ನವಯುಗ

VOL. 43 No. 36 — ಸಂಪುಟ ೪೩ ಸಂಚಿಕೆ ೩೬

NAVAYUGA—Nationalist Weekly ‡‡ ಉಡುಪಿ **7-5-1964** ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಗುಲ್ಜಾರಿಲಾಲ ನಂದಾ

ಕಾಶ್ಮೀರದ ಸಿಂಹ ಶೇಖ ಅಬ್ದುಲ್ಲಾರವರು ಪ್ರಧಾನಿ ನೆಹರೂರವರೊಡನೆ ಮಾತನಾಡಲು ನವದೆಹಲಿಗೆ ಆಗಮಿಸಿದವರಾದರೂ ಹಿರಿಯ ಮಂತ್ರಿಗಳೊಡನೆಯೂ ಸಮಾಲೋಚನೆ ನಡೆಸಿದರು. ನೆಹರು—ಶೇಖ ಮಾತುಕತೆಯಲ್ಲಿ ಕಾಶ್ಮೀರದ ಸಂಬಂಧದ ಕೇಂದ್ರ ಬಿಂದುವಿನ ಕುರಿತಾದ ಉಲ್ಲೇಖವು ಬಾರದೆ ಉಳಿದುವೇ ಇದಕ್ಕೆ ಕಾರಣವಿದ್ದರೂ ಇರಬಹುದು ನೆಹರು-ಶೇಖರು ವಿಷಯದಿಂದ ಬಹು ದೂರನಿಂತೇ ವಿಚಾರವಿನಿಮಯ ಮಾಡಿಕೊಂಡಿರಬೇಕು ಆದರೆ ಲಾಲಬಹದೂರ ಶಾಸ್ತ್ರಿ, ಟಿ. ಟಿ. ಕೆ. ಮತ್ತು ಗುಲ್ಜಾರಿಲಾಲ ನಂದಾರವರು ಕಾಶ್ಮೀರದ ಕೇಂದ್ರ ಬಿಂದುವನ್ನು ಕುರಿತಾಗಿಯೇ ಆಡಿದರು, ಮೊದಲೂ ಆಡಿದ್ದರು.

ಕಾಶ್ಮೀರವನ್ನು ಉಳಿದ ರಾಜ್ಯಗಳಿಗಿಂತ ಆಡಳಿತೆಯಲ್ಲಿ ಸ್ವಲ್ಪ ಭಿನ್ನತೆಯಿದ್ದ ಇದನ್ನು ದೂರಮಾಡಿ ಅದನ್ನು ಭಾರತದ ಉಳಿದ ರಾಜ್ಯಗಳ ಸಮಾನ ಸ್ಥಾನಕ್ಕೆ ತಂದು ನಿಲ್ಲಿಸುವುದು ಕಾಶ್ಮೀರ ಮತ್ತು ಭಾರತ ಸರಕಾರಗಳ ಗುರಿ ಗೃಹ ಮಂತ್ರಿ ನಂದಾರವರು ಈ ಬಗ್ಗೆ ಉತ್ಸುಕತೆಯಿಂದ ಮುಂದುವರಿದಿದ್ದಾರೆ. ನಂದಾರವರು ಭಾರತದ ಕಾಶ್ಮೀರ ನೀತಿಯನ್ನು ಶೇಖರೊಡನೆ ಸವಿವರಿಸಿಕೊಂಡರು ಕಾಶ್ಮೀರದ ವಿವಾದಕ್ಕೆ ಸೂಕ್ತ ಪರಿಹಾರವೆಂದರೆ, ಅದನ್ನು ಈಗಿನ ಸ್ಥಿತಿಯಲ್ಲೇ ಶಾಶ್ವತವಾಗಿ ಮುಂದುವರಿಸುವುದು. ಅಂದರೆ, ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂಬುವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು. ಆದರೆ, ಶೇಖರು ಮಾತ್ರ ಇದನ್ನು ಒಪ್ಪುವುದಿಲ್ಲ ಕಾಶ್ಮೀರದ ತಂಟೆಯು ಭಾರತ—ಕಾಶ್ಮೀರ—ಪಾಕಿಸ್ತಾನಗಳಿಗೆ ಸಮ್ಮತವಾದ ವಿಧಾನದಲ್ಲಿ ತೀರ್ಮಾನಗೊಳ್ಳಬೇಕು ಎಂದವರ ಇಂದಿನ ವಾದ ಆದರೆ, ಇಂತಹ ತೀರ್ಮಾನ ಯಾವುದೆಂದು ಮುಂದಿಡಲು ಶೇಖರು ಅಶಕ್ತರಾದುದು ಉಲ್ಲೇಖನೀಯವೇ

ಕಾಶ್ಮೀರದಲ್ಲಿರುವ ಪ್ರಚಲಿತ ಪರಿಸ್ಥಿತಿಯನ್ನು ಸ್ವಲ್ಪವಾದರೂ ಕೆದಕಿದರೆ, ದೊಡ್ಡ ಕೋಲಾಹಲವೇ ಏಳುತ್ತದು. ಶೇಖರು ವಿವಾದ ಪರಿಹಾರದ ದಾರಿಯನ್ನು ಹುಡುಕುತ್ತಲೇ ಇರಬಹುದು, ಆದರೆ, ಅವರು ಸಮಾಧಾನಕರ ವಿಧಾನವನ್ನು ಖಂಡಿತಕ್ಕೂ ಅರಸಿತರಲಾರರು ಆದದರಿಂದ ಅವರ ಚಟುವಟಿಕೆಗಳ ಮೇಲೆ ಮಾತ್ರ ತೀವ್ರ ದೃಷ್ಟಿಯಿಟ್ಟರೆ ನಂದಾರು ಯಶಸ್ವಿಯಾದಾರು. ಆದರೆ, ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣರಂತಹರು ಕಾಶ್ಮೀರಿಗಳಿಗೆ ಸ್ವಯಂ ನಿರ್ಣಯಾಧಿಕಾರವನ್ನು ನೀಡಬೇಕೆಂದು ಹೇಳತೊಡಗಿದಂತಹುದು ಮಾತ್ರ ದುರ್ದೈವದ ಸಂಗತಿ ಗೃಹ ಮಂತ್ರಿ ನಂದಾರವರು ಗೃಹದೊಳಗೆ ಕಾಶ್ಮೀರದ ಬಗ್ಗೆ ಅಪಸ್ವರವೇಳಲು ಬಿಡಬಾರದು ಕೂತಿರುವ ದೋಣಿಯೇ ತೂತಾದರೆ, ನೀರನ್ನು ದೂರಿಯೇನು ಸಾರ್ಥಕ? ಆದುದರಿಂದ ನಂದಾರು ಈ ದಿಸೆಯಲ್ಲಿ ಆವಶ್ಯ ಕಾರ್ಯಕ್ರಮ ಕೈಗೊಳ್ಳಬೇಕು ಅಲ್ಪ ಸಂಖ್ಯಾಕರ ರಕ್ಷಣೆಯ ಬಗ್ಗೆ ತನ್ನನ್ನೇ ಮುಡುಪಿಟ್ಟಿಕೊಟ್ಟಿದೆಯು ನಂದಾ ಈ ಬಗ್ಗೆಯೂ ತನ್ನ ಎಂಟೆದೆಯನ್ನು ತೋರಿಸಬೇಕು



ಡಾ| ಟಿ ಎಂ ಎ ಪೈ

ಪರಿಮಳ ಹೂವು ಗಿಡಕಿಗೆ ನಡುಕೆ ಹೋಗುವುದಿಲ್ಲ, ಗಿಡಕಿಗಳೇ ಅದರ ಬಳಿಗೆ ಬರುತ್ತಾರೆ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ಪಮಾತಿಪುರುಷರಾದ ರೋಟೇರಿಯನ್ ಡಾ| ಟಿ ಮಾಧವ ಪೈಯವರು ಇಂಟರ್ನೆ ರೋಟರಿ ಜಿಲ್ಲೆಯ ಗವರ್ನರಾದುದು ಹೀಗೆ ಇದೇ ತಿಂಗಳ ಮೇ ೨೧ರಿಂದ ಜೂನ್ ೫ರವರೆಗೆ ಅಮೇರಿಕೆಯ ಲೇಕ್ ಪ್ಲಾಸಿಡ್‌ನಲ್ಲಿ ನಡೆಯುವ ರೋಟರಿ ಅಂತಾರಾಷ್ಟ್ರೀಯ ಅಸೆಂಬ್ಲಿಯಲ್ಲಿ ಭಾಗವಹಿಸಲು ಇವರು ವಿದೇಶಯಾತ್ರೆಗೆ ತೊಡಗಲಿದ್ದಾರೆ ಅನಂತರ ಜೂನ್ ೭ರಿಂದ ೧೧ರ ವರೆಗೆ ಕೆನಡಾದ ಟೊರಂಟೋದಲ್ಲಿ ನಡೆಯುವ ರೋಟರಿ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಪಾಲುಗೊಳ್ಳಲಿದ್ದಾರೆ ಮೇ ೨೧ ರಂದು ಮುಂಬಯಿಯಿಂದ ವಿಮಾನ ಮೂಲಕ ನ್ಯೂಯಾರ್ಕಿಗೆ ಪ್ರಯಾಣ ಮಾಡಿ, ಲೇಕ್ ಪ್ಲಾಸಿಡನ್ನು ತಲಪುವುದಕ್ಕೆ ಮೊದಲು ರಟ್ಲ್ಯಾಂಡನಲ್ಲಿ ಮೂರುದಿನ ತಂಗುವರು.

ಅಂತಾರಾಷ್ಟ್ರೀಯ ಸಮಾವೇಶನದ ಬಳಿಕ ಅವರು ಜೂನ್ ೧೩ ಮತ್ತು ೧೪ ರಂದು ನ್ಯೂಯೋರ್ಕಿನಲ್ಲಿ ವಿಶ್ವಮೇಳವನ್ನು ವೀಕ್ಷಿಸುವರು ಫಿಲಿಡೆಲ್ಫಿಯಾ, ವಾಶಿಂಗಟನ್, ಬಾಲ್ಟಿಮೋರ್, ಮಿಯಾಮಿ ಮತ್ತು ಪ್ಯಾರಿಸ್‌ಗಳಿಗೆ ಭೆಟ್ಟಿಕೊಟ್ಟು ಜೂನ್ ೨೭ರಂದು ಮುಂಬಯಿಗೆ ಮರಳಿ ಬರುವರು ಬೆಂಗಳೂರಿನಲ್ಲಿ ಸೇರಲಿರುವ ರೋಟರಿ ಜಿಲ್ಲಾ ಅಧಿವೇಶನದಲ್ಲಿ ಭಾಗವಹಿಸಲು ಡಾ| ಪೈ ಮೇ ೧೮ರಂದು ಬೆಂಗಳೂರಿಗೆ ಹೊರಟು, ಅಲ್ಲಿಂದಲೇ ತಮ್ಮ ವಿದೇಶ ಯಾತ್ರೆಯನ್ನು ಆರಂಭಿಸುತ್ತಾರೆ

ಡಾ| ಪೈಯವರು ವಿದೇಶ ಯಾತ್ರೆ ಮಾಡುವುದು ಇದೇನೂ ಹೊಸತಲ್ಲ ಹಿಂದೆ ಅವರು ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರರಿದ್ದಾಗ ವಿದೇಶಯಾತ್ರೆ ಮಾಡಿ, ಬ್ಯಾಂಕಿಗೂ, ಅಕೆಡೆಮಿಯ ವಿದ್ಯಾಸಂಸ್ಥೆಗಳಿಗೂ ತಮ್ಮ ಅನುಭವದ ಲಾಭವನ್ನು ಹಂಚಿದ್ದಾರೆ. ಇದೀಗ, ರೋಟರಿ ಗವರ್ನರರಾಗಿ ಹೊರ ದೇಶಗಳ ವಿವಿಧ ಸಮಾವೇಶಗಳಲ್ಲಿ ಭಾಗ ವಹಿಸುವ ಡಾ| ಪೈಯವರು ದೇಶಕ್ಕೆ ಮತ್ತಷ್ಟು ಪ್ರಯೋಜನಕಾರಿ ಯಾಗಬಲ್ಲರು

ಬಿ ಲಿಂಗಪ್ಪ ಶೆಟ್ಟರು

ವ್ಯಕ್ತಿ ಮತ್ತು ಸಂಸ್ಥೆಗಳಲ್ಲಿ ಯಾವುದು ಮುಖ್ಯವೆಂಬ ಪ್ರಶ್ನೆಯಿಂದ. ಒಬ್ಬೊಬ್ಬರಿಂದ ಒಂದೊಂದು ರೀತಿಯಿಂದ ಉ

ತ್ತರಿಸಲ್ಪಡುತ್ತದೆ ವ್ಯಕ್ತಿಯೊಬ್ಬನಿಂದಲೇ ಸಂಸ್ಥೆ ಬೆಳೆಯುವುದ, ಬಾಳುವುದು ಮತ್ತು ಕೀರ್ತಿಗಳಿಸುವುದು ಅಸಂಭವವೆನ್ನುವುದು ಅಸಾಧ್ಯವಾದರೂ ಇಂತಹ ನಿದರ್ಶನ ಅಪರೂಪವಾಗಿಯಾದರೂ ಒಮ್ಮೊಮ್ಮೆ ದೊರೆಯುತ್ತದೆ ಈ ಬಗೆಯ ಅಪರೂಪವಾದ ವ್ಯಕ್ತಿಗಳಲ್ಲಿ ಉಡುಪಿಯ ಬನ್ನಂಜೆ ಲಿಂಗಪ್ಪ ಶೆಟ್ಟರು ಒಬ್ಬರು ವೃತ್ತಿಯಲ್ಲಿ ಪ್ರಾಥಮಿಕ ಶಾಲಾ ಅಧ್ಯಾಪಕರಾದ ಇವರು ಎಲೆಮರೆಯ ಕಾಯಿ, ಹೆಚ್ಚಿನ ಪ್ರಸಿದ್ಧಿಯನ್ನು ಬಯಸಿದವರಲ್ಲ, ಆದರೆ ಅವರ ಒಳ್ಳೆಯತನವೇ ಅವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟಿದೆ, ಅವರ ಶಾಲೆಗೂ ಗೌರವವನ್ನು ತಂದಿದೆ.

ಲಿಂಗಪ್ಪ ಶೆಟ್ಟರು ಮೂವತ್ತೇಳು ವರ್ಷಗಳ ಸುದೀರ್ಘಕಾಲ ಒಂದೇ ಶಾಲೆಯಲ್ಲಿ, ಉಡುಪಿಯ ಹಳೆಯ ದೊಡ್ಡ ಪ್ರಾಥಮಿಕ ಶಾಲೆ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದುಡಿದು ಈಗ ನಿವೃತ್ತರಾಗಿದ್ದಾರೆ ಸುಮಾರು ೧೨೦ಕ್ಕೂ ಕಡಿಮೆ ಮಕ್ಕಳಿದ್ದಾಗ ಈ ಶಾಲೆ ಸೇರಿದ ಇವರು ೮೦೦ಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿಂದ ತುಂಬಿ ತುಳುಕುತ್ತಿರುವ ಈ ಸಮಯದಲ್ಲಿ ನಿವೃತ್ತರಾಗಿದ್ದಾರೆ ರೂ 3ರಿಂದ ರೂ 100ರವರೆಗಿನ ವೇತನಗಳನ್ನು ಕಂಡಿದ್ದಾರೆ ಈ ದೀರ್ಘಾವಧಿಯಲ್ಲಿ ಅದೆಷ್ಟೋ ಮಳೆಗಾಳಿ ಬಿರುಗಾಳಿ ಬೀಸಿತ್ತು; ಆದರೆ, ಚಿಂತಾಮೂರ್ತವನ್ನು ಎದುರಿಸಿ ಬಾಗದೆ, ಬಗ್ಗದೆ ತೊಯ್ಲನಲ್ಲಿ ಕೊಚ್ಚಿ ಹೋಗದೆ ದೃಢವಾಗಿ ನಿಂತ ಹೆಮ್ಮರದಂತೆ ನಂಜನ್ನುಂಡ ಶಿವನಂತೆ ಇವರು ಅಚಲರಾಗಿ ನಿಂತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಾಮಾಣಿಕವಾಗಿ ವಿದ್ಯೆ

(ಆನೇ ಪುಟ ನೋಡಿರಿ)

ನಾರದ ಕಥೆ

ಪಾಪ ವಿಧಿಸಿದ ಫಲ

ಬರೆದವರು: ಶ್ರೀ ಕಾ. ಸೋ. ಮುತ್ತಪ್ಪ, ಪೆರುವಾಜೆ.

ಬಿಕ್ಕಿ ಬಿಕ್ಕಿ ಅಳುತ್ತಿದ್ದ ಜೋಮಿಯನ್ನು ಸಮಾಧಾನಪಡಿಸುವವರು ಯಾರೂ ಇಲ್ಲವಾದರು. ಅವಳ ತಂದೆ ತಾಯಿಗಳ ಇರವೇ ಅವಳಿಗೆ ಅರಿಯದು. ತನ್ನ ಪತಿ ಎನಿಸಿಕೊಂಡ ಮಾರನ ಶವವನ್ನು ಆ ದಿನವೇ ಮಣ್ಣು ಮಾಡಿ ಬಂದಿದ್ದಳು. ಅವನೊಡನೆ ತನ್ನ ಬಾಳ್ವೆಯ ನೆಮ್ಮದಿಯನ್ನೇ ಕಳೆದುಕೊಂಡಿದ್ದಳು. ವಿಧಿಯಿಲ್ಲದೆ ಕುಲದೈವವಾದ "ಗುಳಿಗರಾಜನಿ'ಗೆ ತನ್ನ ಪ್ರಾಣವನ್ನು ತೆಗೆದುಕೊಳ್ಳುವಂತೆ ಮೊರೆಯಿಟ್ಟಳು. ಕಲ್ಲು ದೇವರಿಗೆ ಅವಳ ಮೊರೆ ಕೇಳಿಸಿತೊ ಇಲ್ಲವೊ ಭಾವನೆ ಅವಳ ಮನದಲ್ಲಿ ಉದ್ಭವಿಸಿತು. "ಅವನು ಸತ್ತರೇನಾಯಿತು ತಾನು ಮಾಡಿದ ಕರ್ಮಕ್ಕೆ ತಕ್ಕ ಫಲ ಅನುಭವಿಸಿದ" ಎಂದು ಉದ್ಗಾರ ತೆಗೆದಳು.

ವಕ್ಷಿನ ತನ್ನ ಸಣ್ಣ ಗುಡಿಸಲಿನ ಜಾವಡಿಯಲ್ಲಿ ಕುಳಿತಿದ್ದ ಜೋಮಿಗೆ ಸಣ್ಣಗೆ ಬೀಸುತ್ತಿದ್ದ ಗಾಳಿಯಿಂದ ಸ್ವಲ್ಪ ಚಳಿ ಎನಿಸಿರಬೇಕು. ಅಲ್ಲೆ ಹಾಕಿದ್ದ ಬೆಂಕಿಯ ಹತ್ತಿರ ಅವಳ ಅತ್ತೆ ಮಾವ ತಮ್ಮ ಮಗನು ಮಡಿದುದರ ಬೇಗೆಯನ್ನು ಅನುಭವಿಸಿ ಅತ್ತು ಅತ್ತು ಹಾಗೆ ಸ್ವಲ್ಪ ಒರಗಿದ್ದರು. ಅವಳು ಅರ್ಧ ಉರಿಯುತ್ತಿದ್ದ ಕೊಳ್ಳಿಯೊಂದನ್ನು ಒಳಗೆ ನೂಕಿದಳು. ಅವಳ ಮನದಲ್ಲಿ ನಾನಾ ಬಗೆಯ ಯೋಚನೆಗಳು ಸುಳಿಯಲಾರಂಭಿಸಿದುವು.

ತನ್ನ ಮೊದಲಿನ ಪತಿ—ಬೆಳ್ಳನ ದೃಢಕಾಯರೂಪ ಕಣ್ಮುಂದೆ ಮೆಲ್ಲನೆ ಗೋಚರಿಸಲಾರಂಭಿಸಿತು. ಅದೆ ಬೆಳ್ಳನೊಡನೆ ತಾನು ಚಿಕ್ಕಂದಿನಲ್ಲಿ ತೋಟದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದುದು ನೆನಪಿಗೆ ಬಂತು. ಅವನ ದೃಢಕಾಯದ ಸುಂದರ ರೂಪಿಗೆ ಮರುಳಾಗಿ ಅವನೊಡನೆ ಓಡಿ ಬಂದಿದ್ದಳು.

ನನ್ನೊಡನೆ ಬಂದುಬಿಡು ನಿನ್ನನ್ನು ರಾಣಿಯಂತೆ ನೋಡ್ತೀನಿ ಎಂದು ಭರವಸೆ ಕೊಟ್ಟು ತಂದ ಬೆಳ್ಳ ಅವನ್ನು ಮರೆತುಬಿಟ್ಟ. ಸ್ವಭಾವದಿಂದ ಸೋಮಾರಿಯಾದ ಅವನು ನೆಪಕ್ಕೆ ಇವತ್ತು ಯಾವ ಕೆಲಸ ಸಿಗಲಿಲ್ಲ ಎಂದು ಸುಳ್ಳು ಹೇಳಿ ಕಾಲ ಕಳೆದ. ಕಡೆಗೆ ತುತ್ತು ಅನ್ನಕ್ಕೂ ಗತಿಯಿಲ್ಲದೆ. ಇಬ್ಬರೂ ಉಪವಾಸವಿರ ಬೇಕಾಯಿತು.

ಇದನ್ನು ಸಹಿಸಲಾರದ ಜೋಮಿ ತಾನೂ ಪಟೇಲ ರಾಮಯ್ಯ ಗೌಡರಲ್ಲಿ ಕೆಲಸಕ್ಕೆ ಹೋಗಲುತೊಡಗಿದಳು. ಸ್ವಲ್ಪ ದಿನ ಅವಳನ್ನು ಕೆಲಸಕ್ಕೆ "ನೀನು ಹೋಗಬೇಡ" ವೆನ್ನುತ್ತಿದ್ದ ಬೆಳ್ಳ ತಾನು ಕೆಲಸ ಮಾಡದಿದ್ದರೂ ಉಪವಾಸವಿರುವ ಪ್ರಮೇಯ ತಪ್ಪಿತಲ್ಲ ಎಂದು ಸುಮ್ಮನಾದ. ವಾರಕ್ಕೆ ೨-೩ ದಿನ ಮಾತ್ರ ತಾನು ಕೆಲಸಕ್ಕೆ ಅವರಲ್ಲಿಗೆ ಹೋಗತೊಡಗಿದ.

ಇಬ್ಬರೂ ಸೇರಿ ಪಟೇಲರಿಂದ ಕಾಡಿ ಬೇಡಿ ಇಲ್ಲದ ಕುಂಟು ನೆಪ ಹೇಳಿ ೨೦೦|- ಸಾಲ ತೆಗೆದುಕೊಂಡು ರಾತೋರಾತ್ರಿ ಗಂಟುಮೂಟೆ ಕಟ್ಟಿ ತನ್ನ ಹುಟ್ಟೂರಾದ ಬಿಳಿಯೂರಿಗೆ ಬಂದರು. ಅಲ್ಲಿ ಬೆಳ್ಳ ತನ್ನ ತಂದೆ ತಾಯಿ ತಮ್ಮನೊಡನೆ ಸೇರಿಕೊಂಡು ಕೆಲಸ ಮಾಡಿಕೊಂಡು ನೆಮ್ಮದಿಯಿಂದ ಕೆಲವು ದಿನ ಕಳೆದ.

ಬೆಳ್ಳ ತನ್ನ ತಮ್ಮನಾದ ಮಾರನನ್ನು ಕರೆದುಕೊಂಡು ಹಗ್ಗದಿಂದ ಮಾಡಿದ ಬಲೆಗಳಿಂದ, ಸಣ್ಣ ಬೋನುಗಳಿಂದ, ಕಾಡು ಪ್ರಾಣಿಗಳನ್ನು ಹಿಡಿದು ತರುತ್ತಿದ್ದ. ಗಾಳಹಾಕುವವರಲ್ಲಿ ಅವರದು ಎತ್ತಿದ ಕೈ. ಜೇನಿನ ಬೇಟೆಯೆಂದರೆ ಮಾರನಿಗೆ ತುಂಬಾ ಪ್ರೀತಿ. ಕಾಡೆಲ್ಲಾ ಸುತ್ತಿ ಪೊಟರೆಯಿಂದಲೂ ಹುತ್ತದಿಂದಲೂ ಜೇನನ್ನು ಲೀಲಾಜಾಲವಾಗಿ ತೆಗೆಯುತ್ತಿದ್ದರು. ಆದರೆ ವಿಧಿ ಅವರ ಜೀವನವನ್ನು ನೋಡಿ ನಕ್ಕಿತು. ಜೇನು ತೆಗೆಯಲು ಹತ್ತಿದ ಬೆಳ್ಳ ಮರದಿಂದ ಬಿದ್ದು ಪ್ರಾಣ ಕಳೆದುಕೊಂಡ.

ಮುಂದೆ ಅವರ ಜಾತಿನಿಯಮದಂತೆ ಜೋಮಿಯನ್ನು ಒಪ್ಪಿಸಿ ಮಾರನ ತಂದೆ ತಾಯಿಗಳು ಅವಳನ್ನು ತಮ್ಮ ಮಗನಿಗೆ ಕಟ್ಟಿದರು. ಆದರೆ ಮದುವೆಯಾದನಂತರ ಆದೊಂದುದಿನ ತನ್ನ ಪತಿಯ ಮಾತು ಕೇಳಿದ ಜೋಮಿ ದಿಗ್ಭ್ರಾಂತಳಾದಳು.

"ನೋಡು ಜೋಮಿ. ನಿನಗೆ ನನ್ನ ಕೈ ಹಿಡಿಯೋದಕ್ಕೆ ಇಷ್ಟ ಇರಲಿಲ್ವೇ?" ಎಂದುಕೇಳಿದ ಮಾರ.

"ಯಾಕೆ ಹಾಗೆ ಕೇಳುತ್ತೀರಿ" ಅಂದಳು ಜೋಮಿ

"ನಾನು ನಿನಗಾಗಿ ಎಷ್ಟು ಕಷ್ಟ ಪಟ್ಟೆ ಗೊತ್ತೇ?"

"ಏನು ಅಂಥ ಕಷ್ಟ ಪಟ್ಟಿರಿ!" ಎಂದಳು ಆಶ್ಚರ್ಯದಿಂದ

"ನಿನಗಾಗಿ ನಾನು ನನ್ನ ಅಣ್ಣನನ್ನೆ ಕೊಲೆ ಮಾಡಬೇಕಾಯಿತು.

"ಕೊಲೆಯೆ!? ಹಾಗಾದರೆ ಅವರು ಮರದಿಂದ ಬಿದ್ದು ಸತ್ತದ್ದು ಸುಳ್ಳಾ?" "ಸುಳ್ಳಲ್ಲ ಜೋಮಿ! ಅವನಾಗಿಯೇ ಮರದಿಂದ ಬೀಳಲಿಲ್ಲ ನಾನೇ ಬೀಳಿಸಿದೆ" ಎಂದ ಪ್ರೌಢಿಮೆಯಿಂದ.

"ಅದೇಕೆ?" ಎಂದಳು ಜೋಮಿ ಭಯಮಿಶ್ರಿತ ಕುತೂಹಲದಿಂದ.

"ಭಯಪಡ ಬೇಡ ಜೋಮಿ. ನಿನ್ನನ್ನು ಅಣ್ಣ ಈ ಮನೆಗೆ ಕರೆದು ಕೊಂಡು ಬಂದಂದಿನಿಂದ ನಿನ್ನ ರೂಪಕ್ಕೆ ಮರುಳಾದೆ. ನಿನ್ನನ್ನು ಹೇಗಾದರೂ ಪಡೆಯಬೇಕೆಂದು ಯೋಚಿಸತೊಡಗಿದೆ. ಕಡೆಗೊಮ್ಮೆ ಅಂಥ ಸಂಧರ್ಭ ಸಿಕ್ಕಿತು. ಅಣ್ಣ ಜೇನು ಬಾಗಿದ ಕೊಂಬೆಯೊಂದರಲ್ಲಿ ಎಚ್ಚರಿಕೆಯಿಂದ ಕೈ ಬಿಟ್ಟು ದಾಟುತಿದ್ದ. ಅವನಿಗೆ ನಾನು ಕೆಳಗಿಂದ ಜೋರಾಗಿ ಕಲ್ಲೊಂದನ್ನು ಎಸೆದೆ ತಕ್ಷಣ ಅದನ್ನು ತಪ್ಪಿಸಲು ಹೋಗಿ ಆಯ ತಪ್ಪಿ ಕೆಳಗೆಬಿದ್ದ. ಇಷ್ಟೇ ನಡೆದದ್ದು"

"ಥೂ ಪಾಪಿ" ಎಂದು ಉಗಿದು ಹೊರಟುಹೋದಳು. ಆದರೆ ಅವಳಿಗೆ ಮಾರ ಬಿಟ್ಟರೆ ಗತಿಯಿಲ್ಲ. ದಾರಿಕಾಣದೆ ಅವನೊಡನೆ ಬಾಳ್ವೆನಡೆಸ ಬೇಕಾಯಿತು.

ಮಾರ ಬಿಳಿಯೂರಿನ ಜಮೀನ್ದಾರರಲ್ಲೊಬ್ಬರಾದ ಚೆಂಗಪ್ಪನವರಲ್ಲಿಗೆ ಚಿಕ್ಕಂದಿನಿಂದಲೂ ಕೆಲಸಕ್ಕೆ ಹೋಗುತ್ತಿದ್ದ. ಅವರಿಗೆ ಮಾರನನ್ನು ಕಂಡರೆ ತುಂಬಾ ಪ್ರೀತಿ ಈಗಲೂ ಅವರ ಗದ್ದೆಯಲ್ಲಿ ಕೆಲಸಮಾಡಲು ಹೋಗುತ್ತಿದ್ದ.

ಸುಗ್ಗಿ ಸಮಯದಲ್ಲಿ ಮಾರನಿಗೆ ತಮ್ಮ ಕೋವಿಯನ್ನು ಕೊಟ್ಟು ಗದ್ದೆಯಲ್ಲಿ ಒಂದು ಸಣ್ಣ ಜೋಪಡಿ ಕಟ್ಟಿ ಕಾವಲು ಇರಿಸುತಿದ್ದರು. ಹುಟ್ಟಿನಿಂದಲೂ ಕೋವಿ ಹೊಡೆಯುವ ಮಾರನಿಗೆ ಕೋವಿ ಉಪಯೋಗಿಸುವ ಸಂದರ್ಭ ಬಂದೇ ಬತು.

ರಾತ್ರಿ ಅರೆ ನಿದ್ರೆಯಲ್ಲಿದ್ದ ಮಾರನಿಗೆ ಹಂದಿ ಭತ್ತ ತಿನ್ನುವ 'ಚಪ್ಪ' 'ಚಪ್ಪ' ಶಬ್ದ ಕೇಳಿ ಎಚ್ಚರವಾಯಿತು.

ಮೆಲ್ಲನೆ ಎದ್ದು ಬಂದು ನೋಡುತ್ತಾನೆ ತಿಂಗಳು ಬೆಳಕಿನಲ್ಲಿ ಹಂದಿಯ ಆಕಾರ ಅಸ್ಪಷ್ಟವಾಗಿ ಕಾಣಿಸಿತು. ಗುರಿಯಿಟ್ಟು ಕಣ್ಣು ಮುಚ್ಚಿ ಹೊಡೆದೇ ಬಿಟ್ಟ. ತಕ್ಷಣ ಆಯ ತಪ್ಪಿ ಈ ಕಡೆ ಬಿದ್ದ. ಬಾಯಲ್ಲೆಲ್ಲ ರಕ್ತ ಸುರಿಯುತ್ತಿತ್ತು. ಮೆಲ್ಲನೆ ಎದ್ದು ನೋಡುತ್ತಾನೆ, ಹಂದಿ ಸ್ವಲ್ಪ ದೂರ ಬಿದ್ದಿದೆ. ಸಂತೋಷದಿ ಕುಣಿದಾಡಿದ. ಗುಂಡು ಹೊಡೆದ ಕೋವಿಯ ಹಿಂದಿನ ಪೆಟ್ಟಿನಿಂದ ಹ ರಡು ಉದುರಿದ ಪರಿವೇ ಇಲ್ಲವಾಯಿ ಅವನಿಗೆ.

ಅಂದಿನಿಂದ ಗುರಿ ಕಲಿಯಲು ಯ ಸಿದ. ತನ್ನ ಯಜಮಾನರೊಡನೆ ಕೆಲ ಸಾರಿ ಬೇಟೆಗೂ ಹೋಗತೊಡಗಿದ. ನ ಕಳೆದಂತೆ ಶಿಕಾರಿಯಲ್ಲಿ ನಿಪುಣನಾ ಶಿಕಾರಿಯ ಹುಚ್ಚು ಅವನಿಗೆ ಹಿಡಿದು ಟ್ಟಿತು.

ಊರ ಹೊರಗಿನ ದೇವರ ಕಾಡಿ ಹುಲಿಯೊಂದು ತುಂಬಾ ಜನರಿಗೆ ತೊ ದರೆ ಕೊಡುತ್ತಿತ್ತು. ಕಾಡಿಗೆ ಹೋದ ನಕರುಗಳು ಕಾಣೆಯಾಗುತ್ತಿದ್ದುವು. ಗಪ್ಪನವರು ಆ ಹುಲಿಯನ್ನು ಒಂದು ನೋಡಿ ಬಿಡುತ್ತೇನೆ ಎಂದು ಪಣ ಟ್ಟರು.

ಸರಿ ಮಾರನಿಗಂತೂ ಸಂಭ್ರಮ ಸಂಭ್ರಮ. ಒಂದು ಕವಲೊಡೆದ ಮ ಕ್ಕೆ ಹಲಗೆಗಳನ್ನು ಕಟ್ಟಿ ಮಾರ ಕು ಲಿಕ್ಕೆ ಸ್ಥಳ ಮಾಡಿದನು. ಯಜಮಾ ಆಜ್ಞೆಯಂತೆ ಆ ದಿನ ಹುಲಿಯಿಂದ ಕ ವಾದ ಹಸುವನ್ನು ಆ ಮರಕ್ಕೆ ಸ್ವ ದೂರದಲ್ಲಿ ತಂದಿಟ್ಟ.

ಮರದ ಮೇಲೆ ಇಬ್ಬರೂ ಕೋವಿ ಹಿಡಿದುಕೊಂಡು ಹುಲಿಯ ಬರವನ್ನು ದು ಕುಳಿತರು. ದೂರದಲ್ಲಿ ಕೂಗುವ ಗೆಯ ವಿಕಾರ ಧ್ವನಿ. ಗುಳ್ಳೆನರಿಗಳ ಗು ಪ್ರಾಣಿಗಳು ಓಡಾಡುವಾಗ ಟಾಗುವ ಚರ ಪರ ಧ್ವನಿಯಿಂದ ಕೆಲ ವೇಳೆ ಅವರ ಎದೆ ನಡುಗುತ್ತಿತ್ತು.

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಪ್ರವಾಸ ಕಥನ

ರಜತಪೀಠದಿಂದ ತಿರುಮಲೆಗೆ

(ಕೊನೆಯ ಲೇಖಾಂಕ)

ಬರೆದವರು: ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿ, ಉಡುಪಿ

೪—೨—೬೪ನೇ ಮಂಗಳವಾರ ಪ್ರಾತಃ ೯ ಘಂಟೆಗೆ ವೆಂಕಟೇಶ್ವರ ಸರ್ವೀಸಿನ ಬಸ್ಸುಗಳು ನಮ್ಮ ಬಿಡಾರಗಳ ಬಳಿಗೆ ಬಂದುವು. ಹಿಂದಿನ ದಿನವೇ ವಿವಾಹವು ಪ್ರಾರಂಭವಾಗಿದ್ದದರಿಂದ, ನಮ್ಮ ಬಿಡಾರಗಳನ್ನು ಬೇರೊಂದು ಉನ್ನತ ಸ್ಥಾನಕ್ಕೆ ಸ್ಥಳಾಂತರಿಸಲಾಗಿತ್ತು. ಎಲ್ಲರೂ ಪ್ರಾತರಾಹ್ನಿಕ ಸ್ನಾನಾದಿಗಳನ್ನು ತೀರಿಸಿ, ನಮ್ಮ ಹೋಲ್ಡಾಲು ಇತ್ಯಾದಿಗಳನ್ನು ಸಿದ್ಧಗೊಳಿಸಿ, ಬಸ್ಸಿನ ನಿರೀಕ್ಷೆಯಲ್ಲೇ ಇದ್ದೆವು. ಮಗುದೊಮ್ಮೆ ಎಲ್ಲರೂ ಅಲ್ಲಿಂದಲೇ ವೆಂಕಟರಮಣನನ್ನು ವಂದಿಸಿ, ತಮ್ಮ ತಮ್ಮ ಸಾಮಗ್ರಿಗಳೊಡನೆ ಬಸ್ಸುಗಳನ್ನೇರಿ ಕುಳಿತುಕೊಂಡೆವು. "ಕಾಶೀಮಠ ಸಂಸ್ಥಾನಕೀ ಜೈ, ಸುಧೀಂದ್ರ ತೀರ್ಥ ಸ್ವಾಮಿ ಮಹಾರಾಜಕೀ ಜೈ, ತಿರುಪತಿ ವೆಂಕಟರಮಣ ಗೋವಿಂದಾ ಗೋವಿಂದಾ" ಎಂದು ಎಲ್ಲರೂ ಬಾಯಿಯಿಂದ ಒಕ್ಕೊರಲಿನಿಂದ ಘೋಷಿಸುವಾಗ ಅಕ್ಕ ಪಕ್ಕಗಳಲ್ಲಿ ನೆರೆದಿರುವ ಸಾವಿರಾರು ಜನರು ಎವೆಯಿಕ್ಕದೇ ನಮ್ಮನ್ನೇ ನೋಡುತ್ತಿದ್ದಂತೆ, ನಮ್ಮ ಬಸ್ಸುಗಳು ಮೆಲ್ಲ ಮೆಲ್ಲನೆ ಬೆಟ್ಟದಿಂದ ಕೆಳಗಿಳಿದುವು.

ಗೋವಿಂದರಾಜಪಟ್ಟಣಕ್ಕೆ ಬಂದು, ಛತ್ರದ ಬಳಿಯಿರುವ ನಮ್ಮ ಬಸ್ಸುಗಳಿಗೆ ತಮ್ಮ ತಮ್ಮ ಸಾಮಗ್ರಿಗಳನ್ನು ಬದಲಾಯಿಸಿಕೊಂಡೆವು. ಅಲ್ಲಿಂದ ಹದಿನಾರು ಮೈಲು ದೂರವಿರುವ ಕಾಳಹಸ್ತಿಗೆ ನಮ್ಮ ಬಸ್ಸುಗಳೂ ಕಾರುಗಳೂ ಮುಂದುವರಿದುವು. ಕಾಳಹಸ್ತಿಯು ವೆಂಕಟರಮಣನ ಮಾವನ ಮನೆಯಂತೆ. ಮಾವನನ್ನು ನಾವು ಕಾಣಲಿಲ್ಲವಾದರೂ, ಬೇಡರಕಣ್ಣಪ್ಪ, ಗಣಪತಿ, ಪಿಂಕಾಳೇಶ್ವರ ಮೊದಲಾದ ಹಲವಾರು ಮೂರ್ತಿಗಳನ್ನು ಅಸ್ಪಷ್ಟವಾಗಿ ಕಂಡೆವು. ದೇವಸ್ಥಾನದೊಳಗೆ ತುಂಬ ಕತ್ತಲು. ಭಕ್ತಾದಿಗಳು ತಮ್ಮ ಹೃದಯದೊಳಗಿನ ಕತ್ತಲೆಯನ್ನು ಇಲ್ಲೇ ಬಿಟ್ಟುಹೋಗಿದ್ದಾರೇನೋ. ಅಲ್ಲಿಯ ಅಧಿಕಾರಿ ವರ್ಗದ ಕೆಲವರ ರೂಕ್ಷ ವ್ಯವಹಾರವನ್ನು ಕಂಡು ನನಗೆ ಇಲ್ಲಿ ಯಾಕೆ ಬಂದೆನೋ ಎನಿಸಿತು. ಹಿಂತಿರುಗಿ ಬರುತ್ತಾ ಪದ್ಮಾವತೀ ದೇವಾಲಯದ ಕೆರೆಯಲ್ಲಿ ಸ್ನಾನಮಾಡಿದೆವು. ನಮ್ಮ ಮಹಿಳಾಮಂಡಳಿಯವರು ಪದ್ಮಾವತಿಯಮ್ಮನ ದರ್ಶನವನ್ನೂ ಕುಂಕುಮವನ್ನೂ ಪಡೆದು ಧನ್ಯರಾದರು.

ನಮ್ಮ ಛತ್ರದಲ್ಲಿ ಉಪಹಾರದ ಏರ್ಪಾಡು ಆಗಿತ್ತು. ಈ ಮುಖ್ಯ ಕೆಲಸವನ್ನು ಪೂರೈಸಿ, ಎಲ್ಲರೂ ತಂತಮ್ಮ ಬಸ್ಸುಗಳನ್ನೇರಿ ಕುಳಿತುಕೊಂಡೆವು.

ಸುಮಾರು ರಾತ್ರೆ 2-20ಕ್ಕೆ ನಮ್ಮ ಬಸ್ಸುಗಳು ಬೆಂಗಳೂರಿನಲ್ಲಿರುವ ಗೋಕರ್ಣಮಠದ ದ್ವಾರಕಾನಾಥ ಭವನಕ್ಕೆ ಬಂದು ತಂಗಿದುವು. ವಿಶಾಲವಾದ ಆ ಸುಂದರ ಛತ್ರದಲ್ಲಿ ನಮ್ಮ ಉಳಕೊಳ್ಳುವ ಉತ್ತಮ ವ್ಯವಸ್ಥೆಯಾಗಿತ್ತು. ಆದರೆ, ಮರುದಿನ ಅಲ್ಲಿ ಒಂದು ಮದುವೆಯ ಕಾರ್ಯಕ್ರಮವಿದ್ದುದರಿಂದ ನಾವು ಪ್ರಾತಃಕಾಲ ಉಪಹಾರ ಪೂರೈಸಿದ ನಂತರ ಅದನ್ನು ಬಿಟ್ಟುಕೊಡಬೇಕಾಗಿ ಬಂದಿತು.

ತಾ. ೫ರಂದು ಉಪಾಹಾರದ ನಂತರ ನಮ್ಮ ಪರಿವಾರವು ಕೆನರಾ ಬ್ಯಾಂಕಿನ ಅತಿಥಿಗೃಹ 'ಶಂಕರ ಪ್ರಸಾದ'ಕ್ಕೆ ತೆರಳಿತು. ಅಲ್ಲಿ ಮಧ್ಯಾಹ್ನ ಊಟ ತೀರಿಸಿ, ಲಾಲ್‌ಬಾಗ್, ವಿಧಾನ ಸೌಧ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳನ್ನು ಕಂಡು, ಸಾಯಂಕಾಲ ೬-ಕ್ಕೆ ಮೈಸೂರಿಗೆ ಹೊರಟೆವು. ಮೈಸೂರು ವೃಂದಾವನಕ್ಕೆ ತಲುಪುವಾಗ ರಾತ್ರೆ ೮-೩೦ ಘಂಟೆತ್ತು. ಹಾಗಾಗಿ ಬಣ್ಣ ಬಣ್ಣದ ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಿರುವ ವೃಂದಾವನದ ರಾತ್ರಿಕಾಲದ ಸೌಂದರ್ಯವನ್ನು ಕಾಣುವ ಭಾಗ್ಯವು ನಮಗಿಂದು ಒದಗಿ ಬರಲಿಲ್ಲ. ಅಲ್ಲಿಂದ ಶ್ರೀರಾಮ ಪೇಟೆಗೆ ಬಂದು, ನಂಜಮ್ಮನ ಛತ್ರದಲ್ಲಿ ಬಿಡಾರ ಹೂಡಿದೆವು.

ಮರುದಿನ ಪ್ರಾತಃಕಾಲ ಎದ್ದು, ಉಪಾಹಾರ ಪೂರೈಸಿ, ಚಾಮುಂಡಿಬೆಟ್ಟ, ಲಲಿತಮಹಾಲ್, ಪ್ರಾಣಿಸಂಗ್ರಹಾಲಯ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳನ್ನು ಅವಲೋಕಿಸಿ, ನಮ್ಮ ಬಿಡಾರಕ್ಕೆ ಬಂದು ಊಟಮಾಡಿದೆವು. ಕೊಂಚ ವಿಶ್ರಮಿಸಿ, ಶ್ರೀರಂಗಪಟ್ಟಣಕ್ಕೆ ಹೋಗಿ, ಹಲವಾರು ಸ್ಥಳಗಳಲ್ಲಿ ಟಿಪ್ಪುಸುಲ್ತಾನನ ಕೈವಾಡವನ್ನು ಕಂಡು, ಶ್ರೀರಂಗನಾಥ ಮಂದಿರಕ್ಕೆ ತೆರಳಿ ತೀರ್ಥಪ್ರಸಾದವನ್ನು ಸ್ವೀಕರಿಸಿದೆವು. ರಾತ್ರಿ ಕನ್ನಂಬಾಡಿಗೆ ತೆರಳಿ, ವೃಂದಾವನದಲ್ಲಿ ಬಗೆ ಬಗೆ ಬಣ್ಣಗಳ ಕಾರಂಜಿಗಳ ಸೊಬಗನ್ನು ಕಣ್ತುಂಬಾ ಸವಿದೆವು. ಅಂದು, ಬೆಂಗಳೂರಿನ ಯಾರೋ ಇಬ್ಬರು ಶ್ರೀಮಂತ ಸಾಹುಕಾರರು ೨೦೦ ರೂಪಾಯಿ ತೆತ್ತು, ಸ್ಪೆಶಲ್ಲಾಗಿ ೨ ಘಂಟೆಗಳ ತನಕ ವಿದ್ಯುದ್ದೀಪಗಳನ್ನು ಹಾಕಿಸಿದ್ದರಂತೆ, ಇಲ್ಲವಾದರೆ ನಾವಾದರೂ ನೂರು ರೂಪಾಯಿ ತೆತ್ತು ಒಂದು ಘಂಟೆಯತನಕ ವಿದ್ಯುದ್ದೀಪಗಳನ್ನು ಹಾಕಿಸುವ ಸಿದ್ಧತೆಯಲ್ಲೇ ಬಂದಿದ್ದೆವು. [ಸಾಮಾನ್ಯವಾಗಿ, ಬುಧವಾರ, ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಮಾತ್ರ ವೃಂದಾವನದ ಕಮಿಟಿಯವರೇ ವಿದ್ಯುದ್ದೀಪಗಳನ್ನು ಹಾಕಿಸುವರು. ಇತರ ದಿನಗಳಲ್ಲಿ, ಯಾರಾದರೂ ೧೦೦ ರೂಪಾಯಿ ಸಲ್ಲಿಸಿದರೆ, ಒಂದು ಘಂಟೆಯ ತನಕ ವಿದ್ಯುದ್ದೀಪಗಳನ್ನುರಿಸಲಾಗುವುದು]

ತಾ. ೭ರಂದು ಪ್ರಾತಃಕಾಲ ಎದ್ದು, ಶೌಚಾದಿಗಳಿಂದ ನಿವೃತ್ತರಾಗಿ, ಉಪಾಹಾರ ಸೇವಿಸಿ ಸುಮಾರು ೯ಕ್ಕೆ ಮೈಸೂರನ್ನು ಬೀಳ್ಕೊಂಡೆವು. ನಮ್ಮ ೪ ಬಸ್ಸುಗಳೂ ೩ ಕಾರುಗಳೂ ಜಯಘೋಷ, ಭಜನೆ, ಕೀರ್ತನೆಗಳನ್ನು ಮಾಡುತ್ತ ಮುಂದರಿದವು. ಮಡಿಕೇರಿಯಲ್ಲಿ ಮಧ್ಯಾಹ್ನದೂಟ ತೀರಿಸಿ, ಮಂಗಳೂರಿನಲ್ಲಿ ಸಾಯಂಕಾಲದ ಉಪಾಹಾರ ಪೂರೈಸಿ, ಸಾಯಂ ೬-೩೦ಕ್ಕೆ ಮೂಲ್ಕಿ ವೆಂಕಟರಮಣ ಮಂದಿರದಲ್ಲಿಳಿದೆವು. ಮಂದಿರದಲ್ಲಿ ಹಣ್ಣುಕಾಯಿ ಸಮರ್ಪಿಸಿ, ಪ್ರಸಾದ ಪಡೆದು, ಹೊರಟವರು ಸುಮಾರು ೯ಕ್ಕೆ ಉಡುಪಿ ಕಲ್ಪನಾ ಥಿಯೇಟರ ಬಳಿ ಬಂದು ಸೇರಿದೆವು. ಅಲ್ಲಿ ನಮ್ಮನ್ನು ಸ್ವಾಗತಿಸಲು, ಉಡುಪಿಯ ಸಾವಿರಾರು ನಾಗರಿಕರು ನೆರೆದಿದ್ದರು. ಪೆಟ್ರೊಮೆಕ್ಸ್ ದೀಪಗಳು ಬೇಂಡು ವಾದ್ಯ ಘೋಷಗಳೊಡನೆ ನಮ್ಮ ಬೃಹತ್ ಮೆರವಣಿಗೆಯು ಅಲಂಕಾರ ಥಿಯೇಟರ್ ಮಾರ್ಗವಾಗಿ, ರಥಬೀದಿಗಾಗಿ, ಶ್ರೀ ವೆಂಕಟರಮಣ ಮಂದಿರಕ್ಕೆ ಸಾಗಿತು. ಹಾರಾರ್ಪಣೆ, ಕಾಲಿಗೆ ಅಡ್ಡ ಬೀಳುವುದು, ಒಬ್ಬರು ಇನ್ನೊಬ್ಬರನ್ನು ಅಪ್ಪಿಕೊಳ್ಳುವುದು—ಇತ್ಯಾದಿ ಪಾವನ ದೃಶ್ಯಗಳು ಭಾವುಕರಲ್ಲಿ ರೋಮಾಂಚನವುಂಟುಮಾಡುತ್ತಿದ್ದವು.

ವೆಂಕಟರಮಣ ಮಂದಿರದಲ್ಲಿ ನಮಗೆಲ್ಲಾ ಭೋಜನದ ಏರ್ಪಾಡಾಗಿತ್ತು. ಸರ್ವರೂ ಶುಚಿರ್ಭೂತರಾಗಿ ದೇವರ ದರ್ಶನ ಪಡೆದು, ತಮ್ಮ ತಮ್ಮ ಯಾತ್ರಾಯಾಸವನ್ನು ನೀಗಿಸಿಕೊಂಡೆವು.

ಮರುದಿನ, ಸಾಮೂಹಿಕ ಹರಿಸೇವಾ ಸಮಾರಾಧನೆಯಾಯಿತು. ಒಬ್ಬಂಟಿಗರಾಗಿ, ಸಪತ್ನೀಕರಾಗಿ ತಮ್ಮ ತಮ್ಮ ಯಾತ್ರಾಫಲವನ್ನು ನಾವು ಶ್ರೀ ವೆಂಕಟರಮಣನ ಅಡಿದಾವರೆಗಳಲ್ಲಿ ಕೃಷ್ಣಾರ್ಪಣ ಮಾಡಿದೆವು. ಸಹಸ್ರಭೋಜನದ ತರುವಾಯ ವಸಂತ ಪೂಜೆಯಿದ್ದಿತು. ಅನಂತರ, ನೆರೆದ ಸ್ತ್ರೀ ಪುರುಷರಿಗೆಲ್ಲಾ ನಮ್ಮ ಯಾತ್ರಾನುಭವವನ್ನು ವಿವರಿಸಿ ಹೇಳಲಾಯ್ತು. ಪ್ರಸಾದ ವಿತರಣೆಯೊಂದಿಗೆ, ರಾತ್ರಿ ಸುಮಾರು ೧ ಘಂಟೆಗೆ ಸಮಾರಂಭವು ಕೊನೆಗೊಂಡಿತು

ಕೊನೆಯ ಮಾತು

ಈ ನಮ್ಮ ಒಂಭತ್ತು ದಿನಗಳ ಯಾತ್ರೆಯಲ್ಲಿ ಕೆಲವೊಂದು ಅವ್ಯವಸ್ಥೆಗಳೂ ಉಂಟಾಗಿವೆ. ಮೊದಲಾಗಿ, ನಮ್ಮ ಎಣಿಕೆಗೆ ಮೀರಿಯೇ ಹಣ ವೆಚ್ಚವಾಗಿದೆ. ಸಕಾರಣವಾಗಿ ಯಾ ವಿನಾಕಾರಣವಾಗಿ ತೀಕ್ಷ್ಣ ಮಾತುಗಳೂ ಸಹ ಕೆಲವರ ಬಾಯಿಯಿಂದ ಹೊರಟು ಬಂದಿವೆ. ಆದರೆ, ಇಷ್ಟು ಮಾತ್ರದಿಂದಲೇ ಯಾರೊಬ್ಬರ ವ್ಯಕ್ತಿತ್ವವನ್ನಳೆಯಲು ಬರುವುದಿಲ್ಲ. ಸಮಯಕ್ಕೆ ಸರಿಯಾಗಿ ನಿದ್ರೆಯು ಹಾಗೂ ಆಹಾರ ಪಾನೀಯಗಳ ಅಭಾವ, ಅಧಿಕವಾದ ಶಾರೀರಿಕ ಪರಿಶ್ರಮ—ಇವುಗಳಿಂದ ಮನುಷ್ಯನ ತಾಳ್ಮೆಯು ಬಾಡಮೋಲಾದರೆ, ಅದರಲ್ಲಿ ಆಶ್ಚರ್ಯಪಡಬೇಕಾದ್ದೇನೂ ಇರುವುದಿಲ್ಲ. ಅಲ್ಲದೆ, ಕೆಲವೊಂದು ಅವಘಡಗಳನ್ನೂ ನಾವು ಎದುರಿಸಬೇಕಾಗಿ ಬಂದೀತು ಹಾದಿಯಲ್ಲಿ ನಮ್ಮಲ್ಲೊಬ್ಬರ ಹೋಲ್ಡಾಲು ನಮಗರಿಯದೆ ಅಕಸ್ಮಾತ್ ಜಾರಿ ಬಿದ್ದು ಹೋಗಿದ್ದು, ಬಹಳ ನಂತರ ಬಂದ ಹಿಂದಿನ ಬಸ್ಸಿನವರು ಅದನ್ನು ಸುರಕ್ಷಿತವಾಗಿ ತಲುಪಿಸಿದರು. ಓರ್ವರ ಬಟ್ಟೆಬರೆ ಮತ್ತು ಹಣದ ಚೀಲವಿದ್ದ ಒಂದು ಟ್ರಂಕು ಕಾಣೆಯಾಗಿ, ಮರುದಿನ ಏನೂ ಹಲಾಕ್ ಆಗದೆ ಕೈಸೇರಿತು. ಪಾಪನಾಶಿನೀ

(೧೧ನೇ ಪುಟ ನೋಡಿರಿ)

ಪ್ರೊ. ಕು.ಶಿ. ಹರಿದಾಸ ಭಟ್ಟ, ಎಂ.ಎ.

ಅವರ ನವೀನ ಪುಸ್ತಕಗಳು ರೂ.ನ

ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ಐಶ್ವದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಪಟ್ಟಿಗಾಗಿ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧–೦೦
ಉತ್ತಮ ಪ್ರತಿ ರೂ. ೧–೫೦
ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ

ನಗೆಗಡಲು

ಮನೆಗೆ ಬೆಕ್ಕು ತಂದಾಗ

ರ

‘ಇಲಿಗಳ ಕಾಟ ಮಿತಿಮೀರಿ ಹೋಗಿದೆ!’ ಪೇಟೆಯಿಂದ ಮನೆಗೆ ವಾಪಸ್ ಬರೋವಾಗ, ಏನಾದರೂ ಅವಕ್ಕೆ ಸ್ವಲ್ಪ ತರ್ತೀರಾ? ಎಂದು ಹೇಳಿದಳು ನನ್ನಾಕೆ, ನಾನು ಮನೆಯಿಂದ ಸಂಜೆ ಹೊರಟಾಗ. ನನಗೆ ವಿಪರೀತ ಸಿಟ್ಟು ಬಂತು. ‘ಮನೇಲಿರೋದನ್ನೇ ತಿಂದುಕೊಂಡು ಬಿದ್ದಿರೋದಾದರೆ ಬಿದ್ದಿರಲಿ. ಅವಕ್ಕೆ ಅಂಗಡಿಯಿಂದ ಹಣಕೊಟ್ಟು ತಿಂಡಿ ತರೋಕೆ ಇಲ್ಲಿ ನಿನ್ನಪ್ಪ ಸಂಪಾದಿಸಿಡಲಿಲ್ಲ’ ಎಂದವನೇ ರೇಗುತ್ತಾ ಹೆಜ್ಜೆ ಕಿತ್ತೆ. ಆಗ ನನ್ನವಳು ನಗ್ತಾ ಹೇಳಿದ್ಲು—‘ಅಯ್ಯೋ, ಇದೇನ್ರೀ ತಪ್ಪಿ ತಿಳ್ಕೊಂಬಿಟ್ರಿ? ನಾನು ಹೇಳಿದ್ದು ತಿಂಡಿ ವಿಚಾರ ಅಲ್ಲ. ಅವನ್ನ ‘ಇಲ್ಲ’ ಅನ್ನಿಸಿ ಬಿಡೋಕೆ ಉಪಯೋಗಿಸುವ ಆ ‘ಇದು” ಇದೆಯಲ್ಲ. ಅದನ್ನೇ ನಾಲ್ಕಾಣೆ ಕೊಟ್ಟು ಒಂದು ಪೊಟ್ಟಣ ತನ್ನಿ ಅಂತಂದೆ ಅಷ್ಟೆ! ತಿಳೀತಾ?” ಆಗಂತೂ ನನ್ಗೆ ವಿಪರೀತ ನಾಚಿಗೆಯಾಯಿತು. ‘ಹಾಗೆಂದು ಆವಾಗ್ಲೇ ಸ್ಪಷ್ಟವಾಗಿ ಹೇಳ್ಬಾರ್ದಾಗಿತ್ತೇನೆ?’ ಎಂದು ಕೇಳಿದೆ. ಅದಕ್ಕವಳು, ‘ಬಾಯ್ಬಿಟ್ಟು ಗಟ್ಟಿಯಾಗಿ ಹಾಗೆಲ್ಲ ‘ಇಲಿಪಾಷಾಣ” ಅಂದ್ಬಿಟ್ರೆ ಬಟ್ಟೆಯ ಮೂಲೆಯಲ್ಲಿರುವ ಇಲಿಗ್ಳು ನನ್ಮಾತನ್ನ ಕೇಳಿಸ್ಕೊಂಡ್ಬಿಟ್ಟು ರಾತ್ರಿ ನಾನು ಅದನ್ನಿಟ್ಟರೆ ತಿನ್ನದೇ ಇದ್ಬಿಟ್ರೆ....ನಮ್ಮ ಪ್ರಯತ್ನ ದಂಡವಾಗುತ್ತಲ್ಲ!’ ‘ಅಂದ್ಳು’ ನನಗಾಗ ವಿಪರೀತ ನಗು ಬಂತು.

ಅಲ್ಲ! ನನಗೀಗ ಇದು ನಿಜವಾಗ್ಲೂ ನಗೋ ವಿಷ್ಯ ಅಲ್ಲ ಅಂತನ್ನಿಸ್ಬಿಟ್ಟಿದೆ! ಇತ್ತೀಚೆಗಂತೂ ಈ ಹೆಗ್ಗಣಗಳ ಕಾಟ ತಡೆಯಲಿಕ್ಕಾಗದಷ್ಟು ಆಗಿ ಹೋಗಿ ಬಿಟ್ಟಿದೆ—ನಮ್ಮನೆಯಲ್ಲಿ! ಅಬ್ಬಬ್ಬಬ್ಬಬ್ಬ—ಏನ್ ಸೈನ್ಯವಪ್ಪಾ ಅವದ್ದು? ಒಂದೊಂದ್ರಾತ್ರಿ ಅವು ಗುಂಪು ಗುಂಪಾಗಿ ಅಡಿಗೆ ಮನೆಗೆ ಧಾಳಿಯಿಟ್ಟಾಗ ನನ್ಗಂತೂ ಚೀನೀ ಸೇನೆ ನೆನಪಾಗಿ ಬಿಡತ್ತೆ. ಆಗ ಏನೇನ ನಾಹುತ ಅನರ್ಥ ಎಲ್ಲ ಆಗತ್ತೆ ಅಂತೀರಾ? ಸ್ವಲ್ಪ ಕೇಳಿ ಇವ್ರೇ? ಪಾತ್ರೆಗಳ ಉರುಳಾಟದಿಂದುಂಟಾಗುವ ಗಣಗಣಾಟ, ಇಲಿಮರಿಗಳ ಚೀರಾಟ, ಕೂಗಾಟ ಓಡೋಟ, ಹಾರಾಟ ಒಟ್ಟಾರೆ ನಮ್ಮ ಮನೆ ನಲವಾರು ವಿಚಿತ್ರಸ್ವರಗಳಿಂದ ತುಂಬಿಕೊಂಡು ಮನೆಯ ವಾತಾವರಣವೇ ಪತ್ತೇದಾರೀ ಕಾದಂಬರೀಕಾರರೆನ್ನುವಂತೆ ರುದ್ರಭೀಕರವಾಗಿ ಬಿಡುತ್ತದೆ, ಭಯಾನಕವಾಗುತ್ತದೆ. ಆಗ ‘ಚಂದಮಾಮ” ಸಂಚಿಕೆಯಲ್ಲಿ ಅಚ್ಚಾಗುವ ದೆವ್ವದ ಕಥೆಗಳ ನೆನಪಾಗಿ ‘ನೀರೊಳಗಿದ್ದರೂ ಬೆವರ್ದ ಉರಗ ಪಕ”ನ ಸ್ಥಿತಿಯೇ ನನ್ನದಾಗುತ್ತದೆ. ಇಷ್ಟೇನಾ ಅವುಗಳ ಉಪದ್ರವ?—ಊಹೂ! ಆ ಪ್ರಾಣಿಗಳು ನನ್ನ ಹಾಸಿಗೆಗೂ ಬರುತ್ತವೆ. ಆಗ ನಾನು ಬೆದರಿ, ಮುಸುಕು ಹಾಕಿಕೊಂಡು, ಉಸಿರನ್ನೂ ಗಟ್ಟಿಯಾಗಿ ಬಿಡದೆ, ನಿರ್ಜೀವ ಕೊರಡಿನಂತೆ ಬಿದ್ದುಕೊಳ್ಳಬೇಕಾಗುತ್ತದೆ. ಅಷ್ಟು ಭಯ, ನನಗಾ ಇಲಿಗಳೆಂದರೆ! ಅದಕ್ಕಾಗಿ ಕೆಲರಾತ್ರಿ ನಾನಾ ದೀಪವನ್ನು ಆರಿಸದೇ ಹಾಗೇ ಮಲಗಿ ನಿದ್ರಿಸುವುದುಂಟು; ಆದರೂ ಕೆಲವು ವೀರ ಮೂಷಿಕಗಳು ನಿರ್ಭಯದಿಂದ ತಮ್ಮ ರಾತ್ರಿಯ ಕಳ್ಳ ಸಾಗಣಿಕೆಯ ಕಾರ್ಯವನ್ನು ಸಾಗಿಸುವುದೂ ಉಂಟು.

“ಈ ಇಲಿಗಳ ಸಂಹಾರ ಮಾಡಲೇಬೇಕು”—ಆದರೆ ಅದಕ್ಕೇನಿದೆ ಉಪಾಯ? ನನ್ನ ಮಡದಿ ಹೇಳಿದಂತೆ ಇಲಿ ವಿಷವನ್ನು ತಂದು ಹಪ್ಪಳದೊಂದಿಗೆ ರಾತ್ರಿ ಇಲಿಗಳು ಸಂಚರಿಸುವಲ್ಲಿ ಇಟ್ಟು ನೋಡಿದೆ. ಆದರೆ ಆ ಇಲ್ಲಿಗಳು ಕನ್ನಡ ಪಠ್ಯಪುಸ್ತಕದಲ್ಲಿ ಹೇಳಲ್ಪಟ್ಟಂತೆ ಬಹು ಜಾಣ ಇಲಿಗಳಿರಬೇಕು. ಅವಕ್ಕೆ ಈ ವಿಷದ ಸುಳಿವು ಹೇಗೆ ತಿಳಿಯಿತೊ ಆ ಇಲ್ಲದ ಪರಮಾತ್ಮನೇ ಬಲ್ಲ. ಅದನ್ನು ಇಲಿಗಳು ಮುಟ್ಟಲೂ ಇಲ್ಲ, ಮೂಸಲೂ ಇಲ್ಲ. ಪರಿಣಾಮವೇನೆಂದರೆ, ಹಲವಾರು ಹಪ್ಪಳಗಳೂ ಇಲಿವಿಷದ ಕ್ರಯ ನಾಲ್ಕಾಣೆಯೂ ಹಾಳಾದುದೇ ಆಯ್ತು. ವಿನಾ ನಮ್ಮ ಮನೆಯಲ್ಲಿರುವ ಅಗಣಿತ ಇಲಿಗಳಲ್ಲಿ ಒಂದಾದರೂ ಇಲ್ಲವಾದುದು ಕಂಡುಬರಲಿಲ್ಲ. ಅವುಗಳ ಉಪಟಳ ಇನ್ನಷ್ಟು ಹೆಚ್ಚಾಯಿತು. ಧಾನ್ಯಗಳ ಡಬ್ಬಗಳನ್ನುರುಳಿಸಿ ಧಾನ್ಯದ ಬೀಜವನ್ನು ಅಡಿಗೆಮನೆಯಲ್ಲಿಯೇ ಬಿತ್ತುವುದು, ಎಣ್ಣೆ ಹಾಲು ಮೊದಲಾದ ದ್ರವ ಪದಾರ್ಥಗಳನ್ನು ಚೆಲ್ಲುವುದು, ನನ್ನ ಸಣ್ಣಮಗುವಿನ ತಲೆಕೂದಲನ್ನು ಮತ್ತು ನಾನು ಅಪಾರ ಆರೈಕೆಯಿಂದಲೂ ಪ್ರೀತಿಯಿಂದಲೂ ಬೆಳೆಸಿದ ಸೊಗಸಾದ ಮೀಸೆಯನ್ನು ವಿರೂಪಗೊಳಿಸುವುದು ...ಒಂದೇ ಎರಡೇ ಅವುಗಳ ಹಾವಳಿ. ಕೆಟ್ಟೆನಪ್ಪಾ ಕೆಟ್ಟೆ—ನಾನೀ ಮೂಷಿಕ ಸೈನ್ಯದಿಂದ.

ಹೆಗ್ಗಣಗಳು ಮನೆಯಲ್ಲಿಲ್ಲದಂತೆ ಮಾಡಲು ಏನೇನು ಕಾರ್ಯಕ್ರಮಗಳನ್ನೆಲ್ಲ ಕೈಗೊಳ್ಳಬಹುದೋ ಅವೆಲ್ಲವನ್ನೂ ಕೈಗೊಂಡೆ. ಕುಳಿತ ಕೂಡಲೇ ಧಮ್ಮೆಂದು ಬಾಗಿಲು ಮುಚ್ಚಿ ಕೊಳ್ಳುವ ಪೆಟ್ಟಿಗೆಯ ಪ್ರಯೋಗವೂ ಆಯಿತು. ಆದರೆ ಅದರಲ್ಲಿರುವ ತಿಂಡಿಯ ಆಸೆಗಾಗಿ ನನ್ನ ಕುಮಾರ ನಾಣಿ ಒಮ್ಮೆ ಪೆಟ್ಟಿಗೆಯಲ್ಲಿ ಕೈ ಇಟ್ಟು ಆದ ಅನರ್ಥದಿಂದ ಅದರ ಸಹವಾಸವನ್ನೆ ಬಿಟ್ಟು ಬಿಡಬೇಕಾಯ್ತು. ಇಲಿವಿಷ ಮೊದಲೇ ಹೇಳಿದಂತೆ ಪ್ರಯೋಜನಕಾರಿಯಾಗಲಿಲ್ಲ. ಪತ್ರಿಕೆಗಳಲ್ಲಿ ಬರುವ ಜಾಹೀರಾತುಗಳನ್ನು ನೋಡಿ V.P.P ಮೂಲಕ ಅವುಗಳನ್ನು ತರಿಸಿ ಇಲಿಗಳಿಗಿಟ್ಟೆ. ಇಲಿಗಳು ಅದರ ಸೇವನೆಯಿಂದ ಇನ್ನೂ ಅಷ್ಟು ಬೆಳೆದುವು. ಆ ಔಷಧಿಯ ಪರಿಣಾಮವಾಗಿ ನಮ್ಮ ಮನೆಯಲ್ಲಿ ಇಲಿಗಳ ಸಂಸಾರ ವೃದ್ಧಿಯಾಯಿತು....ಕೊನೆಗೆ “ಪಿತ್ರಿ ಪಕ್ಷ” ಸಾಪ್ತಾಹಿಕದ ಸಂಪಾದಕರ ಸಲಹೆಗಾಗಿ ಪತ್ರಬರೆದೆ - ಇಲಿಗಳಿಲ್ಲದಂತಾಗಲು ಏನು ಮಾಡಬೇಕು?’—ಎಂದು. ಮರು ಸಂಚಿಕೆಯಲ್ಲೇ ಸಂಪಾದಕರಿಂದ “ಬೆಕ್ಕು ಸಾಕಬೇಕು” ಎಂಬ ಉತ್ತರ ಬಂತು. “ಸರಿ, ಬೆಕ್ಕೊಂದನ್ನ ಸಾಕುವುದೇ ಸುಲಭೋಪಾಯ; ಇಷ್ಟೂ ತಿಳಿಯದ ನಾನೆಂತಹ ಬೆಪ್ಪುತಕ್ಕಡಿ?” ಎನಿಸಿತು ನನಗಾಗ! ‘ಬೆಕ್ಕು ಸಾಕಣೆಯ ಮುಖೇನ ಈ ಇಲಿಗಳ ವಂಶವನ್ನೇ ನಿರ್ಮೂಲ ಮಾಡುತ್ತೇನೆ” ಎಂಬ ಭೀಷ್ಮ ಶಪಥ ತೊಟ್ಟು ಕಾರ್ಯರಂಗಕ್ಕಿಳಿದೆ. ಹಾಗೂ ಜಾತಿ ಬೆಕ್ಕಿನ ಶೋಧನೆ ಮಾಡಲಾರಂಭಿಸಿದೆ.

ಅಂತೂ ಕೊನೆಗೊಬ್ಬನಲ್ಲಿ ಜಾತಿ ಬೆಕ್ಕು (ಬೆಕ್ಕಿನ ಜಾತಿಯದು?) ಕಂಡು ಬಂತು. ಕ್ರಯ ಕೇಳಿದೆ. ಅತ ಆಗ ಹೀಗೆಂದ. ‘ಸ್ವಾಮಿ, ಈ ಬೆಕ್ಕು ಬನಾರಸು ಜಾತಿಯದಲ್ಲ. ಇದಿದ್ದ ಮನೆಯಲ್ಲಿ ಇಲಿಗಳು ಬರ್ಕತ್ತಾಗುವುದೇ ಇಲ್ಲ. ..ಆದರೂ ನಾನೀ ಬೆಕ್ಕಿಗೆ ನಿಮ್ಮಿಂದ ಹಣ ಪಡೆಯಲಾರೆ. ನೀವು ಈ ಬೆಕ್ಕಿನ ನೆನಪಿಗಾಗಿ, ಇಂದಿನಿಂದ ಒಂದು ತಿಂಗಳವರೆವಿಗೆ ಒಂದೊಂದು ಸೇರು ಹಾಲನ್ನು ನಿಮ್ಮ ಮಾಣಿಯ ಹತ್ತಿರ ನಮ್ಮ ಮನೆಗೆ ಕಳುಹಿಸಿ ಅಷ್ಟೇ ಸಾಕು. ಇನ್ನೇನೂ ಬೇಡ!” ಎಂದು ಬೆಕ್ಕನ್ನು ನನಗೆ ‘ಮುಕ್ಕಟೆ’ ಕೊಡಲು ಒಪ್ಪಿದ. ನಾನು ಅದಕ್ಕೊಪ್ಪಿ, ಜೋಯಿಸರು ಹೇಳಿದ ಒಂದು ಶುಭ ಮುಹೂರ್ತದಲ್ಲಿ ಬೆಕ್ಕಿನಿಂದ ಗೃಹ ಪ್ರವೇಶ ಮಾಡಿಸಿದೆ. ಆ ದಿನ ನನಗೆ ಬಲು ಹಿಗ್ಗು. ಮಧ್ಯಾಹ್ನ ಮಲಗಿದವನು ‘ನಮ್ಮ ಮನೆಯ ಎಲ್ಲ ಮೂಷಿಕಗಳೂ ಪಡ್ಚ” ಆದಂತೆ ಕನಸು ಕಂಡೆ—ಅದು ಹಗಲುಗನಸು!

ಬೆಕ್ಕು ಮನೆಗೆ ಆಗಮಿಸಿತು. ನಿಜ! ಆದರೆ ಅದರಿಂದ ನಮ್ಮ ಮನೆಯ ಶಾಂತ ವಾತಾವರಣವೇ ಕಲಕಿ ಹೋಯಿತು. ನಮ್ಮಜ್ಜಿ ಬೆಕ್ಕು ಎದುರು ಬಂದರೇ ಸಾಕು. ತಣ್ಣೀರ ಸ್ನಾನಮಾಡಿ ಮಡಿಯಾಗುತ್ತಿದ್ದರು. ನನ್ನ ಮಗ ನಾಣಿ ಬೆಕ್ಕು ಎಲ್ಲಿ ಕಣ್ಣಿಗೆ ಬಿದ್ದರೂ ಸರಿಯೇ, ಅದನ್ನೆತ್ತಿಕೊಂಡು ಉಪಚರಿಸಲು ತೊಡಗುತ್ತಿದ್ದ. ಆಗ ‘ನಾಣಿಗೆ ಆಟ, ಬೆಕ್ಕಿಗೆ ಪ್ರಾಣಸಂಕಟ’ ಆಗುತ್ತಿತ್ತು. ನನ್ನಾಕೆಯಂತೂ, ‘ಈ ಹಾಳು ಬೆಕ್ಕನ್ನು ಮನೆಗೇಕೆ ತಂದಿರಿ? ಮನೆಯಲ್ಲಿನಿತೂ ಹಾಲು ಉಳಿಯುವುದಿಲ್ಲ!” ಎಂದು ಧುಮುಗುಟ್ಟುತ್ತಿದ್ದಳು. ನನಗೂ ಅದು ನಿಜ ಅನಿಸುತ್ತಿತ್ತು. ಆದರೆ ಎಲ್ಲರಿಗೂ ‘ಬೆಕ್ಕಿನಿಂದ ಮೊದಲು ಇಲಿಗಳ ಪರಿವಾರ ನಾಶವಾಗಲಿ. ಕೂಡ್ಲೇ ಈ ಬೆಕ್ಕನ್ನ ಮನೆಯಿಂದ ಹೊರಡಿಸಿ ಬಿಡೋಣ!’ ಎಂದು ಸಮಾಧಾನ ಹೇಳುತ್ತಿದ್ದೆ. ಆದರೆ ಬೆಕ್ಕು ಮನೆಗೆ ಕಾಲಿಟ್ಟು ತಿಂಗಳೆರಡು ಕಳೆದರೂ ಇಲಿಗಳು ಕಡಿಮೆಯಾದುದು ತಿಳಿದು ಬರಲೇ ಇಲ್ಲ. ಆ ಮೂಷಿಕಗಳು ನಮ್ಮ ಈ ಮಾರ್ಜಾಲ ಮಹಾಶಯನನ್ನು ಇನಿತೂ ಕೇರ್ ಮಾಡುತ್ತಿರಲಿಲ್ಲ. ಬದಲಾಗಿ ಈ ಮಹಾಮುನಿಯೇ ರಾತ್ರಿ ಬಂದೊಡನೆ ಆ ಇಲಿಗಳಿಗೆ ಹೆದರಿ ನಮ್ಮ ಯಾರಾದರೊಬ್ಬರ ಚಾಪೆಯಲ್ಲಿ ಬಂದು ಅಡಗಿ ಕುಳಿತುಕೊಳ್ಳುತ್ತಿದ್ದ. ಇಂತು ಬೆಕ್ಕಿಗೆ ಹಗಲು ಒಲೆಯ ಬದಿಯಾದರೆ ಇರುಳು ನಮ್ಮ ಹಾಸಿಗೆಯೇ ಆಶ್ರಯ ಸ್ಥಾನವಾಗುತ್ತಿತ್ತು. ನನಗೂ ‘ನಾನೇಕೆ ಈ ಕೊಳಕು ಬೆಕ್ಕನ್ನು ಮನೆಗೆ ತಂದೆನಪ್ಪಾ” ಅನಿಸತೊಡಗಿತು.

ಅದೂ ಹೆಣ್ಣು ಬೆಕ್ಕು. ಮನೆಗೆ ಬಂದ ತಿಂಗಳೆರಡು ಉರುಳುವಷ್ಟರಲ್ಲಿಯೇ, ಏಕ್‌ಧಮ್ ಒಂದೇ ಬಾರಿಗೆ, ನಾಲ್ಕು ಮರಿಗಳಿಗೆ ಜನನವಿತ್ತಿತು. ಆ ಮರಿಗಳ ಜನ್ಮದಿಂದ ನಮ್ಮ ಮನೆಯ ಪರಿಸ್ಥಿತಿ ಮಂತ್ರಿಗಳೆನ್ನುವಂತೆ, ಶೀರಾ ಹದಗೆಟ್ಟಿತು. ನಮ್ಮ ಅಜ್ಜಿಗಂತೂ ದಿನಕ್ಕೆ ಹದಿನಾರು ಬಾರಿ ತಣ್ಣೀರ ಸ್ನಾನ ಮಾಡಬೇಕಾಯಿತು. ‘ಹೀಗೆ ಇಡೀ ದಿವಸ ತಣ್ಣೀರಿನಲ್ಲಿಯೇ ಇದ್ದರೆ ಅವರಿಗೆ ಆರೋಗ್ಯ ಕೆಟ್ಟೀತು’ ಎಂದು ನನಗನಿಸಿತು. ಅಷ್ಟಲ್ಲದೆ ಸದಾ ಸರ್ವರ ಕಾಲು ಬದಿಯಲ್ಲಿ ಒಂದಲ್ಲ ಒಂದು ಬೆಕ್ಕಿನ ಮರಿಯೇ. ಒಮ್ಮೆ ಮನೆಗೆ ಬಂದ ಸ್ನೇಹಿತರೊಬ್ಬರು ಈ ಬೆಕ್ಕಿನ ಬಳಗವನ್ನು ಈಕ್ಷಿಸಿ, “ಇದೇನು? ನಿಮ್ಮ ಸಂಸಾರದ ಸದಸ್ಯರಿಗಿಂತ, ನಿಮ್ಮ ಬೆಕ್ಕಿನ ಬಳಗದ ಸದಸ್ಯರ ಸಂಖ್ಯೆಯೇ ಹೆಚ್ಚಿದೆಯಲ್ಲ!” ಎಂದಾಗಲಂತೂ ನನಗೆ ಬಲು ಬಲು ನಾಚಿಗೆಯಿಂದ ‘ಸತ್ತಷ್ಟ’ ಆಯಿತು. ಹಾಗೂ ಕ್ರೋಧವೂ ಬಂತು ಅನ್ನಿ. ಆ ಸ್ನೇಹಿತರು ಮರಳಿದುದೇ ತಡ ನನ್ನವಳು ನನ್ನನ್ನು ತರಾಟೆಗೆ ತೆಗೆದುಕೊಂಡಳು. “ಒಂದೋ ಇವುಗಳನ್ನು ನದಿಯಾಚೆ ಬಿಟ್ಟು ಬನ್ನಿ. ಇಲ್ಲವಾದರೆ ನಾನು ಒಂದೊಂದೇ ಮರಿಗಳನ್ನು ಒಲೆಯೊಳಗೆ ಉರಿಯುವ ಬೆಂಕಿಗೆ ಬಿಸುಟು ನಂತರ ತಾಯಿಯನ್ನೂ ಅಗ್ನಿಗೆ ಆಹುತಿಯಾಗಿತ್ತು ಮಾರ್ಜಾಲ ಮಹಾಯಜ್ಞವನ್ನೇ ಮಾಡಿಬಿಡುತ್ತೇನೆ” ಎಂದು ಬಿಟ್ಟಳು. ನನಗೂ ಆಕೆಯ ಅಭಿಪ್ರಾಯ ‘ಖರೇ’ ಅನಿಸಿತು.

ಬೆಕ್ಕಿನ ಆಗಮನದಿಂದುಂಟಾದ ಇನ್ನೊಂದು ಅಪಘಾತವನ್ನು ನಿಮಗರುಹಲು ಮರೆತೇ ಬಿಟ್ಟಿದ್ದೆನಲ್ಲ. ಈಗಲಾದರೂ ಜ್ಞಾಪಕಕ್ಕೆ ಬಂತು, ಮತ್ತೇನು? ಅದನ್ನೂ ತಿಳಿಸಿ ಬಿಡುತ್ತೇನೆ. ಬೆಕ್ಕು ನಮ್ಮ ಮನೆಗೆ ಕಾಲಿಟ್ಟಂದಿನಿಂದ ನಮ್ಮ ಮನೆಯಲ್ಲಿ ನೊಣಗಳು ಜಾಸ್ತಿ ಆಗಿ ಬಿಟ್ಟಿವೆ. ಅದು ಹೇಗೆ ಅನ್ನುವಿರಾ? ನಿಜವಾಗ್ಲೂ ಈ ವಿಷಯ ನಿಮ್ಮಂತೆ ನನಗೂ ಆಶ್ಚರ್ಯ ಕುತೂಹಲವನ್ನು ಕೆರಳಿಸುವ ವಿಚಾರವೇ ಆಗಿತ್ತು. ಆದರೆ ಎಡೆಬಿಡದೆ ನಡೆಸಿ

(೯ನೇ ಪುಟ ನೋಡಿ)

ಗೇಹ ರಾಜ್ಯದಲ್ಲಿ

ಕೊಳಕು ಹರಿವ ಸಂಜೀವಿನಿ ಲೋಕ

"ಹೌದ್ರಿ. ಸುದ್ದಿಯೊಂದನ್ನ ಕೇಳಿದ್ರ್ಯಾ?"

"ಏನು? ಯಾರ ಸುದ್ದಿಯಂತೆ ಇವತ್ತು?"

"ಅಲ್ಲಾ, ನಮ್ಮ...ರಿಗೆ ರಿಟೈರ್ಡ್ ಆಯ್ತಂತೆ."

"ಹೌದು. ಅದೇನು ಹೊಸ ಸುದ್ದಿ? ಆಗಿ ತಿಂಗಳೊಂದು ಕಳೆದೂ ಹೋಯ್ತು. ಅರುವತ್ತು ತುಂಬಿದಂದೇ ಅವರು ಕೆಲಸದಿಂದ ಹೊರಟು ಹೋದರು."

"ಏನಂತೀರಾ ನೀವು? ಏನು, ಅವರಿಗೆ ಅರುವತ್ತು ವರ್ಷ ಆಯ್ತೆ? ಸುಳ್ಳು ಹೇಳ್ತೀರಿ."

"ಸರಿ, ಹಾಗಾದ್ರೆ ನೀನೇ ಹೇಳು ಎಷ್ಟಾಗಬಹುದೂಂತ...?"

"ನೋಡಿ, ಕಬ್ಬಿಣದ ಕಡಲೆ ಕೊಟ್ಟರೂ ಜಗಿದು ಪುಡಿಗುಟ್ಟುವ ಶಕ್ತಿ ಅವರ ಹಲ್ಲಿಗಿದೆ...."

"ನಿಜಾನ್ನು. ಕಳೆದ ೪೦ ವರ್ಷಗಳಲ್ಲಿ ಅವರದೆಷ್ಟು ಕಬ್ಬಿಣದ ಕಡಲೆಗಳನ್ನು ಜಗಿದು ಪುಡಿಗುಟ್ಟಿದ್ದಾರೋ?"

"ತಲೆ ಕೂದಲು ಇನ್ನೂ ನರೆತಿಲ್ಲ" "ಅಕಾಲದಲ್ಲಿ ನರೆಗೂದಲಾದ ಅದೆಷ್ಟು ಜನರನ್ನವರು ಕಂಡಿದ್ದಾರೋ!"

"ದೇಹವಿನ್ನೂ ನಲುವತ್ತು ತುಂಬಿದಂತಿದೆ..."

"ಸರಿಕಣೆ, ನಾನು ಹುಟ್ಟಿದಾಗಲೂ ಹೀಗೇ ಇದ್ದರು. ಇಂದಿಗೂ ಹಾಗೆಯೇ ಇದ್ದಾರೆ."

"ಸಾಕಪ್ಪ, ಅವರ ಜೀವನ..."

"ಏಕೆ ಸಾಕು? ಅವರು ಇನ್ನೂ ಬಹಳಷ್ಟು ಮಳೆಗಾಲ ಹೀಗೇ ಉಳಿಯಬೇಕು."

"ಅದು ಸರಿ. ಇಲ್ಲವಾದರೆ ನಮ್ಮೂರ ನಿತ್ಯ ಸಂಚಾರಿಗಳ ಸಂಖ್ಯೆಯಲ್ಲಿ ಒಂದು ಕಡಿಮೆಯಾಗಬಹುದು."

"...ಹಾಗಂದ್ರೆ..."

"ಅಂದ್ರೆ, ನೋಡಿ ಪ್ರತಿನಿತ್ಯವೂ ಅವ್ರು ಮೇಲೆ ಇಂತ್ಹಾರಿ ಇಪತ್ತಿಗೂ. ಈಚೆ ಬರಬೇಕಾಗಿಲ್ಲವಾದ್ರೂ ಅವ್ರು ದಿನಾ ಬರ್ತಾ ಇರ್ತಾರಂತೆ."

"ಏನು ಮಾಡೋದು ಹೇಳು? ಕೆಲವರ ಸ್ವಭಾವವೇ ಹಾಗೆ. ಕೆಲಸ ಅವರನ್ನು ಬಿಟ್ರೂ ಅವ್ರು ಕೆಲಸವನ್ನು ಬಿಡೋಲ್ಲ."

"ಸರ್ಕಾರದ ನಿಯಮ ತಾನೆ? ಏನು ಮಾಡೋಕಾಗ್ತದೆ?"

"ನಿಯಮವಿಲ್ಲದೆ ಸ್ವೇಚ್ಛೆಯಿಂದ ನಿವೃತ್ತರಾದವರು ಮತ್ತೆ ವೃತ್ತಿಗಿಳಿಯಲು ಹಾತೊರೆಯುತ್ತಿರುವಾಗ ಇವರದೇನು ಮಹಾ? ತನ್ನ ಆಯುಷ್ಯವನ್ನೇ ಸವೆಸಿದ ಸ್ಥಳವನ್ನು ಕಾಣುವುದೂ ನಿವೃತ್ತ ಜೀವನದ ಸೌಖ್ಯಕ್ಕೊಂದು ಸಾಧನವಾಗಬಹುದು."

"ಅದು ಹೌದೂನ್ನಿ. ಅಲ್ಲ ನಿವೃತ್ತರಾದವರು ಮತ್ತೆ ವೃತ್ತಿಗಿಳಿಯುವುದೂಂತಂದ್ರಿ. ಅದು ಆಗುತ್ತದೆಯೆ ಎಂದಿಗಾದ್ರೂ......."

"ಸರ್ಕಾರ ಮತ್ತಿತರ ನೌಕರಿಯಲ್ಲಿ ಆಗುವುದಿಲ್ಲ ..."

"ಮತ್ಯಾವುದ್ರಲ್ಲಿ ಆಗ್ತದೆ?"

"ಅಯ್ಯೋ ಪೆದ್ದಿ, ಅಷ್ಟೂ ತಿಳಿಯೋಲ್ವೆ? ಲೋಕದಲ್ಲಿ ಯಾವುದೆಲ್ಲಾ ಆಗಬಾರ್ದೋ ಅದೆಲ್ಲಾ ಆಗೋ ಒಂದು ಸಂಜೀವಿನಿ ಲೋಕವೊಂದಿದೆ."

"ಅಯ್ಯಯ್ಯ...ಏನು ಹೇಳೀಂತಂದ್ರೆ ಶುರು ಮಾಡಿದ್ರು ಒಗಟು ನುಡಿಯೋದಕ್ಕೆ......."

"ಒಗಟಲ್ವೆ ಇದು......"

"ಮತ್ತೇನೂಂತ...."

"ಹ್ಞಾಂ...ಒಂದ್ರೀತಿಯಿಂದ ಒಗಟೇ ಅನ್ನು. ಹಾಗೇಂತನ್ನೋದಾದ್ರೆ, ಇದು ಭಾರಿ ಭಾರಿ ಒಗಟು."

"ಮತ್ತೂ ಅದೇರಾಗ...."

"ದೇವ್ರು ಕೊಟ್ಟರಾಗನೋಡು. ಬೇಡಾನ್ನೋಕಾಗುತ್ಯೆ?"

"ಏನೂಂತನ್ನೀಂದ್ರೆ..."

ಹೇಳಿದಲ್ಲ....ಅದು ಭಾರಿಭಾರಿ ಜಿಗುಟು ಒಗಟು. ನೋಡೋಣ ಅದ್ಯಾವುದೂಂತ ಹೇಳು..."

"..ಹ್ಞಾಂ ಹೇಳ್ಲೇಬೇಕೆ? ಆಯ್ತು ಹೇಳ್ತೀನಿ. ಹೇಳಿದ್ರೆ ಏನು ಕೊಡ್ತೀರಂತ..."

"ಏನೇ, ಇನ್ನೇನು ಬೇಕೇ ನಿನ್ಗೆ...."

"ಇನ್ನೇನು ಬೇಕೂಂತನ್ನೋದಕ್ಕೆ ಈಗಾಗ್ಲೇ ಏನು ಕೊಟ್ಟಿದ್ದೀರೀಂತ ಮಹಾ......"

"ಏ, ನೋಡೇ ಇಲ್ಲಿ....ನಾನು ಕೊಡ್ಲಿಲ್ವೆ ನಿನ್ಗೆ..."

"ಇಲ್ಲ ಇಲ್ಲ..ಇಲ್ಲ...."

"ನೋಡು ನನ್ನ ಮುಖ ಸರಿಯಾಗಿ ನೋಡಿಹೇಳೆ...ಏನೂ ಕೊಡ್ಲಿಲ್ವೆ ನಾನು ನಿನ್ಗೆ...."

"....ಅಯ್ಯಯ್ಯ....ಸತ್ಯ ನುಡಿದ್ರೆಯೂ ಕೋಪಿಸ್ಕೋತೀರಾ ಮತ್ತೆ...."

"ನೋಡು, ನಿನ್ನ ತಾಯ್ತಂದೆಯರು ನಿನ್ನನ್ನ ನನಗೆ ಕೊಟ್ರು. ಆದ್ರೆ ನೋಡು ನಾನು ನನ್ನನ್ನೇ ನಿನ್ಗೆ...."

"ಶೂ...ಬಾಯಿ ಮುಚ್ಚಿ...ಅದೆಲ್ಲಾ ಹೇಳೋ ಮಾತೆ?"

"ಮತ್ತೆ ನೀನಾಗಿ ನನ್ನ ಮಹಾತ್ಯಾಗವನ್ನು ಅರಿತು ಕೊಂಡಿಲ್ಲಾಂತಾದ ಮೇಲೆ ನಾನಾದ್ರೂ...."

"ಸಾಕು ಬಿಡೀಂದ್ರೆ......ಏನಾಗ್ಬೇಕು ಈಗ..."

"ಒಗಟಿಗೆ ಉತ್ತರ...."

"ಭಾರಿ ಭಾರಿ ಜಿಗುಟಾದ ಒಗಟಿಗೆ ಅಲ್ವೆ?"

"ಹ್ಞಾಂ..."

"ಹೇಳ್ತೀನೆ ತಡೀರಿ...ಅಂತಹ ಒಗಟು...ಒಗಟು....ಶಿಕ್ಷಣ ಕ್ಷೇತ್ರ ..."

"ಅಲ್ಲಾ........ಅದಕ್ಕೆಲ್ಲಾ ನಿಯಮ ಜೋರು, ನಡೀದಿದ್ರೂ ಪರ್ವಾಗಿಲ್ಲ. ಆದ್ರಿಂದ ಜಿಗುಟೇ ಇಲ್ಲ...."

"ಹಾಗಾದ್ರೆ....ಇದ್ದೇ ಇದೆಯಲ್ಲಾ ಅರ್ಥ ಶಾಖೆ.."

"ಅನರ್ಥವಾದ್ರೂ ಅರ್ಥದ ಲೇಖಾಚಾರಾನೇ ಮುಗಿಯೋದಿಲ್ಲ ಅದ್ರೂ ಅದೂ ಅಲ್ಲ..."

"ನಿಲ್ಲಿ ಹಾಗಾದ್ರೆ....ಹೇಳ್ತೀನೆ..."

"ನಿಂತೇ ಇದ್ದೇನೆಲ್ಲ ಮಾತ್ರವಲ್ಲ ನಿನ್ನ ಮಾತನ್ನು ಕೇಳುತ್ಲೂ ಇದ್ದೇನೆ..."

"ಸರಿ ಬಿಡಿ.. ನೀವನ್ನೋದು ರಾಜಕಾರಣ ಅಲ್ವೆ?"

"ಪರ್ವಾಗಿಲ್ಲ ಕಣೇ ನೀನು? ನಿನ್ನ ಬುದ್ಧಿಶಕ್ತಿಗೆ ಮೆಚ್ಚಿದೆ ಏನು ಕೊಡ್ಲಿ ನಿನಗೆ ಬಹುಮಾನ?"

"ಅಲ್ಲಾ, ಈಗ ತಾನೇ ನಿಮ್ಮನ್ನೇ ಕೊಡ್ಕೊಂಡಿದೀರೀಂತ ಅತ್ತುಕೊಂಡ್ರಿ ಮತ್ತೆ ಕೊಡ್ತೀರಂತೆ ಬಹುಮಾನ."

"ಅಂದ್ರೆ ಏನೂ ಬೇಡಾಂತ ಅಲ್ವೆ...?"

"ಏನೂ ಬೇಡಾಂತಲ್ಲ; ನೀವೊಬ್ರು ಇದ್ರೆ ಮತ್ತೇನು ಬೇಕೂಂತ..."

"ಸರೀನ್ನು, ಕಲ್ಪವೃಕ್ಷ ಬಳೀಲಿದ್ರೆ ಮತ್ಯಾವುದರ ಆಶೆ?"

"ನೀನೇ ಹೇಳಿ... ಅಲ್ಲ, ರಾಜಕಾರಣದಲ್ಲಿ ನಿವೃತ್ತಿ....ನಿವೃತ್ತಿ ಅಂದಿರಲ್ಲಾ..."

"ಹೋ, ಆ ಮಾತು ಅಲ್ವೆ? ಹೌದು ಜಯಪ್ರಕಾಶ ನಾರಾಯಣರು ರಾಜಕೀಯ ಬೇಡಾಂತ ತಿಲಾಂಜಲಿಯಿತ್ತು ಸ್ವೇಚ್ಛೆಯಿಂದ ವಿನೋಬಾ ಭಾವೆಯವರ ಶಿಷ್ಯತ್ವ ಸ್ವೀಕರಿಸಿ ಸರ್ವೋದಯ ಪ್ರಚಾರದಲ್ಲಿ ತೊಡಗಿದರೂ. ಅವರಿಗಿನ್ನೂ ರಾಜಕೀಯದಲ್ಲಿ ಆಸಕ್ತಿ ಇದೆ; ಆದರಲ್ಲಿಯೇ ಮರಳಿ ಉರುಳಲು ಅವರು ಬಯಸುವಂತಿದೆ...."

"ಅವ್ರೆ ತಾನೆ? ಅದೇನು ಹೊಸತಲ್ಲ ಬಿಡಿ. ಅದೆಷ್ಟೋ ಸಲ ಅವ್ರು ರಾಜಕೀಯ ಬಿಟ್ಟಿದ್ದಾರೆ; ಮತ್ತೆ ಸೇರಿದ್ದಾರೆ."

ಅದ್ಕೇ ಅನ್ನೋದು ನೋಡು. ರಾಜಕೀಯವನ್ನು ಬಿಟ್ರೂ ರಾಜಕೀಯ ಅವ್ರನ್ನು ಬಿಡೋದಿಲ್ಲಾಂತ."

"ಅಲ್ಲ, ಮೊನ್ನೆ ಅವ್ರೇನೋ ಕಾಶ್ಮೀರದ ಬಗ್ಗೆ ಅಂದ್ರಂತೆ.."

"ಹೌದು. ಒಂದು ದೇಶದಲ್ಲಿ ಎರಡು ಬಗೆಯ ಪೈಸೆ ನಾಣ್ಯ ಇರಬಾರದೂಂತ."

"ಅಂದ್ರೆ...ಕಾಶ್ಮೀರದ ಸೇರ್ಪಡೆ ಭಾರತದಲ್ಲಿ ಆಗಿಲ್ಲಾಂತ್ಲೇ...."

"ಏನೋ, ಅವರಿಗೇ ಗೊತ್ತು. ಆದ್ರೆ, ಕಾಶ್ಮೀರಿಗಳಿಗೆ ಸ್ವಯಂ ನಿರ್ಣಯಾಧಿಕಾರವನ್ನು ಕೊಡಬೇಕೆಂದು ಅವರು ಅಂದಿ

(೮ನೇ ಪುಟ ನೋಡಿರಿ)

ಅಪೇಕ್ಷೆಯನ್ನು ಮಾಡಿರಿ— ಏನಾದರೊಂದು ಅಪೇಕ್ಷೆ!

ಆಗ.... ... .

ಒಂದು ಸೇವಿಂಗ್ಸ್ ಬ್ಯಾಂಕ್ ಎಕೌಂಟನ್ನು ತೆರೆಯಿರಿ

ಮತ್ತು.........................

ನಿಮ್ಮ ಅಪೇಕ್ಷೆಯನ್ನು ನಿಜವಾಗಿಸಿರಿ.

ಯಾರಾದರೊಬ್ಬನು ನಿಶ್ಚಿತ ಮಾಯಾ ದೀಪವೊಂದನ್ನು ಪರಿಶೋಧಿಸುವ ತನಕ, ಅಮೂಲ್ಯ ಗುರಿ ಸಾಧಿಸಲು ಉಳಿತಾಯ ಖಾತೆಯೊಂದು ನಿಶ್ಚಿತ ದಾರಿಯಾಗಿದೆ. ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಉಳಿತಾಯವು ಸುರಕ್ಷಿತ, ಲಾಭಕರ ಮತ್ತು ಅನುಕೂಲವೂ ಆಗಿದೆ. ನಿಮ್ಮ ಸಿಂಡಿಕೇಟ್ ಬ್ಯಾಂಕ್ ಸೇವಿಂಗ್ಸ್ ಎಕೌಂಟನ್ನು ತೆರೆಯಿರಿ........... ಮತ್ತು ಅದನ್ನು ಕ್ರಮಬದ್ಧಗೊಳಿಸಿರಿ...........ಹಾಗೂ ಅಲ್ಲಾವುದ್ದೀನನು ಅದನ್ನು ಅಷ್ಟು ಉತ್ತಮವಾಗಿ ಹೊಂದಲಿಲ್ಲವೆಂಬುದನ್ನು ಕಂಡುಕೊಳ್ಳಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ
ಉಳಿಸಿರಿ
ಮತ್ತು ಕ್ರಮಬದ್ಧವಾಗಿ ಉಳಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್.

.......ವಿಶ್ವವ್ಯಾಪೀ ಬ್ಯಾಂಕಿಂಗಿಗಾಗಿ

ಶಾಖೆಗಳು 190

ಚಲಾವಣಾ ನಿಧಿ 57 ಕೋಟಿಗೂ ಮಿಕ್ಕಿದೆ.

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ ಇಂಗ್ಲಿಷ್ ಪತ್ರವ್ಯವಹಾರ ಮಾಡಲು ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲ್ಲಿ ಪತ್ರಲೇಖನ

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.

ಬೆಲೆ: ರೂ. 1—25.

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮಾಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.

ರೂ.1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟ್ನು ಪಡೆಯಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೩	೭-೫-೧೯೬೪	೨೬

ವಿದಾಯ, ಸ್ವಾಗತ

ಸುಮಾರು ಕಾಲು ಶತಮಾನಗಳ ದೀರ್ಘಾವಧಿಯಲ್ಲಿ ಮೈಸೂರಿನ ಮಹಾರಾಜರಾಗಿ, ರಾಜಪ್ರಮುಖರಾಗಿ ಮತ್ತೆ ರಾಜ್ಯಪಾಲರಾಗಿ ಕನ್ನಡಿಗರ ಸೇವೆ ಮಾಡಿ, ಕನ್ನಡಿಗರಿಂದ ಸೇವಿತರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ಮದ್ರಾಸ ರಾಜ್ಯಪಾಲರಾಗಿ ಅಧಿಕಾರ ವಹಿಸಿದರು. ಬದಲಾಗುತ್ತಿರುವ ಜಾಗತಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡು ನಡೆದ ಒಡೆಯರವರ ಮೇಲೆ ಎಲ್ಲ ಕನ್ನಡಿಗರಿಗೂ ಅಪಾರ ಪ್ರೀತ್ಯಾದರಗಳಿವೆ; ಗೌರವವಿದೆ. ಯದುವಂಶಸಂಭೂತರಾದ ಇವರಲ್ಲಿ ಪಾರಂಪರ್ಯವಾಗಿ ಬಂದಿರುವ ಹಲವು ಸದ್ಗುಣಗಳಿವೆ; ಈ ಗುಣಗಳ ಪರಿಣಾಮವಾಗಿಯೇ ಇವರು ಕನ್ನಡಿಗರ ಕಣ್ಣಾಗಿ ಪರಿಣಮಿಸಿದ್ದಾರೆ. ಈಗ, ಪ್ರಜಾಸತ್ತೆಯ ನಿಯಮದಂತೆ ಅವರು ತನ್ನ ರಾಜ್ಯವನ್ನು ಬಿಟ್ಟು ಬೇರೆ ರಾಜ್ಯಕ್ಕೆ ಹೋಗುತ್ತಾರೆ; ಇದು ದುರ್ಧರವೆನಿಸಿದರೂ ಅನಿವಾರ್ಯ; ರಾಜಭಕ್ತರಾದ ಕನ್ನಡಿಗರು ಈ ಘಟನೆಯಿಂದ ಪ್ರೇರಿತರಾಗಿ ಪ್ರಜಾಸತ್ತೆಗೆ ಸಂಪೂರ್ಣ ಹೊಂದಿಕೊಳ್ಳಬೇಕು. ಕರ್ನಾಟಕ ಸಿಂಹಾಸನಾಧೀಶರೆಂದು ಬಿರುದು ಭಾಜನ ರಾಜ ಮಹಾರಾಜ ಒಡೆಯರರೇ ಪ್ರಜಾಪ್ರಭುತ್ವದ ಮುಂದೆ ತಲೆಬಾಗಿ ಎಲ್ಲರಿಗೂ ಪಾಠಕಲಿಸಿದ್ದಾರೆ ಎಂದರೆ, ಅತಿಶಯೋಕ್ತಿಯಲ್ಲ.

ಶ್ರೀ ಜಯಚಾಮರಾಜರು ಸ್ವಯಂ ವಿದ್ವಾಂಸರು; ಕಲಾರಾಧಕರು, ಸಾಹಿತ್ಯಪ್ರೇಮಿಗಳು, ಉತ್ತಮ ಆಡಳಿತಗಾರರು; ಸದ್ಗುಣಸಂಪನ್ನರು, ಸದಾಚಾರಶೀಲರು; ವೇದಾಂತಿಗಳೂ ಹೌದು. ಜಗತ್ತಿನಾದ್ಯಂತ ಶ್ರವ್ಯ ವೇದಾಂತದ ಭಾಷಣ ಮಾಲೆಯ ಮೂಲಕ ಭಾರತೀಯ ಸಂಸ್ಕೃತಿಯ ದಾರಿದೀಪವೆನಿಸಿದರು; ಇದರಿಂದಾಗಿಯೇ ಅಂತಾರಾಷ್ಟ್ರೀಯ ಖ್ಯಾತಿವೆತ್ತವರು. ಇಂತಹರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದುದು ನಮ್ಮ ಸೌಭಾಗ್ಯ. ಆದರೆ, ಪ್ರಜಾಪ್ರಭುತ್ವದಲ್ಲಿ ಒಬ್ಬನೇ ಆಜೀವವಾಗಿ ಒಂದೇ ರಾಜ್ಯದಲ್ಲಿರುವುದು ಸಮಂಜಸವಲ್ಲವೆಂಬ ಅಭಿಪ್ರಾಯದಿಂದ ಈಗ ಅವರ ವರ್ಗಾವಣೆಯಾಗಿದೆ ಶ್ರೀ ಚಾಮರಾಜರು ಎಲ್ಲಿದ್ದರೂ ಅವರು ಮುಂದೆಯೂ ಮೈಸೂರಿನ ಮಹಾರಾಜರಾಗಿಯೇ ಉಳಿಯುವರು; ಕನ್ನಡಿಗರಿಗೂ ಅವರ ಮೇಲಿನ ಗೌರವ ಕಡಿಮೆಯಾಗುವುದಿಲ್ಲ.

ಶ್ರೀ ಜಯಚಾಮರಾಜರ ಸ್ಥಾನದಲ್ಲಿ ಶ್ರೀ ಎಸ್. ಎಂ. ಶ್ರೀನಾಗೇಶರು ಕರ್ನಾಟಕದ ರಾಜ್ಯಪಾಲರೆಂದು ಅಧಿಕಾರ ವಹಿಸಿದ್ದಾರೆ. ಇವರು ಮಿಲಿಟರಿ ವ್ಯಕ್ತಿ. ತಮ್ಮ ೨೦ನೆಯ ವಯಸ್ಸಿನಲ್ಲಿ ಭಾರತೀಯ ಸೇನಾಪಡೆಯನ್ನು ಸೇರಿದ ಶ್ರೀ ನಾಗೇಶರು ಸೇನೆಯ ಮಹಾದಂಡನಾಯಕರಾಗಿ ನಿವೃತ್ತರಾದರು ಆ ಮೇಲೆ ಅವರು ಅಸ್ಸಾಮು ಮತ್ತು ಆಂಧ್ರ ಪ್ರದೇಶ ರಾಜ್ಯಗಳಲ್ಲಿ ರಾಜ್ಯಪಾಲರಾಗಿ ದುಡಿದೀಗ, ನಮ್ಮ ರಾಜ್ಯಕ್ಕೆ ಬಂದಿದ್ದಾರೆ. "ಚಂದದ ನಾಡಾದ ಈ ರಾಜ್ಯಕ್ಕೆ, ಕನ್ನಡಿಗರಿಗೆ ಸೇವೆ ಮಾಡಲು" ತನ್ನನ್ನೇ ಮುಡುಪಿಟ್ಟ ಶ್ರೀ ನಾಗೇಶರು ಯಶಸ್ವೀ ರಾಜ್ಯಪಾಲರಲ್ಲಿ ಒಬ್ಬರು ಎನ್ನಬಹುದು. "ಜಯಚಾಮರಾಜರ ಆಳವಾದ ಪಾಂಡಿತ್ಯ, ಉದಾರ ಹೃದಯ, ವಿಶಾಲ ದೃಷ್ಟಿಗಳಿಂದ ಆ ಸ್ಥಾನಕ್ಕೆ ಬರುತ್ತಿರುವ ನನ್ನ ಜವಾಬ್ದಾರಿಯು ದೊಡ್ಡದೇ. ಈ ಹೊಣೆಗಾರಿಕೆಯನ್ನು ನಿರ್ವಹಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತೇನೆ" ಎಂದ ಶ್ರೀ ನಾಗೇಶರು ಸತ್ಯವನ್ನೇ ಆಡಿದ್ದಾರೆ.

ಇತಿಹಾಸ ಪ್ರಸಿದ್ಧವಾದ ಘಟನೆಯಿದು. ಇದುವರೆಗೆ ಮಹಾರಾಜ ವಂಶದವರ ಆಳಿಕೆಯಲ್ಲಿಯೇ ಬೆಳೆದು ಬಂದಿತ್ತು ಮೈಸೂರು. ಪ್ರಜಾಸತ್ತೆಯಲ್ಲಿ ಸ್ಥಾಪಿತಗೊಂಡಿರುವುದು ನಿಜವಾದರೂ ರಕ್ತಗತವಾಗಿ ಬಂದ ರಾಜಪ್ರಭುತ್ವದ ಸೋಂಕು ದೂರವಾಗಿಲ್ಲ. ಆದರೆ, ನಿಜವಾದ ಪ್ರಜಾಪ್ರಭುತ್ವದಲ್ಲಿ ವ್ಯಕ್ತಿನಿಷ್ಠೆಗೆ ಮಹತ್ವವಿಲ್ಲ. ಆದರೆ, ಹಳೆಯ ಮೈಸೂರಿಗರ ಮನೋವೃತ್ತಿಯು ಪ್ರಜಾಸತ್ತೆಗೆ ಹೊಂದಿಕೊಂಡು ಹೋಗುವುದು ಅಷ್ಟು ಸುಲಭವಾಗಿರಲಿಲ್ಲ ಮಹಾರಾಜರು ರಾಜ್ಯವನ್ನು ಬಿಟ್ಟು ಕೊಟ್ಟರೂ ಗುತ್ತಿಗೆದಾರರುಹಾಗೆ ಮಾಡಲು ಬಿಡುತ್ತಿದ್ದರು ಈ ಬಗೆಯ ಸಂಕುಚಿತ ಪ್ರವೃತ್ತಿಯೇ ರಾಜ್ಯ ವಿಭಜನೆಯಂತಹ ಅಪಸ್ವರಕ್ಕೂ ಮೂಲವಾಗಿದೆ. ಈಗ "ಮಹಾರಾಜ"ರ ಆಳಿಕೆಯಲ್ಲಿ ಕೊನೆಗೊಂಡು "ಸೈನಿಕಾಧಿಕಾರಿ"ಯ ಆಳಿಕೆ ಪ್ರಾರಂಭವಾಯಿತೆನ್ನಬಹುದು. ಇಲ್ಲಿಗೇನೇ ಪ್ರಜಾಸತ್ತೆ ಶಾಶ್ವತವಾಗಿ ರೂಪಿತವಾಗುವುದೆನ್ನುವಂತಿಲ್ಲ. ಆದರೂ ಅದಕ್ಕೆ ಪೂರ್ವಭಾವಿಯಾದ ಸಿದ್ಧತೆಯು ನಡೆಯುವ ಸದವಕಾಶ ಪ್ರಾಪ್ತವಾಯಿತೆನ್ನುವುದು ನಿರ್ವಿವಾದ. "ರಾಜ್ಯಪಾಲ ಪದವಿಯಲ್ಲಿದ್ದುಕೊಂಡು ಮಾಡಬಹುದಾದ ಕಾರ್ಯಗಳು ಬಹಳ ಕಡಿಮೆ. ಈ ಪದವಿಯು ಕೇವಲ ಅಲಂಕಾರ ಮೂರ್ತಿ"ಯೆಂಬ ಅಭಿಪ್ರಾಯ ಕೆಲವರಲ್ಲಿರಬಹುದಾದರೂ, ರಾಜ್ಯದ ಹಿತದೃಷ್ಟಿಯಿಂದ ಸರಕಾರಕ್ಕೆ ಸಲಹೆ ನೀಡುವುದು ಸಾಧ್ಯವಿದೆ. ಹಾಗಿರುವಾಗ. ಮೈಸೂರಿನ ರಾಜಕಾರಣವು, ನಿವೃತ್ತ ಮಿಲಿಟರಿ ವ್ಯಕ್ತಿಯನ್ನು ರಾಜ್ಯಪಾಲರನ್ನಾಗಿ ನೇಮಿಸಿದುದರಿಂದ ಸುಧಾರಿಸುವುದು ಸಾಧ್ಯವೆಂದು ಹೆಚ್ಚಿನವರು ನಂಬಿದ್ದಾರೆ. ಜನರ ಈ ನಂಬಿಕೆಯು ಈಡೇರುವಂತಾಗಲಿ.

ನೆಹರು—ಶೇಖ ಭೆಟ್ಟಿ

ನೆಹರು— ಶೇಖ ಅಬ್ದುಲ್ಲಾರ ಮಾತುಕತೆಯು ಸೌಹಾರ್ದಮಯ ವಾತಾವರಣದಲ್ಲಿ ನಡೆಯಿತೇನೋ ನಿಜ; ಆದರೆ, ಅದು ಸೌಹಾರ್ದವನ್ನುಳಿಸುವಲ್ಲಿ ಹೇಗೆ ಪರಿಣಾಮಕರವೆನಿಸೀತೆಂದು ಹೇಳುವುದು ಸಾಧ್ಯವಿಲ್ಲ. ನೆಹರುರವರು ಕಾಶ್ಮೀರವು ಭಾರತದಲ್ಲಿ ಸೇರಿಯಾಗಿದೆಯೆಂಬ ತನ್ನ ನೀತಿಯನ್ನು ಸ್ಪಷ್ಟಪಡಿಸಿದ್ದರೂ ಇರಬಹುದು. ಆದರೆ, ಶೇಖರ ವಾದವೊಂದೇ: "ಸೇರ್ಪಡೆಯ ಪ್ರಶ್ನೆಯು ಗೌಣವಾದುದು; ಶಾಂತ ವಾತಾವರಣ ನಿರ್ಮಾಣವು ಪ್ರಧಾನವಾದುದು." ಭಾರತ—ಪಾಕಿಸ್ತಾನ—ಕಾಶ್ಮೀರಗಳಲ್ಲಿ ಶಾಂತಿ ನೆಲಸುವಂತೆ ಮಾಡುವುದೇ ತನ್ನ ಜೀವನದ ಉದ್ದೇಶವೆಂದು ಸಾರುತ್ತಾರೆ ಶೇಖರು. ಭಾರತವು ತನ್ನ ಸೇನೆಯನ್ನು ಕಾಶ್ಮೀರದಿಂದ ಹಿಂದೆ ಕರೆಸಿಕೊಳ್ಳಬೇಕು, ಅಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಜನಮತಗಣನೆ ನಡೆಯಬೇಕು ಎಂಬುದಿವರ ವಾದವಿದ್ದಂತಿದೆ. ಆದರೆ, ಕಾಶ್ಮೀರದಲ್ಲಿ ಸದ್ಯವಿರುವ ಪರಿಸ್ಥಿತಿಯನ್ನು ಎಳ್ಳಷ್ಟನ್ನಾದರೂ ಬದಲಿಸಿದರೆ, ಅಶಾಂತಿಯು ತಲೆದೋರುವುದೆಂದು ಭಾರತೀಯ ಹಿರಿಯ ನಾಯಕರ ವಾದ. ಹೀಗಾಗಿ ಇದ್ದ ಸಮಸ್ಯೆ ಇದ್ದಂತೆಯೇ ಉಳಿದಿದೆ. ಶೇಖ—ನೆಹರು ಭೆಟ್ಟಿಯು ಅಂತಾರಾಷ್ಟ್ರೀಯ ಮಹತ್ವ ಪಡೆಯಿತಾದರೂ ಅದರಿಂದ ಅಂತಹ ಪರಿಣಾಮ ಮಾತ್ರ ಸಿಗಲಿಲ್ಲ. ಬದಲು ಮತ್ತಷ್ಟು ಕಸಿವಿಸಿಯನ್ನೇ ಅಂತಾರಾಷ್ಟ್ರೀಯ ವಲಯದಲ್ಲಿ ನಿರ್ಮಿಸಿದೆಯೆನ್ನಬೇಕಾಗುತ್ತದೆ. ಶೇಖರ ಹೇಳಿಕೆಗಳಿಂದ ಅವರು ಭಾರತದ ನೀತಿಯನ್ನು ಒಪ್ಪುವಂತೆ ತೋರುವುದಿಲ್ಲ; ಪಾಕಿಸ್ತಾನದ ಪಕ್ಷವನ್ನವರು ಬೆಂಬಲಿಸುವುದಿಲ್ಲ; ಸ್ವತಂತ್ರ ಕಾಶ್ಮೀರದ ಕನಸನ್ನು ಪ್ರಕಟಿಸುವುದಿಲ್ಲ. ಭಾರತ ಉಪಖಂಡದಲ್ಲಿ ಶಾಂತಿ ಸ್ಥಾಪನೆ—ಕಾಶ್ಮೀರದಲ್ಲಿ ಜನಮತಗಣನೆ ಇವು ಪರಸ್ಪರ ವಿರುದ್ಧವಾದ ಕಾರ್ಯಕ್ರಮಗಳು. ಹಾಗಾಗಿ ಶೇಖರ ನಿಲುಮೆಯಿನ್ನೂ ಅನಿರ್ದಿಷ್ಟವಾಗಿಯೇ ಇದೆ; ಅಥವಾ ಅವರು ಅಸ್ಪಷ್ಟ ನೀತಿಯನ್ನೇ ನೆಮ್ಮಿದ್ದಾರೆಯೆನ್ನಬೇಕಾಗುತ್ತದೆ. ಶೇಖರ ಅಭಿಪ್ರಾಯ ಪರಿವರ್ತಿಸುವುದು ಪ್ರಧಾನಿ ನೆಹರುರವರಿಂದ ಸದ್ಯ ಸಾಧ್ಯವಾಗಲಿಲ್ಲ ಎಂದರೂ ಅತ್ಯುಕ್ತಿಯಾಗಲಾರದು.

ಜಗತ್ಪರ್ಯಟನ

ಪಾಶ್ಚಾತ್ಯರ ಗಲಿಬಿಲಿ

ಸಂಯುಕ್ತರಾಷ್ಟ್ರ ಸಂಸ್ಥೆಯ ಭದ್ರತಾ ಮಂಡಲದಲ್ಲಿ ಈ ವರ್ಷದಲ್ಲಿ ಮೂರನೆಯ ಬಾರಿಗೆ ಕಾಶ್ಮೀರದ ಚರ್ಚೆ ಪ್ರಾರಂಭವಾಗಿದೆ. ಕಾಶ್ಮೀರ ಒಳಸಂಚಿನ ಪ್ರಕರಣದಲ್ಲಿ ಬಂಧಿತರಾಗಿದ್ದ ಅಲ್ಲಿನ ಮಾಜಿ ಪ್ರಧಾನಿ ಶೇಖ ಅಬ್ದುಲ್ಲಾ ಮತ್ತವರ ಸಂಗಡಿಗರ ಬಿಡುಗಡೆಯೊಂದನ್ನುಳಿದರೆ ಕಳೆದೊಂದೂವರೆ ತಿಂಗಳಲ್ಲಿ ಅಲ್ಲಿಯೂವ ಸ್ಥಿತ್ಯಂತರವೂ ನಡೆಯಲಿಲ್ಲ. ಆದರೆ, ಈ ಬಿಡುಗಡೆಯೇ ಅಂದು ಪಾಕಿಸ್ತಾನದ ಪರವಾಗಿದ್ದ ರಾಷ್ಟ್ರಗಳಿಗೆ ತಮ್ಮ ಹಿಂದಿನ ನೀತಿಯನ್ನು ಮುಂದುವರಿಸಲು ಆತಂಕವೊಡ್ಡಿದಂತಿದೆ. ಮೇಲಾಗಿ ತಾನು ಈ ಸಂದರ್ಭದಲ್ಲಾಡಿದ ವಿಶ್ವಾಸ ಘಾತದ ನಾಟಕವು ಭಾರತೀಯರಲ್ಲಿ ತೀವ್ರ ಪರಿಣಾಮ ಬೀರಿದೆಯೆಂದು ರಾಯಭಾರಿ ಚೆಸ್ಟರ್ ಬೌಲ್ಸ್‌ರಿಂದ ತಿಳಿದ ಅಮೆರಿಕೆಗೆ ಬಿಸಿ ತುಪ್ಪ ನುಂಗಿದಂತಾಗಿದೆ. ಹಾಗೆಯೇ ಉಳಿದ ಸದಸ್ಯ ರಾಷ್ಟ್ರಗಳೂ ಏನು ಮಾಡಬಹುದೆಂದು ಚಿಂತಿಸತೊಡಗಿವೆ.

ಬಸ್ಸು ತಪ್ಪಿಹೋಯ್ತು

ಬುಕಾರೊ ಉಕ್ಕಿನ ಕಾರಖಾನೆಗೆ ಸೋವಿಯತ್ ರಶ್ಯವು ೧೫ ೧೦೦ ಕೋಟಿಯ ನೆರವನ್ನು ನೀಡಲು ಮುಂದೆ ಬಂದಿದೆ. ಕಳೆದ ವರ್ಷ ಅಮೆರಿಕೆಯ ಕಾಂಗ್ರೆಸ್ ಈ ಯೋಜನೆಗೆ ಸಹಾಯ ನೀಡುವ ವಿಚಾರವನ್ನು ಮುಂದುವರಿಸಿತ್ತು. ಮುಂದೆ, ಭಾರತ ಸರಕಾರವೂ ತನ್ನ ಪ್ರಾರ್ಥನಾ ಪತ್ರವನ್ನು ಹಿಂದೆ ತೆಗೆದುಕೊಂಡಿತ್ತು. ಈ ಘಟನೆಯು ಅಮೆರಿಕೆಯಲ್ಲಿ ಮಹತ್ವದ ವಿಷಯವಾಗಿ ಪರಿಣಮಿಸಿದೆ. ಒಬ್ಬನಿದನ್ನು ವರ್ಣಿಸುತ್ತ, "ನಾವು ಮೊದಲಿಗೆ ಆಸ್ವಾನದಲ್ಲಿ ಬಸ್ಸನ್ನು ಕಳೆದು ಕೊಂಡೆವು; ಈಗ ಬುಕಾರೋದಲ್ಲಿಯೂ ಬಸ್ಸು ತಪ್ಪಿಹೋಯಿತು" ಎಂದಿದ್ದಾನೆ. ಅಂತೂ ನಿಕಟ ಭವಿಷ್ಯದಲ್ಲಿ ಬುಕಾರೊ ಕಾರಖಾನೆ ನಿರ್ಮಾಣಗೊಳ್ಳುವುದು ನಿಜವೆಂದಾಯ್ತು. ಮಂ ಶ್ರೀ ಸುಬ್ರಹ್ಮಣ್ಯಮರ ಆಶಾವಾದ ನಿರರ್ಥಕವಾಗಲಿಲ್ಲ.

ಜಯಪ್ರಕಾಶನಾರಾಯಣ

ಮಾತೇ ಮಾಣಿಕ್ಯವೆಂದಿದ್ದಾನೆ ಸರ್ವಜ್ಞಕವಿ. ಒಂದು ಮಾತನಾಡುವುದಕ್ಕೆ ಮೊದಲು ನೂರು ಯೋಚಿಸುವುದು ಅಗತ್ಯ. ಸರ್ವೋದಯನಾಯಕ ಜಯಪ್ರಕಾಶನಾರಾಯಣರು ಕಾಶ್ಮೀರಕ್ಕೆ ಜನಮತಾಧಿಕಾರ ನೀಡಬೇಕೆಂದಿದ್ದ ಮಾತಿಗೆ ಪ್ರತಿಕೂಲ ಕ್ರಿಯೆಗಳು ಈಗಾಗಲೇ ಗೋಚರವಾಗಿವೆ. ಅವರ ಪ್ರಾಣವು ಗಂಡಾಂತರಕ್ಕೆ ಗುರಿಯಾಗುವುದೆಂಬ ಎಚ್ಚರಿಕೆಯ ಪತ್ರಗಳು ಈಗಾಗಲೇ ಬರತೊಡಗಿವೆ. ಇದರಿಂದಾಗಿ ಅವರಿಗೆ ತಕ್ಕ ಭದ್ರತೆಯನ್ನೀಯುವುದು ಸರಕಾರಕ್ಕೆ ಅಗತ್ಯವಾಯಿತು. ಜನಾಭಿಪ್ರಾಯಕ್ಕೆ ಅಹ್ವಾನವಿತ್ತರೇನಾಗುವುದೆಂಬುದಕ್ಕಿದೊಂದು ಉದಾಹರಣೆಯಾದೀತು.

ರಾಜ್ಯದಲ್ಲಿ ಭ್ರಷ್ಟಾಚಾರ

ಭ್ರಷ್ಟಾಚಾರದ ವಿರೋಧವಾಗಿ ಕೈಗೊಂಡಿರುವ ಆಂದೋಲನದ ಪರಿಣಾಮವಾಗಿ ಕರ್ನಾಟಕ ರಾಜ್ಯದಲ್ಲಿಯೂ ವಿಸ್ತಾರವಾದ ವಿಚಕ್ಷಕ ಆಯೋಗವನ್ನು ಶೀಘ್ರದಲ್ಲಿಯೇ ಸ್ಥಾಪಿಸಲಾಗುವುದೆಂದು ತಿಳಿಯುತ್ತದೆ. ಸರಕಾರಿ ನೌಕರರ ಭ್ರಷ್ಟಾಚಾರ, ಅವಿಧೇಯತೆ ಮತ್ತು ಅದಕ್ಷತೆ—ಇವುಗಳನ್ನು ಕಂಡುಹಿಡಿದು ತನಿಖೆ ನಡೆಸಿ ದಂಡಿಸಲು ಸರಕಾರಕ್ಕೆ ಸಿಫಾರಸು ಮಾಡುವುದು ಈ ಆಯೋಗದ ಕೆಲಸ. ದಂಡಿಸುವ ಇಲ್ಲವೇ ಬಿಡುವ ಅಧಿಕಾರ ಮಾತ್ರ ಸರಕಾರಕ್ಕೆ ಸೇರಿದ್ದು.

ಸೇವೆಯ ಪ್ರತೀಕ

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಡಿ. ಸಿ. ಪಾವಟೆಯವರ ಪುತ್ಥಳಿಯೊಂದನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಧಾರವಾಡದಲ್ಲಿ ಅನಾವರಣ ಮಾಡಿದರು. ಶ್ರೀ ಪಾವಟೆಯವರ ವಜ್ರ ಮಹೋತ್ಸವದ ಅಂಗವಾಗಿ ನಿರ್ಮಿತವಾದ ಈ ಪುತ್ಥಳಿಯು ಕಂಚಿನದ್ದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಶ್ರೀ ಪಾವಟೆಯವರು ಸಲ್ಲಿಸುತ್ತಿರುವ ಅಮೂಲ್ಯ ಸೇವೆಯ ಕುರುಹೆಂದು ಶಿಕ್ಷಣ ಸಂಸ್ಥೆಗಳ ಆವಾರದಲ್ಲಿಯೇ ಇದನ್ನು ಸ್ಥಾಪಿಸಲಾಗಿದೆ

ನಸ್ಸೇರರ ಧೀರತೆ

ಸಂಯುಕ್ತ ಅರಬ ಪ್ರಜಾರಾಜ್ಯಕ್ಕೆ ಆರ್ಥಿಕ ದಿಗ್ಬಂಧನವನ್ನು ಹೇರಬೇಕೆಂಬ ಅಭಿಪ್ರಾಯವನ್ನು ಬ್ರಿಟನ್ನು ವ್ಯಕ್ತಪಡಿಸಿತ್ತು. ಆದರೆ, ಇದರಿಂದ ನಸ್ಸೇರರು ಧೃತಿಗುಂದಲಿಲ್ಲ. ಬ್ರಿಟನ್ನವು ಈ ಬಗೆಯ ದಿಗ್ಬಂಧನವನ್ನು ಹೇರುವುದಾದರೆ, ತಾವೂ

ಅಲ್ಲಲ್ಲಿಯ ಸುದ್ದಿ ಸಾರ

ಪ್ರತಿಭಟನಾ ದಿನಾಚರಣೆ— ಜೀವ ವಿಮಾ ಕಾರ್ಪೊರೇಶನಿನ ಉಡುಪಿ ಡಿವಿಜನಲ್ ಯೂನಿಯನಿನ ಆಶ್ರಯದಲ್ಲಿ ನೌಕರರು 'ಅಖಿಲ ಭಾರತ ಪ್ರತಿಭಟನಾ ದಿನಾಚರಣೆ'ಯನ್ನು ತಾ. 30.4.64ರಂದು ಯಶಸ್ವಿಯಾಗಿ ಆಚರಿಸಿದರು. ಉಡುಪಿಯ ಆಫೀಸುಗಳಲ್ಲಿ ದುಡಿಯುತ್ತಿರುವ ನೌಕರರು ಸಂಜೆ ಅಜ್ಜರಕಾಡಿನಲ್ಲಿರುವ ಡಿವಿಜನಲ್ ಆಫೀಸಿನ ಎದುರು ಮುಕಪ್ರದರ್ಶನವನ್ನು ನಡೆಸಿದರು. ಬಳಿಕ ಅಲ್ಲಿಂದ ನೌಕರರ ಮೆರವಣಿಗೆಯು ಘೋಷಣೆಗಳನ್ನೆಬ್ಬಿಸುತ್ತ ಉಡುಪಿಯ ಮುಖ್ಯ ಬೀದಿಗಳಲ್ಲಿ ಸಾಗಿತು.

ನಂತರ ಯೂನಿಯನಿನ ಕಾರ್ಯಾಲಯದಲ್ಲಿ ಶ್ರೀ. ಕೆ. ರಘುನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಕಾರ್ಯದರ್ಶಿ ಶ್ರೀ ಬಿ. ಟಿ. ಕೆದಿಲಾಯರು ಸಭೆಯ ಉದ್ದೇಶವನ್ನು ತಿಳಿಸಿ, ಜೀವವಿಮಾ ಕಾರ್ಪೊರೇಶನು ತನ್ನ ಆಡಳಿತ ವಿಧಾನದಲ್ಲಿ ಮಾಡಬೇಕೆಂದು ಎಣಿಸಿರುವ ಬದಲಾವಣೆಯು ದುಷ್ಪರಿಣಾಮಕಾರಿ ಎಂದು ತಿಳಿಸಿ, ನೌಕರರು ಈ ಸಂದರ್ಭ ಎಚ್ಚರವಾಗಿದ್ದು ಇದನ್ನು ಪ್ರತಿಭಟಿಸಬೇಕು ಎಂದರು. ಸಭಿಕರಲ್ಲಿ ಶ್ರೀಗಳಾದ ಬಿ. ವಿ. ಕೆದಿಲಾಯ ಹಾಗು ಸದಾಶಿವ ರಾಯರು ಮಾತಾಡಿ, ಉಡುಪಿ ಡಿವಿಜನಲ್ ಆಫೀಸಿನಂತಹ ಸಣ್ಣ ಡಿವಿಜನಲ್ ಆಫೀಸುಗಳನ್ನು ಬೆಂಗಳೂರುಗಳಂತಹ ದೊಡ್ಡ ನಗರಕ್ಕೆ ವರ್ಗಾಯಿಸುವುದರಿಂದಾಗುವ ಭೀಕರ ಸಮಸ್ಯೆಗಳನ್ನು ವಿವರಿಸಿ, ಅಧಿಕಾರದ ವಿಕೇಂದ್ರೀಕರಣದ ಈ ಕಾಲದಲ್ಲಿ ಇಂತಹ ಬದಲಾವಣೆ ಅನುಚಿತ ಹಾಗೂ ಸರಕಾರದ ಧೋರಣೆ ಧ್ಯೇಯಗಳಿಗೆ ವ್ಯತಿರಿಕ್ತವಾದುದು ಎಂದು ಹೇಳಿ ಉಡುಪಿ ಡಿವಿಜನಲ್ ಆಫೀಸನ್ನು ಉಡುಪಿಯಲ್ಲೇ ಸ್ಥಿರಗೊಳಿಸುವುದು ನಗರದ, ಪಾಲಿಸಿದಾರರ ಹಾಗೂ ನೌಕರರ ಹಿತದೃಷ್ಟಿಯಿಂದ ಅಗತ್ಯ ಎಂದರು. ಆ ಬಳಿಕ ಕಾರ್ಪೊರೇಶನು ಆಳವಡಿಸಬೇಕೆಂದಿರುವ ಹೊಸ ಆಡಳಿತ ವಿಧಾನವನ್ನು ಕೂಡಲೇ ಹಿಂತೆಗೆದುಕೊಂಡು ಈ ಕುರಿತು ನೌಕರರ ಸಂಘಗಳೊಡನೆ ಪರ್ಯಾಲೋಚನೆ ನಡೆಸಬೇಕೆನ್ನುವ, ತುಟ್ಟಿ ಭತ್ತೆಯನ್ನು ತಾ 1.1.64ರಿಂದ ಹೆಚ್ಚಿಸಬೇಕೆನ್ನುವ, ಇತ್ಯರ್ಥವಾಗದೆ ಉಳಿದಿರುವ ನೌಕರರ ಸವಲತ್ತುಗಳ ಕುರಿತು ಕೂಡಲೇ ಮಾತುಕತೆ ನಡೆಸಬೇಕೆನ್ನುವ ಹಾಗೂ ಜೀವನ ವೆಚ್ಚದ ಬೆಲೆ ಸೂಚಿಯನ್ನು ಶಾಸ್ತ್ರೀಯ ರೀತಿಯಿಂದ ಸರಿಪಡಿಸಬೇಕೆನ್ನುವ ನಿರ್ಣಯಗಳು ಅವಿರೋಧವಾಗಿ ಮಂಜೂರಾದವು.

ಬ್ರಿಟನನ್ನ ದಿಗ್ಬಂಧ ಗೊಳಿಸಲು ಶಕ್ತನೆಂದಿದ್ದಾರೆ ಅವರು. ಮಧ್ಯಪ್ರಾಚ್ಯದ ಎಣ್ಣೆ ಗಣಿಗಳಿಂದ ಸಾಕಷ್ಟು ಲಾಭಮಾಡುವ ಬ್ರಿಟನ್ನವನ್ನು ಕಂಗಾಲು ಗೊಳಿಸಲು ಹೆಚ್ಚಿನ ತ್ರಾಸವಿಲ್ಲ; ತಮ್ಮ ಆರ್ಥಿಕ ಬೆಳವಣಿಗೆಯನ್ನು ಮಾಡಿಕೊಳ್ಳಲು ತಾವು ಸಮರ್ಥರಿದ್ದೇವೆ ಎನ್ನುತ್ತಾರೆ. ಅವರು.

ಮಾತೃ ಭಾಷೆಯಲ್ಲಿ ಶಿಕ್ಷಣ

ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಶ್ರೀ ಮಾಳಿಯವರು ಹಿಂದಿಯು ಶಿಕ್ಷಣ ಮಾಧ್ಯಮ ವಾಗಲಾರದೆಂದೂ ರಾಜ್ಯ ಭಾಷೆಗಳು ಬೆಳೆದು ಬರುವವರೆಗೆ ಇಂಗ್ಲಿಷ್ ಬೋಧ ಭಾಷೆಯಾಗಿ ಮುಂದುವರಿಯುವುದು ಸರಿಯಲ್ಲವೆಂದೂ ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮ ಮಾಡಿದಾಗಲೇ ಅದು ಸಮೃದ್ಧವಾಗುವುದು ಮತ್ತು ಶಿಕ್ಷಣವೂ ಪರಿಣಾಮಕಾರಿಯಾಗುವುದೆಂದೂ ಹೇಳುತ್ತಾರೆ. ಯಾವ ದೊಡ್ಡ ದೇಶದಲ್ಲಿಯೂ ವಿದೇಶಿ ಭಾಷೆಯು ಶಿಕ್ಷಣ ಮಾಧ್ಯಮವಾಗಿರುವುದಿಲ್ಲ. ಆದುದರಿಂದ ನಮ್ಮ ದೇಶದಲ್ಲಿಯೇ ಇಂಗ್ಲಿಷ್ ಏಕೆ ಮುಂದುವರಿಯಬೇಕು? ಎಂದವರ ಸವಾಲು.

ಉಡುಪಿ ರೋಟರಿ ಕ್ಲಬ್— ರಾಮಾಯಣದ ಬಗ್ಗೆ ಸಂಶೋಧನೆ ಇನ್ನೂ ನಡೆಯುತ್ತಿದೆ ಎಂದು ಬಾಗಲಕೋಟೆಯ ಬಸವೇಶ್ವರ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಡಾ| ಚಿದಂಬರ ಎನ್. ದೇಶಪಾಂಡೆಯವರು ತಾ. 28-4-64ರಂದು ಉಪೇಂದ್ರಬಾಗ್‌ನಲ್ಲಿ ಸಾಪ್ತಾಹಿಕ ಸಭೆ ಸೇರಿದ್ದ ರೋಟೇರಿಯನ್ನರುಗಳನ್ನುದ್ದೇಶಿಸಿ ಮಾತನಾಡುತ್ತಾ, ವಾಲಿಯ ಮರಣ ಮತ್ತು ಸೀತೆಯ ಅಗ್ನಿ ಪರೀಕ್ಷೆಯ ಉದಾಹರಣೆಗಳನ್ನು ಡಾ| ದೇಶಪಾಂಡೆಯವರು ವಿವೇಚಿಸಿ, ವಾಲಿಯನ್ನು ರಾಮ ಕೊಂದನೆಂದೂ, ಸೀತೆಯ ಬದಲಾಗಿ ಶಬರಿಯನ್ನು ಅಗ್ನಿ ಪರೀಕ್ಷೆಗೆ ಒಳಪಡಿಸಲಾಯಿತೆಂದೂ ಸಂಶೋಧಕರು ತೀರ್ಮಾನಿಸಿರುವುದಾಗಿ ನುಡಿದರು. ನಾವು ಪರಿಗಣಿಸುವಂತೆ ರಾಮ ದೇವರಾಗಿರಲಿಲ್ಲವೆಂದೂ, ಆತನು ಮಹಾ ರಾಜತಂತ್ರಜ್ಞನಾಗಿದ್ದನೆಂದೂ ಅವರು ಹೇಳಿದರು

ಬರುವ ವರ್ಷಕ್ಕೆ ವಿವಿಧ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳ ಹೆಸರುಗಳನ್ನು ಶ್ರೀ ರಮೇಶ ಪೈ ಘೋಷಿಸಿದರು. ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ| ಕೃಷ್ಣ ರಾವ್‌ರವರು ಬರುವ ವರ್ಷದಲ್ಲಿ ಎಲ್ಲ ಸದಸ್ಯರ ಸಹಾಯ ಹಾಗೂ ಸಹಕಾರವನ್ನು ಕೋರಿದರು

ತಾ 3. 5 64ರಂದು ಜಪಾನಿನ ರಾಷ್ಟ್ರೀಯ ದಿನವನ್ನು ಆಚರಿಸುವುದಕ್ಕಾಗಿ ಏರ್ಪಡಿಸಿದ್ದ ರೋಟರಿ ಸಮಾರಂಭದಲ್ಲಿ ಇಬ್ಬರು ಜಪಾನೀಯರು ಗೌರವ ಅತಿಥಿಗಳಾಗಿದ್ದರು. ಜೀವ ಶಾಸ್ತ್ರಜ್ಞರಾದ ಶ್ರೀ ತೋಶಿಜೋ ಸಾವಡಾ ಮತ್ತು ಆಹಾರ ಜೋಪಾಸನೆಯ ಇಂಜಿನಿಯರ್ ಶ್ರೀ ಅಕಿಯೋಯಾನೋರವರು ಮಂಗಳೂರಿನ ಮತ್ಸ್ಯ ಜೋಪಾಸನಾ ಕೇಂದ್ರದಲ್ಲಿ ತಜ್ಞರಾಗಿದ್ದಾರೆ. ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ರಮೇಶ ಪೈ ಸ್ವಾಗತ ಭಾಷಣ ಮಾಡಿ ಜಪಾನಿನಲ್ಲಿ ಅನೇಕ ಅಡೆತಡೆಗಳಿದ್ದರೂ ಅದು ಪ್ರಪಂಚದಲ್ಲಿ ಅತಿ ಹೆಚ್ಚು ಉತ್ಪಾದನೆ ಮಾಡುವ ರಾಷ್ಟ್ರಗಳಲ್ಲೊಂದಾಗಿದೆ ಎಂದರು. ನಮ್ಮೆರಡು ದೇಶಗಳ ಬಾಂಧವ್ಯ ಹೆಚ್ಚು ಹೆಚ್ಚಾಗಿ ವರ್ಧಿಸಲಿ. ಎಂದು ಹಾರೈಸಿದರು. ಅತಿಥಿಗಳ ಭಾಷಣದ ಬಳಿಕ ಡಾ| ಟಿ. ಎಂ ಎ ಪೈಗಳು ಮಾತನಾಡಿ ಜಪಾನೀಯರ ಕರ್ತೃತ್ವ ಶಕ್ತಿಯನ್ನು ಹೊಗಳಿದರು.

ಜನ್ಮ ದಿನಾಚರಣೆ — ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯ ರಿಜಿಸ್ಟ್ರಾರ್ ಡಾ| ಟಿ. ಎಂ. ಎ ಪೈಯವರು ಅಮೋಘ ಸಾಧನೆಗಳನ್ನು ಮಾಡಿದ್ದಾರೆಂದು ತಿರುಚನಾಪಳ್ಳಿಯ ಸೀತಾಲಕ್ಷ್ಮಿ—ರಾಮಸ್ವಾಮಿ ಕಾಲೇಜಿನ ಸ್ಥಾಪಕ—ಅಧ್ಯಕ್ಷ, ಪದ್ಮಶ್ರೀ ದಿವಾನ್ ಬಹದೂರ್, ಎನ್, ರಾಮಸ್ವಾಮಿ ಅಯ್ಯರ್ ತಾ. 3.4.64ರಲ್ಲಿ ಡಾ| ಪೈಯವರ ೬೬ನೇ ಜನ್ಮದಿನ ಸಂದರ್ಭದಲ್ಲಿ ಸಿಂಡಿಕೇಟ್ ಬ್ಯಾಂಕ್ ಸಭಾಭವನದಲ್ಲಿ ನಡೆದ ಅಕಾಡೆಮಿ ಸ್ಥಾಪನಾ ದಿನದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ನುಡಿದರು. ಶ್ರೀ ಅಯ್ಯರ್‌ರವರು ಡಾ| ಪೈಯವರ ಶಿಲಾ ಪ್ರತಿಮೆಯೊಂದನ್ನು ಅನಾವರಣ ಮಾಡಿದರು. ಇಲ್ಲಿರುವ ವಿವಿಧ ಸಂಸ್ಥೆಗಳೇ ಡಾ| ಪೈಯವರ ಚಿರಸ್ಮಾರಕವಾಗಿವೆ ಎಂದರು.

ಡಾ| ಮಾಧವ ಪೈಯವರು ಜನ್ಮದಿನದ ಸಂದೇಶ ಕೊಡುತ್ತಾ ವಿದ್ಯಾ ಸೌಲಭ್ಯಗಳನ್ನು ಸರಿಯಾಗಿ ಒದಗಿಸಿದರೆ, ನಮ್ಮ ದೇಶ ಜಗತ್ತಿನಲ್ಲೇ ಅತಿ ಶ್ರೀಮಂತ ರಾಷ್ಟ್ರವಾಗಬಲ್ಲುದೆಂದರು.

ಕಾಸರಗೋಡಿನ ಎಡ್ವಕೇಟ್, ಶ್ರೀ ಕೆ. ಪಿ. ಮಾಧವರಾವ್‌ರವರು ಅಭಿನಂದನಾ ಭಾಷಣ ಮಾಡಿದರು.

ಶ್ರೀ ಟಿ. ಎ. ಪೈ, ಸ್ವಾಗತ ಭಾಷಣ ಮಾಡುತ್ತ, ನಮ್ಮ ದೇಶದಲ್ಲಿ ಡಾ|| ಪೈಯವರು ಮಾನವಬಲದ ಪ್ರಾಮುಖ್ಯತೆಯನ್ನು ತಿಳಿದುಕೊಂಡಿರುವ ಏಕೈಕ ವ್ಯಕ್ತಿಯಾಗಿದ್ದಾರೆಂದರು. ಶುಭ ಸಂದೇಶಗಳನ್ನು ಶ್ರೀ ರಮೇಶ ಪೈ ಓದಿದರು. ಶ್ರೀ ಎ ಜೆ. ಆಲ್ಸೆಯವರು ವಂದನಾರ್ಪಣೆ ಮಾಡಿದರು.

ಕುಂಬ್ಳೆ— ಕುಂಬಳೆ ನಗರ ಅಭಿವೃದ್ಧಿ ಸಂಘ ಮಣಿಪುರ ಸೆಂಟ್ರಲ್ ಕ ದರ ಉದ್ಘಾಟನಾ ಸಮಾರಂಭವು ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ತಾರೀಕು 25-4-64ರಂದು ಶ್ರೀ ಜಿ. ಆರ್. ದೇಸಾಯಿ ಇವರಿಂದ ನೆರವೇರಿಸಲ್ಪಟ್ಟಿತು. ರಾತ್ರಿ ಶ್ರೀ ಶ್ರೀಶ ಬಲ್ಲಾಳರ ಅಧ್ಯಕ್ಷತೆಯಲ್ಲಿ ಶ್ರೀ ವಿರೋಟ ಯಕ್ಷಗಾನ ಕಲಾ ಮಂಡಳಿಯವರಿಂದ ಬಯಲಾಟಗಳು ನಡೆದವು

ತಾ. 26-1-64ರಂದು ಉಡುಪಿಯ ಕಲ್ಪನಾ ಥಿಯೇಟರಿನಲ್ಲಿ ವಿವಾಹವಾದ ನೂತನ ವಧೂವರರು ಶ್ರೀ ಕೆ. ರಘುರಾಮ ಶೆಟ್ಟಿ, ಎಂ ಡಿ. (ದಿ| ಕಣಂಜಾರು ಬರ್ಕೆ ದೇಜು ಹೆಗ್ಗಡೆರ ಪುತ್ರ) ಮತ್ತು ಶ್ರೀಮತಿ ಶಾಲಿನಿ ಆರ್. ಶೆಟ್ಟಿ (ಮಾಜಿ ಎಂ. ಎಲ್. ಎ. ಶ್ರೀ ಬಿ ಜಗಜ್ಜೀವನದಾಸ್ ಶೆಟ್ರ ಪುತ್ರಿ)

ತಾ. 4.2.64ರಂದು ಶ್ರೀ ರಘುರಾಮ ಶೆಟ್ರು ಉನ್ನತ ಶಿಕ್ಷಣಕ್ಕಾಗಿ ತಿರುಗಿ ಅಮೆರಿಕಕ್ಕೆ ತೆರಳಿರುವರು. ತಾ. 26-4-64ರಂದು ಅವರನ್ನು ಸೇರಿಕೊಳ್ಳಲು ಅವರ ಪತ್ನಿ ಶ್ರೀಮತಿ ಶಾಲಿನಿ ಆರ್. ಶೆಟ್ಟಿ ಅವರೂ ವಿಮಾನ ಮೂಲಕ ಅಮೆರಿಕಕ್ಕೆ ತೆರಳಿದ್ದಾರೆ.

ದ ಕ. ಜಿಲ್ಲಾ ಸಹಕಾರಿ ಸಮ್ಮೇಳನ— ತಾ 1-5 64ರಂದು ಮಂಗಳೂರು ಬೆಸೆಂಟ್ ಶಾಲೆಯ ಪರಿಸರದಲ್ಲಿ ದ. ಕ. ಜಿಲ್ಲಾ ಸಹಕಾರಿ ಸಮ್ಮೇಳನದ ಉದ್ಘಾಟನಾ ಸಮಾರಂಭವು ಶ್ರೀ ಟಿ. ಎ. ಪೈಯವರಿಂದ ಶ್ರೀ ಎಂ. ವೈ. ಘೋರ್ಪಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಪೈಯವರು ತಮ್ಮ ಭಾಷಣದಲ್ಲಿ, ಜನರು ಸರಕಾರದ ತತ್ವಗಳಲ್ಲಿ ನಂಬುಗೆಯನ್ನಿಡದೆ ಕಾರ್ಯಗಳನ್ನೆಸಗಿದಲ್ಲಿ ದೇಶಕ್ಕೆ ತುಂಬಾ ಹಾನಿಯುಂಟಾಗಬಹುದು, ಸರಕಾರವೂ ಕಾನೂನುಗಳನ್ನು ರಚಿಸುವಾಗ ಜನರ ಸ್ವಸ್ಫೂರ್ತಿ, ಸ್ವಾತಂತ್ರ್ಯಕ್ಕೆ ಬೆಲೆಕೊಟ್ಟು ಪ್ರಗತಿಗೆ ಕಾರ್ಯವೆಸಗಲು ಆಸ್ಪದ ಒದಗಿಸಿ ಕೊಡಬೇಕಾದುದು. ಅಗತ್ಯವೆಂದರು. ಮುಂದುವರಿಸುತ್ತಾ ಅವರು ಭೂಸುಧಾರಣೆ, ನಿರುದ್ಯೋಗ ಸಮಸ್ಯೆಗಳನ್ನು ವಿವರಿಸಿ, ಅದಕ್ಕೆ ಪರಿಹಾರೋಪಾಯಗಳನ್ನು ತಿಳಿಸಿದರು.

ಶ್ರೀ ಆರ್. ಭರಣಯ್ಯನವರಿಂದ ಶ್ರೀ ಮೊಳಹಳ್ಳಿ ಶಿವರಾಯರ ಭಾವಚಿತ್ರ ಅನಾವರಣವಾಯಿತು. ಅಧ್ಯಕ್ಷ ಭಾಷಣವಾದ ಬಳಿಕ, ಕೊನೆಯಲ್ಲಿ ಶ್ರೀ ಬಿ. ಆನಂದ ರೈಯವರು ಧನ್ಯವಾದಗಳನ್ನರ್ಪಿಸಿದರು.

ದ.ಕ.ಜಿಲ್ಲಾ ಸಹಕಾರೀ ಸಮ್ಮೇಳನದ ಎರಡನೇ ದಿನ ತಾ 2ರಂದು, ದೇಶದಲ್ಲಿ ಕೃಷಿ ಉತ್ಪನ್ನವು ಹೆಚ್ಚಾಗ ಬೇಕಾಗಿದ್ದರೆ ಕೃಷಿ ಮಾಡುವ ಕೃಷಿಕನಿಗೆ ತನ್ನ ಉತ್ಪನ್ನಕ್ಕೆ ಒಂದು ಕನಿಷ್ಠವಾದ ಬೆಲೆಯು ದೊರಕ ಬೇಕು. ಮತ್ತು ಕೃಷಿಯು ಒಂದು ಲಾಭದಾಯಕ ಉದ್ಯಮವೆಂದು ತೋರಿಸಿಕೊಡ ಬೇಕಾದುದು ಅತೀ ಅಗತ್ಯ. ಇದಕ್ಕೆ ಸರಕಾರ ಮುಂದೆ ಬರಬೇಕು ಎಂಬ ನಿರ್ಣಯವನ್ನು ಪರಿಷತ್ತು ನಿರ್ಣಯಿಸಿದೆ. ಶ್ರೀಗಳಾದ ಪಿ ಶ್ರೀನಿವಾಸ ರಾವ್, ಎಸ್. ನರ್ಸಪ್ಪಯ್ಯ ಎಂ. ಎಲ್. ಸಿ. ಶ್ರೀ ಮುಣೀಲ್ ಶ್ರೀನಿವಾಸ ನಾಯಕ್, ಎಂ. ಎಲ್. ಎ. ಎಸ್. ಕೆ. ಅಮೀನ್, ಬಿ. ಮಂಜಯ್ಯ ಹೆಗ್ಡೆ, ವೆಂಕಪ್ಪಯ್ಯ, ಎಂ. ಎನ್. ಚಾಟ, ಎಸ್. ಮುಕುಂದರಾವ್ ಎಂ ಎಲ್.ಸಿ, ಟಿ. ರಮೇಶ ಪೈ, ಎ. ಜೆ. ಆಲ್ಸೆ, ಮೊದಲಾದವರು ಠರಾವುಗಳನ್ನು ಮಂಡಿಸಿ ಚರ್ಚೆಯಲ್ಲಿ ಭಾಗವಹಿಸಿದ್ದರು ಅಧ್ಯಕ್ಷ ಶ್ರೀ ಎಂ. ವೈ. ಘೋರ್ಪಡೆ ಯವರು ಕೃಷಿಕನ ಆರ್ಥಿಕ ಸಮಸ್ಯೆ ಪರಿಹಾರವಾದರೆ ಮಾತ್ರ ಪ್ರಗತಿ ಸಾಧ್ಯವೆಂದರು. ಅಂತ್ಯದಲ್ಲಿ ಶ್ರೀ ಬಿ. ನಾರಾಯಣ ನಾಯಕರು ಧನ್ಯವಾದ ಸಮರ್ಪಿಸಿದರು.

ಕುರಾಡಿ— ತಾ. 25.4.64ರಂದು ಕುರಾಡಿ ಶಾಲಾ ವಾರ್ಷಿಕೋತ್ಸವ ಮತ್ತು ಪ್ರಾಕ್ತನ ವಿದ್ಯಾರ್ಥಿ ಸಂಘದ ವರ್ಷಾಂತ್ಯೋತ್ಸವವು ಶ್ರೀ ಎಸ್ ಧರ್ಮಸಾಮ್ರಾಜ್ಯ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಮೆನೇಜರ್ ಡಾ. ಕೆ ಕೆ ಶೆಟ್ಟಿಗಾರರು ಸ್ವಾಗತಿಸಿದರು. ಶ್ರೀ ಕೆ. ಸಂಜೀವ ಶೆಟ್ರು ಪ್ರಾಕ್ತನ ವಿದ್ಯಾರ್ಥಿ ಸಂಘದ ವರದಿಯನ್ನೋದಿದರು ಶ್ರೀ ಧರ್ಮಸಾಮ್ರಾಜ್ಯರಿಗೂ, ಶ್ರೀ ಎಂ. ಮಧ್ವರಾಜ್ ಎಂ. ಎಲ್. ಎ. ಯವರಿಗೂ ಗ್ರಾಮಸ್ಥರ ಪರವಾಗಿ ಶ್ರೀ ಕೆ. ಅಣ್ಣಪ್ಪ ಶೆಟ್ರು ಮಾನಪತ್ರವನ್ನರ್ಪಿಸಿದರು. ಜಿಲ್ಲಾ ಪ್ರಚಾರಾಧಿಕಾರಿ ಶ್ರೀ ಎಲ್ ಸುಬ್ರಮಣ್ಯ ಐಯ್ಯರ್‌ರವರು ಬಹುಮಾನ ವಿತರಣೆ ಮಾಡಿದರು. ಶ್ರೀಗಳಾದ ಕೆ. ಬಾಲಕೃಷ್ಣ ಆಚಾರ್ಯ, ಕೆ. ಜಗನ್ನಾಥ ಆಳ್ವ, ರಾಯ. ಎಂ. ಮಧ್ಯಸ್ಥ ಮತ್ತು ಪದ್ಮರಾಜವರ್ಮ ಇವರು ಶಾಲಾ ಚಟುವಟಿಕೆಗಳನ್ನು ಕೊಂಡಾಡಿ ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು.

ಶ್ರೀರಾಮನಾಮ ಪ್ರಚಾರಿಣೀ ಮಂಡಳಿ, ಉಡುಪಿ—ಇದರ ಎರಡನೇ ಸಂಕೀರ್ತನಾ ಸಮಾರಂಭವು ತಾ. 26-4-64ರಂದು ಶ್ರೀ ಹನುಮಜ್ಜಯಂತಿಯ ಅಂಗವಾಗಿ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ಅಖಂಡ ರಾಮನಾಮ ಸಂಕೀರ್ತನೆಯೊಂದಿಗೆ ಜರಗಿತು. ಶ್ರೀಮತಿ ಲೀಲಾಬಾಯಿ ಶರ್ಮ ಅವರು ಸಮಾರಂಭವನ್ನು ಉದ್ಘಾಟಿಸಿದರು. ಕುಮಾರಿ ವೀಣಾ ಅವರು ಗತ ಸಮಾರಂಭದ ವರದಿ ವಾಚನ ಮಾಡಿದರು. ಉ. ಲಕ್ಷ್ಮೀನಾರಾಯಣ ಕಿಣಿಯವರು ಮಂಡಳಿಯ ಉದ್ದೇಶ ಹಾಗೂ ಚಟುವಟಿಕೆಗಳನ್ನು ವಿವರಿಸಿ ಬರುವ ತಿಂಗಳು ಅಮೇರಿಕಾ ಪ್ರವಾಸಕ್ಕೆ ತೆರಳಿರುವ ಡಾ| ಟಿ. ಎಂ. ಎ. ಪೈ ಅವರಿಗೆ ಶುಭವನ್ನು ಹಾರೈಸಿದರು. ಡಾ| ಪೈಯವರು ಸಮಾರೋಪಣ ಭಾಷಣ ಮಾಡುತ್ತಾ ರಾಮನಾಮದ ಮಹಿಮೆಯನ್ನು ವಿವರಿಸಿದರು. ವಿಠಲಾಚಾರ್ಯರು ಕೃತಜ್ಞತೆಗಳನ್ನರ್ಪಿಸಿದರು.

ಉಪಕಾರ ಸ್ಮರಣೆ

ಕಳೆದ ವಾರ ನವಯುಗದ ಸಂಸ್ಥರಣಕ್ಕಾಗಿ ಡಾ| ಎಚ್ ಚಂದ್ರಶೇಖರ ಶೆಟ್ಟಿ, ಹಿರಿಯೂರು, ಡಾ| ಬಿ ಎಂ. ಶೆಟ್ಟಿ, ಬಗಳೂರು, ಡಾ| ಕೆ. ಎಸ್. ಶೆಟ್ಟಿ, ಹೊಳಲ್ಕೆರೆ, ಇವರು ಸ್ವತಃ ಹೃತ್ಪೂರ್ವಕ ನೆರವಿತ್ತದಲ್ಲದೆ ಆಯಾಯ ಊರಲ್ಲಿ ಹಲವಾರು ಚಂದಾದಾರರನ್ನು ಒದಗಿಸಿಕೊಟ್ಟು ಸಹಕರಿಸಿರುತ್ತಾರೆ. ಡಾ| ಬಿ. ಕೆ. ಹೆಗ್ಡೆ, ನರಸಿಂಹರಾಜಪುರ, ಡಾ| ಕಸ್ತೂರಿ ಎಸ್. ಶೆಟ್ಟಿ, ಹೊಳಲ್ಕೆರೆ, ಶ್ರೀ ಬಿ. ಎಸ್. ಬದ್ರಿನಾಥರಾವ್, ಜೂನಿಯರ್ ಇಂಜಿನಿಯರ್, ಹೊಳಲ್ಕೆರೆ ಇವರೂ ಕೆಲವು ಚಂದಾದಾರರನ್ನು ಮಾಡಿಕೊಟ್ಟಿರುತ್ತಾರೆ ನಮ್ಮ ಸಂಚಾರವು ಜಯಪ್ರದವಾಗುವಂತೆ ಡಾ| ಎ. ಪಿ. ಶೆಟ್ಟಿ ಕೊಪ್ಪ, ಡಾ| ಎ. ಎಂ. ಶೆಟ್ಟಿ, ಬೀರೂರು ಮತ್ತು ಓರ್ವ ಮಿತ್ರರು ಸಹಕರಿಸಿರುತ್ತಾರೆ, ಅಲ್ಲದೆ ಉಡುಪಿಯಲ್ಲಿ 'ಓರ್ವ ಹಿತೈಷಿ'ಗಳೂ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರೂ ಪ್ರೋತ್ಸಾಹಿಸಿ ಹರಸಿರುತ್ತಾರೆ. ಇವರೆಲ್ಲರಿಗೂ ನಮ್ಮ ಹಾರ್ದಿಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ. ಸಂಪಾದಕ.

ಜನತಾ ಉವಾಚ

ಸರ್ವೋದಯ ಕಾರ್ಯಕರ್ತರಾದ ಜಯಪ್ರಕಾಶನಾರಾಯಣರು ಕಾಶ್ಮೀರ ಪ್ರಶ್ನೆಯನ್ನು ಕಾಯಿದೆಯ ದೃಷ್ಟಿಯಿಂದ ನೋಡದೆ ನೈತಿಕ ಮತ್ತು ರಾಜಕೀಯ ಸಮಸ್ಯೆಯೆಂದು ಹೇಳಿದುದು ನಿಜಕ್ಕೂ ಗಂಡಾಂತರ ಕಾರಿಯಾಗಿದೆ. ಕಾಶ್ಮೀರವು ಭಾರತದಲ್ಲಿ ಈ ಹಿಂದೆಯೇ ವಿಲೀನವಾಗಿದೆಯೆಂದು ಭಾರತೀಯರೆಲ್ಲರೂ (ಕಾಶ್ಮೀರಿಗಳೂ ಸೇರಿ) ದೃಢವಾಗಿ ನಂಬಿರುವಾಗ, ರಾಷ್ಟ್ರೀಯ ಸಾರ್ವಭೌಮ್ಯಕ್ಕೆ ಸಂಬಂಧಿಸಿದ ಈ ಪ್ರಶ್ನೆಯನ್ನು ಗಾಳಿಪಟದಂತೆ ಆಕಾಶದಲ್ಲಿ ತೂರಿಬಿಡುವ ಜಯಪ್ರಕಾಶ ನಾರಾಯಣರ ಉದ್ಗಾರವು ಆಕಾಲಿಕವಾದುದು. ಸದ್ಯದಲ್ಲಿಯೇ ಪಾಕಿಸ್ತಾನದ ಸಂಚಾರವನ್ನೂ ಕೈಗೊಳ್ಳಲಿರುವ ಇವರ ಮಾತುಗಳಿಗೆ ಒಂದು ಮಿತಿಯಿರಲೇ ಬೇಕೆನಿಸುತ್ತದೆ. ಉಜ್ವಲ ರಾಷ್ಟ್ರೀಯವಾದಿಯೆಂದು ಹೆಸರಾದ ಜಯಪ್ರಕಾಶ ನಾರಾಯಣರು ರಾಷ್ಟ್ರೀಯ ಐಕ್ಯ ಮತ್ತು ಸಾರ್ವಭೌಮತೆಯ ಬಗ್ಗೆ ತೀವ್ರ ಎಚ್ಚರಿಕೆಯಿಂದಿರುವುದು ಅಗತ್ಯವೆನಿಸುತ್ತದೆ.

ಉಡುಪಿ. ಪದ್ಮನಾಭ ಭಟ್.

ಲೋಕಸಭೆಯಲ್ಲಿ ಮಂಡಿಸಿದ್ದ ಸಂವಿಧಾನಕ್ಕೆ ೧೭ನೆಯ ತಿದ್ದುಪಡಿ ವಿಧೇಯಕವು ಬಿದ್ದುಹೋದುದು ಹೆಚ್ಚಿನ ರಾಜ್ಯಗಳು ಮಂಜೂರು ಮಾಡಿಟ್ಟಿರುವ ಭೂಸುಧಾರಣಾ ವಿಧೇಯಕಕ್ಕೆ ಕುಠಾರಪ್ರಾಯವಾಯಿತು. ಆದರೂ ಇದೇ ವಿಧೇಯಕವನ್ನು ಈ ತಿಂಗಳ ಕೊನೆಯಲ್ಲಿ ವಿಶೇಷ ಅಧಿವೇಶನವನ್ನು ಕರೆದು ಮತ್ತೆ ಮಂಡಿಸಲಾಗುವುದೆಂದು ತಿಳಿಯುತ್ತದೆ. ಅಲ್ಲಿ ಅದು ಸಾಕಷ್ಟು ಬಹುಮತ ಪಡೆದು ಮಂಜೂರಾಗುವುದೂ ನಿರೀಕ್ಷಿತವೇ. ಆದರೂ ಮೊನ್ನೆ ದಿನದಂದು ಅದು ಬಿದ್ದುಹೋದುದಕ್ಕೆ ಕಾರಣವೇನೆಂಬುದನ್ನು ವಿವೇಚಿಸಬೇಕು. ಇನ್ನಿತರ ಉಪಸಮಿತಿಗಳ ಚುನಾವಣೆಯಲ್ಲಿ ಭಾಗವಹಿಸಲು ಹೊರ ಹೋದ ಸದಸ್ಯರು ಬರುವಾಗ ತಡವಾಯಿತೆಂಬುದು ಸಮುಚಿತ ಕಾರಣವೆನ್ನಬಾರದು. ಮಹತ್ವದ ವಿಧೇಯಕದ ಮೇಲೆ ಮತದಾನ ನಡೆಯುತ್ತಿರುವಾಗ ಸದಸ್ಯರೆಲ್ಲರಿಗೂ ಅದರಲ್ಲಿ ಭಾಗವಹಿಸುವ ಅನುಕೂಲತೆ ಕಲ್ಪಿಸಿಕೊಡುವುದು ಅಗತ್ಯವಿದೆ. ಸರಕಾರಿ ಪಕ್ಷ ಕಾಂಗ್ರೆಸಿನ ಪ್ರತೋದರರೇ ಈ ವಿಧೇಯಕವು ನಾಪಾಸಾಗುವುದಕ್ಕೆ ಹೊಣೆಗಾರರು ಎಂದರೂ ತಪ್ಪಾಗಲಾರದು. ಆದುದರಿಂದ ಇನ್ನು ಮುಂದಾದರೂ ಇಂತಹ ಸಂದರ್ಭಗಳಲ್ಲಿ ತೀವ್ರ ಎಚ್ಚರಿಕೆ ವಹಿಸುವುದು ಅಗತ್ಯವಲ್ಲವೆ?

ಉದ್ಯಾವರ, —ಸದಾನಂದ.

ಉಡುಪಿ ನಗರ ಸಭಾಕ್ಷೇತ್ರದಲ್ಲಿ ತೀವ್ರ ತರದ ವಾಹನಗಳ ಓಡಾಟ ಮುಖ್ಯ ಬೀದಿಗಳಲ್ಲಿರುವುದು ಸ್ವಾಭಾವಿಕ, ಇಲ್ಲಿನ ಎಲ್ಲ ಮುಖ್ಯ ರಸ್ತೆಗಳ ಪಕ್ಕದಲ್ಲಿಯೂ ದೊಡ್ಡ ದೊಡ್ಡ ಶಾಲೆ ಕಾಲೇಜುಗಳಿವೆ. ಇವುಗಳಿಂದ, ಮುಖ್ಯವಾಗಿ ಮಧ್ಯಾಹ್ನ ಮತ್ತು ಸಂಜೆಯ ಸಮಯದಲ್ಲಿ ನೂರಾರು ವಿದ್ಯಾರ್ಥಿಗಳು ಏಕಕಾಲದಲ್ಲಿ ರಸ್ತೆಗೆ ಇಳಿಯುವುದು ಸ್ವಾಭಾವಿಕ. ಆದರೆ ಈ ಶಾಲಾ ಪರಾರಗಳಲ್ಲಿ ಒಂದೇ ಒಂದು ಶಾಲಾ ಸೂಚನಾ ಫಲಕವಿಲ್ಲದಿರುವುದು ಶೋಚನೀಯ. ಮಧ್ಯಾಹ್ನದ ಉರಿಬಿಸಿಲಲ್ಲಿ ಕಣ್ಣು ತೆರೆಯಲಾರದ ಎಳೆಯ ಮಕ್ಕಳ ಮೇಲಿಯೇ ವಾಹನಗಳು ಚಿನ್ನಾಟವಾಡಿದ ಪ್ರಸಂಗಳು ಕೆಲವಿವೆ ಆದುದರಿಂದ ಹೈವೇ ವಿಭಾಗದವರು ತಮ್ಮ ನಿಯಂತ್ರಣದಲ್ಲಿರುವ ಮಾರ್ಗಗಳಲ್ಲಿ ನಗರಸಭೆಯವರು ಅವರ ವಶವಿರುವ ದಾರಿಯಲ್ಲಿ ಶಾಲಾಪರಾರದ ಸಂಕೇತದ ಬೋರ್ಡುಗಳನ್ನು ಹಾಕುವುದು ಅವಶ್ಯವಾಗಿದೆ. ಮುಖ್ಯವಾಗಿ ಉಡುಪಿ—ಮಣಿಪಾಲಗಳ ನಡುವೆ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆ—ಯು. ಕಮಲಾಬಾಯಿ ಹೈಸ್ಕೂಲುಗಳಿರುವ ಅಗಲಕಿರಿದಾದ ಮಾರ್ಗದಲ್ಲಿ ಇದರ ಆವಶ್ಯಕತೆ ಬೇಕೆಂಬಚ್ಚಿದೆ.

ಕುಂಜಿಬೆಟ್ಟು. —ಆನಂದ ಶೆಟ್ಟಿ

ನಮ್ಮ—ನಮ್ಮವರು

(೧ನೇ ಪುಟದಿಂದ)

ದಾನ ನೀಡಿ ಪುಣ್ಯಗಳಿಸಿದ್ದಾರೆ.

ತನ್ನ ಶಾಲೆ, ತನ್ನ ಶಾಲೆಯ ಅಧ್ಯಾಪಕರು, ಶಾಲೆಯ ವಿದ್ಯಾರ್ಥಿಗಳು— ಹಳೆಯ ವಿದ್ಯಾರ್ಥಿಗಳು, ವಿದ್ಯಾರ್ಥಿ ಪಾಲಕರು ಎಂದರೆ, ಅವರಿಗೆ ಎಲ್ಲಿಲ್ಲದ ಅಭಿಮಾನ. ಅವರಿಂದ ಶಿಕ್ಷಣ ಪಡೆದವರು ದೇಶದ ಮೂಲೆ ಮೂಲೆಗಳಲ್ಲೂ ಉಚ್ಚ ಸ್ಥಾನಾಪನ್ನರಾಗಿದ್ದಾರೆ. ಪ್ರಾಮಾಣಿಕ ಕರ್ತವ್ಯಪಾಲನೆ, ಪ್ರಿಯ ವಾಕ್ಯ, ಸದಾಚಾರ ಸಂಪನ್ನತೆ, ನಿಷ್ಕಳಂಕ ಮತ್ತು ಉದಾರ ಮನಸ್ಸು, ಮುಖದಲ್ಲಿ ಸದಾ ಮಿನುಗುತ್ತಿರುವ ಮಂದಹಾಸ ಮತ್ತು ೬೦ ತುಂಬಿದರೂ ದೃಢವಾದ ಉತ್ಸಾಹಯುಕ್ತವಾದ ವ್ಯಕ್ತಿತ್ವ— ಇವೇ ಅವರ ವೃತ್ತಿ ಸಾಫಲ್ಯದ ಗುಟ್ಟು ಎನ್ನಬೇಕು. ಒಬ್ಬ ಅಧ್ಯಾಪಕನು ಶಾಲೆಯ ಏಳಿಗೆಗಾಗಿ ಏನೇನೆಲ್ಲ ಮಾಡಬಹುದೋ ಅದೆಲ್ಲವನ್ನೂ ಅವರು ಮಾಡಿ ತೋರಿಸಿದ್ದಾರೆ. ಶಾಲಾ ಪರಿಸರದಲ್ಲಿ ಅವರು 'ಅಜಾತ ಶತ್ರು' ಎಂದರೂ ಸರಿಯಾಗುವುದು, "ಇಂತಹ ಆದರ್ಶ ಉಪಾಧ್ಯಾಯರು ವಯಸ್ಸು ತುಂಬಿತೆಂಬ ಕಾರಣದಿಂದ ನಿವೃತ್ತರಾಗುವುದು ಶಿಕ್ಷಣ ಕ್ಷೇತ್ರಕ್ಕೆ ಕೊರತೆ; ಇದಕ್ಕೆ ಸೂಕ್ತ ಉಪಾಯವನ್ನು ಸರಕಾರ ಯೋಚಿಸಬೇಕು" ಎಂದೊಬ್ಬರ ಮಾತು ಅಕ್ಷರಶಃ ನಿಜ. ಲಿಂಗಪ್ಪ ಶೆಟ್ಟರನ್ನು ಅವರ ಸಹೋದ್ಯೋಗಿಗಳು ವಿದ್ಯಾರ್ಥಿಗಳೂ ಹಳೆಯ ವಿದ್ಯಾರ್ಥಿಗಳೂ ಗೌರವಿಸಿದುದರಿಂದ ಶೆಟ್ಟರ ಗೌರವ ಹೆಚ್ಚುವುದಿಲ್ಲ; ಸತ್ಕರಿಸಿದವರ ಗೌರವವೇ ಹೆಚ್ಚುವುದು, ಒಳ್ಳೆಯದನ್ನು ಕಂಡುಕೊಳ್ಳುವವರು ಇನ್ನೂ ಇದ್ದಾರೆಂಬುದನ್ನು ಲೋಕಕ್ಕೆ ತೋರಿಸಿ ಕೊಡುವುದು.

ವಿಚಾರ ಕಿಡಿಗಳು.

ಜೇನುತುಂಬಿದ ಕೊಡವನ್ನೇ ಆದರೂ ಹೊರಗೆ ನವಿದರೆ ರುಚಿ ಸಿಗುವುದು ಹೇಗೆ?—

ಐಶ್ವರ್ಯವಂತರ ಮನೆಗೆ ಆದರೂ ನಿತ್ಯಹೋಗಿ ಬರುತ್ತಿರುವ ಬಡವನ ಕಷ್ಟ ಪರಿಹಾರ ಆಗುವ ಹಾಗೆ?

೦ ೦ ೦

ಚೆನ್ನಾಗಿ ಫಲಿತ ಒಳ್ಳೆಯ ಹಣ್ಣಿನ ರಾಶಿಯೇ ಇದ್ದರೂ ಕೊಳೆತ ಹಣ್ಣುಗಳನ್ನು ಮಾತ್ರ ನುಸಿಗಳು ಮುತ್ತುತ್ತವೆ. ಲೋಕದಲ್ಲಿ ಎಷ್ಟೋ ಸಜ್ಜನರು ಸುಶೀಲರು ಇದ್ದರೂ ಅನೀತಿವಂತರು ಅನ್ಯಾಯಗಾರರ ಸ್ನೇಹವನ್ನೇ ಬಯಸುತ್ತಾರೆ.

೦ ೦ ೦

ಎಳೆತನದಲ್ಲೇ ಎಳೆಯರಿಗೆ ಎದುರಾಡಲು ಕಲಿಸಿ, ಮುಂದೆ ಮಾತು ಮಾತಿಗೂ ಆತ ವಿವಾದಕ್ಕೆ ನಿಂತರೆ ಚಿಂತಿಸಿ ಪ್ರಯೋಜನವಿಲ್ಲ. ಬೇವನ್ನು ಬಿತ್ತಿ ಬೆಳೆಸಿ ಅದರಲ್ಲಿ ಮಾವನ್ನು ಪಡೆಯಲಾಗಲಿಲ್ಲವೆಂದು ದುಃಖಿಸಿ ಫಲವಿಲ್ಲ!

೦ ೦ ೦

ಕಲ್ಪನೆಯ ಕಲೆ ಗೊತ್ತಿರುವವರಿಗೆ ಕೃತಕಸೃಷ್ಟಿಯ ಬೆಲೆಯೂ ತಿಳಿದಿರಬೇಕು. ಕಳ್ಳತನ ಮಾಡುವ ಎದೆಗಾರಿಕೆ ಉಳ್ಳವರಿಗೆ ಕಾಲುಕಿತ್ತು ಓಡುವ ಚತುರತೆಯೂ ಗೊತ್ತಿರಬೇಕು.

೦ ೦ ೦

ಸಾಲಮಾಡುವಷ್ಟು ಸಂಭ್ರಮಾಡಂಬರಗಳಿರಬಾರದು—ಸಾವು ಬರುವಷ್ಟರ ವರೆಗೆ ಮನಸ್ಸಿಗೆ ನೋವು ಹಚ್ಚಿಕೊಳ್ಳಬಾರದು!

೦ ೦ ೦

ಹೊಟ್ಟೆಗೆ ಹಿಟ್ಟಿಲ್ಲದಾಗ ಹುರುಪು ಬರುವುದು ಹೇಗೆ?— ಎಣ್ಣೆಯಿಲ್ಲದ ದೀಪ ಉರಿಯುವ ಹಾಗೆ!

೦ ೦ ೦

ಒಳ್ಳೆಯ ಆಚಾರ ವಂಶದಿಂದ ಉತ್ತಮ ವಿಚಾರಗಳನ್ನು ಕಲಿತುಕೊಳ್ಳಬಹುದು—ಒಳ್ಳೆಯ ಕ್ಷೇತ್ರದಲ್ಲಿ ಬಿದ್ದ ಬೀಜದಿಂದ ತಾ ಉತ್ತಮ ಫಲ ದೊರೆಯುವುದು!

ಶ್ರೀ ಕೆ. ಜಿ. ಶೆಟ್ಟಿ, ಕಡಂದಲೆ.

ಕೊಳಕು ಹರಿವ ಸಂಜೀವಿನಿ ಲೋಕ

(೫ನೇ ಪುಟದಿಂದ)

ದ್ರು ಇದವರ ವಾದಕ್ಕೆ ನಿದರ್ಶನವಿರಬಹುದು."

"ಅಂದ್ರೆ ......ಇವ್ರು ಶೇಖರಂತೆಯೇ ವಾದ ಮಾಡುವಂತಿದೆ...."

"ಏನು ಪಾಪವೋ ಗೀದವೋ....ಇದನ್ನೆಲ್ಲಾ ನೋಡೋವಾಗ ಕೆಂಪಿನವರೇ ಒಳ್ಳೆಯವರೆಂದು ತೋರುತ್ತೆ. ಒಗ್ಗದ ಮಾತಾಡಿದ್ರೆ ಡಂ....'

"ಅವ್ರಿರ್ತಿದ್ರೆ, ನಾನೂ ನೀನೂ ಯಾವಾಗ ಈ ಲೋಕ ಬಿಟ್ಟು ಹೋಗ್ಬೇಕಾಗಿತ್ತೊ...."

"ಬೇಡಪ್ಪಾ ಬೇಡ........ಕೆಲವ್ರನ್ನ ಕಂಡ್ರೆ ಹಾಗನಿಸ್ತದೆ ಒಮ್ಮೊಮ್ಮೆ, ಆಪ್ರೆ ಅಂತಹ ಸೇವನೆಯ ಜೀವನ ಯಾಕೆಂತ ..."

"ಮಳೆ ಬರೋ ಸಮಯ ಬಂದ್ರೂ ಮಳೆಯೇ ಬರಲೊಲ್ದು ಕಂಡ್ರಿ.... ಬರೀ ಸೆಖೆ ಫ್ಯಾನ್ ಬಿಟ್ರೆ, ಮತ್ತೆ ನಾವು ಬಿಟ್ಟ ಬಿಸಿಗಾಳಿನೆ ತಿರುಗಿ ಸುತ್ತತೊಡಗುತ್ತೆ..."

"ಈಗ ನೋಡು ಬಿಸಿ ಗಾಳಿ ಸುದೇ ಕಾಟ. ಅದಕ್ಕೆ ಭಾರವಿಲ್ಲ, ರಸವಿಲ್ಲ, ಗಂಧವಿಲ್ಲ, ವೇಗಾನೂ ಇಲ್ಲ. ಹಾಗಿರುವಾಗ ಬಿಸಿಗಾಳಿ ಬೀಸದೆ ಮತ್ತೇನು ಬೀಸೀತು?"

"ಮೈಯೆಲ್ಲಾ ಸುಡುತ್ತೆ...."

"ಉರಿಯ ಸುಡದಿದ್ದೀತೆ? ಅದಕ್ಕೇ ಹೇಳೋದು ನಿಸರ್ಗ ಮಾತ್ರ ಸುಂದರಾಂತ ಕಾಡ್ನಲ್ಲಿ ಇರೋಗಾಗುತ್ಯೆ?"

"ನಮಗಾಗೋದಿಲ್ಲ; ಅದ್ರಿಂದ ಉರಿಯ ಕಾಟ ತಾಳಲೇ ಬೇಕು"

"ತಾಳುವಿಕೆಗಿಂತನ್ಯತಪ ಬೇರೆಯಿಲ್ಲ."

ಅದ್ರಿಂದ್ಲೇ ವರ್ಷಕಾಲ ಬರುವತನಕ ತಾಳಬೇಕು ನೀನು ಬಡಿಸೋತನಕ ನನ್ನ ಹಸಿವು ತಾಳಬೇಕು.."

"ಓ, ಬನ್ನೀಂದ್ರೆ..ಪಾಪ...ಎಷ್ಟು ಹಸಿವಾಗಿದೆಯೋ...."

"ಹಾಗಾದ್ರೂ ಆಯ್ತಲ್ಲ ನೆನಪು...ಸದ್ಯ ಬದುಕಿದೆ...."

—ಗೋರಾ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಬಾಲ ಹಿತಚಿಂತನೆ

ಮಕ್ಕಳ ಆರೋಗ್ಯಧಾಮ—ಆರ್ಕ್

ಶ್ವಾಸ ಕೋಶಗಳಿಗೆ ಪಾರ್ಶ್ವವಾಯು ಹೊಡೆದು ಅದರಿಂದ ಅಂಗವಿಕಲರಾದ ಮಕ್ಕಳಿಗೆ ಅಭಯ ಪ್ರಧಾನ ಆಶ್ರಯ ಧಾಮವಾಗಿ ನೆದರ್‌ಲೇಂಡ್ಸಿನ ರಾಟರ್ ಡಮ್ ದಕ್ಷಿಣ ಆಸ್ಪತ್ರೆಯ ಆವರಣದಲ್ಲಿ ಎದ್ದು ನಿಂತಿರುವ "ಆರ್ಕ್" ಭವನ ರಾರಾಜಿಸುತ್ತದೆ. ಕೃತಕ ಶ್ವಾಸೋಚ್ಛ್ವಾಸ ಸಲಕರಣೆಗಳ ನೆರವಿಲ್ಲದೆ ಬದುಕು ದೂಡಲಾರದ ಮಕ್ಕಳು ಈ ಭವನದಲ್ಲಿ ಸಂತೋಷದಿಂದ ದಿನ ಕಳೆಯುತ್ತಿದ್ದಾರೆ. ಮನೆಯ ಆಸರೆಯನ್ನು ರೋಗದ ದೆಸೆಯಿಂದ ಕಳೆದುಕೊಂಡಿರುವ ಈ ಮಕ್ಕಳಿಗೆ ಮನೆಯಾಗಿ ಆರ್ಕ್ ನಿಂತಿದೆ. ಅಲ್ಲಿನ ವೈದ್ಯರು ತಾಯಿ ತಂದೆಯರ ಸ್ಥಾನವನ್ನು ತುಂಬಲು ಯತ್ನಿಸಿದ್ದಾರೆ.

ಅಂಗವಿಕಲ ಮಕ್ಕಳ ಉಸಿರಾಡುವಿಕೆಗೆ ಅನುಕೂಲವಾಗುವಂತೆ "ಆರ್ಕ್"ನ್ನು ಸಜ್ಜುಗೊಳಿಸಲಾಗಿದೆ. ವೈದ್ಯ ವೀರ್ಡನ್ ಎಂಬುವರ ನೇತೃತ್ವದಲ್ಲಿ ಇದರ ಕೆಲಸ ಕಾರ್ಯಗಳು ಸುಸೂತ್ರ ಸಾಗುತ್ತಿವೆ.

ಪೋಲಿಯೋ— ಶ್ವಾಸಕೋಶಗಳಿಗೆ ಎರಗುವ ಪಾರ್ಶ್ವವಾಯುವಿಗೆ ಮತ್ತೊಂದು ಹೆಸರು. ೧೦ ವರ್ಷಗಳಿಗೆ ಮೊದಲು ಪೋಲಿಯೋ ಸಾಂಕ್ರಾಮಿಕ ರಾಟರ್ ಡಾಮಿಗೆ ತಲೆ ಹಾಕಿದಂದಿನಿಂದ "ಆರ್ಕ್" ಚರಿತ್ರೆಯು ಆರಂಭವಾಗುತ್ತದೆ. ಪೋಲಿಯೋ ರೋಗಕ್ಕೆ ತುತ್ತಾದ ರೋಗಿಗಳ ಆರೈಕೆಯಲ್ಲಿ ರಾಟರ್‌ಡಾಮ್ ಆಸ್ಪತ್ರೆಯ ಸಿಬ್ಬಂದಿ ಹಗಲಿರುಳು ತೊಡಗಿ ಅತ್ಯುತ್ತಮ ಔಷಧೋಪಚಾರಗಳನ್ನಿತ್ತ ಫಲವಾಗಿ ಪೋಲಿಯೋದಿಂದ ಸತ್ತವರ ಸಂಖ್ಯೆ ಇಳಿಮುಖವಾಯಿತು.

ಈ ಸಮಯದಲ್ಲಿ ಆಸ್ಪತ್ರೆಯಲ್ಲಿ ಎಲ್ಲ ರೋಗಿಗಳನ್ನೂ ಉಳಿಸಿಕೊಂಡು ಅವರ ಆರೈಕೆ ಮಾಡುವುದು ಅಸಾಧ್ಯವಾಯಿತು. ಆದ್ದರಿಂದ ಮನೆಯಲ್ಲೇ ರೋಗಿಗಳ ಯೋಗ ಕ್ಷೇಮ ನಿರ್ವಹಿಸಲು ಗೃಹ ಯೋಗ ಕ್ಷೇಮ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಪೋಲಿಯೋ ಮೊಟ್ ಕೃತಕ ಶ್ವಾಸೋಚ್ಛ್ವಾಸ ಸಲಕರಣೆಗಳನ್ನು ದೊಡ್ಡವರಿಗಿತ್ತು ಅವರ ಆರೈಕೆ ಉಪಚಾರಗಳಿಗೆ ಸೂಕ್ತರಾದವರನ್ನು ನೇಮಿಸಿ ಮನೆಗೆ ಕಳುಹಿಸಲಾಯಿತು.

ಇದೇ ಬಗೆಯ ವ್ಯವಸ್ಥೆ ಮಕ್ಕಳ ವಿಷಯದಲ್ಲಿ ಕೈಗೊಳ್ಳುವಂತಿರಲಿಲ್ಲ. ಪೋಲಿಯೋವಿಗೆ ಗುರಿಯಾದ ಮಕ್ಕಳ ಆರೈಕೆ ಮನೆಯಲ್ಲಿ ಹೇಗೆತಾನೇ ಸಾಧ್ಯವಾದೀತು? ಏನು ವ್ಯವಸ್ಥೆ ಮಾಡಲಾದೀತು? ಮನೆಗಳಿಗೆ ಮಕ್ಕಳನ್ನು ಕಳುಹಿಸದಿದ್ದರೆ ಮನೆಯನ್ನೇ ಮಕ್ಕಳಿಗೆ ತಂದರಾಯಿತಷ್ಟೆ! ಇದೇ ಭಾವನೆ ಡಾ|ವಾನ್ ವೀರ್ಡನ್ ಅವರಿಗೆ ಸ್ಫೂರ್ತಿದಾಯಿಯಾಯಿತು ಜೀವ ಮಂತ್ರವಾಯಿತು. ಮಕ್ಕಳು ಅತ್ಯುತ್ತಮ ಔಷದೋಪಚಾರ, ಆರೈಕೆಗಳನ್ನು ಪಡೆಯಲು ಅನುಕೂಲವಾಗಿರುವ ಯೋಜಿತ ಭವನ ಅವರ ಮನಸ್ಸಿನಲ್ಲಿ ರೂಪುತಳೆಯಿತು. ಆಸ್ಪತ್ರೆಯ ಆವರಣದಲ್ಲಿಯೇ ಇದರ ನಿರ್ಮಾಣವಾಯಿತು. ಭವನದ ಖರ್ಚುವೆಚ್ಚಗಳನ್ನು ನಿರ್ವಹಿಸಿಕೊಳ್ಳಲು ರಾಟರ್ ಡಾಮಿನ ಪುರಸಭೆ ಮುಂದೆ ನಿಂತಿತು. ೧೯೫೬ರಲ್ಲಿ ಭವನ ಸಿದ್ಧವಾಯಿತು. ಅದರ ವಾಸಿಗಳು ಅದನ್ನು "ಆರ್ಕ್" ಎಂದು ಕರೆದರು.

ಆರ್ಕ್ ವೈದ್ಯಕೀಯ ಹಾಗೂ ತಾಂತ್ರಿಕ ದೃಷ್ಟಿಯಿಂದ ಆಸ್ಪತ್ರೆಗೆ ಸೇರಿದ ಒಂದು ಭಾಗ. ಆದರೂ ತನ್ನದೇ ಆದ ಸ್ವಾತಂತ್ರ್ಯವನ್ನು ಇದು ಪಡೆದಿದೆ. ಸ್ವರೂಪ ಸೌಂದರ್ಯಗಳಲ್ಲಿ ವಿಶಿಷ್ಟತೆಯನ್ನುಳಿಸಿಕೊಂಡಿದೆ. ಆಸ್ಪತ್ರೆಯ ವಾತಾವರಣಕ್ಕೆ ತೀರ ವಿಭಿನ್ನವಾದ ವಿರೋಧವಾದ ವಾತಾವರಣವನ್ನು ಇದು ಪಡೆದಿದೆ.

ಸಮವಸ್ತ್ರದ ನರ್ಸುಗಳು ಇಲ್ಲಿ ಕಾಣಸಿಗುವುದಿಲ್ಲ. ಕರ್ತವ್ಯನಿಷ್ಠ ಯಾಂತ್ರಿಕ ವೈದ್ಯರು ಇಲ್ಲಿ ಕಾಣ ಸಿಗುವುದಿಲ್ಲ. ನರ್ಸುಗಳು ಕಾಣುವುದು ಮಕ್ಕಳೊಂದಿಗೆ ಲಲ್ಲೆ ಹೊಡೆಯುತ್ತಾ, ಅವರೊಂದಿಗೆ ಊಟ ಮಾಡುತ್ತಿರುವ, ದಾದಿಗಳನ್ನು, ಒಳ್ಳೆಯ ಊಟಕ್ಕೆ ಹೊರಟಿರುವ ವೈದ್ಯರನ್ನು.

ಆಸ್ಪತ್ರೆಯಲ್ಲಿರುವಂತೆ ತಾಯಿ ತಂದೆ ವೀಕ್ಷಕರು ಇಂತಿಷ್ಟೇ ಹೊತ್ತಿನಲ್ಲಿ ರೋಗಿಗಳನ್ನು ನೋಡಿಕೊಂಡು ಹೋಗಬೇಕೆಂಬ ನಿಯಮ ಇಲ್ಲಿಲ್ಲ. ಅವರು ಯಾವಾಗಲೂ ಬೇಕಾದರೂ ತಮ್ಮ ಮಕ್ಕಳನ್ನು ನೋಡಿಕೊಂಡು ಹೋಗಬಹುದಾಗಿದೆ. ಆರ್ಕ್ ಸಾಮೂಹಿಕ ಜೀವನದ ವಸತಿ ಗೃಹದಂತೆಯೋ ಇಲ್ಲ ಹಾಸ್ಟೆಲ್ಲಿನಂತೆಯೋ ಕಾಣುತ್ತದೆ.

ಜೀವನವೆಂದರೆ ಇಲ್ಲಿ ಕೇವಲ ಊಟಮಾಡುವುದು ಮಲಗುವುದು ಇಷ್ಟರಲ್ಲಿಯೇ ಕಳೆಯದೆ ಪಾಠ ಪ್ರವಚನಗಳಿಗೆ ಸಿದ್ಧರಾಗುವುದು, ರೇಡಿಯೋ ಕೇಳುವುದು, ಟೆಲಿವಿಷನ್ ನೋಡುವುದು, ಆಟಿಕೆಗಳೊಂದಿಗೆ ಆಡಿಕೊಳ್ಳುವುದು ಮೊದಲಾದ ವಿಚಾರ ವಿನೋದ ವಿಹಾರಗಳಲ್ಲಿ ಸಮಯವನ್ನು ದೂಡಲಾಗುತ್ತದೆ. ಮಕ್ಕಳ ಶ್ವಾಸಕೋಶಗಳು ಶಕ್ತಿಯನ್ನು ಪಡೆಯಲು ಅನುಕೂಲವಾಗುವಂತಹ, ಕೆಲಸಕ್ಕೆ ಬಾರದ ಕೈ ಕಾಲುಗಳು ಮತ್ತೆ ಉಪಯೋಗಕ್ಕೆ ಬರಲು ಅನುಕೂಲವಾಗುವಂತಹ ಸಾಧನಗಳನ್ನು ಉಪಯೋಗಿಸಲು ಸಹಾಯ ಮಾಡಲಾಗುವುದು.

ಆರ್ಕ್—ಮೊದ ಮೊದಲಿಗೆ ತಾತ್ಕಾಲಿಕ ಆಶ್ರಯಧಾಮವೆಂದು ನಿರ್ಮಾಣವಾಯಿತಾದರೂ ಆ ಪುಟ್ಟ ರೋಗಿಗಳನ್ನು ಹೊರಗೆ ಕಳುಹಿಸಲಾರದೆ ಅದೇ ಸ್ಥಿರವಾದ "ಮನೆ"ಯಾಗಿ ಪರಿವರ್ತನೆಗೊಂಡಿತು.

ಈಗ ರೋಗಿಗಳ ಸಂಖ್ಯೆ ಬೆಳೆದಂತೆ ವಾಸಸ್ಥಳವನ್ನು ವಿಸ್ತಾರ ಮಾಡಲಾಗಿದೆ. ಇದಕ್ಕೆ ಸೇರಿದಂತೆ ಮತ್ತೊಂದು ಭವನವನ್ನು ೧೯೬೨ರಲ್ಲಿ ಕಟ್ಟಲಾಗಿದೆ.

ಮಕ್ಕಳು ಬೆಳೆದು ಹಿರಿಯರಾದಂತೆ ಅವರಿಗೆ ಪ್ರತ್ಯೇಕ ಕೋಣೆಗಳನ್ನು ಬಿಟ್ಟು ಕೊಡಲಾಗಿದೆ. ಪೋಲಿಯೋ ಮೊಟ್ ಉಪಕರಣದ ಸಹಾಯವಿಲ್ಲದೆ ಅವರು ಉಸಿರಾಡಲು ಯತ್ನಗಳನ್ನು ಕೈಗೊಳ್ಳಲಾಗುತ್ತಿದೆ. ಅವರಲ್ಲ ನೇಕರು ಹಗಲು ವೇಳೆ ಉಪಕರಣದ ಸಹಾಯವಿಲ್ಲದೆಯೇ ಉಸಿರಾಡ ಬಲ್ಲವರಾಗಿದ್ದಾರೆ.

ನಮ್ಮ ಭಾರತದಲ್ಲಿ ಇಂತಹ ಆರೋಗ್ಯ ಕೇಂದ್ರಗಳೆಷ್ಟಿವೆ?

ಮನೆಗೆ ಬೆಕ್ಕು ಬಂದಾಗ

(೪ನೇ ಪುಟದಿಂದ)

ದ ಸಂಶೋಧನೆಯ ಫಲವಾಗಿ ನನಗೆ ಈ ಸಮಸ್ಯೆಯ ಕಾರಣ ತಿಳಿದು ಬಂತು. ನೋಡಿ! ಈ ಬೆಕ್ಕುಗಳಿವೆಯಲ್ಲ? ಅವು ಏನು ಮಾಡುತ್ತಿದ್ದವು ಗೊತ್ತೇ? ಎಲ್ಲೆಲ್ಲೋ ಅಡಗಿ ಕುಳಿತು ಒಮ್ಮೆಲೇ ಗುರಿ ನೋಡಿ ಓಡಿಬಂದು ನೆಲದಲ್ಲಿ ಕುಳಿತ ನೊಣಗಳನ್ನು "ಗುಳುಂ" ಎಂದು ಸ್ವಾಹಾ ಮಾಡುವ ಹಲ್ಲಿಗಳು ಇವೆಯಲ್ಲ— ಹಲ್ಲಿಗಳು ತಿಳಿಯಿತಷ್ಟೆ ಇವರೇ— ಈ ಹಲ್ಲಿಗಳನ್ನು ನಮ್ಮ ಈ ಬೆಕ್ಕುಗಳು ಕಂಡಕಂಡಲ್ಲಿ ಕಬಳಿಸಿಬಿಡುತ್ತಿದ್ದವು. ತತ್ಪರಿಣಾಮವಾಗಿ ನೊಣಗಳಿಗಿರುವ ಅಪಾಯ ತಪ್ಪಿ ಅವು ಏನೊಂದೂ ಭಯವಿಲ್ಲದೆ ಸ್ವಚ್ಛಂದವಾಗಿ ಬೆಳೆಯಲು ಸಾಧ್ಯವಾಯಿತು. ಹೀಗೆ ಮನೆಯಲ್ಲಿ ನೊಣಗಳ ಗುಯ್ ಗುಟ್ಟುವಿಕೆ ಹೆಚ್ಚಾಯಿತು. ಈ ವಿಚಾರವನ್ನ ಅವಗಾಹನೆಗೆ ಬರುತ್ತಲೇ ಬೆಕ್ಕಿನಿಂದಾಗಬಹುದಾದ ಹಾವಳಿ, ಇಲಿಗಳಿಂದಾಗುವ ಉಪಟಳಕ್ಕಿಂತಲೂ ಹೆಚ್ಚು ಎಂದುಕೊಂಡು ಬೆಕ್ಕುಗಳನ್ನು ಮನೆಯಿಂದ ಹೊರಡಿಸುವ ಸಾಹಸಕ್ಕೆ ಕೈಹಾಕಿದ್ದೇನೆ.

ಕೇವಲ ಇನ್ನು ಐದೇ ದಿವಸಗಳ ಅವಧಿಯೊಳಗಾದರೂ ಬೆಕ್ಕುಗಳು ಬೇಕಿದ್ದರೆ ಬರೆಯಿರಿ. ಶೀಘ್ರದಲ್ಲಿಯೇ ಸಪ್ಲಾಯ್ ಮಾಡುತ್ತೇನೆ. ಯಾರೂ ಅಭ್ಯರ್ಥಿಗಳು ಇಲ್ಲದೇ ಹೋದಲ್ಲಿ ನನ್ನ ನಂಬಿಕೆ ಸೂಚಿಸಿದಂತೆ ಕೊನೆಗೆ ಈ ಐದೂ ಬೆಕ್ಕುಗಳನ್ನೂ ನಮ್ಮೂರ ಸಮೀಪ ಹರಿಯುವ ನದಿಗೆ ಬಿಟ್ಟು ಬರುತ್ತೇನೆ ಶಿವನಿಚ್ಛೆಯಿದ್ದಂತಾಗುತ್ತದೆ

—ಶ್ರೀ ಶಂಕ ಐತಾಳ, ಹಾಯ್ಗೂಡಿ.

ಅದೋ! ಆಕಡೆ ನೋಡಿ.

೧

ಅದೋ! ಆಕಡೆ ನೋಡಿ...
ಹಿಮಗಿರಿಯ ಶಿರದಲ್ಲಿ
ಶಾಂತತೆಯ ಗವಿಯಲ್ಲಿ
ಕುಳಿತಿರುವ ಗಂಭೀರ ಮೂರ್ತಿಯನ್ನು
ಮಂಗಳ ನಗುವಿನ ಮುಖವು
ಶಾಂತ ಭಾವದ ಸುಖವು
ನೆಲಸಿ ಮೆರೆಯುವ ಮೂರ್ತಿಯನ್ನು

೨

ಅಭಯ ಹಸ್ತದಿ ಮೆರವ
ಶಾಂತಿಯಿಂದಲಿ ಹೊಳೆವ
ಆ ಪಾವನ ಶ್ರೀ ಶಿವನ ಅಂದವೇನು
ಪಕ್ಕದಲಿ ಪಾರ್ವತಿಯು
ರಕ್ಷಿಸುವ ದೇವತೆಯು
ಕುಳಿತಿರುವ ಶಂಕರನ ಚಂದವೇನು.

೩

ಅದೋ! ಆಕಡೆ ನೋಡಿ...
ಭಕ್ತರಿಗೆ ವರದಾನ
ಕೊಟ್ಟಿರುವ ಶಂಕರನ
ಜ್ಞಾನ ದೀಪದಿ ಹೊಳೆವ ಮೂರ್ತಿಯನು
ಯುಗಯುಗಾಂತರದಿ
ದೇವಿ ಪಾರ್ವತಿ ಎಡದಿ
ಕುಳಿತಿರುವ ಶಂಕರ ಕೀರ್ತಿಯನ್ನು.

೪

ಧರಣಿಯನೆ ಪಾಲಿಸುವ
ಜನತೆಯನೆ ರಕ್ಷಿಸುವ
ಈಶ್ವರೀ ರಮಣನ ಶಕ್ತಿಯೇನು
ಮುಖದಲ್ಲಿ ಶಾಂತಿಯು
ಶಿರದಲ್ಲಿ ಸರ್ಪವು
ನೆಲಸಿರು ಶ್ರೀ ಶಿವನ ಕರುಣೆಯೇನು.

೫

ಅದೋ! ಆಕಡೆ ನೋಡಿ...
ಶಿವನ ಆ ಹಿಮ ಪರ್ವತ
ಇದುವೆ ಪಾವನ ಭಾರತ
ಪಾರ್ವತಿಯ ಈ ಭೂಮಿ ಅಲ್ಲವೇ ಪಾವನ
ಕ್ಷಣ ಕ್ಷಣಕೆ ಶಂಕರನ
ಎಣಿಸಿದರೆ ಈ ಮನ
ಸುಖದ ಸಾಗರವಲ್ಲವೇ ಜೀವನ.

ಅದೋ! ಆಕಡೆ ನೋಡಿ...
ಹಿಮ ಗಿರಿಯ ಶಿರದಲ್ಲಿ
ಶಾಂತತೆಯ ಗವಿಯಲ್ಲಿ
ಕುಳಿತಿರುವ ಗಂಭೀರ ಮೂರ್ತಿಯನ್ನು.

—ಕುಕ್ಕಾರುಗುತ್ತು ರವೀಂದ್ರ ಶೆಟ್ಟಿ.

In the Court of the Subordinate Judge of S. K. Mangalore.

S. C. No. 47/64.

Between:-
M/s. Hajee M. Moidinabba
Hajee V. Hussain Kunhi & Co.
—Plaintiff
and
A. P. Saldhana — Defendant.
To
Sri A. P. Saldhana,
S/o A. P. P. Saldhana,
Planter, Falnir, Mangalore.

Please take notice that the above suit filed by the Plaintiff against you for the recover of Rs. 543-92 with costs is stands posted to 6—6—1964 for your appearance. If you fail to appear or represent to by a pleader on that date the above suit will be decided exparte.

By order of the Court.

K. Venkat Rao,
Advocate for Plaintiff.

Mangalore, 2-5-64.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ ಜೈ ಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಜೋಕಟ್ಟೆ, ಮಂಗಳೂರು-೧.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

ಪ್ರಕೃತಿಯ ಸೃಷ್ಟಿ

ಮುಪ್ಪು ಕಾಣದ ನೀರು ಬೆಕ್ಕುಗಳು

ನದಿಗಳಲ್ಲಿ ವಾಸಮಾಡುವ ನೀರು ಬೆಕ್ಕುಗಳನ್ನು ನೀವು ಕಂಡಿರಬಹುದು. ಸಮುದ್ರದಲ್ಲಿ 'ಸಾಗರಶಿಶು' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ ಸಮುದ್ರಬಿಡಾಲ. ಅದು ವಿಶಾಲ ಸಾಗರದಲ್ಲಿ ಜಲವಿಹಾರ ಮಾಡುತ್ತಿರುತ್ತದೆ, ನೆಗೆಯುತ್ತಿರುತ್ತದೆ. ಉತ್ಸಾಹವನ್ನೂ ಚಪಲತೆಯನ್ನೂ ಕಾಣುವಾಗ, ಈ ಒಗೆಯ ಬೆಕ್ಕಿಗೆ ವೃದ್ಧಾಪ್ಯವೇ ಇಲ್ಲವೆಂಬುದು ಮನವರಿಕೆಯಾಗುವುದು. ಅದು ತೆರೆಗಳನ್ನು ಕತ್ತರಿಸಿ ಮುಂದುವರಿಯುವ ಕತ್ತರಿಯಂತೆ ಕಾಣಬಹುದು, ಬೆನ್ನು ಅಡಿಮಾಡಿ ಇಷ್ಟವೇ ಒಂದು ಪಾದದ ಮೂಲಕ ಈಜುತ್ತಿರುವುದನ್ನು ನೋಡಬಹುದು. ಪಾದದಿಂದೀಜುವಾಗ ಇನ್ನೊಂದನ್ನು ತನ್ನ ಎದೆಯ ಮೇಲೆ ಇಟ್ಟುಕೊಂಡಿರುವುದನ್ನೂ ಗಮನಿಸಬಹುದು.

ನೀರು ಬೆಕ್ಕಿನ ಎದೆ, ಅದಕ್ಕೆ ತಿಂಡಿಯಿಡುವ ಮೇಜಿನಂತೆ ಉಪಯೋಗವಾಗುತ್ತದೆ. ಎದೆಯ ಮೇಲೆ ಮೀನುಗಳನ್ನು ಹರಡಿಟ್ಟುಕೊಂಡು ಒಂದೊಂದನ್ನೇ ತಿನ್ನುತ್ತದೆ. ಭೋಜನ ಮುಗಿದ ಬಳಿಕ ಅದು ಹತ್ತಾರು ಬಾರಿ ಉರುಳುತ್ತದೆ, ತನ್ನ ಸಿಂಬಿಗಳಿಂದ ಕುತ್ತಿಗೆ ಮತ್ತು ತಲೆಯನ್ನು ಉಜ್ಜಿಕೊಳ್ಳುತ್ತದೆ.

ನೀರು ಬೆಕ್ಕು ಹಸುಳೆತನದಲ್ಲಿ ತನ್ನ ತಾಯ ಮಡಿಲಲ್ಲಿಯೇ ಮಲಗಿಕೊಂಡು ಬಹು ಸಮಯವನ್ನು ಕಳೆಯುತ್ತದೆ. ಸಂಕಟ ಕಾಲವೊದಗಿದಾಗ, ತಾಯಿಯು ಮಗುವನ್ನು ತನ್ನ ಒಂದು ಕೈಯಲ್ಲಿ ಹಿಡಿದುಕೊಂಡು ತನ್ನ ದೊಡ್ಡದಾದ ರೋಮಗಳ ಕಾಡಿನಲ್ಲಿ ಅಡಗಿಸುತ್ತದೆ. ತಾಯಿಯು ತನ್ನ ಮಗುವಿಗೆ ಹೊಡೆಯುವುದೂ ಇದೆ; ಆಗಾಗ್ಗೆ ಈಜಾಡುವುದಕ್ಕೂ ಕಲಿಸಿಕೊಡುತ್ತದೆ.

ರೋಮಗಳಿಂದ ತುಂಬಿದ ನೀರು ಬೆಕ್ಕಿನ ಚರ್ಮವು ಬಹು ಬೆಲೆ ಬಾಳುತ್ತದೆ. ಆದುದರಿಂದಲೇ ಲೋಭಿ ವ್ಯಾಪಾರಿಗಳು ಸುಮಾರು ೭೦—೮೦ ವರ್ಷಗಳಿಂದ ಸಮುದ್ರದ ನೀರು ಬೆಕ್ಕುಗಳನ್ನು ನಾಶಮಾಡ ತೊಡಗಿದ್ದಾರೆ. ಅವರು ತಮ್ಮ ಕೆಲಸವನ್ನು ನಿರಂತರವಾಗಿ ನಡೆಸುತ್ತ ಬಂದುದರಿಂದ, ಈ ಶತಮಾನದ ಆದಿಯಲ್ಲಿ ಸಮುದ್ರದ ನೀರು ಬೆಕ್ಕುಗಳು ನಾಮಾವಶೇಷವಾಗಿವೆಯೆಂದು ಹೇಳುವಂತಾಗಿದೆ.

ನೀರು ಬೆಕ್ಕುಗಳು ದೊರೆಯುತ್ತಿದ್ದ ಸಮುದ್ರ ತಟದ ದೇಶಗಳು ಈ ದುರ್ಲಭ ಜಾತಿಯ ಪ್ರಾಣಿಗಳನ್ನು ಉಳಿಸಲು ಕೆಲವು ಯೋಜನೆಗಳನ್ನು ಹೂಡಿದರು. ಈ ಕಾರಣದಿಂದಲೇ ಈ ಅಸಾಧಾರಣ ಜಾತಿಯ ಜಂತುಗಳು ಸಂಪೂರ್ಣ ನಾಶವಾಗಲಿಲ್ಲ. ಇಂದು ಅಲಾಸ್ಕಾ ಮತ್ತು ಎಲಿಯೂಶಿಯನ್ ದ್ವೀಪಗಳಲ್ಲಿಯೇ ೮,೦೦೦ ನೀರು ಬೆಕ್ಕುಗಳಿವೆ. ಅವುಗಳನ್ನು ಚಿಕ್ಕ ಚಿಕ್ಕ ಗುಂಪುಗಳಲ್ಲಿ ವಿಭಜಿಸಿ ಸರಿಯಾಗಿ ಪಾಲಿಸಲಾಗುತ್ತಿದೆ. ಇದರಿಂದ ಅವು ಆರಾಮದಿಂದಿದ್ದು ತಮ್ಮ ಸಂಖ್ಯೆಯನ್ನು ಹೆಚ್ಚಿಸಲಿ ಎಂಬುದೇ ಈ ಕೃತ್ಯದ ಹಿಂದಿರುವ ಆಶಯ.

ಸಮುದ್ರದ ನೀರು ಬೆಕ್ಕುಗಳು ಅಮೆರಿಕೆಯ ಶಾಂತ ಮಹಾಸಾಗರದ ದಡದಿಂದ ಹಿಡಿದು ಉತ್ತರ ಅಲಾಸ್ಕದ ವರೆಗೆ ತೋರಿಬರುತಿದ್ದ ಕಾಲವೊಂದಿತ್ತು. ಅಲಾಸ್ಕಾದ ನಿವಾಸಿಗಳು ಇವರ ಚರ್ಮದ ವ್ಯಾಪಾರ ಮಾಡುತಿದ್ದರು. ಇದಕ್ಕಾಗಿಯೇ ನೀರು ಬೆಕ್ಕುಗಳನ್ನು ಬೇಟೆಯಾಡುತ್ತಲೇ ಇದ್ದರು. ಅಲಾಸ್ಕಾವನ್ನು ಅಮೆರಿಕೆಯು ಕೊಂಡುಕೊಂಡನಂತರ, ನೀರು ಬೆಕ್ಕುಗಳನ್ನು ಕೊಲ್ಲುವ ಕೆಲಸವು ಬಹಳ ಕಡಿಮೆಯಾಯಿತು; ೧೯೧೦ರಲ್ಲಿ ಇವುಗಳನ್ನು ಕೊಲ್ಲುವುದನ್ನ ಕಾನೂನಿನ ಮೂಲಕ ನಿಷೇಧಿಸಲಾಯಿತು.

ಇದಕ್ಕೆ ಮೊದಲು ಒಂದು ಕರಿ ನೀರು ಬೆಕ್ಕಿನ ಚರ್ಮಕ್ಕೆ ಸುಮಾರು ೧೩,೦೦೦ ರೂಪಾಯಿ ಬೆಲೆ ಬರುತಿತ್ತು! ಈ ಚರ್ಮದ ವ್ಯಾಪಾರಿಗಳು ರಶ್ಯದಿಂದ ತೊಡಗಿ ಏಶ್ಯ ತುಂಬ ಹರಡಿದ್ದರು. ತಮ್ಮ ಲಾಭಕ್ಕಾಗಿ ಇವರು ಕೊಲೆ, ಸುಲಿಗೆಗಳನ್ನು ಮಾಡುತಿದ್ದರು. ಅಲಾಸ್ಕಾದ ನಿವಾಸಿಗಳನ್ನು ತಮ್ಮ ಗುಲಾಮರನ್ನಾಗಿಟ್ಟುಕೊಳ್ಳುತಿದ್ದರು. ಕಾಲಕ್ರಮೇಣ ಇಂಗ್ಲಿಷ್ ಮತ್ತು ಅಮೆರಿಕೆಯ ವ್ಯಾಪಾರಿಗಳೂ ಈ ಲಾಭಪ್ರದ ವ್ಯವಹಾರದಲ್ಲಿ ತೊಡಗಿದರು.

ಅಮೆರಿಕೆಯ ಅಧಿಕಾರಿಗಳು ಉಳಿದುಳಿದ ಸಮುದ್ರ ನೀರ ಬಿಡಾಲಗಳನ್ನು ಗುಪ್ತ ಸ್ಥಳಗಳಲ್ಲಿ ಅಡಗಿಸಿ ಕೊಲೆ ಸುಲಿಗೆಗಳ ಈ ಲಜ್ಜೆಗೇಡಿ ಪ್ರಸಂಗಗಳನ್ನು ಕೊನೆಗೊಳಿಸಿದರು. ೧೯೩೦ರಲ್ಲಿ ಜಪಾನದ ಮೀನುಗಾರರು ಈ ಗುಪ್ತ ಸ್ಥಳಗಳನ್ನು ಭೇದಿಸಿ, ನೀರು ಬೆಕ್ಕುಗಳನ್ನು ಕದಿಯುತ್ತಿರುವುದು ಕಂಡು ಬಂತು. ಇದರಿಂದ ಅವುಗಳ ರಕ್ಷಣೆಯ ಕಾರ್ಯವನ್ನು ಮತ್ತಷ್ಟು ಬಿಗಿಗೊಳಿಸಿದರೂ ಚೌರ್ಯವು ಮಾತ್ರ ನಿಲ್ಲಲಿಲ್ಲ.

ಕಳೆದ ಮಹಾಯುದ್ಧದ ಸಮಯದಲ್ಲಿ ಈ ನೀರು ಬೆಕ್ಕುಗಳ ಕಡೆಗೆ ಯಾರ ಗಮನವೂ ಹರಿಯಲಿಲ್ಲ. ಆದುದರಿಂದ ಈ ಅವಧಿಯಲ್ಲಿ ಅವುಗಳ ಸಂಖ್ಯೆಯು ನಿರಂತರ ವೃದ್ಧಿಯಾಗುತ್ತ ಬಂತು. ಇಂದು ಆ ತೀರ ಪ್ರದೇಶದಲ್ಲಿ ಸುಮಾರು ೪,೦೦೦ ಕ್ಕೂ ಮಿಕ್ಕಿದ ನೀರು ಬೆಕ್ಕುಗಳಿವೆ. ಅನಧಿಕೃತವಾಗಿ ಇವುಗಳ ಚರ್ಮವನ್ನಿಟ್ಟುಕೊಳ್ಳುವುದು ಅಪರಾಧವೆಂದು ಅಮೆರಿಕೆಯು ಶಾಸನ ಮಾಡಿರುವುದರಿಂದ, ನೀರು ಬೆಕ್ಕುಗಳ ಮೇಲೆ ಕೈಮಾಡುವ ದರ್ಪವು ದೂರವಾಗುತ್ತ ಬರುತ್ತಿದೆ.

ಸಮುದ್ರ ನೀರ ಬಿಡಾಲಗಳು ಕೆಲವೇ ವಿಶೇಷ ಸಮುದ್ರ ತಟದಲ್ಲಿರುತ್ತವೆಯೆಂದು ಜೀವಶಾಸ್ತ್ರಜ್ಞರು ಹೇಳುತ್ತಾರೆ. ಹೆಚ್ಚು ಆಳವಿಲ್ಲದ ಸಮುದ್ರಗಳಲ್ಲಿ ಮಾತ್ರ ಅವು ಹೆಚ್ಚಾಗಿ ವಾಸ ಮಾಡುತ್ತವೆ. ಏಕೆಂದರೆ ಅಲ್ಲಿ ಅವುಗಳಿಗೆ ಬೇಕೆಂಬಷ್ಟು ಚಿಕ್ಕ ಮೀನುಗಳು ತಿನ್ನಲು ದೊರೆಯುತ್ತವೆ ಹಾಗೂ ದೊಡ್ಡ ಮೀನುಗಳು ಉಪದ್ರವ ನೀಡುವುದಿಲ್ಲ. ವ್ಹೇಲ್ ಮೀನು ಮತ್ತು ಮಾನವರಿಬ್ಬರೂ ಇದಕ್ಕೆ ಯಮಸ್ವರೂಪರು. ಇವುಗಳಿಂದ ತಮ್ಮ ಪ್ರಾಣವುಳಿಸುವ ಪ್ರಯತ್ನವನ್ನು ಮಾಡುತ್ತವೆ. ಇವು ಎಲ್ಲಾದರೂ ವ್ಹೇಲ್ ಮೀನು ಅಥವಾ ಹಡಗಗಳು ಗೋಚರವಾಯಿತೆಂದರೆ, ತಮ್ಮ ಕಾಲುಸಿಂಬಿಗಳಿಂದ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತವೆ.

ವಯಸ್ಕ ನೀರು ಬೆಕ್ಕುಗಳು ತಮ್ಮ ಉದ್ದವಾದ ಮೀಸೆ ೫೫ ಇಂಚು ಉದ್ದ ೫೦ ರಾತಲು ಭಾರವುಳ್ಳ ಶರೀರದಿಂದ ಮುದುಕನಂತೆ ತೋರುತ್ತವೆ. ಆದರೆ, ಅವುಗಳಲ್ಲಿ ಬಾಲಕರಲ್ಲಿರುವಂತಹ ಚಟುವಟಿಕೆ ಮತ್ತು ಚಪಲತೆಗಳಿವೆ.

ಮೊದಮೊದಲಿಗೆ ನೀರು ಬೆಕ್ಕುಗಳು ಏಕಪತ್ನೀ ವ್ರತವನ್ನು ಪಾಲಿಸುತಿದ್ದುವು. ಆದರೆ, ವ್ಯಾಪಾರಿಗಳ ಆಕ್ರಮಣಾನಂತರ ಬಹುಪತ್ನೀವ್ರತವನ್ನು ಸ್ವೀಕರಿಸಿದುವು. ಸಮುದ್ರದ ನೀರು ಬೆಕ್ಕುಗಳನ್ನು ಹಿಡಿದು ಭೂಮಿಯಲ್ಲಿ ಸಾಕತೊಡಗಿದರೆ, ಕೆಲವೇ ದಿನಗಳಲ್ಲಿ ಸತ್ತುಹೋಗುವುವು. ಆದಕ್ಕಾಗಿ ಅವುಗಳ ಆಹಾರ, ಅಭ್ಯಾಸಗಳನ್ನು ಕಲಿತು ಭೂಮಿಯಮೇಲೆ ಹೆಚ್ಚುಸಮಯ ಜೀವಂತವಿರಿಸುವ ಬಗ್ಗೆ ಪ್ರಯತ್ನಗಳು ಇಂದಿಗೂ ನಡೆಯುತ್ತಿವೆ.

ರಜತಪೀಠದಿಂದ ತಿರುಮಲೈಗೆ

(೩ನೇ ಪುಟದಿಂದ)

ಸ್ನಾನ ಘಟ್ಟಕ್ಕಿಳಿಯುವಾಗ ಒಬ್ಬಳು ತಾಯಿಯು ಕಾಲು ಜಾರಿ ಬಿದ್ದು, ೭ ಘಂಟೆಯ ನಂತರ ಚೇತರಿಸಿಕೊಂಡಳು. ಓರ್ವ ಹೆಣ್ಣು ಮಗಳಿಗೆ ಅಕಸ್ಮಾತ್ ಕಾಲು ಬಾತು ಹೋಗಿದ್ದರೆ, ಇನ್ನೊಬ್ಬಾಕೆಗೆ ಕೈ ಬಾತು ಸುತುಗಳ್ಳಗಳೆದ್ದಿದ್ದುವು. ಒಂದು ವರ್ಷದ ಮಗುವಿನಿಂದ ತೊಡಗಿ ೮೫ ವರ್ಷದ ಮುದುಕಿಯರ ತನಕವಿರುವ ೨೪ರ ಮಂದಿ ಸ್ತ್ರೀ ಪುರುಷರಿಂದೊಡಗೂಡಿದ ನಮ್ಮ ಸಂಯುಕ್ತ ಪರಿವಾರದ ಮೇಲೆ, ಪರಮಾತ್ಮನ ಹಾಗೂ ಸದ್ಗುರು ಮಧ್ವರ ಅಪಾರ ಕರುಣೆಯಿದ್ದುದರಿಂದಲೇ ನಮ್ಮ ಎಲ್ಲಾ ಆಪತ್ತುಗಳೂ ಪ್ರಾತಃಕಾಲದ ಮಂಜಿನಂತೆ ಕರಗಿ ನೀರಾಗಿ ಹೋದವು. ಇಂತಹ ದುರ್ಧರ ಪ್ರಸಂಗಗಳಲ್ಲೂ ಎದೆಗೆಡದೆ, ತಾಳ್ಮೆಗೆಡದೆ, ಎಲ್ಲರನ್ನೂ ಸಮಜಾಯಿಸುತ್ತಿದ್ದ—ಪರಿವಾರದ ಮುಖಂಡರಾದ ಶ್ರೀ ರಾಘವೇಂದ್ರ ಕೃಷ್ಣ ಭಟ್ಟರ ಸಹನಾಶೀಲತೆಯೂ ನಿರ್ಲಿಪ್ತ ಮನೋಭಾವನೆಯೂ ತನ್ನವೇ ಆದ ವೈಶಿಷ್ಟ್ಯವನ್ನು ಕಾಯ್ದುಕೊಂಡು ಬಂದಿದೆ.

ಶ್ರೀ ಲಕ್ಷ್ಮೀವೆಂಕಟೇಶನು ಸರ್ವರಿಗೂ ಸನ್ಮಂಗಳ ಉಂಟುಮಾಡಲಿ.

(ಮುಗಿದುದು)

ಶ್ರೀ ಕೆ ಕೆ ಶೆಟ್ಟಿ, ಎಂ.ಎಲ್ ಸಿ ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ!	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇದಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್ 66 ಉಡುಪಿ

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು ರಾಘವೇಂದ್ರ ಆಚಾರ್ಯ, ಎಂ ಎ.

ಸಾಮಾನ್ಯ ರೋಗಗಳು

ಡಾ| ಕೆ ಎಲ್. ಐತಾಳ, ಎಂ ಬಿ ಬಿ ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಾಪ ವಿಧಿಸಿದ ಫಲ

(೩ನೇ ಪುಟದಿಂದ)

ಮಧ್ಯರಾತ್ರಿಗೆ ಹುಲಿಯು ಬರವನ್ನು ಸೂಚಿಸುವ ತರಗೆಲೆಗಳ ದರ ದರ ಶಬ್ದ ಕೇಳಿಸಿತು. ತಿಂಗಳುಬೆಳಕಿನಲ್ಲಿ ಅದರ ಆಕೃತಿ ಗೋಚರಿಸಿತು ಅದರ ಅದ್ಭುತ ಆಕಾರ ಭಯಂಕರ ಘರ್ಜನೆ ಕೇಳಿ ಧೈರ್ಯಸ್ಥರಾದ ಅವರ ಎದೆ ಸ್ವಲ್ಪ ನಡುಗಿತು. ಧೈರ್ಯಸಾಲದೆ ಕೋವಿಯನ್ನು ಎರಡು ಮೂರು ಸಾರಿ ಎತ್ತಿ ಇಳಿಸಿದರು ಕಡೆಗೆ ಮನಸ್ಸು ದೃಢ ಮಾಡಿ ಹೊಡೆದೇ ಬಿಟ್ಟರು ಕಾಡೆಲ್ಲ ನಡುಗುವಂತಹ ಭಯಂಕರ ಆರ್ಭಟಿಸೊಡನೆ ಅಷ್ಟು ಮೇಲಕ್ಕೆ ಹಾರಿ ಕೆಳಗೆ ಬಿತ್ತು ಹುಲಿ. ಆದರೆ ಅದು ಎಲ್ಲಿ ಬಿತ್ತೆಂದು ಇಬ್ಬರಿಗೂ ಕಾಣಿಸಲಿಲ್ಲ.

ಸ್ವಲ್ಪ ಕಾದುನೋಡಿದರು ಬಿದ್ದ ಹುಲಿ ಓಡಿದ ಶಬ್ದ ಕೇಳಲಿಲ್ಲ. ಹುಲಿ ಸತ್ತು ಹೋಗಿರಬೇಕೆಂದು ನಿರ್ಧರಿಸಿ ಮೆಲ್ಲನೆ ಕೆಳಗೆ ಇಳಿದರು. ಸುತ್ತುಮುತ್ತಲು ಹುಡುಗಿದರು. ಎಲ್ಲೂ ಕಾಣಲಿಲ್ಲ ಸ್ವಲ್ಪ ದೂರದ ಮುಳ್ಳಿನ ಪೊದರಿನ ಕಡೆಗೆ ನಡೆದರು. ಅಲ್ಲಿ ಹುಡುಕುತ್ತಿದ್ದಂತೆ ಚಂಗಪ್ಪನವರು "ಅಯ್ಯೋ, ಹುಲಿ' ಎಂದು ಆರ್ತನಾದದೊಡನೆ ಕೆಳಗೆ ಬಿದ್ದರು ಗುಂಡು ತಗಲಿ ಅರೆ ಗಾಯಗೊಂಡ ಹುಲಿ ಅವರ ಮೇಲೆ ಬಿದ್ದಿತ್ತು. ಹುಲಿ ಬಿದ್ದ ರಭಸಕ್ಕೆ ಅವರ ಕೈಯಲ್ಲಿದ್ದ ಕೋವಿ ಅಷ್ಟು ದೂರ ಸಿಡಿದು ಬಿದ್ದಿತ್ತು. ಆ ಕೋವಿಯನ್ನು ತೆಗೆದು ಕೊಂಡು ಕೊಲ್ಲಬೇಕೆಂದು ಬಂದ ಮಾರನ ಕಡೆ ತಿರುಗಿತು ಹುಲಿ ಮಾರ ವೀರಾವೇಶದಿಂದ ಬರಿ ಕೈಯಲ್ಲಿ ಹುಲಿಯೊಡನೆ ಹೋರಾಡಿದನು ಆದರೆ ಹುಲಿಯ ವಜ್ರಾಘಾತದಿಂದ ಜರ್ಜರಿತನಾದ

ಅಷ್ಟರಲ್ಲಿ ಚಂಗಪ್ಪನವರು ಮೆಲ್ಲನೆ ಸರಿದು ಆಚೆ ಬಿದ್ದಿದ್ದ ಕೋವಿತೆಗೆದುಕೊಂಡು ಹುಲಿಗೆ ಗುರಿಯಿಟ್ಟು ಹೊಡೆದರು ಗುರಿತಪ್ಪಲಿಲ್ಲಹುಲಿ ಭಯಂಕರಘರ್ಜನೆ ಮಾಡುತ್ತ ಅತ್ತಬಿದ್ದು ಪ್ರಾಣಬಿಟ್ಟಿತು.

ಇಬ್ಬರಿಗೂ ಏಳಲು ಆಗುತ್ತಿರಲಿಲ್ಲ. ಬೆಳಗಿನವರೆಗೆ ನೋವನ್ನು ಅನುಭವಿಸುತ್ತ ಕಳೆದರು ಬೆಳಿಗ್ಗೆ ಇವರನ್ನು ಹುಡುಕಲು ಬಂದ ಜನರು ನೋಡಿದರೆ ಮಾರ ಪ್ರಾಣ ಕಳೆದು ಕೊಂಡಿದ್ದಾನೆ ಚಂಗಪ್ಪನಿಗೆ ಗುಟುಕು ಜೀವಮಾತ್ರ ಇತ್ತು. ಅವರನ್ನು ಊರ ವೈದ್ಯರಲ್ಲಿ ಹುಲಿ ಸಹಿತ ಸಾಗಿಸಿದರು ಮಾರನ ಶವವನ್ನು ಕಂಡು ಚೋಮಿ ಜೋರಾಗಿ ಚೀರಿದಳು.

ಅವಳು ಕಿರಿಚಿದ ಧ್ವನಿಕೇಳಿದ ಅತ್ತೆ ಮಾವಂದಿರಿಗೂ ಎಚ್ಚರವಾಯಿತು. ಅವಳನ್ನು ಸಮಾಧಾನ ಪಡಿಸಲು ಅವರಿಂದಲೂ ಅಸಾಧ್ಯವಾಯಿತು. ಮೆಲ್ಲನೆ ತನ್ನ ಪಕ್ಕಕ್ಕೆ ತಾನೇ ಧೈರ್ಯ ತಂದುಕೊಂಡು, "ಪಾಪಕ್ಕೆ ತಕ್ಕ ಪ್ರತಿಫಲ ದೇವರು ಕೊಟ್ಟರು" ಎಂದು ಉದ್ಗಾರತೆಗೆದಳು.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ಕೃತಿ ಪರಿಚಯ

"ರಸಿಕರಂಗ' ರಂ. ಶ್ರೀ ಮುಗಳಿ— (ಒಂದು ಸವಿ ಪರಿಚಯ)

ಪ್ರಕಾಶನ: ಪರಾಗ ಪ್ರಕಾಶನ, ಧಾರವಾಡ ಮಾರಾಟಗಾರರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ ಪುಟಗಳು ೭೦ ಬೆಲೆ. ರೂ ೧=೫೦

ಗಡಿನಾಡಿನ ಕನ್ನಡದ ದಾರಿದೀಪ ಶ್ರೀ ರಂ ಶ್ರೀ ಮುಗುಳಿಯವರ ಜೀವನ ಸಾಹಿತ್ಯ ನಿವೃತ್ತಿ, ಕನ್ನಡದ ಅಧ್ಯಾಪನ, ಕನ್ನಡ ಮರಾಠೀ ಭಾವೈಕ್ಯ ಸಾಧನೆ, ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಅವರು ಆತ್ಮೀಯ ವರ್ತುಲದಲ್ಲಿ ಗಳಿಸಿದ ಸ್ಥಾನಮಾನಗಳಿಗೆ ಸಂಬಂಧಿಸಿದ ಲೇಖನಗಳ ಮೂಲಕ ಅವರ ಪರಿಚಯ ಮಾಡಿ ಕೊಡುವ ಲಘು ಪ್ರಯತ್ನವಿದು ಪುಸ್ತಕದ ಕೊನೆಯಲ್ಲಿ ಶ್ರೀ ಮುಗಳಿಯವರೇ ತನ್ನ ಜೀವನ ದೃಷ್ಟಿಯೇನೆಂಬುದನ್ನು ಬರೆದಿದ್ದಾರೆ. ಮುಂದೆ ಮುಗುಳಿಯವರನ್ನು ಕುರಿತ ಪ್ರಕಟಿತ ಲೇಖನ ಮಾಲೆಯನ್ನು ಹೆಚ್ಚಿನ ಅಭ್ಯಾಸಕ್ಕೆಂದು ನೀಡಲಾಗಿದೆ

ಕನ್ನಡದಲ್ಲಿ ಒಬ್ಬ ವ್ಯಕ್ತಿಯ ಜೀವನ — ವಿಮರ್ಶೆಯನ್ನು ಮಾಡುವ ಗ್ರಂಥಗಳು ತೀರ ಅಪರೂಪ ನಮ್ಮಲ್ಲಿ ಒಬ್ಬನನ್ನು ಸಂಪೂರ್ಣವಾಗಿ ಅರಿತುಕೊಳ್ಳುವ ಪರಿಪಾಠವಿನ್ನೂ ಪ್ರಬುದ್ಧಾವಸ್ಥೆಗೆ ಬಂದಿಲ್ಲ ಹಾಗಿರುವಾಗ, ಒಬ್ಬ ಅಧ್ಯಾಪಕ— ಸಾಹಿತ್ಯ ಸೇವಕನ ಬಗೆಗೆ ಹುಟ್ಟಿದ ಈ ಪುಟ್ಟ ಗ್ರಂಥ ನಿಜಕ್ಕೂ ಸ್ವಾಗತಾರ್ಹ ಮುಂದೆ ಹುಟ್ಟಬಹುದಾದ ಬೃಹತ್ ಗ್ರಂಥಗಳಿಗೊಂದು ನಾಂದಿ ಈ ಮಾದರಿಯ ವ್ಯಕ್ತಿ ಪರಿಚಾಯಕ ಗ್ರಂಥಗಳು ಕನ್ನಡದಲ್ಲಿ ಹೆಚ್ಚಬೇಕು ಗಡಿನಾಡಿನ ಕನ್ನಡಿಗರೇ ಈ ದಿಸೆಯಲ್ಲಿ ಉಳಿದವರಿಗೆ ಮಾರ್ಗದರ್ಶನ ಮಾಡಿದ್ದಾರೆ ಕನ್ನಡಕ್ಕೆ ಕಲಿತ ಪ್ರಾಧ್ಯಾಪಕರುಗಳ ಸ್ಥೂಲ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟು ಬಹಳ ಉಪಕಾರವೆಸಗಿದ್ದಾರೆ ಇವರು ಮೆಟ್ಟಿದ ದಾರಿಯನ್ನು ಉಳಿದವರೂ ತುಳಿಯಲಿ, ಕನ್ನಡದ ಗುಡಿಯನ್ನು ಹಾರಿಸಲಿ

ಸಮಾಜ ಪರಿಚಯ. (ಪೂರಕ ಸಾಹಿತ್ಯ) ಅಧಿಕೃತ ಮಾರಾಟಗಾರರು ಶ್ರೀನಿವಾಸ ಬ್ರದರ್ಸ್, ಮಂಗಳೂರು ಮತ್ತು ಸ್ಕೂಲ್ ಬುಕ್ ಕಂಪೆನಿ, ಮಂಗಳೂರು

ಪುಟಗಳು ೯೬ ಬೆಲೆ. ರೂ. ೧=೫೫

ಪ್ರಜಾಪ್ರಭುತ್ವದಲ್ಲಿ ಸಮಾಜ ಜ್ಞಾನಕ್ಕೆ ಮಹತ್ವದ ಸ್ಥಾನವಿದೆ. ಮಾನವ ಸಮಾಜ ಜೀವಿಯಾಗಿದ್ದು ಸಮಾಜದ ಸಂಪೂರ್ಣ ಪರಿಚಯವನ್ನು ಪಡೆದರೆ ಮಾತ್ರ ಪ್ರಜಾಸತ್ತೆಯು ಯಶಸ್ವಿಯಾಗಬಹುದು ಇದಕ್ಕಾಗಿಯೇ ಶಾಲೆಗಳಲ್ಲಿ—ಸಮಾಜ ಪರಿಚಯವನ್ನು ಮಾಡಿಕೊಡಲಾಗುತ್ತಿದೆ ಇದರ ಅಧ್ಯಯನವು ಪಠ್ಯಕ್ರಮದ ಒಂದು ಅಂಗವಾಗಿದೆ

ಸಮಾಜ ಪರಿಚಯವನ್ನು ನೇರವಾಗಿ ಮಾಡಿಕೊಡುವುದು ಸಾಧ್ಯವಿಲ್ಲ. ಹೀಗಾಗಿ ಅದಕ್ಕೆ ಪೂರಕ ಸಾಹಿತ್ಯದ ಅಗತ್ಯ ಇದೆ ಕನ್ನಡ ಭಾಷೆಯಲ್ಲಿ ಇಂತಹ ಪೂರಕ ಸಾಹಿತ್ಯದ ಅಭಾವವಿದೆ ಆದರೂ ನಮ್ಮ ಜಿಲ್ಲೆಯ ಶಿಕ್ಷಕ ಸಮಾಜವು ಈ ದಿಸೆಯಲ್ಲಿ ಅಧಿಕಾರಿಗಳ ನೇತೃತ್ವದಲ್ಲಿ ಮುಂದೆ ಬಂದು ತಮಗಾಗಿ, ತಮ್ಮ ಕೃತಿಯನ್ನು ತಾವೇ ಪ್ರಕಟಿಸಿ ತಮಗೇನೇ ಉಪಕಾರ ಮಾಡಿಕೊಂಡಿದ್ದಾರೆ ಇದು ಶುಭ ಚಿಹ್ನೆ ಇದರ ಪ್ರಥಮ ಸಮಾಜ ಪರಿಚಯ'ದ ರೂಪದಲ್ಲಿ ಹೊರಬಿದ್ದಿದೆ

ಇಲ್ಲಿರುವ ಲೇಖನಾದಿಗಳು ಸಮಾಜ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿಸಲು ಸಹಾಯಕವಾಗುತ್ತವೆಯೆಂಬುದು ನಿಜ ಆದರೆ ಒಂದೇ ವಿಷಯಕ್ಕೆ ಸಂಬಂಧಿಸಿದ ಕೃತಿಗಳು ಒಂದಕ್ಕಿಂತ ಹೆಚ್ಚಿರುವುದೂ ಒಂದು ಕ್ಷಮ್ಯ ದೋಷ ಶಿಕ್ಷಕರು ಅನುಸರಿಸಿದ ಮಾರ್ಗವು ಪ್ರಶಂಸೆಯದಾದರೂ ಪೂರಕ ಸಾಹಿತ್ಯವು ನಿರ್ದೋಷವಾಗುವಂತೆ ಪ್ರಯತ್ನಿಸುವುದು ಅಗತ್ಯವೆನಿಸುತ್ತದೆ ಗ್ರಂಥವನ್ನು ಅವಲೋಕಿಸಿದಾಗ ಜಿಲ್ಲೆಯ ಎಲ್ಲಾ ಅಧ್ಯಾಪಕ ಕೇಂದ್ರಗಳು ಸಕ್ರಿಯವಾಗಿ ಗ್ರಂಥ ರಚನೆಯಲ್ಲಿ ಭಾಗವಹಿಸಲಿಲ್ಲವೆ ಎಂಬ ಸಂದೇಹ ಬರವುದು. ವಿಷಯ ವೈವಿಧ್ಯ ಮತ್ತು ಪ್ರತಿಭಾನ್ವಿತ ಅಧ್ಯಾಪಕರ ಕೃತಿಗಳನ್ನು ಸಂಗ್ರಹಿಸಲು ಸೂಕ್ತ ಕ್ರಮ ಕೈಗೊಳ್ಳಬಹುದಿತ್ತೆನಿಸುತ್ತದೆ. ಮುಂದಕ್ಕೆ ಇಂತಹ ಕೃತಿ ರಚಿಸುವಾಗ ಈ ಕ್ರಮವನ್ನು ಅನುಸರಿಸಿದರೆ, ಇದಕ್ಕೂ ಉತ್ತಮ ಮತ್ತು ಉಪಯುಕ್ತ ಪೂರಕ ಸಾಹಿತ್ಯವನ್ನು ಒದಗಿಸುವುದು ಸಾಧ್ಯ ಈ ಬಗೆಯ ಕೃತಿಗಳ ಪ್ರಯೋಜನವನ್ನು ನಮ್ಮ ಶಿಕ್ಷಕ ಸಮಾಜವು ಉಪಯೋಗಿಸಿಕೊಂಡು ಮುಂದಿನ ನಾಗರಿಕರನ್ನು ರೂಪಿಸುವುದು ಅಗತ್ಯವಿದೆ "ಸಮಾಜ ಪರಿಚಯ ಪೂರಕ ಸಾಹಿತ್ಯ" ಒಂದು ಸಾಮಾನ್ಯ ಕೃತಿಯಾದರೂ ಇಲ್ಲಿ ನಡೆದ ಪ್ರಯತ್ನವು ಮಾತ್ರ ಪ್ರಶಂಸನೀಯ, ಮುಂದಿನವರಿಗೆ ದಾರಿದೀಪ.

ಎರಡು ಏಕಾಂಕ ನಾಟಕಗಳು.

ಲೇಖಕರು ಶ್ರೀ ಪಿ ಜಿ ಪರಮೇಶ್ವರಪ್ಪ, ಚಿತ್ರದುರ್ಗ ಪ್ರಕಾಶಕರು ಭೂಷಣ ಅಂಡ್ ಕೋ, ಬಸವನ ಗುಡಿ, ಬೆಂಗಳೂರು—೪

ಪುಟಗಳು: ೫೧ ಬೆಲೆ ೦=೭೦

"ಕಣ್ಣಾರೆ ಕಂಡರೂ" ಮತ್ತು "ರಂಗಮ್ಮನ ಇತಿಹಾಸ' ಎಂಬೆರಡು ಏಕಾಂಕಗಳ ಸಂಗ್ರಹವಿದು ರೋಗಿ ಕಲ್ಲಪ್ಪನಿಗೆ ವಿಷಕುಡಿಸಿದನೆಂಬ ಅತ್ತಿಗೆಯ ಆರೋಪವನ್ನು ಸಹಿಸಲಾರದ ಚಂದ್ರು ತಾನೆ ವಿಷ ಪಾನಮಾಡಿದ ಸತ್ಯಸಂಗತಿ ತಿಳಿದಾಗ ಕಲ್ಲಪ್ಪ ಮತ್ತು ಆತನ ಮಡದಿ ಹೃದಯ ಸ್ತಂಭನದಿಂದ ನಿಧನರಾದರು— ಇದು ಮೊದಲಿನ ಏಕಾಂಕದ ಕಥಾವಸ್ತು. ಚಂದ್ರುವಿನ ಭ್ರಾತೃಪ್ರೇಮ, ಅತ್ತಿಗೆಯ ಚಂಚಲಚಿತ್ತ ಇಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿದೆ

ಯೌವನದಲ್ಲೇ ವಿಧವೆಯಾದ ರಂಗಮ್ಮ, ವೇಶ್ಯಾ ಜೀವನವನ್ನು ಹೊಟ್ಟೆಯ ಪಾಡಿಗಾಗಿ ಅವಲಂಬಿಸಿದರೂ ತನ್ನ ಅಪ್ಪನ ಅಳಿದಾಗ ಮಗಳು ಪಾರ್ವತಿಯ ಸಹಾಯ ಪಡೆಯುವುದರಲ್ಲಿ ಅಸಹಾಯಕಳಾದಳು ಅದೇ ಸಮಯ, ಸುಧಾರಕ ಮನೋವೃತ್ತಿಯ ರಾಜು ಪಾರ್ವತಿಯನ್ನು ಮದುವೆಯಾದ ವಿಷಯ ಎರಡನೆ ಏಕಾಂಕದ ವಸ್ತು. ವಸ್ತು ಸಾಮಾನ್ಯವಾದರೂ ಅದನ್ನು ಪ್ರತಿಪಾದಿಸಿದ ರೀತಿ ಉತ್ತಮವಿದೆ. ಶ್ರೀ ಪರಮೇಶ್ವರಪ್ಪನವರ ಸಂಭಾಷಣಾ ರೀತಿಯಲ್ಲಿ ಜೀವವಿದೆ ಬೇಕೆಂಬಲ್ಲಿ ಗಾದೆ ಮಾತುಗಳು ಅನುಭವೋಕ್ತಿಗಳು ತುಂಬಿ ಅದಕ್ಕೆ ಪ್ರಾಣ ಪ್ರತಿಷ್ಠೆ ಮಾಡುತ್ತವೆ ಇವರಿಂದ ಇನ್ನೂ ಹಲವು ಕೃತಿಗಳನ್ನು ಬಯಸಿದರೆ ಅದು ನಿಷ್ಫಲವಾಗಲಾರದು.

— ಗೋರಾ.



READ & ADVERTISE IN NAVAYUGA WEEKLY

REGD. No. B. G. 176
LICENCE No. 31
Licensed to Post without Prepayment

ಕವಲು ದಾರಿ—ಕೆಂಪು ದೀಪ

ಇದು ಮರೆಯುವಂಥದಲ್ಲ!

—ಸುದಾಸ.

'ಮನ್ಮಥನ ಹೆಂಡತಿ'ಯನ್ನು ಓದುಗರ ಕೈಗಿತ್ತ ವೆಂಕಟರಾಜ ಪಾನಸೆಯವರು ಈಗ "ಇದು ಬರೆಯುವಂಥಾದಲ್ಲ" ವನ್ನು ಒಪ್ಪಿಸಿದ್ದಾರೆ.

ಇದನ್ನು ಕುಮಟೂರಿನ ಜನತಾ ಪುಸ್ತಕಾಲಯದವರು ಪ್ರಕಟಿಸಿದ್ದಾರೆ.

ನೂರಹತ್ತು ಪುಟಗಳಲ್ಲಿ ಸರಳವಾಗಿರುವ ಸುಂದರ ಹೊದಿಕೆಯಿಂದ ಕೂಡಿರುವ ಹತ್ತು ಕತೆಗಳುಳ್ಳ ಈ ಕಥಾ ಸಂಕಲನ—ರಾಜ ಪಾನಸೆ, ಕನ್ನಡಕ್ಕಿತ್ತ ಅಪೂರ್ವ ಕೊಡುಗೆ.

ಪಾನಸೆಯವರ ಕತೆಗಳಿಗೂ, ಕನ್ನಡ ಕಥಾ-ಸಾಹಿತ್ಯದಲ್ಲಿ ನವ್ಯತೆ ಎಂಬ ಹೆಸರಿನಿಂದ ಕೆಲವು ಕತೆಗಾರರು ಮಾಡುತ್ತಿರುವ ಅಕ್ಷರ ವ್ಯಭಿಚಾರಕ್ಕೂ ಇರುವ ಅಂತರವನ್ನು ಮುಖ್ಯವಾಗಿ ಇಲ್ಲಿ ವಿವೇಚಿಸ——ಬೇಕಾಗಿದೆ.

ಅದಕ್ಕೆ ಕಾರಣವಿದೆ. ರಾಜ ಪಾನಸೆಯವರು ಹೊಸ ದಾರಿಯನ್ನು ತುಳಿಯುತ್ತಿರುವವರಲ್ಲಿ ಒಬ್ಬರು. ಅದನ್ನು ಈಗಾಗಲೇ ಓದುಗರು ಗುರುತಿಸಿಯೂ ಆಗಿದೆ.

ಕನ್ನಡ ಕಥಾಸಾಹಿತ್ಯವು ನಮ್ಮ ಪ್ರಾಕಾರದೊಳಗೆ ಸುತ್ತುವರಿಯುತ್ತಿರುವುದನ್ನು ನೋಡುವವರಿಗೆ ಒಂದು ಅಂಶ ಹೆಚ್ಚು ಚೆನ್ನಾಗಿ ಎದ್ದು ಕಾಣಿಸುತ್ತದೆ,

ನವ್ಯ ಶೈಲಿ ಎಂದು ಕರೆಯಿಸಿ ಕೊಳ್ಳಲು, ಉದಯೋನ್ಮುಖ ಬರಹಗಾರರೂ ಇದನ್ನು ತಮ್ಮ ಕತೆಗಳಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಈ ಜಾಡ್ಯ ಈಗ ಬೆಳೆಯುತ್ತಾ ಸಾಗಿದೆ.

'ಕನ್ನಡ ಸಾಹಿತ್ಯದಲ್ಲಿ ಹಾವುಗಳ ಹಾವಳಿ ಜಾಸ್ತಿಯಾಗುತ್ತಿದೆಯಲ್ಲ' ಎಂದು ಒಬ್ಬರು ಇತ್ತೀಚೆಗೆ ಪ್ರಶ್ನಿಸಿದ್ದಾರೆ. ಇದೇ ಪ್ರಶ್ನೆ ಪ್ರಬುದ್ಧ ಬರಹಗಾರರಲ್ಲಿ ಬಹು ಮಂದಿಯನ್ನು ಕಾಡಿಯೂ ಇದೆ.

ಕೇರೆಹಾವುಗಳು ಹೆಣ್ಣಿನ ಸಂಕೇತವೆಂದೂ, ನಾಗರ ಹಾವು ಗಂಡಿನ ಸಂಕೇತವೆಂದೂ, ಬರೆಯುತ್ತ, ವಾಚ್ಯವಾಗಿ ಹೇಳುವ ಗೊಡವೆಗೆ ಹೋಗದೆ ಕತೆಗಾರ ಸೂಚ್ಯವಾಗಿ ಈ ರೀತಿ ಹೇಳುತ್ತಾನೆ.

'ಹಾವನ್ನು ಅವನು ಎಸೆದನು—' ಎಂದರೆ ಅದರ ಅರ್ಥ, ಆತ ಕಾಮ ಕೇಳಿಕೆಗೆ ಸಿದ್ಧತೆ ನಡೆಸಿದನು ಎಂದೇ ಓದುಗರು ಕಲ್ಪಿಸಿ ಕೊಳ್ಳಬೇಕು!

'ಉಚ್ಚೆ ಹೊಯ್ದು" ವ ಪರಿಪಾಠವೂ ನಮ್ಮ ಕತೆಗಳಲ್ಲಿ ಈಗೀಗ ಹೆಚ್ಚಾಗಿ ಕಂಡು ಬರುತ್ತಿವೆ!

ಇವಕ್ಕೆಲ್ಲಾ ಬೇರೆ ಬೇರೆ ಸಂಕೇತ ಪದ ಇದ್ದರೂ ಇರ ಬಹುದು. ಆದರೆ ಸಾಮಾನ್ಯ ಓದುಗನೊಬ್ಬ ಈ ಸಂಕೇತಕ್ಕೆ ಅರ್ಥವನ್ನು ಯಾವ ಶಬ್ದಕೋಶದಿಂದ ಪಡೆಯಬೇಕು? ಇರುವಂತೆಯೇ ಓದಿ ತನ್ನದೇ ಆದ ಅಭಿಪ್ರಾಯ ತಳೆಯಬೇಕೇ?

ಈ ಕುರಿತು ನಮ್ಮ ಕತೆಗಾರರಲ್ಲಿ ಕೇಳೋಣವೇ ?

'ನಿಮಗೆ ಅರ್ಥವಾಗುವದಿಲ್ಲ!' ಎಂದು ಆಶ್ಚರ್ಯ ಸೂಚಿಸುತ್ತಾರೆ. ಅದೇ ಅವರಿಗೆ ಹೆಮ್ಮೆಯ ವಿಷಯ. ಯಾರಿಗೂ ತಿಳಿಯದಂತಹುದನ್ನು ತಾವು ಕೊಟ್ಟಿದ್ದೇವೆ ಎಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿ ಕೊಳ್ಳುತ್ತಾರೆ!

ವಾಸ್ತವವಾಗಿ ಅದರ ಅರ್ಥ ಅವರಿಗೂ ತಿಳಿದಿರುವದಿಲ್ಲ ತಮ್ಮ ಮನೋಬಯಕೆಯನ್ನು "ನವ್ಯ" ಎಂಬ ಹೆಸರಿನ ದುರುಪಯೋಗದ ಮೂಲಕ ಬೀದಿಗೆಳೆದು, ಅವರು ತೃಪ್ತಿ ಪಟ್ಟುಕೊಳ್ಳುತ್ತಾರೆ.

ಮನೋ ವಿಜ್ಞಾನಕ್ಕೆ ಸಂಬಂಧಿತ ಕತೆ ಎಂದು ಅವರೇ ಅವರ ಗುಂಪಿನ ಮೂಲಕ ಹೇಳಿಸಿಕೊಳ್ಳುತ್ತ, ತಮ್ಮ ಮನಸ್ಸಿನ ಹೊಲಸು ವಿಚಾರವನ್ನಷ್ಟೇ ಈ ರೀತಿ ಹೊರಗೆಡಹಲು ಸಮರ್ಥರಾಗುತ್ತಾರೆ. ಅದಕ್ಕೂ ಹೆಚ್ಚಿನ ಏನನ್ನೂ ಅವರು ಸಾಧಿಸಲಾರರು; ಅವರ ದುರ್ಬಲತನ ಅದಕ್ಕೂ ಹೆಚ್ಚಿನದನ್ನು ಸಾಧಿಸಲು ಬಿಡುವುದೂ ಇಲ್ಲ.

ಹೊಸತು ವಿಚಾರವನ್ನು ಪಾನಸೆಯವರು ಮನ್ಮಥನ ಹೆಂಡತಿಯಲ್ಲಿ ಕೊಟ್ಟಿದ್ದರು ಅದರಲ್ಲಿನ "ಬೇಡ!" "ನಕ್ಕಳಾ ರುದ್ರಿ" "ಎರಡು ಹಾಸಿಗೆ, ಒಂದೇ ಕತೆ" "ಭುವನೇಶ್ವರಿ ಸಾಗರ" ಮುಂತಾದ ವೈಚಾರಿಕ ಕತೆಗಳು ಕನ್ನಡಕ್ಕೆ ಸೊಗಸುತನವನ್ನು ಒದಗಿಸಿ ಕೊಟ್ಟಿದ್ದವು.

ಈ ಮೂಲಕ ಓದುಗರಿಗೇ ಆಗಲಿ ವಿಮರ್ಶಕರಿಗೇ ಆಗಲಿ, ಕಂಡುಬಂದಿರುವ ಒಂದು ವಿಷಯ:

"ಪಾನಸೆಯವರು 'ಹೊಸತು' ಎಂಬ ಹೆಸರಿನಲ್ಲಿ ಓದುಗರನ್ನು ಕೆಳಗಿಳಿಸುವು ಖವಾಗಿ ಒಯ್ಯುವದಿಲ್ಲ."

ಓದುಗರನ್ನು ಕೆಳಗೊಯ್ಯಲು ಬಿಡುವದಿಲ್ಲ ಎಂಬಲ್ಲಿಗೇನೇ ಆ ಮಾತನ್ನು ಮುಗಿಸಲಾಗದು. ಅವರು ಓದುಗರ ಮನೋವಿಕಾಸಕ್ಕೆ ಎಡೆಮಾಡಿಕೊಡುತ್ತ, ತಮ್ಮ ಕತೆಗಳ ಮೂಲಕ ಹೆಚ್ಚು ಎತ್ತರಕ್ಕೆ ಬೆಳೆಯಲು ಪ್ರಯತ್ನವನ್ನೂ ನಡೆಸುತ್ತಾರೆ.

"ಇದು ಬರೆಯುವಂಥದಲ್ಲ" ಕಥಾ ಸಂಕಲನದಲ್ಲಿನ "ಸಮಾನತೆಯ ಸುಳಿಯಲ್ಲಿ" "ರಕ್ತದಾನ" "ಸಂಗ್ಯಾ ಬಾಳ್ಯಾ" "ನನಗೂ ಏನೋ ಹೇಳಲಿಕ್ಕಿತ್ತು" ಕತೆಗಳನ್ನೆತ್ತಿಕೊಂಡರೆ ಈ ಮಾತು ನಿಜವೆನಿಸುತ್ತದೆ.

ಬಡರೈತನಿಗೂ ಇಂದಿನ ಶಾಸಕವರ್ಗ ಹಾಗೂ ಯೋಜನಾಧಿಕಾರಿಗಳು (ಜೋತಿಷಿಗಳು!) ಮತ್ತು ಸಮಯಸಾಧಕರಿಗೂ ಸಂಬಂಧಿಸಿರುವ ಕತೆ—ಸಮಾನತೆಯ ಸುಳಿಯಲ್ಲಿ.

ಸಾಮಾನ್ಯ ರೈತನೊಬ್ಬ ತನ್ನ ಮನೆಗೆ ಬೇಕಾಗುವ ಹಂಚು ಬಿದಿರುಗಳ ಕುರಿತು ಹೇಳಲು ಹೊರಟು, ಹೇಗೆ ಚಿಕ್ಕಹಿಡುವಳಿದಾರನೆಂದು ಕರೆಯಿಸಿಕೊಳ್ಳಲು ಇಚ್ಛಿಸುತ್ತಾನೆ, ಎಂಬುದು ಇಲ್ಲಿ ಅಚ್ಚುಕಟ್ಟಾಗಿ ಚಿತ್ರಿಸಲ್ಪಟ್ಟಿದೆ.

'ರಕ್ತದಾನ' ಕಲಿಯುತ್ತಿರುವ ಹೈಸ್ಕೂಲು ವಿದ್ಯಾರ್ಥಿ ಪಾನಸೆ ಬರೆದ ಕತೆ; ಆದರೂ ಎಷ್ಟು ಚೆನ್ನಾಗಿದೆ!

ಸಂಗ್ಯಾ—ಬಾಳ್ಯಾ ರಕ್ತದಾನದ ಇನ್ನೊಂದು ಮುಖ ಎಂಬಂತಿದೆ. ರಕ್ತದಾನದಲ್ಲಿ ಹಣದ ಪ್ರಾಬಲ್ಯ ಕಂಡು ಬರುವದಾದರೆ, ಇಲ್ಲಿ ದೈಹಿಕ ಶಕ್ತಿ ಪ್ರಮುಖ ಸ್ಥಾನದಲ್ಲಿರುತ್ತದೆ.

ಸಂಗ್ಯಾ ಬಾಳ್ಯಾ ಇವರಿಬ್ಬರ ಸೊತ್ತಾಗಿ ಬಾಳುವ ಗಂಗಿ ಕೊನೆಯಲ್ಲಿ ಸಾವನ್ನಪ್ಪುವ ಮಾರ್ಮಿಕ ಚಿತ್ರಣ ನಿಜಕ್ಕೂ ಕರುಣಾಜನಕವಾಗಿರುತ್ತದೆ,

ಅದೇ ರಕ್ತದಾನದ ಕೊನೆಯಲ್ಲೂ ಕಂಡು ಬರುತ್ತದೆ: ತನ್ನ ಪತ್ನಿ ದೇಸಾಯರ ಸೊತ್ತಾದರೂ, ಅವರ ಪ್ರಾಣವುಳಿಸಲು ಮತ್ತು ತಾನು ಪೋಲೀಸರ ಕೈಯಿಂದ ಪಾರಾಗಲು ದೇಸಾಯರಿಗೆ ರಕ್ತದಾನ ಕೊಡಬೇಕಾಗಿ ಬರುವ ಮಸಣ್ಣನ ಅಸಹಾಯಕತನವೂ ಅನುಕಂಪ ಹುಟ್ಟಿಸುವಂತಹದ್ದೇ,

ಈ ಎರಡು ಕತೆಗಳು ವಿಷಯದಲ್ಲಿ ಕೇರಾಭಿನ್ನವಾಗಿವೆ; ಆದರೆ ಒಂದರಲ್ಲಿ ದುರ್ಬಲ ಹೆಣ್ಣು ಸಾವನ್ನಪ್ಪುತ್ತಾಳೆ; ಇನ್ನೊಂದರಲ್ಲಿ ದುರ್ಬಲ ಗಂಡ ಬದುಕಲು ತನ್ನ ಶತ್ರುವಿಗೆ ರಕ್ತ ಕೊಡುತ್ತಾನೆ.

ಇಲ್ಲಿ ಇಬ್ಬರೂ ಅಸಹಾಯರೇ; ಇಬ್ಬರೂ ಬದುಕಲು ಹಂಬಲಿಸಿದವರೇ: ಇಬ್ಬರೂ ಮಾನವನ್ನು ಕಳೆದುಕೊಳ್ಳುವ ಜೀವಿಗಳೇ; ಆದರೆ ಒಂದು ಕತೆ ಸಾವಿನಲ್ಲಿ ಸಮಾಪ್ತಿಗೊಳ್ಳುತ್ತದೆ; ಇನ್ನೊಂದು ಬದುಕಿನತ್ತ ಮುನ್ನಡೆಯುತ್ತದೆ.

'ಹೆಂಡತಿ ನೆನಪಾಗಲಿಲ್ಲ' 'ಅತ್ತೆ ಬೈದರು' 'ಸುಳ್ಳು" ಈ ಮೂರು ಕತೆಗಳು ಹೆಣ್ಣು ಅನುಭವಿಸುವ ವೈವಿಧ್ಯ ರೀತಿಯನ್ನು ಸೂಚಿಸುವಲ್ಲಿ ಅತ್ಯಂತ ಯಶಸ್ವಿಯಾಗಿವೆ, ಹೆಣ್ಣಿನ ಬಗ್ಗೆ ಈ ಕತೆಗಳಲ್ಲಿ ಅನುಕಂಪ ಸೂಚಿಸುವ ಪಾನಸೆ, ಗಂಡಿನ ಮೇಲೇನೂ ದೋಷಾರೋಪ ಹೊರಿಸುವದಿಲ್ಲ.

ಆದರೆ.........

ವಸ್ತು ಸ್ಥಿತಿಯನ್ನು ಓದುಗರ ಮುಂದಿರಿಸುವಾಗ ಕತೆಗಾರ ಪಾನಸೆ ಜಾಣ್ಮೆಯಿಂದ ಸಮಸ್ಯೆಗೆ ಪರಿಹಾರವನ್ನು ಸೂಚಿಸುತ್ತಾರೆ; ಬಹಳ ಎಚ್ಚರಿಕೆಯಿಂದ ಆ ಕಾರ್ಯ ಸಾಧಿಸಲು ಯತ್ನಿಸುತ್ತಾರೆ.

"ಸುಳ್ಳು" ಕತೆಯಲ್ಲಿ ವಿಶೇಷವಾದುದೇನೂ ಇಲ್ಲ ಎಂದು, ಓದುಗರಿಗೆ ಅನಿಸಬಹುದು. ಕತೆ ಹೇಳಲು ಪ್ರೇರೇಪಿಸುವ ಮಗು ನಿದ್ದೆ ಮಾಡಲಿ ಎಂದು ತಾಯಿ—ರಾಧೆ ಪ್ರಯತ್ನಿಸುತ್ತಾಳೆ. ಅಗಲೇ ಮಗುವಿನ ಕುತೂಹಲದ ಒಂದು ಪ್ರಶ್ನೆ: ಅಪ್ಪ ಅಮ್ಮ ಹೇಗಾಗ್ತಾರಮ್ಮ? (1)

ಸಾಮಾನ್ಯವಾಗಿ ಈ ಪ್ರಶ್ನೆಗೆ ಯಾವ ತಾಯಿಯೂ ಉತ್ತರಿಸುವುದಿಲ್ಲ. ಸರಿಯಾದ ಉತ್ತರವನ್ನು ಕೊಡಲು ಅಸಮರ್ಥಳಾಗಿ ಆಕೆ ಉತ್ತರ ರೂಪವಾಗಿ ಒಂದು ಏಟು ಬಿಗಿಯುತ್ತಾಳೆ. ಆಗ ಚಿರಂಜೀವಿ ನು ಮಾಡುವ ನಾಗಸ್ವರಕ್ಕೆ ಹೆಚ್ಚಿನ ತಾಯಿಂದಿರು ಮತ್ತೆ ತಾಳ ಹಾಕುವುದೂ ಇದೆ!

ಇಲ್ಲಿ ರಾಧೆಯೂ ವಿವರವಾಗಿ ಅದನ್ನೇನೂ ಹೇಳುವದಿಲ್ಲ. "ಪ್ರೇಮ ಅಂದ್ರೆ ಪ್ರೇಮ" ಇಷ್ಟು ಹೇಳಿ ಮಗುವನ್ನು ಮುದ್ದಿಸುತ್ತಾಳೆ.

ಮರುದಿನ ಈ ಪ್ರಶ್ನೆ ತಂದೆಯ ಬಳಿಗೂ ಹೋಗುತ್ತದೆ. ಅಮ್ಮನ ಚಿಕ್ಕಪ್ಪ ರೇಡಿಯೋ ಕೊಟ್ಟುದಕ್ಕಾಗಿ ತಾನು ಆಕೆಯನ್ನು ಪಡೆದೆ ಎಂದು ತಂದೆ ಹೇಳುತ್ತಾನೆ.

ಗಂಡನ ಈ ಸುಳ್ಳು ನುಡಿ ಪತ್ನಿಗೆ ರುಚಿಸುವದಿಲ್ಲ. ತನ್ನ ಪ್ರೀತಿಯನ್ನು ಮಗುವಿಗೆ ಇತ್ತ ಒಂದು ಮುತ್ತಿನಲ್ಲಿ ಸೂಚಿಸುವ ರಾಧೆ ತನ್ನ ಗಂಡ ತನ್ನನ್ನು ಪ್ರೀತಿಸುವದಿಲ್ಲ ಎಂಬ ನೋವನ್ನನುಭವಿಸುತ್ತಾಳೆ.

'ನನಗೂ ಏನೋ ಹೇಳಲಿಕ್ಕಿತ್ತು" ಕತೆಯ ವಸ್ತು ಎಲ್ಲ ಕತೆಗಳಿಗಿಂತ ಹೆಚ್ಚು ಅರ್ಥವತ್ತಾದುದಾಗಿದೆ. ಸುತ್ತಲಿನ ಸಮಸ್ಯೆಗಳನ್ನರಿತಿರುವ ಅಸಹಾಯ ತರುಣನೊಬ್ಬನ ಚಿತ್ರ ಈ ಕತೆಯಲ್ಲಿ ಸ್ಪಷ್ಟವಾಗಿ ಮೂಡಿದೆ. ತನ್ನದೇ ಆಗಿರುವ ಸಮಸ್ಯೆಗಳಿಂದ ಹೊರ ಬರಲಾಗದೆ ಚಡಪಡಿಸುತ್ತಿರುವ ತರುಣನ ಮನೋವೇದನೆ ಹೃದಯಸ್ಪರ್ಶಿಯಾಗಿದೆ.

ಹತ್ತು ಉತ್ತಮ ಕತೆಗಳಿಂದ ವೆಂಕಟರಾಜ ಪಾನಸೆಯವರು ಈ ಸಂಕಲ್ಪವನ್ನು ಸಜ್ಜುಗೊಳಿಸಿದ್ದಾರೆ. ಕತೆಗಳಲ್ಲಿ ಹೊಸ ಹುರುಪಿನ ಹೊಸತನವಿದೆ. ವಿಚಾರಕ್ಕೆ ಎಡೆಕೊಡುವ ವಿಷಯಗಳಿವೆ.

ಕನ್ನಡಕ್ಕೆ ಹೊಸತು ವಿಚಾರ ಮತ್ತು ಹೊಸ ಬಗೆಯ ನೋಟವನ್ನು ಈ ಮೂಲಕ ಪಾನಸೆಯವರು ಒದಗಿಸಿ ಕೊಟ್ಟಿದ್ದಾರೆ. ಇದು ಉದಯೋನ್ಮುಖ ಬರಹಗಾರರು "ನವ್ಯ ಎಂಬ ಹೆಸರನ್ನು ಹೇಗೆ ಅರಿತುಕೊಳ್ಳಬೇಕು ಎಂಬುದಕ್ಕೆ ನೆರವಾಗುವಂತಿದೆ,

ಮನ್ಮಥನ ಹೆಂಡತಿಯನ್ನು ಓದಿದ ಓದುಗರು ಉತ್ತಮ ವಿಚಾರಗಳನ್ನೇ ಒದಗಿಸಿ ಕೊಡಬಲ್ಲ ಕತೆಗಾರನೊಬ್ಬ ಕನ್ನಡ ಸಾಹಿತ್ಯದಲ್ಲಿ ಕಂಡುಬಂದಿದ್ದಾನೆ ಎಂದು ಗುರುತಿಸಿದ್ದರೆ ಇದು ಬರೆಯುವಂಥದಲ್ಲ ಕಥಾ ಸಂಕಲನದ ಮೂಲಕ ರಾಜ ಪಾನಸೆ, ಎಂದೆಂದೂ ಮರೆಯಲಾಗದಂಥ ಕತೆಗಳನ್ನು ಒಪ್ಪಿಸಿದ್ದಾರೆ ಎಂಬುದನ್ನು ಗುರುತಿಸುವಂತಿದೆ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H.Shetty, at the Navayuga Press, Udipi, S. India.

ನವಯುಗ

VOL. 43 No. 37

NAVAYUGA—Nationalist Weekly ‡‡ ಉಡುಪಿ 14-5-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವಿಷ್ಟ-ವಿಷ್ಟವರು

ಶ್ರೀ ಯು. ಎನ್. ದೇಭಾರ್

ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೇ ಪ್ರಸಿದ್ಧಿಗೆ ಬಂದವರಲ್ಲಿ ಶ್ರೀ ಯು. ಎನ್. ದೇಭಾರರು ಅಗ್ರಗಣ್ಯರು. ಈ ಹುದ್ದೆಗೆ ಅವರು ಅನಿರೀಕ್ಷಿತವಾಗಿಯೇ ಏರಿದವರು; ಹುದ್ದೆಯಿಂದ ಹೊರಬಂದ ಮೇಲಾದರೂ ಅನರು ಉಳಿದವರಂತೆ ರಾಜಕಾರಣವನ್ನು ಮೈ ಮೇಲೆ ಎಳೆದುಕೊಳ್ಳದವರು. ಕಾಂಗ್ರೆಸ್ಸಿನ ತತ್ವಗಳನ್ನು ಮತ್ತವನ್ನು ಅನುಷ್ಠಾನಕ್ಕೆ ತರುವಲ್ಲಿ ದೇಭಾರರ ನಿಷ್ಠೆ ಅಚಲವೆಂದೇ ಅವರು ಕೇವಲ ಲೋಕಸಭಾ ಸದಸ್ಯರಾಗಿದ್ದರೂ ದೇಶದ ಮಹತ್ವದ ಆಗು ಹೋಗುಗಳ ಮೇಲೆ ದೃಷ್ಟಿಯಿರಿಸಿದ್ದಾರೆ. ಇವರು ಮಿತಭಾಷಿ, ಸ್ಪಷ್ಟವಾದಿ, ಧ್ಯೇಯಜೀವಿ. ಎಂತೆಂತಹರು ಕಾಂಗ್ರೆಸ್ಸಿನ ಅಧ್ಯಕ್ಷ ಪಟ್ಟವನ್ನೇರಿ. ಬೀಸಿದ ಬಿರುಗಾಳಿಯಿಂದ ಆಮೂಲ ಉರುಳಿದರೂ ದೇಭಾರರು ವಿಶುದ್ಧ ದೇಶಭಕ್ತ ರತ್ನವಾದುದರಿಂದ ಇಂದಿಗೂ ಪ್ರಶಂಸಾರ್ಹರೆನಿಸಿದ್ದಾರೆ.

ಕಾಂಗ್ರೆಸ್ಸು ಭುವನೇಶ್ವರದ ಅಧಿವೇಶನದಲ್ಲಿ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸಮಾಜವಾದವನ್ನು ರೂಪಿಸಲು ನಿರ್ಧರಿಸಿತು; ಮತ್ತು ಶ್ರೀ ದೇಭಾರರ ಅಧ್ಯಕ್ಷತೆಯಲ್ಲೊಂದು ಸಮಿತಿಯನ್ನು ಏರ್ಪಡಿಸಿ, ಈ ಗುರಿ ಸಾಧನೆಯ ಬಗ್ಗೆ ಕೈಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಅಧ್ಯಯನ ನಡೆಸಿ ವರದಿನೀಡುವಂತೆ ಸೂಚಿಸಿತ್ತು. ಈಗಾಗಲೇ ಪ್ರಾರಂಭವಾದ ಬೊಂಬಾಯಿಯ ಎ. ಐ. ಸಿ. ಸಿ. ಸಭೆಯಲ್ಲಿ ಈ ವರದಿಯು ಚರ್ಚಿಸಲ್ಪಡುವುದು. ಇನ್ನ ಬಹು ದೀರ್ಘವಾದ ವರದಿಯಲ್ಲಿ ಸಮಿತಿಯು ಸ್ಪಷ್ಟವಾದ ಮಾತಿನಿಂದ ಕೇಂದ್ರ ಮತ್ತು ರಾಜ್ಯಸರಕಾರಗಳಿಗೆ ಸಲಹೆ ಮಾಡಿದೆ. ಯೋಜನೆಯ ಗುರಿಯು ನಿರ್ದೇಶಿತ ಪ್ರಮಾಣದಲ್ಲಿ ಮುಂದೊತ್ತದಿರುವುದರಿಂದ, ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿತಿಗತಿಗಳ ಉನ್ನತಿಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು, ಯೋಜನೆಯ ಯಶಸ್ಸಿಗೆ ರಾಜ್ಯಗಳ ಮುಖ್ಯ ಮಂತ್ರಿ ಮತ್ತು ಕೃಷಿ ಮಂತ್ರಿಗಳೇ ಜವಾಬ್ದಾರರಿರಬೇಕು— ಎಂದಿದೆ ಈ ವರದಿಯಲ್ಲಿ. ಇದರಿಂದ ಜವಾಬ್ದಾರಿಯ ಮಹತ್ವದ ಅರಿವು ಮೂಡಿ ಅದನ್ನು ನಿರ್ವಹಿಸುವಲ್ಲಿ ಚಾಣಾಕ್ಷತೆ ಮತ್ತು ತ್ವರಿತತೆಗಳು ಹೆಚ್ಚಬಹುದೆಂಬ ನಿರೀಕ್ಷೆ ಅವರದು. ಎಲ್ಲಕ್ಕಿಂತ ಹೆಚ್ಚಾಗಿ ಭೂ ಸುಧಾರಣೆಯನ್ನು ಮೂರನೇ ಯೋಜನೆಯ ಕೊನೆಯೊಳಗಾದರೂ ವ್ಯವಸ್ಥೆಗೊಳಿಸಬೇಕೆಂದದು ಹೇಳಿದೆ. ಈ ಬಗೆಯ ಸ್ಪಷ್ಟ ವರದಿ ನೀಡಿದುದಕ್ಕೆ ದೇಭಾರರು ನಿಜಕ್ಕೂ ಅಭಿನಂದನೀಯರು. ವರದಿಯು ಅದೆಷ್ಟು ಭಾಗ ಕಾರ್ಯಕೃತವಾಗುತ್ತದೋ ನೋಡಬೇಕಷ್ಟೆ.

ಡಾ| ನಾಗಪ್ಪ ಆಳ್ವ

ಜನತೆಯ ಆರೋಗ್ಯ ರಾಷ್ಟ್ರದ ಆರೋಗ್ಯಕ್ಕೆ ಮೂಲ. ಆದುದರಿಂದಲೇ ಕರ್ನಾಟಕದ ಆರೋಗ್ಯ ಸಚಿವ ಡಾ| ನಾಗಪ್ಪ ಆಳ್ವ ಅವರ ಹೊಣೆಗಾರಿಕೆ ಗುರುತರವಾಗಿದೆ. ರಾಷ್ಟ್ರದಲ್ಲಿ ಡಾಕ್ಟರರುಗಳ ಅಭಾವವಿದೆ; ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇದು ಭೀಕರವಾಗಿದೆಯೆಂದು ಎಲ್ಲರೂ ಹೇಳುತ್ತಾರೆ. ಸರಕಾರವು ಬಹಳ ವೆಚ್ಚಮಾಡಿ ಕಟ್ಟಿಸಿದ ಆಸ್ಪತ್ರೆಗಳಲ್ಲಿ ಕೂಡ "ಡಾಕ್ಟರಿದ್ದರೆ ಔಷಧಿಯಿಲ್ಲ; ಔಷಧಿಯಿದ್ದರೆ ಡಾಕ್ಟರುಗಳಿಲ್ಲ" ಎಂಬ ಪರಿಸ್ಥಿತಿ ಅಲ್ಲಲ್ಲಿ ಕೇಳಿ ಬರುತ್ತಿದೆ. ಇಂತಹ ವಿಚಾರಗಳು ಬಲು ಬೇಗನೇ ಪ್ರಸಿದ್ಧಿಯನ್ನೂ ಪಡೆಯುತ್ತವೆ; ಸರಕಾರಕ್ಕೆ ಅಪಯಶಯಸ್ಸನ್ನೂ ತರುತ್ತವೆ. ಆದರೂ ಡಾ| ಆಳ್ವ ಅವರು ಮಿತಿ ಮೀರಿದ ಕಾಳಜಿಯಿಂದ ತನ್ನ ಹೊಣೆಗಾರಿಕೆಯನ್ನರಿತುಕೊಂಡೇ ಮುನ್ನಡೆಯುತ್ತಾರೆ. ಡಾಕ್ಟರುಗಳೇ ದೊರೆಯದೆ ಹೋದರೆ ಯಾರಾದರೂ ಏನು ಮಾಡಬಲ್ಲರು?

ಪ್ರತಿ ಜಿಲ್ಲೆಯ ಕೇಂದ್ರದಲ್ಲಿರುವ ಆಸ್ಪತ್ರೆಗಳಿಗೆ ಶಸ್ತ್ರ ಚಿಕಿತ್ಸರು, ವೈದ್ಯರು ಮಾತ್ರವಲ್ಲದೆ ವಿಶೇಷ ತಜ್ಞರನ್ನೂ ಒದಗಿಸಬೇಕು ಎಂಬುದು ನಮ್ಮ ರಾಜ್ಯ ಸರಕಾರದ ನೀತಿ. ಆದರೆ ಇದನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುವುದು ವಿಳಂಬವಾಗಬಹುದಾದರೂ, ಮುಂದಿನ ವರ್ಷದೊಳಗೆ ಬಹಳಷ್ಟು ಯಶಗಳಿಸಬಹುದೆಂಬ ಆಶಯ ನಾಗಪ್ಪ ಆಳ್ವರದ್ದು.

ರೋಗವು ಬಂದಮೇಲೆ ಅದನ್ನು ತಡೆಗಟ್ಟುವುದಕ್ಕಿಂತ ಮೊದಲೇ ಅದನ್ನು ತಡೆಹಿಡಿಯುವುದು ಮೇಲೆಂದು ಎಲ್ಲರೂ ಬಲ್ಲರು. ಆದರೆ, ಅದೇಕೋ ಹೆಚ್ಚಿನವರಿಂದ ಹೀಗೆ ಮಾಡುವುದು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಚಿಕ್ಕತನದಿಂದಲೇ ಆರೋಗ್ಯದತ್ತ ಗಮನ ನೀಡಬೇಕು. ಮಕ್ಕಳು ಮತ್ತು ತಾಯಂದಿರ ಆರೋಗ್ಯವು ಉತ್ತಮವಿದ್ದರೆ, ಭಾವಿ ಜನಾಂಗದ ಸ್ವಾಸ್ಥ್ಯವೂ ಉತ್ತಮಗೊಳ್ಳುವುದು. ಆದುದರಿಂದ ವೈದ್ಯಕೀಯ ವೃತ್ತಿಯಲ್ಲಿರುವವರು ಈ ಕಡೆಗೆ ವಿಶೇಷ ಲಕ್ಷ್ಯ ಹರಿಸಬೇಕೆನ್ನುತ್ತಾರೆ, ಮಾನ್ಯ ಆರೋಗ್ಯ ಮಂತ್ರಿಗಳು. ಡಾ| ನಾಗಪ್ಪ ಆಳ್ವ ಅವರ ಈ ಯಥಾರ್ಥವಾದ ಕೇಳಿಕೆಯನ್ನು ಯಾವ ವೈದ್ಯನೂ ಕೇಳದಿರಬಾರದು; ತನ್ನ ಸಂಪರ್ಕಕ್ಕೆ ಬಂದ ಮಕ್ಕಳು, ತಾಯಿಯರಿಗೆ ಅತ್ಯಲ್ಪ ವೆಚ್ಚದಿಂದ ಅತ್ಯಧಿಕ ಆರೋಗ್ಯ ಲಭಿಸುವಂತೆ ನೋಡಿಕೊಳ್ಳಬೇಕು. ದೇಶದ ಒಳಿತಿಗಾಗಿ ಪ್ರತಿಯೊಬ್ಬರೂ ತಂತಮ್ಮ ಕರ್ತವ್ಯವನ್ನು ಮಾಡಲು ಹಿಂಜರಿಯಬಾರದು; ಹಾಗಿರುವಾಗ ವೈದ್ಯರು ಕರ್ತವ್ಯವಿಮುಖರಾಗಬಾರದೆಂದು ಡಾ| ಆಳ್ವರ ಸಲಹೆ ನ್ಯಾಯೋಚಿತವಾದುದು.

ಶ್ರೀ ರತ್ನವರ್ಮ ಹೆಗ್ಗಡೆ

ಮಾತು ಬಿಡದ ಮಂಜುನಾಥನಿಂದಾಗಿ ಭಾರತದಾದ್ಯಂತ ಕೀರ್ತಿವೆತ್ತಿದೆ ಶ್ರೀ ಧರ್ಮಸ್ಥಳ ಕ್ಷೇತ್ರ. ಕ್ಷೇತ್ರದ ದರ್ಶನ ಮಾಡಿದವರು ಅಲ್ಲಿನ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರ ಕಾರ್ಯದ ಸಾಹಸದ ದರ್ಶನವನ್ನೂ ಮಾಡಿಕೊಳ್ಳುತ್ತಾರೆ. ಪರಂಪರೆಯಿಂದ ನಡೆದು ಬರುತ್ತಿರುವ ಸಕಲ ದೇವಕಾರ್ಯಾದಿಗಳನ್ನು ನಿರ್ವಿಘ್ನವಾಗಿ ಮುಂದುವರಿಸಿಕೊಂಡು ಬರುತ್ತಿರುವ ಶ್ರೀ ಹೆಗ್ಗಡೆಯವರದು ಅಪೂರ್ವ ಕರ್ತೃತ್ವ ಶಕ್ತಿ ಮತ್ತು ಉನ್ನತ ವ್ಯಕ್ತಿತ್ವ. ನಿರಾಡಂಬರದ ಮೂರ್ತಿ; ನಿರಹಂಕಾರಿ, ನಿಗರ್ವಿ. ಇವುಗಳಿಂದಾಗಿಯೇ ಇಂದು ನವನವೋನ್ಮೇಷಶಾಲಿನಿಯಾಗಿ ಧರ್ಮಸ್ಥಳ ಬೆಳೆದು ಬರುತ್ತಿದೆ.

ದೇಶದ ನಾನಾಮೂಲೆಗಳಿಂದ ಬರುತ್ತಿರುವ ಅಸಂಖ್ಯಾತ ಭಕ್ತ ಸಮುದಾಯದ ವಸತಿ ಸೌಕರ್ಯಕ್ಕೆಂದು ಕಟ್ಟಿದ ಬೃಹತ್ ಛತ್ರಗಳು ಕ್ಷೇತ್ರದ ಘನತೆಯನ್ನು ಮುಗಿಲೆತ್ತರಕ್ಕೆ ಒಯ್ಯುತ್ತವೆ. ಉದ್ಯಾನದಲ್ಲಿ ಹೆಗ್ಗಡೆಯವರ ಬೀಡು, ವಸಂತ ಮಹಲು ಇತ್ಯಾದಿಗಳನ್ನು ಅತ್ಯಂತ ಪ್ರೇಕ್ಷಣೀಯವಾಗಿಸಿರುವರು. ಕ್ಷೇತ್ರ ಯಾತ್ರಿಕರಿಗೆ ಯಾವ ಬಗೆಯ ಕೊರತೆಯೂ ತಲೆದೋರದಂತೆ ಅತ್ಯಂತ ಎಚ್ಚರಿಕೆಯಿಂದ ದೇವಳದ ಸಮಸ್ತ ಆಗುಹೋಗುಗಳನ್ನು ನೋಡಿಕೊಂಡು ಬರುತ್ತಿದ್ದಾರೆ.

ಹಿಂದೆ ರಾಜ್ಯದ ವಿಧಾನ ಸಭಾ ಸದಸ್ಯರಿದ್ದಾಗ ತನ್ನ ಮತದಾರ ಕ್ಷೇತ್ರದ ಉನ್ನತಿಗಾಗಿಯೂ ಇವರು ಶ್ರಮಿಸಿದ್ದರು. ಇಂದವರು ಸ್ವೇಚ್ಛೆಯಿಂದಲೇ ರಾಜಕೀಯದಲ್ಲಿ ಪ್ರತ್ಯಕ್ಷ ಭಾಗವಹಿಸುವುದನ್ನು ನಿಲ್ಲಿಸಿ, ತನ್ನ ಕರ್ತವ್ಯ ಧರ್ಮಾಧಿಕಾರ್ಯದಲ್ಲಿಯೇ ಪೂರ್ಣಸಮಯವನ್ನು ಕಳೆಯುತ್ತಲಿದ್ದಾರೆ. ದಿ॥

(೧೩ನೇ ಪುಟ ನೋಡಿರಿ)

ವಾರದ ಕಥೆ

ಕರ್ಮದ ಫಲ

ಬರೆದವರು: ಶ್ರೀ ಪಿ. ಎಸ್. ರಾವ್, ಮಂಗಳೂರು.

ಮೈಮೇಲೆಲ್ಲ ಮೂಡಿದ್ದ ಕೀವುಗುಳ್ಳೆಗಳಿಂದ ಜನಾರ್ದನ ಸಂಪೂರ್ಣ ಹಣ್ಣಾಗಿದ್ದ. ಅದು ಹೇಗೆ ಮೂಡಿತ್ತು, ಯಾವ ಕಾರಣಗಳಿರಬಹುದು ಎಂದು ಡಾಕ್ಟರರಿಗೆ ಅದರ ಮೂಲವನ್ನು ಕಂಡುಹಿಡಿಯಲು ಸಾಧ್ಯವಾಗಿರಲಿಲ್ಲ. ಮೈಯಲ್ಲಿ ಭಯಂಕರವಾದ ಉರಿ, ಹಾಗೂ ನೋವು, ಹದಿನೈದು ದಿನದಿಂದ ಜನಾರ್ದನನನ್ನು ಹದ ಮಾಡುತಿತ್ತು. ಗಳಿಗೆಗಳಿಗೆಗೆ ನರ್ಸ್ ಬಂದು ಮಾತ್ರೆ ತಿನ್ನಲು ಕೊಡುತ್ತಿದ್ದಳು ಡಾಕ್ಟರರು ದಿನಕ್ಕೆರಡು ಇಂಜೆಕ್ಷನ್ ಚುಚ್ಚುತ್ತಿದ್ದರು.

ರಾತ್ರಿ ಇಡೀ ನಿದ್ರೆಯಿಲ್ಲದೆ, ನಾನಾ ಆಲೋಚನೆಯಲ್ಲಿ ನರಳಿದ್ದ ಜನಾರ್ದನನಿಗೆ ಪ್ರಾತಃಕಾಲದ ಸಮಯ ಕಣ್ಣಿಗೆ ಮಂಪರು ಹಿಡಿದರೂ, ಕೂಡಲೇ ಎಚ್ಚರವಾಯಿತು. ನೋವಿನ ಬಾಧೆ ಅಂಗಾಂಗದಲ್ಲಿ ಹರಡಿತ್ತು.

“ಅಯ್ಯಯ್ಯೋ.... ನೋವು.... ನೋವು ...ತಡೆಯಲಾರೆ”—ಕೂಗಿಕೊಂಡ ಜನಾರ್ದನ.

“ಪಾಪಿ! ನೋವೆಂದು ಬೊಬ್ಬಿಡುತ್ತಿರುವೆಯಾ? ನೀನು ಮಾಡಿದ ಕರ್ಮದ ಫಲ ಉಣ್ಣುತ್ತಿರುವಿ! ಮಾನವನಾಗಿ ಜನಿಸಿದ ನೀನು, ಮಾನವತೆಯ ಪವಿತ್ರತೆಯನ್ನು ಕಾಪಾಡಿಕೊಳ್ಳಲು ಬಯಸಲಿಲ್ಲ! ಸ್ವಾರ್ಥ ಸಾಧಕ ಮನೋಭಾವದಿಂದ, ಮೆರೆದಾಡಿದೆ. ನಿನ್ನ ಜನ್ಮದಲ್ಲಿ ಯಾರಿಗಾದರೂ ಚಿಕ್ಕಾಸಿನ ಉಪಕಾರವಾಗಿದೆಯೇ? ಪರೋಪಕಾರ ಮಾನವನಲ್ಲಿ ರಕ್ತಗತವಾಗಿ ಹರಿದು ಬರಬೇಕಾಗಿತ್ತು! ನಿನ್ನ ಕ್ಷುಲಕ ಮನೋಭಾವದ ವೇದನೆಯಿಂದ ಪರಿತಪಿಸಿದ ಮಾನಿನಿಗಳ ಶಾಪದ ಹೊಗೆ, ನಿನ್ನನ್ನು ವೇದನೆಯ ಚಿತೆಯಲ್ಲಿ ದಹಿಸುತ್ತಿರುವುದು! ನಿನ್ನ ಬದುಕಿಗೆ ಚಿಕ್ಕಾಸಿನ ಬೆಲೆಯಿಲ್ಲ”

—ಮನಸ್ಸು ಮಾತಾಡಿದಾಗ ಜನಾರ್ದನ ಕಣ್ಣರಳಿಸಿದ.

“ನಾನಾಗಿಯೇ ಅನ್ಯಾಯದ ಮಾರ್ಗ ಹಿಡಿದಿರುವೆನೇ? ನನಗೆ ಅನ್ಯಾಯ ಮಾಡಿ ಆನಂದ ಪಡುತ್ತಿರುವವರಲ್ಲಿ ಸೇಡು ತೀರಿಸಿಕೊಂಡುದು ಪಾಪವೆ?”

“ಸೇಡು! ನಾಚಿಕೆ ಆಗುವುದಿಲ್ಲವೇ! ನಿನ್ನ ಮನಸ್ಸಿನಂತೆ, ನಿನಗೆ ಒಲಿದು ಬರಲಿಲ್ಲವೆಂಬ ದುರ್ವಾದದಿಂದ, ಅಪವಾದದ ಹೊರೆ ಹೊರಿಸಿ, ಟೈಪಿಸ್ಟ್ ಲೀಲಳನ್ನು ಹೊರ ಓಡಿಸಿದೆ, ಆವಳನ್ನು ಹೊರಗಟ್ಟಲು, ಯಾವ್ಯಾವ ಕಲ್ಪನೆಯ ಕತೆ ಕಟ್ಟಿ ಅಧಿಕಾರಿಗಳ ಬಾಲ ಹಿಡಿದು ಪರದಾಡಿದೆ. ಅವಳ ಅನ್ನಕ್ಕೆ ಮಣ್ಣೆರಚಿದ ನಿನ್ನ ತಪ್ಪು ಕ್ಷಮಾರ್ಹವೆ?”

“ದುಡಿಯಲು ಬಂದ ಹೆಣ್ಣ ಮಹಾ ಮಾನಿನಿಯಾಗಿ ಮಾನ ಕಾಪಾಡಲು ಪ್ರಯತ್ನಿಸಿದಾಗ, ಅಂಥ ಮರ್ಯಾದವಂತ ಮಡಿಹೆಣ್ಣು ನಮ್ಮ ಆಫೀಸಿನಲ್ಲಿ ಬೇಡವೆಂಬ ಹಂಬಲದಿಂದ ಅವಳನ್ನು ಹೊರ ಹೊರಡಿಸಿದೆ. ಹಿಂದಿನ ಹಲವು ತರುಣಿಯರಲ್ಲಿ ಪಡೆದ ಆನಂದ ಇವಳನ್ನೂ ಪ್ರೇರೇಪಿಸುವಂತೆ ಪ್ರೋತ್ಸಾಹಿಸಿತು.”

‘ತೂ! ಚಂಡಾಲ! ನಿನ್ನ ಹುಂಬತನದ ವರ್ತನೆಗೆ ಪರಿಮಿತಿಯೇ ಇಲ್ಲವೇ? ಯಾರೇ ಅಧಿಕಾರಿಯಾಗಿ ಬರಲಿ, ಅವರ ಬಾಲ ಹಿಡಿದು, ನಗುಮುಖದ ಸರಿಯಾಗಿ, ಅವರ ಬಿಟ್ಟಿ ಚಾಕರಿ ಮಾಡಿ, ನೀನೊರ್ವ ಪ್ರಾಮಾಣಿಕ ವ್ಯಕ್ತಿ ಎಂದು ಪ್ರಶಂಸೆ ಪಡೆಯಲು ಶತಪ್ರಯತ್ನ ಮಾಡಿದೆ! ನಿನ್ನ ಸಹೋದ್ಯೋಗಿಗಳ ಮೇಲೆ ಸಲ್ಲದ ಚಾಡಿ ಮಾತು ಹೇಳಿಕೊಟ್ಟು, ಅಧಿಕಾರಿಗಳ ವಕ್ರ ದೃಷ್ಟಿ ಅವರತ್ತ ಹಾಯುವಂತೆ ಮಾಡಿ. ನೀನೊರ್ವನೇ ನಿಷ್ಠಾವಂತ ಕಾಮಗಾರ ಎಂಬ ಪ್ರತಿಬಿಂಬ ನಿನ್ನ ಅಧಿಕಾರಿಗಳಲ್ಲಿ ಉಳಿಯುವಂತೆ ಪ್ರಯತ್ನಿಸಿ ಫಲ ಉಂಡೆ! ನಿನ್ನನ್ನು ಎಲ್ಲರೂ ಮೆಚ್ಚಿರುವರು ಎಂದು ನೀನು ಭಾವಿಸಿರಬಹುದು! ನಿನ್ನ ಬೆನ್ನ ಹಿಂದೆ ಯಾವ ಕಾರ್ಯ ಸ್ಥಾನ ಸ್ಥಾಪಿತ ವಾಗಿದೆಯೆಂದು ಅಂತಿರುವೆಯಾ ಮೂರ್ಖ!”

“ಇನ್ನು ಮುಂದೆ ವರ್ತನೆಯನ್ನು ಬದಲಾಯಿಸಿದರೆ-ಸರಿ!”

“ತೂ—ಹೇಡಿ ನಿನ್ನ ಬಾಳಿಗೊಂದು ರೂಪ ವಿದೆಯೇ! ಭವಿಷ್ಯಕ್ಕೊಂದು ಆದರ್ಶವಿದೆಯೇ? ನೆಮ್ಮದಿಯ ಬದುಕಿನ ಆಸೆಯಿದೆಯೇ? ನಾಯಿ ಬಾಳು ನಿನ್ನದು! ಪರರ ಎಂಜಲನ್ನೇ ಪರಮಾನ್ನವೆಂದು ಪರಿತಪಿಸುವವ ನೀನು! ನಿನಗೇಕೆ ಬದುಕು! ಯಾವ ಸುಖಕ್ಕಾಗಿ ನೀನು ಬದುಕಬೇಕು! ನಿನಗೇಕೆ ಆಸ್ಥೆ? ಮಂಚದಿಂದ ಎದ್ದೇಳು! ಇನ್ನ್ಯಾರಿಗಾದರೂ ಮಂಚ ತೆರವು ಮಾಡಿಕೊಡು! ಅವರಾದರೂ ಬದುಕಲಿ! ನೀನು ಸ್ವಾರ್ಥಿ! ನೀನು ಕುಹಕಿ! ನೀನು ವಂಚಕ! ನರದ್ರೋಹಿ! ನೀನು ಸಾಯಲೇಬೇಕು! ಹೋಗು... ಬಾವಿಗೆ ಹಾರು—ಪ್ರಾಣಬಿಡು!!”

ಗಹಗಹಿಸಿ ನಕ್ಕಂತಾಯಿತು ಮನಸ್ಸು! ತಲೆಯೊಳಗೆ ಭಯಂಕರ ಬಿರುಗಾಳಿ ಮೂಡಿದಂತಾಗಿ ಕಣ್ಣು ಮುಚ್ಚಿತು.

“ಅಯ್ಯೋಯೋ...ನೋವು— ತಡೆಯಲಾರೆ....”

—ಸುತ್ತಲೂ ಕಣ್ಣು ಹೊರಳಿಸಿದ ಜನಾರ್ದನ! ಎಲ್ಲರೂ ಒಂದಲ್ಲ ಒಂದು ವಿಧದ ನೋವಿನ ಬೇನೆಯಿಂದಲೇ ಬಳಲುತ್ತಿರುವರು, ಪ್ರತಿ ಮಂಚದಲ್ಲಿಯೂ ಮಲಗಿರುವಾಗ, ಯಾರು ಯಾರಿಗೆ ಸಹಾಯಕರಾಗಬೇಕು? ನರ್ಸ್‌ಗಳು ಮಾತ್ರ ತಮ್ಮ ಕರ್ತವ್ಯದ ಕಟ್ಟಳೆಯಲ್ಲಿ ಬಂಧಿತರಾಗಿದ್ದು ನರಳಿದವರ ಹತ್ತಿರ ಓಡೋಡಿ ಬರುತ್ತಿದ್ದರು.

ಗಟ್ಟಿಯಾಗಿ ಕೇಕರಿಸಿ ಉಗಿಯಿತು—ಪತನ ವಾದ ಮನ!

“ನೋವು....ಇದೇ ರೀತಿ ನೀನೆಷ್ಟು ಮಂದಿಯ ನೆಮ್ಮದಿಯ ಮನಸ್ಸಿಗೆ ನೋವಿನ ಬರೆ ಎಳೆದಿರುವಿ—ಜನ್ನ! ಹಲವರ ಅನ್ನಕ್ಕೆ ಕಲ್ಲೆಸೆದ, ಕಲ್ಲೆದೆಯ ಮನುಷ್ಯ ನೀನು! ನಿನ್ನ ಬಾಳಿಗೆ ಚಿಕ್ಕಾಸಿನ ಬೆಲೆಯಿಲ್ಲ. ನೀನು, ನಿನ್ನ ಬಾಳನ್ನು ರೂಪಿಸಿಕೊಂಡ ರೀತಿಯೇ ಕುಹಕದ್ದು. ನಿನ್ನ ಅನ್ಯಾಯದ ಪ್ರತಿಫಲ ಇಂದು ನಿನ್ನ ಮೈಯಲ್ಲಿ ಎದ್ದು ಕಾಣುತ್ತಿದೆ! ಗುಳ್ಳೆ ರೂಪತಾಳಿದೆ! ನಿನ್ನ ಮೈಯಲ್ಲಿ ಮೂಡಿರುವ ಗುಳ್ಳೆಗಳನ್ನೆಲ್ಲಾ ಲೆಖ್ಖಮಾಡು! ನೀನು ಎಷ್ಟು ಜನರಿಗೆ ಅನ್ಯಾಯ ಮಾಡಿರುವೆ ಎಂಬ ಪರಿಪೂರ್ಣ ಪರಿಚಯ ದೊರಕುತ್ತದೆ. ನೋವಿನ ಬಾಧೆಯಿಂದ ಒಂದು ವರುಷದ ವರೆಗೆ ನರಳಿ—ಸಾಯುವೆ.”

“ಅಯ್ಯೋ—ದೇವರೆ! ನನ್ನನ್ನು ರಕ್ಷಿಸು.”

“ದೇವರು! ಇಂದು ನೆನಪಾಯಿತೇ—ದೇವರದ್ದು, ನಿನ್ನ ಅನ್ಯಾಯಕ್ಕೆ ದೇವರು ಸರಿಯಾದ ಶಿಕ್ಷೆ ವಿಧಿಸುವನು ಎಂದು ನಿನ್ನ ಪೀಡೆಯಿಂದ ಪರದಾಡಿದವರು ಅರುಹಿದಾಗ. ದೇವನೆಂಬವನಿಲ್ಲ—ಮಾನವನ ಹುಚ್ಚು ಕಲ್ಪನೆಯೇ ದೇವರು ಎಂದು ಎದೆ ತಟ್ಟಿ, ನಿನ್ನ ದೈತ್ಯರೂಪ ತೋರಿದೆ. ನಿನಗೆ ಸಂಕಟ ಬಂದಿದೆ ಎಂದು ವೆಂಕಟರಮಣನ ಸ್ಮರಣೆಯೇ? ಈಗ ನಿನಗೆ ಮಾತ್ರ ದೇವರು ನೆರವು ನೀಡಿ ಕಾಪಾಡಬೇಕು”

ಇನ್ನು ಮುಂದೆ ಯಾರಿಗೂ ಅನ್ಯಾಯ ಮಾಡುವುದಿಲ್ಲ. ಎಲ್ಲರಿಗೂ ಕೈಯಲ್ಲಾದ ಸಹಾಯ ಮಾಡಲು ಪ್ರಯತ್ನಿತ್ತೇನೆ.

“ನಿನ್ನ ಜನ್ಮ ಈ ಆಸ್ಪತ್ರೆಯಲ್ಲಿಯೇ ಕೊನೆಗೊಳ್ಳಲಿದೆ!-ಜನ್ನ!”

“ಒಂದು ವರ್ಷದ ಅವಧಿ ಇಲ್ಲಿಯೇ ಇರಬೇಕೆ?”

ಒಂದು ವರುಷ! ಇನ್ನೂ ಒಂದು ವರ್ಷ ಬದುಕುವ ಹಂಬಲವೇ? ಇಲ್ಲ! ನಿನಗೆ ಕೂಡಲೇ ಸಾವು....ನಿನಗಾಗುವ ಆಪರೇಷನ್, ನಿನಗೆ ಮುಕ್ತಿ ಕರುಣಿಸುತ್ತದೆ. ಈ ಲೋಕದಿಂದ ನಿನಗೆ ಸ್ಥಾನಾಂತರ! ಲೀಲಳನ್ನೇ ಆಫೀಸಿನಿಂದ ಓಡಿಸಿದದುರ ಪ್ರತಿಫಲ—ನಿನಗೂ ಸ್ಥಾನಾಂತರ”

ಅಯ್ಯೋ! ನನ್ನ ಮಡದಿ—ಮಕ್ಕಳಿಗಾರುಗತಿ! ಅಂಬೆ ಗಾಲಿಕ್ಕುತ್ತಿರುವ ಚಿಕ್ಕ ಹಸುಳೆಗಾರುಗತಿ! ನನ್ನ ಮಡದಿಗಂತೂ ಇನ್ನೂ ಚಿಕ್ಕಪ್ರಾಯ! ಈ ಪ್ರಾಯದಲ್ಲಿ ಅವಳು ವಿಧವೆಯಾಗ ಬಾರದು!”

“ನಿನ್ನ ಹುಚ್ಚು ಕಲ್ಪನೆಗೆ ಮಿತಿಯಿಲ್ಲವೇ? ನಿನ್ನ ಚಿಕ್ಕ ಪ್ರಾಯದ ಮಡದಿ-ವಿಧವೆಯಾಗ ಬಾರದು! ನಿನ್ನೊಡನೆ ದುಡಿಯಲು ಬಂದವರ ಮಾನ ಉಳಿಯ ಬಾರದು! ಇವೆರಡಕ್ಕೆ ಯಾವ ಅಂತರ! ನೀನು ಅನುಭವಿಸಿದ ಪರ ಹೆಣ್ಣಿನ ಸುಖವನ್ನು ನಿನ್ನ ವಿಧವೆ ಹೆಂಡತಿಯೂ ಅನುಭವಿಸಲಿ!

“ಛಿ! ಅವಳು ಸೂಳೆಯಲ್ಲ.”

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ‘ನವಯುಗ’ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕಿರಿ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ $5\frac{1}{4}$ ವರೆಗೆ

3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಶತ್ರುಗಳನ್ನು ಗೆಲ್ಲಲು

ಭಾರತಕ್ಕೆ ಸಾಧ್ಯವಿದೆಯೆ?

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಅಯೂಬರ ಆಲಿಂಗನ ಹಾಗೂ ಚೌ-ಎನ್—ಲೈಯವರ ಚೆಲ್ಲಾಟದ ವಿವರಣೆಯನ್ನು ಆದಾಗಲೇ 'ನವಯುಗ'ವು ಜನತೆಯ ಮುಂದಕ್ಕಿಟ್ಟಿರುತ್ತದೆ. ಸಂಕ ಷಾಷಣಕ್ಕೆ ಹಾಲಾಹಲವನ್ನು ಸೇವಿಸಿದಂತಾಯ್ತು ಅಯೂಬ—ಚೌ ಭೇಟಿ. ಅದರ ದುಷ್ಪರಿಣಾಮ ಭಾರತೀಯರ ಮೇಲಾಗುವುದರಲ್ಲಿನಿತೂ ಸಂದೇಹವಿಲ್ಲ. ಈ ತಿಂಗಳ ಆರಂಭದಲ್ಲಿ ಕೇಂದ್ರದ ಅರ್ಥಮಂತ್ರಿ ಟಿ. ಟಿ ಕೃಷ್ಣಮಾಚಾರಿಯವರಿಗೆ ಭಾರತದ ಪ್ರೆಸ್ಸ್ ಕ್ಲಬ್ಬಿನವರು ಒಂದು ಆಮಂತ್ರಣವನ್ನಿತ್ತಿದ್ದರು. ಆ ಸಭೆಯಲ್ಲಿ ಮಾತಾಡುತ್ತ ಅರ್ಥಮಂತ್ರಿಯವರು ಅರ್ಥವತ್ತಾಗಿ, ಕಮ್ಯೂನಿಸ್ಟ್ ಚೈನಾವು ಭಾರೀ ಪ್ರಮಾಣದಲ್ಲಿ ೧೯೬೬ರ ಹೊತ್ತಿನಲ್ಲಿ ಧಾಳಿ ನಡೆಸಲಿಕ್ಕಿದೆಂದು ಹೇಳಿದರು. ರಾಜಕೀಯಜ್ಞನ ಕವಡೆಗಳ ಸಹಾಯದಿಂದ ಮಾತ್ರ ಆ ರೀತಿ ಹೇಳುವದಲ್ಲದೆ, ಸರಕಾರಕ್ಕೆ ಸಿಕ್ಕಿರುವ ರಹಸ್ಯ ವರದಿಗಳ ಆಧಾರದ ಮೇಲಿನಿಂದಲೂ ಹೇಳುತ್ತಿರುವದಾಗಿ ಅವರು ಸ್ಪಷ್ಟಪಡಿಸಿರುವರು. ಶಾಖಾರಹಿತ ಸಚಿವ ಲಾಲಬಹಾದ್ದೂರ್ ಜೀಯವರು ದೇಶದೊಳಗೆ ಕಮ್ಯೂನಿಸ್ಟ್ ಹಾಗೂ ಪಾಕ್ ಪಂಚಮ ದಳದವರ ಕುಕೃತ್ಯ ನಡೆಯುತ್ತಿದೆಯೆಂಬುದನ್ನು ಒಪ್ಪಿಕೊಂಡಿರುವರಲ್ಲದೆ, ಗಡಿಪ್ರದೇಶಗಳಲ್ಲಿ ಸೈನ್ಯ ಜಮಾವಣೆ ಭರದಿಂದ ಸಾಗುತ್ತಿದ್ದು, ಶತ್ರುಗಳ ಚಟುವಟಿಕೆ ಜಾಸ್ತಿಯಾಗಿದೆಂಬುದನ್ನು ತಿಳಿಸಿರುವರು. ಗಡಿಪ್ರದೇಶಗಳಲ್ಲಿ ಶತ್ರುಸೈನ್ಯ ಜಮಾವಣೆಯ ಕುರಿತು ರಕ್ಷಣಾ ಅಮಾತ್ಯ ಯಶವಂತರಾವ ಸಹ ಹೇಳಿರುವರು. ಪಾಕ್ ಹಾಗೂ ಕಮ್ಯೂನಿಸ್ಟ್ ದಲ್ಲಾಳಿಗಳ ಚಟುವಟಿಕೆಗಳ ಮೇಲೆ ಸರಕಾರ ಕಣ್ಣಿಟ್ಟುಕೊಂಡಿದೆಯೆಂದು ಗೃಹಸಚಿವ ಗುಲ್ಜಾರೀಲಾಲ್ ನಂದಾಜಿಯವರು ನುಡಿದಿರುವರು. ಕಲ್ಕತ್ತ ಬಂದರಿನ ಕಾರ್ಮಿಕರಲ್ಲಿ ಕೆಲವರನ್ನು ಪಾಕಿಸ್ಥಾನಕ್ಕೆ ಕಳುಹಿಸ ಬೇಕಾಯಿತು. ಒರಿಸ್ಸಾದಲ್ಲಿ ಕಮ್ಯೂನಿಸ್ಟರ ಕೈವಾಡವನ್ನು ಚಿಗುರಿನಲ್ಲೇ ಕಿತ್ತುಹಾಕಲಾಯಿತು. ಮದರಾಸಿನಲ್ಲಿ ಪೂರ್ವ ಪಾಕಿಸ್ಥಾನ ಪೈಶಾಚಿಕ ಕುಕೃತ್ಯ ಖಂಡನೆ ಮೆರವಣಿಗೆಯ ಮೇಲೆ ಹಾಗೂ ನಗರ ರಕ್ಷಕರ ಮೇಲೆ ಮಸೀದಿಯಿಂದ ಆಕ್ರಮಣ ನಡೆದಾಗ ಚಾಣಾಕ್ಷತನದಿಂದ ಕ್ರಮ ಕೈಗೊಳ್ಳಲಾಯಿತು ಇವೆಲ್ಲವುಗಳತ್ತ ಕೈ ತೋರಿಸಿ ನಂದಾಜಿಯವರು ಸರಕಾರ ಜಾಗರೂಕತೆಯಲ್ಲಿದೆಯೆಂದು ಹೇಳುತ್ತಿದ್ದಾರೆ. ಶಾಂತಿಪ್ರಿಯ ಪ್ರಧಾನಿ ಜವಾಹರಲಾಲ ನೆಹ್ರೂಜಿಯವರು ಕೂಡಾ ಅಪಾಯ ಅಕ್ಕಪಕ್ಕದಲ್ಲೇ ಇದೆಯೆಂದು ರಾಷ್ಟ್ರವನ್ನು ಎಚ್ಚರಿಸುತ್ತಿದ್ದಾರೆ. ಶ್ರೀಮಾನ್ ಟಿ. ಟಿ. ಕೆ.ಯವರು ೧೯೬೬ರಲ್ಲಿ ಚೈನೀ ಕಮ್ಯೂನಿಸ್ಟರು ಆಕ್ರಮಣ ನಡೆಸುವರೆಂದು ಭವಿಷ್ಯ ಹೇಳುತ್ತಿದ್ದಾಗಾದಲ್ಲಿ ಅಂದರೆ ಇನ್ನೆರಡು ವರ್ಷ ಸಮಯವಿದೆಯೆಂದು ಅಪರಾಡುತ್ತಿದ್ದಲ್ಲಿ ಭಾರತೀಯ ಜನಸಂಘದ ಅಧ್ಯಕ್ಷ ದೇವಪ್ರಸಾದ ಘೋಷರು ಮದ್ರಾಸಿಗೆ ಆಗಮಿಸಿದಾಗ ಇನ್ನೆರಡು ತಿಂಗಳೊಳಗೆ ಚೈನೀ ಕಮ್ಯೂನಿಸ್ಟರು ನೇಫಾ-ಲಡಾಖ್ ಪ್ರದೇಶದಲ್ಲಿ ಮುಂದೆ ಬರುವರೆಂದೂ; ಪಾಕಿಸ್ತಾನಿಗಳು ತ್ರಿಪುರ—ಅಸ್ಸಾಂ ಪ್ರದೇಶಗಳಲ್ಲಿ ಆಕ್ರಮಣ ನಡೆಸುವರೆಂದೂ ಹೇಳಿರುವದಾಗಿ ವರದಿಯಾಗಿರುತ್ತದೆ. ಇದು ನಾಣ್ಯದ ಒಂದು ಮೈ. ಇನ್ನೊಂದು ಮೈಯೂ ಇದೆ. ಅದುವೇ ಇಲ್ಲಿರುವ ಕಮ್ಯೂನಿಸ್ಟರು ಹಾಗೂ ಅವರ ಸಹಚರರು ಮತ್ತು ಕೆಲ ಪೀತ ಪತ್ರಿಕೆಗಳು, ಅಲ್ಲದೆ ಪಾಕಿಸ್ತಾನದ ದಲ್ಲಾಳಿಗಳು. ಬೊಂಬಾಯಿಯಿಂದ ಅಧಿಕ ಪ್ರಮಾಣದಲ್ಲಿ' ಪ್ರಸಾರವಾಗುತ್ತಿರುವ ಒಂದು ಆಂಗ್ಲೇಯ ಪೀತ ವಾರಪತ್ರಿಕೆಯು ಕೆಲವು ವಾರಗಳ ಹಿಂದೆ ನಮಗೆ ಚೈನಾದಿಂದ ಭಯವೇ ಇಲ್ಲವೆಂದು ದೊಡ್ಡಕ್ಷರಗಳಲ್ಲಿ ಪ್ರಥಮ ಪುಟದಲ್ಲೇ ಪ್ರಕಟಿಸಿರುತ್ತದೆ. ಅದರ ಪ್ರಕಾರ ನಾವು ಭಯಪಡಬೇಕಾಗಿರುವದು ಅಮೇರಿಕಾ ಪಾಕಿಸ್ತಾನಕ್ಕೆ ಕೊಟ್ಟಿರುವ ಅಸ್ತ್ರಗಳಿಗಾಗಿ! ಕಮ್ಯೂನಿಸ್ಟರಾದರೋ ಚೈನಾವು ಆಕ್ರಮಣ ನಡೆಸಿಯೇ ಇಲ್ಲವೆಂದು ಇಂದೂ ಪ್ರಧಾನಿಯವರ ಎದುರಿಗೇನೇ ಹೇಳುತ್ತಿದ್ದಾರೆ! ಏನೇ ಇರಲಿ. ಆಕ್ರಮಣಕ್ಕಾಗಿ ಗಡಿಯಲ್ಲಿ ಸಿದ್ಧತೆ ನಡೆಯುತ್ತಿದೆಯೆಂಬುದೂ ಸ್ಪಷ್ಟ. ಜನತೆಯ ಮುಂದೆ ಇರುವ ಪ್ರಶ್ನೆಯೆಂದರೋ ಚೈನಾ ಮತ್ತು ಪಾಕಿಸ್ತಾನಗಳ ಸಮ್ಮಿಲಿತ ರಾಕ್ಷಸೀ ಶಕ್ತಿಯನ್ನೆದುರಿಸಲು ಭಾರತಕ್ಕೆ ಸಾಧ್ಯವೇನೆಂಬುದು.

ನೇಫಾದಲ್ಲಿ ನಮ್ಮ ಸೇನೆಗೆ ಸೋಲಾದುದರಿಂದ ಹಾಗೂ ನಂತರ ನಡೆದ ಚೈನಾ-ಪಾಕ್ ಸಂಬಂಧದಿಂದಾಗಿ ಭಾರತೀಯರ ಮನೋಸಾಗರದಲ್ಲಿ ಒಂದು ಪ್ರಶ್ನೆ ಎದ್ದಿರುತ್ತದೆ. ಚೈನಾ ಮತ್ತು ಪಾಕಿಸ್ಥಾನ ಸಮ್ಮಿಲಿತ ಶಕ್ತಿಯನ್ನೆದುರಿಸಲು ಭಾರತಕ್ಕೆ ಸಾಧ್ಯವೇನು? ಚೈನಾ ಮತ್ತು ಪಾಕಿಸ್ತಾನಗಳ ನಡುವೆ ಸೈದ್ಧಾಂತಿಕ ಸಾಮ್ಯತೆ ಏನೂ ಇರುವದಿಲ್ಲ. ರಕ್ತ ಸಂಬಂಧವಂತೂ ಇಲ್ಲವೇ ಇಲ್ಲ. ಭಾರತವನ್ನು ಬಗ್ಗುಬಡಿಯಬೇಕೆಂಬ ಏಕಮೇವ ದುರುದ್ದೇಶದಿಂದ ಪಾಕಿಸ್ತಾನವು ಚೈನಾಕ್ಕೆ ಸರ್ವ ವಿಧದಲ್ಲೂ ಸಹಾಯವನ್ನೀಯಲು ಮನಸ್ಸು ಮಾಡಿರುತ್ತದೆ. ಹೀಗೆ ಮಾಡುವ ಸಮಯದಲ್ಲಿ ಸ್ವಯಂ ಪಾಕಿಸ್ತಾನದ ಅಸ್ತಿತ್ವಕ್ಕೂ ಅಪಾಯದ ಡ್ರೇಗನ್ ಧಡಾರನೆ ಬಾಯಿ ಹಾಕುತ್ತದೆ ಈ ವಿಷಯದತ್ತ ಅದಕ್ಕಿನಿತೂ ಆಲೋಚನೆ ಇರುವದಿಲ್ಲ ಅದರ ಅದೊಂದೇ ಆಲೋಚನೆ, ಭಾರತಕ್ಕೆ ಕೇಡು ಬಗೆಯಬೇಕೆಂಬದು.

ದುರ್ಬುದ್ಧಿಗಳ ಹಾಗೂ ದ್ವೇಷದ ಕಾರಣದಿಂದಾಗಿಯೇ ಪಾಕಿಸ್ತಾನವು ಚೈನಾದೊಂದಿಗೆ ಚೆಲ್ಲಾಟವಾಡುತ್ತಿದೆಯಾದರೂ ಈ ಎರಡು ಸಮ್ಮಿಲಿತ ಶಕ್ತಿಗಳು ಶಕ್ತಿಪರೀಕ್ಷೆಯನ್ನು ಮಾಡಲು ಭಾರತವು ಸಿದ್ಧತೆ ನಡೆಸಬೇಕಾಗುತ್ತದೆ. ಸತ್ಯವಾಗಿ ಸಮರ ಸಿದ್ಧತೆಯು ಅವಕಾಶ ಕಾಲದಲ್ಲಿ ನಡೆಯುವಂತಹದು. ಈ ಕೆಲಸ ಕೆಲ ತಿಂಗಳಲ್ಲಿರುವದಿಲ್ಲ, ವರ್ಷಗಳದ್ದೇ ಇದೆ. ಯುದ್ಧ—ಯೋಜನೆಯ ನಿರ್ಮಾಣವು ಸಮರ-ಶಾಸ್ತ್ರೀಯ ಅರ್ಥ ಶಾಸ್ತ್ರೀಯ ದೃಷ್ಟಿಗಳಿಂದ ನಡೆಸುವಂತಹದು. ಶತ್ರು ಯಾರಿದ್ದಾನೆ? ಕದನವೇಶಗಳು ಅವನ ಕೈಯಲ್ಲಿದೇನು ಆಯುಧವಿದೆ? ಅವನ ಬಳಿ ಅದೆಂತು ಯುದ್ಧಮಾಡಬೇಕಾಗುತ್ತದೆ? ಇತ್ಯಾದಿ ವಿಷಯಗಳ ಆಧಾರದ ಮೇಲೆ ಸಿದ್ಧತೆಯ ಸ್ವರೂಪದ ನಿರ್ಧಾರ ಮಾಡಬೇಕಾಗುತ್ತದೆ. ಅಂದರೆ, ಅದಾಗ್ಯೂ ಕೂಡನೆ ಹೋರಾಡಬೇಕಾದ್ದಗಿನ್ನೂ ರಾಷ್ಟ್ರದ ಆದರ್ಶ ಅಲ್ಲದೆ ಉದ್ದೇಶ ಸ್ಪಷ್ಟವಾಗಿರಲೇ ಬೇಕು.

ಯುದ್ಧ ನಿರ್ಣಾಯಕ ಸಮಯದಲ್ಲಿ ದೇಶದ ಭೌಗೋಲಿಕ ಸ್ಥಿತಿಯೂ ಮಹತ್ವದ ವಿಷಯವಿದೆ. ಉತ್ತರ ಸೀಮೆಯಲ್ಲಿ ಪಾಕ್ ಮತ್ತು ಚೈನೀಯರು ನಡೆಸುವ ಸಂಚು ಭಾರತವನ್ನು ಸಂಕಟದಲ್ಲಿ ಸಿಲುಕಿಸುವುದೇ ಇದೆ. ಪೂರ್ವದಿಕ್ಕಿನಲ್ಲಿ ಪಾಕ್—ಚೈನೀಯರು ಭಾರತದ ಅತಿ ಸಮೀಪದಲ್ಲೇ ಇದ್ದಾರೆ. ಅವರು ಅಸ್ಸಾಂದ ಕೆಲವೇ ಮೈಲುಗಳಷ್ಟು ಭೂಪ್ರದೇಶವನ್ನು ಆಕ್ರಮಿಸಿಕೊಂಡರೆಂದರೆ ಅಸ್ಸಾಮಿಗೂ ಉಳಿದ ಭಾರತಕ್ಕೂ ಸಂಬಂಧ ಕಡಿದು ಹೋಗುತ್ತದೆ.

ಇದು ಚಿತ್ರದ ಒಂದು ಬದಿ. ಅದರ ಇನ್ನೊಂದು ಬದಿಯೂ ಕಮ್ಮಿ ಮಹತ್ವದ್ದಿರುವದಿಲ್ಲ. ಪೂರ್ವ ಪಾಕಿಸ್ತಾನವು ಮೂರು ಬದಿಗಳಲ್ಲಿ ಭಾರತದಿಂದ ಸುತ್ತುವರಿದುಕೊಂಡಿದೆ ಅದು ಪಶ್ಚಿಮ ಪಾಕಿಸ್ಥಾನದಿಂದ ಬಹಳಷ್ಟು ದೂರದಲ್ಲಿದೆ ಕರಾಚಿಗೂ ಪೂರ್ವ ಬಂಗಾಲಕ್ಕೂ ನೆಲಸಂಪರ್ಕ ಇಲ್ಲವೆನ್ನಬಹುದು. ಇನ್ನೊಂದು ಗಮನೀಯ ವಿಷಯವೆಂದರೆ ಪೂರ್ವ್ ಪಾಕಿಸ್ತಾನವು ಇಂದಿನ ವರೆಗೂ ಪಶ್ಚಿಮ ಪಾಕಿಸ್ತಾನದೊಂದಿಗೆ ಭಾವಾತ್ಮಕ ಐಕ್ಯತೆ ಹೊಂದಿರುವುದಿಲ್ಲ. ಅದಕ್ಕೂ ಸ್ವಾತಂತ್ರ್ಯವಾಗಿರುವ ಇಚ್ಛೆಇದೆ. ಸಮರ ಸಮಯದಲ್ಲಿ ಅವರು ಅದಕ್ಕಾಗಿ ಪ್ರಯತ್ನಿಸುವದು ಸ್ವಾಭಾವಿಕವಿದೆ.

ಎಂದಿನ ವರೆಗೆ ಚೈನಾ—ಪಾಕ್‌ಗಳ ಚೆಲ್ಲಾಟದಿಂದಾಗಿರುವ ಸಂಕಟದ ಸಮಸ್ಯೆ ಇರುತ್ತದೆಯೋ, ಅಂದಿನ ವರೆಗೆ ಆ ಭೂಪ್ರದೇಶಗಳಿಗೂ ಸುರಕ್ಷತೆಯೆಂಬುದಿಲ್ಲ. ತ್ರಿವಿಷ್ಟಪ ಹಾಗೂ ಸಿಂಕಿಯಾಂಗ್ ದೇಶಗಳು ಚೈನಿ ಚಿರತೆಯ ಬಾಯಿಯಿಂದ ತಪ್ಪಿಸಿಕೊಳ್ಳಲು ಸಮಯ ಕಾಯುತ್ತಿವೆ. ಆಗಾಗ ಅವುಗಳು ಅದಕ್ಕಾಗಿ ನಡೆಸುತ್ತಿರುವ ಪ್ರಯತ್ನದ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಭಾರತವನ್ನು ಪಾಕಿಸ್ಥಾನ ದ್ವೇಷಿಸುವಂತೆ ಪಾಕಿಸ್ತಾನವನ್ನು ಅಫಘಾನಿಸ್ಥಾನ ವಿರೋಧಿಸುತ್ತಿದೆ. ಇನ್ನೊಂದು ಬದಿಯಲ್ಲಿ ಕಮ್ಯೂನಿಸ್ಟ್ ಚೈನಾದ ಅವಸ್ಥೆಯೂ ಹಾಗೆ ಇದೆ. ಪೂರ್ವದಲ್ಲಿ ಫಾರ್ಮೋಸಾವು ಕ್ಷಣಗಳನ್ನೆಣಿಸುತ್ತಿದೆ ಸಮಯ ಸಾಧಕವಾದೊಡನೆ ಅದ ಚೈನಾವನ್ನು ಸುತ್ತಿಗೆಯ ಹೊಡೆತದಿಂದ ತಪ್ಪಿಸುತ್ತದೆ.

ಭಾರತವು ಪಾಕಿಸ್ಥಾನ ಹಾಗೂ ಚೈನಾದಿಂದ ಸುತ್ತುವರಿಯಲ್ಪಟ್ಟಿರುವಂತೆ ಪಾಕಿಸ್ಥಾನ ಹಾಗೂ ಚೈನಾ ಶತ್ರು ರಾಷ್ಟ್ರ ಹಾಗೂ ಪ್ರದೇಶಗಳಿಂದ ಸುತ್ತುವರಿಯಲ್ಪಟ್ಟಿವೆಯೆಂಬುದು ಮೇಲಿನ ವಿವರಣೆಗಳಿಂದ ಸ್ಪಷ್ಟವಾಗುತ್ತದೆ. ಶತ್ರುವಿನ ವೈರಿ ನಮ್ಮ ಸ್ನೇಹಿಗನೇ ನಿಜ—ಇದು ರಾಜನೀತಿ. ಈ ನೀತಿಗನುಸಾರವಾಗಿ ನಾವು ಅಫಘಾನಿಸ್ಥಾನ ಹಾಗೂ ಫಾರ್ಮೋಸಗಳೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳಬೇಕು. ಆಗ ತ್ರಿವಿಷ್ಟಪ ಹಾಗೂ ಸಿಂಕಿಯಾಂಗ್‌ಗಳಿಗೂ ಧೈರ್ಯ ಬರುತ್ತದೆ. ಅಲ್ಲಿನ ದೇಶಭಕ್ತರಿಗೂ ನಾವು ಪ್ರೋತ್ಸಾಹವನ್ನೀಯಬಹುದು. ಆಗ, ಚೈನಾ ಇತ್ತ ಬಂದಲ್ಲಿ, ಅಲ್ಲಿ ಫಾರ್ಮೋಸಾ ಮುಂದೆ ಬರಲು ಸಾಧ್ಯವಾಗುತ್ತದೆ; ಪಾಕಿಸ್ಥಾನ ಬಂದಲ್ಲಿ ಅಫಘಾನಿಸ್ಥಾನ ಬದಿಯಿಂದ ಅಡಿಯ ಮುಂದಿಡಲು ಸಾಧ್ಯವಾಗುತ್ತದೆ.

ಪಾಕಿಸ್ಥಾನದೊಂದಿಗೆ ಯುದ್ಧವಾದಲ್ಲಿ ಅದು ಮೈದಾನದಲ್ಲೇ ನಡೆದೀತು. ಪಾಕಿಸ್ಥಾನವು ತೃತೀಯ ಶ್ರೇಣಿಯ ದೇಶವಿದೆ. ಚೈನಾದೊಂದಿಗೆ ಹೋರಾಡುವಾಗ ನಾವು ಪೂರ್ಣಶಕ್ತಿ ಸಂಚಯನ ಮಾಡಿಕೊಳ್ಳಬೇಕಾಗುತ್ತದೆ. ಅದು ಪ್ರಥಮ ಶ್ರೇಣಿಯ ರಾಷ್ಟ್ರವಿದೆ. ಸಂಪೂರ್ಣ ರಾಷ್ಟ್ರವನ್ನು ಸಮರಸಿದ್ಧತೆಗೊಳಿಸುವದೆಂದರೆ ನಗೆಯಾಟ ಇರುವದಿಲ್ಲ. ಚೈನಾದ ಪಾಲಿನಲ್ಲಿ ಪಾಕಿಸ್ಥಾನ ಮಾತ್ರ ಇರುವದಲ್ಲ. ಬರ್ಮಾ ಹಾಗೂ ಹಿಂದೇಷ್ಯಗಳೂ ಇವೆ. ಲಂಕೆಯಂತಹ ದೇಶಗಳು ತಾವು ತಟಸ್ಥ ರಾಷ್ಟ್ರಗಳೆನ್ನುತ್ತವೆ. ಅಂದರೆ ಅವು ಭಾರತದ ನೆರವಿಗಾಗಿ ಇಲ್ಲವೆಂಬುದು ನಿಶ್ಚಿತ. ಪಾಕಿಸ್ಥಾನಕ್ಕೆದುರಾಗಿ ಬ್ರಿಟನ್ನಾಗಲೀ, ಅಮೇರಿಕಾವಾಗಲೀ ನಮಗೆ ನೆರವೀಯುತ್ತವೆಯೆಂಬುದನ್ನಂತೂ ಆಲೋಚಿಸಲು ಕೂಡಾ ಸಾಧ್ಯ ಇರುವದಿಲ್ಲ ಆದರೂ ನಮ್ಮ ಹೆಸರಿಗೆ ಕಳಂಕ ಬರಬಾರದೆಂದು ಅದೇನ್ನಾದರೂ ಅಲ್ಪ-ಸ್ವಲ್ಪ ಸಹಾಯವನ್ನೀಯಬಹುದು, ಅಷ್ಟೇ.

(೧೨ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—೩.

ಅಂತಾರಾಷ್ಟ್ರೀಯ ವೇದಿಕೆಯಲ್ಲಿ

ಯಾರೂ ಬಯಸದ ಕಾಶ್ಮೀರ ಸಂಗೀತ

ಜೇಲಿನಿಂದ ಹೊರಬಂದ ಶೇಖ ಅಬ್ದುಲ್ಲಾ ಕಾಶ್ಮೀರದಲ್ಲಿ ಮಾತ್ರವಲ್ಲ, ಭಾರತದ ಹಲವೆಡೆ, ನವದೆಹಲಿ-ವಾರ್ಧಾ-ಮದ್ರಾಸುಗಳಲ್ಲಿ-ಸಂಗೀತ ಕಚೇರಿಗೆ ತೊಡಗಿದ್ದಾರೆ. ರಾವಲಪಿಂಡಿಯಲ್ಲಿ ಅಧ್ಯಕ್ಷ ಅಯ್ಯೂಬಖಾನರು ಹಿಮ್ಮೇಳವೊದಗಿಸಿದ್ದಾರೆ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ವಿದೇಶ ಮಂತ್ರಿ ಜಡ್. ಎ ಭುಟ್ಟೋ ಅವರು ಕುಣಿಯತೊಡಗಿದ್ದಾರೆ. ಹೀಗೆ ಈ ತ್ರಿಮೂರ್ತಿಗಳ ತ್ರಿವಿಧ ತ್ರಿವಿಕ್ರಮವತಾರದ ಕೊನೆಯೆಲ್ಲಿ ಎಂಬುದು ಈಗಲೆ ಹೇಳುವಂತಿಲ್ಲ.

ಶೇಖರನ್ನು ನವದೆಹಲಿ ಮೊದಲಾದೆಡೆಯಲ್ಲಿ ಸ್ವಾಗತಿಸಲಾಯಿತು; ಅವರೊಡನೆ ಸೌಹಾರ್ದದಿಂದಲೇ ಮಾತುಕತೆ ನಡೆಸಲಾಯಿತು. ಆದರೆ, ತಿಳಿದು ಬಂದ ವರದಿಗಳಂತೆ ಕಾಶ್ಮೀರಕ್ಕೆ ಸಂಬಂಧಿಸಿದ ಮೂಲ ಪ್ರಶ್ನೆಯ ಮೇಲೆ ಎಲ್ಲಿಯೂ ಚರ್ಚೆ ನಡೆಯಲಿಲ್ಲ. ಭಾರತೀಯ ಹಿರಿಯ ನಾಯಕರು ಭಾರತದಲ್ಲಿ ಕಾಶ್ಮೀರವನ್ನು ಕಾಶ್ಮೀರಿಗಳೇ ವಿಲೀನಗೊಳಿಸಿದ್ದಾರೆ; ಅದನ್ನೀಗ ಪ್ರಶ್ನಿಸುವುದು ಸಾಧ್ಯವೇ ಇಲ್ಲವೆಂಬುದನ್ನು ಶೇಖರ ಮುಂದೆ ಬಿಂಬಿಸಿದ್ದಾರೆ ತಾನು ಹಾಡಿದ ಹಾಡನ್ನು ಕೇಳುವವರು ಯಾರು ಇಲ್ಲವೆಂದು ತಿಳಿದೂ ತಿಳಿದೂ "ಭಾರತ—ಪಾಕಿಸ್ತಾನ—ಕಾಶ್ಮೀರಗಳ ಹಿತ"ವೆಂಬ ದೊಡ್ಡ ಮಾತನ್ನು ಮುಂದು ಮಾಡಿ ಅವರು ತನ ಸಂಗೀತವನ್ನು ಮುಂದುವರಿಸುತ್ತ ಬರುತಿದ್ದಾರೆ. ಭಾರತದಲ್ಲಿ ಯಾರಾದರೂ ಆಡಬಹುದು; ಹಾಡಬಹುದು. ಅಂತಹ ಸ್ವಾತಂತ್ರ್ಯದ ಸದುಪಯೋಗವೀಗ ಶೇಖರ ಕೃತಿ ಆದರೆ, ಹಾಡುವ ಹಾಡಿನ ಧ್ವನಿಯೇರಿ ಅಪಸ್ವರ ಹುಟ್ಟುವಾಗಲೂ ಸುತ್ತಮುತ್ತಲಿನವರು ಸುಮ್ಮನಿರುವುದಿಲ್ಲ. ಈಗ ಶೇಖ ಮಹಾಶಯರು ಭಾರತೀಯ ಶ್ರೋತೃಗಳ ಸಹನಾ ಶಕ್ತಿಯನ್ನು ಪರೀಕ್ಷಿಸುತ್ತಿರಬೇಕು.

ಅಯ್ಯೂಬಖಾನರ ಶೇಖರಿಗೆ ತಮ್ಮನ್ನು ಕಾಣಬೇಕೆಂದು ಎಂದೋ ಕರೆಯಿತ್ತಿದ್ದಾರೆ. ಭುಟ್ಟೋರ ಆಶೀರ್ವಾದವೂ ಇದೇ. ಆದರೆ, ಶೇಖರು ಉಚಿತ ಸಮಯ ಕಾಯುತ್ತ ಕುಳಿತಿದ್ದಾರೆ. ದೆಹಲಿಯಲ್ಲಿ ಮಾತುಕತೆ ಮತ್ತೆ ಮುಂದುವರಿಯಿತು; ತಾನೂ ರಾಜಾಜಿಯೂ ಕೂಡಿ ಪರಿಹಾರದ ಹೋರಾಟ ಆರಿಸಿರುವುದಾಗಿ ಶೇಖರು ಅಂದರು ಅಯ್ಯೂಬರ ಎದೆಯಲ್ಲಿ ಎಂಟೋನಕೆ ಬಡಿದಾಟವಾಗಿರಬೇಕು. ಭಾರತದ ಹಳೆಯ ಹುಲಿಗಳೆಲ್ಲ ಒಂದಾಗಿ ಕಾಶ್ಮೀರದ ಹಳೆಯ ಸಿಂಹವನ್ನು ಬುಟ್ಟಿಗೆ ಹಾಕಿ ಕೊಂಡವೆಂದು ಅವರು ಹೆದರಿಯೇ ತುರ್ತಿನ ಪತ್ರ ಕಳಿಸಿ ಕಾಶ್ಮೀರ ಪರಿಹಾರದ ವಿಷಯದಲ್ಲಿ ಭಾರತದೊಡನೆ ಒಪ್ಪಂದಕ್ಕೆ ಬರುವ ಮೊದಲು ತನ್ನೊಡನೆ ವಿಚಾರ ವಿನಿಮಯ ಮಾಡಬೇಕೆಂದು—ಹರಿವ ನೀರಿಗೆ ದೊಣ್ಣೆಯಾಯನ ಅಪ್ಪಣೆಯಾಗಬೇಕೆಂದು— ಎಚ್ಚರಿಕೆಯಿತ್ತರು. ಈ "ಹಳೆಯ ಸಿಂಹ"ದ ಪರಿಚಯವಿಲ್ಲದ ಹೊಸ ಹುಲಿ ಅಯ್ಯೂಬರು ಹೆದರಿದು ಸ್ವಾಭಾವಿಕ. ಸ್ವಾತಂತ್ರ್ಯ ಪೂರ್ವದಲ್ಲಿಯೂ ಕಾಯುದೆ ಅಜಾಮರೂ ಬ್ರಿಟೀಷ ಸರಕಾರಕ್ಕೆ ಇದೇ ಬಗೆಯ ಬೆದರಿಕೆಯ ಪತ್ರವೊಂದನ್ನು ಬರೆದಿದ್ದರು ಪುನರಾವೃತ್ತಿಯೇ ಇತಿಹಾಸವೆನ್ನುವುದರಲ್ಲಿ ಅಯ್ಯೂಬರಿಗೆ ದೃಢ ವಿಶ್ವಾಸವೆಂದರೆ, ಯಾರದು ತಪ್ಪು?

ಅಯ್ಯೂಬರ ತಾಳಕ್ಕೆ ಸರಿಯಾಗಿ ಭದ್ರತಾ ಮಂಡಳದ ವೇದಿಕೆಯಲ್ಲಿ ನರ್ತಿಸುವ ಭುಟ್ಟೋ ಭಾವೋದ್ವೇಗದಿಂದ ಹಾಡುವುದು ಮಾಮೂಲು. ಸರ್ವ ಸಾಮಾನ್ಯವಾಗಿ ಅವರದು ಒಂದೇ ಹಾಡು; "ತುರುಕರನಿಂದಿಸಬೇಡ; ತುರುಕರು ಇದ್ದರೆ ಉಣಬಹುದಣ್ಣ...." ಎಂದು ಮುಂತಾಗಿ ದಾಸರು ತಮ್ಮನ್ನು ಹೊಗಳಿದ ಹಾಡನ್ನೇ ಅವರು ಪಡಿನುಡಿ ಗುಡುತ್ತಾರೆ ಅವರ ನೃತ್ಯವೇನೋ ಪ್ರೇಕ್ಷಕರನ್ನು ದಂಗು ಬಡಿಸುತ್ತದೆ; ಆದರೆ, ಗೀತ ಧ್ವನಿಯು ಮಾತ್ರ ಕರ್ಕಶವಾಗುವಂತಿದೆ. ಎಂತಲೇ ಪ್ರೇಕ್ಷಕರ ಮುಂದೆ ಹೊಸತೊಂದು ಹಾಡು ಹಾಡಿ ಕರತಾಡನದ ಮಳೆ ಬರಿಸುವ ತವಕದಿಂದ ವೇದಿಕೆಯ ಮೇಲೆ ಶೇಖ ಅಬ್ದುಲ್ಲರನ್ನೂ ಕರೆಯಬೇಕೆಂದರು. ತನ್ನ ಕಂಠದಿಂದ ಹೊರಬರುವ ಸಂಗೀತ ಇಂಪೆನಿಸುವುದಿಲ್ಲವಾದರೆ, ಶೇಖರದನು ಕೇಳಿ; ಸ್ವರ ಸರಿಯಾಗದಿದ್ದರೂ ಮುಖಹೊಸತಲ್ಲವೆ? ತಾನು ನರ್ತನವನ್ನು ಮಾತ್ರ ಮಾಡುತ್ತೇನೆ ಎಂಬುದಿವರ ಆಶಯವಿದ್ದಿರಬಹುದು-ಆದರೆ ಕೇಳಿನೋಡಿ ಬೇಸತ್ತ ಪ್ರೇಕ್ಷಕರು ಕಣ್ಣು ಕೂರುತ್ತಲೇ ಇದ್ದರು; ಕಿವಿಯೂ ನಿದ್ರಿಸುತಿತ್ತು.

"ಕಾಶ್ಮೀರ ಸಂಗೀತ"ವು ಹೀಗೆ ಸಾಗುತ್ತಿದೆ. ಆದರೆ, ಇದನ್ನು ತಡೆಗಟ್ಟಲು ಚಾರಕ ಛಾಗ್ಲ ನ್ಯೂಯಾರ್ಕಿನಲ್ಲಿ, ನಂದಾ, ಶಾಸ್ತ್ರಿ ಭಾರತದಲ್ಲಿ ನಿಂತಿದ್ದಾರೆ ಕಾಶ್ಮೀರದ ವಿಷಯದಲ್ಲಿ ಮೂಲ ಭೂತ ನೀತಿಯನ್ನು ಲೋಕಸಭೆಗೆ ತಿಳಿಸದೆ ಬದಲಾಯಿಸುವುದಿಲ್ಲವೆಂದು ನೆಹರು ವಿಶ್ವಾಸದಾನ ಮಾಡಿದ್ದಾರೆ. ಕಾಶ್ಮೀರದ ಸೇರ್ಪಡೆಯ ಪ್ರಶ್ನೆಗಿಂತಲೂ ಪಾಕಿಸ್ತಾನದ ಆಕ್ರಮಣ ಮನೋವೃತ್ತಿ ಗಂಡಾಂತರಕಾರಿ ಎಂದಿದ್ದಾರೆ ಛಗಲಾ. ಶೇಖರು ಮಾತ್ರ ತನ್ನ ತಲೆಯನ್ನು ನೋಯಿಸಿಕೊಂಡಿಲ್ಲ. ಭಾರತ ಉಪಖಂಡದ ಹಿತ ಚಿಂತನೆಯೇ ತನ್ನ ಧ್ಯೇಯವೆನ್ನುವ ಇವರು ಜನಮತಗಣನೆಗೆ ಬೆಂಬಲ ನೀಡುತ್ತಾರೆ, ಇವರ ಈ ವಾದವನ್ನು ಅಯ್ಯೂಬರು ಎತ್ತಿ ಹಿಡಿಯುತ್ತಾರೆ.

ಪಾಕಿಸ್ತಾನವು ಭಾರತದೊಡನೆಯೇ ಸ್ವತಂತ್ರವಾದ ದೇಶ. ಆದರೆ, ಅಲ್ಲಿ ಇದುವರೆಗೂ ಒಂದೇ ಒಂದು ಚುನಾವಣೆ—ಜನಮತವೇನೆಂಬುದನ್ನು ತಿಳಿಯುವ ಸಾಧನ—ನಡೆಯಲಿಲ್ಲ, ಹಿಂದಿನಿಂದಲೂ ವಿಚಿತ್ರ ಪ್ರಜಾಸತ್ತೆಯ ಹೆಸರಿನಲ್ಲಿ ಅಲ್ಲಿ ಸರ್ವಾಧಿಕಾರ—ಮತ್ತೀಗ ಸೇನಾಧಿಕಾರ ನಡೆಯುತ್ತ ಬಂದಿದೆ. ಅಧಿಕಾರಕ್ಕಾಗಿ ಬಂಧನ—ಕೊಲೆಗಳೂ ನಡೆದಿವೆ. ತನ್ನ ನಾಗರಿಕರಿಗೆ ಮತದಾನದ ಅಧಿಕಾರವನ್ನು ನೀಡದ ಅಯ್ಯೂಬಖಾನರು ಮತಾಧಿಕಾರದಿಂದ ತಮ್ಮ ಭವಿಷ್ಯವನ್ನೆಂದೋ ನಿರ್ಧರಿಸಿರುವ ಕಾಶ್ಮೀರಿಗಳ ದುಃಖವನ್ನು ಕರುಣ ಕಥೆಯೆಂದು ವರ್ಣಿಸಿ, ಮೊಸಳೆಯ ಕಣ್ಣೀರು ಸುರಿಸುವ ಉದಾರತೆ—ಮಾನವತೆಯನ್ನು ತೋರಿಸುತ್ತ ಬಂದಿದ್ದಾರೆ. ಶೇಖರಿಗೂ ಇದರ ಪತ್ತೆ ತಿಳಿಯದಿರಲಾರದು. ಪಾಕಿಸ್ತಾನದ ಈ ಕೃತ್ಯವು ತೀರ ಕುತ್ಸಿತ. ಇದಕ್ಕೆ ಪಾಶ್ಚಾತ್ಯ ಸಂಭಾವಿತರೂ ಅವ್ಯಕ್ತ ಉತ್ತೇಜನ ನೀಡುವುದು ಸ್ವತಂತ್ರ ಜಗತ್ತಿಗೆ ಲಾಂಛನೀಯ.

ಇತಿಹಾಸ ಪುನರಾವೃತ್ತವಾಗುತ್ತಿದೆ
ಏಕೆ? ಮಾನವರು ಒಮ್ಮೆ ಮಾಡಿದ ತಪ್ಪ
ನ್ನು ಮತ್ತೆ ಮತ್ತೆ ಮಾಡುವುದರಿಂದ ಹಿ
ಗಾಗುತ್ತದೆ. ಪಾಕಿಸ್ತಾನವು ನಡೆಯುತ್ತಿ
ರುವ ದಾರಿಯಿದೇ. ಇಸ್ಲಾಮನ್ನೇ ತನ
ಧರ್ಮವೆಂದು ಘೋಷಿಸಿ ಅದು ಮೊದ
ಗೆ ತಪ್ಪು ಮಾಡಿತು. ಕಾಶ್ಮೀರದ ಮೇ
ಅನ್ಯಾಯದ ಧಾಳಿ ಮಾಡಿತು, ಸಂಯು
ಕ್ತ ರಾಷ್ಟ್ರಕ್ಕೆ ಅಪಮಾನ ಮಾಡಿತು
ಅಂದಿನಿಂದ ಜಾತೀಯ ಭೀಕರ ನೀತಿಯ
ನ್ನೇ ಆಧರಿಸಿ ಕುಂಟುತ್ತ ನಡೆಯ ತೊ
ಗಿತು ಒಮ್ಮೆ ಮಾಡಿದ ತಪ್ಪನ್ನೇ ಮತ್ತ
ಮತ್ತು ಅದು ಮಾಡುತ್ತ ಬಂದಿದೆ; ಎಂ
ರೆ, ಅಯ್ಯೂಬರ ಪಟ್ಟಿಗೆ ಇತಿಹಾಸ ಪ
ನರುಕ್ತವಾದರೂ ಆಗಬಹುದು.

ಭಾರತದ ಪರಿಸ್ಥಿತಿ ಹೀಗಿಲ್ಲ ತಾನಿ
ಹೆಜ್ಜೆಯು ತಪ್ಪೆಂದು ತಿಳಿದರೆ, ಅದನ
ಹಿಂತೆಗೆದುಕೊಳ್ಳಲು ಅದು ಸದಾಸಿದ್ಧ
ದೆ. ಆದುದರಿಂದಲೇ ಇಲ್ಲಿ ಇತಿಹಾಸ ಅ
ಯೇ ಸುತ್ತುತ್ತಿರುವುದಿಲ್ಲ; ಅದು ಬೆ
ಯುತ್ತಲೇ ಮುಂದುವರಿಯುತ್ತಿದೆ. ಇ
ನ್ನು ಮನವರಿಕೆ ಮಾಡಿಕೊಂಡರೆ, ಶೇ
ರು ಸಂಗೀತ ಮುಂದುವರಿಸದೆ ತಮ್ಮ
ಲುವನ್ನು ನಿರ್ಧರಿಸಿಕೊಳ್ಳುತ್ತಾರೆ. ಅ
ರಿಗೆ ದೆಹಲಿ—ರಾವಲ ಪಿಂಡಿಗಳ ಆಗ
ವಿಲ್ಲ; ಶ್ರೀನಗರದಲ್ಲಿಯೇ ಮತ್ತೊಮ್ಮೆ
ಜನಪ್ರಿಯರಾಗಿ ಮೆರೆಯುವ ಅವಕಾ
ಪಡೆದರೂ ಪಡೆಯಬಹುದೆನಿಸುತ್ತದೆ.

ದ. ಕ ಸಬೋರ್ಡಿನೇಟ್ ಜಡ್ಜ
ಕೋರ್ಟಿನ

S. C. No. 420/196

ಜೋತಿಮ್ ಮಿಂಗೆಲ್ ಫರಾಯಸ್— ವಾ

ಮತ್ತು

ಕೆ. ಈಶ್ವರ —ಪ್ರತಿವಾ

ಪ್ರತಿವಾದಿಗೆ

ಮಂಗ್ಳೂರು ಟೌನ್ ಪದವು ಗ್ರಾಮದ
ಬಿನ ಬಾಡು ಎಂಬವರ ಮಗ ಕಂಟ್ರಾಕ್ಟ
ಕೆ. ಈಶ್ವರನವರಿಗೆ ವಾದಿಯು ನಿವಿಂದ
ರತಕ್ಕ ರೂಪಾಯಿ 650-75 ಮತ್ತು ಕೋಟ
ಖರ್ಚು ವಗೈರೆ ಸಿಗಬೇಕೆಂತ ಮಾಡಿದ ವ
ಜ್ಯವು ಜೂನ್ ತಿಂಗಳ ತಾರೀಕು 15ಕ್ಕೆ
ಸ್ಸಿಗೆ ಇಟ್ಟಿರುತ್ತದೆ. ಸದ್ರಿ ದಿವ್ಸ ನೀವು ಸ
ಹ ಯಾ ವಕೀಲರ ಮುಖಾಂತ್ರ ಹಾಜರಾ
ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿ
ಲ್ಲಿ ತೀರ್ಮಾನಿಸಲಾದೀತು.

By order

(Sd) K· S N· Adig

Advocate for Plainti

Mangalore, 7-5-1964.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಪ್ರೊ. ಕು. ಶಿ. ಹರಿದಾಸ ಭಟ್ಟ,ಎಂ.

ಅವರ ನವೀನ ಪುಸ್ತಕಗಳು ರೂ

ನಡುಹಗಲಿನ ಕಗ್ಗತ್ತಲೆ	2=5
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=0
ಘಂಟಮಾರಾ	2=(
ಐಶ್ವರ್ಯದ ಸಂಪತ್ತು	2=(
ಅಮೇರಿಕದ ಆರು ಕತೆಗಳು	1=7
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=5
ಯುಗವಾಣಿ	0=5
ಕಾಲವೇ ಬದಲಾಗಿದೆ	0=3
ಪುಸ್ತಕ ಪುರಾಣ	0=2
ಮನೆಯೊಳಗಿನ ಮಹಾಜೀವಿಗಳು	0=3

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿ

ನವಭಾರತ ಪುಸ್ತಕ ಭಂಡಾರ, ಉಡು

ಗೇಹ ರಾಜ್ಯದಲ್ಲಿ

ಸಮಸ್ಯೆಯು ಪರಿಹಾರವಾಯ್ತು

"ಏನಂತೆ, ಈಟಿನ ಹೇಳದೆ ಕೇಳದೆ ಹೊರಗೆ ಹೋಗಿ ಬಿಟ್ಟಿತು ಸವಾರೀಂತ......"

"..... ಓ, ನೀನೇ, ನನ್ನ ಅಡ್ಡಗಟ್ಟಿ ರೋದು? ನಾನು...."

"ಹೌದು ಹೌದು .. ನೀವು ಮತ್ತ್ಯಾರೋಂತ ತಿಳ್ಕೊಂಡ್ರಿ ಅಲ್ವೆ? ಅಬ್ಬಾ ನಿಮ್ಮ ಪುರುಷ ಜಾತೀನೆ?"

"ಏನಾಯ್ತಿದು? ನಮ್ಗೆ, ಪುರುಷರಿಗೆ ಏನಾಗಿದೇಂತ?"

"ಆಗೋದೇನು ಮತ್ತೆ? ಕೈಯೂರಿ ಹಿಡ್ದ ಹೆಂಡ್ತಿ ಎದ್ರು ಬಂದು ಮಾತಾಡ್ಸಿದ್ರೂ ಮತ್ಯಾರೋ ಬಂದು ತಮ್ಮ ಗೋಕಿಲ ಕಂಠವನ್ನು ತೆರೆದ್ರೂಂತ...."

"ಛೆ ...ಛೆ... ಏನೇ ಇದು ನೀನು? ಅಲ್ಲಾ, ಏನೋ ಆಲೋಚಿಸುತ್ತಾ ಬರುವಾಗ ಅಡ್ಡ ಬಂದೆ ಬಿಡು. ಥಕ್ಕನೆ ಗಾಬ್ರಿಯಾಗಿ ಯಾವುದಾದ್ರೂ ಭೂತ...."

"ಸಾಕು ಬಿಡಿ. ನಿಮ್ಮಂತಹ ಮನ್ಮಥರ ಮುಂದೆ ಬರೋ ರತಿಭೂತವಾದ್ರೂ ಯಾವ್ದೂಂತ...."

"ಸಾಕೇ ಸಾಕು ನಿನ್ಮಾತು.... ಅಂತೂ ನಾನು ಕುರೂಪಿ ಅಂದು ಕೊಳ್ಳೋದಕ್ಕೆ ನನ್ಗೇನೂ ನಾಚ್ಕೆ ಎನ್ಸೋದಿಲ್ಲ...."

"ಮತ್ಯಾರಿಗಾಗುತ್ತೇಂತ..."

"ನಿನ್ಗಾದ್ರೂ ಗಂಡ ಕುರೂಪೀಂತ ನ್ಸೋಕಾಗೋದು ಬೇಡ್ವೆ?"

"ಅಯ್ಯಯ್ಯ....ಇದ್ದದ್ದನ್ನ ಇದ್ದಂತೆ ಅನ್ನೋದಕ್ಕೆ ಯಾರಿಗೆ ಯಾಕೆ ನಾಚಿಗೆ ಆಗ್ಬೇಕೂಂತ..."

"ಅದಕ್ಕೇ ಅನ್ನೋದು ನಿನ್ನನ್ನ ಗಂಡು ಹುಡುಗೀಂತ...."

"ಯಾಕೆ ಹುಡುಗೀಂತನ್ನೀರಾ ಮತ್ತೆ... ಹುಡುಗ ಅನ್ನಿ ಬಿಡಿ...."

"ಛೆ....ಛೆ...ಅದೆಲ್ಲ ಆಗುತ್ತೆ? ಕೇಳುವ ಕಿವಿ ಸುಳ್ಳು ಹೇಳಿದ್ರೂ ನೋಡುವ ಕಣ್ಣು ನುಡಿಯೋದಿಲ್ಲವೆ?"

"ಸರಿಸರಿ ಬಿಡಿ ಮತ್ತೆ... ನಿಮ್ಮ ಕಣ್ಣೂ ನುಡಿಯುತ್ತೆ ಕಿವೀನೂ ಮಾತ್ನಾಡುತ್ತೆ, ಪಂಚಮುಖಿಗಳು ನೀವು..."

"ನೋಡೇ, ಪಂಚಮುಖಿ ನಾನಲ್ಲ ಕಣೇ...ಅದು ಕಾಡಿನಲ್ಲಿರೋದು...."

"ಅಂದ್ರೆ....?"

"ಅಂದ್ರೆ ವನರಾಜ... ಸಿಂಹರಾಜನಿಗೆ ಆ ಹೆಸ್ರು...."

"ಸಿಂಹ ಅನ್ನುತ್ಲೂ ನೆನ್ಪಿಗೆ ಬಂತು... ನಿಮ್ಮ ಕಾಶ್ಮೀರದ ರಾಜಸಿಂಹ ಏನಂತೆ?"

"ಅವನಿಗೇನಂತೆ? ಆರಾಮವಾಗಿ ಸುತ್ತಾಡ್ತಾ ಇದ್ದಾನೆ...ದಿನ ಮಾಡುತ್ತೆ...."

"ಆವ ದಿನ ದೂಡಿದನ್ರೂ ದಿನವೇ ಅವನನ್ನು ದೂಡುತ್ತೇನ್ಸಿ. ಅದ್ರೆ ನೋಡಿ, ಮೊನ್ನೆ ಅವನು ಎಲ್ಲಿಗೋ ನೋಡಿ..."

"ಏನೇ ನೋಡೋದು? ಆಗಿನಿಂದ ನಿನ್ನ ಮುಖನೇ ನೋಡ್ತಾ ಇದ್ದೇನಲ್ಲ.."

"ಓಹೋ ನೀವು ನನ್ನ ಮುಖಾನೇ ನೋಡ್ತಾ ಇದ್ದೀರಾ? ಅದೂ ಆಗ್ಲಿಂದ್ಲೂ ...ಪಾಪ, ಮತ್ಯಾರ ಮುಖ ನೋಡೋ ಆಶೆಯಿತ್ತೊ......"

"ನೋಡು, ತುಟಿ ಬಿಚ್ಚೋ ಮೊದ್ಲು ಯೋಚಿಸ್ಕೋಬೇಕು...."

"ಇಲ್ಲಾದ್ರೆ?...."

"ಮಾಡಿದವರ ಪಾಪ ಆಡಿದವರ ಮೇಲೆ...."

"ಆಡೋರು ಏನು ತಾನೇ ಮಾಡ್ತಾರಂತೆ? ಅದೇ ಹೇಳ್ತಾರಲ್ಲಾ ...ಕಚ್ಚೋ ನಾಯಿ ಬೊಗಳೋದಿಲ್ಲಾಂತ..."

"ಅದು ನಿಜಾನ್ನಿ. ಕಚ್ಚೋನಾಯಿ ಬೊಗಳೋದಿಲ್ಲ.. ಅರ್ಭಟಿಸೋ ಸಿಂಹದಿಂದ ಬೇರೆಯೋದೂ ಇಲ್ಲ...."

"ಅಂದ್ರೆ....ಈ ಅರ್ಭಟಿಸೋ ಸಿಂಹಾಂತಂದ್ರೆ?"

"ಇದ್ದಾನಲ್ಲಾ ನಿನ್ನ ಕಾಶ್ಮೀರದ ಸಿಂಹ...."

"ಬಿಡೀಂದ್ರೆ ಆ ಸಿಂಹದ ಮಾತು... ಅದ್ರನಾಲಗೆಗೆ ಎಲುಬಿಲ್ಲ....ಅದು ಹೇಗೆ ಬೇಕಾದೂ ಸುತ್ತುತ್ತೆ...."

"ಅದು ಸರೀನ್ನಿ. ಆದ್ರೂ ಕೆಲವರ ನಾಲಗೇಲಿ ಎಲುಬಿಲ್ಲದಿದ್ರೂ ಎಲುಬಿನಂತಹ ಶಕ್ತಿಯಿರುತ್ತೆ."

"ಅಂದ್ರೆ ನೀವು ಯಾರನ್ನ ಕುರಿತು ಹೇಳ್ತಿರೋದು?"

"ನೀನೇ ಹೇಳು ನೋಡೋಣ...."

"ನೋಡಿ, ನೀವು ಹೀಗೇ ಯಾವಾಗ್ಲೂ .... ಒಂದಕ್ಕೆ ಪಂಥ ಎರಡಕ್ಕೆ ಪರಾಕ್ರಮ.... "

"ಅಂದ್ರೆ ಸತ್ಯ ಪಂಥಕ್ಕೆ ನಿಲ್ಲೋ ಕೆಚ್ಚಿಲ್ಲಾಂತ ತೋರುತ್ತೆ... "

"ನಿಲ್ಲೋಬೇಕಾದ್ರೆ ನಿಲ್ತೇನೆ. ಆದ್ರೆ ಅದಕ್ಕೆ..."

"ಬೇಡ ಮಹಾರಾಯ್ತಿ ಬೇಡ. ನಿನ್ನ ಪಂಥಗಿಂತ ಎಲ್ಲಾ ಅಲ್ಲೇ ಇರ್ಲಿ ಬಿಡು..."

"ಹಾಗಾದ್ರೆ ಹೇಳಿ ನೋಡೋಣ...."

"ನಾನು ಹೇಳ್ತಿರೋದು ಎಲ್ರಿಗೂ ಗೊತ್ತಿದೆ."

"ಆದ್ರೆ ನನಗೆ ಗೊತ್ತಿಲ್ಲವಲ್ಲಾ...."

"ಇಲ್ಲಾಂತಂದ್ರೆ ಏನೆ? ನಿನ್ಗೂ ಗೊತ್ತಿದೆ..."

"ಇಲ್ಲಾಂತಂದ್ರೆ..."

"ಗೊತ್ತಿದೆ....ಹೇಳು..."

"ಹೇಳ್ಲೇ ಬೇಕೇನು?"

"ಹೇಳ್ಬಿಡು ಮತ್ತೆ...."

"........ಹ್ಞೂ, ನೀವನ್ನೋದು ಶೇಖ ಅಬ್ದುಲ್ಲಾರನ್ನೇ ಕುರಿತು ತಾನೆ?"

"ಅಬ್ಬಾ ಹುಡುಗೀನೆ? ಊಹನಾ ಶಕ್ತಿ ಭಾರಿ ಭಾರಿ ಇದೆ..."

"ಮತ್ತೆ ನಿಮ್ಗೆ ಮಾತ್ರ ಇರೋದಾಂತ...."

"ನಾವು ನಾಷ್ಟಜಗಳವಾಡಿಕೊಂಡ್ರೆ."

"ಭಾರತ—ಪಾಕ್ ವಿ ವಾ ದ ವಾಗುತ್ತೆ..."

"ಆಗ ಕಾಶ್ಮೀರ ಪ್ರಶ್ನೇನೂ ಏಳುತ್ತೆ."

"ಕಾಶ್ಮೀರ ಎದ್ರೆ ಏನಂತೆ? ವಿಶ್ವಸಂಸ್ಥೆಗೆ ಒಯ್ದಾಯ್ತು..."

"ಒಯ್ಯೋದು ಸುಲಭ ಬಿಡು....ಆದ್ರೆ ಅಲ್ಲಿಂದ ಹೊರಡೋದು ಮಾತ್ರ...."

"ಅಬ್ಬಾ ಹೊರಡ್ಬೇಕು ಯಾಕೇಂತ? ನೋಡಿ ಕಳೆದ ಹದಿನಾರು ವರ್ಷಗಳು ಉರುಳಿದ್ರೂ ಇನ್ನೂ ಅದು ಉರುಳುತ್ಲೇ ಇರುತ್ತೆ..."

"ಇನ್ನೂ ಒಂದು ಚಿಂತೆಯಿದೆ....ನಮ್ಮ ಕಾಶ್ಮೀರಕ್ಕೆ ಭದ್ರತಾ ಮಂಡಳಿಯ ಸದಸ್ಯರಾಗಲು ಯಾರೂ ಒಪ್ಪೋಕಿಲ್ಲ...."

"ಯಾಕೇಂತ?"

"ಕಾಶ್ಮೀರದ ವಿವಾದ ಮುಗಿವಂತೆಯೇ ಇಲ್ಲಾಂತಿರೋವಾಗ ಮತ್ತೆ ಹೊಟ್ಟೆ ಪಾಡು ಕಾಣ್ದೆ ಸಭೆ ಮಾಡ್ತಾ ಕೂತ್ರೆ ಏನು ನಡೆಯೋದು...."

"ಹಾಗಾದ್ರೆ...."

"ನನ್ನ ನಿನ್ನ ವಿವಾದವನ್ನ ನಾವು ನಾವೇ ತೀರ್ಮಾನಿಸಿ ಬಿಡುವ. ವಿಶ್ವಸಂಸ್ಥೆನೂ ಬೇಡ; ಭದ್ರತಾ ಸಮಿತಿನೂ ಬೇಡ... ಮತ್ತೊಬ್ಬ ಶೇಖ ಅಬ್ದುಲ್ಲ ಹುಟ್ಟೋದೂ ಬೇಡ...."

"ನೋಡೀಂದ್ರೆ..ಭದ್ರತಾ ಸಮಿತಿಯಲ್ಲಿ ಶೇಖಸಾಹೇಬ್ರು...."

"ಶೇಖೂ ಇಲ್ಲ ಜೋಕೂ ಇಲ್ಲ..."

"ಅಂದ್ರೆ...."

"ಅಂದ್ರೆ ಮತ್ತೇನ.? ಶೇಖರು ಅಲ್ಲಿ ಹೋಗೋ ಹಂಗಿಲ್ಲ. ಮತ್ತೆ ನೋಡು ಕಾಶ್ಮೀರ್ದ ವಿವಾದವನ್ನು ಭಾರತ–ಪಾಕಿಸ್ತಾನಗಳೇ ಸೇರಿ ಮಾತುಕತೆಯ ಮೂಲಕ ಮುಗಿಸಿದ್ರೆ ಸರಿ..."

"ಇಷ್ಟೇನೇಯ ಆದದ್ದು? ಛುಟ್ಟೋ ಕೂಗುವಾಗ ಕಾದೇ ನಡುಗುತ್ತಿತ್ತು..."

"ಏನೋ ಆಗುತಿತ್ತು. ಈಗ್ಲೂ ಏನೋ ಆಗ್ತದೆ..."

"ಏನಂತೆ?"

"...ಮತ್ತೇನೂ ಇಲ್ಲ....ನನ್ನ ನಿನ್ನ ವಾದದ ನಡುವೆ ನಮ್ಮಿಬ್ಬರ ಹೊಟ್ಟೆ ಕಾಶ್ಮೀರವಾಗಿ ಬಿಟ್ರೆ..."

"'ಅಯ್ಯಯ್ಯ' ನಿಮ್ದೊಂದು ಹೊಟ್ಟೆ.... ಯಾವಾಗ ನೋಡಿದ್ರೂ ಅದೇ....ಹ್ಞೂಂ ...ಕಾಲ್ತೊಳ್ಕೊಂಡ್ಬನ್ನಿ..."

"ನಮ್ಮ ಕಾಶ್ಮೀರ ತಂಟೆ ಪರಿಹಾರವಾಗೋ ದಾರಿಹಿಡೀತು ಅಲ್ವೆ?..."

"ಹ್ಞೂಂ...."

—ಗೋರಾ.

ಕರಿ ಮೆಣಸು–ಬಿಳಿ ಶುಂಠಿ

ಮಾನವ ವಿಕಾಸದೃಷ್ಟಿಯಿಂದ ಸ್ತ್ರೀ ವಿದ್ಯಾಭ್ಯಾಸ ಅಗತ್ಯ.

—ಸ್ತ್ರೀಗೆ ಹೆಚ್ಚಿನ ವಿದ್ಯಾಭ್ಯಾಸವನ್ನೀಯಲು ಮಾನವನಲ್ಲಿ ವಿಶಾಲದೃಷ್ಟಿ ಅತ್ಯಗತ್ಯವಲ್ಲವೆ?

o o o

ನಗರದಲ್ಲಿ ರೊಟ್ಟಿ ಯಂತ್ರವೊಂದರ ಸ್ಥಾಪನೆ

—ರೊಟ್ಟಿ ಪ್ರಿಯರಿಗಿದೊಂದು ಸಂತಸದ ಸಮಾಚಾರವೆಂದು ನಂಬಲೇ?

o o o

ಲಕ್ಷದ್ವೀಪ, ಮಿನಿಕಾಯ್ ಮತ್ತು ಅಮಿನ್‌ದಿವಿ ದ್ವೀಪಗಳು ಭಾರತದಲ್ಲಿಯೇ ಯಾವ ತೆರಿಗೆಯೂ ಇಲ್ಲದ ಪ್ರದೇಶಗಳೆಂದು ತಿಳಿದುಬಂದಿದೆ.

—ಹಾಗಾದರೆ, ಇನ್‌ಕಮ್ ಟ್ಯಾಕ್ಸ್ ಕೊಡಬೇಕಾದ ಮಹನೀಯರೆಲ್ಲ ದ್ವೀಪಾಂತರ ವಾಸಿಗಳಾಗ ಬಹುದಷ್ಟೆ?

o o o

ಕೇಂದ್ರ ಸರ್ಕಾರದ ಮಂತ್ರಿ ಶಾಖೆಗಳ ನಾನಾ ಇಲಾಖೆಗಳ ಹಾಗೂ ಸಂಬಂಧಿಸಿದ ಇತರ ಸಹ ಸಂಸ್ಥೆಗಳ ಫೈಲುಗಳನ್ನೆಲ್ಲ ಒಂದರ ಹಿಂದೆ ಒಂದರಂತೆ ಜೋಡಿಸಿಬಿಟ್ಟರೆ 76 ಮೈಲಿಗಳಷ್ಟು ಉದ್ದ ಆಗಬಹುದಂತೆ.

—ಇನ್ನು ಆ ಆ ಇಲಾಖೆಗಳಿಗೆ ಸಂಬಂಧಿಸಿದ ಆ ಆ ಅಧಿಕಾರಿಗಳ, ಸಹಾಯಕ ಅಧಿಕಾರಿಗಳ ಮನೆಗಳಲ್ಲಿ ಸೇರಿಹೋದ ಫಾಯಿಲುಗಳನ್ನೂ ಮೇಲೆ ಹೇಳಿರುವ ಫೈಲುಗಳ ಮಾಲೆಗೆ ಪೋಣಿಸಿದರೆ ಆಗ ಎಷ್ಟು ಉದ್ದ ಆಗಬಹುದೋ ಅವಲೋಕಿಸಿಯೇ ಹೇಳಬೇಕಾದ ವಿಚಾರ.

o o o

ಬಿರುಗಾಳಿಯಿಂದ ಹೊಸದುರ್ಗ ರೋಡ್‌ನಲ್ಲಿಯ ಹಲವಾರು ಮನೆಗಳ ಹಂಚು ಹಾರಿಹೋಗಿವೆಯಂತೆ.

—ಕೆಲವು ಮನೆಯಲ್ಲಿ ಅತ್ತೆಸೊಸೆ ಜಗಳದ ಬಿಸಿಬಿಸಿ ಬಿರುನುಡಿ ಸಿಡಿನುಡಿಯ ಕಿಡಿಗಳಿಗೆ ಹಂಚುಗಳು ಹಾರಿ ಹೋಗುವಾಗ ಬಿರುಗಾಳಿಗೆ ಹಾರಿಹೋದುದೇನೂ ಆಶ್ಚರ್ಯದ ವಿಷಯವಲ್ಲ.

o o o

ಜನತೆಯ ಪರಿಶ್ರಮದಿಂದ ಮಾತ್ರ ರಾಷ್ಟ್ರನಿರ್ಮಾಣ ಸಾಧ್ಯ.

—ರಾಷ್ಟ್ರನಿರ್ಮಾಣ ಕಾರ್ಯಕ್ಕೆ ಬಡ ಬೋರೇಗೌಡನಂತಹವರೇ ಅವಶ್ಯಕವಲ್ಲದೆ, ಮಂತ್ರಿ ಮಾಗಧರೇನಲ್ಲ.

o o o

ನ್ಯಾಯ ಬೆಲೆಯಂಗಡಿಗಳನ್ನು ತೆರೆಯಲು ಶಾಸನವೊಂದು ತಯಾರಾಗುತ್ತಿದೆ.

—ಅಯ್ಯೋ! ಹಾಗಾದರೆ ಈಗಿರುವ ಈ ಶುದ್ಧ (ಅ)ನ್ಯಾಯಬೆಲೆಯಂಗಡಿಗಳ ಪರಿಸ್ಥಿತಿ ಚಿಂತಾಜನಕವಾಗಬಹುದೆ?

o o o

ತಾನು ಅಪೇಕ್ಷಿಸಿದ ಸೀರೆಯನ್ನು ಗಂಡ ತಂದು ಕೊಡಲಿಲ್ಲವೆಂಬ ಕಾರಣದಿಂದ ಮಹಿಳೆಯೊಬ್ಬಳು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಳಂತೆ.

—ಅದೇ ಗಂಡ ಕೊನೆಗೆ ಅದೇ ಸೀರೆಯನ್ನು ತಂದು ಹೆಂಡತಿಯ ಶವಕ್ಕೆ ಹೊದಿಸಿದಾಗ ಶವ ಎದ್ದು ಕುಳಿತಿತೆಂಬ ಸುದ್ದಿ ಶುದ್ಧ ಕುಹಕವಂತೆ.

o o o

ಚಿಕ್ಕಮಗಳೂರಿನಿಂದ ಮಂಗಳೂರಿಗೆ ಹೋಗುತ್ತಿದ್ದ ನಾಟಾ ತುಂಬಿದ ಭರ್ತಿ ಲಾರಿಯೊಂದು ಚಾರ್ಮಾಡಿ ಘಾಟಿಯ ಒನೇ ತಿರುವಿನಲ್ಲಿ ಚಾಲಕನ ಹತೋಟಿ ತಪ್ಪಿ ಭೀಕರ ಅಪಘಾತಕ್ಕೀಡಾಗಿದೆ.

—ಈತನ್ಮಧ್ಯೆ "ನಾಟಾ ಪೂರ್ತಿ ಕಳ್ಳಸಾಗಣಿಕೆಯ ನಾಟಾ ಆದುದರಿಂದಲೇ ಲಾರಿ ಮಗುಚಿತು. ಮಾನವ ಶಿಕ್ಷಿಸದಿದ್ದರೂ ದೈವ ಸುಮ್ಮನಿರುತ್ತದೆ; ಎಂದು ಅವರಿವರು ಆಡಿಕೊಳ್ಳುತ್ತಿರುವರೆಂಬುದು ನಿಜವಲ್ಲವಂತೆ.

o o o

ತಾನು ಭಾರತದ ಪ್ರಧಾನಮಂತ್ರಿ ಶ್ರೀ ನೆಹರೂ ಅವರ ಉತ್ತರಾಧಿಕಾರಿ ಆಗುವುದಿಲ್ಲವೆಂದು ಶ್ರೀಮತಿ ಇಂದಿರಾಗಾಂಧಿ ತಿಳಿಸಿದ್ದಾರೆ.

—"ನೆಹರುನಂತರಯಾರು" ಎಂಬ ಪ್ರಶ್ನೆ ಬಹುಕಾಲ ಉಳಿಯಲಿ.

—ಶ್ರೀಕಂಠ ಐತಾಳ, ಹಾಯ್ಗಾಡಿ

ನವಯುಗ

ವರುಷ	ಉಡುಪಿ	ವಾರ
೪೩	೧೪-೫-೧೯೬೪	೩೭

ಮಹೋನ್ನತ ಸಾಧನೆ

ಮೇ ದಿನಾಂಕ ೧೦ ಭಾರತದ ಇತಿಹಾಸದಲ್ಲಿ ಪರಮ ಪವಿತ್ರ ದಿನ. ಭಾರತದಲ್ಲಿಯೇ ರೂಪಿತವಾಗಿ ತಯಾರಾದ ಎಚ್. ಎಫ್. ೨೪ ಸೂಪರ್‌ಸಾನಿಕ್ ವಿಮಾನಗಳು ಭಾರತೀಯ ವಾಯು ಪಡೆಗೆ ಹಸ್ತಾಂತರಗೊಂಡ ಸುದಿನವಿದು. ಬೆಂಗಳೂರಿನ ಹಿಂದುಸ್ತಾನ್ ಏರ್‌ಕ್ರಾಫ್ಟ್ ಸಂಸ್ಥೆಯು ಪರಿಶ್ರಮ ಪಟ್ಟು, ಸಾಹಸ ಪ್ರದರ್ಶಿಸಿ, ಈ ವಿಮಾನಗಳ ರಚನೆಯಲ್ಲಿ ಕೈ ಹಾಕಿ ಅದರಲ್ಲಿ ಯಶಸ್ವಿಯಾಯಿತು; ಇದು ಎಚ್‌ಎಎಲ್‌ಗೆ ಮಾತ್ರ ಅಭಿಮಾನವಲ್ಲ; ಸಮಸ್ತ ಭಾರತೀಯರು ಹೆಮ್ಮೆ ಪಡಲೇ ಬೇಕಾದ ಸಾಧನೆ. ಆಧುನಿಕ ವಿಮಾನಗಳ ಉತ್ಪಾದನೆಯನ್ನು ನಾವು ಮಾಡತೊಡಗಿದ್ದೇವೆ; ನಮ್ಮ ಶತ್ರುಗಳಿಗೆ ಇದೊಂದು ಎಚ್ಚರಿಕೆಯ ದಿನವಾಗುವುದೂ ಸಾಧ್ಯ.

ಎಚ್ ಎಫ್ ೨೪ ಯಂತ್ರವು ಬ್ರಿಟಿಷ ಲೈಸನ್ಸಿನಿಂದ ಇಲ್ಲಿಯೇ ತಯಾರಾದ ಆರ್ಫಿಯಸ್. ಮುಂದೆ ಧ್ವನಿವೇಗದ ಇಮ್ಮಡಿಯಷ್ಟು ತೀವ್ರಗತಿಯನ್ನು ಸೇಡಬಲ್ಲ ಮ್ಯಾಕ್ ಯಂತ್ರೋತ್ಪಾದನೆ ಮಾಡಿ ಅವನ್ನು ಈ ಸೂಪರ್ ಸಾನಿಕ್ ವಿಮಾನಗಳಿಗೆ ಜೋಡಿಸುವ ಆಶಯವಿದೆ. ಚೀನೀಯ ವಾಯು ಪಡೆಯ ರಣ ವಿಮಾನಗಳಲ್ಲಿ ಹೆಚ್ಚಿನವು ಮಿಗ್ ೧೭ ಮತ್ತು ೧೯ ಮತ್ತವು ಸಬ್ ಸೋನಿಕ್ ಮತ್ತು ಟ್ರಾನ್ ಸೋನಿಕ್‌ಗಳು. ಚೀನವು ಈಗ ಸೂಪರ್ ಸಾನಿಕ್ ಯುಗದಲ್ಲಿ ಪಾದಾರ್ಪಣ ಮಾಡಲು ಪ್ರಯತ್ನಿಸುತ್ತಿದ್ದರೂ ಭಾರತದ ಸಾಧನೆಯು ನಮಗೆ ಭದ್ರತೆಯ ದ್ಯೋತಕವೆಂದರೆ ಅತ್ಯುಕ್ತಿಯಲ್ಲ. ಚೀನೀಯರು ನಮ್ಮ ದೇಶವನ್ನು ಅಕ್ರಮವಾಗಿ ಆಕ್ರಮಣ ಮಾಡಿದ ನಂತರ; ನಮಗೆ ಬೇಕಾದ ರಕ್ಷಣಾ ಸಾಧನಗಳನ್ನು ನಾವೇ ತಯಾರಿಸಿಕೊಳ್ಳಬೇಕು ಎಂಬ ತತ್ವವು ಸಂಯೋಗಿ ಮನನಕೆಯಾಯಿತು. ನಮ್ಮ ವಾಯು ಸೇನೆಗೆ ಬೇಕಾದ ರಣ ವಿಮಾನಗಳು, ಪ್ರಯಾಣಿಕರ ಸೌಲಭ್ಯಕ್ಕೆ ಸಾರಿಗಾ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು– ಯಾವುವು ಬೇಕಾದರೂ ನಮ್ಮ ದೇಶದಲ್ಲಿಯೇ ನಿರ್ಮಾಣವಾಗುವುದು ಅಪೇಕ್ಷಣೀಯ ಮತ್ತು ಸುರಕ್ಷಿತ. ಇದಕ್ಕಾಗಿಯೇ ರಶ್ಯದ ಸಹಾಯದಿಂದ ಮಿಗ್ ೨೧ ಮಾದರಿಯ ಇನ್ನೊಂದು ಸೂಪರ್ ಸಾನಿಕ್ ವಿಮಾನಗಳ ತಯಾರಿಕೆಯ ಯೋಜನೆ ನಮ್ಮ ಮುಂದಿದೆ; ಆದರೆ ಇದರ ಕಾರ್ಯಗತಿಯು ಇದುವರೆಗೆ ಬಹಳ ನಿಧಾನವಾಗಿದೆ. ಆದರೂ ಇನ್ನು ಮುಂದಿನ ವರ್ಷಗಳಲ್ಲಿ ಇದೂ ಕಾರ್ಯರೂಪಕ್ಕೆ ಬರುತ್ತದೆ; ನಮ್ಮ ವಾಯು ಪಡೆಗೆ ಮತ್ತೊಂದು ಸೂಪರ್ ಸಾನಿಕ್ ಪಾಲೆಯು ದೊರೆಯುತ್ತದೆ. ಸಂರಕ್ಷಣಾ ಮಂತ್ರಿ ವೈ. ಬಿ. ಚವನರು ಈ ಸೂಪರ್ ಸಾನಿಕ್ ವಿಮಾನ ಪಡೆಗೆ 'ಮರುತ್' ಎಂದು ನಾಮಕರಣ ಮಾಡಿದರು. ಇದು ಸಾರ್ಥಕವಾಗುವುದು ಖಂಡಿತ. ಕಾನಪುರದಲ್ಲಿ ಬ್ರಿಟಿಷ ಲೈಸನ್ಸಿನಲ್ಲಿ ಅವ್ರೊ ೭೪೮ ಎಂಬ ಸಾರಿಗೆಯ ವಿಮಾನಗಳು ತಯಾರಾಗುತ್ತಿವೆ, ತಯಾರಿಕೆಯ ಪ್ರಮಾಣ ಮಾತ್ರ ತೀರ ಅಲ್ಪ. ಫ್ರೆಂಚರಿಂದ ಸ್ವರೂಪ ನಿರ್ಧರಿತವಾದ ಹೆಲಿಕಾಪ್ಟರನ್ನು ಉತ್ಪಾದಿಸುವ ಯೋಜನೆಯು ಈಗ ಎಚ್‌ಎಎಲ್‌ನ ಮುಂದಿದೆ. ಕಳೆದ ವರ್ಷದಿಂದ ಎಚ್‌ಎಎಲ್ ಬ್ರಿಟಿಷ ಮಾದರಿಯ ಟ್ರಾನ್ ಸೋನಿಕ್ ರಣ ವಿಮಾನಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸಿದ್ಧಪಡಿಸುತ್ತಿದೆ. ಹೀಗೆ ನಮ್ಮ ವಾಯು ಯಾನಗಳ ಉತ್ಪಾದನೆಯು ತೃಪ್ತಿಕರವಾಗಿಯೇ ಮುನ್ನಡೆಯುತ್ತಿದೆಯೆನ್ನಬಹುದು. ಆದರೂ ಅತ್ಯಾಧುನಿಕ ಮಾದರಿಯ ವಿಮಾನ ಯಂತ್ರಗಳನ್ನೂ ಸಂಪೂರ್ಣ ಭಾರತೀಯವನ್ನಾಗಿಯೇ ರೂಪಿಸಿಕೊಳ್ಳುವುದಿನ್ನು ಬಾಕಿ ಉಳಿದಿದೆ; ಮುಂದಿನ ವರ್ಷಗಳಲ್ಲಿ ಅದೂ ಸಾಧ್ಯವೆನಿಸುವುದೆಂಬ ನಿರೀಕ್ಷೆಯಿದೆ.

ಎಚ್ ಎಫ್ ೨೪ ಎಂಬ ಮ್ಯಾಕ್ ೧ ಮಾದರಿಯ ನಾಲ್ಕು ವಿಮಾನಗಳು ಸದ್ಯ ಭಾರತೀಯ ವಿಮಾನ ಪಡೆಯನ್ನು ಸೇರಿರುವುದರಿಂದ ವಾಯು ಪಡೆಯ ಶಕ್ತಿಯು ಹೆಚ್ಚುವುದು ಸ್ವಾಭಾವಿಕ. ಭಾರತೀಯ ಇಂಜಿನಿಯರರು ಇತರ ಯಾವುದೇ ರಾಷ್ಟ್ರದ ತಮ್ಮ ಸಮಸ್ಪರ್ಧಿಗಳಿಗೆ ಕಡಿಮೆಯಿಲ್ಲದೆಂಬುದನ್ನು ಈ ಸಾಧನೆಯು ಜಗತ್ತಿನಲ್ಲಿ ಸಾರಿತು. ಪಶ್ಚಿಮ ಯುರೋಪಿನ ರಾಷ್ಟ್ರಗಳು ಈ ಬಗೆಯ ಸೂಪರ್ ಸಾನಿಕ್ ವಿಮಾನಗಳ ಸಂಶೋಧನೆ ಮತ್ತು ಉತ್ಪಾದನೆಯಲ್ಲಿ ತೆಗೆದುಕೊಂಡ ಅವಧಿಗೆ ಹೋಲಿಸುವಾಗ ಹಿಂದುಸ್ತಾನ ವಿಮಾನ ಕಾರಖಾನೆಯು ಎಚ್ ಎಫ್ ೨೪ರ ಸಂಶೋಧನೆ ಮತ್ತು ಉತ್ಪಾದನೆಗೆ ತೆಗೆದುಕೊಂಡ ಸಮಯವು ಅತ್ಯಲ್ಪವೆಂದೆನಿಸುವುದು. ಇದು ನಮ್ಮ ಇಂಜಿನಿಯರರ ಮತ್ತು ಕೆಲಸಗಾರರ ನಿರಂತರ ಕೌಶಲತೆ, ಪರಿಶ್ರಮ ಪ್ರಿಯತೆ ಮತ್ತು ಕರ್ತವ್ಯ ದಕ್ಷತೆಗಳ ದ್ಯೋತಕ. ವಿಮಾನವು ಕೇವಲ ವಾಹಕವಾಗಿದೆ. ಸಂರಕ್ಷಣೆಗೆ ಅವರೊಳಗಿರುವ ಶಸ್ತ್ರಾಸ್ತ್ರಗಳೇ ಕಾರಣವಾದರೂ ವಾಹಕಗಳ ಸ್ಥಾನವೂ ಅಗ್ರಗಣ್ಯವಾದದು. ಇದರಿಂದ ಭಾರತದ ಮಹೋನ್ನತ ಸಾಧನೆಯ ಮುಂದೆ ಎಲ್ಲ ಭಾರತೀಯರೂ ಗೌರವಾಭಿಮಾನದಿಂದ ತಲೆಬಾಗಲೇ ಬೇಕು.

ಕ್ರುಶ್ಚೇವ–ನಸ್ಸೇರ ಭೇಟಿ

ಚೀನೀಯ ಪ್ರಧಾನಿ ಚೌಎನ್ ಲಾಯ್ ಇವರು ತನ್ನ ಬೃಹತ್ ಪ್ರಮಾಣದ ಸಂಚಾರ ಮಾಡಿ ಕೊಳೆತ ಕುಂಬಳ ಕಾಯಿಯನ್ನು ಮನೆಗೆ ಹೊತ್ತು ತಂದ. ಆದರೂ ಇದರ ದುರ್ವಾಸನೆಯನ್ನು ಕೆಲವು ರಾಷ್ಟ್ರಗಳ ಮೂಗಿಗೆ ಬಡಿಸದೆ ಉಳಿಲ್ಲ. ಮಧ್ಯ ಪೂರ್ವದಲ್ಲಿ ಗಣನೀಯವಾಗಿ ಬೆಳೆದು ಬರುತ್ತಿರುವ ಸಂಯುಕ್ತ ಅರಬ ಪ್ರಜಾರಾಜ್ಯದ ರಾಜಧಾನಿ ಕಾಯಿರೋವಿನ ಮಹತ್ವವಿಂದು ಬಹುವಾಗಿ ಬೆಳೆಯ ಬರತೊಡಗಿದೆ. ಪೂರ್ವಾರ್ಧಗೋಲದ ಮಧ್ಯೆಯಿರುವುದರಿಂದ ಇದ್ದಿರಬಹುದು. ಅದರಲ್ಲೂ ಅರಬ ರಾಷ್ಟ್ರಗಳು ಮತ್ತು ಆಫ್ರಿಕೆಯ ದೇಶಗಳ ನಡುವಣ ಸಂಪರ್ಕ ಸಾಧನವಾಗಬಲ್ಲುದು ಕಾಯಿರೋ. ಆದುದರಿಂದಲೇ ಚೀನೀಯ ಲಾಯರೂ ಕಾಯಿರೋದಲ್ಲಿ ಕುಳಿತು ಪಿಟೀಲು ಬಾರಿಸಿದ್ದರು. ಅನಂತರ ಇದೀಗ ರಶ್ಯದ ಪ್ರಧಾನಿ ನಿಕೀಟಾ ಕ್ರುಶ್ಚೇವರು ಅಲ್ಲಿಗೆ ೧೬ ದಿನಗಳ ಸುದೀರ್ಘ ಸಂದರ್ಶನ ನೀಡಿದ್ದಾರೆ. ಸರಕಾರೇತರ ಮಾತುಕತೆಗಳೇ ಅವರ ಸಂದರ್ಶನದ ಕಾರಣವೆಂದು ತಿಳಿಯುತ್ತದೆ. ಅಧ್ಯಕ್ಷ ನಸ್ಸೇರರು ಈ ಭೇಟಿಯನ್ನು ಅತ್ಯಂತ ಮಹತ್ವದೆಂದು ತಿಳಿದಿದ್ದಾರೆಂದೂ ಜನತೆಯೂ ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸೀತೆಂದೂ ವರದಿಯಾಗಿದೆ. ಕ್ರುಶ್ಚೇವರಿಗೆ ಇಂತಹ ವೈಭವೋಪೇತ ಸ್ವಾಗತ ಭಾರತದಲ್ಲಿ ಮಾತ್ರ ದೊರಕಿತ್ತಂತೆ. ಹೀಗಾಗಿ ಈ ನಾಯಕದ್ವಯರ ಭೇಟಿಯು ಅಂತಾರಾಷ್ಟ್ರೀಯ ರಂಗದಲ್ಲಿ ಮಹತ್ವದ ಪಾತ್ರವಹಿಸಿದೆ; ಅದರ ಪರಿಣಾಮವೂ ಮಹತ್ವದ್ದೇ ಆಗಬಹುದು.

ಜಗತ್ಪರ್ಯಟನ

ಕೃಷ್ಣ ಮೆನನ್

ಮಂತ್ರಿಯಾಗುವುದಕ್ಕೆ ಮೊದಲೂ ಕೃಷ್ಣ ಮೆನನ್ನರು ಕಾಶ್ಮೀರದ ಬಗ್ಗೆ ತುಂಬ ಆಡಿದವರು, ಮಂತ್ರಿಯಾಗಿರುವವರೆಗೆ ಅವರೇ ಕಾಶ್ಮೀರವಾಗಿದ್ದರು; ಈಗ, ಮಂತ್ರಿ ಪದದಿಂದ ಹೊರಬಂದ ನಂತರವೂ ಅವರು ಕಾಶ್ಮೀರದ ಮೇಲೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ವಿ. ಕೆ. ಕೆ. ಯವರು ಭಾರತದ ಕಾಶ್ಮೀರ ನೀತಿಯನ್ನು, ಅದು ಎಂದೋ ಭಾರತದ ಅಂಗವಾಗಿದೆಯೆಂಬುದನ್ನು ಬಲವಾಗಿ ಸಮರ್ಥಿಸುತ್ತಾರೆ. ಭಾರತ-ಪಾಕಿಸ್ತಾನಗಳನ್ನು ಕೂಡಿಸಿ ಕಾನ್‌ಫೆಡರೇಶನ್ ಸ್ಥಾಪಿಸುವ ಕೆಲವರ ಅಭಿಪ್ರಾಯವು ಕುಹಕತನದ್ದೆಂದೂ ಅದು ಅವ್ಯವಹಾರ್ಯವೆಂದೂ ಅವರು ಹೇಳುತ್ತಾರೆ. ಭಾರತವು ಪ್ರಜಾಸತ್ತಾತ್ಮಕ ಜಾತ್ಯತೀತ ರಾಷ್ಟ್ರ; ಪಾಕಿಸ್ತಾನವು ಜಾತೀಯ ವಾದದ ಮೇಲೆ ಸರ್ವಾಧಿಕಾರದತ್ತ ನಡೆಯುತ್ತಿರುವ ದೇಶ—ಇವುಗಳ ನಡುವೆ ಹೊಂದಾಣಿಕೆ ಸಾಧ್ಯವಿಲ್ಲ.

ನಿರೀಕ್ಷಕ ನಿಮ್ಮೊ

ಕಾಶ್ಮೀರದಲ್ಲಿರುವ ಯುದ್ಧವಿರಾಮ ರೇಖೆಯ ರಕ್ಷಣೆ ಸರಿಯಾಗಿ ನಡೆಯುತ್ತಿಲ್ಲವೆಂಬುದಕ್ಕೆ ಪಾಕ್ ಪೆಟ್ರೋಲಿನ ಪೋಲೀಸರು ರೇಖೆಯನ್ನು ಮೀರಿ ಗುಲ್ಲೆಬ್ಬಿಸುತ್ತಿರುವುದೇ ಸಾಕ್ಷಿ. ಇದಕ್ಕೆ ನಿರೀಕ್ಷಕರ ತಂಡವು ಚಿಕ್ಕದಿದ್ದುದೂ ಒಂದು ಕಾರಣವಿರಬಹುದು. ಆದರೂ ಇದು ತನ್ನ ಕರ್ತವ್ಯವನ್ನು ಮಾಡುವುದರ ಬದಲು ಕಾಶ್ಮೀರದ ಸರಕಾರಿ ವಿರೋಧಿ ಗುಂಪಿನಿಂದ ಒಂದು ವಿಜ್ಞಪ್ತಿ ಪತ್ರವನ್ನು ಸ್ವೀಕರಿಸುವ ಧಾರ್ಷ್ಟ್ಯತನವನ್ನು ತೋರಿಸಿದೆ; ಪಾಕಿಸ್ತಾನದ ಮೇಲೆ ಪಕ್ಷಪಾತವನ್ನೂ ತೋರಿಸುತ್ತಿದೆ ಎನ್ನಬಹುದೋ ಏನೋ! ೧೯೪೯ರಲ್ಲಿ ಪ್ರಧಾನ ಸೈನಿಕ ನಿರೀಕ್ಷಕರಾಗಿದ್ದ ಡೆಲ್ವೋಯಿಯವರು ನಾಗರಿಕ ಆಡಳಿತೆಯಲ್ಲಿ ಕೈ ಹಾಕಿದುದರಿಂದ ಹಿಂದೆ ಕರೆಯಲ್ಪಟ್ಟರು. ಹಾಗೆಯೇ ಸದ್ಯದ ಪ್ರಧಾನ ನಿರೀಕ್ಷಕ ನಿಮ್ಮೊರವರೂ ಅಧಿಕಪ್ರಸಂಗಕ್ಕೆ ತೊಡಗಿದಂತಿದೆ.

ಸಿರಿಮಾವೋ ಭಂಡಾರನಾಯಿಕೆ

ಸಿಂಹಳದ ಸಿರಿಮಾವೋ ಮುಳ್ಳಿನ ಮೇಲೆಯೇ ನಡೆಯುತ್ತ ಬಂದಿದ್ದಾರೆ. ಅಲ್ಲಿ ಪ್ರಜಾಸತ್ತೆಯು ಉಳಿದಿದೆಯಾದರೂ ಆಡಳಿತೆಯ ಕಾರ್ಯ ವಿಧಾನವು ಪ್ರಜಾಸತ್ತಾತ್ಮಕವಾಗಿಲ್ಲವೆಂಬ ದೂರು ಕೇಳಿಬರುತ್ತಿದೆ. ಈ ನಡುವೆ ಸಮ್ಮಿಶ್ರ ಸರಕಾರದ ಯೋಚನೆಯೂ ಕೆಲವರಲ್ಲಿ ಸುಳಿದಿದೆ. ಇದಕ್ಕಾಗಿಯೇ ಮುಂದಿನ ಚುನಾವಣೆಗಳಲ್ಲಿ ದೇಶದ ಪ್ರಗತಿಪರ ಪಕ್ಷಗಳೊಡನೆ ಮಾತುಕತೆ ನಡೆಸಿ, ಒಡಂಬಡಿಕೆಗಳನ್ನು ಮಾಡಿಕೊಳ್ಳಲು ಸಿರಿಮಾವೋ ತನ್ನ ಲಂಕಾ ಫ್ರೀಡಂ ಪಕ್ಷದಿಂದ ಅಧಿಕಾರ ಹೊಂದಿದ್ದಾರೆ. ಸಿರಿಮಾವೋರವರಿಗೆ ಸಮ್ಮಿಶ್ರ ಸರಕಾರ ರಚಿಸಲೇ ಬೇಕಾದ ಗಂಡಾಂತರವೇನು ಎಂಬುದಿನ್ನೂ ತಿಳಿದಿಲ್ಲ; ಪಕ್ಷಗಳನ್ನು ಬಗಲಲ್ಲಿ ಹಾಕಿಕೊಳ್ಳುವುದೊಂದೇ ಧ್ಯೇಯವಿದ್ದಿರಬಹುದೆ?

ನಿಕೀಟಾ ಕ್ರುಶ್ಚೇವ

ಚೀನ ಮತ್ತು ರಶ್ಯಗಳ ನಡುವಣ ಮತಭೇದಗಳು ತೀವ್ರಗೊಳ್ಳಲು ಕಾರಣವೇನೆಂಬುದನ್ನು ರಶ್ಯನ್ ಸೈದ್ಧಾಂತಿಕ ಪತ್ರಿಕೆಯೊಂದು ಹೊರಗೆಡಹಿದೆ. ಚೀನೀ ಧುರೀಣರು ತಾವಾಗಿಯೇ ಘರ್ಷಣೆಯಲ್ಲಿ ತೊಡಗಿ ಸಮಾಜವಾದಿ ಹಾಗೂ ನವೋದಿತ ಸ್ವತಂತ್ರ ರಾಷ್ಟ್ರಗಳನ್ನು ಒಂದುಗೂಡಿಸುವ ಸಮಾಜವಾದಿ ಗುಂಪಿನ ನೀತಿಯನ್ನು ಕಡೆಗಣಿಸಿದ್ದಾರೆ. ಭಾರತ—ಚೀನಾ ಗಡಿ ತಂಟೆಯು ಸಾಮ್ರಾಜ್ಯಶಾಹಿಗಳಿಗೆ ತುಂಬ ನೆರವಾಯಿತು; ಇದರಿಂದ ಭಾರತಕ್ಕೆ, ಸಾಮ್ರಾಜ್ಯಶಾಹಿ ವಿರೋಧಿ ರಂಗಕ್ಕೆ ಏಟು ಬಡಿಯಿತು. ಈ ಗಡಿ ತಂಟೆಯನ್ನು ತೀಕ್ಷ್ಣಗೊಳಿಸಿದ ಪೀಕಿಂಗ್ ಸರಕಾರದ ನೀತಿಯನ್ನು ರಶ್ಯವು ಒಪ್ಪದ್ದರಿಂದ ರಶ್ಯ-ಚೀನಿ ನಾಯಕರಲ್ಲಿ ಮತಭೇದಯುಂಟಾಯಿತು. ಕ್ರುಶ್ಚೇವರ ಕಾಯರೋ ಸಂದರ್ಶನಕ್ಕೂ ಈ ರಹಸ್ಯ ಸ್ಫೋಟಕ್ಕೂ ಸಂಬಂಧವಿದ್ದರೂ ಇರಬಹುದು.

ಚೆಸ್ಟರ್ ಬೌಲ್ಸ್

ಭದ್ರತಾ ಮಂಡಳವು ಕಾಶ್ಮೀರ ಪ್ರಶ್ನೆಯ ಸಂಬಂಧದಲ್ಲಿ ಇತ್ಯರ್ಥಕ್ಕೆ ಬರಲು ಇನ್ನೂ ಸಾಧ್ಯವಾಗಿಲ್ಲ. ಆದುದರಿಂದ ಅದು ಈ ಬಗ್ಗೆ ಅಸಮರ್ಥವಾಗುವಂತಿದೆ. ಸದ್ಯದ ಅಧಿವೇಶನವು ಪಾಕ್–ಭಾರತಗಳ ನೇರ ಮಾತುಕತೆಗಳ ಮೂಲಕವೇ ಈ ಚರ್ಚೆಯನ್ನು ಮುಗಿಸಬೇಕೆಂಬ ಸಲಹೆಯನ್ನು ನೀಡುತಿದೆ. ಭಾರತವು ಕೇಳುವಂತೆ ಕಾಶ್ಮೀರದ ಬಗ್ಗೆ ಭದ್ರತಾ ಮಂಡಳದಲ್ಲಿ ಚರ್ಚೆ ನಡೆಯುವ ಅಗತ್ಯವಿಲ್ಲವೆಂಬ ನಿರ್ಧಾರಕ್ಕೆ ಬರುವುದೇ ಪರಿಸ್ಥಿತಿಯ ಹದಗೆಡದಂತೆ ಮಾಡಲು ಸಾಧನವಾಗಬಹುದು. ಭಾರತ—ಪಾಕಿಸ್ತಾನಗಳ ವಿವಾದಗಳ ನಡುವೆ ಅಮೆರಿಕೆಯು ಕೈ ಹಾಕಬಾರದೆಂದೂ ಅವುಗಳೇನೇ ಅವನ್ನು ಪರಿಹರಿಸಿಕೊಳ್ಳಲು ಬಿಡಬೇಕೆಂದೂ ಹೇಳಿದ ರಾಯಭಾರಿ ಚೆಸ್ಟರ್ ಬೌಲ್ಸರ ಅಭಿಪ್ರಾಯದ ಪ್ರತಿಚ್ಛಾಯೆಯಿದಾಗಿರಬಹುನೆ?

ಅಲ್ಲಲ್ಲಿಯ ಸುದ್ದಿ ಸಾರ

ವಿದಾಯ ಸತ್ಕಾರ — ತಾ. 6-5-64 ರಂದು ಉಡುಪಿ ಪಾಸ್ ಟ್ಯುಟೋರಿಯಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು ಪಣಂಬೂರಿಗೆ ಪೋಸ್ಟಲ್ ಡಿಪಾರ್ಟ್‌ಮೆಂಟಿಗೆ ಹೋಗುವ ಶ್ರೀ ಯಂ. ಭಾಸ್ಕರ ಭಂಡಾರಿ, ಮಣಿಪಾಲ ಇವರಿಗೆ ಶ್ರೀ ಯು ಶಿವರಾಯರ ಅಧ್ಯಕ್ಷತೆಯಲ್ಲಿ ವಿದಾಯಕೂಟ ಜರಗಿತು. ಸಭಿಕರಲ್ಲಿ ಕೆಲವರು ಶ್ರೀ ಭಂಡಾರಿಗಳ ಗುಣಗಾನ ಮಾಡಿದರು. ಅಧ್ಯಕ್ಷರು ಮಾತನಾಡಿದ ಬಳಿಕ ಶ್ರೀ ಭಂಡಾರಿಗಳು ಉತ್ತರಿಸುತ್ತಾ ತನಗಾಗಿ ತೋರಿದ ಈ ಅಭಿಮಾನ ಚಿರಸ್ಮರಣೀಯವಾದುದೆಂದರು.

ಸಾಹಿತ್ಯ ಪ್ರಕಟಣೆ — ಮಹಾ ಕವಿ ಕಾಳಿದಾಸ ಮತ್ತು ಹರಿದಾಸವರೇಣ್ಯ ಪುರಂದರ ವಿಠಲರ ಬಗ್ಗೆ ಪ್ರಬಂಧಗಳ ಸಂಕಲನವೊಂದನ್ನು ಪ್ರಕಟಿಸಲು ಸುರತ್ಕಲ್ಲು ವಿಜಯ ಸಾಹಿತ್ಯ ಮಾಲೆಯ ವತಿಯಿಂದ ಸಿದ್ಧತೆಗಳಾಗುತ್ತಿದೆಯೆಂದೂ, ಸಾಹಿತ್ಯಾಭಿಮಾನಿಗಳು ಬೆಂಬಲ ನೀಡಬೇಕೆಂದೂ ಸಂಪಾದಕರು ವಿನಂತಿಸುತ್ತಾರೆ.

ಮುಲ್ಕಿ — ಸ್ಥಳೀಯ ಪೊಂಜ ಮತ್ತು ಕಂಪೆನಿಯ ಆಫೀಸಿನಲ್ಲಿ ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜರ್, ಶ್ರೀ ಎ ಭಾಸ್ಕರ ನಾಯಕ್; ಎಕೌಂಟೆಂಟ್ ಪೈ. ಶಶೀಧರ ಶೆಟ್ಟಿ; ಕಾರ್ನಾಡಿನ ಸಬ್ ಪೋಸ್ಟ್ ಮಾಸ್ಟರ್ ಎಸ್. ಕೊರಿಯ; ಪವರ್ ಎಂಡ್ ಲೈಟಿನ ಶ್ರೀ ಎಚ್. ವೆಂಕಟ ಸುಬ್ಬರಾವ್ ಇವರಿಗೆ ವಿದಾಯ ಕೋರುವ ಮತ್ತು ಅವರ ಸ್ಥಾನಕ್ಕೆ ಬಂದಿರುವ ಶ್ರೀ ಯು. ಎನ್. ಪಡಿಯೂರ್, ಶ್ರೀಮತಿ ಯು. ಸುಶೀಲಾ ಪಡಿಯೂರ್, ಶ್ರೀ ಪಿ. ಕೃಷ್ಣಯ್ಯ ಶಾನುಭೋಗ್, ಶ್ರೀ ಗೋಪಿನಾಥರಾವ್, ಇವರಿಗೆ ಸ್ವಾಗತ ಕೋರುವ ಸಮಾರಂಭವು ಡಾ. ಎಂ. ಆರ್ ಕಾಮತರ ಅಧ್ಯಕ್ಷತೆಯಲ್ಲಿ ತಾ 9ರಂದು ಜರಗಿತು. ಶ್ರೀ ಎಂ ಆರ್. ಎಚ್ ಪೂಂಜರು ಸ್ವಾಗತಿಸಿದರು. ಡಾ|ಕೆ ಬಾಬು ಶೆಟ್ಟಿ; ಶ್ರೀಕೆ. ಜಿ. ಮಹಾಬಲ; ಎಂ. ಎಚ್. ಹಮ್ಮದ್; ಇವರು ಭಾಷಣಮಾಡಿದ ಬಳಿಕ ಅತಿಥಿಗಳು ಉತ್ತರ ಕೊಟ್ಟರು. ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಎಂ. ಆರ್. ಎಚ್. ಪೂಂಜರು ಧನ್ಯವಾದಗಳನ್ನರ್ಪಿಸಿದರು.

ರೋಟರಿ ಸಭೆ — ಜನರು ರೋಟರಿಯ ಧ್ಯೇಯಗಳನ್ನು ಅರ್ಥಮಾಡಿಕೊಳ್ಳುತ್ತಿದ್ದು, ಪ್ರಪಂಚದಲ್ಲಿ ಹಿತಕರ ವಾತಾವರಣವನ್ನುಂಟು ಮಾಡುವುದರಲ್ಲಿ ರೋಟರಿಯು ದೊಡ್ಡ ಪಾತ್ರವನ್ನು ವಹಿಸಬೇಕಾಗಿದೆ ಎಂದು [illegible]ನೇ ರೋಟರೀ ಜಿಲ್ಲೆಯ ಗೌರ್ನರಾಗಿ ನಾಮಕರಣಗೊಂಡಿರುವ ಡಾ| ಟಿ. ಎಂ ಎ. ಪೈ [illegible]. 5ರಂದು ಮಣಿಪಾಲದಲ್ಲಿ ತಿಳಿಸಿದರು.

ತಾವು ಈ ಮಾಸಾಂತ್ಯದಲ್ಲಿ ಅಮೇರಿಕದ [illegible] ಸಿಡ್‌ನಲ್ಲಿ ಭಾಗವಹಿಸಲಿರುವ ಅಂತರಾಷ್ಟ್ರೀಯ ರೋಟರಿ ಸಭೆಯಿಂದ ಗೌರ್ನರುಗಳಾಗಿ ನಾಮಕರಣಗೊಂಡಿರುವವರಿಗೆ ಅಂತರಾಷ್ಟ್ರೀಯ ರೋಟರಿ ಅಧ್ಯಕ್ಷರ ಸಂದೇಶ ತಿಳಿದುಕೊಂಡು ಅದನ್ನು ಸಾಧ್ಯವಿದ್ದಷ್ಟು ಚೆನ್ನಾಗಿ ತಮ್ಮ ಜಿಲ್ಲೆಗಳಲ್ಲಿಜ್ಯಾರಿಗೆ ತರಲು ಸಹಾಯ ಮಾಡುತ್ತದೆಂದು ಉಡುಪಿ ರೋಟರಿ ಕ್ಲಬ್‌ನ ಸಾಪ್ತಾಹಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಅವರು ನುಡಿದರು.

ರೊಟೇರಿಯನ್ನರುಗಳಾದ ಜಿ. ಆರ್. ದೇವಯ್ಯ, ಪಿ. ಆರ್ ಶೆಣೈ, ಡಾ. ಕೆ. ಎಲ್ [illegible]ಶಾಳ ಹಾಗೂ ವಿಜಿಟಿಂಗ್ ರೊಟೇರಿಯನ್ [illegible]ದರಾಬಾದ್ ರೋಟರಿ ಕ್ಲಬ್‌ನ್ ಕೆ. ಪಾ[illegible] ರಾವ್‌ರವರು ಭಾಷಣಮಾಡಿ ಡಾ| ಪೈಯವರಿಗೂ, ಅವರ ಸಂಗಡ ತೆರಳಲಿರುವ ಶ್ರೀ[illegible]ಮೇಶ ಪೈಯವರಿಗೂ ಸುಖ ಪ್ರಯಾಣ ಬಯಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ರ[illegible]ಮೇಶ ಪೈಯವರು ಡಾ| ಪೈ ಹುಟ್ಟಿನಿಂದಲೇ ರೊಟೇರಿಯನ್ ಆಗಿದ್ದಾರೆಂದರು.

ಕುಂಟಾಲ್ ನಗರ — ತಾ. 5.5.64 [illegible]ಂದು 'ಕುಂಟಾಲ್ ನಗರ ಅಭಿವೃದ್ಧಿ ಸಂಘ', ಮಣಿಪುರ ಸೆಂಟ್ರಲ್' ಇದರ ಒಂದು ವಿಶೇಷ ಸಭೆಯು ಶ್ರೀ ಎ ಜೆ. ಆಲ್ವ ಇವರ ಅಧ್ಯಕ್ಷತೆಯಲ್ಲಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಡಾ. ಪಿ. ಸಿ. ರೈಯವರು ಅತಿಥಿಗಳನ್ನು ಸ್ವಾಗತಿಸಿದರು, ಶ್ರೀಗಳಾದ ಬಾಲಕೃಷ್ಣ ಶೆಟ್ಟಿ; ಪರೇಲ್, ಪದ್ಮನಾಭ ಆಚಾರ್ಯ, ಹಯವದನ ಆಚಾರ್ಯ, ಕೆ.ಸೋಮಯ್ಯ ಶೆಟ್ಟಿ, ಸ್ಟಿನಸ್ ಲೋಬೊ ನೋರೆನ್ನ ಮೊದಲಾದವರು ಮಾತನಾಡುತ್ತಾ ಸಂಘದ ಕಾರ್ಯಗಳ ಕುರಿತು ಸೂಕ್ತ ಸಲಹೆಯನ್ನಿತ್ತರು. ಅಧ್ಯಕ್ಷರು ಈ ಸಂಘಕ್ಕೆ ಶುಭಕೋರಿ ಮಾತನಾಡಿದರು. ಕೊನೆಗೆ ಪಿ. ಜಗನ್ನಾಥ ಶೆಟ್ಟರು ಧನ್ಯವಾದವನ್ನಿತ್ತರು.

ಭೋಜನಕೂಟ: — ಮಂಗಳೂರಿನಲ್ಲಿ ಜೂನಿಯರ್ ಛೇಂಬರ್ಸಿನ ಶಾಖೆಯ ಆರಂಭೋತ್ಸವದ ಸಂಬಂಧದಲ್ಲಿ ಬಂದಿದ್ದ ಜೂನಿಯರ್ ಛೇಂಬರ್ಸಿನ ದಕ್ಷಿಣ ಭಾರತದ ಶಾಖೆಗಳ ಸದಸ್ಯರ ಗೌರವಾರ್ಥ ತಾ 9ರಂದು ಮಣಿಪಾಲದಲ್ಲಿ ಸಿಂಡಿಕೇಟ್ ಬ್ಯಾಂಕ್ ಭೋಜನ ಕೂಟವನ್ನೇರ್ಪಡಿಸಿತ್ತು.

ಜೂನಿಯರ್ ಛೇಂಬರ್ಸಿನ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸುಬ್ಬರಾವ್ ಮಾತನಾಡಿ, ದೇಶಕ್ಕೆ ಒಳ್ಳೆಯ ನಾಯಕರನ್ನು ಒದಗಿಸುವುದೇ ಈ ಸಂಸ್ಥೆಯ ಗುರಿಯಾಗಿದೆ ಎಂದರು. ಆರಂಭದಲ್ಲಿ ಶ್ರೀ ಟಿ. ಎ. ಪೈ ಸ್ವಾಗತ ಭಾಷಣಮಾಡಿ, ಜೇಸೀಗಳು ನಡೆಸುತ್ತಿರುವ ಚಟುವಟಿಕೆಗಳನ್ನು ಪ್ರಶಂಸಿಸಿದರು

ಶ್ರೀ ರಮೇಶ ಪೈಯವರು ಅಕಾಡೆಮಿ ಆಫ್ ಜನರಲ್ ಎಜುಕೇಶನಲ್ ಸಂಸ್ಥೆಯ ಹುಟ್ಟು ಹಾಗೂ ಬೆಳವಣಿಗೆ ಕುರಿತು ಮಾತನಾಡಿದರು.

ಮಂಗಳೂರು ಶಾಖೆಯ ಅಧ್ಯಕ್ಷ ಡಾ|| ಮೋದಾಯಿಲ್‌ರವರು ಉಡುಪಿಯಲ್ಲೂ ಜೂನಿಯರ್ ಛೇಂಬರ್ಸಿನ ಶಾಖೆಯಾಗಲೆಂದು ಆಶಿಸಿದರು.

ವಾರ್ಷಿಕೋತ್ಸವ — ಉಡುಪಿ ತಾಲೂಕು ಬ್ರಹ್ಮಶ್ರೀ ಗುರುನಾರಾಯಣ ಯುವಕ ಮಂಡಳ, ಉಡುಪಿ ಇದರ ಪ್ರಥಮ ವಾರ್ಷಿಕೋತ್ಸವವು ತಾ. 7-5-64ರಂದು ಬನ್ನಂಜೆ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸಭಾ ಭವನದಲ್ಲಿ ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ. ಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಂಡಳದ ಅಧ್ಯಕ್ಷ ಶ್ರೀ ಎ. ವಿಶ್ವನಾಥನವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಎ ಕೋಟ್ಯಾನ್‌ರವರು ವರದಿ ವಾಚನ ಮಾಡಿ ಸಂಘದ ಉದ್ದೇಶ, ಸಾಧನೆಗಳನ್ನು ವಿವರಿಸಿದರು. ಜಿಲ್ಲಾ ಬಿಲ್ಲವ ಯೂನಿಯನ್ನಿನ ಅಧ್ಯಕ್ಷ ಶ್ರೀ ಎಂ. ದೂಮಪ್ಪನವರು ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆ ಮಾಡಿ ಸಂಘದ ಕಾರ್ಯಗಳನ್ನು ಮೆಚ್ಚಿ ಮಾತನಾಡಿದರು. ಸಭಿಕರಲ್ಲಿ ಎಡ್ವಕೇಟ್, ಶ್ರೀ ಪಿ. ಶಿವಾಜಿ ಶೆಟ್ಟಿ ಮೊದಲಾದವರು ಭಾಷಣವಿತ್ತ ಬಳಿಕ ಅಧ್ಯಕ್ಷರು ಸಂಘದ ಬೆಳವಣಿಗೆಗಾಗಿ ಕೆಲವು ಸೂಚನೆಗಳನ್ನಿತ್ತು ಭಾಷಣ ಮಾಡಿದರು. ಧನ್ಯವಾದ ಸಮರ್ಪಣೆಯಾದ ನಂತರ ವಿವಿಧ ವಿನೋದಾವಳಿಗಳಾದುವು. ಬೆಳಿಗ್ಗೆ ಎಡ್ವಕೇಟ್, ಶ್ರೀ ಬಿ. ವಿಠಲ ಶೆಟ್ಟರು ಧ್ವಜಾರೋಹಣ ಮಾಡಿದ್ದರು

ಮೈಸೂರು ಪ್ರದೇಶ ಕಾಂಗ್ರೆಸ್ ರಾಜಕೀಯ ಪರಿಷತ್ತು —

ಇದೇ ತಾ. 18 ಮತ್ತು 19ನೇ ಸೋಮವಾರ ಮಂಗಳವಾರ, ಮಂಗಳೂರಲ್ಲಿ ಉರ್ವ ಕೆನರಾ ಹೈಸ್ಕೂಲಿನ ಪದ್ಮನಾಭ ಮಲ್ಯ ನಗರದಲ್ಲಿ ಜರಗಲಿರುವುದು. ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕಾಮರಾಜರು ಪರಿಷತ್ತನ್ನು ಉದ್ಘಾಟಿಸುವರು. ಮೈಸೂರು ಪ್ರದೇಶ ಕಾಂಗ್ರೆಸ್ಸ್ ಅಧ್ಯಕ್ಷ ಶ್ರೀ ಎಂ. ಮಹಮ್ಮದಾಲಿಯವರು ಅಧ್ಯಕ್ಷತೆ ವಹಿಸುವರು. ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ಲಾಲ ಬಹದೂರ್ ಶಾಸ್ತ್ರಿ, ಶ್ರೀ ರಾಜ ಬಹದ್ದೂರ್, ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ ಮೊದಲಾದವರು ಭಾಷಣಮಾಡಲಿರುವರು

ಉಡುಪಿ ನೇಕಾರರ ಸಹಕಾರಿ ಉತ್ಪತ್ತಿ ಮತ್ತು ಮಾರಾಟ ಸಂಘದ ರಜತೋತ್ಸವವು ಇದೇ ತಾ. 9ರಂದು ಉಡುಪಿ ಶ್ರೀಕೃಷ್ಣಾಪುರ ಮಠದ ಶ್ರೀ ಕೃಷ್ಣಾ ಸಭಾ ಮಂಟಪದಲ್ಲಿ ಶ್ರೀ ಎಂ. ಮಧ್ವರಾಜ್, ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು ಸಂಘದ ಅಧ್ಯಕ್ಷ ಶ್ರೀ ಕೆ. ಗುರುರಾಜರಾಯರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಯು. ರಾಮರಾಯರು ವರದಿ ವಾಚನ ಮಾಡಿದರು. ಶ್ರೀ ಟಿ. ಎಂ. ಪೈ ಯವರು ರಜತೋತ್ಸವನ್ನೂ ಶ್ರೀ ಕೆ. ಶಿ. ಹರಿದಾಸ ಭಟ್ಟರು ಬೆಳ್ಳಿ ಹಬ್ಬದ ಸ್ಮಾರಕ ಸಂಚಿಕೆಯನ್ನೂ ಉದ್ಘಾಟಿಸಿದರು. ಅತಿಥಿಗಳ ಭಾಷಣವಾದ ನಂತರ ಡಾ| ಟಿ. ವಿಠಲ ಪೈಯವರು ಸಂಘದ ಮೂಲ ಸದಸ್ಯರಿಗೆ ಸನ್ಮಾನವಿತ್ತರು. ಅಧ್ಯಕ್ಷರ ಭಾಷಣದ ನಂತರ ವಂದನಾರ್ಪಣೆ ಮನರಂಜನಾ ಕಾರ್ಯಕ್ರಮಗಳಾದುವು.

ಕಾಸರಗೋಡಿನಲ್ಲಿ ಕನ್ನಡಿಗರ ರಾಜಕೀಯ ಪರಿಷತ್ತು — ಇದೇ ತಾ. 5ರಂದು ಕಾಸರಗೋಡು ಪ್ರಾಂತೀಕರಣ ಪರಿಷತ್ತಿನ ಆಶ್ರಯದಲ್ಲಿ ಬೆಂಗಳೂರಿನ ಮಾಜಿ ಮೇಯರ್ ಶ್ರೀ ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ, ರಾಜಕೀಯ ಪರಿಷತ್ತು ಜರಗಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರಿಂದ ಸಮಾರಂಭದ ಉದ್ಘಾಟನೆಯಾಯಿತು. ಅಧ್ಯಕ್ಷರು ಮಾತನಾಡುತ್ತಾ ಕಾಸರಗೋಡು ಮೈಸೂರಿಗೇ ಸೇರಬೇಕಾಗಿದೆಯೆಂದು ಒತ್ತಿ ಹೇಳಿದರು.

ಕಾಸರಗೋಡನ್ನು ಮೈಸೂರಿನೊಂದಿಗೆ ಸೇರಿಸಲಿರುವ ಕುರಿತಾದ ಕಾರ್ಯಕ್ರಮವೊಂದಿಗೆ ಈ ಪ್ರಶ್ನೆ 6 ತಿಂಗಳುಗಳ ಒಳಗೆ ಬಗೆಹರಿಯದಿದ್ದರೆ ತೀವ್ರ ಕ್ರಮ ಅನುಸರಿಸ ಬೇಕಾಗುವುದು ಎಂದು ಮುಂತಾದ ನಿರ್ಣಯಗಳಾದುವು.

ಉಳಿಸುವವನ ಆಯ್ಕೆ

"ಸಿಂಡಿಕೇಟ್ ಬ್ಯಾಂಕ್"

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಠೇವಣಿಗಾರರು ಪ್ರತಿಯೊಂದು ವೃತ್ತಿಯವರೂ ಇರುತ್ತಾರೆ........ ಮತ್ತು ಪ್ರತಿಯೊಂದು ಉದ್ದೇಶಕ್ಕೂ ಉಳಿಸುತ್ತಾರೆ. ವ್ಯಕ್ತಿಗಳು ಮತ್ತು ಕುಟುಂಬಗಳು, ದೊಡ್ಡ ಮತ್ತು ಸಣ್ಣ ಠೇವಣಿಗಾರರು ಮುಂಚಿತವಾಗಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಅವರಿಗೆ ಅಗತ್ಯವಿರುವ ವಿಷಯಕ್ಕಾಗಿ ಉಳಿಸುತ್ತಾರೆ. ಒಂದು ಖಾತೆಯನ್ನು ತೆರೆಯುವುದರ ಮೂಲಕ ಇಲ್ಲವೆ ನಿಮ್ಮ ಲೆಕ್ಕಕ್ಕೆ ಕ್ರಮವಾಗಿ ಕೂಡಿಡುವುದರ ಮೂಲಕ ನಿಮ್ಮ ಉದ್ದೇಶಗಳನ್ನು ಸಾಧಿಸಬಹುದೆಂಬುದನ್ನು ನಿಶ್ಚಯ ಮಾಡಿಕೊಳ್ಳಿರಿ. ಏಕ ಪ್ರಕಾರವಾದ ಬಡ್ಡಿ ಪಾವತಿಯು ನಿಮ್ಮ ಲೆಕ್ಕಕ್ಕೆ ಕೂಡಿಸಲ್ಪಡುತ್ತದೆ ಮತ್ತು ನಿಮ್ಮ ತೀವ್ರ ಅಭಿವೃದ್ಧಿಗೆ ಸಹಾಯ ಮಾಡುತ್ತದೆ.

ಸಿಂಡಿಕೇಟ್ ಬ್ಯಾಂಕ್

ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ ಮಣಿಪಾಲ

..........ಭಾರತದ ಬ್ಯಾಂಕಿಂಗಿನಲ್ಲಿ ಒಂದು ಪರಿಚಯದ ಹೆಸರು

ಬ್ಯಾಂಕಿನ ಕುಳಗಳು

ಸಾಧಾರಣವಾಗಿ ಒಂದು ಬ್ಯಾಂಕಿಗೆ ಮೂರು ಬಗೆಯ ಕುಳಗಳಿರುತ್ತಾರೆ. ಒಂದು, ದುಡ್ಡುಳ್ಳ ಧನಿಕ ವರ್ಗ ಈ ವರ್ಗದ ಜನ ಬೇರೆ ದೇಶಗಳಲ್ಲಿ ಬ್ಯಾಂಕಿಂಗ್ ಮಂಡಳದ ಆಧಾರ ಸ್ತಂಭವೇ ಆಗಿರುತ್ತಾರೆ; ಆದರೆ ನಮ್ಮಲ್ಲಿ ದುಡ್ಡಿರುವವರು ಇನ್‌ಕಮ್ ಟ್ಯಾಕ್ಸಿನ ಭಯದಿಂದ ಬ್ಯಾಂಕಿನೊಳಗೆ ಲೆಕ್ಕವಿಡಲು ಅಳುಕುತ್ತಾರೆ. ಎರಡನೆಯವರು ಖರ್ಚು ಹೆಚ್ಚಾಗಿ ಆದಾಯ ಕಡಿಮೆಯಾಗಿ ತ್ರಾಸ ಪಡುತ್ತಿರುವ ಮಧ್ಯಮ ವರ್ಗದ ಜನ. ಅವರಿಂದಲೂ ಹೆಚ್ಚು ಉಳಿತಾಯದ ಆಸೆ ಕಟ್ಟಿಕೊಳ್ಳುವುದು ಸಲ್ಲದು. ಈಗ ಬಡ ಜನರು, ಕೂಲಿಕಾರರು ಮುಂತಾದವರ ಕೈಯಲ್ಲಿ ಹಣ ಓಡಾಡುತ್ತಿದೆ. ಅವರು ಮೂರನೆಯ ವರ್ಗದ ಕುಳಗಳಾಗ ಬಲ್ಲರೆಂದು ನನ್ನ ಅನುಭವವು ಹೇಳುತ್ತದೆ. ಆ ಪೈಕಿ ಒಬ್ಬನಿಗೆ ನಮ್ಮ ಬ್ಯಾಂಕಿನಲ್ಲಿ ರೂ. 18,000 ಡಿಪಾಸಿಟು ಇದೆ. ಹಾಗೆಂತ ಒಬ್ಬ ಕರಿಕಾರಿ ಹೆಂಗಸು ರೂ. 3,000 ಡಿಪಾಸಿಟು ಇಟ್ಟಿದ್ದಾಳೆ ಇಂಥವರು ಬ್ಯಾಂಕಿನಲ್ಲಿ ವಿಶ್ವಾಸವಿಡುವ ದಿನ ಬಂದರೆ ವಿಶ್ವಾಸವಿಡುವಂತೆ ಬ್ಯಾಂಕುಗಳು ಅವರನ್ನು ಸ್ವಾಗತಿಸಿದರೆ ನಮ್ಮ ರಾಷ್ಟ್ರೀಯ ಬ್ಯಾಂಕಿಂಗ್ ಕ್ಷೇತ್ರ ಬಲು ಬೇಗನೆ ವ್ಯಾಪಿಸ ಬಲ್ಲದು.

— ಶ್ರೀ ಟಿ. ಎ. ಪೈ.

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ —

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ,

ನವಭಾರತ ಪುಸ್ತಕ ಭಂಡಾರ, ಉಡುಪಿ.

ಜನತಾ ಉವಾಚ

ಅಕ್ಕಿಯೂ ಕಳಸಂತೆಗೆ?

ಆಹಾರಧಾನ್ಯಗಳ ಬೆಲೆಯು ಏಕಪ್ರಕಾರವಾಗಿ ಏರುತ್ತಲೇ ಹೋಗುತ್ತಿದೆ. ಸರಕಾರದ ಆಹಾರಧಾನ್ಯಗಳ ನೀತಿಗೆ ಕೆಲವೆಡೆ ವಿರೋಧವೂ ಪ್ರಕಟವಾಗಿದೆ. ಬೆಲೆಯೇರಿಕೆಯೊಡನೆ ಮಳೆ ಬೀಳುವುದಕ್ಕೆ ಮೊದಲೇ ಕೆಲವೆಡೆ "ಅಕ್ಕಿಯಿಲ್ಲ" ಎಂಬ ಮಾತೂ ಕೇಳಿ ಬರುತ್ತಿದೆ. ಇದರ ಅರ್ಥ, ಒಳಗಡೆ ದಾಸ್ತಾನಿಟ್ಟು, ಮಳೆಗಾಲದಲ್ಲಿ ಧಾರಾಳ ಬೆಲೆಗೆ ಮಾರಬೇಕು ಎಂಬುದು. ಎಂದರೆ, ಅಕ್ಕಿಯು ಒಳ್ಳೆಯ ಬೆಲೆ ತರಬಲ್ಲುದೆಂದು ವ್ಯಾಪಾರಿ ವರ್ಗ ಈಗಾಗಲೇ ನಿರ್ಧಾರ ಮಾಡಿದೆ. ಕೇಂದ್ರ ಆಹಾರ ಮಂತ್ರಿ ಥಾಮಸರು ಮತ್ತೆ ರೇಶನ್ ತರುವುದಿಲ್ಲವೆಂದು ಹೇಳಿ, ಆಹಾರ ಧಾನ್ಯಗಳ ಸಂಗ್ರಹ ಬೇಕಷ್ಟಿದೆ ಎಂದು ನುಡಿದಿದ್ದಾರೆ. ಸಂಗ್ರಹಿತ ಧಾನ್ಯ ದೇಶದ ಎಲ್ಲ ಮೂಲೆಯಲ್ಲೂ ಉಚಿತ ರೀತಿಯಲ್ಲಿ ನ್ಯಾಯಬೆಲೆಗೆ ವಿಕ್ರಯಿಸಲ್ಪಡುವಂತೆ ಎಚ್ಚರಿಕೆ ವಹಿಸಬೇಕು. ಸರಕಾರವು ಇತ್ತೀಚೆಗೆ ಆಹಾರಧಾನ್ಯ ಮಾರಾಟದ ಲೈಸನ್ಸ ನೀತಿಯನ್ನು ಘೋಷಿಸಿದ ನಂತರವೇ ಈ ಕೃತಕ ಅಭಾವ ಹುಟ್ಟಿದೆಯೆಂದರೆ ತಪ್ಪಲ್ಲ. ಆದುದರಿಂದ ಈ ಲೈಸನ್ಸ ನೀತಿಯಲ್ಲಿರ ಬಹುದಾದ ಕಿರುಕುಳಗಳನ್ನು ಕಿತ್ತೊಗೆದು ಸರಳಗೊಳಿಸಿದಲ್ಲಿ ಈಗ ತಲೆದೋರಿದ ಅಭಾವ ತಾನಾಗಿಯೇ ನೀಗಬಹುದು. ಸರಕಾರವು ಸಕ್ಕರೆಯ ಮೇಲೆ ಕೈ ಹಾಕಿ ಕಾಳಸಂತೆಯೇ ಬೆಳೆದಂತೆ ಆಹಾರಧಾನ್ಯಗಳ ಗೂ. ಕಾಳಸಂತೆಯ ಖದೀಮರಿಗೆ ಜನ ಮರಿ ಹೋಗವಂತಾಗಲಿ. ರಾಜ್ಯ ಮತ್ತು ಕೇಂದ್ರ ಸರಕಾರಗಳು ಈ ಬಗ್ಗೆ ತ್ವರಿತ ಪರಿಹಾರವನ್ನು ಯೋಜಿಸಿ, ರೂಪಿಸಿ, ಅನುಷ್ಠಾನಕ್ಕೆ ತರಲಿ; ಅನಾಹುತದಿಂದ ದೇಶವನ್ನುಳಿಸಲಿ,

ಕಲ್ಯಾಣಪುರ. —ಫ್ರಾನ್ಸಿಸ್

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮ ಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ
ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ
ಬೆಲೆ: ರೂ. 1=75; ಬಿಳಿ ಕಾಗದ
ರೂ.೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು
ವ್ಯಾಪಾರಿಗಳಿಗೆ ಧಾರಾಳ ಕಮಿಷನ್
ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಗೆಗಡಲು

ಮಿತ ಸಂತಾನ;

ಕಾಂಗ್ರೆಸ್ಸ ಅಧಿಕಾರಿಗಳೊಬ್ಬರು "ಮಿತ ಸಂತಾನ"ದ ಬಗ್ಗೆ ಮೂರು ತಾಸಿಗೂ ಮಿಕ್ಕಿ-"ರೆಡಿಮೆಡ" ಭಾಷಣವು ಗಿಟಿ ಹೊರಬಂದು—ಕಾರು ಏರುತ್ತಿರುವಾಗಲೇ... ಪೋಸ್ಟಮ್ಯಾನ ಕೈಗೆ ತಾರುಕೊಟ್ಟ—

'....ಆ ತಾರು. ಅವರ ಹೆಂಡತಿ ಹತ್ತನೆ ಸಲ ಹೆಣ್ಣುಹಡೆದ ಸುದ್ದಿ ತಂದಿತ್ತು.

o o o o

ಮದುವೆ....?

ರಾಮರಾಯರು: — ಏನು?...ಅವನು ಮದುವೆ ಆಗುವುದಿಲ್ಲ ಅಂದನೆ.......

ಲಕ್ಷ್ಮಣರಾಯರು: —ಅದಷ್ಟು ಬೇಗ ಮುಗಿದು ಹೋಗಲು ಅಂತ; ಮದುವೆ ಅಂದ್ರೆ ಇನ್ನೇನು ಬಾಕಿ?....ತಾಳಿ ಕಟ್ಟುವದೊಂದ ತಾನೆ?

o o o o

ಪಾರ್ಟ್ ಟ್ಯಾಂ ಶಿಕ್ಷಕರು

ಸರಕಾರವು ನಿರ್ಧರಿಸಿದಷ್ಟು ಪಿರೇಡುಗಳು ಒಬ್ಬ ಅಧ್ಯಾಪಕನಿಗೆ ದೊರೆಯದೆ ಹೋದರೆ, ಆ ಹುದ್ದೆಗೆ ಪಾರ್ಟ್ ಟ್ಯಾಂ ಶಿಕ್ಷಕರನ್ನೇ ನೇಮಿಸ ಬೇಕೆಂಬುದು ಮಾದರಿ ಮೈಸೂರಿನ ನೀತಿ ೧೭ ಪಿರೇಡಿಗಿಂತ ಕಡಿಮೆಯಿದ್ದರೆ ಇಂತಹ ಶಿಕ್ಷಕರೇ ಗತಿ. ನಮ್ಮ ಜಿಲ್ಲೆಯ ಹೈಸ್ಕೂಲುಗಳಿಗೆ ನಿಯಮಾನುಸಾರ ಈ ರೀತಿಯ ಪಾರ್ಟ್ ಟ್ಯಾಂ ಅಧ್ಯಾಪಕರು ತುಂಬ ಬೇಕಾಗುತ್ತಾರೆ. ಆದರೆ, ನಮ್ಮ ಜಿಲ್ಲೆಯ ಪರಿಸ್ಥಿತಿಯಲ್ಲಿ ಇವರು ಸಿಗುವುದಿಲ್ಲವಾದುದರಿಂದ ಹುದ್ದೆಯು ಖಾಲಿಬೀಳುತ್ತ ಬಂದಿದೆ. ಒಂದುವೇಳೆ ಸಿಕ್ಕರೂ ಅವರಿಗೆ ಯಾವ ಅಭಿರುಚಿಯೂ ಸಹಜವಾಗಿ ಇಲ್ಲವಾದುದರಿಂದ ಹೆಚ್ಚಿನ ಲಾಭವಾಗುವುದಿಲ್ಲ. "ಎರಡು ದಿನದ ಮಟ್ಟಿಗೆ ಅಧ್ಯಾಪಕ ಬರುವುದಕ್ಕಿಂತೆ ಬಾರದುಳಿಯುವುದೇ ಮೇಲು" ಎನ್ನುವುದು ಒಂದು. ಹಾಗಿರುವಾಗ, ಈ ಪಾರ್ಟ್ ಟ್ಯಾಂ ಶಿಕ್ಷಕರ ಹುದ್ದೆಯನ್ನು ಸರಕಾರ ಕಿತ್ತು ಹಾಕಬೇಕು. ಪ್ರತಿ ಹೈಸ್ಕೂಲಿನಲ್ಲಿ ಪ್ರತಿ ವಿಷಯಕ್ಕೆ ಒಬ್ಬೊಬ್ಬ ವಿಶಿಷ್ಟ ಅಧ್ಯಾಪಕನಾದರೂ ಇರಬೇಕು. ಹೀಗೆ ಮಾಡದೆ ಹೋದರೆ, ಶಿಕ್ಷಣದ ಮಟ್ಟ ಏರುವುದು ಸಾಧ್ಯವಿಲ್ಲ. ಸರಕಾರವು ಹಣದ ಪ್ರಶ್ನೆಯೊಂದನ್ನೇ ಎತ್ತಿಕೊಳ್ಳಬಾರದು ಹಾಯರ್ ಸೆಕೆಂಡರಿಯ ಆರ್ಥಿಕ ನಷ್ಟದ ಹಾದಿಯಾದರೂ ಆದನ್ನು ಎತ್ತಿ ಕೊಂಡಿಲ್ಲವೆ?

ಸಾಲಿಗ್ರಾಮ. —ರಾಧಾಕೃಷ್ಣ.

ಹಿಂದ್ಯೇತರ ರಾಜ್ಯಗಳ ಶಾಲೆಗಳ ಹಿಂದಿ ಶಿಕ್ಷಕರ ವೇತನದ ವೆಚ್ಚವನ್ನು ಕೇಂದ್ರ ಸರಕಾರವು ವಹಿಸಿಕೊಳ್ಳಲು ಮುಂದೆ ಬಂದಿರುವುದು ಪ್ರಶಂಸನೀಯ. ಆದುದರಿಂದ ನಮ್ಮ ರಾಜ್ಯ ಸರಕಾರವು ಎಲ್ಲ ಹೈಸ್ಕೂಲ್ ಮತ್ತು ಮಿಡ್ಲ್ ಸ್ಕೂಲುಗಳಿಗೆ ಕನಿಷ್ಠ ಒಬ್ಬೊಬ್ಬ ಹಿಂದೀ ಅಧ್ಯಾಪಕರನ್ನು ನೇಮಿಸಲು ಅನುಮತಿಯನ್ನು ಈ ವರ್ಷವಾದರೂ ನೀಡೀತೆ? ಶಿಕ್ಷಕರ ನೇಮಕವಿಲ್ಲದೆ ಹಿಂದಿಯನ್ನು ಕಡ್ಡಾಯಗೊಳಿಸುವುದು ಸಾಧ್ಯವಿಲ್ಲವಾದುದರಿಂದ ಈ ಬಗ್ಗೆ ಶೀಘ್ರ ಗಮನ ನಮ್ಮ ವಿದ್ಯಾಮಂತ್ರಿ ಶ್ರೀ ಅಂರಿಯಪರು ಹರಿಸಿಯಾರೆ?

ಪಿಲಿಖೂರು. —ಚಂದ್ರಶೇಖರ.

ನಿಮಗೂ ಗೊತ್ತಿರಲಿ

ಕನ್ನಡಿಯ ಉತ್ಪತ್ತಿ

ಕನ್ನಡಿಯ ಮೂಲವು ಎಲ್ಲಿಂದ ಎಂಬುದು ನಿಮಗೆ ಗೊತ್ತೆ? ಭೃಂಗಿಯು ಶಿವನ ಶ್ರದ್ಧೆಯುಳ್ಳ ಪರಿಚಾರಕನಾಗಿದ್ದನು.

ಕ್ಯಾರೆಟ....?

ಪುಟ್ಟು:— ಮುರಾರ್ಜಿಯವರ ಬಗ್ಗೆ ಏನ್ ಹೇಳ್ತಿಯೊ?...

ಕಿಟ್ಟು:— ಅವರು ಹೀಗೆಮಾಡ್ತಾರೆ ಅಂತ ತಿಳಿದಿದ್ದರೆ... ಮುಂಚಿನ ವರುಷವೇ ಇಪ್ಪತ್ತನಾಲ್ಕು—ಕ್ಯಾರೆಟಿನ ಹುಡುಗಿಯನು ಮದುವೆಯಾಗುತ್ತಿದ್ದೆ....!

o o o o

ಧ್ಯೇಯ.

"ಧನಲಕ್ಷ್ಮಿ ಹೆರ ಕಟಿಂಗ ಸೆಲೂನ" ಕಾಮಣ್ಣ, ಗಿರಾಕಿಗಳಿಗೆ ಕಾಣುವಂತೆ ಎದುರು ಗೋಡೆಯಮೇಲೆ ಈ ರೀತಿ ಬೋರ್ಡು ಅಂಟಿಸಿದ್ದ—

"....ಸರ್ವರೀತಿಯಿಂದಲೂ ಗಿರಾಕಿಗಳಿಗೆ ಒಪ್ಪುವಂತೆ ತಲೆ ಹೊಡೆಯುವದೇ ನಮ್ಮ ಧ್ಯೇಯ."

o o o o

ಯಾರು?....

ದೂರದಲ್ಲಿ ಬರುತ್ತಿರುವ ಅಪ್ಟುಡೇಟ ಹುಡುಗಿಯನ್ನು ನೋಡಿ—

ಕಿಟ್ಟು:—ನೋಡು ಅವಳು ಕೂಲಿಂಗ್ಲಾಸ ಧರಿಸಿರುವುದರಿಂದ ಎಷ್ಟು ಚಂದ ಕಾಣುತ್ತಾಳೆ!

ಪುಟ್ಟು:—ಛೆ, ನಿನ್ನತಲೆ ಎಲ್ಲೊ... ಅವಳು ಕಂನಡಕ ಧರಿಸಿರುವುದರಿಂದ.... ನಾವು ಅವಳಿಗೆ ಚಂದ ಕಾಣಿಸುತ್ತೇವೆ.!?

—ಶ್ರೀ ಪಿ. ಎನ್ ಹೆಗ್ಡೆ-ಶಂಬು, ಹೊಸಾಕುಳಿ.

o o o o

ಬಿ. ಎಸ್‌ಸಿ ಅಲ್ಲ ಬಿ. ಎಸ್. ಸಿ .

ಮೋಹನ—ಸುರೇಶ, ನೀನೀಗ ಏನ ಮಾಡುತ್ತಿದ್ದಿ?

ಸುರೇಶ—B. Sc ಯಲ್ಲಿದ್ದೇನೆ.

ಮೋಹನ—ಆ! ನೀನು ಹೋದಸಲ S.S.L.C.ಯಲ್ಲಿ ಫೈಲ್ ಈಗ B.S.C ಹ್ಯಾಗಾದಿಯಪ್ಪಾ?

ಸುರೇಶ—ಅದೂ ತಿಳಿಯೋಲ್ವೆ? ನೋಡು B. S. C. ಅಂದರೆ ಬಾಟಾ ಶೂ ಕ್ಲೀನರ್ ಅಂತ.

ದೊಡ್ಡ ಕೊಡುಗೆ

ಭಾವೀಮಾವ—ನನ್ನ ಮಗಳನ್ನು ಭಾರೀ ವರದಕ್ಷಿಣೆಯನ್ನೂ ಕೊಡಬಲ್ಲೆ. ಅದಕ್ಕೆ ಪ್ರತಿಯಾಗಿ ನೀವೇನು ಕೊಡಬಲ್ಲಿರಿ?

ಭಾವೀ ಅಳಿಯ— ನಾನೇ, ಬೇಕೇ ಬೇಕು ಎಂದರೆ ರಸೀತಿ ಕೊಡಬಲ್ಲೆ.

ರಜೆಗಾಗಿ ಪಿಕಲಾಟ

ಫೋನಿನಲ್ಲಿ ಧ್ವನಿ—ಸಾರ್ ರಾಮರಾವ್‌ಗೆ ಮೈಗೆ ಹುಷಾರಿಲ್ಲ. ಅವರಿಗೆ ಇವತ್ತು ರಜೆ ಬೇಕಂತೆ.

ಮ್ಯಾನೇಜರ್—ಹಾಗೇ ಆಗಲಿ, ತಾವು ಯಾರು?

ಧ್ವನಿ (ಬೆವರುತ್ತಾ) – ನಾನೇ, ನಾನೇ...ರಾಮರಾವ್...ಮಗ.

—ಶ್ರೀ ಕೆ. ಹರಿ ಐತಾಳ್, ಉಡುಪಿ.

ಆತನ ಶಿವಭಕ್ತಿ ಅಪಾರವಾಗಿತ್ತು. ಆ ಭಕ್ತಿಯು ಮುಂದೆ ಪಾರ್ವತಿಯನ್ನು ಕೂಡ ಹಿಮ್ಮೆಟ್ಟಬೇಕಿತ್ತು. ಒಂದು ದಿನ ಶಿವಪಾರ್ವತಿಯರು ಕುಳಿತು ಸಂಭಾಷಣೆ ಮಾಡುತ್ತಿರುವ ಸಮಯ ಭೃಂಗಿಯು ಓಡಿ ಬಂದು ಶಿವನಿಗೆ ಮಾತ್ರ ಪ್ರದಕ್ಷಿಣೆ ಮಾಡಿದನು. ಭಕ್ತಿ ಸ್ವಾರ್ಥತೆಯಿಂದ ತನ್ನು ಅಲಕ್ಷ್ಯ ಮಾಡಿದಾಗ ಪಾರ್ವತಿಗೆ ಮನಸ್ಸು ಕುಗ್ಗಿ ಭೃಂಗಿಯ ಬಲವನ್ನು ಇಳಿಸುವುದಾಗಿ ನಿರ್ಧರಿಸಿದಳು. ಈ ಬಗ್ಗೆ ಆಕೆಯು ಶಿವನನ್ನು ಬಿಟ್ಟು ಏಕಾಂತವಾಸಿಯಾಗಿ ತಪಸ್ಸಿನಲ್ಲಿ ಮಗ್ನಳಾದಳು.

ಪಾರ್ವತಿಯನ್ನು ಅಗಲಿದ ಶಿವನು ಕೆಲಕಾಲ ತರುವಾಯ ಆಕೆಯಿದ್ದ ಏಕಾಂತಸ್ಥಳಕ್ಕೆ ಆಗಮಿಸಿ ಆಕೆಯ ಮನೋಭಾವವನ್ನು ತಿಳಕೊಂಡನು. ತಕ್ಷಣವೇ ಪಾರ್ವತಿಯು ಶಿವನನ್ನು ನೋಡಿ "ಸ್ವಾಮಿ, ತಾವು ನನ್ನನ್ನು ತಮ್ಮ ವಾಮಭಾಗದಲ್ಲಿ ಸೇರಿಸಿಟ್ಟುಕೊಳ್ಳಿರಿ. ಆಗ ಭೃಂಗಿಯ ಸ್ವಾರ್ಥಬುದ್ಧಿಯು ಕ್ಷಯಿಸುವುದು" ಎಂದಳು.

ನಗ ನಗುತ್ತಾ ಪರಮ ಶಿವನು ಪಾರ್ವತಿಗೆ ಬೇಡಿದ ವರವನ್ನು ದಾನ ಮಾಡಿದನು ಅಂದಿನಿಂದ ಆತನನ್ನು ಅರ್ಧನಾರೀಶ್ವರನೆಂದು ಕರೆಯುವರು. ಆತನ ಬಲಗೈ ಬಲಗಣ್ಣು ಇತ್ಯಾದಿ ಆತನದಾದರೂ ಎಡಕೈ, ಎಡಗಣ್ಣು ಇತ್ಯಾದಿ ಪಾರ್ವತಿಯದಾಗಿರುವವು.

ಈ ಸಂದರ್ಭದಲ್ಲಿ ಪಾರ್ವತಿಗೆ ತನ್ನ ಪ್ರಿಯನಾದ ಪರಮಶಿವನ ಮುಖಾವಲೋಕನ ಮಾಡುವ ಶಕ್ತಿಯು ಮಾಯವಾಯಿತು. ಒಂದೇ ಶರೀರದ ಎರಡು ಕಣ್ಣುಗಳು ಒಂದನೊಂದು ಕಾಣಬಲ್ಲವೆ? ಇಲ್ಲ. ಆಗ ವಿವೇಕಶಾಲಿಯಾದ ಉಮೆಯು ಮುಕುರ (ಕನ್ನಡಿ)ಯನ್ನು ಯೋಜಿಸಿದಳು. ಕನ್ನಡಿಯನ್ನು ಅರ್ಧನಾರೀಶ್ವರರ ಮುಂದಿಟ್ಟಾಗ ಶಿವನು ಪಾರ್ವತಿಯನ್ನೂ ಪಾರ್ವತಿಯು ಶಿವನನ್ನೂ ಕಂಡು ಆನಂದಪಟ್ಟರು. ಭೂಲೋಕದಲ್ಲಿ ಪ್ರಥಮ ಕಂಡುಬಂದ ಮುಕುರವೇ ಪಾರ್ವತಿಯು ಉಂಟುಮಾಡಿದ ಮುಕುರ.

—ಶ್ರೀ ಎಂ. ಬಿ. ಶಂಕರ ರಾವ್.

READ &
ADVERTISE IN
NAVAYUGA WEEKLY

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.
ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿರಾಶರಾಗಬೇಡಿ

ನಿಮ್ಮ ಸಲಹೆಗೂ ಬೆಲೆ ಬಂದೀತು

ಭಾರತದಲ್ಲಿ ಸಲಹೆಗಾರರು ಬಹು ಸಂಖ್ಯೆಯಲ್ಲಿದ್ದಾರೆ. ಆ ಸಲಹೆಗಳನ್ನು ಕಾರ್ಯರೂಪಕ್ಕೆ ತರುವವರು ಮಾತ್ರ ಅಪರೂಪ, ಅಂದರೆ ಸಲಹೆಗಳನ್ನು ಪುಕ್ಕಟೆಯಾಗಿಯೇ ಕೊಡುವವರು ಭಾರತದಲ್ಲಿದ್ದರೂ ಅವನ್ನು ಪಡೆದುಕೊಳ್ಳುವವರೇ ಇಲ್ಲ. ಆದರೆ, ಇಂತಹ ಸಲಹೆಗಳಿಗೂ ಒಂದು ದಿನ ಬರಲಿದೆ. ಆದುದರಿಂದ ಸ್ವೀಕರಿಸಿದ ಸಲಹೆಗಳನ್ನು ಸುಮ್ಮ ಸುಮ್ಮನೆ ಇತ್ತು ಅರ್ಥ ಕೆಡಿಸುವುದಕ್ಕಿಂತ ನಿಮ್ಮ ಪೆಟ್ಟಿಗೆಯಲ್ಲಿಯೇ ಸುರಕ್ಷಿತವಾಗಿಟ್ಟು ಕಾಲ ಪಕ್ವವಾಗುವಾಗ ಹೊರ ತೆಗೆಯಿರಿ. ಆಗ ನಿಮಗೆ ಇಪ್ಪತ್ತರಿಂದ ತೊಡಗಿ ೫೦ ಸಾವಿರ ಡಾಲರ್ (ಒಂದು ಡಾಲರ್ ಅಂದರೆ ಸುಮಾರು ಐದು ರೂಪಾಯಿ)ಗಳ ಗಂಟನ್ನು ಒದಗಿಸಿಕೊಡಬಹುದು. ನೀವು ಯಾವ ಸಲಹೆಯನ್ನು ಅತ್ಯಮೂಲ್ಯವೆಂದು ಭಾವಿಸುತ್ತೀರೋ ಅದನ್ನೇ ಹೊರಹಾಕದೆ ಬಾರುಡೆಯಲ್ಲಿ ಭದ್ರಪಡಿಸಿಕೊಳ್ಳಲು ಮರೆಯಬೇಡಿರಿ.

ಸಲಹೆಗಳನ್ನೂ ದುಡ್ಡು ಕೊಟ್ಟು ಕೊಂಡುಕೊಳ್ಳುವವರಿದ್ದಾರೆ ಎಂದರೆ ಆಶ್ಚರ್ಯವಾಗಬಹುದು. (ನಮ್ಮಲ್ಲಿ ಲಾಯರುಗಳ ಸಲಹೆಗಳಿಗೆ ಮಾತ್ರ ಬೆಲೆ.) ಅಮೆರಿಕೆಯಲ್ಲಿಂದು ಹೊಸ ಹೊಸ ಸಲಹೆಗಳಿಗೆ ದೊಡ್ಡ ಮಾರುಕಟ್ಟೆಗಳಿವೆ. ಕೆಲವೊಮ್ಮೆ ಗಿರಾಕಿಗಳು ಹೆಚ್ಚಿದಾಗ ಅವನ್ನು ಲಿಲಾವು ಹಾಕುವುದೂ ಅನಿವಾರ್ಯವೆನಿಸುತ್ತದೆ. ಈ ವರ್ಷದಲ್ಲಿ ಅಮೆರಿಕೆಯ ಕಂಪೆನಿಗಳು ನೂತನ ಮೌಲಿಕ ಸಲಹೆಗಳಿಗಾಗಿ ಎರಡು ಕೋಟಿ ಡಾಲರ್‌ಗಳಿಗೂ ಹೆಚ್ಚಿನ ವೆಚ್ಚ ಮಾಡಿದುವು!

ಸಲಹೆಗಳು ಯಾವಸ್ವರೂಪದ್ದೂ ಇರಬಹುದು; ಯಾರಿಂದಲೂ ಬರಬಹುದು. ಅದಕ್ಕೆ ತಕ್ಕ ಗಿರಾಕಿಗಳನ್ನು ಆಯ್ದುಕೊಂಡರಾಯಿತು. ಸದ್ಯ ನಿಮ್ಮಲ್ಲಿ ಸಲಹಾ ಭಂಡಾರವಿದೆಯೆಂದು ತಿಳಿದರೆ, ನಿಮ್ಮನ್ನೇ ಗಿರಾಕಿಗಳು ಮುತ್ತಿಬಿಡುವರು.

ಹಲ್ಫ್‌ಪೂಲ್ ಕಾರ್ಪೊರೇಶನಿನಲ್ಲಿ ಕೆಲಸ ಮಾಡುತ್ತಿದ್ದ ವೆಲ್ಡರನೊಬ್ಬನು ಒಂದು ಸಲಹೆಯಿತ್ತ: "ವೆಲ್ಡಿಂಗ್ ಮಾಡುವಾಗ ಟಾಂಕಿಗಳಲ್ಲಿ ಗ್ಯಾಸು ಮುಗಿದರೆ, ಹೊಸ ಟಾಂಕಿಗಳನ್ನು ತಂದಿಡಬೇಕಾಗುವುದರಿಂದ ಅಷ್ಟು ಸಮಯ ಹಾಳಾಗುತ್ತದೆ. ಆದುದರಿಂದ ಹೊರಗಡೆ ದೊಡ್ಡ ಟಾಂಕಿನಲ್ಲಿ ಗ್ಯಾಸು ತುಂಬಿಸಿ, ಒಳಗಿನ ಚಿಕ್ಕ ಟಾಂಕಿಗೆ ನಳ್ಳಿಗಳ ಮೂಲಕ ಗ್ಯಾಸು ಬರುವಂತೆ ಮಾಡುವುದು ಒಳ್ಳೆಯದು" ಎಂತಹ ಸಾಮಾನ್ಯ ಸಲಹೆಯಿದು! ಆದರೆ, ಕಂಪೆನಿಯು ಇದನ್ನು ಸ್ವೀಕರಿಸಿ ವೆಲ್ಡರನಿಗೆ ಒಂದು ಸಾವಿರ ಡಾಲರುಗಳನ್ನು ನೀಡಿತು.

ಜನರಲ್ ಮೋಟರ್ಸ್‌ನ ಒಬ್ಬ ಮಾಮೂಲಿ ಗುಮಾಸ್ತೆ ಮೋಟಾರಿನ ಯಾವುದೋ ಭಾಗದ ಉತ್ಪಾದನೆಯನ್ನು ಶೀಘ್ರದಲ್ಲಿ ಮಾಡಬಲ್ಲ ಸಲಹೆ ನೀಡಿದ; ಇದನ್ನು ಸ್ವೀಕರಿಸಿದ ಕಂಪೆನಿಯವರು ಐದು ಸಾವಿರ ಡಾಲರು ನೀಡಿದರು; ಮುಂದೆ ಟೆಂಪೆಸ್ಟ್ ಕಾರುಗಳಲ್ಲಿಯೂ ಇದರ ಪ್ರಯೋಗ ನಡೆಸಿದ್ದಾಗ ಮತ್ತೆ ಮೂರು ಸಾವಿರ ಡಾಲರ್ ಅತನಿಗೆ ದೊರೆತುವು.

೩೬ ವರ್ಷದ ಹಬರ್ಟ್ ಓವೆನ್ಸನು ಐ. ಬಿ. ಎಂ. ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ. ಒಂದು ಚಿಕ್ಕ ಸಲಹೆಗಾಗಿ ಆತನಿಗೆ ೨೫ಸಾವಿರ ಡಾಲರ್ ದೊರೆಯಿತು ಇನ್ನೊಂದು ಸಲಹೆಯು ಮತ್ತೆ ೨೫ಸಾವಿರ ಡಾಲರ್ ಗಳಿಸಿತು. ಮೂರನೆಯ ಸಲಹೆಯೊಂದು ೩೫ಸಾವಿರ ದುತ್ತು ನಾಲ್ಕನೆಯದು ೭೫ಸಾವಿರ ಡಾಲರ್‌ಗಳ ಬಹುಮಾನವನ್ನು ಗಳಿಸಿಕೊಂಡುವು!

ಅದೇ ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದ ಇಬ್ಬರು ಒಂದಾಗಿ ಕಂಪ್ಯೂಟರ್ ಅಧಿಕವೇಗವಾಗಿ ಕಾರ್ಯಪ್ರವೃತ್ತವಾಗುವ ಸಲಹೆಯೊಂದಿತ್ತರು ಇದನ್ನು ಪ್ರಯೋಗಿಸಿದಾಗ ಯಶಸ್ವಿಯಾದುದರಿಂದ ಒಟ್ಟು ೫೬ಸಾವಿರ ಡಾಲರುಗಳು ಇನಾಮಾಗಿ ದೊರೆತುವು.

ಕಂಪೆನಿಗಳು ನೌಕರರನ್ನು ನೇಮಿಸುವಾಗ ಅವರ ಬುದ್ಧಿ ಶಕ್ತಿಯನು ಕೊಂಡುಕೊಳ್ಳುತ್ತಿದ್ದ ಕಾಲವೊಂದಿತ್ತು. ನೌಕರರು ತಮ್ಮ ಬುದ್ಧಿ ಚಾತುರ್ಯದಿಂದ ಯಾವುದಾದರೂ ಸಂಶೋಧನೆ ಮಾಡಿದರೆ, ಅದು ಕಂಪೆನಿಯ ಸೊತ್ತಾಗುತ್ತಿತ್ತು. ಇದರಿಂದ ನೌಕರರು ಶೋಧಕಾರ್ಯದತ್ತ ಮನಸ್ಸರಿಸುವುದನ್ನೇ ನಿಲ್ಲಿಸುತ್ತಿದ್ದರು. ಇದರ ಪರಿಣಾಮ ತಮ್ಮ ಮೇಲೆಯೇ ಆಗುವುದೆಂದು ಕಂಪೆನಿಯವರು ಕಂಡುಕೊಂಡರು. ಸಲಹೆಗಳಿಗೆ ಬಹುಮಾನ ನೀಡುವ ಯೋಜನೆಯನ್ನು ಸುಮಾರು ೫೦೦ ಕಂಪೆನಿಗಳು ಪ್ರಕಟಿಸಿದುವು. ಇದರಿಂದಾಗಿ ಅವು ಶೀಘ್ರ ಪ್ರಗತಿ ಹೊಂದಿ ಬಹಳಷ್ಟು ಲಾಭ ಗಳಿಸಿವೆ.

ಸಲಹೆ ನೀಡಲು ಎರಡು ವಿಧಾನಗಳು ಅಮೆರಿಕೆಯಲ್ಲಿವೆ. ಖಾಲಿ ಕಾಗದದಲ್ಲಿ ಸಲಹೆ ಬರೆದು ತನ್ನ ಹಸ್ತಾಕ್ಷರವನ್ನು ಹಾಕಿ ಸಲಹಾ ಪೆಟ್ಟಿಗೆಯಲ್ಲಿ ಹಾಕುವುದು ಒಂದು ವಿಧಾನ. ಕೆಲವೆಡೆ ನಂಬ್ರವಿರುವ ನಿಶ್ಚಿತ ಪತ್ರವೇ ಇರುತ್ತದೆ. ಈ ನಂಬ್ರ ಸೂಚಿಸುವ ಪತ್ರದಂಶವನ್ನು ಗುರುತಿಗಾಗಿಟ್ಟು ಮುಂದದರಲ್ಲಿ ಸಲಹೆ ಬರೆದು ಪೆಟ್ಟಿಗೆಗೆ ಹಾಕಬೇಕು. ಇವನ್ನು ಮಾಲಕನಾಗಲಿ, ಪರಿಶೀಲನಾ ಸಮಿತಿಯಾಗಲಿ ನೋಡಿ, ಪ್ರಯೋಗಿಸಿ ಅದು ಸ್ವೀಕಾರ್ಯವೇ ಅಸ್ವೀಕಾರ್ಯವೇ ಎಂದು ನಿರ್ಧಾರವಾಗುತ್ತದೆ.

ಸಲಹೆಗಳ ಸ್ವರೂಪ ಹೇಗಿರಬೇಕು? ಯಾವ ರೀತಿಯಲ್ಲೂ ಇರಬಹುದು. ಹೊಸ ವಸ್ತುವಿನ ಉತ್ಪಾದನೆ, ಉತ್ಪಾದನೆಯನ್ನು ತೀವ್ರಗೊಳಿಸುವ ವಿಧಾನ, ಹಾಳಾಗುವ ಪದಾರ್ಥಗಳನ್ನು ಉಪಯೋಗಕ್ಕೆ ಬರುವಂತೆ ಮಾಡುವ ಕ್ರಮ, ಸಾಪ್ತಾಹಿಕ ವರದಿ ಬರೆಯುವ ಕ್ರಮ ಸುಧಾರಣೆ, ಪತ್ರ ಜೋಡಿಸುವಲ್ಲಿಯೂ ಸರಳ ವಿಧಾನ, ವಸ್ತುವಿನ ಬೆಲೆಯಿಳಿಸುವ ರೀತಿ ಅಥವಾ ಅದನ್ನು ಅಲ್ಪಾವಧಿಯಲ್ಲಿ ಸಿದ್ಧಪಡಿಸುವ ಕ್ರಮ—ಹೀಗೆ ಯಾವುದೇ ಬಗೆಯ ಸಲಹೆಗೂ ಅವಕಾಶ ಇದೆ.

ನಾಯಿಲ್ಸ್‌ನಲ್ಲೊಬ್ಬ ಸೆಕ್ಷನಿನ ಕೆಲಸಗಾರನಿದ್ದ. ಫ್ಯೂಜ್‌ಹೋದ ಬಲ್ಬುಗಳನ್ನು ತೆಗೆದು ಬೇರೆಯವನ್ನಿರಿಸಲು ಪದೇಪದೇ ಆತ ಹೋಗಬೇಕಾಗುತ್ತಿತ್ತು. ಅವನೊಂದು ಸಲಹೆಯಿತ್ತ: ದೀರ್ಘಕಾಲಬಾಳಿಕೆ ಬರುವ ಬಲ್ಬುಗಳನ್ನು ಉಪಯೋಗಿಸಿ ಸಮಯ ಉಳಿತಾಯ ಮಾಡಬಹುದುದೆಂದು ಸೂಚಿಸಿದ. ಮಾಲಿಕ ಒಪ್ಪಿ, ಸಲಹೆಗಾಗಿ ಹದಿನೆರಡು ಸಾವಿರ ಡಾಲರ್ ಪುರಸ್ಕಾರವಿತ್ತ! ಎಷ್ಟು ಚಿಕ್ಕ, ಸಾಮಾನ್ಯ ಸಲಹೆನೋಡಿ!

ಸಾಮಾನುಗಳನ್ನು ಹೇರುವ ಇಳಿಸುವ ಕ್ರೇನೊಂದರಲ್ಲಿ ದಿಕ್ಕು ತಿಳಿಯುವುದಕ್ಕಾಗಿ ದಿಕ್ಸೂಚಕ್ರ ಉಪಯೋಗಿಸಬಹುದೆಂಬ ಸಲಹೆಗೆ ೫೦ ಸಾವಿರ ಡಾಲರ್ ಬಹುಮಾನ ದೊರಕಿತ್ತು.

ಇಲ್ಲಿ ಒಂದು ಮಾತನ್ನು ನಾವು ಗಮನಿಸಬೇಕು ಭಾರತದಲ್ಲಿ ನಾವು ನಮ್ಮ ಕಾರ್ಯಗಳಲ್ಲಿ ನಮ್ಮ ಸಲಹೆಯನ್ನು ಉಪಯೋಗಿಸುವುದಿಲ್ಲ. ಇತರರ ಕಾರ್ಯಗಳಿಗೆ ಮಾತ್ರ ಸಲಹೆ ನೀಡುತ್ತೇವೆ; ಆದುದರಿಂದಲೇ ಅದು ಬಹುಪಟ್ಟಿಗೆ ಯಶಸ್ವಿಯಾಗುವುದಿಲ್ಲ. ಆದರೆ, ಅಮೆರಿಕೆಯಲ್ಲಿ ಹಾಗಲ್ಲ. ತಾನು ಮಾಡುವ ಕಾರ್ಯವನ್ನು ಸರಿಯಾಗಿ ಮಾಡಿ, ಅದನ್ನು ಹೇಗೆ ಸುಧಾರಿಸಬಹುದೆಂದು ಯೋಚಿಸಿ ತನಗೆ ಹೊಳೆದ ವಿಧಾನವನ್ನಾತ ಸಲಹೆಯಾಗಿ ಸೂಚಿಸುತ್ತಾನೆ. ನಾವೂ ನಮ್ಮ ಅನುಭವ ಸಾಗರವನ್ನು ಕಡೆದು ನವನೀತ ತೆಗೆದರೆ, ಅದು ಪುರಸ್ಕಾರಗಳನ್ನದೆ ಹೋದರೂ ಸ್ವೀಕೃತವಾಗಬಹುದು.

ಇನ್ನೊಂದು ಸಲಹೆಯೊಂದರ ರೀತಿ ನೋಡಿ. ಔಷಧಿ ತಯಾರಿಸುವ ಕಾರಖಾನೆಯೊಂದರಲ್ಲಿ ಒಂದು ಫಿಲ್ಟರ್ ಇತ್ತು. ಅದು ಕೆಟ್ಟುಹೋಯಿತ್ತು. ಅದನ್ನು ಸರಿ ಮಾಡಲು ಪ್ರಯತ್ನಿಸಿದರೂ, ಆಗಲಿಲ್ಲ. ಆಗ ಒಬ್ಬ ನೌಕರ ಸಲಹೆಯಿತ್ತ: ಈ ಫಿಲ್ಟರ್ ಇಲ್ಲಿ ನಿರುಪಯುಕ್ತ. ಆದುದರಿಂದ ಅದನ್ನು ಹೊರಗೆಸದರೆ, ಇದರ ಉಪದ್ರವ ತಪ್ಪುತ್ತದೆ. "ಕರ್ಮಚಾರಿಗೆ ೧೨೭೫ ಡಾಲರ್ ಪುರಸ್ಕಾರ ತಂದ ಸಲಹೆಯಿದು!

ಇವೆಲ್ಲಾ ಏನು ಹುಚ್ಚು ಎಂದು ನೀವು ಕೇಳಬಹುದು. ಆದರೆ ದೊಡ್ಡ ದೊಡ್ಡ ಸಂಶೋಧನೆಯಲ್ಲಿಯೇ ಜೀವನ ಕಳೆಯುವ ಮಹಾಪುರುಷನಿಗೆ ಚಿಕ್ಕ ವಿಷಯಗಳತ್ತ ಗಮನನೀಡಲು ಅವಕಾಶವೇ ಇಲ್ಲ; ಅಥವಾ ಅವರ ಮೆದುಳಿಗವು ಹೊಳೆಯುವುದೇ ಇಲ್ಲವೆಂದರೂ ತಪ್ಪಲ್ಲ, ನೀವು ನಿಮ್ಮ ಸಲಹೆಯು ಸ್ವೀಕೃತವಾಗುವಂತೇಕೆ ಮಾಡಬಾರದು?

ದೇಶದ ಶಕ್ತಿ



ಲೇಖಕ: ಯಂ. ಭಾಸ್ಕರ ಭಂಡಾರಿ, ಮುಚಿಬೈಲು.

[ಅಮೇರಿಕನ್ ಬರಹಗಾರರಾದ "ಸರ್ ರಾಫ್‌ವೇಲ್ಡೊ ಅಮರ್‌ಸನ್ನ"ರನ್ನು ಅನುಸರಿಸಿ]

ಧನವಲ್ಲ, ಮನುಜರೇ ಮಾಡಬಹುದದನು|
ಘನವಾದ ದೇಶವೊಂದರ ಏಳಿಗೆಯನ |
ಮಹಜನರು ದೇಶದಾ ಕೀರ್ತಿಯನ್ನುಳಿಸೆ|
ಮಹ ಸತ್ಯವನು ಬೆಸಗಿ, ಅನ್ಯಾಯವನಳಿಸೆ|
ದೃಢವಾಗಿ ನಿಲ್ಲುವರು ತಾವೆಂದು ಮುಂದು |
ಅಡಿಗಡಿಗೆ ಪಡುತಿಹರು ಕಷ್ಟವೆಂದೆಂದು||
ಸೇವಾರಿಗಳು ದೇಶದಾ ಗೋಜಿ ಬಿಟ್ಟು |
ಸೋಮಾರಿತನದಿಂದ ಕಾರ್ಯಪಥ ಬಿಟ್ಟು
ಜಡರಾಗಿ ಕುಳ್ಳಿರಲು ಎದ್ದಾವ ಚತುರ |
ದುಡಿಯುವನೊ? ಭಾರತಾಂಬೆಯ ಪುಣ್ಯ ಕುವರ |
ವಂದ್ಯ! ನವನಿಂದಲೇ ದೇಶದುನ್ನತಿಯು|
ವಿಂದ್ಯ ಹಿಮಗಿರಿಗಳಂ ಮೀರಿ ತಾನತಿಯು|
ಆಗಸದಿ ಪಸರಿಪುದು ಮೇಲೇರಿ ಏರಿ|
ತೂಗುವುದು ಜಗತಲೆಯನಚ್ಚರಿಯು ಮೀರಿ !

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

ಹೊಸಕೆರೆ ಚಿದಂಬರಯ್ಯನವರ
ಗೀತೆಯ ಕೈಗನ್ನಡಿ
ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಈಗ ಮಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಪ್ರತಿಗಳಿಗೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟರುಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಕೃತಿ ಪರಿಚಯ

ರಸಚಕ್ರ (ಶರತ್ಚಂದ್ರ ಚಟ್ಟೋಪಾಧ್ಯಾಯರ ಅಪ್ರಕಾಶಿತ ಕಾದಂಬರಿಗಳು)

ಅನುವಾದಕರು: ಶ್ರೀ ಎಸ್. ಎ. ಬುರ್ಲಿ.

ಮಾರಾಟಗಾರರು: ಸಮಾಜ ಪುಸ್ತಕಾಲಯ, ಧಾರವಾಡ. ಪುಟಗಳು ೧೮೩. ಬೆಲೆ: ರೂ ೩.೦೦

ಬಂಗಾಳಿ ಸಾಹಿತ್ಯ ಚಕ್ರವರ್ತಿಗಳಾದ ಶರತ್ಚಂದ್ರರ ಕಾದಂಬರಿಗಳು ಕನ್ನಡಕ್ಕೆ ಈಗಾಗಲೇ ಅನುವಾದಿತವಾಗಿವೆ, ಕನ್ನಡಿಗರ ಗೌರವಾದರಗಳಿಗೂ ಪಾತ್ರವಾಗಿವೆ ಶರತ್‌ರು ಕೊನೆಯ ಕಾಲದಲ್ಲಿ ಬೇರೆ ಬೇರೆ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಬರೆಯುತ್ತಿದ್ದ "ರಸಚಕ್ರ" "ಜಾಗರಣೆ" "ಆಗಮನದ ನಿರೀಕ್ಷೆಯಲ್ಲಿ" "ಶಿಷ್ಯ—ದುಷ್ಟ" ಮತ್ತು "ಸಮಯುಗಳ ಪರೀಕ್ಷೆ" ಯೆಂಬ ಕಾದಂಬರಿಗಳ ಭಾಗವನ್ನು ಈ 'ರಸಚಕ್ರ'ದಲ್ಲಿ ನಾವು ಕಾಣುತ್ತೇವೆ. ಇಲ್ಲಿನ ಕಾದಂಬರಿಗಳೆಲ್ಲವೂ ಅಪೂರ್ಣ "ಜಾಗರಣೆ" ಯೊಂದು ಮಾತ್ರ ಸ್ವಲ್ಪ ಮುಂದುವರಿದು, ಒಂದು ಪಟ್ಟ ತಲುಪಿದೆಯನ್ನಬಹುದು ಉಳಿದುವು ಪ್ರಾರಂಭವಾಗಿವೆ ಅಥವಾ ಸ್ವಲ್ಪವೇ ಮುಂದುವರಿದಿವೆ. ಹಾಗಾಗಿ ಅವು ಇವುಗಳಲ್ಲಿ ವ್ಯಕ್ತಪಡಿಸಲು ಬಯಸುತ್ತಿದ್ದ ವಿಚಾರಗಳು ಅವ್ಯಕ್ತ— ಅಜ್ಞಾತವೇ ಆಗಿವೆ

"ಜಾಗರಣೆ"ಯಲ್ಲಿ ಅಸಹಕಾರ ಚಳುವಳಿಯ ಹಿನ್ನೆಲೆಯಲ್ಲಿ ಜಮೀನುದಾರಿಯ ನಾಶವನ್ನು ಸೂಚಿಸುವ ವಸ್ತುವಿನಿಂದ ಕೂಡಿದೆ ಬಹು ಸಮಯಕ್ಕೆ ಮೊದಲೇ ಜಮೀನುದಾರಿಯು ಅಮಾನುಷವಾಗಿಯೇ ಮುಂದುವರಿದರೆ, ಅದು ನಾಶವಾಗಲೇ ಬೇಕೆಂಬ ಕವಿಯ ದೂರದರ್ಶಿತ್ವವು ಉಲ್ಲೇಖನೀಯ. ಇಂದದು ಸತ್ಯವಾಗುತ್ತಿದೆ. "ರಸ ಚಕ್ರ"ದಲ್ಲಿ ಪ್ರಾಯಃ ಹಿಂದೂ ಅವಿಭಕ್ತ ಕುಟುಂಬದ ಸುಂದರ ಚಿತ್ರವನ್ನೆಳೆಯುವ ಆಶಯವಿದ್ದಂತಿದೆ ಅಸಹಕಾರದ ಹಿನ್ನೆಲೆಯಲ್ಲಿ ಪ್ರಣಯದ ಮೌಲ್ಯವನ್ನು ತೂಗುವ ಪ್ರಯತ್ನವು 'ಸಮಯ ಪರೀಕ್ಷೆ'ಯಲ್ಲಿ ತಲೆ ಹಾಕುವಂತಿದೆ, ಉಳಿದೆರಡು ಕಾದಂಬರಿಗಳು ಕೇವಲ ಪ್ರಾರಂಭ ಘಟ್ಟದಲ್ಲಿವೆ ಇವೆ ಆದ್ದರಿಂದ ಶರತ್ ಇಟ್ಟುಕೊಂಡಿರುವ ಗುರಿಯು ಸರಿಯಾಗಿ ತಿಳಿಯುವುದಿಲ್ಲ

ಇಲ್ಲಿ ಸಂಗ್ರಹಿತವಾಗಿರುವುದು ೫ ಅಪೂರ್ಣ ಕಾದಂಬರಿಗಳು ಕೃತಿ ಪೂರ್ಣವಿರದಿದ್ದರೂ ಸಾಹಿತ್ಯಗುಣಕ್ಕೆ ಬಾಧಿಲ್ಲ. ಶರತ್ ಸಹಜವಾದ ಮಾರ್ದವತೆ, ಸುಕುಮಾರತೆಗಳು ಇಲ್ಲಿಯೂ ಗೋಚರವಾಗುತ್ತವೆ. ಅನುವಾದದ ಕಾರ್ಯವೂ ತೃಪ್ತಿಕರವಾಗಿಯೇ ಇದೆ ಕಾದಂಬರಿಯನ್ನು ಓದಿ ಮುಗಿಸುವ ದೃಷ್ಟಿಯಿಂದ ಈ ಸಂಗ್ರಹ ಪ್ರಯೋಜನವಿಲ್ಲವೆಂದು ಭಾಸವಾಗಬಹುದು ಆದರೆ, ಶರತ್ ಸಾಹಿತ್ಯದ ಪರಿಪೂರ್ಣ ಸಂಗ್ರಹ ಮತ್ತು ಅಧ್ಯಯನಕ್ಕೆ ಇದು ಅತ್ಯಂತ ಸಹಕಾರಿಯೆಂಬುದು ನಿಸ್ಸಂದೇಹ ಈ ದೃಷ್ಟಿಯಿಂದ ಈ ಸಂಗ್ರಹದ ಪ್ರಕಟಣೆ ಸ್ತುತ್ಯಾರ್ಹ.

ಶ್ರೀ ಗಣೇಶ ಮಹಾತ್ಮೆ (ಯಕ್ಷಗಾನ)

ಲೇಖಕ ಮತ್ತು ಪ್ರಕಾಶಕರು: ಶ್ರೀ ಡಿ ವಿ ಹೊಳ್ಳ, ವಿದ್ವಾನ್. ಕುಂದಾಪುರ. ದ. ಕ.

ಪುಟಗಳ ೧೮. ಬೆಲೆ: ರೂ. ೦=೨೫.

ವಿಘ್ನರಾಜ ಗಣಪತಿಯ ಜನ್ಮವೃತ್ತಾಂತವನ್ನೂ ಗಣೇಶನ ಮಹಾತ್ಮೆಯನ್ನೂ ಶ್ರೀ ಹೊಳ್ಳರು ಎಲ್ಲರಿಗೂ ತಿಳಿಯುವ ಸರಳ ಭಾಷೆಯಲ್ಲಿ ಯಕ್ಷಗಾನ ರೂಪದಲ್ಲಿ ಕನ್ನಡಿಗರ ಮುಂದಿರಿಸಿದ್ದಾರೆ. ಶ್ರೀ ಹೊಳ್ಳರ ಇತರ ಯಕ್ಷಗಾನಕೃತಿಯಂತೆಯೇ ಇದೂ ಒಂದು ಸ್ತುತ್ಯ ಪ್ರಯತ್ನ. ಶಾಲೆಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅಭಿನಯಿಸಲು ಅನುಕೂಲವಾದ ಕೃತಿ.

ಭಕ್ತ ಶ್ರೀ ಗೋವಿಂದದಾಸರ ಭಜನ ಪದ್ಧತಿ—

ಪ್ರಕಾಶಕರು ಶ್ರೀ ಕೆ ಸೀತಾರಾಮರಾಯರು, ಹೋಟೇಲ್ ದಾರ ಪ್ರಕಾಶ, ಮದ್ರಾಸು.

ಪುಟಗಳು: ೩೮+೮

ದಕ್ಷಿಣಕನ್ನಡದ ಶ್ರೀಗೋವಿಂದದಾಸರು, ಉಡುಪಿ ಕೃಷ್ಣನ ಪರಮ ಭಕ್ತರು ಅವರು ಬಾಲ್ಯದಲ್ಲಿ ಉಡುಪಿ, ಮದ್ರಾಸು, ತಿರುಪತಿ ಮೊದಲಾಡೆಡೆಯಲ್ಲಿ ದಾಸರಾಗಿ ಮೆರೆದವರು, ಪರಮಾತ್ಮ ಸಾಧನೆಯಲ್ಲಿಯೇ ಆಸಕ್ತರಾದವರು ಅವರು ತನ್ನ ಜೀವನದಲ್ಲಿ ಭಜನೆಗೆ ಮಹತ್ವದ ಸ್ಥಾನವನ್ನು ಕೊಡುತ್ತಿದ್ದರಲ್ಲದೆ, ದೈನಂದಿನ ಕಾರ್ಯಕ್ರಮಗಳ ಅವಿಭಾಜ್ಯ ಅಂಗವೆಂದು ಅನುಷ್ಠಾನಕ್ಕೆ ತರುತ್ತಿದ್ದರು, ಈ ವೇಳೆಯಲ್ಲಿ ಅವರು ಕರ್ನಾಟಕದ ದಾಸವರ್ಯರಾದ ಪುರಂದರ, ವಿಜಯ, ವ್ಯಾಸರಾಯ, ಜಗನ್ನಾಥ ಮೊದಲಾದ ದಾಸರ ಕೀರ್ತನೆಗಳನ್ನು ಭಕ್ತಿ ತನ್ಮಯರಾಗಿ ಹಾಡುತ್ತಿದ್ದರು. ಈ ಪರಮಾತ್ಮ ಕೀರ್ತನೆ, ಗುರು ಕೀರ್ತನೆ, ತುಲಸೀ ಕೀರ್ತನೆ ಮೊದಲಾದುವನ್ನು ದಿ|| ಗೋವಿಂದ ದಾಸರ ತೃತೀಯ ಪುತ್ರ ಶ್ರೀ ಕೆ. ಸೀತಾರಾಮ ರಾಯರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಭಕ್ತ ಸಮುದಾಯಕ್ಕೆ ಈ ಪ್ರಕಟಣೆಯು ಒಂದು ಅಮೂಲ್ಯ ಕಾಣಿಕೆ ಶ್ರೀ ರಾಯರ ಶ್ರಮದ ಪ್ರಯೋಜನ ನಮ್ಮ ಭಕ್ತವೃಂದ ಸಂಪೂರ್ಣ ಪಡೆದುಕೊಳ್ಳಬಹುದು.

ಶಕುಂತಲಾ ದುಷ್ಯಂತರು:

ಬರೆದವರು. ಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ.

ಪ್ರಕಾಶಕರು. ಸುಬೋಧ ಸಾಹಿತ್ಯ ಮಾಲೆ, ಹಿರಿಯಡಕ, ದ. ಕ.

ಪುಟಗಳು. ೪೨ ಬೆಲೆ: ರೂ. ೦=೫೦

ಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ಪಳಗಿದ ಶ್ರೀ ಗಣಪಯ್ಯ ಶೆಟ್ಟರು ಕಾಳಿದಾಸನ ಶಾಕುಂತಲಾ ನಾಟಕದ ಕಥೆಯನ್ನಿಲ್ಲಿ ಸಾಳಗನ್ನಡದಲ್ಲಿ ಸಂಗ್ರಹಿಸಿದ್ದಾರೆ. ಈ ನಾಟಕದ ಕಥೆಯು ಈ ಮೊದಲೇ ಬೇರೆ ಬೇರೆ ವಿದ್ವನ್ಮಣಿಗಳಿಂದ ಬರೆಯಲ್ಪಟ್ಟಿದ್ದರೂ ಶಾಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗದೆ ಶ್ರೀ ಶೆಟ್ಟರ ಕೃತಿ ಇಲ್ಲಿ ಬಳಸಲಾದ ಭಾಷೆಯು ಶುದ್ಧವಾಗಿದೆ, ಸರಳವಾಗಿದೆ. ಕಥೆಯನ್ನು ಓದುತ್ತ ಹೋಗುತ್ತಿರುವಂತೆ ಕುತೂಹಲವನ್ನು ಕೆರಳಿಸುತ್ತದೆ ನಾಟಕದ ನಾಟಕೀಯತೆಯನ್ನು ದೂರವಿಟ್ಟು ಕಥಾರೂಪಕ್ಕೆ ಅದನ್ನು ತರುವಲ್ಲಿ ಶ್ರೀ ಶೆಟ್ಟರು ಯಶಸ್ವಿಯಾಗಿದ್ದಾರೆ

ಪುಸ್ತಕದ ಹಾಳೆಗಳನ್ನು ಜೋಡಿಸುವಾಗ ತುಸು ಎಚ್ಚರಿಕೆ ವಹಿಸುವುದು ಮುದ್ರಣಾಲಯದವರ ಕಾರ್ಯ. ನಮ್ಮ ಕೈಸೇರಿದ ಪ್ರತಿಯಲ್ಲಿ ಪುಟ ೩೯ರಿಂದ ೩೬ರ ವರೆಗೆ ಬೇರೊಂದು ಪುಸ್ತಕದ ಹಾಳೆಯು ಸೇರಿದೆ, ಇಂತಹ ಲೋಪದೋಷಗಳು ಸಾಧಾರಣವಾದರೂ ಅವು ತಲೆದೋರದಂತೆ ಸೂಕ್ತ ಎಚ್ಚರಿಕೆ ವಹಿಸುವುದು ಅಗತ್ಯವೇ ಎಂದು ಹೇಳಬೇಕೆ ಗತ್ಯಂತರವಿಲ್ಲ.

ಬಿಳಿ ಕಾಗದದಲ್ಲಿ ಸುಂದರವಾದ ಮುದ್ರಣ ಆಕರ್ಷಕವಿದೆ ಈ ಪ್ರಕಟಣೆ ನಿಜಕ್ಕೂ ಸ್ವಾಗತಾರ್ಹ

— ಗೋರಾ

ಭಾರತಕ್ಕೆ ಸಾಧ್ಯವಿದೆಯೆ?

(೩ನೇ ಪುಟದಿಂದ)

ಅದೇ ರೀತಿ ಕಮ್ಯೂನಿಸ್ಟ್ ಚೈನಾದ ಕೈಬಿಟ್ಟು ರಷ್ಯಾವು ಭಾರತಕ್ಕೆ ಸಹಾಯ ಮಾಡೀತೆಂಬುದು ಕಲ್ಪನೆಗೂ ಎಟುಕದ ವಿಷಯವಿದೆ ಯಾಕೆಂದರೆ, ಇಬ್ಬರ ಉದ್ದೇಶವೂ ಒಂದೇ ಇದೆ ಇನ್ನೊಂದೆಡೆಯಲ್ಲಿ ರಷ್ಯಾ—ಚೈನಾ ರಂಭಾಟದಿಂದ ಅಮೇರಿಕದ ಶಕ್ತಿ ಹೆಚ್ಚಾಗುತ್ತದೆ. ಅದನ್ನು ಆ ರಾಷ್ಟ್ರಗಳೆರಡೂ ಕಡೆಗಣಿಸಲಾರವು ಹೀಗಿರುವಾಗ ಭಾರತವು ಕೇವಲ ಚೈನಾ ಅಥವಾ ಪಾಕಿಸ್ತಾನದೊಂದಿಗೆ ಮಾತ್ರ ಹೋರಾಡಬೇಕಾಗಿ ಬರುವದಲ್ಲದೆ ಬರ್ಮಾ ಹಾಗೂ ಇಂಡೋನೇಶ್ಯದೊಂದಿಗೂ ಹೋರಾಡಬೇಕಾಗಿ ಬರಬಹುದು, ದ್ವೀಪಾಂತರದೊಂದಿಗೆ ಜಲ ಹಾಗೂ ಆಕಾಶದಲ್ಲಿ ಹೋರಾಡಬೇಕಾಗಿ ಬಂದೀತು. ಹತ್ತು ಕೋಟಿ ಪ್ರಜೆಗಳಿರುವ ಆ ದೇಶವು ಇಂದು ಇಡೀ ಏಷ್ಯಾದಲ್ಲಿ ಸರ್ವಾಧಿಕ ಶಕ್ತಿಶಾಲಿ ಒಂಭತ್ತು ನೌಕಾದಳಗಳ ಒಡೆಯನಾಗಿದೆ. ಆದರ ವಿಮಾನ ದಲವೂ ಬಲಯುಕ್ತವಿದೆ. ಇದು ಸುಕರ್ಣರವರ ಕೇವಲ ದರ್ಪದ ಮಾತು ಮಾತ್ರ ಇರುವದಿಲ್ಲ. ಸೋವಿಯಟ್ ರಷ್ಯಾವು ಅದಕ್ಕೆ ಬಹಳ ಸಹಾಯ ಮಾಡಿರುತ್ತದೆ. ಅದರ ವಿಜ್ಞಾನಿಗಳು ಭಾರತದಲ್ಲಿ ಶಿಕ್ಷಣ ಪಡೆಯುತ್ತಾರೆ ಮತ್ತು ಚೈನಾದಲ್ಲಿಗೊಂಡಲ್ಲಿ ಯುದ್ಧ ತರಬೇತಿಯನ್ನು ಪಡೆಯುತ್ತಾರೆ ಭಾರತಕ್ಕೆ ಪ್ರದೇಶ ಥಾಯಿ (ಥಾಯಿಲೇಂಡ) ಮತ್ತು ಮಲೇಷ್ಯಾದಿಂದ ಆದೇನೂ ಸಹಾಯ ಸಲ್ಲಿಸಲು ಸಾಧ್ಯ ಇರುವದಿಲ್ಲ. ಅವೇ ಅತೀ ದುರ್ಬಲ ರಾಷ್ಟ್ರಗಳಿವೆ. ಹೀಗಿರುವದರಿಂದ ಪಾಕಿಸ್ಥಾನ, ಚೈನಾ ಮತ್ತು ದ್ವೀಪಾಂತರದ ಸಂಯುಕ್ತ ರಾಕ್ಷಸೀ ಶಕ್ತಿಯನ್ನು ಭೂ-ಜಲ-ನಭದಲ್ಲಿ ಭಾರತವು ತಾನೇ ತಾನಾಗಿ ರಾಮಬಾಣದಿಂದ ಎದುರಿಸಬೇಕಾಗಿರುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಟ್ರಾನ್ಸ್‌ಮಿಟಂಗ್, ಬೋಕೆರೋ........ ಹೀಗೆ ಹಲವಾರು ರೀತಿಯಲ್ಲಿ ಅಮೇರಿಕವು ಭಾರತಕ್ಕೆ ಸಹಾಯ ಮಾಡಬಹುದೆಂದು ಭಾವಿಸಿಕೊಳ್ಳಲಾಗಿತ್ತು. ಇಂದು ಆಶೆಯ ಮೋಡ ಹರಿದು ಹೋಗಿದೆ. ಒಂದು ವಿಮಾನ (ಯಫ್. ೧೦೪) ಕೊಡಲು ಅಮೇರಿಕಾ ಒಪ್ಪಿರುವದಿಲ್ಲ ಅಮೇರಿಕ ತಳೆದಿರುವ ಈ ಧೋರಣೆಯನ್ನು ಕಂಡ ಮೇಲೂ ಅಲ್ಲಿಂದವೇನಾದರೂ ಸಹಾಯ ಬಂದೀತೆಂದು ಆಶಾ ಮೃಗಜಲದ ಹಿಂದುಗಡೆ ಓಡುವದು ದೂರದೃಷ್ಟಿಪೂರ್ಣ ನೀತಿಯಲ್ಲ, ಚೈನಾಕ್ಕೆ ವಿಮಾನಗಳನ್ನು, ಅಣುಗುಂಡು ತಯಾರಿಸುವ ಸಾಮಗ್ರಿಗಳನ್ನು ಬ್ರಿಟನ್ನು ಕೊಡುತ್ತಾ ಇದೆ. ಹೀಗಿರುವದರಿಂದ ಈ ಎರಡು ದೊಡ್ಡ ರಾಷ್ಟ್ರಗಳಿಂದ ಏನಾದರೂ ಸಹಾಯ ಸಿಗಬಹುದೆಂದಾಶಿಸುತ್ತ ಕಾಲ ಕಳೆಯುವದೆಂದರೆ ನಮ್ಮನ್ನು ನಾವೇ ಮೋಸ ಮಾಡಿಕೊಂಡಂತಿದೆ ಭಾರತವು ಒಂದು ಪ್ರಬಲ ರಾಷ್ಟ್ರವಿದೆ. ಆಗ್ನೇಯ ಏಷ್ಯಾದಲ್ಲಿ ಭಾರತದ ಪ್ರಭಾವ ವರ್ಧಿಸುತ್ತಿರುವದನ್ನು ಚೈನಾ ಹಾಗೂ ದ್ವೀಪಾಂತರ ಹೇಗೆ ಸಹಿಸುವದಿಲ್ಲವೋ ಹಾಗೆಯೇ ಪ್ರಪಂಚದಲ್ಲಿ ಭಾರತದ ಪ್ರಭಾವ ವರ್ಧಿಸುತ್ತಿರುವುದನ್ನು ಅಮೇರಿಕ ಹಾಗೂ ಬ್ರಿಟನ್ನು ಕೂಡಾ ಸಹಿಸುವದಿಲ್ಲ.

ಈ ದೇಶದಲ್ಲಿ ಒಂದು ವರ್ಗವಿದೆ, ಆ ವರ್ಗದವರು ಬಹಿರಂಗವಾಗಿ ಹೇಳುತ್ತಿದ್ದಾರೆ—ರಷ್ಯಾದಿಂದಲೇ ಅಧಿಕಾಧಿಕ ಸಹಾಯವನ್ನು ಪಡೆದುಕೊಳ್ಳಬೇಕೆಂದು. ರಷ್ಯಾದಿಂದ ಗನಿ ಎಣ್ಣೆಯನ್ನು ತಂದು ಇಲ್ಲಿ ಇಂಡಿಯನ್ನೆಣ್ಣೆಯೆಂಬ ಹೆಸರಿನಿಂದ ಮಾರಲಾಗುತ್ತಿದೆ ಅಲ್ಲಿಂದ ಒಂದು ಹಿಡಿಯಷ್ಟು ಮಿಗ್ ವಿಮಾನಗಳೂ ಬಂದಿರುವದಿಲ್ಲ. ಹೀಗಿರುವಾಗ ರಷ್ಯಾದಿಂದ ಎಲ್ಲಾ ಬರಬಹುದೆಂದು ನಂಬಿ ಕೈಕಟ್ಟಿ ಕುಳಿತುಕೊಳ್ಳುವದು ಬುದ್ಧಿವಂತರ ಲಕ್ಷಣವೇನು ? ಇಂತಹ ಸಮಯದಲ್ಲಿ ಅತಿ ಸ್ವಲ್ಪ ದೃಷ್ಟಿಯನ್ನು ಹಾಯಿಸಬೇಕು. ಮಿಶ್ರದೇಶವು (ಇಜಿಪ್ಟ) ಅಂತರ್ಜಲ ನೌಕೆಯನ್ನು ಕಟ್ಟಲು ನಿರ್ಧರಿಸಿ, ಹಾಗೆಯೇ, ಆದ್ಯಾರ ಸಹಾಯಕ್ಕೂ ಕೈ ಚಾಚದೆ ಕೆಲಸಕ್ಕೆ ಕೈಹಾಕಿತು ಈಗ ಅದು ಅಂತಹ ಅನೇಕ ವೈಜ್ಞಾನಿಕ ಸಲಕರಣೆಗಳನ್ನೂ ತಯಾರಿಸಿಕೊಳ್ಳುತ್ತಿದೆ. ಔದ್ಯೋಗಿಕ ದೃಷ್ಟಿಯಲ್ಲಿ ಮಿಶ್ರದೇಶವು ಪ್ರಥಮ ಶ್ರೇಣಿಯ ರಾಷ್ಟ್ರವೇನೂ ಇರುವದಿಲ್ಲ. ಆದರಿಂದ ರಾಕೆಟ್ಟು, ಅಂತರ್ಜಲ ನೌಕೆ ಇತ್ಯಾದಿಗಳನ್ನು ತಯಾರಿಸಲು ಸಾಧ್ಯ ಇರುವಾಗ ನಮ್ಮಿಂದ ಸಾಧ್ಯ ಇಲ್ಲವೇನು? ಸ್ಪಷ್ಟ ಇಚ್ಛೆ ಹಾಗೂ ಆತ್ಮವಿಶ್ವಾಸ ಅದಕ್ಕೆ ಅವಶ್ಯವಿದೆ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು

ಪ್ರಕಾಶಕರು. ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಅನುಭವಾಮೃತ

ನೋ ಸ್ಮೋಕಿಂಗ್

ಶಿಸ್ತಿನಿಂದಲೇ ಮಾನವ ಜೀವನಕ್ಕೆ ಕಳೆ ಬರುತ್ತದೆ ಗತಕಾಲದದ ಮಾನವ ಶ್ರೇಷ್ಠರನೇಕರು ಶಿಸ್ತುಬದ್ಧ ಜೀವನ ಮತ್ತು ನಿಯಮ ಸಂಯಮಗಳ ಪರಿಪಾಲನೆಯಿಂದಲೇ ಅಖಂಡ ಭಾರತದಲ್ಲಿ ಪ್ರಖ್ಯಾತರಾದರು. ಮಹಾತ್ಮಾ ಗಾಂಧೀಜಿಯವರು ತಮ್ಮ ನಿಯಮ ಸಂಯಮಗಳ ಬಲದಿಂದಲೇ ಯುಗ ಪುರುಷನೆನಿಸಿದರು. ಇತರರಿಗೆ ತನ್ನಿಂದ ಲವಲೇಶ ನೋವಾದರೂ, ಗಾಂಧೀಜಿ ಆ ತಪ್ಪಿಗಾಗಿ ಅನಶನ ವ್ರತವನ್ನು ಆಚರಿಸುತ್ತಿದ್ದರು. ಶಿಸ್ತು ಪರಿಪಾಲನೆಗಾಗಿ ಗಲ್ಲಿ ಚರಂಡಿಗಳನ್ನು ಮುದಿತನದಿಂದಲೂ ತಮ್ಮ ಹಸ್ತಗಳಿಂದ ಶುಚಿ ಮಾಡಲು ಅವರು ಹಿಂಜರಿಯಲಿಲ್ಲ.

ಆದರೆ ಗಾಂಧೀಜಿ ಇಂದು ತಿರುಗಿ ಬಂದರೆ ಅವರು ಇಲ್ಲಿ ಕಾಣುವುದೇನು? ಇಕ್ಷನ ವಂಚನೆ ಅಶಿಸ್ತುಗಳನ್ನು ಕಂಡು ಆ ಪವಿತ್ರಾತ್ಮಕ್ಕೆ ಅದೆಷ್ಟು ದೊಡ್ಡ ಆಘಾತವಾಗಬಹುದು?! ತನ್ನ ಸರ್ವಸ್ವವನ್ನು ಬಲಿದಾನ ಮಾಡಿ, ಅಸಹಕಾರ ಚಳವಳಿ ಮತ್ತು ಸ್ವಾತಂತ್ರ್ಯ ಸಂಗ್ರಾಮಗಳಿಂದ ತಮ್ಮ ತನುಮನವನ್ನು ಸವೆಯಿಸಿ ಭಾರತಕ್ಕೆ ಅಖಂಡ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಕೀರ್ತಿಶೇಷರಾದ ಆ, ಪಿತಾಮಹನ ಕಂಬನಿಯನ್ನು ತಡೆಯುವವರಾರು?

ಇಂದು ಶಿಸ್ತು ಮತ್ತು ನಿಯಮಗಳು ಕೇವಲ "ಫ್ಯಾಶನ್"ನ ರೂಪದಲ್ಲಿ ಉಳಿದಿವೆ. ತನ್ನ ಸ್ವಾತಂತ್ರ್ಯವನ್ನು ಕಾಪಾಡುವ ಹಕ್ಕು ಭಾರತದ ಪ್ರತಿಯೊಬ್ಬ ಪೌರನಿಗಿದ್ದರೂ, ಇನ್ನೊಬ್ಬನ ಹಕ್ಕನ್ನು ಕೇಳುವ ಅಧಿಕಾರವಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಇನ್ನೊಬ್ಬರಿಗೆ ತೊಂದರೆಯಾಗದಂತೆ ನಡೆದುಕೊಳ್ಳಬೇಕಾದುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಆದರೆ, ಈ ತತ್ವವನ್ನು ಅನುಸರಿಸುವವರಾದರೂ ಅದೆಷ್ಟು ಮಂದಿ?

ಅನುದಿನವೂ, ಅನವರತವೂ ನಡೆಯುವ ನಿಯಮೋಲ್ಲಂಘನೆಗಳಲ್ಲಿ ಧೂಮ್ರಪಾನವೂ ಒಂದು. "No smoking" "smoking prohibiled" "ಸರಕಾರದ ಆಜ್ಞೆಯ ಮೇರೆಗೆ ಈ ಥಿಯೇಟರಿನೊಳಗೆ ಧೂಮ ಪಾನವು ಖಡ್ಡಾಯವಾಗಿ ನಿಷೇಧಿಸಲ್ಪಟ್ಟಿದೆ" ಎಂಬ ಬೋರ್ಡುಗಳಿಗೋ ಅಥವಾ ಅದರ ಅರ್ಥಕ್ಕೋ ಗೌರವ ಕೊಡುವ ನಾಗರಿಕರಾದರೂ ಎಷ್ಟು ಮಂದಿ?! ಬದಲಾಗಿ, ಆ ಬೋರ್ಡನ್ನು ನೋಡುತ್ತಾ ಓದುತ್ತಾ ಸಿಗರೇಟಿಗೆ ಬೆಂಕಿ ಹಚ್ಚುವ ಸಾಹಸಿಗಳಿಗೇನೂ ಕಡಿಮೆಯಿಲ್ಲವಷ್ಟೇ? ಸುಶಿಕ್ಷಿತ ನಾಗರಿಕರು ಈ ತಪ್ಪಿನಿಂದ ನಿಜವಾಗಿಯೂ ದೂರವಿರಬೇಕಿತ್ತು. ಆದರೆ ಬೇಲಿಯೇ ಹೊಲವನ್ನು ಮೇಯುವ ಕಾಲವಿದು. ಬಸ್ಸುಗಳಲ್ಲಿ, ರೈಲುಗಾಡಿಗಳಲ್ಲಿ, ಸಿನೇಮಾ ಥಿಯೇಟರಿನಲ್ಲಿ, ಉಪಸ್ಥಿತ ಎಷ್ಟೋಮಂದಿ ಗೃಹಸ್ಥರಿಗೂ, ವಿಶೇಷವಾಗಿ ಸ್ತ್ರೀಯರಿಗೂ, ಬೀಡಿ, ಸಿಗರೇಟುಗಳ ವಾಸನೆ ಮೂಗಿಗೆ ಬಡಿದರಾಗುವುದಿಲ್ಲ. ಕೆಲವರಂತೂ ವಾಂತಿಮಾಡುತ್ತಾರೆ. ಹೊಗೆ ಸೊಪ್ಪಿನಲ್ಲಿರುವ "ನಿಕೋಟಿನ್" ಎಂಬ ವಿಷ ವಸ್ತುವೇ ಇದಕ್ಕೆ ಕಾರಣವಾಗಿದೆ. ಆದರೆ ಧೂಮ್ರಪಾನದ ಗುಲಾಮರು ಅದನ್ನೆಂತು ಬಿಟ್ಟಾರು?

ಒಬ್ಬ ಬಸ್ ಚಾಲಕನಿಗೂ ಓರ್ವ ಪ್ರಯಾಣಿಕನಿಗೂ ನಡೆದ ಸಂಭಾಷಣೆಯೊಂದು ನೆನಪಿಗೆ ಬರುತ್ತದೆ. ಸೂಟು ಬೂಟು ಧರಿಸಿ, ನೆಕ್ ಟೈ ಬಿಗಿದು, ಕೂಲಿಂಗ್ ಗ್ಲಾಸಿನಿಂದ ತನ್ನ ದೃಷ್ಟಿಯ ಗುರುತ್ವ ಕೇಂದ್ರವಾವುದೆಂದು ತಿಳಿಯದಂತೆ ಮಾಡಿ, ಸಿಗರೇಟು ಸೇದುತ್ತಾ ನವನಾಗರಿಕನೊಬ್ಬ ಚಾಲಕನಪಕ್ಕದಲ್ಲೇ ಸುಖಾಸೀನನಾಗಿದ್ದ ಬಸ್ ಚಾಲಕನು No" smoking" ಎಂಬ ಬೋರ್ಡಿನ ಕಡೆಗೊಮ್ಮೆ ಮಗುದೊಮ್ಮೆ ಆ ಸೂಟುಧಾರಿ ಪ್ರಯಾಣಿಕನ ಕಡೆಗೆ ದೃಷ್ಟಿ ಹಾಯಿಸಿ ಮೆಲುದನಿಯಲ್ಲಿ "ಸ್ವಾಮೀ ತಮ್ಮೂರೆಲ್ಲಿ? ಎಲ್ಲಿ ತನಕ ಓದಿದ್ದೀರಿ?" ಎಂದು ಕೇಳಿದ. ಪ್ರಯಾಣಿಕ: "ಓ! ನಮ್ಮದು ಮೈಸೂರು. ಎಂ. ಬಿ. ಬಿ. ಎಸ್. ಪಾಸಾಗಿ ಇದೀಗ ಊರ ಕಡೆ ತೆರಳುತ್ತಿದ್ದೇನೆ. ಈ ಸಲ ನಮ್ಮ ಯುನಿವರ್ಸಿಟಿಯಲ್ಲಿ ನಾನೇ ಫಸ್ಟ್... ಅಂದ ಹಾಗೆ ನೀವು?..." ಎಂದು ತಲೆದೂಗುತ್ತಾ ಬಲಗಾಲನ್ನು ಎಡಕಾಲ ಮೇಲೆ ಹಾಕಿ ಮೀಸೆಯನ್ನೊಮ್ಮೆ ತಿರುವಿ, ಕನ್ನಡಕವನ್ನೊಮ್ಮೆ ಸರಿಮಾಡಿ, ಇನ್ನೊಂದು ಸಿಗರೇಟನ್ನು ಸುಡುತ್ತಾ ಹೆಮ್ಮೆ ಕಟ್ಟಿಕೊಂಡ. ಬಸ್ ಚಾಲಕ: "ನಮ್ಮದೇನು ಸಾರ್, ಈ ತನಕ ಸುದರ್ಶನ ಚಕ್ರವನು ತಿರುಗಿಸಿ ಹೊಟ್ಟೆ ಹೊರೆಯುತ್ತಿದ್ದೇವೆ. ನಾನೇನೂ ವಿದ್ಯಾವಂತನಲ್ಲ. ಆದರೂ ಅಲ್ಲಿ ಬರೆದಿರುವ "No smoking" ಅನ್ನುವ ಬೋರ್ಡನ್ನು ಓದಿಕೊಳ್ಳುವಷ್ಟು ಜ್ಞಾನವಿದೆ" ಎಂದು ನಗುತ್ತಾ ನುಡಿದ.

ನೋಡಿದಿರಾ? ಆ ಸೂಟುಧಾರಿಗಿಂತ ಬಡ ಬಸ್ ಚಾಲಕನೇ ಮೇಲಲ್ಲವೇ? ಸಾಲದುದಕ್ಕೆ ಆ ಸೂಟುಧಾರಿ M. B. B S ಸಿಗರೇಟಿನಿಂದಾಗಿ ಕ್ಯಾನ್ಸರ್ ಮತ್ತು ಕ್ಷಯರೋಗವು ಉಲ್ಬಣಾವಸ್ಥೆಯನ್ನು ಹೊಂದುತ್ತದೆಂಬ ಮಾತನ್ನು ಉಪದೇಶಿಸಲು ಮಾತ್ರ ಬಲ್ಲ.

– ಶ್ರೀ ಕೆ. ವಿಷ್ಣು ಹೆಬ್ಬಾರ್,
ಕಾಸರಗೋಡು.

ಕರ್ಮದ ಫಲ

(೨ನೇ ಪುಟದಿಂದ)

"ನಿನ್ನಂತಹ ಗಂಡುಗಳ ಸ್ವಾರ್ಥ, ಹೆಣ್ಣನ್ನು ಸೂಳೆಯಾಗಿ ಸ್ಥಾನಾಂತರಿಸುತ್ತಿದೆ., ದುಡಿಯಲು ಬಂದ ಹೆಣ್ಣನ್ನು ನೆಮ್ಮದಿಯ ನೆಲೆಯಿಂದ ತಪ್ಪಿಸುವ ನಿಮ್ಮ ಕುಹಕಕ್ಕೆ ನಿಮ್ಮ ಮನೆಯವರೂ ಬಲಿಯಾಗಲಿ!"

"ಇಲ್ಲ....ನಾನು ಸತ್ತರೂ, ನನ್ನ ಹೆಂಡತಿ ಸೂಳೆಯಾಗಬಾರದು. ಅವಳ ಸುತ್ತಲೂ, ಪ್ರೇತವಾಗಿ ಬಂದಿಳಿದು, ಕಾಪಾಡುತ್ತೇನೆ. ಬೇರೆ ಯಾವ ಗಂಡಾದರೂ ಅವಳ ಮೈ ಮುಟ್ಟಿದರೆ ಕುತ್ತಿಗೆ ಹಿಚುಕಿ ಕೊಂದುಬಿಡುತ್ತೇನೆ. ನನ್ನ ಹೆಂಡತಿಯ ಮೈ ಮುಟ್ಟುವ ಧೈರ್ಯವಾದರೂ ಯಾವ ಗಂಡು ಮಗನಿಗಿದೆ ಎಂದು ನೋಡಿಯೇ ಬಿಡುತ್ತೇನೆ. ನನ್ನ ಹೆಂಡತಿ—ಮಕ್ಕಳು ಗತಿ ಹೀನರು! ಅವರಿಗಾವ ನೆಲೆಯೂ ಇಲ್ಲ! ನನ್ನ ದುಡಿಮೆಯಿಂದಲೇ ಬದುಕುತ್ತಿರುವ ಅವರಿಗಾಗಿಯಾದರೂ ನನ್ನನ್ನು ಉಳಿಸು—ಹೇ ಪ್ರಭು!"

"ಓಹೋ! ನೀನೋರ್ವನು ಮಾತ್ರ ಮಡದಿ ಮಕ್ಕಳನ್ನು ಪಡೆದವ. ನಿನ್ನ ಕೀಟಲೆಯಿಂದ ನರಕಯಾತನೆಯನ್ನು ಅನುಭವಿಸಿದವರು ಸನ್ಯಾಸಿಗಳೆಂದು ಭಾವಿಸಿದೆಯೋ? ಇಹಪರದ ಅಂಜಿಕೆ-ಆತಂಕಗಗಳಿಲ್ಲದೆ ಹಾರಾಡಿದ ನೀನು....ಈ ಮಂಚದಿಂದ ಹೆಗಲ ಮಂಚದಲ್ಲಿಯೇ ಬೇಗನೆ ಹೋಗುವಿ ಎಂಬುದನ್ನು ಜ್ಞಾಪಕದಲ್ಲಿಡು ನೀನು ಮಾಡಿದ ಕರ್ಮದ ಫಲ— ಇದೇ ಜನ್ಮದಲ್ಲಿ ಅನುಭವಿಸಿದ್ದಿ."

—ಕೆರಳಿದ ಮನ ನಕ್ಕು ಮೌನವಾಯಿತು.

ಡಾಕ್ಟರರು ಅದಾಗಲೇ ಚುಚ್ಚು ಮದ್ದನ್ನಿತ್ತ ಕಾರಣ ಹಾಗೆಯೇ ಕಣ್ಣು ಮುಚ್ಚಿದ ಜನ್ನ—ತನ್ನ ಮಡದಿ ಮಕ್ಕಳನ್ನು ಸ್ಮರಿಸುತ್ತಾ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ
LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25

ಅತ್ಯಂತ ಪ್ರಯೋಜನಕಾರಿ ಪುಸ್ತಕ—
ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ: ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುದ್ರಣ
ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ:
ನವಯುಗ ಪ್ರೆಸ್
ಸಂತೆಕಟ್ಟೆ
ಉಡುಪಿ

REGD. No. E. G. 176
LICENCE No. 31
Licensed to Post without Prepayment

ಕೇವಲು ದಾರಿ—ಕೆಂಪು ದೀಪ

ಭ್ರಷ್ಟಾಚಾರದ ಅನ್ನದಾತರು?

ಭಾರತವು ಈಗ ಅನುಭವಿಸುತ್ತಿರುವ ಒಂದು ಸಾಂಕ್ರಾಮಿಕ ರೋಗಕ್ಕೆ, ಕೇಂದ್ರದ ಗೃಹಮಂತ್ರಿಯವರು ಪರಿಹಾರವನ್ನು ಕಂಡುಹಿಡಿದು, ಸಲಹೆ ಸೂಚನೆ ನೀಡಿದ್ದಾರೆ ಗೃಹಮಂತ್ರಿ ನೀಡಿರುವ ಸಲಹೆಯು ಇದುವಂತಲೇ, ಇದು ಮನೆಮನೆಯ ಸುದ್ದಿಯಾಗಿದೆ, ಎಂದು ಹೇಳಲಾಗುವದಿಲ್ಲ

ಆದರೂ ಪ್ರತಿಯೊಂದು ಕುಟುಂಬ ಈ ಔಷಧಿಯನ್ನು ಉಪಯೋಗಿಸಿದರೆ, ಖಾತ್ರಿಯಾಗಿ ದೀರ್ಘ ಕಾಲ ಬದುಕುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

ಗುಲ್ಜಾರೀಲಾಲ್ ನಂದಾ ಅವರು ದೀಕ್ಷೆ ತೊಟ್ಟಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ ಎರಡು ವರ್ಷದೊಳಗೇನೆ ಇದರ ಉಚ್ಚಾಟನೆಯ ಕಾರ್ಯ ಸಾಧಿಸಲ್ಪಡುತ್ತದೆ

ಇದು ಅವರ ನಂಬಿಕೆ ಆದರೆ, ಎಂದಿನಿಂದಲೋ ಬೆಳೆಯುತ್ತ ಬಂದಿರುವ ಭ್ರಷ್ಟಾಚಾರವು ಕೇವಲ ಎರಡು ವರ್ಷಗಳಲ್ಲಿ ಕೊನೆಗೊಳ್ಳಲು ಸಾಧ್ಯವೇ ಎಂದು ಅಪ್ರಾಮಾಣಿಕರಲ್ಲಿ ಅಲ್ಪ ಸ್ವಲ್ಪ ಪ್ರಾಮಾಣಿಕತನವನ್ನು ಸೊ ಮಾಡುತ್ತ ಬಂದಿರುವ ಕೆಲವರು ಅಭಿಪ್ರಾಯ ಪಡುತ್ತಾರೆ

ಭ್ರಷ್ಟಾಚಾರದ ನಿರ್ಮೂಲನೆ ಮಾಡುತ್ತೇನೆಂದು ಶ್ರೀ ನಂದಾ ಅವರು ದೀಕ್ಷೆ ತೊಟ್ಟಾಗಲೇ ಅದರ ವಿರಾಟ ಸ್ವರೂಪ ದರ್ಶನ ಆಗಿದೆ,

ಈ ಹಿಂದೆಯೂ ಅದರ ಪರಿಚಯ ಎಲ್ಲರಿಗೆ ಇತ್ತು. ಆದರೆ ಅದು ಎಲ್ಲೆಂದರಲ್ಲಿ ಕಾಲಮಿತಿಯಿಲ್ಲದೆ ಕಾಣಿಸಿಕೊಳ್ಳುತ್ತದೆ ಎಂಬುದು ಇದೀಗ, ಶ್ರೀ ನಂದಾ ಅವರು ಹೇಳಿಕೆಯಿತ್ತಾದ ಬಳಿಕ ಹೆಚ್ಚು ಎದ್ದು ಕಾಣಿಸಿಕೊಳ್ಳತೊಡಗಿದೆ.

ಹಿಂದೆ ಮರೆಯಲ್ಲಿ ನಡೆಯುತ್ತಿದ್ದ ಈ ಕಾರ್ಯ ಈಗ ಮುಚ್ಚುಮರೆಯಿಲ್ಲದೆ ನಡೆಯುತ್ತಿದೆ ಭ್ರಷ್ಟಾಚಾರದ ಮಹಿಮೆಯನ್ನು, ನಮ್ಮಂತಹ ಮಂದಿ ನೋಡಿಯೇ ಮೂರ್ಛೆ ಹೋಗುತ್ತಿದ್ದಾರೆ!

ಈ ಮಂತ್ರಿಗಳು ಇಷ್ಟು ತಿಂದರು . ಆ ಮಂತ್ರಿಗಳ ಅಳಿಯನ ಚಿಕ್ಕಪ್ಪ ಇಷ್ಟು ತಿಂದುದರಿಂದ ಅಜೀರ್ಣವಾಗಿದೆ ..ಇದರ ಪತ್ತೆಯಾಗಲೇ ಬೇಕು .ಈ ಪಕ್ಷದ ಪ್ರಮುಖರು ಕಬಳಿಸಿದ ಇಂತಿಷ್ಟು ರೂಪಾಯಿಯ ಬಗ್ಗೆ ವಿಚಾರಣೆ ನಡೆಯಬೇಕು ..ಇಂತಹ ಹೆಣ್ಣನ್ನು ಅಪಹರಣ ಮಾಡಿ ತಮ್ಮ ಕಾರ್ಯ ಸಾಧಿಸಲು ಪ್ರಯತ್ನಿಸಿದ ಈ ಮಹಾನುಭಾವರ ವಿಚಾರಣೆ ನಡೆಯಬೇಕಾಗಿದೆ ಸಕ್ಕರೆ ಕಾಳಸಂತೆಯಲ್ಲಿ .ದವಸ ಧಾನ್ಯಗಳ ಬೆಲೆ ಏರತೊಡಗಿದೆ... ವಿದ್ಯಾರ್ಥಿಗಳು ಅಧ್ಯಾಪಕರನ್ನು ಥಳಿಸಿದರು ..

ಶೇಷವೇನೂ ಇಲ್ಲದಂತೆ ಕೇಳಲ್ಪಡುತ್ತಿರುವ ಇಂತಹ ವಿಶೇಷ ಸುದ್ದಿಗಳನ್ನು ಕೇಳುತ್ತ ಕೇಳುತ್ತ ಪ್ರತಿಯೊಬ್ಬರೂ ಅಧಿ ಇಲ್ಲದ ಕಾಣಿಸಿಕೊಂಡಿರುವ ಈ ಆಚಾರಕ್ಕೆ ಅಂತ್ಯವೆಲ್ಲಿ ಎಂದು ಪ್ರಶ್ನಿಸಿಕೊಳ್ಳುತ್ತಾರೆ

ಅವರಲ್ಲೂ ತಮ್ಮ ಹಿತಸಾಧನೆಗಾಗಿ ಇನ್ನೊಬ್ಬರ ಬಲಿಕೊಡಲು ಸಿದ್ಧರಾಗಿರುವವರಲ್ಲಿ ಹಲವರು, ಅದನ್ನು ಸಾಧಿಸಿ ಪಾರಾಗಿಬಿಡುವ ಅದೃಷ್ಟಶಾಲಿಗಳಾಗಿರುತ್ತಾರೆ.

ಅದಕ್ಕೆ ಕಾರಣವೆಂದರೆ, ಅದೆಲ್ಲಾ ಅವರ ವೈಯಕ್ತಿಕ ವಿಷಯಗಳೆನಿಸಿ ಬಿಡುತ್ತವೆ ಅವರ ವೈಯಕ್ತಿಕ ವಿಷಯುವೇ ಕೆಲವೊಮ್ಮೆ ಸಾಮೂಹಿಕ ರೀತಿಯಲ್ಲಿ ಅದೆಷ್ಟು ಜೀವಗಳ ಬಲಿ ಬೇಡುತ್ತದೆ ಎಂಬುದನ್ನು ಗಮನಿಸುವರೇ ಇಲ್ಲ!

ನಮ್ಮ ರಾಜಕೀಯದಲ್ಲಿ ಹೊಲಸು ತುಂಬಿಕೊಂಡಿದೆ ನಮ್ಮ ಸಾಹಿತ್ಯದಲ್ಲಿ ಹೊಲಸು ತುಂಬಿ ತುಳುಕುತ್ತಿದೆ, ನಮ್ಮ ಚಲಚಿತ್ರಗಳು, ನಾಟಕಗಳು ಇನ್ನಿತರ ಮನೋರಂಜನಾಕಾರ್ಯಕ್ರಮಗಳು ಹೊಲಸುತನಕ್ಕೆ ಸುಪ್ರಸಿದ್ಧವಾಗಿವೆ ಎನ್ನುವದಕ್ಕಿಂತ ಅದರ ವಿಡಂಬನೆಯನ್ನೇ ನಡೆಸುತ್ತಿವೆಯೆನ್ನಬಹುದು! ನಮ್ಮ ವಿದ್ಯಾಕ್ಷೇತ್ರವೂ ಇದೇ ರಾಡಿಯನ್ನು ಮೈಗಂಟಿಸಿಕೊಂಡಿದೆ!

ಯಾವುದೇ ಒಂದು ಕಾರ್ಯವಾಗಬೇಕಾದರೆ ಕೈ ಬಿಸಿಮಾಡಬೇಕೆನ್ನುವದನ್ನು ಮಹಾ ಮೂರ್ಖನೂ ಇವತ್ತು ಚೆನ್ನಾಗಿ ತಿಳಿದಿದ್ದಾನೆ

ಹಣಮತ್ತು ಹೆಣ್ಣಿನ ಸರಬರಾಜು ಮಾಡಿ ಯಾವ ಕಾರ್ಯವನ್ನೂ ಸಾಧಿಸಬಹುದು. ಎಂಬುದನ್ನು ಈಗ ಎಲ್ಲರೂ ತಿಳಿದಿರುತ್ತಾರೆ

ಹೆಣ್ಣನ್ನು ನಾವು ಗೌರವಿಸಿದಂತೆ ಬೇರೆ ಯಾವ ದೇಶಗಳವರೂ ಗೌರವಿಸಿಲ್ಲ. ನಾವು ಆಕೆಯನ್ನು ಪೂಜಿಸಿದಂತೆ ಬೇರೆ ಯಾವ ದೇಶಗಳವರೂ ಪೂಜಿಸಿಲ್ಲ! ಇದನ್ನು ಕಂಡ ವಿದೇಶಿಯರು ನಮ್ಮ ಅನುಕರಣೆ ಮಾಡಲು ಹೆಮ್ಮೆಯಿಂದ ಮುಂದುವರಿದಾಗಲೇ, ನಾವು ಆಕೆಯನ್ನು ಕಾಲಡಿಯಲ್ಲಿ ಹಿಸುಕಿ ಹಾಕಿದ್ದೇವೆ ಆಕೆಯನ್ನು ಗೌರವಿಸುವ ಮಾತಂತಿರಲಿ, ಆ ದೃಷ್ಟಿಯಿಂದ ನೋಡುವದೂ ನಮಗೆ ಬೇಡವಾಗಿದೆ ನಮ್ಮ ವಿಲಾಸ— ನಮ್ಮ ಸುಖಸಾಧನೆ—ನಮ್ಮ ಶ್ರೇಯೋಭಿವೃದ್ಧಿಯ ಒಂದು ಮೆಟ್ಟಿಲು ಹೆಣ್ಣು, ಎಂದೂ ನಾವು ತಿಳಿದು ಕೊಂಡಿದ್ದೇವೆ

ಹೆಣ್ಣು ಮತ್ತು ಹಣದ ಪ್ರಭಾವದಿಂದ ಮನುಷ್ಯನು ಮೆರೆಯತೊಡಗಿರುವಾಗಲೇ, ಅವನ ಇನ್ನೊಂದು ಮುಖ್ಯವೂ ಕಾಣಿಸಿಕೊಳ್ಳುತ್ತದೆ.

ದಾಹಪೀಡಿತ ವ್ಯಕ್ತಿಗಳು ಅನೀತಿಯಿಂದ ತಮ್ಮ ವಿಜಯ ಪತಾಕೆ ಹಾರಿಸಬಹುದೇನೋ ನಿಜ ಆಗಲೂ ಅವರಿಗೆ ಭಯವಿದ್ದೇ ಇರುತ್ತದೆ ಆ ಭಯವೇ ಅವರಿಂದ ಮಂದಿರ ಕಟ್ಟಿಸುತ್ತದೆ ಅನಾಥಾಶ್ರಮಗಳನ್ನು ತೆರೆಯಿಸುತ್ತದೆ, ಶಾಲೆ ಕಾಲೇಜುಗಳನ್ನು ನಿರ್ಮಿಸುತ್ತದೆ, ಇನ್ನೂ ಅನೇಕ ಸಮಾಜಕಲ್ಯಾಣದ ಕಾರ್ಯ ಸಾಧಿಸುತ್ತದೆ.

ಇದರಿಂದ ಅವರ "ಕಪ್ಪು ಕಲೆ' ಮಾಯವಾಗಿ ಅವರಿಗೆ ಗೌರವದ ಬಿರುದು ಬಾವಲಿ ಲಭ್ಯವಾಗುತ್ತದೆ ಹಾಗಿರುವಾಗ ಪ್ರಾಮಾಣಿಕತನಕ್ಕೆ ಏನೇನೂ ಬೆಲೆ ಉಳಿಯದೆ ಅನ್ಯಾಯದಿಂದ ಹಣ ಸಂಪಾದಿಸಿ, ಅದರಲ್ಲಿನ ಸ್ವಲ್ಪ ಹಣವನ್ನೇ ದಾನ ಧರ್ಮಗಳ ಕಾರ್ಯಗಳಿಗೆ ವ್ಯಯಿಸಿದರೆ, ಅಲ್ಲಿಗೆ, ಆ ಮಹಾಶಯರು ಪುಣ್ಯಮತ್ತು ಪುರುಷಾರ್ಥದ ಪಾಲುದಾರರಾಗುತ್ತಾರೆ!

ಭ್ರಷ್ಟಾಚಾರದ ಒಂದು ಕಣ್ಣು ಕಾಣಿಸಿಯಾದರೆ, ಇನ್ನೊಂದು ಕಣ್ಣು ಕಾಂಚಾಣ ಇವೆರಡರಿಂದಲೇ ಭ್ರಷ್ಟಾಚಾರವು ಬೆಳೆಯುತ್ತಾ ಸಾಗಿದೆ ಪ್ರಬಲವಾಗಿ ಬೆಳೆಯುತ್ತಿರುವ ಇದನ್ನು ತಡೆಗಟ್ಟುವದು ಸುಲಭವು ಅಲ್ಲ; ಸಾಧ್ಯವೂ ಅಲ್ಲವೆನ್ನಬಹುದ?

—ಸುದಾಸ.



ಕಾಂಡ್ಲ ಬಂದರದ ಒಂದು ಸುಂದರ ನೋಟ.

ನಮ್ಮ—ನಮ್ಮವರು

(೧ದೇ ಪುಟದಿಂದ)

ಮಂಜಯ್ಯ ಹೆಗ್ಗಡೆಯವರ ಕಾಲದಿಂದ ನಡೆದು ಬರುತ್ತಿರುವ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯೋತ್ಸವಗಳನ್ನು ಮತ್ತಷ್ಟು ಊರ್ಜಿತಗೊಳಿಸಿ ಶ್ರೀ ರತ್ನವರ್ಮ ಹೆಗ್ಗಡೆಯವರು ಮುನ್ನಡೆಸುತ್ತ ಬಂದಿದ್ದಾರೆ ಕರ್ತವ್ಯನಿಷ್ಠೆ, ಕಾರ್ಯದಕ್ಷತೆ, ಧರ್ಮ ಸಂಸ್ಕೃತಿಪ್ರೇಮ, ಉದಾರತೆ ಕಲಾರಾಧನೆ, ಭಗವದ್ ಭಕ್ತಿಗೆ ಹೆಸರಾದ ಹೆಗ್ಗಡೆಯವರು ಜನಸೇವೆಯೇ ಜನಾರ್ದನ ಸೇವೆ, ಭಕ್ತತೃಪ್ತಿಯೇ ಭಗವಂತನ ತೃಪ್ತಿಯೆಂದು ತಿಳಿದುಕೊಂಡು ಸೇವಾತ್ಪರರಾಗಿದ್ದಾರೆ. ಈ ನಿಸ್ಪೃಹಸೇವೆ ಇನ್ನೂ ಬಹುಕಾಲ ಭಕ್ತವರ್ಗಕ್ಕೆ ದೊರೆಯುತಿರಲಿ

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ಹೊಸ ಪುಸ್ತಕ—
ನಚಿಕೇತ'ರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ ಎರಡು.
ನವಯುಗ ಪ್ರೆಸ್, ಉಡುಪಿ.

VOL. 43 No. 38

ಸಂಪುಟ ೪೩ ಸಂಚಿಕೆ ೩೮

NAVAYUGA—Nationalist Weekly ಉಡುಪಿ 21-5-1964 ಗುರುವಾರ ನವಯುಗ ರಾಷ್ಟ್ರೀಯ ವಾರಪತ್ರಿಕೆ

ಕಾಮರಾಜ

ಮದ್ರಾಸಿನ ಕಾಮರಾಜ ನಾಡಾರರು ಮುಖ್ಯಮಂತ್ರಿ ಪದವಿಯನ್ನು ಅದೆಷ್ಟು ಆಕಸ್ಮಿಕವಾಗಿ ಸ್ವೀಕರಿಸಿದ್ದರೋ ಅಷ್ಟೇ ಕುತೂಹಲ ಸನ್ನಿವೇಶದಲ್ಲಿ ಅದನ್ನು ತ್ಯಜಿಸಿದರು. ಕಾಂಗ್ರೆಸಿನಲ್ಲಿ ಸೇವೆ ತ್ಯಾಗಗಳ ಭಾರವನ್ನು ಪ್ರತಿಬಿಂಬಿಸಿ ಅಧಿಕಾರ ವ್ಯಾಮೋಹವನ್ನು ದೂರಮಾಡುವ ಉದ್ದೇಶದಿಂದ ತಾನೇ ಒಂದು ಸೂತ್ರವನ್ನು ರಚಿಸಿ, ಅದರ ತುದಿಯಲ್ಲಿ ತನ್ನನ್ನೇ ಕೋದುಕೊಂಡರು. ಈ ಸೂತ್ರದ ಯಶಸ್ಸು—ಅಯಶಸ್ಸಿನ ಬಗ್ಗೆ ಆಗಲೇ ಭಿನ್ನಾಭಿಪ್ರಾಯ ಮೂಡಿತ್ತು. ಈಗ್ಗೆ ಕೆಲವುಕಾಲ ಗತಿಸಿದರೂ ಇದ್ದ ಭಿನ್ನಮತ ಇದ್ದಂತೆಯೇ ಇದೆ. ಒಂದು ಗುಂಪಿನವರು ಈ ಸೂತ್ರವನ್ನು ಹಿಂದೆ ತೆಗೆದುಕೊಳ್ಳಬೇಕು ಎಂದು ಇಂದು ಬಲವಾಗಿ ವಾದಿಸತೊಡಗಿದ್ದಾರೆ.

ಇನ್ನೂ ಬ್ರಹ್ಮಚಾರಿಯಾಗಿಯೇ ಉಳಿದಿರುವ ಈ ಹಳೆಯ ಹುಲಿ, ತನ್ನ ಸೂತ್ರ ಯಶಸ್ವಿಯಾಗಿದೆಯೆಂದು ದೃಢವಾಗಿ ಸಾಧಿಸಿದ್ದಾರೆ. ನಿವೃತ್ತರಾದ ಮಂತ್ರಿಗಳು, ಅದೆಷ್ಟು ಚಾಣಾಕ್ಷರೇ ಇದ್ದರೂ, ಅನಿವಾರ್ಯ ಪ್ರಸಂಗವನ್ನುಳಿದರೆ, ಮತ್ತೆ ಮಂತ್ರಿಯಾಗುವ ಅವಕಾಶ ಕೊಡುವುದಿಲ್ಲ. ಅಂತಹ ಹಿರಿಯ ಕಾಂಗ್ರೆಸ್ ನಾಯಕರು ಪಕ್ಷದ ಸಂಘಟನೆಗೆ ಮತ್ತು ಅದರ ನೀತಿ ಮತ್ತಿಗೆ ಅನುಕೂಲ ವಾತಾವರಣ ನಿರ್ಮಿಸಲು, ಅದರಲ್ಲಿ ಪುನಶ್ಚೇತನ ತುಂಬಲು ಹೆಚ್ಚು ಅವಕಾಶ ಮಾಡುವುದು ಕಾಂಗ್ರೆಸಿನ ಉದ್ದೇಶವೆಂದು ಡಣಾಡಂಗುರವಾಗಿ ಸಾರಿದ್ದಾರೆ. ನೀತಿ ನಿರ್ಮಿಸಿದವರು ಇಷ್ಟೊಂದು ಧೃಢವಾಗಿ ತನ್ನ ನಿಲುಮೆಯಲ್ಲಿ ನಿಲ್ಲುವ ರಾಜಕಾರಣಿಗಳು ಅಪರೂಪ. ಈ ಬಗೆಯ ಅಪರೂಪ ವ್ಯಕ್ತಿಗಳಲ್ಲಿ ಕಾಮರಾಜರೂ ಒಬ್ಬರಾಗಿದ್ದಾರೆ.

ದೇಶವು ಆರ್ಥಿಕ ಪುನಾರಚನಾಕಾರ್ಯದಲ್ಲಿಂದು ವ್ಯಸ್ತವಾಗಿದೆ. ಈ ಮಹತ್ಕಾರ್ಯವನ್ನು ನಾವು ಯಶಸ್ವಿಯಾಗಿ ಸಾಧಿಸಬೇಕು. ಇದಕ್ಕಾಗಿ ಎಲ್ಲರೂ ಒಕ್ಕಟ್ಟಿನಿಂದ ಒಮ್ಮನಸ್ಸಿನಿಂದ ದುಡಿಯುವುದು ಅಗತ್ಯವಿದೆ. ಕಾಂಗ್ರೆಸಿನ ಧ್ವಜದಡಿಯಲ್ಲಿ ಜಾತೀಯ, ಧರ್ಮ, ಪ್ರಾಂತ ಭಾವನೆಗಳನ್ನು ಕಿತ್ತು ಹಾಕಿ ಒಂದಾಗಿ ತ್ಯಾಗಮಾಡಿದ ಅನೇಕ ಭಾರತೀಯರು ಅವರಾಗಿದ್ದಾರೆ. ಆ ಪವಿತ್ರಾತ್ಮಗಳ ಅಮರ ಸಂದೇಶವನ್ನು ನಾವು ಮನನ ಮಾಡಿ, ದೇಶವನ್ನು ಕಟ್ಟಲು ಸೊಂಟ ಕಟ್ಟಬೇಕು ಎಂದವರು ಬೊಂಬಾಯಿಯಲ್ಲಿ ಸೇರಿದ ಎಐಸಿಸಿ ಸಭೆಯಲ್ಲಿ ಕರೆ ನೀಡಿದ್ದಾರೆ.

ಗುಲ್ಜಾರೀಲಾಲ

ಗುಲ್ಜಾರೀಲಾಲ ನಂದಾರವರು ಕೇಂದ್ರದಲ್ಲಿ ಗೃಹಖಾತೆಯನ್ನು ವಹಿಸಿಕೊಂಡ ವೇಳೆ ಈ ಖಾತೆಯಲ್ಲೊಂದು ಹೊಸ ಸಂಚಾರವಾದಂತೆ ಭಾಸವಾಗಿದೆ. ಲಂಚ ನಿರ್ಮೂಲನದ ಕಾರ್ಯವನ್ನು ಎರಡೇ ಎರಡು ವರ್ಷಗಳಲ್ಲಿ ಸಾಧಿಸುವ ಅಚಲ ನಿರ್ಧಾರ ಮಾಡಿದ ಅವರು ಈ ದಿಸೆಯಲ್ಲಿ ಈಗಾಗಲೇ ಮುಂದುವರಿದಿದ್ದಾರೆ. ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿಯೂ ವಿಚಕ್ಷಣ ಆಯೋಗದ ರಚನೆಯಾಗತೊಡಗಿದೆ. ಅವರ ಈ ಸಾಹಸವು ಯಶಸ್ವಿತೆಯ ದಾರಿ ಹಿಡಿದರೂ ಹಿಡಿಯಬಹುದು; ಆದರೆ ಇದರ ಪರಿಣಾಮವನ್ನು ನಿರೀಕ್ಷಿಸಬೇಕಾದರೆ, ಇನ್ನೂ ಒಂದೂವರೆ ವರ್ಷ ತಾಳ್ಮೆ ವಹಿಸಬೇಕು.

ಮೊನ್ನೆ ಮುಂಬಯಿಯಲ್ಲಿ ನಂದಾರು



ಮತ್ತೊಂದು ಘೋಷಣೆ ಮಾಡಿ ಸತ್ಯಾಗ್ರಹಿಗಳ ಉಪವಾಸವನ್ನು ನಿಲ್ಲಿಸಿದರು. ಸಂಯುಕ್ತ ಮಹಾರಾಷ್ಟ್ರ ಸಮಿತಿಯ ೧೦೧ ಸದಸ್ಯರು ಉಪವಾಸ ಮಾಡಿ, ಕರ್ನಾಟಕದಲ್ಲಿರುವ ಮರಾಠೀ ಪ್ರದೇಶವನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂಬ ಬೇಡಿಕೆ ಮುಂದಿಟ್ಟರು. ಆಗ, ನಂದಾರು ಮುಂದಿನ ಆಗೋಸ್ತು ಹದಿನೈದನೆಯ ದಿನದೊಳಗೆ ಮಹಾರಾಷ್ಟ್ರ—ಕರ್ನಾಟಕ ಗಡಿ ವಿವಾದವನ್ನು ಪರಿಹರಿಸುವುದಾಗಿ ವಚನವಿತ್ತರು. ಒಂದು ವೇಳೆ ಪರಿಹಾರವು ಉಭಯ ಸಮ್ಮತಿಯಿಂದಾಗದೆ ಹೋದರೆ, ಈ ವಿಚಾರವನ್ನು ನಿರ್ಧಾರಕ್ಕೆ ಬರಲು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ಒಪ್ಪಿಸಲಾಗುವುದೆಂದೂ ಭರವಸೆಯಿತ್ತರು.

ಕರ್ನಾಟಕದೊಂದಿಗೆ ಕೇರಳ ಗಡಿಯ ಸಮಸ್ಯೆಯೂ ಇದೆ. ಕೇರಳದ ಕನ್ನಡಿಗರು ಮಂಗಳೂರಿನಲ್ಲಿ ಸೇರಿದ ಕರ್ನಾಟಕ ರಾಜ್ಯ ರಾಜಕೀಯ ಪರಿಷತ್ತಿನ ವೇಳೆ ಮತ ಪ್ರದರ್ಶನವನ್ನೂ ಮಾಡಿದರು. ತಮ್ಮ ಆಶೆ ಈಡೇರದೆ ಹೋದರೆ, ನೇರಕ್ರಮ ಕೈಕೊಳ್ಳುವುದಾಗಿಯೂ ಅವರು ಗೊತ್ತುಪಡಿಸಿದ್ದಾರೆ. ಆಗೋಸ್ತು ೧೫ರ ಒಳಒಳಗೆ ಕರ್ನಾಟಕ— ಮಹಾರಾಷ್ಟ್ರ ಗಡಿ ತಂಟೆಯನ್ನು ಪರಿಹರಿಸುವ ಮಾತಿತ್ತ ನಂದಾ ಕರ್ನಾಟಕ—ಕೇರಳ 'ಗಡಿ ಸಮಸ್ಯೆ"ಯನ್ನು ನವಂಬರ ಒಂದರೊಳಗೆ ಪರಿಹರಿಸಿ ಅನ್ಯಾಯಕ್ಕೆ ಗುರಿಯಾದ ಕನ್ನಡಿಗರಿಗೆ ನ್ಯಾಯ ದೊರಕಿಸಿ ಕೊಡಬೇಕು.

ಕೇಶವಾನಂದ ಭಾರತಿ

ದಕ್ಷಿಣ ಕನ್ನಡದ ಒಂದು ತಾಲೂಕಾಗಿ ಕನ್ನಡ ಪರಂಪರೆಯಲ್ಲಿ ಬೆಳೆದು ಬಂದ ಕಾಸರಗೋಡಿನಲ್ಲಿ ಎಡನೀರು ಮಠವಿದೆ. ಶ್ರೀ ಆದಿ ಶಂಕರಾಚಾರ್ಯರ ಅದ್ವೈತ ಸಂಪ್ರದಾಯದ ಮಠವಿದು. ಈ ಮಠದಲ್ಲಿ ಶ್ರೀ ಮತ್ ಕೇಶವಾನಂದ ಭಾರತಿ ಶ್ರೀಪಾದಂಗಳವರು ಈಗ ಪೀಠಾರೂಢರಾಗಿದ್ದಾರೆ. ಧರ್ಮ—ಸಂಸ್ಕೃತಿಗಳಲ್ಲಿ ಅತ್ಯಧಿಕ ಆಸಕ್ತಿಯಿಂದ ಭಾಗವಹಿಸುತ್ತಿರುವ ಶ್ರೀ ಪಾದಂಗಳವರು ಪ್ರತಿವರ್ಷವೂ 'ಶಂಕರ ಜಯಂತಿ' ಮಹೋತ್ಸವವನ್ನು ವೈಭವೋಪೇತವಾಗಿ ಆಚರಿಸಿ, ಜನತೆಯಲ್ಲಿ ಧರ್ಮ ಜಾಗ್ರತಿಯನ್ನು ಮಾಡುತ್ತಿದ್ದಾರೆ. ಈ ಉತ್ಸವದಲ್ಲಿ ಊರು—ಪರವೂರಿನ ಅನೇಕ ವಿದ್ವಾಂಸರು ಭಾಗವಹಿಸುತ್ತಾರೆ.

ಶ್ರೀ ಪಾದಂಗಳವರು ಎಳೆಯ ಪ್ರಾಯದಲ್ಲಿ ಸಂಸ್ಥಾನ ಪೀಠವನ್ನೇರಿದವರು. ತಮ್ಮ ಹಿರಿಯರು ತುಳಿದ ದಾರಿಯಲ್ಲೇ

ಮುಂದುವರಿದು, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕಾಳಜಿ ವಹಿಸುವವರು. ಇಂತಹ ಕಾರ್ಯಕ್ರಮಗಳಿಗೆ ವಿಶೇಷ ಪ್ರೋತ್ಸಾಹ ನೀಡುವರು. ಒಂದು ಹೈಸ್ಕೂಲನ್ನು ಸ್ವಂತ ವೆಚ್ಚದಿಂದ (ಗ್ರಾಂಟು ಪಡೆಯದೇನೇ) ನಡೆಸಿಕೊಂಡು ಬಂದು ವಿದ್ಯಾದಾನದಂತಹ ಮಹಾ ಪುಣ್ಯ ಕಾರ್ಯದಲ್ಲಿ ತಾಲುಗೊಂಡಿದ್ದಾರೆ. ಕನ್ನಡದ ಜಾನಪದ ಕಲೆ ಯಕ್ಷಗಾನದ ಮಹಾ ಅಭಿಮಾನಿಗಳಾದ ಇವರು ಕನ್ನಡದ ಪ್ರೇಮಿಗಳು, ಕನ್ನಡದ ಹಿತಚಿಂತಕರು, ಪ್ರೋತ್ಸಾಹಕರು.

ಶ್ರೀ ಸ್ವಾಮಿಗಳವರು ಎಳೆಯ ಮರೆಯ ಕಾಯಿಯಂತೆ ಸಮಾಜೋದ್ಧಾರಕ್ಕೆ ಹೇತುವೆನಿಸುವ ವಿವಿಧ ಕಾರ್ಯಕ್ರಮಗಳಲ್ಲಿ ವ್ಯಸ್ತರಾಗಿದ್ದು ಮಠಾಧಿಪತಿಗಳಿಗೆ ಕಲಶಪ್ರಾಯರಾಗಿದ್ದಾರೆ, ಶಮದಮಾದಿ ಸನ್ಯಾಸ ಸಹಜ ಗುಣಗಳ ತವರುಮನೆಯಾದ ಸ್ವಾಮಿಯವರು ದಾನಧರ್ಮಾದಿಗಳಿಗೂ ಹೆಸರಾಗಿದ್ದಾರೆ. ಶ್ರೀ ಕೇಶವಾನಂದ ಭಾರತಿಯವರು ಸನ್ಯಾಸಿ ಕುಲಕ್ಕೊಂದು ದೀಪಕರಾಗಿದ್ದಾರೆ.

ಇನ್ನೊಬ್ಬರ ಸಾಧನೆಯನ್ನು ಲಘುವಾಗಿ ಟೀಕಿಸುವುದು ಅನೀತಿ; ಇದೇ ಅವನತಿಯ ಮೂಲವೆಂದು ತಿಳಿ.

೦ ೦ ೦

ಪುಸ್ತಕ, ಪತ್ರಿಕೆಗಳನ್ನು ಓದುವ ಚಟವಿರಬೇಕು, ಆದರೆ ಪುಕ್ಕಟೆ ಓದುವ ಪರಿಪಾಠ ಸಲ್ಲದು.

ವಾರದ ಕಥೆ

ಭೀಷ್ಮ ಪ್ರತಿಜ್ಞೆ

ಬರೆದವರು:—ಶ್ರೀ ಪಿ ರಾಮಕೃಷ್ಣ ಆಚಾರ್, ಕುಂತೂರು

ರವಿಯು ಭುವಿಯನ್ನು ಬಿಟ್ಟು ಪಡುವಗಡಲನ್ನು ಸೇರಿದೊಡನೆ ನಾಡನ್ನು ಕತ್ತಲು ಆವರಿಸತೊಡಗಿತು. ಅದೇ ರೀತಿ ಶಿಲ್ಪಿಯ ಹೃದಯವನ್ನೂ ಕೂಡಾ ಸಂಶಯವೆಂಬ ಪಿಶಾಚಿಯೊಂದು ಕವಿಯತೊಡಗಿತು.

ಜ್ಯೋತಿಷ್ಯದಲ್ಲಿ ಪಂಡಿತನಾಗಿದ್ದ ಜಕಣ್ಣ ತನ್ನ ಮನಸ್ಸಿನಲ್ಲಿ ಗುಣಿಸಿನೋಡಿದ. "ತನ್ನ ಹೆಂಡತಿ ಜಾರಿಣಿ" ಎಂಬ ಸಂಶಯ ಆತನನ್ನು ಇನ್ನೂ ಬಿಡಲಿಲ್ಲ. ನೆಟ್ಟಗೆ ಸ್ನಾನಾಗಾರದ ಕಡೆಗೆ ನಡೆದು ಸ್ನಾನವನ್ನು ಮುಗಿಸಿ ಸಂಧ್ಯಾವಂದನೆ ಗೈದು ಬಳಿಕ ಊಟದ ಶಾಸ್ತ್ರ ಮುಗಿಸಿ ಹಾಸಿಗೆಯಲ್ಲಿ ಬಿದ್ದುಕೊಂಡರೂ ಆತನಿಗೆ ನಿದ್ದೆ ಹತ್ತಲಿಲ್ಲ. "ಜಾರಿಣಿ, ಜಾರಿಣಿ" ಎಂಬ ಭೂತಾಕಾರದ ಶಬ್ದವು ಹೃದಯದಲ್ಲಿ ಬೃಹದ್ಧ್ವನಿಯನ್ನು ಹುಟ್ಟಿಸುತ್ತಿತ್ತು.

ಬೇಸರದ ಕಡಲಿನಲ್ಲಿ ತೇಲುತ್ತಿದ್ದ ಜಕ್ಕಣ್ಣನಿಗೆ ನಿದ್ರೆಯ ಸಮುದ್ರದಲ್ಲಿ ಮುಳುಗಿಹೋದುದು ಗೊತ್ತೇ ಆಗಲಿಲ್ಲ. ಜಕ್ಕಣ್ಣ ತನ್ನ ನಿದ್ರಾವಸ್ಥೆಯಲ್ಲೇ ಸಾಕ್ಷಾತ್ ವಿಶ್ವಕರ್ಮನನ್ನು ಕಂಡುಕೊಂಡ. ಭಗವಂತನನ್ನು ಕಂಡ ಜಕ್ಕಣ್ಣನಿಗೆ ಅಪಾರ ಸಂತೋಷವಾಯಿತು. "ದೇವ, ನಿನ್ನ ಸೇವೆಯನ್ನು ನಾನ್ಯಾವ ರೀತಿಯಲ್ಲಿ ಮಾಡಲಿ" ಎಂದು ಜಕ್ಕಣ್ಣ ಕೇಳಿದ. "ಶಿಲ್ಪ ಸಾರ್ವಭೌಮ, ನಿನ್ನಲ್ಲಿ ಜಗತ್ತಿಗೆ ಬೇಕಾದ ಎಲ್ಲಾ ಗುಣಗಳು ಉದಾತ್ತವಾಗಿ ಬಂದಿವೆ! ಎಚ್ಚರಿಕೆ ನಡೆ ಮುಂದೆ. ಶಿಲ್ಪಕಲೆಯಲ್ಲಿ ನಿನ್ನ ಅಪೂರ್ವ ತೇಜಸ್ಸನ್ನು ತೋರಿಸಿ ಲೋಕದಲ್ಲಿ ಪ್ರಖ್ಯಾತನಾಗು" ಎಂದು ಜಕ್ಕಣ್ಣನಿಗೆ ದೇವರೇ ಹೇಳಿದಂತೆ ಭಾಸವಾಯಿತು. ತಕ್ಷಣ ಜಕ್ಕಣ್ಣ ಎಚ್ಚರಗೊಂಡನು. ಶಿಲ್ಪಕಲೆಯ ಸೇವೆ ಗೈಯಬೇಕಾದರೆ ನಾಡಬಿಟ್ಟು ತೆರಳಬೇಕು. ತನ್ನ ಕುಟುಂಬವನ್ನು ಮರೆಯಬೇಕು. ಹೊನ್ನು ಮಣ್ಣು, ಹೆಣ್ಣು ಎಲ್ಲವೂ ಅಪೂರ್ಣ ಜಗತ್ತಿನಲ್ಲಿ ಒಂದೇ ಕೀರ್ತಿಮಾತ್ರ ಅಮರ. ಈ ಕೀರ್ತಿಯನ್ನು ಕೆಲವರು ಕೆಲವು ವಿಧದಿಂದ ಸಾಧಿಸಬಹುದು. ನಾನು ನನ್ನ ಶಿಲ್ಪಕಲೆಯಿಂದ ಸಾಧಿಸುವೆ. ಬುದ್ಧದೇವನೇ ಲೋಕದ ಹಿತಕ್ಕಾಗಿ ಹೆಂಡತಿ ಮಕ್ಕಳನ್ನು ತೊರೆದು ಕಾಡನ್ನು ಸೇರಿಲ್ಲವೇ? ಹಾಗಿರುವಾಗ ನಾನು ಬಿಡುವುದು ಹೆಚ್ಚೇನು?"

ಶಿಲ್ಪಿಗೆ ನವಚೇತನ ತುಂಬಿಬಂತು. ಮನೆಯ ಬಾಗಿಲನ್ನು ತೆರೆದು ಅಂಗಳಕ್ಕೆ ಓಡಿದನು; ಅಂಗಳದಿಂದ ಬಯಲಿಗಿಳಿದು ಮುಂದಾದನು. ಅಮರ ಶಿಲ್ಪಿಯಾಗಿರುವ ಜಕ್ಕಣ್ಣನ ನಿರ್ಗಮನವನ್ನು ಕಂಡ ಕೈಬಾಳಿಗ ತೊರೆಗಳೂ ಝರಿಗಳೂ ತರುಗಳೂ ಲತೆಗಳೂ ಬೇಸರದಿಂದ ಬೀಳ್ಕೊಟ್ಟವು.

ಶಿಲ್ಪಿ ಮುಂದೆ ಮುಂದೆ ನಡೆದನು. ಬೆಳಗಾಯಿತು. ಪುನಃ ಇನ್ನೊಂದೂರಿಗೆ ತಲುಪಿದಾಗ ಕತ್ತಲಾಯಿತು. ಆದರೆ ಶಿಲ್ಪಿಯ ಮನದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಅದು ಶಿವಪುರ. ಶಿವಪುರದಲ್ಲಿ ಶಿವಾಲಯವನ್ನು ಹೊಸದಾಗಿ ನಿರ್ಮಿಸುತ್ತಿದ್ದಾರೆ ಜಕ್ಕಣ್ಣ ಆ ಶಿಲ್ಪಿಗಳ ಸಂಗಡ ತಾನೂ ಸೇರಿಕೊಂಡ ಇದರಿಂದ ಜಕ್ಕಣ್ಣನಿಗೆ ಹೆಚ್ಚಿನ ಅನುಭವ ಬಂತು. ಜಕ್ಕಣ್ಣನಲ್ಲಿದ್ದ ಓಜಸ್ಸನ್ನು ಕಂಡ ಜನರು ಅನೇಕರು ಅವನ ಶಿಷ್ಯರಾದರು. ಶಿವಾಲಯದಲ್ಲಿ ದೇಗುಲದ ಎಲ್ಲಾ ಕೆಲಸಗಳಾಗುವಷ್ಟರಲ್ಲಿ ತನ್ನಿಂತಾನೇ ಶಿವಲಿಂಗ ಉದ್ಭವಿಸಿಕೊಂಡಿತು,

ಪುರಸ್ಕಾರಗಳನ್ನು ಪಡೆದ ಶಿಲ್ಪಿ ಅಲ್ಲಿಂದ ಮುಂದೆ ನಡೆದ ಆಗ ಧರ್ಮಕ್ರಾಂತಿಯ ಸಮಯ. ಶೈವರು ವೈಷ್ಣವರಾಗುತ್ತಿದ್ದರು ವೈಷ್ಣವರು ಜೈನರಾಗುತ್ತಿದ್ದರ, ಕನ್ನಡ ನಾಡಿನ ಪ್ರಸಿದ್ಧ ಜೈನ ದೊರೆ ಬಿಟ್ಟಿದೇವ ಜೈನ ಮತವನ್ನು ಬಿಟ್ಟು ವೈಷ್ಣವನಾಗಿ ವಿಷ್ಣುವರ್ಧನನಾಗಿದ್ದನು. ಅವನು ಹರಕೆಯಂತೆ ಸದ್ಯದಲ್ಲೇ ಬೇಲೂರಲ್ಲಿ ಒಂದು ಚೆನ್ನಕೇಶವ ದೇವಾಲಯವನ್ನು ಕಟ್ಟಿಸುವುದರಲ್ಲಿದ್ದನು. ಆತನಿಗೆ ಯೋಗ್ಯರಾದ ಶಿಲ್ಪಿಗಳಾರೂ ಸಿಕ್ಕಿರಲಿಲ್ಲ. ಜಕ್ಕಣ್ಣನನ್ನು ಆತನು ಕರೆಸಿ ಈ ಕೆಲಸವನ್ನು ಆತನಿಗೆ ಒಪ್ಪಿಸಿದನು.

o o o

ಅಂದಿಗೆ ಶಿಲ್ಪಿ ತನ್ನ ನಾಡನ್ನು ಬಿಟ್ಟು ಹದಿನೆಂಟು ವರ್ಷವಾಗಿತ್ತು. ಆ ಹದಿನೆಂಟು ವರ್ಷದಲ್ಲಿ ಶಿಲ್ಪಿ ಸಾಧಿಸಿದ ಕೆಲಸಗಳೇನು? ಕೇವಲ ನಾಲ್ಕೈದು ದೇಗುಲಗಳ ಕೆಲಸ! ಆದರೆ ಆ ಕೆಲಸಗಳು ಶಿಲ್ಪಿಗೆ ಎಂದಿಗೂ ಚಿರಕೀರ್ತಿಯನ್ನು ಕೊಡುವಂತಹವು. ಶಿಲ್ಪಿ ಕೆತ್ತಿದ ಚಿತ್ರಗಳೇನು? ಜೀವಂತವಾಗಿರುವಂತೆ ಕಾಣುತ್ತಿವೆ ಬೊಂಬೆಗಳು. ಆಗಿನ ಕಾಲದ ಸಮಾಜದ ನೈಜಚಿತ್ರ ದೇಗುಲಗಳಲ್ಲಿ ರೂಪಿತವಾಗಿವೆ. ಜನರು ಶೂರರೂ ಧೀರರೂ ಆಗಿದ್ದರೆ ದೇಗುಲದ ಮೂರ್ತಿಗಳೂ ಶೂರತನವನ್ನು ತೋರಿಸುತ್ತವೆ. ಅಲಂಕಾರ ಪ್ರಿಯರೂ ವೈಭವದಿಂದ ಕೂಡಿದವರೂ ಆಗಿದ್ದರೆ ಮೂರ್ತಿಗಳು ಕೂಡಾ ಅದನ್ನು ಪ್ರತೀಕಿಸುತ್ತವೆ, ಆ ಖುತನದಿಂದ ವೈಜ್ಞಾನಿಕವಾಗಿ ಅನೇಕ ದೇಗುಲಗಳನ್ನು ಕಟ್ಟಿದು ಕೀರ್ತಿಯನ್ನು ಗಳಿಸಿದ ಜಕ್ಕಣ್ಣ. ಆತನೇ ಧನ್ಯ. ಕವಿ ಹೇಳುತ್ತಾನೆ: "ಬ್ರಹ್ಮನು ನಿರ್ಮಿಸಿದ ಬೊಂಬೆಗಳಿಗೆ ಪೂಜೆ ಮಾಡುವರು ಯಾರೊಬ್ಬರೂ ಇಲ್ಲ. ಶಿಲ್ಪಿ ನಿರ್ಮಿತ ಬೊಂಬೆಗೆ ಎಲ್ಲರೂ ಪೂಜೆ ಗೈಯ್ಯುವರೆಂ"ದು ಆದುದರಿಂದ ಶಿಲ್ಪಿ ಧನ್ಯನಾಗುತ್ತಾನೆ

ಅಂದು ಎಲ್ಲೆಲ್ಲೂ ಕೋಲಾಹಲ. ಗಂಟೆ, ಜಾಗಟೆ, ಶಂಖಗಳ ಧ್ವನಿ ಪ್ರತಿಧ್ವನಿಸುತ್ತಿದೆ. ದೇಗುಲದ ಮೂರ್ತಿಯ ಪ್ರತಿಷ್ಠಾಪನೆಯ ದಿನ ಅಂದು. ನೆರೆದ ಜನಸ್ತೋಮ ಎವೆಯಿಕ್ಕದೆ ಬಾಯಿಬಿಟ್ಟು ಶಿಲ್ಪಕಲೆಯನ್ನು ಕಂಡು ಅಚ್ಚರಿ ಪಡುತ್ತಿದೆ. ವಿಷ್ಣುವರ್ಧನನು ಶಿಲ್ಪಿಯ ಕೆಲಸದಲ್ಲಿ ತೃಪ್ತಿಪಟ್ಟು ಸಂತೋಷದಿಂದಿದ್ದಾನೆ. ಜನಸ್ತೋಮದ ನಡುವೆ ಹದಿನೆಂಟು ವರ್ಷದ ಬಾಲಕನೋರ್ವನು ಆ ಶಿಲ್ಪಕಲೆಯ ಸವಿಯನ್ನು ಸಂಪೂರ್ಣವಾಗಿ ಸವಿಯುತ್ತಾ ಬರುತ್ತಿರುವುದು ಯಾರ ಲಕ್ಷ್ಯಕ್ಕೂ ಬರಲಿಲ್ಲ. ಹೈದ ಮುಂದೆ ಮುಂದೆ ಸಾಗಿದ. ಗರ್ಭಗುಡಿ ಪ್ರವೇಶಿಸಿದ. ಅಲ್ಲೇ ಪ್ರತಿಷ್ಠಾಪನೆಗೆಂದು ಇಟ್ಟಿದ್ದ ಚೆನ್ನಕೇಶವನ ಮೂರ್ತಿಯನ್ನು ಕಂಡು ಬೆರಳು ಕಚ್ಚಿದ. ಬೆರಳು ಕಚ್ಚಿದ್ದನ್ನು ನೋಡಿದ ಎಲ್ಲಾ ಜನರು ಆಶ್ಚರ್ಯಪಟ್ಟರು.

"ಈ ಮೂರ್ತಿಯಲ್ಲಿ ಒಡಕಿದೆ" ಹುಡುಗನ ಬಾಯಿಯಿಂದ ಈ ಮಾತು ತನ್ನಿಂತಾನೇ ಹೊರಬಂತು.

"ನೀನು ಶಿಕ್ಷೆಗೆ ಒಳಗಾಗುವಿ. ಹಾಗೆನ್ನಬೇಡ ಹುಡುಗ" ಎಂದಿತು ಜನಸ್ತೋಮ.

"ಇಲ್ಲ ನಾನು ನಿಜವಾದುದನ್ನೇ ಹೇಳುತ್ತೇನೆ. ಈ ಮೂರ್ತಿ ಪೂಜೆಗೆಯೋಗ್ಯವಲ್ಲ."

ಶಿಲ್ಪಗುರುವಿಗೆ ಅಪಮಾನ ಮಾಡಿದನೆಂದು ಕೆಲವರು ಕೋಪದಿಂದ ಹಾರಿದರು. ಕೆಲವರು ಬೇಸರಪಟ್ಟರು. ಕೆಲವರು ನೆಟ್ಟಗೆ ಜಕ್ಕಣ್ಣನಲ್ಲಿಗೆ ತೆರಳಿ ಈ ವಿಷಯ ಹೇಳಿದರು. ಜಕ್ಕಣ್ಣ ಈ ಮಾತನ್ನು ಕೇಳಿದೊಡನೆ ಆಶ್ಚರ್ಯ ಕುತೂಹಲದಿಂದ ಗರ್ಭಗುಡಿಗೆ ಓಡಿದ.

"ಮಗೂ ನೀನು ಹೇಳುತ್ತಿರುವ ಮಾತು ತಪ್ಪು ಈ ಮೂರ್ತಿಯಲ್ಲಿ ಯಾವ ಒಡಕೂ ಇರಲಾರದು."

"ಒಡಕು ಖಂಡಿತ ಇದ್ದೇ ಇದೆ. ಇದನ್ನು ಪ್ರತ್ಯಕ್ಷವಾಗಿ ತೋರಿಸಬಲ್ಲೆ."

"ಪ್ರತ್ಯಕ್ಷವಾಗಿ ತೋರಿಸಿಕೊಡುವಾಗ ಮೂರ್ತಿಗೆ ಯಾವ ಕೆಡುಕೂ ಬರಬಾರದು"

"ಇಲ್ಲ ಮೂರ್ತಿಗೆ ಕೆಡುಕು ಬಾರದಂತೆ ಇದರ ನ್ಯೂನತೆಯನ್ನು ತೋರಿಸಿ ಕೊಡಬಲ್ಲೆ!

"ಈ ಮೂರ್ತಿಯಲ್ಲಿ ಒಡಕು ಕಂಡುಬಂದುದಾದರೆ ನನ್ನ ಬಲಗೈಯನ್ನೇ ನಾನು ತುಂಡರಿಸಿ ಬಿಡುವೆನು" ಭೀಷ್ಮ ಪ್ರತಿಜ್ಞೆ ಹಾಕಿದ ಜಕ್ಕಣ್ಣ.

"ಹಾಗಾದರೆ, ಮೂರ್ತಿಗೆ ಸಂಪೂರ್ಣ ಪೂಸುವಷ್ಟು ಗಂಧವನ್ನು ಅರೆದು ತನ್ನಿರಿ" ಎಂದ ಎಳ್ಳಷ್ಟು ಎದೆಗುಂದದ ಆ ಹುಡುಗ.

ಅನೇಕ ಜನರು ಹೋಗಿ ದೊಡ್ಡ ದೊಡ್ಡ ಗಂಧದ ಕೊರಡುಗಳನ್ನು ತೇಯ

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಆತ್ಮ ವಿಶ್ವಾಸ

ಹತ್ತು ಚೀನಾಗಳನ್ನು ಎದುರಿಸಬಲ್ಲೆವು

ಬರೆದವರು: ಶ್ರೀ ಶಿವಶಂಕರ, ಮದ್ರಾಸು

ಪಾಕಿಸ್ಥಾನ, ಚೈನಾ ಮತ್ತು ದ್ವೀಪಾಂತರಗಳ ಒಟ್ಟು ಜನಸಂಖ್ಯೆಯು ಸುಮಾರು ನೂರುಕೋಟಿ ಇರಬಹುದು. ಭಾರತದ ಜನಸಂಖ್ಯೆಯು ನಲ್ವತ್ತೈದು ಕೋಟಿ ಇದೆ. ಜನಸಂಖ್ಯೆಗಳ ನಡುವಣ ಈ ಅಂತರವು ಕೌರವ–ಪಾಂಡವರ ಸೈನ್ಯದ ಸ್ಮರಣೆಯನ್ನುಂಟುಮಾಡುತ್ತದೆ. ಕೇವಲ ಸಂಖ್ಯಾಬಲವೇ ಸಮರನಿರ್ಣಾಯಕ ವಿಷಯವಾಗಿದ್ದಲ್ಲಿ ಬಾಬರ್ ವಿಜೇತನಾಲು ಸಾಧ್ಯವಿರುತ್ತಿದ್ದಿಲ್ಲ. ವಿಜಯಮಾಲೆ ಬೀಳುವದು ಯುದ್ಧ ಪ್ರಣಾಳಿ ಹಾಗೂ ಶಸ್ತ್ರ ಬಲಕ್ಕೆ—ಜಪಾನಿನ ಉದ್ವಸ್ಥಕ್ಕೆ ಕಾರಣವೇನು?—ಅಮೇರಿಕದವರ ಬಳಿ ಇದ್ದಂತೆ ಅಣು ಗುಂಡು ಇತ್ಯಾದಿ ಅವರ ಬಳಿ ಇರದೇ ಇದ್ದದ್ದು, ಬ್ರಿಟಿಷ್ ಕೂಟ ರಾಷ್ಟ್ರಗಳಿಗೆ ಜರ್ಮನಿಯತ್ತ ಹೊರಡಲು ಸಾಧ್ಯವಾಗಲಿಲ್ಲ— ಕಾರಣವೆಂದರೆ, ಜರ್ಮನಿಯ ಬಳಿ ಉತ್ತಮ ವಿಮಾನ ದಲವಿತ್ತು. ಆದೇ ಹಿಟ್ಲರನು ಅಣುಗುಂಡುಪಯೋಗಿಸುತ್ತಿದ್ದರೆ ಅಮೇರಿಕ—ಬ್ರಿಟನ್ನು ಹೇಳಹೆಸರಿಲ್ಲದಂತಾಗುತ್ತಿತ್ತು

ಪಾಕಿಸ್ಥಾನಕ್ಕೆ ೧೯೫೪ರಿಂದ ಅಮೇರಿಕವು ಪ್ರತಿವರ್ಷ ಸಾಧಾರಣ ನಾನ್ನೂರು ಕೋಟಿ ರೂಪಾಯಿಗಳಷ್ಟು ಸೈನಿಕ ಸಹಾಯವನ್ನೀಯುತ್ತಿದೆ ಅದರೆ, ಈ ಹತ್ತು ವರ್ಷಗಳಲ್ಲಿ ಸುಮಾರು ನಲ್ವತ್ತು ನೂರು ಕೋಟಿ ರೂಪಾಯಿ ಸೈನಿಕ ಸಹಾಯ ಬಂದಿರುತ್ತದೆ. ಅಮೇರಿಕವು ಪಾಕಿಸ್ತಾನಕ್ಕೆ ನೆಲ—ಜಲಗಾಮಿ ಕ್ರಾಫ್ಟ್— ಟೇಂಕ್; ಜಲ—ನೆಲ – ನಭಗಾಮಿ ಕ್ರಾಫ್ಟ್, ಇತರ ರೀತಿಯ ತ್ವರಿತ ವೇಗದ ವಿಮಾನ ಹಾಗೂ ಟೇಂಕುಗಳನ್ನೂ ಶಸ್ತ್ರಾಸ್ತ್ರಗಳನ್ನೂ ಕೊಟ್ಟಿರುತ್ತದೆ. ಈ ಶಸ್ತ್ರಾಸ್ತ್ರಗಳನ್ನು ಕಂಡು ಭಯ ಭೀತರಾಗುವ ಆವಶ್ಯಕತೆ ಇಲ್ಲ. ದೃಢನಿಶ್ಚಯ ಮತ್ತು ವಿಶ್ವಾಸ ಇದ್ದಲ್ಲಿ ವಿಜಯ ಮಹಲಿನ ಕದ ತೆರೆಯಲ್ಪಡುವವರೆಗೂ ಹೋರಾಡಲು ಸಾಧ್ಯ. ಮುಷ್ಟಿಯಲ್ಲಿರುವಷ್ಟು ಐರೋಪ್ಯರು ದಕ್ಷಿಣ ಆಫ್ರಿಕಾವನ್ನು ಅಲ್ಲೋಲ ಕಲ್ಲೋಲ ಮಾಡುತ್ತಿದ್ದಾರೆ. ಇಸ್ರಾಯೇಲ್ ಇಷ್ಟು ಚಿಕ್ಕದಿದೆಯಾದರೂ, ಅರಬ ನಾಡುಗಳಿಂದ ಸಂಪೂರ್ಣ ಆವರಿಸಲ್ಪಟ್ಟಿದೆಯಾದರೂ ಅದಿಂದು ಜೀವಿತ ರಾಷ್ಟ್ರವಿದೆ, ಭಾರತಕ್ಕೆ ಕೂಡಾ ಪಾಕ್ ಚೈನಾಗಳನ್ನೆದುರಿಸಿ ದಾನವ ದಮನಕ್ಕೆ ಸಾಧ್ಯವಿದೆ. ಈ ಸಂಯುಕ್ತ ಶಕ್ತಿಯನ್ನು ಸೋಲಿಸಲು ಸಾಧ್ಯವಿದೆ. ಆದರಲ್ಲಿನಿತೂ ಸಂದೇಹವಿಲ್ಲ. ಆದರೆ, ಅದಕ್ಕೆ ಆಗತ್ಯ ಬೇಕಾಗಿರುವದು ಸಿದ್ಧತೆ, ಅಷ್ಟೆ.

ಅಣುಯುಗದಲ್ಲಿ ರಾಕೇಟ್ ಮಿಸಿಲಿಗಳಿದ್ದರೂ ಕೂಡಾ, ಅಗ್ನಿ ಬಾಣ ಹಾಗೂ ಸಿಡಿಮದ್ದುಗಳಿದ್ದರೂ ಕೂಡಾ ಪರಂಪರಾನುಗತ ಹತ್ಯಾರುಗಳ ಮಹತ್ವವು ಕಮ್ಮಿ ಇರುವುದಿಲ್ಲ. ತೋಪು. ಬಂದೂಕು ರಣರಂಗದಲ್ಲಿಂದೂ ನಿರುಪಯೋಗಿ ಎನಿಸಿಕೊಳ್ಳುವುದಿಲ್ಲ, ಇವುಗಳ ಶಕ್ತಿ ಅಣುಗುಂಡು, ಸಿಡಿಮದ್ದುಗಳಿಗಿಂತ ಕಮ್ಮಿ ಇರಬಹುದು. ಚೈನಾವು ಭಾರತಕ್ಕೆದುರಾಗಿ ೧೯೬೨ರಲ್ಲಿ ಪಾರಂಪರಿಕ ಶಸ್ತ್ರಾಸ್ತ್ರಗಳನ್ನೇ ಉಪಯೋಗಿಸಿತ್ತು. ಭಾರತೀಯ ಸೈನಿಕನು ಯೋಧನಿದ್ದಾನೆ. ಚೈನಿ ಸಿಪಾಯಿಗಿಂತ ಸಹಸ್ರಪಾಲು ಅಧಿಕ ಯೋಗ್ಯನಿದ್ದಾನೆಂಬುದನ್ನು ಹೇಳುವ ಆವಶ್ಯಕತೆಯೇ ಇಲ್ಲ.

ಭಾರತದಲ್ಲಿರುವ ತೋಪುಗಳಿಂದ ಸುಮಾರು ಐವತ್ತು ಮೈಲು ದೂರದ ವರೆಗೂ ಗುರಿ ಹೊಡೆಯಲಾಗುತ್ತದೆ ಅದರ ಅರ್ಥವೇನೆಂದರೆ ಚೈನಾವನ್ನು ನಾವು ಬಯಲಪ್ರದೇಶಲ್ಲೆದುರಿಸಿದರೆ ಈ ತೋಪುಗಳಿಂದ ಅವರನ್ನು ಹತ್ತಿ ಹಾರಿಸಿದ ಹಾಗೆ ಹಾರಿಸಿಬಿಡಬಹುದು. ಇಂತಹ ತೋಪುಗಳನ್ನು ನಾವು ಹೆಚ್ಚಿಸಿಕೊಳ್ಳಬೇಕು ಅದಕ್ಕೆಂದು ಅಧಿಕ ದೂರಕ್ಕೆ ಟೇಂಕರುಗಳೇ ಬೇಕು ಇವರ ಉಪಯೋಗವು ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಇದೆ.

ಚೈನಾದೊಂದಿಗೆ ಲಢಾಖ್, ನೇಫಾ ಮತ್ತು ಹಿಮಾಲಯ ಪ್ರದೇಶದಲ್ಲಿ, ಅಂದರೆ ಮೆಕ್–ಮಹೋನ್ ರೇಖೆಯ ಬಳಿ, ಅಲ್ಲದೆ, ಉತ್ತರಪ್ರದೇಶ, ಆಸ್ಸಾಂ, ಹಿಮಾಚಲ ಪ್ರದೇಶ, ಪಂಜಾಬು, ಜಮ್ಮು ಮತ್ತು ಕಾಶ್ಮೀರಗಳಲ್ಲಿ ಕೂಡಾ ಹೋರಾಡಬೇಕಾದೀತು. ಈ ಎಲ್ಲಾ ಪ್ರದೇಶಗಳಲ್ಲಿ ಉತ್ತಮ ರಸ್ತೆಯ ಅಭಾವ ಇವೆ ಅಂದರೆ ಅಲ್ಲಿ ಶಸ್ತ್ರಾಸ್ತ್ರಗಳನ್ನೊಯ್ಯುವದು ಬಹಳ ಕಠಿಣಕಾರ್ಯವೆಂಬದು ಸ್ಪಷ್ಟ ಮಳೆಗಾಲದಲ್ಲೇ ಆಗಲಿ ಚಳಿಗಾಲದಲ್ಲೇ ಆಗಲಿ ನಾವು ಆ ಪ್ರದೇಶಗಳಲ್ಲಿ ಚೈನಿ ಶತ್ರುಗಳನ್ನೆದುರಿಸಲು ಸಿದ್ಧರಿರಬೇಕು. ರಸ್ತೆಗಳ ಸಂಖ್ಯೆ ಕಮ್ಮಿ ಇರುವುದರಿಂದ ಭಾರೀ ಶಸ್ತ್ರಾಸ್ತ್ರಗಳನ್ನೊಯ್ಯಲು ಸಾಧ್ಯವಿಲ್ಲವೆಂದಾದೊಡನೆ ಕೈಕಾಲು ಬಿಡಬೇಕಾಗಿಲ್ಲ. ನಮ್ಮಲ್ಲೂ ಕೆಲವಾರು ಪಾರಂಪರಿಕ ಹತ್ಯಾರುಗಳವೆ—ಕೈಕೋವಿ, ಸ್ವಯಂ—ಚಾಲಿತ ಬಂದೂಕು, ಯಾಂತ್ರಿಕ ಕೋವಿ, ಹಲವಾರು ರೀತಿಯ ತೋಪುಗಳು, ಭಿನ್ನ – ವಿಭಿನ್ನ ರೀತಿಯ ಗುಂಡುಗಳು ಇತ್ಯಾದಿ. ಶಸ್ತ್ರಾಸ್ತ್ರಗಳ ವಿಷಯ ಹೀಗಾದ ಮೇಲೆ ಚೈನಾದೊಂದಿಗೆ ಹೋರಾಡಲು ಭಾರತದಲ್ಲಿ ಶಕ್ತಿ ಇವೆಯೆಂದಾಯಿತು, ಯುದ್ಧ ಮಾಡುವಾಗ ಚೈನಾದ ಶಕ್ತಿ ನಷ್ಟವಾಯಿತೆಂದಿಗೆ ಅದರ ಹಿಂಬಾಲಕ ರಾಷ್ಟ್ರಗಳ ಎದೆಹಾರಿಹೋಗುತ್ತದೆ. ಹೀಗೆಂದೊಡನೆ ನಾವು ಶಸ್ತ್ರಾಸ್ತ್ರಗಳನ್ನು ಸಿದ್ಧಗೊಳಿಸಬಾರದು, ಸಂಗ್ರಹಿಸಬಾರದು ಹಾಗೂ ರಸ್ತೆ ರಚನೆ ಮತ್ತು ದುರಸ್ತಿ ಮಾಡಕೂಡದೆಂದಲ್ಲ. ಚೈನಾವು ಸಿಡಿಮದ್ದುಗಳನ್ನು ತಯಾರಿಸುತ್ತಿದೆ. ಅವನ್ನೆದುರಿಸಲೂ ಭಾರತ ಸಿದ್ಧವಿರಬೇಕು.

ದ್ವೀಪಾಂತರದ ವಿಷಯ ಪರಿಶೀಲಿಸಿದಲ್ಲಿ ಅದು ಸಹಸ್ರ ದ್ವೀಪಗಳ ಪುಂಜವಿದೆಂಬುದು ತಿಳಿದುಬರುತ್ತದೆ. ಆದರೊಂದಿಗೆ ಹೋರಾಟ ಸಮುದ್ರ ಹಾಗೂ ಆಕಾಶದಲ್ಲಿ ಭಾರತದ ವರ್ಣವನ್ನು ತಾಳಿದಿರುವ ದ್ವೀಪಾಂತರವು ಭಾರತದ ಮಿತ್ರ ರಾಷ್ಟ್ರವಾಗಿರಲು ಸಾಧ್ಯವೇನು? ಅದು ಚೈನಾದ ಸ್ನೇಹಿತ ರಾಷ್ಟ್ರವೆಂಬುದನ್ನು, ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅದು ಕೂಡಾ, ಹತ್ತು ವರ್ಷಗಳಲ್ಲದಿದ್ದರೂ ೨೪—೨೫ ವರ್ಷಗಳಲ್ಲಿ ಪೂರ್ಣ ಆಗ್ನೇಯಾವನ್ನು ಅಂಗೈಯಲ್ಲಿಟ್ಟುಕೊಳ್ಳಲು ಆಲೋಚಿಸುತ್ತಿದೆ. ಮಲೇಷ್ಯಾದಲ್ಲಿಯ ಜನಸಂಖ್ಯೆ ಕೇವಲ ಒಂದುಕೋಟಿಯಾದಲ್ಲಿ ಫಿಲಿಪ್ಪೈನಿನ ಜನಸಂಖ್ಯೆ ಮೂರು ಕೋಟಿ. ಈ ಕ್ಷೇತ್ರದಲ್ಲಿ ಅದರ ಕಣ್ಣುಗಳಿಗೆ ಬೀಳುವುದು ಭಾರತ ಮಾತ್ರ. ಈ ಒಂದು ಕಾರಣದಿಂದಾಗಿಯೇ ದ್ವೀಪಾಂತರವು ತನ್ನ ಹಿಂದಿನ ನಿಲುವನ್ನು ಬದಲಾಯಿಸಿ ಭಾರತವನ್ನೆದುರಿಸಲು ಸಮಯ ನೋಡುತ್ತಿದೆ.

ಜನಸಂಖ್ಯೆಯ ಒಂದುದಶಮಾಂಶ ಮಾತ್ರ ಸೈನ್ಯದಲ್ಲಿರುತ್ತದೆ ಸಾಧಾರಣ ಮೂವತ್ತು—ನಲ್ವತ್ತು ವರ್ಷಗಳ ನಡುವಣ ವ್ಯಕ್ತಿಗಳಿಗೆ ಸೈನಿಕ ಶಿಕ್ಷಣಕೊಟ್ಟು ಸಿದ್ಧಗೊಳಿಸಿಟ್ಟುಕೊಳ್ಳಲೇ ಬೇಕು ಚೈನಿ ಸೇನೆಯಲ್ಲಿ ಸುಮಾರು ಎಪ್ಪತ್ತು—ಎಂಭತ್ತು ಲಕ್ಷ ಸೈನಿಕರು ಇರಬಹುದು ಚೈನಾ ಹಾಗೂ ಅದರ ಗೆಳೆಯ ರಾಷ್ಟ್ರಗಳ ಸಂಯುಕ್ತ ಶಕ್ತಿ ಒಂದ ಕೋಟಿ ಸೈನಿಕರದ್ದಿರಬಹುದು. ಈ ಪೂರ್ಣ ಸಂಖ್ಯೆಯು ಒಂದೇ ಸ್ಥಳದಲ್ಲಿ ನಿಂತು ಕಾದಾಡಲು ಸಾಧ್ಯಇರುವುದಿಲ್ಲ. ಅವರಿಗೆ ಮಾರ್ಶೆಲ್ ಚಿಯಾಂಗ್ ಕೈಶೇಖರ ಭಯವೂ ಇದೆ. ಪೆಕಿಂಗಿನ ರಾಜಕೀಯ ಅತ್ಯುತ್ತಮ ಸುರಕ್ಷಿತವಾಗಿರುವದಿಲ್ಲ. ಮಂಚೂರಿಯಾದಿಂದ ಕಝಾಕಸ್ಥಾನದವರೆಗೊಂದು ಪಹರೆಯವರನ್ನು ನಿಲ್ಲಿಸಬೇಕಾಗಿರುತ್ತದೆ. ಹೀಗಿರುವುದರಿಂದ ಚೈನಾಕ್ಕೆ ಹಿಮಾಲಯ ಪತ್ತ ಸುಮಾರು ಒಂಭತ್ತು ಅಥವಾ ಹತ್ತು ಸೈನಿಕ ವಿಭಾಗಗಳನ್ನು ಕಳುಹಿಸಬಹುದು, ಅಷ್ಟೆ. ಭಾರತಕ್ಕಿರುವಂತೆ ಚೈನಾಕ್ಕೂ ಹಲವಾರು ಸಮಸ್ಯೆಗಳಿವೆ. ರಸ್ತೆಗಳ ರಚನೆಯೂ ಅದರಲ್ಲಿ ಒಂದು. ತ್ರಿವಿಷ್ಟಪ ಪೀಠಭೂಮಿಯಲ್ಲಿ ೧೯೫೦ರಿಂದ ಚೈನೀಯರಿದ್ದಾರೆ. ಸಿಂಕಿಯಾಂಗಿನಿಂದ ಅಕ್ಷಯ ಚಿನ್ನಗೆ ಬರುವಾಗ ದಾರಿಯಲ್ಲಿ ಕುಂಸೂನು ಪರ್ವತವನ್ನು ದಾಟಿ ಬರಬೇಕಾಗುತ್ತದೆ. ಅವರಾಗಲೇ ಅಲ್ಲಿ ಮಳೆಗಾಲಕ್ಕೆ ಯೋಗ್ಯವಿರುವ ರಸ್ತೆಗಳನ್ನು ನಿರ್ಮಿಸಿರುತ್ತಾರೆ. ಪರ್ವತದ ಸ್ಥಿತಿಗತಿಯೂ ಚೈನಾಕ್ಕೆ ಚೆನ್ನಾಗಿ ಅನುಕೂಲವಾಗಿದೆ. ಈ ಕಾರಣದಿಂದಾಗಿ ಅವರು ಸಮರ ಸಾಮಗ್ರಿಗಳನ್ನು ಬಹಳ ಸುಲಭವಾಗಿ ರಣಾಂಗಣಕ್ಕೆ ತೆಗೆದುಕೊಂಡು ಬರಲು ಸಾಧ್ಯವಿದೆ. ಲಢಾಖ್ ಮತ್ತಿತರ ಭಾರತೀಯ ಗಡಿಯ ಬಳಿಯೇ ಚೈನೀಯರು ರಸ್ತೆಗಳನ್ನು ನಿರ್ಮಿಸಿದ್ದಾರೆ ಅಲ್ಲಿ ಅವರು ಸರಬರಾಜು ಸಂಗ್ರಹಾಲಯಗಳನ್ನು ತೆರೆದಿರುವರು. ಅದೂ ಅಲ್ಲದೆ ಅದಷ್ಟು ಬೇಗನೇ ಸಾಮಾನುಗಳನ್ನು ತರಿಸಿಕೊಳ್ಳಲಿಕ್ಕಾಗಿ ಏರ್ಪಾಡು ಮಾಡಿಕೊಂಡಿಕೊಂಡಿದ್ದಾರೆ ಈ ದೃಷ್ಟಿಯಲ್ಲಿ ಅವರಿಗೆ ತ್ರಿವಿಷ್ಟಪವಾಗಲೀ ಸಿಂಕಿಯಾಂಗ್ ಆಗಲೀ ಮುಖ್ಯವಲ್ಲ. ಯಾಕೆಂದರೆ, ಅಲ್ಲಿಗೆನೇ ಸಾಮಗ್ರಿಗಳು ಪೆಕಿಂಗಿನಿಂದ ಬರಬೇಕಾಗಿರುತ್ತದೆ ತ್ರಿವಿಷ್ಟಪದಲ್ಲಿ ಚೈನಾದ ೧೪—೧೫ ವಿಭಾಗ ಇದೆಯೆಂದರೆ ೨,೨೫,೦೦೦ ಸೈನಿಕರಿದ್ದಾರೆನ್ನಬಹುದು. ಅವರಿಗೆ ಪ್ರತೀ ದಿನ ಮೂರು ಗಾಡಿಗಳ ಹಾಗೂ ೧,೦೦೦ ಟ್ರಕ್ಕುಗಳ ಆವಶ್ಯಕತೆ ಇದೆ. ಈ ಕಾರ್ಯ ಸುಲಭವಿರುವುದಿಲ್ಲ ಈ ರೀತಿ ಚೈನಾ ಬಹಳಷ್ಟು ದಿನ ನಿಲ್ಲುವಂತಿಲ್ಲ. ಆದರೆ ಚೈನಾವು ಲ್ಹಾಸಾ ತ್ರಿವಿಷ್ಟಪ—ಸಿಂಕಿಯಾಂಗ್‌ಗಳವರೆಗೆ ಹಳಿಯನ್ನು ಹಾಕಿದಲ್ಲಿ ಪರಿಸ್ಥಿತಿ ಬದಲಾದೀತು. ಆದರೆ ಅದಕ್ಕೆ ಸಮಯ ಬೇಕಾಗುತ್ತದೆ ಭಾರತಕ್ಕೆ ಬೇಕಾಗುವ ಸಮರ ಸಾಮಗ್ರಿವಗೈರೆಗಳನ್ನು ಆಕಾಶ ಮಾರ್ಗದ ಮೂಲಕ ಕೊಂಡೊಯ್ಯಬೇಕಾಗಿ

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇಂದಿಗ ಮಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧–೦೦
ಉತ್ತಮ ಪ್ರತಿ ರೂ. ೧–೫೦
ಖಂಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ

ಅಂತಾರಾಷ್ಟ್ರೀಯ ಘಟನೆ

ಕ್ಯಾರೋವಿನಲ್ಲಿ ಕ್ರುಶ್ಚೇವರು

ರಶ್ಯದ ಪ್ರಧಾನಿ ನಿಕಿಟಾ ಕ್ರುಶ್ಚೇವರು ಸದ್ಯ ಸಂಯುಕ್ತ ಅರಬ ಪ್ರಜಾರಾಜ್ಯದ ಸಂಚಾರವನ್ನು ತೊಡಗಿದ್ದಾರೆ. ಐಗುಪ್ತದ ಜನತೆಯು ಇವರಿಗೆ ಭವ್ಯವಾದ ಮತ್ತು ಹಾರ್ದಿಕವಾದ ಸ್ವಾಗತವನ್ನಿತ್ತಿತ್ತು. ಇದು ಸ್ವಾಭಾವಿಕ. ಸುಯೇಜ ಕಾಲುವೆಯನ್ನು ನಸ್ಸೇರರು ರಾಷ್ಟ್ರೀಕರಣಗೊಳಿಸಿದಂಗ ಮತ್ತು ಯುದ್ಧದ ಛಾಯೆ ಜಗತ್ತಿನಲ್ಲಿ ಆವರಿಸಿದಾಗ, ಕ್ರುಶ್ಚೇವರು ತಮ್ಮ ಸಹಾಯಕ್ಕೆ ನಿಂತಿರುವುದನ್ನೂ ಸುಯೇಜ ಕಾಲುವೆಯನ್ನು ಪಾಶ್ಚಾತ್ಯ ಸಾರಿಗಾ ವ್ಯವಸ್ಥಾಪಕರು ಮರಳಿ ಹೋದ ನಂತರ ಅದನ್ನು ನಡೆಸುವಲ್ಲಿ ಸಹಕಾರ ನೀಡಿರುವುದನ್ನೂ ಐಗುಪ್ತದ ಜನ ಸಮುದಾಯವು ಎಂದಿಗೂ ಮರೆಯಲಾರದು. ಇದಾದ ನಂತರ ಅಧ್ಯಕ್ಷ ನಸ್ಸೇರರು ರಶ್ಯದ ವಿಮಾನ ಮತ್ತಿತರ ಶಸ್ತ್ರಾಸ್ತ್ರಗಳನ್ನು ಕೊಂಡುಕೊಂಡು ಶಕ್ತಿಶಾಲಿ ಸಂರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ ಇದಕ್ಕೂ ಮಿಗಿಲಾಗಿ ರಶ್ಯವು ಐಗುಪ್ತಕ್ಕೆ ನೆರವಾಗಿದೆ. ಲಕ್ಷಾಂತರ ಎಕ್ರೆ ಮರುಭೂಮಿಗೆ ನೀರನ್ನೊದಗಿಸಬಲ್ಲ ನೈಲನದಿಗೆ ಅಡ್ಡವಾಗಿ ಹಾಕಲಾದ ಅಸ್ವಾನ್ ಅಣೆಕಟ್ಟನ್ನು ಕಟ್ಟಲು ಅಮೇರಿಕೆ ಮತ್ತು ಜಾಗತಿಕ ಬ್ಯಾಂಕು ನಿರಾಕರಿಸಿದಾಗ ಕ್ರುಶ್ಚೇವರು ತಮ್ಮ ಸಹಾಯಕ್ಕೆ ಧಾವಿಸಿದ್ದನ್ನು ಐಗುಪ್ತ ಜನತೆ ಮರೆಯಲಾರದು.

ಹೀಗೆ ರಶ್ಯ—ಐಗುಪ್ತಗಳ ಸಂಪರ್ಕ ಬಹಳ ತೀವ್ರವಾಗಿಯೇ ನಡೆದು ಬಂದಿದೆ. ಈ ವರ್ಷ ಅಧ್ಯಕ್ಷ ನಸ್ಸೇರರು ಹಲವು ಬಾರಿ ಮೋಸ್ಕೋವಿಗೆ ಹೋಗಿ ಬಂದಿದ್ದಾರೆ. ಕ್ರುಶ್ಚೇವರನ್ನು ಆಗ ಆಮಂತ್ರಿಸುತ್ತಾ ಬಂದಿದ್ದಾರೆ. ಹಾಗಿದ್ದರೂ ಪ್ರಧಾನಿ ಕ್ರುಶ್ಚೇವರು ಕ್ಯಾರೋವಿಗೆ ಬರಬೇಕಾದರೆ, ಇಷ್ಟು ಕಾಲ ಕಾದಿರುವುದು ಏಕೆಂದು ತಿಳಿಯುವುದಿಲ್ಲ. ಇದೀಗ ಬಹಳಷ್ಟು ತಡವಾಗಿಯೇ ನಡೆದ ಈ ರಶ್ಯನ್ ಪ್ರಧಾನಿಯ ಭೆಟ್ಟಿಯು ಐತಿಹಾಸಿಕ ಮಹತ್ವದ್ದೆಂದು ವರ್ಣಿಸಿದರೆ, ಅತಿಶಯೋಕ್ತಿಯಾಗಲಾರದು

ಮಧ್ಯಪೂರ್ವದ ದೇಶಗಳು ಸಾಂಪ್ರದಾಯಿಕವಾಗಿಯೇ ರಶ್ಯನ್ ವಿದೇಶ ನೀತಿಯಿಂದ ದೂರವಿರುವವೆಂಬುದನ್ನು ಮರೆಯುವಂತಿಲ್ಲ. ಹಿಂದೆ ಸಿರಿಯಾಕ್ಕೆ ರಶ್ಯವು ಬೃಹತ್ ಪ್ರಮಾಣದ ನೆರವನ್ನು ನೀಡಿದಾಗ, ರಶ್ಯದ ಈ ಕೃತಿಯನ್ನು ಸಂದಿಗ್ಧ ದೃಷ್ಟಿಯಿಂದ ಪಾಶ್ಚಾತ್ಯ ಮಿತ್ರ ರಾಷ್ಟ್ರಗಳು ನೋಡಿದುವು; ಇದನ್ನು ಅನ್ಯಾಯದ್ದೆಂದು ವರ್ಣಿಸುವಷ್ಟು ಅವು ಮುಂದುವರಿದುವು. ಆದರೆ, ಇಂತಹ ವಿರೋಧಕ್ಕೆ ಅಮೇರಿಕೆ ಬ್ರಿಟನ್ ಮತ್ತು ಫ್ರಾನ್ಸ್‌ಗಳೊಡನೆ ರಶ್ಯಕ್ಕಿದ್ದ ಈ—ಸಂಬಂಧವೇ ಕಾರಣವಾಗಿತ್ತು. ಇಂದು ಈ ಸಂಬಂಧವು ಪುನಶ್ಚೇತನಗೊಂಡಿದೆ. ಹಾಗಾಗಿ ಹಿಂದೆ ಕಾಣಿಸಿಕೊಂಡಂತಹ ವಿರೋಧ ಭಾವನೆಯು ಇಂದು ಎಂದಿಗೂ ಮೂಡಲಾರದು; ಸಂದೇಹ ದೃಷ್ಟಿಯೂ ಚಿಗುರದು. ಆದುದರಿಂದಲೇ ಕ್ರುಶ್ಚೇವರು "ಉಚಿತ ಸಮಯ"ವನ್ನರಿತು ಕೊಂಡೇ ಸಂಚಾರಕ್ಕೆ ತೊಡಗಿದ್ದಾರೆ ಎನ್ನುವುದು ಸರಿಯೂದುದು.

ಐಗುಪ್ತದಲ್ಲಿ ಕಮ್ಯೂನಿಸ್ಟರನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿಲ್ಲವೆಂಬುದೊಂದು ದೂರಿತ್ತು. ನಸ್ಸೇರರು ಈ ಮನೋಭಾವದಿಂದ ರಶ್ಯನ್ ಪ್ರಧಾನಿಯವರು ನೊಂದೂ ಇದ್ದರು; ಮೋಸ್ಕೋದಿನ ವೇದಿಕೆಯ ಮೇಲೆ ನಿಂತು ಕ್ಯಾರೋವಿನ ಈ ನೀತಿಯನ್ನು ಸ್ಪಷ್ಟವಾಗಿ ಖಂಡಿಸಿಯೂ ಇದ್ದರು. ಆದರೆ, ಅಧ್ಯಕ್ಷ ನಸ್ಸೇರರು ಅವರಿಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿ ಬಿಟ್ಟಿದ್ದಾರೆ. "ಈ ಪ್ರಸಂಗವು ಐಗುಪ್ತದ ಆಂತರಿಕ ವಿಚಾರ. ವಿದೇಶಿ ಶಕ್ತಿಗಳು ಇದರಲ್ಲಿ ಎಂದಿಗೂ ಹಸ್ತಕ್ಷೇಪ ಮಾಡಬಾರದು. ಅದೆಷ್ಟು ಮಿತ್ರ ರಾಷ್ಟ್ರವಾಗಿರಲಿ, ಐಗುಪ್ತದ ಆಂತರಿಕ ನೀತಿಯಲ್ಲಿ ಕೈಹಾಕುವುದನ್ನು ನಾವು ವಿರೋಧಿಸುತ್ತೇವೆ. ಕ್ಯಾರೋವು ನಿರ್ಲಿಪ್ತ ನೀತಿಯನ್ನು ಅನುಸರಿಸುವ ರಾಷ್ಟ್ರ. ಸಂಪೂರ್ಣ ಸ್ವಾತಂತ್ರ್ಯ ಮತ್ತು ಬಾಹ್ಯಶಕ್ತಿ ಪ್ರಭಾವದಿಂದ ಸಂಪೂರ್ಣ ವಿಮುಕ್ತಿಯೇ ಅದರ ಅರ್ಥ" ಎಂದು ಅವರು ಕಠೋರ ಸತ್ಯವನ್ನು ನುಡಿದಿದ್ದಾರೆ. ಕ್ರುಶ್ಚೇವರಿಗೆ ಇದು ಮೊದಮೊದಲು ಕಿವಿ ಚುಚ್ಚಿದಂತೆ ಭಾಸವಾದರೂ ವಸಾಹತುವಾದದಿಂದ ಬಿಡುಗಡೆ ಮತ್ತು ಆರ್ಥಿಕಾಭಿವೃದ್ಧಿಯತ್ತ ಮುನ್ನಡೆದೇ ಮೂಲ ಗುರಿಯಾಗಿರುವ ಆಫ್ರೋ ಏಶ್ಯಾನ್ ದೇಶಗಳಿಗೆ ಇದಕ್ಕಿಂತ ಉತ್ತಮವಾದ ನೀತಿಯು ಬೇರಿಲ್ಲವೆಂಬುದನ್ನು ಮನಗಂಡರು. ಎಂತಲೇ ತನ್ನ ಸಂಚಾರಕ್ಕೆ ತೊಡಗಿದರು.

ಕಾರ್ಗಲಿ (ಬಿಹಾರ)ಯ ಕಲ್ಲಿದ್ದಲು ಶುದ್ಧೀಕರಣದ ಕಾರಖಾನೆ.

ಕ್ರುಶ್ಚೇವರು ಕ್ಯಾರೋದಲ್ಲಿ ಹಲವು ಭಾಷಣಗಳನ್ನು ಮಾಡಿದರು. ಇವುಗಳಲ್ಲಿ ಅವರು ಯೆಮೆನ್ ಮತ್ತು ದಕ್ಷಿಣ ಅರೇಬಿಯಾಗಳ ಬಗ್ಗೆ ಬ್ರಿಟನ್ ಅನುಸರಿಸುವ ನೀತಿಯನ್ನೂ ಮೊಜಾಂಬಿಕ್ ಮತ್ತು ಅಂಗೋಲಾಗಳಲ್ಲಿ ಪೋರ್ಚುಗೀಜ ದಮನನೀತಿಯನ್ನೂ ಖಂಡಿಸಿದರು. ಅಣ್ವಸ್ತ್ರ ಪರಿಶೀಲನಾಪ್ರಯೋಗ ನಿಷೇಧವೇ ಮೊದಲಾದ ವಿಷಯಗಳು ತನಗೆ ಕಮ್ಯುನಿಸ್ಟ ಚೀನಾದೊಡನಿರುವ ಭಿನ್ನಾಭಿಪ್ರಾಯಗಳನ್ನು ಬಹಿರಂಗ ಪಡಿಸಿದರು. ದ್ವಿತೀಯ ಬಾಡುಂಗ ಮಾದರಿಯ ಪರಿಷತ್ತಿನಲ್ಲಿ ಭಾಗವಹಿಸಲು ಅರ್ಹತೆಯಿರುವ ಏಶ್ಯನ್ ರಾಷ್ಟ್ರ ರಶ್ಯವೆಂದವರು ಘೋಷಿಸಿದರು. ಜಕಾರ್ತಾದಲ್ಲಿ ಭಾರತೀಯ ನಿಯೋಗದ ನಾಯಕ ಸರ್ದಾರ ಸ್ವರ್ಣಸಿಂಗರು ರಶ್ಯದ ಬಹುಭಾಗವು ಏಶ್ಯಾದಲ್ಲಿಯೇ ಇರುವುದರಿಂದ ಅದಕ್ಕೂ ಬಾಡುಂಗ ಮಾದರಿಯ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಸೂಚಿಸಿದ್ದನ್ನು ನೆನಪಿಸಿಕೊಳ್ಳಬಹುದು ಆಗ, ಈ ಸೂಚನೆಯನ್ನು ಬಲವಾಗಿ ವಿರೋಧಿಸಿದ ದೇಶಗಳೆಂದರೆ, ಕೆಂಪು ಚೀನಾ ಮತ್ತು ಪಾಕಿಸ್ತಾನಗಳು. ಪೀಕಿಂಗ್ ತರ್ಕಬದ್ಧವಾಗಿ ನಿರಾಕರಿಸುತ್ತಿರುವ ಆಫ್ರೋ-ಏಶ್ಯಾದಲ್ಲಿ ಮೋಸ್ಕೋವಿನ ಪಟ್ಟ ಭದ್ರಸ್ಥಾನಕ್ಕೆ ಕ್ಯಾರೋ ಬೆಂಬಲವನ್ನು ಈಗ ಕ್ರುಶ್ಚೇವರು ನಿರೀಕ್ಷಿಸುತ್ತಿದ್ದಾರೆ. ಕ್ಯಾರೋ ಪೂರ್ಣ ಬೆಂಬಲವು ತಮಗೆ ದೊರೆತರೆ ಉಳಿದ ಅರಬ ಮತ್ತು ಆಫ್ರಿಕನ್ ರಾಷ್ಟ್ರಗಳ ಹಿತೇಚ್ಛೆ ಗಳಿಸುವುದು ಅಷ್ಟು ಪ್ರಯಾಸವೆನಿಸದೆಂದು ಎಲ್ಲರೂ ಬಲ್ಲರು—ಚೀನೀಯ ಕೆಂಪು ಪ್ರಧಾನಿ ಲಾಯರು ತನ್ನ ಲಾಯರ್‌ನಿಯ ಪರೀಕ್ಷೆಯು ಕ್ಯಾರೋದಲ್ಲಿ ನಡೆದಾಗಲೇ ಅನುತ್ತೀರ್ಣರಾದುದು ಅವರ ವಿಫಲ ಸಂಚಾರಕ್ಕೆ ಕಾರಣವಾಯಿತು.

ಅರಬ ಮತ್ತು ಆಫ್ರೋ ದೇಶಗಳು ರಶ್ಯನ್ ಮಾದರಿಯ ಕಮ್ಯುನಿಜಂನಲ್ಲಿ ಆಸಕ್ತಿ ವಹಿಸುವುದಿಲ್ಲ, ಈ ಬಗ್ಗೆ ಉತ್ಸಾಹವೂ ಅವುಗಳಲ್ಲಿಲ್ಲ ಆದರೂ ಅವು ರಶ್ಯದ ಕೆಲವು ನೀತಿಯನ್ನು ಮೆಚ್ಚುತ್ತವೆ. ಪೋರ್ಚುಗೀಸ ವಸಾಹತು ಶಾಹಿಯನು

(೯ನೇ ಪುಟ ನೋಡಿರಿ)

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ, ಯಾವದೇ ತರದ ಕನ್ನಡ ಇಲ್ಲವೆ ಇಂಗ್ಲಿಷ್ ಮುದ್ರಣ ಕಾರ್ಯಗಳಿಗೆ

ವಿಚಾರಿಸಿರಿ:

ನವಯುಗ ಪ್ರೆಸ್

ಸಂತೆಕಟ್ಟೆ ಉಡುಪಿ

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ. ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್ 66 ಉಡುಪಿ

ಜನತಾ ಉವಾಚ

ಹಿಂದೀ ಪ್ರಚಾರ

ಇದುವರೆಗೆ ಮೈಸೂರು ರಾಜ್ಯದಲ್ಲಿ ಸ್ವಯಂ ಪ್ರೇರಿತ ಸಂಸ್ಥೆಗಳು ಹಿಂದೀ ಪ್ರಚಾರದ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ. ವಿವಿಧ ಸಂಸ್ಥೆಗಳು ನಡೆಸುವ ಪರೀಕ್ಷೆಗಳು ಭಿನ್ನ ಮಟ್ಟದ್ದಾಗಿವೆಯೆಂಬ ಕಾರಣವನ್ನು ಮುಂದಿಟ್ಟು ಸರಕಾರವು ಈ ಸಂಸ್ಥೆಗಳ ಪರೀಕ್ಷೆಗಳಿಗೆ ೧೯೬೫ರಿಂದ ಮಾನ್ಯತೆಯನ್ನು ಹಿಂತೆಗೆದುಕೊಂಡು, ತಾನೇ ವಿವಿಧ ಪರೀಕ್ಷೆಗಳನ್ನು ನಡೆಸುವ ವ್ಯವಸ್ಥೆ ಮಾಡುವುದಾಗಿ ಯೋಚಿಸಿ, ಈ ಸಂಬಂಧದ ವಿವರಗಳನ್ನು ಗಜೇಟಿನಲ್ಲಿ ಪ್ರಕಟಿಸಿದೆ. ಈ ವಿಚಾರವನ್ನು ಮನನ ಮಾಡಿದಾಗ, ಹಿಂದೀ ಪ್ರಚಾರದ ಕಾರ್ಯಕ್ಕೆ ಹೊಸ ಯೋಜನೆಯು ಪೋಷಕವಾಗುವುದೆಂದು ಭಾಸವಾಗುವುದಿಲ್ಲ. ಇದೂ ಒಂದು ರಾಷ್ಟ್ರೀಕರಣದ ಯೋಜನೆಯೆಂದು ತೋರುವುದು. ರಾಜ್ಯದ ವಿಶ್ವವಿದ್ಯಾಲಯಗಳ ಪಾಠಪಟ್ಟಿಯಲ್ಲಿಯೇ ಮಾನ್ಯತೆಯನ್ನು ಕಾದುಕೊಳ್ಳುವುದು ಸಾಧ್ಯವಾಗಿಲ್ಲವೆಂಬುದನ್ನು ನಾವು ಗಮನಿಸಬೇಕು. ರಾಜ್ಯ ಸರಕಾರದ ಓರಿಯಂಟಲ್ ಬೋರ್ಡ್ ನಡೆಸುತ್ತಿರುವ ಪರೀಕ್ಷೆಗಳ ಕ್ರಮವನ್ನು ಅಭ್ಯಸಿಸಬೇಕು. ಆಗ ಹಿಂದೀ ಪ್ರಚಾರದ ಕಾರ್ಯವನ್ನ ಸರಕಾರವು ತನ್ನ ಕೈಗಳಿಗೆ ತೆಗೆದುಕೊಳ್ಳುವುದು ಒಳ್ಳೆಯದಲ್ಲವೆಂದು ತೋರುವುದು. ಸಾಮಾನ್ಯ ಪಾಠಪಟ್ಟಿಯನ್ನು ಅನುಸರಿಸುವಂತೆ ಅದು ಹಿಂದೀ ಪ್ರಚಾರ ಸಂಸ್ಥೆಗಳನ್ನು ಕೇಳಿಕೊಳ್ಳಬಹುದು; ಅವು ಭರದಿಂದ ಮಾಡುವ ಹಿಂದೀ ಪ್ರಚಾರ ಕಾರ್ಯಕ್ಕಿಂತ ಸುಗಮವಾಗಿ ಹಿಂದೀ ಪ್ರಚಾರವು ಸರಕಾರದ ಕೈಯಿಂದ ಆಗಲಾರದು. ಸರಕಾರವು ಈ ಯೋಜನೆಯ ಗುಣಾವಗುಣಗಳು, ರಾಜ ಭಾಷಾ ಹಿಂದಿಯ ಪ್ರಚಾರದ ಆವಶ್ಯಕತೆ-ಮೊದಲಾದುವನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕು. ಹಳೆಯದನ್ನು ದೂರ ತಳ್ಳಿ ಮತ್ತೆ ಅದಕ್ಕೇ ಶರಣು ಹೋಗುವುದು ಸಲ್ಲದು. ಸರಕಾರದ ಮೆಡಿಕಲ್ ಸ್ಕೂಲ್ ಯೋಜನೆಯಂತೆ ಹಿಂದೀ ಯೋಜನೆಯೂ ಹಾಸ್ಯಾಸ್ಪದವಾಗಿ ಕೊನೆಗೊಳ್ಳುವಂತಾಗಬಾರದು.

ಉಡುಪಿ —ಸದಾನಂದ ಭಟ್.

ಖಾಸಗೀ ಶಾಲೆಗಳು

ಸರಕಾರಿ ಸಹಾಯಕ ಖಾಸಗೀ ಶಾಲೆಗಳ ಮೆನೇಜರರು ತಮ್ಮ ಆಡಳಿತೆಯ ಅಧ್ಯಾಪಕರ ಮೇಲೆ ಆದಷ್ಟು ದೂರನ್ನು ಸರಕಾರದ ಪಂಪಾಂಬರಿಕೆಗೆ ತಂದು ತಮ್ಮ ಭಾರವನ್ನು ತಪ್ಪಿಸುವಲ್ಲಿ ಹಾಗೂ ಸರಕಾರವು ತಮ್ಮ ಹೊರಿಸಿದ ದೂರಿಗೆ ಅಧ್ಯಾಪಕರೇ ಹೊಣೆಗಾರರೆಂದು ಹೇಳುವಲ್ಲಿ ವಿದ್ಯಾಖಾತೆಯು ಗಮನಿಸಿದ್ದರೆ ಖಾಸಗಿ ಶಾಲೆಗಳ ಅಧ್ಯಾಪಕರ ಜೀವನವು ಉಭಯಶಃ ಕ್ಲಿಷ್ಟಕರವೆಂಬುದು ಗಮನೀಯವಾಗಿದೆ. ಈ ಪರಿಸ್ಥಿತಿಯಲ್ಲಿ ಸರಕಾರವು ಮೆನೇಜರ್ ಮತ್ತು ಅಧ್ಯಾಪಕರ ಶಾಸನವನ್ನು ನಿಷ್ಪಕ್ಷಪಾತವಾದ ವಿಧಿಯಿಂದ ಕೈಕೊಂಡು, ಮುಚ್ಚುವ ಖಾಸಗೀ ಶಾಲೆಗಳ ಆಡಳಿತೆಯನ್ನು ಕುರಿತು ತಕ್ಕ ನಿಗಾವಹಿಸುವುದು ಅಧ್ಯಾಪಕರ ಹಿತದೃಷ್ಟಿಯಿಂದ ಅಗತ್ಯವೆಂದು ತೋರುವುದಿಲ್ಲವೇ?

ಸುರತ್ಕಲ್ಲು —"ವಿಜಯಾ."

ನವದೆಹಲಿಯಲ್ಲಿ ನವಯುಗ

ದಿನಾಂಕ ೩೦-೪-೧೯೬೪ರ 'ನವಯುಗ' ಸಂಚಿಕೆಯಲ್ಲಿ ಪ್ರಕಟವಾಗಿರುವ ಪಾಕಿಸ್ತಾನದಲ್ಲಿ ಅಯೂಬ—ಚೌ ಎಲಿಂಗನ ಲೇಖನವು ಜನತೆಯ ಗಮನವನ್ನು ಸೆಳೆದುಕೊಂಡಿದೆನ್ನಬಹುದು. ಇದರಲ್ಲಿ ಹೇಳಿರುವ ಎರಡು ವಿಷಯಗಳಿಗೆ ಒಡನೆ ಪ್ರತಿಫಲ ಕಂಡು ಬಂದಿರುತ್ತದೆ. ಮೊದಲನೆಯದಾಗಿ, ಬರ್ಮಾದಲ್ಲಿ ಭಾರತದ ರಾಯಭಾರಿ ಇಲ್ಲದಿರುವ ವಿಷಯ. ಎರಡನೆಯದಾಗಿ "ಅಯೂಬರು ಸೈನಿಕ ಅನುಭವ ಉಳ್ಳವರು, ಅಂತೆಯೇ ಚೌ ಕೂಡಾ ....ಆದುದರಿಂದಲೇ ಸೇನಾಧಿಕಾರಿಗಳ ನಡುವೆ ಮಾತುಕತೆ ನಡೆಯುತ್ತದೆ, ಒಪ್ಪಂದ ನಡೆಯುತ್ತದೆ......" ಈ ಎರಡೂ ಹಣ್ಣುಗಳನ್ನು ಕೇಂದ್ರ ಸರಕಾರವು ಒಂದೇ ಕಲ್ಲಿನಲ್ಲಿ ಉದುರಿಸುತ್ತದೆ. ಬರ್ಮಾಕ್ಕೆ ಶ್ರೀ ರಾಮದಾಸ ಕರಾರಿಯವರನ್ನು ರಾಯಭಾರಿಯನ್ನಾಗಿ ಆರಿಸಿಕೊಳ್ಳಲಾಗಿದೆ. ಬರುವ ತಿಂಗಳಲ್ಲಿ ಅವರಲ್ಲಿಗೆ ಹೋಗಬಹುದು. ಶ್ರೀ ರಾಮದಾಸ ಕರಾರಿಯವರು ಸೇನಾಧಿಕಾರಿಯಾಗಿದ್ದವರೆಂಬುದು ಮರೆಯಲಾಗದ ವಿಷಯ. ಅಂತೆಯೇ ಬರ್ಮಾದಲ್ಲಿರುವದು ಸೈನಿಕ ಸರಕಾರವೆಂಬುದನ್ನು ಮರೆಯಲು ಸಾಧ್ಯ ಇರುವದಿಲ್ಲ. ಬರ್ಮಾದ ಸೇನಾಧಿಕಾರಿಯ ಮಾತು ಭಾರತದ ಸೇನಾಧಿಕಾರಿ (ನಿವೃತ್ತರಾದರೂ) ರಾಯಭಾರಿಗೆ ಸುಲಭವಾಗಿ ಅರ್ಥವಾಗಬಹುದು. ಆದರೆ ಅದಕ್ಕೆ ಬೇಕಾಗಿರುವದು ರಾಷ್ಟ್ರದ ಮೇಲೆ ಶ್ರದ್ಧೆ, ಗೌರವ ಮತ್ತು ಪ್ರೀತಿ; ಶ್ರೀ ರಾಮದಾಸರಲ್ಲಿ ಅದಕ್ಕೇನೂ ಕೊರತೆ ಅಥವಾ ಅಭಾವ ಇರಲಿಕ್ಕಿಲ್ಲ. ಆದರೆ ಅವರು ದೇವತೆಗಳನ್ನು ತೃಪ್ತಿಪಡಿಸಬೇಕಾಗುತ್ತದೆ. ಇತರ ರಾಯಭಾರಿಗಳಂತೆ ಸೇನಾಧಿಕಾರಿಯಾಗಿದ್ದವರು ವಾದ್ಯವಾಡಲಾರರೆಂಬುದು ಸಾಮಾನ್ಯ ಜನತೆಯ ಅಭಿಪ್ರಾಯ.

ಮದ್ರಾಸು. —ಶಿವಶಂಕರ.

ನಗೆಗಡಲು

?

ಭಟ್ರು— ಶಾಸ್ತ್ರಿಗಳೆ, ನಮ್ಮ ಹುಡುಗನಿಗೆ ಹೆಂಣಿನ ಜಾತಕ ಏನೊ ತಂದ್ರಿ, ಹುಡುಗನಿಕ್ಕಿಂತ ಹುಡುಗಿಗೆ ಒಂದು ವರುಷ ಜಾಸ್ತಿಯಲ್ಲಾ...

ಶಾಸ್ತ್ರಿ.... (ಯಾವದೊ ಗುಂಗಿನಲ್ಲಿ) ಅದೇನು ಭಟ್ರೆ; ಹೆಂಣಿನ ಮದುವೆ ಈ ವರುಷವೇ ಮುಗಿಸಿಕೊಂಡು—ಹುಡುಗನಿಗೆ ಮದುವೆ ಬರುವ ಮಾಘಕ್ಕೆ ಮಾಡಿದರಾಯಿತು.

ಂ ಂ ಂ

ಔಷಧಿ....

"ಆರೋಗ್ಯಗಳನ್ನೆಲ್ಲ ನಾಶಗೊಳಿಸುವ ಮತ್ತು ರೋಗವನ್ನು ಸಂರಕ್ಷಿಸುವ" ಔಷಧಿಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಂ ಂ ಂ

ಜಾಹಿರಾತು...

ಇನ್ನೊಬ್ಬರ ತಲೆಗೂದಲನ್ನು ಕಂಡು ಅಸೂಯೆ ಪಡುವುದಕ್ಕಿಂತ....ನಮ್ಮ ಈ ಹೊಸ ಹೇರ್ ಓಯ್ಲ—ಉಪಯೋಗಿಸಿ—ತಮ್ಮ ತಲೆಯನ್ನೆ ಕಂಡು ಅಸೂಯೆ ಪಡಿರಿ....

ಂ ಂ ಂ

ಹತ್ತೇ ನಿಮಿಷ

ಗಂಡ— ಇನ್ನೂ ಅಲಂಕಾರಾನೆ ಮುಗಿದಿಲ್ಲವೇ?....

ಹೆಂಡತಿ— (ಪೌಡರ ಹೊಡೆದುಕೊಳ್ಳುತ್ತ) ಎಷ್ಟು ಸಲ ಒದರಬೇಕು, ಹತ್ತೆ ನಿಮಿಷದಲ್ಲಿ ಬಂದೆ ಅಂತ ಎರಡು ತಾಸಿನಿಂದ ಕೂಗ್ತಾ ಇದ್ದೆನೆ...

ಂ ಂಂ

ಸೌಂದರ್ಯ

ಪುಟ್ಟು— ಹೆಂಗುಸರು...ಸ್ನೋ, ಪೌಡರು, ಲಿಪ್‌ಸ್ಟಿಕ್, ಹೇರ್‌ಓಯ್ಲ....ಇನ್ನೆಷ್ಟೋ ಸೌಂದರ್ಯ ಸಾಧನವನ್ನು ಯಾಕಾಗಿ—ಯಾರಿಗಾಗಿ ಉಪಯೋಗಿಸುತ್ತಾರೆ?

ಕಿಟ್ಟು— ಕಾಣುವವರ ಕಂಣಿಗೆ ಸೌಂದರ್ಯವತಿಯರಾಗಿ ಕಾಣಿಸಿಕೊಳ್ಳಲಿಕ್ಕೆ... ಎರಡನೆಯದಾಗಿ—ತಮ್ಮ ಕುರೂಪಿತನವನ್ನು ಮುಚ್ಚಿಕೊಳ್ಳಲಿಕ್ಕೆ....!!!

ಂ ಂ ಂ

—ಪಿ. ಎನ್ ಹೆಗ್ಡೆ—ಶಂಭು.
ಹೊಸಾಕುಳಿ.

ಪರಿಹಾರ

ಆವ: ಇವತ್ತು ಆರು ಕಡೆಯಲ್ಲಿ ಮದುವೆ ಮುಂಜಿ ಅಂತ ಹೇಳಿಕೆಯಿದೆಯಪ್ಪ. ಯಾರಲ್ಲಿಗೆ ಹೋಗೋದು ಯಾರಲ್ಲಿಗೆ ಬಿಡೋದು ಎಂಬುದೇ ದೊಡ್ಡ ಸಮಸ್ಯೆಯಾಗಿದೆ.

ಇವ: ಅಷ್ಟೇನೆಯೆ? ನಾನೊಂದು ಪರಿಹಾರ ಹೇಳ್ತೇನೆ. ನಿಮ್ಮನೆಯಲ್ಲೂ ಸತ್ಯನಾರಾಯಣ ಮಾಡ್ಸಿ ಬಿಡು. ಸಮಸ್ಯೆ ತಾನಾಗಿಯೇ ಬಗೆಹರಿಯುತ್ತದೆ.

ಸಮರ್ಥನೆ

"ನನಗೆ ಡಿಟೆಕ್ಟಿವ್ ನಾವೆಲ್‌ಗಳೆಂದರೆ ಭಾರಿ ಇಷ್ಟ" ಅಂತ ಅಂದಳು ಕಾಲೇಜ್ ಗರ್ಲ್ ತನ್ನ ಪ್ರಾಥಮಿಕ ಶಾಲೆಯಿಂದಲೇ ಸ್ನಾತಕಳಾದ ಸ್ನೇಹಿತಳೊಡನೆ ಆಕೆ ತುಸು ಠಕ್ಕಾಬಿಕ್ಕಿಯಾಗಿ ಮತ್ತೆ ಹೇಳಿದಳು:

"ನನಗೂ ಹಾಗೇನೇ. ಬಟಾಟೆಬೋಂಡಾಂತಂದ್ರೆ ಭಾರಿ ಇಷ್ಟ"

ಟವರ್ಗ

ಮೇಸ್ಟ್ರು: "ಏ ಟೋಣಪ, ಕಲಿತಿದ್ದೀಯೊ ಮೊನ್ನೆ ಕಲಿಸಿದ ಪಾಠ?"

"ಹೌದು ಸಾರ್"

"ಹಾಂಗಾದ್ರೆ ಕೇಳಲಿಯೋ ಪ್ರಶ್ನೆ?"

"ಸರಿಸಾರ್."

"ಒಂದೊಂದು ವರ್ಗದಲ್ಲಿ ಎಷ್ಟೆಷ್ಟು ವರ್ಣಗಳು?"

"ಐದು ಸಾರ್."

"ಟವರ್ಗ ಯಾವುದು"

"ಆಟ, ಈಟ, ಊಟ, ಏಟ, ಓಟ ಸಾರ್...."

"ಸಾಕಾಯ್ತೋ ನಿನ್ನ ಕಾಟ" ಎಂದ ಮೇಸ್ಟ್ರು ನಿಟ್ಟುಸಿರು ಬಿಟ್ಟರು.

—ಗೆಳೆ.

ದಿ ಸಿಂಡಿಕೇಟ್
ಲೋನ್ ಸ್ಕಾಲರ್‌ಶಿಪ್
ಎಂಡ್ ಎಜ್ಯುಕೇಶನ್ ಫಂಡ್

ತಾಂತ್ರಿಕ ವಿಷಯಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆಯಲಿಚ್ಚಿಸುವ ವಿಶೇಷ ಯೋಗ್ಯತೆಯ ಉಮೇದ್ವಾರರಿಗೆ ವಿದ್ಯಾರ್ಥಿ ವೇತನಗಳನ್ನು ಸಾಲರೂಪದಲ್ಲಿ ಕೊಡಲಾಗುವುದು.

ಕಳೆದ ಪಬ್ಲಿಕ್ ಪರೀಕ್ಷೆಯಲ್ಲಿ ಸೇಕಡಾ ೬೦ಕ್ಕಿಂತ ಹೆಚ್ಚು ಮಾರ್ಕುಗಳನ್ನು ಗಳಿಸಿದ ಯಾವದೇ ಜಾತಿ, ಮತದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಸಾಲರೂಪದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಬಹುದು.

ಸಾಮಾನ್ಯವಾಗಿ ಒಬ್ಬ ವಿದ್ಯಾರ್ಥಿಗೆ ಒಂದು ವರುಷಕ್ಕೆ ಕೊಡುವ ಅತ್ಯಧಿಕ ಸಾಲ ವಿದ್ಯಾರ್ಥಿ ವೇತನ ರೂ. ೫೦೦/-. ಈ ಹಣವನ್ನು ಸೇಕಡಾ ೪ರ ಬಡ್ಡಿಯಲ್ಲಿ ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುವುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ: ಕಾರ್ಯದರ್ಶಿ, ದಿ ಸಿಂಡಿಕೇಟ್ ಲೋನ್ ಸ್ಕಾಲರ್‌ಶಿಪ್ ಎಂಡ್ ಎಜ್ಯುಕೇಶನ್ ಫಂಡ್, 'ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್', ಮಣಿಪಾಲ ಅಥವಾ ಸಮೀಪದ ನಮ್ಮ ಶಾಖೆಯ ಸಂಪರ್ಕ ಬೆಳೆಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,

ಚಲಾವಣಾ ನಿಧಿ 57 ಕೋಟಿಗೂ ಮಿಕ್ಕಿದೆ. ಶಾಖೆಗಳು 190.

READ &
ADVERTISE IN
NAVAYUGA WEEKLY

ನವಯುಗ

ವರುಷ	ಉಡುಪಿ	ವಾರ
೪೩	೨೧-೫-೧೯೬೪	೩೪

ಒಕ್ಕಟ್ಟಿಗೆ ನಾಂದಿಯಾಗಲಿ

ದೇಶವು ಸ್ವತಂತ್ರವಾಗುವುದಕ್ಕೆ ಬಹಳ ಮೊದಲು, ಅಂದರೆ, ೧೯೩೫ರ ಮೇ ತಿಂಗಳಲ್ಲಿ ಮೊತ್ತಮೊದಲ ಬಾರಿಗೆ ನಮ್ಮ ಜಿಲ್ಲೆಯ ರಾಜಧಾನಿ ಮಂಗಳೂರಿನಲ್ಲಿ ರಾಜಕೀಯ ಸಮ್ಮೇಳನವು ನೆರೆದು, ಅಂದಿನ ರಾಜಕಾರಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಿತ್ತು. ಅದರ ನಂತರ ಇಂದು ೨೯ ವರ್ಷಗಳು ಗತಿಸಿದ ಬಳಿಕ ಮರಳಿ ಅಂತಹುದೇ ಮತ್ತೊಂದು ಸಮ್ಮೇಳನವು ನೆರವೇರಿತು. ಅಂದು ಮತ್ತು ಇಂದಿನ ರಾಜಕೀಯ ಸನ್ನಿವೇಶ ಮತ್ತು ಸಮಸ್ಯೆಗಳಲ್ಲಿ ಆಜಗಜಾಂತರವಿದೆ. ಇಂದಿನ ದಿನಗಳಿಗೆ ಅತ್ಯಾವಶ್ಯಕವಾದ ವಿಚಾರಗಳನ್ನು ಸಮ್ಮೇಳನವು ಸವಿಸ್ತಾರವಾಗಿ ಚರ್ಚಿಸಿತು; ರಾಜ್ಯದ ರಾಜಕೀಯ ನಾಯಕರೂ ಕೇಂದ್ರದ ಕೆಲವಂದಿ ಮಂತ್ರಿಗಳೂ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಅದಕ್ಕೆ ಪೂರಕವಾಗಿಯೇ ಎಂ. ಪಿ. ಸಿ. ಸಿ.ಯ ಸಭೆಯೂ ಮಂಗಳೂರಿನಲ್ಲಿಯೇ ನೇರಿ ಕೆಲವೊಂದು ಗೊತ್ತುವಳಿಗಳನ್ನು ಸ್ವೀಕರಿಸಿತು. ಇಲ್ಲಿ ನಾವು ಒಂದು ಮಾತನ್ನು ಅವಶ್ಯ ಗಮನಿಸಬೇಕು. ಕೇವಲ ಗೊತ್ತುವಳಿಯನ್ನು ಅನುಷ್ಠಾನಕ್ಕೆ ತಂದು ಅದರಲ್ಲಿ ಯಶಸ್ವಿಯಾಗುವುದು ಮುಖ್ಯವಲ್ಲ, ಅದರೂ ಗೊತ್ತುವಳಿಗಳು ಕಾರ್ಯಸಾಧನೆಗೆ ಪ್ರೇರಕ ಶಕ್ತಿಯಾಗಬೇಕು.

ಸಮ್ಮೇಳನವನ್ನು ಉದ್ಘಾಟಿಸುತ್ತ ಕಾಂಗ್ರೆಸಿನ ಅಧ್ಯಕ್ಷ ಕಾಮರಾಜರು ಕೆಲವೊಂದು ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ದೇಶದ ಹಿತ ಚಿಂತನೆಯನ್ನೂ ಕಾಂಗ್ರೆಸಿನ ಯಶವನ್ನೂ ಹಾರೈಸುತ್ತಿರುವ ಇವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪ್ರತಿಯೊಬ್ಬರೂ ಗಮನಿಸಬೇಕು. ಇಂದು ನಾವು ಸ್ವತಂತ್ರರಾಗಿದ್ದೇವೆ. ಆದರೆ ಎಲ್ಲರೂ ತಿಳಿದಿರುವಂತೆ ನಾವು ಆರ್ಥಿಕವಾಗಿ ಇನ್ನೂ ಸ್ವತಂತ್ರವಾಗಿಲ್ಲ. ಆದುದರಿಂದಲೇ ಅಭಿವೃದ್ಧಿಯ ಪಥದತ್ತ ನಾವು ಬಿಟ್ಟಡಿಯಿಡುತ್ತಿದ್ದೇವೆ. ನಮ್ಮ ಹೆಜ್ಜೆ ಕೆಲವೆಡೆ ತಪ್ಪಿರಬಹುದು; ನಡೆವಾಗ ಕೆಲವೊಮ್ಮೆ ಎಡವಿ ಬಿದ್ದಿರಲೂ ಬಹುದು. ಇದು ಸ್ವಾಭಾವಿಕ. ರಾಷ್ಟ್ರದ ಸೂತ್ರಧಾರತನವನ್ನು ಕಾಂಗ್ರೆಸ್ ಕಳೆದ ೧೭ ವರ್ಷಗಳಿಂದಲೂ ಹೊತ್ತುಕೊಂಡಿದೆ. ಆದುದರಿಂದ ಆಡಳಿತ ಪಕ್ಷವನ್ನು ಎದುರಿಸುವ ಹತ್ತುಹಲವು ಸಮಸ್ಯೆಗಳನ್ನು ಎದುರಿಸಿ, ಯಶಸ್ವಿಯಾಗಲು ಅವಶ್ಯಕ ಕಾರ್ಯಕ್ರಮಗಳನ್ನು ರೂಪಿಸುವುದು ಕಾಂಗ್ರೆಸಿನ ಕರ್ತವ್ಯ. ಈದಿಸೆಯಲ್ಲಿ ಕಾಂಗ್ರೆಸಿಗರಿಂದು ಮುಂದಾಗಿ ಬರಬೇಕು. ನಮ್ಮದೇಶ ಹೇಳಿಕೇಳಿ ಕೃಷಿಕರದು. ಆದುದರಿಂದ ಕೋಟ್ಯಾಂತರ ಗ್ರಾಮೀಣ ಜನತೆಯ ಉದ್ಧಾರವಾದರೆ ಮಾತ್ರ ದೇಶೋದ್ಧಾರವಾದೀತು. ಕೆಲವೇ ಜನ ಸಂಪನ್ನರನ್ನು ಬಿಟ್ಟರೆ, ಬಹು ಸಂಖ್ಯಾಕರು ಇನ್ನೂ ಅನ್ನ-ಬಟ್ಟೆ-ಮನೆಗಳಿಗಾಗಿ ವಿಲಿ ವಿಲಿಒದ್ದಾಡುತ್ತಲೇ ಇದ್ದಾರೆ. ಪ್ರತಿಯೊಬ್ಬ ನಾಗರಿಕನಿಗೂ ಜೀವನಕ್ಕೆ ಆವಶ್ಯಕವಾದ ಕನಿಷ್ಠ ಆವಶ್ಯಕತೆಗಳನ್ನಾದರೂ ಒದಗಿಸಿಕೊಡುವುದು ಕಾಂಗ್ರೆಸಿನ ಗುರಿಯಾಗಬೇಕು. ನಾವೀ ದೆಸೆಯಲ್ಲಿ ಮುಂದುವರಿಯುತ್ತಿರುವೆವಾದರೂ ಪರಿಪೂರ್ಣತೆಯನ್ನು ಸಾಧಿಸಿಲ್ಲ. ಈ ಗುರಿಯು ಈಡೇರುವ ತನಕ ಕಾಂಗ್ರೆಸ್ಸು ವಿಶ್ರಮಿಸಬಾರದು. ದೇಶದಲ್ಲಿ ಹಲವಾರು ಪಕ್ಷಗಳಿರುವವಾದರೂ ಅವುಗಳು ದೇಶವಾಳುವ ಹೊಣೆ ಹೊರುವ ಸಾಮರ್ಥ್ಯವನ್ನು ಇನ್ನೂ ಪಡೆಯಬೇಕಷ್ಟೆ, ಆದುದರಿಂದ ಕಾಂಗ್ರೆಸಿನ ಕರ್ತವ್ಯವು ಮತ್ತಷ್ಟು ದೊಡ್ಡದಾಗಿದೆ. ದೇಶವನ್ನು ಸರಿಯಾದ ಮಾರ್ಗದಲ್ಲಿ ನಡೆಸುವ ಗುರುತರ ಉತ್ತರದಾಯಿತ್ವವನ್ನು ಕಾಂಗ್ರೆಸ್ ಹೊತ್ತಿದೆ; ಇನ್ನೂ ಬಹುಕಾಲ ಹೊರಬೇಕಾಗಿದೆ. ೪೫ ಕೋಟಿ ಭಾರತೀಯರ ಭವಿಷ್ಯವನ್ನು ರೂಪಿಸುವ ಮಹಾಕಾರ್ಯದಲ್ಲಿ ತೊಡಗಿ ಅದರಲ್ಲಿ ಸಿದ್ಧಿ ಪಡೆಯಬೇಕಾಗಿದೆ.

ಸಂಘಟನೆಯಲ್ಲಿ ಶಕ್ತಿಯಿದೆ. ಶಕ್ತಿಯಿರುವಲ್ಲಿ ಯಶಸ್ಸು ತಾನೇತಾನಾಗಿ ಬರುತ್ತದೆ. ಆದರೆ,ಕಾಂಗ್ರೆಸ್ಸಿಗರಲ್ಲಿ ಇಂದು ಒಳಗುಂಪುಗಳು ತಲೆದೋರುತ್ತಿವೆ. ಇವುಗಳು ಪಕ್ಷದ ಶಕ್ತಿಯನ್ನು ಹ್ರಾಸಗೊಳಿಸುತ್ತಿವೆ. ಇದರ ದುಷ್ಟ ಪರಿಣಾಮ ಸಮಸ್ತ ಭಾರತೀಯರ ಮೇಲಾಗುತ್ತಿದೆ. ರಾಜ್ಯ ರಾಜ್ಯದಲ್ಲಿ ಜಿಲ್ಲೆ ಜಿಲ್ಲೆಯಲ್ಲಿ ಕಾಂಗ್ರೆಸಿಗರು ಪದವಿ-ಸ್ಥಾನ-ಮಾನಗಳಿಗಾಗಿ ಹೊಡೆದಾಡುವ ಪ್ರವೃತ್ತಿ ಬೆಳೆಯುತ್ತಿದೆ. ಇದರಿಂದಾಗಿ ನಿಷ್ಠಾವಂತ ಕಾರ್ಯಕರ್ತರು ಹಿಂದೆ ಸರಿಯಲೇ ಬೇಕಾಗಿ ಬಂದಿದೆ. ಸಂದರ್ಭ ಸಾಧಕರ ಕಾರುಭಾರ ತಡೆಯಿಲ್ಲದೆ ಸರಕಾರದಲ್ಲಿ ನಡೆಯುತ್ತಿಲ್ಲವೇ ಇದರ ಪರಿಣಾಮವಾಗಿಯೇ ಎಂಬಂತೆ ಲಂಚಗುಳಿತನ, ಅನೈಕ್ಯದ ಮನೋಭಾವ, ಕೋಮುವಾರು ಭಾವನೆಗಳು ತಾಂಡವವಾಡತೊಡಗಿವೆ. ಸಂಪತ್ತಿನ ಸಮಾನ ವಿತರಣೆಯ ಬದಲು ಮತೀಯ ಲಿರುವ ಮತ್ತುಗಳು ತಮ್ಮ ಪ್ರಭಾವವನ್ನು ತೋರಿಸತೊಡಗಿವೆ. ಎಂದಿನ ವರೆಗೆ ಕಾಂಗ್ರೆಸ್ಸು ದುರ್ಬಲತೆಗಳಿಂದ ದೂರವಿದ್ದು ನಿಸ್ವಾರ್ಥ ಬುದ್ಧಿಯಿಂದ ಜನಸಾಮಾನ್ಯರ ಹಿತವನ್ನೇ ಗಮನಿಸಿ ಕಾರ್ಯಮಗ್ನವಾಗುವುದಿಲ್ಲ, ಅಂದಿನ ವರೆಗೆ ಸಮರ್ಥ ಸಶಕ್ತ ಭಾರತವನ್ನು ನಾವು ಕಟ್ಟಲಿಲ್ಲ. ಸುಖ-ಶಾಂತಿ-ಸಂಮೃದ್ಧಿಗಳಿಂದ ತುಂಬಿ ತುಳುಕಾಡುವ ಹೊಸ ನಾಡೊಂದನ್ನು ಕಟ್ಟುವ ಭೀಷ್ಮ ಪ್ರತಿಜ್ಞೆಯನ್ನು ಮಾಡಿದೆ ಕಾಂಗ್ರೆಸ್ಸು; ಆ ಪ್ರತಿಜ್ಞೆಯನ್ನು ಎಂತಹ ಎಡರು ತೊಡರುಗಳೇ ಎಡತಾಕಿದರೂ ಎದುರಿಸುವ ಕೆಚ್ಚೆದೆ ಕಾಂಗ್ರೆಸಿಗರಲ್ಲಿರಬೇಕು. ಇನ್ನೊಬ್ಬರ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು ಅವುಗಳ ಪೊಳ್ಳು ಜಳ್ಳುಗಳನ್ನು ಪರಿಶೋಧಿಸಿ ಒಮ್ಮತದಿಂದ ಏಕಸಂಧವಹಿಡಿದು ಸಾಗುವ ನಿರಪೇಕ್ಷ ಬುದ್ಧಿಯನ್ನು ಕಾಂಗ್ರೆಸಿಗರು ಹೊಂದಬೇಕು. ಇಂತಹ ಕಾರ್ಯಸಾಧನೆಗೆ ಸದ್ಯ ನಡೆದ ರಾಜ್ಯ ರಾಜಕೀಯ ಸಮ್ಮೇಳನವು ಪ್ರೇರಕ ಶಕ್ತಿಯಾಗಲಿ, ರಾಜ್ಯದಲ್ಲಿ ಕಂಡು ಬರುತ್ತಿರುವ ಕಾಂಗ್ರೆಸ್ ಬಿಕ್ಕಟ್ಟು ದೂರ ಹರಿಯಲು ನಾಂದಿಯಾಗಲಿ, ಕಾಂಗ್ರೆಸ್ಸಿನಲ್ಲಿ ರಾಜ್ಯದ ಜನತೆಯಿಟ್ಟಿರುವ ಗೌರವಾದರ ಭಾವನೆಗಳನ್ನು ಉಳಿಸಿಕೊಳ್ಳುವಲ್ಲಿ ಸಿದ್ಧಿ ಪಡೆಯಲಿ.

ಜಗತ್ಪರ್ಯಟನ

ರಾವಲ್ಪಿಂಡಿಗೆ ಶೇಖ್

ಪ್ರಧಾನಿ ನೆಹರುರವರೊಡನೆ ಕಾಶ್ಮೀರ ವಿಷಯಕ ಮಾತುಕತೆಯ ಎಂಡನೆಯ ಸುತ್ತಿಗಾಗಿ ನವದೆಹಲಿಗೆ ಬಂದ ಶೇಖ್ ಅಬ್ದುಲ್ಲರು ರಾವಲ್ಪಿಂಡಿಗೆ ಭೆಟ್ಟಿಯಿತ್ತು ಅಲ್ಲಿ ಅಧ್ಯಕ್ಷ ಅಯೂಬ್ ಖಾನರೊಡನೆಯೂ ವಿಚಾರ ವಿನಿಮಯ ಮಾಡುವರು. ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿ ಭಾರತದೊಡನೆ ಒಡಂಬಡಿಕೆ ಮಾಡಿಕೊಳ್ಳುವುದಕ್ಕೆ ಮೊದಲು ತನ್ನನ್ನು ಕಾಣಬೇಕೆಂದು ಖಾನರು ಶೇಖರಿಗೆ ತಿಳಿಸಿದ್ದು ಶೇಖರದಕ್ಕೆ ಒಪ್ಪಿಗೆ ನೀಡಿದ್ದರು. ಶೇಖ್ ಅಬ್ದುಲ್ಲರು ಈಗಾಗಲೇ ಜಮ್ಮು ಮತ್ತು ಕಾಶ್ಮೀರಗಳ ಸುಮಾರು ೨೫ ನಾಯಕರೊಡನೆ ಮಾತುಕತೆ ನಡೆಸಿದ್ದರು. ಅವರಿತ್ತಿದ್ದ ಆಮಂತ್ರಣವನ್ನು ೧೫ ಜನ ನಾಯಕರು ತಿರಸ್ಕರಿಸಿದ್ದರು. ಜಾತೀಯ ಸೌಹಾರ್ದದ ಹಿನ್ನೆಲೆಯಲ್ಲಿ ಉಭಯತರಿಗೆ ಸಮಾಧಾನಕರವಾದ ಯಾವ ಪರಿಹಾರವನ್ನು ಶೇಖರು ಹುಡುಕುತ್ತಿರುವರು ಎಂದು ಎಲ್ಲರೂ ಕುತೂಹಲಿಯಾಗಿದ್ದಾರೆ.

ಆಸ್ವಾನ್ ಅಣೆಕಟ್ಟು

ಸಂಯುಕ್ತ ಅರಬ ಪ್ರಜಾರಾಜ್ಯದ ಹಿಹತ್ ನದಿ ನೈಲಿಗೆ ಅಡ್ಡವಾಗಿ ಕಟ್ಟಲಾದ ಆಸ್ವಾನ ಅಣೆಕಟ್ಟಿನ ಮೊದಲ ಹಂತವು ಪೂರ್ಣಗೊಂಡಿದ್ದು ಅದರ ಉದ್ಘಾಟನೆಯು ಕ್ರುಶ್ಚೇವ, ನಸ್ಸೇರ, ಇರಾಕ ಮತ್ತು ಯೆಮೆನಿನ ಅಧ್ಯಕ್ಷರು—ಹೀಗೆ ಚತುರ್ಮೂರ್ತಿಗಳು ಒಂದಾಗಿ ಗುಬ್ಬಿ ಒತ್ತುವುದರ ಮೂಲಕ ನೆರವೇರಿತು; ಇದರ ಜತೆಗೆ ಅಣೆಕಟ್ಟಿನ ದ್ವಿತೀಯ ಹಂತದ ಕಾರ್ಯಕ್ರಮವೂ ಪ್ರಾರಂಭವಾಯಿತು. ಆಸ್ವಾನ ಅಣೆಕಟ್ಟಿನ ಉದ್ಘಾಟನೆಯಾಗುತ್ತಲೇ, ನೀಲ ನದಿಯು ತನ್ನ ಸಹಜ ಗತಿಯನ್ನು ಬದಲಾಯಿಸಿ ಸಾಗರದ ತೆರೆಗಳನ್ನೆಬ್ಬಿಸುತ್ತ ಮಾನವ ನಿರ್ಮಿತ ೮೦ ಮೀಟರ್ ಆಳ, ೧೧೫೦ ಮೀಟರ್ ಉದ್ದದ ಕಾಲುವೆಯಲ್ಲಿ ಹರಿಯ ತೊಡಗಿತು. ಈ ಬೃಹದ್ಯೋಜನೆಯು ಸೋವಿಯತ್ತಿನ ಸಹಾಯದಿಂದ ನಿರ್ಮಿತವಾಗಿದೆಯೆಂಬುದನ್ನು ಸ್ಮರಿಸಿಕೊಳ್ಳಬೇಕು.

ಎ ಐ ಸಿ ಸಿ

ಬೊಂಬಾಯಿಯಲ್ಲಿ ಸೇರಿದ ಎ ಐ ಸಿ ಸಿಯ ಸಭೆಯು ಕೆಲವೊಂದು ದೃಷ್ಟಿಯಿಂದ ಮಹತ್ವದ್ದಾಗಿದೆ. ಕಾಂಗ್ರೆಸಿನಲ್ಲಿ ಬೋಗಸ್ ಸದಸ್ಯತನವು ಮೂಡದಂತೆ ಮೊದಲ ಪ್ರಾಥಮಿಕ ಸದಸ್ಯರಿಗಿದ್ದ ಮತಾಧಿಕಾರವನ್ನು ರದ್ದುಗೊಳಿಸಲು ಶಿಫಾರಸು ಮಾಡಲಾಗಿದೆ; ಹಾಗೆಯೇ ಸಕ್ರಿಯ ಸದಸ್ಯರುಮಾತ್ರವೇ ಯಾವಪಕ್ಷೀಯ ಸಮಿತಿಗಳಲ್ಲಿರಲು ಅಧಿಕಾರಹೊಂದಿದವರೆಂದು ಅಭಿಪ್ರಾಯಕ್ಕೆ ಬಂದಿದೆ. ಧೇಬರ ಸಮಿತಿಯು ಭುವನೇಶ್ವರದಲ್ಲಿ ಸ್ವೀಕರಿಸಿದ ಸಮಾಜವಾದದ ನೀತಿಯನ್ನು ಕಾರ್ಯರೂಪಕ್ಕೆ ತರುವುದು ಹೇಗೆಂದು ಅಭ್ಯಸಿಸಿ ನೀಡಿದ ವರದಿಯನ್ನು ಚರ್ಚಿಸಿ ಅದಕ್ಕೆ ಸಾಮಾನ್ಯ ಒಪ್ಪಿಗೆಯನ್ನು ನೀಡಿದೆ. ಕಾಶ್ಮೀರ - ಚೀನಾಗಳ ಭಾರತ ಸರಕಾರದ ನೀತಿಯನ್ನು ಮತ್ತೊಮ್ಮೆ ಬೆಂಬಲಿಸಿದೆ. ಆದರೆ, ಕಾಮರಾಜ ಸೂತ್ರವನ್ನು ಕಿತ್ತೊಗೆಯಬೇಕೆಂಬುದನ್ನು ಕೂಡಿ ಬಂದಿರುವ ತಿಂಬಾಪಗಿಗೊತ್ತುವಳಿಸ್ನಿದು ಚರ್ಚಿಸದೆ ಬೇರೆಯೇ ಸಭೆ ಕರೆಯಲು ನಿರ್ಧರಿಸಿದೆ.

ಗೋವೆ ಯಾರಿಗೆ ?

ಮಹಾರಾಷ್ಟ್ರದ ನಾಯಕರು ಕೇಂದ್ರದ ಸಂರಕ್ಷಣಾ ಮಂತ್ರಿ ವೈ. ಬಿ. ಚವನರು ಕೂಡ ಗೋವೆಯು ಮಹಾರಾಷ್ಟ್ರದಲ್ಲಿ ಲೀನವಾಗಬೇಕೆಂದು ಎಂದಿನಿಂದಲೋ ಹೇಳುತ್ತ ಬಂದಿದ್ದಾರೆ. ಆಗ ಕರ್ನಾಟಕದ ನಾಯಕರು, ಗೋವೆಯ ಭವಿಷ್ಯವನ್ನು ಗೋಮಾಂತಕರೇ ನಿರ್ಧರಿಸಬೇಕೆಂದು ಉದ್ಗರಿಸುತ್ತ ಬಂದಿದ್ದಾರೆ. ಗೋವೆಯಲ್ಲಿ ಅಧಿಕಾರದಲ್ಲಿರುವ ಸಂಯುಕ್ತ ಮಹಾರಾಷ್ಟ್ರ ಪಕ್ಷವಾದರೂ ಗೋವೆಯನ್ನು ಮಹಾರಾಷ್ಟ್ರದಲ್ಲಿ ಲೀನಗೊಳಿಸುವ ಕಾರ್ಯದಲ್ಲಿ ಆಸಕ್ತವಾಗಿದೆ. ಮುಖ್ಯಮಂತ್ರಿ ಬಾಂದೋಡಕರರು ಮರು ಚುನಾವಣೆಯಲ್ಲಿ ಗೆದ್ದುದು ತಮ್ಮ ವಾದದ ವಿಜಯವೆಂದವರು ತಿಳಿದಿದ್ದಾರೆ. ಆದೇನೇ ಇದ್ದರೂ ಗೋವೆಯು ಮರಾಠೀ ಪ್ರದೇಶವಲ್ಲ, ಕೊಂಕಣಿಗರು ಅಧಿಕ ಸಂಖ್ಯೆಯಲ್ಲಿ ಅಲ್ಲಿದ್ದಾರೆ. ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರು ಗಣನೀಯ ಪ್ರಮಾಣದಲ್ಲಿದ್ದಾರೆ. ಹಾಗಾಗಿ ಭೌಗೋಳಿಕ, ಸಾಮಾಜಿಕ ಚಾರಿತ್ರಿಕ ಮತ್ತು ಸಂಸ್ಕೃತಿಕ ದೃಷ್ಟಿಯಿಂದ ಗೋವೆಯು ಕರ್ನಾಟಕದಲ್ಲಿ ಸೇರುವುದು ನ್ಯಾಯೋಚಿತ. ಆದರೂ ಕನ್ನಡಿಗರು ಇದರ ಬಗ್ಗೆ ಆಗ್ರಹ ಪಡುವುದಿಲ್ಲ. ನಾಲ್ಕು ಶತಮಾನಗಳ ಪೋರ್ಚುಗೀಜ ದಾಸ್ಯದಿಂದ ನವೆದ ಗೋವೆಯು ಮುಂದಿನ ೧೫ ವರ್ಷ ಕೇಂದ್ರಾಧೀನವಾಗಿಯೇ ಉಳಿಯಬೇಕೆಂದೂ ಆನಂತರವಾದರೂ ಗೋವೆಯು ಯಾವುದಾದರೂ ರಾಜ್ಯದಲ್ಲಿ ವಿಲೀನವಾಗಬೇಕೇ ಅಥವಾ ಕೇಂದ್ರ ದಡಿಯಲ್ಲಿಯೇ ಮುಂದುವರಿಯಬೇಕೇ ಎಂಬುದನ್ನು ಗೋಮಾಂತಕರೇ ನಿರ್ಧರಿಸಬೇಕು ಎಂದೂ ಎಂ ಪಿ ಸಿ ಸಿಯು ಸ್ವೀಕರಿಸಿದ ಗೊತ್ತುವಳಿಯು ನ್ಯಾಯೋಚಿತವಾದುದು; ಕಾಂಗ್ರೆಸಿನ ನೀತಿಗೆ ಅನುಕೂಲವಾದುದು. ಗೋವೆಯ ಸಂಬಂಧದಲ್ಲಿ ಅನವಶ್ಯವಾದ ವಾದಗಳನ್ನೆತ್ತಿ ಅದರ ಪ್ರಗತಿಯಲ್ಲಿ ತಡೆಯೊಡ್ಡುವುದು ಮಹಾರಾಷ್ಟ್ರೀಯರಿಗೆ ಉಚಿತವಲ್ಲ. ಗೋವೆಯ ಅಧಿಕಾರಾರೂಢ ಪಕ್ಷವಾದರೂ ಇದನ್ನು ಮನಗಂಡು ರಾಜ್ಯದ ಅಭಿವೃದ್ಧಿಯಲ್ಲಿಯೇ ಲಕ್ಷ್ಯ ಕೇಂದ್ರೀಕರಿಸುವುದು ಸೂಕ್ತವಾದುದು.

ಬರುವ ವಾರ ರಜೆ

ನಾವು ವರ್ಷಕ್ಕೊಮ್ಮೆ ರಜೆ ಪಡೆಯುವ ವಾಡಿಕೆಯಂತೆ ಬರುವ ವಾರದ ಅಂದರೆ ತಾ. 28-5-64ರ ನವಯುಗ ಸಂಚಿಕೆಯನ್ನು ನಿಲ್ಲಿಸಲಾಗಿದೆ. ವಾಚಕರು ಗಮನಿಸಬೇಕಾಗಿ ವಿನಂತಿ.

ಮೆನೇಜರ್, ನವಯುಗ.

ಕೃತಿ ಪರಿಚಯ

ಪ್ರೇಮವಾಹಿನಿ— ಅನುವಾದಕರು ಮತ್ತು ಲೇಖಕರು: ಶ್ರೀ ಕೆ. ಎನ್‌, ಭಟ್‌, ಶಿರಾಡಿಪಾಲ್‌. ಪ್ರಕಾಶಕರು: ಕಾಡಾಣ ಸಾಹಿತ್ಯ ಪ್ರಕಾಶನ, ಅಶೋಕನಗರ, ಬೆಳ್ತಂಗಡಿ, ದ. ಕ. ಪುಟಗಳು: ೧೦೧. ಬೆಲೆ: ರೂ. ೧–೫೦.

ಪುಸ್ತಕದ ಹೆಸರೇ ಹೇಳುವಂತೆ ಇದು ಪ್ರೇಮವಾಹಿನಿ. ನಾನಾ ಬಗೆಯ ಪ್ರೇಮದಿಂದಲೇ ಇಲ್ಲಿನ ಕಥೆಗಳು ಅಭಿವ್ಯಂಜಿತವಾಗುತ್ತಿವೆ; ವಸ್ತುವು ಮುಂದುವರಿಯುತ್ತದೆ. ಹಲವು ಪ್ರೇಮದ ತೊರೆಗಳಿಂದ ಕೂಡಿ ಹರಿಯುವ ಪ್ರೇಮವಾಹಿನಿಯಾಗದೆ ಪುಸ್ತಕ. ಇಲ್ಲಿ ಕಾಣುವ ೯ ಕತೆಗಳಲ್ಲಿ ಮೂರು ಲೇಖಕರ ಕನ್ನಡ ಕೃತಿಗಳು. ಉಳಿದ ಆರು ಹಿಂದೀ ಮರಾಠೀ, ಬಂಗಾಳಿ ಭಾಷೆಯ ಸುಪ್ರಸಿದ್ಧ ಸಾಹಿತಿಗಳ ಉತ್ತಮ ಕಥೆಗಳ ಅನುವಾದಗಳು. ಹಿಂದೀ–ಕನ್ನಡಗಳೆರಡರಲ್ಲೂ ವಿದ್ವಾಂಸರಾದ ಶ್ರೀ ಭಟ್ಟರ ಮೂಲ ಭಾಷೆ ಮತ್ತು ಅನುವಾದದ ವೈಖರಿ ಪ್ರಶಂಸನೀಯವಾಗಿಯೇ ಇರುವುದು ಅಭಿವಂದನೀಯ.

ಔರಂಗಜೇಬನ ಅಮಾನುಷತೆ ಮತ್ತು ಹಿಂದೂ ವಿದ್ವೇಷದಿಂದಾಗಿ ಸೆರೆಬಿದ್ದ ಸಿಕ್ಖಗುರು ತೆಗ್ಬಹದ್ದೂರ್ "ತಲೆ ಕೊಟ್ಟರೂ ತತ್ವ ಕೊಡದ" ರೋಮಾಂಚಕಕಥನವೇ 'ಬಲಿದಾನ'. ಗುರುವಿನ ಧರ್ಮ ಪ್ರೇಮ, ತತ್ವನಿಷ್ಠೆಗಳು ಇಲ್ಲಿ ವ್ಯಕ್ತವಾಗುತ್ತವೆ. ತನ್ನ ಜೀವದಾನದಿಂದ ಗುರುವಿನ ಇರವನ್ನು ಸೂಚಿಸಿದ 'ಒಬ್ಬ'ನು ಅಂಜುಗುಳಿ ನಾಗರಿಕನ ಕುರುಹು! ಜುನಾಗಢದ ಮಹೀಪಾಲನು ಶತ್ರುಗಳ ಆಕ್ರಮಣಕ್ಕೆ ಸಿಕ್ಕು ಮೃತ್ಯು ಹೊಂದಲು ರಾಜಕುಮಾರ ನೌಘಣನನ್ನು ಸಂರಕ್ಷಿಸುವ ಹೊಣೆ ಹೊತ್ತು ತಮ್ಮ ಕರ್ತವ್ಯ ನಿರ್ವಹಿಸಿದ ಗೌಳಿಗ ದಂಪತಿಗಳ ರಾಜ ಭಕ್ತಿಯೇ 'ಕರ್ತವ್ಯದ ಬಲಿ ಪೀಠದ ಮೇಲೆ...'. "ವೀರಾಂಗನೆ"ಯು ಭಾರತೀಯ ಕ್ಷತ್ರಿಯ ನಾರಿಯ ಎಂಟೆದೆಯ ಪರಿಪೂರ್ಣ ಪರಿಚಯ ಮಾಡಿಕೊಡುತ್ತದೆ. ಸಾಹಿತ್ಯ ಪ್ರೇಮಿ ಸುಂದರರಾಯರು ಸಾಹಿತಿಯನ್ನೇ ಅರಸಿ ಆತನಿಗೆ ಕನ್ಯಾದಾನ ಮಾಡಿದ ಪ್ರಸಂಗ 'ಕನ್ಯಾದಾನ'ದಲ್ಲಿದೆ. ತಂಗಿ ಸುಶೀಲೆಗಾಗಿ ತನ್ನ ಸರ್ವಸ್ವವನ್ನೇ ಧಾರೆಯೆರೆದ ಗುಣವತಿಯ ಹೃದಯ ವಿದ್ರಾವಕ ದುರಂತ ಚಿತ್ರಣ "ತ್ಯಾಗ ಮಯಿ". ವಕೀಲರು ತಮ್ಮ ಸಲಹೆಯಿಂದ ತಮ್ಮ ಮಗಳ ಜೀವನವನ್ನೇ ಹಾಳು ಗೆಡಹಿದ ಕಥೆ 'ಒಳಗೆ ಮತ್ತು ಹೊರಗೆ'. ಪತಿ-ಪತ್ನಿಯರ ಸಮಸ್ಯೆಯು 'ಪ್ರೀತಿಯ ಕರೆ'ಯಲ್ಲಿ ವ್ಯಕ್ತಪಟ್ಟಿದೆ, ಆದರ್ಶದ ಹೆಸರಿನಲ್ಲಿ ಬವಣೆಗೆ ಗುರಿಯಾದ ಸರಳ 'ಪಂಚ ಕನ್ಯೆಯರ'ಲ್ಲಿ ಮನ ಸೆಳೆಯುತ್ತಾಳೆ. ಕೊನೆಯದಾದ 'ಪ್ರೇಮವಾಹಿನಿಯು ಆದರ್ಶದ ಹಿನ್ನೆಲೆಯಲ್ಲಿದೆ. ಇಲ್ಲಿನ ಕಥೆಗಳಲ್ಲಿ ನವೀನತೆಯಿದೆ; ಕೆಲವೆಡೆ ನಾಟಕೀಯತೆಯೂ ಇಣಿಕಿ ನೋಡುತ್ತದೆ.

ಶ್ರೀ ಭಟ್ಟರ ಶೈಲಿಯಲ್ಲಿ ಶಕ್ತಿಯಿದೆ, ಕಸುವಿದೆ. ಸ್ವತಂತ್ರ ಕೃತಿಗಳಲ್ಲಿ ನವೀನತೆಯಿದೆ. ಪ್ರೇಮವು ಪ್ರಾಣಿ ಸಹಜವಾದ ಒಂದು ಭಾವ. ಅದು ಬಹು ವಾಹಿನಿಯಾಗಿ ಹರಿಯಬಲ್ಲುದು. ಅವುಗಳಲ್ಲಿ ಒಂಭತ್ತು ಬಗೆಯ ವಾಹಿನಿಯ ಬಿಂದುಗಳನ್ನು ತಂದು ಶ್ರೀ ಭಟ್ಟರು ಕನ್ನಡ ಸಾಹಿತ್ಯದಲ್ಲಿ ಹರಿಯ ಬಿಟ್ಟಿದ್ದಾರೆ. ಇದರಲ್ಲಿ ಮಿಂದು ಮನೋರಂಜನೆ ಮಾತ್ರವಲ್ಲ ವಿವೇಕಕ್ಕೊಂದು ಪ್ರಚೋದನೆಯನ್ನೂ ನೀಡುವುದು ಕನ್ನಡಿಗರ ಕರ್ತವ್ಯ.

ನೀತಿವಲ್ಲರಿ ಮತ್ತು ಕವಿತಾ ಮಂಜರಿ:

ಬರೆದವರು: ವಿದ್ವಾನ್ ಸುರತ್ಕಲ್ಲು ಸುಬ್ಬರಾವ್.

ಪ್ರಕಾಶಕರು: ವಿಜಯಾ ಸಾಹಿತ್ಯಮಾಲೆ, ಸುರತ್ಕಲ್ಲು.

ಪುಟಗಳು: ೫೦. ಬೆಲೆ: ರೂ ೦–೮೦.

ಕಳೆದ ೪೦ ವರ್ಷಗಳಿಂದಲೂ ಹಲವಾರು ರಂಗಗಳಲ್ಲಿ ಕನ್ನಡದ ಗುಡಿ ಹಾರಿಸಿದ ಸುಬ್ಬರಾಯರು ತಮ್ಮ ಭಕ್ತಿಸಾಮ್ರಾಜ್ಯಾದಿ ಕೃತಿಗಳಿಂದ ಪರಿಚಿತರಾಗಿದ್ದಾರೆ. ಕನ್ನಡದ ಅಧ್ಯಾಪನಮಾಡಿ ಕನ್ನಡದ ಸೇವೆಯನ್ನು ಮಾಡುತ್ತಿದ್ದಾರೆ. ಶ್ರೀಯುತರು ಸಂಸ್ಕೃತ ಶ್ಲೋಕಗಳ ಆಧಾರದಿಂದ ಬರೆದ 'ನೀತಿವಲ್ಲರಿ' ಯೆಂಬುದು ೧೫೮ ನೀತಿ ಗೀತೆಗಳ ಸಂಗ್ರಹ. ಸಂಸ್ಕೃತ ಸಾಹಿತ್ಯದಲ್ಲಿ ನೀತಿ ಶತಕಾದಿ ನೀತಿ ಪ್ರತಿಪಾದಿತ ಗ್ರಂಥಗಳು ಬೇಕಷ್ಟಿವೆ; ಕಾವ್ಯಗಳಲೂ ನೀತಿತಲೆ ಹಾಕುತ್ತದೆ. ಆದರೆ, ಕನ್ನಡದಲ್ಲಿ ಇಂತಹ ಕೃತಿ ಅತ್ಯಲ್ಪವೆನಬೇಕು.

ಕವಿಗಳು ಪ್ರಾರಂಭದಲ್ಲಿ ಶಿವಾದಿ ದೇವತೆಗಳನ್ನ ಪ್ರಾರ್ಥಿಸಿ, ಪೂರ್ವಕವಿಗಳನ್ನು ನಮಿಸುತ್ತಾರೆ. ಆಡುಗೆಯ ಸಾಧನವೊಂದಾದರೂ ಪಾಚಕ ಭೇದದಿಂದ ಸವಿ ಬಗೆಬಗೆಯಾಗುವಂತೆ ಹಿಂದಿನ ಕಬ್ಬಿಗರ ಕಬ್ಬಗಳನ್ನೇ ವಿರಚಿಸಿ ಸೊಬಗೂಡುವುದಾಗಿ ಹೇಳುತ್ತಾರೆ. ಅನಂತರ, ವಿದ್ಯೆ, ಸುಜನ, ದುರ್ಜನ, ನುಡಿ, ವಿನಯ, ಧರ್ಮ, ದೈವ, ಉದ್ಯಮ, ಧನ, ಪರೋಪಕಾರ, ಧೀರ, ಸಜ್ಜನ. ಸತ್ಸಂಗ, ಸದ್ಗುಣ, ನೀತಿ, ಆಶ್ವಾಸನೆ ಎಂಬುದಾಗಿ ವಿಷಯವನ್ನಾಯ್ದುಕೊಂಡು ಅವಕ್ಕೆ ಸಂಬಂಧಿಸಿ ಕಂದ ವೃತ್ತಗಳನ್ನು ಬರೆದಿದ್ದಾರೆ. ಉಪಮೆ, ನಿದರ್ಶನ, ಅರ್ಥಾಂತರನ್ಯಾಸಾದಿ ಅಲಂಕಾರಗಳಿಂದ ಕೂಡಿದ ಈ ಪದ್ಯಗಳು ಹಳೆಗನ್ನಡದಲ್ಲಿವೆ. ಲಲಿತಬಂಧ ಮತ್ತು ದ್ರಾಕ್ಷಾಪಾಕಗಳು ಮೆರುಗಿತ್ತಿವೆ. ತೊಳಗುವರನ್ನಮನೊಲ್ಲದೆ ನಲೆಕಲ್ಲಂ ಬಿಡದೆ ಕೊಳ್ವ ಗಾಂಪ, ಜಗದೊಳ್ಗದ ಮಂತೊಳೆದುಂ ಮೊಗವಂ ತೊಳೆವುದು ಬಳಿಕ್ಕೆ ಸಹಜ ಇತ್ಯಾದಿ ಅಲಂಕಾರಗಳು ಹೃದಯಂಗಮವಾಗಿವೆ ಕೆಲವು ಪದ್ಯಗಳಲ್ಲಿ ಸಂಸ್ಕೃತ ಶ್ಲೋಕದ ಛಾಯೆ ಪರಿಣಾಗಿ ಗೋಚರವಾಗುವುದಾದರೆ, ಇನ್ನು ಕೆಲವಲ್ಲಿ ಅಸ್ಪಷ್ಟ.

ಎರಡನೆಯ 'ಕವಿತಾ ಮಂಜರಿ'ಯು ಬೇರೆ ಬೇರೆ ಕವಿತೆಗಳ ಸಂಗ್ರಹ, ಪ್ರಾರ್ಥನೆ, ಸೂರ್ಯಚಂದ್ರೋದಯ, ಧರ್ಮ ಇತ್ಯಾದಿಗಳಿಗೆ ಸಂಬಂಧಿಸಿದ ವರ್ಣನಾತ್ಮಕ ಮತ್ತು ಛಂದೋಬದ್ಧ ಪದ್ಯಗಳಿಲ್ಲಿವೆ. ಭಾಮಿನಿ ಮತ್ತು ಚೌಪದಿಗಳೂ ಇಲ್ಲಿ ತಲೆ ಹಾಕಿವೆ. ಪಂಡಿತ ಶಿವರಾಮಯ್ಯನವರ ಗುಣ ಪ್ರಶಂಸಾತ್ಮಕ ಕವಿತೆಯೂ ಬಂದಿದೆ.

ವಿದ್ವಾಂಸರಾದ ಸುಬ್ಬರಾಯರು ಸಹಜ ಕಾವ್ಯಶಕ್ತಿ ಅದು ಈ ಗ್ರಂಥದಲ್ಲಿ ಕೋಡಿಹರಿದಿದೆ. ಹೊಸ ಕಾಲದಲ್ಲಿ ಹಳೆಯ ಛಾಕಟ್ಟಿನಲ್ಲಿ ಬೆಳಗಿ ಬಂದ ಈ ಕವಿತೆಗಳು ಹಳೆಯ ವಿಚಾರವನ್ನೇ ಪ್ರತಿಪಾದಿಸುತ್ತಿವೆ ಯೆನ್ನುವವರೂ ಕೆಲವರಿರಬಹುದು; ಆದರೆ, ಈ ವಿಚಾರಗಳು ಹಳತಾಗುವುದಿಲ್ಲ; ಅವು ಸದಾ ಪುನರ್ನವ, ನಿತ್ಯ ಅಮರ. ಸುಬ್ಬರಾಯರ ಈ ಕೃತಿ ಪ್ರಶಂಸನೀಯ, ಸ್ವಾಗತಾರ್ಹ. ಪ್ರಕಾಶಕರು ಕನ್ನಡಿಗರಿಗೆ ಉತ್ತಮ ಪುಸ್ತಕವೊಂದನ್ನು ನೀಡಿದ್ದಾರೆ. ಇದರ ಮನನ ಮಾಡಿ ಕನ್ನಡಿಗರು ನೀತಿ ಮತ್ತಿಯನ್ನು ಬೆಳೆಸಿಕೊಳ್ಳಬೇಕು.

—ಗೋರಾ

ಹೊಳಲ್ಕೆರೆ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟದ ಸಹಕಾರ ಸಂಘ ಲಿಮಿಟೆಡ್, ಹೊಳಲ್ಕೆರೆ— ೧೯೬೧ನೆಯ ಇಸ್ವಿಯಲ್ಲಿ ಮೈಸೂರು ಸರಕಾರದಿಂದ ಸಾರ್ವಜನಿಕ ಸೇವಾ ಪ್ರಶಸ್ತಿಯನ್ನು ಪಡೆದ ಸಹಕಾರಿ ಸಂಘವಿದು. ಪ್ರಜಾಪ್ರಭುತ್ವ ಭಾರತದಲ್ಲಿ ಸಹಕಾರ ಆಂದೋಲನವು ಉಜ್ವಲವಾಗಿಯೇ ನಡೆದು ಬರುತ್ತಿದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲಿ ಕೃಷಿಕ ಬಾಂಧವರ ವ್ಯವಸಾಯೋತ್ಪನ್ನಗಳನ್ನು ಮಾರಾಟ ಮಾಡುವ ಈ ಸಹಕಾರಿ ಸಂಘವು ಸದಸ್ಯರ ಸಹಕಾರದಿಂದ, ಸರಕಾರದ ಉತ್ತೇಜನದಿಂದ ಸಮರ್ಥ ವ್ಯಕ್ತಿಗಳ ಸೂಕ್ತ ಮಾರ್ಗದರ್ಶನದಿಂದ ೧೯೬೨—೬೩ರಲ್ಲಿ ೧೩‖ ಲಕ್ಷ ರೂಪಾಯಿಗಳಿಗೂ ಮಿಕ್ಕಿದ ವ್ಯವಹಾರವನ್ನು ಮಾಡಿ ರೂ. ೨೫‖ ಸಾವಿರ ರೂಪಾಯಿಗಳ ನಿವ್ವಳ ಲಾಭಗಳಿಸಿದೆ. ತನ್ನ ಸದಸ್ಯರ ಸೌಕರ್ಯಕ್ಕೋಸ್ಕರ ತಾಲೂಕಿನ ಮುಖ್ಯ ಸ್ಥಾನಗಳಲ್ಲಿ ಗೋದಾಮುಗಳನ್ನು ಕಟ್ಟಿಸುವುದು, ಕೃಷಿಕ ವಿಶ್ರಾಂತಿ ಭವನಗಳನ್ನು ನಿರ್ಮಿಸುವುದು ಮೊದಲಾದುವು ಈ ಸಂಘದ ವಿಶೇಷ ಚಟುವಟಿಕೆಗಳು ಸದಸ್ಯರಿಂದಲೂ ಸದಸ್ಯೇತರರಿಂದಲೂ ಡಿಪೋಜಿಟ್‌ಗಳನ್ನು ತೆಗೆದುಕೊಂಡು ಅದಕ್ಕೆ ಸೂಕ್ತ ಬಡ್ಡಿಯನ್ನೂ ಇದು ನೀಡುತ್ತದೆ ಸಂಘದ ಆಸ್ತಿ ಜವಾಬ್ದಾರಿಯು ಮೊತ್ತವು ರೂ ೩‖ ಲಕ್ಷಕ್ಕೂ ಮಿಕ್ಕಿದೆ ಸದಸ್ಯ ಸಂಪತ್ತು ೬೩೫ ಇದ್ದು ಶೇರು ಬಂಡವಾಳವು ರೂ. ೧೫,೮೭೫ ಇರುವುದಾದರೂ ಇದರ ಚಟುವಟಿಕೆಗಳು ರೈತ ಜನರಿಟ್ಟ ವಿಶ್ವಾಸದ ಪರಿಣಾಮವಾಗಿಯೇ ೧೪ ಲಕ್ಷ ರೂಪಾಯಿಗಳ ವ್ಯವಹಾರವನ್ನು ತೋರಿಸಿವೆ. ಸಂಘದ ರಿಜರ್ವ ಫಂಡು ೧೯ ಸಾವಿರ ರೂಪಾಯಿಗೆ ಸಮೀಪಿಸಿದೆ ಅಧ್ಯಕ್ಷ ಶ್ರೀ ಜಿ ಎಸ್. ನಂಜುಡಪ್ಪ ಮತ್ತು ಕಾರ್ಯದರ್ಶಿ ಶ್ರೀ ಎಚ್. ಬಿ. ಚಿನ್ನಪ್ಪನವರ ಉಚಿತ ದಿಗ್ದರ್ಶನದಲ್ಲಿ ಸಂಘವು ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಯಶಸ್ಸುಗಳಿಸಿ, ತನ್ನ ಸದಸ್ಯರಿಗೆ ಉತ್ತಮ ಸೇವೆ ಸಲ್ಲಿಸುವಂತಾಗಲಿ.

ಅಲ್ಲಲ್ಲಿಯ ಸುದ್ದಿಸಾರ

ನೂತನ ಶಾಲಾರಂಭ— ಸುರತ್ಕಲ್ಲು ಕೇಂದ್ರದ ಮಧ್ಯಗ್ರಾಮದಲ್ಲಿ ಇದೇ ತಿಂಗಳಿಂದ 'ವಿದ್ಯಾಸೇವಾ ಸಮಿತಿ'ಯ ಪರವಾಗಿ 'ಶ್ರೀ ಗೋಪಾಲಕೃಷ್ಣ ಪ್ರಾಥಮಿಕ ಶಾಲೆ'ಯು ಪ್ರಾರಂಭವಾಗಿದೆಯೆಂದು ವಿಶ್ವಸ್ತವಾಗಿ ತಿಳಿದು ಬತ್ತುದೆ.

ಬಂಟರ ಯಾನೆ ನಾಡವರ ಸಂಘ

ಮುಂಬಾಯಿ— ಈ ಸಂಘದವರು ತಾರೀಕು 13–5–64ನೇ ಸಾಯಂಕಾಲ ವರ್ಲಿ ಸ್ಪೋರ್ಟ್ಸ್ ಕ್ಲಬ್‌ಗ್ರಾಂಡ್ ಆದರ್ಶ ನಗರ ವರ್ಲಿ, ಇಲ್ಲಿ ಮೈಸೂರಿನ ಮಾನ್ಯ ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವರನ್ನು ಸತ್ಕರಿಸಿ ಗೌರವಿಸಿದರು. ಸಂಘದ ಉಪಾಧ್ಯಕ್ಷ ಶ್ರೀ ಯಸ್. ಕೃಷ್ಣದಾಸ್ ಶೆಟ್ಟಿ ಡಾ| ಆಳ್ವರನ್ನು ಸ್ವಾಗತಿಸಿ ಭಾಷಣ ಮಾಡಿದರು. ಲೋಕಸಭಾ ಸದಸ್ಯ ಶ್ರೀ ಎ. ಶಂಕರ ಆಳ್ವರು ಸಮಯೋಚಿತ ಭಾಷಣಗೈತ್ತರು. ಡಾ| ಆಳ್ವರು ಮುಂಬಯಿಯಲ್ಲಿ ಅನೇಕ ಸಂಸ್ಥೆಗಳು ರೂಪುತಾಳಿ ಸಮಾಜ ಸೇವೆ ಮತ್ತು ದೇಶ ಸೇವೆಯನ್ನು ಮಾಡುತ್ತಿರುವುದನ್ನು ಕೊಂಡಾಡಿದರು. ಹಣದ ಬೆಲೆ ತಗ್ಗುತ್ತಾ ಮಾನವೀಯತೆಯ ಮೌಲ್ಯವು ಹೆಚ್ಚುಗುತ್ತಿರುವ ಈ ಕಾಲದಲ್ಲಿ ಸಮಾಜದ ಹಾಗೂ ದೇಶದ ಉದ್ಧಾರಕ್ಕಾಗಿ ಪ್ರತಿಯೊಬ್ಬನೂ ಕೆಲಸ ಮಾಡುವುದು ಆತನ ಕರ್ತವ್ಯ ಹಾಗೂ ಧರ್ಮವೆಂದು ಒತ್ತಿ ಹೇಳಿದರು ಸಂಘದ ಗೌರವ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಯಸ್. ಗೋಪಾಲ ಶೆಟ್ಟಿ ಧನ್ಯವಾದಗಳನ್ನು ಅರ್ಪಿಸಿದರು

ಮಣಿಪಾಲ — ರೋಟರಿ ಅಂತರಾಷ್ಟ್ರೀಯ ಸಂಸ್ಥೆಯ ೩೧೭ನೇ ಜಿಲ್ಲಾ ಗೌರ್ನರಾಗಿ ನಾಮಕರಣಗೊಂಡಿರುವ ಡಾ. ಟಿ. ಎಂ. ಎ. ಪೈಯವರು ಅಂತರಾಷ್ಟ್ರೀಯ ರೋಟರಿ ಸಭೆ ಹಾಗೂ ಸಮಾವೇಶದಲ್ಲಿ ಭಾಗವಹಿಸುವುದಕ್ಕಾಗಿ ಅಮೆರಿಕೆಗೆ ಹೋಗುವ ಸಲುವಾಗಿ ತಾ. 16–5–64ರಂದು ಇಲ್ಲಿಂದ ಬೆಂಗಳೂರಿಗೆ ಶ್ರೀ ರಮೇಶ ಪೈಯವರೊಂದಿಗೆ ತೆರಳಿದರು. ಅವರಿಬ್ಬರೂ ಜೂನ್ ತಿಂಗಳಿನ ಕೊನೆಯಲ್ಲಿ ಹಿಂದಿರುಗಿ ಬರಲಿದ್ದಾರೆ.

ವಿಶ್ವಕರ್ಮ ಸೇವಾ ಮಂಡಳಿ— ಉಡುಪಿ ತಾಲೂಕ. ವಿಶ್ವಕರ್ಮ ಸೇವಾ ಮಂಡಳಿಯ ಕಾರ್ಯ ಸಮಿತಿ ಸಭೆಯು ಮೇ ದಿನಾಂಕ 17ರಲ್ಲು ಶ್ರೀ ಯಚ್. ವೆಂಕಟನ ಮಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರಿಗೆ ತಾ. 23—3—64ರಲ್ಲು ಬರಕೊಂಡಿರುವ ಮನವಿಗೆ, ಮೈಸೂರು ಸರಕಾರದ ಚಿನ್ನ ನಿಯಂತ್ರಣ ಅಧಿಕಾರಿಗಳಿಂದ ಪ್ರತ್ಯುತ್ತರವಾಗಿ ಈ ಮಂಡಳಿಗೆ ಬಂದಿರುವ ತಾ 13.4.64 ನೇ ಪತ್ರವನ್ನು ಕಾರ್ಯದರ್ಶಿ ಶ್ರೀ ಬಿ. ಸಂಜೀವಾಚಾರ್ಯರು ಸಭೆಯ ಮುಂದಿಟ್ಟರು. ಸದ್ರಿ ಪತ್ರದಲ್ಲಿ ಸಂಕ್ರಸ್ತ ಚಿನ್ನದ ಕೆಲಸಗಾರರ ಕೇಳಿಕೆಗಳ್ಯಾವುವೂ ಬಗೆ ಹರಿಸಲ್ಪಟ್ಟಿಲ್ಲವಾದುದರಿಂದ ಮುಖ್ಯ ಮಂತ್ರಿಗಳಲ್ಲಿ ಸಂತ್ರಸ್ತರ ಸಂಕಷ್ಟಗಳನ್ನು ಪುನಃ ನಿವೇದಿಸಿಕೊಳ್ಳತಕ್ಕದೆಂತ ನಿರ್ಣಯಿಸಲಾಯಿತು.

ಶ್ರೀ ಸುಬ್ರಹ್ಮಣ್ಯ ಯುವಕ ಸಂಘ ಉಡುಪಿ—ಯ ಆಶ್ರಯದಲ್ಲಿ ತಾ. 16ರಂದು ಶ್ರೀ ಶಂಕರ ಜಯಂತಿಯನ್ನು ಆಚರಿಸಲಾಯಿತು. ಮಂಗಳೂರಿನ ಡಾ| ಎನ್. ವಿ. ಉಪಾಧ್ಯಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘದ ಕೋಶಾಧಿಕಾರಿ ಶ್ರೀ ಎ. ಕೃಷ್ಣರಾಯರು ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತ ಸಂಘದ ಉದ್ದೇಶ ಮತ್ತು ಶಂಕರ ಜಯಂತಿಯ ಮಹತ್ವವನ್ನು ತಿಳಿಸಿದರು. ಕಾರ್ಯದರ್ಶಿ ಶ್ರೀ ಯು. ಅನಂತಕೃಷ್ಣ ಶರ್ಮರು ಅಮೃತ ವಚನಗಳನ್ನು ವಾಚಿಸಿದ ಬಳಿಕ, ಕಾರ್ಕಳದ ಪ್ರಾ|| ಎಂ. ಆರ್. ಶರ್ಮರು 'ಶಂಕರರ ಜೀವನ ಮತ್ತು ಸಂದೇಶ'ಗಳನ್ನು ಕುರಿತು ಉಪನ್ಯಾಸವಿತ್ತರು. ಶಂಕರಾಚಾರ್ಯರು ದಾರ್ಶನಿಕ ರಂಗದಲ್ಲಿ ಮಾಡಿದ ಸಾಹಸವನ್ನೂ ಅವರು ಜಗತ್ತಿಗೆ ನೀಡಿದ ಅದ್ವೈತದ ಚರಮ ಸಂದೇಶವನ್ನೂ ಅವರೂ ಅಧ್ಯಕ್ಷರೂ ವಿವರಿಸಿದರು. ಅನಂತರ ಪೂಜೆ—ಪ್ರಸಾದ ವಿತರಣೆಗಳೂ ನಡೆದುವು.

ಪ್ರಾರಂಭದಲ್ಲಿ ಮುಖ್ಯ ಅತಿಥಿಗಳಿಗೆ ಸಂಘದ ಅಧ್ಯಕ್ಷ ಶ್ರೀ ಕೆ. ರಾಘವೇಂದ್ರರಾಯರು ಹಾರಾರ್ಪಣೆ ಮಾಡಿ ಗೌರವಿಸಿದರು. ಕೊಯಲ್ಲಿ ಉಪಕಾರ್ಯದರ್ಶಿ ಶ್ರೀ ಎಸ್. ಗೋಪಾಲಚಂದರಾಯರು ಧನ್ಯವಾದವರ್ಪಿಸಿದರು.

ಉಪಕಾರ ಸ್ಮರಣೆ

ಕಳೆದ ವಾರ ನವಯುಗದ ಪರಿಷ್ಕರಣಕ್ಕಾಗಿ ಡಾ| ಎ ಆನಂದ ಶೆಟ್ಟಿ, ಭದ್ರಾವತಿ, ಡಾ| ಎಚ್. ನಾರಾಯಣ ಬಲ್ಲಾಳ, ದಾವಣಗೆರೆ, ಡಾ| ಕೆ. ಆರ್. ಕೆ. ಶೆಟ್ಟಿ, ಎಂ. ಬಿ; ದಾವಣಗೆರೆ, ಎಚ್. ಎಸ್. ಹೆಗ್ಡೆ, ಶಿವಮೊಗ್ಗಾ ಇವರು ಪ್ರೋತ್ಸಾಹಿಸಿ ಸಹಕರಿಸಿದ್ದಾರೆ. ಭದ್ರಾವತಿಯಲ್ಲಿ ಚಂದಾದಾರರನ್ನು ಒದಗಿಸುವಲ್ಲಿ ಮಾಜಿ ಎಂ. ಎಲ್. ಎ. ಶ್ರೀ ಬಿ. ಮಾಧವಾಚಾರ್ಯರೂ, ಡಾ| ಎ ಆನಂದ ಶೆಟ್ಟರೂ ಶಿವಮೊಗ್ಗದಲ್ಲಿ ನಯೋ ಮೆಡಿಕಲ್ ಹಾಲ್‌ನ ಶ್ರೀ ಕಾಮತರೂ ನೆರವಾಗಿದ್ದಾರೆ. ಇವರೆಲ್ಲರಿಗೂ ನಾವು ಆಭಾರಿಯಾಗಿದ್ದೇವೆ. ಅಲ್ಲದೆ ವಿವಿಧ ರೀತಿಯಲ್ಲಿ ಸಹಕರಿಸಿದ ಉಪಾಧ್ಯಾಯ ಬಂಧುಗಳಿಬ್ಬರಿಗೂ ಸಸ್ಕಿತ್ತರೊಬ್ಬರಿಗೂ ಬೀರೂರಿನ ಡಾ| ಎ. ಎಂ. ಶೆಟ್ಟರಿಗೂ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ.
ಸಂಚಾಲಕ—ಸಂಪಾದಕ.

ಗೀಪ ರಾಜ್ಯದಲ್ಲಿ

ಭಾರಿ ಗುಡುಗು ಮತ್ತು ಹನಿಮಳೆ

"ಅಲ್ಲಾ, ಹೊರಗಡೆ ಮಳೆ ಹನಿ ಸುರಿಯುತಿದ್ರೂ ನಿಮ್ಗೆ ಮನೆಗೆ ಬೇಗನೇ ಬರೋದಿಕ್ಕಾಗೋದಿಲ್ಲಾಂದ್ರೆ ..."

"ಏನೇ ಅದು? ಬೇಗನೇ ಅಂದ್ರೆ ಯಾವಾಗಾಂತ? ಗಂಟೆ ಇನ್ನೇ ಎಂಟೂ ಬಡೀಲಿಲ್ಲ..."

"ಗಂಟೆ ಎಂಟಾದ್ರೇನು, ಆರಾದ್ರೇನು? ಹೊಸ ಮಳೆ ಅಪರೂಪವಾಗಿ ಸುರೀಲಿಕ್ಕೆ ಸುರು ಹತ್ತಿದೆ..."

"ನಾಲ್ಕು ಹನಿ ಮಳೆ ಸುರಿದ್ಬಿಟ್ರೆ, ಏನಂತೆ ಮಹಾ ಹಾರಿ ಹೋಗೋದು?"

"ಮಳೆ ಹನಿ ನಾಲ್ಕೇ ನಾಲ್ಕಾದ್ರೂ ಅದರ ಪರಿಣಾಮ ನಾಲ್ಕು ದಿನ ಅನುಭವಿಸಿದ್ರೂ ದೂರವಾಗೋಲ್ಲ..."

"ತಿಳೀತು ಬಿಡು, ಜತೆಗೆ ನಾಲ್ಕು ರೂಪಾಯಿ ದಂಡಾನ ತೆರಬೇಕೂನ್ನು..."

"ಅಲ್ಲಾ, ಹೀಗೆಲ್ಲಾ ತಿಳ್ಕೊಂಡಿರೋ ನೀವೇ ಹೀಗೆಲ್ಲಾ ಮಾಡಿದ್ರೆ...."

"ನಾನೇ ಏನು? ಬೀದೀಲಿ ಎಷ್ಟು ಜನ ಇದ್ರು ಗೊತ್ತೆ?"

"ಯಾರ್‍ಯಾರು ಎಲ್ಲೆಲ್ಲೇ ಇರ್‍ಲಿ, ನಮ್ಗದರಿಂದ ಬರೋ ಹಾನೀನೂ ಇಲ್ಲ."

"ಅಂದ್ರೆ ನಾನು ಮಾತ್ರ ..."

"....ಶ್ಯೂ...ಬಾಯಿ ಮುಚ್ಚಿ. ಹುಸು ಮೆತ್ತಗೆ ಮಾತ್ನಾಡಿ. ನಿಮ್ಮ ಕಾಗೆ ಧ್ವನಿ ಕೇಳಿದ್ರೆ ಎಲ್ರೂ ಓಡಿ ಬಂದಾರು ..."

"ಸಾಕು ಬಿಡೇ ವಾಚಾಳಿ. ನನ್ದು ಕಾಗೇ ಧ್ವನಿ ಅಂತೆ ಕಾಗೇಧ್ವನಿ. ಪಾಪ....ನಿನ್ದು ಕೋಗಿಲೆಯದ್ದೇ ಇರ್‍ಬೇಕು".

"ನಿಮ್ಗೆ ಹೇಗ ಅನಿಸ್ತದೆ....?"

"ಧ್ವನಿ ಕೋಗಿಲೆಯದ್ದೂಂತನ್ನೋದು ಕಷ್ಟವಾದ್ರೂ ದೇಹ ಮಾತ್ರ ಅದ್ರದ್ದೆ...."

"ಅಬ್ಬಬ್ಬ ನೀನೆ? ನಿಮ್ಮ ದೇಹ ಪಾಪ ಕೊಕ್ಕರೆ ಬಣ್ಣದ್ದು...."

"ಪರ್ವಾಗಿಲ್ಲಾ ಕಣೇ ನೀನು. ಎಂದಿತಕ್ಕೂ ನೀನು ರಾಜಕೀಯಕ್ಕೆ ಇಳೀಬೇಕು...."

"ಮೊನ್ನೆ ನೀವೇ ಅಂದಿದ್ರಿ, ರಾಜಕೀಯ ಬರೀ ಬರಡೆಮ್ಮೇಂತ...."

"ಅದು ಸರೀನ್ನೂ. ಆದ್ರೂ ಬರಡೆಮ್ಮೇ ಮೊಲೆಗೆ ಕೈ ಹಾಕೋದ್ರಲ್ಲೂ ಒಂದು ಆನಂದ ಇದೆ..."

"ಹೌದು ಹೌದು. ಮಾಡೋಕೆ ಬೇರೇನೂ ಕೆಲ್ಸ ಇಲ್ದಿದ್ರೆ ತಾನೇ ಅದಕ್ಕೆಲ್ಲಾ ಮನಸ್ಸು ಹಾಕ್ಬೇಕು ..."

"ನಿನ್ಗೆ ಭಾರಿ ಕೆಲ್ಸ ರಾಶಿ ಬಿದ್ದಿದೆ ಮತ್ತೆ..."

"ಇಲ್ಲಪ್ಪ, ಎಲ್ಲಾ ಮಾಡೋರು ನೀವು ....ನಾನು ತೆಪ್ಪಗೆ ಬಿದ್ದಿರುವವಳು ..."

"ಅಯ್ಯೋ, ಯಾಕೆ ಹಾಗೆ ಮುನಿಸು ಮಾಡ್ತೀಯ? ನಾನೆಲ್ಲಿ ಹಾಗಂದೆ?"

"ಮತ್ತೇನಂದ್ರಿ ನೀವು?"

"ಅಲ್ಲಾ, ಒಂದ್ವೇಳೆ ನಾನು ಅಂದೇಂತಿಟ್ಕೊಳೊ. ಆದ್ರಲ್ಲೆ ಏನು ತಪ್ಪೂಂತ...."

"ಹ್ಞಾಂನ್ನಿ. ನೀವು ಏನು ಮಾಡಿದ್ರೂ ಏನಂದ್ರೂ ಅದು ತಪ್ಪಲ್ಲ, ನಾವು ಮಾತ್ರ...."

"ಬೇಡ ಕಣೆ...ಹಾಗನ್ಬೇಡ....ನೀನು ಏನಂದ್ರೂ, ನಾನು ಸುಮ್ನಿರ್ತೀನೆ. ನಿನ್ನ ಮುಖಾ ಕಂಡ್ರೆ ಮಾತಾಡೋದೇ ಬೇಡಾಂತ ಕಾಣುತ್ತೆ..."

"ಹೋಗಿ ಬಿಡಿ ಹಾಗಾದ್ರೆ...ಮಾತೂ ಬೇಡ ಗೀತೂ ಬೇಡ...."

"ಹೀಗೆಲ್ಲಾ ಕೋಪಿಸ್ಕೊಂಡ್ರೆ ಗತಿ ಏನೂಂತ?"

"ನಗ್ಗೆ ಕೋಪಾನು ಇಲ್ಲ...ಗೀಪಾನು ಇಲ್ಲ..."

"ಗೀಪ ಇಲ್ಲ; ಗೀತು ಬೇಡಾಂತ ಗೊತ್ತು. ಆದ್ರೂ...."

"ಆದ್ರೂ ಏನಂತೆ? ಅದನ್ನೂ ಅನ್ಬಿಡಿ ಮತ್ತೆ..."

"ಅನ್ಲೇ ಬೇಕೇನು?"

"ಅನ್ನೀಂತದ್ನಲ್ಲ?"

"ಆದೂ...ಕೋಪ ಮಾತು ಬೇಡಾಂದ್ರೆ ಆಗುತ್ಯೆ?"

"ಸಾಕು ಬಿಡೀಂದ್ರೆ ನೀವೊಬ್ರು...."

"ನಾನು ಒಬ್ನೆ ಇಲ್ವೆ ಅಲ್ಲ ಹತ್ತು ರೂಪ ತಾಳೋಕೆ ನಾನು ಭಗವಂತ ವಿಷ್ಣು ಅಲ್ವಲ್ಲಾ?"

"ರೂಪ ತಾಳೋಕೆ ಭಗವಂತ್ನೇ ಆಗ್ಬೇಕೆಂದೇನು?"

"ಮತ್ತೆ....?"

"ಇದು ನೋಡಿ, ಪ್ರಜಾಪ್ರಭುತ್ವದ ಯುಗ. ಜನತೆಯೇ ಜನಾರ್ದನ. ಹಾಗಿರುವಾಗ ಜನರೆಲ್ಲ ಬೇಕಾದಾಗ ಬೇಕಾದಷ್ಟು ರೂಪ ತಾಳ ಬಹುದು."

"ಏನಂತೀಯೊ ನೀನು?"

ನಾನೇನನ್ನೋದು? ಎಲ್ಲಿ ಜನ ಬೇಕಾದಂತೆ ಅವತಾರ ತಾಳ್ತಾರೇ ಅಲ್ಲಿನೇ ಪ್ರಜಾ ಸತ್ತೆ ಯಶಸ್ವಿಯಾಗ್ತದೇಂತ...."

"...ಹ್ಞಾಂ....ತಿಳೀತು ಬಿಡು. ಅಲ್ಲಾ ಇದ್ಕೇ ನೋಡು ನೀನು ರಾಜಕಾರಣಕ್ಕೆ ಸೇರಿಕೊಳ್ಳೋಬೇಕಿತ್ತೂಂತ ಅನ್ನೋದು..."

"ತಿಳೀತು ತಿಳೀತು ಅಂದ್ರೆ..ಏನು ತಿಳೀತು ಹೇಳಿ...."

"ನೀನು ಕವೀಂತ ತಿಳೀತು...."

"ಕವಿಯಲ್ಲ ...ಕವಯಿತ್ರೀಂತ ನೀವೇ ಹೇಳ್ಳಿದ್ರಿ...."

"ತಪ್ಪನ್ನ ಒಪ್ಪಿಕೊಂಡು ಬಿಟ್ಟೆ....ಕವಿಯಲ್ಲ ಕಪಿಯೂ ಅಲ್ಲ ಕವಯಿತ್ರಿ___"

"ಯಾಕೆ ಹಾಂಗೇಂತಂದ್ರಿ?"

"ನಿನ್ನ ಮಾತಿನ ವೈಖರಿ ನೋಡೋವಾಗ...."

"ಅಂದ್ರೆ..."

"ಅನ್ಯೋಕ್ತಿಯನ್ನ ಯಶಸ್ವಿಯಾಗಿ ಪ್ರಯೋಗ ಮಾಡಿದಿ..."

"ಹಾಗಂತಂದ್ರೆ....?"

"ತಿಳೀಲಿಲ್ಲಾ ನಿನಗೆ..."

"ತಿಳಿದಿದ್ರೆ ಕೇಳ್ತೀನಾ ಮತ್ತೆ?"

"ನೀನು ಕವಯಿತ್ರಿ ಮಾತ್ರ. ವಿಮರ್ಶಕಾರ್ತಿಯಲ್ಲ...."

"ನೀವೇನಂದ್ಕೊಂಡ್ರೂ ತೃಪ್ತಿ ತಾಳಿ. ಅಂತಹ ವಿಮರ್ಶೆಗೆ ನನ್ನ ಮಾತ್ನಲ್ಲಿ ಏನು ಇದೇಂತ?"

"ನೋಡು, ನೀನಂದಿ ಪ್ರಜಾಸತ್ತೆ ಮತ್ತು ಅವತಾರಾಂತ...."

"ಹೌದು...."

"ಅಲ್ಲೇ ಇದೆ ನೋಡು ಕಾವ್ಯ ಗುಣ...."

"ಗುಣವೋ ಗಣವೋ ಏನು ಹೇಳಿ ನೋಡೋಣ."

"ನಿನ್ನ ಮಾತು ಪಾಶ್ಚಾತ್ಯ ಮಿತ್ರರಿಗೆ ಸರಿ ಹೊಂದುತ್ತೆ...."

"ಅಂದ್ರೆ?...."

"ನೋಡು, ಕಾಶ್ಮೀರದ ವಿಷಯದಲ್ಲಿ ಪಾಶ್ಚಾತ್ಯ ಮಿತ್ರ ರಾಷ್ಟ್ರಗಳು ಡೊಂಬರಾಟ ಆಡಿ ಅವತಾರ ತಾಳಿದುವು. ಆದ್ದರಿಂದ್ಲೇ ಅಲ್ಲಿ ಪ್ರಜಾಸತ್ತೆ ಯಶಸ್ವೀಂತ.."

"ಅಬ್ಬ ನಿಮ್ಮ ಬುದ್ಧಿ ಶಕ್ತಿಯೇ? ನಾನು ಏನೋ ಒಂದು ಅಂದ್ರೆ ನೀವು ಅದ್ಕೆ ಬೇರೆಯೇ ತಿಳ್ಕೊಳ್ತೀರಿ."

"ಅದ್ಕೇ ನೋಡು ಅನ್ನೋದು ರವಿ ಕಾಣದುದಂ ಕವಿ ಕಾಂಬಂ; ಕವಿ ಕಾಣದುದಂ ವಿಮರ್ಶಕ ಕಾಂಬಂ ಎಂದು."

"ಸಾಕು ಬಿಡೀಂದ್ರೆ ತನ್ನನ್ನೇ ತಾನು ಹೊಗಳಿಕೊಳ್ಳೋದು ಆತ್ಮಹತ್ಯೆಗೆ ಸಮಾನ ಅಂತೆ"

"ಅದು ನಿಜಾನ್ನು. ಆದರೂ ಆತ್ಮಾನಂನಾವಸಾಧಯೇತ್ ಎಂದೂ ಅಂದಿದ್ದಾನೆ ಕೃಷ್ಣ."

"ಆ ಅವತಾರಿ ಪುರುಷ ಒಂದೊಂದು ಕಾಲದಲ್ಲಿ ಒಂದೊಂದು ರೂಪ ತಾಳಿ ಒಂದೊಂದು ಮಾತನ್ನ ಆಡ್ತಾನೆ. ಆವನಿಗಿಂತ ಒಂದೇ ಕಾಲದಲ್ಲಿ ರೂಪ ಬದ್ಲಾಯಿಸಿ ಬೇರೆ ಬೇರೆ ಮಾತನ್ನ ಆಡೋರು ಹೆಚ್ಚು. ಅಂತಹರೇ ದೇ. ಭ. ಆಗ್ತಾರೆ; ಹೋದಲ್ಲಿ ಬಂದಲ್ಲಿ ಮಾಲೆ ಹಾಕಿಸಿ ಕೊಳ್ಳುತ್ತಾರೆ...."

"ಅಂದ್ರೆ ನೀನೂ ದೇ. ಭ. ಆಗ್ಬೇಕೂಂತಿಯ? ನಿನ್ನ ಕೊರಳಿಗೆ ನಾನೇ ಮಾಲೆ ಹಾಕಿದ್ದೇನೆ ಅಂದ್ರೆ..."

"ಸಾಕು ಬಿಡಿ. ನಾಚಿಗೆ ಆಗೋದಿಲ್ವೆ?

"ಒಮ್ಮೆ ಹೇಳಿದ ಮಾತಿಗೆ ವಿರೋಧವಾಗಿ ಮತ್ತೊಂದನ್ನ ಅನ್ನೋಕೆ ಅಮೆರಿಕೆ—ಬ್ರಿಟನ್ನಗಳಿಗೆ ನಾಚಿಗೆ ಆಗೋದಿಲ್ಲ; ತನ್ನ ಅಪರಾಧದ ಕೆಂಡವನ್ನು ಬಚ್ಚಿಟ್ಟೋಕೆ ಪಾಕಿಸ್ತಾನಕ್ಕೆ ನಾಚಿಗೆಯಿಲ್ಲ; ಹತ್ತು ವರ್ಷ ಹಿಂದೆ ಅಂದ ಮಾತನ್ನ ಮುಚ್ಚಿಡೋಕೆ ಶೇಖ ಅಬ್ದುಲ್ಲಾರಿಗೆ ನಾಚಿಗೆ ಆಗೋದಿಲ್ಲ... ಹಾಗಿರೋವಾಗ ಸತ್ಯವನ್ನ ನುಡಿಯೋಕೆ ನನಗೆ ಯಾಕೆ ಅದು ಆಗ್ಬೇಕೂಂತ...."

"ಅದು ಸರೀನ್ನಿ. ಅಮೆರಿಕೆ ಕಾಶ್ಮೀರವನ್ನು ಗೊಂಬೇಂತ ತಿಳಿದು ಅದರೊಡನೆ ಆಡ್ತಾ ಇದೆ."

"ಹೌದು, ಒಮ್ಮೆ ಭಾರತದತ್ತ ಹೊರಳಿಸುತ್ತದೆ; ಮತ್ತೊಮ್ಮೆ ಪಾಕಿಸ್ತಾನದತ್ತ ......"

"ಬ್ರಿಟನ್ನು ಆಡಿದ ನಾಟಕ ಆಡ್ತಾ ಇದೆ.."

"ಭುಟ್ಟೋ ಭೋಂತ ಗರ್ಜಿಸುತ್ತಾರೆ'

"ಶೇಖ ತನ್ನ ಶೇಖಿಸ್ತಾನ ಪಡೆಯುವ ಪ್ರಯತ್ನದಲ್ಲಿ ಲೀನನಾಗಿದ್ದಾರೆ."

"ಹೀಗೆ ಗುಡುಗು ಗುಡುಗುತ್ತಿದೆ; ನಾಲ್ಕೂ ನಿಟ್ಟಿನಲ್ಲಿ...."

"ಬರೀ ಗುಡುಗು...ಮಳೆಯಿಲ್ದೆ ಬಾವಿಯೂ ಬಾಯಿಯೂ ಆರಿಬಿಟ್ಟಿದೆ..."

"ಆದ್ರೂ ನಾಲ್ಕು ಹನಿ ಉದುರುತ್ತಿವೆ... ಆದ್ರಲ್ಲೂ ನನೇಬಾರ್ದ ಶೀತ ಆಗುತ್ತೇಂತ ಹೆದರಿಸ್ತಾ ಇದ್ದಿಯಲ್ಲ ಮತ್ತೆ..."

"ಅಬ್ಬ ನೀನೆ, ತಾನು ಮಾಡಿದ್ದನ್ನ ಸಮರ್ಥಿಸಿಕೊಳ್ಳೋದ್ರಲ್ಲಿ ನೀವು ಭಾರಿ ಬಿರ್ಸರು..."

"ಹೊಗ್ಲಿ ಸುರುವಾಗ್ಲಿ ನಿನ್ನ ಪುರಾಣ. ಯಾರನ್ನಾದ್ರೂ ಮುಂದುಗಡೆ ಹೋಗಬಾರ್ದೂಂತ ನೀತಿ."

ಕೆಲವ್ರು ತಮ್ಮ ಪ್ರಶಂಸೆ ಹೇಳಿ ಉಬ್ಬಿಬಿಡ್ತಾರೆ..."

"ನಾನಿಲ್ಲಿಯೆ ಉಬ್ಬೋದು? ನನ್ನಂತಹ ಕಡ್ಡಿ ಪೈಲುವಾನನೂ ಉಬ್ಬೋಕೆ ಸುರುಮಾಡಿದ್ರೆ...."

"ನೋಡಿ, ಆತ್ಮಾನಂನಾವಸಾಧಯೇತ್...."

"ಸರಿ ಬಿಡು...."

"ಬಿಡೋದೇನು ಬಂತು? ಇಲ್ಲಿ ಬನ್ನಿ, ಪಾಪ, ಮಳೆಯಲ್ಲಿ ಒದ್ದೆಯಾಗಿದ್ದೀರಿ.. ತಲೆ ಒರ್ಸುತ್ತೇನೆ.."

"ತಲೆ ಒರ್ಸಿ ಜತೆಗೆ ಹೊಟ್ಟೇನೂ ತಣ್ಸಿ!

"ಅದು ಇದ್ದೇ ಇದೆ ತಾನೇ, ಬನ್ನಿ ಇಲ್ಲಿ..."

"ನೀನು ಹೀಗೆ ಕರಿಯೋವಾಗ ಇಲ್ಲಾಂತೇನೆಯೆ ನಾನು?..."

—ಗೋರಾ

ಪ್ರಣಯ ನಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

ಕನಲುದಾರಿ-ಕೆಂಪ್ರದೀಪ

ಶಿಷ್ಟಾಚಾರ-ಭ್ರಷ್ಟಾಚಾರ

ಚೆನ್ನಾಗಿರುವ ಒಂದು ಹಣ್ಣನ್ನು ಕೊಳೆತ ಒಂಭತ್ತು ಹಣ್ಣುಗಳ ನಡುವೆ ಇರಿಸುವಂತಿಲ್ಲ. ಹಾಗಿರಿಸಿದ ಹಣ್ಣು ಮತ್ತೆ ತಿನ್ನಲು ಯೋಗ್ಯವಾಗಿರುವುದಿಲ್ಲ ಎಂಬುದನ್ನು ಎಲ್ಲರೂ ಬಲ್ಲರು.

ಚೆನ್ನಾಗಿರುವ ಒಂಭತ್ತು ಹಣ್ಣುಗಳ ನಡುವೆ ಒಂದು ಕೊಳೆತ ಹಣ್ಣನ್ನು ಇರಿಸಿ ನೋಡಿ. ಆ ಒಂಭತ್ತು ಹಣ್ಣುಗಳು ಮೂರನೆಯ ದಿನ ತಿನ್ನಲು ಆಯೋಗ್ಯವಾಗಿರುತ್ತವೆ.

ಮಾನ ಕಳೆದುಕೊಂಡಿರುವ ಒಬ್ಬ ಕೂಳಿ, ಮಾನವೆಂದರೇನೆಂಬುದನ್ನರಿಯದ ಒಬ್ಬ ಪೋಲಿ, ಒಂದು ಊರು ಕೆಡಿಸಲು ಸಾಕು.

ಜೈಲಿಗೆ ಹೋಗಿ ಬಂದಿರುವ ರಾಜಕಾರಣಿಗಳಲ್ಲಿ ಅನೇಕರು "ಸಜ್ಜನ"ರಾಗಿರುವುದನ್ನು ನೋಡಿದರೆ ದಾಸರು ಹಾಡಿರುವ "ಇದು ಭಾಗ್ಯ, ಇದು ಭಾಗ್ಯವಯ್ಯ" ಎಂಬ ಹಾಡನ್ನು ಹಾಡೋಣವೆನ್ನಿಸುತ್ತದೆ.

ಆಚರಣೆಯಲ್ಲಿ ಪರಿಶುದ್ಧ ಭಾವವಿರಬೇಕೆಂದು ಬಾಯಿ ತುಂಬಾ ಆಡಿಕೊಳ್ಳುವವರು, ಅವರ ಆಚರಣೆಯಲ್ಲಿ ಎಂತಹ ಭಾವ ತುಂಬಿಕೊಂಡಿದ್ದಾರೆ ಎಂಬುದರ ಕುರಿತು ಚಕಾರ ಶಬ್ದ ಎತ್ತಬಾರದು!

—ಕಾರಣ ಅದು ಅವರ ವೈಯಕ್ತಿಕ ವಿಷಯ.

ವೈಯಕ್ತಿಕ ಹಾಗೂ ಸಾರ್ವತ್ರಿಕ ವಿಷಯಗಳು ಭಿನ್ನವಾಗಿರುತ್ತವೆ.

ಇನ್ನೊಬ್ಬರ ಹಿತಕ್ಕಾಗಿ ಆಡಿಕೊಳುವ ಹಿತಕಾಂಕ್ಷಿಗಳಿಗೆ, ಅವರ ಹಿತ ಸಂಬಂಧದ ವಿಚಾರದಲ್ಲಿ ಆಡಿಕೊಳ್ಳುವಂತಹುದು ಆಚರಣೆಯಲ್ಲಿ ಇರಿಸಿಕೊಳ್ಳುವಂತಹುದೂ ಉಳಿದಿರುವದಿಲ್ಲ.

ತಮ್ಮ 'ಹಿತ'ಕ್ಕಾಗಿ ಅವರಿಗೆ ಬೇರೆಯೇ ದಾರಿಯಿದೆ. ಆ ದಾರಿಯನ್ನು ತುಳಿಯಲು ಯಾರಿಗೂ ಅಧಿಕಾರವಿಲ್ಲ. ಕಾರಣ ಅದು ಅವರ ದಾರಿ. ಅದಕ್ಕೆ ಅವರು ವೈಯಕ್ತಿಕ ಎಂದು ಹೇಳುತ್ತಾರೆ.

ಈ ವೈಯಕ್ತಿಕ ಎಂಬುದು ಈಗ ಒಂದು ಸಾಮಾನ್ಯ ವಿಷಯವಾಗಿದೆ. ಅಲ್ಲದೆ ಇದರ ಪ್ರಭಾವದಿಂದ, ಎಷ್ಟೋ 'ಸದಾಚಾರಿ'ಗಳು ಬದುಕಿ ಉಳಿದಿದ್ದಾರೆ.

ಬಚಾಯಿಸಿ ಕೊಳ್ಳಲು ತಿಳಿದವನು ಇವತ್ತು ಬದುಕಿ ಉಳಿಯುತ್ತಾನೆ

ಇದನ್ನು ಇಂದಿನ ಭಾರತದ ಸ್ಥಿತಿಗತಿಗಳ ಅವಲೋಕನೆ ಮಾಡುವ ಪ್ರತಿಯೊಬ್ಬ ಸುಲಭವಾಗಿ ಅರಿತುಕೊಳ್ಳಬಲ್ಲ.

ಮಾಡಿದ್ದನ್ನು ಉಣ್ಣಬೇಕು ಎಂಬ ನಾಡನುಡಿಗೆ ಇವತ್ತು ಹೆಚ್ಚು ಬೆಲೆಯಿದೆ.

ಪ್ರಾಮಾಣಿಕತನದಿಂದ ಬದುಕಬೇಕೆಂದು ಇಚ್ಛಿಸುವವರು ಪುನರ್ಜನ್ಮದಲ್ಲಿ ಸುಖಿಗಳಾಗುವರಂತೆ. ಜನರನ್ನು ಸುಲಿದು ತಿನ್ನುವ ಮಂದಿ ಪುನರ್ಜನ್ಮದಲ್ಲಿ, ಅತ್ಯಂತ ಹೀನಾವಸ್ಥೆಯಲ್ಲಿ ಬದುಕುವರಂತೆ!

ಪ್ರಾಮಾಣಿಕ ವ್ಯಕ್ತಿ ಈ ಜನ್ಮದಲ್ಲಿ ಅನುಭವಿಸುವ ಅತ್ಯಂತ ಶೋಚನೀಯಾವಸ್ಥೆಯ ಸ್ಥಿತಿಯನ್ನೂ, ಅಪ್ರಾಮಾಣಿಕತನದಿಂದ ಬದುಕುವ ವ್ಯಕ್ತಿ ಈ ಜನ್ಮದಲ್ಲಿ ಸಕಲ ಸೌಲಭ್ಯಗಳನ್ನೂ ಪಡೆಯುತ್ತಿರುವದನ್ನೂ ನೋಡಿದರೆ, ಮರು ಜನ್ಮದಲ್ಲಿ ಇವರಿಬ್ಬರಲ್ಲೂ ಉಂಟಾಗಲಿರುವ ಬದಲಾವಣೆಗೆ ಒಂದು ಅರ್ಥ ಕಲ್ಪಿಸಿಕೊಳ್ಳುವಂತಿದೆ

ಅವರ ಇವತ್ತಿನ ಬದುಕನ್ನೇ ನಾವು ಅದಲು ಬದಲು ಮಾಡಿಕೊಂಡು ನೋಡಿದರೆ ಇದು ಮನವರಿಕೆಯಾಗುತ್ತದೆ.

ಅಂದರೆ ನಾವು ಜನ್ಮ ಜನ್ಮಾಂತರಗಳ ಬಗ್ಗೆ ಸಂದೇಹ ಸೂಚಿಸಿದಂತೆ ಆಗುವದಿಲ್ಲ; ಹಾಗೆ ತಿಳಿಯುವುದೂ ತಪ್ಪಾಗುತ್ತದೆ.

ಆದರೆ ಶಿಷ್ಟಾಚಾರವೆನ್ನುವುದು ಇವತ್ತಿನ ನವನಾಗರಿಕ ಸಮಾಜದಲ್ಲಿ ಯಾವ ಕಡೆಗೆ ಸಂಚರಿಸುತ್ತಿದೆ; ಅದನ್ನು ಯಾರು ಪಾಲನೆ ಮಾಡಿಕೊಂಡು ಬರುತ್ತಿದ್ದಾರೆ, ಎಂಬತ್ತ ನೋಡಿದರೆ, ನಮಗೆ ಶೂನ್ಯದ ಕಲ್ಪನೆಯೇ ಹೆಚ್ಚು ನಿಚ್ಚಳವಾಗಿ ಕಾಣಿಸುತ್ತದೆ.

ಮನುಷ್ಯನು ತಪ್ಪುಮಾಡುತ್ತಾನೆ; ಅದು ಅವನ ಸ್ವಭಾವ; ಒಂದಲ್ಲ ಒಂದು ತಪ್ಪು ಆಗಿಯೇ ಆಗುತ್ತದೆ; ಹಾಗೆ ಒಂದು ತಪ್ಪಾಗದಂತೆ ಇರುವ ವ್ಯಕ್ತಿ ಒಬ್ಬನೂ ಸಿಗಲಾರ—ಎಂಬ ಮಾತನ್ನು ನಾವು ನಂಬಬಹುದಾದರೆ, ಸ್ವರ್ಗದಲ್ಲಿರಲು ಒಬ್ಬನೂ ಅರ್ಹನಾಗಿ ಉಳಿಯುದೆ, ಸ್ವರ್ಗವೆನ್ನುವದೇ ನರಕವಾಯುವಾಗಿ—ನರಕವೆನ್ನುವದೇ ಉಳಿಯುವದಿಲ್ಲ!

ಹೇಗಿದ್ದರೂ, ಇವತ್ತು ನಮ್ಮ ವ್ಯಾಪಾರಿಗಳು, ರಾಜಕಾರಣಿಗಳು, ಕಲಾರಾಧಕರು, ಬುದ್ಧಿವಂತರು ತುಳಿಯುತ್ತಿರುವ ದಾರಿಯಲ್ಲಿ ಸುಖೀ ಜೀವನವನ್ನು ತುಳಿಯಲು ಸಾಕಷ್ಟು ಪ್ರಯತ್ನ ನಡೆಯುತ್ತಿದೆ.

ಹಸಿವೆ, ಕಾಮ, ಕಾಸು—ಈ ಮೂರು ವಿಷಯಗಳಿಗೆ ತಮ್ಮ ಪ್ರಾಮಾಣಿಕತನವನ್ನು ಬಲಿಗೊಡುವ 'ವಿಚಾರವಂತರು' ತಮ್ಮ ಜೀವನವನ್ನು ಎಲ್ಲಾ ಬಗೆಯ ಸುಖ ಸೌಕರ್ಯಗಳಿಂದ ಸಜ್ಜುಗೊಳಿಸುವಲ್ಲಿ, ಹೆಚ್ಚು ಲಕ್ಷ್ಯವಹಿಸುತ್ತಾರೆ, ಇದಕ್ಕಾಗಿ ಇನ್ನೊಬ್ಬರ ಹಿತವನ್ನು ಕಡೆಗಣಿಸುತ್ತಾರೆ

ಬಡವನೊಬ್ಬನಿಂದ ನಡೆಯು ಬಹುದಾದ ಚಿಲ್ಲರೆ ಕಾಸಿನಲ್ಲಿ ನಡೆಯುವ ವಂಚನೆಯು ಸಮಾಜದ ಈ "ನೀತಿವಂತ"ರಿಗೆ ಬೃಹದಾಕಾರವಾಗಿ ಕಾಣಿಸುತ್ತದೆ.

ಆದರೆ ಅವರು ತಮ್ಮ ಪ್ರಾಮಾಣಿಕತನವನ್ನು ಯಾವ ಒರೆಗಲ್ಲಿಗೆ ಹಚ್ಚಿ ನೋಡಿದ್ದಾರೆ?

ಅವರು ಸಾರ್ವತ್ರಿಕ ಹಿತಸಂಬಂಧದ ಬಗೆಗೆ ನೂರು ಆಡಿಕೊಳ್ಳುತ್ತಾರೆ; ಆದರೆ ತಮ್ಮ ಅಂತರಂಗವೂ ಪರಿಶುದ್ಧವಾಗಿರಬೇಕೆಂದು ಏಕೆ ಪ್ರಯತ್ನಿಸುತ್ತಿಲ್ಲ?



ಟ್ರಾಂಬೇಯ ಅಣು ರಿಯಾಕ್ಟರಿನ ಅಂತರಿಕ ದೃಶ್ಯ.

ಶಿಷ್ಟಾಚಾರಕ್ಕೆ ತಲೆ ಬಾಗಿರುವ ಭಾರತದಲ್ಲಿ ಇಂದು ಭ್ರಷ್ಟಾಚಾರವು ತಲೆ ಎತ್ತಿ ಮೆರೆಯ ತೊಡಗಿದೆ ಎಂಬುದು ನಿಜ. ಇದಕ್ಕೆ ಕಾರಣವನ್ನು ಹುಡುಕಿ ತೆಗೆಯುವುದೂ, ಇದನ್ನು ತಡೆಗಟ್ಟಿ, ಜನಜೀವನಕ್ಕೆ ಸುಖ ಸೌಕರ್ಯವನ್ನು ಒದಗಿಸಿ ಕೊಡುವುದೂ, ಅತೀ ಅಗತ್ಯ.

ಈ ಸೌಕರ್ಯ ಎಲ್ಲಿಂದ, ಹೇಗೆ, ಯಾರಿಂದ ಸಾಧಿಸಲ್ಪಡಬೇಕು?

ಈ ಪ್ರಶ್ನೆಗೆ ಉತ್ತರಾಧಿಕಾರಿ ಸಿಕ್ಕರೆ ಆಗ ಭ್ರಷ್ಟಾಚಾರವು ಅಳಿದು ಹೋದೀತು. ಭಾರತದಲ್ಲಿ ಶಿಷ್ಟಾಚಾರವು ತಲೆ ಎತ್ತಿ ಮೆರೆದೀತು.

—**ಸುದಾಸ.**

ಕ್ಯಾರೋವಿನಲ್ಲಿ ಕ್ರುಶ್ಚೇವರು

(೪ನೇ ಪುಟದಿಂದ)

ರಷ್ಯ ಖಂಡತುಂಡವಾಗಿ ಪ್ರತಿಭಟಿಸುತ್ತದೆ; ದಕ್ಷಿಣ ಆಫ್ರಿಕೆಯ ಕಾಳವರ್ಣನೀತಿಯನ್ನು ಬಲವಾಗಿ ವಿರೋಧಿಸುತ್ತದೆ. ಪಾಶ್ಚಾತ್ಯ ರಾಷ್ಟ್ರಗಳೊಡನೆ ಒಡಂಬಡಿಕೆ ಮಾಡಿಕೊಂಡು ಅಣ್ವಸ್ತ್ರ ಹಾವಳಿಯಿಂದ ದೂರವಿರುವಲ್ಲಿ ಉತ್ಸುಕತೆ ವಹಿಸುತ್ತದೆ. ಅಮೆರಿಕೆಯನ್ನು ಪೀಕಿಂಗ್ ಸಾಮ್ರಾಜ್ಯ ವಾದಿಯೆಂದು ಕರೆಯುವುದಾದರೂ ಅದಕ್ಕೆ ಆಫ್ರಿಕೆಯಲ್ಲಿ ಒಂದೇ ಒಂದು ವಸಾಹತು ಇಲ್ಲ ಆದುದರಿಂದ ಅದು ಪೀಕಿಂಗ್ ಉಪಾಗರವು ನಿರ್ಮೂಲವಾದದೆಂದು ಹೇಳಿದರೆ ಅತ್ಯುಕ್ತಿಯಾಗದು.

"ನೀವು ಬಹಳಷ್ಟನ್ನು ಸಾಧಿಸಿದ್ದೀರಿ. ನಾನೀಗ ಅದನ್ನು ಕಣ್ಣಾರೆ ಕಾಣುವ ತವಕದಿಂದ ಬಂದಿದ್ದೇನೆ" ಎಂದು ಉದ್ಗರಿಸಿದ್ದರು. ಪ್ರಧಾನಿ ಕ್ರುಶ್ಚೇವರು ಕ್ಯಾರೋದ ನೆಲದಲ್ಲಿ ಕಾಲಿಟ್ಟಾಗ. ಇದು ನಿಜ. ಆದರೂ ಅವರಲ್ಲಿ ಇದಕ್ಕಿಂತಲೂ ಬಲವತ್ತರವಾದ ಆಶೆಯೊಂದಿದೆ. ಕೆಂಪು ಚೀನಾ ಮತ್ತು ರಷ್ಯಗಳ ನಡುವಣ ಸೈದ್ಧಾಂತಿಕ ಮತಭೇದವಿಂದು ಬೆಳೆಯುತ್ತ ಬಂದಿದೆ; ಇನ್ನೂ ಬೆಳೆಯುತ್ತಲೇ ಹೋಗುತ್ತಿದೆ ಆಯರು ಚೀನೀಯ ಪ್ರಭಾವದ ಕೆಂಪು ಪ್ರಕಾಶ ಹರಡುವ ಸಾಹಸವನ್ನು ಕೈಗೊಂಡರು. ಇದರಿಂದ ತನ್ನ ಪ್ರಭಾವವನ್ನೂ ಹರಡುವುದು ಮತ್ತು ಬೆಂಬಲಗಳಿಸುವುದು ಅಗತ್ಯವೆಂದು ಕ್ರುಶ್ಚೇವರಿಗೆ ಕಂಡಿತು. ರಷ್ಯವು ಅರಬ-ಆಫ್ರಿಕನ್ ದೇಶಗಳಿಗೆ ನೆರವು ನೀಡಿದೆ; ಬರಿಗೈಯಿಂದ ಅವರು ಬೆಂಬಲಕೇಳುವುದಿಲ್ಲ. ಹಾಗಾಗಿ ಮಧ್ಯಪೂರ್ವದ ಮಹಾನಗರ ಕ್ಯಾರೋವಿಗೆ ಕ್ರುಶ್ಚೇವರ ಭೇಟಿಯು ಅಂತರಾಷ್ಟ್ರೀಯ ಪ್ರಾಮುಖ್ಯವನ್ನು ಪಡೆದಿದೆ. ಕ್ರುಶ್ಚೇವರ ದೌತ್ಯ ಲಾಭದಾಯಕವೆಂತಾಗುವುದಿಲ್ಲ. ಇಂದು ಖಂಡಿತ.

ಹೊಸ ಪುಸ್ತಕ—
ನಚಿಕೇತ'ರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ನವಯುಗ ಪ್ರೆಸ್, ಉಡುಪಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: **ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.**

ಹತ್ತು ಚೀನಾಗಳನ್ನು ಎದುರಿಸಬಲ್ಲೆವು

(೩ನೇ ಪುಟದಿಂದ)

ರುತ್ತದೆ ಇದಕ್ಕೆ ಎಂಜಿನ್ ಯಂತ್ರಗಳಿರುವ ವಿಮಾನಗಳು ಬಹಳ ಪ್ರಯೋಜನಕಾರಿಯಾಗಿರುತ್ತದೆ ಭಾರಗಳನ್ನು ಕೊಂಡೊಯ್ಯುವ ವಿಮಾನ ಇದ್ದಲ್ಲಿ ನಮ್ಮ ಯೋಧರಿಗೆ ಬೇಕಾಗುವ ಸಾಮಗ್ರಿಗಳನ್ನು ಒದನೊಡನೆ ಪೂರೈಸಲು ಬಹಳ ಅನುಕೂಲವಾಗುತ್ತದೆ ನಮ್ಮ ವೈಮಾನಿಕರು ಈ ಕಾರ್ಯವನ್ನು ಬಹಳ ಪ್ರಶಂಸನೀಯ ರೀತಿಯಲ್ಲಿ ಮಾಡಿದ್ದಾರೆ ಹಾಗಿರುವಾಗ ನಿರಾಶೆ ಪಡಲು ಆದ್ಯಾವ ಕಾರಣವೂ ಇರುವದಿಲ್ಲ ಈಗ ಬೇಕಾಗಿರುವದು ಸಿದ್ಧತೆಯು ವೇಗವನ್ನು ಅಧಿಕಗೊಳಿಸುವದು, ಅಷ್ಟೆ ಯುದ್ಧದಲ್ಲಿ ಕ್ಷಿಪ್ರತೆ, ತೀವ್ರತೆ ಅಲ್ಲದೆ ವೇಗವು ಅವಶ್ಯಕ ಗುಣ ಅದೇ ರೀತಿ ಸಿದ್ಧತೆಯೂ ಒಂದು ಉತ್ತಮ ಗುಣ ಚೈನಾದ ಒಂಬತ್ತು—ಹತ್ತು ಲಕ್ಷ ಸೈನಿಕರಿಗೆದುರಾಗಿ ಹೋರಾಡಲು ಪರ್ವತೀಯ ಯುದ್ಧ ಶಿಕ್ಷಣವನ್ನು ಪಡೆದ ೯—೧೦ ಲಕ್ಷ ಭಾರತೀಯ ಯುವಕರು ದಾರಳವಾಗಿ ನಾಕು ಹಿಮಾಲಯ ಪ್ರದೇಶದಲ್ಲಿ ವಾಸಿಸುತ್ತಿರುವ ಘೂರ್ಖರು, ಗರವಾಲಿಗಳು ಕುಮಾಯೂನ್‌ಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣವಿತ್ತಲ್ಲಿ ಬಹಳ ಚೆನ್ನಾಗಿರುತ್ತದೆ

ಜನಶಕ್ತಿ, ಶಸ್ತ್ರಾಸ್ತ್ರಗಳ ಶಕ್ತಿ, ವ್ಯವಹಾರ ಸಾಧನ ಹಾಗೂ ಪ್ರಯಾಣ—ಸರಬರಾಜು ಸಾಧನಗಳ ದೃಷ್ಟಿಯಲ್ಲಿ ವಿಚಾರ ಮಾಡಿದ ಮೇಲೆ ಪಾಕ್—ಚೈನಾ—ದ್ವೀಪಾಂತರ ಬಲಗಳೊಂದಿಗೆ ಹೋಲಿಸಿ ನೋಡುವಾಗ ನಾವು ಹಿಂದೆ ಇಲ್ಲವೆಂಬುದರ ಅರಿವಾಗುತ್ತದೆ ಅವಶ್ಯಕತೆ ಇರುವದು ಸಂಕಲ್ಪ ಹಾಗೂ ಉದ್ದೇಶಗಳ ಸ್ಪಷ್ಟತೆಗಳದ್ದು ಇವುಗಳು ಪೂರ್ತಿಯಾಯಿತೆಂದರೆ ಭಾರತದ ವಿಜಯದಲ್ಲಿನಿತೂ ಸಂದೇಹಕ್ಕೆಡೆಯೇ ಇರುವದಿಲ್ಲ

ಹಾಗು ಅವರಲ್ಲಿ ಸಂದೇಹವಿಲ್ಲ ನಮ್ಮಲ್ಲಿ ಒಕ್ಕಟ್ಟು—ಶಿಸ್ತು ಇದ್ದಲ್ಲಿ ಮಾತೃಭೂಮಿಯ ಮೇಲೆ ಗೌರವ ಇದ್ದಲ್ಲಿ ಒಂದಲ್ಲ ಹತ್ತು ಚೈನಾಗಳನ್ನು ಹಿಮ್ಮೆಟ್ಟಿಸಬಹುದು. ಓರ್ವ ಅದ್ವಿತೀಯ ದೇಶಭಕ್ತರೊಬ್ಬರು ಹೇಳಿರುವದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು ಆದರೆ ಎಲ್ಲರೂ ಇದೇ ಅಭಿಪ್ರಾಯದವರಿರುವದಿಲ್ಲ ಇದಕ್ಕೆ ಯುದ್ಧ ಭಯವೂ ಒಂದು ಕಾರಣವಿದೆ ಚೈನಾದಲ್ಲಿ ಆರುವತ್ತೈದು ಕೋಟಿ ಜನವಸತಿ ಇದೆ ಅದು ವಿಶಾಲ ರಾಷ್ಟ್ರ, ಸಬಲ ಕಮ್ಯೂನಿಸ್ಟ್ ಸರಕಾರ ಇರುವ ರಾಷ್ಟ್ರವೆಂಬುದನ್ನು ಮರೆಯಬಾರದು ಸಂಧ್ಯಾ

ವಿಲ್ಲವೆಂದು ಅವರು ಲೋಕ ಸಭೆಯಲ್ಲಿ ಮಾತಾಡಲೂ ಕೆಲವರು ಹೇಸಿರುವದಿಲ್ಲ, ಇನ್ನೊಂದು ರಂಗದವರು ಕಮ್ಯೂನಿಸ್ಟ್ ಬಣದವರು ಹಾಗೂ ಪಾಕಿಸ್ಥಾನಿ ದಲ್ಲಾಳಿಗಳು ಕಮ್ಯೂನಿಸ್ಟ್ ಬಣದವರಾದರೋ ಆಕ್ರಮಣವೇ ನಡೆದಿಲ್ಲವೆಂದೂ, ಭಾರತವೇ ಆಕ್ರಮಣ ನಡೆಸಿರುತ್ತದೆಂದು ವೇದಿಕೆಗಳ ಮೇಲೂ, ಪತ್ರಿಕೆಗಳ ಮೂಲಕವೂ ಪ್ರಚಾರ ಮಾಡುತ್ತಿದ್ದಾರೆ ಪಾಕಿಸ್ಥಾನಿ ದಲ್ಲಾಳಿಗಳ ಕುಕೃತ್ಯ ವಿಪರೀತವಾಗಿದೆ ಲಕ್ನೋದಲ್ಲಿ, ಜಬ್ಬಲಪುರದಲ್ಲಿ. ಹೀಗೆ ಹಲವಾರೆಡೆಗಳಲ್ಲಿ ಶಸ್ತ್ರ ತಯಾರಿಸುವ ಗುಪ್ತ ಕಾರ್ಖಾನೆಗಳಿರುವದನ್ನು ಈಗೀಗ ಕಂಡು ಹಿಡಿಯಲು ಗುಪ್ತಚರ ಇಲಾಖೆ ಪ್ರಯತ್ನ ನಡೆಸುತ್ತಿದೆನ್ನುವದು ಪ್ರಶಂಸನೀಯ ಇತ್ತೀಚೆಗೆ ಮದ್ರಾಸಿಗೆ ಬಂದಿದ್ದ ಸಂಚಾರ ಸಾಧನ ಸಚಿವ ರಾಜಬಹದ್ದೂರರವರು ಪ್ರಮುಖ ಬಳಗವನ್ನು ಎಚ್ಚರಿಸಿ ಕಮ್ಯೂನಿಸ್ಟ್ ಚೈನಾ ಹಾಗೂ ಪಾಕಿಸ್ಥಾನಿ ಪಂಚಮ ಸ್ಥಂಭೀಯರ ಮೋಸದ ಮಾತಿಗೆ ಗುರಿಯಾಗಬಾರದೆಂದು ಹೇಳಿರುವರು ಅಂದರೆ ಈ ಪಂಚಮ ಸ್ಥಂಭೀಯರ ಘಾತಕ ಕೃತ್ಯಗಳ ಅರಿವು ಶ್ರೀ ರಾಜ ಬಹದ್ದೂರರವರಿಗಾಗಿದೆನ್ನಬಹುದು ಇವರಾದರೋ ಅನ್ಯರಾಷ್ಟ್ರಗಳ ಮೇಲೆ ಶ್ರದ್ಧೆ ಇಟ್ಟುಕೊಳ್ಳುವರಿದ್ದಾರೆ. ಭಾರತದಲ್ಲಿ ಇರುವ ಇನ್ನೊಂದು ವಿಚಿತ್ರ ಗುಂಪು ದೇಶ ವಿಭಜನಾ ಕಾರ್ಯಕ್ಕೆ ಹೇಸದ ಯದ್ವಾತದ್ವಾ ಆಡುತ್ತಿದೆ ಅದುವೇ ಪಕ್ಷದ ಸದಸ್ಯರಿಗೆಲ್ಲಾ ಸ್ವತಂತ್ರವಿತ್ತಿರುವ ಸ್ವತಂತ್ರ ಯಾ ಸ್ವೇಚ್ಛಾ ಪಕ್ಷ ಈಗಿನ ದುರ್ದೈವ ಪರಿಸ್ಥಿತಿಯಲ್ಲಿ ಅದು ಕಾಶ್ಮೀರವನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಟ್ಟು ರಾಜಿಮಾಡಿಕೊಂಡು ಚೈನಾವನ್ನೆದುರಿಸಬೇಕೆಂದು ಹೇಳುತ್ತಿದೆ ಕಾಶ್ಮೀರ ಕರುವಿನ ರುಚಿ ನೋಡಿದ ಪಾಕಿಸ್ಥಾನ ಪುಲಿ ಅಸ್ಸಾಂ ಆದನ್ನು, ಪಶ್ಚಿಮ ನೆಲವನ್ನೂ ಕೇಳದೆ ಇದ್ದೀತೇ? ಅದಕ್ಕೆ ಅಂತ್ಯವೆಂದರೂ ಎಲ್ಲಿ? ಅತ್ತ ದುರ್ದೈವವಶಾತ್ ಸ್ವತಂತ್ರಪಕ್ಷ ಗಮನ ಕೊಟ್ಟಿರುವದಿಲ್ಲ ಇವರೇ ಅಲ್ಲದೆ ಕಾಂಗ್ರೆಸ್ ಪಕ್ಷದ ಒಳಗೂ

ಗಡಿ ರಕ್ಷಣೆಯಲ್ಲಿ ನಿರತರಾಗಿರುವ ಭಾರತೀಯ ಸೈನಿಕರು

ಕಮ್ಯೂನಿಸ್ಟ್ ಸಹಚರರಿದ್ದು, ಅವರು ಭಾರತವನ್ನು ಚೈನಾ ಡೇರೆಯೊಳಗೆ ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದಾರೆ ಅವರು ಈಗಿನ ಬಿಸಿ ವಾತಾವರಣದಲ್ಲಿ ರಾಷ್ಟ್ರೀಯ ಶಕ್ತಿಗಳನ್ನು ನಾಶ ಮಾಡಬೇಕೆಂದು ಪ್ರಯತ್ನಿಸುತ್ತಿದ್ದಾರೆ ಹಾಗಾದರೂ ಆಯೂಬರ ಅತೃಪ್ತಿ, ಅಸಮಾಧಾನ ಕಮ್ಮಿಯಾಗಲಿ, ಚೌ ಎನ್‌-ಲೈ ಚೆನ್ನಾಗಿರಲೆಂದು ಅವರು ಹಾರೈಸುತ್ತಿದ್ದಾರೆ ಅದನ್ನು ಅರಿತುಕೊಂಡೇ ಗಳಿಗೆಗೊಂದು ರೀತಿಯಾಡುತ್ತಿರುವ ಆಯೂಬ ಇತ್ತೀಚೆಗೆ ಮಾತಾಡುತ್ತ, ಭಾರತದಲ್ಲಿರುವ ಮತೀಯ ದಂಗೆಗಳ ಕಾರಣವೆಂದರೆ ಅಲ್ಲಿರುವ ಅಲ್ಪ ಸಂಖ್ಯಾಕರಿಗೆ ಶಿಕ್ಷೆ ಕೊಡಬೇಕೆಂಬುದು, ಅವರನ್ನು ನಾಶ ಮಾಡಬೇಕೆಂಬುದು ಅಲ್ಲ, ಚುನಾವಣಾ ರಂಗದಲ್ಲಿ ಸೋಲಿಸಲಿಕ್ಕಾಗದ ಕಾಂಗ್ರೆಸ್ಸನ್ನು ಕಿತ್ತು ಬಿಸಾಡಲೆಂದೇ ಹಿಂದೂ ಸೈನಿಕ ಸಂಘಟನೆಗಳು ಪ್ರಯತ್ನಿಸುತ್ತಿವೆಯೆಂದು ಹೇಳಿರುವರು. ಹಿಂದೂ ಸಂಘಟನೆ ಸಹಿಸದವರಿಗೆ ಇಷ್ಟೇ ಸಾಕು ಒಡನೆ ಅವರು ಇತ್ತ ವಿಷ ಕಾರಲಾರಂಭಿಸುತ್ತಾರೆ ಏನಿದ್ದರೂ ಎಚ್ಚರಿಕೆಯು ಸಾಯೋಗದಯವಾಗುವ ಲಕ್ಷಣ ಕಂಡು ಬರುತ್ತಿದೆ. ಭಿನ್ನಾಭಿಪ್ರಾಯಗಳನ್ನು ಬದಿಗೆ ಸರಿಸಿ, ಶತ್ರುಗಳನ್ನೆದುರಿಸುವ ಲಕ್ಷಣ ಕಂಡು ಬರುತ್ತಿದೆ

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು ರಾಘವೇಂದ್ರ ಆಚಾರ್ಯ, ಎಂ ಎ.

ಸಾಮಾನ್ಯ ರೋಗಗಳು

ಡಾ| ಕೆ ಎಲ್ ಐತಾಳ, ಎಂ ಬಿ ಬಿ ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡಕ್ಕಿಲ ಕೃಷ್ಣ ಭಟ್ಟ ಎಲ್ ಎಲ್ ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.





ಅಭಿಪ್ರಾಯ

ಶಿಕ್ಷಣರಂಗದಲ್ಲಿ ಕ್ರಾಂತಿಬೇಕು

ಬರೆದವರು: ಶ್ರೀ ಹಳೆನಾಡು ಸುಬ್ರಾಯ ಭಟ್ಟ, ಚೋನಾಳಿ

ಇಂದು ಶಿಕ್ಷಣದಲ್ಲಿ ಪ್ರಗತಿಯಾಗಬೇಕು; ಶಿಕ್ಷಣ ಸುಧಾರಿಸಬೇಕೆಂಬುದಾಗಿ ಸರಕಾರ ಹೊಸ ಹೊಸ ಕ್ರಮವನ್ನೇನೋ ಜಾರಿಗೆ ತಂದಿದೆ. ಆದರೆ ಯಾವುದೇ ಒಂದು ಹೊಸ ವಿಧಾನವನ್ನು ಅನುಸರಿಸುವಾಗಲೂ, ಅದರಿಂದಾಗುವ ಒಳಿತು ಕೆಡುಕುಗಳನ್ನು ವಿವೇಚಿಸುವುದು ಅಗತ್ಯ.

ಇಂದಿನ ಶಿಕ್ಷಣ ಪದ್ಧತಿ ಎಂಬುದು ಹಳೆಯದನ್ನು ಸಂಪೂರ್ಣವಾಗಿ ಬಿಡದ ಹೊಸ ಕ್ರಮವನ್ನು ಸಂಪೂರ್ಣವಾಗಿ ಅನುಸರಿಸದ ಹಂತದಲ್ಲಿದೆ ಎಂಬುದು ಸರ್ವವಿದಿತವಾದ ವಿಷಯವಾಗಿದೆ. ಹಿಂದೆ ಶಿಕ್ಷಣ ಬೋಧನೆ ಎಂಬುದು ನಾನ್ ಬೇಸಿಕ್ (ಅ—ಮೂಲ?) ಕ್ರಮದಲ್ಲಿತ್ತು. ಅದು ಅಷ್ಟೊಂದು ಪರಿಣಾಮಕಾರಿಯಲ್ಲ; ಗಾಂಧೀಜಿಯವರು ಹೇಳಿದ ಮೂಲ (Basic) ಕ್ರಮವೇ ಸರ್ವ ಶ್ರೇಷ್ಠವೆಂಬುದಾಗಿ ಸರಕಾರ ಮನಗಂಡು ಇಂದು ಆಚರಣೆಗೆ ತಂದಿದೆ. ಆದರೆ ಬುನಾದಿ ಕ್ರಮದಂತೆ ಬೋಧಿಸಲು ಶಾಲೆಗಳಲ್ಲಿ ಎಷ್ಟರ ಮಟ್ಟಿನ ಸೌಕರ್ಯವಿದೆ; ಅದರಂತೆಯೇ ನಡೆಯುತ್ತಿದೆಯೇ; ನಡೆಯಲು ಸಾಧ್ಯವೇ? ಎಂಬ ವಿಚಾರದತ್ತ ಸರಕಾರ ಗಮನ ಹರಿಸಬೇಕಾದುದಗತ್ಯ. ಇಂದು ಹೆಚ್ಚಿನ ಶಾಲೆಗಳಲ್ಲಿ ಸಾಕಷ್ಟು ಸಲಕರಣೆಗಳೂ ಇರುವುದಿಲ್ಲ. ಸ್ಥಳಾಭಾವ ಕೂಡಾ ಇದೆ. ಸಾಕಷ್ಟು ಬುನಾದಿ ತರಬೇತಾದ ಅಧ್ಯಾಪಕರೂ ಇಲ್ಲದಿರಬಹುದು. ಇದರಿಂದ ಇಂದು ಯಾವುದೋ ಒಂದು ಕ್ರಮದಲ್ಲಿ ಶಿಕ್ಷಣ ಸಾಗುತ್ತಿದೆ.

ಸರಕಾರ ಸಾಕ್ಷರತೆ ಪ್ರಚಾರಕ್ಕಾಗಿ ಕಡ್ಡಾಯ ಶಿಕ್ಷಣ ಕ್ರಮವನ್ನು ಜಾರಿಗೆ ತಂದಿದೆ. ಸಂತೋಷದಾಯಕವಾದ ವಿಚಾರ. ಆದರೆ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ತಪ್ಪಿಸಿದರೆ ಅದಕ್ಕಾವ ದಂಡನೆ ಎಂಬುದು ಮಾತ್ರ ಇನ್ನೂ ಹಾಗೆಯೇ ಉಳಿದಿರುವುದು ಮಾತ್ರ ಶೋಚನೀಯ. ಇದರಿಂದ ಕಡ್ಡಾಯ ಶಿಕ್ಷಣದ ನಿಜವಾದ ಪ್ರಯೋಜನ ಸಿಗುತ್ತಿದೆಯೇ ಎಂಬ ಅನುಮಾನ ಬರುವುದು. ಕೇವಲ ಅಂಕೆ ಸಂಖೆಗಳಲ್ಲಿ ಸಾಕ್ಷರತೆ ಪ್ರಚಾರ ನಡೆದರೆ ಸಾಲದು. ನಿಜವಾಗಿಯೂ ಅದರ ಪ್ರಯೋಜನ ಜನತೆಗೆ ಸಿಗುವಂತಾಗಬೇಕು.

ಅಧ್ಯಾಪಕನು ಹೆತ್ತವರಲ್ಲಿ ಅದೆಷ್ಟು ಹೇಳಿಕೊಂಡರೂ ಹಳ್ಳಿಯ ಅನೇಕ ಹೆತ್ತವರು ಇನ್ನೂ ಶಾಲೆಯತ್ತ ನೋಡದಿರುವವರೂ ಇದ್ದಾರೆ. ಅಂತವರಿಗೆ ಯಾವುದಾದರೊಂದು ಕಾರ್ಯಕ್ರಮವೇ ಅಗತ್ಯವಾಗಿರುವುದು.

ಮಕ್ಕಳ ಪಠ್ಯ ಪುಸ್ತಕಗಳು ಅವರ ಮನೋಮಟ್ಟಕ್ಕನುಸಾರವಾಗಿರಬೇಕು. ವಿಷಯವೆಂಬುದು ಒಂದಕ್ಕೊಂದು ಸಂಬಂಧಿಸಿರಬೇಕು. ಆದರೆ ಇಂದಿನ ಪುಸ್ತಕಗಳಲ್ಲಿ ಅನೇಕ ತಪ್ಪುಗಳಿವೆ; ವಿಷಯ ಜೋಡಣೆ ಅಷ್ಟೊಂದು ಉತ್ತಮವೆಂದು ಕಂಡು ಬರುವುದಿಲ್ಲ. ಆದ್ದರಿಂದ ಪಠ್ಯ ಪುಸ್ತಕಗಳನ್ನು ತಯಾರಿಸುವಾಗ ಹಿರಿಯ ತಜ್ಞರೊಡನೆ ಕೆಲವು ಪ್ರಾಥಮಿಕ ಶಾಲಾ ನುರಿತ ಅಧ್ಯಾಪಕರ ಸಲಹೆಯನ್ನು ಕೂಡಾ ಪಡೆದರೆ ಹೆಚ್ಚಿನ ಪ್ರಯೋಜನವಾಗಬಹುದು.

ಇಂಗ್ಲೀಷಿನ ವ್ಯಾಮೋಹ ಒಮ್ಮೆ ಕಡಿಮೆಯಾಗುವಂತೆ ಸರಕಾರ ಮಾಡಿತ್ತು. ಆದರೆ ಅದರಿಂದ ಉಂಟಾದ ತೊಂದರೆಯನ್ನು ಮನಗಂಡು ಪುನಃ ಇಂಗ್ಲೀಷಿಗೆ ಪ್ರಾಧಾನ್ಯ ಕೊಡುತ್ತಿರುವುದು ತುಂಬಾ ಸಂತೋಷ. ಆದರೆ ಎಸ್. ಎಸ್. ಎಲ್. ಸಿ ಪೂರೈಸಿದ ಮಕ್ಕಳು ಪಿ.ಯು.ಸಿ.ಯಲ್ಲಿ ಹೆಚ್ಚಿನವರು ಫೇಲಾಗುತ್ತಿರುವುದು ಕಂಡು ಬರುತ್ತಿದೆ. ಇದಕ್ಕೆ ಕಾರಣವೇನು ಎಂಬುದನ್ನು ಕಂಡು ಹುಡುಕಬೇಕಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಹಿಡಿತ ಇಲ್ಲದಿರುವುದೇ ಕಾರಣವೆಂಬುದು ಯಾರ ಮನಸ್ಸಿಗೂ ಹೊಳೆಯದಿರಲಾರದು. ಆದ್ದರಿಂದ ಇಂದು ಪರೀಕ್ಷಾ ಕ್ರಮದಲ್ಲಿಯೇ ಹೊಸಮಾದರಿಯನ್ನು ಕಂಡು ಹುಡುಕಬೇಕಾಗಿದೆ. ಮಕ್ಕಳು ಬಾಯಿ ಪಾಠ ಕಲಿತು ಪಾಸಾಗಬಹುದಾದ ಸಂದರ್ಭವನ್ನು ತಪ್ಪಿಸಿದರೆ ಮುಂದೆ ಪಿ. ಯು. ಸಿ.ಯಲ್ಲಿ ಅಷ್ಟೊಂದು ಮಂದಿ ಅನುತ್ತೀರ್ಣರಾಗಲಾರರು. ಪರೀಕ್ಷೆ ಪಾಸಾಗಬೇಕಾದರೂ ಹೆಚ್ಚಿನ ಭಾಷಾಜ್ಞಾನ ಅಗತ್ಯವೆಂಬುದು ಮನವರಿಕೆಯಾಗಿ ಹೆಚ್ಚಿನ ಶ್ರಮವಹಿಸಿ ದುಡಿಯಲು ಮುಂದಾಗುವರು.

ಇಂದು ಸರಕಾರ ಅಧ್ಯಾಪಕರ ಗೋಳನ್ನು ತುಂಬಾ ಪರಿಹರಿಸಿದೆ. ಆದರೆ ನಿಶ್ಚಿತ ದಿನದಂದು ಆತನಿಗೆ ಸಂಬಳ ಸಿಗುವಂತೆ ಮಾಡಬೇಕಾದುದು ಕೂಡಾ ಅಗತ್ಯವಿದೆ. ಎಂದಾದರೊಂದಿನ ಕೊಡುವ ಸಂಬಳವನ್ನು ನಿಶ್ಚಿತ ದಿನ ಕೊಡುವುದಾದರೆ ಆತನು ನೆಮ್ಮದಿಯಿಂದಲೇ ತನ್ನ ಕಾರ್ಯವನ್ನು ಪೂರೈಸಬಹುದು. ಭಾವೀ ಪ್ರಜೆಗಳನ್ನು ರೂಪಿಸುವ ಹೊಣೆಹೊತ್ತ ಅಧ್ಯಾಪಕನು ತನ್ನ ಕಾರ್ಯವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಬೇಕಾದುದಗತ್ಯ.

ಸರಕಾರ, ಅಧ್ಯಾಪಕ; ಹೆತ್ತವರು, ಮಕ್ಕಳು ಎಲ್ಲರೂ ಒಮ್ಮನಸ್ಸಿನಿಂದ ದುಡಿದರೇನೆ ನಮ್ಮ ವಿದ್ಯಾ ಪ್ರಗತಿ ಇನ್ನೂ ಹೆಚ್ಚಿನದಾಗಬಹುದು. ದೇಶದ ರಕ್ಷಣೆಗೆ ಹೇಗೆ ಸೈನ್ಯ ಅಗತ್ಯವೋ ಹಾಗೆಯೇ ದೇಶದ ಪ್ರಗತಿಗೆ ವಿದ್ಯೆ ಪ್ರಾಮುಖ್ಯವಾಗಿದೆ. ಆದ್ದರಿಂದ ಇಂದು ಶಿಕ್ಷಣರಂಗದಲ್ಲಿ ಹೊಸ ಕ್ರಾಂತಿಯಾಗಬೇಕು ಶಿಕ್ಷಣಕ್ಕೆ ವ್ಯಯಿಸುವ ಹಣದ ಸದುಪಯೋಗವಾಗಬೇಕು.

ಭೀಷ್ಮ ಪ್ರತಿಜ್ಞೆ

(೨ನೇ ಪುಟದಿಂದ)

ತೊಡಗಿದರು. ಒಂದು ದೊಡ್ಡ ಪಾತ್ರೆಯಲ್ಲಿ ಅರೆದ ಗಂಧವನ್ನು ತಂದು ಪರೀಕ್ಷಕನ ಮುಂದಿಟ್ಟರು. ಪರೀಕ್ಷೆಯ ಫಲಿತಾಂಶವನ್ನು ಕಾಣಲು ಎಲ್ಲರೂ ಕುತೂಹಲಭರಿತರಾಗಿದ್ದರು. ಗಂಧವನ್ನು ತೆಗೆದು ತೆಗೆದು ಹುಡುಗ ಮೂರ್ತಿಯ ಮೈಗೆಲ್ಲ ಪೂಸಿದ. ಕಲ್ಲಿಗೆ ಪೂಸಿದ ಗಂಧ ಕೆಲವೇ ನಿಮಿಷಗಳಲ್ಲಿ ಆರಿಹೋಯಿತು. ಆದರೆ ಒಂದೆಡೆ ಮೂರ್ತಿಯ ಹೊಕ್ಕಳ ಬಳಿ ಮಾತ್ರ ಅದು ಆರಲಿಲ್ಲ. ಹುಡುಗ ಉಳಿ, ಕೊಡಲಿಯನ್ನು ತೆಗೆದು ಮೂರ್ತಿಯ ಹೊಕ್ಕಳಿಗೆ ಒಂದೇಟು ಬಡಿದ. ಚಿಲ್ಲೆಂದು ನೀರು ಹಾರಿತು. ಅಲ್ಲಿಂದಲೇ ಕಪ್ಪೆಯೊಂದು ನೆಗೆಯಿತು. ಎಲ್ಲರೂ ಹುಡುಗನನ್ನು ಕೊಂಡಾಡಿದರು. ಜಕ್ಕಣ್ಣನ ಆನಂದಕ್ಕಂತೂ ಪಾರವೇ ಇಲ್ಲ. ಹುಡುಗನನ್ನು ಆಲಿಂಗಿಸಿ ಮುದ್ದಾಡಿದನು. ಅನಂತರ ತನ್ನ ಕೈಯನ್ನೇ ತಾನು ತುಂಡರಿಸಿಕೊಂಡನು. ಯಾರು ತಡೆದರೂ ನಿಲ್ಲಲಿಲ್ಲ. ತನ್ನ ಪ್ರತಿಜ್ಞೆಯನ್ನು ನೆರವೇರಿಸಿಯೇ ಬಿಟ್ಟನು.

"ಯಾರು ಮಗೂ ನೀನು?" ಆನಂದ ಭಾಷ್ಪವನ್ನು ಸುರಿಸುತ್ತಾ ಕೇಳಿದ ವಿಷ್ಣುವರ್ಧನ.

"ನಾನು ಕೈದಾಳದ ಶಿಲ್ಪಿ ಜಕ್ಕಣ್ಣಾಚಾರ್ಯರ ಮಗ ಡಂಕಣಾಚಾರಿ" ಎಂದು ಉತ್ತರಿಸಿದ ಬಾಲಕುಮಾರ ಶಿಲ್ಪಿಯ ಆನಂದಕ್ಕೆ ಪಾರವೇ ಇಲ್ಲ. ಇನ್ನೊಮ್ಮೆ ಮಗನನ್ನು ಅಪ್ಪಿ ಸ್ವರ್ಗಸುಖವನ್ನನುಭವಿಸಿದನು ಆ ಅಮರ ಶಿಲ್ಪಿ ಜಕ್ಕಣ್ಣ. ಈತ ಸಿಂಹ ಶಿಶುವೇ ಸರಿ ಎಂಬ ಸಮಾಧಾನದ ನಿಟ್ಟುಸಿರು ಬಿಟ್ಟನಾತ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ|| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25

ಅತ್ಯಂತ ಪ್ರಯೋಜನಕಾರಿ ಪುಸ್ತಕ—
ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ: ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ಕ್ರಾಂತಿಕಾರಿ ಲೇಖನಿಯ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ__

ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA 21-5-1964

REGD. No. B. G. 176
LICENCE No. 31
Licensed to Post without Prepayment

ಭಾರತೀಯ ವಿಮಾನ ಬಲದ ವಾರ್ಷಿಕೋತ್ಸವ

ಭಾರತೀಯ ವಿಮಾನ ಬಲದ ವಾರ್ಷಿಕೋತ್ಸವವನ್ನು ಮೂರ್ಖರ ದಿನದಂದು ಆಚರಿಸಲಾಗುತ್ತಿರುವುದರಿಂದ, ವಾರ್ಷಿಕೋತ್ಸವಕ್ಕೆ ಸಂಬಂಧಿಸಿದಂತೆ ಅನೇಕ ವ್ಯಂಗ್ಯೋಕ್ತಿಗಳು ಹುಟ್ಟಿಕೊಂಡಿವೆ.

ಹೊಸ ಹಣಕಾಸಿನ ವರ್ಷವನ್ನು ಎಪ್ರಿಲ್ ೧ರಿಂದಲೇ ಆರಂಭಿಸಬೇಕೆಂದು ನಿರ್ಧರಿಸಿದವರೂ ಪ್ರತಿಭಾವಂತರೇ. ೧೯೩೨ರ ಹಣಕಾಸಿನ ವರ್ಷದ ಆರಂಭದ ದಿನದಂದೇ ಭಾರತೀಯ ರಕ್ಷಣಾ ಸೇನೆಯಲ್ಲಿ ವಿಮಾನ ಬಲವನ್ನು ರಚಿಸುವ ಕಾರ್ಯಯೋಜನೆ ಅನುಷ್ಠಾನದಲ್ಲಿ ಬಂದಿತು.

ವೆಸ್ಟ್‌ಲ್ಯಾಂಡ್ ವ್ಯಾಪಿಟಿ ವಿಮಾನಗಳಿಂದ ಆರಂಭವಾದ ನಮ್ಮ ವಿಮಾನ ಬಲವು ಇಂದು ಸೂಪರ್‌ಸಾನಿಕ್ ಮಿಗ್ ೨೧ ವಿಮಾನಗಳಿಂದ ಸುಸಜ್ಜಿತವಾಗಿದೆ. ವಿಮಾನ ಬಲವು ಕಳೆದ ಮೂವತ್ತು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ಸರ್ವಪರಿಚಿತವಾಗಿದೆ. ಈ ಅವಧಿಯಲ್ಲಿ ವಿಮಾನ ಸಾರಿಗೆ ಸೌಕರ್ಯಗಳ ವಿಸ್ತರಣೆ ಸಂಬಂಧವಾಗಿಯೂ ಕ್ರಮ ಕೈಗೊಳ್ಳಲಾಯಿತು.

ವಿಮಾನ ಬಲದಲ್ಲಿ ಸೇವೆ ಸಲ್ಲಿಸುತ್ತಿರುವವರ ಮೂರ್ಖರ ಶಕ್ತಿ ಸಾಮರ್ಥ್ಯಗಳು ಇನ್ನೂ ಬಹುತೇಕ ಜನರಿಗೆ ತಿಳಿದಿರಲಿಕ್ಕಿಲ್ಲ.

ಭಾರತೀಯರು ಹೊಸ ವಿಚಾರಗಳನ್ನು ಉತ್ಸಾಹದಿಂದ ಅಳವಡಿಸಿಕೊಳ್ಳುತ್ತಾರೆ. ಇಂಗ್ಲೆಂಡಿನಲ್ಲಿ ಅಧ್ಯಯನ ಮಾಡುತ್ತಿದ್ದ ಇಬ್ಬರು ಭಾರತೀಯರು ಪ್ರಥಮ ವಿಶ್ವಸಮರ ಆರಂಭವಾದಾಗ, ಬ್ರಿಟನ್ನಿನಲ್ಲಿ ಆದೇ ಆಗ ರಚಿತವಾದ ರಾಯಲ್ ಫ್ಲೈಯಿಂಗ್ ಕೋರ್‌ನಲ್ಲಿ ಸೇರಿದರು. ಅವರಿಬ್ಬರ ಪೈಕಿ ಒಬ್ಬರಾದ ಲೆಫ್ಟಿನೆಂಟ್ ಇಂದ್ರಲಾಲ್ ರಾಯ್ ಅವರು ದುರದೃಷ್ಟವಶಾತ್ ಫ್ರಾನ್ಸಿನಲ್ಲಿ ನಡೆದ ಕದನವೊಂದರಲ್ಲಿ ಮರಣಹೊಂದಿದರು. ತಮ್ಮ ಜಿಜ್ಞಾಸೆ, ಶೌರ್ಯ ಸಾಹಸಗಳಿಗಾಗಿ ವಿಮಾನ ಬಲದ ವಿಶಿಷ್ಟ ಪದಕವನ್ನು ಪಡೆದ ಭಾರತೀಯರಲ್ಲಿ ಅವರೇ ಮೊದಲಿಗರು.

ದ್ವಿತೀಯ ವಿಶ್ವಸಮರ ಆರಂಭವಾದಾಗ ನಮ್ಮ ವಿಮಾನ ಬಲವು ವಾಯುವ್ಯ ಸರಹದ್ದಿನ ಪ್ರಾಂತದಲ್ಲಿ, ಸೇನಾ ಸಹಾಯಕ ವಿಭಾಗವಾಗಿ ಕಾರ್ಯನಿರ್ವಹಿಸುತ್ತಿತ್ತು. ಅನಂತರ ಅಲ್ಪಾವಧಿಯಲ್ಲಿಯೇ ಪೂರ್ವ ವಿಭಾಗದ ರಕ್ಷಣೆಯ ಹೊಣೆಯನ್ನು ವಿಮಾನ ಬಲಕ್ಕೆ ವಹಿಸಿಕೊಡಲಾಯಿತು. ಭಾರತೀಯ ವಿಮಾನ ಚಾಲಕರು ವಿಮಾನ ದಾಳಿಯಲ್ಲಿ ಮತ್ತು ಸಂಪರ್ಕ ಸೇವಾ ವ್ಯವಸ್ಥೆಯಲ್ಲಿ ಮಹತ್ವಪೂರ್ಣ ಪಾತ್ರ ನಿರ್ವಹಿಸಿದರು. ಭಾರತೀಯ ಯೋಧರಲ್ಲಿ ಅನೇಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು; ಭಾರತೀಯ ವಿಮಾನಬಲದ ಸ್ಕ್ವಾಡ್ರನ್ ಕಮಾಂಡರಿಗೆ ವಿಶಿಷ್ಟ ಸೇವಾ ಪದಕವನ್ನು ನೀಡಲಾಯಿತು.

ದ್ವಿತೀಯ ವಿಶ್ವ ಸಮರದ ಅವಧಿಯಲ್ಲಿ ೨೪ ಮಂದಿ ಭಾರತೀಯ ವಿಮಾನ ಚಾಲಕರಿದ್ದ ತಂಡವೊಂದಕ್ಕೆ ಬ್ರಿಟನ್ನಿನಲ್ಲಿ ತರಬೇತಿ ನೀಡಲಾಯಿತು. ತರಬೇತಿ ಪಡೆದ ನಂತರ ಅವರು ಯೂರೋಪಿನ ರಣಾಂಗಣಗಳಲ್ಲಿ ರಾಯಲ್ ಏರ್‌ಫೋರ್ಸಿನ ವೈಮಾನಿಕರೊಂದಿಗೆ ಫೈಟರ್ ಮತ್ತು ಬಾಂಬರ್ ವಿಮಾನಗಳನ್ನು ಬಹು ಚಾಕಚಕ್ಯತೆಯಿಂದ ನಡೆಸಿದರು. ಭಾರತೀಯ ವಿಮಾನ ಚಾಲಕರಲ್ಲಿ ಒಬ್ಬನು ನಾಲ್ಕು ಎಂಜಿನ್‌ಗಳಿದ್ದ ಲ್ಯಾಂಕಾಸ್ಟರ್ ಬಾಂಬರ್ ವಿಮಾನವನ್ನು ನಡೆಸಿದನಲ್ಲದೆ, ಬ್ರೆಸ್ಟ್ ಹಾರ್ಬರ್ ಕದನದಲ್ಲಿಯೂ ಭಾಗವಹಿಸಿದ.

ದ್ವಿತೀಯ ವಿಶ್ವ ಸಮರದ ನಂತರ ನಿಯತಕಾಲಿಕ ಪತ್ರಿಕೆಯೊಂದು ನಡೆಸಿದ ಸಮೀಕ್ಷೆಯಲ್ಲಿ ದಿವಂಗತ ವಿಂಗ್ ಕಮ್ಯಾಂಡರ್ ಜಂಬೂ ಮುಜುಂದಾರ್ ಅವರು ವಿಶ್ವದ ೧೦ ಮಂದಿ ಶ್ರೇಷ್ಠ ವಿಮಾನ ಚಾಲಕರಲ್ಲಿ ಒಬ್ಬರೆಂದು ಅಭಿಪ್ರಾಯ ಪಟ್ಟಿದೆ. ದಿವಂಗತ ಮುಜುಂದಾರ್ ಅವರು ತಮ್ಮ ಶೌರ್ಯಸಾಹಸಗಳಿಗಾಗಿ ಎರಡು ಸಲ ಪ್ರಶಸ್ತಿ ಪಡೆದರು. ಭಾರತೀಯ ವಿಮಾನ ಬಲದ ಸಂಸ್ಥಾಪಕರಾದ ಈ ಸಾಹಸಿ ವಿಮಾನ ಚಾಲಕರು ದ್ವಿತೀಯ ವಿಶ್ವ ಸಮರ ಮುಗಿದ ನಂತರ ವಿಮಾನ ಪ್ರಾಯೋಗಿಕ ಹಾರಾಟ ನಡೆದಾಗ ಮರಣಹೊಂದಿದರು.

ಭಾರತದಲ್ಲಿ ವಿಮಾನ ಬಲ ಸ್ಥಾಪನೆಗೆ ಅಗತ್ಯವಾದ ಯೋಧರಿಗೇನೂ ಕೊರತೆಯಿರಲಿಲ್ಲ. ಭಾರತವು ಸ್ವತಂತ್ರವಾದ ಕೂಡಲೇ ಬ್ರಿಟಿಷ್ ಸಿಬ್ಬಂದಿಯವರು ಭಾರತದಿಂದ ತೆರಳಿದ್ದರಿಂದ, ಕೆಲವೇ ಜನ ವಿಮಾನ ಬಲದ ಅಧಿಕಾರಿಗಳು ಸಿಬ್ಬಂದಿಯ ತರಬೇತಿಯಲ್ಲಿ ವಿಶೇಷ ಶ್ರಮ ವಹಿಸಬೇಕಾಯಿತು. ಭಾರತೀಯ ವಿಮಾನ ಬಲದ ಅಧಿಕಾರಿಗಳು ತಮ್ಮ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ವಿಮಾನ ಬಲದ ಸಿಬ್ಬಂದಿಯವರನ್ನು ವಿಶೇಷ ತರಬೇತಿಗಾಗಿ ಹೊರದೇಶಗಳಿಗೂ ಕಳುಹಿಸಲಾಯಿತು.

ತರಬೇತಿ ವರ್ಗಗಳಲ್ಲಿ ಭಾರತೀಯ ವಿಮಾನ ಬಲದ ವಿಮಾನ ಚಾಲಕರು ತಮ್ಮ ಪ್ರತಿಭೆಯಿಂದ ವಿಶಿಷ್ಟ ಸ್ಥಾನಗಳಿಸಿದರು. ದಿವಂಗತ ಸ್ಕ್ವಾಡ್ರನ್ ಲೀಡರ್ ಸುಧಾಕರನ್ ಅವರು ಆಗ ಬ್ರಿಟನ್ನಿನ ಟೆಸ್ಟ್ ಪೈಲಟ್ಸ್ ಸ್ಕೂಲ್ ಪರೀಕ್ಷೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದರು. ಪರೀಕ್ಷೆಯಲ್ಲಿ ಅವರು ಕಾಮನ್‌ವೆಲ್ತ್ ರಾಷ್ಟ್ರಗಳ ವಿಮಾನ ಬಲಗಳ ಸಿಬ್ಬಂದಿಯವರೊಂದಿಗೆ ಸ್ಪರ್ಧಿಸಬೇಕಾಗಿತ್ತು.

ಹಿಮಾಲಯ ಪ್ರದೇಶದಲ್ಲಿ ವಿಮಾನಸಾರಿಗೆ ಆರಂಭದ ಹಿನ್ನೆಲೆಯಲ್ಲಿಯೂ ಶೌರ್ಯ—ಸಾಹಸ ಪ್ರಧಾನವಾದ ಕಥೆಯಿದೆ. ಹಿಮಾಲಯದ ದುರ್ಗಮವಾದ ಪ್ರದೇಶದಲ್ಲಿ ವಿಮಾನ ಸಾರಿಗೆಯನ್ನು ಆರಂಭಿಸಿದ ಘಟನೆಯು ವಿಮಾನ ಸಾರಿಗೆ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ್ದಾಗಿದೆ.

ಈ ಪ್ರದೇಶದಲ್ಲಿ ವಿಮಾನ ಸಾರಿಗೆಯನ್ನು ಆರಂಭಿಸಲು ಅಪ್ರತಿಮ ಧೈರ್ಯ; ಸಾಹಸ; ಮನೋಸ್ಥೈರ್ಯ; ಆತ್ಮ ವಿಶ್ವಾಸಗಳ ಅಗತ್ಯವಿದೆ. ಈ ಅಪೂರ್ವ ಗುಣಗಳಿಂದ ಕೂಡಿದ ನಮ್ಮ ವಿಮಾನ ಬಲದ ಯೋಧರು ಕಾಶ್ಮೀರ್ ಕಾರ್ಯಾಚರಣೆ ಮತ್ತು ಚೀಣೀ ಆಕ್ರಮಣದ ಸಂದರ್ಭದಲ್ಲಿ ಸೇನೆಗೆ ಪ್ರಶಂಸನೀಯ ರೀತಿಯಲ್ಲಿ ನೆರವಾದರು. ಹಿಮಾಲಯದ ದುರ್ಗಮ ಗಿರಿಕಂದರಗಳಲ್ಲಿ ವಿಮಾನಗಳನ್ನು ನಡೆಸುವುದು ಸುಲಭ ಸಾಧ್ಯವಾಗಿರಲಿಲ್ಲ. ಈ ವಿಮಾನಗಳನ್ನು ತಯಾರಿಸಿದವರೂ ಸಹ ಒಂದು ದಿನ ಅತಿ ಎತ್ತರದ ಪ್ರದೇಶದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ ಎಂಬುದನ್ನು ಊಹಿಸಿಯೂ ಇರಲಿಲ್ಲ.

ವಿಮಾನ ಬಲದ ಸಿಬ್ಬಂದಿಯವರು ತಮ್ಮ ಶ್ರೇಷ್ಠ ಮಟ್ಟದ ಕಾರ್ಯದಕ್ಷತೆಯಿಂದ ಈ ಎಲ್ಲಾ ವಿಘ್ನಗಳನ್ನೂ ಯಶಸ್ವಿಯಾಗಿ ಎದುರಿಸಿದರು.



ನೇಫಾಕ್ಕೆ ಧಾವಿಸುತ್ತಿರುವ ಐ. ಎ. ಎಫ್. ಹೆಲಿಕಾಪ್ಟರ್.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H.Shetty. at the Navayuga Press, Udipi, S. India.

VOL. 43 No. 40

ಸಂಪುಟ ೪೩ ಸಂಚಿಕೆ ೪೦

NAVAYUGA—Nationalist Weekly ‡‡ ಉಡುಪಿ 4–6–1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಮಾನವತೆಯ ಕಣ್ಮಣಿ ಉದುರಿತು
ಭಾರತ ಭಾಸ್ಕರನು ಅಸ್ತಮಾನನಾದನು
ಪಂಡಿತ ಜವಾಹರರು ನಮ್ಮಿಂದಗಲಿದರು

ಮೂರು ದಿನಗಳ ವಿಶ್ರಾಂತಿಗೆಂದು ಡೆಹರಡೂನಿಗೆ ಹೊರಡುವುದಕ್ಕೆ ಮೊದಲು "ನನ್ನ ಜೀವಮಾನವು ಇಷ್ಟು ಬೇಗನೇ ಮುಗಿಯುವುದಿಲ್ಲ" ವೆಂಬ ಆತ್ಮವಿಶ್ವಾಸ ಪ್ರದರ್ಶಿಸಿದ ಜವಾಹರಲಾಲರ ಉದ್ಗಾರವನ್ನು "ಚಿರಂಜೀವಿ ನೆಹರು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲಾಗಿತ್ತು. ಆದರೆ,ಆದಾದ ಐದನೆಯ ದಿನದಲ್ಲಿಯೇ ಈ ಜನಮನ ನಾಯಕ ಪಂಚತ್ವವೈದಿ ನಿರಂತರ ಅಮರನಾಗುವನೆಂದು ಯಾರೂ ಊಹಿಸಿದ್ದಿಲ್ಲ. ಕಾಲಗತಿಯ ಕೈವಾಡವು ಸದಾಕಾಲ ಅಗೋಚರವೇ ಎಂಬುದಕ್ಕೆ ಇದೊಂದು ಜ್ವಲಂತ ನಿದರ್ಶನ.

ಡೆಹರಡೂನಿನಲ್ಲಿ ಮೂರುದಿನ ಉಳಿದು ವಿಶ್ರಾಂತಿಹೊಂದಿದ ನೆಹರು ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಭಾಗವಹಿಸಲು ಉತ್ಸಾಹದಿಂದಲೇ ತನ್ನ "ತೀನ್ ಮೂರ್ತಿ" ನಿವಾಸಕ್ಕೆ ಆಗಮಿಸಿ, ತನ್ನ ಕಚೇರಿಯ ಎಲ್ಲ ಕೆಲಸಗಳನ್ನೂ ಮುಗಿಸಿ ಮಲಗಿದರು. ಹಾಗೆಯೇ "ನಾನು ನನ್ನ ಕಚೇರಿಯ ಎಲ್ಲ ಕೆಲಸವನ್ನು ಮುಗಿಸಿದ್ದೇನೆ" ಎಂದು ಆಡಿದ್ದರು. ಅಂದು ಮಾಡಿದ್ದ ಕೆಲಸದೊಂದಿಗೆ ಜವಾಹರರ ಕೆಲಸವೆಲ್ಲವೂ ಆ ಮಾತಿನೊಂದಿಗೆ ಜವಾಹರರ ಮಾತೆಲ್ಲವೂ ಮುಗಿಯುವುದೆಂದು ಯಾರೂ ತಿಳಿದಿರಲಿಲ್ಲ.

ವಿಶ್ರಾಂತಿಯಿಂದ ಮರಳಿ ಕರ್ತವ್ಯಕ್ಕೆ ಅಂಟಿಕೊಳ್ಳಲು ಆಗಮಿಸಿದ ನೆಹರು ಮಲಗಲು ಹೋದಾಗ ಆರೋಗ್ಯವಂತರಾಗಿದ್ದರು. ಮುಂಜಾವದ ೬–೩೦ಕ್ಕೆ ಅವರಿಗೆ ಬೆನ್ನಿನಲ್ಲಿ ನೋವು ಕಾಣಿಸಿಕೊಂಡಿತು. ಡಾಕ್ಟರರು ಬರುವಷ್ಟರಲ್ಲಿಯೇ ಅವರು ಮೂರ್ಛೆಗೆ ಸಂದರು; ಹೋದ ಪ್ರಜ್ಞೆ ಮತ್ತೆ ಮರಳಲಿಲ್ಲ. ೧೦-೩೦ರ ನಂ

(೧೨ನೇ ಪುಟ ನೋಡಿರಿ)

ವಾರದ ಕಥೆ

ಅಮ್ಮನ ವೈದ್ಯ

ಬರೆದವರು: ಶ್ರೀ ಕುಸುಮಗೋಪಾಲ.

ಮನೆಯಲ್ಲಿ ಎಲ್ಲರ ಮುಖಗಳೂ ಬಾಡಿ ಹೋಗಿದ್ದುವು. ಅಮ್ಮ ಬಿಕ್ಕಿ ಬಿಕ್ಕಿ ಅಳುತಿದ್ದಳು. ಅಕ್ಕ ತಂಗಿ, ಅಣ್ಣ ತಮ್ಮಂದಿರೆಲ್ಲಾ ಮುಖ ಸಣ್ಣಗೆ ಮಾಡಿ ಕೊಂಡಿದ್ದರು. ತಂದೆಯವರು ಮಾತನಾಡದೆ ಮೌನವಾಗಿದ್ದರು. ಯಾರಿಗೂ ತಂಗಿ ಸುಮತಿಯನ್ನು ಕಳುಹಿಸಿಕೊಡಲು ಇಷ್ಟವಿರಲಿಲ್ಲ. ಭಾವಯ್ಯ ಅಕ್ಕನನ್ನು ಪ್ರಥಮ ಬಾರಿಗೆ ಪರವೂರಿಗೆ ಕರೆದೊಯ್ಯುವಾಗ ಜೊತೆಗೆ ಮಗುವೂ ಇರಲಿ, ಬೇಸರ ಕಳೆಯಲು ಆಗುತ್ತದೆ ಎಂದು ಹೇಳಿದಾಗ ಮನಸ್ಸಿಲ್ಲದ ಮನಸ್ಸಿನಿಂದಲೇ ಅಮ್ಮ ಅಪ್ಪ ಮೂರು ವರ್ಷದ ಸುಮತಿಯನ್ನು ಕಳುಹಿಸಿಕೊಡಲು ಒಪ್ಪಿದರು.

ಬೆಳಿಗ್ಗೆ ಹತ್ತು ಘಂಟೆಯ ಸಮಯಕ್ಕೆ ಊಟ ಮುಗಿಯಿತು. ಅಂದು ಪಾಯಸ ಬೇರೆ ಮಾಡಿತ್ತು. ಹನ್ನೊಂದು ವರೆ ಘಂಟೆಗೆ ಅಕ್ಕ ಭಾವ ಇಬ್ಬರೂ ಹೊರಟು ನಿಂತರು. ಸುಮತಿಯನ್ನು ಸಿಂಗರಿಸಿಯಾಗಿತ್ತು. ಪೆಟ್ಟಿಗೆಗೆ ಬಟ್ಟೆಬರೆಗಳನ್ನು ಸೇರಿಸಿ ಕೆಲಸದ ಹುಡುಗಿಯೊಡನೆ ಬಸ್‌ಸ್ಟಾಂಡಿಗೆ ಕಳುಹಿಸಿದರು. ಅಕ್ಕ ಸಂಪ್ರದಾಯದಂತೆ ದೇವರಿಗೆ ನಮಸ್ಕರಿಸಿ, ತಂದೆ, ತಾಯಿ, ಅಜ್ಜಿಯವರಿಗೂ ನಮಸ್ಕರಿಸಿ ಅವರ ಆಶೀರ್ವಾದ ಪಡೆದಳು. ಸುಮತಿಗೂ ಹೇಳಿದಳು — ಎಲ್ಲರಿಗೂ ನಮಸ್ಕಾರ ಮಾಡಮ್ಮ—ಎಂದು. ಅವಳಿಗೆ ನಗು. ತಾನು ಅಮ್ಮನನ್ನು ಬಿಟ್ಟು ಅಕ್ಕನೊಂದಿಗೆ ದೂರದೂರಿಗೆ ಹೋಗುತ್ತೇನೆಂಬ ಅರಿವೇ ಅವಳಿಗಿದ್ದಂತಿಲ್ಲ. ಅಂತೂ ತಾನು ಯಾವುದೋ ಉತ್ಸವಕ್ಕೆ ಎಲ್ಲಿಗೋ ಹೋಗುತ್ತೇನೆಂದು ಮಾತ್ರ ಗೊತ್ತಿತ್ತು. ಅದೂ ಅಕ್ಕನೊಂದಿಗೆ ಹೋಗುವುದೆಂದರೆ ಬಹಳ ಖುಷಿ ಅವಳಿಗೆ. ಅಕ್ಕ ತನ್ನನ್ನು ಬಹಳ ಮುದ್ದು ಮಾಡುತ್ತಾಳೆಂದು ಗೊತ್ತು. ಅಕ್ಕ ಹೇಳಿದಂತೆ ದೇವರಿಗೆ ನಮಸ್ಕರಿಸಿದಳು ಸುಮತಿ. ದೇವರ ಗುಡಿಯ ಜಗಲಿಯಲ್ಲೇ ಕೌಪೀನಧಾರಿಯಾಗಿ ಗಂಭೀರ ಮೌನದಲ್ಲಿ ಕುಳಿತಿದ್ದ ತಂದೆಯವರಿಗೂ ನಮಸ್ಕರಿಸಿದಳು. ತಂದೆಯವರಿಗೆ ದುಃಖ ತಡೆಯಲಾಗಲಿಲ್ಲ. ಮಗುವನ್ನು ಅಪ್ಪಿಕೊಂಡು ಮುದ್ದಿಸಿದರು. ಕಣ್ಣಿನಲ್ಲಿ ನೀರು ತುಂಬಿತ್ತು. ಆ ದೃಶ್ಯ ನಮಗೂ ದುಃಖವನ್ನು ತಂದಿತು. ಅನಂತರ ಎಲ್ಲರಿಗೂ ನಮಸ್ಕರಿಸಿತು, ಮಗು. ಅಮ್ಮನೂ ತುಸುಹೊತ್ತು ಸುಮತಿಯನ್ನು ಹೊತ್ತುಕೊಂಡು ಏನೇನನ್ನೋ ಹೇಳಿದರು. ಭಾವ ತಮ್ಮ ಚಿನ್ನದ ಸರಪಳಿಯ ಗಡಿಯಾರವನ್ನು ನೋಡಿ ಬಸ್ಸಿಗೆ ಹೊತ್ತಾಯ್ತು ಎಂದರು. ಅಕ್ಕ ಮಗುವನ್ನು ಎತ್ತಿಕೊಂಡಳು. ಸುಮಾರು ಇನ್ನೂರೈವತ್ತು ಮೈಲು ದೂರ ದೂರಿಗೆ ಹೊರಟರು—ಅಕ್ಕ ಭಾವ ಮತ್ತು ಸುಮತಿ.

ಮನೆಯಲ್ಲಿ ಅನಂತರ ಸುಮಾರು ಅರ್ಧ ಘಂಟೆ ಮೌನ—ಅಕ್ಕ ತಂಗಿ ಇಬ್ಬರೂ ಪ್ರಥಮ ಬಾರಿಗೆ ದೂರದೂರಿಗೆ ಹೊರಟಿದ್ದುದಕ್ಕಾಗಿ.

ಒಂದೂವರೆ ವರ್ಷದವರೆಗೂ ಅವರು ಬಂದಿರಲಿಲ್ಲ. ಕೇವಲ ಪತ್ರವ್ಯವಹಾರ ಮಾತ್ರ ನಡೆಯುತ್ತಿತ್ತು. ಅಲ್ಲಿಂದ ಒಂದೊಂದು ಕಾಗದ ಬಂದಾಗಲೂ ಮಗುವಿನ ಯೋಗಕ್ಷೇಮವನ್ನು ಕೇಳಿ ತಿಳಿಯುವ ಭಾಗ್ಯ ತಂದೆತಾಯಿಯವರದಾಯಿತು. ಅಕ್ಕನಿಂದ ಕಾಗದ ಬಂದರೆ ನಾನಾ, ಸುಮತಿಯನ್ನು ಕಂಡಷ್ಟೇ ಸಂತೋಷವಾಗುತಿತ್ತು ಅವರಿಗೆ. ಯಾವಾಗ ಬರುತ್ತಾರಂತೆ, ಮಗು ಹೇಗಿದೆಯಂತೆ ಬೇಗನೇ ಒಂದು ಬಾರಿ ಬಂದು ಹೋಗುವಂತೆ ಬರೆಯಿರಿ ಎಂದು ಚಡಪಡಿಸುತ್ತಿದ್ದಳು ಅಮ್ಮ. ಅವಳ ಮಾತೃ ಹೃದಯ ಹುಟ್ಟಿ ಕಂದನನ್ನು ನೋಡದೆ ತಳಮಳಿಸುತ್ತಿತ್ತು. ಪಾಪ, ಅವಳಿಗೆ ಓದು ಬರಹ ಬರುತ್ತಿದ್ದರೆ ಯಾರ ಹಂಗೂ ಇಲ್ಲದೆ ಅವಳೇ ಅಕ್ಕನಿಗೆ ಪತ್ರ ಬರೆಯುತ್ತಿದ್ದಳೋ ಏನೋ!

ಅಮ್ಮನಿಗೆ ಅವಳ ಮಗಳದೇ ಚಿಂತೆ. ಯಾವ ಕೆಲಸಕ್ಕೆ ಹೋದರೂ ಸುಮತಿಯ ಚಿಂತೆ, ಮನೆಯಲ್ಲಿ ಏನೇ ವಿಶೇಷ ನಡೆಯಲಿ ಅಂದು ಸುಮತಿಯನ್ನು ಜ್ಞಾಪಿಸಿಕೊಳ್ಳುತ್ತಿದ್ದಳು. ಏನಾದರೂ ತಿಂಡಿಮಾಡಿದರೆ ಅದನ್ನು ಸುಮತಿಗೆ ತಿನ್ನಿಸದೆ ಹೇಗೆ ತಿನ್ನಲಿ ಎಂದು ಒದ್ದಾಡುತ್ತಿದ್ದಳು. ಪ್ರತಿಸಲವೂ ಅಕ್ಕನನ್ನೂ ಸುಮತಿಯನ್ನೂ ಕರೆದು ಕೊಂಡು ಬರುವಂತೆ ಭಾವನಿಗೆ ಪತ್ರ ಬರೆಸುತ್ತಿದ್ದಳು. ಅಂತೂ ಒಂದು ದಿನ ಭಾವ ಬಂದೇ ಬಿಟ್ಟರು—ಅಕ್ಕನನ್ನೂ ಸುಮತಿಯನ್ನೂ ಕರೆದು ಕೊಂಡು.

ಸುಮತಿ—ಹಳ್ಳಿಯಲ್ಲಿ ಹುಟ್ಟಿದ ಮಗು ಹಳ್ಳಿಯ ವಾತಾವರಣದಲ್ಲಿ ಬೆಳೆದು ಪುಟ ಪುಟವಾಗಿತ್ತು, ಅಕ್ಕನ ಆರೈಕೆಯೋ! ಅಲ್ಲಿನ ಹವೆಯೋ ತಿಳಿಯದು. ಅಂತೂ ಎಷ್ಟೋ ಮುಂದುವರಿದಿದ್ದಳು. ಕನ್ನಡ ಮಾತನ್ನು ಕಲಿತಿದ್ದಳು, ಕೆಲವು ಹಾಡುಗಳನ್ನು ಕಲಿತಿದ್ದಳು, ಅಲ್ಪ ಸ್ವಲ್ಪ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬರೆಯಲು ಕಲಿತ್ತಿದ್ದಳು. ಅಮ್ಮನ ಆನಂದಕ್ಕೆ ಪಾರವಿದೆಯೇ! ಅಪ್ಪನ ಸಂತೋಷಕ್ಕೆ ಮಿತಿ ಇದೆಯೇ! ಬಾಕಿ ಮಕ್ಕಳೆಲ್ಲ ಅವರ ಕಣ್ಣಿಗೆ ಬೀಳಲಿಲ್ಲ. ಯಾವಾಗ ನೋಡಿದರೂ ಸುಮತಿ, ಸುಮತಿ, ಸುಮತಿ ಒಂದೇ. ಸುಮತಿಯ ಬಗ್ಗೆ ಪ್ರೇಮ ವಿಶ್ವಾಸಗಳನ್ನು ತೋರಿಸತೊಡಗಿದರು. ಉಳಿದವರ ಸ್ಥಿತಿಯೂ ಅಷ್ಟೆ, ಎಲ್ಲರೂ ಸುಮತಿಗೆ ಪ್ರಶ್ನೆಗಳನು ಹಾಕುವವರೇ, ಎಲ್ಲಿಗೆಲ್ಲ ಹೋಗಿದ್ದೆ, ಏನೆಲ್ಲ ನೋಡಿದೆ, ಏನೆಲ್ಲ ಕಲಿತೆ ಇತ್ಯಾದಿ. ಆದರೆ ಸುಮತಿಯನ್ನು ಮುದ್ದು ಮಾಡಲು ಹೆಚ್ಚುಕಾಲ ಬಿಡಲಿಲ್ಲ ಭಾವ. ಅವರು ಪುನಃ ಹೊರಟರು. ಅಕ್ಕನನ್ನೂ ಸುಮತಿಯನ್ನೂ ಸ್ವಲ್ಪ ಕಾಲ ಬಿಟ್ಟು ಹೋಗಿ ಎಂದು ಹೇಳಿದರೆ ಅವರು ಕೇಳಬೇಕೇ! ಸುಮತಿಯನ್ನಾದರೂ ಬಿಟ್ಟಾರು ಅವರು ಅಕ್ಕನನ್ನು ಹೇಗೆ ಬಿಟ್ಟು ಹೋದಾರು? ಮಕ್ಕಳಿರದ ಅಕ್ಕ ಸುಮತಿಯನ್ನಾದರೂ ಹೇಗೆ ಬಿಟ್ಟಾಳು! ಅವರಿಬ್ಬರನ್ನೂ ಅಮ್ಮ ಹೇಗೆ ಬಿಟ್ಟುಕೊಟ್ಟಾಳು? ಒಳ್ಳೆಯ ತಾಪತ್ರಯ ಕ್ಕಿಟ್ಟುಕೊಂಡಿತು. ಅದರೇನು ಮಾಡುವುದು ಒಬ್ಬರನ್ನೊಬ್ಬರು ಅಗಲಲೇ ಬೇಕಲ್ಲವೇ! ಹಾಗೆಯೇ ಭಾವ ಅಕ್ಕ ಮತ್ತು ಸುಮತಿಯನ್ನು ಕರೆದು ಕೊಂಡು ಹೋದರು. ಅಮ್ಮ ಗರ್ಭಿಣಿ ಯಾಗಿದ್ದರೂ ಕೂಡಾ ಏನೇನೋ ತಿಂಡಿ ತಿನಸುಗಳನ್ನು ಮಾಡಿ ಡಬ್ಬಿಗಳಲ್ಲಿ ತುಂಬಿಸಿ ಕೊಟ್ಟಳು ಅಕ್ಕನಿಗೆ, ಅಲ್ಲದೆ ಹಪ್ಪಳ ಸಂಡಿಗೆ ಉಪ್ಪಿನಕಾಯಿಗಳನ್ನೂ ಕಳುಹಿಸಿಕೊಟ್ಟಳು. ತಾನು ಗರ್ಭಿಣಿ ಹೆಂಗಸು, ಹೆಚ್ಚು ಕೆಲಸ ಮಾಡಬಾರದು, ತನಗೂ ತನ್ನ ಹೊಟ್ಟೆಯಲ್ಲಿರುವ ಮಗುವಿಗೂ ಸರಿಯಾಗದು ಎಂಬುದು ಸ್ವಲ್ಪವೂ ಇರಲಿಲ್ಲ ಅವಳ ತಲೆಯಲ್ಲಿ. ಒಂದು ಘಳಿಗೆಯೂ ಸುಮ್ಮನಿರುವ ಜಾಯಮಾನ ಅವಳದಲ್ಲ. ಒಂಬತ್ತು ಮಕ್ಕಳನ್ನು ಹೆತ್ತು ಹೊತ್ತು ಸಾಕಿ ಸಲಹಿದ ಜೀವ ಅವಳು. ಬಿಸಿಲಲ್ಲಿ ಬೆಂದು, ಮಳೆಯಲ್ಲಿ ನೆನೆದು, ಚಳಿಗಾಳಿಗಳಲ್ಲಿ ನಡುಗಿ ದೊಡ್ಡ ಸಂಸಾರವನ್ನು ನಿಭಾಯಿಸಿಕೊಂಡು ಬಂದವಳು ಅವಳು. ಕೆಲಸವೆಂದರೆ ಜೀವನ, ಜೀವನವೆಂದರೆ ಕೆಲಸ ಅವಳಿಗೆ, ತಾನು ದುಡಿದು ಜೀವ ಸವೆಸಿದರೂ ಚಿಂತಿಲ್ಲ. ತನ್ನ ಮನೆ ತನ್ನ ಸಂಸಾರ ಚೆಂದಾಗಿರ ಬೇಕೆಂಬುದೇ ಅವಳ ಆಸೆ, 'ಹೇಗೆಯೂ ಸಮಯಾಕ್ಕಾದರೂ ಬನ್ನಿ' ಎಂದು ಹೇಳಿ ಅವರನ್ನೆಲ್ಲ ಹರಸಿ ಕಳುಹಿಸಿ ಕೊಟ್ಟಳು. ಅವಳ ಕಣ್ಣಲ್ಲಿ ನೀರು ಬರುತ್ತಿತ್ತು. ಮನೆಬಿಟ್ಟು ಯಾರೇ ಹೋಗಲಿ, ಆಗ ಅವಳ ಕಣ್ಣಲ್ಲಿ ನೀರು ಅಗಲುವಿಕೆ ಸದಾ ಸಂಕಷ್ಟವನ್ನು ತರುತ್ತಿತ್ತು ಅವಳಿಗೆ, ಅಪ್ಪ ಈ ಸಲ ಸ್ವಲ್ಪ ನಗು ನಗುತ್ತಾ ಇದ್ದರು. ಅವರೆಷ್ಟಾದರೂ ಗಂಭೀರವ್ಯಕ್ತಿ, ದುಃಖವನ್ನಾಗಲೀ ಸುಖವನ್ನಾಗಲೀ ಏಕರೀತಿಯಿಂದ ಅನುಭವಿಸುವ ಜೀವಿ ಅವರು. ಒಂದು ಘಳಿಗೆ ಮುಖ ಸಣ್ಣಗೆ ಮಾಡಿಕೊಂಡರೂ ಅವರೆಲ್ಲರನ್ನೂ ನಗು ನಗುತ್ತಾ ಬೀಳ್ಕೊಟ್ಟರು ಸುಮತಿಗೆ ಎಲ್ಲಿಲ್ಲದ ಖುಷಿ, ಅವಳಿಗೆ ಈಗ ಅಮ್ಮನೇ ಬೇಡ. ಅಕ್ಕನೇ ಅಮ್ಮ ಅಪ್ಪ ಎಲ್ಲವೂ ಆಗಿದ್ದಳು ಅವಳಿಗೆ. ಶಾರದ, ಮಗುವನ್ನು ಜೋಪಾನವಾಗಿ ನೋಡಿಕೋ, ಅಮ್ಮ ಹೇಳಿದಾಗ 'ಅದನೆಲ್ಲ ನೀವು ಹೇಳಿ ಕೊಡಬೇಕೇ ಅವಳಿಗೆ' ಎಂದರು ಭಾವ. ಸುಮತಿ ತನ್ನ ಬೂಟ್ಸು ಕಾಲನ್ನು ನೆಲಕ್ಕೆ ಪಟ ಪಟನೆ ಬಡಿಯುತ್ತ ಎಲ್ಲರಿಗೂ ಟಾಟಾ ಹೇಳಿ ಹೊರಟಳು. ಪಾಪ ಹೋಗುವಾಗ ಅಣ್ಣ ಅಕ್ಕಂದಿರಿಗೆ ಮುತ್ತುಕೊಡಲು ಮರೆಯಲಿಲ್ಲ ಅವಳು.

ದಿನಗಳುರುಳಿದುವು ಅಮ್ಮನ ಹೊಟ್ಟೆ ದಿನೇ ದಿನೇ ದೊಡ್ಡದಾಗಿ ಪ್ರಸವದ

(೧೨ನೇ ಪುಟ ನೋಡಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ. ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಭಾರತೀಯ ಜನಮನ ನಾಯಕ

ಪಂಡಿತ ನೆಹರು ಸದಾ ಅಮರರು

ನೆಹರು ಯುಗವೇನೊ ಕೊನೆಗೊಂಡಿತು; ಆದರೆ, ನೆಹರು ನೆನಪು ತಂದೆಯಿಂದ ಮಗನಿಗೆ ಮತ್ತೆ ಮತ್ತೆ ಮರುಕೊಳಿಸುವುದು. ತನ್ನ ಸಂಪತ್ತನ್ನು ತ್ಯಜಿಸಿ ಮಾತೃಭೂಮಿಗೆ ಸ್ವಾತಂತ್ರ್ಯವನ್ನು ಗಳಿಸಲು ಭೀಕರವಾದ ಕದನದಲ್ಲಿ ವ್ಯಸ್ತನಾದ ಮಾನವನನ್ನು ಪೀಳಿಗೆ ಪೀಳಿಗೆಯು ಮರೆಯಲಾರದು ಭಾರತಕ್ಕೆ ರಾಷ್ಟ್ರೀಯತನವನ್ನು ತಂದುಕೊಟ್ಟವನನ್ನು, ಪ್ರಚಂಡ ಆಣೆಕಟ್ಟು ಮತ್ತು ಭೀಮಾಕಾರದ ಔದ್ಯಮಿಕ ಯೋಜನೆಗಳನ್ನು ನಿರ್ಮಿಸಿದವನನ್ನು ಅವನ್ನು ಜನತಾ ಜನಾರ್ದನನ ದೇವಕುಲವೆಂದು ಕರೆದವನನ್ನು, ವಿವಿಧ ರಾಷ್ಟ್ರಗಳ ನಡುವೆ ತನ್ನ ದೇಶದ ಬಗ್ಗೆ ಅಭಿಮಾನ ಪಡುತ್ತಿದ್ದವನನ್ನು, ದೇಶದ ಜನರೆಲ್ಲರನ್ನೂ ಅನನ್ಯಾದೃಶವಾಗಿ ಪ್ರೀತಿಸುತ್ತಿದ್ದ ನಾಯಕಾಗ್ರಣಿಯನ್ನು, ೪೫ ಕೋಟಿ ಗಂಡಸರು, ಹೆಂಗಸರು ಮತ್ತು ಮಕ್ಕಳ ಪ್ರೀತಿ — ನಿಷ್ಠೆಗಳನ್ನು ಪ್ರತಿಯಾಗಿ ಪಡೆದವನನ್ನು ತಲೆತಲಾಂತರದವರೆಗೂ ಭಾರತೀಯರು ಮರೆಯಲಾರರು.

ತನ್ನ ಭೌತಿಕ ಶರೀರವು ಅಗ್ನಿ ನಾರಾಯಣನಿಗೆ ಸಮರ್ಪಿತವಾದ ರಾಜಘಾಟಕ್ಕೆ ಜವಾಹರಲಾಲರು ಅಚ್ಚ ಬಿಳಿಯ ಬಣ್ಣದ ಹೂಮಾಲೆಗಳೊಡನೆ ಒಂದಲ್ಲ ನೂರು ಬಾರಿ ಮಹಾತ್ಮಾ ಗಾಂಧೀಜಿಯವರಿಗೆ, ತನ್ನ ನಾಯಕನಿಗೆ, ಗೌರವಾರ್ಪಣೆ ಮಾಡಲು ಹೋಗಿದ್ದಾರೆ. ಅಲ್ಲಿ ಅವರು ಮೌನವಾಗಿ ಕುಳಿತುಕೊಂಡು, ಗಾಂಧೀಜಿಯವರ ಪ್ರಿಯಗೀತೆಯನ್ನು ಆಲಿಸಿ, ತ್ಯಾಗಮಯ ನೂಲುವಿಕೆಯಲ್ಲಿ ಇತರರೊಡನೆ ಸೇರಿಕೊಂಡಿದ್ದಾರೆ. ಇಂದು ಆ ಅಮರ ಪವಿತ್ರ ರಾಜಘಾಟವು ಇಮ್ಮಡಿ ಪಾವನವಾಗಿದೆ. ಕೃತಜ್ಞ ಭಾವದ ರಾಷ್ಟ್ರವು ರಾಷ್ಟ್ರಪಿತನಿಗೆ ಗೌರವಾರ್ಹ ಮತ್ತು ಆಧುನಿಕ ಭಾರತದ ಮಹಾ ಶಿಲ್ಪಿಯ ದಿವ್ಯ ಸ್ಮರಣೆಯನ್ನು ಮಾತಲು ರಾಜಘಾಟದ ಯಾತ್ರೆಗೆ ತೆರಳುವುದು

ಜವಾಹರರ ಪಾರ್ಥಿವ ಶರೀರವು ಆಕರ್ಷಕವಾದುದು. ವಿರೋಧಾಭಾಸಮಯವಾದುದು, ಅಭಿಮಾನಿಯಾದರೂ ಅವರು ಜನ ಜಂಗುಳಿಯ ಜನ. ಕನಸುಗಾರರೂ ಹೌದು; ದಿವ್ಯದರ್ಶನ ಪಡೆಯುವ ಭಾಗ್ಯಶೀಲರೂ ಹೌದು. ಕರ್ತವ್ಯನಿಷ್ಠ ಸಮಾಜದ ಪ್ರತಿರೂಪ ಅವರು. ಕಳೆದ ಅರ್ಧಶತಮಾನದಷ್ಟು ಸುದೀರ್ಘಕಾಲ ಅವರು ಭಾರತೀಯರ ಹೃದಯಗಳನ್ನು ಆಳಿದರು; ಅವರು ಪರಂಪರೆಯನ್ನು ರೂಪಿಸಿದರು. ತಮ್ಮ 'ಮುಕುಟ ರಹಿತ ದೊರೆ'ಯೆಂದು ಸಮಸ್ತ ಭಾರತೀಯರು ಅವರನ್ನು ಗೌರವಿಸಿದರು. ನೆಹರುವನ್ನು ಸೇವಿಸುವುದು ತಮ್ಮ ಭಾಗ್ಯವೆಂದು ಭಾವಿಸಿದರು; ಅವರ ಒಪ್ಪಿಗೆ ಪಡೆಯುವುದೇ ಬಹುಮಾನವೆಂದು ತಿಳಿದರು.

ಇಂತಹ ಅದ್ಭುತ ವಾತಾವರಣ--ಶಕ್ತಿಗಳ ನಡುವಿರುವ ಯಾವುದೇ ವ್ಯಕ್ತಿ ನಿರಂಕುಶತೆಯತ್ತ ವಾಲುವುದು ಸಹಜ ಆದರೆ, ಜವಹರಲಾಲ ನೆಹರು ಹೀಗಾಗಲಿಲ್ಲ. ಜನತೆ ತನ್ನಲ್ಲಿಟ್ಟ ಅಚಲನಿಷ್ಠೆ—ಭಕ್ತಿ—ಗೌರವಗಳನ್ನು ದುರುಪಯೋಗ ಪಡಿಸಲಿಲ್ಲ. "ನಾನು ಅಧಿಕಾರ ಬಲದಿಂದ ನವದೆಹಲಿಯಲ್ಲಿ ಪ್ರಧಾನಮಂತ್ರಿಯಾಗಿ ಕುಳಿತಿಲ್ಲ. ಭಾರತೀಯ ಜನತೆಯ ಮನಸ್ಸನ್ನು ಪ್ರತಿನಿಧಿಸುತ್ತಿದ್ದೇನೆಂಬ ವಿಶ್ವಾಸದಿಂದ ಮತ್ತು ಭಾರತೀಯ ಜನತೆಯ ಕೃಪಾಕಟಾಕ್ಷದಿಂದನಾನಲ್ಲಿದ್ದೇನೆ" ಎಂದೊಮ್ಮೆ ಅವರು ಬಾನುಲಿ ಪ್ರಸಾರದಲ್ಲಿ ಅಂದಿದ್ದರು.

ಜವಹರಲಾಲ ನೆಹರು ಮತ್ತು ಭಾರತ ಪರಸ್ಪರರನ್ನು ಅತ್ಯಂತಿಕವಾಗಿ ಪ್ರೀತಿಸುತ್ತಿದ್ದರು. ಭಾರತದ ಈ ಪ್ರೀತಿಯು ಅವರಿಗೆ ಭಾರತವನ್ನಾಳ ಬಲ್ಲ ಮಹಾಶಕ್ತಿಯನ್ನು ನೀಡಿತು. ಜನತೆಯ ಪ್ರೀತಿಯನ್ನು ಸಾಮಾನ್ಯ ನಾಯಕರು ಅವರ ಮೇಲೆ ಪ್ರಭುತ್ವ ನಡೆಸಲು ಉಪಯೋಗಿಸುತ್ತಾರೆ. ಆದರೆ, ಶ್ರೀ ನೆಹರು ತಮ್ಮ ಅಧಿಕಾರವನ್ನು ಸರ್ವಾಧಿಕಾರಿಯಂತೆ ಉಪಯೋಗಿಸಲು ಒಪ್ಪಲಿಲ್ಲ. ಬಹು ಸುಲಭದಲ್ಲಿ ಅವರು ಸರ್ವಾಧಿಕಾರಿಯಾಗಬಹುದಿತ್ತು. ಆದರೆ, ಅವರಿಗೆ ಬೇಕಾಗಲಿಲ್ಲ. ದೇಶದ ಮೇಲಿನ ಅತ್ಯಂತಿಕ ಪ್ರೇಮದಿಂದ ಅವರು ಭಾರತವು ಸ್ವತಂತ್ರವಾಗಿರಲಿ ಎಂದು ಆಗ್ರಹ ತೊಟ್ಟಿದ್ದು ಅವರಿತ್ತ ಮಹಾ ಕಾಣಿಕೆ ಎಂದು ಬರೆದ ನ್ಯೂಯಾರ್ಕ್ ಟೈಮ್ಸ್ ನಿಜವಾದುದನ್ನೇ ಹೇಳಿದೆ.

ನೆಹರು ತಮ್ಮ ಕರ್ಮಗತಿಯಲ್ಲಿ ವಿಶ್ವಾಸವಿಡುವಂತೆ ತಮ್ಮ ಬಗ್ಗೆ ಅಭಿಮಾನ ಪಡುವಂತೆ ಪಾಠ ಕಲಿಸಿದ್ದಾರೆ, ಭಾರತೀಯ ಜನಕೋಟಿಗೆ ಜಾಗತಿಕ ಪ್ರಸಂಗದಲ್ಲಿ ತಾವಾಡಬೇಕಾದ ಪಾತ್ರವೇನೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಒಮ್ಮೆ ಒಂದು ಸಭಾಂತ್ಯದಲ್ಲಿ ತನ್ನ ಪಾದ ಹಿಡಿಯ ಬಂದವನೊಬ್ಬನನ್ನು ಅವರು ಗದರಿಸಿದರು, "ಅದು ಗುಲಾಮತನದ ಕುರುಹು. ನಾವೆಲ್ಲರೂ ಸರಿಸಮಾನರು; ಯಾರೊಬ್ಬರೂ ಮೇಲಲ್ಲ, ಕೀಳಲ್ಲ, ನಾವು ತಲೆಯೆತ್ತಿ ಸಮಾನಸ್ಕಂಧರಾಗಿರಬೇಕು" ಎಂದರು.

ನೈಜ ಪ್ರಜಾಪ್ರಭುತ್ವವಾದಿಯಾದ ನೆಹರು ರಾಷ್ಟ್ರದ ನಾಯಕರಾದರು; ಜನತೆಯೂ ಅವರ ಅನುಗಾಮಿಯಾಯಿತು. 'ನೆಹರು ಎಂದರೆ ಭಾರತ, ಭಾರತವೆಂದರೆ ನೆಹರು' ಎಂಬ ಅದ್ವೈತ ಭಾವವು ಒಮ್ಮಿಂದೊಮ್ಮೆಗೆ ಮೂಡಿತು. ಅವರು ಜನರಿಗೆ ದಾರಿ ತೋರಿಸಿದರು. ಜನ ತೋರಿದ ದಾರಿಯಲ್ಲಿ ಅವರನ್ನು ನೆಹರು ಮುನ್ನಡೆಸಿದರು. ಕೆಂಪು ಕೋಟೆಯ ವಿಚಾರಣೆಯಲ್ಲಿ ಅವರು ಐ ಎನ್ಎ ನಾಯಕರನ್ನು ಉಳಿಸಲು ವಕೀಲರ ಉಡುಗೆಯನ್ನು ಉಟ್ಟರು. ಲೂಟಿಗೆ ಗುರಿಯಾಗಿ ಹಾಳಾದ ನಗರ—ಗ್ರಾಮಗಳಲ್ಲಿ ಹೊಸ ಪ್ರಾಣ ಸಂಚಾರ ಮಾಡಲು ಅವರು ಸಂಚರಿಸಿದರು, ವಿಪತ್ತಿನ ವೇಳೆ ಅಸ್ಥಳದಲ್ಲಿ ಮೊತ್ತಮೊದಲು ಕಾಣಿಸಿಕೊಳ್ಳುವ ವ್ಯಕ್ತಿ ಅವರು. ಪ್ರಧಾನ ಮಂತ್ರಿ ನಿವಾಸದ ಮುಂದೆ ಹೋಳಿಯಾಡಿದರ; ಪ್ರಜಾಪ್ರಭುತ್ವದಿನಾಚರಣೆಯಲ್ಲಿ ಗುದ್ದಲಿ ಹಿಡಿದು ಜನರೊಡನೆ ಕುಣಿದಾಡಿದರು. ಮಕ್ಕಳ ಜಾತ್ರೆಯಲ್ಲಿ ಗೊಂಬೆ ರೈಲುಗಳಲ್ಲಿ ಕುಳಿತು ಪ್ರಯಾಣ ಮಾಡಿದರು ನೆಹರುವನ್ನುಳಿದು ಭಾರತವು ಬಹುಕಾಲದ ವರೆಗೆ ತುಂಬಿ ಬರುವುದಿಲ್ಲ.

ನೆಹರು ಅಮರಜೀವಿ ಜಾ ಜಾ ನೆಹರುವಿನ ಅಪಾರ ಕಥೆಯನ್ನು ಅಜ್ಜಿಗಳು ತಮ್ಮ ಮೊಮ್ಮಕ್ಕಳಿಗೆ ಪ್ರತಿದಿನ ಹೇಳುವದಿನ ಬಂದೇ ಬರುತ್ತದೆ. ದೇಶದ ಪ್ರಧಾನಮಂತ್ರಿಯೆಂದು ನೆಹರು ಕೀರ್ತಿ ಪಡೆದಿಲ್ಲ; ಆದರೆ, ದೇಶದ ಆಶೆ—ಉತ್ಸಾಹಗಳ ಗುರುವೆಂದು ಯಶಗಳಿಸಿದ್ದಾರೆ. ತಮಗೆ ತಮ್ಮ ಅಜ್ಜ ಮುತ್ತಜ್ಜಗಳು ರಾಮ—ಕೃಷ್ಣರ ಪವಿತ್ರ ಕತೆಗಳನ್ನು ಹೇಳುತ್ತಿದ್ದಂತೆಯೇ ಈಗಿನ ಮತ್ತು ಮುಂದಿನ ಅಜ್ಜಿಯಂದಿರು ಜವಾಹರರ ಅಮರ ಕಥೆಯನ್ನು ಹೇಳುತ್ತಾರೆ

ಯಾರ-ದಾರೂ ನಾಯಕರು ಮೃತರಾದರೆ, ಅದನ್ನು 'ತುಂಬಿ ಬರದ ನಷ್ಟ'ವೆಂದು ವರ್ಣಿಸುವುದು ಸ್ವಾಭಾವಿಕ; ಅದೀಗ ಉಪಚಾರದ ಶುಷ್ಕ ಉದ್ಗಾರವೂ ಆಗಿದೆ. ಆದರೆ, ಭಾರತ ರತ್ನ ಜವಾಹರಲಾಲರ ಅಗಲಿಕೆ ಖಂಡಿತವೂ ತುಂಬಿ ಬರುವುದಿಲ್ಲ. ಮಹಾತ್ಮಾ ಗಾಂಧೀಜಿಯವರ ನಿಧನದ ಹಾನಿಯಂತೆಯೇ ಭಾರತಕ್ಕಾದ ಅಪಾರ ಹಾನಿ ಇದು. ಗಾಂಧೀಯುಗ ಕಳೆದ ಬಳಿಕ ನೆಹರುಯುಗ ಆರಂಭವಾಗಿತು. ಆದರೆ, ಈ ಯುಗ ಕೊನೆಗೊಂಡ ಬಳಿಕ ಇಂತಹ ಮತ್ತೊಂದು ಯುಗ ಖಂಡಿತವೂ ಬರುವುದಿಲ್ಲ. ಒಬ್ಬನೇ ಒಬ್ಬ ನೆಹರುವರಲ್ಲಿದ್ದ ಯೋಗ್ಯತೆ ಪ್ರಶ್ನಾತೀತ, ಕಲ್ಪನಾತೀತ. ಇವು ವಿಶ್ವನಾಯಕರ ಉದ್ಗಾರ!

ನಿಮ್ಮ ಮಗು!!!

ಇಂದು ಪುಟ್ಟ ಹೆಜ್ಜೆಯಿಡುತಿದ್ದಾನೆ
ನಾಳೆ ಪಠ್ಯ ಪುಸ್ತಕ ಒಂದು ಬೇಕೆನ್ನುತ್ತಾನೆ!!!

ಆಗ ಅವನ ಭವಿಷ್ಯವನ್ನು ರೂಪಿಸುವುದಕ್ಕೆ ಶಾಲೆಯಲ್ಲಿ ಸದ್ವಿದ್ಯೆ ದೊರೆಯಬೇಕು; ಇದು ಈಡೇರಲು ತಮಗೆ ಬೇಕಾದ ಆಸರೆ ಒಂದು ಕ್ರಮದಲ್ಲಿ ಕೂಡಿಟ್ಟ ಹಣ.

ಇಂದಿನಿಂದಲೇ ಇದಕ್ಕಾಗಿ ನಿಮ್ಮ ಉಳಿಕೆ ಹಣವನ್ನು ಕೂಡಿಡಲು ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸೇವಿಂಗ್ಸ್ ಲೆಕ್ಕವನ್ನು ಪ್ರಾರಂಭಿಸಿರಿ. ಹೀಗೆ ಕೂಡಿಟ್ಟ ಹಣ ಅದರ ಬಡ್ಡಿ ಸೇರಿ ನಿಮ್ಮ ಮಗುವಿನ ಶಾಲೆ, ಕಾಲೇಜುಗಳ ವಿದ್ಯಾಭ್ಯಾಸವನ್ನು ಸುಗಮವಾಗಿ ನೆರವೇರಿಸಬಲ್ಲುದು.

ಆದರೆ ಅದನ್ನು ಪ್ರಾರಂಭಿಸಲು ಒಳ್ಳೆಯ ಘಳಿಗೆ ಇದೇ.

●

ಉಳಿತಾಯಗಾರರ ಸನ್ಮಿತ್ರ........

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮಣಿಪಾಲ.

●

ಚಲಾವಣಾ ನಿಧಿ: ಐವತ್ತೇಳು ಕೋಟಿಗೂ ಮಿಗಿಲಿದೆ.

ಶಾಖೆಗಳು: ನೂರತೊಂಭತ್ತು.

ಹೊಸ ಪುಸ್ತಕ—

ನಚಿಕೇತ'ರ,

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ ಎರಡು.

ನವಯುಗ ಪ್ರೆಸ್, ಉಡುಪಿ.

ಕವಲು ದಾರಿ—ಕೆಂಪು ದೀಪ

ನಮ್ಮ ದೇಶದ ಪವಿತ್ರ ನೆಲ-ಫಲ

ನಮ್ಮ ದೇಶದ ಮಣ್ಣಿನ ಗುಣದ ಬಗ್ಗೆ ವಿದೇಶೀಯರು ಕೂಡಾ ಹೆಮ್ಮೆಪಡುತ್ತಿರುವದನ್ನು ಕಂಡು ನಾವು ಹೆಮ್ಮೆಪಟ್ಟುಕೊಳ್ಳುತ್ತಿದ್ದೇವೆ

ಈ ದೇಶದ ಮಣ್ಣಿನಲ್ಲಿ ಹುಟ್ಟಿ ಬೆಳೆದ ರಾಮ, ಕೃಷ್ಣ, ಬುದ್ಧ, ಅಶೋಕ, ಶಂಕರ, ಮಧ್ವ, ಬಸವಣ್ಣ, ರಾಮಕೃಷ್ಣ, ವಿವೇಕ, ಗಾಂಧಿ, ರವೀಂದ್ರ, ಶರತ್ ಚಂದ್ರ ಈ ದೇಶದ ಮಣ್ಣಿನಲ್ಲೇ ಬೆರೆತು ಹೋಗಿದ್ದಾರೆ

ಈ ದೇಶದ ಜನರ ಹಿತಚಿಂತನೆಗಾಗಿ ಅವರು ದುಡಿದರು. ಪೂರ್ಣ ಜೀವನಕ್ಕಾಗಿ ಅವರು ನಡೆಸಿದ ಹೋರಾಟ ಅಪೂರ್ಣವಾಗಿಯೇ ಉಳಿದಿದೆ ಅದೆಂದೂ ಪೂರ್ಣವಾಗುವದಿಲ್ಲ?

ಅವರ ಜೀವನವೂ ಪೂರ್ಣವಲ್ಲ ಎಲ್ಲರಿಗಿಂತ ತುಸು ಹೆಚ್ಚಿನ ಪಾಲು ಅವರ ಜೀವನಕ್ಕೆ ಸಿಗಬಹುದೇ ವಿನಃ ಅದು ಪೂರ್ಣ ಜೀವನವಲ್ಲ

ಅವರ ಜೀವನ ಪೂರ್ಣವೆನಿಸುತ್ತಿದ್ದರೆ ಅವರ ಸಾಧನೆಯೂ ತುಂಬಿ ನಿಲ್ಲುತ್ತಲಿತ್ತು. ಆದರೆ ಅವರ ಸಾಧನೆ ಎಷ್ಟು ಎತ್ತರಕ್ಕೆ ಬೆಳೆಯಿತೋ ಅದೇ ಸಾಧನೆ ಕೆಳಗಿಳಿ ವ್ಯಂಗ್ಯವಾಗಿರುವದನ್ನೂ ಇವತ್ತಿನ ಸಾರ್ವತ್ರಿಕ ಜನಜೀವನವನ್ನು ನೋಡಿದರೆ ಎನಿಸುತ್ತದೆ

ಅವರ ಸಾಧನೆ ಅಮೂಲ್ಯ ಸ್ವತ್ತು ನಿಜ; ಆದರೆ ಅದು ಚಿರಂತನವಾಗಿದ್ದಿರುವದನ್ನು ನೋಡಿದರೆ, ಆ ಸಾಧನೆಯಲ್ಲಿ ಅಪೂರ್ಣತನವಿತ್ತು ಎಂಬ ಮಾತು ಸುಸ್ಪಷ್ಟವಾಗಿಯೇ ಇದೆ

ರಾಮ, ಕೃಷ್ಣ, ಬುದ್ಧ, ಗಾಂಧಿ, ಇವರೆಲ್ಲ ನಡೆಸಿದ ಪ್ರಯತ್ನ ಇಂದಿಗೆ ಮೃತಪ್ರಾಯವಾಗಿದೆ. ಅವರ ಸಾಧನೆಯು ಅವರೊಡನೆಯೇ ಮಣ್ಣುಗೂಡಿದೆ.

ಅದು ಅಮೃತವಾಗಿರುತ್ತಿದ್ದರೆ, ರಾಮರಾಜ್ಯ ಇವತ್ತಿಗೆ ಕೂಡಾ ಇರುತ್ತಲಿತ್ತು ವಿವೇಕಾನಂದರ ಗಂಭೀರ ವಾಣಿ ಇವತ್ತಿಗೂ ಭಾರತದ ಮೂಲೆ ಮೂಲೆಯಿಂದ ಕೇಳಿ ಬರುತ್ತಲಿತ್ತು. ಬುದ್ಧ, ಗಾಂಧಿಯ ಅಹಿಂಸಾ ತತ್ವ ಈಗ ಎಲ್ಲಡಗಿದೆ? ಬಸವಣ್ಣನ ಅಮೃತ ವಾಣಿಯನ್ನು ಕುಡಿಯುವ ಧೈರ್ಯ ಯಾರಿಗಿದೆ? ಅದನ್ನು ಪ್ರತಿಯೊಬ್ಬ ವಿಷವೆಂದೇ ತಿಳಿದು ಕುಡಿಯಲೊಲ್ಲ? ಅದು ಗಂಟಲನ್ನು ಸುಟ್ಟೀತು ಎಂಬ ಭೀತಿ ಜನತೆಗಿದೆ?

ಪೂರ್ಣತ್ವದ ಬದುಕನ್ನು ಯಾರೂ ಬಾಳಿಲ್ಲ; ಆ ಕುರಿತು ಅನ್ನುವಾಗ ಹಿರಿಯರು ಆ ಕೆಲಸವನ್ನು ಪೂರ್ಣಗೊಳಿಸಲು ಇನ್ನೊಬ್ಬ ಬರುವನೆನ್ನುತ್ತಾರೆ

ಇದ್ದರೆ—ಅದಕ್ಕಾಗಿ ಇನ್ನೊಬ್ಬ ರಾಮ ಇನ್ನೊಬ್ಬ ಗಾಂಧಿ ಹುಟ್ಟಿ ಬರುವನಾದರೆ ಆಗ ಆ ಅಪೂರ್ಣತೆಯ ಕಟ್ಟಡ ಪಾಳು ಬಿದ್ದಿರುತ್ತದೆ, ಇದನ್ನು ದುರಸ್ತಿಗೊಳಿಸುವದು ಅಸಾಧ್ಯವೆಂದು ಆ ಇನ್ನೊಬ್ಬ ತಿಳಿಯುತ್ತಾನೆ ಅಂತೆಯೇ, ತನ್ನದೇ ಆದ ಇನ್ನೊಂದು ಕಟ್ಟಡವನ್ನು ಸೃಷ್ಟಿಸುತ್ತಾನೆ; ಅನೂ ಅವನ ನಂತರ ಖಾಲಿಯಾಗುತ್ತದ

ಅಂತೆಯೆ ಈ ದೇಶದಲ್ಲಿ ಯಾರಿಗೂ ತನ್ನ ಜೀವನ ಪೂರ್ಣವಾಗಿದೆ ಎಂದು ಹೇಳಲು ಅಧಿಕಾರವಿರುವದಿಲ್ಲ. ಈ ದೇಶದ ಬಗ್ಗೆ ಇನ್ನಿತರ ದೇಶಗಳು ಒಳ್ಳೆಯ ಅಭಿಪ್ರಾಯವಿತ್ತು, ಆ ಅಭಿಪ್ರಾಯವನ್ನು ಹೆಮ್ಮೆಯ ಕಳಸವೆಂದೇ ಒಗೆದು ಹೊತ್ತು ಮೆರೆಯುವ ಅಧಿಕಾರ ಯಾರಿಗೂ ಇರುವದಿಲ್ಲ.

ಇದನ್ನು ಭ್ರಷ್ಟಾಚಾರವು ಚೆನ್ನಾಗಿ ತಿಳಿದಿದೆ ಎಂತಲೇ ಇವತ್ತು ಅದು ತಲೆ ಎತ್ತಿ ಮೆರೆಯುತ್ತಿದೆ. ನಮ್ಮ ದೇಶದ ಆದರ್ಶ ಎಂಬ ಕೀರ್ತಿಯ ಪತಾಕೆಯನ್ನು ಮೆಟ್ಟಿ ಹಾಕಿ, ತಾನೇ ತಾನಾಗಿ ಮೆರೆಯುತ್ತಿದೆ ಇಂದು ಭ್ರಷ್ಟಾಚಾರ.

ಒಬ್ಬ ರಾಮ, ಒಬ್ಬ ಗಾಂಧಿ, ಒಬ್ಬ ಬುದ್ಧ ಈ ದೇಶದ ಏಳಿಗೆಯನ್ನು ಸಾಧಿಸಲಾರರು. ಅವರು ಸಾಧಿಸಿಯೂ ಇಲ್ಲ ಎಂಬುದೂ, ಇಂದು ಭಾರತದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳುವ ಯಾರಿಗಾದರೂ ತಿಳಿಯುವ ಸತ್ಯವಾಗಿದೆ.

ಆ ಕಾರ್ಯ ಸಾಧಿಸಲ್ಪಡಬೇಕಾದರೆ, ಪ್ರತಿಯೊಬ್ಬನೂ ಅತ್ತ ಲಕ್ಷ್ಯ ವಹಿಸಬೇಕಾಗಿದೆ. ಮನೆ ಮನೆಯಲ್ಲಿ ಆ ಉಚ್ಚ ಆದರ್ಶದ ಶಿಕ್ಷಣ ನಡೆಯಬೇಕು. ಮಾತ್ರವಲ್ಲ, ಅದನ್ನು ಸಾಧಿಸಿ ತೋರುವಲ್ಲಿ ಪ್ರತಿಯೊಬ್ಬನೂ ಪಣತೊಟ್ಟು ಹೋರಾಡಬೇಕು. ಪ್ರಾಮಾಣಿಕತನದ ಕೈಯನ್ನು ಎಂದಿಗೂ ಬಿಡಬಾರದು. ಕ್ಷಣ ಎಚ್ಚರ ತಪ್ಪಿದರೂ, ಮತ್ತೆ ಏನಾದರೊಂದು ಸಮಸ್ಯೆ ಎದ್ದು ನಿಲ್ಲುವದೆಂಬ ಅರಿವು ಅತನಿಗಿರಬೇಕು.

ಈ ದೇಶದ ಏಳಿಗೆಗಾಗಿ ಶ್ರಮಿಸಿದವರೆಂದು ನಾವು ಬಾಯಿ ತುಂಬ ಅವರನ್ನು ಹೊಗಳಿದರೆ ಬಂದ ಭಾಗ್ಯವೇನು? ಅವರ ಭಾವ ಚಿತ್ರಗಳನ್ನು ಮನೆಯಲ್ಲಿಟ್ಟು ಪೂಜಿಸಿದರೆ, ಸಾಧಿಸಲ್ಪಡಬಹುದಾದ ಶ್ರೇಯದ ಕಾರ್ಯ ಯಾವದು?

ಇಷ್ಟರಿಂದ ನಾವು ಸಾಧಿಸಿರುವದು ಶೂನ್ಯವೇ ಆಗಿ ಉಳಿಯುವದೇ ವಿನಃ ಅದಕ್ಕಿಂತ ಹೆಚ್ಚು ಬೆಲೆ ನಮ್ಮ ಆಚರಣೆಗೆ ಬರುವದಿಲ್ಲ ಅಲ್ಲದೆ, ನಮ್ಮ ಈ ಒಣ ಉಪಚಾರವು, ಅವರ ಆದರ್ಶವನ್ನು ಇನ್ನಷ್ಟು ಅಳುಕ್ಕಿಳಿಸುವ ಪ್ರಯತ್ನದಂತೆಯೇ ಇರುತ್ತದೆ.

ಭ್ರಷ್ಟಾಚಾರದ ನಿವಾರಣೆ ಆಗಬೇಕಾದರೆ ಈ ಮಾತನ್ನು ಪ್ರತಿಯೊಬ್ಬ ತಿಳಿದುಕೊಳ್ಳಬೇಕು. ಯಾರದೋ ಗೋರಿಯ ಮುಂದೆ ನಿಂತು ಎರಡು ಹನಿ ಕಣ್ಣೀರು ಸುರಿಸುವ ಮಾತ್ರದಿಂದ ಏನೂ ಆಗುವದಿಲ್ಲ. ಯಾರದೋ ಆದರ್ಶವನ್ನು ನೆನೆಸಿಕೊಂಡು ಅವನ ಗೋರಿಯ ಮುಂದೆ ನಾಲ್ಕು ಮುತ್ತಿನಂಥಹ ಮಾತಾಡಿ, ಎರಡು ಪುಷ್ಪಗಳನ್ನು ಸಮರ್ಪಿಸಿದ ಮಾತ್ರದಿಂದ ಭ್ರಷ್ಟಾಚಾರ ನಿವಾರಣೆ ಮಾಡಿದೆವು ಎಂದು ಹೇಳುತ್ತ, ಕ್ಷಣ ಹೊತ್ತು ಕಳೆದ ಬಳಿಕ, ದಾಹ ಪೀಡಿತರಂತೆ, ಹಣ ಸುಲಿಗೆಯ ಕಾರ್ಯ ಮಾಡುವ 'ಆದರ್ಶ ಪ್ರಿಯ'ರು, ಭ್ರಷ್ಟಾಚಾರದ ನಿವಾರಣೆಗಿಂತ, ಅದರ ಶ್ರೇಯೋಭಿವೃದ್ಧಿಗಾಗಿ ದುಡಿಯುವವರಾಗಿರುತ್ತಾರೆ.

ಶ್ರೀಮಂತ ಕುಲ ಕೋಟಿಯು ದರಿದ್ರ ಕುಲಕೋಟಿಯನ್ನು ಅವಮಾನಿಸುವನ್ನುತ್ತದೆ, ದರಿದ್ರ ಕುಲಕೋಟಿಯು ಶ್ರೀಮಂತ ಕುಲಕೋಟಿಯನ್ನು ಅವಮಾನಿಸರೆನ್ನುತ್ತದೆ, ಈ ಇಬ್ಬಗೆಯ ಕುಲಕೋಟಿ ಮನುಷ್ಯರಾಗಲು ಯತ್ನಿಸಿದಾಗ ಭ್ರಷ್ಟಾಚಾರವು ನಮ್ಮ ದೇಶದ ಮಣ್ಣನ್ನು ತುಳಿಯುವ ಸಾಹಸ ಮಾಡಲಾರದು.

ಆ ರೀತಿ ನಡೆದಾಗ ನಮ್ಮ ಪೂರ್ವದ ಆದರ್ಶವಾದಿಗಳು ಎದ್ದು ನಿಲ್ಲುತ್ತಾರೆ.

ಇವರೆಲ್ಲರ ಉದ್ಧಾರವಾಗಲು ಈಗ ಭಗೀರಥನೊಬ್ಬನಿಂದ ಸಾಧ್ಯವಿಲ್ಲ. ನಮ್ಮ ಈ "ಪವಿತ್ರ" ದೇಶದ ಮಣ್ಣಿನ ಮಕ್ಕಳು ಎಲ್ಲರೂ ಭಗೀರಥರೆನಿಸಿದಾಗ ಮಾತ್ರ ಇದು ಸಾಧ್ಯವಾದೀತು.

ಅದುವರೆಗೆ ಭ್ರಷ್ಟಾಚಾರಕ್ಕೂ ಅದರ ಹರಿಕಾರ ಭಕ್ತರಿಗೂ ಮಾತ್ರ ಬೆಲೆಯಿರುತ್ತದೆ.

—ಸುದಾಸ.

ಚಿತ್ತರಂಜನ ರೇಲು ಯಂತ್ರ ಕಾರಖಾನೆಯಲ್ಲಿ ಕರ್ತವ್ಯ ಪರಾಯಣನಾದ ಕೆಲಸಗಾರ.



ಕಾರ್ಕಳ ದಿ ಮು ಕೋರ್ಟಿನಲ್ಲಿ

O S No. 656/1962

ರುಕ್ಮಿಣಿ ಹೆಗ್ಗಡ್ತಿ ಸಹಾ— ವಾದಿರು.

ಸಂಣಮ್ಮ ಹೆಗ್ಗಡ್ತಿ (ಪೌತ್ರಿ) ಸಹಾ— ಪ್ರತಿವಾದಿರು.

೫೫, ರಾಮಣ್ಣ ಹೆಗ್ಡೆ. ಸುಬ್ಬಯ್ಯ ಹೆಗ್ಡೇರ ಮಗ, ಕಾರ್ಕಳ ತಾಲ್ಕು ಮುಡ್ರಾಡಿ ಗ್ರಾಮದ ತೆಂಕೋಡು ಜಡ್ಡು ಎಂಬಲ್ಲಿರುವವ.

55ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ವಾದಿರೆ ಮತ್ತು 1ರಿಂದ 51ನೇ ವರೆಗಿನ ಪ್ರತಿವಾದಿರ ಮತ್ತು ಪಾಲಿ ಮೃತಪಟ್ಟಿರುವ ನಿಮ್ಮ ತಂದೆ ಸುಬ್ಬಯ್ಯ ಹೆಗ್ಡೇರ ಕುಟುಂಬದ ಆಸ್ತಿಗಳ ಹಿಸ್ಸೆಕೇಳಿ ವಾದಿರು ದಾಖಲ್ಲು ಮಾಡಿದ ಸದ್ರಿ ದಾವೆಯು ತಾ 9_6_64ಕ್ಕೆ ನಿಮಗೆ ಆಕ್ಷೇಪ ನೋಟೀಸ ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ರೆ ಆ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟ ಮುಂದೆ ನೀವು ಹಾಜ್ರಿಗಿ ಉದಾಹರಣೆಕೊಡತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ದಾವಾ ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K· V Kamath.
Advocate for Plantiff

ಕಾರ್ಕಳ, 27_5_1964

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ವಿಶ್ವಸಂಚಾರಿ ವಿಶ್ವಪ್ರೇಮಿ

ವಿಶ್ವಹಿತಸಾಧಕ-ಜವಾಹರಲಾಲ

ಶ್ರೀ ನೆಹರೂ ಅವರ ನಾಯಕತ್ವದಲ್ಲಿಯೇ ಭಾರತವು ಆರ್ಥಿಕಾಭಿವೃದ್ಧಿ ಸಾಧನೆಗಾಗಿ ಶ್ರಮಿಸಿತು. ಭಾರತದ ಸರ್ವಾಂಗೀಣ ಪ್ರಗತಿ ಪಂಚವಾರ್ಷಿಕ ಯೋಜನೆಗಳ ಮುಖ್ಯ ಗುರಿ. ಈ ಯೋಜನೆಗಳ ಸಿದ್ಧತೆಯಲ್ಲಿ ಜವಹರಲಾಲ್ ನೆಹರೂ ಅವರ ಮಾರ್ಗದರ್ಶನ ಮತ್ತು ಸ್ಫೂರ್ತಿ ಅಷ್ಟಿಷ್ಟಲ್ಲ. ವಾಸ್ತವವಾಗಿ ಭಾರತವನ್ನು ಯೋಜಿತ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕೆಂಬುದೇ ಅವರ ಸಂಕಲ್ಪ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿದ್ದಾಗಲೂ ಅವರು ದೇಶದ ಭವಿತವ್ಯವನ್ನೇ ಕುರಿತು ಚಿಂತಿಸುತ್ತಿದ್ದರು. ಕಾಂಗ್ರೆಸ್ ತಾತ್ಕಾಲಿಕವಾಗಿ ರೂಪಿಸಿದ ಅಭಿವೃದ್ಧಿ ಯೋಜನೆಗಳ ಶಿಲ್ಪಿಗಳಲ್ಲಿ ಶ್ರೀ ನೆಹರೂ ಅವರೂ ಒಬ್ಬರಾಗಿದ್ದರು.

ವಿದೇಶಾಂಗ ವ್ಯವಹಾರಗಳ ಕ್ಷೇತ್ರದಲ್ಲಿ ಸಹ ಅವರು ಭಾರತಕ್ಕೇ ಒಂದು ಸ್ವತಂತ್ರ ಧೋರಣೆಗಳನ್ನು ರೂಪಿಸಿಕೊಟ್ಟರು. ಉಗ್ರ ಟೀಕೆಗಳು ಬಂದಾಗ್ಯೂ, ಹಲವಾರು ಅಂತಾರಾಷ್ಟ್ರೀಯ ವ್ಯವಹಾರಗಳಿಂದಾಗಿ ಉಗ್ರ ರೀತಿಯ ಒತ್ತಡಗಳಿದ್ದಾಗ್ಯೂ, ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ದೇಶವು ಅಲಿಪ್ತ ನೀತಿಯನ್ನೇ ಅನುಸರಿಸುವುದೆಂದು ಸಾರಿದರು. ಆ ನೀತಿಯನ್ನು ಅನುಸರಣೆಗೆ ತರುವಲ್ಲಿ ಅವರೂ ಒಮ್ಮೆಯೂ ಎಡವಲಿಲ್ಲ. ಅವರನ್ನು ಪಂಚಶೀಲ ತತ್ವಗಳ ಮೂಲ ಪುರುಷರೆಂದೂ ಕರೆಯಬಹುದು. ಮುಂದೆ ಆ ತತ್ವಗಳನ್ನು ೧೯೫೫ರಲ್ಲಿ ಬಾಂಡುಂಗ್‌ನಲ್ಲಿ ಸಮಾವೇಶಗೊಂಡಿದ್ದ ಆಫ್ರಿಕನ್ ಏಷಿಯನ್ ದೇಶಗಳು ಅಂಗೀಕರಿಸಿದವು.

ಶ್ರೀ ನೆಹರೂ ಅವರು ಸದಾಕಾಲವೂ ಅನಭಿವೃದ್ಧ ದೇಶಗಳ ಹಿತವನ್ನೇ ಬಯಸುತ್ತಿದ್ದರು. ಅದಾಗ್ಯೂ ಆಫ್ರಿಕನ್ ಮತ್ತು ಏಷಿಯನ್ ದೇಶಗಳ ಐಕ್ಯತೆಯಲ್ಲಿ ತೀವ್ರಾಸಕ್ತಿ ತಂದಿದ್ದರು. ಇವರ ಈ ತೀವ್ರಾಸಕ್ತಿ ೧೯೪೭ರ ಮಾರ್ಚಿ ೨೩ರಂದು ದೆಹಲಿಯಲ್ಲಿ ನಡೆದ ಏಷಿಯನ್ ರಾಷ್ಟ್ರಗಳ ಸಂಬಂಧಗಳ ಸಮ್ಮೇಳನದಲ್ಲಿ ನೂತನ ರೂಪ ತಳೆಯಿತು. ವಾಸ್ತವವಾಗಿ ಆ ಸಮ್ಮೇಳನವೇ ೧೯೫೫ರಲ್ಲಿ ಬಾಡುಂಗಿನಲ್ಲಿ ಆಫ್ರಿಕನ್ ಏಷಿಯನ್ ದೇಶಗಳ ಸಮ್ಮೇಳನ ನಡೆಯಲು ಸುಭದ್ರವಾದ ಅಡಿಪಾಯವನ್ನು ಹಾಕಿತು ಎನ್ನಬಹುದು. ಆ ಸಮ್ಮೇಳನದಲ್ಲಿ ಪ್ರಧಾನ ಮಂತ್ರಿ ನೆಹರೂ ಅವರು ವಹಿಸಿದ್ದ ಮಹತ್ವಪೂರ್ಣ ಪಾತ್ರ ಚಿರಸ್ಮರಿತವಾಗಿದೆ.

ಕಾಮನ್‌ವೆಲ್ತ್ ಪರಿಷತ್ತಿನಲ್ಲಿ ಪ್ರಧಾನ ಮಂತ್ರಿಗಳೊಡನೆ ನೆಹರು.

ಅವರು ವಿದೇಶಗಳಿಗೆ ಭೇಟಿ ಕೊಟ್ಟಾಗಲೆಲ್ಲಾ ಶಾಂತಿ ಮತ್ತು ಸ್ವಾತಂತ್ರ್ಯ ಸಾಧನೆಗಳ ಬಗೆಗೆ ನಿರ್ಭೀತರಾಗಿ ಮಾತಾಡುತ್ತಿದ್ದರು. ೧೯೪೮, ೧೯೫೦ ಮತ್ತು ೧೯೬೦ರಲ್ಲಿ ಅವರು ವಿಶ್ವ ಸಂಸ್ಥೆಯ ಮಹಾಸಭೆಯನ್ನುದ್ದೇಶಿಸಿ ಮಾಡಿದ ಭಾಷಣಗಳೂ ಮಹತ್ವಪೂರ್ಣವಾಗಿವೆ. ಆ ಭಾಷಣಗಳಲ್ಲಿ ನೆಹರೂ ಅವರು ವಿಶ್ವದಲ್ಲಿ ಶಾಂತಿ ಪಾಲನೆ ಮತ್ತು ವಸಾಹತು ಶಾಹಿಗಳ ನಿರ್ಮೂಲನವನ್ನು ಕುರಿತು ಪ್ರಸ್ತಾಪಿಸಿದ್ದರು.

೧೯೬೦ರಲ್ಲಿ ಶ್ರೀ ನೆಹರೂ ಅವರು ವಿಶ್ವ ಸಂಸ್ಥೆಯ ಮಹಾಸಭೆಯ ಅಧಿವೇಶದಲ್ಲಿ ಭಾರತೀಯ ನಿಯೋಗದ ನಾಯಕರಾಗಿ ಭಾಗವಹಿಸಿದ್ದರು. ಶ್ರೀ ಐಸೆನ್‌ಹೋವರ್ ಮತ್ತು ಶ್ರೀ ಕ್ರುಶ್ಚೇವ್ ಅವರಿಬ್ಬರೂ ಪುನಃ ಭೇಟಿಯಾಗಿ ಮಾತುಕತೆಗಳನ್ನು ನಡೆಸಬೇಕೆಂಬ ನಿರ್ಣಯವನ್ನೂ ಶ್ರೀ ನೆಹರೂರವರು ಈ ಅಧಿವೇಶನದಲ್ಲಿ ಮಂಡಿಸಿದ್ದರು. ಈ ಅಧಿವೇಶನದಲ್ಲಿಯೂ ೧೯೬೧ರಲ್ಲಿ ಬೆಲ್ಗ್ರೇಡಿನಲ್ಲಿ ನಡೆದ ತಟಸ್ಥ ರಾಷ್ಟ್ರಗಳ ಸಮ್ಮೇಳನದಲ್ಲಿಯೂ ಅವರು ಭಾಗವಹಿಸಿದ್ದರು. ಅಷ್ಟೇ ಅಲ್ಲದೆ ಅವರು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ವಿಶ್ವದ ಪ್ರಮುಖ ಮುತ್ಸದ್ದಿಗಳಲ್ಲಿ ಒಬ್ಬರೆಂದು ಅವರು ಪರಿಗಣಿಸಲ್ಪಟ್ಟರು.

ವಿಶ್ವಸಂಸ್ಥೆಯಲ್ಲಿ ಅವರಿಗೆ ಅಚಲ ವಿಶ್ವಾಸವಿತ್ತು. ವಿಶ್ವದ ವ್ಯವಹಾರಗಳಲ್ಲಿ ವಿಶ್ವಸಂಸ್ಥೆಯು ರಚನಾತ್ಮಕ ಪಾತ್ರ ವಹಿಸಬಹುದೆಂಬುದೂ ಅವರ ದೃಢ ನಂಬಿಕೆಯಾಗಿತ್ತು. ದೇಶಗಳು ಶೀತಲ ಯುದ್ಧದಲ್ಲಿ ಅಥವಾ ಭೀಕರ ಸಮರದಲ್ಲಿ ನಿರತರಾಗದೆ ಶಾಂತಿಪಥ ಹಿಡಿಯಲು ವಿಶ್ವಸಂಸ್ಥೆಯಿಂದ ಸಾಧ್ಯ ಎಂಬುದು ನೆಹರೂ ಅವರ ದೃಢ ನಂಬಿಕೆ.

ಭಾರತ ಪಾಕಿಸ್ತಾನಗಳ ನಡುವಿನ ವಿರಸ ಸಂಬಂಧ ಅವರನ್ನು ದುಃಖಿಯನ್ನಾಗಿ ಮಾಡಿತು. ಎರಡೂ ದೇಶಗಳ ಸಂಬಂಧವನ್ನು ಉತ್ತಮಪಡಿಸಲು ಅವರು ಸರ್ವಸಾಧ್ಯ ಪ್ರಯತ್ನ ನಡೆಸಿದರು. ತಮ್ಮ ನಿಧನದ ಕೊನೆಯ ಕ್ಷಣದವರೆ

(ಆನೇ ಪುಟ ನೋಡಿರಿ)



ಅಂಕೆ ಸಂಖ್ಯೆಗಳು ಹೇಳುವುದಾದರೂ ಏನು?

ಕೆನರಾ ಬ್ಯಾಂಕಿನ ಠೇವಣಾತಿಗಳ ಮೊತ್ತ 1963ರ ಅಂತ್ಯಕ್ಕೆ ರೂ. 72.37 ಕೋಟಿಯಷ್ಟು ಬೆಳೆದಿದೆ
1962ರ ಅಂತ್ಯಕ್ಕೆ ಇದ್ದ ರೂ 50.88 ಕೋಟಿ ಠೇವಣಾತಿ ಒಂದೇ ವರ್ಷದಲ್ಲಿ (1963) ರೂ. 21.49 ಕೋಟಿಯಷ್ಟು ಠೇವಣಾತಿ ಹೆಚ್ಚಿದೆ

1963ರಲ್ಲಿ ಬ್ಯಾಂಕಿಂಗ್ ಉದ್ದಿಮೆಯ ಠೇವಣಾತಿ ಏರಿಕೆಯು ಸರಾಸರಿ ಶೇಕಡ 10 ಮಾತ್ರವಿದ್ದು ಕೆನರಾ ಬ್ಯಾಂಕಿನ ಠೇವಣಾತಿಯ ಏರಿಕೆ ಶೇಕಡ 42.3 ಇರುತ್ತದೆ

ಅಂಕೆ ಸಂಖ್ಯೆಗಳ ಈ ರೀತಿ ಏರುವಿಕೆಯನ್ನು ಗಮನಿಸಿದ್ದೇ ಆದರೆ ಮುಖ್ಯವಾಗಿ ಒಂದಂಶವು ಸಹಜವಾಗಿ ವ್ಯಕ್ತವಾಗುತ್ತದೆ. ಅದೇ, ಕೆನರಾ ಬ್ಯಾಂಕ್ ಬಗ್ಗೆ ಒಂದೇ ಸಮನೆ ಹೆಚ್ಚುತ್ತಿರುವ ಜನತೆಯ ದೃಢವಿಶ್ವಾಸ

ಈಗ, ಅಂಕೆ ಸಂಖ್ಯೆಗಳು ಏನೂ ಹೇಳುವುದಿಲ್ಲವೆನ್ನಲಾದೀತೆ?

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡ

ರಿಜಿಸ್ಟರ್ಡ್ ಆಫೀಸ್: ಮಂಗಳೂರು.
ಆಡಳಿತ ಕಛೇರಿ: ಬೆಂಗಳೂರು

ಪ್ರಸಂಚದಾದ್ಯಂತ ಪ್ರತಿನಿಧಿಗಳು
239 ಶಾಖೆಗಳು

ದಕ್ಷಿಣ ಭಾರತದಲ್ಲೇ ಪ್ರಮುಖ ಬ್ಯಾಂಕು

CB-107 Kan.

ನವಯುಗ

ವರುಷ	ಉಡುಪಿ	ವಾರ
೪೩	೪-೬-೧೯೬೪	೪೦

ನೆಹರೂ ಉತ್ತರಾಧಿಕಾರಿ

ಪಂಡಿತ ಜವಾಹರಲಾಲ ನೆಹರುರವರು ಅನಿರೀಕ್ಷಿತವಾಗಿ ನಮ್ಮಿಂದ ಸದಾ ಕಾಲಕ್ಕೆ ಅಗಲಿ ಹೋದುದರಿಂದ ದೇಶದಲ್ಲಿ ಮಾತ್ರವಲ್ಲ ಇಡಿಯ ಪ್ರಪಂಚದಲ್ಲಿಯೇ ಕುತೂಹಲವೊಂದು ಎದ್ದಿತ್ತು. ತನ್ನ ಜೀವಿತಾವಧಿಯಲ್ಲಿ ತನ್ನ ಉತ್ತರಾಧಿಕಾರಿಯೊಬ್ಬನನ್ನು ಹೆಸರಿಸುವ ಗೋಜಿಗೆ ಹೋಗದ ನೆಹರು ಕಾಂಗ್ರೆಸ್ ಪಕ್ಷವು ಯೋಗ್ಯನಾದವನನ್ನೇ ಆಯ್ದುಕೊಳ್ಳುವುದು ಎಂದು ವಿಶ್ವಾಸ ಪ್ರಕಟಿಸಿದ್ದರು. ಮೂರು ದಿನಗಳು ತೂಗುಯ್ಯಾಲೆಯಲ್ಲಿ ಕುಳಿತಿದ್ದ ಈ ಉತ್ತರಾಧಿಕಾರಿಯ ಹೂಮಾಲೆಯು ಲಾಲ ಬಹದೂರ ಶಾಸ್ತ್ರಿಯವರ ಕೊರಳಿಗೆ ಅವಿರೋಧವಾಗಿ ಬಿದ್ದುದರಿಂದ ಮುಂದಾರು ಎಂಬ ಪ್ರಶ್ನೆ ಸದ್ಯಕ್ಕೆ ಅಡಗುವಂತಾಯಿತು. ಶ್ರೀ ಶಾಸ್ತ್ರಿಯವರು ದೇಶದ ತುಂಬ, ವಿದೇಶಗಳಲ್ಲಿ ಕೂಡ ಸಾಕಷ್ಟು ಪರಿಚಿತರಾದವರು; ನೆಹರೂರವರ ಆಪ್ತರಲ್ಲಿ ಅಗ್ರಗಣ್ಯರು; ನೆಹರು ಸಿದ್ಧಾಂತಗಳಲ್ಲಿ ಅನನ್ಯ ಆಸ್ಥೆಯಿರುವವರು. ನೆಹರುರವರ ಧೈಯಗಳನ್ನು ಅರಿತುಕೊಂಡು ಖಾತೆರಹಿತ ಮಂತ್ರಿಯಾಗಿದ್ದಾಗ, ಅವರಿಗೆ ಸಹಾಯ ಸಲ್ಲಿಸಿದವರು. ಭಾರತ ರತ್ನ ಪಂಡಿತ ನೆಹರು ತೋರಿಸಿದ ದಾರಿಯಲ್ಲಿ ಭಾರತ ಪ್ರಜೆಗಳನ್ನು ಮುನ್ನಡೆಸಲು ಶಾಸ್ತ್ರಿಯವರು ಸರ್ವಸಮರ್ಥರು.

ದಿವಂಗತ ಪ್ರಧಾನಿ ನೆಹರು ಮತ್ತವರ ಪುತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಹೇಳಿರುವಂತೆ, ಪ್ರಧಾನಿ ಪದವನ್ನು ನಿರ್ವಹಿಸುವ ಅರ್ಹತೆ, ಸಾಮರ್ಥ್ಯವಿರುವ ಹಿರಿಯ ರಾಜಕಾರಣಿಗಳು ಭಾರತದಲ್ಲಿ—ಕಾಂಗ್ರೆಸ್ ಪಕ್ಷದಲ್ಲಿ—ಹಲವರಿದ್ದಾರೆಂಬುದು ನಿಜ. ಇಂತಹ ದಕ್ಷ ವ್ಯಕ್ತಿಗಳಲ್ಲಿ ಶ್ರೀ ಮುರಾರ್ಜಿ ದೇಸಾಯಿಯವರೂ ಒಬ್ಬರು. ತನ್ನನ್ನು ಜನತೆ ಆ ಹುದ್ದೆಗೆ ಅರ್ಹನೆಂದು ಬಗೆಯುವುದಾದರೆ, ತಾನು ಪ್ರಧಾನಿ ಸ್ಥಾನಕ್ಕೆ ಸ್ಪರ್ಧಿಸಲು ಹಿಂಜರಿಯುವುದಿಲ್ಲವೆಂದಿದ್ದ ಅವರು ಅವಿರೋಧ ಚುನಾವಣೆಗೆ ತನ್ನ ಒಪ್ಪಿಗೆಯನ್ನು ನೀಡಿದುದು ಮಹತ್ವದ ಸಂಗತಿ. ಪಕ್ಷದ ಶಿಸ್ತುವಂತ ಸದಸ್ಯರೆಂದು ಮುರಾರ್ಜಿ ಹೆಸರಾದವರು. ಪಕ್ಷದ ಆದೇಶಗಳನ್ನು ಚಾಚೂ ತಪ್ಪದೆ ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿರುವವರು. ಅವರು ಸದ್ಯ ಸ್ಪರ್ಧೆಯಿಂದ ಹಿಂದೆ ನಿಂತು ಶಾಸ್ತ್ರಿಯವರನ್ನೇ ನಾಯಕ ಸ್ಥಾನಕ್ಕೆ ಸೂಚಿಸಿರುವುದು ಗಣನೀಯ. ದೇಸಾಯಿಯವರ ಈ ಚಾತುರ್ಯ ಅಥವಾ ಕೃತಿ ಅವರ ಗೌರವವನ್ನು ಹೆಚ್ಚಿಸಿದೆಯೆಂದರೆ ತಪ್ಪಲ್ಲ. ನೆಹರು ಉತ್ತರಾಧಿಕಾರಿಗಳ ಮಾಲೆಯಲ್ಲಿ ಶ್ರೀ ಜಗಜ್ಜೀವನರಾಮರ ಹೆಸರೂ ಕೇಳಿ ಬರುತಿತ್ತು. ಅವಕಾಶವೊದಗಿದಾಗ ಅವರೂ ಪ್ರಸಂಗದಲ್ಲಿ ತಲೆ ಹಾಕತೊಡಗಿದರು. ಅದರೆ, ಪರಿಶಿಷ್ಟ ಜನಾಂಗಗಳ ಪ್ರತಿನಿಧಿಗಳ ಬೆಂಬಲವಿದೆಯೆಂದು ಹೇಳಿ ತನ್ನ ತಲೆ ನುಸುಳಿಸಲೆತ್ನಿಸಿದುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಪಾರ್ಲಿಮೆಂಟ್ ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ನಿರ್ಧಾರ ಮಾಡುವವರು ಬರೇ ಒಂದು ಕೋಮಿನವರಲ್ಲ. ಜಾತ್ಯತೀತತೆಗೆ ಹೆಸರು ಪಡೆಯಬೇಕಾದ ಭಾರತದಲ್ಲಿ ಅದರ ತಳಹದಿಯಲ್ಲಿ ಕಾಂಗ್ರೆಸಿಗರೊಬ್ಬರು ಮುಂದೆ ಬರುವುದು ನ್ಯಾಯವೂ ಅಲ್ಲ. ತಾತ್ಕಾಲಿಕ ಪ್ರಧಾನ ಮಂತ್ರಿಯಾಗಿರುವ ಶ್ರೀ ಗುಲ್ಜಾರೀಲಾಲನಂದಾ ಅವರು ಇಷ್ಟರಿಂದಲೇ ತೃಪ್ತರಾಗಿದ್ದಾರೆ. ಅವರು ಪ್ರಧಾನ ಮಂತ್ರಿಯಾಗುವ ಆಶೆಯನ್ನು ಇಟ್ಟುಕೊಂಡಿಲ್ಲ. ಅದೇನೇ ಇರಲಿ, ಇವರೆಲ್ಲರೂ ಶಾಸ್ತ್ರಿಯವರನ್ನು ಒಮ್ಮತದಿಂದ ನೆಹರೂ ಉತ್ತರಾಧಿಕಾರಿಯಾಗಿ ಆಯ್ದುಕೊಳ್ಳುವಲ್ಲಿ ನೆರವಿತ್ತುದು ಪ್ರಶಂಸಾರ್ಹ. ಜಗತ್ತಿನ ದೃಷ್ಟಿಯಲ್ಲಿ ಇದೊಂದು ಅಪೂರ್ವ ಸನ್ನಿವೇಶ.

ಕಾಂಗ್ರೆಸ್ ಸಂಸ್ಥೆಯು ಪಂಡಿತ ನೆಹರುರವರ ವೈಯಕ್ತಿಕ ಶಕ್ತಿಯಿಂದಾಗಿ ಶಿಸ್ತುಬದ್ಧವಾಗಿದೆ; ನೆಹರೂ ನಂತರ ಕಾಂಗ್ರೆಸಿನಲ್ಲಿ ಅಧಿಕಾರಕ್ಕಾಗಿ ಯಾದವೀಕಲಹ ಹುಟ್ಟುವುದು; ಶಿಥಿಲತೆ ತಲೆದೋರುವುದು, ಪಕ್ಷವು ಛಿನ್ನವಿಚ್ಛಿನ್ನವಾಗುವುದು ಎಂದು ಮುಂತಾದ ಉದ್ಗಾರಗಳು ಒಂದೊಮ್ಮೆ ಹೊರಟಿದುವು. ಪಕ್ಷದೊಳಗೆ ಕೆಲವೊಮ್ಮೆ ನಡೆಯುತ್ತಿದ್ದ ಹೋರಾಟಗಳೂ ಇದನ್ನು ಸಮರ್ಥಿಸುವಂತಿದ್ದುವು. ನೆಹರೂ ನಿಧನದಿಂದ ಕಾಂಗ್ರೆಸ್ಸು ತನ್ನ ಸರ್ವ ಸಮರ್ಥ ನಾಯಕಮಣಿಯನ್ನು ಕಳೆದುಕೊಂಡಿತು ನಿಜ; ಅದರ ಜತೆಗೆ ಪಕ್ಷದ ಒಕ್ಕಟ್ಟನ್ನುಳಿಸುವ ದೃಢನಿರ್ಧಾರವನ್ನು ಮಾಡಿದ್ದು ಸತ್ಯ. ಈ ಬಗೆಯ ಅಚಲ ನಿರ್ಧಾರದಿಂದ ತನ್ನನಾಯಕನನ್ನು ಅವಿರೋಧವಾಗಿ ಆರಿಸಿದ ಕಾಂಗ್ರೆಸ್ಸು ಸತ್ ಪರಂಪರೆಯೊಂದನ್ನು ನಿರ್ಮಿಸಿದೆ. ಅದರಲ್ಲೂ ನೆಹರೂರವರ ಅತಿನಿಕಟ ವರ್ತಿಗಳನ್ನೇ ಅವರ ಉತ್ತರಾಧಿಕಾರಿಯಾಗಿ ಆಯ್ದು ಕಾಂಗ್ರೆಸ್ಸು ತನ್ನ ನೆಹರು ನಿಷ್ಠೆಯೊಡನೆ ದೇಶದ ಕಡೆಗೆ ತನ್ನ ಕರ್ತವ್ಯ ದೃಷ್ಟಿಯನ್ನೂ ವ್ಯಕ್ತಪಡಿಸಿದೆ. ಲಾಲ ಬಹದೂರ ಶಾಸ್ತ್ರಿಯವರ ಆಯ್ಕೆಯಿಂದ ನೆಹರೂ ಸಿದ್ಧಾಂತಗಳೂ ತತ್ವಗಳೂ ನೀತಿಗಳೂ ಮುಂದೆಯೂ ಮುಂದುವರಿಯುವುವೆಂದು ದೇಶೀಯರೂ ವಿದೇಶಿಯರೂ ಒಂದಾಗಿ ನಂಬಿದ್ದಾರೆ. ಜನತೆಯ ನಿರೀಕ್ಷೆ ಸುಳ್ಳಾಗಲಾರದು.

ಭುವನೇಶ್ವರ ಕಾಂಗ್ರೆಸ್ ಅಧಿವೇಶನಾನಂತರ ಲಾಲ ಬಹದೂರ ಶಾಸ್ತ್ರಿಯವರನ್ನು ನೆಹರು ಖಾತೆರಹಿತ ಮಂತ್ರಿಯಾಗಿ ನೇಮಿಸಿ ತನ್ನ ಕೆಲಸ ಮಾಡುವಂತೆ ಅಂದಿದ್ದರು. ನೆಹರುರವರ ಆ ಆಜ್ಞೆ ಇಂದು ಸತ್ಯವಾಗಿ ಪರಿಣಮಿಸಿದೆ. ಶಾಸ್ತ್ರಿಯವರ ಬಗ್ಗೆ ನೆಹರುರವರು 'ಶ್ರೇಷ್ಠ ಪ್ರಾಮಾಣಿಕರು, ಸದಸದ್ವಿವೇಕಿಗಳು ಮತ್ತು ಪರಿಶ್ರಮಿಗಳು' ಎಂದಿದ್ದರು ಈ ಮುಪ್ಪುರಿಯ ತ್ರಿವೇಣಿಯೇ ಶಾಸ್ತ್ರಿಯವರ ಜನಪ್ರಿಯತೆಗೆ ಕಾರಣವಾಗಿದೆ. ಬಡ ಕುಟುಂಬವೊಂದರಲ್ಲಿ ಅಧ್ಯಾಪಕರೊಬ್ಬರ ಪುತ್ರನಾಗಿ ಹುಟ್ಟಿದ ಶಾಸ್ತ್ರಿ ಸ್ವಯಂ ನಿರ್ಮಿತ ವ್ಯಕ್ತಿ. ಶ್ರೀ ನೆಹರು, ಆಚಾರ್ಯ ನರೇಂದ್ರದೇವ, ರಫಿ ಅಹಮ್ಮದ ಕಿದ್ವಾಯಿ, ಪುರುಷೋತ್ತಮದಾಸ ಟಂಡನ ಮೊದಲಾದವರ ಸಂಪರ್ಕಪಡೆದು ಅಂತಹರೊಡನೆ ಕೆಲಸ ಮಾಡಿ, ಕರ್ತವ್ಯ ಪಾಲನೆಯಿಂದಲೇ ಮೇಲ್ಮೆ ಹೊಂದಿದವರು, ಕಾಂಗ್ರೆಸ್ ಸಂಘಟನೆಯಲ್ಲಿ ಇವರು ತೋರಿದ ಸಾಹಸ ಮತ್ತು ಪಡೆದ ಯಶಸ್ಸು ಇವರನ್ನು ಮತ್ತಷ್ಟು ಜನಪ್ರಿಯಗೊಳಿಸಿತು. ಕಾಂಗ್ರೆಸಿನಲ್ಲಿ ಶಾಂತಿ ಸ್ಥಾಪಕರಾಗಿಯೇ ಉಳಿದ ಶ್ರೀ ಶಾಸ್ತ್ರಿಯವರು ರಾಜಕಾರಣದಲ್ಲಿ ಬಹಳಷ್ಟು ಪಳಗಿದವರು. ನೆಹರುರವರಂತೆಯೇ ರಾತ್ರಿ ಬಹು ಸಮಯದ ವರೆಗೆ ಕಾರ್ಯಮಗ್ನರಾಗಿ ಮುಂಜಾನೆ ಬೇಗನೇ ಜಾಗ್ರತರಾಗುವವರು ಇವರು. ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಿ ಕಾರಾಗೃಹವಾಸಾದಿ ಸಂಕಷ್ಟಗಳನ್ನುಂಡ ಶಾಸ್ತ್ರಿಯವರು ಅಂದು ಪ್ರಾದೇಶಿಕ ವ್ಯಕ್ತಿಯಾಗಿಯೇ ಉಳಿದಿದ್ದರೂ ೧೯೫೭ರ ನಂತರ ಅಖಿಲ ಭಾರತ ವ್ಯಕ್ತಿಯಾಗಿದ್ದಾರೆ. ತಮ್ಮ ಕಾರ್ಯ ತತ್ಪರತೆ, ಕರ್ತವ್ಯ ಪರಾಯಣತೆ, ಪ್ರತ್ಯುತ್ಪನ್ನಮತಿತ್ವ ಮತ್ತು ಚತುರತೆಗಳಿಂದ ಅತಿ ಜನಪ್ರಿಯರಾಗಿದ್ದಾರೆ. ಇಂತಹ ಸಶಕ್ತ ಹಾಗೂ ದೇಶ ಪ್ರೇಮಿಯು ಆಧುನಿಕ ಭಾರತದ ಮಹಾಶಿಲ್ಪಿಯ ರಿಕ್ತ ಸ್ಥಾನವನ್ನೇರುವುದರಿಂದ ತೊಡಗಿರುವ ಮಹಾ ಕಾರ್ಯಗಳು ನಿರ್ವಿಘ್ನವಾಗಿ ಮುಂದುವರಿದು, ಭವ್ಯ ಭಾರತದ ನಿರ್ಮಾಣವು ಭರದಿಂದ ಸಾಗುವುದು ಎಂದು ಆಶಿಸ ಬಹುದು.

ಶ್ರೀ ಲಾಲಬಹದೂರ ಶಾಸ್ತ್ರಿಯವರ ಆಯ್ಕೆಯನ್ನು ಅವಿರೋಧವಾಗಿ ಮಾಡುವಲ್ಲಿ ನೆರವಾದ ಪಾರ್ಲಿಮೆಂಟ್ ಪಕ್ಷ ಮತ್ತು ಕಾರ್ಯಕಾರಿಣಿಯ ಸದಸ್ಯರನ್ನು ಜಗತ್ತಿಗೆ ಜಗತ್ತು ಅಭಿನಂದಿಸುತ್ತಿದೆ. ಕಾಂಗ್ರೆಸ್ ಪಕ್ಷವನ್ನು ಸಾನಬಲದಿಂದ ಒಂದಾಗಿ ಕಟ್ಟಿದ ಅಧ್ಯಕ್ಷ ಚಕ್ರವರ್ತಿ ಕಾಮರಾಜರು ಯಶಸ್ವೀ ಪ್ರಯತ್ನ ಮಾಡಿದುದಕ್ಕೆ ಅವರನ್ನು, ಪಕ್ಷದ ನಾಯಕರಾದ ಶಾಸ್ತ್ರಿಯವರನ್ನು ಎಲ್ಲರೂ ಅಭಿನಂದಿಸಿ, ಈ ಸಮ್ಮಿಲಿತ ಪ್ರಯತ್ನ ಮುಂದಿನ ಕಾರ್ಯಸಾಧನೆಗೆ ನಾಂದಿಯಾಗಲೆಂದು ಹಾರೈಸುತ್ತಾರೆ.

ನಾಯಕಮಣಿಗೆ ಶ್ರದ್ಧಾಂಜಲಿ

ವಿಶ್ವ ನಾಯಕರಲ್ಲಿ ಮಾನನೀಯ ಸ್ಥಾನ ಗಳಿಸಿದ ಜವಾಹರಲಾಲರ ಚಿತಾಭಸ್ಮವನ್ನು ಅಲಹಾಬಾದದ ತ್ರಿವೇಣಿ ಸಂಗಮದಲ್ಲಿ ತಾ. ೮ರಂದು ವಿಸರ್ಜಿಸಲಾಗುವುದು. ಅವರ ಅಪೇಕ್ಷೆಯಂತೆ ಅವರಿಗೆ ಪ್ರಿಯವಾಗಿದ್ದ ಪರ್ವತ ಪ್ರದೇಶ ಮತ್ತು ಗದ್ದೆಗಳಲ್ಲಿಯೂ ಚೆಲ್ಲಲಾಗುವುದು. ಅಲ್ಲದೆ ವಿವಿಧ ರಾಜ್ಯಗಳ ಮುಖ್ಯ ಮಂತ್ರಿಗಳೂ ಮೊಹರು ಹಾಕಿದ ಕರಂಡಕದಲ್ಲಿ ಚಿತಾಭಸ್ಮವನ್ನು ತಂತಮ್ಮ ರಾಜ್ಯಗಳಿಗೊಯ್ಯುವರು. ಇದನ್ನು ಎಲ್ಲಿ ವಿಸರ್ಜಿಸಬೇಕೆಂಬುದನ್ನು ಅವರೇ ನಿರ್ಧರಿಸಿಕೊಳ್ಳುವರು.

ಭೋಜರಾಜ

ನೆಹರುರವರು ಬುದ್ಧನ ಅಪರಾವತಾರ. ಗೌತಮ ಬುದ್ಧನು ಉಪದೇಶಿದ ಪಂಚಶೀಲವನ್ನು ಮೊದಲು ದೇಶದಲ್ಲಿ ಆಚರಣೆಗೆ ತಂದವನು ಸಾಮ್ರಾಟ ಅಶೋಕನು ಇದೇ ಪಂಚಶೀಲದಿಂದ ಜಗತ್ತನ್ನೇ ಗೆದ್ದವರು ಪಂಡಿತ ನೆಹರು,

ಅಯ್ಯೂಬಖಾನ್

ನೆಹರುರಂತಹ ವ್ಯಕ್ತಿ ಅಪರೂಪಕ್ಕೆ ಜನ್ಮ ತಳೆಯುತ್ತಾರೆ. ಅವರು ಮಹಾ ವ್ಯಕ್ತಿಯಾಗಿದ್ದರು. ಭಾರತಕ್ಕೆ ಹದಿನೇಳು ವರ್ಷಗಳ ಕಾಲ ಸ್ಥಿರವಾದ ಆಡಳಿತವನ್ನು ಒದಗಿಸಿದ್ದು ಅವರ ಮಹತ್ ಸಾಧನೆ. ಈ ಮೂಲಕ ಅವರು ಭಾರತಕ್ಕೆ ಪ್ರಗತಿ ಹಾಗೂ ಅಭಿವೃದ್ಧಿ ಸಾಧಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ನೆಹರುರ ಉತ್ತರಾಧಿಕಾರಿಯು ಅವರಂತೆಯೇ ಪಾಕಿಸ್ತಾನದೊಂದಿಗೆ ಸಹಜೀವನ ಹಾಗೂ ಸ್ನೇಹಮಯ ಸಂಬಂಧದ ಧೋರಣೆ ಮುಂದುವರಿಸಿಕೊಂಡು ಬರಬೇಕು.

ಅರ್ಲ್ ಆಟ್ಲಿ

ಪೂರ್ವ ಪಶ್ಚಿಮಗಳ ಸಂಗಮವನ್ನು ನಿರ್ಮಿಸುವ ಕಾರ್ಯಕ್ಕೆ ನೆಹರುಗಿಂತ ಯೋಗ್ಯ ವ್ಯಕ್ತಿ ಇನ್ನೊಬ್ಬನಿಲ್ಲ. ನೆಹರೂರ ವೈಶಿಷ್ಟ್ಯವೆಂದರೆ, ಅವರ ಅಗಾಧವಾದ ಸಹನೆ. ಅವರು ಜಗತ್ತಿನ ಅತಿ ದೊಡ್ಡ ಮುತ್ಸದ್ದಿ.

ಸಿರಿಮಾವೊ

ನೆಮ್ಮದಿಯನ್ನು ಕಳೆದುಕೊಂಡಿರುವ ಇಂದಿನ ಜಗತ್ತಿನಲ್ಲಿ ನಮಗೆಲ್ಲ ಮಾರ್ಗದರ್ಶನ ಮಾಡಲು ನೆಹರು ಇನ್ನಿಲ್ಲವಾದರು. ನೆಹರು ಚಿರಂಜೀವಿಗಳಲ್ಲಿ ತಮ್ಮ ಸ್ಥಾನ ಪಡೆದವರು. ಅವರ ಶಾಂತಿ ಹಾಗೂ ಮಾನವ ಕಲ್ಯಾಣ ತತ್ವಗಳನ್ನು ಕಾರ್ಯ ರೂಪದಲ್ಲಿ ಅನುಸರಿಸುವುದೇ ನಾವ ವರಿಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ.

ಲೀ ಕು ಅನ ಯು

ಭಾರತ, ಏಶ್ಯಾ, ಆಫ್ರಿಕಾ ಹಾಗೂ ಜಗತ್ತಿನ ಕಲ್ಯಾಣ ಹಾಗೂ ಸುಭಿಕ್ಷಕ್ಕಾಗಿ ತಮ್ಮ ಸರ್ವಸ್ವವನ್ನೂ ಮೀಸಲಾಗಿರಿಸಿದ ನೆಹರೂರ ಹೆಸರು ಅವರ ತತ್ವಗಳಂತೆ ದೇದೀಪ್ಯಮಾನವಾಗಿ ಜಗತ್ತಿನ ಇತಿಹಾಸದಲ್ಲಿ ಉಳಿಯುವುದು.

ಡಾ| ರಾಧಾಕೃಷ್ಣನ್

ಜವಾಹರಲಾಲರು ಕೇವಲ ಭಾರತ ವರ್ಷದ ಸೇವಕರಾಗಿರಲಿಲ್ಲ, ಅದರೆ ಬಳಲುತ್ತಿರುವ ಮಾನವ ಜನಾಂಗದ ಸೇವಕರಾಗಿದ್ದರು, ಅಣುಶಕ್ತಿ ವಿಜ್ಞಾನದಲ್ಲಿ ಸಾಧಿಸಲಾದ ಅದ್ಭುತ ಪ್ರಗತಿಯನ್ನು ಕಂಡು ಅವರು ಮಾನವನು ಹೋರಾಡಬೇಕಾದ ಮಹಾ ಶತ್ರುವೆಂದರೆ ಯಾವುದೊಂದು ರಾಷ್ಟ್ರವಲ್ಲ; ಅದರೆ ಯುದ್ಧವೇ ಮಹಾ ಶತ್ರುವಾಗಿದೆ ಎಂದು ಭಾವಿಸಿದ್ದರು. ಆದುದರಿಂದ ಶಾಂತಿಯುತ ಸಹಜೀವನ, ಸಹಕಾರ ಮತ್ತು ಅಲಿಪ್ತ ನಿಲುಮೆ ಮುಂತಾದ ತಮ್ಮ ತತ್ವಗಳಿಂದ ರಾಷ್ಟ್ರ ರಾಷ್ಟ್ರಗಳಲ್ಲಿ ಒಳ್ಳೆ ತಿಳುವಳಿಕೆಯನ್ನು ಮೂಡಿಸಲು ಸರ್ವವಿಧದಿಂದ ಯತ್ನಿಸುತಿದ್ದರು

ಡೀನ್ ರಸ್ಕ್

ನೆಹರೂ ನಿಧನವು ಮಾನವ ಕುಲಕ್ಕೆ ಅದ ಹಾನಿ. ಪ್ರಧಾನಿ ನೆಹರು ಸ್ವಾತಂ

ಅಲ್ಲಲ್ಲಿಯ ಸುದ್ದಿ ಸಾರ

ಡಾ| ಎ. ವಿ. ಬಾಳಿಗರ ನಿಧನ— ಭಾರತದ ಸುಪ್ರಸಿದ್ಧ ಡಾಕ್ಟರರಲ್ಲಿ ಒಬ್ಬರಾಗಿದ್ದ ಎ. ವಿ. ಬಾಳಿಗರು ಕಳೆದ ತಿಂಗಳ ೧೯ನೆ ತಾರೀಕಿನಂದು ಲಂಡನ್ನಿನಲ್ಲಿ ಹೃದಯಾಘಾತದಿಂದ ನಿಧನರಾದರು. ಡಾ| ಬಾಳಿಗರು ವಿಯನ್ನಾದಲ್ಲಿ ನಡೆದ ಸರ್ಜನರ ಸಮ್ಮೇಳನದಲ್ಲಿ ಭಾಗವಹಿಸಲು ತೆರಳಿದ್ದು ಅಲ್ಲಿಂದ ಲಂಡನಿಗೆ ಖಾಸಗಿ ಸಂದರ್ಶನದ ಮೇಲೆ ಹೋಗಿದ್ದರು. ಕೇವಲ ೬೦ ವರ್ಷ ತುಂಬಿದ ಡಾ| ಬಾಳಿಗರವರು ತನ್ನ ವೃತ್ತಿಯಲ್ಲಿ ಅದ್ವಿತೀಯ ಯಶಸ್ಸು ಗಳಿಸಿದ್ದರು. ಸೋವಿಯತ್—ಭಾರತ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ ಇವರು ಸಲ್ಲಿಸಿದ ಸೇವೆಯು ಚಿರಸ್ಮರಣೀಯ. ಇತ್ತೀಚಿನ ವರ್ಷಗಳಲ್ಲಿ ಇವರು ಕಾಂಗ್ರೆಸಿನ ಸಕ್ರಿಯ ಸದಸ್ಯರೂ ಆಗಿದ್ದರು.

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದ ಡಾ| ಬಾಳಿಗರು

ಶ್ರೀ ಮಾನವೀಯ ಪ್ರತಿಷ್ಠೆ, ನ್ಯಾಯ ಸತ್ಯ ಹಾಗೂ ಶಾಂತಿಯ ಆದರ್ಶಗಳ ಪ್ರತೀಕವೆನಿಸಿದ್ದರು.

ಗಡಿನಾಡ ಗಾಂಧಿ

ಪ್ರಧಾನಿ ನೆಹರು ವಿಶ್ವ ಶಾಂತಿ ಪ್ರೇಮ ಮತ್ತು ಸೌಹಾರ್ದತೆಯ ಸಂಕೇತವಾಗಿದ್ದರು. ಜಾತ್ಯತೀತ ತತ್ವನಿಷ್ಠರಾಗಿದ್ದ ಅವರಲ್ಲಿ ಯಾವುದೇ ರೀತಿಯ ಜಾತೀಯ ಮತ್ತು ಕರ ಸಂಕುಚಿತ ಭಾವನೆಗೆ ಸ್ವಲ್ಪವೂ ಎಡೆಯಿರಲಿಲ್ಲ.

ದಲಾಯ್ ಲಾಮಾ

ಜಗತ್ತು ಒಬ್ಬ ದೊಡ್ಡ ರಾಜಕಾರಣಿಯನ್ನು ಕಳೆದುಕೊಂಡಿದೆ; ಭಾರತವು ತನ್ನ ಶ್ರೇಷ್ಠ ನಾಯಕನನ್ನು ಕಳೆದುಕೊಂಡಿದೆ. ಆದರೆ, ಟಿಬೇಟವು ತನ್ನೊಬ್ಬ ಪರಮ ಮಿತ್ರನನ್ನು ಕಳೆದುಕೊಂಡಿತು.

ಐಸನ್ ಹಾವರ್

ಜಾಗತಿಕ ಶಾಂತಿಯ ಬಗ್ಗೆ ಪ್ರಧಾನ ಮಂತ್ರಿ ನೆಹರೂರಿಗಿದ್ದ ಕಳಕಳಿ ಹಾಗೂ ನಿಷ್ಠೆಯನ್ನು ಕುರಿತು ಯಾರೂ ಸಂದೇಹಪಡಲಾರರು.

ಲಿಂಡನ್ ಜಾನ್ಸನ್

ಯುದ್ಧವೇ ಇಲ್ಲದ ಜಗತ್ತಿನ ನಿರ್ಮಾಣವೇ ನೆಹರೂರಿಗೆ ಅತ್ಯಂತ ಯೋಗ್ಯ ಸ್ಮಾರಕ.

ಚಾರ್ಲ್ಸ್ ಡಿಗಾಲೆ

ಪ್ರಜಾಸತ್ತೆಯ ಸೇವೆ ಸಾಮಾಜಿಕ ಪ್ರಗತಿ ಮತ್ತು ಶಾಂತಿಗಳಿಗೆ ತಮ್ಮ ಜೀವನವನ್ನು ಧಾರೆಯೆರೆದ ಶ್ರೀ ನೆಹರೂ ಗುಣಗಳು ಭಾರತ ಮತ್ತು ಜಗತ್ತಿನ ದೈವದ ಮೇಲೆ ಅಳಿಸಲಾಗದಂತಹ ಅಚ್ಚೊತ್ತಿವೆ.

ನಿಕಟಾ ಕ್ರುಶ್ಚೇವ್

ನೆಹರು ರಶ್ಯದ ಅತ್ಯಂತ ಶ್ರೇಷ್ಠ ಮಿತ್ರ.

ಚೌ ಎನ್ ಲಾಯ್

ಶ್ರೀ ಜವಾಹರಲಾಲರ ನಿಧನದ ವಾರ್ತೆ ಕೇಳಿ ನನಗೆ ದುಃಖವಾಗಿದೆ.

ಗಮಾಲ್ ನಸ್ಸೇರ್

ಈಜಿಪ್ತ್ ಜನತೆಯ ನಿಷ್ಠಾವಂತ ಸ್ನೇಹಿತರಾದ ನೆಹರೂ ಸಮಗ್ರ ಮಾನವೀಯತೆಗೆ ದಾರಿದೀಪವಾಗಿದ್ದರು.

ವಿನೋಬಾ

ದ್ವೇಷ, ಅಸೂಯೆಗಳಿಂದ ಮುಕ್ತನಾಗಿದ್ದ ಇಂಥ ರಾಜಕಾರಣಿಯನ್ನು ನಾನು ಬೇರೆಲ್ಲೂ ಕಂಡಿಲ್ಲ.

ಮುಂಬಯಿಯಲ್ಲಿಯೇ ಬಹುಕಾಲದಿಂದ ನೆಲಸಿದರು. ಇವರು ೧೯೫೫ರಲ್ಲಿ ಚೀನಾವನ್ನೂ ಸಂದರ್ಶಿಸಿ ಅಲ್ಲಿ ಎರಡು ಬಾರಿ ಪ್ರಧಾನ ಲಾಯರನ್ನೂ ಕಂಡಿದ್ದರು. ಮುಂಬಯಿ ಮಹಾನಗರದ ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಗಳೊಡನೆ ಇವರ ಸಂಪರ್ಕ ನಿಕಟವಾಗಿತ್ತು. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಅನೇಕ ಶಿಕ್ಷಣ ಸಂಸ್ಥೆಗಳಿಗೆ ಇವರು ಉದಾರ ಹಣದ ನೆರವನ್ನು ನೀಡಿದ್ದರು. ಡಾ| ಬಾಳಿಗರ ನಿಧನವು ಆಕಸ್ಮಿಕ ಮತ್ತು ಅಪಾರ ಹಾನಿಕಾರಕ.

ದಿವಂಗತ ಕಳೇವರವನ್ನು ಲಂಡನ್ನಿನಿಂದ ಮುಂಬಯಿಗೆ ತಂದು ಅಂತ್ಯ ಸಂಸ್ಕಾರಗಳನ್ನು ನಡೆಸಲಾಯಿತು. ಇವರ ಮಡದಿ ಮತ್ತು ಕುಟುಂಬ ಹಾಗೂ ಇಷ್ಟಮಿತ್ರರ ದುಃಖದಲ್ಲಿ 'ನವಯುಗ'ವೂ ಸಹಭಾಗಿ. ಡಾ| ಬಾಳಿಗರ ಪವಿತ್ರಾತ್ಮ ಚಿರಶಾಂತಿ ಪಡೆಯಲಿ.

ನೆಹರೂರವರಿಗೆ ಉಡುಪಿ ಸಾರ್ವಜನಿಕರ ಶ್ರದ್ಧಾಂಜಲಿ:— ಕಳೆದ ತಾ 28ರಂದು ಉಡುಪಿ ರಥಬೀದಿಯಲ್ಲಿ, ಶ್ರೀ ನೆಹರೂ ನಿಧನದ ಬಗ್ಗೆ ಶ್ರದ್ಧಾಂಜಲಿಯನ್ನರ್ಪಿಸುವ ಸಾರ್ವಜನಿಕ ಸಭೆಯು ಶ್ರೀ ಓ. ರಂಗನಾಥ ಶ್ಯಾನುಭೋಗರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಟಿ. ಎ ಪೈಗಳು ಮಾತನಾಡುತ್ತಾ ಆ ಶೋಕದ ಸಂತರ ಲೋಕ ಶಾಂತಿಗಾಗಿ ದುಡಿದಂತಹ ವ್ಯಕ್ತಿತ್ವ ಶ್ರೀ ನೆಹರೂರವರನ್ನು ಬಿಟ್ಟರೆ ಬೇರೊಂದಿಲ್ಲವೆಂದರು. ಮುಂದುವರಿಸುತ್ತಾ ಅವರು ನೆಹರೂರವರ ಧ್ಯೇಯ, ಧೋರಣೆ ಹಾಗೂ ಅವರು ಸಾಧಿಸಿದ ಕಾರ್ಯಗಳನ್ನು ವಿವರಿಸಿದರು. ಸಭಿಕರ ಪರವಾಗಿ ಶ್ರೀಗಳಾದ ಮಧ್ವರಾಜ್, ಎಂ ಎಲ್ ಎ, ಕೆ ಕೆ. ಪೈ, ವಕೀಲ ಬಿ. ಪಿ. ಲೀಗೋ., ಡಾ| ಕೆ. ಎಲ್. ಐತಾಳ, ಎಸ್ ಎಲ್ ನಾರಾಯಣ ಭಟ್, ಮನ್ನಾ ಸಾಹೇಬ್ ಬಿ. ಎಸ್. ಲುವಿಸ್., ಎಂ. ಅನಂತಕೃಷ್ಣ ಮತ್ತು ಯು. ಗೋಪಾಲಕೃಷ್ಣ ಇವರು ಶ್ರದ್ಧಾಂಜಲಿಯನ್ನರ್ಪಿಸಿದರು. ಕೊನೆಯಲ್ಲಿ ಸಂತಾಪ ಸೂಚಕ ಗೊತ್ತುವಳಿ ಅಂಗೀಕರಿಸಿ ಮೌನ ಆಚರಿಸಲಾಯಿತು.

ಶಂಕು ಸ್ಥಾಪನೆ— ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನ್ನಿನ ಆಶ್ರಯದಲ್ಲಿ ಕ್ಷಯ ರೋಗಿಗಳ ಶುಶ್ರೂಷಾಲಯದ ಶಂಕು ಸ್ಥಾಪನಾ ಸಮಾರಂಭವು ಶ್ರೀ ಮಧ್ವರಾಜ, ಎಂ. ಎಲ್. ಎ ರವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರಿಂದ ನೆರವೇರಿತು. ಆರಂಭದಲ್ಲಿ ಡಾ| ಯು. ಕೆ. ಆಚಾರ್ಯರು ಸ್ವಾಗತಿಸಿದರು. ಎಸೋಸಿಯೇಶನ್ನಿನ ಕಾರ್ಯದರ್ಶಿ ಡಾ| ವೆಂಕಟಕೃಷ್ಣರು ಶುಭಕೋರಿ ಬಂದ ಸಂದೇಶಗಳನ್ನೋದಿದರು. ಎಸೋಸಿಯೇಶನಿನ ಅಧ್ಯಕ್ಷ ಡಾ| ವೈ ಆರ್. ಶೆಟ್ಟರು ಮೆಡಿಕಲ್ ರಿಲೀಫ್ ಎಸೋಸಿಯೇಶನ್ ಈ ಕಟ್ಟಡದ ಬಗ್ಗೆ ಹಣ ಸಂಗ್ರಹಿಸಿದೆಯೆಂದೂ, ಆವಶ್ಯವಾದ ಕೆಲವು ಸಲಕರಣೆಗಳನ್ನು ಸರಕಾರ ನೀಡಬೇಕೆಂದೂ ಹೇಳಿದರು. ಶಿರ್ವ ಪಂಚಾಯತಿನ ಬಗ್ಗೆ ಅಧ್ಯಕ್ಷ ಶ್ರೀ ಎಂ. ವೆಂಕಟ್ರಮಣ ಕಾಮತರು ಗ್ರಾಮೀಣ ಆವಶ್ಯಕತೆಗಳ ಮನವಿಯೊಂದನ್ನು ಮುಖ್ಯಮಂತ್ರಿಗರ್ಪಿಸಿದರು. ಮಾನ್ಯ ಮಂತ್ರಿಗಳು ಮಾತಾಡುತ್ತಾ ಈ ಶುಶ್ರೂಷಾಲಯಕ್ಕೆ ಸರಕಾರ ಸಾಧ್ಯವಾದ ಸಹಾಯ ನೀಡುವುದೆಂದು ತಿಳಿಸಿದರು. ಅಧ್ಯಕ್ಷರು ಮಾತಾಡುತ್ತಾ ಉಡುಪಿಯಲ್ಲಿ ನೀರಿನ ತೊಂದರೆಯನ್ನು ವಿವರಿಸಿ ನೀರ ಸರಬರಾಯಿ ಯೋಜನೆಯನ್ನು ಶೀಘ್ರ ನೆರವೇರಿಸಿ ಕೊಡಬೇಕಾಗಿ ಕೇಳಿ ಕೊಂಡರು ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರವರು ಶಿರ್ವ ಮೆಡಿಕಲ್ ರಿಲೀಫ್‌ನ ಈ ಕಾರ್ಯವನ್ನು ಪ್ರಶಂಸಿದರು. ಅಂತ್ಯದಲ್ಲಿ ಡಾ| ವೆಂಕಟಕೃಷ್ಣರವರು ಧನ್ಯವಾದ ಸಮರ್ಪಿಸಿದರು.

ಉಡುಪಿ ತಾಲೂಕು ಬೋರ್ಡಿನ ಶ್ರದ್ಧಾಂಜಲಿ— ಉಡುಪಿ ತಾಲೂಕು ಬೋರ್ಡಿನಲ್ಲಿ ಶ್ರೀ ನೆಹರೂರವರ ನಿಧನ ದುಃಖ ಸೂಚನಾರ್ಥವಾಗಿ ಬೋರ್ಡಿನ ವಿಶೇಷ ಸಭೆಯು ಅಧ್ಯಕ್ಷ ಶ್ರೀ ಮಧ್ವರಾಜರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ಯು. ಕೃಷ್ಣಾಚಾರ್ಯ, ಬಿ. ಬಿ. ಪಿ., ಎ. ಕೊರಗಪ್ಪ ಮತ್ತು ಸದಸ್ಯ ಮಹಾಬಲ ಶೆಟ್ಟಿ ಸಭಿಕರ ಪರವಾಗಿ ಮಾತಾಡಿದರು. ಸಂತಾಪ ಸೂಚಕ ಗೊತ್ತುವಳಿಯನ್ನು ಸ್ವೀಕರಿಸಲಾಯಿತು.

ಡಾಂಕೀಸ್ ಕ್ಲಬ್ ಕುರಿತು ಭಾಷಣ— ನಮಗೆ ಉಚ್ಚ ಪರಂಪರೆ ಇದೆಯಾದರೂ ನಮ್ಮಲ್ಲಿ ಅನೇಕ ತಪ್ಪುಗಳಿವೆ. ಅವುಗಳನ್ನು ನಾವು ತಿಳಿದುಕೊಂಡು, ಸರಿಪಡಿಸಿಕೊಳ್ಳಬೇಕು. ನೂರಾರು ಮಂದಿ ಕಷ್ಟಪಟ್ಟು ಒಳ್ಳೆಯ ಕೆಲಸ ಮಾಡುತ್ತಿದ್ದರಾದರೂ ಅವನ್ನು ಯಾರೂ ಗಮನಿಸುತ್ತಿಲ್ಲವೆಂದು ಶ್ರೀ ಟಿ. ಎ. ಪೈ ಅವರು ತಾವು ಆರಂಭಿಸಿರುವ "ಡಾಂಕೀಸ್ ಕ್ಲಬ್" ಕುರಿತು ಉಡುಪಿ ರೋಟೇರಿಯನ್ನರುಗಳ ತಾ. 19-5-64ರ ಸಾಪ್ತಾಹಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

"ಡಾಂಕೀಸ್ ಕ್ಲಬ್" ಬೇರೆ ಯಾವ ಸಂಸ್ಥೆಯೊಂದಿಗೂ ಸ್ಪರ್ಧೆ ನಡೆಸುವುದಿಲ್ಲವೆಂದೂ, ಜನರ ತಪ್ಪುಗಳನ್ನು ತಿದ್ದುವುದಕ್ಕೆ ಅದು ಶ್ರಮಿಸುವುದೆಂದೂ, ಶ್ರೀ ಪೈ ವಿವರಿಸಿದರು.

ಮಂಗಳೂರಿನಲ್ಲಿ ಡಾಂಕೀಸ್ ಕ್ಲಬ್ ಬಗ್ಗೆ ವಿಶೇಷ ಆಸಕ್ತಿ ಮೂಡಿದೆ. ಇದರಲ್ಲಿ ಪುರುಷರೂ ಸ್ತ್ರೀಯರೂ ಸದಸ್ಯರಾಗಬಹುದಾಗಿದೆ. ಯುವಕ ಯುವತಿಯರಿಗೆ ಹೆಚ್ಚಿನ ಪ್ರೋತ್ಸಾಹವಿದೆ, ಪ್ರತಿಯೊಬ್ಬ ಸದಸ್ಯನನ್ನೂ "ಡಾನ್" ಎಂದು ಕರೆಯಲಾಗುತ್ತದೆ.

ಶ್ರೀ ಟಿ. ಎ. ಪೈ ಯವರಂತವರು ಸಮಾಜದಲ್ಲಿರುವ ದೋಷಗಳನ್ನು ಬೆಳಕಿಗೆ ತಂದು ಸರಿಪಡಿಸ ಬೇಕೆಂದು ಸಭೆಯ ಅಧ್ಯಕ್ಷತೆ ವಹಿಸಿದ್ದ, ಉಪಾಧ್ಯಾಕ್ಷ ಶ್ರೀ ಕೆ ಕೆ. ಪೈ ನುಡಿದರು.

ಉಡುಪಿ ರೋಟರಿ ಕ್ಲಬ್— ಇಡೀ ಆಗ್ನೇಯ ಏಷ್ಯಾದಲ್ಲಿ ಯಾವತ್ತೂ ಸ್ವತಂತ್ರವಾಗಿ ಉಳಿದುಕೊಂಡಿರುವ ದೇಶವೆಂದರೆ ಥೈಲ್ಯಾಂಡ್ ಮಾತ್ರವೆಂದು ಥೈಲ್ಯಾಂಡಿನಿಂದ ಬಂದಿರುವ ವಿದ್ಯಾರ್ಥಿ ಶ್ರೀ ಎಸ್. ಸುಪೋಚನ ತಾ. 26-5-64ರಂದು ಉಡುಪಿಯಲ್ಲಿ ನುಡಿದರು. ಥೈಲ್ಯಾಂಡಿನಲ್ಲಿ ಜೀವನ ಮಟ್ಟ ಕೂಡ ಬಹಳ ಉತ್ತಮವಾಗಿದೆ ಎಂದು ಅವರು ಸ್ಥಳೀಯ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಉಪಾಧ್ಯಕ್ಷ ಶ್ರೀ ಕೆ. ಕೆ. ಪೈ ಅಧ್ಯಕ್ಷತೆ ವಹಿಸಿದ್ದರು.

ಈಚೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಎಂ. ಎ ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಶ್ರೀ ಸುಪೋಚನರವರನ್ನು ರೋಟೇರಿಯನ್ ಶ್ರೀಕರ ಎಲ್. ಭಂಡಾರಕರ್ ಸಭೆಗೆ ಪರಿಚಯ ಮಾಡಿಕೊಟ್ಟರು.

ಶ್ರೀ ಸುಪೋಚನಾ ಥೈಲ್ಯಾಂಡಿನ ನೃತ್ಯ ಪ್ರದರ್ಶಿಸಿ ಹಾಡುಗಳನ್ನು ಹಾಡಿ ಎಲ್ಲರ ಮೆಚ್ಚುಗೆಯನ್ನು ಗಳಿಸಿದರು.

ಆರಂಭದಲ್ಲಿ ಡಾ|| ಕೆ. ಮೋಹನದಾಸ ಪೈ ಯವರು ಮಾತನಾಡಿದರು. ಸಭೆಯು ಸಂತಾಪ ಸೂಚಕ ನಿರ್ಣಯವೊಂದನ್ನು ಅಂಗೀಕರಿಸಿತು

ಕುಂತೂರು— ತಾ. 28-5-64ರಂದು ಇಲ್ಲಿಯ ಪೇಟೆಯ ಎಲ್ಲಾ ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚಿ ನೆಹರೂರವರ ಮರಣದ ಬಗ್ಗೆ ಸಂತಾಪ ಸೂಚಿಸಿದರು. ಸ್ಥಳೀಯ ಬೋ. ಹಾ. ಎ. ಶಾಲೆಯಲ್ಲಿ ಸಂತಾಪ ಸೂಚಕ ಸಭೆ ಸೇರಿತು. ಅಧ್ಯಕ್ಷತೆಯನ್ನು ಶ್ರೀ ಪಿ. ದಾಮೋದರ ಪ್ರಭುಗಳವರು ವಹಿಸಿದ್ದರು. ಸಭೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ ರಾಮಕೃಷ್ಣ ಆಚಾರ್, ಶ್ರೀ ಬಿ. ನಾರಾಯಣ ಭಟ್ ಹಾಗೂ ಶ್ರೀ ಪಿ. ಶ್ರೀನಿವಾಸ ಪ್ರಭುಗಳು ಮಾತಾಡಿದರು. ಉಕ್ಕಿ ಬರುವ ದುಃಖವನ್ನು ತಡೆದು ಅಧ್ಯಕ್ಷರು ಮಾತನಾಡುತ್ತಾ ನೆಹರೂರವರ ಮರಣದಿಂದ ದೇಶಕ್ಕೆ ಅಪಾರ ನಷ್ಟವಾಗಿದೆ ಎಂದರು.

ವಿದಾಯ ಸತ್ಕಾರ:— ವಿಜಯಾ ಬ್ಯಾಂಕಿನ ಉಡುಪಿ ಶಾಖೆಯ ಏಜಂಟ್ ಶ್ರೀ ಬಿ. ಆರ್. ಅಡ್ಯಂತಾಯರಿಗೆ ಧಾರವಾಡಕ್ಕೆ ವರ್ಗವಾದ ಪ್ರಯುಕ್ತ ಸ್ಥಳೀಯ ಸಿಬಂಧಿಯವರು ಅವರಿಗೆ ತಾ 1ರಂದು ವಿದಾಯ ಕೂಟವಿತ್ತು ಸತ್ಕರಿಸಿದರು. ಶ್ರೀಗಳಾದ ವಿ. ಆರ್. ಕಾಮತ್, ಬಿ. ಸಚ್ಚಿದಾನಂದ ಹೆಗ್ಡೆ ಇವರು ಶ್ರೀ ಅಡ್ಯಂತಾಯರ ಅಧ್ಯಕ್ಷತೆಯನ್ನು ಕೊಂಡಾಡಿದರು. ಶ್ರೀ ಅಡ್ಯಂತಾಯರು ಸಿಬಂಧಿ ಮತ್ತು ಜನರ ಸಹಕಾರಕ್ಕಾಗಿ ವಂದನೆಗಳನ್ನು ಅರ್ಪಿಸಿದರು.

ಬಿ. ಹಿರಿಯಣ್ಣ ಹೆಗ್ಡೆಯವರ ನಿಧನ:— ಕಳೆದ ತಾ 30ರಂದು ಉಡುಪಿಯ ವಕೀಲ್ ಬಿ. ಹಿರಿಯಣ್ಣ ಹೆಗ್ಡೆಯವರು ಮಂಗಳೂರಲ್ಲಿ ಶಸ್ತ್ರಕ್ರಿಯೆ ನಂತರ ನಿಧನಗೊಂಡುದು ವಿಷಾದಕರವಿದೆ. ಶ್ರೀಯುತರು ಕಾಂಗ್ರೆಸ್ ಭಕ್ತರೂ ಪ್ರತಿಷ್ಠಿತ ಬಂಟ ಮನೆತನದವರೂ ಜನಪ್ರಿಯರೂ ಆಗಿದ್ದರು.

ಪಾಂಗಾಳ ಮಂಜುನಾಥ ನಾಯ್ಕರ ನಿಧನ— ಹಳೆಯ ಕಾಂಗ್ರೆಸ್ ಮುಖಂಡರಲ್ಲೊಬ್ಬರಾಗಿದ್ದು ಸೆರೆಮನೆ ವಾಸವನ್ನು ಅನುಭವಿಸಿದ್ದ. ಶ್ರೀ ಪಾಂಗಾಳ ಮಂಜುನಾಥ ನಾಯ್ಕರು ಇದೇ ತಾ. 2ರಂದು ಉಡುಪಿಯಲ್ಲಿ ಡಾ| ಪಿ. ಆರ್. ನಾಯ್ಕರ ಡಿಸ್ಪೆನ್ಸರಿಯಲ್ಲಿ ಮಾತಾಡುತ್ತಿದ್ದಂತೆಯೇ ಹೃದಯಾಘಾತದಿಂದ ನಿಧನರಾದುದು ವಿಷಾದಕರವಿದೆ.

ಅಜ್ರಿ — ತಾ. 28.5.64 ಅಜ್ರಿ ಬೋ. ಎಲಿ. ಶಾಲಾವಠಾರದಲ್ಲಿ ಅಜ್ರಿ ಪಂಚಾಯತ್ ಚೇರ್ಮನ್ ಗಿ ಭುಜಂಗ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ನೆಹರೂಜಿ ಮರಣವ ಕುರಿತು ಅಶ್ರುಪೂರಿತ ತೀವ್ರ ಸಂತಾಪ ವ್ಯಕ್ತಪಡಿಸಿ ಹೆಡ್ ಮಾಸ್ಟರ್ ಎಚ್. ಮಂಜಯ್ಯ ಶೆಟ್ಟರ ಸಮಾರೋಪ ಭಾಷಣದೊಂದಿಗೆ ಕೊನೆಗೊಂಡಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 649/1963.

ಕೆ. ಶಂಕರ ಭಟ್ಟ— ವಾದಿ.

ಮತ್ತು

ಗುದ್ದು ಹೆಂಗಸು ಕೂಡಾ—ಪ್ರತಿವಾದಿರು.

D. 20, ಸೋಮಪ್ಪ—ಪೆಡನ್ನಕ್ಕ ಹೆಂಗಸಿನ ಮಗ. ಪುತ್ತೂರು ತಾಲೂಕು ಬಂಟ್ರ ಗ್ರಾಮದ ಕಾಯಿಂದೂರು.

D. 57 ಶೇಷಪ್ಪ— ಕುಜ್ಜಾಕ್ಕ ಹೆಂಗಸಿನ ಮಗ ಪುತ್ತೂರು ತಾಲೂಕು ನೆಟ್ಟಣಿಗೆ ಮುಡ್ನೂರು ಗ್ರಾಮದ ಈಶ್ವರ ಮಂಗಲದಲ್ಲಿರುವವರು,

D 65, ಯಮುನ— ನರಸು ಹೆಂಗಸಿನ ಮಗಳು, D. 69, ಸೋಮಪ್ಪ— ವೆಂಕಮ್ಮನ ಮಗ.	ಪುತ್ತೂರು ತಾಲೂಕು ಕೊಯಿಲ ಗ್ರಾಮಸ್ಥರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾ 21-10-1955ರಲ್ಲು ಮೇಲಿನ ದಾವೆಯ 1ನೇ ವರೆಗಿನ ಪ್ರತಿವಾದಿರು ವಾದಿಗೆ ರೂ 1250ಕ್ಕೆ ಬರಕೊಟ್ಟ ಅಡವು ದಸ್ತವೇಜಿನ ಅಸಲು ಬಡಿ ಐವೇಜು ವಸೂಲಿಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ. 11-6-1964ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಆ ಕುರಿತು ಆಕ್ಷೇಪವೇನಾದರೂ ಇದ್ದಲ್ಲಿ ತಾ. 11-6-1964ರಲ್ಲು ಪೂರ್ವಾಹ್ನ 10-30 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ದಾಖಲು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸೋಣವಾಗಿಯದೆ.

N. R. Bhat.
Advocate for plaintiff.

ಪುತ್ತೂರು,
ತಾ. 21—4—1964.

ನವಯುಗಕ್ಕೆ,
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

ವಿಶ್ವಹಿತಸಾಧಕ—ಜವಾಹರಲಾಲ

(೫ನೇ ಪುಟದಿಂದ)

ಗೆ ಅವರು ಎರಡೂ ದೇಶಗಳ ನಡುವೆ ಸಾಮರಸ್ಯವನ್ನು ಸಾಧಿಸುವ ಬಗ್ಗೆ ಪ್ರಯತ್ನ ನಡೆಸುತ್ತಲೇ ಇದ್ದರು

ಚೀಣಾದಲ್ಲಿ ಕಮ್ಯೂನಿಸ್ಟರ ಆಡಳಿತವು ತಳವೂರಿದೆ ಎಂಬುದನ್ನು ಮನಗಂಡವರಲ್ಲಿ ಶ್ರೀ ನೆಹರೂ ಅವರೇ ಮೊದಲಿಗರು ಶ್ರೀ ನೆಹರೂ ಅವರ ಮಾರ್ಗದರ್ಶನದಲ್ಲಿ ಭಾರತವು ಚೀಣಾದಲ್ಲಿನ ಹೊಸ ಸರ್ಕಾರಕ್ಕೆ ಮನ್ನಣೆ ನೀಡಿತು ಶ್ರೀ ನೆಹರೂ ಅವರು ಚೀಣಾ ಸರ್ಕಾರದಲ್ಲಿ ಪೂರ್ಣ ವಿಶ್ವಾಸ ತಳೆದಿದ್ದು ಬಾಂಡುಂಗ್‌ನಲ್ಲಿ ನಡೆದ ಏಷಿಯನ್ ಆಫ್ರಿಕನ್ ದೇಶಗಳ ಸಮ್ಮೇಳನದಲ್ಲಿ ಚೀಣವನ್ನು ಸೇರಿಸಿಕೊಳ್ಳಲು ಮುಖ್ಯ ಕಾರಣರಾದರು. ೧೯೫೪ರಲ್ಲಿ ಅವರು ಶ್ರೀ ಚೌ-ಎನ್-ಲೈ ಅವರೊಂದಿಗೆ ಒಪ್ಪಂದವೊಂದಕ್ಕೆ ಹಸ್ತಾಕ್ಷರವಿತ್ತರು ಈ ಒಪ್ಪಂದದಲ್ಲಿ ಸಹಬಾಳ್ವೆಯ ಐದು ಸೂತ್ರಗಳನ್ನು ಅಂದರೆ ಪಂಚಶೀಲ ತತ್ವವನ್ನು ಸೇರಿಸಿಕೊಳ್ಳಲಾಯಿತು ಮುಂದಿನ ವರ್ಷದಲ್ಲಿ ಸಹ ಅವರು ಚೀಣಕ್ಕೆ ಮೈತ್ರಿ ಹಸ್ತವನ್ನು ನೀಡಿದರು ಆದ್ದರಿಂದ ೧೯೬೨ರ ಅಕ್ಟೋಬರ್‌ನಲ್ಲಿ ಚೀಣಾ ಭಾರತದ ಮೇಲೆ ಆಕ್ರಮಣ ನಡೆಸಿದಾಗ ನೆಹರೂ ಅವರ ರೀತಿ ಆಸೆ ಆಘಾತ ಎಷ್ಟಾಯಿತೆಂಬುದನ್ನು ಹೇಳುವುದೇ ಸಾಧ್ಯವಿಲ್ಲ

ಸೂಯೆಜ್ ಕಾಲುವೆ ಬಿಕ್ಕಟ್ಟು ತಲೆದೋರಿದಾಗ ಅವರು ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ತೋರಿದ ದಿಟ್ಟತನದ ನಿಲುವು ಅಪ್ರತಿಮವಾದುದಾಗಿದೆ ಈ ವಿಚಾರದಲ್ಲಿ ಅವರು ಬ್ರಿಟಿಷ್ ಸರಕಾರವನ್ನು ಬಲವಾಗಿ ಖಂಡಿಸಲು ಹಿಂಜರಿಯಲಿಲ್ಲ ಅಷ್ಟಕ್ಕೇ ಬಿಡದ ಅವರು ೧೯೫೬ರ ಅಕ್ಟೋಬರ್ ೩೧ರಂದು ವಿಶ್ವ ಸಂಸ್ಥೆಗೆ ತುರ್ತಿನ ಸಂದೇಶವೊಂದನ್ನು ಕಳುಹಿಸಿ ಈಜಿಪ್ಟಿನ ವಿರುದ್ಧ ನಡೆದ ದುರಾಕ್ರಮಣವನ್ನು ತಪ್ಪಿಸುವ ವಿಚಾರದಲ್ಲಿ ವಿಶ್ವಸಂಸ್ಥೆಯು ತ್ವರಿತ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ವಿವಿಧ ದೇಶಗಳಲ್ಲಿನ ರಾಷ್ಟ್ರೀಯ ಚಳುವಳಿಗೆ ಉತ್ತೇಜನ ನೀಡುವ ಧೋರಣೆಗಳ ಅನ್ವಯ ಹೊಸದಾಗಿ ಸ್ವಾತಂತ್ರ್ಯಗಳಿಸಿದ ಏಷಿಯನ್ ಆಫ್ರಿಕನ್ ದೇಶಗಳಿಗೆ ಪೂರ್ಣ ಬೆಂಬಲವಿತ್ತರು

೧೯೪೯ರಲ್ಲಿ ಅಕ್ಟೋಬರ್‌ನಲ್ಲಿ ಅವರು ಅಧ್ಯಕ್ಷ ಟ್ರೂಮನ್ ಅವರ ಆಹ್ವಾನದ ಮೇರೆಗೆ ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಭೇಟಿಯಿತ್ತರು ಅಕ್ಟೋಬರ್ ೧೩ರಂದು ಅವರು ಅಮೇರಿಕದ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸನ್ನು ಉದ್ದೇಶಿಸಿ, ಅದೇ ವರ್ಷ ಅಕ್ಟೋಬರ್ ೨೪ರಂದು ಕೆನಡಾದ ಪಾರ್ಲಿಮೆಂಟನ್ನು ಉದ್ದೇಶಿಸಿ ಭಾಷಣಗಳನ್ನು ಮಾಡಿದರು. ಶ್ರೀ ನೆಹರೂ ಅವರು ಡಿಸೆಂಬರ್ ೧೯೫೬ ಮತ್ತು ೧೯೬೧ರಲ್ಲಿ ಮತ್ತೆ ಅಮೇರಿಕಾಕ್ಕೆ ಭೇಟಿಯಿತ್ತರು ೧೯೨೭ ಮತ್ತು ೧೯೫೫ರಲ್ಲಿ ಅವರು ರಶ್ಯವನ್ನು ಸಂದರ್ಶಿಸಿದರು ೧೯೫೪ರಲ್ಲಿ ಅವರು ಚೀಣಾಕ್ಕೆ ಭೇಟಿಯಿತ್ತಿದ್ದರು

ಶ್ರೀ ನೆಹರೂ ಅವರು ೧೯೫೧ರ ಜೂನ್ ಮತ್ತು ೧೯೫೯ರಲ್ಲಿ ನೇಪಾಳವನ್ನು ಸಂದರ್ಶಿಸಿದರು ೧೯೫೩ರ ಮೇ ತಿಂಗಳಲ್ಲಿ ಅವರು ಲಂಡನ್ನಿನಲ್ಲಿ ಎರಡನೆಯ ಎಲಿಜಬೆತ್ ರಾಣಿಯ ಕಿರೀಟಧಾರಣ ಮಹೋತ್ಸವದಲ್ಲಿ ಭಾಗವಹಿಸಿದ್ದರು. ಅವರು ೧೯೫೪ರ ಡಿಸೆಂಬರ್‌ನಲ್ಲಿ ಬರ್ಮಾ, ಥಾಯಲೆಂಡ್, ಇಂಡೊನೇಷ್ಯಾ ಮತ್ತು ಮಲಯಾಗಳಿಗೆ ಭೇಟಿಯಿತ್ತರು ೧೯೫೫ರ ಜೂನ್, ಜುಲೈ ಅವಧಿಯಲ್ಲಿ ಶ್ರೀ ನೆಹರೂ ಅವರು ರಷ್ಯಾ ಯುಗೋಸ್ಲಾವಿಯಾ, ಪೋಲೇಂಡ್, ಜೆಕೊಸ್ಲಾವಾಕಿಯಾ, ಆಸ್ಟ್ರಿಯಾ, ಇಟಲಿ ಮತ್ತು ಈಜಿಪ್ಟುಗಳಿಗೆ ಭೇಟಿಯಿತ್ತರು. ೧೯೫೫ರ ಜುಲೈ ೮ರಂದು ಅವರು ಗೋವಾ ವಿಚಾರದಲ್ಲಿ ರೋಮಿನಲ್ಲಿ ಪೋಪರವರನ್ನು ಕಂಡಿದ್ದರು ಅದೇ ವರ್ಷ ಡಿಸೆಂಬರ್ ೧೩ರಲ್ಲಿ ಅವರು ರಷ್ಯಾದ ಪ್ರಧಾನಿ ಶ್ರೀ ಬುಲ್ಗಾನಿನ್ ಅವರೊಂದಿಗೆ ಸಹಬಾಳ್ವೆಯ ಬಗ್ಗೆ ಸಂಯುಕ್ತ ಹೇಳಿಕೆಯೊಂದಕ್ಕೆ ಹಸ್ತಾಕ್ಷರವಿತ್ತರು ೧೯೫೬ರ ಜೂನ್—ಜುಲೈನಲ್ಲಿ ಶ್ರೀ ನೆಹರೂ ಅವರು ಐರ್ಲೆಂಡ್, ಪಶ್ಚಿಮ ಜರ್ಮನಿ, ಫ್ರಾನ್ಸ್, ಯುಗೋಸ್ಲಾವಿಯಾ, ಗ್ರೀಸ್, ಈಜಿಪ್ಟ್, ಸಿರಿಯಾ ಮತ್ತು ಲೆಬನಾನ್‌ಗಳಲ್ಲಿ ಪ್ರವಾಸ ಮಾಡಿದರು ೧೯೫೭ರ ಜೂನ್ ತಿಂಗಳಲ್ಲಿ ಸಿರಿಯಾ, ಡೆನ್ಮಾರ್ಕ್, ಫಿನ್ಲೆಂಡ್, ನಾರ್ವೆ ಮತ್ತು ಸ್ವೀಡನ್‌ಗಳಿಗೂ ಜುಲೈ ತಿಂಗಳಲ್ಲಿ ಈಜಿಪ್ಟ್, ಹಾಲೆಂಡ್ ಮತ್ತು ಸೂಡಾನ್‌ಗಳಿಗೂ ಭೇಟಿಯಿತ್ತರು ೧೯೫೭ರ ಅಕ್ಟೋಬರ್‌ನಲ್ಲಿ ಅವರು ಜಪಾನ್‌ಗೆ ಭೇಟಿಯಿತ್ತರು

ವಿವಾದಗಳನ್ನು ಶಾಂತಿಯುತ ಮಾರ್ಗಗಳಲ್ಲಿ ಇತ್ಯರ್ಥಗೊಳಿಸುವ ಅಗತ್ಯವನ್ನು ಕುರಿತು ೧೯೫೯ರ ಡಿಸೆಂಬರ್ ೧೧ರಂದು ಶ್ರೀ ನೆಹರೂ ಅವರು ಅಧ್ಯಕ್ಷ ಐಸೆನ್ ಹೋವರ್ ಅವರೊಂದಿಗೆ ಸಂಯುಕ್ತ ಹೇಳಿಕೆಯೊಂದನ್ನು ಹೊರಡಿಸಿದರು.

ದೇಶಕ್ಕಾಗಿ ಅವರ ಸಲ್ಲಿಸಿದ ಅಪಾರ ಸೇವೆ ಮತ್ತು ಮಾನವ ಜನಾಂಗಕ್ಕಾಗಿ ಶಾಂತಿಪಾಲನೆಯ ಬಗೆಗೆ ಅವರು ನಡೆಸಿದ ಸಾಹಸದ ಪ್ರಯತ್ನಗಳಿಗಾಗಿ ೧೯೫೫ರಲ್ಲಿ ರಾಷ್ಟ್ರಪತಿಯವರು ಶ್ರೀ ನೆಹರೂ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನಿತ್ತು ಪುರಸ್ಕರಿಸಿದರು.

ದೇಶದ ಸಮಗ್ರತೆ ಐಕ್ಯತೆಗಳಿಗಾಗಿ ಶ್ರೀ ನೆಹರೂ ಅವರು ೧೯೬೧ರಲ್ಲಿ ಕೈಗೊಂಡ ಪ್ರಯತ್ನ ಮಹತ್ವದ್ದಾಗಿದೆ. ಅವರು ಆ ವರ್ಷ ರಾಷ್ಟ್ರೀಯ ಐಕ್ಯ ಸಮ್ಮೇಳನವೊಂದನ್ನು ವ್ಯವಸ್ಥೆಗೊಳಿಸಿದರು ಅವರು ಯೋಜನಾ ಮಂಡಳಿಯ ಅಧ್ಯಕ್ಷರಾಗಿದ್ದರಲ್ಲದೆ ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಮಾಜವಾದಿ ಸ್ವರೂಪದ ಸಮಾಜವನ್ನು ರೂಪಿಸುವಂತಹ ಮೂಲಭೂತ ತತ್ವಗಳನ್ನು ಸೇರಿಸಿಕೊಳ್ಳಲು ಮುಖ್ಯವಾಗಿ ಕಾರಣರಾದರು

ಶ್ರೀ ನೆಹರೂ ಅವರು ರಚಿಸಿರುವ "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ' ಆತ್ಮ ಚರಿತ್ರೆ ಮತ್ತು "ಡಿಸ್ಕವರಿ ಆಫ್ ಇಂಡಿಯಾ' ಎಂಬ ಕೃತಿಗಳು ಶ್ರೇಷ್ಠ ದರ್ಜೆಯ ಸಾಹಿತ್ಯ ಕೃತಿಗಳಾಗಿ ಪ್ರಶಂಸೆ ಪಡೆದಿವೆ



ಕಾರ್ಯಮಗ್ನ ನೆಹರು.

ಒಂದು ಸ್ಮರಣೀಯ ದೃಶ್ಯ

ಕಂಬನಿ!

೧

ಕಣ್ಣೀರ ಕಡಲಲ್ಲಿ
ಕಣ್ಗಾಣದಾಗಿಹುದು
ಭಾರತದ ನಲ್ವತ್ತು ಕೋಟಿ ಜನತೆ!
"ಓ ಧೀರ, ಓ ವೀರ,
ಓ ಶಾಂತಿ ಪ್ರಿಯ ನೆಹರು"
ನೀನಿಲ್ಲದಿಲ್ಲವರ ಮನಕೆ ಸ್ಥಿರತೆ! ॥

೨

ವಿಶ್ವಶಾಂತಿಯ ಸನ್ನಿಧಿ
ಮಾರಕಾಸ್ತ್ರಗಳೆಂಬ
ಕರಿ ಮುಗಿಲ ಮುಸುಕಿರಲು ಬೆಳಗಿ ಬಂದೆ!
'ಶಾಂತಿ' 'ಪ್ರೀತಿ' 'ಅಹಿಂಸ
ಎಂಬ ಮಂತ್ರವೆ ಲೋಕ
'ಕಲ್ಯಾಣ ತಾರಕವು' ಎಂದು ನೀನೆಂದೆ ॥

೩

"ಭಾರತದ ಭಾಗ್ಯ ರವಿ'
ಈ ಸಂಧಿ ಕಾಲದಲಿ
ನಮ್ಮನಗಲಿದಯೇಕೆ? ಸಹಿಸಲೆಂತು!
ಸುತ್ತು ಮುತ್ತಲು ಭಯದ
ಕತ್ತಲೆಯು ಕವಿದಿರಲು
ನಮ್ಮನಗಲುವ ಮನವು ನಿನಗೆಂತು ಬಂತು? ॥

೪

ರಾಷ್ಟ್ರಪಿತ ನನ್ನಗಲಿ
ಕಂಗೆಟ್ಟ ಮಾತೆಗಿದೊ
"ಕಂದನಾನಿಹೆ'ನೆಂದು ಮುಂದೆ ಬಂದೆ!
ಓ "ಭಾರತದ ರತ್ನ"
ಓ ದೇಶ ಸಾರಥಿಯೆ!
ಇಂದವಳ ಸಂತೈಪರಾರು ತಂದೆ? ॥

೫

ಕಂಬನಿಯ ಅರ್ಘ್ಯವ
ನಿತ್ತಿ ಬೇಡುವ ನಿನ್ನ
ಆದರ್ಶ ನಡೆಸಲೆಮ್ಮನು ಮುಂದೆ ಮುಂದೆ
ನಿನ್ನ ಮಾನವಾಶಯವೆ
ಎಮ್ಮ ಗುರಿಯಾಗಿರಲಿ
ಅದುವಿರಲಿ ಜೀವನದ ಧ್ಯೇಯವೆಂದೆ! ॥

— ಮುಚ್ಚಿಬೈಲು ಭಾಸ್ಕರ ಭಂಡಾರಿ.

ಭಾರತೀಯರಿಗೆ

ಬೌದ್ಧ ಪೂರ್ಣಿಮೆಯ ಪ್ರಶ್ನೆ ಬಂದಾಗ

ಬರೆದವರು: ಶ್ರೀ ಶಿವಶಂಕರ.

ದಿನಾಂಕ ೧೪-೫-೧೯೬೫ರ ಸಂಚಿಕೆಯಲ್ಲಿ ಚೈನಾ ಮತ್ತು ಪಾಕಿಸ್ತಾನಗಳ ಸಮ್ಮಿಲಿತ ಪಾಶವೀ ಶಕ್ತಿಯನ್ನೆದುರಿಸಲು ಭಾರತಕ್ಕೆ ಸಾಧ್ಯವೇನೆಂಬುದರ ಕುರಿತು ಚರ್ಚಿಸಿರುವೆವು. ಆಗ ಭಾರತವು ಕೇವಲ ಚೈನಾ ಮತ್ತು ಪಾಕಿಸ್ಥಾನದೊಂದಿಗೆ ಮಾತ್ರ ಹೋರಾಡಬೇಕಾಗಿ ಬರುವದಲ್ಲದೆ ಬ್ರಹ್ಮದೇಶ ಹಾಗೂ ದ್ವೀಪಾಂತರ (ಇಂಡೋನೇಷ್ಯಾ)ದೊಂದಿಗೂ ಹೋರಾಡಬೇಕಾಗಿಬರಬಹುದೆಂಬುದನ್ನು ತಿಳಿದುಕೊಂಡಿರುವೆವು. ಅದಕ್ಕೆ ಕಾರಣವೇನೆಂಬುದನ್ನೂ ಅದೇ ಸಂಚಿಕೆಯಲ್ಲಿ ಅಲ್ಲದೆ ಮರುಸಂಚಿಕೆಯಲ್ಲಿ ನೋಡಿರುವೆವು. ಇಂತಹ ಸಮ್ಮಿಲಿತ ಶಕ್ತಿಯನ್ನೆದುರಿಸಲು ಆದ್ಯಾವದರ ಆವಶ್ಯಕತೆ ಇದೆಯೆಂಬುದನ್ನೂ ಆಲೋಚಿಸಿರುವೆವು. ಹಾಗು ಎಳುತ್ತಾ ಇದೆ—ರೊಟ್ಟೆಕೊಡೆಂದು. ರಾಣಾ ಪ್ರತಾಪನ ಕಣ್ಣಲ್ಲಿ ನೀರು ಬಂತು ಆದರೂ ಧೃತಿಗೆಡಲಿಲ್ಲ. ಅವನು ಅಜಯನಾಗಿ ಇರಲಿಲ್ಲ. ವಿಜಯ ವೈಜಯಂತಿಯನ್ನೇ ವೈಭವದಿಂದ ಬಾನೆತ್ತರಕ್ಕೇರಿಸಿದನು. ಅವನಿಗೆಲ್ಲಿಂದ ಬಂತು ಶಕ್ತಿ? ಪರಿಸ್ಥಿತಿ ಬದಲಾಗಿದ್ದರೂ ಅಂತಹ ಕಷ್ಟ ಸ್ಥಿತಿಯಲ್ಲೀ ನಾವಿದ್ದೇವೆ. ಹೋಗಯ್ಯಾ, ಪ್ರತಾಪನ ಪ್ರತಾಪ ನಮ್ಮ ಬಳಿ ಎಲ್ಲಿದೆ? ನಮ್ಮ ಬಳಿ ಈಗ ಇರುವದು ಜವಾಹರಲಾಲರ ಜಢತನವಲ್ಲವೇನು?...ಮಾತಿನ ಮಲ್ಲರು ಮಾತೆತ್ತಬಹುದು. ಆದರೆ ದಂಡೆತ್ತಿ ಬಂದ ಚೈನೀಯರನ್ನು ನಾವು ಹೊಡೆದಟ್ಟಿರುವದು ಒಂದೆರಡು ಬಾರಿಯಲ್ಲವೆಂಬುದನ್ನು "ನವಯುಗ" ವಾಚಕರು ಮರೆತಿರಲಿಕ್ಕಿಲ್ಲ ಗಾಂಡೀವಧರಿಯು ಅದೆಂತು ಮದಾಂಧ ಚೈನೀಯರನ್ನು ಹತೋಟಿಗೆ ತಂದಿದ್ದನೆಂಬುದನ್ನು ಸಮ್ಮಿಲಿತ ದುಃಶಕ್ತಿಯನ್ನೆದುರಿಸಲು ಅವೇನು ಅಗತ್ಯವೆಂಬದನ್ನೂ ತಿಳಿದುಕೊಂಡ ಮೇಲೆ ನನ್ನ ನೋಟದಲ್ಲಿ ನರಸಿಂಹ ಚರಿತ್ರೆಯನ್ನು ಅಭ್ಯಾಸಿಸಿರುವೆವು. ಆದರೆ ಅದು ವಿಚಿತ್ರಾರ್ಥವಿರುವದರಿಂದ, ಮಹಾಭಾರತದ ಘಟನೆಯನ್ನು ಬಿಟ್ಟಲ್ಲಿ ಬೇರೆ ಉದಾಹರಣೆಯಿವೆಯೇ ಎಂದು ಕಲವರು ಕೇಳಬಹುದು ಮಹಾಭಾರತ ಕಾಲದಲ್ಲಿ ಗಾಂಡೀವಧಾರಿಯು ಚೈನಾಕ್ಕೆ ಭಾರತದ ಪರಾಕ್ರಮತೆಯ ಪುನರ್ ಪರಿಚಯ ಮಾಡಿಕೊಟ್ಟನ್ನದರಿಂದ, ರಾಜಸೂಯದ ಸಮಯದಲ್ಲಿ ಚೈನಾದಿಂದ ಕಾಣಿಕೆ ಬಂದಿರುವ ವಿಷಯವನ್ನೂ ಓದಿರುವೆವು ನವ್ಯ ನರಸಿಂಹ ಚರಿತ್ರೆಯಾಗಲೀ ಗಾಂಡೀವಧಾರಿ ಚರಿತ್ರೆಯಾಗಲೀ ಚೈನಾದ ಮೇಲೆ ಮಾತ್ರ ಕೀರ್ತಿಕೇತುವನ್ನು ಹಾರಿಸಿರುವದನ್ನು ಮಾತ್ರ ತಿಳಿಸುತ್ತದಲ್ಲದೆ, ಸಮ್ಮಿಲಿತ ಶಕ್ತಿಯನ್ನೆದುರಿಸಿರುವ ಕುರಿತು ಹೇಳುವದಿಲ್ಲವೆಂಬುದು ಕೆಲವರ ವಾದ. ಸರಿ, ಅಂತಹ ಒಂದು ಉದಾಹರಣೆ ಇಲ್ಲಿದೆ. ಅದಕ್ಕೆ ಈಗ ಎರಡು ಪಾಲು ವಿಶೇಷ ಇದೆ

೧೬-೫-೧೯೬೫— ಶ್ರೀ ಬುದ್ಧಪೂರ್ಣಿಮೆ ಜನನ—ಮರಣ, ಕಷ್ಟ—ಸುಖ... ಸಮಸ್ಯೆಗಳನ್ನು ಬಗೆಹರಿಸಲೆಂದು ಸಿದ್ಧಾರ್ಥನು ಕಾಡಿಗೆ ಹೋಗಿ ತಪಸ್ಸು ಮಾಡಿದನು. ಜ್ಞಾನೋದಯ ಪಡೆದ ಬುದ್ಧನು ಜಗತ್ತಿಗೆನೇ ಉಪದೇಶಕ್ಕಾರಂಭಿಸಿದನು. ಚೈನಾ-ಪಾಕ್‌ಗಳ ಆಕ್ರಮಣ ಈಗಿರುವ ದೊಡ್ಡ ಪೀಡೆ. ಚೈವಿ ದಲ್ಲಾಳಿ ಕಮ್ಯೂನಿಸ್ಟರೋ ಆಕ್ರಮಣವೇ ನಡೆದಿಲ್ಲವೆಂದು ಸಾಮಾನ್ಯ ಜನತೆಯನ್ನು ದಾರಿ ತಪ್ಪಿಸುತ್ತಿದ್ದಾರೆ. ಪಾಕಿಸ್ಥಾನಕ್ಕೆ ಆಕ್ರಮಣದ ಆಶೆಯೇ ಇಲ್ಲವೆಂದು ಪಾಕ್ ಪಂಚಮಸ್ಥಂಭೀಯರು ಪ್ರಚಾರ ನಡೆಸುತ್ತ ಬಂದಿದ್ದು, ಹಿಂದೂ ಮತೀಯವಾದಿಗಳು ಇಲ್ಲದ -ಸಲ್ಲದ ಆರೋಪಗಳನ್ನು ಹೊರಿಸಿ ಗಲಭೆಗೆ ಗಂಟೆ ನೋಡುತ್ತಿದ್ದಾರೆಂದು ಅವರು ಸರಕಾರಕ್ಕೆ ದೂರೀಯುತ್ತಿದ್ದಾರೆ. ಈ ಕಾದಾಟಗಳಿರವರಿಂದಲೂ ಲಾಭ ಪಡೆದುಕೊಳ್ಳುವ ಆಶೆಯಿಂದ, ಹಾಗೂ ರಾಜಕೀಯ ಅಧಿಕಾರದ ಸವಾರಿ ಮಾಡುವ ಆಶೆಯಲ್ಲಿ ಉದ್ದಂಗಿಯ ಪರು ಕಿವಿಯನ್ನು ಉದ್ದ ಬಿಡುತ್ತಿದ್ದಾರೆ. ಇಂತಹ ಸಮಯದಲ್ಲಿ ನಮಗೇನಾದರೂ ಜ್ಞಾನೋದಯವಾದೀತೇ? ನಾವಿಂದು ಪುನಃ "ಸಂಘಂ ಶರಣಂ ಗಚ್ಛಾಮಿ" ಎನ್ನಲಾರಂಭಿಸಿಯೇವೇ? ಸಂಘವೆಂದರಿಲ್ಲಿ ಯಾವದಾದರೊಂದು ಮತೀಯ ಅಥವಾ ಜಾತೀಯ, ಅಲ್ಲದೆ ಭಾಷಿಯರ ಗುಂಪು -ಸಭೆ ಇರದೆ ರಾಷ್ಟ್ರೀಯ ಸಂಘಟನೆಯ ಕುರಿತು ಇದೆ—ಒಂದೇ ಮಾತೆಯ ಮಕ್ಕಳು ನಾವೆಂಬ ಅಭಿಮಾನದಿಂದ ಭಿನ್ನಭಾವನೆಗಳನ್ನು ತೊಡೆದು ಹಾಕಿ ಎದ್ದು ನಿಲ್ಲುವ ರಾಷ್ಟ್ರೀಯರ ಸಂಘಟನೆಯ ಕುರಿತು ಇದೆ. ಕಲಿಯುಗದಲ್ಲಿ ಸಂಘವೇ ಶಕ್ತಿ.

ಬುದ್ಧನಿಗಾದರೋ ಭಾರತದಲ್ಲಿ ಜ್ಞಾನೋದಯವಾದದ್ದು, ಚೈನಾದಲ್ಲಿರುವದೂ ಬೌದ್ಧ ಮತ ತಾನೇ! ಅವುಗಳ ನಡುವೆ ಹೋರಾಟ ನಡೆದೀತೇ? ಆದರೆ ಇಂದಲ್ಲಿ ಅಧಿಕಾರ ಮಂಟಪದಲ್ಲಿರುವದು ಬೌದ್ಧ ಮತವಲ್ಲ; ಅಲ್ಲಿರುವದು ಕಮ್ಯೂನಿಸಂ; ಇದಕ್ಕೆ ತದ್ವಿರುದ್ಧ ಕಾಲ ಒಂದಿತ್ತು. ಆಗ ಭಾರತದಲ್ಲಿ ಬೌದ್ಧ ಮತಕ್ಕೆ ಪ್ರಭಾವ ಇರಲಿಲ್ಲ. ಚೈನಾದಲ್ಲಿ ಬೌದ್ಧ ಮತ ಪ್ರಭಾವ ಬೀರಿತ್ತು. ಚೈನಾದಲ್ಲಿ ಮಾತ್ರವಲ್ಲ, ಅಕ್ಕಪಕ್ಕದ ರಾಷ್ಟ್ರಗಳಲ್ಲೂ ಬೌದ್ಧ ಮತವೇ ಹಬ್ಬಿತ್ತು ಆಗ ನಡೆದ ಒಂದು ಘಟನೆ ಇಂದಿನ ಸನ್ನಿವೇಶದಲ್ಲಿ ನಮಗೆ ಸ್ಫೂರ್ತಿದಾಯಕವಿದೆ ಚೈನೀಯರಿಗೊಂದು ಉತ್ತಮ ಪಾಠ ಇದೆ.

ಜಯಾಮಿ ದೇಶೋದ್ಭವರ, ಲಕ್ಷ ಮಂದಿ, ಲಕ್ಷಮಂದಿ ಜಪಾನಿಗಳು, ದಶಲಕ್ಷ ಚೈನಾ ದೇಶದವರು ಸೇರಿ ಭಾರತದ ಮೇಲೆ ದಂಡೆತ್ತಿಕೊಂಡು ಬಂದರು. ಆಗ ಆ ದೇಶಗಳಲ್ಲಿ ಬೌದ್ಧಮತ ಪ್ರಚಾರದಲ್ಲಿದ್ದು, ಭಾರತದಲ್ಲಿ ಹೀನ ಸ್ಥಿತಿಗೆ ಬಂದಿತ್ತು. ಸೇನಾ ಪ್ರವಾಹ ಬರುತ್ತಿರುವ ಸುದ್ದಿ ಭಾರತಕ್ಕೆ ತಲಪಿತು. ಆಕ್ರಮಣಗಾರರನ್ನು ಶಾಶಾ ನಡಿದಂಡೆಯಲ್ಲೇ ಎದುರಿಸಲಾಯಿತು, ಶತ್ರುಪಡೆಯಲ್ಲಿ ಹಾಹಾಕಾರವೆದ್ದಿತು. ತಮ್ಮ ತಪ್ಪಿನ ಅರಿವಾಯಿತು ಅರಿಗಳಿಗೆ. ಇನ್ನು ಮುಂದೆ ಆದೆಂದಿಗೂ ಭಾರತದ ಮೇಲೆ ಸರ್ವೋಚ್ಚ, ಲೋಕವಂದ್ಯ ಭಾರತದ ಮೇಲೆ—ದಂಡೆತ್ತಿಕೊಂಡು ಬರುವದಿಲ್ಲವೆಂದು ಅವರು ಶಪಥ ಮಾಡಿಕೊಂಡರು. ಉಳಿದವರು ಹಿಂತಿರುಗಿದರು. ಭವಿಷ್ಯ ಪುರಾಣದ ಪ್ರತಿಸರ್ಗಪರ್ವದಲ್ಲಿ ಇದರ ವಿವರಣೆ ಇದೆ.

ವಿವರಣೆಯನ್ನು ತಿಳಿದುಕೊಂಡಾಗ 'ಹತ್ತು ಚೀನಾಗಳನ್ನು ಎದುರಿಸಬಲ್ಲೆವ' ಎನ್ನುವದರಲ್ಲಿ ನಮಗೆ ಸಂದೇಹವಿರಲಿಕ್ಕಿಲ್ಲ. ಯಾಕೆಂದರೆ ಆ ಲೇಖನದಲ್ಲಿ [೨೦-೧೦-೬೨] ಚೈನಾ ಆಕ್ರಮಣ ನಡೆಸಿದಲ್ಲಿ ನಾವು ಪಾಕಿಸ್ತಾನ ದ್ವೀಪಾಂತರ, ಬ್ರಹ್ಮದೇಶಗಳೊಂದಿಗೂ ಯುದ್ಧ ಮಾಡಬೇಕಾದೀತೆಂದು ಎಚ್ಚರಿಕೆಯನ್ನೀಯಲಾಗಿತ್ತು. ಪಾಕಿಸ್ಥಾನ—ಬ್ರಹ್ಮದೇಶಗಳಾದರೋ ಮೊಗಲರ ಯುದ್ಧಕಾಲದಲ್ಲಿ ನಮ್ಮ ದೇಶದ ಭಾಗವೇ ಆಗಿದ್ದುವು ಆದರ ಸಾಲಿನಲ್ಲಿ ಆಗ ಜಯಾಮಿ ದೇಶದವರೂ, ಜಪಾನು ದೇಶದವರೂ ಚೈನಾದೊಂದಿಗೆ ಸೇರಿ ಒಂದಿದ್ದರು. ಆ ಪಡೆಯನ್ನೇ ನಾವು ಸೋಲಿಸಿದ್ದೇವೆಂದರೆ ಈಗಿನ ಚೈನಾದ ಒಡಕು ಪಡೆಗೆ ಚಿಯಾಂಗ್ ಅಲ್ಲಿ ಕಾಯುತ್ತಿದ್ದಾರೆ. ನಾವೇತಕ್ಕೆ ಹೆದರ ಬೇಕು?

ಇನ್ನೂ ಒಂದು ಮುಖ್ಯವಿಷಯವಿದೆ. ಆ ದೇಶಗಳಲ್ಲಿ ಆಗ ಬೌದ್ಧಮತ ರಾಜಮತವಾಗಿತ್ತು. ಆ ದೃಷ್ಟಿಯಲ್ಲಿ ಭಾರತ ಅವರಿಗೆ ಗುರುವೇ ಸರಿ. ಅದನ್ನು ಗಣಿಸದೆ ಅವರು ಪಡೆ ಎತ್ತಿಕೊಂಡು ಬಂದಿದ್ದರು. ಪರಿಣಾಮ: ಬೇರೇನಾದೀತು?

ಹಾಗೆಯೇ ಇಂದು ಚೈನಾದಲ್ಲಿ ಕಮ್ಯೂನಿಸಂ ಸ್ವರೂಪದ ಸಮಾಜವಾದವಿದೆ ನಾವಾದರೊ ಇಲ್ಲಿ ವಿವರಿಸಲಾಗದಂತಹ ರೀತಿಯ ಸಮಾಜವಾದ ಇದೆ ಎನ್ನುತ್ತೇವೆ. ಅದಕ್ಕೆ ವಿರೋಧವಿದೆಯಲ್ಲಿ ಅಧಿಕಾರವು ಬೇಗದಕ್ಕೆ ಅವರ ಬಳಿ ತಾನೇ ಇರುವದು. ಆರಂಭದಲ್ಲಿ ಪಂಡಿತ ಜವಾಹರಲಾಲನೆಹ್ರೂಜೀ ಹಾಗೂ ಅವರ ಹಿಂಬಾಲಕರು ಒಂದು-ಸಮಾಜವಾದಿ ರಾಷ್ಟ್ರ ಇನ್ನೊಂದು ಸಮಾಜವಾದಿರಾಷ್ಟ್ರದವರೆಲೆಯುದ್ಧ ಮಾಡದು, ಆಕ್ರಮಣ ಮಾಡದು, ಕೇವಲ ವಿರೋಧಿಗಳ ಅಪಪ್ರಚಾರ ಅದೆಂದರು. ಚರಿತ್ರೆ ಕೇಳಬೇಕಲ್ಲ, ಘಟಿಸುವದು ಘಟನೆಯೇ ಘಟಿಸಿತು.

ಬುದ್ಧಪೂರ್ಣಿಮೆಯ ದಿನ ಬುದ್ಧನಿಗೆ ಜ್ಞಾನ ಬಂದಂತೆ ನಮಗೂ ಯಾಕೆ ಜ್ಞಾನೋದಯವಾಗಬಾರದು? ನೈಜ ರಾಷ್ಟ್ರೀಯತೆ ಯಾವುದು? ಈ ಮಣ್ಣಿನ ಆಗುಹೋಗುಗಳೊಂದಿಗೆ ಒಂದಾಗುವ ಮಕ್ಕಳು ಯಾರು? ನೈಜ ಶತ್ರುಯಾರು?.... ಒಂದರೆಕ್ಷಣವಾದರೂ ಕುಳಿತು ನಾವು ನಿರ್ಮಲಚಿತ್ತದಿಂದ ಭಾರತಮಾತೆಯ ಧ್ಯಾನಮಾಡಿದಲ್ಲಿ ಆಗ ನಮಗೂ ಜ್ಞಾನೋದಯವಾದೀತು? ಜ್ಞಾನೋದಯವಾದ ಬುದ್ಧಮತ್ತೆ ಸಂಸಾರ ಸಾಗರದಲ್ಲಿ ಸಿಲುಕಲಿಲ್ಲ, ಹಾಗೆಯೇ ನೈಜ ರಾಷ್ಟ್ರೀಯ ಜ್ಞಾನೋದಯ ನಮ್ಮಲ್ಲಾದರೆ ಮತ್ತೆ ನಾವು ಕೊಳಕು ಜಾತೀಯತೆಯ ಪ್ರಗ ಮರೀಚಿಕೆಯ ಹಿಂದುಗಡೆ ಇತಲಾರೆವು ಆಗ ಹತ್ತು ಚೈನಾಗಳನ್ನು ಹಿಸುಕಿ ಬಿಡುವ ಶಕ್ತಿ ನಮ್ಮಲ್ಲುಂಟಾಗುತ್ತದೆ. ಬುದ್ಧ ಪೂರ್ಣಿಮೆಯ ಪ್ರಶ್ನೆ ಬಂದಾಗ—ಸಂಘಂ ಶರಣಂ ಗಚ್ಛಾಮಿ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರ ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ, ವಿವರವಾದ ಕೆಟಲಾಗಿಗೆ ಹತ್ತು ನಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಜಾಸತ್ತೆಯ ಅಚಲ ವಿಶ್ವಾಸಿ

ಭಾರತರತ್ನ ಜವಾಹರ

ಭಾರತೀಯರ ಪಾಲಿಗೆ ನೆಹರು ಇನ್ನಿಲ್ಲವಾದರು. ಅಣುಬಾಂಬುಗಳ ಭೀಷಣ ಗದ್ದಲಗಳಿಗೂ ಮೀರಿದ ನೆಹರು ಧ್ವನಿ ಸ್ತಬ್ಧಗೊಂಡಿತು. ಭಾರತ ಭಾಸ್ಕರನು ಅಸ್ತಂಗತನಾದನು. ಸದಾ ವಸಂತ ಋತುವಿನ ಆನಂದಮಯ ನಿರುದ್ವೇಗ ವಾತಾವರಣದಲ್ಲಿದ್ದ ನೆಹರುರಂತಹ ಇನ್ನೊಬ್ಬ ವ್ಯಕ್ತಿ ನಮ್ಮ ಮುಂದೆ ಬರುವುದು ಸಾಧ್ಯವೆ?

೧೪-೧೧-೧೮೮೯ರಂದು ಅಲಹಾಬಾದಿನಲ್ಲಿ ಜನಿಸಿದ್ದರು ಜವಾಹರಲಾಲರು. ವೈಭವದ ಸುಪ್ಪತ್ತಿಗೆಯಲ್ಲಿಯೇ ಪವಡಿಸಿ ಬೆಳೆದು ಬಂದ ನೆಹರು ವಿದೇಶ ಗಮನ ಮಾಡಿ, ಬ್ಯಾರಿಸ್ಟರ ಪದವಿ ಪಡೆದು ಸ್ವದೇಶಕ್ಕೆ ಮರಳಿ ಬಂದರು

ಹಳೆಯ ವಾತಾವರಣಕ್ಕೆ ಹೊಸ ವಿಚಾರಗಳೊಂದಿಗೆ ಬಂದ ಅವರು ೧೯೧೨ರಲ್ಲಿಯೇ ಕಾಂಗ್ರೆಸ್ (ಬಂಕೀಪುರ) ಅಧಿವೇಶನದಲ್ಲಿ ಭಾಗವಹಿಸಿದರು. ಅಲ್ಲಿನ ಆಂಗ್ಲರ ಮೇಲು ಸ್ತರ ವರ್ಗದ ಸ್ನೇಹಕೂಟದ ವಾತಾವರಣದಿಂದ ನೊಂದರು. ನೆಹರು ವಕೀಲಿ ವೃತ್ತಿಯನ್ನು ಹಿಡಿಯಲಿಲ್ಲ. ಕೆಲವು ಸಮಯ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಅವರ ಗಮನ ಸೆಳೆಯಿತು. ಆದರೆ, ಅಸಹಕಾರ ಚಳವಳಿ ಮತ್ತು ಲೋಕಮಾನ್ಯರ ಅಸಹಕಾರ ಆಂದೋಲನವು ಅವರ ಮನಸ್ಸಿನ ಮೇಲೆ ಪರಿಣಾಮ ಮಾಡಿತು. ತಮ್ಮ ತಂದೆಯೂ ಸಾಮ್ಯವಾದಿ ಗುಂಪಿನಿಂದ ಪ್ರತ್ಯೇಕರಾದುದು ಜವಾಹರರಿಗೆ ಸಂತೋಷ ತಂದಿತು; ಈ ಸಮಯದಲ್ಲಿಯೇ ನೆಹರು ಕಾಂಗ್ರೆಸಿನ ಉಗ್ರವಾದಿ ಗುಂಪಿನತ್ತ ಸರಿಯತೊಡಗಿದ್ದರು.

ಮಹಾತ್ಮಾ ಗಾಂಧೀಜಿಯವರೊಡನೆ ನೆಹರು ಸಂಪರ್ಕವಾಯಿತು. ೧೯೨೧—೧೯೪೫ರ ನಡುವೆ ಏಳು ಸಲ ಸೆರೆಮನೆಗೆ ಹೋಗಿ ೫½ ವರ್ಷ ಅಲ್ಲಿ ಕಳೆದರು. ಈ ಅವಧಿಯಲ್ಲಿ ತೀವ್ರ ವ್ಯಾಸಂಗ—ವಿಚಾರಗಳಲ್ಲಿ ತೊಡಗಿ ತಮ್ಮದೇ ತತ್ವಜ್ಞಾನವನ್ನು ರೂಪಿಸಿಕೊಂಡರು. ಈ ತತ್ವಜ್ಞಾನವು ಗಾಂಧೀ ತತ್ವಗಳ ಹಿನ್ನೆಲೆಯಿಂದ ಕೂಡಿತ್ತು. ಆದರೆ, ಅವರ ರಚನೆ ಸಂಪೂರ್ಣ ಗಾಂಧೀವಾದಿಯಾಗಿರಲಿಲ್ಲ. ಅವರು ಗಾಂಧೀವಾದವನ್ನು ಪ್ರಾಮಾಣಿಕರಾಗಿ ಸ್ವೀಕರಿಸಿದ್ದರು; ಗಾಂಧೀಜಿಯವರಿಗೆ ಪೂರ್ಣ ವಿಶ್ವಸ್ತರೂ ಆಗಿದ್ದರು. ಆದರೆ, ತಮ್ಮ ಆತ್ಮವನ್ನು ಗಾಂಧೀಜಿಗೆ ಒಪ್ಪಿಸಲಿಲ್ಲ.

ಕಾಂಗ್ರೆಸ್ ರಾಜಕಾರಣ ಬದಲಾಗುತ್ತಿತ್ತು. ನೆಹರು ಗಾಂಧೀಜಿಯ ನಂತರದ ಅಗ್ರಸ್ಥಾನವನ್ನು ಕಾಂಗ್ರೆಸ್ಸಿನಲ್ಲಿ ಪಡೆದರು. ಗಾಂಧೀಜಿಯವರೂ ತಮ್ಮ ರಾಜಕೀಯ ಶಿಷ್ಯನೆಂದು ನೆಹರುರನ್ನು ಸ್ವೀಕರಿಸಿದರು. ನೆಹರು ತನ್ನ ಶಿಷ್ಯನಾದರೂ ಅವರಿಗೆ ತಮ್ಮದೇ ಆದ ವಿಚಾರಧಾರೆಯಿದೆ ಯೆಂಬುದು ಗಾಂಧೀಜಿಗೆ ಗೊತ್ತಿತ್ತು. ಅಸಹಕಾರ ಚಳುವಳಿಯು ಗಾಂಧೀಜಿಯವರ ನಾಯಕತ್ವದಲ್ಲಿ ನಡೆಯುತಿದ್ದಾಗ, ನೆಹರುರವರಿಗೆ ತಮ್ಮ ಇತರ ಸಹೋದ್ಯೋಗಿಗಳ ಏಕಮುಖವಾದ ಮನೋವೃತ್ತಿ ಒಪ್ಪಿಗೆ ಯಾಗಲಿಲ್ಲ! ಈ ಸಮಯದಲ್ಲಿ ಅವರು ವಿದೇಶ ಯಾತ್ರೆಯನ್ನು ಮಾಡಿ, ತನ್ನ ಸಂಪರ್ಕವನ್ನು ಹೆಚ್ಚಿಸಿಕೊಂಡರು.

೧೯೨೭ರಲ್ಲಿ ಮದ್ರಾಸದ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾತಂತ್ರ್ಯದ ಗೊತ್ತುವಳಿ ಮಂಡಿಸಿದ ವೀರರು ಜವಹರರು. ೨೯ರಲ್ಲಿಯೇ ಇವರು ಕಾಂಗ್ರೆಸ್ ಅಧ್ಯಕ್ಷರಾದರು. ಆಗ ಕಾಂಗ್ರೆಸನ್ನು ಸಂಪೂರ್ಣ ಸ್ವಾತಂತ್ರ್ಯಕ್ಕೆ ಬದ್ಧಗೊಳಿಸಿ ತನ್ನ ಸಮಾಜವಾದದ ನಿಲುಮೆಯನ್ನು ಸ್ಪಷ್ಟಗೊಳಿಸಿದರು. ೧೯೩೧ರಲ್ಲಿ ಮೂಲಭೂತ ಹಕ್ಕುಗಳ ಗೊತ್ತುವಳಿಗೆ ಹೊಣೆಗಾರರಾದರು. ೩೬ರಲ್ಲಿ ಸ್ವಾತಂತ್ರ್ಯ ಹಾಗೂ ಸಮಾಜವಾದದ ತತ್ವಗಳನ್ನು ಎತ್ತಿ ಹಿಡಿದರು. ಕೇವಲ ರಾಜಕೀಯವೆನಿಸಿದ ಕಾಂಗ್ರೆಸ್ಸಿನ ಬೇಡಿಕೆಗೆ ಆರ್ಥಿಕ ಹಿನ್ನೆಲೆಯನ್ನೂ ಒದಗಿಸಿದ ಅಗ್ರ ಪುರುಷರಾದರು. ೧೯೩೬ರಿಂದ ಒಂದು ದಶಕ ನೆಹರು ಜೀವನದಲ್ಲಿ ಏಕಾಂಗ ಜೀವನವೆನ್ನಬೇಕು. ಈ ಸಮಯದಲ್ಲಿ ತನ್ನ ತಂದೆ, ತಾಯಿ, ಪತ್ನಿಯರನ್ನವರು ಕಳೆದುಕೊಂಡರು.

ದ್ವಿತೀಯ ಲೋಕ ಸಮರ ಪ್ರಾರಂಭವಾದಾಗ, ಅವರು ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಗೆ ಜೀವಪ್ರತಿಷ್ಠೆ ಮಾಡಿದರು. ದೇಶವೊಂದು ಸ್ವತಂತ್ರವಾದರೆ, ಆಗ ಅದು ಜಗತ್ತಿನ ಇತಿಹಾಸದ ನಿರ್ಣಾಯಕ ಕಾಲದಲ್ಲಿ ಮಿತ್ರ ರಾಷ್ಟ್ರಗಳ ಪರವಾಗಿ ಪರಿಣಾಮಕರ ಕಾರ್ಯ ಮಾಡಬಹುದೆಂದು ಹೇಳಿದರು. ೧೯೪೦ರಲ್ಲಿ ಬಂಧಿತರಾದ ಇವರು ೪೧ರಲ್ಲಿ ಬಿಡುಗಡೆಯಾದರು. 'ಭಾರತದಿಂದ ತೊಲಗಿರಿ' ಯೆಂಬ ೪೨ರ ಚಳವಳಿಯಲ್ಲಿ ಮರಳಿ ಸೆರೆಮನೆಗೆ ತೆರಳಿದ ನೆಹರು ೪೫ರ ವರೆಗೆ ಅಲ್ಲಿಯೇ ಉಳಿದರು. ಸಿಮ್ಲಾದಲ್ಲಿ ನಡೆದ ಪರಿಷತ್ತಿನಲ್ಲಿ ಸಕ್ರಿಯವಾಗಿ ಭಾಗವಹಿಸಿದ ಇವರು ಪಾಕಿಸ್ತಾನ ರಚನೆಯನ್ನು ವಿರೋಧಿಸಿದರು. ಅದೇ ಸಮಯ ಐ ಎನ್ ಎ ಚಳವಳಿ ನಡೆದಾಗ ನೆಹರೂ ಬ್ಯಾರಿಸ್ಟರ ವೇಷವಂಸಿದರು.

೧೯೪೬ರಲ್ಲಿ ಭಾರತದ ತಾತ್ಕಾಲಿಕ ಸರಕಾರದ ಉಪಾಧ್ಯಕ್ಷರೆಂದು ಅಧಿಕಾರ ಸ್ವೀಕರಿಸಿ, ವಿದೇಶವ್ಯವಹಾರ ಶಾಖೆಯನ್ನು ತಾನೇ ನೋಡಿ ಕೊಳ್ಳತೊಡಗಿದರು. ೧೯೪೭ರಲ್ಲಿ ಭಾರತವು ಸ್ವತಂತ್ರವಾದ ಮೇಲೆ ತಮ್ಮ ನಿಧನದ ವರೆಗೂ ಪ್ರಧಾನ ಮಂತ್ರಿಯಾಗಿ ನಚ್ಚಿನ ನಾಯಕನಾಗಿ ಉಳಿದು ಬಂದಿದ್ದರು. ಈ ಅವಧಿಯಲ್ಲಿ ಅವರು ದೇಶದ ಆರ್ಥಿಕ ಭವಿಷ್ಯತ್ತಿಗೆ ನಾಂದಿಯನ್ನು ಹಾಕಿ ಪ್ರಜಾಸತ್ತಾತ್ಮಕ ಸಮಾಜವಾದ ದಾರಿಯನ್ನು ಅದಕ್ಕೆ ತೋರಿಸಿಕೊಟ್ಟರು.

ಜವಾಹರಲಾಲರಿಗೆ ಪ್ರಜಾಸತ್ತೆಯಲ್ಲಿ ಅಚಲ ವಿಶ್ವಾಸ. ಉಳಿದ ರಾಜತಂತ್ರಗಳಿಗಿಂತ ಇದರಲ್ಲಿ ದೋಷ ಕಡಿಮೆಯಾದುದರಿಂದ ಇದು ಸ್ವೀಕಾರಾರ್ಹವೆನ್ನುತ್ತಾರೆ ಅವರು. "ಗಾಂಧೀಜಿ ನಿಮ್ಮನ್ನು ರಾಜಕೀಯ ಉತ್ತರಾಧಿಕಾರಿಯೆಂದು ಸ್ವೀಕರಿಸಿದಂತೆ ನಿಮ್ಮ ಉತ್ತರಾಧಿಕಾರಿಯನ್ನು ನೀವು ಸ್ವೀಕರಿಸ ಬಾರದೇಕೆ?" ಎಂಬುದಕ್ಕೆ ಅವರಿತ್ತ ಉತ್ತರ ಇದಕ್ಕೆ ಮತ್ತೊಂದು ನಿದರ್ಶನ: "ಪ್ರಧಾನಮಂತ್ರಿ ಹುದ್ದೆ ನಿರ್ವಹಿಸಬಲ್ಲ ಅನೇಕ ಮಕ್ಕಳನ್ನು ಭಾರತ ಮಾತೆ ಹೆತ್ತಿದ್ದಾಳೆ" ಎಂದಿದ್ದಾರೆ ಇವರು. ತಾನು ಉತ್ತರಾಧಿಕಾರಿಯನ್ನು ಹೆಸರಿಸಿ ಜನತೆಯ ಮೇಲೆ ಆತನ ಅಧಿಕಾರವನ್ನು ಹೇರಬಾರದು; ಜನತೆಯೇ ತನಗೆ ಬೇಕಾದವನನ್ನು ಆರಿಸಬೇಕು—ಎಂಬುದು ಅವರ ಗುರಿ. ಇದೇ ಪ್ರಜಾಪ್ರಭುತ್ವ. ನೆಹರು ಉದ್ದೇಶ ಇಷ್ಟರಲ್ಲೇ ಸಿದ್ಧಿಸಲಿದೆ.



ಅಳಿದೇ ಹೋಯಿತು ಭಾರತ ರತ್ನ

೧

ಹೋಯಿತು ಭಾರತ ಕೀರ್ತಿ ಪತಾಕೆ ।
ಆಯಿತು ದೇಶದ ಶಾಂತಿಗೆ ಧಕ್ಕೆ ॥
ಕಾಯವು ತೊರೆಯಿತು ನೆಹರು ಆತ್ಮ ।
ಮಾಯವಾಯಿತು ಭಾರತ ರತ್ನ ॥
ಧ್ಯೇಯದ ಸಾಧಕ ಧೀರ ಮಹಾತ್ಮ ।
ನ್ಯಾಯದ ಮೂರ್ತಿನೀ ಆದೆ ಹುತಾತ್ಮ

೨

ಪಂಚ ಶೀಲದಾ ಸ್ಥಾಪಕ ನೆಹರೂ ।
ಕೊಂಚವು ನೋವಿಗೆ ಸಿಲುಕದ ನೆಹರು ।
ವಂಚನೆಯಿಲ್ಲದೆ ಆಳಿದ ನೆಹರೂ ।
ಪಂಚಮರನು ಉದ್ಧರಿಸಿದ ನೆಹರೂ ॥

೩

ಆನಂದ ಭವನದ ಪ್ರೀತಿಯ ಕಂದಾ ।
ಆನಂದದಿಂದಲೆ ಸ್ವಾತಂತ್ರ್ಯ ತಂದಾ ॥
ಕಾಣುವ ಹಿಂಸೆ ಅಸೂಯೆಗೆ ನೊಂದಾ ।
ಕಾಣದ ಸ್ವರ್ಗಕೆ ನಡೆದನು ಚಂದಾ ॥

೪

ಮೋತಿಲಾಲರ ಪ್ರೀತಿಯ ಕುವರನೇ ।
ಮಾತಿನ ಜಾಣನೆ ಕಮಲೆಯ ವರನೇ ।
ನೀತ ಅಹಿಂಸೆಗೆ ಶಾಂತಿಯ ವೀರನೇ ।
ನೂತನ ರೂಪದಿ ಗೆದ್ದಿಹ ಧೀರನೇ ॥

೫

ರಾಣಿ ಸ್ವರೂಪಳ ಲಾಲ ಜವಾಹಿರ ।
ದಾಸಿಯು ನೀನು ತೋರಿದೆ ಕೃಪಾಕರ ।
ಮಾನನಿಧಿ ನೀ ಇಂದಿರ ಪಿತವರ ॥
ಪ್ರಾಣವ ಬಿಡುತನೀ ಆದೆಯ ಅಮರಾ ॥

೬

ಹೋದೆಯ ನಮ್ಮಯ ನೇಹದ ನೇತಾ ।
ಕಾದಿ ಹಜ ನೂರೆ ಶಾಂತಿಯ ದೂತಾ ॥
ಆದರು ದೇಶದ ಸೇವೆಗೆ ಸೋತಾ ।
ನೋಡದಿ ಆದನು ಭುವನ ವಿಖ್ಯಾತಾ ॥

—ಶ್ರೀ ಪಿ. ರಾಮಕೃಷ್ಣ ಆಚಾರ್.

ಟೆಲಿಗ್ರಾಂ; 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

READ & ADVERTISE IN NAVAYUGA WEEKLY

ಅಮ್ಮನ ವೈದ್ಯ

(೨ನೇ ಪುಟದಿಂದ)

ದಿನ ಹತ್ತಿರವಾಯಿತು. ನಾನಾಗ ಸಣ್ಣವನು, ಹೆಚ್ಚುಕಮ್ಮಿ ಹತ್ತು ವರ್ಷವಾಗಿರಬಹುದು. ಹುಟ್ಟು ಸಾವುಗಳ ಬಗ್ಗೆ ಮೂಢನಾಗಿದ್ದೆ. ಅಂದು ರಾತ್ರಿ ಊಟ ಮುಗಿಸಿ ಮಲಗಿ ನಿದ್ರೆ ಹೋಗಿದೆ. ಮಧ್ಯ ರಾತ್ರಿ ಕಳೆದ ಮೇಲೆ ಜೋರಾಗಿ ಘಂಟೆ ಬಡಿದಂತಾಗಿ ಎಚ್ಚರಗೊಂಡು ಕಣ್ಣುಜ್ಜುತ್ತಾ ಹೊರಬಂದು ನೋಡಿದೆ ಅಣ್ಣ ಘಂಟೆ ಬಡೆಯುತ್ತಿದ್ದ. ಸಣ್ಣ ಮಗುವೊಂದು ಜೋರಾಗಿ ಅಳುತಿತ್ತು. ಅಮ್ಮ ಸಣ್ಣ ಧ್ವನಿಯಲ್ಲಿ ನರಳುತಿದ್ದಳು. ಅಜ್ಜಿ ಕಿರುಚುತಿದ್ದ ಮಗುವಿಗೆ ಬಿಸಿ ನೀರಿನಲ್ಲಿ ಸ್ನಾನ ಮಾಡಿಸುತಿದ್ದರು. ಅಬ್ಬ ಎಷ್ಟೊಂದು ಸಣ್ಣ ಮಗು. ಪುಟ್ಟ ತಲೆ, ಸಣ್ಣ ಕೈ ಕಾಲುಗಳು, ಪುಟ್ಟ ಬಾಯಿ. ಪುಟ್ಟ ಪುಟ್ಟ ಕಣ್ಣು ಕಿವಿಗಳು, ದೊಡ್ಡ ಹೊಕ್ಕಳು. ಮಾಂಸದ ಮುದ್ದೆಯಂತಿತ್ತು ಆ ಗಂಡು ಮಗು. ಅದಕ್ಕೆ ನಗಲು ಬರುತ್ತಿರಲಿಲ್ಲ ಅಳುತ್ತಲೇ ಇತ್ತು. ಆ ನಂತರ ಬಾಯಿ ಮುಚ್ಚಿ ಕಣ್ಣು ಮುಚ್ಚಿಕೊಂಡಿತು

ದೊಡ್ಡದಾಗಿದ್ದ ಅಮ್ಮನ ಹೊಟ್ಟೆ ಸಣ್ಣದಾಗಿತ್ತು. ಮನೆಯಲ್ಲಿ ಬೇರೆ ಕೋಣೆ ಇಲ್ಲದಿದ್ದುದರಿಂದ ಚಾವಡಿಯಲ್ಲೇ ತಟ್ಟಿಯನ್ನು ಇಟ್ಟು ಕೋಣೆಯಂತೆ ಮಾಡಿದ್ದರು. ಅಮ್ಮ ಅಲ್ಲೇ ಮಲಗಿದ್ದಳು. ಅಜ್ಜಿ ಮಗುವನ್ನು ಅಮ್ಮನ ಹತ್ತಿರ ಮಲಗಿಸಿದ್ದಳು. ನನ್ನನ್ನು ನೋಡಿ ಅಮ್ಮ ನಕ್ಕು ನಿನಗೊಬ್ಬ ತಮ್ಮ ಬಂದಿದ್ದಾನೆ ನೋಡು ಎಂದಳು. ನನಗೇಕೋ ಆ ಮಗುವನ್ನು ನೋಡಿ ರಹಸ್ಯವಾಗಿತ್ತು. ಹಿಡಿಯುವಂತಿರಲಿಲ್ಲ, ಆಡಿಸುವಂತಿರಲಿಲ್ಲ, ಅದಕ್ಕೆ ರೂಪಿಲ್ಲ, ಮಾತಿಲ್ಲ, ನಗುವಿಲ್ಲ. ಹುಟ್ಟುವಾಗ ನಾನೂ ಹಾಗೆಯೇ ಇದ್ದಿರಬಹುದೆಂದು ಕೊಂಡು ಸಮಾಧಾನಪಟ್ಟೆ. ಅಮ್ಮ ಅಂದಳು—ಸುಮತಿಯೂ ಇದ್ದಿದ್ದರೆ ಚೆನ್ನಾಗಿತ್ತು. ಮಗುವನ್ನು ನೋಡಿ ಸಂತೋಷಪಡುತಿತ್ತು ಅದು—ಎಂದ. ಮಾರನೇ ದಿನವೇ ಅಕ್ಕನಿಗೆ ಪತ್ರ ಹೋಯಿತು—ಮನೆಗೆ ಒಬ್ಬ ಹೊಸ ಅತಿಥಿ ಬಂದಿದ್ದಾನೆಂದೂ ಆತನನ್ನು ನೋಡಲು ಒಮ್ಮೆ ಊರಿಗೆ ಬಂದು ಹೋಗಬೇಕೆಂದೂ ಅಕ್ಕನಿಗೆ ಪತ್ರದಲ್ಲಿ ತಿಳಿಸಿತ್ತು.

ಅಮ್ಮನ ಬಾಣಂತಿತನ ಕಳೆಯುತ್ತ ಬಂತು. ಪ್ರತಿನಿತ್ಯ ಆಕೆ ಒಂದೊಂದು ಹರಿವಾಣ ವೀಳ್ಯದೆಲೆ ಖಾಲಿ ಮಾಡುತಿದ್ದಳು. ಮನೆಗೆ ಬಂದವರೆಲ್ಲಾ ವೀಳ್ಯದೆಲೆ ತಂದುಕೊಟ್ಟು ಹೋಗುತಿದ್ದರು. ಮಗುವಿಗೆ ಕೈಯಲ್ಲಿ ಏನಾದರೂ ಇಟ್ಟು ಹೋಗುತಿದ್ದರು. ಅಮ್ಮನಿಗೆ ಜಾಗ್ರತೆಯಾಗಿರಿ ಎಂದು ಬುದ್ಧಿವಾದ ಹೇಳಿ ಹೋಗುತ್ತಿದ್ದರು. ಅಮ್ಮ ಸೊಂಟಕ್ಕೆ ಸೀರೆಯನ್ನು ಬಲವಾಗಿ ಪಟ್ಟಿಯಂತೆ ಕಟ್ಟಿದ್ದಳು. ಬಹುಶಃ ಸೊಂಟಕ್ಕೆ ಬಲ ಬರಲಿ ಎಂದು ಕಟ್ಟಿರಬಹುದು. ಅವಳಿಗೆ ಹೆಚ್ಚು ಕೆಲಸ ಮಾಡಲು ಆಗುತ್ತಿರಲಿಲ್ಲ. ಆದರೂ ಇನ್ನೊಬ್ಬ ಅಕ್ಕನಿಗೆ ಏನೇನೋ ಹೇಳುತಿದ್ದಳು. ದನ ಕರುಗಳಿಗೆ ನೀರಿಟ್ಟಾಯ್ತೋ, ಎಮ್ಮೆ ಕರೆದಾಯ್ತೋ, ಅಡಿಗೆಯಾಯ್ತೋ, ಹಾಲು ಕಾಯಿಸಿಯಾಯ್ತೋ ತರಕಾರಿ ಬೆಳೆಗಳಿಗೆ ನೀರು ಹಾಕಿಯಾಯ್ತೋ ಇತ್ಯಾದಿ ಇತ್ಯಾದಿ ಪ್ರಶ್ನೆಗಳನ್ನು ಹಾಕುತ್ತಾ ಮಲಗಿಕೊಂಡೇ ಕಾರುಬಾರು ನಡೆಸುತಿದ್ದಳು. ಮನೆಯ ಕೆಲವು ಸಣ್ಣಪುಟ್ಟ ಕೆಲಸಗಳನ್ನು ಅವಳೇ ಮಾಡುತಿದ್ದಳು.

ದಿನಗಳುರುಳಿದಂತೆ ಮಗು ಪುಟಪುಟವಾಗಿ ಬೆಳೆಯಿತು. ಕೈ ಕಾಲು ಅಲ್ಲಾಡಿಸಿ ಬಾಯಗಲಿಸಿ ನಗತೊಡಗಿತು. ಅಜ್ಜಿಯ ಇಷ್ಟದಂತೆ ಮಗುವಿಗೆ 'ನಾರಾಯಣ' ಎಂದು ಹೆಸರಿಟ್ಟರು. ಅವನು ಹುಟ್ಟಿದ ಗಳಿಗೆ ಚೆನ್ನಾಗಿದೆಯೆಂದೂ ಅದರಿಂದ ಮನೆಗೆ ಒಳ್ಳೆಯದಾಗುತ್ತದೆಂದೂ ತಂದೆಯವರು ಹೇಳುತ್ತಲೇ ಇದ್ದರು.

ಒಂದು ತಿಂಗಳಾಗುವುದರೊಳಗೆ ಅಮ್ಮ ಹಿಂದಿಗೆ ಬಿಟ್ಟಿದ್ದ ಕೆಲಸ ಮಾಡತೊಡಗಿದಳು. ಆಗಾಗ್ಗೆ ಅವಳಿಗೆ ಸುಮತಿಯ ಜ್ಞಾಪಕವಾಗುತಿತ್ತು. ಪಾಪ ಆ ಮಗು ಇದ್ದಿದ್ದರೆ ಈ ಮಗುವನ್ನು ನೋಡಿ ಸಂತೋಷಪಡುತಿತ್ತು ಎಂದು ಹೇಳುತ್ತಲೇ ಇದ್ದಳು ಅಕ್ಕನಿಗೆ ಒಂದು ಬಾರಿ ಬಂದು ಹೋಗುವಂತೆ ಪತ್ರ ಬರೆದಿದ್ದಳು.

ನಾರಾಯಣನಿಗೆ ಒಂದು ವರ್ಷ ತುಂಬುವುದರೊಳಗೆ ಅಕ್ಕ ಪುನಃ ಊರಿಗೆ ಬಂದಳು. ಈ ಬಾರಿ ಅಕ್ಕ ಗರ್ಭಿಣಿಯಾಗಿದ್ದಳು ಸುಮತಿಯನ್ನೂ ಕರೆದುಕೊಂಡು ಬಂದಿದ್ದಳು ಅಕ್ಕ. ಸುಮತಿಯಾದರೋ ಮೊದಲಿನಂತಿರಲಿಲ್ಲ ತುಂಬ ಕ್ಷೀಣವಾಗಿದ್ದಳು. ಕೈಕಾಲು ಸಣ್ಣಗಾಗಿದ್ದುವು. ಹೊಟ್ಟೆ ಸ್ವಲ್ಪ ದೊಡ್ಡದಾಗಿತ್ತು, ಮುಖ ಬಿಳಚಿಕೊಂಡು ಕಳೆಹೀನವಾಗಿತ್ತು ಅವಳಿಗೆ ದಿನ ಬಿಟ್ಟು ದಿನ ಜ್ವರ ಬರತೊಡಗಿತು ಅದೇನೋ ಮಲೇರಿಯಾ ಜ್ವರವಂತೆ.

ಅಮ್ಮ ಏನೇನೋ ಔಷಧಿಗಳನ್ನು ಮಾಡಿದಳು. ಹಿಂದಿನಿಂದಲೂ ನಮ್ಮ ಹಳ್ಳಿಯಲ್ಲಿ ಅಮ್ಮ ಒಬ್ಬ ವೈದ್ಯಳಂತೆಯೇ ಆಗಿ ಹೋಗಿದ್ದಳು ನಾರು ಬೇರುಗಳನ್ನು ತಂದು ಇದನ್ನು ಇಂಥಾ ರಸದಲ್ಲಿ ತೇದು ನೆಕ್ಕಿ, ಅರೆದು ಹಚ್ಚಿ, ಕುದಿಸಿ ಕುಡಿಯಿರಿ ಎಂದೇನೇನೋ ಹೇಳಿ ಆ ನಾರು ಬೇರುಗಳನ್ನು ಕೊಟ್ಟು ಆಸುಪಾಸಿನ ಮನೆಗಳ ಅನೇಕ ವ್ಯಾಧಿಗಳನ್ನು ಓಡಿಸಿದ್ದಳು. ನೆರೆಹೊರೆಯ, ಊರು ಪರವೂರಿನ ಎಷ್ಟೋ ಜನ ಬಂದು ತಮ್ಮ ಮನೆಯಲ್ಲಿರುವ ಖಾಯಿಲೆಗಳನ್ನು ವರ್ಣಿಸಿ ಅಮ್ಮನೊಂದಿಗೆ ಘಂಟೆಗಟ್ಟಲೆ ಪಟ್ಟಾಂಗ ಹೊಡೆದು ಔಷಧಿ ತೆಗೆದುಕೊಂಡು ಹೋಗುತ್ತಿದ್ದರು. ಅಮ್ಮ ಅವರಿಂದ ಒಂದು ಕಾಸನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಬದಲಾಗಿ ಅವರಿಗೇ ಪಥ್ಯಕ್ಕೆ ಬೇಕಾದ ವಸ್ತುಗಳನ್ನು ಮನೆಯಿಂದಲೇ ತೆಗೆದು ಕೊಡುತಿದ್ದಳು. ಯಾವ ಪ್ರತ್ಯುಪಕಾರವನ್ನೂ ಅಪೇಕ್ಷಿಸದೆ ಜನಸೇವೆ ಮಾಡುತಿದ್ದ ಅಮ್ಮನ ಹೆಸರು ಆಸುಪಾಸಿನ ಹತ್ತಾರು ಊರುಗಳಿಗೆ ಹರಡಿತ್ತು.

ಅಮ್ಮನ ಈ ವೈದ್ಯಕ್ಕೆ ಹೆಚ್ಚು ಕಾರಣರಾದವರು ನಮ್ಮ ಬಾರಕೂರಿನ ಅಜ್ಜಯ್ಯನವರಂತೆ. ಅವರ ಪೂರ್ಣ ನೆನಪು ನನಗಿಲ್ಲ. ಅವರನ್ನು ನಾನು ಕಂಡಾಗ ನನ್ನ ಸುಮತಿಯಾಗಲೀ, ಜಾನಕಿಯಾಗಲೀ ಹುಟ್ಟಿರಲಿಲ್ಲ. ಆಗ ನಾನು ಮೂರು ನಾಲ್ಕು ವರ್ಷದ ಪೋರನಿರಬೇಕು. ಆ ಅಜ್ಜಯ್ಯನಾದರೋ ಆಗೊಮ್ಮೆ ಈಗೊಮ್ಮೆ ಬಾರಕೂರಿನಿಂದ ನಮ್ಮ ಮನೆಗೆ ಬರುತಿದ್ದರು. ಅವರಿಗೆ ಅಮ್ಮನ ಮೇಲೆ ಬಹಳ ಪ್ರೀತಿ. ಹೆಚ್ಚು ಕಮ್ಮಿ ಅಮ್ಮನನ್ನು ಅವರ ಮಗಳಂತೆಯೇ ನೋಡುತಿದ್ದರು. ಅಮ್ಮ ಮಾಡಿ ಹಾಕಿದ ಅಡಿಗೆಯೆಂದರೆ ಅವರಿಗೆ ಪಂಚಪ್ರಾಣ. ಅವರು ಮಧ್ಯಾಹ್ನ ಅಥವಾ ರಾತ್ರಿ ಊಟ ಮಾಡಿ ಸ್ವಲ್ಪ ಮಲಗಿದರೆ ಅವರ ಹೊಟ್ಟೆ ನನ್ನ ಆಟದ ಮೈದಾನವಾಗುತಿತ್ತು. ಅವರಿಗೂ ನನ್ನ ಮೇಲೆ ಬಹಳ ಪ್ರೀತಿಯಿತ್ತಂತೆ. ಆಗ ಮನೆಯಲ್ಲಿ ನಾನೇ ಚಿಕ್ಕವನಾಗಿದ್ದುದರಿಂದ ನನ್ನನ್ನೇ ಹೆಚ್ಚಾಗಿ ಆಡಿಸುತ್ತಿದ್ದರಂತೆ ಅವರು. ಅದು ನಿಜವೋ ಸುಳ್ಳೋ ಅಂತೂ ಅವರ ಹೊಟ್ಟೆಯ ಮೇಲೆ ಬಿದ್ದು ಹೊರಳಾಡುತ್ತಿದ್ದುದು ನನಗೆ ಸ್ವಲ್ಪ ಜ್ಞಾಪಕವಿದೆ.

ಈ ಬಾರಕೂರಿನ ಅಜ್ಜಯ್ಯ ಔಷಧಿ ಕೊಡುವುದರಲ್ಲಿ ಮಹಾ ಗಟ್ಟಿಗನಂತೆ, ಅವರ ಔಷಧಿಯಿಂದ ಗುಣವಾಗದ ರೋಗವೇ ಇರಲಿಲ್ಲವಂತೆ. ಏನೇನೊ ಮಾತ್ರೆಗಳನ್ನೂ ಕಷಾಯಗಳನ್ನೂ ಮಾಡಿ ಮಾರಿ ಆ ಆಸುಪಾಸಿನಲ್ಲಿ ಪ್ರಸಿದ್ಧ ಪಂಡಿತರಾಗಿದ್ದರು ಅವರು. ಅವರಿಂದ ಎಷ್ಟೊ ನಾರು ಬೇರುಗಳ ಹೆಸರುಗಳನ್ನು ಕೇಳಿ ತಿಳಿದುಕೊಂಡಿದ್ದಳು—ಅಮ್ಮ. ಅಲ್ಲದೆ ಅವರು ತಯಾರಿಸಿದ್ದೆಂದು ಹೇಳಲಾದ ಕೆಲವು ಮಾತ್ರೆಗಳು ಈಗಲೂ ನಮ್ಮ ಮನೆಯಲ್ಲಿವೆ, ಅವನ್ನು ಉಪಯೋಗಿಸುವ ಕ್ರಮ ಅಮ್ಮನಿಗಲ್ಲದೆ ಬೇರೆ ಯಾರಿಗೂ ತಿಳಿಯದು. ಆ ಅಜ್ಜಯ್ಯ ಸತ್ತು ಯಾವ ಸ್ವರ್ಗದಲ್ಲಿದ್ದಾರೋ ತಿಳಿಯದು. ಆದರೂ ಅವರು ಕೆಲವು ಔಷಧಿಗಳ ರಹಸ್ಯವನ್ನು ಅಮ್ಮನಿಗೆ ತಿಳಿಸಿ ಅವಳಿಂದ ಜನರಿಗೆ ಅದನ್ನು ಉಪಕಾರವಾಗಲಿ ಎಂದು ಹರಸಿ ಹೋಗಿದ್ದಾರೆ.

ಈ ಕಾರಣದಿಂದ ನಮ್ಮ ಮನೆಯಲ್ಲಿ ಯಾರಿಗೆ ಏನೇ ಆಗಲಿ ಅದಕ್ಕೆ ಅಮ್ಮನದೇ ಮದ್ದು. ಅವಳ ಕೈಗುಣವೋ ಸಶ್ರದ್ಧತೆಯೋ ಅಲ್ಲ ಬಾರಕೂರಿನ ಅಜ್ಜಯ್ಯನ ಆಶೀರ್ವಾದವೋ ತಿಳಿಯದು—ಅವಳು ಕೊಟ್ಟ ಔಷಧಿ ಪರಿಣಾಮಕಾರಿಯೇ ಇರುತಿತ್ತು. ಇಂಗ್ಲಿಷ್ ಡಾಕ್ಟರರಿಂದ ಗುಣವಾಗದ ಕೆಲವು ಖಾಯಿಲೆಗಳೂ ಅಮ್ಮನ ಔಷಧಿಯಿಂದ ಗುಣವಾಗುತಿತ್ತು. ಇದಕ್ಕಾಗಿ ಯಾರೂ ಅವಳಿಗೆ ಯಾವ ವಿಧದ ಸರ್ಟಿಫಿಕೇಟನ್ನೂ ಕೊಡಲಿಲ್ಲ. ಅಮ್ಮ ಅದನ್ನು ಬಯಸಿಯೂ ಇಲ್ಲ.

ಹೀಗೆ ಊರಿಗೇ ವೈದ್ಯಳಾಗಿದ್ದ ಅಮ್ಮನಿಗೆ ಈ ಮಲೇರಿಯಾ ರೋಗವೊಂದು ಲೆಕ್ಕವೇ! ಕೆಲವು ಕಷಾಯಗಳು ತಯಾರಾಯ್ತು ಮನೆಯಲ್ಲಿ ಯಾವ ಯಾವುದೋ ನಾರು ಬೇರುಗಳಿಂದ. ಅದನ್ನು ಸುಮತಿಗೆ ಕುಡಿಸತೊಡಗಿದರು ಆ ಗಲಾಟೆಯೋ ಗಲಾಟೆ. ಆಗ ಮನೆಯಲ್ಲಿ ಉಳಿದ ಮಕ್ಕಳು ಪರವಾಡಲು ಹೆದರುತ್ತಿದ್ದರು ಸುಮತಿಯು ಔಷಧಿಯನ್ನು ಕುಡಿಯುತ್ತೇನೆಂದರೆ ಸರಿ, ಎಲ್ಲರೂ ಗಪ್

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು ಉತ್ತಮ ಪ್ರತಿ: ರೂ ಎರಡೂವರೆ (ಟಪಾಲು ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟಪಾಲು ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗಿ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟಪಾಲು ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

REGD. No. B. G. 176
LICENCE No. 31
Licensed to Post without Prepayment

ಚಿಪ್. ಅಷ್ಟು ಕಹಿಯಾಗಿತ್ತು ಆ ಕಷಾಯ. ಪಾಪ ಸುಮತಿಕೂಡಾ ಅಮ್ಮನ ಆ ಕಹಿ ಔಷಧಿಗೆ ಹೆದರಿ ಕೆಲವು ವೇಳೆ ಛಳಿ ಜ್ವರ ಬಂದರೂ ಅದನ್ನು ತಡೆದು ಕೊಂಡು ತಾನು ಸರಿಯಾಗಿರುವುದಾಗಿ ತೋರಿಸುತಿದ್ದಳು. ಆದರೂ ಪ್ರತಿ ನಿತ್ಯ ಮೂರು ಹೊತ್ತು ಸುಮತಿಗೆ ಔಷಧಿಯನ್ನು ಕುಡಿಸತೊಡಗಿದರು ಜ್ವರದ ಪ್ರತಾಪ ದಿನೇ ದಿನೇ ಜೋರಾಗುತ್ತಲೇ ಇತ್ತು. ದಿನಬಿಟ್ಟು ದಿನ ಬರುತಿದ್ದ ಜ್ವರ ಪ್ರತಿ ನಿತ್ಯ ಬರ ತೊಡಗಿತು. ಜ್ವರ ಬಂದಾಗ ಮೈ ಕಾವ ಕೆಂಡದಂತಾಗುತಿತ್ತು. ಕಂಬಳಿಗಳ ರಾಶಿಯನ್ನೇ ಹೊದಿಸಿದರೂ ಸುಮತಿ ಮತ್ತೂ ಛಳಿಯಲ್ಲಿ ನಡುಗುತಿದ್ದಳು. ದಿನೇ ದಿನೇ ಕ್ಷೀಣಿಸುತ್ತಾ ಬಂದು ಕೇವಲ ಎಲುಬಿನ ಪಂಜರವಾಯಿತು ಅವಳ ಶರೀರ. ಮನೆಯಲ್ಲಿ ಎಲ್ಲರಿಗೂ ಗಾಬರಿ, ಅಮ್ಮನೂ ಸುಸ್ತಾದಳು ಅವಳಿಗೆ ಸುಮತಿಯ ಜ್ವರ ಒಂದು ದೊಡ್ಡ ಸಮಸ್ಯೆಯಾಯಿತು.

ಇನ್ನು ಈ ನಾಟಿ ಔಷಧಿಗೆ ಈ ಜ್ವರ ಜಗ್ಗುವುದಿಲ್ಲ, ಇದಕ್ಕೆ ಇಂಗ್ಲಿಷ್ ಔಷಧಿಯೇ ಸರಿ, ಪೇಟೆಗೆ ಕರೆದುಕೊಂಡು ಹೋಗಿ ಸುಮತಿಗೆ ಅಲ್ಲಿ ಔಷಧಿ ಕೊಡಿಸುವುದೇ ಸರಿ ಎಂದು ಅಪ್ಪ ಯೋಚಿಸಿದರು. ಆದರೆ ಇದು ಅಮ್ಮನಿಗೆ ಸರಿ ಕಂಡುಬರಲಿಲ್ಲ. ಸುಮತಿಯನ್ನು ಬೇರೆ ಡಾಕ್ಟರರಿಗೆ ತೋರಿಸಿ ಔಷಧಿ ಕೊಡಿಸಲು ಅವಳು ಒಪ್ಪಲಿಲ್ಲ. ಅವಳ ಮನಸ್ಸು ಹಾಗೆ ಮೃದುವೆಂದರೆ ಕುಸುಮ, ಕಠಿಣವೆಂದರೆ ವಜ್ರ. ನಾಳೆ ಬೇರೆ ಔಷಧಿ ಮಾಡುತ್ತೇನೆ ಎಂದಳು.

ಮಾರನೆಯ ದಿನ ಎಂದಿನಂತೆ ಸುಮಾರು ಒಂಭತ್ತು ಘಂಟೆಯ ಸಮಯಕ್ಕೆ ಸುಮತಿ ನಡುಗ ತೊಡಗಿದಳು. ಮೈಕೈಗಳೆಲ್ಲಾ ಕಾದು ಕೆಂಡವಾಗಿದ್ದುವು ಛಳಿ ಬಿಸಿಯೇರಿತ್ತು ಹಲ್ಲುಗಳು ಕಟಕಟನೆ ಎನ್ನುತಿದ್ದುವು ಅವಳ ಇಡೀ ಶರೀರ ಛಳಿಯಿಂದ ಕಂಪಿಸುತಿತ್ತು. ನಾವೆಲ್ಲ ನಮ್ಮ ನಮ್ಮ ಹಾಸಿಗೆಗಳಿಂದ ಕಂಬಳಿಗಳನ್ನು ಹೊರತೆಗೆದೆವು, ಸುಮತಿಗೆ ಹೊದ್ದಿಸಲು. ಕೆರೆಯಲ್ಲಿ ಎಮ್ಮೆಯ ಮೈ ತೊಳೆಯುತಿದ್ದ ಅಮ್ಮನಿಗೆ ಸುದ್ದಿ ಹರಡಿತು. ಮಲೇರಿಯಾ ಮಾರಿ ಮಗಳಿಗೆ ಹೊಕ್ಕಿರುವುದನ್ನು ಕೇಳಿ ಎಮ್ಮೆಯನ್ನು ಕೆರೆಯಲ್ಲೇ ಬಿಟ್ಟು 'ಇದಕ್ಕೆ ಮಾಡುತ್ತೇನೆ ಇವತ್ತು ಮದ್ದು' ಎಂದು ಹೇಳುತ್ತಲೇ ಬಂದಳು, ಅರ್ಧ ಒದ್ದೆಯಾಗಿದ್ದ ಸೀರೆಯನ್ನು ಮೇಲಕ್ಕೆ ಕಟ್ಟಿಕೊಂಡು. ಅಪ್ಪ ಮದ್ದು ಕುಡಿಸುತಾಳೆಂದು ಸುಮತಿ ಹೆದರಿದಳು. ಆದರೆ ಅಮ್ಮ ಮದ್ದು ಕುಡಿಸಲಿಲ್ಲ ಅಕ್ಕನನ್ನು ಕರೆದಳು ಸುಮತಿಯ ಮೈಮೇಲಿದ್ದ ಅಂಗಿಯನ್ನು ಬಿಚ್ಚಿ ಬಾವಿಯ ಕಟ್ಟೆಗೆ ಕರೆದುಕೊಂಡು ಹೋಗಿ ಕಲ್ಲಿನ ಮೇಲೆ ಕೂರಿಸಿದಳು. ಆಗಲೇ ಶುರು ಸುಮತಿಯ ರೋದನ. ನಾವೆಲ್ಲಾ ದಂಗಾಗಿ ಹೋದೆವು— ಅಮ್ಮನ ಕೆಲಸವನ್ನು ನೋಡಿ ಸುಮತಿಯನ್ನು ಹಿಡಿದು ಕೂರಿಸಲು ಅಕ್ಕನಿಗೆ ಆಜ್ಞಾಪಿಸಿದಳು ಅಮ್ಮ. ಅವಳಿಗೆ ಕೋಪ ಬಂದಿತೆಂದು ತಿಳಿಯಿತು. ಇನ್ನು ಅವಳಿಗೆ ಎದುರಾಡಿದರೆ ಅವಳ ಬಾಯಲ್ಲಿ ಬದುಕುವುದಿಲ್ಲವೆಂದು ತಿಳಿದು ಸುಮತಿಯನ್ನು ಹಿಡಿದುಕೊಂಡು ಕುಳಿತಳು ಅಕ್ಕ ಅಮ್ಮ ಬಾವಿಯಿಂದ ನೀರು ಸೇದಿ ಸೇದಿ ಸುಮತಿಯ ತಲೆಯ ಮೇಲೆ ಸುರಿಯ ತೊಡಗಿದಳು. ಒಂದು, ಎರಡು, ಮೂರು, ನಾಲ್ಕು ಸಂಖ್ಯೆ ಏರುತ್ತಲೇ ಇತ್ತು. ಒಂದಾದ ನಂತರ ಒಂದು ಬಿಂದಿಗೆ ನೀರು ಸುಮತಿಯ ತಲೆಯ ಮೇಲೆ ಬೀಳುತ್ತಲೇ ಇತ್ತು. ಮೊದಲೇ ಛಳಿ, ಕುದಿಯುವ ಜ್ವರ, ಅದರ ಮೇಲೆ ತಣ್ಣೀರಿನ ಅಭಿಷೇಕ. ಪಾಪ, ಪಾಪ, ಆ ಕೋಮಲ ಶರೀರ ಉಳಿಯಬೇಕೇ ಅಳಿಯಬೇಕೇ! ಅಪ್ಪ ಪೆಚ್ಚಾಗಿ ನಿಂತು ನೋಡುತಿದ್ದರು. ಹಚ್ಚು ಕಮ್ಮಿ ಹತ್ತು ಹದಿನೈದು ಕೊಡ ನೀರನ್ನು ಸೇದು ಹಾಕಿರಬೇಕು ಅಮ್ಮ, ಸುಮತಿಯ ತಲೆಯ ಮೇಲೆ ನಂತರ ಸುಮತಿಯ ಚೀರಾಟ ಜಾಸ್ತಿಯಾದ್ದನ್ನು ಕಂಡು ಅವಳಿಗೆ ಕರುಣೆಯುಕ್ಕಿ ಬಂತೋ ಏನೋ! ನೀರು ಸೇದುವುದನ್ನು ನಿಲ್ಲಿಸಿ ಸುಮತಿಯ ಮೈ ಮಂಡೆಗಳನ್ನೆಲ್ಲಾ ಚೆನ್ನಾಗಿ ಒರಸಿ ಎತ್ತಿಕೊಂಡು ಬಂದು ಹಾಸಿಗೆಯಲ್ಲಿ ಮಲಗಿಸಿ ನಾವೆಲ್ಲ ತೆಗೆದಿಟ್ಟಿದ್ದ ಕಂಬಳಿಗಳನ್ನು ಹೊದಿಸಿದಳು. ಸುಮತಿಯ ಉಸಿರು ಮೇಲೆ ಕೆಳಗೆ ಆಗಿತ್ತು. ನಮಗೆಲ್ಲಾ ಹೆದರಿಕೆ, ಏನಾಗುತ್ತೋ ಎಂತಾಗುತ್ತೋ ಎಂದು. ಸುಮತಿಯನ್ನು ಮಲಗಿಸಿದವಳೇ ಅಮ್ಮ ಒಳಗೆ ಹೋಗಿ ಒಲೆಯ ಮೇಲೆ ನೀರಿಟ್ಟು ಕಾಫಿ ತಯಾರಿಸಿದಳು. ಕಾಲು ಘಂಟೆ ಬಿಟ್ಟು ಬಿಸಿ ಬಿಸಿ ಕಾಫಿಯನ್ನು ತಂದು ಸುಮತಿಗೆ ಕುಡಿಸಿದಳು.

ಆ ಮೇಲೆ ಏನಾಯಿತೆಂದು ನನಗೆ ತಿಳಿಯದು. ಅಂದು ಓಡಿ ಹೋದ ಮಲೇರಿಯಾ ಜ್ವರ ಇಂದಿಗೂ ನಮ್ಮ ಮನೆಯ ಬಳಿ ಸುಳಿಯಲಿಲ್ಲ. ಅಮ್ಮನ ವೈದ್ಯದ ವೈಖರಿಯನ್ನು ನೋಡಿ ಎಲ್ಲರೂ ಮೂಗಿನ ಮೇಲೆ ಬೆರಳಿಡುವವರೇ ಆದರು.

ಪಂಡಿತ ಜವಾಹರರು ನಮ್ಮಿಂದಗಲಿದರು

(೧ನೇ ಪುಟದಿಂದ)

ತರ ಅವರ ದೇಹಸ್ಥಿತಿ ಕೆಡುತ್ತ ಬಂದಿತು. ತಜ್ಞ ಡಾಕ್ಟರರು ಸುಮಾರು ಎಂಟು ತಾಸುಗಳ ಕಾಲ ಮೃತ್ಯುವಿನ ಸಂಗಡ ವಿಶ್ವನಾಗರಿಕರ ಪರವಾಗಿ ಹೋರಾಡಿದರು ತಮ್ಮ ಹೋರಾಟವು ಮಧ್ಯಾಹ್ನದ ೨ ತಾಸಿಗೆ ನಿಷ್ಫಲವಾಯಿತೆಂದವರು ಗದ್ಗದಂಗಿಯೇ ಹೇಳಿದರು. ಜವಾಹರರ ಪ್ರಾಣಪಕ್ಷಿ ಭೌತಿಕದೇಹದಿಂದ ಹಾರಿ ಅನಂತದಲ್ಲಿ ಲೀನವಾಯಿತು. ೨ಗಂಟೆಯ ಹೊತ್ತಿಗೆ ಭಾರತೀಯ ಜಾಗತಿಕ ಕಣ್ಮಣಿ ಉದುರಿ ಬಿದ್ದ ವಾರ್ತೆ ಹೊರಟಿತು. ೨-೫೦ರ ಸುಮಾರಿಗೆ ಜಗತ್ತಿಗೆ ಜಗತ್ತೇ ಮರುಗತೊಡಗಿತು; ಎತ್ತೆತ್ತಲೂ ಶೋಕದ ಬಿರುಗಾಳಿ ಬೀಸಿತು; ಮಾನವತೆಯನ್ನು ಶೋಕ ಸಾಗರದಲ್ಲಿ ಅದ್ದಿತು

ಪಂಡಿತ ಜವಹರಲಾಲ ನೆಹರುವರು ಈ ವರ್ಷದ ಜನವರಿ ತಿಂಗಳಿಂದಲೇ ಅಸ್ವಾಸ್ಥ್ಯಕ್ಕೆ ಗುರಿಯಾಗಿದ್ದರು ಆದರೆ, ಅವರು ಕಳೆದು ಕೊಂಡ ಆರೋಗ್ಯವನ್ನು ಮರಳಿ ಪಡೆದಿದ್ದರು; ತನ್ನ ಕರ್ತವ್ಯ ಪಾಲನೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು. ಒಂದೊಮ್ಮೆ ಧೃತಿಗುಂದಿದ್ದ ೪೫ ಕೋಟಿ ಭಾರತೀಯರು ಮಾತ್ರವಲ್ಲ, ವಿಶ್ವದ ರಾಜ್ಯಗಳ ಎಲ್ಲ ನಾಗರಿಕರೂ ನೆಹರು ಸಚೇತರಾದುದರಿಂದ ಉಲ್ಲಾಸಗೊಂಡಿದ್ದರು, ಈಗ, ಇಂತಹ ನೆಹರುವನ್ನು ಕಳೆದುಕೊಂಡ ಸ್ವತಂತ್ರ ಜಗತ್ತು ಒತ್ತಿಬಂದ ದುಃಖದಿಂದ ತತ್ತರಿಸಿ ಹೋಯಿತು ನೆಹರುರವರ ನಿಧನದಿಂದ ಮಾನವತೆಯು ಅನಾಥವಾಯಿತು. ಜಗತ್ತು ಸ್ವಾತಂತ್ರ್ಯ ಹೋರಾಟದ ಧೀರ ಸೇನಾನಿಯೊಬ್ಬನನ್ನು ಕಳೆದುಕೊಂಡಿತು.

ದೇಶದ ಮೂಲೆ ಮೂಲೆಗಳಿಂದ ಮಾತ್ರವಲ್ಲ ಜಗತ್ತಿನಾದ್ಯಂತದ ಮಾನವತಾ ಪ್ರೇಮಿಗಳು "ಅತಿ ಮಾನವ ಜವಾಹರ"ರ ನಿಧನದಿಂದ ಕಂಗೆಟ್ಟು ಶೋಕಸೂಚಕ ಸಂದೇಶಗಳನ್ನು ಕಳಿಸತೊಡಗಿದರು, ಮಾನವ ನಾಯಕನ ಅಂತ್ಯ ದರ್ಶನಕ್ಕೆಂದು ನವದೆಹಲಿಗೆ ಧಾವಿಸಿದರು. ಚಿರ ಶಾಂತಿಯಲ್ಲಿ ಮಲಗಿದ ಆ ಪುಣ್ಯ ಪುರುಷನ ಶರೀರದ ಮೇಲೆ ಪತ್ರ-ಪುಷ್ಪ ಮಾಲೆಗಳನ್ನು ಸಮರ್ಪಿಸಿ ಶ್ರದ್ಧಾವನತರಾಗಿ ಶ್ರದ್ಧಾಂಜಲಿಯನ್ನರ್ಪಿಸಿದರು. ನೆಹರು ನಿವಾಸದ ಮುಂದ ಮುಂಗಾರ ಮಳೆಯಂತೆ ಜನರು ಕಿಕ್ಕಿರಿದು ನೆರೆದರು; ಕಣ್ಣೀರ ಕೋಡಿ ಹರಿಸಿದರು, "ಕಾಲಾಯ ತಸ್ಮೈ ನಮಃ" ಎಂದಂದುಕೊಂಡು ಸಮಾಧಾನ ಪಡಲು ಪ್ರಯತ್ನಿಸಿದರು.

ಮೇ ತಿಂಗಳ ೨೭ನೆಯ ಬುಧವಾರದಂದು ಮಧ್ಯಾಹ್ನದ ೨ ತಾಸಿಗೆ ದಿವಂಗತರಾದ ಪಂಡಿತ ಜವಾಹರಲಾಲ ನೆಹರುರವರ ಅಂತ್ಯ ಸಂಸ್ಕಾರವು ಮರುದಿನ ಮಧ್ಯಾಹ್ನದ ೧ ತಾಸಿಗೆ ಪ್ರಾರಂಭವಾಯಿತು. 'ತೀನ್ ಮೂರ್ತಿ'ಯಿಂದ ಹೊರಟ ಸ್ಮಶಾನ ಯಾತ್ರೆಯು ಸುಮಾರು ೫ ಗಂಟೆಯ ಹೊತ್ತಿಗೆ ರಾಜಘಾಟನ್ನು ಮುಟ್ಟಿತು. ರಾಷ್ಟ್ರಪಿತ ಮಹಾತ್ಮಾ ಗಾಂಧಿಜಿಯವರ ಸಮಾಧಿಯಿಂದ ೩೦೦ ಗಜ ದೂರದಲ್ಲಿ ರಾಷ್ಟ್ರಶಿಲ್ಪಿ ಪಂಡಿತ ನೆಹರುರವರಿಗಾಗಿ ಚಿತೆ ಸಿದ್ಧವಾಗಿತ್ತು. ನೆಹರುರವರ ಮೊಮ್ಮಗ ಸಂಜೀವ ಚಿತೆಗೆ ಅಗ್ನಿಸ್ಪರ್ಶಮಾಡಿದರು; ಕೆಲವೇ ಸಮಯದಲ್ಲಿ ಪೂರ್ಣ ಶಾಂತಿಪಡೆದ ಜವಹರರ ಅಸ್ಥಿರ ರೂಪ ಅಗ್ನಿ ನಾರಾಯಣರ ಉದರ ಸೇರಿತು; ನೆಹರು ಇನ್ನಿಲ್ಲ, ಎನ್ನುವಂತಾಯಿತು

ಕಾಮನ್‌ವೆಲ್ತಿನ ರಾಣಿ ಇಂಗ್ಲೆಂಡಿನ ರಾಣಿ ಎಲಿಜಬೆಥರ ಪ್ರತಿನಿಧಿ ಅರ್ಲ್ ಮೌಂಟ್ ಬ್ಯಾಟನ್, ಪ್ರಧಾನಿ ಸರ್ ಹೋಂ, ಸಿಂಹಳದ ಪ್ರಧಾನಿ ಸಿರಿಮಾವೋ ಭಂಡಾರ ನಾಯಿಕೆ, ರಶ್ಯದ ಉಪ ಪ್ರಧಾನಿ ಕೋಸಿಜಿನ್, ನೇಪಾಳದ ಪ್ರಧಾನಿ ತುಳಸಿಗಿರಿ, ಅಮೇರಿಕೆಯ ವಿದೇಶಾಂಗ ಸಚಿವ ಡೀನ್ ರಸ್ಕ್ ಸಂಯುಕ್ತ ಅರಬ ಪ್ರಜಾರಾಜ್ಯದ ಉಪಾಧ್ಯಕ್ಷ ಹುಸೇನ ಶಫಿ, ಯುಗೊಸ್ಲಾವಿಯಾದ ಪ್ರಧಾನಿ ಸ್ಟಾಂಬೋಲಿಕ್, ಪಾಕಿಸ್ಥಾನದ ವಿದೇಶ ಮಂತ್ರಿ ಜಡ್. ಎ ಭುಟ್ಟೊ, ಇರಾಣ, ಫ್ರಾನ್ಸಗಳ ವಿದೇಶಿ ಸಚಿವರು, ಇನ್ನಿತರ ಹಲವಾರು ದೇಶಗಳ ರಾಯಭಾರಿಗಳು—ಹೀಗೆ ಇಡಿಯ ಜಗತ್ತಿನ ರಾಜಕಾರಣಿಗಳು, ಪತ್ರಕರ್ತರು, ಸಾಹಿತಿಗಳು, ಕಲಾವಿದರು, ಜನ ಸಾಮಾನ್ಯರು ಕೂಡ ಈ ಅಮರನ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿದ್ದರು ಲೋಕಕ್ಕೆ ಲೋಕವೇ ಈ ಲೋಕ ನಾಯಕನಿಗೆ ತನ್ನ ಅಂತಿಮ ಗೌರವವನ್ನು ಅರ್ಪಿಸಿತು.

ರಾಜಘಾಟದಲ್ಲಿ ಸುಮಾರು ೫ ಲಕ್ಷ ಜನರು ಚಿತೆಯ ಸುತ್ತಮುತ್ತ ನೆರೆದಿದ್ದರು. ಮತ್ತೈದು ಲಕ್ಷ ಜನರು ನವದೆಹಲಿಯಿಂದ ರಾಜಘಾಟದ ವರೆಗಿನ ಮಾರ್ಗದಲ್ಲಿ ಸಾಲುಗಟ್ಟಿ ನಿಂತಿದ್ದರು. ಇನ್ನೈದು ಲಕ್ಷ ಮಂದಿ ಸ್ಥಳಸಿಗದೆ 'ತೀನ್ ಮೂರ್ತಿ'ಯ ಆಸುಪಾಸಿನಲ್ಲಿ ಗುಂಪು ಸೇರಿದ್ದರು, ಇಷ್ಟೊಂದು ದೊಡ್ಡ ಜನ ಸಮೂಹವು ಕಲೆತು ಮಾನವ ನಾಯಕ ನೆಹರುವಿಗೆ ಶ್ರದ್ಧಾಂಜಲಿಯನ್ನರ್ಪಿಸುವ ಸನ್ನಿವೇಶ "ನಭೂತೋ ನಭವಿಷ್ಯತಿ" ಎಂಬಂತಿತ್ತು.

ಕಳೆದ ಐವತ್ತು ವರ್ಷಗಳಿಂದ ಪಂಡಿತ ಜವಾಹರಲಾಲರು ಭಾರತೀಯರ ಮನೆ ಮನೆಯ ಮಾತಾಗಿದ್ದಾರೆ ಸಂಪತ್ತಿನ ಸುಪ್ಪತ್ತಿಗೆಯು ಸ್ವಾತಂತ್ರ್ಯದ ಮುಂದೆ ಕ್ಷುಲ್ಲಕವೆಂದು ಬಗೆದು ವೈಯಕ್ತಿಕ ಸುಖ ಭೋಗಗಳನ್ನು, ಆಶೆ ಆಮಿಷಗಳನ್ನು ಪರಿತ್ಯಾಗ ಮಾಡಿ, ದೇಶದ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ, ಅದರಲ್ಲಿ ಯಶಸ್ವಿಯಾದ ಸ್ವಾತಂತ್ರ್ಯ ಶಿಲ್ಪಿ ನೆಹರು ದೇಶವು ಸ್ವಾತಂತ್ರ್ಯ ಪಡೆದ ಬಳಿಕ ತನ್ನ ಕೊನೆಯುಸಿರಿರುವ ತನಕ ಅದರ ಪ್ರಧಾನ ಮಂತ್ರಿಯಾಗಿ, ಆಡಳಿತೆಯ ಸೂತ್ರವನ್ನು ಚಾಣಾಕ್ಷತನದಿಂದ ಹಿಡಿದು ಸಮೃದ್ಧಿಯ ಪಥದತ್ತ ಮುನ್ನಡೆಸಿ, ಸಮೃದ್ಧ ಭಾರತ ನಿರ್ಮಾಣದ ಮಹಾಸಾಧನೆಯಲ್ಲಿ ಭವ್ಯ ಭಾರತದ ಅಮರ ಶಿಲ್ಪಿಯಾದವರು ನೆಹರು. ಪಂಡಿತ ನೆಹರು ಚಿರಾಯುವಾಗಲಿ" ಎಂಬ ಘೋಷಣೆ ಮುಗಿಲಂಗಳವನ್ನು ಭೇದಿಸುವ ಕಾಲ ಮುಗಿದಿಲ್ಲ. ಮುಂದೆಯೂ ಇದೆ ಪಂಡಿತ ನೆಹರು ಸದಾ ಚಿರಂಜೀವಿ. ಅವರ ಭೌತಿಕ ದೇಹವಿಂದು ನಮ್ಮ ಮುಂದಿಲ್ಲವಾದರೂ ಅವರ ಅಮರ ಜೀವಾತ್ಮ ಭಾರತ ನೆಲದ ಕಣಕಣದಲ್ಲಿಯೂ ವಿಹರಿಸುತ್ತಿದೆ; ಭಾರತೀಯರಿಗೆ ಆತ್ಮವಿಶ್ವಾಸ, ಆತ್ಮಪ್ರೇರಣೆ, ಆತ್ಮೋದ್ಧಾರದ ದಾರಿಯನ್ನು ಗಳಿಗೆ ಗಳಿಗೆಯಲ್ಲಿಯೂ ನೀಡುತ್ತ ಇರುವುದು.

ಪಂಡಿತ ನೆಹರು ಇನ್ನು ನಮ್ಮ ಭೌತಿಕ ನೇತ್ರಗಳ ಮುಂದಿಲ್ಲ ಆದರೆ ಅವರು ನಮ್ಮ ಹೃದಯದಲ್ಲಿ ಮನೆಮಾಡಿದ್ದಾರೆ. ಅವರು ತೋರಿದ ಆದರ್ಶ, ಅವರು ತುಳಿದ ಮಾರ್ಗ ನಮ್ಮ ಮುಂದಿದೆ. ಅವರು ಹಿಡಿದ ಆದರ್ಶವನ್ನು ಸಾಧಿಸಲು ಅವರು ಮೆಟ್ಟಿದ ದಾರಿಯಲ್ಲಿಯೇ ಸಾಗುವರಿದು 'ನೆಹರು ಬಯಸಿದ ಭವ್ಯ ಭಾರತ' ನಿರ್ಮಾಣ ಕಾರ್ಯದಲ್ಲಿ ತೊಡಗಬೇಕು. 'ಆರಾಮ್ ಹರಾಂ ಹೈ'—ಎಂಬ ನೆಹರುವಾಣಿಯನ್ನು ಹೆಜ್ಜೆ ಹೆಜ್ಜೆಗೆ ನೆನಪಿಸಿಕೊಂಡು ಅದನ್ನು ಕಾರ್ಯರೂಪಕ್ಕಿಳಿಸುವ ದೃಢಪ್ರತಿಜ್ಞೆಯನ್ನು ತೊಡಬೇಕು.

ನವಯುಗ

VOL. 43 No. 41 ಸಂಪುಟ ೪೩ ಸಂಚಿಕೆ ೪೧

NAVAYUGA—Nationalist Weekly ‡‡ ಉಡುಪಿ 11-6-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಕಾಮರಾಜ

ಪ್ರಧಾನಿ ನೆಹರೂರವರು ಅನಿರೀಕ್ಷಿತವಾಗಿಯೇ ನಿಧನಗೊಂಡುದರಿಂದ ದೇಶವು ಒಮ್ಮೆ ಹಿಂದೆ ಮುಂದೆ ನೋಡುವಂತಾಯಿತು. ರಾಷ್ಟ್ರಪತಿಯವರು ಮಂತ್ರಿಮಂಡಳದಲ್ಲಿ ಹಿರಿಯರಾದ ಗುಲ್ಜಾರಿಲಾಲ ನಂದಾರನ್ನು ತಾತ್ಕಾಲಿಕ ಪ್ರಧಾನಿಯನ್ನಾಗಿ ನೇಮಿಸಿ ಮಧ್ಯಾವಧಿ ವ್ಯವಸ್ಥೆಯನ್ನು ಮಾಡಿದರು. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವು ತನ್ನ ಹೊಸ ನಾಯಕನನ್ನು ಆರಿಸಿ ಈ ನಾಯಕನು ಅಧಿಕಾರ ಸ್ವೀಕರಿಸುವ ವರೆಗೆ ಮಾತ್ರ ಈ ವ್ಯವಸ್ಥೆಯು ಮುಂದುವರಿಯುವುದು. ತನ್ನ ಏಕಮೇವಾದ್ವಿತೀಯ ನಾಯಕನ ಕಣ್ಮರೆಯಿಂದ ನೊಂದ ಪಾರ್ಲಿಮೆಂಟರಿ ಕಾಂಗ್ರೆಸ್ ಪಕ್ಷವು ಆತನ ಉತ್ತರಾಧಿಕಾರಿಯನ್ನು ಆರಿಸುವ ಪ್ರಶ್ನೆ ಅಷ್ಟೇನೂ ಸುಲಭವಾಗಿರಲಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾಡಾರರು ಆಡಿದ ಪಾತ್ರವು ಭಾರತೀಯ ಜನತೆಗೆ ಗೌರವವನ್ನೂ ಭಾರತೀಯ ರಾಜಕಾರಣಕ್ಕೆ ಸ್ಥಿರತೆಯನ್ನೂ ತಂದುಕೊಟ್ಟಿದೆ.

ನಾಯಕನನ್ನು ಆರಿಸಿಕೊಳ್ಳುವುದು ಪಾರ್ಲಿಮೆಂಟರಿ ಕಾಂಗ್ರೆಸ್ ಪಕ್ಷವಾದರೂ ಅಖಿಲ ಭಾರತೀಯ ಕಾಂಗ್ರೆಸ್ ವರಿಷ್ಠರು ಸಲಹೆನೀಡುವುದು ಅನುಚಿತವಲ್ಲವೆಂದರು ಕಾಮರಾಜರು. ಪಕ್ಷದಲ್ಲಿ ಒಕ್ಕಟ್ಟನ್ನು ಉಳಿಸಿಕೊಂಡು, ಒಮ್ಮತದಿಂದ ನಾಯಕನ ಚುನಾವಣೆ ನಡೆಯುವುದಕ್ಕೆ ಅವರು ಮೂರು ಹಗಲು-ರಾತ್ರಿ ಪ್ರಯತ್ನಿಸಿದರು; ತನ್ನ ಪ್ರಯತ್ನದಲ್ಲಿ ಯಶಸ್ವಿಯೂ ಆದರು; ಭಾರತದಲ್ಲಿ ನೆಹರೂ ನಂತರವೂ ಮುತ್ಸದ್ಧಿತನ ಇದೆಯೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು. ಲಾಲ ಬಹದೂರ ಶಾಸ್ತ್ರಿಯವರನ್ನು ಏಕಮನದಿಂದ ಮುಂದಿನ ಪ್ರಧಾನಿಯೆಂದು ಆಯ್ದುದು ಮಾತ್ರವಲ್ಲದೆ ಅವರ ಪ್ರಬಲ ಪ್ರತಿಸ್ಪರ್ಧಿಗಳೆಂದು ಕರೆಯಲಾದ ಮುರಾರ್ಜಿಭಾಯಿ ಮತ್ತು ಜಗಜ್ಜೀವನ ರಾಮರೂ ಹೊಸನಾಯಕನಿಗೆ ತಮ್ಮ ಹೃತ್ಪೂರ್ವಕ ಸಹಕಾರ ನೀಡುವ ವಿಶ್ವಾಸ ಕೊಡುವಂತೆ ಮಾಡಿದರು. ಇಂತಹ ಚಾಣಾಕ್ಷತನ ಕಾಮರಾಜರಲ್ಲಿದೆ; ಪಕ್ಷವನ್ನು ಕಟ್ಟುವ ಮತ್ತು ಅದನ್ನು ಬೆಳೆಸುವ ಹಾಗೂ ಉಳಿಸುವ ಧೀಶಕ್ತಿವಂತನೊಬ್ಬನು ಈ ಗಂಡಾಂತರದ ವೇಳೆ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷ ಗದ್ದುಗೆಯಲ್ಲಿರುವುದು ಕಾಂಗ್ರೆಸಿಗೆ ಭೂಷಣ; ಭಾರತಕ್ಕೆ ಶೋಭೆ.

ನಾಕಷ್ಟು ಇಂಗ್ಲಿಷ್ ಅಥವಾ ಹಿಂದೀ ಭಾಷೆಯರಿಯದ ಈ ನಿಷ್ಠಾವಂತ ಕಾಂಗ್ರೆಸ್ ಕೆಲಸಗಾರನನ್ನು ಭಾರತೀಯರು ಮಾತ್ರವಲ್ಲ ಜಗತ್ತಿನ ಎಲ್ಲರೂ ಅಭಿನಂದಿಸುತ್ತಾರೆ. ನೆಹರು ತುಳಿದ ದಾರಿಯಲ್ಲಿ ಮುಂದೆ ನಡೆಯಬೇಕಾದವರು ಲಾಲಬಹದೂರರಾದರೂ ನೆಹರೂ ದಾರಿಗೆ ಅಡ್ಡ ಬರಬಹುದಾದ ಕಲ್ಲು-ಮುಳ್ಳುಗಳನ್ನು ನಿರ್ವಿಶೇಷಗೊಳಿಸಿ ಅದರ ಬಾಗಿಲನ್ನು ರಕ್ಷಿಸಿಕೊಂಡವರು ಕಾಮರಾಜರು.

ಕಾರಿ ಯಾರು ಎಂಬ ಪ್ರಶ್ನೆಯ ಮುಂದೆ ನಿಂತಿದ್ದ ನಾಲ್ಕಾರು ಹೆಸರುಗಳಲ್ಲಿ ಈ ಭಾಯಿಯವರದೂ ಮೊದಲ ಮೂರರ ನಡುವೆ ಸಿಲ್ಲುತ್ತಿತ್ತು. ಪ್ರಸಿದ್ಧ ಜ್ಯೋತಿಷಿಗಳೂ ಪ್ರಧಾನಿಯಾಗುವ ಯೋಗವಿದೆಯೆಂದವರಿಗೆ ಭವಿಷ್ಯ ನುಡಿದಿದ್ದರೆಂದು ಹೇಳಲಾಗಿದೆ. ಆದರೆ ಗ್ರಹಗಳು ಮುನ್ಸೂಚನೆಯನ್ನು ಮಾತ್ರವೇ ಕೊಡಬಲ್ಲುವಲ್ಲದೆ, ಫಲ ದೊರೆತೇ ದೊರೆಯುವುವೆಂದು ಆಗ್ರಹ ಪಡುವುದಿಲ್ಲ. ಇದರಂತೆ ಭಾಯಿಯವರಿಗೆ ಯೋಗವೇನೊ ಬಂತು, ಅದು ಕೈಗೂಡುವುದೆಂದು ಆಸೆಯೂ ಬಲಿಯಿತು ಆದರೆ, ಕೈಗೆಬಂದ ತುತ್ತು ಬಾಯಿಗೆ ಬೀಳಲಿಲ್ಲ.

ಮುರಾರ್ಜಿಯವರು ಹಿಂದೇಟು ಹಾಕಬೇಕಾದುದಕ್ಕೆ ಒಂದಲ್ಲ ಹಲವುಕಾರಣಗಳಿವೆ. ಇವರು ಮಂತ್ರಿ ಪಟ್ಟದಿಂದ

ನ್ನು ಉಳಿಸಲು ಯಾವ ತ್ಯಾಗಕ್ಕೂ ಸಿದ್ಧ. ಈ ತತ್ವಗಳಿಗೆ ಅಚಲರಾಗಿ ಉಳಿಯುವ ದೃಢ ಸಂಕಲ್ಪವನ್ನು ಭಾಯಿ ಮುಂದುವರಿಸಿದರೆ, ಇವರಿಗೆ ಪ್ರಧಾನಿ ಪಟ್ಟದ ಮಾಲೆ ಅಷ್ಟು ಶೀಘ್ರವಾಗಿ ಬೀಳುವುದು ಅಸಾಧ್ಯ. ಅದೇನೇ ಇರಲಿ, ಭಾಯಿಯವರು ಭಾಯಿಯಾಗಿಯೇ ಉಳಿಯುವುದಂತೂ ಖಂಡಿತ.

ಗಂಡಾಂತರದ ವೇಳೆಯಲ್ಲಿ ಸ್ವಲ್ಪಮಾತ್ರವೂ ತತ್ತರಿಸದೆ ಧ್ಯೇಯ ಸಾಧನೆಯಲ್ಲೇ ವ್ಯಸ್ತರಾಗುವ ನಾಯಕಾಗ್ರಣಿಗಳಿಗೆ ಭಾರತದಲ್ಲಿ ಕೊರತೆಯಿಲ್ಲ ಎಂದು ಡಣಾಡಂಗುರವಾಗಿ ಸಾರಿದ ಧೀರ ಕಾಮರಾಜರು ಮುಂದೆಯೂ ಕಾಂಗ್ರೆಸ್ಸನ್ನು ಪ್ರಬಲಶಕ್ತಿಯಾಗಿ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುವರು. ಇದು ವರೆಗಿನ ಯಾವ ಕಾಂಗ್ರೆಸ್ ಅಧ್ಯಕ್ಷನೂ ಎದುರಿಸದ ಮಹಾ ಸತ್ವಪರೀಕ್ಷೆಯಲ್ಲಿ ಉತ್ತೀರ್ಣರಾದ ಕಾಮರಾಜರು ನಿಜಕ್ಕೂ ಅಭಿನಂದನೀಯರು.

ಮುರಾರ್ಜಿಭಾಯಿ

ವಿತ್ತ ಮಂತ್ರಿಯಾಗಿದ್ದಾಗ ಅಮೇರಿಕೆಯಲ್ಲಿ ಭಾರತದ ಭಾವಿ ಪ್ರಧಾನಿಯೆಂದು ಸ್ವಾಗತ ಪಡೆದ ಮುರಾರ್ಜಿಭಾಯಿ ಕಾಮರಾಜ ಸೂತ್ರದ ಉರುಳಿಗೆ ಸಿಕ್ಕಿಬಿದ್ದು ಉರುಳಿ ಹೋದರು. ನೆಹರೂ ಉತ್ತರಾಧಿ

ಇಳಿದು ಪಕ್ಷದ ಬಲ ಸಂವರ್ಧನೆಗೆಂದು ಸೊಂಟಕಟ್ಟಿದವರು. ನೆಹರೂ ಅಸ್ವಸ್ಥರ ವೇಳೆಯಲ್ಲೂ ಅವರಿಗೆ ಸಹಾಯಕನಾಗಿ ಹೋಗುವ "ಭಾಗ್ಯ" ದಿಂದ ಇವರು ವಂಚಿತರಾದವರು. ಚಿನ್ನ ನಿಯಂತ್ರಣವೇ ಮೊದಲಾದ ಒಂದೆರಡು ಕಾಯದೆಗಳಿಂದ ಜನಪ್ರಿಯತೆಗೆರವಾದವರು; ಅತಿತ್ರೀವಂತರಾಗಿ, ಅಂತಹರ ಸ್ನೇಹದಲ್ಲಿಯೇ ಹೆಚ್ಚಾಗಿ ಇರುವ ಭಾಯಿಯನ್ನು ಸಮಾಜವಾದದ ಧ್ಯೇಯವಿಟ್ಟುಕೊಂಡವರು ಸುದೃಷ್ಟಿಯಿಂದ ನೋಡಲು ಹಿಂಜರಿದರು. ಪಕ್ಷದ ನಿಷ್ಠಾವಂತ ಸೇವಕನೆಂದು ಹೆಸರು ಪಡೆದ ಇವರೀಗ ಎರಡನೆಯ ಬಾರಿಗೂ ಅದರ ಆದೇಶದ ಮುಂದೆ ತಲೆ ಬಾಗಲೇ ಬೇಕಾಯಿತು; ಶಾಸ್ತ್ರಿಯವರ ಹೆಸರನ್ನು ತಾನೇ ಅನುಮೋದಿಸಿ. ತನ್ನ ಸಹಕಾರ ನೀಡುವ ಭರವಸೆಯಿತ್ತು ಭಲೇ ಎನ್ನಿಸಿಕೊಂಡರು.

ಮುಂದಿನ ಮಂತ್ರಿಮಂಡಳದಲ್ಲಿ ತನಗೊಂದು ಸ್ಥಾನ ಪಡೆಯಬೇಕೆಂಬ ಆಸೆ ಇವರಲ್ಲಿ ಮಿತಿ ಮೀರಿದೆ. ಅದು ಈಡೇರಿದರೂ ಈಡೇರಬಹುದು. ಮುಂದಿನ ಸಾರ್ವತ್ರಿಕ ಚುನಾವಣೆಯ ನಂತರವೊಮ್ಮೆ ತನ್ನ ಅದೃಷ್ಟ ಪರೀಕ್ಷೆ ಮಾಡುವ ಪೂರ್ವ ತಯಾರಿಯದು ಇದ್ದರೂ ಇರಬಹುದು. ಆದರೂ ಒಂದು ಮಾತು ಸತ್ಯ. ಮುರಾರ್ಜಿ ಕಾಂಗ್ರೆಸ್ ಪಕ್ಷದ ಒಗ್ಗಟ್ಟ

ಎಸ್. ಪದ್ಮಸೆಟ್ಟಿ

ಮೂಲ್ಕಿಗೆ ಸಮೀಪದ ಸೇಮಂತೂರಿನಲ್ಲಿ ಜನ್ಮ ತಳೆದ ಸೇಮಂತೂರು ಪದ್ಮಸೆಟ್ಟಿಯವರು ತನ್ನ ಚಿಕ್ಕ ಪ್ರಾಯದಲ್ಲಿಯೇ ಭಾರತದ ಮಹಾನಗರ ಬೊಂಬಾಯಿಗೆ ತೆರಳಿದವರು. ಅಲ್ಲಿ ಹೋಟೇಲು ಉದ್ಯಮವನ್ನು ಕೈಗೊಂಡದ್ದು ಮಾತ್ರವಲ್ಲದೆ ಅದರಲ್ಲಿ ಸಂಪೂರ್ಣ ಯಶಸ್ಸನ್ನೂ ಗಳಿಸಿದವರು. ಈ ಉದ್ಯಮದ ತಂತ್ರವನ್ನು ಸಂಪೂರ್ಣ ಕರಗತ ಮಾಡಿಕೊಂಡಿರುವುದರಿಂದಲೇ ಇವರು ೨-೩ ಹೋಟೇಲುಗಳ ಮಾಲಕರಾಗುವುದು ಸಾಧ್ಯವಾಯಿತು. ತನ್ನ ಬಹುಕಾಲವನ್ನು ಈ ಮಹಾ ಉದ್ಯಮದಲ್ಲಿಯೇ ವಿನಿಯೋಗಿಸಿದ ಶೆಟ್ಟರು ಇದರ ಸಿಹಿ-ಕಹಿಗಳ ಅನುಭವಗಳನ್ನೆಲ್ಲ ಪಡೆದಿದ್ದಾರೆ. ಹೋಟೇಲು ಮಾಲಿಕರ ರಂಗದಲ್ಲಿ ಪ್ರತಿಷ್ಠೆಯನ್ನೂ ಗಳಿಸಿದ ಕೆಲವೇ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಮೃದು ಮಧುರ ವಾಚಿಗಳಾದ ಇವರು ಹತ್ತು ಜನರಿಗೆ ಬೇಕಾದವರೆಂದೂ ಹೆಸರು ಪಡೆದಿದ್ದಾರೆ.

ಕೆಲವು ವರ್ಷಗಳಿಗೆ ಮೊದಲು ಪದ್ಮಸೆಟ್ಟರು ಉಡುಪಿ ತಾಲೂಕು ಕೊರಂಗರಪಾಡಿ ಗ್ರಾಮದ ಕೆಮ್ಮೂರಿನಲ್ಲಿ ಬಹು ವಿಸ್ತಾರದ ಭೂಮಿಯನ್ನು ಪಡೆದುಕೊಂಡರು. ಅದರಲ್ಲಿ ಆಧುನಿಕ ಸೌಕರ್ಯಗಳಿಂದ ಕೂಡಿದ ಮನೆಯನ್ನು ಕಟ್ಟಿ ಅಲ್ಲಿ ವಾಸಮಾಡುತ್ತಿದ್ದಾರೆ. ಭೂಮಿಯನ್ನು ಆಧುನಿಕ ವಿಧಾನಗಳಿಂದ ವ್ಯವಸಾಯ ಮಾಡುತ್ತಿದ್ದಾರೆ. ಗುಡ್ಡೆ-ಗುಂಡಿಗಳಿಂದ ತುಂ

(೧೨ನೇ ಪುಟ ನೋಡಿರಿ)

ವಾರದ ಕಥೆ

ಸಿರಿಯ ಮನೆಯ ಹುಡುಗಿ

ಬರೆದವರು: ಶ್ರೀ ಪಿ. ಎಸ್. ಎಸ್., ಚಿತ್ರದುರ್ಗ.

ಉಷಾ ನನ್ನ ಬರುವನ್ನು ಎದುರು ನೋಡುತ್ತಿದ್ದಳೆಂದು ತೋರುತ್ತದೆ ಆಫೀಸಿನ ಕೆಲಸ ಮುಗಿಸಿ ಮನೆಯ ಬಾಗಿಲಿಗೆ ಬರುವ ವೇಳೆಗೆ ಮುಗುಳ್ನಗೆಯಿಂದಲೇ ಸ್ವಾಗತ ಬಯಸಿದಳು. ಅಂದಿನ ವಿಶೇಷ ಉತ್ಸಾಹ; ಸಂತೋಷಕ್ಕೆ ಕಾರಣ ವಿಲ್ಲದಿಲ್ಲ ಎಂದು ಊಹಿಸಿದೆ. ಅವಳ ಅಂತರಂಗದ ಅಭಿಪ್ರಾಯವನ್ನು ಅರಿಯಲು ಸಹಜವಾಗಿಯೇ—

"ಇವೇನು, ಇಷ್ಟು ಸಂತೋಷವಾಗಿದ್ದೀಯ?" ಎಂದೆ.

"ನೀವೇ ಹೇಳಿ ನೋಡೋಣ"

"ಅತಿ ಸಂತೋಷದ ಪರಮಾವಧಿಗೆ ಹೋಗಲು ತಿಂಗಳ ಮೊದಲನೆಯ ತಾರೀಖು ಅಲ್ಲ. ತಿಂಗಳ ಕೊನೆ. ಬರಬೇಕಾದ ಬಾಕಿ ಹಣದಲ್ಲಿ ಒಂದು ನಯಾಪೈಸಾನು ಬಂದಿಲ್ಲ..."

"............"

"ನಿಮ್ಮಪ್ಪ ಅಮ್ಮ ಏನಾದರೂ ಕಾಗದ ಬರೆದಿದ್ದರೇನೆ?"

"ಪರವಾಗಿಲ್ಲ ಕಣ್ರೀ ನಿಮ್ಮನ್ನು ಏನೋ ಅಂತಿದ್ದೆ ಚೆನ್ನಾಗಿ ಊಹಿಸಿದ್ದೀರಿ" ಎಂದಳು ಉಷಾ.

"ನನಗೆ ಗೊತ್ತಿಲ್ಲವೇನೆ ನಮ್ಮ ದೇವರ ಸತ್ಯ...ಅವರಲ್ಲಿಯೂ ನೀನು ಮನೆಯ ಮುದ್ದಿನ ಮಗಳು. ಅದರಲ್ಲಿಯೂ ದೀಪಾವಳಿ ಹಬ್ಬ ಬಂದ ಮೇಲೆ ಯಾರ ಅಪ್ಪ ಅಮ್ಮ ತಾನೆ ಆಹ್ವಾನ ಕೊಡುವುದಿಲ್ಲ? ಅದರಲ್ಲಿಯೂ ನಿನ್ನಂತಹ ನೊಂಡ ಹುಡುಗಿಯರಿಗಂತೂ ಸದವಕಾಶ" ಎಂದೆ.

"ಓಹೋ ಪ್ರಾರಂಭ ಮಾಡಿಬಿಟ್ಟಿರಲ್ಲ ಉಪನ್ಯಾಸ" ಎಂದು ಹೇಳುತ್ತಾ ಕಾಫಿ ಟನ್ನು ಕೈಗೆ ತೆಗೆದುಕೊಂಡಳು.

ತಿಂಡಿ ಮುಗಿಸಿ ಕಾಫಿ ಸೇವನೆಯಲ್ಲಿರುವಾಗ ಉಷಾ ತೌರಿನಿಂದ ಬಂದಿದ್ದ ಪತ್ರವನ್ನು ಕೈಗೆ ತಂದಿತ್ತಳು. ಪತ್ರವನ್ನು ಓದಲು ಮನ ಬರಲಿಲ್ಲ. ಅದಲ್ಲಿಯೂ ಅವಳಿಗೆ ಬರೆದಿದ್ದ ಪತ್ರ.

"ನನಗೇನೂ ಕೊಡಬೇಡ. ನೀನೇ ಓದಿದ್ದೀಯಲ್ಲ. ವಿಷಯ ಏನು ತಿಳಿಸಿಬಿಡು ಅಷ್ಟೇ ಸಾಕು" ಎಂದು ಪತ್ರವನ್ನು ಅವಳಿಗೆ ಹಿಂತಿರುಗಿಸಿದೆ;

"ಕಾಗದ ಓದಿ ಕೊಂಡಿದ್ದರೆ......ನಿಮಗೆ......"

"ಇರಲಿ ಅದೇನು ಹೇಳು ಸಾಕು...."

"ಮುಂದಿನ ವಾರದ ಕೊನೆಯ ವೇಳೆಗೆ ಅಪ್ಪ ಅಮ್ಮ ಇಬ್ಬರೂ ಬರುತ್ತಾರಂತೆ, ಈ ಮಾರ್ಗವಾಗಿಯೇ ಮೈಸೂರಿಗೂ ಹೋಗಿ ಬರ ಬೇಕಾಗಿದೆ, ನೀವಿಬ್ಬರೂ ಆ ವೇಳೆಗೆ ತಪ್ಪದೆ ಹೊರಟಿರುವುದು ಎಂದು ಬರೆದಿದ್ದಾರೆ....ಬರುತ್ತೀರಷ್ಟೇ "ಎಂದು ಉಷಾ ಪತ್ರದ ಸಾರಾಂಶವನ್ನು ತಿಳಿಸಿದಳು,

"ದೀಪಾವಳಿ ಹಬ್ಬಕ್ಕೆ ಊರಿಗೆ ಹೋಗಬೇಕೆ ಉಷಾ?"

"ಇದೇನ್ರೀ ಇಂಥ ಪ್ರಶ್ನೆ ಕೇಳ್ತೀರಾ? ಅಪ್ಪ ಅಮ್ಮ ಅದಕ್ಕಾಗಿಯೇ ಬರುತ್ತೇವೆ ಎಂದು ಬರೆದಿದ್ದಾರೆ. ಹೋಗದಿರಲಾಗುತ್ತದೆಯೇ!

"ಸರಿ ಸಂತೋಷ ಹೋಗಿ ಬಿಟ್ಟುಬಾ"

'ನೀವು....!"

"ನನಗೆ ಈಗ ಸಮಯವೇ ಇಲ್ಲ, ರಜಾ ದೊರೆಯುವಂತಿಲ್ಲ. ಬರಲು ಸಾಧ್ಯವೇ ಇಲ್ಲ"

"ಹಾಗಾದಲ್ಲಿ ನೀವು ಬರುವುದಿಲ್ಲವೇ?"

"ಇಲ್ಲ" ಎಂದು ನಿರ್ಧಾರ ವಾಣಿಯಲ್ಲಿ ನುಡಿದೆ. ಉಷಾಳ ನಗುಮುಖ ಬಾಡಿತು.

"ಇದು ನಿಮ್ಮ ನಿರ್ಧಾರವೆ?...ಸ್ವಲ್ಪ ಮನಸ್ಸು ಮಾಡಿದರೆ ಎರಡು ದಿನದ ಮಟ್ಟಿಗೆ ಹೋಗಿ ಬರಬಹುದು" ಮಾತನಾಡಲೋ ಬೇಡವೋ ಎನ್ನುವಂತೆ ಹೇಳಿದಳು ಉಷಾ.

"ಈ ವಿಷಯದಲ್ಲಿ ಹೆಚ್ಚು ಪ್ರಸ್ತಾಪ, ಒತ್ತಾಯ ಬೇಡ ಉಷಾ" ಎಂದೆ.

'ನನಗೆ ಎಂದೋ ಗೊತ್ತಿತ್ತು, ನೀವು ಈ ಉತ್ತರ ಹೇಳುತ್ತೀರ ಎಂದು, ಇನ್ನೊಬ್ಬರ ಮನಸ್ಸು ನಿಮಗೆ ಹೇಗೆ ಅರ್ಥವಾಗುತ್ತದೆ....ನೀವು ಏಕೆ ಬರುವುದಿಲ್ಲವೆಂದು ಹೇಳಿದ್ದೀರಿ ಎನ್ನುವುದು ನನಗೆ ಗೊತ್ತು" ಎಂದು ಉಷಾ ಮತ್ತೆ ಅಲ್ಲಿ ನಿಲ್ಲದೆ ಒಳಕ್ಕೆ ನಡೆದಳು.

ಅವಳು ಹೇಳಿದ ಕೊನೆಯ ವಾಕ್ಯವನ್ನೇ ಯೋಚಿಸುತ್ತಾ ಪೇಟೆಯ ಹಾದಿ ಹಿಡಿದೆ.

೦ ೦ ೦

ಉಷಾ ಶ್ರೀಮಂತರ ಮನೆಯ ಮಗಳು ಎಂದ ಮೇಲೆ ನಾನು ಸಿರಿವಂತರ ಅಳಿಯ ಎಂದು ಬೇರೆ ಹೇಳ ಬೇಕಿಲ್ಲವಷ್ಟೇ. ನಾನು ಉಷಾ ಪರಸ್ಪರ ಮನ ಒಲಿದು ದಂಪತಿಗಳಾದೆವು. ನಾನು ಶ್ರೀಮಂತರ ಮನೆಯ ಅಳಿಯನಾದರೂ ಬಡತನದ ಬವಣೆಯನ್ನರಿತವನು ಬಡತನದಲ್ಲಿಯೇ ಇದ್ದವನು, ಸಿರಿವಂತರಿಗೆ ನಾನು ಪ್ರಭಾವಿತನಾಗಲಿಲ್ಲ. ಸಿರಿತನ ಆಡಂಬರ, ಆಟ್ಟಹಾಸಗಳಿಗೂ ಉತ್ತರ–ದಕ್ಷಿಣ ಧ್ರುವಗಳಷ್ಟೆ ಸಾಮ್ಯ.

ಸಿರಿವಂತಿಕೆಯ ವೈಭವದಲ್ಲಿ ಬೆಳೆದಿದ್ದರೂ ನನ್ನನ್ನೊಲಿದು ಮನ ಮನೆಗಳನ್ನು ಬೆಳಗಿದ ಮೇಲೆ ಬಡತನದ ಬಾಳುವೆಗೆ ಹೊಂದಿಕೊಂಡಳು ಕೆಲವು ಬಾರಿ ತನ್ನ ಮನೆಯ ವೈಭವವನ್ನು ಹೇಳಿ ಅಥವಾ ತಾನು ಶ್ರೀಮಂತ ಕುಟುಂಬದ ಕನ್ಯೆ ಎನ್ನುವುದನ್ನು ಪ್ರದರ್ಶಿಸಲು ಪ್ರಯತ್ನಿಸಿ ನನ್ನ ಮನೋಭಿಪ್ರಾಯದ ಕಾರಣದಿಂದ ತಪ್ಪನ್ನರಿತು ಕ್ಷಮಾಪಣೆ ಕೇಳಿದ ಪ್ರಸಂಗಗಳೂ ಹಲವಾರು.

ಹಲ ಕೆಲವು ಬಾರಿ ಬಡತನದ ಜೀವನವನ್ನು ಉಷಾ ಉದ್ದೇಶ್ಯ ಪೂರ್ವಕವಾಗಿ ಹೀಯಾಳಿಸದಿದ್ದರೂ ಕಾರಣಾಂತರದಿಂದ ಅವಳ ಬಾಯಿಂದ ಅವಳಿಗರಿವಿಲ್ಲದೆಯೇ ಸಿರಿವಂತಿಕೆಯ ದೊಡ್ಡಸ್ತಿಕೆಯ ಮಾತು ಹೊರ ಬೀಳುತ್ತಿದ್ದವು.

ಹಣದ ವೈಭವಯುಕ್ತ ಜೀವನದಲ್ಲಿ ಮೆರೆಯುವ ಸಿರಿವಂತರಿಗೆ ಬಡವರನ್ನು ಹೀನಾಯವಾಗಿ ಕಾಣುವುದಕ್ಕಿಂತಲೂ ಸಮಾಜಕ್ಕೆ, ಲೋಕಕ್ಕೆ ತಮ್ಮ ಸಿರಿತನದ ದೊಡ್ಡಸ್ತಿಕೆಯ ವೈಭವವನ್ನು ಪ್ರಸಾರ ಮಾಡಬೇಕೆನ್ನುವ ಆಸೆ ಬಹಳ. ಈ ನಿಯಮಕ್ಕೆ ಉಷಾ ತಂದೆ ತಾಯಿಯರೂ ದೂರವಾಗಿರಲಿಲ್ಲ.

ಉಷಾಳ ಮನೆಯವರ ನಡವಳಿಕೆಯನ್ನು ಕಂಡು ಕೆರಳಿದರೂ ಅವಳಿಗಾಗಿ ತಡೆದುಕೊಂಡಿದ್ದೆ. ನನ್ನ ಬಗ್ಗೆ ಯಾರಿಗೂ ತಾತ್ಸಾರ, ದುರಭಿಪ್ರಾಯವಿರಲಿಲ್ಲ. ಆದರೆ ನನಗೆ ಅವರಾರಲ್ಲೂ ಗೌರವವಿರಲಿಲ್ಲ.

ಮನ ಒಪ್ಪದ ಕಾರ್ಯಕ್ಕೆ ಯಾವ ಪ್ರಭಾವಶಾಲಿಗಳ ಮಾತಿಗೂ ಅಧಿಕಾರ ವಾಣಿಗೂ ತಲೆ ಬಾಗಲು ಸಿದ್ಧವಿಲ್ಲದಿದ್ದ ನಾನು ಸಿರಿವಂತಿಕೆಯ ಸಂಪರ್ಕ ಸುಲಭವಾಗಿ ದೊರೆಯುವಂತಿದ್ದರೂ ಸಿರಿವಂತರ ಸಹವಾಸದಿಂದ ದೂರದಲ್ಲಿಯೇ ಇದ್ದೆ. ಇದರಿಂದ ಹಲವರ ಕೋಪತಾಪಕ್ಕೆ ಒಳಗಾಗದಿರಲಾಗುತ್ತದೆಯೆ?

ನಾನಾಗಿಯೇ ಸಿರಿವಂತ ಮಾವನ ಮನೆಗೆ ಹೋಗುತ್ತಿರಲಿಲ್ಲ, ಸಿರಿವಂತ ಬಂಧುಗಳು ನನ್ನ ಮನೆ ಬಾಗಿಲಿಗೆ ಬಂದರೂ ಅವರನ್ನು ದೂರವಿರಿಸುತ್ತಿರಲಿಲ್ಲ.

ಸಿರಿವಂತ–ಬಡವರ ಸಂಬಂಧ ನನ್ನ ಜೀವನದಲ್ಲಿ ಬಿಡಿಸಲಾಗದ ಸಮಸ್ಯೆಯೂ ಗಿತ್ತು. ಇದೇ ಕಾರಣದಿಂದ ಉಷಾ ನನ್ನ ಮೇಲೆ ಕೆಲದಿನ ಮುನಿದದ್ದೂ ಉಂಟು. ಎಷ್ಟಾದರೂ ಸಿರಿವಂತರ ಕುವರಿಯಲ್ಲವೆ?

ದೀಪಾವಳಿಯ ತೌರುಮನೆಯ ಕರೆಗೆ ಉಷಾಳನ್ನು ಕಳುಹಿಸಲು ನಿರ್ಧರಿಸಿಕೊಂಡೇ ಮನೆಗೆ ಹಿಂದಿರುಗಿದೆ.

೦ ೦ ೦

ನಾಲ್ಕಾರು ದಿನಗಳವರೆಗೆ ನಮ್ಮಿಬ್ಬರಲ್ಲಿ ದೀಪಾವಳಿಗೆ ಊರಿಗೆ ಹೋಗುವ ಸಂಗತಿಯ ಪ್ರಸ್ತಾಪವೇ ನಡೆಯಿತು. ಇಬ್ಬರೂ ಒಬ್ಬರ ನಿರ್ಧಾರವನ್ನೂ ಬದಲಿಸಲು ಸಿದ್ಧವಿರಲಿಲ್ಲ.

"ಇದು ಮೊದಲ ವರ್ಷದ ದೀಪಾವಳಿ. ನಮ್ಮಿಬ್ಬರನ್ನೂ ಎಲ್ಲರೂ ನಿರೀಕ್ಷಿಸಿರುತ್ತಾರೆ. ಅಲ್ಲದೆ ಮನೆಗೆ ಅಕ್ಕಂದಿರು ಅಣ್ಣಂದಿರು ಎಲ್ಲ ಬಂದಿರುತ್ತಾರೆ. ನೀವಿಲ್ಲದಿದ್ದರೆ ಚೆನ್ನಾಗಿರುವುದಿಲ್ಲ...ನೀವೂ ಬರಬೇಕು, ಇಲ್ಲವಾದರೆ ನಾನೂ ಹೋಗುವುದಿಲ್ಲ" ಎನ್ನುವುದು ಉಷಾ ವಾದ.

"ಸಮಯವಿಲ್ಲದ ಕಾರಣ ಬರುವುದಿಲ್ಲ, ನೀನೇ ನನ್ನ ಪರವಾಗಿ ಹೋಗಿ ಬಾ. ನೀನು ಹೋಗಿಬರಲು ನನ್ನ ಅಭ್ಯಂತರವಿಲ್ಲ. ಯಾರೂ ಹೋಗದಿದ್ದರೆ ಅವರಿಗೆ ಬೇಸರವಾಗುತ್ತದೆ. ಸಾಧ್ಯವಾದಲ್ಲಿ ಒಂದು ದಿನದ ಮಟ್ಟಿಗೆ ಬಂದು ಹಿಂದಿರುಗುತ್ತೇನೆ" ಎಂದು ನನ್ನ ಸೂಚನೆ.

(೧೦ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೬

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ **5½** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಅಮರರಾದವರು

೧
ಪೊಡವಿ ಬಿರಿಯಿತೊ?
ಸಿಡಿಲು ಬಡಿಯಿತೊ?
ಹೃದಯ ತಳಮಳವಾಯಿತು
ಕಾಲನಡಿಗೆಯು ನಿಂತಿತು
ಕಾಲನಡಿಗೆಯು ನಿಂತಿತು

೨
ಮತಿಯು ಹೋಯಿತು
ಗತಿಯು ಕಟ್ಟಿತು
ಬುದ್ಧಿಯ ಸ್ಥಿತಿಯು
ಚಂಚಲವಾಯಿತು
ಸ್ಥಿತಿಯು ಚಂಚಲವಾಯಿತು

೩
ಬರಿಯದಾಯಿತು
ಬಂಜರಾಯಿತು
ಬಾಳ ಬಯಕೆಯು ಅರಿತು
ಮೌನ ಮೂರುತಿಯಾಯಿತು
ಮೌನ ಮೂರುತಿಯಾಯಿತು

೪
ಪಥವು ತಿಳಿಯದು
ಸ್ಥಿತಿಯು ಅರಿಯದು
ಪತಿತಪಾವನ ರೂಪು
ಹೃದಯದಿ ನಿಂತಿತು
ರೂಪು ಹೃದಯದಿ ನಿಂತಿತು

೫
ರಾಮನಿಲ್ಲದ ಅಯೋಧ್ಯೆಯಾಯಿತು
ಪ್ರೇಮ ಸಾಗರವಾರಿತು
ದೇಶ ದುರ್ಬಲವಾಯಿತು
ದೇಶ ದುರ್ಬಲವಾಯಿತ.

೬
ಭಾರತಾಂಬೆಯ ಭಾಗ್ಯಧಾತರು
ಬಾಪು ನೆಚ್ಚಿನ ಶಿಷ್ಯರೂ
ನೆಹರೂ ಕಣ್ಮರೆಯಾದರು
ನೆಹರು ಕಣ್ಮರೆಯಾದರು

೭
ಕತ್ತಲಾಯಿತು. ಬತ್ತಲಾಯಿತು
ದೇವರಿಲ್ಲದ ದೇಗುಲಾಯಿತು ದೇಶವು
ದೇಗುಲಾಯಿತು ದೇಶವು

೮
ಬಲವು ಹೋಯಿತು ಬರಡದಾಯಿತು
ಬಾಳ ಬಯಕೆಯು ನಿಂತಿತು
ಬಾಳ ಬಾಸ್ಕರ ಕಂತಿತು
ಬಾಳ ಬಾಸ್ಕರ ಕಂತಿತು

೯
ಧೈರ್ಯ ಸ್ಥೈರ್ಯದ ಶಾಂತಿ
ನಿಧಿಯದು ಬತ್ತಿತು
ಕೃಷ್ಣನಿಲ್ಲದ ಪಾಂಡು ಪುತ್ರರ
ಸ್ಥಿತಿಯದಾಯಿತು ಆಯಿತು
ಸ್ಥಿತಿಯದಾಯಿತು ಆಯಿತು

೧೦
ಪತಿವಿಹೀನಳ ಸ್ಥಿತಿಯದಾಯಿತು
ಭಾರತಾಂಬೆಯ ಮೂಗ
ಮುತ್ತದು ಉದುರಿತು
ಮೂಗ ಮುತ್ತದು ಉದುರಿತು

೧೧
ಶಾಂತಿ ದೂತರು ಜಗದ ಪ್ರೀತರು
ಅಗಲಿ ನಮ್ಮನು ಪೋದರು
ಅವರು ಅಮರರಾದರು
ಅವರು ಅಮರರಾದರು

— ಡಾ। ಯು ಚಂದ್ರಶೇಖರ
ಕುಡುಮಲ್ಲಿಗೆ.

ಸ್ವತಂತ್ರ ಭಾರತದ ಸರ್ವಶ್ರೇಷ್ಠ ಶಿಲ್ಪಿ ಪ್ರಧಾನಿ ಜವಾಹರಲಾಲರು ನಿಧನಗೊಂಡ ಬಳಿಕ ವಿಶ್ವನಾಯಕರು ಬಂದು ಅಂತಿಮ ಗೌರವವನ್ನು ಸಮರ್ಪಿಸಿದರು ಈ ಚಿತ್ರದಲ್ಲಿ ಸಿಂಹಳದ ಪ್ರಧಾನಿ ಭಂಡಾರ ನಾಯಿಕೆಯವರು ತಮ್ಮ ಮಿತ್ರನಿಗೆ ಗೌರವ ಸಮರ್ಪಿಸುತ್ತಿರುವುದನ್ನು ಕಾಣಬಹುದು

ನ ಗೆ ಗ ಡ ಲು

ಆನಂದ ಬಾಷ್ಪ ..

ಕಾಂಗ್ರೆಸ್ಸಿನ ಅಧಿಕಾರಿಗಳೊಬ್ಬರ ಆಕಾಲಿಕ ಮರಣದ ದುಃಖ ಸೂಚಕ ಸಭೆಯು—ಬಹು ವಿಜೃಂಭಣೆಯಿಂದ ನೆರವೇರಿತ್ತು. ಮಾನ್ಯ ಅಧ್ಯಕ್ಷರು ದಿವಂಗತರ ಗುಣಗಾನ ಮಾಡುತ್ತ ಆನಂದ ಬಾಷ್ಪವನ್ನು ಕೋಡಿಯಾಗಿ ಹರಿಸಿದರು.

ದಿವಂಗತರ ಸ್ಥಾನ ಶ್ರೀಯುತರಿಗೆ (ಅಧ್ಯಕ್ಷರಿಗೆ) ಕಾದಿತ್ತು !

೦ ೦ ೦ ೦

—ಪಿ. ಎನ್ ಹೆಗಡೆ—ಶಂಭು.

ಒಬ್ಬರೂ ಬರುವುದಿಲ್ಲ!

ವೃದ್ಧ ಹೃದಯದ ಸಾಮಾಜಿಕ ಕಾರ್ಯಕರ್ತೆ ಸೆರೆಮನೆಯ ಕೈದಿಗಳನ್ನು ನೋಡ ಹೋದಳು. ಒಬ್ಬನನ್ನು ನೋಡಿ ತುಂಬಾ ಮರುಕವಾಯಿತು. ನಿನಗೆಷ್ಟು ಜನ ಮಕ್ಕಳು? ಎಂದು ಕೇಳಿದಳು. ಹತ್ತು ಜನ ಎಂದುತ್ತರವಿತ್ತ ಕೈದಿ

"ಹಾಗಿದ್ರೆ ನಿನ್ನ ನೋಡೋಕೆ ಅವರೆಲ್ಲ ಬರ್ತಿರ್ತಾರೋ"

"ಇಲ್ಲ ತಾಯಿ, ಇದ ವರೆಗೆ ಒಬ್ಬನೂ ಬಂದಿಲ್ಲ"

'ಎಂಥ ಕಟುಕರಪ್ಪಾ ಅವರು? ಎಲ್ಲಿದ್ದಾರೆ? ಅವರೆಲ್ಲ?'

"ಇಲ್ಲೇ ತಾಯಿ, ಇದೇ ಜೈಲಿನಲ್ಲಿ ಬೇರೆ ಬೇರೆ ಕೋಣೆಯಲ್ಲಿದ್ದಾರೆ"

ಎಚ್ಚರಿಕೆ

ಹೆಂಡತಿ—'ನೋಡಿಂದ್ರೆ ಏನೋ ಶಬ್ದ ಆಗ್ತಾ ಇದೆ, ಬಾವಿಯಲ್ಲಿ'

"ಕಳ್ಳರು ಇರಬೇಕು ಕಣೆ, ಕಿರಿಚಕೋಬೇಡ ಸದ್ಯ" ಎಂದು ಹಾಸಿಗೆಯಿಂದ ಇಳಿದ ಗಂಡ. "ಹುಷಾರಾಗಿರಿ, ಏನಾದ್ರೂ ಮಾಡೋಕೆ ಹೋಗಿ ಪೊಡೆತ ತಿನ್ನಬೇಡಿ" ಎಂದು ಗಾಬರಿಯಿಂದ ಹೆಂಡತಿ ಅಂದಳು.

"ಎಲ್ಲೂ ಹೋಗೋಲ್ಲ ಕಣೆ, ನಮ್ಮ ರೂಮಿಗೆ ಒಳಗಿನ ಚಿಲಕ ಹಾಕ್ತೀನಿ ಅಷ್ಟೆ" ಎಂದ ಧೈರ್ಯಸ್ಥ ಗಂಡ.

ವ್ಯವಹಾರ ಜ್ಞಾನ

"ಲಕ್ಷಾಧಿಪತಿ ಯಾದರೆ ಏನು ಮಾಡುತ್ತೀನಿ?"

ಎಂಬ ವಿಷಯವಾಗಿ ಎಲ್ಲರೂ ಪ್ರಬಂಧ ಬರೆಯುವಂತೆ ಮೇಷ್ಟ್ರು ಹೇಳಿದರು.

ಕೂಡಲೇ ತರಗತಿಯಲ್ಲಿ ಚಟುವಟಿಕೆ ಪ್ರಾರಂಭವಾಯಿತು ಪುಸ್ತಕ ಪೆನ್ಸಿಲ್‌ಗಳು ಕೂಡಲೇ ಚೀಲದಿಂದ ಹೊರ ಬಂದುವು

ಕಿಟ್ಟಿ ಮಾತ್ರ ಕಾಲು ಮೇಲೆ ಕಾಲು ಹಾಕಿ ಕೊಂಡು ಪುಸ್ತಕ ಮುಚ್ಚಿ, "ವಿಸಿಲ್" ಹಾಕುತ್ತಾ, ಬೀರಿಯಿಂದು ಕುಳಿತು ಕೊಂಡನು.

ಮೇಷ್ಟ್ರು ರೇಗಿ—"ಏ ಕಿಟ್ಟಿ, ಎಲ್ರೂ ಬರಿತಿದ್ರೆ ಇದೇನೋ ನೀನೂದ್ತಾ ಇರೋದು?" ಎಂದು ಗದರಿದರು.

"ಇಲ್ಲಾ ಸಾರ್, ಲಕ್ಷಾಧಿಪತಿಯಾದರೆ ನಾನೇಕೆ ಬರೀಬೇಕು? ನನ್ನ ಗುಮಾಸ್ತರಿದ್ದಾರೆ—ಅವರು ಬರೀತಾರೆ. ಅದಕ್ಕೆ ಹೀಗೆ ಕೂತಿರೋದು"— ಬಾಣದಂತೆ ಬಂದಿತು ಕಿಟ್ಟುವಿನ ಉತ್ತರ.

೦ ೦ ೦

—ಶ್ರೀ ಕೆ ಹರಿದಾಸ ಭಟ್.

ಬಗ್ಗರು

"ಊರವರಿಂದ ಸಂಗ್ರಹಿಸಿದ ರೂ. ೧೦,೦೦೦ರಕ್ಕೆ ಆಡಳಿತೆಯವರು ಮತ್ತೆ ರೂ. ೧,೧೦೦ನ್ನು ಸೇರಿಸಿ ಬಡವರಿಗೆ ಉಚಿತ ಆಶನ-ವಸನಗಳನ್ನು ಒದಗಿಸಿದ್ದರು." 'ಅ' ಸಂಘದ ಆಡಳಿತ ಸಮಿತಿಯ ವರದಿಯಲ್ಲಿ ಉಲ್ಲೇಖ. ಇದನ್ನು ಕಂಡ 'ಬ' ಸಂಘದ ಆಡಳಿತೆಯವರು ಮರುದಿನ ಪತ್ರಿಕೆಯಲ್ಲಿ ವರದಿ ಪ್ರಕಟಿಸಿದರು "ಬ ಸಂಘದ ಆಡಳಿತ ಸಮಿತಿಯವರು ಊರವರಿಂದ ಸಂಗ್ರಹಿಸಿದ ರೂ. ೫,೬೭೪ಕ್ಕೆ ಮತ್ತೆ ೧೫,೦೦೦ನ್ನು ಸೇರಿಸಿ ಬಡವರಿಗೆ ಮಾತ್ರವಲ್ಲ ಬಗ್ಗರಿಗೂ ಉಚಿತ ಅಶನ ವಸನ ವ್ಯವಸ್ಥೆಯನ್ನು ಮಾಡಿದ್ದಾರೆ."

ಓದುಗನೊಬ್ಬ ತನ್ನಲ್ಲೇ ಪ್ರಶ್ನಿಸಿದ:

"ಬಡವರೆಂದರೆ ತಿಳಿಯಿತು; ಇನ್ನು ಬಗ್ಗರು ಎಂದರೆ ಯಾರು?"

ರಾಮರಾಜ್ಯ

ಸರಳತನಕ್ಕೆ ಹೆಸರಾದ ಶ್ರೀ ಶಂ. ರವರು ತಮ್ಮ ಪುತ್ರನ ಕಲ್ಯಾಣ ಪತ್ರಿಕೆಯನ್ನು ಹೀಗೆ ಅಚ್ಚು ಹಾಕಿಸಿದರು:

"ಕ್ರೋಧಿ ವರ್ಷದ ಜಸವತಿಂಗಳು ದಿನ ೩೩ ಬೇಸಗೆ ಕಪ್ಪು ೧೧ ಶನಿವಾರ ಸಂಜೆ ಗಂಟೆ ೭ಕ್ಕೆ ಒದಗುವ ದನದೂಳಿ ಮೂರ್ತದಲ್ಲಿ ರಾಮರಾಯನೆಂಬ ಗಂಡು ಸೀತಮ್ಮನೆಂಬ ಹೆಣ್ಣಿಗೆ ಕೈಕೊಡುವುದಾಗಿಗೊತ್ತು ಮಾಡಿದ್ದಾರೆ ..."

ಲಗ್ನ ಪತ್ರಿಕೆ ಓದಿದ ಭೀಮರಾಯರು ತಮ್ಮ ಧರ್ಮಪತ್ನಿಯನ್ನು ಪ್ರಶ್ನಿಸಿದರು;

"ಹೌದೇನೇ, ಕೈಕೊಡುವುದಕ್ಕೂ ಪತ್ರ ಪ್ರಿಂಟಾಗೋ ಸತ್ಯಯುಗ ಪ್ರಾರಂಭವಾಯ್ತಲ್ಲೇ—"

ಅದನ್ನೇ ಅನ್ನೋದು ರಾಮರಾಜ್ಯಂತ."

ಇಬ್ಬರೂ ಸಮಾಧಾನ ಪಟ್ಟರು.

— ಗೋರಾ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ... ...
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು. "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಇವರಲ್ಲಿ ಪ್ರಸಿದ್ಧಿ ತಾನಾಗಿಯೇ ನುಗ್ಗಿದೆ

ಶಾಂತಿಸಾಧಕ - ಲಾಲಬಹದೂರ್



ಭುವನೇಶ್ವರದ ಕಾಂಗ್ರೆಸ್ ಅಧಿವೇಶನದ ವೇಳೆ ಅಸ್ವಸ್ಥರಾಗಿ ಗುಣಮುಖವಾಗಿ ಬಂದ ಜವಾಹರಲಾಲ ನೆಹರುರವರು ತಮ್ಮ ಮಾರ್ಗದರ್ಶನದಲ್ಲಿ ಕೆಲಸ ಮಾಡುವಂತೆ ಲಾಲ ಬಹದೂರ್ ಶಾಸ್ತ್ರಿಯವರನ್ನು 'ಮಂತ್ರಿಯನ್ನಾಗಿ ನೇಮಿಸಿದರು. "ನಾನು ಯಾವ ಕೆಲಸವನ್ನು ಮಾಡ ಬೇಕು?' ಎಂಬ ಶಾಸ್ತ್ರಿಯವರ ಪ್ರಶ್ನೆಗೆ "ನೀವು ನನ್ನ ಕೆಲಸವನ್ನು ಮಾಡಿರಿ" ಎಂದು ಸಹಜವಾಗಿಯೇ ಅಂದಿದ್ದರು. ಅಂದು ತೀರ ಸಹಜವಾಗಿದ್ದ ನೆಹರು ಉತ್ತರಕ್ಕೆ ಶಾಸ್ತ್ರಿಯವರು ನೆಹರು ಉತ್ತರಾಧಿಕಾರಿಯಾಗಿ ಆಯ್ಕೆಗೊಂಡನಂತರ ವಿಶೇಷ ಅರ್ಥ ಹುಟ್ಟಿಕೊಂಡಿದೆ. ನೆಹರೂರವರು ಭವಿಷ್ಯವಾಣಿಯನ್ನು ನುಡಿದಿರಲಾರರು, ಆದರೆ, ಆವರ ವಾಣಿಮಾತ್ರ ಸತ್ಯವಾಗಿ ಪರಿಣಮಿಸಿವೆ. ಶಾಸ್ತ್ರಿಯವರು ನೆಹರೂರವರ ಆಧುನಿಕ ಭಾರತ ನಿರ್ಮಾಣದ ಮಹಾಕಾರ್ಯವನ್ನು ಮುಂದುವರಿಸುವ ಸೂತ್ರಧಾರರಾಗಿದ್ದಾರೆ, ಇಂದು.

ಶಾಸ್ತ್ರಿಯವರ ಬಗ್ಗೆ ಆಡುತ್ತ ನೆಹರು ಅಂದಿದ್ದರು: "ಅವರು ಶ್ರೇಷ್ಠ ಪ್ರಾಮಾಣಿಕರೂ ಸದಸದ್ವಿವೇಕಿಗಳೂ ಪರಿಶ್ರಮಿಗಳೂ ಆಗಿದ್ದಾರೆ" ಎಂದು. ಇದು ಅವರ ಮೇಲಿರುವ ನೆಹರೂ ವಿಶ್ವಾಸವನ್ನು ತೋರಿಸುತ್ತದೆ ಶಾಸ್ತ್ರಿಯವರೊಡನೆ ನಿಕಟ ಸಂಪರ್ಕವಿದ್ದ ಪುರುಷೋತ್ತಮದಾಸ ಟಂಡನರು ಇವರನ್ನು "ಎಲ್ಲ ಸಂದರ್ಭಗಳಲ್ಲಿಯೂ ಸಮತೋಲನೆಯನ್ನು ಕಾಯ್ದುಕೊಳ್ಳುವ, ಕಠಿಣ ಪರಿಸ್ಥಿತಿಯನ್ನು ಕೂಲಂಕಷ ಪರಿಶೀಲಿಸಿ ರಾಜಿಯನ್ನುಂಟು ಮಾಡುವ ಮಹಾ ಬುದ್ಧಿವಂತನೆ"ಂದು ಕರೆದಿದ್ದರು. ಕಾಂಗ್ರೆಸ್ ಪಕ್ಷದಲ್ಲಿಯೂ ಶಾಸ್ತ್ರಿಯವರು ನಿಷ್ಠಾವಂತ ನಿಷ್ಕಾಮ ಸೇವಕರೆಂದು ಹೆಸರು ಪಡೆದಿದ್ದಾರೆ. ತಾನು ಸೇವಕನೆಂದು ಶಾಸ್ತ್ರಿ ಹೇಳಿಕೊಳ್ಳಲು ನಾಚುವುದಿಲ್ಲ. ಸಚಿವ ಸಂಪುಟದಲ್ಲಿನ ಅತ್ಯಂತ ಯಶಸ್ವಿ ಮಂತ್ರಿಗಳಲ್ಲಿ ಇವರೊಬ್ಬರಾಗಿದ್ದಾರೆ. ಗಾಂಧೀ ತತ್ವಗಳಲ್ಲಿ ಅಚಲ ನಿಷ್ಠೆಯಿರುವ, ನೆಹರು ನೀತಿಯಲ್ಲಿ ಸ್ಥಿರ ಶ್ರದ್ಧೆಯಿರುವ ವ್ಯಕ್ತಿಯೆಂದು ದೇಶ — ವಿದೇಶಗಳಲ್ಲಿ ಕೀರ್ತಿಶಾಲಿಯಾಗಿದ್ದಾರೆ.

"ವರ್ಣಮಯ ವ್ಯಕ್ತಿತ್ವವುಳ್ಳ ನನ್ನ ಮಗನು ಪ್ರಸಂಗ ಬಂದರೆ ತನ್ನ ಪ್ರಾಣವನ್ನು ಗಂಡಾಂತರದಲ್ಲಿ ನೂಕಿಯಾದರೂ ಭಾರತದ ಸಮೃದ್ಧಿಗಾಗಿ ಪರಿಶ್ರಮಿಸಲಿ. ಬಡ ಜನತೆಗೆ ದುಃಖವನ್ನುಂಟು ಮಾಡುವ ಯಾವ ಕಾರ್ಯವನ್ನೂ ಅವನು ಮಾಡದಿರಲಿ" ಎನ್ನುವ ಉನ್ನತ ಆಶಯವಿರುವ ಪುಣ್ಯಮಾತೆ ರಾಮದುಲಾರಿ ದೇವಿಯ ಗರ್ಭದಿಂದ ೧೯೦೪ರ ಅಕ್ಟೋಬರ ೨ನೆಯ ದಿನದಂದು ಲಾಲಬಹದೂರರ ಜನನವಾಯ್ತು. ಇವರ ಕುಟುಂಬ ತೀರ ಬಡವಾಗಿಯೇ ಇದ್ದಿತ್ತು. ಇವರು ಬಾಲ್ಯದಲ್ಲಿ ವಾರಣಾಸಿಯ ಹರಿಶ್ಚಂದ್ರ ಶಾಲೆಯಲ್ಲಿ ಶಿಕ್ಷಣ ಪಡೆದವರು. ಆದರೆ, ೧೯೨೧ರಲ್ಲಿ ಗಾಂಧೀಜಿಯವರ ಭಾಷಣದಿಂದ ಸ್ಫೂರ್ತಿ ಪಡೆದು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರಿಂದ ಶಿಕ್ಷಣವು ಅಪೂರ್ಣವಾಯಿತು. ಅದೇ ವರ್ಷ ಸೆರೆಮನೆಯಿಂದ ಬಿಡುಗಡೆ ಹೊಂದಿದ ಬಳಿಕ ಕಾಶೀ ವಿದ್ಯಾಪೀಠಕ್ಕೆ ಸೇರಿ ಅಭ್ಯಾಸವನ್ನು ಮುಂದುವರಿಸಿದರು

ಇಂಗ್ಲಿಷ್ ಮಾತಾಡುವ ಶಾಲೆಯಲ್ಲಿ ಲಾಲಬಹದೂರರು ಶಿಕ್ಷಣ ಪಡೆಯಲಿಲ್ಲ. ಹಿಂದೂಧರ್ಮ—ಶಾಸ್ತ್ರ ಮತ್ತು ಅಧ್ಯಯನಗಳಲ್ಲಿ ಆಸಕ್ತಿ ವಹಿಸಿದ್ದ ಕುಟುಂಬದಲ್ಲಿ ಜನಿಸಿದ ಇವರು ಕಾಶೀ ವಿದ್ಯಾಪೀಠದಲ್ಲೇ ಮುಂದುವರಿದರು. ಧಾರ್ಮಿಕ ಬೋಧನೆ ಮತ್ತು ರಾಷ್ಟ್ರೀಯ ಭಾವನೆಗಳಿಗೆ ಈ ವಿದ್ಯಾಪೀಠ ಹೆಸರಾಗಿತ್ತು. ಆದುದರಿಂದಲೇ ತನ್ನ ೧೬ನೆಯ ವಯಸ್ಸಿನಲ್ಲಿಯೇ ಇವರು ಮಹಾತ್ಮರ ಶಿಷ್ಯರಾದರು, ಅವರ ಪಂಥವನ್ನೇ ಅನುಸರಿಸಲು ನಿರ್ಧರಿಸಿದರು. ವಿದ್ಯಾಪೀಠದಲ್ಲಿ ಗಳಿಸಿದ "ಶಾಸ್ತ್ರಿ" ಪದವಿಯೇ ಇವರ ಉಪನಾಮದಂತೆ ಬಳಕೆಗೆ ಬಂತು. ಈ ಸಮಯದಲ್ಲಿ ಆಚಾರ್ಯ ಕೃಪಲಾನಿ, ಶ್ರೀ ಪ್ರಕಾಶ, ಡಾ॥ ಸಂಪೂರ್ಣಾನಂದ ಮೊದಲಾದವರ ಸಂಪರ್ಕವು ಇವರಿಗೆ ಲಭಿಸಿತು.

ಶಿಕ್ಷಣದಲ್ಲಿ ಅತ್ಯಂತಾಸಕ್ತಿಯಿದ್ದ ಲಾಲಬಹದೂರ್ ಹೆಸರಿನಲ್ಲಿ ಮಾತ್ರ ಲಾಲರೂ ಬಹದೂರರೂ ಆಗಿದ್ದರು. ಎಳೆಯ ವಯಸ್ಸಿನಲ್ಲಿ ಕಡವಿನವನಿಗೆ ತೆರಲು ಹಣವಿಲ್ಲದ ಕಾರಣ ಗಂಗಾ ನದಿಯನ್ನು ಈಜಿಕೊಂಡು ದಾಟಿದ್ದರಂತೆ! ಇವರ ತಂದೆ ಒಬ್ಬ ಶಿಕ್ಷಕ ಇವರೂ ಮಗು ಚಿಕ್ಕವನಿರುವಾಗಲೇ ತೀರಿ ಹೋಗಿದ್ದರು

ಗಾಂಧೀಜಿಯವರ ತತ್ವಗಳಲ್ಲಿ ಆಸ್ಥೆ ತೋರಿಸಿದ ಶಾಸ್ತ್ರಿಯವರು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಒಟ್ಟು ಎಂಟು ಸಲ ಬಂಧಿತರಾಗಿದ್ದರು; ಒಂಭತ್ತು ವರ್ಷಗಳನ್ನು ಸೆರೆಮನೆಗಳಲ್ಲಿ ಕಳೆದಿದ್ದರು. ೧೯೨೧ರಲ್ಲಿಯೇ ರಾಜಕಾರಣದಲ್ಲಿ ತಲೆ ಹಾಕಿದ ಶಾಸ್ತ್ರಿಯವರು ಉತ್ತರ ಪ್ರದೇಶದಲ್ಲಿ ಆಗಲೇ ಹೆಸರು ಪಡೆದಿದ್ದರು.

೧೯೩೦ರಲ್ಲಿಯೇ ಲಾಲಬಹದೂರರು ಅಲ್ಲಹಾಬಾದ ನಗರಸಭೆಯ ಅಧ್ಯಕ್ಷರಾದರು. ಅಂದಿನಿಂದ ನಾಗರಿಕ ಚಟುವಟಿಕೆಗಳಿಗೆ ನೆಗೆದರು. ಮುಂದಿನ ಕೆಲವು ವರ್ಷಗಳಲ್ಲಿ ಕಾಂಗ್ರೆಸ್ಸಿನಲ್ಲಿ ಭಿನ್ನಾಭಿಪ್ರಾಯವು ಮೂಡಿದಾಗ, ಜವಾಹರರು ಶಾಂತಿ ಸ್ಥಾಪಕರೆನಿಸಿಕೊಂಡರು. ಶಾಸ್ತ್ರಿಯವರೂ ಇವರ ದಾರಿಯನ್ನೇ ಅನುಸರಿಸಿದರು. ಮಹಾತ್ಮಾ ಗಾಂಧಿಯವರಿಂದ ಜವಾಹರಲಾಲರು ಆಕರ್ಷಿತರಾಗಿದ್ದರು; ನೆಹರುರವರು ಶಾಸ್ತ್ರಿಯವರನ್ನು ಕನ್ನತ್ತ ಸೆಳೆದರು.

೧೯೩೭ರಲ್ಲಿ ಶಾಸ್ತ್ರಿ ಉತ್ತರ ಪ್ರದೇಶ ವಿಧಾನ ಸಭೆಗೆ ಆಯ್ಕೆ ಗೊಂಡರು. ೧೯೪೬ರಲ್ಲಿ ಅಲ್ಲಿನ ಮುಖ್ಯ ಮಂತ್ರಿಯಾದ ಪಂಡಿತ ಗೋವಿಂದ ವಲ್ಲಭ ಪಂತರ ಪಾರ್ಲಿಮೆಂಟರಿ ಕಾರ್ಯದರ್ಶಿಯಾದರು. ಮುಂದಿನ ವರ್ಷ ಅಲ್ಲಿಯೇ ಗೃಹ ಮತ್ತು ಸಾರಿಗೆಯ ಮಂತ್ರಿಯಾದರು. ೧೯೫೧ರಲ್ಲಿ ಕಾಂಗ್ರೆಸ್ಸಿನ ಕಾರ್ಯದರ್ಶಿಯಾದಾಗ ತಮ್ಮ ಮಂತ್ರಿ ಪದವಿಗೆ ರಾಜಿನಾಮೆಯಿತ್ತ ಶಾಸ್ತ್ರಿ ಪ್ರಥಮ ಸಾರ್ವತ್ರಿಕ ಚುನಾವಣೆಗಳಲ್ಲಿ ರಾಜ್ಯ ಸಭೆಗೆ ಆಯ್ಕೆ ಹೊಂದಿ ಸಾರಿಗೆ ಮತ್ತು ರೇಲ್ವೆ ಮಂತ್ರಿಯಾದರು. ೧೯೫೬ರಲ್ಲಿ ರೇಲ್ವೆ ದುರ್ಘಟನೆಯೊಂದರ ಕಾರಣದಿಂದ ಅವರು ಪ್ರಜಾಪ್ರಭುತ್ವದ ತತ್ವಗಳನ್ನು ಮನ್ನಿಸಿ ರಾಜಿನಾಮೆಯಿತ್ತರು ಆದರೆ, ಮುಂದೆ ಅವರು ಮತ್ತೆ ಮಂತ್ರಿಯೆಂದು ನಿಯುಕ್ತರಾದರು. ೧೯೬೩ರಲ್ಲಿ ಕಾಮರಾಜ ಯೋಜನೆಯಂತೆ ರಾಜಿನಾಮೆಯನ್ನು ಇತ್ತರು.

ಶಾಸ್ತ್ರಿಯವರು ೧೯೬೪ರಲ್ಲಿ ಮಹತ್ವದ ಗೃಹ ಶಾಖೆಯನ್ನು ವಹಿಸಿಕೊಳ್ಳಬೇಕಾಯಿತು. ಈ ವೇಳೆಯಲ್ಲಿ ಅವರು ಕಾಚಾರದ ಭಾಷಾ ಸಮಸ್ಯೆ, ಪಂಜಾಬದ ಅಕಾಲಿ ಸಮಸ್ಯೆಗಳನ್ನು ಸಮಾಧಾನಕರವಾಗಿ ಬಗೆಹರಿಸಿದರು. ನೆಹರು-ಶಾಸ್ತ್ರಿಯವರ ನಡುವಣ ಸಂಬಂಧವು ದೃಢವಾಗಿ ಬೆಳೆದಿದ್ದುದರಿಂದಲೇ ನೆಹರು ಅಸ್ವಸ್ಥರಾದನಂತರ ನೆರವಿಗನೆಂದು ಶಾಸ್ತ್ರಿಯವರು ಮುಂದೆ ಬರಲೇ ಬೇಕಾಯಿತು. ಈ ವೇಳೆಯಲ್ಲಿಯೇ ಅವರು ಪವಿತ್ರ ಕೇಶದ ಪ್ರಕರಣ, ಶೇಖ ಅಬ್ದುಲ್ಲಾರ ಬಿಡುಗಡೆ ಮೊದಲಾದ ಸಂದರ್ಭಗಳಲ್ಲಿ ಜಾಣಾಕ್ಷತೆಯಿಂದ ನಡೆದುಕೊಂಡರು.

ಕಾಂಗ್ರೆಸ್ಸಿನಲ್ಲಿ ಶಾಂತಿ ಸ್ಥಾಪಕರಾಗಿ ಬಂದವರಲ್ಲಿ ಶಾಸ್ತ್ರಿ ಒಬ್ಬರು. ಜನತೆಯ ಸುಖ—ಕಷ್ಟಗಳನ್ನು ಅರಿತಿರುವ ಇವರು ಪರಿಶ್ರಮ ಶೀಲರು, ಧ್ಯೇಯ ವಾದಿಗಳು. ತನ್ನ ಉನ್ನತ ಗುಣಗಳಿಂದ ಇವರು ಪ್ರಧಾನ ಮಂತ್ರಿಯಾಗಿ ಯಶಸ್ಸು ಗಳಿಸುವುದು ಖಂಡಿತ. ನಿಷ್ಕರುಣೆಯಿಂದ ಇವರು ಯಾವ ಕಾರ್ಯವನ್ನೂ ಮಾಡಲಾರರು. ಏಕೆಂದರೆ, ಈ ಬಗೆಯ ಕಠೋರತೆ ಈ ಮನುಷ್ಯನಲ್ಲಿಯೇ ಇಲ್ಲ. ಆದರೂ ಆವಶ್ಯಕತೆ ಬಂದಾಗ ದೃಢ ನಿಲುಮೆಗೆ ಇವರು ಅಂಟಿ ಕುಳಿತುಕೊಳ್ಳುವರೆಂಬುದೂ ಅಷ್ಟೇ ನಿರ್ಧಾರಿತ.

ಗಾಂಧೀ ಜಯಂತಿಯಂದೇ ಜನ್ಮತಾಳಿದ ಶಾಸ್ತ್ರಿಯವರಿಗೆ ಗಾಂಧೀಜಿಯ ಮಾನವತೆ ಮತ್ತು ಕೋಮಲತೆಗಳಲ್ಲಿ ಪಾಲಿದೆ; ನೆಹರೂ ಹೆಜ್ಜೆಯಲ್ಲಿ ಮುಂದುವರಿಯುವ ಶಾಸ್ತ್ರಿಯವರಿಗೆ ಗತಕಾಲದ ಉತ್ತಮ ಸಂಪ್ರದಾಯಗಳೊಂದಿಗೆ ಬೆಳೆಯುತ್ತಿರುವ ಆಧುನಿಕ ಜಗತ್ತಿನ ನಿಕಟ ಸಂಪರ್ಕವೂ ಇದೆ. (ವಿದೇಶ ಗಮನವನ್ನು ಇವರು ಮಾಡದಿದ್ದರೂ ಅಲ್ಲಿನವರೊಡನೆ ಹೊಕ್ಕು ಬಳಕೆ ಬೇಕಾದಷ್ಟಿದೆ.)

ಗಾಢೆಯ ಮಾತುಗಳು ಅರ್ಥ ಸತ್ಯವನ್ನಾಧರಿಸುತ್ತವೆ. ಬಲವಂತರು ಸುಮ್ಮನಿರುವುದಿಲ್ಲ; ಸಾಧುಗಳು ಸರಳವಾಗಿರುವುದೂ ಇಲ್ಲ. ಶಾಸ್ತ್ರಿಯವರಲ್ಲಿರುವ ನಮ್ರತೆಯು ಸುಲಭ ಸಮ್ಮತಿಯು ಇಲ್ಲವೇ ಹುಟ್ಟಿನಿಂದಿರುವ ಅಥವಾ ಅಸಹಾಯಕತೆಯ ಗುಣವೆಂದು ಯಾರೂ ಊಹಿಸ ಬೇಕಾಗಿಲ್ಲ.

ಲಾಲ ಬಹದೂರರ ಬಹಾದೂರಿಯನ್ನು ಭವಿಷ್ಯವೇ ಸಾಧಿಸುವುದು. ಕೆಲವರು ಜನ್ಮಜಾತ ಮಹಾ ಪುರುಷರಾಗುತ್ತಾರೆ; ಕೆಲವರು ಪ್ರಸಿದ್ಧಿಯನ್ನು ಗಳಿಸುತ್ತಾರೆ. ಕೆಲವರಲ್ಲಿ ಪ್ರಸಿದ್ಧಿಯು ತಾನಾಗಿಯೇ ನುಗ್ಗುತ್ತದೆ. ಶಾಸ್ತ್ರಿಯವರು ಈ ಬಗೆಯವರಲ್ಲಿ ಮೂರನೆಯ ವರ್ಗಕ್ಕೆ ಸೇರಿದವರು. ಶಾಸ್ತ್ರಿಯವರು ದೇಶವನ್ನು ನೆಹರೂ ದಾರಿಯಲ್ಲಿ ಮುಂದೊಯ್ದು ಸಮೃದ್ಧಿಯನ್ನು ಸಾಧಿಸಲಿ; ಕಾಂಗ್ರೆಸ್ ಪಕ್ಷವೂ ಭಾರತೀಯರೂ ಅವರಿಗೆ ಹೃತ್ಪೂರ್ವಕ ನೆರವುನೀಡಿ, ಆಧುನಿಕ ಭವ್ಯ ಭಾರತ ನಿರ್ಮಾಣದ ಗುರಿ ತೀವ್ರ ಮುಟ್ಟಲಿ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ!	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಪಾದಗಳಲ್ಲಿ ಆಣಿಗಳು

ಬೆರಳುಗಳು ಬಾತುಹೋಗಿ ಎಷ್ಟೇ ಕಡೆ ಚಿಕಿತ್ಸೆ ನಡೆಸಿ ನಿರಾಶರಾಗಿದ್ದಲ್ಲಿ ಕಾಲು ಅಣಿಬಹಿರ್ಲೇಪನ ತೈಲ ಆಣಿಗಳು ಪುನಃ ಬರದಂತೆ ಶಾಶ್ವತವಾಗಿ ಗುಣಪಡಿಸುತ್ತೆ. ಬೆಲೆ ಸೀಸೆ ಒಂದಕ್ಕೆ ಅಂಚೆವೆಚ್ಚ ಸೇರಿ ರೂ. 4-50. ಜಗನ್ನಾಥ್ & ಕೋ., P. B. 1859, ಮದ್ರಾಸ್-1

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ಭಾರತವನ್ನು ನುಂಗುವ

ಹಿರಣ್ಯಗರ್ಭ - ಹಿರಣ್ಯಕಶಿಪು

ಬರೆದವರು: ಶಿವಶಂಕರ, ಮದ್ರಾಸು.

ಚೈನಾ ಮತ್ತು ಪಾಕಿಸ್ತಾನಗಳ ಸಮ್ಮಿಲಿತ ಶಕ್ತಿಯನ್ನೆದುರಿಸಲು ಭಾರತಕ್ಕೆ ಸಾಧ್ಯವೇನೆಂಬುದರ ಕುರಿತು ಮೂರುವಾರಗಳ ಹಿಂದೆ ಯೋಚಿಸಿರುವೆವು.. ಯೋಚಿಸುತ್ತಾ ಒಂದು ನಿರ್ಣಯಕ್ಕೆ ಬಂದಿರುವೆವು. ಅದುವೇ, ಇಂತಹ ಶತ್ರು ಚೈನಾ—ಪಾಕಿಸ್ಥಾನಗಳನ್ನೂ ಹಿಚುಕಿಬಿಡಬಹುದೆಂಬುದು. ಅದಕ್ಕೆ ಅದೇನೆಲ್ಲಾ ಆಗತ್ಯ ಅನ್ನುವದನ್ನು ವಿವರವಾಗಿ ತಿಳಿದುಕೊಂಡಿರುವೆವು. ಅಷ್ಟಾಗುವಾಗ, ಭಾರತ ಸರಕಾರದ ಅಧಿಕಾಧಿಕ ನಿಧಿಲುತನ ಹಾಗೂ ವಿಚಿತ್ರ ಧೋರಣೆಯ ಫಲಿತಾಂಶವಾಗಿ, ಕಾರಾಗೃಹದಲ್ಲಿದ್ದು ಇದೀಗ ಹೊರಗೆ ಬರುವ ಶೇಖ ಅಬ್ದುಲ್ಲಾ ಒಂದು ನೂತನ ಗುಂಡನ್ನೆಸೆದಿರುವರು. ಪಾಕಿಸ್ಥಾನ ಆಕ್ರಮಿಸಿಕೊಂಡಿರುವ ಕಾಶ್ಮೀರದ ಒಂದು ಪ್ರದೇಶವನ್ನು, ಅದು ತನ್ನದೆಂದು ಚೌ ಹೇಳಿದೊಡನೆ ಆಯೂಬ ಪ್ರಧಾನ ಮಾಡಿರುವತ್ತ ಶೇಖ ಅಬ್ದುಲ್ಲಾರ ಗಮನವನ್ನು ಸೆಳೆದಾಗ, ತಟ್ಟನೆ, ಅವರು ನೇಫಾ—ಲಢಾಕ್ ಪ್ರದೇಶದಲ್ಲಿ ಎಷ್ಟೊಂದು ಭೂಪ್ರದೇಶವನ್ನು ಚೈನಾ ಆಕ್ರಮಿಸಿಕೊಂಡಿರುವಾಗ ಭಾರತ ಸರಕಾರ ಏನು ಕ್ರಮಕೈಗೊಂಡಿರುತ್ತದೆಂದು ಕೇಳಿಬಿಟ್ಟರು. ಬಹುಷಃ ಮರು ಉತ್ತರ ಬರಲಿಲ್ಲವೆಂದು ಕಾಣಿಸುತ್ತದೆ. ಲೋಕಸಭೆಯಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರವೀಯುತ್ತ ಶ್ರೀಮತಿಲಕ್ಷ್ಮೀ ಮೆನನರವರು ಚೈನಾ ಭಾರತದ ಮೇಲೆ ಆಕ್ರಮಣ ನಡೆಸಿದ್ದು ೧೪, ೫೦೦ ಚದರ ಮೈಲು ನೆಲವನ್ನು ಇನ್ನೂ ಆಕ್ರಮಿಸಿಕೊಂಡಿರುತ್ತದೆಂದು ಹೇಳಿದರು ೧೪, ೫೦೦ ಚ. ಮೈಲೆಂದು ಭಾರತ ಸರಕಾರ ಹೇಳಿದರೂ ನಿಜವಾಗಿ ಚೈನಿ ಚಿರತೆಯು ಹಿಡಿತದಲ್ಲಿ ಇನ್ನೂ ಅತ್ಯಧಿಕ ಭೂಪ್ರದೇಶವಿದೆಯೆಂದು ಎದುರುಪಕ್ಷದವರು ಬಿಡದೆ ಹೇಳುತ್ತಿದ್ದಾರೆ. ಅದೂ ಅಲ್ಲದೆ, ಇತ್ತೀಚೆಗೆ ಲಢಾಖ್ ಪ್ರದೇಶದಲ್ಲಿ ಚೈನೀಯರು ಹೊಸ ಕಲ್ಲಕಂಭಗಳನ್ನು ನೆಟ್ಟಿದ್ದಾರೆಂದೂ ಶ್ರೀಮತಿ ಲಕ್ಷ್ಮೀಮೆನನರು ರಾಜ್ಯ ಸಭೆಯಲ್ಲಿ ಹೇಳಿರುವರು. ಚೈನಾ ಮಾತ್ರ ಭಾರತ ಭೂಪ್ರದೇಶವನ್ನು ಆಕ್ರಮಿಸಿಕೊಂಡಿರುವುದೇನು? ಇನ್ನೊಂದು ಹೊಸಕೀಟಿಯ ಪಿಡುಗು ಇದೆ. ಅದುವೇ ಪಾಕಿಸ್ಥಾನ. ಪಾಕಿಸ್ಥಾನವಾದರೋ ಏನಿದೆ? ಭಾರತ ಭೂಪ್ರದೇಶವೇ ಇದೆ. ಅಂದರೆ ಅನ್ಯರ ಆಕ್ರಮಣಕ್ಕೊಳಗಾಗಿ ಇದೆ - ಆದರೆ ಅದಕ್ಕೆ ರಾಜಕೀಯ ಒಪ್ಪಿಗೆಯ ಮುದ್ರೆ ಇದೆ. ಆ ಪಾಕಿಸ್ಥಾನವು ಕಾಶ್ಮೀರದಲ್ಲಿ ಮೂರನೇ ಒಂದಂಶವನ್ನು ಹಿಡಿತದಲ್ಲಿಟ್ಟುಕೊಂಡಿದೆಯಲ್ಲದೆ, ಬೆರುಬಾರಿಯನ್ನು ಬುಟ್ಟಿಯಲ್ಲಿ ಹಾಕಿಕೊಂಡಿರುತ್ತದೆ, ಅಲ್ಲದೆ ಅಸ್ಸಾಮಿನ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದು, ಪಶ್ಚಿಮ ಬಂಗಾಲದ ಮೇಲೆ ಪಡೆ ಎತ್ತಿಕೊಂಡು ಬಂದು ಮುತ್ತಿಗೆ ಹಾಕಿರುತ್ತದೆ. ಹಾಗೆಯೇ ಇತರ ಕೆಲ ಪ್ರದೇಶಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ. ಆದರೆ ಇದಕ್ಕೆಲ್ಲಾ ಅದಾವ ರಾಜಕೀಯ ಒಪ್ಪಿಗೆಯೂ ಇಲ್ಲ —ಕೇವಲ ರಾಜಕೀಯ ರಾದ್ಧಾಂತ ಮಾತ್ರ. ಆದರೂ ಅದಕ್ಕೆ ಇನ್ನೊಂದು ಸಣ್ಣ ನೆಯ ಪರದೆಯನ್ನು ಹಾಕಲಾಗಿರುತ್ತದೆ. ಅಂದರೆ, ಅದರಲ್ಲಿ ಕೆಲ ಪ್ರದೇಶಗಳನ್ನು 'ತೊಂದರೆಯ ಪ್ರದೇಶ"ಗಳೆಂದು; ಅವು ಸಂಧಾನ-ಮಾತುಕತೆಗಳಿಗೊಳಗಾಗಬೇಕಾಗಿರುವ ಪ್ರದೇಶಗಳೆಂದು ಅವಕ್ಕೆ ಹೆಸರು ಕೊಡಲಾಗಿರುತ್ತದೆ. ಆ ಪ್ರದೇಶಲ್ಲಿದ್ದದ್ದೇ ಆಗ ಸರಕಾರದ ಲಗಾಮನ್ನು ಹಿಡಿದುಕೊಂಡವರಿಗೆ ಗೊತ್ತಿರಲಿಲ್ಲ. ಆದುದರಿಂದ ಪಾಕಿಸ್ಥಾನ ಹಾಗೂ ಬಾಕಿ ಭಾರತ ಸಮಾಧಾನದಿಂದ ಕುಳಿತುಕೊಂಡು ಅವುಗಳನ್ನು ಯಾರಿಗೆ ಸೇರಿಸಬೇಕೆಂದು ನಿರ್ಧರಿಸಬೇಕು ರಾಷ್ಟ್ರಾಭಿಮಾನಿಗಳಿಗೆ ಇದೆಲ್ಲಾ ಹಾಸ್ಯದ ಹಾಗೂ ನಾಚಿಕೆಯ ವಿಷಯವಾಗಿದೆಯಾದರೂ ರಾಜಕೀಯ ಆಟದಲ್ಲಿ ಇತ್ಯರ್ಥವಾಗಬೇಕಾಗಿರುವ ವಿಷಯಗಳೇ ಇವೆ.

ಇವನ್ನೆಲ್ಲಾ ಇಂದಿನ ಪರಿಸ್ಥಿತಿಯಲ್ಲಿ ಯೋಚಿಸುವಾಗ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಪೂರ್ಣ ಭಾರತವನ್ನು ಹಿರಣ್ಯಗರ್ಭನು ಆಕ್ರಮಿಸಿಕೊಂಡಾಗ ವರಾಹಕಲಾಂಛನ ವಿಜಯ ವೈಜಯಂತಿ ವಿಜೃಂಭಣೆಯಿಂದ ಹಾರಿಸಲ್ಪಟ್ಟಿತು. ಹಿರಣ್ಯಗರ್ಭನ ಪ್ರಾಣ ಹರಣವಾಯಿತು. ಭಾರತ ಆಕ್ರಮಣಗಾರ ಅಸುರನ ಅಂಗೈಯಿಂದ ಪಾರಾಯಿತು. ಇದೀಗ ಪುನಃ ಭಾರತವು ಹಿರಣ್ಯಗರ್ಭನ ಅಥವಾ ಹಳದಿ ಮನುಷ್ಯರ ಧಾಳಿಗೆ ತುತ್ತಾಗಿರುತ್ತದೆ. ನಮ್ಮ ಭೂ ಪ್ರದೇಶದ ಮೇಲೆ ಅವರು ತಮ್ಮ ಧ್ವಜವನ್ನು ಹಾರಿಸಿರುವರು. ಆ ಪ್ರದೇಶದಲ್ಲಿ ಪುನಃ ಭಾರತದ ಬಾವುಟ ಎಂದು ಹಾರೀತು? ಇದು ಕಮ್ಯೂನಿಸ್ಟ್ ಚೈನೀಯರ ವಿಷಯದಲ್ಲಿ ಮಾತ್ರವಲ್ಲ, ಪಾಕಿಸ್ಥಾನಿಗಳಿಗೂ ಸಂಬಂಧಪಟ್ಟದ್ದೇ ಇದೆ.

ಭೂ ಪ್ರದೇಶದ ವಿಷಯವಾಯಿತು. ಹಿರಣ್ಯಗರ್ಭದ ಮುಕ್ತಾಯವಾಯಿತು. ಅನಂತರ ಆರಂಭವಾಯಿತು ಹಿರಣ್ಯಕಶಿಪುವಿನ ಅಟ್ಟಹಾಸ. ಅವನು ಪ್ರಹ್ಲಾದನನ್ನು ಶಿಕ್ಷಿಸುತ್ತಾನೆ, ಎಲ್ಲಿ ನಿನ್ನ ಹರಿಯೆಂದು? ಕಂಭದಲ್ಲಿದ್ದಾನೆಯೇ? ಆಗ ನರಸಿಂಹ ಪ್ರತ್ಯಕ್ಷನಾಗುತ್ತಾನೆ. ಹಿರಣ್ಯಕಶಿಪುವಿನ ಸಂಹಾರ ನಡೆಯುತ್ತದೆ. ಚೈನಾ ಹಾಗೂ ಪಾಕಿಸ್ತಾನ ಇಂದು ಒಂದಾಗಿ ಬಂದು ದರ್ಪದಿಂದ ಪ್ರಶ್ನಿಸುತ್ತಿದ್ದಾರೆ ಭಾರತೀಯತೆ—ಭಾರತ ರಾಷ್ಟ್ರೀಯತ್ವ—ಎಲ್ಲಿದೆಂದು?

ಚೈನಿ ಡ್ರೇಗನ್ ತನ್ನ ಬಾಲವನ್ನು ಭಾರತದಲ್ಲಿ ಬಿಟ್ಟಿರುತ್ತದೆ. ಅದುವೇ ಇಲ್ಲಿರುವ ಕಮ್ಯೂನಿಸ್ಟ್ ಪಕ್ಷ. ಇದರಲ್ಲಿ ರಷ್ಯಾ ಗುಂಪು – ಚೈನಾ ಗುಂಪೆಂದು ಎರಡು ವಿಧವಂತೆ! ಇಲ್ಲೂ ದ್ವಿಮುಖ ವೇಷವನ್ನವರು ಬಿಟ್ಟಿರುವುದಿಲ್ಲ. ರಷ್ಯಾ ಗುಂಪು ಕಾಂಗ್ರೆಸ್ ನೆಹರೂರವರ ಸ್ತುತಿಗೈಯುತ್ತ ಅವರ ರಕ್ಷಣೆಯಲ್ಲಿದ್ದ ಕಮ್ಯೂನಿಸ್ಟ್ ಪಕ್ಷವನ್ನು ಪರಿಪಾಲಿಸುತ್ತಿತ್ತು. ಇನ್ನೊಂದು ಪಕ್ಷವು ಕಾರ್ಮಿಕರ ನಡುವೆ ಅಸಮಾಧಾನದ ಬೀಜ ಬಿತ್ತಿ ಶ್ರೀಯುತ ನೆಹ್ರೂಜಿಯವರ ಬೆನ್ನೆಲುಬು ಮುರಿಯಲು ಪ್ರಯತ್ನಿಸುತ್ತಾ. ಈ ಎರಡು ಗುಂಪುಗಳು ಈಗ ಬೇರೆ ಬೇರೆ ವೇಷಗಳನ್ನು ಹಾಕುತ್ತಿದ್ದು ಇಲ್ಲಿರುವ ಚಿಕ್ಕ ಪುಟ್ಟ ಪಕ್ಷಗಳನ್ನು ನುಂಗಲು ಪಂದ್ಯಾಟ ನಡೆಸುತ್ತಿವೆ. ಕೊನೆಯಲ್ಲಿ ಖಳನಾಯಕರ ಮಿಲನದಲ್ಲಿ ನಾಟಕ ಮುಕ್ತಾಯವಾಗುತ್ತದೆಂದು ಕಮ್ಯೂನಿಸ್ಟ್ ಪಕ್ಷ ಕನಸು ಕಾಣುತ್ತಿದೆ. ಕಮ್ಯೂನಿಸ್ಟ್ ಪಕ್ಷಕ್ಕೆ ಭಾರತೀಯ ಸಂಸ್ಕೃತಿ, ಕಲಾಚಾರ, ನಾಗರೀಕತೆಯ ಮೇಲೆ ಎಳ್ಳಷ್ಟೂ ಅಭಿಮಾನ ಇರುವದಿಲ್ಲ. ಅದೆಲ್ಲಾ ಅಂಧ ಶ್ರದ್ಧೆ ಗೊಡ್ಡು ಸಂಪ್ರದಾಯದ ಆವರಿಗೆ. ಈ ದೇಶದವ ತಾನು, ರಾಷ್ಟ್ರೀಯನು ತಾನೆಂದು ಹೇಳಲು ಅವರು ನಾಚಿಕೆ ಮಾಡುತ್ತಿದ್ದಾರೆ. ತಾಯಿ ತಂದೆಯರ ಕಾಮದ ಫಲ ರೂಪವಾಗಿ ತಾವು ಇಲ್ಲಿ ಕಣ್ಣಾಗಿ ಹುಟ್ಟಿದ್ದೇವೆಂದೇ ಅವರು ತಿಳಿದಿದ್ದಾರೆ!

ಇನ್ನೊಂದೆಡೆ ಪಾಕಿಸ್ಥಾನೀ ಪ್ರೇತ ನೃತ್ಯ ನಡೆಯುತ್ತಿದೆ. ಅವರಂತೂ ತಾವು ಈ ದೇಶದವರಲ್ಲವೆಂದು ಪ್ರತ್ಯೇಕ ರಾಜ್ಯವನ್ನೇ ಸೃಜಿಸಿ ಆಳಿಕೊಂಡಿದ್ದಾರೆ. ಅಲ್ಲಿರುವ ಮುಸ್ಲಿಮೇತರರ ಪ್ರಾಣ ಹರಣ ಪ್ರೇತ ಕೃತ್ಯವನ್ನು ಅವರು ಗರ್ವದಿಂದ ಸರಾಗವಾಗಿ ನಡೆಸುತ್ತಿದ್ದಾರೆ. ವಿನಾಶ ಕಾಲದಲ್ಲಿ ವಿಪರೀತ ಬುದ್ಧಿ ಎಂಬಂತೆ ಇದೀಗ ಅದು ಅಧಿಕವಾಗಿರುತ್ತದೆ. ಪಾಕಿಸ್ಥಾನದಲ್ಲಿ ಮುಸ್ಲಿಮೇತರರು ಅಧಿಕವಾಗಿದ್ದ ಸ್ಥಳಗಳಲ್ಲಿ ಮುಸ್ಲಿಮರಿಗೆ ಮುಂಚೆಯೇ ಎಚ್ಚರಿಕೆ ಇತ್ತು ಹಳ್ಳಿಗೆ ಹಳ್ಳಿಯನ್ನು ಸುಟ್ಟು ಬಿಡಲಾಗುತ್ತದೆ-ಗಂಡಸರನ್ನು ಹಿಡಿದು ಕಾರಾಗೃಹದೊಳಗೆ ತಳ್ಳಿ ಬಿಡುತ್ತಾರೆ. ಮುದುಕರ-ಬಾಲಕರ ಸಾಮೂಹಿಕ ಕೊಲೆ ನಡೆಯುತ್ತಿದೆಯಾದಲ್ಲಿ, ಯುವತಿಯರನ್ನು ಹಿಡಿದು ಮೊನಗೆಡಿಸಿ ಅರಬ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದಾರೆ. ಆದರೂ ಮುಸ್ಲಿಮೇತರು ಇಸ್ಲಾಮ್ ಮತಕ್ಕೆ ಸೇರುತ್ತಿಲ್ಲ! ಗಡಿ ಪ್ರಾಂತ್ಯಗಳಂತೂ ಪಾಕಿಸ್ತಾನದ ಮಹಮ್ಮದೀಯರು ತಂಗಿದ್ದು ಸಿಖ್ಖರ ಮುಸ್ಲಿಮರನ್ನಂಟು ಮಾಡಿರುವರು. ಕೆಲವೆಡೆಗಳಲ್ಲಿ, ಮುಖ್ಯವಾಗಿ ಅಸ್ಸಾಮ್ ಗಡಿಪ್ರದೇಶದಲ್ಲಿ ಒಂದು ಬೀಡು ಬಿಟ್ಟಿರುವ ಮಹಮ್ಮದೀಯರನ್ನು ನೈಜ ಪ್ರಜೆಗಳನ್ನ ಅಲ್ಲಿಂದ ಕಳಿಸಲು ಸರಕಾರ ಯೋಚಿಸಿದಾಗ, ಅವರಿಗೆ ಬೇಕಾಗಿರುವ ಇಲ್ಲಿನ ಮಂತ್ರಿಗಳೂ ದಪ್ಪ ಮಾತಾಡಲಾರಂಭಿಸಿದ್ದಾರೆ. ಗಡಿಯಲ್ಲಿ ಅವರು ಗಡಿಬಿಡಿ ಮಾಡುತ್ತಿರುವದು ಮಾತ್ರವಲ್ಲದೆ ದೇಶದೊಳಗೂ ಹಬ್ಬಿಕೊಂಡಿದ್ದಾರೆ, ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೂ ಅವರು ದೇವಸ್ಥಾನಗಳಂಥ ಮೂರ್ತಿಗಳನ್ನು ಕಳೆಯುತ್ತಿದ್ದಾರೆ. ದೇವಸ್ಥಾನದ ಆವಾರದಲ್ಲಿ ಹೆಣಗಳನ್ನು ಹೂತು, ಗೋವಧೆನಡೆಸಿ ಅಪವಿತ್ರಗೊಳಿಸುತ್ತಿದ್ದಾರೆ ಹಿಡಿಗಂಡು—ಮದ್ದುಗಳನ್ನು ತಯಾರಿಸಲು ಗುಪ್ತ ಕಾರ್ಖಾನೆ

(೮ನೇ ಪುಟ ನೋಡಿರಿ)

ಅತ್ಯುತ್ತಮ ಸೇವೆಗಾಗಿ ಸಮಾವೇಶ..........

ದಿ ಒರಿಯಂಟಲ್ ಯೂನಿಯನ್ ಬ್ಯಾಂಕ್

XX

ಸಿಂಡಿಕೇಟ್ ಬ್ಯಾಂಕ್

ದಿ ಒರಿಯಂಟಲ್ ಯೂನಿಯನ್ ಬ್ಯಾಂಕ್ ಲಿಮಿಟೆಡ್ ಕಡುತುರುತಿ, ಅವರ ಬ್ಯಾಂಕಿಂಗ್ ವ್ಯವಹಾರವನ್ನು ದಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್, ಮಣಿಪಾಲ, ಅವರು ಶೀಘ್ರದಲ್ಲಿಯೇ ವಹಿಸಿಕೊಳ್ಳುವರು. ಸಿಂಡಿಕೇಟ್ ಬ್ಯಾಂಕಿನೊಡನೆ ಈ ವರೆಗೆ ಸೇರ್ಪಡೆಗೊಂಡ ಬ್ಯಾಂಕುಗಳಲ್ಲಿ ಇದು ಹದಿನಾರನೆಯದು. ನಮ್ಮ ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಸೇವೆಯನ್ನು ದಿ ಒರಿಯಂಟಲ್ ಯೂನಿಯನ್ ಬ್ಯಾಂಕಿನ ಗಿರಾಕಿಗಳೂ ಪಡೆಯುವರೆಂಬ ಸದಾಶಯ ನಮಗಿದೆ.

ಡಾ॥ ಟಿ. ಎಂ. ಎ. ಪೈ
ಚೇರ್‌ಮ್ಯಾನ್

ಟಿ. ಎ. ಪೈ
ಮ್ಯಾನೇಜಿಂಗ್ ಡೈರೆಕ್ಟರ್.

ಒಟ್ಟು ಶಾಖೆಗಳು:
190

ಚಲಾವಣಾನಿಧಿ:
57 ಕೋಟಿಗೂ ಮಿಕ್ಕಿದೆ

— ಸಮಾನ ಸೇವೆ..............ಸರಿಯಾದ ಭದ್ರತೆ —

ನವಯುಗ

ವರುಷ	ಉಡುಪಿ	ವಾರ
೪೩	೧೧-೬-೧೯೬೪	೪೧

ಶಾಸ್ತ್ರಿ ಸಂಪುಟ

ಹೊಸತಾಗಿ ಪ್ರಧಾನ ಮಂತ್ರಿಯೆಂದು ಆಯ್ಕೆಗೊಂಡ ದಿನವೇ ನವನಾಯಕ ಲಾಲಬಹದೂರ ಶಾಸ್ತ್ರಿಯವರು ತಾನು ಮಂತ್ರಿ ಮಂಡಳವು ಬೃಹತ್ ಪರಿಮಾಣ ಹೊಂದುವುದನ್ನು ಒಪ್ಪುವುದಿಲ್ಲವಾದರೂ ತನ್ನ ಮಂತ್ರಿಮಂಡಳವು ಸಾಕಷ್ಟು ದೊಡ್ಡದಾಗಿಯೇ ಇರುವ ನಿರೀಕ್ಷೆಯಿರುವುದೆಂದು ತಿಳಿಸಿದ್ದರು. ಇದನ್ನು ಸಮರ್ಥಿಸಲು ಭಾರತದಂತಹ ದೊಡ್ಡ ದೇಶಕ್ಕೆ ದೊಡ್ಡ ಮಂತ್ರಿಮಂಡಳವಿರುವುದು ತಪ್ಪಾಗಲಾರದೆಂದೂ ಅಂದಿದ್ದರು. ಮಂತ್ರಿಗಳ ನೇಮಕದಲ್ಲಿ ಅರ್ಹತೆ ಮತ್ತು ಸಾಮರ್ಥ್ಯಗಳನ್ನು ಮಾತ್ರ ಗಣಿಸುವುದು ಸಾಧ್ಯವಾಗಲಾರದೆಂದೂ ಇನ್ನಿತರ ವಿಷಯಗಳನ್ನೂ ಗಮನಕ್ಕೆ ತಂದುಕೊಳ್ಳಬೇಕೆಂದೂ ಹೇಳಿದ್ದರು. ಕಾಮರಾಜ ಸೂತ್ರದಂತೆ ಪಕ್ಷ ಸಂವರ್ಧನೆಯ ನೆಪದಲ್ಲಿ ಸಚಿವ ಕನಕ್ಕೆ ಹೊರತಾದ 'ಹಿರಿಯರು' ತನ್ನ ಮಂತ್ರಿಮಂಡಳದಲ್ಲಿ ಸೇರಬೇಕೇ ಬೇಡವೇ ಎಂಬುದನ್ನು ಕಾಮರಾಜರೇ ನಿರ್ಧರಿಸಬೇಕೆಂದೂ ಸ್ಪಷ್ಟವಾಗಿ ಆಡಿದ್ದರು. ಇದೀಗ ಪ್ರತಿಜ್ಞಾ ವಿಧಿಯನ್ನು ಕೈಗೊಂಡ ಲಾಲಬಹದೂರರ ಮಂತ್ರಿಮಂಡಳದ ಸದಸ್ಯರನ್ನು ಕಾಣುವಾಗ ಅವರು ಮೊದಲು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಸಾಕಷ್ಟು ಪುಟ ದೊರೆಯುತ್ತದೆ.

ಹೊಸತಾಗಿ ಸಚಿವರಾಗಿ ನೇಮಕಗೊಂಡವರೆಂದರೆ ಸದ್ಯಕ್ಕೆ ಇಂದಿರಾಗಾಂಧಿ ಮಾತ್ರ. ಇದು ನಿರೀಕ್ಷಿತವಾಗಿಯೇ ಇತ್ತು. ಕಾಮರಾಜ ಸೂತ್ರದ ಉರುಳಿಗೆ ಸಿಕ್ಕಿ ಬಿದ್ದ ಕೇಂದ್ರದ ಮಂತ್ರಿಯಾಗಿದ್ದ ಎಸ್. ಕೆ. ಪಾಟೀಲರೂ ಆಂಧ್ರದ ಮುಖ್ಯಮಂತ್ರಿಯಾಗಿದ್ದ ಎನ್. ಸಂಜೀವ ರೆಡ್ಡಿಯವರೂ ಸದ್ಯ ಸ್ಥಾನಗಳಿಸಿಕೊಂಡಿದ್ದಾರೆ. ಮಿಕ್ಕವರೆಲ್ಲಾ ಹಿಂದಿನವರೇ ಇದ್ದು ಕೆಲವರಲ್ಲಿ ಖಾತೆಯ ಬದಲಾವಣೆಯೂ ಆಗಿದೆ. ಜಗಜ್ಜೀವನ ರಾಮ ಮತ್ತು ಮುರಾರ್ಜಿ ಭಾಯಿಯವರು ಮಂತ್ರಿ ಪಟ್ಟದಲ್ಲಿ ಆಸಕ್ತಿ ತಳೆದಿದ್ದರೆಂದೂ ಅಷ್ಟು ಮುಖ್ಯವಲ್ಲದ ಖಾತೆಗಳನ್ನು ತೆಗೆದುಕೊಳ್ಳುವುದಕ್ಕೂ ಇವರು ಸಿದ್ಧರಿದ್ದರೆಂದೂ ಆದುದರಿಂದ ಇವರಿಬ್ಬರೂ ಶಾಸ್ತ್ರಿ ಸಚಿವ ಸಂಪುಟದಲ್ಲಿ ಸೇರಿಕೊಳ್ಳುವುದು ಖಂಡಿತವೆಂದೂ ಊಹಿಸಲಾಗಿತ್ತು. ಆದರೆ, ಸದ್ಯ ಇದು ಸತ್ಯವಾಗಲಿಲ್ಲ. ಇದಕ್ಕೆ ಬೇರೆಯೇ ಕಾರಣಗಳಿವೆಯೆಂದು ತಿಳಿಯುವುದು ತಪ್ಪಾಗಲಾರದು. ಕಾಮರಾಜರು ನೂತನ ನಾಯಕನ ಆಯ್ಕೆಯ ಸಮಯದಲ್ಲಿ ನೆಹರೂ ನಿಧನದಿಂದ ತೆರವಾದ ಸ್ಥಾನಕ್ಕೆ ತಕ್ಕವನೊಬ್ಬನನ್ನು ತರುವುದು ಅಸಾಧ್ಯವಾದುದರಿಂದ ಸಾಮೂಹಿಕ ನಾಯಕತ್ವ ವಿರಬೇಕು ಎಂದಿದ್ದರು. 'ಸಾಮೂಹಿಕ ನಾಯಕತ್ವದ' ಅರ್ಥ ನಿರೂಪಣೆಯನ್ನು ಅವರು ಮಾಡಲಿಲ್ಲ. ಆದುದರಿಂದಲೇ ಮುರಾರ್ಜಿ ಮೊದಲಾಗಿ ಹೊರ ಬಂದವರೆಲ್ಲರೂ ಮತ್ತೆ ಸಚಿವರಾಗಿ ಸೇರಿ ಅಲ್ಲಿ ಸಾಮೂಹಿಕ ನಾಯಕತ್ವವನ್ನುಂಟು ಮಾಡಬಹುದೆಂಬ ಅಭಿಪ್ರಾಯ ಮೂಡಿತ್ತು. ಆದರೆ, ಕಾಮರಾಜರೊಡನೆ ಬೇಕೆಂಬಷ್ಟು ಪರ್ಯಾಲೋಚನೆಯ ನಂತರ ತನ್ನ ಸಚಿವರ ಹೆಸರುಗಳನ್ನು ಪ್ರಕಟಿಸಿದ ಶಾಸ್ತ್ರಿಯವರ ವರ್ತನೆಯನ್ನು ಕಾಣುವಾಗ ಕಾಮರಾಜರ 'ಸಾಮೂಹಿಕ ನಾಯಕತ್ವ'ಕ್ಕೆ ಬೇರೊಂದು ಅರ್ಥವಿದೆಯೆಂದು ತಿಳಿಯಬಹುದು. ನೆಹರುಗಳು ಪಕ್ಷದಲ್ಲೂ ಸರಕಾರದಲ್ಲೂ ಸಾಕಷ್ಟು ಪ್ರಭಾವ ಬೀರಿದ ವ್ಯಕ್ತಿ ಹಾಗೂ ಶಕ್ತಿ. ಅವರು ಪಕ್ಷದ ಆದೇಶವನ್ನು ಅನುಸರಿಸಿಕೊಂಡು ಹೋಗುತ್ತಿದ್ದರು ಎನ್ನುವದಕ್ಕಿಂತ ಅವರ ಆದೇಶಗಳನ್ನೇ ಕಾಂಗ್ರೆಸ್ಸು ಅನುಸರಿಸುತ್ತಿತ್ತು ಎನ್ನಬಹುದು. ನೆಹರುಗಳಲ್ಲಿ ಅಂತಹ ವ್ಯಕ್ತಿತ್ವ ವಿತ್ತು. ಆಗ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೂ ಹೆಚ್ಚಿನ ಗೌರವವಿರಲಿಲ್ಲವೆಂಬ ದೂರು ಕೇಳಿಬರುತ್ತಿತ್ತು. ಹಾಗಿರುವಾಗ ಪಕ್ಷದ ಮಾತೆಲ್ಲಿ ಬಂದು ನಿಂತೀತು? ಆದರೆ, ಇಂದು ಪರಿಸ್ಥಿತಿ ಬದಲಾಗಿದೆ. ಕಾಮರಾಜರು ಶಾಸ್ತ್ರಿಯವರಿಗಿಂತ ಬಹುದೊಡ್ಡದಾಗಿದ್ದಾರೆ. ಕಾಂಗ್ರೆಸಿನ ನೀತಿ-ಆದೇಶಗಳನ್ನು ಶಾಸ್ತ್ರಿಯವರು ಅನುಸರಿಸಿಕೊಂಡು ಹೋಗಬೇಕಾಗುವುದು. ಆದುದರಿಂದ ಪಕ್ಷದಲ್ಲಿ ಜೀವಕಳೆ ಹೆಚ್ಚಾಗಿದೆ. ಈ ಸಂದರ್ಭದಲ್ಲಿ ತನಗೆ ಹೆಚ್ಚಿಗೆ ಬಂದ ಜವಾಬ್ದಾರಿಯನ್ನು ನಿರ್ವಹಿಸಲು ಅನುಕೂಲವಾಗುವಂತೆ ಶಕ್ತಿಯುತರಲ್ಲಿ ಕೆಲವರಾದರೂ ಪಕ್ಷದ ಹಿತ ದೃಷ್ಟಿಯಿಂದ ಸರಕಾರದ ಹೊರಗಿರುವುದು ಒಳ್ಳೆಯದು ಎಂದುಕೊಂಡಿರಬಹುದೇ ಕಾಮರಾಜರು. ಕಾಂಗ್ರೆಸ್ ಪಕ್ಷ ಮತ್ತು ಸರಕಾರಗಳ ಪರಿಷ್ಕರ ನಾಯಕತ್ವವೇ ಸಾಮೂಹಿಕ ನಾಯಕತ್ವವೆಂದು ಅವರ ಅಭಿಪ್ರಾಯವಿರಬಹುದೇ?

ಮುರಾರ್ಜಿ ಮತ್ತು ಜಗಜ್ಜೀವನ ರಾಮರು ಹಿರಿಯ ಮಂತ್ರಿಗಳಾಗಿದ್ದವರು. ಪ್ರಧಾನಿ ಪಟ್ಟಕ್ಕೂ ಅರ್ಹರು ತಾವೆಂದು ತಿಳಿದುಕೊಂಡವರು. ಆದರೆ, ಕಾಂಗ್ರೆಸಿನ ಸಂವರ್ಧನೆಗೆಂದು ಹೊರಗೆ ತಂದ ಕಾಮರಾಜರು ಈಗ ಅವರನ್ನು ಸಂಪುಟದೊಳಗೆ ಎಳೆದುಕೊಳ್ಳಲು ಅನುಮತಿಸಲಿಲ್ಲವೇನೋ! ಸೇವೆಯ ಮುಂದೆ ಅಧಿಕಾರವನ್ನು ತೃಣ ಸಮಾನವೆಂದು ಬಗೆದಿದ್ದ ಇವರು ಮತ್ತೆ ಅಧಿಕಾರಕ್ಕೆ ಅಂಟಿಕೊಳ್ಳುವುದು ಇಂದಿನ ಪರಿಸ್ಥಿತಿಯಲ್ಲಿ ಉತ್ತಮ ಸಂಪ್ರದಾಯವಲ್ಲವೆಂದವರು ತಿಳಿದಿರಲೂ ಬಹುದು. ಕಾಮರಾಜ ಸೂತ್ರದ ಸೃಷ್ಟಿ ಅದರ ಉರುಳಿಗೆ ನೆಹರು ಸಿಲುಕಿಸಲು ಆಯ್ದ ವ್ಯಕ್ತಿಗಳು—ಇವುಗಳ ಪೂರ್ವೋತ್ತರಗಳನ್ನು ಪ್ರಾಯಃ ಶಾಸ್ತ್ರಿ—ಕಾಮರಾಜರಂತೆ ಇತರರಾರೂ ಅರಿತಿರಲಾರರು. ಆದುದರಿಂದ ಯಾವ ಕಾರಣಗಳಿಂದ ಅವರಿಬ್ಬರೂ ಹೊರಗೆ ಹೋದರೋ ಅದು ಈಡೇರುವುದಕ್ಕೆ ಮುನ್ನ ಒಳಗೆ ಬರುವುದು ಸತ್ ಸಂಪ್ರದಾಯವೆನ್ನುವಂತಿಲ್ಲ. ಹೀಗೆ ನಿರೀಕ್ಷೆಗೆ ಮೀರಿದ ಅತಿಶಯದೊಡನೆ ಭಾರತೀಯರು ವಿಸ್ಮಿತರಾಗುವಂತೆ ಶಾಸ್ತ್ರಿ-ನಾಡಾರರು ಮಾಡಿದ್ದಾರೆ. ಪಕ್ಷದ ಆದೇಶವನ್ನು ಚಾಚೂ ತಪ್ಪದ ಮುರಾರ್ಜೀ ಎಂದಿನಂತೆಯೇ ಇಂದೂ ಸಂತೋಷಿಗಳಾಗಿಯೇ ಇರಬಲ್ಲರು; ಆದರೆ, ಜಗಜ್ಜೀವನ ರಾಮರ ಕತೆ ಹೇಗಿದ್ದೀತು?

ಜಗತ್ಪರ್ಯಟನ

ಸೂತಕ ಕಳೆಯಿತು

ದಿವಂಗತ ಪ್ರಧಾನಿ ನೆಹರೂರವರ ಚಿತಾ ಭಸ್ಮವನ್ನು ತಾ. ೮ರಂದು ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸಲಾಯಿತು. ನವದೆಹಲಿಯ ತೀನ್ ಮೂರ್ತಿಯಿಂದ ಲಕ್ಷಾಂತರ ಜನರ ಸಮೂಹದ ಸ್ಮಶಾನ ಮೌನದ ನಡುವೆ ಚಿತಾ ಭಸ್ಮವನ್ನು ಗೌರವ ಸಹಿತವಾಗಿ ಒಯ್ಯಲಾಯಿತು. ನೆಹರೂರವರ ಮೊಮ್ಮಕ್ಕಳು ರಾಜೀವ ಮತ್ತು ಸಂಜಯರು ಅವಶೇಷಗಳ ಕರಂಡಕವನ್ನು ಹೊತ್ತು ತಂದರು. ನೆರೆದಿದ್ದ ವಿಪುಲ ಜನಸ್ತೋಮ ತನ್ನ ರಾಷ್ಟ್ರನಾಯಕನಿಗೆ ಅಂತಿಮ ಗೌರವವನ್ನು ಅರ್ಪಿಸಿ ಕಣ್ಣೀರು ಮಿಡಿಯಿತು. ಸಂಗಮದಲ್ಲಿ ನೆಹರೂ ಅವಶೇಷಗಳೊಡನೆ ೧೯೩೬ರಲ್ಲಿ ಮೃತರಾಗಿದ್ದ ಅವರ ಪತ್ನಿ ಕಮಲಾ ನೆಹರುರವರ ಚಿತಾ ಭಸ್ಮದ ಕೆಲವಂಶವನ್ನೂ ವಿಸರ್ಜಿಸಲಾಯಿತು. ಅದೇ ಕಾಲಕ್ಕೆ ದೇಶದ ವಿವಿಧ ಪುಣ್ಯನದಿಗಳಲ್ಲಿ ಸಮುದ್ರದಲ್ಲಿ ಪ್ರಧಾನಿಯವರ ಭಸ್ಮವನ್ನೂ ವಿಸರ್ಜಿಸಲಾಯಿತು. ತಾ ೧೨ರಂದು ನೆಹರೂ ಇಚ್ಛೆಯಂತೆ ಅವರ ಭಸ್ಮದ ಸ್ವಲ್ಪಾಂಶವನ್ನು ದೇಶದ ಹೊಲಗದ್ದೆಗಳಲ್ಲಿ ವಿಮಾನಗಳ ಮೂಲಕ ಚೆಲ್ಲಲಾಗುವುದು.

ಬಂಗಾರ ನಿಯಂತ್ರಣಾಜ್ಞೆ

ದೇಶದಲ್ಲಿ ಬಂಗಾರದ ಕಳ್ಳ ಪೇಟೆಯನ್ನು ತಡೆ ಹಿಡಿಯುವುದು ಮತ್ತು ಬಂಗಾರದ ಮೋಹವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಬಂದ ಚಿನ್ನ ನಿಯಂತ್ರಣ ಆಜ್ಞೆಯನ್ನು ಲೋಕ ಸಭೆಯಲ್ಲಿ ಕೆಲವು ಕಾಂಗ್ರೆಸ್ ಸದಸ್ಯರೇ ವಿರೋಧಿಸಿದರು. ಸ್ವಯಂ ಕಾಂಗ್ರೆಸ್ಸಿನಲ್ಲೇ ಈ ನೀತಿಯ ಬಗ್ಗೆ ಒಮ್ಮತಾಭಿಪ್ರಾಯವಿಲ್ಲವೆಂದು ಇದರಿಂದ ತಿಳಿಯಬಹುದು. ಈ ಆಜ್ಞೆಯಿಂದ ನಿಯೋಜಿತ ಲಾಭಗಳು ಸಂಪೂರ್ಣ ಈಡೇರಿಲ್ಲವಾದರೂ ಆರ್ಥಿಕ ಹಿತದೃಷ್ಟಿಯಿಂದ ಈ ಬಗೆಯ ಕ್ರಮವು ಅತ್ಯಾವಶ್ಯಕವಾಗಿದೆಯೆನ್ನುತ್ತಾರೆ ವಿತ್ತೋಪಮಂತ್ರಿ ಭಗತ್ ಬಂಗಾರ ನಿಯಂತ್ರಣ ವಿಧೇಯಕವನ್ನು ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆ.

ಭೂಸುಧಾರಣಾ ವಿಧೇಯಕಗಳು

ವಿವಿಧ ರಾಜ್ಯಗಳ ಭೂಸುಧಾರಣಾ ವಿಧೇಯಕಗಳಿಗೆ ಸಂವಿಧಾನ ರೀತ್ಯಾ ಮನ್ನಣೆಯನ್ನು ನೀಡುವುದಕ್ಕಾಗಿ ತಂದ ಸಂವಿಧಾನದ ೧೭ನೆಯ ತಿದ್ದುಪಡಿಯೆಂದು ತಾ ೨೭ರ ವಿಶೇಷ ಅಧಿವೇಶನದಂದು ಸಂಸತ್ತಿನ ಮುಂದೆ ಬಂತು. ಹಿಂದೊಮ್ಮೆ ಸಾಕಷ್ಟು ಬಹುಮತವಿಲ್ಲದೆ ಬಿದ್ದು ಹೋದ ಈ ವಿಧೇಯಕವು ಈ ಬಾರಿ ಮಂಜೂರಾಗಿದೆ. ಯೋಜನಾ ಆಯೋಗದ ಅನುಮತಿ ಬಂದೊಡನೆಯೇ ಪ್ರಾಯಃ ಮುಂದಿನ ಏಪ್ರಿಲದೊಳಗೆ ರಾಜ್ಯಗಳಲ್ಲಿ ಭೂಸುಧಾರಣಾ ಮಸೂದೆಗಳು ಜ್ಯಾರಿಗೆ ಬರುವವೆಂದು ಗೊತ್ತಾಗಿದೆ.

ಅಯ್ಯೂಬರಿಗೆ ಶುಭಶಕುನ

ಲಾಲ ಬಹದೂರರು ಭಾರತದ ನೂತನ ಪ್ರಧಾನಿಯಾಗಿ ಆಯ್ಕೆಗೊಂಡುದಕ್ಕೆ ಪಾಕ್ ಅಧ್ಯಕ್ಷ ಅಯ್ಯೂಬಖಾನ್ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಆಯ್ಕೆಯನ್ನವರು ಭಾರತ—ಪಾಕಿಸ್ತಾನ ಸಂಬಂಧದಲ್ಲಿ ಶುಭಶಕುನವೆಂದು ಕರೆದಿದ್ದಾರೆ. ತನ್ನ ಮೇಲೆ ದೇಶವು ಹೊರಿಸಿದ ಗುರುತರ ಹೊಣೆಗಾರಿಕೆಯನ್ನು ಸಾಮರ್ಥ್ಯ ಮತ್ತು ದಕ್ಷತೆಗಳಿಂದ ನಿರ್ವಹಿಸಲು ಶಾಸ್ತ್ರಿ ಸಮರ್ಥರೆಂದು ಅವರು ಹೇಳಿದ್ದಾರೆ. ಉಭಯ ದೇಶಗಳಲ್ಲಿ ತಿಳುವಳಿಕೆ ಮೂಡಿ ಭಿನ್ನಾಭಿಪ್ರಾಯಗಳು ಬೇಗನೆ ತಿಳಿಯಾಗಿ ಭಾರತ ಉಪಖಂಡದಲ್ಲಿ ಶಾಂತಿ—ಸೌಹಾರ್ದಗಳು ಹೆಚ್ಚಾಗಲೆಂದವರು ಹಾರೈಸಿದ್ದಾರೆ.

ಲಾವೋಸಿನಲ್ಲಿ ಗೊಂದಲ

ಲಾವೋಸದ ಬಿಕ್ಕಟ್ಟು ಕಡಿಮೆಯಾಗುವ ಬದಲು ಹೆಚ್ಚುತ್ತಲೇ ಹೋಗುತ್ತಿದೆ. ತುರ್ಕಿಯ ಪರರನ್ನು ಸದೆ ಬಡೆಯುತ್ತ ಗ್ರೀಕ್ ಸೇನೆಯು ಮುಂದೊತ್ತುತಿದೆ. [..]ಜವಾಗಿ ಲಾವೋಸಿನಲ್ಲಿ ಯಾರಿಗೂ ಬೇ[..]ವಾಗಿ ಬಂದಿದ್ದ ಸ್ವಾತಂತ್ರ್ಯದಿಂದ ವಿ[..] ಶಾಂತಿಗೇನೇ ಮಾರಕವಾಗುವಂತಾಗಿದೆ. ಇದನ್ನೆಲ್ಲಾ ಬ್ರಿಟನ್ ಆದು ಹೇಗೆ ಸ[..]ಸುವುದೋ ದೇವರೇ ಬಲ್ಲ!

ಪವಿತ್ರಾತ್ಮಕ್ಕೆ ಶಾಂತಿ

ಭಾರತೀಯ ಜನತೆ ತನ್ನ ಅಪ್ರತಿಮ ನಾಯಕ, ಶಿಲ್ಪಿ ಜವಾಹರಲಾಲ ನೆಹರುರವರ ಚಿತಾ ಭಸ್ಮವನ್ನೂ ಆವರಿಚ್ಛೆಯಂತೆಯೇ ವಿಸರ್ಜಿಸಿ ಸೂತಕವನ್ನು ಕಳೆದು ಅವಭೃಥವನ್ನು ಮಾಡಿಕೊಂಡಿತು. ಅದೇ ಸಮಯಕ್ಕೆ ಅವರ ಉತ್ತರಾಧಿಕಾರಿಯನ್ನೂ ಅವರ ಸಹಕರ್ಮಚಾರಿಗಳನ್ನೂ ಸ್ವಾಗತಿಸಿತು. ನೆಹರೂರವರ ಸ್ಮರಣೆಯನ್ನು ಭಾರತೀಯರು ಕಳೆದುಕೊಳ್ಳುವುದಿಲ್ಲ ನಿಜ; ಅವರ ಕಥೆ ಅಮರವಾಗಿಯೇ ಉಳಿಯುವುದು, ಇದೂ ಸತ್ಯ. ತಮ್ಮ ನೆಚ್ಚಿನ ಪ್ರಧಾನಿಯ ಆತ್ಮವು ಚಿರಶಾಂತಿಯನ್ನು ಪಡೆಯಲೆಂದು ದೈನ್ಯದಿಂದ ಬೇಡಿಕೊಳ್ಳುವುದೂ ವಾಸ್ತವ. ಆದರೆ, ಆ ಪವಿತ್ರಾತ್ಮಕ್ಕೆ 'ಶಾಂತಿ ದೊರೆಯುವಂತೆ ಮಾಡುವ ಹೊಣೆಗಾರಿಕೆ ನಮ್ಮ ಮೇಲೆಯೇ ಇದೆಯೆಂಬುದನ್ನು ನಾವು ಮರೆಯಬಾರದು. ವಿದೇಶೀಯರ ಕೈಗಳಲ್ಲಿ ಸಿಲುಕಿ ಪದದಲಿತವಾದ ನಮ್ಮ ದೇಶವು ಸ್ವಾತಂತ್ರ್ಯ ಪಡೆದು ಸಮೃದ್ಧವಾಗಿ ಸಂಪನ್ನ ರಾಷ್ಟ್ರಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲಬೇಕೆಂಬುದು ಅದರ ಆಶಯ. ಈ ದಿಸೆಯಲ್ಲಿ ಅವರು ಸ್ವಾತಂತ್ರ್ಯವನ್ನು ಗಳಿಸಿದ ನಂತರ ಬಹಳ ಮುಂದುವರಿದಿದ್ದಾರೆ; ಇನ್ನೂ ಮುಂದುವರಿಯುವುದು ನಮ್ಮ ಕರ್ತವ್ಯ. ಗುರಿ ಮುಟ್ಟುವುದೇ ನಮ್ಮ ಸಾಧನೆ. ವಿಶ್ವಶಾಂತಿ, ಜಾತೀಯ ಐಕ್ಯ, ನಿರ್ಲಿಪ್ತ ಧೋರಣೆ, ನಿಶ್ಶಸ್ತ್ರೀಕರಣ, ವಿಶ್ವಕುಟುಂಬತ್ವ ಮೊದಲಾದುವುಗಳು ಅವರ ಹೃದಯದ ಆಶಯಗಳಿದ್ದುವು; ಕ್ಷಣವೊಂದನ್ನು ಹಾಳಾಗಗೊಡದೆ ಈ ಬಗೆಯ ಉನ್ನತ ಆದರ್ಶಗಳ ಸಾಧನೆಗಾಗಿ ದುಡಿಯುವುದು ಅವರ ಅಭಿಲಾಷೆಯಿತ್ತು. ಕಾಯಕವೇ ಕೈಲಾಸ ಇಲ್ಲವೇ ದುಡಿಮೆಯೇ ದೇವರು— ಎಂಬುದವರ ಧ್ಯೇಯ ವಾಕ್ಯವಿತ್ತು. ಇವನ್ನು ಮರೆಯದೆ ನಮ್ಮ ನೆಹರು ಇಟ್ಟಿರುವ ಗುರಿಯನ್ನು ಅವರು ತೋರಿಸಿದ ಹೆದ್ದಾರಿಯಲ್ಲೇ ನಾವು ಮುಟ್ಟುವ ಪ್ರಯತ್ನದಲ್ಲಿ ಅನುದಿನವೂ ತೊಡಗಿದರೆ, ಅದರಿಂದಲೇ ಅವರ ಪವಿತ್ರಾತ್ಮ ತೃಪ್ತಿ ಪಡೆಯುವುದು: ಹಾಗಾಗಲಿ.

ಪಂಡಿತ ನೆಹರೂ ವಿಯೋಗದಿಂದ ಭಾರತೀಯ ಸಾಹಿತ್ಯ ಪ್ರಪಂಚಕ್ಕೆ ನಷ್ಟ

ಭಾರತದ ಮಹಾ ಪ್ರಧಾನಿಗಳೂ ವಿಶ್ವ ಶಾಂತಿ ಸಾಧಕರೂ ನೂತನ ಭಾರತೀಯತೆಯ ಉದ್ಧಾರಕರೂ ರಾಷ್ಟ್ರಪಿತ ಗಾಂಧೀಜಿ ಉತ್ತರಾಧಿಕಾರಿಗಳೂ ಎನಿಸಿಕೊಂಡಿದ್ದ ಭಾರತರತ್ನ 'ಪಂಡಿತ ಜವಹರಲಾಲ್ ನೆಹರೂ ವಿಯೋಗವು ಭಾರತೀಯರ ರಾಜಕೀಯಕ್ಕೆ ಲೋಕದ ಶಾಂತಿ ಸಾಧನೆಗೆ ಬಲವಾದ ಪೆಟ್ಟು ಎಂಬುದನ್ನು ಎಲ್ಲರೂ ಅರಿತಿದ್ದಾರೆ. ಗಾಂಧಿ ಮತ್ತು ನೆಹರು ನಿಜಕ್ಕೂ ಯುಗ ಪುರುಷರು. ಭಾರತದ ಐದು ಸಾವಿರ ವರ್ಷಗಳ ಚರಿತ್ರೆಯಲ್ಲಿ ಕೃಷ್ಣ—ಅರ್ಜುನ—ಬುದ್ಧ—ಅಶೋಕ, ಗಾಂಧಿ—ನೆಹರು ಇಂತಹ ಮಹನೀಯರನ್ನು ನಾವು ಮತ್ತೆಲ್ಲಿಯೂ ಕಾಣಲಾರೆವು.

ಪಂಡಿತ ಜವಹರಲಾಲ್ ನೆಹರು ಬಹುಮುಖವಾದ ಪ್ರಜ್ಞೆಯುಳ್ಳವರು. ಹಿಂದಿ, ಉರ್ದು, ಪರ್ಶಿಯನ್, ಸಂಸ್ಕೃತ, ಇಂಗ್ಲಿಷ್ ಮೊದಲಾದ ಭಾಷೆಯಲ್ಲಿ ಅವರಿಗೆ ಅಪಾರವಾದ ಪಾಂಡಿತ್ಯವಿದ್ದಿತು. ವಿದ್ಯಾಸಾಗರ ಎನಿಸಿದ್ದ ಪಂಡಿತ ಮೋತಿಲಾಲ್ ನೆಹರುಗೆ ವಿದ್ಯಾಸಮುದ್ರ ಪಂಡಿತ ಜವಹರಲಾಲ್ ನೆಹರೂ ತಕ್ಕ ಮಗ ಎನಿಸಿಕೊಂಡಿದ್ದರು. ಭಾರತೀಯ ಸಾಹಿತ್ಯ ಸಂಸ್ಕೃತಿಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಇಂಗ್ಲೆಂಡಿನ ಹ್ಯಾರೋ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಗಳಿಸಿದ್ದ ಅವರು ಭಾರತದ ಮಹಾ ಪ್ರಧಾನರೇ ಅಲ್ಲದೆ ಅಖಿಲ ಭಾರತದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರೆಂಬುದು ಗಮನಾರ್ಹ. ಅದಕ್ಕೂ ಮಿಗಿಲಾಗಿ ಸತ್ಯ ಸೌಂದರ್ಯಗಳ ಉಪಾಸಕರಾದ ಸಹೃದಯರೆಂಬುದು ಇಲ್ಲಿ ನೆನಪಿಡುವ ಸಂಗತಿ. ಅವರು ಬರೆದಿರುವ ಆತ್ಮಚರಿತ್ರೆ, ಭಾರತದರ್ಶನ, (Discovery of India) ಮಗಳಿಗೆ ತಂದೆಯ ಓಲೆಗಳು ಮೊದಲಾದ ಗ್ರಂಥಗಳು ಕನ್ನಡಕ್ಕೂ ಅನುವಾದವಾಗಿವೆ. ಕೋಟಿ ಕೋಟಿ ಕನ್ನಡಿಗರು ಅದನ್ನು ಓದಿಕೊಂಡು ಸ್ಫೂರ್ತಿಗೊಂಡಿದ್ದಾರೆ. ಅವರ ಭಾರತ ದರ್ಶನವು ವಿಶ್ವದಲ್ಲೆಲ್ಲಾ ಭರತ ಖಂಡಕ್ಕೆ ಹೆಚ್ಚಿನ ಮನ್ನಣೆಯನ್ನು ಗಳಿಸಿಕೊಂಡಿದೆ. ಈಗ ಪಂಡಿತ ನೆಹರೂ ಅವರನ್ನು ಕುರಿತು ಭಾರತದ ಎಲ್ಲ ಭಾಷೆಗಳಲ್ಲಿಯೂ ವಿಶೇಷವಾಗಿ ಇಂಗ್ಲೀಷಿನಲ್ಲಿಯೂ ಮಹತ್ವದ ಗ್ರಂಥಗಳು ಪ್ರಕಟವಾಗಿವೆ. ದೇಶನಾಯಕರಾದ ಅವರ ಆತ್ಮ ಚರಿತ್ರೆ ಭಾರತೀಯ ಭಾಷೆಗಳಲ್ಲೆಲ್ಲ ವಿಖ್ಯಾತವಾಗಿವೆ. ನಾಡಿನ ವಿದ್ವಾಂಸರು ಅವರನ್ನು ಕುರಿತು ಬರೆದ ಲೇಖನಗಳಿಂದ ಕೂಡಿದ 'A study of Nehru' ಎಂಬ ಗ್ರಂಥವು ಇಂಗ್ಲಿಷ್ ಸಾಹಿತ್ಯಕ್ಕೆ ಅಮೂಲ್ಯ ರತ್ನವೆಂಬಂತಿದೆ. ಇದರಿಂದ ನೆಹರೂರವರ ಅಸದೃಶವಾದ ವ್ಯಕ್ತಿತ್ವವು ಪ್ರಪಂಚಕ್ಕೆ ವಿದಿತವಾಗಿದೆ.

ಪಂಡಿತ ಜವಹರಲಾಲ್ ನೆಹರು ಸಂಸ್ಕಾರ ಜನ್ಯ ಮಹಾ ಪುರುಷರು. ಸಜೀವ ಜ್ಞಾನ ಭಂಡಾರದಂತೆ ಇದ್ದವರು. ಅವರು ಭಾರತದಲ್ಲಿಯೂ ಇಂಗ್ಲೆಂಡ್, ಅಮೇರಿಕಾ, ರಷ್ಯ, ಈಜಿಪ್ಟ್ ಮೊದಲಾದ ದೇಶಗಳಲ್ಲಿಯೂ ಕಾಂಗ್ರೆಸ್ ಅಧ್ಯಕ್ಷರಾಗಿ ಮತ್ತು ಲೋಕ ಸಭೆಯ ಮುಖಂಡರಾಗಿ ಮಾಡಿದ ಭಾಷಣಗಳನ್ನೆಲ್ಲಾ ಸಂಗ್ರಹಿಸಿ ಪ್ರಕಟಿಸಿದರೆ ಅದು ಪ್ರಪಂಚಕ್ಕೇ ಉಪಯೋಗವಾಗುವ ಒಂದು ಬೃಹತ್ ಗ್ರಂಥವಾಗುತ್ತದೆಂದು ಹೇಳಬಹುದು.

ಪರಮಹಂಸರು, ಅರವಿಂದರು, ವಿವೇಕಾನಂದರು, ರವೀಂದ್ರರು, ಗಾಂಧಿಯವರು ತಮ್ಮ ಅವತಾರದಿಂದ ಭಾರತ ಮತ್ತು ವಿಶ್ವಗಳನ್ನು ಪರಿಪೂರ್ಣಗೊಳಿಸಿದಂತೆಯೇ ಪಂಡಿತ ಜವಹರಲಾಲರೂ ಕೂಡ ತಮ್ಮ ಜನನದಿಂದ ಭರತ ಖಂಡಕ್ಕೆ ಮಿಗಿಲಾದ ಕೀರ್ತಿ ಗೌರವಗಳನ್ನು ತಂದಿರುತ್ತಾರೆ. ಅವರು ವಿಶ್ವಮಾನವರೆಂಬುದಕ್ಕೆ ಭಾರತದಲ್ಲಿಯೂ ಇತರ ಮಿತ್ರ ರಾಷ್ಟ್ರಗಳಲ್ಲಿಯೂ ವ್ಯಕ್ತವಾದ ಪ್ರತಿಕ್ರಿಯೆಯು ಸುಸ್ಪಷ್ಟವಾದ ನಿದರ್ಶನವಾಗಿದೆ. ಅವರ ವಿಯೋಗವು ಕೇವಲ ರಾಜಕೀಯ ಪ್ರಪಂಚಕ್ಕೇ—ಅಲ್ಲ, ಸಾಹಿತ್ಯ ಪ್ರಪಂಚಕ್ಕೂ ಅಪಾರವಾದ ನಷ್ಟವನ್ನುಂಟು ಮಾಡಿದೆಯೆಂದು ಹೇಳಬೇಕಾಗಿದೆ. ಕರುಣಾಳುವಾದ ಪರಮೇಶ್ವರನು ದಿವಂಗತ ನೆಹ್ರೂರವರ ಆತ್ಮಕ್ಕೆ ಶಾಂತಿಯನ್ನೂ ಅವರ ಸುಪುತ್ರಿ, ಸೋದರಿ, ಮೊಮ್ಮಕ್ಕಳು ಮೊದಲಾದ ಬಂಧು ಮಿತ್ರರ ಮನಸ್ಸಿಗೆ ಸಮಾಧಾನವನ್ನೂ ಉಂಟು ಮಾಡಲೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಪ್ರಾರ್ಥಿಸುತ್ತೇನೆ.

—ಬಿ ಶಿವಮೂರ್ತಿ ಶಾಸ್ತ್ರಿ.

ಅಲ್ಲಲ್ಲಿಯ ಸುದ್ದಿಸಾರ

496 ಗ್ರಾಮಗಳಿಗೆ ವಿದ್ಯುಚ್ಛಕ್ತಿ— ಇದೇ ತಾ. 4ರಂದು ಜಿಲ್ಲಾ ಸಹಕಾರೀ ಕೃಷಿ ಅಭಿವೃದ್ಧಿ ಸಂಘದ ಕಾರ್ಯಕಾರೀ ಸಮಿತಿಯ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಅಧ್ಯಕ್ಷ ಶ್ರೀ ಟಿ. ಎ. ಪೈಗಳು, ಜಿಲ್ಲೆಯಲ್ಲಿರುವ 620 ಗ್ರಾಮಗಳಲ್ಲಿ 216 ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಾಗಿದೆ. ಮುಂದಿನ ತೃತೀಯ ಪಂಚವಾರ್ಷಿಕ ಯೋಜನೆಯೊಳಗೆ ದ. ಕ. ಜಿಲ್ಲೆಯ 496 ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಾಗ ಬೇಕಾಗಿದೆಯೆಂದು ತಿಳಿಸಿದರು. ಮುಂದುವರಿಯುತ್ತಾ ಅವರು ಗ್ರಾಮೀಣ ವಿದ್ಯುತ್ ಪೂರೈಕೆಯ ಸೌಕರ್ಯದ ಪೂರ್ಣ ಪ್ರಯೋಜನವನ್ನು ಜಿಲ್ಲೆಯ ರೈತರು ಪಡೆಯಕೊಳ್ಳಬೇಕು. ವಿದ್ಯುಚ್ಛಕ್ತಿ ಮಂಡಳಿಯೇ ಆಸಕ್ತಿ ವಹಿಸಿ ಮುಂದೆ ಬರುವುದಕ್ಕಿಂತಲೂ ಪ್ರದೇಶದ ಜನರೇ ಸಾಕಷ್ಟು ವಿದ್ಯುತ್ ಬೇಡಿಕೆಯನ್ನು ಮುಂದಿಟ್ಟು ಬರುವುದು ಉತ್ತಮ ಎಂದರು. ಮಾತ್ರವಲ್ಲದೇ ಸಂಘದ ಬಗ್ಗೆ ಕೇಳಿ ಬರುತ್ತಿರುವ ಟೀಕೆಗಳನ್ನು ನಿರಾಕರಿಸಿ, ಇದೊಂದು ಲಾಭದಾಯಕ ಸಂಸ್ಥೆಯಲ್ಲ ರೈತರ ಸೇವೆಯೇ ಇದರ ಧ್ಯೇಯವೆಂದರು. ಅಂತ್ಯದಲ್ಲಿ ಸಂಘ ಪೂರೈಕೆ ಮಾಡುತ್ತಿರುವ ಪಂಪು ಸೆಟ್ಟುಗಳ ಸರ್ವಿಸಿಂಗ್ ಮತ್ತು ರಿಪೇರಿಗಾಗಿ ವರ್ಕ್‌ಶೋಪ್ ಒಂದರ ಸ್ಥಾಪನೆಯಾಗ ಬೇಕೆಂಬ ಸೂಚನೆಯೊಂದನ್ನು ಕಾರ್ಯಕಾರೀ ಸಮಿತಿ ಒಪ್ಪಿಕೊಂಡಿತು.

ಶ್ರೀ ಮಧ್ವರಾಜರ ವಿದೇಶ ಪ್ರಯಾಣ:— ಇದೇ ತಾ. 30ರಂದು ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷರೂ ಉಡುಪಿ ಮತದಾರ ಕ್ಷೇತ್ರದ ಎಂ. ಎಲ್. ಎ.ಗಳೂ ಆದ ಶ್ರೀ ಎಂ. ಮಧ್ವರಾಜರವರು, ಒಂದೂವರೆ ತಿಂಗಳ ವಿದೇಶ ಪ್ರಯಾಣವನ್ನು ಕೈಗೊಂಡಿರುವರು. ಇವರು ಜಪಾನು ಅಮೇರಿಕಾ, ಇಂಗ್ಲೆಂಡ್, ಚಿಕಾಗೋ ಮುಂತಾದ ಕಡೆಗಳಿಗೆ ಹೋಗಲಿರುವರು

ಸಾಮುದಾಯಿಕ ವಿಮೆ— ಮೇ 26, 1964ರಂದು ಏರೀ ಮಿಲ್ಸ್ ಕೊಲಬಾ, ಗೋರೆಗಾಂ ಇಲ್ಲಿ ಮಹಾರಾಷ್ಟ್ರ ರಾಜ್ಯದ ಕೃಷಿ ಮಂತ್ರಿ, ಶ್ರೀ ಪಿ. ಕೆ. ಸಾವಂತ್‌ರವರು, ಲೈಫ್ ಇನ್ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದ ವೇತನ ಉಳಿತಾಯ ಯೋಜನೆಯಲ್ಲಿ ವಿಮೆ ಕೊಂಡಿರುವ ಗ್ರೇಟರ್ ಮುಂಬೈ ಮಿಲ್ಸ್ ಸ್ಟೀವರ್ಸ್‌ನ ನೌಕರರಿಗೆ 1000 ಪಾಲಿಸಿಗಳನ್ನು ಹಂಚಿದರು. ಈ ಸಮಾರಂಭದಂದು ಕಾರ್ಪೊರೇಶನ್‌ನ ಚೇರ್‌ಮನ್, ಶ್ರೀ ಬಿ. ಕೆ. ಕೌಲ್, ಐ. ಸಿ. ಎಸ್. ಇವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ವೇತನ ಉಳಿತಾಯ ಯೋಜನೆಯಲ್ಲಿ ಲೈಫ್ ಇನ್ಶೂರನ್ಸ್ ಕಾರ್ಪೊರೇಷನ್ ಒದಗಿಸುತ್ತಿರುವ ಎಲ್ಲಾ ವಿಧಗಳ ಪಾಲಿಸಿಗಳನ್ನು ವ್ಯಾಪಾರ, ಔದ್ಯೋಗಿಕ ಮತ್ತು ಸರಕಾರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸುಲಭವಾಗಿ ಪಡೆಯಬಹುದು. ಪ್ರೀಮಿಯಮ್‌ಗಳನ್ನು ಮಾಸಿಕ ಕಂತುಗಳಲ್ಲಿ ನೌಕರರ ಸಂಬಳಗಳಲ್ಲಿ ವಜಾ ಮಾಡಲಾಗುವುದು. ಇದರಲ್ಲಿ ಪ್ರೀಮಿಯಮ್ ವಜಾ ಮಾಡುವುದು, ವೈದ್ಯಕೀಯ ಪರೀಕ್ಷೆ ಇತ್ಯಾದಿಗಳಲ್ಲಿಯೂ ವಿಶೇಷ ಸೌಲಭ್ಯಗಳು ದೊರೆಯುವುವು. ಗ್ರೇಟರ್ ಮುಂಬೈ ಮಿಲ್ಸ್ ಸ್ಟೀವರ್ಸ್‌ನವರು ಸಾಮುದಾಯಿಕವಾಗಿ ಸ್ವೀಕರಿಸಿರುವ ವೇತನ ಉಳಿತಾಯ ಯೋಜನೆಯನ್ನು ಮಹಾರಾಷ್ಟ್ರ ರಾಜ್ಯ ಸರಕಾರದ ಎಲ್ಲಾ ವಿಭಾಗಗಳು ಮತ್ತು ಆಫೀಸುಗಳು ಸ್ವೀಕರಿಸುವುವೆಂದು ನಿರೀಕ್ಷಿಸಲಾಗಿದೆ

ಕಾರ್ಕಳದಲ್ಲಿ ಮೈಸೂರು ಕಟ್ಟಡ ತೆರಿಗೆಗೆ ವಿರೋಧ— ತಾ. 26ರಂದು ವಕೀಲ ಎಂ. ಎಸ್. ಅಧಿಕಾರಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿದ ಸಭೆಯಲ್ಲಿ ಮೈಸೂರು ಕಟ್ಟಡಗಳ ತೆರಿಗೆಯ ಕಾನೂನಿಗೆ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಲಾಯಿತು. ಸರ್ವಶ್ರೀ ವಕೀಲ ಇಡ್ಯ ರಾಮಮೂರ್ತಿ, ವಕೀಲ ಬೋಳ ರಘುರಾಮ ಶೆಟ್ಟಿ, ವಕೀಲ ಬಿ. ಸುಬ್ಬರಾವ್ ಮತ್ತು ಫರೂಕಿ ಅಬ್ದುಲ್ ಸುಕೂರ್ ಸಾಹೇಬ್ ಇವರೇ ಮೊದಲಾದವರು ಮಾತನಾಡಿ, ಈ ಕಾನೂನು ಪಕ್ಷಪಾತ ಧೋರಣೆಯಿಂದ ಕೂಡಿದ್ದಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. "ಈ ಚಳವಳಿಗಳು ಬರೀ ಶ್ರೀಮಂತರದ್ದು ಮಾತ್ರ, ಬಡವರ ಬೆಂಬಲವು ಈ ಚಳವಳಿಗೆ ಇರುವುದಿಲ್ಲ"ವೆಂಬ ಮಂತ್ರಿ ಜತ್ತಿಯವರ ಹೇಳಿಕೆಯನ್ನು ಸಭೆಯಲ್ಲಿ ಕಟುವಾಗಿ ಟೀಕಿಸಲಾಯಿತು. ಈ ತೆರಿಗೆಯ ವಿರುದ್ಧ ಚಳುವಳಿಗಳನ್ನು ಹೂಡಲು ಜನತೆ ಸಿದ್ಧರಾಗಬೇಕೆಂದು ಸಭೆಯಲ್ಲಿ ಕೇಳಿಕೊಳ್ಳಲಾಯಿತು.

ಕೆಂತೂರು— ತಾ. 26-5-64ರಂದು ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳ ಪಾರ್ಲಿಮೆಂಟನ್ನು ಶ್ರೀ ನಾ. ಭಟ್, ಬೆಳ್ತ ಇವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ರಾಮಕೃಷ್ಣ ಆಚಾರ್ಯರವರು ವಹಿಸಿದ್ದರು.

ಹೊಸ ಪ್ರಾಥಮಿಕ ಹಿಂದೀ ವರ್ಗ:— ಹಿಂದೀ ಪ್ರಚಾರ ಸಮಿತಿ, ಉಡುಪಿ ಇದರ ವತಿಯಿಂದ ಇದೇ ಜೂನಿನಿಂದ 3 ತಿಂಗಳ ಅವಧಿಯ ಒಂದು ಹೊಸ ವಿಶೇಷ ಪ್ರಾಥಮಿಕ ವರ್ಗವು ಸಮಿತಿಯ ಕಾರ್ಯಾಲಯದಲ್ಲಿ ತೆರೆಯಲಾಗಿದೆಯೆಂದೂ ಸೇರಬಯಸುವವರು ಕೂಡಲೇ ತಮ್ಮ ಅರ್ಜಿಗಳನ್ನು ಸಲ್ಲಿಸಬೇಕೆಂದೂ ಸಮಿತಿಯ ಪ್ರಧಾನ ಕಾರ್ಯದರ್ಶಿಯವರು ಪ್ರಾರ್ಥಿಸುತ್ತಾರೆ

ಪಾಣೆಮಂಗಳೂರು— ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯ ಆಶ್ರಯದಲ್ಲಿ ಮುಂದಿನ ವಾರ ಪಾಣೆಮಂಗಳೂರಿನಲ್ಲಿ ಒಂದು ಪ್ರೌಢ ಶಾಲೆಯನ್ನು ಆರಂಭಿಸಲಾಗುವುದು.

ಮಣಿಪಾಲ— ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ೧೬೦ನೇ ಜಿಲ್ಲೆಯ ಗವರ್ನರ್ ಫಿರೋಜ್ ಶೆ ಇರಾನಿಯವರು ತಮ್ಮ ಉತ್ತರಾಧಿಕಾರಿ ಡಾ| ಟಿ. ಎಂ. ಎ. ಪೈಯವರಿಗೆ ಜೂನ್ ೬ರಂದು ಇಲ್ಲಿ ನಡೆಯುವ ಸಮಾರಂಭದಲ್ಲಿ ಅಧಿಕಾರ ವಹಿಸಿಕೊಡುತ್ತಾರೆಂದು ಉಡುಪಿ ರೋಟರಿ ಕ್ಲಬ್ ಹೊರಡಿಸಿರುವ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಪೆರ್ಡೂರು:— ಪೆರ್ಡೂರು ಪ್ರೌಢಶಾಲೆಯಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿದ್ದ ೨೨ ಮಂದಿಯೂ ತೇರ್ಗಡೆಯಾಗಿದ್ದಾರೆ. ಆ ಶಾಲೆಯಿಂದ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಪೈಕಿ ಇದೇ ಪ್ರಥಮ ತಂಡವಾಗಿದೆ.

ದೇಲಂಪಾಡಿ— ಬನಾರಿ ಯಕ್ಷಗಾನ ಕಲಾಮಂದಿರದಲ್ಲಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ತಾ. 23-5-64ರಂದು ವಿಜೃಂಭಣೆಯಿಂದ ಜರಗಿತು.

ಸಮಾರಂಭದ ಅಂಗವಾಗಿ ಶ್ರೀಗಳಾದ ಜಯರಾಮ ಪುಣಿಂಚತ್ತಾಯ, ಕೇ. ವ. ಕೇಶವ, ರಘುರಾಮ ಪುಣಿಂಚತ್ತಾಯ, ಪದ್ಮನಾಭ ಪುಣಿಂಚತ್ತಾಯ ಅವರ ಹಿಮ್ಮೇಳದೊಂದಿಗೆ ಶ್ರೀಗಳಾದ ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ಟ, ಡಾ| ರಮಾನಂದ ಬನಾರಿ, ಯು. ಬಿ. ಗೋವಿಂದ ಭಟ್ಟ, ಪಿ. ಪಿ. ಪುಣಿಂಚತ್ತಾಯರ ಅರ್ಥ ವಿವರಣೆಯೊಂದಿಗೆ 'ವಿದುರಾತಿಥ್ಯ' ಎಂಬ ಯಕ್ಷಗಾನ ಕೂಟ ನಡೆಯಿತು. ತದನಂತರ ಶ್ರೀ ಕೃಷ್ಣ ವಿಜಯವೆಂಬ ಯಕ್ಷಗಾನ ನಾಟಕವು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು

ಪ್ರಾರಂಭದಲ್ಲಿ ಡಾ| ರಮಾನಂದ ಬನಾರಿಯವರು ಸಭಿಕರಿಗೆ ಸ್ವಾಗತ ಬಯಸಿದ್ದು ಅಂತ್ಯದಲ್ಲಿ ಶ್ರೀ ಯು. ಬಿ. ಗೋವಿಂದ ಭಟ್ಟರು ಧನ್ಯವಾದ ಸಮರ್ಪಿಸಿದರು.

ನೆಹರೂರವರ 13ನೇ ದಿನಾಚರಣೆ— ಶ್ರೀ ನೆಹರೂರವರ ನಿಧನದ 13ನೇ ದಿನಾಚರಣೆಯು ಉಡುಪಿಯಲ್ಲಿ ಉಡುಪಿ ನಗರ ಸಭೆ ಮತ್ತು ಸಾರ್ವಜನಿಕರ ವತಿಯಿಂದ ತಾ. 8ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನೆರವೇರಿತು. ಈ ಮೊದಲೇ ತಾಲೂಕು ಬೋರ್ಡು ಸದಸ್ಯ ಶ್ರೀ ಬಿ. ಶಾಕು ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ನಿರ್ಣಯವಾದಂತೆ ಸಮಿತಿಯವರು ಸಂಗ್ರಹಿಸಿದ ನೂರಾರು ಮುಡಿ ಅಕ್ಕಿಯನ್ನು ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ದೊಡ್ಡವರಿಗೆ ಒಂದು ಸೇರಿನಂತೆಯೂ ಮಕ್ಕಳಿಗೆ ಅರ್ಧ ಸೇರಿನಂತೆಯೂ ಆರು ಸಾವಿರಕ್ಕೂ ಮಿಕ್ಕಿದ ಬಡಬಗ್ಗರಿಗೆ ಹಂಚಲಾಯಿತು. ಅಪರಾಹ್ನ ಮೆರವಣಿಗೆಯಾಗಿ ಸಂಜೆ ರಥಬೀದಿಯಲ್ಲಿ ಡಾ| ವಿ. ಆರ್. ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರವೇರಿತು. ನಗರ ಸಭಾಪತಿ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿ ಅಕ್ಕಿ ದಾನ ಮಾಡಿದವರ ಹೆಸರುಗಳನ್ನು ಓದಿ ಹೇಳಿ ಉಪಕಾರ ಸ್ಮರಣೆ ಮಾಡಿದರು. ಅನಂತರ ಪ್ರಿನ್ಸಿಪಾಲ್ ಶ್ರೀ ಕೃ. ಶಿ. ಹರಿದಾಸ ಭಟ್ಟ, ಶ್ರೀ ಬಿ. ವಿ. ಕೆದಿಲಾಯ ಇವರು ನೆಹರೂ ವ್ಯಕ್ತಿತ್ವದ ಕುರಿತು ಭಾಷಣವಿತ್ತರು. ಅಧ್ಯಕ್ಷರು ನೆಹರು ಆದರ್ಶವನ್ನು ನಾವೆಲ್ಲರೂ ಪಾಲಿಸಿಕೊಳ್ಳಬೇಕೆಂದರು. ಶ್ರೀ ಕೆ. ಕೆ. ಪೈಗಳು ವಂದನಾರ್ಪಣೆಗೈದರು.

ಎಡನೀರು ಜೂ 3— ಸ್ಥಳೀಯ ಶಾಲಾ ವಠಾರದಲ್ಲಿ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನೆಹರೂ ಸಂತಾಪ ಸೂಚಕ ಸಭೆಯು ಜರಗಿತು. ಡಾ| ವೆಂಕಟರಮಣ ಭಟ್ಟರು ಧ್ವಜವನ್ನೇರಿಸಿದರು. ಶ್ರೀ ಸ್ವಾಮಿಗಳು ಮಾತನಾಡುತ್ತಾ—"ಉತ್ತಮ ರಾಷ್ಟ್ರದ ನಾಯಕರಾಗಲು ಸಾಮಾನ್ಯ ಪ್ರತಿಭಾ ಶಕ್ತಿಯಿಂದ ಸಾಲದು, ಜನ್ಮಾಂತರದ ಸಂಸ್ಕಾರಗಳ ಸಂಚಯವೂ ಅಗತ್ಯ. ಶ್ರೀ ನೆಹರುಗಳ ವ್ಯಕ್ತಿತ್ವ ಅನುಕರಣೀಯವಾದುದು ಅವರ ಆತ್ಮಶಕ್ತಿ ಕೋಟ್ಯಂತರ ಜನರ ಮಾರ್ಗದರ್ಶಕವಾಗಿದೆ. ಅವರ ಆತ್ಮವು ಶ್ರೀ ಪರಮಾತ್ಮನಲ್ಲಿ ಐಕ್ಯವಾಗಿ ಚಿರಂತನ ಶಾಂತಿಯನ್ನು ಪಡೆಯಲಿ—ಎಂದು ಆಶಿಸಿದರು. ಯಂ. ವೆಂಕಪ್ಪ ಶೆಟ್ಟಿ, ಸಿ ಯಚ್. ವಾಸುದೇವ ಮುಂತಾದವರು ಭಾಷಣವಿತ್ತರು. ಮಠದ ವತಿಯಿಂದ ಎಲ್ಲ ನೌಕರರಿಗೂ ಈ ದಿನ ಸಂಬಳ ಸಹಿತ ರಜೆಯನ್ನು ಕೊಡಲಾಯಿತು.

ಕಾರ್ಕಳ:— ಇಲ್ಲಿ ಈವರ್ಷ ಒಂದು ಪ್ರೌಢ ಶಾಲೆಯನ್ನು ಪ್ರಾರಂಭಿಸುವುದಕ್ಕೆ ವಿದ್ಯಾ ಇಲಾಖೆ ಮಂಜೂರಾತಿ ಕೊಟ್ಟಿದೆ ಎಂದು ಗೊತ್ತಾಗಿದೆ.

ಈ ಶಾಲೆಯನ್ನು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯ ಆಶ್ರಯದಲ್ಲಿ ಕಾರ್ಕಳ ವಿದ್ಯಾ ಸಂಸ್ಥೆಯವರು ಜೂನ್ ೧೫ರಂದು ಆರಂಭಿಸಲಿದ್ದಾರೆ.

ಧನ್ಯವಾದ

ತಾ. 28-5-1964ನೇ ಗುರುವಾರ ಮಂಗಳೂರು ಬಲ್ಮಠ ಜ್ಯೋತಿ ಟಾಕೀಸಿನಲ್ಲಿ ಶ್ರೀಮತಿ ಮತ್ತು ಶ್ರೀ ಪಿ. ಎಮ್. ಹೆಗ್ಡೇರ ಮಗಳು ಸೌ| ಸ್ವರ್ಣಲತಾ ವಿವಾಹವು ಶ್ರೀ ತಿಮ್ಮಪ್ಪ ಶೇಣವರೊಡನೆ ಮತ್ತು ಸದ್ದಿಯವರ ಮಗಳು ಸೌ| ಸುಶೀಲರ ವಿವಾಹವು ಶ್ರೀ ರತ್ನಾಕರ ಶೆಟ್ಟಿಯವರೊಡನೆ ನಡೆದ ಸಮಾರಂಭಕ್ಕೆ ಚಿತ್ತೈಸಿ, ಶುಭಾಶಯ ಕೋರಿದ, ವ, ಪಾರಿತೋಷಕಗಳನ್ನು ಕೊಟ್ಟು, ಆಶೀರ್ವದಿಸಿದ ಅವರ ಸ್ನೇಹಿತರಿಗೆ, ಸಮ್ಬಂಧಿಕರಿಗೆ ಶ್ರೀಮತಿ ಮತ್ತು ಶ್ರೀ ಪಿ. ಎಮ್. ಹೆಗ್ಡೇರು ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಾರೆ. ಇದನ್ನೇ ವೈಯಕ್ತಿಕ ಧನ್ಯವಾದಗಳೆಂದು ಸ್ವೀಕರಿಸ ಬೇಕಾಗಿ ಅವರ ವಿನಂತಿ.

ಮಂಗಳೂರು,
9-6-1964

ಕವಲು ದಾರಿ—ಕೆಂಪು ದೀಪ

ಸಿನೆಮಾ - ನಾಟಕ

ಸಿನೆಮಾ ಬಂದು ನಾಟಕ ಕಲೆ ಅಳಿದು ಹೋಯಿತು ಎಂದು ಹೇಳುವ ಮಂದಿ ಈಗ ಹೆಚ್ಚಾಗಿದ್ದಾರೆ.

ಈ ಮಾತು, ಕರ್ನಾಟಕದಲ್ಲಿ ಮಾತ್ರವೇ ಅಲ್ಲ; ಭಾರತದ ಎಲ್ಲಾ ಕಡೆಗಳಿಂದ ಕೇಳಿ ಬರುತ್ತಿದೆ.

ಭಾರತದ ಹೊರಗಿನ ದೇಶಗಳಲ್ಲಿ ಸಿನೆಮಾ ಮತ್ತು ನಾಟಕಕ್ಕೆ ನೇರವಾಗಿ ಒಂದರಿಂದ ಇನ್ನೊಂದಕ್ಕೆ ಯಾವದೇ ಬಗೆಯ ಹಾನಿ ಸಂಭವಿಸಿರುವದಿಲ್ಲ.

ಅಲ್ಲಿನ ಜನರು ಸಿನೆಮಾ ಮೆಚ್ಚಿಕೊಳ್ಳುವಂತೆ ನಾಟಕವನ್ನೂ ಮೆಚ್ಚಿಕೊಳ್ಳುತ್ತಾರೆ.

ಅಂತೆಯೇ ಅಲ್ಲಿ ನಾಟಕ ಕಲೆ ಇವತ್ತಿಗೆ ಸರಾಗವಾಗಿ ಉಸಿರಾಡಿಸುತ್ತಿದೆ.

ಭಾರತದ ರಂಗ ಭೂಮಿಯು ಇಂದಿನ ಸ್ಥಿತಿ ಶೋಚನೀಯವಾಗಿರಲು ಸಿನೆಮಾ ಕಾರಣವಾಗಿದ್ದಿರಬಹುದು; ಆದರೆ ಕನ್ನಡ ರಂಗ ಭೂಮಿಗೆ ಮಾತ್ರ ಇದರಿಂದ ಹಾನಿ ಒದಗಿರುವದಿಲ್ಲ.

ಪರಿವರ್ತನೆ ಎಂಬ ಮಾತು, ಜನರನ್ನು ಸುಲಭವಾಗಿ ರಕ್ಷಣೆ ಮಾಡುವ ಇಂದಿನ ದಿನದಲ್ಲಿ ನಮ್ಮ ರಂಗ ಭೂಮಿಗೂ ಈ ಬಗೆಯ ರಕ್ಷಾ ಕವಚವನ್ನು ತೊಡಿಸಲಾಗಿದೆ.

ನಮ್ಮ ರಂಗ ಭೂಮಿ ಮತ್ತು ಸಿನೆಮಾ ರಂಗದಲ್ಲಿ ಇವತ್ತು ಕುತೂಹಲಕರ ಒಂದು ವಿಷಯ ಅಡಗಿದೆ,

ನಮ್ಮ ರಂಗಭೂಮಿಯು ನಶಿಸಿ ಹೋಯಿತಲ್ಲ ಎಂದು ವ್ಯಥೆ ಪಡುವವರು, ಒಂದು ಕನ್ನಡ ಚಿತ್ರ ನೋಡಿದರೆ ನಿಜವಾಗಿ ದಂಗಾಗಿ ಬಿಡುತ್ತಾರೆ.

ನಾಟಕ ರಂಗವೇ ಪರಿವರ್ತನ ಹೊಂದಿ ರಜತ ಪರದೆಯ ಮೇಲೆ ಇರುವುದು, ಅವರ ಕಣ್ಣಿಗೆ ಬಿದ್ದಾಗ, ಅವರಿಗೆ ಸಂತೋಷವಾಗದೆ ಇರಲು ಸಾಧ್ಯವೇ ಇಲ್ಲ.

ನಿಜಕ್ಕೂ ಈ ವಿಷಯದಲ್ಲಿ ಕನ್ನಡ ಚಿತ್ರ ನಿರ್ಮಾಪಕರನ್ನು ಅಭಿನಂದಿಸಬೇಕು.

ಇಂತಹ ಸಾಹಸದ ಕೆಲಸ ಬೇರೆಯಾವ ಭಾಷೆಗಳವರಿಂದಲೂ ಅಸಾಧ್ಯವೆನಿಸಿರುವಾಗ, ನಾಟಕವನ್ನು ಸಿನೆಮಾ ಮಾಯ ಮಾಡಲು ಅವರೆಲ್ಲ ನಡೆಸಿರುವ ಪ್ರಯತ್ನವೇನಾದರೂ ಸಾಮಾನ್ಯ ವಿಷಯವೆ?

ಮರಾಠೀ, ಗುಜರಾತೀ ಚಿತ್ರ ನಿರ್ಮಾಪಕರು ಈ ಪ್ರಯತ್ನ ನಡೆಸಿ ಅಯಶಸ್ವಿಯಾಗಿದ್ದಾರೆ ಎಂದಮೇಲೆ, ನಮ್ಮವರಿಗೆ ಈ ಗೌರವ ಮೀಸಲಾಗಿ ಉಳಿಯುತ್ತದೆ.

ಕನ್ನಡ ಚಿತ್ರಗಳು ರಂಗ ಭೂಮಿಯನ್ನು ಚಿರಕಾಲ ಸೆರೆಹಿಡಿಯುವ ಪ್ರಯತ್ನಗಳನ್ನು ನಡೆಸುತ್ತಿವೆ ಎಂಬುದು ಸಂದೇಹಕ್ಕೆ ಎಡೆಕೊಡದ ಒಂದು ವಿಷಯ.

ಇದಕ್ಕೆ ಪ್ರಮುಖ ಕಾರಣವೆಂದರೆ, ನಮ್ಮ ಚಿತ್ರರಂಗದಲ್ಲಿರುವ ಬಹಳಷ್ಟು ಮಂದಿ ರಂಗ ಭೂಮಿಯಲ್ಲಿ ದೀರ್ಘಕಾಲ ಇದ್ದು ತರಬೇತಿ ಪಡೆದವರೇ ಆಗಿರುತ್ತಾರೆ

ಅಷ್ಟೇ ಅಲ್ಲದೆ ಇವತ್ತಿಗೆ ನಮ್ಮ ನಟ-ನಟಿಯರು ಎಲ್ಲಿ ನಾಟಕಾಭಿನಯ ಮರೆತು ಹೋಗುವದೋ ಎಂಬ ಭೀತಿಯಿಂದ, ನಾಟಕಗಳಲ್ಲಿ ಅಭಿನಯಿಸಿ, ಪರೀಕ್ಷೆ ನಡೆದ್ದಾರೆ.

ರಂಗ ಭೂಮಿಯು ಈ ರೀತಿ ಪರಿವರ್ತನೆ ಹೊಂದಿರುವ ಕಾರಣ, ನಮ್ಮ ಚಲಚಿತ್ರಗಳನ್ನು ಸಿನೆಮಾ ನಾಟಕ ಎಂದು ಕರೆಯಬಹುದು.

ಸಿನೆಮಾ ನಾಟಕವೆಂದು ಕರೆದಾಗ ಮಾತ್ರ ನಮ್ಮ ಚಲಚಿತ್ರಗಳಿಗೆ ಸರಿಯಾದ ನಾಮಕರಣವಾದಂತಾಗುತ್ತದೆ.

ಇದನ್ನು ನಾಟಕಗಳ ನವೀಕರಣವೆನ್ನಬಹುದಲ್ಲ, ಎಂದು ಒಬ್ಬರು ಪ್ರಶ್ನಿಸುತ್ತಾರೆ.

ಒಪ್ಪತಕ್ಕ ಮಾತು.

ಸಂಭಾಷಣೆ, ಹಾವಭಾವಗಳನ್ನು ನೋಡಿದವರಿಗೆ, ನಾಟಕಗಳನ್ನು ಕೆಮರಾ ಸೆರೆಹಿಡಿಯುತ್ತದೆ ಎಂಬ ಅನುಭವವಂತೂ ಆಗಿಯೇ ಆಗುತ್ತದೆ.

ಇನ್ನು ಕತೆ; ನಾಟಕದಲ್ಲಿ ನಾಟಕವನ್ನು ದುರಂತ ಇಲ್ಲವೆ ಸುಖಾಂತಗೊಳಿಸಲು ಕತೆಯೂ ಜೀವ ಹಿಡಿದಿರ ಬೇಕಾಗುತ್ತದೆ. ಸಿನೆಮಾ ಈ ಬಂಧನದಿಂದ ಪಾರಾಗಿರುತ್ತದೆ.

ಇಲ್ಲಿ ಒಂದು ದೃಶ್ಯಕ್ಕೂ ಇನ್ನೊಂದು ದೃಶ್ಯಕ್ಕೂ ಸಂಬಂಧವನ್ನು ಯಾರೂ ಹೆಣೆಯಲು ಯತ್ನಿಸುವದಿಲ್ಲ; ಆ ಕೆಲಸವನ್ನು ಮೂರ್ಖರೇ ಮಾಡುತ್ತಾರೆ!

ಅಂತೆಯೇ ಸಿನೆಮಾ—ಕನ್ನಡ ಸಿನೇಮಾ ಈ ಬಂಧನಕ್ಕಂಟಿಕೊಳ್ಳದೆ, ಎಲ್ಲೆಲ್ಲಿಗೋ ಸಾಗಿ, ಯಾವುದೋ ವ್ಯಂಗ್ಯದ ವ್ಯಂಗ್ಯಕ್ಕೆಡೆ ಮಾಡಿಕೊಟ್ಟು ಸಾಗುತ್ತ ಮುಕ್ತಾಯಗೊಳ್ಳುತ್ತದೆ.

ಹಾಡುಗಳು ಇಂತಹದೇ ಇರಬೇಕೆಂಬ ನಿರ್ಬಂಧವೂ ಇರದ ಕಾರಣ ಕೆಲವೊಮ್ಮೆ ಅಳುವ ಸನ್ನಿವೇಶದಲ್ಲಿ ಕೇಳಿ ಬರುವ ಹಾಡುಗಳನ್ನು ಕೇಳುತ್ತ ನಗೆ ಬರುತ್ತದೆ. ಮಧುರ ಸನ್ನಿವೇಶದಲ್ಲಿ ತಿಳಿಯದ ನಗೆ ಮೂಡುವ ಸಮಯ ಕೇಳಿ ಬರುವ ಹಾಡನ್ನು ಕೇಳುತ್ತ ಅಳೋಣವೆನ್ನಿಸುತ್ತದೆ.

ಇದು ಸಿನೆಮಾದಲ್ಲಿ ಕೂಡಾ ಹೊಸತಲ್ಲ; ನಾಟಕದ ಅಪಾರ ಅನುಭವವೆಂಬ ಭಟ್ಟಿಯಲ್ಲಿ ಈ ರಸ ಪಾಕವೆಲ್ಲ ಸಜ್ಜುಗೊಳ್ಳುತ್ತದೆ.

ಕನ್ನಡ ಸಿನೆಮಾ ನಾಟಕವು ಈ ಮಾದರಿಯಲ್ಲಿ ರೂಪುಗೊಂಡಿರುವಾಗ ಇಲ್ಲಿ ತಾಂತ್ರಿಕತೆಯ ಅಗತ್ಯ—ಅನಗತ್ಯದ ಪ್ರಶ್ನೆ ಏಳಬಹುದು.

ಆದರೆ ಇದು ನಾಟಕದ ರೂಪ ಬದಲಾವಣೆಯಾಗಿರುವ ಕಾರಣ, ಇಲ್ಲಿ ಅನಿವಾರ್ಯವೆನಿಸುವ ತಾಂತ್ರಿಕತೆಗೆ ಪ್ರವೇಶವಿರುವದಿಲ್ಲ. ನಾಟಕದಲ್ಲಿರವ ಮಾಮೂಲುತನ ಇಲ್ಲಿಯ ಕಾರ್ಯ ನಿರ್ವಹಣೆಗೆ ಸಾಕಾಗುತ್ತದೆ; ಸಾಲುವಷ್ಟು ಇರುವ ಈ 'ತಾಂತ್ರಿಕತೆ"ಯನ್ನೇ ಬಳಸಿಕೊಂಡರೆ ಧಾರಾಳವಾಯ್ತು.

ಇನ್ನೂ ಒಂದು ಮಾತಿದೆ; ಕೊನೆಯ ಮಾತು.

ಈಗ ಕನ್ನಡ ಚಿತ್ರಗಳಲ್ಲಿ ಬಳಕೆಗೆ ಬಂದಿರುವ ನವ ಪ್ರಯೋಗ. ಈ ಕುರಿತು ಹಲವು ಮಂದಿಗೆ ಸಂದೇಹವಿರುವ ಕಾರಣ, ವಿವರಣೆಕೊಡಬೇಕಾದುದು ಅತಿ ಜಗತ್ಯ.

ನವ ಪ್ರಯೋಗವೊಂದು ಪ್ರಚಾರ ಸಾಧನವೇ ಎಂದು ಕೇಳುವವರಿಗೆ ಹೌದು ಎಂದೂ ಅನ್ನ ಬೇಕಾಗುತ್ತದೆ; ಅಲ್ಲ ಎಂದೂ ಅನ್ನ ಬೇಕಾಗುತ್ತದೆ.

ಇದು ಪ್ರಚಾರ ಸಾಧನವೂ ಆಗಿದೆ; ಅಲ್ಲದೆ ಒಬ್ಬ ಲೇಖಕರು ಹೇಳಿದಂತೆ ಗೀಚಿದ್ದೆಲ್ಲವೂ ನಮ್ಮ ಕಾವ್ಯ ಎಂದು ಹೇಳಬಹುದಾಗಿರುವ ಇವತ್ತಿನ ಕಾಲದಲ್ಲಿ, ನನ್ನ ಕಾವ್ಯವನ್ನೂ 'ನವ್ಯ' ಎಂದು ಧಾರಾಳವಾಗಿ ಹೇಳಬಹುದು.

ಅದೇ ರೀತಿ, ಕನ್ನಡ ಚಿತ್ರಗಳೆಲ್ಲವನ್ನೂ ನವ್ಯ ಎಂದು ಕರೆಯಬಹುದಾದರೆ, ಈ ನವೋ ನವ್ಯಗಳನ್ನು ಆಹಸರಿನಿಂದ ಕರೆಯಲು ಅಡ್ಡಿಯಿಲ್ಲ.

ಸಿನೀಮಾನಾಟಕದ ಕತೆ ಮುಗಿಯಿತು. ಈಗ ಉಪಸಂಹಾರ ಎರಡು ಮಾತು:

ನಮ್ಮ ಚಿತ್ರ ನಿರ್ಮಾಪಕರು ಹೊಸ ಹಾದಿಯನ್ನು ತುಳಿಯಲು ಪ್ರಯತ್ನಿಸುವರಾದರೆ, ಬಂದಿನಿ, ದೋಬಿಘಾ ಜಮೀನ್ ಪ್ಯಾಸಾ, ಸೀಮಾ, ರಕ್ತ ಕಣ್ಣೀರ್, ಸುಮೈತಾಗಿ, ನೆಂಜಿಲ್ ಬರು ಆಲಯಂ, ಜಲಸಾಘರ್, ಸಾತ್ ಪಾಕೆ ಬಂದಾ, ಮುಂತಾದ ಚಿತ್ರಗಳಂತೆ, ಕನ್ನಡ ಚಿತ್ರೋದ್ಯಮದಲ್ಲೂ; ಅಪೂರ್ವತೆಯನ್ನು ತೋರಿಕೊಡ ಬಲ್ಲರಾದರೆ ಚೆನ್ನಾಗಿರುತ್ತದೆ.

ಅದರೆ, ರಂಗ ಭೂಮಿಯ ರಕ್ಷಣೆಗೆ ಕಂಕಣಬದ್ಧರಾಗಿ ಕುಳಿತಿದ್ದೇವೆ ಎಂದು ಅವರು ಅನ್ನುವವರಾದರೆ, ಆ ಮಾತಿಗೆ ನಾವು ಹೇಳಬೇಕಾಗಿರುವುದೇನೂ ಇರುವದಿಲ್ಲ.

— ಸುದಾಸ.

ಹಿರಣ್ಯಗರ್ಭ—ಹಿರಣ್ಯಕಶಿಪು

(೫ನೇ ಪುಟದಿಂದ)

ಗಳನ್ನೇ ತೆರೆದಿದ್ದಾರೆ ಮಸಿದಿಯ ಮುಂದುಗಡೆಯಿಂದ ಹೋಗುವಾಗ ಸದ್ದು ಮಾಡಿದರೆಂಬ ನೆಪಹೇಳಿ ಅವರ ಮೆರವಣಿಗೆಯ ಮೇಲೆ ಧಾಳಿನಡೆಸುತ್ತಿದ್ದಾರೆ. ಇವೆಲ್ಲವನ್ನೂ ಮುಚ್ಚಿ ಬಿಡಲು ಅವರ ದೊಡ್ಡ ಜನರಂತೂ ಮುಡಾರಿಗಳ ಪಕ್ಕದಲ್ಲಿ ಇದ್ದಾರೆ ಅಲ್ಲದೆ ಚಿಕ್ಕ ಘಟನೆಗಳಗೂ ತದ್ವಿರುದ್ಧ ಅರ್ಥವಿತ್ತು ಜಗತ್ತಿಗೆ ತಿಳಿಯಪಡಿಸಲು ಪಾಕಿಸ್ಥಾನ ಸಹಾ ಕಾದುಕೊಂಡಿದೆ. ಅಲ್ಲಿಗೆ ಸುದ್ದಿ ಕಳಿಸಲು ಅವರ ಒಳ ಧ್ವನಿಪ್ರಸಾರಕಗಳೂ ಇವೆ.

ಹೀಗೆ ಚೈನಾ-ಪಾಕಿಸ್ಥಾನ ಸೇರಿ ಭೂಮಿಯನ್ನು ಆಕ್ರಮಿಸಿಕೊಂಡಿರುವುದು ಮಾತ್ರವಲ್ಲ, ರಾಷ್ಟ್ರೀಯತೆ ಎಲ್ಲಿ ಎಲ್ಲಿ ಎನ್ನುತ್ತಿದ್ದಾರೆ? ಭಾರತೀಯರೆಲ್ಲ ಒಂದಾಗಿ ಎದ್ದು ನಿಂತು, ಎದೋ ಇಲ್ಲಿದೆ ಭಾರತದ ರಾಷ್ಟ್ರೀಯತೆ, ಎನ್ನ ಬೇಕಾಗಿರುತ್ತದೆ, ನಮ್ಮಲ್ಲಿರುವ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಎರಡು ವರ್ಷಗಳಲ್ಲಿ ಭಾರತದ ಮೇಲೆ ಭಾರಿ ಆಕ್ರಮಣ ನಡೆಸಲಿರುವ ಚೈನೀಯರನ್ನು ಅವರಿಗೆ ಪಕ್ಕ ಬಲವಾಗಿರುವ ಪಾಕಿಸ್ಥಾನಗಳನ್ನು ಎದುರಿಸಲು ಒಂದಾಗ ಬೇಕಾಗಿರುತ್ತದೆ. ಆಗ ಮಾತ್ತ ಚೈನಾ-ಪಾಕ್ ಗಳನ್ನು ಹಿಚುಕಿ ಹಾಕ ಬಹುದು.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಈದಿಗ ಮಾರಾಟಕ್ಕೆ ಸಿದ್ಧವಾಗಿದೆ 360 ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಖಂಪ್ರತಿಗ್ಗ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್. ಉಡುಪಿ, ದ. ಕ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾರೂ. ೧೦.

ಗೇಹ ರಾಜ್ಯದಲ್ಲಿ

ಪಂಡಿತ ನೆಹರೂ ಅಮರ ರಹೇಂಗೆ

"ಅಂತೂ ಇಂದಿಗೆ ಎಲ್ಲಾ ಮುಗಿದಂತಾಯಿತೂನ್ನಿ!"

"ಏನೇ ಇಂದಿಗೆಲ್ಲಾ ಮುಗಿಯೋದು?"

"ಮತ್ತೇನು, ದಿವಂಗತ ಪ್ರಧಾನಿಯವರ ಚಿತಾ ಭಸ್ಮವೂ ಗಂಗೆಯಲ್ಲಿ ಸೇರಿ ಹೋಯಿತು."

"ಓ, ಎಲ್ಲಿಯೋ ಮುಗಿದದ್ದು? ಇನ್ನು ಭಾನುವಾರ ದೇಶದ ಎಲ್ಲೆಡೆಯೂ ವಿಮಾನಗಳು ಭಸ್ಮವನ್ನು ಚೆಲ್ಲುವುವು."

"ಅಂದರೆ, ಅಂದಿಗೇ ಎಲ್ಲಾ ಮುಗಿಯೋದೂಂತ ತಾನೇ ನೀವನ್ನೋದು?

"ಛೆ....ಛೆ....ಹಾಗನ್ನಬೇಡ. ನೆಹರೂರ ಕತೆ ಮುಗಿಯದ ಕತೆ. ಅದಕ್ಕೆ ಕೊನೆಯೆಂಬುದೇ ಇಲ್ಲ."

"ಅದು ಹೇಗಂತೆ?"

"ನಿನ್ಗೆ ಅಷ್ಟೂ ತಿಳಿಯೋದಿಲ್ವೆ?"

"ತಿಳಿದ್ರೆ ನಿಮ್ಮನ್ನ ಯಾಕೆ ಮತ್ತೆ ಕೇಳ್ತೀನೆ?"

"ಮತ್ತೆ ಹೇಳ್ತೀಯಲ್ಲಾ, ನನ್ಗೆ ಎಲ್ಲಾ ಗೊತ್ತೂಂತ."

"ಹೌದು ನನ್ಗೆಲ್ಲಾ ಗೊತ್ತು."

"ಏನು ಗೊತ್ತು? ಸುಂಸುಮ್ನೆ ಗೊತ್ತುಗಿತ್ತೂಂತ ಅಬ್ಬರಲಾಗ ಹಾಕಿದರೆ ಆಗಿಲ್ಲ ನೋಡು."

"ಅಯ್ಯಯ್ಯ, ನೀವೊಂದು ನಾವು ಹೆಂಗಸ್ರು ಆದಲ್ಲಿ ಲಾಗ ಹಾಕ್ತೇವೆ?"

"ಪಾಪದ ಗಂಡಂದ್ರು ಸಿಕ್ಕಿದ್ರೆ ಆವ್ರ ಮುಂದೆ ಮತ್ತೇನಂತೆ ನೀವು ಮಾಡೋದು?"

"...ಸರೀನ್ನಿ. ಯಾರೋ ಕೆಲವ್ರು ಹಾಗೆ ಮಾಡ್ತಾರಂತ ಎಲ್ರಿಗೂ ..."

"ಸ್ಥಾಳೀಪುಲಾಕನ್ಯಾಯಾಂತಂದ್ರೆ ಅದೇನೋಡು ಮತ್ತೆ..."

"ತಾಳಿಯೋ ಕರಿಮಣಿಯೋ..."

"ಹ್ಹಹ್ಹಹ್ಹ...ನಾನೊಂದು ಹೇಳಿದ್ರೆ ನೀನೊಂದು...."

"ಮತ್ತೆ ನಿಮ್ಮ ತಲೆಬುರುಡೆಯನ್ನು ನನ್ನ ಮುಂದೆ ಒಡೀಲಿಕ್ಕೆ ಆರಂಭಿಸಿದ್ರೆ..."

"ತಲೆಬುರುಡೆ ಬಡ್ಕೊಂಡ್ರೆ ಮತ್ತೆ ನನ್ಗೆಲ್ಲಿದೇನೆ ಆದು? ಅಷ್ಟೂ ಮೂರ್ಖನಾನಲ್ಲ..."

"ನೀವ್ಯಾಕೆ ಮೂರ್ಖರಾಗ್ತೀರಿ? ನಿಮ್ಮ ಕೈ ಹಿಡಿದಿರೋ ನಾನು ಮೂರ್ಖಳೆನ್ನಿ...."

"ನಾನು ಮೂರ್ಖನಲ್ಲವಾದ್ರೆ ನೀನು ಹೇಗಾಗ್ತಿಯೊ ಮತ್ತೆ?"

"ಅಂದ್ರೆ ನಾನು ಮೂರ್ಖಳಲ್ಲಾಂತ ನಿಮ್ಮ ಸರ್ಟಿಫಿಕೇಟು ಅಲ್ವೆ?"

"ಸರ್ಟಿಫಿಕೇಟು ಕೊಟ್ರೆ ಸಾಕೆ, ಅದಕ್ಕೆ ಬೆಲೆ ಬರಬೇಕೆ?"

"ಅಂದ್ರೆ ನಾನು ಶತ ಮೂರ್ಖಳನ್ನೋದಲ್ಲ ನೀವು? ಸಾಕು ಬಿಡಿ. ನನ್ನನ್ನು ಕಡಿಮೆ ಮಾಡಿದಷ್ಟು ನಿಮ್ಮ ತೂಕ ಏರ್ತದೆ..."

"ತೂಕ ಏರಿದ್ರೇನು ತಗ್ಗಿದ್ರೇನು? ಬೆಲೆಯೇರಿಕೆಯ ನಡುವೆ ಸಂಬಳವಾದ್ರೂ ಏರ್ತಿದ್ರೆ ಏನಾದ್ರೂ ಪ್ರಯೋಜನ..."

"ಅಲ್ಲಾ ಏನೋ ಒಂದೈದು ರೂಪಾಯಿ ಏರ್ಸ್ತೇವೇಂತ ಅಂದಿದ್ರಲ್ಲಾ...."

"ಅಲ್ವೆ, ಬೆಲೆ ಐವತ್ತು ಏರಿರೋವಾಗ ಸಂಬಳ ಐದು ಏರ್ಸಿದ್ರೇನಂತೆ ಲಾಭ?"

"ಅದ್ಕೇನು ಮಾಡೋದು? ಕೊಟ್ಟೂ ತಣಿಸುವರುಂಟೆ ಅಂತಾರಲ್ಲಾ...."

"ಕೊಟ್ಟು ತಣಿಸೋದು ಇಲ್ಲ, ಪಡೆದು ತಣಿಯೋದೂ ಇಲ್ಲ, ಅವ್ರೇನೋ ಕೊಡ್ತಾರೆ; ನಾವೇನೋ ಕೊಳ್ತೇವೆ. ಅಷ್ಟೆ."

"ಇದಿರ್ಲಿ....ಅದೇನೋ ತಾಳಿ ಕರಿಮಣೀಂತ ಅಂದ್ರಲ್ಲಾ..."

"ನನಗ್ಯಾಕಪ್ಪಾ ಇನ್ನು ಕರಿಮಣಿ ತಾಳಿಕಟ್ಟೋ ಕೆಲಸ? ಈಗಾಗ್ಲೆ ಕಟ್ಟಿ ಬಿಟ್ಟಿದ್ದೇನೆ ನೋಡು...."

"ಸಾಕು ಬಿಡಿ ಸುಮ್ನಿರಿ ಸ್ವಲ್ಪ. ನೀವೊಂದು........ಏನೋ ನನ್ಗೆ ಅರ್ಥವಾಗದ್ಹಾಗೆ ಅನ್ನೋದು ಮತ್ತೆ ನನ್ನ ಗೋಳು ಹೊಯ್ಸಿಕೊಳ್ಳೋದು. ಅದ್ರಲ್ಲೇ ತೃಪ್ತಿ ನಿಮಗೆ...."

"ಕೋಪಿಸ್ಕೋಬೇಡ ಮತ್ತೆ....ನಾನಂದದ್ದು ಸ್ಥಾಳೀ ಪುಲಾಕ ನ್ಯಾಯಾಂತ- ಅಂದ್ರೆ ನೀನು ಅನ್ನ ಬೆಂದಿದಿಯೋ ಇಲ್ವೋಂತ ಹೇಗೆ ತಿಳ್ಕೊಳ್ತಿತ್ತಿ?"

"ಅಭಿನವ ನಳ ಮಹಾರಾಜರಿಗೆ ಗೊತ್ತಿರ್ಲೇ ಬೇಕಲ್ಲಾ..."

"ದಮಯಂತಿಗೆ ಗೊತ್ತಿದೆಯೋಂತ...."

"ಯಾರಿಗೆ ನನ್ಗೇನೆ? ಅದನ್ನೂ ನಿಮ್ಮ ಕೈಯಿಂದ ಕಲಿಯೋದು ಬಾಕಿ. ಸರಿ, ಅದನ್ನೂ ಕಲ್ಸಿಕೊಡಿ."

"ಮಾತ್ಯಾಕೆ ಹೆಚ್ಚು? ಕೇಳು, ಒಲೆಗೆಯೊಳಗೆ ಪಟ್ಟಿಗ ಹಾಕಿ ಬೇಯುತ್ತಿರುವ ಅಗುಳುಗಳನ್ನು ಎತ್ತಿ ಅವುಗಳಲ್ಲಿ ಒಂದೆರಡನ್ನ ಒತ್ತಿನೋಡಿ ಅವು ಬೆಂದಿದ್ರೆ ಅನ್ನ ಬೆಂದಿತೂಂತನ್ನುತ್ತೀಯಲ್ಲಾ...."

"ನಾನು ಏನೋ ಅಂತಿದ್ದೆ. ಸಾಕು ನೀವು ಏನು ಪಾಕಶಾಸ್ತ್ರದಲ್ಲೂ ಆನರ್ಸ್ ಪಡೆದಿದ್ದೀರಾ ಮತ್ತೆ?"

"ಇಲ್ಲದೆ ಉಂಟೆ? ಇಪ್ಪತ್ತೇಳು ದಿನದ ಇಂಟರ್ ಮಿಡಿಯೇಟ್ ಮುಗಿಸಿ ಮತ್ತೆ ಮೂರು ದಿನ ಆನರ್ಸ್..."

"ಸಾಕು ಬಿಡೀಂದ್ರೆ ತಮಾಷೆ ..ಸದ್ಯ ವಿಷ್ಯಕ್ಕೆ ಬನ್ನಿ...."

"ಏನು ವಿಷ್ಯಾಂತ..."

"ಅದೇ ನಿಮ್ಮ ಪಾಕಶಾಸ್ತ್ರದ ಪಾಂಡಿತ್ಯ...."

"ಪಾಕ ಶಾಸ್ತ್ರ ಅದಲ್ಲ ಕಣೇ, ಅದು ಲೌಕಿಕ ನ್ಯಾಯಶಾಸ್ತ್ರ..."

ನ್ಯಾಯ ಶಾಸ್ತ್ರವೇ ಅದು? ಅದೇನು ಸಾರುತ್ತದೆ?"

"ಸಾರೋದೇನು? ಮುಖ ನೋಡಿ ಮನುಷ್ಯನ್ನ ತೂಕ ಮಾಡ ಬಹುದು, ಮನೆ ನೋಡಿ ಒಳಗಿನವರನ್ನ ಅರೀಬಹುದು;.... ಹಾಗೇನೇ ..."

"ಏನಂತೆ? ಹಾಗೇನೇ ಎಂತ ನಿಲ್ಸಿದ್ರಿ..."

"ಹೇಳ್ಲೇ ಬೇಕೇನು? ಒಬ್ಬಾಕೆ ಹೆಂಗ್ಸನ್ನ ಕಂಡ್ರೆ ಎಲ್ರನ್ನೂ ತೂಕ ಮಾಡಬಹುದು..."

"ನಿಮ್ಮ ವಾದ ಒಳ್ಳೆದು ...ಒಂದು ಮನೆಯನ್ನು ಕಂಡು ಎಲ್ಲ ಮನೆಯನ್ನೂ ತಿಳಿಯಬಹುದೂಂತ...."

"ಅದೂ ಹೌದು ಕಣೇ...ನೋಡು, ನಮ್ಗೆ ಸಾಲ ಕೊಟ್ಟರೋ ದೇಶದವ್ರು ಬರ್ತಾರೆ....ಒಂದು ಅಣೆಕಟ್ಟು ಒಂದು ರಸ್ತೆ ಒಂದು ಊರು ನೋಡ್ತಾರೆ, ಒಬ್ಬಬ್ರನ್ನ ಮಾತಾಡಿಸ್ತಾರೆ...ದೇಶ ತಾವಿತ್ತ ಸಾಲವನ್ನು ಒಳ್ಳೇ ಉಪಯೋಗ ಮಾಡಿದೆ; ದೇಶದವ್ರೆಲ್ಲಾ ಸಜ್ಜನರೂಂತ ಉದ್ಗರಿಸಿ ಹೊರಟು ಹೋಗ್ತಾರೆ...."

"ಹಾಗಾದ್ರಿಂದ್ಲೇ ಮತ್ತೂ ಮತ್ತೂ ಸಾಲ ದೊರೆಯೋದು ತಾನೆ? ಅದು ಬಿಟ್ಟು ತಾವಿತ್ತ ಭಂಡವಾಳ ಶರಾವತಿ ಕೊಳಕ್ಕೆ ಬಿತ್ತೂಂತ ತಿಳಿದ್ರೆ ಮತ್ತೆ ಕೊಡ್ತಾರಾ ಯಾರಾದ್ರೂ...."

"ಇದನ್ನೇ ನೋಡು ಸ್ಥಾಳೀ ಪುಲಾಕ ಅನ್ನೋದು...ಹಾಗೆಯೇ ನಮ್ಮ ದಿವಂಗತ ಪ್ರಧಾನಿ ನೆಹರುರನ್ನ ಕಂಡು ಎಲ್ಲ ಭಾರತೀಯರೂ ಅವ್ರಂತೆಯೇ ಇದ್ದಾರೇಂತ ವಿದೇಶಿಯರ ನ್ಯಾಯ...."

"ಇದ್ರಿಂದ ನಮಗೇನೂ ಕೆಡುಕಾಗೋದಿಲ್ಲ ಕಂಡ್ರಿ. ಆದ್ರೆ....ಅಂತ ರತ್ನ ಇನ್ನು ಎಲ್ಲಿ ಬರಬೇಕು?"

"ಅದ್ಕೇ ನೋಡು, ಅನ್ನೋದು? ರತ್ನ ಇನ್ನೂ ಇದೆ. ಅದು ಎಲ್ಲಾ ಕಾಲಕ್ಕೂ ಇದೆ ಅಂತ, ಅದಕ್ಕೆ ಕೊನೆಯೇ ಇಲ್ಲಾಂತ"

"ಅದು ಹೇಗೆ?"

"ನೋಡು, ಅವ್ರ ಇಚ್ಛೆಯಂತೆ ಅವ್ರ ಬೂದಿಯನ್ನ ದೇಶದ ತುಂಬ ಹೊಲ ಗದ್ದೆಗಳಲ್ಲಿ ಚೆಲ್ಲಾಡ್ತಾರೆ...."

"ಹೌದು, ಆಗ್ಲೇ ಹೇಳಿದ್ರಲ್ಲಾ...."

"ಹಾಗೆ ಚೆಲ್ಲಿದ ಬೂದಿ ಗದ್ದೆಗೆ ಗೊಬ್ಬರವಾಗುತ್ತೆ. ಗೊಬ್ಬರದಿಂದ ಧಾನ್ಯ ಬೆಳೆಯುತ್ತೆ ಇದು ಬೀಜವಾಗುತ್ತೆ. ಧಾನ್ಯವನ್ನು ತಿಂದು ನಮ್ಮೆಲ್ಲ ರಕ್ತದಲ್ಲೂ ಜವಾಹರರ ಸತ್ವ ತುಂಬುತ್ತೆ; ಬೀಜ ಬಿತ್ತಿ ಫಸಲು ಎತ್ತುವುದು ನಡೆಯುತ್ತಲೇ ಇರುವುದರಿಂದ ಯುಗ ಯುಗಾದಿ ಕಳೆದರೂ ಜವಾಹರಲಾಲ ಜನ ರಕ್ತದಲ್ಲಿ ಅಮರರಾಗಿಯೇ ಉಳಿಯುತ್ತಾರೆ. ಪಂಡಿತ ನೆಹರೂ ಅಮರ ರಹೇಂಗೆ."

"ವಿಚಿತ್ರವಾಗಿದೆ ನಿಮ್ಮ ವಾಗ್ಜಾಲ.."

"ವಾಗ್ಜಾಲವಲ್ಲವಿದು, ನ್ಯಾಯದ ಜಾಲ ತಿಳಿಯಿತೆ?"

"ಈಗ ತಿಳಿಯಿತೂನ್ನಿ."

"ಹಾಗಾದ್ರೆ ಮುಂದಿನ ಕೆಲ್ಸ..."

"......ಹ್ಞಾ......ತಯಾರಿದೆ. ಬನ್ನಿ ಮತ್ತೆ..."

"ಹ್ಞೂಂ.........."

— ಗೋರಾ.

ಕರಿಮೆಣಸು, ಒಣ ಶುಂಠಿ

ಪಾಕಿಸ್ತಾನದ ಅಧ್ಯಕ್ಷ ಮೇಜರ್ ಜನರಲ್ ಅಯ್ಯೂಬಖಾನರು ಭಾರತದ ಕಡೆಗೆ ಸ್ನೇಹ ಹಸ್ತವನ್ನು ನೀಡಿದ್ದಾರೆ.

—ಚೌ-ಎನ್-ಲಾಯರು ನೀಡಿದ್ದ ಸ್ನೇಹ ಹಸ್ತವನ್ನೂ ಆ ಮೇಲೆ ನಡೆದ ಇತಿಹಾಸ ಪ್ರಸಿದ್ಧ ಘಟನೆಗಳನ್ನೂ ನೆಹರು ಉತ್ತರಾಧಿಕಾರಿ ಖಂಡಿತಕ್ಕೂ ಮರೆಯಲಾರರು.

o o o

ಅಂತ್ಯಕಾಲದಲ್ಲಿ ಇಂದಿರಾ ಗಾಂಧಿಯವರು ಒಂದು ಬಾಟಲಿಯಷ್ಟು ರಕ್ತವಿತ್ತರೂ ಪ್ರಧಾನಿ ನೆಹರುರವರನ್ನು ಬದುಕಿಸುವುದು ಸಾಧ್ಯವಾಗಲಿಲ್ಲ.

—ಅಂತಹವನ ದೂತರಿಗೆ ಕಿಂಚಿತ್ತು ದಯವಿಲ್ಲ ಎಂಬುದು ಮತ್ತೊಮ್ಮೆ ಸಿದ್ಧವಾಯಿತು.

o o o

ಪಂಡಿತ ನೆಹರು ಬುದ್ಧನ ಅವತಾರವೆಂದು ಬೌದ್ಧ ಸಂಸ್ಥೆಯ ಅಧ್ಯಕ್ಷ ಭೋಜರಾಜರು ವರ್ಣಿಸಿದರು.

—ಬುದ್ಧನಾಗುವುದಕ್ಕೆ ಮೊದಲು ಪಡೆದಿದ್ದ ಅವತಾರಗಳು ಆತನಿಗೆ ಸಾಲದೆ ಹೋದುದಕ್ಕೆ ಇಷ್ಟು ವರ್ಷಗಳ ನಂತರ ಮತ್ತೆ ಅವತಾರವೆತ್ತಿದ್ದರೂ ಇರಬಹುದು.

o o o

ನಿಯೋಜಿತ (?) ಪ್ರಧಾನಿಯವರ ಮನೆಗೆ ಸಂದರ್ಶಕರ ಪ್ರವಾಹ ಹರಿಯತೊಡಗಿದೆ.

— ಪ್ರಾಯಃ ಅಲ್ಲಿ ಬೆಲ್ಲ ಬಿದ್ದಿರಬೇಕು; ನೊಣಗಳು ಮುತ್ತುವುದು ಸ್ವಾಭಾವಿಕವಲ್ಲವೆ?

o o o

ಬೆಲೆಯೇರಿಕೆಯು ಗಂಡಾಂತರ ಮಟ್ಟವನ್ನು ತಲುಪಿದ್ದು ಸರಕಾರಿ ವ್ಯಾಪಾರದ ಬಗ್ಗೆ ವಿಧಾನ ಮತ್ತು ಕಿರುಕುಳ ವಿತರಣೆಯ ಮೇಲೆ ಉಗ್ರನಿಯಂತ್ರಣವನ್ನು ಹೇರದೆ ಗತ್ಯಂತರವಿಲ್ಲ-ಟಿಟಿಕೆ.

—ದೇಶವೇ ಗಂಡಾಂತರದ ಮಟ್ಟವನ್ನು ಮುಟ್ಟಿರುವಾಗ ಬೆಲೆಯೇರಿಕೆಯದೇನ ಮಹಾ?

o o o

ಸರಕಾರಿ ಕಾಲೇಜುಗಳ ಫಲಿತಾಂಶಗಳನ್ನು ವಿಮರ್ಶಿಸಿದರೆ ಅತ್ಯಂತ ಶೋಚನೀಯ ಸ್ಥಿತಿ ಕಂಡು ಬರುವುದು—ರಾಜ್ಯ ಸರಕಾರದ ಜೋಲು ಮೋರೆ.

—ಖಾಸಗಿ ಕಾಲೇಜುಗಳ ಫಲಿತಾಂಶಗಳನ್ನು ವಿಮರ್ಶಿಸಿದರೆ ಅತ್ಯಂತ ಅಸೂಯೆ ಹುಟ್ಟಿ ಬರುವುದು ಸ್ವಾಭಾವಿಕ.

o o o

ಒಡಿಸ್ಸಾ ರಾಜ್ಯದಲ್ಲಿ ನಡೆಸಿಕೊಂಡು ಬರುತ್ತಿರುವ ಬಾಂಬು ಮತ್ತು ರೈಫಲ್ ಮೊದಲಾದ ಲೂಟಿಂಗಳನ್ನು ನಿಲ್ಲಿಸಿ ಬಿಡುವಂತೆ ರಾಜ್ಯ ಸರಕಾರಕ್ಕೆ ಕೇಂದ್ರವು ತಿಳಿಸಿದೆ.

—ರೈಫಲ್ ನಿಂತುದರಿಂದ 'ಕಷ್ಟಕ್ಕೆ' ಗುರಿಯಾದವರಿಗೆ ಸೂಕ್ತ ಪುನರ್ನಿವೇಶನ - ಪರಿಹಾರಗಳ ವ್ಯವಸ್ಥೆ ಮಾಡುವುದು ಅಗತ್ಯವಾದೀತು.

o o o

ಸರಕಾರಿ ಕಾಲೇಜುಗಳಿಗಿಂತ ಶುಲ್ಕ ಹೆಚ್ಚಿರುವುದಾದರೂ ವಿದ್ಯಾರ್ಥಿಗಳು ಖಾಸಗಿ ಕಾಲೇಜುಗಳನ್ನೇ ನುಗ್ಗುತ್ತಾರೆ.

—ಖಾಸಗಿ ಕಾಲೇಜುಗಳನ್ನೂ ರಾಷ್ಟ್ರೀಕರಣ ಮಾಡುವುದೊಂದೇ ಈ ಸಮಸ್ಯೆಗೆ ಪರಿಹಾರವೆನಿಸೀತು.

'ನಚಿಕೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ನವಯುಗ ಪ್ರೆಸ್, ಉಡುಪಿ.

ಸಿರಿಯ ಮನೆಯ ಹುಡುಗಿ

(೬ನೇ ಪುಟದಿಂದ)

ಇಬ್ಬರೂ ಬೇಸರ ಬರುವವರೆಗೂ ಪ್ರಸ್ತಾಪಿಸುತ್ತಿದ್ದೆವು ನಮ್ಮ ಪ್ರಯಾಣ ಬಗೆಹರಿಯದ ಒಗಟಾಯಿತು. ಕೊನೆಗೆ ಒತ್ತಾಯಕ್ಕೋ ಅಥವಾ ಅವಳೇ ಹೋಗಬೇಕೆಂದು ಮನಸ್ಸು ಮಾಡಿಯೋ ಊರಿಗೆ ಹೋಗಿ ಬರುತ್ತೇನೆ" ಎಂದು ತಿಳಿಸಿದಳು. ನನಗೆ ಅರ್ಧ ಹೊರೆ ಇಳಿದಂತಾಯಿತು. ಪ್ರಯಾಣಕ್ಕೆ ಸಿದ್ಧತೆಯನ್ನು ನಡೆಸಿದಳು ಉಷಾ.

○ ○ ○

ಬರುವ ದಿನವನ್ನು ಗೊತ್ತುಪಡಿಸಿ ಪತ್ರದಲ್ಲಿ ಸೂಚಿಸಿದ್ದಂತೆ ಅದೇ ದಿನ ಸಂಜೆಗೆ ನನ್ನ ಅತ್ತೆ ಮಾವ ಅವರ ಕಿರಿಯ ಪುತ್ರನೊಂದಿಗೆ ಕಾರಿನಲ್ಲಿ ಬಂದಿಳಿದರು. ಮನೆಗೆ ಬಂದ ಹಿರಿಯರನ್ನು ಬರಮಾಡಿಕೊಳ್ಳದಿರಲಾಗುತ್ತದೆಯೇ? ಇಬ್ಬರೂ ಆದರದಿಂದಲೇ ಸ್ವಾಗತಿಸಿದೆವು.

ಮಾಮೂಲಿನಂತೆ ಕ್ಷೇಮ ಸಮಾಚಾರಾದಿ ಪ್ರಸ್ತಾಪ ಮುಗಿಯಿತು

ಮಾರನೆ ದಿನವೇ ಹೊರಡುತ್ತೇವೆ. "ಮೈಸೂರಿಗೆ ಹೋಗಿ ಹಿರಿಯ ಮಗಳನ್ನು ಕರೆದುಕೊಂಡು ಬರಬೇಕು" ಎಂದು ತಿಳಿಸಿದರು ಮಾವ. ಬಂದ ದಿನವೇ ಹೊರಡುವುದು ಸಮಂಜಸವಲ್ಲವೆಂದು ವಾದಿಸಿ ಮೂರನೆಯ ದಿನ ಪ್ರಯಾಣ ಬೆಳೆಸುವಂತೆ ಪ್ರಾರ್ಥಿಸಿದೆ. ಉಷಾ ನನ್ನ ವಾದವನ್ನು ಅನುಮೋದಿಸಿದಳು.

ಅತ್ತೆ ಮಾವ ನಮ್ಮ ಸಂಸಾರವನ್ನು ಕಂಡು ಸಂತೋಷಪಟ್ಟರೋ ಇಲ್ಲವೋ ಬಾಯಿ ಬಿಟ್ಟು ಏನನ್ನೂ ಹೇಳಲಿಲ್ಲ.

○ ○ ○

ತಂದೆ ತಾಯಿಗಳ ಯೋಗಕ್ಷೇಮವನ್ನು ನೋಡಿಕೊಂಡು ಅವರನ್ನು ಉಪಚರಿಸಲು ಉಷಾ ಸಿದ್ಧವಾಗಿ ನಿಂತಿದ್ದುದರಿಂದ ಮೇಲಾಗಿ ಕಛೇರಿಯ ಕೆಲಸ ವಿಶೇಷವಾಗಿದ್ದುದರಿಂದ ಕೆಲಸಕ್ಕೆ ಹೋಗದೆ ಗತ್ಯಂತರವೇ ಇರಲಿಲ್ಲ

ಅತ್ತೆ ಮಾವ ಬಂದ ನಂತರ ಉಷಾ ಉತ್ಸಾಹಶಾಲಿಯಾಗಿಯೇ ಕೆಲಸ ಮಾಡುತ್ತಿದ್ದಳು. ಅವರು ಬಂದ ಎರಡನೆಯ ದಿನ ಕಛೇರಿಯಿಂದ ಮುಂಚಿತವಾಗಿಯೇ ಮನೆಗೆ ಹಿಂತಿರುಗಿದೆ. ಜಿಂಕೆಯಂತೆ ಆಟವಾಡುತ್ತಿದ್ದ ಉಷಾ ಕಣ್ಣಿಗೆ ಬೀಳಲಿಲ್ಲ.

ವರಾಂಡದಲ್ಲಿ ಪತ್ರಿಕೆ ಓದುತ್ತಿದ್ದ ಮಾವನವರು. ನನ್ನನ್ನು ಕಂಡೊಡನೆಯೇ "ಉಷಾ ಹೊಟ್ಟೆ ನೋವು ಅಂತ ಮಲಗಿದ್ದಾಳಪ್ಪಾ. ಬೆಳಿಗ್ಗೆಯಿಂದ ಆರೋಗ್ಯವಾಗಿಯೆ ಇದ್ದಳು, ಈಗ ಇದ್ದಕ್ಕಿದ್ದಂತೆ ನರಳುತ್ತಿದ್ದಾಳೆ' ಎಂದರು.

ಕ್ವಿನೈನ್ ಗುಳಿಗೆ ನುಂಗಿದಂತಾಗಿತ್ತು ನನ್ನ ಸ್ಥಿತಿ. ಅತ್ತೆಯವರೇನೋ "ನನಗೆ ತಿಳಿದ ಔಷಧಿ ಮಾಡಿದ್ದೇನಪ್ಪಾ, ಗಾಬರಿ ಬೀಳಬೇಡ, ಸರಿಹೋಗುತ್ತದೆ" ಎಂದು ಧೈರ್ಯ ಹೇಳಿದರು.

ನನಗೆ ಧೈರ್ಯ ಬರಬೇಕೇ?

ಉಷಾ ಸಂಕಟದಿಂದ ಸೊರಗಿದ್ದಾಳೆ ಎಂದು ತಿಳಿದು ಅವಳ ನಿರಾಕರಣೆಯನ್ನು ಗಣನೆಗೆ ತಾರದೆ ಮಿತ್ರ ಡಾ॥ ಚಂದ್ರು ಬಳಿಗೆ ಓಡಿದೆ. ಗಾಬರಿಗೊಂಡವನಂತೆ ಚಂದ್ರು ಮನೆಗೆ ಬಂದು ಅವಳನ್ನು ಪರೀಕ್ಷಿಸಿದ. "ಗಾಬರಿ ಪಡಬೇಕಾಗಿಲ್ಲ ಕಣೋ ಏನೋ ಸ್ವಲ್ಪ ಹೊಟ್ಟೆ ನೋವು ಬಂದಿದೆಯಷ್ಟೆ. ಮಾತ್ರೆ, ಔಷಧಿ ಕಳುಹಿಸುತ್ತೇನೆ" ಎಂದು ಹೇಳಿ ನಡೆದ.

ಔಷಧಿ ಪಥ್ಯ ಎಲ್ಲ ಆಯಿತು. ಆದರೂ ಉಷಾ ನರಳಾಟ ತಪ್ಪಲಿಲ್ಲ.

"ಮಗಳು ತಮ್ಮೊಂದಿಗೆ ಬರುತ್ತಾಳೆ" ಎಂದು ಅವಳ ತಂದೆ ತಾಯಿಯರು ಸಂತೋಷದಿಂದಿದ್ದರು. ಅವಳ ಅನಿರೀಕ್ಷಿತ ಹೊಟ್ಟೆ ನೋವಿನ ಬಾಧೆಯಿಂದ ಬರದಿದ್ದುದನ್ನು ಕಂಡು ಅತ್ತೆ ಮಾವ ಇಬ್ಬರಿಗೂ ಮನ ಮರುಗಿತು. ಬಂದ ದಿನವೇ "ನನಗೆ ಊರು ಬಿಟ್ಟು ಬರಲು ವೇಳೆ ಇಲ್ಲ ಸಾಧ್ಯವಾದರೆ ಒಂದು ದಿನದ ಮಟ್ಟಿಗೆ ಮಾತ್ರ ಬರುತ್ತೇನೆ, ಹೆಚ್ಚು ಒತ್ತಾಯಪಡಿಸಬೇಡಿ" ಎಂದು ತಿಳಿಸಿದ್ದೆ. ಉಷಾ ನಾನು ಹೇಳಿಕೊಟ್ಟಿದ್ದ ಗಿಣಿಪಾಠವನ್ನು ಒಪ್ಪಿಸಿ ತಂದೆ ತಾಯಿಯರನ್ನು ಸಮಾಧಾನಪಡಿಸಿದ್ದಳು.

ಮಗಳ ಮಾತಿಗೆ ವಿರೋಧಿಸಿ ಎದುರು ಹೇಳುವ ಶಕ್ತಿ ಇಬ್ಬರಿಗೂ ಇರಲಿಲ್ಲ.

ಉಷಾ ಅವರೊಂದಿಗೆ ಹೊರಡುವುದೆಂದು ಗೊತ್ತಾಗಿತ್ತು, ಅದೂ ಸಾಧ್ಯವಾಗುವಂತಿರಲಿಲ್ಲ.

"ಈ ಸ್ಥಿತಿಯಲ್ಲಿ ನಾನು ಎಲ್ಲಿಗೂ ಬರುವಂತಿಲ್ಲಮ್ಮ. ನೀವು ಮೈಸೂರಿಗೆ ಹೋಗಿ ಬನ್ನಿ ಹಬ್ಬದ ವೇಳೆಗೆ ನಾನು ಅವರೂ ಇಬ್ಬರೂ ಒಟ್ಟಾಗಿ ಊರಿಗೆ ಬರುತ್ತೇವೆ" ಎಂದು ಹೇಳಿದಳು ಉಷಾ.

ಉಷಾಳನ್ನು ಬಿಟ್ಟು ಹೋಗಲು ಅವಳ ತಾಯಿ ಸಿದ್ಧವಿರಲಿಲ್ಲ ಅವಳ ತಂದೆ ಮೈಸೂರಿಗೆ ಹೋಗಲೇ ಬೇಕಿದ್ದ ಕಾರಣವಿತ್ತು ಅವರು ಉಳಿಯುವಂತಿರಲಿಲ್ಲ; ಬಿಟ್ಟು ಹೋಗಲಾರದ ಹೋಗದೆ ಇರಲಾರದ ತಂದೆ ತಾಯಿಗಳಿಗೆ ಅದಾವ ಮೋಡಿಹಾಕಿಯೋ ಅಥವಾ ಪ್ರಭಾವ ಬೀರಿಯೋ ಹೊರಡುವಂತೆ ಮಾಡಿದಳು ಉಷಾ.

"ನಿನ್ನನ್ನು ಹೇಗಮ್ಮ ಈ ಸ್ಥಿತಿಯಲ್ಲಿ ಬಿಟ್ಟು ಹೋಗೋದು? ನಿನ್ನ ಗಂಡ ಮನೆ ಸೇರುವುದೇ ಅಪರೂಪ....ಎಂದು ನೊಂದು ನುಡಿದ ತಾಯಿಗೆ ತನ್ನ ನೆರವಿಗೆ ಬರುವ ನೆರೆಯ ಗೆಳತಿಯರ ಗುಂಪಿನ ವಿಷಯವನ್ನೇ ಉಪನ್ಯಾಸ ಮಾಡಿದಳು ಉಷಾ

ಮನೆ ಬಿಟ್ಟು ಹೊರಡುವ ಮುಂಚೆ ಅತ್ತೆ ಮಾವ— ಖಂಡಿತ ಬರದೆ ಇರಬೇಡಿ. ನಿಮ್ಮನ್ನೇ ಎದುರು ನೋಡುತ್ತಿರುತ್ತೇವೆ. ಈಗ ಬಂದಿದ್ದರೆ ಚೆನ್ನಾಗಿತ್ತು....ಈಗ ಹೋಗದೆ ಇರುವಂತೆಯೇ ಇಲ್ಲ. ಬನ್ನಿ" ಎಂದು ಬಗೆ ಬಗೆಯಲ್ಲಿ ಹೇಳಿ ಕಾರನ್ನು ಮುಂದಕ್ಕೆ ಬಿಟ್ಟರು.

○ ○ ○

ತಮ್ಮ ಮಾತಾಪಿತರೊಡನೆ ಬಾಲಕ ಜವಾಹರಲಾಲ.

ನನ್ನ ಅತ್ತೆ ಮಾವ ಮನೆ ಬಿಟ್ಟು ನಡೆದ ರಾತ್ರಿಯೇ ಅವಳಿಗೆ ಬಂದಿದ್ದ ಹೊಟ್ಟೆ ನೋವು ತಾನಾಗಿಯೇ ಓಡಿಹೋಯಿತು.

ನನಗೆ ಆಶ್ಚರ್ಯ!

ತೌರು ಮನೆ ಯುವತಿಯರ ಜೀವನದಲ್ಲಿ ಪ್ರಮುಖಪಾತ್ರ ವಹಿಸಿರುತ್ತದೆ. ಅದರಲ್ಲಿಯೂ ನವ ವಿವಾಹಿತ ತರುಣಿಯರಿಗಂತೂ ತೌರು ಮನೆಯ ಆಸ್ತೆ ಬಹಳ. ತೌರುಮನೆಗೆ ಹೋಗಲು ಕಾತುರಳಾಗಿ ಸಿದ್ಧವಾಗಿದ್ದ ಉಷಾ ಅವಳ ತಂದೆ ತಾಯಿಯವರು ಬಂದ ದಿನವೇ ಹಠಾತ್ತಾಗಿ ಮಲಗಿ ಅವರು ಮನೆ ಬಿಟ್ಟು ಹೊರಟ ದಿನವೇ ಆರೋಗ್ಯಶಾಲಿಯಾದುದನ್ನು ಕಂಡು ಅಚ್ಚರಿಗೊಂಡೆ.

ಅವಳು ಹೋಗಲು ನನ್ನ ವಿರೋಧವು ಇರಲಿಲ್ಲ, ಹೋಗದೆ ಇರಲು ನನ್ನ ಅಭ್ಯಂತರವೂ ಇರಲಿಲ್ಲ.

ಅಂದು ರಾತ್ರಿ ಮನೆಗೆ ಬಂದಾಗ ಅಡಿಗೆಯ ಕೆಲಸವನ್ನು ಮುಗಿಸಿ ಅಂದಿನ ಪತ್ರಿಕೆ ಓದುವುದರಲ್ಲಿ ತಲ್ಲೀನಳಾಗಿದ್ದಳು ಉಷಾ.

ಊಟ ಮುಗಿದ ನಂತರ ಬರೆಯಬೇಕೆಂದು ಕುಳಿತೆ ಏನು ಬರೆಯಬೇಕೆಂದು ತೋಚಲಿಲ್ಲ; ಯೋಚಿಸುತ್ತಲೇ ಕುಳಿತಿದ್ದೆ. ಸ್ವಲ್ಪ ಹೊತ್ತಿನಲ್ಲಿಯೇ ಮನೆಯ ಕೆಲಸ ಮುಗಿಸಿ ಕೋಣೆಯೊಳಕ್ಕೆ ಅಡಿ ಇರಿಸಿದಳು ಉಷಾ.

ಅಂದು ಅವಳೊಂದಿಗೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ನಿರ್ಧಾರ ಮಾಡಿದ್ದೆ. ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕುಳಿತ ಉಷಾ ನನ್ನನ್ನೇ ದಿಟ್ಟಿಸಿ ನೋಡಿ "ಏನೋ ಯೋಚಿಸುತ್ತಿರುವಂತಿದೆಯಲ್ಲ?" ಎಂದಳು.

"ನಿಮ್ಮ ಅಪ್ಪ ಅಮ್ಮ ನೀನು ಬರುತ್ತೀ

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.



ಯು ಅಂತ ಬಹು ಆಸೆ ಇಟ್ಟುಕೊಂಡಂತಿತ್ತು. ನೀನು ಹೋಗದೆ ಅವರಿಗೆ ಅತೀವ ನಿರಾಶೆಯಾಗಿದೆ. ವೈಲಿ ಚೆನ್ನಾಗಿರದಿದ್ದರೆ ಏನಾಗುತ್ತಿತ್ತು? ಅವರೊಂದಿಗೆ ಹೋಗಬಹುದಿತ್ತು. ಎರಡು ದಿನ ಸುಧಾರಿಸಿಕೊಳ್ಳುತ್ತಿದ್ದೆ. ನೀನು ಹಾಗೆ ಮಾಡಬಾರದಿತ್ತು...." ಎಂದು ವಿಷಯವನ್ನು ಪ್ರಸ್ತಾಪಿಸಿದೆ.

"ಆಹಹ....ಹಾ.... ಏನು ಚೆನ್ನಾಗಿ ಹೇಳ್ತೀರ್ರೀ... ನನಗೆ ಉಪದೇಶ ಮಾಡ್ತೀರಲ್ಲ? ನೀವೇ ಏಕೆ ನಾಲ್ಕು ದಿನ ರಜೆ ಹಾಕಿ ಹೊರಡಬಾರದಿತ್ತು? ಅಮ್ಮ ಅಪ್ಪ ಅಂಗಲಾಚಿ ಗೋಗರೆದು ಬೇಡಿಕೊಂಡರು."

"ನನ್ನ ವಿಷಯ ಬೇರೆ.. ನಿನ್ನ ವಿಷಯ ಬೇರೆ... ನೀನು ಮನೆಯ ಮುದ್ದಿನ ಮಗಳು.. ಆದರಿಂದ ಪ್ರೀತಿ ..ಹೆಚ್ಚು."

"ಈ ಒಣ ಉಪಚಾರ ನನಗೇನು ಬೇಕಿಲ್ಲ.... ಈ ಗಂಡಸು ಜಾತಿಯು ಹಣೆಯ ಬರಹವೇ ಇಷ್ಟು— ಎದುರಿಗೆ ಕಣ್ಣೀರು ಬರುವಂತೆ ಅನ್ನುವುದು, ಹಿಂದೆ ಚೆನ್ನ ಎಂದು ಗೋಗರೆಯುವುದು."

"ಗಂಡಸು ಜಾತಿ ನಿಂದನೆ ಸಾಕು. ಈಗ ನಿನ್ನ ಆರೋಗ್ಯ ಹೇಗಿದೆ? ಹೊಟ್ಟೆ ನೋವು ಅಂತ ನನ್ನನ್ನು ಗಾಬರಿ ಪಡುವಂತೆ ಮಾಡಿದ್ದೆ. ನನಗಂತೂ ದಿಕ್ಕೇ ತೋಚದಂತಾಗಿತ್ತು."

"ಯಾರಿಗೆ ಹೊಟ್ಟೆ ನೋವು?"

"ಇದೇನೆ ಹೀಗೆ ಕೇಳ್ತೀಯ?"

"ಮತ್ತಿನ್ನೇನು? ಹೊಟ್ಟೆ ನೋವು ಬಂದಿದ್ದದ್ದು ಯಾರಿಗೆ ಹೇಳಿ."

" ....' '..... ... "

"ನಿಮಗಿಂತಲೂ ತೊಟ್ಟಿಲಲ್ಲಿರುವ ಮಕ್ಕಳು ಎಷ್ಟೋ ವಾಸಿ ಕಣ್ರೀ"

"ಅದೇಕೆ ಹಾಗೆ ಹೇಳ್ತೀಯ?"

"ಅಲ್ಲ ಅಪ್ಪ ಅಮ್ಮನ ಬಂಧನದಿಂದ ಪಾರಾಗಲು ಹೂಡಿದ ಆಟ ಅದು ಅಷ್ಟೆ. ನನಗೆ ಹೊಟ್ಟೆ ನೋವೂ ಇಲ್ಲ, ತಲೆ ನೋವೂ ಇಲ್ಲ" ಎಂದು ನಕ್ಕಳು ಉಷಾ.

ನನಗೆ ತಲೆಯೇ ತಿರುಗಿದಂತಾಯ್ತು. ಉಷಾ ನಗುತ್ತಾ ಕುಳಿತಿದ್ದಳು.

"ಪರವಾಗಿಲ್ಲ ಎಲ್ಲರಿಗೂ ಒಳ್ಳೇ ಗಸ್ತು ಕೊಟ್ಟೆ ಕಣೆ ಉಷಾ"

"ಕೊಡಬೇಕಾದ ಪ್ರಸಂಗ ಬಂತು ಕೊಟ್ಟೆ"

"ಅಷ್ಟಕ್ಕಾಗಿ ಹೊಟ್ಟೆ ನೋವು ನಟಿಸಿ ಎಲ್ಲರಿಗೂ ಮಣ್ಣು ಮುಕ್ಕಿಸಿದೆ."

"ನಾನು ಹಾಗೆ ಮಾಡದಿದ್ದರೆ ಅಮ್ಮ ನನ್ನನ್ನು ಬಿಟ್ಟುಹೋಗುತ್ತಿರಲಿಲ್ಲ. ಅಮ್ಮ ಅಪ್ಪ ಒಂದು ವೇಳೆ ನನ್ನ ಮಾತಿಗೆ ಒಪ್ಪಿಕೊಂಡು ಸುಮ್ಮನಿದ್ದರೂ ನೀವು ತಾರು ಮನೆಯ ಹಾದಿ ತೋರಿಸುತ್ತಿದ್ದಿರಿ"

"ನೀನು ಹೋದರೆ ನನಗಾಗುವ ಲಾಭವೇನು?"

"ಹೋಗಲಿ ಬಿಡಿ ಎಲ್ಲಿಯ ಮಾತು?"

"ನೀನು ಏನೇ ಹೇಳು ಉಷಾ, ನೀನು ನಿನ್ನ ತಂದೆ ತಾಯಿಗಳಿಗೇ ಆ ರೀತಿ ಮಾಡಿ, ಹೋಗದೆ ಉಳಿದುಕೊಂಡಿದ್ದು ತಪ್ಪು. ತಂದೆಯು ಎಂತಹವರಾಗಿರಲಿ ಆವರಿಗೆ ಮಕ್ಕಳ ಮೇಲೆ ಎಲ್ಲಿಲ್ಲದ ವಿಶ್ವಾಸ, ಪ್ರೀತಿ ಇರುತ್ತದೆ. ಅಲ್ಲದೆ ನಿನಗೂ ನಿನ್ನ ಬಂಧು ಮಿತ್ರರನ್ನು ನೋಡಬೇಕೆನ್ನುವ ಆಸೆ ಇರುವುದು ಸಹಜ, ತಾಯಿ ಮನೆ ಯಾವ ಹೆಣ್ಣಿಗ ತಾನೆ ಬೇಡ?"

"ಸಾಕ್ರೀ....ನಿಮ್ಮ ಹರಿಕಥೆ. ನನಗೆ ಹೇಳೋರು ನೀವೇಕ್ರಿ ವೇಳೆ, ಕಾಲ, ವಿರಾಮ ಇಲ್ಲ ಅಂತ ಇಲ್ಲದ ಸುಳ್ಳು ಹೇಳುತ್ತೀರಿ. ನಿನಗಿರುವಷ್ಟೇ ಸ್ವಾಭಿಮಾನ, ಆತ್ಮ ವಿಶ್ವಾಸ ನಿಮ್ಮ ಹೆಂಡತಿ ಅನಿಸಿಕೊಂಡ ನನಗೂ ಇದೆ.

"ಶಭಾಷ್ ಉಷಾ" ಎಂದು ಬೆನ್ನು ತಟ್ಟಿದೆ.

"ಅವರ ಜೊತೆ ಹೋಗದೆ ಏಕೆ ಉಳಿದುಕೊಂಡೆ ಗೊತ್ತೆ?" ಎಂದಳು ಉಷಾ.

"ನನಗೇನು ಗೊತ್ತು? ಹೇಳಿದರೆ ತಾನೆ ಗೊತ್ತಾಗೋದು?"

"ನಿಮಗಾಗಿ .. ..."

"ನನಗಾಗಿ......."

"ಹುಂ..."

"ನನಗಾಗಿ ಉಳಿಯಬೇಕೆನ್ನುವ ಆವಶ್ಯಕತೆ ಏನಿತ್ತೋ ಕಾಣೆ."

"ನಿಮ್ಮ ಮನೋಧರ್ಮ ನಾನು ಬಲ್ಲೆ.... ನೀವಿಲ್ಲದ ಸುಖ, ಸಂಪತ್ತು, ದೊಡ್ಡಸ್ತಿಕೆ ಎಷ್ಟಿದ್ದರೇನು?"

ಕೇಂಬ್ರಿಜ್ಜಿನಲ್ಲಿ ಶಿಕ್ಷಣ ಪಡೆಯುತಿದ್ದ ವಿದ್ಯಾರ್ಥಿ ಜವಾಹರಲಾಲ ನೆಹರು.

"ಅಂದರೆ.... "

"ಅಂದರೆ.. ನಾನು ಸಿರಿವಂತರ ಮಗಳು ನಿಜ. ಹಣದ ಬಲದಿಂದ ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯ ಬಹುದು. ನಾನು ಆಸೆಪಟ್ಟರೆ ನನ್ನ ತಂದೆ ನನ್ನನ್ನು ನೆಲದ ಮೇಲೆ ಇಳಿಸದಂತೆ ತಾರಲ್ಲಿಯೇ ತಿರುಗಿಸಬಹುದು. ಅಮ್ಮ ಬಂಗಾರದ ತೊಟ್ಟಿಲಲ್ಲಿ ಮಲಗಿಸಿ ತೂಗಬಹುದು ತಾರು ಮನೆಯಲ್ಲಿ ಲಕ್ಷ್ಮಿ ತಾಂಡವವಾಡುತ್ತಿರಬಹುದು, ಸುಖದ ಹೊಳೆ ಹರಿಯುತ್ತಿರಬಹುದು, ಆದರೆ ಇವು ಯಾವುವೂ ನನ್ನ ಆತ್ಮಕ್ಕೆ ಶಾಂತಿ ನೀಡುವ ವಸ್ತುಗಳಾಗಲಾರವು. ನನ್ನ ಸುಖ, ಶಾಂತಿ; ಆಸೆಯ ಕೇಂದ್ರ ನೀವು. ಇಷ್ಟೆಲ್ಲ ತಾರು ಮನೆಯಲ್ಲಿದ್ದರೂ ನೀವಿಲ್ಲದಿದ್ದರೆ ನನಗೆ ಬಂದ ಭಾಗ್ಯವೇನು? ನನ್ನ ಪಾಲಿನ ದೇವರು ನೀವೊಬ್ಬರು ನನ್ನೊಂದಿಗಿದ್ದರೆ ಸಾಕು"ಎಂದು ಹೃದಯ ತುಂಬಿ ನುಡಿದಳು ಉಷಾ.

ಅಭಿಮಾನದ ಸಾಕ್ಷಿಯಾಗಿ ಅವಳ ಕಣ್ಣಂಚಿನಲ್ಲಿ ನೀರು ತುಂಬಿತ್ತು. ಉಷಾಳ ಅಂತರಂಗದ ಒಲವಾದ ನುಡಿಗೆ ಹೃದಯ ಉತ್ತರ ಕೊಡಲು ಸಿದ್ಧವಿತ್ತು. ಆದರೆ ಬಾಯಿ ಮಾತನಾಡುವ ಶಕ್ತಿ ಕಳೆದುಕೊಂಡಿತ್ತು.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ(ಟ ಖ ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ ಖ. ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ:

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

REGD. No. B. G. 176
LICENCE No. 31
Licensed to Post without Prepayment

ಶುದ್ಧ ಹರಟೆ

ಹರಟೆಯ ಮೇಲೆ ಹರಟೆ

ಹರಟಿದವರು: ಶ್ರೀ ಶಂಸ ಐತಾಳ, ಹಾರ್ಯಾಡಿ.

ಹರಟೆಯೆನ್ನುತ್ಲೂ ನೆನಪ್ಪಾಯ್ತು ನೋಡಿ—ಗೊರಟು ಇರುತ್ತದೆಯಲ್ಲ. ಗೊರಟು? ಮಾವಿನ ಹಣ್ಣಿನ ಒಳಗೆ? ಅದರ ವಿಷ್ಯ ಒಂದು ಕಥೆ ಇದೆ ನೋಡಿ, ಒಮ್ಮೆ ಅಕ್ಬರ ಹಾಗೂ ಬೇಗಂ ಸಾಹೇಬರೊಂದಿಗೆ ಕುಳಿತು ಊಟ ಮಾಡಬೇಕಾದ ಸಂದರ್ಭ ಬೀರಬಲನಿಗೆ ಬಂತಂತೆ. ಬೀರಬಲ ಅಂದರೆ ಬೀರು ಕುಡಿದೇ ಬಲವಾದೋನು ಅಂತ ಅದೊಂದು ಅನರ್ಥ ಕೋಶದಲ್ಲಿ ಯಾವನೋ ಒಬ್ಬ ಸುಡುಗಾಡು ಸಾಹಿತಿ ಬರೆದಿದ್ದಾನೆ. ನನಗೇ ಆ ಉಲ್ಲೇಖ ಸರಿಯಲ್ಲ ಅನಿಸುತ್ತೆ. ಅಂದ ಹಾಗೆ ಸರಿ ಮಿಗಿಲಿ ಎಲ್ಲ ಈ ಕಾಲದಲ್ಲಿ ಯಾರು ಕೇಳ್ತಾರೆ ಹೇಳಿ! ಒಟ್ನಾರೆ ಕಾಲವೇ ಕೆಟ್ಟುಹೋಯ್ತು. ಕಲಿಗಾಲ ಇಲಿ ಬಾಲ ಅಂತ ಮಾತಿಗಾದ್ರೂ ಹೇಳ್ತಾರಲ್ಲ ನೋಡಿ ಸುಮ್ನೆ?

....ಏನಪ್ಪಾ ವಿಷ, ಓಡೋದ್ಬಿಟ್ಟಿಟ್ಟು ಆಕಾಶ ನೋಡ್ತೀರಿ....ಹಹ್ಹ...ಪೆಚ್ಚಾದಿರಾ? ನೋಡಿ ಸಾರಾಂಶ ಇಷ್ಟೆ!—ಹರಟೆಯ ಕುರಿತೇ ಒಂದು ಹರಟೆ ಬರೆಯೋಣಾಂತನಿಸ್ತು. ಯಾವುದಕ್ಕೂ ಮೊದಲು ಹರಟೆಯ ಕುರಿತು ವಿವೇಚಿಸುವಾಗ ಮೊದಲು 'ಹರಟೆ ಎಂದರೆ ಏನು?' ಎಂಬ ಪ್ರಶ್ನೆ ಬರುತ್ತೆ ತಾನೇ? ಸರಿ! ಹರಟೆ ಅಂದರೆ ಹರಟೆ. ಅದಕ್ಕೆ ಒಂದು ಉದಾಹರಣೆ ಕೊಡೋಣಾಂತಂತಲೇ ಮೇಲಿನ ಪ್ರಕರಣ ಗೀಚಿದೆ ಅಷ್ಟೆ. ಅರ್ಥವಾಯಿತೇ ಈಗಲಾದ್ರೂ? ಸರಿ!....ಮೇಲಿನ ಅಧ್ಯಾಯ ಹರಟೆಗೆ ಒಂದು ಉದಾಹರಣೆ.

ಹರಟೆ ಅಂದರೆ ಏನು? ಹರಟೆ ಹೇಗಿರುತ್ತದೆ? ಹರಟೆ ಬರೆಯುವುದು ಹೇಗೆ? ಹರಟೆ ಓದುವುದರಿಂದ ಏನೇನು ಫಲಗಳಿವೆ? ಹರಟೆ ಪಠನ ಮೋಕ್ಷಕ್ಕೆ ದಾರಿಯೆ? ಹರಟೆ ಓದುವುದು ಮನಸ್ಸಿಗೆ ಆರೋಗ್ಯವೆ? ಹರಟೆಗಳಲ್ಲಿ ಎಷ್ಟು ವಿಧ? ಹರಟೆಗಳಲ್ಲಿ ಯಾವ ರಸಕ್ಕೆ ಪ್ರಾಮುಖ್ಯ?

ಹರಟೆ ಎಂದರೆ ಹೆಚ್ಚು ಕಡಿಮೆ ಪ್ರಬಂಧದ ಸಹೋದರಾ ಅಂತನ್ನಬಹುದು. ಹೌದು! ಹರಟೆ, ಪ್ರಬಂಧ, ಲಘು ಬರೆಹ, ಲೇಖ ಇವೆಲ್ಲ ಒಂದೇ ಅಮ್ಮನ ಮಕ್ಕಳು. ಪ್ರಬಂಧಗಳಿಗೆ ಮಹಾ ಮಹಾ ವಿದ್ವಾಂಸರ ಆಶ್ರಯ ಸಿಕ್ಕಿತು. ಆದರೆ ಈ ಹರಟೆ ಮಾತ್ರ ಪಾಪ! ಬಡ ಸಾಹಿತಿಗಳ ಸಂಗತಿಯಾಯ್ತು. ಇರಲಿ ಬಿಡಿ. ಅದನ್ನೆಲ್ಲ ಕಟ್ಕೊಂಡು ನಮಗೇನು ತಾನೇ ಆಗಬೇಕಾಗಿದೆ ಹೇಳಿ?

ಹರಟೆ ಹೇಗಿರುತ್ತದೆ? ಅರೇ ಮತ್ತೆ ಅದೇ ಪ್ರಶ್ನೆ ಕೇಳಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ಹರಟೆ ಹೇಗೂ ಇರಬಹುದು. ಹೇಗೂ ಇರಬಹುದು ಅಂತಲೇ ಅಲ್ಲವೇ ಅದಕ್ಕೆ ಹರಟೆ ಅನ್ನೋ ಹೆಸರನ್ನು ಪ್ರಾಜ್ಞರಿತ್ತುದು? ಹರಟೆ ಹೀಗೆಯೇ ಇರಬೇಕೆಂದು ಆದಾರೂ ಶ್ರಾದ್ಧ ನಿಯಮದಂತೆ ನಿಯಮ ಬರೆದಿಲ್ಲ. ಹರಟೆ ಹೇಗೂ ಇರಬಹುದು. ಸಾಸುವೆಯಂತೆ ಚಿಕ್ಕದಾಗಿರಲೂ ಬಹುದು. ಅಥವಾ ಶಂಖಾವತಿಗೆ ಸಂಬಂಧಿಸಿದ ಫೈಲುಗಳಂತೆ ಮೈಲುಗಟ್ಟಲೆ ಉದ್ದ ಹಾಗೂ ಬೃಹತ್ ಪ್ರಮಾಣದಲ್ಲಿಯೂ ಇರಬಹುದು. ಹರಟೆ ತಲೆ ನೋವನ್ನು ತರಿಸಲೂ ಬಹುದು, ಯಾ ಮನುಷ್ಯನನ್ನು ತಲೆ ನೋವಿನಿಂದ ಪಾರು ಮಾಡಲೂ ಬಹುದು. ಹರಟೆ ನಿದ್ರೆ ತರುವ ಮತ್ತು ನಿದ್ರೆ ಬರದಂತೆ ಗೈಯುವ ಈ ಎರಡು ವಿಧದ ಮಾತ್ರೆಗಳ ಕಾರ್ಯವನ್ನು ಸಮಯ ಹೊಂದಿ ಮಾಡಬಹುದು. ಹರಟೆಯಿಂದ ಮನರಂಜನೆ ಸಿಗಲೂ ಬಹುದು. ವ್ಯಥಾ ಕಾಲಕ್ಷೇಪವೂ ಆಗಬಲ್ಲುದು. ಅಂತೂ ಒಂದೇ ಮಾತಿನಲ್ಲಿ ಹೇಳುವುದಾದರೆ ಹರಟೆಗೆ ಅಣುರೇಣು ತೃಣ ಕಾಷ್ಟವೆಂದಂತೆ ಹಲವಾರು ರೂಪಗಳು. ಹರಟೆ ಅಣೋರಣೀಯಾನ್ ಮಹತೋ ಮಹೀಯಾನ್.

ಹರಟೆ ಬರೆಯುವುದು ಹೇಗೆ? ಹೇಗೂ ಬರೆಯಬಹುದು. ಅಂತೂ ಬರೆಯಲು ಮುಖ್ಯವಾಗಿ ಕಾಗದ ಲೇಖನಿ ಮೇಜ್ ಇಂಕು ಹಾಗೂ ಸಮಯ ಇವಿಷ್ಟು ಬೇಕೇ ಬೇಕು. ಹರಟೆ ಬರೆಯಲು ಏನು ಆಧಾರ?—ಮೇಜೇ ಆಧಾರ. ಹರಟೆಯನ್ನೇ ಬರೆಯಲು ನಿರ್ದಿಷ್ಟವಾದ ಒಂದು ವಿಷಯ ಬೇಕೆಂದೇನೂ ಇಲ್ಲ. ಯಾವ ವಿಚಾರವೇ ಆಗಲಿ, ಅದರ ಸುತ್ತ ಮುತ್ತ ಹರಟೆಯನ್ನು ಹೆಣೆಯ ಬಹುದು. ಈಗ ನೋಡಿ, ನಾನು ಹರಟೆಯ ಕುರಿತೇ ಹರಟೆ ಗೀಚುತ್ತಿರುವೆನಲ್ಲ. ಅಂತೆಯೇ ಧೂಳು ಚಪ್ಪಲಿ ಅದೇಕೆ? ಸೆಗಣಿ ಮುದ್ದೆಯ ಕುರಿತೂ ಹರಟೆ ಬರೆಯಲು ಸಾಧ್ಯವಿದೆ.

ಚೀನಾದ ಗ್ವಾಳಿಯಿಂದ ನೊಂದ ಜವಾನನೊಡನೆ ನೆಹರು.

ಹರಟೆ ಓದುವುದರಿಂದ ಏನು ಫಲ? ಕೇಳಿ! ಇಲ್ಲಿ ಒಂದು ಮಾತು. ನೀವು ಕಾಫಿ ಕುಡಿಯುವಿರಾ? ಹೌದೇ—ಸರಿ! ಏಕೆ ಕುಡಿಯುವಿರಿ?—ಆ—ಏಕೆ ಸುಮ್ಮನಾದಿರಿ? ಬಾಯಾರಿಕೆ ನೀಗಿಸಿ ಕೊಳ್ಳಲೆಂದೇ?—ಇದು ಸರಿಯುತ್ತರವಲ್ಲ. ಬಾಯಾರಿಕೆ ತಣಿಸಿಕೊಳ್ಳಲು ಕಾಫಿ ಬೇಕಿಲ್ಲ. ತಣ್ಣೀರೇ ಸಾಕಾಗುತ್ತದೆ.

ಹರಟೆ ಓದುವುದರಿಂದ ಮುಖ್ಯ ಫಲವೆಂದರೆ ಕಾಲಕ್ಷೇಪ. ದಣಿದ ಮನಸ್ಸಿಗೆ ಹರಟೆ ಓದೋಣ ಯೋಗ್ಯ ಔಷಧಿ. ಏಕೆಂದರೆ ಹರಟೆಗಳಲ್ಲಿ ಹೆಚ್ಚಾಗಿ ಚುಟುಕ ಹಾಸ್ಯಗಳು ಬೆರೆತಿರುತ್ತವೆ. ಕೆಲವು ಹರಟೆಗನ್ನೋದಲಾರಂಭಿಸಿದೊಡನೆ ಓದುಗನಿಗೆ ನಿದ್ರೆ ಬಂದು ಅವನ ಆಯಾಸ ಪರಿಹಾರವಾಗುತ್ತದೆ.

ಹರಟೆ—ಮೊದಲೇ ಉಲ್ಲೇಖಿಸಿದಂತೆ—ಹೆಚ್ಚಾಗಿ ಹಾಸ್ಯದಿಂದೊಡಗೂಡಿರುತ್ತದೆ. ಹರಟೆಗೆ ನವರಸಗಳಲ್ಲಿ ಹಾಸ್ಯರಸವೇ ಪ್ರಾಮುಖ್ಯ. ಮತ್ತಾವುದಾದರೂ ರಸವನ್ನೊಳಗೊಂಡಿದ್ದರೆ ಅದು ಹರಟೆಯೆನ್ನಿಸಿಕೊಳ್ಳುವುದೇ ಇಲ್ಲ. ಲೇಖನ ಯಾ ಪ್ರಬಂಧವಾಗಿ ಬಿಡುತ್ತದೆ.

ಹರಟೆಗಳಲ್ಲಿ ಎಷ್ಟು ವಿಧಗಳಿವೆ? ಕಂಡಾಪಟ್ಟೆ ವಿಧಗಳಿವೆ. ಶುದ್ಧ ಹರಟೆ, ಗೊಡ್ಡು ಹರಟೆ, ಮುದಿ ಹರಟೆ, ತಲೆ ಹರಟೆ, ಹಸಿ ಹರಟೆ. ಕವಿ ಕೊರೆತ, ಬುರುಡೆ ಗುಳಿಗುಂಡು, ಪಟಾಕಿ, ನಗೆಬುರುಡೆ, ತಲೆ ಬುರುಡೆ ಇವೆಲ್ಲ ಹರಟೆಯ ವಿಭಾಗಕ್ಕೇನೇ ಸೇರಿದ ವಿವಿಧ ಪ್ರಕಾರಗಳು. ಇವುಗಳಿಗೆಲ್ಲ ಉದಾಹರಣೆ ಕೊಡುತ್ತಾ ಹೋದರೆ ಇದು ಒಂದು ಶುದ್ಧ ತಲೆಹರಟೆಯೇ ಆದೀತು. ಆದರೂ ಒಂದೇ ಒಂದು ಮಾತು. ಸೆಲೂನು ಅಂಗಡಿಗಳಲ್ಲಿ, ಕಾಫಿ ಹೋಟೆಲುಗಳಲ್ಲಿ, ಹೆಂಗಸು ಲೇಡೀಸು ಕ್ಲಬ್ ಸಮೂಹದಲ್ಲಿ, ನದಿ ದಡದಲ್ಲಿ ವಸ್ತ್ರ ಒಗೆಯುವ ಹೆಂಗಸರ ನಡುವೆ, ನಡೆಯುವ ಸಂಭಾಷಣೆಗಳೆಲ್ಲವನ್ನೂ ಹರಟೆಗೆ ಯೋಗ್ಯ ಉದಾಹರಣೆಯಾಗಿ ಕೊಡಬಹುದು ಅಂದರೆ ಹರಿಯುವುದೇ ಹರಟೆಯ ವೈಶಿಷ್ಟ್ಯ. ಅದು ಮುಣುಮುಸಣ, ಸುಟ್ಟಿದು ಸುಡುಗಾಡು, ಅದೂ, ಇದೂ, ಎಂದು ಎಲ್ಲವನ್ನೂ ಸೇರಿಸಿಕೊಂಡಿರುತ್ತದೆ. ಹಾಗೂ ನಿರರ್ಗಳವಾಗಿ ಮುಂದೆ ಸಾಗುತ್ತದೆ. ಆದುದರಿಂದಲೇ ಹರಟೆಯನ್ನೋದುವುದೆಂದರೆ ಅದೊಂದು ಸಂತಸದ ವಿಷಯ. ಅಂತೆಯೇ ಹರಟೆ ಕೊಚ್ಚುವುದೂ ಸಹಾ!

ಹರಟೆ ಅಂದರೆ ಹಾಸ್ಯ ಬರೆಹ ಎಂದೆನಷ್ಟೆ! ಆದರೆ ಎಲ್ಲ ಹರಟೆಗಳಿಗೂ ಈ ನಿಘಂಟು ಅನ್ವಯಿಸಲಾರದು. ಕೆಲವು ಹರಟೆಗಳು ಬರೀ ನೀರಸದ ಬರೆಹಗಳಾಗಿರುತ್ತವೆ.

ಹರಟೆಯನ್ನೋದುವುದು ಪುಕ್ಕಟೆ ಮನರಂಜನೆಗಳಲ್ಲೊಂದಾಗಿದೆ. ಆದುದರಿಂದಲೇ ಎಲ್ಲರೂ ಹರಟೆಗಳನ್ನೋದುವ ಅಭ್ಯಾಸವನ್ನು ಬೆಳೆಸಿಕೊಂಡು ತಮ್ಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಕೊನೆಯದಾಗಿ ಈ ಹರಟೆಕಾರ ಆಶಿಸುತ್ತಾನೆಂದು ಹೇಳಿ—ತಪ್ಪದೆ... ಬರೆದು ಯಾನೇ ಗೀಚಿ ಹರಟೆಗೇ ಸಂಬಂಧಿಸಿದ ನನ್ನ ಈ ಹರಟೆಯ ಕುರಿತು ಎಂಬ ಹರಟೆಯನ್ನು ಮುಗಿಸುವೆ.

ಹರಟೆಗೆ ಜಯವಾಗಲಿ, ಹರಟೆ ಚಿರಂಜೀವಿಯಾಗಲಿ!

ನಮ್ಮ–ನಮ್ಮವರು

(೧ನೇ ಪುಟದಿಂದ)

ಬಿದ್ದ ಆ ಒಣ ಜಮೀನನ್ನು ಕಡಿದು ವಿಶಾಲವಾದ ಗದ್ದೆಗಳನ್ನು ನಿರ್ಮಿಸಿದ್ದಾರೆ, ಕೆರೆಗಳನ್ನು ತೋಡಿದ್ದಾರೆ, ಹೆಚ್ಚು ಆಹಾರ ಬೆಳೆಯುವಲ್ಲಿ ಸಕ್ರಿಯವಾಗಿ ದುಡಿಯುತ್ತಲೂ ಇದ್ದಾರೆ. ಅವರ ಜಮೀನು ಪದ್ಮ ಪುಷ್ಪದಂತೆ ಸಮೃದ್ಧವಾಗಿದೆ; ಪರಿಶ್ರಮ, ಕಾಯ ಕಷ್ಟ, ಕ್ರಿಯುತೆ, ಉನ್ನತ ಸದ್ಭಾವನೆಗಳು ಅವರ ಯಶಸ್ಸಿನ ಮೂಲವೆನ್ನಬೇಕು. ಸಸ್ಯ ಶ್ಯಾಮಲವಾದ ಅವರ ಜಮೀನು ಪದ್ಮದ ಹೂವಿನಂತೆ ಆಹ್ಲಾದಕರ, ಮನ ಶಾಂತಿಗೆ ಆಗರ. ಇವರು ಜನಪ್ರಿಯರೂ ಜನ ಸಹಾಯಕರೂ ಆಗಿದ್ದಾರೆ. ಎಂತಲೇ ಕೊರಂಗರಪಾಡಿ ಗ್ರಾಮದ ಜನತೆ ಇವರನ್ನೂ ಇವರ ಸಹ ಧರ್ಮಿಣಿಯನ್ನೂ ತನ್ನ ಗ್ರಾಮ ಪಂಚಾಯತಿಯ ಸದಸ್ಯರನ್ನಾಗಿ ಆಯ್ದು ಗೌರವಿಸಿದೆ. ಈ ಗೌರವ ಶ್ರೀ ಪದ್ಮ ಶೆಟ್ಟಿ ದಂಪತಿಗಳಿಗೆ ಅವಶ್ಯ ದೊರೆಯಬೇಕಾದುದೇ

READ &
ADVERTISE IN
NAVAYUGA WEEKLY

Edited, Printed & Published by K, H,Shetty, at the Navayuga Press, Udipi, S, India

VOL. 43 No. 42 ಸಂಪುಟ ೪೩ ಸಂಚಿಕೆ ೪೨

NAVAYUGA—Nationalist Weekly ‡‡ ಉಡುಪಿ 18-6-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಗುಲ್ಜಾರೀಲಾಲ ನಂದಾ

ಜವಾಹರಲಾಲ ನೆಹರುರವರು ಆಕಸ್ಮಿಕವಾಗಿ ನಿಧನರಾಗುವರೆಂದು ಸ್ವಯಂ ಅವರೂ ತಿಳಿದಿರಲಿಲ್ಲ "ತನ್ನ ಜೀವಮಾನ ಇಷ್ಟು ಬೇಗನೇ ಕೊನೆಗೊಳ್ಳುವುದಿಲ್ಲ" ಎಂದವರು ಇನ್ನೂ ಬಹುಕಾಲ ಬದುಕುವ ಆಶಯವನ್ನೂ ವ್ಯಕ್ತಪಡಿಸಿದ್ದರು ಆದರೆ, ವಿಧಿಯು ಅವರ ಜೀವವನ್ನು ಹೆಚ್ಚು ಕಾಲ ಇರಗೊಡಲಿಲ್ಲ ನೆಹರು ಉತ್ತರಾಧಿಕಾರಿಯನ್ನು ಆರಿಸುವ ಕೆಲಸವು ಪಾರ್ಲಿಮೆಂಟರಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದುದು. ಆದರೆ, ಪ್ರಧಾನಿಯವರ ದೇಹಾವಸಾನದೊಡನೆ, ಅವರ ಸಚಿವ ಸಂಪುಟವೂ ಸಂವಿಧಾನಾತ್ಮಕವಾಗಿ ಅವಸಾನಗೊಳ್ಳುವುದರಿಂದ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರು ನೆಹರು ಸಂಪುಟದ ಅತಿ ಹಿರಿಯ ಮಂತ್ರಿಯಾದ ಗುಲ್ಜಾರೀಲಾಲ ನಂದಾರನ್ನು ಪ್ರಧಾನಿಯನ್ನಾಗಿ ನೇಮಿಸಿ ತಾತ್ಕಾಲಿಕವಾಗಿ ಸಚಿವ ಸಂಪುಟ ರಚಿಸುವಂತೆ ಆದೇಶವಿತ್ತರು. ನಂದಾರವರು ಈ ಆದೇಶವನ್ನು ಶಿರಸಾವಹಿಸಿ, ನೆಹರು ಸಂಪುಟದ ಎಲ್ಲ ಸದಸ್ಯರನ್ನೂ ತನ್ನ ಮಂಡಳಿಯಲ್ಲಿ ಉಳಿಸಿಕೊಂಡು ಸರಕಾರದ ಹೊರೆಯನ್ನು ಹೊತ್ತುಕೊಳ್ಳಲು ಮುಂದೆ ಬಂದರು

ಗುಲ್ಜಾರೀಲಾಲ ನಂದಾರವರು ಕೇಂದ್ರ ಸಚಿವರಲ್ಲಿ ಹಿರಿಯರು; ಅನುಭವಿಗಳು. ನೆಹರೂರವರ ಉತ್ತರಾಧಿಕಾರಿಯಾರೆಂಬ ಪ್ರಶ್ನೆಯ ಮುಂದೆ ಇವರ ಹೆಸರೂ ನಿಲ್ಲುತಿತ್ತು. ಆದರೆ, ನಂದಾರವರು ತನ್ನ ಅಳವನ್ನು ಅರಿತುಕೊಂಡವರು, ಜಗಜ್ಜೀವನರಾಮ - ಮುರಾರ್ಜಿಭಾಯಿಯವರಂತೆ ತನ್ನ ಶ್ರೇಣಿಗಾಗಿ ಅವರು ಹೋರಾಡಿದವರಲ್ಲ. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಉಪನಾಯಕ ಸ್ಥಾನದ ಆಯ್ಕೆಯ ವೇಳೆಯಲ್ಲೂ ಇವರು ಗಸಿವಿಸಿಗೊಂಡಿರಲಿಲ್ಲ ತನ್ನ ಪಾಲಿಗೆ ಬಂದಿರುವ ತಾತ್ಕಾಲಿಕ ಹೊಣೆಗಾರಿಕೆಯನ್ನು ಆದಷ್ಟು ಶೀಘ್ರವಾಗಿ ಇಳಿಸುವ ಆಲೋಚನೆಯನ್ನೇ ಅವರು ಮಾಡಿದರು. ನಾಯಕನ ಆಯ್ಕೆಯ ಪ್ರಶ್ನೆಯಲ್ಲಿಯೂ ಅವರು ಜಗಜ್ಜೀವನರಾಮರಂತೆ ಗುಲ್ಲೆಬ್ಬಿಸಲು ಮುಂದೆ ಬರಲಿಲ್ಲ, ಇದರಿಂದ ನಂದಾರ ಬಗ್ಗೆ ಹೆಚ್ಚಿನ ಗೌರವವು ಭಾರತೀಯರಲ್ಲಿ ಹುಟ್ಟಿರುವುದು ಸಹಜ

ಪ್ರಧಾನಿ ಪಟ್ಟದಿಂದ ಹಿಂದೆ ಸರಿದರೂ ನಂದಾ ತನ್ನ ದ್ವಿತೀಯ ಸ್ಥಾನವನ್ನು ಬಿಟ್ಟುಕೊಡಲು ನಿರಾಕರಿಸಿದರೆಂದು ವದಂತಿಯಿದೆ ಗೃಹ ಖಾತೆಯನ್ನಿವರು ವಹಿಸಿಕೊಂಡಂದಿನಿಂದ ಆ ಖಾತೆಯಲ್ಲಿ ಹೊಸ ಚುರುಕುತನ ಕಾಣಿಸಿಕೊಂಡಿರುವುದನ್ನು ಭ್ರಷ್ಟಾಚಾರವೇ ಮೊದಲಾದ ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡುವ ವೀರ ಪ್ರತಿಜ್ಞೆಯನ್ನವರು ಮಾಡಿ, ಅದರ ಪಾಲನೆಯಲ್ಲಿ ಉತ್ಸುಕತೆ ತೋರಿಸುತ್ತಿರುವುದನ್ನೂ ಭಾರತೀಯ ಜನತೆ ಕಣ್ಣಿನಲ್ಲಿ ಎಣ್ಣೆ ಹಾಕಿ ನೋಡುತ್ತಿತು. ಕೆಲವರು ಇಂದಿರಾ ಗಾಂಧಿಯವರ ಹೆಸರನ್ನು ಸೂಚಿಸಿದರೂ ಅವರು ತಮ್ಮ ಅನಿಚ್ಛೆಯನ್ನು ಮತ್ತೊಮ್ಮೆ ವ್ಯಕ್ತಪಡಿಸಿದರು, ಶಾಸ್ತ್ರಿಯವರನ್ನೇ ಬೆಂಬಲಿಸಿದರು.

ದೆ. ಇದರ ಪರಿಣಾಮ ರಮಣೀಯವಾದೀತೇ ಎಂದು ಜನ ಪ್ರತೀಕ್ಷಿಸುತ್ತಿದೆ. ತನ್ನ ವೀರ ಪಣವನ್ನು ಸಾಧಿಸಲು ನಿರ್ಧರಿತ ಮನಸ್ಕರಾದ ನಂದಾರು ಹೊಸ ಮಂಡಳಿಯಲ್ಲೂ ತನ್ನ ಹಿಂದಿನ ಖಾತೆಯನ್ನೇ ಪಡೆದಿದ್ದಾರೆ ಎರಡು ವರ್ಷಗಳಲ್ಲಿ [illegible] ಕಾರಿಯಾಗಿ ಲಂಚ ನಿರ್ಮೂಲನವನ್ನು ಸಾಧಿಸುವುದು ಮಾತ್ರ ನಂದಾರ ಗುರುತರ ಹೊಣೆಗಾರಿಕೆಯಾಗಿದೆ ಗೃಹ ಖಾತೆಯನ್ನು ನೆಮ್ಮದಿಗೊಳಿಸುವಲ್ಲಿ ನಂದಾ ಯಶಸ್ವಿಯಾದರೆ ಅವರ ಕಿರೀಟಕ್ಕೊಂದು ನವಿಲಗರಿಯೇರುವುದು

ಇಂದಿರಾ ಗಾಂಧಿ

ತನ್ನ ತಂದೆಯ ನಂತರ ಅವರ ಉತ್ತರಾಧಿಕಾರಿಯಾಗಲು ತಾನು ಬಯಸುವುದಿಲ್ಲ, ಆ ಸ್ಥಾನಕ್ಕೆ ಅರ್ಹರಾದವರು ಭಾರತದಲ್ಲಿ ತುಂಬ ಜನ ಇದ್ದಾರೆ ಎಂದು ಇಂದಿರಾ ಗಾಂಧಿಯವರು ಅಮೇರಿಕೆಯಲ್ಲಿ ಹೇಳಿ ಒಂದು ದಿನ ಗತಿಸುವುದಕ್ಕೆ ಮೊದಲೇ ಉತ್ತರಾಧಿಕಾರಿಯಾಗುವ ಅವಕಾಶ ಅವರ ಮುಂದೆ ಬಂತು. ಉತ್ತರಾಧಿಕಾರಿಯಾರಾದೀತೆನ್ನುವಾಗ ಮುರಾರ್ಜಿ ಮತ್ತು ಜಗಜ್ಜೀವನರಾಮರು ತಾನ, ತಾನು ಎಂದು ಮುಂದೆ ಬಂದರು; ಬಂದಂತೆಯೇ ಅವರು ಹಿಂದೆ ಸರಿಯಬೇಕಾಯಿ ಲಾಲಬಹದೂರ ಶಾಸ್ತ್ರಿಯವರ ಸಚಿವ ಸಂಪುಟದಲ್ಲಿ ಮಾತ್ರ ಇವರು ಸೇರಿಕೊಂಡರು.

೪೭ ವರ್ಷ ವಯಸ್ಸಿನ ಶ್ರೀಮತಿ ಗಾಂಧಿಯವರು ತಮ್ಮ [illegible]ನೆಯ ವಯಸ್ಸಿನಲ್ಲಿ ಕಾಂಗ್ರೆಸ್ ಸೇರಿ, ೪೨ನೆ ವರ್ಷದಲ್ಲಿಯೇ ಅದರ ಅಧ್ಯಕ್ಷಪದವನ್ನು ಪಡೆದರು ಈ ನಡುವೆ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಶಿಕ್ಷೆಯನ್ನೂ ಅನುಭವಿಸಿದ್ದರು ಸಾಮಾಜಿಕ ಕಾರ್ಯಗಳಲ್ಲಿ ಇವರು ಹೆಚ್ಚಿನ ಆಸಕ್ತಿ ತಳೆದವರು ತಮ್ಮ ತಂದೆಯೊಡನೆ, ಕೆಲವೊಮ್ಮೆ ತಾನೇ, ಹಲವು ಬಾರಿ ವಿದೇಶ ಯಾತ್ರೆಯನ್ನೂ ಮಾಡಿ ಅಲ್ಲಿನವರ ಸಂಪರ್ಕವನ್ನೂ ಪಡೆದಿರುವವರು ತಂದೆಯಲ್ಲಿರುವ ಉನ್ನತ ಗುಣಗಳು ಈ ಏಕಮಾತ್ರ ಪುತ್ರಿಯಲ್ಲಿಯೂ ಇವೆ, ತಂದೆಯ ಕಾರ್ಯಗಳಲ್ಲಿ ನಿರಂತರ ಸಹಾಯ ಮಾಡುತ್ತಿದ್ದ ಇಂದಿರಾ ಗಾಂಧಿಯವರು ರಾಜಕಾರಣದಲ್ಲಿಯೂ ತುಂಬ ಪಳಗಿದವರು. ಇತ್ತೀಚೆಗೆ ಇವರ ಅಮೇರಿಕೆಯ ಸಂದರ್ಶನದಿಂದ ಅಲ್ಲಿ ಭಾರತದ ಬಗ್ಗೆ ಇದ್ದಿದ್ದ ದುರಭಿಪ್ರಾಯವು ಕಡಿಮೆಯಾಯಿತೆಂಬುದನ್ನು ನಾವು ಗಮನಿಸಬೇಕು.

ಇಂದಿರಾ ಗಾಂಧಿಯವರಿಗೆ ನೆಹರು ಮತ್ತು ಬಾನುಲಿ ಖಾತೆಯನ್ನು ವಹಿಸಲಿಟ್ಟಿದ್ದಾರೆ. ಇವರು ಇನ್ನು ಕೆಲವೇ ದಿನಗಳಲ್ಲಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸುವರು. ಗಾಂಧಿಯವರಿಗೆ ಕೊಡಮಾಡಿದ ಖಾತೆಯು ಕೇವಲ ತಾತ್ಕಾಲಿಕವೆಂದೂ ಪ್ರಧಾನಿ ಶಾಸ್ತ್ರಿಯವರು ಜುಲೈ ತಿಂಗಳ ಕಾಮನ್‌ವೆಲ್ತ್ ಪ್ರಧಾನಿ ಸಮ್ಮೇಳನದಿಂದ ಹಿಂತಿರುಗಿದ ಬಳಿಕ ತಾನು ವಹಿಸಿರುವ ವಿದೇಶ ಖಾತೆಯನ್ನು ಅವರಿಗೆ ನೀಡಬಹುದೆಂದೂ ಊಹಾಪೋಹ ನಡೆದಿದೆ ಈ ಊಹೆಯು ಕಾರ್ಯರೂಪಕ್ಕೆ ಬರುವ ಸಂಭವ ಕಡಿಮೆ, ಆದರೆ, ಒಂದು ವೇಳೆ ಹಾಗೇನಾದರೂ ನಡೆದರೆ, ಇಂದಿರಾ ಗಾಂಧಿ ತನ್ನ ಹೊಸ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸುವುದು ಖಂಡಿತ ಸದ್ಯ ಪಾಕಿಸ್ತಾನದ ಅಪಲಾಪ ಪಕ್ಕ್ಯಾಂದ ವಿತಿ ಬಂದಿರುವ ಸಲ್ಲಕ್ಷಣ ತೋರಿ ಬರುತ್ತಿದೆ; ಆದರೆ, ಪೀಕಿಂಗ್ ರೇಡಿಯೋದ ಬಕವಾದ ನಡೆಯುತ್ತಲೇ ಇದೆ. ಇದಕ್ಕೆ ಉತ್ತರವನ್ನು ನೀಡುವುದು ಭಾರತೀಯ ಆಕಾಶವಾಣಿಯ ಕಾರ್ಯ. ಶ್ರೀಮತಿ ಗಾಂಧಿಯವರು ಈ ದಿಸೆಯಲ್ಲಿ ಮುಂದುವರಿದು ಭಾರತೀಯ ಬಾನುಲಿಪ್ರಸಾರದಲ್ಲಿ ಜಡಚೇತನವನ್ನು ದೂರೀಕರಿಸಿ ನವಚೇತನ ತುಂಬಬೇಕು, ಭಾರತೀಯ ಗರಿಮೆಯನ್ನು ಎತ್ತಿ ಹಿಡಿಯಬೇಕು

ಎ. ಸುಬ್ಬಯ್ಯ ಪಕ್ಕಳ

ಆರೋಗ್ಯವೇ ಭಾಗ್ಯವೆಂಬುದು ಎಲ್ಲರ ಅನುಭವಕ್ಕೆ ನಿಲುಕಿದ ಪ್ರಾಚೀನರ ಉಕ್ತಿ. ರೋಗವು ಬಂದ ಮೇಲೆ ನಿರೋಧಿಸುವುದು ಕೆಲವೊಮ್ಮೆ ತ್ರಾಸದಾಯಕವಾಗಬಹುದು. ಅನೇಕ ಬಾರಿ ಮಂತ್ರ ತಂತ್ರ ಬಲಿ ಮೊದಲಾದ ಅಂಧ ಶ್ರದ್ಧೆಯ ಕೃತ್ಯಗಳಿಂದ ಮತ್ತು ಇಂಜೆಕ್ಷನ್ ಮೊದಲಾದ ಅತ್ಯಾಧುನಿಕ ವೈದ್ಯ ವಿಧಾನಗಳಿಂದ ಗುಣಮುಖವಾಗದ ಮಹಾ ಕಾಯಿಲೆಗಳು ತೈಲಾದಿ ಔಷಧಿಗಳಿಂದ ಶೀಘ್ರ ಮಾಯವಾಗುವುವು. ಇದಕ್ಕೆ ಅವುಗಳಲ್ಲಿರುವ ಉತ್ತಮ ನಿರೋಧ ಗುಣ

([illegible]-ನೇ ಪುಟ ನೋಡಿರಿ)

ನಾರದ ಕಥೆ

ಕುರುಡು ಇಲಿಗಳು

ಇಂಗ್ಲಿಷ್ ಮೂಲ: ಶ್ರೀ ಆದಿ ಕೆ. ಶೇಟ್.
ಭಾವಾನುವಾದ: ಶ್ರೀ ಕೆ. ಎಸ್. ಪುರಾಣಿಕ

ಆವಾಗಲೇ ಬೆಳಗಾಗಿತ್ತು. ಸೂರ್ಯನ ಕಿರಣಗಳು ಕಿಟಕಿಯನ್ನು ದಾಟಿ ಕೋಣೆಯೊಳಕ್ಕೆ ಪ್ರವೇಶಿಸಿದ್ದವು. ಅರ್ಜುನನು ಎದ್ದು ಬಂದು ಕಿಟಕಿಯ ಬಾಗಿಲುಗಳನ್ನು ತೆಗೆದನು. ಅಲ್ಲಿ ಶಿವ ಪಾರ್ವತಿಯರ ನಿವಾಸ ಸ್ಥಾನವಾದ ಕೈಲಾಸ ಪರ್ವತವು ಹೊಳೆಯುತ್ತಿದ್ದಿತು.

ಶೋಭಾ ಮತ್ತು ಅರ್ಜುನ ಇಬ್ಬರೂ ನವವಿವಾಹಿತ ದಂಪತಿಗಳು. ಮಧು ಚಂದ್ರಕ್ಕೆಂದು ಇಬ್ಬರೂ ಮಸ್ಸೂರಿಗೆ ಬಂದಿದ್ದರು. ಶೋಭಾಳನ್ನು ಅರ್ಜುನ ಬಹಳವಾಗಿ ಪ್ರೀತಿಸುತ್ತಿದ್ದ. ಅವರ ಮದುವೆಯ ಸಮಯದಲ್ಲಿ ಶೋಭಾಳ ತಂದೆಯು ಐವತ್ತು ಸಾವಿರ ರೂಪಾಯಿ ಗಳನ್ನು ವರದಕ್ಷಿಣೆಯ ರೂಪದಲ್ಲಿ ಕೊಟ್ಟಿದ್ದ.

ಸಾಯಂಕಾಲದ ಹೊತ್ತಿಗೆ ಇಬ್ಬರೂ ಪಾರ್ಕಿಗೆ ತೆರಳಿದರು. ಸರಸ ಸಲ್ಲಾಪಗಳ ನಡುವೆ ಅರ್ಜುನನು ಹೇಳಿದ.

"ಡಿಯರ್, ನನಗೆ ಆ ಮಹೇಂದ್ರನು ಅಪಘಾತದಲ್ಲಿ ಸಿಲುಕಿ ಸತ್ತ ನಂತರ ಮನಸ್ಸಮಾಧಾನವೇ ಇಲ್ಲವಲ್ಲ. ಏನು ಮಾಡಲಿ?"

"ಏನು? ಯಾವ ಮಹೇಂದ್ರ? ಏನು ಹೇಳುತ್ತಿದ್ದೀರಿ?" ಶೋಭಾ ಆತುರದಿಂದ ಕೇಳಿದಳು.

"ತಪ್ಪಿ ಹೇಳಿ ಏನೂ ಪ್ರಯೋಜನವಿಲ್ಲ ಡಿಯರ್! ಆತನೊಮ್ಮೆ ದೀರ್ಘ ಶ್ವಾಸವನ್ನೆಳೆದು ಹೇಳಲು ಪ್ರಾರಂಭಿಸಿದ.

"ನಾನು ಮತ್ತು ಮಹೇಂದ್ರ ಇಬ್ಬರೂ ಒಂದೇ ಕ್ಲಾಸಿನಲ್ಲಿ ಕಲಿತವರು. ನಾನೂ ಆತನೂ ಮೆಡಿಕಲ್ ಕಾಲೇಜಿನಲ್ಲಿಯೂ ಒಟ್ಟಿಗಿದ್ದೆವು. ಕಲಿತಾದ ನಂತರ ಆತನಿಗೆ ಒಳ್ಳೆಯ ಕೆಲಸ ಸಿಕ್ಕಿತು. ಮದುವೆಯಾಗಿ ಒಂದು ಮಗುವೂ ಹುಟ್ಟಿತು. ಆದರೆ ಆ ದಂಪತಿಗಳು ಒಂದೇ ಒಂದು ಪೈಸೆಯನ್ನೂ ಉಳಿಸಲಿಲ್ಲ. ಆದರೆ ಮಗುವಿಗೆ ಕೆಲವು ತಿಂಗಳುಗಳಾಗುವಷ್ಟರಲ್ಲಿ ಮಹೇಂದ್ರನು ಒಂದು ಕಾರು ಅಪಘಾತದಲ್ಲಿ ಮರಣಹೊಂದಿದ."

[illegible] ಅರಿಸುತ್ತಿದ್ದ [illegible] ಕ್ಷಣ ತಡೆದು ಅರ್ಜುನನು ಮುಂದುವರಿಸಿದ "ಚಿಕ್ಕಂದಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡ ಆ ವಿಧವೆ ಏನನ್ನೂ ಮಾಡಲಾರದವಳಾಗಿದ್ದಳು. ತನ್ನ ಬಂಧುಗಳಿಗೆ ಭಾರವಾಗಿ ಜೀವಿಸುವುದನ್ನು ಅವಳು ಇಚ್ಛಿಸುತ್ತಿರಲಿಲ್ಲ. ಹಾಗೆಂದು ಅವಳು ಯಾವುದೇ ಕೆಲಸಕ್ಕೆ ಸೇರಲೂ ಸಾಧ್ಯವಿರಲಿಲ್ಲ. ಆದುದರಿಂದ ಡಿಯರ್, ನಾವು ನನ್ನ ಸಂಬಳದಲ್ಲಿ ಒಂದಂಶವನ್ನು ಉಳಿಸಬೇಕು ಮಾತ್ರವಲ್ಲ; ನಾವಿಬ್ಬರೂ ವಿಮೆಯನ್ನು ತೆಗೆಯಬೇಕು. ಯಾವುದೇ ಡಾಕ್ಟರನಾದರೂ ನಮಗೆ ಸರ್ಟಿಫಿಕೇಟು ಕೊಡದಿರಲಾರ. ನಾವು ಆರೋಗ್ಯವಂತರಾಗಿದ್ದೇವಷ್ಟೆ."

ಆತನು ಮಾತನಾಡುವುದನ್ನು ನಿಲ್ಲಿಸಿ ಸಿಗರೇಟು ಹಚ್ಚಿದ. ಆದರೆ ಶೋಭಳ ಮನಸ್ಸು ಮಾತ್ರ ಆ ವಿಧವೆಯ ವಿಷಯದಿಂದಲೇ ಮಗ್ನವಾಗಿತ್ತು.

"ಆದುದರಿಂದ ಡಿಯರ್" ಅರ್ಜುನ ಪುನಃ ಮುಂದುವರಿಸಿದ "ನಾವು ದೆಹಲಿಗೆ ಹಿಂತಿರುಗಿದ ತಕ್ಷಣ ಜೀವ ವಿಮೆಯನ್ನು ತೆಗೆಯಬೇಕು. ಆದರಿಂದ ನಮಗೂ ನಮ್ಮ ಮಕ್ಕಳಿಗೂ ತುಂಬಾ ಉಪಕಾರವಾಗುವುದು. ನಾನು ಒಂದು ಲಕ್ಷರೂಪಾಯಿಗಳಿಗೆ ಮತ್ತು ನಿನ್ನ ಹೆಸರಿನಲ್ಲಿ ಅರ್ಧ ಲಕ್ಷರೂಪಾಯಿಗಳಿಗೆ ವಿಮೆಯನ್ನು ತೆಗೆಸುತ್ತೇನೆ. ನಾವಿಬ್ಬರೂ ಅದಕ್ಕೆ ಸಹಿ ಹಾಕಬೇಕಾಗುವುದು" ಎಂದು ಅರ್ಜುನ ಹೇಳಿದ.

"ನಾನೂ ತಯಾರಿದ್ದೇನೆ. ಆ ಹಣವು ನಮಗೆ ಮುಂದೆ ತುಂಬಾ ಉಪಕಾರ ಮಾಡುವುದು. ಆ ವಿಧವೆಯ ಮತ್ತು ಮಗುವಿನ ವಿಷಯ ನನಗೆ ತುಂಬಾ ಬೇಸರವಾಗುತ್ತದೆ. ನಾವು ಅವಳಿಗೆ ಏನಾದರೂ ಸಹಾಯ ಮಾಡಲಾರವೆ?" ಶೋಭಾ ಪ್ರಶ್ನಿಸಿದಳು

"ಒಳ್ಳೆಯದು. ನನಗೆ ಏನಾದರೂ ಆದರೆ......ನೀನು ತುಂಬಾ ಹಣವನ್ನು ಪಡೆಯುವೆ..." ಎಂದು ಅರ್ಜುನನು ತಮಾಷೆ ಮಾಡಿದನು.

"ಡಾರ್ಲಿಂಗ್, ದಯವಿಟ್ಟು ಆ ರೀತಿ ಮಾತನಾಡಬೇಡ" ಎಂದವಳೇ ಅವನ ಕೈಯನ್ನು ಗಟ್ಟಿಯಾಗಿ ಹಿಡಿದು ಕೊಂಡಳು. ಅವಳ ಕಣ್ಣುಗಳಲ್ಲಿ ಭಯವು ತುಂಬಿತ್ತು.

ಂ ಂ ಂ

ಸಮಯವು ಯಾರನ್ನೂ ಪ್ರೇಮಿಗಳನ್ನೂ ಕಾಯಲಾರದು. ಕೆಲವು ತಿಂಗಳುಗಳುರುಳಿದುವು. ಅರ್ಜುನ ಮತ್ತು ಶೋಭಾ ಇಬ್ಬರೂ ಸಂತೋಷದಿಂದಿದ್ದರು.

ಅರ್ಜುನನು ಆತನ ಲೆಬೊರೆಟರಿಯಲ್ಲಿ ಸರಿಯಾಗಿ ಕೆಲಸ ಮಾಡುತ್ತಲಿದ್ದ. ಆತನು ತನ್ನ ರಿಸರ್ಚ್‌ನಲ್ಲೇ ಮಗ್ನನಾಗಿದ್ದ.

ಅರ್ಜುನ ಮತ್ತು ಶೋಭಾ ಇಬ್ಬರೂ ದೆಹಲಿಯಲ್ಲಿ ಪರಿಚಿತರಾಗಿದ್ದರು. ಅವರಿಬ್ಬರೂ ತುಂಬಾ ಕೂಟಗಳಿಗೆ ಆಮಂತ್ರಿಸಲ್ಪಟ್ಟಿದ್ದರು.

ಒಂದು ದಿನ ಅರ್ಜುನನು ತುಂಬಾ ಕಷ್ಟದಲ್ಲಿ ಸಿಲುಕಿದ್ದಂತೆ ಕಂಡು ಬಂದಿತು ಅವನು ತನ್ನ ಹಿರಿಯ ಆಫೀಸರ್ ಆದ ಡಾ| ಮುಂಡರ್‌ಕಾರ್‌ರೊಂದಿಗೆ ಹೇಳಿದ "ಸರ್, ನನ ಹೆಂಡತಿಯು ಎದೆ ಬೇನೆಯಿಂದ ನರಳುತ್ತಿದ್ದಾಳೆ. ನಿಮ್ಮನ್ನು ಭೇಟಿಯಾಗುವಂತೆ ಎಷ್ಟು ಕೇಳಿಕೊಂಡರೂ ಆಕೆ ಒಪ್ಪುವುದಿಲ್ಲವಲ್ಲ ಏನು ಮಾಡಲಿ"

"ನೀನು ಇಂದು ಸಾಯಂಕಾಲ ಆಕೆಯನ್ನು ಒತ್ತಾಯದಿಂದ ಇಲ್ಲಿಗೆ ಕರೆದುಕೊಂಡು ಬಾ. ಅಥವಾ ನಾನೇ ಇಂದು ಸಂಜೆ ಅಲ್ಲಿಗೆ ಬರುತ್ತೇನೆ. ಏನೂ ಹೆದರಬೇಡ" ಎಂದರು ಡಾ| ಮುಂಡರ್‌ಕಾರ್.

"ಇಲ್ಲ" ಅರ್ಜುನನು ನಿರಾಶೆಯ ಧ್ವನಿಯಲ್ಲಿ ಹೇಳಿದ. "ಆದರಿಂದ ಆಕೆಯು ಕೆರಳಬಹುದು. ನಿಮ್ಮೊಡನೆ ಏನನ್ನೂ ಹೇಳಬಾರದೆಂದು ನನಗೆ ಆಕೆಯ ಆದೇಶವಿದೆ ಮಾತ್ರವಲ್ಲ ಭಾಷೆಯನ್ನೂ ತೆಗೆದುಕೊಂಡಿದ್ದಾಳೆ ನನಗೆ ಇಷ್ಟವಿದೆಯಾದರೂ, ನೀವು ಬಂದರೆ ಅವಳು ಇನ್ನೂ ಹೆಚ್ಚು ಕೆರಳಬಹುದು. ನಾನು ಆಕೆಗೆ ವಿಶ್ರಾಂತಿ ಪಡೆಯುವಂತೆ ಹೇಳಿರುತ್ತೇನೆ. ಧೈರ್ಯ ಹೇಳಿದ್ದೇನೆ. ನಾವು ಇನ್ನು ನಾಲ್ಕೈದು ದಿನ ಎಲ್ಲಿಯೂ ಹೋಗಕೂಡದೆಂದು ಎಣಿಸಿದ್ದೇನೆ."

"ಅದು ಒಳ್ಳೆಯದಾಯಿತು" ಡಾ| ಮುಂಡರ್‌ಕಾರ್ ಹೇಳಿದರು "ಚಿಂತಿಸಬೇಡ ನಿನಗೆ ರಜೆ ಬೇಕಾದರೆ ಇಂದು ಮಧ್ಯಾಹ್ನ ಬರಬೇಕೆಂದಿಲ್ಲ."

"ತುಂಬಾ ಥ್ಯಾಂಕ್ಸ್ ಸರ್. ನಾನು ನಿಮಗೆ ಫೋನ್ ಮಾಡಿ ಅವಳ ಸ್ಥಿತಿಯನ್ನು ತಿಳಿಸುತ್ತೇನೆ. ನಿಮಗೆ ನೂರಾರು ಥ್ಯಾಂಕ್ಸ್‌ಗಳು, ಸರ್" ಎಂದು ಅರ್ಜುನ ತನ್ನ ಕೃತಜ್ಞತೆಗಳನ್ನು ಸಲ್ಲಿಸಿದ.

ಆದರೆ ಮನೆಗೆ ಮರಳಿದವನೇ ಅವನು ತನಗೆ ಸೌಖ್ಯವಿಲ್ಲವೆಂದೂ ತುಂಬಾ ಆಯಾಸ ಗೊಂಡಿರುವೆನೆಂದೂ ಶೋಭಳಿಗೆ ಹೇಳಿದ

"ಡಾರ್ಲಿಂಗ್. ಇನ್ನು ಮೂರುನಾಲ್ಕು ದಿನಗಳ ವರೆಗೆ ಕ್ಲಬ್‌ಗಳಿಗೆ ಹೋಗದೇ ಇಲ್ಲಿಯೇ ಕಾರ್ಡ್ಸ್ ಆಡೋಣ. ಆಗದೇ?" ಅರ್ಜುನ ಕೇಳಿದ.

"ಆಗದೇ ಏನು? ಆದರೆ ನೀವು ಯಾಕೆ ಡಾಕ್ಟರರ ಹತ್ತಿರ ಪರೀಕ್ಷೆಮಾಡಿಸಲಿಲ್ಲ?" ಎಂದು ಶೋಭಾ ಆಲು ತುಂಬಿದ ದನಿಯಲ್ಲಿ ಹೇಳಿದಳು.

"ಇಲ್ಲ ಡಾರ್ಲಿಂಗ್. ನಾನು ಡಾ| ಮುಂಡರ್‌ಕಾರರೊಡನೆ ಹೇಳಿದೆ. ಅವರು ಪರೀಕ್ಷಿಸಿ ವಿಶ್ರಾಂತಿ ಪಡೆಯಲು ಹೇಳಿರುತ್ತಾರೆ." ಎಂದು ಒಂದು ಕ್ಷಣ ತಡೆದು "ಪ್ರಿಯೇ, ಇನ್ನು ಮೂರು ನಾಲ್ಕು ದಿನಗಳ ವರೆಗೆ ನಮ್ಮ ಮಿತ್ರರಿಗೆ ನಮ್ಮನ್ನು ಕೂಟಗಳಿಗೆ ಕರೆಯದಂತೆ ತಿಳಿಸು ಅವರ ಚಿರಿಚಿರಿಯನ್ನು ಸಹಿಸಿಕೊಳ್ಳಲು ನನ್ನಿಂದ ಸಾಧ್ಯವಿಲ್ಲ" ಎಂದು ನಿಟ್ಟುಸಿರು ಬಿಟ್ಟ

ಂ ಂ ಂ

ಡಾ. ಮುಂಡರ್‌ಕಾರರು ಯಾವಾಗಲೂ ಶೋಭಳ ಆರೋಗ್ಯದ ವಿಚಾರವಾಗಿ ಕೇಳುತ್ತಿದರು. ಆದರೆ ಅರ್ಜುನನು ಹಿಂದಿಗಿಂತಲೂ ಉಲ್ಲಸಿತನಾಗಿದ್ದ "ಅವಳು ಈಗ ಸುಧಾರಿಸುತ್ತಿದ್ದಾಳೆ ನಾನು ಹೇಳಿದಂತೆ ಆಕೆಯು ಸಂಪೂರ್ಣ ವಿಶ್ರಾಂತಿ ಪಡೆಯುತ್ತಿದ್ದಾಳೆ" ಎಂದು ಹೇಳಿ ತನ್ನ ಕೆಲಸಗಳಿಗೆ ಹೊರಟು ಹೋದ.

ನಾಲ್ಕನೇ ದಿನ ಅರ್ಜುನನು "ಈ ದಿನ ಪುನಃ ಎದೆ ನೋವು ಪ್ರಾರಂಭವಾಗಿದೆ. ಆದರೆ ಆಕೆಯು ಧೈರ್ಯದಿಂದಿದ್ದಾಳೆ. ಮತ್ತು ಮದ್ದಿನ ಆವಶ್ಯಕತೆಯಿಲ್ಲ ಎನ್ನುತ್ತಾಳೆ. ಏನು ಮಾಡಲಿ ಸರ್?" ಎಂದು

(೧೦ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಕವಲು ದಾರಿ—ಕೆಂಪು ದೀಪ

ನಾವು ಸಾಗಬೇಕಾದ ದಾರಿ

ದೀಪ ಆರಿತು.

ಒಂದು ಮನೆಯ ದೀಪವಲ್ಲ; ಒಂದು ಊರಿನ ದೀಪವಲ್ಲ; ಒಂದು ದೇಶದ ದೀಪವಲ್ಲ.

—ಜಗತ್ತಿನ ದೀಪ ಆರಿತು.

ನೆಹರು ಇನ್ನು ಇಲ್ಲ.

ಎಪ್ಪತ್ತೈಗರ ತರುಣ ನೆಹರು, ಇನ್ನೂ ಹತ್ತಿಪ್ಪತ್ತೈದು ವರ್ಷ, ಭವ್ಯ ಭಾರತ ರಚನೆಗಾಗಿ ನಮ್ಮ ಮುಂದಿರಬಹುದೆಂದು ತಿಳಿದಿದ್ದರೆ, ಅಷ್ಟರಲ್ಲೇ ಅವರು ಇನ್ನು ಇಲ್ಲ, ಎಂಬ ಸುದ್ದಿ!

o o o

ಸುದ್ದಿ ಭಯಂಕರ!

ಗಾಂಧೀಜಿ ಪತ್ತಾಗ ಉಂಟಾದ ವೇದನೆಯು ಮತ್ತೊಮ್ಮೆ ಮರುಕಳಿಸುವಂತಹ ಸುದ್ದಿ,

ಅದರ ಜೊತೆಯಲ್ಲೇ ಅವರ ಆದರ್ಶ ಪಾಲನೆಯ ನಾಲ್ಕಾರು ಬಾಯಿ ಉಪಚಾರದ ಮಾತುಗಳು?

ಈ ರೀತಿ ಆಡಲು ನನಗೆ—ನಮ್ಮ ನಾಯಕರಲ್ಲಿ ಹಲವರಿಗೆ ಏನು ಅಧಿಕಾರವಿದೆ ಎಂದು ಆಡಬೇಕು?

ಹಾಗೆ ಆಡುವ ಅಧಿಕಾರ ಅವರಿಗಿಲ್ಲ.

ಗಾಂಧೀಜಿಯ ಬಳಿಕ ಅವರ ದಾರಿಯಲ್ಲಿ ಮುನ್ನಡೆಯುತ್ತೇವೆ ಎಂದು ಪ್ರತಿಜ್ಞೆ ತೊಟ್ಟ ಎಷ್ಟು ಮಂದಿ. ಅದನ್ನು ಆಚರಣೆಯಲ್ಲಿ ತಂದಿದ್ದಾರೆ?

ಆಡಿದ ಮಾತು ಮೂರು ದಿನವೂ ಅವರ ನೆನಪಿನಲ್ಲಿ ಉಳಿಯುವುದಿಲ್ಲ.

ಅಂತಹ ಮಂದಿ ಈಗ ನೆಹರೂ ಆದರ್ಶದ ಕಲ್ಪನೆ ಮೂಡಿಸತೊಡಗಿದ್ದಾರೆ?

ಈಗ?!

ನೆಹರೂ ಇರುವಾಗ ಅವರೊಡನೆ ಸಹಕರಿಸದೆ 'ತಮ್ಮ' ಹಿತವನ್ನು ಹೆಚ್ಚು ಬಯಸಿದ ನಮ್ಮ ನಾಯಕರಲ್ಲಿ ಹಲವರು, ಈಗ ನೆಹರೂ ಇಲ್ಲದೆ ಹೋದಾಗ ಅವರ ಆದರ್ಶವನ್ನು ಬಣ್ಣ ಬಣ್ಣದ ಬೆಳಕಿನ ಮುಂದೆ ಇರಿಸಿ ನೋಡತೊಡಗಿದ್ದಾರೆ?

o o o

ಕೆಂಪು ಗುಲಾಬಿಯ ನೆಹರೂ ಇನ್ನು ಇಲ್ಲ. ಜನರನ್ನು ಪ್ರೀತಿಸಿದ ನೆಹರು ಇನ್ನು ಇಲ್ಲ ಮಕ್ಕಳ ಚಾಚಾಜಿ ಇನ್ನು ಇಲ್ಲ. ಶಾಂತಿಪ್ರಿಯ ನೆಹರು ಇಲ್ಲ.

o o o

ಹುಟ್ಟಿದ ಮನೆ, ಬೆಳೆದ ವಾತಾವರಣ ಎಲ್ಲವೂ ಅವರಿಗೆ ಅನುಕೂಲವಾಗಿದ್ದವು. ನೆಹರೂ ಒಬ್ಬ ಬರಸಗಾರರಾಗಿಯೂ, ಪ್ರಸಿದ್ಧಿ ಗಳಿಸುತ್ತಿದ್ದರು, ಎಂಬುದೂ ಸಂದೇಹಕ್ಕೆಡೆಯಿರದ ಮಾತೇ.

ಕೀರ್ತಿಯು ಅವರ ಮನೆ ಬಾಗಿಲನ್ನು ಎಂದೋ ತಟ್ಟಿತ್ತು.

ಆದರೆ ಅವರ ಮನಸ್ಸಿನ ಬಾಗಿಲು, ದೇಶದ ಏಳಿಗೆಗಾಗಿ, ಜನರ ಏಳಿಗೆಗಾಗಿ ಶ್ರಮಿಸುವತ್ತ ತೆರೆದು ನಿಂತಿತ್ತು.

ಅಂತೆಯೇ ಅವರು ಜನ ಸಾಮಾನ್ಯರೊಡನೆ ಕೂಡಿ ಕೊಂಡರು; ಅವರ ಒಣಗಿದ ರೊಟ್ಟಿಯಲ್ಲಿರುವ ಸವಿಯನ್ನು ಸವಿದು ಅನುಭವಿಸಿದರು; ಅವರಂತೆಯೇ ಅವರ ಜೊತೆ ಗುಡಿಸಲಲ್ಲಿ ಮಲಗಿ ಕಳೆದರು,

ಇದು ಬಹಳ ಹಿಂದಿನ ಮಾತು; ನೆಹರೂ ಭಾರತದ ಪ್ರಧಾನಿಯಾಗುವ ಮೊದಲಿನ ಮಾತು; ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಪೂರ್ವದ ಮಾತು.

ಆದರೂ ಈ ಮಾತು ಭಾರತೀಯರ ಹೃದಯದಲ್ಲಿ ಅಚ್ಚೊತ್ತಿ ನಿಂತಿದೆ. ನೆಹರೂ ನಮ್ಮವರು ಎಂಬುದನ್ನು ಕಲ್ಪಿಸಿಕೊಟ್ಟಿದೆ.

ಅಂದಿನಿಂದ ಇಂದಿನ ವರೆಗೆ ನೆಹರೂ ಭಾರತದ ಕಷ್ಟಗಳನ್ನು ನಿವಾರಿಸಲು ಸತತ ಶ್ರಮಿಸಿದ್ದಾರೆ. ಶ್ರಮಿಸುತ್ತ, ಸಹಕರಿಸುವವರ ಕೊರತೆಯಿಂದ ನಿರಾಶರಾಗಿದ್ದಾರೆ. ನಿರಾಶರಾದರೂ ಮತ್ತೆ ಆಶೆಯ ನಿರೀಕ್ಷೆಯಲ್ಲಿ ಕಳೆದಿದ್ದಾರೆ, ಹಗಲಿರುಳು.

ಅವರು ಅಂದರು.

ನನ್ನ ಜೀವನದ ಮುಂಬರುವ ದಿನಗಳಲ್ಲಿ ಏನೇ ಉಳಿದಿರಲಿ, ಅಲ್ಲಿ, ನನ್ನ ಸರ್ವಶಕ್ತಿ ಮತ್ತು ಕ್ಷಮತೆಯನ್ನು ಉಪಯೋಗಿಸಿ ಭಾರತದ ಪುನಃ ನಿರ್ಮಾಣ ಕಾರ್ಯ ಮಾಡುತ್ತೇನೆ. ನಾನು ಸಾಯುವ ಕ್ಷಣದ ವರೆಗೂ ಈ ಕಾರ್ಯವನ್ನು ತೀವ್ರ ಗತಿಯಲ್ಲಿ ಸಾಧಿಸುವ ನನ್ನ ಕಾರ್ಯ ಶಕ್ತಿಯನ್ನು ಅಂತಿಮ ಘಟ್ಟದಲ್ಲಿ ಎಸೆದು ಬರಲು ನಾನು ಸಿದ್ಧನಿಲ್ಲ.

ಮತ್ತೆ ಅವರು ಅಂದರು:

ನೀವು ಇಲ್ಲವೆ ಯಾರಾದರೂ ನನ್ನ ಕುರಿತು ಏನೇ ಚಿಂತಿಸಿರಿ; ಆ ಕುರಿತು ನನಗೇನೂ ಚಿಂತೆಯಿಲ್ಲ. ನನಗೆ ಇಷ್ಟು ಸಾಕು; ನಾನು ನನ್ನನ್ನು—ನನ್ನ ಸರ್ವ ಶಕ್ತಿ ಮತ್ತು ಕ್ಷಮತೆಯನ್ನು ಭಾರತದ ಸೇವೆಯಲ್ಲಿ ಹುಗಿದು ಬಿಟ್ಟಿದ್ದೇನೆ.

o o o

ಎದೆ ಭಾರವಾಗುತ್ತಿದೆ, ಕೈಗಳು ನಡುಗುತ್ತಿವೆ. ಕಣ್ಣುಗಳು ಹನಿಗೂಡುತ್ತಿವೆ.

ನಮ್ಮ ನೆಹರು ನಮ್ಮಿಂದ ದೂರ ಸರಿದರು.

ನೆಹರು ನಮ್ಮಿಂದ ದೂರ ಸರಿದರು.

ಅವರ ನಂತರ ಯಾರು ಎಂಬ ಪ್ರಶ್ನೆ ಇನ್ನು ಅನಗತ್ಯ.

ಅವರ ನಂತರ ಏನು ಎಂಬುದು ಮುಖ್ಯ.

ಅವರ ಸ್ಮಾರಕದ ಕುರಿತು ಚರ್ಚೆ ಇದೆ; ಅನುಚಿತದ ಚರ್ಚೆ!

ಭವ್ಯ ಭಾರತ ರಚನೆಯ ಕುರಿತು ಗಾಂಧೀಜಿ ತುಳಿದ ಹಾದಿಯಲ್ಲಿ ಸಾಗಿದ ನೆಹರು ಅವರ ದಾರಿ, ನಮ್ಮ ದಾರಿ ಎಂದು ತಿಳಿಯ ಬೇಕಾಗಿದೆ.

ಆ ದಾರಿಯಲ್ಲಿ ನಮ್ಮ ನಾಯಕರು ಭಾರತೀಯರ ಹಿತಚಿಂತನೆಯನ್ನು ಚಿಂತಿಸಿ ಮುಂದುವರಿಯ ಬೇಕಾಗಿದೆ,

ಎಲ್ಲರನ್ನೂ ಆ ದಾರಿಯತ್ತ ಒಯ್ಯುವ ಕಾರ್ಯ ನಡೆಯಬೇಕಾಗಿದೆ

ಅಂದರೆ ಮಾತ್ರ ಗಾಂಧೀಜಿಯ ಉತ್ತರಾಧಿಕಾರಿ ಮುಂದೆ ಸಾಗಿದ ದಾರಿ ಉಳಿಯುತ್ತದೆ.

ಅದು ನೆಹರೂ ಸ್ಮಾರಕವೆನಿಸುತ್ತದೆ.

—ಸುದಾಸ.

— ನಗೆಗಡಲು —

ವರದಕ್ಷಿಣೆ!

ರಮೇಶ— ನಿನ್ನ ಕ್ಲಾಸಮೇಟ ಲಕ್ಷ್ಮಣನಿಗೆ ಮಾವನ ಮನೆಯಿಂದ ಕಾರು ಕೊಟ್ಟರಂತೆ!

ಉಮೇಶ— ಥು ಪೆಚ್ಚೆ! ನಿನಗಿನ್ನೂ ಗೊತ್ತೆ ಇಲ್ಲವೆ? ಆ ಕಾರು ನನಗೆ ಬರುವದಿತ್ತು— ಯಾಕೆ ಬಿಟ್ಟೆ ಅಂತ ಗೊತ್ತಾ.... ಕುಂಟು ಹುಡುಗಿ!

o o o

ಪ್ರೇಮದ ಪುತ್ರಿ

"ಪ್ರೇಮದ ಪುತ್ರಿ"

— ಇದೀಗ ಮಾರಾಟಕ್ಕೆ ಸಿದ್ಧವಾಗಿದೆ! ಏಜಂಟರಿಗೆ ಧಾರಾಳ ಕಮಿಶನ್!

o o o

ಪತ್ರಿಕೆ!

ಅತ— ನಿನ್ನ ಅಚ್ಚುಮೆಚ್ಚಿನ ಪತ್ರಿಕೆ ಯಾವದು?

ಈತ— ಲಗ್ನ ಪತ್ರಿಕೆ!

o o o

ಕಾಯಿದೆ!

ಪುಟ್ಟು— ಭಾರತಕ್ಕೆ ಯಾವುದರ ಕೊರತೆ? ಅದನ್ನು ಹೇಗೆ ತುಂಬಿಕೊಳ್ಳಬೇಕು?

ಚಿಟ್ಟು— ಭಾರತಕ್ಕೆ ಯೋಧರ ಕೊರತೆ. ಅದನ್ನು ತುಂಬಿಕೊಳ್ಳಲು "ಪ್ರತಿಯೊಬ್ಬ— ಹೆಂಗಸರೂ ಎರಡುವರುಷಕ್ಕೆ ಮೂರು ಗಂಡು ಮಕ್ಕಳನ್ನಾದರೂ ಹಡಲೇ ಬೇಕು" ಎಂದು —ಕಾಯಿದೆಯನ್ನೇ ಜಾರಿಯಲ್ಲಿ ತರಬೇಕು.

o o o

'ತೀವ್ರ ಬೇಕಾಗಿದೆ'

"ಇನ್ನು ನಾಲ್ಕು ತಿಂಗಳಲ್ಲಿ ಶೂಟಿಂಗಿಗೆ ಪ್ರಾರಂಭವಾಗುವ ನಮ್ಮ ಒಂದು ನೂತನ ಚಲಚಿತ್ರಕ್ಕೆ 2 ತಿಂಗಳ 3 ಶಿಶುಗಳು ಬೇಕಾಗಿವೆ' ಅಂತ ಪಾಲಕರು ತಮ್ಮ ಶಿಶುವಿನ ಫೋಟೊವನ್ನು ಇದೇ ತಿಂಗಳ ಇಪ್ಪತ್ತನೆ ತಾರೀಖಿನೊಳಗಾಗಿ ಕಳಿಸಿಕೊಡಬೇಕು-ನಂತರ ಬಂದವನ್ನು ಗಮನಿಸಲಾಗುವದಿಲ್ಲ.

—ಪಿ. ಎಸ್. ಹೆಗಡೆ—ಶಂಭು.

ಉಡ್ಪಿ ಡಿ. ಮು. ಕೋರ್ಟನಲ್ಲಿ.

R E P 337/63

ಅಲ್ಫೊನ್ಸೊ ಸಜರತ್ ಕೂಡಾ. ಅರ್ಜಿದಾರರು

ಮತ್ತು

ನರಸಿಂಹ ಪಡಿಯಾರ ಕೂಡಾ—ಎದ್ರಿಗ್ರಿ ಯವರೊಳಗೆ,

ಪ್ರಕಟಣೆ,

ಉಡ್ಪಿ ತಾಲ್ಲೂಕ ನೂಡತೊನ್ಸೆ ಗ್ರಾಮದಲ್ಲಿ ಇಕ್ಕೈರು ವಾಸ್ತವ್ಯವಾಗಿರುವ. ಎದ್ರಿ ನರಸಿಂಹ ಪಡಿಯಾರ್ರ ಮಕ್ಕಳು 3ನೇ ಎದ್ರಿ ಶಾಂತಾರಾಮ ಪಡಿಯಾರ 4ನೇ ಎದ್ರಿ ರಾಜಾರಾಮ ಪಡಿಯಾರ ಕೂಡಾ ಇವರಿಗೆ

ಅರ್ಜಿದಾರರು ಎದ್ರಿಯರ ಜಾಟ್ತು ಆಸ್ತಿಯನ್ನು ತಮ್ಮ ಡಿಕ್ರಿ ಹಣ ವಸೂಲಿಗೋಸ್ಕರ ಲಿಲಾವಿಗೆ ಅಪೇಕ್ಷಿಸಿ ಯಿಸ್ತಿ ಹಾದು ಜಾಪ್ರಿ ಪಡಿಸಿರುತ್ತಾರೆ 3_4ನೆ ಎದ್ರಿರ ನೋಟಿಸ ಬಗ್ಗೆ ತಾ.9-7-64 ನಿಶ್ಚಯಿಸಲ್ಪಟ್ಟಿದೆ, ದ್ರಿಯವರ ಅಕ್ಷೇಪವಿದ್ದೆ ಆ ದಿವಸ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡತಕ್ಕದ್ದು ಯಿಲ್ಲವಾದ್ರೆ ಅವರ ಒಪ್ಪಿಗೆ ಎಂತ ರಿಗಣಿಸಲ್ಪಡುವದು

ಕೋರ್ಟು ಮೊಹರು ಸಹಿ-ಆದ ಹುಕುಂ

B. Y. Holla.

Advocate for Petitioners.

dipi, 19-6-64



ದಿ| ಜವಾಹರಲಾಲ ನೆಹರೂರವರ ಅಂತ್ಯ ಸಂಸ್ಕಾರದವೇಳೆ ಲಕ್ಷಾಂತರ ಜನರು ಕಲೆತು ಅಂತಿಮ ಗೌರವವನ್ನು ಅರ್ಪಿಸುತ್ತಿರುವ ಮರ್ಮಸ್ಪರ್ಶಿ ಸನ್ನಿವೇಶ.

ಚೌ-ಎನ್-ಲಾಯ್ ಮೆಚ್ಚಿದ

ಶ್ರೀಲಂಕೆಯ ಲಂಕಿಣಿಯರು

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಭಾರತ—ಚೈನಾ ಒಪ್ಪಂದ—ಮೈತ್ರಿ ನಾಟಕದಲ್ಲಿ ಪ್ರಮುಖ ಪಾತ್ರಧಾರರೆಂದರೆ ಸಿಂಹಳದ ಪ್ರಧಾನ ಮಂತ್ರಿಣಿ ಸಿರಿಮಾವೋ ಮತ್ತು ಅರಬರ ನಾಡಿನ ಪ್ರಮುಖ ನಾಸ್ಸೇರ್. ಆದಕ್ಕಾಗಿಯೇ ಚೈನಾದಿಂದ ಹೊರಬಂದ ಚೌ ಶೀಘ್ರ ಹೋಗಿ ನಾಸ್ಸೇರರನ್ನು ಕಂಡು ಮಾತುಕತೆಯಾಡಿದರು. ಶ್ರೀಮತಿ ಸಿರಿಮಾವೋರನ್ನು ಕಾಣದೆ ಚೈನಾಕ್ಕೆ ಹಿಂತಿರುಗುವದಾದರೂ ಎಂತು? ಲಂಕೆಗೆ ಹೋಗಲು ಭಾರತ ಭೂಮಿಯ ಮೇಲಿನಿಂದ ಹಾಯಲು ಚೌ-ಎನ್-ಲ್ಯಾಗೆ ವಿಶೇಷ ಅನುಮತಿಯನ್ನು ಕೊಡಲಾಗಿತ್ತು. ಸಿಂಹಳಕ್ಕೆ ಬಂದೊಡನೆ ಭಾರತದೊಡನೆ ಒಪ್ಪಂದಕ್ಕೆ ತಾನು ಸದಾ ಸಿದ್ಧನೆಂದು ಚೌ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡರು. ತನಗೆ ಯುದ್ಧವೇ ಬೇಕಾಗಿಲ್ಲವೆಂದೂ ಶಾಂತಿಯೇ ಬೇಕೆಂದೂ ಅವರು ತಿಳಿಸಿದರು. ಅವರಿಗೆ ಯುದ್ಧ ಬೇಡವಾಗಿದ್ದು, ಶಾಂತಿ ಬೇಕಾಗಿದ್ದಲ್ಲಿ ಮತ್ತಾರಿಗೆ, ಭಾರತಕ್ಕೆ ಯುದ್ಧ ಬೇಕಾಗಿದೆಯೇನು? ಇಂತಹ ಪ್ರಶ್ನೆಗಳೇಳುವದು ಸ್ವಾಭಾವಿಕ. ಆದಕ್ಕೆ ಉತ್ತರವನ್ನು ಅವರವರಿಗೆ ಬೇಕಾದಂತೆ ಅವರವರು ಕೊಡಬಹುದು. ಆದರೂ ಅವರು ಶಾಂತಿಯ ಮಾತು ತೆಗೆಯಲು ಸಿರಿಮಾವೋರೇ ಕಾರಣವೆಂದಲ್ಲಿ ತಪ್ಪೇನಿಲ್ಲ. ರಾಮಾಯಣ ಕಾಲದಿಂದಲೂ ಲಂಕೆಯಲ್ಲಿ ಸ್ತ್ರೀಯರೇ ಪ್ರಬಲೆಯರಾಗಿರುವರು. ಅಂತೆಯೇ ಸಿರಿಮಾವೋರ ಪ್ರಭಾವ. ಸಿರಿಮಾವೋ ಅಷ್ಟು ಧೈರ್ಯದಿಂದ ಮುಂದೆ ಬರುತ್ತಿರುವಾಗ ಅಲ್ಲಿನ ಅಂಗನೆಯರ ಸ್ಥಿತಿ ಹೇಗಿದೆಂಬುದನ್ನು ನೋಡೋಣ.

ಇತ್ತೀಚಿಗಿನ ಕಲ ಶತಕಗಳಲ್ಲಿ ಸಿಲೋನಿನ ಸ್ತ್ರೀಯರು ಪ್ರಬಲ ಪ್ರಗತಿಯನ್ನು ಪಡೆದಿರುವರು. ಅವರು ಮನೆಯಿಂದ ರಾಜಕಾರಣಕ್ಕೂ ಅಲ್ಲಿಂದ ಅಂತರಾಷ್ಟ್ರೀಯ ಅಂಗಳಕ್ಕೂ ಧಾವಿಸಿರುವರು. ಅದರಲ್ಲಿ ಅವರ ಪ್ರಧಾನಿ ಸಿರಿಮಾವೋ ಹೆಸರು ಬಹು ಮುಖ್ಯವಾಗಿದೆ.

ಏಷ್ಯಾದ ಹೆಂಗಸರು ಹಿಂದುಳಿದವರೆನ್ನಲಾಗುತ್ತಿತ್ತು. ಅದಕ್ಕೆ ಅಪವಾದವೆಂಬಂತೆ ಸಿರಿಮಾವೋ ಎದ್ದು ನಿಂತಿದ್ದಾರೆ. ಇದೊಂದು ಮಹತ್ಸಾಧನೆಯೇ ಸರಿ.

ಇಂದು ಸಿಲೋನಿನ ಸ್ತ್ರೀಯರು ಅನೇಕ ಉದ್ಯೋಗ ರಂಗಗಳಲ್ಲಿ ಪಾತ್ರ ವಹಿಸುತ್ತಿದ್ದಾರೆ. ಕೊಲಂಬೋದ ರಸ್ತೆಗಳಲ್ಲಿ ಒಂದು ಬೆಳಿಗ್ಗೆ ನಿಂತರೆ ಸಾಕು! ಸ್ತ್ರೀ ಸಮೂಹವನ್ನಲ್ಲಿ ಕಾಣಬಹುದು. ಅನೇಕಾನೇಕ ಬಣ್ಣಗಳ ಬಟ್ಟೆಗಳನ್ನುಟ್ಟುಕೊಂಡು ತಮ್ಮ ತಮ್ಮ ಕಾರ್ಯರಂಗದತ್ತ ಅವರು ಕಾಲು ಹಾಕುತ್ತಿರುವರು. ಸಾಮಾನ್ಯವಾಗಿ ಅವರು ಉಪಾಧ್ಯಾಯಿನಿ, ದಾದಿ, ಶೀಘ್ರಲಿಪಿ ಬರಹಗಾರ್ತಿ, ಕಾರ್ಯದರ್ಶಿ ಹಾಗೂ ಸ್ವಾಗತ ಸ್ತ್ರೀ ಉದ್ಯೋಗಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವರು. ಈಗ ಅಲ್ಲಿ ಸ್ತ್ರೀ ವೈದ್ಯರನ್ನು, ನ್ಯಾಯವಾದಿನಿಗಳನ್ನು, ನಗರ ರಕ್ಷಕ ಅಧಿಕಾರಿಣಿಗಳನ್ನು ಮತ್ತು ರಾಜಕಾರಿಣಿಗಳನ್ನು ಅಲ್ಲದೆ ಕೃಷಿಕರನ್ನು ಕಾಣಬಹುದು.

ಕೇವಲ ಕೆಲ ವರ್ಷಗಳ ಹಿಂದೆ ಅದ್ಯಾವ ತಾಯಿಯು ತನ್ನ ಮಗಳನ್ನು ಮನೆಯ ಹೊರಗೆ ಒಬ್ಬಂಟಿಗಳನ್ನಾಗಿ ಹೋಗಲು ಬಿಡುತ್ತಿರಲಿಲ್ಲ.

ಇಂದು, ಹುಡುಗಿಯರು ತುಟಿಗೂ ಕೆನ್ನೆಗೂ ಬಣ್ಣ ಬಣ್ಣದ ಬಣ್ಣಗಳನ್ನು ಉಪಯೋಗಿಸುತ್ತಾರಲ್ಲದೆ, ಆಧುನಿಕ ಆಟಗಳನ್ನು ಆಡುತ್ತಾರೆ. ಅವರ ತಲೆಯ ಆಕಾರಗಳನ್ನು ನೋಡಬೇಕ! ಹೊಸ ಹೊಸ ರೀತಿಗಳಲ್ಲಿ ಹೂಗಿಡಗಳನ್ನು ತೋಟದಲ್ಲಿ ಬೆಳೆಸುವಂತೆ ತಲೆಯ ಮೇಲೆ ಕೂದಲುಗಳನ್ನು ಅವರು ಬೆಳೆಸಿಕೊಳ್ಳುತ್ತಿದ್ದಾರೆ. ಆಂಗ್ಲೇಯ ಅಂಗನೆಯರಂತೆ ಸಿಲೋನಿನ ಸ್ತ್ರೀಯರೂ ಬದಲಾಗಿದ್ದಾರೆಂದರೆ ಅತಿಶಯೋಕ್ತಿ ಏನಿಲ್ಲ. ಇಂದು ವಾಹನಗಳಲ್ಲಾಗಲೀ, ರಸ್ತೆಗಳಲ್ಲಾಗಲೀ ಸ್ತ್ರೀ ಒಬ್ಬಂಟಿಗಳಾಗಿ ಹೋಗುವದಿರಲಿ, ಆಕೆಯೇ ಸ್ವತಃ ಕಾರು ಬಿಡುತ್ತಾಳೆ, ಸ್ಕೂಟರೋಡಿಸುತ್ತಾಳೆ.

ಸಿಲೋನಿನ ಸ್ತ್ರೀಯರು ಈ ರೀತಿ ಇತ್ತೀಚಿಗಿನ ಸಮಯದಲ್ಲಿ ಮುಂದೆ ಬರಲು ಕಾರಣವೆಂದರೆ ಅಲ್ಲಿ ಅವರಿಗೆ ಲಭಿಸುವ ವಿದ್ಯಾಭ್ಯಾಸ. ಕೆಲ ವರ್ಷಗಳ ಹಿಂದೆ ಕೇವಲ ಶ್ರೀಮಂತರ ಮನೆಯ ಹುಡುಗಿಯರಿಗೆ ಮಾತ್ರ ವಿದ್ಯಾಭ್ಯಾಸಕ್ಕೆ ಸೌಕರ್ಯ ಇತ್ತು. ಇಂದು ಹಾಗಲ್ಲ. ಬಡ ಹಳ್ಳಿಗಾಡಿನ ಹುಡುಗಿಯೂ ಇಂದು ಶಾಲೆಗೆ ಹೋಗಬಹುದಾಗಿರುತ್ತದೆ.

೧೯೪೫ರಿಂದ ಅಲ್ಲಿ ವಿದ್ಯಾಭ್ಯಾಸ, ವಿಶ್ವವಿದ್ಯಾಲಯದ ತರಬೇತಿ ಶಿಕ್ಷಣ ಕೂಡಾ, ಧರ್ಮಾರ್ಥವಿದೆ. ಇದರ ಫಲಿತಾಂಶವೆಂದರೆ ಹುಡುಗರಿಗಿಂತ ಹೆಚ್ಚು ಹುಡುಗಿಯರಿಗೆ ಸ್ಥಳ ಸಿಗುತ್ತಿದೆ. ಕೇಂದ್ರ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಸಿಗಬೇಕಾದರೆ ಕಠಿಣ ಪ್ರಶ್ನೆಗಳಿಗೆ ಯುಕ್ತ ಉತ್ತರಗಳನ್ನು ಕೊಡಬೇಕು. ಅಲ್ಲಿ ಸ್ತ್ರೀ ಅಭ್ಯರ್ಥಿಗಳಿಗೇನೇ ಹೆಚ್ಚಿನ ಸ್ಥಾನ ಸಿಗುತ್ತದೆ.

ಸಿಲೋನಿ ಸ್ತ್ರೀ ಈ ರೀತಿ ಸಂಗವಾಗಿ ಮುಂದೆ ಬರಲು ಅವಳಿಗೆ ಹಿಂಬದಿ ನಾಗರೀಕತೆಯೂ ಇದೆ. ಹಿಂದಿನ ಕಾಲದಲ್ಲಿ ರಾಜಕೀಯ ರಂಗದಲ್ಲಿ ಸ್ತ್ರೀಯರು ಭಾಗವಹಿಸುತ್ತಿದ್ದರು. ಅಂದರ ಅಂಗನೆಯರೆಲ್ಲರೂ ರಾಜಕಾರಣಿಗಳಾಗಿದ್ದು, ಗಂಡಸರಿಗೆ ಅಡುಗೆ ಮಾಡಿ ಹಾಕದೆ, ಮಕ್ಕಳ ಲಾಲನೆ-ಪಾಲನೆಗೆ ಗಮನ ಕೊಡದೆ ಇದ್ದರೆಂದರ್ಥವಲ್ಲ. ಸಾಮಾನ್ಯ ಸ್ತ್ರೀಗೆ ಗೃಹವೇ ಗರಡಿಯಾಗಿತ್ತು.

ಆಂಗ್ಲೇಯರ ಸಹವಾಸ ಹಾಗೂ ಆಧುನಿಕ ವಿದ್ಯಾಭ್ಯಾಸದಿಂದಾಗಿ ಸಿಲೋನಿನ ಸ್ತ್ರೀಯರಿಂದು ಅನೇಕಾನೇಕ ಅಂಗಳದಲ್ಲಿ ಅಧಿಕಾಧಿಕ ಪಾತ್ರ ವಹಿಸುತ್ತಿರುವರು. ಸಂಪಾದನೆಯ ರಂಗದಲ್ಲಿ ಮಾತ್ರ ಅವರು ಕಾಣಿಸಿಕೊಳ್ಳುತ್ತಿರುವದಲ್ಲದೆ, ಈಗ ಅವರು ಅನೇಕ ಸ್ವಯಂ ಸೇವಿಕಾ ದಳಗಳನ್ನು ಮಾಡಿಕೊಂಡಿದ್ದು ದೇಶಾಭಿವೃದ್ಧಿ ಕಾರ್ಯಗಳಲ್ಲಿ ಮುತುವರ್ಜಿಯಿಂದ ಮುಂದಕ್ಕೆ ಬರುತ್ತಿದ್ದಾರೆ.

ಸಿಂಹಳದ ಇಂದಿನ ಪ್ರಧಾನಿ ಶ್ರೀಮತಿ ಸಿರಿಮಾವೋ ಭಂಡಾರನಾಯಿಕೆಯವರೂ ಉತ್ತಮ ಸಾಮಾಜಿಕ ಕಾರ್ಯಕರ್ತೆಯಾಗಿದ್ದರು. ಅವರು ಸುಮಾರು ಇಪ್ಪತ್ತು ವರ್ಷ ಕಾಲ ಸಿಲೋನ್ ಸ್ತ್ರೀ ಸಂಘದ ಸದಸ್ಯೆಯಾಗಿದ್ದರು. ಈ ಸಂಘಕ್ಕೆ ದೇಶದಲ್ಲಿ ಸಾಧಾರಣ ಎರಡು ಸಹಸ್ರ ಶಾಖೆಗಳಿವೆ

ಅಲ್ಲಿಂದ ಸಂಯುಕ್ತ ರಾಷ್ಟ್ರ ಸಂಘಕ್ಕೆ ಕಳುಹಿಸಲ್ಪಟ್ಟಿರುವ ಮೊತ್ತ ಮೊದಲ ಸ್ತ್ರೀ ಪ್ರತಿನಿಧಿ ಶ್ರೀಮತಿ ಎರ್ಝುನ್ ದರಣಿಯಗಲರವರೂ ಸಾಮಾಜಿಕ ಕಾರ್ಯಕರ್ತೆಯಾಗಿದ್ದರು; ಅಲ್ಲದೆ ಅವರು ಸ್ತ್ರೀ ನ್ಯಾಯವಾದಿನಿಗಳಲ್ಲಿ [ಬ್ಯಾರಿಸ್ಟರ್] ಮೊತ್ತ ಮೊದಲಿಗರು. ಅವರು ಆಕ್ಸ್‌ಫೋರ್ಡಿನ ವಿದ್ಯಾರ್ಥಿನಿಯಾಗಿದ್ದರು.

ಸಿಂಹಳದ ಸ್ತ್ರೀಯರಿಗೆ ಹಿಂದೆ ಮತದಾನದ ಹಕ್ಕಿರಲಿಲ್ಲ. ಆದಕ್ಕಾಗಿ ಅವರು ಮಹಿಳಾ ಮತದಾನ ಮಂಡಳಿಗಳನ್ನು ಸ್ಥಾಪಿಸಿದರು. ಆರಂಭದಲ್ಲಿ ಅದ್ಯಾರು ಅತ್ತ ಗಮನಕೊಟ್ಟಿರಲಿಲ್ಲ. ಮೂರೇ ಮೂರು ವರ್ಷಗಳೊಳಗೆ ಅದು ತನ್ನ ಗುರಿಯನ್ನು ತಲಪಿತು. ೧೯೩೧ರಿಂದ ಮಹಿಳೆಯರಿಗೆ ಮತದಾನದ ಹಕ್ಕು ಲಭಿಸಿರುತ್ತದೆ.

೧೯೪೮ರಲ್ಲಿ ಸಿಂಹಳಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಸ್ತ್ರೀಯರು ಪ್ರಗತಿ ಪಥದಲ್ಲಿ ಇನ್ನೊಂದು ವಿಜಯವನ್ನು ಪಡೆದರು. ಅಲ್ಲಿ ಪ್ರಜಾಪ್ರಭುತ್ವ ರೀತಿಯ ಆಡಳಿತ ಪ್ರಯೋಗಕ್ಕೆ ಬಂತು. ಆಗ ಮಹಿಳೆಯೂ ಮತ್ತಿತರರಂತೆ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಭಾಗವಹಿಸಲಾರಂಭಿಸಿತು.

ಕೇವಲ ಕೆಲವೇ ವರ್ಷಗಳಲ್ಲಿ ನ್ಯಾಯವಿಧಾಯಕ ಸಭೆಯ ಉಪ ಅಧ್ಯಕ್ಷರನ್ನಾಗಿ ನಾರಿಯನ್ನೇ ನೇಮಿಸಲಾಯಿತು. ೧೯೫೬ರಲ್ಲಿ ಓರ್ವ ಅಜ್ಜಿಯನ್ನು ಆರೋಗ್ಯ ಅಮಾತ್ಯೆಯನ್ನಾಗಿ ಆರಿಸಿದರು.

೧೯೬೦ರಲ್ಲಿ ಶ್ರೀಮತಿ ಸಿರಿಮಾವೋ ಭಂಡಾರನಾಯಿಕೆಯವರನ್ನು ಪ್ರಧಾನಿಯವರಾದಾಗ ಸಾಧನಾಪಥದಲ್ಲಿ ಸ್ತ್ರೀ ಇನ್ನೊಂದು ಮೈಲು ಮುಂದಕ್ಕೆ ಬಂದಳು. ಪ್ರಪಂಚದಲ್ಲಿ ಈ ರೀತಿಯಾಗಿರುವದು ಪ್ರಥಮ ಬಾರಿ ಇದೆ ಇನ್ನೆಲ್ಲೂ ಮಹಿಳೆ ಪ್ರಧಾನಿಯಾಗಿರುವದಿಲ್ಲ.

ಸಿಲೋನಿ ಸ್ತ್ರೀಯರ ನೈಸರ್ಗಿಕ ಸುಂದರತೆಯೂ ಜಗದ್ವಿಖ್ಯಾತವಿದೆ. ಅವರನ್ನು ಅಂಗಡಿಗಳಲ್ಲಿಟ್ಟುಕೊಳ್ಳುತ್ತಾರೆ. ಕಾ

(೯ನೇ ಪುಟ ನೋಡಿರಿ)

Notice.

In the Court of the District Munsif of Coondapoor.

O. S. No. 87/1964.

Between:

K. Manjayya Karantha...Plaintiff

and

Hanumantha Sheregara, son of Malkayya Sheregara,—Forest Guard, Shikaipur, Mysore States. ... Defendant.

To

The Defendant

Please take notice that the above suit filed by the plaintiff against you for recovering the arrears of mulgeni rent due to him for the years Subakrathu and Shobhakrathu — stands posted to 29—6—1964 for your appearance. If you fail to appear before the above court on 29—6—1964 at 11 A. M. either in person or through a duly instructed pleader to answer the claim, you will be declared Ex Parte and the suit will be decided in your absence.

(By Order of the Court)

(Sd) K. Ramappayya,
B. A., B. L.,
Advocate for Plaintiff.

Coondapoor, 11-6-1964.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್..

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಜಗತ್ತಿನ ಗಾಳಿಗೋಪುರ

ಭಾರತದಲ್ಲಿ ಕುಸಿಯುತ್ತಿದೆ!

ಪ್ರಧಾನಿ ನೆಹರೂರವರ ನಿಧನವು ಭಾರತವೆದುರಿಸಬೇಕಾಗಿ ಬಂದ ಒಂದು ಮಹಾ ದುರ್ಘಟನೆ—ವಿಪತ್ತು. ಈ ಸಂದರ್ಭದಲ್ಲಿ ನಮ್ಮ ಜನತೆ ಮಾತ್ರವಲ್ಲ, ಜಗತ್ತಿನ ನಾಗರಿಕರು ಕೂಡ, ವ್ಯಕ್ತಪಡಿಸಿದ ಪ್ರತಿಕ್ರಿಯೆ ಭಾರತದಲ್ಲಿ ಗೊಂದಲವೇಳುವುದು ಅಥವಾ ದೇಶ ಕುಸಿದು ಬೀಳುವುದು ಎಂದಾಗಿರಲಿಲ್ಲ. "ನೆಹರೂರವರ ನಂತರ ಯಾರು" ಎಂಬ ಮಹಾಪ್ರಶ್ನೆ ಮತ್ತೊಮ್ಮೆ ಅವರ ಮನಸ್ಸಿನಿಂದ ಹೊರಬಿತ್ತು. ಅದು ಅತೀವ ಹಳೆಯದು. ಅದಕ್ಕೆ ಬೆಲೆ ಬಂದಿರಲಿಲ್ಲವಾದುದರಿಂದ ಹಳೆಯ ಕಂತೆಯಡಿಯಲ್ಲೇ ಸೇರಿ ಹೋಗಿತ್ತು. ಆದರೆ, ಪಂಡಿತ ನೆಹರೂರವರ ನಿಧನದಿಂದ ಅದಕ್ಕೆ ಬೆಲೆ ಬಂದೇ ತೀರಬೇಕು. ನೆಹರೂ ನಿಧನದಿಂದ ಭಾರತದಲ್ಲಿ ಉತ್ತರಾಧಿಕಾರದ ಬಗ್ಗೆ ಸಮರ ನಡೆದು ಇಲ್ಲಿ ಪ್ರಳಯವಾಗುವುದೆಂದು ಜಗತ್ತು ಊಹಿಸಿತು. ಪ್ರಧಾನಿ ಗದ್ದುಗೆಗೆ ತೀವ್ರ ಪೈಪೋಟಿ ಎದ್ದು ಕಾಂಗ್ರೆಸ್ ಪಕ್ಷ ಛಿನ್ನವಿಛಿನ್ನವಾಗುವುದೆಂದು ಭಾರತೀಯ ಪತ್ರಿಕೆಗಳ ಊಹಾಪೋಹವಿತ್ತು. ಆದರೆ, ಲೋಕ ನಾಯಕ ನೆಹರು ನಮ್ಮ ಮುಂದೆಯೇ ಅದೃಶ್ಯರಾದ ವೇಳೆಯೂ ಅನಪೇಕ್ಷಿತ ಘಟನೆಯೂ ನಡೆಯಲಿಲ್ಲ. ಇದು ನಮಗೆಲ್ಲರಿಗೂ ಅಭಿಮಾನದ ಸಂಗತಿ.

ಉತ್ತರಾಧಿಕಾರದ ಬಗ್ಗೆ ಹೋರಾಟ ನಡೆಯಲಿಲ್ಲ. ಎಲ್ಲ ದೃಷ್ಟಿಯಿಂದಲೂ ಅತ್ಯರ್ಹರೂ ಯೋಗ್ಯರೂ ಆದವರಲ್ಲಿ ಒಬ್ಬರಾದ ಶ್ರೀ ಲಾಲಬಹದೂರ ಶಾಸ್ತ್ರಿಯವರನ್ನು ಕಾಂಗ್ರೆಸ್ಸು ಜವಾಹರಲಾಲರ ಉತ್ತರಾಧಿಕಾರಿಯನ್ನಾಗಿ ಆರಿಸಿತು. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರ ಉತ್ತಮ ಮಾರ್ಗದರ್ಶನದಲ್ಲಿ ಈ ಆಯ್ಕೆಯು ಶಿಸ್ತಿನಿಂದ, ಉನ್ನತ ನಡವಳಿಕೆಯಿಂದ ಅವಿರೋಧವಾಗಿ ನಡೆಯಿತು. ಇದು ಕಾಂಗ್ರೆಸಿಗೆ ಮಾತ್ರ ಹೆಮ್ಮೆಯ ವಿಷಯವಲ್ಲ; ಸಮಸ್ತ ಭಾರತೀಯರಿಗೆ ಗೌರವವನ್ನು ತಂದು ಕೊಡುವ ವಿಚಾರ.

ಭಾರತೀಯರಿಗಿಂತಲೂ ಈ ಘಟನೆಯನ್ನು ವಿದೇಶಿಯರು ಅನಿಮಿಷರಾಗಿ ನೋಡುತ್ತಿದ್ದರು, ತಮ್ಮ ಊಹೆ ಪೊಳ್ಳಾದುದನ್ನು ಕಂಡ ಅವರು ಇನ್ನೂ ಭಾರತವನ್ನು ಸಂದೇಹ ದೃಷ್ಟಿಯಿಂದಲೇ ನೋಡುತ್ತಿದ್ದಾರೆ ಶ್ರೇಷ್ಠ ನಾಯಕನ ಮೃತ್ಯುವಿನ ವೇಳೆಯಲ್ಲಿ ಉಂಟಾದ ತಾತ್ಕಾಲಿಕ ಸಮಾಧಾನ ಸನ್ನಿವೇಶವಿದೆಯೆಂದೂ ನಿಕಟ ಭವಿಷ್ಯದಲ್ಲಿಯೇ ಈ ಐಕ್ಯತೆಯ ವಿರುದ್ಧ ಕತ್ತಿಯು ಮಸೆಯಲ್ಪಡುವುದೆಂದೂ ಆಗ ತಾವು ನಿರೀಕ್ಷಿಸಿದ್ದ 'ಪ್ರಳಯ'ವು ನಡೆಯುವುದೆಂದೂ ಅವರ ಕಾಲ್ಪನಿಕ ಚಿತ್ರ. ಪಾಕಿಸ್ತಾನದ ಪತ್ರಿಕೆಯೊಂದು ಈ ಕಾಲ್ಪನಿಕ ಪ್ರಳಯವನ್ನೇ ಅಧಿಕರಿಸಿ ಶಾಸ್ತ್ರಿಯವರ ಸುತ್ತ ಮುತ್ತ ಮುರಾರ್ಜಿ ಜಗಜ್ಜೀವನರಾಮ್ ಮತ್ತು ಕೃಷ್ಣ ಮೆನನ್ನರು ಕತ್ತಿ ಹಿರಿದ ವ್ಯಂಗ್ಯ ಚಿತ್ರವನ್ನು ಪ್ರಕಟಿಸಿದೆ, ಆದರೆ, ಈ ಕಲ್ಪನೆಯೂ ಹಳೆಯವುಗಳ ಸಾಲಿನಲ್ಲಿ ಸೇರಿ ಹೋಗುವುದೆಂಬುದರಲ್ಲಿ ಭಾರತೀಯರು ವಿಶ್ವಾಸವಿಡುತ್ತಾರೆ.

ಅಧಿಕಾರಕ್ಕಾಗಿ ನಾಯಕರು ಹೋರಾಡುವುದು ದೇಶದಲ್ಲಿ ಅರಾಜಕತೆಯ ಬೀಜ ಬಿತ್ತಿದಂತೆ. ಅವ್ಯವಸ್ಥೆ—ಅರಕ್ಷೆಗಳಿಗೆ ಆಹ್ವಾನವಿತ್ತಂತೆ. ಅಶಾಂತಿಗೆ ಕರೆಯಿತ್ತಂತೆ. ರಕ್ತಗತವಾದ ಶಾಂತ ಗುಣಪ್ರಿಯರಾದ ಭಾರತೀಯರು ತಮ್ಮ ಕಾಲುಗಳ ಮೇಲೆ ತಾವೇ ಕೊಡಲಿ ಹಾಕಿಕೊಳ್ಳಲು ಎಂದಿಗೂ ಸಿದ್ಧರಿಲ್ಲವೆಂಬುದನ್ನು ನಾವು ಜಗತ್ತಿಗೆ ತೋರಿಸಿಕೊಡಬೇಕಾದ ಕಾಲವಿಂದು ಬಂದಿದೆ ಈ ಸತ್ವ ಪರೀಕ್ಷೆಯಲ್ಲಿ ಭಾರತವು ಪುಕ್ಕಳಿಯಾಗಿ ಉಳಿದು ಬಂದರೆ, ಆ ಮೇಲೆ ಕುಚೋದ್ಯ ಪ್ರಿಯರು ಮೌನವಾಗುತ್ತಾರೆ.

ವಿದೇಶೀಯರು ಭಾರತದ ರಾಜಕೀಯ ಸನ್ನಿವೇಶವು ತಪ್ಪು ದಾರಿ ಹಿಡಿಯುವುದನ್ನು ನೋಡಲು ಕಾಯುತ್ತಿದ್ದಾರೆ. ನಮ್ಮ ದೇಶದ ಪತ್ರಿಕೆಗಳಲ್ಲಿ ಬರುವ ಊಹಾಪೋಹಗಳ ಮೇಲೆಯೇ ತಮ್ಮ ಕಲ್ಪನೆಯ ಭವನವನ್ನು ಕಟ್ಟುವ ಗಾಳಿಗೋಪುರದ ಶಿಲ್ಪಿಗಳವರು ಎಂದರೆ ತಪ್ಪಲ್ಲ ಭಾರತದಲ್ಲಿರುವ ಪತ್ರಿಕಾ ಸ್ವಾತಂತ್ರ್ಯದಿಂದಲೇ ಇಲ್ಲಿನ ಪತ್ರಿಕೆಗಳು ಸರಕಾರದ ನೀತಿ ನಡಾವಳಿಗಳನ್ನು ಖಂಡಿಸುತ್ತವೆ; ಸರಕಾರದ ಅಸಮರ್ಥತೆಯನ್ನು ಟೀಕಿಸುತ್ತವೆ; ಹುಳುಕುಗಳನ್ನು ಎತ್ತಿ ತೋರಿಸುತ್ತವೆ ಕೆಲವೊಮ್ಮೆ ಈ ಅಸ್ತ್ರಗಳು ಅತಿ ಕಟುವಾಗುತ್ತವೆ; ಅತಿಶಯೋಕ್ತಿಯಿಂದ ಕೂಡಿರುವುದೂ ಉಂಟು. ಆದರೆ, ದೇಶದ ಗಂಡಾಂತರದ ವೇಳೆ ಭಾರತೀಯರು ಸದಾ ಏಕಗುರಿಯವರು ಎಂಬುದನ್ನು ಎಲ್ಲರೂ ನೆನಪಿಡಬೇಕು.

ಗೋವೆಯಮೇಲೆ ಸೈನಿಕ ಕಾರ್ಯಾಚರಣೆ ಮಾಡಿದಾಗ, ಚೀನೀಯ ಕಮ್ಯೂನಿಸ್ಟರು ದೇಶದ ಪವಿತ್ರ ಭೂಮಿಯನ್ನು ಆಕ್ರಮಣ ಮಾಡಿದಾಗ, ಪಾಶ್ಚಾತ್ಯ ರಾಷ್ಟ್ರಗಳು ಕಾಶ್ಮೀರದ ಬಗ್ಗೆ ಪಕ್ಷಪಾತದ ನೀತಿಯನ್ನು ಅನುಸರಿಸಿದಾಗ—ಹೀಗೆ ಇನ್ನೂ ಒಂದಲ್ಲ ಹಲವು ಸಂದರ್ಭಗಳಲ್ಲಿ ಸಮಸ್ತ ಭಾರತೀಯರು ಒಂದಾಗಿ ರಾಷ್ಟ್ರ ಗೌರವ ರಕ್ಷಣೆಯಲ್ಲಿ ಒಂದಾಗುವರೆಂದು ಲೋಕಕ್ಕೆ ತೋರಿಸಿಕೊಟ್ಟಿದ್ದರು ಹಾಗೆಯೇ ಜವಾಹರಲಾಲರ ನಿಧನದ ವಿಘಳಿಗೆಯಲ್ಲಿಯೂ ಧೈರ್ಯ-ಆಶೆಗಳಿಂದ ಕೂಡಿ ಭಾರತ ದೇಶ ನೂತನ ಪ್ರಧಾನಿ ಶಾಸ್ತ್ರಿಗಳನ್ನು ಹೃತ್ಪೂರ್ವಕ ಸ್ವಾಗತಿಸಿದೆ. ಅವರು ಗಂಡಾಂತರಗಳನ್ನು ಎದುರಿಸ ಬೇಕಾದೀತೆಂಬ ಅಂಜಿಕೆ ಭಾರತೀಯರಲ್ಲಿ ಇಲ್ಲವೇ ಇಲ್ಲ.

ಸ್ವದೇಶದ ಕೆಲವು ಪತ್ರಿಕೆಗಳೂ ವಿದೇಶೀಯರೂ "ಗಂಡಾಂತರ ಕಾಲ"ವನ್ನು ನಿರೀಕ್ಷಿಸುವುದಕ್ಕೆ ಮುಖ್ಯ ಕಾರಣವಿದೆಯೆಂಬುದು ಗಮನೀಯ. ಮುರಾರ್ಜಿ ದೇಸಾಯಿ ಮತ್ತು ಜಗಜ್ಜೀವನರಾಮರನ್ನೂ ಹಳೆಯ ಕೃಷ್ಣ ಮೆನನ್ನರನ್ನೂ ಸಚಿವ ಸಂಪುಟದಿಂದ ಹೊರಗಿಟ್ಟುದೇ ಈ "ಕಾಲ್ಪನಿಕ ದುರಂತ"ಕ್ಕೆ ಹೇತು.

ಅತ್ಯುತ್ತಮ ಸೇವೆಗಾಗಿ ಸಮಾವೇಶ............

ದಿ ಒರಿಯಂಟಲ್ ಯೂನಿಯನ್ ಬ್ಯಾಂಕ್

XX

ಸಿಂಡಿಕೇಟ್ ಬ್ಯಾಂಕ್

ದಿ ಒರಿಯಂಟಲ್ ಯೂನಿಯನ್ ಬ್ಯಾಂಕ್ ಲಿಮಿಟೆಡ್ ಕೆಡುತುರುತಿ, ತಾ. 15—4—'64ರಂದು ದಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್, ಮಣಿಪಾಲ, ಇದರೊಂದಿಗೆ ಸಮಾವೇಶಗೊಂಡಿರುವುದು. ಸಿಂಡಿಕೇಟ್ ಬ್ಯಾಂಕಿನೊಡನೆ ಈ ವರೆಗೆ ಸೇರ್ಪಡೆಗೊಂಡ ಬ್ಯಾಂಕುಗಳಲ್ಲಿ ಇದು ಹದಿನಾರನೆಯದು. ನಮ್ಮ ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಸೇವೆಯನ್ನು ದಿ ಒರಿಯಂಟಲ್ ಯೂನಿಯನ್ ಬ್ಯಾಂಕಿನ ಗಿರಾಕಿಗಳೂ ಪಡೆಯುವರೆಂಬ ಸದಾಶಯ ನಮಗಿದೆ.

ಡಾ॥ ಟಿ. ಎಂ. ಎ. ಪೈ	ಟಿ. ಎ. ಪೈ
ಚೇರ್‌ಮ್ಯಾನ್	ಮ್ಯಾನೇಜಿಂಗ್ ಡೈರೆಕ್ಟರ್.
ಒಟ್ಟುಶಾಖೆಗಳು	ಚಲಾವಣಾನಿಧಿ
192	57 ಕೋಟಿಗೂ ಮಿಕ್ಕಿದೆ:

— ಸಮಾನ ಸೇವೆ..............ಸರಿಯಾದ ಭದ್ರತೆ —

ಆದರೆ, ಭಾರತದಲ್ಲಿ ಈ ಹೊಸ ಸಚಿವ ಸಂಪುಟವು ಬಾಳಬಲ್ಲುದು. ಲಾಲಬಹದೂರ ಶಾಸ್ತ್ರಿಯವರು ಪ್ರಧಾನಿಯಾಗಿರುವುದು ಮತ್ತು ಕಾಮರಾಜರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವುದು ಇದಕ್ಕೆ ಪ್ರೇರಕ ಶಕ್ತಿಯಾಗಿರುವುದು. ಇವರಿಬ್ಬರೂ ವೈಯಕ್ತಿಕವಾಗಿ ಸಂಘಟನಾಪ್ರಿಯರು, ಒಮ್ಮತವಾದಿಗಳು; ದೇಶದೊಳಗೂ ಪಕ್ಷದಲ್ಲಿಯೂ ಇವರ ಬಗ್ಗೆ ಉನ್ನತ ಭಾವನೆಯಿದೆ; ಅಭಿಮಾನವಿದೆ. ಶಾಸ್ತ್ರಿ ಮತ್ತು ಕಾಮರಾಜರು ಪರಸ್ಪರರಲ್ಲಿ ವಿಶ್ವಾಸವಿಟ್ಟಿದ್ದಾರೆ. ಕೈ—ಕೈ ಹಿಡಿದುಕೊಂಡು ತೊಡಗಿದ ದಾರಿಯಲ್ಲಿ ಅಡ ಹಾಯುವ ವಿಘ್ನವಿಧ್ವಂಸಗಳನ್ನು ಕೆಚ್ಚೆದೆಯಿಂದ ಎದುರಿಸಿ ಮುಂದುವರಿಯುವ ಗಂಡೆದೆ ಇವರಿಬ್ಬರದು. ವಿಘಾತುಕ ಶಕ್ತಿಗಳನ್ನು ಅಶಕ್ತಗೊಳಿಸುವ ಚಾತುರ್ಯ ಇಬ್ಬರಲ್ಲಿಯೂ ಇದ್ದೇ ಇದೆ. ಅದು ಇಷ್ಟರಲ್ಲೇ ಹೊರಪಟ್ಟಿದೆ.

ತನ್ನ ೧೭ ವರ್ಷಗಳ ನಿರಂತರ ಆಡಳಿತೆಯಲ್ಲಿ ದಿವಂಗತ ಪ್ರಧಾನಿ ನೆಹರೂರವರು ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಭದ್ರವಾದ ತಳಹದಿಯನ್ನು ಹಾಕಿಕೊಟ್ಟಿದಾರೆ. ಕೆಲವೊಮ್ಮೆ ತಪ್ಪು ಅಸಫಲತೆಯ ಸಂದರ್ಭದಲ್ಲೂ ಅವರು ಭಾರತವು ಪ್ರಜಾಸತ್ತೆಯ ನೇರ ಆದರೆ ಅಗಲಕಿರಿದಾದ ದಾರಿಯಿಂದ ತಪ್ಪಿ ಹೋಗಲು ನಿರಾಕರಿಸಿದ್ದರು. ಪ್ರಜಾಪ್ರಭುತ್ವ ವಿಧಾನದಲ್ಲಿಯೇ ಭಾರತ ಬೆಳೆದು ಬರಬೇಕೆಂದು ಅವರ ಅಚಲ ನಿರ್ಧಾರವಿತ್ತು; ಹೃದಯದ ಆಶಯವಿತ್ತು.

"ನೆಹರು ನಂತರ ಯಾರು?" ಎಂಬ ಮುಖ್ಯ ಪ್ರಶ್ನೆಗೆ ನೆಹರು ಕೊಡುತ್ತಿದ್ದ ಉತ್ತರವಿದು:"ಜನತೆ ನನ್ನ ಉತ್ತರಾಧಿಕಾರಿಯನ್ನು ಸರಿಯಾಗಿಯೇ ಆರಿಸಿಕೊಳ್ಳುವುದು" ಈ ಜವಾಬು ನೀಡುತ್ತಿರುವಾಗ, ತಾನು ಯಾವುದನ್ನು ಕುರಿತು ಅನ್ನುತ್ತಿದ್ದೇನೆ ಎಂಬುದರ ಅರಿವು ಅವರಿಗಿತ್ತು. ಪ್ರಜಾಪ್ರಭುತ್ವವು ಭಾರತದಲ್ಲಿ ಯಶಸ್ವಿಯಾಗಿಯೇ ತೀರುವುದೆಂದವರು ಬಲವಾಗಿ ನಂಬಿದ್ದರು.

ನೆಹರು ತನ್ನ ಜನತೆಯಲ್ಲಿಟ್ಟಿದ್ದ ವಿಶ್ವಾಸವಿಂದು ಫಲಕಾರಿಯಾಗಿದೆ. ಭಾರತೀಯರು ಉನ್ನತ ನಾಗರಿಕ ವರ್ತನೆಯಿಂದ ಪ್ರಜಾಪ್ರಭುತ್ವದ ವಿಧಾನಗಳಿಂದ ನೆಹರೂ ಉತ್ತರಾಧಿಕಾರಿಯನ್ನು ಪಕ್ಷದಿಂದ ಆಯ್ದು ಕೊಂಡರು. ಅವರ ನಂಬುಗೆ ಹುಸಿಯಲ್ಲವೆಂದು ಎಲ್ಲರೂ ನಂಬುವಂತಾಯಿತು. ಲಾಲಬಹದೂರ ಶಾಸ್ತ್ರಿ ನೆಹರೂರವರ ಅನುಯಾಯಿ; ಅವರ ನೀತಿಯ ಅತಿ ವಿಶ್ವಾಸಿ. ಅಂತಹವನನ್ನೇ ನೆಹರೂ ನಂತರದ ಪ್ರಧಾನಿಯನ್ನಾಗಿ ಆಯ್ದುಕೊಂಡಿದೆ ಭಾರತ.

ಈ ಬಗೆಯ ಆದರ್ಶ ಆಯ್ಕೆಗೆ ಭಾರತದಲ್ಲಿ ಜಾಗ್ರತವಾದ ಪ್ರಜಾಸತ್ತೆಯಲ್ಲಿನ ವಿಶ್ವಾಸವೇ ಕಾರಣ. ಈ ವಿಶ್ವಾಸವನ್ನು ನೆಹರು ಜಾಗ್ರತಗೊಳಿಸಿದರು. ಇದಕ್ಕಾಗಿ ಆ ರಾಷ್ಟ್ರನಾಯಕನಿಗೆ ಭಾರತೀಯರು ಅದೆಷ್ಟು ಕೃತಜ್ಞರಾದರೂ ಸಾಲದು.

ವಿದೇಶೀಯರ ಗಾಳಿಗೋಪುರದ ಪಂಚಾಂಗ ಈಗಾಗಲೇ ಬಿರುಕು ಬಿಟ್ಟಿದೆ; ಇನ್ನೇನು, ಇಡಿಯ ಗೋಪುರವೇ ಉರುಳಲಿದೆ, ಇದು ಭಾರತಕ್ಕೊಂದು ಅಭಿಮಾನ ಹೇಗಾದರೆ ಮಾತ್ರ ಇಲ್ಲಿ ಪ್ರಜಾಸತ್ತೆಗೆ ಪುನಃಸ್ಥಾನ; ಅದು ದೂರತಾಗಲೇ ಪ್ರೀತಿಯ ನೆಹರೂಗೆ ಸಮಾಧಾನ.

ನವಯುಗ

ವರುಷ	ಉಡುಪಿ	ವಾರ
೪೩	೧೮-೬-೧೯೬೪	೪೩

ಕೈರಾನರ ದುರಂತ ನಾಟಕ

ಎರಡು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಪಂಜಾಬದ ಮುಖ್ಯ ಮಂತ್ರಿ ಪ್ರತಾಪ ಸಿಂಹ ಕೈರಾನರ ಪ್ರಕರಣವಿದೀಗ ಮುಗಿತಾಯದ ಹಂತದಲ್ಲಿದೆ. ತನ್ನ ಮುಖ್ಯ ಮಂತ್ರಿತ್ವದ ಪ್ರಭಾವದಿಂದ ದುರ್ವ್ಯವಹಾರ ನಡೆಸಿದರೆಂಬ ಆಪಾದನೆಯು ಅವರ ಮೇಲೆ ಬಿದ್ದಿತ್ತು. ಆದರೆ, ಕೈರಾನರು ಮಾತ್ರ ಇದನ್ನು ಒಪ್ಪಲಿಲ್ಲ; ಈ ಸಂಬಂಧದ ವರದಿಗಳನ್ನು ತಿರಸ್ಕರಿಸಿದರು; ವಿರೋಧಿ ಹಾಗೂ ತನ್ನ ಪಕ್ಷದ ಸದಸ್ಯರ ಟೀಕೆ-ಟಿಪ್ಪಣಿಗಳನ್ನೂ ಅವರು ಕೇಳಲಿಲ್ಲ. ತಾನು ನಿರಪರಾಧಿಯೆಂಬುದನ್ನೇ ಅವರು ಸಾರಿದರು. ೮೦ ದಿನ ಪ್ರಧಾನಿ ಜವಾಹರಲಾಲ್ ನೆಹರುರವರು ಕೈರಾನರು ಸಮರ್ಥ ಆಡಳಿತೆದಾರನೆಂದೂ ಅವರನ್ನು ಹೊಗಳಿದ್ದರು. ಈ ಹೊಗಳಿಗೆಯನ್ನೇ ತನ್ನ ರಕ್ಷಣೆಯ ಭದ್ರಕವಚವೆಂದು ತಿಳಿದ ಅವರಾದರೂ ನಲಿದುಕೊಳ್ಳುತಿದ್ದರು. ಆದರೆ, ಪ್ರಜಾ ಪ್ರಭುತ್ವದಲ್ಲಿ ಜನಾಭಿಪ್ರಾಯಕ್ಕೆ ಬೆಲೆ ಬರಲೇ ಬೇಕಿತ್ತು. ಅಂದು ಈ ಬೆಲೆ ಬರಲಿಲ್ಲ, ಇಂದು ಬಂದಿದೆ. ಜನತೆಯ ಒತ್ತಾಯದಿಂದೆಂಬಂತೆ ಕೇಂದ್ರ ಸರಕಾರವು ದಾಸ ಆಯೋಗವನ್ನು ನೇಮಿಸಿತು. ದಾಸಗುಪ್ತರು, ಕೈರಾನರ ಆಪಾದನೆಗಳನ್ನು ಕೂಲಂಕಷವಾಗಿ ವಿಚಾರಿಸಿ, ತನ್ನ ವರದಿಯನ್ನು ಪ್ರಚಲಿತ ಪ್ರಧಾನಿ ಲಾಲ ಬಹದೂರಿಗೆ ಒಪ್ಪಿಸಿದರು. ವರದಿಯ ಬಗ್ಗೆ ಪತ್ರಿಕೆಗಳಲ್ಲಿ ವ್ಯಕ್ತವಾದ ಸುದ್ದಿಗಳನ್ನು ಅನುಲಕ್ಷಿಸಿ ಕೈರಾನರು ತನ್ನ ಸಚಿವ ಸಂಪುಟದ ರಾಜಿನಾಮೆಯಿತ್ತಿದ್ದಾರೆ.

ಕೇಂದ್ರದ ಹಿಂದಿನ ರಕ್ಷಣಾ ಸಚಿವರಾಗಿದ್ದ ಕೃಷ್ಣ ಮೆನನ್ನರ ಮೇಲೆಯೂ ಜನತೆಗೆ ವಿಶ್ವಾಸವಿದ್ದಿರಲಿಲ್ಲ. ಮೊದಮೊದಲು ಇದನ್ನು ಗಣನೆಗೆ ತಾರದೆ ಹೋದರೂ ಚೀನಿಯ ಆಕ್ರಮಣದ ವೇಳೆ ಲೋಕಮತದ ಮುಂದೆ ಪ್ರಧಾನಿ ನೆಹರೂ ತಲೆ ತಗ್ಗಿಸಿಯೇ ತಗ್ಗಿಸಿದರು. ಭಾರತದಲ್ಲಿ ಪ್ರಜಾಪ್ರಭುತ್ವವೇ ಇದೆಯೆಂಬುದು ಇದರಿಂದ ಸ್ಪಷ್ಟವಾಗಿತ್ತು. ಇದೀಗ ಕೈರಾನರ ರಾಜಿನಾಮೆಯೂ ಇದನ್ನೇ ಮತ್ತೊಮ್ಮೆ ಸ್ಪಷ್ಟೀಕರಿಸುತ್ತದೆ. ಅಧಿಕಾರದಲ್ಲಿರುವವರು ನಿಷ್ಕಲಂಕ ಚರಿತ್ರರಿರಬೇಕು; ಸಂದೇಹಾತೀತರಿರಬೇಕು—ಕೇವಲ ಸಾಮರ್ಥ್ಯ ಮಾತ್ರವಿದ್ದರೆ ಸಾಲದು ಎಂಬುದನ್ನು ಭಾರತದ ಈ ಘಟನೆಗಳು ಉಲ್ಲೇಖಿಸುತ್ತವೆ. ಪ್ರತಾಪ ಸಿಂಹರು ಪಂಜಾಬದಂತಹ ಗಡಿನಾಡಿನಲ್ಲಿ ಅನಭಿಷಿಕ್ತ ದೊರೆಯಂತಿದ್ದರು ನಿಜ. ಅವರು ಯಾವುದನ್ನೂ ಯಾರನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಪತ್ರಿಕಾ ವರದಿಗಳನ್ನು, ಟೀಕೆಗಳನ್ನು ಕ್ಷುಲ್ಲಕ ದೃಷ್ಟಿಯಿಂದ ನೋಡುತಿದ್ದ ಅವರು ಇದೀಗ ಅವೇ ವರದಿಯನ್ನು ಆಧರಿಸಿ ಆತ್ಮರಕ್ಷಣೆಗಾಗಿ ರಾಜಿನಾಮೆ ನೀಡಿದ್ದಾರೆ. ದಾಸಗುಪ್ತ ವರದಿಯಲ್ಲಿ ಏನು ಹೇಳಿದೆಯೆಂಬುದನ್ನು ಅವರೂ ಸಂಪೂರ್ಣ ತಿಳಿದಿರಲಾರರು. ಜನತೆಯೂ ಅರಿತಿಲ್ಲ. ಆದುದರಿಂದ ಈ ರಾಜಿನಾಮೆಯ ಪ್ರಕರಣವು ತೀರ ಸೋಜಿಗವೆಂದರೂ ಸರಿಯಾಗಬಹುದು.

ಕೈರಾನರು ಜವಾಹರರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು; ಅವರ ವ್ಯಕ್ತಿತ್ವವೂ ಹಾಗೆಯೇ ಇತ್ತು ಎಂಬುದು ನಿರ್ವಿವಾದ. ಆದರೆ, ಲಾಲಬಹದೂರರು ಜನಂಗೆ ಬೇಡವಾದವರು ಅಧಿಕಾರದಲ್ಲಿರಲು ಒಪ್ಪುವುದಿಲ್ಲ. ಅರ್ಥ ಶಾಖೆಯಲ್ಲಿ ಉಪ ಮಂತ್ರಿಯಾಗಿದ್ದ ತಾರಕೇಶ್ವರಿ ಸಿಂಹರನ್ನೂ ಅವರು ಈ ಕಾರಣದಿಂದಾಗಿಯೇ ತನ್ನ ಸಂಪುಟಕ್ಕೆ ತೆಗೆದುಕೊಳ್ಳಲಿಲ್ಲ. ಅವರ ಮೇಲಿನ ಆಪಾದನೆಗಳು ಇತ್ಯರ್ಥವಾಗುವವರೆಗೆ ಮಂತ್ರಿಯಾಗಿರುವುದು ಸರಿಯಲ್ಲವೆಂಬುದು ಒಪ್ಪತಕ್ಕ ಮಾತು. ಈ ಕಾರಣದಿಂದಲೇ ಕೈರಾನರೂ ರಾಜಿ ಪತ್ರ ನೀಡಿದ್ದು ಸ್ವಾಭಾವಿಕ. ಆದರೆ, ಕೈರಾನರು ತನ್ನ ಗೌರವವನ್ನೂ ಪ್ರತಿಷ್ಠೆಯನ್ನೂ ಉಳಿಸಿಕೊಳ್ಳ ಬೇಕೆಂದಿದ್ದರೆ, ಇದಕ್ಕೆ ಮೊದಲೇ ರಾಜಿನಾಮೆಯಿತ್ತು ವಿಚಾರಣೆಗೆ ಒಪ್ಪಿಕೊಳ್ಳ ಬೇಕಿತ್ತು. ಕೊನೆಗಾದರೂ ಯಾರಿಗೂ ಒಗ್ಗದ ಪಂಜಾಬದ ಈ ಹೊಸ ಹುಲಿ ಜನಾಭಿಪ್ರಾಯಕ್ಕೆ ಬಗ್ಗಿದುದು ಸಂತೋಷ. ಕೈರಾನರು ಉತ್ತಮ ಆಡಳಿತದಾರರು, ಪಂಜಾಬದ ಆಡಳಿತಕ್ಕೆ ಒಂದು ಸ್ಥಿಮಿತವನ್ನು ತಂದು ಕೊಟ್ಟವರು. ಪ್ರಾಯಃ ಅವರು ತಾನು ಪ್ರಜಾಪ್ರಭುತ್ವ ಯುಗದಲ್ಲಿರುವೆನೆಂಬುದನ್ನು ಮರೆತಿರಬೇಕು. ಆದುದರಿಂದಲೇ ಅವರ ರಾಜಕಾರಣವು ಅಸಫಲವಾಯಿತು. ಇನ್ನೂ ರಾಜಗೀಯವನ್ನು ತಾನು ತ್ಯಜಿಸುವುದಿಲ್ಲವೆಂದು ಹೇಳುವ ಕೈರಾನರು ಕೊನೆಯ ಹಂತದಲ್ಲಾದರೂ ಸ್ವಯಂಪ್ರೇರಣೆಯಿಂದ ತ್ಯಾಗ ಪತ್ರ ನೀಡಿದುದರಿಂದ ರುದ್ರದುರಂತವಾಗಬಹುದಾದ ಅವರ ರಾಜಕೀಯ ನಾಟಕವು ಕೇವಲ ದುರಂತದಲ್ಲಿ ಪರ್ಯವಸಾನ ಹೊಂದುವಂತಾಯಿತು, ತಲೆಗೆ ಬರಬಹುದಾದ ಗಂಡಾಂತರ ಕಾಲಿನಲ್ಲಿ ಬಂದು ಹೋಯಿತು.

ಪ್ರತಾಪ ಸಿಂಹ ಕೈರಾನರ ಪತನದಿಂದ ಪ್ರಜಾಪ್ರಭುತ್ವದಲ್ಲಿರುವ ಎಲ್ಲ ಮಂತ್ರಿಮಾಗಧರೂ ಪಾಠ ಕಲಿಯಬೇಕು. ಭಾರತದ ಯಾವುದೋ ಒಂದು ಮೂಲೆಯಲ್ಲಿ ನಡೆದ ಅಪಘಾತದ ನೈತಿಕ ಹೊಣೆಯನ್ನು ತಾನು ಹೊತ್ತು ರಾಜಿನಾಮೆ ನೀಡಿದ ಅಂದಿನ ರೇಲ್ವೆ ಮಂತ್ರಿ ಲಾಲಬಹದೂರರೇ ಇಂದು ಪ್ರಧಾನ ಮಂತ್ರಿಯಾಗಿರುವರೆಂಬುದನ್ನು ಜ್ಞಾಪಿಸಿಕೊಳ್ಳಬೇಕು. ತಮ್ಮ ಮೇಲೆ ಜನತೆಯು ಸಂದೇಹ ದೃಷ್ಟಿಯಿಂದ ನೋಡುವಾಗ ಅದು ನಿರಾಧಾರವೆಂದು ಸಾರುತ್ತ ಹಿರಿಯರ ಪ್ರಶಸ್ತಿಯನ್ನೇ ರಕ್ಷಾಕವಚವೆಂದು ಬಗೆಯುತ್ತ ಇರುವುದು ಪ್ರಜಾಪ್ರಭುತ್ವಕ್ಕೆ ಶೋಭನೀಯವೆನ್ನುವಂತಿಲ್ಲ. ಪವಿತ್ರೆಯೆಂದು ದಶರಥನು ಸಾರಿದರೂ ಕಲಂಕಿತೆಯೆಂದು ಜನ ಅನ್ನುವಾಗ, ಜನಾಭಿಪ್ರಾಯವನ್ನು ಮನ್ನಿಸಿ ಸತ್ವಪರೀಕ್ಷೆಗೆ ಸೀತೆಯನ್ನು ರಾಮಚಂದ್ರ ಗುರಿಪಡಿಸಿದ್ದನೆಂಬುದನ್ನು ರಾಮರಾಜ್ಯದ ಅಧಿಕಾರಿಗಳು ನೆನೆಯಬೇಕು. ಕೈರಾನರ ದುರಂತವು ಈ ದಿಸೆಯಲ್ಲಿ ಪ್ರೇರಕ ಶಕ್ತಿಯಾಗಬೇಕು.

ಜಗತ್ಪರ್ಯಟನ

ಹೊಸ ಯುಗದ ಪ್ರಾರಂಭ

ದಿ| ಪ್ರಧಾನ ಮಂತ್ರಿ ಜವಾಹರಲಾಲರಿಗೆ ದೇಶ ವಿದೇಶಗಳು ಸಾಕೆಂಬಷ್ಟು ಗೌರವವನ್ನು ನೀಡಿದುವು. ಹಲವಾರು

ಕರ್ನಾಟಕದಲ್ಲಿ ಭೂತೆರಿಗೆ

ಕರ್ನಾಟಕ ರಾಜ್ಯದಲ್ಲಿ ಭೂ ತೆರಿಗೆಯ ಹೊಸ ಮಸೂದೆಯು ಸದ್ಯದಲ್ಲಿಯೇ ಶಾಸನವಾಗಿ ಬರಲಿರುವುದು. ಈ ಶಾಸನದಿಂದ ಚಿಕ್ಕ ಹಾಗೂ ಮಧ್ಯಮ ವರ್ಗದ ಭೂಮಾಲಿಕರಿಗೆ ಬಹಳಷ್ಟು ಪೆಟ್ಟು ತಗಲುವುದು ಈ ವಿಧೇಯಕವು ಮಂಜೂರಾಗುವಾಗ ಜನತಾ ಪ್ರತಿನಿಧಿಗಳು ಇದರ ಲಾಭ-ಹಾನಿಗಳನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂದೇ ಅನ್ನಬೇಕಾಗುತ್ತದೆ. ಹೊಸ ಶಾಸನದಂತೆ ಬೀಳುವ ತೆರಿಗೆಯು ಪುಂಜಕ್ಕೆ ಸೇ. ೬೦ರಷ್ಟು, ನಂಜಕ್ಕೆ ಸೇ. ೧೧೫ರಷ್ಟು, ಅಡಿಕೆ ತೋಟಕ್ಕೆ ಸೇ. ೧೨೫ರಷ್ಟು, ತೆಂಗಿನ ತೋಟಕ್ಕೆ ಸೇ. ೧೨೪ರಷ್ಟು ಏರುವುದೆಂದು ಗೊತ್ತಾಗಿದೆ. ಅವಲ್ಲದೆ ಇದರ ಮೇಲೆ ಸೆಸ್ ಇತ್ಯಾದಿಗಳು ಇದ್ದೇ ಇರುತ್ತವೆ. ಜೀವನದ ಮಟ್ಟವು ಏರುತ್ತಿರುವಾಗ, ಜನತೆ ಹೆಚ್ಚಿನ ತೆರಿಗೆ ತೆರಲು ಬದ್ಧವಾಗಬೇಕು ನ್ಯಾಯವೇ. ಆದರೆ, ತೆರಿಗೆಯ ಪ್ರಮಾಣಕ್ಕೂ ಒಂದು ಮಿತಿಯಿರಬೇಕು ಭೂಮಿಯಲ್ಲಿ ಬೆಳೆ ತೆಗೆಯಲು ತಗಲುವ ವೆಚ್ಚವೆಷ್ಟು, ಅದರಲ್ಲಿ ಹುಟ್ಟುವ ಉತ್ಪತ್ತಿಯೆಷ್ಟು—ಮೊದಲಾದ ಎಲ್ಲ ವಿವರಣೆಗಳನ್ನೂ ಕೂಲಂಕಷವಾಗಿ ಪರಿಶೀಲಿಸದೆ ತೆರಿಗೆಯ ದರಗಳನ್ನು ನಿರ್ಧರಿಸುವುದು ಅನ್ಯಾಯಕಾರ್ಯ; ಭೂಮಾಲಿಕರಾಗದ ತಪ್ಪಿಗೆ ಅವರಿಂದ ದಂಡ ವಸೂಲು ಮಾಡುವುದು ಅನ್ಯಾಯ.

ವಿಧೇಯಕವು ಮಂಜೂರಾದ ಬಳಿಕ ಅವಾಂತರವೆಬ್ಬಿಸುವುದು ಸರಿಯಲ್ಲ; ಏನಿದ್ದರೂ ಮೊದಲೇ ಕೇಳಿಕೊಳ್ಳ ಬೇಕು ಎನ್ನುವುದು ಸರಿ. ಆದರೆ, ಸರಕಾರವು ಯಾವುದೇ ವಿಧೇಯಕವನ್ನು ವಿಧಾನಸಭೆಗಳ ಮುಂದೆ ತರುವುದಕ್ಕೆ ಮೊದಲು ಅದಕ್ಕೆ ಸಾಕಷ್ಟು ಪ್ರಸಿದ್ಧಿಯನ್ನು ಕೊಡಬೇಕು; ಹಳ್ಳಿ ಹಳ್ಳಿಗಳವರಿಗೂ ಅದು ತಿಳಿಯುವಂತೆ ಮಾಡಬೇಕು. ಸರಕಾರಿ ಗಜೇಟಿನಲ್ಲಿ ಮಾತ್ರ ಅವನ್ನು ಪ್ರಕಟಿಸುವುದು ಕಾನೂನಿನ ದೃಷ್ಟಿಯಲ್ಲಿ ನ್ಯಾಯವೆನಿಸಿದರೂ ಮಾನವತೆಯ ದೃಷ್ಟಿಯಿಂದ ಸಾಲದು. ಕಡಿಮೆ ಪಕ್ಷ ರಾಜ್ಯದಲ್ಲಿರುವ ಎಲ್ಲ ಪತ್ರಿಕೆಗಳಿಗಾದರೂ ಕಳಿಸುವ ಪರಿಪಾಠವನ್ನು ಸರಕಾರ ಇಟ್ಟುಕೊಂಡರೆ, ಹನ್ನೊಂದನೆಯ ತಾಸಿನಲ್ಲಿ ಜನರೂ ಅದೂ ಗಡಿಬಿಡಿಗೊಳ್ಳುವುದು ಅಗತ್ಯವಿಲ್ಲ. ಆದುದರಿಂದ ಸ್ಪಷ್ಟವಾದ ಜನಾಭಿಪ್ರಾಯವನ್ನು ಪಡೆಯದೇ ಹಲವು ರೀತಿಯಿಂದ ಭೂಮಾಲಿಕರಿಗೆ ಅನ್ಯಾಯಕಾರಕವಾದ ಈ ಭೂಕಂದಾಯದ ಮಸೂದೆಯನ್ನು ತಡೆಹಿಡಿದು, ಜನಮತ ಪಡೆದು ಬಳಿಕ ತಿದ್ದುಪಡಿಗಳನ್ನು ಮಾಡುವುದು ಅಗತ್ಯವಿದೆ. ನಮ್ಮ ಜನತಾ ಪ್ರತಿನಿಧಿಗಳೂ ಇಂತಹ ಸಂದರ್ಭಗಳಲ್ಲಿ ತೀವ್ರ ಎಚ್ಚರಿಕೆಯಿಂದ ನಡೆದುಕೊಳ್ಳುವುದು ಆವಶ್ಯಕವೆಂದು ಒತ್ತಿ ಹೇಳಬೇಕು.

ಮಾರ್ಗಗಳು, ಬೆಟ್ಟಗಳು, ಉದ್ಯಾನವನಗಳು, ವಿದ್ಯಾಲಯಗಳು ಮೊದಲಾದುವು ನೆಹರು ಹೆಸರಿನಿಂದ ಕರೆಯಲ್ಪಟ್ಟವು. ಈ ಲೋಕ ನಾಯಕನ ಇಚ್ಛೆಯಂತೆ ಅವರ ಚಿತಾ ಭಸ್ಮದ ಒಂದಂಶವನ್ನು ದೇಶದ 'ಪವಿತ್ರ ನದಿ'ಗಳಲ್ಲಿ ವಿಸರ್ಜಿಸಲಾಯಿತಲ್ಲದೆ ಭಾರತದ ಭೂಮಿಯ ಮೇಲೂ ಸುರುವಲಾಯಿತು. ಇಲ್ಲಿಗೆ ಭಾರತದಲ್ಲಿ ನಡೆದು ಬಂದ ನೆಹರು ಯುಗವು ಕೊನೆಗೊಂಡಿತು. ಹೊಸತಾಗಿ ಪ್ರಧಾನಿಯಾದ ಲಾಲಬಹದೂರರು ತನ್ನ ಯುಗವೊಂದನ್ನು ನಿರ್ಮಿಸಲು ಶಕ್ತರಾದಾರೇ ಎಂದು ಕಾದು ನೋಡಬೇಕು.

ಶಾಸ್ತ್ರಿ ಸಚಿವ ಸಂಪುಟ

ಪ್ರಧಾನಿ ಶಾಸ್ತ್ರಿಯವರು ತನ್ನ ಸಚಿವ ಸಂಪುಟವನ್ನು ನಿರ್ಮಿಸಿಕೊಂಡಿದ್ದಾರೆ. ಹಿಂದಿನ ನೆಹರು ಸಂಪುಟದವರಲ್ಲಿ ಬಹು ಸಂಖ್ಯಾಕರು ಇದರಲ್ಲಿ ಸ್ಥಾನ ಪಡೆದಿದ್ದಾರೆ. ಹೆಚ್ಚಿನವರ ಮಂತ್ರಿ ಶಾಖೆಗಳೂ ಅಬಾಧಿತವಾಗಿಯೇ ಉಳಿದಿವೆ. ಇಂದಿರಾ ಗಾಂಧಿ, ಎಸ್. ಕೆ. ಪಾಟೀಲ ಮತ್ತು ಎನ್. ಸಂಜೀವ ರೆಡ್ಡಿಯವರು ಮಾತ್ರ ಹೊಸಬರು. ಈ ಮಂಡಳಿಯಲ್ಲಿ ಕಾಂಗ್ರೆಸ್ಸಿನ ಎಡ-ಬಲ ಪಕ್ಷಗಳಲ್ಲಿ ಸಮತೋಲನವನ್ನು ಉಳಿಸಿಕೊಳ್ಳಲಾಗಿದೆಯೆಂದು ತಿಳಿಯುತ್ತದೆ. ದಿ| ನೆಹರುರವರಂತೆಯೇ ಶಾಸ್ತ್ರಿಯವರು ವಿದೇಶ ವ್ಯವಹಾರ ಮತ್ತು ಅಣುಶಕ್ತಿ ಶಾಖೆಗಳನ್ನು ತಾನೇ ಇಟ್ಟುಕೊಂಡಿದ್ದಾರೆ.

ಕಾಮರಾಜರ ವಿಜಯ

೧೯೩೪ರಲ್ಲಿ ಕಾಂಗ್ರೆಸ್ಸಿನಿಂದ ಹೊರನಡೆದಿದ್ದ ಅಶೋಕ ಮೆಹತಾ ಮೂವತ್ತು ವರ್ಷಗಳ ನಂತರ ಮತ್ತೆ ಕಾಂಗ್ರೆಸ್ ಸೇರಿದರು. ಅವರೊಡನೆ ಅವರ ಅನುಯಾಯಿಗಳಲ್ಲಿಯೂ ಬಹುಜನರು ಪಕ್ಷಾಂತರ ಹೊಂದಿದರು. ಕಾಂಗ್ರೆಸ್ಸು ಪ್ರಜಾಪ್ರಭುತ್ವವಾದಿ ಸಮಾಜವಾದದ ಗುರಿಯನ್ನು ಸ್ವೀಕರಿಸಿದುದರಿಂದ ಸಮಾಜವಾದದಲ್ಲಿ ವಿಶ್ವಾಸವಿರುವ ಎಲ್ಲರೂ ಕಾಂಗ್ರೆಸಿನ ಸೇರಿ ಈ ಪಕ್ಷವನ್ನು ಬಲಪಡಿಸಬೇಕೆಂಬ ಕಾಮರಾಜರ ಕರೆಗೆ ಇದು ಬೆಲೆ ತರುವಂತಾಯಿತು.

ಶರಾವತಿ ಪ್ರಶಸ್ತಿ

ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರನ್ನು ಗಂಡಾಂತರಕ್ಕೆ ಸಿಲುಕಿಸಿದ್ದ ಶರಾವತಿ ಯೋಜನೆಯ ಮೇಲೆ ಹಿಂದಿನ ನೀರಾವರಿ ಮಂತ್ರಿ ಡಾ| ಕೆ. ಎಲ್. ರಾಯರು ಪ್ರಶಸ್ತಿ ಪತ್ರ ನೀಡಿದ್ದರು. ಆದರೂ ಈ ಪ್ರಕರಣದ ಮೇಲೆ ನ್ಯಾಯ ವಿಚಾರಣೆ ನಡೆಯಬೇಕು. ಎಂಬವಾದವು ನಿಲ್ಲಲಿಲ್ಲ. ಶಾಸ್ತ್ರಿ ಮಂತ್ರಿಮಂಡಳದಲ್ಲಿ ನೀರಾವರಿ- ವಿದ್ಯುತ್ ಶಾಖೆಯನ್ನು ಪಡೆದ ಕನ್ನಡಿಗ ದಾಸಪ್ಪನವರು ಮತ್ತೆ ನಿಜಲಿಂಗಪ್ಪನವರ ಬೆನ್ನು ತಟ್ಟಿದ್ದಾರೆ. ಇನ್ನಾದರೂ ಕನ್ನಡಿಗರು ಸುಮ್ಮನಿರಬಾರದೆ?

ನಮ್ಮ ಮುಂದಿರುವ ಗುರಿ

ಜವಾಹರಲಾಲರು ಹೊತ್ತಿಸಿದ ದೇಶ ಸ್ವಾತಂತ್ರ್ಯ ಮತ್ತು ಪ್ರಗತಿಯ ಜ್ಯೋತಿಯನ್ನು ಸದಾ ಬೆಳಗುವಂತೆ ನಾವು ನೋಡಿಕೊಳ್ಳೋಣ; ಅವರು ತೆರೆದ ದಾರಿಯಲ್ಲೇ ನಾವು ಮುಂದುವರಿಯೋಣ. ನಾವು ಮಾಡಲೆಂದು ಅವರು ಬಿಟ್ಟು ಹೋಗಿರುವ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗೋಣ—ವೆಂದಿದ್ದಾರೆ ರಾಷ್ಟ್ರಪತಿ ಡಾ| ರಾಧಾಕೃಷ್ಣನ್. ಇದೇ ನಮ್ಮ ಗುರಿಯೆಂಬುದನ್ನು ಮರೆಯಬಾರದು.

ಜನತಾ ಉವಾಚ

ಪೆಂಬಡನ ಆಶಯ

ಇತ್ತೀಚೆಗೆ ಎರಡು ಮೂರು ವರ್ಷಗಳಿಂದ ಕೆಲವು ಯಕ್ಷಗಾನ ಮೇಳದವರು ಕೇವಲ ಹಣದ ಆಶೆಯಿಂದ ಪ್ರೇರಿತರಾಗಿ ಯಕ್ಷಗಾನವನ್ನು ಬಿಟ್ಟು ಅಡ್ಡದಾರಿ ಹಿಡಿದು ನಮ್ಮಂಥ ಬಡವರ ಕುಲದ ಕಸಬನ್ನು ನಮ್ಮಿಂದ ಕಸಿದುಕೊಳ್ಳುತ್ತಿರುವುದನ್ನು ಕಂಡು ಕಳವಳದಿಂದ ನಮ್ಮ ಜಾತಿ ಬಾಂಧವರೊಬ್ಬರು ಈ ಹಿಂದೆ ಪತ್ರಿಕೆಗಳ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಬಲ್ಲಿದರಲ್ಲಿ ಅತಿ ವಿನಯದಿಂದ ಬಿನ್ನವಿಸಿಕೊಂಡಿದ್ದರು: ಇಂಥ ಅಪಚಾರವನ್ನು ಆಗಗೊಡಬಾರದು, ಒಂದು ವೇಳೆ ಇದನ್ನು ತಡೆಗಟ್ಟುವುದು ಅಶಕ್ಯವಾದಲ್ಲಿ ಕೋಲ ಕಟ್ಟುವವರನ್ನು ಮೇಳಕ್ಕಾದರೂ ಸೇರಿಸಿಕೊಳ್ಳಬೇಕು ಎಂದು ಅವರ ನ್ಯಾಯುವಾದ ಅಂಬೋಣವಾಗಿತ್ತು.

ಇದು ತನಕ ನಮ್ಮ ಬೊಬ್ಬೆ ಜನರಿಲ್ಲದ ಜಾಗದಲ್ಲಿ ಹಾಕಿದ ಬೊಬ್ಬೆಯಂತೆ ಗಂಟಲು ನೋವಿಗೆ ಹೇತುವಾಯಿತಲ್ಲದೆ ಕಾಸಿನ ಪ್ರಯೋಜನಕ್ಕೆ ಬಾರದೆ ಹೋಯಿತು. ನಮ್ಮ ಬೊಬ್ಬೆಯ ಮರುದನಿಯನ್ನು ನಾವೇ ಕೇಳಬೇಕಾಯಿತು. ಈ ವರ್ಷ ಎಲ್ಲಿ ನೋಡಿದರೆ ಅಲ್ಲಿ ಕಾಂತಾಬಾರೆ-ಬೂದಾಬಾರೆ,ಬಪ್ಪನಾಡುಉಳ್ಳಾಲ್ತಿ, ಕೋಡ್ದಬ್ಬು ತನ್ನಿಮಾನಿಗ-ಇವರ ಪ್ರತಾಪವೇ ಪ್ರತಾಪ ಎಲ್ಲಕಡೆ ಕಿಕ್ಕಿರಿದ ಜನಸಂದಣಿ. ಸಾಮಾನ್ಯವಾಗಿ, ಕಾಸಿನ ಖರ್ಚಿಲ್ಲದೆ ನೋಡಬಹುದಾದಂತಹ ಬಯಲಾಟಗಳನ್ನು ನೋಡುವುದೆಂದರೆ ತಮ್ಮ ಗೌರವಕ್ಕೆ ಕುಂದು ಎಂದು ಭಾವಿಸುತ್ತಿದ್ದ ಸಂಭಾವಿತ ಮಂದಿ ಕೂಡ ಕಾಸು ಕೊಟ್ಟು ಈ ಹೊಸ ಆಟಗಳನ್ನು ನೋಡಿ 'ಭೇಷ್' ಎಂದು ಮೂಗಿನ ಮೇಲೆ ಬೆರಳಿಟ್ಟರು. ಈ ಬಗೆಯಆಟ ಗಳನ್ನು ಬಾಯ್ತುಂಬ ಹೊಗಳಿ ಹೆಳಿಯುತ್ತಿದ್ದ ಮಹಾಶಯರ ಪೈಕಿ ಒಬ್ಬಿಬ್ಬರು ಇಂಥ ವಿಜಾತೀಯ ಪ್ರಸಂಗಗಳನ್ನು ಬರೆದು 'ಪುಣ್ಯ' ಕಟ್ಟಿಕೊಂಡರು. ಕಾಲದ ಮಹಿಮೆಯೊ, ಮೇಳ ನಡೆಸುವವರ ದೆಸೆಯೊ, ಅಥವಾ ನಮ್ಮ ಭೂತ ಪ್ರೇತಗಳ ಕಾರಣೀಕವೊ ಆ ನೆಲ್ಲಿಕಟ್ಟೆ ಜುಮಾದಿಯ ಚಿತ್ತಕ್ಕೇ ವೇದ್ಯ. ರಾಮಭೀಮರ ಸಮಾಧಿಯ ಮೇಲೆ ಜುಮಾದಿ ಜಾರಂದಾಯರ ಜಾಯಮಾನ!

ಮೊನ್ನೆ ಮೊನ್ನೆ ದೊಡ್ಡ ಸೋಜಿಗದ ಸಂಗತಿಯೊಂದು ನಡೆದು ಹೋಗಿದೆ. ನಮ್ಮ ಬೇಡಿಕೆಯ ಪರಿಣಾಮವೊ, ಇನ್ನಾವ ಕಾರಣವೊ ನಾ ತಿಳಿಯೆ. ಅಂತೂ ಬರುವ ವರ್ಷದ ತಿರುಗಾಟಕ್ಕೆ ಮೇಳ ಸೇರುವಂತೆ ನನಗೆ ಮೂರು ಮೇಳಗಳಿಂದ ಕರೆ ಬಂದಿದೆ. ಕೈತುಂಬ ಸಂಬಳ ಕೊಡುವರಂತೆ. ನಾನು ಹತ್ತು ವರ್ಷ ನನ್ನ ಕುಲದ ಕಸಬು ಮಾಡಿದರೂ ಇಷ್ಟು ಹಣ ದಕ್ಕೀತೆಂಬ ನಂಬಿಕೆ ನನಗಿಲ್ಲ. ಆದ್ದರಿಂದ ಮೇಳ ಸೇರುವುದೇ ಸರಿ ಎಂದು ನಾನು ನಿರ್ಧರಿಸಿ ಬಿಟ್ಟಿದ್ದೇನೆ. ಕುಲ ಕಸಬು ಬಿಡಬೇಕಾಗುತ್ತದಲ್ಲಾ ಎಂಬ ಕಸಿವಿಸಿ ನನಗಾಗದೆ ಇಲ್ಲ. ಹಾಗೆ ನೋಡಿದರೆ ಯಾರ ಕುಲ ಕಸಬು ಈಗ ಉಳಿದಿದೆ? ಇನ್ನು ಮೇಳ ಸೇರಿದ ಮೇಲೆ, ಪ್ರಸಿದ್ಧ ಅರ್ಥಧಾರಿಯೊಬ್ಬರು ಅನ್ನುವಂತೆ ಕೈತುಂಬ ಹಣ ಕೊಟ್ಟರೆ ಯಾವ ವೇಷವಾದರೇನಂತೆ, ಅಶ್ವಮೇಧದ ಕುದುರೆಯ ವೇಷವಾದರೂ ಸರಿಯೆ.

ಈ ಸಂದರ್ಭದಲ್ಲಿ ನನ್ನಂಥವನಿಗೆ ಈ ತೆರನ ಸದವಕಾಶವನ್ನು ಒದಗಿಸಿ ಕೊಡಲು ಕಾರಣರಾದ 'ಅಭಿನವ ಪಾರ್ತಿ ಸುಬ್ಬ'ರೆನಿಸಿಕೊಂಡವರಿಗೆ—ಅಂದರೆ ಈಗಿನ ಚಿತ್ರವಿಚಿತ್ರ ಪ್ರಸಂಗಗಳನ್ನು ಬರೆದ ಮಹನೀಯರುಗಳಿಗೆ ಈ ಬಡವನ ಕೃತಜ್ಞತೆಗಳು ಸಲ್ಲಬೇಕು. (ಆ ಪುಣ್ಯಾತ್ಮ ಸುಬ್ಬನ ಹಿಂಗತಿಗೆ ಗ್ರಹಣ ಹಿಡಿದಿದೆ. ಇವರ ಮುಂಗತಿಗೆ ಯಾವ ಪಾಡೊ? ಅಂತೂ ಪರವಾ ಇಲ್ಲ ಎನ್ನಿ) ಒಂದು ಸಾವಿರದ ಒಂದು ಭೂತಗಳಿವೆ ಒಂದನ್ನೂ ಬಿಡದೆ ಪ್ರಸಂಗಗಳನ್ನು ಬರೆಯಲಿ, ಯಕ್ಷಗಾನದ ಅವಸಾನ ಸಂಪೂರ್ಣವಾಗುವ ವರೆಗೂ ಈ ವರ ಕವಿಗಳ ಹೆಸರುಗಳು ಮೆರೆಯಲಿ, ಮತ್ತಿವರ ಜೇಬುಗಳು ಭರಪೂರ ತುಂಬಿಕೊಳ್ಳಲಿ! ಇದೇ ನನ್ನ ಆಶಯ.

— ಪೆಂಬದ ಸುಬ್ಬ., ಬೈಲೂರು.

ಕಾಸರಗೋಡು ಸಮಸ್ಯೆ

ಮಹಾರಾಷ್ಟ್ರೀಯರು ಬೆಳಗಾಂನ್ನು ಮೈಸೂರಿನಿಂದ ಪ್ರತ್ಯೇಕಿಸಲು ಮಾಡುವ ಶತ ಪ್ರಯತ್ನದ ಕಾಲಂಶ ಪ್ರಯತ್ನವನ್ನು ಕನ್ನಡಿಗರು ಮಾಡುತ್ತಿದ್ದಲ್ಲಿ, ಕಾಸರಗೋಡಿನ ಅಚ್ಚ ಕನ್ನಡ ಮಾತನಾಡುವ ಜನತೆ ಕೇರಳೀಯರ ದಬ್ಬಾಳಿಕೆಯ ಕಪಿಮುಷ್ಟಿಯಡಿಯಲ್ಲಿ ತಮ್ಮ ಭಾಷೆ ಸಂಸ್ಕೃತಿ ಕಳೆದುಕೊಳ್ಳುವಸ್ಥಿತಿಯಲ್ಲಿರುತ್ತಿದ್ದಿಲ್ಲ. ಕಾಸರಗೋಡು ಚಳವಳಿ, ಠರಾವು, ಘೋಷಣೆಗಳಲ್ಲಿಯೇ ಉಳಿದಿದ್ದು ಮಾತು ಇನ್ನೂ ಕೃತಿಗಿಳಿಯದಿದ್ದುದರಿಂದಲೇ ಆಗಬೇಕಾದ ಕೆಲಸ ಮಾತ್ರ ಬಾಕಿಯುಳಿದಿದೆ.

ಮುಖಂಡರೇನೋ ತಮ್ಮ ಭಾಷಣಗಳಲ್ಲಿ ೨ ಲಕ್ಷ ಕನ್ನಡಿಗರ ಸಹಾಯ ತಮ್ಮ ಬೆನ್ನ ಹಿಂದೆ ಇದೆ ಎಂದು ಎದೆ ತಟ್ಟಿದರೂ ನಿಜವಾಗಿ ಅವರ ಹಿಂದೆ ಎಷ್ಟು ಜನರ ಬೆಂಬಲವಿದೆಯೆಂಬುದನ್ನು ಇನ್ನೂ ವಿಚಾರಿಸಿದಂತಿಲ್ಲ. ಕಾಸರಗೋಡಿನ ಕನ್ನಡಿಗರೇ "ನಮಗೆ ಕೇರಳವಾದರೇನು ಮೈ? ಸೂರಾದರೇನು?" ಎಂಬ ಅಭಿಪ್ರಾಯ ತಾಳಿದ್ದರಿಂದಲೇ ನಮ್ಮ ಜನಪ್ರಿಯ ಮುಂದಾಳು ಶ್ರೀ ಕೆ. ಆರ್. ಕಾರಂತರು ಕಳೆದ ಚುನಾವಣೆಯಲ್ಲಿ ಸೋಲ ಬೇಕಾಯಿತು. ಇದೇ ಬೆಂಬಲದ ಗುಟ್ಟೋ?

ಕಾಸರಗೋಡಿನ ಸಾಮಾನ್ಯ ಜನತೆಯ ಹೃದಯದಲ್ಲಿ ಕನ್ನಡ ಮಾತೆಯ ಮೇಲೆ ಪ್ರೇಮವನ್ನು ಜಾಗೃತಗೊಳಿಸಿ, ಸರನಾಡಿಗಳಲ್ಲಿ "ಕನ್ನಡಿಗ" ಮಕ್ಕಳೆಲ್ಲ ಏಕ ಛತ್ರದಡಿಯಲ್ಲಿ ಸೇರಬೇಕೆಂಬ ಹೊಸ ಚೈತನ್ಯ ಮತ್ತು ಹುರುಪನ್ನು ತುಂಬಿಸಬಲ್ಲ ಮುಖಂಡ ವರ್ಗವು ಮುಂದಕ್ಕೆ ಬಂದಲ್ಲಿ ಮಾತ್ರ ೨ ಲಕ್ಷ ಕನಡಿಗರು ೨೪ ಗಂಟೆಗಳಲ್ಲಿ ಎಚ್ಚೆತ್ತೇಳಿ ಕಾಸರಗೋಡು ಕನ್ನಡ ನಾಡಿಗೆ ಸೇರ್ಪಡೆಯಾದೀತು. ಕ್ಯಾಲೆ ತಿಳಿಯದೆ ರೋಗಿಗೆ ಔಷಧಿ ಮಾಡಿ ಪ್ರಯೋಜನವೇನು?

— ಶಿರ್ತಾಡಿ ವಿಲಿಯಂ ಪಿಂಟೊ, ಉಡುಪಿ.

ಶ್ರೀಲಂಕೆಯ ಲಂಕಿಣಿಯರು

(ಕಳೆಯ ಪುಟದಿಂದ)

ಮುಕ ಜಗತ್ತು ಅಷ್ಟರಲ್ಲೇ ತೃಪ್ತಿ ಪಟ್ಟಿಲ್ಲ. ಅವರನ್ನು ಹೊಂಗ್‌ಕೋಂಗ್, ಸಿಂಗಾಪುರ ಮತ್ತು ಲಂಡನು ಮುಂತಾದ ದೊಡ್ಡ ನಗರಗಳಲ್ಲಿರುವ ರಾತ್ರಿ ಏನೋ ದಾಲಯುಗಳಲ್ಲಿ ಆಮಂತ್ರಣಗಾರ್ತಿವಗ್ಗೆರೆ ಕೆಲಸಗಳಲ್ಲಿ ಭರ್ತಿಮಾಡಿಕೊಂಡಿದ್ದಾರೆ. • ಸಿಂಹಳದ ಸ್ತ್ರೀ ಕ್ರಮಶಃ ಮೆಟ್ಟಿಲುಗಳನ್ನೇರಿರುವದನ್ನು ನಾವು ಕಾಣಬಹುದು. ಸಿಲೋನಿ ಸ್ತ್ರೀ ಹಿಂದುಳಿದಿರಲಿಲ್ಲ. ರಾ ಮಾ ಯ ಣ ಕಾ ಲ ದ ಲೂ ಅಷ್ಟೇ. ಆದರೆ ಅಂದು ಅವರು ಖಾನಾವಳಿಗಳಿಗೂ ವಿನೋದಾವಳಿಗಳಿಗೆ ಬೆಲೆವೆಣ್ಣುಗಳಾಗಿರಲಿಲ್ಲ. ಇಂದು ಆ ದೃಷ್ಟಿಯಲ್ಲೂ ಮುಂದರಿದಿದ್ದಾರೆ ಬಹುಶಃ ಚೌ—ಎನ್—ಲೈ ಅದನ್ನು ಚೆನ್ನಾಗಿ ತಿಳಿದುಕೊಂಡೇ ಇತ್ತ ಬಂದಿರ ಬಹುದು. ಅವರಿಗೂ ತನ್ನ ಚೈನಿ ಕಮ್ಯೂನಿಸಂ ಸರಕನ್ನು ವಿಕ್ರಯಿಸಲು ಅಂದದ ಬೆಡಗಿನ ಬಿನ್ನಾಣಗಿತ್ತಿಯರು ಬೇಕಾಗಿದ್ದಾರೆ. ಅವರು ಮೊರೆದಂತೆ ಕುಣಿಯುವವರಿಂದ ಮಾರಲು ಸಾಧ್ಯ ಇರುವದಿಲ್ಲ. ಉತ್ತರದಲ್ಲೂ ಅವರು ಅದೇ ರೀತಿ ಮಾಡಿದ್ದರು.

ಸಿಂಹಳದಲ್ಲಿ ನೈಸರ್ಗಿಕ ಅಂಗಡಿ ಅಂಗನೆಯರು ಮಾತ್ರ ಇರುವದಿಲ್ಲ. ಕೇವಲ ಬೆಲೆವೆಣ್ಣುಗಳಿಗಾಗಿ ಚೌ ಅತ್ತ ಧಾವಿಸಿಲ್ಲ. ಅಷ್ಟೇ ಸಾಕಾಗಿದ್ದಲ್ಲಿ ಪಾಕಿಸ್ಥಾನದಿಂದಲೇ ಅವರು ಹಿಂತಿರುಗುತ್ತಿದ್ದರು. ಇಷ್ಟತ್ತನೇ ಶತಮಾನದಲ್ಲಿ ಪಾಕಿಸ್ಥಾನ ಆ ರೀತಿ ಅಮಾನುಷ ಕುಕೃತ್ಯವನ್ನು ನಡೆಸುತ್ತಿದೆ. ಅದು ಅಲ್ಲಿರುವ ಅಂಗನೆಯರನ್ನು ಅರಬ ನಾಡುಗಳಿಗೆ ರಫ್ತು ಮಾಡುತ್ತಿದೆ, ಅಲ್ಲದೆ ಗಡಿಯ ಈಚೆ ನುಗ್ಗಿ ಬಂದು ಭಾರತದಿಂದಲೂ ಹೆಂಗಸರನ್ನು ಕದ್ದೊಯ್ಯುತ್ತಿದ್ದಾರೆ. ಚೌ ಅಲ್ಲೀ ಈ ವ್ಯಾಪಾರಕ್ಕೆ ಸಹಿ ಹಾಕ ಬಹುದಾಗಿತ್ತು, ಸ್ವಲ್ಪ ಸಮಯದ ಹಿಂದೆ ಪೆಕಿಂಗ್ ಆಕಾಶವಾಣಿಯಲ್ಲಿ ಭಾರತೀಯ ಸ್ತ್ರೀಯ ಸ್ವರ ಕೇಳಿಬರುತ್ತಿದೆಯೆಂದು ಹೇಳಲಾಗಿತ್ತು. ಇದು ಹೇಗೆ ಸಾಧ್ಯವಾಯಿತು? ಲಂಕಿನಿಯರನ್ನು ಕರೆದೊಯ್ದು ಕಲಂಕಿನಿಯರನ್ನಾಗಿ ಮಾಡುವದಷ್ಟೇ ಅವರ ಉದ್ದೇಶವಾಗಿರದೆ ಬೇರೆ ದುರುದ್ದೇಶವೂ ಇತ್ತು. ಅದೇನು? ಅದನ್ನು ಮುಂದಿನ ವಾರ ಯೋಚಿಸುವ.

ಚೀಣಾದಲ್ಲಿ "ಮಹಿಳಾ ವಿಮೋಚನಾ" ವೈಖರಿ

ಚೀಣಾದ ಮಹಿಳೆಯರು ತಂದೆ, ಪತಿ ಹಾಗೂ ಮಕ್ಕಳು ಈ ಮೂವರನ್ನು ಅವಲಂಬಿಸಬಾರದೆಂದೂ ಮಹಿಳೆಯರ ಚಾರಿತ್ರ್ಯದ ಲಕ್ಷಣಗಳಾದ, ಸದ್ವರ್ತನೆ; ಒಳ್ಳೆಯ ಮಾತುಗಳು; ಸಮರ್ಪಕ ಉದ್ಯೋಗ ಇವೇ ಮೊದಲಾದವುಗಳನ್ನು ಬಿಟ್ಟು ಕೊಡಬೇಕೆಂದೂ ಪೀಕಿಂಗ ಸರ್ಕಾರವು ಕೇಳಿಕೊಂಡಿದೆ.

ಕ್ಯಾಂಟನ್ನಿನ "ಈವನಿಂಗ್ ನ್ಯೂಸ್" ಪತ್ರಿಕೆಯು ಆಡಳಿತ ಪಕ್ಷದ ಈ ವಿಚಾರಗಳನ್ನು ಪ್ರಕಟಿಸುತ್ತಾ ಇಂಥ "ಮಧ್ಯಕಾಲೀನ" ವಿಚಾರಗಳು ಮ್ಯೂಸಿಯಂನಲ್ಲಿ ಮಾತ್ರ ಇಡಲು ಯೋಗ್ಯವೆಂದು ಅಭಿಪ್ರಾಯಪಟ್ಟಿದೆ.

ಪೀಕಿಂಗ್ ಸರ್ಕಾರವು ಚೀಣೀ ಮಹಿಳೆಯರು ತಂದೆ, ಪತಿ, ಅಥವಾ ಮಕ್ಕಳಿಗಿಂತಲೂ ಕಮ್ಯುನಿಸ್ಟ್ ಪಕ್ಷಕ್ಕೆ ಮತ್ತು "ಜನರಿಗೆ" ಹೆಚ್ಚು ನಿಷ್ಠರಾಗಿರಬೇಕೆಂದೂ ಕೇಳಿಕೊಂಡಿದೆ.

ಮಹಿಳೆಯರ "ಬಂಧವಿಮೋಚನೆ"ಗಾಗಿಯೇ ಈ ಚಳುವಳಿಯನ್ನು ಆರಂಭಿಸಿರುವುದಾಗಿ ಪೀಕಿಂಗ್ ಬಡಾಯಿ ಕೊಚ್ಚಿಕೊಂಡಿದೆ.

ನಚಿಕೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ನವಯುಗ ಪ್ರೆಸ್, ಉಡುಪಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ ಜೈ ಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ
ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್
ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಕ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ
ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!
14 ಕೆರಿಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.
ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.
ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್
ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.
ತೆಂಕಪೇಟೆ ಫೋನ್:66 ಉಡುಪಿ.

ಕುರುಡು ಇಲಿಗಳು

(೨ನೇ ಪುಟದಿಂದ)

ಡಾ| ಮುಂಡರ್‌ಕಾರರೊಡನೆ ಕೇಳಿದನು.

"ಇಲ್ಲಿ ನೋಡು, ಮಿ| ಅರ್ಜುನ್, ಆಕೆಯು ಏನೇ ಹೇಳಲಿ, ಅವಳನ್ನು ಇಲ್ಲಿಗೆ ಕರೆದುಕೊಂಡು ಬಾ. ಅಥವಾ ನಾನೇ ಅಲ್ಲಿಗೆ ಬರುತ್ತೇನೆ. ಆಗದೇ?"

ದಯವಿಟ್ಟು ಹಾಗೆ ಮಾಡಬೇಡಿ ಡಾಕ್ಟರ್. ಅದು ಆಕೆಯ ರೋಗವನ್ನು ಇನ್ನೂ ಉಲ್ಬಣಿಸುವಂತೆ ಮಾಡಬಹುದು. ನೀವು ಆಕೆಯ ನಡತೆಯನ್ನು ತಿಳಿಯಲಾರಿರಿ. ಆದರೆ ನಾನು ನಾಳೆ ಬೆಳಗ್ಗೆ ಹೇಗಾದರೂ ಮಾಡಿ ಆಕೆಯನ್ನು ಇಲ್ಲಿಗೆ ಕರೆ ತರುವ ಪ್ರಯತ್ನ ಮಾಡುತ್ತೇನೆ" ಎಂದು ಅರ್ಜುನ ಹೇಳಿದ.

ಆ ದಿನ ರಾತ್ರಿ ಅರ್ಜುನನು ಹೊಸ ಬಗೆಯ ಟ್ರೇ ಒಂದನ್ನು ತಂದಾಗ ಶೋಭಳಿಗೆ ಆಶ್ಚರ್ಯವಾಯಿತು.

"ಡಾರ್ಲಿಂಗ್, ಇದು ನಿನಗೆ ಆಶ್ಚರ್ಯವನ್ನುಂಟು ಮಾಡಬಹುದು. ಆದರೆ, ಇದು ನಾನು ಗುಣಪಡಿಸಿದ್ದೇನೆ, ಆದೂ ಸಂಪೂರ್ಣವಾಗಿ ಎಂಬುದರಷ್ಟೋ ತಕವಾಗಿ, ತಂದಿದ್ದಾಗಿದೆ."

"ಅದು ಸರಿ. ಆದರೆ ಜೋನನು ಎಲ್ಲಿ ಹೋಗಿದ್ದಾನೆ? ತೋರುವುದೇ ಇಲ್ಲವಲ್ಲ?" ಜೋನನು ಅವರ ಒಬ್ಬನೇ ಒಬ್ಬ ಕೆಲಸದಾಳು.

ಅರ್ಜುನ ನಕ್ಕ. "ನಾನು ಅವನನ್ನು ಲಕ್ಷ್ಮಿಯೊಡನೆ ತಿರುಗಾಡಿ ಬರುವಂತೆ ಕಳುಹಿಸಿದ್ದೇನೆ ಅತನಿಲ್ಲದೆ ನಾನು ಈ ಟ್ರೇಯನ್ನು ತರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ ಅಲ್ಲವೆ?" ಎಂದು ಆತ ನಗುತ್ತಾ ಒಂದು ಕಪ್‌ನಲ್ಲಿ ಯಾವಾಗಲೂ ಹಾಕುವಷ್ಟೇ ಸಕ್ಕರೆ ಹಾಕಿ ಟೀಯನ್ನು ಬಗ್ಗಿಸಿ ಅದಕ್ಕೆ ಹಾಲು ಸುರಿದ.

"ಇದನ್ನು ಕುಡಿ. ಡಿಯರ್." ಎಂದು ಹೇಳಿ ಆ ಕಪ್ ಆಕೆಯ ಕೈಗೆ ಕೊಟ್ಟ ಆಕೆಯು ಸ್ವಲ್ಪ ಕುಡಿದು ನಿಲ್ಲಿಸಿದಳು.

"ಎಲ್ಲಾ ಕುಡಿ. ಇದು ನಿನಗೆ ಉತ್ಸಾಹವನ್ನು ಕೊಡುವುದು" ಎಂದು ಹೇಳಲು ಆಕೆಯು ಅದನ್ನು ಕುಡಿದಳು.

ಆದರೆ ಆಕೆಯು ತನ್ನ ಎದೆಯನ್ನು ಒತ್ತಿ ಹಿಡಿದು ಏನೇನೋ ಮಣ ಮಣ ಎಣಿಸುತ್ತಾ ದೊಪ್ಪನೆ ಹಾಸಿಗೆಯ ಮೇಲೆ ಬಿದ್ದಳು.

ಅರ್ಜುನನು ತುಂಬಾ ಜಾಗರೂಕನಾಗಿದ್ದ. ಯೋಚಿಸಿದಂತೆಯೇ ಎಲ್ಲಾ ನಡೆದಿತ್ತು. ಮೆಲ್ಲನೆ ಆಕೆಯ ಹಾಸಿಗೆಯ ಮೇಲಿದ್ದ ಕಪ್ ಮತ್ತು ಸೋಸರ್ ತೆಗೆದು, ತೊಳೆದು ಅದನ್ನು ಒಂದು ಡ್ರಾವರಿನಲ್ಲಿ ಅಡಗಿಸಿಟ್ಟನು. ಆಕೆಯ ಹಾಸಿಗೆಯ ಮೇಲೂ ಸ್ವಲ್ಪ ಟೀ ಬಿದ್ದಿತ್ತು. ಕೂಡಲೇ ಆಕೆಯನ್ನು ಎತ್ತಿ ಕೆಳಗೆ ಮಲಗಿಸಿ ಸಾಧ್ಯವಾದಷ್ಟು ಬೇಗ ಹಾಸಿಗೆಯ ವಸ್ತ್ರಗಳನ್ನು ಬದಲಿಸಿದ. ಮತ್ತು ಪುನಃ ಆಕೆಯನ್ನು ಹಾಸಿಗೆಯ ಮೇಲೆ ಮಲಗಿಸಿದ.

ಆತನು ಬೇರೊಂದು ಕಪ್ ಮತ್ತು ಸೋಸರ್ ತಂದು ಅದರಲ್ಲಿ ಅರ್ಧದಷ್ಟು ಟೀ ಹಾಕಿದ. ಅನಂತರ ಬೆಡ್‌ಶೀಟುಗಳನ್ನು ಯಾರೂ ಗುರುತಿಸಲಾಗದಂತಹ ಸ್ಥಳವೊಂದರಲ್ಲಿ ಬಚ್ಚಿಟ್ಟ.

ಜೋನನು ನಾಯಿಯೊಂದನೆ ಹಿಂತಿರುಗುವ ಮೊದಲೇ ಅರ್ಜುನನು ಡಾ| ಮುಂಡರ್‌ಕಾರರಿಗೆ ಫೋನ್ ಮಾಡಿ ಶೋಭಳು ಹಾಸಿಗೆಯಲ್ಲಿ ಕುಸಿದು ಬಿದ್ದಿದ್ದಾಳೆಂದು ತಿಳಿಸಿದ.

ಆತನ ದುಃಖವು ಅಸಾಧ್ಯವಾಗಿತ್ತು. ಆತನನ್ನು ಕಾಣಲು ಬಂದ ಮಿತ್ರರೊಡನೆ ಆತನು ದುಃಖಪೂರಿತ ದನಿಯಿಂದ "ಯಾಕೆ ದೇವರು ನನ್ನನ್ನು ಈ ರೀತಿ ಕಷ್ಟಕ್ಕೆ ಗುರಿಪಡಿಸಿದರೋ ಏನೋ!" ಎಂದು ಹೇಳುತ್ತಿದ್ದ.

ಕೆಲವು ದಿನಗಳ ನಂತರ ಆತನು ಕೆಲಸಕ್ಕೆ ಹಾಜರಾದ ಡಾ| ಮುಂಡರ್‌ಕಾರರು ಹತ್ತಿರವಿದ್ದಾಗಲೆಲ್ಲ ದುಃಖಪೂರಿತನಾಗಿದ್ದಂತೆ ನಟಿಸುತ್ತಿದ್ದ.

ಆತನು ಕ್ಲಬ್ಬುಗಳಿಗೆ ಹೋಗುವುದು ಕಡಿಮೆಯಾಗಿತ್ತು. ಎಲ್ಲರಿಗೂ ಆತನ ವಿಷಯದಲ್ಲಿ ಅನುತಾಪವಿತ್ತು. ಆದರೆ ವಿಮೆಯ ಹಣವು ಕೈಗೆ ಸಿಕ್ಕಿದೊಡನೆಯೇ ಆತನು ತನ್ನ ಜನರಲ್ ಮೆನೇಜರನನ್ನು ಕಂಡು, "ಇಲ್ಲಿಯ ಎಲ್ಲ ವಿಷಯಗಳೂ ಹೆಂಡತಿಯ ನೆನಪನ್ನು ತರುತ್ತವೆ ಆದುದರಿಂದ ದಯವಿಟ್ಟು ನನ್ನನ್ನು ಬೊಂಬಾಯಿಗೆ ಕಳುಹಿಸಿರಿ" ಎಂದನು.

ಅದರಂತೆಯೇ ಆತನು ಬೊಂಬಾಯಿಗೆ ವರ್ಗಾಯಿಸಲ್ಪಟ್ಟನು

೦ ೦ ೦

ಸ್ವಿಮ್ಮಿಂಗಿನಲ್ಲಿ ಹೋಟೆಲಿನ ಮಾಳಿಗೆಯಲ್ಲಿ ನಿಂತು ಅರ್ಜುನನು ಸೌಂದರ್ಯವನ್ನು ವೀಕ್ಷಿಸುತ್ತಿದ್ದ. ಅವನ ಪತ್ನಿಯು ತಿರುಗಾಡಲು ಹೋಗಲು ಒಳ್ಳೆಯ ಸೀರೆಯೊಂದನ್ನು ಹುಡುಕುತ್ತಿದ್ದಳು

ಒಬ್ಬನ ಅದೃಷ್ಟವು ಯಾವ ರೀತಿಯಲ್ಲಿಯೂ ತಿರುಗಲು ಸಾಧ್ಯವಿದೆ. ಅಲ್ಲದಿದ್ದರೆ ಅದನ್ನು ಕೊಲೆಯೆಂದು ಯಾರೊಬ್ಬರಾದರೂ ಹೇಳಿದ್ದಾರೆಯೇ? ನಿಜವಾಗಿಯೂ ಅರ್ಜುನನು ತುಂಬಾ ಹಣವನ್ನು ಸಂಪಾದಿಸಿದ್ದ.

ಬೊಂಬಾಯಿಯಲ್ಲಿ ಅರ್ಜುನನು ಹೆಸರು ಹೊಂದಿದ್ದ. ಎಲ್ಲಾ ಕೂಟಗಳಲ್ಲಿಯೂ ಆತನು ಇದ್ದೇ ಇರುತ್ತಿದ್ದನು.

ಆತನ ಮೆನೇಜಿಂಗ್ ಡೈರೆಕ್ಟರರು ಏರ್ಪಡಿಸಿದ ಒಂದು ಕೂಟಕ್ಕೆ ಹೋದಾಗ ಅಲ್ಲಿ ಅವನು ಮೀರಳನ್ನು ಸಂಧಿಸಿದ್ದ. ಅದು ಬೆಳೆದು ಅವರಿಬ್ಬರೂ ಮದುವೆಯಾಗಿದ್ದರು. ಎಲ್ಲರೂ ಅವನ ಪ್ರಥಮ ಪತ್ನಿಯ ಮರಣದ ಸುದ್ದಿಯನ್ನು ತಿಳಿದಿದ್ದರು. ಎಲ್ಲರಿಗೂ ಆತನ ಮೇಲೆ ಕರುಣೆಯಿತ್ತು. ಮೀರಾಳನ್ನು ಮದುವೆಯಾದಂತೆಯೇ ಆತನ ಕೆಲಸದಲ್ಲಿ ಭಡ್ತಿ ದೊರಕಿತ್ತು.

ಇದೆಲ್ಲವನ್ನೂ ಯೋಚಿಸುತ್ತಿದ್ದ ಅರ್ಜುನನು ಒಂದು ಪದ್ಯವನ್ನು ಗುಣುಗುಣಿಸಲಾರಂಭಿಸಿದನು.

"ಮೂರು ಕುರುಡು ಇಲಿಮರಿಗಳು..."

"ಮೂರು ಕುರುಡು ಇಲಿಮರಿಗಳು ..."

ಅವನಿಗೆ ಅದೊಂದೇ ಪದ್ಯ ತಿಳಿದಿತ್ತು.

ಆ ದಿನ ರಾತ್ರಿ ಊಟಕ್ಕೆ ಕುಳಿತಾಗ ಅವನು ಮೀರಳಿಗೆ ಮಹೇಂದ್ರನ ಕತೆಯನ್ನು ಹೇಳಿದನು.

"ಒಂದು ವೇಳೆ ನಾನು ಹಾಗೇ ಆದರೆ?" ಎಂದು ಹೇಳಿದಾಗ ಮೀರಳು ಹೆದರಿದಳು. ದಯವಿಟ್ಟು ಹಾಗೆ ಹೇಳಬಾರದೆಂದು ಬೇಡಿಕೊಂಡಳು.

"ಡಾರ್ಲಿಂಗ್, ವಿಮೆಯು ಪ್ರತಿಯೊಬ್ಬನಿಗೂ ಅವಶ್ಯವಾಗಿದೆ. ಆದುದರಿಂದ ನಾವು ಏಕೆ ತೆಗೆಸಬಾರದು? ನಾನು ನನ್ನ ಹೆಸರಿನಲ್ಲಿ ಒಂದೂವರೆ ಲಕ್ಷಕ್ಕೂ, ನಿನ್ನ ಹೆಸರಿನಲ್ಲಿ ಒಂದು ಲಕ್ಷಕ್ಕೂ ವಿಮೆಯನ್ನು ತೆಗೆಸುತ್ತೇನೆ. ಅವುಗಳು ಮುಂದೆ ನಮಗೆ ಉಪಕಾರಕ್ಕೆ ಬೀಳುತ್ತವೆ ಆಗದೇ?" ಎಂದು ಮುಗುಳ್ನಗುತ್ತಾ ಆಕೆಯ ಕಡೆಗೆ ನೋಡಿದ.

"ಅದು ಸರಿಯಾಗಿದೆ. ನಾವು ಬೊಂಬಾಯಿಗೆ ಹೋದ ಕೂಡಲೇ ವಿಮೆಯನ್ನು ತೆಗೆಸ ಬೇಕು. ಅದು ಒಳ್ಳೆಯ ಆಲೋಚನೆಯಾಗಿರುತ್ತದೆ" ಎಂದು ಮೀರಾ ಹೇಳಿದಳು.

೦ ೦ ೦

ಅಂದು ವಿಜಯ ದಶಮಿಯಾಗಿತ್ತು. ಅರ್ಜುನನ ಮೂರನೆಯ ಮಡದಿಯಾಗಿದ್ದ ವಿಜಯಾಳು ಮನೆಯ ಹೊರಗೆ ಉದ್ಯಾನವನದಲ್ಲಿ ನಿಂತುಕೊಂಡು ಮಾಲಿಗಳು ಮಾಡುವ ಕೆಲಸವನ್ನು ನೋಡುತ್ತಿದ್ದಳು. ಆಗ ಅವಳು ತನ್ನ ಮನೆಗೆ ಒಂದು ಉತ್ತಮವಾದ ಕಾರು ಬರುತ್ತಿದ್ದುದನ್ನು ಕಂಡಳು. ಆ ಕಾರು ಆಕೆಯ ಸ್ನೇಹಿತೆಯಾದ ಮಿಸೆಸ್ ರೊಯ್‌ಯದಾಗಿತ್ತು

"ಹಲೋ, ವಿಜಯಾ. ನಾನು ನಿನ್ನ ಗಂಡನ ಸ್ನೇಹಿತೆಯೊಬ್ಬಳನ್ನು ಕರೆ ತಂದಿದ್ದೇನೆ ನೋಡು. ಅವಳು ಆತನನ್ನು ಚೆನ್ನಾಗಿ ಬಲ್ಲಳು". ಎಂದು ಕಾರಿನಿಂದಲೇ ಮಿಸೆಸ್ ರೋಯ್ ಕರೆದಳು.

ಮಧ್ಯ ವಯಸ್ಸಿನ ಮಿಸೆಸ್ ಖನ್ನಾಳು ಅರ್ಜುನನನ್ನು ಚೆನ್ನಾಗಿ ಬಲ್ಲವಳಿದ್ದಳು. ಅವರು ತಮ್ಮ ತಮ್ಮೊಳಗೆ ಮಾತನಾಡುತ್ತಿದ್ದಂತೆಯೇ ಮಿಸೆಸ್. ಖನ್ನಾ ಅವಳು ಬಹಳ ಬೇಸರದಿಂದ "ಮಿ. ಅರ್ಜುನನು ಇಲ್ಲದುದು ನನಗೆ ಬಹಳ ಬೇಸರವಾಗಿದೆ. ಆತನು ಇದ್ದಿದ್ದರೆ ಒಳ್ಳೆಯದಿತ್ತು, ಅವನು ತನ್ನ ಮೊದಲ ಪತ್ನಿ ಶೋಭಳೊಂದಿಗೆ ದೆಹಲಿಯಲ್ಲಿದ್ದಾಗ ನನ್ನ ಪತಿ ಮತ್ತು ಅವನು ಒಂದೇ ಆಫೀಸಿನಲ್ಲಿ ಕೆಲಸಕ್ಕಿದ್ದರು" ಎಂದಳು.

"ಮೀರಳನ್ನು ನಾನು ಒಮ್ಮೆ ಕಂಡಿದ್ದೆ. ಅವಳು ಶೋಭಳಿಗೆ ಸರೀ ವಿರುದ್ಧವಾಗಿದ್ದಳು. ಅವಳು ತುಂಬಾ ಶ್ರೀಮಂತಳಾಗಿದ್ದಳು" ಎಂದು ಮಾತಿನ ಮಲ್ಲಿಯಾದ ಮಿಸೆಸ್ ಖನ್ನಾ ಹೇಳಿದಳು.

"ಹೌದು" ಕಾಫಿಯನ್ನು ಕಪ್‌ಗಳಿಗೆ ಸುರಿಯುತ್ತಿದ್ದಂತೆಯೇ ವಿಜಯಾ ಹೇಳಿದಳು "ಅವರಿಗೆ ತುಂಬಾ ಕಷ್ಟದ ಸಮಯವಾಗಿತ್ತು. ಮೊದಲನೆಯ ಮಡದಿಯು ಟೈಫ್ಹಾಯ್ಡ್‌ನೊಡನೆ ಹೋರಾಡಿ ಸೋತಳು. ಎರಡನೆಯವಳು ಬೆಂಕಿ ಅನಾಹುತದಲ್ಲಿ ನಿಧನಳಾದಳು..."

"...ಏನು! ಟೈಫ್ಹಾಯ್ಡ್! ಬೆಂಕಿ ಅನಾಹುತ! ಸಾಧ್ಯವೇ ಇಲ್ಲ, ವಿಜಯಾ, ನೀನು ತಪ್ಪಿದ್ದೀ. ಅವರಿಬ್ಬರೂ ಒಂದೇ ಬಗೆಯ ರೋಗದಿಂದ—ಅಂದರೆ ಎದೆ ನೋವಿನಿಂದ— ಸತ್ತಿದ್ದಾರೆಂದು ನನಗೆ ಖಂಡಿತ ತಿಳಿದಿದೆ. ಇದು ಬಹಳ ವಿಚಿತ್ರವಾಗಿದೆ. ಅಲ್ಲವೆ?" ಎನ್ನುತ್ತಾ ಆಶ್ಚರ್ಯದಿಂದ ವಿಜಯಾಳ ಮೋರೆ ನೋಡುತ್ತಾ ಹೇಳಿದಳು ಖನ್ನಾ.



ಶ್ರೀ ಕೆ. ಕೆ ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

"ಶೋಭಾಳು ದೆಹಲಿಯಲ್ಲಿ, ಮೀರಳು ಶೋಲಾಪುರದಲ್ಲಿ ಸಿಧನರೊಂದಿದ್ದರು. ಆದೂ ಅವರು ಸಂಚಾರಕ್ಕಾಗಿ ಹೋದಾಗ. ದೇವರು ಒಂದು ಕೈಯಿಂದ ತೆಗೆದುಕೊಂಡು ಇನ್ನೊಂದು ಕೈಯಿಂದ ಕೊಡುತ್ತಾನೆ. ಅರ್ಜುನನ ಇಬ್ಬರು ಹೆಂಡಂದಿರೂ ವಿಮೆಯನ್ನು ತೆಗೆದಿದ್ದರು. ಆ ಹಣವೆಲ್ಲವೂ ಮೀರಳ ತಂದೆಯಿಂದ ವರದಕ್ಷಿಣೆಯೂ ಹೇರಳ ಭಂಗಾರವೂ ಆತನಿಗೆ ಸಿಕ್ಕಿದೆ. ಅದಿರಲಿ, ನೀನು ವಿಮೆಯನ್ನು ತೆಗೆಸಿದ್ದೀಯೊ?" ಎಂದು ಮಿಸೆಸ್ ಖನ್ನಾ ವಿಜಯಳೊಡನೆ ಹೇಳಿದಳು.

ಆದರೆ ವಿಜಯಳು ಆಲೋಚನೆಯಲ್ಲಿ ಮುಳುಗಿದ್ದಳು. ಯಾಕೆ ಅರ್ಜುನನು ತನಗೆ ಸುಳ್ಳು ಹೇಳಿದನು? ಇಬ್ಬರು ಹೆಂಡಂದಿರ ಸಾವಿನ ವಿಷಯವಾಗಿ ಸುಳ್ಳು ಹೇಳಿದ್ದನು. ಅವಳು ಮಿಸೆಸ್ ಖನ್ನಾಳನ್ನು ನೋಡಲು ಕತ್ತೆತ್ತಿದಳು.

"ಏನು? ನಾನೇನಾದರೂ ಹೇಳಬಾರದ್ದನ್ನು ಹೇಳಿದೆನೆಯೇ? ಕ್ಷಮಿಸು" ಎಂದು ಮಿಸೆಸ್ ಖನ್ನಾಳು ವಿಜಯಳ ಮುಖನೋಡುತ್ತಾ ಹೇಳಿದಳು.

ಇದೊಂದು ದೇವರು ಕಳುಹಿಸಿದ ಮುಂಜಾಗ್ರತೆಯ ಸಂದೇಶವೆಂದು ವಿಜಯಾ ತಿಳಿದಳು. ಅವಳ ಜೀವವು ಉಯ್ಯಾಲೆಯಂತೆ ತೂಗಾಡುತ್ತಿತ್ತು.

○ ○ ○

"ವಿಮೆಯು ಪ್ರತಿಯೊಬ್ಬನಿಗೂ ಅವಶ್ಯ. ನಾವೂ ಸಹ ತೆಗೆಸೋಣವೇ? ನಾನು ನನ್ನ ಹೆಸರಿನಲ್ಲಿ ಮೂರು ಲಕ್ಷ ರೂಪಾಯಿಗಳಿಗೂ, ನಿನ್ನ ಹೆಸರಿನಲ್ಲಿ ಎರಡು ಲಕ್ಷ ರೂಪಾಯಿಗಳಿಗೂ ವಿಮೆ ತೆಗೆಸುತ್ತೇನೆ. ಅದು ಮುಂದಕ್ಕೆ ಒಳ್ಳೆಯದನ್ನುಂಟು ಮಾಡುತ್ತದೆ. ಒಂದು ವೇಳೆ ನಾನು ಸತ್ತರೆ..."

"ಹಾಂ" ಎಂದು ಕಿರುಚಿದಳು ವಿಜಯಾ. ಕನ್ಯಾ ಕುಮಾರಿಯ ಹೋಟೆಲಿನಲ್ಲಿ ಅರ್ಜುನನು ಹೇಳಿದ ಮಾತುಗಳು ಅವಳ ಕಿವಿಗಳಲ್ಲಿ ಗುನುಗುನಿಸುತ್ತಿದ್ದವು.

"ಅದಿರಲಿ, ನೀನು ವಿಮೆಯನ್ನು ತೆಗೆಸಿದ್ದೀಯೊ?"—ಮಿಸೆಸ್ ಖನ್ನಾಳ ಮಾತುಗಳು ನೆನಪಿಗೆ ಬಂದುವು ಅವುಗಳು ಒಂದು ಬಗೆಯ ಸಂದೇಶವಾಗಿದ್ದುವು

ಆದರೆ ಅವಳು ತನ್ನ ಗಂಡನಲ್ಲಿ ಯಾವ ದೋಷವನ್ನು ಹುಡುಕುವುದು ಸಾಧ್ಯವಿರಲಿಲ್ಲ. ತನ್ನ ಮುಂದಿನ ಕರ್ತವ್ಯದ ಕುರಿತು ಆಕೆಯು ಅವಳ—ಅವರ—ಮನೆಯ ಅಂಗಳದಲ್ಲಿ ಕುರಿತು ಆಲೋಚಿಸುತ್ತಿದ್ದಳು.

ಬೀಗ ಹಾಕಿ ಇಟ್ಟಿದ್ದ ಒಂದು ಡ್ರಾವರು ಮಾತ್ರ ಅವಳ ಆಲೋಚನೆಗಳಿಗೆ ಸಹಾಯಕವಾಗಿದ್ದವು. ಅವುಗಳನ್ನು ಮುಟ್ಟಬಾರದೆಂದೂ, ಆದರೊಳಗೆ ಕೆಲವು ರಹಸ್ಯ ಮತ್ತು ಕೆಲಸದ ಬಗೆಗಿನ ಪತ್ರಗಳು ಕ್ರಮವಾಗಿವೆಯೆಂದೂ ಅರ್ಜುನನು ಹೇಳಿದ್ದನು ಅವಳು ಅವುಗಳನ್ನು ಅದಲು ಬದಲು ಮಾಡಬಹುದೆಂದು ಅವನು ಹೆದರಿದ್ದನು.

ಅಂಗಳದಿಂದ ವಿಜಯಳು ನೇರವಾಗಿ ಮನೆಯೊಳಗೆ ಹೋದಳು. ಅರ್ಜುನನ ಕೋಣೆಯೊಳಗೆ ಹೋಗಿ ಆ ಡ್ರಾವರಿನ ಹತ್ತಿರ ನಿಂತಳು

ಅದೇ ಡ್ರಾವರ್....

○ ○ ○

ಅರ್ಜುನನು ಇಲ್ಲಿರಲಿಲ್ಲ ಅವಸರದ ಕೆಲಸಗಳಿಗಾಗಿ ಬೊಂಬಾಯಿಗೆ ಹೋಗಿದ್ದನು. ಮರುದಿನ ಸಂಧ್ಯಾಕಾಲದ ನಂತರ ಹಿಂತಿರುಗುವೆನೆಂದು ಹೇಳಿದನು

ಸುಮಾರು ಅರ್ಧಗಂಟೆಯ ಕಾಲ ವಿಜಯಾ ಕಷ್ಟಪಟ್ಟು ಬೀಗತೆರೆಯಲು ಪ್ರಯತ್ನಿಸಿದಳು. ಕೊನೆಗೆ ಯಶಸ್ವಿಯಾದಳು. ಅಲ್ಲೀ ಎಲ್ಲಾ ರಹಸ್ಯಗಳು ಅಡಗಿದ್ದವು .. ...

ಒಂದು ಸಣ್ಣ ಬಾಟಲಿ. ಆ ಬಾಟಲಿಯ ಮೇಲೆ ಒಂದು ಪಟ್ಟಿಯನ್ನು ಹಚ್ಚಿದ್ದರು.

"ಪೊಟೇಶಿಯಂ ಸೈನೈಡ್...."

ಡೋಸ್: "ಒಂದು ಕಪ್ ಟೀಗೆ ಮೂರು ಬಿಂದುಗಳು"

ಎಲ್ಲಾ ಮರಣೋತ್ತರ ಸರ್ಟಿಫಿಕೇಟುಗಳು ಅಲ್ಲಿದ್ದುವು. ವಿಮೆಯ ಪೊಲಿಸಿಗಳೂ ಅಲ್ಲಿ ಇದ್ದುವು

ಅವಳ ಹೆಸರಿನ ಪೊಲಿಸಿಯೂ ಸಹ ಅಲ್ಲೇ ಇತ್ತು. ಎರಡು ಲಕ್ಷ........

ಅರ್ಜುನನ ಹೆಸರಿನಲ್ಲಿ...ಮೂರು ಲಕ್ಷ.... ..

ಒಟ್ಟು ಐದು ಲಕ್ಷ!

ಆವಳು ತನ್ನ ಗಂಡನೊಡನೆ ಧೈರ್ಯದಿಂದವ್ಯವಹರಿಸಬೇಕೆಂದೆಣಿಸಿಕೊಂಡಳು

ಅಲ್ಲಿಯೇ ಒಂದು ಪಟ್ಟಿಯಿತ್ತು, ಅದರ ಮೇಲೆ "ಮೂರು ಕುರುಡ ಇಲಿ ಮರಿಗಳು" ಎಂದು ಬರೆದು ಅದರ ಕೆಳಗೆ ಸಾಲಾಗಿ "ಶೋಭಾ", "ಮೀರಾ" ಮತ್ತು "ವಿಜಯಾ" ಎಂದು ಬರೆಯಲಾಗಿತ್ತು. ಶೋಭಾ ಮತ್ತು ಮೀರಾ ಇವರ ಹೆಸರಿನ ಎದುರು ಒಂದು ಚಿಹ್ನೆಯನ್ನು ಹಾಕಲಾಗಿತ್ತು ಆದರೆ ವಿಜಯಳ ಹೆಸರಿನ ಮುಂದೆ ಏನೂ ಇರಲಿಲ್ಲ. ಮುಂದೊಂದು ದಿನ ದಿನ ಅಲ್ಲಿಯೂ ಚಿಹ್ನೆ ಬೀಳಬಹುದು.... ಎಂದು ವಿಜಯಾ ಯೋಚಿಸಿದಳು.

ಹಾಗೆ ಆಗಲಿಕ್ಕೆ ಬಿಡಬಾರದು" ಎಂದು ಯೋಚಿಸಿ ಧೈರ್ಯ ತಂದುಕೊಂಡಳು.

ಅವಳು ಆ ಚಿಕ್ಕ ಬಾಟಲಿಯೊಳಗಿದ್ದುದನ್ನು—ಸ್ವಲ್ಪವನ್ನು—ಬೇರೊಂದು ಬಾಟಲಿಯಲ್ಲಿ ಹಾಕಿ ಎಲ್ಲಾ ವಸ್ತುಗಳನ್ನೂ ಯಥಾ ಪ್ರಕಾರ ಜೋಡಿಸಿಟ್ಟಳು.

ಅವರಿಬ್ಬರಲ್ಲಿ ಯಾರಾದರೊಬ್ಬರು ಸಾಯುವುದು ಖಂಡಿತವಾಗಿತ್ತು. ಆದುದರಿಂದ ಅವಳು ಅರ್ಜುನನನ್ನು ಕೊಲ್ಲಲು ನಿರ್ಧರಿಸಿದಳು.

○ ○ ○

ಮರ ದಿನ ಸಾಯಂಕಾಲ ಅರ್ಜುನನು ಹಿಂತಿರುಗಿದನು. ಬಂದ ಕೂಡಲೇ ವಿಜಯಳು ಅವನನ್ನು ಸ್ವಾಗತಿಸಿದಳು.

"ಇಂದು ರಾತ್ರಿ ಏನಾದರೂ ಪ್ರೋಗ್ರಾಂ ಇದೆಯೇ" ಎಂದು ಅವನು ಪ್ರಶ್ನಿಸಿದ,

"ಇಲ್ಲವೇ ಏನು? ಮಿ ಬಿರೇನ್‌ರವರಲ್ಲಿ ಕೂಟವಿದೆಯೆಂಬುದು ಮರೆತು ಹೋಯಿತೇನು?"

"ಕ್ಷಮಿಸು. ಇಂದು ನಾನು ಆಯಾಸಗೊಂಡಿದ್ದೇನೆ" ಎಂದು ಹೇಳಿದರೂ ಪತ್ನಿಯ ಒತ್ತಾಯದಿಂದ ಕೂಟಕ್ಕೆ ತೆರಳಿದ.

ಹಿಂತಿರುಗಿ ಬರುವಾಗ ತುಂಬಾ ರಾತ್ರಿಯಾಗಿತ್ತು ಬಂದವನೇ "ನಾನು ತುಂಬಾ ಆಯಾಸ ಪಟ್ಟಿದ್ದೇನೆ, ನಾಳೆ ನನ್ನಿಂದ ಏನೂ ಮಾಡಲೂ ಸಾಧ್ಯವಿಲ್ಲ" ಎಂದು ಹೇಳಿದನು

'ಇರಲಿ ಬಿಡಿರಿ ಏನೂ ಇಲ್ಲ. ಇದೆಲ್ಲ ಪಾರ್ಟಿಯ ಸಮಯ ಹೆಚ್ಚಾಗಿ ಕುಡಿದುದರ ಕಾರಣದಿಂದಿರಬೇಕು. ಎಲ್ಲಾ ನಾಳೆ ಬೆಳಗ್ಗೆ ಸರಿ ಹೋಗಬಹುದು" ಎಂದಳವಳು.

○ ○ ○

ಕೂಡಲೇ ಅವಳಿಗೊಂದು ಆಲೋಚನೆ ಹೊಳೆಯಿತು. ಇದೊಂದು ಸುಸಂದರ್ಭವಾಗಿತ್ತು. ಇದು ತಪ್ಪಿದರೆ ಅವಳು ಮೂರನೆಯ ಕುರುಡು ಇಲಿ ಮರಿಯಾಗಬೇಕಾಗುತ್ತಿತ್ತು.

'ಡಾರ್ಲಿಂಗ್" ಸಮಾಧಾನಕರವಾದ ದನಿಯಿಂದ ಹೇಳಿದಳು "ನನ್ನ ತಾಯಿಯು ಯಾವಾಗಲೂ ಆಯಾಸವಾದಾಗ ಬಿಸಿ ಚಹ ಕುಡಿದರೆ ಅದು ಉಲ್ಲಾಸವನ್ನೀಯುವುದೆಂದು ಹೇಳುತ್ತಿದ್ದಳು. ನಾನು ಒಂದು ಕಪ್ ಚಹ ಮಾಡಿತರಲೇ?"

ಹತ್ತು ಮಿನಿಟುಗಳ ನಂತರ ವಿಜಯಾಳು ಚಹ ಮಾಡಿಕೊಂಡು ತಂದಳು. ಅರ್ಜುನನು ಚಹವನ್ನು ಕಾದು ಕುಳಿತಿದ್ದ. ಅವಳು ಕಪ್ ಹಿಡಿದುಕೊಂಡಿದ್ದವಳು ನಡುಗುವ ಕೈಗಳಿಂದ ಆತನಿಗೆ ಕೊಟ್ಟಳು,

"ಕುಡಿಯಿರಿ, ಡಿಯರ್, ನಾಳೆ ಬೆಳಗ್ಗೆ ನೀವು ಉಲ್ಲಾಸಪೂರಿತರಾಗಿ ಏಳುವಿರಿ. ಇಂದು ಕುಡಿದುದರ ಅಮಲೆಲ್ಲ ಇಳಿದು ಹೋಗುವುದು".

"ಡಿಯರ್, ನೀವು ಹೇಳಿದ, ಆ ಪದ್ಯ ಯಾವುದು? ಹಾಂ. ಅದೆ! ಅವಳು ಪದ್ಯವನ್ನು ಹೇಳಲಾರಂಭಿಸಿದಳು.

"ಮೂರು ಕುರುಡ ಇಲಿ ಮರಿಗಳು,
ಮೂರು ಕುರುಡ ಇಲಿ ಮರಿಗಳು,
ನೋಡು ಹೇಗೆ ಓಡುತಿವೆ!
ನೋಡು ಹೇಗೆ ಓಡ ತಿವೆ!"

ಅರ್ಜುನನು ಅಲ್ಲಿಯೇ ಕುಸಿದು ಬಿದ್ದ. ಎದೆಯನ್ನು ಒತ್ತಿಕೊಂಡು ತನ್ನ ಪತ್ನಿಯ ಕಡೆಗೆ ನೋಡುತ್ತಾ ಕಣ್ಣು ಮುಚ್ಚಿದನು. ಕಪ್ ಮತ್ತು ಸಾಸರ್‌ಗಳು ಕೈಯಿಂದ ಜಾರಿ ಕೆಳಗೆ ಹಾಸಿಗೆಯ ಮೇಲೆ ಬಿದ್ದಿದ್ದುವು. ಉಳಿದ ಚಹವು ಅಲ್ಲೇ ಬಿದ್ದಿತ್ತು!

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ

160 ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್

ನಿಸ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್. ಉಡುಪಿ, ದ. ಕ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ ಎರಡು ಉತ್ತಮ ಪ್ರತಿ: ರೂ ಎರಡೂವರೆ(ಟಪಾ.ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗುವುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ:ರೂ. 1-25 (ಟಪಾ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟಪಾ ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

REGD. No. B. G. 176
LICENCE No. 31
Licensed to Post without Prepayment

ಅಪ್ರತಿಮ ಮಾನವತಾವಾದಿ ಜವಾಹರಲಾಲ ನೆಹರು

ಬರೆದವರು

ಸ್ಕ್ವಾಡ್ರನ್ ಲೀಡರ್ ಚಾದ್ದಾ

ದಿವಂಗತ ಪ್ರಧಾನ ಮಂತ್ರಿ ನೆಹರೂ ಅವರು ಕಾಲಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಅವರು ಯಾವುದೇ ಸಮಾರಂಭಗಳಿಗೇ ಆಗಲಿ ಎಂದೂ ತಡವಾಗಿ ಹೋಗಲಿಲ್ಲ. ಅಸ್ವಸ್ಥರಾದಾಗಲೂ ಅವರು ಪಟಿ ಸಮಾರಂಭಗಳಿಗೆ ಸಮಯಕ್ಕೆ ಸರಿಯಾಗಿ ಆಗಮಿಸುತ್ತಿದ್ದರು. ಅವರ ಈ ನಿಯಮಿತತನವು ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ.

ದಿವಂಗತ ಪ್ರಧಾನ ಮಂತ್ರಿಗಳ ಕೊನೆಯ ವಿಮಾನ ಪ್ರಯಾಣದ ದಿನ ಅಂದರೆ ೧೯೬೪ ಮೇ ೨೬ರಂದು ರಾತ್ರಿ ನಾವು ಅವರನ್ನು [illegible] ಪಾಲಂ ವಿಮಾನ ನಿಲ್ದಾಣದವರೆಗೆ ವಿಮಾನದಲ್ಲಿ ಕರೆತಂದೆವು. ಅವರು ಅಂದು ವೇಳೆಗೆ ಸರಿಯಾಗಿಯೇ ಆಗಮಿಸಿದರು. ನೆಹರೂ ಅವರು ತಮ್ಮ ವಿಮಾನ ನಡೆಸುತ್ತಿದ್ದ ವಿಮಾನ ಸಿಬ್ಬಂದಿಯವರ ಹಿತರಕ್ಷಣೆಯಲ್ಲಿ ವಿಶೇಷ ಆಸಕ್ತಿ ವಹಿಸುತ್ತಿದ್ದರು. ನಾವು ನಮ್ಮ ನಿವಾಸ ಸ್ಥಳಗಳಿಂದ ದೂರವಿದ್ದಾಗ ನಮಗೆ ಯಾವುದೇ ವಿಧದ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಅವರ ಕೊನೆಯ ವಿಮಾನ ಪ್ರಯಾಣದ ದಿನವಂತೂ ನೆಹರೂ ಅವರು ಪಾಲಂ ವಿಮಾನ ನಿಲ್ದಾಣಕ್ಕೆ ನೀವು ಬಂದು ಬಹಳ ಹೊತ್ತಾಯಿತೇ? ಎಂದು ನಮ್ಮನ್ನು ಕೇಳಿದರು. ಇಲ್ಲ, ಈಗ ನಾವು ಬಂದೆವು ಎಂದು ಹೇಳಿದಾಗ ಅವರು ತಮ್ಮ ಪ್ರಯಾಣಗಳಿಂದಾಗಿ ನಮಗೆ ಯಾವುದೇ ತೊಂದರೆಯಾಗಿಲ್ಲವೆಂದು ಸಮಾಧಾನ ಪಟ್ಟುಕೊಂಡರು.

ನೆಹರೂ ಅವರು ನಿಸರ್ಗಪ್ರೇಮಿಗಳಾಗಿದ್ದರು. ಸಾಮಾನ್ಯವಾಗಿ ಜನಸಾಮಾನ್ಯರ ಗಮನಕ್ಕೆ ಬರದಿರುವಂತಹ ಸಣ್ಣಪುಟ್ಟ ವಸ್ತುಗಳ ಬಗೆಗೂ ಅವರು ಅಮಿತ ಆಸಕ್ತಿ ವಹಿಸುತ್ತಿದ್ದರು. ಅವರಿದ್ದ ವಿಮಾನವು ಬೆಟ್ಟಗಳ ಮೇಲೆ ಹಾರುತ್ತಿದ್ದಾಗ ನೆಹರೂ ಅವರು ನಿಸರ್ಗ ಸೌಂದರ್ಯವನ್ನು ಕಂಡು ಮುಗ್ಧರಾಗುತ್ತಿದ್ದರು. ಯಾವುದೇ ಗಿರಿಶಿಖರಗಳು ಕಂಡು ಇದು ಯಾವ ಶಿಖರ? ಎಂದು ಕೇಳುತ್ತಿದ್ದರು. ಇಲ್ಲವೇ ಇದು ಇಂತಹ ಶಿಖರವಿರಬೇಕು ಎಂದು ತಮ್ಮಷ್ಟಕ್ಕೆ ತಾವೇ ತರ್ಕಮಾಡುತ್ತಿದ್ದರು.

ನೆರೆಹಾವಳಿಯಿಂದ ಸಂತ್ರಸ್ತರಾದ ಪ್ರದೇಶಗಳ ವೀಕ್ಷಣೆ ಮಾಡುವಾಗ, ನಿಸರ್ಗದ ದುರಂತಗಳಿಂದಾಗಿ ದುಃಖ ದುಮ್ಮಾನಗಳನ್ನು ಅನುಭವಿಸುತ್ತಿದ್ದ ಜನರನ್ನು ಕಂಡು ಅವರ ಮನಕರಗಿ ಹೋಗುತ್ತಿತ್ತು. ವಿಮಾನ ಚಾಲಕನ ದೃಷ್ಟಿಯಿಂದ ಹೇಳಬೇಕಾದರೆ ನೆಹರೂ ಒಬ್ಬ ಉತ್ತಮ ಪ್ರಯಾಣಿಕರಾಗಿದ್ದರು. ವಿಮಾನವು ಪ್ರತಿಕೂಲ ಹವಾಮಾನದಲ್ಲಿ ಮುಂದುವರಿಯಬೇಕಾದ ಪ್ರಸಂಗಗಳಲ್ಲಿಯೂ ಅವರ ಗಾಂಭೀರ್ಯ, ಪ್ರಶಾಂತತೆಗೆ ಎಂದೂ ಭಂಗ ಬರಲಿಲ್ಲ. ಸುದೂರದ ಸ್ಥಳಗಳಿಗೆ ವಿಮಾನದಲ್ಲಿ ಪ್ರಯಾಣ ಮಾಡುವಾಗ ಸಾಮಾನ್ಯವಾಗಿ ಪ್ರತಿಕೂಲ ಹವಾಮಾನವನ್ನು ಎದುರಿಸಬೇಕಾಗುತ್ತದೆ. ಪ್ರಯಾಸಕರವಾದ ಇಂತಹ ಪ್ರಯಾಣದ ನಂತರವೂ ನೆಹರೂ ಅವರು ಹರ್ಷಚಿತ್ತರಾಗುತ್ತಿದ್ದರು. ಅವರ ಮುಖದ ಮೇಲೆ ಮುಗುಳು ನಗೆ ತುಳುಕುತ್ತಿತ್ತು.

ದಿವಂಗತ ಪ್ರಧಾನ ಮಂತ್ರಿ ನೆಹರೂ ಅವರನ್ನು ವಿಮಾನದಲ್ಲಿ ಕೆಲವು ದೂರದವರೆಗೆ ಸಾಗಿಸಿದ ನಾವು ನಮ್ಮ ಸಂಗಡಿಗರೇ ಭಾಗ್ಯಶಾಲಿಗಳು. ಕಾರಣ ನೆಹರೂ ಪ್ರಧಾನ ಮಂತ್ರಿಗಳಾಗಿದ್ದರೆಂದಲ್ಲ ಅವರ ತುಂಬಾ ದಯಾಳುಗಳಾಗಿದ್ದರು. ನೆಹರೂ ಅವರ ಔದಾರ್ಯ, ಅವರ ಮಾನವೀಯತೆ ಅಸದೃಶವಾಗಿದ್ದವು.

ನಿನ್ನ ಭಾಗ್ಯದ ರವಿಯು ತೇಜವೊಂದೇ ಸಾಕು!

ಉತ್ತರದ ಉತ್ತುಂಗ ಹಿಮಗಿರಿಯು ಔನ್ನತ್ಯ,
ಪಶ್ಚಿಮದ ಸಾಗರನ ವೈಶಾಲ್ಯ ಹೃದಯದಲಿ ||
ಗಂಗೆಯೂ ಸಲಿಲದಾ ಪಾವನಂ ನ ನವಾಗಿ
ಭಾರತದ ಆದರ್ಶ ಪುತ್ರ ನೀನು ||
ಗಾಂಧಿ ಗಂಧದ ಕಂಪ ಜಗಕೆಲ್ಲ ಸೂಸುವಾ
ವಾಯುದೇವನ ಕಾರ್ಯ—ಶಿಷ್ಯಗೈದೆ ||
ಶಾಂತಿ ಸತ್ಯದ ಪ್ರಭೆಯು ಜನದೃಷ್ಟಿಯಲಿ ಬೆಳಗೆ
ಅಗ್ನಿದೇವನ ಕೆಲಸ ಗೈವುದಾಯ್ತು ||
ಜನರ ಮನವಾಳುತ್ತ ವೈಭವದಿ ಬಾಳುತ್ತ
ದೇವೇಂದ್ರ ನೀನಾದೆ ಭಾರತದ ಭಾನು ||
ಪಶ್ಚಿಮದ ಸಂಸ್ಕೃತಿಯು ಪೂರ್ವಕ್ಕೆ ಹೊಂದಿಸುವ
ವರ ಸರಸ್ವತಿ ಕುವರನಾದೆ ನೀನು ||
ಶಿಬಿಯವೊಲು ರಾಷ್ಟ್ರಕೆದೇಹಾರ್ಪಣಗೈದೆ
ಪತ್ನಿ ಪ್ರಾಣವ ಒತ್ತೆಯಿತ್ತೆ ರಾಮನೊಲು
ಹತ್ತು ವರ್ಷಕು ಮಿಕ್ಕು ವನವಾಸವನುಗೈದೆ
ಭಾರತದ ಸ್ವಾತಂತ್ರ್ಯ ಸಾಧನೆಗೆ ವಿಭುವೆ||
ಸಾಹಿತ್ಯ ವಿಜ್ಞಾನ ಆಟ ನೋಟಗಳೆನಿತು
ನಷ್ಟ ಹೊಂದಿವೆ ನಿನ್ನ ನಿಧನದಿಂದ ||
ಕಾವಿ ಕರೊ ಬಡವರೋ ಅಲ್ಪ ಸಂಖ್ಯಾಕರೊ
ಕೂಗುತಿಹರೈ ಜ್ಯೋತಿ ನಂದಿತೆಂದು ||
ನಿನ್ನ ಮಕ್ಕಳ ಪ್ರೀತಿ ಸೌಶೀಲ್ಯ ಘನತೆಗಳು
ನಿನ್ನ ಅಂತಃಕರಣ ಮರೆವ ಬಹವೇ ||
"ನಿನ್ನ ಭಾಗ್ಯದ ರವಿಯು ತೇಜವೊಂದೇ ಸಾಕು"
ಭಾರತಂ ಮುನ್ನಡೆಯೆ—ನೀಡು ದೊರೆಯೆ ||

—ಎ. ಬಾಲಕೃಷ್ಣ ಶೆಟ್ಟಿ, ಪೊಳಲಿ!

ನಮ್ಮ-ನಮ್ಮವರು.

(೧ನೇ ಪುಟದಿಂದ)

ಗಳೇ ಕಾರಣ ಚಿಕ್ಕಮಕ್ಕಳಿಂದ ತೊಡಗಿ ಹಿರಿಯ ಮುದುಕರ ವರೆಗಣವರ ಅನೇಕ ರೋಗಗಳಿಗೆ ಬಾಲವಿಷ್ಣು ತೈಲವು ಪರಿಣಾಮಕಾರಿಯೆಂದು ಸಿದ್ಧವಾಗಿದೆ. ಈ ಅಪೂರ್ವ ತೈಲವನ್ನು ತಯಾರಿಸುವವರು ಶ್ರೀ ಎ ಸುಬ್ಬಯ್ಯ ಪಕ್ಕಳರು. ಇವರು 'ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ತನ್ನ ಬಾಲವಿಷ್ಣು ತೈಲ ಔಷಧಾಲಯದಲ್ಲಿ ಈ ತೈಲವನ್ನು ತಯಾರಿಸುತ್ತಿರುವರು; ನಾಡಿನ ಮೂಲೆ ಮೂಲೆಗಳಿಗೆ ವಿತರಣೆ ಮಾಡುತ್ತಿರುವರು

ಅರಿಹೋದ ಕಾಲು ಯಥಾರೀತಿಗೆ ಬರುವುದು, ನರನಾಡಿ ಬಲವಿಲ್ಲದ ಮಕ್ಕಳು ನಡೆಯುವುದು, ಮುದ್ದೆಯಾದ ಕೈಕಾಲು ಸರಿಯಾಗುವುದು, ಗುಣವಾಗದ ಕೆಮ್ಮು, ಉಬ್ಬಸ ಹೊಂದಿದ ಕ್ಷಯ, ಮೂರ್ಛೆ ಮೊದಲಾದುವು ಗುಣವಾಗುವದು—ಮೊದಲಾದುವು ಈ ತೈಲದ ಅನ್ಯಾದೃಶ ಫಲಗಳು. ಈ ತೈಲವು ಬಾಲಗ್ರಹ ಮತ್ತು ಶೂಲಗ್ರಹದ ಬೇರನ್ನೇ ಕಿತ್ತು ಬಿಡುವುದು, ಮಕ್ಕಳ ಚಿಪ್ಪೆಯ ರೋಗವನ್ನು ನಿರ್ನಾಮ ಮಾಡುವುದು. ಈ ಬಗೆಯ ಅದ್ಭುತ ಗುಣೋಪೇತ ತೈಲ ತಯಾರಕರಾದ ಪಕ್ಕಳರು ಈ ತೈಲದಂತೆಯೇ ಉನ್ನತ ಗುಣೋಪೇತರು. ಸ್ವಯಂ ಪರಿಶ್ರಮ ಪಟುಗಳು, ಸಾಹಸಿಗಳು ಇವರ ಹೃದಯ ಕುಸುಮ ಕೋಮಲ; ಗುಣ ಉದಾರ. ಇವುಗಳಿಂದಾಗಿಯೇ ತನ್ನ ವ್ಯವಹಾರದಲ್ಲಿ ಯಶಸ್ಸನ್ನು ಪಡೆದಿದ್ದಾರೆ, ಇವರು. ಈ ಅತ್ಯದ್ಭುತ ಶಕ್ತಿವಂತ ತೈಲ ತಯಾರಕರು ನಮ್ಮ ಜಿಲ್ಲೆಯವರು ಎಂಬುದು ನಮಗೊಂದು ಅಭಿಮಾನ; ಅವರಿಂದ ಜಿಲ್ಲೆಯ ಕೀರ್ತಿ ಬೆಳೆದಿದೆ, ಮುಂದೆಯೂ ಬೆಳೆಯುತ್ತಿದೆ.

ಭೋಪಾಳದ ಘನವಿದ್ಯುದುಪಕರಣ ಕಾರಖಾನೆಯಲ್ಲಿ ಕಾರ್ಯನಿರತನಾದ ಕರ್ಮಚಾರಿ.

Edited, Printed & Published by K. H. Shetty, at the Navayuga Press, Udipi, S. India

ನವಯುಗ

VOL. 43 No. 43 — ಸಂಪುಟ ೪೩ ಸಂಚಿಕೆ ೪೩

NAVAYUGA—Nationalist Weekly ‡‡ ಉಡುಪಿ 25-6-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಲಾಲ್ ಬಹಾದ್ದೂರ್ ಶಾಸ್ತ್ರಿ

ದಿವಂಗತ ಪ್ರಧಾನಿ ನೆಹರೂರವರು, ಲಾಲಬಹದ್ದೂರ್ ಶಾಸ್ತ್ರಿಗಳು ಖಾತೆ ರಹಿತ ಮಂತ್ರಿಗಳಾಗಿ ಪುನಃನೇಮಕಗೊಂಡಾಗ, ತಾನು ಯಾವ ಕೆಲಸ ಮಾಡಬೇಕು ಎಂದು ಪ್ರಶ್ನಿಸಿದಕ್ಕೆ 'ನನ್ನ ಕೆಲಸಮಾಡಿರಿ' ಎಂದು ಹೇಳಿದರಂತೆ. ಈ ಮಾತು ಇಂದು ಸತ್ಯವಾಗಿ ಪರಿಣಮಿಸಿದೆ. ನೆಹರೂರ ಅನಿರೀಕ್ಷಿತ ನಿಧನದಿಂದ ಭಾರತದಪ್ರಧಾನ ಮಂತ್ರಿ ಪಟ್ಟ ಇಂದು ಲಾಲಬಹದ್ದೂರರಿಗೆ ಲಭಿಸಿದೆ. ನೆಹರೂರವರ ಹೊಣೆಗಾರಿಕೆಯ ಬಹ್ವಂಶ ಇಂದು ಶಾಸ್ತ್ರಿಯವರ ಹೆಗಲಿಗೆ ಬಿದ್ದಿದೆ. ನಾಯಕನ ಆಯ್ಕೆಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಅವಿರೋಧವಾಗಿ ಆಯ್ಕೆಗೊಂಡ ಶಾಸ್ತ್ರಿಯವರು, ಮಂತ್ರಿಮಂಡಲ ರಚನೆಯಲ್ಲಿ ತನ್ನ ನೈಪುಣ್ಯತೆಯನ್ನು ಪ್ರದರ್ಶಿಸಿದ್ದಾರೆ. ಪ್ರಧಾನಿ ನೆಹರೂರ ನಿಕಟವರ್ತಿಗಳಾಗಿದ್ದ ಶಾಸ್ತ್ರಿಯವರು, ರಾಷ್ಟ್ರದ ಧ್ಯೇಯ ಧೋರಣೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಬಲ್ಲ ಚತುರರು. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ರಂಗಗಳಲ್ಲಿ ಇನ್ನು ಅವರು ಮಹತ್ತರವಾದ ಪಾತ್ರ ವಹಿಸಬೇಕಾಗಿದೆ.

ಜುಲೈ ತಿಂಗಳಲ್ಲಿ ಲಂಡನಿನಲ್ಲಿ ಜರಗಲಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕೆ ನೆಹರೂರ ಕೆಲಸ ಮಾಡಲು ಶಾಸ್ತ್ರಿಯವರು ತೆರಳುತ್ತಿದ್ದಾರೆ. ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಶಾಸ್ತ್ರಿಯವರು ಭಾಗವಹಿಸುತ್ತಿರುವುದು ಇದು ಮೊದಲ ಬಾರಿ. ಅವರ ಈ ಮೊದಲನೆಯ ಅನುಭವ ಭಾರತ ಹಾಗೂ ಕಾಮನ್‌ವೆಲ್ತಿನ ಸಂಬಂಧ ಸಂವರ್ಧನೆಗೆ ಸಹಕಾರಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಲಂಡನಿನಲ್ಲಿ ಪಾಕಿಸ್ತಾನದ ಅಧ್ಯಕ್ಷ ಆಯೂಬ ಖಾನರ ಕೂಡೆ ಕೂಡಾ ಅವರು ಮಾತುಕತೆನಡೆಸಲಿರುವರೆಂದು ತಿಳಿದು ಬರುತ್ತದೆ. ಚತುರ ಸಂಧಾನ ಶೂರ ಶಾಸ್ತ್ರಿಯವರು ಹದಗೆಟ್ಟಿರುವ ಭಾರತ [illegible]

ಲು ಯತ್ನಿಸುವುದು ಖಂಡಿತ. ಈಗಾಗಲೇ ಅವರು ಪಾಕಿಸ್ತಾನಕ್ಕೆ ಸ್ನೇಹ ಹಸ್ತದ ಕರೆ ನೀಡಿದ್ದಾರೆ.

ಕಾಮನ್‌ವೆಲ್ತ್ ಸಮ್ಮೇಳನದಿಂದ ಹಿಂದಿರುವಾಗ ಅವರು ಕೈರೋ ಹಾಗೂ ಇನ್ನು ಕೆಲವು ಮಧ್ಯಪೂರ್ವ ರಾಷ್ಟ್ರಗಳನ್ನು ಸಂದರ್ಶಿಸುವ ಕಾರ್ಯಕ್ರಮ ಇಟ್ಟುಕೊಂಡಿರುವರು. ನೆಹರೂರವರ ಉತ್ತರಾಧಿಕಾರಿ ಶಾಸ್ತ್ರಿಯವರಿಗೆ ವಿದೇಶಗಳಲ್ಲಿ ವಿಶೇಷ ತಂದ ಸ್ವಾಗತ ಹಾಗೂ ಮನ್ನಣೆ ದೊರೆಯುವುದು ಖಂಡಿತ. ಇತರ ರಾಷ್ಟ್ರಗಳೊಡನೆ ಬೆಳೆದು ಬಂದಿರುವ ಭಾರತದ ಹಿತ ಸಂಬಂಧ, ಶಾಸ್ತ್ರಿಯವರ ಭೇಟಿಯಿಂದ ಇನ್ನಷ್ಟು ಬಲಗೊಳ್ಳುವುದೆಂದು ಎಲ್ಲರೂ ಹಾರೈಸುತ್ತಾರೆ. ಈ ಹಾರೈಕೆಯನ್ನು ನಿಜಗೊಳಿಸುವುದರಲ್ಲಿ ಶಾಸ್ತ್ರಿಯವರು ಹಿಂದುಳಿಯಲಾರರು.



ರಸ್ಥರು ದೇಶದ ಹಿತವೆಲ್ಲಿದೆ ಎಂಬುದನ್ನು ಅರಿತು ವರ್ತಿಸಲಿ ಎಂದು ಅವರು ವ್ಯಾಪಾರಸ್ಥರಿಗೆ ಬುದ್ಧಿ ಹೇಳಿದ್ದಾರೆ. ತಪ್ಪು ದಾರಿ ಹಿಡಿಯದೆ ಜನತೆಯ ಕಂಗಾಲ ಪರಿಸ್ಥಿತಿಯನ್ನು ನಿವಾರಿಸಬೇಕು. ಒಂದು ವೇಳೆ ಇಂತಹುದೇ ಪರಿಸ್ಥಿತಿ ಮುಂದುವರಿದರೆ ಸರಕಾರವು ಈ ಪ್ರವೃತ್ತಿ ತೋರಿದು

ವ್ಯಕ್ತಿ-ವ್ಯಕ್ತಿತ್ವ

ಸುಬ್ರಹ್ಮಣ್ಯಂ

ಆಹಾರ ಧಾನ್ಯಗಳ ಹಾಗೂ ಇನ್ನಿತರ ಜೀವನಾವಶ್ಯಕ ವಸ್ತುಗಳ ಬೆಲೆಯು ನಾಗಾಲೋಟದಿಂದ ಏರುತ್ತಿರುವ ಈ ಸಂದಿಗ್ಧ ಸಂದರ್ಭದಲ್ಲಿ ಸುಬ್ರಹ್ಮಣ್ಯಂರವರ ಕೈಗೆ ಆಹಾರ ಮಂತ್ರಿ ಖಾತೆ ಬಂದಿದೆ. ದಿನದಿಂದ ದಿನಕ್ಕೆ ದೇಶದ ಎಲ್ಲೆಡೆಗಳಲ್ಲೂ ಈ ಕುರಿತು ತೀವ್ರ ವಿಮರ್ಶೆ ಹಬ್ಬತೊಡಗಿದೆ. ಸರಕಾರೀ ವಲಯದಲ್ಲಂತೂ ಇದೇ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಬೆಲೆಯೇರಿಕೆಯನ್ನು ತಡೆಗಟ್ಟುವಲ್ಲಿ ಸರಕಾರದ ಅಸಮರ್ಥತೆಯ ಕುರಿತು ತೀವ್ರವಾದ ಟೀಕೆಗಳು ಸರಕಾರಿ ಪಕ್ಷದ ಸದಸ್ಯರಿಂದಲೇ ಕೇಳಿ ಬರುತ್ತಿವೆ. ಹತೋಟಿ ತಪ್ಪಿದ ಆಹಾರ ಪದ್ಧತಿಯನ್ನು ಈಗ ಹಿಡಿತಕ್ಕೆ ತರುವ ಗುರುತರ ಹೊಣೆಯನ್ನು ಶ್ರೀ ಸುಬ್ರಹ್ಮಣ್ಯಂ ಹೊತ್ತಿದ್ದಾರೆ.

ಒಂದು ವೇಳೆ ಬೆಲೆಯೇರಿಕೆಯನ್ನು ತಡೆಗಟ್ಟುವಲ್ಲಿ ವ್ಯಾಪಾರಸ್ಥರು ಸಹಕರಿಸದಿದ್ದರೆ ಸರಕಾರವು ಸರಕಾರೀ ವ್ಯಾಪಾರದಂತಹ ಉಗ್ರ ಉಪಾಯಗಳನ್ನು ಕೈಗೊಳ್ಳುವುದಕ್ಕೂ ಹಿಂಜರಿಯುವುದಿಲ್ಲ ಎಂದು ಸುಬ್ರಹ್ಮಣ್ಯಂ ಆಹಾರ ಧಾನ್ಯಗಳ ವ್ಯಾಪಾರಸ್ಥರ ಪ್ರತಿನಿಧಿಗಳ ಸಭೆಯಲ್ಲಿ ಇತ್ತೀಚೆಗೆ ಹೇಳಿದ್ದಾರೆ. ತಾನಾಗಿಯೇ [illegible]

ಹಾಕಲು ಕಠಿಣ ಹಾಗೂ ಉಗ್ರ ಉಪಾಯಗಳನ್ನು ಕೈಗೊಳ್ಳದೆ ಗತ್ಯಂತರವಿಲ್ಲ. ಸರಕಾರವು ಈ ದಿಸೆಯಲ್ಲಿ ಹಿಂದುಳಿಯಲಾರದು ಎಂದು ಸ್ಪಷ್ಟಪಡಿಸಿದ್ದಾರೆ.

ಸುಬ್ರಹ್ಮಣ್ಯಂ ಸ್ಪಷ್ಟವಾದಿ ಹಾಗೂ ಚತುರ ಕಾರ್ಯಸಾಧಕ. ರಾಜಾಜಿ ಗರಡಿಯಲ್ಲಿ ಪಳಗಿದ ಅವರು ಮದರಾಸಿನ ರಾಜಕೀಯದಲ್ಲಿ ಕಾಮರಾಜರ ಬಲಗೈಯಾಗಿದ್ದರು. ಮದ್ರಾಸಿನ ದಕ್ಷ ಆಡಳಿತ ಇವರ ಕಡೆಗೆ ನೆಹರೂರವರನ್ನು ಆಕರ್ಷಿಸಿತು. ಅಂತಲೇ 1962ರ ಚುನಾವಣೆಯ ಬಳಿಕ ಸುಬ್ರಹ್ಮಣ್ಯಂ ಮದ್ರಾಸಿನಿಂದ ದೆಹಲಿಗೆ ಹೋದರು. ಉಕ್ಕು ಗಣಿ ಮತ್ತು ಭಾರ ಉದ್ದಿಮೆಗಳ ಮಂತ್ರಿಯಾಗಿ ಅವರು ಸಾಧಿಸಿದ ಕಾರ್ಯಗಳು, ಇಂದು ಅವರು ಆಹಾರ ಖಾತೆಯನ್ನು ವಹಿಸಿಕೊಂಡಾಗ ಜನತೆಯಲ್ಲಿ ಆಶಾ ಭಾವನೆಯನ್ನು ಮೂಡಿಸಿವೆ. ಎಲ್ಲರೂ ಇಂದು ಆಹಾರ ಮಂತ್ರಿ ಖಾತೆಯ ಕಡೆಗೆ ನೋಡುತ್ತಿದ್ದಾರೆ. ಸುಬ್ರಹ್ಮಣ್ಯಂರಿಗೆ ಇಂದು ಅಗ್ನಿ ಪರೀಕ್ಷೆಕಾದಿದೆ. ಆದರೆ ಈ ಅಗ್ನಿ ಪರೀಕ್ಷೆಯಲ್ಲಿ ಅವರು ಗೆದ್ದು, ಇನ್ನಷ್ಟು ಶುದ್ಧ ಚಿನ್ನವಾಗುವುದು ಖಂಡಿತ. ಅವರ ಹಿಂದಿನ ಚರಿತ್ರೆಯೇ ಇದಕ್ಕೆ ಆಧಾರ.

ಎಂ. ಮಧ್ವರಾಜ

ನಮ್ಮ ನೈಸರ್ಗಿಕ ಸಂಪತ್ತಿನ ಸದುಪಯೋಗ ಪಡಿಸಿಕೊಂಡರೇನೇ ನಮ್ಮ

ದೇಶದ ಅಭಿವೃದ್ಧಿ ಸಾಧ್ಯ. ಈ ನೈಸರ್ಗಿಕ ಸಂಪತ್ತಿನ ಉಪಯೋಗ ಪಡೆಯಲು ಸರಕಾರವು ಹಾಗೂ ಇತರ ವಾಣಿಜ್ಯ ಸಂಸ್ಥೆಗಳೂ ಪ್ರಯತ್ನಿಸುತ್ತಿರುವುದೇನೋ ಸಹಜ. ಆದರೆ ಈ ದಿಸೆಯಲ್ಲಿ ಆಗಬೇಕಾದಷ್ಟು ಕೆಲಸ ಮಾತ್ರ ಆಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಮೈಸೂರು ರಾಜ್ಯದ ಇನ್ನೂರು ಮೈಲುಗಳಷ್ಟು ಉದ್ದದ ಕರಾವಳಿಯಲ್ಲಿ ಮೀನುಗಾರಿಕೆಗೆ ಅತಿ ಹೆಚ್ಚಿನ ಅನುಕೂಲತೆಗಳಿವೆ. ಆದರೆ, ಮೀನುಗಾರಿಕೆಯನ್ನು ಒಂದು ಲಾಭದಾಯಕ ಹಾಗೂ ವಿದೇಶೀ ವಿನಿಮಯವನ್ನು ಗಳಿಸಬಲ್ಲ ಉದ್ದಿಮೆಯನ್ನಾಗಿ ಪರಿವರ್ತಿಸುವಲ್ಲಿ ಮಾತ್ರ ಹೆಚ್ಚಿನ ಯಶಸ್ಸನ್ನು ಈವರೆಗೆ ಯಾರೂ ಗಳಿಸಿಲ್ಲ. ಈ ಮಾತಿಗೆ ಶ್ರೀ ಮಧ್ವರಾಜರು ಮಾತ್ರ ಅಪವಾದವಾಗಿದ್ದಾರೆ.

ಮೀನುಗಾರಿಕೆಯು ಒಂದು ಸುಯೋಚಿತ ಹಾಗೂ ಲಾಭದಾಯಕವಾದ ಉದ್ದಿಮೆಯಾಗಿ ಬೆಳೆಯದಿದ್ದುದಕ್ಕೆ ಹಲವಾರು ಕಾರಣಗಳಿಂಬಹುದು. ಮುಖ್ಯವಾಗಿ ವಿದ್ಯಾವಂತರಾದವರು ಈ ಕಡೆ ಹೆಚ್ಚಿನ ಗಮನವೀಯದೆ ಕಾತ್ರಸ್ರ ದೃಷ್ಟಿಯಿಂದ ನೋಡುತಿದ್ದುದೂ ಒಂದು ಕಾರಣ. ಈಗ ಪದವೀಧರರಾದ ಮಧ್ವರಾಜರು ನಮ್ಮ ವಿದ್ಯಾವಂತ ಯುವಕರಿಗೆ ದಾರಿ ಹಾಕಿ ಕೊಟ್ಟಿದ್ದಾರೆ. ಮೀನುಗಾರಿಕೆಯಲ್ಲಿ ಆಧುನಿಕ ವಿಧಾನಗಳನ್ನು ಬಳಸಿ, ಅವನ್ನು ಒಂದು ಮಹಾನ್ ಉದ್ದಿಮೆಯನ್ನಾಗಿ ಮೈಸೂರು

(೧೨ನೇ ಪುಟ ನೋಡಿರಿ)

ನಾರದ ಕತೆ:

ಚೈನಿ ಚೇಲದಲ್ಲಿ ಚಂಚಲೆಯರು

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಚಾ ಎನ್-ಲ್ಯಾಯ ಸಿಂಹಳ ಪ್ರಯೊಣ ಸಮಯ ಅವರ ಒಂದು ಕಣ್ಣು ಆಕ್ಲಿನ ಅಂಗನೆಯರ ಮೇಲಿತ್ತೆಂದು ತಿಳಿಸಿದಾಗ ಮಡಿವಂತರೂ ಕಮ್ಯೂನಿಸ್ಟರೂ ಹೌಹಾರಿರುವುದು ಸಹಜ. ಮಿತ್ರ ರಾಷ್ಟ್ರವೊಂದರ ಮಹಿಳೆಯರ ಮೇಲೆ ಈ ರೀತಿ ದೋಷ ತೋರಿಸುವುದೇ? ಎಂದು ಅವರು ಕೇಳಬಹುದು. ಸಿಂಹಳದ ಸುರಸುಂದರಿಯರ ಮೇಲೆ ಸಲ್ಲದ ಮಾತನ್ನು ಇಲ್ಲಿ ಬರೆದಿಲ್ಲ. ಅದರ ಬದಲು ಚಾ-ಎನ್-ಲೈಯ ಚಾಣಕ್ಯತನ ಮಾತ್ರ ಇಲ್ಲಿ ವ್ಯಕ್ತವಾಗುತ್ತದೆ. ಅದಕ್ಕೆ ಆಧಾರವೇನು? ಚೈನಿ ಕಮ್ಯೂನಿಸ್ಟ್ ಪ್ರಧಾನಿಗೆ ತಮ್ಮ ರಾಜ್ಯದಲ್ಲೇ ಬೇಕಾದಷ್ಟು ಸ್ತ್ರೀಯರಿರುವಾಗ ಇಷ್ಟು ದೂರ ಅವರೇತಕ್ಕೆ ಬರಬೇಕು? ಒಟ್ಟಾರೆ ಕಮ್ಯೂನಿಸ್ಟರ ಮೇಲಿನ ಹಗೆತನದಿಂದ ಏನಾದರೂ ಬರೆಯುವರೆಂದು ಕಮ್ಯೂನಿಸ್ಟರು ತೀರ್ಮಾನಿಸಿ ಬಿಡಬಹುದು.

ಮೊದಲನೆಯ ಪ್ರಶ್ನೆಗೆ ಆಧಾರ ಬಹಳಷ್ಟಿವೆ ಪೆಕಿಂಗ್ ರೇಡಿಯೋದಲ್ಲಿ ಭಾರತೀಯ ಸ್ತ್ರೀಯ [ತಮಿಳು ಬಲ್ಲ ಹೆಂಗಸಿನ] ಸ್ವರ ಕೇಳಿಬರುತಿದ್ದು, ಅದರ ಕುರಿತು ವಿಷಯ ಸಂಗ್ರಹಿಸಬೇಕೆಂದು ಬಹಳ ಹಿಂದೆಯೇ ಭಾರತ ಸರಕಾರವನ್ನು ಅನೇಕ ದೇಶಪ್ರೇಮಿಗಳು ಕೇಳಿಕೊಂಡಿದ್ದರು. ಚಾಣಕ್ಯನ ರಾಜಕೀಯದಲ್ಲಿ ರಮಣಿಯರಿಗೆ ಮಾತ್ರವಲ್ಲ ಗಣಿಕೆಯರಿಗೂ ಸ್ಥಾನವಿದೆ. ಅಬ್ಬಾ! ಅವರು ನಡೆಸಿರುವ ಕಾರಸ್ಥಾನಗಳೇ! ಹಾಗಿರುವಾಗ ಮಹತ್ವಾಕಾಂಕ್ಷೆಯ ಮದೋನ್ಮತ್ತ ಚಾ ಸುಮ್ಮನಿರಲು ಸಾಧ್ಯವೇನು? ಅವರು ಅಂಗನೆಯರನ್ನು ಉಪಯೋಗಿಸಿಕೊಂಡಿರುವದಕ್ಕೆ ಒಂದು ಉದಾಹರಣೆಯನ್ನಿಲ್ಲಿ ಕೊಡಲಾಗುವುದು.

ಚೈನಾದಲ್ಲಿ ಚಂಚಲೆಯರಿಗೆ ಬರಗಾಲ ಬಂದಿರಲಿಕ್ಕಿಲ್ಲ. ಆದರೆ ಅವರಿಗೆ ತರಬೇತಿ ಇತ್ತು, ಅನ್ಯ ರಾಷ್ಟ್ರಗಳಿಗೆ ಕಳುಹಿಸಿ ಕಾರಸ್ಥಾನ ನಡೆಸುವದು ಎಲ್ಲಾ ಪ್ರದೇಶಗಳಲ್ಲಿ ಸಾಧ್ಯವಾಗುವದಿಲ್ಲ. ಅದನ್ನರಿತುಕೊಂಡಿರುವ ಚಾ ಸ್ಥಾನೀಯ ಸ್ತ್ರೀಯರಿಗೆ ಸ್ಥಾನಕೊಡುವದರಲ್ಲಿ ವಿಶೇಷವೇನೂ ಇಲ್ಲ ಸಿಂಹಳದ ಸ್ತ್ರೀಯರನ್ನು ಸಿದ್ಧಗೊಳಿಸಿದರೆ ಪುಟ್ಟ ರಾಷ್ಟ್ರ ಲಂಕೆಯನ್ನು ಗುಳುಂಕನೆ ನುಂಗಿಬಿಡಬಹುದು, ಅಲ್ಲದೆ, ಪಾಕಿಸ್ತಾನ್ ರಾಷ್ಟ್ರಕ್ಕೂ ನೆರೆಯ ಸಿಲೋನಿನಿಂದ ಸಿದ್ಧಗೊಳಿಸಿದ ಮಾಯಾಂಗನೆಯರನ್ನು-ಶೂರ್ಪನಖಿಯರನ್ನು ಕಳುಹಿಸಲು ಸಾಧ್ಯ. ಅದನ್ನು ಯೋಚಿಸಿಕೊಂಡೇ ಯೋಜನೆಗೆ ಮುಂದೆ ಬಂದಿರುವದು ಚಾ, ವಿನಃ ಕ್ಷಣಿಕ ವಿಷಯ ಸುಖಕ್ಕಾಗಿ ಅಲ್ಲ, ರಾಜಯೋಗಕ್ಕಾಗಿ ಅಷ್ಟೆ.

ಹಾಗೆ ಚಾ-ಎನ್-ಲೈ ಲಲನೆಯರನ್ನುಪಯೋಗಿಸಿಕೊಂಡು ಸಿಕ್ಕಿ ಬಿದ್ದಿರುವ ಒಂದು ಘಟನೆ ಇಲ್ಲಿದೆ. ಕಮ್ಯೂನಿಸ್ಟ್ ಚೈನಾ ಆದಾಗಲೇ ಆಕ್ರಮಣ ನಡೆಸಿ ಮುಂದೊತ್ತಿ ಬರುತ್ತಿತ್ತಾದರೂ, ಭಾರತ ಸರಕಾರವು ಆಕ್ರಮಣ ನಡೆದಿದೆ ಎಂದು ಒಪ್ಪಿಕೊಂಡಿರಲಿಲ್ಲ. ಅಲ್ಲದೆ ಗಡಿಪ್ರದೇಶದಲ್ಲಿ ಗಡಿಬಿಡಿ ಏನೂ ಇರಲಿಲ್ಲ. ಅಷ್ಟು ಸುಲಭವಾಗಿ ಕಮ್ಯೂನಿಸ್ಟ್ ಚೈನೀಯರು ಮುಂದಕ್ಕೆ ಬರುತ್ತಿದ್ದರು. ಗಡಿಯಲ್ಲಿ ಕಾವಲುಗಾರ ಸೈನಿಕ ದಳಗಳು ಅಲ್ಲಲ್ಲಿ ಇದ್ದುವು ಅಷ್ಟೆ.

ಅದು ೧೯೬೨ರ ಮಧ್ಯಕಾಲ. ಲಡಾಕ್ ಪ್ರದೇಶದಲ್ಲಿ ಸಾಮಾನ್ಯವಾಗಿರುವಂತೆ ಇದ್ದ ಸೇನೆಯ ನಡುವೆ ಸುರಸುಂದರಿಯೋರ್ವಳು ಕಾಣಿಸಿಕೊಂಡಳು. ಭಾರತೀಯ ಸೈನಿಕರ ಬರಡು ಬಾಳನ್ನು ಕಂಡು ಕನಿಕರಪಟ್ಟು ವನದೇವತೆಯೇ ವರವೀಯಲು ಬಂದಿರಬಹುದೆಂಬಂತೆ ಸೈನಿಕರು ನಿಂತುಬಿಟ್ಟರು. ಅವರನ್ನೆಲ್ಲಾ ಆಕೆಯ ಅಂದ ಮೋಹದಲ್ಲಿ ಸಿಲುಕಿಸಿಬಿಟ್ಟಿತು. ಅವರ ಚಟುವಟಿಕೆಯನ್ನು ಸ್ತಬ್ಧಗೊಳಿಸಿ ಬಿಟ್ಟಿತು ಆಕೆಯ ಅರೆನಗು. ಹಸನ್ಮುಖಿಯಂತೆ ಆಕೆ ಕಂಡುಬರುತ್ತಿದ್ದು ಶಿಬಿರದಲ್ಲೂ ಆಕೆ ನಗುವಿನ ವಾತಾವರಣವನ್ನುಂಟು ಮಾಡಬಹುದೆಂದು ಅವರು ಭಾವಿಸಿಕೊಂಡರು.

ಸಮಾಚಾರ ಶಿಬಿರಾಧಿಕಾರಿಗೆ ತಲಪಿತು. ಕುತೂಹಲದಿಂದ ಅವರು ಅಂಗನೆಗೆ ಆಮಂತ್ರಣವಿತ್ತರು. ಆಕೆ ಆಸೀನಳಾದಳು. ಚಹಾ ಬಂತು, ಬಿಸ್ಕಿಟ್ಟುಗಳು ಬಂದುವು. ಹಾಗೆ ಮಾತೂ ಆರಂಭವಾಯಿತು. ಸೌಂದರ್ಯ ಸಿಡಿಲಿನ ಆಘಾತಕ್ಕೊಳಗಾಗಿದ್ದರೂ ಅಧಿಕಾರಿಯ ಆಸನದಿಂದ ಅಧಿಕಾರಿ ಕೇಳಿದರು: "ಯಾರು ನೀನು? ವನ ಪ್ರದೇಶದಲ್ಲಿ ನಿನಗೇನು ಕೆಲಸ?" ಇನ್ನೂ ಏನೇನೋ ಕೇಳಬೇಕೆಂದಿದ್ದರು. ಆಕೆಯ ಮುಗುಳ್ನಗೆ ಅದಕ್ಕೆ ಅಡ್ಡ ಬಂತು.

ಆಕೆಯೇ ಮುಂದರಿದಳು. "ನಾನು ತ್ರಿವಿಷ್ಟಪದವಳು. ನನ್ನ ಹೆಸರು ಡೋಲ್-ಮಾ ನನ್ನನ್ನು ಚೈನಿ ಕಮ್ಯೂನಿಸ್ಟರು ಈ ಹೀನ ಸ್ಥಿತಿಗೆ ತಂದಿರುವರು. ಹಗೆಯನ್ನು ತೀರಿಸಿಕೊಳ್ಳಲು ನಾನು ಪಣ ತೊಟ್ಟಿರುವೆನು. ನಿಮ್ಮಿಂದ ಸಹಾಯ ಸಿಕ್ಕೀತೆಂದು ಇತ್ತ ಬಂದಿರುವೆನು"

ವರವೀಯುವಳೆಂದು ಭಾವಿಸಿಕೊಂಡಲ್ಲಿ ಆ ವನದೇವತೆಯೇ ಸಹಾಯವನ್ನು ಕೇಳುತ್ತಿದ್ದಾಳೆ! ಆಪತ್ತಿನಲ್ಲಿ ಸಿಲುಕಿಕೊಂಡಿರುವ ಸುರಸುಂದರಿಗೆ ಸಹಾಯ ಮಾಡದೆ, ಇನ್ನಾರಿಗೆ ಸಹಾಯಮಾಡುವುದಿಲ್ಲಿ?

'ಏನಮ್ಮಾ, ನನ್ನಿಂದಾಗುವ ಸಹಾಯ? ಅಷ್ಟು ದೊಡ್ಡ ಶಬ್ದವೇತಕ್ಕೆ? ನನ್ನಿಂದಾಗುವ ಕೆಲಸವೇನಾದರೂ ಇದ್ದರೆ ಸಂಕೊಚಪಡದೆ ತಿಳಿಸಿರಿ.'

. "ಅದಕ್ಕೇ ಅನ್ನುವುದು ಭಾರತೀಯರ ವಿಶಾಲ ಹೃದಯವೆಂದು. ಅವರೆಂದೂ 'ಇಲ್ಲ' ವೆಂದವರಲ್ಲ. ಅದನ್ನರಿತುಕೊಂಡೇ ಇತ್ತ ಬಂದಿರುವೆನು." ಮುಗುಳ್ನಗುತ್ತಾ ಆಕೆ ಬಲೆಬೀಸಿದಳು.

"ನಿಮ್ಮ ಮಾತುಗಳಿಗೆ ನನ್ನ ವಂದನೆಗಳು. ನನ್ನಿಂದೇನಾಗ ಬೇಕೆಂಬುದನ್ನು ತಿಳಿಸೋಣವಾಗಲಿ."

"ನಿಮ್ಮ ನೆರವು ನನಗೆ ಅತ್ಯಗತ್ಯ. ನಿಮ್ಮ ಭಾರೀ ನೆರವಿನ ಅಗತ್ಯ ನನಗಿದೆ. ನೀವು ಹಿಂಜರಿಯಕ್ಕಿಲ್ಲವೆಂದು ನನಗೆ ಗೊತ್ತು." ಅವರ ಕಣ್ಣುಗಳನ್ನೇ ನೋಡುತ್ತಾ ಅವಳು ಹೇಳಿ ಮುಂದುವರಿಸಿದಳು. "ಈಗ ಇಲ್ಲಿ ನೀವಿರುವದೇ ಸ್ವಲ್ಪ ಮಂದಿ, ಹಾಗೂ ಸಾಮಾಗ್ರಿಗಳು ಬಹಳಷ್ಟು ಇಲ್ಲವೆಂದು ಕಾಣುತ್ತದೆ" ಅವರ ಎದೆಯನ್ನು ಯನ್ನು ನೋಡುತ್ತಾ, ಅದರ ಆಳವನ್ನು ಅರಿತುಕೊಳ್ಳಲು ಮಾತಿನ ಬಾಣಬಿಟ್ಟಳು- 'ಸರಿ, ಅಗತ್ಯಬಿದ್ದಲ್ಲಿ ನಂತರ ಹೇಳುತ್ತೇನೆ. ಈಗ ನನಗೇನೂ ನೀವು ಕೊಡಬೇಡಿ.' ಅನಿಶ್ಚಿತ ಸ್ಥಿತಿಯಲ್ಲಿ ಅವರನ್ನು ಬಿಟ್ಟಳು.

"ಏನೂ ಬೇಕಾಗಿಲ್ಲದಾಕೆ ಅದನ್ನು ಹೇಳಲೆಂದೇ ಇಲ್ಲಿಗೆ ಬಂದಿರುವೆಯೇನು?" ನಿರಾಶೆಗೊಳಗಾದವರಂತೆ ಅವರು ಕೇಳಿದರು.

"ಕ್ಷಮಿಸಿ. ಏನೂ ತಪ್ಪುತಿಳಿದು ಕೊಳ್ಳಬೇಡಿ. ನಿಮ್ಮ ಆಶ್ವಾಸನೆಯೇ ಸಾಕು. ನಾನು ಜಯಪಡೆಯುವೆ."

"ಪಡೆಯಲೇಬೇಕು; ಮತ್ತು ಆ ದಾರಿಯಲ್ಲಿ..."ಮಧ್ಯದಲ್ಲೇ ಆಕೆ ಬಾಯಿ ಹಾಕಿದಳು. "ದಾರಿಯಲ್ಲಿ ಅಂದ ಹಾಗೆ..ನೋಡಿ ನನ್ನ ಬಳಿ ಈಗ ಸುಮಾರು ನೂರು ಕತ್ತೆಗಳಿವೆ. ಆ ಕತ್ತೆಗಳ ಸಹಾಯದಿಂದ ಧ್ಯೇಯ ಪಥದಲ್ಲಿ ಗಡಿ ಪ್ರದೇಶದಲ್ಲಿ ತಿರುಗಾಡಿಕೊಂಡಿದ್ದೇನೆ. ನಮಗೆ ನಿಮ್ಮಿಂದ ತಡೆಯಾಗದಿದ್ದರೆ ಸರಿ. ಅಷ್ಟೆ ಅದುವೇ ಈಗ ನಿಮ್ಮಿಂದಾಗ ಬೇಕಾಗಿರುವ ಮಹೋಪಕಾರ."

"ಅದಕ್ಕೇನಂತೆ? ಅದಕ್ಕಾಗಿ ನೀನಿಲ್ಲಿಯವರೆಗೆ ಬಂದೆಯೇನೂ? ಕ್ಷಮಿಸಮ್ಮಾ ನಮ್ಮಿಂದ ತೊಂದರೆಯಾದುದಕ್ಕೆ."

"ಪರವಾಯಿಲ್ಲ. ತೊಂದರೆ ಇದು ಏನು ಮಹಾ? ತಮ್ಮೆಲ್ಲರ ಪರಿಚಯ[illegible] ವಕಾಶಲಭಿಸಿತು."

"ಭಾರತೀಯ ಸೈನಿಕರಿಂದ ಸ್ತ್ರೀಯರಿಗೆಂದೂ ತೊಂದರೆಯಾಗದಮ್ಮಾ ಆಶ್ವಾಸನೆ ನಾನೀಯ ಬಲ್ಲೆ."

"ಅದನ್ನರಿತು ಕೊಂಡೇ, ಧೈರ್ಯದಿಂದ ನಾನಿಲ್ಲಿಗೆ ಬಂದಿರುವೆನು. ಸರಿ, ಇನ್ನು ನಾನಿನ್ನು ಬರಲೇನೂ?"

"ಬರಲೇನು" ಬರ ಬಡಿದಂತಾಯಿತು. ಯಾವುದೋ ಸ್ವಪ್ನ ಲೋಕದಲ್ಲಿ ವಿಹರಿಸುತ್ತಿದ್ದಾಗ ಯಾರೋ ಬಂದು ಕಾಲನ್ನೆಳೆದಂತಾಯಿತು.

"ಅವಸರದಲ್ಲಿರುವಿರೆಂದು ಕಾಣುತ್ತೆ. ಒಳ್ಳೆಯದು. ಶುಭವಾಗಲಿ ನಿಮಗೆ. ನೆರವಿನ ಅವಶ್ಯಕತೆ ಇದ್ದಲ್ಲಿ ಸಂಕೋಚಪಡದಿರಿ." ತನ್ನ ಸೈನಿಕರಿಗೆ ಸುರಸುಂದರಿಯ ಪರಿಚಯ ಮಾಡಿಕೊಟ್ಟು, ಈ ವನಪ್ರದೇಶದಲ್ಲಿ ಅಡ್ಡಾಡಲು ಆಕೆಗೇನೂ ಅಭ್ಯಂತರವಿಲ್ಲವೆಂದು ತಿಳಿಸಿದರು.

ಸರಳ ಹೃದಯವನ್ನು ಸುಲಭವಾಗಿ ಬುಟ್ಟಿಯೊಳಗೆ ಹಾಕಿಕೊಳ್ಳ ಬಹುದೆಂದೆಣಿಸುತ್ತ ಅದೇ ನಗೆಯಲ್ಲಿ ಆಕೆ ಅಲ್ಲಿಂದ ಹೊರಟಳು.

ಕ್ಷಣಕಾಲ ಶಿಬಿರದಲ್ಲಿ ಮೌನ ಆವರಿಸಿತು. ಎಲ್ಲರೂ ಆಕೆ ಹೋಗುತ್ತಿರುವದನ್ನು ನೋಡುತ್ತ ನಿಂತರು....

ಆಕೆ ಹೋದಳು, ತನ್ನ ಕಾರಸ್ಥಾನವನ್ನು ಮುನ್ನಡೆಸುತ್ತ ಹೋದಳು.

ಆಕೆಯ ಕಾರಸ್ಥಾನ ಮುನ್ನಡೆದಂತೆ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಪ್ರವಾಸ ಕಥನ

ನಿಸರ್ಗಸುಂದರ ಕುದುರೆಮುಖ

(ಮೊದಲ ಲೇಖಾಂಕ)

ಬರೆದವರು: ಶ್ರೀ ಬಿ. ಕೆ. ವೆಂಕಟಸುಬ್ಬ ರಾವ್, ಕಿಲ್ಲೂರು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಹಿಂದುಸ್ಥಾನದಲ್ಲೇ ಅತ್ಯಂತ ಪ್ರಸಿದ್ಧಿ ಪಡೆದಿದ್ದು ಈಗಿನ ನಮ್ಮ ಪ್ರಜಾಪ್ರಭುತ್ವ ಸರಕಾರದ ಆಡಳಿತದಲ್ಲಿ ಸಂಪೂರ್ಣ ಅಲಕ್ಷಿಸಲ್ಪಟ್ಟ ಕುದುರೆಮುಖ ಪರ್ವತ ಪ್ರದೇಶದ ನಿಸರ್ಗ ಸೌಂದರ್ಯವನ್ನು ಪ್ರತ್ಯಕ್ಷ ಕಾಣಲು, ಅನುಭವಿಸಲು ಬಯಸುವವರಿಗೆ ಈಗಲೂ ಖಂಡಿತವಾಗಿ ಪ್ರಕೃತಿಯ ದಿವ್ಯಭವ್ಯ ಸ್ವಾಗತ ಕಾದಿದೆ ಎಂಬದನ್ನು ಚಿತ್ರಿಸುವುದೇ ಈ ಲೇಖನದ ಉದ್ದೇಶ.

ಈ ಗಿರಿಶಿಖರವು ಸಮುದ್ರ ಮಟ್ಟಕ್ಕಿಂತ ೬೦೦೦ ಅಡಿ ಎತ್ತರವಾಗಿದೆ ಎಂದು ಅಂದಾಜು ಮಾಡಿದ್ದಾರೆ. ಇದು ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಸಂಸೆ ಗ್ರಾಮದಲ್ಲಿದೆ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ನಾವೂರು ಗ್ರಾಮದ ಗಡಿಯಂಚಿನಲ್ಲಿರುತ್ತದೆ.

ಮಿತ್ತಬಾಗಿಲುಗ್ರಾಮ ಪಂಚಾಯತ್ ಮತ್ತು ಮಿತ್ತಬಾಗಿಲು ಯುವಕ ಮಂಡಲಗಳ ಸಂಯುಕ್ತ ನಿರ್ದೇಶನದಲ್ಲಿ ತಾ. ೨೮-೪-೬೪ನೇ ಮಂಗಳವಾರ ಪೂರ್ವಾಹ್ನ ೫ ಗಂಟೆಗೆ ಹದಿನೇಳು ಜನರುಳ್ಳ ಸಮರ್ಥ ಪ್ರವಾಸೀ ತಂಡವು ಕಿಲ್ಲೂರಿಂದ ನಾವೂರು ವರೆಗೆ ಟ್ಯಾಕ್ಸಿಯಲ್ಲಿ ಹೊರಟಿತು. ಪ್ರವಾಸೀ ತಂಡದಲ್ಲಿ ಪಂಚಾಯತ್ ಸಭಾಪತಿಗಳು, ಕಾರ್ಯದರ್ಶಿಗಳು, ಯುವಕ ಮಂಡಲದ ಕಾರ್ಯದರ್ಶಿ ಮತ್ತು ಸದಸ್ಯರು, ಶಾಲಾ ಉಪಾಧ್ಯಾಯರು, ಕೃಷಿಕರು, ಸಹಕಾರೀ ಮಾರಾಟ ಸಂಘದ ಅಕೌಂಟೆಂಟರು, ಹೈಸ್ಕೂಲು, ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ನಾಲ್ಕು ಜನ ಮಜದೂರರೂ ಸೇರಿದ್ದರು. ಪ್ರವಾಸೀ ತಂಡವನ್ನು ಒಯ್ಯುತ್ತಿದ್ದ ಟ್ಯಾಕ್ಸಿಯು ಅಲ್ಲಲ್ಲಿ ಮುಷ್ಕರ ಮಾಡುತ್ತಾ ಕೆಮ್ಮುತ್ತ ಹೇಗೂ ಪೂರ್ವಾಹ್ನ ೬-೩೦ಕ್ಕೆ ನಾವೂರು, ಕಾಸ್ರೋಳಿ ಬಂಗ್ಲೆ ಸಮೀಪ ರಸ್ತೆ ಅಂತ್ಯಗೊಳ್ಳುವಲ್ಲಿ ಇಳಿಸಿ ಹೊರಟು ಹೋಯಿತು.

ಟ್ಯಾಕ್ಸಿಯಿಂದಿಳಿದ ಪ್ರವಾಸೀ ತಂಡವು ತಮ್ಮ ತಮ್ಮ ಸಾಹಿತ್ಯ ಸಲಕರಣೆಗಳ ಚೀಲಗಳು, ಗಂಟುಗಳನ್ನು ಹೊತ್ತುಕೊಂಡು ಬೆಟ್ಟವೇರಲು ಆರಂಭಿಸಿತು. ಹಿಂದಿನ ಬ್ರಿಟಿಷ್ ಸರಕಾರ ಮಾಡಿಸಿದ್ದ ೫ ಯಾ ೬ ಫೀಟು ಅಗಲದ ಕಾಲುದಾರಿ ಈಗಲೂ ಹೆಚ್ಚಿನ ಕಡೆಗಳಲ್ಲಿ ಚೆನ್ನಾಗಿದೆ. ಕೆಲವೆಡೆಗಳಲ್ಲಿ ಮಾತ್ರ ಕಾಡು ಬೆಳೆದು, ಮರಗಳು ಅಡ್ಡ ಮುರಿದು ಬಿದ್ದು ಪರ್ವತದ ಝರಿಗಳ ಮಳೆಗಾಲದ ನೀರು ಹರಿದು, ಕಲ್ಲುಮಣ್ಣುಗಳು ಜರಿದು ಬಿದ್ದು ಅಲ್ಲಲ್ಲಿ ಆತಂಕಗಳಿವೆ. ಈ ದಾರಿಯ ನಿರ್ಮಾಣದ ಸಾಹಸ ಕಾಣುವಾಗ ನಿಜವಾಗಿಯೂ ಪ್ರತಿಯೊಬ್ಬನೂ ಆಶ್ಚರ್ಯಪಡಬೇಕು. ಈ ಕಾಲು ದಾರಿಯಿಂದಲೇ ಕುದುರೆ ಮುಖ ಬೆಟ್ಟಕ್ಕೆ ಮುಂದರಿಯಬೇಕು. ಈ ಪ್ರದೇಶದಲ್ಲಿ ಜನವಸತಿಯೇ ಇಲ್ಲ. ಅಲ್ಲಲ್ಲಿ ನೀರಿನ ಹರಿವುಗಳಿವೆಯಾದರೂ ಪ್ರವಾಸಿಗರು ಕುಡಿಯುವ ನೀರನ್ನು ಅಲ್ಲಲ್ಲಿ ಸಂಗ್ರಹಿಸಿಕೊಂಡೊಯ್ಯಬೇಕು. ಬಿಸಿಲಿನ ತಾಪದಿಂದಲೂ ಎತ್ತರದ ಹಾದಿಯಲ್ಲೇ ಪ್ರಯಾಣ ಬೆಳೆಸಬೇಕಾದ್ದರಿಂದಲೂ ತುಂಬಾ ಬಾಯಾರಿಕೆ ಯಾಗುವುದು. ಮುಸುಂಬಿ, ಲಿಂಬೆ ಹಣ್ಣಿನ ಶರಬತ್ತು ಸಿದ್ಧವಾಗಿದ್ದರೆ ಬಹಳ ಪ್ರಯೋಜನವಾಗುವುದು. ಎತ್ತರಕ್ಕೆ ಹೋದಂತೆ ಅಲ್ಲಲ್ಲಿಂದ ಕೆಳಗಿನ ಬಯಲು ಪ್ರದೇಶದ ನೋಟ ಅತಿ ಸುಂದರವಾಗಿ ಕಾಣುತ್ತದೆ. ಹೊಳೆಗಳ ದೃಶ್ಯ, ಹೊಲ ಗದ್ದೆಗಳ ನೋಟ; ಮಧ್ಯೆ ಅಲ್ಲಲ್ಲಿ ಕಾಣುವ ಗುಡಿ ಗೋಪುರಗಳ ಸನ್ನಿವೇಶ ಕಣ್ಮನಗಳನ್ನು ಸೆಳೆಯುತ್ತವೆ. ಪ್ರವಾಸಿಗರು ಕೆಲವೆಡೆಗಳಲ್ಲಿ ಕಾಲುದಾರಿಯನ್ನು ಬಿಟ್ಟು ನೇರವಾಗಿ ಹತ್ತುವ, ಕಠಿಣ ಆದರೆ ಹತ್ತಿರವಾದ ಒಳದಾರಿಯಲ್ಲಿ ಪ್ರಯಾಣ ಮಾಡಬೇಕಾಗುತ್ತದೆ, ಹೀಗೆ ನೇರವಾಗಿ ಹತ್ತುವಾಗ ಹೆಚ್ಚಿನ ಎತ್ತರಕ್ಕೆ ಹತ್ತಬೇಕಾಗುವುದರಿಂದ ತುಂಬಾ ಆಯಾಸವಾಗುತ್ತದೆ.

ನಾವು ಸುಮಾರು ಪೂರ್ವಾಹ್ನ ೧೦ ಗಂಟೆಗೆ 'ಹೇವಳ'ಎಂಬಲ್ಲಿಗೆ ತಲುಪಿದೆವು. ಇಲ್ಲಿ ಎರಡು ಕ್ರೈಸ್ತ ರೈತ ಕುಟುಂಬಗಳಿವೆ. ಕಾಸ್ರೋಳಿ ಬಂಗ್ಲೆಯಿಂದ ಹೇವಳಕ್ಕೆ ೯ ಮೈಲು ದೂರವೆಂದು ಎಣಿಸಿದ್ದೇವೆ. ಹಳೆಯ ಕಾಲುದಾರಿಯಲ್ಲೇ ಪೂರ್ತಿ ಪ್ರಯಾಣಮಾಡಿದರೆ ಸುಮಾರು ೧೨ ಮೈಲು ದೂರವಾಗಬಹುದು.

ಜನ ಸಂಪರ್ಕದಿಂದ ಅತಿದೂರದಲ್ಲಿರುವ ಈ ರೈತರು ಇಲ್ಲಿ ಭತ್ತದ ಬೆಳೆ ಬೆಳೆಸುತ್ತಾರೆ. ಭತ್ತದ ಪೈರು ಇಲ್ಲಿ ಚೆನ್ನಾಗಿ ಬೆಳೆಯುತ್ತದೆ. ವರ್ಷದಲ್ಲಿ ಎರಡು ಬೆಳೆ ಬೆಳೆಸುವುದಾಗಿ ತಿಳಿಸಿದರು. ನಾವು ಸಂದರ್ಶಿದ ಸಮಯ ಬೈಲು ಗದ್ದೆಗಳಲ್ಲಿ ಭತ್ತದ ಉತ್ತಮ ಪೈರು ಇತ್ತು. ಜಪಾನು ಮಾದರಿಯಲ್ಲಿ ನೇಜಿ ನೆಟ್ಟು ಒಳ್ಳೆಯ ಬೆಳೆ ಬೆಳೆಸಿದ್ದಾರೆ. ಈ ರೈತರಿಗೆ ಇಲ್ಲಿ ೯೦ ಎಕ್ರೆ ಅಂದಾಜು ಪಟ್ಟಸ್ಥಳ ಇರುವುದಾದರೂ, ಕೂಲಿಗಳ ಅಭಾವದಿಂದ ಬರೀ ೧೫ ಎಕ್ರೆ ಮಾತ್ರ ಬೇಸಾಯ ಮಾಡುತ್ತಿರುವುದಾಗಿ ಸೂಚಿಸಿದರು. ಈ ಪ್ರದೇಶ ಚಿಕ್ಕಮಂಗಳೂರು ಜಿಲ್ಲೆಗೆ ಸೇರಿದ ಸಂಸೆ ಗ್ರಾಮದಲ್ಲಿದೆ. ಇಲ್ಲಿರುವ ಈ ರೈತರು ದಯಾಳುಗಳೂ ವಿನಯ ಶೀಲರೂ ಆಗಿದ್ದು, ಪ್ರವಾಸಿಗರಿಗೆ ಎಲ್ಲಾ ರೀತಿಯ ಸಹಕಾರಗಳನ್ನು ನೀಡಿ ಸಂತೋಷದ ಸ್ವಾಗತ ಕೋರುತ್ತಾರೆ. ಬಹುಶಃ ಮನುಷ್ಯ ಸಂಪರ್ಕದಿಂದ ಬಲುದೂರವಿದ್ದುದೂ ಇದರ ಕಾರಣವಿರಲೂ ಬಹುದು. ಹೇಗಿದ್ದರೂ ಪ್ರವಾಸಿಗರು, ದಣಿದು, ಬಳಲಿದ ಸಮಯ ಈ ರೈತ ಬಂಧುಗಳು ತೋರುವ ಆತ್ಮೀಯತೆಗೆ ಎಂಥವನೂ ಮರೆಯದ ಕೃತಜ್ಞತೆ ವ್ಯಕ್ತಪಡಿಸದಿರಲು ಸಾಧ್ಯವಿಲ್ಲ. ಈ ರೈತ ಬಂಧುಗಳು ಕ್ರೈಸ್ತಮತೀಯರಾದುದರಿಂದ ಪ್ರತಿ ಭಾನುವಾರ ಬಂಗಾಡಿ ಇಗರ್ಜಿಗೆ ಪ್ರಾರ್ಥನೆಯ ಬಗ್ಗೆ ಬರುತ್ತಾರೆಂಬುದನ್ನು ಕೇಳಿದಾಗ ನಮಗೆಲ್ಲಾ ತುಂಬಾ ಆಶ್ಚರ್ಯವಾಯಿತು. ಪ್ರತೀ ವಾರವೂ ಈ ಪರ್ವತ ಶಿಖರದಿಂದ ಬಂಗಾಡಿಗೆ ಸುಮಾರು ೧೪ರಿಂದ ೧೬ ಮೈಲು ದೂರ ನಡೆದು ಹೋಗಿಬರುವ ಸಾಹಸ ಮೆಚ್ಚುವಂಥಾದ್ದು.

ನಾವು ನಮಗೆ ಬೇಕಾದ ಎಲ್ಲಾ ಆಹಾರ ಸಾಹಿತ್ಯಗಳನ್ನು ನಮ್ಮೊಡನೆ ಕೊಂಡುಹೋಗಿದ್ದೆವಾದ ಕಾರಣ ಈ ರೈತರಿಂದ ಸ್ವಲ್ಪ ಹಾಲು ಮಾತ್ರ ಪಡೆಕೊಂಡು, ಹೆಚ್ಚು ಸಮಯ ಕಳೆಯದೆ ಅಲ್ಲಿಂದ ಕೂಡಲೇ ಪುನಃ ಬೆಟ್ಟದ ತುದಿಗೇರಲು ಮೊದಲು ಮಾಡಿದೆವು. ಈಗಾಗಲೇ ಮಾರ್ಗಾಯಾಸದಿಂದ ಬಳಲಿದ ನಮಗೆ ಹೇವಳದಿಂದ ಕುದುರೆಮುಖ ಶಿಖರ ಹತ್ತಲು ಬಹಳ ಪ್ರಯಾಸವಾಯಿತು. ಇಲ್ಲಿಂದ ಮುಂದಿನ ದಾರಿ ತುಂಬಾ ಕಡಿದಾಗಿದೆ. ಮಧ್ಯಾಹ್ನದ ಬಿಸಿಲಿನ ತಾಪ, ಹೊಟ್ಟೆಯ ಹಸಿವು, ಬಾಯಾರಿಕೆ ಮುಂದೆ ಹತ್ತಲಿರುವ ಕಡಿದಾದ ಬೆಟ್ಟವೇರುವ ಪ್ರಯಾಸದ ಹಾದಿ ಇವುಗಳಿಂದ ನಮ್ಮ ತಂಡದವರೆಲ್ಲಾ ಸೋತು ಹೋದರು. ಕುದುರೆಮುಖ ತಲಪುವ ಸಂಕಲ್ಪ ಬಲವಾಗಿತ್ತಾದ ಕಾರಣ ಸುಮಾರು ೪ ಮೈಲು ಹಾದಿ ನಡೆದ ನಂತರ, ನಾವು ಸಂಕಲ್ಪಿಸಿದ ಬೆಟ್ಟದ ತುದಿ ಕಾಣಿಸಿತು. ಸುಮಾರು ಮಧ್ಯಾಹ್ನ ೧೨ ಗಂಟೆಗೆ ನಾವೆಲ್ಲಾ ಕುದುರೆ ಮುಖ ಶಿಖರದ ಕೆಳ ಪಾರ್ಶ್ವದಲ್ಲಿ ಹರಿಯುವ ಚಿಕ್ಕ ಹಳ್ಳವೊಂದರ ಬದಿಯಲ್ಲಿ ವಿಶ್ರಾಂತಿಗಾಗಿ ನಿಂತೆವು. ನಾವೆಲ್ಲಾ ಸಾಹಿತ್ಯಗಳನ್ನು ಕೆಳಗಿರಿಸಿ ಹಳ್ಳದ ಬದಿಯಲ್ಲಿ ಒಲೆ ಮಾಡಿ, ಕಟ್ಟಿಗೆ ತಯಾರಿಸಿ, ಗಂಜಿ ಬೇಯಿಸಿಕೊಂಡೆವು. ಹಳ್ಳದಲ್ಲಿ ಸ್ನಾನ ತೀರಿಸಿದೆವು. ತಂಪಿನ ಹವೆ, ತಣ್ಣಗಿರುವ ನೀರು, ನಮ್ಮ ಎಲ್ಲಾ ಆಯಾಸವನ್ನೂ ಪರಿಹರಿಸಿತು. ತಂದಿದ್ದ ಚಟ್ನಿ, ತುಪ್ಪ ಉಪ್ಪಿನಕಾಯಿಯೊಂದಿಗೆ, ತಯಾರಿಸಿದ ಗಂಜಿಯನ್ನು ಉಂಡಾಗ ಹಸಿವೂ ನಿವಾರಣೆಯಾಯಿತು. ಮರಗಳ ಅಡಿಯಲ್ಲಿ ಕೆಲವರು ವಿಶ್ರಾಂತಿ ಪಡೆದರು. ಇನ್ನು ಕೆಲವರು ಇಸ್ಪೀಟು ಆಟದಿಂದ ಹೊತ್ತು ಕಳೆದರು ಕೆಲವರು ನಿಸರ್ಗ ಸೌಂದರ್ಯದ ಕುರಿತು ವಿಮರ್ಶಿಸುತ್ತಾ ಕಾಲ ಕಳೆದರು. ಸಂಜೆ ೩|| ಗಂಟೆಗೆ ಹಳ್ಳದ ಬದಿಯಿಂದ ನಾವೂ ನಮ್ಮ ಸಾಹಿತ್ಯಗಳನ್ನು ಜತೆಗೊಳಿಸಿ ಹಿಂದಿನಂತೆ ಮೂಟೆಗಳನ್ನು ಸಿದ್ಧಪಡಿಸಿ ಅಲ್ಲಿಂದ ಮುಂದೆ ಕುದುರೆಮುಖ ಶಿಖರದ ತುದಿ ಸೇರಲು ಹೊರಟೆವು. ಸ್ವಲ್ಪ ದೂರದಲ್ಲಿ ಬೆಟ್ಟದ ಒಂದು ಬದಿಯನ್ನೇ ವಿಶಾಲ ಸಮತಟ್ಟು ಮಾಡಿರುವ ಪ್ರದೇಶ ಸಿಕ್ಕಿತು. ಇಲ್ಲಿ ಹಾಳು ಬಿದ್ದಿರುವ ಸರಕಾರೀ ಪ್ರವಾಸೀ ಮಂದಿರವಿದೆ. ಈ ಕಟ್ಟಡ ಅತೀ ದೊಡ್ಡದಾಗಿದೆ. ಪಾಶ್ಚಾತ್ಯರಿಗೆ ಆವಶ್ಯವಿರುವಂತೆ ಈ ಮಂದಿರದ ನಿರ್ಮಾಣವಾಗಿದೆ. ಹಿಂದೆ ಈ ಪ್ರವಾಸೀ ಮಂದಿರವು ದೊಡ್ಡ ದೊಡ್ಡ ಅಧಿಕಾರಿಗಳಿಗೆ ಅವಶ್ಯವುಳ್ಳ ಸಮಸ್ತ ವಸತಿ ಸೌಕರ್ಯಗಳನ್ನೊಳಗೊಂಡ ಸುಂದರವಾದ ಒಂದು ದೊಡ್ಡ ಬಂಗ್ಲೆಯಾಗಿತ್ತೆಂತ ಈಗ ಕಾಣುವ ಅವಶೇಷಗಳಿಂದ ಸುಲಭವಾಗಿ ತಿಳಿಯಬಹುದು. ಇಟ್ಟಿಗೆಗಳಿಂದ ಕಟ್ಟಿದ, ಗಾರೆ ಮಾಡಿದ ಎತ್ತರ ವಿಶಾ

(೧೦ ನೇ ಪುಟನೋಡಿರಿ.)

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

OS 95/1964

ವೆಂಕಟ್ರಮಣ ಭಟ್ಟ....ವಾದಿ.

—V—

ಸುಬ್ಬಯ್ಯ ಶೆಟ್ಟಿ ಕೂಡಾ...ಪ್ರತಿವಾದಿ.

ಬೆಳ್ತಂಗಡಿ ತಾಲೂಕು ಉರುವಾಲು ಗ್ರಾಮದ ಗೇರು ಕಟ್ಟೆಯೆಂಬಲ್ಲಿರುವ ಸಂಕಪ್ಪ ಶೆಟ್ಟರ ಮಗ, ಮೇಲಿನ ವ್ಯಾಜ್ಯದ 3ನೇ ಪ್ರತಿವಾದಿ ಸಂಜೀವ ಶೆಟ್ರಿಗೆ—

ಗೇಣಿ ಬಾಕಿ ಬಗ್ಗೆ ವಾದಿಯು ಮೇಲಿನ ದಾವೆ ದಾಖಲು ಮಾಡಿದ್ದು, ನಿಮ್ಮ ಹಾಜರಾತಿ ಬಗ್ಗೆ ತಾ. 4-7-1964 ಕ್ಕೆ ಸದ್ರಿ ವ್ಯಾಜ್ಯದ ವಾಯಿದೆ ಇಟ್ಟಿರುತ್ತದೆ. ಆದುದರಿಂದ ಆ ದಿವಸ ನೀವು ಖುದ್ದು ಯಾ ವಕೀಲ ದ್ವಾರಾ ಹಾಜರಾಗಿ ಉತ್ತರಿಸದಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆ ಫೈಸ್ಲ ಮಾಡಲಾದೀತು.

(ಕೋರ್ಟು ಹುಕುಂ ಪ್ರಕಾರ)

(Sd) S. Rama Bhat-
Advocate for Plaintiff.
ಸಿ ಶಂಕರ ದೇವಸ್ಥಾನ ರಸ್ತೆ,
ಪುತ್ತೂರು ದ. ಕ.
ತಾ. 10-6-1964

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನೆಹರು ಪ್ರೀತಿಸುವ

ಔದ್ಯೋಗಿಕ ಮಹಾತಪಸ್ಸು

"ಕರ್ಮಣ್ಯೇವಾಧಿಕಾರಸ್ತೇ
ಮಾಫಲೇಷು ಕದಾಚನ
ಮಾಕರ್ಮ ಫಲ ಹೇತು ರ್ಭೂ
ರ್ಮಾತೇ ಸಂಗೋಽಸ್ತ್ವ ಕರ್ಮಣಿ'
(ಶ್ರೀ ಮದ್ಭಗವದ್ಗೀತೆ)

ನಮ್ಮ ಪವಿತ್ರ ಗ್ರಂಥವಾದ "ಭಗವದ್ಗೀತೆ"ಯಲ್ಲಿ ಭಗವಂತನೇ ಹೇಳಿದ ಮಾತಿದು. "ನೀನು ಕರ್ಮವನ್ನು ಮಾಡು ಫಲವನ್ನು ಬಯಸದಿರು. ಕರ್ಮಫಲಗಳನ್ನುಂಟು ಮಾಡಿಕೊಳ್ಳುವವನಾಗಬೇಡ. ಕರ್ಮವನ್ನು ಮಾಡುವುದರಲ್ಲಿ ಒಲವಿರಬೇಕು ಮಾಡದಿರುವುದರಲ್ಲಿ ಒಲವಿರಬಾರದು." ಆದುದರಿಂದ ನಮ್ಮ ರಾಷ್ಟ್ರ ಬಿನ್ನದ್ದಿಗೂ, ಸುಭಿಕ್ಷೆ, ಸುಸಂಪತ್ತು ನೆಲಸಲು ಪ್ರತಿಯೊಬ್ಬನೂ ಉದ್ಯೋಗ ನಿರತನಾಗಬೇಕು "ಅಜದಷ್ಟು ಚಿಕ್ಕದಾದರೂ ಗಜದಂತೆ ದುಡಿ, ಕಷ್ಟಪಟ್ಟು ಕೆಲಸ ಮಾಡು, ಹೊಟ್ಟೆ ತುಂಬಾ ಊಟ ಮಾಡು; ಕಷ್ಟಪಟ್ಟರೆ ಇಷ್ಟ ಉಂಟು, ಕೈಕೆಸರಾದರೆ ಬಾಯ್ಮೊಸರು; ಆಳಾಗಿ ದುಡಿದವನೇ - ಅರಸನಾಗಿ ಉಣ್ಣುವನು" — ಇತ್ಯಾದಿ ಹಲವು ಸದ್ವಾಕ್ಯಗಳು ಉದ್ಯೋಗದ ಮಹತ್ವವನ್ನು ತಿಳಿಸುತ್ತಿಲ್ಲವೆ? "ಉದ್ಯೋಗಂ ಪುರುಷ ಲಕ್ಷಣಂ' ಎಂಬಂತೆ "ಪುರುಷ" ಅಥವಾ "ಮನುಷ್ಯ' ಎನ್ನಬೇಕಾದರೆ— ಆತನು ದುಡಿಯುವವನಾಗಬೇಕು. ದುಡಿತವು ಹೆಚ್ಚಿದಂತೆ ಭಾರತದಲ್ಲಿ—ಏಕೆ—ಇಡಿ ಜಗತ್ತಿನಲ್ಲಿ ಭಿಕ್ಷುಕರನಿರ್ಮೂಲನವಾಗಿದೇಶವು ಸುಭಿಕ್ಷೆಯಿಂದ ತುಂಬಿತುಳುಕುವುದೆನ್ನುವುದು ನಿಸ್ಸಂದೇಹ. ಸರಕಾರವು ನಿರುದ್ಯೋಗ ನಿವಾರಣೆಗಾಗಿ ಗುಡಿ ಕೈಗಾರಿಕೆಗಳಿಗೂ, ಯಾಂತ್ರಿಕ ಯುಗವಾದ ಇಂದು 'ಯಂತ್ರ ಕೈಗಾರಿಕೆ' ಗಳಿಗೂ —ಪ್ರೋತ್ಸಾಹ ಕೊಡುತ್ತಿದ್ದು, ಹಲವು ಕಾರ್ಮಿಕರು ಮೇಲ್ಮಟ್ಟಕ್ಕೆ ಬರುತ್ತಿದ್ದಾರೆ ಹಾಗೂ ಉದ್ಧಾರವಾಗುತ್ತಿದ್ದಾರೆ. ಆದುದರಿಂದ "ಉದ್ಯೋಗ ಖಲು ಕರ್ತವ್ಯ" ಎಂಬಂತೆ ಉದ್ಯೋಗ ಶೀಲತೆಯು ಪ್ರತಿಯೊಬ್ಬನಿಗೂ ಅತ್ಯುತ್ತಮ ಕರ್ತವ್ಯ

ಪ್ರಿಯ ಓದುಗ ಮಹಾಶಯರೇ, ಇನ್ನು ಉದ್ಯೋಗದ ಮಹಿಮೆ, ಶ್ರೇಷ್ಠತೆ ಹಾಗೂ ಪ್ರಾಮುಖ್ಯತೆಗಳನ್ನು ಕೆಲವು ಸುಭಾಷಿತಕಾರರ ಸರಸ ವಾಣಿಗಳಿಂದ ನೋಡೋಣ.

ಅಶ್ರುತಶ್ಚ ಸಮುನ್ನದ್ಧೋ| ದರಿದ್ರಶ್ಚ
ಮಹಾಮನಾಃ||
ಅರ್ಥಾಂಶ್ಚಾಕರ್ಮಣಾ ಪ್ರೇಪ್ಸು|
ರ್ಮೂಢ ಇತ್ಯುಚ್ಯತೇ ಬುಧೈಃ||
(ವಿದುರನೀತಿ)

ಏನೂ ತಿಳಿಯದೆ ತನ್ನನ್ನು ವಿಜ್ಞಾನಿ ಎನ್ನುವವನನ್ನೂ, ದರಿದ್ರನಾಗಿದ್ದರೂ ಅನೇಕಾನೇಕ ಮಹತ್ವಾಕಾಂಕ್ಷೆಗಳನ್ನಿಟ್ಟುಕೊಂಡಿರುವವನನ್ನೂ ದುಡಿಯದೇ ಹಣ ಸಂಪಾದಿಸುವ ಆಸೆಯಿರುವವನನ್ನೂ ಬುದ್ಧಿವಂತರು ಮೂರ್ಖರೆನ್ನುತ್ತಾರೆ.

ಆರಭ್ಯತೇ ನಖಲು ವಿಘ್ನ ಭಯೇನ
ನೀಚೈಃ
ಆರಬ್ಧ ವಿಘ್ನ ನಿಹತಾ ವಿರಮಂತಿ
ಮಧ್ಯಾಃ
ವಿಘ್ನೈಃ ಪುನಃ ಪುನರಪಿ ಪ್ರತಿಹನ್ಯ
ಮಾನಾಃ
ಆರಬ್ಧಮುತ್ತಮ ಗುಣಾನ್
ಪರಿತ್ಯಜಂತಿ.
(ಭರ್ತೃಹರಿ)

"ಅಧಮರೆನ್ನಿಸಿದವರು ವಿಘ್ನ ಉಂಟಾಗುತ್ತದೆಂಬ ಭಯದಿಂದ ಯಾವ ಕಾರ್ಯವನ್ನೂ ಮೊದಲು ಮಾಡುವುದೇ ಇಲ್ಲ. "ಮಧ್ಯಮ"ರು ಆರಂಭಿಸಿದ ಕಾರ್ಯಕ್ಕೆ ವಿಘ್ನ ಬಂದರೆ ಅದರ ಗೊಡವೆಯನ್ನೇ ಬಿಡುತ್ತಾರೆ "ಉತ್ತಮ"ರು ಆರಂಭಿಸಿದ ಕೆಲಸಕ್ಕೆ ಪದೇ ಪದೇ ವಿಘ್ನ ಬಂದರೂ ಕಾರ್ಯವನ್ನು ನೆರವೇರಿಸದೆ ಬಿಡಲಾರರು.

ಉದ್ಯಮೇನ ಹೀ ಸಿದ್ಧ ಸ್ತಿ
ಕಾರ್ಯಾಣಿನ ಮನೋರಥೈ ||
ನಹಿ ಸುಪ್ತಸ್ಯ ಸಿಂಹಸ್ಯ
ಪ್ರವಿಶಸ್ತಿ ಮುಖಿ ಮೃಗಾಃ ||
(ಸುಭಾಷಿತ)

ಉದ್ಯೋಗ ಮಾಡುವುದರಿಂದ ಮಾತ್ರವೇ ಕಾರ್ಯಗಳು ಸಿದ್ಧಿಸುತ್ತವೆ. ಮನೋರಥಗಳಿಂದ ಸಿದ್ಧಿಸದು. ಮಲಗಿರುವ ಸಿಂಹದ ಬಾಯೊಳಗೆ ಮೃಗಗಳು ಬಂದು ತಾವಾಗಿಯೇ ಪ್ರವೇಶಿಸಲಾರವು.

ಉದೋಗಃ ಖಲು ಕರ್ತವ್ಯಃ
ಫಲಂ ಮಾರ್ಜಾಲವದ್ಭವೇತ್ಃ
ಜನ್ಮ ಪ್ರಭೃತಿ ಗೌರ್ನಾಸ್ತಿ
ಪಯಃ ಪ್ರಿಬತಿ ನಿತ್ಯಶಃ
(ಸುಭಾಷಿತ)

ಉದ್ಯೋಗವನ್ನು (ಪ್ರಯತ್ನಗಳನ್ನು) ಮಾಡುತ್ತಲೇ ಇರಬೇಕು. ಫಲವು ಬೆಕ್ಕಿಗೆ ಸಿದ್ಧಿಸಿದಂತೆ ಸಿದ್ಧಿಸುತ್ತದೆ. ದನವನ್ನು ಕಟ್ಟಲಿಲ್ಲ, ಸಾಕಲಿಲ್ಲ; ಆದರೂ ಹುಟ್ಟಿದಾರಭ್ಯ ಹಾಲನ್ನು ಕುಡಿಯುತ್ತಿರುತ್ತದೆ.

ಉದ್ಯಮಂ ಸಾಹಸಂ ಧೈರ್ಯಂ|
ಬುದ್ಧಿಃ ಶಕ್ತಿಃ ಪರಾಕ್ರಮಃ ||
ಷಡೇತೆಯತ್ರವರ್ತನ್ತೇ |
ತತ್ರ ದೇವಃ ಸಹಾಯ ಕೃತ್ ||
(ಸುಭಾಷಿತ)

ಉದ್ಯಮ, ಸಾಹಸ, ಧೈರ್ಯ, ಬುದ್ಧಿಶಕ್ತಿ ಮತ್ತು ಪರಾಕ್ರಮ— ಈ ಆರು ಗುಣಗಳೆಲ್ಲಿರುವವೋ ಅಲ್ಲಿ ದೇವರು ಸಹಾಯಕನಾಗುವನು.

ನದೈವ ಮಿತಿ ಸಂಚಿನ್ತ್ಯ
ತ್ಯಜೇ ದುದ್ಯೋಗ ಮಾತ್ಮನಃ
ಅನುದ್ಯ ಮೇ ಕಸ್ತೈಲಂ
ತಿಲೇಭ್ಯಃ ಪ್ರಾಪ್ತಿ ಮರ್ಹತಿ ||
(ಸುಭಾಷಿತ)

ಕೇವಲ ದೇವರು, ಅದೃಷ್ಟ ಎಂದು ಹೇಳಿಕೊಂಡು ಯಾರೂ ತಮ್ಮ ಪ್ರಯತ್ನಗಳನ್ನು ಬಿಡಬಾರದು ಪ್ರಯತ್ನಿಸದೇ ಎಳ್ಳಿನಿಂದ ಎಣ್ಣೆಯನ್ನು ತೆಗೆಯಲು ಸಾಧ್ಯವೇ? ಇಷ್ಟರಲ್ಲೇ ನಿಮಗೆ 'ಉದ್ಯೋಗ' (ಕರ್ಮ) ದ ಶ್ರೇಷ್ಠತೆಯು ಅರಿವಾದೀತು. ಅಂತೂ ಉದ್ಯೋಗವು ಮಹಾ ತಪೋಸಮುದ್ರ. 'ಕಾರ್ಲಾಯಿಲ್' ಎಂಬವನು ಹೇಳಿರುವನೇನೆಂದರೆ "ಹಾಡಿಕೊಳ್ಳುತ್ತಾ ಉದ್ಯೋಗ ಮಾಡುವಂತಹ ಮನುಷ್ಯನ ನಗುಬೇಕು, ಆತನು ಕೈಗೊಂಡ ಕಾರ್ಯ ಯಾವುದೇ ಇದ್ದರೂ ಅದೇ ಕಾರ್ಯದಲ್ಲಿ ತೊಡಗಿದ ಜೋಲು ಮುಖದವನಿಗಿಂತಲೂ, ಅವನು ಚೆನ್ನಾಗಿ ಮಾಡುವನು ಅಲ್ಲದೆ ಉಳಿದವರಿಗಿಂತ ಆತನ ದುಡಿಮೆಯ ಪ್ರಮಾಣವೂ ಜಾಸ್ತಿ. ದೀರ್ಘ ಪರಿಶ್ರಮವನ್ನು ಅವನೊಬ್ಬನೇ ಸಾಧಬಲ್ಲನು"

"ಆಹ್ಲಾದಕತೆಯ ಶಕ್ತಿಯು ಅದ್ಭುತವಾದುದು. ಅದು ಯಾವ ಗಣಿತ ಗುಣಿತಕ್ಕೂ ಸಿಲುಕದು. ಕೈಗೊಂಡ ಕಾರ್ಯದಿಂದ ಸಂತತವಾದ ಪ್ರಯೋಜನ ದೊರೆಯ ಬೇಕಾದರೆ, ಅದರಲ್ಲಿ ಸೂರ್ಯ ರಶ್ಮಿಯ ಪ್ರಭೆಯನ್ನು ತಂದುಕೊಳ್ಳ ಬೇಕು. ಆನಂದವಿರುವಲ್ಲಿ ಸೌಂದರ್ಯವಿದೆ " ಇದರಿಂದ ಉದ್ಯೋಗಿ ಪುರುಷನ ನಗು ಕ್ರೀಡಾ ಅಷ್ಟು ಮಹತ್ವದ್ದು ಎಂಬುದು ವ್ಯಕ್ತವಾಗುತ್ತದೆ

"ದುಡಿತವೇ ದುಡ್ಡಿನತಾಯಿ" ಎಂಬಂತೆ ಐಶ್ವರ್ಯಲಕ್ಷ್ಮಿಯನ್ನೊಲಿಸಲು ನಾವು ದುಡಿಮೆ ಮಾಡಬೇಕು. 'ದುಡಿದರೂ ದುಗುಡ ಕೊನೆಗಾಣದಿದ್ದರೆ ಮಡಿಯುವುದೇ ಮೇಲು' ಎಂಬ ನಾಣ್ಣುಡಿಯೂ ಇದೆ. ಆದರೂ ನಾವು ಪ್ರಯತ್ನಗಳನ್ನು ಸಾಧ್ಯವಿದ್ದಷ್ಟು ಮಾಡಬೇಕು. 'ಕಡೆಯದೆಯೆ ಕೇಳ್ ಬೆಣ್ಣೆ ಹೊಮ್ಮುವುದೆ, ಮುಳುಗದಿರ್ದೊಡೆ ಮಹಾ ರತ್ನಗಳ್?" ಎಂದು 'ಕುವೆಂಪು'ರವರೆಂದಂತೆ, ನಮಗೆ ಸಂಪತ್ತು, ದೈವ ಸಹಾಯಗಳೆಲ್ಲ ಒದಗ ಬೇಕಾದರೆ ನಾವು ಉದ್ಯೋಗವೆಂಬ "ಮಹಾ ತಪಸ್ಸ"ನ್ನು ಆಚರಿಸಲೇ ಬೇಕು, ನಾವು ಹಲವು ದೇವರುಗಳನ್ನು ಒಂದೊಂದು ರೀತಿಯಲ್ಲಿ ಪೂಜಿಸುವಂತೆ, "ಉದರ ನಿಮಿತ್ತಂ ಬಹುಕೃತ ವೇಷಂ" ಎಂದ ಶಂಕರಾಚಾರ್ಯರ ಮಾತಿನಂತೆ ಪ್ರತಿಯೊಬ್ಬರೂ ಒಂದೊಂದು ತರದ ಉದ್ಯೋಗ ತಪಸ್ಸನ್ನು ಆಚರಿಸಲೇ ಬೇಕಷ್ಟೆ? ಇದುದರಿಂದ ಉದ್ಯೋಗವೇ "ಮಹಾ ತಪಸ್ಸು" ಎಂದು ಪುನಃ ಹೇಳಿದರೂ, ಪಿಷ್ಟಪೇಷಣ ನ್ಯಾಯವಾಗದಷ್ಟೆ?

ಶ್ರೀ ರಾಮಕೃಷ್ಣ ಹೆಬ್ಬಾರ್
ಸುರತ್ಕಲ್

In the Court of the
Subordinate Judge of Udipi
S. C. No. 52/1964.

Sri Sode Vadiraja Mutt, Udipi
— Plaintiff
and
Rukka Shetty and others.
—Defendants.

Notice to Defendants Nos.

3 Kitti Shedthy
4 Kuddu Shetty
7. Kutti Shetty
8 Appi Shedthy
} Children of Kollu-Shedthy

All reside in Padur village, Udipi Taluk.

You are hereby informed that the above suit filed against you for recovery of Shubhakrithu and Shobhakrithu rent arrears, stands posted to 16-7-64 for hearing. If you have any objections you can appear on that day at 11 A. M. before the above Court, failing which the above suit will be disposed off in your absence.

(Sd.) V G Kedlaya. M A LL B.
Advocate, Udipi.

Udipi Date 19-6-64.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ. ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವ

ಗೀತೆಯ
ಕೈಗನ್ನಡಿ

360 ಪುಟಗಳಿಗೂ ಮಿಕ್ಕಿದ
ಪಾಕೇಟ್ ಎಡಿಶನ
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಒಂದು ಪ್ರತಿ ಬೇಕಾದವರು ಅಂಚೆ ವೆಚ್ಚ ೩೦ನ. ಪೈಸೆ ಸೇರಿಸಿ ಬೇಕಾದ ಪುಸ್ತಕ ಬೆಲೆಯನ್ನು ಮನಿಯಾರ್ಡರ, ಮಾಡುವುದು ರಖಂಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ. ೧೦.

ಜವಾಹರಲಾಲರ ವಿಚಾರಧಾರೆ

ಭವಿಷ್ಯದ ಬಗ್ಗೆ ಭಾರತಕ್ಕೆ ಹೆದರಿಕೆ ಎಂಬುದಿಲ್ಲ

ನನಗೆ ಭವಿಷ್ಯದ ಬಗ್ಗೆ ಚಿಂತೆಯಿಲ್ಲ. ನನ್ನ ಮನಸ್ಸಿನಲ್ಲಿ ಈ ಬಗ್ಗೆ ಯಾವ ಒಂದು ಭೀತಿಯೂ ಇಲ್ಲ. ಭಾರತ ಮಿಲಿಟರಿ ದೃಷ್ಟಿಯಿಂದ ಅಷ್ಟು ಮಹತ್ವದ ಸ್ಥಾನ ಪಡೆದಿಲ್ಲವಾದರೂ ನನಗೆ ಅದರ ಭವಿಷ್ಯದ ಬಗ್ಗೆ ಭೀತಿಯಾಗ ಇಲ್ಲ. ದೊಡ್ಡ ದೊಡ್ಡ ದೇಶಗಳ ಸೈನಿಕಬಲ, ನೌಕಾಬಲ ಮತ್ತು ಅವರ ಅಣು ಬಾಂಬುಗಳು— ಇವುಗಳು ಯಾವುವೂ ನನ್ನನ್ನು ಹೆದರಿಸಲಾರವು. ನನ್ನ ಗುರುವಿನಿಂದ ನಾನು ಕಲಿತಿರುವ ಪಾಠ ಇದೇ ಆಗಿದೆ. ಒಂದು ಮಹಾನ್ ದೇಶ ಹಾಗೂ ಅತ್ಯಂತ ಪ್ರಬಲ ಸಾಮ್ರಾಜ್ಯದ ವಿರುದ್ಧ ನಮ್ಮ ಜನ ನಿರಾಯುಧರಾಗಿ ನಿಂತು ಹೋರಾಡಿದರು. ದುಷ್ಟ ಶಕ್ತಿಗಳಿಗೆ ನಾವು ತಲೆ ಬಾಗಲು ನಿರಾಕರಿಸಿ ನಿಂತ ಪರಿಣಾಮವಾಗಿ ನಮಗೆ ನೆರವು ದೊರಕಿತು. ಮತ್ತು ನಮ್ಮ ಬಲ ಸಂವರ್ಧನೆಯೂ ಆಯಿತು. ಇಂದು ನಮ್ಮ ಮುಂದೆ ಅಷ್ಟೇ ಅಲ್ಲ ನಮ್ಮ ಜನರ ಮುಂದೆ ಈ ಪಾಠ ಇದೆ. ಒಮ್ಮೆ ನಾವು ನಮ್ಮ ಮನಸ್ಸಿನಲ್ಲಿರುವ ಭೀತಿಯನ್ನು ತೊರೆದು ಹಾಕಿದರೆ ಮತ್ತು ನಮ್ಮ ಆತ್ಮ ವಿಶ್ವಾಸವನ್ನು ಬೆಳೆಸಿಕೊಂಡರೆ ಸಾಕೆನಿಸುತ್ತದೆ. ಹಿಂಸಾತ್ಮಕ ನಡೆನುಡಿ ಮತ್ತು ಕೊನೆಗೆ ಯುದ್ಧಕ್ಕೆ ಅವಕಾಶ ಮಾಡುವುದಕ್ಕೆ ಬದಲಾಗಿ, ವಿಶ್ವಾಸ ಬೆಳೆಸಿಕೊಂಡು ಹೋಗುವ ದಾರಿ ಅನುಸರಿಸುವುದು ಹೆಚ್ಚು ಕ್ಷೇಮವೆಂದು ನಾನು ಭಾವಿಸುತ್ತೇನೆ.

(೧೯೪೮ ನವಂಬರ್ ೩ರಂದು ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ ಮಾಡಿದ ಭಾಷಣದಿಂದ)

ಭಾರತದ ಸತ್ಯ ಪ್ರತಿಪಾದನೆ,

ನಮ್ಮ ಧ್ವನಿ ಇಂದು ಬಹಳ ಕ್ಷೀಣವಾಗಿರಬಹುದು. ಆದರೆ ನಾವು ಜಗತ್ತಿನ ಮುಂದೆ ಇಡುತ್ತಿರುವ ಸಂದೇಶ ಮಾತ್ರ ಕ್ಷೀಣವಾಗಿಲ್ಲ. ಅದು ಸತ್ಯ ಪ್ರತಿಪಾದನೆಯ ಬಲವನ್ನು ಹೊಂದಿದೆ ಮತ್ತು ಅದು ಜಯಗಳಿಸುತ್ತದೆ.

(೧೯೪೯ರ ಜನವರಿ ೩೦ರಂದು ಮಹಾತ್ಮಾ ಗಾಂಧಿಯವರ ಪ್ರಥಮ ವಾರ್ಷಿಕ ತಿಥಿಯ ಸಮಯದಲ್ಲಿ ಮಾಡಿದ ಪ್ರಸಾರ ಭಾಷಣದಿಂದ)

ಇಂದಿನ ವಿಶ್ವದಲ್ಲಿ ಭಾರತದ ಪಾತ್ರ

ಅಪಾರ ಸಂಪತ್ಸಾಧನೆಗಳಿಂದ ಕೂಡಿರುವ ಸ್ವತಂತ್ರ, ಭಾರತವು ವಿಶ್ವಕ್ಕೂ ಮಾನವ ಜನಾಂಗಕ್ಕೂ ವಿಶೇಷ ರೀತಿಯ ಸೇವೆ ಸಲ್ಲಿಸಲು ಸಮರ್ಥವಾಗಿದೆ. ಜಗತ್ತಿನಲ್ಲಿ ಭಾರತಕ್ಕೆ ಒಂದು ವಿಶಿಷ್ಟ ಸ್ಥಾನವಿದೆ, ದೊಡ್ಡ ದೊಡ್ಡ ಸಾಧನೆಗಳಿಗಾಗಿಯೇ ಭಾರತದ ಪಾತ್ರ ಮೀಸಲರಿಗಿದೆ. ನಾವು ವಿಮುಖರಾಗುವ ಹಾಗಿಲ್ಲ ಜಗತ್ತಿನ ವಿದ್ಯಮಾನಗಳಲ್ಲಿ ನಾವು ಒಂದು ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ.

(ಭಾರತದ ಐಕಮತ್ಯ)

ಭಾರತದ ಸತ್ವ ಶಕ್ತಿ.

ಭಾರತವು ಅನಾದಿ ಕಾಲದಿಂದಲೂ ಒಂದು ತತ್ವ ಶಾಲಿ ರಾಷ್ಟ್ರವಾಗಿ ಉಳಿದಿದ್ದರೆ ಅದಕ್ಕೆ ಒಂದು ಮುಖವಾಗಿರುವಂತಹ ಹಾಗೂ ಸಹನೆಯಿಂದ ಕೂಡಿರುವ ನಮ್ಮ ಸಂಸ್ಕೃತಿ ಬಹು ಮಟ್ಟಿಗೆ ಕಾರಣವಾಗಿದೆ. ಜೀವನವನ್ನು ಆಳವಾಗಿ ನೋಡುವ ಒಂದು ದೃಷ್ಟಿ ಹಾಗೂ ಮಾನವತೀಯ ಒಂದು ಸೂಕ್ಷ್ಮ ಧರ್ಮ ಹಾಗೂ ಜೀವನದ ವಿಚಿತ್ರ ಗತಿಯ ಪ್ರಜ್ಞೆ ಇವುಗಳು ಹಿನ್ನೆಲೆಯಲ್ಲಿವೆ. ಭಾರತದ ಅಮೋಘ ಸಾಹಿತ್ಯ ಮತ್ತು ಕಲೆಗಳ ಮೂಲಕ ಅನಾದಿ ಕಾಲದಿಂದಲೂ ವಿಶೇಷ ರೀತಿಯ ಚೈತನ್ಯ ಹರಿದುಬಂದಿರುವುದು ಕಂಡು ಬರುತ್ತದೆ. ಇದರಲ್ಲಿ ನಾವು ಕಿಂಚಿತ್ ಭಾಗವನ್ನು ಮಾತ್ರ ಅನುಭವಿಸುತ್ತಿದ್ದೇವೆ. ಬಲ ಭಾಗ ಇನ್ನೂ ಅಡಗಿಕೊಂಡಿದೆ. ಅಥವಾ ನೈಸರ್ಗಿಕ ಕಾರಣಗಳಿಂದಾಗಿ ಇಲ್ಲವೆ ಮಾನವನ ವಿನಾಶ ಶಕ್ತಿಯಿಂದಾಗಿ ಹಾಳಾಗಿ ಹೋಗಿದೆ.

(ಭಾರತದರ್ಶನ)

ಸ್ವಾತಂತ್ರ್ಯ ಪಥದಲ್ಲಿ ಭಾರತ

ನಮ್ಮ ಈ ಭಾರತದಲ್ಲಿ ಕ್ರಾಂತಿಕಾರಿ ಹಾಗೂ ಮೂಲಭೂತವಾದ ಬದಲಾವಣೆಗಳಿಂದಾಗಿ ನಾವು ದೊಡ್ಡ ದೊಡ್ಡ ಘೋಷಣೆಗಳನ್ನು ಹಾಕುತ್ತಿರುವಾಗ. ಈ ವಿಶ್ವದಲ್ಲೇ ಕ್ರಾಂತಿಕಾರಿ ಬದಲಾವಣೆಗಳು ನಡೆಯುತ್ತಿರುವಾಗ ನಾವು ನಮ್ಮ ಮುಂದಿರುವ ಗುರಿಯನ್ನು ಮರೆಯುವುದಾದರೂ ಹೇಗೆ? ನಮ್ಮ ಗುರಿ ಮುಟ್ಟುವುದಕ್ಕೆ ಮೊದಲು ನಮ್ಮ ಚೈತನ್ಯವನ್ನು ನಾವು ಕಳೆದುಕೊಂಡರೆ ಹೇಗೆ? ನಾವು ಆಯಾಸಗೊಂಡರೆ ಮತ್ತು ವಿರಾಮವಾಗಿ ಕಾಲ ಕಳೆಯಲು ಬಯಸಿದರೆ ಭಾರತದ ಜನ ನಮ್ಮನ್ನು ಹೇಗೆ ತಾನೆ ನಾಯಕರನ್ನಾಗಿ ಅಂಗೀಕರಿಸಲು ಸಾಧ್ಯ? ಮೂಲ ಅವಶ್ಯಕತೆಗಳು ಹಾಗೂ ಆರ್ಥಿಕ ಕಾರಣಗಳು ಅವರನ್ನು ಗುರಿಯ ಕಡೆಗೆ ಮುನ್ನಡೆಯುವಂತೆ ಮಾಡುತ್ತಿರುವಾಗ ನಾವು ಸುಮ್ಮನೆ ಕುಳಿತಿರಲು ಹೇಗೆ ಸಾಧ್ಯ? ನಾವು ಹಿಮ್ಮೆಟ್ಟಿದರೆ ಇತರರು ನಮ್ಮನ್ನು ಹಿಂದಕ್ಕೆ ಹಾಕಿ ಪ್ರವಾಹ ಗತಿಗೆ ಅನುಗುಣವಾಗಿ ಮುನ್ನಡೆದು ಹೋಗುತ್ತಾರೆ.

(ಭಾರತ ಮುಕ್ತ ನಮ್ಮ ಜಗತ್ತು)

ರಾಷ್ಟ್ರಕ್ಕೆ ಮರಣವಿಲ್ಲ

ರಾಷ್ಟ್ರಕ್ಕೆ ಸಾವು ಎಂಬುದಿಲ್ಲ. ಜನರು ಬರಬಹುದು ಹೋಗಬಹುದು. ಆದರೆ ರಾಷ್ಟ್ರ ಮಾತ್ರ ಯಾವಾಗಲೂ ಉಳಿಯುತ್ತದೆ. ಅದಕ್ಕೊಂದು ಅಮರತ್ವವಿದೆ.

(೧೯೪೯ ಜನವರಿ ೨೮ರಂದು ಲಕ್ನೋ ವಿಶ್ವವಿದ್ಯಾಲಯದಲ್ಲಿ ವಿಶೇಷ ಪದವೀಧಾನ ಸಮಾರಂಭದ ಭಾಷಣದಿಂದ).

ಒಂದು ರಾಷ್ಟ್ರದ ವ್ಯಕ್ತಿತ್ವ

ಒಬ್ಬ ವ್ಯಕ್ತಿಗೆ ಹೇಗೊ ಹಾಗೆಯೇ ಒಂದು ರಾಷ್ಟ್ರಕ್ಕೆ ಬಹುಮುಖವಾದ ವ್ಯಕ್ತಿತ್ವವಿದೆ. ಜೀವನವನ್ನು ನೋಡುವ ಅನೇಕ ದೃಷ್ಟಿಗಳಿವೆ. ವಿವಿಧ ವ್ಯಕ್ತಿತ್ವ ಲಕ್ಷಣಗಳನ್ನು ಒಟ್ಟುಗೂಡಿರುವ ಒಂದು ಸಮಷ್ಟಿ ವ್ಯವಸ್ಥೆ ಬಲವಾಗಿದ್ದರೆ ಸರಿ. ಇಲ್ಲವಾದರೆ ಈ ವ್ಯಕ್ತಿತ್ವ ಲಕ್ಷಣಗಳು ಪ್ರತ್ಯೇಕಗೊಂಡು ಹಲವು ವಿಕಾರಗಳಿಗೆ ಅವಕಾಶ ಮಾಡಿಕೊಡುತ್ತವೆ. ಸಾಮಾನ್ಯವಾಗಿ ಪರಸ್ಪರ ಹೊಂದಾಣಿಕೆಯ ಒಂದು ನಿರಂತರ ಪ್ರಯತ್ನ ನಡೆಯುತ್ತಿರುತ್ತದೆ ಮತ್ತು ಇವುಗಳ ಒಂದು ಸಮತೋಲ ಸ್ಥಾಪಿತವಾಗುತ್ತದೆ. ಈ ಸಹಜ ಬೆಳವಣಿಗೆ ಕುಂಠಿತಗೊಂಡರೆ ಅಥವಾ ಕೆಲವು ವೇಳೆ ತೀವ್ರ ಬದಲಾವಣೆಗಳು ಉಂಟಾದರೆ ಅವುಗಳನ್ನು ಸುಲಭವಾಗಿ ಮೈಗೂಡಿಸಿಕೊಳ್ಳುವುದು ಸಾಧ್ಯವಾಗದೇ ಹೋಗಿ ವಿವಿಧ ವ್ಯಕ್ತಿತ್ವ ಲಕ್ಷಣಗಳ ಮಧ್ಯೆ ಘರ್ಷಣೆ ಉಂಟಾಗುತ್ತದೆ. ಭಾರತದ ಬೆಳವಣಿಗೆ ದೀರ್ಘಕಾಲ ಕುಂಠಿತಗೊಂಡಿತ್ತು. ಇದರ ಪರಿಣಾಮವಾಗಿ ಮೂಲಭೂತವಾದಂತಹ ಒಂದು ಬಿಕ್ಕಟ್ಟು ಹಾಗೂ ಘರ್ಷಣೆ ನಡೆಯುತ್ತಿರುವುದನ್ನು ನಾವು ಗಮನಿಸಬಹುದು. ಹೊರಗೆ ಕಂಡು ಬರುವ ಘರ್ಷಣೆಗಳು ಮತ್ತು ಭೇದಭಾವಗಳ ಅಂತರಾಳದಲ್ಲಿ ಮೂಲತಃ ಆ ಒಂದು ಅಶಾಂತಿ ಇದೆ. ಒಂದು ಸಮಾಜ ಸ್ಥಿರ ತಳಹದಿಯ ಮೇಲೆ ನಿಲ್ಲಬೇಕಾದರೆ ಮತ್ತು ಪ್ರಗತಿಪರವಾಗಿ ಬೆಳೆಯಬೇಕಾದರೆ ಅದಕ್ಕೆ ಆಧಾರವಾಗಿ ಗೊತ್ತಾದ ಕೆಲವು ಮೂಲಭೂತತತ್ವಗಳ ಅಡಿಪಾಯ ಅವಶ್ಯಕವಾಗುತ್ತದೆ. ಅಂತೆಯೇ ಸಮಾಜದ ದೃಷ್ಟಿ ಕೂಡಾ ವಿಶಾಲವಾಗಬೇಕಾಗುತ್ತದೆ. ಇವೆರಡೂ ಅವಶ್ಯಕ. ವಿಶಾಲವಾದ ದೃಷ್ಟಿಯಿಲ್ಲವಾದರೆ ಅದು ಕೊಳೆಯುತ್ತದೆ ಮತ್ತು ಹಾಳಾಗುತ್ತದೆ. ಒಂದು ತತ್ವದ ಬಲವಾದ ತಳಹದಿ ಇಲ್ಲದಿದ್ದರೆ ವ್ಯಕ್ತಿತ್ವದ ಲಕ್ಷಣಗಳು ಚದುರಿ ಹೋಗುತ್ತವೆ ಮತ್ತು ಹಾಳಾಗುತ್ತವೆ.

(ಭಾರತ ದರ್ಶನ)

ರಾಷ್ಟ್ರೀಯ ಪರಂಪರೆ

ಒಂದು ಭವ್ಯ ಪರಂಪರೆಗಿಂತ ದೊಡ್ಡದು ಬೇರೊಂದಿಲ್ಲ. ಅದರಷ್ಟು ಪ್ರಯೋಜನಕಾರಿ ಬೇರೊಂದಿಲ್ಲ ಆದರೆ ಆ ಪರಂಪರೆಯನ್ನಷ್ಟೇ ಆಶ್ರಯಿಸಿ ಕುಳಿತುಕೊಳ್ಳುವದಕ್ಕಿಂತ ದೊಡ್ಡ ಅಪಾಯ ಕೂಡಾ ಬೇರೊಂದಿಲ್ಲ. ತನ್ನ ಪೂರ್ವಿಕರನ್ನು ಮಾತ್ರ ಅನುಸರಿಸುವುದರಿಂದ ಒಂದು ರಾಷ್ಟ್ರದ ಪ್ರಗತಿ ಸಾಧ್ಯವಾಗಲಾರದು. ಒಂದು ರಾಷ್ಟ್ರವನ್ನು ಕಟ್ಟಲು ಕ್ರಿಯಾತ್ಮಕವಾದ ಹಾಗೂ ಹೊಸದಾದ ಚೈತನ್ಯ ಶಾಲಿ ಕಾರ್ಯ ಚಟುವಟಿಕೆಗೆ ಬಹಳ ಅವಶ್ಯಕವಾಗುತ್ತದೆ.

(1952 ರ ಅಕ್ಟೋಬರ್ 20 ರಂದು ಸಾಗರ್ ವಿಶ್ವ ವಿದ್ಯಾನಿಲಯದಲ್ಲಿ ಮಾಡಿದ ಭಾಷಣದಿಂದ)

ಸತ್ಯದ ಹಾಗೂ ಸರಿಯಾದ ಹಾದಿ.

ಸರಿಯಾದ ಮಾರ್ಗವನ್ನು ಅನುಸರಿಸಿದರೆ ಮತ್ತು ನಾವು ಅದರಿಂದ ವಿಮುಖರಾಗದೆ ಹೋದರೆ ಸತ್ಯದ ಪ್ರಯೋಜನದ ದೃಷ್ಟಿಯಿಂದಲೂ ನಮಗೆ ಜಯ ಲಭಿಸುತ್ತದೆ ಎಂಬ ಪೂರ್ಣ ವಿಶ್ವಾಸ ನನಗಿದೆ. ಅಸತ್ಯದ ಹಾದಿ ಹಿಡಿಯುವ ಯಾವ ರಾಷ್ಟ್ರವೇ ಆಗಲಿ ತನ್ನ ಗುರಿಯನ್ನು ಮುಟ್ಟಲು ಅಸಮರ್ಥವಾಗುತ್ತದೆ.

(೧೯೪೮ ಸಪ್ಟಂಬರ್ ೩ರಂದು ಲಾಜ್ಯಾಂಗ ಸಭೆಯಲ್ಲಿ ಮಾಡಿದ ಭಾಷಣದಿಂದ)

ಜನರ ಪ್ರೀತಿ ಅಮೂಲ್ಯ

ನಿಮಗೆ ಅನೇಕ ಉಡುಗೊರೆಗಳು ದೊರೆತಿರಬಹುದು. ಆದರೆ ಜನರ ಪ್ರೀತಿ ವಿಶ್ವಾಸಗಳಷ್ಟು ಅಮೂಲ್ಯವಾದುದು ಬೇರೊಂದಿಲ್ಲ

(೧೯೪೮ ಜೂನ್ ೨೦ರಂದು ನವದೆಹಲಿಯಲ್ಲಿ ಮೌಂಟ್ ಬ್ಯಾಟನ್ ದಂಪತಿಗಳ ಸತ್ಕಾರ ಸಮಾರಂಭದಲ್ಲಿ ಮಾಡಿದ ಭಾಷಣದಿಂದ)

ಅತ್ಯುತ್ತಮ ಸೇವೆಗಾಗಿ ಸಮಾವೇಶ..........

ದಿ ಒರಿಯಂಟಲ್ ಯೂನಿಯನ್ ಬ್ಯಾಂಕ್

XX

ಸಿಂಡಿಕೇಟ್ ಬ್ಯಾಂಕ್

ದಿ ಒರಿಯಂಟಲ್ ಯೂನಿಯನ್ ಬ್ಯಾಂಕ್ ಲಿಮಿಟೆಡ್ ಕಡುತುರುತಿ, ತಾ. 15—6—'64ರಂದು ದಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್, ಮಣಿಪಾಲ, ಇದರೊಂದಿಗೆ ಸಮಾವೇಶಗೊಂಡಿರುವುದು. ಸಿಂಡಿಕೇಟ್ ಬ್ಯಾಂಕಿನೊಡನೆ ಈ ವರೆಗೆ ಸೇರ್ಪಡೆಗೊಂಡ ಬ್ಯಾಂಕುಗಳಲ್ಲಿ ಇದು ಹದಿನಾರನೆಯದು. ನಮ್ಮ ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಸೇವೆಯನ್ನು ದಿ ಒರಿಯಂಟಲ್ ಯೂನಿಯನ್ ಬ್ಯಾಂಕಿನ ಗಿರಾಕಿಗಳೂ ಪಡೆಯುವರೆಂಬ ಸದಾಶಯ ನಮಗಿದೆ.

ಡಾ|| ಟಿ. ಎಂ. ಎ. ಪೈ ಚೇರ್‌ಮ್ಯಾನ್	ಟಿ. ಎ. ಪೈ ಮ್ಯಾನೇಜಿಂಗ್ ಡೈರೆಕ್ಟರ್.
ಒಟ್ಟು ಶಾಖೆಗಳು 192	ಚಲಾವಣಾನಿಧಿ 57 ಕೋಟಿಗೂ ಮಿಕ್ಕಿದೆ:

— ಸಮಾನ ಸೇವೆ ....ಸರಿಯಾದ ಭದ್ರತೆ —

ನವಯುಗ

ವರುಷ	ಉಡುಪಿ	ವಾರ
೪೩	೨-೫೬-೧೯೬೪	೪೩

ಬಿಗಡಾಯಿಸಿದ ಆಹಾರ ಪರಿಸ್ಥಿತಿ

ದೇಶದ ಆಹಾರ ಪರಿಸ್ಥಿತಿಯ ಕುರಿತು ಈಗ ಎಲ್ಲಾ ವರ್ಗಗಳೂ ತೀವ್ರ ವಿವಂಚನೆಯನ್ನು ವ್ಯಕ್ತಪಡಿಸುತ್ತವೆ. ದಿನದಿಂದ ದಿನಕ್ಕೆ ಗಗನ ಮುಟ್ಟುತ್ತಿರುವ ಆಹಾರ ಧಾನ್ಯಗಳ ಬೆಲೆಗಳ ಏರಿಕೆಗೆ, ಕಾರಣವೇನು? ಬೆಲೆಗಳನ್ನು ಹತೋಟಿಯಲ್ಲಿಡುವುದು ಹೇಗೆ? ದೇಶದಲ್ಲಿ ಎದ್ದಿರುವ ಈ ಆಹಾರದ ಅಭಾವದ ಪರಿಸ್ಥಿತಿ ಕೃತಕವೇ ಹಾಗೂ ಕೆಲವೇ ಲಾಭಕೋರರಿಂದ ಪ್ರೇರಿತವಾಗಿರುವುದೇ ಎಂಬುದು ನಿರ್ಧರಿಸಬೇಕಾದ ವಿಷಯ. ದೇಶದಲ್ಲಿ ಈ ಕುರಿತು ಎಲ್ಲೆಡೆಯಲ್ಲೂ ಹಾಹಾಕಾರವೆದ್ದಿದೆ. ಮಧ್ಯಮ ಹಾಗೂ ಬಡ ವರ್ಗದ ಜನತೆಯ ಜೀವನವು ದಿನದಿಂದ ದಿನಕ್ಕೆ ದುಸ್ತರವೆನಿಸುತ್ತಿದೆ. ಬೇಸಾಯದ ಆರಂಭದ ಈ ದಿನಗಳಲ್ಲೇ ಅಕ್ಕಿ ಮತ್ತು ಗೋಧಿಯ ಬೆಲೆ ಕಳೆದ ವರ್ಷಕ್ಕಿಂತ ಸೇಕಡಾ ೨೦ರಿಂದ ೩೦ರ ತನಕ ಏರಿದೆಯೆಂದರೆ ಪರಿಸ್ಥಿತಿಯು ಎಷ್ಟು ವಿಷಮತೆಗೆ ಮುಟ್ಟಿದೆ ಎಂದು ಎಲ್ಲರಿಗೂ ಮನವರಿಕೆಯಾಗಬಹುದು.

ಇದೇ ತಿಂಗಳ ೩ರಂದು ನಮ್ಮ ರಾಜ್ಯಗಳ ಮುಖ್ಯ ಮಂತ್ರಿಗಳು ನವದೆಹಲಿಯಲ್ಲಿ ಸಭೆ ಸೇರಿ ಈ ಕುರಿತು ಚರ್ಚಿಸಿದ್ದಾರೆ. ಈ ಸಂಚಿಕೆಯು ಅಚ್ಚಿಗೆ ಹೋಗುವ ಹೊತ್ತಿಗೆ ಅವರ ಸಮ್ಮೇಳನದ ಫಲಶ್ರುತಿಯ ವಿವರ ತಿಳಿದು ಬಂದಿಲ್ಲ. ಪ್ರಧಾನ ಮಂತ್ರಿ ಶಾಸ್ತ್ರಿಯವರು, ಆಹಾರ ಧಾನ್ಯಗಳ ಬೆಲೆಯೇರಿಕೆಯನ್ನು ತಡೆಯಲು ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಮತ್ತು ಆಹಾರ ಪರಿಸ್ಥಿತಿಯ ಇತರ ವಿಷಯಗಳ ಬಗ್ಗೆ ಪರಿಶೀಲನೆ ನಡೆಸಲು ಈ ಪರಿಷತ್ತನ್ನು ಕರೆದಿದ್ದಾರೆ. ಈ ಸಭೆಯು ಸಮಸ್ಯೆಯ ಪರಿಹಾರಕ್ಕೆ ಅಲ್ಪಾವಧಿಯ ಹಾಗೂ ದೀರ್ಘಾವಧಿಯ ಉಪಾಯಗಳನ್ನು ಪರಿಶೀಲಿಸುವುದೆಂದೂ ಹೇಳಲಾಗಿದೆ. ಈ ಸಂಚಿಕೆ ಓದುಗರ ಕೈ ಸೇರುವ ವೇಳೆಗೆ ಮುಖ್ಯ ಮಂತ್ರಿಗಳ ಪರಿಷತ್ತಿನ ಫಲಶ್ರುತಿಗಳ ವಿಚಾರ ಓದುಗರಿಗೆ ತಿಳಿಯಬಹುದು.

ದೇಶದ ಹಲವಾರು ರಾಜ್ಯಗಳಲ್ಲಿ ಆಹಾರಾಭಾವ ತೀವ್ರ ಗತಿಗೆ ಮುಟ್ಟಿದೆ ಎಂದು ತಿಳಿಯುತ್ತದೆ. ಮಹಾರಾಷ್ಟ್ರ ಪಶ್ಚಿಮ ಬಂಗಾಳಗಳಲ್ಲಿ ಪರಿಸ್ಥಿತಿ ವಿಪರೀತಾವಸ್ಥೆಗೆ ಮುಟ್ಟಿದಾಗ, ಕೇಂದ್ರ ಸರಕಾರ ದಾಸ್ತಾನಿನಿಂದ ಅಕ್ಕಿ ಗೋಧಿಗಳನ್ನು ಬಿಡುಗಡೆ ಮಾಡಿ, ಪರಿಸ್ಥಿತಿಯನ್ನು ಸ್ಥಿಮಿತಕ್ಕೆ ತಂದಿತು. ದೇಶದ ಇತರ ರಾಜ್ಯಗಳ ಸ್ಥಿತಿಯೂ ಅಷ್ಟು ಚೆನ್ನಾಗಿಲ್ಲ. ಮೈಸೂರು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಆಹಾರ ಧಾನ್ಯಗಳ ಬೆಲೆಗಳು ಒಂದೇ ಸಮನೆ ಹೆಚ್ಚಾಗ ತೊಡಗಿವೆ. ಕಾಲಕ್ಕೆ ಸರಿಯಾಗಿ ಮುಂಗಾರು ಮಳೆಯು ಕೂಡಾ ಬಾರದೆ ರೈತರು ಕಂಗಾಲಾಗಿದ್ದಾರೆ. ಬೇಸಾಯವು ಮುಗಿಯ ಬೇಕಾಗಿದ್ದ ಈ ಸಮಯ ಇನ್ನೂ ಬೇಸಾಯ ಆರಂಭವಾಗಿಲ್ಲ. ಹೀಗಾದರೆ ಕೊಯ್ಲಿಗೆ ವೇಳೆಯಾಗಿ, ಆಹಾರಾಭಾವ ಇನ್ನಷ್ಟು ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ

ದೇಶದಲ್ಲಿ ಎದ್ದಿರುವ ಈ ಅಭಾವ ಪರಿಸ್ಥಿತಿಗೆ ಕಾರಣವೇನು? ಇತ್ತೀಚೆಗೆ, ಕೇಂದ್ರ ಸರಕಾರದ ಆಹಾರ ಮಂತ್ರಿ ಶಾಖೆಯು ಒಂದು ಪ್ರಕಟಣೆ ಹೊರಡಿಸಿ ೧೯೬೩—೬೪ನೇ ವರ್ಷದ ಅಕ್ಕಿಯ ಉತ್ಪಾದನೆಯು ಮೂವತ್ತಾರು ಮಿಲಿಯ ಟನ್ನುಗಳಷ್ಟಾಗಬಹುದೆಂದೂ, ಇದು ಹಿಂದಿನ ದಾಖಲೆಗಳನ್ನು ಮುರಿದಿದೆಯೆಂದೂ ಸಾರಿತು. ಗೋಧಿಯ ಉತ್ಪಾದನೆಯೂ ತಕ್ಕ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದೂ ಈ ಹೇಳಿಕೆ ಹೇಳಿತು ಇಷ್ಟು ಮಾತ್ರವಲ್ಲದೆ ೧೯೬೩ರಲ್ಲಿ ಅಮೇರಿಕೆಯ ಜತೆ ಮಾಡಿಕೊಂಡ ಎ. ಎಲ್. ೪೮೦ ಒಪ್ಪಂದ ಹಾಗೂ ಇತರ ರೀತಿಯ ಕೊಳ್ಳುವಿಕೆಗಳಿಂದ ದೇಶಕ್ಕೆ ಆಮದಾದ ಆಹಾರ ಧಾನ್ಯ ೧೮೮ ಕೋಟಿ ರೂ. ಬೆಲೆಯ ೪.೫೬ ಮಿಲಿಯ ಟನ್ನುಗಳಷ್ಟಾಗಿವೆ. ದೇಶದ ಅಧಿಕ ಉತ್ಪಾದನೆ ಹಾಗೂ ವಿದೇಶಗಳಿಂದ ಆಹಾರ ಧಾನ್ಯಗಳ ಆಮದಿನಿಂದ ಈ ವರ್ಷ ಆಹಾರ ಧಾನ್ಯಗಳ ಬೆಲೆ ಬಹುಮಟ್ಟಿಗೆ ಕಡಿಮೆಯಾಗಬಹುದೆಂದು ಎಲ್ಲರೂ ಸಹಜವಾಗಿ ನಿರೀಕ್ಷಿಸಿಕೊಂಡಿದ್ದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಇಂದು ದೇಶದಲ್ಲಿ ಆಹಾರ ಧಾನ್ಯಗಳ ಬೆಲೆ ಏರಿಕೆಯ ಕೂಗು ಹಬ್ಬಿದೆ. ಇದಕ್ಕೆ ಮೂಲ ಕಾರಣವಾದರೂ ಯಾವುದು?

ಆಲೋಚಿಸಿದಲ್ಲಿ ಇದಕ್ಕೆ ಹಲವಾರು ಕಾರಣಗಳಿವೆ, ಆಹಾರ ಧಾನ್ಯಗಳ ಮಾರಾಟದ ಮೇಲೆ ಹತೋಟಿ ಹಾಗೂ ಸರಕಾರೀ ವ್ಯಾಪಾರಗಳ ಕುರಿತು ನಮ್ಮ ನಾಯಕರು ಎಚ್ಚರಿಕೆಯ ರೂಪದಲ್ಲಿ ಆಡುತ್ತಿರುವ ಮಾತುಗಳೇ ದಾಸ್ತಾನುಗಾರರು ಆಹಾರ ಧಾನ್ಯಗಳನ್ನು ಬಚ್ಚಿಡುವುದಕ್ಕೆ ಪ್ರೇರಕವಾಗಿರಬಹುದು. ಅಧಿಕ ಆಹಾರ ಧಾನ್ಯ ದಾಸ್ತಾನಿರುವ ರಾಜ್ಯಗಳು, ಆಹಾರ ಧಾನ್ಯಗಳ ಸಾಗಾಟದ ಕುರಿತು ವಲಯಗಳ ನಡುವೆ ಒಂದೊಮ್ಮೆ ಒಂದೇ ವಲಯದ ಒಳಗೆ ಹೇರಿರುವ ವ್ಯವಹಾರಿಕವಲ್ಲದ ನಿರ್ಬಂಧವೂ ಬಹುಮಟ್ಟಿಗೆ ಈ ಅಭಾವ ಪರಿಸ್ಥಿತಿಗೆ ಕಾರಣವಾಗಿರಬಹುದು. ಸರಕಾರೀ ಪ್ರಾತಿನಿಧಿಕ ಸಂಸ್ಥೆಗಳ ಹಾಗೂ ಸಹಕಾರೀ ಸಂಸ್ಥೆಗಳು ಆಹಾರ ಧಾನ್ಯಗಳ ದಾಸ್ತಾನಿನ ಕುರಿತು ಬೇಜವಾಬ್ದಾರಿಯಿಂದ ವರ್ತಿಸುವುದೂ ಇನ್ನೊಂದು ಕಾರಣವಾಗಿರಬಹುದು. ಸರಕಾರದ ಆಹಾರ ಧಾನ್ಯಗಳ ಸಂಗ್ರಹದ ರೀತಿ ಹಾಗೂ ವಿಧಾನಗಳು ದೋಷಯುಕ್ತವಾದುದರಿಂದಲೂ ಈ ಅಭಾವ ತಲೆದೋರಿರಬಹುದು. ಅಂತೂ ನೈಜವೂ ಅಥವಾ ಕೃತಕವೊ, ಅಭಾವವಂತೂ ಎಲ್ಲೆಲ್ಲೂ ತಾಂಡವವಾಡುತ್ತಿದೆ.

ಕೇಂದ್ರ ಸರಕಾರದ ಆಹಾರ ಮಂತ್ರಾಲಯವು ಅಕ್ಕಿಯ ಉತ್ಪಾದನೆಯ ಕುರಿತು ಇತ್ತ ಹೇಳಿಕೆ ಸತ್ಯವೆಂದಾದರೆ, ಕೇಂದ್ರ ಸರಕಾರದ ಬಳಿ ಅಧಿಕ ಪ್ರಮಾಣದ ಗೋಧಿಯು ದಾಸ್ತಾನು ಇರುವುದು ನಿಜವೆಂದಾದರೆ, ಈ ಸಮಸ್ಯೆಯನ್ನು, ಆಹಾರ ಶಾಖೆಯು ಅಕ್ಕಿ ಮತ್ತು ಗೋಧಿಯನ್ನು ದಾಸ್ತಾನಿನಿಂದ ಬಿಡುಗಡೆ ಮಾಡುವುದರ ಮೂಲಕ ತೀವ್ರವಾಗಿ ಬಗೆಹರಿಸಬಹುದು. ಪರಿಸ್ಥಿತಿಯ ಸತ್ಯ ಚಿತ್ರಣವನ್ನು ಅರಿತು ಈ ಕುರಿತು ಯೋಗ್ಯ ಪರಿಹಾರವನ್ನು ಹುಡುಕುವುದು ಅತಿ ಅಗತ್ಯ. ಸರಕಾರೀ ವ್ಯವಹಾರದಂತಹ ಅಧಿಕ ವೆಚ್ಚದ ವಿಧಾನವನ್ನು ಬಳಸುವುದರ ಬದಲು, ತತ್ಕಾಲಕ್ಕೆ ಸರಕಾರ ಅಗ್ಗ ದರದ ಅಂಗಡಿಗಳನ್ನು ತೆರೆಯುವುದರ ಮೂಲಕ, ನಂಬಿಕೆಯ ವ್ಯಾಪಾರಿಗಳಿಗೆ ಆಹಾರ ಧಾನ್ಯ ವಿತರಣೆಯ ಅಧಿಕಾರ ಕೊಡುವುದರ ಮೂಲಕ ಪರಿಸ್ಥಿತಿಯನ್ನು ಎದುರಿಸಬಹುದು.

ರಾಜ್ಯಗಳ ಮುಖ್ಯ ಮಂತ್ರಿಗಳ ಪರಿಷತ್ತಿನ ಮೇಲೆ ಅಪಾರವಾದ ಜವಾಬ್ದಾರಿ ಬಿಟ್ಟಿದೆ ಈ ಸಮ್ಮೇಳನವು ದೇಶದ ಆಹಾರ ಪರಿಸ್ಥಿತಿಯ ಕುರಿತು ಪ್ರಾಮಾಣಿಕವಾದ ಪರಿಶೀಲನೆ ನಡೆಸುವುದೆಂದು ಎಲ್ಲರೂ ಹಾರೈಸುತ್ತಿದ್ದಾರೆ. ಆಹಾರ ಧಾನ್ಯ ವ್ಯಾಪಾರಿಗಳ ಸಂಸ್ಥೆಗಳು ಮತ್ತು ಸರಕಾರೀ ಅಧಿಕಾರಿಗಳ ನಡುವೆ ಬಿಚ್ಚುಮಾತಿನ ವಿಚಾರ ವಿನಿಮಯ ನಡೆಯುವಂತೆ ಈ ಪರಿಷತ್ತು ಮಾಡುವುದು ಅಗತ್ಯ ದಾಸ್ತಾನಿನಲ್ಲಿರುವ ಆಹಾರ ಧಾನ್ಯವನ್ನು ವಿತರಣೆಗೆ ತಂದು ಯೋಗ್ಯ ದರದಲ್ಲಿ ವಿತರಣೆ ಮಾಡುವ ವಿಧಾನಗಳ ಕುರಿತು ಅಧಿಕಾರಿಗಳೂ ವ್ಯಾಪಾರಸ್ಥರೂ ನಿರ್ಣಯಕ್ಕೆ ಬರಬೇಕು ಕೇಂದ್ರ ಸರಕಾರವು ಮುಂಬರುವ ತಿಂಗಳುಗಳಲ್ಲಿ ತನ್ನ ದಾಸ್ತಾನಿನಿಂದ ಧಾನ್ಯವನ್ನು ಬಿಡುಗಡೆ ಮಾಡುವಲ್ಲಿ ಹಿಂದೇಟು ಹಾಕಬಾರದು. ಅಗತ್ಯವಿದ್ದರೆ ಅದು ಪುನಃ ಅಮೇರಿಕದಿಂದ ಐದು ವರ್ಷಗಳ ವರೆಗೆ ಆಹಾರ ಧಾನ್ಯ ಆಮದು ಮಾಡುವ ಒಪ್ಪಂದ ಮಾಡುವುದು ಒಳ್ಳೆಯದು.

ಕೇವಲ ವಿದೇಶಗಳಿಂದ ಆಮದು ಮಾಡುವುದರಲ್ಲಿಯೇ ಈ ಸಮಸ್ಯೆಗೆ ಪರಿಹಾರ ಅಡಗಿದೆ ಎಂದು ಭಾವಿಸಲಾಗದು. ನಮ್ಮ ದೇಶದಲ್ಲಿ ಆಹಾರ ಧಾನ್ಯಗಳ ಅಧಿಕೋತ್ಪಾದನೆಗೆ ಹೆಚ್ಚಿನ ಪ್ರಯತ್ನ ನಡೆಯಬೇಕು. ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಗೆ ಹೆಚ್ಚಿನ ಮಹತ್ವವನ್ನೀಯುವುದು ಇಂದಿನ ಅತಿ ಮುಖ್ಯ ವಿಷಯಗಳಲ್ಲೊಂದು. ನಮ್ಮ ರಾಜ್ಯಗಳ ಮುಖ್ಯ ಮಂತ್ರಿಗಳ ಪರಿಷತ್ತು ದೇಶದ ಪ್ರಸ್ತುತದ ಈ ಸಮಸ್ಯೆಯನ್ನು ಎದುರಿಸುವಲ್ಲಿ ಸೂಕ್ತ ಪರಿಹಾರೋಪಾಯವನ್ನು ಕಂಡು ಹಿಡಿಯುವುದು ಪ್ರತಿಯೊಬ್ಬನೂ ಹಾರೈಸುತ್ತಿದ್ದಾನೆ.

ಜಗತ್ಪರ್ಯಟನ

ಸಂಯುಕ್ತ ಸದಾಚಾರ ಸಮಿತಿ

ಗೃಹ ಮಂತ್ರಿ ನಂದಾರವರು ಕಳೆದ ತಾ. ೨೨ರಂದು ತನ್ನ ಮನೆಯಲ್ಲಿ ಸ್ಥಾಪಿಸಲ್ಪಟ್ಟ ಸಂಯುಕ್ತ ಸದಾಚಾರ ಸಮಿತಿಯ ಕಛೇರಿಯಲ್ಲಿ ಸಾರ್ವಜನಿಕರಿತ್ತ ದೂರುಗಳನ್ನು ಆಲಿಸಿದರೆಂದು ತಿಳಿದು ಬಂದಿದೆ. ಭ್ರಷ್ಟಾಚಾರವನ್ನು ಸಮೂಲಾಗ್ರ ಕಿತ್ತೊಗೆಯುವ ನಂದಾರ ಪ್ರತಿಜ್ಞೆಯು ದಾಸ್ ಕಮಿಶನ್ ವರದಿಯ ಪ್ರಕಟನೆ ಹಾಗೂ ಕೈರಾನರ ರಾಜೀನಾಮೆಯಿಂದ ಒಂದಂಶ ಪೂರೈಸಿದ್ದರೆ, ಇಂದು ಈಗ ಈ ಸದಾಚಾರ ಸಮಿತಿಯು ಈ ದಿಸೆಯಲ್ಲಿ ಇನ್ನೊಂದು ಹೆಜ್ಜೆಯಾಗಲಿದೆ. ಸಾರ್ವಜನಿಕರ ದೂರುಗಳನ್ನು ಆಲಿಸಲು ನಂದಾರವರು ದಿನವೊಂದರ ಒಂದು ಘಂಟೆಯನ್ನು ಮೀಸಲಾಗಿಡುವರೆಂದು ಹೇಳಲಾಗಿದೆ. ಅವರ ಬಳಿಗೆ ಕೊಂಡೊಯ್ಯಲಾದ ಪ್ರತಿಯೊಂದು ದೂರುಗಳ ಕುರಿತೂ ಸೂಕ್ತ ವಿಚಾರಣೆಯನ್ನು ಸಂಬಂಧಪಟ್ಟ ಮಂತ್ರಿ ಶಾಖೆಗಳ ಮೂಲಕ ಮಾಡಿಸುವುದು. ಮಾಜಿ ಮುಖ್ಯ ನ್ಯಾಯಾಧೀಶ ಹಾಗೂ ಇನ್ನಿತರ ಘನ ಹೊಂದಿದ ವ್ಯಕ್ತಿಗಳು ಸದಸ್ಯರಾಗಿರುವ ಈ ಸದಾಚಾರ ಸಮಿತಿಯು ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಒಂದು ಪ್ರಧಾನ ಪಾತ್ರ ವಹಿಸುವುದೆಂದು ಎಲ್ಲರೂ ನಂಬಿದ್ದಾರೆ.

ಕಾಂಗ್ರೆಸ್ ಶಾಸಕರ ಕುರಿತು ಗುಪ್ತವರದಿ

ಶಾಸಕರು ಮತ್ತು ಅಧಿಕಾರಿಗಳಲ್ಲಿ ತಲೆದೋರಿರುವ ಭ್ರಷ್ಟಾಚಾರವನ್ನು ನಂದಾ ನಿರ್ಮೂಲ ಮಾಡುವ ಪಣ ತೊಟ್ಟಂತೆ ಇದೀಗ ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಕಾಂಗ್ರೆಸ್ ಶಾಸನ ಸಭಾಸದಸ್ಯರು, ಪಾರ್ಲಿಮೆಂಟ್ ಸದಸ್ಯರು, ತಾಲೂಕ್ ಅಭಿವೃದ್ಧಿ ಮಂಡಳದ ಸದಸ್ಯರು, ಕಾರ್ಪೋರೇಟರುಗಳು ಆಯಾಯ ಪ್ರದೇಶದ ಕಾಂಗ್ರೆಸ್ ಸಂಸ್ಥೆಗಳೊಡನೆ ಇಟ್ಟುಕೊಂಡಿರುವ ಸಂಬಂಧ, ಜನಸಾಮಾನ್ಯರಲ್ಲಿ ನೆಲೆಸಿರುವ ಬಾಂಧವ್ಯ, ಅವರ ಸಾರ್ವಜನಿಕ ಕಾರ್ಯ ಕಲಾಪಗಳು ಮುಂತಾದ ವಿಷಯಗಳನ್ನೊಳಗೊಂಡ ಗುಪ್ತವರದಿಯನ್ನು ತನಗೆ ಕಳುಹಿಸಬೇಕೆಂದು ಎಲ್ಲಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನೂ ಕೇಳಿಕೊಂಡಿರುವರೆಂದು ತಿಳಿದು ಬಂದಿದೆ. ಇದು ಸತ್ಯವಾದರೆ ಇನ್ನು ನಮ್ಮ ಶಾಸಕರು, ಜನತಾ ಪ್ರತಿನಿಧಿಗಳೂ ಪಕ್ಷಾನಧಿಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾದ ಸಂದರ್ಭ ಬರುತ್ತದೆ ತಾವು ಗಳಿಸಿದ ಸ್ಥಾನದ ಪಾವಿತ್ರ್ಯತೆಯನ್ನು ಹಾಗೂ ಘನತೆಯನ್ನು ಅವರು ಬಳಸಿಕೊಂಡು ಬರಬೇಕೆಂಬುದೇ ಕಾಮರಾಜರ ಈ ಹೊಸ ಯೋಜನೆಯ ಉದ್ದೇಶವಾಗಿದೆ ಎಂಬುದು ನಿಜ

ಕೆನೆಡಿಯವರಿಗೊಂದು ಸ್ಮಾರಕ

ಅಮೇರಿಕೆಯ ಸಾರ್ವಜನಿಕ ಜೀವನದಲ್ಲಿ ವರ್ಣದ್ವೇಷ ಆಚರಿಸುವುದನ್ನು ಎಲ್ಲಾ ವಿಧದಿಂದಲೂ ಪ್ರತಿಬಂಧಿಸಿ ಕೊನೆಗಾಣಿಸುವ ಉದ್ದೇಶದಲ್ಲಿ ಅಮೇರಿಕದ ನಾಗರಿಕ ಹಕ್ಕುಗಳ ವಿಧೇಯಕ'ವೆಂಬ ಕಾಯಿದೆಯು ಅಮೇರಿಕೆಯ ಸಿನೇಟ ಸಭೆಯು ಕಳೆದ ತಾ. ೧೯ರಂದು ಪ್ರಚಂಡ ಬಹುಮತದಿಂದ ಒಪ್ಪಿಗೆ ಪಡೆಯಿತು. ಇದು ಅಮೇರಿಕದ ಚರಿತ್ರೆಯಲ್ಲಿ ಸ್ಮರಣಾರ್ಹವಾದ ಘಟನೆಯಾಗಿದೆ. ಈ ವಿಧೇಯಕವನ್ನು ಸರಿಯಾಗಿ ಒಂದು ವರ್ಷದ ಹಿಂದೆ ದಿವಂಗತ ಅಧ್ಯಕ್ಷ ಕೆನೆಡಿಯವರು ಅಮೇರಿಕನ್ ಕಾಂಗ್ರೆಸಿಗೆ ತಮ್ಮ ಶಿಫಾರಸುಗಳೊಂದಿಗೆ ಕಳಿಸಿದ್ದರು. ದಕ್ಷಿಣದ ರಾಜ್ಯಗಳಲ್ಲಿ ಈ ಕುರಿತು ತೀವ್ರ ವಿರೋಧ ವ್ಯಕ್ತವಾಗಿತ್ತೆಂದೂ, ಇದೇ ಕೆನೆಡಿಯವರ ಕೊಲೆಗೆ ಮೂಲ ಹೇತುವಾಗಿತ್ತೆಂದೂ ಹಲವರು ಅಭಿಪ್ರಾಯಪಟ್ಟಿದ್ದರು. ಆದರೆ ಅಮೇರಿಕದ ಸಿನೆಟ್ ಸಭೆಯು ಈ ಮಸೂದೆಯನ್ನು ತನ್ನ ನಾಯಕನಿಗೆ ಅತಿ ಉಚ್ಚ ಸ್ಮಾರಕವೊಂದನ್ನು ನಿರ್ಮಿಸಿದಂತಾಗಿದೆ. ಇದು ಹೊಸ ಅಧ್ಯಕ್ಷ ಜಾನ್ಸನರಿಗೆ ದೊರೆತ ಮಹಾ ವಿಜಯ ಹಾಗೂ ಚಾರಿತ್ರಿಕ ಘಟನೆ ಎಂದು ಎಲ್ಲರೂ ಹೇಳುತ್ತಿದ್ದಾರೆ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಬುಲ್ಯನ್ ಮರ್ಚೆಂಟ್ಸ್ ಎಸೋಸಿಯೇಶನ್— ಇದರ ಸಭೆಯು ತಾ 21ರಂದು ಶ್ರೀ ರಾಘವೇಂದ್ರ ಕೃಷ್ಣ ಭಟ್ರ ಅಂಗಡಿ ಮಾಳಿಗೆ ಚಂದ್ರಸದನದಲ್ಲಿ—ರಾಘವೇಂದ್ರ ಕೃಷ್ಣ ಭಟ್ರ ಅಧ್ಯಕ್ಷತೆಯಲ್ಲಿ ಸೇರಿತು. ಆಲ್ ಇಂಡಿಯಾ ಸರಾಫ್ ಅಸೋಸಿಯೇಶನಿನಿಂದ ಬಂದ ಸರ್ಕ್ಯುಲರನ್ನು ಸಭೆಗೆ ಓದಿ ಹೇಳಲಾಯಿತು. ಅನಂತರ ಚಿನ್ನ ನಿಯಂತ್ರಣ ಕಾನೂನನ್ನು ಪ್ರತಿಭಟಿಸಿ ಆಲ್ ಇಂಡಿಯಾ ಸರಾಫ್ ಅಸೋಸಿಯೇಶನಿನವರಿಗೆ ಸಂಪೂರ್ಣ ಬೆಂಬಲವಿತ್ತು. ಚಿನ್ನ ನಿಯಂತ್ರಣವನ್ನು ಸಂಪೂರ್ಣ ತೆಗೆದು ಹಾಕಬೇಕೆಂತ ಸರ್ಕಾರವನ್ನು ಒತ್ತಾಯಿಸುವಂತೆಯೂ ಅಸೋಸಿಯೇಶನಿನ ಆದೇಶದಂತೆ, ಸೆಕ್ರೆಟರಿ ಲೋಕ ಸಭಾ ಪಾರ್ಲಿಮೆಂಟು ಹೌಸ್ ನ್ಯೂ ಡೆಲ್ಲಿ ಇವರಿಗೆ ಮನವಿ ಪತ್ರದ 60 ಪ್ರತಿಗಳನ್ನು ಕಳುಹಿಸ ಬೇಕಾಗಿಯೂ ಈ ಮನವಿ ಪತ್ರಕ್ಕೆ ಸಾರ್ವಜನಿಕರ ಬೆಂಬಲವನ್ನು ಕೋರಿ ಸಾರ್ವಜನಿಕರಿಂದ ಸಹಿಗಳನ್ನು ಸಂಗ್ರಹಿಸಿ ಜೊತೆಯಲ್ಲಿ ಕಳುಹಿಸಿ ಕೊಡಬೇಕಾಗಿಯೂ ಸರ್ವಾನುಮತದಿಂದ ನಿರ್ಣಯಿಸಲಾಯಿತು ಈ ಸಭೆಯ ಅಧ್ಯಕ್ಷರ ಸೂಚನೆಯಂತೆ ಮಹಾ ಪ್ರಧಾನಿಯವರ ನಿಧನದ ಬಗ್ಗೆ ತಮ್ಮ ಅಪಾರ ದುಃಖವನ್ನು ಸೂಚಿಸಿ ಮೌನ ಪ್ರಾರ್ಥನೆ ಮಾಡಲಾಯಿತು

ಮಂಗಳೂರು ತಾಲೂಕು ಬೋರ್ಡಿನ ಸಭೆ— ಇದೇ ತಾ. 13ರಂದು ಮಂಗಳೂರು ತಾಲೂಕು ಅಭಿವೃದ್ಧಿ ಬೋರ್ಡಿನ ಸಾಮಾನ್ಯ ಸಭೆಯೊಂದು ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಸೇರಿ ಬೋರ್ಡಿನ ಸಭೆಗಳು ವ್ಯವಸ್ಥಿತವಾಗಿ ನೆರವೇರಲು ಪ್ರಕೃತದ ಕಟ್ಟಡಕ್ಕೆ ಒಂದು ಸಭಾಭವನವನ್ನು ಸೇರಿಸಿ ಕಟ್ಟುವ ಸಲುವಾಗಿ ರೂ. 20,000 ಮಂಜೂರು ಮಾಡಲಾಯಿತು.

ಶ್ರೀಮತಿ ಶಾಂಭವೀ ಪೂಂಜರ ನಿಧನ— ದಿವಂಗತ ವಕೀಲ್ ಶ್ರೀ ಪಿ. ಆರ್. ರಂಗನಾಥ ಪೂಂಜರ ಪತ್ನಿ ಶ್ರೀಮತಿ ಶಾಂಭವೀ ಪೂಂಜ ಬಿ. ಎ., ಇವರು ಇದೇ ತಾ. 16ರಂದು ಮುಂಬಯಿಯಲ್ಲಿ ಆಪರೇಶನಿನ ನಂತರ ಸ್ವರ್ಗಸ್ಥರಾದರೆಂದು ತಿಳಿದು ಬಂದಿದೆ.

ರಾಜಾಪುರ ಸಾರಸ್ವತ ಸಂಘ ಮುಂಬಯಿ— ಇದರ ಹದಿನಾಲ್ಕನೆಯ ವಾರ್ಷಿಕ ಮಹಾ ಸಭೆಯು ಕಾಂಗ್ರೆಸ್ ಹೌಸ್ ಲೇಸಿನ್ ಫೋರ್ಬಸ್ ಹಾಲಿನಲ್ಲಿ ತಾ 13ರಂದು ಶ್ರೀ ಬಿ ಎ. ನಾಯಕರ ಅಧ್ಯಕ್ಷತೆಯಲ್ಲಿ ಸೇರಿತು. ಗೌರವ ಕಾರ್ಯದರ್ಶಿ ಶ್ರೀ ಡಿ.ಸುಬ್ರಾಯ ನಾಯಕರವರು ವಾರ್ಷಿಕ ವರದಿಯನ್ನೂ, ಆಯವ್ಯಯದ ವಿವರಣೆಯನ್ನೂ ಓದಿದರು. ಮುಂದಿನ ವರ್ಷಕ್ಕೆ ಶ್ರೀ ಯಂ. ಕೃಷ್ಣ ನಾಯಕ್ ಮತ್ತು ಯುನ್. ಕೇಶವ ನಾಯಕ್ ಇವರುಗಳನ್ನು ಗೌ। ಲೆಕ್ಕ ಪರಿಶೀಲಕರನ್ನಾಗಿ ನೇಮಿಸಲಾಯಿತು. ಈ ಶೈಕ್ಷಣಿಕ ವರ್ಷಕ್ಕೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಿರುವ ಸಮಾಜದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ-ವೇತನ ಸಾಲವನ್ನೀಯಲು ರೂಪಾಯಿ 1500—ನ್ನು ಮಂಜೂರು ಮಾಡಲಾಯಿತು

ಹೈಸ್ಕೂಲು ಮಟ್ಟದಲ್ಲಿ ಕಲಿಯುತ್ತಿರುವ ಅತೀ ಹೆಚ್ಚಿನ ಮಾರ್ಕುಗಳನ್ನು ಪಡೆದ ಈರ್ವರು ವಿದ್ಯಾರ್ಥಿನಿಯರಿಗೂ ಓರ್ವ ವಿದ್ಯಾರ್ಥಿಗೂ ರೂ. 16|—ರಂತೆ ಪುರಸ್ಕಾರವನ್ನೀಯ ಬೇಕೆಂದೂ ಸಂಸ್ಕೃತ ವಿದ್ಯಾರ್ಥಿಗಳಿಗೆ "ಶ್ಯಾಮ ನಾಯಕ್ ಸ್ಮಾರಕ ನಿಧಿ"ಯಿಂದ ಧರ್ಮಾರ್ಥ ಧನ ಸಹಾಯ ನೀಡಬೇಕೆಂದೂ ನಿಶ್ಚಯಿಸಲಾಯಿತು. ಮೆಟ್ರಿಕ್ ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸಿನಲ್ಲಿ ಹೆಚ್ಚಿನ ಮಾರ್ಕುಗಳನ್ನು ಪಡೆಯುವ ಓರ್ವ ವಿದ್ಯಾರ್ಥಿ—ಯೂ. ವಿದ್ಯಾರ್ಥಿನಿಗೆ "ಸಿ ಜೆ. ನಾಯಕ್ ಸ್ಮಾರಕ ನಿಧಿ"ಯಿಂದ ಒಂದು ಬಹುಮಾನವನ್ನೀಯಬೇಕೆಂದೂ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲು ಜುಲೈ 31ನೇ ತಾರೀಕನ್ನು ಕೊನೆಯ ದಿನವೆಂದೂ ನಿರ್ಣಯಿಸಲಾಯಿತು.

ಸಂಘದ ಕಾರ್ಯಾಲಯ ನಿರ್ಮಾಣಕ್ಕೆ ನಿಧಿ ಸಂಗ್ರಹ, ಜಾಗ ಖರೀದಿ ಅಥವಾ ಇನ್ನಾವುದೇ ಅವಶ್ಯವಾದ ವಿಚಾರದಲ್ಲಿ "ಕಟ್ಟಡ ಸಮಿತಿ"ಗೆ ಸಂಘದ ಕಾರ್ಯಕಾರೀ ಸಮಿತಿಯು ಸಹಕಾರವನ್ನೀಯಬೇಕೆಂಬ ನಿಲುವೆಯನ್ನು ಅಂಗೀಕರಿಸಲಾಯಿತು.

ಮೊಡಂಕಾಪಿನಲ್ಲಿ ಹೈಸ್ಕೂಲು ಪ್ರಾರಂಭೋತ್ಸವ— ಇದೇ ತಾ 21ರಂದು ಬಂಟವಾಳದ ಸಮೀಪ ಮೊಡಂಕಾಪು ಎಂಬಲ್ಲಿ ದೀಪಿಕಾ ಹೈಸ್ಕೂಲಿನ ಉದ್ಘಾಟನೆಯನ್ನು ಶ್ರೀ ಟಿ. ಎ ಪೈಗಳು, ಶ್ರೀ ಎ. ಶಂಕರ ಆಳ್ವ ಎಂ. ಪಿ. ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪ್ರಾರಂಭದಲ್ಲಿ ಶ್ರೀ ಪಯ್ಯ ಲಕ್ಷ್ಮಿ ನಾರಾಯಣ ಆಳ್ವರು ಸ್ವಾಗತಿಸುತ್ತಾ ಹೈಸ್ಕೂಲು ಸ್ಥಾಪನೆಗೆ ನೆರವಾದವರನ್ನು ಅಭಿನಂದಿಸಿದರು. ಶ್ರೀ ಟಿ. ಎ. ಪೈಗಳು ಉದ್ಘಾಟಿಸುತ್ತಾ ಇಂದಿನ ಶಿಕ್ಷಣದ ಪರಿಣಾಮದಲ್ಲಿ ಇಂಜಿನಿಯರ್, ಡಾಕ್ಟರುಗಳ ಸಂಖ್ಯೆ ಹೆಚ್ಚಾಗಿದೆ, ಆದರೆ ದೇಶದ ಅಭಿವೃದ್ಧಿಯ ದೃಷ್ಟಿಯಲ್ಲಿ ಕೃಷಿಕ, ಕಮ್ಮಾರ, ಬಡಗಿ ಎಲ್ಲರೂ ಸುಶಿಕ್ಷಿತರಾಗಬೇಕು. ಪ್ರತಿಯೊಬ್ಬರೂ ಬೇರೆ ಬೇರೆ ರಂಗಗಳಲ್ಲಿ ದುಡಿದು ದೇಶದ ಪ್ರಗತಿಯನ್ನು ಸಾಧಿಸ ಬೇಕು. ಶಿಕ್ಷಣ ರಂಗದಲ್ಲಿ ತೀವ್ರ ಸುಧಾರಣೆಯಾಗಿ ವೃತ್ತಿಪರ ಶಿಕ್ಷಣ ಸಿಗುವಂತಾಗ ಬೇಕು ಎಂದರು ಸಭಿಕರಲ್ಲಿ ಶ್ರೀಗಳಾದ ಎ.ಬಿ. ಮುದ್ದಪ್ಪ, ರಾಮಚಂದ್ರ ಮಾರ್. ಕೆ. ಶ್ರೀನಿವಾಸ, ಬಿ ಜನಾರ್ಧನ ಶೆಟ್ಟಿ, ಪರಮೇಶ್ವರಪ್ಪ ಮೊದಲಾದವರು ನೂತನ ವಿದ್ಯಾ ಸಂಸ್ಥೆಗೆ ಉಜ್ವಲ ಭವಿಷ್ಯ ಕೋರಿದರು. ಅಧ್ಯಕ್ಷರು ಮಾತನಾಡುತ್ತಾ ಶಿಕ್ಷಣರಂಗದ ಸುಧಾರಣೆಯೊಂದಿಗೆ ಶಿಕ್ಷಕರ ಪರಿಸ್ಥಿತಿಯ ಸುಧಾರಣೆಯೂ ಆಗಬೇಕೆಂದರು ಕೊನೆಯಲ್ಲಿ ರಿ. ಫಾ. ಮಿ.ನೇಜರ್‌ರವರು ವಂದನಾರ್ಪಣೆ ಗೈದರು

ಮಣಿಪಾಲ— ರೋಟರಿ ಸಂಸ್ಥೆಯ ಚಿಹ್ನೆಯಾದ ಚಕ್ರ ಸೂಚಿಸುವಂತೆ ರೋಟೇರಿಯನ್ನರೆಲ್ಲರೂ ಉತ್ಸಾಹದಿಂದ ಕೆಲಸಮಾಡುತ್ತಿರಬೇಕೆಂದು ರೋಟೇರಿಯನ್ ಪ್ರೊ| ಎಲ್. ಕೆ. ಚೆಟ್ಟಿ ತಾ. 16 ರಂದು ಇಲ್ಲಿ ಹೇಳಿದರು. ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಅವರು ಈ ವಿಶ್ವ ವ್ಯಾಪಕ ಸಂಸ್ಥೆಯು ವಿಶ್ವ ಭ್ರಾತೃತ್ವ ಬೆಳೆಸುತ್ತದೆಂಬ ಬಗ್ಗೆ

ದಿವಂಗತ ಪ್ರಧಾನಿ ನೆಹರೂರವರ ಖಾಸಗಿ ಸಿಬಂಧಿಯವರು ಚಿತಾಭಸ್ಮ ವಿಸರ್ಜನೆಗೆ ಮೊದಲು ಅಂತಿಮ ಗೌರವ ಸಲ್ಲಿಸಿದರು.

ಇದರ ಪ್ರತಿಯೊಬ್ಬ ಸದಸ್ಯನೂ ಹೆಮ್ಮೆ ಪಡಬಹುದಾಗಿದೆ ಎಂದರು. ರೋಟರಿ ಕ್ಲಬ್ಬಿನ ಸದಸ್ಯರಾಗುವುದರಿಂದ ಎಲ್ಲ ವೃತ್ತಿಗಳನ್ನು ನಡೆಸುವವರಿಗೂ ಬಹಳ ಪ್ರಯೋಜನವಾಗುತ್ತದೆಂದು ಅವರು ಅಭಿಪ್ರಾಯ ಪಟ್ಟರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಉಪಾಧ್ಯಕ್ಷ ಶ್ರೀ ಕೆ. ಕೆ. ಪೈಯವರು ಮಾತಾಡಿ, ಇದೇ ದಿ. 30 ರಂದು ಡಾ| ಟಿ ಎಂ ಎ ಪೈಯವರು 302 ನೇ ರೋಟರಿ ಜಿಲ್ಲೆಯ ಗೌರ್ನರಾಗಿ ಅಧಿಕಾರ ಸ್ವೀಕರಿಸುವರೆಂದೂ, ಕೇವಲ ಆರು ವರ್ಷಗಳ ಹಿಂದೆ ಆರಂಭಗೊಂಡ ಈ ಕ್ಲಬ್ಬಿನ ಸದಸ್ಯರೊಬ್ಬರು ಗೌರ್ನರಾಗಲಿರುವುದು ಅಭಿಮಾನದ ಸಂಗತಿಯಾಗಿದೆ ಎಂದೂ ನುಡಿದರು. ಕಾರ್ಯದರ್ಶಿ ಶ್ರೀ ಎ. ಜಿ. ಆಳ್ವ ವಂದನೆಗಳನ್ನು ಅರ್ಪಿಸಿದರು

ಶ್ರೀ ರಾಮ ನಾಮ ಪ್ರಚಾರಿಣೀ ಮಂಡಳಿ, ಉಡುಪಿ— ಇದರ ಸಭೆಯು ತಾ. 21—6—64ರಂದು ಡಾ| ಪಿ ರಾಘವೇಂದ್ರ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಸಂಯೋಜಕ ಶ್ರೀ ಯು ಲಕ್ಷ್ಮೀನಾರಾಯಣ ಕಿಣಿಯವರು 'ಮಂಡಳಿ'ಯ ಉದ್ದೇಶಗಳನ್ನು ವಿವರಿಸಿದರು. ಅನಂತರ ಕಾರ್ಯಕಾರೀ ಸಮಿತಿಗೆ ಡಾ| ಪಿ. ರಾಘವೇಂದ್ರ ನಾಯಕ್ ಅಧ್ಯಕ್ಷರು, ಶ್ರೀಗಳಾದ ಯು ಪುಂಡಲೀಕ ಶೆಣೈ ಮತ್ತು ಯುನ್ ಡಿ ಕಾಮತ್ ಎಡ್ವೋಕೇಟ್ ಉಪಾಧ್ಯಕ್ಷರು, ಶ್ರೀ ಪಿ. ರಂಗನಾಥ ಶೆಣೈ ಕೋಶಾಧ್ಯಕ್ಷರು, ಕೆ. ಯುರ್ ಯುನ್ ಹೆಗ್ಡೆ ಮತ್ತು ಯು. ಲಕ್ಷ್ಮೀನಾರಾಯಣ ಕಿಣಿ ಜತೆಕಾರ್ಯದರ್ಶಿಗಳು, ಕೆ. ಶಂಕರ ಶೆಣೈ ಗೌರವ ಲೆಕ್ಕ ಪರಿಶೋಧಕರಾಗಿ ಆರಿಸಲ್ಪಟ್ಟರು.

ಮಂಗಳೂರು ಜನಸಂಘದ ಸಭೆ— ತಾ 15 ರಂದು ಶ್ರೀ ಬೋಳ ರಘುರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಮಂಗಳೂರು ಜನಸಂಘದ ಸಭೆಯು ಜರಗಿತು. ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟಿನ 119ನೇ ಪ್ರಕರಣದ ಮೇರೆಗೆ ಮೈಸೂರು ಸರಕಾರವು ಜಿಲ್ಲೆಯ ಭೂಮಿಗಳ ಮೇಲೆ ಹೊರಿಸಲು ಯೋಚಿಸಿರುವ ಹೆಚ್ಚಿನ ಕಂದಾಯ ಕುರಿತು ಅಸಮಾಧಾನ ವ್ಯಕ್ತಪಡಿಸಿ, ಹೆಚ್ಚಿದ ಕಂದಾಯದ ಕುರಿತು ಜನತೆಗೆ ತಿಳಿಯುವ ದೃಷ್ಟಿಯಿಂದ ವ್ಯಾಪಕ ಪ್ರಚಾರ ಮಾಡಬೇಕೆಂದೂ, ಸಾರ್ವಜನಿಕ ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು 1964 ನೇ ಡಿಸೆಂಬರ್ ಅಂತ್ಯದವರೆಗೆ ವಿಸ್ತರಿಸಬೇಕೆಂದೂ ಸಮಿತಿಯು ಸರಕಾರವನ್ನು ಒತ್ತಾಯಿಸಿತು ಸೆಟ್ಲ್‌ಮೆಂಟ್ ರಿಪೋರ್ಟನ್ನು ಸಮಗ್ರವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಒಂದು ಉಪಸಮಿತಿಯ ರಚನೆಯಾಯಿತು.

ಸಭೆಯ ಪ್ರಾರಂಭದಲ್ಲಿ ನಮ್ಮ ಮಹಾ ಪ್ರಧಾನಿ ನೆಹರೂರವರ ನಿಧನಕ್ಕಾಗಿ ಸಂತಾಪ ಸೂಚಿಸಿ ಎರಡು ನಿಮಿಷ ಮೌನ ಆಚರಿಸಲಾಯಿತು. ಬಳಿಕ ಕಾರ್ಯದರ್ಶಿಗಳು ವರದಿಗಳನ್ನೋದಿದರು.

ಆಗಸ್ಟ್ 15

ಕರ್ನಾಟಕದಲ್ಲಿ ಬಹುಕಾಲದಿಂದಲೂ ಅತ್ಯಂತ ಜನಪ್ರಿಯವಾದ 'ನವಯುಗ' ವಾರಪತ್ರಿಕೆಯ ಸ್ವಾತಂತ್ರ್ಯ ವಿಶೇಷಾಂಕವು ಪ್ರಕಟಗೊಳ್ಳುವ ದಿನ (ಆಗಸ್ಟ್ 15, 1964) ಸಮೀಪಿಸುತ್ತಿದೆಯಷ್ಟೆ ಭಾರತಕ್ಕೆ ಸ್ವಾತಂತ್ರ್ಯವು ದೊರೆತ ಸವಿನೆನಪಿಗಾಗಿ ಈ ಸಲದ 17ನೆಯ ವರ್ಧಂತಿಯ ಶುಭದಿನದಲ್ಲಿ ನಮ್ಮ ವಿಶೇಷಾಂಕವು ವಿಶಿಷ್ಟವಾದ ರೀತಿಯಲ್ಲಿ ಪ್ರಕಟವಾಗಲಿದೆ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ಪತ್ರಿಕೋದ್ಯಮಿಗಳೂ ಬರೆದ ವಿವಿಧ ಲೇಖನಗಳೂ, ಪ್ರಹಸನಗಳೂ ಅಲ್ಲದೆ ನಮ್ಮ ನಾಡಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಜೀವನವನ್ನು ಕುರಿತ ವಿದ್ವತ್ಪೂರ್ಣ ನಿಬಂಧಗಳೂ ಚಿತ್ರಮಯವಾಗಿ ಕರ್ನಾಟಕದ 19 ಜಿಲ್ಲೆಗಳಲ್ಲಿ ವ್ಯಾಪಿಸಿರುವ 'ನವಯುಗ'ದ ಓದುಗರ ಕೈಸೇರುವುವು.

ಆಗಸ್ಟ್ 15—ಒಂದು ಮಂಗಲಕರವಾದ ದಿನ,

ಆಗಸ್ಟ್ 15—ನವಯುಗದ ಸ್ವಾತಂತ್ರ ವಿಶೇಷಾಂಕವು ಪ್ರಚುರವಾಗುವ ಸುದಿನ.

ಆಗಸ್ಟ್ 15— ನಿಮ್ಮ ಸರಕು ಮತ್ತು ಸೇವೆಯ ಸಂದೇಶವನ್ನು ನವಯುಗ ವಿಶೇಷಾಂಕದ ಮೂಲಕ ನಾಡಿನ ಮೂಲೆಮೂಲೆಗೂ ಜಾಹೀರಗೊಳಿಸಬೇಕಾದ ಶುಭದಿನ.

ನಿಮ್ಮ ವ್ಯಾಪಾರವು ಜನಜನಿತವಾಗಲು, ಮತ್ತು ನಿಮ್ಮ ಸರಕುಗಳು ಜನಪ್ರಿಯವೆನಿಸಲು 'ನವಯುಗ'ದ ಸ್ವಾತಂತ್ರ್ಯ ವಿಶೇಷಾಂಕವು ಒಂದು ಅಪೂರ್ವ ಸಾಧನ.

ಜಾಹೀರಾತಿನ ದರಗಳಿಗೆ ವಿಚಾರಿಸಿರಿ ಆಗಸ್ಟ್ 5ರ ಒಳಗೆ ನಿಮ್ಮ ಜಾಹೀರಾತನ್ನು ನಮಗೆ ಕಳಿಸಿ ಕೊಡಿ.

ಮೆನೇಜರ್, ನವಯುಗ, ಉಡುಪಿ.

ಧನ್ಯವಾದ

ತಾ. 12-6-64ನೇ ಶುಕ್ರವಾರ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀಮತಿ ಮತ್ತು ಶ್ರೀ ಎಸ್. ರಾಮ ಶೆಟ್ಟಿ (Section Head, L I C. of India, Udipi)—ಇವರ ಪುತ್ರಿ ಸೌ| ಯಶೋಧರ, B. Sc—ಈಕೆಯ ವಿವಾಹವು ಶ್ರೀ ಕೆ. ನಾರಾಯಣ ಶೆಟ್ಟಿ ಬಿ ಎ.-(Suporintondent, Reservo Bank of Indi1, Bombay)— ಯವರೊಡನೆ ನಡೆದ ಸಮಾರಂಭಕ್ಕೆ ಚಿತ್ತೈಸಿ, ಶುಭಾಶಯ ಕೋರಿದ ಮತ್ತು ಪಾರಿತೋಷಕಗಳನ್ನು ಕೊಟ್ಟು ಆಶೀರ್ವದಿಸಿದ ಆವರ ಸ್ನೇಹಿತರಿಗೆ, ಸಂಬಂಧಿಗಳಿಗೆ, ಹಿತೈಷಿಗಳಿಗೆ ಶ್ರೀಮತಿ ಮತ್ತು ಶ್ರೀ ಎಸ್. ರಾಮ ಶೆಟ್ಟಿ ಈ ಮೂಲಕ ತಮ್ಮ ಧನ್ಯವಾದಗಳನ್ನು ಅರ್ಪಿಸುತ್ತಾರೆ ಇದನ್ನೇ ವೈಯಕ್ತಿಕ ಧನ್ಯವಾದಗಳೆಂದು ದಯವಿಟ್ಟು ಸ್ವೀಕರಿಸಬೇಕಾಗಿ ವಿನಂತಿಸುತ್ತಾರೆ.

ರಾಮ ಸುಂದರ ಸದನ,
ಕೊರಂಗ್ರಪಾಡಿ, ಉಡುಪಿ
16-6-64

ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಪ್ರಥಮ ಹೆಜ್ಜೆ

ದಾಸ್ ಕಮಿಶನ್ ವರದಿ

ಕೈರಾನರು ಮುಖ್ಯ ಮಂತ್ರಿಯಂತಹ ಹುದ್ದೆಯಲ್ಲಿರಲು ಅನರ್ಹರು ಎಂದು ಸಮಿತಿಯ ಅಭಿಪ್ರಾಯ.

ಪಂಜಾಬು ಮಾತ್ರವಲ್ಲ ಸಮಗ್ರ ಭಾರತದ ಜನತೆಯು ಕುತೂಹಲದಿಂದ ನಿರೀಕ್ಷಿಸುತ್ತಿದ್ದ ದಾಸ್ ಕಮಿಶನಿನ ವರದಿಯು ಇದೀಗ ಪ್ರಕಟವಾಗಿ, ಪಂಜಾಬದ ಮುಖ್ಯ ಮಂತ್ರಿ ಪ್ರತಾಪಸಿಂಗ ಕೈರಾನರ ಮೇಲೆ ಆಪಾದನೆಗಳಲ್ಲಿ ಹಲವು ಸತ್ಯವೆಂದು ಸಿದ್ಧವಾಗಿವೆ. ದಾಸ್ ಕಮಿಶನು, ಕೈರಾನರು ತನ್ನ ಅಧಿಕಾರ ಹಾಗೂ ಪ್ರಭಾವಗಳನ್ನು ವೈಯಕ್ತಿಕ ಹಿತಕ್ಕಾಗಿ ಮತ್ತು ತನ್ನ ಮಕ್ಕಳ ಮತ್ತು ಸಂಬಂಧಿಕರ ಹಿತಕ್ಕಾಗಿ ದುರುಪಯೋಗಗೊಳಿಸಿರುವರೆಂದು ಆರೋಪಿಸಿದೆ,

ಕಳೆದ ವರುಷ ಜುಲೈ ೧೩ರಂದು ಪಂಜಾಬದ ಶ್ರೀ ದೇವಿಲಾಲ, ಮಾಸ್ಟರ್ ತಾರಾಸಿಂಗ್, ಮೌಲಾನಾಗ್ಯಾನಿದ್ವಾರ್, ಲಾಲಾ ಜಗತ್ ನಾರಾಯಣ್ ರೇ ಮೊದಲಾದ ೨೭ ಜನರು ರಾಷ್ಟ್ರಾಧ್ಯಕ್ಷರಿಗೆ ಒಂದು ಮನವಿಯನ್ನು ಸಲ್ಲಿಸಿ, ಸರದಾರ್ ಪ್ರತಾಪಸಿಂಗ ಕೈರಾನರ ದುರಾಡಳಿತೆ ಹಾಗೂ ದುರಾಚಾರಗಳ ಕುರಿತು ಸಾರ್ವಜನಿಕ ವಿಚಾರಣೆಯನ್ನು ನಡೆಸಬೇಕೆಂದು ಕೇಳಿಕೊಂಡರು. ಈ ಮನವಿಯಲ್ಲಿ ಕೈರಾನರ ಮೇಲೆ ಭ್ರಷ್ಟಾಚಾರದ ಹಾಗೂ ಅಧಿಕಾರದ ದುರುಪಯೋಗದ ಹಾಗು ಇನ್ನಿತರ ಹಲವಾರು ಆಪಾದನೆಗಳನ್ನು ಹೊರಿಸಲಾಗಿತ್ತು. ಈ ಮನವಿಯಲ್ಲಿ ಮಾಡಲಾದ ಆಪಾದನೆಗಳನ್ನು ಪರಿಶೀಲಿಸುವುದಕ್ಕಾಗಿ ಕೇಂದ್ರದ ಗೃಹಮಂತ್ರಿ ಶಾಖೆಯು ಕಳೆದ ನವಂಬರದಲ್ಲಿ ನ್ಯಾಯಮೂರ್ತಿ ಎಚ್. ಎಸ್. ದಾಸಗುಪ್ತಾರವರ ಹಿರಿತನದಲ್ಲಿ ಒಂದು ಕಮಿಶನನ್ನು ನೇಮಿಸಿತು

ಈ ಕಮಿಶನು ಮೊತ್ತ ಮೊದಲು ನವಂಬರ್ ೨೫ರಂದು ಸಭೆ ಸೇರಿತು. ೧೯೬೪ರ ಮೇ ೧೬ರಂದು ಅದು ಕೊನೆಯದಾಗಿ ಸಭೆ ಕೂಡಿತು. ಈ ಕಾಲಾವಧಿಯಲ್ಲಿ ಅದು ೬೧ ಸಾರ್ವಜನಿಕ ಹೇಳಿಕೆಗಳನ್ನು ಪರಾಮರ್ಶಿಸಿತು. ಆರೋಪವನ್ನು ಹೊರಿಸಿದವರು ತಮ್ಮ ವಾದವನ್ನು ೩೮ ದಿನಗಳವರೆಗೆ ಮಾಡಿದರೆ, ಆಪಾದಿತ ಕೈರಾನರು ೨೫ ದಿನಗಳವರೆಗೆ ತಮ್ಮ ವಾದವನ್ನು ಮಂಡಿಸಿದರು.

೫೯೩ ಪುಟಗಳಷ್ಟು ದೊಡ್ಡದಿರುವ ದಾಸ್ ಕಮಿಶನಿನ ವರದಿಯಲ್ಲಿ ಕೈರಾನರ ಮೇಲಿನ ಹಲವಾರು ಆಪಾದನೆಗಳು ಸಿದ್ಧವಾಗಿವೆ. ಇವುಗಳಲ್ಲಿ ತನ್ನ ಸ್ವಂತ ಹಿತಕ್ಕಾಗಿ ಅಧಿಕಾರದ ಮತ್ತು ಪ್ರಭಾವದ ದುರುಪಯೋಗ ಮಾಡಿದ ಆಪಾದನೆ ಒಂದಾದರೆ, ತನ್ನ ಮಕ್ಕಳ ಮತ್ತು ಸಂಬಂಧಿಕರ ಲಾಭಕ್ಕಾಗಿ ಅಧಿಕಾರದ ದುರುಪಯೋಗ ಮಾಡಿದ ಆಪಾದನೆಗಳು ಮೂರು. ಇಷ್ಟು ಮಾತ್ರವಲ್ಲದೆ ಕೈರಾನರ ಮಗಂದಿರು ಮತ್ತು ಸಂಬಂಧಿಕರು ತಮ್ಮ ಸ್ವಲಾಭಕ್ಕಾಗಿ ಮತ್ತು ಹಿತಕ್ಕಾಗಿ ಸರಕಾರೀ ಅಧಿಕಾರಿಗಳಿಂದ ನಿಯಮ ಬಾಹಿರವಾದ ರೀತಿಯ ಕಾರ್ಯಗಳನ್ನು ಮಾಡಿಸಿರುವ ಐದು ಘಟನೆಗಳು ಬೆಳಕಿಗೆ ಬಂದಿವೆ.

ಮಗಂದಿರು ಹಾಗೂ ಸಂಬಂಧಿಕರು ತನ್ನ ಸ್ಥಾನ ಮತ್ತು ಅಧಿಕಾರವನ್ನು ಅನುಚಿತರೀತಿಯಲ್ಲಿಬಳಸುತ್ತಿದ್ದಾರೆಂದು ಕೈರಾನರಿಗೆ ಮನವರಿಕೆಯಾಗುವ ಅಥವಾ ಸಂಶಯ ಬರುವ ಘಟನೆಗಳು ಜರಗಲಿಲ್ಲ ಎಂಬುದು ಸರಿಯಲ್ಲ. ತನ್ನ ಮಗಂದಿರು ಹಾಗೂ ಸಂಬಂಧಿಕರ ಕಾರ್ಯಕಲ್ಪೆಯಲ್ಲಿ ತಾನು ಪ್ರವೇಶಿಸುವುದು ಉಚಿತವಲ್ಲ ಎಂಬ ಕೈರಾನರ ವಾದದಲ್ಲಿಯೂ ಹುರುಳಿಲ್ಲ. ಅವರ ಗಮನಕ್ಕೆ ಈ ರೀತಿಯ ಘಟನೆಗಳನ್ನು ತಂದಾಗಲೂ, ಅವರು ಈ ಕುರಿತು ವಿಚಾರಣೆಯನ್ನು ನಡೆಸಲಿಲ್ಲ ಸಂಬಂಧಿಸಿದವರಿಗೆ ಎಚ್ಚರಿಕೆಯನ್ನೂ ಕೊಡಲಿಲ್ಲ. ಅಂತಹ ಘಟನೆಗಳು ಪುನಃ ಜರಗದಂತೆ ಯಾವ ಹೆಜ್ಜೆಯನ್ನು ತೆಗೆದುಕೊಳ್ಳಲಿಲ್ಲ. ಬದಲಾಗಿ, ಈ ತರದ ನಡೆವಳಿಕೆ ಹಾಗೂ ವರ್ತನೆಯು ಹಿಂದಿನಂತೆ ಮುಂದರಿಯಗೊಟ್ಟು ತಾನು ನಿರ್ಲಿಪ್ತರಾಗಿ ಕುಳಿತರು. ಎಂದು ವರದಿ ಅಭಿಪ್ರಾಯ ಪಟ್ಟಿದೆ.

ತನ್ನ ವರದಿಯನ್ನು ಮುಕ್ತಾಯಗೊಳಿಸುತ್ತಾ ಕಮಿಶನು ಕೈರಾನರು ಒಂದು ಪ್ರಾಂತ್ಯದ ಮುಖ್ಯಮಂತ್ರಿ ಸ್ಥಾನದಂತಹ ಹಿರಿಯ ಹಾಗೂ ಜವಾಬ್ದಾರಿಯುತ ಸ್ಥಾನವನ್ನು ಅಲಂಕರಿಸಲು ಅನರ್ಹರು ಎಂದು ನಿರ್ಧಾರ ವ್ಯಕ್ತಪಡಿಸಿದೆ. ತನ್ನ ವರದಿಯಲ್ಲಿ ನಮೂದಿಸಲಾದ ಆಪಾದನೆಗಳ ಮುಂದಿನ ಪರಿಸ್ಥಿತಿಯ ಕುರಿತು ನಿರ್ಧರಿಸುವುದು ಕೇಂದ್ರ ಸರಕಾರಕ್ಕೆ ಸೇರಿದ ವಿಷಯ ಎಂದು ಸಮಿತಿಯು ಹೇಳಿದೆ.

ದಾಸ್ ಕಮಿಶನಿನ ವರದಿಯಲ್ಲಿ ಕೈರಾನರು ತನ್ನ ಸ್ವಂತ ಹಿತಕ್ಕಾಗಿ ಅಧಿಕಾರದ ದುರುಪಯೋಗ ಮಾಡಿರುವರೆಂಬ ಆಪಾದನೆಗೆ ಡಾಕ್ಟರ್ ಹರಿಚರಣಸಿಂಗ್ ಧಿಲ್ಲಾನರ ನಿದರ್ಶನವನ್ನು ಕೊಟ್ಟಿದೆ. ಸರಕಾರೀ ಡಾಕ್ಟರರಾದ ಇವರ ಸೇವೆಯನ್ನು ೧೯೫೭ರಲ್ಲಿ ೪೫ ದಿನಗಳ ವರೆಗೆ ಕೈರಾನರು ತಮ್ಮ ಚುನಾವಣಾ ಸಂಚಾರ ಕಾಲದಲ್ಲಿ ಉಪಯೋಗಿಸಿ ಕೊಂಡಿರುವುದು [illegible] ವರು ಪ್ರಯಾಣ ಹಾಗೂ ಇನ್ನಿತರ ಭತ್ತೆಯ ಬಗ್ಗೆ ಅರ್ಜಿ ಹಾಕಿರುವುದು ಅವರು ಈ ಸಲಹಾ ಕಾಲದಲ್ಲಿ ರಜೆಯಲ್ಲಿ ಇದಿಲ್ಲ ಎಂದು ಸಿದ್ಧಪಡಿಸುವುದೆಂದೂ ಕಮಿಶನ್ ಅಭಿಪ್ರಾಯ ಪಟ್ಟಿದೆ, ಕೈರಾನರೇ ಈ ಹಿಂದೆ ಶ್ರೀ ಚೌಧರಿ ಲೆಹರಿ ಸಿಂಗರು ಇಂತಹದೇ ಸೇವೆ ಪಡೆದಾಗ, ಮಂತ್ರಿಗಳ ವೇತನಾ ಕಾಯ್ದೆಯ ಪ್ರಕಾರ ಮಂತ್ರಿಗಳು ಈ ಉಚಿತ ಸೇವೆ ಪಡೆಯಲು ಅರ್ಹರಲ್ಲ ಎಂಬ ತೀರ್ಮಾನ ಇತ್ತಿರುವುದನ್ನು ಸಮಿತಿಯು ಈ ಸಂದರ್ಭ ಸ್ಮರಣೆಗೆ ತಂದುಕೊಂಡಿದೆ ಕೈರಾನರ ಈ ವರ್ತನೆಯು, ಇತರರಿಗೆ ಆದರ್ಶ ಹಾಕಿಕೊಡಬೇಕಾದ ಒಬ್ಬ ಮುಖ್ಯ ಮಂತ್ರಿಗೆ ಉಚಿತವಾದದಲ್ಲ ಎಂದು ಕಮಿಶನು ಉಲ್ಲೇಖಿಸಿದೆ

ತನ್ನ ಮಗಂದಿರ ಹಾಗೂ ಸಂಬಂಧಿಕರ ಅನೀತಿಯುತ ಕಾರ್ಯಗಳನ್ನು ತನ್ನ ಗಮನಕ್ಕೆ ತಂದಿದ್ದಲ್ಲಿ ತಾನು ಅವರಿಗೆ ಸೂಕ್ತ ಎಚ್ಚರಿಕೆ ಕೊಡುತ್ತಿದ್ದೆ ಎಂಬ ಕೈರಾನರ ಹೇಳಿಕೆಯು, ಅವರ ಗಮನಕ್ಕೆ ಈ ವಿಚಾರವನ್ನು ಯಾರೂ ತಂದಿಲ್ಲ ಹಾಗೂ ಅವರು ಈ ಕುರಿತು ಎಚ್ಚರಿಕೆಯನ್ನೂ ಇತ್ತಿಲ್ಲ ಎಂದು ಸ್ಪಷ್ಟಪಡಿಸುತ್ತವೆ. ತಂದೆಯಾದವನು ಕಾನೂನಿನ ಪ್ರಕಾರ ಅಥವಾ ಬಯ್ಸುರೆಯಲ್ಲಿ ತನ್ನ ಮಗಂದಿರು ತಮ್ಮ ವ್ಯವಹಾರವನ್ನು ಸಾಗಿಸುವಲ್ಲಿ ಅಡ್ಡಿ ಬರಲು ಸಾಧ್ಯವಿಲ್ಲವೆಂಬುದು ನಿಜ. ಆದರೆ ತಂದೆಯಾದವನು ಹೊಂದಿರುವ ಸ್ಥಾನ ಮತ್ತು ಪಡೆದಿರುವ ಅಧಿಕಾರದ ದುರುಪಯೋಗವನ್ನು ಒಂದು ವ್ಯವಹಾರವೆಂದು ಗಣಿಸಲು ಸಾಧ್ಯವಿಲ್ಲ, ಇದು ಒಂದು ವ್ಯವಹಾರವೆಂದು ತಿಳಿಯುವುದು ತಪ್ಪು ಹಾಗೂ ತಂದೆಯ ಪ್ರಭಾವ ಹಾಗೂ ಅಧಿಕಾರಗಳ ವ್ಯಾಪಾರವನ್ನು ಮಾಡುವುದೂ ಅವ್ಯವಹಾರ್ಯ ಎಂದು ಸಮಿತಿ ಹೇಳಿದೆ. ಕೈರಾನರು ತನ್ನ ಮಗಂದಿರ ಈ ದುರಾಚಾರಕ್ಕೆ ಸಹಾಯ ಹಸ್ತ ನೀಡದಿದ್ದರೂ ಅವರು ಖಾಸಗಿಯಾಗಿ ಈ ವರ್ತನೆಯ ಕುರಿತು ತನ್ನ ಮಗಂದಿರಿಗೆ ಎಚ್ಚರಿಕೆ ನೀಡಬಹುದಿತ್ತು. ಹಾಗೂ ಅಗತ್ಯವಿದ್ದಲ್ಲಿ ಬಹಿರಂಗವಾಗಿ ತನ್ನ ಸಹೋದ್ಯೋಗಿಗಳಿಗೆ ಹಾಗೂ ಸರಕಾರೀ ಅಧಿಕಾರಿಗಳಿಗೆ ತನ್ನ ಮಗಂದಿರ ಹಾಗೂ ಸಂಬಂಧಿಕರ ದುರ್ವರ್ತನೆಯ ಕುರಿತು ತೀವ್ರ ಎಚ್ಚರಿಕೆ ನೀಡಬಹುದಿತ್ತು ಎಂದು ಸಮಿತಿ ಅಭಿಪ್ರಾಯ ತಾಳಿದೆ.

ಕೈರಾನರ ಮಗಂದಿರು ಹಾಗೂ ಸಂಬಂಧಿಕರು, ಅವರ ಸ್ಥಾನದ ಪ್ರಭಾವದ ಮೂಲಕ ಸರಕಾರೀ ಅಧಿಕಾರಿಗಳಿಂದ ಕಾನೂನಿಗೆ ವ್ಯತಿರಿಕ್ತವಾದ ಪ್ರಯೋಜನವನ್ನು ಪಡೆದಿರುವ ಈ ಕೆಳಗಿನ ಘಟನೆಗಳನ್ನು ಕಮಿಶನು ತನ್ನ ವರದಿಯಲ್ಲಿ ನಮೂದಿಸಿದೆ ಸರಕಾರೀ ಸ್ಥಳವನ್ನು, ಲೈಸನ್ಸ್‌ಗಳನ್ನು ಪಡೆಯುವಲ್ಲಿ ಕಾನೂನಿಗೆ ವ್ಯತಿರಿಕ್ತವಾಗಿ ಅಧಿಕಾರಿಗಳು ವರ್ತಿಸುವಂತೆ ಕೈರಾನರ ಸಂಬಂಧಿಕರು ಒತ್ತಡ ಹೇರಿರುವರೆಂದೂ ಈ ಸಂಗತಿಯು ನೇಶನಲ್ ಮೋಟರ್, ಪಾಟಿಯಾಲಾದ ಕೆಪಿಟಲ್ ಸಿನೆಮಾ, ಹಿಸಾರಿನ ಎಲ್ಫೈಟ್ ಸಿನೆಮಾ, ಫರೀದಾಬಾದಿನ ನೀಲಂ ಸಿನೇಮಾ ಮತ್ತು ನ್ಯೂ ಇಂಡಿಯಾ ಸ್ಪಿನ್ನಿಂಗ್ ಎಂಡ್ ವೀವಿಂಗ್ ಮಿ[illegible] ವಾಗಿದೆಯೆಂದೂ ಸಮಿತಿಯು ಸೂಚಿಸಿದೆ, ಕೈರಾನರ ಮೇಲೆ ಹೊರಿಸಲಾದ ಇತರ ಹದಿನೆಂಟು ಆಪಾದನೆಗಳು ಸಿದ್ಧವಾಗದ ನೆಲೆಯಿಂದಅವುಗಳನ್ನು ಕಮಿಶನು ಸ್ವೀಕಾರಾರ್ಹವಲ್ಲ ಎಂದು ತಿಳಿಸಿದೆ.

ನಗರ ರಚನಾ ಪ್ರಣಾಳಿಕೆಗೆ ವ್ಯತಿರಿಕ್ತವಾಗಿ ಕಟ್ಟಡಗಳನ್ನು ಕಟ್ಟಿಸಲು ಪ್ರಣಾಳಿಕೆಯನ್ನುತಿದ್ದುಪಡಿಗೊಳಿಸುವ ಆಜ್ಞೆ ಹೊರಡಿಸಿದ, ಸರಕಾರೀ ಭೂಮಿಯನ್ನು ಕಾಯಿದೆ ಹಾಗೂ ನಿಯಮಗಳಿಗೆ ವಿರುದ್ಧವಾಗಿ ಸಂಬಂಧಿಕರಿಗೆ ಮಾರುವಂತೆ ಮಾಡಿದ, ಗವರ್ನರರು ಈ ಕುರಿತು ವಿಚಾರಣೆಗೆ ಮುಂದಾದಾಗ ಅವರಿಗೆ ಫೈಲುಗಳು ಸಿಗದಂತೆ ತಡೆಯೊಡ್ಡಿದ, ನಿಯಮಕ್ಕೆ ಹಾಗೂ ಆಡಳಿತಾ ವಿಧಾನಗಳಿಗೆ ವ್ಯತಿರಿಕ್ತವಾದ ರೀತಿಯಲ್ಲಿ ಕಾರ್ಯವೆಸಗುವಂತೆ ಅಧಿಕಾರಿಗಳ ಮೇಲೆ, ಸಹೋದ್ಯೋಗಿಗಳ ಮೇಲೆ ಒತ್ತಡ ಹೇರಿದ ಆಪಾದನೆಯನ್ನು ಕಮಿಶನ್ ಕೈರಾನರ ಮೇಲೆ ಹೊರಿಸಿದೆ.

"ದಾಸ್ ಕಮಿಶನಿನ ವರದಿಯು ಗೃಹಶಾಖೆಯ ಭಾರವನ್ನು ಬಹಳ ಮಟ್ಟಿಗೆ ಕಡಿಮೆಮಾಡಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವ ನನ್ನ ಪ್ರತಿಜ್ಞೆಯ ಒಂದಂಶ, ಪಂಜಾಬ ಮಾತ್ರದ ಮಟ್ಟಿಗಾದರೂ ಪೂರೈಸಿತು" ಎಂದು ಗೃಹ ಮಂತ್ರಿ ಶ್ರೀ ನಂದಾರವರು ವರದಿಯ ಕುರಿತು ಹೇಳಿದ್ದಾರೆ. ಕೈರಾನರು ವರದಿ ಪ್ರಕಟವಾಗುವ ಮೊದಲೇ ರಾಜಿನಾಮೆ ಇತ್ತು ಹೊರಗೆ ಬಂದಿರುವರು. ಅವರ ಸಚ್ಚಾರಿತ್ರ್ಯದ ಕುರಿತು ಅವರು ಇನ್ನೂ ಉದ್ಧಟ ಹೇಳಿಕೆಗಳನ್ನು ನೀಡುತ್ತಾ ಇದ್ದಾರೆ. ಪಂಜಾಬಿನಲ್ಲಿ ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಉಚ್ಚ ಮಟ್ಟದ ಭ್ರಷ್ಟಾಚಾರ ದಾಸ್ ಕಮಿಶನಿನ ವರದಿಯಿಂದ ಕೊನೆಗೊಂಡಂತಾಯಿತು. ಈ ಘಟನೆಯು ದೇಶದ ಮಂತ್ರಿಗಳೆಲ್ಲರಿಗೂ ಪಾಠವಾಗಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಮಾಡಬೇಕಾದರೆ ನಮ್ಮ ಶಾಸಕರು, ಮಂತ್ರಿಗಳು, ಮುಂದಾಳುಗಳು ಸಚ್ಚಾರಿತ್ರ್ಯವನ್ನು ಕಾಪಾಡಿಕೊಳ್ಳುವುದು ಅತಿ ಅಗತ್ಯ. ಅಧಿಕಾರವು ಸ್ವಹಿತ ಸಾಧನೆಗಿಂತ ಪರಹಿತ ಸಾಧನೆಗೆ ಉಪಯೋಗಿಸಲ್ಪಡಬೇಕು ಎಂದು ಎಲ್ಲರೂ ತಿಳಿದು ವರ್ತಿಸಬೇಕು

ಪಂಜಾಬದಲ್ಲಿ ಹೊಸ ನಾಯಕನ ಚುನಾವಣೆ ಸದ್ಯದಲ್ಲೇ ನಡೆಯಲಿದೆ. ಈ ಮಧ್ಯೆ ಕೈರಾನರನ್ನು ಕಾಂಗ್ರೇಸ್ ಪಕ್ಷದಿಂದಲೇ ಹೊರಗೆ ಕಳ್ಳಬೇಕೆಂದು ಕೆಲವು ಸದಸ್ಯರು ಒತ್ತಾಯ ಪಡಿಸುತ್ತಿದ್ದಾರೆಂದೂ ತಿಳಿದು ಬಂದಿದೆ. ಹೀಗಾದರೆ ಕೈರಾನರು ವಿಷವಿಲ್ಲದ ಸರ್ಪವಾಗುತ್ತಾರೆ ಅವರಿಗೆ ಮುಂದೇನು ಕಾದಿದೆ ಎಂದು ಕಾದು ನೋಡಬೇಕಷ್ಟೆ.

ಶ್ರೀ ಕೆ. ಕೆ ಶೆಟ್ಟಿ, ಎಂ.ಎಲ್ ಸಿ ಯವರ
ಕ್ರಾಂತಿಕಾರಿ ಲೇಖನಿಯ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ__
ನವಭಾರತ ಪುಸ್ತಕ ಭಂಡಾರ, ಉಡುಪಿ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಶಿಲ ಕಲಾನಿಧಿ ಪೇರೂರಿಗೆ

ಕ್ರಿಸ್ತಪೂರ್ವದ ಇತಿಹಾಸವಿದೆ

ಸಪ್ತಕೊಂಗು ಶಿವಾಲಯಗಳಲ್ಲಿ ಪೆರೂರಿನ ಪಟ್ಟೀಶ್ವರಾರ್ ದೇವ ಮಂದಿರವು ಒಂದು. ಇದು ಕೊಯಂಬತ್ತೂರಿಂದ ನಾಲ್ಕು ಮೈಲು ಪಡುವಲಿಗಿದೆ. ಅತ್ಯಧಿಕ ಪಾವಿತ್ರ್ಯ ಸಂಚಿತವಾದ ಈ ದೇವಾಲಯವು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದದು ಮೈಸೂರಿನ ಹುಲಿಯೆಂದು ಇತಿಹಾಸದಲ್ಲಿ ಹೆಸರಾದ ಟಿಪ್ಪು ಸುಲ್ತಾನನು ಆರಾಧಿಸುತ್ತಿದ್ದ ಹಲವು ದೇಗುಲಗಳಲ್ಲಿ ಇದೂ ಅಗ್ರಗಣ್ಯವಾಗಿತ್ತು. 'ತಿರುವರೂರಿನಲ್ಲಿ ಜನಿಸಿದವನೂ ಪೆರೂರಿನಲ್ಲಿ ಮೃತ್ಯು ಮುಖನಾಗುವವನೂ ಮುಕ್ತಿ ಪಡೆಯುತ್ತಾನೆ' ಎಂಬ ತಮಿಳು ನಾಣ್ಣುಡಿಯು ಈ ದೇವಾಲಯದ ಘನತೆಯನ್ನು ಎತ್ತಿ ಹೇಳುತ್ತದೆ.

ಸರಕಾರದ ಪ್ರಾಚ್ಯ ಹಸ್ತಪ್ರತಿ ಸಂಗ್ರಹಾಲಯದಲ್ಲಿರುವ 'ಚೋಳನ್ ಪೂರ್ವ ಪಟ್ಟಯಂ" ಹೇಳುವಂತೆ ಪೆರಿಯೂ ಓರ್ (ಇಂದಿನ ಪೆರೂರ್) ಒಂದು ಮಹಾನಗರ(ಪಿರಿದು + ಊರು) ಇರುಳ ಸೇನಾಪತಿ ಕೋವನ್ ಎಂಬವನು ಪೆರೂರಿನ ಹೊರಗಡೆ ಕೊಯಂಬುತ್ತೂರನ್ನು ಹೊಸತಾಗಿ ಕಟ್ಟಿಸಿದನು (ಕೋವನ್ + ಪುಸತು + ಊರು = ಪುತ್ತೂರು) ಕಾಲ ಪ್ರಗತಿಸುತ್ತ ಬಂದಂತೆ ಹೊಸ ನಗರ ಹಳೆ ಶಹರವನ್ನು ಹಿಂದೆ ತಳ್ಳಿತು ಸೇವಿಕೆಯಾಗಿ ಬಂದವಳೇ ಮನೆಯೊಡತಿಯಾದಳು. ಇದರ ಪರಿಣಾಮವಾಗಿ ಪೆರೂರು ಇಂದು ಇತಿಹಾಸಗಾರರಿಗೆ ಮತ್ತು ಧಾರ್ಮಿಕರಿಗೆ ಮಾತ್ರ ತಿಳಿದಿರುವ ಊರಾಗಿ ಪರಿಣಮಿಸಿದೆ. ಆದರೂ ಪೆರೂರು ತನ್ನ ಮಹತ್ವವನ್ನು ಕಳೆದುಕೊಳ್ಳಲಿಲ್ಲ ಕೇರಳೀಯರಿಗೆ ಇದು ತೀರ್ಥ ಸ್ಥಳವಾಗಿದೆ, ಮೃತರಾದ ತಮ್ಮ ಸಂಬಂಧಿಕರ ಉತ್ತರ ಕ್ರಿಯೆಗಳನ್ನು ನೆರವೇರಿಸುವುದಕ್ಕೆ ಪುಣ್ಯ ಭೂಮಿಯಾಗಿದೆ.

ಸಂತ ಸುಂದರ ಮೂರ್ತಿಯವರು ಕೊಂಗನಾಡಿಗೆ ಬಂದಾಗ, ಪೆರೂರಿನ ಪವಿತ್ರ ದೇವಾಲಯವನ್ನು ಸಂದರ್ಶಿಸಿ, ದೇವರ ನಾಮದಿಂದ ಅನುರಗೊಳಿಸಿದರು. ಅವರು ಕೋವನ್ ಪುತ್ತೂರಿನ (ಕೊಯಂಬತ್ತೂರು) ಹೆಸರನ್ನೇ ಉಲ್ಲೇಖಿಸಲಿಲ್ಲ. ಅಂದು ಅದು ಬಹಳ ಚಿಕ್ಕ ಅಗಣ್ಯ ಪಟ್ಟಣವಾಗಿದ್ದುದೇ ಇದಕ್ಕೆ ಕಾರಣವಿರಬಹುದು ಕೊಂಗು ಚೋಳರ ಕಾಲದಲ್ಲಿ ಕೋವನ್ ಪುತ್ತೂರಿನ ಹೆಸರು ದೇಗುಲದ ಗೋಡೆಗಳಲ್ಲಿ ಮೊತ್ತ ಮೊದಲಿಗೆ ಕಂಡುಬರುತ್ತದೆ ವೀರ ರಾಜೇಂದ್ರನ ಕಾಲದಲ್ಲಿ ಕೋವನ್ ಪುತ್ತೂರು ಯಾನೆ ವೀರ ಕೇರಳ ನಲ್ಲೂರ್ ಎಂಬ ಹೆಸರಿನ ಗ್ರಾಮವನ್ನು ಪೆರೂರು ನಾಡಿನಲ್ಲಿ ಪೆರೂರಿನ ತಿರು-ಆನ್ ಪಟ್ಟಿಯುದಯರ್ (ಪಟ್ಟೀಶ್ವರ)ರ ಸೇವೆಗೆಂದು ದೇವದಾನವಾಗಿ ನೀಡಿದುದು ಗೊತ್ತಾಗುತ್ತದೆ.

ಕೇರಳೀಯರು ಪೆರೂರು ನಾಡನ್ನು ವಶಪಡಿಸಿಕೊಂಡಾಗ, ಅಂದಿನ ಸಂಪ್ರದಾಯದಂತೆ ಗ್ರಾಮದ ಹೆಸರನ್ನು ವೀರ ಕೇರಳ ನಲ್ಲೂರ್ ಎಂದು ಬದಲಾಯಿಸಿದರು ಆದರೆ, ಆಕ್ರಮಣಕಾರರನ್ನು ನಾಡಿನಿಂದ ಹೊರದಬ್ಬಿದ ಬಳಿಕ ಹೊಸ ಹೆಸರು ತಾನಾಗಿಯೇ ನಿರ್ನಾಮವಾಯಿತು ೧೩ನೆಯ ಶತಮಾನದಲ್ಲಿ ಕೊಂಗು ಚೋಳರ ಆಳಿತೆಯು ಕೊನೆಗೊಂಡಿತು. ಹೊಯ್ಸಳರಾಗಲೀ ವಿಜಯನಗರದ ರಾಜವಂಶಗಳಾಗಲೀ ಪೆರೂರಿನ ಕಡೆಗೆ ದೃಷ್ಟಿ ಹರಿಸಲಿಲ್ಲ ಆದುದರಿಂದ ಇದು ಕೆಲವು ಶತಮಾನಗಳ ವರೆಗೆ ಇದ್ದಂತೆಯೇ ಉಳಿಯಿತು. ಮೈಸೂರಿನ ಅರಸರ ಕಾಲದಲ್ಲಿ ಗವರ್ನರ ಮಧ್ವಯ್ಯ ರಾಜನು ತಾನು ನೆಲಸಿದ್ದ ಬೀದಿಗೆ ತನ್ನ ಹೆಸರನ್ನಿತ್ತನು. ಅದು ಅಂದು ಮಧ್ವರಾಜ ಮಹಲ್ ರಸ್ತೆಯೆಂದು ಕರೆಯಲ್ಪಡುತಿದ್ದು ಇಂದು ರಾಜ ಬೀದಿಯಾಗಿ ಸಂಕ್ಷೇಪಗೊಂಡಿದೆ.

ಪೆರೂರಿನ ದೇವಾಲಯವು "ನೋಯಿಲ್" ಎಂಬ ಚಿಕ್ಕ ನದಿಯ ದಂಡೆಯ ಮೇಲಿದೆ. ಈ ನದಿಯು ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿದುದು, ಚಿಕ್ಕದಾದರೂ ಇಡೀ ವರ್ಷವೂ ಇದು ಗುಳು ಗುಳು ಧ್ವಾನ ದೊಡನೆ ಹರಿಯುತ್ತಿದೆ ಈ ನದಿಯ ನೀರು ಕೊಯಂಬುತ್ತೂರಿಗೆ ಸರಬರಾಯಿಯೂ ಗುತ್ತಿದೆ; ಇಡಿ ದೇಶದಲ್ಲಿ ಸರಬರ ಜಿಗೆ ದೊರೆಯುವ ನೀರಿನಲ್ಲಿ ನೋಯಿಲ್ ನದಿಯ ನೀರು ಬಹಳ ರುಚಿತಮವಾಗಿದೆ, ಇಲ್ಲಿನ ದೇವಾಲಯವು ಸುಮಾರು ೧೫ ಶತಮಾನಗಳ ಇತಿಹಾಸವುಳ್ಳದ್ದು ಎಂದು ಖಂಡಿತಕ್ಕೂ ಹೇಳಬಹುದು ಇಲ್ಲಿ ಕಂಡುಬರುವ ಕೆತ್ತನೆಗಳು ಕಲಶದ ಘನಸ್ತಿಕೆ ಮತ್ತು ಭಾವುಕತೆಗಳಿಗೆ ಸರಿಸಾಟಿಯೆನಿಸಿದ ಕೆತ್ತನೆಯು ದಕ್ಷಿಣ ಭಾರತದಲ್ಲಿಯೇ ಇಲ್ಲವೆನ್ನಬಹುದು. ಇಲ್ಲಿರುವ ಪ್ರಾಚ್ಯಕಲಾ ಶಾಲೆ ಮತ್ತು ಪ್ರೌಢ ಶಾಲೆಗಳು ತಮಿಳು ಸಾಹಿತ್ಯಾಧ್ಯಯನಕ್ಕೆ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವೆ.

ಕೊಂಗುನಾಡಿನ ಇತಿಹಾಸವನ್ನು ಆ ಕಾಲದ ವ್ಯಕ್ತಿಗಳರೂ ಬರೆದಿಡಲಿಲ್ಲ. ಆದರೆ, ದೇವಾಲಯದಲ್ಲಿ ಲಭಿಸುವ ನೂರಾರು ಶಾಸನಗಳು ನಮ್ಮ ಪೂರ್ವಜರ ಐತಿಹಾಸಿಕ ಕಂತ ಸ್ಫೂರ್ತಿಯನ್ನು ಪ್ರಕಟಿಸುತ್ತವೆ ಪ್ರಾಕ್ತನ ಸಾಕ್ಷ್ಯ ಮತ್ತು ಶಾಸನಲಿಪಿಗಳಿಗೆ ಪೆರೂರು ಖಜಾನೆಯೆನ್ನಬಹುದು ನೆರೊವಿನ ಕಾಲದ ರೋಮನ್ ನಾಣ್ಯಗಳು ಇಲ್ಲಿ ದೊರೆತಿವೆ. ಇದರಿಂದ ಸುಮಾರು ೨,೦೦೦ ವರ್ಷಗಳಿಗೆ ಮೊದಲೇ ಪೆರೂರು ರೋಮಿನೊಂದಿಗೆ ವಾಣಿಜ್ಯ ಸಂಬಂಧವನ್ನು ಇಟ್ಟುಕೊಂಡಿತ್ತು ಎಂಬುದು ಸಿದ್ಧವಾಗುವುದು.

ಪೆರೂರಿನ ದೇಗುಲದಲ್ಲಿ ಸಂಭ್ರಮದಿಂದ ಆಚರಿಸುವ ಉತ್ಸವಗಳಲ್ಲಿ ದ

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ನಮ್ಮನಗಲಿದ ನೆಹರೂ !

ನಮ್ಮನಗಲಿದ ನೆಹರು ಮುಂದೆ ನಮಗಾರಿಹರು ?
ಭಾರತ ಮಹಾ ನೌಕೆಯನ್ನಾರು ನಡೆಸುವರು ?
ರಾಷ್ಟ್ರನಾಯಕನಾಗಿ, ಶಾಂತಿ ಸ್ಥಾಪಕನಾಗಿ
ರಾಷ್ಟ್ರಕೋಸುಗ ತನ್ನ ಸರ್ವಸ್ವವನೆ ನೀಗಿ
ಹಗಲಿರುಳು ಹಸಿವೆ ನೀರಡಿಕೆಗಳ ಕಡೆಗಣಿಸಿ
ನೊಗಕೆ ಹೆಗಲನ್ನಿತ್ತ ನೆಹರು ವೈ ಸಾಹಸಿ !
ಪಾಶ್ಚಾತ್ಯ ರಾಷ್ಟ್ರಗಳ ಸ್ನೇಹ ಸಂಪರ್ಕವನು
ಗಳಿಸಿ ಭಾರತದೇಳ್ಗೆಗಾಗಿ ತನು ತೇದವನು.
ಎಳವೆಯಿಂ ಧೀರನಾಗಿರ್ದು ಗಾಂಧೀಜಿಯ
ಚಳವಳದಿ ದುಮ್ಮಿಕ್ಕಿ ದುಡಿದ ನೆಹರು ಪಂಡಿತಜೀಯು !
ಶಾಂತಿ ಗಾಂಭೀರ್ಯಗಳೆ ಸಾಕಾರವಾದಂತೆ
ಶಾಂತಿಮಯ ಮುಖದಲ್ಲಿ ಕಾಣುವುದು ನಿಶ್ಚಿಂತೆ
ಮಕ್ಕಳನು ಕಂಡಾಗ ಉಕ್ಕಿಬರುವುದು ಮಮತೆ
ಚಿಕ್ಕರೆಯಿನೆತ್ತಿ ಹರಿಯಿಸುವ ಬೆಳ್ಳಿಗೆಯೊರತೆ
ಬಾಪೂಜಿ ತುಳಿದ ದಾರಿಯಲಿ ನಡೆನಡೆಯುತ್ತ
ಬಾಪು, ಭಾರತದ ಪ್ರಧಾನಿ ಖ್ಯಾತಿಯುವೆತ್ತ
ಪಂಡಿತ ಜವಾಹರರ ಕಾಲ ನಿಧನದ ವಾರ್ತೆ
ಗಂಡಾಂತರದಿ ಭಾರತ ಮಾತೆ ಹಾ ದುಃಖಾರ್ತೆ
ಪುತ್ರ ಶೋಕದಿ ಕಂಬನಿಯ ಕರೆವಳೈ ಹೆಂತ
ಚಿತ್ರ ಲಿಖಿತಂ ವಿಶ್ವಮಾಯ್ತು ಚಿಂತಾಕ್ರಾಂತ !
ಜನರೆಲ್ಲ ಮೌನದಲಿ ಶೋಕಪೂರಿತರಾಗಿ
ಜನನಾಯಕನಿಗಾಗಿ ಮರುಗುವರು ಮನ ಕರಗಿ
ಬಾಳಬೇಕಿತ್ತು ಕೆಲ ವರ್ಷ ಪಂಡಿತ ನೆಹರು
ಕಾಳ ದುರ್ವಿಧಿಯ ಕೈ ತಡೆಯುವವರಾರಿಹರು ?
ಇನ್ನಿಲ್ಲ ಇನ್ನಿಲ್ಲ ನೆಹರು ಇನ್ನಿಲ್ಲ
ಕಣ್ಣೀರ ತರ್ಪಣವನವಗೀವೆವೆಲ್ಲ.

— ಎಸ್ ತಿರುಮಲೇಶ್ವರ ಭಟ್ಟ, ಮಂಗಳೂರು.

ನಗೆಗಡಲು

ಕಳ್ಳ ಡಾಕ್ಟರ್!

ರೋಗಿ— (ಬೇರೊಬ್ಬ ರೋಗಿಗೆ) ನೀನು ಬೇರೆ ಯಾವ ಡಾಕ್ಟರರಿದ್ದಲ್ಲಾದರೂ ಹೋಗು—ಶಾನುಭೋಗ ಡಾಕ್ಟರರಿದ್ದಲ್ಲಿ ಮಾತ್ರ ಹೋಗಬೇಡ. ಕಳೆದ ವರ್ಷ ಏನಾಯಿತು ಅಂತ ನನ್ನ ಹತ್ತಿರ ಕಿಟಕಿ ಬಾಗಿಲು ತೆರೆದ ಕೊಂಡು ಮಲಗಲು ಹೇಳಿದರು ರಾತ್ರಿ ಆಲಾರಾಂ, ಪೆನ್ನು, ಪೆಂಟು, ಶರ್ಟು, ಹೊಸ ಕೋಟು ಔಷಧಿ ಎಲ್ಲಾ ಕಳವಾಯಿತು ಅಬ್ಬಾ! ಕಳ್ಳ ಡಾಕ್ಟರ್!!

ಖಾತ್ರಿ ಮಾಡಿಕೊಳ್ಳಿ

'ಆರೋಗ್ಯವೇ ಭಾಗ್ಯ' ರೋಗಗಳಿಂದ ಏಕೆ ಬಳಲುತ್ತೀರಿ?

ಇಂದೆ ಭೇಟಿ ಕೊಡಿ-ಅಥವಾ ಉತ್ತರಕ್ಕಾಗಿ ಸ್ಟಾಂಪು ಇಟ್ಟು ಬರೆಯಿರಿ ..

'ಮೂಲ ವ್ಯಾಧಿಯ ಮೇಲೆ ರಾತ್ರಿ ಉಪಚಾರ'

ಕುರುಡಿ!!

ಎಷ್ಟೋ ಹುಡುಗಿಯರಿಂದ ಕುರೂಪಿ ಎಂದು ಹೇಳಿಸಿಕೊಂಡು ಇನ್ನೂ ಅವಿವಾಹಿತನಾಗಿ ಉಳಿದ ರಾಮಣ್ಣನಿಗೆ-ಒಂದು ಹುಡುಗಿ ಸಂದರ್ಶಿಸಿ—'ನಾನು ನಿಮ್ಮನ್ನು ಮದುವೆಯಾಗುತ್ತೇನೆ"

"ನನ್ನನ್ನು!?. "

"ತಾವು ಮದುವೆಯಾಗುವದಿಲ್ಲವೆ? ತಾವು ಬಹಳ ಸುಂದರವಿದ್ದೀರಿ ನಿಮ್ಮಂದವರನ್ನು ನಾನು ಇನ್ನೂ ನೋಡಿಯೇ ಇಲ್ಲ."

"ನಿನ್ನಂಥ ಕುರುಡಿಯನ್ನ ಹೇಗೆ ಮದುವೆಯಾಗಲಿ? ...

ಶಂಬರದ ಆರುದ್ರ ದರ್ಶನ ಮತ್ತು ಮಾರ್ಚಿಯ ಪಂಗುಣ್ಣಿ ಉತ್ಸವ ಅತಿ ಮುಖ್ಯವಾದುವು. ಇಷ್ಟು ಹಳೆಯದಾದ ದೇವಾಲಯ ಇನ್ನೂ ಅದೇ ಘನತೆಯಿಂದಿರುವುದೇ ಒಂದು ವೈಶಿಷ್ಟ್ಯ.

ಇನ್ನೇನು!

ಮಗ— ನಿನ್ನ ಮನಸ್ಸಿಗೆ ಬಂದ ಹಾಗೆ ತಂಟೆತಕರಾರು ಇಲ್ಲದೆ ಸುಖವಾಗಿ ಚಿಕ್ಕ ಚೊಕ್ಕ ಸಂಸಾರ ಮಾಡಿಕೊಂಡು ಇದ್ದರೆ .. ಸರಿ ನನಗೆ ಇನ್ನೇನು ಬೇಕು? .

ಅಳಿಯ— ಅದೇ ನನಗೆ ಬೇಕಾಗಿದ್ದ —ನಿಮ್ಮ ಮಗಳಿಗೆ ಸೋಡಚೀಟಿ ಕೊಡುವುದೊಂದು....ಎರಡನೆ ಮದುವೆಗೊಂದು ಪರ್ಮಿಷನ್....!

—ಪಿ ಎಸ್. ಹೆಗ್ಡೆ—ಶಂಭು. ಹೊಸಾಕುಳಿ.

೦ ೦ ೦

ಮೂರೇ ಹೆಚ್ಚು

ಫಸ್ಟ್ ಕ್ಲಾಸಿನಲ್ಲಿ ಪಾಸಾದ ವಿದ್ಯಾರ್ಥಿಯೊಬ್ಬನ ತಂದೆ ತನ್ನ ಮಗನ ಉಜ್ವಲ ಫಲಿತಾಂಶವನ್ನು ಪೇಟೆಯುದ್ದಿ ಡಂಗುರ ಸಾರುತ್ತಾ ಮೀಸೆಯ ಮೇಲೆ ಬೆರಳಾಡಿಸುತ್ತಿದ್ದ. ಇದನ್ನು ಸಹಿಸದ ಗಣಪನ ಅಪ್ಪ ತನ್ನ ಮಗನ ಫಲಿತಾಂಶವೇ ಹೆಚ್ಚಿನದು ಎಂದು ಸಮರ್ಥಿಸ ತೊಡಗಿದ.

"ಫಸ್ಟ್ ಕ್ಲಾಸಂತೆ ಅವನ ಮಗ. ಅದೇನು ಪರ್ವತಾಂತ ಹೆಮ್ಮೆ ಆ ಕೋತಿಗೆ ನೋಡಿ, ನಮ್ಮ ಗಣಪು ಥರ್ಡ್ ಕ್ಲಾಸ್ ಬಂದಿದ್ದಾನೆ. ಥರ್ಡ್! ಅವರಲ್ಲಿಲ್ವೈ ಚಿಂತೆ"

ಇದನ್ನು ಕೇಳಿದ ನಾಗರಿಕನೊಬ್ಬ ಆವನ ಆವೇಶ ಮತ್ತೂ ಕೆರಳದಂತೆ ಸಾಂತ್ವನ ಗೊಳಿಸಿದ.

" ನೀನು ಸರಿಯಪ್ಪ ಒಂದಕ್ಕಿಂತ ಮೂರು ಯಾವಾಗಲೂ ಹೆಚ್ಚಲ್ಲವೆ?"

ಗಣಪಮ್ಮ ಬೋಳಿಸಿದ ಮೀಸೆಯ ಸ್ಥಾನವನ್ನು ಅಭಿಮಾನದಿಂದ ಮುಟ್ಟ ತೊಡಗಿದ.

— ಗೋ.

ಕವಲು ದಾರಿ—ಕೆಂಪು ದೀಪ

ಶಾಸ್ತ್ರಿಯವರು ಮತ್ತು ಭಾರತ!

ನೆಹರೂ ಇಲ್ಲವಾದಾಗ, ಅಮೇರಿಕೆಯಲ್ಲಿದ್ದುಕೊಂಡು ರಾಮ ಮನೋಹರ ಲೋಹಿಯಾ, ನೆಹರೂ ಕುರಿತು ಆಡಬಾರದ್ದನ್ನು ಆಡಿದ್ದಾರೆ.

ಲೋಹಿಯಾ ಉತ್ತಮ ಬರಹಗಾರರೂ ನಿಜ; ಉತ್ತಮ ಭಾಷಣಕಾರರೂ ನಿಜ. ಆದರೆ, ಅವರು ನೆಹರೂ ಕುರಿತು ಆಡಬಾರದ್ದನ್ನು ಆಡಿ, 'ಉತ್ತಮ' ಎಂಬುವಕ್ಕೆ ಕಲಂಕ ಹಚ್ಚುವ ಕೆಲಸವನ್ನು ತಾವೇ ಮಾಡಿಕೊಂಡಿದ್ದಾರೆ.

ಅವರು ಆಡಿಕೊಂಡುದು ಅಮೇರಿಕೆಯಲ್ಲಿ. ಎಂತಲೇ ಈ ಸಂದರ್ಭದಲ್ಲಿ ಉಳಿದುಕೊಂಡರು. ನೆಹರೂ ಇಲ್ಲವಾದಾಗ ಆ ಮಾತು ಭಾರತದಲ್ಲೇ ಅವರ ಮುಖೇನ ಹೊರ ಬರುತ್ತಿದ್ದರೆ, ಕತೆ ಬೇರೆಯೇ ಇತ್ತೋ ಏನೋ!

ಲೋಹಿಯಾ ಭಾರತದ ಹೊರಗಿದ್ದುಕೊಂಡು ಆಡಿದ್ದರೆ, ಭಾರತದ ಒಳಗೆ, ನೆಹರೂ ಬಗ್ಗೆ ಆಡಿಕೊಳ್ಳದವರು ಇದ್ದರೂ ನೆಹರೂ ಸ್ಥಾನಕ್ಕಾಗಿ, ನಾಕಷ್ಟು ಪ್ರಯತ್ನ ನಡೆಸಿದವರಿದ್ದಾರೆ.

ಅವರಲ್ಲಿ ಮೊರಾರ್ಜಿ ಭಾಯಿಯವರದ್ದು ಏಕ ಪಾತ್ರಾಭಿನಯ ಅಲ್ಲವಾಗಿದ್ದರೂ, ಅಸ್ಪಷ್ಟರೂಪದಲ್ಲಿ ಅವರ ಪಾತ್ರ ಮುಖ್ಯವಾಗಿತ್ತು. ಆದರೂ ಅವರು ಯಶ ಸಾಧಿಸಲಿಲ್ಲ!

ದೇಶದ ತುಂಬ ಇನ್ನೇನು ಎಂಬ ಪ್ರಶ್ನೆ ನೀಡಿದ್ದರೆ, ನೆಹರೂ ಸ್ಥಾನಕ್ಕೆ ತಾವಲ್ಲದೆ ಇನ್ನೊಬ್ಬರು ಅರ್ಹರಲ್ಲ ಎಂಬಂತೆ ವರ್ತಿಸಿದವರೂ ಬಹಳ ಮಂದಿ.

ಇದೇ ಹೊತ್ತಿನಲ್ಲಿ ಜ್ಯೋತಿಷಿಗಳನ್ನು ಆಶ್ರಯಿಸಿದ ರಾಜಕಾರಣಿಗಳಿಗೂ ಕಡಿಮೆಯಿಲ್ಲ.

ಭಾರತದ ರಾಜಧಾನಿಯಲ್ಲಿ ಜ್ಯೋತಿಷಿಗಳ ಓಡಾಟವೇ ಓಡಾಟ ನಡೆದಿತ್ತು. ಆದರೆ ಯಾವ ಜ್ಯೋತಿಷಿಯೂ ಕಣಿ ಕೇಳದ ಲಾಲಬಹದೂರ ಶಾಸ್ತ್ರಿಯವರು, ನೆಹರೂ ಸ್ಥಾನಕ್ಕೆ ಆರಿಸಲ್ಪಟ್ಟರು.

ಇದರಿಂದ ನೆಹರೂ ನಂತರದ ಒಂದು ಸಮಸ್ಯೆ ಬಗೆಹರಿಯಿತು.

ಇದು ತಾತ್ಕಾಲಿಕ;

ನೆಹರೂ ಇರುವಾಗ, ಸಹಕಾರಿ ನೀಡದ ಹಲವು ಮಂದಿ, ಅವರು ಇಲ್ಲವಾದಾಗ, ಭಾರತ ರಕ್ಷಣೆಗಾಗಿ ಟೊಂಕ ಕಟ್ಟಿ ನಿಲ್ಲುತ್ತಾರೆ, ಎಂಬ ಭರವಸೆ ಇಲ್ಲ. ಅವರ ಸೇವಾ ಪ್ರವೃತ್ತಿ 'ಮಂಡೂಕ ಪ್ರಪಂಚ'ದಿಂದ ಹೊರ ಬರುತ್ತದೆ ಎಂಬ ಆಶೆಗೆ ಎಡೆಯೂ ಇಲ್ಲ.



ಏನಿದ್ದರೂ, ನೆಹರೂ ಪ್ರಿಯ ಶಾಸ್ತ್ರಿಯವರು ಆರಿಸಿ ಬಂದುದು, ನೆಹರೂ ನಂತರದ ಸಮಸ್ಯೆಗೆ ಪರಿಹಾರ ಸೂಚಿಸಿದೆ.

ಸೇವಾ ಪ್ರಿಯರೂ, ನಿಸ್ವಾರ್ಥಿಗಳೂ ತುಂಬು ಪ್ರಾಮಾಣಿಕತನಕ್ಕೆ ಹೆಸರಾದವರೂ ಆಗಿರುವ ಶಾಸ್ತ್ರಿಯವರು, ನೆಹರೂ ಸ್ಥಾನಕ್ಕೆ ಅರ್ಹರು, ಎಂಬ ಮಾತು ನೆಹರೂ ಅವರಿಗೂ ಚೆನ್ನಾಗಿ ತಿಳಿದಿತ್ತು.

ಆದರೆ ಆ ಮಾತು ನೆಹರೂ ಅವರ ಮುಖದಿಂದ ಹೊರ ಬಿದ್ದಿರಲಿಲ್ಲ ಶಾಸ್ತ್ರಿಯವರು ಆಗತ್ಯ ಸಂದರ್ಭಗಳಲ್ಲಿ ತಮ್ಮ ಅಧಿಕಾರವನ್ನು ಬದಿಗೆ ಸರಿಸಿ, ಸೇವೆಯತ್ತ ಸಾಗಿ ಬಂದವರೇ ಆಗಿದ್ದಾರೆ. ಅವರಿಗೆ ಅಧಿಕಾರ ಮುಖ್ಯವಲ್ಲ. ಕಾರ್ಯ ನಡೆಯ ಬೇಕಾದುದು ಮುಖ್ಯ. ಅದು ತಮ್ಮಿಂದಲೇ ಆಗುತ್ತದೆ—ಆಗಬೇಕು—ತಮ್ಮನ್ನು ಬಿಟ್ಟರೆ ಆ ಕಾರ್ಯ ಬೇರೆ ಯಾರಿಂದಲೂ ಆಗುವದಿಲ್ಲ—ಎಂದು ತಿಳಿದವರೂ ಅಲ್ಲ—ತಿಳಿಯುವವರೂ ಅಲ್ಲ, ಯಾರಾದರೂ ಆ ಕಾರ್ಯ ಮಾಡಿ ಮುಗಿಸಲಿ; ತನ್ನ ಆಗತ್ಯ ಎಲ್ಲಿದೆಯೋ, ಅಲ್ಲಿ ಪರಿಪೂರ್ಣ ರೀತಿಯಲ್ಲಿ ಶ್ರಮಿಸಬೇಕು ಎಂದು ತಿಳಿದವರು ಶಾಸ್ತ್ರಿಯವರು.

ಅಂತೆಯೇ ನೆಹರೂ ಅವರನ್ನು ಗುರುತಿಸಿಕೊಂಡಿದ್ದರು. ಶಾಸ್ತ್ರಿ ತಮ್ಮ ಅಧಿಕಾರವನ್ನು ಬದಿಗಿಟ್ಟು, ಹೊರ ಬಂದಾಗಲೂ ನೆಹರು, ಶಾಸ್ತ್ರಿಯವರನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ಕೂಡಲೇ ಶಾಸ್ತ್ರಿಯವರ ಮೇಲೆ ಇನ್ನೊಂದು ಹೊರೆಯನ್ನು ಹೊರಿಸಿ ತಮ್ಮ ಬಳಿಗೆ ಕರೆದುಕೊಳ್ಳುತ್ತಿದ್ದರು ನೆಹರು.

ಇದಕ್ಕೆ ಕಾರಣವಿಷ್ಟೆ; ಶಾಸ್ತ್ರಿ ಉಳಿದವರಂತಲ್ಲ ಎಂಬುದು ನೆಹರೂ ಅವರಿಗೆ ಹೆಚ್ಚು ತಿಳಿದಿತ್ತು.

ಇದೇ ಶಾಸ್ತ್ರಿಯವರಲ್ಲಿರುವ ವ್ಯಕ್ತಿ ವಿಶಿಷ್ಟ ಗುಣ.

ಹೆಚ್ಚು ಕಲಿತವರಲ್ಲದ ಶಾಸ್ತ್ರಿಯವರು ಹೆಚ್ಚು ದೇಶಗಳನ್ನು ಸುತ್ತಿದವರೂ ಅಲ್ಲ. ಇದುವರೆಗೆ ಒಮ್ಮೆಯೂ ಅವರು ಭಾರತವನ್ನು ಬಿಟ್ಟು ವಿದೇಶಗಳತ್ತ ಪ್ರವಾಸ ಬೆಳೆಸಿಲ್ಲ. ಒಂದು ಬಾರಿ ಅವರು ನೇಪಾಳಕ್ಕೆ ಭೇಟಿ ಕೊಟ್ಟಿದ್ದಾರೆ. ಅಲ್ಲಿಗೆ ಮುಗಿಯಿತು ಅವರ ವಿದೇಶ ಪ್ರವಾಸ.

ಕಲಿತುದು ಕಾಶಿಯ ವಿಶ್ವ ವಿದ್ಯಾಲಯದಲ್ಲಿ 'ಶಾಸ್ತ್ರಿ' ಎಂಬ ಪರೀಕ್ಷೆ ಪ್ಯಾಸಾಗುವವರೆಗೆ. ಅಲ್ಲಿಗೆ ಅವರ ಶಿಕ್ಷಣವೂ ಮುಕ್ತಾಯಗೊಂಡಿತು.

ಅನುಭವವನ್ನೇ ಹೆಚ್ಚು ಪಡೆದಿರುವ ಶಾಸ್ತ್ರಿಯವರು "ಭರತ" ಎಂಬ ಹೆಸರಿಗೆ ಯೋಗ್ಯ ವ್ಯಕ್ತಿ. ಬಡ ಅಧ್ಯಾಪಕ ಕುಟುಂಬದಲ್ಲಿ ಹುಟ್ಟಿ ಬೆಳೆದ ಶಾಸ್ತ್ರಿ ಅವರು, ದಾರಿದ್ರ್ಯದ ಅನುಭವವನ್ನು ಉಂಡು ಅರಗಿಸಿಕೊಂಡಿದ್ದಾರೆ.

ಅಂತರಂಗದಲ್ಲೊಂದು, ಬಹಿರಂಗದಲ್ಲಿ ಇನ್ನೊಂದು ಎಂಬುದನ್ನು ತಿಳಿಯದ ಲಾಲ ಬಹದೂರ ಶಾಸ್ತ್ರಿಯವರು ಯಾರ ವಿರೋಧಿಯೂ ಅಲ್ಲ. ಈ ಕಾರಣದಿಂದಲೂ, ಅವರು ನೆಹರೂ ಸ್ಥಾನಕ್ಕೆ ಸರಿಯಾದ ವ್ಯಕ್ತಿ.

ಸಾದಾತನದ ಜೀವಂತ ಮೂರ್ತಿಯೂ ಗಿರುವ ಶಾಸ್ತ್ರಿಯವರನ್ನು ಕಂಡರೆ ಅವರು ಹೆಚ್ಚು ಎತ್ತರಕ್ಕೆ ಬೆಳೆದಿಲ್ಲ ಎಂದು ಅನ್ನಿಸುತ್ತದೆ.

ಐದು ಅಡಿ ಎತ್ತರವುಳ್ಳ ಶಾಸ್ತ್ರಿಯವರು ನೋಡಲು ಕುಳ್ಳಗೆ ಇದ್ದರೂ ತಮ್ಮ ಅನುಭವದಿಂದ ಐದುನೂರು ಅಡಿ ಎತ್ತರದ ಮೇಲಿಂದ ಕಾಣಿಸಿಕೊಳ್ಳ ಬಲ್ಲರು!

ಅವರ ಉತ್ತಮ ಗುಣ ಅವರಮೂರ್ತಿ ಚಿಕ್ಕದಾದರೂ ಅವರನ್ನು ಅವರಿಗಿಂತ ಎಷ್ಟೋ ಪಾಲು ಎತ್ತರಕ್ಕೆ ಬೆಳೆಸಿದೆ.

ನಿಸ್ವಾರ್ಥ ದೃಷ್ಟಿಯುಳ್ಳ ಕೀರ್ತಿಯ ಕಿರೀಟಕ್ಕೆ ಎಂದೂ ತಲೆ ಬಾಗಿಸದ, ಸೇವಾಪ್ರಿಯ ಶಾಸ್ತ್ರಿಯವರು ವಾಮನ ಮೂರ್ತಿಯಾಗಿ ಕಾಣಿಸಿಕೊಳ್ಳುತ್ತಾರೆ.

ಈ ವಾಮನ ಮೂರ್ತಿಯು ಭಾರತಕ್ಕಂಟಿಕೊಂಡಿರುವ ದುಷ್ಟ ಶಕ್ತಿಗಳನ್ನು ಭಾರತದ ರಾಜಕಾರಣದಲ್ಲಿರುವ ಹೊಲಸುತನವನ್ನು ಮೆಟ್ಟಿ ನಿಲ್ಲಬಹುದು. ಆ ಕುರಿತು, ಅವರು ಇವತ್ತಿನವರೆಗೆ ಸಾಧಿಸಿದ ಕಾರ್ಯಗಳನ್ನು ನೋಡಿರುವವರಿಗೆ, ಸಂದೇಹವಿರುವದಿಲ್ಲ.

—ಸುದಾಸ.

ನಿಸರ್ಗಸುಂದರ ಕುದುರೆ ಮುಖ

(೩ ನೇ ಪುಟದಿಂದ)

ಲವಾದ ಗೋಡೆಗಳು ಈಗಲೂ ಈ ಬಂಗ್ಲೆಯ ವಿಸ್ತಾರವನ್ನು ವ್ಯಕ್ತ ಪಡಿಸುತ್ತವೆ. ನೆಲಕ್ಕೆ ಹಾಸಿದ ನಾಜೂಕಾದ ಇಟ್ಟಿಗೆಗಳು, ಮಾಡಿನ ಮೂಲೆ ಹಂಚುಗಳು, ಮಂಗಳೂರು ಹಂಚುಗಳು, ಮಾಡಿಗೆ ಇಡುವ ಬೆಳಕಿಂಡಿ ಹಂಚುಗಳು ಇನ್ನೂ ತುಂಬಾ ರಾಶಿಯಾಗಿ ಇಲ್ಲಿ ಅಸ್ತವ್ಯಸ್ತವಾಗಿ ರಾಶಿ ಬಿದ್ದಿವೆ- ಪುಡಿಪುಡಿಯಾಗಿ ಬಿದ್ದಿರುವ ಇಟ್ಟಿಗೆ ಹಂಚುಗಳ ರಾಶಿಗಳು; ಮಾಡಿಗೆ ಹಾಕಿದ್ದ ವಾಲ್ ಪ್ಲೇಟು, ಟ್ರಸ್ ಅಡ್ಡಗಳು, ದೊಡ್ಡ ದೊಡ್ಡ ಕೋಣೆಗಳು, ಪಕಾಸುಗಳು, ಮೂಲೆ ಪಕಾಸುಗಳು, ಕಿಟಕಿ ಬಾಗಿಲುಗಳ ಚೌಕಟ್ಟುಗಳು ಚೂರಾಗಿ ಮುರಿದು, ಸುಟ್ಟು ನೇತಾಡುತ್ತಿರುವ ದೃಶ್ಯ; ಕೆಲವು ಇನ್ನೂ ಅಳ್ಳಾಡದೆ ನಿಂತಿರುವ ನೋಟ; ಪ್ರವಾಸಿಗರಿಗೆ ಹಿಂದಿನ ವೈಭವವನ್ನು ನೆನಪಿಗೆ ತಂದುಕೊಟ್ಟು, ಇಂದಿನ ನಮ್ಮ ಅನಾಸಕ್ತಿ ಮತ್ತು ಅಶ್ರದ್ಧೆಗಳ ಪರಿಣಾಮದ ಪ್ರತ್ಯಕ್ಷ ನಿದರ್ಶನವಾಗಿ ತೋರುವುದರಲ್ಲಿ ಏನೂ ಸಂದೇಹವಿಲ್ಲ. ಇಲ್ಲಿ ನಿಂತು ಆತ್ಮ ವಿಮರ್ಶೆ ಮಾಡಿ ನೋಡಬೇಕು. ನಿಜವಾಗಿ ನಾವು ಈಗ ಮುಂದರಿದಿದ್ದೇವೆಯೇ ಅಥವಾ ಹಿಂದೆ ಬಿದ್ದಿದ್ದೇವೆಯೆ? ಎಂಬುದನ್ನು. ಈ ಪ್ರಶ್ನೆಯ ಉತ್ತರವನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಈ ಬಂಗ್ಲೆಯಲ್ಲಿ ಈಗಲೂ ಕಾಣಬಹುದಾದ ಪ್ರಾರ್ಥನಾ ಮಂದಿರದ ಗೋಡೆಯ ಮೇಲಿನ ಯೇಸುಕ್ರಿಸ್ತ ಮರಿಯಮ್ಮನವರ ಮಸುಕಾದ ಚಿತ್ರಗಳು ಪ್ರಾರ್ಥನಾ ವೇದಿಕೆ, ಹಿಂದೆ ಆಳಿದ ಬ್ರಿಟಿಷರಲ್ಲಿದ್ದ ಮತೀಯ ನಿಷ್ಠೆಯನ್ನು ಎತ್ತಿ ತೋರಿಸುತ್ತವೆ. ಮಂಗಳೂರು ಹಂಚು ಕಾರ್ಖಾನೆಯಲ್ಲಿ ತಯಾರಾದ ಕುಂದದ ಇಟ್ಟಿಗೆಗಳಿಂದ ಕಟ್ಟಿದ ಹಲವು ಕುಂದಗಳು; ಬಿದ್ದುಹೋದ ಕುಂದಗಳು; ಸ್ನಾನದ ಕೋಣೆಗಳು; ಊಟದ ಮನೆಗಳು; ನೀರಿನ ತೊಟ್ಟಿಗಳು, ಅಡಿಗೆ ಮನೆಗಳು ಹೀಗೆ ಪ್ರತಿಯೊಂದು ಕೋಣೆಯೂ ಸರ್ವ ಸಿದ್ಧತೆಗಳಿಂದ ಕೂಡಿದ್ದು ಈ ಪ್ರವಾಸೀ ಮಂದಿರವು ಹಿಂದೆ ಬಹು ಉನ್ನತ ಮಟ್ಟದ ಒಂದು ಬಂಗ್ಲೆಯಾಗಿತ್ತೆಂತ ಸುಲಭವಾಗಿ ಊಹಿಸಬಹುದು. ಆದರೆ ಈಗ ಇದು ಸ್ಮಶಾನ ಸದೃಶವಾಗಿರುವುದನ್ನು ನೋಡಲು ಬಹಳ ದುಃಖವಾಗುತ್ತದೆ. ಇಲ್ಲಿಂದ ಬೆಲೆಬಾಳುವ ಹಲವು ಕಬ್ಬಿಣದ ಸರಳು, ಬಿಡಾಗ್ರಿ, ಪ್ಯಾಪು ಜಿಂಕ್‌ಶೀಟ್, ಹಂಚುಗಳು ಕನ್ನಡಿಗಳು ಇತ್ಯಾದಿಗಳನ್ನು ಬೇಕಾದವರು ಸಾಧ್ಯವಿರುವಷ್ಟೇ ಸಾಗಿಸಿಬಿಟ್ಟಿದ್ದಾರೆಂತ ಜನ ಹೇಳುತ್ತಾರೆ. ಈಗ ಇಲ್ಲಿ ಉಳಿದುಕೊಂಡಿರುವ ಹಂಚು ಇಟ್ಟಿಗೆಗಳ ಬೆಲೆಯು ಕೆಲವು ಸಾವಿರ ರೂಪಾಯಿಗಳಾಗ ಬಹುದು. ಈ ಬಂಗ್ಲೆಯನ್ನು ದುರಸ್ತಿ ಪಡಿಸುವ ಅವಶ್ಯಕತೆ ಇದೆ ಎಂಬುದು ಇಲ್ಲಿ ಪ್ರವಾಸಕ್ಕಾಗಿ ಬರುವ ಪ್ರತಿಯೊಬ್ಬನಿಗೂ ಖಂಡಿತ ಮನವರಿಕೆಯಾಗುವ ವಿಚಾರ. ನಮ್ಮ ಶಾಸಕರು ಈ ಪರ್ವತ ಶಿಖರಕ್ಕೆ ಪ್ರವಾಸ ಮಾಡುವ ಸಾಹಸ ಯಾಕೆ ಮಾಡಲಿಲ್ಲವೋ ತಿಳಿಯದು. ಇನ್ನಾದರೂ ಅವರು ಅವಶ್ಯವಾಗಿ ಈ ಕಾರ್ಯಕ್ರಮ ವಿಡಬೇಕಂತ ನಮ್ಮ ವಿನಂತಿ. ಕುದುರೆ ಮುಖ ಪ್ರವಾಸ ಮಾಡಿದ ಪ್ರತಿಯೊಬ್ಬನೂ ಈ ಭಗ್ನ ಕಟ್ಟಡದ ಅವಶೇಷಗಳನ್ನು ಕಂಡಾಗ ಅತಿಯಾಗಿ ಮರುಗುತ್ತಾನೆ. ಇದು ಸತ್ಯ.

(ಸಶೇಷ)

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಚೈನಿ ಚೀಲದಲ್ಲಿ ಚಂಚಲೆಯರು

(೨ನೇ ಪುಟದಿಂದ)

ನೇಪಾಳದ ಸೇನಾಧಿಕಾರಿಗಳಿಗೆ ಸಂಶಯದ ವಾಸನೆ ಬಂತು. ಹೌದು, ಶತ್ರುಗಳ ಆಟ ಇಲ್ಲಿ ನಡೆಯುತ್ತಿದೆ. ಆದರೆ, ಇದ್ದಕ್ಕಿದ್ದಂತೆ ಅದನ್ನು ಹಿಡಿಯುವುದೆಂತು? ಸುರಸುಂದರಿಯನ್ನು ಹಿಡಿಯುವದೆಂತು? ಅದು ಅಂತರರಾಷ್ಟ್ರೀಯ ಗಡಿಗಳಲ್ಲಿ ನಡೆಯುವ ಕಾರಸ್ಥಾನ. ಅವಳನ್ನು ಹಿಡಿಯ ಬೇಕಾದಲ್ಲಿ ನೆರೆರಾಷ್ಟ್ರ ನೆರವು ಅಗತ್ಯ. ನೇಪಾಲೀ ಸೇನಾಧಿಕಾರಿಗೆ ಗಡಿಪ್ರದೇಶದಲ್ಲಿರುವ ಶಿಬಿರ ಒಂದರ ಸೇನಾಧಿಕಾರಿಯ ಪರಿಚಯವಿತ್ತು. ಅವರು ರಹಸ್ಯವಾಗಿ ಭಾರತೀಯ ಸೇನಾಧಿಕಾರಿಗೆ ಸಮಾಚಾರ ತಿಳಿಸಿ ನೆರವನ್ನು ಯಾಚಿಸಿದರು. ಸೇನಾಧಿಕಾರಿಯವರಿಬ್ಬರ ಆಲೋಚನೆಯೂ ಒಂದೇ-ಆಪತ್ತನ್ನು ಬಗೆಹರಿಸಿ ರಾಷ್ಟ್ರಕಲ್ಯಾಣ ಮಾಡುವದಿತ್ತು.

ಒಪ್ಪಿದ ಸೇನಾಧಿಕಾರಿದ್ವಯರು ಒಂದು ಉಪಾಯದಾಟವನ್ನಾಡಿದರು. ಅವರು ವಾಹನವನ್ನು ಸಿದ್ಧಗೊಳಿಸಿದರು, ಅದರ ಮಧ್ಯದಲ್ಲಿ ತೆರೆಬಿಟ್ಟಿದ್ದು, ಮುಂದುಗಡೆ ನೇಪಾಲೀ ಸೇನಾಧಿಕಾರಿ ರಹಸ್ಯವಾಗಿ ಕುಳಿತುಕೊಂಡರು. ಭಾರತೀಯ ಸೇನಾಧಿಕಾರಿ ಹಿಂದುಗಡೆ ಕುಳಿತುಕೊಂಡರು. ಅಲ್ಲೇ ಒಂದು ಹಾಸಿಗೆಯನ್ನೂ ಹಾಸಿಟ್ಟರು. ಅದರಡಿಯಲ್ಲಿ ಅತೀ ರಹಸ್ಯವಾಗಿ ಧ್ವನಿಮುದ್ರಕ ಯಂತ್ರವನ್ನಿಟ್ಟಿದ್ದರು. ವಾಹನ ಮುಂದರಿಯುವಂತೆ ಪಕ್ಕದ ಕಾಡಿನಲ್ಲಿ ಸೇನಾ ವಿಭಾಗವೊಂದು ರಹಸ್ಯವಾಗಿ ಮುಂದರಿಯುತ್ತಲೇ ಇತ್ತು.

ಡೋಲ್-ಮಾ ಆ ಪ್ರದೇಶದಲ್ಲಿದ್ದ ಸುದ್ದಿ ಅವರಿಗೆ ಸಿಕ್ಕಿತ್ತು. ಸುದ್ದಿ ಕಂಡು ಹಿಡಿಯುವುದು ಅಷ್ಟು ಕಷ್ಟದ ವಿಷಯವಾಗಿರಲಿಲ್ಲ. ಡೋಲ್—ಮಾಳ ಕತ್ತೆ ಗುಂಪು ಒಂದು ಸೇತುವೆಯ ಮೇಲಿನಿಂದ ಹೋದರೆ ಸ್ವಲ್ಪ ಸಮಯದಲ್ಲೇ ಮುರಿದು ಬೀಳುತಿತ್ತು. ಭಾರತೀಯ ಶಿಬಿರದ ಬಳಿಯಿಂದ ಆಕೆ ಹಾಯ್ದು ಹೋದಳೆಂದರೆ ಮರುದಿನವೇ ಅಲ್ಲಿ ಅಂತಹದ್ದೇ ಇನ್ನೊಂದು ಶಿಬಿರ, ಆದರೆ ಅಧಿಕ ಸೈನಿಕರಿರುವ ಶಿಬಿರ- ಎದ್ದೇಳುತಿತ್ತು. ಗುಡ್ಡಗಾಡುಗಳಲ್ಲೂ ಖಾನಾವಳಿಗಳು ಸಿದ್ಧವಾಗುತ್ತಿದ್ದವು. ಚಹಾ ಮಾಡುವವರೂ ಚಂಚಲೆಯರೇ, ಬಿಸ್ಕಿಟು ಕೊಡುವವರು ಬಿನ್ನಾಣಗಿತ್ತಿಯರೇ ಮಾತು ಕೊಡುವವರೂ ಮಹಿಳೆಯರೇ, ಹಣತೆಗೆದುಕೊಳ್ಳುವವರೂ ಹೆಂಗಸರೇ ಸರಬರಾಯಿಗಂತೂ ಸ್ತ್ರೀಯರೇ....ಹೀಗೆ ಅಲ್ಲೊಂದು ಕಿಲಿಕಿಲಿ ನಗುತ್ತಿರುವ ಉಲೂಸಿ ನಗರವಾಗಿ ಬಿಡುತ್ತಿತ್ತು, ಇಲ್ಲವೇ ನಾಗಾಲೋಕವಾಗಿ ಬಿಡುತ್ತಿತ್ತು. ಆ ಗುಡ್ಡನಾಡು ಗಡಿ ಪ್ರದೇಶಗಳಲ್ಲಿ ಖಾನಾವಳಿಗಳ ಅವಶ್ಯತೆ ಯಾರಿಗಿದೆ? ಸಂಸಾರ ಸಾಗರದ ಮೇಲೆ ಹಿಮ ಪರ್ವತದಲ್ಲಿರುವವರಿಗೆ ಅದು ಬಹಳ ಉಪಯೋಗವಾಗುತ್ತಿತ್ತು. ತಾವು ಕುಡಿಯುತ್ತಿರುವುದು ಚೈನಿ ಚಹಾವಲ್ಲ, ವಿದ್ರೋಹದ ವಿಷವೆಂಬ ವಿಷಯ ತಿಳಿದಲ್ಲಿ ಅವರು ಅಲ್ಲಿಗೆ ಬರುವದಿಲ್ಲ.

ಇಂತಹ ಗುರುತುಗಳ ಸಹಾಯದಿಂದ ಡೋಲ್-ಮಾಳಿದ್ದ ಸ್ಥಳವನ್ನು ಕಂಡುಹಿಡಿದು ವಾಹನವನ್ನು ಆಕೆಯ ಸಮೀಪಕ್ಕೆ ಸೇನಾಧಿಕಾರಿಗಳು ಒಯ್ದರು.

"ಓಹೋ ಬಹುದೂರ ಹೋಗುತ್ತೀರೆಂದು ಕಾಣುತ್ತದೆ.". ಭಾರತೀಯ ಸೇನಾಧಿಕಾರಿ ವಿಚಾರಿಸಿದರು, ಸಾಮಾನ್ಯ ಕೇಳುವಂತೆ,

"ಆ, ನಾವೇ, ಬಹಳ ದೂರವೇನಿಲ್ಲ. ಹೀಗೆ ಹಿಮಾರಿಗೆ ಹೋಗುತ್ತಿದ್ದೇವೆ."

"ಹಿಮಾರಿಗೆ; ಅಲ್ಲಿಗೆ ಇನ್ನೂ ಇಪ್ಪತ್ತು ಮೈಲುದೂರ ಇದೆ. ತಾವೇನೂ ತಿಳಿದುಕೊಳ್ಳುವದಿಲ್ಲವಾದಲ್ಲಿ ನಮ್ಮ ಬಂಡಿಯಲ್ಲಿ ಬರಬಹುದು. ನಿಮ್ಮನ್ನು ಹಿಮಾರಿಯಲ್ಲಿ ಬಿಟ್ಟು ನಾವು ಹಾಗೆಯೇ ಮುಂದಕ್ಕೆ ಹೋಗುತ್ತೇವೆ."

"ನೀವಂತೂ ಬಹಳ ದೂರ ಹೋಗುವವರೆಂದು ಕಾಣುತ್ತದೆ. ನಿಮಗೆ ಏತಕ್ಕೆ ಸುಮ್ಮಗೆ ಕಷ್ಟಕೊಡುವದು? ನನಗಂತೂ ಇದೆಯಲ್ಲಾ ಇದು, ಅಭ್ಯಾಸವಾಗಿ ಬಿಟ್ಟಿದೆ.' 'ಚಾಟಿಯನ್ನು ಕಟ್ಟುತ್ತಾ' ಅಂದಳು

ನಮಗೇನೂ ತೊಂದರೆಯಾಗುವುದಿಲ್ಲ. ನಿಮಗೆ ಕಷ್ಟವಾಗವೆ, ತೊಂದರೆ ಎನಿಸದಿದ್ದರೆ ಬರಬಹುದು."

"ನಿಮ್ಮ ಮಾತನ್ನು ನಾನೆಂತು ಮೀರಲಿ? ಅಂತಹ ಗಂಡೆದೆ ನನಗಿದೆ ಏನು? ಸುಮ್ಮನೆ ಎದೆಯನ್ನು ಮುಂದೆಮಾಡಿ ನಕ್ಕಳು.

'ಮಾತಿನ ಮಲ್ಲೆ ನೀನು. ಪಕ್ಕದಲ್ಲಿದ್ದರೆ ಪ್ರಯಾಣದ ಪ್ರಯಾಸವೇ ಗೊತ್ತಾಗಲಿಕ್ಕಿಲ್ಲ. ಬನ್ನಿ ಬೇಕಾದಷ್ಟು ಸ್ಥಳವಿದೆ."

ಆಕೆಗೂ ಅದುವೇ ಬೇಕಾಗಿತ್ತು ಜೇಡ "ಬಾನೋಣವೇ, ಬಾನೋಣವೇ ನನ್ನ ಮನೆಗೆಂ"ದು ಕರೆದಂತೆ ಸೇನಾಧಿಕಾರಿ ಕರೆಯುತ್ತಿರುವರೆಂಬುದು ಆಕೆಗೆ ಗೊತ್ತಾಗಲಿಲ್ಲ ತನ್ನ ಅಪಾರಸೌಂದರ್ಯದಿಂದ ಆದೇನನ್ನೂ ಮಾಡಿಸಿಕೊಳ್ಳಬಲ್ಲೆನೆಂಬ ಧೈರ್ಯದಿಂದ ಆಕೆ, ಹುಡುಕಿಕೊಂಡು ಹೋಗುತಿದ್ದಾಗ ಕಾಲಿಗೇನೇ ಸಿಕ್ಕಿತೆಂಬಂತೆ ಕತ್ತೆಯಿಂದ ಕೆಳಗಿಳಿದು ಭಾರತೀಯ ಸೇನಾಧಿಕಾರಿಯವರಿದ್ದ ವಾಹನದಲ್ಲಿ ಕುಳಿತು ಕೊಂಡಳು. ಅಧಿಕಾರಿ ಆಗಲೇ ಹಾಸಿಗೆಯನ್ನು ಬಿಡಿಸಿದರು. ವಾಹನ ಮೆಲ್ಲನೇ ಮುಂದುವರಿಯಿತು. ಆವಳ ಪಡೆ ಹಿಂದಿನಿಂದ ಬರುತ್ತಿತ್ತು.

ಸೇನಾಧಿಕಾರಿಯವರ ಮನಸೂರೆಮಾಡುವಂತಹ ನಗೆ ನಕ್ಕು ಆಕೆ ಉಪಕಾರವಾಯಿತೆಂದಳು.

'ಇದರಲ್ಲೇನು ಉಪಕಾರ ಮಹಾ. ದಾರಿಯಲ್ಲಿ ಹೋಗುತ್ತಿದ್ದಾಗ ಕರೆದು ಕೊಂಡು ಹೋಗುತ್ತಿದ್ದೇವೆ ಅಷ್ಟೆ.'

'ನಾನೇನೋ ಪುಣ್ಯಮಾಡಿರಬೇಕು, ನಿಮ್ಮಬಳಿ ಹೀಗೆ ಸ್ಥಾನ ಪಡೆದು ಕೊಳ್ಳಲು."

'ಪುಣ್ಯದ ಗಂಟು!" ಕರಗುತ್ತಿದ್ದ ಹಿಮದರಾಶಿಯತ್ತ ಬೆರಳು ತೋರಿಸಿ ಅವರು ನಕ್ಕರು

"ಹೂಂ, ಸೈನಿಕನ ಹೃದಯವಲ್ಲವೇ ನಿಮ್ಮದು ಪಾಪ—ಪುಣ್ಯದಲ್ಲಿ ನಿಮಗೆ ನಂಬಿಕೆ ಇಲ್ಲವೆಂದು ಕಾಣುತ್ತದೆ." ಅರ್ಥವತ್ತಾಗಿ ಅರ್ಧ ನಕ್ಕು ಮತ್ತಷ್ಟು ಬಳಿಗೆ ಹೋದಳು.

"ಸೈನಿಕನ ಹೃದಯದಲ್ಲಿ ಹಾದಿಯಲ್ಲಿ ಹೋಗುತ್ತಿರುವವರಿಗೆ ಸ್ಥಾನವಿದೆ."

"ಅಂದರೆ, ನೀವು ಬಹಳ ದೂರ ಹೋಗುವವರೆಂದು ಕಾಣುತ್ತದೆ. ಮರೆತು-ಗಿರೆತು ಮಾತಿನ ಗುಂಗಿನಲ್ಲಿ ನನ್ನನ್ನೂ ಕರೆದುಕೊಂಡು ಹೋಗಿ ಬಿಟ್ಟೀರಿ ಮತ್ತೆ. ಅಯ್ಯಯ್ಯೋ. ಬೇಡ. ನನ್ನನ್ನು ಹಿಮಾರಿಯಲ್ಲಿ ಬಿಟ್ಟುಬಿಡಿ."

"ಯಾಕೆ ನನ್ನೊಡನೆ ಬರಲಿಷ್ಟ ಇಲ್ಲವೇ ನಿನಗೆ? ಸರಿ. ಹಾಗಾದರೆ ಇಲ್ಲೇ ಬೇಕಾದರೂ ಇಳಿ."

"ಸ್ಸ್! ಕೋಪ ಬಂತೇನು? ಹಾಗೇನಿಲ್ಲ ನೀವು ಸೈನೆಗೆ ಸಂಬಂಧಪಟ್ಟ ರಹಸ್ಯ ವಿಷಯಗಳಿಗಾಗಿ ಹೋಗುತ್ತಿರುವಿರಿ. ನನ್ನನ್ನು ಕರೆದುಕೊಂಡು ಹೋಗುವದು ಸರಿ ಏನು? ಅಷ್ಟು ದೂರ ಏತಕ್ಕೆ?"

ಸದ್ದೇನೆಂದು ನೇಪಾಲದ ಸೇನಾಧಿಕಾರಿ ಜಾಗ್ರತೆಯಿಂದ ಗಮನಿಸಿದಾಗ, ಡೋಲ್-ಮಾಳು ಭಾರತೀಯ ಸೇನಾಧಿಕಾರಿಯನ್ನು ಬಾಹು ಬಂಧನದಲ್ಲಿ ಬಿಗಿದಿರುವದು ಅವರಿಗೆ ತಿಳಿದು ಬಂತು. ಮೆಲ್ಲಗೆ ಆಕೆ ತುಟಿಗಳಿಗೆ ಮುದ್ರೆ ಇತ್ತಳು. ಹಾಸಿಟ್ಟಿದ್ದ ಹಾಸಿಗೆ ಅವರಿಗೆ ಸೌಕರ್ಯವಾಯಿತು. ಮುತ್ತಿಟ್ಟಿದ್ದಂತೆಯೇ ತುಟಿಗಳನ್ನು ಬಿಡದೆ, ಮೆಲ್ಲನೆ ಆಕೆ ಪಡೆಯ ವಿಷಯ, ಶಸ್ತ್ರಾಸ್ತ್ರಗಳ ವಿಷಯ ವಿಚಾರಿಸಿದಳು. ಹೀಗೆ ಅನೇಕ ಪ್ರಶ್ನೆಗಳಿಗೆ ಉತ್ತರ ಬಂದ ಮೇಲೆ ಸೌಮ್ಯವಾಗಿ ಸೇನಾಧಿಕಾರಿಯ ಬೆನ್ನನ್ನು ತಟ್ಟಿದಳು. ಆಗ ಸೇನಾಧಿಕಾರಿ ಥಟ್ಟನೆ ಆಕೆಯ ಬಾಹು ಬಂಧನದಿಂದ ತಪ್ಪಿಸಿಕೊಂಡು, "ಚೆನ್ನಾಗಿದೆ. ಬೇಕಾದಷ್ಟು ವಸ್ತು ಸಂಗ್ರಹವಾಯಿತೆಂದು ಕಾಣುತ್ತದೆ."

ಪ್ರಶ್ನೆ ವಿಚಿತ್ರವಾಗಿ ಕಂಡು ಬಂತು

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭವಾದ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪ್ಯಾಪುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

REGD. No. B. G. 176
LICENCE No. 31
Licensed to Post without Prepayment

ಡೋಲ್-ಮಾಳಿಗೆ "ನೀವದೇನನ್ನು ಕೇಳುವದು?" ಡೋಲ್-ಮಾ ಸರಿಪಡಿಸುತ್ತ ಕೇಳಿದಳು.

"ಏನಿಲ್ಲ ತೆರೆಯ ಹಿಂದುಗಡೆ ಇರುವ ನನ್ನ ನೇಹಿಗನೊಡನೆ, ನಮ್ಮ ಹಾಸಿಗೆಯಡಿಯಲ್ಲಿರುವ ಧ್ವನಿ ಮುದ್ರಕವನ್ನು ನಿಲ್ಲಿಸಿ ಬಿಡಬಹುದೇ ಎಂದು ಕೇಳುತ್ತಿದ್ದೇನೆ'

"ಯಾಕೆ? ಏನು? ಹಾಸಿಗೆಯಡಿಯಲ್ಲಿ ಧ್ವನಿ ಮುದ್ರಕ ಏತಕ್ಕೆ? ನಾನು ನಿಮಗೆ ಏನು ಮಾಡಿದೆ? ಸುಮ್ಮಗೆ ..ಕರೆದುಕೊಂಡು ಬಂದು ಈಗ.. ನನ್ನ ಗೋಳು ಹೊಯ್ಸಿಕೊಳ್ಳಬೇಡಿ. ಇಲ್ಲಿ ನಾನೂ ನೀವು.."

"ನಾನೂ ನೀವು ಇದೇ ಕೊನೆಯದು ಬುದ್ಧಿ ಸಂಗ್ರಹಣೆಗಾಗಿ ಭಾರತೀಯ ಸೇನಾಧಿಕಾರಿಗಳ ಹಾಸಿಗೆಯಲ್ಲಿ ಪಾಲುಗೊಳ್ಳುವದು ಇದೇ ಕೊನೆಯ ಬಾರಿ"

ಹವಿತು ಬರುತ್ತಿದ್ದ ಸೈನಿಕರು ಡೋಲ್ ಮಾಳ ಪಡೆಯನ್ನು ಮುತ್ತಿ ಶೋಧಿಸಿದರು ಅವರಿಗೆ ಮುಖ್ಯವಾಗಿ ಧ್ವನಿ ಪ್ರಸಾರಗಳು ಸಿಕ್ಕಿದುವೆಂದು ಸಕಲೇಶ ಕಥೆ ಮುಗಿಸುತ್ತಾರೆ.

ಈ ಕಥೆ ಇಲ್ಲೇ ಮುಗಿದರೂ ನಂತರ ನೇಫಾ ನಡುಗಿದಾಗ, ಲಢಾಖ್ ತತ್ತರಿಸಿದಾಗ ಶಿಬಿರದಲ್ಲಿ ಅಧಿಕಾರಿಗಳು ಇರದೆ ಅಂತಹ ಡೋಲ್-ಮಾಗಳನ್ನು ಕಳುಹಿಸಿ ಅದರ ಹಿಂದುಗಡೆ ಕಮ್ಯೂನಿಸ್ಟ್ ಸೈನಿಕರು ಮುಂದೆ ಬಂದುದರಿಂದ ಅವರಿಗೆ ಆಕ್ರಮಣ ಸುಲಭ ಸಾಧ್ಯವಾಯಿತು ಸೈನಿಕ ರಹಸ್ಯಗಳೆಂದು ಹೆಚ್ಚಿನ ವಿಷಯಗಳು ಹಿಮಾಲಯದಿಂದ ಕೆಳಗೆ ಬಂದಿಲ್ಲವಾದರೂ, ಅಂತಹ ಅನೇಕ ಘಟನೆಗಳು ನಡೆದಿವೆ ಎನ್ನುವದಕ್ಕೆ ಮೇಲಿನ ಕಥೆಯೇ ಉತ್ತಮ ಸಾಕ್ಷಿ.

ಡೋಲ್-ಮಾಳಾದರೋ ನೇರಚೈನಾದಿಂದ ಬಂದಾಕೆಯಲ್ಲ ಆಕೆ ಅಲ್ಲೇ ಗುಡ್ಡಗಾಡಿನವಳು -ತ್ರಿವಿಷ್ಟಪದವಳು ಅವಳನ್ನು ಬಲೆಗೆ ಹಾಕಿಕೊಂಡು ಕಮ್ಯೂನಿಷ್ಟರು ಕಾರಸ್ಥಾನ ನಡೆಸಿದರು ಅಂತೆಯೇ, ಅದೇ ಆಶೆಯಿಂದ ಚೌ-ಎನ್-ಲೈ ಲಂಕೆಗೆ ಹಾರಿದರು. ಹಿಂದಿನ ಲೇಖನದಲ್ಲಿ ತಿಳಿಸಿದ್ದಂತೆ ಚೀನಿನ ಸುರಸುಂದರಿಯರನ್ನು ಬೆಲೆವೆಣ್ಣುಗಳನ್ನಾಗಿ, ಹೋರಾಟದ ಹುಡುಗಿಯರನ್ನಾಗಿ, ಆಮಂತ್ರಣವೀಯುವ ಅಂಗನೆಯರನ್ನಾಗಿ ಜಗತ್ತಿನ ನಾನಾ ದೇಶಗಳಿಗೆ ಕೊಂಡೊಯ್ಯುವದನ್ನು ಕೇಳಿದ್ದ ಚೌ-ಎನ್-ಲೈ ತನ್ನ ಕಮ್ಯೂನಿಸಂ ಕೊಳಕು ಸರಕನ್ನು ಮಾರಲು ಡೋಲ್-ಮಾ ಸದೃಶ ಸುರಸುಂದರಿಯರಿಗಾಗಿ ಮುಂದೆ ಬಂದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಚೌ-ಎನ್-ಲೈ ಒಂದು ದೇಶದ ಪ್ರಧಾನಿ ಇರುವದರಿಂದ ನೇರ ಆ ಕೆಲಸಕ್ಕೆ ಇಳಿಯಲಿಕ್ಕಿಲ್ಲ ಆದರೆ ಬದಲು ಕಿವಿಯಾರೆ ಕೇಳಿದ್ದನ್ನು ಕಣ್ಣಾರೆ ಕಂಡು ಅದಕ್ಕೆ ಬೇಕಾದ ಏರ್ಪಾಡು ಮಾಡಿ ಹೋಗುವದೇ ಅವರ ಉದ್ದೇಶವಾಗಿತ್ತು. ಇಂತಹ ಶೂರ್ಪನಖಿಗಳನ್ನು ಹಿಡಿದು ಕೊಂಡಲ್ಲಿ ಮುಂದಕ್ಕೆ ಸಿಂಹಳಕ್ಕೇನೇ ಸುರಂಗವಿಡಲು ಅವರಿಗೆ ಕಷ್ಟವಾಗಲಿಕ್ಕಿಲ್ಲ. ಸುರಂಗವಿಡಲು ಸಹಾಯವಾಗುವಂತೆ ಅವರು ಮತ್ತೇನನ್ನು ನೋಡಿದರು?

ಅನ್ಯರ ಆದರ್ಶ

ಪುಸ್ತಕದ ಹಿಂದಿನ ಲೇಖಕ ಪ್ರಪಂಚ

೧೯೫೨-೫೩ರ ಚಳಿಗಾಲದಲ್ಲಿ "ನೂರು ಲೇಖಕರಲ್ಲಿ ಡಚ್ ಸಾಹಿತ್ಯ" ಎಂಬ ಸಾಹಿತ್ಯ ಪ್ರದರ್ಶನವೊಂದು ಹೇಗ್‌ನ ಮುನಿಸಿಪಲ್ ಮ್ಯೂಸಿಯಂ ಆಶ್ರಯದಲ್ಲಿ ನಡೆಯಿತು. ಗ್ರಂಥದ ಮರೆಯಲ್ಲಿನ ಪ್ರಪಂಚದ ಸಂಕ್ಷಿಪ್ತ ಪರಿಚಯ ಮಾಡಿಕೊಡುವಂತಹ ಚಿತ್ರ ಪ್ರಬಂಧವಿದ್ದಂತೆ ಇದ್ದಿತು ಲೇಖಕರು ಬರೆಯುವ ವಾತಾವರಣ, ಬರೆಯುವ ರೀತಿ, ಹಸ್ತಪ್ರತಿ ಸಾಹಿತ್ಯ ಕೃತಿಯ ಮೂಲ ಕೃತಿ, ಪತ್ರಗಳು ಮುಂತಾದ ಎಲ್ಲ ಬಗೆಯ ದಾಖಲೆಗಳೂ ಅಲ್ಲಿ ಪ್ರದರ್ಶಿತವಾಗಿದ್ದುವು.

ಈ ಪ್ರದರ್ಶನವನ್ನು ಉದ್ಘಾಟಿಸಿದಂದು ಡಚ್ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಂಗ್ರಹಿಸಿ ಅಪೂರ್ವ ಕೃತಿಗಳು ಅಪರೂಪ ಕೃತಿಗಳು ನಾಶವಾಗದಂತೆ ಜೋಪಾಸನೆ ಮಾಡುವ ಆಸೆಯನ್ನು ವ್ಯಕ್ತಪಡಿಸಲಾಯಿತು. ಇದರಿಂದ ಸಂಶೋಧನೆ ಮತ್ತು ಪ್ರದರ್ಶನ ಇವೆರಡಕ್ಕೂ ಅನುಕೂಲವಾಗುವುದೆಂಬ ಭಾವನೆಯನ್ನು ವ್ಯಕ್ತಪಡಿಸಲಾಯಿತು.

ಲೇಖಕರು ಹುಟ್ಟಿ ಬೆಳೆದು ಮೃತಹೊಂದಿದ ಕಡೆಗಳಿಗೆಲ್ಲ ಹೋಗಿ ಅವರ ಜೀವನ ಹಾಗೂ ಬರಹಗಳ ಅಧ್ಯಯನ ನಡೆಸುವುದು ಕಷ್ಟ ಸಾಧ್ಯ. ಆದ್ದರಿಂದ ಹಾಗೆ ಚದುರಿ ಚಲ್ಲಾಪಿಲ್ಲಿಯಾಗಿರುವ ಹಸ್ತಕೃತಿಗಳು ಮುಂತಾದ ಸಾಹಿತ್ಯಕ ವಸ್ತು ವಿಷಯಗಳನ್ನು ಸಂಗ್ರಹಿಸಿ ಕೇಂದ್ರ ಸಂಗ್ರಹಾಲಯವೊಂದರಲ್ಲಿ ರಕ್ಷಿಸುವ ಕಾರ್ಯ ಎಲ್ಲ ರಾಷ್ಟ್ರಗಳಲ್ಲೂ ನಡೆಯುತ್ತಿದೆ. ಇಂತಹದೊಂದು ಸಂಗ್ರಹಾಲಯ ಸ್ಥಾಪಿಸುವುದು ಸಣ್ಣಪುಟ್ಟ ರಾಷ್ಟ್ರಗಳಲ್ಲಿ ಸುಲಭ. ಯುದ್ಧಪೂರ್ವ ಬೆಲ್ಜಿಯಂನಲ್ಲಿ ಸಾಂಸ್ಕೃತಿಕ ವಸ್ತು ಸಂಗ್ರಹಾಲಯವೊಂದನ್ನು ಸ್ಥಾಪಿಸಲಾಯಿತು. ೧೯೫೪ರಲ್ಲಿ ನೆದರ್‌ಲ್ಯಾಂಡಿನಲ್ಲಿ ಸಾಹಿತ್ಯಕ ವಸ್ತು ಸಂಗ್ರಹಾಲಯ ಮತ್ತು ದಾಖಲೆಗಳ ಕೇಂದ್ರವನ್ನು ತೆರೆಯಲಾಯಿತು. ಈಗ ಇವೆರಡೂ ಪರಸ್ಪರ ಸಹಕಾರದೊಂದಿಗೆ ತಮ್ಮ ಕೆಲಸವನ್ನು ತೂಗಿಸುತ್ತಿವೆ.

ನೆದರ್‌ಲ್ಯಾಂಡಿನ ವಸ್ತು ಸಂಗ್ರಹಾಲಯದ ವೆಚ್ಚಗಳನ್ನು ಸರಕಾರ ಮತ್ತು ಆಗಿನ ಪುರಸಭೆ ಪೂರೈಸುತ್ತಿವೆ. ಈ ಸಂಗ್ರಹಾಲಯ ಆಗಾಗ ಪ್ರದರ್ಶನಗಳನ್ನು ಏರ್ಪಡಿಸುವುದಲ್ಲದೆ ಸಾಹಿತ್ಯಕ ದಾಖಲೆಗಳ ಸಂಗ್ರಹಪಟ್ಟಿ ತಯಾರಿಕೆ ಮತ್ತು ಕೃತಿಗಳ ಜೋಪಾಸನೆ ಕಾರ್ಯದಲ್ಲಿ ತೊಡಗಿರುತ್ತದೆ ಅದರ ಆರಂಭದಂದೀಚೆಗೆ ಸುಮಾರು ಸಹಸ್ರ ಹೊಸ ಸಂಗ್ರಹಗಳನ್ನು ಜೋಡಿಸಿದೆ. ಈಗ ಇಲ್ಲಿ ೧೭೫೦ರಿಂದೀಚಿನ ಸುಮಾರು ೨ ಸಹಸ್ರ ಡಚ್ ಲೇಖಕರು ಮತ್ತು ಕೃತಿಗಳ ಬಗ್ಗೆ ಪೂರ್ಣ ಮಾಹಿತಿ ದೊರೆಯುತ್ತಿ

ಸರಕಾರದ ಸಂಗ್ರಹಾಲಯವಲ್ಲದೆ ಇನ್ನಿತರ ಖಾಸಗೀ ಸಂಸ್ಥೆಗಳಿಗೆ ಸೇರಿದ ಸಂಗ್ರಹ ಕೇಂದ್ರಗಳೂ ನೆದರ್‌ಲ್ಯಾಂಡಿನಲ್ಲಿವೆ ರಾಷ್ಟ್ರೀಯ ಸಾಹಿತ್ಯಕ ವಸ್ತು ಸಂಗ್ರಹಾಲಯ ಸಣ್ಣ ಪುಟ್ಟ ಸಂಸ್ಥೆಗಳಿಗೆ ಮಾರಕವಾಗದೆ ಅವುಗಳನ್ನು ಅನೇಕ ವಿಧಗಳಲ್ಲಿ ಪ್ರೋತ್ಸಾಹಿಸುತ್ತಿದೆ.

ಈಗ ಸಾಹಿತ್ಯಕ ಸಂಗ್ರಹಾಲಯ ಲೇಖಕರ ಬಗ್ಗೆ ಹಾಗೂ ಅವರ ಕೃತಿಗಳ ಬಗ್ಗೆ ಪತ್ರಗಳು ಚಿತ್ರಗಳು, ಪತ್ರಿಕೆಯ ವರದಿಗಳು, ಧ್ವನಿ ಮುದ್ರಿಕೆಗಳು ಮುಂತಾದವನ್ನು ಸಂಗ್ರಹಿಸಿ ಪಟ್ಟಿ ಮಾಡಿದೆ ಇಲ್ಲಿ ಅಭ್ಯಸಿಸುವವರಿಗೆ ಈ ಪಟ್ಟಿಗಳು ನೆರವಾಗುವಲ್ಲದೆ, ವಿಶೇಷ ಮಾಹಿತಿ ದೊರಕಬಹುದಾದ ವಿವಿಧ ಬೇರೆಯ ಮೂಲಗಳನ್ನೂ ಪರಿಚಯ ಮಾಡಿಕೊಡುತ್ತದೆ.

ನಮ್ಮ-ನಮ್ಮವರು

(೧ನೇ ಪುಟದಿಂದ)

ಕರಾವಳಿಯಲ್ಲಿ ಮಾಡುವಲ್ಲಿ ಅವರು ಯಶಸ್ವಿಗಳಾಗಿದ್ದಾರೆ ಅವರ ಕರ್ನಾಟಕ ಫಿಶರೀಸ್ ಕಾರ್ಪೋರೇಶನ್ ಇಂದು ಅನೇಕ ಕಡೆ ಕಾರ್ಯವೆಸಗುತ್ತಿದೆ. ಮೀನುಗಾರಿಕೆಯಲ್ಲಿ ಹೊಸ ಹೊಸ ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಂಡಿದೆ.

ಮೀನುಗಾರಿಕೆಗೆ ಸುಪ್ರಸಿದ್ಧವೆನಿಸಿದ ದೇಶಗಳಾದ ನಾರ್ವೆ, ಜಪಾನ್ ಹಾಗೂ ಇನ್ನಿತರ ರಾಷ್ಟ್ರಗಳಲ್ಲಿ ಮೀನುಗಾರಿಕೆಯ ವಿಧಾನಗಳು ಆಧುನಿಕವಾಗಿವೆ ಈ ವಿಧಾನಗಳು ಹಾಗೂ ತಾಂತ್ರಿಕತೆಗಳ ಜ್ಞಾನವನ್ನು ನಮ್ಮ ಬೆಸ್ತರು ಪಡೆದರೆ, ಆಗ ಮೀನೆಂಬುದು ಮುತ್ತಾಗಿ ಪರಿಣಮಿಸುತ್ತದೆ. ಶ್ರೀಯುತ ಮಧ್ವರಾಜರು ಈಗ ಜಪಾನಿನ ಸಂದರ್ಶನಕ್ಕಾಗಿ ತೆರಳಿದ್ದಾರೆ ಮೀನುಗಾರಿಕೆಗೆ ಸುಪ್ರಸಿದ್ಧವೆನಿಸಿದ ಜಪಾನಿನ ಸಂದರ್ಶನದಿಂದ ಮಧ್ವರಾಜರು ಪಡೆದ ಅನುಭವ ಹಾಗೂ ಜ್ಞಾನ ನಮ್ಮ ರಾಜ್ಯದ ಮೀನುಗಾರಿಕೆಯ ಅಭಿವೃದ್ಧಿಗೆ ನೆರವಾಗುವುದೆಂಬುದರಲ್ಲಿ ಸಂದೇಹವಿಲ್ಲ. ನೋಡಿದ್ದನ್ನು ಗ್ರಹಿಸಬಲ್ಲ, ಯೋಗ್ಯವಾದದನ್ನು ಕಾರ್ಯರೂಪಕ್ಕೆ ಇಳಿಸಬಲ್ಲ ಸಮರ್ಥರು ಮಧ್ವರಾಜರು. ಇವರ ವಿದೇಶ ಸಂದರ್ಶನೆ ಯಶಸ್ವಿಯಾಗಲಿ ಎಂದು ಹಾರೈಸುವುದು ಸಮಯೋಚಿತವಾಗಿದೆ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction Madras.

ಮತ್ತೆರಡು ಶಾಖೆಗಳು - - - - -

ದಿ ಒರಿಯಂಟಲ್ ಯೂನಿಯನ್ ಬ್ಯಾಂಕ್ ಲಿಮಿಟೆಡ್, ಕಡುತುರುತಿ, (ಕೇರಳ), ಅವರ ಬ್ಯಾಂಕಿಂಗ್ ವ್ಯವಹಾರವನ್ನು ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ ಮಣಿಪಾಲ, ಅವರು ಇದೇ ಜೂನ್ 15, 1964ರಿಂದ ವಹಿಸಿಕೊಂಡಿರುವರು. ಸಿಂಡಿಕೇಟ್ ಬ್ಯಾಂಕಿನ ಈ ಕೆಳಗಿನ ಎರಡು ಶಾಖೆಗಳು, ಕೇರಳ ರಾಜ್ಯದಲ್ಲಿ ತೆರೆಯಲ್ಪಟ್ಟಿವೆ. ಸಿಂಡಿಕೇಟ್ ಬ್ಯಾಂಕಿನೊಡನೆ ಸೇರ್ಪಡೆಗೊಂಡ ಬ್ಯಾಂಕುಗಳಲ್ಲಿ ಇದು ಹದಿನಾರನೆಯದು.

1) ಕಡುತುರುತಿ. 2) ಕುರುವಿಲಂಗಾಡು.

ಕೇರಳ ರಾಜ್ಯದಲ್ಲಿ ನಮ್ಮ ಶಾಖೆಗಳು 28

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ

ಶಾಖೆಗಳು: 192 ಚಲಾವಣಾನಿಧಿ 57 ಕೋಟಿಗೂ ಮಿಕ್ಕಿ

. . . ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ

Edited Printed & Published by K. H. Shetty, at the Navayuga Press, Udipi, S. India

VOL. 43 No. 44

ಸಂಪುಟ ೪೩ ಸಂಚಿಕೆ ೪೪

NAVAYUGA—Nationalist Weekly ಉಡುಪಿ 2-7-1964 ಗುರುವಾರ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಟಿ ಟಿ. ಕೃಷ್ಣಮಾಚಾರಿ

ಭಾರತದ ಅರ್ಥ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಕೇಂದ್ರ ಸಂಪುಟ ಸೇರಿದಂದಿನಿಂದ ಭಾರಿ ಸುದ್ದಿಯ ವ್ಯಕ್ತಿಗಳಾಗಿದ್ದಾರೆ. ಮುರಾರ್ಜಿಯವರು ಕಾಮರಾಜ ಯೋಜನೆಯನ್ವಯ ಕೇಂದ್ರ ಮಂತ್ರಿ ಮಂಡಲದಿಂದ ಹೊರಗೆ ಬಂದಾಗ ಅರ್ಥ ಮಂತ್ರಿ ಖಾತೆ ತಾನಾಗಿಯೇ ಇವರ ಕೊರಳಿಗೆ ಬಿತ್ತು. ಕೇಂದ್ರ ಸಂಪುಟದಲ್ಲಿ ಕೃಷ್ಣಮಾಚಾರಿಯವರ ಸೇರ್ಪಡೆಯೊಂದಿಗೆ ಜನರು ನಿರೀಕ್ಷಿಸಿಕೊಂಡಿದ್ದ ವ್ಯವಹಾರಿಕ ಬದಲಾವಣೆಗಳನ್ನು ತಮ್ಮ ಮೊದಲ ವರ್ಷದ ಮುಂಗಡ ಪತ್ರದಲ್ಲಿ ಕೃಷ್ಣಮಾಚಾರಿಯವರು ಅಳವಡಿಸಿಕೊಂಡರು. ಮುರಾರ್ಜಿ ದೇಸಾಯಿಯವರು ಅರ್ಥ ಮಂತ್ರಿಗಳಾಗಿದ್ದಾಗ, ಅವರ ಧೋರಣೆಗಳಿಗೆ ಎಲ್ಲಾ ಪಕ್ಷದವರೂ ವಿರೋಧವನ್ನು ವ್ಯಕ್ತಪಡಿಸಿದ್ದುಂಟು ಅವರ ಚಿನ್ನ ನಿಯಂತ್ರಣ ಮಸೂದೆ ಹಾಗೂ ಕಡ್ಡಾಯ ಉಳಿತಾಯ ಯೋಜನೆಗಳು ದೇಶದ ಎಲ್ಲಾ ವರ್ಗಗಳ ಜನತೆಯೂ ಕೆರಳುವಂತೆ ಮಾಡಿದುವು. ಹಿಡಿದ ಪಟ್ಟು ಬಿಡದ ಮುರಾರ್ಜಿಯವರು ಈ ವಿರೋಧಗಳಿಗೆ ಜಗ್ಗಲಿಲ್ಲ ಆದರೆ ಕೃಷ್ಣಮಾಚಾರಿಯವರು ಅರ್ಥ ಮಂತ್ರಿ ಹುದ್ದೆ ವಹಿಸಿಕೊಂಡಾಗ, ಜನತೆಯ ಮನದ ಇಂಗಿತವನ್ನರಿತು, ಸರಕಾರದ ಧೋರಣೆಯಲ್ಲಿ ಕೆಲವು ಮಹತ್ತರವಾದ ಬದಲಾವಣೆಯನ್ನು ಮಾಡಿದರು. ಮುರಾರ್ಜಿಯವರು ಜಾರಿಗೆ ತಂದುದನ್ನು ತೆಗೆದು ಹಾಕುವುದಕ್ಕೂ ಅವರು ಹಿಂಜರಿಯಲಿಲ್ಲ. ಈ ಬಾರಿಯ ಮುಂಗಡ ಪತ್ರದಲ್ಲಿ ಅಲ್ಪ ಆದಾಯದ ಗುಂಪಿನವರ ಕಡ್ಡಾಯ ರೇವಣಿ ಯೋಜನೆಯಿಂದ ಮುಕ್ತರನ್ನಾಗಿ ಮಾಡಿ, ಕೃಷ್ಣಮಾಚಾರಿಯವರು ಜನಮೆಚ್ಚುಗೆ ಗಳಿಸಿದರು ಬೆಲೆಗಳ ಏರಿಕೆಯ ಕುರಿತು ಅವರ ಗಮನ ಸಾಗ ಹರಿದಿದೆ. ಇದಕ್ಕೆ ತಕ್ಕ ಕಾರಣವೇನೆಂದು ತಿಳಿದು ಸೂಕ್ತ ಪರಿಹಾರ ಹಾಕುವುದರಲ್ಲಿ ಅವರೀಗ ತೀವ್ರವಾಗಿ ಮಗ್ನರಾಗಿದ್ದಾರೆ.

ಕಡ್ಡಾಯ ರೇವಣಿ ಯೋಜನೆಯು ಹೊಸ ಆರ್ಥಿಕ ವರ್ಷದಿಂದ ರದ್ದುಗೊಳಿಸಲ್ಪಟ್ಟಾಗ, ಆ ವರೆಗೆ ರೇವಣಿಯಲ್ಲಿಟ್ಟ ಹಣವನ್ನು ಐದು ವರ್ಷಗಳ ನಂತರವೇ ಮರಳಿ ಕೊಡಲಾಗುವುದೆಂದು ಸರಕಾರ ಸಾರಿತು ಇದರಿಂದ ಹಲವರಿಗೆ, ಮುಖ್ಯವಾಗಿ ಅಲ್ಪ ಆದಾಯದ ಗುಂಪಿನವರಿಗೆ ತುಸು ನಿರಾಸೆಯೂ ಆಯಿತ. ಈಗ ಟಿ ಟಿ ಕೆ ಯವರ ಅರ್ಥ ಮಂತ್ರಿ ಖಾತೆ ಈ ವಿಚಾರವನ್ನು ಪುನರ್ವಿಮರ್ಶಿಸಿ, ರೂ. ೫೦೦೦ ವರೆಗಿನ ವಾರ್ಷಿಕ ಆದಾಯವಿರುವವರ ವಾರ್ಷಿಕ ರೇವಣಿ ರೂ. ೧೫೦ ಮೀರದಿದ್ದರೆ ಅಂತಹಾ ಮೊತ್ತವನ್ನು, ಅಪೇಕ್ಷಿಸಿದಲ್ಲಿ ಕೂಡಲೇ ಹಿಂದೆ ಕೊಡಲಾಗುವುದೆಂದು ಸಾರಿದೆ. ಮಾತ್ರವಲ್ಲ, ೭೦ ವಯಸ್ಸನ್ನು ಮೀರಿದವರ ರೇವಣಿ ಯಾವುದೇ ಮೊತ್ತವಿದ್ದರೂ ಅದನ್ನು ಕೂಡಾ ಮರುಪಾವತಿ ಮಾಡಲಾಗುವುದ ಎಂದು ಸಾರಿದ್ದಾರೆ. ಇದರಿಂದ ಅಲ್ಪಾದಾಯ ಗುಂಪಿನ ಜನತೆ ಸಮಾಧಾನದ ಉಸಿರು ಬಿಟ್ಟಿದೆ. ಟಿ ಟಿ ಕೆ ಯವರು ಜನರ ಹೃದಯ ಮರಿತು ಕೆಲಸ ಮಾಡುವುದರಲ್ಲಿ ನಿಪುಣರು ಅವರಿಂದ ಮಧ್ಯಮ ವರ್ಗದ ಜನತೆ ಇನ್ನೂ ಹೆಚ್ಚಿನ ಪರಿಹಾರ ಅಪೇಕ್ಷಿಸಿದರೆ ಅದರಲ್ಲಿ ತಪ್ಪೇನಿಲ್ಲ.



ಕೆಂಗಲ್ ಹನುಮಂತಯ್ಯ

ಕೆಂಗಲ್ ಹನುಮಂತಯ್ಯನವರು ಮೈಸೂರಿನ ಮಾತ್ರವಲ್ಲ ಭಾರತದ ರಾಜಕೀಯದಲ್ಲೇ ಒಬ್ಬ ಸಮುತ್ಕ್ಯಾತ್ರಿಕ ವ್ಯಕ್ತಿಗಳಾಗಿದ್ದಾರೆ ಕಾಂಗ್ರೆಸ್ ಸಂಸ್ಥೆಯಲ್ಲಂತೂ ಅವರ ವಿಚಾರ ಧೋರಣೆಗಳ ಕುರಿತು ತೀವ್ರ ವಿವಾದ ಹಾಗೂ ವಿರೋಧಗಳು ಕಂಡುಬರುತ್ತವೆ ಅವರ ಕಟ್ಟುನಿಟ್ಟಾದ ಧೋರಣೆ, ನಿರ್ದಾಕ್ಷಿಣ್ಯವಾದ ಮಾತು, ಹಾಗೂ ಸ್ವತಂತ್ರವಾದ ವಿಚಾರಧಾರೆ ಅವರು ಆಳುವವರು ಹೊರತು ಆಳಿಸಿಕೊಳ್ಳುವವರಲ್ಲ ಎಂದು ತೋರಿಸುತ್ತದೆ. ಅಂತಲೇ ಅವರು ಲೋಕಸಭೆಗೆ ಆರಿಸಿ ಹೋದಾಗಲೂ ಅವರಿಗೆ ಕೇಂದ್ರ ಸಂಪುಟದಲ್ಲಿ ಸ್ಥಾನ ದೊರಕಲಿಲ್ಲ ಹೊಂದಿಕೊಂಡು ಹೋಗುವ ಮನೋಭಾವ ಅವರಲ್ಲಿ ಇಲ್ಲವಾದುದೇ ಇದಕ್ಕೆ ಕಾರಣವೋ ಏನೋ ತಿಳಿಯದು ನೆಹರೂರವರ ನಿಧನದ ಬಳಿಕ ಅವರು ಕಾಂಗ್ರೆಸ್ ಸಂಸ್ಥೆಯ ಶುದ್ಧೀಕರಣದ ಕುರಿತು ಮಾತಾಡಲಾರಂಭಿಸಿದ್ದಾರೆ.

ಕಾಂಗ್ರೆಸ್ ಸಂಸ್ಥೆಗೆ ತಗಲಿದ ವ್ಯಾಧಿ "ಸ್ಥಳೀಯ ವ್ಯಾಧಿ" ಈ "ಸ್ಥಳೀಯ ವ್ಯಾಧಿ" ಪ್ರಧಾನವಾಗಿ "ಅಧಿಕಾರ ಲಾಲಸೆ" ಈ ಅಧಿಕಾರಕ್ಕಾಗಿ ಒಂದು ಗೊಣಗುವ ಗುಂಪು ಹೋದರೆ ಇನ್ನೊಂದು ಗೊಣಗುವ ಗುಂಪು ಸಿದ್ಧವಾಗುತ್ತದೆ. ಇದು ಮೈಸೂರು ರಾಜ್ಯದ ಅನುಭವ. ಎಲ್ಲಾ ರಾಜ್ಯಗಳೂ ಇದಕ್ಕೆ ಹೊರತಾಗಿಲ್ಲ! ಎಂದು ಹೇಳಿದ್ದಾರೆ. ಮೈಸೂರು ರಾಜ್ಯದ ಕಾಂಗ್ರೆಸ್ ಸಂಸ್ಥೆಯನ್ನು ಕುರಿತು ಅವರು ಈ ರೀತಿ ಹೇಳಿದ್ದಾರೆ. "ರಾಜ್ಯದಲ್ಲಿ ಗುಂಪುಗುಳಿತನ ಮಿತಿಮೀರಿ ಹೋಗಿದೆ. ಅನ್ಯಾಯ, ಅಕ್ರಮವ್ಯವಹಾರಗಳು ಕಾಂಗ್ರೆಸಿನಲ್ಲಿ ಸಾಮಾನ್ಯ ಲಕ್ಷಣಗಳಾಗಿವೆ. ಇಂದಿನ ಮಂತ್ರಿ ಮಂಡಲದ ನಾಯಕತ್ವದಲ್ಲಿ ಇದು ಬಲವಾಗಿದೆ. ಟೀಕೆ ಮಾಡುವವರ ಮೇಲೆ ಅಸಹನೆ ಉಗ್ರ ಕಾರ್ಯಕ್ರಮ, ಶಿಸ್ತಿನ ಶಿಕ್ಷೆಯ ಹೆದರಿಕೆ ಹಾಕುವುದು ಅಸಾಧ್ಯವಾಗಿದೆ, ಇಲ್ಲಿ "ಆಲೋಚನ" ಮಾಡುವವರಿಗಿಂತ "ಅಧಿಕಾರ" ಮಾಡುವವರೂ ಮಾಡಬಯಸುವವರೇ ಹೆಚ್ಚಿದ ಕಾರಣ ಸಂಸ್ಥೆ ಮತ್ತಷ್ಟು ಕೆಟ್ಟಿತು" ಕೆಂಗಲ್‌ರ ಈ ಕಟೂಕ್ತಿ ಅಧಿಕಾರ ರೂಢರಾದವರಿಗೆ 'ಅಪ್ರಿಯ' ವಾಗ ಬಹುದಾದರೂ, ಅತೃಪ್ತರಿಗೆ ಪ್ರಿಯವಾಗಬಹುದು ಇಂತಹ ವಿಚಾರಧಾರೆ ಸಂಸ್ಥೆಯ ಶುದ್ಧೀಕರಣಕ್ಕೆ ನೆರವಾಗ ಬಹುದಾದರೂ, ಇದನ್ನು ಕಾರ್ಯರೂಪಕ್ಕಿಳಿಸುವುದು ಎಷ್ಟರ ಮಟ್ಟಿಗೆ ಸಾಧ್ಯವೆಂದು ಕಾದು ನೋಡಬೇಕಾಗಿದೆ.

ಕೆಂಗಲ್‌ರು ಆಡಿದುದನ್ನು ಕಾಂಗ್ರೆಸಿನ ಹಿರಿಯನಾಯಕರೂ ಆಡುತ್ತಿದ್ದಾರೆ; ಈ ಹಿಂದೆಯೂ ಆಡಿದ್ದಾರೆ ಆದರೆ, ಶುದ್ಧೀಕರಣವು ಮಾತ್ರಾ ಆಡಿದಷ್ಟು ಸುಲಭವಲ್ಲ ಇದಕ್ಕೆ ಯೋಜನಾ ಬದ್ಧ, ಕಠಿಣ ಹೆಜ್ಜೆಯೇ ಅಗತ್ಯ.

ಡಾ|| ಟಿ ಮಾಧವ ಪೈ.

ಯೋಗ್ಯತೆಯುಳ್ಳವರು ಸ್ಥಾನಮಾನಗಳನ್ನು ಅರಸಿಕೊಂಡು ಹೋಗಬೇಕಾಗಿಲ್ಲ; ಅವುಗಳೇ ಅವರನ್ನು ಹುಡುಕಿ ಕೊಂಡು ಬರುತ್ತವೆ ಡಾ|| ಪೈಗಳು ಇದಕ್ಕೊಂದು ನಿದರ್ಶನ ಅವರ ಬಹುಮುಖ ಪ್ರತಿಭೆ ಹಾಗೂ ಸಾಧನೆಗಳು ಅವರನ್ನು ದೇಶದ ಪ್ರತಿಭಾವಂತರ ಸಾಲಿನಲ್ಲಿ ಸೇರಿಸಿವೆ. ಅಧಿಕಾರ ಹಾಗೂ ಹುದ್ದೆಗಳು ಅವರನ್ನು ಕೈ ಚಾಚಿ ಕರೆಯುತ್ತಿವೆ ಅವರ ಅಪ್ರತಿಮ ಸಾಧನೆ ಹಾಗೂ ಕಾರ್ಯಗಳು ದೇಶ ಮಾತ್ರವಲ್ಲ ವಿದೇಶದಲ್ಲೂ ಹೆಸರು ಗಳಿಸಿವೆ ವೈದ್ಯಕೀಯ ವೃತ್ತಿಯಲ್ಲಿ ಸಾರ್ವಜನಿಕ ರಂಗ ಪ್ರವೇಶಿಸಿದ ಪೈಗಳು ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಪವಾಡ ನಡೆಸುವರೆಂದು ಯಾರೂ ಊಹಿಸಿರಲಿಲ್ಲ ಅವರ ನೇತೃತ್ವದಲ್ಲಿರುವ ಶಿಕ್ಷಣ ಸಂಸ್ಥೆಗಳು ಇಂದು ಶಿಕ್ಷಣ ರಂಗದಲ್ಲಿ ಅಪೂರ್ವ ಸೇವೆ ಸಲ್ಲಿಸುತ್ತಿವೆ

ಡಾಕ್ಟರರ ಬಹುಮುಖ ಕಾರ್ಯರಂಗಗಳಲ್ಲಿ ರೋಟರಿ ಕ್ಲಬ್ಬೂ ಒಂದಾಗಿದೆ. ಉಡುಪಿಯಲ್ಲಿ ರೋಟರಿ ಕ್ಲಬ್ಬಿನ ಸ್ಥಾಪನೆಗೆ ಕಾರಣರಾದವರಲ್ಲಿ ಡಾ|| ಪೈಗಳೂ ಒಬ್ಬರು. ಅವರೀಗ ರೋಟರಿ ಅಂತರಾಷ್ಟ್ರೀಯ ಸಂಸ್ಥೆಯ ೩೧೭ನೇ ಜಿಲ್ಲೆಯ ಗವರ್ನರರಾಗಿ ನೇಮಕ ಹೊಂದಿದ್ದಾರೆ. ಹಿಂದಿನ ಗವರ್ನರ್ ಫರೂಕ್ ಕೆ. ಇರಾನಿಯವರಿಂದ ಕಳೆದ ತಾ. ೩೦ ರಂದು ಅವರು ಗವರ್ನರ್ ಹುದ್ದೆಯ ಅಧಿಕಾರ ಸ್ವೀಕಾರ ಮಾಡಿದರು. ಡಾಕ್ಟರರಿಗೆ ರೋಟರಿ ಸಂಸ್ಥೆ ಈ ಹುದ್ದೆ ಕೊಟ್ಟುದು ಸಂಸ್ಥೆಗೊಂದು ಭೂಷಣ. ಇವರಿಂದ ರೋಟರಿಯ ಘನತೆ ಹೆಚ್ಚುವುದೆಂಬುದು ನಿರ್ವಿವಾದ. ಡಾಕ್ಟರರ ಗವರ್ನರ್ ಅಧಿಕಾರದ ಅವಧಿಯಲ್ಲಿ ಈ ಜ

(೧೨ನೇ ಪುಟ ನೋಡಿರಿ)

ನಾರದ ಕಥೆ

ತಬ್ಬಲಿ!

ಭಾಸ್ಕರ ಭಂಡಾರಿ, ಮುಜಿಬೈಲು.

"ಜಗದೀಶ! ಜಗದೀಶ! ಮಗೂ ಏಳು" —ಎಂದು ಲಕ್ಷ್ಮಮ್ಮನವರು ತನ್ನ ಮಗನನ್ನು ಎಚ್ಚರಿಸಿದರು.

"ಹೂಂ ಅಮ್ಮಾ ಎದ್ದೆ" ಎಂದು ಜಗದೀಶನು ಕಣ್ಣುಜ್ಜಿಕೊಳ್ಳುತ್ತಾ ಎದ್ದು ಕುಳಿತನು. ಲಕ್ಷ್ಮಮ್ಮನವರು—"ಮಗೂ ಮುಖ ತೊಳೆದು ದೇವರನ್ನು ಸ್ಮರಿಸಿ, ಪಾಠವನ್ನು ಓದು" ಎಂದರು.

ಜಗದೀಶನು ಎದ್ದು ಬಾವಿ ಕಟ್ಟೆಗೆ ಹೋಗಿ ಸ್ನಾನ ತೀರಿಸಿ ಬಂದು ನೆಟ್ಟ ಮನಸ್ಸಿನಲ್ಲಿ ದೇವರನ್ನು ಧ್ಯಾನಿಸಿದನು. ಆದಾಗಲೇ ಹತ್ತಿರದ ಇಗರ್ಜಿಯಲ್ಲಿ ನಾಲ್ಕು ಗಂಟೆ ಬಡಿಯಿತು. ಮಾರ್ಗದ ಬದಿಯ ವಿದ್ಯುದ್ದೀಪವು ಇನ್ನೂ ಪ್ರಕಾಶವನ್ನೀಯುತ್ತಾ ಪರೋಪಕಾರ ಗೈಯುತ್ತಿತ್ತು. ತನ್ನ ಪುಸ್ತಕಗಳನ್ನು ಹಿಡಿದುಕೊಂಡು ಗುಡಿಸಲಿನಿಂದ ಹೊರ ಬಂದನು. ಲಕ್ಷ್ಮಮ್ಮನವರು ಕೈಯಲ್ಲಿ ಎರಡು ಮಣೆಗಳನ್ನು ಹಿಡಕೊಂಡು ತನ್ನ ಮಗನನ್ನು ಹಿಂಬಾಲಿಸಿದರು. ಒಂದನ್ನು ತನ್ನ ಮಗನಿಗೂ ಇನ್ನೊಂದನ್ನು ತಾನೂ ಇಟ್ಟುಕೊಂಡು ವಿದ್ಯುದ್ದೀಪದ ಕಂಬದ ಕೆಳಗೆ ಕುಳಿತರು. ಜಗದೀಶನು ಮಣೆಯ ಮೇಲೆ ಕುಳಿತು ತನ್ನ ಪಾಠಗಳನ್ನು ಮನಸ್ಸಿಟ್ಟು ಓದುತ್ತಿದ್ದನು. ರವಿಯಿನ್ನೂ ಪೂರ್ವಾಚಲವನ್ನು ಅಡರಿರಲಿಲ್ಲ. ಉಷೆಯಿನ್ನೂ ತನ್ನ ಹೊಂಬಣ್ಣದ ಸೀರೆಯನ್ನುಟ್ಟುಕೊಂಡು ವಿಹಾರಕ್ಕಾಗಿಹೊರಟಿರಲಿಲ್ಲ. ನಗರದ ಜನರೆಲ್ಲಾ ಇನ್ನೂ ಎದ್ದಿರಲಿಲ್ಲ. ಮಂಜುಳ ಗಾನವನ್ನು ಹಾಡುವ ಹಕ್ಕಿಗಳು ತಮ್ಮ ಗೂಡಿನಲ್ಲಿ ಎಚ್ಚತ್ತು ಚಿಲಿಪಿಲಿಗುಟ್ಟುತ್ತಿರಲಿಲ್ಲ ಕೊಳದಲ್ಲಿದ್ದ ಕೆಂದಾವರೆಯು ಮೊಗ್ಗೆಯು ಬಂದು ತನ್ನ ಚೆಲುವನ್ನು ಇತರರಿಗೆ ಕಾಣಿಸುತ್ತಿರಲಿಲ್ಲ. ನಗರದಲ್ಲಿ ಕೇವಲ ಕೆಲವೇ ನಾಗರೀಕರು ಎದ್ದು ತಂತಮ್ಮ ಕೆಲಸಗಳಲ್ಲಿ ತಲ್ಲೀನರಾಗಿದ್ದರು.

ಇಂಥ ಈ ಕಾಲದಲ್ಲಿ ನಿಷ್ಕರುಣೆಯಾದ ಬಡತನವೆಂಬ ದೇವತೆಗೆ ಬಲಿಯಾದ ಸ್ತ್ರೀಯೊಬ್ಬಳು ದೀಪವನ್ನುರಿಸಲು ಬೇಕಾದ ಎಣ್ಣೆಗೆ ಗತಿಯಿಲ್ಲದೆ ಮಾರ್ಗದ ದೀಪದ ಬೆಳಕಿನ ಸಹಾಯದಿಂದ ತನ್ನ ಮಗನನ್ನು ಓದಿಸುತ್ತಿದ್ದಳು.

೦ ೦ ೦

ಠಣ್! ಠಣ್! ಠಣ್! ಠಣ್!... ಠಣ್! ಠಣ್!... ಆದಾಗಲೇ ಹತ್ತಿರದ ಇಗರ್ಜಿಯಲ್ಲಿ ಆರುಗಂಟೆ ಬಡಿದ ಶಬ್ದ ಕೇಳಿಸಿತು. ಜಗದಕ್ಷಿಯಾದ ಅರುಣನು ಹೊಂಬಟ್ಟಲಂತೆ ಶೋಭಿಸುತ್ತಾ ಪೂರ್ವದಿಶಾಪಟ್ಟವನ್ನಲಂಕರಿಸಿ ಎಳಗೈಗಳಂತಿರುವ ತನ್ನ ಎಳೆ ಕಿರಣಗಳನ್ನು ಹರಡಿಸಿದನು.

"ಮಗೂ ಓದಿಯಾಯಿತೇ?"—ಎಂದರು ಲಕ್ಷ್ಮಮ್ಮ. "ಆಯ್ತಮ್ಮಾ ಇನ್ನೆರಡು ಪುಸ್ತಕಗಳು "ಬುಕ್ ಬೈಂಡು" ಮಾಡಲಿಡೆಯಮ್ಮ. ಇಂದೇ ಕೊಡಬೇಕೆಂದು ಹೇಳಿದ್ದಾರೆ. ಸಿಕ್ಕಿದ ಹಣದಿಂದ ಎಣ್ಣೆ ಕಾಳು ತರುತ್ತೇನಮ್ಮಾ"—ಎಂದನು ಜಗದೀಶ.

"ನೂಲುವುದಿಲ್ಲವೇ ಕಂದಾ"

"ನೂಲುತ್ತೇನಮ್ಮಾ! ಅದನ್ನು ಮರೆಯುವೆನೇ? ಅಮ್ಮಾ ನೀನು ಹೋಗಿ ಕಾಫಿ ಮಾಡು"

"ಸರಿ ಮಗನೇ" ಎನ್ನುತ್ತಲೇ ಲಕ್ಷ್ಮಮ್ಮನವರು ಒಳ ಹೋದರು. ಜಗದೀಶನು "ಬುಕ್ ಬೈಂಡು" ಮಾಡುವುದರಲ್ಲೇ ತಲ್ಲೀನನಾಗಿದ್ದನು. ಅದು ಮುಗಿದ ನಂತರ ತನ್ನ ನಿತ್ಯ ಕರ್ಮದಂತಿದ್ದ ನೂಲುವುದನ್ನು ಪೂರೈಸಿದನು. ಆಗಲೇ ಲಕ್ಷ್ಮಮ್ಮನವರ ಕಾಫಿಯು ಸಿದ್ಧವಾಯಿತು. ಜಗದೀಶನನ್ನು ಕರೆದರು. ಜಗದೀಶನ ಓದಿಗೆ ಅನುಕೂಲವಾಗಿ ದೀಪವು ಬೆಳಕನ್ನು ನೀಡುತಿತ್ತೋ ಎಂಬಂತೆ ಆತನು ಒಳ ಹೋದಾಗಲೇ ಮಾರ್ಗದ ದೀಪಗಳೆಲ್ಲವನ್ನೂ ನಂದಿಸಿದರು.

ಎಂಟು ಗಂಟೆಯ ಬಳಿಕ ಆತನು ತಾಯಿಗೆ ನೀರು ತಂದುಕೊಟ್ಟು ತನ್ನ ಹರಿದ ಅಂಗಿ ಮತ್ತು ಚಡ್ಡಿಗಳನ್ನು ಧರಿಸಿ ಶಾಲೆಗೆ ಹೊರಟನು.

೦ ೦ ೦

ಲಕ್ಷ್ಮಮ್ಮನವರು ಶಂಕರ ರಾಯರ ಮಡದಿ. ಶಂಕರ ರಾಯರಾದರೋ ಒಬ್ಬ ಅಧ್ಯಾಪಕರಾಗಿದ್ದರು. ಹತ್ತು ವರ್ಷಗಳ ಮೊದಲು ಬಂದು ನೂರಾರು ಜನರ ಜೀವನವನ್ನು ಕೊಂಡೊಯ್ದ ಮಾರಿ ರೋಗವು ಅವರ ಪ್ರಾಣವನ್ನು ಅಪಹರಿಸಿದ್ದಿತು.

ಜಗದೀಶನಿಗಾಗ ಕೇವಲ ಆರು ವರ್ಷವಾಗಿತ್ತು. ಲಕ್ಷ್ಮಮ್ಮನವರಿಗೆ ಅದೊಂದು ಕೂಸಲ್ಲದೆ ಬೇರೆ ಗತಿಯಿರಲಿಲ್ಲ. ಮೊದಲೇ ಸಿಕ್ಕಿದವರ ಮನೆಯಲ್ಲಿ ಕೆಲಸ ಮಾಡಿ ತನ್ನ ಮಗುವನ್ನು ಸಾಕಿದರು. ಅನಾಥರಿಗೆ ಬುದ್ಧಿ ಶಕ್ತಿ ಹೆಚ್ಚೆಂದು ವಾಡಿಕೆ. ಅದರಂತೆ ಈ ತಬ್ಬಲಿ ಮಗು ನೆರೆಕರೆಯ ಮಕ್ಕಳೊಡನೆ ಶಾಲೆಗೆ ಹೋಗುತ್ತಿತ್ತು. ಅಧ್ಯಾಪಕರೆಲ್ಲರೂ ಮುದ್ದಾದ ಹಾಗೂ ತಬ್ಬಲಿಯಾದ ಈ ಮಗುವಿಗೆ ಪುಸ್ತಕ ಸ್ಲೇಟುಗಳನ್ನು ಕೊಡುತ್ತಿದ್ದರು. ಹೀಗೆ ಜಗದೀಶನು ಕಲಿಯುತ್ತ ಮುಂದೆ ಬಂದನು.

ಯಾವಾಗಲೂ ಬುಕ್‌ಬೈಂಡು ಮಾಡುವುದು, ನೂಲುವುದು, ಮೊದಲಾದ ಕೆಲಸಗಳನ್ನು ಮಾಡಿ ಚಿಲ್ಲರೆ ಹಣ ಸಂಪಾದಿಸುತ್ತಿದ್ದನು. ಇದರಿಂದ ಮಧ್ಯಾಹ್ನದ ಊಟ ತೀರಿಸಿ ಉಳಿದುದರಿಂದ ತಾಯಿಗಾಗಿ ಕಾಳನ್ನು ತರುತ್ತಿದ್ದನು. ರಾತ್ರಿ ಹತ್ತು ಗಂಟೆಯ ತನಕ ಮಾರ್ಗದಲ್ಲಿದ್ದ ದೀಪದ ಸಹಾಯದಿಂದ ಓದುತ್ತಿದ್ದನು. ಒಬ್ಬನಿಗೆ ಬೇಸರವಾಗುವುದಕ್ಕೆ ಲಕ್ಷ್ಮಮ್ಮನವರೂ ಒಟ್ಟಿಗೆ ಇರುತ್ತಿದ್ದರು. ಹತ್ತು ಗಂಟೆಯ ನಂತರ ತಾಯಿ ಮಗ ಇಬ್ಬರೂ ಇದ್ದ ತುತ್ತನ್ನು ಬಾಯಿಗೆ ಹಾಕಿ ಮಲಗಿ ಬಿಡುತ್ತಿದ್ದರು. ಪ್ರಾತಃಕಾಲ ನಾಲ್ಕು ಗಂಟೆಗೆ ಏಳುವನು. ಆರು ಗಂಟೆಯ ತನಕ ಪಾಠಗಳನ್ನು ಓದುವನು. ಅಷ್ಟರಲ್ಲಿ ಲಕ್ಷ್ಮಮ್ಮನವರ ಕಾಫಿ ಸಿದ್ಧವಾಗುತಿತ್ತು ಕಾಫಿ ಕುಡಿದು ನೂಲುವುದು, ಬುಕ್‌ಬೈಂಡು ಮೊದಲಾದುವುಗಳನ್ನು ಮಾಡುವನು. ನಂತರ ತಾಯಿಯ ಗೃಹಕೃತ್ಯಗಳಲ್ಲಿ ಸಹಾಯಮಾಡಿ ಶಾಲೆಗೆ ಹೋಗುತ್ತಿದ್ದನು. ಇದೀಗ ಜಗದೀಶನು S. S. L. C. ಯಲ್ಲಿ ಕಲಿಯುತ್ತಿದ್ದನು. ತನ್ನ ಖರ್ಚನ್ನು ತನ್ನ ದುಡಿಮೆಯ ಮೂಲಕವೂ ಮಹನೀಯರಿಂದ ಬೇಡಿಕಾಡಿಯೂ ಕಳೆಯುತ್ತಿದ್ದನು. ಹೀಗೆಯೇ ತಬ್ಬಲಿಯಾದ ಆ ಬಡ ಮಗುವಿನ ಜೀವನವು ಕಳೆಯುತ್ತಾ ಇತ್ತು.

೦ ೦ ೦

"ಅಮ್ಮಾ...ಅಮ್ಮಾ...ಇದೋ ಈ ಮದ್ದು ಕುಡಿ" ಜಗದೀಶನು ಅರೆಬತ್ತಲೆ ಎಲುಬುಗೂಡಿನಂತಿರುವ ತನ್ನ ತಾಯಿಯ ಚಾಪೆಯ ಬಳಿ ಕಣ್ಣೀರಿನ ಓಕುಳಿ ಹರಿಸಿ ನಡುಗುತ್ತಿರುವ ತನ್ನ ಕೈಗಳಿಂದ ಕಿಸೆಯೊಳಗಿದ್ದ ಮದ್ದಿನ ಸೀಸೆಯನ್ನು ತೆಗೆದನು ಡಿದನು.

ಲಕ್ಷ್ಮಮ್ಮನವರು ಕಳೆದ ಎಂಟು ದಿವಸಗಳಿಂದ "ಟೈಫೈಡ್" ಜ್ವರದಿಂದ ಕಂಗೆಟ್ಟವರಾಗಿ ನರಳುತ್ತಿದ್ದರು. ಅವರ ಶರೀರವು ಕೃಷ್ಣ ಪಕ್ಷದ ಚಂದ್ರನಂತೆ ಕ್ಷೀಣವಾಗಿತ್ತು. ತೇಜಃಪುಂಜವಾದ ಅವರ ಮುಖವು ಕಳೆಗುಂದಿತ್ತು. ಜಗದೀಶನು ಕರೆದಾಗ ಅರೆಗಣ್ಣನ್ನು ತೆರೆದು ಮಗನನ್ನು ದಿಟ್ಟಿಸಿದರು. ಅವರು ದಿಟ್ಟಿಸುತ್ತಿದ್ದಂತೆಯೇ ಧಾರಾಕಾರವಾಗಿ ಅವರ ಕಣ್ಣೀರು ಹರಿದು ನಿಸ್ತೇಜವಾದ ಕೆನ್ನೆಗಳೆರಡನ್ನು ಒದ್ದೆ ಮಾಡುತ್ತಿತ್ತು. "ಮಗೂ ....ಬಂ...ದೆ....ಯಾ"! "ಅಮ್ಮಾ ಇದೋ ಬಂದೆ ಮದ್ದು ಕುಡಿ ಅಮ್ಮಾ" ಎನ್ನುತ್ತಾ ಜಗದೀಶನು ಮದ್ದಿನ ಸೀಸೆಯಿಂದ ಸ್ವಲ್ಪ ಮದ್ದನ್ನು ತನ್ನ ಮಾತೆಯ ಬಾಯಿಗೆ ಸುರಿದನು.

ಮದ್ದು ನಿಧಾನವಾಗಿ ಹೊಟ್ಟೆಯೊಳಗೆ ಬಿಂದು ಬಿಂದುವಾಗಿಯೇ ಇಳಿಯಿತು. ಜಗದೀಶನ ಕಣ್ಣುಗಳಿಂದಲೂ ನೀರು ಇಳಿಯುತ್ತಾ ಇತ್ತು.

೦ ೦ ೦

ಮರುದಿವಸ ಬೆಳಗ್ಗೆ ಜ್ವರವು ವಿಪರೀತವಾಗಿತ್ತು. ಲಕ್ಷ್ಮಮ್ಮನವರಿಗೆ ಸ್ಮೃತಿ ಇರಲಿಲ್ಲ. ಏನೇನೋ ಹೇಳುತ್ತಿದ್ದರು. ಜಗದೀಶನ ಅವಸ್ಥೆಯನ್ನು ಹೇಳ ತೀರದು. ಇನ್ನೂ ಹದಿನೈದು ವರ್ಷದ ನಿರ್ಗತಿಕ ಬಾಲಕ ಪ್ರೀತಿಯಿಂದ ದುಡಿದು ಸಾಕುತ್ತಿದ್ದ ತಾಯಿಯೂ ಈ ರೀತಿಯಾದರೆ ಗ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರ್ಯಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸಾಕರ್ಯವಿರುವುದು.

ಸ್ತರಣಾವಾದಿ, ಸಾಮ್ರಾಜ್ಯ ಶಾಹಿ

ಚೈನಿಯರ ದೃಷ್ಟಿಯಲ್ಲಿ ಸಿಲೋನು

ಬರೆದವರು: ಶ್ರೀ ಶಿವಶಂಕರ ಮದ್ರಾಸು.

ವಿಸ್ತರಣಾ ಯೋಜನೆಯನ್ನು ಮುಂಟ್ಟುಕೊಂಡು ಕಮ್ಯೂನಿಸ್ಟ್ ಚೈನಾದ ಪ್ರಧಾನಿ ಚೌ-ಎನ್-ಲೈ ಶ್ರೀ ಲಂಕೆಗೆ ...ಳಿ ವಸ್ತು ಪರೀಕ್ಷೆಯಲ್ಲಿ ಮಗ್ನರಾಗಿ ...ವದನ್ನು ಹಿಂದಿನ ಕೆಲ ಲೇಖನಗಳಲ್ಲಿ ವರಿಸಲಾಗಿತ್ತು. ಸಿಲೋನು ಸ್ವತಂತ್ರ ಸಾಮ್ರಾಜ್ಯವಾಗಿರುವದರಿಂದ ಚೈನ ಚಕ್ರಾಂದ ...ಟಕ್ಕೆ ಬಹು ಸುಲಭವಾಗಿ ಬಲಿ ಬೀಳಬಹುದೆಂದು ಚೌ ಜೇಡ ತನ್ನ ಸಮಾಜವಾದದ ಬಲೆಯನ್ನು ಬೀಸಿ "ಬಾ ನೊಣವೆ, ಬಾ ನೊಣವೆ ಬಾ ನನ್ನ ಮನೆಗೆ" ...ದು ಹಾಡುತ್ತ ಬಂದಿಳಿಯಿತು. ಶ್ರೀ ...ಕೆಯು ಇತಿಶ್ರೀ ಹಾಡಿ ಬಿಡಬೇಕೆಂ... ಅವರೆಷ್ಟು ಪ್ರಯತ್ನಿಸುತ್ತಿದ್ದಾರೆಂಬು...ಕ್ಕೆ ಇತ್ತೀಚಿನ ಒಂದು ಘಟನೆಯೆ ...ಕು. ಹೇಗಾದರೂ ಲಂಕೆಯವರನ್ನು ...ಬಿಸಿ ಕಲಂಕಿನಿಗಾರರನ್ನಾಗಿ ಮಾಡಿ ಬಿಡಬೇಕೆಂಬುದೇ ಕಮ್ಯೂನಿಸ್ಟ್ ಚೈನಾದ ಪ್ರಧಾನಿ ಚೌ-ಎನ್-ಲೈಯ ಉದ್ದೇಶ. ...ಂಚನೆ—ಕಾಮಿನಿಯರಿಂದ ಕಡು ಕ...ದ ಕಾರ್ಯವೂ ಕೈಗೂಡುತ್ತದೆಂಬುದು ಚೌ-ಎನ್-ಲೈಯ ಅಭಿಪ್ರಾಯ. ಕಾಮಿನಿಯರನ್ನು ಅದೆಂತು ತನ್ನ ಕಾರ್ಯರಂಗದಲ್ಲಿ ಚೌ ಉಪಯೋಗಿಸಿಕೊಂಡಿರುವರೆಂಬುದನ್ನು ಹಿಂದಿನ ಲೇಖನ ತಿಳಿಸಿರುತ್ತದೆ. ...ನಾಕ್ಕೆ ಸಿಲೋನು ಕೊಡಬೇಕಾಗಿದ್ದ ...ಲದ ಬಡ್ಡಿಯನ್ನು ಚೈನಾ ಮನ್ನಾ ಮಾಡಿರುತ್ತದೆ. ಇದು ಸದುದ್ದೇಶದಿಂದಲೋ, ದುರುದ್ದೇಶದಿಂದಲೋ ಎಂಬುದನ್ನು ವಾಚಕರಿಗೆ ಪ್ರತ್ಯೇಕ ತಿಳಿಸಬೇಕಾಗಿಲ್ಲವದಿಲ್ಲ. ಈ ರೀತಿ ಕಾಮಿನಿ—ಕಾಂಚನ ಪ್ರಯೋಗದಿಂದ ಲಂಕೆಯನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಲಿಕ್ಕೆ ಚೈನಾ ಹವಣಿಸುವ ಕಾರಣವೇನು?

ಮೊತ್ತಮೊದಲನೆಯದಾಗಿ ಚೈನಾ ವಿಸ್ತರಣಾವಾದಿ ಕಮ್ಯೂನಿಸ್ಟ್ ನಾಡಾಗಿದೆ. ಜಂಳಿಗೆ ತನ್ನ ಮೂಸೆ ಹೋಗಲು ಎಡೆ ಸಿಕ್ಕಿದರೂ ಸಾಕು, ಪೂರ್ತಿ ದೇಶವನ್ನೇ ಕೊಂಡೊಯ್ದು ಒಳಗೆ ಇದ್ದುದೆಲ್ಲವನ್ನು ಮುಗಿಸಿ ಬಿಡುತ್ತದೆ. ಕಮ್ಯೂನಿಸ್ಟರೂ ಅಂತಹ ಜಿರಳೇಗಳೇ ಆಗಿದ್ದಾರೆ. ಈ ಬಡವರ ಬಂಧು, ಶ್ರಮಿಕರ ಸೇವಕರಿಗೆ ಈ ಮೂಸೆ ಹೋಗಲು ಸಂಧರ್ಭ ಸಿಕ್ಕಿದಲ್ಲಿ ಸಾಕು; ಮುಗಿಯಿತು ಅಲ್ಲಿಗೆ ಕಥೆ. ಅದನ್ನು ಬಲ್ಲ ಮಾರೀಚಬಂಧುಗಳು ಹಲವಾರು ವೇಷದಲ್ಲಿ ಚೌ-ಎನ್-ಲೈಯನ್ನು ಚೆನ್ನಾಗಿ ನೋಡಿಕೊಳ್ಳುವದರಲ್ಲಿ ಸಂದೇಹವಿಲ್ಲ.

ಮುಖ್ಯವಾದ ಇನ್ನೊಂದು ವಿಷಯವೂ ಇದೆ. ಅದನ್ನು ಹಿಂದಿನ ವಿಶೇಷ ಸಂಚಿಕೆಯಲ್ಲಿ ಸೂಚಿಸಲಾಗಿರುತ್ತದೆ. ಅದುವೇ ರಕ್ಷಣಾ ಸ್ಥಾನದಲ್ಲಿ ಸಿಲೋನಿನ ಶ್ರೇಣಿ. ಈ ದೃಷ್ಟಿಯಿಂದಲೇ ಅಮೇರಿಕಾ, ಬ್ರಿಟನು, ಅರಬ ನಾಡುಗಳು ಅಲ್ಲದೆ ರಷ್ಯಾ—ಚೈನಾ ಅತ್ತ ನೋಡುತ್ತಿವೆ. ಆ ರಾಷ್ಟ್ರಗಳಾದರೋ ಬಕಧ್ಯಾನ ಮಾಡುತ್ತಿವೆ—ಸಿಂಹಳದ ಸಿಗಡಿಯನ್ನು ಸ್ವಾಹಾ ಮಾಡಲು ಲಂಕೆಯನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡಲ್ಲಿ ತಮ್ಮ ಸೇನಾ ಠಾಣ್ಯವನ್ನು ಅಲ್ಲಿ ತೆರೆಯಬಹುದು. ಅಲ್ಲಿಂದ ಪೇರಡೆಗಳಿಗೆ ಬಹು ಸುಲಭವಾಗಿ ಸೇನೆಯನ್ನು ಕಳುಹಿಸಬಹುದು. ಬ್ರಿಟಿಷರು ಅದೇ ದೃಷ್ಟಿಯಲ್ಲಿ ಅಲ್ಲಿ ವಿಮಾನ ನಿಲ್ದಾಣಗಳನ್ನು ಕಟ್ಟಿದ್ದರು. ಅದರ ಕುರಿತು ಮುಂದಿನ ಲೇಖನದಲ್ಲಿ ಪ್ರಸ್ತಾಪಿಸಲಾಗುವುದು.

ಕೊಲಂಬೋದಲ್ಲಿ ಕಾಲಿಟ್ಟೊಡನೆ ಸಿಂಹಳೀಯರ ಗಮನವನ್ನು ಸೆಳೆದುಕೊಳ್ಳಲು ಅವರೊಂದು ಉತ್ತಮ ಆಟವನ್ನು ಆಡಿದರು. ಸಾಧಾರಣವಾಗಿ ಅನ್ಯ ರಾಷ್ಟ್ರಗಳಲ್ಲಿ ಚೌ ಭಾಷಣ ಮಾಡಿದಾಗಲೆಲ್ಲಾ ಅವರ ಭಾಷಣದ ಆಂಗ್ಲೇಯ ಭಾಷಾಂತರವನ್ನು ಪತ್ರಿಕೆಗಳಿಗೆ ಮುಂಚಿತವಾಗಿ ಕೊಟ್ಟು ಬಿಡುವದುಂಟು. ಸಿಂಹಳದಲ್ಲಿ ಅವರು ಹಾಗೆ ಮಾಡಲಿಲ್ಲ. ಬ್ರಿಟಿಷರು ಭಾರತದಿಂದ ಸಿಲೋನನ್ನು ಬೇರ್ಪಡಿಸಿಟ್ಟುಕೊಂಡು ತಮ್ಮ ಒಡೆದು ಆಳುವ ಧೋರಣೆಗನುಸಾರವಾಗಿ ನಡೆದುಕೊಳ್ಳುತ್ತಿದ್ದರೂ ಅಲ್ಲಿಂದ ಕಾಲ್ತೆಗೆಯಲೇ ಬೇಕಾಯಿತು. ಆಂಗ್ಲೇಯರ ಅಧಿಕಾರವನ್ನು ಅಡಿ ಸಹಿತ ಮುಗಿಸಿದ ಮೇಲೆ ಅಲ್ಲಿ ಆಂಗ್ಲೇಯ ಭಾಷೆಗೆ ಅಧಿಕಾರ ಸ್ಥಾನ ಸಿಗುವದಾದರೂ ಎಂತು? ಆದುದರಿಂದಲೇ ಸಿಂಹಳದಲ್ಲಿ ಸಿಂಹಳಿ ಭಾಷೆ ಬಳಕೆಯಲ್ಲಿದೆ. ತಮ್ಮ ಭಾಷೆಯೂ ಇರಬೇಕೆಂದು ತಮಿಳರು ಕೇಳಿಕೊಳ್ಳುತ್ತಿದ್ದಾರಾದರೂ ಅವರನ್ನು ಅಟ್ಟುವ ದುಸ್ಸಾಹಸಕ್ಕೆ ಲಂಕೆ ಕೈ ಹಾಕಿದೆ. ಚೌ ಅಲ್ಲಿ ಚೈನಿ ಭಾಷೆಯಲ್ಲಿ ಭಾಷಣವನ್ನಿತ್ತರು. ಒಡನೆ ಸಿಂಹಳಿ ಭಾಷೆಗೆ ಅದನ್ನು ಭಾಷಾಂತರಿಸಲಾಗಿತ್ತು. ಅದೂ ಅಲ್ಲದೆ ಸಿಂಹಳದ ಪ್ರಧಾನಿ ಸಿರಿಮಾವೋ ಭಂಡಾರನಾಯಕೆಯವರ ಬಳಿ ಮುಂಚೆಯೇ ತಾನೇನು ಮಾತಾಡಬೇಕೆಂಬುದನ್ನು ಚೌ ಕೇಳಿ ತಿಳಿದುಕೊಂಡಿದ್ದರು. ಅಷ್ಟು ಜಾಗ್ರತೆಯಿಂದ ಅವರು ವರ್ತಿಸಿದ್ದಾರೆ. ಹಾಗಾಗಿ ಕೆಲವಾರು ಸಿಂಹಳೀಯರು ಚೌ ಭಾರತದ ಕುರಿತು ಕಹಿಯಾಗಿ ಮಾತಾಡಬಹುದೆಂದೆಣಿಸಿಕೊಂಡಿದ್ದವರಿಗೆ ನಿರಾಶೆಯಾಯಿತು. ಮೇಲಿಂದ ಮೇಲಕ್ಕೆ ಅವರು ಚೈನಾ-ಭಾರತದ ವಿರಸದ ಕುರಿತು ಮಾತೆತ್ತಿದರೂ ಸಿಂಹಳದ ಸ್ನೇಹ ಹಸ್ತದಿಂದಾಗಿ ವಿಷವೂ ಅಮೃತವಾಗುತ್ತಿದೆಂದು ಸಿಂಹಳಿಯರಿಗೆ ಗಾಳ ಹಾಕಿದರು. ಅಲ್ಲದೆ ಚೈನಾಕ್ಕೂ ಸಿಂಹಳಕ್ಕೂ ಬಹಳ ಹಿಂದಿನಿಂದ ಬಾಂಧವ್ಯ ಬೆಳೆದಿತ್ತೆಂದು ಅವರು ಹೇಳಿದರು. ಅದೆಂತಹ ಬಾಂಧವ್ಯ ಆ ರಾಷ್ಟ್ರಗಳ ನಡುವೆ ಇತ್ತೆಂಬುದನ್ನು ಕ್ರಮಶಃ ಮುಂದಿನ ವಾರದಿಂದ ನೋಡೋಣ.

ಚೌ-ಎನ್—ಲೈಗೆ ಚೆನ್ನಾಗಿ ಸಂತೋಷವಾಗಲೆಂದು ಸಿಂಹಳೀಯರು ಆದಾಗಲೇ ಭಾರತದ ಮೇಲೊಂದು ಪ್ರತಿಭಟನಾ ಪತ್ರವನ್ನು ಕಳುಹಿಸಿಕೊಟ್ಟರು. ಸಿಂಹಳದ ಆಕಾಶದಲ್ಲಿ ಭಾರತೀಯ ಸೈನಿಕ ವಿಮಾನ ಹಾರಿತೆಂಬುದೇ ಅವರ ದೂರು. ನಿಜವಾಗಿ ಅದೇನೂ ಮಹತ್ವದ ಘಟನೆಯಾಗಿರದೆ ಕೂಡಿಬಂದ ಸಮಯ ಮಾತ್ರ ಅಂತಹುದಾಗಿತ್ತು.

ಅದರಿಂದ ಸಂತೋಷಪಟ್ಟ ಚೌ ೩೦ ಹಳೀಯರ ಮುಖ ಸ್ತುತಿಗೆ ಮುಂದಾದರು. ಚೈನಾ—ಭಾರತ ಬಾಂಧವ್ಯ ಬೆಳವಣಿಗೆಗೆ ಸಿಲೋನಿನ ಸಹಕಾರ ಅತ್ಯಗತ್ಯವೆಂದವರು ಹೇಳಿದರು. ಕೊಲಂಬೋ ಸಮಾಲೋಚನೆಯಂತೆ ಭಾರತದೊಡನೆ ಒಪ್ಪಂದಕ್ಕೆ ತಾವು ಸಿದ್ಧರೆಂದು ಅವರು ಹೇಳಿದರು. ಕೊಲಂಬೋ ಷರತ್ತುಗಳಂತೆ ಚೈನಾ ನಡೆದುಕೊಂಡಿಲ್ಲವೆಂಬುದು ಸಿಂಹಳಕ್ಕೂ ಗೊತ್ತು. ಆದರೂ ಮುಖ ಉಳಿಸಿಕೊಳ್ಳಲು ಅವರು ನಕ್ಕರು. ಅದರಂತೆ ಲಂಕೆಯಿಂದ ಹಿಂತಿರುಗಿದ ಚೌ ತನ್ನ ಕಮ್ಯೂನಿಸ್ಟ್ ಆಟಕ್ಕೆ ಆರಂಭಿಸಿರುವರು.

ನಿಜವಾಗಿ ಸಿಂಹಳದ ಸಿರಿಮಾವೋ ಚೈನಾದ ಚೌವಿನ ಚಿನ್ನದ ಮಾತುಗಳಿಗೆ ಬಲಿಯಾದರೆ? ನಕರಾತ್ಮಕ ಉತ್ತರ ಸದಾ ಸಿದ್ಧವೆನ್ನಬಹುದು. ದೊಡ್ಡವರ ಸುದ್ದಿ ತಮಗೇತಕ್ಕೆ? ಚೈನಾ ಆನೆಯ ಹಾಗೆ ಇದೆ, ಲಂಕೆ ಆಡಿನ ಹಾಗೆ ಇದೆ. ಹಾಗಿರುವಾಗ ಆಡಿಗೆ ಆನೆಯೊಡನೆ ಹೋರಾಡಲು ಸಾಧ್ಯವೇನು? ಇಲ್ಲದ ತಂಟೆ-ತಕರಾರು ಅವರಿಗೇತಕ್ಕೆ? ಬಂದ ಮಾರಿಯನ್ನು ತೃಪ್ತಿ ಪಡಿಸಿ ಹಿಂದಕ್ಕೆ ಕಳುಹಿಸಿಕೊಡುವದು ಕಾರ್ಯ ಜಾಣರ ಲಕ್ಷಣ. ಅಂತೆಯೇ ಚೌರ ಮನ ನೋಯಿಸದೆ ಸಾವಧಾನವಾಗಿ ಅವರನ್ನು ಹಿಂದಕ್ಕೆ ಕಳುಹಿಸಿ ಕೊಟ್ಟರು ಸಿರಿಮಾವೋರವರು.

ಚೌ—ಎನ್—ಲೈ ಒಂದು ಹೆಜ್ಜೆ ಮುಂದರಿದು ಸಿಂಹಳ ಕೊಡಬೇಕಾಗಿದ್ದ ಬಡ್ಡಿ ಹಣವನ್ನು ಕೊಡಬೇಕಾಗಿಲ್ಲವೆಂದು ಹೇಳಿದರು. ಅದರ ಹಿಂದುಗಡೆ ಅಡಗಿರುವ ದುರುದ್ದೇಶವಾದರೂ ಏನು? ಚೌ-ಎನ್-ಲೈ ಸಮಯ ಕಳೆಯಲಿಕ್ಕಾಗಿ ಸಿಲೋನಿಗೆ ಹೋಗಿರಲಿಲ್ಲ. ಮೈತ್ರಿಯನ್ನು ಬೆಳೆಸಿಕೊಳ್ಳುವ ಉದ್ದೇಶ ಮಾತ್ರದಿಂದಲೇ ಅತ್ತ ಹೋಗಿರಲಿಲ್ಲ. ವಿಸ್ತರಣಾವಾದಿ ಚೈನಿಯರ ದೃಷ್ಟಿಯಲ್ಲಿ ಸಿಲೋನಿಗೆ ವಿಶಿಷ್ಟ ಸ್ಥಾನವಿದೆ. ಆ ಒಂದು ನೊಣವು ತನ್ನ ಬಲೆಯೊಳಗೆ ಬಿದ್ದರೆ ಸಾಕು, ಈ ಕಮ್ಯೂನಿಸ್ಟ್ ಜೇಡನಿಗೆ. ಅಲ್ಲಿಂದ ಚೌ ಅನೇಕಾನೇಕ ಕಾರ್ಯಗಳಲ್ಲಿ ಮುಂದಾಗುವರು. ಅದೆಂತು? ಅದರ ವಿವರವನ್ನು ಮುಂದಿನ ಸಂಚಿಕೆಗಳಲ್ಲಿ ಕಾಣುವ.

ಉಡುಪಿ. ಡಿ. ಮು. ಕೋರ್ಟಿನಲ್ಲಿ—
O. S. 98/64

ಕೊರಪಳು ಸೆಡ್ತಿ— ವಾದಿಳು.

ಮತ್ತು

ಶೇಷಿ ಪೂಜಾರ್ತಿ ಕೂಡಾ—ಪ್ರತಿವಾದಿರು.

ಇವರೊಳಗೆ

4 ನೇ ಪ್ರತಿವಾದಿಳು: ಪದ್ದಕ್ಕ ಸೆಡ್ತಿ—ದು...ಸೆಡ್ತಿರ ಮಗಳು. ಉಡುಪಿ ತಾಲ್ಲೂಕು ಕೊರಂ...ಪಾಡಿ ಗ್ರಾಮದ ಕೆಂಮ್ಮಣ್ಣು—ಇವರಿಗೆ ...ಳಿಯ ಪಡಿಸುವುದೇನೆಂದರೆ:—

ವಾದಿರು ಪ್ಲೆಂಟು ನಿವೃತ್ತಿಗಳಿಗೆ ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯು ...ತಾ. 8-7-64 ಕ್ಕೆ ಯೀ ಕೋರ್ಟಿನಲ್ಲಿ ನಿಂ...ವ ಹಾಜರಾತಿ ಬಗ್ಗೆ ಯಿಟ್ಟಿರುವುದರಿಂದ ಮೇಲಿನ ದಾವೆಯಲ್ಲಿ ಉದಾಹರಿಸುವುದಿದ್ದರೆ, ಮೇಲಿನ ತಾರೀಕು ಹಗಲು ಗಂಟೆ 11 ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

(By order of the court)
Y. C. S. Hegde
Advocate of Plff.

ಉಡುಪಿ, ತಾ. 24-6-64

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

360 ಪುಟಗಳಿಗೂ ಮಿಕ್ಕಿದ

ಪಾಕೇಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧—೦೦

ಉತ್ತಮ ಪ್ರತಿ ರೂ. ೧—೫೦

ಒಂದು ಪ್ರತಿ ಬೇಕಾದವರು ಅಂಚೆ ವೆಚ್ಚ ೩೦ನ. ಪೈಸೆ ಸೇರಿಸಿ ಬೇಕಾದ ಪುಸ್ತಕದ ಬೆಲೆಯನ್ನು ಮನಿಯಾರ್ಡರ್ ಮಾಡುವುದು, ರಖಂಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿ.

ವಾರ್ಷಿಕ ಚಂದಾ ರೂ. ೧೦.

ಪ್ರವಾಸ ಕಥನ

ನಿಸರ್ಗಸುಂದರ ಕುದುರೆಮುಖ

(ಎರಡನೇ ಲೇಖಾಂಕ)

ಬರೆದವರು: ಶ್ರೀ ಬಿ. ಕೆ. ವೆಂಕಟಸುಬ್ಬ ರಾವ್, ಕಿಲ್ಲೂರು

ಸಂಜೆ ೫ ತಾಸಿಗೆ ನಾವು ಕುದುರೆಮುಖ ಶಿಖರ ತಲಪಿದೆವು. ಈ ಶಿಖರದ ತುದಿಯಲ್ಲಿ ನಿಂತಾಗಲೇ ಪ್ರವಾಸಿಗರು ತಮ್ಮ ಕಠಿಣವಾದ ಈ ಪ್ರವಾಸದ ನಿಜವಾದ ಸಾರ್ಥಕತೆಯ ಅರಿವನ್ನು ಅನುಭವಿಸುವರು. ಅಲ್ಲಿಯ ತಂಪು ಹವೆ, ತಂಗಾಳಿ, ಬಿಡಿಸಿದ ಹತ್ತಿಯಂತೆ ತೇಲುವ ಬಿಳಿ ಮೋಡಗಳ ನೃತ್ಯ, ಕೆಳಗೆ ವಿಶಾಲವಾಗಿ, ವಿಸ್ತಾರವಾಗಿ ಕಾಣುವ ಬಯಲು, ಅರಣ್ಯ, ಹೊಳೆ ಹಳ್ಳಗಳ ನೋಟ ಬಲು ರಮ್ಯವಾಗಿದೆ. ಪ್ರವಾಸಿಯು ಈ ಉನ್ನತ ಬೆಟ್ಟದ ಮೇಲೆ ನಿಂತು ನೋಡಿದಾಗ, ಸ್ವರ್ಗದಲ್ಲಿರುವಂತೆ ಭಾಸವಾಗುತ್ತದೆ. ದೂರದಿಂದ ಕೆಳಗೆ ಕಾಣುವ ಜಲರಾಶಿಯು ಒಂದು ಬೆಳ್ಳಿಯ ಪಟ್ಟಿಯಂತೆ ತೋರುತ್ತದೆ. ಉಜಿರೆ, ಬೆಳ್ತಂಗಡಿ, ಪುಂಜಾಲಕಟ್ಟೆ, ಬಂಗಾಡಿ, ಕಿಲ್ಲೂರು ಮುಂತಾದ ಪ್ರದೇಶಗಳಲ್ಲದೆ ಗುರುತಿಸಲಾಗದ ಹಲವಾರು ಸ್ಥಳಗಳ ದೃಶ್ಯಾವಳಿಗಳು ಕಾಣುತ್ತವೆ. ಇವುಗಳನ್ನೆಲ್ಲಾ ನೋಡುವಾಗ ಪ್ರವಾಸದ ಸಂಪೂರ್ಣ ಆಯಾಸ ಪರಿಹಾರವಾದಂತೆನಿಸುತ್ತದೆ. ದೇಹಮನಸ್ಸುಗಳೆರಡೂ ಸಂತೋಷಗೊಳ್ಳುವುವು.

ನಾವು ಸಂಜೆ ೫॥ ರ ಸಮಯ ಈ ಕುದುರೆಮುಖ ಶಿಖರದ ತುದಿಯಿಂದ ಕೆಳಗೆ ಸುಮಾರು ೨ ಫರ್ಲಾಂಗು ದೂರದಲ್ಲಿ ರಾತ್ರಿಯ ವಿಶ್ರಾಂತಿಗಾಗಿ ಸ್ಥಳವಾರಿಕೊಂಡು, ನಮ್ಮ ಕಾಫಿ ಉಪಹಾರಗಳನ್ನು ತಯಾರಿಸಿಕೊಂಡೆವು. ಕತ್ತಲಾಗುವ ಮುಂಚೆಯೇ ಉಪಹಾರ ಸ್ವೀಕರಿಸಿದೆವು. ಕೆಲವರು ಸೂರ್ಯಾಸ್ತಮಾನವನ್ನು ನೋಡುವ ಬಗ್ಗೆ ಸಮೀಪದ ಇನ್ನೊಂದು ಬೆಟ್ಟದ ತುದಿಯೇರಿ ಸೃಷ್ಟಿಯ ಸೌಂದರ್ಯವನ್ನು ಕಂಡು ಆನಂದಿಸಿದರು. ಈ ದೃಶ್ಯ ಅದೃಶ್ಯವಾದನಂತರ ಮೂರು ಕಡೆಗಳಲ್ಲಿ ಬೆಂಕಿ ಮಾಡಿಕೊಂಡು ನಾವೆಲ್ಲಾ ಮಲಗಿದೆವು. ಮಿತಿಮೀರಿದ ಚಳಿ ಸೆಕೆಗಳಿಲ್ಲದಲ್ಲೂ ಈ ಪ್ರದೇಶದಲ್ಲಿದೆ. ನಾವು ಊರಿನಿಂದ ಬರುವಾಗ ಬೇಸತ್ತು ಹೆಚ್ಚಿನ ಹೊದಿಕೆಗಳನ್ನು ತಂದಿರಲಿಲ್ಲ. ಕುದುರೆಮುಖದಲ್ಲಿ ಈ ಸಮಯದಲ್ಲಿ ಕೂಡಾ ಇಷ್ಟು ಚಳಿಯಿದೆ ಎಂದು ಭಾವಿಸಿರಲಿಲ್ಲ, ಹಾಗಾಗಿ ಹೆಚ್ಚಿನವರಲ್ಲಿ ಯಾರಿಗೂ ನಿದ್ರೆ ಬರಲಿಲ್ಲ. ಕೆಲವರು ಇಸ್ಪೀಟು ಆಟ ಆಡಿದರೆ, ಇನ್ನು ಕೆಲವರು ವಿಚಾರ ಗೋಷ್ಠಿಗಳಲ್ಲಿ ನಿರತರಾಗಿ ಮತ್ತೆ ಕೆಲವರು ವಿನೋದದಲ್ಲಿ ಮಗ್ನರಾಗಿ ರಾತ್ರಿಯನ್ನು ಕಳೆಯಬೇಕಾಯಿತು. ಕುದುರೆಮುಖ ಪರ್ವತದಲ್ಲಿ ರಾತ್ರಿ ಉಳಿಯಲು ಅಪೇಕ್ಷಿಸುವವರು ಅಗತ್ಯವಾಗಿ ಸಾಕಷ್ಟು ಹೊದ್ದುಕೊಳ್ಳುವ ಬಗ್ಗೆ ಬೆಚ್ಚಗಿನ ವಸ್ತ್ರ ಯಾ ಕಂಬಳಿಗಳನ್ನು ತರುವುದೊಳ್ಳೆಯದು.

ತಾರೀಕು ೨೯-೪-೬೪ನೇ ಬುಧವಾರ ಮುಂಜಾನೆ ಘಂಟೆ ೬ಕ್ಕೆ ಎದ್ದು ಶೌಚಾಚಮನಗಳನ್ನು ಪೂರೈಸಿಕೊಂಡು, ಸೂರ್ಯೋದಯದ ಸೊಬಗನ್ನು ಸವಿದೆವು. ನಂತರ ಗಂಜಿ ಬೇಯಿಸಿಕೊಂಡು ಉಂಡೆವು. ಗಂಟೆ ೮ಕ್ಕೆ ಕುದುರೆಮುಖ ಶಿಖರದಿಂದ ಮರಳಲು ಆರಂಭಿಸಿದೆವು. ಹತ್ತುವುದಕ್ಕಿಂತಲೂ ಇಳಿಯುವ ಪ್ರಯಾಣದಲ್ಲಿ ಹೆಚ್ಚಿನ ಎಚ್ಚರಿಕೆ ಅವಶ್ಯ. ಸ್ವಲ್ಪ ಎಡವಿದರೂ ಬೀಳುವ ಸಂಭವವಿದೆ. ಬೆಳಿಗ್ಗೆ ಘಂಟೆ ೧೦ಕ್ಕೆ ಪುನಃ ದೇವಳಕ್ಕೆ ತಲಪಿದೆವು. ಅಲ್ಲಿ ಶರಬತ್ ಕುಡಿದು ದಣಿವಾರಿಸಿಕೊಂಡು ಮತ್ತೆ ಪುನಃ ಇಳಿಯಲು ಮೊದಲು ಮಾಡಿದೆವು, ಮಧ್ಯಾಹ್ನ ಒಂದೂವರೆ ಘಂಟೆಗೆ ಕಾಸ್ರೋಳಿ ಬಂಗ್ಲೆ ತಲುಪಿದೆವು. ಈ ಬಂಗ್ಲೆ ನೋಡಿ ನಮಗೆ ತುಂಬಾ ಆಶ್ಚರ್ಯವಾಯಿತು.

ಕಾಸ್ರೋಳಿ ಬಂಗ್ಲೆಯ ವಿಚಾರದಲ್ಲಿ ಒಂದೆರಡು ಮಾತು ತಿಳಿಸಲೇ ಬೇಕೆನಿಸುತ್ತದೆ. ಇಲ್ಲಿ ಎರಡು ಕಟ್ಟಡಗಳಿವೆ, ಒಂದು ಬಂಗ್ಲೆ ಇನ್ನೊಂದು ಅಡಿಗೆ ಮನೆ ಮತ್ತು ಕಾರ್ ಶೆಡ್ಡು. ಈ ಕಟ್ಟಡಗಳು ಫಾರೆಸ್ಟ್ ಇಲಾಖೆಯವರ ವಶದಲ್ಲಿವೆ ಎಂತ ತಿಳಿದವು. ಹೊರಗಿನಿಂದ ನೋಡುವಾಗ ಕಟ್ಟಡಗಳು ಚೆನ್ನಾಗಿ ಕಾಣುತ್ತವೆ. ಬಂಗ್ಲೆಯ ಎದುರು ಬಾಗಿಲಿಗೆ ಬೀಗ ಹಾಕಿತ್ತು, ಇತರ ಕೋಣೆಗಳು ತೆರವಾಗಿದ್ದುವು. ಕಸ, ಧೂಳು, ಗೆದ್ದಲು, ಬೀಡಿ ತುಂಡುಗಳಿಂದ ತುಂಬಿ ಗಲೀಜಾಗಿವೆ. ಕಸ ತೆಗೆಯದೆ ಎಷ್ಟು ಸಮಯವಾಯಿತೆಂದು ಊಹಿಸಲಸಾಧ್ಯ. ಗೋಡೆಯಲ್ಲೂ ಮಾಡಿನಲ್ಲೂ ಗೆದ್ದಲು ತುಂಬಿದೆ. ಅರಣ್ಯಾಧಿಕಾರಿಗಳು ದಯವಿಟ್ಟು ಅನಿರೀಕ್ಷಿತವಾಗಿ ಈ ಕಟ್ಟಡಗಳನ್ನು ಸಂದರ್ಶಿಸುವುದು ಅತೀ ಅಗತ್ಯ.

ಸಾಲದಕ್ಕೆ ಈ ಕಂಪೌಂಡಿನಲ್ಲಿದ್ದ ಬಾವಿಯು ಪೂರ್ಣ ಮುಚ್ಚಿ ಹೋಗಿದೆ. ಕಲ್ಲುಗಳಿಂದ ತುಂಬಿದೆ. ನೀರಿನ ಪಸೆಯೂ ಇಲ್ಲ. ದಂಡೆಗಳ ಕಲ್ಲುಗಳನ್ನು ನೂಕಿಹಾಕಲಾಗಿದೆ. ಇದು ಅತ್ಯಂತ ಶೋಚನೀಯ. ನಾವು ನೀರಿಗಾಗಿ ತುಂಬ ಕಷ್ಟ ಪಡಬೇಕಾಯಿತು. ಸುಮಾರು ಒಂದೆರಡು ಮೈಲು ಸರಹದ್ದಿನಲ್ಲಿ ಎಲ್ಲಿಯೂ ಒಳ್ಳೆಯ ನೀರೇ ಇಲ್ಲವೆಂತ ಆಸುಪಾಸಿನ ರೈತರು ತಿಳಿಸಿದರು. ಸುತ್ತಲೂ ಬಡ ರೈತಾಪಿಜನರು ವಾಸಿಸುತ್ತಾರೆ. ಈ ಜನರಿಗೆ, ಜಾನುವಾರುಗಳಿಗೆ ಕೂಡಾ ಕುಡಿಯಲು ಒಳ್ಳೆಯ ನೀರೇ ಇಲ್ಲ! ಈ ಬಂಗ್ಲೆಯ ಕಂಪೌಂಡಿನಲ್ಲಿ ಕಾಣುವ ಹಲವಾರು ಒಲೆಗಳನ್ನು ನೋಡಿದರೆ ಪ್ರವಾಸಿಗರು ಅಡಿಗೆ ಊಟಗಳಿಗಾಗಿ, ಬಂಗ್ಲೆಯನ್ನು ಆಶ್ರಯಿಸಿದ್ದಂತೆ ತೋರುತ್ತದೆ. ಆದರೂ ಒಳ್ಳೆಯ ನೀರು ಹತ್ತಿರದಲ್ಲಿಲ್ಲದಿರುವುದು ದೊಡ್ಡ ಕೊರತೆ. ಈ ಬಂಗ್ಲೆಗೆ ಬಂದ ನಂತರವೇ ಈ ನೀರಿನ ಅಭಾವದ ವಿಚಾರ ನಮ್ಮ ತಿಳುವಳಿಕೆಗೆ ಬಂದದ್ದು. ಹತ್ತಿರದ ಮನೆಯವರಲ್ಲಿ ವಿಚಾರಿಸಿದಾಗ ಎರಡು ಫರ್ಲಾಂಗ್ ದೂರದಲ್ಲಿ ಹರಿವು ನಿಂತ ಒಂದು ಕೊಳಕು ತೋಡಿನ ಹೊಂಡದಲ್ಲಿ ನೀರು ಇದೆ ಎಂತ ತಿಳಿಯಿತು. ಅಲ್ಲಿಗೆ ಹೋಗಿ ನೋಡುವಾಗ ಈ ನೀರು ಮುಖ ತೊಳೆಯುವುದಕ್ಕೂ ಯೋಗ್ಯವಾಗಿಲ್ಲವೆಂಬುದು ತಿಳಿಯಿತು, ಬೇರೆ ಉಪಾಯವಿಲ್ಲ. ಈ ನೀರನ್ನು ನಾವೂ ಕೂಡಾ ಉಪಯೋಗಿಸಬೇಕಾಯಿತು. ನೆರೆಕೆರೆಯ ಹಲವು ಮನೆಗಳ ಜನರೂ ಇದೇ ನೀರನ್ನು ಉಪಯೋಗಿಸುತ್ತಿದ್ದಾರೆಂದು ತಿಳಿದಾಗ ಆಶ್ಚರ್ಯವಾಯಿತು. ನಮ್ಮ ಶಾಸಕರು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಈ ಪ್ರದೇಶದಲ್ಲಿ ಒಂದು ಸಾರ್ವಜನಿಕ ಕುಡಿಯುವ ನೀರಿನ ಬಾವಿ ತೋಡಿಸಿ, ನೆರೆಯ ಬಡ ಜನರಿಗೂ, ಪ್ರವಾಸಿಗರಿಗೂ ಮಹದುಪಕಾರ ಮಾಡಬೇಕು. ಬಂಗ್ಲೆಯ ವಠಾರದಲ್ಲಿ ಮುಚ್ಚಿರುವ ಬಾವಿಯನ್ನು ದುರುಸ್ತಿ ಪಡಿಸಿದರೂ ಆಗಬಹುದು. ಈ ವಿಚಾರದಲ್ಲಿ ಸೂಕ್ತಕ್ರಮ ಕೈಕೊಳ್ಳುವುದು ಅತೀ ಅಗತ್ಯ.

ಕಾಸ್ರೋಳಿ ಬಂಗ್ಲೆಯಿಂದ, ಕಾಫಿ ಉಪಾಹಾರ ತೀರಿಸಿಕೊಂಡು ಸ್ವಲ್ಪ ವಿಶ್ರಾಂತಿ ಪಡೆದು ಸಂಜೆ ೩॥ ಗಂಟೆಗೆ ಹೊರಟು ಮರಳಿ ಕಿಲ್ಲೂರಿಗೆ ಸಂಜೆ ೫ ಗಂಟೆಗೆ ಪರಮಾತ್ಮನ ಕೃಪೆಯಿಂದ ಸುರಕ್ಷಿತವಾಗಿ ತಲಪಿದೆವು. ಈ ಸುಖ ಪ್ರವಾಸದ ಬಗ್ಗೆ ಸಂತೋಷದಿಂದ ತಂಡದವರೆಲ್ಲರೂ ಪರಸ್ಪರ ಅಭಿನಂದನೆಗಳೊಂದಿಗೆ ಚದರಿದೆವು.

ಕುದುರೆಮುಖ ಶಿಖರ ಪ್ರದೇಶವು ಉತ್ತಮ ಪ್ರವಾಸೀ ಕೇಂದ್ರವಾಗಲು ಯೋಗ್ಯವಾದ ಪ್ರದೇಶವೆನ್ನುವುದನ್ನು ಶತಮಾನಗಳ ಹಿಂದೆ ಆಳಿದ ಬ್ರಿಟಿಷರು ಕಂಡುಕೊಂಡಿದ್ದರು. ನಾವು ಈ ತನಕ ಅಲಕ್ಷಿಸಿರುವುದು ಒಂದು ಅಪರಾಧ. ಇಡಿಯ ತಿಂಗಳಲ್ಲಿನ ಹಲವು ಯೋಜನೆಗಳಿಗಾಗಿ ಲೆಕ್ಕವಿಲ್ಲದಷ್ಟು ಹಣ ಅಪವ್ಯಯವಾಗುತ್ತಿರುವಾಗ, ಬಹಳ ಸ್ವಲ್ಪ ಖರ್ಚಿನಿಂದಲೇ ಈಗಿರುವ ಹಳೇ ಕಾಲುದಾರಿಯನ್ನು ಸರಿಮಾಡಿಸಿದರೆ ಈ ಪ್ರವಾಸೀ ಕೇಂದ್ರಕ್ಕೆ ಕಾರಿನಂಥಾ ವಾಹನಗಳು ಪ್ರವಾಸಿಗರನ್ನು ನೇರವಾಗಿ ಒಯ್ಯಬಲ್ಲವು ಎಂಬುದನ್ನು ನಾವು ಪ್ರತ್ಯಕ್ಷ ಸಂದರ್ಶನದಿಂದ ನಿಚ್ಚಳವಾಗಿ ಹೇಳುತ್ತೇವೆ. ನಮ್ಮ ಸರಕಾರವನ್ನು, ನಮ್ಮ ಶಾಸಕರೂ, ಮುಂದಾಳುಗಳೂ ಈ ವಿಚಾರವಾಗಿ ಒತ್ತಾಯಿಸಿ ಈ ಕಾರ್ಯವನ್ನು ಮಾಡಬೇಕೆಂಬುದು ಎಲ್ಲರ ಹಿರಿಯಾಸೆ. ಒಮ್ಮೆ ನಮ್ಮ ಶಾಸಕರು ಹಾಗೂ ನಾಯಕರು ಈ ಕುದುರೆಮುಖ ಶಿಖರದ ಪ್ರವಾಸ ಕೈಕೊಂಡು ಸ್ವಾನುಭಾವ ಪಡೆಯುವುದು ಒಳಿತೆಂದು ನಮ್ಮ ನಮ್ರ ಸೂಚನೆ.

(ಮುಗಿಯಿತು.)

ಅಮೃತ ಬಿಂದುಗಳು

ಸತ್ಯವು ಎಲ್ಲ ಜ್ಞಾನದ ತಳಹದಿ; ಎಲ್ಲ ಸಮಾಜಗಳನ್ನು ಬಂಧಿಸಿಡುವ ಅಯಸ್ಕಾಂತ.

ಂ ಂ ಂ

ಎಲ್ಲವನ್ನು ಸಹಿಸಿಕೊಳ್ಳುವುದು ಯೋಗ್ಯತೆ ಯಾ ಸಹನೆಯಲ್ಲ; ಆದರೆ ಸಹನೆ ಮೀರಿ ವರ್ತಿಸುವುದು ಮಾತ್ರ ಅಸಹನೀಯ ಅಪರಾಧ.

ಂ ಂ ಂ

ಜೀವನವನ್ನು ಪ್ರೇಮಿಸದವನು ತನ್ನ ಸಮಯದ ದುಂದುಗಾರಿಕೆ ಮಾಡಬಾರದು. ಏಕೆಂದರೆ ಸಮಯವೇ ಜೀವನ.

ಂ ಂ ಂ

ಚಿನ್ನದ ಪ್ರತಿಯೊಂದು ಚೂರು ಕೂಡಾ ಹೇಗೆ ಅಮೂಲ್ಯವೋ ಹಾಗೆಯೇ ಸಮಯದ ಪ್ರತಿಯೊಂದು ನಿಮಿಷವೂ ಕೂಡಾ ಅಮೂಲ್ಯ.

ಂ ಂ ಂ

ಉತ್ತಮ ಚಿಂತನೆ, ಭಾವನೆಗಳಿಂದ ಕೂಡಿದವರಾರೂ ಕೂಡಾ ಏಕಾಂಗಿಗಳಲ್ಲ.

ಂ ಂ ಂ

ಅಳುಕಿ, ಬಳುಕಿ ತೊಟ್ಟಿಕ್ಕುವ ಕಂಬನಿಯೇ ಆತ್ಮಕ್ಕೆ ಮಾನವತೆಯ ಶಿಕ್ಷಣ ನೀಡುತ್ತದೆ.

ಂ ಂ ಂ

ತಾನು ಉರಿಯುತ್ತಿರದ ದೀಪ ಬೇರೆ ದೀಪ ಹಚ್ಚಲಾರದು. ತಾನು ಕಲಿಯುತ್ತಿರದ ಅಧ್ಯಾಪಕ ಇತರರಿಗೆ ಕಲಿಸಲಾರ.

ಂ ಂ ಂ

ಕಳ್ಳನಿಗೆ ಪ್ರತಿ ಪೊದೆಯೂ ಪೋಲೀಸನಾಗಿ ತೋರುವಂತೆ ಸಂಶಯ ಪೀಡಿತನಿಗೆ ಪ್ರತಿಯೊಂದರಲ್ಲೂ ಮೋಸ ಕಾಣುತ್ತದೆ.

ಂ ಂ ಂ

ಜಗತ್ತನ್ನು ಪ್ರೀತಿಸಬೇಕಾದರೆ ಆನಂದದ ಮನೋಭಾವ ಬೇಕು. ಜಗತ್ತನ್ನು ಅರಿಯಬೇಕಾದರೆ ಕಷ್ಟದ ಅಗ್ನಿ ಪರೀಕ್ಷೆ ಬೇಕು.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

READ & ADVERTISE IN NAVAYUGA WEEKLY

ಶಿಕ್ಷಣ ಕ್ಷೇತ್ರ

ಅಮೆರಿಕೆಯಲ್ಲಿ ಕಾಲೇಜು ಶಿಕ್ಷಣ

ಸಾಲರೂಪದ ವ್ಯಾಸಂಗ ವೇತನಗಳು ಅಲ್ಲಿ ಹೇರಳವಾಗಿ ಜ್ಯಾರಿಯಲ್ಲಿವೆ.

ಅಮೆರಿಕದ ವಿದ್ಯಾರ್ಥಿಗಳು ನಾನಾ ಬಗೆಯ ಅಲ್ಪ ಕಾಲಾವಧಿಯ ಕೆಲಸಗಳನ್ನು—ಉದಾಹರಣೆಗೆ, ಉಕ್ಕಿನ ಕಾರ್ಖಾನೆಯ ಮೇಲ್ವಿಚಾರಕ, ಅಗ್ನಿ ಶಾಮಕ ದಳದ ಸಿಪಾಯಿ, ಹೋಟೆಲು ಮಾಣಿ–ಸಂಗೀತಗಾರ, ಟ್ಯಾಕ್ಸಿ ಚಾಲಕ, ಮೋಂಟಗಾರ—ಹೀಗೆ ಕಾಲೇಜು ಪದವಿ ಅವಶ್ಯವಿಲ್ಲದ ಎಲ್ಲ ಬಗೆಯ ಕೆಲಸಗಳನ್ನೂ ಕೈಗೊಳ್ಳುತ್ತಾರೆ. ಕಾಲೇಜು ಶಿಕ್ಷಣಕ್ಕೆ ಅಪಾರವಾದ ಹಣ ಅವಶ್ಯವಿದ್ದು ಅನೇಕ ಮಂದಿ ಮಾತಾಪಿತೃಗಳಿಗೆ ಅಷ್ಟೊಂದು ಹಣ ಒದಗಿಸುವುದು ಕಷ್ಟ ಸಾಧ್ಯವಾದುದರಿಂದ ವೆಚ್ಚದ ಒಂದಷ್ಟು ಭಾಗವನ್ನು ಹೊಂದಿಸಿಕೊಳ್ಳಲು ವಿದ್ಯಾರ್ಥಿಗಳು ಈ ರೀತಿ ಕೆಲಸ ಮಾಡುತ್ತಾರೆ.

ಅಮೆರಿಕದಲ್ಲಿ ಮಾನ್ಯತೆ ಪಡೆದ ೨೦೦೦ ವಿಶ್ವವಿದ್ಯಾನಿಲಯಗಳೂ, ಕಾಲೇಜುಗಳೂ ಇವೆ. ಇವುಗಳಲ್ಲಿ ೧೩೦೦ ಖಾಸಗಿ ದತ್ತಿಗಳಿಂದ ಕಾರ್ಯನಿರ್ವಾಹ ಮಾಡುತ್ತಿವೆ. ಇವುಗಳ ಶಿಕ್ಷಣ ಶುಲ್ಕ ಅರ್ಧ ವರ್ಷಕ್ಕೆ (ನಾಲ್ಕೂವರೆ ತಿಂಗಳು) ಕೇವಲ ೩೦ ಡಾಲರುಗಳಿಂದ ೫೦೦ ಡಾಲರು ಮೀರುವ ವರೆಗೂ ಇರುತ್ತದೆ. ಉಳಿದ ೭೦೦, ರಾಜ್ಯದ ಹಾಗೂ ಪೌರ ಸಭೆಯ ಬೆಂಬಲದಿಂದ ಕೆಲಸ ಮಾಡುತ್ತಿವೆ. ಇವುಗಳ ಶುಲ್ಕ ಕಡಿಮೆ. ಕೆಲವೊಮ್ಮೆ ರಾಜ್ಯದ ನಿವಾಸಿಗಳು ಶುಲ್ಕವನ್ನೇ ಕೊಡಬೇಕಾಗಿರುವುದಿಲ್ಲ, ಇತರ ರಾಜ್ಯಗಳ ನಿವಾಸಿಗಳಿಗೂ ಸಾಂಕೇತಿಕ ಶುಲ್ಕ ಇರುವುದು. ಇಷ್ಟಾದರೂ, ಪಠ್ಯ ಪುಸ್ತಕಗಳ ಬೆಲೆ, ಆಹಾರ, ವಾಸದ ಬಾಡಿಗೆ, ಬಟ್ಟೆಬರೆ ಹಾಗೂ ಇತರ ವೈಯಕ್ತಿಕ ವೆಚ್ಚಗಳಿಗೆ ವರ್ಷ ಒಂದಕ್ಕೆ ಕನಿಷ್ಠ ಅನೇಕ ನೂರು ಡಾಲರುಗಳು ಬೇಕಾಗುವುವು.

ಅಮೆರಿಕದ ಕಾಲೇಜು ವಿದ್ಯಾರ್ಥಿಗಳ ಸಂಖ್ಯೆ ೪೧ ಲಕ್ಷ. ಇವರಲ್ಲಿ ಮೂರನೆ ಎರಡರಷ್ಟು ಮಂದಿ ವಿಶ್ವವಿದ್ಯಾನಿಲಯದ ಆವರಣದ ಒಳಗೆ ಅಥವ ಹೊರಗೆ ಕೆಲಸ ಮಾಡಿ ತಮ್ಮ ಖರ್ಚುಗಳನ್ನು ಗಳಿಸಿಕೊಳ್ಳುತ್ತಾರೆ ಇವರಲ್ಲಿಮೂರನೆಒಂದರಷ್ಟು ಮಂದಿ ಬೇಸಿಗೆ ರಜಾ ಕಾಲದಲ್ಲಿಯೂ ಕೆಲಸ ಮಾಡುತ್ತಾರೆ.

"ಕಲಿಕೆಯ ಜತೆಯಲ್ಲಿಯೇ ಗಳಿಕೆ" ಯನ್ನು ನಡೆಸುವುದು, ಯುವಜನರಿಗೆ ಅಮೂಲ್ಯವಾದ ಶಿಕ್ಷಣ. ಇದರಿಂದ ಅಧ್ಯಯನಕ್ಕೆ ತೊಂದರೆಯಾಗುವುದಿಲ್ಲ ಎಂಬುದು ಅಮೆರಿಕದ ಶಿಕ್ಷಣ ತಜ್ಞರ ಸಾಮಾನ್ಯ ನಂಬುಗೆ.

"ಕಾಲೇಜು ಶಿಕ್ಷಣಕ್ಕಾಗಿ ಸಂಪಾದನೆ ಮಾಡುವುದು ಸಮಾಜ ವಿಜ್ಞಾನ ಹಾಗೂ ಮನೋ ವಿಜ್ಞಾನಗಳೆರಡರ ದೃಷ್ಟಿಯಿಂದಲೂ ಆವಶ್ಯಕವಾದುದು'' ಎಂಬುದಾಗಿ ಒಬ್ಬ ಕಾಲೇಜು ಅಧಿಕಾರಿ ಹೇಳಿದರು.

ಕಾಲೇಜು ಶಿಕ್ಷಣದ ವೆಚ್ಚ ಹೆಚ್ಚುತ್ತಿರುವ ಫಲವಾಗಿ, ಗಳಿಕೆಯಲ್ಲಿ ನಿರತರಾಗಿರುವ ವಿದ್ಯಾರ್ಥಿಗಳು ಕೂಡ ಹಣದ ಕೊರತೆಯಿಂದ ಬಳಲುತ್ತಿದ್ದರು. ಓದುವ ಕಾಲದಲ್ಲಿ ಗಳಿಸುವ ಬದಲು ಶಿಕ್ಷಣಕ್ಕೆ ಬೇಕಾಗುವ ಹಣವನ್ನು ಸಾಲ ಮಾಡಿ, ಗಳಿಕೆಗೆ ವಿನಿಯೋಗಿಸುತ್ತಿದ್ದ ಕಾಲವನ್ನೂ ಅಧ್ಯಯನಕ್ಕೇ ವಿನಿಯೋಗಿಸಿ, ವೃತ್ತಿಯನ್ನು ಕೈಗೊಂಡ ಮೇಲೆ ಸಾಲ ಪಡೆದ ಹಣವನ್ನು ಹಿಂತಿರುಗಿಸುವುದು ಉತ್ತಮ ಎಂಬುದು ಕೆಲ ಶಿಕ್ಷಣ ತಜ್ಞರ ಭಾವನೆ. ತತ್ಫಲವಾಗಿ "ಈಗ ಓದಿ, ಅನಂತರ ಹಣ ಕೊಡಿ" ಎಂಬ ಕಮ್ಮಿ ಬಡ್ಡಿಯ, ದೀರ್ಘಾವಧಿಯ ಸಾಲಗಳು, ವಿದ್ಯಾರ್ಥಿಗಳಿಗಾಗಿ ರೂಪುಗೊಂಡವು. ಈ ವ್ಯವಸ್ಥೆಯಲ್ಲಿಯೂ ಅನೇಕ ವಿಧಾನಗಳಿವೆ.

೧೯೫೮ರಲ್ಲಿ ಅಮೆರಿಕದ ಕಾಂಗ್ರೆಸ್ಸು ನ್ಯಾಷನಲ್ ಡಿಫೆನ್ಸ್ ಎಜ್ಯುಕೇಷನ್ ಆಕ್ಟಿನ ಆಶ್ರಯದಲ್ಲಿ ಡಿಫೆನ್ಸ್ ಸ್ಟೂಡೆಂಟ್ ಲೋನ್ ಫಂಡನ್ನು ನಿರ್ಮಿಸಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯನ್ನಿಟ್ಟಿತು. ಈ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಸಾಲ ಕೊಡುವ ಸಲುವಾಗಿ ಫೆಡರಲ್ ಸರಕಾರದ ನಿಧಿಯನ್ನು ಕಾಲೇಜುಗಳಿಗೆ ಒದಗಿಸುತ್ತದೆ. ವಿದ್ಯಾರ್ಥಿಯ ಕಾಲೇಜು ಅಭ್ಯಾಸದ ಅವಧಿಯಲ್ಲಿ ಸಾಲಕ್ಕೆ ಬಡ್ಡಿಯಿಲ್ಲ. ಪದವಿ ಪಡೆದ ನಂತರ ೧೧ ವರ್ಷಗಳ ಅವಧಿಯಲ್ಲಿ ಶೇಕಡ ೩ರ ಬಡ್ಡಿಯೊಡನೆ ಸಾಲವನ್ನು ಮರುಪಾವತಿ ಮಾಡಬೇಕು.

ಮಾತಾಪಿತೃಗಳೋ ಅಥವ ಪೋಷಕರೋ ಸಾಲದ ಪತ್ರಕ್ಕೆ ಸಹಿ ಹಾಕಬೇಕಾದುದು ಅವಶ್ಯವಾದರೂ, ಸಾಲವನ್ನು ವಿದ್ಯಾರ್ಥಿಗೇ ನೇರವಾಗಿ ಕೊಡಲಾಗುವುದು; ಭದ್ರತೆಯ ಅವಶ್ಯಕತೆಯಿಲ್ಲ.

ಪಾಠಶಾಲಾ ಅಧ್ಯಾಪಕರ ವೃತ್ತಿಯನ್ನು ಕೈಗೊಂಡವರ ವಿಷಯದಲ್ಲಿ ಅವರ ಸೇವಾವಧಿಗನುಸಾರವಾಗಿ ಸಾಲದ ಒಂದಷ್ಟು ಭಾಗವನ್ನು ತೊಡೆದು ಹಾಕಲಾಗುವುದು. ಈ ಸಾಲಗಳನ್ನು ವಿದ್ಯಾರ್ಜನೆಗೆ ಮಾತ್ರವೇ ಉಪಯೋಗಿಸಬೇಕೆಂಬುದು ಕಡ್ಡಾಯ. ಹಣದ ಅವಶ್ಯಕತೆಯಿರುವ, ಒಳ್ಳೆಯ ಅಭ್ಯಾಸ ಮಾಡುವ ಎಲ್ಲ ಪದವಿ ಪೂರ್ವದ ವಿದ್ಯಾರ್ಥಿಗಳಿಗೂ ಈ ಸಾಲ ಲಭ್ಯವಾಗುವುದು.

೧೯೫೯ರಿಂದ ೧೯೬೩ರ ಅಂತ್ಯದೊಳಗೆ ಈ ಕಾರ್ಯಕ್ರಮದ ಆಶ್ರಯದಲ್ಲಿ ೩೬ ಕೋಟಿ ಡಾಲರುಗಳ ಮೊತ್ತದ ೮೦೦,೦೦೦ ಸಾಲಗಳನ್ನು ನೀಡಲಾಯಿತು.

ಸರಕಾರದ ಭರವಸೆಯಿಂದ ಕೂಡಿದ ಸಾಲದ ಕಾರ್ಯಕ್ರಮ ಇತ್ತೀಚಿನದು. ಸದ್ಯದಲ್ಲಿಯೇ ಎಲ್ಲ ರಾಜ್ಯಗಳಲ್ಲೂ ಜಾರಿಗೆ ಬರಲಿರುವ ಈ ಕಾರ್ಯಕ್ರಮಗಳ ಆಶ್ರಯದಲ್ಲಿ ದೀರ್ಘಾವಧಿಯ ಕಮ್ಮಿ ಬಡ್ಡಿಯ ಸಾಲಗಳಿಗೆ ಭದ್ರತೆಯನ್ನು ಒದಗಿಸುವ ಸಲುವಾಗಿ ಸರಕಾರ ಅಥವಾ ಖಾಸಗಿ ಸಂಸ್ಥೆಗಳ ಆಶ್ರಯದಲ್ಲಿ ನಿಧಿಗಳನ್ನು ರಚಿಸಲಾಗುವುದು. ಈ ಸಾಲಗಳನ್ನು ಸಾಮಾನ್ಯವಾಗಿ ಬ್ಯಾಂಕುಗಳ ಮೂಲಕ ಕೊಟ್ಟರೂ, ಈ ಕಾರ್ಯಕ್ರಮ ಲಾಭೋದ್ದೇಶವಿಲ್ಲದ ಸಾಹಸ. ಬಡ್ಡಿಯದರ ಶೇಕಡ ೩ರಿಂದ ೬ರ ವರೆಗೆ ಇದ್ದು ವ್ಯಾಪಾರೀ ಬಡ್ಡಿದರಕ್ಕಿಂತ ಕಮ್ಮಿ. ಕೆಲವು ರಾಜ್ಯಗಳಲ್ಲಿ ವಿದ್ಯಾರ್ಥಿ ಕಾಲೇಜಿನಲ್ಲಿರುವಾಗ ಬಡ್ಡಿಯನ್ನು ವಸೂಲು ಮಾಡುವುದಿಲ್ಲ ಪದವಿ ಪಡೆದ ಕೆಲವು ತಿಂಗಳ ನಂತರದಿಂದ ಮರುಪಾವತಿ ಆರಂಭವಾಗಿ ೩ರಿಂದ ೬ ವರ್ಷಗಳ ಅವಧಿಯಲ್ಲಿ ಮುಕ್ತಾಯವಾಗುತ್ತದೆ.

ಸಾಲದ ರಂಗದಲ್ಲಿ ಯುನೈಟೆಡ್ ಸ್ಟೂಡೆಂಟ್ ಏಯ್ಡ್ ಫಂಡ್ಸ್, ಇನ್‌ಕಾರ್ಪೋರೇಟೆಡ್,—ಇದು ಮೂರನೆಯ ಪ್ರಮುಖ ಕಾರ್ಯಕ್ರಮ. ೧೯೬೧ರಲ್ಲಿ ಆರಂಭವಾಗಿ, ಈಗ ರಾಷ್ಟ್ರವ್ಯಾಪಿಯಾಗಿರುವ ಯು. ಎಸ್. ಎ. ಫಂಡ್ಸ್ ವಿದ್ಯಾರ್ಥಿಗಳಿಗೆ ಕೊಡುವ ಸಾಲಗಳನ್ನು ನಿರ್ಧರಿಸಲು ರಿಸರ್ವ್ ಫಂಡ್ ಕೂಡಿಸುವ ಲಾಭೋದ್ದೇಶವಿಲ್ಲದ ಸಂಸ್ಥೆ. ಒಂದು ಕಾರ್ಯಕ್ರಮದ ರೀತ್ಯ ಈ ಸಂಸ್ಥೆ ಗ್ಯಾರಂಟಿ ಹಣವನ್ನು ರಾಜ್ಯದಲ್ಲಿಯೇ ಹೊಂದಿಸಲು ಸಹಾಯ ನೀಡಿ, ರಾಜ್ಯದ ನಿವಾಸಿಗಳು ಪಡೆದ ಸಾಲಗಳಿಗೆ ಬ್ಯಾಂಕುಗಳಲ್ಲಿ ಗ್ಯಾರಂಟಿಯಾಗಿ ನಿಲ್ಲುತ್ತವೆ. ಮ

(ಆನೇ ಪುಟನೋಡಿರಿ)

ಕನಸು ನೆನಸಾಗಬೇಕಾದರೆ ......

ಜೀವನದಲ್ಲಿ ಹಣವೇ ಸರ್ವಸ್ವ ಅಲ್ಲ. ಆದರೆ ಹಣವನ್ನು ವಿನಿಯೋಗಿಸುವ ಜಾಣತನದಲ್ಲಿ ಜೀವನದ ಸಾಫಲ್ಯ ಸಮಾವೇಶಗೊಂಡಿದೆ. ನಮ್ಮ ಆಸೆಗಳೆಲ್ಲ ಕೈಗೂಡಬೇಕಾದರೆ, ಕನಸು ನೆನಸಾಗಬೇಕಾದರೆ ಒಂದೇ ಒಂದು ಸಾಧನ-ಹಣ. ಒಂದು ಪ್ರಾಯೋಗಿಕವಾದ ಅಂದಾಜು ಪತ್ರ ಎಂದರೆ ಒಂದು ಸಂಸಾರದ "ಬೇಕು"ಗಳು ಮತ್ತು ಅದರ ಸಾಧ್ಯತೆಯ ಹೊಂದಾಣಿಕೆ. ಕನಸು ನೆನಸನ್ನು ಬೆಸೆಯುವ ಸೂತ್ರ.

ಆರ್ಥಿಕ ಯೋಜನೆ ಅಂದರೆ ನಮ್ಮ ಅಂದಾಜು ಪತ್ರದ ವಿವಿಧ ಬೇಡಿಕೆಗಳಿಗಾಗಿ ಹಣವನ್ನು ವಿಭಾಗಿಸುವುದು ಎಂದಿಷ್ಟೇ ಅರ್ಥವಲ್ಲ. ಅದಕ್ಕೆ ಇನ್ನೂ ಆಳವಾದ ಪಂಚಾಂಗದ ಬಲವಿದೆ. ಜೀವನದ ಮಟ್ಟ, ಒಂದು ಸಂಸಾರದ ಈಗಣ ಮತ್ತು ಭವಿಷ್ಯದ ಭವ್ಯತೆಯನ್ನು ಹೊಂದಿಕೊಂಡಿದೆ ಎನ್ನುವುದನ್ನು ನೀವು ಮರೆಯುವಂತಿಲ್ಲ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿಸಿರಿ; ಅದೇ ನಿಮ್ಮ ಭವಿಷ್ಯದ ಭದ್ರತೆಗೆ ಒಂದು ಭರವಸೆಯಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ವಿಶ್ವವ್ಯಾಪೀ ಬ್ಯಾಂಕಿಂಗಿಗಾಗಿ...........

ಶಾಖೆಗಳು: 192 57 ಕೋಟಿಗೂ ಮಿಕ್ಕಿದ ಭಂಡವಾಳ

ಉಡ್ಪಿ. ಡಿ ಮು. ಕೋರ್ಟಿನಲ್ಲಿ

RPA 198/ 1964 O. S. 263/1963

K. ರಾಮ ಮರಕಾಲ—ವಾದಿ

ಮತ್ತು

ಪದ್ಮಾವತಿ ಬ್ಯಾ ಕೂಡಾ—ಪ್ರತಿವಾದಿರು

ಇವರೊಳಗೆ.

To,

ಪ್ರತಿವಾದಿಸು.

5. ಬಾಲಕೃಷ್ಣ ಶೆಟ್ಟಿ. ಕಲ್ಯಾಣಿಶೆಡ್ತಿ ರಮಗ

6. ವಸಂತಿ ಶೆಡ್ತಿ } ಮ್ಯಾನರ್ರು ಗಾರ್ಡಿ
7. ಸುಭಾಷ ಚಂದ್ರ } ಯನ್ ತ್ಯಾ ಕ
8. ಶರತ್ ಚಂದ್ರ } ಲ್ಯಾಣಿ ಶೆಡ್ತಿ.

ಉಪ್ಪಿತಾಲ್ಕು ಹೇರೂರುಗ್ರಾಮ

9 K ಅನಂತ. ಸುಬ್ಬಯ್ಯ ಗಾಣಿಗರ ಮಗ ಕೋಟಿಕಟ್ಟುಗ್ರಾಮ.

ವಾದಿಯು ಪಿ. ಡಿಕ್ರಿಯುಸ್ತ್ರಾಸ್ತಿ ಮೊರಾಟದ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಮಾಡಿದ ಮೇಲಿನ ಅರ್ಜಿಯು ತಾ. 15-7-64 ಕ್ಕೆ ಇಟ್ಟಿರುವುದ್ರಿಂದಾ ಅದಿಮ್ಮ ಮೇಲಿನಪ್ರತಿವಾದಿಗಳತಮ್ಮ ಆಕ್ಷೇಪಣೆಯಿದ್ದರೆ ಬೆಳಗ್ಗೆ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿಯು ಅವರ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದು.

B. Vasudeva Rao,
Counsel for Pltf

Udipi. D/27-6-64

ಉಡ್ಪಿ ಡಿ.ಮು. ಕೋರ್ಟಿನಲ್ಲಿ

R. E. P. No. 652/1963

O. S. No. 397/59.

ಕೆ. ಗೋಪಾಲ ಭಟ್ಟ —ಅರ್ಜಿದಾರ,

ಮತ್ತು

ಶಂಕರನಾರಾಯಣರಾವ್ ಕೂಡಾ—
ಎದ್ರಿರು,

ಇವರೊಳಗೆ

1ನೇ ಎದ್ರಿ ಉಡ್ಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಪೆರಂಪಳ್ಳಿಯಲ್ಲಿ ಇರುವ ಪೊಳಿನಾಯ ಶ್ಯಾಮರಾಯರ ಮಗ ಶಂಕರನಾರಾಯಣರಾವರೀಗೆ ಈ ಮೂಲಕ ತಿಳಿಸುವುದೇನಂದ್ರೆ—

ಮೇಲ್ಕಂಡ ಅಮಲಜ್ಯಾರಿಯಲ್ಲಿ ಏಲಾಗೆ ಆಪೇಕ್ಷಿಸಿದ ಆಸ್ತಿಗಳ ವಿಕ್ರಯದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸಲಿಕ್ಕೆ 1964ನೇ ಇಸವಿ ಜುಲಾಯಿ ತಿಂಗಳ 27ನೇ ತಾರೀಕು ನಿಶ್ಚಯಿಸೋಣಾಗಿಯಿದಂತ ನಿಮಗೆ ಇದರಿಂದ ತಿಳಿಸೋಣಾಗಿದೆ.

P. V. Acharya,
Vakil for Petitioner.

ಉಡ್ಪಿ, ತಾ. 26-6-64.

ನವಯುಗ

ವರುಷ	ಉಡುಪಿ	ವಾರ
೪೩	೨-೭-೧೯೬೪	೪೪

ಭ್ರಷ್ಟಾಚಾರ ನಿರ್ಮೂಲನೆ

ಭಾರತದ ಸಾರ್ವಜನಿಕ ಜೀವನದಲ್ಲಿ ಹಾಗೂ ಆಡಳಿತ ರಂಗದಲ್ಲಿ ಇಂದು ಬಲವಾಗಿ ಬೇರೂರಿರುವ ಭ್ರಷ್ಟಾಚಾರದ ನಿರ್ಮೂಲನವು ಸರಕಾರಕ್ಕೊಂದು ದೊಡ್ಡ ಸಮಸ್ಯೆಯಾಗಿದೆ. ಇಂದು ನಮ್ಮ ಜನರಿಗೆ 'ಸಮಾಜವಾದ' ಶಬ್ದದ ಅರ್ಥ ಆಗದಿದ್ದರೂ 'ಭ್ರಷ್ಟಾಚಾರ' 'ಲಂಚ' ಇತ್ಯಾದಿ ಶಬ್ದಗಳ ಅರ್ಥ ಮಾತ್ರ ಬೇಗನೆ ಆಗುತ್ತದೆ. ಇದಕ್ಕೆ ಕಾರಣ ಜನಜೀವನದಲ್ಲಿ ಇಂದು ಹಾಸುಹೊಕ್ಕಾಗಿರುವ ಭ್ರಷ್ಟಾಚಾರವೇ. 'ಸಮಾಜವಾದ' ಎಂಬುವನ್ನು ಜನ ಬರೀ ಭಾಷಣಗಳಲ್ಲಿ ಕೇಳಿ, ಪತ್ರಿಕೆಗಳಲ್ಲಿ ಓದಿ ತಿಳಿದಿರಬಹುದಲ್ಲವೆ, ಅದರ ಅನುಭವ ಮಾತ್ರ ಅವರಿಗೆ ಆಗಿಲ್ಲ, ಹಾಗಾಗಿ ಆ ಶಬ್ದ ಬರಿಯ ಶಬ್ದಕೋಶದ ಶಬ್ದವಾಗಿಯೇ ಇದೆ. ಆದರೆ ಭ್ರಷ್ಟಾಚಾರವೆಂದರೇನೆಂದು ಅವರಿಗೆ ಚೆನ್ನಾಗಿ ಗೊತ್ತು. ಕಾರಣ ತಮ್ಮ ದಿನನಿತ್ಯ ಜೀವನದಲ್ಲಿ ಅವರ ಇದನ್ನು ಕಾಣುತ್ತಿದ್ದಾರೆ, ಅನುಭವಿಸುತ್ತಿದ್ದಾರೆ, ಒಂದಲ್ಲ ಒಂದು ವಿಧದಲ್ಲಿ ಅವರು ಈ ಭ್ರಷ್ಟಾಚಾರದ ಪ್ರಭಾವಕ್ಕೆ ಒಳಗಾಗಿದ್ದಾರೆ. ಭಾರತದ ಎಲ್ಲಾ ರಂಗದಲ್ಲೂ ಹಬ್ಬಿರುವ ಈ ಭ್ರಷ್ಟಾಚಾರ ದೇಶದ ಪ್ರಗತಿಗೊಂದು ದೊಡ್ಡ ತಡೆ ಹಾಗೂ ಕಳಂಕ. ಇದನ್ನು ಸಮೂಲಾಗ್ರವಾಗಿ ನಿರ್ಮೂಲಗೊಳಿಸಬೇಕೆಂಬ ಕೂಗು ಎಲ್ಲೆಡೆಯಿಂದಲೂ ಕೇಳಬರುತ್ತಿದೆ. ಆದರೆ ಈ ಕಾರ್ಯ ನಾವೆಣಿಸಿದಷ್ಟು ಸುಲಭವೇ?

ಈ ಭ್ರಷ್ಟಾಚಾರವು ಇಂದು ಕೇವಲ ರಾಜಕೀಯ ಮತ್ತು ಆಡಳಿತರಂಗದಲ್ಲಿ ಮಾತ್ರವಲ್ಲ ವಾಣಿಜ್ಯ ಉದ್ಯೋಗ ಹಾಗೂ ವಿದ್ಯಾಕ್ಷೇತ್ರಗಳಿಗೂ ಹಬ್ಬಿದೆ. ಭ್ರಷ್ಟಾಚಾರವನ್ನು ನಿರ್ಮೂಲಮಾಡುವಲ್ಲಿ ಸರಕಾರವು ಕೈಕೊಳ್ಳುವ ಕಾರ್ಯಕ್ರಮವು ಒಂದು ದಿಟ್ಟತನದ ಕಾರ್ಯಕ್ರಮವಾಗಬೇಕೆನ್ನುವಾಗ, ಅದು ಭ್ರಷ್ಟಾಚಾರಗಳಿಗೆ ಒಂದು ತರದ ಆಹ್ವಾನದ ರೂಪದಲ್ಲಿರಬಾರದು. ಇದಕ್ಕಾಗಿ ಭ್ರಷ್ಟಾಚಾರದ ವಿರುದ್ಧ ಕೈಗೊಳ್ಳುವ ಕಾರ್ಯಕ್ರಮಗಳು ಅತಿ ಸೂಕ್ಷ್ಮ ರೀತಿಯವುಗಳಾಗಿದ್ದು, ಈ ಅಪರಾಧಕ್ಕಾಗಿ ಈಯುವ ಶಿಕ್ಷೆಯು ಕೂಡಾ ನ್ಯಾಯವನ್ನು ಒದಗಿಸುವ ಪರಮೋದ್ದೇಶದಿಂದ ಪ್ರೇರಿತವಾಗಿರಬೇಕು. ಭ್ರಷ್ಟಾಚಾರದ ಅಪರಾಧಕ್ಕೆ ಈಯುವ ಶಿಕ್ಷೆಯು ಬರೀ ಪ್ರತೀಕಾರದ ಉದ್ದೇಶದಿಂದ ಕೂಡಿರಬಾರದು. ಪ್ರತೀಕಾರದ ಉದ್ದೇಶದಿಂದ ಕೂಡಿದ ಕಾರ್ಯಕ್ರಮಗಳು ಹಾಗೂ ಶಿಕ್ಷೆಗಳಿಂದ ಆಡಳಿತ ರಂಗದಲ್ಲಿ ತೀವ್ರ ರೀತಿಯ ಅತೃಪ್ತಿ ಹುಟ್ಟಲು ಕಾರಣವಾಗಬಹುದು. ಅಂದರೆ ಈ ಅಪರಾಧ ಮಾಡಿದವರಿಗೆ ಶಿಕ್ಷೆ ಈಯಬಾರದೆಂಬುದು ನಮ್ಮ ವಾದವಲ್ಲ, ಆದರೆ ಶಿಕ್ಷೆ ಈಯುವಾಗ ನ್ಯಾಯ ರಕ್ಷಣೆಯೇ ಪರಮೋದ್ದೇಶವಾಗಿರಬೇಕು ಹೊರತು ಸೇಡಿನ ಭಾವನೆಯಲ್ಲ.

ಈ ಮಾತನ್ನು ಯಾಕೆ ಬರೆಯಬೇಕಾಯಿತೆಂಬುದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡಲು ಬಯಸುತ್ತೇವೆ. ಇಂದು ಲಂಚದ ಹಾಗೂ ಭ್ರಷ್ಟಾಚಾರದ ಅಪರಾಧದಲ್ಲಿ ಸಿಕ್ಕಿ ಬೀಳುವವರು ಕೇವಲ ಕೆಳದರ್ಜೆಯ ನೌಕರರು. ಅಲ್ಪ ಲಂಚವನ್ನು ಸ್ವೀಕರಿಸುವುದಕ್ಕೂ ಅಥವಾ ಇನ್ನಾವ ಕಾರಣಕ್ಕಾಗಿಯೂ ಒಬ್ಬ ಚಪರಾಸಿಯನ್ನು ಕೆಲಸದಿಂದಲೇ ಕಿತ್ತು ಹಾಕುವಷ್ಟರ ಮಟ್ಟಿಗೆ ಲಂಚನಿರೋಧ ಶಾಖೆ ಹೋಗುವಾಗ, ಸಾವಿರಗಟ್ಟಲೆ ಲಂಚ ಸ್ವೀಕರಿಸಿ ಭ್ರಷ್ಟಾಚಾರದಲ್ಲೇ ಜೀವನ ಸಾರ್ಥಕ್ಯವಿದೆಯೆಂದು ಕಂಡುಕೊಂಡ ಒಬ್ಬ ಆಫೀಸರನ ಕುರಿತು ಆ ಶಾಖೆ ಕಣ್ಣು ಮುಚ್ಚಿ ಕುಳಿತ ಘಟನೆಗಳೆಷ್ಟೋ ಇವೆ. ಹಲವು ಬಾರಿ ಈ ಚಪರಾಸಿ ವರ್ಗದ ನೌಕರರು, ಲಂಚ ಸ್ವೀಕಾರದ ಮಧ್ಯಮ ವರ್ಗಗಳಾಗಿ, ಶಿಕ್ಷೆಗೆ ಗುರಿಯಾಗುವುದೂ ಇದೆ, ಲಂಚ ಸ್ವೀಕರಿಸುವುದು ಅಪರಾಧವೇನೋ ಹೌದು. ಆದರೆ ಬಿಲ ಕೊರೆಯುವ ಹೆಗ್ಗಣಗಳನ್ನು ಬಿಟ್ಟು, ಬಿಲದಲ್ಲಿ ತೂರುವ ಚಿಕ್ಕ ಇಲಿಗಳನ್ನು ಹೊಡೆದರೇನು ಫಲ? ಮುಖ್ಯವಾಗಿ ಇಂದು ಮೇಲ್ಮಟ್ಟದಲ್ಲಿ ವ್ಯಾಪಿಸಿರುವ ಭ್ರಷ್ಟಾಚಾರ ನಿರ್ಮೂಲವಾದರೇನೇ ಕೆಳ ಮಟ್ಟದಲ್ಲಿ ಇದರ ನಿರ್ಮೂಲವಾದೀತು. ಲಂಚ ಸ್ವೀಕರಿಸುವ ಅಧಿಕಾರಿಗೆ ಲಂಚ ಸ್ವೀಕರಿಸಬೇಡವೆಂದು ತನ್ನ ಪೇದೆಗೆ ಹೇಳುವಷ್ಟು ಧೈರ್ಯ, ಆತ್ಮವಿಶ್ವಾಸ ಬಂದೀತೆ? ಹೀಗಾಗಿ ಇಡೀ ಇಲಾಖೆಗೆ ಇಲಾಖೆಯೇ ಲಂಚೇಶ್ವರ ಭಕ್ತರಾಗುತ್ತಾರೆ.

ಇನ್ನು ಭ್ರಷ್ಟಾಚಾರದ ನಿರ್ಮೂಲನೆಯಲ್ಲಿ ಸರಕಾರ ಎದುರಿಸಬೇಕಾದ ಇನ್ನೊಂದು ಸಮಸ್ಯೆ ಇದೆ. ಸರಕಾರೀ ನೌಕರರನ್ನು ಶಿಸ್ತಿನ ಕಾರ್ಯಕ್ರಮದ ಮೂಲಕ ಸರಕಾರ ದಂಡಿಸಬಹುದು ಅಥವಾ ಇತರ ಕಾರ್ಯಕ್ರಮಗಳ ಮೂಲಕ ತಕ್ಕ ಶಿಕ್ಷೆ ವಿಧಿಸಬಹುದು. ಆದರೆ ರಾಜಕೀಯ ಮುಂದಾಳುಗಳ ಭ್ರಷ್ಟಾಚಾರದ ಕುರಿತು ಮಾತ್ರ ಅದು ಯಾವ ಕಠಿಣ ಕಾರ್ಯಕ್ರಮವನ್ನೂ ಕೈಗೊಳ್ಳುವಂತಿಲ್ಲ. ಒಬ್ಬ ರಾಜಕೀಯ ಪುಢಾರಿಯ ಮೇಲೆಯೆ, ಅಥವಾ ಮಂತ್ರಿಯ ಮೇಲೆಯೇ ಭ್ರಷ್ಟಾಚಾರದ ಆರೋಪ ಹೊರಿಸಲ್ಪಟ್ಟು ಅದು ಸಿದ್ಧವಾದಾಗ ಹೆಚ್ಚೆಂದರೆ, ಅವನು ರಾಜೀನಾಮೆ ಕೊಟ್ಟು ತನ್ನ ಸ್ಥಾನದಿಂದ ಹೊರಗೆ ಬರುವಂತೆ ಮಾಡಬಹುದೇ ಹೊರತು, ಅವನಿಗೆ ಯಾವ ಶಿಕ್ಷೆಯನ್ನೂ ವಿಧಿಸುವುದು ಸಾಧ್ಯವಿಲ್ಲ. ಅದೇ ಒಬ್ಬ ಸರಕಾರಿ ನೌಕರನಾದರೆ, ಅಥವಾ ಉದ್ಯೋಗಿಯಾದರೆ ಅವನಿಗೆ ಅತಿ ಕಠಿಣವಾದ ಕಾರಾಗೃಹವಾಸವನ್ನೂ, ಜುಲುಮಾನೆಯನ್ನೂ ವಿಧಿಸುವುದಕ್ಕೂ ನಮ್ಮ ಕಾನೂನಿನಲ್ಲಿ ಅಧಿಕಾರವಿದೆ. ಈ ರಾಜಕೀಯ ವ್ಯಕ್ತಿಗಳಿಗೆ ಯಾಕೆ ಈ ಕಾನೂನು ಅನ್ವಯಿಸುವುದಿಲ್ಲ? ರಾಜೀನಾಮೆ ಈಯುವುದೊಂದೇ ಎಲ್ಲಾ ಅಪರಾಧಗಳಿಗೆ ಪರಿಹಾರವಾದರೆ, ಭ್ರಷ್ಟಾಚಾರ ನಿರ್ಮೂಲನ ಸಾಧ್ಯವೆ?

ಸರದಾರ್ ಪ್ರತಾಪ ಸಿಂಗ್ ಕೈರಾನರ ವಿಚಾರವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳೋಣ. ಅವರೇನೋ ಈಗ ರಾಜಿ ಇತ್ತು ಹೊರಗೆ ಬಂದಿದ್ದಾರೆ. ಇಲ್ಲಿಗೇ ಈ ಪ್ರಕರಣ ಮುಕ್ತಾಯವಾಯಿತೆಂದರೆ, ದಾಸ್ ಆಯೋಗದ ವರದಿಯ ಸಾರ್ಥಕ-

ಜಗತ್ಪರ್ಯಟನ

ರಾಜಾಜಿ ಸಲಹೆ

ಸಮರ್ಥ ಹಾಗೂ ದಕ್ಷ ಆಡಳಿತೆಯೇ ಪಂಡಿತ ಜವಾಹರಲಾಲ ನೆಹರೂರವರಿಗೆ ಅತಿ ಯೋಗ್ಯವಾದ ಸ್ಮಾರಕ ಎಂಬುದಾಗಿ ಇತ್ತೀಚೆಗೆ ಮುಂಬಯಿಯಲ್ಲಿ ಮಾತನಾಡುತ್ತಾ ರಾಜಾಜಿ ಹೇಳಿದರು. ಇಂದು ಭ್ರಷ್ಟಾಚಾರವು ಕಾಂಗ್ರೆಸ್ ಆಡಳಿತೆಯಲ್ಲಿ ತಾಂಡವವಾಡುತ್ತಿದೆ. ದೇಶಕ್ಕೆ ಈಗ ಬೇಕಾಗಿರುವುದು ಉತ್ತಮ ಹಾಗೂ ನಿಷ್ಕಲಂಕವಾದ ಆಡಳಿತೆ. ಭ್ರಷ್ಟಾಚಾರವನ್ನು ಮೂಲದಲ್ಲೇ ಹುಡುಕಿ ತೆಗೆದು ಕಿತ್ತುಹಾಕದಿದ್ದರೆ ನಮಗೆ ಉಳಿಗಾಲವಿಲ್ಲ ಎಂದು ಅವರು ಎಚ್ಚರಿಸಿದ್ದಾರೆ. ಸರಕಾರದ ಪರ್ಮಿಟು ಮತ್ತು ಲೈಸನ್ಸ್ ಪದ್ಧತಿಯೇ ಭ್ರಷ್ಟಾಚಾರದ ತಾಯಿಬೇರು ಎಂದು ಅವರು ಹೇಳಿ, ಈ ಪದ್ಧತಿಯನ್ನು ಕಿತ್ತು ಹಾಕಿದರೆ ಅರ್ಧಾಂಶ ಭ್ರಷ್ಟಾಚಾರ ನಿಂತೀತು. ಪರ್ಮಿಟು ಹಾಗೂ ಲೈಸನ್ಸ್‌ಗಳನ್ನು ಕೊಡಲು ಒಂದು ಸ್ವತಂತ್ರವಾದ ಬೋರ್ಡನ್ನು ರಚಿಸಬೇಕು ಎಂಬುದಾಗಿ ಅವರು ಸಲಹೆ ಮಾಡಿದ್ದಾರೆ.

(ಆಯೋಗದ ವರದಿಯ ಸಾರ್ಥಕ-)ವೇನು? ಆಯೋಗದ ವರದಿಯಲ್ಲಿ ಸಿದ್ಧಗೊಳಿಸಲ್ಪಟ್ಟ ಆರೋಪಗಳ ಕುರಿತು ತಕ್ಕ ಕಾರ್ಯಕ್ರಮ ಕೈಗೊಂಡು, ಸಾರ್ವಜನಿಕ ನೆಲೆಯಲ್ಲಿ ಸರಕಾರ ಈ ಕುರಿತು ಮುಂದಡಿಯಿಡಬೇಕು. ರಾಜೀನಾಮೆ ಈಯುವುದರಿಂದ ಭ್ರಷ್ಟಾಚಾರ ಮುಚ್ಚಿ ಹೋಗುವುದಾದರೆ, ಎಲ್ಲಾ ನಾಯಕರೂ ಈ ಮಾರ್ಗವನ್ನು ಕೊನೆಗಾಲಕ್ಕೆ ಅನುಸರಿಸಿಯಾರು.

ಬರೀ ಕಾನೂನು ಮತ್ತು ಶಿಕ್ಷೆಗಳಿಂದ ಭ್ರಷ್ಟಾಚಾರ ನಿಲ್ಲುವುದೆಂಬುದು ಸುಳ್ಳು. ಲಂಚ ಕೊಡುವವರಿರುವುದರಿಂದಲೇ ಲಂಚ ತೆಗೆದುಕೊಳ್ಳುವುದು ನಡೆದಿದೆ. ಸಾರ್ವಜನಿಕರು ಲಂಚ ಕೊಡುವುದು ಒಂದು ಮಾಮೂಲ ಎಂದು ತಿಳಿಯುವುದನ್ನು ಬಿಡಬೇಕು. ಭ್ರಷ್ಟಾಚಾರದ ವಿರುದ್ಧ ಜನರು ಹೋರಾಡುವ ದೃಢ ನಿರ್ಧಾರ ತಾಳಬೇಕು. ಅವರ ಮನೋಭಾವವು ಬದಲಾಗಬೇಕು. ಲಂಚ ಕೊಟ್ಟೇ ಕಾರ್ಯ ಸಾಧಿಸುತ್ತೇವೆ ಎಂಬ ಭಾವನೆ ತ್ಯಜಿಸಬೇಕು.

"ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ಎಂಬುದು ಗಾದೆ ಮಾತು. ಇಂದು ಮೇಲ್ಮಟ್ಟದಲ್ಲಿರುವ ಮಂತ್ರಿ ವರ್ಗದವರು, ಆಫೀಸರರುಗಳು ಲಂಚ ಲೋಲುಪರಾಗಿದ್ದಾರೆ ಎನ್ನುವ ಅಪವಾದವಿದೆ. ಸಾರ್ವಜನಿಕ ಮುಂದಾಳುಗಳೂ, ರಾಜಕೀಯ ನಾಯಕರೂ ಈ ಅಪವಾದಕ್ಕೆ ಹೊರತಾಗಿಲ್ಲ. ಮೊತ್ತಮೊದಲು ನಾಯಕರೆನಿಸಿಕೊಂಡವರು ತಮ್ಮ ನಡತೆ ತಿದ್ದಿಕೊಂಡು ಇತರರಿಗೆ ಮಾರ್ಗದರ್ಶನವೀಯಬೇಕು. ಹಾಗಾದರೆ ಎಲ್ಲರೂ ಅವರ ಆದರ್ಶ ಅನುಸರಿಸಿಯಾರು. ಬೇಲಿಯೇ ಎದ್ದು ಹೊಲ ಮೇದರೆ ಮತ್ತೇನು ಉಳಿಯಿತು?

ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ನಂದಾ ಅಪರಿಮಿತ ಪ್ರಾಮಾಣಿಕತೆಯಿಂದ ದುಡಿಯುವ ನಿರ್ಧಾರ ಮಾಡಿದ್ದಾರೆ. ಅವರ ಉತ್ಸಾಹ, ಕಾರ್ಯನಿಷ್ಠೆ ಹಾಗೂ ಪ್ರಾಮಾಣಿಕತೆಗಳನ್ನು ಪ್ರಶ್ನಿಸುವವರೇ ಇಲ್ಲ. ಅವರು ಇತ್ತೀಚೆಗೆ ಸ್ಥಾಪಿಸಿದ ಸದಾಚಾರ ಸಮಿತಿ ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಇನ್ನೊಂದು ಹೆಜ್ಜೆ. ದಿನಾ ಒಂದು ಗಂಟೆ ಸಾರ್ವಜನಿಕರ ದೂರುಗಳನ್ನು ಕೇಳುವ ನಂದಾ ನ್ಯಾಯ ಪರಿಪಾಲಕ, ರಾಜ ಮಹಾರಾಜರುಗಳ ಪರಂಪರೆ ತುಳಿಯುವ ಲಕ್ಷಣ ಕಾಣುತ್ತದೆ. ಅವರ ಪ್ರತಿಜ್ಞೆ ಕೈಗೂಡಲಿ, ದೇಶದಲ್ಲಿ ಹಬ್ಬಿರುವ ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಅವರಿಗೆ ಜನತೆಯ ಬೆಂಬಲ ದೊರೆತು, ದೇಶದ ಅನಿಷ್ಟಕಾರಿ ಸಮಸ್ಯೆಯು ಬೇಗನೇ ದೂರಾಗಲಿ ಎಂದು ಹಾರೈಸುತ್ತೇವೆ.

ತೀನ್ ಮೂರ್ತಿ ನಿವಾಸ

ಹದಿನಾರು ವರ್ಷಗಳವರೆಗೆ ಪ್ರಧಾನಿ ನೆಹರೂರವರು ವಾಸಿಸಿಕೊಂಡಿದ್ದ "ತೀನ್ ಮೂರ್ತಿ" ನಿವಾಸವನ್ನು ಅವರ ಸ್ಮಾರಕವಾಗಿ ಪರಿವರ್ತಿಸುವ ನಿರ್ಧಾರವನ್ನು ಮಾಡಲಾಗಿದೆ. ಈ ನಿವಾಸದಲ್ಲಿ ನೆಹರೂರವರ ಜೀವನಕ್ಕೆ ಸಂಬಂಧಿಸಿದ ಚಿತ್ರಪಟಗಳು ಛಾಯಾ ಚಿತ್ರಗಳು ಇತ್ಯಾದಿಗಳನ್ನು ಇಲ್ಲಿ ಸಂಗ್ರಹಿಸಿ ಪ್ರದರ್ಶನಕ್ಕೆ ಇಡಲಾಗುವುದು. ಪಂಡಿತಜೀಯವರ ಜೀವನದ ಸಂಪೂರ್ಣ ವಿಷಯಗಳು ಈ ಸ್ಮಾರಕದಲ್ಲಿ ಸಂಗ್ರಹಿಸಲ್ಪಡಲು ಸಾಧ್ಯವಾಗುವಂತೆ ಶ್ರೀ ನೆಹರೂರವರ ಜೀವನ ಹಾಗೂ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಯಾವುದೇ ದಾಖಲೆ, ಚಿತ್ರ ಇತ್ಯಾದಿಗಳು ಯಾವನೇ ಭಾರತೀಯ ಅಥವಾ ವಿದೇಶೀಯರಲ್ಲಿದ್ದರೆ ಅವುಗಳನ್ನವರು ಶ್ರೀಮತಿ ಇಂದಿರಾಗಾಂಧಿಯವರಿಗೆ ತೀನ್ ನಿವಾಸಕ್ಕೆ ಕಳುಹಿಸಿಕೊಡಬೇಕಾಗಿ ಪ್ರಧಾನಿ ಶಾಸ್ತ್ರಿಯವರೀಗ ವಿನಂತಿಸಿದ್ದಾರೆ. ತೀನ್ ಮೂರ್ತಿ ನಿವಾಸವು ಒಂದು ಆಕರ್ಷಕ ಸಂಗ್ರಹಾಲಯವಾಗಲು ಎಲ್ಲ ಯತ್ನಗಳನ್ನು ಮಾಡಲಾಗುತ್ತದೆ.

ಆಹಾರಧಾನ್ಯಗಳ ಪರಮಾವಧಿ ಬೆಲೆ

ಸರಕಾರವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಆಹಾರ ಧಾನ್ಯಗಳ ಪರಮಾವಧಿ ಬೆಲೆಯನ್ನು ನಿರ್ಧರಿಸಿ ಘೋಷಿಸುವುದು ಎಂದು ಕೇಂದ್ರ ಆಹಾರ ಮತ್ತು ಕೃಷಿ ಮಂತ್ರಿ ಶ್ರೀ ಸಿ. ಸುಬ್ರಮಣ್ಯರು ಇತ್ತೀಚೆಗೆ ಮುಂಬಯಿಯಲ್ಲಿ ಮಾತಾಡುತ್ತಾ ಹೇಳಿರುವರು. ವ್ಯಾಪಾರಿಗಳು ಹಾಗೂ ದಾಸ್ತಾನುಗಾರರು ಸರಿಯಾದ ದಾರಿಯಲ್ಲಿ ನಡೆಯದಿದ್ದರೆ ಅವರ ವಿರುದ್ಧ ಭಾರತದ ರಕ್ಷಣಾ ಕಾಯ್ದೆಯನ್ನು ಜ್ಯಾರಿಗೊಳಿಸುವದಕ್ಕೂ ಸರಕಾರ ಹಿಂಜರಿಯಲಾರದು ಎಂದು ಅವರು ಎಚ್ಚರಿಸಿದ್ದಾರೆ. ಸರಕಾರದ ಮುಂದೆ ಈಗಿರುವ ಮೊತ್ತಮೊದಲ ಕಾರ್ಯವೆಂದರೆ ಈಗಿರುವ ಬೆಲೆಗಳನ್ನು ಏರದಂತೆ ನೋಡಿಕೊಳ್ಳುವುದು. ಇದು ಕೈಗೂಡಿದ ನಂತರ ಸರಕಾರ ನಿಧಾನವಾಗಿ ಬೆಲೆಗಳನ್ನು ಇಳಿಸುವ ಕಾರ್ಯದಲ್ಲಿ ತೊಡಗುವುದು ಎಂದು ಅವರು ಹೇಳಿದರು.

ಶಾಸ್ತ್ರಿಯವರ ಆರೋಗ್ಯ

ಪ್ರಧಾನ ಮಂತ್ರಿ ಲಾಲಬಹಾದ್ದೂರ್ ಶಾಸ್ತ್ರಿಯವರ ಆರೋಗ್ಯವು ಇತ್ತೀಚೆಗೆ ತುಸು ಕೆಟ್ಟಿತ್ತೆಂದೂ, ಈಗ ಅವರು ತುಸು ಸುಧಾರಿಸುತ್ತಿರುವರೆಂದೂ ವರದಿಯಾಗಿದೆ. ಮಿತಿಮೀರಿದ ಕಾರ್ಯಭಾರದಿಂದ ಅವರಿಗೆ ತುಸು ಜ್ವರ ಬಂದಿತ್ತೆಂದೂ, ಈಗ ದೇಹದ ಉಷ್ಣತಾಮಾನವು ಸರಿಯಾಗಿದೆಯೆಂದೂ ತಿಳಿದು ಬರುತ್ತದೆ. ಪ್ರಧಾನಿ ಹುದ್ದೆ ಹೊತ್ತ ಕೆಲವೇ ದಿನಗಳಲ್ಲಿ ಶಾಸ್ತ್ರಿಯವರ ಪರಿಸ್ಥಿತಿ ಹೀಗಾದ ಬಗ್ಗೆ ದೇಶದ

ಅಲ್ಲಲ್ಲಿಯ ಸುದ್ದಿ ಸಾರ

ಸಂತಾಪ ಸೂಚಕ ಸಭೆ:— ಬೇಸಿಗೆಯ ರಜೆ ಕಳೆದು ಕಾಲೇಜು ಪ್ರಾರಂಭವಾದ ತಾ 24 ರಂದು ಉಡುಪಿ ಎಂ. ಜಿ. ಎಂ. ಕಾಲೇಜಿನ ಪ್ರಾಧ್ಯಾಪಕರೂ ವಿದ್ಯಾರ್ಥಿಗಳೂ ಸಭೆಸೇರಿ ಭಾರತದ ಪ್ರಧಾನಿ ಪಂ| ನೆಹರೂ ಹಾಗೂ ಡಾ| ಎ. ವಿ. ಬಾಳಿಗ ಇವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸುವ ಗೊತ್ತುವಳಿಗಳನ್ನು ಅಂಗೀಕರಿಸಿದರು ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಕಾಲೇಜಿನ ಆಪ್ತ ಹಿತೈಷಿಗಳಾಗಿದ್ದ ಡಾ| ಎ. ವಿ. ಬಾಳಿಗರ ಹಿರಿಮೆಯನ್ನು ಎತ್ತಿ ತೋರಿಸಿದರು. ಉಡುಪಿಯ ಸಮೀಪದ ಕಲ್ಯಾಣಪುರದಲ್ಲಿ ಹುಟ್ಟಿದ ಇವರು ಬಾಲ್ಯವನ್ನು ಸಾಮಾನ್ಯರಂತೆ ಕಳೆದರೂ, ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾಗ ಗಾಂಧೀಜಿಯವರ ಸ್ವಾತಂತ್ರ್ಯ ಚಳವಳಿಯ ಕರೆಗೆ ಓಗೊಟ್ಟರು. ತರುವಾಯ ವೈದ್ಯಕೀಯ ಶಿಕ್ಷಣವನ್ನು ಮುಂದುವರಿಸಿ ಅಂತರಾಷ್ಟ್ರೀಯ ಖ್ಯಾತಿಯ ಸರ್ಜನರಾಗಿ ರೂಪುಗೊಂಡರು. ಸಮಾಜವಾದದಲ್ಲಿ ಆಸಕ್ತಿಯಿದ್ದ ಡಾ| ಬಾಳಿಗರು ಬಡವರಿಗೆ ಅತ್ಯಂತ ಉಪಕಾರಿಗಳಾಗಿದ್ದರು. ಭಾರತ ರಷ್ಯಾಗಳೊಳಗೆ ಸಾಂಸ್ಕೃತಿಕ ಸಂಬಂಧ ಬೆಳೆಯಲು ಡಾ| ಬಾಳಿಗರು ಮುಖ್ಯ ಕಾರಣರಾಗಿದ್ದರು. ಉಡುಪಿಯಲ್ಲಿ ವಿದ್ಯಾ ಪ್ರಸಾರಕ್ಕಾಗಿ ಆಗುತ್ತಿದ್ದ ಪ್ರಯತ್ನಗಳಿಗೆ ಸಂಪೂರ್ಣ ಸಹಕಾರಿಗಳಾಗಿದ್ದ ಇವರು ಎಂ. ಜಿ. ಎಂ ಕಾಲೇಜನ್ನು 1949 ರಲ್ಲಿ ಉದ್ಘಾಟಿಸಿದರು. ಅವರ ನಿಧನದಿಂದಾಗಿ ಆತ್ಮೀಯರೊಬ್ಬರು ಕಳೆದು ಹೋದಂತಾಯಿತೆಂದು ಶ್ರೀ ಹರಿದಾಸ್ ಭಟ್ಟರು ತಿಳಿಸಿದರು. ಸಂತಾಪ ಸೂಚಕ ರಂಪನೊಂದಿಗೆ ಸಭೆಯು 2 ನಿಮಿಷಗಳ ಮೌನವಾಚರಿಸಿತು.

ತರುವಾಯ ಕಾಲೇಜಿನ ಪ್ರಾಧ್ಯಾಪಕರಲ್ಲೊಬ್ಬರಾದ ಶ್ರೀ ಶ್ರೀಶ ಬಳ್ಳಾಳರು ಪಂಡಿತ ನೆಹರೂರ ಕುರಿತು ಮಾತನಾಡುತ್ತ ನೆಹರೂರವರು ರಾಜಗಾಂಭೀರ್ಯವಿದ್ದ ವ್ಯಕ್ತಿಯೆಂದು ವರ್ಣಿಸಿದರು. ಯಾವಾಗಲೂ ಮುಂದಾಳುಗಳಾಗಿದ್ದ ಅವರು ಗೌರವವನ್ನು ಸಹಜವಾಗಿಯೇ ಪಡೆಯುತ್ತಿದ್ದರು. ಭಾರತವು ಪ್ರಪಂಚದ ಅನೇಕ ರಾಷ್ಟ್ರಗಳೊಂದಿಗೆ ಬೆಳೆಸಿಕೊಂಡ ಮೈತ್ರಿಗೆ ಪಂ| ನೆಹರೂರೇ ಕಾರಣರಾಗಿದ್ದರೆಂದು ಅವರು ಅಭಿಪ್ರಾಯ ಪಟ್ಟರು ಅವರ ನಿಧನದಿಂದುಂಟಾದ ತೆರವನ್ನು ತುಂಬಾ ಕಷ್ಟದಿಂದ ತುಂಬಿಸಬೇಕಷ್ಟೆ ಎಂದು ತಿಳಿಸಿದರು. ಡಾ| ನೆಹರೂರವರ ಆತ್ಮಕ್ಕೆ ಚಿರಶಾಂತಿಯುಂಟಾಗುವಂತೆ ಪ್ರಾರ್ಥಿಸುತ್ತ ಸಭೆಯು ಮೌನಪ್ರಾರ್ಥನೆಯನ್ನು ಸಲ್ಲಿಸಿತು.

ಕ್ಯಾನ್ಸರ್ ಸಂಸ್ಥೆ ಸ್ಥಾಪನೆಯ ಸೂಚನೆ — ಮಣಿಪಾಲದಲ್ಲೊಂದು ಕ್ಯಾನ್ಸರ್ ಸಂಸ್ಥೆಯನ್ನು ಸ್ಥಾಪಿಸಬಹುದಾಗಿದೆ ಎಂದು ಶ್ರೀ ಟಿ. ಎ. ಪೈಯವರು ತಾ. 23 ರಂದು ಉಡುಪಿ ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಖಾಸಗಿ ವೈದ್ಯರುಗಳ ಸಹಕಾರ ತೆಗೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಯಾನ್ಸರ್ ರೋಗದ ಚಿಕಿತ್ಸಾ ಕೇಂದ್ರವನ್ನು ಆರಂಭಿಸುವುದು ಬಹಳ ಮುಖ್ಯವಾಗಿದೆ ಎಂದು ಅವರು ತಿಳಿಸಿದರು.

ಬೇರೆ ಕಡೆಗಳಲ್ಲಿ ಆಸ್ಪತ್ರೆಗಳಲ್ಲಿ ಸಹ ವೈದ್ಯರಿಲ್ಲ. ಆದರೆ ಈ ಜಿಲ್ಲೆಯಲ್ಲಿ ಹಳ್ಳಿಗಳಲ್ಲಿ ಕೂಡ ವೈದ್ಯರಿದ್ದಾರೆ. ಇಲ್ಲಿ ಲಭ್ಯವಿರುವ ವೈದ್ಯಕೀಯ ಸೌಕರ್ಯಗಳ ಸಮೀಕ್ಷೆ ನಡೆಸಿ ವಿಷಯ ಸಂಗ್ರಹಣೆ ಮಾಡಬೇಕೆಂದರು.

ಇಂತಹ ಪ್ರಯತ್ನಕ್ಕೆ ಎಲ್ಲ ಕಡೆಯಿಂದ ಪ್ರೋತ್ಸಾಹ ಸಿಗುತ್ತದೆಂದು ಶ್ರೀ ಪಿ. ಎಸ್. ಆಚಾರ್ಯ ಅಭಿಪ್ರಾಯಪಟ್ಟರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಕೆ. ಪೈಯವರು ಈ ಒಳ್ಳೆಯ ಯೋಜನೆಯನ್ನು ಹೊಸ ರೋಟರಿ ವರ್ಷದಲ್ಲಿ ಕೈಗೊಳ್ಳಬಹುದಾಗಿದೆ ಎಂದರು.

ರೋಟರಿ ಕ್ಲಬ್ ಉಡುಪಿ — ಬೆಂಗಳೂರಿನ ಶ್ರೀ ಸಿ. ಕೆ. ನಾಗರಾಜ ರಾವ್‌ರವರು ತಾ. 23ರಂದು ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ತಾವು ಸದ್ಯದಲ್ಲೇ ಅಕ್ಕಮಹಾದೇವಿಯ ಜೀವನ ಕುರಿತು ಕನ್ನಡ ಚಲಚ್ಚಿತ್ರವನ್ನು ತಯಾರಿಸುವ ಕಾರ್ಯ ಆರಂಭಿಸಲಿರುವುದಾಗಿ ತಿಳಿಸಿದರು. ಎಂಟು ಶತಮಾನಗಳ ಹಿಂದೆ ಶಿವಮೊಗ್ಗ ಜಿಲ್ಲೆಯಲ್ಲಿ ಜನಿಸಿದ ಅಕ್ಕ ಮಹಾದೇವಿ ದಿಟ್ಟತನದಿಂದ ಭಕ್ತಿ ಪೂರ್ಣವಾದ ಉತ್ತಮ ಜೀವನ ನಡೆಸಿದರೆಂದು ಅವರು ನುಡಿದರು. ಅವಳ ಬಗ್ಗೆ ಜಾತೀಯ ಭಾವನೆಯಿಂದ ಆಲೋಚಿಸಬಾರದು. ಆಕೆಯ ಪವಿತ್ರ ಜೀವನದ ಉಚ್ಚ ಧ್ಯೇಯಗಳನ್ನು ಅರ್ಥಮಾಡಿಕೊಂಡು ಅನುಸರಣೆ ಮಾಡುವುದಕ್ಕೆ ಎಲ್ಲರೂ ಪ್ರಯತ್ನಿಸಬೇಕು ಎಂದರು.

ಶ್ರೀ ನಾಗರಾಜ ರಾಯರನ್ನು ಕಾರ್ಯದರ್ಶಿ ಶ್ರೀ ಎ. ಜಿ. ಅಲ್ಸೆ ಸಭೆಗೆ ಪರಿಚಯ ಮಾಡಿಕೊಟ್ಟರು.

ಶ್ರೀ ಕೆ. ಕೆ. ಪೈಯವರು ಅಧ್ಯಕ್ಷತಾ ಭಾಷಣ ಮಾಡಿ, ಶ್ರೀ ರಾಯರಿಗೆ ಉಡುಪಿಯ ರೋಟೇರಿಯನ್ನರುಗಳ ಶುಭಾಶಯಗಳನ್ನು ತಿಳಿಸಿದರು.

ಶ್ರೀ ಪಡಮುನ್ನೂರು ನಾರಾಯಣಾಚಾರ್ಯರ ಸನ್ಮಾನೋತ್ಸವ—ದಕ್ಷಿಣ ಭಾರತದ ಕೆಲವೇ ಮಂದಿ ಶ್ರೇಷ್ಠ ಸಂಸ್ಕೃತ ವಿದ್ವಾಂಸರಲ್ಲೊಬ್ಬರೂ ದ್ವೈತ ಸಿದ್ಧಾಂತದಲ್ಲಿ ಉದ್ದಾಮ ಪಂಡಿತರೂ, ಪ್ರತಿಭಾವಂತ ನ್ಯಾಯ ತರ್ಕ ಶಾಸ್ತ್ರಜ್ಞರೂ ಆಗಿರುವ ಉಡುಪಿಯ ಶ್ರೀ ಪಡಮುನ್ನೂರು ನಾರಾಯಣಾಚಾರ್ಯರನ್ನು ಸಾರ್ವಜನಿಕ ನೆಲೆಯಲ್ಲಿ ಸನ್ಮಾನಿಸಲು ಸಮಾಲೋಚಿಸುವ ಬಗ್ಗೆ ಪುರ ಜನರ ಸಭೆಯೊಂದು ಜೂನ್ ತಾ 19ರಂದು ಉಡುಪಿ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಶ್ರೀ ಎ. ಜಿ ಅಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಪುರ ಸಭಾಪತಿ ಶ್ರೀ ಪಿ. ಆರ್. ಶೆಣೈಯವರು ಸಭೆಯನ್ನು ಕರೆದುದರ ಉದ್ದೇಶವನ್ನು ವಿವರಿಸಿ ಶ್ರೀ ನಾರಾಯಣಾಚಾರ್ಯರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟರು. ಡಾ| ಪಿ ಜಿ. ಆಚಾರ್ಯ, ಶ್ರೀಗಳಾದ ಕು. ಶಿ. ಹರಿದಾಸ ಭಟ್ಟ, ಯು. ಪುಂಡಲೀಕ ಶೆಣೈ, ಪಿ. ಶೀನ ಶೆಟ್ಟಿ, ಎಸ್. ಎಲ್. ಎನ್. ಭಟ್, ಎಂ. ಎಸ್. ಅನಂತ ಕೃಷ್ಣಾಚಾರ್ಯ, ಮೊದಲಾದವರು ಉಪಯುಕ್ತ ಸಲಹೆಯನ್ನು ನೀಡಿದ ತರುವಾಯ ಈ ಕೆಳಗಿನ ಕಾರ್ಯಕ್ರಮಗಳನ್ನು ಜರಗಿಸುವ ನಿರ್ಣಯ ತೆಗೆದುಕೊಳ್ಳಲಾಯಿತಲ್ಲದೆ ಸಮಿತಿಯೊಂದನ್ನು ರಚಿಸಲಾಯಿತು.

ಶ್ರೀ ಆಚಾರ್ಯರಿಗೆ ಸಾರ್ವಜನಿಕರ ನೆರವಿನಿಂದ ನಿಧಿಯೊಂದನ್ನು ಅರ್ಪಿಸುವುದು, ಪುರಸಭೆ ಹಾಗೂ ಸಂಘ ಸಂಸ್ಥೆಗಳಿಂದ ಅಭಿನಂದನಾ ಪತ್ರಗಳನ್ನು ಸಲ್ಲಿಸುವುದು, ಶ್ರೀ ಆಚಾರ್ಯರೇ ಬರೆದಿರುವ ಅಪ್ರಕಟಿತ ಸಂಸ್ಕೃತ ಗ್ರಂಥವನ್ನು ಪ್ರಕಟಿಸುವುದು— ಹಾಗೂ ಅವರ ಬಗ್ಗೆ ಬಲ್ಲವರಿಂದ ಲೇಖನಗಳನ್ನು ಬರೆಸಿ ಪುಸ್ತಕ ರೂಪದಲ್ಲಿ ಸಂಗ್ರಹಿಸಿ ಪ್ರಕಟಪಡಿಸುವುದು, ಸನ್ಮಾನೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸುವುದು.

ಉಡುಪಿ ಮಂಡಲ ಕಾಂಗ್ರೆಸಿನ ಸಭೆ—ಶ್ರೀ ಬಿ. ಕಾಳಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. 21ರಂದು ಉಡುಪಿ ಮಂಡಲ ಕಾಂಗ್ರೆಸಿನ ಸಭೆಯು ಸೇರಿ ನ್ಯಾಯ ಬೆಲೆಯ ಅಂಗಡಿಗಳು ಉಡುಪಿಯ ಎಲ್ಲ ಕಡೆಗಳಲ್ಲೂ ತೆರೆಯಲ್ಪಟ್ಟು, ಅಲ್ಲಿಗೆ ಸಾಕಷ್ಟು ಅಕ್ಕಿ ಪೂರೈಸುವಂತೆ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸ್ವೀಕರಿಸಲಾಯಿತು. ಶ್ರೀ ಎ. ಜಿ. ಅಲ್ಸೆಯವರು ಸಭೆಯ ಉದ್ದೇಶಗಳನ್ನು ವಿವರಿಸಿದ ಬಳಿಕ, ಪಿಠ್ಠ ಮಾಸ್ಟ ನೆಹರೂರವರ ಮರಣಕ್ಕೆ ಶೋಕ ಪ್ರದರ್ಶಿಸುವ, ಹಾಗೂ ನೂತನ ಮುಖ್ಯಮಂತ್ರಿಗಳ ಸಚಿವ ಸಂಪುಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುವ ನಿರ್ಣಯವನ್ನು ಶ್ರೀ ಪಿ. ರಂಗನಾಥ ಶೆಣೈಯವರು ಮಂಡಿಸಿ ಅಂಗೀಕರಿಸಲಾಯಿತು. ಹಾಗೆಯೇ ಡಾ| ಎ. ವಿ. ಬಾಳಿಗರ ಮತ್ತು ಶ್ರೀ ಪಾಂಗಾಳ ಮಂಜುನಾಥ ನಾಯಕರ ನಿಧನದ ಬಗೆ ಶೋಕ ಪ್ರದರ್ಶಿಸಿ ಮಂಡಿಸಿದ ನಿರ್ಣಯಗಳ ಅಂಗೀಕಾರವಾಯಿತು. ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯುವ ಬಗ್ಗೆ ಜಿಲ್ಲಾಧಿಕಾರಿಗಳೊಡನೆ ಮಾತನಾಡಲು ಶ್ರೀ ಟಿ. ಎ. ಪೈಗಳ ನೇತೃತ್ವದಲ್ಲಿ ಒಂದು ಶಿಷ್ಟ ಮಂಡಲ ಕಳುಹಿಸುವ ನಿರ್ಣಯವು ಸಭಾಂತ್ಯದಲ್ಲಾಯಿತು.

ಅದಮಾರು ಹ್ಯಾಸ್ಕೂಲಿನಲ್ಲಿ XI ನೇ ತರಗತಿ:—ತಾ. 22 ರಂದು ಅದಮಾರು ಹಾಯರ್ ಸೆಕೆಂಡರಿ ಶಾಲೆಯಲ್ಲಿ ಪ್ರಿ. ಯುನಿವರ್ಸಿಟಿಗೆ ಸಮಾನವಾದ XI ನೇ ತರಗತಿಯನ್ನು ಶ್ರೀ ಕೆ. ಆರೂರು ಲಕ್ಷ್ಮೀನಾರಾಯಣ ರಾಯರು ಶ್ರೀ ಕೆ. ಆರ್. ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಪ್ರಾರಂಭದಲ್ಲಿ ಶ್ರೀ ಶಾಂತರಾಜ ಅರಸಮಾರಮ್ಮ ಹೆಗ್ಗಡೆಯವರು ಸ್ವಾಗತಿಸಿದರು ಉದ್ಘಾಟಕರು 11 ನೇ ದೀಪವನ್ನು ಹಚ್ಚಿ ಗಾಂಧೀ ತತ್ವದ ತಳಹದಿಯ ಮೇಲೆ ನಡೆಯುತ್ತಿರುವ ಈ ಶಾಲೆಗೆ ಉತ್ತಮ ಭವಿಷ್ಯವಿದೆಯೆಂದರು ಅಧ್ಯಕ್ಷರು ಮಾತಾಡುತ್ತಾ ಆ ಶಾಲೆಯ ವಿಧ್ಯಾರ್ಥಿಗಳು ಆದರ್ಶ ಜೀವನದಿಂದ ಶಾಲೆಯ ಕೀರ್ತಿಯನ್ನು ಹಬ್ಬಿಸಬೇಕೆಂದರು ಶ್ರೀ ಅದಮಾರು ಮಠದ ಶ್ರೀಗಳವರು ಆಶೀರ್ವದಿಸುತ್ತಾ ಶಾಲೆಗೆ ಉತ್ತಮ ಭವಿಷ್ಯವನ್ನು ಹಾರೈಸಿದರು. ಅಂತ್ಯದಲ್ಲಿ ಮುಖ್ಯೋಪಧ್ಯಾಯ ಶ್ರೀ ಎ. ಎಸ್. ಭಟ್ಟರು ವಂದನೆಗಳನ್ನರ್ಪಿಸಿದರು.

ಅಜೆಕಾರು—ಮಂಗಳೂರು ಬೆಥನಿ ಸಂಸ್ಥೆಯ ನೆರವಿನಿಂದ ಅಜೆಕಾರಿನಲ್ಲಿ ಸ್ಥಾಪಿಸಲಾದ ಜ್ಯೋತಿ ಹ್ಯಾಸ್ಕೂಲಿನ ಉದ್ಘಾಟನಾ ಸಮಾರಂಭವು ತಾ. 24ರಂದು ಶ್ರೀ ಎಸ್. ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಶ್ರೀ ಕೆ. ಗೋಪಾಲ ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ದಯಾನಂದ ಕಲ್ಲೆಯವರು ಉದ್ಘಾಟಿಸುತ್ತಾ ಬೆಥನಿ ವಿದ್ಯಾ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿ ಶಾಲೆಗೆ ಶುಭ ಕೋರಿದರು. ಮಂಗಳೂರಿನ ಡಾ| ಆರ್. ಡಿ. ಮೆಲ್ಲೋ ಬಿಷಪರು ಹ್ಯಾಸ್ಕೂಲನ್ನು ಹರಸಿದರು. ಬೆಥನಿ ವಿದ್ಯಾಸಂಸ್ಥೆಯ ಮದರ್ ಜನರಲ್‌ರವರು ಹ್ಯಾಸ್ಕೂಲಿನ ಯಶಸ್ಸಿಗೆ ಕಾರಣರಾದ ಸರಕಾರ ಜನತೆ ಮತ್ತು ಸ್ಥಳೀಯ ರೆ| ಫಾ. ಯಲ್. ಡಿ.ಸೋಜರ ಕಾರ್ಯಗಳನ್ನು ಸ್ಮರಿಸಿದರು. ಸಭಿಕರಲ್ಲಿ ಶ್ರೀಗಳಾದ ಎಮ್. ಡಿ. ಅಧಿಕಾರಿ, ರೆ| ಫಾ. ಕುಲಾಸೋ ಮತ್ತು ಡಾ| ಯು. ಕೃಷ್ಣನವರು ಮಾತಾಡುತ್ತಾ ಶಾಲೆಗೆ ಶುಭ ಕೋರಿದರು. ಅಧ್ಯಕ್ಷರ ಸಮಾರೋಪ ಭಾಷಣ ಮಾಡುತ್ತಾ ಊರ ಪರವೂರ ಮಕ್ಕಳನ್ನು ಸೆಳೆಯುವ ಆದರ್ಶ ಶಾಲೆಯಾಗಲಿಯೆಂದು ಹಾರೈಸಿದರು. ಕೊನೆಯಲ್ಲಿ ಸ್ಥಳೀಯ ರೆ| ಫಾ. ಯಲ್. ಡಿ.ಸೋಜರು ಧನ್ಯವಾದಗಳನ್ನರ್ಪಿಸಿದರು.

ಕಾಸರಗೋಡಿನ ಕನ್ನಡ ಮಕ್ಕಳಿಗೆ ಮೈಸೂರು ಸರ್ಕಾರ ಆಶ್ರಯ ನೀಯಲಿ

ಕನ್ನಡನಾಡಿನ ಒಂದು ಭಾಗವೇ ಆಗಿದ್ದು ರಾಜಕೀಯದ ಯಾವುದೋ ಒಂದು ದುರ್ಘಟನೆಯ ಫಲವಾಗಿ ತಾತ್ಕಾಲಿಕವಾಗಿ ಕೇರಳಕ್ಕೆ ಸೇರಿರುವ ಕಾಸರಗೋಡು ತಾಲೂಕಿನ ಎರಡು ಲಕ್ಷ ಕನ್ನಡಿಗರ ಒಲುಮೆಯ ಮಕ್ಕಳಾದ ಸುಮಾರು 800 ಮಂದಿ ವಿದ್ಯಾರ್ಥಿಗಳಿಗೆ ಕಾಲೇಜಿಗೆ ಸೇರಲು (ಪಿ. ಯು. ಸಿ.) ಮೈಸೂರು ಸರ್ಕಾರ ಈಗಲೂ ಉದಾರವಾಗಿ ಆಶ್ರಯವೀಯಬೇಕಾಗಿದೆ.

ಕಾಸರಗೋಡು ಕೇರಳಕ್ಕೆ ಸೇರಿದುದು ಕೇವಲ ಆಕಸ್ಮಿಕ ದುರಂತ ಘಟನೆ. ಅಲ್ಲಿನ ಜನ ಕೇರಳಕ್ಕೆ ಸೇರಲು ಬಯಸಿಲ್ಲ. ಕೇರಳ ಸರ್ಕಾರವು ಕಾಸರಗೋಡು ತಮಗೆ ಸೇರಬೇಕೆಂದು ಕೇಂದ್ರವನ್ನು ಕೇಳಿಲ್ಲ. ಆದರೂ ದುರದೃಷ್ಟದ ಘಟನೆಯೊಂದರಿಂದ ಕಾಸರಗೋಡು, ಕೇರಳಕ್ಕೆ ಸೇರಿಕೊಂಡಿದೆ. ಶೇಕಡ 95 ಭಾಗ ಕಾಸರಗೋಡು ತಾಲೂಕಿನಲ್ಲಿನ ಜನ ಕನ್ನಡಿಗರು, ಅದು ಯಕ್ಷಗಾನ ಕಲೆಯ ನೆಲೆವೀಡು. ಅವರು ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಉಜ್ವಲಾಭಿಮಾನಿಗಳು. ಅವರು ಪ್ರಾಣ ಹೋದರೂ ಕೇರಳಕ್ಕೆ ಸೇರುವುದಿಲ್ಲವೆಂದು ಪಣತೊಟ್ಟ ವೀರ ಜನ. 1950ರಿಂದ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಅವರು ಪ್ರಾಂತೀಕರಣ ಸಮಿತಿಯ ಪರವಾಗಿ ಒತ್ತಾಯ ಮಾಡುತ್ತಿದ್ದಾರೆ. ಅವರ ಅಂತಃಕರಣಪೂರ್ವಕವಾದ ಬೇಡಿಕೆ ಕೇರಳ ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ, ಮೈಸೂರು ಸರ್ಕಾರಕ್ಕೂ ಮುಟ್ಟಿದೆ. ಕರ್ನಾಟಕಕ್ಕೆ ಸೇರುವ ಈ ತಮ್ಮ ನಿರ್ಧಾರವನ್ನು ಅವರು ಎಂತಹ ಕಷ್ಟ ಸಮಯದಲ್ಲಿಯೂ ಬದಲಾಯಿಸಿಲ್ಲ. ಈ ತಮ್ಮ ಅಭಿಪ್ರಾಯವನ್ನು ಬೆಂಗಳೂರು, ಮಂಗಳೂರು, ತಿರುವಾಂಕೂರುಗಳಲ್ಲಿ ಪ್ರದರ್ಶನಗಳ ಮೂಲಕ, ಸಭೆಗಳ ಮೂಲಕ ನಿಯೋಗಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಕಾರಣ ಮೈಸೂರಿಗೂ ಕಾಸರಗೋಡಿಗೂ ಇರುವ ಭಾಷೆ, ಸಾಹಿತ್ಯ ಸಂಸ್ಕೃತಿಗಳ, ಸಾವಿರಾರು ವರ್ಷಗಳ ಐತಿಹಾಸಿಕ, ಭೌಗೋಳಿಕ ಬಾಂಧವ್ಯಗಳ ಫಲವಾಗಿ ಇಂದಲ್ಲ ನಾಳೆ ಕಾಸರಗೋಡು ಕರ್ನಾಟಕಕ್ಕೆ ಸೇರಲೇ ಬೇಕಾಗಿರುವ ನಿಮಿತ್ತವಾಗಿ ಕಾಸರಗೋಡು ಕನ್ನಡ ಮಕ್ಕಳಿಗೆ ಕನ್ನಡಿಗರ ಮಂತ್ರಿಸಂಪುಟದಿಂದ ಕೂಡಿರುವ ಮೈಸೂರು ಸರ್ಕಾರವು ಉದಾರಾಶ್ರಯವನ್ನು ನೀಡಬೇಕೆಂದು ಪ್ರಾರ್ಥಿಸುತ್ತೇವೆ. ಈ ಅಪೂರ್ವ ಸಂದರ್ಭದಲ್ಲಿ ಮೈಸೂರಿನ ಮಾನ್ಯ ಮುಖ್ಯ ಮಂತ್ರಿಗಳು, ವಿದ್ಯಾ ಮಂತ್ರಿಗಳು ಶಾಸನಸಭಾ ಮತ್ತು ಪರಿಷತ್ತಿನ ಸದಸ್ಯರು ಕರ್ನಾಟಕತ್ವದ ಅಭಿಮಾನದಿಂದ ಕನ್ನಡ ಕುಲ ಮತ್ತು ನೆಲಗಳ ಅಭಿಮಾನದಿಂದ ಉದಾರವಾಗಿ ವ್ಯವಹರಿಸುವರೆಂದು ನಂಬುತ್ತೇವೆ.

(ಸಹಿ.) ಬಿ. ಶಿವಮೂರ್ತಿಶಾಸ್ತ್ರಿ,
ಅಧ್ಯಕ್ಷ,
ಕನ್ನಡ ಸಾಹಿತ್ಯ ಪರಿಷತ್ತು.

(ಸಹಿ.) ಆರ್. ಅನಂತರಾಮನ್,
ಅಧ್ಯಕ್ಷ,
ಕನ್ನಡ ಗಡಿನಾಡು ಕ್ರಿಯಾ ಸಮಿತಿ.

ಬೆಂಗಳೂರು, ತಾ. 27.6.64.

ಕೆ. ಎನ್. ಜೋಗಪ್ಪ ಹೆಗ್ಡೇರ ನಿಧನ—ಮುಂಬಯಿಯಲ್ಲಿ ಹೋಟೇಲು ಉದ್ಯಮದಲ್ಲಿ ಖ್ಯಾತಿಗಳಿಸಿ ಮುಂಬಯಿಯ ದ. ಕ ಹೋಟೇಲ್ ಮಾಲಕರಲ್ಲಿ ಪ್ರಖ್ಯಾತರಲ್ಲೊಬ್ಬರಾದ ನಂದಳಿಕೆ ನಡುಮನೆ ಹೊಸಮನೆ ಕೆ. ಎನ್. ಜೋಗಪ್ಪ ಹೆಗ್ಡೇರು ತಾ. 19.6.64 ರಂದು ರಕ್ತದ ಒತ್ತಡದಿಂದ 57 ನೇ ವಯಸ್ಸಿನಲ್ಲಿ ತನ್ನ ಸ್ವಗೃಹದಲ್ಲಿ ನಿಧನರಾದುದು ವಿಷಾದಕರವಿದೆ. ದಿವಂಗತರು ಹಲವು ಧಾರ್ಮಿಕ ಹಾಗೂ ವಿದ್ಯಾ ಸಂಸ್ಥೆಗಳಿಗೆ ಸಹಾಯ ಪ್ರೋತ್ಸಾಹ ನೀಡಿ ಜನಪ್ರಿಯರಾಗಿದ್ದರು. ಮೃತರು ತನ್ನ ಹಿಂದೆ ಪತ್ನಿ, 3 ಹೆಣ್ಣು, 3 ಗಂಡು ಮಕ್ಕಳನ್ನು ಬಿಟ್ಟು ಹೋಗಿರುವರು.

ಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ ಕಳವಳ ವ್ಯಕ್ತಪಡಿಸಲಾಗಿದೆ. ಆದರೆ, ಅವರು ಇದೀಗ ಚೇತರಿಸಿಕೊಳ್ಳುತ್ತಿದ್ದಾರೆ ಎಂಬುದು ಸಮಾಧಾನದ ಸಂಗತಿ. ಅವರಿಗೆ ಚಿರಾರೋಗ್ಯವನ್ನು ಕೋರುವುದು ಭಾರತೀಯರ ಕರ್ತವ್ಯ.

ರಾಜ್ಯದ ಹಲವೆಡೆ ಬರಗಾಲ

ಕಾಲಕ್ಕೆ ಸರಿಯಾಗಿ ಮುಂಗಾರು ಮಳೆಯಾಗದೆ ಮೈಸೂರು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ತಲೆದೋರಿದೆ ಎಂದು ವರದಿಗಳು ಬರುತ್ತಿವೆ. ಚಿತ್ರದುರ್ಗ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಜನರು ಹೊಟ್ಟೆಗಿಲ್ಲದೆ ವಲಸೆ ಹೋಗ ಹತ್ತಿರುವರೆಂದೂ, ಜಾನುವಾರುಗಳು ಸಾಯುವ ಸ್ಥಿತಿಯಲ್ಲಿವೆಯೆಂದೂ, ಆಹಾರ ಧಾನ್ಯಗಳಿಗಾಗಿ ಜನರು ಮೈಲುಗಟ್ಟಲೆ ಅಲೆಯ ಬೇಕಾದ ಪರಿಸ್ಥಿತಿ ಒದಗಿದೆಯೆಂದೂ, ದನ ಕರುಗಳಿಗೆ ಮೇವಿಲ್ಲದೆ ಅವುಗಳು ಬದುಕುವುದೇ ದುಸ್ತರವಾಗಿದೆಯೆಂದೂ ತಿಳಿದುಬರುತ್ತಿದೆ. ಬಂಗಾಲದ ಬರಗಾಲದ ಛಾಯೆ ಈಗ ಮರುಕಳಿಸುತ್ತಿದೆಯೇ ಎಂಬ ಭಯ ಜನರಲ್ಲಿ ಮೂಡಿದೆ. ಸರಕಾರ ಸೂಕ್ತ ಪರಿಹಾರೋಪಾಯಗಳನ್ನು ಕೈಗೊಳ್ಳುವುದು ಅತಿ ಅಗತ್ಯ.

ಅಮೇರಿಕೆಯಲ್ಲಿ ಕಾಲೇಜು ಶಿಕ್ಷಣ.

(೫ ನೇ ಪುಟದಿಂದ)

ತ್ತೊಂದು ಕಾರ್ಯಕ್ರಮದ ರೀತ್ಯಾ ಮುಡಿಪು ಹಣವನ್ನು ಕಾಲೇಜು ಒದಗಿಸುತ್ತದೆ; ವಿದ್ಯಾರ್ಥಿಯು ಹಿನ್ನೆಲೆಯೊಂದನ್ನೂ ಲಕ್ಷ್ಯಕ್ಕೆ ತಾರದೆ ಈ ಸಂಸ್ಥೆ ಸಾಲಕ್ಕೆ ಗ್ಯಾರಂಟಿಯಾಗಿ ನಿಲ್ಲುತ್ತದೆ.

ಒಬ್ಬ ವಿದ್ಯಾರ್ಥಿ ವರ್ಷಕ್ಕೆ ೧೦೦೦ ಡಾಲರಿನಂತೆ ೫೦೦೦ದ ವರೆಗೂ ಸಾಲ ಪಡೆದು, ಪದವಿ ಗಳಿಸಿದ ೫ ತಿಂಗಳ ನಂತರದಿಂದ ಮೂರು ವರ್ಷಗಳ ಅವಧಿಯಲ್ಲಿ ಮರುಪಾವತಿಮಾಡಬಹುದು. ಅತಿ ಹೆಚ್ಚಿನ ಬಡ್ಡಿ ಎಂದರೆ ಶೇಕಡ ೬.

ಈ ಅನೇಕ ಯೋಜನೆಗಳ ಜತೆಗೆ, ಕಾಲೇಜುಗಳೂ, ಬ್ಯಾಂಕುಗಳೂ, ಖಾಸಗಿ ಹಣಕಾಸಿನ ಸಂಸ್ಥೆಗಳೂ, ದಾನಶೀಲ, ಪೌರ, ಧಾರ್ಮಿಕ, ವ್ಯಾಪಾರಿ ಹಾಗೂ ಕಾರ್ಮಿಕ ತಂಡಗಳೂ ಸಾಲಗಳನ್ನು ನೀಡುತ್ತವೆ.

ವೈದ್ಯ ಶಿಕ್ಷಣದಲ್ಲಿ ಸಹಾಯ ಬಯಸುವ ವಿದ್ಯಾರ್ಥಿಗಳಿಗಾಗಿ ಅಮೆರಿಕದ ಮೆಡಿಕಲ್ ಅಸೋಸಿಯೇಷನ್ ವಿಶೇಷ ಸಾಲದ ನಿಧಿಯೊಂದನ್ನು ಏರ್ಪಡಿಸಿದೆ ವರ್ಷಕ್ಕೆ ೧೫೦೦ ಡಾಲರುಗಳ ಪರಿಮಿತಿಯಲ್ಲಿ ೭ ವರ್ಷಗಳ ತರಬೇತಿಗಾಗಿ ವಿದ್ಯಾರ್ಥಿ ೧೦,೦೦೦ಕ್ಕೂ ಹೆಚ್ಚು ಡಾಲರುಗಳ ಸಾಲವನ್ನು ಪಡೆಯಬಹುದು. ಬಡ್ಡಿಯ ದರ ಕಮ್ಮಿ; ಮರುಪಾವತಿಯ ಅವಧಿ ೧೦ ವರ್ಷಗಳ ವರೆಗೆ. ಕಾಲೇಜಿನ ಪದವಿಯ ಗಳಿಕೆಗೆ ಮತ್ತೆರಡು ಮಾರ್ಗಗಳಿವೆ—ವಿದ್ಯಾರ್ಥಿ ವೇತನ ಹಾಗೂ ಸಹಕಾರಿ ಕಾರ್ಯಕ್ರಮ.

ಅರ್ಹತೆ ಅಥವ ಸ್ಪರ್ಧಾತ್ಮಕ ಪರೀಕ್ಷೆಗಳ ಆಧಾರದ ಮೇಲೆ, ಸಾಮಾನ್ಯವಾಗಿ ಆರ್ಥಿಕ ಸಹಾಯ ಆವಶ್ಯವಿರುವ ಸುಮಾರು ನಾಲ್ಕು ಲಕ್ಷ ವಿದ್ಯಾರ್ಥಿಗಳಿಗೆ ಅಮೆರಿಕದಲ್ಲಿ ವೇತನ ನೀಡಲಾಗುತ್ತದೆ. ವಿದ್ಯಾರ್ಥಿಯ ಪೂರ್ಣ ಅಥವಾ ಒಂದು ಭಾಗದ ವೆಚ್ಚವನ್ನು ಪೂರೈಸಬಲ್ಲ ವೇತನವನ್ನು ವಿಶ್ವವಿದ್ಯಾಲಯಗಳೂ, ಫ್ರೆಟರ್ನಲ್ ಕ್ಲಬ್ಬುಗಳೂ, ಫೌಂಡೇಶನ್ನುಗಳೂ, ಪೇಟ್ರಿಯಾಟಿಕ್ ಹಾಗೂ ಸಿವಿಕ್ ಸಂಸ್ಥೆಗಳೂ, ವಿದ್ವನ್ಮಂಡಲಗಳೂ ಚರ್ಚುಗಳೂ ವ್ಯಕ್ತಿಗಳೂ ನೀಡುವರು. ವರ್ಷಂಪ್ರತಿ ಪದವೀಧರ ವಿದ್ಯಾರ್ಥಿಗಳಿಗೆ ೬೦,೦೦೦ ವಿದ್ಯಾರ್ಥಿ ವೇತನಗಳು ಲಭ್ಯವಿವೆ.

ಸಹಕಾರಿ ಕಾರ್ಯಕ್ರಮದಲ್ಲಿ ಕೆಲವು ಕಾಲೇಜುಗಳು ವಿದ್ಯಾರ್ಥಿ ಆಯ್ಕೆ ಮಾಡಿರುವ ಕ್ಷೇತ್ರದಲ್ಲಿ ಅಧ್ಯಯನದ ಜತೆಗೆ ಕೆಲಸ ಮಾಡುವುದಕ್ಕೂ ಅವಕಾಶವನ್ನು ಕಲ್ಪಿಸುತ್ತವೆ. ವಿದ್ಯಾರ್ಥಿ ಒಂದು ಅರ್ಧ ವರ್ಷ ಅಧ್ಯಯನ ಮಾಡುತ್ತಾನೆ. ಇನ್ನೊಂದು ಅರ್ಧ ವರ್ಷ ಕೆಲಸ ಮಾಡುತ್ತಾನೆ. ಈ ವ್ಯವಸ್ಥೆ ವಿಶೇಷತಃ ವಿಜ್ಞಾನ ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಸಂಬಂಧದಲ್ಲಿ ವಿಶೇಷ ಪರಿಣಾಮಕಾರಿಯೆಂದು ಕಂಡುಬಂದಿರುತ್ತದೆ.

ಕೆಲಸ, ಸಾಲ, ವಿದ್ಯಾರ್ಥಿವೇತನ ಹಾಗೂ ಸಹಕಾರಿ ಕಾರ್ಯಕ್ರಮಗಳು, ಕಾಲೇಜು ವಿದ್ಯಾಭ್ಯಾಸವನ್ನು ನಿಜವಾಗಿಯೂ ಬಯಸುವ ವಿದ್ಯಾರ್ಥಿಗೆ ಲಭ್ಯವಿವೆ. ಕಾಲೇಜಿಗೆ ಹೋಗಬೇಕೆನ್ನುವವರೆಲ್ಲ ಕಾಲೇಜಿಗೆ ಹೋಗಲು ಸಾಧ್ಯವಿಲ್ಲವಾದರೂ ಹೋಗುವವರ ಸಂಖ್ಯೆ ಹೆಚ್ಚಾಗುವುದು.

ದ.ಕ., ಚಿಕ್ಕಮಗಳೂರ ಮತ್ತು ಹಾಸನ ಜಿಲ್ಲೆಯಲ್ಲಿ ಡಾ| ಪುಕಾಳೆಯವರ ಸಂಚಾರ

ಶ್ವಾಸ ರೋಗ ಚಿಕಿತ್ಸಕ ಡಾ| ಪುಕಾಳೆಯವರು ದಮ್ಮು ಅಸ್ತಮಾ ರೋಗಿಗಳ ಉಪಚಾರಾರ್ಥ ಕರ್ನಾಟಕ ರಾಜ್ಯದಲ್ಲಿ ಸಂಚರಿಸುತಿದ್ದು ದ.ಕ. ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಮತ್ತು ಹಾಸನ ಜಿಲ್ಲೆಯಲ್ಲಿ ಸಂಚರಿಸುವರು. ಜುಲೈ ೧ ಮತ್ತು ೨ ಮಂಗಳೂರು, ೩—೪ ಮೂಡಿಗೆರೆ, ೫-೬ ಚಿಕ್ಕಮಗಳೂರು, ೭-೮ ಅರಸೀಕೆರೆ, ೯-೧೦ ಹಾಸನ ೧೧-೧೨ ಅರಕಲಗೂಡು ಈ ನಗರಗಳ ಪ್ರವಾಸ ಮಂದಿರದಲ್ಲಿ ಮೇಲಿನಂತೆ ಕ್ಯಾಂಪ ನಡೆಸುವದರಿಂದ ಮೂರು ಜಿಲ್ಲೆಗಳ ಅಸ್ತಮಾ ಪೀಡಿತರು ಡಾ| ಪುಕಾಳೆಯವರ ವೈದ್ಯಕೀಯ ಸೇವೆ ಲಾಭ ಪಡೆದು ಆರೋಗ್ಯ ಸಂಪನ್ನರಾಗಬೇಕಾಗಿ ಕಾರ್ಯದರ್ಶಿ ಬಾಳೇಕುಂದ್ರಿ ಇವರು ಪ್ರಾರ್ಥಿಸುತ್ತಾರೆ.

ಜನತಾ ಉವಾಚ

ಪಾಲಿಸಿದಾರರಿಗೇನು ಗತಿ?

ಆಯ್ಯಾ ಸಂಪಾದಕರೇ,

ಎರಡು ತಿಂಗಳ ಹಿಂದೆ ಉಡುಪಿಯ ಎಲ್. ಐ. ಸಿ. ನೌಕರರು ಮತ ಪ್ರದರ್ಶನ ಮೆರವಣಿಗೆ ನಡೆಸಿ 'ಉಡುಪಿ ಡಿವಿಜನಲ್ ಆಫೀಸನ್ನು ಉಡುಪಿಯಲ್ಲೇ ಉಳಿಸಿರಿ' ಎಂದು ಘೋಷಣೆಗಳನ್ನೆಬ್ಬಿಸುತ್ತಿದ್ದರು. ನಮಗೆ ಆಗ ಆ ವಿಚಾರ ಏನೆಂದು ಸರಿಯಾಗಿ ಅರ್ಥವಾಗಲಿಲ್ಲ. ಈಗ ಮೊನ್ನೆ ಮೊನ್ನೆ ಉಡುಪಿ ನಗರ ಸಭೆಯು ಒಂದು ಠರಾವನ್ನು ಮಂಜೂರು ಮಾಡಿ, ಇಲ್ಲಿಯ ಜೀವ ವಿಮಾ ಕಛೇರಿಯನ್ನು ಬೆಂಗಳೂರಿಗೆ ವರ್ಗಾಯಿಸ ಬಾರದೆಂದು ಕೇಳಿಕೊಂಡಿದೆಯಂತೆ. ಇಲ್ಲಿಯ ಡಿವಿಜನಲ್ ಆಫೀಸನ್ನು ಮುಚ್ಚಿ, ಇಲ್ಲಿ ಬರೇ ಒಂದು ಶಾಖಾ ಕಾರ್ಯಾಲಯವನ್ನು ಇರಿಸುವುದು ಎಲ್. ಐ. ಸಿ. ಯ ದೊಡ್ಡ ದೊಡ್ಡವರ ಇಚ್ಛೆಯ ಉಪ್ಪೇರಿಯಂತೆ. ಇಲ್ಲಿಂದ ನೂರಾರು ನೌಕರರನ್ನು ಬೆಂಗಳೂರಿಗೆ ವರ್ಗ ಮಾಡುವುದಂತೆ; ಅಲ್ಲಿ ಕೆಲಸ ಮಾಡಲು ಲಕ್ಷಗಟ್ಟಲೆ ರೂಪಾಯಿ ಬೆಲೆಯ ಯಂತ್ರಗಳನ್ನು ತರಿಸುವುದಂತೆ. ಪಾಲಿಸಿದಾರರಿಗೆ ಎಲ್ಲಾ ತರದ ಸೇವೆಯನ್ನು ಬೆಂಗಳೂರಿನಿಂದಲೇ ಒದಗಿಸುವುದಂತೆ. ಈ ಅಂತೆ ಕಂತೆಗಳ ಸಂತೆಯಲ್ಲಿ ಪ್ರಾಯಶಃ ನಾವು ಪಾಲಿಸಿದಾರರು ಚಟ್ನಿ ಎಂದು ತೋರುತ್ತದೆ. ಈಗಲೇ, ಉಡುಪಿಯಲ್ಲೇ ವಿಭಾಗ ಕಛೇರಿ ಇದ್ದು, ಪಾಲಿಸಿದಾರರು ಕಾಗದಕ್ಕೆ ಉತ್ತರ ಬರಲು ದಿನಗಟ್ಟಲೆ ಕಾಯಬೇಕು. ಇನ್ನು ಬೆಂಗಳೂರಿಗೆ ಈ ಆಫೀಸು ಹೋದರೆ ಮತ್ತೆ ಕೇಳುವುದೇ ಬೇಡ. ಇದಕ್ಕೂ ವಿಧಾನ ಸೌಧದ ಗಾಳಿ ಸೋಂಕಿದರೆ ಮತ್ತೆ ಪಾಲಿಸಿದಾರರಿಗೆ ದೇವರೇ ಗತಿ!

ಈ ದೊಡ್ಡ ಯೋಜನೆಯು ಹೊಳೆದ ತಲೆ ಎಂತಹುದೋ? ಉಡುಪಿಯಲ್ಲಿ ಇತ್ತೀಚೆಗೆ ಲಕ್ಷಗಟ್ಟಲೆ ಹಣ ಖರ್ಚು ಮಾಡಿ ದೊಡ್ಡ ಕಟ್ಟಡ ಕಟ್ಟಿಸಿದ್ದಾರೆ. ಈ ಕಟ್ಟಡವನ್ನು ಇನ್ನು ಏನು ಮಾಡುವರೋ? ಈ ರೀತಿ ಪಾಲಿಸಿದಾರರ ಹಣವನ್ನು ಮುಂದಾಲೋಚನೆ ಇಲ್ಲದೆ ಖರ್ಚು ಮಾಡುವುದು ನ್ಯಾಯವೆ? ಉಡುಪಿಯಲ್ಲಿ ಕಛೇರಿ ಬೇಡವೆಂದು ಇದ್ದರೆ, ಈ ರೀತಿ ಕಲ್ಲಿಗೆ ಹಣ ಸುರಿದು ಕಟ್ಟಡ ಕಟ್ಟಿಸಿದ್ದು ಯಾಕೆ? ಹಿಂದಿನ ಹಾಗೆ ಬಾಡಿಗೆಯ ಕಟ್ಟಡದಲ್ಲಿಯೇ ಇರಬಹುದಿತ್ತಲ್ಲ? ಪಾಲಿಸಿದಾರರ ಹಿತರಕ್ಷಣೆಯೇ ಜೀವವಿಮಾ ಕಾರ್ಪೋರೇಶನಿನ ಗುರಿ ಎಂದು ಉದ್ದುದ್ದ ಹೇಳಿಕೆಗಳನ್ನು ಕೊಡುವುದರಲ್ಲಿಯೇ, ಎಲ್. ಐ. ಸಿ. ಅಧಿಕಾರಿಗಳು ತೃಪ್ತರಾಗಿದ್ದಾರೆ ಹೊರತು ನಮ್ಮ ಕಷ್ಟಗಳನ್ನು ಕೇಳುವವರಿಲ್ಲ ನಾವು ಪ್ರೀಮಿಯಂ ಕಟ್ಟಿದ ಹಣ ಈ ರೀತಿ ಪೋಲಾಗುವುದಾದರೆ, ಇದನ್ನು ಸರಕಾರ ವಾದರೂ ಕಣ್ಣು ಮುಚ್ಚಿ ನೋಡುವುದೆ? ಈ ಹೊಸ ಯೋಜನೆಗೆ ಸರಕಾರ ಮಂಜೂರಾತಿ ಇತ್ತದ್ದರೆ, ಈ ವಿಚಾರವೂ ಪುದನ್ನೂ ಗಮನಕ್ಕೆ ತಂದುಕೊಂಡಿಲ್ಲವೆ? ಬರೇ ಅಂಗೀಕಾರದ ಮುದ್ರೆ ಒತ್ತಿತೆ? ನಮ್ಮ ಪಾರ್ಲಿಮೆಂಟು ಸದಸ್ಯರು, ಈ ಕುರಿತು ಸೂಕ್ತ ವಿಚಾರ ನಡೆಸಿ, ಪಾಲಿಸಿದಾರರ ಹಿತವನ್ನು ರಕ್ಷಿಸಬೇಕೆಂದು ಕೇಳಿಕೊಳ್ಳುತ್ತೇನೆ.

—ಓರ್ವ ಪಾಲಿಸಿದಾರ.

ನ್ಯಾಯಬೆಲೆ ಅಂಗಡಿಗಳು ತೆರೆಯಲ್ಪಡಲಿ, ಕಾರ್ಡನ್ನು ಹಂಚಿ ಅಕ್ಕಿ ವಿತರಣೆಯಾಗಲಿ

ಪ್ರಿಯ ಸಂಪಾದಕರೇ,

ಅಕ್ಕಿಯ ಬೆಲೆ ಮುಡಿ ಒಂದರ ೩೨ ರೂ. ಗೂ ಮಿಕ್ಕಿರುವುದರಿಂದ ಜನತೆಯನ್ನು ಬೆಲೆ ಏರಿಕೆಯಿಂದ ರಕ್ಷಿಸಲು ನ್ಯಾಯ ಬೆಲೆ ಅಂಗಡಿಗಳನ್ನು ಕೂಡಲೇ ತೆರೆಯಬೇಕು. ಸರಕಾರ ಕೇವಲ ನ್ಯಾಯ ಬೆಲೆಯ ಅಂಗಡಿಯನ್ನು ತೆರೆದ ಮಾತ್ರಕ್ಕೆ ಅಕ್ಕಿಯ ವ್ಯವಸ್ಥೆ ಮಾಡಿದಂತಾಗಲಿಲ್ಲ. ಇಂದು ಬೆಲೆಯೇರಿಕೆಯಿಂದ ಕಷ್ಟಕ್ಕೊಳಗಾಗಿರುವವರು ಕೇವಲ ಕೂಲಿಗಾರರು. ಮಾತ್ರವಲ್ಲ ಅವರಿಗಿಂತಲೂ ನಿಕೃಷ್ಟವಾದ ಮತ್ತು ತ್ರಿಶಂಕು ಸ್ಥಿತಿಯಲ್ಲಿ ಜೀವನ ನಡೆಸತಕ್ಕವರು ಕೆಮ್ಮಿ ಆಡಾಯವಿರುವ ಮಧ್ಯಮವರ್ಗದ ಜನರು.

ಅವರ ಸುಖ ದುಃಖವನ್ನು ಕೇಳುವವರೇ ಇಲ್ಲದಂತಾಗಿದೆ. ಈ ನ್ಯಾಯ ಬೆಲೆಯ ಅಂಗಡಿಯಿಂದ ಅಕ್ಕಿಯನ್ನು ಪಡೆಯುವ ಸಲುವಾಗಿ ತಮ್ಮ ಎಷ್ಟೋ ಕೆಲಸವನ್ನು ಬಿಟ್ಟುಕೊಂಡು ಕಾದು ಕುಳಿತಿರಲು ಸಾಧ್ಯವಿಲ್ಲ. ಆದುದರಿಂದ ಅವರಿಗೂ ನ್ಯಾಯ ಬೆಲೆಯ ಅಂಗಡಿಯ ಸೌಲಭ್ಯವನ್ನು ದೊರಕಿಸಿ ಕೊಡುವ ಸಲುವಾಗಿ ಸಕ್ಕರೆಗಾಗಿ ಮುನಿಸಿಪಲ್ ಕೌನ್ಸಿಲರು ಕಾರ್ಡನ್ನು ಹಂಚಿ ಎಲ್ಲರಿಗೂ ಸಕ್ಕರೆ ದೊರಕುವ ವ್ಯವಸ್ಥೆ ಮಾಡಿರುವಂತೆ ಅಕ್ಕಿಗೂ ಆ ವ್ಯವಸ್ಥೆ ಮಾಡುವುದು ಹಿತಕರವಾಗಿದೆ. ಇದರಿಂದ ಕಷ್ಟದಲ್ಲಿರುವ ಎಲ್ಲರಿಗೂ ಅಕ್ಕಿಯನ್ನು ನ್ಯಾಯ ಬೆಲೆಯಲ್ಲಿ ವಿತರಣೆ ಮಾಡಿದಂತಾಗುತ್ತದೆ! ಕ್ಯೂನಲ್ಲಿ ನಿಂತು ಸಮಯ ಹಾಳಾಗುವುದೂ ನಿಲ್ಲುತ್ತದೆ.

ಸಿಕ್ಕಾಪಟ್ಟೆ ಹಂಚುವುದರಿಂದ ರಟ್ಟೆಯಲ್ಲಿ ಬಲವಿರುವವರೂ, ಬೇರೆ ಉದ್ಯೋಗವಿಲ್ಲದವರೂ ಅಕ್ಕಿಯನ್ನು ಸಂಗ್ರಹಿಸಿ, ತಿರುಗಿ ಅಂಗಡಿಯವರಿಗೇ ಮಾರಿ ಹಣ ಮಾಡುವ ಹಂಚಿಕೆಯನ್ನು ಮಾಡುತ್ತಾರೆ. ಇದಕ್ಕಾಗಿ ಸಕ್ಕರೆ ಕಾರ್ಡಿನಂತೆಯೇ ಅಕ್ಕಿಗೂ ವ್ಯವಸ್ಥೆಯಾಗಬೇಕು. ಮುನಿಸಿಪಲ್ ಕೌನ್ಸಿಲರು ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

—ಶಿರ್ವಾಡಿ ವಿಲಿಯಂ ಪಿಂಟೋ, ಉಡುಪಿ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 25/ 64

ಜೊಲ್ಲ ಗೌಡ— ವಾದಿ.

ಬೋರ ಗೌಡ. ಉಮ್ಮಣ್ಣ ಗೌಡರ ಮಗ, ಸಡ್ಯೇಲು— ಪುದುಬೆಟ್ಟು ಗ್ರಾಮ ಬೆಳ್ತಂಗಡಿ ತಾಲೂಕು. Post. ಕಳೆಂಜ ದ. ಕ. } ಪ್ರತಿವಾದೀಗೆ

ವಾದಿಯು ನಿಮ್ಮ ಮೇಲೆ ಮೂಲಗೇಣಿಗೆ ಬಾಕಿ ರೂ. 695.43 ನ ಕೋರ್ಟು ಖರ್ಚಿಗೆ ಮಾಡಿದ ದಾವೆಯು ತಾ. 15-7-64 ಕ್ಕೆ ಇರುತ್ತದೆ. ನೀವು ಆ ದಿನ ಈ ಕೋರ್ಟು ಮುಂದೆ ಹಾಜರಾಗಿ ಉದಸರಿಸದಿದ್ದಲ್ಲಿ ನಿಮ್ಮನ್ನು ಶಿವಾಯಿ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

By order of court

Sripati Rao B.

Advocate for plff

ಪುತ್ತೂರು, 19—6—64.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. No. 58/1964.

ಕಿಟ್ಟಣ್ಣ ರೈ.... ವಾದಿ.

ಪುಳ್ತು ಪೂಜಾರಿ... ಪ್ರತಿವಾದಿ.

ಪ್ರತಿವಾದಿ – ಪುತ್ತು ಪೂಜಾರಿಗಳಿಗೆ, ಪುತ್ತೂರು ತಾಲೂಕು ಆರ್ಯಾಪು ಗ್ರಾಮದ ಕೂರೇಲು ಎಂಬಲ್ಲಿರುವ ಚೆನ್ನಪ್ಪ ಪೂಜಾರಿಗಳ ಅಳಿಯ, Post ಆರ್ಯಾಪು.

ಮೇಲ್ಕಂಡ ವ್ಯಾಜ್ಯವು ನಿಮ್ಮ ಹಾಜರಾತಿಗೆ ತಾ. 8-7-1964 ಕ್ಕೆ ಇಟ್ಟಿರುತ್ತದೆ. ಆ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವತಹ ವಾಗಲೀ ವಕೀಲ ಮುಖಾಂತ್ರ ವಾಗಲೀ ಹಾಜರಾಗಲು ತಪ್ಪಿದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

(ಕೋರ್ಟಿನ ಹುಕುಂ ಮೇರೆಗೆ)

A. Kunhipalli

ವಾದಿಕಡೆ ಎಡ್ವಕೇಟ್.

ಪುತ್ತೂರು. ತಾ 20-6-64.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್. ಸಿ. ಯವರ

ಕ್ರಾಂತಿಕಾರಿ ಲೇಖನಿಯ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯು ಹೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ, ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

—— ಜಾಹೀರು ——

ಕನಲು ದಾರಿ—ಕೆಂಪು ದೀಪ

ಪ್ರಧಾನ ಮಂತ್ರಿ: ಮೊರಾರ್ಜಿ ದೇಸಾಯಿ?

ಭಾರತದ ರಾಜಕೀಯದಲ್ಲಿ ಈ ಬಾರಿ ಒಂದು ಮಹತ್ವಪೂರ್ಣ ಘಟನೆ ನಡೆಯಿತು.

ಈ ಘಟನೆಯು ಮುಂದಕ್ಕೆ ಯಾವ ಪರಿಣಾಮವನ್ನು ತಂದೊಡ್ಡುತ್ತದೆ ಎಂಬ ಕುತೂಹಲವಿರಬಹುದಾದರೂ, ಇದನ್ನು ಸದ್ಯ ಶುಭ ಚಿಹ್ನೆ ಎಂದೇ ತಿಳಿಯಲಾಗುತ್ತದೆ.

ಅಂತೂ ಈ ಬಾರಿ ಮೊದಲಿನಂತೆ ಹಣಕ್ಕೆ, ವಿಜಯ ಮಾಲೆ ಹಾಕಿಸಿ ಕೊಳ್ಳಲು ಸಾಧ್ಯವಾಗಲಿಲ್ಲ.

ಯಾರು ಖಾಲಿಯಾಗಿರುವ ನೆಹರೂ ಸ್ಥಾನಕ್ಕೆ ಬರುತ್ತಾರೆಂದು ಕಲ್ಪಿಸಲಾಗಿತ್ತೊ ಅವರು ಬರಲಿಲ್ಲ.

ಇದಕ್ಕೆ ಕಾರಣವಿದೆ.

ಆದರೆ ಇರುವ ಕಾರಣಕ್ಕೆ ಇಲ್ಲದ ಕಾರಣವನ್ನು ಬಳಸಿ, ಭಾರತದ ಪ್ರಜಾಪ್ರಭುತ್ವವು ಜ್ಯೋತಿಷಿಗಳ ಆಸರೆಯಿಂದ ನಿರ್ಮಾಣ ಗೊಳ್ಳುತ್ತದೆ ಎಂಬುದರ ಸೂಚನೆಯನ್ನೀಗ ಉದಾಹರಣೆ ಸಹಿತ ಕೊಡಲಾಗುತ್ತಿದೆ.

ಅರ್ವತ್ತೊಂಬತ್ತು ಮಳೆಗಾಲವನ್ನು ಕಂಡು ಹದಿನೇಳು ಭಾರಿ ಜನ್ಮದಿನವನ್ನು ಕಂಡಿರುವ ಮಾಜೀ ಅರ್ಥ ಮಂತ್ರಿ ಮೊರಾರ್ಜೀ ದೇಸಾಯಿಯವರು,ಪ್ರಧಾನ ಮಂತ್ರಿಯಾಗುವರೆಂದು ಅವರ ಹಿತ ಸಂಬಂಧಿಗಳು ಆಶಿಸಿದ್ದರು.

ಅಂತರಂಗದಲ್ಲಿ ಈ ಮಹಾ ಕಾರ್ಯಕ್ಕಾಗಿ ಭಾರೀ ಪ್ರಯತ್ನಗಳೂ ನಡೆದವು ಎನ್ನಲಾಗುತ್ತಿದೆ.

ಬಿಜೂ ಪಟ್ನಾಯಕ್, ಕೆ. ಡಿ. ಮಾಲವೀಯ, ಪ್ರತಾಪ್ ಸಿಂಗ್ ಕೈರಾನ್, ಬೀಕೀನ್ ಮಿತ್ರಾ, ಜಗಜೀವನರಾಮ್ ಮುಂತಾದವರೂ, ಮೊರಾರ್ಜೀ ದೇಸಾಯಿಯವರು ಪ್ರಧಾನ ಮಂತ್ರಿಗಳಾಗಬೇಕೆಂದು ಶುಭ ಕೋರಿ (ಇದರಿಂದ ಯಾರಿಗೆ ಎಷ್ಟು ಲಾಭ?) ಪೌರೋಹಿತ್ಯವನ್ನೂ ವಹಿಸಿದ್ದರು ಎನ್ನಲಾಗುತ್ತಿದೆ.

ಶ್ರೀಮಾನ್ ಮೊರಾರ್ಜೀ ದೇಸಾಯಿಯವರು ಪ್ರಧಾನ ಮಂತ್ರಿಯಾಗಲಿಲ್ಲ. ಶಾಸ್ತ್ರಿ ಸಂಪುಟದಲ್ಲಿ ಸೇರಿಕೊಳ್ಳಲೂ ಇಲ್ಲ.

ಶಾಸ್ತ್ರಿಯವರು ತಮ್ಮ ಸಂಪುಟದಲ್ಲಿ ಕೂಡಿಕೊಳ್ಳಬೇಕೆಂದು ದೇಸಾಯಿಯವರೊಡನೆ ಸುಮಾರು ನಲ್ವತ್ತೈದು ನಿಮಿಷ ಚರ್ಚೆ ನಡೆಸಿದಾಗಲೂ, ದೇಸಾಯಿ ತಮಗೆ ಮಂತ್ರಿ ಪದವಿ ಬೇಡವೆಂದು ನಿರಾಕರಿಸಿದರು.

ಇದು ಮೊರಾರ್ಜೀ ದೇಸಾಯಿಯವರ ನಿಸ್ವಾರ್ಥ ಬುದ್ಧಿಯನ್ನು ಸೂಚಿಸುತ್ತದೆ ಎಂದು ಅವರ ಕುರಿತು ಹೆಮ್ಮೆಪಟ್ಟುಕೊಳ್ಳುವವರೂ ಇದ್ದಾರೆ.

ಹಾಗೆ, ಹೆಮ್ಮೆಪಟ್ಟುಕೊಳ್ಳುವವರಲ್ಲಿ ಒಂದು ಮಾತು:

ದೇಸಾಯಿಯವರು ಏಕೆ ಶಾಸ್ತ್ರಿ ಸಂಪುಟದಲ್ಲಿಕೂಡಿಕೊಳ್ಳಲಿಲ್ಲವೆಂಬುದಕ್ಕೆ ಕಾರಣವನ್ನು ಕೆಲವು ಪತ್ರಕರ್ತರು ಕೇಳಿದಾಗ, ಶಾಸ್ತ್ರಿಯವರನ್ನೇ ಕೇಳಿ; ಎಂದು ದೇಸಾಯಿಯವರು ಶಾಸ್ತ್ರಿಯವರತ್ತ ಬೊಟ್ಟು ಮಾಡಿ ಹೇಳಿದ್ದಾರೆ.

ಮೊರಾರ್ಜೀ ದೇಸಾಯಿಯವರು ಶಾಸ್ತ್ರಿ ಸಂಪುಟದಲ್ಲಿ ಇನಿತ್ತು ಕಾಣಿಸಿಕೊಳ್ಳದೆ ಇರಲು ಅವರ ನಿಸ್ವಾರ್ಥ ಗುಣ ಕಾರಣವಾಗಿರದೆ ಅವರಿಗೆ ಶಾಸ್ತ್ರಿಯವರ ನಂತರದ ಸ್ಥಾನ (ನೆಹರೂ ನಂತರ ಎಂಬ ಪ್ರಶ್ನೆಯಂತೆ?) ಸಿಗಬೇಕೆಂದೂ, ಅದಕ್ಕೆ ಶಾಸ್ತ್ರಿಯವರು ಒಪ್ಪಿಗೆ ಕೊಡದೆ, ಕೆಲ ದಿನಗಳ ಮಟ್ಟಿಗೆ ನೆಹರೂ ಸ್ಥಾನದಲ್ಲಿ ಕಾರ್ಯ ನಿರ್ವಹಿಸಿದ ನಂದಾ ಅವರೇ ಆ ಸ್ಥಾನಕ್ಕೆ ಅರ್ಹರೆಂದೂ ಹೇಳಿದ ಕಾರಣವೇ ಮೊರಾರ್ಜೀ ದೇಸಾಯಿ ಸಿಟ್ಟಾಗಿ, ಶಾಸ್ತ್ರಿ ಸಂಪುಟದಲ್ಲಿ ಕೂಡಿಕೊಳ್ಳಲಿಲ್ಲ ಎನ್ನುವದು ಸಾಧಾರವುಳ್ಳ ಸುದ್ದಿ.

ದ್ವಿತೀಯ ಸ್ಥಾನಕ್ಕೆ ನಂದಾ ಎಂದು ತೀರ್ಮಾನಿತಗೊಂಡರೆ, ತೃತೀಯ ಸ್ಥಾನ ಟಿ. ಟಿ. ಕೆ. ಅವರಿಗೆ ಸಿಗುತ್ತದೆ. ಆದರೆ ಆ ಸ್ಥಾನವನ್ನು ಮೊರಾರ್ಜೀಯವರಿಗೆ ಕೊಡಿಸುವದಾಗಿ ಶಾಸ್ತ್ರಿಯವರು ಹೇಳಿದರೂ, ಮೊರಾರ್ಜೀ ದೇಸಾಯಿಯವರು ಒಪ್ಪಿಕೊಳ್ಳಲಿಲ್ಲ.

ಯಾವಾಗಲೂ ಫಸ್ಟ್ ಕ್ಲಾಸಿನಲ್ಲೇ ಇರಲು ಬಯಸುತ್ತಿದ್ದ, ಮೊರಾರ್ಜೀ ದೇಸಾಯಿಯವರನ್ನು ಥರ್ಡ್ ಕ್ಲಾಸಿನಲ್ಲಿರಿ ಎಂದು ಶಾಸ್ತ್ರಿಯವರು ಹೇಳಿದರೆ ಅವರು ಅದನ್ನು ಸ್ವೀಕರಿಸುವದಾದರೂ ಹೇಗೆ?

ಶಾಸ್ತ್ರಿಯವರೇನೋ ಸ್ಥಾನ ಕ್ಕಾಗಿ ಕಚ್ಚಾಟ ನಡೆಯಲಿಕ್ಕಿಲ್ಲ ಎಂದು ತಿಳಿದುಕೊಂಡಿರಬಹುದು. ಕಾರಣ ಅವರೆಂದೂ ಸ್ಥಾನವನ್ನು ಬಯಸಿದವರಲ್ಲ. ಅದು ಅವರ ಒಳ್ಳೆಯ ಗುಣ,

ಹದಿನಾಲ್ಕು ಕ್ಯಾರೆಟ್ಟನ್ನು ತಂದು ಭಾರತಕ್ಕೆ ಮಹದುಪಕಾರವನ್ನು ಮಾಡಿರುವ ದೇಸಾಯಿಯವರ ಗುಣವೂ ಆ ಮಾದರಿಯದ್ದಾಗಿಯೇ ಇದೆ, ಎಂದು ಜನಸಾಮಾನ್ಯರು ದೂರಿಕೊಳ್ಳುತ್ತಿದ್ದಾರೆ.

ಜನಸಾಮಾನ್ಯರಿಗೂ ದೇಸಾಯಿಯವರಿಗೂ ಬಹಳ ಹಿಂದಿನಿಂದಲೂ ಕೂಡಿ ಬಂದಿಲ್ಲ.

ಅದೇನೇ ಇರಲಿ.

ಮೊರಾರ್ಜೀ ದೇಸಾಯಿಯವರು ಪ್ರಧಾನ ಮಂತ್ರಿಯೂ ಆಗಲಿಲ್ಲ, ಮಂತ್ರಿ ಪದವಿಯೂ ಸಿಕ್ಕಲಿಲ್ಲ.

ಈ ಕುರಿತು ಅವರ ಹಿತ ಸಂಬಂಧಿಗಳಿಗೆ ಭಾರೀ ನಿರಾಶೆಯಾಗಿದೆ.

ಆದರೂ ಕೂಡಾ ಅದು ತಾತ್ಕಾಲಿಕ.

ಈ ಕುರಿತು ಮುರಾರ್ಜೀಯವರ ಜಾತಕ ನೋಡಿದವರು ಹೇಳುತ್ತಾರೆ:

ಕಳೆದ ಜನವರಿಯಿಂದ ಮೊರಾರ್ಜೀ ದೇಸಾಯಿಯವರನ್ನು ಶನಿ ಕಾಡುತ್ತಿದ್ದಾನೆ. ಇದರಿಂದಾಗಿಯೇ ಅವರು ಕಾಮರಾಜ ಯೋಜನೆಯಂತೆ ಸಚಿವ ಸ್ಥಾನದಿಂದ ಹೊರ ಬರಬೇಕಾಯಿತು. ಶನಿಯು ಸಪ್ಟೆಂಬರ ತಿಂಗಳ ೨೫ ತಾರೀಖಿನವರೆಗೆ ಕಾಡುತ್ತಾನೆ. ಅನಂತರ ಶನಿಯ ಪ್ರಭಾವವು ಮೊರಾರ್ಜೀ ದೇಸಾಯಿಯವರನ್ನು ಯಶಸ್ಸಿನ ಹಂತ ಹಂತಗಳತ್ತ ಏರುವಂತೆ ಕಾರ್ಯ ಸಾಧಿಸುತ್ತದೆ.

೧೯೬೫ನೆಯ ಫೆಬ್ರವರಿ ತಿಂಗಳ ಕೊನೆಗೆ ದೇಸಾಯಿಯವರು ಎಷ್ಟೆತ್ತರ ಗದ್ದಿಯಲ್ಲಿರುತ್ತಾರೆ.

ಇದು ದೇಸಾಯಿಯವರ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ಸಂದರ್ಭ.

ಜ್ಯೋತಿಷಿಯೊಬ್ಬರ ಹೇಳಿಕೆಯಂತೆ ಭಾರತದ ಪ್ರಜಾಪ್ರಭುತ್ವ ಸರಕಾರದಲ್ಲಿ ಮೊರಾರ್ಜೀ ದೇಸಾಯಿಯವರು ಪ್ರಧಾನ ಮಂತ್ರಿಯ ಸ್ಥಾನದಲ್ಲಿ ಕಾಣಿಸಿಕೊಳ್ಳುವ ಸಂಭವವಿದೆ.

ಇದೇ ಹೊತ್ತಿಗೆ, ಅವರ ಸಹೋದ್ಯೋಗಿಗಳೆಲ್ಲ, ಅವರನ್ನು ಬೆಂಬಲಿಸುತ್ತಾರೆ, ಅವರ ಪ್ರತಿಷ್ಠೆ ಹೆಚ್ಚುತ್ತದೆ. ಈ ಸಂದರ್ಭದಲ್ಲಿ ಅಂದರೆ ಸಪ್ಟೆಂಬರ ತಿಂಗಳಿಂದ ಅವರು ಕೈಕೊಳ್ಳುವ ಪ್ರವಾಸ, ಅವರು ಆಡುವ ಮಾತು, ಇದಕ್ಕೆಲ್ಲಾ ಗೌರವ ಸಿಗುತ್ತದೆ.

ಇಂದಿನ ವರೆಗೆ, ಅವರು ಕೈಕೊಂಡ ಪ್ರವಾಸ, ಆಡಿದ ಮಾತು, ಇದಕ್ಕೆ ಬೆಲೆ ಸಿಕ್ಕಿಲ್ಲವೆಂದೇನೂ ಅಲ್ಲ. ಮುಂದಕ್ಕೆ ಅವರು ಗ್ರಹಚಾರದಿಂದ ಬಿಡುಗಡೆ ಹೊಂದಿದ ಬಳಿಕ, ಹೆಚ್ಚು ಪ್ರತಿಷ್ಠೆ ಸಂಪಾದಿಸುತ್ತಾರೆ.

ಜ್ಯೋತಿಷಿಗಳ ಭವಿಷ್ಯ ವಾಣಿಯು ಮೊರಾರ್ಜೀ ದೇಸಾಯಿಯವರ ಪ್ರಚಾರ ಸಾಧನ ಎಂದೂ ಅನ್ನುವವರಿದ್ದಾರೆ.

ಅವರ ಹದಿನಾಲ್ಕು ಕ್ಯಾರೆಟ್ಟಿನ ಕತೆ ನಮಗೆ ಗೊತ್ತಿಲ್ಲವೇ?—

—ಎಂದು ಅಂತಹ ಮಂದಿ ಹೇಳುತ್ತಾರೆ.

ಜ್ಯೋತಿಷಿಗಳ ಮಾತನ್ನು ಮೊರಾರ್ಜೀ ನಂಬುವರಾದರೆ, ಜ್ಯೋತಿಷಿಗಳ ಮಾತು ನಿಜವಾದರೆ ಮುಂದಿನ ವರ್ಷ ಮೊರಾರ್ಜೀ ಎದ್ದುನಿಲ್ಲುತ್ತಾರೆ. ಇಲ್ಲದಿದ್ದರೆ ಈಗ ಬಿದ್ದವರು ಇನ್ನೆಂದೂ ಏಳುವುದಿಲ್ಲ

—ಸುದಾಸ.

ಆಗಸ್ಟ್ 15

ಕರ್ನಾಟಕದಲ್ಲಿ ಬಹುಕಾಲದಿಂದಲೂ ಅತ್ಯಂತ ಜನಪ್ರಿಯವಾದ 'ನವಯುಗ' ವಾರಪತ್ರಿಕೆಯ ಸ್ವಾತಂತ್ರ್ಯ ವಿಶೇಷಾಂಕವು ಪ್ರಕಟಗೊಳ್ಳುವ ದಿನ (ಆಗಸ್ಟ್ 15, 1964) ಸಮೀಪಿಸುತ್ತಿದೆಯಷ್ಟೆ. ಭಾರತಕ್ಕೆ ಸ್ವಾತಂತ್ರ್ಯವು ದೊರೆತ ಸವಿನೆನಪಿಗಾಗಿ ಈ ಸಲದ 17ನೆಯ ವರ್ಧಂತಿಯ ಶುಭದಿನದಲ್ಲಿ ನಮ್ಮ ವಿಶೇಷಾಂಕವು ವಿಶಿಷ್ಟವಾದ ರೀತಿಯಲ್ಲಿ ಪ್ರಕಟವಾಗಲಿದೆ. ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ಪತ್ರಿಕೋದ್ಯಮಿಗಳೂ ಬರೆದ ವಿವಿಧ ಲೇಖನಗಳೂ, ಪ್ರಹಸನಗಳೂ ಅಲ್ಲದೆ ನಮ್ಮ ನಾಡಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಜೀವನವನ್ನು ಕುರಿತ ವಿದ್ವತ್ಪೂರ್ಣ ನಿಬಂಧಗಳೂ ಚಿತ್ರಮಯವಾಗಿ ಕರ್ನಾಟಕದ 19 ಜಿಲ್ಲೆಗಳಲ್ಲಿ ವ್ಯಾಪಿಸಿರುವ 'ನವಯುಗ'ದ ಓದುಗರ ಕೈಸೇರುವುವು.

ಆಗಸ್ಟ್ 15—ಒಂದು ಮಂಗಲಕರವಾದ ದಿನ,

ಆಗಸ್ಟ್ 15—ನವಯುಗದ ಸ್ವಾತಂತ್ರ್ಯ ವಿಶೇಷಾಂಕವು ಪ್ರಚುರವಾಗುವ ಸುದಿನ.

ಆಗಸ್ಟ್ 15—ನಿಮ್ಮ ಸರಕು ಮತ್ತು ಸೇವೆಯ ಸಂದೇಶವನ್ನು ನವಯುಗ ವಿಶೇಷಾಂಕದ ಮೂಲಕ ನಾಡಿನ ಮೂಲೆಮೂಲೆಗೂ ಜಾಹೀರಗೊಳಿಸಬೇಕಾದ ಶುಭದಿನ.

ನಿಮ್ಮ ವ್ಯಾಪಾರವು ಜನಜನಿತವಾಗಲು, ಮತ್ತು ನಿಮ್ಮ ಸರಕುಗಳು ಜನಪ್ರಿಯವೆನಿಸಲು 'ನವಯುಗ'ದ ಸ್ವಾತಂತ್ರ್ಯ ವಿಶೇಷಾಂಕವು ಒಂದು ಅಮೂಲ್ಯ ಸಾಧನ.

ಜಾಹೀರಾತಿನ ದರಗಳಿಗೆ ವಿಚಾರಿಸಿರಿ. ಆಗಸ್ಟ್ 5ರ ಒಳಗೆ ನಿಮ್ಮ ಜಾಹೀರಾತನ್ನು ನಮಗೆ ಕಳಿಸಿ ಕೊಡಿ.

ಮೆನೇಜರ್, ನವಯುಗ, ಉಡುಪಿ.

ಪೂಜ್ಯ ನೆಹರೂಜಿಯವರ ಸ್ಮರಣಾರ್ಥವಾಗಿ

ಬೆಳಗುತಿದೆ ನೋಡಲ್ಲಿ |
ಬ್ರಹ್ಮಾಂಡ ಶಿಖರದಲಿ |
ಭಾರತದ, ಜನಕೋಟಿ,
ಹೃದಯವನು, ಪರಿಕಿಸುತ |
ನವನಾಡ, ನಿರ್ಮಾಣ,
ಕನಸನ್ನು ನೆನಸುತ್ತ |
ಪಾವನ ಪರಿಮಳಿತ,
ಜ್ಯೋತಿಯನು, ಬೀರುತ್ತ |
ಚಿರಶಾಂತಿ, ಧ್ರುವ ತಾರೆ,
ಯಂದದಲಿ, ಹೊಳೆಯುತ್ತ ||
ಭಾರತದ ಜನಕೋಟಿ,
ಕಣ್ಮಣಿಯು, ಧನ್ಯಾತ್ಮ |
ಬೆಳಗುತಿದೆ ನೋಡಲ್ಲಿ
ಅನಂತತೆಯ, ಶಿಖರದಲಿ ||

—ಕೆ. ರಾಮಯ್ಯ, ಕುಡುಮಲ್ಲಿಗೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್.,
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

"ಕಲ್ಪನೆಗೂ ಮೀರಿದ ವಿಚಿತ್ರ ಇಲ್ಲಿದೆ!"

ಇದು ವಿಚಿತ್ರವಾದರೂ ಸತ್ಯ!

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಮೂರುವರೆ ವರ್ಷದ ಹುಡುಗನಿಗೆ ಗಡ್ಡ-ಮೀಸೆ!

ಅಮೇರಿಕಾ ಪ್ರಾಂತ್ಯದ ಒಹಿಯೋ ಟೊಲೆಡೋ ಎಂಬ ನಗರದಲ್ಲಿ ಫ್ಲೋರೆನ್ಸ್-ಕೇದರ್ ಎಂಬೋರ್ವ ಮಹಿಳೆ ವಾಸವೂ ಮಾಡಿ ಕೊಂಡಿದ್ದಳು. ಅವಳಿಗೆ 3½ ವರ್ಷ ಪ್ರಾಯದ ಒಬ್ಬ ಹುಡುಗನಿದ್ದನು. ಈ ಹುಡುಗನು ಮೂರು ವರ್ಷ ಪ್ರಾಯ ತುಂಬುವವರೆಗೂ, ಇತರ ಹುಡುಗರಂತೆಯೇ ಇದ್ದ. ಆದರೆ ಆ ಬಳಿಕ ಅನಿರೀಕ್ಷಿತವಾಗಿ ಆತನ ಶರೀರವು ವಿಚಿತ್ರವಾದ ಪರಿವರ್ತನೆಗೊಳಗಾಯಿತು. ಆಶ್ಚರ್ಯವೆಂದರೆ ಕೇವಲ ಆರು ತಿಂಗಳೊಳಗಾಗಿಯೇ ಆ ಹುಡುಗ ನಾಲ್ಕು ಫೀಟು ಉದ್ದ ಬೆಳೆದ! ಆತನ ಮಾನಸಿಕ ಹಾಗೂ ದೈಹಿಕ ಶಕ್ತಿಯೂ ಕೂಡಾ ತರುಣರಾದ ಪುರುಷರ ಶಕ್ತಿಗೆ ಸರಿಸಮವಾಯಿತು. ಅಷ್ಟರಲ್ಲಿ ಆತನಿಗೆ ಗಡ್ಡ ಮೀಸೆಗಳೂ ಬೆಳೆದು ಆತ ದಿನ ನಿತ್ಯವೂ ಮುಖ ಕ್ಷೌರವನ್ನೂ ಮಾಡಿ ಕೊಳ್ಳತೊಡಗಿದ! ಸಿಗರೇಟು ಶರಾಬು—ಇವೆಲ್ಲವನ್ನೂ ಸಹ ಹೆಚ್ಚಿನ ಪ್ರಮಾಣದಲ್ಲಿ ದಿನವೂ ಸೇವಿಸ ತೊಡಗಿದ!- ಹೀಗೆ ಪರಿವರ್ತನೆ ಹೊಂದಿದ ಈ ಮೂರುವರೆ ವರ್ಷದ ಹುಡುಗನ ಶಕ್ತಿ ಎಷ್ಟು ಅಗಾಧವಾಗಿತ್ತೆಂದರೆ, ಒಂದು ಸಲ ಆತನು ತನ್ನ ತಾಯಿಯನ್ನು ಮಗುವನ್ನು ಕೈಗಳ ಮೇಲೆ ಎತ್ತಿಕೊಳ್ಳುವ ಹಾಗೆ ಎತ್ತಿಕೊಂಡು, ತನ್ನ ಮನೆಗೆ ಓಡೋಡಿಯೇ ಮೂರು ನಾಲ್ಕು ಸುತ್ತು ತಿಗೆದು ಮತ್ತೆ ನಿಧಾನವಾಗಿ ಕೆಳಗಿಳಿಸಿದ್ದನಂತೆ! ಈ ಹುಡುಗನ ಶಕ್ತಿಯನ್ನು ಕಂಡ ಅಲ್ಲಿಯ ಜನರು ಅತ್ಯಂತ ಆಶ್ಚರ್ಯಕ್ಕೊಳಗಾಗಿದ್ದರು!

ಏಳು ವರ್ಷ ಪ್ರಾಯದ ಮುದುಕ!

ಇಂಗ್ಲೇಂಡಿನಲ್ಲಿ ಚಾರ್ಲ್ಸ್‌ವರ್ಥ್ ಎಂಬ ಹೆಸರಿನ ಒಬ್ಬ ಮನುಷ್ಯನಿದ್ದನು. ಈತನು ಸ್ಟೆಫರ್ಡ್ ಶಾಯರ್ ಎಂಬ ಪ್ರಾಂತ್ಯದಲ್ಲಿ, ಕ್ರಿ. 24-1826ರಲ್ಲಿ ಹುಟ್ಟಿದನು. ಈತನು ನಾಲ್ಕು ವರ್ಷ ಪ್ರಾಯದವನಾಗಿರುವಾಗಲೇ ಆತನಲ್ಲಿ ಯೌವನದ ಎಲ್ಲಾ ಲಕ್ಷಣಗಳೂ ಕಾಣಿಸ ತೊಡಗಿದುವು. ಗಡ್ಡ ಮೀಸೆಗಳು ಸೊಂಪಾಗಿ ಬೆಳೆದುವು, ಮತ್ತೆ ಒಂದೆರಡು ವರ್ಷಗಳೊಳಗಾಗಿಯೇ ಅವನು ಮುದುಕನಾಗ ತೊಡಗಿದ! ಈತನಿಗೆ ಏಳು ವರ್ಷ ಪ್ರಾಯ ತುಂಬುವುದರೊಳಗಾಗಿಯೇ ಗಡ್ಡ ಮೀಸೆಗಳು ನರೆತು ಆತ ಮುದುಕನಾದನು! ಆ ನಂತರ ಇತರ ಮುದುಕರು ತೀರಿ ಹೋಗುವಂತೆಯೇ ಈತನೂ ತೀರಿ ಕೊಂಡನು.

ಬೇರೆ ಬೇರೆ ವ್ಯಕ್ತಿತ್ವವುಳ್ಳ ವಿಚಿತ್ರ ತರುಣಿ!

ಅಮೇರಿಕಾದ ಓರ್ವ ಯುವಕನು ಕೋಮಲಾಂಗಿಯೋರ್ವಳನ್ನು ಮದುವೆ ಮಾಡಿಕೊಂಡು ಈಗ ದೊಡ್ಡ ಸಮಸ್ಯೆಯಲ್ಲಿ ಸಿಲುಕಿದ್ದಾನೆ. ಅತ್ಯಂತ ಚೆಲುವೆಯಾದ ಆ ಕೋಮಲಾಂಗಿಯೊಡನೆ, ಆತ ಒಂದು ವರ್ಷದವರೆಗೆ ದಾಂಪತ್ಯ ಸುಖವನ್ನು ಅನುಭವಿಸಿದ. ಅಷ್ಟರಲ್ಲಿ ಆಕೆ ಒಂದು ಹೆಣ್ಣು ಮಗುವಿಗೆ ಜನ್ಮವಿತ್ತಳು. ಹೆರಿಗೆಯಾಗಿ ಕೆಲವು ತಿಂಗಳ ಕಾಲ ಕಳೆದಾಗ ಆಕೆ ವಿಚಿತ್ರ ಪರಿವರ್ತನೆಗೊಳಗಾದಳು. ಒಂದು ಮಗುವಿನ ತಾಯಿಯಾಗಿದ್ದ ಆಕೆ ಈಗ ಕೇವಲ ಹದಿನೈದು ವರ್ಷದ ಕಾಮೋನ್ಮಾದಿನಿಯಂತೆ ವರ್ತಿಸತೊಡಗಿದಳು- ಈ ವೇಳೆ ಆಕೆಗೆ ತನ್ನ ಚಂಚಲತೆಯ ಹೊರತು ತನ್ನ ಮಗು, ತನ್ನ ಗಂಡ ಎಂಬ ಯಾವ ನೆನಪೂ ಇರುತ್ತಿರಲಿಲ್ಲ! ಯಾವನಾದರೂ ಸುಂದರ ಯುವಕನನ್ನು ನೋಡಿದಾಗ ಆಕೆ, ಕಾಮೋದ್ರೇಕಿತೆಯಾಗಿ ವರ್ತಿಸುತ್ತಿದ್ದಳು. ತನ್ನ ಪ್ರೀತಿಯ ಹೆಂಡತಿಯ ಈ ಪರಿಸ್ಥಿತಿಯನ್ನು ಕಂಡ ಆಕೆಯ ಗಂಡನಿಗೆ ಗಾಬರಿಯಾಯಿತು. ಈ ವಿಚಿತ್ರವನ್ನರಿಯಲು ಆತ ಡಾಕ್ಟರರ ಸಲಹೆ ಕೇಳಿದನು. ಅನೇಕ ಪ್ರಸಿದ್ಧ ಡಾಕ್ಟರರು ಆಕೆಯನ್ನು ಪರೀಕ್ಷಿಸಿದರು. ಆದರೆ, ಕೊನೆಗೂ ಆಕೆಯಲ್ಲಿ ಉಂಟಾಗುವ ವಿಚಿತ್ರ ಪರಿವರ್ತನೆಯನ್ನು ತಿಳಿಯಲಾರದಾದರು. ಆ ಬಳಿಕ, ಹಲವು ಮಂದಿ ಡಾಕ್ಟರರು ಸಭೆ ಸೇರಿ ಆಕೆಯನ್ನು ವಿವಿಧ ರೀತಿಯಿಂದ ಪರೀಕ್ಷಿಸಿದ ಬಳಿಕ ಒಂದು ನಿರ್ಣಯಕ್ಕೆ ಬಂದರು- ಅವರೆಲ್ಲರ ಸಂಶೋಧನೆಯ ವಿವರ ಹೀಗಿತ್ತು—

"ಈ ಮಹಿಳೆಯಲ್ಲಿ ಮೂರು ಬಗೆಯ ವ್ಯಕ್ತಿತ್ವಗಳು ಅಡಕವಾಗಿವೆ. ಇದರಲ್ಲಿ ಮತ್ತೂ ವಿಶೇಷವೇನೆಂದರೆ, ಒಂದು ವ್ಯಕ್ತಿತ್ವವು ಮತ್ತೊಂದು ವ್ಯಕ್ತಿತ್ವವನ್ನು ಏನೂ ತಿಳಿದುಕೊಳ್ಳಲಾರದಾಗಿದೆ."

ಹೀಗೆ ಈಕೆಯಲ್ಲಿ ಮೂರು ವ್ಯಕ್ತಿತ್ವಗಳು ಕೆಲಸ ಮಾಡುತ್ತಿರುವ ಕಾರಣ ಡಾಕ್ಟರುಗಳು ಒಂದೊಂದು ವ್ಯಕ್ತಿತ್ವಕ್ಕೆ ಒಂದೊಂದು ಹೆಸರನ್ನು—"ಈವ್ ವ್ಹೈಟ್" "ಈವ್ ಬ್ಲೇಕ್" ಮತ್ತು "ಈವ್ ಬ್ಲ್ಯೂ" ಎಂಬುದಾಗಿ ಕೊಟ್ಟರು. ಈಕೆಯ "ಈವ್ ವ್ಹೈಟ್" ವ್ಯಕ್ತಿತ್ವವು ಮೃದು ಮಧುರ ಭಾಷಿಣಿಯಾದ ಓರ್ವ ಪತ್ನಿಯ ಮತ್ತು ಮಾತೆಯ ರೂಪದಲ್ಲಿದ್ದು "ಈವ್ ಬ್ಲೇಕ್" ವ್ಯಕ್ತಿತ್ವವು ಮದ್ಯಪಾನ ಮಾಡುವ ಸ್ವೇಚ್ಛಾಚಾರಿಣಿಯಾದ ಓರ್ವ ತರುಣಿಯದಾಗಿರುತ್ತಿತ್ತು. ಈ ವ್ಯಕ್ತಿತ್ವದಲ್ಲಿರುವಾಗ ಆಕೆ—ದೊಡ್ಡ ದೊಡ್ಡ ಅಂಗಡಿಗಳಿಗೆ ಹೋಗಿ ಬೆಲೆಬಾಳುವ ಬಟ್ಟೆಗಳಿಗೆ ಆರ್ಡರ್ ಕೊಡುತ್ತಿದ್ದಳು. ಕೆಲವು ಬಟ್ಟೆಗಳನ್ನು ಅಪಹರಿಸಿಕೊಂಡು ಬರುವುದೂ ಕೂಡಾ ಆಕೆಯ ಸಹಜ ಗುಣವಾಗಿರುತಿತ್ತು. "ಈವ್ ಬ್ಲ್ಯೂ" ವ್ಯಕ್ತಿತ್ವವು ಮದಾಂಧಳಾದ ಓರ್ವ ಕಾಮಿನಿಯ ವ್ಯಕ್ತಿತ್ವವಾಗಿರುತ್ತಿತ್ತು!

ಹೀಗೆ ಈ ತರುಣಿಯ ದೇಹದಲ್ಲಿ ಒಂದೊಂದು ವೇಳೆ ಒಂದೊಂದು ವ್ಯಕ್ತಿತ್ವವು ಕೆಲಸ ಮಾಡುತ್ತಿತ್ತು. ಒಂದು ವ್ಯಕ್ತಿತ್ವದಲ್ಲಿದ್ದಾಗ ಆಕೆ, ಬೆಲೆಬಾಳುವ ಬಟ್ಟೆಗಳಿಗೆ ಆರ್ಡರ್ ಕೊಟ್ಟಿರುತ್ತಿದ್ದಳು. ಆದರೆ, ಆರ್ಡರು ಮಾಡಿದ ಬಟ್ಟೆ ಅವಳಿಗೆ ತಲುಪುವ ಕಾಲಕ್ಕೆ ಆಕೆ ಬೇರೆ ವ್ಯಕ್ತಿತ್ವದಲ್ಲಿರುತ್ತಿದ್ದರೆ, ಬಟ್ಟೆಗೆ ಆರ್ಡರ್ ಮಾಡಿದ್ದು ಅವಳಿಗೆ ಗೊತ್ತೇ ಇರುವುದಿಲ್ಲ. ಹೀಗಾಗಿ ಆಕೆ ಆಶ್ಚರ್ಯಚಕಿತಳಾಗುತ್ತಿದ್ದಳು. "ನಿನ್ನೆ ನೀವು ಆ ತರುಣನೊಡನೆ ಕ್ಲಬ್ಬಿನಲ್ಲಿ ನೃತ್ಯವಾಡಿದ್ದೀರಿ!" ಎಂಬುದಾಗಿ- ಆಕೆ "ಈವ್ ವ್ಹೈಟ್" ವ್ಯಕ್ತಿತ್ವದಲ್ಲಿದ್ದಾಗ, ಯಾರಾದರೂ ಅವಳೊಡನೆ ಹೇಳಿದರೆ, ಆಗ ಆಕೆ ನಾಚಿಕೆಯಿಂದ ತಲೆ ತಗ್ಗಿಸಿ ಕಣ್ಣೀರ್ಮಿಡಿಯುತ್ತಿದ್ದಳು!

—ಸಾಧಾರ (ಯುಪಸಟ್ ಪ್ರೈದಿಂದ)

ವಿಚಾರ ಕಿಡಿಗಳು

ಬೆಳಕನ್ನು ಕಂಡು ಮುಖ ಮುಚ್ಚಿಕೊಂಡರೆ ಕಣ್ಣಿದ್ದೂ ಕುರುಡರಾದಂತೆ. ಸಂದರ್ಭ ದೊರೆತಾಗಲೂ ಸಾಧಿಸದ ಆಲಸಿಗರು ಸ್ವಹಿತವನ್ನೇ ಹಾಳು ಮಾಡಿಕೊಂಡಂತೆ!

o o o

ಅನ್ಯರನ್ನು ಉದ್ಧರಿಸುವುದಕ್ಕಾಗಿ ಸರ್ವತ್ಯಾಗ ಮಾಡಿದ ಪುಣ್ಯಾತ್ಮರ ಗುಣಗಾನ ಮಾಡುತ್ತಲೇ ಇದ್ದಂತೆ ತನ್ನವರ ನಾಶಕ್ಕಾಗಿ ನ್ಯಾಯ ಹೂಡುವ ಧಾಂಬಿಕರಿದ್ದಾರೆ!

o o o

ಸಂತೋಷದ ದಿನದಲ್ಲಿ ಸಂಕಷ್ಟವನ್ನೆತ್ತಿ ಮಾತಾಡಬಾರದು. ಹುಟ್ಟು ಹಬ್ಬದ ದಿನದಂದು ಮರಣಗೊಂಡ ಹಿರಿಯರನ್ನು ನೆನೆದು ಮರುಗಬಾರದು!

o o o

ವಿರೋಧಿಯೊಂದಿಗೆ ವ್ಯವಹಾರ ಸಂಬಂಧ ಇಟ್ಟುಕೊಂಡರೆ ನಷ್ಟ!—ದುಷ್ಟನಲ್ಲಿ ದಯಾಭಾವ ತೋರಿಸುವುದರಿಂದ ಕಷ್ಟ!

o o o

ಅನ್ಯಾಯ ಅತ್ಯಾಚಾರಗಳನ್ನು ಕಂಡು ಸುಮ್ಮನಿರುವುದಲ್ಲ. ಎದುರಿಸುವ ಎದೆಗಾರಿಕೆ ಬೇಕು. ಒಳ್ಳೆಯತನವನ್ನು ಕಂಡು ವಿರೋಧಿಸುವುದಲ್ಲ—ಪ್ರೋತ್ಸಾಹ ನೀಡುವ ಉದಾರತೆ ಇರಬೇಕು!

o o o

ಅದೃಷ್ಟ ಚೆನ್ನಾಗಿದ್ದರೆ ಅರೆ ನಿಮಿಷದಲ್ಲೇ ಮೇಲೇರಬಹುದು!—ಆಯುಷ್ಯ ಮುಗಿದಿದ್ದರೆ ಅರೆ ಘಳಿಗೆಯಲ್ಲೇ ಮರಣ ಸಂಭವಿಸುವುದು!

o o o

ಮನೆ ಒಳ್ಳೆಯದೆಂದು ಆಶ್ರಯಕ್ಕೆ ಹೋದರೇನು?—ಆ ಮನೆಯಲ್ಲಿರುವವನ ಮನಸ್ಸೂ ಒಳ್ಳೆಯದಿರಬೇಕು. ಜನ ಒಳ್ಳೆಯವನೆಂದು ಸ್ನೇಹ ಗಳಿಸಿದರೇನು?—ಆತ ಸಂಕಷ್ಟದಲ್ಲಿ ಸಹಕರಿಸುವ ದಯಾಭಾವಿಯಾಗಿರಬೇಕು!

o o o

ಮದುವೆ ಮನೆಯಲ್ಲೇ ಮರಣ ಸಂಭವಿಸಿದರೆ ಹೇಗೆ?—ತಿನ್ನುವ ಆಹಾರದಲ್ಲೇ ವಿಷ ಬೆರೆತಿದ್ದ ಹಾಗೆ!

—ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ.



ಉಡುಪಿ, ಡಿ. ಮು. ಕೋರ್ಟಿನಲ್ಲಿ—
O. S. 129/61.

ಸಂಜೀವಿ ಜೆ. ಶೆಟ್ಟಿ — ವಾದಿ
ಮತ್ತು
ತುಂಗಮ್ಮ ಶೆಡ್ತಿ ಕೂಡಾ —ಪ್ರತಿವಾದಿರು,
ಇವರೊಳಗೆ.

7 ನೇ ಪ್ರತಿವಾದಿ ಬಾಲಯ್ಯ ಶೆಟ್ಟಿ, ಮೂಸಕ್ಕ ಶೆಡ್ತಿರವರ ಉಡುಪಿ ತಾಲ್ಲೂಕು ಜಂಡಾಡಿ ಗ್ರಾಮದ ಮುರ್ಬ— ಇವರಿಗೆ ತಿಳಿಯಪಡಿಸುವುದೇನೆಂದರೆ:—

ವಾದಿರಿಗೆ ಪ್ರತಿವಾದಿರಿಂದ ಬರಬೇಕಾದ ಕಳೆದ ಸ್ವವಸಂ|ರದ ಉಗ್ರಾಣತು ಬೋಳಕೃತು ಸಂ|ರದ ಅಂತ್ಯದ ವರೆಗಿನ ಮೂಲಗೇಣಿ ಬಾಕಿಗೆ ವಾದಿರು ಮಾಡಿದ ಮೇಲಿನ ದಾವೆಯು ತಾ. 23-7-64 ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉದಾಹರಿಸುವದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11 ಕ್ಕೆ ಯೀ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು.

(By order of the court)
Y. C. S. Hegde
Advocate for Pltf

ಉಡುಪಿ. ಡಿ. ಮು. ಕೋರ್ಟಿನಲ್ಲಿ—
O. S. 101/196

ಅಕ್ಕಯ ಶೆಡ್ತಿ —ವಾದಿಳು
ಮತ್ತು
ಪಿರಲಶೆಟ್ಟಿ—ಅಣ್ಣಯ್ಯ ಶೀನುಗ—ಉಡುಪಿ ತಾಲೂಕು ಕೊರಂಗ್ರಪಾಡಿ ಗ್ರಾಮದ ದೊಡ್ಡಮನೆ— 2ನೇ ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಪಡಿಸುವದೇನೆಂದ್ರೆ:—

ನಿಮ್ಮ ತಂದೆ ಮೃತ ಅಣ್ಣಯ್ಯ ಶೆಟ್ರು ವಾದಿಳಿಗೆ ತಾ. 28-1-1950ರಲ್ಲು ರಿಜಿಸ್ಟರಿ ರೂಪಾಯಿ 700 ಕ್ಕೆ ಬರಕೊಟ್ಟ ಸ್ಥಿರಾಧಾರ ಈಡು ದಸ್ತಾವೇಜಿನ ಬಾಬ್ತು ವಾರೀಸುದಾರರಾದ ನೀವು ವಗೈರೆರಿಂದ ಬರತಕ್ಕ ಮೇಜಿನ ಬಗ್ಗೆ ವಾದಿಯು ದಾಖಲು ಮಾಡಿ ಮೇಲ್ಕಂಡ ದಾವೆಯು ತಾ.4.7.1964 ಯಿಟ್ಟದೆ — ಉದಾಹರಿಸುವಂಥಾದ್ದು ಯಿದ್ದರೆ ಆ ದಿನ್ನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು—ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಯೇಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು

K. Balachandra Ra
Advocate for Planti
Udipi. 24-6-1964

ಅಮೆರಿಕೆಯಲ್ಲಿ

ಭಾರತೀಯ ಶಿಲ್ಪಾಕೃತಿ ಪ್ರದರ್ಶನ

ಗೋಲ್ಡನ್ ಗೇಟ್ ಪಾರ್ಕಿನ ಡಿಯಂಗ ಮೆಮೋರಿಯಲ್ ಮ್ಯೂಸಿಯಂನಲ್ಲಿ ಪ್ರಾಚೀನ ಭಾರತದ ಉಜ್ವಲ ಶಿಲ್ಪ ಕಲಾಕೃತಿಗಳ ಆಯ್ಕೆಯೊಂದನ್ನು ಪ್ರದರ್ಶಿಸಲಾಗುತ್ತಿದೆ. ಇದು ಮೇ ೨೯ರಂದು ಪ್ರಾರಂಭವಾಗಿತ್ತು, ಜುಲೈ ೧೯ರವರೆಗೆ ಉಳಿಯುವುದು. ೫೦೦೦ ವರ್ಷ ವ್ಯಾಪ್ತಿಯ ಭಾರತೀಯ ಕಲಾಕೃತಿಗಳನ್ನಿಲ್ಲಿ ಪ್ರದರ್ಶಿಸಲಾಗುವುದು.

ಶಿಲೆ ಮತ್ತು ಜೇಡಿ ಮಣ್ಣಿನ ೧೦೦೦ಕ್ಕಿಂತಲೂ ಹೆಚ್ಚು ಕಲಾಕೃತಿಗಳನ್ನು ಪಾಶ್ಚಾತ್ಯ ಗೋಳಾರ್ಧದಲ್ಲಿ ಮೊದಲ ಬಾರಿಗೆ ಪ್ರದರ್ಶಿಸಲಾಗುತ್ತಿದೆ. ಭಾರತದ ವಸ್ತು ಸಂಗ್ರಹಾಲಯಗಳು ಮತ್ತು ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯದವರು ಇವುಗಳನ್ನು ಎರವಲು ಕೊಟ್ಟಿದ್ದಾರೆ.

ಒಟ್ಟು ೩೦ ಟನ್‌ಗಳಷ್ಟು ಭಾರವಿರುವ ಈ ಅಮೂಲ್ಯ ಶಿಲ್ಪ ಕಲಾಕೃತಿಗಳನ್ನು ಮೊದಲು ಟೋಕಿಯೋ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ತೋರಿಸಲು ಒಟ್ಟುಗೂಡಿಸಲಾಯಿತು. ಡಿಯಂಗ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಿದ ನಂತರ ಈ ಶಿಲ್ಪ ಕಲಾಕೃತಿಗಳನ್ನು ಸಿಯಾಟಲ್ ಆರ್ಟ್ ಮ್ಯೂಸಿಯಂನಲ್ಲಿ, ಕ್ಲೀವ್‌ಲೆಂಡ್ ಆರ್ಟ್ ಮ್ಯೂಸಿಯಂನಲ್ಲಿ ನ್ಯೂಯಾರ್ಕಿನ ಮೆಟ್ರೊಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್‌ನಲ್ಲಿ ಮತ್ತು ಹೊನಲೂಲು ಆರ್ಟ್ಸ್ ಅಕಾಡೆಮಿಯಲ್ಲಿ ಪ್ರದರ್ಶಿಸಲಾಗುವುದು.

ಪ್ರದರ್ಶಿಸಲಾಗುವ ಅಪೂರ್ವ ಕೃತಿಗಳಲ್ಲಿ ಅತಿ ಪ್ರಾಚೀನವಾದುವುಗಳೆಂದರೆ ಸುಮಾರು ಕ್ರಿ. ಪೂ. ೨,೫೦೦೦ ವರ್ಷಗಳ ಹಿಂದಿನ, ಮೊಹೆಂಜೋದಾರೋ ಮತ್ತು ಹರಪ್ಪಾದ ಪ್ರಾಚೀನ ಕೃತಿಗಳು. ಇವುಗಳಲ್ಲಿ ಕಂಚಿನಿಂದ ತಯಾರಿಸಿದ ಚಿಕ್ಕ ಕೋಡಿನ ಒಂದು ಕೋಣ ಮತ್ತು ಕೊರಳಲ್ಲಿ ಮಣಿಸರ, ಫ್ಯಾನ್‌ನಂಥ ಶಿರೋಭೂಷಣ ಮತ್ತು ತಲೆಯ ಎರಡೂ ಬದಿಗಳಲ್ಲಿ ಬುಟ್ಟಿಗಳಂಥ ಅಲಂಕೃತಿಗಳನ್ನು ಧರಿಸಿದ ದೇವಿಯ ಜೇಡಿ ಮಣ್ಣಿನ ಎದೆಯುಳ್ಳತನಕದ ಮೂರ್ತಿಗಳು ಇವೆ. ಇವು ಮೊಹೆಂಜೊದಾರೋದ ಕೃತಿಗಳು; ಮತ್ತು ಚೌಕಾಕೃತಿಯ ಕೆತ್ತನೆಯ ಮುದ್ರೆಗಳಿವೆ, ಇವುಗಳಲ್ಲಿ ತುದಿಯಲ್ಲಿ ಎಂಟು ಚಿತ್ರರೇಖೆಗಳಿರುವ ಪವಿತ್ರ ಹೀರವನ್ನು ರಕ್ಷಿಸುತ್ತಿರುವ ಏಕಶೃಂಗಿಯನ್ನು ತೋರಿಸಲಾಗಿದೆ ಮತ್ತು ಒಂದು ಹಣ್ಣನ್ನು ತಿನ್ನುತ್ತಿರುವ ಅಳಿಲಿನ ಶಿಲ್ಪಕೃತಿಯಿದೆ, ಇವು ಹರಪ್ಪಾದ ಕಲಾಕೃತಿಗಳು.

ಕ್ರಿ. ಪೂ. ಎರಡನೇ ಶತಮಾನದ ಸಾಂಚಿಯ ಪ್ರಭಾವ ಸ್ತೂಪದ ಅಂಗವಾದ ಬರೂತ ಸ್ತೂಪದ ಕಟಕಟೆಯ ಒಂದು ಭಾಗ ಈ ಪ್ರದರ್ಶನದಲ್ಲಿರುವುದು. ಇದರಲ್ಲಿ ಮೂರು ಸ್ತಂಭಗಳು ಮತ್ತು ಆರು ಅಡ್ಡ ಕಂಬಗಳು ಇವೆ. ದಕ್ಷಿಣ ದ್ವಾರದ ಪಶ್ಚಿಮದ ಸ್ತಂಭದಿಂದ ತೆಗೆದ ಮೂರ್ತಿಗಳಿನ ಒಂದು ತುಂಡೂ ಇದೆ, ಇದೇ ಕ್ರಿ. ಪೂ. ಒಂದನೆಯ ಶತಮಾನದ್ದು. ಬಲಮುಖದಲ್ಲಿ ದ್ವಾರಪಾಲಕನೊಬ್ಬನ ಕಾಲುಗಳಿವೆ, ಎಡ ಮುಖದಲ್ಲಿ ಬಳ್ಳಿಗಳು, ಹಕ್ಕಿಗಳು, ಹಣ್ಣು ಮತ್ತು ಒಬ್ಬ ಯಕ್ಷನಿರುವ ಒಂದು ಕೋಮಲ ಗಿಡದ ಕಲಾಕೃತಿಯಿದೆ.

ಮಥುರೆಯ, ಜೇಡಿ ಮಣ್ಣಿನ, ಅಲಂಕಾರ ಭರಿತವಾಗಿರುವ ದೇವಿಯ ವಿಗ್ರಹವೊಂದು ಕ್ರಿ. ಪೂ. ೪೦೦-೨೦೦ರ ಕಾಲದ್ದು. ಮೊಣಕಾಲುಗಳ ಮೇಲೆ ಕೈಗಳನ್ನಿಟ್ಟು ಕುಳಿತುಕೊಂಡಿರುವ, ಜೇಡಿ ಮಣ್ಣಿನ ಎರಕದ ವಿಗ್ರಹವೊಂದು ಕ್ರಿ ಪೂ. ಎರಡನೇ ಶತಮಾನದ ಶುಂಗರ ಕಾಲದ್ದು. ಈ ಯಕ್ಷನು ವೈಭವದ ಶಿರೋಭೂಷಣಗಳನ್ನು ಮತ್ತು ಇತರ ಭೂಷಣಗಳನ್ನು ಧರಿಸಿರುತ್ತಾನೆ.

ಶುಂಗರ ಕಾಲದ ಜೇಡಮಣ್ಣಿನ ಆಟದ ರಥವೊಂದು ಇಲ್ಲಿದೆ. ಇದಕ್ಕೆ ನಾಲ್ಕು ಎತ್ತುಗಳನ್ನು ಜೋಡಿಸಲಾಗಿದೆ, ಬದಿಗಳ ರಂಧ್ರಗಳಲ್ಲಿ ಅಕ್ಷಗಳಲ್ಲಿ ಎರಡು ಚಕ್ರಗಳನ್ನಿಡಲಾಗಿದೆ ಮತ್ತು ಎಳೆಯುವ ಸಾಧನಕ್ಕಾಗಿ ಮುಂಭಾಗದಲ್ಲಿ ಒಂದು ರಂಧ್ರವಿದೆ.

ಸುಮಾರು ಕ್ರಿ. ಶ. ೫೫೦ ಇಸವಿಯ ಗುಪ್ತರ ಕಾಲದ ಒಂದು ಬುದ್ಧನ ವಿಗ್ರಹವಿದೆ, ಮಖಮಲ್ ಬಣ್ಣದ ಮರಳುಗಲ್ಲಿನ ಇದನ್ನು ಕೆತ್ತಲಾಗಿದೆ, ಮಥುರಾದ ಈ ವಿಗ್ರಹವು ಪಾರದರ್ಶಕ ವಸ್ತ್ರವನ್ನು ಐದು ಮಡಿಕೆಯಲ್ಲಿ ಧರಿಸಿದೆ. ಸಿಂಹ ಚಿತ್ರದ ಮೇಲೆ ಸವಾರಿ ಮಾಡುವ ಯೋಧನೊಬ್ಬನನ್ನು ತೋರಿಸುವ ಮರಳುಗಲ್ಲಿನ ವಿಗ್ರಹ ಸಾಂಚಿಯಿಂದ ಪಡೆದುದು. ಇದು ಐದನೆಯ ಅಥವಾ ಆರನೆಯ ಶತಮಾನದ ಕೃತಿ.

ಡಿಯಂಗ ಮ್ಯೂಸಿಯಂನ ಪ್ರದರ್ಶನದಲ್ಲಿ ೧೭ ರಿಂದ ೧೯ನೇ ಶತಮಾನದ ಆದಿಯವರೆಗಿನ ರಜಪೂತ ಮತ್ತು ಮೊಗಲ ಚಿತ್ರ ಕಲೆಗಳೆರಡನ್ನೂ ಪ್ರತಿನಿಧೀಕರಿಸುವ ೮೫ ಭಾರತೀಯ ಪೈಂಟಿಂಗ್‌ಗಳಿವೆ.

ತಬ್ಬಲಿ!

(೨ನೇ ಪುಟದಿಂದ)

ತಿಯೇನು? ಜಗದೀಶನು ಆಸ್ಪತ್ರೆಗೆ ಓಡಿದ. ಡಾಕ್ಟರೊಡನೆ ಎಲ್ಲಾ ವಿಷಯವನ್ನು ಹೇಳಿ ಗೋಳೋ ಎಂದು ಅತ್ತು ಬಿಟ್ಟನು. ಡಾಕ್ಟರರಿಗೂ ಆ ಬಾಲಕನ ಮೇಲೆ ಕರುಣೆ ಹುಟ್ಟಿತು. ಕೂಡಲೇ ಹೊರಟು ಬಂದರು. ಬರಬರುತ್ತಾ ಜಗದೀಶನ ಜೋಪಡಿಯ ಹತ್ತಿರ ಬಂದರು. ನಿಕೃಷ್ಟ ವಾತಾವರಣದ ಗುಡಿಸಲಿನಲ್ಲಿ ಡಾಕ್ಟರರನ್ನು ಜಗದೀಶ ತನ್ನ ತಾಯಿಯು ಮಲಗಿದ್ದ ಚಾಪೆಯ ಹತ್ತಿರಕ್ಕೆ ಹರಿಯುತ್ತಿರುವ ಕಣ್ಣೀರನ್ನು ಒರಸುತ್ತಾ ಕೊಂಡೊಯ್ದನು. ಆ ಕತ್ತಲೆಯಿಂದ ತುಂಬಿದ ಗುಡಿಸಲಿನ ಮೂಲೆಯಲ್ಲಿ ಮಲಗಿದ್ದ ಆ ರೋಗಿಯನ್ನು ಪರೀಕ್ಷಿಸಲು ಬಗ್ಗಿದರು. ಹಾ! ಹಾ! ಏನೆನ್ನಲಿ? ಇದುವರೆಗೆ ಜಗದೀಶನಿಗಿದ್ದ ಒಂದೇ ಒಂದು ಆಧಾರಸ್ತಂಭವೂ ಮುರಿದು ಬಿತ್ತು. ಅಯ್ಯೋ ಜಗದೀಶನ ದುಃಖಕ್ಕೆ ಪಾರವಿದೆಯೇ? ಹೆಚ್ಚೇಕೆ ಡಾಕ್ಟರರೂ ಒಂದು ನಿಟ್ಟುಸಿರು ಬಿಟ್ಟರು. ಅವರ ಕಣ್ಣಿನಿಂದಲೂ ಒಂದು ತೊಟ್ಟು ನೀರು ಹಾಯಿತು. ಆಹಾ! ಆ ಬಡ ಬಾಲಕನ ದುಃಖವನ್ನು ಅವರು ಕಾಣಬಾರದು. ಆಗ ಅವರು ಜಗದೀಶನನ್ನು ಸಂತೈಸಿ ಅವರ ಮನೆಗೆ ಕರೆದೊಯ್ಯುತ್ತಲೇ ಲಕ್ಷ್ಮಮ್ಮನವರ ಶವ ಸಂಸ್ಕಾರವನ್ನೂ ಮಾಡಿಸಿದರು. ಡಾಕ್ಟರರ ಮನೆಯಲ್ಲಿ ಜಗದೀಶನು ಶಾಲೆಗೆ ಹೋಗುವ ಮೊದಲೂ ಶಾಲೆಯಿಂದ ಬಂದ ನಂತರವೂ ಕೆಲಸ ಮಾಡುತ್ತಿದ್ದನು. ರಾತ್ರಿ ೮ ಗಂಟೆಯ ತನಕ ಡಾಕ್ಟರರ ಮನೆಯ ಕೆಲಸ. ನಂತರ ೧೦ ಗಂಟೆಯ ತನಕ ಮಾರ್ಗದ ದೀಪದ ಅಡಿಯಲ್ಲಿ ವ್ಯಾಸಂಗ. ಆ ಮೇಲೆ ಹೋಗಿ ಮನೆಯವರ ನಿದ್ದೆಗೆ ತೊಡಕು ಬಾರದಂತೆ ಜಗಲಿಯಲ್ಲಿ ಮಲಗುವನು. ಬೆಳಗ್ಗೆ ೪ ಗಂಟೆಗೆ ಎದ್ದು ೬ ಗಂಟೆಯ ತನಕ ಓದುತ್ತಿದ್ದನು. ದೇವರ ದಯವೋ ಎಂಬಂತೆ ಆ ಬಾಲಕನಿಗೆ ಜದರಿಕೆ ಬೇಸರಗಳ ಗೊಡವೆಯೇ ಇರಲಿಲ್ಲ. ಹೇಗೂ ಜಗದೀಶನು ಬಿ. ಎಸ್. ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದನು ಇದಾಗಲೇ ಡಾಕ್ಟರರ ಮನಸ್ಸು ಆವನತ್ತ ಹರಿಯಿತು. ತನ್ನ ಮಗಳಾದ ವಿಮಲೆಯನ್ನು ಅವನಿಗೆ ಕೊಟ್ಟು ವಿವಾಹ ಮಾಡಿದರಲ್ಲದೆ ಮುಂದೆ M. B. B S. ಶಿಕ್ಷಣಕ್ಕೆ ಕಳುಹಿಸಿದರು. ಹೀಗೆ ಮುಂದೆ ಜಗದೀಶನು ಒಬ್ಬ ಯೋಗ್ಯ ಡಾಕ್ಟರನಾಗಿ ಮೆರೆದನು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ: ರೂ ಎರಡೂವರೆ(ಟ.ಖ.ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ
LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಕಿರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

REGD. No. B. G. 176
LICENCE No. 31
Licensed to Post without Prepayment

ಅಗಲಿದ ಮಹಾನಾಯಕನಿಗೊಂದು ಸ್ಮಾರಕ

"ನೆಹರೂ ಸ್ಮಾರಕ ನಿಧಿ"

ಕಾಣಿಕೆ ನೀಡಲು ರಾಷ್ಟ್ರಪತಿಯವರ ಕರೆ

ದಿವಂಗತ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರೂರವರ ಸ್ಮಾರಕಾರ್ಥವಾಗಿ ಒಂದು ನಿಧಿಯನ್ನು ಸಂಗ್ರಹಿಸಲಾಗುವುದೆಂದೂ ಇದಕ್ಕೆ ಎಲ್ಲಾ ವರ್ಗದ ಜನತೆಯಿಂದ ವಂತಿಗೆ ಸ್ವೀಕರಿಸಲಾಗುವುದೆಂದೂ ತಿಳಿದು ಬಂದಿದೆ. ಕಳೆದ ತಾ. ೩೦ರಂದು ರಾಷ್ಟ್ರಪತಿ ಡಾ|| ರಾಧಾಕೃಷ್ಣನರು ಈ ನಿಧಿಯ ಕುರಿತು ಜನತೆಗೆ ತಿಳಿಯಪಡಿಸುತ್ತಾ ಜನರು ಈ "ನೆಹರೂ ಸ್ಮಾರಕ ನಿಧಿ"ಗೆ ವಂತಿಗೆ ನೀಡಬೇಕೆಂದು ವಿನಂತಿಸಿಕೊಂಡರು. ದಿವಂಗತ ಪ್ರಧಾನ ಮಂತ್ರಿಗಳಿಗೆ ಯೋಗ್ಯವಾದ ಸ್ಮಾರಕಗಳನ್ನು ನಿರ್ಮಿಸಲು ಈ ನಿಧಿಯನ್ನು ವಿನಿಯೋಗಿಸಲಾಗುವುದೆಂದು ಅವರು ಹೇಳಿದರು.

ಈ ಸಂದರ್ಭ ತನ್ನ ಸ್ಮಾರಕದ ಕುರಿತು ನೆಹರೂರವರು ಈ ಹಿಂದೆ ಆಡಿದ್ದ ಮಾತು ಸ್ಮರಣೆಗೆ ಬರುತ್ತದೆ. ತನ್ನ ಮೂರ್ತಿಯನ್ನು ರಚಿಸಿ ಆ ಮೂಲಕ ತನಗೆ ಯಾರೂ ಸ್ಮಾರಕ ನಿರ್ಮಿಸಬಾರದೆಂದು ಅವರು ಹೇಳಿದ್ದರು. ಈ ರೀತಿಯ ಡಂಭಾಚಾರದ ಸ್ಮಾರಕಗಳಲ್ಲಿ ಅವರಿಗೆ ಆಸಕ್ತಿ ಇದ್ದಿಲ್ಲ ಎಂದು ಇದರಿಂದ ತಿಳಿಯುತ್ತದೆ. ಜನತೆಗಾಗಿ ಶ್ರಮಿಸುವ, ಜನರ ಕಷ್ಟ ಸುಖಗಳಲ್ಲಿ ಪಾಲುಗೊಳ್ಳುವ, ಜನತೆಯ ಕಷ್ಟಗಳ ಕುರಿತು ಅನುತಾಪ ತಾಳುವ ಯಾವ ನಿಷ್ಠಾವಂತ ಜನ ಸೇವಕನಿಗೂ ತನ್ನ ಮೂರ್ತಿ ಪ್ರದರ್ಶಿತವಾಗಬೇಕೆಂಬ ಬಯಕೆ ಇರುವುದಿಲ್ಲ. ಜನತೆಯ ಸೇವಕನಾದವನ ಹೆಸರು ಆತನು ಜನತೆಗಾಗಿ ಮಾಡಿದ ಸೇವೆಗಳಿಂದ ಚಿರಸ್ಥಾಯಿಯಾಗಿ ಉಳಿಯುವುದಲ್ಲದೆ, ಆತನ ಶಿಲಾಮೂರ್ತಿಯ ಪ್ರತಿಷ್ಠಾಪನೆಯಿಂದಾಗಲೀ, ತೈಲ ಚಿತ್ರದ ಅನಾವರಣದಿಂದಾಗಲೀ ಅಲ್ಲ. ಇದನ್ನು ಪಂಡಿತಜೀ ತಿಳಿದಿದ್ದರು. ಪಂಡಿತಜೀಯವರ ಅಪಾರವಾದ ರಾಷ್ಟ್ರಪ್ರೇಮ ಹಾಗೂ ಜನಸೇವೆಯ ಕುರಿತು ಅಜರಾಮರವಾಗಿ ಭಾರತವರ್ಷ ಹಾಡುತ್ತಿರುತ್ತದೆ. ನಮ್ಮ ಮುಂದಿನ ಪೀಳಿಗೆಗಳು ಅವರನ್ನು ಮರೆಯುವುದು ಸಾಧ್ಯವೇ ಇಲ್ಲ. ಅಂತಹ ಗಾಢವಾದ ಪ್ರಭಾವವನ್ನು ಅವರು ಈ ಭಾರತದ ಮಣ್ಣಿನಲ್ಲಿ ಬೀರಿದ್ದಾರೆ.

'ನೆಹರೂ ಸ್ಮಾರಕ ನಿಧಿ'ಗಾಗಿ ಎಲ್ಲಾ ವರ್ಗದ ಜನತೆಯೂ ವಂತಿಗೆ ನೀಡಬೇಕೆಂದೂ ಈ ನಿಧಿಯನ್ನು ಜವಾಹರಲಾಲರಿಗೆ ಪ್ರಿಯವಾದ ಉದ್ದೇಶಗಳ ಸಾಧನೆಗೆ ಬಳಸಲಾಗುವುದೆಂದೂ ರಾಷ್ಟ್ರಾಧ್ಯಕ್ಷರು ಹೇಳಿದರು. ಈ ನಿಧಿಯನ್ನು ನಿರುಪಯೋಗಿಯಾದ ಶಿಲಾಮೂರ್ತಿ ಇತ್ಯಾದಿಗಳ ರಚನೆಗೆ ಬಳಸಲಾಗುವುದಿಲ್ಲವೆಂದೂ ಅವರು ಹೇಳಿರುವರು.

ನೆಹರೂರವರು ಮಾನವ ಕೋಟಿಯ ಒಳಿತಿಗಾಗಿ, ಜಗತ್ತಿನ ಕಲ್ಯಾಣಕ್ಕಾಗಿ ಶ್ರಮಿಸಿದ ಕೆಲವೇ ನಾಯಕರಲ್ಲಿ ಒಬ್ಬರು. ಅವರು ಶಾಂತಿ, ಅಹಿಂಸೆ, ಹಾಗೂ ಸತ್ಯಗಳಿಗೆ ಜೀವನವನ್ನೇ ಮುಡಿಪಾಗಿಟ್ಟರು. ಬಡ ಜನತೆಯ ಸಂಕಷ್ಟಮಯ ಜೀವನದ ಕುರಿತು ಅವರಿಗೆ ಅಪಾರವಾದ ಅನುಕಂಪ ಹಾಗೂ ಕಳಕಳಿ ಇತ್ತು. ಭಾರತದ ಜನತೆಯ ಜೀವನ ಮಟ್ಟವನ್ನು ಎತ್ತರಿಸುವುದಕ್ಕಾಗಿ ಅವರು [illegible] ಶ್ರಮಿಸಿದರು. ದೇಶದೇಶಗಳೊಳಗಣ ಮಧುರ ಸಂಬಂಧ ಸಾಧನೆಗೆ, ವಿವಿಧ ವರ್ಗದ ಜನತೆಯ ಕಲ್ಯಾಣಕ್ಕೆ ಹಾಗೂ ಸಮಗ್ರ ಜಗತ್ತಿನ ಒಳಿತಿಗಾಗಿ ಅವರು ಹಂಬಲಿಸಿದರು ಹಾಗೂ ದುಡಿದರು. ಮಕ್ಕಳ ಹಿತ ರಕ್ಷಣೆ, ದುಃಖಾರ್ತರ ದುಃಖಪರಿಹಾರ, ನಮ್ಮ ಹಳ್ಳಿಗಳಲ್ಲಿ ಬೇರೂರಿರುವ ಅಂಧಕಾರ, ಅಜ್ಞಾನ ಹಾಗೂ ದಾರಿದ್ರ್ಯಗಳ ನಿರ್ಮೂಲನ ಮೊದಲಾದ ವಿಷಯಗಳಲ್ಲಿ ಅವರಿಗೆ ಅಪಾರವಾದ ಆಸಕ್ತಿ ಇತ್ತು. ಜವಾಹರಲಾಲ ಸ್ಮಾರಕ ನಿಧಿಯು ಮೇಲಿನ ಆಶೆಗಳನ್ನು ಹಾಗೂ ಅವರಿಗೆ ಪ್ರಿಯಕರವಾದ ಅವರ ಉದ್ದೇಶಗಳ ಸಾಧನೆಗಾಗಿ ವಿನಿಯೋಗಿಸಲ್ಪಡುವುದು.

"ಈ ನಿಧಿಯನ್ನು ಜನತೆಯ ನಿಧಿಯನ್ನಾಗಿ ಮಾಡಬೇಕೆಂದೂ, ಅಗಲಿದ ಮಹಾ ಧುರೀಣನಿಗೆ ಕೃತಜ್ಞತೆ ಸಲ್ಲಿಸುವ ಈ ಸಂಯುಕ್ತ ಪ್ರಯತ್ನದಲ್ಲಿ ಬಡವ ಬಲ್ಲಿದ ಎಂಬ ಭೇದ ಭಾವಕ್ಕೆ ಅವಕಾಶ ಕೊಡದೆ ಸರ್ವರಿಗೂ ಸಮಾನವಾದ ಫಲವನ್ನು ನೀಡಬೇಕೆಂದೂ ಆಶಿಸಲಾಗಿದೆ" ಎಂದು ರಾಷ್ಟ್ರಪತಿಯವರು ಈ ನಿಧಿಯ ಕುರಿತು ಹೇಳಿರುವರು.

ಅಗಲಿದ ಮಹಾ ನಾಯಕನ ಮೇಲೆ ಜನತೆಗಿರುವ ಅಪಾರವಾದ ವಿಶ್ವಾಸ ಹಾಗೂ ಪ್ರೇಮಗಳ ಪ್ರತೀಕವಾಗಿ ಈ ನಿಧಿ ರೂಪುಗೊಳ್ಳಬೇಕು. ನೆಹರೂರವರು ಸರ್ವಪ್ರಿಯರಾದ ವ್ಯಕ್ತಿ. ಅವರು ಜನತೆಯ ಹೃದಯದಲ್ಲಿ ಮನೆ ಮಾಡಿದ್ದಾರೆ. ದೇಶದ ಎಲ್ಲೆಡೆಗಳಿಂದಲೂ ಈ ನಿಧಿಗೆ ಕಾಣಿಕೆಗಳು ಮಹಾಪೂರದಂತೆ ಹರಿದು ಬರುವುದು ಖಂಡಿತ. ನಿಧಿಗೆ ಅರ್ಪಿಸುವ ಕಾಣಿಕೆಯು, ಬೆಲೆಯು, ಅದರ ಮೊತ್ತದ ಪ್ರಮಾಣದಲ್ಲಿ ನಿರ್ಧರಿಸಲ್ಪಡದೆ, ಆ ಕಾಣಿಕೆಯನ್ನು ಅರ್ಪಿಸುವಾತನು ನೆಹರೂರವರ ಆಶೋತ್ತರಗಳನ್ನು ಪೂರೈಸಲು ಎಷ್ಟರ ಮಟ್ಟಿಗೆ ಶ್ರಮಿಸುತ್ತಿರುವನೆಂಬುದನ್ನು ಹೊಂದಿಕೊಂಡಿದೆ. ದೊಡ್ಡ ಮೊತ್ತದ ಕಾಣಿಕೆಯು, ಅಲ್ಪ ಹೃದಯದ ವ್ಯಕ್ತಿಯಿಂದ ಪ್ರಚಾರದ ಸಲುವಾಗಿ ಬಂದರೆ ಅದು ಗಣನೀಯವೆನ್ನುವಂತಿಲ್ಲ. ನಿಜವಾದ ಭಕ್ತಿಯಿಂದ ಪ್ರೇರಿತರಾಗಿ, ಅರ್ಪಿಸಿದ ಅತಿ ಚಿಕ್ಕ ಮೊತ್ತದ ಕಾಣಿಕೆಯು ಗಣನೀಯವೆನಿಸುತ್ತದೆ. ಇಲ್ಲಿ ಬೇಕಾದುದು ನೆಹರೂರವರ ಹೃದಯ, ಅನುಕಂಪ ಹಾಗೂ ದೇಶ ಭಕ್ತಿ ಹೊರತು ನೆಹರೂರವರ ಪಡೆದು ಬಂದಿದ್ದ ಸಂಪತ್ತಲ್ಲ ಎಂಬುದನ್ನು ಎಲ್ಲರೂ ತಿಳಿದು ಕೊಳ್ಳುವುದಗತ್ಯ.

'ನೆಹರೂ ಸ್ಮಾರಕ ನಿಧಿ'ಯು ಇತರ ಸಾರ್ವಜನಿಕ ನಿಧಿಗಳಂತಾಗದೆ, ತನ್ನ ಉದ್ದೇಶ ಸಾಧನೆಯಲ್ಲಿ ಗುರಿಯಿಟ್ಟಲ್ಲಿ; ನೆಹರೂರವರ ಹೃದಯಕ್ಕೆ ನೆಚ್ಚಿಗಿದ್ದ ವಿಷಯಗಳ ಸಾಧನೆಗಾಗಿ ವಿನಿಯೋಗಿಸಲ್ಪಡಲಿ, ದಿವಗಂತ ನೆಹರೂರವರು ನಮಗಾಗಿ ಹೊತ್ತಿಸಿಟ್ಟುಹೋಗಿರುವ ಜ್ಯೋತಿಯನ್ನು ಸದಾ ಜಾಜ್ವಲ್ಯಮಾನವಾಗಿಡುವ ನಮ್ಮ ದೃಢ ನಿರ್ಧಾರದ ಪ್ರತೀಕವಾಗಲಿ ಎಂದು ಎಲ್ಲರೂ ಹಾರೈಸುವುದರೊಂದಿಗೆ, ನೆಹರೂರ ಬಗ್ಗೆ ನಮಗಿರುವ ಗೌರವಾದರ ಹಾಗೂ ಪ್ರೇಮಕ್ಕೆ ಉಚಿತವೆನಿಸುವಂತಹ ಪ್ರತೀಕವಾಗಿ ಮಾಡೋಣವೆಂದು ನಾವು ಎಲ್ಲರೂ ಈಗ ಪ್ರತಿಜ್ಞೆ ಮಾಡೋಣ!

ಉಡುಪಿ ಡಿ ಮು. ಕೋರ್ಟಿನಲ್ಲಿ

O. S No. 121/64

ಪಿ. ಅಂಬಾ ಬಾಯಿ ಕೂಡಾ — ವಾದಿಗಳು

ಮತ್ತು

ಸಿಲ್ವೆಸ್ಟರ್ ಕೆಸ್ತಲಿನೋ ಕೂಡಾ — ಪ್ರತಿವಾದಿಗಳು

ಇವರೊಳಗೆ

ಉಡುಪಿ ತಾಲ್ಲೂಕು ಮೂಡಬೆಟ್ಟು ಗ್ರಾಮದ ಅಚ್ಚಡದ ಗುಡಿಯಲ್ಲಿರುವ— ವ ಇದ್ದ ಪ್ರತಿವಾದಿಗಳು (1) ಸಿಲ್ವೆಸ್ಟರ್ ಕೆಸ್ತಲಿನೋ; (3) ಸೆಬಸ್ಟಿಯನ್ ಕೆಸ್ತಲಿನೋ. (4) ಮೇರಿ ಕೆಸ್ತಲಿನೋ; (5) ಎವಂಜಲಿನ್ ಕೆಸ್ತಲಿನೋ— ಲೊರೆನ್ಸ್ ಕೆಸ್ತಲಿನೋರ ಮಕ್ಕಳು ಇವರಿಗೆ ತಿಳಿಯಪಡಿಸುವುದು

ನಿಮ್ಮಿಂದ ಬರ ಗೇಣಿ ಬಾಕಿಗೆ ವಾದಿಗಳು ಮಾಡಿದ ದಾವೆಯು ನಿಮ್ಮ ನೋಟೀಸಿನ ಬಗ್ಗೆ ತಾರೀಖು 28-7-1964ಕ್ಕೆ ಇಟ್ಟಿದೆ. ಉದಾಹರಣೆ ಕೊಡುವದಿದ್ರೆ ನೀವು ಕೋರ್ಟಿನ ಮುಂದೆ ಆ ತಾರೀಕಿಗೆ ಹಗಲು 11 ಗಂಟೆಗೆ ಹಾಜರಾಗಿ ದಾಖಲೆ ಮಾಡಬೇಕು. ಇಲ್ಲವಾದ್ರೆ ನಿಮ್ಮ ಗೈರು ಹಾಜರಿಯಲ್ಲಿ ದಾವೆ ತೀರ್ಮಾನವಾಗುವುದು.

(By order of the court)

B Y. Holla
Advocate for Plaintiff.

ಉಡುಪಿ ತಾ. 26-6-64

ಟೆಲಿಗ್ರಾಂ. 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ನಮ್ಮ-ನಮ್ಮವರು

(೧ನೇ ಪುಟದಿಂದ)

ಲ್ಲಿಯು ಅಪೂರ್ವವಾದ ದಾಖಲೆ ನಿರ್ಮಿಸಲಿ. ರೋಟರಿ ಚಳವಳವು ಈ ಜಿಲ್ಲೆಯಲ್ಲಿ ಇನ್ನಷ್ಟು ಬಲವಾಗಿ ಪ್ರಸಾರವಾಗಿ, ರೋಟರಿ ಸಂಸ್ಥೆಯ ಧ್ಯೇಯ ಧೋರಣೆಗಳ ಸಾಧನೆಗೆ ಈ ಜಿಲ್ಲೆ ಇನ್ನೂ ಹೆಚ್ಚು ಪರಿಶ್ರಮಿಸಲಿ ಎಂದು ಹಾರೈಸುತ್ತೇವೆ. ಡಾ|| ಪೈಗಳು ಕಾರ್ಯಚತುರರು, ಅಪ್ರತಿಮ ಕ್ರಿಯಾಶೀಲರು. ಅವರು ಇದೀಗ ವಿದೇಶಗಳಲ್ಲಿಯ ರೋಟರಿಯ ಚಟುವಟಿಕೆಗಳ ಅಧ್ಯಯನ ಮಾಡಿ ಮರಳಿ ಬಂದಿದ್ದಾರೆ. ಅವರು ವಿದೇಶಗಳಲ್ಲಿ ಪಡೆದ ಅನುಭವದ ಪ್ರಯೋಜನ, ರೋಟರಿ ಸಂಸ್ಥೆಗೂ, ನಮಗೂ ದೊರೆಯುವುದೆಂಬುದರಲ್ಲಿ ಸಂದೇಹವಿಲ್ಲ. ರೋಟೇರಿಯನ್ ಪೈಗಳಿಂದ ಜನತೆ ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸುತ್ತಿದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C No 164/1964

ಬಿ ವಾಸುದೇವ ರಾವ್— ವಾದಿ

ಮತ್ತು

ಲಕ್ಷ್ಮಣ ರಾವ್, ಬೊಮ್ಮೇಶ್ವರ ವೆಂಕಟೇಶ ಶೆಟ್ರ ಮಗ-ಉಡುಪಿ ತಾಲ್ಲೂಕು ಉದ್ಯಾವರ ಗ್ರಾಮ. — ಪ್ರತಿವಾದಿ

ಇವರೊಳಗೆ

ಪ್ರತಿವಾದಿಗೆ—

ವಾದಿಗೆ ನಿಮ್ಮಿಂದಾ ಬಹಾ ಕಳೆದ ಶುಭಕೃತು ಮತ್ತು ಶೋಭಕೃತು ಸಂವತ್ಸರದ ಗೇಣಿ, ಬಡ್ಡಿ ಕೂಡಾ ರೂಪಾಯಿ 50-42ಕ್ಕೆ ಮಾಡಿದ ದಾವೆಯು ತಾ. 24-7-1964ಕ್ಕೆ ಇಟ್ಟಿರುವುದರಿಂದ ಆ ದಿವಸ ನಿಮ್ಮ ಉದಾಹರಣೆಯಿದ್ದರೆ ಬೆಳಿಗ್ಗೆ ಗಂಟೆ 11ಕ್ಕೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು. ತಪ್ಪಿದ್ರೆ ಸದ್ರಿ ವ್ಯಾಜ್ಯವು ಡಿಕ್ರಿ ಮಾಡಲಾಗುವುದು.

P. V. Acharya.
Vakil for pltf

ಉಡುಪಿ, 27-6-1964.

In the Court of the Dt. Munsiff, Udipi

O. P. No. 23/1964

Akku Shedthi, daughter of Ummakke Shedthi— residing at Achol of Mallar Village, Udipi Taluk ... . Petitioner.

NOTICE

Whereas the above named Petitioner has applied for the issue of a Succession Certificate in her favour in respect of the assets of her deceased son Madhusoodana Shetty, the said application is posted to 27—7—64, and any person intending to file objections, is directed to appear in person or by pleader at 11 a m. on that date in this Court.

K. L. Aithal.
Vakil for petitioner.

Udipi, 27-6-64.

Edited, Printed & Published by K. H.Shetty. at the Navayuga Press, Udipi, S. India

ನವಯುಗ

VOL. 43 No. 45 ಸಂಪುಟ ೪೩ ಸಂಚಿಕೆ ೪೫

NAVAYUGA—Nationalist Weekly ‡‡ ಉಡುಪಿ 9-7-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಶ್ರೀ ಟಿ. ಅನಂತ ಪೈ

ಜನತಾ ಸೇವೆ ಮಾಡಬೇಕೆಂಬ ಆಶೆ ಉಳ್ಳವರು ಅಧಿಕಾರ ಸ್ಥಾನದಲ್ಲಿದ್ದೇ ಜನ ಸೇವೆ ಮಾಡ ಬೇಕೆಂದಿಲ್ಲ ಎಂಬುದನ್ನು ತನ್ನ ನಿಜ ಜೀವನದಲ್ಲಿ ತೋರಿಸಿ ಕೊಟ್ಟವರು ಶ್ರೀ ಟಿ. ಅನಂತ ಪೈಗಳು. ಅವರು ಅಧಿಕಾರವನ್ನು ಬಯಸಿದ್ದರೆ, ಇಂದು ಅವರು ಕೇಂದ್ರದಲ್ಲಿ ಒಬ್ಬ ಪ್ರಭಾವೀ ಪಾರ್ಲಿಮೆಂಟ್ ಸದಸ್ಯರಾಗುತ್ತಿದ್ದರೇನೋ? ಆದರೆ, ಅವರು ಸ್ಥಾನ ಮಾನ ಹಾಗೂ ಅಧಿಕಾರವನ್ನು ಬಯಸದೆ, ಅವುಗಳಿಂದ ದೂರವಿದ್ದು ಜನ ಸೇವೆಯಲ್ಲಿ ಮಗ್ನರಾದರು. ನಮ್ಮ ಜಿಲ್ಲೆಯು ಮದ್ರಾಸು ಸಂಸ್ಥಾನದಲ್ಲಿದ್ದಾಗ, ಮದ್ರಾಸು ವಿಧಾನ ಸಭೆಯ ಅತಿ ಕಿರಿಯ ಸದಸ್ಯನಾಗುವ ಭಾಗ್ಯ ೧೯೫೨ರಲ್ಲಿ ಶ್ರೀ ಪೈಗಳಿಗೆ ಲಭಿಸಿತು. ಅವರು ಮದ್ರಾಸು ವಿಧಾನ ಸಭೆಯಲ್ಲಿ ಒಬ್ಬ ಕಾರ್ಯನಿರತ ಹಾಗೂ ಚುರುಕಾದ ಸದಸ್ಯರಾಗಿ ಎಲ್ಲರನ್ನೂ ತನ್ನ ಕಡೆಗೆ ಆಕರ್ಷಿಸಿದರು. ೧೯೫೬ರಲ್ಲಿ ರಾಜ್ಯ ಪುನರ್ವಿಂಘಟಣೆ ನಡೆದು, ೧೯೫೭ರಲ್ಲಿ ಮರು ಚುನಾವಣೆ ನಡೆದಾಗ ಶ್ರೀ ಪೈಗಳು ಅಧಿಕಾರದಿಂದ ದೂರ ಉಳಿದರು. ಅವರು ಸಾರ್ವಜನಿಕ ಸೇವೆಗಾಗಿ ತನ್ನ ವೈಯಕ್ತಿಕ ನೆಲೆಯಲ್ಲಿ ದುಡಿಯಲಾರಂಭಿಸಿದರು.

ಶ್ರೀ ಪೈಗಳು ಜಿಲ್ಲೆಯ, ರಾಜ್ಯದ ಹಾಗೂ ದೇಶದ ಸಮಸ್ಯೆಗಳ ಕುರಿತು ಆಳವಾದ ಅಧ್ಯಯನ ನಡೆಸಿದವರು. ಅವರು ಯಾವ ಸಭೆಯಲ್ಲೇ ಭಾಗವಹಿಸಲಿ, ಎಲ್ಲಿಯೇ ಭಾಷಣ ಮಾಡಲಿ, ಅವರ ಮಾತುಗಳಲ್ಲಿ ಆಳವಾದ ಅಭ್ಯಾಸದ ಪ್ರಭಾವ ಎದ್ದು ಕಾಣುತ್ತಿದೆ. ಅಂಕೆ ಸಂಖ್ಯೆಗಳ ಮೂಲಕ ಅವರು ತಾನು ಮಾತಾಡಲಿರುವ ವಿಷಯವನ್ನು ಅತಿ ಪ್ರಭಾವಯುತವಾಗಿ ಮಂಡಿಸುತ್ತಾರೆ. ಅಂತಲೇ ಅವರ ಮಾತಿಗೆ ಎಲ್ಲಿ ಹೋದರೂ ಬೆಲೆ ಬರುತ್ತದೆ. ಅವಮಾಡುವುದನ್ನು ಜನ ಕಿವಿಗೊಟ್ಟು ಕೇಳುತ್ತಾರೆ.

ಅನಂತ ಪೈಗಳು ಎಳವೆಯಲ್ಲಿಯೇ ಸಾರ್ವಜನಿಕ ಕಾರ್ಯಕ್ಷೇತ್ರಕ್ಕೇ ಬಂದರು. ಅವರ ಸಾರ್ವಜನಿಕ ಸೇವೆ ಇಂದು ಅವರು ರಾಜ್ಯದಲ್ಲಿ ಮಾತ್ರವಲ್ಲ ಇತರ ರಾಜ್ಯಗಳಲ್ಲಿಯೂ ಅತಿ ಮಹತ್ತರವಾದ ಸ್ಥಾನ ಕಲ್ಪಿಸಿಕೊಟ್ಟಿದೆ. ಅವರು ಹಿಂದೊಮ್ಮೆ ವಿದೇಶ ಸಂಚಾರ ಮಾಡಿ ಬಂದು ಪಡೆದ ಅನುಭವವನ್ನು ನಾಡಿನ ಅಭಿವೃದ್ಧಿಗೆ ವಿನಿಯೋಗಿಸುವಲ್ಲಿ ಯತ್ನಿಸಿದರು. ಈಗ ಅವರು ಪುನಃ ಜಪಾನ್ ದೇಶ ಸಂದರ್ಶನಕ್ಕಾಗಿ ತೆರಳಿದ್ದಾರೆ. ಅವರು ಜಪಾನಿನಲ್ಲಿ ಬ್ಯಾಂಕಿಂಗ್ ಉದ್ದಿಮೆಯ ಕುರಿತು ಮಾತ್ರವಲ್ಲ, ಅಲ್ಲಿಯ ವ್ಯವಸಾಯ ಪದ್ಧತಿ, ಚಿಕ್ಕ ಕೈಗಾರಿಕೆಗಳು, ಶಿಕ್ಷಣಕ್ರಮ ಹಾಗೂ ಇನ್ನಿತರ ಹಲವು ವಿಷಯಗಳ ಕುರಿತು ಅಧ್ಯಯನ ನಡೆಸುತ್ತಾರೆ. ಮೀನುಗಾರಿಕೆಗೆ ಪ್ರಸಿದ್ಧವಾದ ಜಪಾನಿನ ಮೀನುಗಾರಿಕೆಯ ಕುರಿತು ಅವರು ವಿಶೇಷ ಅಭ್ಯಾಸ ನಡೆಸಲಿರುವರು. ಅವರ ಈ ಜಪಾನ್ ಸಂದರ್ಶನದ ಅನುಭವದ ಪ್ರಯೋಜನ ನಮ್ಮ ಜಿಲ್ಲೆಗೆ ಹಾಗೂ ರಾಜ್ಯಕ್ಕೆ ದೊರೆತು, ನಮ್ಮ ಅಭಿವೃದ್ಧಿಗೆ ನೆರವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಅವರ ವಿದೇಶ ಪ್ರಯಾಣ ಯಶಸ್ವಿಯಾಗಲಿ ಎಂದು ಎಲ್ಲರೂ ಹಾರೈಸುವುದು ಸಮಯೋಚಿತ ಹಾಗೂ ಸ್ವಾಭಾವಿಕವಾಗಿದೆ.

ಶ್ರೀ ಕೆ. ಮಹಾಬಲ ಭಂಡಾರಿ

"ಕಾಸರಗೋಡು ಕನ್ನಡ ನಾಡು" ಎಂಬ ಕೂಗು ಇಂದು ದೆಹಲಿಯ ತನಕವೂ ಮುಟ್ಟಿದೆ. ತಿರುವನಂತಪುರಕ್ಕೂ, ಜತೆಗೆ ಬೆಂಗಳೂರಿಗೂ ಮುಟ್ಟಿದೆ. ಕಾಸರಗೋಡಿನ ಎರಡು ಲಕ್ಷ ಕನ್ನಡಿಗರು ಇಂದು ಕೇರಳ ರಾಜ್ಯದಲ್ಲಿ ಸೇರಿಹೋಗಿದ್ದಾರೆ ರಾಜ್ಯ ಪುನರ್ಘಟನೆಯ ಕಾಲ ನಡೆದ ಅಚಾತುರ್ಯದ ಫಲವನ್ನು ಅವರು ಈಗ ಅನುಭವಿಸುತ್ತಿದ್ದಾರೆ. ೧೯೫೬ರಿಂದ ಈ ಎಂಟು ವರ್ಷಗ ತನಕ ಕಾಸರಗೋಡಿನಲ್ಲಿ ಕನ್ನಡ ಚಳವಳಿ ಬಲವಾಗಿ ಪಸರಿಸಿದೆ. ಅಲ್ಲಿಯ ಜನ ಸಹನೆ, ತಾಳ್ಮೆ ಹಾಗೂ ವಿವೇಕಗಳಿಂದ ಇಂದಿಗೂ ಶಾಂತಿಯುತ ಹೋರಾಟವನ್ನೇ ಮಾಡುತ್ತಿದ್ದಾರೆ. ಮರಾಠಿಗರು ನಡೆಸುವ ಪುಂಡಾಟ ಹಾಗೂ ಹಿಂಸಾಚಾರದತ್ತ ಕಾಸರಗೋಡಿನ ಕನ್ನಡಿಗರು ಒಲಿಯಲಿಲ್ಲ. ಅಹಿಂಸೆಯ ಮಾರ್ಗದಲ್ಲಿಯೇ ಇಂದಿಗೂ ಅವರು ಹೋರಾಟ ನಡೆಸುತ್ತಿದ್ದಾರೆ. ಕಾಸರಗೋಡಿನ ಕನ್ನಡಿಗರ ಈ ಹೋರಾಟದ ಹಿಂದೆ ಇರುವ ಕೇಂದ್ರ ವ್ಯಕ್ತಿಗಳಲ್ಲಿ ಒಬ್ಬರು, ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಯವರು. ಅವರು ಕಾಸರಗೋಡಿನ ಬಿಡುಗಡೆಗಾಗಿ ಅಹೋ ರಾತ್ರಿ ದುಡಿಯುತ್ತಿದ್ದಾರೆ. ಕಾಸರಗೋಡಿನ "ಕರ್ನಾಟಕ ಪ್ರಾಂತೀಕರಣ ಸಮಿತಿ"ಯ ಪತಿಯಿಂದ ಅವರು ಚುನಾವಣೆಗೆ ನಿಂತು ಕೇರಳ ವಿಧಾನ ಸಭಾ ಸದಸ್ಯರಾಗಿ ಆಯ್ಕೆಹೊಂದಿದ್ದಾರೆ. ಕಾಸರಗೋಡಿನ ಕನ್ನಡಿಗರಿಗಾದ ಅನ್ಯಾಯವನ್ನು ಕೇಂದ್ರ ನಾಯಕರಿಗೆ ಹಾಗೂ ಕೇರಳದ ಮಂತ್ರಿಗಳಿಗೆ ಮನಬುಗುವಂತೆ ವಿವರಿಸುವಲ್ಲಿ ಅವರು ಯಶಸ್ವಿಗಳಾಗಿದ್ದಾರೆ. ಅವರು ಬೆಂಗಳೂರಿಗೆ ಕನ್ನಡಿಗರ ಜಾಥಾ ತೆಗೆದುಕೊಂಡು ಹೋದರು. ಮಂಗಳೂರಿನಲ್ಲಿ ರಾಜಕೀಯ ಪರಿಷತ್ತು ನಡೆದಾಗ ಅಲ್ಲಿಯೂ ಕಾಸರಗೋಡು ಕನ್ನಡಿಗರ ಕಷ್ಟಗಳನ್ನು ಅವರು ಹೇಳಿದರು. ಒಂದಲ್ಲ ಒಂದು ರೀತಿಯಲ್ಲಿ ವಿವರಿಸಿ ತನ್ನ ಉದ್ದೇಶಕ್ಕಾಗಿ ಶ್ರಮಿಸುತ್ತಿದ್ದಾರೆ.

ಈ ಬಾರಿಯ ಜೂನ್ ತಿಂಗಳಲ್ಲಿ ಕಾಸರಗೋಡು ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಸೀಟು ಸಿಗದೆ ಹೋದಾಗ, ಮಂಗಳೂರಿನ ಕಾಲೇಜುಗಳು ಆ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ತಾಂತ್ರಿಕ ತಡೆಗಳಿದ್ದುವುದರ ದೆಸೆಯಿಂದ ನಿರಾಕರಿಸಬೇಕಾದಾಗ, ಕನ್ನಡ ವಿದ್ಯಾರ್ಥಿಗಳ ಭವಿಷ್ಯದ ಕುರಿತು ಕರಾಳ ಅಂಧಕಾರ ವ್ಯಾಪಿಸಿತು. ಈ ಸಂದರ್ಭ ಮಹಾಬಲ ಭಂಡಾರಿಯವರು ಕನ್ನಡ ವಿದ್ಯಾರ್ಥಿಗಳಿಗಾದ ಈ ಅನ್ಯಾಯದ ವಿರುದ್ಧ ಎದ್ದು ನಿಂತು, ತೀವ್ರ ರೀತಿಯ ಚಟುವಟಿಕೆಗಳಲ್ಲಿ ನಿರತರಾದರು. ಕೇರಳದ ಮುಖ್ಯ ಮಂತ್ರಿಗಳಿಗೆ ಈ ಭೀಕರ ಪರಿಸ್ಥಿತಿಯ ಕುರಿತು ತಿಳಿಯಪಡಿಸಿದುದಲ್ಲದೆ ಈ ವಿಚಾರವನ್ನು ಮೈಸೂರು ಸರಕಾರದ ಗಮನಕ್ಕೂ ತಂದರು. ಇದೀಗ ಮೈಸೂರು ಯುನಿವರ್ಸಿಟಿಯು ಅಂತಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದೆಂಬ ಆದೇಶ ನೀಡಿರುವುದೆಂದೂ, ಜತೆಗೇ ಕಾಸರಗೋಡಿನ ಕಾಲೇಜಿನಲ್ಲಿ ಇನ್ನು ಎರಡು ಹೆಚ್ಚು ತರಗತಿಗಳನ್ನು ತೆರೆಯಲು ಕೇರಳ ಸರಕಾರ ಆಜ್ಞೆ ಹೊರಡಿಸಿರುವುದೆಂದೂ ತಿಳಿದು ಬಂದಿದೆ. ಇದು ಮಹಾಬಲ ಭಂಡಾರಿಯವರ ಕಾರ್ಯದಕ್ಷತೆಗೆ ಹಾಗೂ ಚುರುಕು ಬುದ್ಧಿಗೊಂದು ನಿದರ್ಶನ ನಮಗಿಂದು ಬೇಕಾಗಿರುವವರು ಕಾಲಕ್ಕೊದಗುವ ಹಿತಚಿಂತಕರು. ಅಂತಹ ಹಿತಚಿಂತಕರನ್ನು ಪಡೆದ ಕಾಸರಗೋಡಿನ ಕನ್ನಡಿಗರು ಭಾಗ್ಯಶಾಲಿಗಳು. ಮಹಾಬಲ ಭಂಡಾರಿಯವರ ನಾಯಕತ್ವದಲ್ಲಿ ಅವರು ಕನ್ನಡನಾಡು ಸೇರಿಯೇ ಸೇರುತ್ತಾರೆ.

ಶ್ರೀ ಬಿ. ಜಗನ್ನಾಥ ಹೆಗ್ಡೆ

ಜಿಲ್ಲೆಯ ಸುಪ್ರಸಿದ್ಧ ಕಾಂಗ್ರೆಸಿಗರಾದ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರನ್ನು ತಿಳಿಯದವರು ವಿರಳ. ಅವರ ಚಿರಂಜೀವರಾದ ಶ್ರೀ ಬಿ. ಜಗನ್ನಾಥ ಹೆಗ್ಡೆಯವರೂ ತಂದೆಯಂತೆಯೇ ಪ್ರಸಿದ್ಧಿಯತ್ತ ಸಾಗುತ್ತಿದ್ದಾರೆ. ಮದ್ರಾಸಿನ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎಲ್.

(೧೨ನೇ ಪುಟ ನೋಡಿರಿ)

ವಾರದ ಕತೆ

ಚಿಕ್ಕಮ್ಮ

ಮೂಲ ಲೇಖಕರು: ಶ್ರೀ ಸಿಯಾರಾಮ ಶರಣಗುಪ್ತ (ಹಿಂದಿ)

ಭಾವಾನುವಾದ: ಶ್ರೀ ಕೆ. ಚಂದ್ರಹಾಸ

ಶ್ಯಾಮೂ ಬೆಳಿಗ್ಗೆ ಏಳುವಾಗ ಮನೆ ಜನರಿಂದ ತುಂಬಿ ಹೋಗಿತ್ತು. ಶ್ಯಾಮೂ ಆಶ್ಚರ್ಯ ಚಕಿತನಾಗಿ ಸುತ್ತಲೂ ನೋಡಿದನು. ಚಿಕ್ಕಮ್ಮ ಇನ್ನೂ ಎದ್ದಿರಲಿಲ್ಲ—ಮಲಗೇ ಇದ್ದಳು. ಅವಳನ್ನು ತಲೆಯಿಂದ ಕಾಲಿನ ವರೆಗೂ ಒಂದು ಕಂಬಳಿಯಿಂದ ಸುತ್ತಿದ್ದರು. ಎಲ್ಲರೂ ಅವಳನ್ನೇ ನೋಡುತ್ತಾ ಕರುಣಾಮಯ ಧ್ವನಿಯಿಂದ ಅಳುತ್ತಿದ್ದರು. ಶ್ಯಾಮುವಿಗೆ ಇದೆಲ್ಲಾ ಆಶ್ಚರ್ಯವಾಗಿ ಕಂಡಿತು. ಚಿಕ್ಕಮ್ಮ ಪರಲೋಕವಾಸಿಯಾದ ವಿಷಯ ಅವನಿಗೇನು ಗೊತ್ತು? ಪಾಪ, ಇನ್ನೂ ಚಿಕ್ಕ ಹುಡುಗ

ಸ್ವಲ್ಪದರಲ್ಲೇ ನೆರೆದಿದ್ದವರಲ್ಲಿ ಕೆಲವರು ಬಂದು ಚಿಕ್ಕಮ್ಮನ ಸ್ಮಶಾನ ಯಾತ್ರೆಗೆ ತ್ವರೆ ಮಾಡಿದರು. ಚಿಕ್ಕಮ್ಮನನ್ನು ಎಲ್ಲಿಗೋ ಕೊಂಡು ಹೋಗುತ್ತಿರುವುದನ್ನು ಕಂಡು ಶ್ಯಾಮೂ ದಿಙ್ಮೂಢನಾದನು. ಓಡುತ್ತಾ, ಜನರ ಗುಂಪಿನಲ್ಲಿ ದಾರಿಮಾಡಿಕೊಂಡು ಬಂದು ಚಿಕ್ಕಮ್ಮನ ನಿರ್ಜೀವ ದೇಹದ ಮೇಲೆ ಬಿದ್ದು ಅಳುತ್ತಾ ತಾನು ಚಿಕ್ಕಮ್ಮನನ್ನು ಕೊಂಡು ಹೋಗಲು ಬಿಡುವುದಿಲ್ಲವೆಂಬುದಾಗಿ ನಿಶ್ಚಯವಾಗಿ ಹೇಳಿಯೇ ಬಿಟ್ಟನು. ನೆರೆದಿದ್ದವರೆಲ್ಲಾ ಅವನನ್ನು ಸಂತೈಸತೊಡಗಿದರು. ಯಾರಿಂದಲೂ ಅವನನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಮನೆಯ ಕೆಲಸದಾಳು ಸಂತೈಸ ತೊಡಗಿದಳು. ಶ್ಯಾಮೂ ಏನೂ ಮಾಡಲಾರದಾದ. ಅಂತೂ ಚಿಕ್ಕಮ್ಮನನ್ನು ಕೊಂಡು ಹೋಗಲು ಅವರಿಗೆ ಅನುಮತಿ ದೊರೆತಂತಾಯಿತು.

ಸ್ಮಶಾನ ಯಾತ್ರೆಯು ಹೊರಟಿತು. ಜನರ ಗುಂಪು ಕಣ್ಮರೆಯಾಗುವ ವರೆಗೂ ಶ್ಯಾಮೂ ತನ್ನ ಚಿಕ್ಕಮ್ಮನನ್ನು ಹೊತ್ತುಕೊಂಡು ಹೋಗುತ್ತಿರುವ ದುಃಖಮಯ ಸನ್ನಿವೇಶವನ್ನು ನೋಡುತ್ತಲೇ ಇದ್ದನು. ಮನೆಯೊಳಗೆ ಬಂದು ಶ್ಯಾಮೂ ದಾದಿಯೊಡನೆ—"ಚಿಕ್ಕಮ್ಮನನ್ನು ಎಲ್ಲಿಗೆ ಹೊತ್ತುಕೊಂಡು ಹೋದರು? ಹೇಳಿ" ಎಂದು ಕೇಳಿದನು. ದಾದಿ ಸತ್ಯ ಸಂಗತಿಯನ್ನು ಮರೆಮಾಚುತ್ತಾ, "ಅವಳನ್ನು ಮಾವನ ಮನೆಗೆ ಕರಕೊಂಡು ಹೋಗುತ್ತಿದ್ದಾರೆ ಮಗೂ" ಎಂದು ಹೇಳಿದಳು.

ಅಸತ್ಯದ ಮರೆಯಲ್ಲಿದ್ದ ಸತ್ಯಾಂಶವು ಹೊರಬೀಳಲು ಹೆಚ್ಚು ಸಮಯವೇನೂ ಬೇಕಾಗಲಿಲ್ಲ. ತನ್ನ ಸಂಗಾತಿಗಳೊಡನೆ ಆಟವಾಡುತ್ತಿರುವಾಗ, ಕೆಲ ಹುಡುಗರ ಹೇಳಿಕೆಯಂತೆ ಚಿಕ್ಕಮ್ಮನು ಮೇಲೆ—ರಾಮನಲ್ಲಿಗೆ ಹೋಗಿರುವುದಾಗಿ ಅವನಿಗೆ ತಿಳಿಯಿತು. ಚಿಕ್ಕಮ್ಮನಿಗಾಗಿ ಶ್ಯಾಮೂ ಬಹಳವಾಗಿ ಅತ್ತನು. ಕೆಲ ದಿವಸಗಳ ಮೇಲೆ ಅವನ ಅಳು ಕಡಿಮೆಯಾಗತೊಡಗಿತು. ಆದರೆ ಅಗಲಿಕೆಯ ದುಃಖವು ಅವನ ಅಂತರ್ಯದಲ್ಲೇ ಬೇರೂರಿತ್ತು. ಮಳೆ ಬಂದು ಒಂದೆರಡು ದಿನಗಳಲ್ಲೇ ಭೂಮಿಯ ತಳದಲ್ಲಿಯ ನೀರು ಆರಿ ಹೋದರೂ ಕೆಳಗೆ ಹೋದಂತೆ ಆರ್ದ್ರತೆಯು ಇನ್ನೂ ಇರುವಂತೆ ಶ್ಯಾಮುವಿನ ಹೃದಯವು ಇನ್ನೂ ದುಃಖಿಸುತ್ತಿತ್ತು. ಕೆಲವೊಮ್ಮೆ ಶ್ಯಾಮೂ ಏಕಾಂತವಾಗಿ ಕುಳಿತು ಶೂನ್ಯಾಕಾಶದತ್ತ ತನ್ನ ದೃಷ್ಟಿಯನ್ನಿಟ್ಟು ಮನದಲ್ಲೇ ದುಃಖಿಸುತ್ತಿದ್ದನು.

ಒಂದು ದಿನ ಶ್ಯಾಮುವಿನ ದೃಷ್ಟಿಗೆ ನೀಲಾಕಾಶದಲ್ಲಿ ಹಾರಾಡುತ್ತಿದ್ದ ಒಂದು ಗಾಳಿಪಟವು ಗೋಚರಿಸಿತು. ಆ ಕ್ಷಣವೇ ಶ್ಯಾಮುವಿನ ಮನದಲ್ಲಿ ಏನೋ ಹೊಸ ಯೋಚನೆಯೊಂದು ಹೊಳೆಯಿತು. ತನಗೂ ಅಂತಹ ಒಂದು ಗಾಳಿಪಟ ಬೇಕೆಂದಾಯಿತವನಿಗೆ. ಮನೆಯೊಳಗೆ ಓಡಿ ಹೋಗಿ, ಅಲ್ಲಿ ಕುಳಿತಿದ್ದ ವಿಶ್ವೇಶರನೊಡನೆ, "ಚಿಕ್ಕಪ್ಪ, ನನಗೊಂದು ಗಾಳಿಪಟ ತಂದುಕೊಡುವಿಯಾ?" ಎಂಬುದಾಗಿ ದೀನಸ್ವರದಿಂದ ಕೇಳಿಕೊಂಡನು.

ಧರ್ಮಪತ್ನಿಯ ಅಗಲಿಕೆಯಿಂದಾದ ದುಃಖವು ವಿಶ್ವೇಶ್ವರನ ಮನದಿಂದ ಇನ್ನೂ ದೂರವಾಗಿರಲಿಲ್ಲ. ಬಾಲಕನ ಮಾತನ್ನ ಅಷ್ಟೊಂದು ಗಮನಕ್ಕೆ ತೆಗೆದುಕೊಳ್ಳದೆ," ಆಗಲಿ, ತಂದುಕೊಡುವೆನು." ಎಂದು ಹೇಳಿ ಹೊರ ಹೊರಟನು.

ಶ್ಯಾಮು ಗಾಳಿಪಟ ಹಾರಿಸಲು ಬಹಳ ಆತುರನಾಗಿದ್ದನು. ತನ್ನ ಬಾಲ್ಯದಲ್ಲಿಯೇ ಅವನು ಇಷ್ಟೊಂದು ಆತುರನಾಗಿದ್ದುದು ಇದೇ ಮೊದಲು. ಗೋಡೆಯಲ್ಲಿದ್ದ ಕೊಂಡಿಯೊಂದರಲ್ಲಿ ವಿಶ್ವೇಶರನ ಕೋಟು ನೇತು ಹಾಕಲಾಗಿತ್ತು; ಶ್ಯಾಮು ಸ್ಟೂಲೊಂದನ್ನು ತಂದಿರಿಸಿ ಅದರ ಮೇಲೆ ನಿಂತು ಕೋಟನ್ನೆಲ್ಲಾ ಶೋಧಿಸಿ ಕಡೆಗೆ ಅದರಿಂದ ನಾಲ್ಕಾಣೆಯನ್ನು ಸಂಗ್ರಹಿಸಿ ಅಲ್ಲಿಂದ ಹೊರಗೋಡಿದನು.

ಸುಖಿಯಾ ದಾದಿಯ ಹುಡುಗ, ಭೋಲಾ, ಶ್ಯಾಮುವಿನ ಸಮ ವಯಸ್ಕ ಸಂಗಾತಿ. ಶ್ಯಾಮು ತಾನು ಸಂಪಾದಿಸಿದ ನಾಲ್ಕಾಣೆಯನ್ನು ಭೋಲಾನ ಕೈಯಲ್ಲಿಡುತ್ತಾ, "ಭೋಲಾ, ನೀನು ಧನಿಗಳಿಗೆ ತಿಳಿಯದಂತೆ ಒಂದು ದಾರ ಮತ್ತು ಒಂದು ಗಾಳಿಪಟ ತಂದು ಕೊಡಬೇಕು. ಯಾರಿಗೂ ತಿಳಿಯಬಾರದು. ಜಾಗ್ರತೆ ಬಾ" ಎಂದು ಹೇಳಿ ಅವನನ್ನು ಪೇಟೆಗಟ್ಟಿದನು.

ಭೋಲಾ ಗಾಳಿಪಟ ಮತ್ತು ದಾರವನ್ನು ಪೇಟೆಯಿಂದ ತಂದಿದ್ದನು. ಇಬ್ಬರೂ ಕತ್ತಲೆ ಕೋಣೆಯೊಂದರಲ್ಲಿ ಕುಳಿತು ಗಾಳಿಪಟಕ್ಕೆ ದಾರವನ್ನು ಕಟ್ಟತೊಡಗಿದರು. ಶ್ಯಾಮೂ ಭೋಲಾನೊಡನೆ, "ಭೋಲಾ, ಯಾರೊಡನೆಯೂ ನೀನು ಹೇಳುವುದಿಲ್ಲವಾದರೆ ನಾನೊಂದು ಮಾತು ಕೇಳುತ್ತೇನೆ."

ಭೋಲಾ ತಲೆಯಲ್ಲಾಡಿಸುತ್ತಾ, "ಇಲ್ಲ, ಯಾರೊಡನೆಯೂ ಹೇಳುವುದಿಲ್ಲ."

ಶ್ಯಾಮೂ ರಹಸ್ಯವನ್ನು ಬಿಚ್ಚಿಡದೆ, "ನಾನು ಈ ಗಾಳಿಪಟವನ್ನು ರಾಮನಲ್ಲಿಗೆ ಕಳುಹಿಸುವವನಿದ್ದೇನೆ. ಇದನ್ನು ಆಧಾರವಾಗಿ ಹಿಡಿದು ಚಿಕ್ಕಮ್ಮ ಕೆಳಗೆ ಬಂದಾಳು. ನನಗೆ ಬರೆಯಲು ಬರುವುದಿಲ್ಲ. ಇಲ್ಲವಾದರೆ ಇದರಲ್ಲಿ ಹೆಸರು ಕೂಡಾ ಬರೆಯಬಹುದಿತ್ತು."

ಭೋಲಾ, ಶ್ಯಾಮುವಿಗಿಂತ ಸ್ವಲ್ಪ ತಿಳಿದವನಾಗಿದ್ದನು. ಅವನು "ನಿನ್ನ ಯೋಚನೆಯೆಲ್ಲಾ ಸರಿಯಾದುದೇ. ಆದರೆ ಅದರಲ್ಲೊಂದು ಕೊರತೆಯುಂಟು. ದಾರ ಬಹಳ ಸಪೂರವಾಗಿದೆ. ಅದನ್ನು ಆಧರಿಸಿ ಬರುವಾಗ ಎಲ್ಲಾದರೂ ತುಂಡಾದರೆ....? ಒಂದು ತೋರವಾದ ಹಗ್ಗವನ್ನು ಕಟ್ಟುವುದು ಉತ್ತಮ." ಎಂಬುದಾಗಿ ಸೂಚನೆಯನ್ನಿತ್ತನು.

ಶ್ಯಾಮೂ, ಭೋಲಾನ ಮಾತನ್ನು ಸಮರ್ಥಿಸಿದನು. ಯೋಜನೆಯೇನೋ ಸರಿ. ಆದರೆ ಹಗ್ಗವನ್ನು ಕೊಂಡುಕೊಳ್ಳಲು ದುಡ್ಡೆಲ್ಲಿಂದ ಸಿಗಬೇಕು? ಕೈಯಲ್ಲಿ ಒಂದು ಬಿಡಿಕಾಸೂ ಇಲ್ಲ. ಅಲ್ಲದೆ ಮನೆಯವರಾರಿಂದಲೂ ಸಿಗಲಿಕ್ಕಿಲ್ಲ. ಆ ರಾತ್ರಿ ಹಗ್ಗದ ಚಿಂತೆಯನ್ನಿಟ್ಟುಕೊಂಡೇ ಶಾಮೂ ಮಲಗಿದ. ನಿದ್ರೆಯೆಂಬುದೇ ಅನಿಗೆ ಬರಲಿಲ್ಲ.

ಮರುದಿನ ಹಿಂದಿನ ದಿನದಂತೆಯೇ ವಿಶ್ವೇಶ್ವರನ ಕೋಟನ್ನು ಶೋಧಿಸಿ ಶ್ಯಾಮೂ ಒಂದು ರೂಪಾಯಿ ಸಂಪಾದಿಸಿದನು. ರೂಪಾಯಿಯನ್ನು ಭೋಲಾನ ಕೈಯಲ್ಲಿಡುತ್ತಾ," ಭೋಲಾ, ಪೇಟೆಯಿಂದ ಎರಡು ಒಳ್ಳೊಳ್ಳೆಯ ಹಗ್ಗ ತರಬೇಕು. ಯಾರಿಗೂ ಗೊತ್ತಾಗಬಾರದು. ಎರಡನ್ನೂ ಜೋಡಿಸಿ ಕಳುಹಿಸಬಹುದು. ನೀನು ತರುವಷ್ಟರಲ್ಲಿ ನಾನು ಜವಾಹರನಿಂದ ಒಂದು ಕಾಗದದ ಚೂರಿನಲ್ಲಿ "ಚಿಕ್ಕಮ್ಮ" ಎಂದು ಬರೆಯಿಸುತ್ತೇನೆ. ಹೆಸರಿನ ಚೀಟಿಯನ್ನಿಟ್ಟರೆ ನೇರವಾಗಿ ಗಾಳಿಪಟವು ಚಿಕ್ಕಮ್ಮನಲ್ಲಿಗೇ ಹೋಗುತ್ತದೆ' ಎಂದು ಹೇಳಿದನು.

ಎರಡು ತಾಸುಗಳ ಮೇಲೆ ಪ್ರಸನ್ನವದನರಾಗಿ ಶ್ಯಾಮೂ ಮತ್ತು ಭೋಲಾ ಕತ್ತಲೆ ಕೋಣೆಯಲ್ಲಿ ಕುಳಿತು ಗಾಳಿಪಟಕ್ಕೆ ಹಗ್ಗವನ್ನು ಕಟ್ಟುತ್ತಿದ್ದರು. ಶುಭಕಾರ್ಯದಲ್ಲಿ ಆಕಸ್ಮಿಕವಾಗಿ ಬರುವ ವಿಘ್ನದಂತೆ ವಿಶ್ವೇಶ್ವರನು ಉಗ್ರರೂಪವನ್ನು ತಾಳಿ ಆ ಕೋಣೆಯನ್ನು ಹೊಕ್ಕನ್ನು ಭೋಲಾ ಮತ್ತು ಶ್ಯಾಮೂವನ್ನು ಗದರಿಸುತ್ತಾ ವಿಶ್ವೇಶ್ವರ—"ನೀವು ನನ್ನ ಕೋಟಿನಿಂದ ದುಡ್ಡು ತೆಗೆದಿದ್ದೀರಲ್ಲವೆ?" ಎಂಬುದಾಗಿ ಹೇಳಿದನು.

ಭೋಲಾ ಭಯಭೀತನಾಗಿ, ವಿಶ್ವೇಶ್ವರನು ಒಮ್ಮೆ ಕಣ್ಣಾರಳಿಸುವುದರಲ್ಲೇ ಹೆದರಿ ನಡುಗುತ್ತಾ, "ನಾನು ತೆಗೆಯಲಿಲ್ಲ ಹಗ್ಗ ಮತ್ತು ಗಾಳಿಪಟ ತರಲು ಶ್ಯಾಮು ಅಣ್ಣ ತೆಗೆದದ್ದು" ಎಂದುಸುರಿದನು.

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ



ಕನಲು ದಾರಿ—ಕೆಂಪು ದೀಪ

ನಮ್ಮ ರಾಜ್ಯಪಾಲರಿಗೊಂದು ಮನೆ!

—ಸುದಾಸ.

ಮೈಸೂರಿನ ರಾಜ್ಯಪಾಲರು ಉಳಿಯುವುದಕ್ಕಾಗಿ ರಾಜ್ಯ ಭವನವನ್ನು ಕಟ್ಟಿಸಬೇಕೆಂದು ಮೈಸೂರಿನ ಮುಖ್ಯಮಂತ್ರಿ ನಿಜಲಿಂಗಪ್ಪ ಅವರು ನಿಶ್ಚಯಿಸಿದ್ದಾರೆ,

ಇದಕ್ಕೆ ಬರುವ ಖರ್ಚು ಇಪ್ಪತ್ತು ಲಕ್ಷ ರೂಪಾಯಿ. ಇದರ ಸಂಖ್ಯೆಯು 'ಎಸ್ಟಿಮೇಟ್' ಎಂಬ ಕಾರಣದಿಂದ ಕೆಂಪು ಹೆಚ್ಚಾಗಬಹುದೇ ವಿನಃ ಕಡಿಮೆ ಆಗುವದಿಲ್ಲ.

ಈ ಇಪ್ಪತ್ತು ಲಕ್ಷ ರೂಪಾಯಿ ಕೆಲವರಿಗೆ 'ಕೇವಲ'ವಾಗಿ ಕಾಣಬಹುದು. ರಾಜ್ಯಪಾಲರ ಸೌಕರ್ಯಕ್ಕಾಗಿ ವಿನಿಯೋಗಿಸಲ್ಪಡುವ ಇಪ್ಪತ್ತು ಲಕ್ಷ ರೂಪಾಯಿ ದುಬಾರಿಯಾಗಿಯೂ ಕೆಲವರಿಗೆ ಅನಿಸಲಾರದು.

ನಮ್ಮ ರಾಜ್ಯದಲ್ಲಿ ಜನತಾ ಸೌಕರ್ಯದ ಯಾವ ಮಹಾನ್ ಕಾರ್ಯವಾದರೂ ಮೂಲ್ಲಕವಾಗಿಯೂ, ಅನಗತ್ಯವಾಗಿಯೂ ಅನಿಸಬಹುದಾದರೂ, ಇದು ವಿಲಂಬವಾಗಿ ನಡೆದರೂ ನಡೆಯಬಹುದು, ಎನ್ನುವ ಮಹಾ ವಿಚಾರವಂತರಿಗೆ ಕಡಿಮೆಯಿಲ್ಲ.

ಒಂದು ದಿನ ಪತ್ರಿಕೆ ಹೀಗೆ ಅಭಿಪ್ರಾಯಪಟ್ಟಿದೆ:

ರಾಜ್ಯಪಾಲರು ಇರಲು ಕುಮಾರ ಕೃಪಾ ಹಳೆಯ ಭವನವಾಗಿದೆ. ಇದರಲ್ಲಿ ಮಹಾತ್ಮಾ ಗಾಂಧಿಯವರು ಒಂದು ಕಾಲದಲ್ಲಿ ತಂಗಿರಬಹುದು. ಅಂದ ಮಾತ್ರಕ್ಕೆ ಅಲ್ಲಿ ರಾಜ್ಯಪಾಲರೂ ಇರಬೇಕೆಂದೇನೂ ಇಲ್ಲ. ಮಹಾತ್ಮಾ ಗಾಂಧಿ ಬಡವರಾಗಿದ್ದರು. ಅಲ್ಲದೆ ಅವರು ರಾಜ್ಯಪಾಲರೂ ಆಗಿರಲಿಲ್ಲ!

ನಿಜ. ಗಾಂಧಿ ಅವರು ಬಡವರಾಗಿದ್ದರು. ಅವರಿದ್ದ 'ಕುಮಾರ ಕೃಪಾ' ರಾಜ್ಯಪಾಲರು ಇರಲು ಯೋಗ್ಯವಾಗಿಲ್ಲ. ಗಾಂಧಿ ಅವರು ಇದ್ದರು ಎಂದ ಮಾತ್ರಕ್ಕೆ ಅದರಲ್ಲಿ ರಾಜ್ಯಪಾಲರೂ ಇರಬೇಕೆಂದೇನೂ ಇಲ್ಲ.

ಅಂತೂ ರಾಜ್ಯಪಾಲರಿಗೆ ಹೊಸತಾದ ಭವನವನ್ನು ನಿರ್ಮಿಸಿ ಕೊಡಬೇಕಾದುದು ನಮಗೆ ಅಗತ್ಯವಾಗಿದೆ. ಇದೂ ಒಂದು ಸಮಸ್ಯೆಯಾಗಿ ನಮ್ಮಲ್ಲಿ ಉಳಿಯುವದು ನಮ್ಮ ಗೌರವಕ್ಕೂ ಸಂಸ್ಕೃತಿಗೂ ಕಳಂಕವಾದೀತು!

ರಾಜ್ಯಪಾಲರು ಕುಮಾರ ಕೃಪಾ, ವನ್ನು ಉಪಯೋಗಿಸಿಕೊಳ್ಳ ಬಾರದೇಕೆ? ಇಪ್ಪತ್ತು ಲಕ್ಷರೂಪಾಯಿಗಳನ್ನು ಮನೆಗಳಿಲ್ಲದವರಿಗೆ ಕಟ್ಟಿಸಿ ಕೊಡುವಂತೆ ಉಪಯೋಗಿಸ ಬಾರದೇಕೆ, ಎಂದು ಅಭಿಪ್ರಾಯ ಪಡುವವರಿದ್ದಾರೆ.

ಅವರ ಅಭಿಪ್ರಾಯ ಸಹಜ ಆಕಾಂಕ್ಷೆಗಳಿಂದ ಕೂಡಿರ ಬಹುದಾದರೂ, ನಾವು ರಾಜ್ಯಪಾಲರಿಗೆ ಒಂದು ಭವ್ಯ ಭವನವನ್ನು ಕಟ್ಟಿಸಿ ಕೊಡುವ ಕಾರ್ಯದಿಂದ ನಾವು ಹಿಂದೆ ಸರಿಯ ಬಾರದು

ಹಿಂದಿನ ರಾಜ್ಯ ಪಾಲರು ತಮ್ಮ ಅರಮನೆಯಲ್ಲೇ ಇರುತ್ತಿದ್ದ ಕಾರಣ, ಇನ್ನೊಂದು ಅರಮನೆಯ ಪ್ರಶ್ನೆ ಎದ್ದು ನಿಂತಿರಲಿಲ್ಲ.

ಈಗ ಆ ಪ್ರಶ್ನೆ ನಿಂತಿದೆ. ನೂತನ ರಾಜ್ಯಪಾಲರ ಘನತೆಗೆ "ಕುಮಾರ ಕೃಪಾ" ಕಡಿಮೆಯಾದೀತು. ಅಂತೆಯೇ ಒಂದು ಭವ್ಯ ರೀತಿಯ ಅರಮನೆಯನ್ನೇ ಕಟ್ಟಿಸಿ ಕೊಡುವ ಅಗತ್ಯ ಈಗ ಹೆಚ್ಚು ಇದೆ.

ಆದೂ ರಾಜ ಭವನವು ಬರೀ ಇಪ್ಪತ್ತು ಲಕ್ಷ ರೂಪಾಯಿಗಳಲ್ಲೇ ನಿರ್ಮಾಣಗೊಳ್ಳುತ್ತಿದೆ ಎಂದ ಮೇಲೆ, ಈ ಕಾರ್ಯದಲ್ಲಿ ವಿಳಂಬವಾಗುವದೂ, ಕಾರ್ಯವನ್ನು ಬದಿಗೊತ್ತುವದೂ ಚೆನ್ನಾಗಿರುವದಿಲ್ಲ.

ರಾಜ್ಯದಲ್ಲಿ ನೀರಿನ ಅಭಾವ; ಬೆಳೆ ಚೆನ್ನಾಗಿಲ್ಲ; ನಿರುದ್ಯೋಗ ಸಮಸ್ಯೆ; ಮನೆ ಮಠಗಳ ಸುವ್ಯವಸ್ಥೆ ಇಲ್ಲ; ಆತ್ಮಹತ್ಯೆ—ಪಾಲಿಡಾಲ್—ಆತ್ಮಹತ್ಯೆ; ಆಹಾರ ವಸ್ತುಗಳಲ್ಲಿ ಬೆಲೆ ಏರಿಕೆ; ಬರಗಾಲ; ಇತ್ಯಾದಿ, ಇತ್ಯಾದಿ ಸುದ್ದಿಗಳ ಮೇಲೆ ಕನ್ನಡ ನಾಡನ್ನು ಸುತ್ತುವರಿದಿದೆ ಎಂದೇ?

ಇದೆ. ಇಂತಹ ವಿಷಯ ಇದ್ದೇ ಇದೆ, ಆದರೆ ಯಾವ ರಾಜ್ಯದಲ್ಲಿ ತಾನೇ ಇಂತಹದೆಲ್ಲ ನಡೆಯುತ್ತಿಲ್ಲ? ಆದರೂ ಚಿತ್ರದುರ್ಗ ಜಿಲ್ಲೆಯಲ್ಲಿ ಅನ್ನ ನೀರಿಲ್ಲದೆ ಅಲ್ಲಿನ ಸ್ಥಿತಿ ಅತ್ಯಂತ ಶೋಚನೀಯವಾಗಿದೆ ಜನರು ಕಂಗಾಲಾಗಿದ್ದಾರೆ.

ಎಲ್ಲೆಡೆಯೂ ಇಂತಹ ಹಾಹಾಕಾರ ಏಳುತ್ತಲೇ ಇದೆ. ಅದರ ನಿವಾರಣೆಯಂತೂ ಅಸಾಧ್ಯ. ಆದರೂ ಪ್ರಯತ್ನವನ್ನೇನೂ ಸರಕಾರ ನಿಲ್ಲಿಸಿಲ್ಲ

ನಮ್ಮದು ಪ್ರಜಾಪ್ರಭುತ್ವ ಸರಕಾರ ವಾದುದರಿಂದ, ಆಗುವ ವ್ಯವಹಾರದಲ್ಲಿ, ಜನ ಸಾಮಾನ್ಯರು ಲಾಭ ನಷ್ಟಗಳಲ್ಲಿ ಸಮಭಾಗಿಗಳಾಗಲೇ ಬೇಕು!

ಅದು ವಿಧಿ. ಎಷ್ಟು ಆಪತ್ತು ಬಂದರೂ, ಎಷ್ಟು ಕಷ್ಟಕಾರ್ಪಣ್ಯಗಳು ಕಾಡಿದರೂ, ಅವನ್ನು ಅನುಭವಿಸಲಾಗದಿದ್ದರೆ, ಪ್ರಜಾಪ್ರಭುತ್ವದ ರಥ ಮುಂದೆ ಸಾಗುವದಿಲ್ಲ.

ದೇವರನ್ನು ಸಂತೃಪ್ತಿಗೊಳಿಸದಿದ್ದರೆ, ಅವನು ಭಕ್ತರನ್ನು ಕಾಡಿಸುತ್ತಾನೆ; ಪೀಡಿಸುತ್ತಾನೆ ಎಂದು ನಂಬಿಕೆ ಉಳ್ಳವರು ಹೇಳುತ್ತಾರೆ.

ನಾವು ಕೂಡಾ ನಮ್ಮ ದೇವರುಗಳನ್ನು ಸಂತೃಪ್ತಿಗೊಳಿಸಬೇಕಾಗಿದೆ. ಇಲ್ಲದಿದ್ದರೆ, ಅವರ ಕಾಟವನ್ನು ಸಹಿಸಿಕೊಳ್ಳಲು ಕಷ್ಟವಾಗುತ್ತದೆ.

ಒಂದು ಅಭಿಪ್ರಾಯ

ಪರಮಸುಖದ ವಾಸಸ್ಥಳವೆಲ್ಲಿ?

ಬರೆದವರು: ಶ್ರೀ ಎಂ. ಬಿ. ಶಂಕರ ರಾವ್.

ಭಗವಂತನು ಸರ್ವವ್ಯಾಪಿಯು. ಹಾಗಿದ್ದಾಗ ಲೋಕದಲ್ಲಿ ದುಃಖದಿಂದ ಬಳಲುವ ಜೀವಿಗಳು ಹೆಚ್ಚೆಚ್ಚಾಗಲು ಕಾರಣವೇನು? ಸರ್ವಸ್ವವೂ ಬ್ರಹ್ಮಸ್ವರೂಪವೆಂದು ಭಾವಿಸುವಾಗ ನಮ್ಮ ಸುತ್ತುಮುತ್ತಲೂ ಬಡತನದ ಸ್ವರೂಪವು ಏಕೆ ಕಾಣುತ್ತಿದೆ? ಜೀವಾತ್ಮನು ಜ್ಞಾನೋಪದೇಶವನ್ನು ಕೇಳುತ್ತಾನೆ; ಶಾಸ್ತ್ರಗಳನ್ನು ಓದಿ ತಿಳಿದುಕೊಳ್ಳುತ್ತಾನೆ; ಪರಂತು ದುಃಖದ ಎಳೆಯನ್ನು ಬದಲಾಯಿಸಲು ಶಕ್ತನಲ್ಲ. ಪ್ರತಿ ಜೀವಾತ್ಮನೂ ಭಾಗ್ಯವನ್ನೂ, ಸುಖವನ್ನೂ ಬಯಸುವುದು ನ್ಯಾಯವಾದ ಸಂಗತಿಯು.

ಜೀವಾತ್ಮನಿಗೆ ತನ್ನ ವಾಸ್ತವಿಕವಾದ ಸ್ವರೂಪವು ತಿಳಿಯದೇ ಭೌತಿಕ ವಿಚಾರದಲ್ಲಿಯೆ ಮಗ್ನನಾಗಿ ನಡೆಯುವ ಸ್ವಭಾವವಿರುವ ಕಾರಣದಿಂದಲೇ ದುಃಖದ ಗಡಿಯನ್ನು ಮುರಿಯಲು ಆತನು ಶಕ್ತನಲ್ಲವೆನ್ನಬಹುದು. ಎಲ್ಲಾ ಜೀವಿಗಳು ಸುಖ ಸಂಪತ್ತನ್ನೇ ಬಯಸುತ್ತವೆ. ದುಃಖವನ್ನು ಯಾವ ಜೀವವೂ ಅಪೇಕ್ಷಿಸುವುದಿಲ್ಲ ವಿವೇಕ ಸೋಪಾನದಿಂದ ಚಿತ್ತವು ಹಾಳಾದಾಗ ಮತ್ತು ಜಾರಿ ಕೆಳ ಬಿದ್ದಾಗ ದುಃಖವು ತಾನಾಗಿಯೇ ಪರಿಣಮಿಸುವುದು.

ತನ್ನ ನಾಭಿಯಲ್ಲಿಯೇ ಕಸ್ತೂರಿಯು ಇರುವಾಗ ಜಿಂಕೆಯು ಪರಿಮಳ ದ್ರವ್ಯಗಳನ್ನು ಹುಡುಕಿ ಕಾಡೆಲ್ಲ ಓಡಾಡುವುದು. ಓಡಾಡಿದರೂ ಅದರ ಪ್ರಯತ್ನವು ಸದಾಕಾಲವೂ ವಿಫಲ, ಕೊನೆಗೆ ಒಂದು ದಿನ ಬೇಟೆಗಾರನ ಅಥವಾ ಹುಲಿಯ ಬಾಯಿಗೆ ತುತ್ತಾಗಿ ಸಾಯುತ್ತಿದೆ. ತನ್ನವರಿಂದಾಗಲೀ, ಸ್ನೇಹಿತರಿಂದಾಗಲೀ ತಾನು ಸುಖವನ್ನು ಪಡೆವೆನು ಎಂದು ಎಣಿಸುವವನು ಸದಾಕಾಲ ಜಯಿಸುವುದಿಲ್ಲ, ಆದರೆ ಕೆಲಬಾರಿ ಜೀವಾತ್ಮಗಳು ಹಲವು ಸೇರಿ ಏಕಚಿತ್ತದಿಂದ ಮಾನವರನ್ನು ಉದ್ಧರಿಸಬಹುದು ಅಂತಹ ಸಂದರ್ಭಗಳು ಬಹು ಕಡಿಮೆ. ಪಣ್ಯಶಾಲಿಗಳಿಗೆ ಅಂತಹ ಅವಕಾಶವು ಲಭಿಸಬಹುದು.

ಪಂಚೇಂದ್ರಿಯಗಳಿಂದ ಸುಖಕ್ಕೆ ಮಿಗಿಲಾದ ದುಃಖವು ಯಾವತ್ತೂ ಒದಗುವುದು ವಾಡಿಕೆಯು, ಜೀವಾತ್ಮನು ಇಂದ್ರಿಯಗಳ ಮಾಯಾಜಾಲದಿಂದ ಹೊರ ಬಿದ್ದರೆ ಮಾತ್ರ ಆತನು ದುಃಖವಿರಹಿತನಾಗಬಹುದು. ಇಂದ್ರಿಯಗಳನ್ನು ಜಯಿಸುವುದೇ ಪರಮ ಸುಖಶಾಂತಿಯ ಕೇಂದ್ರವು. ಮಿಠಾಯಿಯನ್ನು ಭುಂಜಿಸುವಾಗ ನಾಲಗೆಗೂ ಚಿತ್ತಕ್ಕೂ ಆನಂದವಾಗುವುದು. ಕೆಲವು ಬಾರಿ ಅವಿರಾಯಿ ಸೇವನೆಯಿಂದಲೇ ಉದರಶೂಲವೂ ಆಗಬಹುದು—ವಿವೇಕವಿದ್ದಲ್ಲಿ ಮಾತ್ರ ಜೀವನು ದುಃಖವಿರಹಿತನಾಗ ಬಹುದು. ವಿವೇಕಹೀನನಿಗೆ ಸದಾಕಾಲ ದುಃಖವು ಮುತ್ತಿಕೊಂಡೇ ಇರುವುದೆಂಬುದರಲ್ಲಿ ಎಳ್ಳಿನಷ್ಟಾದರೂ ಸಂಶಯವಿಲ್ಲ.

ಜೀವಾತ್ಮನಿಗೆ ನಿಜವಾದ ಸುಖ ಶಾಂತಿಯು ಲಭಿಸಬೇಕಾದರೆ ಆತನು ತನ್ನನ್ನು ತಾನೇ ಸರಿಯಾಗಿ ಅರಿತುಕೊಂಡು ತನ್ನ ಕಷ್ಟಗಳನ್ನು ತಿದ್ದಿಕೊಂಡು ತನ್ನ ಆತ್ಮದ ಅಭಿವೃದ್ಧಿಗಾಗಿ ಕಾದಾಡ ತಕ್ಕದ್ದು. ಇದಕ್ಕೆ ಚಿತ್ತ ಬಲವು ಅಗತ್ಯ. ಧ್ಯಾನವೂ ಅಗತ್ಯ. ಜೀವವು ಆತ್ಮ ಸ್ವರೂಪವಾದುದರಿಂದ ಪ್ರಕೃತಿ ಸಹಾಯದಿಂದ ಜೀವಾತ್ಮನು ತನ್ನನ್ನು ತಾನು ನೆಟ್ಟಗಾಗಿ ತಿಳಕೊಂಡು ವಿವೇಕದಿಂದ ಮುನ್ನಡೆದರೆ ಆತನು ಇಟ್ಟ ಹೆಜ್ಜೆಗಳೆಲ್ಲ ಪರಮಸುಖದ ಹೆಜ್ಜೆಗಳು. ಜೀವನು ಆನಂದ ಸ್ವರೂಪನು. ಪ್ರಪಂಚದ ಆಟಗಳೆಲ್ಲ ಮುನ್ನಡೆವುದು ಜೀವಗಳಿಂದಲೇ. ಕರ್ಮ ಯೋಗವು ಬಲವತ್ತರವಾದ ಯೋಗ. ಕರ್ಮಯೋಗ ಬಲದಿಂದ ಸಚ್ಚಿದಾನಂದನನ್ನು ಕಂಡು ಹಿಡಿದು ಯಾರು ನೈಜ ಸುಖ ಶಾಂತಿಯನ್ನು ಹೊಂದುತ್ತಾನೋ ಆತನು ಇರುವ ಸ್ಥಳ ಪರಮಸುಖದ ವಾಸ ಸ್ಥಳವು.

'NAVAYUGA' Weekly is [in] the list of periodicals [an]d Newspapers approved [fo]r use in Secondary [Sc]hools as per proceedings [R]c. No. 466 N/50 dated ..12-1950 of the Director [of] Public Instruction, [M]adras.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಪತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ_

ನವಭಾರತ ಪುಸ್ತಕ ಭಂಡಾರ, ಉಡುಪಿ

ಸಿಲೋನಿ ಸ್ತ್ರೀಯೊಡನೆ ಚೈನಿ ಚಂಚಲೆಯರು

೨೫-೬-೬೪ರ ಸಂಚಿಕೆಯಲ್ಲಿ ಡೋಲ್-ಮೊಳ ಚಿತ್ರ ಪ್ರಕಟವಾದೊಡನೆ ಕೆಲವರು ತಟ್ಟನೆ, ನಮ್ಮ ಸೇನೆ ಚೈನಿ ಸೇನೆಯು ದಂಡೆತ್ತಿಕೊಂಡು ಬಂದಾಗ ಯಾವ ಸ್ಥಿತಿಯಲ್ಲಿತ್ತು ಹಾಗೂ ಹೋರಾಟದ ಸಮಯ ಏನು ನಡೆದಿತ್ತೆಂಬುದರ ಕುರಿತು ಪ್ರಕಟವಾಗಿರುವ ವರದಿಯನ್ನು ಜ್ಞಾಪಿಸಿಕೊಂಡಿರುವರು. ಇನ್ನೊಂದು ತಂಡದವರಿದ್ದಾರೆ, ಅವರು ಅದ್ಯಾವಳೋ ಡೋಲ್-ಮೊಳ ದೋಲು ಬಡಿಯುವ ಲೇಖನ ಅದೆಂದು ಡೋಲು ಬಡಿಯುತ್ತಿದ್ದಾರೆ. ಅವರ ಅಗ್ರೇಸರ ದಾಂಗೆಯವರ ಧಾಂಬಿಕತನ ಅದರಿಂದ ಇನ್ನಷ್ಟು ಸ್ಪಷ್ಟವಾಗುತ್ತದೆ. ಅವರು ಇತ್ತೀಚಿಗೆ ಬೆಂಗಳೂರಿಗೆ ಬಂದಿದ್ದಾಗ ಭಾಷಣ ಕೊಡುತ್ತ "ಚೈನಿಯರು ಪುನಃ ಪಡೆಯೆತ್ತಿಕೊಂಡು ಬರುವದಿಲ್ಲ. ಇನ್ನು ಭಯಪಡಬೇಕಾಗಿಲ್ಲ. ಆಕ್ರಮಣದ ಹೆಸರು ಹೇಳುತ್ತ ಕೆಲವರು ಭಜನೆ ಮಾಡುತ್ತಿದ್ದಾರೆಂ"ದೆಲ್ಲಾ ಆಲಾಪನೆಗೈದಿದ್ದಾರೆ. ಚೈನಿಕಮ್ಯೂನಿಸ್ಟರಿಗೆ ಭಾರತದಲ್ಲಿರುವ ಕಮ್ಯುನಿಸ್ಟರು ಸಾಕ್ಷಿ—ರಕ್ಷನಿಗೆ ರಿಕ್ಕ ಸಾಕ್ಷಿ! ಅವರು ಅದ್ಯಾವ ಧೈರ್ಯದಿಂದ ಆಶ್ವಾಸನೆ ಕೊಡುತ್ತಿದ್ದಾರೋ, ಗೊತ್ತಾಗುವದಿಲ್ಲ. ಜನತೆಯನ್ನು ಮೋಸಗೊಳಿಸಲೆಂದೇ ಆ ರೀತಿ ಯದ್ವಾತದ್ವಾ ಅಪಸ್ವರ ಎತ್ತುತ್ತಿದ್ದಾರೆ. ಚೈನಾಕ್ಕೆ ಆಕ್ರಮಣ ನಡೆಸುವ ಇಷ್ಟವಿಲ್ಲದಿದ್ದಲ್ಲಿ ಆಕ್ರಮಿಸಿ ಕೊಂಡಿರುವ ಪ್ರದೇಶದಿಂದ ಸೇನೆಯನ್ನು ಹಿಂದಕ್ಕೆ ಕೊಂಡು ಹೋಗುವದು ಹಾಗಿರಲಿ, ಮತ್ತೂ ಸೇನೆಯನ್ನು ಶೇಖರಿಸಲು ಕಾರಣವೇನು? ಚೈನಾದಲ್ಲಿ ಜನಸಂಖ್ಯೆ ಹೆಚ್ಚಾಗಿರುವದೇ ಕಾರಣವೇನು? ಅಲ್ಲದೆ ಕಮ್ಯೂನಿಸ್ಟ್ ಚೈನಾದ ಪ್ರಧಾನಿ ಪರ ರಾಷ್ಟ್ರ ಪರ್ಯಟನೆ ನಡೆಸುತ್ತಿರಲು ಕಾರಣವೇನು?

ಸಿಲೋನಿ ಸ್ತ್ರೀ ಅದೆಂತು ಮುಂದರಿದಿದ್ದಾಳೆಂಬುದನ್ನು ಹಿಂದಿನ ಲೇಖನಗಳಲ್ಲಿ ಕಂಡಿರುವೆವು. ಅದನ್ನು ಕಂಡು ಸ್ವತಃ ಚೌ-ಎನ್-ಲೈ ಮೂಗಿನ ಮೇಲೆ ಬೆರಳಿಟ್ಟುಕೊಂಡು ಚೈನಾಕ್ಕೆ ಹೋಗಿರುವರು. ಅದವರಿಗೆ ದಂಗು ಬಡಿಸಿರುವದಿಲ್ಲ. ಅವರನ್ನು ಕಾರ್ಯಪ್ರವೃತ್ತರಾಗುವಂತೆ ಪ್ರೇರೇಪಿಸಿರುತ್ತದೆ. ತಮ್ಮ ಮಹಿಳೆಯರನ್ನೂ ಮುಂದಕ್ಕೆ ತರಲು ಅವರು ಹಂಚಿಕೆ ಹೂಡುತ್ತಿದ್ದಾರೆ. ಅದಾಗಲೇ ನವಯುಗದಲ್ಲಿ ಪ್ರಕಟವಾಗಿರುತ್ತದೆ.

ಚೈನಿಚಂಚಲೆಯರು ದಾಸ್ಯದ ನೊಗದಲ್ಲಿ ಕತ್ತು ಕೊಟ್ಟಿದ್ದಾರೆಂಬುದು ಇದೀಗ ಸಿಂಹಳ ಸಂಚಾರದ ನಂತರ ಚೌಎನ್-ಲೈಗೆ ಚೆನ್ನಾಗಿ ಗೊತ್ತಾಗಿರುತ್ತದೆಂಬುದು ಕಾಣುತ್ತದೆ. ಅಲ್ಲಿಯ ಅಂಗನೆಯರಿನ್ನು ಮುಂದೆ ಪಿತೃ, ಪತಿ ಅಥವಾ ಪುತ್ರರ ಮೇಲೆ ಅವಲಂಬಿಸಿಕೊಂಡಿರಬೇಕಾಗಿಲ್ಲ, ಈ ವಿಷಯ ಹಿಂದೆಯೇ ಪ್ರಕಟವಾಗಿದೆಯಾದರೂ ಪುನಃ ಚೈನಿ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಕಮ್ಯೂನಿಸ್ಟ ಚೈನಾದಲ್ಲಿ ಕಲ್ಯಾಣ ಕಟ್ಟಳೆ, ಬಾಲಕರ ಸ್ಥಿತಿ ಇಂತಹ ಲೇಖನಗಳ ಮೂಲಕ ಅಲ್ಲಿಯೂ ಅಂಗನೆಯರ ಶೋಚನೀಯ ಸ್ಥಿತಿಯನ್ನು "ನವಯುಗ"ವು ಹಿಂದೆಯೇ ವಾಚಕರಿಗೆ ತಿಳಿಯ ಪಡಿಸಿತ್ತು. ಅದನ್ನೇ ಈಗ ಸ್ವತಃ ಚೈನಾವೇ ಒಪ್ಪಿ ಕೊಂಡಂತಾಗಿದೆ. ಶಿಬಿರದಲ್ಲಿ ಸ್ತ್ರೀಯೂ ಕೆಲಸ ಮಾಡುತ್ತಿರುವಾಗ, ಅದೆಂದೋ ಸರಕಾರ ಸಮ್ಮತಿ ಸೂಚಿಸಿದಾಗ ಮಾತ್ರ ಹೆಣ್ಣು-ಗಂಡು ಒಂದಾಗ ಬೇಕಾಗಿರುವಾಗ ಆಕೆ ಪಿತೃ, ಪತಿ ಅಥವಾ ಪುತ್ರರನ್ನು ಆಧರಿಸಿ ಕೊಂಡಿರಲು ಸಾಧ್ಯವಾದರೂ ಎಲ್ಲಿ? ಎಲ್ಲವೂ ಸರಕಾರಿ ಚಕ್ರದಲ್ಲಿ ಸುತ್ತುತ್ತಿರುತ್ತದೆ. ಸರಕಾರ ಸೂಚಿಸಿದವರನ್ನು ವಿವಾಹವಾಗಬೇಕು, ಮಕ್ಕಳಾದಲ್ಲಿ ಅವನ್ನು ಸರಕಾರವೇ ನೋಡಿಕೊಳ್ಳುತ್ತದೆಂದ ಮೇಲೆ ಅವಲಂಬನೆಯ ಪ್ರಶ್ನೆಯಾದರೂ ಎಲ್ಲಿ ಬರುತ್ತದೆ?

ಅಲ್ಲಿಯ ಅಂಗನೆಯರು ನಾಲ್ಕು ಗುಣಗಳನ್ನು ಬಿಟ್ಟುಕೊಡಬೇಕೆಂದೂ "ಕೇಂಟನ್ ಇವ್ನಿಂಗ್ ನ್ಯೂಸ್" ಪತ್ರಿಕೆಯು ಕೇಳಿಕೊಂಡಿರುತ್ತದೆ. ಆ ನಾಲ್ಕು ಗುಣಗಳೆಂದರೆ ಸದ್ವರ್ತನೆ, ಯುಕ್ತ ಮಾತು, ಸದಾಚಾರ ಹಾಗೂ ಸಮರ್ಪಕ ಉದ್ಯೋಗಗಳೇ ಇವೆ. ಕೇಂಟನ್ ಇವ್ನಿಂಗ್ ನ್ಯೂಸ್, ಆಡಳಿತ ಪಕ್ಷದ ವಿಚಾರವನ್ನು ಪ್ರಕಟಿಸಿರುತ್ತದೆ. ಇವೆಲ್ಲವೂ ಸಂಗ್ರಹಾಲಯಗಳಲ್ಲಿರ ಬೇಕಾಗಿರುವುದರಿಂದ ಅವನ್ನು ಬಿಟ್ಟುಕೊಟ್ಟು ಪಕ್ಷ ಹಾಗೂ ಜನತಾ ನಿಷ್ಠೆಯನ್ನು ಬೆಳೆಸಿಕೊಳ್ಳಬೇಕೆಂದು ಪತ್ರಿಕೆಯು ತಿಳಿಸಿರುತ್ತದೆ.

ಇವನ್ನೋದುವಾಗ ಹಲವಾರು ಸಮಿತಿ—ಕೂಟಗಳಲ್ಲಿ ಅನ್ಯ ರಾಷ್ಟ್ರಗಳಿಗೆ—ದಕ್ಷಿಣ ಆಫ್ರಿಕಾಕ್ಕೆ—ಹೋಗಿದ್ದ ಹೆಂಗಸರು ಅಲ್ಲಿ ನಡೆದುಕೊಂಡಿದ್ದ ರೀತಿ ನೆನಪಿಗೆ ಬರುತ್ತದೆ.

ಅವರಭಾಗ್ಯದಿಂದಾಗಿ ಎಂಬಂತೆ ಅಂತಹ ಸಭೆಗಳಿಗೆ ಇಲ್ಲಿಂದ ಸುಭದ್ರಾ ಜೋಷಿ ಹಾಗೂ ಅಂತಹ ಸಹಚರ ಕಮ್ಯೂನಿಸ್ಟರೇ ಹೋಗಿದ್ದುದರಿಂದ ಅವರಿಗೆ ಪಕ್ಷ ಬಲ ಬಂದಂತಾಗಿ ಮತ್ತಷ್ಟು ಹೀನ ರೀತಿಯಲ್ಲಿ ನಡೆದುಕೊಂಡಿರುವರು. ಅವರು ಅಂತಹ ಸಭೆಗಳನ್ನು ಅರ್ಧದಲ್ಲೇ ನಿಲ್ಲಿಸಿ ಬಿಟ್ಟಿರುವರು. ಇವು ಅವರ ವರ್ತನೆಗೆ, ನಡೆ-ನುಡಿ, ಆಚಾರ-ವ್ಯವಹಾರಗಳತ್ತ ಚೆನ್ನಾಗಿ ಬೆಳಕು ಬೀರುತ್ತದೆ. ಇನ್ನು ಅಂಗೈ ನೋಡಲು ಕನ್ನಡಿ ಬೇಕೇ? ಅದಾಗಲೇ ಅವರ ಅಂಗನೆಯರು ಆ ರೀತಿ ನಡೆದುಕೊಳ್ಳುತ್ತಿರುವಾಗ ಅದನ್ನು ಇದೀಗ ಕೆಂಟೋನ್ ಸಾಯಂ. ಸಮಾಚಾರ ಪ್ರಕಟಿಸಬೇಕೇ?

ಸ್ತ್ರೀಯರನ್ನು ಪಕ್ಷ ನಿಷ್ಠೆಯುಳ್ಳವರಾಗಿರಲು "ಕೆಂಟೋನ್ ಸಾಯಂ. ಸಮಾಚಾರ" ಕೇಳಿಕೊಳ್ಳುತ್ತಿದೆ! ಅಂತೆಯೇ ಡೋಲ್-ಮಾ ವರ್ತಿಸಿರುವಳು. ಅಂತಹ ಉದಾಹರಣೆಗಳು ಇನ್ನಷ್ಟಿವೆ.

ಅದರಿಂದಲೂ ಕಮ್ಯೂನಿಸ್ಟ್ ಅಧಿಕಾರ ಚಕ್ರಕ್ಕೆ ತೃಪ್ತಿಯಾಗಿರುವದಿಲ್ಲ. ಅದು ಇನ್ನೂ ಉರುಳುತ್ತಿದೆ. ಸ್ತ್ರೀಯರಿಗೂ ಕಡ್ಡಾಯ ಸೈನಿಕ ಶಿಕ್ಷಣ ಕೊಡಲಾರಂಭಿಸಿದೆ. ಇತರ ದೃಷ್ಟಿಗಳಲ್ಲಿ ಅಲ್ಲಿನ ವಿದ್ಯಾಭ್ಯಾಸದ ಮಟ್ಟ ಕೀಳ್ಮಟ್ಟಕ್ಕಿಳಿಯುತ್ತಿದೆ. ಕೀಳ್ಮಟ್ಟಕ್ಕಿಳಿದರೆ ತಾನೇ ಅವರು ನಡೆ-ನುಡಿ, ಆಚಾರ-ವ್ಯವಹಾರಗಳನ್ನು ಸಂಗ್ರಹಾಲಯಗಳಲ್ಲಿ ಬಿಟ್ಟು ಬಂದಾರು!

ಇಷ್ಟರಲ್ಲೇ ಆ ಚಕ್ರ ನಿಂತಿರುವದಿಲ್ಲ. ಮರಿ ಡೋಲ್-ಮಾಗಳನ್ನು ಅವರು ಸಿದ್ಧಗೊಳಿಸುತ್ತಿದ್ದಾರೆ. ವಿದ್ಯಾಭ್ಯಾಸವೆಂಬ ಪವಿತ್ರ ಹೆಸರಿನಡಿಯಲ್ಲಿ ತಮ್ಮ ರಾಜಕೀಯ ವ್ಯಾಪಾರ— ವ್ಯಭಿಚಾರವನ್ನೇ ನಡೆಸುತ್ತಿದ್ದಾರೆ. "ಅನ್ಯ ರಾಷ್ಟ್ರಗಳ ವಿದ್ಯಾರ್ಥಿ"ಗಳೆಂದು ಕೆಲ ರಾಷ್ಟ್ರಗಳ ಸರಕಾರ ಸುಮ್ಮಗಿರುವದುಂಟು. ಧೈರ್ಯಶಾಲಿಗಳು ಒಡನೆ ಯುಕ್ತ ಮಾರ್ಗದಲ್ಲಿ ನಡೆಯುವದುಂಟು. ಇಂಡೋನೇಷ್ಯಾ (ದ್ವೀಪಾಂತರ)ದಲ್ಲಿ ಒಲಿಂಪಿಕ್ ಆಟದ ಸಮಯ ನಡೆದ್ದಾದರೂ ಏನು? ಚೈನಿ ಹಸ್ತಕರು ದ್ವೀಪಾಂತರದ ಕಮ್ಯೂನಿಸ್ಟ್ ಪ್ರೇಮಿಗಳನ್ನು ನಿಲ್ಲಿಸಿಕೊಂಡು ಭಾರತಕ್ಕೆ ದ್ರೋಹ ಬಗೆದರು. ನಮ್ಮ ದೂತ ನಿವಾಸವನ್ನು ಹಾಳುಗೈದುದು ಮಾತ್ರವಲ್ಲದೆ ಭಾರತೀಯ ಕ್ರೀಡಾಪಟುಗಳ ಮೇಲೂ ಅಲ್ಲಿರುವ ಭಾರತೀಯರ ಮೇಲೂ ಹಲ್ಲೆ ನಡೆಸಿದರು.

ಇವುಗಳಲ್ಲಿ ವಿದ್ಯಾರ್ಥಿಗಳೆ ಅದರಲ್ಲೂ ಸ್ತ್ರೀವಿದ್ಯಾರ್ಥಿಗಳಪಾತ್ರಕ್ಕೆಷ್ಟು ಪ್ರಾಮುಖ್ಯತೆ ಇದೆ ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿ ಇದೆ. ಮಲೇಷ್ಯಾದ ರಕ್ಷಣಾದಳದವರು ನಲ್ವತ್ತೊಂದು ಚೈನಿ ವಿದ್ಯಾರ್ಥಿಗಳನ್ನು ಸೆರೆಹಿಡಿದಿರುವರು. ಇದರಲ್ಲಿ ನಾಲ್ವರು ಚೈನಿ ನಾರೀವಿದ್ಯಾರ್ಥಿನಿಗಳಿದ್ದಾರೆ. ಇವರ ಬಂಧನಕ್ಕೆ ಕಾರಣವೇನೆಂದರೆ ಅವರ ಕಮ್ಯೂನಿಸ್ಟ್ ಚಟುವಟಿಕೆಗಳೇ ಇವೆ ಎಂದು ಅಲ್ಲಿ ರಕ್ಷಣಾ ಮಂತ್ರಿ ಡಾ| ಇಸ್ಮಾಯಿಲ್ ಹೇಳಿರುವರು. ರಕ್ಷಣಾ ವಿಭಾಗದವರು ಅಲ್ಲಿಯ ನನ್ಯಾಂಗ್ ವಿಶ್ವ ವಿದ್ಯಾಲಯವನ್ನು ಮುತ್ತಿಗೆ ಹಾಕಿ ಅವರನ್ನು ಬಂಧಿಸಿರುವರು. ಈ ರೀತಿ ಬಂಧಿಸಿರುವದು ಇದೇನು ಪ್ರಥಮ ಬಾರಿ ಇರುವದಿಲ್ಲವಾದರೂ, ಇಷ್ಟು ವಿದ್ಯಾರ್ಥಿಗಳನ್ನು ಒಮ್ಮೆಲೆ ಹಿಂದೆ ಸೆರೆಹಿಡಿದಿರುವದಿಲ್ಲ.

ಈ ಎರಡು ಘಟನೆಗಳಿಂದ ಸಿಲೋನಿಗೆ ಬಂದಿದ್ದ ಚೌ ಎನ್—ಲೈ ಅಲ್ಲಿಯ ಅಂಗನೆಯರ ಪ್ರಗತಿಯನ್ನು ಕಂಡು ಪ್ರೇರಿತರಾಗಿ ಚೈನಾಕ್ಕೆ ಹಿಂತಿರುಗಿದ ಮೇಲೆ ಅದೆಂತು ತಮ್ಮ ತರುಣಿಯರನ್ನು ಮುಂದಕ್ಕೆ ತರಲು ಪ್ರಯತ್ನಿಸುತ್ತಿರುವರೆಂಬುದು ಗೊತ್ತಾಗುತ್ತದೆ. ಸಿಲೋನಿ ಸ್ತ್ರೀಯೊಡನೆ ಚೈನಿ ಚಂಚಲೆ ಇನ್ನೂ ಮುಂದಕ್ಕೆ ಬಂದಿರುವದಿಲ್ಲವೆಂಬುದು ಅವರಿಗೆ ಮನವರಿಕೆಯಾಗಿರುತ್ತದೆ. ಲಂಕೆಯಲ್ಲಿ ಶೂರ್ಪಣಖಿಯ ಕಾಲ ಅದಾಗಲೇ ಮುಗಿದು ಹೋಗಿದೆಯಾದರೂ ಚೈನಾದಲ್ಲಿ ಇದೀಗ ಆರಂಭವಾಗುತ್ತಿದೆ, ಅಲ್ಲಿನ ನವೀನ ಶೂರ್ಪಣಖಿ ಡೋಲ್-ಮಾಳ ವೇಷದಲ್ಲಿ ಬರಬಹುದು ವಿದ್ಯಾರ್ಥಿನಿಗಳ ವೇಷದಲ್ಲಿ ಬರಬಹುದು, ಅವರನ್ನು ಹದ್ದಿನಲ್ಲಿಟ್ಟುಕೊಳ್ಳುವದು ಭಾರತೀಯ ತರುಣರ ಮನೋದಾರ್ಢ್ಯತೆ ಹಾಗೂ ರಾಷ್ಟ್ರದ ಮೇಲಿನ ಅಚಲ ವಾತ್ಸಲ್ಯದ ಮೇಲೆ ಹೊಂದಿಕೊಂಡಿದೆ. ಆಗ ಮಾತ್ರ ಚೈನಾದ ಕಮ್ಯೂನಿಸ್ಟ್ ಶೂರ್ಪಣಖಿಯನ್ನು ಭಾರತೀಯ ರಾಮ-ಲಕ್ಷ್ಮಣರು ಹಿಂದಕ್ಕೆ ಕಳುಹಿಸಿ ಕೊಟ್ಟಾರು.

—ಶ್ರೀ ಶಿವಶಂಕರ.

ನವಯುಗ ಸ್ವಾತಂತ್ರ್ಯ ವಿಶೇಷಾಂಕ ಅಗಸ್ಟ 15

ಕರ್ನಾಟಕದಲ್ಲಿ ಬಹುಕಾಲದಿಂದಲೂ ಅತ್ಯಂತ ಜನಪ್ರಿಯವಾದ 'ನವಯುಗ' ವಾರಪತ್ರಿಕೆಯ ಸ್ವಾತಂತ್ರ್ಯ ವಿಶೇಷಾಂಕವು ಪ್ರಕಟಗೊಳ್ಳುವ ದಿನ (ಅಗಸ್ಟ 15, 1964) ಸಮೀಪಿಸುತ್ತಿದೆಯಷ್ಟೆ. ಭಾರತಕ್ಕೆ ಸ್ವಾತಂತ್ರ್ಯವು ದೊರೆತ ಸವಿನೆನಪಿಗಾಗಿ ಈ ಸಲದ 17ನೆಯ ವರ್ಧಂತಿಯ ಶುಭದಿನದಲ್ಲಿ ನಮ್ಮ ವಿಶೇಷಾಂಕವು ವಿಶಿಷ್ಟವಾದ ರೀತಿಯಲ್ಲಿ ಪ್ರಕಟವಾಗಲಿದೆ. ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ಪತ್ರಿಕೋದ್ಯಮಿಗಳೂ ಬರೆದ ವಿವಿಧ ಲೇಖನಗಳೂ, ಪ್ರಹಸನಗಳೂ ಅಲ್ಲದೆ ನಮ್ಮ ನಾಡಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಜೀವನವನ್ನು ಕುರಿತ ವಿದ್ವತ್ಪೂರ್ಣ ನಿಬಂಧಗಳೂ ಚಿತ್ರಮಯವಾಗಿ ಕರ್ನಾಟಕದ 19 ಜಿಲ್ಲೆಗಳಲ್ಲಿ ವ್ಯಾಪಿಸಿರುವ 'ನವಯುಗ'ದ ಓದುಗರ ಕೈಸೇರುವುವು.

ಅಗಸ್ಟ 15—ಒಂದು ಮಂಗಲಕರವಾದ ದಿನ.

ಅಗಸ್ಟ 15—ನವಯುಗದ ಸ್ವಾತಂತ್ರ್ಯ ವಿಶೇಷಾಂಕವು ಪ್ರಚುರವಾಗುವ ಸುದಿನ.

ಅಗಸ್ಟ 15— ನಿಮ್ಮ ಸರಕು ಮತ್ತು ಸೇವೆಯ ಸಂದೇಶವನ್ನು ನವಯುಗ ವಿಶೇಷಾಂಕದ ಮೂಲಕ ನಾಡಿನ ಮೂಲೆಮೂಲೆಗೂ ಜಾಹೀರಗೊಳಿಸಬೇಕಾದ ಶುಭದಿನ.

ನಿಮ್ಮ ವ್ಯಾಪಾರವು ಜನಜನಿತವಾಗಲು, ಮತ್ತು ನಿಮ್ಮ ಸರಕುಗಳು ಜನಪ್ರಿಯವೆನಿಸಲು 'ನವಯುಗ'ದ ಸ್ವಾತಂತ್ರ್ಯ ವಿಶೇಷಾಂಕವು ಒಂದು ಅಮೂಲ್ಯ ಸಾಧನ.

ಜಾಹೀರಾತಿನ ದರಗಳಿಗೆ ವಿಚಾರಿಸಿರಿ. ಅಗಸ್ಟ 5ರ ಒಳಗೆ ನಿಮ್ಮ ಜಾಹೀರಾತನ್ನು ನಮಗೆ ಕಳಿಸಿ ಕೊಡಿ.

ಮೆನೇಜರ್, ನವಯುಗ, ಉಡುಪಿ.

ಗೇಹ ರಾಜ್ಯದಲ್ಲಿ

ಅಧ್ಯಕ್ಷ ಕೆನ್ನೆಡಿಗೆ ಶಾಶ್ವತ ಸ್ಮಾರಕ

"ಕೇಳಿದಿಯೇನೇ ದೊಡ್ಡ ಸುದ್ದಿಯನ್ನ?"

"ಮನೇ ಗೋಡೆಗಳ ನಡುವೆ ಇರೋ ನನಗೆ ಹೇಗಪ್ಪಾ ಅದು ಗೊತ್ತಾಗ್ಬೇಕು?"

"ಅಯ್ಯೋ ಪಾಪಾಂತ...."

"ಏನಂತೆ? ಪಾಪ ಪುಣ್ಯಗಳ ವಿವೇಚನೆಗೆ ಸುರು ಮಾಡಿದ್ರೀಂತ?"

"ಅಲ್ವೆ, ಮನೆಯೊಳ್ಗಿದ್ರೂ ಲೋಕದ ಸಮಾಚಾರ ತಿಳೀಲೀಂತ ಪೇಪ್ರು ತರ್ಸ್ತ ಇದ್ದಿ....ಅದ್ರ ಮೇಲೆ..."

"ಯಾಕೆ ಅದನ್ನ ಬಾಕಿ ಇಡ್ತೀರಿ? ಹೇಳ್ಬಿಡಿ ಮತ್ತೆ?"

"ಹೇಳ್ಬೇಕೊಂತಲ್ವೆ ಸುರು ಮಾಡಿದ್ದು?"

"ಆದ್ಕೇ ಅಂದೆ, ಹೇಳ್ಬಿಡೀಂತ..."

"ಅಲ್ವೆ, ನಿನ್ಗೆ ಮಾತಾಡೋಕೆ ರಪ ಪ್ಪಾದ್ರೂ ಹೆದ್ರಿಕೆ ಆಗೋದಿಲ್ವೇಂತ?"

"ಹೆದ್ರಿಕೆ? ಯಾರಿಗೆ? ಯಾಕೇಂತ?"

"ಅಲ್ಲ, ಕೈಹಿಡಿದ ಗಂಡಾಂತನ್ನೋ ಪ್ರಾಣಿಯಾದ್ರೂ ಕಣ್ಮುಂದೆ ನಿಂತಿದೇಂತಾದ್ರೂ...."

"ಗಂಡಾಂತಂದ್ರೆ ಹುಲಿಯುಲ್ಲ ತಾನೆ?"

"ಹುಲಿಯೂ ಅಲ್ಲ; ಸಿಂಹವೂ ಅಲ್ಲ. ಗಂಡಾಂತಾಂದ್ರೆ ಗಂಡ. ಹೆಂಡ್ತೀನ ಉಳಿಸೋವ, ಅಳಿಸೋವಂತ ಜ್ಞಾಪಕವಿಲ್ವೆ?"

"ಉಳಿಸೋದಾದ್ರೆ ಉಳ್ಸಿ. ಅಳಿಸೋದಾದ್ರೆ ಅಳಿಸಿನಿಮ್ಮ ಕೈಹಿಡಿದದ್ದಕ್ಕೆ ಸಾರ್ಥಕವಾಯ್ತು.."

"ಏನೇ ಅದು, ನಾಲಿಗೇನ ಮಾರುದ್ದ ಮಾಡ್ತಾ ಇದ್ದೀಯ? ಎಲುಬಿಲ್ಲದ ನಾಲಿಗೆ ಇಂಡಿನೂ ರಬ್ಬರಾಗುತ್ತೆಂತ ಗೊತ್ತಿಲ್ವೇನೆ?"

"ತಿಳೀತು ಬಿಡಿ; ಇಲ್ಲ ಇನ್ನು ಮಾತಾಡೋದಿಲ್ಲ."

"ಮಾತಾಡ್ಬಾರ್ದೂಂತ ಅಂದೆನೆ? ಮಾತಾಡ್ಬೇಕು;ಅದ್ರೆ ಮಾತಾಡಿದ್ರೆ ಬಾಯಿಂದ ಮುತ್ತು ಸುರೀಬೇಕೂನ್ನು...."

"ಸಾಕು ನಿಮ್ಮ ಉಪದೇಶ ನಿಮ್ಮ ಟೋಪೀಸರಕಾರ್ದ ಮಂತ್ರಿ ಮಾಗಧರಿಗೆ ಹೇಳಿ ನಿಮ್ಮ ಈ ಸಲಹೆ...."

"ಏನು ಹೇಳ್ತೀಯ ನೀನು? ಮಂತ್ರಿಗಳಿಗೆ ಯಾರಾದ್ರೂ ಹೇಳೋದು ಕೇಳೋದು ಇದ್ದಾರಾ? ಇ"ರ್ರು ಅವ್ರು ತಮ್ಮದನ್ನೇ ಕೇಳ್ದವ್ರು ಬೇರೆಯವ್ರು ಮಾತನ್ನ ಕೇಳ್ತಾರಾ?"

"ಅದು ಸರೀನ್ನಿ. ಅವ್ರೇ ಬೇರೆಯವರಿಗೆ ಹೇಳೋರು ಮತ್ತೆಲ್ಲಿ ಕೇಳ್ತಾರೆ? ಪಾಪ, ನಿಮ್ಮಂತ ನಾಲ್ಕು ಸಜ್ಜನರ ಉಪದೇಶ ಗೋಡೆಯೊಳಗಿರೋ ನಮ್ಮಂತವರಿಗೇ ಸರಿಹೋಯ್ತು."

"ಸದ್ಯ ನೀವೂ ಕೇಳೋದಿಲ್ಲವಲ್ಲ....?"

"ಅದು ಗೊತ್ತಿದ್ದೇ ದಾಸರು ಹಾಡಿರಬೇಕು...."

"ಸಜ್ಜನರಿಗೆ ಇದು ಕಾಲವಲ್ಲಾಂತ ಅಲ್ವೆ?"

"ಹ್ಞಾಂ ಕಂಡ್ರಿ. ನಿಮ್ಮ ಕಂಠ ಕಂಡ್ರೆ...."

"ಬೋಳು ಅಲ್ವೆ?...ಹ್ಞಾ... ಅಲ್ಲಾನ್ನು. ಹಾಕಿಕೊಂಡಿರೋ ಜೋಡು ಜನಿವಾರ ಇದೇನ್ನು."

"ಅಯ್ಯಯ್ಯ...ನೀವೊಂದು..ನಾನೊಂದಂದ್ರೆ, ನೀವು ಮತ್ತೊಂದು...."

ಅದು ಹಾಗೇ ಅಲ್ವೇನೆ? ನೀನೊಂದು ನಾನೊಂದು...ಅಲ್ಲಾಂತಂತಾರೆ..." ನಾನರ್ಥ...ನೀನರ್ಥ ಒಟ್ಟುಒಂದಂತೆ....

"ಆದೇನಿದ್ರೂ ಬಸ್ಸು ಟಿಕೇಟಿಗೆ ಎರಡೇ ಅಲ್ವೆ?"

"ಹೌದೂನ್ನು. ಅದ್ಕೇ ಅನ್ನೋದು ಹಿಂದಿನವ್ರು ಹೇಳಿದ್ದು ಮಾಡಿದ್ದು ಅಧರ್ಮಾಂತ..."

"ಯಾಕೆ ಹಾಗೇಂತೀರಾ? ಆ ಕಾಲ್ದಲ್ಲಿ ಇದ್ದಿದ್ದ್ರಿಸುದು...."

"ಸರೀನ್ನು. ದಿನ ಸರಿದಾಗೆ ಸಾಮಾಜಿಕ ಧರ್ಮವೂ ಬದಲಾಗುತ್ತ ಹೋಗುತ್ತೆ..."

"ಏನೋ ಎಂಥದೋ ಸೂರ್ಯ ಬದಲಾಗ್ಲಿಲ್ಲ, ಚಂದ್ರ ಬದಲಾಗ್ಲಿಲ್ಲ, ಆದ್ರೆ ಮನುಷ್ಯ ಮತ್ತು ಆತನ ಧರ್ಮ ಬದಲಾಗಿದೆ...."

"ಅದೇ ನೋಡು ನಿನ್ನ ಅಜ್ಞಾನ!"

"ಒಂದೇ ಮಾತ್ನಲ್ಲಿ ನನ್ನನ್ನ ಅಜ್ಞಾನೀಂತ ಅಂದ್ಬಿಟ್ರಿ?"

"ಅಲ್ಲ, ಮತ್ತೇನನ್ಬೇಕೊಂತ. ನೀನನ್ನೋ ಸೂರ್ಯಚಂದ್ರರೆಲ್ಲಾ ದೇವತೆಗಳ ಅಪರಾವತಾರವಾಗಿದ್ದ ಆಕಾಲವೊಂದಿತ್ತು. ಇಂದು ನೋಡು ಅವ್ರೆಲ್ಲಾ ಸಾಮಾನ್ಯ ಗ್ರಹಗಳಾಗಿ ಬಿಟ್ಟಿದ್ದಾರೆ."

"ಹೌದು....ಇದು ಬದಲಾವಣೇನೇ ಅಲ್ವೆ?"

"ಹಾಗೇ ನೋಡು, ಸಾಮಾಜಿಕ ಧರ್ಮವೂ ಒಂದು ವಿಜ್ಞಾನ. ಅದು ಗಣಿತದ ಧರ್ಮದಂತೆ ನಾಲ್ಕು ನಾಲ್ಕು ಎಂಟೆಂಬಂತೆ ಖಂಡಿತವಾದವಲ್ಲ. ಕಾಲಸ್ಥಿತಿ, ದೇಶಸ್ಥಿತಿ, ಮಾನವಸ್ಥಿತಿಗಳನ್ನು ಹೊಂದಿಕೊಂಡು ಬದಲಾಗುತ್ತಿರುವ ವಿಜ್ಞಾನವದು..."

"ಅದು ಹೌದೂನ್ನಿ.ಒಂದು ಕಾಲದಲ್ಲಿ ಅಸ್ಪೃಶ್ಯತೆಯೇ ಮಾನ್ಯವಾಗಿತ್ತು. ಆದರೆ ಇಂದದು ಅನ್ಯಾಯವೆಂದು ಪರಿಗಣಿಸಲ್ಪಟ್ಟಿದೆ ನೋಡಿ."

"ಅದನ್ನೇ ಅನ್ನೋದು, ಮಾನವನ ಮನೋವೃತ್ತಿ ಬದಲಾವಣೆ ಹೊಂದಿದ ಹಾಗೆ ಸಾಮಾಜಿಕ ಧರ್ಮವೂ ಬದಲಾಗುತ್ತಿದೇಂತ."

"ಅಲ್ಲಾ ಈ ಧರ್ಮ ಅಧರ್ಮ,ಪಾಪ ಪುಣ್ಯಗಳ ವಿಚಾರವೀಗ ಯಾಕೆ ಬಂತೂಂತ?"

"ಓ, ಹೌದೇ, ಮಾತಿಗೆ ಕೂತ್ರೆ ಮುಖ್ಯ ವಿಚಾರನೇ ಮರೆತು ಹೋಗ್ಬಿಡುತ್ತೆ...."

"ಇದು ಒಳ್ಳೇದಾಯ್ತು. ಉಪಕಥೆ ಹೇಳ್ತಾ ಹೇಳ್ತಾ ಮುಖ್ಯ ಕಥೆಯನ್ನೇ ಮರೆತು ಬಿಟ್ಕಂತೆ ಹಂದಾಸ...."

"ಸಾಕೇ, ನಿನ್ನ ಗೇಲಿ. ಹಾಗೆಲ್ಲಾ ಬೇಡಾದ ವಿಚಾರಾನ್ನ ಆಡೋಕೆ ಬೇಕಲ್ಲ ಪುರ್ಸೊತ್ತು?"

"ಮತ್ತೆ ಈಗ ಏನಂತೆ ಹರಟದ್ದು...."

"ಅಲ್ಲಾ,ನಿನ್ನೆ ಹಣೇ ಬರಹವೆ? ಲೋಕದಲ್ಲಿ ಏನೇನೆಲ್ಲಾ ಆಗುತ್ತೇಂತ ತಿಳಿಯೋದ್ರೆ...."

"ಹೇಗಪ್ಪಾ ನಾನು ಮನೇಲಿ ತಿಳಿಯೋದು?"

"ಪೇಪ್ರು ಬರುತ್ತೇ ಅಲ್ಲ...."

"ಏನ್ಬರುತ್ತೋ, ಪಾಪ ಮಳೆಗಾಳೀಂತ ಡೆಲಿವರಿ ಮಾಡ್ತಾನೆ ಎರಡು ಮೂರು ದಿನಕ್ಕೊಮ್ಮೆ. ಗದರ್ಸಿದ್ರೆ ಗಟ್ಟಾನೇ ಇಳೀಲಿಲ್ಲ ಅಂತಾನೆ, ಮತ್ತೆ, ನೀವು ತಂದಿರೋ ರೇಡಿಯೋ.... ಅದಕ್ಕೆ ಕಿರುಚೋದೊಂದೇ ಕೆಲ್ಸ. ಸ್ವಿಚ್ ಹಾಕಿದೊಡನೆ ಗುಡುಗಿನಂತೆ ಗುಡುಗತೊಡಗುತ್ತೆ...."

"ಅಂತೂ ನೀನು ದಂಡಾಂತನ್ನು....

"ಹೌದು. ಯಾವಾಗಲೂ ಹಾಗೇನೇ ನಾವೆಲ್ಲ ದಂಡ. ನೀವಾದ್ರೋ ಅಪದಂಡ..."

"ಏ, ಸಾಕೇ ಮಾತು ಸಲಿಗೆ ಕೊಟ್ರೆ ನಾಯಿ...."

'ಅಯ್ಯಪ್ಪ, ಅಜ್ಞಾನಿ ಅಂದ್ರಿ, ಈಗ ನಾಯಿಅಂತೀರಿ. ಮತ್ತೊಂದು ಕ್ಷಣದಲ್ಲಿ ಇನ್ನೇನಂತೀರೋ ಏನೋ?"

"ಆದಿರ್ಲಿ ಸದ್ಯ... ನಿನ್ಗೆ ದೊಡ್ಡ ಸುದ್ದಿ ಗೊತ್ತಿಲ್ಲಾನ್ನು."

"ಇನ್ನಾದ್ರೂ ಮುಖ್ಯ ವಿಷಯಕ್ಕೆ ಬನ್ನಿಂದ್ರೆ..."

"ಅದೇ ಅಂದ್ನೆಲ್ಲಾ ... ದೊಡ್ಡ ಸುದ್ದೀಂತ... "

"ಸುದ್ದಿ ದೊಡ್ಡದಲ್ಲಾದ್ರೂ, ನಿಮ್ಮ್ಕೈಗೆ ಬಂದ್ಮೇಲೆ ಅದು ದೊಡ್ಡದಾಗ್ದೆ ಹೋಗುತ್ಯೆ?"

"ನೋಡು,ಅಮೇರಿಕೆಯಲ್ಲಿ ನೀಗ್ರೋಗಳಿಗೂ ಸಮಾನ ನಾಗರಿಕಾಧಿಕಾರವೀಯುವ ಮಸೂದೆ ಕಾಯದೆಯಾಯ್ತಂತೆ"

"ಅಂದ್ರೆ ಕೆನ್ನೆಡಿಯವರು ಬಯಸಿದ್ದು ಅಲ್ವೆ?"

"ಹೌದು, ಹೌದು ಇದರಿಂದಾಗಿಯೇ ಅಧ್ಯಕ್ಷ ಕೆನ್ನೆಡಿಯವರು ಗುಂಡಿನೇಟಿಗೆ ಗುರಿಯಾದರು."

"ಸರಿಹೋಯ್ತು ಬಿಡಿ. ಕೆನ್ನೆಡಿಯವರಿಗೆ ಒಳ್ಳೆಯ ಶಾಶ್ವತ ಸ್ಮಾರಕವನ್ನು ಅರಿಕೆಯಲ್ಲಿ ಸ್ಥಾಪಿಸಿದಂತಾಯ್ತು"

"ಇನ್ನಾದ್ರೂ ದಕ್ಷಿಣ ಆಫ್ರಿಕೆಗೆ ಬುದ್ಧಿ ಬರುತ್ತೋ ಕಾದು ನೋಡಬೇಕು"

"ಅಮೇರಿಕೆಗೆ ಬುದ್ಧಿ ಬಂತು, ಅವರು ನೀವನ್ನೋ ಸಾಮಾಜಿಕ ಧರ್ಮವನ್ನು ಅರಿತುಕೊಂಡರು. ಆದರೆ, ಸಮಾಜದಿಂದಲೇ ದೂರವಿರ ಬಯಸುವ ದಕ್ಷಿಣ ಆಫ್ರಿಕೆಯು ದಾರಿಗೆ ಬರೋ ದಾರಿ ಮಾತ್ರ ಕಾಣಿಸದು"

"ಅಷ್ಟು ನಿರಾಶೆಯಾದೆ, ಹೇಗೆ? ಮಾನವನ ಪ್ರವೃತ್ತಿ ಕ್ಷಣಕ್ಷಣವೂ ಬದಲಾಗುತ್ತಿದೆ. ಎಷ್ಟಾದರೂ ದಕ್ಷಿಣ ಆಫ್ರಿಕೆಯವರು ಬಿಳಿಯರಾದ್ರೂ ಮನುಷ್ಯರು ಅಲ್ವೆ?"

"ಮನುಷ್ಯರೋ ಪ್ರಾಣಿಗಳೋ ಕಾದು ನೋಡೋಣ. ಅಂಗೈ ನೋಡಲು ಕನ್ನಡಿಯೇಕೆ?"

"ಇರ್ಲಿ ಬಿಡೇ, ಸದ್ಯ ನಾವಂತೂ ಮನುಷ್ಯರಲ್ವೆ? ಮಾನವ ಸಹಜವಾದ ಹೊಟ್ಟೆ..."

"ತಿಳೀತು ಬಿಡಿ. ಬಚ್ಚಲಿಗೆ ಹೋಗಿ ಕೈಕಾಲ್ತೊಳ್ಕೊಂಡ್ಬನ್ನಿ...."

"ಹ್ಞಾ... ಬಾರ್ದ್ದ ಉಂಟೆ?

—ಗೋರಾ.

ಕನಸು ನೆನಸಾಗಬೇಕಾದರೆ ......

ಜೀವನದಲ್ಲಿ ಹಣವೇ ಸರ್ವಸ್ವ ಅಲ್ಲ. ಆದರೆ ಹಣವನ್ನು ವಿನಿಯೋಗಿಸುವ ಜಾಣತನದಲ್ಲಿ ಜೀವನದ ಸಾಫಲ್ಯ ಸಮಾವೇಶಗೊಂಡಿದೆ. ನಮ್ಮ ಆಸೆಗಳೆಲ್ಲ ಕೈಗೂಡಬೇಕಾದರೆ, ಕನಸು ನೆನಸಾಗಬೇಕಾದರೆ ಒಂದೇ ಒಂದು ಸಾಧನ-ಹಣ. ಒಂದು ಪ್ರಾಯೋಗಿಕವಾದ ಅಂದಾಜು ಪತ್ರ ಎಂದರೆ ಒಂದು ಸಂಸಾರದ "ಬೇಕು"ಗಳು ಮತ್ತು ಅದರ ಸಾಧ್ಯತೆಯ ಹೊಂದಾಣಿಕೆ. ಕನಸು ನೆನಸನ್ನು ಬೆಸೆಯುವ ಸೂತ್ರ.

ಆರ್ಥಿಕ ಯೋಜನೆ ಅಂದರೆ ನಮ್ಮ ಅಂದಾಜು ಪತ್ರದ ವಿವಿಧ ಬೇಡಿಕೆಗಳಿಗಾಗಿ ಹಣವನ್ನು ವಿಭಾಗಿಸುವುದು ಎಂದಿಷ್ಟೇ ಅರ್ಥವಲ್ಲ. ಅದಕ್ಕೆ ಇನ್ನೂ ಆಳವಾದ ಪಂಚಾಂಗದ ಬಲವಿದೆ. ಜೀವನದ ಮಟ್ಟ ಒಂದು ಸಂಸಾರದ ಈಗಣ ಮತ್ತು ಭವಿಷ್ಯದ ಭವ್ಯತೆಯನ್ನು ಹೊಂದಿಕೊಂಡಿದೆ ಎನ್ನುವುದನ್ನು ನೀವು ಮರೆಯುವಂತಿಲ್ಲ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿಸಿರಿ; ಅದೇ ನಿಮ್ಮ ಭವಿಷ್ಯದ ಭದ್ರತೆಗೆ ಒಂದು ಭರವಸೆಯಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ವಿಶ್ವವ್ಯಾಪೀ ಬ್ಯಾಂಕಿಂಗಿಗಾಗಿ..........

ಶಾಖೆಗಳು: 192 57 ಕೋಟಿಗೂ ಮಿಕ್ಕಿದ ಭಂಡವಾಳ

ನವಯುಗ

ವರುಷ	ಉಡುಪಿ	ವಾರ
೪೩	೯-೭-೧೯೬೪	೪೫

ಕಾಮನ್‌ವೆಲ್ತ್ ಸಮ್ಮೇಳನ

ಇದೇ ತಾರೀಖು ೮ರಂದು ಲಂಡನಿನಲ್ಲಿ ಆರಂಭವಾಗಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲಾಗದಿದ್ದುದಕ್ಕಾಗಿ ಪ್ರಧಾನ ಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿಯವರು ತೀವ್ರ ನಿರಾಶೆಯನ್ನು ವ್ಯಕ್ತಪಡಿಸಿದ್ದಾರೆ. ಈ ಸಮ್ಮೇಳನದಲ್ಲಿ ಅವರು ಭಾಗವಹಿಸುವುದು ಸಾಧ್ಯವಾಗಿದ್ದರೆ, ಕಾಮನ್‌ವೆಲ್ತ್ ನಾಯಕರಲ್ಲಿ ಕೆಲವರನ್ನಾದರೂ ಭೆಟ್ಟಿಯಾಗಿ ವಿಚಾರ ವಿನಿಮಯ ಮಾಡುವ ಒಂದು ಉತ್ತಮ ಅವಕಾಶ ಅವರಿಗೆ ಲಭಿಸುತ್ತಿತ್ತು ಮಾತ್ರವಲ್ಲ ಬ್ರಿಟಿಷ್ ಪ್ರಧಾನಿ ಶ್ರೀ ಅಲೆಕ್ ಡಗ್ಲಾಸ್ ಹೋಮರೊಡನೆಯೂ ಅವರು ವಿಚಾರ ವಿನಿಮಯ ಮಾಡಿಕೊಳ್ಳುವ ಸಂದರ್ಭ ದೊರೆಯುತ್ತಿತ್ತು. ಅನಾರೋಗ್ಯದ ನಿಮಿತ್ತ ತಮ್ಮ ಲಂಡನ್ ಸಂದರ್ಶನವನ್ನು ರದ್ದುಗೊಳಿಸಿದ ಶಾಸ್ತ್ರಿಯವರು ತಮ್ಮ ಪ್ರತಿನಿಧಿಗಳಾಗಿ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸಲು ಅರ್ಥಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರನ್ನೂ, ವಾರ್ತಾ ಮತ್ತು ಪ್ರಸಾರ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರನ್ನೂ ಕಳುಹಿಸಿದ್ದಾರೆ. ಇವರಿಬ್ಬರ ಆಯ್ಕೆ ನಿಜಕ್ಕೂ ಸಮಯೋಚಿತ ಹಾಗೂ ಸಮಂಜಸವಾಗಿದೆ.

ಅರ್ಥ ಮಂತ್ರಿ ಟಿ. ಟಿ. ಕೆ.ಯವರು ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸುವುದು ಈ ಬಾರಿಯ ಸಮ್ಮೇಳನಕ್ಕೆ ಹೆಚ್ಚಿನ ಚೈತನ್ಯ ಒದಗಿಸಬಹುದು. ಬ್ರಿಟಿಷ್ ಪ್ರಧಾನಿಯವರು ಈ ಬಾರಿಯ ಸಮ್ಮೇಳನದಲ್ಲಿ, ಕಾಮನ್‌ವೆಲ್ತ್ ರಾಷ್ಟ್ರಗಳೊಳಗೆ ಪರಸ್ಪರ ಆರ್ಥಿಕ ಸಹಾಯ ಹಾಗೂ ಯೋಜನೆಗಳಿಗೆ ಆರ್ಥಿಕ ನೆರವು, ಅಲ್ಲದೆ ಹಿಂದುಳಿದ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಜೆಗಳ ಜೀವನ ಮಟ್ಟದ ಅಭಿವೃದ್ಧಿಗೆ ಸಹಾಯ ಇತ್ಯಾದಿ ಹೊಸ ವಿಚಾರಗಳನ್ನು ಮಂಡಿಸಲಿರುವರು. ಈ ರೀತಿಯ ಹಿರಿಯ ಉದ್ದೇಶವನ್ನು ಕಾಮನ್‌ವೆಲ್ತ್ ಹೊಂದಿರುವುದು ಇದೇ ಮೊದಲನೆ ಬಾರಿ. ಮೇಲಿನ ವಿಷಯದ ಚರ್ಚೆಯಲ್ಲಿ ಅರ್ಥ ಮಂತ್ರಿ ಟಿ. ಟಿ. ಕೆ ಯವರು ಅತಿ ಮಹತ್ತರ ಪಾತ್ರವನ್ನು ವಹಿಸಬೇಕಾಗಿದೆ. ಮೇಲಿನ ವಿಚಾರದಲ್ಲಿ ಭಾರತದ ಅಭಿಪ್ರಾಯಗಳನ್ನು ಬಿಂಬಿಸುವಲ್ಲಿ, ಹಾಗೂ ಭಾರತದ ಅಭಿವೃದ್ಧಿ ಯೋಜನೆಗಳ ಮತ್ತು ಅವಶ್ಯಕತೆಗಳ ಕುರಿತು ನಿವೇದಿಸುವಲ್ಲಿ ಅವರಂತಹ ಸಮರ್ಥ ವ್ಯಕ್ತಿಗಳು ಇನ್ನೊಬ್ಬರಿಲ್ಲ.

ಹಿಂದುಳಿದ ರಾಷ್ಟ್ರಗಳಿಗೆ ಸಂಯುಕ್ತವಾಗಿ ತಾಂತ್ರಿಕ ನೆರವು ನೀಡುವುದನ್ನು ಕೂಡಾ ಈ ಸಮ್ಮೇಳನ ಚರ್ಚಿಸಲಿರುವುದು. ಸಂಯುಕ್ತ ರಾಷ್ಟ್ರ ಸಂಸ್ಥೆಯ ಪೋಲೀಸ ದಳಕ್ಕೆ ಕಾಮನ್‌ವೆಲ್ತ್ ರಾಷ್ಟ್ರಗಳ ಪರವಾಗಿ ಸಂಯುಕ್ತ ಸೈನಿಕ ನೆರವು ನೀಡುವ ಸೂಚನೆಯ ಬಗ್ಗೆ ಇತರ ರಾಷ್ಟ್ರಗಳೊಂದಿಗೆ ಚರ್ಚೆ ನಡೆಸುವುದಾಗಿ ಬ್ರಿಟಿಷ್ ಪ್ರಧಾನಿಯವರು ಹೇಳಿದ್ದಾರೆ. ಈ ಸೂಚನೆಯು ನಿಜವಾಗಿಯೂ ಸ್ವೀಕಾರಾರ್ಹವಾಗಿದೆ. ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಸಂದಿಗ್ಧ ಸಂದರ್ಭಗಳಲ್ಲಿ, ಸೈನಿಕ ನೆರವು ನೀಡುವಲ್ಲಿ ಇಂದು ಕೆಲವೇ ರಾಷ್ಟ್ರಗಳು ಮುಂದೆ ಬರುತ್ತಿವೆ. ಇದರಿಂದ ಕೆಲವೇ ರಾಷ್ಟ್ರಗಳಿಗೆ ಅನಾನುಕೂಲವಾಗುವ ಸಂದರ್ಭವಿದೆ. ಅದರ ಬದಲು ಕಾಮನ್‌ವೆಲ್ತ್ ರಾಷ್ಟ್ರಗಳೊಂದಿಗೆ ಸಂಯುಕ್ತ ಸೈನಿಕ ನೆರವು ನೀಡುವುದನ್ನು ನಿರ್ಧರಿಸಿದರೆ, ನಿಜಕ್ಕೂ ಉತ್ತಮ. ಈ ಸೂಚನೆಯತ್ತ ಎಲ್ಲಾ ರಾಷ್ಟ್ರಗಳೂ ಅನುಕೂಲ ಅಭಿಪ್ರಾಯ ತಾಳಬಹುದೆಂಬ ನಂಬಿಕೆ ಇದೆ.

ಕಾಮನ್‌ವೆಲ್ತ್ ರಾಷ್ಟ್ರಗಳ ಒಳಗೆಯೇ ಇರುವ ಹಲವಾರು ಉದ್ರೇಕಕಾರಿ ಸಮಸ್ಯೆಗಳ ಕುರಿತು ಕೂಡಾ ಈ ಸಮ್ಮೇಳನವು ಚರ್ಚಿಸಲಿದೆ. ಹಲವಾರು ರಾಷ್ಟ್ರಗಳಲ್ಲಿ ವಿಷಮ ಪರಿಸ್ಥಿತಿಯನ್ನು ನಿವಾರಿಸುವುದಕ್ಕಾಗಿ ಮಾರ್ಗವನ್ನು ಹಲವು ರಾಷ್ಟ್ರಗಳು ಯೋಚಿಸುತ್ತಿವೆ. ಇವುಗಳಲ್ಲಿ ಮಲಯೇಸ್ಯಾದಲ್ಲಿ ಇಂಡೋನೇಸ್ಯಾದ ದೆಸೆಯಿಂದ ಉದ್ಭೂತವಾಗಿರುವ ವಿಷಮ ಪರಿಸ್ಥಿತಿ, ಸೈಪ್ರಸ್ಸಿನ ಸಮಸ್ಯೆ, ಬ್ರಿಟಿಷ್ ಗಯಾನಾದ ಹಾಗೂ ದಕ್ಷಿಣ ರೊಡೇಶಿಯದ ಕ್ಲಿಷ್ಟತರ ಸಮಸ್ಯೆಗಳು ಮುಖ್ಯವಾದುವುಗಳು. ಕಾಮನ್‌ವೆಲ್ತ್ ಪ್ರಧಾನಿಗಳು ಮೇಲಿನ ಸಮಸ್ಯೆಗಳ ಕುರಿತು ಬಿಚ್ಚು ಮನಸ್ಸಿನ ಚರ್ಚೆ ನಡೆಸಿ, ದ್ವೇಷವನ್ನು ಕಡಿಮೆ ಮಾಡಿ, ಶಾಂತಿಯನ್ನು ಸ್ಥಾಪಿಸುವಲ್ಲಿ ಮುಂದಾಗುವರೆಂದು ಆಶಿಸಬಹುದು.

ಹದಿನೆಂಟು ಕಾಮನ್‌ವೆಲ್ತ್ ರಾಷ್ಟ್ರಗಳ ಈ ಸಮ್ಮೇಳನದಲ್ಲಿ ೭೫೦ ಮಿಲಿಯ ಜನತೆ ಪ್ರತಿನಿಧಿಗಳು ಜಾಗತಿಕ ವಿದ್ಯಮಾನಗಳ ಕುರಿತು ಕೂಡಾ ಎರಡು ದಿನಗಳ ತನಕ ಚರ್ಚೆ ನಡೆಸಲಿದ್ದಾರೆ. ಇದರಲ್ಲಿ ಮುಖ್ಯವಾಗಿ ಪೂರ್ವ ಪಶ್ಚಿಮ ಸಂಬಂಧ ಹಾಗೂ ನಿಶ್ಶಸ್ತ್ರೀಕರಣ ಸಮಸ್ಯೆಗಳು ಹೆಚ್ಚಿನ ಪ್ರಾಶಸ್ತ್ಯ ಪಡೆಯುವುವು. ಕಾಮನ್‌ವೆಲ್ತ್ ಪ್ರಧಾನಿಗಳು ಜಾಗತಿಕ ಸಮಸ್ಯೆಗಳ ಕುರಿತು ಹಾಗೂ ಶಾಂತಿ ಸ್ಥಾಪನೆಯ ಕುರಿತು ವಿಚಾರ ವಿನಿಮಯ ನಡೆಸಲಿವೆ. ನಿಶ್ಶಸ್ತ್ರೀಕರಣದ ವಿಚಾರದಲ್ಲಿ ಈ ಹಿಂದೆಯೇ ಸಾಕಷ್ಟು ಸಮ್ಮೇಳನಗಳು ನಡೆದು ಹೋಗಿರುವುದಾದರೂ, ಈ ವರೆಗೆ ಯಾವುದೇ ಪ್ರಯೋಜನವುಳ್ಳ ನಿರ್ಧಾರವಾಗಿಲ್ಲ. ಕಾಮನ್‌ವೆಲ್ತ್ ಪ್ರಧಾನಿಗಳು ಈ ವಿಚಾರದ ಕುರಿತು ಅತಿ ಕೂಲಂಕುಷ ಚರ್ಚೆ ನಡೆಸಿ ಒಂದು ಸೂಕ್ತ ನಿರ್ಣಯಕ್ಕೆ ಬರುವುದು ಅತಿ ಅಗತ್ಯ.

ಈ ಬಾರಿಯ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ದಕ್ಷಿಣ ರೊಡೇಶಿಯವು ಬಹಳ ವಿವಾದಕ್ಕೆ ಎಡೆ ಕೊಡುವ ಲಕ್ಷಣ ಕಾಣುತ್ತಿದೆ. ಆಫ್ರಿಕದ ಕಾಮನ್‌ವೆಲ್ತ್ ರಾಷ್ಟ್ರಗಳು ದಕ್ಷಿಣ ರೊಡೇಶಿಯದ ಮೇಲೆ ಆರ್ಥಿಕ ಬಹಿಷ್ಕಾರವನ್ನು ಹಾಕಬೇಕೆಂಬ ಕುರಿತು ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಒತ್ತಾಯ ತಂದಿದ್ದುವು. ಆದರೆ ಅದು ಕಾರಣಾಂತರದಿಂದ ಸಫಲವಾಗಲಿಲ್ಲ. ಈಗ ಮತ್ತೆ ಈ ರಾಷ್ಟ್ರಗಳು ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ದಕ್ಷಿಣ ರೊಡೇಶಿಯದ ವರ್ಣಭೇದ ನೀತಿಯ ಕುರಿತು ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಲಿವೆ, ದಕ್ಷಿಣ ರೊಡೇಶಿಯವನ್ನು ಸಂಪೂರ್ಣವಾಗಿ ಹೊರಗಿಡಬೇಕೆನ್ನುವ ಅರ್ಥದ ನಿರ್ಣಯದ ಅಂಗೀಕಾರಕ್ಕೂ ಅವುಗಳು ಯತ್ನಿಸದೆ ಉಳಿಯಲಾರವು. ಎಚ್ಚೆತ್ತ ಆಫ್ರಿಕದ ಸ್ವತಂತ್ರ ರಾಷ್ಟ್ರಗಳು ಈ ಕುರಿತು ಕಠಿಣ ನಿಲುವು ತಳೆದರೂ ತಳೆಯಬಹುದು. ಆಗ ಪರಿಸ್ಥಿತಿ ಹೇಗೆ ಕೊನೆಗೊಳ್ಳುವುದೆಂದು ಊಹಿಸುವುದು ಅಸಾಧ್ಯ.

ಪ್ರಧಾನಿ ನೆಹರೂರವರು ಕಾಮನ್‌ವೆಲ್ತಿನಲ್ಲಿ ಒಬ್ಬ ಪ್ರಭಾವೀ ವ್ಯಕ್ತಿಯಾಗಿದ್ದರು. ಅವರ ಅಭಿಪ್ರಾಯ ಹಾಗೂ ಸಲಹೆಗಳಿಗೆ ಎಲ್ಲರೂ ತಲೆದೂಗುತ್ತಿದ್ದರು. ಅವರ ವ್ಯಕ್ತಿತ್ವದ ದೆಸೆಯಿಂದ ಕಾಮನ್‌ವೆಲ್ತಿಗೆ ಕಳೆ ಬಂದಿತ್ತು. ಕಾಮನ್‌ವೆಲ್ತ್ ಸಂಬಂಧದ ಕುರಿತು ತೀವ್ರ ನಿಷ್ಠೆ ಇದ್ದ ವ್ಯಕ್ತಿಗಳಲ್ಲಿ ಅವರು ಒಬ್ಬರಾಗಿದ್ದರು. ಈ ಬಾರಿಯ ಸಮ್ಮೇಳನವು ಅವರ ಮರಣದ ದೆಸೆಯಿಂದ ತುಸು ಸಪ್ಪೆ ಎನಿಸಬಹುದು ಎಂದು ಹಲವರ ಅಭಿಪ್ರಾಯ. ಆದರೆ ಭಾರತ ತನ್ನ ಪ್ರತಿನಿಧಿಗಳಾಗಿ ಪ್ರಧಾನಿಗಳ ಪುತ್ರಿ ಇಂದಿರಾ ಗಾಂಧಿ ಹಾಗೂ ಟಿ. ಟಿ. ಕೆ. ಯವರನ್ನು ಕಳುಹಿಸಿ ಕೊಟ್ಟಿದೆ. ಇವರಿಬ್ಬರೂ ಸಮರ್ಥ ವ್ಯಕ್ತಿತ್ವವುಳ್ಳ ಪ್ರತಿಭಾವಂತ ನಾಯಕರು, ಪ್ರಧಾನಿ ನೆಹರೂರವರ ಧ್ಯೇಯ ಧೋರಣೆಗಳ ನಿಕಟ ಪರಿಚಯ ಇದ್ದವರು. ಭಾರತದ ಅಭಿಪ್ರಾಯಗಳನ್ನು ಯೋಗ್ಯ ರೀತಿಯಲ್ಲಿ ಮುಂದಿಡುವಲ್ಲಿ ನಮ್ಮ ನಾಯಕರಿಬ್ಬರೂ ಸಮರ್ಥರೆಂದು ಹೇಳಬಹುದು.

ಈ ಬಾರಿಯ ಸಮ್ಮೇಳನದಲ್ಲಿ ಬ್ರಿಟನು ಐರೋಪ್ಯ ಮಾರುಕಟ್ಟೆಯನ್ನು ಪ್ರವೇಶಿಸುವ ಕುರಿತು ಚರ್ಚೆ ನಡೆಯುವ ಸಂಭವ ಇದೆ. ಇದರಿಂದ ಕಾಮನ್‌ವೆಲ್ತ್ ರಾಷ್ಟ್ರಗಳ ಹಿತಾಸಕ್ತಿಗೆ ಧಕ್ಕೆ ತಗಲುವುದೆಂಬ ಅಭಿಪ್ರಾಯ ಕಳೆದ ವರ್ಷವೇ ಈ ಸೂಚನೆ ಬಂದಾಗ ಇತ್ತು. ಬ್ರಿಟನು ಮಾತ್ರ ಈ ಭಯಕ್ಕೆ ಎಡೆ ಇಲ್ಲ ಎಂದು ಹೇಳುತ್ತಿದೆ. ಆದುದರಿಂದಲೇ ಈ ಕುರಿತು ತನ್ನ ಪ್ರಯತ್ನ ಮುಂದುವರಿಸುತ್ತಲೂ ಇದೆ.

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ಕಾಮನ್‌ವೆಲ್ತ್ ರಾಷ್ಟ್ರಗಳ ಹಿತಾಸಕ್ತಿಗಳ ಕುರಿತು ಯೋಗ್ಯ ನಿರ್ಣಯಗಳನ್ನು ಕೈಕೊಂಡು ಅವುಗಳನ್ನು ಕಾರ್ಯರೂಪಕ್ಕಿಳಿಸಲಿ ಎಂದು ಹಾರೈಸುತ್ತೇವೆ.

ಜಗತ್ಪರ್ಯಟನ

ಸ್ವತಂತ್ರ ನ್ಯಾಸಾಲ್ಯಾಂಡ್.

ಕಳೆದ ೭೩ ವರ್ಷಗಳಿಂದ ಬ್ರಿಟನರ ಆಳ್ವಿಕೆಯಲ್ಲಿದ್ದ ನ್ಯಾಸಾಲ್ಯಾಂಡ್‌ವು ಕಳೆದ ತಾ. ೫ರ ಮಧ್ಯರಾತ್ರಿಯಲ್ಲಿ "ಮಾಲವಿ" ಎಂಬ ಹೊಸ ಹೆಸರಿನೊಂದಿಗೆ ಸ್ವತಂತ್ರವಾಯಿತು. ರಾಜಧಾನಿ ಬ್ಲ್ಯಾಂಟೈರದಲ್ಲಿ ನಡೆದ ಸಮಾರಂಭದಲ್ಲಿ ೫೮ ವರ್ಷ ವಯಸ್ಸಿನ ಡಾ| ಹೇಸ್ಟಿಂಗ್ಸ್ ಕಾಮುಝು ಬಾಂಡಾರು ನೂತನ ರಾಜ್ಯದ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಯೂನಿಯನ್ ಜಾಕ್ ಧ್ವಜವು ಇಳಿಸಲ್ಪಟ್ಟು ನೂತನ ರಾಷ್ಟ್ರದ ಕಪ್ಪು ಕೆಂಪು ಹಾಗೂ ಹಸಿರು ಬಣ್ಣಗಳ ರಾಷ್ಟ್ರಧ್ವಜವು ಎಲ್ಲೆಲ್ಲಿಯೂ ಹಾರಿಸಲ್ಪಟ್ಟಿತು. ಪರ್ವತಮಯ ನಾಡಾದ ಮಾಲವಿಯು ಬ್ರಿಟಿಷ್ ಕಾಮನ್‌ವೆಲ್ತಿನ ಸದಸ್ಯರಾಷ್ಟ್ರವಾಗಿಯೇ ಉಳಿಯುವುದು, ಎಚ್ಚೆತ್ತ ಆಫ್ರಿಕಾದ ಹೊಸ ರಾಜ್ಯ ಮಾಲವಿ, ತನ್ನ ಹೆಸರಿಗೆ ತಕ್ಕಂತೆ ಸ್ವಾತಂತ್ರ್ಯ ಜ್ವಾಲೆಯನ್ನು ಬೆಳಗಿಸುವುದೆಂಬುದರಲ್ಲಿ ಅನುಮಾನವಿಲ್ಲ.

ಜಾತೀಯ ಪಕ್ಷಗಳಿಗೆ ಬಹಿಷ್ಕಾರ

ಜನತೆಯ ಭಿನ್ನ ಭಿನ್ನ ವರ್ಗಗಳಲ್ಲಿ ವೈರ ಇಲ್ಲವೆ ದ್ವೇಷ ಹುಟ್ಟಿಸುವ ಜಾತೀಯ ಪಕ್ಷಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು ಹಾಗೂ ಅವುಗಳ ಎಲ್ಲ ಚಟುವಟಿಕೆಗಳನ್ನು ಕಾನೂನುಬಾಹಿರವೆಂದು ಸಾರಬೇಕು ಎಂದು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವು ಜಾತೀಯ ಸಂಸ್ಥೆಗಳನ್ನು ಬಹಿಷ್ಕರಿಸುವ ಪ್ರಶ್ನೆಯ ಬಗ್ಗೆ ಪರಿಶೀಲನೆ ನಡೆಸಲು ಹಿಂದಿನ ಕೇಂದ್ರ ಆಹಾರ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರ ನೇತೃತ್ವದಲ್ಲಿ ನೇಮಿಸಲ್ಪಟ್ಟಿದ್ದ ವಿಶೇಷ ಸಮಿತಿಯು ಸೂಚನೆ ಮಾಡಿದೆ. ದೇಶದಲ್ಲಿ ಜಾತೀಯ ಪಕ್ಷಗಳ ಚಟುವಟಿಕೆಗಳನ್ನು ಹತ್ತಿಕ್ಕಲು ಈ ಸಮಿತಿಯು ಅನೇಕ ಕ್ರಮಗಳನ್ನು ಸೂಚಿಸಿದೆ. ಜಾತೀಯ ತಳಹದಿಯ ಮೇಲೆ ರಾಜಕೀಯ ಪಕ್ಷ ಕಟ್ಟಲು ಪ್ರಯತ್ನಿಸಿದರೆ ಭಾರತೀಯ ಸಮಾಜವು ಛಿನ್ನವಿಚ್ಛಿನ್ನವಾಗಿ ಹೋಗುವುದೆಂದು ಸಮಿತಿ ಅಭಿಪ್ರಾಯಪಟ್ಟಿದೆ.

ಪಂಜಾಬದ ನೂತನ ಮುಖ್ಯಮಂತ್ರಿ

ಶ್ರೀ ರಾಮಕಿಶನರ ಹಿರಿತನದಲ್ಲಿಯ ಏಳು ಜನ ಸದಸ್ಯರುಳ್ಳ ನೂತನ ಪಂಜಾಬದ ಮಂತ್ರಿ ಮಂಡಳವು ಕಳೆದ ತಾ. ೭ರಂದು ಪ್ರತಿಜ್ಞಾವಿಧಿ ಸ್ವೀಕರಿಸಿತು. ಪ್ರತಿಜ್ಞಾವಿಧಿ ಸ್ವೀಕರಿಸಿದ ರಾಮಕಿಶನರು ದಾಸ ಆಯೋಗದ ವರದಿಯ ಪ್ರಕಾರ ಅಗತ್ಯವಿದ್ದ ಕ್ರಮಗಳನ್ನು ಕೈಕೊಳ್ಳುವುದಕ್ಕೆ ಸಹಾಯ ಸಲ್ಲಿಸುವುದು ತಮ್ಮ ಮುಂದಿನ ಅವಸರದ ಆದರೆ ಅಪ್ರಿಯವಾದ ಕರ್ತವ್ಯವಾಗಿದೆ ಎಂದು ಹೇಳಿದರು. ಆದರೂ ಸಾರ್ವತ್ರಿಕ ವಿಶ್ವಾಸ ಹಾಗೂ ನಿರ್ಭಯದ ವಾತಾವರಣವನ್ನು ನಿರ್ಮಿಸಬಲ್ಲ ಭದ್ರವಾದ ಹಾಗೂ ಪರಿಶುದ್ಧ ಆಡಳಿತಕ್ಕೆ ನಾಂದಿ ಹಾಕಲು ಇದು ತೀರ ಅಗತ್ಯವೆನಿಸಿರುವುದು. ನ್ಯಾಯವನ್ನು ನೆಲೆಗೊಳಿಸಿ ಸಾರ್ವಜನಿಕ ಹಿತವನ್ನು ರಕ್ಷಿಸಬೇಕಾಗಿದೆ ಎಂದು ಅವರು ತಮ್ಮ ಹೇಳಿಕೆಯಲ್ಲಿ ಹೇಳಿರುವರು. ಹೊಸ ಮುಖ್ಯಮಂತ್ರಿಯಿಂದ ಪಂಜಾಬ ಹೊಸತನ್ನು ನಿರೀಕ್ಷಿಸಬಹುದು.

ಬೆಂಗಳೂರಿನಲ್ಲಿ ಸುಬ್ರಹ್ಮಣ್ಯಂ

ಕೇಂದ್ರ ಆಹಾರ ಹಾಗೂ ಕೃಷಿ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರು ಕಳೆದ ತಾ. ೭ರಂದು ರಾಜ್ಯದ ಮಂತ್ರಿಗಳು ಹಾಗೂ ಸರಕಾರದ ಕಾರ್ಯದರ್ಶಿಗಳು ಮತ್ತು ಶಾಖಾ ಮುಖ್ಯಾಧಿಕಾರಿಗಳೊಡನೆ ರಾಜ್ಯದ ಆಹಾರ ಪರಿಸ್ಥಿತಿಯ ಕುರಿತು ಚರ್ಚೆ ನಡೆಸಿದರು. ರಾಜ್ಯದಲ್ಲಿ ಬಿಗಡಾಯಿಸಿರುವ ಆಹಾರ ಪರಿಸ್ಥಿತಿಯ ಕುರಿತು ಕೇಂದ್ರ ಮಂತ್ರಿಗಳಿಗೆ ನಿವೇದಿಸಿಕೊಳ್ಳಲಾಯಿತಲ್ಲದೆ ರಾಜ್ಯದ ಹಲವೆಡೆ ಮುಂಗಾರು ಮಳೆಯ ಅಭಾವದಿಂದ ಬರಗಾಲ ಪರಿಸ್ಥಿತಿ ಬಂದುದನ್ನು ಕೂಡಾ ತಿಳಿಸಲಾಯಿತೆಂದು ವರದಿಯಾಗಿದೆ. ರಾಜ್ಯದ ಆಹಾರ ಧಾನ್ಯದ ಬೇಡಿಕೆಯನ್ನು ತಿಳಿಸಿ, ತೀವ್ರ ಪರಿಹಾರ ಕಾರ್ಯಕ್ರಮದ ಕುರಿತು ಪ್ರಾರ್ಥಿಸಲಾಗಿದೆ. ಆಹಾರ ಧಾನ್ಯಗಳ ಬೆಲೆ ಮಾತ್ರ ಇನ್ನು ಕಡಿಮೆ ಆಗುವ ಲಕ್ಷಣಗಳು ಕಂಡು ಬರುತ್ತಿಲ್ಲ. ಇನ್ನೇನಾಗುವುದೋ ಕಾದು ನೋಡಬೇಕು.

ಅಲ್ಲಲ್ಲಿಯ ಸುದ್ದಿ ಸಾರ

ದೇಶ ಪ್ರಗತಿಯಲ್ಲಿ ರೋಟರಿಯ ಪಾತ್ರ — ನಮ್ಮ ದೇಶದ ಪ್ರಗತಿಯಲ್ಲಿ ರೋಟರಿ ಸಂಸ್ಥೆ ಬಹಳ ದೊಡ್ಡ ಪಾತ್ರ ವಹಿಸಬಹುದಾಗಿದೆ ಎಂದು ರೋಟರಿ ಅಂತರಾಷ್ಟ್ರೀಯ ಸಂಸ್ಥೆಯ ೩೧೭ನೇ ಜಿಲ್ಲೆಯ ಗೌರ್ನರ್ ಡಾ| ಟಿ. ಎಂ. ಎ. ಪೈ ತಾ. 30ರಂದು ಮಣಿಪಾಲದಲ್ಲಿ ಘೋಷಿಸಿದರು.

ಅಧಿಕಾರಾವಧಿ ಮುಗಿದ ಗೌರ್ನರ್ ಫರೂಕ್ ಇರಾನಿಯವರಿಂದ ಅಧಿಕಾರ ಸ್ವೀಕರಿಸಿದ ಬಳಿಕ ಉಡುಪಿ ರೋಟರಿ ಕ್ಲಬ್‌ನ ಸಾಪ್ತಾಹಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ರೋಟರಿ ಅಂತರಾಷ್ಟ್ರೀಯ ಅಧ್ಯಕ್ಷರಾದ ಚಾರ್ಲ್ಸ್ ಪೆಟ್ಟಿಂಗಿಲ್‌ರವರು ಬರುವ ಡಿಸೆಂಬರ್ ೨೭ ಮತ್ತು ೨೮ರಂದು ಇಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನದಲ್ಲಿ ಭಾಗ ವಹಿಸುವುದಾಗಿ ತಿಳಿಸಿದ್ದಾರೆಂದು ಪ್ರಕಟಪಡಿಸಿದರು.

ರೋಟರಿಯು ಜನರಿಗೆ ಸೇವೆಸಲ್ಲಿಸುವುದಕ್ಕೆ ಅವಕಾಶ ಒದಗಿಸುವ ಮಹಾ ಸಂಸ್ಥೆಯಾಗಿದೆ. ತಾವು ಭಾಗವಹಿಸಿದ್ದ ಅಮೇರಿಕದ ಲೇಕ್ ಪ್ಲಾಸಿಡ್ ನಗರದಲ್ಲಿ ನಡೆದ ರೋಟರಿ ಅಂತರ್‌ರಾಷ್ಟ್ರೀಯ ಸಭೆಯಲ್ಲಿ ಸ್ಫೂರ್ತಿಯುತವಾದ ಅತ್ಯುತ್ತಮ ಅನುಭವ ಸಿಕ್ಕಿತೆಂದು ಅವರು ತಿಳಿಸಿದರು.

ಗೌರ್ನರ್ ಫರೂಕ್ ಇರಾನಿಯವರು ಮಾತನಾಡಿ ಡಾ.| ಟಿ. ಎಂ. ಎ. ಪೈಯವರು ದೂರದೃಷ್ಟಿ, ವಿಶ್ವಾಸ ಹಾಗೂ ಧೈರ್ಯವಂತರಾದ ಮಹಾ ವ್ಯಕ್ತಿಯಾಗಿದ್ದಾರೆಂದರು. "ಈ ರೋಟರಿ ಜಿಲ್ಲೆಯ ಮುಖ್ಯಾಧಿಕಾರಿಯಾಗಿ ಅವರು ಇರುವುದು ಬಹಳ ಅದೃಷ್ಟಕರವಾದ ಸಂಗತಿ" ಎಂದರು.

ಉಡುಪಿ ರೋಟರಿ ಕ್ಲಬ್ಬಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ|| ಎ. ಕೃಷ್ಣರಾವ್‌ರವರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀ ಎನ್. ಎಸ್. ಪ್ರಭುಗಳವರು ಸಂದೇಶಗಳನ್ನು ಓದಿದರು.

೧೯೬೫-೬೬ ನೇ ಸಾಲಿಗೆ ಗೌರ್ನರ್ ಆಗಿ ನಾಮಕರಣ ಗೊಂಡಿರುವ ಶ್ರೀ ಟಿ. ವೆಂಕಟರಾಮ ಶಾಸ್ತ್ರಿಯವರು ಭಾಷಣಮಾಡಿ ಡಾ|| ಪೈಯವರು ಮಹತ್ತರ ಕಾರ್ಯಗಳನ್ನು ಸಾಧಿಸಿದ ಅಸಮಾನ್ಯ ವ್ಯಕ್ತಿಯಾಗಿದ್ದಾರೆಂದರು. ಅವರ ನೇತೃತ್ವದಲ್ಲಿ ಈ ರೋಟರಿ ಜಿಲ್ಲೆ ಉಳಿದೆಲ್ಲ ಜಿಲ್ಲೆಗಳಿಗೆ ಮಾದರಿಯಾಗಲೆಂದು ಹಾರೈಸಿದರು.

ಡಾ|| ಪೈ ಹುಟ್ಟಿನಿಂದಲೇ ರೋಟರಿಯನ್ನರಾಗಿದ್ದು, ಯಾರಾದರೂ ದ್ವೇಷಪಡುವಂತಹ ಉತ್ತಮ ಜೀವನ ನಡೆಸಿದ್ದಾರೆಂದು ಶ್ರೀ ಟಿ. ಎ. ಪೈ ನುಡಿದರು. ಅವರ ಅಧಿಕಾರಾವಧಿ ರೋಟರಿ ಇತಿಹಾಸದ ಅತ್ಯುತ್ತಮ ಅಧ್ಯಾಯಗಳಲ್ಲೊಂದಾಗಲೆಂದು ಆಶಿಸಿದರು. ಮಂಗಳೂರು ರೋಟರಿ ಕ್ಲಬ್ ಅಧ್ಯಕ್ಷ ಡಾ|| ಕೆ. ಪಿ. ಗಣೇಶನ್, ಕಾರ್ಕಳ ರೋಟರಿ ಕ್ಲಬ್‌ನ ಅಧ್ಯಕ್ಷ ಶ್ರೀ ಕೆ. ವಿ. ಕಾಮತ್ ಮತ್ತು ಕುಂದಾಪುರ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ|| ಹೊಸಕೋಟೆಯವರು ಭಾಷಣಮಾಡಿದರು. ಸಭಾಧ್ಯಕ್ಷತೆ ವಹಿಸಿದ್ದ ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಕೆ. ಕೆ. ಪೈಯವರು ಫರೂಕ್ ಇರಾನಿಯವರು ಗೌರ್ನರಾಗಿ ಸಲ್ಲಿಸಿರುವ ಸೇವೆಯನ್ನು ಶ್ಲಾಘಿಸಿದರು. ಕಾರ್ಯದರ್ಶಿ ಶ್ರೀ ಎ. ಜಿ. ಆಳ್ವಿಯವರು ವಂದನಾರ್ಪಣೆಮಾಡಿದರು.

ಎಕಾಡೆಮಿಯ ಮಹಾಸಭೆ — ಮಣಿಪಾಲದ ಮೆಡಿಕಲ್ ಕಾಲೇಜಿನಲ್ಲಿ ೨೫,೦೦೦ ರೂ. ವರೆಗೆ ಹಣ ವಸೂಲು ಮಾಡಲಾಗುತ್ತಿದೆ ಎಂದು ಜವಾಬ್ದಾರಿಯುತರಾದವರು ಮೈಸೂರು ವಿಧಾನ ಮಂಡಲದಲ್ಲಿ ನಿರಾಧಾರವಾದ ಅಂಶಗಳನ್ನು ಪ್ರಸ್ತಾಪಿಸಿರುವುದನ್ನು ತಾ. 30ರಂದು ಮಣಿಪಾಲದಲ್ಲಿ ನಡೆದ ಎಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಖಂಡಿಸಲಾಯಿತು.

ಆ ದೋಷಪೂರಿತವಾದ ನಿರರ್ಥಕ ಹೇಳಿಕೆಗಳನ್ನು ಖಂಡತುಂಡವಾಗಿ ನಿರಾಕರಿಸಬೇಕೆಂದು ಶ್ರೀ ಟಿ. ಎ. ಪೈ ನುಡಿದರು. ತಮ್ಮ ಆರೋಪಗಳನ್ನು ರುಜುವಾತು ಮಾಡಿ ತೋರಿಸುವಂತೆ ಸಂಬಂಧಪಟ್ಟ ಸದಸ್ಯರನ್ನು ಕೇಳಿಕೊಳ್ಳಬೇಕೆಂದೂ, ಅಗತ್ಯವೆನಿಸಿದರೆ ಈ ವಿಷಯದ ಬಗ್ಗೆ ನ್ಯಾಯಾಂಗ ವಿಚಾರಣೆಯನ್ನು ನಡೆಸುವಂತೆ ರಾಜ್ಯದ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳ ಬೇಕೆಂದೂ ಅವರು ಒತ್ತಾಯ ಪಡಿಸಿದರು.

ಎಕಾಡೆಮಿಯ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಎಕಾಡೆಮಿಯ ಆಡಳಿತ ವರದಿಯನ್ನು ಶ್ರೀ ಪಿ. ಶ್ರೀಪತಿ ಆಚಾರ್ಯರು ಓದಿದರು. ಅಂತ್ಯದಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ವಂದನೆಗಳನ್ನರ್ಪಿಸಿದರು.

ಬಂಟರ ಯಾನೆ ನಾಡವರ ಸಂಘ

ಮುಂಬಯಿ — ಈ ಸಂಘದ 36ನೇ ವಾರ್ಷಿಕ ಮಹಾಸಭೆ ಮತ್ತು ಸ್ನೇಹ ಕೂಟ ಸಮಾರಂಭವು ತಾ. 8-6-64ರಂದು ಭಾರತ್ ಸ್ಕೌಟ್ ಪೆವಿಲಿಯನ್, ಶಿವಾಜಿ ಪಾರ್ಕ್ ಇಲ್ಲಿ ಸಂಘದ ಅಧ್ಯಕ್ಷರಾದ ಡಾ| ಯಚ್. ಬಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಗೌರವ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಯನ್. ಗೋಪಾಲ ಶೆಟ್ಟಿಯವರು ವರದಿಯನ್ನೋದಿದರು. ಗೌ. ಕೋಶಾಧಿಕಾರಿ ಶ್ರೀ ಕೆ. ಕೆ. ಶೆಟ್ಟಿಯವರು ಆಯವ್ಯಯದ ಪಟ್ಟಿಯನ್ನು ಸಭೆಯ ಮುಂದಿರಿಸಿದರು. ಈ ಕೆಳಗಿನವರನ್ನೊಳಗೊಂಡ 35 ಮಂದಿ ಮಾನ್ಯರನ್ನು ಹೊಸ ವರ್ಷದ ಆಡಳಿತ ಸಮಿತಿಗೆ ಚುನಾಯಿಸಲಾಯಿತು.

1) ಶ್ರೀಗಳಾದ ಡಾ| ಯಚ್. ಬಾಲಕೃಷ್ಣ ಶೆಟ್ಟಿ, M B ; B.S ; D G O—ಅಧ್ಯಕ್ಷ. 2) ಸಿರ್ವ ಕೃಷ್ಣದಾಸ್ ಶೆಟ್ಟಿ—ಉಪಾಧ್ಯಕ್ಷ. 3) ಯನ್. ಗೋಪಾಲ ಶೆಟ್ಟಿ B A ; LL B — ಗೌ. ಪ್ರಧಾನ ಕಾರ್ಯದರ್ಶಿ. 4) ಕರುಣಾಕರ ಶೆಟ್ಟಿ, B. Sc—ಗೌ. ಉಪಕಾರ್ಯದರ್ಶಿ. 5) ಕೆ. ಕೃಷ್ಣ ಶೆಟ್ಟಿ—ಗೌ. ಕೋಶಾಧಿಕಾರಿ. 6) ಪಮ್ಮರ್ದೆ ಶೀನ ಪಿ. ಶೆಟ್ಟಿ— ಗೌ. ಉಪಕೋಶಾಧಿಕಾರಿ 7) ಕೆ. ರಾಮರಾಯ ಶೆಟ್ಟಿ—ಶಾಲಾ ಚೆಯರ್‌ಮೇನ್. 8) ಸಂಜೀವ ಕೆ ಶೆಟ್ಟಿ B A.; B.com — ಶಾಲಾ ಕಾರ್ಯದರ್ಶಿ. 9) ಸುಂದರ ಬಿ. ಶೆಟ್ಟಿ—ಗೌ. ಶಾಲಾ ಕೋಶಾಧಿಕಾರಿ.

ಶ್ರೀಮತಿ ರಾಂಭವಿ, ಆರ್. ಪೂಂಜ ಮತ್ತು ಬೋಳ ಕೃಷ್ಣ ಶೆಟ್ಟಿ ಮತ್ತು ಸಮಿತಿಯ ಅವಗಾಹನೆಗೆ ಬಾರದ ಇತರ ಮೃತಪಟ್ಟ ಬಂಧುಗಳ ಆತ್ಮಗಳಿಗೆ ಪರಮಾತ್ಮನು ಚಿರ ಶಾಂತಿಯನ್ನೀಯಲೆಂದು ಪ್ರಾರ್ಥಿಸಲಾಯಿತು. ಸಭಿಕರಲ್ಲಿ ಡಾ|| ಪಿ ಜಗನ್ನಾಥ ಶೆಟ್ಟಿ, ರಾಮ ಬಿ ಶೆಟ್ಟಿ, ಕಳವಾರು ರಾಮ ಶೆಟ್ಟಿ, ಸಿರ್ವ ಕೃಷ್ಣದಾಸ ಶೆಟ್ಟಿ, ಯನ್. ಗೋಪಾಲ ಶೆಟ್ಟಿ ಇವರು ಸಮಯೋಚಿತವಾಗಿ ಭಾಷಣವಿತ್ತರು. ಅಧ್ಯಕ್ಷ ಡಾ| ಯಚ್ ಬಾಲಕೃಷ್ಣ ಶೆಟ್ಟರು ತಮ್ಮ ಹುರಿದುಂಬಿಸುವ ಭಾಷಣದಿಂದ ಸಭಿಕರನ್ನು ಸಂತೋಷಗೊಳಿಸಿದರು. ಲಘು ಉಪಹಾರದ ನಂತರ ಸಭಿಕರ ಮನರಂಜನೆಗೊಳಿಸಲು ವಿವಿಧ ವಿನೋದಾವಳಿಗಳಾದವು. ಗೌ. ಪ್ರಧಾನ ಕಾರ್ಯದರ್ಶಿ ಶ್ರೀ ಯನ್. ಗೋಪಾಲ ಶೆಟ್ಟರು ಧನ್ಯವಾದಗಳನ್ನರ್ಪಿಸಲು ಆಂದಿನ ಸಭಾಂತ್ಯವಾಯಿತು.

ಉದಾರ ದಾನ — ಉಡುಪಿಯ ಎಡ್ವೊಕೇಟ್ ಶ್ರೀ ಆರೂರು ಲಕ್ಷ್ಮೀನಾರಾಯಣರಾಯ ತಮ್ಮ ಚೆರಿಟೆಬಲ್ ಟ್ರಸ್ಟಿನಿಂದ 1-1-64 ರಿಂದ ಈ ವರೆಗೆ ಈ ಕೆಳಗಿನಂತೆ ವಂತಿಗೆಗಳ ನ್ನಿತ್ತಿರುವರು. 1) ಶ್ರೀ ಮತೋಬಾರ್ ವಿಷ್ಣುಮೂರ್ತಿ ದೇವಸ್ಥಾನ, ಮಟ್ಟಿ ಗ್ರಾಮ, ಉಡುಪಿ ತಾಲೂಕು, ಇದರ ಜೀರ್ಣೋದ್ಧಾರಕ್ಕೆ ರೂ 501. 2) ಕಟಪಾಡಿ ವೆಂಕಟರಮಣ ದೇವಸ್ಥಾನದ ರಥನಿರ್ಮಾಣಕ್ಕೆ ರೂ. 501 3) ಪುತ್ತಿಗೆಯ ಮಹಾವಿಷ್ಣು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ರೂ. 501 4) ಪರ್ಕಳ ಹೈಸ್ಕೂಲಿನ ಕಟ್ಟಡಕ್ಕಾಗಿ ರೂ. 500. 5) ಅಲೆವೂರು ಹೈಸ್ಕೂಲಿನ ಕಟ್ಟಡಕ್ಕಾಗಿ ರೂ. 500 6) ಉಡುಪಿ ತಾಲೂಕಿನ ಹೇರೂರು ಗ್ರಾಮದ ಹೇರಂಜೆ ಎಲಿಮೆಂಟರಿ ಶಾಲೆಯ ನಿರ್ಮಾಣಕ್ಕಾಗಿ ರೂ. 200. 7) ಪಡುಬಿದ್ರೆ ಹಾಯರ್ ಎಲಿಮೆಂಟರಿ ಶಾಲೆಯ ವಿಸ್ತರಣೆಗಾಗಿ ರೂ. 200. 8) ಬೈಲೂರು ಮಹಿಷಮರ್ದಿನಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ರೂ. 101. 9) ಉಡುಪಿ ತಾಲೂಕಿನ ಮಣಿಪುರದ ಕೊಡಂಗಲ ಎಲಿಮೆಂಟರಿ ಶಾಲೆಯ ನಿರ್ಮಾಣಕ್ಕೆ ರೂ. 100. 10) ಪೆರಂಪಳ್ಳಿ ಎಲಿಮೆಂಟರಿ ಶಾಲೆಯ ಕಟ್ಟಡಕ್ಕೆ ರೂ. 100 11) ಆರೂರು ಹಾಯರ್ ಎಲಿಮೆಂಟರಿ ಶಾಲೆಗೆ ಮಧ್ಯಾಹ್ನ ಧರ್ಮಾರ್ಥ ಊಟಕ್ಕೆ ಬೇಕಾದ ಪಾತ್ರೆಗಳನ್ನು ಕೊಂಡುಕೊಳ್ಳುವುದಕ್ಕೆ ರೂ.100. 12) ಕಿದಿಯೂರು ಹಾಯರ್ ಎಲಿಮೆಂಟರಿ ಶಾಲೆಗೆ ಮಧ್ಯಾಹ್ನ ಧರ್ಮಾರ್ಥ ಊಟಕ್ಕೆ ಬೇಕಾದ ಪಾತ್ರೆಗಳನ್ನು ಕೊಂಡು ಕೊಳ್ಳುವುದಕ್ಕೆ ರೂ. 100.

ಇದಲ್ಲದೆ, ಈ ಕೆಳಗಿನ ಸಾಲಗೂಪದ ವಿದ್ಯಾರ್ಥಿ ವೇತನಗಳನ್ನೂ ಕೊಟ್ಟಿರುತ್ತಾರೆ. (1) ಮೈಸೂರು ಆಯುರ್ವೇದ ಮೆಡಿಕಲ್ ಕಾಲೇಜಿನ ಜಿ. ಸಿ. ಎ. ಎಂ. ಎರಡನೆ ವರ್ಷದಲ್ಲಿ ಕಲಿಯುವ ವಿದ್ಯಾರ್ಥಿಗೆ ರೂ. 600. 2) ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನ 5 ಮಂದಿ ಬಡವಿದ್ಯಾರ್ಥಿಗಳಿಗೆ ರೂ. 100 ರಂತೆ. 3) ಉಡುಪಿಯ ಎಂ ಜಿ. ಎಂ. ಕಾಲೇಜಿನ 5 ಮಂದಿ ಬಡ ವಿದ್ಯಾರ್ಥಿಗಳಿಗೆ ರೂ. 100 ರಂತೆ. 4) ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ ಇಬ್ಬರು ಬಡ ವಿಧ್ಯಾರ್ಥಿಗಳಿಗೆ ರೂ. 100 ರಂತೆ 5) ಉಡುಪಿಯ ಎಂ. ಜಿ. ಎಂ. ಕಾಲೇಜಿನ ಬಿ. ಯಸ್. ಸಿ. ಡಿಗ್ರಿ ಕ್ಲಾಸಿನಲ್ಲಿ ಕಲಿಯುತ್ತಿರುವ ಬಡ ವಿದ್ಯಾರ್ಥಿಗೆ ರೂ 100. 6) ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಒಬ್ಬ ಬಡವಿದ್ಯಾರ್ಥಿಗೆ ರೂ.100.

ಮದರಾಸ್ ಧರ್ಮಪ್ರಕಾಶದಲ್ಲಿ ಧರ್ಮೋಪನಯನ ಸಮಾರಂಭ — ಶ್ರೀ ಭಂಡಾರಕೇರಿ ಮಠದ ಶ್ರೀ ಶ್ರೀ ವಿದ್ಯಾಮಾನ್ಯ ಶ್ರೀಗಳವರು ಮತ್ತು ಉಡುಪಿ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಗಳವರು, ಈ ಉಭಯ ಶ್ರೀ ಪಾದಂಗಳವರ ಸಮಕ್ಷಮದಲ್ಲಿ ತಾ. 22-6-64ರಂದು ತ್ರಿಮತಸ್ಥ ಬ್ರಾಹ್ಮಣ ಬಡ ಬಾಲಕರಿಗೆ ಧರ್ಮೋಪನಯನವನ್ನು ಧರ್ಮ ಪ್ರಕಾಶದ ಧರ್ಮದರ್ಶಿಗಳಾದ ಶ್ರೀ ಕೆ. ಸೀತಾರಾಮರಾಯರು ವೇದೋಕ್ತವಾದ ವಿಧಿಗಳೊಂದಿಗೆ ಪರಮ ವೈಭವದಿಂದ ನೆರವೇರಿಸಿದರು.

ವಟುವೃಂದಕ್ಕೆ ಕುಮಾರ ಭೋಜನವಾದ ನಂತರ ಮಿಥುನ ಲಗ್ನದಲ್ಲಿ ಬ್ರಹ್ಮೋಪದೇಶವು ನಡೆಯಿತು. ಧರ್ಮಕರ್ತೃಗಳಾದ ಶ್ರೀ ಸೀತಾರಾಮರಾಯರು ಮತ್ತು ಅವರ ಕುಟುಂಬದವರು ವಟುಗಳಿಗೆ ಯೋಗ್ಯವಾದ ವಸ್ತ್ರ ಮತ್ತು ಸಂಧ್ಯಾಪಾತ್ರೆಗಳನ್ನೂ, ವಟುಗಳ ಮಾತಾಪಿತೃಗಳಿಗೆ ಸೀರೆಧೋತ್ರಗಳನ್ನೂ ವಿತರಣೆಯಿಂದ ಹಂಚಿದರು.

ಪುನಃ ಅಂದಿನ ಸಮಾರಂಭದ ಕಾರ್ಯಕ್ರಮವು ಸಾಯಂಕಾಲ ಪ್ರಾರಂಭವಾಯಿತು. ಶ್ರೀ ಕೆ. ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಆ ಭಾಷಣದಲ್ಲಿ ಶ್ರೀ ರಾಯರು, ಶ್ರೀ ಶ್ರೀಗಳವರಿಬ್ಬರೂ ಒಟ್ಟುಗೂಡಿ ಲೋಕಕಲ್ಯಾಣಕ್ಕಾಗಿ ಮಾಡುತ್ತಿರುವ ಅಗಾಧ ಪ್ರಯತ್ನಗಳನ್ನೂ, ದೇಶದ ನಾನಾಭಾಗಗಳಲ್ಲಿ ಅದರಿಂದ ಆಗುತ್ತಿರುವ ಮಹೋಪಕಾರಗಳನ್ನೂ ಸಭೆಯ ಅವಗಾಹನೆಗೆ ತಂದರು. ಈ ಧಾರ್ಮಿಕ ಕಾರ್ಯದ ಪ್ರೇರಕರು ಅವರ ಪೂಜ್ಯರಾದ ದಿವಂಗತ ಭಕ್ತ ಶ್ರೀ ಗೋವಿಂದ ದಾಸರೆಂದು ತಿಳಿಸಿ, ಆ ದಾಸವರ್ಯರು ಉಡುಪಿಯ ಶ್ರೀ ಕೃಷ್ಣ ಪಾದಾರವಿಂದದಲ್ಲಿ 70 ವರ್ಷಗಳ ಕಾಲ ಸಲ್ಲಿಸಿದ ಏಕಾಂತ ಭಕ್ತಿಯನ್ನು ವಿವರಿಸಿದರು.

ಸ್ವಾಗತ ಭಾಷಣವಾದ ನಂತರ, ಮದರಾಸಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಎಸ್. ರಾಮಚಂದ್ರ ಅಯ್ಯರ್, ರಿಟೈರ್ಡ್ ಸುಪ್ರಿಮ್ ಕೋರ್ಟು ಜಡ್ಜರಾದ ಶ್ರೀ ಟಿ. ಎಲ್. ವೆಂಕಟರಾಮ ಅಯ್ಯರ್, ರಿಟೈರ್ಡ್ ಪೋಲಿಸ್ ಕಮಿಷನರ್ ಎಸ್. ಪಾರ್ಥಸಾರಥಿ ಅಯ್ಯಂಗಾರ್, ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜ್ ಸಿ. ಆರ್. ಕೃಷ್ಣರಾಯರು, ಕೃಷ್ಣ ಮಂದಿರದ ಪಂಡಿತ ಶ್ರೀ ಲಕ್ಷ್ಮೀನಾರಾಯಣ ಉಪಾಧ್ಯಾಯ, ಮತ್ತು ಧರ್ಮ ಸೇವಾ ಸಂಘದ ಕಾರ್ಯದರ್ಶಿ ಶ್ರೀ ಲಕ್ಷ್ಮೀನಾರಾಯಣ ಶಾಸ್ತ್ರಿಗಳು ಮಾತನಾಡಿ ಉಪನಯನದ ಮಹತ್ವವನ್ನು ವಿವರಿಸಿ ಶ್ರೀ ಸೀತಾರಾಮರಾಯರ ಧರ್ಮ ಕಾರ್ಯವನ್ನು ಕೊಂಡಾಡಿದರು. ಭಂಡಾರಕೇರಿ ಮಠದ ಶ್ರೀ ಶ್ರೀಯವರು ಗಾಯತ್ರಿ ಮಂತ್ರದ ಮಹತ್ವವನ್ನು ಕುರಿತು ಮಾತನಾಡುತ್ತಾ ಅದರ ತತ್ವಾರ್ಥವನ್ನು ಪ್ರಮಾಣಗಳ ಸಹಿತವಾಗಿ ವಿವರಿಸಿದರು. ಪೇಜಾವರ ಮಠದ ಶ್ರೀ ಶ್ರೀಯವರು ಧರ್ಮ ಶಬ್ದಾರ್ಥವನ್ನೂ ಅದರ ಮುಖ್ಯ ತತ್ವವನ್ನೂ ತಿಳಿಸಿ, ಅರ್ಥಕಾಮಗಳನ್ನೂ ಧರ್ಮದಲ್ಲಿಯೇ ಇದ್ದುಕೊಂಡು, ಅದನ್ನು ಧರ್ಮದಲ್ಲಿ ಸೇರಿಸಿಕೊಂಡು ಸೇವಿಸಬೇಕು. ಆಯೂ ಆಶ್ರಮ ಧರ್ಮವನ್ನೂ ಎಂದಿಗೂ ಬಿಡಬಾರದು ಎಂದು ಹೇಳಿ ಬ್ರಹ್ಮಚರ್ಯಾಶ್ರಮದ ಧರ್ಮರಕ್ಷಣೆಯು ಬ್ರಹ್ಮಜ್ಞಾನಕ್ಕೆ ಸಾಧಕವಾದದ್ದೆಂದು ಅಪ್ಪಣೆ ಕೊಡಿಸಿದರು.

ಪಂಡಿತ ರಘೋತ್ತಮಾಚಾರ್ಯರ ವಂದನಾರ್ಪಣಾ ಭಾಷಣವಾದ ನಂತರ ಮಹಾ ಸಭೆಯು ಮುಕ್ತಾಯಗೊಂಡಿತು.

ನಿಧನ — ಕಳೆದ ತಾ. 30ರಂದು, ಉಡುಪಿ ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕು. ಶಿ. ಹರಿದಾಸ ಭಟ್ಟರ ತಂದೆ ಶ್ರೀ ಕುಂಜಿಬೆಟ್ಟು ಶಿವಗೋಪಾಲ ಭಟ್ಟರು ತಮ್ಮ 84ನೇ ವಯಸ್ಸಿನಲ್ಲಿ ಕುಂಜಿಬೆಟ್ಟು ತಮ್ಮ ಸ್ವಗೃಹದಲ್ಲಿ ಸ್ವರ್ಗಸ್ಥರಾದರೆನ್ನಲು ವಿಷಾದವಾಗುತ್ತದೆ.

ಸನ್ಮಾನ ಸಮಾರಂಭ: — ಇದೇ ತಾ. 2 ರಂದು ಉಡುಪಿಯ ವಿಕ್ಟೋರಿಯಾ ಜುಬಿಲೀ ಯೂನಿಯನ್ ಕ್ಲಬ್ಬಿನವರು 317ನೇ ರೋಟರಿ ಗವರ್ನರಾಗಿ ಚುನಾಯಿತರಾದ ಡಾ|| ಟಿ. ಎಂ ಎ. ಪೈಗಳನ್ನು ಸನ್ಮಾನಿಸಲಿಕ್ಕೂ ಜಪಾನಿಗೆ ತೆರಳುವ ಕ್ಲಬ್ಬಿನ ಅಧ್ಯಕ್ಷ ಶ್ರೀ. ಟಿ. ಎ. ಪೈಗಳಿಗೆ ವಿದಾಯ ನೀಡಲಿಕ್ಕೂ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಡಾ|| ಪಿ. ಆರ್. ನಾಯಕರು ಸಭಾಧ್ಯಕ್ಷತೆ ವಹಿಸಿದ್ದರು. ಕ್ಲಬ್ಬಿನ ಕಾರ್ಯದರ್ಶಿ ಶ್ರೀ. ಕೆ. ಕೆ. ಪೈಗಳು ಸ್ವಾಗತ ಭಾಷಣಮಾಡಿ ಅತಿಥಿಗಳ ಗುಣ ವರ್ಣನೆಮಾಡಿದರು.

ಡಾ|| ಟಿ. ಎಂ. ಎ. ಪೈಗಳು ರೋಟರಿ ಇಂಟರ್ ನೇಶನಲ್ ಸಮ್ಮೇಳನದ ವಿವರಗಳನ್ನಿತ್ತು ಭಾಷಣಮಾಡಿದರು. ಶ್ರೀ ಟಿ. ಎ. ಪೈಗಳು ನಾವು ನಮ್ಮ ನೈಸರ್ಗಿಕ ಸಂಪತ್ತಿನ ಕಡೆಗೆ ವಿಶೇಷ ಗಮನ ಕೊಡ ಬೇಕೆಂದೂ ಮಲ್ಪೆಯಲ್ಲಿ ಮತ್ಸ್ಯ ವ್ಯವಸಾಯದ ಮಹಾ ಉದ್ಯಮವನ್ನು ಕೈಕೊಳ್ಳಬಹುದೆಂದೂ ತಿಳಿಸಿ ಮತ್ಸ್ಯ ಮತ್ತು ಕೃಷಿ ವ್ಯವಸಾಯದಲ್ಲಿ ಹೇಗೆ ಪ್ರಗತಿ ಸಾಧಿಸ ಬಹುದೆಂಬುದನ್ನು ಅಭ್ಯಾಸಿಸುವುದಕ್ಕಾಗಿ ಜಪಾನಿಗೆ ತೆರಳುವುದಾಗಿ ತಮ್ಮ ಭಾಷಣದಲ್ಲಿ ಹೇಳಿದರು. ಡಾ|| ಪಿ. ಆರ್. ನಾಯಕರು ನಮ್ಮ ನಾಡೇ ನಮಗೆ ಶ್ರೇಷ್ಠ ವೆಂದೂ ಪ್ರಮಾಣಿಕತೆ ಹಾಗೂ ಉದ್ಯೋಗ ಶೀಲತೆ ನಮ್ಮಲ್ಲಿ ಕಡಿಮೆಯಾದುದರಿಂದಲೇ ಪ್ರಗತಿ ಕುಂಠಿತವಾಯಿತೆಂದೂ ಹೇಳಿದರು. ಜೊತೆ ಕಾರ್ಯದರ್ಶಿ ಶ್ರೀ ಕೆ. ಶ್ರೀನಿವಾಸ ಬಾಳಿಗರು ಧನ್ಯವಾದಗಳನ್ನು ಅರ್ಪಿಸಿದರು.

ವಿದಾಯ ಸತ್ಕಾರ: — ಜಪಾನಿಗೆ ತೆರಳುವ ಶ್ರೀ ಟಿ ಎ. ಪೈಗಳನ್ನು ತಾ. 3-7-64 ರಂದು ಉಡುಪಿ ಪತ್ರಿಕೋದ್ಯೋಗಿಗಳವತಿಯಿಂದ ಹೋಟೇಲು ಕಲ್ಪನಾದ "ಟೂರಿಸ್ಟ್ ಹಾಲಿ" ನಲ್ಲಿ ಸತ್ಕರಿಸಲಾಯಿತು. ಶ್ರೀ ಕೆ. ಹೊನ್ನಯ್ಯ ಶೆಟ್ಟರು ಸ್ವಾಗತಿಸಿ ಶ್ರೀ ಪೈಗಳು ವಿಶಿಷ್ಟ ವ್ಯಕ್ತಿತ್ವದಿಂದ ಗಣ್ಯಸ್ಥಾನಗಳಿಸಿರುವರೆಂದರಲ್ಲದೆ, ಅವರ ಪ್ರಯಾಣ ಸುಖದಾಯಕವಾಗಲೆಂದೂ ಕೋರಿದರು. ಇದೇ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫರಾಗಿ ಆಯ್ಕೆ ಹೊಂದಿದ ಶ್ರೀ ಬಿ. ಜಗನ್ನಾಥ ಹೆಗ್ಡೆಯವರನ್ನೂ ಸ್ವಾಗತಿಸಿ ಶುಭಾಕಾಂಕ್ಷೆ ಕೋರಿದರು. ಶ್ರೀ ಟಿ. ಎ. ಪೈಗಳು ಮಾತನಾಡುತ್ತಾ ಜನರಿಂದಲೇ ನಾಡು ಪ್ರಗತಿ ಪಡೆಯ ಬೇಕೆಂದೂ ಇಲ್ಲಿಯ ವಿದ್ಯಾ ಸಂಸ್ಥೆಗಳಿಂದಾಗಿ ಜನರು ವಿದ್ಯಾವಂತರಾದರೂ ಅವರಿಗೆ ತಕ್ಕ ಉದ್ಯೋಗ ಇಲ್ಲವೆಂದೂ ಬೇರೆ ಬೇರೆ ಕೈಗಾರಿಕೆಗಳನ್ನು ಸ್ಥಾಪಿಸದಿದ್ದರೆ ವಿದ್ಯಾವಂತರು ಕೃಷಿ ರಂಗವನ್ನು ಪ್ರವೇಶಿಸದಿದ್ದರೆ ಪ್ರಗತಿ ಹೊಂದದೆಂದೂ ಹೇಳಿದರು. ಶ್ರೀ ಜಗನ್ನಾಥ ಹೆಗ್ಡೆಯವರು ತಮ್ಮೆಲ್ಲರ ಪ್ರೀತಿ ವಿಶ್ವಾಸಗಳಿಗೆ ಸಮಾಶಯಗಳಿಗೆ ಆಭಾರಿ ಎಂದರು. ಶ್ರೀ ಎ. ಜಿ. ಆಳ್ವಿಯವರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಹೋಟೇಲ್ ಕಲ್ಪನಾದ ಪ್ರೊ| ಆರ್. ಎಸ್. ಶೆಣೈಯರ ನೇತೃತ್ವದಲ್ಲಿ ಉಪಹಾರ ಸತ್ಕಾರ ನಡೆಯಿತು.

ಕರಿಮೆಣಸು - ಒಣಶುಂಠಿ

ಚಿತ್ರದುರ್ಗ ಜಿಲ್ಲೆಯಲ್ಲಿ ಭೀಕರ ಬರಗಾಲದ ಪರಿಸ್ಥಿತಿ—ಪತ್ರಿಕಾ ವರದಿ.

—"ಎರಡು ವಾರಗಳಲ್ಲಿಯೇ ಅಲ್ಲಿಗೆ ಆಹಾರ ಧಾನ್ಯಗಳನ್ನು ಕಳಿಸಲಾಗುವುದು; ಕಂದಾಯ ವಸೂಲಿಯನ್ನು ನಿಲ್ಲಿಸಲಾಗುವುದು"—ಎಂಬ ರಾಜ್ಯ ಸರಕಾರದ ಬಿದಂಕೆಗೂ ಬರಗಾಲ ಬಗ್ಗಲಿಲ್ಲವಂತೆ.

o o o

ಕರ್ನಾಟಕದ ಕ್ರೈಸ್ತರ ವಿಚಾರಣೆಯಾಗಬೇಕೆಂದು ವಿಧಾನ ಸಭೆಯಲ್ಲಿ ವಿರೋಧಿ ಸದಸ್ಯರು ಆಗ್ರಹಪಡಿಸಿದರಂತೆ.

—ಕರ್ನಾಟಕದಲ್ಲಿ ಕ್ರೈಸ್ತರು ಇಲ್ಲವೆಂಬುವಷ್ಟು ಪರಿಜ್ಞಾನ ಅವರಿಗೆ ಇಲ್ಲದೆ ಹೋಯಿತಲ್ಲಾ ಎಂದು ಮೊಸಳೆ ಕಣ್ಣೀರ್ಗರೆಯಿತೆಂಬುದು ಶುದ್ಧ ಕುಹಕವಿರಲೇ ಬೇಕು.

o o o

ಈ ಬಾರಿಯ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ತೀರಾ ಸಪ್ಪೆ—ಬ್ರಿಟನ ಪ್ರಧಾನಿ ಹೋಮರ ಚಿಂತೆ.

—ನೆಹರು ಇಲ್ಲದ ಯಾವ ಸಮ್ಮೇಳನವೂ ಸಪ್ಪೆಯೆಂಬುದಕ್ಕೆ ಬೇರೆ ನಿದರ್ಶನ ಬೇಕೆ?

o o o

ಪ್ರಧಾನಿ ಶಾಸ್ತ್ರಿಯವರ ಆರೋಗ್ಯವನ್ನು ವಿಚಾರಿಸುವ ನಿತ್ಯ ಸಂದರ್ಶಕರಲ್ಲಿ ಮುರಾರ್ಜಿಭಾಯಿ ಒಬ್ಬರಂತೆ.

—ಭಾಯಿಯವರ ಸುದೀರ್ಘ ಯೋಚನಾ ಲಹರಿಯಲ್ಲಿ ಯಾವ ವಿಚಾರ ಓಲಾಡುತ್ತಿದೆಯೋ!

o o o

ಪಾಕ್ ಅಧ್ಯಕ್ಷ ಅಯ್ಯೂಬ ಖಾನರು ಪ್ರಧಾನಿ ಶಾಸ್ತ್ರಿಯವರೊಡನೆ ಕಾಶ್ಮೀರಾದಿ ಪ್ರಶ್ನೆಗಳ ಬಗ್ಗೆ ಮಾತಾಡಲು ನವದೆಹಲಿಗೆ ಬರುವ ಆಶಯವನ್ನು ಹೊರಗೆಡಹಿದ್ದಾರೆ.

—ಸಮರ ನಿಯಂತ್ರಣ ರೇಖೆಯನ್ನು ಮೀರಿ ಕಾಶ್ಮೀರವನ್ನು ನುಗ್ಗಿ ಪಾಕ್ ಸೈನಿಕರು ಲೂಟಿಯನ್ನು ಮಾಡಿದರು ಎಂಬುದನ್ನು ಮರೆಯಬಹುದೆ?

o o o

ರಾಜ್ಯದ ೩೯೧ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ ಆರೋಗ್ಯ ಮಂತ್ರಿ ಅಳ್ವಾ.

—ಆದರೂ ರೋಗಿಗಳ ಇಲಾಜು ಸರಿಯಾಗಿ ಆಗುತ್ತಿರುವಾಗ ಇತರ ಆಸ್ಪತ್ರೆಗಳ ಡಾಕ್ಟರರನ್ನೂ ಅಮೆರಿಕೆಗೋ ಆಸ್ಟ್ರೇಲಿಯಕ್ಕೋ ರವಾನೆ ಮಾಡಬಹುದು.

o o o

ಕ್ರೈಸ್ತರ ಉತ್ತರಾಧಿಕಾರಿಯಾಗಿ ರಾಮಕಿಶನ್ ಅವಿರೋಧವಾಗಿ ಆಯ್ಕೆಗೊಂಡರು.

—ಕಾಮರಾಜರ ರಾಜ್ಯಕೀಯವನ್ನು ಅರ್ಥಮಾಡಲು ಪಾರ್ವತಿಯೇ ಬರಬೇಕಾಯಿತು.

o o o

ಕಾಶ್ಮೀರದ ಸಿಂಹದ ಗರ್ಜನೆಯೇಕೆ ಕೇಳಿಸುವುದಿಲ್ಲ ಎಂದು ಈಗೆದ್ದಿರುವ ಪ್ರಶ್ನೆ.

—ಸಿಂಹದ ಉಗುರು ಉಡುಗಿದೆಯೆಂಬ ಉತ್ತರ ಸಮಾಧಾನಕ್ಕೆಂದು ಸ್ಫೂರ್ತಿ ಮಾತ್ರ.

o o o

ಬೆಂಗಳೂರಿನಲ್ಲಿ ಇದೇ ತಿಂಗಳಿಂದ ಹೊಸತೊಂದು ವಿಶ್ವವಿದ್ಯಾಲಯವು ಪ್ರಾರಂಭವಾಗುವುದು.

—ಇನ್ನಾದರೂ ಕರಾವಳಿಯ ಜಿಲ್ಲೆಗೊಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಕೊಡಬಹುದಲ್ಲಾ..?

o o o

ರಾಜ್ಯದಲ್ಲಿ ಆಹಾರಾಭಾವ, ಸಕ್ಕರೆಯ ಅಭಾವ, ಆರ್ಥಿಕ ಮೂಲಾಭಾವ, ವಿದ್ಯುಚ್ಛಕ್ತಿಯ ಅಭಾವ, ಡಾಕ್ಟರರ ಅಭಾವ, ಶಿಕ್ಷಕರ ಅಭಾವ, ಕಾಲೇಜು ಸೀಟುಗಳ ಅಭಾವ...

—ಸರಕಾರದಲ್ಲಿ ದಕ್ಷತೆಯ ಅಭಾವ, ಮಂತ್ರಿಗಳಲ್ಲಿ ಪ್ರಾಮಾಣಿಕತೆಯ ಅಭಾವ...

ಪುಸ್ತಕ ಪರಿಚಯ

ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮ್ಯೆ—(ಯಕ್ಷಗಾನ) ಬರೆದವರು: ಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ. ಪ್ರಕಾಶಕರು: ಶ್ರೀ ಎಸ್. ರವೀಂದ್ರನಾಥ ಶೆಟ್ಟಿ, ಸುಬೋಧ ಸಾಹಿತ್ಯ ಭಂಡಾರ, ಹಿರಿಯಡಕ, ದ. ಕ. ಪುಟಗಳು: ೨೨. ಬೆಲೆ: ರೂ. ೦-೪೦ ಪೈಸೆ.

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿರುವ ಮೂಲ್ಕಿಗೆ ಸಮೀಪವಾದ ಬಪ್ಪನಾಡಿನಲ್ಲಿ ಪರಮೇಶ್ವರಿಯು ಬಂದು ನೆಲಸಿದ ಬಗೆ, ವ್ಯಾಪಾರಿ ಬಪ್ಪ ಬ್ಯಾರಿಗೆ ದೇವಿಯೊಲಿದ ರೀತಿ, ದೇವಿಯ ಮಹಾತ್ಮ್ಯೆ, ಅನುಗ್ರಹ ಶಕ್ತಿ—ಮೊದಲಾದುವುಗಳನ್ನು ವಿವರವಾಗಿ ತಿಳಿಸುವ ಯಕ್ಷಗಾನ ಕೃತಿಯಿದು. ಈಗಾಗಲೇ ಕೆಲವೊಂದು ದಶಾವತಾರದ ಮೇಳಗಳು ಈ ಕಥೆಯನ್ನು ರಂಗಸ್ಥಳಕ್ಕೆ ತಂದು ಮೆರೆಯಿಸಿರುವುದರಿಂದ ಮತ್ತದು ಜನಪ್ರಿಯವೂ ಆಗಿರುವುದರಿಂದ ಪ್ರಕೃತದ ಕೃತಿ ಉತ್ತಮವೆಂದೇ ಹೇಳಬಹುದು. ಯಕ್ಷಗಾನ ಕಲೆಯಲ್ಲಿಯೇ ಸಾಕಷ್ಟು ಪಳಗಿದ ಶ್ರೀ ಗಣಪಯ್ಯ ಸೆಟ್ಟರು ಯಕ್ಷಗಾನದ ಘನತೆಯನ್ನು ಉಳಿಸಿಕೊಂಡು ಈ ಪುಟ್ಟ ಕೃತಿಯನ್ನು ಬರೆದಿದ್ದಾರೆ. ಇವರ ಶೈಲಿ ಸರಳವಾಗಿದೆ, ಶುದ್ಧವಾಗಿದೆ.

Bhakta Sri Govinda Dasa

ಲೇಖಕರು: ಪಂಡಿತ ಎನ್. ರಾಘುವೇಂದ್ರ ಬಲ್ಲಾಳ. ಪ್ರಕಾಶಕರು: ಶ್ರೀ ಕೆ. ಸೀತಾರಾಮರಾವ್, ಹೋಟೆಲ್ ದಾಸಪ್ರಕಾಶ, ಮದ್ರಾಸು-7. ಪುಟಗಳು: 35.

ಉಡುಪಿಯ ಶ್ರೀಕೃಷ್ಣನ ಭಕ್ತಾಗ್ರಣಿಯೂ ದಾಸವರ್ಯ ಶ್ರೀ ಪುರಂದರದಾಸರ ನಮ್ರಾನುಯಾಯಿಗಳೂ ಆದ ಶ್ರೀ ಗೋವಿಂದದಾಸರ ಜೀವನ ಚರಿತ್ರೆಯಿದು. ಎಳವೆಯಲ್ಲಿಯೇ ಭಕ್ತಿ-ಜ್ಞಾನ-ವೈರಾಗ್ಯ ಸಂಪನ್ನರಾಗುತ್ತ ಬಂದ ದಾಸರು ಪ್ರಾಣೇಶ ವಿಟ್ಠಲದಾಸರ ಉಪದೇಶದಂತೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ಆದರೂ ಪದ್ಮ ಪತ್ರ ಮಿವಾಂಭಸಿ ಎಂಬಂತೆ ಅವರು ಸಂಸಾರದಲ್ಲಿದ್ದರು. ಮುಂದೆ ಅವರು ತಮ್ಮೆಲ್ಲ ಸಮಯದಲ್ಲಿ ಭಗವದ್ಧ್ಯಾನ-ಸಂಕೀರ್ತನೆ-ಪೂಜೆಗಳಲ್ಲಿಯೇ ತನ್ಮಯರಾದರು; ಅನಾಯಾಸೇನ ಪರಮಾತ್ಮ ಸಾನಿಧ್ಯ ಹೊಂದಿದರು. ತನ್ನ ಮರಣಾನಂತರವೂ ಅವರು ತನ್ನ ಪ್ರಿಯ ಶರರಿಗೆ ಕಾಣಿಸಿಕೊಂಡು ದಿಗ್ದರ್ಶನ ಮಾಡಿದ್ದೂ ಇದೆ. ಈ ಬಗೆಯ ಸಿದ್ಧ ಪುರುಷನ ಜೀವನೇತಿಹಾಸವನ್ನು ಆಂಗ್ಲ ಭಾಷೆ ಬಲ್ಲವರ ಉಪಯೋಗಕ್ಕೆಂದು ಪ್ರಕಟಿಸಲಾಗಿದೆ. ಇಲ್ಲಿನ ಶೈಲಿ ಪ್ರೌಢವಾಗಿದೆ; ಹೃದಯಸ್ಪರ್ಶಿಯಾಗಿದೆ. ಪುಸ್ತಕಕ್ಕೆ ಶ್ರೀ ಪೇಜಾವರ ಮಠದ ಶ್ರೀಮದ್ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ಮುನ್ನುಡಿ ಬರೆದಿದ್ದಾರೆ.

ಯುವಾಸಮಾಜ ಮೇಂ ಆತ್ಮೀಯತಾ

(ಹಿಂದಿ) ಲೇಖಕರು ಮತ್ತು ಪ್ರಕಾಶಕರು: ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿ, ಹಿಂದೀ ಪ್ರಚಾರಕ, ಉಡುಪಿ. ಪುಟಗಳು: ೨೧. ಬೆಲೆ: ರೂ. ೦-೫೦ ಪೈಸೆ.

ಸುಂದರವಾದ ಬಾಲ್ಯಾವಸ್ಥೆಯನ್ನು ದಾಟಿ ಬಾಲಕಬಾಲಿಕೆಯರು ಯುವಾವಸ್ಥೆಗೆ ಪಾದಾರ್ಪಣ ಮಾಡುವ ಸಮಯ ಅವರಿಗೊಂದು ಸಂಕ್ರಾಂತಿಯ ಕಾಲ. ಈ ಸಮಯದಲ್ಲಿ ಅವರಿಡುವ ಹೆಜ್ಜೆ ಉಸುಬಿನ ಮೇಲಾದರೆ, ಭವಿಷ್ಯವೇ ಕುಸಿದು ಹೋದಂತೆ. ಆದುದರಿಂದ ಇಂತಹ ಕಾಲದಲ್ಲಿ ಉತ್ತಮರ ಒಡನಾಟಕ್ಕೆ ಬಿದ್ದು ತಮ್ಮ ಜೀವನವನ್ನು ಉಜ್ವಲಗೊಳಿಸುವತ್ತ ಯುವಕ ಯುವತಿಯರು ಅತೀವ ಲಕ್ಷ್ಯ ಹರಿಸಬೇಕು. ತಮ್ಮ ಒಡನಾಡಿಯನ್ನು, ಸಾಥಿಯನ್ನು ಆರಸುವಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಮಾತುಗಳನ್ನು ಶ್ರೀ ಕಿಣಿಯವರು ತಾನು ಓದಿ, ಕೇಳಿ, ಕಂಡು ಪಡೆದ ಅನುಭವದ ಮೂಸೆಯಿಂದ ನಮ್ಮ ಮುಂದಿಟ್ಟಿದ್ದಾರೆ ರಾಮ ಧೀರನಾದರೂ ಶಾಂತ ಪ್ರಕೃತಿಯವನು, ಲಕ್ಷ್ಮಣನು ಉಗ್ರ ಉದ್ಧತ ಪ್ರಕೃತಿಯವನು. ಆದರೂ ಇವರೊಳಗೆ ಎಂತಹ ಸ್ನೇಹವಿತ್ತು! ದುರ್ಯೋಧನ—ಕರ್ಣರ ಸ್ವಭಾವದಲ್ಲಿ ಅಜಗಜಾಂತರ! ಆದರೆ ಅವರ ಒಡನಾಟ ಹಾಲು ನೀರಿನಂತೆ! ಇಂತಹ ಒಡನಾಡಿಗಳನ್ನು ಆಯ್ದುಕೊಳ್ಳುವುದು ನಮ್ಮ ಯುವಾಸಮಾಜದ ಕರ್ತವ್ಯ. 'ಆತ್ಮೀಯತೆ'ಯ ಪವಿತ್ರ ಶಬ್ದದ ಅರ್ಥವನ್ನು ಅರಿತು ಅದರಂತೆ ನಡೆಯುವ ಸಾಥಿಗಳ ಆಯ್ಕೆ ಮಾಡಿಕೊಂಡರೆ, ಅಲ್ಲಿಗೆ ಯುವಕರ ಭವಿಷ್ಯ ಸೇರವಾದಂತೆ.

ಈಯೆಲ್ಲ ವಿಚಾರವನ್ನು ವಿವೇಚಿಸುವ ಈ ನಿಬಂಧದಲ್ಲಿನ ಪ್ರಯುಕ್ತ ಭಾಷೆ ಸರಳವಾಗಿದೆ, ಸುಂದರವಾಗಿದೆ. ಶೈಲಿಯಲ್ಲಿ ಕಸುವಿದೆ; ಓಟವಿದೆ. ಹಾಗೆಯೇ ಹಿಡಿತವೂ ಇದೆ. ಹಿಂದೀ ರಂಗದಲ್ಲಿ ಪಳಗಿದ ಶ್ರೀ ಕಿಣಿಯರು ನಮ್ಮ ಯುವಾ ಸಮಾಜಕ್ಕೊಂದು ದಿಗ್ದರ್ಶನ ಮಾಡಿದ್ದಾರೆ.

ಡಾ| ಮುದ್ದಣ್ಣರು ಇಂಗ್ಲಿಷಿನಲ್ಲಿ ಶ್ರೀ ಬಿ. ರಾಮಕೃಷ್ಣ ಆಚಾರ್ಯರು ಕನ್ನಡದಲ್ಲಿ ಸಮೀಕ್ಷಾತ್ಮಕವಾದ ಮಾತುಗಳನ್ನು ಬರೆದಿದ್ದಾರೆ. ಈ ಪುಸ್ತಕವು ಅತ್ಯಂತ ಉಪಯುಕ್ತವಾದುದರಿಂದ ಮತ್ತು ಇದರ ಉಳಿತಾಯದ ಮೊತ್ತವು ರಾಷ್ಟ್ರೀಯ ಸಂರಕ್ಷಣಾ ನಿಧಿಗೆ ಸಮರ್ಪಿತವಾಗುವುದರಿಂದ ಹಿಂದೀ ಬಲ್ಲವರು ಅವಶ್ಯ ಕೊಂಡುಕೊಂಡು ಓದಿ ವಿಚಾರಗ್ರಹಣ ಮಾಡಿಕೊಳ್ಳಬಹುದಾದ ಪುಸ್ತಕವಿದು. ಶ್ರೀ ಕಿಣಿಯವರು ಲೇಖನಿ ಸಾಮಾಜಿಕ ಸುವ್ಯವಸ್ಥೆಯತ್ತ ಹರಿಯತೊಡಗಿದುದು ಅಭಿನಂದನೀಯ. ಈ ಲಘು ಪ್ರಮಾಣದ ಗುರು ಗುಣದ ಪುಸ್ತಕಕ್ಕೆ ಹಾರ್ದಿಕ ಸ್ವಾಗತ.

—ಗೋರಾ.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

360 ಪುಟಗಳಿಗೂ ಮಿಕ್ಕಿದ
ಪಾಕೇಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಒಂದು ಪ್ರತಿ ಬೇಕಾದವರು ಅಂಚೆ ವೆಚ್ಚ 30 ನ. ಪೈಸೆ ಸೇರಿಸಿ ಬೇಕಾದ ಪುಸ್ತಕದ ಬೆಲೆಯನ್ನು ಮನಿಯಾರ್ಡರ್ ಮಾಡುವುದು.
ಹೆಚ್ಚಿನ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೫—೦ (1=50)
ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಶ್ರೀ ಸಾಯೀ ನೀಲಕಂಠೇಶ್ವರ ಪಂಚಕಮ್!

॥ ವಿ ॥

ಶ್ರೀ ರಣ್ನಾಕರ ಭಕ್ತವೃಂದ ಭಜಕಂ ಭಕ್ತಾದಿ ಸಂಸೇವಿತಂ
ಶ್ರೀಮಂ ತಂ ಬಲು ಶಾಂತ ಕಾಂತಿಮಯ ತಾಂವೇದಾಂತ ಪಾರಂಗತಂ
ಶ್ರೀ ವಿಶ್ವಾತ್ಮಕ ವಿಶ್ವಪ್ರೇಮಿಬಾಧಂ "ಶ್ರೀ ಸಾಯಿಬಾಬಾಂಕಿತಂ"
ಶ್ರೀ ಸಚ್ಛಾಂತಿಯುತಂ "ಪ್ರಶಾಂತಿ ನಿಲಯಾ" ವಾಸಂ ನಮೋ ಸಾಯಿ ರಾಮ್, ॥೧॥
ದ್ವೈತಾದ್ವೈತ ವಿಶಿಷ್ಟ ಭೇದರಹಿತಂ ಸದ್ಧರ್ಮ ಸಂಸ್ಥಾಪಕಂ
ಜ್ಯೋತಿಶ್ಶಾಸ್ತ್ರ ಧುರೀಣ ವೈದ್ಯ ಚಯದೊಳ್ ಧನ್ವಂತರೀ ರೂಪನುಂ
ಕರ್ಮ ನ್ಯಾಯುಸಿದಂ ಸುಕರ್ಮನಿರತಂ ವಾಗ್ಸಿದ್ಧಿಯೊಳ್ ಸಿದ್ಧನೈ
ಸ್ಪೃಶ್ಯಾ ಸ್ಪೃಶ್ಯ ವಿಭೇದ ಶೂನ್ಯನೆ ನಮೋ ಶ್ರೀ ಸತ್ಯಸಾಯೀಶ್ವರಾ ॥ ೨ ॥

॥ ವಿ ॥

ರನೇ ಮರ್ಕಟನಂತೆ ವರ್ತಿಸುವಙ್ಞಾನಜ್ಞಾನ ಸಂದೋಹದಿಂ
ರನೇ ಜ್ಞಾನದ ದೀಪ್ತಿಯಿಂ ಬೆಳಗುವಂದೇವೇಶನೋಲ್ ಸತ್ಯವೆಂ.
ರಿಯುಲ್ಪಿಕದ "ಪುಟ್ಟ ಪರ್ತಿ" ಯೊಳು ಶ್ರೀ ಸಾಯೀಶನಾಸ್ಥಾನದೊಳ್
ರನೇ ದೈವತವಾಗಿ ತೋರ್ಪನಹಹಾ! ಶ್ರೀ ನೀಲಕಂಠೇಶ್ವರಾ ॥ ೩ ॥

॥ ವಿ ॥

ನಿನ್ನಾದರ್ಶನ ಕಾಂಕ್ಷೆಯಿಂದ ಬರುವರ್ ಭಕ್ತಾದಿಗಳ್ ದೂರದಿಂ
ಇನ್ನಾದರ್ಶನ ಭಾಗ್ಯವಿಲ್ಲದ ಜನರ್ ನಿರ್ಭಾಗ್ಯರೋಲ್ ದುಃಖಿಪರ್
ಸನ್ಮಾರ್ಗಂ ಸ್ಥಿರಚಿತ್ತ ಶುದ್ಧ ಹೃದಯಂ ತಾನಾಂಗುಂ ಸೋಲನೈ
ನಿನ್ನಾದರ್ಶನ ಮೇನ ಮೋಘಮರಿಯೆಂ ಶ್ರೀ ನೀಲಕಂಠೇಶ್ವರಾ ॥ ೪ ॥
ಚ್ಚಿದ್ರೂಪ ಮಹಾತ್ಮ ಸಿದ್ಧಪುರುಷಂ ಭೋಗೀಶ ಯೋಗೀಶ್ವರಂ
ತ್ಯಾನಂದಮಯಂ ಸುಹಾಸ ಭರಿತಂ ಪ್ರೇಮಾಕರಂ ಸುಂದರಂ
ದೇವಂತಾನಿರಲಾರ" ನೆಂಬ ಜನರಾ ಮೂಢತ್ವಂಮಂ ನೀಗಿಸಲ್
ವಂ ಮಾನವ ರೂಪದಿಂದೆ ಮೆರೆವಂ ಶ್ರೀ ನೀಲಕಂಠೇಶ್ವರಾ ॥ ೫ ॥

ಕವಿ—ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

— ಕವನ ಕಿಡಿಗಳು —

ಬ್ಯಾಂಕ್

ಬ್ಯಾಂಕಿನಲ್ಲಿಡಿರಿ ಹಣ, ಇದು ಬಹಳ ಸುಲಭ ಕಣಾ
ನಿಮ್ಮ ಹಣ ಬಿಡದೆಲ್ಲಾ ಗಳಿಸುವುದು ಬಡ್ಡಿ
ಅಲ್ಲಿರುವ ಹಣಕಿಹಿತಾ ಇಲ್ಲ ಕಳ್ಳರ ಭಯವು
ಇರುವ ಭಯ ಬ್ಯಾಂಕಿನದು ಮಾತ್ರ,—ನೋಡಿ!

ತಾಲೂಕು ಬೋರ್ಡು ಸ್ಕೂಲು

ನಮ್ಮದಿದು ತಾಲೂಕು ಬೋರ್ಡು ಹೈಸ್ಕೂಲು
ಮುಂದ ಟೇಬಲ್ ಕುರ್ಚಿ ಡೆಸ್ಕು ಬೆಂಚ್ ಸ್ಟೂಲು
ಇವೇ ಆಸ್ತಿ—ಮತ್ತೆ ಸ್ಟ್ಯಾಂಪ್ ಗ್ರಾಂಟು ಏನೇನೂ
ಕೇಳಲೇಬೇಡಿ—ಅದಕಿಲ್ಲ ಕಾನೂನು.

ಕೋರ್ಟು

ಕೋರ್ಟುಕಟ್ಟೆಯ ಇಳಿದು ಬರುವಾಗ ಮನೆಯಲ್ಲಿ
ಏನುಂಟು?—ಬರೆ ಗಾಳಿ ಬೆಳಕು; ಇಷ್ಟೇ!
ಮತ್ತೆಲ್ಲ ವಸ್ತುಗಳೂ ಮಾರ್ವಾಡಿ ಅಂಗಡಿಗೆ—
ಹೋಗಿತ್ತು; ಮಾರಾಟವಾಗಿತ್ತು ಆಸ್ತಿ.

ಆಸ್ಪತ್ರೆ

ಆಸ್ಪತ್ರೆ ಕಟ್ಟಡಕೆ ಕಲ್ಲು ಹಾಕಲು ರಾಜ್ಯ—
ದಾರೋಗ್ಯ ಮಂತ್ರಿಗಳು ಒಪ್ಪಿರುವರಂತೆ
ಒಳ್ಳೆ ಕೆಲಸಕೆ ಕಲ್ಲು ಹಾಕುವುದೇ ಮಂತ್ರಿಗಳ .
ಹುಟ್ಟುಗುಣ!—ಮತ್ತವರಿಗೇನು ಚಿಂತೆ?

ಆಧುನಿಕ ವಿವಾಹ

ಆಧುನಿಕ ಕಾಲವಿದು, ಹೆಣ್ಣೊಂದು ಗಂಡೊಂದು
ಇದ್ದರಾಯಿತು ಮದುವೆ—ಟುರ್ ಪೋಸ್ಟಿನಲ್ಲಿ (?)
ವೈದಿಕರು ಬೇಕಿಲ್ಲ—ಕುಲಗೋತ್ರ ಕೇಳದಿರಿ
ಡೆಟ್ರೋಫುಬರ್ತಿರುವುದಾಫೀಸಿನಲ್ಲಿ

ತಾಲೂಕು ಬೋರ್ಡು ಕ್ಲಾರ್ಕು

ನಾನು ತಾಲೂಕು ಬೋರ್ಡಾಫೀಸಿನಲಿ ಕ್ಲಾರ್ಕು
ಎಂಭತ್ತು ಪ್ಲಸ್ ಡಿ. ಎ. ಹದಿನೈದು ಮಾತ್ರ
ನನ್ನ ಸಂಬಳ; ಮತ್ತೆ ಆಗಾಗ ಆಷ್ಟಿಷ್ಟು
ಶಾಬಾಯಾಲವಹಾಯ, ಅನೆ ನನ್ನ ಗಾತ್ರ!

ತಾಲೂಕು ಬೋರ್ಡು ಆಡಳಿತ

ನಮ್ಮ ತಾಲೂಕು ಬೋರ್ಡಾಫೀಸು ಗೋಡೆ,
ಮಾಡು ಟೇಬಲ್ ಕುರ್ಚಿಗಳೂ ಕೈಯ್ಯ ನೀಡೆ—
ಆದೇತು ಕಿಸೆ, ಖಾಲಿ—ಕೆಲಸ? — ಪೆಂಡಿಂಗೇ,
ಕ್ಲಾರ್ಕು ಹೊಣೆಯೇ ಅದಕೆ? ಅಲ್ಲ ಕಣೋ ಪೆಂಗೇ!

—ಶ್ರೀ ರಂಗ ಐತಾಳ, ಹಾರ್ಯಾಡಿ.

ತಾಯಿ

ಮಾನವ ರೂಪದ ದೇವರು !

ದೇವರ ಪ್ರಥಮ ದರ್ಶನ ಬೇಕೆಂದರೆ ಮಾನವನಿಗೆ ದೊರೆಯುವ ಪ್ರಥಮ ದೇವರೇ ತಾಯಿ. ಅದರಿಂದಲೇ ಪ್ರಪ್ರಥಮವಾಗಿ "ಮಾತೃ ದೇವೋಭವ" ಎನ್ನುತ್ತಿದೆ ಶೃತಿ. ವಾತ್ಸಲ್ಯ ಮೂರ್ತಿ ಪರಮಾತ್ಮನಲ್ಲವೇ? ಆ ವಾತ್ಸಲ್ಯದ ಸಾಕಾರ ಮಾನವ ಮೂರ್ತಿಯೇ ತಾಯಿ! ಈ "ತಾಯಿ" ಕಲ್ಪನೆಯ ವ್ಯಾಪ್ತಿಯನ್ನೇ ಬೆಳೆಸಿ "ವಂದೇ ಮಾತರಂ" ಎಂದು ಸಮಗ್ರ ವಿಶ್ವವನ್ನು ನೋಡುತ್ತೇವೆ. ಇದುವೇ ಜೀವರೂಪಿ ಮಾನವನ ವಿಶ್ವರೂಪದರ್ಶನ.

ಜಗತ್ತಿನಲ್ಲಿ ಕಣ್ತೆರೆಯುವ ಜೀವಿಯ ಮುಂದೆ ನಿಲ್ಲುವ ಮೂರ್ತಿ ಪರಮಾತ್ಮನ ಉಚ್ಚ ಪ್ರತಿಮೆ ತಾಯಿ! ತಾಯಿಯ ಪೂಜೆಯೇ ಪರಮಾತ್ಮ ಸಾಧನೆ ಎನ್ನುವದನ್ನೇ "ಮಾತೃ ದೇವೋಭವ" ಹೇಳುತ್ತದೆ. ವಾತ್ಸಲ್ಯ ಪರಮಾತ್ಮನ ದಿವ್ಯಗುಣವಾದರೆ ತಾಯಿ ಆ ಗುಣದ ಸಾಕಾರ ಮೂರ್ತಿ. "ಒಂದೇ ಕಾಲಕ್ಕೆ ಎಲ್ಲೆಡೆಯಲ್ಲೂ ಕಾಣಿಸಿಕೊಳ್ಳುವ ಬಯಕೆಯೇ ಭಗವಂತನನ್ನು ಮಾತೆಯ ರೂಪು ತಳೆಯುವಂತೆ ಸಗಿದೆ" ಎಂಬ ತಿಳಿದವರ ನುಡಿ ಹುಸಿ ನುಡಿಯಲ್ಲ.

ತಾಯಿಯ ಪ್ರೀತಿಗೆ ಭಗವಂತನ ಮಮತೆಯಂತೆ ಪ್ರತಿಫಲದ ಆಕಾಂಕ್ಷೆಯಿಲ್ಲ. ಇಳಿವಯಸ್ಸಿನಲ್ಲಿ ತನ್ನನ್ನು ಪೋಷಿಸಲೆಂದು ಯಾವ ತಾಯಿಯೂ ತನ್ನ ಮಗುವನ್ನು ಪ್ರೀತಿಸುವದಿಲ್ಲ. ಆಕೆ ಮಗುವನ್ನು ಹೆತ್ತಳು. ಬೇನೆಯನ್ನನುಭವಿಸಿದಳು. ಆ ಬೇನೆಯೇ ಪ್ರೇಮದ ರೂಪು ತಳೆಯಿತು. ಆಕೆ ಮಮತಾವತ್ಸಲೆಯಾದಳು. ಆಗ ಹುಟ್ಟಿದ ಮಗು ಭಗವಂತನ ಸುಂದರ ರಚನೆ. ಪ್ರಪಂಚದ ಸೋಂಕು ತಗಲದ ದೈವೀ ಕೃತಿ ಅದು. ಅದನ್ನೆತ್ತಿ ಕುಳಿತುಕೊಂಡ ತಾಯಿಯ ಚಿತ್ರ ಈ ನಶ್ವರ ಪ್ರಪಂಚದ ಜೀವನದಲ್ಲಿ ಪ್ರೇಮ ಸಿಂಚಿತ ಸರ್ವ ಸುಂದರ ಚಿತ್ರ.

ಮಾತೆಯ ಪ್ರೇಮವೇ ಜಗತ್ತಿನ ಮಹಾ ರಕ್ಷಾ ಕವಚ. ಆ ಪ್ರೇಮದಿಂದಲೇ ಜಗತ್ತು ಬಾಳಿ ಬದುಕಿದೆ. ಭಗವಂತನ ಸಾಕಾರ ಮೂರ್ತಿಯಾದ ಪ್ರೇಮಮಯಿ ಮಾತೆಯೇ ಅರಿವುಳ್ಳವರ ದೈವ. ಆ ದೈವವನ್ನು ಕಂಡುಕೊಂಡವರಿಗೆ ಬೇರೆ ದೇವರ ಪೂಜೆ, ಪ್ರಾರ್ಥನೆ, ಉಪಾಸನೆ ಬೇಕಿಲ್ಲ. 'ಮಾತೆ' ಶಬ್ದವೇ ಪುನೀತವಾದುದು; ಅದರ ಉಚ್ಚಾರಣೆ ಯಾವ ವೇದ, ಮಂತ್ರ, ಬೀಜಾಕ್ಷರಗಳಿಗಿಂತಲೂ ಹಿರಿದು.

—ಕೆ. ಪಿ. ತಿಮ್ಮಯ್ಯ, ನೆಲಜಿ

ಅಮೃತ ಬಿಂದು

ಅನೀತಿಯ ಪ್ರತಿಫಲ ನಮ್ಮ ಸುಖದ ಕಾಲದಲ್ಲೂ ಚುಚ್ಚುತ್ತಿರುತ್ತದೆ. ನೀತಿಯ ಬಲ ಕಷ್ಟದ ಕಾಲದಲ್ಲೂ ಸಮಾಧಾನವೀಯುತ್ತದೆ.

o o o

ನಾವು ಸಾಯುವ ಮುನ್ನ ನಮ್ಮ ದುರ್ಗುಣಗಳು ಸತ್ತರೇನೇ ನಮಗೆ ಸದ್ಗತಿ.

o o o

ಬಡತನ ಮನುಷ್ಯರನ್ನು ಹೇಡಿಯಾಗಿಸಿದರೆ ಅಹಂಕಾರ ತಿಳಿಗೇಡಿಯಾಗಿಸುತ್ತದೆ. ಜಿಪುಣತೆ ಆತನನ್ನು ಸಮಾಜಬಾಹಿರನಾಗಿಸಿದರೆ ಅತಿಯಾಸೆ ಭಯಂಕರನಾಗಿಸುತ್ತದೆ.

o o o

ಬೇರು ಕತ್ತರಿಸಿದ ಗಿಡದಲ್ಲಿಯ ಹೂವು ಬಾಡಿ ಹೋಗುವಂತೆ ಬಡತನದಲ್ಲಿ ಮುಳುಗಿದ ಜೀವ ಮುದುಡಿಕೊಳ್ಳುತ್ತದೆ.

o o o

ಎಷ್ಟು ಪರಿಮಾಣದಲ್ಲಿ ಒಬ್ಬನಿಗೆ ಜ್ಞಾನದ ಅಗತ್ಯವಿದೆಯೋ ಅಷ್ಟೇ ಪರಿಮಾಣದಲ್ಲಿ ಆತನಲ್ಲಿ ಅಹಂಭಾವವಿರುತ್ತದೆ. ಜ್ಞಾನ ತುಂಬಿದಾಗ ಅಹಂಕಾರ ಇಳಿಯುತ್ತದೆ.

o o o

ಎಷ್ಟೇ ಗಾತ್ರದಲ್ಲಿ, ಎಷ್ಟೇ ಶಕ್ತಿಯಲ್ಲಿ, ಎಷ್ಟೇ ಅಧಿಕಾರದಲ್ಲಿ ಬೆಳೆದರೂ ಅಸತ್ಯ ಸತ್ಯವಾಗಲಾರದು.

o o o

ಚಿನ್ನದ ಅತಿ ಚಿಕ್ಕ ಚೂರೂ ಕೂಡ ಹೇಗೆ ಬೆಲೆಯುಳ್ಳದ್ದಾದುದೋ ಅದೇ ರೀತಿ ಸಮಯದ ಪ್ರತಿ ಸೆಕೆಂಡೂ ಕೂಡ ಅಮೂಲ್ಯ.

o o o

ಅಮರತ್ವವನ್ನು ಅಶಿಸುವವನು ಸಮಯದ ಸದುಪಯೋಗ ಮಾಡಬೇಕು. ಗತಕಾಲ ಬರುವಂತಿಲ್ಲ; ಭವಿಷ್ಯ ಅನಿಶ್ಚಿತ. ವರ್ತಮಾನವೇ ನಮ್ಮದು. ಇಂದಿನ ಒಂದು ಗಂಟೆ ನಾಳೆಯ ಒಂಭತ್ತು ಗಂಟೆಗೆ ಸಮಾನ!

o o o

ಜೀವನವನ್ನು ಪ್ರೀತಿಸುವವನು ಸಮಯದ ಸೂರೆ ಮಾಡಬಾರದು. ಏಕೆಂದರೆ ಸಮುಪಯೋಗವಾದ ಸಮಯವೇ ಜೀವನ.

ಉಡುಪಿ ಡಿ. ಮು. ಕೋರ್ಟಿನಲ್ಲಿ

R. I. A. 41/64, O. S. 482/51.

T. ದೇಜು ಸೆಟ್ಟಿ —ಅರ್ಜಿದಾರರು.

ಮತ್ತು

ಸೀತು ಸೆಟ್ಟಿ ಕೂಡಾ —ಎದುರಿರು.

ಇವರೊಳಗೆ

1ನೇ ಎದುರು ಸೀತು ಸೆಟ್ಟಿ— ದೋಣಿ ಯಾನೆಸೋಮು ಸೆಟ್ಟಿ ಮಗಳು ಮಂಗಳೂರು ತಾಲ್ಲೂಕು ತಾಳಿಪಾಡಿ ಗ್ರಾಮದಲ್ಲಿರುವುದು, P. O. ಕಿನ್ನಿಗೋಳಿ,

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅರ್ಜಿಯಲ್ಲಿ ಅರ್ಜಿದಾರರ ಹಕ್ಕಿನ ಅನ್ವೇಜು ಮೇಲ್ಕಂಡ ಕೋರ್ಟು O S. 482/51ರ creditಗೆ ಡಿಪೋಜಿಟು ಆಗಿ ಇರುವ ಅಷ್ಟೇಜನ್ನು ವಸೂಲು ಕೇಳಿ ವಗೈರೆ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 21-7-64ಕ್ಕೆ ನಿಮ್ಮ ಉದಾಹರಣ ಬಗ್ಗೆ ಇರುವುದರಿಂದ ಆ ದಿವಸ ಮೇಲ್ಕಂಡ ಕೋರ್ಟಿಗೆ ಬೆಳಿಗೆ 11 ಗಂಟೆಗೆ ಹಾಜರಾಗಿ ನಿಮ್ಮ ಉದಾಹರಣೆ ಇದ್ದರೆ ಹಾಜರು ಪಡಿಸತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿ ಫೈಸ್ಲು ಮಾಡೋಣಾದೀತು.

(ಕೋರ್ಟು ಹುಕುಂ ಪ್ರಕಾರ)

(Sd) Shivaji Shetty Perody
Advocate for Petitioner.

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ನವಯುಗ ಪ್ರೆಸ್, ಉಡುಪಿ.

ಅರಬಿ ಸಮುದ್ರದ ರಾಣಿ

ಕೊಚಿನ್ ಬಂದರು

ಪ್ರಗತಿಯ ಸಿಂಹಾವಲೋಕನ

ಕೊಚಿನ್ ಬಂದರು ಭಾರತದ ಆರು ದೊಡ್ಡ ಬಂದರಗಳಲ್ಲಿ ಒಂದಾಗಿದ್ದು ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ. ಜಲಮಾರ್ಗ, ರೈಲುಮಾರ್ಗ, ಒಳನಾಡಿನ ಜಲಸಾರಿಗೆ, ವಿಮಾನಸಾರಿಗೆ ಮತ್ತು ರಸ್ತೆಗಳೊಂದಿಗೆ ನೇರವಾದ ಸಂಪರ್ಕವುಳ್ಳ ಬಂದರು ಇದೊಂದೇ ಆಗಿದೆ. ಇಡೀ ವರ್ಷವೆಲ್ಲ ಬಂದರಿನಲ್ಲಿ ಹಡಗುಗಳನ್ನು ಲಂಗರು ಹಾಕಿ ನಿಲ್ಲಿಸುವ ವ್ಯವಸ್ಥೆಯಿದೆ. ಮಳೆಗಾಲದಲ್ಲಿ ಪ್ರತಿಕೂಲ ಹವಾಮಾನ ವಿದ್ದಾಗಲೂ ಸಹ ಬಂದರು ಆಳವಾದ ಜಲ ಸಾರಿಗೆಗೆ ಯುಕ್ತವಾಗಿದೆ.

ಸದರ್ನ್ ರೈಲ್ವೆಯ ಬ್ರಾಡ್‌ಗೇಜ್ ಮತ್ತು ಮೀಟರ್ ಗೇಜ್ ರೈಲು ಮಾರ್ಗಗಳು ಈ ಬಂದರಿಗೆ ಸಂಪರ್ಕ ಕಲ್ಪಿಸುತ್ತವೆ. ಹಿನ್ನೀರಿನಲ್ಲಿ ಸರಕು ಸಾಮಗ್ರಿಗಳ ಸಾಗಾಣಿಕೆಗಾಗಿ ಒಳನಾಡಿನಲ್ಲಿ ಉತ್ತಮ ಜಲ ಸಾರಿಗೆ ಸೌಲಭ್ಯಗಳಿವೆ. ಬಂದರು ಪ್ರದೇಶದಲ್ಲಿ ಒಂದು ವಿಮಾನ ನಿಲ್ದಾಣವೂ ಇದೆ. ಈ ವಿಮಾನ ನಿಲ್ದಾಣವು ಬೆಂಗಳೂರು, ಮುಂಬಯಿ, ಮದರಾಸು ನಗರಗಳೊಂದಿಗೆ ಸಂಪರ್ಕ ಕಲ್ಪಿಸಿದೆ. ೪೭ನೆಯ ರಾಷ್ಟ್ರೀಯ ಹೆದ್ದಾರಿಯೂ ವಿಲಿಂಗ್ಡನ್ ದ್ವೀಪದ (ಕೊಚಿನ್ ಬಂದರು) ಮೂಲಕ ಹಾದು ಹೋಗುತ್ತದೆ.

ಬಂದರು ೧೯೬೧ರಲ್ಲಿ ಒಟ್ಟು ೧,೫೫೦,೪೪೭ ಟನ್‌ಗಳಷ್ಟು ಆಮದು—ರಫ್ತು ವಾಣಿಜ್ಯ ಕೈಗೊಂಡಿತ್ತು. ೧೯೬೨-೬೩ರಲ್ಲಿ ಈ ವಾಣಿಜ್ಯವು ೨,೨೫೪,೮೫೧ ಟನ್‌ಗಳಷ್ಟಿತ್ತು. ಈ ಅವಧಿಯಲ್ಲಿ ಸಾಗರದಲ್ಲಿದ್ದ ನೌಕೆಗಳನ್ನುಳಿದು ಸುಮಾರು ೪೪.೮೦ ಲಕ್ಷ ಟನ್ ಪ್ರಮಾಣದ ೧೩೩೧ ನೌಕೆಗಳು ಬಂದರನ್ನು ಪ್ರವೇಶಿಸಿದ್ದುವು. ಇದರ ಹಿಂದಿನ ವರ್ಷ ೪೩-೧೦ ಟನ್ ಪ್ರಮಾಣದ ೧೩೮೨ ನೌಕೆಗಳು ಬಂದರನ್ನು ಪ್ರವೇಶಿಸಿದ್ದುವು.

ಸುದೀರ್ಘ ಇತಿಹಾಸ

ಯುರೋಪಿನಿಂದ ಪೂರ್ವ ರಾಷ್ಟ್ರಗಳಿಗೆ ಹೋಗುವ ನೇರ ಜಲಮಾರ್ಗದಲ್ಲಿರುವ ಕೊಚಿನ್ ಬಂದರು ಅರಬ್ಬಿ ಸಮುದ್ರದ ರಾಣಿ ಎಂದೂ ಪ್ರಸಿದ್ಧವಾಗಿದೆ. ಈ ಬಂದರಿನ ಇತಿಹಾಸ ಕ್ರಿಸ್ತ ಶಕಕ್ಕೂ ಮೊದಲೇ ಆರಂಭವಾಗುತ್ತದೆ. ಅನೇಕ ಶತಮಾನಗಳ ವರೆಗೂ ಈ ಬಂದರು ಪೂರ್ವ ರಾಷ್ಟ್ರಗಳಿಗೆ ಹೋಗಲು ಹೊಸ ಜಲಮಾರ್ಗ ಶೋಧಿಸುವಲ್ಲಿ ನಿರತವಾಗಿದ್ದ ಯುರೋಪಿನ ಅನೇಕ ರಾಷ್ಟ್ರಗಳಿಗೆ ಒಂದು ಆಕರ್ಷಣಾ ಕೇಂದ್ರವಾಗಿತ್ತು. ಯುರೋಪಿಯನ್ನರು ಭಾರತದಲ್ಲಿ ಮೊತ್ತಮೊದಲು ಪದಾರ್ಪಣ ಮಾಡಿದ ಸ್ಥಳವೂ ಇಲ್ಲಿಯೇ ಇದೆ.

ಬಂದರಿನ ಸಮೀಪದಲ್ಲಿಯೇ ಬಂಡೆಯಂತೆ ಎತ್ತರವಾದ ಮರಳು ದಿಣ್ಣೆಯಿತ್ತು. ಈ ಮರಳು ದಿಣ್ಣೆಯು ನೌಕೆಗಳು ಬಂದರನ್ನು ಪ್ರವೇಶಿಸುವ ಮಾರ್ಗದಲ್ಲಿದ್ದು ಒಂದು ಆತಂಕವಾಗಿ ಪರಿಣಮಿಸಿತ್ತು. ಚಿಕ್ಕ ಪುಟ್ಟ ದೋಣಿಗಳು ಸಮು[illegible]

ಪೂರೈಸುತ್ತಿದ್ದವು. ಮತ್ತು ಆಮದು ಸರಕುಗಳನ್ನು ನೌಕೆಗಳಿಂದ ಬಂದರಿಗೆ ತರುತ್ತಿದ್ದವು. ಆಧುನಿಕ ನೌಕೆಗಳು ಬಂದರನ್ನು ಪ್ರವೇಶಿಸಲು ಅಗತ್ಯವಾದ ಸೌಲಭ್ಯಗಳನ್ನು ಏರ್ಪಡಿಸುವ ಬಗ್ಗೆ ಕ್ರಮಕೈಗೊಳ್ಳುವುದು ಅಗತ್ಯವಾಯಿತು. ಎಂಜಿನಿಯರರು ಅನೇಕ ದಶಕಗಳವರೆಗೂ ಈ ಪ್ರಶ್ನೆಯನ್ನು ಕುರಿತು ವಿಚಾರ-ವಿಮರ್ಶೆ ನಡೆಸಿದರು. ಆದರೂ ಸಮಸ್ಯೆಗೆ ಒಂದು ಸರ್ವಸಮ್ಮತವಾದ ಪರಿಹಾರ ಕಂಡು ಬರಲಿಲ್ಲ. ೧೯೨೦ರಲ್ಲಿ ಅನೇಕ ವರ್ಷಗಳಿಂದಲೂ ಒಂದು ಕನಸಾಗಿದ್ದ ಕಾರ್ಯ ಯೋಜನೆ ನನಸಾಗುವ ಚಿಹ್ನೆಗಳು ಕಂಡು ಬಂದುವು. ಬಂದರಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮದರಾಸ್ ಸರ್ಕಾರವು ಆ ವರ್ಷ ಸಣ್ಣ ಪ್ರಮಾಣದಲ್ಲಿ ಕಾರ್ಯ ಕೈಗೊಂಡು ಗುರಿ ಸಾಧನೆಗೆ ಪೂರ್ವಪೀಠಿಕೆ ಹಾಕಿತು.

೧೯೨೮ರಲ್ಲಿ ನೌಕೆಗಳು ಬಂದರಿನವರೆಗೂ ಬರಲು ಸೌಲಭ್ಯ ಕಲ್ಪಿಸುವುದಕ್ಕಾಗಿ ಸಮುದ್ರದ ತಳದಲ್ಲಿದ್ದ ಮರಳಿನ ಗೋಡೆಯನ್ನು ಭೇದಿಸಿ ೪೫೦ ಅಡಿ ವಿಸ್ತೀರ್ಣವಾದ ಮತ್ತು ೩½ ಮೈಲು ಉದ್ದವಾದ ಕಾಲುವೆಯೊಂದನ್ನು ನಿರ್ಮಿಸಲಾಯಿತು. ಬಂದರಿನ ಮುಖ್ಯ ಮತ್ತು ಆಳವಾದ ಸಾಗರದ ನಡುವೆ ಸಂಪರ್ಕವೇರ್ಪಟ್ಟಿತು. ೧೯೨೮—೩೦ರಲ್ಲಿ ೩೦ ಅಡಿ ಉದ್ದವಾದ ನೌಕೆಗಳು ಈ ಬಂದರನ್ನು ಪ್ರವೇಶಿಸ ತೊಡಗಿದವು.

ಆರು ವರ್ಷಗಳ ನಂತರ ಕೊಚಿನ್ ಬಂದರು ಒಂದು ದೊಡ್ಡ ಬಂದರೆಂದು ಘೋಷಿಸಲಾಯಿತು. ಮುಂದೆ ಮೂರು ವರ್ಷಗಳಲ್ಲಿಯೇ ಪ್ರಥಮ ದರ್ಜೆ ಬಂದರಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಲಾಯಿತು. ೧೯೩೯ರ ಜೂನ್ ೨ರಂದು ಹೊಸದಾಗಿ ನಿರ್ಮಾಣಗೊಂಡ ಬಂದರು ಕಟ್ಟೆಗೆ ಮೊತ್ತ ಮೊದಲನೆಯ ನೌಕೆ ಬಂದಿತು.

ಬಂದರಿನ ಅಭಿವೃದ್ಧಿ ಕಾರ್ಯ ನಿರಂತರವಾಗಿ ಮುಂದುವರಿಯಿತು. ಮೊದಲನೆಯ ಪಂಚವಾರ್ಷಿಕ ಯೋಜನೆ ಆರಂಭವಾದಾಗ ಬಂದರಿನಲ್ಲಿ ಆಳವಾದ ನೀರಿನ ಒಂದು ಬಂದರು ಕಟ್ಟೆಯಿತ್ತು. ಬಂದರು ಕಟ್ಟೆಯು ೨೨೦೦ ಅಡಿ ಉದ್ದವಾದುದಾಗಿತ್ತು. ಸುಮಾರು ೪೫೦ ಅಡಿ ಉದ್ದವಾದ ನಾಲ್ಕು ನೌಕೆಗಳು ಏಕ ಕಾಲಕ್ಕೆ ನಿಲ್ಲುವಷ್ಟು ಸ್ಥಳಾವಕಾಶವಾಗಿತ್ತು.

ಮಹತ್ವದ ಕಾರ್ಯ

ಎರ್ನಾಕುಲಂಗೆ ಎದುರಾಗಿ ವಿಲಿಂಗ್ಡನ್ ದ್ವೀಪದ ಪೂರ್ವ ಬದಿಗೆ ನಾಲ್ಕು ಹೊಸ ಬಂದರು ಕಟ್ಟೆಗಳನ್ನು ನಿರ್ಮಿಸಲು ೨೨೪ ಲಕ್ಷ ರೂ.ಗಳನ್ನು ಒದಗಿಸಿದುದು ಪ್ರಥಮ ಮತ್ತು ದ್ವಿತೀಯ ಯೋಜನೆಯ ಅವಧಿಯಲ್ಲಿ ಕೈಗೊಂಡ ಮಹತ್ವದ ಕಾರ್ಯವಾಗಿದೆ. ಈ ಹೊಸ ಬಂದರು ಕಟ್ಟೆಯನ್ನು "ಎರ್ನಾಕುಲಂ ಬಂದರು ಕಟ್ಟೆ" ಎಂದು ಕರೆಯಲಾಗುತ್ತಿದ್ದು ಅದು ೨೨೦೧ ಅಡಿ ಉದ್ದವಿದೆ.

ಹೊಸ ಬಂದರು ಕಟ್ಟೆಯಲ್ಲಿ ಕ್ರೇನ್, ಸರಕುಗಳನ್ನು ಸ್ಥಳಾಂತರಿಸಲು ಹಾಗೂ ಕೂಡಿಡಲು ಅಗತ್ಯವಾದ ದಾಸ್ತಾನು ಮಳಿಗೆಗಳು, ರೈಲುಮಾರ್ಗಗಳಿಂದ ಸುಸಜ್ಜಿತವಾಗಿವೆ. ಬಂದರಿನಲ್ಲಿ ೧೦ ಟನ್ ಭಾರ ಎತ್ತುವ ಸಾಮರ್ಥ್ಯವುಳ್ಳ ೮ ಸಂಚಾರಿ ಕ್ರೇನ್‌ಗಳಿವೆ, ನಾಲ್ಕು ಟ್ರಾಕ್ಟರ್‌ಗಳೂ ಇವೆ.

ಬದಲಾದ ರೂಪ

ವಿಲಿಂಗ್ಡನ್ ದ್ವೀಪದ ಭೂಮಿಯ ಮೇಲ್ಮೈ ಸ್ವರೂಪದ ಬಗ್ಗೆ ಹೇಳಬೇಕಾದರೆ, ಈ ದ್ವೀಪವು ೧೯೫೧ರ ವರೆಗೂ ಹುಲ್ಲು ಗಿಡಕಂಟಿಗಳಿಂದ ತುಂಬಿತ್ತು. ಆಗ, ಬಂದರು ಪ್ರದೇಶದಲ್ಲಿ ಆಡಳಿತ ವಿಭಾಗದ ಕಚೇರಿಗಳು, ಕೆಲವು ಅಧಿಕಾರಿಗಳ ವಸತಿಗಳು, ಮಲಬಾರ್ ಹೋಟೆಲ್, ವರ್ಕ್‌ಷಾಪ್ (ಕಾರ್ಯಾಗಾರ) ಮತ್ತು ರೈಲ್ವೆ ಸ್ಟೇಷನ್ ಇವುಗಳನ್ನು ಬಿಟ್ಟರೆ ಬೇರೇನೂ ಇರಲಿಲ್ಲ. ಬಂದರು ಅಂದಿನಿಂದ ಈವರೆಗೆ ಗಣನೀಯವಾಗಿ ಬೆಳೆದಿದೆ.

ನಗರದಲ್ಲಿ ಇಂದು ನೀಟಾದ ರಸ್ತೆಗಳು, ಅಚ್ಚುಕಟ್ಟಾದ ವಸತಿಗೃಹಗಳು, ಸುಂಕದ ಮತ್ತು ಇನ್ನಿತರ ಸರ್ಕಾರಿ ಕಚೇರಿಗಳು, ಖಾಸಗೀ ಸಂಸ್ಥೆಗಳ ದಾಸ್ತಾನು ಮಳಿಗೆಗಳು, ಹೋಟೇಲ್‌ಗಳು, ಉಪವನಗಳು, ಶಾಲೆ ಹಾಗೂ ಆಸ್ಪತ್ರೆಗಳೂ ಇವೆ. ಬಂದರಿನ ಅಧಿಕಾರಿಗಳು, ದ್ವೀಪದ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ, ಮತ್ತು ವಿದ್ಯುಚ್ಛಕ್ತಿ ಸರಬರಾಜು ವ್ಯವಸ್ಥೆಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ.

ದಾಸ್ತಾನು ಸೌಲಭ್ಯ

ವಿಲಿಂಗ್ಡನ್ ದ್ವೀಪದಲ್ಲಿ ದಾಸ್ತಾನು ಮಳಿಗೆ ಸೌಲಭ್ಯಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನಿಸಿ ಬಂದರು ಪ್ರದೇಶದಲ್ಲಿ ಮತ್ತೆ ಎರಡು ದಾಸ್ತಾನು ಮಳಿಗೆಗಳನ್ನು ನಿರ್ಮಿಸಲಾಗಿವೆ. ಈ ಮಳಿಗೆಗಳ ನಿರ್ಮಾಣಕ್ಕೆ ೭.೮ ಲಕ್ಷ ರೂ. ಗಳ ವೆಚ್ಚ ತಗಲಿತು. ಮೊದಲನೆ ಮಳಿಗೆಯನ್ನು ೧೯೬೧ರಲ್ಲೂ ಎರಡನೆಯ ಮಳಿಗೆಯನ್ನು ೧೯೬೨ರಲ್ಲೂ ನಿರ್ಮಿಸಲಾಯಿತು.

ಆಳ್ವೆ ಮತ್ತು ಸುತ್ತು ಮುತ್ತಲಿನ ಪ್ರದೇಶದಲ್ಲಿ ಹೊಸ ಕೈಗಾರಿಕೆಗಳು ಆರಂಭವಾಗಿದ್ದುದರಿಂದ ಮತ್ತು ಕೊಚಿನ್‌ನಲ್ಲಿ ದ್ವಿತೀಯ ಹಡಗು ನಿರ್ಮಾಣ ಕೇಂದ್ರವನ್ನೂ ನಾಲ್ಕನೆಯ ತೈಲ ಶುದ್ಧೀಕರಣ ಕೇಂದ್ರವನ್ನೂ ಸ್ಥಾಪಿಸುವ ಯೋಜನೆಯಿರುವುದರಿಂದ ಬಂದರಿನ ವಾಣಿಜ್ಯ ನಿರಂತರ ಅಭಿವೃದ್ಧಿ ಹೊಂದುವುದು ಖಚಿತವಾಗಿದೆ. ಬಂದರು ಈಗಾಗಲೇ ಗಣನೀಯ ಪ್ರಗತಿ ಸಾಧಿಸುವುದೆಂದೂ ನಿರೀಕ್ಷಿಸಲಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ: ರೂ.ಎರಡೂವರೆ(ಟ.ಖ.ಪ್ರತ್ಯೇಕ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಮನೆಯಿಂಪಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹಿರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಪ್ರಾಣಿ ಶಾಸ್ತ್ರ

ಕಡಲದೈತ್ಯ ತಿಮಿಂಗಿಲ

ಬರೆದವರು: ಶ್ರೀ ಎಸ್. ಚನ್ನಪ್ಪ, ಅವತಿ.

ಭೂಮಿಯ ಮೇಲೆ ಜೀವಿಸಿರುವ ದೊಡ್ಡ ಸಸ್ತನಿ ಪ್ರಾಣಿಯೆಂದರೆ ಆನೆ, ಆದರೆ ಆನೆಗಿಂತಲೂ ಐವತ್ತರಷ್ಟು ಹೆಚ್ಚಾಗಿರುವ, ಪ್ರಪಂಚದಲ್ಲಿ ಜೀವಿಸಿರುವ ಪ್ರಾಣಿಗಳಲ್ಲೆಲ್ಲಾ ದೊಡ್ಡ ಪ್ರಾಣಿ ಎಂದರೆ "ತಿಮಿಂಗಿಲ". ಸರ್ವ ಸಾಮಾನ್ಯವಾಗಿ ಇದು ೧೦೦ ಅಡಿ ಉದ್ದವೂ ೧೫೦ ಟನ್ ತೂಕವುಳ್ಳದ್ದಾಗಿಯೂ ಇದೆ ಎಂದರೆ ಆಶ್ಚರ್ಯವಾಗ ಬಹುದು. ಲಕ್ಷಾನುವರ್ಷಗಳಿಂದಲೂ ತಿಮಿಂಗಲ ಭೂಮಿಯ ಮೇಲೆ ವಾಸಿಸುತ್ತಿತ್ತು-ಎಂದು ಕೆಲವು ಆಧಾರಗಳಿಂದ ಖಚಿತವಾಗಿದೆ. ನೀರು ತಿಮಿಂಗಿಲವನ್ನು ಪೋಷಿಸುವುದರಿಂದಲೇ ಅದು ಅಷ್ಟು ಬೃಹದಾಕಾರವಾಗಿ ಬೆಳೆಯಲು ಕಾರಣವಾಗಿರುವುದು!

ಸಸ್ತನಿ ಪ್ರಾಣಿ

ಬಾಹ್ಯ ನೋಟಕ್ಕೆ ತಿಮಿಂಗಿಲ ಮೀನಿನಂತೆ ಕಂಡರೂ, ಅದು ಮೀನಿನಂತೆ ಕಿವಿರುಗಳಲ್ಲಿಉಸಿರಾಡುವುದಿಲ್ಲ. ಅದು ದೀರ್ಘಕಾಲ ನೀರಿನಲ್ಲಿ ಇರಬಲ್ಲುದು. ಸಸ್ತನಿಗಳಂತೆ ಬಿಸಿ ರಕ್ತವನ್ನೂ ಹೊಂದಿರುವುದಲ್ಲದೆ, ಶರೀರ ಖಂಡದಿಂದಲೂ ಕೂಡಿರುತ್ತದೆ. ಇದರ ಚರ್ಮ ಮತ್ತು ಮಾಂಸ ಖಂಡಗಳ ನಡುವೆ ಒಂದು ಪದರಿನಷ್ಟು ಕೊಬ್ಬಿರುತ್ತದೆ. ಇದನ್ನು "ತಿಮಿಮೇಧಸ್ಸು" ಎಂದು ಕರೆಯುವರು. ತಿಮಿಂಗಿಲಗಳ ಚರ್ಮ ದಪ್ಪವಾಗಿದ್ದು ಮೃದುವಾಗಿರುತ್ತದೆ.

ಚಳಿಯಿಂದ ರಕ್ಷಣೆ

ಅನೇಕಪ್ರಾಣಿಗಳುತಮ್ಮಮೈಮೇಲಿರುವ ಕೂದಲುಗಳ ಸಹಾಯದಿಂದ ದೇಹವನ್ನುಚಳಿ-ಗಾಳಿಯಿಂದ ರಕ್ಷಿಸಿಕೊಳ್ಳುತ್ತವೆ.ಅಂತಹ ರಕ್ಷಣೆಯನ್ನುತಿಮಿಂಗಿಲತನ್ನ ದೇಹದಲ್ಲಿರುವ"ತಿಮಿಮೇದಸ್ಸಿ"ನಿಂದ ಪಡೆಯುತ್ತದೆ. ಭೂಮಿಯ ಮೇಲಿರುವ ಸಸ್ತನಿಗಳು ತಮ್ಮ ಮರಿಗಳಿಗೆ ಹಾಲು ಕೊಟ್ಟು ಪೋಷಿಸುವಂತೆ; ತಿಮಿಂಗಿಲುಗಳೂ ಮರಿಗಳನ್ನು ಪ್ರಸರಿಸಿ ಪೋಷಿಸುತ್ತವೆ. ಇವುಗಳ ಹಾಲೂ ಹಸುವಿನ (ಎಮ್ಮೆಯ) ಹಾಲಿನಂತೆ ಬೆಳ್ಳಗಿರುತ್ತದೆ.

ದೇಹರಚನೆ

ತಿಮಿಂಗಿಲಗಳಿಗೆ ಉಸಿರಾಡಲು ಸಹಾಯಕವಾಗುವಂತೆ ಆದರ ತಲೆಯ ತುದಿಯಲ್ಲಿ ಮೂಗಿನ ಸೊಳ್ಳೆಗಳಿರುತ್ತವೆ. ಕಿವಿಯ ರಂಧ್ರಗಳು ಬಹು ಸೂಕ್ಷ್ಮವಾಗಿರುತ್ತವೆ. ಅನಕ್ಕೆ ಹಿಂದಿನ ಕಾಲುಗಳಿಲ್ಲ. ಆದರೆ ಮುಂದೂಡುವ ಚಪ್ಪಟೆಯಾದಂಥ ಬಾಲವಿದೆ. ತಿರುಗುವುದಕ್ಕೆ ಮುಂದಿನ ಕಾಲುಗಳೂ; ಮುಂದಿನ ಚಲನೆಗೆ-ಬಾಲವೊಂದು ಸಹಾಯಕವಾಗಿವೆ.ತಿಮಿಂಗಿಲಗಳಲ್ಲಿ ಹಲವು ವಿಧಗಳಿದ್ದರೂ ಮುಖ್ಯವಾಗಿ (೧) ತಿಮ್ಮನಿ ಅಥವಾ ಬಲೀನ್ ತಿಮಿಂಗಿಲುಗಳು ಮತ್ತು (೨) ಹಲ್ಲುಳ್ಳ ತಿಮಿಂಗಿಲುಗಳು"-ಎಂಬ ಎರಡು ಪಂಗಡಗಳಿವೆ.

ಸಂಘಜೀವಿ

ನಿರ್ದಿಷ್ಟವಾಗಿ ತಿಮಿಂಗಿಲಗಳು ಇಷ್ಟೇ ಕಾಲ ಬದುಕಿರ ಬಲ್ಲವು— ಎಂಬುದನು ಹೇಳಲು ಅಸಾಧ್ಯವೆನಿಸಿದರೂ; ಕೆಲವು ಆಧಾರಿತ ಸೂಚನೆಗಳಿಂದ ಅವು ನೂರು ವರ್ಷಗಳಿಗಿಂತ ಕಡಿಮೆ.ಕಾಲ ಬದ ಕಿರಬಲ್ಲುವು ಎನ್ನ ಬಹುದು. ಸಾಮಾನ್ಯವಾಗಿ ತಿಮಿಂಗಿಲಗಳು ಒಟ್ಟಿಗೆ ಬಾಳ್ವೆನೂಡಲು ಇಚ್ಛಿಸುತ್ತವೆ. ಅಂತೆಯೇ ಅವು ಏಕಾಕಿ ಇಲ್ಲವೆ ಹಿಂಡು ಹಿಂಡಾಗಿಯೂ; ಕೆಲವು ವೇಳೆ ಒಂದೊಂದು ಹಿಂಡಿನಲ್ಲಿ ನೂರಾರು ಇದ್ದಶಾಂತ ರೀತಿಯ ಸಹ ಬಾಳ್ವೆಯನ್ನು ಮೊಡಬಲ್ಲವುಪರಸ್ಪರಜಗಳವಾಡದೆಹೊಂದಿಕೊಂಡು ಜೀವನ ಮಾಡುತ್ತವೆ. ಸಾಮಾನ್ಯವಾಗಿ ಅವು "ಕೆಡುಕು" ಬಯಸದ ಪ್ರಾಣಿಗಳಾದರೂ, ಪೆಟ್ಟು ತಗಲಿದಾಗ— ಹಡಗು, ದೋಣಿ ಮುಂತಾದುವುಗಳ ಮೇಲೆ ಧಾಳಿ ಮಾಡುವ ಸಂಭವವಿದೆ.

ಇಬ್ಬರು ವೈರಿ

ತಿಮಿಂಗಿಲಗಳಿಗೆ "ಮನುಷ್ಯ"—ಒಬ್ಬ ವೈರಿಯಾದರೆ "ಕಿಲ್ಲರ್" ಎಂಬುದು ಮತ್ತೊಂದು ವೈರಿ. ಇದು ಸಾಮಾನ್ಯವಾಗಿ "ಸೀಲ್" ಪ್ರಾಣಿ ಮತ್ತು ಕಡಲು ಹಂದಿಗಳ ಮೈ ಮೇಲೆ ಬೆಳೆದುಕೊಂಡಿದ್ದು; ತನ್ನ ಎರಡರಷ್ಟಿರುವ ಪ್ರಾಣಿಯನ್ನು ಎದುರಿಸುವಷ್ಟು ಶಕ್ತಿ ಉಳ್ಳದಾಗಿದೆ. ತಿಮಿಂಗಿಲದ ಬೇಟೆಯು ಬಹುಸಾಹಸದ ಕಾರ್ಯವಾಗಿದ್ದಂತೆ ಬಹು ಲಾಭದಾಯಕವೂ ಹೌದು. ಕಡಲಿನ ದೈತ್ಯ ಎಂಬ ಹೆಸರು ಆದಕ್ಕೆ ಅನ್ವರ್ಥನಾಮವಾಗಿದೆ.

ಚಿಕ್ಕಮ್ಮ

(೨ನೇ ಪುಟದಿಂದ)

ವಿಶ್ವೇಶ್ವರನು ಶ್ಯಾಮ-ಣನನ್ನು ಮೂದಸುತ್ತಾ, "ಕಳ್ಳತನ ಕಲಿತು ಜೈಲಿಗೆ ಹೋಗುತ್ತೀಯೇನೋ?" ಎಂದು ಹೇಳಿದ್ದು ಮಾತ್ರವಲ್ಲದೆ ಅವನಿಗೆ ಎರಡು ಮೂರು ಏಟು ಕೊಟ್ಟು ಗಾಳಿಪಟವನ್ನು ಹರಿದು ಹಾಕಿದನು. ಹಗ್ಗದ ಕಡೆಗೆ ದೃಷ್ಟಿ ಹಾಯಿಸಿ ವಿಶ್ವೇಶ್ವರನು—"ಇದನ್ನು ಯಾರು ಕೊಂಡದ್ದು ಎಂದು ಪುನಃ ಗದರಿಕೊಂಡನು.

ಭೋಲಾ ಭಯಭೀತನಾಗಿ— "ಶ್ಯಾಮೂ ಅಣ್ಣನೇ ತರಿಸಿದ್ದು. ಈ ಹಗ್ಗವನ್ನು ಗಾಳಿಪಟಕ್ಕೆ ಕಟ್ಟಿ ಚಿಕ್ಕಮ್ಮನನ್ನು ರಾಮನಲ್ಲಿಂದ ಕೆಳಗಿಳಿಸುತ್ತೇನೆಂದು ಅವರು ಹೇಳುತ್ತಿದ್ದರು" ಎಂದು ನಿಜಸಂಗತಿಯನ್ನೆಲ್ಲಾ ಅರುಹಿದನು.

ವಿಶ್ವೇಶರನ್ನು ಇದನ್ನು ಕೇಳುತ್ತಲೇ ಸ್ತಂಭೀಭೂತನಾಗಿನಿಂತಲ್ಲಿಯೇ ಸ್ವಲ್ಪಕಾಲದವರೆಗೆ ಅಲುಗಾಡದೆ ನಿಂತಿದ್ದನು. ಹರಿದು ಹೋಗಿದ್ದ ಗಾಳಿಪಟವನ್ನು ಎತ್ತಿನೋಡುತ್ತಲೆ, ವಿಶ್ವೇರನ ದೃಷ್ಟಿಗೆ ಅದರಲ್ಲೊಂದು ಕಾಗದ ಚೂರು ಇರುವುದಾಗಿ ಕಂಡಿತು. ಕಾಗದವನ್ನೆತ್ತಿ ನೋಡಲು ಅದರಲ್ಲಿ "ಚಿಕ್ಕಮ್ಮ" ಎಂದು ಬರೆದಿತ್ತು.

ನಗೆಗಡಲು

ವಿಶ್ವಾಸ...?

ಆತ— ನಾನು ಒಂದು ಕಾದಂಬರಿಯನ್ನು ಬರೆದಿದ್ದೇನೆ. ಅದನ್ನು ತಿದ್ದುವುದು ಸುಪ್ರಸಿದ್ಧ ಕಾದಂಬರಿಕಾರ "ಶ್ರೀ". ವರಿಂದಲೇ ಸಾಧ್ಯ!?....ನಿನಗೆ ಅವರ ವಿಳಾಸ ಗೊತ್ತಿದ್ದರೆ...

ಈತ— ನನ್ನ ಮೇಲೆ ನಿನಗೆ ವಿಶ್ವಾಸವಿಲ್ಲವೆ? ಅವರಿಗೆ...ಲೆಟರ್ ಬರೆದು ವಿಳಾಸ ಕೂಡಲೇ ತರಿಸಿಕೊಡುತ್ತೇನೆ!!

೦ ೦ ೦

ಭೀಷ್ಮ ಪ್ರತಿಜ್ಞೆ....!!

ಹೊಸತಾಗಿ ಸ್ಯಾಕಲ್ ಏರಿದ ಮಹಾನುಭಾವರೊಬ್ಬರು ಆಕಸ್ಮಾತ್ ನಮ್ಮ ಹತ್ತಿರವೆ ಬಿದ್ದರು. ನಾವೆಲ್ಲ ನಕ್ಕೆವು. [ಅವರಿಗೆ ಅಪಮಾನವಾಗಿರಬೇಕು]

"ನಾನು ಇನ್ನೂ ಸರಿಯಾಗಿ ಸ್ಯಾಕಲ್ ಕಲಿತ ವಿನಹ ಸ್ಯಾಕಲ್ ಮುಟ್ಟುವುದೇ ಇಲ್ಲ" ಎಂದು ಗೊಣಗುತ್ತ— ಸ್ಯಾಕಲ್ ದೂಡಿಕೊಂಡು ಹೋದರು—

೦ ೦ ೦

ಭಟ್ಟರ ಸಮಾಜ! ?

ಗುರುಗಳ— 'ಸಮಾಜ'ದ ಬಗ್ಗೆ ವಿವರಿಸಿ ಹೇಳಿ... ನಾವು ಹೊಸ ಸಮಾಜ ಕಟ್ಟಬೇಕೆಂದರು. ನಿದ್ರಿಸುತಿದ್ದ ರಾಂಭಟ್ಟನನ್ನು ಕಂಡು ಅವರು—

'ಏನೊ-ರಾಂ ಭಟ್ಟ ನಿದ್ರೆ ಬಂತೇನೊ?.... (ಜೋರಿನಿಂದ) ಮಾನವನಾದವನು ಏನು ಕಟ್ಟುತ್ತಾನೆ?....' ಎಂದು ಪ್ರಶ್ನಿಸಿದರು.

ಆಗ ರಾಮು ಭಟ್ಟ—"ಮಾನವನೆಂದಾದವನು ಜುಟ್ಟು ಕಟ್ಟುತ್ತಾನೆ!!" ಎಂದು ಉತ್ತರವಿತ್ತ.

೦ ೦ ೦

ಗ್ಯಾರಂಟಿ...

ರಾಯರು:— ಈ ಸೀರೆ ಬಣ್ಣ ಗ್ಯಾರಂಟಿ ಏನ್ರಿ?....

ಮಾಲಿಕ— ನೀವು ಬೇಕಾದರೆ....ಒಮ್ಮೆ ಒಗೆಯಿರಿ ಆ ಮೇಲೆ ನೋಡಿ— ಉಳಿಯುತ್ತೆ—ಗ್ಯಾರಂಟಿ ಬಣ್ಣ!"

೦ ೦ ೦

ಕಾಲ....

ಮಾಸ್ತರರು— "ಸೀತೆಯನ್ನು ಕಳೆಕೊಂಡ ರಾಮನು ಮರಗಳನ್ನೂ ಸಹ ಸೀತೆ ಎಂದು ಅಪ್ಪುತ್ತಿದ್ದನು" ಇದು ಯಾವ ಕಾಲವೊ—ಕತ್ತೆ....

ಕತ್ತೆ (ವಿದ್ಯಾರ್ಥಿ)— "ಪ್ರಣಯ ಕಾಲ...."

— ಪಿ. ಎನ್. ಹೆಗಡೆ—ಶಂಭು, ಹೊಸಾಕುಳಿ.

ವಿವರವಾದ ವರದಿ

ಗಣ್ಯ ವ್ಯಕ್ತಿಗಳೊಬ್ಬರ ಮರಣದ ಸುದ್ದಿ ವಾರ ಪತ್ರಿಕೆಯೊಂದರಲ್ಲಿ ಹೀಗೆಂದು ವರದಿಯಾಗಿತ್ತು "ನಮ್ಮ ನಾಡಿನ ಪ್ರತಿಭಾವಂತ ನಾಯಕರೂ, ಸಾರ್ವಜನಿಕ ಸೇವಾ ಧುರೀಣರೂ, ಪ್ರತಿಷ್ಠಿತರೂ ಆದ ಶ್ರೀ.......ರು ಮರಣ ಹೊಂದಿದರು ಎಂದು ತಿಳಿಸಲು ವಿಷಾದವಾಗುತ್ತದೆ. ಅವರು ತಮ್ಮ ಹಿಂದೆ ತಮ್ಮ ಪತ್ನಿ ಇಬರು ಪುತ್ರರು, ಮೂರು ಜನ ಪುತ್ರಿಯರು, ಒಂದು ಅಲ್ಸೇಶಿಯನ್ ನಾಯಿ ಹಾಗೂ ಒಂದು ಕಪ್ಪು ಬೆಕ್ಕುಗಳನ್ನು ಬಿಟ್ಟು ಹೋಗಿರುತ್ತಾರೆ. ಮೃತರ ಆತ್ಮಕ್ಕೆ ಚಿರ ಶಾಂತಿ ಲಭಿಸಲಿ"

೦ ೦ ೦

ಅಕ್ಕಿಯ ಬೆಲೆ

ಪುಟ್ಟು—ಹಾದೇನೋ ಕಿಟ್ಟು, ನಮ್ಮ ರಾಜ್ಯದಲ್ಲಿ ಅಕ್ಕಿಯ ಬೆಲೆ ಕಡಿಮೆಯಾಗಿದೆಯಂತಲ್ಲ?

ಕಿಟ್ಟು:— ಯಾರು ಹೇಳಿದರು?

ಪುಟ್ಟು:- ದೆಹಲಿಗೆ ಟೆಲಿಗ್ರಾಂ ಕೂಡಾ ಕೊಟ್ಟಿದ್ದಾರೆ ಎಂದು ಪೇಪರಿನಲ್ಲಿ ಬಂದಿದೆ. ವಿಚಾರಿಸಿದೆಯಾ?

ಕಿಟ್ಟು:- ಹೌದು, ವಿಚಾರಿಸಿದೆ. ಸಮಾಚಾರ ಸತ್ಯವಂತೆ.

ಪುಟ್ಟು:- ಹೌದೆ? ಹಾಗಾದರೆ ಕಿಲೋ ಅಕ್ಕಿಗೆ ಎಷ್ಟು ಬೆಲೆ ಕಡಿಮೆ ಆಗಿದೆ?

ಕಿಟ್ಟು:— ಒಂದು ಚೀಲ ಅಕ್ಕಿಗೆ ಸರಾಸರಿ ಒಂದು ಪೈಸೆ ಬೆಲೆ ಕಡಿಮೆಯಾಗಿದೆಯಂತೆ. ಅದೂ ಒಂದು ಪೈಸೆ ಕಡಿಮೆಯಾಗಿರುವುದು ಅಕ್ಕಿಗಲ್ಲ, ಗೋಣಿ ಚೀಲಿಕ್ಕೆ.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

READ & ADVERTISE IN NAVAYUGA WEEKLY

REGD. No. B. G. 176
LICENCE No. 31
Licensed to Post without Prepayment

ಜನತಾ ಉಪವಾಕೆ

ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ರಾಷ್ಟ್ರಪುರುಷರ ನಾಮಕರಣ ಗಳಾಗಲಿ

ಭಾರತವು ಸ್ವತಂತ್ರವಾಗಿದೆ. ವಿಶಾಲ ಮೈಸೂರು ರಚನೆಯಾಗಿದೆ. ಭಾರತದಲ್ಲಿ ಪ್ರಜಾಪ್ರಭುತ್ವವು ಕ್ರಮಕ್ರಮವಾಗಿ ವಿಕಾಸಗೊಳ್ಳುತ್ತಿದೆ. ಕರ್ನಾಟಕದಲ್ಲಿಯೂ ಮಹತ್ಕಾರ್ಯಗಳು ನಡೆಯುತ್ತಿವೆ ಕಾರಣ ಇಂತಹ ಜಾಗೃತ ಪರಿಸ್ಥಿತಿಯಲ್ಲಿ ಬೆಂಗಳೂರಿನಲ್ಲಿಯೂ, ಕರ್ನಾಟಕದ ಇತರ ಭಾಗಗಳಲ್ಲಿಯೂ ಪ್ರಮುಖ ಸ್ಥಳಗಳಿಗೆ ರಾಜವೀಥಿಗಳಿಗೆರಾಷ್ಟ್ರಪುರುಷರ ನಾಮಕರಣ ವಾಗುವುದು ಅಗತ್ಯವೂ ಅನಿವಾರ್ಯವೂ ಆಗಿದೆ. ಆದುದರಿಂದ ಈ ಮುಂದೆ ಸೂಚಿಸಿರುವ ಭಾರತದ ಮತ್ತು ಕರ್ನಾಟಕದ ಮಹಾ ಪುರುಷರ ಹೆಸರುಗಳನ್ನುರಾಜ್ಯದ ಸ್ಥಳಗಳಿಗೆ ಅನ್ವಯಿಸಲು ಬೆಂಗಳೂರು ನಗರಸಭೆಯವರು ಮತ್ತು ಮೈಸೂರು ಸರ್ಕಾರದವರು ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಎಂಬ ಕೆಂಪು ತೋಟಕ್ಕೆ ಇನ್ನು ಮುಂದೆ ವಿಶ್ವಮಾನವ ಪಂಡಿತ ಜವಾಹರಲಾಲ್ ನೆಹರು ಸ್ಮಾರಕವಾಗಿ ನೆಹರೂ ಲಾಲ್‌ಬಾಗ್ ಅಥವಾ ನೆಹರೂ ಕೆಂಪು ತೋಟ ಎಂದು ಹೆಸರಿಡಬಹುದು. ಹಾಗೆಯೇ ಬೆಂಗಳೂರು ಕಬ್ಬನ್ ಪಾರ್ಕ್ ಇನ್ನು ಮುಂದೆ ರಾಷ್ಟ್ರನಾಯಕ ಸರ್ದಾರ್ ಪಟೇಲರ ಶುಭ ನಾಮದಿಂದ ಸರ್ದಾರ್ ಪಾರ್ಕ್ ಅಥವಾ ವಲ್ಲಭಭಾಯ್ ಉಪವನ ಎಂದಾಗ ಬಹುದು. ಅಂತೆಯೆ ತಂಗಭದ್ರಾ ಜಲಾಶಯಕ್ಕೆ ದಿವಂಗತ ರಾಜೇಂದ್ರಪ್ರಸಾದರ ಪವಿತ್ರ ನಾಮವನ್ನು ಅಳವಡಿಸಿ ರಾಜೇಂದ್ರ ಜಲಾಶಯವೆಂದು ಕರೆಯಬಹುದು. ನಿರ್ಮಾಣವಾಗುತ್ತಿರುವ ಲಕ್ಕವಳ್ಳಿ ಜಲಾಶಯಕ್ಕೆ ನಮ್ಮ ಮಹಾರಾಜರೂ, ರಾಜ್ಯಪಾಲರೂ ಆಗಿದ್ದು ಕರ್ನಾಟಕ ರಾಜ್ಯಕ್ಕೆ ಭದ್ರವಾದ ನೆಲಗಟ್ಟನ್ನು ಹಾಕಿದ ಶ್ರೀ ಜಯಚಾಮರಾಜರ ಶುಭನಾಮವನ್ನು ಅಳವಡಿಸಿ ಜಯಚಾಮರಾಜ ಜಲಾಶಯವೆಂದು ಹೆಸರಿಡಬಹುದು. ಬೆಂಗಳೂರು ನಗರದ ರಾಜವೀಥಿಗಳಿಗೆ ಕರ್ನಾಟಕದ ಮಹಾ ಪುರುಷರಾದ ಚಾಲುಕ್ಯ ವಿಕ್ರಮ ಇಮ್ಮಡಿ ಪುಲಿಕೇಶಿ, ಕೃಷ್ಣದೇವರಾಯ, ಶಿವಪ್ಪನಾಯಕ, ಕೆಳದಿಯ ಚೆನ್ನಮ್ಮಾಜಿ, ಕಿತ್ತೂರು ಚೆನ್ನಮ್ಮ, ಚಿಕ್ಕದೇವರಾಜ ಒಡೆಯರು ಮೊದಲಾದವರ ಶುಭ ನಾಮವನ್ನು ಕರೆಯಬಹುದು. ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಪಕ್ಕದ ಬೀದಿಗಳಿಗೆ ರಾಷ್ಟ್ರಕೂಟ ನೃಪತುಂಗ,ಆದಿಪಂಪ, ಬಸವೇಶ್ವರ, ಅಕ್ಕಮಹಾದೇವಿ, ಕವಿರನ್ನ, ಹರೀಶ್ವರ, ರಾಘವಾಂಕ, ಚಾಮರಸ, ಲಕ್ಷ್ಮೀಶ, ಕುಮಾರವ್ಯಾಸ, ಷಡಕ್ಷರದೇವ, ಪುರಂದರದಾಸರು, ಕನಕದಾಸರು; ಸರ್ವಜ್ಞಮೂರ್ತಿ, ಕವಿ ಕಾಳಿದಾಸ, ಸರ್ಪಭೂಷಣ ಶಿವಯೋಗಿ, ನಿಜಗುಣ ಶಿವಯೋಗಿ ಮುದ್ದಣ ಮೊದಲಾದವರ ಹೆಸರುಗಳನ್ನು ಕರೆಯಬಹುದು.

ಈ ರಾಷ್ಟ್ರೀಯ ನಾಮಕರಣದಿಂದ ನಮ್ಮ ಜನರಲ್ಲಿ ದೇಶಭಾಷಾಭಿಮಾನಗಳು ಬೆಳೆದು ನವಸ್ಫೂರ್ತಿಯುಂಟಾಗಲು ಕಾರಣವಾಗುತ್ತದೆ. ಆದುದರಿಂದ ನಮ್ಮ ಘನಸರ್ಕಾರದವರೂ ಬೆಂಗಳೂರು ನಗರಸಭೆಯವರೂ ಇಂತಹ ಉತ್ತಮ ಬದಲಾವಣೆಗಳನ್ನು ಕೂಡಲೇ ಕೈಗೊಳ್ಳುವರೆಂದು ನಿರೀಕ್ಷಿಸಬಹುದೇ?

ಸಹಿ- ಬಿ. ಶಿವಮೂರ್ತಿ ಶಾಸ್ತ್ರೀ.
ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು—18

ನಮ್ಮ-ನಮ್ಮವರು

(೧ನೇ ಪುಟದಿಂದ)

ಪದವಿ ಪಡೆದ ಶ್ರೀ ಹೆಗ್ಡೆಯವರು ಕಳೆದ ನಾಲ್ಕು ವರುಷಗಳಿಂದ ಉಡುಪಿಯಲ್ಲಿ ಎಡ್ವೊಕೇಟರಾಗಿ ಕೆಲಸ ಮಾಡುತ್ತಿದ್ದರು ಎಂ. ಜಿ. ಎಂ. ಕಾಲೇಜಿನಲ್ಲಿ 'ಕಮ್ಮರ್ಶಿಯಲ್ ಲಾ' ದ ಪಾರ್ಟ್ ಟೈಮ್ ಶಿಕ್ಷಕರರಾಗಿದ್ದರು, ಸಾರ್ವಜನಿಕ ರಂಗದಲ್ಲಿ ಕಾರ್ಯವೆಸಗುವ ಹುಮ್ಮಸ್ಸು ತರುಣರಾದ ಹೆಗ್ಡೆಯವರಲ್ಲಿ ಬಹಳವಿತ್ತು. ವಿದ್ಯಾವಂತರಾದವರು ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸುತ್ತಿದ್ದಾರೆಂಬ ಕೂಗು ಕೇಳುತ್ತಿರುವ ಈ ದಿನಗಳಲ್ಲಿ ಶ್ರೀ ಹೆಗ್ಡೆಯವರು ತನ್ನ ಹಳ್ಳಿಯ ಕೃಷಿಕ ರಂಗದಲ್ಲಿ ಹಲವಾರು ಕಾರ್ಯ ಮಾಡಿರುವರು, ಅದರಲ್ಲಿಆಸಕ್ತಿಯನ್ನು ತಳೆದಿರುವರು.

ಇದೀಗ ಅವರು ಸರಕಾರದಿಂದ ಮುನ್ಸೀಫರಾಗಿ ನೇಮಕ ಗೊಂಡು, ಧಾರವಾಡಕ್ಕೆ ತೆರಳಿದ್ದಾರೆ. ತರುಣರಾದ ಶ್ರೀ ಹೆಗ್ಡೆಯವರ ಯೋಗ್ಯತೆಗೆ ತಕ್ಕ ಪುರಸ್ಕಾರ ಈಗಾಗಲೇ ಲಭಿಸಿದೆ. ಅವರು ತನ್ನ ಹುದ್ದೆಯಲ್ಲಿ ಯಶಸ್ವಿಗಳಾಗಿ ಕೀರ್ತಿ ಪಡೆಯಲಿ,ಇನ್ನೂ ಹೆಚ್ಚಿನ ಸ್ಥಾನ ಮಾನಗಳು ಅವರಿಗೆ ಲಭಿಸಲಿ ಎಂದು ನವಯುಗವು ಈ ಸಂದರ್ಭದಲ್ಲಿ ಹಾರೈಸುತ್ತದೆ.

o o o

ಬೊಂಬಾಯಿ ಲೇಬರ್ ಯೂನಿಯನು ಮತ್ತು ಹೊಸತಾಗಿ ತಲೆ ಎತ್ತಿರುವ ನೇಶನಲ್ ರೆಸ್ಟೋರೆಂಟ್ ಎಸೋಸಿಯೇಶನ್ ಆಫ್ ಇಂಡಿಯ, ಇವರೊಳಗಿನ ವಿಚಿತ್ರ ಒಪ್ಪಂದ.

ಇದೇ ಕಳೆದ ತಾರೀಕು ೧೦ನೇ ಜೂನ್ ೧೯೬೪ಕ್ಕೆ ಬೊಂಬಾಯಿ ಲೇಬರ್ ಯೂನಿಯನ್ ತನ್ನ ಬೇಳೆ ಬೇಯಿಸುವ ಕುತಂತ್ರದ ದಾರಿಯಲ್ಲಿ ಇನ್ನೊಂದು ಹೆಜ್ಜೆ ಮುಂದಿಡುವ ಉದ್ದೇಶದಿಂದ, ತನ್ನದೇ ಆದ ಒಂದು ಹೊಸ ಹೋಟೆಲು ಮಾಲಕರ ಎಸೋಸಿಯೇಶನನ್ನು ಹೋಟೆಲು ಮಾಲಕರ ಹೆಸರಿನಲ್ಲಿ ತಲೆ ಎತ್ತಿಸಿ, ಈಗಾಗಲೇ ತುಂಬಾ ಕಷ್ಟನಷ್ಟಗಳಿಗೆ ಗುರಿಯಾಗಿರುವ ಸಣ್ಣ ಮತ್ತು ಮಧ್ಯಮ ತರಗತಿಯ ಹೋಟೆಲು ಮಾಲಕರನ್ನು ನಾಶ ಮಾಡುವ ಪ್ರಯತ್ನವನ್ನು ನಡೆಸಿದೆ!

ನೇಶನಲ್ ರೆಸ್ಟೋರೆಂಟ್ ಎಸೋಸಿಯೇಶನ್ ಆಫ್ ಇಂಡಿಯ ಎಂಬ ಹೆಸರಿನಿಂದ ತಲೆ ಎತ್ತಿದ ಈ ಹೊಸ ಎಸೋಸಿಯೇಶನ್, ಬೊಂಬಾಯಿ ಲೇಬರ್ ಯೂನಿಯನಿನ ಪ್ರಧಾನ ಕಾರ್ಯಕರ್ತರಾದ ಶ್ರೀ ಜೋರ್ಜ್ ಫೆರ್ನಾಂಡಿಸರ ಪಕ್ಷವಾದಿಗಳೂ, ಅವರ ಮಿತ್ರರೂ ಆದವರೊಬ್ಬರೂ, ಕೆಲವು ಮಂದಿ ಸ್ವಾರ್ಥಿಗಳೂ, ಹಣವಂತರೂ ಆದ ಹೋಟೆಲು ಮಾಲಕರನ್ನು ಒಳಪಡಿಸಿಕೊಂಡು ಸ್ಥಾಪಿಸಿದ್ದಾರೆ.

ಕಳೆದ ತಾರೀಕು ೧೨ನೇ ಜೂನ್ ೧೯೬೪ಕ್ಕೆ ಮಾಡುತ್ತೇನೆಂದು ಹೆದರಿಸಿದ ಹೋಟೆಲು ಕೆಲಸಗಾರರ ಸಂಪು, ನಡೆಸುವುದ, ಅಸಾಧ್ಯವೆಂದು ತಿಳಿದ ಶ್ರೀ ಜೋರ್ಜ್ ಫೆರ್ನಾಂಡಿಸರು, ತನ್ನ ಮುಖವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಎಸೋಸಿಯೇಶನನ್ನು ಸ್ಥಾಪಿಸಿದ ಮಹದುದ್ದೇಶ ಈ ಎಸೋಸಿಯೇಶನಿನೊಡನೆ ಬೊಂಬಾಯಿ ಲೇಬರ್ ಯೂನಿಯನ್ ಮಾಡಿಕೊಂಡ ಒಪ್ಪಂದದಿಂದ, ಸಣ್ಣ ಮತ್ತು ಮಧ್ಯಮ ತರಗತಿಯ ಹೋಟೆಲು ಮಾಲಕರಿಗೆ ತುಂಬಾ ಅನ್ಯಾಯ ಮಾಡುವಂತದ್ದಾಗಿದೆ. ಈಗಾಗಲೇ ಒಂದು ವರುಷ ಆರು ತಿಂಗಳ ಒಳಗೆ, ಪ್ರವಿಡೆಂಟ್ ಫಂಡ್, ಮಿನಿಮಮ್ ವೇಜಸ್, ಕಟ್ಟಡದ ಟೇಕ್ಸ್ ಮುನಿಸಿಫಲ್ ಲೈಸೆನ್ಸ್ ಫೀ ಇತ್ಯಾದಿ ಕಾಯಿದೆಗಳು ಜಾರಿಗೆ ಬಂದು, ಹೋಟೆಲು ಮಾಲಕರು ತಮ್ಮ ವ್ಯವಸಾಯವನ್ನು ನಡಿಸುವುದೇ ಕಷ್ಟವಾಗಿ ಹೋಗಿದೆ.

ಇನ್ನು ಮೇಲೆ ಹೊಸ ಎಸೋಸಿಯೇಶನಿನವರ ಒಪ್ಪಂದ ಪ್ರಕಾರ, ಆ ಶರ್ತಗಳು ಜಾರಿಗೆ ಬರುವಂತಾದರೆ, ಹೋಟೆಲು ಮಾಲಕರು ತಮ್ಮ ವ್ಯಾಪಾರವನ್ನು ಬಿಟ್ಟು ಓಡಿ ಹೋಗಬೇಕಾದೀತು.

ಹೊಸ ಶರ್ತಗಳ ಪ್ರಕಾರ ಹೋಟೆಲು ಕೆಲಸಗಾರರಿಗೆ ದಿವಸದ ಗ್ರೇಚುವಿಟಿ ೫ ದಿವಸದ ಸೀಕು ರಜೆ ಮತ್ತು ೫ ದಿವಸದ ಕೇಜುವಲ್ ರಜೆ ಎಂಬ ಹಾಗೆ ೨೫ ದಿವಸದ ಸಂಬಳ ಹೆಚ್ಚಿಗೆ ಕೊಡಬೇಕಾಗುತ್ತದೆ. ಈ ಶರ್ತಗಳಿಗೆ ಕೆಲವು ದೊಡ್ಡ ಮತ್ತು ಹಣವಂತ ಹೋಟೆಲು ಮಾಲಕರು ಒಪ್ಪಿ ಎಗ್ರಿಮೆಂಟು ಮಾಡಿದ್ದಾರೆಂಬುದಾಗಿ ತಿಳಿದು ಬಂದಿದೆ. ಈಗ ನಾವು ೨೧ ದಿವಸದ ಸಂಬಳ ಕೊಡುತ್ತಾ ಇದ್ದೇವೆ. ಈ ಶರ್ತ ಪ್ರಕಾರ ಇನ್ನು ಮುಂದೆ ೪೬ ದಿವಸದ ಸಂಬಳ ಕೊಡಲಿಕ್ಕೆ ಈ ಹೊಸ ಎಸೋಸಿಯೇಶನಿನ ಕೆಲವು ದೊಡ್ಡ ಹೋಟೆಲು ಮಾಲಕರು ಒಪ್ಪಿದ್ದಾರಾಗಿ ತಿಳಿದು ಬಂದಿದೆ.

ಬೊಂಬಾಯಿ ಲೇಬರ್ ಯೂನಿಯನ್ ಮತ್ತು ದೊಡ್ಡ ಹೋಟೇಲು ಮಾಲಕರ ಏಜಂಟರುಒಟ್ಟುಕೂಡಿ, ಸಣ್ಣ ಮತ್ತು ಮಧ್ಯಮ ತರಗತಿಯ ಹೋಟೇಲು ಮಾಲಕರನ್ನು ನಾಶ ಮಾಡಿ, ಬೊಂಬಾಯಿಬಿಡಿಸಬೇಕೆಂಬ ಪ್ರಯತ್ನದಲ್ಲಿದ್ದಾರೆಂಬುದಕ್ಕೆ ಸಂದೇಹವಿಲ್ಲ.

ಇಷ್ಟೇ ಅಲ್ಲದೆ ಇನ್ನು ಮುಂದೆ ಬೊಂಬಾಯಿ ಲೇಬರ್ ಯೂನಿಯನ್ ಕೇಳುವ ಯಾವತ್ತೂ ಶರ್ತಗಳನ್ನು, ಕೇಳಿಕೆಗಳನ್ನು ಕೂಡಾ ಮುಂದಕ್ಕೆ ಆಲೋಚನೆ ಮಾಡುವರೆ ಒಪ್ಪಿರುತ್ತಾರೆ.

ಬೊಂಬಾಯಿ ಶಹರಿನಲ್ಲಿ ಸಣ್ಣ ಮತ್ತು ಮಧ್ಯಮ ತರಗತಿಯ ಹೋಟೇಲು ಮಾಲಕರ ಸಂಖ್ಯೆ ಹೆಚ್ಚಿಗೆ ಇದೆ. ಸಾವಿರಾರು ಹೋಟೇಲುಮಾಲಕರ ಮಕ್ಕಳ ಹಾಲಿಗೆ ಮಣ್ಣು ಹಾಕಲಿಕ್ಕೆ ಪ್ರಯತ್ನ ಮಾಡುವ ಈ ಸಮಾಜ ದ್ರೋಹಿ ಹೋಟೇಲು ಮಾಲಕರ ಏಜಂಟರ, ಈ ಕುಟಿಲಕಾರ- ಸ್ಥಾನಕ್ಕೆ ಮರುಳಾಗದೆ, ಸತ್ಯಸ್ಥಿತಿಯನ್ನು ತಿಳಿದು, ನಮ್ಮ ಏಳಿಗೆಯು ಯಾವುದರಲ್ಲಿದೆ ಎಂಬುದನ್ನು ತಿಳಿಯಬೇಕು. ಮತ್ತು ಈ ಸಮಾಜ ದ್ರೋಹಿ ಏಜಂಟರನ್ನು ನಮ್ಮ ಮಧ್ಯೆಯಿಂದ ತೆಗೆದು ಬಿಸಾಡಬೇಕು. ಇದರ ಎದುರು ದೊಡ್ಡ ಚಳವಳವನ್ನು ಮಾಡುವರೆ ತಾವೆಲ್ಲರೂ ಒಂದಾಗಿ ಮುಂದೆ ಬಂದು, ಈ ಮಹತ್ಕಾರ್ಯವನ್ನು ಮಾಡಬೇಕು. ತಮಗೆಲ್ಲಾ ತರದ ಸಹಾಯವನ್ನು ಮಾಡಲಿಕ್ಕೆ, ಮಹಾರಾಷ್ಟ್ರ ರಾಜ್ಯ ಹೋಟೇಲ್ಸ್ ಫೆಡರೇಶನ್ ಮತ್ತು ಅದರ ಪದಾಧಿಕಾರಿಗಳು, ಕಾರ್ಯಕಾರಿ ಮಂಡಲಿಯವರು, ಯಾವತ್ತೂ ತಮ್ಮ ಸೇವೆಗೆ ಸಿದ್ಧರಾಗಿದ್ದಾರೆ.

—ಶ್ರೀ ಬಿ. ಗೋಪಾಲ ಶೆಟ್ಟಿ
ಉ. ಕಾರ್ಯದರ್ಶಿ, ಮಹಾರಾಷ್ಟ್ರ ರಾಜ್ಯ ಹೋಟೇಲ್ಸ್ ಫೆಡರೇಶನ್, ಬೊಂಬಾಯಿ.

ಓ...ನನ್ನ ವೇತನಾ

ಓ ನನ್ನ ವೇತನಾ।
ಆಗು ಚಿರಚೇತನಾ॥
ಬಿಟ್ಟು ಬಿಡು ಜಡತನಾ।
ಬಾ ಓಡಿ ನೂತನಾ॥೧॥

ನಿನ್ನ ನಂಬಿ ಸೋತೆ ನಾ।
ಬನ್ನ ಪಟ್ಟು ಕೂತೆ ನಾ॥
ಅನ್ನ ಬಿಟ್ಟು ಕಾದೆ ನಾ
ಸೊನ್ನೆಯಾಯ್ತು ಜೀವನಾ॥೨॥

ಪೇಟ್ ಜೇಗೆ ಶರಣನಾದೆ।
ಹೋಟೇಲಿಗೆ ದೂರನಾದೆ॥
ಬೇಟೆಯಾಡೆ ಸಿಗದೆ ಹೋದೆ।
ನೋಟಕರಿಗೆ ಮರುಳನಾದೆ॥೩॥

ಸಿಗ್ಗಿನಿಂದ ಕುಗ್ಗಿ ಹೋದೆ।
ಬಗ್ಗಿ ಬಗ್ಗಿ ಬಾಗಿ ಹೋದೆ॥
ಸುಗ್ಗಿ ಊಟ ಉಣದೆ ಹೋದೆ।
ಸಗ್ಗ ಸುಖವ ಕಾಣದಾದೆ॥೪॥

ನೀನು ಬರದೆ ಹಬ್ಬವೆಲ್ಲಿ।
ನೀನು ಇರದೆ ಮಬ್ಬು ಎಲ್ಲ॥
ಮನಕೆನ್ನ ಬೆಲೆಯು ಎಲ್ಲಿ।
ದಾನ ಧರ್ಮ ಆನಸನಲ್ಲಿ॥೫॥

ನೀನು ಇರದೆ ಇಲ್ಲ ವಿದ್ಯೆ।
ನೀನು ಇಲ್ಲದಿರಲು ನಿದ್ದೆ॥
ಶೂನ್ಯವೆಲ್ಲ ಮಣ್ಣು ಮುದ್ದೆ।
ನೀನೆ ಆಡಕೆ ಎಲ್ಲ ಮದ್ದೆ॥೬॥

ಓಡಿ ಬಾರೋ ನೀನು ಬೇಗ।
ನೋಡಿ ಎನ್ನ ಮನದ ಬೇಗೆ॥
ನಾಡ ಜನರ ಮಧ್ಯೆ ಕಾಗೆ
ಮಾಡ ಬೇಡ ನೀನು ಹಾಗೆ॥೭॥

ಓ ನನ್ನ ವೇತನಾ।
ಆಗು ನೀನು ಚೇತನಾ॥
ಬಿಟ್ಟು ಬಿಡು ಜಡತನಾ।
ಬಾ ಓಡಿ ನೂತನಾ॥

—ಪಿ ರಾಮಕೃಷ್ಣ ಆಚಾರ್,
ಕುಂತಲೂರು.

Printed & Published by K. H. Shetty, at the Navayuga Press, Udipi, S. India

VOL. 43 No. 46 ಸಂಪುಟ ೪೩ ಸಂಚಿಕೆ ೪೬

NAVAYUGA—Nationalist Wookly ‡‡ ಉಡುಪಿ 16-7-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಇಂದಿರಾ ಗಾಂಧಿ

ಪ್ರಧಾನಿ ಲಾಲಬಹಾದ್ದೂರ್ ಶಾಸ್ತ್ರಿಯವರು ಅಸ್ವಸ್ಥತೆಯ ದೆಸೆಯಿಂದ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿದು ಬಂದಾಗ, ಅವರನ್ನು ಪ್ರತಿನಿಧೀಕರಿಸುವವರು ಯಾರು ಎಂಬ ಬಗ್ಗೆ ಊಹಾಪೋಹಗಳು ಎದ್ದಿದ್ದುವು. ಶಾಸ್ತ್ರಿಯವರ ಈ ಬಾರಿಯ ಲಂಡನ್ ಪ್ರಯಾಣದ ವಿಚಾರವಾಗಿ ಹಲವರು ಹಲವಾರು ಅಭಿಪ್ರಾಯಗಳನ್ನು ಇರಿಸಿದ್ದರು. ಅವರು ಅನಿರೀಕ್ಷಿತವಾಗಿ ಅವರ ಲಂಡನ್ ಪ್ರವಾಸವನ್ನು ರದ್ದುಗೊಳಿಸಿದರು. ಈಗ ತನ್ನ ಸ್ಥಾನದಲ್ಲಿ ಅವರು ಶ್ರೀ ಟಿ. ಟಿ. ಕೃಷ್ಣಮಾಚಾರಿ ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರನ್ನು ಪ್ರತಿನಿಧಿಗಳಾಗಿ ಲಂಡನಿಗೆ ಕಳುಹಿಸಿದ್ದಾರೆ.

ಶ್ರೀಮತಿ ಇಂದಿರಾ ಗಾಂಧಿಯವರ ಈ ಆಯ್ಕೆ ಸಮಯೋಚಿತ ಹಾಗೂ ಸೂಕ್ತವಾದುದು. ಅವರು ಜುಲೈ ೨ರಂದು ವಾರ್ತೆ ಮತ್ತು ಪ್ರಸಾರ ಖಾತೆಯ ಮಂತ್ರಿಗಳಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಿದ ಆರಂಭದಲ್ಲೇ ಈ ಸಂಯೋಗ ಅವರಿಗೆ ಲಭಿಸಿದೆ. ಅವರು ಸಮ್ಮೇಳನದಲ್ಲಿ ಚರ್ಚಿಸಲಿರುವ ಹಲವಾರು ವಿಷಯಗಳ ಕುರಿತು ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಸಮರ್ಥರು. ಆಫ್ರಿಕಾ ಹಾಗೂ ಅನ್ಯಾಗಳ ಜನತೆಯ ನಾಡಿಯ ಮಿಡಿತ ಹಾಗೂ ಹೃದಯದ ಬಿಂಡಿತವನ್ನು ಅವರಷ್ಟು ಪ್ರಭಾವಶಾಲಿಯಾಗಿ ವ್ಯಕ್ತಪಡಿಸಬಲ್ಲವರು ಇನ್ನೊಬ್ಬರಿಲ್ಲ. ನೆಹರೂರವರ ಪುತ್ರಿ ಎಂಬುದೇ ಅವರ ಈ ಖ್ಯಾತಿಗೆ ಕಾರಣವಲ್ಲ. ಜೀವನದಾರಂಭದಿಂದ ಅವರು ಕೈಗೊಂಡ ಹಲವಾರು ಸಾಮಾಜಿಕ ಸೇವೆ ಹಾಗೂ ಕಾರ್ಯಗಳೇ ಅವರ ಯೋಗ್ಯತೆಗೆ ಸಾಕ್ಷಿ ಹೇಳುತ್ತಿವೆ. ಅವರು ಕಾಂಗ್ರೆಸ್ ಅಧ್ಯಕ್ಷರಾದಾಗ ಅ ಕುರಿತು ಹಲವರು ಇಲ್ಲ ಸಲ್ಲದ ಮಾತು ಆಡಿದರು. ಅನುವಂಶಿಕವಾಗಿ ಅಧಿಕಾರ ಹಸ್ತಾಂತರ ಹೊಂದುತ್ತಿದೆಯೆಂದು ವಿರೋಧಿ ಪಕ್ಷಗಳು ಹೇಳಲಾರಂಭಿಸಿದುವು. ತಂದೆ ಪ್ರಧಾನಿ, ಮಗಳು ಕಾಂಗ್ರೆಸ್ ಅಧ್ಯಕ್ಷೆ, ಎಂಬ ಕೂಗು ಕೇಳಿಬಂತು. ಆದರೆ ಇಂದಿರಾ ಗಾಂಧಿ ಈ ಅಪವಾದಗಳಿಗೆ ಸರಿಯಾದ ಉತ್ತರವನ್ನು ತನ್ನ ಕಾರ್ಯ ಸಾಧನೆಗಳಿಂದ ಕೊಟ್ಟರು.

ದೇಶ ವಿದೇಶಗಳಲ್ಲಿ ಸಂಚರಿಸಿ ಅಪಾರ ಅನುಭವ ಪಡೆದಿರುವ ಇಂದಿರಾಗಾಂಧಿ ಇಂದು ಜಗದ್ವಿಖ್ಯಾತರಾಗಿದ್ದಾರೆ. ಅವರು ಯಾವ ದೇಶವನ್ನೇ ಸಂದರ್ಶಿಸಲಿ, ಯಾವ ಪತ್ರಿಕಾ ಪರಿಷತ್ತನ್ನು ಕುರಿತು ಮಾತಾಡಲಿ, ಭಾರತದ ಧ್ಯೇಯ-ಧೋರಣೆಗಳನ್ನು ಅತಿ ಉತ್ತಮ ರೀತಿಯಲ್ಲಿ ತಿಳಿಯಪಡಿಸುತ್ತಾರೆ. ಭಾರತದ ವಿದೇಶಾಂಗ ನೀತಿ ಹಾಗೂ ತಾಟಸ್ಥ್ಯ ಧೋರಣೆಗಳ ಕುರಿತು ಅತಿ ಪ್ರಭಾವಯುತವಾಗಿ ಮಾತಾಡಬಲ್ಲವರು ಅವರು ಒಬ್ಬರೇ.

ಲಂಡನ್ ಸಂದರ್ಶನದಿಂದ ಮರಳಿ ಬಂದ ಬಳಿಕ ಅವರು ವಾರ್ತಾ ಮತ್ತು ಪ್ರಸಾರ ಖಾತೆಯನ್ನು ಬಿಟ್ಟು ವಿದೇಶಾಂಗ ಖಾತೆಯನ್ನು ವಹಿಸಿಕೊಳ್ಳುವರೆಂಬ ಊಹಾಪೋಹೆ ಇದೆ. ಈಗ ಪ್ರಧಾನಿಯವರ ವಶವಿರುವ ಈ ಖಾತೆ ಇಂದಿರಾ ಗಾಂಧಿಯವರ ಕೈಗೆ ಹೋಗುವುದಾದರೆ ಇದು ಯೋಗ್ಯ ಬದಲಾವಣೆಯೇ. ಇಂದಿರಾ ಗಾಂಧಿಯವರು ನೆಹರೂರವರ ನಿಕಟವರ್ತಿ ಹಾಗೂ ಪುತ್ರಿಯಾದುದರಿಂದ ಅವರು ರೂಪಿಸಿದ ವಿದೇಶ ಧೋರಣೆ ಹಾಗೂ ನೀತಿಗಳನ್ನು ಅನುಸರಿಸುವುದರಲ್ಲಿ ಅಗ್ರಗಣ್ಯ ಪಾತ್ರ ವಹಿಸುವರು. ಈ ಊಹೆ ಸತ್ಯವಾದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಎಂ. ಸಿ. ಛಾಗ್ಲಾ

ನ್ಯಾಯಾಧೀಶ ಸ್ಥಾನವನ್ನಲಂಕರಿಸಿದವರೂ, ರಾಯಭಾರಿ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿದವರೂ, ದೇಶದ ಪ್ರತಿಭಾವಂತರಲ್ಲಿ ಒಬ್ಬರೂ ಆದ ಎಂ. ಸಿ. ಛಾಗ್ಲಾರವರು ಕೇಂದ್ರ ಶಿಕ್ಷಣ ಖಾತೆಯ ಮಂತ್ರಿಗಳಾದುದು ಎಲ್ಲರಿಗೂ ಹರ್ಷವನ್ನುಂಟು ಮಾಡಿತು. ಅವರ ಆಗಮನದಿಂದ ಶಿಕ್ಷಣ ಮಂತ್ರಿ ಶಾಖೆಯಲ್ಲಿ ಹೊಸ ಚೈತನ್ಯ ಉಂಟಾಗುವುದೆಂಬ ಎಲ್ಲರ ನಿರೀಕ್ಷೆಯನ್ನು ಅವರು

ಸತ್ಯವಾಗಿಸಿದರು. ಅವರು ಶಿಕ್ಷಣ ಮಂತ್ರಿಗಳಾದ ಕೂಡಲೇ ಶಿಕ್ಷಣ ಖಾತೆಯಲ್ಲಿದ್ದ ಹಲವಾರು ನಿರುಪಯೋಗಿ ಸಮಿತಿಗಳನ್ನು ಬರ್ಖಾಸ್ತುಗೊಳಿಸಿ, ಕ್ರಾಂತಿಯನ್ನೇ ಮಾಡಿದರು. ಶಿಕ್ಷಣ ಖಾತೆಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿ ಅವರು ಆ ಖಾತೆಗೆ ಜೀವ ತಂದು ಕೊಟ್ಟರು.

ಶ್ರೇಷ್ಠ ನ್ಯಾಯದರ್ಶಿಗಳಾಗಿದ್ದ ಛಾಗ್ಲಾ ಶಿಕ್ಷಣತಜ್ಞರೂ ಹೌದು. ಶಿಕ್ಷಣ ಕ್ಷೇತ್ರದ ಕುರಿತು ಅವರಾಡುವ ಮಾತುಗಳಲ್ಲಿ ಆಳವಾದ ಅನುಭವ ಕುದುಗಿದೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉಚ್ಚ ಶಿಕ್ಷಣದವರೆಗೆ ಅವರು ಎಲ್ಲವನ್ನೂ ಬಲ್ಲರು. ಶಿಕ್ಷಣ ಕ್ಷೇತ್ರದಲ್ಲಿ ಇಂದು ಬೇರು ಬಿಟ್ಟಿರುವ ಸಮಸ್ಯೆಗಳನ್ನು ನಿವಾರಿಸುವಲ್ಲಿ ಅವರಿಗೆ ಆಸ್ಥೆ ಇದೆ. ದೇಶದ ಪ್ರಗತಿಗೆ ಶಿಕ್ಷಣದ ಅಭಿವೃದ್ಧಿಯಾಗಬೇಕೆಂಬ ಅಭಿಪ್ರಾಯ ಅವರು ಮೊದಲಿನಿಂದಲೂ ತಾಳಿದ್ದಾರೆ.

ಕಳೆದ ತಾ. ೧೧ರಂದು ಅವರು ಬೆಂಗಳೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಉದ್ಘಾಟಿಸಿದರು. ಈ ಸಂದರ್ಭ ಅವರಾಡಿದ ಮಾತುಗಳು ಮನನೀಯವಾಗಿವೆ. ರಾಷ್ಟ್ರೀಯ ಭಾವೈಕ್ಯಕ್ಕೆ ಸಹಾಯವಾಗುವ ರೀತಿಯಲ್ಲಿ ಈ ನೂತನ ವಿಶ್ವವಿದ್ಯಾಲಯವು ದೇಶದ ಎಲ್ಲಾ ಭಾಗಗಳಿಂದಲೂ ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ಆಕರ್ಷಿಸಿ ಇಡೀ ದೇಶಕ್ಕೆ ಮಾದರಿಯಾಗಿ ಮಾರ್ಗದರ್ಶನ ಮಾಡಲಿ ಎಂದು ಅವರು ಹೇಳಿದರು. ವಿಶ್ವವಿದ್ಯಾಲಯಗಳು ದೇಶದ ಎಲ್ಲೆಡೆಗಳ ವಿದ್ಯಾರ್ಥಿಗಳಿಗೆ ಆಶ್ರಯಸ್ಥಾನವಾಗಬೇಕೆಂಬುದು ಅವರ ಅಭಿಮತ. ಇದರಿಂದ ರಾಷ್ಟ್ರೀಯ ಭಾವೈಕ್ಯಕ್ಕೆ ನೆರವಾಗುವುದೆಂದು ಅವರು ಹೇಳುತ್ತಾರೆ. ಈ ಮಾತು ನಿಜಕ್ಕೂ ಸತ್ಯ. ಆದರೆ ಇಂದಿನ ನಮ್ಮ ವಿಶ್ವವಿದ್ಯಾಲಯಗಳು ಈ ಭಾವನೆಯಿಂದ ದುಡಿಯುತ್ತಿವೆಯೇ ಎಂದು ಕೇಳಿದರೆ ಇಲ್ಲ ಎಂದೇ ಹೇಳಬೇಕಾಗುವುದು. ಪ್ರತ್ಯೊಂದು ವಿಶ್ವವಿದ್ಯಾಲಯವು ತನ್ನ ಕಾರ್ಯಕ್ಷೇತ್ರಕ್ಕೊಳಪಟ್ಟ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿ ಕೊಡುವುದರಲ್ಲೇ ನಿರತವಾಗಿದೆ. ಮಾತ್ರವಲ್ಲ, ಶಿಕ್ಷಣಾಪೇಕ್ಷಿಗಳಾಗಿ ಬಂದ ಬೇರೆ ವಿಶ್ವ ವಿದ್ಯಾಲಯದ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ಕೊಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಈ ಪ್ರಾದೇಶಿಕ ಭಾವನೆಯನ್ನು ವಿಶ್ವ ವಿದ್ಯಾಲಯಗಳು ಬಿಡಬೇಕು ಎಂಬುದು ಛಾಗ್ಲಾರ ಮತ. ಇದು ಎಲ್ಲ ವಿಶ್ವ ವಿದ್ಯಾಲಯಗಳೂ ಪರಿಶೀಲಿಸಿ, ಅನುಷ್ಠಾನಕ್ಕೆ ತರಬೇಕಾದ ಉತ್ತಮ ಸೂಚನೆ.

ಕಾಲೇಜುಗಳಲ್ಲಿ ದಟ್ಟಣೆ ಕಡಿಮೆಮಾಡುವುದಕ್ಕಾಗಿ ಅಂಚೆ ಶಿಕ್ಷಣ ಹಾಗೂ ಸಂಜೆ ತರಗತಿಗಳನ್ನು ತೆರೆಯಬೇಕೆಂದು ಶ್ರೀ ಛಾಗ್ಲಾ ಸೂಚಿಸಿರುವರು. ಇದನ್ನು ಮೈಸೂರು ವಿಶ್ವ ವಿದ್ಯಾಲಯದವರು ಆಸ್ಥೆಯಿಂದ ಅನುಷ್ಠಾನಕ್ಕೆ ತರುವುದು ಒಳಿತು. ಅಂಚೆ ಹಾಗೂ ಸಂಜೆತರಗತಿಗಳಿಂದ ಶಿಕ್ಷಣದ ಮಟ್ಟ ಕಡಿಮೆಯಾಗುವುದೆಂಬ ವಾದವು ಹುರುಳಿಲ್ಲದುದುಎಂಬುದು ಛಾಗ್ಲಾರ ಅನುಭೂತಿನಿಂದ ವ್ಯಕ್ತವಾಗುವುದು. ನಮ್ಮ ವಿಶ್ವವಿದ್ಯಾಲಯಗಳು ರಾಷ್ಟ್ರೀಯ ಭಾವೈಕ್ಯ ಸಾಧನೆಯಲ್ಲಿ ತಮ್ಮ ಅಪಾರ ಸೇವೆ ಸಲ್ಲಿಸುವ ಅವಕಾಶ ಪಡೆದಿವೆ. ಛಾಗ್ಲಾರ ಆಶಯ ಈಡೇರಿದರೆ ಆಗ ಭಾರತದಲ್ಲಿ ಐಕ್ಯ ಸಾಧನೆಯಾದಂತೆಯೇ ಸರಿ.



ಜನಾರ್ಧನ ನೆಲ್ಲಿ

ಹೋಟೇಲು ಉದ್ಯಮದಲ್ಲಿ ದಕ್ಷಿಣ ಭಾರತದಲ್ಲಿ ಉಡುಪಿಯವರು ಪ್ರಸಿದ್ಧಿಪಡೆ

(ಬೇರೆ ಪುಟ ನೋಡಿರಿ)

ವಾರದ ಕತೆ

ಆನಂದ

ಬರೆದವರು: ಶ್ರೀ ಕಂಸುವು ಗೋಪಾಲ.

"ಆನಂದಾ..."

ಘೋರ್ಗರೆವ ಕಡಲ ದಡದಲ್ಲಿ ಏಕಾಂಗಿಯಾಗಿ, ರಭಸದಿಂದ ಬೀಸುತ್ತಿದ್ದ ಗಾಳಿಗೆ ಮೈಯೊಡ್ಡಿ ಕುಳಿತು ಯಾವುದೋ ವಿಚಾರವನ್ನು ಮನದೊಳಗೇ ಚರ್ಚಿಸುತ್ತಾ ಬಾಹ್ಯ ಪ್ರಪಂಚದ ಇರವನ್ನೇ ಮರೆತು ತನ್ನದೇ ಆದ ಆದರ್ಶ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತಿದ್ದ ಆನಂದನಿಗೆ ತನ್ನನ್ನು ಯಾರೋ ಕರೆಯುತ್ತಿದ್ದುದು ಕೇಳಿಸಿ ಫಕ್ಕನೆ ಎಚ್ಚರವಾಯಿತು. ಒಂದರ ಮೇಲೊಂದು ತಾಮುಂದು ನಾಮುಂದೆಂಬಂತ ಸ್ಪರ್ಧಾ ಮನೋಭಾವವನ್ನು ತಳೆದು ದಡದ ಮರಳ ರಾಶಿಗೆ ಅಪ್ಪಳಿಸುತ್ತಿದ್ದ ಬೆಟ್ಟದಂತಹ ಅಲೆಗಳ ಕರ್ಕಶ ನಿನಾದದ ನಡುವೆ ತನ್ನ ಹೆಸರು ಅಸ್ಪಷ್ಟವಾಗಿ ಅಪರಿಚಿತ ಧ್ವನಿಯಂತೆ ಕೇಳಿ ಒಂದರೂ ಯಾರೋ ತನ್ನನ್ನೇ ಕರೆಯುತ್ತಿದ್ದಾರೆಂದು ತಿಳಿದು ಕಲ್ಪನೆಯ ಲೋಕವನ್ನು ತ್ಯಜಿಸಿ ಬಾಹ್ಯರಂಗಕ್ಕಿಳಿದ. ತನ್ನ ದೃಷ್ಟಿಯನ್ನು ಸುತ್ತ ಒಂದು ಬಾರಿ ಬೀರಿದನು. ಸೂರ್ಯನ ಸಂಜೆಯ ಕೆಂಪಾದ ಕಿರಣಗಳು ಆತನನ್ನು ಸ್ಪರ್ಶಿಸಿ ಒಂದು ಬಗೆಯ ಆನಂದವನ್ನೊದಗಿಸುತ್ತಿದ್ದುವು, ಗಾಳಿ ರಭಸದಿಂದ ಬೀಸುತ್ತಿತ್ತು. ಬೆಂಗದಿರನ ಕೆಂಗಿರಣಗಳ ಪ್ರತಿಫಲನದಿಂದ ಕಡಲಿನ ಅಲೆಗಳು ಶೋಭಾಯಮಾನವಾಗಿ ಕಾಣುತ್ತಿದ್ದುವು. ಪಶ್ಚಿಮ ದಿಕ್ಕಿನಲ್ಲಿ ಆಕಾಶ ನಾಚಿದ ಹೆಣ್ಣಿನ ಮುಖದಂತೆ ಕೆಂಪೇರಿತ್ತು. ತನ್ನ ಹೆಸರು ಕೇಳಿ ಬಂದೆಡೆ ಒಮ್ಮೆ ಕತ್ತೆತ್ತಿ ಕಣ್ಣರಳಿಸಿ ವೀಕ್ಷಿಸಿದ ಆನಂದ ಯಾರೋ ದೂರದಿಂದ ಬರುವಂತೆ ಕಾಣಿಸಿತು. ಶುಭ್ರವಾದ ಉಡಿಗೆ ಧರಿಸಿದ್ದ ವ್ಯಕ್ತಿ ತನ್ನೆಡೆಗೇ ಬರುತ್ತಿತ್ತು. ಬರುತ್ತಿದ್ದವನ ಕೇಶರಾಶಿಯು ಅಲರ ಸುಳಿತಕ್ಕೆ ಸಿಕ್ಕಿ ಕೆದರಿತ್ತು. 'ಆನಂದಾ' ಎನ್ನುತ್ತಾ ತನ್ನ ಬಳಿಯೇ ಬಂದ ವ್ಯಕ್ತಿಯ ಪರಿಚಯವಾಗಲು ಆನಂದನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ. ಬಳಿ ಬಂದ ಗೆಳೆಯ ಗೆಳೆಯನನ್ನು ತನ್ನೆರಡು ಕೈಗಳನ್ನು ಚಾಚಿ ಅಪ್ಪಿಕೊಂಡನು. ಹೃದಯದ ಕಡಲಿನಲ್ಲಿ ಎದ್ದ ಆನಂದದ ಅಲೆ ಎದುರಿಗಿದ್ದ ಕಡಲಿನ ಅಲೆಗಿಂತಲೂ ರಭಸವಾಗಿ ಉಕ್ಕಿ ಬಂತು. ಎರಡು ಸ್ನೇಹಜೀವಗಳ ಪರಸ್ಪರ ಮಿಲನವನ್ನು ಕಂಡು ಸಮುದ್ರದ ಅಲೆಗಳು ಸೂರ್ಯನ ಕಿರಣಗಳೊಂದಿಗೆ ಹಾಡಿ ನಲಿಯುತ್ತಿತ್ತು— ಪ್ರಕೃತಿಯ ಆಗಿನ ರಮಣೀಯ ದೃಶ್ಯ.

"ನಾನಿಲ್ಲಿರುವುದು ನಿನಗೆ ಹೇಗೆ ತಿಳಿಯಿತು ಸುಂದರ?" —ಆನಂದನೇ ತಮ್ಮಲ್ಲಿದ್ದ ಮೌನವನ್ನು ಭೇದಿಸಿ ಕೇಳಿದನು.

"ನೀನಿರುವ ಸ್ಥಳ ನನಗೆ ತಿಳಿಯದೇ ಆನಂದ! ಮನೆಗೆ ಬಂದೆ, ನೀನಿರಲಿಲ್ಲ ಅಲ್ಲಿ, ತಕ್ಷಣ ಇಲ್ಲಿಗೆ ಬಂದೆ. ಹುಲ್ಲುಗಾವಲು, ಕಾಡು, ಬೆಟ್ಟ, ಸಮುದ್ರತೀರ, ನದೀ ತೀರ ಇವೆಲ್ಲಾ ನೀನಿರುವ ಸ್ಥಳಗಳಲ್ಲವೇ! ನಾಲ್ಕು ಜನ ಸೇರುವೆಡೆ ನೀನಿರುವುದು ಅಪೂರ್ವವೆಂದು ನನಗರಿಯದೇ! ಅದೆಲ್ಲಾ ಇರಲಿ, ಇಂದು ಇಲ್ಲಿ ಏನನ್ನು ಯೋಚಿಸುತ್ತಾ ಇರುವೆ?"

ಆನಂದನ ಹುಟ್ಟುಗುಣವೇ ಯೋಚಿಸುತ್ತಾ ಇರುವುದು. ಯಾವಾಗ ನೋಡಿದರೂ ಯೋಚನೆ, ಎಲ್ಲಿ ನೋಡಿದರೂ ಯೋಚನೆ. ಅವನ ಯೋಚನೆಗೆ ಕೊನೆ ಮೊದಲೇ ಇಲ್ಲ. ಆನಂದ—ಸುಂದರರ ಸ್ನೇಹ ತುಂಬ ಹಳೆಯದು. ಇಬ್ಬರೂ ಒಂದೇ ತರಗತಿಯಲ್ಲಿ ಓದಿ ಒಟ್ಟಿಗೇ ತೇರ್ಗಡೆಯಾಗಿದ್ದವರು. ಯಾರ ತಂಟೆಗೂ ಹೋಗದೆ ಯಾರೊಡನೆಯೂ ಅತಿ ಮಾತಾಡದೆ ಇರುತ್ತಿದ್ದ ಆನಂದನ ವ್ಯಕ್ತಿತ್ವ ಸುಂದರನಿಗೆ ಬಹುಪ್ರಿಯವಾಗಿ ಕಂಡಿತು. ಆನಂದ ಯಾವುದೋ ಆದರ್ಶಕ್ಕಾಗಿ ಹಾತೊರೆಯುತ್ತಿದ್ದಾನೆ ಎಂಬುದು ತಿಳಿದಿತ್ತು ಸುಂದರನಿಗೆ. ವಿಶ್ವ ವಿಶಾಲ ವ್ಯಕ್ತಿಯಾಗಿ, ಲೋಕ ಸೇವಕನಾಗಿ, ಮಾನವ ಕಲ್ಯಾಣಕ್ಕಾಗಿ ಹೆಣಗಾಡಬೇಕೆಂದೂ ಮಹದಾಸೆ ಆನಂದನಲ್ಲಿ ಮನೆಮಾಡಿತ್ತು. ಆದರೆ ಅದಕ್ಕೆ ಅವಕಾಶ ಸಿಗಲಿಲ್ಲ.

....ಅಂದು. ಅಂದೊಮ್ಮೆ ಕಾಲೇಜಿಗೆ ಹೋಗುತ್ತಿದ್ದಾಗ ಕೇಳಿದ್ದ ಸುಂದರ. ತರಗತಿಯಲ್ಲಿ ಆನಂದ ಮೊದಲನೆಯವನಾಗಿದ್ದರೂ ಅವನಲ್ಲಿ ಸಂತೋಷ ವಿರಲಿಲ್ಲಿ ಉತ್ಸಾಹವಿರಲಿಲ್ಲ 'ಎಲ್ಲರೂ ನಗು ನಗುತ್ತಾ ಇರುವಾಗ, ಎಲ್ಲರೂ ಆನಂದ ಪರವಶವಾಗಿರುವಾಗ, ಎಲ್ಲರೂ ಸುಖವಾಗಿ ಮೆರೆಯುತ್ತಾ ಇರುವಾಗ ನೀನೇಕೆ ಹೀಗೆ ಮಂಕನಾಗಿ; ನಿರುತ್ಸಾಹಿಯಾಗಿ, ಆನಂದ ರಹಿತನಾಗಿ ಇದ್ದೀಯ? ನಿನ್ನನ್ನು ಬಾಧಿಸುತ್ತಿರುವ ಯೋಚನೆಯಾದರೂ ಏನು ಹೇಳು?'

ಅದಕ್ಕೆ ಆನಂದ ಉತ್ತರ ಕೊಟ್ಟಿದ್ದ- 'ನನಗೆ ಎಲ್ಲೂ ಆನಂದ ಕಾಣುತ್ತಿಲ್ಲ ಸುಂದರ. ಎಲ್ಲಿ ನೋಡಿದರೂ ನನಗೆ ಕಷ್ಟ ಕಾರ್ಪಣ್ಯ ದುಃಖ, ನಿರಾಶೆಗಳೇ ಎದ್ದು ಕಾಣುತ್ತಿವೆ. ಮದ ಮಾತ್ಸರ್ಯ ಅಹಂಕಾರಗಳೇ ಕಣ್ಣ ಮುಂದೆ ಬಂದು ನಿಲ್ಲುತ್ತಿವೆ. ಈ ಜನ, ಈ ಜನದ ಮನ ಹೀಗೇಕೆ ಒದ್ದಾಡುತ್ತಿದೆಯೋ ನನಗೆ ತಿಳಿಯುವುದಿಲ್ಲ. ಪ್ರತಿನಿತ್ಯ ಜಗಳ, ಹೊಡೆದಾಟ; ಕೊಲೆ, ಸುಲಿಗೆ, ಲೂಟಿ, ಮೋಸ ಕೃತ್ಯಗಳೇ ಜರಗುತ್ತಿರುವುದನ್ನು ಕಾಣಬೇಕಾಗಿದೆ. ಒಂದು ಕಡೆ ಬಡತನದ ಹೆಮ್ಮಾರಿ ಕುಣಿಯುತ್ತಿದೆ, ಇನ್ನೊಂದೆಡೆ ಸಿರಿತನದ ಭೂತ ಅರಚುತ್ತಿದೆ. ಒಂದೆಡೆ ಕಲಿತವರ ಹರ್ಷ, ಇನ್ನೊಂದೆಡೆ ಕಲಿಯುವವರ ದರ್ಪ. ಅಧಿಕಾರ ಐಶ್ವರ್ಯಗಳಿಗಾಗಿ ಹೋರಾಟ ನಡೆಯುತ್ತಿದೆಯೇ ಹೊರತು ಜ್ಞಾನ ಸಂಪಾದನೆಗಾಗಿ ನಡೆಯುತ್ತಿಲ್ಲ. ನಮ್ಮಲ್ಲಿ ಬಹುಜನರ ನಡತೆಯೇ ಹೀಗಾಗಿದೆ. ನಾವು ಕಲಿಯುತ್ತಿರುವ ವಿದ್ಯೆ ಅತ್ಯಲ್ಪ. ಜ್ಞಾನ ಎಷ್ಟು ಇದೆ! ವಿಜ್ಞಾನ, ಕಲೆ, ಸಾಹಿತ್ಯ, ಸಂಗೀತ, ಶಿಲ್ಪ, ಗಣಿತ—ಒಂದೊಂದು ವಿಭಾಗದಲ್ಲೂ ಜೀವನವಿಡೀ ಕಲಿಯುವ ವಿಚಾರವಿದೆಯಲ್ಲಾ! ಅನಂತದಷ್ಟು ಜ್ಞಾನದ ಒಂದು ಅಣುವನ್ನು ಕರಗತ ಮಾಡಿಕೊಳ್ಳಲು ನಮ್ಮಲ್ಲಿ ಎಷ್ಟು ಜನರಿಂದ ಸಾಧ್ಯವಾಗಿದೆ? ವಿಶ್ವದಲ್ಲಿ ಇಂದು ಕೆಲವೆಡೆ ನಡೆಯುತ್ತಿರುವ ಪ್ರಗತಿಯನ್ನು ಕಂಡರೆ ನಮ್ಮ ಜ್ಞಾನವೆಲ್ಲಿಯದು ಎಂಬಂತಾಗಿದೆ. ಸಂಶೋಧನೆಗಳು, ಪ್ರಯೋಗಗಳು ನಡೆಯುತ್ತಲೇ ಇವೆ. ಒಂದೆಡೆ ಆಕಾಶವನ್ನು ಚುಂಬಿಸಿ ಬಂದಿದ್ದರೆ ಮತ್ತೊಂದೆಡೆ ಭೂಗರ್ಭದ ಹುಡುಕಾಟ ಆರಂಭವಾಗಿದೆ. ಆದರೆ ನಾವಿನ್ನೂ ಕೂಸುಗಳು. ಆದರೂ ನಮ್ಮಲ್ಲಿ ಅಂದರೆ ನಮ್ಮಂಥ ವಿದ್ಯಾರ್ಥಿಗಳಲ್ಲಿ ಎಷ್ಟೊಂದು ಮದ, ಮಾತ್ಸರ್ಯ, ಅಹಂಕಾರಗಳು ಬೇರೂರಿವೆ ನೋಡು. ಒಂದೆರಡು ಪುಸ್ತಕಗಳನ್ನು ಓದಿದೊಡನೆಯೇ ನಾವು ಬೃಹಸ್ಪತಿಗಳಾಗಲಾರೆವು, ಜ್ಞಾನಿಗಳಾಗಲಾಗಲಾರೆವು. ಅದಕ್ಕೆ ಬೇಕು ಸಹನೆ, ಸಂಯಮ, ಸಹೃದಯತೆ. ಜ್ಞಾನದ ಗಂಧವಿಲ್ಲದೆ, ಮಾನವತೆಯ ಅರಿವಿಲ್ಲದೆ ಮೆರೆಯುವ ಜನರ ನಾಡಾಗಿದೆ ನಮ್ಮದು ಇದು. ನಾಲ್ಕಕ್ಷರ ಕಲಿತೊಡನೆ ತಾನೇ ಸರಸ್ವತಿ ಪುತ್ರನಾದೆವೆಂದುಕೊಂಡು ಕುಣಿದಾಡುವವರಿಗೆ ಈ ಪ್ರಪಂಚವೇ ಸಾಲದಾಗಿದೆ. ಬಾಹ್ಯರೂಪದಲ್ಲಿ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರೂ ಮಾನಸಿಕ ತೃಪ್ತಿಯಿಂದ ಬಾಳುತ್ತಿರುವ ಜನವೆಷ್ಟಿದ್ದಾರೆ ಹೇಳು! ನನ್ನ ಮನ ಇಂದು ಯೋಚಿಸುತ್ತಿದೆ—ಸಂತೋಷವಾಗಿರಬೇಕಾದರೆ ಏನು ಮಾಡಬೇಕು? ಎಂದು. ಕಸದಲ್ಲೇ ರಸವನ್ನು ಕಂಡು ಜೀವನವನ್ನು ಸಾರವತ್ತಾಗಿ ಮಾಡಿ ಎಲ್ಲರೊಡನೆ ಬೆರೆತು ಎಲ್ಲದರಲ್ಲೂ ಪಾಲ್ಗೊಂಡು ಯೋಚನೆಯನ್ನು ತೊರೆದು ಬಾಳಬೇಕೇ ಅಥವಾ ಎಲ್ಲವನ್ನೂ ದೂರದಲ್ಲೇ ಕಾಣುತ್ತಾ ಅದರ ಸ್ಥಿತಿಗತಿಗಳನ್ನು ವಿಮರ್ಶಿಸುತ್ತಾ ಅಂಕುಡೊಂಕುಗಳನ್ನು ಸರಿಪಡಿಸುತ್ತಾ ಕುಳಿತು ಕೊಂಡಿರಲೇ ಎಂದು—ಆನಂದನ ಉತ್ತರ ಕೇಳಿ ಬೆರಗಾಗಿದ್ದ ಸುಂದರ.

ಆದರೆ ಇಂದು ಕೇಳಿದ ಸುಂದರನ ಪ್ರಶ್ನೆಗೆ ಆನಂದನ ಉತ್ತರವೇ ಸಿಗಲಿಲ್ಲ. ಆನಂದ ತನ್ನ ಗಲ್ಲಕ್ಕೆ ಕೈಯಿಟ್ಟು ಅಧೋವದನನಾಗಿ ಹೊಯಿಗೆಯ ರಾಶಿಯನ್ನು ಕಾಲ ಬೆರಳಿನಿಂದ ಕೆದಕಲಾರಂಭಿಸಿದ. ಮದುವೆಯ ವಿಚಾರವೇನಾದರೂ ಆಲೋಚಿಸುತ್ತಿದ್ದೀಯಾ?' ಎಂದು ಪ್ರಶ್ನಿಸಿದ ಸುಂದರ. "ಮದುವೆ" ಎಂಬ ಶಬ್ದ ಕೇಳಿದೊಡನೆಯೇ ಅದರ ವಿಚಾರದಲ್ಲಿ ತಾತ್ಸಾರತೋರುತ್ತಿದ್ದ ಆನಂದ. ಹಿಂದೊಮ್ಮೆ ಅದರ ಬಗ್ಗೆ ಆನಂದ ತುಂಬ ಚರ್ಚಿಸಿದ್ದ ಸುಂದರನೊಡನೆ.

...ಒಂದು ದಿನ- ಕಾಲೇಜಿನ ದಿನಗಳು ಕಳೆದ ಮೇಲೆ ದಾರಿಯಲ್ಲಿ ಸಿಕ್ಕಿದ ಆನಂದನನ್ನು ಕೇಳಿದ್ದ ಸುಂದರ—ನಿನ್ನ ಮದುವೆ ಯಾವಾಗ ಆನಂದ?"-ಎಂದು.

"ಏನು ಮದುವೆಯೇ? ಮದುವೆಯೊಂದಾದರೆ ಜೀವನದಲ್ಲಿ ಎಲ್ಲಾ ಆದಂತೆಯೇ ನಿನ್ನ ಅಭಿಪ್ರಾಯ'

'ಹಾಗಲ್ಲ ಆನಂದ, ವಯಸ್ಸಿಗನುಗುಣವಾಗಿ ಆಗಬೇಕಾದ್ದೆಲ್ಲ ಆಗಲೇ ಬೇಕಲ್ಲ'

'ನಿನ್ನ ವಾದವನ್ನು ಒಪ್ಪುತ್ತೇನೆ, ಮದುವೆ ಬೇಡವೆಂದು ಯಾರೂ ಹೇಳುವುದಿಲ್ಲ, ಪ್ರತಿ ಮನುಷ್ಯನೂ ಯೌವನ ಕಾಲದಲ್ಲಿ ಮದುವೆಯಾಗಲು ಬಯಸುತ್ತಾನೆ, ನಾನಾ ಆಸೆಗಳ ಕನಸು ಕಾಣುತ್ತಾನೆ. ಕೆಲವರಂತೂ ಹಿರಿಯರ ಒತ್ತಾಯಕ್ಕೋ, ಮಾನಸಿಕ ದೌರ್ಬಲ್ಯಕ್ಕೋ ಒಳಗಾಗಿ ಚಿಕ್ಕಂದಿನಲ್ಲೇ ಮದುವೆಯಾಗುತ್ತಾರೆ. ಕೆಲವರು ಮೂವತ್ತು ಮೂ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಹಿಂದಿನಿಂದಲೂ ಬೆಳೆದು ಬಂದ

ಚೈನಿ ಸಿಲೋನ್ ಸಂಬಂಧ

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಸಿಂಹಳಕ್ಕೆ ಆಗಮಿಸಿದ್ದ ಚೈನಾದ ಪ್ರಧಾನಿ ಚೌ-ಎನ್-ಲೈ ಅಲ್ಲಿನ ಅಂಗನೆಯರ ಪ್ರಗತಿಯನ್ನು ಕಂಡು ಅವಕ್ಕಾಗಿ ಹೋದರು. ಅದರ ವಿವರವನ್ನು ಕಳೆದ ವಾರ ವಾಚಕರ ಮುಂದಿಟ್ಟಿರುತ್ತದೆ. ಕೆಳಗೆ ಬಿದ್ದರೂ ಮೀಸೆಗೆ ಮಣ್ಣು ತಾಗಿಲ್ಲವೆನ್ನುವ ಜಟ್ಟಿಗಳಂತೆ ಚೌ-ಎನ್-ಲೈ ಕೂಡಾ ಸಿಲೋನಿ ಸ್ತ್ರೀ ಬಹಳಷ್ಟು ಸುಧಾರಿಸಿಕೊಂಡಿದ್ದು, ಚೈನಿ ಚಂಚಲೆ ಚೇತ್ಕಾರವೆಬ್ಬಿಸಿಕೊಂಡಿದ್ದರೂ ಕೂಡಾ, ಸಿಲೋನಿಗೂ ಚೈನಾಕ್ಕೂ ಬಹಳ ಹಿಂದಿನ ಸಂಬಂಧವಿದೆ. ಅದನ್ನು ಮುಂದಕ್ಕೆ ಬೆಳೆಸಿಕೊಳ್ಳಬೇಕೆಂದು ಹೇಳಿರುವರು. ಸಿಲೋನಿಗೂ ಚೈನಾಕ್ಕೂ ಹಿಂದೆ ಸಂಬಂಧ—ಸಂಪರ್ಕವಿತ್ತೇ? ಹಿಂದೆ ಅಂದರೆ ಯಾವಾಗ? ಹಿಂದಿನ ಚೈನಾವಾಗಲೀ, ಲಂಕೆಯಾಗಲೀ ಇಂದು ತಾತ್ವಿಕ ದೃಷ್ಟಿಯಲ್ಲಿ ಅಸ್ತಿತ್ವದಲ್ಲಿರುವದಿಲ್ಲ. ಚೌ ಕನ್‌ಫ್ಯೂಸಿಯಸನ ತತ್ವಗಳನ್ನು ನಂಬಲು ಸಿದ್ಧರಿಲ್ಲ. ಅಲ್ಲಿನ ದೇವ—ದೇವತೆಗಳೂ, ಬುದ್ಧನೂ ಇಂದು ಭೂಗತರಾಗಿದ್ದು ಆ ಸ್ಥಾನವನ್ನು ಲೆನಿನ್-ಮಾವೋ-ಚೌ ಆಕ್ರಮಿಸಿಕೊಂಡಿದ್ದಾರೆ. ಸಿಲೋನಿನ ಸ್ಥಿತಿಯೂ ಅಷ್ಟೇ.

ಅಖಿಲ ಜಗತ್ತಿನಲ್ಲಿ ಒಂದೇ ಧರ್ಮ ಹಬ್ಬಿದ್ದು, ಭಾರತವು ಜಗದ್ಗುರುವಾಗಿದ್ದಾಗ ಶ್ರೀ ಲಂಕೆಗೂ ಚೀನಾಕ್ಕೂ ಸಂಬಂಧ—ಸಂಪರ್ಕವಿತ್ತು. ಅಲ್ಲದೆ ಬೌದ್ಧ ಮತ ಎರಡು ದೇಶಗಳಲ್ಲೂ ಹಬ್ಬಿಕೊಂಡಿದ್ದಾಗಲೂ ಸಂಪರ್ಕವಿತ್ತು. ಚೈನಾದಲ್ಲೀಗ ಬೌದ್ಧ ಮತ ಹೆಸರಿಗೆ ಮಾತ್ರ ಇದೆ. ಸಿಲೋನಿನಲ್ಲಿ ಬೌದ್ಧ ಮತ ಇಗೆಯಾದರೂ ಅಷ್ಟು ಪ್ರಭಾವದಲ್ಲಿಲ್ಲ. ಅಲ್ಲಿನ ಸರಕಾರದಲ್ಲಿ ಮಾರ್ಕ್ಸ್‌ವಾದಿಗಳಿಗೂ ಪಾಲಿದೆ.

ಸಿಂಹಳದಲ್ಲಿ ಒಂದು ಶಿಲಾಲೇಖನವಿದೆ. ಅದು ಅಲ್ಲಿಯ ಗಲ್ಲಿ ಎಂಬಲ್ಲಿ ದೊರಕಿದುದು. ಗಲ್ಲಿಯು ಉತ್ತಮ ಬಂದರು ಸ್ಥಳವಾಗಿದೆ. ಕೊಲಂಬೋ, ತ್ರಿಕೋಣಮಲೆ ಮತ್ತು ಗಲ್ಲಿಯು ಅಲ್ಲಿನ ದೊಡ್ಡ ಬಂದರು. ತ್ರಿಕೋಣಮಲೆಯು ನೌಕಾ ವಿಭಾಗದ ರಾಣ್ಯವಾಗಿತ್ತು. ಅದನ್ನು ಬ್ರಿಟಿಷರು ಚೆನ್ನಾಗಿ ಬೆಳೆಸಿದ್ದರು. ಚೈನಿ ಕಮ್ಯೂನಿಸ್ಟರಿಗಂತೂ ಈ ಬಂದರುಗಳ ಮೇಲೆ ಕಣ್ಣು. ಪೆಕಿಂಗಿನಿಂದ ನೌಕಾ ತಜ್ಞರು ಸಿಂಹಳಕ್ಕೆ ಬಂದು ಈ ಬಂದರುಗಳ ಮಾಹಿತಿ ಪಡೆದುಕೊಂಡು ಹೋಗಿರುವರು. ಚೈನಾ—ಸಿಂಹಳಗಳ ನಡುವೆ ವ್ಯಾಪಾರವೂ ಪ್ರಗತಿ ಹೊಂದಿರುತ್ತದೆ. ಕಳೆದ ವರ್ಷ ಚೈನಾವು ಸುಮಾರು ನಲ್ವತ್ತು ಮಿಲಿಯ ರೂಪಾಯು ಬೆಲೆಬಾಳುವ ಸಾಮಾಗ್ರಿಗಳನ್ನು ರಫ್ತು ಮಾಡಿತ್ತಾದಲ್ಲಿ, ಈ ವರ್ಷ ಸುಮಾರು ನೂರಮೂವತ್ತೆಂಟು ಮಿಲಿಯ ರೂಪಾಯಿ ಬೆಲೆಬಾಳುವ ಸಾಮಾಗ್ರಿಗಳನ್ನು ರಫ್ತು ಮಾಡಿರುತ್ತದೆ. ಹೀಗೆ ವಾಣಿಜ್ಯ ಸಂಪರ್ಕ ಬೆಳೆಯುತ್ತಿದೆ.

ಗಲ್ಲಿಯಲ್ಲಿ ಸಿಕ್ಕಿರುವ ಶಿಲಾ ಲೇಖನವನ್ನು ಮೂರು ಭಾಷೆಗಳಲ್ಲಿ ಬರೆದಿರುವರು. ಇದನ್ನು ಯಂಗ್-ಲೋ ರಾಜನು ಕೆತ್ತಿಸಿರುವನು. ಇತರ ಕೆಲವೆಡೆಗಳಲ್ಲಿ ಕೂಡಾ ಅವನು ಅದೇ ರೀತಿ ಶಿಲಾ ಲೇಖನಗಳನ್ನು ನೆಡಿಸಿರುವನು. ಈ ಚೆಂಗ್-ಹೋನು ಸಿಂಹಾಸನವನ್ನೇರಿರುವ ಘಟನೆಯನ್ನು ತಿಳಿದುಕೊಂಡರೆ ಸಿಂಹಳ - ಚೈನಾ ಮತ್ತು ಪಾಕಿಸ್ತಾನಿಗಳ (ಪಾಕಿಸ್ತಾನದವಲ್ಲ) ನಡುವಣ ಸಂಬಂಧ ಸಂವರ್ಧಿಸುತ್ತಿರುವದರ ಕುರಿತು ಆಶ್ಚರ್ಯವಾಗಲಿಕ್ಕಿಲ್ಲ.

ಚೈನಾವನ್ನು ಹಲವಾರು ವಂಶಗಳು ಆಳಿಕೊಂಡಿದ್ದುವು. ಹಿಂದಿನ ಒಂದು ಲೇಖನದಲ್ಲಿ ಚೈನಾ ಯಾವಾಗ ಇಷ್ಟು ದೊಡ್ಡದಾಯಿತೆಂಬುದರ ವಿವರ ಕೊಡಲಾಗಿರುತ್ತದೆ. ೧೩೬೮ರಲ್ಲಿ ಮಿಂಗ್ ವಂಶದವರು ಚೈನಾದ ಸಿಂಹಾಸನವನ್ನೇರಿದರು. ಅವರು ಅನ್ಯನಾಡುಗಳೊಡನೆ ಸಂಪರ್ಕ ಬೆಳೆಸಿಕೊಳ್ಳಲು ಪ್ರಾರಂಭಿಸಿದರು. ಹೆಚ್ಚಾಗಿ ಅವರು ಕಡಲು ದಾರಿಯಾಗಿ ಪೂರ್ವ ಏಷ್ಯಾದ ರಾಜ್ಯಗಳ ಮೇಲೆ ದಂಡೆತ್ತಿಕೊಂಡು ಹೋಗುತ್ತಿದ್ದರು. ಸುಮಾರು ನೂರು ವರ್ಷಗಳ ಕಾಲ ಅವರ ಕಾರುಭಾರು ನಡೆಯಿತು.

ಸಿಂಹಾಸನಾರೋಹಣದ ಮರುವರ್ಷ, ಅಂದರೆ ೧೩೬೯ರಲ್ಲಿ ಪ್ರಥಮ ಮಿಂಗ್ ಚಕ್ರವರ್ತಿ ಟ್ಯಾ-ಟ್ಸು ಕೊರೊಮಂಡಲ ಕರಾವಳಿ ಪ್ರದೇಶಕ್ಕೆ ಮಹತ್ವದ ಘಟನೆಗಳನ್ನು ತಿಳಿಸಲು ಒಂದು ತಂಡವನ್ನು ಕಳುಹಿಸಿದನು. ಹಾಗೆಯೇ ೧೩೭೦ರಲ್ಲಿ ಪುನಃ ಇನ್ನೊಂದು ತಂಡವನ್ನು ಕಳುಹಿಸಿದನು. ೧೪೦೨ರಲ್ಲಿ ಯಂಗ್-ಲೋ ಸಿಂಹಾಸನವನ್ನೇರಿದಾಗ ಮತ್ತೊಂದು ತಂಡವನ್ನು ಕೊರೊಮಂಡಲಕ್ಕೆ ಕಳುಹಿಸಿದನು. ೧೪೦೫ರಲ್ಲಿ ಹಿಂದೂದೇಶದಿಂದ ಇಬ್ಬರು ವ್ಯಾಪಾರಿಗಳು ಅಲ್ಲಿಗೆ ಹೋಗಿದ್ದರು. ಅವರು ಚಕ್ರವರ್ತಿಗೆ ಕಾಣಿಕೆಯನ್ನಾಗಿ ಕುದುರೆಗಳನ್ನಿತ್ತರು, ಕುದುರೆಗಳನ್ನು ಕಂಡು ಸಂತುಷ್ಟನಾದ ಚಕ್ರವರ್ತಿಯು ವ್ಯಾಪಾರಕ್ಕೆ ಅನುಮತಿಯಿತ್ತನು. ಅವರು ತೆರಿಗೆ ಕೂಡಾ ತೆರಬೇಕಾಗಿರಲಿಲ್ಲ. ಅವರು ಕರಿಮೆಣಸನ್ನೊಯ್ದಿದ್ದರು. ಅದೇರೀತಿ ಲಂಕೆಯಿಂದಲೂ ವ್ಯಾಪಾರಿಗಳು ಬರುತ್ತಿದ್ದರು.

ಈ ಯಂಗ್-ಲೋ ಪಟ್ಟವನ್ನೇರುವಾಗ ಒಂದು ಚಿಕ್ಕ ಘಟನೆ ನಡೆದಿರುತ್ತದೆ. ಅವನ ದಾಯಾದಿಯು ನಿಜವಾಗಿ ಸಿಂಹಾಸನವನ್ನೇರಬೇಕಾಗಿತ್ತು. ಅವನ ಹೆಸರು ಯುನ್—ವೆನ್. ಅವನು ೧೩೯೮ರಿಂದ ೧೪೦೨ರ ವರೆಗೆ ಆಳಿಕೊಂಡಿದ್ದನು. ಅವನು ಉತ್ತಮ ರಾಜಕಾರಣಿ ಹಾಗೂ ಧೀರ ಸೇನಾನಿಯೆಂದು ಹೆಸರುಗಳಿಸಿದನು. ಆಗ ಚೆಂಗ್—ಹೋ ಎಂಬ ಫಕೀರನು ಅಲ್ಲಿದ್ದನು. ಅವನ ಅಜ್ಜ ಆಟಿವನ ಅಪ್ಪ ಮಕ್ಕ—ಮದೀನಗಳಿಗೆ ಹಾಜ್ ಹೋಗಿಯೋಗಿ ಬಂದಿದ್ದರು ಅವರು ಅನ್ಯ ರಾಷ್ಟ್ರಗಳ ಕುರಿತು ವಿವರಗಳನ್ನು ಅವನಿಗೆ ತಿಳಿಸಿದ್ದರು. ಫಕೀರನಿಗೆ ಗಣ್ಯವೇನಿದೆ? ಆದರೂ ಅವನ ನಾಲಗೆಗುಲ್ಲಿ ಆಗಲೇ ನೀರೂರಿತ್ತು. ಹಲವಾರು ದೇಶ ವಿದೇಶಗಳನ್ನು ಕಾಣಬೇಕೆನ್ನುವ ಹಂಬಲದ ಬೀಜ ಅವನ ಮನೋಭೂಮಿಯಲ್ಲಿ ಮೊಳಕೆಯೊಡೆದಿತ್ತು, ಅವನಾದರೋ ಹಗಲು ಕನಸು ಕಾಣುತ್ತಾ ಮನಸ್ಸಿನ ಲ್ಲೇ ಮಂಡಿಗೆ ತಿನ್ನುತ್ತಿರಲಿಲ್ಲ. ತನ್ನ ಅಭೀಷ್ಟದ ಪೂರ್ತಿಗಾಗಿ ಸಂಚಿಕೆಗೆ ಮುಂದಾದನು. ಅವನು ಯುನ್-ವೆನ್‌ನನ್ನು ಕೆಳಗಿಳಿಸಿ ಯಂಗ್-ಲೋನನ್ನು ಪಟ್ಟದಲ್ಲಿ ಕುಳ್ಳಿರಿಸಿದನು. ತನ್ನ ಆಸೆಯಂತೆ ಅವನು ಅನೇಕ ಬಾರಿ ಪ್ರಪಂಚ ಪ್ರದಕ್ಷಿಣೆಗೆ ಹೋಗಿದ್ದನು. ಹೀಗೆ ಏಳು ಬಾರಿ ಹೋಗಿರುವ ಕುರಿತು ಶಿಲಾಲೇಖದಲ್ಲಿ ತಿಳಿಸಲಾಗಿರುತ್ತದೆ. ಚಕ್ರವರ್ತಿಯು ಆ ಶಿಲಾಲೇಖಗಳನ್ನು ಕೆತ್ತಿಸಿರುವನು. ಅಂತಹ ಒಂದು ಶಿಲಾಲೇಖವೇ ಗಲ್ಲಿಯಲ್ಲಿ ಸಿಕ್ಕಿದುದು.

ಇದರಿಂದ ಕೆಲ ವಿಷಯಗಳು ಸ್ಪಷ್ಟವಾಗುತ್ತವೆ. ಸಿಲೋನಿಗೂ ಚೈನಾಕ್ಕೂ ವ್ಯಾಪಾರ ಸಂಪರ್ಕ ವಿದ್ದುದರಿಂದ ಯಂಗ್ ಲೋನ ಶಿಲಾಲೇಖ ಸಿಂಹಳದಲ್ಲಿ ಸಿಕ್ಕಿರುತ್ತದೆ. ಅಂದರೆ ಆಗ ಅವುಗಳ ನಡುವೆ ಸಂಪರ್ಕ ವಿತ್ತು.

ಇನ್ನೊಂದು ಮುಖ್ಯ ವಿಷಯವೆಂದರೆ ಮುಸಲ್ಮಾನರಿಗೂ ಚೈನಿಯರಿಗೂ ಇರುವ ಸಂಬಂಧ. ಇಸ್ಲಾಂ ಆಗಲೇ ಚೈನಾದಲ್ಲಿ ಹಬ್ಬಿದ್ದು ಅದು ಸಿಂಹಾಸನವನ್ನೂ ಅಲುಗಾಡಿಸುತ್ತಿತ್ತು. ಮಹಮ್ಮದೀಯ ಮತಕ್ಕೆ ಅಲ್ಲಿ ಅಷ್ಟು ಮಹತ್ವವಿರದಿದ್ದರೆ ಫಕೀರ ಆ ಪಾತ್ರವನ್ನು ವಹಿಸುವಂತಿರಲಿಲ್ಲ. ತನ್ನ ವೈಯಕ್ತಿಕ ಜಾಣಾಕ್ಷತನದಿಂದ ಆವನು ಚಕ್ರವರ್ತಿಯ ಮನಸೆಳೆದುಕೊಂಡಿರಬಹುದು ಆದರೆ ಇಸ್ಲಾಮಿನಲ್ಲಿ ಎದೆ ಇರದಿರುತ್ತಿದ್ದಲ್ಲಿ ಇತರರು ಅವರನ್ನೋಡಿಸಲು ಹವಣಿಸುತ್ತಿದ್ದರು. ಇಲ್ಲಿ ಇನ್ನೊಂದು ವಿಷಯವಿದೆ. ಒಂದು ಶಿಲಾಲೇಖ ಅದನ್ನು ಸೂಚಿಸುತ್ತದೆ, ಆ ಶಿಲಾಲೇಖದ ಪ್ರಕಾರ ಚೆಂಗ್-ಹೋನ ಹಿಂದಿನವರು ಮಹಮ್ಮದೀಯ ಮತಕ್ಕೆ ಸೇರಿದವರಂತೆ ಕಂಡುಬರುತ್ತದೆ ಅದನ್ನು ಸೂಚಿಸಲಿಕ್ಕಾಗಿ ಅವರ ಹೆಸರಿನಲ್ಲಿ 'ಮ' ಅಕ್ಷರವನ್ನು ಕುಟುಂಬ ಸೂಚಕವನ್ನಾಗಿ ಉಪಯೋಗಿಸುತ್ತಿದ್ದರು. 'ಮ' ಸುಮ್ಮಗೆ ಒಂದು ಅಕ್ಷರವಲ್ಲ. ಅದು "ಮಹಮ್ಮದ" ಹೆಸರನ್ನು ಸೂಚಿಸುವ ಮೊದಲ ಅಕ್ಷರವಾಗಿತ್ತು. ಹೀಗೆ ಚೈನಾದಲ್ಲಿ ಮುಸ್ಲಿಮರ ಕಾರುಬಾರು ಆಗಲೇ ನಡೆಯುತ್ತಿತ್ತೆನ್ನಬಹುದು. ಅದು ಕಾರುಬಾರು ಮಾತ್ರವಲ್ಲ ಕಾರಸ್ಥಾನವನ್ನು ನಡೆಸುತ್ತಿತ್ತು. ಯುನ್-ವೆನ್‌ನನ್ನು ಪಟ್ಟದಿಂದ ತಳ್ಳಿ ಯಂಗ್-ಲೋನನ್ನು ಪಟ್ಟದಲ್ಲಿ ಕುಳ್ಳಿರಿಸಿ ತನ್ನ ಇಷ್ಟದಂತೆ ಪ್ರಪಂಚ ಪ್ರದಕ್ಷಿಣೆ ನಡೆಸುವಷ್ಟು ಮಹಮ್ಮದೀಯರಿಗೆ ಚೈನಾದಲ್ಲಿ ಪ್ರಾಬಲ್ಯತೆ ಇತ್ತು.

ಆಡಂಬರ ಮಾತುಗಳಿಗೆ ಚೌ-ಮಾವೋ ಕಿವಿಗೊಡಲು ತಯಾರಿರುವರೇ? ಇವರ ಆದೇಶದಂತೆ ನಡೆಯಲು ಸಿರಿಮಾವೋ ಸಿದ್ಧರಿದ್ದಾರೆಯೇ? ಅದನ್ನು ಮುಂದಿನ ದಿನಗಳು ತಿಳಿಸುವುವು. ಹಿಂದೆ ಚೈನಿಯರು ಸಮುದ್ರ ಚೋರರಾಗಿದ್ದು ಸಿಲೋನಿನೊಡನಿಟ್ಟುಕೊಂಡಿದ್ದ ಸಂಪರ್ಕದ ಕುರಿತು ಶ್ರೀ ವಿಲಿಯಂ ವಿಲ್ಲಿಟ್ಸ್‌ರ ಲೇಖನಗಳಿಂದ ಕೆಲ ವಿಷಯಗಳನ್ನು ಆರಿಸಿ ಸಂದರ್ಭಕ್ಕೆ ತಕ್ಕಂತೆ ಕ್ರಮಶಃ ಮುಂದಿನ ವಾರಗಳಲ್ಲಿ ಕೊಡಲಾಗುವದು. ಅದರಿಂದ ಚೌ ಹೇಳಿರುವ ಭೌತ ಸಂಪರ್ಕ ಎಂತಹದ್ದೆಂಬುದರ ಅರಿವು ವಾಚಕರಿಗಾಗುತ್ತದೆ.

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

360 ಪುಟಗಳಿಗೂ ಮಿಕ್ಕಿದ

ಪಾಕೇಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಒಂದು ಪ್ರತಿ ಬೇಕಾದವರು ಅಂಚೆ ವೆಚ್ಚ 80ನ. ಪೈಸೆ ಸೇರಿಸಿ ಬೇಕಾದ ಪುಸ್ತಕದ ಬೆಲೆಯನ್ನು ಮನಿಯಾರ್ಡರ ಮಾಡುವುದು.

ಹೆಚ್ಚು ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿ.

ವಾರ್ಷಿಕ ಚಂದಾ ರೂ. ೧೦.

ಮಹಾರಾಷ್ಟ್ರದ ಚಾರಿತ್ರಿಕ ಸಂಶೋಧನೆಯ ಮೂಲಪುರುಷ

ವಿಶ್ವನಾಥ ಕಾಶೀನಾಥ ರಾಜವಾಡೆ

ಲೇಖಕ: ಪ್ರೊ. ಆರ್. ಎನ್. ಸಾರಕ್

ಕಳೆದ ಶತಮಾನದ ಮಧ್ಯ ಭಾಗದ ನಂತರ ಮಹಾರಾಷ್ಟ್ರದಲ್ಲಿ ಸ್ವಾಭಿಮಾನಿಗಳಾದ ಕೆಲವು ಜನ ತಮ್ಮ ಸ್ವಾತಂತ್ರ್ಯದ ಚರಿತ್ರೆಯ ಕಡೆಗೆ ಗಮನಹರಿಸಿದರು. ಕಳೆದು ಹೋದ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಚಾರಿತ್ರಿಕ ಘಟನಾವಳಿಗಳ ಬಗೆಗೆ ವಿಚಾರ ವಿಮರ್ಶೆ ಮಾಡತೊಡಗಿದರು. ೧೮೨೬ರಲ್ಲಿ ಗ್ರಾಂಟ್ ಡಫ್ ಎಂಬಾತನು ಮರಾಠರ ಚರಿತ್ರೆಯನ್ನು ಪ್ರಕಟಿಸಿದನು. ಇದಕ್ಕಾಗಿ ಆತ ಸತಾರೆಯಲ್ಲಿ ಛತ್ರಪತಿ ಶಿವಾಜಿಯ ದಾಖಲೆಗಳನ್ನೂ, ೧೮೧೮ರಲ್ಲಿ ಕೊನೆಗೊಂಡ ಪೇಶ್ವೆಯವರ ಆಡಳಿತದ ಪ್ರತ್ಯಕ್ಷ ದರ್ಶಿಗಳ ವರದಿಗಳನ್ನೂ ಸಂಗ್ರಹಿಸಿದನು. ಆದರೆ ಈತನ ಕೃತಿಯಲ್ಲಿ ಗಂಭೀರವಾದ ಹಲವಾರು ತಪ್ಪುಗಳಿದ್ದವು. ಇವನ್ನು ಮನಗಂಡು ಎಸ್. ಜೆ. ಕೀರ್ತನೆ ಎಂಬ ಕಾಲೇಜ ಶಿಕ್ಷಿತ ಯುವಕನೊಬ್ಬನು ಆ ತಪ್ಪುಗಳನ್ನು ಹೊರಗೆಡಹಲಿಕ್ಕಾಗಿ ಉಪನ್ಯಾಸಗಳನ್ನು ಕೊಡಲು ತೊಡಗಿದನು. ೧೮೭೮ರಲ್ಲಿ ಈತ "ಕಾವ್ಯೇತಿಹಾಸ ಸಂಗ್ರಹ" ಎಂಬ ಸಂಕಲನವನ್ನು ಆರಂಭಿಸಿದನು, ಇದರಿಂದಾಗಿ ಜನರಲ್ಲಿ ಚರಿತ್ರೆಯ ಕುರಿತು ಅಲ್ಪ ಸ್ವಲ್ಪ ಪ್ರಜ್ಞೆ ಹುಟ್ಟಲು ಸಹಾಯವಾಯಿತು.

ಬ್ರಿಟಿಷರು ಪುಣೆಯಲ್ಲಿ ಇರಿಸಿದ್ದ ಪೇಶ್ವೆಯರ ದಾಖಲೆಗಳನ್ನು ಬೆಳಕಿಗೆ ತರಲು ರಾನಡೆ, ತೆಲಾಂಗ್ ಮೊದಲಾದ ಪ್ರತಿಷ್ಠಿತ ವ್ಯಕ್ತಿಗಳು ಪ್ರಯತ್ನಿಸಿದರು. ಇವರ ಪ್ರಯತ್ನದ ಫಲ ಸ್ವರೂಪವಾಗಿ ಪೇಶ್ವೆಯರ ದಿನಚರಿಗಳು ಪ್ರಕಟವಾದುವು. ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳಲ್ಲಿ ಕೆಲವು ಮೌಲಿಕ ಪುಸ್ತಕಗಳೂ ಬರೆಯಲ್ಪಟ್ಟವು. ರಾನಡೆಯವರು ತಮ್ಮ "ಮರಾಠಾ ಅಧಿಕಾರದ ಉದಯ" ಎಂಬ ಹೊತ್ತಗೆಯ ಪೀಠಿಕೆಯ ರೂಪದಲ್ಲಿ ಹಲವೆಡೆ ಉಪನ್ಯಾಸಗಳನ್ನು ಕೊಟ್ಟರು. ಲೇಖನಗಳನ್ನು ಬರೆದರು "ಕಾವ್ಯೇತಿಹಾಸ ಸಂಗ್ರಹ"ದ ಪ್ರಕಾಶನ ನಿಂತು ಹೋದ ಬಳಿಕ ದತ್ತಾತ್ರೇಯ ಬಳವಂತ ಪಾರಸನೀಸ ಎಂಬವರೊಬ್ಬರು "ಭಾರತ ವರ್ಷ" ಎಂಬ ಸಂಕಲನವನ್ನು ಆರಂಭಿಸಿದರು. ವಿೂರಜಿನ ವಾಸುದೇವ ಶಾಸ್ತ್ರಿಯವರು ಪಟವರ್ಧನ ದಾಖಲೆಗಳನ್ನು ಪತ್ರಿಕೆಯೊಂದರ ರೂಪದಲ್ಲಿ ಪ್ರಕಟಿಸಿದರು, ಇವೆಲ್ಲ ಚಾರಿತ್ರಿಕ ಆಧಾರ ಸಂಗ್ರಹ ಚಟುವಟಿಕೆಗಳು ನಡೆಯುತ್ತಿದ್ದುದು ಕಳೆದಶತಮಾನದ ಕೊನೆಯ ದಶಕದಲ್ಲಿ.

ವಿಶ್ವನಾಥ ಕಾಶೀನಾಥ ರಾಜವಾಡೆಯವರು ಇದೇ ಕಾಲಕ್ಕೆ ಸೇರಿದವರೂ ಸೇರಿದವರಾಗಿದ್ದರೂ ತಮ್ಮ ಅಗಾಧ ಪರಿಶ್ರಮ ಹಾಗೂ ಸ್ವತಂತ್ರ ಕಾರ್ಯಗಳಿಂದಾಗಿ ಅವರು ವಿಶಿಷ್ಟವಾಗಿ ಕಂಗೊಳಿಸುತ್ತಾರೆ. ಅವರ ಸ್ವಭಾವ, ಸಂಶೋಧನೆಯ ಕ್ರಮ, ಬಹುಮುಖ ಪ್ರತಿಭೆ, ಇವೆಲ್ಲಾ ಅವರನ್ನು ಇತರರಿಗಿಂತ ಬೇರೆಯಾದವರಾಗ ಪಾಂಡಿತ್ಯವುಳ್ಳ ಹಾಗೂ ತಮ್ಮ ಅಭ್ಯಾಸ ಕ್ಷೇತ್ರದಲ್ಲಿ ಹೊಸ ವಿಷಯಗಳನ್ನು ಕಂಡು ಹಿಡಿಯಬಲ್ಲ ವಿದ್ವಾಂಸ ಸಂಶೋಧಕರನ್ನು ಬೇರೆ ಎಲ್ಲಿಯೂ ಕಾಣುವುದು ಕಷ್ಟ ಸಾಧ್ಯ.

ರಾಜವಾಡೆಯವರು ೧೮೬೪ ನೇ ಜುಲೈ ೧೨ ರಲ್ಲಿ (೧೮೬೩ ಕೂಡಾ ಅವರ ಜನನ ವರ್ಷವೆಂದೂ ತಿಳಿಯಲಾಗುತ್ತದೆ.) ಪುಣೆಯಲ್ಲಿ ಜನಿಸಿದರು. ಅಲ್ಲಿಯೇ ವಿದ್ಯಾಭ್ಯಾಸ ನಡೆಸಿ ಪದವೀಧರರಾದರು. ಚಿಕ್ಕಂದಿನಲ್ಲಿ ರಾಜವಾಡೆ ಬಲಿಷ್ಟ ಹುಡುಗನಾಗಿದ್ದ. ಯಾವಾಗಲೂ ಇತರ ಮಕ್ಕಳೊಡನೆ ಜಗಳಕ್ಕೆ ನಿಲ್ಲುತ್ತಿದ್ದ. ಕಾಲೇಜಿನಲ್ಲಿ ಕಲಿಯುತ್ತಿರುವಾಗ ಸತತ ವ್ಯಾಯಾಮ ಮಾಡಿ ತನ್ನ ದೇಹ ದಾರ್ಢ್ಯತೆಯನ್ನು ಬೆಳೆಸಿ ಕೊಂಡನಲ್ಲದೆ ವಿವಿಧ ವಿಷಯಗಳ ಕುರಿತು ವಿಸ್ತಾರವಾಗಿ ಓದಿಕೊಂಡ, ಇಂಗ್ಲಿಷ್, ಫ್ರೆಂಚ್, ಪೋರ್ಚುಗೀಸ್, ಪರ್ಶಿಯನ್ ಇತ್ಯಾದಿ ಭಾಷೆಗಳ ವ್ಯವಹಾರ ಜ್ಞಾನವನ್ನು ಸಂಪಾದಿಸಿಕೊಂಡ. ಮರಾಠರ ಚರಿತ್ರೆಯ ಅಭ್ಯಾಸಕ್ಕೆ ಈ ಭಾಷೆಗಳ ಜ್ಞಾನ ತುಂಬಾ ಉಪಯುಕ್ತವಾಯಿತು. ರಾಜವಾಡೆಗೆ ಸಂಸಾರ ಶಾಸತ್ರ್ಯ ವಿರಲಿಲ್ಲ. ಏಕೆಂದರೆ ಆತನ ಹೆಂಡತಿ ಮತ್ತು ಮಗ ತಾರುಣ್ಯದಲ್ಲೇ ತೀರಿ ಕೊಂಡಿದ್ದರು.

ಶಿಕ್ಷಣ ಮುಗಿಸಿದೊಡನೆ ರಾಜವಾಡೆ ಸ್ವಲ್ಪ ಕಾಲ ಅಧ್ಯಾಪಕರಾಗಿ ದುಡಿದರು. ಬಳಿಕ 'ಭಾಷಾಂತರ' ವೆಂಬ ಪತ್ರಿಕೆಯ ಪ್ರಕಟನೆಯನ್ನು ಆರಂಭಿಸಿದರು. ಇದನ್ನು ಆರಂಭಿಸಿದ ಉದ್ದೇಶ ಸಫಲವಾಗುವ ಸಂಭವ ಕಡಿಮೆಯಾಗಿತ್ತು. ಎರಡೇ ವರ್ಷದಲ್ಲಿ 'ಭಾಷಾಂತರ'ದ ವ್ಯವಹಾರ ನಿಂತು ಹೋಯಿತು. ರಾಜವಾಡೆ ಚಾರಿತ್ರಿಕ ಸಂಶೋಧನೆಯ ಕ್ಷೇತ್ರಕ್ಕೆ ಧುಮುಕಿದರು.

ರಾಜವಾಡೆಯವರು ತನ್ನ ಜೀವನದಲ್ಲಿ ಮೂವತ್ತು ವರ್ಷ ಕಾಲವನ್ನು ಚಾರಿತ್ರಿಕ ಮಹತ್ವವುಳ್ಳ ದಾಖಲೆಗಳು, ತಾಮ್ರ ಲಿಪಿಗಳು ಮತ್ತು ಕಗ್ಗಲ್ಲ ಶಾಸನಗಳನ್ನು ಗೊತ್ತು ಹಚ್ಚುವುದರಲ್ಲಿ ಕಳೆದರು. ಚಾರಿತ್ರಿಕ ಪ್ರಸಿದ್ಧಿಯುಳ್ಳ ಮನೆತನಗಳ ಪತ್ತೆ ಹಚ್ಚಿ ಅಂತಹ ಕುಟುಂಬಗಳ ಅನುವಂಶಿಕರಿದ್ದಲ್ಲಿಗೆ ಹೋಗುವುದು, ಅವರಲ್ಲಿ ಹಳೆಯ ದಾಖಲೆಗಳನ್ನು ಕೇಳುವುದು, ಸುಲಭದಲ್ಲಿ ಸಿಗದಿದ್ದರೆ ಇದ್ದ ಚಾತುರ್ಯವನ್ನೆಲ್ಲ ಉಪಯೋಗಿಸುವುದು ಅವರ ಕೆಲಸವಾಗಿತ್ತು. ಶಿವಾಜಿಯ ಕಾಲದ ದಾಖಲೆಗಳನ್ನು ಹುಡುಕುತ್ತಾ, ಅವರು ಹಸಿವು ನೀರಡಿಕೆಗಳನ್ನು ಮರೆತು ರಾತ್ರಿ ಹಗಲು ಗುಡ್ಡಕಾಡುಗಳಲ್ಲಿ ಅಲೆದನೆಂಟು; ದಕ್ಷಿಣದಲ್ಲಿ ತಂಜಾವೂರಿನಿಂದ ಉತ್ತರದಲ್ಲಿ ಗ್ವಾಲಿಯರಿನ ತನಕ ಅವರು ಅಲೆದಾಡಿದರು. ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಕಾಡ ದಾರಿಗಳನ್ನು ತುಳಿದರು ಯಾವುದೇ ಚಾರಿತ್ರಿಕ ಘಟನೆಯು ಸಂಭವಿಸಿದ ಸ್ಥಳವನ್ನು ಸ್ವತಃ ಸಂದರ್ಶಿಸಿದಲ್ಲಿ ಆ ಘಟನೆಯು ಉತ್ತಮವಾಗಿ ಅರ್ಥವಾಗುತ್ತ [illegible] ಅನುಕೂಲವಾಗುತ್ತದೆ ಎಂದು ಅವರು ತಿಳಿದಿದ್ದರು.

ರಾಜವಾಡೆಯವರ ಆತ್ಮ ವಿಶ್ವಾಸ ಅಚಲವಾಗಿತ್ತು. ಅವರ ಬುದ್ಧಿಶಕ್ತಿ ಆಳವಾಗಿತ್ತು. ಇತರರಿಗೆ ಅಸ್ಪಷ್ಟವಾಗಿರುವ ಹಲವು ವಿಷಯಗಳು ಅವರ ಮನಸ್ಸಿಗೆ ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಒಮ್ಮೆ ಚಿಂತಾಮಣಿ ವಿನಾಯಕ ವೈದ್ಯರೆಂಬ ಪಂಡಿತರೊಬ್ಬರು ರಾಜಸ್ಥಾನದ ಚರಿತ್ರೆಯನ್ನು ಅಭ್ಯಸಿಸುತ್ತಿದ್ದಾಗ 'ಖೊಮ್ಮಾನ್' ಎಂಬ ಅರಸನ ಹೆಸರು ಬಂದಿತು. ಈ ಹೆಸರಿನ ಮೂಲವನ್ನು ವೈದ್ಯರಿಗೆ ಗೊತ್ತು ಮಾಡಲಾಗಲಿಲ್ಲ. ಅವರು ರಾಜವಾಡೆಯವರೊಡನೆ ಇದನ್ನು ಪ್ರಸ್ತಾಪಿಸಿದರು. ರಾಜವಾಡೆ ಕ್ಷಣಕಾಲ ಯೋಚಿಸಿ, ಕಾಳಿಂದ್ಯಾನ ಎಂಬ ಸೂರ್ಯವಂಶದ ಅರಸನೊಬ್ಬನ ಹೆಸರಿನ ಸಂಸ್ಕೃತ ಪದವೇ ಆ ಶಬ್ದದ ಮೂಲ ಎಂಬುದಾಗಿ ಹೇಳಿದರು.

ರಾಜವಾಡೆಯವರು ಬರೆದ "ಮರಾಠಾ ಚರಿತ್ರೆ"ಯ ಮೂಲ ಸಾಮಗ್ರಿಯ ೨೨ ಸಂಪುಟಗಳಲ್ಲಿ ಮೊದಲನೆಯದು "ಮರಾಠಾ ಚರಿತ್ರೆಯ ಮೂಲ ಸಾಮಗ್ರಿ ಭಾಗ ೧" ಇದು ಮುಖ್ಯವಾಗಿ ಪಾಣಿಪತದ ಕಾಳಗಕ್ಕೆ ಸಂಬಂಧಪಟ್ಟದ್ದು. ಈ ಹೊತ್ತಗೆಯ ಮುನ್ನುಡಿಯು ಮರಾಠಾ ಚರಿತ್ರೆಯ ಕೂಲಂಕುಶ ಸಮೀಕ್ಷೆಯನ್ನೊಳಗೊಂಡಿದೆ. ಹದಿನೈದನೆಯ ಸಂಪುಟದಿಂದ ಮುಂದಿನ ಏಳು ಸಂಪುಟಗಳು ಶಿವಾಜಿಯ ಕಾಲದ ಅತ್ಯಮೂಲ್ಯ ಪತ್ರವ್ಯವಹಾರಗಳನ್ನು ಒಳಗೊಂಡಿದೆ. ಶಿವಾಜಿಯ ಸ್ವತಂತ್ರ ರಾಜ್ಯದ ಆರಂಭದ ಸಂಗತಿಗಳು ೧೯೧೦ರ ತನಕ ವಿಶೇಷ ಬೆಳಕಿಗೆ ಬಂದಿರಲಿಲ್ಲ. ಅವು ರಾಜವಾಡೆಯವರ ಸಂಪುಟಗಳಲ್ಲೇ ಮೊತ್ತ ಮೊದಲಬಾರಿಗೆ ಪ್ರಕಟವಾದವು, ಶಿವಾಜಿಯು ಸ್ವರಾಜ್ಯ ಸ್ಥಾಪನೆಗಾಗಿ ತನ್ನ ಮಾವಳೆ ಸಂಗಾತಿಗಳಿಂದ ರಾಯರೇಶ್ವರ ದೇವಳದಲ್ಲಿ ಮಾಡಿಸಿದ ಪ್ರತಿಜ್ಞೆಯು ಈ ರೀತಿ ಪ್ರಕಾಶಕ್ಕೆ ಬಂದ ಒಂದು ಘಟನೆ. ಶಹಾಜಿಯು ತಂಜಾವೂರು ವಿಜಯದ ವರ್ಣನೆಯಿಂದ ತುಂಬಿದ 'ಮಹಿಕಾವತಿ ಬಖಾರ' ಮತ್ತು 'ರಾಧಾ ಮಾಧವ ವಿಲಾಸ ಚಂಪೂ' ಎಂಬ ಕೃತಿಗಳನ್ನು ಅವರು ಪ್ರಕಾಶಿಸಿದರು.

ಮಾನವನ ಚರಿತ್ರೆಯೆಂದರೆ ಕೇವಲ ರಾಜಕೀಯ ಆಡಳಿತೆಯ ದಾಖಲೆ ಮಾತ್ರವಲ್ಲ, ಜನರ ಭಾಷೆ, ಮತ, ಭೌಗೋಲಿಕ ಸನ್ನಿವೇಶ ಆರ್ಥಿಕ ಪರಿಸ್ಥಿತಿ ಮತ್ತು ಇತರ ಅನೇಕ ವಿಷಯಗಳು ಅದರಲ್ಲಿ ಅಡಕವಾಗಿದೆ ಎಂಬ ವಿಷಯವನ್ನು ರಾಜವಾಡೆಯವರು ಎಂದಿಗೂ ಮರೆಯಲಿಲ್ಲ.

ಚಾರಿತ್ರಿಕ ದಾಖಲೆಗಳನ್ನು ಸಂಗ್ರಹಿಸುವುದರಲ್ಲಿ ಮಾತ್ರ ರಾಜವಾಡೆಯವರು ತೃಪ್ತಿ ಹೊಂದಲಿಲ್ಲ. ತನ್ನ ಕೊನೆಯ ವರ್ಷಗಳಲ್ಲಿ ಸಾಹಿತ್ಯ ಮತ್ತು ಭಾಷೆಯ ಬಗೆಗೆ ಅವರು ಆಸಕ್ತಿ ವಹಿಸಿದರು. ಸಾಧು ಏಕನಾಥರ ಕಾಲ ನಿರ್ಣಯ ಮಾಡುವ ಕೃತಿ 'ಧ್ಯಾನೇಶ್ವರಿ' ಇದಕ್ಕೊಂದು ನಿದರ್ಶನ. ಮಹಾರಾಷ್ಟ್ರದ ಪಟ್ಟಣಗಳ ಹೆಸರಿನ ವಿಶ್ಲೇಷಣೆ ಮಾಡುತ್ತಾ ಯಾವ ಪಟ್ಟಣದಲ್ಲಿ ಯಾವ ಕಾಲದಿಂದ ಜನ ನಿ[illegible] ಎಂಬುದನ್ನು ಅವರು ಒಂದೆಡೆ ವಿವೇಚಿಸಿದರು. ಸಮಾಜ ಶಾಸ್ತ್ರದ ಮೇಲೂ ಅವರು ವಿಚಾರ ಪೂರಿತ ಬರಹಗಳನ್ನು ಪ್ರಕಟಿಸಿದರು. ತಮ್ಮ ಪುಸ್ತಕಗಳಿಗೆ ಅವರು ಬರೆದ ವಿದ್ವತ್ಪೂರ್ಣ ಮುನ್ನುಡಿಗಳು ಅವರ ಪ್ರತಿಭೆಗೆ ಉತ್ತಮ ಸಾಕ್ಷಿ. ಅವರು ಸಂಗ್ರಹಿಸಿದ ಶಬ್ದ ವ್ಯುತ್ಪತ್ತಿಯ ನಿಘಂಟು ಅವರ ನಿಧನದ ನಂತರ ಪ್ರಕಟವಾಯಿತು.

ರಾಜವಾಡೆಯವರ ಕಾರ್ಯಕ್ಷೇತ್ರದ ವಿಸ್ತಾರ ಅಪಾರ. ಅವರು ಸಂಘಟಿಸಿದ 'ಆರೋಗ್ಯ ಮಂಡಳ' ಎಂಬ ಆರೋಗ್ಯ ಸಂಬಂಧವಾದ ಸಂಘ ಇದಕ್ಕೆ ಉದಾಹರಣೆ. ಭಾರತೀಯರೆಲ್ಲರೂ ಶುಚಿತ್ವದ ಕಡೆಗೆ ಹೆಚ್ಚು ಗಮನ ಕೊಡುವುದು ಅಗತ್ಯವೆಂದು ಅವರು ತಿಳಿದಿದ್ದರು; ಶುಚಿತ್ವದ ಅಭಾವವೇ ಅಂಟು ಜಾಡ್ಯಗಳ ತವರು ಎನ್ನುವುದನ್ನು ಅವರು ಜನರಿಗೆ ತಿಳಿಸಲು ಬಯಸುತ್ತಿದ್ದರು, ಪೂಣೆಯಲ್ಲೊಮ್ಮೆ ಅವರು ಭಾಷಣ ಮಾಡುತ್ತಿದ್ದಾಗ ಈ ನಗರ ಲಂಡನ್ ನಗರದಂತೆ ನಾಶವಾದ ಮೇಲೆಯೇ ನಾಗರಿಕರ ಆರೋಗ್ಯ ಸುಧಾರಣೆಯಾಗುವುದೆಂದೂ ಅವರು ಘಂಟಾ ಘೋಷವಾಗಿ ಸಾರಿದರು.

ಮರಾಠಿಯ ವಿನಹ ಬೇರಾವ ಭಾಷೆಯಲ್ಲೂ, ತಾನು ಆಡುವುದಿಲ್ಲ, ಬರೆಯುವುದಿಲ್ಲ ಎಂಬುದಾಗಿ ರಾಜವಾಡೆಯವರು ಪಣ ತೊಟ್ಟಿದ್ದರು. ಅವರ ಕೃತಿಗಳು ದೇಶದ ಇತರ ಭಾಗಗಳಲ್ಲಿ ಅಷ್ಟೊಂದು ಪ್ರಸಿದ್ಧಿಯಾಗದಿರಲು ಬಹುಶಃ ಇದೇ ಕಾರಣವಾಗಿರಬೇಕು. ಆದರೆ ಈಗ ಪರಿಸ್ಥಿತಿ ಬದಲಾಗಿದೆ ಮರಾಠರ ಚರಿತ್ರೆಯನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಈಗ ರಾಜವಾಡೆಯವರ ಕೃತಿಗಳ ಪ್ರಯೋಜನ ಪಡೆಯುತ್ತಿದ್ದಾರೆ.

ರಾಜವಾಡೆಯವರ ಸ್ಫೂರ್ತಿಯಿಂದ ಸ್ಥಾಪನೆಯಾದ ಪೂಣೆಯ ಭಾರತ ಇತಿಹಾಸ ಸಂಶೋಧನಾ ಮಂಡಳವು ಕಳೆದ ೫೪ ವರ್ಷಗಳಿಂದ ಉತ್ತಮ ಕಾರ್ಯವೆಸಗುತ್ತಿದೆ. ಧೂಲಿಯಾದಲ್ಲಿರುವ ರಾಜವಾಡೆ ಸಂಶೋಧನಾ ಮಂದಿರವು ಸಂಶೋಧನೆಯ ಕಾರ್ಯದಲ್ಲಿ ನಿರತವಾಗಿದೆ. ಹೀಗೆ ರಾಜವಾಡೆಯವರ ಕೃತಿಗಳು ಉಂಟು ಮಾಡಿದ ಚರಿತ್ರೆಯ ಮೇಲಿನ ಆಸಕ್ತಿಯು ಇನ್ನೆಷ್ಟೋ ಚಾರಿತ್ರಿಕ ಸಂಶೋಧನಾ ಸಂಘಗಳ ಸ್ಥಾಪನೆಗೆ ಕಾರಣೀಭೂತವಾಗಿದೆ.

ರಾಜವಾಡೆಯವರು ಮಹಾರಾಷ್ಟ್ರದಲ್ಲಿ ಚಾರಿತ್ರಿಕ ಸಂಶೋಧನೆಯ ಮೂಲ ಪುರುಷರೆಂದು ನಿಸ್ಸಂದೇಹವಾಗಿ ಹೇಳಬಹುದು. ಸಂಶೋಧನೆ ಅವರ ಜೀವನದ ತಪಸ್ಸಾಗಿತ್ತು. ಅವರೇ ಹೇಳಿದಂತೆ ಚಾರಿತ್ರಿಕ ಸಂಶೋಧನಾ ಕ್ಷೇತ್ರದಲ್ಲಿ ಇನ್ನು ಮಾಡಬೇಕಾದ ಕೆಲಸ ಈ ತನಕ ಮಾಡಿದ ಕೆಲಸಕ್ಕಿಂತ ನೂರು ಪಾಲು ಹೆಚ್ಚಿಗೆ ಇದೆ. ಈ ಮಹಾನುಭಾವರು ತೋರಿಸಿದ ದಾರಿಯಲ್ಲಿ ಶ್ರದ್ಧೆಯಿಂದ ಮುನ್ನಡೆಯುವವರು ಮಾತ್ರ ಭಾರತದ ಚರಿತ್ರೆಯಲ್ಲಿ ಈ ವರೆಗೂ ಅಪರಿಹಾರ್ಯವಾಗಿರುವ ಸಮಸ್ಯೆಗಳನ್ನು ಪರಿಹರಿಸಬಲ್ಲರು.

ಪ್ರಕೃತಿಯ ವರ

ಸಸ್ಯಸಂಪತ್ತಿನಿಂದ ರಾಷ್ಟ್ರದ ಉತ್ಕರ್ಷ

ನಾವು ಸೇವಿಸುವ ಗಾಳಿ, ಜೀವನದಾಯಿನಿಯಾದ ಜಲ ಇವು ಪ್ರಕೃತಿಯ ಎರಡು ವರಗಳಾದರೆ, ಸಸ್ಯ ಸಂಪತ್ತು ಮೂರನೆಯ ವರವಾಗಿದೆ. ಮರಗಳು ಅನೇಕ ಕಾರಣಗಳಿಂದಾಗಿ ನಮ್ಮೆಲ್ಲರ ಗೌರವ ಹಾಗೂ ಆತ್ಮೀಯತೆಗೆ ಪಾತ್ರವಾಗಿವೆ. ಇಂದು ನಾವು ನೋಡುವ ಕಲ್ಲಿದ್ದಲು, ಫಲವತ್ತಾದ ಭೂಮಿ, ನೀರಾವರಿಗೆ ಅಗತ್ಯವಾದ ಜಲ ಮತ್ತು ಶುದ್ಧವಾದ ಹವೆ ಇವೆಲ್ಲವೂ ಸಸ್ಯ ಸಂಪತ್ತಿನಿಂದಲೇ ಸಾಧ್ಯವಾಗಿವೆ.

ಗಿಡಮರಗಳು ಹಸಿರಿನಿಂದ ಪ್ರಕೃತಿ ಶೋಭೆಯನ್ನು ಹೆಚ್ಚಿಸುತ್ತವೆ. ಜೊತೆಗೆ ಬಿಸಿಲಿನ ಬೇಗೆಯಿಂದ ಬಳಲಿದ ಜನ ಮತ್ತು ಪಶುಪಕ್ಷಿ ಪ್ರಾಣಿಗಳಿಗೆ ನೆರಳನ್ನೂ ನೀಡುತ್ತವೆ. ಅವು ನೀಡುವ ಇಂಧನ, ಮರದ ಉತ್ಪನ್ನಗಳು, ಫಲಪುಷ್ಪಗಳು ಅನೇಕ ಕೈಗಾರಿಕೆಗಳ ಅಸ್ತಿತ್ವಕ್ಕೆ ಕಾರಣವಾಗಿವೆ. ಗಿಡಮರಗಳು ಮಣ್ಣಿನ ಸಾರ ನಾಶವಾಗದಂತೆ ರಕ್ಷಿಸಿ ತಮ್ಮ ಅಸ್ತಿತ್ವ ಎಷ್ಟೊಂದು ಅಮೂಲ್ಯ ಎಂಬುದನ್ನು ತೋರಿಸಿಕೊಟ್ಟಿವೆ. ಮಣ್ಣಿನ ಸಾರ ರಕ್ಷಣೆಗಾಗಿ ಸುಲಭವಾದ ಹಾಗೂ ಕಡಿಮೆ ವೆಚ್ಚದ ಹೊಸದೊಂದು ವಿಧಾನವನ್ನು ವಿಜ್ಞಾನ ಇನ್ನೂ ಕಂಡು ಹಿಡಿಯಬೇಕಾಗಿದೆ.

ನಮ್ಮ ಬೇಸಾಯ ವ್ಯವಸ್ಥೆಯಲ್ಲಿ, ಸಸ್ಯ ಸಂಪತ್ತಿನ ಮಹತ್ವ ಅತ್ಯಂತ ಅಧಿಕವಾಗಿದೆ. ಮನೆಯ ಮುಂಭಾಗದಲ್ಲಿ ಒಂದು ಉಪವನ, ಹಣ್ಣಿನ ಮರಗಳು, ಹಾಲು ಕರೆಯುವ ಹಸು ಎಷ್ಟು ಅಗತ್ಯವೋ ಜಮೀನುಗಳಲ್ಲಿ ಗಿಡಮರಗಳಿರುವುದೂ ಅಷ್ಟೇ ಅಗತ್ಯವಾಗಿದೆ. ವಿಶ್ವದ ಗೋಧಿಯ ಕಣಜವೆಂದು ಖ್ಯಾತವಾಗಿರುವ ಕೆನಡಾದ ಮೂರು ಪ್ರೇರಿ ಪ್ರಾಂತಗಳಲ್ಲಿ ಹೊಲಗದ್ದೆಗಳ ಇಕ್ಕೆಲಗಳಲ್ಲಿಯೂ ಗಿಡಮರಗಳನ್ನು ನೆಡಲಾಗಿದೆ. ಜಮೀನಿನ ಅಂಚುಗಳಲ್ಲಿ ಗಿಡಮರಗಳನ್ನು ನೆಡುವ ಸಂಪ್ರದಾಯವನ್ನು ರಷ್ಯಾದಲ್ಲೂ ಕಾಣಬಹುದು. ಅಮೆರಿಕಾದ ಮಹಾ ಮರುಭೂಮಿಯ ಸುತ್ತಲೂ ಗಿಡಮರಗಳನ್ನು ನೆಡಲಾಗಿದೆ. ಈ ಮರಗಿಡಗಳು ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಬೇಸಿಗೆಯ ಶಾಖವನ್ನೂ ಚಳಿಗಾಲದಲ್ಲಿ ಹಿಮಪಾತವನ್ನೂ ಕಡಿಮೆ ಮಾಡಿ ಆ ಪ್ರದೇಶಗಳನ್ನು ಸಮೃದ್ಧ ಪ್ರದೇಶಗಳನ್ನಾಗಿ ಮಾಡಿವೆ. ಪೂರ್ವ ಮತ್ತು ಪಶ್ಚಿಮ ಆಫ್ರಿಕಾದಲ್ಲಿಯೂ ಸಹ ಕೋಕೋ ಮತ್ತು ಕಡಲೆಕಾಯಿ ಬೆಳೆಗಳ ರಕ್ಷಣೆಗಾಗಿ ಈ ಪೈರುಗಳ ಸುತ್ತುಮುತ್ತಲೂ ಗಿಡಮರಗಳನ್ನು ನೆಡಲಾಗುತ್ತಿದೆ. ನೆರೆಯ ದೇಶವಾದ ಸಿಲೋನಿನಲ್ಲಿಯೂ ಈ ಕ್ರಮವನ್ನು ಅನುಕರಿಸಲಾಗುತ್ತಿದೆ.

ಭಾರತೀಯರ ಜೀವನದಲ್ಲಿ

ಪ್ರಾಚೀನ ಭಾರತದಲ್ಲಿ ಗಿಡಮರಗಳು ಮತ್ತು ಜನಜೀವನದ ನಡುವೆ ನಿಕಟ ಸಂಬಂಧವಿತ್ತು. ನಮ್ಮ ಪುರಾತನ ನಾಗರೀಕತೆಯ ತೊಟ್ಟಿಲುಗಳಾಗಿದ್ದ ಹರಪ್ಪಾ ಮೊಹೆಂಜೋದಾರೋ ನಗರಗಳೂ ಸುಂದರವಾದ ಅರಣ್ಯಗಳ ಮಡಿಲಲ್ಲಿಯೇ ಬೆಳೆದು ಉತ್ಕರ್ಷ ಹೊಂದಿದವು. ಸುಂದರವಾದ ಗಿಡಮರಗಳಿಂದ ತುಂಬಿದ ವನಗಳ ಮಧ್ಯದಲ್ಲಿಯೇ ಬೌದ್ಧ ವಿಹಾರಗಳನ್ನೂ ನಿರ್ಮಿಸಲಾಗಿತ್ತು.

ಭಾರತದ ಬಹುತೇಕ ಭಾಷೆಗಳ ಜನಪದ ಸಾಹಿತ್ಯದಲ್ಲಿ ಗಿಡಮರಗಳಿಗೆ ವಿಶೇಷ ಪ್ರಾಧಾನ್ಯವಿದೆ. ದೇಶದ ಭವ್ಯ ಶಿಲ್ಪ ಕಲಾ ಪರಂಪರೆಯಲ್ಲಿ ಗಿಡಮರಗಳಿಗೆ ಸಂಬಂಧಿಸಿದಂತೆ ಕೆತ್ತನೆಗಳೂ ಇವೆ. ಪ್ರಾಚೀನ ಭಾರತದಲ್ಲಿ ಸಸ್ಯಸಂಪತ್ತನ್ನು ಹೆಚ್ಚಿಸುವ ಸಂಸ್ಕೃತಿ ಎಷ್ಟು ಮಟ್ಟಿಗೆ ಪ್ರಗತಿಶೀಲವಾಗಿತ್ತೆಂಬುದನ್ನು ಈ ಶಿಲ್ಪ ಕಲಾಕೃತಿಗಳು ಸೂಚಿಸುತ್ತವೆ. ನಮ್ಮ ಪುರಾತನ ಗ್ರಂಥಗಳಲ್ಲಿ ವನಗಳು, ಉಪವನಗಳು ಮತ್ತು ಪಕ್ಷಿಗಳ ಸಂರಕ್ಷಣಾ ಕೇಂದ್ರಗಳ ಬಗೆಗೂ ಉಲ್ಲೇಖವಿದೆ.

ಸಸ್ಯ ಸಂಪತ್ತಿನ ಶೋಷಣೆ

ಇತ್ತೀಚಿನ ವರೆಗೂ ಭಾರತದ ಹಳ್ಳಿಗಳ ಸುತ್ತಮುತ್ತಲೂ ಗಿಡಮರಗಳು ದಟ್ಟವಾಗಿ ಬೆಳೆಯುತ್ತಿದ್ದವು. ಈ ಗಿಡಮರಗಳ ನೆರಳಿನಲ್ಲಿ ಮಕ್ಕಳು ನಕ್ಕು ನಲಿದಾಡಿದರೆ, ಹಳ್ಳಿಗಳಲ್ಲಿನ ಹಿರಿಯರು ಅವುಗಳ ನೆರಳಿನಲ್ಲಿ ಕುಳಿತು ಗ್ರಾಮ ಜೀವನದ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ಮತ್ತು ವಿಶಾಲವಾದ ರಸ್ತೆಗಳ ಇಕ್ಕೆಲಗಳಲ್ಲೂ ಮರಗಳ ಸಾಲುಗಳನ್ನು ಕಾಣಬಹುದಾಗಿತ್ತು. ಬೇಸಿಗೆ ಬಿಸಿಲ ತಾಪದಿಂದ ಬಳಲಿದ ಪ್ರಯಾಣಿಕರು ಈ ಮರಗಳ ನೆರಳಿನಲ್ಲಿ ಕುಳಿತು ವಿಶ್ರಾಂತಿ ಪಡೆಯುತ್ತಿದ್ದರು.

ದೇಶದ ಜನಸಂಖ್ಯೆ ತ್ವರಿತವಾಗಿ ಹೆಚ್ಚುತ್ತಾ ನಡೆದದ್ದರಿಂದ ಅಗತ್ಯವಾದುದಕ್ಕಿಂತಲೂ ಹೆಚ್ಚಾಗಿ ಸಸ್ಯಸಂಪತ್ತಿನ ಶೋಷಣೆ ನಡೆಯಿತು. ರಸ್ತೆಗಳ ಇಕ್ಕೆಲಗಳು, ಕೆರೆ ಕಾಲುವೆಗಳು, ಹಾಗೂ ಇತರ ಕಡೆಗಳಲ್ಲಿ ಅಂಚಿನಲ್ಲಿ ವಿಪುಲವಾಗಿ ಬೆಳೆದಿದ್ದ ಗಿಡಮರಗಳನ್ನು ಕಡಿದು ಅಲ್ಲಿ ದನಕರುಗಳನ್ನು ಮೇಯಿಸಲು ಆರಂಭವಾಯಿತು. ಫಲಸ್ವರೂಪವಾಗಿ ಹಳ್ಳಿಗಳಲ್ಲಿ ಉರುವಲಿಗಾಗಿ ಮರದ ಕೊರತೆ ಕಂಡು ಬಂದಿತು. ಈ ಕೊರತೆಯನ್ನು ನಿವಾರಿಸಲು ಸಗಣಿಯನ್ನು ಉರುವಲಿನ ರೂಪದಲ್ಲಿ ಉಪಯೋಗಿಸುವುದು ಆರಂಭವಾಯಿತು. ಭಾರತದಲ್ಲಿ ಸಿಂಧ್ರಿ ಕಾರ್ಖಾನೆಗಳಂಥ ಸಹಸ್ರಾರು ಕಾರ್ಖಾನೆಗಳು ತಯಾರಿಸುವಷ್ಟು ಫಾರಂ ಗೊಬ್ಬರ ಸಿಗುತ್ತದೆ. ನಮ್ಮ ಅಗತ್ಯಗಳಲ್ಲಿ ಕೇವಲ ಅಲ್ಪ ಭಾಗವನ್ನು ನಾವು ಈಗ ಉತ್ಪಾದಿಸುತ್ತಿದ್ದೇವೆ. ಆದ್ದರಿಂದ ಫಾರಂ ಗೊಬ್ಬರವನ್ನು ಅಪವ್ಯಯ ಮಾಡುವುದು ಹಾನಿಕರ. ಗ್ರಾಮಾಂತರ ಪ್ರದೇಶಗಳಲ್ಲಿ ಉರುವಲಿಗೆ ಉಪಯೋಗಿಸಬಹುದಾಗ ಮರವನ್ನು ಅಗದ ದರದಲ್ಲಿ ಪೂರೈಸುವುದರಿಂದ ಸಗಣಿ ಗೊಬ್ಬರದ ಅಪವ್ಯಯವನ್ನು ತಪ್ಪಿಸಬಹುದಾಗಿದೆ. "ಹೆಚ್ಚು ಗೊಬ್ಬರವನ್ನು ಉತ್ಪಾದಿಸಿ" ಇದು ಇಂದಿನ ರೈತರ ಮೂಲ ಮಂತ್ರವಾಗಬೇಕಾಗಿದೆ.

ದೇಶದ ಅನೇಕ ಕಡೆಗಳಲ್ಲಿ ಗ್ರಾಮಗಳಲ್ಲಿನ ಮರಗಳನ್ನು ಕಡಿದದ್ದರಿಂದಾಗಿ ಮರಗಳನ್ನು ಅವಲಂಬಿಸಿದ್ದ ಅನೇಕ ಕೈಗಾರಿಕೆಗಳು ಕಣ್ಮರೆಯಾಗುತ್ತಾ ನಡೆದಿವೆ. ಸಾಮಾನ್ಯವಾಗಿ ಬಳಕೆಯಲ್ಲಿರುವ ಮರದ ವಸ್ತುಗಳನ್ನು ಅಗ್ಗದ ದರದಲ್ಲಿ ತಯಾರಿಸುವುದು ಆರ್ಥಿಕ ದೃಷ್ಟಿಯಿಂದ ಲಾಭದಾಯಕವಲ್ಲ. ಒಂದು ಕಾಲದಲ್ಲಿ ಕಾಗದ ತಯಾರಿಸುವ ಕೈಗಾರಿಕೆಯು ಇಂಥ ಕಚ್ಚಾ ವಸ್ತುಗಳನ್ನೇ ಅವಲಂಬಿಸಿತ್ತು. ಕಾಗದ ತಯಾರಿಕೆಯು ಗ್ರಾಮಾಂತರ ಸ್ವರೂಪದ ಕೈಗಾರಿಕೆಯೂ ಆಗಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಸಸ್ಯ ಸಂಪತ್ತನ್ನು ಹೆಚ್ಚಿಸುವುದರಿಂದ ಮೂಲಕ ಈ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಲು ಸಾಧ್ಯವಾಗುವುದು. ಹಳ್ಳಿಗಳಲ್ಲಿ ಹಿಪ್ಪನೇರಳೆ ಗಿಡಗಳನ್ನು ಬೆಳೆಸುವುದರಿಂದ ರೇಷ್ಮೆ ಕೈಗಾರಿಕೆಯು ರೈತರಿಗೆ ಪೂರಕ ಉದ್ಯೋಗವನ್ನು ಕಲ್ಪಿಸಿಕೊಡಬಹುದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿಪುಲವಾಗಿ ಬೆಳೆಯುವ ಬೇವಿನ ಮರಗಳಿಂದ ತೈಲ ಉತ್ಪಾದನೆಗೆ ಸಹಾಯಕವಾಗುತ್ತದೆ. ಅಲ್ಲದೆ ಸಾಬೂನಿನ ಕೈಗಾರಿಕೆಯನ್ನೂ ಅಭಿವೃದ್ಧಿಗೊಳಿಸಲೂಬಹುದಾಗಿದೆ.

ಹಳ್ಳಿಗಳಲ್ಲಿ ಮರಗಳನ್ನು ಕಡಿದುದರಿಂದಾಗಿ ನೆರೆಯಲ್ಲಿನ ಅರಣ್ಯಗಳಿಗೆ ಹೆಚ್ಚು ಧಕ್ಕೆಯೊದಗಿದೆ. ಅವು ಕ್ರಮೇಣ ನಾಶವಾಗುತ್ತಾ ನಡೆದಿವೆ. ಹೊಸ ರೈಲು ಮಾರ್ಗಗಳು, ಪೆಟ್ರೋಲು ಬಾವಿಗಳು, ಬೇಸಾಯ ಮತ್ತು ಕೈಗಾರಿಕೆಗಳ ವಿಸ್ತರಣ ಕಾರ್ಯಯೋಜನೆ, ಜಲ ವಿದ್ಯುತ್ ಯೋಜನೆ ನೀರಾವರಿ, ಗಣಿ. ಹಾಗೂ ಪುನರ್ವಸತಿ ಇವೇ ಮೊದಲಾದ ಹಲವಾರು ಹೊಸ ಕಾರ್ಯಯೋಜನೆಗಳಿಂದಾಗಿ ಅರಣ್ಯ ಪ್ರದೇಶದ ವಿಸ್ತೀರ್ಣ ಕಡಿಮೆಯಾಗುತ್ತಾ ನಡೆದಿದೆ. ಈ ಕಾರ್ಯಯೋಜನೆಗಳಿಗಾಗಿ ಅರಣ್ಯ ಪ್ರದೇಶವನ್ನು ಅತಿಕ್ರಮಿಸಿದ್ದರಿಂದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮವಾಗಿದೆ. ಮಣ್ಣು ಸತ್ವಹೀನವಾಗುತ್ತಿದ್ದು ಇಂಧನ, ಮರದ ವಸ್ತುಗಳು ಮತ್ತು ಹೊಟ್ಟಿನ ಕೊರತೆ ಗಂಭೀರ ಸ್ವರೂಪದ್ದಾಗಿದೆ.

ಅರಣ್ಯ ಸಂರಕ್ಷಣೆಯ ಮಹತ್ವ

ಬೇಸಾಯದ ಉತ್ಕರ್ಷಕ್ಕಾಗಿ ಅರಣ್ಯ ಸಂರಕ್ಷಣೆ ಅಗತ್ಯ. ದೇಶದಲ್ಲಿ ಈಗ ಅರಣ್ಯಗಳು ನಮ್ಮ ಅಗತ್ಯಗಳನ್ನು ಪೂರೈಸುವಷ್ಟು ವಿಸ್ತೀರ್ಣವಾಗಿಲ್ಲ, ಅರಣ್ಯಗಳ ಒಟ್ಟು ವಿಸ್ತೀರ್ಣ ೩, ೧೫, ೬೬೮ ಚದುರ ಮೈಲುಗಳಷ್ಟಿದೆ ಅಂದರೆ ದೇಶದ ಒಟ್ಟು ಭೂಭಾಗದಲ್ಲಿ ಶೇ ೨೪ ರಷ್ಟು ಭಾಗ. ಅರಣ್ಯಗಳಿದ್ದಂತಾಯಿತು. ಇಂಧನ ಮತ್ತು ಮರದ ವಸ್ತುಗಳ ಸಂಬಂಧವಾದ ಅಗತ್ಯವನ್ನು ಪೂರೈಸುವುದಕ್ಕಾಗಿ ದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇ ೩೩⅓ ಭಾಗ ಅರಣ್ಯ ಇರಬೇಕು. ೧೯೭೫ರ ಹೊತ್ತಿಗೆ ದೇಶದಲ್ಲಿ ಸುಮಾರು ೧೦ ಕೋಟಿ

(ಅನೇ ಪುಟ ನೋಡಿ)

ಸ್ವಲ್ಪ ಜನರು ಹಣವನ್ನು ಉಳಿಸುತ್ತಾರೆ;
ಸ್ವಲ್ಪ ಜನರು ಉಳಿಸುವುದಿಲ್ಲ.

ಮತ್ತು ಯಾರು ಮುಂದಾಗುತ್ತಾರೆಂಬುದು ನಿಮಗೆ ತಿಳಿದಿದೆ;
ಯಾರು ಆಗುವುದಿಲ್ಲ ಎಂಬುದೂ ನಿಮಗೆ ತಿಳಿದಿದೆ!

ಇದು ಸಾರ್ವತ್ರಿಕವಾಗಿ ಸತ್ಯವಾಗಿರಲಾರದು, ಆದರೆ ನಿಮ್ಮ ಸ್ವಂತ ನಿರೀಕ್ಷಣೆಯಿಂದ ಅದು ಪ್ರಶಂಸನೀಯ ಸ್ಥಿರವಾದುದೆಂಬುದು ನಿಮ್ಮ ಮನಸ್ಸಿಗೆ ಹೊಳೆಯದಿರದು. ಒಬ್ಬ ಕ್ರಮಾಗತ ಉಳಿತಾಯಗಾರನು ಉತ್ತಮ ಮನುಷ್ಯನಾಗಿದ್ದಾನೆ. ಅವನೊಡನೆ ನೀವು ಪಂಥ ಹಾಕಬಹುದು.

ಮತ್ತು ಬ್ಯಾಂಕ್ ಉಳಿತಾಯಗಾರನು ಭದ್ರತೆಯ, ಉಪಯೋಗದ, ಸಂಪಾದನೆಯ, ಸೇವೆ ಮತ್ತು ಸಹಾಯಕವಾಗುವ ವಿವಿಧ ಅನುಕೂಲತೆಗಳನ್ನು ಪಡೆಯುತ್ತಾನೆ .... ಉಳಿಸು............... ಹೆಚ್ಚಾಗಿ ಉಳಿಸು.... .... ನಿರಂತರವಾಗಿ ಹೆಚ್ಚು ಉಳಿಸು — ನಮ್ಮ ಬ್ಯಾಂಕಿನಲ್ಲಿ!

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ಮಣಿಪಾಲ
ವಿಶ್ವದಾದ್ಯಂತ ಬ್ಯಾಂಕಿಂಗ್ ಸೇವೆ

ನವಯುಗ

ವರುಷ	ಉಡುಪಿ	ವಾರ
೪೩	೧೬-೭-೧೯೬೪	೪೬

ದ್ವಿಮುಖಿ ಅಯ್ಯೂಬಖಾನ್

ಲಂಡನ್ನಿನಲ್ಲಿ ಕಾಮನ್‌ವೆಲ್ತ್ ಸಮ್ಮೇಳನವು ನಡೆಯುವುದಕ್ಕೆ ಪ್ರಾರಂಭವಾಗುವಾಗಲೇ ಕಾಶ್ಮೀರದ ಸಮರ ವಿರಾಮ ರೇಖೆಯ ಉಲ್ಲಂಘನೆಯೂ ಪಾಕಿಸ್ತಾನಿ ಸೇನೆಯಿಂದ ನಡೆಯತೊಡಗಿದೆ; ಪ್ರಾಯಶಃ ಇದು ಕಾಮನ್‌ವೆಲ್ತ್ ಸಮ್ಮೇಳನವು ಅಂತ್ಯಗೊಂಡಾಗಲೇ ಕೊನೆಗೊಳ್ಳುವುದು. ಪಾಕಿಸ್ತಾನಿ ರಾಜಕಾರಣಿಗಳು ಒಂದು ಕೈಯಲ್ಲಿ ಸೌಹಾರ್ದಯುತ ಮಾತುಕತೆಯ ರೊಟ್ಟಿಯನ್ನು ಮುಂದೆ ಮಾಡಿ ಮತ್ತೊಂದು ಕೈಯಲ್ಲಿ ಸಮರ ವಿರಾಮ ರೇಖೆಯ ದೊಣ್ಣೆಯನ್ನು ಹಿಡಿದಿರುತ್ತಾರೆ. ಇದೇನೂ ಹೊಸ ಸಂಗತಿಯಲ್ಲ. ಅಂತಾರಾಷ್ಟ್ರೀಯ ಮಹತ್ವದ ಸಭೆ-ಸಮ್ಮೇಳನಗಳ ಹಿನ್ನೆಲೆಯಲ್ಲಿ ಅವರು ಕಾಶ್ಮೀರವನ್ನು ಅಶಾಂತ ಪ್ರದೇಶವೆಂದೂ ಅದರ ಪ್ರಶ್ನೆ ಬೇಗನೇ ಇತ್ಯರ್ಥವಾಗಬೇಕೆಂದೂ (ತಾನು ಹೇಳುವಂತೆ) ವಾದಿಸಿ ಈ ವಾದಕ್ಕೆ ಬಲ ನೀಡಲು ಬಿಡಿಸಿದ ಎರಡಲಗಿನ ಕತ್ತಿಯನ್ನು ಝಳಪಿಸಿದ್ದಾರೆ; ಬಹುಕಾಲದಿಂದಲೂ ಅವರು ನಡೆದು ಬಂದ ದಾರಿಯಿದು.

ಪ್ರಧಾನಿ ನೆಹರೂರವರು ದಿವಂಗತರಾದ ಮೇಲೆ ಲಾಲ ಬಹದೂರರು ಹೊಸ ಪ್ರಧಾನಿಯಾಗಿ ಆಯ್ಕೆ ಹೊಂದಿದ ಮೇಲೆ, ಫೀಲ್ಡ್ ಮಾರ್ಶಲ್ ಅಯ್ಯೂಬಖಾನರ ರಾಗದಲ್ಲಿ ತುಸು ಬದಲಾವಣೆಯಾಗಿದೆ; ಆದರೆ, ಈ ಹೊಸರಾಗದಲ್ಲಿಯೂ ಅವರಾಡುವ ಪಲ್ಲವಿ ಮಾತ್ರ ಒಂದೇ. ಕಾಮನ್‌ವೆಲ್ತ್ ಸಮ್ಮೇಳನವು ನಡೆಯುತ್ತಿರುವ ವೇಳೆ ಅವರು ಲಂಡನ್ನಿನಲ್ಲಿ ದೊಡ್ಡ ದೊಡ್ಡ ಮಾತುಗಳನ್ನು ಆಡಿದರು. ಚೀನಿಯರಿಂದ ದೊಡ್ಡ ಪ್ರಮಾಣದ ಆಕ್ರಮಣ ಭೀತಿಯು ಭಾರತಕ್ಕೆ ವಾಸ್ತವವಾಗಿ ಇರುವುದಿಲ್ಲವೆಂದೂ ಭಾರತದ ತಪ್ಪು ಕಲ್ಪನೆಯೇ ಈ ವ್ಯರ್ಥ ಭೀತಿಗೆ ಕಾರಣವೆಂದೂ ಇದರಿಂದಾಗಿಯೇ ಅದು ತನ್ನ ಸೈನಿಕ ವೆಚ್ಚವನ್ನು ಹೆಚ್ಚು ಮಾಡಿ ನೆರೆಯ ರಾಷ್ಟ್ರಗಳಿಗೆ ಅಭದ್ರ ಪರಿಸ್ಥಿತಿಯನ್ನು ತಂದಿದೆಯೆಂದೂ ಅವರು ಹೇಳಿದ್ದಾರೆ. ಭಾರತ ಉಪಖಂಡದ ಭದ್ರತೆಯು ಭಾರತ—ಪಾಕಿಸ್ತಾನಗಳ ಸಂಯುಕ್ತ ಹೊಣೆಗಾರಿಕೆಯೆಂದೂ ಇದಕ್ಕಾಗಿ ಭಾರತವು ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಲು ಮುಂದೆ ಬರಬೇಕಾಗಿತ್ತೆಂದೂ ಹೀಗಾಗುತ್ತಿದ್ದರೆ, ಚೀನೀಯ ಆಕ್ರಮಣವನ್ನು ತಪ್ಪಿಸ ಬಹುತಿತ್ತೆಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ. ಭಾರತ ಬಗ್ಗೆ ಭವಿಷ್ಯ ಮತ್ತು ಸಂಭಾವ್ಯಗಳನ್ನು ನುಡಿದ ಅಯ್ಯೂಬಖಾನರಿಗೆ ಈ ಯೆಲ್ಲಾ ವಿಚಾರಗಳು ಹೇಗೆ ತಿಳಿದುವೆಂದು ಗೊತ್ತಿಲ್ಲ. ಕೆಂಪು ಚೀನಾವು ಭಾರತದ ಮೇಲೆ ಆಕ್ರಮಣ ಮಾಡಿದೆಯೇ ಇಲ್ಲವೇ, ಮುಂದಕ್ಕೆ ಮಾಡಬಹುದೇ ಮಾಡಲಾರದೆ ಎಂಬುದನ್ನು ಅರಿತುಕೊಳ್ಳುವ ಶಕ್ತಿ ಭಾರತೀಯರಿಗಿದೆ; ಅದನ್ನು ಪಾಕಿಸ್ತಾನದಿಂದ ಎರವಲು ಕೊಂಡು ಕೊಳ್ಳುವ ದುರ್ಗತಿ ಅವರಿಗೆ ಬಂದಿಲ್ಲ. ತನ್ನ ದೇಶದಲ್ಲಿ ಹರಿಯುವ ನದಿಗಳು ಕಾಶ್ಮೀರವನ್ನು ಹಾದು ಬರುವುದರಿಂದ ಕಾಶ್ಮೀರವು ತನಗೆ ಸೇರಿದ್ದು ಎಂಬ ವಾದವನ್ನವರೀಗ ಮುಂದೆ ಮಾಡಿದ್ದಾರೆ. ಇದನ್ನು ವಿಚಿತ್ರ ವಾದವೆನ್ನದೆ ಮತ್ತೇನೆನ್ನಬೇಕು?

ಭಾರತವು ಪಾಕಿಸ್ತಾನದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಒಂದು ಮಾತು ಬರೆಯ ಬೇಕೆನಿಸುತ್ತದೆ. ಭಾರತವು ತನ್ನ ಸಂರಕ್ಷಣೆಗಾಗಿ ತನ್ನ ಸೈನಿಕ ಶಕ್ತಿಯನ್ನು ಹೆಚ್ಚಿಸುತ್ತಿರುವಾಗ, ಪಾಕಿಸ್ತಾನ ತುಸು ಗಾಬರಿಯಾಗುವುದು ನ್ಯಾಯವೇ. ಕಾಶ್ಮೀರವೇ ಮೊದಲಾದ 'ವಿವಾದ'ಗಳಿರುವಾಗ ಅದಕ್ಕೆ ಇಂತಹ ಭಯವು ಸಹಜವೆಂದೇ ಹೇಳೋಣ. ಆದರೆ, ಪರಸ್ಪರ ಅನಾಕ್ರಮಣದ ಒಡಂಬಡಿಕೆಯನ್ನು ಮಾಡಿಕೊಳ್ಳೋಣವೆಂದ ಭಾರತದ ಸಲಹೆಯನ್ನದು ತಿರಸ್ಕರಿಸಿದ್ದು ಯಾಕೆ? ಇದರಿಂದಲೇ ಅದರ ಆಕ್ರಮಣಶೀಲತೆ, ಆಕ್ರಮಣಕಾರಿ ಚೀನೀಯರ ಪರವಾದ ಒಲವುಗಳು ಬಹಿರಂಗವಾಗುವುದಿಲ್ಲವೆ? ಚೀನಾದೊಡನೆ ಸಂಧಾನವನ್ನು ಮಾಡಿ,ಗಡಿ ಸಮಸ್ಯೆಯನ್ನು ದೂರೀಕರಿಸಿಕೊಳ್ಳ ಬಹುದೆನ್ನುವ ಅಯ್ಯೂಬಖಾನರು ತಾನು ತನ್ನದಲ್ಲದ, ಮತ್ತು ಎಂದೂ ತನ್ನದಾಗಿರದ ಕಾಶ್ಮೀರದ ವಿಸ್ತೃತ ಭಾಗವನ್ನು ಚೀನಕ್ಕೆ ಧಾರೆಯೆರೆದು ಸ್ನೇಹ ಬೆಳೆಸಿದಂತೆ ಭಾರತವು ತನ್ನ ನೆಲವನ್ನು ಲಾಯರ ಬಾಯಿಗೆ ಆಹುತಿ ನೀಡಬೇಕೆಂದು ಅವರು ಹೇಳಿದಂತಾಗಿದೆ. ಲಡಖ—ನೇಫಾಗಳನ್ನು ಕೆಂಪು ಚೀನಾಕ್ಕೆ, ಕಾಶ್ಮೀರವನ್ನು ತನಗೆ ದತ್ತಿ ಬಿಟ್ಟು ಭಾರತವು ನೆರೆಯ ರಾಷ್ಟ್ರಗಳೊಳಗಿನ ವಿವಾದಗಳನ್ನು ಶಾಂತ ವಿಧಾನಗಳಿಂದ ಪರಿಹರಿಸಿಕೊಳ್ಳಬೇಕೆಂಬ ಸಲಹೆ ಅಯ್ಯೂಬಖಾನರದ್ದಿರಬಹುದೆ? ಅವರ ವಾಗ್ಜಾಲವನ್ನು ಕೇಳುವಾಗ, ಈ ಭಾವನೆಯು ಸ್ಪಷ್ಟವಾಗುತ್ತದೆ. ಆದರೆ, ಭಾರತೀಯರು ಅಷ್ಟು ತಿಳಿಗೇಡಿಗಳಲ್ಲ; ವಿವೇಕ ಶೂನ್ಯರಲ್ಲ. ದ್ವಿಮುಖಿ ಮಾರ್ಗಭ್ರಮಣ ನಾಡುವ ಅಯ್ಯೂಬಖಾನರು ಕೆಂಪು ಚೀನಾದ ವಕೀಲರ ಪಾತ್ರವನ್ನು ಲಂಡನ್ನಿನಲ್ಲಿ ಆಡಿ ತೋರಿಸಿದರು ಎಂದು ಎಲ್ಲರೂ ತಿಳಿದುಕೊಳ್ಳಬಲ್ಲರು.

ಕಾಶ್ಮೀರದ ಪ್ರಶ್ನೆಯನ್ನು ಶಾಂತ ವಿಧಾನಗಳಿಂದ ಬಗೆಹರಿಸುವ ಇರಾದೆಯುಳ್ಳವರು ಅಯ್ಯೂಬಖಾನರಾದರೆ, ತನ್ನ ಸೇನೆ-ಪೋಲೀಸರ ಕಡೆಯಿಂದಾಗುವ ಸಮರ ವಿರಾಮ ರೇಖೆಯ ಉಲ್ಲಂಘನೆಯನ್ನು ತಡೆಯಬೇಕು. ನಿರಪರಾಧಿಗಳಾದ ಕಾಶ್ಮೀರಿಗಳನ್ನು ಲೂಟಿ ಮಾಡುವುದನ್ನು, ಅವರಿಗೆ ಕಿರುಕುಳ ಕೊಡುವುದನ್ನು ಅವರು ನಿಲ್ಲಿಸಬೇಕು. ತನ್ನದೇ ಆದ ಮೊಂಡು ವಾದವೊಂದಕ್ಕೆ ಮಾತ್ರ ಅಂಟಿಕುಳಿತುಕೊಳ್ಳದೆ ನ್ಯಾಯದ ಮುಂದೆ ತಲೆ ಬಗ್ಗಿಸಲು ಕಲಿತುಕೊಳ್ಳಬೇಕು. ಇನ್ನೊಬ್ಬರನ್ನು ಅಪಮಾನ ಮಾಡುವುದರಿಂದಲೇ ತನ್ನ ಮಾನ ಹೆಚ್ಚುವುದೆಂಬ ಕುಕಲ್ಪನೆಯನ್ನು ಬಿಟ್ಟು, ಸೌಹಾರ್ದಕ್ಕೆ ತಕ್ಕ ವಾತಾವರಣವನ್ನು ನಿರ್ಮಿಸಬೇಕು. ಬಾಯಲ್ಲಿ ರಾಮನಾಮ ಹಾಡುತ್ತ ಬಗಲಲ್ಲಿ ಗುಂಡು ಇಟ್ಟುಕೊಂಡು ಸಮಯ ಕಾಯುವ ವಂಚಕತನವನ್ನು ಕೈಬಿಡಬೇಕು. ಎಲ್ಲ ಕಾಲದಲ್ಲೂ ಸತ್ಯವನ್ನು ಮುಚ್ಚಿಡುವ ಪ್ರಯತ್ನ ಯಶಸ್ವಿಯಾಗುವುದಿಲ್ಲವೆಂಬುದನ್ನವರು ಅರಿತು ಇನ್ನಾದರೂ ಹಾರ್ದಿಕವಾಗಿ ಮಾತುಕತೆಗೆ ತಯಾರಾಗ ಬೇಕು. ಉಪಖಂಡದ ರಕ್ಷಣೆಯಲ್ಲಿ ತನಗೂ ಪಾಲಿದೆಯೆಂದು ಹೇಳುವ ಅವರು ಉಪಖಂಡದ ಶತ್ರುಗಳ ಕೂಡೆ ಸ್ನೇಹದಿಂದಿರುವುದನ್ನು ಬಿಟ್ಟುಬಿಡಬೇಕು. ಇದಕ್ಕೆ ಅಯ್ಯೂಬಖಾನರು ಸಿದ್ಧರಿದ್ದಾರೆಯೆ?

ಡಾ| ಜಾಕೀರ್ ಹುಸೇನ್

ಉಪರಾಷ್ಟ್ರಪತಿ ಡಾ| ಜಾಕೀರ ಹುಸೇನರು ಆಲ್ಜೀರಿಯಾದ ಅಧ್ಯಕ್ಷ ಬೆನ್ ಬೆಲ್ಲಾ, ಮೊರಕ್ಕೋವಿನ ಅರಸ ಹುಸೇನ್ ಮತ್ತು ಟ್ಯುನಿಸಿಯಾದ ಅಧ್ಯಕ್ಷ ಬೋರ್ಗಿಬಾರೊಡನೆ ಸೌಹಾರ್ದ ಸಂದರ್ಶನದ ವೇಳೆ ಮಾತುಕತೆಯಾಡಿದರು. ಆಫ್ರಿಕೆಯಲ್ಲಿ ಭಾರತದ ಪರಮ ಮಿತ್ರ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರರೊಬ್ಬರಿದ್ದಾರೆ. ಆದರೂ ಆಫ್ರಿಕನ್ ರಾಷ್ಟ್ರಗಳಲ್ಲಿ ಭಾರತದ ನೀತಿಯ ಬಗ್ಗೆ ವಿಶ್ವಾಸವನ್ನು ಮೂಡಿಸಬೇಕಾದರೆ, ಹಲವು ರಾಷ್ಟ್ರಗಳ ಸಂಪರ್ಕ ಅಗತ್ಯ. ಚೀನಾ ಮತ್ತು ಪಾಕಿಸ್ತಾನಗಳು ಭಾರತ ಬಗ್ಗೆ ಅಪಪ್ರಚಾರದ ಕಾರ್ಯದಲ್ಲಿಯೇ ಮಗ್ನವಾಗಿರುವಾಗ, ನಮ್ಮ ಧೋರಣೆಯನ್ನು ಸರಿಯಾಗಿ ತಿಳಿಸಿ ಹೇಳುವುದು ಮತ್ತು ಹೆಚ್ಚಿನ ರಾಷ್ಟ್ರಗಳಲ್ಲಿ ತುಂಬಿರಬಹುದಾದ ದುರಭಿಪ್ರಾಯವನ್ನು ದೂರಮಾಡುವುದು ನಮ್ಮ ಕರ್ತವ್ಯ. ಅದಕ್ಕಾಗಿಯೇ ಡಾ| ಹುಸೇನರು ಕೈಗೊಂಡ ಈ ಸಂಚಾರ ಮತ್ತು ಆಡಿದ ಮಾತುಕತೆಗಳು ನೆಹರು ನಿಧನಾ ನಂತರವೂ ಭಾರತದ ನೀತಿ ಬದಲಾಗಿಲ್ಲವೆಂಬುದನ್ನು ಸ್ಪಷ್ಟಪಡಿಸಿವೆ. ಆಫ್ರಿಕದ ಎಲ್ಲ ರಾಷ್ಟ್ರಗಳೂ ಸ್ವತಂತ್ರವಾಗಬೇಕೆಂಬುದೇ ಭಾರತದ ಆಶಯ. ಜಗತ್ತಿನಲ್ಲಿಯೇ ಹಿಂದುಳಿದ ಆಫ್ರೇಶ್ಯಾದ ರಾಷ್ಟ್ರಗಳಲ್ಲಿ ಪರಸ್ಪರ ತಿಳುವಳಿಕೆ ಮೂಡಿ ಒಬ್ಬರ ಅಸ್ತಿತ್ವವನ್ನು ಮತ್ತೊಬ್ಬರು ಮನ್ನಿಸಿ ಸುಖೀರಾಜ್ಯ ನಿರ್ಮಾಣದ ಕಾರ್ಯದಲ್ಲಿ ಯಶಸ್ವಿಯಾಗಬೇಕು ಎಂಬುದೇ ಭಾರತದ ಅಭಿಲಾಷೆ. ಇದನ್ನು ಪ್ರತಿಬಿಂಬಿಸುವಲ್ಲಿ ಡಾ| ಹುಸೇನರ ಯಾತ್ರೆ ಯಶಸ್ವಿಯಾಗಿದೆಯೆಂದು ಹೇಳಲು ಹಿಂದೆ ಮುಂದೆ ನೋಡಬೇಕಾಗಿಲ್ಲ.

ಕರಿಮೆಣಸು-ಒಣಶುಂಠಿ

ಹುಬ್ಬಳ್ಳಿಯಲ್ಲಿ ಸಕ್ಕರೆ ವಿತರಣೆಯ ಲೈಸನ್ಸಿನ ದುರುಪಯೋಗ ಪಡಿಸಿಕೊಂಡ ೧೨ ಜನರ ಲೈಸನ್ಸುಗಳನ್ನು ರದ್ದುಗೊಳಿಸಲಾಗಿದೆ. (ಸರಕಾರದ ಉಗ್ರ ಕ್ರಮ?)

—ಅಲ್ಲಿಯೇ ಉಳಿದವರ ಮತ್ತು ಉಳಿದೆಡೆಯವರ ಸರದಿ ಯಾವಾಗ ಬಂದೀತೆಂದು ಜನ ಇದಿರು ನೋಡುತ್ತಿದೆ.

೦ ೦ ೦

ಶಿಕ್ಷಕರಿಗೆ ಕೆಲಸ ಮಾಡುತ್ತಿರುವಾಗಲೇ ತರಬೇತಿ ಪಡೆಯುವ ವ್ಯವಸ್ಥೆಯೋಜಿಸ ಬೇಕು. (ಕೇಂದ್ರ ಸಚಿವ ಭಾಗ್ವತ ಸಲಹೆ)

—ಇದನ್ನು ಸರಕಾರ ಜ್ಯಾರಿಗೆ ತಂದರೆ, ಉದ್ಯೋಗದಲ್ಲಿರುವ ಹಳೆಯ ಮೆಸೂರಿನ ತರಬೇತಿ ಹೊಂದದ ಶಿಕ್ಷಕರ್ಯಾರೊಬ್ಬರೂ ಬೀದಿಗೆ ಬೀಳದಿರುವುದಿಲ್ಲವೆಂಬುದು ಖಂಡಿತ.

೦ ೦ ೦

ಶಾಸ್ತ್ರಿ ಮಂತ್ರಿಮಂಡಳವು ಜೋಪಾಸನಾ ಸರಕಾರವೆಂದು ತಿಳಿಯ ಬಾರದು; ಅದು ಸುಭದ್ರವಾದ ಸರಕಾರ—ಅಮೇರಿಕೆಯ ವಿದೇಶ ಮಂತ್ರಿ ಡೀನ್ ರಸ್ಕರ ಪ್ರಶಂಸೆ.

—ಶಾಸ್ತ್ರಿಯವರನ್ನು ಭರತನೆಂದು ಯಾರೂ ಕರೆಯಲಿಲ್ಲ; ಅವರೂ ಹಾಗೆಂದು ತಿಳಿಯಲಿಲ್ಲವೆಂಬುದು ರಸ್ಕರಿಗೆಲ್ಲಿ ಗೊತ್ತಾಗಬೇಕು?

೦ ೦ ೦

ದಕ್ಷಿಣದ ರಾಜ್ಯದಲ್ಲಿ ಹಿಂದೀ ಪ್ರಚಾರವನ್ನು ಖಾಸಗಿ ಸಂಸ್ಥೆಗಳೇ ನಡೆಸಬೇಕು—ಭಾಗ್ವತರ ಅಭಿಮತ.

—ಕರ್ನಾಟಕದ ಸರಕಾರ ಈ ಜವಾಬ್ದಾರಿಯನ್ನೂ ಹೊರಲು ಸಿದ್ಧವಾಗಿದೆಯೆಂಬುದನ್ನವರು ಅರಿತಿಲ್ಲವೆಂದು ತೋರುತ್ತದೆ.

೦ ೦ ೦

೨೦ ವರ್ಷಗಳ ನಂತರ ಡಾ| ರಾಧಾಕೃಷ್ಣನ್ ತಾನು ಹುಟ್ಟಿದ ಮನೆಯಿದ್ದ ಸ್ಥಾನಕ್ಕೆ ಭೇಟಿಯಿತ್ತರು.

—ಹುಟ್ಟೂರಿನ ನೆನಪು ಮರೆಯುವುದಿಲ್ಲವೆಂಬುದು ಸತ್ಯವೆಂದಾಯಿತು.

೦ ೦ ೦

ಟಿಟಿಕೆಯವರು ಮತ್ತೊಮ್ಮೆ ಅಯ್ಯೂಬಖಾನರನ್ನು ಭೆಟ್ಟಿಯಾಗಲು ಬಯಸುವುದಿಲ್ಲ [ವಾರ್ತೆ]

—ಅಯೂಬರ ಧೋರಣೆಯ ವೈಧಿಲ್ಯ ಶಾಬ್ದಿಕ ಮಾತ್ರವೆಂದವರು ಪ್ರಥಮ ಭೇಟಿಯಲ್ಲೇ ತಿಳಿದುಕೊಂಡಿರ ಬಹುದೆ?

೦ ೦ ೦

ಗೋವೆಯ ಲೆ|ಜ| ಸರ್‌ದೇವರು ಕಾಕಾ ಕಾಲೇಲ್ಕರಿಗೆ ನೀಡಿದ ಸತ್ಕಾರ ಸಮಾರಂಭವನ್ನು ಅಲ್ಲಿನ ಮಂತ್ರಿಗಳು ಬಹಿಷ್ಕರಿಸಿದರು.

—ಮಹಾರಾಷ್ಟ್ರವಾದಿ ಗೋಮಾಂತಕರು ಮಹಾಸಿದ್ಧಿಯೊಂದನ್ನು ಗಳಿಸಿದರೆಂದು ನಂಬಲು ಸಾಕಷ್ಟು ಪುರಾವೆಗಳಿಲ್ಲ.

೦ ೦ ೦

ಆಹಾರಧಾನ್ಯಗಳವ್ಯಾಪಾರಿಗಳು ತಮ್ಮ ವರ್ತನೆಯನ್ನು ತಿದ್ದಿಕೊಳ್ಳಲು ಮೂರು ತಿಂಗಳ ಅವಕಾಶವನ್ನು ಕೇಂದ್ರ ಆಹಾರ ಸಚಿವ ಸುಬ್ರಹ್ಮಣ್ಯಂ ನೀಡಿದ್ದಾರೆ.

—ಅಷ್ಟರಲ್ಲಿ ಸುಗ್ಗಿಯ ಕಾಲ ಪ್ರಾರಂಭವಾಗುವುದರಿಂದ ವರ್ತಕರ ವರ್ತನೆ ಖಂಡಿತಕ್ಕೂ ಪರಿವರ್ತನೆಯಾಗುತ್ತದೆಯೆಂದು ವಿಶ್ವಾಸವೆ?

೦ ೦ ೦

ಪ್ರಧಾನಮಂತ್ರಿ ಶಾಸ್ತ್ರಿಯವರು ತಮ್ಮ ಕಳೆದುಕೊಂಡ ಆರೋಗ್ಯವನ್ನು ಮರಳಿ ಗಳಿಸಿಕೊಂಡಿದ್ದಾರೆ.

—ಸದ್ಯ ಅವರ ಸಚಿವ ಸಂಪುಟವು ಸಮಾಧಾನ ಪಡುವಂತಾಯಿತು.

೦ ೦ ೦

ಕಾಮನ್‌ವೆಲ್ತ್ ಸಮ್ಮೇಳನವು ಹೇಗೆ ಹೇಗೋ ನಡೆಯಿತು.

—ಭವಿಷ್ಯದ ಸೂಚನೆಯೇ ಇದು?

ಅಲ್ಲಲ್ಲಿಯ ಸುದ್ದಿ ಸಾರ

ರೋಟರಿ ಕ್ಲಬ್ಬಿನ ಸಭೆ— ಭಾರತದಲ್ಲಿ ಹಲವಾರು ಭಾಷೆಗಳಿರುವಂತೆ ಅಸಂಖ್ಯಾತ ಸಮಸ್ಯೆಗಳಿವೆ ಎಂಬ ಸಂಗತಿ ಬಹುಪಾಲು ವಿದೇಶೀಯರಿಗೆ ತಿಳಿದಿಲ್ಲವೆಂದು ಉಡುಪಿ ರೋಟರೀ ಕ್ಲಬ್ ಅಧ್ಯಕ್ಷ ಶ್ರೀ ರಮೇಶ ಪೈ ತಾ. 7-7-64ರಂದು ಮಣಿಪಾಲದಲ್ಲಿ ನುಡಿದರು. ಅವರು ಅಮೆರಿಕ ಮತ್ತು ಯೂರೋಪ್ ಪ್ರವಾಸ ಮುಗಿಸಿಕೊಂಡು ಇಲ್ಲಿಗೆ ಬಂದೊಡನೆ ಕ್ಲಬ್ಬಿನ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಡಾ| ಟಿ. ಎಂ. ಎ. ಪೈಯವರೊಡಗೂಡಿ ತಾವು ಟೊರಂಟೋ ನಗರದಲ್ಲಿ ರೋಟರಿ ಅಂತರಾಷ್ಟ್ರೀಯ ಅಧಿವೇಶನದಲ್ಲಿ ಭಾಗವಹಿಸಿದ್ದರಿಂದ ಅಪೂರ್ವ ಅನುಭವವಾಯಿತೆಂದೂ, ಅಲ್ಲಿ ೧೬,೦೦೦ ರೋಟೇರಿಯನ್ನರುಗಳು ಸಮಾವೇಶಗೊಂಡಿದ್ದರೆಂದೂ ಅವರು ಹೇಳಿದರು.

ಅಮೇರಿಕದ ಧರ್ಮ ಸಂಸ್ಥೆಗಳೊಡನೆ ತಾವು ಮಾತುಕತೆ ನಡೆಸಿದ್ದನ್ನು ಪ್ರಸ್ತಾಪಿಸುತ್ತಾ, ಬೋಳು ಗುಡ್ಡವಾಗಿದ್ದ ಮಣಿಪಾಲವನ್ನು ಹತ್ತು ವರ್ಷಗಳಲ್ಲಿ ದೊಡ್ಡ ವಿದ್ಯಾ ಕೇಂದ್ರವಾಗಿ ಪರಿವರ್ತಿಸಲಾಗಿದೆ ಎಂಬುದನ್ನು ಅಲ್ಲಿಯ ಅಧಿಕಾರಿಗಳು ನಂಬಲೊಪ್ಪಲಿಲ್ಲವೆಂದರು. ಜಾನ್ ಹಾಪ್ ಕಿನ್ಸ್ ವಿಶ್ವ ವಿದ್ಯಾಲಯದ ಅಧ್ಯಕ್ಷರು ಎಕಾಡೆಮಿಯ ಚಟುವಟಿಕೆಗಳ ಬಗ್ಗೆ ವಿಶೇಷ ಆಸಕ್ತಿ ತೋರಿಸಿದರೆಂದರು.

ಶ್ರೀ ಪೈಯವರು ನೂತನ ಅಧ್ಯಕ್ಷ ಡಾ|| ಎ. ಕೃಷ್ಣರಾವ್‌ರವರಿಗೆ ಅಧಿಕಾರ ವಹಿಸಿಕೊಟ್ಟರು. ಕಳೆದ ವರ್ಷ ಕ್ಲಬ್ ಸಲ್ಲಿಸಿದ ಸೇವೆಗಳನ್ನು ಸ್ಮರಿಸಿಕೊಂಡು, ಹೊಸ ವರ್ಷವು ಮೆಡಿಕಲ್ ಕಾಲೇಜು ಡೀನುಗಳಲ್ಲಿ ಕಿರಿಯವರಲ್ಲೊಬ್ಬರಾದ ಡಾ|| ರಾವ್ ರವರ ನಾಯಕತ್ವದಲ್ಲಿ ಫಲಪ್ರದವಾಗಲೆಂದು ಹಾರೈಸಿದರು. ಡಾ| ರಾವ್‌ರವರು ಹಿಂದಿನ ಅಧ್ಯಕ್ಷರು ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ, ಅವರ ಉಚ್ಚ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದಾಗಿ ಹೇಳಿದರು. ಕ್ಲಬ್ಬಿನ ಹೊಸ ಪದಾಧಿಕಾರಿಗಳನ್ನು ಅವರು ಅಧಿಕಾರ ರೂಢರನ್ನಾಗಿ ಮಾಡಿದರು. ಅಧಿಕಾರಾವಧಿ ಮುಗಿದ ಕಾರ್ಯದರ್ಶಿ ಶ್ರೀ ಎ. ಜೆ. ಆಳ್ವಿಯವರು ವಂದನಾರ್ಪಣೆ ಮಾಡಿದರು.

ಹೋಟೇಲ್ ಸತ್ಯಪ್ರಕಾಶ್— ಬಿ. ಎಸ್. ಕೃಷ್ಣರಾವ್ ಮತ್ತು ಸಹೋದರರ ಹೋಟೇಲ್ ಸತ್ಯಪ್ರಕಾಶ ಎಂಬ ಬೋರ್ಡಿಂಗ್, ಲಾಜಿಂಗ್ ಮತ್ತು ರೆಸ್ಟೋರೆಂಟ್ ಇದೇ ತಾ. 3ರಂದು ಬೆಂಗಳೂರಲ್ಲಿ ಶೇಷಾದ್ರಿಪುರಂ ಸರ್ಕಲ್‌ನಲ್ಲಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷ ಶ್ರೀ ಜಿ. ವಿ. ಹಳ್ಳಿಕೇರಿಯವರಿಂದ ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲ್ಪಟ್ಟಿರುವುದು.

ಕಡಿರುದ್ಯಾವರ:— ಮಿತಬಾಗಿಲು ಪಂಚಾಯಿತಿನ ಆಡಳಿತಗೊಳಪಟ್ಟು ನಡೆಯುತ್ತಿರುವ ಕಡಿರುದ್ಯಾವರ ಎಲಿಮೆಂಟರಿ ಶಾಲೆಯಲ್ಲಿ ದಿನಾಂಕ 8-7-1964 ರಂದು ಬೆಳ್ತಂಗಡಿ ತಾಲೂಕು ಬೋರ್ಡು ಮೆಂಬರರಾದ ಮಾನ್ಯ ಶ್ರೀ ವಾಸುದೇವ ಹೆಬ್ಬಾರರವರ ಅಧ್ಯಕ್ಷತೆಯಲ್ಲಿ—ಮಾನ್ಯ ಪಡಂಗಡಿ ಪಂಚಾಯತ್ ಚೇರ್ ಮೇನ್ ಶ್ರೀ. ಭೋಜರಾಜ ಹೆಗ್ಡೆಯವರ ದಿವ್ಯ ಹಸ್ತದಿಂದ ಆರನೆ ತರಗತಿಯನ್ನು ಉದ್ಘಾಟಿಸಲಾಯಿತು. ಮಾನ್ಯ ಬೆಳ್ತಂಗಡಿ ತಾಲೂಕು ಬೋರ್ಡು ಅಧ್ಯಕ್ಷರಾದ ಶ್ರೀಮಾನ್ ಜಿ. ಎಸ್. ಬಿಡೆಯವರು, ಮಿತಬಾಗಿಲು ಪಂಚಾಯತು ಚೇರ್ ಮೇನ್ ಶ್ರೀ ಮಾನ್ ಬಿ. ಕೆ. ವೆಂಕಟಸುಬ್ಬರಾವ್‌ರವರು ಮೊದಲಾದ ಮಹನೀಯರು ಅಭಿವೃದ್ಧಿಗೊಂಡ ಈ ಶಾಲೆಯ ಬಗ್ಗೆ ತಮ್ಮ ಹಿತ ಸೂಚನೆಗಳನ್ನು ಕೊಟ್ಟರು. ಊರಿನ ಪರಊರಿನ ನೂರಾರು ಮಂದಿ ಗ್ರಾಮಸ್ಥರು ಸೇರಿದ ಈ ಸಮಾರಂಭವು ಯಶಸ್ವಿಯಾಗಿ ನೆರವೇರಿತು.

ಎಫ್ ಎಕ್ಸ್ ಡಿ. ಪಿಂಟೋರಿಗೆ ನೈಟ್ ಹುಡ್ ಪ್ರಶಸ್ತಿ— ಇದೇ ತಾ. 12ರಂದು ಮಂಗಳೂರಿನ ಪ್ರಸಿದ್ಧ ಕೈಗಾರಿಕೋದ್ಯಮಿಗಳೂ ಮಾಜಿ ಎಂ. ಎಲ್. ಎ. ಗಳೂ ಆದ [illegible] ರಿಗೆ ಪೋಪರವರು ಸಾರಿದ್ದ ನೈಟ್‌ಹುಡ್ ಪ್ರಶಸ್ತಿಯನ್ನು ಇಲ್ಲಿನ ಬಿಷಪ್ ರೈಟ್ ರೆವರೆಂಡ್ ಡಾ| ಆರ್. ಡಿ. ಸೋಜರವರು ಸಂಭ್ರಮದ ಸಮಾರಂಭವೊಂದರಲ್ಲಿ ಶ್ರೀ ಪಿಂಟೋರವರಿಗೆ ಅರ್ಪಿಸಿದರು. ಕಾಥೆಡ್ರಲಿನಲ್ಲಿ ಜರಗಿದ ಈ ಸಮಾರಂಭಕ್ಕೆ ನಗರದ ಪ್ರಮುಖರನೇಕರು ಆಗಮಿಸಿದ್ದರು.

ಜಗತ್ಪರ್ಯಟನ

ನಾಲ್ಕನೆ ಯೋಜನೆಯಲ್ಲಿ ಶಿಕ್ಷಣ

ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಶಿಕ್ಷಣಕ್ಕಾಗಿ ೧,೯೯೦ ಕೋಟಿ ರೂಪಾಯಿಗಳನ್ನು ಮೀಸಲಾಗಿಡಬೇಕೆಂದು ಸಾಮಾನ್ಯ ಶಿಕ್ಷಣ ತಾಂತ್ರಿಕ ಮಂಡಲಿಯು ಯೋಜನಾ ಆಯೋಗಕ್ಕೆ ಸಲಹೆ ನೀಡಿದೆ ಎಂದು ಸುದ್ದಿ. ತೃತೀಯ ಯೋಜನಾವಧಿಯಲ್ಲಿ ಶಿಕ್ಷಣಕ್ಕೆ ಮೀಸಲಾಗಿರಿಸಿದುದು ಕೇವಲ ೬೧೮ ಕೋಟಿ ರೂಪಾಯಿಗಳು. ಇದನ್ನು ಹೋಲಿಸುವಾಗ ಚತುರ್ಥ ಯೋಜನೆಯಲ್ಲಿ ಈ ಸಲಹೆ ಅಂಗೀಕೃತವಾದರೆ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳಾಗುವುದು ಖಂಡಿತ.

ಹದಿನಾಲ್ಕು ವರ್ಷದ ವರೆಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ, ಅಧ್ಯಾಪಕರ ವೇತನ ಅಭಿವೃದ್ಧಿ, ವೈಜ್ಞಾನಿಕ ಹಾಗೂ ತಾಂತ್ರಿಕ ಶಿಕ್ಷಣದ ಪ್ರಗತಿ, ಅಧ್ಯಾಪಕರ ತರಬೇತಿ ಇತ್ಯಾದಿಗಳ ಕಡೆಗೆ ವಿಶೇಷ ಗಮನ ಈಯಬೇಕೆಂದೂ ಈ ಸಮಿತಿ ಸಲಹೆ ಮಾಡಿದೆ. ಮೂಲ ಶಿಕ್ಷಣ ಹಾಗೂ ಸಾಮಾನ್ಯ ಶಿಕ್ಷಣ ಎಂಬ ಅಂತರವನ್ನು ಹೋಗಲಾಡಿಸಿ ಎಲ್ಲಾ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೂ ವೃತ್ತಿಪರ ಶಿಕ್ಷಣ ಒದಗಿಸಬೇಕೆಂಬುದು ಸಮಿತಿಯು ಮಾಡಿದ ಇನ್ನೊಂದು ಮಹತ್ವದ ಸೂಚನೆ.

ರಾಜ್ಯದಲ್ಲಿ ಕಾಲರಾ ಪಿಡುಗು

ಮೈಸೂರು ರಾಜ್ಯದ ಬಳ್ಳಾರಿ, ಹಿರಿಯೂರು, ಹರಪನ ಹಳ್ಳಿ, ಕೂಡ್ಲಿಗಿ, ಹೊಸಪೇಟೆ, ಸಿರುಗುಪ್ಪಾ, ಹನುಮಾಬಾದ್, ಗಂಗಾವತಿ, ಕೊಪ್ಪಳ, ಲಿಂಗ್ ಸುಗೂರು, ಗೋಕಾಕ, ಹಡಗಲಿ, ರಾಯಚೂರು, ಹುನಗುಂದ, ಮೊದಲಾದ ಪಟ್ಟಣಗಳಲ್ಲಿ ಕಾಲರಾ ಬೇನೆ ವಿಪರೀತವಾಗಿ ಹಬ್ಬಿದೆ ಎಂದು ತಿಳಿದುಬಂದಿದೆ. ಈ ಬೇನೆಯಿಂದ ಈಗಾಗಲೇ ೩೦೦ಕ್ಕೂ ಮಿಕ್ಕಿ ಜನರು ನಿಧನ ಹೊಂದಿದ್ದಾರೆಂದೂ ರಾಜ್ಯದ ಸಾರ್ವಜನಿಕ ಆರೋಗ್ಯ ಶಾಖೆ ಪ್ರಕಟಣೆ ಹೊರಡಿಸಿದೆ. ಎಲ್ಲಾ ನಗರಗಳಲ್ಲಿಯ ಆರೋಗ್ಯ ಇಲಾಖೆಯವರೂ ಸಾಧ್ಯವಿದ್ದ ಪ್ರತಿಬಂಧನ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಚುಚ್ಚು ಮದ್ದನ್ನು ಚುಚ್ಚುವ ಕಾರ್ಯಕ್ರಮ ಭರದಿಂದ ಸಾಗುತ್ತಿದೆ ಎಂದೂ, ಸಾರ್ವಜನಿಕರಿಗೆ ಈ ರೋಗದ ಕುರಿತು ಮಾಡಬೇಕಾದ ಮುಂಜಾಗ್ರತೆಗಳ ಕುರಿತು ಸೂಚನೆ ಕೊಡಲಾಗಿದೆ ಎಂದೂ ತಿಳಿದುಬರುತ್ತದೆ. ಹಲವು ಕಡೆಗಳಲ್ಲಿ ಈಗಾಗಲೇ ಕಾಲರಾ ಬೇನೆ ಹತೋಟಿಗೆ ಬಂದಿದೆಯೆಂದೂ ವರದಿಯಾಗಿದೆ.

Estd. 1921 **NAVAYUGA** P. B. No. 22

POPULAR KANNADA WEEKLY

UDIPI

Announcement

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 17th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the State. Kindly send in your advertisement material on or before August 5th, 1964.

ADVERTISEMENT RATES:

Full Page ...	Rs. 125/-	Back Cover Page ...	Rs. 500/-
Half Page ...	Rs. 65/-	Inside 1st Cover Page ...	Rs. 400/-
Quarter Page ...	Rs. 35/-	Inside 2nd Cover Page ...	Rs. 300/-

MECHANICAL DATA:

Paper Size ... 15" × 10" (37·5 Cm. × 25 Cm.)

Size of type page ... 13" × 8" (32.5 Cm. × 20 Cm.)

Date of publication: 13—8—1964.

ಪುನಃ ಭಾರತ-ಪಾಕ್ ಗೃಹ ಸಚಿವರ ಸಮ್ಮೇಳನ

ಭಾರತ ಪಾಕಿಸ್ತಾನ ವಿವಾದಗಳ ಕುರಿತು ಮಾತುಕತೆಗಳಿಗೆ ಯೋಗ್ಯ ವಾತಾವರಣ ನಿರ್ಮಾಣದ ಕುರಿತೂ, ಈ ಉದ್ದೇಶದಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಕುರಿತೂ ಪಾಕ್ ಅಧ್ಯಕ್ಷ ಅಯೂಬ ಹಾಗೂ ಭಾರತದ ಅರ್ಥಮಂತ್ರಿ ಟಿ. ಟಿ. ಕೆ ಯವರು ಲಂಡನ್ನಿನಲ್ಲಿ ಪರ್ಯಾಲೋಚಿಸಿದರೆಂದು ಒಂದು ಪತ್ರಿಕಾ ಪ್ರಕಟಣೆ ಹೇಳಿದೆ. ಭಾರತ ಪಾಕಿಸ್ಥಾನಗಳ ಗೃಹ ಸಚಿವರುಗಳ ಮತ್ತೊಂದು ಸಮ್ಮೇಲನವು ಈ ತಿಂಗಳಲ್ಲಾಗಲೀ, ಆಗೋಸ್ತು ತಿಂಗಳಾರಂಭದಲ್ಲಾಗಲೀ ಜರಗುವ ಸಾಧ್ಯತೆ ಇದೆಯೆಂದೂ, ಇದಾದನಂತರ ಪಾಕ್ ಅಧ್ಯಕ್ಷರು ಭಾರತ ಪ್ರಧಾನಿಯವರನ್ನು ಭೇಟಿಯಾಗಬಹುದೆಂದೂ ಈ ಪ್ರಕಟಣೆ ಹೇಳುತ್ತದೆ.

ರಾಜ್ಯಕ್ಕೆ ಮೂರು ವಿಮಾನ ನಿಲ್ದಾಣಗಳು

ಮೈಸೂರು ರಾಜ್ಯದ ಬಿಜಾಪುರ, ಹೊಸಪೇಟೆ ಮತ್ತು ಹಾಸನಗಳನ್ನೊಳಗೊಂಡು ಆರು ಪ್ರವಾಸಿ ಆಕರ್ಷಣೆಯ ಕೇಂದ್ರಗಳನ್ನು ವಿಮಾನ ಇಳಿಯುವ ಸೌಕರ್ಯ ಒದಗಿಸುವುದಕ್ಕಾಗಿ ಆರಿಸಲಾಗಿದೆ ಎಂದು ನವದೆಹಲಿಯಿಂದ ಕಳೆದ ತಾ. ೧೨ರಂದು ಹೊರಟ ಒಂದು ಪತ್ರಿಕಾ ಪ್ರಕಟಣೆ ಹೇಳುತ್ತದೆ. ಬಿಜಾಪುರ ಮತ್ತು ಹೊಸಪೇಟೆಗಳಲ್ಲಿ 'ರನ್‌ವೇ'ನಿ ನಿರ್ಮಿಸಲು ಯೋಗ್ಯ ಸ್ಥಳಗಳ ಸರ್ವೆ ಕೂಡಾ ನಡೆದಿದೆ.

ಆಯ್ಕೆಗೊಂಡ ಉಳಿದ ಮೂರು ಸ್ಥಳಗಳೆಂದರೆ ಖಜುರಾಹೋ, ಕೇನಾರಕ ಹಾಗೂ ಕೇರಳದ ಪೆರಿಯಾರ ಸರೋವರ (ವನ್ಯ ಮೃಗಗಳ ಸುರಕ್ಷಿತ ಪ್ರದೇಶ). ಈ ವಿಮಾನ ನಿಲ್ದಾಣಗಳ ಕಾರ್ಯ ಮೂರನೆ ಯೋಜನಾಂತ್ಯದೊಳಗೆ ಪೂರ್ತಿಯಾಗಬಹುದೆಂದೂ ನಿರೀಕ್ಷಿಸಲಾಗಿದೆ. ಪ್ರವಾಸಿ ಆಕರ್ಷಣೆಯ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ವಿಮಾನ ನಿಲ್ದಾಣಗಳನ್ನು ಮತ್ತು ವಿಮಾನ ಇಳಿಯುವ ಸೌಕರ್ಯಗಳನ್ನು ಒದಗಿಸಲು ತೃತೀಯ ಯೋಜನೆಯಲ್ಲಿ ೫೬ ಲಕ್ಷ ರೂ. ಗಳನ್ನು ಒದಗಿಸಲಾಗಿದೆ ಎಂಬುದನ್ನು ಈ ಕಾಲ ಸ್ಮರಿಸಬೇಕು.

ವಿವೇಕಾನಂದರ ಪುತ್ಥಳಿ

ರಾಷ್ಟ್ರಪತಿ ಡಾ| ರಾಧಾಕೃಷ್ಣನರು ಕಳೆದ ತಾ. ೧೩ರಂದು ಮದ್ರಾಸದ ಮರಿನಾ ಬೀಚಿನಲ್ಲಿರುವ ವಿವೇಕಾನಂದ ಭವನದಲ್ಲಿ ೧೦ ಅಡಿ ಎತ್ತರದ ಸ್ವಾಮಿ ವಿವೇಕಾನಂದರ ಪುತ್ಥಳಿಯೊಂದನ್ನು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ಮಾಡಿದ ತಮ್ಮ ಉದ್ಬೋಧಕವಾದ ಭಾಷಣದಲ್ಲಿ ಅವರು ವಿಶ್ವಬಂಧುತ್ವ, ಮಾನವ ಸೇವೆ, ಧರ್ಮಾಚರಣೆ ಹಾಗೂ ಮಾನವನ ಉನ್ನತಿ ಸಾಧಿಸುವುದು ಎಲ್ಲ ಧರ್ಮಗಳ ಗುರಿಯಾಗಿದೆಯೆಂದೂ ಇವೇ ಪಾಠಗಳನ್ನು ಸ್ವಾಮಿ ವಿವೇಕಾನಂದರು ನಮಗೆ ಕಲಿಸಿದರು ಎಂದು ಹೇಳಿದರು.

ಕೃತಜ್ಞತೆಗಳು.

ಇತ್ತೀಚೆಗೆ ಶ್ರೀ. ಎಸ್. ಮಾದಪ್ಪ ಶೆಟ್ಟರೊಂದಿಗೆ ವಿಟ್ಲ, ಅಡ್ಯನಡ್ಕ ಮೊದಲಾದ ಕಡೆಗಳಿಗೆ ನವಯುಗದ ಪರಿಷ್ಕರಣ ಕಾರ್ಯಾರ್ಥವಾಗಿ ಪ್ರವಾಸ ಮಾಡಿದಾಗ ಪ್ರೋತ್ಸಾಹಿಸಿದ ಶ್ರೀ. ವಿ. ಸುಬ್ರಾಯ ಭಟ್ಟ, ಅಡ್ಯನಡ್ಕ ಇವರಿಗೂ ಚಂದಾದಾರರಾಗಿ ಸಹಕರಿಸಿದ ಹಲವರಿಗೂ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ-ಸಂಪಾದಕ.

ನಮ್ಮ-ನಮ್ಮವರು

(೧ನೇ ಪುಟದಿಂದ)

ದಷ್ಟು ಇನ್ನಾರೂ ಪಡೆದಿಲ್ಲ. ಉಡುಪಿ ಹೋಟೇಲುಗಳೆಂದರೆ ಎಲ್ಲೆಲ್ಲಿಯೂ ಪ್ರಖ್ಯಾತಿ ಹೊಂದಿವೆ. ಸುಪ್ರಸಿದ್ಧರಾದ ನಮ್ಮ ಹೋಟೇಲು ಉದ್ಯಮೆದಾರರಲ್ಲಿ ಶ್ರೀ ಪಿ. ಕೆ. ಜನಾರ್ಧನ ನೆಲ್ಲಿಯವರೂ ಒಬ್ಬರು. ಪೆರ್ಡೂರಿನವರಾದ ನೆಲ್ಲಿಯವರು ಶಿವಮೊಗ್ಗದಲ್ಲಿ ಮನೋಹರ್ ಕೆಫೆ ಎಂಬ ಸುಸಜ್ಜಿತವಾದ ಊಟ ಫಲಾಹಾರ ಹಾಗೂ ವಸತಿ ಗೃಹವನ್ನು ನಡೆಸುತ್ತಿದ್ದಾರೆ. ಹೋಟೇಲು ವ್ಯವಹಾರದಲ್ಲಿ ಶ್ರೀಯುತ ನೆಲ್ಲಿಯವರು ಅನುಭವಿಗಳು ಹಾಗೂ ಕುಶಲರು. ಇವರ ಈ ಕುಶಲತೆಯಿಂದ ಇಂದು ಶಿವಮೊಗ್ಗದಲ್ಲಿ ನೆಲ್ಲಿಯವರ ಹೋಟೇಲು ಎಲ್ಲರ ಮನೆಮಾತಾಗಿದೆ.

ಶ್ರೀಯುತ ನೆಲ್ಲಿಯವರು ಧಾರ್ಮಿಕ ಮನೋಭಾವನೆಯುಳ್ಳ ಉದಾರ ಶೀಲರು. ಧಾರ್ಮಿಕ ವಿಧಿಗಳಲ್ಲಿ ಅವರಿಗೆ ಅಪಾರ ಭಕ್ತಿ ಹಾಗೂ ವಿಶ್ವಾಸ. ಅಂತೆಯೇ ಅವರು ಸಾರ್ವಜನಿಕ ಸಂಸ್ಥೆಗಳಿಗೆ ಉದಾರ ದಾನವನ್ನಿತ್ತು ಉದಾರಿಗಳೂ ಎನಿಸಿದ್ದಾರೆ. ಪೆರ್ಡೂರಿನ ಅನಂತ ಪದ್ಮನಾಭನ ಭಕ್ತರಾದ ನೆಲ್ಲಿಯವರು ಕಳೆದ ವರ್ಷ ಪೆರ್ಡೂರಿನಲ್ಲಿ ಜರಗಿದ ಅಷ್ಟಬಂಧ ಮಹೋತ್ಸವಕ್ಕೆ ಉದಾರ ದಾನವನ್ನಿತ್ತು ಆ ಕಾರ್ಯವು ಸುಸೂತ್ರವಾಗಿ ಜರುಗುವಂತೆ ನೆರವಾಗಿದ್ದಾರೆ. ಪೆರ್ಡೂರಿನ ಹೈಸ್ಕೂಲಿಗೂ ಅವರು ಧನ ಸಹಾಯವಿತ್ತಿದ್ದಾರೆ. ಹೀಗೆ ಹತ್ತು ಹಲವಾರು ಸಂಘ ಸಂಸ್ಥೆಗಳಿಗೆ ಕೊಡುಗೈಯ ದಾನವನ್ನಿತ್ತ ಶ್ರೀಯುತರು ಯಾವ ಪ್ರಚಾರವನ್ನೂ ಬಯಸದ ನಿರಾಡಂಬರ ಜೀವಿಗಳು.

ನೆಲ್ಲಿಯವರು ಸ್ನೇಹ ಶೀಲರು. ಸಹಾಯಕ್ಕಾಗಿ ಅವರನ್ನು ಯಾಚಿಸಿದ ಯಾರೂ ಬರಿಗೈಯಿಂದ ಬಂದುದಿಲ್ಲ. ನಮ್ಮ ಜಿಲ್ಲೆಯ ಯಾರೇ ಆಗಲಿ ಅವರನ್ನು ಬೇಟಿಯಾದರೆ ಅವರ ಸ್ನೇಹ ಶೀಲಕ್ಕೆ ಮರುಳಾಗುತ್ತಾರೆ. ಊರಿನವರೆಂದರೆ ಅವರಿಗೆ ತುಂಬಾ ಅಭಿಮಾನ.

ಶಿವಮೊಗ್ಗದಲ್ಲಿ ೨೩ ವರ್ಷಗಳ ಹಿಂದೆ ಅವರು ತೆರೆದ ಮನೋಹರ ಕೆಫೆಯ ೨೩ನೇ ವಾರ್ಷಿಕೋತ್ಸವವನ್ನು ಅವರು ಕಳೆದ ತಾ. ೭ರಂದು ವಿಜೃಂಭಣೆಯಿಂದ ಆಚರಿಸಿದರು. ಈ ಸಂದರ್ಭ ಸತ್ಯನಾರಾಯಣ ಪೂಜೆಯನ್ನು ಅವರು ಮಾಡಿ ಈ ಸಮಾರಂಭಕ್ಕೆ ಧಾರ್ಮಿಕತೆಯ ಮೆರುಗನ್ನಿತ್ತರು. ನೆಲ್ಲಿಯವರ "ನೆಲ್ಲಿ ಪ್ರಕಾಶ್" ರಜತ ಮಹೋತ್ಸವವನ್ನು ಆಚರಿಸುವ ದಿನವನ್ನು ಶಿವಮೊಗ್ಗದ ನಾಗರಿಕರೂ ಹಾಗೂ ಜಿಲ್ಲೆಯ ಅಭಿಮಾನಿಗಳೂ ಇದಿರು ನೋಡುತ್ತಿದ್ದಾರೆ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction, Madras.

ಸಸ್ಯ ಸಂಪತ್ತಿನಿಂದ ರಾಷ್ಟ್ರದ ಉತ್ಕರ್ಷ

(೫ನೇ ಪುಟದಿಂದ)

[illegible] ಗಳಷ್ಟು ಮರದ ಸಾಮಾನುಗಳು ಮತ್ತು ಇಂಧನದ ಕೊರತೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ದೇಶದಲ್ಲಿ ಈಗಿರುವ ಅರಣ್ಯ ಪ್ರದೇಶ, ಆರ್ಥಿಕ ಪ್ರಗತಿಗೆ ಕನಿಷ್ಠವಾಗಿ ಇರಬೇಕಾದ ಅರಣ್ಯ ಪ್ರದೇಶ ಇವುಗಳ ನಡುವಣ ಅಂತರವನ್ನು ನಿವಾರಿಸಬೇಕಾಗಿದೆ.

ಗಾಂಧೀಜಿಯವರು ಆದರ್ಶ ಹಳ್ಳಿಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಇಂಥ ಹಳ್ಳಿಯ ನಿವಾಸಿಗಳು ತಮ್ಮ ಹಳ್ಳಿಯ ಸುತ್ತಮುತ್ತಲಿನ ಐದು ಮೈಲು ಪ್ರದೇಶದಲ್ಲಿ ದೊರೆಯುವ ಕಚ್ಚಾ ವಸ್ತುಗಳಿಂದ ಗುಡಿಸಲುಗಳನ್ನು ಕಟ್ಟಿಕೊಳ್ಳಬೇಕೆಂದು ಹೇಳಿದ್ದರು. ಅವರು ಹಾಗೆ ಹೇಳಿದಾಗ ಹಳ್ಳಿಗರು ಮರಗಳಿಂದ ದೊರೆಯುವ ಸಾಧನಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಗುಡಿಸಲುಗಳನ್ನು ನಿರ್ಮಿಸಿಕೊಳ್ಳಲೆಂದು ಖಂಡಿತವಾಗಿಯೂ ಹೇಳಿರಬೇಕು. ಇಂದು ಎಷ್ಟು ಹಳ್ಳಿಗಳಲ್ಲಿ ಈ ಬಗೆಯ ಸೌಲಭ್ಯವಿದೆ?

ರಸ್ತೆ, ರೈಲುಮಾರ್ಗ, ವಿಮಾನಗಳ ಮೂಲಕ ಪ್ರಯಾಣ ಮಾಡುವವರಿಗೆ ಗಿಡ ಮರಗಳಿಲ್ಲದ ಬೋಳುಬೋಳಾದ ವಿಶಾಲ ಪ್ರದೇಶಗಳು ಕಣ್ಣಿಗೆ ಬೀಳುತ್ತವೆ. ವಿಸ್ತೀರ್ಣವಾಗುತ್ತಾ ನಡೆದ ಬಂಜರು ಮತ್ತು ಸತ್ವಹೀನವಾದ ಭೂಮಿಗಳು ನೋಡುವವರಿಗೆ ವೇದನೆಯನ್ನುಂಟು ಮಾಡುತ್ತವೆ.

ಮಾನವ ಜೀವನ ಮತ್ತು ಮರಗಳು

ಮಾನವನ ಮತ್ತು ಮರಗಳ ನಡುವೆ ನಿಕಟವಾದ ಸಂಬಂಧವಿದೆ. ಹಿಂದೆ ನಿಬಿಡವಾದ ಅರಣ್ಯ ಪ್ರದೇಶಗಳಲ್ಲಿಯೇ ಅನೇಕ ನಾಗರಿಕತೆಗಳು ಬೆಳೆದು ಉತ್ಕರ್ಷ ಹೊಂದಿದವು. ಆದರೆ ನಿರ್ಲಕ್ಷ್ಯದಿಂದ ಹಾಗೂ ಮನಸ್ಸಿಗೆ ಬಂದಂತೆ ಮರಗಳನ್ನು ಕಡಿದದ್ದರಿಂದಾಗಿ ಇಂದು ಫಲವತ್ತಾದ ಭೂಮಿ ಸತ್ವಹೀನವಾಗಿದೆ.

ಉತ್ತರ ಆಫ್ರಿಕಾ, ಮೆಡಿಟರೇನಿಯನ್, ಯೂರೋಪ್, ಮಧ್ಯಪೂರ್ವ ಮತ್ತು ಇನ್ನೂ ಹತ್ತಿರದ ಹರಪ್ಪ, ಮೊಹೆಂಜೋದಾರೋ ಸಂಸ್ಕೃತಿಗಳು, ಮನುಷ್ಯನ ನಿರ್ಲಕ್ಷ್ಯದಿಂದ ಸಂಭವಿಸಿದ ದುರಂತಗಳ ದಾರುಣ ಚಿತ್ರವನ್ನು ನೆನಪಿಗೆ ತರುತ್ತವೆ. ಇದೇ ರೀತಿ ಅಮೇರಿಕಾದ ಅತಿ ದೊಡ್ಡ ಮರುಭೂಮಿಯು ಈ ದಿಶೆಯಲ್ಲಿ ಒಂದು ದೊಡ್ಡ ಮಹತ್ವದ ಉದಾಹರಣೆಯಾಗಿದೆ. ಸಸ್ಯ ಸಂಪತ್ತಿನ ಸಂರಕ್ಷಣೆಗಾಗಿ ಮುಂಜಾಗ್ರತೆ ವಹಿಸಿದ್ದರಿಂದ ಕೆಲವೇ ದಶಕಗಳಲ್ಲಿ ಫಲವತ್ತಾದ ಲಕ್ಷಾವಧಿ ಎಕರೆಗಳಷ್ಟು ಭೂಮಿ ಈಗ ಸತ್ವಹೀನವಾಯಿತು; ಮರುಭೂಮಿಯಾಗಿ ಪರಿಣಮಿಸಿತು. ದೇಶದಲ್ಲಿಯೇ ಹೆಚ್ಚುತ್ತಿರುವ ನೆರೆ ಹಾವಳಿ, ಬಿರುಗಾಳಿಯ ಅನಾಹುತಗಳು, ಮರಗಳ ನಷ್ಟದಿಂದ ಮುಂದೆ ಸಂಭವಿಸಬಹುದಾದ ಹಾನಿಯ ಸೂಚನೆ ಕೊಡುತ್ತವೆ. ಈ ನಷ್ಟವನ್ನು ತಪ್ಪಿಸಲು ಸಸ್ಯ ಸಂಪತ್ತಿನ ಸಂರಕ್ಷಣೆ ಅಗತ್ಯವಾಗಿದೆ, ಇದು ನಮ್ಮೆಲ್ಲರ ಕರ್ತವ್ಯವಾಗಿದೆ.

ರಾಜಸ್ಥಾನ್ ಮರುಭೂಮಿ ಮತ್ತು ಕಚ್ ಮರುಭೂಮಿಗಳಲ್ಲಿ ಬೀಸುವ ಬಿರುಗಾಳಿಗಳು, ನೆರೆಹೊರೆಯ ಪ್ರದೇಶಗಳಿಗೆ ಮರಳನ್ನು ಹೊತ್ತು ತರುವುದರಿಂದಾಗಿ ಮರುಭೂಮಿಯ ವಿಸ್ತೀರ್ಣ ಹೆಚ್ಚಬಹುದಾಗಿದೆ. ಹಿಮಾಲಯದ ಪೂರ್ವ ಪರ್ವತ ಪ್ರದೇಶಗಳಲ್ಲಿ ಅಧಿಕವಾಗಿ ದನ ಕುರಿಗಳನ್ನು ಮೇಯಿಸುತ್ತಿದ್ದರಿಂದಾಗಿ ಅಲ್ಲಿಯೂ ಸಸ್ಯಸಂಪತ್ತು ನಶಿಸತೊಡಗಿದೆ. "ನಿಮ್ಮ ಅಸ್ತಿತ್ವಕ್ಕಾಗಿ ಮರಗಳನ್ನು ರಕ್ಷಿಸಿ" ಎಂಬ ಗಾದೆ ಈ ಕಾರಣಗಳಿಂದಾಗಿ ಅರ್ಥಪೂರ್ಣವಾಗಿದೆ.

ಅಧಿಕ ಗಿಡಮರಗಳನ್ನು ನೆಡಿರಿ

ಮಣ್ಣಿನ ಸಾರಸಂರಕ್ಷಣೆಯು ಈಗ ಉಳಿದಿರುವುದು ಒಂದೇ ಉಪಾಯ. ಪುನಃ ಅರಣ್ಯಗಳನ್ನು ಬೆಳೆಸಲು ಅಧಿಕ ಮರಗಳನ್ನು ನೆಡಬೇಕಾಗಿದೆ. ಈ ಉದ್ದೇಶ ಸಾಧನೆಗಾಗಿಯೇ ೧೯೫೦ರಲ್ಲಿ ವನಮಹೋತ್ಸವವನ್ನು ಆರಂಭಿಸಲಾಯಿತು. ರಸ್ತೆಗಳ ಇಕ್ಕೆಲಗಳಲ್ಲಿ ನೆರಳು ನೀಡುವ ಮರಗಳನ್ನು ನೆಡುವುದು, ವನಗಳನ್ನು ಪುನಃ ಅಭಿವೃದ್ಧಿಗೊಳಿಸುವುದು, ದನಕುರಿಗಳನ್ನು ಮೇಯಿಸುವ ಬಯಲು ಪ್ರದೇಶಗಳ ಅಭಿವೃದ್ಧಿ, ಬಾಬುಲ್ ಇವೇ ಮೊದಲಾದ ಜಾತಿಯ ಮರಗಳನ್ನು ನೆಡುವುದು ವನಮಹೋತ್ಸವದ ಉದ್ದೇಶವಾಗಿದೆ. ಬಾಬುಲ್ ಮರಗಳು ಇಂಧನ ಉದ್ದೇಶಗಳಿಗಾಗಿ ಮತ್ತು ಮನೆಗಳನ್ನು ಕಟ್ಟಲು ಹಾಗೂ ಬೇಸಾಯ ಉಪಕರಣಗಳಿಗೆ ಅಗತ್ಯವಾದ ಕಟ್ಟಿಗೆಯನ್ನು ಒದಗಿಸುತ್ತವೆ. ವನಮಹೋತ್ಸವ ಇಂದು ಒಂದು ರಾಷ್ಟ್ರೀಯ ಹಬ್ಬವಾಗಿದೆ. ಕಳೆದ ೧೫ ವರ್ಷದಲ್ಲಿ ಒಟ್ಟು ೪೧ ಕೋಟಿ ಗಿಡಮರಗಳನ್ನು ನೆಡಲಾಗಿದೆ. ಈ ವರ್ಷದ ವನಮಹೋತ್ಸವದ ಸಮಯದಲ್ಲಿ ರಾಷ್ಟ್ರೀಯ ಹಿತದೃಷ್ಟಿಯಿಂದ ಮರಗಳ ವಿಷಯದಲ್ಲಿ ಪ್ರೇಮ ಆತ್ಮೀಯ ಮನೋಭಾವನೆ ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ಈ ಸಲ ಅಧಿಕ ಸಂಖ್ಯೆಯಲ್ಲಿ ಗಿಡಮರಗಳನ್ನು ನೆಡುವುದರ ಮೂಲಕ ರಾಷ್ಟ್ರೀಯ ಉತ್ಕರ್ಷದಿಂದ ತಳಹದಿ ಹಾಕಬಹುದಾಗಿದೆ.

ವಿಕ್ರಮ

ವಿಜಯದಶಮಿ ವಿಶೇಷಾಂಕ ಕಥಾಸ್ಪರ್ಧೆ (೧೯೬೪)

ಪ್ರಥಮ ಬಹುಮಾನ ರೂ. ೪೦. ದ್ವಿತೀಯ ಬಹುಮಾನ ರೂ: ೨೦.

— ಸ್ಪರ್ಧೆಯ ನಿಯಮಗಳು —

೧. ಕಥೆ ಸ್ವಂತ ಕೃತಿಯಾಗಿದ್ದು ಸಾಮಾಜಿಕ ಹಿನ್ನೆಲೆಯಲ್ಲಿ ರಚಿಸಿ ಕನ್ನಡದಲ್ಲಿ ೧೫೦೦ ಪದಗಳಿಗೆ ಮೀರದಂತೆ ಕಾಗದದ ಒಂದೇ ಕಡೆ ಬರೆದು, ಲೇಖಕರ ಹೆಸರು ಮತ್ತು ವಿಳಾಸವನ್ನು ಪ್ರತ್ಯೇಕವಾಗಿ ಬರೆದು ಜೊತೆಗೆ ಕಳುಹಿಸಬೇಕು.

೨. ಪ್ರವೇಶ ಧನ ೫೦ ಪೈಸೆ ಅಂಚೆ ಚೀಟಿ ಅಥವಾ ಪೋಸ್ಟಲ್ ಆರ್ಡರ್ ಜೊತೆಗಿಟ್ಟಿರಬೇಕು. ಪ್ರವೇಶಕ್ಕೆ ಬಂದ ಕಥೆಗಳನ್ನು ಹಿಂತಿರುಗಿ ಕಳುಹಿಸಲಾಗುವುದಿಲ್ಲ.

೩. ಸ್ಪರ್ಧೆಯ ಫಲಿತಾಂಶದೊಡನೆ ಪ್ರಥಮ ಮತ್ತು ದ್ವಿತೀಯ ಬಹುಮಾನಿತ ಕಥೆಗಳನ್ನು ಲೇಖಕರ ಭಾವಚಿತ್ರ ಸಹಿತ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.

೪. ಈ ಬಗ್ಗೆ ಎಲ್ಲಾ ವಿಚಾರಗಳಲ್ಲೂ ಸಂಪಾದಕರ ತೀರ್ಮಾನವೇ ಕೊನೆಯದು.

ಸ್ಪರ್ಧೆಯ ಪ್ರವೇಶಗಳನ್ನು ಸ್ವೀಕರಿಸುವ ಕೊನೆಯ ದಿನ ೧೫.೮-೧೯೬೪

ಪ್ರವೇಶ ಕಥೆಗಳನ್ನು ಕಳುಹಿಸಬೇಕಾದ ವಿಳಾಸ:

ಸಂಪಾದಕ, 'ವಿಕ್ರಮ' ಕಥಾ ಸ್ಪರ್ಧೆ ವಿಭಾಗ,
ಚಾಮರಾಜಪೇಟೆ : : ಬೆಂಗಳೂರು-೧೮.

ವಿಚಾರ ಕಿಡಿಗಳು

ಅಡಿಯಲ್ಲಿ ತೂತಿರುವ ಪಾತ್ರೆ ಎಷ್ಟು ದೊಡ್ಡದಾಗಿದ್ದರೂ ತುಂಬಿಸಿಟ್ಟ ನೀರು ಸಮಯದಲ್ಲಿ ಬರಿದಾಗುವುದು ನಿಶ್ಚಿತ.— ದೊರೆತ ನಿಧಿ ಎಷ್ಟೇ ಹೆಚ್ಚಿನದ್ದಾದರೂ ಇಟ್ಟುಕೊಳ್ಳುವ ಬುದ್ಧಿ ಇಲ್ಲವಾದರೆ ಕೈ ಬರಿದಾಗುವುದೇ ಖಂಡಿತ!

o o o

ಮೂರ್ಖರೊಂದಿಗೆ ಇರುವವರೆಲ್ಲ ಜ್ಞಾನವಂತರೆನ್ನಲಾಗುವುದಿಲ್ಲ; ಬುದ್ಧಿ ಶೂನ್ಯರೂ ಇರಬಹುದು!— ಬೆಣ್ಣೆಯ ಮೇಲೆ ಕುಳಿತಿರುವ ನೊಣವೂ ತಿನ್ನಲರ್ಹವಾದುದಲ್ಲ—ಅದು ರೋಗವನ್ನೂ ಹರಡಬಹುದು!

o o o

ಕಷ್ಟಪಟ್ಟವರಿಗೆ ಇಷ್ಟ ಸಿಗುವುದಾದರೆ—ಉದಾಸೀನರಾದವರಿಗೆ ಉಪವಾಸವೇ ಪ್ರತಿಫಲ!

o o o

ಮನುಷ್ಯ ತಾನು ಸೃಷ್ಟಿ ಮಾಡಿದ ಪಾಪದ ಜೀವವನ್ನು ಮರೆಮಾಚಲು ಧರ್ಮ ನೀತಿಯ ಅಂಗಿಯನ್ನು ತೊಡಿಸುತ್ತಾನೆ.

o o o

ನಿದ್ದೆ ಬಂದವರನ್ನು ಎಬ್ಬಿಸಬಹುದು. ನಿದ್ದೆ ಬಾರದೆ ಕಣ್ಣುಮುಚ್ಚಿದವರನ್ನು ಎಬ್ಬಿಸುವುದಸಾಧ್ಯ!— ಕುರುಡರನ್ನಾದರೂ ಕೈಹಿಡಿದು ದಾರಿನಡೆಸಬಹುದು. ಕಣ್ಣಿದ್ದೂ ಕುರುಡರಂತೆ ವರ್ತಿಸುವವರನ್ನು ದಾರಿಗೆ ತರುವುದು ಕಷ್ಟ ಸಾಧ್ಯ!

o o o

ಕಳ್ಳತನ ಮಾಡುವವರಿಗೆ ಕತ್ತಲಲ್ಲೂ ಕಾಲಡಿಯ ಭಯವಿರುವುದಿಲ್ಲ.— ಕರ್ತವ್ಯ ನಿರತರಾದವರನ್ನು ಕೆಟ್ಟ ಯೋಚನೆಗಳು ಕಾಡುವುದಿಲ್ಲ.

o o o

ಒಳ್ಳೆಯ ನಡತೆಯವನನ್ನೇ ಆದರೂ ಅತಿಯಾಗಿ ಹೊಗಳಿದರೆ ಅದರಿಂದ ಅನಿಷ್ಟವೇ ಸಂಭವಿಸುತ್ತದೆ. —ಒಳ್ಳೆಯ ವಸ್ತು ಆದರೂ ಅದನ್ನು ಹೆಚ್ಚಾಗಿ ತಿಂದರೆ ಅಜೀರ್ಣವಾಗುತ್ತದೆ!

o o o

ಮಾತಿಗೆ ಮಾತು ಎದುರಾದರೆ, ವಿವಾದವಷ್ಟೇ ಹೆಚ್ಚೀತು! —ಜಾತಿಗೆ ಜಾತಿ ಹಗೆಯಾದರೆ ಯಾವ ಕೂಟಾಟದಲ್ಲೂ ಸುಖವಿರಲಾರದು.

—ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ

ಆಂಗ್ಲ ಗವರ್ನರನ ಮುಂದೆ
ಸಮಾಧಿಯಿಂದೆದ್ದು ಬಂದ ಸನ್ಯಾಸಿ

ತುಂಗಭದ್ರಾ ನದೀತಟದಲ್ಲಿರುವ ಮಂತ್ರಾಲಯವು ಸಂತ ಶ್ರೀ ರಾಘವೇಂದ್ರ ಸ್ವಾಮಿಯವರ ವೃಂದಾವನದಿಂದ ಚಿರಪರಿಚಿತವಾಗಿದೆ, ಈ ವೃಂದಾವನವು ಅಲೌಕಿಕ ಶಕ್ತಿಗೆ ಹೆಸರಾಗಿದೆ ಇಲ್ಲಿಗೆ ಆಗಮಿಸುವ ಭಕ್ತ ಮಹಾಶಯರಿಗೆ ಮಾನಸಿಕ ಶಾಂತಿಯನ್ನು ತಂದೊದಗಿಸುವ ವಿಶಿಷ್ಟ ಸ್ಥಾನವೆಂದು ಇದು ಕೀರ್ತಿ ಪಡೆದಿದೆ. ಮದ್ರಾಸು—ಬೊಂಬಾಯಿ ರೇಲ್ವೆಯ ಮಂತ್ರಾಲಯ ರೋಡ್ ಸ್ಟೇಶನಿನಿಂದ ಬಸ್ಸುಗಳ ಮೂಲಕ ಮಂತ್ರಾಲಯಕ್ಕೆ ಮುಟ್ಟಬಹುದು. ರೇಲ್ವೆ ನಿಲ್ದಾಣದಿಂದ ಈ ಹಳ್ಳಿಗೆ ಇರುವ ದೂರ ಬರೇ ಒಂಭತ್ತು ಮೈಲುಗಳು. ವೃಂದಾವನದ ಅಧಿಕಾರಿಗಳು ನಡೆಸುವ ಸುಂದರ ಛತ್ರವೊಂದಿಲ್ಲಿದೆ

ಯತಿಯೊಬ್ಬರ ವೃಂದಾವನ ಮಾತ್ರದಿಂದ ಕೀರ್ತಿಶಾಲಿಯಾದ ಈ ಸ್ಥಳದ ಹೆಗ್ಗಳಿಕೆಗೆ ಕಾರಣ ಪುರುಷರಾದ ರಾಘವೇಂದ್ರ ಸ್ವಾಮಿಯವರ ಪೂರ್ವಾಶ್ರಮದ ಹೆಸರು ವೆಂಕಟ ಭಟ್ಟ ಎಂದು. ಮಾಧ್ವ ಸಂಪ್ರದಾಯಸ್ಥರ ಕುಟುಂಬದಲ್ಲಿ ಜನಿಸಿದ ವೆಂಕಟ ಭಟ್ಟರು ತಿರುಮಲೆ ಬೆಟ್ಟದರಸು ವೆಂಕಟೇಶ್ವರನ ಪರಮ ಭಕ್ತರು. ಮಧುರೆಯ ಶ್ರೀ ಲಕ್ಷ್ಮೀ ನರಸಿಂಹ ಆಚಾರ್ಯರ ಮುಖದಿಂದ ಇವರು ವೇದ, ಕಾವ್ಯ, ಮೀಮಾಂಸಾ ಮೊದಲಾದ ವಿದ್ಯೆಗಳನ್ನು ಕಲಿತುಕೊಂಡರು. ಸರಸ್ವತಿಬಾಯಿಯವರೊಡನೆ ವಿವಾಹವಾದ ಬಳಿಕ ವೆಂಕಟ ಭಟ್ಟರು ಕುಂಭಕೋಣಂಗೆ ತೆರಳಿದರು. ಅಲ್ಲಿ ಮಧ್ವಾಚಾರ್ಯರ ಪರಂಪರೆಯ ವಿದ್ವಾಂಸ ಸನ್ಯಾಸಿಯಾದ ಶ್ರೀ ಸುಧೀಂದ್ರ ತೀರ್ಥರ ಉತ್ಸಾಹಿ ಶಿಷ್ಯರಾದರು. ಇವರ ಸಂಸರ್ಗದ ವೇಳೆಯಲ್ಲಿ ವೆಂಕಟ ಭಟ್ಟರು ತಮ್ಮ ಅಪಾರ ಬುದ್ಧಿ ಶಕ್ತಿಯನ್ನು ಪ್ರದರ್ಶಿಸಿದರು. ಇದರಿಂದ ಶ್ರೀ ಸುಧೀಂದ್ರ ತೀರ್ಥರು ವೆಂಕಟ ಭಟ್ಟರು ಅಸಾಮಾನ್ಯ ವ್ಯಕ್ತಿಯೆಂಬುದನ್ನು ಕಂಡುಕೊಂಡರು.

ಚೊಚ್ಚಲ ಹೆಂಗೆಯಾದಾಗ ಸರಸ್ವತಿ ಬಾಯಿ ಮತ್ತು ವೆಂಕಟ ಭಟ್ಟರು ತಮ್ಮ ಬಡತನದಿಂದಾಗಿ ಬಹಳಷ್ಟು ನವೆಯಬೇಕಾಯಿತು. ಆದರೂ ಭಗವಂತನ ಮೇಲವರಿಟ್ಟ ವಿಶ್ವಾಸವು ಇದರಿಂದ ಕುಗ್ಗಿಸಗೊಳ್ಳಲಿಲ್ಲ.

ವರ್ಷಗಳುರುಳಿದುವು; ಸುಧೀಂದ್ರ ತೀರ್ಥರು ಅಸ್ವಸ್ಥಕ್ಕೊಳಗಾದರು. ಅವರ ಕೊನೆ ಗಾಲವೂ ನಿಕಟವಾಯಿತು. ತನ್ನ ಮರದ ದೈನಂದಿನ ಪೂಜೆ ಮತ್ತು ಆಡಳಿತೆಯನ್ನು ಒಳ್ಳೆಯವನ ಕೈಗಳಿಗೊಪ್ಪಿಸುವ ಇರಾದೆಯಿಂದ ಅವರು ವೆಂಕಟ ಭಟ್ಟರನ್ನು ಸನ್ಯಾಸಾಶ್ರಮ ಸ್ವೀಕರಿಸುವಂತೆ ಒತ್ತಾಯಿಸತೊಡಗಿದರು ಇನ್ನೂ ಎಳೆ ಹರೆಯದವರಾದ ವೆಂಕಟ ಭಟ್ಟರು ತನ್ನ ಗುರುವಿನ ಆಜ್ಞೆಯನ್ನು ಶಿರಸಾವಹಿಸಲು ನಿರ್ಧರಿಸಿದರು. ಮಡದಿ—ಮಗರ ಚಿಂತೆಯೊಮ್ಮೆ ಅವರನ್ನು ಕಾಡಿದರೂ ದೇವರ ಕರೆಯನ್ನು ಮನ್ನಿಸಲೇ ಬೇಕೆಂದು ಅವರ ಅಂತರಾತ್ಮ ಅಂದಿತು. ತಂಜಾವೂರಿನ ಸಮೀಪದ ಹನುಮಂತ ಪುರಕ್ಕೆ ತೆರಳಿ ಅಲ್ಲಿ ಸನ್ಯಾಸವನ್ನು ಸ್ವೀಕರಿಸಿ ರಾಘವೇಂದ್ರ ತೀರ್ಥ ಎಂಬ ನಾಮಧೇಯವನ್ನು ಪಡೆದರು. ಶ್ರೀ ಸುಧೀಂದ್ರ ತೀರ್ಥರು ಅಲ್ಪ ಕಾಲದಲ್ಲೇ ಸಮಾಧಿಸ್ಥರಾದರು; ಶ್ರೀ ರಾಘವೇಂದ್ರ ತೀರ್ಥರು ಮಠಾಧಿಪತಿಯಾದರು.

ಶ್ರೀ ರಾಘವೇಂದ್ರ ತೀರ್ಥರು ಕುಂಭಕೋಣಂನಲ್ಲಿ ಸ್ವಲ್ಪ ಸಮಯವಿದ್ದು ಯಾತ್ರೆಯನ್ನು ಕೈಗೊಂಡರು. ದಾರಿಯುದ್ದಕ್ಕೂ ಶ್ರೀ ಮಧ್ವಾಚಾರ್ಯರ ದ್ವೈತ ತತ್ವಗಳನ್ನು ಪ್ರಚಾರ ಮಾಡುತ್ತ ಮುಂದುವರಿದರು. ಈ ಸಂದರ್ಭದಲ್ಲಿಯೇ ಶ್ರೀ ರಾಘವೇಂದ್ರರು ದೈವಿಕಾಂಶ ಸಂಭೂತರೆಂದು ತಿಳಿಯುವ ಹಲವಾರು ಘಟನೆಗಳು ನಡೆದು ಹೋದುವು. ಕಾಲಗತಿಯು ವೇಗವಾಗಿ ಸಾಗುತಿತ್ತು, ಶ್ರೀ ರಾಘವೇಂದ್ರರಿಗೆ ತಮ್ಮ ಪಾರ್ಥಿವ ಜೀವನದ ಕೊನೆಗಾಲ ಸಮೀಪಿಸುತ್ತಿದೆಯೆಂದು ಭಾಸವಾಯಿತು. ತನ್ನ ದೈಹಿಕ ಜೀವನವನ್ನು ಮುಕ್ತಾಯಗೊಳಿಸುವ ಇರಾದೆಯನ್ನವರು ವ್ಯಕ್ತಪಡಿಸಲು ಅದವಾನಿಯ ಮುಸ್ಲಿಂ ಅಧಿಕಾರಿ—ಇವನಿಗೆ ಸಾಧು ಸಂತರೆಂದರೆ ಅತಿ ಪ್ರೀತಿ—ಸಿದ್ದಿ ಮಸೂದ್‌ಖಾನ (೧೬೭೨-೧೬೮೭) ನು ತನ್ನ ಅಧಿಕಾರಕ್ಕೊಳಪಟ್ಟ ಭೂ ಭಾಗದಲ್ಲಿ ಎಲ್ಲಿ ಬೇಕಾದರೂ ವೃಂದಾವನವನ್ನು ಕಟ್ಟಲು ಸ್ಥಳವನ್ನು ನೀಡುವುದಾಗಿ ಹೇಳಿದನು. ಶ್ರೀ ರಾಘವೇಂದ್ರರು ತುಂಗಭದ್ರೆಯ ದಡದ ಮೇಲಿನ ಪುಟ್ಟ ಹಳ್ಳಿ ಮಂತ್ರಾಲಯವನ್ನು ಆಯ್ದುಕೊಂಡರು. ಅಧಿಕಾರಿಯ ದಿವಾನ ವೆಂಕಣ್ಣನು ಸನ್ಯಾಸಿ ನಿರ್ದೇಶಿತ ಸ್ಥಳದಲ್ಲಿ ವೃಂದಾವನವನ್ನು ಕಟ್ಟಿಸಿದನು.

ಶ್ರೀ ಶ. ೧೬೭೧ರಲ್ಲಿ ಶ್ರಾವಣ ಬಹುಳ ದ್ವಿತೀಯ ಗುರುವಾರ ದಿನ ಶ್ರೀ ರಾಘವೇಂದ್ರ ಸ್ವಾಮಿಯವರು ವೃಂದಾವನಕ್ಕೆ ನಡೆದರು. ನೆರೆದ ಸಾವಿರಾರು ಭಕ್ತರು ವೇದ ಘೋಷವನ್ನೂ ಹರಿ ಭಜನೆಯನ್ನೂ ಮಾಡುತ್ತಿದ್ದಂತೆ ಅದರಲ್ಲಿ ಕುಳಿತುಕೊಂಡರು. ಅವರ ಆದೇಶದಂತೆ ಏಳುನೂರು ಸಾಲಿಗ್ರಾಮಗಳಿಂದ ಶಿಷ್ಯರು ವೃಂದಾವನವನ್ನು ಮುಚ್ಚಿದರು. ಅಂದಿನಿಂದ ಶ್ರೀ ರಾಘವೇಂದ್ರ ಸ್ವಾಮಿಯವರ ಯೌಗಿಕ ಶಕ್ತಿಯು ವಿಸ್ಮಯಕಾರಕವಾಗಿ ಪರಿಣಮಿಸಿದೆ.

೧೮೨೦-೨೭ರ ಅವಧಿಯಲ್ಲಿ ಮದ್ರಾಸಿನ ಗವರ್ನರನಾಗಿದ್ದ ಸರ್ ಥಾಮಸ್ ಮೂರನ ಜೀವನದಲ್ಲಿ ನಡೆದ ಘಟನೆಯೊಂದು ಆಶ್ಚರ್ಯಕರವಾಗಿದೆ. ಅವನು ವೃಂದಾವನಕ್ಕೆ ಕೊಡಲ್ಪಟ್ಟ ದತ್ತಿ—ಉಂಬಳಿಗಳ ಕುರಿತು ತನಿಖೆ ಮಾಡುವುದಕ್ಕೆಂದು ಅಲ್ಲಿಗೆ ಹೋಗಿದ್ದನು. ಈ ಸಂಬಂಧದಲ್ಲಿ ಮದ್ರಾಸ್ ಜಿಲ್ಲಾ ಗಜೇಟಿಯರ್—ಸಂಪುಟ ೧ ಬಳ್ಳಾರಿ ಅಧ್ಯಾಯ ೧೫ ಅದವಾನಿ ತಾಲೂಕು ಪುಟ ೨೧೩ರಲ್ಲಿ ಈ ರೀತಿ ಬರೆದಿದೆ:

"ಮಂತ್ರಾಲಯವು ೧೨೧೨೫ ಜನಸಂಖ್ಯೆಯಿರುವ ತಾಲೂಕಿನ ಅತಿ ಉತ್ತರದಲ್ಲಿರುವ ತುಂಗಭದ್ರೆಯ ದಡದ ಮೇಲಿರುವ ಚಿಕ್ಕ ಹಳ್ಳಿ ಮಾಧ್ವ ಸಂತ ಶ್ರೀ ರಾಘವೇಂದ್ರ ಸ್ವಾಮಿಯವರ ವೃಂದಾವನವಿಲ್ಲಿದೆಯೆಂದು ಹೆಸರು ಪಡೆದಿದೆ ಈ ಸ್ವಾಮಿಯ ವಾರ್ಷಿಕೋತ್ಸವವು ಆಗೋಸ್ತು ತಿಂಗಳಲ್ಲಿ ನಡೆಯುವುದಿದ್ದು ಇದರಲ್ಲಿ ಬೊಂಬಾಯಿಯ ನೈಜಾಮ ರಾಜ್ಯದ ಮತ್ತು ಮೈಸೂರಿನ ಲಿಂಗಾಯತರು ಸಹ ಭಾಗವಹಿಸುತ್ತಾರೆ. ದತ್ತಿಯನ್ನು ಮರಳಿ ತೆಗೆದುಕೊಳ್ಳುವ ವಿಚಾರವಿತ್ತು. ಮೂರನು ಈ ಸಂಬಂಧದಲ್ಲಿ ವಿಚಾರಣೆ ನಡೆಸಲು ಬಂದಿದ್ದನು. ತನ್ನ ಬೂಟು, ಹೇಟುಗಳನ್ನು ಕಳಚಿದ ಮೇಲೆ ಅವನು ಸಮಾಧಿಯ ಬಳಿಗೆ ಬಂದನು. ಆಗ ಸನ್ಯಾಸಿಯು ಸಮಾಧಿಯಿಂದ ಮೇಲೆ ಬಂದು ಅವನನ್ನು ಭೆಟ್ಟಿಯಾದನು. ಕೆಲವು ಸಮಯ ಅವರಿಬ್ಬರೂ ದತ್ತಿಯನ್ನು ಹಿಂತೆಗೆದುಕೊಳ್ಳುವ ವಿಚಾರವಾಗಿ ಮಾತಾಡಿಕೊಂಡರು. ಸನ್ಯಾಸಿಯು ಮೂರನಿಗೆ ಕಾಣಿಸಿಕೊಂಡಿದ್ದರೂ ಅವನ ಮಾತು ಆತನಿಗೆ ಕೇಳಿಸಿದ್ದರೂ ಅಲ್ಲಿದ್ದ ಇತರರಾರಿಗೂ ಆತನು ಕಾಣಿಸಲೂ ಇಲ್ಲ; ಅವರಿಬ್ಬರೊಳಗಣ ಮಾತು ಕೇಳಿಸಲೂ ಇಲ್ಲ. ಅವರು ಆದು ದೇವಾಂಶ ಸಂಭೂತನಾದ ಸನ್ಯಾಸಿಯು ದೇಹವೆಂದು ಘೋಷಿಸಿದರು ಮಾತುಕತೆಯು ಮುಗಿಯಿತು. ಸರ್ ಥಾಮಸ್ ಮೂರನು ತನ್ನ ಬಿಡಾರಕ್ಕೆ ಬಂದನು ದತ್ತಿಯನ್ನು ಹಿಂತೆಗೆದು ಕೊಳ್ಳುವ ಸೂಚನೆಗಳನ್ನು ರದ್ದು ಮಾಡಿದನು. ಸ್ವಲ್ಪ ಸಮರ್ಪಿತವಾದ ಅಕ್ಕಿಯನ್ನು ಆತನಿಗೆ ಕೊಡಲು ಅವನದನ್ನು ಸ್ವೀಕರಿಸಿ, ಅಂದಿನ ತನ್ನ ಭೋಜನಕ್ಕೆ ಅದನ್ನು ಉಪಯೋಗಿಸುವಂತೆ ಆಜ್ಞಾಪಿಸಿದನು."

ಈ ಬಗೆಯ ಕಾರಣಿಕದ ವೃಂದಾವನದ ನಾಡು, ನಮ್ಮ ನಾಡು, ಪವಿತ್ರವಲ್ಲವೆ?

ನವಕಾಲಿಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂತಾನ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ನಗೆಗಡಲು

ಅದೃಷ್ಟ?

ಅಮೇರಿಕದವನ ಕಾಫಿ ಗ್ಲಾಸ್‌ದಲ್ಲಿ ನೊಣ ಬಿದ್ದರೆ-ಗ್ಲಾಸ್ ಸಹಿತ ಬೀದಿಗೆ ಹೋದೀತು.. ಭಾರತೀಯನ ಕಾಫಿ ಗ್ಲಾಸದಲ್ಲಿ ನೊಣ ಬಿದ್ದರೆ-ನೊಣ ತೆಗೆದೆಗೆದು ...ಕಾಫಿ ಕುಡಿದಾನು, ಅದೇ ಚೀನೀಯನ ಕಾಫಿ ಗ್ಲಾಸದಲ್ಲಿ ನೊಣ ಬಿದ್ದರೆ—ಅದು ಆತನ ಅದೃಷ್ಟ! ಮೊದಲು ನೊಣ ತಿಂದ—ಆ ಮೇಲೆ ಕಾಫಿ!

○ ○ ○

ನಿನ್ನಂಥ ಗಂಡ!

ಆಕೆ– ಇಂದಿನ ಈ ಪರಿಸ್ಥಿತಿಯಲ್ಲಿ ಗಂಡಾಗಿ ಹುಟ್ಟಲೆಬಾರದು! 'ರಾಣಿ'–ತಾಳ ಹಾಕಿದಾಗ ಕುಣಿಯಬೇಕು'! ಹೆಣ್ಣಾಗಿ ಹುಟ್ಟಿದರೆ...ಸ್ನೋ, ಪೌಡರು, ಲಿಫ್‌ಸ್ಟಿಕ್ ಜಾರ್ಜೆಟ್ ಸೀರೆ ಅಂತ ಗಂಡಂದಿರನ್ನ 'ಕೀಲು ಗೊಂಬೆ' ಮಾಡಿ ಕುಣಿಸಬಹುದು:....!!

ಈತ: — ಅದೇನೊ ಸರಿ; ನಿನ್ನಂತ ಗಂಡಂದಿರು ಸಿಕ್ಕರೆಮಾತ್ರ!?....

○ ○ ○

ಅವರು!

ಉಮಾ:—(ದೀರ್ಘಕಾಲ ಗತಿಸಿದ ನಂತರ ಅಕಸ್ಮಾತ ಚೌಕದಲ್ಲಿ ಸಂಧಿಸಿದ ಗೆಳತಿಗೆ.) ಸುಖವಾಗ ಇದ್ದಿಯಾ—ಮಕ್ಕಳೆಷ್ಟು?.... 'ನೀನಲ್ಲದೆ ನನಗೆ ಬೇರೆ ಪ್ರಪಂಚನೇ ಇಲ್ಲ' ಅಂತ ಏನೇನೋ ಲೆಟರ ಬರೆತಿದ್ದನಲ್ಲಾ; ಕೊನೆಗೆ ಆ ರ್ಯಾಸಕಲ್‌ನ್ ಗತಿ ಏನಾಯಿತು?

ರಮಾ:—ಇನ್ನೂ ಹಾಗೆ ಹೇಳ್ತಿಯಾ?.... ಇಲ್ಲೇ ಅವರ ಮನೆ ಇದೆ, ಕಾಫೀಕುಡಿದು- ಹೋಗ ಬಹುದು ಅವರು ಈಗ ಪ್ರಸಿದ್ಧ ವಕೀಲರು-B.A L. L.B.!!

ಉಮಾ:—ತಿಳಿದಿರಲಿಲ್ಲ—ಕಥೆ ಗೊತ್ತೇ ಇಲ್ಲ ಕ್ಷಮಿಸು-ನಿನ್ನ ಅವರೇ?!

ಶ್ರೀ ಪಿ. ಎನ್ ಹೆಗ್ಡೆ-ಶಂಭು

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಕವಲು ದಾರಿ—ಕೆಂಪು ದೀಪ

ಭಾರತದ ತೊಟ್ಟಿಲಲ್ಲಿರುವ ನಮ್ಮ ಮಗು!

— ಸುದಾಸ.

ನಮ್ಮ ರಾಜ್ಯದ ಕೆಲವೆಡೆಗಳಲ್ಲಿ ಈಗ ಬರಗಾಲ ಬಂದಿದೆ. ಕೆಲವು ಕಡೆಗಳಲ್ಲಿ ಕಾಲರಾ ಬಂದಿದೆ ಕೆಲವು ಕಡೆಗಳಲ್ಲಿ ನೀರಿನ ಅಭಾವವಿದೆ. ಇನ್ನು ಕೆಲವು ಕಡೆಗಳಲ್ಲಿ ಜಾನುವಾರುಗಳ ಕಾಹಿಲೆ.

ಇಂತಹ ಒಂದೆರಡು ವಿಷಯಗಳು ಇತರ ರಾಜ್ಯಗಳಲ್ಲೂ ಇರಬಹುದು. ಆದರೆ ನಮ್ಮಲ್ಲಿ ನಡೆಯುವಂತೆ ಎಲ್ಲಾ ವಿಷಯಗಳೂ ಏಕ ಕಾಲಕ್ಕೆ ನಡೆಯುವದು ಇತರ ರಾಜ್ಯಗಳಲ್ಲಿ ಈಗ ಇಲ್ಲ.

ಅಂದ ಮಾತ್ರಕ್ಕೆ ಇತರ ರಾಜ್ಯಗಳ ನಮ್ಮ ಬಂಧುಗಳು ಸುಖಿಗಳಾಗಿದ್ದಾರೆ, ಎಂದಂತೆ ಆಗುವದಿಲ್ಲ

ಅಲ್ಲಿ ಕೂಡಾ ಒಂದಲ್ಲ ಒಂದು ಕಾರಣದಿಂದ ದರಿದ್ರರಾಗಿಯೇ ಉಳಿದವರೂ ಶ್ರೀಮಂತರಾಗಿ ಮೆರೆದವರೂ ಕಾಣಿಸಿಕೊಳ್ಳಬಹುದು.

ಆದರೆ ನಮ್ಮ ರಾಜ್ಯದ ಕತೆ ಇಲ್ಲಿಗೇ ಮುಗಿಯುವದಿಲ್ಲ. ನಮ್ಮ ರಾಜ್ಯಕ್ಕೆ ನೀರಿನ ಸೌಕರ್ಯ ಸಿಗುತ್ತದೆ ನಮ್ಮ ಉದ್ಧಾರಕ್ಕಾಗಿ ಯೋಜನೆಗಳ ಮೇಲೆ ಯೋಜನೆಗಳು ನಡೆಯುತ್ತಿವೆ. ಅಂದ ಮೇಲೆ ಮುಂದಾದರೂ ನಾವೆಲ್ಲ ಸುಖದ ಹೊತ್ತನ್ನು ಕಾಣಬಹುದು.

ಸಧ್ಯಕ್ಕೆ ಮಾತ್ರ ಆ ಮಾತಿಗೆ ಎಡೆಯಿಲ್ಲ. ಬೆಂಗಳೂರಿನಲ್ಲಿರುವಂತೆಯೇ, ನಿಮ್ಮ ಊರಲ್ಲಿ ಕೂಡಾ ಸಕ್ಕರೆಯ ಅಭಾವವಿರಬಹುದು. ಅಕ್ಕಿಗೆ ಬೆಲೆಯೇರಿರಬಹುದು. (ವ್ಯಾಪಾರಿಗಳೂ ತುಂಬಾ ಪ್ರಾಮಾಣಿಕರಾಗಿ ವ್ಯವಹಾರ ನಡೆಸುತ್ತಿರಬಹುದು)

ಇಲ್ಲಿನಂತೆಯೇ ನಿಮಗೆ ಸಿಗುವ ನಿಮ್ಮ ಶ್ರಮದ ಪ್ರತಿಫಲ (?) ವನ್ನು ಹಂಚಿಕೊಳ್ಳಲು ನೂರು ಬಾಯಿಗಳು ಕಾದು ಕೊಂಡಿರಬಹುದು.

ಈ ಮಾತಿಗೆ ನೀವೇನನ್ನುತ್ತೀರಿ? ಹದ್ದು ಡೇಗೆಗಳಂತೆ ಕಾದಿರುತ್ತಾರೆ ಎನ್ನುತ್ತೀರಾ?

ಹಾಗೂ ಇರಬಹುದು. ಏನಿದ್ದರೂ, ನಿಮ್ಮ ದುಡಿಮೆಯಿಂದ ನಿಮಗೆ ಎರಡು ಹೊತ್ತು ಉಣ್ಣಲೂ ಸಾಧ್ಯವಾಗುತ್ತಿರಲಿಕ್ಕಿಲ್ಲ. ಅದಕ್ಕಾಗಿಯೂ ಹಣ ಸಾಲದೆ ಸಾಲ ಮಾಡಬೇಕಾಗುವ ಪ್ರಸಂಗ ಬರಬಹುದು.

ಇದೆಲ್ಲಾ ನಮ್ಮ—ನಿಮ್ಮ ಗೋಳಿನ ಕತೆಯಾಯಿತು.

ಪತ್ರಿಕೆಗಳಲ್ಲಿ ಬಡತನವನ್ನು ಸಹಿಸಲಾಗದೆ ಪ್ರಾಣವನ್ನು ಬಡತನಕ್ಕೊಪ್ಪಿಸಿದ ಕುಟುಂಬಗಳ ಕತೆಯನ್ನು ಕೇಳುತ್ತಿರುತ್ತೇವೆ.

ಇದು ನಮ್ಮ ರಾಜ್ಯದಲ್ಲಿ ಮಾತ್ರವೇ ಅಲ್ಲ; ನಮ್ಮ ಎಡ ಬದಿಯ ರಾಜ್ಯಗಳಲ್ಲೂ ನಡೆಯುತ್ತದೆ. ಅಲ್ಲದೆ ಸಾಮಾನ್ಯ ಘಟನೆ ಎಂಬಂತೆ ನಡೆಯುತ್ತಿದೆ.

ಆಗೆಲ್ಲಾ ಅವರ ಕುರಿತು ಬೇಸರವೂ ಆಗುತ್ತದೆಯಲ್ಲ? 'ಅಯ್ಯೋ ಪಾಪ!' ಎಂಬ ಮಾತೂ ಮನಸ್ಸಿನಲ್ಲಿ ಮೂಡಿ ನಿಲ್ಲುತ್ತದೆ.

ಭವಿಷ್ಯವನ್ನು ಕಾಣ ಬೇಕಾಗಿದ್ದವರು ದಾರಿದ್ರ್ಯದ ತುತ್ತುಗಳಾಗಿ, ಎಳೆಯ ಪ್ರಾಯದಲ್ಲೇ ಸಾವನ್ನಪ್ಪಿಕೊಳ್ಳಬೇಕಾಗುವ ಸಂದರ್ಭ ನಿಜಕ್ಕೂ ಕರುಣಾಜನಕ.

ಹೆತ್ತೊಡಲು ಏನೂ ತಿಳಿಯದ ಮಕ್ಕಳಿಗೆ ಹಾಲನ್ನ ಉಣ್ಣಿಸುವ ಬದಲು, ವಿಷ ಉಣ್ಣಿಸಿ ತಾವೂ ಸೇವಿಸಿ ಪ್ರಾಣ ಕಳೆದುಕೊಳ್ಳಬೇಕಾಗುವ ಸಂದರ್ಭ ಹೇಗಿರಬೇಡ?

ಹುಟ್ಟಿಸಿದ ದೇವರು ಹುಲ್ಲು ಕೊಡಲೂ ಅಸಮರ್ಥನಾಗಿದ್ದಾನೆ ಎಂದು ಅನ್ನಿಸುತ್ತದೆಯಲ್ಲ?

ನಿಮ್ಮ—ನಮ್ಮ ಅನಿಸಿಕೆಗಳು ಭಾರತದ ಚಿತ್ರವನ್ನೇ ಬದಲಿಸುವಂತಾಗುತ್ತಿದ್ದರೆ?

ಹಾಗಾಗದೆ ಇರಲು ನಮ್ಮ ದೌರ್ಭಾಗ್ಯ' ಎನ್ನೋಣವೆ? ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಅನಿಸಿಕೆಗಳಿಗೆ ಬೆಲೆ ಇಲ್ಲ ಎನ್ನೋಣವೆ?

ನಮ್ಮ ಮತವನ್ನು ಯಾರು ಕೇಳುತ್ತಾರೆ ಎಂದು ಹೇಳುವುದೇ ಇವತ್ತಿಗೆ ಬಹಳ ಸುಲಭವಾಗಿ ಆಡಿಕೊಳ್ಳಬಹುದಾದ ಮಾತೆನಿಸಿದೆ?

ನಿಜ; ನಮ್ಮ ರಾಜ್ಯದ ಆಗು ಹೋಗುಗಳನ್ನು ನೋಡುವವರಿಗೆ ಈ ಮಾತೇ ನಿಜವೆಂದು ಅನ್ನಿಸುತ್ತದೆ.

ನಮ್ಮ ರಾಜಕಾರಣಿಗಳದ್ದು ವಿಶಾಲ ಹೃದಯ. ಅವರು ಆಡುವ ಮುತ್ತಿನಂತಹ ಮಾತುಗಳನ್ನು ಕೇಳಿದಾಗ, ಸಂತೋಷದಿಂದ ಹೊಟ್ಟೆ ತುಂಬಿ ಬರುತ್ತದೆ.

ಕರ್ನಾಟಕವೆಂದು ಕರೆಯಬೇಕಾಗಿದ್ದ ನಮ್ಮ ವಿಶಾಲ ಮೈಸೂರು ಭಾರತದಲ್ಲೇ ಇದೆ ಎಂಬ ಬುದ್ಧಿವಂತಿಕೆಯ ಮಾತುಗಳಿಂದ ಇದನ್ನು ತಿಳಿಯದ ಮಂದಿಗೆ ಅವರು ತಿಳಿಸಿ ಹೇಳಲೂ ಪ್ರಯತ್ನಿಸುತ್ತಿದ್ದಾರೆ

ಸ್ವಂತದ ಚಿಂತೆಯುಳ್ಳವರಿಗೆ ಲೋಕದ ಚಿಂತನೆಯತ್ತ ಎಂದೂ ಲಕ್ಷ್ಯಕೊಡಲು ಸಾಧ್ಯವಾಗುವದಿಲ್ಲ.

ಆದರೆ ನಮ್ಮ ರಾಜಕಾರಣಿಗಳೆಲ್ಲ ವಿಶಾಲ ಹೃದಯಿಗಳಾಗಿರುವರೆಂತಲೇ, ಅವರು ಸಮಗ್ರ ಭಾರತವನ್ನು ಕುರಿತು ಚಿಂತಿಸಲು ಸಾಧ್ಯವಿದೆ. ಅಂತೆಯೆ ಅವರಿಗೆ ನಮ್ಮ ಚಿಂತೆಗಿಂತಲೂ ಭಾರತದ ಚಿಂತೆಯೇ ಹೆಚ್ಚಾಗಿ ಕಾಡುತ್ತಿದೆ.

ಅಂತೆಯೇ ಅವರು ಭಾರತೀಯರನ್ನು ಒಂದು ಗೂಡಿಸುವ ಶ್ರಮ ತೆಗೆದುಕೊಳ್ಳುತ್ತಾರೆ.

ಏನಿದ್ದರೂ ನಮ್ಮ ರಾಜ್ಯದಲ್ಲಿ ನಮಗೆ ನೂರು ಅನಾನುಕೂಲತೆಗಳಿರಲಿ, ನಾವಂತೂ ಭಾರತದ ಇತರ ರಾಜ್ಯಗಳಿಗಿಂತ ಮಾದರಿಯಾಗಿದ್ದುಕೊಂಡು, 'ಮಾದರಿ ಪುರುಷರು' ಎಂಬ ಬಿರುದನ್ನು ಗಳಿಸಿಕೊಳ್ಳಬಹುದು, ಎಂದು ಇವತ್ತು ನಮ್ಮ ರಾಜ್ಯದ ಆಗು ಹೋಗುಗಳನ್ನು ನೋಡಿದಾಗ ಅನಿಸುತ್ತದೆ.

ಧನ್ಯ ಮೈಸೂರು; ಧನ್ಯ ಭಾರತ, ಎಂದು ನಾವೇ ಅಂದುಕೊಳ್ಳೋಣ ಆಗಬಹುದಲ್ಲ?

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.
ಜಗತ್ಪ್ರಸಿದ್ಧವಾದ ಜೈ ಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧



ಅದಲು...ಬದಲು!

—ಶ್ರೀ ಯಂ. ಭಾಸ್ಕರ ಭಂಡಾರಿ:
ಮಜಿ ಬೈಲು,

(ಗ್ರಾಮದಾನ ಮಾಡುವ....ಎಂಬಂತೆ)

ಕಾಲವಿಂದು ಬದಲಿದೆ!
ಕಲ್ಯುಯುಗವು ಉದಿಸಿದೆ!
ಹಳೆಯ ರೀತಿಯಡಗಿದೆ
ನವ್ಯ ನೀತಿ ಬೆಳಗಿದೆ॥

ಸತ್ಯಧರ್ಮವಳಿದಿದೆ
ಮಿಥ್ಯ ಹಿಂಸೆ ಉಳಿದಿದೆ॥
ಶಾಂತಿ ಯೆತ್ತ ಓಡಿದೆ
ಕ್ರಾಂತಿ ಯೆದ್ದು ಮೊರೆದಿದೆ!

ಸಹನೆಯೆಲ್ಲೊ ಹುದುಗಿದೆ
ರೋಷವುಕ್ಕಿ ಹರಿದಿದೆ॥
ಸಹಜ ಪ್ರೇಮ ತೊಲಗಿದೆ
ನಟನೆ ಪಟ್ಟವೇರಿದೆ॥

ಐಕ್ಯವೆಲ್ಲೋ ಓಡಿದೆ
ಈರ್ಷೆ ಜ್ವಲಿಸ ಬಂದಿದೆ ॥
ಜಾತಿ ವೈರ ಕಳಚಿದೆ
ಪಕ್ಷ ವೈರ ಬೆಳೆದಿದೆ ॥

ಮಾನ ಭ್ರಷ್ಟವಾಗಿದೆ
ಹಣವೆ ಜಗದಿ ಮೆರೆದಿದೆ ॥
ಧರೆಗೆ 'ಸುರೆ'ಯು ಇಳಿದಿದೆ
ಜನತೆ ಶರಣು ಹೋಗಿದೆ ॥

ನಿತ್ಯ ಕರ್ಮವಿಲ್ಲವು
ಚಲಿಸ ಮನಗಳೆಲ್ಲವು ॥
ಭಕ್ತಿ ಪೂಜೆ ಶೂನ್ಯವು
ತೆರೆಯ ಹೊರಗೆ ಕಾಣವು !

ಧೈರ್ಯ ಶೌರ್ಯವಿಲ್ಲವು
ಮೋಸ ಕೃತ್ಯವೆಲ್ಲವು ॥
ಮಾತ ಕೊಡುವರೆಲ್ಲವು
ನಡೆಯುವರಿಲ್ಲ ಅಲ್ಪವು ॥

'ಕ್ರಿಸ್ತ' 'ಕೃಷ್ಣ' 'ಅಲ್ಲಾ' ನೋ?
'ಬುದ್ಧ' 'ಜೈನಮೂಲ' ನೋ?
ಎಲ್ಲರೊಂದೆ ಅಲ್ಲವೆ?
ರೂಪ ಮಾತ್ರ ಭೇದವೆ!॥

ಜನತೆ ಕಣ್ಣು ತೆರೆಯದೆ?
ಜ್ಞಾನ ಉದಯವಾಗದೆ?
ದೈವ ಶಕ್ತಿ ಯೆಂಬುದೇ
ಏಕ ವೆಂದು ತಿಳಿಯದೆ?

ಏನು ಜಗಳ ಗೈವಿರಾ?
ಕಾದಿ ಹರಣ ತೊರೆವಿರಾ?
ಯಾರ ನೀವು ಹೊಡೆವಿರಿ?
ಯಾರಿಗಾಗಿ ಮಡಿವಿರಿ? ॥

ದೇಶಕಾಗಿ ದುಡಿವಿರಾ?
ದೇಶ ದ್ರೋಹ ಗೈವಿರಾ? ॥
ಏತಕಿಂತು ಸ್ವಾರ್ಥವು?
ಅದುವೆ ಬರಿ ನಿರರ್ಥವು ॥

ಒಂದೆ ತಾಯಿ ಕಂದರೆ!
ಮಾತೆಗಿರಲು ತೊಂದರೆ
ಭೇದ ಭಾವ ಅಳಿಸಿರಿ ।
ಒಂದುಗೂಡಿ ದುಡಿಯಿರಿ ॥

ಹೃದಯ ಕೋಟೆ ಉಕ್ಕಲಿ !
ಪ್ರೇಮ ಜಲವು ಚಿಮ್ಮಲಿ !
ತಾಯ ಭವಣೆ ನೀಗಲಿ !
ನಾಡ ಶಾಂತಿ ಹೆಚ್ಚಲಿ!

— ಜೈಹಿಂದ್ —

ಆನಂದ

(೨ನೇ ಪುಟದಿಂದ)

ತ್ತೈದು ವರ್ಷಗಳವರೆಗೂ ಕಾಯು ತ್ತಾರೆ; ಆದರೂ ಮದುವೆಯಾಗಲು ಒ ತ್ತ ಸಮಯ ಒದಗಬೇಡವೇ?'

"ಅಂದರೆ?"

"ಅಂದರೆ ಕಾಲ ಒದಗಿ ಬರಬೇಕು. ರಿಯಾದ ಸನ್ನಿವೇಶ ದೊರಕ ಬೇಕು, ರಿಯಾದ ವಧು ದೊರಕ ಬೇಕು. ನಂ ರ ಮದುವೆಯಾಗ ಬೇಕು"

"ಅಂತೂ ಮದುವೆಯಾದ ಮೇಲೆ ಸು ಖವಿದೆ ಅನ್ನು."

"ಸುಖ ದುಃಖಗಳ ಅನುಭವಕ್ಕಾಗಿ ಮದುವೆಯಾಗುವುದಲ್ಲ. ಅದೊಂದು ಮಾ ನವನ ಪವಿತ್ರ ಕರ್ತವ್ಯ. ಆ ಕರ್ತವ್ಯ ನೆರವೇರಿಸಲು ಆತ ಮದುವೆಯಾಗುತ್ತಾ ನೆ. ಈ ಮದುವೆಯಲ್ಲಿ ಸುಖವೂ ಇದೆ ದುಃಖವೂ ಇದೆ. ಕೆಲವರು ಮದುವೆ ಯಾದ ನಂತರ ಸುಖಪಡುತ್ತಾರೆ, ಕೆಲ ವರು ತುಂಬ ತೊಂದರೆಗೊಳಗಾಗುತ್ತಾ ರೆ, ಹುಚ್ಚರಾಗಿ ಹೋಗುತ್ತಾರೆ, ಸನ್ಯಾ ಸಿಗಳಾಗಿ ಹೋಗುತ್ತಾರೆ. ಕೆಲವರು ಹೆಂ ಡತಿಯ ತೃಪ್ತಿಗಾಗಿ ಕಳವು, ಖೂನಿಗಳಿ ಗೂ ಹೇಸುವುದಿಲ್ಲ. ಕೆಲವು ಸಂಸಾರಗ ಳನ್ನು ನೋಡಿದರೆ ನಿಜಕ್ಕೂ ಅಯ್ಯೋ ಎನ್ನಿಸುತ್ತದೆ. ಮದುವೆಯಾಗಿ ಐದಾರು ತಿಂಗಳು ಸಂತೋಷದಿಂದಿರುತ್ತಾರೆ. ನಂ ತರದ ಅವರ ಪಾಡು ಪರಬ್ರಹ್ಮನಿಗೇ ಪ್ರೀತಿ. ಆರೋಗ್ಯದ ತೊಂದರೆ, ಹಣ ಕಾಸಿನ ತೊಂದರೆ ಅವರ ಮುಂದೆ ಬರು ತ್ತದೆ. ಮಾನ ಮರ್ಯಾದೆಗಳಿಗಾಗಿ ಹೋ ರಾಟ ಆರಂಭವಾಗುತ್ತದೆ. ಮಕ್ಕಳು ಮ ರಿ, ಬಂಧು ಬಳಗ, ನೆರೆಹೊರೆ, ಸಮಾ ಜ–ಇವುಗಳೇ ದೊಡ್ಡ ಸಮಸ್ಯೆಯಾಗಿ ಮುಂದೆ ಬಂದು ನಿಲ್ಲುತ್ತದೆ, ಚಿಕ್ಕಂದಿ ನಲ್ಲಿ ನಿರ್ಮಿಸಿದ್ದ ಆಕಾಶಗೋಪುರಗಳೆಲ್ಲಾ ಪುಡಿ ಪುಡಿಯಾಗುತ್ತವೆ. ಆದರ್ಶತೆಯು ಗುಂಡಿ ನೆಲಮಟ್ಟವಾಗುತ್ತದೆ. ಕೆಲವೇ ದಿನಗಳಲ್ಲಿ ವೈರಾಗ್ಯ ಬಂದುಬಿಡುತ್ತದೆ. ತುಂಬ ಯೋಚಿಸಬೇಕು ಸುಂದರಾ ಮ ದುವೆಯಾಗಲು. ಮದುವೆ ಒಂದು ಪವಿ ತ್ರ ಬಂಧನ. ಕೇವಲ ಕಾಮ ತೃಪ್ತಿಗಾ ಗಿ ಮದುವೆಯಾಗ ಬಾರದು. ಬಾಳು ಬಾಳಲು ಮದುವೆಯಾಗಬೇಕು. ಇದ ಕ್ಕೆ ದೂರಾಲೋಚನೆ ಬೇಕು. ಪರರ ಮ ನೆಯ ಹೆಣ್ಣನ್ನು ತಂದು ಅವಳು ಕಣ್ಣೀ ರಲ್ಲಿ ಕೈ ತೊಳೆಯುವಂತೆ ನಾವು ಮಾಡ ಬಾರದು. ನಮ್ಮ ಯೋಗ್ಯತೆಯನ್ನು ಮೊ ದಲು ಅಳೆದುಕೊಂಡು ಅದಕ್ಕೆ ಸರಿಯಾ ದ ಹೆಣ್ಣನ್ನೇ ಆರಿಸಬೇಕು. ಕೆಲವು ಸಂ ಸಾರಗಳು ಹಾಳಾಗಲು ಹೆಣ್ಣು ಗಂಡು ಗಳ ಜೋಡಿ ಸರಿ ಇಲ್ಲದಿರುವುದೇ ಆಗಿದೆ. ಮದುವೆಯ ನಂತರ ಒಂದೋ ಗಂಡು ಒಂದೋ ಹೆಣ್ಣು ಕೊರಗುತ್ತಲೇ ಇರುತ್ತ ದೆ. ಇದು ಗಂಡು ಹೆಣ್ಣುಗಳ ಪರಸ್ಪರ ಒಪ್ಪಿಗೆಯಿಲ್ಲದೆ, ಹಿರಿಯರ ಬಲವಂತಕ್ಕೆ ಆದ ಮದುವೆಗಳ ಪ್ರತಿಫಲ. ಆದುದರಿಂ ದ ಯೋಚಿಸಿ ಸಮಯಾಸಮಯಗಳನ್ನು ನೋಡಿಕೊಂಡು ಗೃಹಸ್ಥಾಶ್ರಮಕ್ಕೆ ಕಾ ಲಿಡಬೇಕು......."

"ಹಾಗಾದರೆ ನೀನು ಈಗ ಮದುವೆ ಯಾಗುವ ಪರಿಸ್ಥಿತಿಯಲ್ಲಿ ಇಲ್ಲವೇ?"

"ಮದುವೆಯಾಗಲು ಸದ್ಯಕ್ಕೆ ಇಷ್ಟ ವಿಲ್ಲ. ಇನ್ನು ನಾಲ್ಕೈದು ವರ್ಷಗಳ ವರೆ ಗೆ ಆ ಯೋಚನೆಯನ್ನೇ ನಾನು ಮಾಡು ವಂತಿಲ್ಲ."

"ಅದೇನು?"

"ನನ್ನ ಸ್ಥಿತಿ ಚೆನ್ನಾಗಿಲ್ಲ ಈಗ. ಉ ದ್ಯೋಗ ದೊರಕಿಸಿಕೊಂಡು ನಾಲ್ಕು ಕಾ ಲ್ಕಾಸು ಸಂಪಾದಿಸಬೇಕಾಗಿದೆ. ನಂತ ರವೇ ಎಲ್ಲ ಯೋಚನೆ. ಸದ್ಯಕ್ಕೆ ಮದು ವೆಯ ಪ್ರಶ್ನೆಯನ್ನೇ ಎತ್ತಬೇಡ."— ಸುಂದರ ಏನೂ ಮಾತನಾಡಲಿಲ್ಲ ಆಗ.

ಹಿಂದೆ ಹಾಕಿದ್ದ ಪ್ರಶ್ನೆಯನ್ನೇ ಸುಂದ ರ ಪುನಃ ಹಾಕಿದ, "ಈಗ ಇಲ್ಲಿ ಮದು ವೆಯ ವಿಚಾರವೇನಾದರೂ ಯೋಚಿಸು ತಿದ್ದೀಯಾ?"

ಆನಂದನ ಮೌನವೇ ಸಮ್ಮತಿಯನ್ನು ಸೂಚಿಸಿತು. ಆವನು ಯೋಚಿಸುತ್ತಿದ್ದು ದೂ ಅದೇ ವಿಚಾರವಾಗಿತ್ತು ಅವನ ದೃಷ್ಟಿ ಯಾವರೋ ಉನ್ನತ ಮಟ್ಟದ್ದಾಗಿತ್ತು. ಕೇವಲ ಭೋಗಕ್ಕಾಗಿ, ಕೇವಲ ವಿಲಾಸ ಕ್ಕಾಗಿ ಮದುವೆಯಾಗಲು ಬಯಸಲಿಲ್ಲ ಆತ, ಆತನಿಗೆ ಓರ್ವ ಸಂಗಾತಿ ಬೇಕಾಗಿ ತ್ತು. ತನ್ನ ಬಾಳನ್ನು ಹಸನುಗೊಳಿಸುವ ಸಂಗಾತಿ ಬೇಕಾಗಿತ್ತು. ಅವಳನ್ನು ಬಾ ಲ್ಯದಲ್ಲೇ ಆರಿಸಿದ್ದ ಆತ.

ಹೌದು — ಬಾಳ ಸಂಗಾತಿಯನ್ನು ಬಾಲ್ಯದಲ್ಲೇ ಚುನಾಯಿಸಿದ್ದ ಆನಂದ. ತಾನಿನ್ನೂ ಹದಿನೈದು ವರ್ಷದ ಪೋರ ನಾಗಿರಬೇಕು. ಧರ್ಮ ಕರ್ಮ ಸಂಯೋ ಗದಿಂದ ಆ ಹತ್ತಿರ ಶಾಲೆಯನ್ನು ಕಂಡು ಆಗಲೇ ಪ್ರತಿಜ್ಞೆ ಮಾಡಿದ್ದ—ತನ್ನ ಬಾಳ ಗೆಳತಿ ಆಕೆಯೇ ಆಗಬೇಕೆಂದು. ಆಕೆಯ ಸ್ಥಿತಿಗತಿಗಳನ್ನು ಅರಿಯುತ್ತಲೇ ಬಂದಿ ದ್ದ. ಆಕೆಯನ್ನು ನಂತರ ಕಾಣದೆ ಸುಮಾ ರು ಹತ್ತು ವರ್ಷ ಕಳೆದರೂ ಆಕೆ ಓದಿ ಪದವೀಧರ ಸುಂದರ ಮಹಿಳೆಯಾಗಿದ್ದಾ ಳೆಂದು ಕೇಳಿ ತಿಳಿದಿದ್ದ. ಇನ್ನು ಆಕೆಯ ಮನೆಗೆ ತೆರಳಿ ಮದುವೆಯ ನಿಶ್ಚಯ ಮಾಡಬೇಕೆಂದು ಯೋಚಿಸು ತ್ತ ಸಮುದ್ರ ದಡದಲ್ಲಿ ಕುಳಿತಿದ್ದ. ತನ್ನ ಮನದಲ್ಲಿದ್ದ ವಿಷಯವನ್ನು ಗೆಳೆ ಯ ಸುಂದರನಿಗೆ ಹೇಳಲು ನಾಚಿಕೆಪಡ ಬೇಕೇಕೆ ಆತ. 'ಹೌದು ಸುಂದರ, ಈ ವರುಷ ಮದುವೆಯಾಗಬೇಕೆಂಬ ಹಂಬಲ ದಿಂದಿದ್ದೇನೆ. ನೀನೂ ಏಕೆ ಈ ವರ್ಷವೇ ಮದುವೆಯಾಗಬಾರದು?'— ಎಂದು ಕೇ ಳಿದ.

'ಕ್ಷಮಿಸು ಆನಂದ. ಕಾರಣಾಂತರ ದಿಂದ ನನ್ನ ಮದುವೆಯ ವಿಚಾರವನ್ನು ನಿನಗೆ ತಿಳಿಸಲಾಗಲಿಲ್ಲ ವಿದೇಶದಿಂದ ಬಂದೊಡನೆಯೇ ನನ್ನ ಮದುವೆಯ ನಿಶ್ಚ ಯವಾಯ್ತು. ಕಾಲವಿಲ್ಲದಿದ್ದುದರಿಂದ ಯಾರಿಗೂ ತಿಳಿಸಲಾಗಲಿಲ್ಲ. ನನ್ನ ವಿವಾ ಹ ಆಗಲೇ ನಡೆದು ಹೋಯಿತು.

'ಹೌದೇನು? ತುಂಬ ಸಂತೋಷ. ದೇ ವರು ನಿಮ್ಮನ್ನು ಸುಖವಾಗಿಡಲಿ. ಅಯ್ಯೋ ನಾನೆಂಥ ಮೂರ್ಖ. ಅಪರೂಪವಾಗಿ ಬಂ ದು ನಿನ್ನನ್ನು ಇಲ್ಲಿಯೇ ನಿಲ್ಲಿಸಿಕೊಂಡೆ ನಡಿ, ಮನೆಗೆ ಹೋಗೋಣ. ಬಂದವನು ಹೇಗೂ ಬಂದೆ, ನಿನ್ನ ಹೆಂಡತಿಯನ್ನೂ ಕರೆದುಕೊಂಡು ಬರಬಹುದಿತ್ತಲ್ಲ.'

'ಹೌದು ಕರೆದುಕೊಂಡು ಬಂದಿದ್ದೇನೆ. ನಿಮ್ಮ ಮನೆಯಲ್ಲಿ ಅವಳನ್ನು ಬಿಟ್ಟು ನಾ ನು ಇಲ್ಲಿಗೆ ಬಂದೆ, ನಿನ್ನ ತಾಯಿಯೊಂದಿ ಗೆ ಮಾತನಾಡುತ್ತಾ ಇದ್ದಾಳೆ, ಅವಳ ತಾ ಯಿಯವರೂ ಬಂದಿದ್ದಾರೆ'

'ತುಂಬ ಸಂತೋಷ'.

ಇಬ್ಬರು ಗೆಳೆಯರೂ ಕೈಕೈ ಹಿಡಿದು ಕೊಂಡು ಮನೆಯತ್ತ ಹೊರಟರು. ಆಗ ಲೇ ಕತ್ತಲಾವರಿಸಿ ದೀಪಗಳು ಉರಿಯ ತೊಡಗಿದ್ದವು. ಆನಂದ ಅಂಗಡಿಯತ್ತ ತೆರಳಿ ಹೂವು, ಹಣ್ಣುಗಳನ್ನೆಲ್ಲ ಕೊಂಡು ಕೊಂಡನು.

ಮನೆಯೊಳಗೆ ಕಾಲಿಡುತ್ತಲೇ ಆನಂದ ನ ಮುಖ ಚರ್ಯೆಯೇ ಬದಲಾಯಿತು. ಗೆಲುವಿದ್ದ ಕಡೆ ದುಗುಡ ಆವರಿಸಿತು. ನ ಗುತಿದ್ದ ಮುಖ ಬಿಳಿಚಿಕೊಂಡಿತು. ಗರಿಗೆದರಿ ಸಂತೋಷದಿಂದ ಹಾರುತ್ತಿದ್ದ ಆವನ ಮ ನಸ್ಸು ಬೆಂಕಿಗೆ ಬಿದ್ದ ಹುಳುವಿನಂತೆ ವಿಲ ವಿಲನೆ ಒದ್ದಾಡಿತು. ತಾನು ನಿಜ ಲೋ ಕದಲ್ಲಿರುವೆನೋ, ಸ್ವಪ್ನ ಲೋಕದಲ್ಲಿರು ವೆನೋ ಎಂಬುದು ತಿಳಿಯದಾಯಿತು. ಸುಂದರ ಬಂದು ತನ್ನ ಹೆಂಡತಿಯನ್ನು ತೋರಿಸಿ 'ನೋಡು ಆನಂದಾ, ಇವಳೇ ನನ್ನ ಹೆಂಡತಿ ಪ್ರಿಯದರ್ಶಿನಿ' ಎಂದು ನು ಡಿದಾಗ ಆನಂದನಿಗೆ ಓಡಿ ಹೋಗಲೇ ಎನಿಸಿತು.

ದುಗುಡವನ್ನು ಒತ್ತಿ ಹಿಡಿದು ಸಂಯ ಮವನ್ನು ಎತ್ತಿ ಹಿಡಿದು ಆನಂದ ತನ್ನೊ ಳಗೇ ತಾ ನುಡಿದ "ನಾನು ನಿರ್ಭಾಗ್ಯ, ನಾ ಬಯಸಿದ ಹೆಣ್ಣೇ ನನ್ನ ಸ್ನೇಹಿತನ ಹೆಂಡತಿಯಾಗಿ ಬಂದಿದ್ದಾಳೆ. ನನ್ನ ಹೆಂಡ ತಿಯಾಗಬೇಕಾದವಳು ನನ್ನ ಸೋದರಿ ಯಾಗಿ ಬಂದಿದ್ದಾಳೆ. ಅಯ್ಯೋ ದೇವರೇ ನನಗೆ ಶಕ್ತಿ ಕೊಡು, ಈ ವೇದನೆಯನ್ನು ತಡೆದುಕೊಳ್ಳಲು."

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾನೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕಾಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಶ್ರೀನಿವಾಸ್ ಬ್ರದರ್ಸ್ ಪುತ್ತೂರಲ್ಲಿ ಪ್ಯೂಪುಲರ್ ಸ್ಟೋರ್ಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

READ & ADVERTISE IN NAVAYUGA WEEKLY

REGD. No. B. G. 176
LICENCE No. 31
Licensed to Post without Prepayment

ಇದನ್ನು ಎಲ್ಲರೂ ಚಿಂತಿಸುತ್ತಾರೆ
ವಿದ್ಯಾರ್ಥಿಗಳು ಏಕೆ ತೇರ್ಗಡೆ ಹೊಂದುವುದಿಲ್ಲ?

ರಾಜಧಾನಿಯಲ್ಲಿ ವಿಶ್ವವಿದ್ಯಾಲಯವಿಲ್ಲವೆಂಬ ಕೊರತೆಯಿದ್ದ ಕರ್ನಾಟಕದ ಅಭಾವಸ್ಥಿತಿಯೀಗ ದೂರವಾಯಿತು. ಕೇಂದ್ರ ಶಿಕ್ಷಣ ಸಚಿವ ಶ್ರೀ ಎಂ. ಸಿ. ಛಾಗ್ಲಾ ಅವರು ಬೆಂಗಳೂರು ವಿಶ್ವವಿದ್ಯಾಲಯವನ್ನು ಇದೇ ತಾ. ೧೦ರಂದು ಉದ್ಘಾಟಿಸಿ ರಾಜ್ಯದ ಕೀರ್ತಿಗೊಂದು ಕಳಶವಿಟ್ಟರು. ಇದೀಗ ನಮ್ಮ ರಾಜ್ಯದಲ್ಲಿ ಮೈಸೂರು, ಕರ್ನಾಟಕ ಮತ್ತು ಹೆಬ್ಬಾಳದ ವ್ಯವಸಾಯ ವಿಶ್ವವಿದ್ಯಾಲಯಗಳೊಂದಿಗೆ ಬೆಂಗಳೂರು ಸೇರುವಂತಾಯಿತು. ಈ ಹೊಸ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಸುಮಾರು ೨॥ ಸಾವಿರ ವಿದ್ಯಾರ್ಥಿಗಳಿಂದ ಕೂಡಿದ ೩೭ ಕಾಲೇಜುಗಳು ಸೇರಿಕೊಳ್ಳುವವೆಂದು ತಿಳಿದು ಬಂದಿದೆ. ಈ ಸಂಖ್ಯೆಯು ಮುಂದಿನ ವರ್ಷಗಳಲ್ಲಿ ಹೆಚ್ಚುವುದೂ ಖಂಡಿತವೇ.

ವಿಶ್ವವಿದ್ಯಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಶ್ರೀಗಳಾದ ಛಾಗ್ಲಾ, ಶ್ರೀಮಾಲಿ ಮತ್ತು ನಿಜಲಿಂಗಪ್ಪನವರು ಕೆಲವೊಂದು ವಿಷಯಗಳನ್ನು ಪ್ರಸ್ತಾಪಿಸಿದರು. ಶ್ರೀ ಛಾಗ್ಲಾರವರು ಕೇಂದ್ರ ಶಿಕ್ಷಣ ಸಚಿವರ ಸ್ಥಾನದಿಂದಾಡಿದ ಮಾತುಗಳು ಪ್ರಶಂಸನೀಯವಿವೆ, ದೇಶದ ಎಲ್ಲಾ ಮೂಲೆಗಳಿಂದ ಶಿಕ್ಷಕರನ್ನೂ ವಿದ್ಯಾರ್ಥಿಗಳನ್ನೂ ಆಕರ್ಷಿಸಿ, ತಾಂತ್ರಿಕ, ಮತ್ತು ಸಂಶೋಧನಾ ವಿಭಾಗಗಳಿಗೆ ಅಧಿಕ ಮಹತ್ವವನ್ನು ಈ ವಿಶ್ವವಿದ್ಯಾಲಯ ನೀಡಬೇಕು; ಈ ಸಂಬಂಧದಲ್ಲಿ ಉತ್ತಮ ಖ್ಯಾತಿಯನ್ನಿದು ಹೊಂದಿದರೆ, ಇದನ್ನು ಕೇಂದ್ರ ವಿಶ್ವವಿದ್ಯಾಲಯವನ್ನಾಗಿ ಮಾಡುವ ಬಗ್ಗೆ ಆಲೋಚಿಸಬಹುದು ಎಂದರವರು. ಇದು ಶ್ರೀ ಛಾಗ್ಲಾ ಅವರ ಅಮೂಲ್ಯ ಸಲಹೆಯೂ ಹೌದು; ಕರ್ನಾಟಕದ ರಾಜಕಾರಣಿಗಳ, ಪ್ರತಿಷ್ಠಿತರ ಗೊಂಬೆಯಂತಿರುವ ಇತರ ವಿಶ್ವವಿದ್ಯಾಲಯಗಳ ಪರೋಕ್ಷ ಟೀಕೆಯೂ ಹೌದು; ಇಂದಿನ ಭಾರತದ ಕೊರತೆಗಳನ್ನು ನೀಗಿಸುವಲ್ಲಿ ಈ ಹೊಸ ವಿಶ್ವವಿದ್ಯಾಲಯವು ಮಹತ್ವದ ಪಾತ್ರ ವಹಿಸಬೇಕೆಂಬ ಕಳಕಳಿಯ ಪ್ರಾರ್ಥನೆಯೂ ಹೌದು. ಆದರೆ, ಶ್ರೀ ಛಾಗ್ಲಾರ ಈ ಅಭಿಲಾಷೆಯನ್ನು ಈ ವಿಶ್ವವಿದ್ಯಾಲಯ ಪೂರೈಸಿಕೊಡುವುದೆ? ಇದನ್ನು ಸ್ವತಂತ್ರವಾಗಿ ತಜ್ಞರ ಮೇಲ್ವಿಚಾರಣೆಯಲ್ಲಿಯೇ ನಡೆದು ಬರಲು ಕರ್ನಾಟಕದ ಸರಕಾರವೂ ರಾಜಕಾರಣಿಗಳೂ ಗುತ್ತೇದಾರರೂ ಬಿಡುತ್ತಾರೆಯೆ?

ಹಳೆಯ ಮೈಸೂರಿಗರಲ್ಲಿ ಹೆಚ್ಚಿನವರು ಕರ್ನಾಟಕವೆಂದರೇನೇ ಮುನಿದು ಬೀಳುವವರೆಂಬುದು ಈಗಾಗಲೇ ಒಂದಲ್ಲ ಹಲವು ಬಾರಿ ವ್ಯಕ್ತಪಟ್ಟಿದೆ. ಬಹಳಷ್ಟು ಕಷ್ಟಪಟ್ಟು ಹಸ್ತಪಾದಗಳಿಲ್ಲದ ಕರ್ನಾಟಕವನ್ನಾದರೂ ಪಡೆದೆವೆಂದು ಕನ್ನಡಿಗರು ಸಮಾಧಾನದ ಉಸಿರು ಬಿಡುತ್ತಿರುವಾಗ, ಅದರ ಶಿರಚ್ಛೇದವನ್ನು ಮಾಡಬೇಕೆಂದು ವಾದಿಸುವ ಮಹಾ ಬುದ್ಧಿವಂತರಿದ್ದಾರೆ ಅಲ್ಲಿ. ಇಂತಹ ಸಂಕುಚಿತ ಹಾಗೂ ಅಂಧ ಪ್ರವೃತ್ತಿಯವರ ನಡುವೆ ಯಶಸ್ಸು ತಪ್ಪಿಯಾದರೂ ಬಂದೀತೇ ಎನ್ನುವುದು ಪ್ರಶ್ನಾರ್ಥಕ ಚಿಹ್ನೆಯಲ್ಲಿಯೇ ಕೊನೆಗೊಳ್ಳುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಉತ್ತರ ಪ್ರದೇಶದ ಡಾ| ಶ್ರೀಮಾಲಿಯವರು ಪರೀಕ್ಷೆಗಳಲ್ಲಿ ಅತ್ಯಧಿಕ ವಿದ್ಯಾರ್ಥಿಗಳು ಅನುತ್ತೀರ್ಣರಾಗುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಮಾತ್ರವಲ್ಲ ಅವರ ಹೆತ್ತವರೂ ಕಳವಳಗೊಳ್ಳುವಂತಾಗಿದ್ದಾರೆ ಎಂದಿದ್ದಾರೆ. ಮುಖ್ಯಮಂತ್ರಿ ನಿಜಲಿಂಗಪ್ಪನವರ ಮಕ್ಕಳಿಬ್ಬರೂ ಸಾಕಷ್ಟು ಬುದ್ಧಿವಂತರಾಗಿದ್ದರೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲವಂತೆ! ಅವರ ಮಗಳೊಬ್ಬಳು ಕಣ್ಣೀರ ಕೋಡಿ ಹರಿಸಿದಳಂತೆ. ಇದೇ ಬಗೆಯಲ್ಲಿ ಅದೆಷ್ಟು ವಿದ್ಯಾರ್ಥಿಗಳ ನಯನಗಳಲ್ಲಿ ಭಾಗೀರಥಿ ಜನ್ಮ ತಾಳಿದ್ದಾಳೋ ಹೇಳುವುದು ಕಷ್ಟ. ಈ ರೀತಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುವುದರಿಂದ ಅನಾವ್ಯಯವಾಗುತ್ತಿದೆಯೆಂದೂ ಇದನ್ನು ಹೇಗೆ ತಪ್ಪಿಸಬಹುದೆಂಬುದು ಕ್ಲಿಷ್ಟ ಸಮಸ್ಯೆಯಾಗಿದೆಯೆಂದೂ ರಾಜ್ಯ ಶಿಕ್ಷಣ ಮಂತ್ರಿ ಕಂಠಿಯವರು ಗೋಗರೆಯುತ್ತಾರೆ.

ಈ ಬಗೆಯ ಅನುತ್ತೀರ್ಣತೆಗೆ ಕೆಲವೊಂದು ಕಾರಣಗಳನ್ನು ಕೊಡಲಾಗುತ್ತಿದೆ. ಸೆಕೆಂಡರಿ ಶಿಕ್ಷಣವನ್ನು ಮಾತೃಭಾಷೆಯಲ್ಲಿ ಪಡೆದವರು ವಿಶ್ವವಿದ್ಯಾಲಯ ಶಿಕ್ಷಣವನ್ನು ಇಂಗ್ಲಿಷಿನಲ್ಲಿ ಪಡೆಯ ಬೇಕಾಗುತ್ತದೆ; ಸೆಕೆಂಡರಿ ಶಿಕ್ಷಣದ ಸಾರ ಪಟ್ಟಿಯು ವರ್ಷದಿಂದ ವರ್ಷಕ್ಕೆಂಬಂತೆ ಸರಳವಾಗುತ್ತ ನಡೆಯುತ್ತಿದ್ದರೂ ವಿಶ್ವವಿದ್ಯಾಲಯ ಶಿಕ್ಷಣದ ಪಾಠ್ಯಕ್ರಮವು ಇನ್ನೂ ಹಳೆಯದಾಗಿ ಜಟಿಲವಾಗಿರುವುದರಿಂದ ಹೀಗಾಗುತ್ತದೆ; ವಿದ್ಯಾರ್ಥಿಗಳು ಸ್ವತಂತ್ರ ಭಾರತದ ನಾಗರಿಕರಾಗುವಂತೆ ಪಾಠೇತರ ಚಟುವಟಿಕೆ, ಎನ್ ಸಿ ಸಿ ಮೊದಲಾದುವುಗಳಿಗೆ ವಿಶೇಷ ಗಮನ ಕೊಡಬೇಕಾಗುತ್ತಿರುವುದರಿಂದ ಪಾಠದ ಹೊರೆ ನುಂಗಲಾರದ ತುತ್ತಾಗುತ್ತಿದೆ; ವಿದ್ಯಾರ್ಥಿಗಳಲ್ಲಿ ರಾಜಕಾರಣದ ಅವ್ಯಕ್ತ ಪ್ರಭಾವವು ಬೀಳುತ್ತಿರುವುದರಿಂದ ಅಭ್ಯಾಸದ ಕಡೆಗೆ ಅವರ ಗಮನ ಕಡಿಮೆಯಾಗುತ್ತಿದೆ; ಪೇಟೆಯ ವಿವಿಧ ಆಕರ್ಷಣೆ, ಹೆತ್ತವರಿಂದ ದೂರವಿರುವಿಕೆ—ಇತ್ಯಾದಿಗಳಿಂದ ಅವರ ಪರಿಶ್ರಮದಲ್ಲಿ ಹ್ರಾಸವಾಗುತ್ತಿದೆ; ಸಮರ್ಥ ಶಿಕ್ಷಕರ ಅಭಾವ, ಪರ್ಯಾಪ್ತ ಶಿಕ್ಷಕರ ಕೊರತೆ ಮೊದಲಾದ ಸಮಸ್ಯೆಗಳು ಮತ್ತೊಂದು ವಿಧದಿಂದ ಶಿಕ್ಷಣದ ಮಟ್ಟವನ್ನು ಇಳಿಸುತ್ತಿವೆ— ಈಯೆಲ್ಲಾ ಅಥವಾ ಹಲವು ಕಾರಣಗಳಿಂದ ಅನುತ್ತೀರ್ಣತೆಯ ಪ್ರಮಾಣ ಹೆಚ್ಚಿದೆ ಎನ್ನುತ್ತಾರೆ ಹಲವರು.

ಇವುಗಳನ್ನು ನಾವು ವಿವೇಚಿಸುವುದಾದರೆ, ಇವನ್ನು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ. ಆದರೂ ಇವುಗಳಲ್ಲಿ ಕೆಲವೊಂದರ ಬಗ್ಗೆ ನಾವು ಅಸಹಾಯಕರೇ ಆಗ ಬೇಕಾಗಿದೆ. ಹಾಗಿದ್ದರೂ ವಿಶ್ವವಿದ್ಯಾಲಯದ ಅಧಿಕಾರಿಗಳೂ ಸರಕಾರವೂ ಈ ದಿಸೆಯಲ್ಲಿ ಕೆಲವೊಂದು ಸುಧಾರಣೆಗಳನ್ನು ಮಾಡಬಹುದು. ಅನುತ್ತೀರ್ಣತೆಯ ದಾಮಾಶಯವು ಕೇವಲ ವಿಶ್ವವಿದ್ಯಾಲಯದ, ಪರೀಕ್ಷೆಗಳಲ್ಲಿ ಮಾತ್ರ ಇಳಿದಿರುವುದಲ್ಲ, ಸೆಕೆಂಡರಿ ಮತ್ತು ಪ್ರೈಮರಿ ಮಟ್ಟದಲ್ಲಿಯೂ ಇಳಿದಿದೆ. ಇದು ಖಾಸಗಿ ಶಾಲೆ-ಕಾಲೇಜುಗಳಿಗಿಂತಲೂ ಸರಕಾರಿ ಆಡಳಿತೆಗೆ ಒಳಪಟ್ಟ ಸಂಸ್ಥೆಗಳಲ್ಲಿ ಮತ್ತೂ ಹೆಚ್ಚು. ಶಿಕ್ಷಣ ಮಂತ್ರಿ ಕಂಠಿಯವರೇ ಹಿಂದೊಮ್ಮೆ ಹೇಳಿರುವಂತೆ ಖಾಸಗಿ ಶಿಕ್ಷಣಾಲಯಗಳೇ ಹೆಚ್ಚಿರುವ ಕರಾವಳಿಯ ಜಿಲ್ಲೆಗಳಲ್ಲಿ ವಿದ್ಯಾರ್ಥಿ—ಉತ್ತೀರ್ಣತೆಯ ಪ್ರಮಾಣ ಹೆಚ್ಚಿದೆ. ಹಾಗಿರುವಾಗ, ಖಾಸಗಿ ಆಡಳಿತೆಯ ಶಿಕ್ಷಕರು—ಅವರಲ್ಲಿ ಕಲಿಯುವ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದಬಲ್ಲರಾದರೆ, ಸರಕಾರಿ ಆಡಳಿತೆಯಲ್ಲಿ ಅದು ಅಸಾಧ್ಯವಾಗಬೇಕಾದರೆ, ಅಲ್ಲಿಯೇ ದೋಷವಿರಬೇಕಾದುದು ಅನಿವಾರ್ಯ. ಇದು ಎಷ್ಟು ಬೇಗ ಸುಧಾರಿಸುವುದು ಸಾಧ್ಯವಾಯಿತೋ ಅಷ್ಟು ತ್ವರಿತಗತಿಯಲ್ಲಿ ತೇರ್ಗಡೆಯ ಪ್ರಮಾಣ ಏರುವುದು ಸಾಧ್ಯವೆನಿಸಲಾರದೆ?

ಲಂಚ-ವಶೀಲ-ರುಸುವತ್ತುಗಳೂ ವಿದ್ಯಾರ್ಥಿಯ ಉತ್ತೀರ್ಣತೆ- ಅನುತ್ತೀರ್ಣತೆಯ ಭವಿಷ್ಯ ಬರೆಯುವಲ್ಲಿ ಯಶಸ್ವಿಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಇದಕ್ಕಿಂತ ದೊಡ್ಡ ದೌರ್ಭಾಗ್ಯ ಮತ್ತಾವುದಿದೆ? 'ಪರೀಕ್ಷಾಮಾಯ' ದ ಈ ದುರ್ಬಲತೆಯೂ ವಿದ್ಯಾರ್ಥಿಗಳಲ್ಲಿ ಅಧ್ಯಯನದಲ್ಲಿ ಅಶ್ರದ್ಧೆಯನ್ನು ಹುಟ್ಟಿಸುವಲ್ಲಿ ಪ್ರಭಾವ ಬೀರಿದ್ದರೆ ಆಶ್ಚರ್ಯವಿಲ್ಲ.

ಆದರೆ, ಇಲ್ಲಿ ಒಂದು ಮಾತನ್ನು ನಾವು ಅವಶ್ಯ ಗಮನಿಸಬೇಕು. ಇಂದಿನ ವಿದ್ಯಾರ್ಥಿಗಳಲ್ಲಿ ಮಹತ್ವಾಕಾಂಕ್ಷೆಯ ಭಾವನೆಯು ದೂರವಾಗುತ್ತ ಬರುತ್ತಿದೆ. ಉತ್ತಮ ರೀತಿಯಲ್ಲಿ ಅಧ್ಯಯನ ನಡೆಸಬೇಕು, ಒಳ್ಳೆಯ ರೀತಿಯಲ್ಲಿ ಪರೀಕ್ಷೆಗಳಿಗೆ ಅಭ್ಯಾಸ ನಡೆಸಿ ಉತ್ತಮ ಗುಣಗಳನ್ನು ಪಡೆಯಬೇಕು—ಎಂಬಿತ್ಯಾದಿಯಾದ ಯಾವ ಉತ್ಕಟೇಚ್ಛೆಯೂ ಅವರಲ್ಲಿರುವಂತೆ ಭಾಸವಾಗುವುದಿಲ್ಲ. ಹೇಗಾದರೂ ಮುಂದಿನ ವರ್ಷದ ಅಭ್ಯಾಸಕ್ಕೆ ಪರವಾನಿಗೆ ಸಿಕ್ಕರೆ ಸಾಕು ಎಂಬ ಅಲ್ಪ ತೃಪ್ತ ಭಾವನೆಯೇ ಹೆಚ್ಚಿನವರಲ್ಲಿ ಮನೆ ಮಾಡಿದೆ. ಇದಕ್ಕೇನು ಕಾರಣ? ವಿದ್ಯಾರ್ಥಿಯು ಬಯಸುವಂತೆ ಆತನ ಭವಿಷ್ಯವನ್ನು ರೂಪಿಸಲು ಸೂಕ್ತ ಅವಕಾಶಗಳು ಆತನಿಗೆ ದೊರೆಯುವುದೂ ಇದಕ್ಕೊಂದು ಕಾರಣವಾಗಿರಬಹುದೆ? ಕಾಲೇಜುಗಳಲ್ಲಿ ಮುಖ್ಯವಾಗಿ ವೈಜ್ಞಾನಿಕ ವೃತ್ತಿಪರ ಮತ್ತು ಸ್ನಾತಕೋತ್ತರ ಶಿಕ್ಷಣ ಪಡೆಯಲು ವಿದ್ಯಾರ್ಥಿಯು ಪಡಬೇಕಾದ ಬವಣೆಯೆಷ್ಟು!

ಇಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಯು ಆಸೆಗಳಿಗೆ ಬಿಸಿನೀರೆರಚುವ ಸಂಭವವೇ ಹೆಚ್ಚು. ಇದರಿಂದಾಗಿಯೇ ಅಧ್ಯಯನದಲ್ಲಿ ಅನಾಸಕ್ತಿ ಹುಟ್ಟಿ ಗಡಿಯಲ್ಲಿರುವ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ಸಂಭವ ಹೆಚ್ಚು.

ಜನತೆಯು ನೂರುಗಳ ಹಿನ್ನೆಲೆಯಲ್ಲಿ ಈ ವಾಸ್ತವಿಕಾಂಶಗಳನ್ನು ಪರಿಶೀಲಿಸಿ ಈ ಅನುತ್ತೀರ್ಣತೆ ಮತ್ತು ಅನಾವ್ಯಯದ–ಕಳಪೆಯ –ಪ್ರಶ್ನೆಗೆ ಸೂಕ್ತ ಉತ್ತರ ಅರಸಬೇಕು. ಶಿಕ್ಷಣದ ಯಶಸ್ಸು ಎಂಬುದು ವಿದ್ಯಾರ್ಥಿಗಳು, ಪಾಲಕರು ಮತ್ತು ಶಿಕ್ಷಕರು, ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗ, ಸರಕಾರ ಅಥವಾ ವಿಶ್ವವಿದ್ಯಾಲಯಗಳ ಪ್ರಾಮಾಣಿಕ ಮತ್ತು ಸದುದ್ದೇಶ ಸಹಿತ ಪ್ರಯತ್ನವನ್ನೇ ಹೊಂದಿಕೊಂಡಿದೆಯೆಂಬುದನ್ನು ಮರೆಯಬಾರದು. ಶ್ರೀ ಛಾಗ್ಲಾರು ಪ್ರಕಾಶಪಡಿಸಿದ ಅಭಿಪ್ರಾಯವು ಇದನ್ನೇ ಪ್ರತಿಬಿಂಬಿಸುವುದೆನ್ನ ಬಹುದಲ್ಲವೆ?

—ಗೋರಾ.

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ ಇಂಗ್ಲಿಷ್ ಪತ್ರವ್ಯವಹಾರ ಮಾಡಲು ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲ್ಲಿ ಪತ್ರಲೇಖನ

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.

ಬೆಲೆ: ರೂ. 1—25.

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮಾಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.

ರೂ.1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾದಾರರಲ್ಲಿ ವಿನಂತಿ

'ನವಯುಗ'ದ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್, ನವಯುಗ.

... K. H Shetty at the Navayuga Press, Udipi, S. India

ನವಯುಗ

VOL. 43 No. 47 — ಸಂಪುಟ ೪೩ ಸಂಚಿಕೆ ೪೭

NAVAYUGA—Nationalist Weekly ‡‡ ಉಡುಪಿ 23-7-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ನಮ್ಮ - ನಮ್ಮವರು

ಕಾಮರಾಜ ನಾಡಾರ್

ಸದ್ದುಗದ್ದಲವಿಲ್ಲದೇ ಕೇವಲ ಕಾರ್ಯಸಾಧನೆಯಿಂದಲೇ ಪ್ರಸಿದ್ಧಿಗೆ ಬರುವ ವ್ಯಕ್ತಿಗಳು ನಮ್ಮಲ್ಲಿ ವಿರಳ. ಅಂತಹ ಬೆರಳೆಣಿಕೆಯ ವ್ಯಕ್ತಿಗಳಲ್ಲಿ ಶ್ರೀ ಕಾಮರಾಜರು ಅಗ್ರಗಣ್ಯರು. ವಿರೂಧ ನಗರದಲ್ಲಿ ಜನಿಸಿದ ಈ ಜನತೆಯ ಸೇವಕ, ತಮಿಳು ನಾಡಿನಲ್ಲಿ ಮನೆಮಾತಾಗಿದ್ದಾರೆ. ಇಂದು ಅಖಿಲ ಭಾರತ ಕಾಂಗ್ರೆಸಿನ ಅಧ್ಯಕ್ಷರಾಗಿರುವ ಕಾಮರಾಜ ನಾಡಾರರು, ದೇಶದಲ್ಲಿ ಮಾತ್ರವಲ್ಲ, ವಿದೇಶದಲ್ಲಿಯೂ ಖ್ಯಾತವೆನಿಸಿದ್ದಾರೆ.

ಉಚ್ಚ ಶಿಕ್ಷಣ ಪಡೆಯದ ಈ ಬ್ರಹ್ಮಚಾರಿ, ಈ ಬಗೆಯ ಪ್ರಸಿದ್ಧಿಗೆ ಬರುವರೆಂದು ಯಾರೂ ಊಹಿಸಿದವರಲ್ಲ. ಅವರ ನಿಷ್ಠಾವಂತ ಸೇವೆ ಜನತೆಯ ಮೇಲೆ ಅವರಿಗಿರುವ ಮಮತೆ, ಜನರ ಸಂಕಷ್ಟಗಳ ಕುರಿತು ಅವರು ತಾಳಿರುವ ಅನುಕಂಪ, ಉಪದೇಶಕ್ಕಿಂತ ಅನುಷ್ಠಾನಕ್ಕೆ ಅವರು ಇತ್ತ ಹೆಚ್ಚಿನ ಮಹತ್ವ ಇವುಗಳೇ ಇಂದು ಅವರನ್ನು ಒಂದು ಆಕರ್ಷಣೆಯ ಕೇಂದ್ರವನ್ನಾಗಿ ಮಾಡಿವೆ. ಕಳೆದ ೪೦—೪೫ ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದು ದೇಶಸೇವೆ ಹಾಗೂ ಸಂಸ್ಥೆಯ ಅಭಿವೃದ್ಧಿ ಸಾಧಿಸಿದ ಕಾಮರಾಜರನ್ನು ಹಿಂದೀ ಜನರು ಕಾಮ್-ಕಾ-ರಾಜ ಅಂದರೆ 'ಕರ್ಮ ಯೋಗಿ' ಎಂದು ಕರೆಯುತ್ತಾರೆ. ಇಂಗ್ಲಿಷಿನಲ್ಲಿ ಇವರ ಹೆಸರಿನ ಅರ್ಥ ಕಾಮ್ (calm) ರಾಜ್ ಅಂದರೆ 'ಮಿತ ಭಾಷಿ' ಎಂದಾಗುತ್ತದೆ. ಇವರ ಹೆಸರು ಇವರಿಗೆ ಅನ್ವರ್ಥನಾಮವಾಗಿದೆ.

ಕಾಂಗ್ರೆಸಿನಲ್ಲಿ ಪ್ರತಿಭಾವಂತರು, ಸಂಘಟನಾಚತುರರು ಹಾಗೂ ನಾಯಕರೆನಿಸಿಕೊಂಡವರು ಅಧಿಕಾರ ಹಾಗೂ ಪಟ್ಟಗಳಿಗಾಗಿ ಹಾರೈಸಿ, ಸಂಸ್ಥೆಯ ಸಂಘಟನೆಯು ಕುಂದಿದಾಗ ಕಾಮರಾಜರು ಹೊಸದೊಂದು ಯೋಜನೆಯನ್ನು ರೂಪಿಸಿ, ಅನುಷ್ಠಾನಕ್ಕೆ ಬರುವಂತೆ ಮಾಡಿದರು. ಅಧಿಕಾರ ಸ್ಥಾನದಲ್ಲಿರುವ ಹಿರಿಯ ಕಾಂಗ್ರೆಸಿಗರು ಪಕ್ಷದ ಸಂಘಟನೆಗೆ ತಮ್ಮ ಅಧಿಕಾರ ತ್ಯಜಿಸಿ ಹೊರಗೆ ಬರಬೇಕೆಂಬ ಅವರ ಈ ಯೋಜನೆ 'ಕಾಮರಾಜ ಯೋಜನೆ'ಯೆಂದು ಕರೆಯಲ್ಪಟ್ಟು, ದೊಡ್ಡ ಕ್ರಾಂತಿಯನ್ನು ಉಂಟು ಮಾಡಿತು. ತಾನೇ ಪ್ರಥಮವಾಗಿ ರಾಜಿ ಇತ್ತು ಅಧಿಕಾರದಿಂದ ಹೊರಗೆ ಬಂದ ಕಾಮರಾಜರು ಇತರರಿಗೆ ಮಾದರಿಯೆನಿಸಿದರು.

ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ಕಾಮರಾಜರು ತೋರಿದ ಜಾಣ್ಮೆ ಹಾಗೂ ಅವರ ಉಪಯುಕ್ತ ಸಲಹೆಗಳು ೧೯೬೩ರಲ್ಲಿ ಅವರಿಗೆ ಕಾಂಗ್ರೆಸ್ ಅಧ್ಯಕ್ಷ ಪಟ್ಟವನ್ನು ತಂದು ಕೊಟ್ಟವು. ಕಾಂಗ್ರೆಸ್ ಅಧ್ಯಕ್ಷರಾಗಿ ಕಾಮರಾಜರು ಹವಾಡಗಳನ್ನೇ ಮಾಡಿ ತೀರಿಸಿದರು. ನಮ್ಮ ಪ್ರಧಾನ ಮಂತ್ರಿ ನೆಹರೂಗಳು ಕಳೆದ ಮೇಯಲ್ಲಿ ನಿಧಾನರಾದಾಗ, ಉತ್ತರಾಧಿಕಾರಿಯ ಆಯ್ಕೆಯ ಪ್ರಶ್ನೆ ದೊಡ್ಡ ಪೆಮ್ಮರವಾಗಿ ನಿಂತಿತು. ಅಧಿಕಾರ ಹಾಗೂ ಸ್ಥಾನಗಳಿಗಾಗಿ ಕಾಂಗ್ರೆಸಿಗರು ಕಚ್ಚಾಡುವರು. ದೇಶದ ಭವಿಷ್ಯ ಮಣ್ಣುಪಾಲಾಗುವುದು ಎಂದು ಹಲವರು ಊಹಿಸಿದ್ದರು. ನಮ್ಮ ದೇಶಕ್ಕೆ ಇನ್ನು ದೇವರೇ ಗತಿ ಎಂದುಉದ್ಗಾರ ತೆಗೆದವರೂ ಇದ್ದರು. ಆದರೆ ಕಾಮರಾಜರು ಈ ಎಲ್ಲಾ ಭಯ ಹಾಗೂ ಸಂದೇಹಗಳನ್ನು ಹುಸಿಯಾಗಿಸಿದರು. ದೇಶದ ನಾಯಕನ ಆಯ್ಕೆ ಒಂಮತದಿಂದ ಆಗುವಂತೆ ಮಾಡಿದ ಅವರ ಜಾಣ ಚಕ್ಯತೆಯನ್ನು ಎಲ್ಲರೂ ಮೆಚ್ಚಿದರು. ಇಂದು ಅವರ ಸಂಘಟನಾ ಚಾತುರ್ಯಕ್ಕೆ ಒಂದು ಉತ್ತಮ ಉದಾಹರಣೆ.

ಕಳೆದ ತಾ ೧೫ಕ್ಕೆ ಕಾಮರಾಜರಿಗೆ ೬೧ ವರ್ಷ ತುಂಬಿತು. ಭಾರತದ ಭವಿಷ್ಯದ ಸೂತ್ರಧಾರರಲ್ಲೊಬ್ಬರಾದ ಕಾಮರಾಜ ಜನ್ಮದಿನವನ್ನು ಮದ್ರಾಸಿನಲ್ಲಿ ನಾಲ್ಕು ದಿನಗಳ ಉತ್ಸವ ಏರ್ಪಡಿಸಿ ಆಚರಿಸಲಾಯಿತು. ತಮಿಳು ನಾಡಿನ ಜನತೆ ಮಾತ್ರವಲ್ಲ ಅಖಿಲ ಭಾರತದ ಜನತೆಯು ಅವರಿಗೆ ದೀರ್ಘಾಯುರಾರೋಗ್ಯವನ್ನು ಬಯಸಿದರು. ದೇಶವು ಈಗ ಸಂದಿಗ್ಧ ಪರಿಸ್ಥಿತಿಯಲ್ಲಿದೆ. ಈ ಪರಿಸ್ಥಿತಿಯಲ್ಲಿ ನಮ್ಮ ರಾಷ್ಟ್ರಕ್ಕೆ ಕಾಮರಾಜರ ಸೇವೆ ಎಂದಿಗಿಂತ ಹೆಚ್ಚಾಗಿದೆ. ಅವರು ನೂರ್ಕಾಲ ಬಾಳಬೇಕು ಎಂದು ಹಾರೈಸೋಣ.



ಸ್ವರಣ ಸಿಂಘ್

ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಮೊತ್ತಮೊದಲ ಬಾರಿಗೆ ವಿದೇಶ ಮಂತ್ರಿಯೊಬ್ಬರನ್ನು ಕಳೆದ ವಾರ ನೇಮಿಸಲಾಗಿದೆ. ಇದು ಅತಿ ಆಶ್ಚರ್ಯಕರವಾದ ಸುದ್ದಿ. ಪ್ರಧಾನ ಮಂತ್ರಿ ನೆಹರೂರವರು, ಮೊದಲಿನಿಂದಲೂ ವಿದೇಶ ಮಂತ್ರಿ ಖಾತೆಯನ್ನು ತನ್ನ ವಶವೇ ಇಟ್ಟುಕೊಂಡಿದ್ದು ಆ ಶಾಖೆಗೊಂದು ಕಳೆಯನ್ನು ತಂದು ಕೊಟ್ಟಿದ್ದರು. ಅವರ ನಿಧನದ ಬಳಿಕ ಶ್ರೀ ಶಾಸ್ತ್ರಿಯವರು ಪ್ರಧಾನ ಮಂತ್ರಿಗಳಾದಾಗಲೂ, ವಿದೇಶ ಖಾತೆ ಪ್ರಧಾನ ಮಂತ್ರಿಗಳ ವಶವೇ ಉಳಿಯಿತು. ಈಗ ಮಾತ್ರ ಶಾಸ್ತ್ರಿಯವರು ವಿದೇಶ ಮಂತ್ರಿಯೊಬ್ಬರನ್ನು ನೇಮಿಸಿದ್ದಾರೆ. ಭಾರತದ ಪ್ರಪ್ರಥಮ ವಿದೇಶ ಮಂತ್ರಿಯಾಗುವ ಭಾಗ್ಯ ಶ್ರೀ ಸರ್ದಾರ್ ಸ್ವರಣ ಸಿಂಗರಿಗೆ ಲಭಿಸಿದೆ. ಉದ್ಯಮ ಖಾತೆಯ ಮಂತ್ರಿಗಳಾಗಿದ್ದ ಅವರನ್ನು ಶಾಸ್ತ್ರಿಗಳು ವಿದೇಶ ಮಂತ್ರಿಗಳಾಗಿ ನೇಮಿಸಿದ್ದಾರೆ.

ಈ ಆಯ್ಕೆ ಅನಿರೀಕ್ಷಿತವೂ ಹೌದು, ಆಶ್ಚರ್ಯಕಾರಿಯೂ ಹೌದು. ಶಾಸ್ತ್ರಿಗಳು ಇತ್ತೀಚೆಗೆ ಕಾಯಿಲೆ ಬಿದ್ದಾಗ, ಮಿತಿಮೀರಿದ ಕಾರ್ಯದ ಒತ್ತಡವೇ, ಇದಕ್ಕೆ ಕಾರಣ ಎಂದು ಎಲ್ಲರೂ ಅಭಿಪ್ರಾಯ ಪಟ್ಟರು. ಹೆಚ್ಚಿನ ಕಾರ್ಯ ಮಾಡುವುದು ಇನ್ನು ಮುಂದಕ್ಕೂ ಆರೋಗ್ಯ ದೃಷ್ಟಿಯಿಂದ ಹಾನಿಕರ ಎಂದು ಅವರ ವೈದ್ಯರು ಸಲಹೆಯನ್ನು ಇತ್ತಿದ್ದರು. ಇದರ ದೆಸೆಯಿಂದ ಶಾಸ್ತ್ರಿಯವರು ತಮ್ಮ ಕಾರ್ಯದ ಸ್ವಲ್ಪ ಭಾಗವನ್ನು ಇನ್ನೊಬ್ಬರಿಗೆ ಒಪ್ಪಿಸಿಕೊಡುವುದು ಅಗತ್ಯವಾಯಿತು. ಉಪ ಪ್ರಧಾನಿಯೊಬ್ಬನ ನೇಮಕದ ಪ್ರಶ್ನೆ ಈ ಸಂದರ್ಭ ಏಳಲಿಲ್ಲ. ಬದಲು ಎಲ್ಲರೂ ವಿದೇಶ ಖಾತೆ ಇನ್ನೊಬ್ಬರ ಕೈಗೆ ಕೊಡುವುದೆಂದು ನಿರೀಕ್ಷಿಸಿದರು. ಶ್ರೀಮತಿ ಇಂದಿರಾಗಾಂಧಿಯವರು ವಿದೇಶ ವ್ಯವಹಾರ ಖಾತೆಯ ಮಂತ್ರಿಗಳಾಗುವರೆಂಬ ಸುದ್ದಿಯೂ ಇತ್ತು. ಆದರೆ ಈಗ ಶಾಸ್ತ್ರಿಯವರು ಸ್ವರಣ ಸಿಂಗರನ್ನು ವಿದೇಶ ವ್ಯವಹಾರ ಮಂತ್ರಿಗಳಾಗಿ ನೇಮಿಸಿ, ಊಹಾಪೋಹಗಳನ್ನು ಹುಸಿಯಾಗಿಸಿದ್ದಾರೆ.

ಸ್ವರಣ ಸಿಂಗರು ಭಾರತಕ್ಕೆ ಪಂಜಾಬದ ಕೊಡುಗೆ. ಕೇಂದ್ರ ಸರಕಾರದ ಮಂತ್ರಿಗಳಾಗಿ ಅವರು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಆಹಾರ ಮಂತ್ರಿಗಳಾಗಿ, ರೇಲ್ವೆ ಮಂತ್ರಿಗಳಾಗಿ ಅವರು ಸಮರ್ಥ ರೀತಿಯಲ್ಲಿ ಆಡಳಿತ ನಡೆಸಿದ್ದಾರೆ. ಇವೆಲ್ಲವುಗಳಿಗಿಂತ ಮಿಗಿಲಾಗಿ ಸ್ವರಣ ಸಿಂಗರ ಸಂಧಾನ ಚತುರತೆ ಹಾಗೂ ಸಂಘಟನಾ ಕುಶಲತೆಗಳು, ಅವರಿಗೆ ಕೀರ್ತಿ ತಂದು ಕೊಟ್ಟಿವೆ. ೧೯೬೩ರ ಆದಿಯಲ್ಲಿ ಪಾಕಿಸ್ಥಾನ ಹಾಗೂ ಭಾರತಗಳೊಳಗೆ ಕಾಶ್ಮೀರ ಹಾಗೂ ಇತರ ಸಮಸ್ಯೆಗಳೊಳಗೆ ಮಾತುಕತೆ ಆರಂಭವಾದಾಗ, ಪ್ರಧಾನಿ ನೆಹರೂರವರು ಭಾರತೀಯ ನಿಯೋಗದ ನಾಯಕತ್ವವನ್ನು ಸ್ವರಣ ಸಿಂಗರಿಗೆ ವಹಿಸಿ ಕೊಟ್ಟರು. ಕಳೆದ ಎಪ್ರೀಲ್‌ನಲ್ಲಿ ಜರಗಿದ ಆಫ್ರಿಕಾ ಏಸ್ಯಾ ರಾಷ್ಟ್ರಗಳ ಸಮ್ಮೇಳನದ ಪೂರ್ವ ತಯಾರಿಯ ಸಭೆ ಜರಗಿದಾಗ, ಸ್ವರಣ ಸಿಂಗರು ಭಾರತೀಯ ನಿಯೋಗದ ನಾಯಕರಾಗಿ ಭಾರತಕ್ಕೆ ಕೀರ್ತಿತರುವ ರೀತಿಯಲ್ಲಿ ಕಾರ್ಯ ನಿರ್ವಹಿಸಿದರು. ಪಾಕಿಸ್ತಾನ ನಡೆಸಿದ ನಾಲ್ಕು ಸುತ್ತಿನ ಮಾತುಕತೆಯಲ್ಲೂ ಸ್ವರಣಸಿಂಗರು ಭಾರತವನ್ನು ಯಶಸ್ವಿ ರೀತಿಯಲ್ಲಿ ಪ್ರತಿನಿಧಿಸಿದರು.

ಇತ್ತೀಚೆಗೆ ಪಂಜಾಬಿನಲ್ಲಿ ಕೈರೋನರ ರಾಜೀನಾಮೆಯಿಂದ ಹೊಸ ನಾಯಕನ ಆಯ್ಕೆ ಆಗ ಬೇಕಾದಾಗಲೂ, ಅಖಿಲ ಭಾರತ ಕಾಂಗ್ರೆಸ್, ಶ್ರೀ ಸ್ವರಣ ಸಿಂಗರನ್ನೇ ಈ ಕುರಿತಾದ ಸಂಧಾನಕ್ಕೆ ಕಳುಹಿಸಿತು. ಶ್ರೀ ಸಿಂಗರು ಯಶಸ್ವಿ ರೀತಿಯಲ್ಲಿ ವ್ಯವಹರಿಸಿ, ಪಂಜಾಬಿನ ಶಾಸಕರು ಕಾಂಗ್ರೆಸ್ ಅಧ್ಯಕ್ಷ ಹಾಗೂ ಪ್ರಧಾನಿಯವರ ಆಯ್ಕೆಗೆ ಒಪ್ಪುವಂತೆ ಮಾಡಿದರು. ಈ ರೀತಿ ಅವರು ಕಾರ್ಯ ನಿರ್ವಹಣೆಯಲ್ಲಿ, ನಿಸ್ಸೀಮರೆನಿಸಿದ್ದಾರೆ. ಭಾರತ ಹಾಗೂ ಪಾಕಿಸ್ತಾನಗಳ ನಡುವಣ ಸಮಸ್ಯೆಯ ಕುರಿತು ಅವರಷ್ಟು ಚೆನ್ನಾಗಿಬಲ್ಲವರು ಇನ್ನೊಬ್ಬರಿರಲಾರರು.

ವಿದೇಶ ವ್ಯವಹಾರ ಖಾತೆಯ ಮಂತ್ರಿಗಳಾದ ಸ್ವರಣಸಿಂಗರಿಂದ ಭಾರತವು ಬ

(೧೨ನೇ ಪುಟ ನೋಡಿರಿ)

ನಾರದ ಕತೆ

ಅವಳೇ ಇವಳು

ಲೇಖಕರು:
ಶ್ರೀ ಪಿ. ರಾಮಕೃಷ್ಣ ಆಚಾರ್, ಕುಂತೂರು.

"ಹ ಹ್ಹ ಹ್ಹಾ very good dash" ಹುಡುಗರೆಲ್ಲಾ ಕೂಗಿದರು.

"ಕಣ್ಣು ಕಾಣಿಸದೇ?" ಸಿಡಿದು ಕೇಳಿದಳು ರತ್ನ.

"Excuse me. ಗೊತ್ತಾಗದೆ ತಾಗಿಬಿಟ್ಟೆ." ನಮ್ರತೆಯಿಂದ ಉತ್ತರಿಸಿದ ಗೋಪಾಲ.

"ಹ ಹ್ಹ ಹ್ಹಾ" ಮತ್ತೆ ಹುಡುಗರ ಅಟ್ಟಹಾಸದ ನಗೆ. ದುರ ದುರನೆ ನೋಡಿ ಮೆಟ್ಟಲಿಂದಿಳಿದು ಸಾಗಿದಳು ರತ್ನ. ನಾಚಿಕೆಯಿಂದ ಕುಗ್ಗಿ ಮೆಲ್ಲನೆ ನಡೆದನು ಗೋಪಾಲ.

ಮತ್ತೂ ಅದೇ ಆಲೋಚನೆ.

"ಹ ಹ್ಹ ಹ್ಹಾ" ಹುಡುಗರ ಅಟ್ಟಹಾಸದ ನಗು ಕಿವಿಯಲ್ಲಿ ಗುಂಯ್ ಗುಡುತ್ತಿತ್ತು.

"ನಕ್ಕು ನನ್ನನ್ನೆಲ್ಲ ಹಾಸ್ಯ ಮಾಡಿದರೇ. ನಗಲಿ.ನಗುವುದು ಸಹಜದ ಧರ್ಮ" ಅಂದುಕೊಂಡನು ತನ್ನಲ್ಲೇ.

"ಕಣ್ಣು ಕಾಣಿಸದೇ?" ಅವಳ ಚಿತ್ರಪಟಬಂತು ಆಕ್ಷಿ ಪಟಲದಮುರು.

"ಅವಳೇ ಹೋಗಿ ಪ್ರಿನ್ಸಿಪಾಲರಿಗೆ ದೂರಿತ್ತರೆ?"

"ಅಲ್ಲ. ಮತ್ತೂ ರೇಗಿ ಕೊಂಡೇ ಹೋದಳಲ್ಲಾ"

"ಅದೂ ಸ್ತ್ರೀಯರ ಸಹಜದ ಧರ್ಮ"

ಮತ್ತೂ ಆಲೋಚಿಸುತ್ತಾ ಮುಂದೆ ನಡೆದ. ಆವನ ಹಣೆ ಉಬ್ಬಿ ಬಂದಿತ್ತು.

"For Every action there is a reaction ನ್ಯೂಟನ್ಸ್ ಥರ್ಡ್ ಲಾ ಈ ಲಾಪ್ರಕಾರ ಅವಳ ಹಣೆಯೂ ಇಷ್ಟು ಉಬ್ಬಿರಬೇಕಲ್ಲವೇ?

"ಎಂತಹ ಅಜಾಗ್ರತೆ ಮಾಡಿದೆ" ಕನಿಕರಿಸಿದ ಗೋಪಾಲ.

"ಕಣ್ಣು ಕಾಣಿಸದೇ?....ನನಗೆ ಸರಿಯಾಗಿ ಕಾಣುತ್ತದೆ. ಆದರೆ ಕಣ್ಣು ಕಾಣದ ಕುರುಡರೂ ಅನೇಕರಿದ್ದಾರೆ" ಮನಸ್ಸು ವಕ್ರವಾಗಿ ಚಲಿಸುತ್ತಿದ್ದಂತೆ ಕಾಲು ನೇರವಾಗಿ ಚಲಿಸುತ್ತಿತ್ತು

"ಲೀ ಮಿಸ್ಟರ್ ಗೋಪಾಲ್, ನಿಲ್ಲಿ" ಹಿಂದಿನಿಂದ ಹೆಣ್ಣು ಸ್ವರವೊಂದು ಕೂಗಿತು

ಮತ್ತೂ ಅವಳದೇ ಧ್ವನಿ. ಆದರೆ ಆಗಿನಂತಿಲ್ಲ ಈಗ. ಎಷ್ಟು ಬೇಗನೇ ಬದಲಾವಣೆ. ಎಲ್ಲವೂ ವಿಚಿತ್ರ!

"ಮಿಸ್ ರತ್ನ ನಾನು ಗೊತ್ತಾಗದೇ......"

"ನಾನು ಆಗ ಕೋಪದಲ್ಲಿ ಏನೇನೋ ಅಂದುಬಿಟ್ಟೆ. ನಿಮ್ಮ ತಪ್ಪಲ್ಲ. Excuse me" ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತಿದಾಗ ಆವಳ ಹಣೆ ಅಡಿಕೆ ಗಾತ್ರಕ್ಕೆ ಉಬ್ಬಿದುದನ್ನು ನೋಡಿದ ಗೋಪಾಲ.

"ಅದಕ್ಕೆ ನೀವು ಬೇಸರಪಡಬೇಕಾಗಿಲ್ಲ,

"ನಿಮ್ಮ ಸ್ಟಡಿ ಎಲ್ಲಿವರೆಗಾಯಿತು? ಪರೀಕ್ಷೆಗೆ ರೆಡಿಯಾಗಿದ್ದೀರಾ?"

"ನೋ, ನೋ ಮಿಸ್ಟರ್ ಗೋಪಾಲ್. ನಿಮ್ಮ ಸ್ಟಡೀ ನೋಡಿದಾಗ ನೀವು ಈ ಸಲ ರ್‍ಯಾಂಕ್ ಖಂಡಿತ ಹೊಡೆಯುತ್ತೀರಿ ಎಂದು ಕಾಣುತ್ತದೆ"

"All your kind wishes"

ಅಷ್ಟರಲ್ಲೇ ಕೈಕಂಬ ಎದುರಾಯಿತು.

"ನಾನು ಈ ಮಾರ್ಗದಲ್ಲಿ ಹೋಗಲೇ" ಕೇಳಿದ ಗೋಪಾಲ.

"ಓಹೋ, ನಿಮ್ಮ ರೂಮ್ ಎಲ್ಲಿ?"

"ನನ್ನ ರೂಮು ನೆಹರೂ ಪಾರ್ಕಿನ ಹತ್ತಿರ. ಬಿಡುವಿದ್ದಾಗ ಏನಾದರೂ ವಿಷಯ ಕೇಳಲು ಬರಬಹುದು."

"ಆಯಿತು, ಗುಡ್ ಇವ್ನಿಂಗ್"

"ಗುಡ್ ಇವ್ನಿಂಗ್"

೦ ೦ ೦

'ಅಂದು ಆದಿತ್ಯವಾರ, ರತ್ನ ತನ್ನ ಮನೆಗೆಲಸವನ್ನು ಅವಸರವಸರವಾಗಿ ತೀರಿಸಿ ತನ್ನನ್ನು ತಾನೇ ಶೃಂಗರಿಸಿಕೊಂಡಳು.

ಅಮ್ಮ ಕೆಲಸವನ್ನೆಲ್ಲ ಬೇಗನೇ ತೀರಿಸಿ ಈ ದಿನ ರಿವಿಜನ್‌ಗೆ ಆರಂಭಿಸಿದ್ದೇನೆ ನಾನು "

"ನೀನು ಈ ಸಲ ಖಂಡಿತವಾಗಿಯೂ ರ್‍ಯಾಂಕ್ ಹೊಡೆಯುತ್ತಿ ರತ್ನ" ಮನೋಭಿಲಾಷೆಯನ್ನು ಹಾಸ್ಯದೊಂದಿಗೆ ಸೂಚಿಸಿದಳು ತಾಯಿ.

"ನಮ್ಮ ಕ್ಲಾಸಿನಲ್ಲಿ ಗೋಪಾಲ ಎಂಬವರು ಈ ವರ್ಷ ಫಸ್ಟ್ ರ್‍ಯಾಂಕ್ ಪಡೆಯುತ್ತಾರಮ್ಮ. ಅವರು ಬಹಳ ಸಾಧು ಸ್ವಭಾವದವರು. ಯಾರ ಗಲಾಟೆಗೂ ಹೋಗದೆ ಅವರಷ್ಟಕ್ಕೇ ಓದಿಕೊಂಡಿರುತ್ತಾರೆ." ಮನಸ್ಸಿನ ಆತುರದ ಸಂಗತಿಯನ್ನು ಬಯಲಿಗೆಳೆದಳು ರತ್ನ.

"ಯಾರಮ್ಮ ಅದು ಗೋಪಾಲ್ ಅಂದರೆ?" ಕುತೂಹಲದಿಂದ ವಿಚಾರಿಸಿದಳು ತಾಯಿ.

"ಅವರ ಊರು ಪುತ್ತೂರಂತೆ. ನೆಹರೂ ಪಾರ್ಕಿನ ಹತ್ತಿರ ರೂಮು ಮಾಡಿದ್ದಾರಂತ. ನಾಳೆ ನಮಗೆ ಕ್ಲಾಸು ಟೆಸ್ಟೂ ಇದೆ. ನಾನಂತೂ ಓದಲೂ ಇಲ್ಲ. ಏನಾದರೂ ವಿಷಯ ಕೇಳಲಿದ್ದರೆ ಬನ್ನೀ ಎಂದಿದ್ದಾರೆ. ಹೋಗಲೇ ಅಮ್ಮ?"

"ಅಡುಗೆ ಕೆಲಸವೆಲ್ಲಾ ಆಗಬೇಕು ತಾನೇ"

"ಅಡುಗೆ ಕೆಲಸ ಹತ್ತು ಗಂಟೆಗೇ ತೀರಿಸಿದ್ದೇನಮ್ಮ. ಶಶಿಯೊಂದಿಗೆ ನಾನು ಹೋಗಿ ಬರಲೇ?"

"ಆಗಲಿ ಅಮ್ಮಾ. ರಿಕ್ಷಾದಲ್ಲಿ ಕುಳಿತು ಹೋಗಿ ಬಾ."

"ಬೇಗನೆ ಒಂದೆರಡು ಗಂಟೆಗಳಲ್ಲಿ ಬಂದು ಬಿಡುತ್ತೇನೆ."

ಮೊದಲೇ ಶೃಂಗರಿಸಿ ಕೊಂಡಿದ್ದ ರತ್ನ ಮತ್ತೊಮ್ಮೆ ದರ್ಪಣ ದರ್ಶನ ಮಾಡಿಕೊಂಡಳು. ಮುಂಗುರುಳುಗಳನ್ನು ತಿದ್ದಿ ಪೌಡರನ್ನು ಉಜ್ಜಿ, ಸೆರಗನ್ನು ಸರಿಪಡಿಸಿಕೊಂಡು ರತ್ನ ಶಶಿಯೊಂದಿಗೆ ನೆಹರೂ ಪಾರ್ಕಿಗೆ ಹೊರಟಳು.

೦ ೦ ೦

"ಹಲೋ ನೀವೂ ಫಿಲ್ಮಿಗೆ ಬಂದಿದ್ದೀರಾ"

"ಓಹೋ ಕುಳಿತುಕೊಳ್ಳಿ ರತ್ನಾ. ಪರೀಕ್ಷೆಯ ತಲೆ ಬಿಸಿಯಂತೂ ನಿನ್ನೆಗೆ ಮುಗಿಯಿತು. ಊರಿಗೆ ಹೋಗುವ ಮೊದಲು ಒಮ್ಮೆ ಫಿಲ್ಮ್ ನೋಡಿ ಬಿಡೋಣವೆಂದು ಬಂದೆ"

ಅಷ್ಟರಲ್ಲಿ ಮಸಾಲೆ ಕಡಲೆ ಹುಡುಗ ಕೂಗಿದ.

"ಮಸಾಲೆ ಕಡಲೇ, ಮಸಾಲೆ ಕಡಲೇ, ತಗೋಳಿ ಸಾರ್ ಒಂದಾಣೆ"

"ತಗೋಳಿ ರತ್ನ" ರತ್ನನ ಕೈಗೆ ಒಂದು ಕಟ್ಟು ಕಡಲೆಯನ್ನಿತ್ತ ಗೋಪಾಲ.

"Thank you very much"

"No mention please" ಪರೀಕ್ಷೆ ಹ್ಯಾಗಾಗಿದೆ?"

"ನಾನೇನು ಪಾಸಾಗುವುದು ಬಹಳ ಕಷ್ಟ. ನಿಮ್ಮ ದಯೆಯಿಂದ ಸ್ವಲ್ಪವಾದರೂ ಮನಸ್ಸಿಗೆ ಧೈರ್ಯ ಬರುವ ಹಾಗಾಗಿದೆ. ನೀವು ಈ ಸಲ ಖಂಡಿತವಾಗಿಯೂ ರ್‍ಯಾಂಕ್ ಪಡೆಯುತ್ತೀರಿ"

"All your kind wishes, Ratna"

ಬಾಯಿಯಲ್ಲಿ ಮಸಾಲೆ ಕಡಲೆಯ ಮಥನದೊಂದಿಗೆ ಮನಸ್ಸಿನಲ್ಲಿಯೂ ಮಥನವಾಗುತ್ತಿತ್ತು.

"ನಾಳೆ ನೀವು ಊರಿಗೆ ಹೋಗುವಿರಾ?"

"ಹೌದು ಸ್ಟೇಶನಿಗೆ ಎಂಟು ಗಂಟೆಗೆ ಬರುತ್ತೀರಿ ತಾನೇ"

ಅಷ್ಟರಲ್ಲಿ ಸಿನೇಮಾ ಆರಂಭವಾಯಿತು.

೦ ೦ ೦

"ಪರೀಕ್ಷಾ ಫಲಿತಾಂಶ ಬಂದಿದೇ" ಎಂದು ಕೂಗಿದ ಪೇಪರ್ ವಾಲಾ.

ಗೋಪಾಲ ಆತುರದಿಂದ ಪೇಪರು ಕೊಂಡುಕೊಂಡ. ಇರುವೆ ಬೆಲ್ಲಕ್ಕೆ ನೊಯ ಮುತ್ತಿದಂತೆ ಮನೆಯವರೆಲ್ಲರೂ ಪೇಪರ್ ನೋಡಲು ಮುತ್ತಿದರು.

"ಫಸ್ಟ್‌ಕ್ಲಾಸ್"ಕೂಗಿದ ಗೋಪಾಲ.

"ನೋಡಿ ಅಮ್ಮ 13784ನೇ ನಂಬರ್, ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿದ್ದಾನೆ ಅಣ್ಣ" ಎಂದ ರಮೇಶ.

"ದೇವರಿಗೆ ದೀಪ ಹಚ್ಚಿಡು ಗೋಪಾಲ" ಅಂದಳು ತಾಯಿ.

ಆ ದಿನ ಸಂಭ್ರಮವೇ ಸಂಭ್ರಮ. ಗೋಪಾಲನಂತೂ ಬಹಳ ಸಂತೋಷದಿಂದಿದ್ದಾನೆ. ಮಧ್ಯಾಹ್ನದ ಪಾಯಸದೂಟದ ನಂತರ ಗೋಪಾಲನ ತಂದೆ ಆರಾಮ ಕುರ್ಚಿಯಲ್ಲಿ ಒರಗಿಕೊಂಡು ಗೋಪಾಲನನ್ನು ಕರೆದರು.

"ಗೋಪಾಲಾ, ನಾಳೆ ಬೆಂಗಳೂರಿಗೆ ಹೋಗೋಣವೆ?" ಬೆಂಗಳೂರು ಎಂದೊಡನೆ ಗೋಪಾಲನ ತಲೆಯಲ್ಲಿ ಎಲ್ಲಾ ತಿರುಗಿತು. ಕಾಲೇಜು, ರೂಮು ರತ್ನ...

(೧೧ನೇ ಪುಟ ನೋಡಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ



ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕನಲು ದಾರಿ—ಕೆಂಪು ದೀಪ

ನೂರು ಕಾದಂಬರಿ ಮತ್ತು ಅ.ನ.ಕೃ.

ನೂರು ಕೃತಿ ಬರೆದು ಮುಗಿಸುವದು ದೊಡ್ಡ ಮಾತಲ್ಲ. ಬರೆದ ಕೃತಿ ಓದುಗರಲ್ಲಿ ರಸಾನುಭೂತಿಯನ್ನು ಉಂಟುಮಾಡುವ ರೀತಿ, ಓದುಗರನ್ನು ಸೆರೆಹಿಡಿಯಬಲ್ಲ ಪಾತ್ರ ರಚನೆ, ಕಥಾವಸ್ತು ಮುಖ್ಯವೆನಿಸುತ್ತದೆ.

ಬರೆದ ಕೃತಿ ಪ್ರಕಟವಾಗದೆ ಇದ್ದರೂ (ಪ್ರಕಟನೆಯ ಅಗತ್ಯವಿರದೆ?) ತಾವು ಇಂತಿಷ್ಟು ಕೃತಿ ರಚಿಸಿದ್ದೇವೆ ಎಂದು ಹೇಳುವ ಕೃತಿಕಾರರೂ ನಮ್ಮಲ್ಲಿ ಇಲ್ಲದಿಲ್ಲ.

ಕಾದಂಬರಿಕಾರ ಅ. ನ ಕೃ. ನೂರಕ್ಕೆ ಮೇಲೆ ಕೃತಿ ರಚಿಸಿದ್ದಾರೆ. ಅವರ ಕೃತಿಗಳ ಸಂಖ್ಯೆ ಇನ್ನೂರ ನಲ್ವತ್ತೆಂಟು ಆಗುತ್ತದೆ ಎಂದು ಹೇಳುತ್ತಾರೆ.

ಆದರೆ ಕತೆ, ನಾಟಕ, ಸಂಶೋಧನಾ ಗ್ರಂಥಗಳು ಬಿಟ್ಟು ಅವರು ಬರೆದಿರುವ ಕಾದಂಬರಿಗಳ ಸಂಖ್ಯೆ ನೂರಾಯಿತು.

ಇದು ನಮಗೆ ಹೆಮ್ಮೆಯ ವಿಷಯ.

ಈ ಕುರಿತು ಮದರಾಸಿನಲ್ಲಿ ಅವರನ್ನು ಸನ್ಮಾನಿಸುವ ಒಂದು ಸಭೆ ಸೇರಿತು.

ಕರೆದವರು ಮದ್ರಾಸಿನಲ್ಲಿರುವ ಕನ್ನಡ ಚಿತ್ರಗಳವರು. ಸಿನೆಮಾತಾರೆಯರಲ್ಲಿ ಹಲವರು ಬಂದಿದ್ದರು. ಅವರೆಲ್ಲ ಕನ್ನಡಿಗರೆ.

ಕನ್ನಡದ ಕಾದಂಬರಿಕಾರನೊಬ್ಬನಿಗೆ ಆತ ನೂರು ಕಾದಂಬರಿ ಬರೆದುದದರ ಗೌರವಾರ್ಥವಾಗಿ, ಸನ್ಮಾನಿಸುವ ಒಂದು ಕೆಲಸ ಮದ್ರಾಸಿನಲ್ಲಿ ನಡೆಯಬೇಕಾಯಿತು. ಅದನ್ನು ಕನ್ನಡಿಗರು ನೆರವೇರಿಸಿದರು ಎಂಬುದಾದರೂ ಸಮಾಧಾನದ ಸಂಗತಿಯೇ!

ಅ. ನ. ಕೃ ಬರೆದ ನೂರು ಕಾದಂಬರಿಗಳಲ್ಲಿ ಉತ್ತಮ ಎಂದು ಮೆಚ್ಚುಗೆ ಪಡೆದ ಕಾದಂಬರಿಗಳಿವೆ. ವಿಮರ್ಶಕರ 'ಮೆಚ್ಚುಗೆ'ಯನ್ನು ಪಡೆದ ಕಾದಂಬರಿಗಳೂ ಇವೆ.

ಅವರು ಕನ್ನಡಕ್ಕಾಗಿ ದುಡಿದಿದ್ದಾರೆ. ಕನ್ನಡ ಇಂದಿಗೆ ರಾಜಧಾನಿಯಲ್ಲಿ ಉಳಿದಿರಬೇಕಾದರೆ, ಅದರ ಹಿನ್ನೆಲೆಯಲ್ಲಿ ಅ. ನ. ಕೃ ಅವರ ಕೆಚ್ಚೆದೆಯ ಶಕ್ತಿ ನಿಂತಿದೆ. ಕನ್ನಡಕ್ಕಾಗಿ ದುಡಿದಿರುವ ಅ. ನ. ಕೃ ಕನ್ನಡ ಸಾಹಿತ್ಯದ ಬೆಳವಣಿಗೆಗಾಗಿಯೂ ಶ್ರಮಿಸಿದ್ದಾರೆ.

ಅವರು ನೂರು ಕಾದಂಬರಿಗಳನ್ನು ಬರೆದಿರುವರೆನ್ನುವದು ಹೆಮ್ಮೆಯ ವಿಷಯ.

ಆದಕ್ಕಾಗಿ ಅವರನ್ನು ಗೌರವಿಸುವ ಕಾರ್ಯವೊಂದು ಬೃಹತ್ ಪ್ರಮಾಣದಲ್ಲಿ ನಡೆಯಬೇಕಾಗಿದೆ. ಆ ಕುರಿತು ಅಲ್ಲಲ್ಲಿ ಸಮಿತಿಗಳು ಏರ್ಪಟ್ಟು ಕೆಲಸ ಮಾಡಬೇಕಾಗಿದೆ.

ಆದರೆ ಈ ಉತ್ಸಾಹವೇ ಕನ್ನಡಿಗರಲ್ಲಿ ಇದ್ದಂತಿಲ್ಲ. ಇರುತ್ತಿದ್ದರೆ ಕನ್ನಡ ನಾಡಿನ ಮೂಲೆಮೂಲೆಯಲ್ಲಿ, ಉತ್ಸಾಹದ ಏರು ಮುಖ ಕಾಣಿಸಿಕೊಳ್ಳದೆ ಇರುತ್ತಿರಲಿಲ್ಲ.

ಇದು ಕನ್ನಡ ಸಾಹಿತ್ಯದಲ್ಲಿ ಇಂದಿಗೆ ನಡೆಯುತ್ತಿರುವ ವಿಚಾರ ಪತನವನ್ನು ಸೂಚಿಸುತ್ತಿದೆ?

ಇದನ್ನು ನಿಜವೆಂದು ಒಪ್ಪಿಕೊಳ್ಳಬಹುದು. ಮುಚ್ಚುಮರೆಯಿಂದ ಆಡಿಕೊಳ್ಳಲು ತಿಳಿದಿರದ ಅ. ನ. ಕೃ. ಅವರನ್ನು ಸನ್ಮಾನಿಸುವಲ್ಲಿ ಯಾರೋ ಎಡವಿ ಬೀಳತೊಡಗಿದ್ದಾರೆ.

ಒಂದು ಬಗೆಯಿಂದ ಇದನ್ನು ಮುಚ್ಚುಮರೆಯ ಒಂದು ಆಟವೇ ನಡೆಯುತ್ತಿದೆ ಎಂದೂ ಹೇಳಬಹುದು. ಅ. ನ. ಕೃ. ಅವರ ಬಗೆಗೆ ಎಂದಿನಿಂದಲೋ ಸಲ್ಲದ ದ್ವೇಷವನ್ನು ಬೆಳೆಸುತ್ತ ಬಂದಿರುವವರಿಗೆ, ಈ ಸಮಯವೂ ಒಂದು ಮಹತ್ವದ ಸಮಯವೇ ಆದಂತಿದೆ.

ಕ್ರಿಯಾಶೀಲ ಅ. ನ. ಕೃ. ಅವರ ಸಾಧನೆ ಸತತ ನಡೆಯುತ್ತ ಬಂದಿದೆ ಎಂತಲೇ ಇವತ್ತಿಗೆ ಕನ್ನಡ ನಾಡಿನಲ್ಲಿ ಕನ್ನಡ ಬಾಳುತ್ತಿದೆ; ಆಳುತ್ತಿದೆ.

ಅವರನ್ನು ಸನ್ಮಾನಿಸುವಲ್ಲಿ ನಾವು ಏಕೆ ಹಿಂದೇಟು ಹಾಕುತ್ತಿದ್ದೇವೆ? ಅವರ ಮುಂದಾಡಿಕೊಳ್ಳುವವರು, ಹಿಂಬದಿಯಲ್ಲಿ ದ್ವೇಷದ ಉರಿಯನ್ನು ಎತ್ತಿ ಹಿಡಿದು ನಡೆಯುತ್ತಿರುವದು ನಿಜಕ್ಕೂ ಅಂತಹ ಜನರ ಸಮಯ ಸಾಧಕ ಗುಣವನ್ನು ಎತ್ತಿದೆ. ಹಿಡಿಯುತ್ತಿದ

ಕನ್ನಡ ನಾಡು ಬಡವಾಗುತ್ತಿದೆ; ನುಡಿಯಲ್ಲಿ ಪೌರುಷ ಗುಣ ಕುಂದು ಹೋಗುತ್ತಿದೆ; ವಿಚಾರದಲ್ಲಿ ತನ್ನದೆನ್ನುವ ಏನೂ ಕಾಣು ಬಾರದೆ ಇನ್ನೊಬ್ಬರಿಗೆ ತಮ್ಮದನ್ನೊಪ್ಪಿಸುವ-ಒಪ್ಪಿಸಿ ಸೇವೆ ಸಲ್ಲಿಸುವ ದಾಸ್ಯ ಮನೋಭಾವ ಬೆಳೆಯುತ್ತದೆ; ನಾವು ಈಗ ಅ. ನ. ಕೃ ಅವರನ್ನು ಗೌರವಿಸದಿದ್ದರೆ.

ಈ ಮಾತು ಕೇಳಿಸಿ ಬರಬಾರದು. ಆದಕ್ಕಾಗಿ ಕನ್ನಡಿಗರು ಸೇರಿಕೊಂಡು ಒಂದು ಬೃಹತ್ ಯೋಜನೆಯನ್ನು ಕರ್ನಾಟಕದಾದ್ಯಂತ ಕಾರ್ಯರೂಪಕ್ಕೆ ತರಬೇಕು. ಆ ಮೂಲಕ ಕನ್ನಡ ನಾಡಿಗಾಗಿ—ನುಡಿಗಾಗಿ ದುಡಿದ ಒಬ್ಬ ಸಾಹಿತಿಯನ್ನು ಗೌರವಿಸಬೇಕು.

ಇದು ಅಸಾಧ್ಯವೆಂದೇ ಅನ್ನಿಸಿ ಸುಮ್ಮಗಿರುವದು ನಮಗೆ ಹಿತಕರವೆನಿಸುವದಾದರೆ, ನಾನು ಕನ್ನಡಿಗ ಎಂಬ ಒಣ ಅಭಿಮಾನವನ್ನೂ ಇರಿಸಿಕೊಳ್ಳಬಾರದು, ಇದರಿಂದಲೂ ಕನ್ನಡವನ್ನು ಅವಮಾನಪಡಿಸಿದಂತೆ ಆಗುವದೆಂದು ತಿಳಿದುಕೊಳ್ಳಬೇಕು.

ನಮ್ಮ ಮುಂದೆ ಈಗ ಒಂದು ಜವಾಬ್ದಾರಿಯ ಕೆಲಸ ನಿಂತಿದೆ. ಆದಕ್ಕೆ ಭುಜ ಕೊಡಲು ಯಾರು ಮುಂದೆ ಬರುವರೋ ಅವರು ಮಾತ್ರ ಕನ್ನಡಿಗರಾಗಿರುತ್ತಾರೆ. ಉಳಿದವರಿಗೆ ಆ ಮಾತನ್ನು ಆಡಲು ಅಧಿಕಾರವಿರುವದಿಲ್ಲ. ಕನ್ನಡಕ್ಕಾಗಿ ಹೋರಾಡಿದ ವ್ಯಕ್ತಿಗಳನ್ನು ಸಮಯವರಿತು ನಾವು ಗೌರವಿಸಬೇಕು. ಕಾಲ ಮೀರಿದ ಬಳಿಕ ಸನ್ಮಾನಿಸುವ ಮಾನದಂಡವನ್ನು ಈಗ ಮುರಿಯಬೇಕು.

ಆ ಕಾರ್ಯ ಇಂದಿನ ಯುವಕರಿಂದ ಆಗಬೇಕಾಗಿದೆ. ಯುವಕರು ಈಗ ಎಚ್ಚತ್ತು ಆ ಕಾರ್ಯ ಸಾಧಿಸಬೇಕಾಗಿದೆ.

— ಸುದಾಸ.

ವಿನೋದದಲ್ಲಿ ವಿಚಾರ:

ನಮಸ್ಕಾರ ಪದ್ಧತಿ

ಬರೆದವರು

ಶ್ರೀ ಭಾಸ್ಕರ ಭಂಡಾರಿ, ಪುಂಜಿಬೈಲು

ಆಧುನಿಕ ಸಮಾಜದಲ್ಲಿ ಬೆಳಗಿನಿಂದ ಸಂಜೆಯ ತನಕ ಕೊಡುವ; ಕೊಳ್ಳುವ 'ನಮಸ್ಕಾರ'ಗಳಿಗೇನೂ ಕಡಿಮೆಯಿಲ್ಲ. ಕೋರ್ಟು ಕಛೇರಿಗಳಲ್ಲಿ ಶಾಲಾ ಕಾಲೇಜುಗಳಲ್ಲಿ; ಅಂಗಡಿ ಹೋಟೇಲುಗಳಲ್ಲಿ ರಸ್ತೆ ಓಣಿಗಳಲ್ಲಿ ಎಲ್ಲಿ ನೋಡಿದರೂ 'ನಮಸ್ಕಾರ'ವೇ ತಾಂಡವವಾಡುತ್ತಿದೆ. ಪಕ್ಕನೆ ರಸ್ತೆಯಲ್ಲಿ ಯಾರಾದರೊಬ್ಬರನ್ನು ಕಂಡಾಗ 'ನಮಸ್ಕಾರ ಸ್ವಾಮಿ' ಎನ್ನುತ್ತಾ ಎಡದ ಕೈಯೆತ್ತುವವರೂ, ಕೊಡೆಯಿದ್ದರೆ ಕೊಡೆಯನ್ನೇ ಎತ್ತಿ ಹೊಡೆಯುತ್ತಾರೋ ಎಂಬ ಹೆದರಿಕೆಗೊಳಗು ಮಾಡುವವರೂ, ಹಸ್ತಗಳಿಗೆ ಸ್ವತಂತ್ರತೆಯನ್ನು ಕೊಟ್ಟು "ಗಾದು ಬಸವಣ್ಣನಂತೆ ತಲೆಯನ್ನೇ ಬಗ್ಗಿಸುವವರೂ; ಹೋಟೇಲುಗಳಲ್ಲಿ ಕಾಫಿ ಕುಡಿಯುತ್ತಿರುವಾಗ ಗ್ಲಾಸನ್ನೇ ಮೇಲೆತ್ತಿ ನಮ್ಮ ಮೇಲೆ ಬಿಸಿ ಕಾಫಿಯನ್ನೇ ಚೆಲ್ಲುತ್ತಾರೋ ಎಂಬಂತೆ ನಟಿಸುವವರೂ ಧಾರಾಳವಾಗಿದ್ದಾರೆ. ಹೀಗೆ ಸರ್ವತ್ರ ವಿಶ್ವರೂಪವನ್ನು ತಾಳಿದ ಈ 'ನಮಸ್ಕಾರ' ಮೂರ್ತಿಯ ನಿಜಾರ್ಥವನ್ನು ತಿಳಿದವರೆಷ್ಟು ಮಂದಿ?

ನಮಸ್ಕಾರವನ್ನು ಭಕ್ತಿ, ಗೌರವ, ಸ್ನೇಹ, ಪ್ರೀತಿ, ವಿಶ್ವಾಸ, ಪರಿಚಯಗಳ ಸಂಕೇತವೆನ್ನಬಹುದು, ಆದಕ್ಕೆ ಅದನ್ನು ಕೊಡುವ ಹಾಗೂ ಸ್ವೀಕರಿಸುವ ವ್ಯಕ್ತಿ, ಸ್ಥಳ; ಸಮಯವನ್ನು ಹೊಂದಿಕೊಂಡು ಅರ್ಥ ಕಲ್ಪಿಸಿಕೊಳ್ಳಬೇಕೇ ಹೊರತು, ಕೆಲವರು ತಿಳಿಯುವಂತೆ ನಮಸ್ಕಾರ ಪದ್ಧತಿಯು ಮೇಲು ಕೀಳನ್ನು ಅಳೆಯುವ ಅಳತೆಗೋಲೆಂದು ಯಾರೂ ಭಾವಿಸಬಾರದು. ಭಕ್ತನು ಭಗವಂತನಿಗೆ ಭಕ್ತಿಯ, ವಿದ್ಯಾರ್ಥಿಯು ಗುರುವಿಗೆ ಹಾಗೂ ನೌಕರನು ಒಡೆಯನಿಗೆ ಗೌರವ ವಿಧೇಯತೆಗಳ, ಗೆಳೆಯನು ಗೆಳೆಯನೊಬ್ಬನಿಗೆ ಸ್ನೇಹ ವಿಶ್ವಾಸಗಳ, ಅಪರಿಚಿತನಾದರೂ ಒಂದೆರಡು ಸಲ ಸಿಕ್ಕುವಾಗ ಪರಿಚಯದ (ಅಂದರೆ ಅವನು ಗೆಳೆಯನಲ್ಲ. ಸ್ನೇಹ ಹಾಗೂ ಪರಿಚಯಕ್ಕೆ ವ್ಯತ್ಯಾಸವಿದೆ) ಸಂಕೇತವಾಗಿ ನಾವು 'ನಮಸ್ಕಾರ' ಎನ್ನುತ್ತೇವೆ. ಆದರಲ್ಲಿ ಯಾರು ಮೊದಲು ಕೊಡಬೇಕು ಯಾರು ನಂತರ ಎಂಬ ಪ್ರಶ್ನೆಯಿಲ್ಲ! ಯಾರು ಮೊದಲಾಗಿ ವಂದಿಸಿದರೂ ಆ ವಂದನೆಗೆ ಅವರ ವ್ಯಕ್ತಿತ್ವ ಸ್ಥಾನ ಮಾನಗಳಿಗೆ ಸರಿಯಾದ ಬೆಲೆಯಿರುತ್ತದೆ. ಆದರೆ ಈ ದಿನಗಳಲ್ಲಿ

(೧೦ನೇ ಪುಟ ನೋಡಿರಿ)

"ಈಗಲೇ ಉಳಿಸಿರಿ! ವಿಳಂಬವಾಗಿ ಅಲ್ಲ!"

ಒಂದು ಸೇವಿಂಗ್ಸ್ ಬ್ಯಾಂಕ್ ಎಕೌಂಟು ತೆರೆಯುವುದನ್ನು ಮುಂದಕ್ಕೆ ಹಾಕಿದಂತೆ ನಿಮಗದು ಬೇಕೆನಿಸಿದಾಗ ಕಡಿಮೆ ಹಣ ನಿಮ್ಮಲ್ಲಿರುವುದು.

ಜ್ಞಾಪಕದಲ್ಲಿಡಿರಿ! ಉಳಿಸಲು ನಿಮಗಿದುವೇ ಸುಸಮಯ!

ಎಲ್ಲಿ?

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಮಣಿಪಾಲ

ಸ್ಥಾಪನೆಯಾದಂದಿನಿಂದಲೂ ಸಮರ್ಥ, ಸೌಹಾರ್ದಮಯ ಸೇವೆ ನಮ್ಮದಾಗಿದೆ.

ಜಗತ್ತಿನ ಉದ್ಧಾರಕ್ಕೆ ಹೇತುವಾದ

ಕಾಳಿದಾಸನ ಕಾಲಕೃತಿಗಳ ಪರಿಚಯ

ಬರೆದವರು

ಶ್ರೀ ಪಿ ಎಸ್. ಎಸ್. ಚಿತ್ರದುರ್ಗ.

ಲೋಕಕ್ಕೆ ಬೆಳಕು ನೀಡುವ ದಿನಕರ ಒಬ್ಬನೇ, ಹಾಗೆಯೇ ಸಂಸ್ಕೃತ ವಾಙ್ಮಯ ಕ್ಷೇತ್ರಕ್ಕೆ ದಿವ್ಯ ಪ್ರಭಬೀರಿದ ಏಕೈಕ ಕವಿ ಕಾಳಿದಾಸ ಸುಂದರ ಯುಗದ ರಾಮಾಯಣ, ಮಹಾ ಭಾರತದಷ್ಟೇ ಪವಿತ್ರವಾದ, ಶ್ರೇಷ್ಠವಾದ ಮಹಾಕಾವ್ಯಗಳು ಕಂಡು ಬಂದಿವೆ ಲೋಕೋತ್ತರ ಅಮೂಲ್ಯ ಕೃತಿಗಳನ್ನು ರಚಿಸಿದ ಕವಿಗಳೂ ಅವರ ಕಾವ್ಯಗಳೂ ಯಾವ ಬಗೆಯಲ್ಲಿಯೂ ಕಳಪೆಯಲ್ಲ

ಭಾಸ, ಭಾರವಿ, ಬಾಣ, ಪಾಣಿನಿ, ವರರುಚಿ, ಅಶ್ವಘೋಷ, ದಂಡಿ, ಮಾಘ, ಮಲ್ಲಿನಾಥ ಇವರ ಹೆಸರುಗಳು ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಅಚ್ಚಳಿಯದೆ ಉಳಿದಿವೆ ನೂರಾರು ವರ್ಷಗಳ ಹಿಂದೆ ಭರತ ಖಂಡದಲ್ಲಿ ಬದುಕಿ ತಮ್ಮ ಅಗಾಧ ಪಾಂಡಿತ್ಯ ಪ್ರತಿಭೆಯಿಂದ ಮಹೋನ್ನತ ಕಾವ್ಯಗಳನ್ನು ರಚಿಸಿದ ಕವಿ ವರ್ಯರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಸ್ತುತ್ಯಾರ್ಹ ಹಾಗೂ ಸರ್ವ ಜನ ಪ್ರಿಯ ನೂರಾರು ವರ್ಷಕ್ಕೂ ಹಿಂದಿನ ಅವರ ಕೃತಿಗೂ ಸಂಸ್ಕೃತ ಸಾಹಿತ್ಯ ಶರಧಿಯಲ್ಲಿ ಅಡಗಿರುವ ಅನರ್ಘ್ಯ ಅಮೂಲ್ಯ ರತ್ನಗಳು.

ಭರತ ವರ್ಷದ ಸಂಸ್ಕೃತ ವಾಙ್ಮಯ ಇತಿಹಾಸದಲ್ಲಿ ಎಲ್ಲ ಕವಿಗಳ, ಅವರ ಕಾವ್ಯಗಳ ತೂಕವೇ ಒಂದು ಬಗೆಯೇದರೆ, ಕವಿ ಕಾಳಿದಾಸ ಅವನ ಲೋಕೋತ್ತರ ಮಹೋನ್ನತ ಕೃತಿಗಳೇ ಮತ್ತೊಂದು ತೂಕ "ಸಾಗರಂ ಸಾಗರೋಪಮಃ" ಎನ್ನುವಂತೆ ಕಾಳಿದಾಸನಿಗೆ ಸಾಟಿ ಕಾಳಿದಾಸನೊಬ್ಬನೇ.

ಕಾಳಿದಾಸನ ಸ್ಥಾನಕ್ಕೆ ಬರುವ, ಅವನಂತೆ ಜನಾದರಣೀಯ ಕವಿಯಾಗಿ ಬಾಳಿದ, ಅಮೋಘ ಅಮೂಲ್ಯ ಪಾಂಡಿತ್ಯ ಪ್ರತಿಭಾ ವಿಶೇಷಗಳಿಂದ ಬದುಕಿ ಕೀರ್ತಿಗಳಿಸಿದ ಮತ್ತೊಬ್ಬ ಕವಿ ಸಂಸ್ಕೃತ ಸಾಹಿತ್ಯ ಲೋಕದಲ್ಲಿ ಇರಲಿಕ್ಕಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಕಾಳಿದಾಸನನ್ನು "ಕವಿರತ್ನ" ಎಂದು ಕೊಂಡಾಡಬಹುದು 'ಕವಿ ಕುಲತಿಲಕ' ಎಂದು ಪ್ರಶಂಸಿಸಬಹುದು, ಏನಾದರೂ ಕಾಳಿದಾಸ ಒರಿ ಕವಿ ಕಾಳಿದಾಸನಲ್ಲ "ಕವಿರತ್ನ ಕಾಳಿದಾಸ', ಇಂತಹ ರತ್ನವನ್ನು ನಾವು ಪಡೆದಿದ್ದೇವು. ಇಂತಹ ರತ್ನ ರಚಿಸಿದ ಕೃತಿಗಳು ನಮ್ಮಲ್ಲಿವೆ ಎನ್ನುವುದೇ ಒಂದು ಹೆಮ್ಮೆಯ ಸಂಗತಿ.

ಕಾಳಿದಾಸ 'ಕವಿರತ್ನ'ನೇನೋ ಅಹುದು ಈ ರತ್ನನ ಜೀವಿತ ಬಗೆಗೆ ಜೀವಿಸಿದ ಬಗೆಗೆ ಪಂಡಿತರಲ್ಲಿ, ಚರಿತ್ರಕಾರರಲ್ಲಿ, ಸಂಶೋಧಕರಲ್ಲಿ ಹಲ ಬಗೆಯ ಜಿಜ್ಞಾಸೆ ಬೆಳದಿದೆ. ಕಾಳಿದಾಸನ ನೈಜ ಜೀವನ ಕಥೆಯೂ ಅಷ್ಟು ಸ್ಪಷ್ಟವಾಗಿಲ್ಲ. ಹಲ ಬಗೆಯ ಊಹೆಯು, ಪವಾಡದ ಊರೆ ವಿವಾದಗಳಿಗೆ ಕಾರಣವಾಗುವ ಬಗೆಯಲ್ಲೇ ಹೆಣೆದುಕೊಂಡು ಬಳಕೆಯಲ್ಲಿ ಬಂದಿದೆ. ಕವಿಯ ಕಾಲ ಮತ್ತು ಜೀವನವನ್ನು ಕುರಿತು ಸ್ಪಷ್ಟವಾದ ಅಭಿಪ್ರಾಯ ಮೂಡಿಲ್ಲ, ನಂಬಿಗೆ ಬಂದಿಲ್ಲ.

ಕಾಳಿದಾಸ ವೇದಾವಿ ಪಂಡಿತನೋ ನಿರಕ್ಷರ ಕುಕ್ಷಿ ಕಾಡುಗೊಲ್ಲನೋ ಏನಾದರೂ ಬದುಕಿದ್ದ ಎನ್ನುವುದಕ್ಕೆ ಅವನ ಕೃತಿಗಳೇ ಸಾಕ್ಷ್ಯವಾಗಿ ಉಳಿದು ಸ್ಪಷ್ಟವಾಗಿ ಸತ್ಯವನ್ನು ಎತ್ತಿ ಸಾರುತ್ತವೆ.

ಕಾಳಿದಾಸನ ಕಾಲದ ವಿಷಯವಾಗಿ ಹಲ ಬಗೆಯ ಅಭಿಪ್ರಾಯಗಳು ಬೆಳಕಿಗೆ ಬಂದಿವೆ. ಕಾಳಿದಾಸಶುಂಗ ವಂಶದ ಅಗ್ನಿಮಿತ್ರನ ಸಮಕಾಲೀನ, ಅವನ ನಾಟಕ 'ಮಾಳವೀಕಾಗ್ನಿ ಮಿತ್ರ' ಇದಕ್ಕೆ ಉದಾಹರಣೆ. ಕ್ರಿ. ಪೂ. ಎರಡನೆಯ ಶತಮಾನ ಅವನ ಕಾಲ ಎನ್ನುವುದು ಮೊದಲನೆಯ ಅಭಿಪ್ರಾಯ, ಕವಿ ವಿಕ್ರಮಾದಿತ್ಯ (ವಿಕ್ರಮ ಶಕೆಯ ಸ್ಥಾಪಕ ೫೭ ಕ್ರಿ. ಪೂ)ನ ಆಸ್ಥಾನ ಕವಿಯಾಗಿದ್ದು ಸಂಸ್ಕೃತ, ಸಾಹಿತ್ಯಾದಿ ಲಲಿತ ಕಲೆಗಳ ಪೋಷಕ, ರಕ್ಷಕವಾಗಿದ್ದ ದೊರೆಯ ಆಶ್ರಯದಲ್ಲಿದ್ದು ಬದುಕಿದ ಎನ್ನುವುದು ಎರಡನೆಯ ಅಭಿಪ್ರಾಯ. ಉಜ್ಜಯಿನಿಯ ದೊರೆ ಎರಡನೆಯ ಚಂದ್ರಗುಪ್ತ ಅಂದರೆ 'ವಿಕ್ರಮಾದಿತ್ಯ'ನೆಂದೇ ಖ್ಯಾತಿ ಪಡೆದ ದೊರೆಯ ರಾಜ್ಯದಲ್ಲಿದ್ದ, 'ವಿಕ್ರಮೋರ್ವಶೀಯ' ನಾಟಕದಲ್ಲಿ ಬರುವ ಸಾಮ್ರಾಟ ವಿಕ್ರಮ ಎರಡನೆಯ ಚಂದ್ರಗುಪ್ತ (ವಿಕ್ರಮಾದಿತ್ಯ)ನೇ, ಅಲ್ಲದೆ ವಿಕ್ರಮಾದಿತ್ಯನ ಕುಮಾರ ಕುಮಾರ ಗುಪ್ತನ ಜನನದ ಕಾರಣದಿಂದಲೇ ಕವಿ "ಕುಮಾರಸಂಭವ" ಕಾವ್ಯ ರಚಿಸಿ ಉಡುಗೆರೆಯಾಗಿ ಅರ್ಪಿಸಿದ ಈ ಕಾರಣದಿಂದ ಕವಿಯ ಕಾಲ ಕ್ರಿ. ಶ. ಐದನೆಯ ಶತಮಾನ ಎಂದು ಮೂರನೆಯ ಅಭಿಪ್ರಾಯ.

ಕಾಳಿದಾಸ ವರಾಹ ಮಿಹಿರ ಮತ್ತು ಅಮರ ದೇವರ ಸಮಕಾಲೀನ ಆದುದರಿಂದ ಆರನೆಯ ಶತಮಾನವೇ ಅವನ ಜೀವಿತ ಕಾಲ ಎನ್ನುವ ನಾಲ್ಕನೆಯ ಅಭಿಪ್ರಾಯವಿದೆ.

ಧಾರಾ ನಗರದ ದೊರೆ ಭೋಜರಾಜ (ಕ್ರಿ. ಶ ೧೧ನೇ) ಆಸ್ಥಾನ ಕವಿ ಮಾತ್ರವೇ ಅಲ್ಲ ಕಾಳಿದಾಸ, ಅವನಿಂದ ಪುರಸ್ಕೃತ, ವಂದಿತ, ಆಶ್ರಯಿತ, ಗೌರವಿತ ಎನ್ನುವ ಭಾವನೆಯೂ ಇದೆ. ಸ್ವಯಂ ಸಂಸ್ಕೃತ ಪಂಡಿತ. ಕಾವ್ಯ ಪ್ರಿಯ, ಸಾಹಿತ್ಯಾದಿ ಲಲಿತ ಕಲಾಭಿಮಾನಿಯಾಗಿದ್ದ ಭೋಜರಾಜ ಕವಿಗೆ ತನ್ನ ಅರ್ಧ ಸಿಂಹಾಸನವನ್ನೇ ಬಿಟ್ಟು ಕೊಟ್ಟಿದ್ದ ಎಂದು ಹೇಳುತ್ತಾರೆ. ಕವಿ ಭೋಜನ ಆಸ್ಥಾನ ಕವಿಯಾಗಿದ್ದು ಅವನೊಂದಿಗೆ ಇದ್ದಿರಲೂ ಬಹುದು ಎನ್ನುವುದಕ್ಕೆ ಸ್ವಲ್ಪ ಮಟ್ಟಿನ ಸಾಕ್ಷ್ಯಾಧಾರಗಳೂ ದೊರೆಯುತ್ತವೆ.

ಕಾಳಿದಾಸ ಜೀವನಾವಧಿಯ ಕಾಲವನ್ನು ನಿರ್ಧಿಷ್ಟವಾಗಿ ಹೇಳುವುದು ಕಷ್ಟವಾದರೂ ಕ್ರಿ. ಪೂ. ೨ನೆಯ ಶತಮಾನದಿಂದ ಕ್ರಿ. ಶ. ೧೧ನೆಯ ಶತಮಾನ ಎಂದು ಊಹಿಸಬಹುದಾಗಿದೆ.

ಕವಿ ಕಾಳಿದಾಸ ಅಮೂಲ್ಯ ಕಲಾಕೃತಿಗಳನ್ನು ರಚಿಸಿ ಸಂಸ್ಕೃತ ಸಾಹಿತ್ಯ ಭಂಡಾರಕ್ಕೆ ಕೊಡುಗೆಯಾಗಿ ಅರ್ಪಿಸಿದ್ದಾನೆ. ಅವನ ಕೀರ್ತಿಯನ್ನು ಎತ್ತಿ ಸಾರುವ ಮಹಾ ಕಾವ್ಯಗಳು ಎರಡು. ಮೊದಲನೆಯದು ರಘುವಂಶ, ಎರಡನೆಯದಾಗಿ ಕುಮಾರ ಸಂಭವ.

ಕವಿ ತನ್ನ ರಘುವಂಶ ಕಾವ್ಯದಲ್ಲಿ ಒಂದು ಸೀಳಿಗೆಯ ವರ್ಣನೆಯನ್ನು ಹೃದಯಂಗಮವಾಗಿ ಚಿತ್ರಿಸಿದ್ದಾನೆ. ದಿಲೀಪ, ರಘು, ಅಜ, ದಶರಥ, ಶ್ರೀರಾಮ ಇವರು ಕಾವ್ಯದಲ್ಲಿ ಬರುವ ಪ್ರಮುಖ ಪಾತ್ರಧಾರಿಗಳು, ಶ್ರೀರಾಮನ ಗುಣ ವರ್ಣನೆಗೆ ವಿಶೇಷ ಪ್ರಾಶಸ್ತ್ಯವಿತ್ತಿದ್ದಾನೆ ಕವಿ. ಕಾವ್ಯದಲ್ಲಿ ಕಾಣ ಬಂದ ಪ್ರಮುಖ ಪಾತ್ರಗಳಿಗೆ ಜೀವಂತ ಶಕ್ತಿಯನ್ನು ತುಂಬಿ ಸಜೀವಗೊಳಿಸಿದ ಕವಿ ಆದರ್ಶ ಭಾವನೆಯ ಮಾನವ, ಜ್ಞಾನಿ, ಸಾಮ್ರಾಟನ ಹಿರಿಯ ಜೀವನ ಅವನ ಸರಳ ಭಾವನೆ ಉದಾತ್ತ ಗುಣಗಳನ್ನು ಕಾದು ಗನಮನ ಮುಟ್ಟುವಂತೆ ತೆರೆದು ತೋರಿಸಿದ್ದಾನೆ ಆದರೂ ಹತ್ತೊಂಬತ್ತು ಸರ್ಗಗಳ ಈ ಕಾವ್ಯ ಅಂತಿಮವಾಗಿ ಅಪೂರ್ಣ ಕೃತಿಯಾಗಿಯೇ ಉಳಿದಿದೆ.



ಆಕಾಶಬಾಣದಲ್ಲಿ ಪ್ರಪಂಚಕ್ಕೆ ಮೂರು ಸುತ್ತು ಬಂದು ಐತಿಹಾಸಿಕ ದಾಖಲೆ ನಿರ್ಮಿಸಿದ ಅಮೇರಿಕನ್ ಗಗನಯಾತ್ರಿ ಜಾನ್ ಎಚ್. ಗ್ಲೆನ್.

ಹದಿನೇಳು ಸರ್ಗಗಳ ಕುಮಾರ ಸಂಭವ ಕಾವ್ಯ ಕವಿಯ ಮತ್ತೊಂದು ಮಹಾ ಕೃತಿ ಶಿವ ಪಾರ್ವತಿಯರ ವಿವಾಹದ ವರೆಗೆ ಇರುವ ಏಳು ಸರ್ಗಗಳ ಭಾಗ ಮಾತ್ರ ಕಾಳಿದಾಸನ ಕೃತಿ ಉಳಿದ ಮುಂದಿನ ವಿಲಾಸದ ಹತ್ತು ಕಾಂಡಗಳು ಕಾಳಿದಾಸ ಕೃತಿಯಲ್ಲ ಎನ್ನುವ ಭಾವನೆ, ನಂಬಿಕೆ ಇದೆ.

ಕವಿ ಕಾಳಿದಾಸ ಕೀರ್ತಿ ಪಡೆದುದು ರಘುವಂಶ, ಕುಮಾರ ಸಂಭವ ಈ ಎರಡು ಕಾವ್ಯಗಳ ರಚನೆಯಿಂದಲೇ ಅಲ್ಲ ಇವಕ್ಕಿಂತಲೂ ಮಿಗಿಲಾಗಿ ವಿಕ್ರಮೋರ್ವಶೀಯ, ಮಾಳವಿಕಾಗ್ನಿ ಮಿತ್ರ ಅಭಿಜ್ಞಾನ ಶಾಕುಂತಲ ನಾಟಕಗಳಿಂದ, ಮೇಘ ಸಂದೇಶ ಕಾವ್ಯದಿಂದ. ಕಾಳಿದಾಸನ ಕಾವ್ಯಗಳು ಮಾನವನ ಮನಸ್ಸಿನ ಮೇಲೆ ಪರಿಣಾಮ ಬೀರಿ ಶಾಶ್ವತ ನೆನಪನ್ನು ಉಳಿಸುವಂತಹ ಅಮರ ಕೃತಿಗಳು. ಕೃತಿಗಳ ಸನ್ನಿವೇಶ, ಪಾತ್ರ, ಘಟನೆಗಳು ಓದುಗನ ಶ್ರಾವಕನ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದಿರುತ್ತವೆ

ಶೃಂಗಾರ, ವೀರ, ಕರುಣಾದಿ ನವರಸಗಳನ್ನು ತನ್ನ ಕಾವ್ಯ ಕೃತಿಗಳ ರಚನೆಯಲ್ಲಿ ಧಾರಾಳವಾಗಿ ಬಳಸಿಕೊಂಡ ಕವಿ

(೯ನೇ ಪುಟನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ... ...
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಕರ್ನಾಟಕದಲ್ಲಿ ಹೊಸ ನಿವೇಶನ

ಬೈಲಕೊಪ್ಪದಲ್ಲಿ ಸಂತಪ್ತ ನಿರಾಶ್ರಿತರು

• ಹಾಸನದಿಂದ ಸುಮಾರು ೫೫ ಮೈಲುಗಳ ಅಂತರದಲ್ಲಿದೆ ಬೈಲಕುಪ್ಪೆಯೆಂಬ ಸಂಮೃದ್ಧ ಹಳ್ಳಿ. ಅಲ್ಲಿನ ಸುಮಾರು ಮೂರುವರೆ ಸಾವಿರ ಎಕ್ರೆಗಳ ಫಲವತ್ತಾದ ನೆಲವು ಇಂದು ವಿಶೇಷ ಚಟುವಟಿಕೆಗಳಿಂದಾಗಿ ಎದ್ದು ತೋರುವಂತಾಗಿದೆ. ಅತಿಥಿ ಸತ್ಕಾರಕ್ಕೆ ಹೆಸರಾದ ಕನ್ನಡ ನಾಡಿನ ಈ ಭಾಗದಲ್ಲಿ ಆರು ಟಿಬೇಟಿಯನ್ ನಿರಾಶ್ರಿತರ ಶಿಬಿರಗಳಿವೆ. ಇವುಗಳಲ್ಲಿ ೫೦೦ ಟಿಬೇಟ ಜನರ ಕುಟುಂಬಗಳು ನೆಲಸ ತೊಡಗಿವೆ. ಇವುಗಳ ಒಟ್ಟು ಸದಸ್ಯರ ಸಂಖ್ಯೆ ೩,೦೦೦. ಈ ನಿರಾಶ್ರಿತರು ಕರ್ನಾಟಕದ ನೆಲದಲ್ಲಿ ನೆಲಸಿ ಪುನರ್ನಿವೇಶನವನ್ನು ಪಡೆದಿದ್ದಾರೆ.

ಈ ಶಿಬಿರಗಳಲ್ಲಿರುವ ಜನರು ನಗುಮೊಗದಿಂದ ಕೂಡಿದ್ದಾರೆ. ಬಲಿಷ್ಠರಿದ್ದಾರೆ, ಪರಿಶ್ರಮ ಪಟುಗಳೂ ಆಗಿದ್ದಾರೆ. ಭತ್ತ, ಗೋದಿ ಮತ್ತು ತರಕಾರಿ ಮೊದಲಾದುವನ್ನವರು ಬೆಳೆಯುತ್ತಾರೆ. ಹಂದಿ, ಕುರಿ, ಕೋಳಿ ಇತ್ಯಾದಿಗಳನ್ನು ಸಾಕುತ್ತಾರೆ. ಅಲ್ಲಿನ ವಾತಾವರಣಕ್ಕೆ ಒಗ್ಗುವ ಹೊಗೆಸೊಪ್ಪು, ಸೀಐಲ್ಯಾಂಡ್ ಹತ್ತಿ ಮೊದಲಾದುವನ್ನೂ ಅವರು ಉತ್ಪಾದಿಸುತ್ತಾರೆ.

ಇಲ್ಲಿನ ಕಾಡು ಪ್ರದೇಶವು ಒಣ ಹವೆಯನ್ನು ಹೊಂದಿದೆ. ವರ್ಷಂಪ್ರತಿ ೬೦ ಅಂಗುಲದಷ್ಟು ಮಳೆಯಿಲ್ಲಿ ಸುರಿಯುತ್ತದೆ. ಇಲ್ಲಿರುವ ನಿರಾಶ್ರಿತರ ಆರು ಶಿಬಿರಗಳು ಡಿಪ್ಯುಟಿ ಕಮಿಶನರಿಗೆ ಸಮಾನ ಹುದ್ದೆಯ ಒಬ್ಬ ಅಧಿಕಾರಿಯಿಂದ ಆಳಲ್ಪಡುತ್ತದೆ ಆರು ಶಿಬಿರಗಳೂ ಬೇರೆ ಬೇರೆ ಪ್ರದೇಶಗಳಲ್ಲಿ ನೆಲಸಿವೆ. ಈ ಪ್ರದೇಶಗಳೆಂದರೆ, ಗೊಲ್ಲರ ಹೊಸ ಹಳ್ಳಿ, ಕೈಲಾಸಪುರ, ಅರಳೀಕಪ್ರಿ ೧ ಮತ್ತು ೨ ಹಾಗೂ ಗುಳೇದ ಹಳ್ಳಿ ೧ ಮತ್ತು ೨. ಕೃಷಿಯ ಬಗ್ಗೆ ಇದ್ದಿರುವ ಆಸಕ್ತಿಯನ್ನು ಅನುಲಕ್ಷಿಸಿ ಈ ಶಿಬಿರಗಳಿಗೆ ನಿರಾಶ್ರಿತರನ್ನು ಸರಕಾರ ಆಯ್ದುಕೊಂಡಿದೆ.

ಇಂದು ಬೈಲಕುಪ್ಪೆಯಲ್ಲಿ ೬೦೦ ಮಂಗಳೂರು ಹಂಚು ಹೊದಿಸಿದ ಮನೆಗಳಿವೆ. ಪ್ರತಿ ಮನೆಗೂ ತಗಲಿದ ವೆಚ್ಚ ಬರೀ ೧,೬೦೦ ರೂಪಾಯಿಗಳು! ಪ್ರಧಾನ ಮಾರ್ಗದಿಂದ ಆರು ಬೇರೆ ಬೇರೆ ಶಿಬಿರಗಳನ್ನು ಜೋಡಿಸಲು ಐದು ಮೈಲುದ್ದದ ಕೂಡು ದಾರಿಯಿದೆ ಕಾಡು ಪ್ರದೇಶವನ್ನು ಜನನಿವಾಸಕ್ಕೆ ಯೋಗ್ಯವಾಗಿ ಮಾಡಲು ಸುದೃಢರಾದ ಟಿಬೇಟಿಯನ್ ನಿರಾಶ್ರಿತರು ಕಾಡು ಕಡಿಯಲು ತೊಡಗಿದ್ದರು. ಆಗ ಅವರಿಗೆ ಪ್ರತಿದಿನಕ್ಕೆ ಎರಡು ರೂಪಾಯಿಯಂತೆ ಕೂಲಿ ಕೊಡುತ್ತಿದ್ದರು. ೧೯೬೨ರ ಮಧ್ಯದ ವರೆಗೆ ಈ ವ್ಯವಸ್ಥೆಯು ಮುಂದುವರಿಯಿತು. ಅನಂತರ ಈ ನಿರಾಶ್ರಿತರಿಗೆ ಸ್ಥಾನೀಯ ವ್ಯವಸಾಯದಲ್ಲಿ ತರಬೇತಿಯನ್ನು ನೀಡಲು ಮೊದಲೆರಡು ವಸತಿಗಳಲ್ಲಿ ಸಮಾರು ೬೦೦ ಎಕ್ರೆ ಜಮೀನನ್ನು ಆಯ್ದು ಅಲ್ಲಿ ಕೃಷಿಯ ಉದ್ಯೋಗದಲ್ಲಿ ಅವರನ್ನು ತೊಡಗಿಸಿದರು. ಶಾರೀರಿಕ ಶ್ರಮಕ್ಕೆ ಅನರ್ಹರಾದವರಿಗೆ ಮಾಸಿಕ ರೂ. ೩೦ನ್ನು ಇಲ್ಲವೇ ಅವಕ್ಕೆ ಸರಿಹೊಂದುವಷ್ಟು ಆಹಾರ ಪದಾರ್ಥಗಳನ್ನು ನೀಡಲಾಯಿತು. ನಿರಾಶ್ರಿತರಿಗೆ ನೀರನ್ನೊದಗಿಸಲು ಟ್ಯೂಬ್ ಬಾವಿಗಳನ್ನು ತೋಡಿಸಲಾಯಿತು. ನಾಲ್ಕು ಮೈಲು ದೂರದಲ್ಲಿರುವ ಆರೋಗ್ಯ ಕೇಂದ್ರವೊಂದರಲ್ಲಿ ಮೂರು ಶಿಬಿರ ಚಿಕಿತ್ಸಾಲಯಗಳನ್ನೂ ಒಂದು ವಿಶೇಷ ವಾರ್ಡನ್ನೂ ಪ್ರಾರಂಭಿಸಲಾಗುತ್ತಿದೆ.

ಐದರಿಂದ ಹತ್ತು ವರ್ಷ ಪ್ರಾಯದ ಸುಮಾರು ೩೫೦ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಮೂರು ಶಿಬಿರಗಳಲ್ಲಿ ಮೂರು ಪ್ರಾಥಮಿಕ ಶಾಲೆಗಳೂ ಎಲ್ಲ ಶಿಬಿರಗಳಿಗಾಗಿ ಒಂದು ಕೇಂದ್ರ ಶಾಲೆಯೂ ಇವೆ. ನಾಲ್ವರು ಟಿಬೇಟಿಯನ್ ಅಧ್ಯಾಪಕರು ಟಿಬೇಟಿಯನ್ ಅಭ್ಯಾಸ ಮಾಡಿಸುತ್ತಿದ್ದಾರೆ ಇಬ್ಬರು ಹಿಂದೀ ಅಧ್ಯಾಪಕರಿದ್ದಾರೆ. ರಾಜ್ಯ ಸರಕಾರದಿಂದ ಎರವಲು ನೀಡಲಾದ ಐವರು ಅಧ್ಯಾಪಕರ ಸಹಾಯದಿಂದ ಮುಖ್ಯೋಪಾಧ್ಯಾಯರು ಇಂಗ್ಲಿಷನ್ನು ಕಲಿಸುತ್ತಾರೆ. ಟಿಬೇಟಿಯನ್ ಶಾಲೆ ಸಮಿತಿಯ ಮೂಲಕ ಮಕ್ಕಳಿಗೆ ಮಧ್ಯಾಹ್ನ ಊಟದ ವ್ಯವಸ್ಥೆಯನ್ನೂ ಇಲ್ಲಿ ಮಾಡಲಾಗಿದೆ. ಕಲಿಯಬೇಕೆಂದಿರುವ ವಯಸ್ಕರಿಗೆಂದು ಇಂಗ್ಲಿಷ್ ಮತ್ತು ಹಿಂದೀ ಭಾಷಾಧ್ಯಯನದ ವ್ಯವಸ್ಥೆಯೂ ಇಲ್ಲಿದೆ. ಸುಮಾರು ೧೦೦ ಮಂದಿ ನಿರಾಶ್ರಿತ ವಯಸ್ಕರು ಯಶಸ್ವಿಯಾಗಿ ಇದರಲ್ಲಿ ನಿರ್ಧಾರಿತ ಮಟ್ಟವನ್ನು ಮುಟ್ಟಿದ್ದಾರೆ.

ರಾಜ್ಯ ಸರಕಾರವಿತ್ತ ನಾಲ್ಕು ಬುಲ್‌ಡೋಜರ್‌ಗಳ ಸಹಾಯದಿಂದ ಸುಮಾರು ಎರಡು ಸಾವಿರ ಎಕ್ರೆ ಕಾಡನ್ನು ನಿರ್ಮೂಲ ಮಾಡಿ, ಗುತ್ತಿ, ಬೇರುಗಳನ್ನು ಕಿತ್ತು ಕೃಷಿಕರಿಗೆ ಉಪಯುಕ್ತವಾಗಿ ಮಾಡಲಾಗಿದೆ. ಭೂಮಿಯ ಸರ್ವೆ ನಡೆಸಿ ಐದೈದು ಎಕ್ರೆಯ ವಿಭಾಗಗಳನ್ನು ಮಾಡಿದ್ದಾರೆ. ಪ್ರತಿ ಕುಟುಂಬವೂ ತನ್ನ ಸ್ವಂತ ಉಪಯೋಗಕ್ಕೆ ಐದೈದು ಎಕ್ರೆಗಳ ಒಂದೊಂದು ತುಂಡನ್ನು ಪಡೆದಿದೆ. ಪ್ರತಿ ಕುಟುಂಬಕ್ಕೂ ವ್ಯವಸಾಯದ ಪ್ರಾಥಮಿಕ ಆವಶ್ಯಕತೆಗಳನ್ನು, ಸಾಧಾರಿತ ನೇಗಿಲು, ಕೆಲಸಗಾರರನ್ನು ಕೂಡ, ಒದಗಿಸಿದ್ದಾರೆ. ಪ್ರತಿ ಹಳ್ಳಿಗೂ ಕೀಟನಾಶಕೋಪಕರಣಾದಿಗಳನ್ನೂ ಪೂರೈಸಿದ್ದಾರೆ. ಗ್ರಾಮವೊಂದಕ್ಕೆ ಐದು ಎತ್ತಿನ ಗಾಡಿಗಳನ್ನಲ್ಲದೆ ಪ್ರತಿ ಎರಡು ಕುಟುಂಬಗಳಿಗೆ ಒಂದು ಜತೆ ಎತ್ತುಗಳನ್ನೂ ಒದಗಿಸಿದ್ದಾರೆ. ಎರಡು ನೀರಾವರಿಯ ಕೆರೆಗಳನ್ನೂ ತೋಡಿದ್ದಾರೆ. ಇದರಲ್ಲಿ ಟಿಬೇಟಿಯನರೇ ಕೆಲಸ ಮಾಡಿದ್ದಾರೆ.

ತಮ್ಮ ಮೂಲ ಉದ್ಯೋಗಗಳಲ್ಲಿಯೇ ತೊಡಗಿರುವ ಹಲವು ಟಿಬೇಟಿಯನ್ ಕುಟುಂಬಗಳು ಇಲ್ಲಿವೆ. ನೆಟ್ಟು ಹೊಲಿಯುವುದು, ಬಟ್ಟೆ ಹೊಲಿಯುವುದು, ಬಡಗಿತನ, ಬೆಳ್ಳಿಯ ಒಡವೆ ನಿರ್ಮಿಸುವುದು, ಟಿಬೇಟಿಯನ್ ಕಾರ್ಪೆಟ್ ತಯಾರಿಸುವುದು ಮೊದಲಾದುವನ್ನು ಇವರು ಮಾಡುತ್ತಾರೆ. ಮೈಸೂರಿನ ಎಂಪೋರಿಯಮ್‌ದ ಮೂಲಕ ಇದಕ್ಕೆ ಮಾರುಕಟ್ಟೆಯೂ ದೊರೆಯುತ್ತದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮೂಲಕ ಭತ್ತ ಕುಟ್ಟುವುದು, ಜೇನುನೊಣ ಸಾಕುವುದು, ಬಿದಿರಿನ ಒಡವೆ ರಚಿಸುವುದು —ಮೊದಲಾದ ಉದ್ಯೋಗಗಳನ್ನೂ ಪ್ರಾರಂಭಿಸುವ ವಿಚಾರವು ರಾಜ್ಯ ಸರಕಾರಕ್ಕಿದೆ.

ಟಿಬೇಟಿಯನರು ಧರ್ಮಾಭಿಮಾನಿಗಳು ಸಾಮೂಹಿಕ ಪೂಜೆಗೆಂದು ವಿಹಾರವೊಂದರ ಅಭಾವವಿತ್ತು ಅವರಿಗೆ. ಅವರ ಗಳಿಕೆಯಿಂದಲೇ ಒಂದೊಂದು ಶಿಬಿರದಲ್ಲಿ ಒಂದೊಂದು ವಿಹಾರವನ್ನು ಕಟ್ಟುವ ಬಗ್ಗೆ ನಿರ್ಧಾರವಾಗಿದೆ.

ಇಲ್ಲಿರುವ ನಿರಾಶ್ರಿತರು ತಮ್ಮೂರಿನಂತೆಯೇ ಸುಖವಾಗಿದ್ದಾರೆ ಪುನರ್ನಿವೇಶನದ ವ್ಯವಸ್ಥೆಯು ಅವರಿಗೆ ಸಂಪೂರ್ಣ ತೃಪ್ತಿ ಪ್ರದವಾಗಿದೆ. ಈ ನಿವೇಶನಕ್ಕಾಗಿ ಭಾರತ ಸರಕಾರಕ್ಕೆ ೬೦ ಲಕ್ಷ ರುಪಾಯಿ. ಅಂದರೆ, ಪ್ರತಿ ನಿರಾಶ್ರಿತನಿಗೆ ಐದು ವರ್ಷಗಳಿಗೆ ರೂ. ೨,೦೦೦ವಷ್ಟು ವೆಚ್ಚ ಬಂದಿದೆ. ಕೇಂದ್ರ ಸರಕಾರದ ಪರವಾಗಿ ರಾಜ್ಯ ಸರಕಾರವು ಬೈಲಕೊಪ್ಪದಲ್ಲಿ ಈ ಪುನರ್ನಿವೇಶನದ ವ್ಯವಸ್ಥೆಯನ್ನು ಮಾಡಿದೆ.

— —

ಕೃತಿ ಪರಿಚಯ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.

ಗೀತಾ ಸಾಂಗತ್ಯ: ಲೇಖಕರು ಮತ್ತು ಪ್ರಕಾಶಕರು: ಶ್ರೀ ಡಿ. ವಿ. ಹೊಳ್ಳ, ವಿದ್ವಾನ್, ಕುಂದಾಪುರ. ಪುಟಗಳು: ೧೩೦. ಬೆಲೆ: ರೂ. ೧=೫೦.

ಹೆಸರೇ ಸೂಚಿಸುವಂತೆ ಇದು ಶ್ರೀಮದ್ಭಗವದ್ಗೀತೆಯ ಸಾಂಗತ್ಯ ರೂಪೀ ಅನುವಾದ. ಗೀತೆಯ ಪ್ರತಿ ಶ್ಲೋಕವನ್ನೂ ಒಂದೊಂದು ಸಾಂಗತ್ಯದಲ್ಲಿ ಅನುವಾದ ಮಾಡಿದ್ದಾರೆ, ಶ್ರೀ ಹೊಳ್ಳರು. ವಿಶ್ವಧರ್ಮಕ್ಕೆ ಧಾರ್ಮಿಕ ಗ್ರಂಥವಾಗಬಲ್ಲ ಕೃತಿ ಶ್ರೀ ಭಗವಂತನ ಮುಖದಿಂದ ಹೊರಟ ಗೀತೆ. ವಿಶ್ವದ ಪ್ರಮುಖ ದೇಶಗಳೆಲ್ಲೆಲ್ಲ ಇದರ ಪ್ರಸಿದ್ಧಿಯಿದೆ. ಉಪನಿಷತ್ತೆನ್ನುವ ಗೋವಿನ ಕೆಚ್ಚಲಿಂದ ಗೀತೆಯೆಂಬ ಹಾಲನ್ನು ಗೋಪಾಲನು ಕರೆದು ಅರ್ಜುನನೆಂಬ ಕರುವಿಗೆ ಉಣ್ಣಿಸಿದನೆಂದು ಹೇಳುತ್ತಾರೆ, ಇದರ ಮಹಿಮೆಯನ್ನು. ಇಂತಹ ಅದ್ವಿತೀಯ ಕೃತಿಯ ಗದ್ಯಾನುವಾದಗಳು ಕನ್ನಡದಲ್ಲಿಯೂ ಹಲವಿವೆ. ಅಲ್ಲದೆ ಕ್ರಿ. ಶ. ೧೬೫೦ರ ಸುಮಾರಿನಲ್ಲಿದ್ದ ನಾಗರಸನು ೧೮ ಅಧ್ಯಾಯಗಳು ಹಾಗೂ ೭೩೭ ಭಾಮಿನಿ ಷಟ್ಪದಿಗಳಿರುವ ಭಗವದ್ಗೀತೆಯನ್ನು ಬರೆದು ಗೀತೆಯ ಅನುವಾದಕ್ಕೆ ಕೈ ಹಾಕಿದ್ದನು.

ಶ್ರೀ ಹೊಳ್ಳರ ಸಾಂಗತ್ಯವು ವರಾಹ ಪುರಾಣಾಂತರ್ಗತ ಗೀತಾ ಮಾಹಾತ್ಮ್ಯದ ಅನುವಾದವನ್ನೂ ಕೂಡಿದೆ. ಗೀತಾ ಧ್ಯಾನವನ್ನು ೯ ಭಾಮಿನೀಷಟ್ಪದಿಗಳಲ್ಲಿ ಬರೆದಿದ್ದಾರೆ. ಆ ಮೇಲೆ, ಗೀತೆಯ ಹದಿನೆಂಟು ಅಧ್ಯಾಯಗಳನ್ನೂ ಗೀತೆಯರ್ಥವನ್ನು ಪದಶೊಂದೊಂದು ಸಾಂಗತ್ಯದಲ್ಲಿ ತಿರುಳ್ಗನ್ನಡದಲ್ಲಿ ರಚಿಸಿದ್ದಾರೆ. ಹಾಡಿನ ಮಟ್ಟಿನ ಛಂದವನ್ನು ಬಳಸಿಕೊಂಡಿರುವುದು ಇದರ ಪಠನ ಪಾರಣಗಳಿಗೆ ಮಾತ್ರವಲ್ಲ ಗೇಯಕ್ಕೂ ಉಪಯುಕ್ತವೆನಿಸಿದೆ. ಗೀತೆಯ ಮೇಲೆ ವಿಮರ್ಶೆ ಮಾಡುವುದು ಅನಗತ್ಯ. ಅದು ಸರ್ವೋತ್ಕೃಷ್ಟ ಕೃತಿಯೆಂದು ವಿಶ್ವಮಾನ್ಯವಾಗಿಯೇ ಇದೆ.

ಗ್ರಂಥ ದಿಗ್ದರ್ಶನ ಮಾತ್ರಕ್ಕೆ ಮೂಲ, ನಾಗರಸನ ಗೀತೆ ಮತ್ತು ಶ್ರೀ ಹೊಳ್ಳರ ಸಾಂಗತ್ಯದಿಂದ ಒಂದು ಪದ್ಯವನ್ನುಲುದ್ಧರಿಸುವುದೇ ಸಾಕೆನಿಸುತ್ತದೆ.

ಕ್ಲೈಬ್ಯಂ ಮಾಸ್ಮಗಮಃ ಪಾರ್ಥ
ನೈತತ್ತ್ವಯ್ಯುಪಪದ್ಯತೇ
ಕ್ಷುದ್ರಂ ಹೃದಯ ದೌರ್ಬಲ್ಯಂ
ತ್ಯಕ್ತ್ವೋತ್ತಿಷ್ಠ ಪರಂತಪ ॥ (೨-೩)

ಅರಿಭಯಂಕರ ನೀ ನಪುಸಂಕ
ರಿರವನ್ನೈದಲು ಬೇಡ, ನಿನಗಿದು
ದೊರಕಲಾಗದು ಧೀರತನಕಿದು ಹಾನಿ
ಕರವಹುದು

ಮರುಳೆ ಬಡಮನದಿಂದ ಹೆದರದೆ
ಮರುಳುತನವನು ಬಿಟ್ಟು ಕದನಕೆ
ಭರವಸದಲೇಳೆನಲು ಕೃಷ್ಣಗೆ ಪಾರ್ಥ
ನಿಂತೆಂದ॥

ಫಲುಗುಣ ನೀಸರಂಪರನಾಗಿ ಮನ
ನೊಂದು
ಬಳಲುವುದೇನು ಯೋಗ್ಯತೆಯು?
ಬಲುಕ್ಷುದ್ರ ಹೃದಯದ ದುರ್ಬಲ
ತೆಯಬಿಟ್ಟು
ಗಳಿಲನೆದ್ದೇಳು ಸಂಗರಕೆ॥

ಇವರೀರು ಅನುವಾದಕರೂ ಪಾಷೆ ಬಳಸಿಕೊಂಡ ಛಂದಸ್ಸಿನ ಪಾದಪೂರ್ತಿಗೆ ಅನುಕೂಲವಾಗುವಂತೆ ಪದಗಳನ್ನು ಬಳಸಿಕೊಂಡಿರುವುದನ್ನು ನಾವು ಕಾಣಬಹುದು. ಆದರೂ ಎರಡು ಪಾದಗಳ ಶ್ಲೋಕ ವೃತ್ತವನ್ನು ಆರು ಪಾದಗಳಷ್ಟು ವಿಸ್ತರಿಸುವುದು ಕಠಿನವಾದುದರಿಂದಲೇ ನಾಗರಸನ ಅನುವಾದಕ್ಕಿಂತಲೂ ಹೊಳ್ಳರದೇ ಇಲ್ಲಿ ಮೇಲೆನಿಸುತ್ತದೆ. ಅನುವಾದದ ದೃಷ್ಟಿಯಿಂದ ನಾಗರಸನು ಗೀತೆಯ ಅರ್ಥವನ್ನು ಹಿಗ್ಗಿಸಿ ಕುಗ್ಗಿಸಿ ಹೇಳಿದ್ದಾನೆಂಬುದನ್ನು ಒಪ್ಪಿಕೊಳ್ಳಬೇಕು; ಆದರೆ ಹೊಳ್ಳರಿಗೆ ಇಂತಹ ಆಗತ್ಯವಿಲ್ಲ. ಪ್ರತಿ ಶ್ಲೋಕದ ಅರ್ಥವನ್ನವರು ಒಂದು ಸಾಂಗತ್ಯದಲ್ಲೇ ಸಂಗ್ರಹಿಸಲು ಶಕ್ತರಾಗಿದ್ದಾರೆ; ಈ ಕಾರ್ಯದಲ್ಲಿ ಅವರು ಯಶಸ್ವಿಗಳೂ ಆಗಿದ್ದಾರೆ.

ಆದಿತ್ಯಾನಾಮಹಂ ವಿಷ್ಣು
ಜ್ಯೋತಿಷಾಂ ರವಿರಂಶುಮಾನ್
ಮರೀಚಿರ್ಮರುತಾಮಸ್ಮಿ
ನಕ್ಷತ್ರಾಣಾಮಹಂ ಶಶೀ (೧೦-೨೧)

ಇದರ ಸಾಂಗತ್ಯಾನುವಾದ ಹೀಗಿದೆ:

ಈರಾರು ಆದಿತ್ಯರಲ್ಲಿ ವಿಷ್ಣುವು ನಾನೇ
ಸೂರ್ಯನು ಜ್ಯೋತಿರ್ಮಂಡಲದಿ
ತೋರುವ ಮರುತಗಳಲ್ಲಿ ಮರೀಚಿಯು
ತಾರೆಗಳಲ್ಲಿ ಚಂದ್ರಮನು॥

ಇಲ್ಲಿ ಈರಾರು ಮತ್ತು ತೋರುವ ಎಂಬೆರಡು ಪದಗಳು ಮಾತ್ರ ಹೊರಗಣಿಂದ ಬಂದಿವೆ; ಅನುವಾದವು ಅತ್ಯುತ್ತಮವಾಗಿವೆ

ಗೀತಾ ಸಾಂಗತ್ಯವೊಂದು ಆದರ್ಶ ಮತ್ತು ಉತ್ತಮ ಕೃತಿ; ಕನ್ನಡದಲ್ಲಿ ಯೇಗೀತೆಯನ್ನೋದುವ ಅವಕಾಶವನ್ನು ಕನ್ನಡಿಗರಿಗೆ ಇದು ಮಾಡಿಕೊಡುತ್ತದೆ. ಶ್ರೀ ಹೊಳ್ಳರ ಶೈಲಿ ಅತೀವ ಸರಳ, ಆದರೆ, ಸುಂದರ. ಭಾಷೆ ಎಲ್ಲರೂ ಅರಿತುಕೊಳ್ಳಬಹುದಾದ ತಿರುಳ್ಗನ್ನಡ; ಇದರಲ್ಲಿ ಗೀತೆಯ ಯಥಾರ್ಥವು ಯಥಾರ್ಥವಾಗಿಯೇ ಹೊರ ಹೊಮ್ಮಿದೆ. ಇತ್ತೀಚೆಗೆ ಪ್ರಕಟಗೊಂಡ ಕನ್ನಡ ಗ್ರಂಥಗಳಲ್ಲಿ ಇದೊಂದು ಅಪೇಕ್ಷಾ ಸಾಧನ; ಶ್ರೀ ಹೊಳ್ಳರ ಪರಿಶ್ರಮದ ಫಲ. ಇಂತಹ ಕೃತಿಯನ್ನು ಮನಃಪೂರ್ವಕ ಸ್ವಾಗತಿಸದಿರುವವರು ಯಾರು?

—ಗೋರಾ.

ನವಯುಗ

ವರ್ಷ	ಉಡುಪಿ	ವಾರ
೪೩	೨೩-೮-೧೯೬೪	೪೬

ಸಮಸ್ಯಾತ್ಮಕ ವ್ಯಕ್ತಿ

ಜಗತ್ತಿನ ಆಗುಹೋಗುಗಳಲ್ಲಿ ಅಮೆರಿಕೆಯ ಸ್ಥಾನಮಾನಗಳು ಅತ್ಯಂತ ಹಿರಿದಾದುದರಿಂದ ಅಲ್ಲಿಯ ಅಧ್ಯಕ್ಷನಾಗಿ ಆಯ್ಕೆ ಹೊಂದುವವನಾರು ಎಂಬುದರ ಬಗ್ಗೆ ಜಗತ್ತಿಗೆ ಜಗತ್ತೇ ಕುತೂಹಲಿಯಾಗುವುದು ಸಹಜ. ಇಂದಿನ ಅಂತಾರಾಷ್ಟ್ರೀಯ ಪರಿಸ್ಥಿತಿಯಲ್ಲಿ ಯಾವುದೇ ದೇಶದ ಪರಿಸ್ಪರ ಆಯ್ಕೆಯನ್ನು ಉಳಿದ ದೇಶಗಳು ಕಣ್ಣಿನಲ್ಲಿ ಎಣ್ಣೆ ಹಾಕಿ ನೋಡುತ್ತಿರುವುದಕ್ಕೆ ಭಾರತದ ಪ್ರಧಾನಿಯ ಆಯ್ಕೆಯ ಸನ್ನಿವೇಶವೇ ಒಂದು ಜ್ವಲಂತ ಉದಾಹರಣೆ. ಹಾಗಿರುವಾಗ ಅಮೆರಿಕೆಯ ಅಧ್ಯಕ್ಷ ಸ್ಥಾನಕ್ಕೆ ಮುಂದಿನ ನವಂಬರನಲ್ಲಿ ಚುನಾವಣೆ ನಡೆಯಲಿದ್ದು ಅದರಲ್ಲಿ ಯಾರು ಗೆದ್ದು ಬರುವರೆಂದು ನಿರೀಕ್ಷಿಸುತ್ತಿವೆ, ಎಲ್ಲ ದೇಶಗಳು. ಅಮೆರಿಕೆಯು ತನಗೆ ಬೇಕಾದವರನ್ನು ಆ ಹುದ್ದೆಗೇರಿಸಲು ಸ್ವತಂತ್ರವಿದೆ; ಅದರ ಆಂತರಿಕ ವಿಚಾರವದು. ಅದರಲ್ಲಿ ಹೊರಗಿನವರಿಗೆ ಕೈ ಹಾಕುವ ಸಂದರ್ಭವೇ ಇರಬಾರದು. ಆದರೂ ಅಂತಾರಾಷ್ಟ್ರೀಯ ವಲಯದಲ್ಲಿ ಅದು ಗಳಿಸಿದ ಮಹತ್ವದ ಪರಿಣಾಮವೇ ಎಲ್ಲರನ್ನೂ ಕುತೂಹಲ ಚಿತ್ತರನ್ನಾಗಿ ಮಾಡಿದೆ.

ಇದೀಗ ಅಲ್ಲಿ ಅಧಿಕಾರಾರೂಢರಾಗಿರುವ ಜಾನ್ಸನರು ಡೆಮೊಕ್ರೆಟಿಕ್ ಪಕ್ಷದ ಹುರಿಯಾಳುವಾಗಿ ಸ್ಪರ್ಧಿಸಲಿರುವರು. ಈ ಸಂಬಂಧದ ಅಧಿಕೃತ ಘೋಷಣೆ ಮಾತ್ರ ಬಾಕಿಯುಳಿದಿದೆ. ಇದೇ ವೇಳೆ, ರಿಪಬ್ಲಿಕನ್ ಪಕ್ಷವು ಸಿನೇಟರ್ ಗೋಲ್ಡವಾಟರರನ್ನು ಅಧ್ಯಕ್ಷ ಪದಕ್ಕೆ ಸ್ಪರ್ಧಿಸುವಂತೆ ಆಯ್ದುಕೊಂಡಿದೆ. ಸಿನೇಟರ್ ಗೋಲ್ಡ್‌ವಾಟರರ ಆಯ್ಕೆಯ ಬಗ್ಗೆ ಹಲವಾರು ಊಹಾಪೋಹಗಳೆದ್ದಿವೆ. ಇವೆಲ್ಲವುಗಳಿಗೂ ಅವರ ವ್ಯಕ್ತಿತ್ವವೇ ಕಾರಣ. ಒಂದೇ ಮಾತಿನಲ್ಲಿ ಹೇಳುವುದಾದರೆ, ಗೋಲ್‌ವಾಟರ್ ಒಬ್ಬ ಸಮಸ್ಯಾತ್ಮಕ ವ್ಯಕ್ತಿಯಾಗಿದ್ದಾರೆ. ಅವರ [illegible] ಮನೋವೃತ್ತಿ ಬಯಲಾಗಿರುವುದೇ ಇದಕ್ಕೆ ಪ್ರಬಲ ಕಾರಣ. ಕಳೆದ ಕೆಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಅಮೆರಿಕೆಯ ಉದಾರ ನೀತಿಯು ಗೋಲ್ಡ್‌ವಾಟರ್ ಅಧಿಕಾರಕ್ಕೆ ಬಂದರೆ ಬುಡಮೇಲಾಗುವುದೆಂದು ನಿರೀಕ್ಷಕರ ಅಭಿಪ್ರಾಯ. ಅವರು ಈಗ ಇಟ್ಟುಕೊಂಡಿರುವ ನೀತಿಯನ್ನು ಕಾರ್ಯರೂಪಕ್ಕಿಳಿಸಿದರೆ, ಜಗತ್ತಿನ ಆಕಾಶದಲ್ಲಿ ಕಾರ್ಮೋಡ ಹರಡುವುದು ಶಾಂತಿಗೊಂದು ಬಲಯುತ ಆಹ್ವಾನವಾಗುವುದು ಖಂಡಿತ. ಕಮ್ಯೂನಿಜಂನ ಬದ್ಧ ದ್ವೇಷಿಯವರಾದುದರಿಂದ ಜಗತ್ತಿನ ಕಮ್ಯೂನಿಸ್ಟ್ ಆಳಿಕೆಯ ಎಲ್ಲ ದೇಶಗಳ ಮೇಲೆಯೂ ಸೈನಿಕ ಹಾಗೂ ಅಣು ಶಕ್ತಿಯ ಕಾರ್ಯಾಚರಣೆಯನ್ನವರು ಕೈಗೊಳ್ಳುವರು; ಕಮ್ಯೂನಿಸ್ಟ್ ಆಳಿಕೆಯನ್ನು ಕಿತ್ತುಹಾಕುವರು. ಅಣು ಪರಿಶೀಲನಾ ನಿರ್ಬಂಧ ಮತ್ತು ನಿಶ್ಶಸ್ತ್ರೀಕರಣದ ಪ್ರಬಲ ವಿರೋಧಿಗಳಾದವರಿಂದ ಜಗತ್ತು ಪ್ರಳಯಂಕರ ಪರಿಸ್ಥಿತಿಯನ್ನೆದುರಿಸಬೇಕಾಗುವುದು. ತನ್ನ ಕಮ್ಯುನಿಸ್ಟ್ ಶತ್ರುಗಳನ್ನು ಸಂಹರಿಸಲು ಅವರು ಎಂತಹ ಉಗ್ರ ಕ್ರಮವನ್ನಾದರೂ ಕೈಗೊಳ್ಳಲು ಹಿಂಜರಿಯುವುದಿಲ್ಲ. ವಿಯತ್ನಾಮದ ಸಮರವು ಹೇಗೆ ಕೊನೆಗೊಳ್ಳಬೇಕು, ಅಣ್ವಸ್ತ್ರಗಳನ್ನು ನ್ಯಾಟೋ ರಾಷ್ಟ್ರಗಳು ಹೇಗೆ ಬಳಸಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರವನ್ನು ಈಗಿನಂತೆ ನಾಗರಿಕಾಧಿಕಾರಿಗಳಿಗೊಪ್ಪಿಸದೆ ಮಿಲಿಟರಿ ಜನರಲ್ಲರಿಗೆ ಕೊಟ್ಟು ಬಿಡುವರು. ಕಮ್ಯೂನಿಸ್ಟ್ ಚೀನಾಕ್ಕೆ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಪ್ರವೇಶ ನೀಡಿದರೆ, ಅಮೆರಿಕೆಯು ಅದರಿಂದ ಹೊರ ನಡೆಯುವುದು. ಆಯ್ದ ಕೆಲವು ದೇಶಗಳಿಗೆ ಮಿಲಿಟರಿ ಸಹಾಯ ನೀಡುವುದನ್ನುಳಿದು ಇತರ ರೀತಿಯ ಆರ್ಥಿಕ ಸಹಾಯವನ್ನವರು ಹಿಂದೆಗೆದುಕೊಳ್ಳುವರು. ಹೀಗೆ, ಸೋವಿಯತ್ತಿನೊಂದಿಗೆ ತಿಳುವಳಿಕೆಯು ಮೂಡುವಂತೆ ಮಾಡುವ ಇಂದಿನ ಅಮೆರಿಕನ್ ಸರಕಾರದ ನೀತಿಯನ್ನಿವರು ಸಂಪೂರ್ಣ ಕೈಬಿಟ್ಟು, ಸಮರ ಪ್ರಿಯ ಅಮೆರಿಕೆಯನ್ನು ರೂಪಿಸುವರು; ಕಮ್ಯುನಿಸ್ಟ ಜಗತ್ತು ಮೊತ್ತ ಮೊದಲಿಗೆ ಇವರ ಆಹಾರವಾಗುವುದು.

ಬರಿ ಗೋಲ್ಡ್‌ವಾಟರ್ ಗೆದ್ದು ಬಂದರೆ ಹೀಗಾಗಬಹುದು. ಆದರವರು ಗೆದ್ದು ಬರುವರೆ? ಇಂದಿನ ಪರಿಸ್ಥಿತಿಯಲ್ಲಿದು ಅಸಂಭವವೆಂದೇ ಹೇಳಬಹುದು. ಆದರೆ, ಅಮೆರಿಕೆಯ ದೊಡ್ಡ ರಾಜಕೀಯ ಪಕ್ಷವೊಂದು ಈ ಯೆಲ್ಲಾ ಪ್ರವೃತ್ತಿಗಳನ್ನು ಅರಿತುಕೊಂಡೇ ಅವರನ್ನು ಆ ಹುದ್ದೆಗೆ ಆಯಲು ನಿರ್ದೇಶಿಸಿದೆಯೆಂಬುದನ್ನು ಮರೆಯುವಂತಿಲ್ಲ. ಗೋಲ್ಡ್‌ವಾಟರ್‌ರ ನಂಬಿಕೆಯಲ್ಲಿ ವಿಶ್ವಾಸವಿಟ್ಟಿರುವ ಅಮೆರಿಕನ್ನರೂ ಬಹು ಸಂಖ್ಯೆಯಲ್ಲಿದ್ದಾರೆಯೆಂಬುದೇ ಇವರ ನಾಮಕರಣದ ಅರ್ಥ. ನೀಗ್ರೋಗಳಿಗೂ ಸಮಾನ ನಾಗರಿಕ ಹಕ್ಕುಗಳನ್ನು ಕೊಡಮಾಡಿದ, ಸೋವಿಯತ್ತಿನೊಂದಿಗೆ ಸ್ನೇಹದಿಂದ ವರ್ತಿಸುವ ಜಾನ್ಸನ್ ಸರಕಾರದ ನೀತಿಗೆ ಒಳಗಿಂದೊಳಗೇನೇ ಕರುಬುವ ಅಮೆರಿಕನ್ನರೂ ಇದ್ದಾರೆ. ಒಂದುವೇಳೆ ಗೋಲ್ಡ್ ವಾಟರ್ ಚುನಾವಣೆಗಳಲ್ಲಿ ಗೆಲ್ಲದೆ ಹೋದರೂ ಜಾನ್ಸನ್ ಸರಕಾರಕ್ಕೆ ತಲೆನೋವು ಮುಂದಿನ ನಾಲ್ಕು ವರ್ಷ ಕಡಿಮೆಯಾಗುವುದಿಲ್ಲ. ರಿಪಬ್ಲಿಕನ್ ಪಕ್ಷವು ಈ ಕ್ರಾಂತಿಕಾರಿ ನಾಯಕನ ಮುಂದಾಳುತನದಲ್ಲಿಯೇ ಮುಂದಿನಾಲ್ಕು ವರ್ಷಗಳು ಉಳಿಯುವುದು. ಹಾಗಾಗಿ ಅಂತಾರಾಷ್ಟ್ರೀಯ ವಲಯದಲ್ಲಿ ಅಮೆರಿಕೆಯು ತಳೆಯುವ ನೀತಿಯ ಮೇಲೆ ಗೋಲ್ಡ್‌ವಾಟರ್ ಪ್ರಭಾವ ಸಾಕಷ್ಟು ಬೀರದುಳಿಯಲಾರದು.

ಆಹಾರ ಧಾನ್ಯ ಬೆಲೆ ನಿರ್ಧಾರ

ರಾಷ್ಟ್ರಪತಿ ಡಾ|| ರಾಧಾಕೃಷ್ಣನ್ನರು ತಮ್ಮ ಇತ್ತೀಚೆಗಿನ ದಕ್ಷಿಣ ಭಾರತ ಸಂಚಾರದ ವೇಳೆ ಕೇಂದ್ರ ಆಹಾರ ಸಚಿವರ ಕಾರ್ಯಕ್ಷಮತೆಯನ್ನು ಪ್ರಶಂಸಿಸಿದರು. ಶ್ರೀ ಸುಬ್ರಹ್ಮಣ್ಯಂ ಆದರೂ ಆಹಾರವು ಅಯಶಸ್ವಿ ಮಂತ್ರಿ ಶಾಖೆಯಾದರೂ ಅದರಲ್ಲಿ ಯಶಸ್ಸು ಪಡೆಯುವೆನೆಂಬ ಆತ್ಮ ವಿಶ್ವಾಸವನ್ನು ವ್ಯಕ್ತ ಪಡಿಸಿದ್ದಾರೆ, ಇದು ಸಂತೋಷವೇ. ಆದರೂ ಭಾರತ ಸರಕಾರದ ಮಾಜಿ ಆಹಾರ ಮಂತ್ರಿಗಳಲ್ಲಿ ಹೆಚ್ಚಿನವರು ಇದೇ ಆಶಯವನ್ನಿಟ್ಟುಕೊಂಡಿದ್ದರೂ ಅವರು ಸೋತು ಹೋದ ಉದಾಹರಣೆಗಳುಂಟು. ರಫಿ ಅಹಮ್ಮದ ಕಿದ್ವಾಯಿ ಮತ್ತು ಅಜಿತ ಪ್ರಸಾದ ಜೈನರು ಇದಕ್ಕೆ ಸರಿಯಾದ ನಿದರ್ಶನ. ತುಸವಾದರೂ ಯಶ ಗಳಿಸಿದವರೆಂದರೆ ಎಸ್. ಕೆ. ಪಾಟೀಲರು. ಸದ್ಯ ಉತ್ಸಾಹಿಗಳೂ ಕಾರ್ಯಕುಶಲರೂ ಆದ ಸುಬ್ರಹ್ಮಣ್ಯಂ ಆಹಾರದ ಅಭಾವದ ಪರಿಹಾರ ಮತ್ತು ಅದರ ಬೆಲೆಯಲ್ಲಿ ಸ್ಥಿರತೆಯನ್ನು ಉಳಿಸಿಕೊಳ್ಳುವ ಹಲವು ಉಪಾಯಗಳನ್ನು ಪರಿಶೀಲಿಸಿ ಅವಕ್ಕೆ ಅಂತಿಮ ರೂಪ ನೀಡುತ್ತಲಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಆಹಾರಾದಿ ಧಾನ್ಯಗಳ ಬೆಲೆಯನ್ನು ನಿರ್ಧರಿಸುವಾಗ ಅದರ ಉತ್ಪಾದನಾ ವೇತನವನ್ನು ಕಡೆಗಣಿಸಬಾರದು. ತಾನು ಬೆಳೆದ ಆಹಾರ ಧಾನ್ಯಗಳಿಂದಲೇ ಅವನ್ನು ಮಾರಿಯೇ ಇತರ ಅವಶ್ಯಕ ಪದಾರ್ಥಗಳನ್ನು ಕೊಳ್ಳಬೇಕಾದ ರೈತನಿಗೆ ನ್ಯಾಯವು ದೊರೆಯಬೇಕು. ಬೆಲೆ ನಿರ್ಧಾರಣೆಯು ಉತ್ಪಾದಕರಿಗೂ ಬಳಕೆದಾರರಿಗೂ ಕೂಡಿಯೇ ನ್ಯಾಯದಾನ ಮಾಡಬೇಕು.

ಜಗತ್ಪರ್ಯಟನ

ರಶ್ಯಕ್ಕೆ ಹೊಸ ಅಧ್ಯಕ್ಷ

ಸೋವಿಯೆಟ್ ರಶ್ಯದ ಅಧ್ಯಕ್ಷ ಪದಕ್ಕೆ ಪ್ರಸ್ತುತ ರಶ್ಯದ ಪ್ರಥಮ ಉಪ ಪ್ರಧಾನ ಮಂತ್ರಿಗಳಾಗಿರುವ ಶ್ರೀ ಅನಾಸ್ಟಸ್ ಮಿಕೋಯನ್ನರು ಆಯ್ಕೆಗೊಂಡಿರುವರು. ರಶಿಯದ ಸಂಸತ್ತೆನಿಸಿರುವ ಸುಪ್ರೀಮ ಸೋವಿಯೆಟಿನ ಮುಕ್ತಾಯ ಸಭೆಯಲ್ಲಿ ಪ್ರಧಾನ ಮಂತ್ರಿಯಾಗಿರುವ ಶ್ರೀ ನಿಕಿಟಾ ಕ್ರುಶ್ಚೇವರು ಅವರ ಹೆಸರನ್ನು ಸೂಚಿಸಿದರು. ಪ್ರಸಕ್ತ ಅಧ್ಯಕ್ಷರಾಗಿರುವ ಶ್ರೀ ಲಿಯೊನಾಡ್ ಬ್ರೆಜ್ನೇವರನ್ನು ರಶಿಯನ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕಾರ್ಯದಲ್ಲಿ ಲಕ್ಷ್ಯ ಕೇಂದ್ರೀಕರಿಸಲು ಸಾಧ್ಯವಾಗಬೇಕೆಂದು, ಅಧ್ಯಕ್ಷ ಪದದಿಂದ ನಿವೃತ್ತಿಗೊಳಿಸಲಾಗಿದೆ ಎಂದು ವರದಿ.

ಮುಂಬೈ-ಬೆಂಗಳೂರು ವಿಮಾನ ಸಾರಿಗೆ

ಇಂಡಿಯನ್ ಏರ್ ಲ್ಯಾನ್ಸ್ ಕಾರ್ಪರೇಶನ್‌ನವರು ನಾಲ್ಕು ಹೊಸ ವಿಮಾನ ಸಾರಿಗೆಗಳನ್ನು ಪ್ರಾರಂಭಿಸಲು ನಿರ್ಧರಿಸಿದ್ದಾರೆ, ಇವುಗಳಲ್ಲಿ ಒಂದು ಮಂಗಳೂರು, ಗೋವಾ ಹಾಗೂ ಬೆಂಗಳೂರುಗಳೊಡನೆ ಮುಂಬಯಿಯನ್ನು ಜೋಡಿಸುವುದು- ಮುಂಬಯಿಯಿಂದ ಪ್ರತಿ ದಿನ ಹೊರಡುವ ಡಕೋಟಾ ವಿಮಾನವು ಬೆಳಗಾವಿ, ಗೋವಾ ಹಾಗೂ ಮಂಗಳೂರು ಮಾರ್ಗವಾಗಿ ಬೆಂಗಳೂರಿಗೆ ಬಂದು ಅದೇ ಮಾರ್ಗವಾಗಿ ತಿರುಗಿ ಹೋಗುವುದು. ೧೯೬೪ನೇ ಅಕ್ಟೋಬರ ಒಂದರಿಂದ ಈ ಹೊಸ ಸಾರಿಗೆ ಕಾರ್ಯಾರಂಭಿಸುವುದು ಎಂದು ತಿಳಿದು ಬರುತ್ತದೆ.

ಶಿಕ್ಷಣ ವ್ಯವಸ್ಥೆ ರೂಪಿಸಲೊಂದು ಆಯೋಗ

ಇದೇ ಶಿಕ್ಷಣ ಪದ್ಧತಿಯನ್ನು ಸವಿಸ್ತಾರವಾಗಿ ವಿಮರ್ಶಿಸಿ ಶಿಕ್ಷಣದ ಎಲ್ಲ ಮಟ್ಟಗಳಲ್ಲೂ ರಾಷ್ಟ್ರೀಯ ಪದ್ಧತಿಯೊಂದನ್ನು ರೂಪಿಸುವುದಕ್ಕಾಗಿ ಸಲಹೆ ನೀಡಲು ಒಂದು ಆಯೋಗವನ್ನು ರಚಿಸುವುದಾಗಿ ಭಾರತ ಸರಕಾರವು ಪ್ರಕಟಿಸಿದೆ. ಹದಿನಾರು ಜನ ಸದಸ್ಯರುಗಳ ಈ ಆಯೋಗದ ಅಧ್ಯಕ್ಷರಾಗಿ, ಪ್ರಕೃತ ವಿಶ್ವವಿದ್ಯಾಲಯ ಸಹಾಯಧನ ಆಯೋಗದ ಅಧ್ಯಕ್ಷರಾಗಿರುವ ಶ್ರೀ ಡಿ. ಎಸ್. ಕೋಠಾರಿಯವರು ನೇಮಿಸಲ್ಪಟ್ಟಿದ್ದಾರೆ. ಈ ಸಮಿತಿಯಲ್ಲಿ ಅವರು ಪ್ರತಿಷ್ಠಿತ ವಿದೇಶೀ ಶಿಕ್ಷಣ ತಜ್ಞರೂ ಇರುವದೊಂದು ವೈಶಿಷ್ಟ್ಯ.

ಕೇಂದ್ರ ಮಂತ್ರಿ ಮಂಡಲದಲ್ಲಿ ಬದಲಾವಣೆ

ಉದ್ದಿಮೆ ಮತ್ತು ಪೂರೈಕೆ ಮಂತ್ರಿಗಳಾಗಿದ್ದ ಸರದಾರ ಸ್ವರಣ ಸಿಂಗರನ್ನು ವಿದೇಶ ಮಂತ್ರಿಯನ್ನಾಗಿ ನೇಮಿಸಲಾಗಿದೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳಾಗಿರುವ ಶ್ರೀ|| ಎಚ್. ಸಿ ದಾಸಪ್ಪ ಅವರನ್ನು ಸರದಾರ ಸ್ವರ್ಣ ಸಿಂಗರ ಸ್ಥಾನದಲ್ಲಿ ಉದ್ದಿಮೆ-ಪೂರೈಕೆ ಮಂತ್ರಿಗಳೆಂದೂ ನೇಮಿಸಲಾಗಿದೆ. ನೀರಾವರಿ ವಿದ್ಯುಚ್ಛಕ್ತಿ ಶಾಖೆಯಲ್ಲಿ ಸಹಾಯಕ ಮಂತ್ರಿಗಳಾಗಿರುವ ಡಾ|| ಕೆ. ಎಲ್. ರಾವ್ ಅದೇ ಹುದ್ದೆಯಲ್ಲಿದ್ದು ಈ ಶಾಖೆಯನ್ನು ನೋಡಿಕೊಳ್ಳುವರು. ಕೃಷಿ ಉತ್ಪಾದನೆಯ ಹೆಚ್ಚಳದ ಕಡೆಗೆ ವಿಶೇಷ ಗಮನವೀಯಲು ಸಹಾಯಕವಾಗಲೆಂದು ಸದ್ಯದ ಆಹಾರ ಮತ್ತು ಕೃಷಿ ಮಂತ್ರಿ ಶ್ರೀ|| ಸುಬ್ರಹ್ಮಣ್ಯಂ ಅವರಿಗೆ ಸಮೂಹ ವಿಕಾಸ ಹಾಗೂ ಸರಕಾರ ಶಾಖೆಯ ಸಂಪೂರ್ಣ ಮೇಲ್ವಿಚಾರಣೆ ವಹಿಸಕೊಡಲಾಗಿದೆ ಎಂದು ರಾಷ್ಟ್ರಪತಿ ಭವನದಿಂದ ಹೊರಟ ಪ್ರಕಟಣೆ ತಿಳಿಸುತ್ತದೆ.

ಜನಸಂಖ್ಯೆಯ ಹೆಚ್ಚಳದ ಕುರಿತು ಮೆಹತಾ

ಜನಸಂಖ್ಯೆಯ ಹೆಚ್ಚಳದ ಇಂದಿನ ಪ್ರಮಾಣವನ್ನು ತಡೆಗಟ್ಟದಿದ್ದರೆ ದೇಶ

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆಯ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ.ಪಿ. ಮಾಡಿದರೆ 70 ನಯಾಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿಕೊಡುವಂತೆ ಬಿನ್ನವಿಸುತ್ತೇವೆ.

—ಮೆನೇಜರ್.

ಜಲ್ಲಿ ಸಾರ್ವಜನಿಕ ಆರ್ಥಿಕ ಕ್ರಾಂತಿಗಳು ಸಂಭವಿಸದೆ ಇರಲಾರವು ಎಂದು ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಅಶೋಕ ಮೆಹತಾರು ದೆಹಲಿಯಲ್ಲಿ ಕುಟುಂಬ ಯೋಜನೆಯ ಶಿಕ್ಷಣದ ಗೌರವ ಕಾರ್ಯಕರ್ತರ ಪರಿಷತ್ತಿನಲ್ಲಿ ಕಳೆದ ತಾ ೧೭ರಂದು ಹೇಳಿದರು. ಜನಸಂಖ್ಯೆಯು ಹೆಚ್ಚಳದ ವಿರುದ್ಧ ಯುದ್ಧ ಹೂಡಲೇ ಬೇಕು. ಇದು ಅನಿವಾರ್ಯ ಎಂದು ಅವರು ಹೇಳಿದರು. ಜನಸಂಖ್ಯೆಯು ಈಗಿನ ಪ್ರಮಾಣದಲ್ಲಿ ಹೆಚ್ಚುತ್ತಾ ಹೋದರೆ ನಾವು ಸಾಧಿಸುವ ಆರ್ಥಿಕ ಪ್ರಗತಿ ಹಾಳಾಗಿ ಹೋಗುವುದು ಎಂದು ಇವರು ಅಭಿಪ್ರಾಯ ವ್ಯಕ್ತಪಡಿಸಿ, ಕುಟುಂಬ ಯೋಜನೆಗೆ ಅನುಕೂಲ ಜನಾಭಿಪ್ರಾಯ ರೂಪಿಸುವುದು ಕಾರ್ಯಕರ್ತರ ಮೊತ್ತ ಮೊದಲ ಕರ್ತವ್ಯ ಎಂದು ಹೇಳಿದರು.

ವಾಸವಾಡರ ಎಚ್ಚರಿಕೆ.

ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ತಡೆಗಟ್ಟಲು ಕೇಂದ್ರಸರಕಾರವು ಕೂಡಲೇ ಕ್ರಮ ಕೈಕೊಳ್ಳಬೇಕೆಂದು ಅಖಿಲಭಾರತೀಯ ರೈಲ್ವೆ ಕೆಲಸಗಾರರ ರಾಷ್ಟ್ರೀಯ ಮಹಾ ಮಂಡಳದ ಅಧ್ಯಕ್ಷರಾದ ಶ್ರೀ॥ ಎಸ್. ಆರ್. ವಾಸವಾಡರು ಇತ್ತೀಚೆಗೆ ಕಲಕತ್ತದಲ್ಲಿ ಹೇಳಿದರು. ಇಲ್ಲವಾದರೆ ನಮ್ಮ ಇಡೀ ಅರ್ಥ ವ್ಯವಸ್ಥೆಗೆ ಧಕ್ಕೆ ತಟ್ಟುವುದು, ಯೋಜನೆಗಳೆಲ್ಲ ವಿಫಲಹೊಂದುವುವು. ನಾವು ಪ್ರಗತಿಗಾಗಿ ಕಳೆದ ಹದಿನೇಳು ವರ್ಷಗಳಿಂದ ಪಟ್ಟ ಶ್ರಮವೆಲ್ಲಾ ವ್ಯರ್ಥವಾಗಿ ಹೋಗಬಹುದು ಎಂದು ಅವರು ಎಚ್ಚರಿಗೆ ಇತ್ತಿದ್ದಾರೆ. ಲಾಭ ಬಡಕತನ, ಸಂಗ್ರಹ ಪ್ರವೃತ್ತಿ ಹಾಗೂ ಆಹಾರ ಧಾನ್ಯ ವ್ಯಾಪಾರದಲ್ಲಿ ಸಟ್ಟಾ ವ್ಯವಹಾರವನ್ನು ಉಗ್ರವಾಗಿ ಹತ್ತಿಕ್ಕಬೇಕೆಂದು ಅವರು ಸರಕಾರಕ್ಕೆ ಸಲಹೆ ಇತ್ತಿರುವರು.

ಪಂಚಾಯತ್ ರಾಜ್ಯ ಸಮ್ಮೇಳನ

ಬೆಂಗಳೂರಿನ ಲಾಲ್ ಭಾಗಿನಲ್ಲಿ ಕಳೆದ ತಾ. ೧೮ ಮತ್ತು ೧೯ರಂದು ಅಖಿಲ ಭಾರತ ಪಂಚಾಯತ್ ರಾಜ್ಯ ಪರಿಷತ್ತಿನ ನಾಲ್ಕನೇ ಸಮ್ಮೇಳನವು ಜರಗಿತು. ಶ್ರೀ ಜಯಪ್ರಕಾಶ ನಾರಾಯಣರು ಈ ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡಿದರು. ಪಂಚಾಯತ್ ರಾಜ್ಯ ಸ್ಥಾಪನೆಯ ಕುರಿತು ಒಂದು ವಿಸ್ತೃತ ಕಾರ್ಯಕ್ರಮ ಸಿದ್ಧಪಡಿಸುವುದಕ್ಕಾಗಿ ಒಂದು ಸಮಿತಿ ನೇಮಿಸಬೇಕೆಂದು ಪಂಚಾಯತ್ ರಾಜ್ಯಪರಿಷತ್ತಿನ ಪ್ರಧಾನ ಮಂಡಳಿಕ್ಕೆ ಕರೆ ಕೊಡುವ ಒಂದು ಗೊತ್ತುವಳಿಯನ್ನು ಈ ಸಮ್ಮೇಳನ ಒಮ್ಮತದಿಂದ ಸ್ವೀಕರಿಸಿತು. ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಪಂಚಾಯತ ರಾಜ್ಯಕ್ಕೆ ಅನುಗುಣವಾಗಿ ಸ್ಥಾಪಿಸಲಾಗುವ ಸಂಸ್ಥೆಗಳ ನಿರ್ವಹಣೆಗೆ ತೃಪ್ತಿಕರವಾಗಿ ಹಣ ನೀಡಲಾಗುವುದೆಂದು ಈ ಸಮ್ಮೇಳನದ ಮುಕ್ತಾಯ ಭಾಷಣ ಮಾಡುತ್ತಾ ಹೇಳಿದರು. ಪಂಚಾಯತ್ ರಾಜ್ಯ ವಿಧೇಯಕವನ್ನು ಮುಂದಿನ ವರ್ಷ ಜ್ಯಾರಿಗೆ ತರಲಾಗುವುದೆಂಬ ಆಶೆಯನ್ನು ಅವರು ವ್ಯಕ್ತಪಡಿಸಿದರು.

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

360 ಪುಟಗಳಿಗೂ ಮಿಕ್ಕಿದ

ಪಾಕೇಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧–೦೦

ಉತ್ತಮ ಪ್ರತಿ ರೂ. ೧–೫೦

ಒಂದು ಪ್ರತಿ ಬೇಕಾದವರು ಅಂಚೆ ವೆಚ್ಚ 30ನ. ಪೈಸೆ ಸೇರಿಸಿ ಬೇಕಾದ ಪುಸ್ತಕದ ಬೆಲೆಯನ್ನು ಮನಿಯಾರ್ಡರ ಮಾಡುವುದು.

ಬಿಡಿಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ಅಲ್ಲಲ್ಲಿಯ ಸುದ್ದಿಸಾರ

ಮಧ್ವರಾಜರ ಸ್ವದೇಶ ಗಮನ— ಕಳೆದ ತಾ. 16ರಂದು ತಮ್ಮ ಒಂದೂವರೆ ತಿಂಗಳ ವಿದೇಶ ಪ್ರಯಾಣವನ್ನು ಮುಗಿಸಿಕೊಂಡು ಮರಳಿದ ಶ್ರೀ ಎಂ. ಮಧ್ವರಾಜ ಎಂ ಎಲ್. ಎ ಯವರನ್ನು ಉಡುಪಿಮಂಡಲ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಡುಪಿ ತಾಲೂಕು ಬೋರ್ಡು ಸದಸ್ಯ ಶ್ರೀ ಬಿ ಕಾಳಪ್ಪ ಶೆಟ್ಟರು, ಉಡುಪಿ ಇಂಟಕಿನ ಕಾರ್ಯದರ್ಶಿ ಶ್ರೀ ಟಿ. ಎ. ವಾಸುದೇವನ್, ಉಡುಪಿ ನಗರ ಸಭಾ ಸದಸ್ಯ ಶ್ರೀ ಇರ್ವಿನ್ ಅಂದ್ರಾದೆ ಮತ್ತು ಪತ್ರಿಕೋದ್ಯಮಿಗಳೇ ಮೊದಲಾದವರು ಬಜ್ಪೆ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಶ್ರೀ ಮಧ್ವರಾಜರೊಂದಿಗೆ ವೈದ್ಯಕೀಯದಲ್ಲಿ ಉನ್ನತ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ಹೋಗಿದ್ದ ಅವರ ಸಹೋದರ ಡಾ॥ ಎಂ. ರವಿರಾಜರೂ ಇದ್ದರು.

ವಿಜಯಾ ಬ್ಯಾಂಕ್— ಮಂಗಳೂರಿನ ವಿಜಯಾ ಬ್ಯಾಂಕಿನ ಹೊಸ ಶಾಖೆಯೊಂದು ಧಾರವಾಡದಲ್ಲಿ ತಾ 26-7-64ರಂದು ತೆರೆಯಲ್ಪಡುವುದೆಂದು ತಿಳಿದು ಬರುತ್ತದೆ.

ಆಫ್ರಿಕಾ ರಾಷ್ಟ್ರಗಳ ಒಕ್ಕೂಟ ರಚನೆ

ಆಫ್ರಿಕೆಯ ಸಂಯುಕ್ತ ಸಂಸ್ಥಾನವನ್ನು ಸ್ಥಾಪಿಸಬೇಕೆಂದು, ಘಾನಾದ ಅಧ್ಯಕ್ಷ ಶ್ರೀ॥ ಕ್ವಾಮೆ ಎನ್ ಕ್ರೂಮಾರವರು ಕೈರೋದಲ್ಲಿ ಇತ್ತೀಚೆಗೆ ಸೇರಿದ ಆಫ್ರಿಕನ್ ವರಿಷ್ಠ ಪರಿಷತ್ತಿನಲ್ಲಿ ಮಾತಾಡುತ್ತ ಹೇಳಿದರು. ಇಂತಹ ಕೇಂದ್ರ ಸರಕಾರವೊಂದು ಇದ್ದರೇನೇ ಆಫ್ರಿಕವು ಉಳಿಯಬಹುದು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು.

ಜಪಾನದಲ್ಲಿ ಅತಿವೃಷ್ಟಿ

ಜಪಾನಿನ ಶಿಮಾನೆ ಪ್ರದೇಶದಲ್ಲಾದ ಭಾರಿ ಮಳೆಯಿಂದಾಗಿ ೧೦೮ ಜನರು ಮೃತಪಟ್ಟರೆಂದೂ ೩೩ ಜನರು ಕಾಣೆಯಾಗಿದ್ದಾರೆಂದೂ ಟೋಕಿಯೋದಿಂದ ಬಂದ ವಾರ್ತೆಯೊಂದು ಹೇಳುತ್ತದೆ. ವಿಪರೀತ ಮಳೆಯಿಂದಾಗಿ ಸುಮಾರು ೨೭ ಜನರು ಗಾಯಗೊಂಡಿರುವರು. ೩೩೦ ಮನೆಗಳು ನಾಶವಾಗಿ ಸಾವಿರಾರು ಜನರು ಮನೆಮಾರು ಕಳೆದು ಕೊಂಡಿರುವರು. ಮಹಾಪೂರದಿಂದಾಗಿ ೭೩೦ ಸೇತುವೆಗಳು ಕೊಚ್ಚಿಕೊಂಡು ಹೋಗಿವೆ ಎಂದೂ ನಂಬಲಾಗಿದೆ

ಪುರ ಭವನ— ಮಂಗಳೂರಲ್ಲಿ ರೂ. ಹತ್ತು ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾದ ಪುರ ಭವನದ ಕಟ್ಟಡವು ಸಪ್ಟಂಬರ್ ತಿಂಗಳೊಳಗೆ ಸಿದ್ಧವಾಗುವುದೆಂದೂ ಕೇಂದ್ರ ಶಿಕ್ಷಣ ಸಚಿವ ಶ್ರೀ ಎಂ ಸಿ. ಛಾಗ್ಲಾರವರು ಇದನ್ನು ಉದ್ಘಾಟಿಸುವ ಸಂಭವವಿದೆಯೆಂದೂ ತಿಳಿದು ಬರುತ್ತದೆ.

ಗಣೇಶ ನಾರಾಯಣ ರೈಗಳ ನಿಧನ— ಕಾಸರಗೋಡಿನ ವಕೀಲರೂ ಕೋಆಪರೇಟಿವ್ ಟೌನ್ ಬ್ಯಾಂಕಿನ ಅಧ್ಯಕ್ಷರೂ, ಶ್ರೀ ಮಲ್ಲಿಕಾರ್ಜುನ ದೇವಳದ ಟ್ರಸ್ಟಿಗಳಲ್ಲೊಬ್ಬರೂ ಆಗಿದ್ದ ಶ್ರೀ ಎಂ. ಟಿ ಗಣೇಶ ನಾರಾಯಣ ರೈಯವರು ಜುಲೈ 12ರಂದು ಸ್ವರ್ಗಸ್ಥರಾದರೆನ್ನಲು ವಿಷಾದಿಸುತ್ತೇವೆ, ದಿವಂಗತರು ಜನ ಸೇವಕರೂ ಜನಾನುರಾಗಿಗಳೂ ಆಗಿದ್ದರು.

ವಿದೇಶಪ್ರಯಾಣ: ಶ್ರೀ ಕಾಪು ಕೆ. ಪಿ. ಶೀನಪ್ಪ ಶೆಟ್ಟಿಯವರ ಚಿರಂಜೀವರಾದ ಡಾ. ಎಂ. ವಿಶ್ವನಾಥ ಶೆಟ್ಟಿ ಎಂ. ಬಿ. ಬಿ. ಬಿ ಎಸ್. ಇವರುಚ್ಚ ಶಿಕ್ಷಣಕ್ಕಾಗಿ ವಿಮಾನಮೂಲಕ ತಾ. 19-7-64ರಂದು ಅಮೇರಿಕಾಕ್ಕೆ ತೆರಳಿರುವರು, ಇವರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನವಿದ್ಯಾರ್ಥಿಯಾಗಿದ್ದರು

ವಾರ್ಷಿಕ ಚುನಾವಣೆ:— ಕಡಿಯಾಳಿ ಹಾಯರ್ ಎಲಿಮೆಂಟರೀ ಶಾಲೆಯ ಮಕ್ಕಳ ಕೂಟದ ವಾರ್ಷಿಕ ಚುನಾವಣೆಯು ತಾ 16-7-64 ರಂದು ನಡೆದು ಕು॥ ರಾಜೇಂದ್ರ ಆಚಾರ್ಯನು ಶಾಲಾ ಮುಖಂಡನಾಗಿಯೂ ಕು॥ ಶ್ರೀನಿವಾಸ ಮಡಿವಾಳನು ಮಕ್ಕಳ ಕೂಟದ ಕಾರ್ಯದರ್ಶಿಯಾಗಿಯೂ ಬಹುಮತದಿಂದ ಚುನಾಯಿಸಲ್ಪಟ್ಟರು.

ಇಂಟಕಿನ ಸಭೆ— ಕಳೆದ ತಾ 17ರಂದು ಉಡುಪಿ ವಿಭಾಗದ ಇಂಟಕಿನ ಸಭೆಯು ಉಪಾಧ್ಯಕ್ಷ ಶ್ರೀ ಬಿ. ಕಾಳಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಸಭೆಕರಲ್ಲಿ ಶ್ರೀಗಳಾದ ಎ ಜೆ. ಆಲ್ವಿ ಟಿ. ಎ. ವಾಸುದೇವನ್‌ರವರು ಇಂಟಕಿನ ಕಾರ್ಯ ವಿಸ್ತರಣೆಗಾಗಿ ಸಲಹೆಗಳನ್ನಿತ್ತರು.

ಉಡುಪಿ ರೋಟರಿ ಕ್ಲಬ್— ಈಗಿನ ಇಂಜಿನಿಯರಿಂಗ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಜ್ಞಾಪಕ ಶಕ್ತಿಯ ಮೇಲೆ ಬಹಳ ಒತ್ತಡ ಹಾಕಲಾಗುತ್ತಿದೆ. ಬರುವ ಐದು ವರ್ಷಗಳಲ್ಲಿ ಇದಕ್ಕೆ ಬದಲಾಗಿ ಅಮೇರಿಕದಲ್ಲಿರುವಂತೆ ಪಾಠಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ವಿದ್ಯಾರ್ಥಿಗಳು ತೋರಿಸುವ ಶಕ್ತಿಗೆ ಹೆಚ್ಚು ಮಹತ್ವ ಕೊಡುವ ಸಂಭವವಿದೆ.

ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ರೀಡರ್ ಶ್ರೀ ಬಿ. ಚಂದ್ರಶೇಖರ್‌ರವರು ಇದನ್ನು ತಾ. 14-7-64ರ ರೋಟರಿ ಕ್ಲಬ್ಬಿನ ಸಭೆಯಲ್ಲಿ ಹೊರಗೆಡಹಿದರು ಅವರು ಕೊಯಮತ್ತೂರಿನಲ್ಲಿ ಭಾರತದ ತಾಂತ್ರಿಕ ಸಂಸ್ಥೆಗಳ ಪ್ರಿನ್ಸಿಪಾಲರುಗಳ ಸಂಘವು ಅಮೇರಿಕದ ಸಹಾಯ ಸಂಸ್ಥೆಯೊಂದಿಗೆ ಸೇರಿ ಏರ್ಪಡಿಸಿದ್ದ ಬೇಸಿಗೆ ಶಾಲೆಯ ಅನುಭವಗಳನ್ನು ಕುರಿತು ಮಾತನಾಡುತ್ತಿದ್ದರು.

ಮೈಸೂರು, ಮದ್ರಾಸ್ ಮತ್ತು ಕೇರಳ ರಾಜ್ಯಗಳಿಂದ ೪೮ ಉಚ್ಚ ಇಂಜಿನಿಯರಿಂಗ್ ಅಧ್ಯಾಪಕರುಗಳೂ, ಹಲವು ಅಮೇರಿಕದ ಪ್ರಾಧ್ಯಾಪಕರುಗಳೂ ಭಾಗ ವಹಿಸಿದ್ದ ಈ ಶಾಲೆ ಬಹಳ ಉಪಯುಕ್ತವಾಗಿತ್ತೆಂದು ಅವರು ಅಭಿಪ್ರಾಯಪಟ್ಟರು ಇಂಜಿನಿಯರಿಂಗ್ ವಿದ್ಯಾಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಸಂಶೋಧನಕಾರರ ನಡುವಣ ಸಂಬಂಧದ ಬಗ್ಗೆ ಭಾಷಣಗಳು ಹಾಗೂ ಚರ್ಚೆಗಳು ನಡೆದುವೆಂದರು

ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ೩೧೬ ನೆ ಜಿಲ್ಲೆಯ ಗೌರ್ನರ್ ಡಾ॥ ಟಿ ಎಂ ಎ ಪೈಯವರು ಬರುವ ಆಗಸ್ಟ್ ೪ರಂದು ಉಡುಪಿ ರೋಟರಿ ಕ್ಲಬ್ಬಿಗೆ ಭೇಟಿಕೊಡುವುದರ ಮೂಲಕ ಈ ಜಿಲ್ಲೆಯಲ್ಲಿರುವ ರೋಟರಿ ಕ್ಲಬ್ಬುಗಳಿಗೆ ಅಧಿಕೃತ ಭೇಟಿ ಕೊಡುವ ಕಾರ್ಯಕ್ರಮವನ್ನು ಆರಂಭಿಸುತ್ತಾರೆಂದು ಕ್ಲಬ್ಬಿನ ಅಧ್ಯಕ್ಷ ಡಾ॥ ಎ ಕೃಷ್ಣರಾವ್ ಪ್ರಕಟಪಡಿಸಿದರು.

ಶ್ರೀ ಎಲ್. ಕೆ. ಶೆಟ್ಟಿಯವರು ಶ್ರೀ ಚಂದ್ರಶೇಖರ್‌ರವರು ವಿದ್ವತ್ಪೂರ್ಣವಾದ ಭಾಷಣ ಮಾಡಿದ್ದಕ್ಕೆ ವಂದನೆಗಳನ್ನು ಸಲ್ಲಿಸಿದರು.

ಪತ್ರಿಕೆಗಳ ಮೂಲಕ ಗೆಳೆತನ— ಅಮೇರಿಕದಲ್ಲಿ ಪ್ರವಾಸ ಮಾಡಿ ಈಚೆಗೆ ಹಿಂತಿರುಗಿದ ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯ ರಿಜಿಸ್ಟ್ರಾರ್ ಡಾ॥ ಟಿ. ಎಂ. ಎ. ಪೈಯವರು ಅಮೇರಿಕದ ಮಿಯಾಮಿ ಬೀಚ್ ನಗರದ ಪ್ರ್ಯಾಂಕ್ಲಿ ಸ್ಮರ್‌ರವರ ಒಡಂಬಡಿಕೆಯಿಂದ "ಫ್ರೆಂಡ್‌ಶಿಪ್ ಥ್ರೂ ಮ್ಯಾಗಜೈನ್" ಎಂಬ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಸ್ಮರ್‌ರವರು ಎಕಾಡೆಮಿಗೆ ನೆರವು ಕೊಟ್ಟದ್ದಕ್ಕಾಗಿ ಮೂರು ವರ್ಷಗಳ ಹಿಂದೆ ಎಕಾಡೆಮಿಯ ಗೌರವ ಫೆಲೋಶಿಪ್ ಕೊಟ್ಟು ಅಭಿನಂದಿಸಲಾಗಿತ್ತು. ಈ ಯೋಜನೆಯ ಪ್ರಕಾರ ಕೆನಡಾ ಮತ್ತು ಅಮೇರಿಕದ ಹಲವಾರು ಮಂದಿ "ಟೈಮ್ಸ್", 'ಲೈಫ್', "ರೀಡರ್ಸ್ ಡೈಜೆಸ್ಟ್" ಮುಂತಾದ ನಿಯತಕಾಲಿಕ ಪತ್ರಿಕೆಗಳನ್ನು ಇಲ್ಲಿ ಆಸಕ್ತಿಯುಳ್ಳ ವ್ಯಕ್ತಿಗಳಿಗೂ, ಸಂಸ್ಥೆಗಳಿಗೂ ಕಳಿಸಿಕೊಡಲು ಒಪ್ಪಿಕೊಂಡಿದ್ದಾರೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಅಮೇರಿಕ ಅಥವಾ ಕೆನಡಾದಲ್ಲಿರುವ ವ್ಯಕ್ತಿ ಅಥವಾ ಕುಟುಂಬದೊಂದಿಗೆ ಸ್ನೇಹ ಬೆಳೆಸಿಕೊಳ್ಳಲಿಚ್ಛಿಸುವವರು ೧೫ ಪೈಸೆಯ ಅಂಚೆ ಚೀಟಿಯುಳ್ಳ ಸ್ವಂತ ವಿಳಾಸದ ಲಕೋಟೆಯನ್ನು ಲಗತ್ತಿಸಿ 'ಫ್ರೆಂಡ್‌ಶಿಪ್ ಥ್ರೂ ಮ್ಯಾಗಜೈನ್', ದಿ ಎಕಾಡೆಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಬರೆಯಬೇಕಾಗಿ ಕೋರಲಾಗಿದೆ

ಬಜಕ್ಕಲು ಮಹಾಬಲ ಶೆಟ್ರ ನಿಧನ— ವಿಜಯಾ ಬ್ಯಾಂಕಿನಲ್ಲಿ ಸುಮಾರು 15 ವರ್ಷಕಾಲ ಕಾರ್ಯನಿರ್ವಾಹಕರಾಗಿದ್ದು 3-4 ವರ್ಷಗಳ ಕೆಳಗೆ ನಿವೃತ್ತರಾಗಿದ್ದ ಶ್ರೀ ಬಜಕ್ಕಲು ಮಹಾಬಲ ಶೆಟ್ಟರು ತಾರೀಕು 15-7-64ರಂದು ಮಂಗಳೂರಿನಲ್ಲಿ ತಮ್ಮ 65ನೇ ವಯಸ್ಸಿನಲ್ಲಿ ನಿಧನರಾದರೆನ್ನಲು ವಿಷಾದಿಸುತ್ತೇವೆ. ಆರಂಭದಲ್ಲಿ ವಕೀಲಿ ವೃತ್ತಿ ಕೈಗೊಂಡಿದ್ದ ಇವರು ವಿಜಯಾ ಬ್ಯಾಂಕಿನ ಕಾರ್ಯದರ್ಶಿಯಾಗಿ ಅದರ ಪ್ರಗತಿಗಾಗಿ ಸಾಧ್ಯವಾದಷ್ಟು ದುಡಿದಿದ್ದರು. ಇವರು ಸರಳರೂ ಸಾತ್ವಿಕರೂ ಆಗಿದ್ದರು ಇತ್ತೀಚೆಗೆ ಪಡೀಲಿನಲ್ಲಿ ಆಧುನಿಕ ರೀತಿಯ ಗೃಹ ನಿರ್ಮಾಣ ಗೈದು ಅಲ್ಲೇ ವಾಸವಾಗಿದ್ದರು. ದಿವಂಗತರ ದುಃಖಿ ಬಂಧು ಬಳಗದೊಂದಿಗೆ ಸಹಾನುಭೂತಿ ಪಡುತ್ತೇವೆ.

ಲೀವಿ ಹೆಚ್ಚಳಕ್ಕೆ ಜಿಲ್ಲಾ ಜನಸಂಘದ ತೀವ್ರ ವಿರೋಧ— ಕಳೆದ ತಾ. 13ರಂದು ಜಿಲ್ಲಾ ಭಾರತೀಯ ಜನಸಂಘವು, ರಿಸೆಟ್ಲ್‌ಮೆಂಟ್ ಅಧಿಕಾರಿಗಳ ಸಲಹೆಯಂತೆ ಲೀವಿ ಹೆಚ್ಚಿಸುವುದನ್ನು, ತೀವ್ರವಾಗಿ ವಿರೋಧಿಸುವುದಾಗಿ ಶ್ರೀ ಜೆ. ರಮೇಶ ಕಾಮತರು ತಿಳಿಸಿದರು. ಮುಂದುವರಿಯುತ್ತಾ ಅವರು ಲೀವಿ ಹೆಚ್ಚಳದಿಂದಾದ ಅನ್ಯಾಯಗಳನ್ನು ವಿವರಿಸಿ, ಕಂದಾಯ ಹೆಚ್ಚಳವನ್ನು ಖಂಡಿಸಿ ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವ ಮನವಿಗೆ ಜಿಲ್ಲೆಯಾದ್ಯಂತ ರೈತರ ಸಹಿಗಳನ್ನು ಸಂಗ್ರಹಿಸುವುದಾಗಿಯೂ, ರೈತರ ಸಮಸ್ಯೆಗಳನ್ನು ಚರ್ಚಿಸಲು ಆಗೋಸ್ತು ತಿಂಗಳಲ್ಲಿ ಜಿಲ್ಲಾ ರೈತ ಸಮ್ಮೇಳನವೊಂದನ್ನು ಮಂಗಳೂರಲ್ಲಿ ಜರಗಿಸುವುದಾಗಿಯೂ ತಿಳಿಸಿದರು.

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ನವಯುಗ ಪ್ರೆಸ್, ಉಡುಪಿ.

ಸಂಸಾರಸುಖದ ಸುಗ್ಗಿಗೆ

ಡಚ್ಚರಿಂದ ಪಾಠಕಲಿಯಬೇಕು

ನೆದರ್‌ಲ್ಯಾಂಡ್ಸ್ ಪಶ್ಚಿಮ ಯೂರೋಪಿನ ತಗ್ಗು ಸೀಮೆ. ಇದರ ರಮ್ಯತೆಯುಯನ್ನು ಹೆಚ್ಚಿಸಲು ನೆಲ, ನೀರು, ಆಕಾಶಗಳು ಇಲ್ಲಿ ಸನ್ನಾಹ ಮಾಡಿರುವಂತೆ ಕಂಡು ಬರುತ್ತದೆ. ಒಂದೆಡೆ ನೀರು ಮತ್ತೊಂದೆಡೆ ನೆಲ, ಮೇಲೆ ಸದಾ ಕಾರ್ಮುಗಿಲು. ಈ ಪರಿಸರದಲ್ಲಿ ನೆದರ್‌ಲ್ಯಾಂಡ್ಸಿನ ತಗ್ಗು ಪ್ರದೇಶ.

ವರ್ಷದಲ್ಲಿ ಬಹು ಭಾಗ ನೆದರ್‌ಲ್ಯಾಂಡ್ಸಿನ ಜನ ಕಾಲವನ್ನು ಮನೆಯಲ್ಲಿಯೆ ಕಳೆಯ ಬೇಕಾಗುತ್ತದೆ. ಪ್ರಾಯಶಃ ಗೃಹಜೀವನಕ್ಕೆ ಇಲ್ಲಿನ ಜನ ಅಂಟಿಕೊಳ್ಳಬೇಕಾದುದರಿಂದಲೋ ಏನೋ ಇದರಲ್ಲಿ "ಗೆಜೆಲ್ಲಿ ಗೀದ್" ಅಗತ್ಯತೆ ತೀರ ಬೇರೂರಿದೆ. "ಗೆಜೆಲ್ಲಿ ಗೀದ್"— ಈ ಪದ ಸಂಪೂರ್ಣ ಡಚ್ಚರ ಪದ. ಅದನ್ನು ಬೇರೆ ಭಾಷೆಗಳಿಗೆ ಅನುವಾದ ಮಾಡಿದರೆ ಅದರ ಸ್ವಾರಸ್ಯ ಕೆಡುತ್ತದೆ. ಗೃಹ ಜೀವನದ ಏಕಾಂತದಲ್ಲಿ ಮೂಡಿ ಬರುವ ಆತ್ಮೀಯತೆ, ತನಗೆ ತಾನೇ ಇರಬಹುದಾದ ವಾತಾವರಣ ತನ್ನನ್ನು ಪ್ರೀತಿಸುವ ಪ್ರೇಮಿಸುವ ವ್ಯಕ್ತಿಗಳ ಜವಾಬುದಾರಿಯನ್ನು ಸ್ವಂತ ಇಚ್ಛೆಯಿಂದ ಹೊರುವ ಅವಕಾಶ ಇವಿಷ್ಟನ್ನೂ ಆ ಸಣ್ಣ ಪದ ಸೂಚಿಸುತ್ತದೆ.

ಆದುದರಿಂದಲೇ ಡಚ್ಚರಿಗೆ 'ಮನೆ' ಯೆಂದರೆ ಬಹಳ ದೊಡ್ಡ ವಿಷಯ. ಒಳ್ಳೆಯ ಸಂಸಾರಕ್ಕೆ ಸೇರಿದವನು ಎನ್ನುವುದಕ್ಕಿಂತ ಒಳ್ಳೆಯ ಮನೆಯಿಂದ ಬಂದವನು ಎಂದರೆ ಅವರಲ್ಲಿ ಗೌರವ ಹೆಚ್ಚು. ಒಳ್ಳೆಯ ಸಂಸಾರಕ್ಕೆ ಸೇರಿದವನ ಎನ್ನುವ ವ್ಯಕ್ತಿ ಸಮಾಜದಲ್ಲಿ ಅವನಿಗಿರುವ ಪ್ರತಿಷ್ಠೆ, ಹಣಕಾಸಿನ ಸ್ಥಿತಿ ಇವಿಷ್ಟನ್ನು ಮಾತ್ರ ಸೂಚಿಸಬಲ್ಲದು ಎಂದು ಅವರ ಅಭಿಪ್ರಾಯ. 'ಒಳ್ಳೆಯ ಮನೆ' ಯೆಂದರೆ ಡಚ್ಚರಲ್ಲಿ ಅರ್ಥ ವ್ಯಾಪ್ತಿ ವಿಶಾಲ. ಸ್ವಾತಂತ್ರ್ಯ, ಮಾನವೀಯತೆ, ಸರಳತೆ, ಸತ್ಯ ಸಂಧತೆ ಈ ಎಲ್ಲದರ ಮೇಳವನ್ನು ಅದು ಸೂಚಿಸುತ್ತದೆ. ಆದ್ದರಿಂದಲೇ ಅವರು 'ಒಳ್ಳೆಯ ಮನೆಗೆ" ಅಷ್ಟು ಗೌರವ ನೀಡುವುದು. ಮನೆಯೆಂಬ ಸಹಜ ಸಾಂಘಿಕ ಜೀವನವನ್ನು ಪೋಷಿಸಲು ಸರಕಾರ ಹಾಗೂ ಅನೇಕ ಖಾಸಗೀ ಸಂಸ್ಥೆಗಳು ಕಾರ್ಯನಿರತವಾಗಿದ್ದು ಅನೇಕ ವೇಳೆ ಒಂದರ ಸೇವಾ ಕ್ಷೇತ್ರದಲ್ಲಿ ಮತ್ತೊಂದು ತಲೆ ಹಾಕುವ ಪ್ರಸಂಗಗಳು ಉಂಟಾಗಿ ಸಮಸ್ಯೆಯಾಗಿ ಪರಿಣಮಿಸಿತು. ಇದರ ಪರಿಹಾರಕ್ಕೆಂದು ಸಮಾಜ ಕಲ್ಯಾಣ ಸಚಿವರು ನಾಯಕತ್ವ ವಹಿಸಿ ಇಂತಹ ಸಂಘ ಸಂಸ್ಥೆಗಳನ್ನು ಮೇಳೈಸಿ ಒಂದು ಸಂಘಟಿತ ಸಂಸ್ಥೆಯನ್ನು ರೂಪಿಸಿದರು.

ಒಂದೇ ಗುರಿ ಮತ್ತು ಧ್ಯೇಯಗಳುಳ್ಳ ಅನೇಕ ಸಂಸ್ಥೆಗಳ ಘಟನೆ ದೀರ್ಘ ಚರ್ಚೆಗೆ ಎಡೆಗೊಟ್ಟಿತು. ಆದ್ದರಿಂದ ಕುಟುಂಬಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಧ್ಯಯನ ಮಾಡುವ ಕುಟುಂಬ ಮಂಡಳಿಯ ರಚನೆಯಾಯಿತು.

ಸಂಸಾರ ಜೀವನದ ರಕ್ಷಣೆ ಮತ್ತು ಅಭಿವೃದ್ಧಿಗಳತ್ತ ಕುಟುಂಬ ಮಂಡಳಿ ತನ್ನ ಗಮನವನ್ನು ಕೇಂದ್ರೀಕರಿಸಿದೆ. ವಿವಿಧಾಭಿಪ್ರಾಯ ಮತ್ತು ತತ್ವಗಳಿಗೆ ಸೇರಿದ ಪಕ್ಷಗಳನ್ನು ಪ್ರತಿನಿಧಿಸುವ ಹದಿನೇಳು ಮಂದಿ ಈ ಮಂಡಳಿಯ ಸದಸ್ಯರು. ಈ ಮಂಡಳಿ ಜನ್ಮವೆತ್ತಿದ ಕೇವಲ ಹತ್ತು ವರುಷಗಳ ಅವಧಿಯಲ್ಲಿ ಅದು ಅನೇಕ ವಿಷಯಗಳನ್ನು ಅಧ್ಯಯನ ನಡೆಸಿ ಸಲಹೆ ಮಾಡಿದೆ. ಸಾಂಸಾರಿಕ ಸಮಸ್ಯೆಗಳು ಎಷ್ಟು ಗಹನ ಹಾಗೂ ಎಷ್ಟು ಕ್ಲಿಷ್ಟ ಎಂಬುದರ ಪರಿಚಯವಿರುವವರಿಗೆ ಇದು ಸಾಧಿಸಿರುವ ಕೆಲಸಗಳು ನಿಜಕ್ಕೂ ಶ್ಲಾಘನೀಯವೆಂದು ಅನ್ನಿಸದೆ ಇರಲಾರದು. ಆಧುನಿಕ ಸಮಾಜದ ಅನೇಕ ಜಟಿಲ ಜೀವನದ ಸಮಸ್ಯೆಗಳು ಈ ಮಂಡಳಿಯ ಮುಂದೆ ಬರುತ್ತಿರುತ್ತವೆ.

ಇಂದಿನ ಸಮಾಜದಲ್ಲಿ ಸಮಸ್ಯೆಯಾಗಿ ಪರಿಣಮಿಸುತ್ತಿರುವ ವಿವಾಹ ಪದ್ಧತಿಯ ಬಗ್ಗೆ ಕುಟುಂಬ ಮಂಡಳಿ ಸಿದ್ಧಪಡಿಸಿರುವ ವರದಿ ಗಮನಾರ್ಹವಾದದು. ಕೇವಲ ವ್ಯಭಿಚಾರದ ಆಧಾರದ ಮೇಲೆಯೇ ವಿವಾಹ ವಿಚ್ಛೇದನಗಳನ್ನು ನ್ಯಾಯಾಲಯಗಳು ನೀಡಬಾರದೆಂದು ಮಂಡಳಿ ಸಲಹೆ ಮಾಡಿದೆ. ದಾಂಪತ್ಯದ ವಿಷಯದಲ್ಲಿ ಎಲ್ಲವೂ ಮುಖ್ಯವೇ. ವೈಯಕ್ತಿಕ ವಿವಾಹಗಳು ವಿಫಲ ಹೊಂದಲು ಕಾರಣವೇನು ಎಂಬುದು ವಿವೇಚಿಸ ಬೇಕಾದ ಅಂಶ. ಸಂಸಾರ ಒಡೆದು ಚೂರಾಗುತ್ತದೆ ಎನ್ನುವ ಭಯವಿದ್ದರೆ ಮಾತ್ರ ವಿವಾಹ ವಿಚ್ಛೇದನ ನೀಡಬೇಕು ಎಂದು ಮಂಡಳಿ ಸಲಹೆ ಮಾಡಿದೆ.

ದಾಂಪತ್ಯ ಜೀವನದ ಒಡನಾಡಿಗಳಲ್ಲಿ ತಲೆದೋರುವ ಸಮಸ್ಯೆಗಳನ್ನು ನಿವಾರಿಸಲು ದಾಂಪತ್ಯ ಜೀವನ ಸಲಹಾ ಸಂಸ್ಥೆಯೊಂದನ್ನು ಪ್ರತಿ ನ್ಯಾಯಾಲಯದ ವ್ಯಾಪ್ತಿಯಲ್ಲೂ ಸ್ಥಾಪಿಸ ಬೇಕೆಂಬ ಅಭಿಪ್ರಾಯವನ್ನು ಈ ಮಂಡಳಿ ತಿಳಿಸಿದೆ.

ಸಮಾಜದ ವಿವಿಧ ಕ್ಷೇತ್ರಗಳ ಅಧ್ಯಯನದಿಂದ ಇದು ಸಿದ್ಧಗೊಳಿಸಿರುವ ಮತ್ತೊಂದು ಉಪಯುಕ್ತ ವರದಿ, ಸಂಸಾರ ಮತ್ತು ಶಾಲೆಗಳ ನಡುವಣ ವ್ಯವಸ್ಥಿತ ಸಹಕಾರವನ್ನು ಕುರಿತು. ಶಾಲೆ ಹಾಗೂ ಮನೆಗಳಲ್ಲಿ ಮಗುವಿನ ಬೆಳವಣಿಗೆಯನ್ನು ಕುರಿತು ಈ ವರದಿಯಲ್ಲಿ ಶಾಲೆಗಳಲ್ಲಿರಬೇಕಾದ ಪೋಷಕ ಸಮಿತಿಗಳ ಅಗತ್ಯತೆಯನ್ನು ತಿಳಿಸಿದೆ.

ಸಂಸಾರದಲ್ಲಿ ಎಚ್ಚರಿಕೆ ಮತ್ತು ಕುಟುಂಬಗಳ ನೆರವು ಈ ವಿಷಯಗಳ ಬಗ್ಗೆ ಈಗ ಅಧ್ಯಯನ ನಡೆಸುತ್ತಿರುವ ಈ ಮಂಡಳಿ ಕುಟುಂಬದ ಅನೇಕ ಸಮಸ್ಯೆಗಳನ್ನು ತೀವ್ರವಾಗಿ ಪರ್ಯಾಲೋಚಿಸುತ್ತಿದೆ. ಮನೆಯಲ್ಲಿ ಮನೆಯೊಡತಿ ಕಾಯಿಲೆ ಬಿದ್ದರೆ ಸಂಸಾರದಲ್ಲಿ ಪರಿಸ್ಥಿತಿ ವಿರುಪೇರಾಗುವ ಕಾಲವಿದು. ಆಧುನಿಕ ಸಮಾಜ ವ್ಯವಸ್ಥೆಯಲ್ಲಿ ನೆರೆಹೊರೆಯವರಿಂದಾಗಲೀ, ಬಂಧು ಬಳಗಗಳಿಂದಾಗಲೀ ಸಹಾಯ ನಿರೀಕ್ಷಿಸುವಂತಿಲ್ಲ. ಇಂತಹ ಪರಿಸ್ಥಿತಿಗಳಲ್ಲಿ ಸಂಸಾರದಲ್ಲಿ ಯಾವ ರೀತಿಯಲ್ಲಿ ನೆರವು ನೀಡ ಬಹುದು ಎನ್ನುವುದನ್ನು ಮಂಡಳಿ ಆಲೋಚಿಸುತ್ತಿದೆ.

ಬಿಡುವು ವೇಳೆಯಲ್ಲಿ ಚಟುವಟಿಕೆಗಳತ್ತ ಕುಟುಂಬ ಮಂಡಳಿಯ ಗಮನ ಹರಿದಿದೆ. ಕೆಲಸದಿಂದ ದೂರಾಗುವುದು ಬಿಡುವಲ್ಲ. ಕೆಲಸದೊಡನೆ ಹೊಂದಿಕೊಳ್ಳುವುದು ಬಿಡುವು ಎನ್ನುವ ಅಭಿಪ್ರಾಯವನ್ನದು ಇತ್ತಿದೆ.

ಇನ್ನ ಇತರ ಅನೇಕ ಚಟುವಟಿಕೆಗಳ ಜೊತೆಗೆ ರಾಷ್ಟ್ರೀಯ ಸಮ್ಮೇಳನ ಕರೆಯುವ ಕಾರ್ಯಕ್ರಮವನ್ನೂ ಈ ಡಚ್ಚರ ಕುಟುಂಬ ಮಂಡಳಿ ಇಟ್ಟುಕೊಂಡಿದೆ. ಇಂದಿನ ಹಾಗೂ ನಾಳಿನ ಕುಟುಂಬ ಜೀವನದಲ್ಲಿ, ಅದರ ಹಿತರಕ್ಷಣೆಯಲ್ಲಿ ಆಸಕ್ತರಾದವರೆಲ್ಲ ಇದರಲ್ಲಿ ಪಾಲುಗೊಳ್ಳುವರು. "ಪುಟ್ಟ ಸಂಸಾರ", "ಸಂಸಾರ ಮತ್ತು ಶಾಲೆ", "ಸಂಸಾರದಲ್ಲಿ ತಂದೆಯ ಪಾತ್ರ" ಮುಂತಾದ ವಿಷಯಗಳನ್ನು ಇದು ನಡೆಸಿದ ಸಮ್ಮೇಳನಗಳಲ್ಲಿ ಚರ್ಚಿಸಲಾಗಿದೆ.

ವಿಭಿನ್ನ ತತ್ವ ದೃಷ್ಟಿಯುಳ್ಳ ಸದಸ್ಯರನ್ನೊಳಗೊಂಡು, ಗೃಹ ಶಾಂತಿಗೆ ಹವಣಿಸುತ್ತಿರುವ ಈ ಕುಟುಂಬ ಮಂಡಳಿ ಇಂದಿನ ಮತ್ತು ಮುಂದಿನ ಸುವ್ಯವಸ್ಥಿತ ಸಂಸಾರಗಳಿಗೆ ಪ್ರೋತ್ಸಾಹ ನೀಡುವ ಸ್ವಯಂ ಪ್ರೇರಿತ ನೀತಿಗೆ ಸಂಕೇತವಾಗಿ ನಿಂತಿದೆ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

REP 134/1964 REA 348/1964 in OS 567/62.

ಸುಬ್ರಾಯ ಭಟ್ಟ ....ವಾದಿ. ಅರ್ಜಿದಾರ ಮತ್ತು.

ನಾರಾಯಣ ಭಟ್ಟ, ಕೊಟೇಲು ಕೃಷ್ಣ ಭಟ್ಟರ ಮಗ, ಬೆಳ್ತಂಗಡಿ ತಾಲ್ಲೂಕು ಮಾಚಾರು ಗ್ರಾಮದ ಕೊಟೇಲು. ಎದುರು ಪ್ರತಿವಾದಿ

ಎದುರಿಗೆ ಕೋರ್ಟಿನಿಂದ ಪ್ರಕಾರ ತಿಳಿಸುವುದೇನೆಂದರೆ:

ಮೇಲ್ಕಂಡ ಡಿಕ್ರಿ ಮೇಲೆ ವಾದಿಯು ನಡ್ಡಿದ ಮೇಲಿನ ಅಮಲ್ಜಾರಿಯಲ್ಲಿ ನಿಂಮ ಬಾಬ್ತು ಡಿಕ್ರಿಗೆ ಜವಾಬ್ದಾರಿಯಾದುದರಿಂದ ಸ್ಥಿರಾಸ್ತಿಯನ್ನು ಹರಾಜಿಗೆ ಅಪೇಕ್ಷಿಸಿ ದಾಖಲು ಮಾಡಿದ ಅರ್ಜಿಯ ಹರಾಜಿನ ಷರತ್ತುಗಳನ್ನು ನಿರ್ಣಯಿಸುವರೆಯೂ ಅರ್ಜಿದಾರರಿಗೆ ದರ್ಖಾಸ್ತಿಗೆ ನಿಲ್ಲುವರೆ ಪರ್ಮಿಷನ್ ಕೊಡಿಸಬೇಕಾಗಿ ಸಹ ಮಾಡಿದ ಮೇಲ್ಕಂಡ ಅರ್ಜಿಗಳ ತಾ 17-8-64 ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮುಂಜಾನೆ ಕೋರ್ಟಿನ ಮುಂದೆ ಹಾಜರಾಗಿ ಉಪಸ್ಥಿತಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿದೆ

(Sd) C V. Shastry.
Advocate for Petitioner

ಪುತ್ತೂರು, ತಾ, 18-7-1964

Estd. 1921 **NAVAYUGA** P. B. No. 22

POPULAR KANNADA WEEKLY

UDIPI

Announcement

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 17th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the State. Kindly send in your advertisement material on or before August 5th, 1964.

ADVERTISEMENT RATES:

Full Page	... Rs. 125/-	Back Cover Page	... Rs. 500/-
Half Page	... Rs. 65/-	Inside 1st Cover Page	... Rs. 400/-
Quarter Page	... Rs. 35/-	Inside 2nd Cover Page	... Rs. 300/-

MECHANICAL DATA:

Paper Size ... 15" × 10" (37.5 Cm. × 25 Cm.) Size of type page ... 13" × 8" (32.5 Cm. × 20 Cm.)

Date of publication: 13–8–1964.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ಕಾಳಿದಾಸನ ಕಾವ್ಯಕೃತಿಗಳ ಪರಿಚಯ

(೪ನೇ ಪುಟದಿಂದ)

ತನ್ನ ನಾಲ್ಕು ನಾಟಕಗಳಲ್ಲಿಯೂ ಶೃಂಗಾರ ರಸಕ್ಕೆ ವಿಶೇಷ ಪ್ರಾಶಸ್ತ್ಯವಿತ್ತು ಪ್ರದರ್ಶಿಸಿದ್ದಾನೆ. 'ಶೃಂಗಾರವೇ ರಸಂ' ಅಲ್ಲವೇ. ಕವಿ ಕಾಳಿದಾಸ ಇದರಿಂದ ಹೊರತಾಗುವುದಾದರೂ ಎಂತು?

ಕವಿಯ ಕಾವ್ಯಗಳ; ನಾಟಕಗಳ ಬಗೆಗೆ ಜನತೆಯ ಮನಸ್ಸು ಅತಿ ಸುಲಭವಾಗಿ ಹರಿಯುತ್ತದೆ. ಶೃಂಗಾರಕ್ಕೆ ಹೆಚ್ಚು ಪ್ರಾಶಸ್ತ್ಯವಿತ್ತ ಕಾಳಿದಾಸ ಇತರ ರಸಗಳನ್ನು, ಭಾವಗಳನ್ನು ದೂರಮಾಡಿಲ್ಲ ಅಥವಾ ಮರೆತೂ ಇಲ್ಲ. ತನ್ನ ಅಮೋಘ ದೃಷ್ಟಿಯಲ್ಲಿ ರೂಪು ತಾಳಿ ನಿಂತ ಪಾತ್ರಗಳಲ್ಲಿ ಭಾವ, ರಸ, ಶಕ್ತಿಯನ್ನು ಮನದಣಿಯುವಂತೆ ಹೊರಗೆಡಹಿದ್ದಾನೆ. ಕಲ್ಲಿನಲ್ಲಿ ತನ್ನ ಕುಶಲ ಕಲಾಶಕ್ತಿಯಿಂದ ಸುಂದರ ಕಲಾಕೃತಿಯನ್ನು ರೂಪಿಸಿ ಜಗತ್ತಿಗೆ ತೋರಿಸಿ ಬೆರಗುಗೊಳಿಸುವ ಶಿಲ್ಪಿ ಎಂಬಂತೆ ಕಾಳಿದಾಸ ತನ್ನ ಕಾವ್ಯಾದಿಗಳ ಪಾತ್ರದಿಂದ ವಾಙ್ಮಯ ಲೋಕವನ್ನೇ ಬೆರಗುಗೊಳಿಸಿ ಶ್ರಾವಕನನ್ನು ನಲಿಸಿದ್ದಾನೆ.

ಕಣ್ವನಾಶ್ರಮದಲ್ಲಿ ದುಷ್ಯಂತ ಶಕುಂತಳೆಯರ ಮೊದಲ ಭೇಟಿಯು ಶೃಂಗಾರ ಸನ್ನಿವೇಶದಲ್ಲಿ ಮೈಮರೆತು ಮೆರೆದ ಓದುಗ ರಾಜಸ್ಥಾನದಲ್ಲಿ ದುಷ್ಯಂತನಿಂದ ತಿರಸ್ಕೃತಳಾದ ಶಕುಂತಲೆಯನ್ನು ಕಂಡು ಕಣ್ಣೀರು ಗರೆಯುತ್ತಾನೆ. ಬರಿಯ ಕಾವ್ಯವನ್ನು ಓದುವ ಓದುಗನನ್ನೇ ಅಲ್ಲ. ಪ್ರಿಯ ವಸ್ತುವನ್ನು ಅಗಲಬೇಕಾದ ಸಂದರ್ಭ ಬಂದಾಗ ಜೀವ ನಿರ್ಜೀವ ವಸ್ತುಗಳಿಂದಲೂ ಕಣ್ಣೀರು ತರಿಸುತ್ತಾನೆ ಕವಿ. ಅದೇ ಅವನ ಹಿರಿಮೆ, ಪ್ರತಿಭೆ. ಸುಖಾಂತ್ಯ ಹೊಂದಿದ ಕಾವ್ಯ ಕೃತಿಗಳು ಓದುಗನನ್ನು ಅಥವಾ ಶ್ರಾವಕನನ್ನು ನಲಿವಿನ ದಡವನ್ನು ತಂದು ಮುಟ್ಟಿಸುತ್ತವೆ.

ಕಾವ್ಯಗಳಲ್ಲಿ ನಾಟಕಗಳು ರಮ್ಯ. ಅದೂ ನಾಟಕಗಳಲ್ಲಿ "ಅಭಿಜ್ಞಾನ ಶಾಕುಂತಲ" ಸಂಸ್ಕೃತ ನಾಟಕ ಶ್ರೇಣಿಯಲ್ಲಿ ಉತ್ತುಂಗ ಶಿಖರ. ಇಂದಿಗೂ ಪ್ರತಿಯೊಬ್ಬರಿಗೂ ಸಂಸ್ಕೃತ ವಾಙ್ಮಯದಲ್ಲಿ ಪರಿಚಯವಿರುವುವು ಎರಡೇ ಹೆಸರುಗಳು ಒಂದು "ಕಾಳಿದಾಸ" ಮತ್ತೊಂದು "ಅಭಿಜ್ಞಾನ ಶಾಕುಂತಲ" ಕಾಳಿದಾಸನ ಕೃತಿಗಳಲ್ಲಿ "ಶಾಕುಂತಲ" ನಾಟಕ ಮಹಾ ಮೋಜು. ನಾಟಕದಲ್ಲಿ ನವರಸಗಳನ್ನು ಅಳವಡಿಸಿರುವ ಕವಿ ಕೃತಿಪಾತ್ರ, ಸನ್ನಿವೇಶ, ಘಟನೆಯನ್ನು ತನ್ನದೇ ಆದ ವೈಶಿಷ್ಟ್ಯ ಪೂರ್ಣ ಕಲಾಭಾವ ಶಕ್ತಿಯನ್ನು ತುಂಬಿ ಲೋಕೋತ್ತರ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದು ಅಜರಾಮರನಾಗಿದ್ದಾನೆ. ಕೃತಕೃತ್ಯನಾಗಿದ್ದಾನೆ.

ಶಾಕುಂತಲದಂತಹ ಕೃತಿ, ಕಾಳಿದಾಸನಂತಹ ಕವಿ ಬದುಕಿ ಬಾಳಿದ ರಾಷ್ಟ್ರವೂ ಧನ್ಯ. ರಾಷ್ಟ್ರೀಯರೂ ಧನ್ಯರು.

ಹಸಿದ ಭಿಕ್ಷುಕ ಅನ್ನ ಬೇಡಿ ಭುಜಿಸಿ ತನ್ನ ಹಸಿವನ್ನು ಅಡಗಿಸಿಕೊಳ್ಳಬಹುದು. ಆದರೆ ಜ್ಞಾನಾರ್ಥಿಗೆ ವಾಙ್ಮಯವೆನ್ನುವ ಜಲಪಾನ ಮಾಡಿದಂತೆಲ್ಲಾ ದಾಹ ಇಮ್ಮಡಿಯಾಗುತ್ತಲೇ ಇರುತ್ತದೆ. ಬೆಳೆದ ದಾಹ ಹಿಂಗಲು ಯಾವ ಸಾಗರದ ಜಲವೂ ಸಾಲದು. ಸಾಹಿತ್ಯ ಸಾಗರದ ಆಟ ಅಥವಾ ಜಲ ಪ್ರಮಾಣವನ್ನು ಅಳೆಯುವ ಶಕ್ತಿ ಯಾರಿಗೂ ಇಲ್ಲ. ಅವರವರ ಜಾಣ್ಮೆಗನುಸಾರವಾಗಿ ಜ್ಞಾನ ಜಲವನ್ನು ಪಡೆಯ ಬಹುದಷ್ಟೆ.

ಭಾರತದ ಭವ್ಯ ಸಂಸ್ಕೃತಿ, ಧರ್ಮ, ಪವಿತ್ರತೆ, ಶಕ್ತಿ, ಜ್ಞಾನಾದಿಗಳನ್ನು ಲೋಕಕ್ಕೆ ಎತ್ತಿ ಸಾರುವ ಕೃತಿಗಳು ನಮ್ಮ ವೇದಾದಿ ವಾಙ್ಮಯ, ಇತಿಹಾಸ, ಪುರಾಣ, ಕಾವ್ಯಗಳ ಸಂಸ್ಕೃತ ಅಮೂಲ್ಯ ಕೃತಿಗಳೇ ನಮ್ಮ ಜ್ಞಾನ ಭಂಡಾರ, ಸರ್ವ ಶಕ್ತಿಯ ಕೇಂದ್ರ. ಅನಾದಿಯಿಂದಲೂ ಬೆಳೆದು ವಿಕಾಸ, ಉದ್ಧಾರ, ಭವ್ಯತೆಗೆ ಕಾರಣವಾದ ಸಂಸ್ಕೃತ ಭಾಷೆ ದುರದೃಷ್ಟದಿಂದ ವಿನಾಶದ ಹಾದಿ ಹಿಡಿಯಿತ್ತು, ಹಿಡಿದಿದೆ. ತಾಯ್ನುಡಿಯಂತೆ ಈ ಭಾಷೆ, ಸಾಹಿತ್ಯ ಬೆಳೆಯಬೇಕಾದುದು ಅಗತ್ಯ. ಅದಕ್ಕಾಗಿ ದುಡಿಮೆ ಮೊದಲ ಕರ್ತವ್ಯ.

ವಿಶ್ವದ ಜನತೆಗೇ ತಂದು ಹಂಚುವ ವಸ್ತು ಜ್ಞಾನ ಶಕ್ತಿ, ಆಧ್ಯಾತ್ಮಿಕ ಶಕ್ತಿ ಭಾರತದಲ್ಲಿದೆ, ಸಂಸ್ಕೃತ ವಾಙ್ಮಯದಲ್ಲಿದೆ. ಜ್ಞಾನಕ್ಕಾಗಿ, ನಮ್ಮ ಉದ್ಧಾರಕ್ಕಾಗಿ ಪರ ಸಂಸ್ಕೃತಿ, ಪರರ 'ಜ್ಞಾನವನ್ನು ಭಿಕ್ಷುಕರಂತೆ ಕೈಯೊಡ್ಡಿ ಬೇಡುತ್ತಿರುವುದು ಲಜ್ಜಾಸ್ಪದ, ನಮ್ಮ ವೇದಾದಿ ಕಾಲದಿಂದ ಮೊದಲ್ಗೊಂಡು ಪರಕೀಯರ ಧಾಳಿ ಭಾರತದ ಮೇಲಾಗುವ ವರೆಗೆ ಸಂಸ್ಕೃತಿ ಧರ್ಮ, ಸಾಹಿತ್ಯಕ್ಕೆ ಯಾವ ಧಕ್ಕೆಯೂ ಒದಗಿರಲಿಲ್ಲ. ಇತ್ತೀಚೆಗೆ ಭಾರತೀಯರಿಗೇ ಮರೆಯಾದ ಸಂಸ್ಕೃತ ವಾಙ್ಮಯ ಶಕ್ತಿ, ಜ್ಞಾನ, ಹಿರಿಮೆಯನ್ನು ಭಾರತೀಯರಿಗೆ ತಿಳಿಸಲು, ಪರಿಚಯ ಮಾಡಿ ಕೊಡಲು ಪಾಶ್ಚಿಮಾತ್ಯರೇ ಮುಂದಾಗ ಬೇಕಾಯಿತು. ಈ ದೃಷ್ಟಿಯಲ್ಲಿ ಆ ಪುಣ್ಯಾತ್ಮರು ವಂದನಾರ್ಹರು.

ಎ. ಎ ಮೆಕ್ಡೊನಾಲ್, ಪ್ರೊ. ಕೀಲ್ ಎಂ. ವಿಂಟರ್‌ನಿಜ್, ಫರ್ಗೂಸನ್. ಡಾ|ಕಿವೆನ್ ಮಾರ್ಕ್ಸ್ ಮ್ಯೂಲರ್. ಮಿ. ಫ್ಲೀಟ್ ಮೊದಲಾದ ಅನೇಕ ಪ್ರಭಾವ ಪೂರ್ಣ ಭಾರತೀಯ ಸಂಸ್ಕೃತಿ, ಸಾಹಿತ್ಯಾಭಿಮಾನಿಗಳ ದುಡಿಮೆ, ಮಹತ್ವಾಧನೆ ಅಸದೃಶ. ಕವಿಗಳ, ಅವರ ಕೃತಿಗಳ, ಅಪರಿಚಿತ ಕೃತಿಗಳೆ, ಒಂದೇ ಹೆಸರಿನ ಇಬ್ಬರು ಕವಿಗಳ ವಿಷಯ ಸಂದೇಹಾಸ್ಪದವಾಗಿ ಕಾಣಬರುವುದು ಸ್ವಾಭಾವಿಕ. ಅದಕ್ಕಾಗಿ ಹೆಚ್ಚಿನ ಸಂಶೋಧನೆ ಅತ್ಯಗತ್ಯ. ಪಾಶ್ಚಾತ್ಯ ಹಾಗೂ ಭಾರತದ ಅನೇಕ ಪಂಡಿತರು, ಸಂಶೋಧಕರು ಈ ಹಾದಿಯಲ್ಲಿ ಹೆಚ್ಚು ಯಶಸ್ಸು ಗಳಿಸಿದ್ದಾರೆ ದುಡಿದಿದ್ದಾರೆ ಎನ್ನುವುದು ಹೆಮ್ಮೆಯ ಸಂಗತಿ.

ಭಾರತದ ಧರ್ಮ, ಸಂಸ್ಕೃತಿ, ವಿಶಾಲ ಅಂತಃಕರಣ, ವಿಶ್ವಬಾಂಧವ್ಯದ ಸಂದೇಶವನ್ನು ಎತ್ತಿ ಸಾರುವ ಪುರಾತನ ಸಂಸ್ಕೃತ ವಾಙ್ಮಯ ಬೆಳಕು ಬೀರಿ ಬದುಕಿದೆ. ಬೆಳಕು ಬೀರಲು ಬದುಕಬೇಕು. ಕಾಡಿನಲ್ಲಿ ಅರಳಿದ ನಾನಾ ಬಗೆಯ ಪುಷ್ಪಗಳು ಸೌರಭ ಬೀರುತ್ತವೆ. ಬೀರುವ ಸೌರಭ ಅವುಗಳಿಗಾಗಿ ಅಲ್ಲ ಲೋಕಕ್ಕಾಗಿ, ಅಂತೆಯೇ! ಪ್ರಕೃತಿ ನಿಯಮಕ್ಕನುಸಾರವಾಗಿ, ಅದರಂತೆಯೇ ಸಂಸ್ಕೃತ ವಾಙ್ಮಯ ಬದುಕಬೇಕಾದುದು ಭಾರತ ಹಾಗೂ ವಿಶ್ವದ ಉದ್ಧಾರಕ್ಕಾಗಿ, ಶಾಂತಿಗಾಗಿ.

ದಿವಂಗತ ಪ್ರಧಾನಿ ನೆಹರೂರವರ ಚಿತಾಭಸ್ಮ ಭರಿತ ಕಲಶಕ್ಕೆ ಅವರ ಸಂಬಂಧಿಕರು ಅಂತಿಮ ಗೌರವ ಸಲ್ಲಿಸುತ್ತಿರುವುದು.

ಹಗೆ ಗ ಡ ಲು

ಹೆಚ್ಚು ಹೆಚ್ಚು ಕೆಲಸ

ತನ್ನ ಆಫೀಸು ಸಿಬ್ಬಂದಿ, ಆಳು ಕಾಳುಗಳಿಂದ ಹೆಚ್ಚು ಹೆಚ್ಚು ಕೆಲಸ ಮಾಡಿಸ ಬೇಕೆಂದು ಅಪೇಕ್ಷಿಸಿದ ಸಾಹುಕಾರನೊಬ್ಬ, ಮನೋ ವಿಜ್ಞಾನಿಯೊಬ್ಬನ ಸಲಹೆಯಂತೆ 'ನಾಳೆ ಮಾಡುವ ಕೆಲಸವನ್ನು ಇಂದೇ ಮಾಡಿರಿ. ಇಂದು ಮಾಡುವ ಕೆಲಸವನ್ನು ಈಗಲೇ ಮಾಡಿರಿ" ಎಂಬ ಹಲಗೆಯನ್ನೊಂದನ್ನು ಬರೆಸಿ ಆಫೀಸಿನಲ್ಲಿ ತೂಗುಹಾಕಿದ.

ಆ ಹಲಗೆಯ ಪರಿಣಾಮ ಹೀಗಾಯಿತು.

ಆತ ಮರುದಿನ ಏಳುವಾಗಲೇ ಈ ಕೆಳಗಿನ ಸುದ್ದಿಯನ್ನು ಕೇಳಬೇಕಾಯಿತು.

ಅವನ ಹೆಂಡತಿ ಅವನ ಕಂಪೆನಿಯ ಭಾಗಸ್ಥನೊಂದಿಗೆ ಓಡಿ ಹೋಗಿದ್ದಳು.

ಅವನ ಆಫೀಸಿನ ಪೇಷ್ಕರನು ಆಫೀಸಿಗೆ ಕನ್ನ ಹಾಕಿ ಹಣ ದೋಚಿಕೊಂಡು ಪರಾರಿ ಯಾಗಿದ್ದನು

ಅವನ ಕ್ಲಾರ್ಕ್ ಲೇಡಿ ಟಾಯಪಿಸ್ಟ್‌ಳೊಂದಿಗೆ ಆ ದಿನವೇ ರಿಜಿಸ್ಟರ್ ಮದುವೆ ಮಾಡಿಕೊಳ್ಳುವವನಿದ್ದನು.

೦ ೦ ೦

ಇಬ್ಬರಿಗೂ ಚಿಂತೆ

'ನನ್ನ ಪತ್ನಿ ಯಾವಾಗಲೂ ತನ್ನ ಮೊದಲ ಗಂಡನಿರ ವಿಚಾರವನ್ನೇ ಹೇಳುತ್ತಿರುತ್ತಾಳೆ.'

'ಅದರೂ ಪರಾವಾ, ನನ್ನ ಹೆಂಡತಿ ತನ್ನ ಮುಂದಿನ ಗಂಡನಿರ ಕುರಿತೇ ಚಿಂತಿಸುತ್ತಿರುತ್ತಾಳೆ.

೦ ೦ ೦

ಮಾತಿಗೆ ಬೇಕು

ಹೆಂಡತಿ: ಆಹಾ! ಆ ಸೀರೆ ನೋಡು ಸ್ಪಿಡ್ಡರೆ ನನ್ನ ಬಾಯಿಯಿಂದ ಮಾತೇ ಹೊರಡೊಲ್ಲ.

ಗಂಡ: ಹಾಗಾದರದನ್ನು ಖಂಡಿತ ಕೊಂಡುಕೊಳ್ಳೋಣ.

—ಶ್ರೀ. ರಂಗ ವಿಠಾಳ, ಹಾರ್ಯಾಡಿ.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಆಕರ್ಷಣೆಯ ಎಲ್ಲಾ ವಿಧದ ಸಾಮಾನು ಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗೊರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್: 66 ಉಡುಪಿ.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

DONE AT

Crown RUBBER STAMP CO.

BALMATTA ROAD, MANGALORE.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦.

ನೆದರ್‌ಲ್ಯಾಂಡ್ಸಿನ

ಗುಡಿಗೋಪುರದ ಗಂಟೆಗಳು

ಘಂಟಾವಾದ್ಯ ಅಭ್ಯಾಸಕ್ಕೆ ವಿದೇಶಗಳಿಂದಲೂ ಇಲ್ಲಿಗೆ ಜನರು ಬರುತ್ತಾರೆ.

ಹಾಲೆಂಡಿನಲ್ಲಿ ಗಂಟೆಗಳನ್ನು ಕೇವಲ ದೇವಾಲಯಗಳ ಮೇಲೆ ಕಟ್ಟಿ ಬಾರಿಸುವುದಕ್ಕಷ್ಟೆ ಉಪಯೋಗಿಸುವುದಿಲ್ಲ. ಅವುಗಳನ್ನು ವಾದ್ಯಗಳಲ್ಲೊಂದೆಂದು ಭಾವಿಸಲಾಗಿದೆ. ಡಚ್ ಸಂಗೀತ ಕಲೆಯಲ್ಲಿ ಈ ಗಂಟೆಗಳ ನಾದಕ್ಕೆ ವಿಶೇಷ ಮಹತ್ವವಿದೆ. ಈ ಕಾರಣದಿಂದಾಗಿ ನೆದರ್‌ಲೇಂಡ್ಸಿನಲ್ಲಿ ಗಂಟೆಗಳ ತಯಾರಿಕೆಗೆ ವಿಶೇಷ ಪ್ರೋತ್ಸಾಹವಿದೆ.

ನಮ್ಮ ದೇಶದಲ್ಲಿ ಸಂಗೀತಕ್ಕೆ ತಬಲಾ, ಮೃದಂಗ ಮುಂತಾದವುಗಳನ್ನು ಪಕ್ಕವಾದ್ಯಗಳಾಗಿ ಉಪಯೋಗಿಸುವಂತೆ ಹಾಲೆಂಡಿನಲ್ಲಿ ಗಂಟೆಗಳನ್ನು ಪಕ್ಕವಾದ್ಯವಾಗಿ ಉಪಯೋಗಿಸಲಾಗುತ್ತಿದೆ. ಮಧುರವಾದ ಸಂಗೀತದ ನಡುನಡುವೆ ಘಂಟಾರವವಿತ್ತೆಂದರೆ ಸಂಗೀತದ ಮಾಧುರ್ಯವು ಅಧಿಕಗೊಳ್ಳುವುದು. ಇಡೀ ಜಗತ್ತಿನಲ್ಲಿ, ಗಂಟೆಗೆ ಇಷ್ಟು ಮಟ್ಟಿನ ಮಹತ್ವವು ಬೇರೆಲ್ಲೂ ಇರಲಾರದು.

ಬಹು ಪುರಾತನ ವಾದ್ಯ

ಅನೇಕ ಶತಮಾನದಿಂದಲೇ ನೆದರ್‌ಲೇಂಡ್ಸಿನ ಸಂಗೀತ ಕಲೆಯಲ್ಲಿ ಗಂಟೆಗೆ ಪ್ರಮುಖ ಸ್ಥಾನವನ್ನೀಯಲಾಗಿತ್ತು. ಆ ವಕ್ತ ಮೊದಲು, ಅವುಗಳನ್ನು ದೇವಾಲಯಗಳಲ್ಲಿ ಪವಿತ್ರ ಕಟ್ಟಿರಲಾಗಿತ್ತು. ಬೇರೆ ಬೇರೆ ಸ್ವರಗಳನ್ನೆಬ್ಬಿಸುವ ವಿವಿಧ ರೀತಿಯ ಗುಡಿ ಗಂಟೆಗಳನ್ನು ದೇವಾಲಯದ ಗೋಪುರಗಳಿಗೆ ಕಟ್ಟಿರಲಾಗುತ್ತಿತ್ತು. ಈ ಗಂಟೆಗಳ ಬಾರಿಸುವಿಕೆಯಿಂದ ಪ್ರವಹಿಸುವ ನಾದಲಹರಿಯು ಊರನ್ನೇ ಭಕ್ತಿಪರವಶಗೊಳಿಸುತ್ತಿತ್ತು.

ಗಂಟೆಯನ್ನು ವಾದ್ಯವಾಗಿ ಬಳಸಿಕೊಂಡ ಮೇಲೆ ಅದನ್ನು ಸುಮಧುರವಾಗಿ ನುಡಿಸಲು ವಿಶೇಷ ಪರಿಶ್ರಮ ಬೇಕಾಯಿತು. ಜಲತರಂಗವನ್ನು ಬಾರಿಸುವಂತೆ ಬೇರೆ ಬೇರೆ ನಾದವನ್ನೆಬ್ಬಿಸುವ ಗಂಟೆಗಳ ಸಹಾಯದಿಂದ ಸಂಗೀತ ಸುಧೆಯನ್ನು ಹರಿಯಿಸುವುದು ಸಾಧಾರಣ ಕಲೆಯಲ್ಲ. ಈ ರೀತಿ, ಸಂಗೀತದಲ್ಲಿ ವಿಶೇಷ ಜ್ಞಾನ ಉಳ್ಳವರನ್ನೇ ಆಗಿನ ಕಾಲದಲ್ಲಿಯೂ ದೇವಾಲಯಗಳ ಗಂಟೆಗಳನ್ನು ಬಾರಿಸಲು ನಿಯಮಿಸಿಕೊಳ್ಳಲಾಗುತ್ತಿತ್ತು. ಇಂತಹವರಿಗೆ ನೆದರ್‌ಲೇಂಡ್ಸಿನಲ್ಲಿ ಕ್ಯಾರಿಲೋನಿಸ್ಟ್ (carillonist) ಎಂದು ಹೆಸರು

ದೇವಾಲಯಗಳಲ್ಲಿ ಮೊದಲಿದ್ದ ಗಂಟೆಗಳು ಕ್ರಮೇಣ ವಾದ್ಯಗಳ ನಡುವೆ ಸ್ಥಾನವನ್ನು ಗಳಿಸಿಕೊಂಡವು. ಹಾಲೆಂಡಿನ ಪ್ರತಿ ನಗರ, ಗ್ರಾಮಗಳಲ್ಲಿಯೂ ಗಂಟೆಗಳಿಗೆ ವಿಶೇಷ ಮನ್ನಣೆಯುಂಟು. ಜನರಿಗೆ ಗಂಟೆಗಳ ಮೇಲೆ ಅಭಿಮಾನವು ಹೆಚ್ಚುತ್ತಾ ಬಂದಂತೆ, ಅಲ್ಲಿ ಗಂಟೆಗಳ ತಯಾರಿಕೆಯು ಹೆಚ್ಚುತ್ತಾ ಬಂದಿತು. ಎಲ್ಲೆಲ್ಲೂ ಗಂಟೆಗಳನ್ನು ತಯಾರಿಸುವ ಕಾರ್ಖಾನೆಗಳಿದ್ದುವು. ಇಂದು ಹಾಲೆಂಡಿನಿಂದ ಜಗತ್ತಿನ ನಾನಾ ಭಾಗಗಳಿಗೆ ಗಂಟೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ರಫ್ತು ಮಾಡಲಾಗುತ್ತಿದೆ.

ಎರಡನೆಯ ಮಹಾಯುದ್ಧದ ಕಾಲದಲ್ಲಿ, ಹಾಲೆಂಡಿನ ಮೇಲೆ ಆಟಂ ಬಾಂಬಿನ ಧಾಳಿಯಿಂದ ಹಲವಾರು ದೇವಾಲಯಗಳು ಅರ್ಧಮರ್ಧ ನಾಶಹೊಂದಿದವು. ಅಲ್ಲಿನ ಬಹು ಪುರಾತನ ಗಂಟೆಗಳು ಹಾಳಾಗಿ ಹೋದವು! ಇದರಿಂದ ಘಂಟಾವಾದ್ಯಕ್ಕೆ ಕೊಂಚ ಮಂಕು ಹಿಡಿಯಿತೆನ್ನಬಹುದು. ಆದರೆ, ಮಹಾಯುದ್ಧವು ಮುಗಿದು, ಶಾಂತಿ ನೆಲಸಿದ ಕೆಲವು ಕಾಲದಲ್ಲಿಯೇ ಮತ್ತೆ ಅದು ತನ್ನ ಪೂರ್ವ ಸ್ಥಾನವನ್ನು ಪಡೆಯಿತು. ಜನರಲ್ಲಿ ಅದರ ಬಗ್ಗೆ ಸುಪ್ತವಾಗಿದ್ದ ಅಭಿಮಾನವು ಮತ್ತೆ ಜಾಗೃತಗೊಂಡಿತು. ಅವುಗಳ ತಯಾರಿಕೆಯು ಮತ್ತೆ ತಲೆಯೆತ್ತಿತು. ಹೊಸ ವೇಗದಿಂದ ಅದು ಬೆಳೆಯತೊಡಗಿತು!

ಬಾಂಬಿನ ಧಾಳಿಯಿಂದ ಅನೇಕ ಗಂಟೆಗಳು ಪೂರ್ಣವಾಗಿ ನಾಶವಾಗಿದ್ದರೂ ಕೆಲವು ಸ್ವಲ್ಪ ಭಾಗ ಕೆಟ್ಟಿದ್ದವೂ ಇದ್ದವು. ಅಂತಹುಗಳನ್ನು ಸರಿಪಡಿಸಲಾಯಿತು. ನಾಶವಾದವುಗಳ ಸ್ಥಾನಗಳಲ್ಲಿ ಹೊಸ ಗಂಟೆಗಳನ್ನು ಇಡಲಾಯಿತು.

ಈಗ ನೆದರ್‌ಲೇಂಡ್ಸಿನಲ್ಲಿ, ಬ್ರಹ್ಮಾಂಡದಾಕಾರದ ಒಂಭತ್ತು ಘಂಟಾಮಾಲೆಗಳಿವೆ. ಒಂದೊಂದರಲ್ಲಿಯೂ ಕಡಿಮೆಯೆಂದರೆ ನಾಲ್ಕು ಗಂಟೆಗಳಿರುತ್ತವೆ. ನೆದರ್‌ಲೇಂಡ್ಸಿನಲ್ಲಿಯೇ ಅತಿ ಪುರಾತನವಾದ ಗಂಟೆಗಳ ಸಾಲು ಆಮಸ್ಟರ್‌ಡ್ಯಾಂನ ದೇವಾಲಯದಲ್ಲಿದೆ. ಇದರಲ್ಲಿ ೨೪ ಗಂಟೆಗಳಿದ್ದು, ಇದನ್ನು ೧೬೫೮ರಲ್ಲಿ ತಯಾರಿಸಲಾಯಿತು. ಉಟ್ರೆಸ್ ಥೆಲ್ಫ್, ಆಮರ್‌ಸ್ ಫೂರ್ಟ್ ನಗರ ದೇವಾಲಯಗಳಲ್ಲಿ ಕ್ರಮವಾಗಿ ೪೪ ೩೫, ೩೩ ಗಂಟೆಗಳಿರುವ ಸಾಲುಗಳಿವೆ. ಇವುಗಳಲ್ಲಿ ಒಂದೊಂದೂ ೫೦೦೦ ಪೌಂಡುಗಳ ತೂಕವಿದೆ.

ಪರಿಶ್ರಮ.

ಘಂಟಾವಾದ್ಯವನ್ನು ಕಲಿಯಲು ಅಲ್ಲಿನ ಜನರು ವಿಶೇಷ ಆಸ್ಥೆಯನ್ನು ವ್ಯಕ್ತಪಡಿಸುತ್ತಾರೆ, ಇದನ್ನು ಕಲಿಸುವ ಶಾಲೆಗಳೂ ಅಲ್ಲಿ ಬೇಕಾದಷ್ಟಿವೆ. ಶಾಲೆಗಳಲ್ಲಷ್ಟೇ ಅಲ್ಲದೆ, ದೇವಾಲಯಗಳಲ್ಲಿಯೂ ಇದನ್ನು ಕಲಿಸಲಾಗುವುದು. ಇದನ್ನು ಕಲಿಯಲು ನೆದರ್‌ಲೇಂಡ್ಸಿಗೆ ವಿದೇಶಗಳಿಂದ ಬರುವವರೂ ಇದ್ದಾರೆ.

ಘಂಟಾವಾದ್ಯ ರಸಿಕರ ಸಂಘಗಳೂ ನೆದರ್‌ಲೇಂಡ್ಸಿನಲ್ಲಿವೆ. ಅವುಗಳ ನೇತೃತ್ವದಲ್ಲಿ, ಘಂಟಾವಾದ್ಯ ಸಂಗೀತ ಸಭೆಗಳೂ, ಇದರ ವಿಷಯವಾದ ಚರ್ಚಾಕೂಟಗಳೂ, ಸ್ಪರ್ಧೆಗಳೂ ನಡೆಯುತ್ತಿರುತ್ತವೆ.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ರಿಜಿಸ್ಟರ್ಡ್ ಆಫೀಸು: ವಿಜಯಾ ಬ್ಯಾಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು 3 ದ. ಕ.

— ಏಲಂ ನೋಟೀಸು —

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾಜಿಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಜಿಸ್ತ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಜಿಸ್ತ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ -ವ- ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 30-7-1964ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದ್ದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 30-7-1964ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು—ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ-ಯಾ-ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು -ವ-ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ.	ತಾ. 30-6-1964ಕ್ಕೆ ಬರತಕ್ಕ ಮೊಬಲಗು ರೂ. ಪೈಸೆ.
170/61	ದೇವರಾಜ್, ನರಸಿಮ ಕೊಠಾರಿ ಮಗ, ಸಿರಿಯಾರ ಗ್ರಾಮ, ಪೋಸ್ಟ್ ಸ್ಯಾಬರಕಟ್ಟೆ.	213=12
269/61	ಸುಬ್ಬ, ಮಾರೂರನ ಅಳಿಯ, ಬೆಲ್ಲಿ ಮನೆ, ಹಳ್ನಾಡಿ ಗ್ರಾಮ, ಪೋಸ್ಟ್ ಹಳ್ನಾಡಿ ದ. ಕ.	76=07.
721/61	ಕೆ. ಎಮ್. ಗಣಪತಿ, ಎಲೆಕ್ಟ್ರಿಕಲ್ ಸುಪರ್ ವೈಸರ್, ಕುಂದಾಪುರ, ದ. ಕ.	91=12.
68/62	ಶಂಕರ ಶೆಟ್ಟಿ, ಶೇಷಮ್ಮ ಶೆಡ್ತಿಯವರ ಮಗ, ಕ್ಯೊಕಾಡಿ, ಮೊಳಹಳ್ಳಿ ಗ್ರಾಮ, ಪೋಸ್ಟ್ ಮೊಳಹಳ್ಳಿ ದ. ಕ.	101=86
109/62	ಎ. ಕೆ. ಕೋಡಿ, ಕೃಷ್ಣ ಕೋಡಿಯವರ ಮಗ, ಕುಂದಾಪುರ, ಪೋಸ್ಟ್ ಕೋಡಿ ದ. ಕ.	64=05
117/62	ವಿಠಲ ಸೆಟ್ಟಿ, ಮಂಜಯ ಸೆಟ್ರ ಅಳಿಯ ಹಾಲಾಡಿ ಕೆರಾಡಿ ಗ್ರಾಮ, ಪೋಸ್ಟ್ ಕೊಲ್ಲೂರು ದ. ಕ.	57=17
168/62	ಕೊರಗಯ್ಯ ಸೆಟ್ಟಿ. ಚಿಕ್ಕಮ್ಮ ಸೆಡ್ತಿಯವರ ಮಗ,ಹಳನಾಡು ದೊಡ್ಡಮನೆ, ಪೋಸ್ಟ್ ಕಂಡ್ಲೂರು	100=26
180/62	ಎಚ್. ಮೋನಪ್ಪ ಸೆಟ್ಟಿ, ವೀರಣ್ಣ ಸೆಟ್ರ ಮಗ ಹಾಲಾಡಿ ಗ್ರಾಮ, ಪೋಸ್ಟ್ ಹೈಕಾಡಿ, ದ. ಕ.	336=41
252/62	ಪಿಲಿಪ್ ಕಾರ್ವೆಲ್ಲೊ, ರುಜಾರಿಯೊ ಕಾರ್ವೆಲ್ಲರ ಮಗ, ಒಡೇರ್ ಹೋಬಳಿ ಗ್ರಾಮ, ಹುನ್ಸೆಕಟ್ಟೆ, ಪೋಸ್ಟ್ ಕುಂದಾಪುರ, ದ ಕ.	57=95
261/62	ಕೆ. ಸೀತಾರಾಮ ಐತಾಳ, ಚೆಯರ್‌ಮೇನ್ ಕೋಟೇಶ್ವರ ಪಂಚಾಯತ್, ಕೋಟೇಶ್ವರ, ದ. ಕ.	194=11
340/62	ಅಣ್ಣಪ್ಪ ಸೆಟ್ಟಿ, ವೆಂಕಪ್ಪ ಸೆಟ್ರ ಮಗ, ಬಾಗಲಬೆಟ್ಟು, ಅಲೂರು ಗ್ರಾಮ, ಪೋಸ್ಟ್ ಅಲೂರು, ದ. ಕ.	41=76
357/62	ದೇವರಾಜ್, ನರಸಿಮ ಕೊಠಾರಿ ಮಗ, ಸಿರಿಯಾರ ಗ್ರಾಮ ಪೋಸ್ಟ್, ಸ್ಯಾಬರಕಟ್ಟೆ ದ. ಕ.	255=66
417/62	ಕೆ ಎಸ್. ಪ್ರಭಾಕರ, ಕೆ. ಸೀನಪ್ಪ ಸೇರಿಗಾರರ ಮಗ, ಅಗರ, ಪೋಸ್ಟ್ ಅಗರ, ತೀರ್ಥಹಳ್ಳಿ ತಾಲೂಕು	652=16
179/62	ಎಮ್. ಗಣಪಯ್ಯ ಸೆಟ್ಟಿ, ಎಮ್. ಜಗನ್ನಾಥ ಸೆಟ್ರ ಮಗ ವಂಡ್ಸೆ, ಪೋಸ್ಟ್ ವಂಡ್ಸೆ ದ. ಕ.	85=16
541/62	ಎಚ್. ದಿವಾಕರ ಹೆಗ್ಡೆ, ಮಹಾಬಲ ಹೆಗ್ಡೆಯವರ ಅಳಿಯ ಹಿರಿಯಾಣ ಗ್ರಾಮ, ಪೋಸ್ಟ್ ಹಿರಿಯಾಣ ದ. ಕ.	77=96
610/62	ಯು. ವೆಂಕಪ್ಪ ಸೆಟ್ಟಿ, ಕೃಷ್ಣಪ್ಪ ಸೆಟ್ರ ಮಗ, ಬನ್ನಾಡಿ ಗ್ರಾಮ, ಪೋಸ್ಟ್ ಬನ್ನಾಡಿ, ದ. ಕ.	132=46

ಸ್ಥಳ: ಕುಂದಾಪುರ,
ತಾ. 15-7-64.

ಕೆ. ಭಾಸ್ಕರ ಹೆಗ್ಡೆ,
ಏಜಂಟ್.

ನಮಸ್ಕಾರ ಪದ್ಧತಿ

(೩ನೇ ಪುಟದಿಂದ)

ಕೆಲವು ಅಧ್ಯ ಮಹನೀಯರು ತಾವಾಗಿ ಮೊದಲು ವಂದಿಸಿದರೆ ತಮ್ಮ ಘನತೆ (ಡಿಗ್ನಿಟಿ)ಗೆ ಕುಂದೆಂದು ಭಾವಿಸುತ್ತಾರೆ. ಉದಾಹರಣೆಗಾಗಿ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಒಮ್ಮೆ ಕಂಡಾಗ "ನಮಸ್ಕಾರ ಸ್ವಾಮಿ" ಎನ್ನೋಣ "ಓಹೋ ನಮಸ್ಕಾರ ನಮಸ್ಕಾರ" ಎಂದದನ್ನು ನಮಗೆ ಹಿಂದಿರುಗಿಸುತ್ತಾ, ತನ್ನ ಮುಖವನ್ನು ಸ್ವಲ್ಪ ದೊಡ್ಡದು ಮಾಡಿ ಎದೆಯನ್ನುಬ್ಬಿಸಿ, ಮೀಸೆಗೆ ಕೈ ಕೊಡುತ್ತಾ "ಮತ್ತೇನು ವಿಶೇಷ? ಹೇಗಿರುವಿರಿ?" ಎಂದೆಲ್ಲಾ ಪ್ರಶ್ನಿಸುತ್ತಾನೆ. ಅದೇ ವ್ಯಕ್ತಿ ತಿರಿಗೊಮ್ಮೆ ದೊರೆತಾಗ ನಾವೇ ಮೊದಲು ವಂದಿಸಿದರಾಯಿತು ಇಲ್ಲವಾದರೆ ಮುಖ ತಿರುಗಿಸಿ ಪರಿಚಯವಿಲ್ಲದವರಂತೆಯೇ ವರ್ತಿಸುತ್ತಾನೆ. ಏಕೆಂದರೆ ಮೊದಲಾಗಿ ತಾನು ವಂದಿಸಿದರೆ ತನ್ನ ಘನತೆ ಕಡಿಮೆಯಾಗುವುದೆಂದೂ, ನಾವೇ ಮೊದಲಾಗಿ ವಂದಿಸಬೇಕೆಂದೂ ಅವನ ಅಭಿಪ್ರಾಯವಾಗಿರುತ್ತದೆ. ಇದೇ ವ್ಯವಹಾರ ವಿದ್ಯಾರ್ಥಿ ಅಧ್ಯಾಪಕರಲ್ಲಿ ನಡೆಯುತ್ತದೆ. ನೌಕರ ಧನಿಗಳಲ್ಲಿಯೂ ಕಡಿಮೆಯಿಲ್ಲ.

ಹೀಗೆ 'ನಮಸ್ಕಾರ ಪದ್ಧತಿ'ಯಿಂದು ಕೇವಲ ಒಂದು ಪದ್ಧತಿಯೇ ಆಗಿ ಹೋಗಿದೆ. ಇದರಿಂದ ಸಮಾಜದಲ್ಲಿ ಸೌಹಾರ್ದತೆ; ಭಾವೈಕ್ಯವುಂಟಾಗಲು ಸಾಧ್ಯವೇ ಇಲ್ಲ. ವ್ಯಕ್ತಿ ಮೇಲಾಗಲೀ ಕೀಳಾಗಲೀ ಎಲ್ಲರೊಡನೆಯೂ ಪ್ರೀತಿಯಿಂದ, ನಯ ವಿನಯಗಳಿಂದ ವರ್ತಿಸುವುದರಿಂದಲೇ ದೇಶೋದ್ಧಾರ ಸಾಧ್ಯ. ಆಗಲೇ ಈಗ ಕನಸಿನ ಗಂಟಾದ ರಾಷ್ಟ್ರೀಯ ಭಾವೈಕ್ಯ ನನಸಾಗಬಲ್ಲುದು. ಭಾರತಾಂಬೆಯ ಕೀರ್ತಿ ವಿಶ್ವತೋಮುಖವಾಗುವುದು.

ಅವಳೇ ಇವಳು

(೩ನೇ ಪುಟದಿಂದ)

ಹಾ....ಅವಳನ್ನು ಮತ್ತೊಮ್ಮೆ ಕಾಣುವ ನಿರೀಕ್ಷೆ.

"ಯಾಕಪ್ಪಾ ಬೆಂಗಳೂರಿಗೆ?"

"ಗೋಪಾಲ ನೀನು ಪರೀಕ್ಷೆಯಲ್ಲಿ ಪಾಸಾಗಿ ಬಂದಿದ್ದಿ. ಈಗಾಗಲೇ ನನಗೊಂದು ಹೆಣ್ಣಿನ ಕಡೆಯಿಂದ ಕಾಗದ ಬಂದಿದೆ. ನಿನ್ನ ರಿಸಲ್ಟು ತಿಳಿಯಲು ನಾನ ಕಾದು ಕುಳಿತಿದ್ದ"

"ಮದುವೆಯೇ. ನಾನು ಸದ್ಯ ಮದುವೆಯಾಗುವುದಿಲ್ಲಪ್ಪಾ" ಅವಸರವಸರವಾಗಿ ನುಡಿದಾಗ ಅವನ ಸ್ಮೃತಿಪಟಲದಲ್ಲಿ ರತ್ನಳ ಮುಖ ಪಟ ಹೊಳೆಯುತ್ತಿತ್ತು.

"ಸದ್ಯ ಆಗುವುದು ಬೇಡವಾದರೆ ಬೇಡ. ಆದರೆ ಹುಡುಗಿಯನ್ನು ನೋಡಿ ಬರಬಹುದು ತಾನೇ?"

"ಬೆಂಗಳೂರಿನ ಹೆಣ್ಣೇ ಅಪ್ಪಾ"

"ಹುಡುಗಿಯ ತಂದೆ ನಮ್ಮೂರಿನವರೆ ಅಲ್ಲಿ ಡಾಕ್ಟರರಾಗಿದ್ದಾರೆ. ಹುಡುಗಿ ಕಾಲೇಜಿಗೆ ಹೋಗುತ್ತಿದ್ದಾಳೆ.

ಮತ್ತೆ ಶುಭ್ರವಾಗಿದ್ದ ಗೋಪಾಲನ ಹೃದಯಾಕಾಶವನ್ನು ಕಾರ್ಮೋಡ ಮುಸುಕಿತು

೦ ೦ ೦

"ಡಗ್ ಡಗ್ ಡಗ್"

ರಾತ್ರಿ ಹನ್ನೆರಡು ಗಂಟೆಯಾದರೂ ಗೋಪಾಲನಿಗೆ ನಿದ್ದೆ ಬರಲಿಲ್ಲ.

"ಜೀವನದ ಸಂಗಾತಿಯನ್ನು ಬಿಟ್ಟು ಇನ್ನೊಬ್ಬಳ ಕೈ ಹಿಡಿಯಲೇ? ತಂದೆಯ ಮಾತನ್ನು ತಿರಸ್ಕರಿಸಲೇ? ಮದುವೆಯನ್ನೇ ಬಿಟ್ಟು ಬ್ರಹ್ಮಚಾರಿಯಾಗಲೇ?" ಬೇಸರದ ನಿಟ್ಟುಸಿರು ಬಿಟ್ಟು ಹಾಸಿಗೆ ತೊಯ್ದು ಹೋಯಿತು. ಮತ್ತೆ ಮೆಲ್ಲನೆ ಎದ್ದು ದೀಪ ಹಾಕಿದ. ಪೆನ್ನು ತೆಗೆದು ಬರೆಯತೊಡಗಿದ.

"ಕುಮಾರಿ ರತ್ನನವರಿಗೆ,

ನನ್ನ ಮೇಲಿರುವ ಪ್ರೀತಿಯನ್ನು ನೀವು ಬಿಟ್ಟು ಬಿಡಿ. ನಿಮ್ಮನ್ನು ನಾನು ಇಂದಿಗೆ ಮರೆತು ಬಿಟ್ಟಿದ್ದೇನೆ."

ಮತ್ತೇನನ್ನೂ ಬರೆಯಲು ಗೋಪಾಲನಿಗೆ ತೋಚಲಿಲ್ಲ.

"ನಾಳೆ ಬೆಳಗ್ಗೆ ಪ್ರಯಾಣ. ಬೆಂಗಳೂರಿನಲ್ಲಿ ನನ್ನನ್ನು ರತ್ನ ನೋಡಿದರೆ, ಮಾತಾಡುವುದೇ ಬೇಡವೇ ಎಂಬ ಸಮಸ್ಯೆ. ನನ್ನನ್ನು ಮನೆಗೆ ಕರೆದರೆ, ಪಾಸಾದ ಬಗ್ಗೆ ನನ್ನನ್ನು ಸತ್ಕರಿಸಿದರೆ. ಅವಳೂ ಪಾಸಾಗಿದ್ದಾಳೆ. ಅವಳನ್ನು ಸತ್ಕರಿಸಬೇಡವೇ...... ಹಲವಾರು ವಿಚಾರಗಳು.

ಹಾಸಿಗೆಗೆ ಮುಖವಿಟ್ಟು ಮಲಗಿದ ಗೋಪಾಲ ಎಚ್ಚರಗೊಳ್ಳುವಾಗ ಗಂಟೆ ಎಂಟಾಗಿತ್ತು.

೦ ೦ ೦

"ಬನ್ನಿ ಮಿಸ್ಟರ್ ಕೃಷ್ಣ ರಾವ್"

ಕಾರಿನಿಂದಿಳಿದ ತಂದೆ ಮಕ್ಕಳನ್ನು ಡಾಕ್ಟರ್ ದಂಪತಿಗಳು ಸ್ವಾಗತಿಸಿದರು ಕೃಷ್ಣರಾಯರು ಯೋಗಕ್ಷೇಮದ ನಂತರ ಪ್ರಶ್ನಿಸಿದರು. "ಡಾಕ್ಟರ್ ತಮ್ಮ ಮಗಳನ್ನು ಕಾಣುವುದಕ್ಕಾಗಿ ನಾವಿಬ್ಬರೂ ಬಂದಿದ್ದೇವೆ. ಹುಡುಗ ಮೊನ್ನೆ ತಾನೇ M. B. B. S. ಪಾಸ್ ಮಾಡಿದ್ದಾನೆ."

"ಓಹೋ ಈಕ್ವಲ್ ಡಿಗ್ರಿ. ನನ್ನ ಮಗಳೂ M. B. B. S ಪಾಸ್ ಮಾಡಿದ್ದಾಳೆ ಬಾರಮ್ಮ, ಕಾಫಿ ತಗೊಂಡು ಬಾರಮ್ಮ."

ನಿಮ್ನವದನಳಾಗಿ ಬಂದ ವಧು ಕಾಫಿ ಕಪ್ಪುಗಳನ್ನು ಮೇಜಿನ ಮೇಲಿಟ್ಟು ಗೋಪಾಲನ ಕಡೆ ನೋಡಿದಳು. ಗೋಪಾಲ ಅವಳನ್ನೇ ನೋಡಿಬಿಟ್ಟ.

"ಮಿಸ್. ರತ್ನಾ!" ಎಂದನು ಗೋಪಾಲ

"ಹಲೋ ಗೋಪಾಲ್" ಎಂದಳು ರತ್ನ.

"ಏನಿದು ಗೋಪಾಲ್" ಎಂದರು ಕೃಷ್ಣ ರಾವ್.

"ಅವಳೇ ಇವಳು" ಎಂದು ಉದ್ಗರಿಸಿದ ಗೋಪಾಲ್.

ದ. ಕ. ಜಿಲ್ಲೆಯ ಜಾನಪದ ಸಾಹಿತ್ಯದಲ್ಲಿ ಒಂದು ವಿನೋದ ಪ್ರಸಂಗ.

ಅತ್ತೆಗೊಂದು ಬುದ್ಧಿಯ ಮಾತು

ಸಂಗ್ರಾಹಕಿ:
ಶ್ರೀಮತಿ ಪಿ. ಇಂದಿರಾ, ಹಾಲಂಬಿ.

ಅತ್ತೆ:—
ಬತ್ತ ತೊಳೆದಿಯ ಸೊಸಿಯೆ ।
ಬಾಯ್ತಿಗ್ಬಂದಿಯ ಸೊಸಿಯೆ ।
ಬಟ್ಟಲಿಗ್ಹಾಲು ಎರೆದೀದಿ ।

ಸೊಸೆ:—
ಬಂದವ್ವೋದವರೆದುರು ।
ಬಣ್ಣನೆ ಮಾಡುವ ಮಾಯೆ ।
ನಿನ್ನಿನ ಹುಳುಗಂಜಿ ಎರುದಿಪ್ರಿ ।
ನಿನ್ನಿನ ಹುಳುಗಂಜಿ ।
ಎರುದಿಪ್ರಿ ಅತ್ತೆಮ್ಮ ।
ನೀವ್ರಣಿ ನಿಮ್ಮ ಮಗುವ್ರಣಿ ।

ಅತ್ತೆ:—
ಬಂದವ್ವೋದವರೆದುರು।
ಮಾನ ಕಳೆದಳ್ ಸೊಸಿಯು ।
ದಾಂಟಿಸಿ ಬಾರವ್ವ ತಾರಿಗು ।

ಸೊಸೆ:—
ದಾಂಟಿಸಿ ಬಪ್ಪಕು ಮಾಸು ।
ಬರಿದೆ ನಾ ಬರಲಿಲ್ಲ ।
ನನ್ನಪ್ಪ ಕೊಟ್ಟ ಬಳುವಳಿ।
ನನ್ನಪ್ಪ ಕೊಟ್ಟ ಬಳುವಳಿ ಬಟ್ಲು
ಅದು ಜಾಗಲಿ ಮುಂದೆ! [ಚೊಂಬು।
ತಾರಿಗು ।

ಅತ್ತೆ:—
ನಿನ್ನಪ್ಪ ಬಟ್ಲು ಚೊಂಬು ।
ನನ್ಮನೆಗೆ ಬೇಕಿಲ್ಲ ।
ಬಟ್ಲು ಚೊಂಬು ಕಟ್ಟಿಕೊಂಡು
ಹೊರಟ್ಹೋಗು ।

ಸೊಸೆ:—
ಬಟ್ಲು ಚೊಂಬು ಎಂದ್ರೇನು ।
ಎಮ್ಮೆ ಕಡಸು ತರಲಿಲ್ವ ।
ನನ್ನಮ್ಮ ಎಮ್ಮೆ ಕಡಸ್ ಕೊಟ್ಟುಬಿಡಿ
ಬಟ್ಲು ಚೊಂಬು ಎಮ್ಮೆ ಕಡಸ್ ।
ಇವು ಮುಂದೆ ಸಾಗಿದರೆ ।
ನಾ ಹೋತೆ ನನ್ನ ತಾರಿಗು ।

ಮಗ:—
ಕಂಚಿನ ಬಟ್ಲು ಚೊಂಬು ।
ಮಿಂಚವ ಎಮ್ಮೆ ಕಡಸು ।
ಕಳಕೊಂಡ್ ಹ್ಯಾಗಮ್ಮ ಬದುಕೋದು।
ಕಳಕೊಂಡ್ ಬದುಕೋದಕಿಂತ ।
ಸೊಸೆ ಮಾತ ಕೇಳಕೊಂಡ್ ।
ಸುಮ್ಮನಿಪ್ಪ ಬಿಡು । ಹಡೆದವ್ವ ।

ಅತ್ತೆ:—
ಹುಟ್ಟಿದ್ರೆ ಹುಟ್ಟೇಕು ನಿನ್ನಂಥ ಗಂಡು
ಮಗ ।
ಯಾಕೆಂದು ಮಾಸಿ ಬೆಳೆಸ್ಕೊಂಡ್ಯೊ ।
ಯಾಕೆಂದು ಮಾಸಿ ಬೆಳೆಸ್ಕೊಂಡ್ಯೊ
ನನ್ಮಗನೆ ।
ನಿನ್ನ ಹೆಣೆಂಬರಹ ಬೇಗಾಯ್ತು

ಸೊಸೆ:—
ಅಳಬೇಡಿ ಅತ್ತೆಮ್ಮ ಜರಿಬೇಡಿ
ನನ್ನನ್ನ ।
ಇನ್ನಾದ್ರು ತಿಳಿದು ಬಿಡಿ ನಿಜವನ್ನ ।
ಇನ್ನಾದ್ರು ತಿಳಿದು ಬಿಡಿ । ನಿಜವನ್ನ
ಸೊಸೆಯನ್ನ ।
ಮಗಳಂತೆ ಕಾಂಬುದನು । ಕಲಿತು
ಬಿಡಿ।

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ ಎರಡೂವರೆ(ಟ. ಖ. ಪ್ರತ್ಯೇಕ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನಸಹ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ 1-25 (ಟ. ಖ. ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ. ಖ ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿ. ಮು ಕೋರ್ಟಿನಲ್ಲಿ

O. S. No 87/64.

ಮುಕಾಂಬಿಕೆ ಶೆಡ್ತಿ (ಕುಟುಂಬದ ಯಜಮಾನ್ತಿಯಾಗಿ) —ವಾದಿಳು.

ಮತ್ತು

1. ರಾಮಣ್ಣ ನಾಯ್ಕ, 2. ನಾರಾಯಣ ಶೆಟ್ಟಿ — ಪ್ರತಿವಾದಿರು.

ಇವರೊಳಗೆ

2ನೇ ಪ್ರತಿವಾದಿ, ನಾರಾಯಣ ಶೆಟ್ಟಿ— ಸುಬ್ಬಕ್ಕ ಶೆಟ್ತಿ ಮಗ, ಉಡುಪಿ ತಾಲ್ಲೂಕು ನಂಬ್ರ 93ನೇ ಶೀರೂರು ಗ್ರಾಮದಲ್ಲಿರುವವ.

1ನೇ ಪ್ರತಿವಾದಿಯಿಂದ ವಾದಿಳಿಗೆ ಕುಟುಂಬದ ಯಜಮಾನಳಾಗಿ ಬರತಕ್ಕ ಶಾರ್ವರಿ, ಪ್ಲವ ಮತ್ತು ಶುಭಕೃತು ಸಂ।ರಗಳ ಮೂಲಗೇಣಿ ಮತ್ತು ಬಡ್ಡಿ ವಗೈರೆ ಕೇಳಿಯೂ ಆ ಪೈಕಿ ಶಾರ್ವರಿ ಸಂ।ರದ ಗೇಣಿ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ ಡೆಪೋಜಿಟು ಇದ್ದದ್ದನ್ನು ಪಡೆಯುವರೇ ವಾದಿಳೇ ಹಕ್ಕುದಾರಳು ಎಂತ ಸಹಾ ತೀರ್ಮಾನಿಸಬೇಕಾಗಿ ವಗೈರೆ ನಿವೃತ್ತಿ ಕೇಳಿ ವಾದಿಳು ಮಾಡಿದ ಮೇಲಿನ ದಾವೆಯು 2ನೇ ಪ್ರತಿವಾದಿಯ ಅಪ್ಪೀರು ನೋಟೀಸು ಬಗ್ಗೆ ತಾ. 29-7-64ಕ್ಕೆ ಇಟ್ಟಿರುತ್ತದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

B. Ananda Shetty,
Advocate for Plaintiff.
Udipi, 15-7-64.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫರ ಕೋರ್ಟಿನಲ್ಲಿ

O. S. 148/64

A. ಮಹಾಬಲೇಶ್ವರ ಭಟ್—ವಾದಿ.

G. ನಾರಾಯಣಭಟ್. ತಿಮ್ಮಯ್ಯ ಭಟ್ಟರ ಮಗ ಪುತ್ತೂರು ಪಡ್ನೂರು ಗ್ರಾಮದ ದೇವರ ಗುಂಡಿ— ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ:

ನೀವು ವಾದಿಗೆ ತಾ. 29-8-63 ರಲ್ಲು ಬರಕೊಟ್ಟ ಗೇಣಿ ಚೀಟು ಪ್ರಕಾರ ನಿಮ್ಮಿಂದ ತಾ. 31-1-64. ಕ್ಕೆ ಬರತಕ್ಕ ಗೇಣಿ ಬಾಕಿಗೆ ವಾದಿ ನಿಮ್ಮ ಮೇಲೆ ಮಾಡಿದ ದಾವೆಯು ತಾ 7-8-64ಕ್ಕೆ ನೋಟೀಸಿನ ಬಗ್ಗೆ ಇಟ್ಟಿರುತ್ತದೆ, ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಪಸ್ಥಿತರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು,

Sd- M. Sadashiva Rao
Vakil for Petitioner
ಪುತ್ತೂರು. ತಾ 15-7-64

REGD. No. B. G. 176
LICENCE No. 31
Licensed to Post without Prepayment

ನವಯುಗಿಂದು ಅತ್ಯಗತ್ಯ

ಟಾಲ್‌ಸ್ಟಾಯ್ ವಿಚಾರಧಾರೆ

೧೯ನೆ ಶತಮಾನದ ಸುವಿಖ್ಯಾತ ವಿಚಾರಕ ಮತ್ತು ಕಲಾ ವಿಜ್ಞರಲ್ಲಿ ಮಹಾತ್ಮಾ ಟಾಲ್‌ಸ್ಟಾಯ್‌ಯವರು ಒಬ್ಬರು. ತನ್ನ ಆತ್ಮಪೂರ್ಣವಾದ ವಿಚಾರಗಳಿಂದ ಅವರು ಅಖಂಡ ಯುರೋಪ್ ಖಂಡದಲ್ಲಿಯೇ ಕ್ರಾಂತಿಯ ಕಹಳೆಯೂದಿದರು. ಹಲವಾರು ಜನರು ತ್ವಮೇವ ಶರಣಂಮಮ ಎಂಬಂತೆ ಇವರನ್ನೇ ನಂಬಿ ತಮ್ಮ ಗುರುಗಳೆಂದು ಬಗೆದರು; ಇನ್ನು ಕೆಲವರಿಗೆ ಟಾಲ್‌ಸ್ಟಾಯ್ ದಾರಿದೀಪವಾದರು, ಪಥಪ್ರದರ್ಶಕರಾದರು. ಭಾರತದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರೂ ಇವರಿಂದ ಪ್ರೇರಣೆ ಪಡೆದಿದ್ದರು.

ಟಾಲ್‌ಸ್ಟಾಯ್ ಬಹುದೊಡ್ಡ ಬರಹಗಾರ, ಕಾದಂಬರಿ, ಕತೆ, ನಿಬಂಧ, ವಿವೇಚನಾದಿಗಳಲ್ಲಿ ಇವರದು ಎತ್ತಿದ ಕೈ. ಧರ್ಮ, ಸಮಾಜ, ಕಲೆ, ವಿಜ್ಞಾನ ಮತ್ತು ಸ್ತ್ರೀ ಪುರುಷರ ಸಂಬಂಧ ಮೊದಲಾದ ವಿಚಾರಗಳನ್ನು ಇವರು ಅತ್ಯಂತ ಮರ್ಮಿಕವಾಗಿ ಮತ್ತು ಮೌಲಿಕವಾಗಿ ತನ್ನ ಕೃತಿಗಳಲ್ಲಿ ವಿವೇಚಿಸಿದ್ದಾರೆ. ಟಾಲ್ ಸ್ಟಾಯ್‌ಯವರು ಸುಮಾರು ೫೦ ಗ್ರಂಥಗಳನ್ನು ಬರೆದಿದ್ದಾರೆ.

ತಾನು ವರ್ಣಿಸುವ ವಸ್ತುವನ್ನು ಚಿತ್ರದಂತೆ ನಮ್ಮ ಕಣ್ಣು ಮುಂದಿಡುವುದು ಇವರ ವಿಲಕ್ಷಣ ಗುಣ. ತಿಳಿಸಬೇಕಾದ ವಿಷಯವನ್ನು ಹಲವಾರು ಕಾರಣ-ತರ್ಕ-ವಿತರ್ಕ-ಗಳಿಂದ ಸಿದ್ಧಮಾಡಿ ತೋರಿಸುವುದು ಇವರ ಮತ್ತೊಂದು ಚಾಕ್ಷ್ಯ. ಇವರ ಗ್ರಂಥಗಳನ್ನವಲೋಕಿಸುವಾಗ, ಇವರ ಬಹುಮುಖ ಪ್ರತಿಭೆಯ ಪರಿಚಯವಾಗುತ್ತದೆ. "ಏಕಗ್ರಾಹಿಗೆ ಸಮಯೋದಯಂ ಸಮನಿಸುದೆ?" ತನ್ನ ವಿಚಾರಗಳಲ್ಲಿ ಸಾಮ್ಯವನ್ನು ತರುವ ಪ್ರಯತ್ನ ಮಾಡಿ, ಅದರಲ್ಲಿ ಬಹಳಷ್ಟು ಯಶಸ್ವಿಯಾಗಿದ್ದಾರೆ ಟಾಲ್‌ಸ್ಟಾಯ್. ಇವರು ಸಂತರು, ಪರಮಾತ್ಮ ಸೇವಕರು. ಯೇಸು ಕ್ರಿಸ್ತನ ಪರ್ವತದ ಮೇಲಿನ ಉಪದೇಶದಿಂದಿವರು ಮುಗ್ಧರಾಗಿದ್ದರು. ಆಧ್ಯಾತ್ಮಿಕ ಕಲ್ಯಾಣ ಮತ್ತು ಜಾಗತಿಕ ಸುಖಗಳಿಗಾಗಿ ಈ ಉಪದೇಶದಂತೆ ನಡೆಯುವುದು ಅಗತ್ಯವೆಂದು ಅವರ ಭಾವನೆ ತಾವು ಅದನ್ನು ಅನುಷ್ಠಾನಕ್ಕೆ ತರಲು ಮನಃಪೂರ್ವಕ ಪ್ರಯತ್ನಿಸಿದ್ದು ಮಾತ್ರವಲ್ಲದೆ ಇತರರಿಗೂ ಪ್ರೇರಕ ಶಕ್ತಿಯಾಗಿ ಪರಿಣಮಿಸಿದರು. ರಶ್ಯಾದ ಅತ್ಯಂತ ಪ್ರತಿಷ್ಠಿತ ಮತ್ತು ಶ್ರೀಮಂತ ಕುಲದಲ್ಲಿ ಹುಟ್ಟಿದರೂ ಟಾಲ್ ಸ್ಟಾಯ್ ತಮ್ಮ ಜೀವನವನ್ನು ಸರಳವಾಗಿಯೇ ಇಟ್ಟುಕೊಂಡಿದ್ದರು.

ಟಾಲ್‌ಸ್ಟಾಯ್‌ಯವರಂತೆಯೇ ಅವರ ವಿಚಾರಗಳೂ ಸರಳ ಮತ್ತು ಪವಿತ್ರವಾಗಿದ್ದುವು. ಅವರು ಬರೆದ ಪ್ರತಿ ಗ್ರಂಥವು ಮಾನವ ಹೃದಯವನ್ನು ತೆರೆದಿಟ್ಟಂತೆ ಎನ್ನಬಹುದು. ಇವರ ಪುಸ್ತಕ ಸ್ಪರ್ಶವೆಂದರೆ, ಮಾನವ ಹೃದಯಸ್ಪರ್ಶ. ಮಾನವ ಕಲ್ಯಾಣ ಮತ್ತು ಉಚ್ಚಾದರ್ಶಗಳಿದ ಈ ಗ್ರಂಥಗಳ ಪದಪದವೂ ಪವಿತ್ರ, ಅಮರವೆನಿಸಿದೆ.. ಪ್ರಚಲಿತ ಸನ್ನಿವೇಶದ ಜೀವನ ವೈಶಮ್ಯ ಮತ್ತು ಜ್ವಾಲೆಯಲ್ಲಿ ಉರಿಯುತ್ತಿರುವ ವ್ಯಕ್ತಿಗಳಿಗೆ ಈ ಗ್ರಂಥಗಳು ಚಂದನದಂತೆ ಶೀತಲವಾಗಿರುವುವು.

ಮಹಾತ್ಮಾ ಟಾಲ್‌ಸ್ಟಾಯ್ ಶ್ರಮಕ್ಕೆ ಮಹತ್ವವೀಯುತ್ತಿದ್ದರು. "ಪ್ರತಿಯೊಬ್ಬನೂ ಕೃಷಿ ಮತ್ತು ಶ್ರಮಗಳಿಗೆ ಮಹತ್ವ ನೀಡಬೇಕು; ತನ್ನ ಪರಿಶ್ರಮದಿಂದ ಗಳಿಸಿದುದರಿಂದಲೇ ತನ್ನ ಜೀವನ ನಡೆಸಬೇಕು, ಹೀಗೆ ಮಾಡಿದರೆ, ಮಾನವರಲ್ಲಿ ಪ್ರೇಮ ಮತ್ತು ಐಕ್ಯ ಮನೋಭಾವಗಳು ಮೂಡುವುವು. ಆಗ ಜಗತ್ತನ್ನು ಕಾಡುವ ಎಲ್ಲ ಯಾತನೆಗಳೂ ದೂರ ಸರಿಯುತ್ತವೆ ಏಕೆಂದರೆ, ಎಲ್ಲರೂ ಕಾಳು ಬೆಳೆಸುವವರಾದಾಗ ಅದು ಮಾರುಕಟ್ಟೆಯ ವಸ್ತುವಾಗಿ ಉಳಿಯುವುದಿಲ್ಲ; ಮಾತ್ರವಲ್ಲ. ಬೇರೆಯವರಿಗೆ ಸಹಾಯ ಮಾಡಲು ಯಾರೂ ಸಂಕೋಚ ಪಡುವುದಿಲ್ಲ, ಆಗ, ಮಾನವನು ಹಸಿವೆಯಿಂದ ಕಂಗೆಟ್ಟು, ವಂಚಿಸಿ, ಉದ್ದಂಡವಾಗಿ ವರ್ತಿಸಿ ಹೊಟ್ಟೆ ತುಂಬುವುದಕ್ಕೆ ಹೋಗುವುದಿಲ್ಲ; ಜನರ ಸಂತುಷ್ಟರಾಗುವಾಗ ಉದ್ಧಟತನವೂ ವಂಚನೆಯೂ ಪ್ರಪಂಚದಿಂದ ಹಾರಿ ಹೋಗುವುವು. ಹಸಿದವರಿಗೆ ನೆರವು ನೀಡುವುದನ್ನು ದೊಡ್ಡ ಕೆಲಸವೆಂದೂ ಆಗ ನಾವು ತಿಳಿಯುವುದಿಲ್ಲ, ಸಂತುಷ್ಟರಿಗೆ ಸಂಕಷ್ಟವನ್ನು ತಂದು ಹಾಕುವುದಿಲ್ಲ; ಹಸಿದವರೂ ಬಡವರೂ ಹೊಟ್ಟೆಗಿಲ್ಲದೆ ಸಾಯಗೊಡುವುದಿಲ್ಲ' – ಇದವರ ವಿಚಾರಧಾರೆ.

'ಎರಡು ಅಂಗಿಯಿದ್ದವನು ಒಂದಂಗಿಯೂ ಇಲ್ಲದವನಿಗೆ ಒಂದನ್ನು ನೀಡಬೇಕು; ಬೇಕೆಂಬಷ್ಟು ಅನ್ನವಿರುವವನು ಇಲ್ಲದವರೊಡನೆ ಹಂಚಿ ಅದನ್ನು ಉಣ್ಣಬೇಕು' ಎನ್ನುತ್ತಿದ್ದರು ಟಾಲ್‌ಸ್ಟಾಯ್. "ನಿನಗೋಸ್ಕರ ಹಣವನ್ನು ಶೇಖರಿಸ ಬೇಡ; ಏಕೆಂದರೆ, ಅದನ್ನು ಯಾರಾದರೂ ಹಾಳುಗೆಡಹಿಯಾರು, ಕಳ್ಳನು ಕದಿಯಬಹುದು. ನೀನು ಸ್ವರ್ಗಲೋಕದಲ್ಲಿ ನಿನ್ನ ಸಂಪತ್ತನ್ನು ಶೇಖರಿಸು. ಅಲ್ಲಿ ಅದಕ್ಕೆ ಹುಳ ಬೀಳುವುದಿಲ್ಲ; ಬಾಗಿಲು ತೆರೆದು ಕಳ್ಳನು ಅದನ್ನು ಕದಿಯಲಾರನು. ಎಲ್ಲಿ ನಿನ್ನ ಸಂಪತ್ತು ಇರುವುದೋ ಅಲ್ಲಿಯೇ ನಿನ್ನ ಮನಸ್ಸೂ ನೆಲಸುವುದು"— ಇದು ಅವರ ಖಚಿತಾಭಿಪ್ರಾಯವಾಗಿತ್ತು. ಅವರು ಅಸಂಗ್ರಹದ ಮಹಾ ಪುರಸ್ಕರ್ತರು. ಸಂಗ್ರಹ ಬುದ್ಧಿಯು ಸಕಲ ಪಾಪಮೂಲವೆನ್ನುತಿದ್ದರು ಅವರು 'ಸೂಜಿಯ ತೂತಿನಿಂದ ಒಂಟೆಯೂ ಹೊಕ್ಕು ಹೊರಬರಬಹುದು; ಆದರೆ, ಶ್ರೀಮಂತರು ಮಾತ್ರ ಸ್ವರ್ಗವನ್ನು ಹೋಗಲಾರರು" ಎಂದು ಅವರು ಹೇಳುತಿದ್ದರು.

ಮಾದಕ ದ್ರವ್ಯ ಸೇವನೆಯನ್ನು ಟಾಲ್‌ಸ್ಟಾಯ್ ಕಟುವಾಗಿ ವಿರೋಧಿಸುತಿದ್ದರು, ದುರಾಚರಣೆಗೆ ಮಾದಕ ದ್ರವ್ಯ ಸೇವನೆಯು ಕಾರಣ; ಅಂತಃಕರಣದ ಧ್ವನಿಯನ್ನು ತಡೆಯಲು ಇದುವೇ ಪ್ರೇರಕ ನಿರ್ಮದ ಅವಸ್ಥೆಯಲ್ಲಿ ಅಸಂಭವವೆನಿಸುವ ನಿಂದ್ಯ ಕಾರ್ಯಗಳನ್ನು ಅಮಲಿನ ಅಮಲಿದಲ್ಲಿ ಮನುಷ್ಯ ಮಾಡುತ್ತಾನೆ! ಎನ್ನುತ್ತಾರೆ ಅವರು. "ಪ್ರತ್ಯೇಕ ಧರ್ಮದಲ್ಲಿಯೂ ಆತ್ಮೋನ್ನತಿಗೆ ಕ್ರಮಾನುಸಾರ ಉನ್ನತಿಯು ಅಗತ್ಯವೆಂದು ಹೇಳಿದೆ. ಶುದ್ಧ ಸದಾಚಾರೀ ಜೀವನವನ್ನು ಹೊಂದಲು ಕ್ರಮಾನುಸಾರ ಸದ್ಗುಣಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದುದು ಅತ್ಯಗತ್ಯವೆಂದು ಜಗತ್ತಿನ ಎಲ್ಲ ಮಹಾಪುರುಷರೂ ಧರ್ಮಗಳೂ ಸಾರಿವೆ. ತನ್ನ ವಿಲಾಸಮಯ ಜೀವನವನ್ನು ತ್ಯಜಿಸದೆ ಮಾನವನ ಹಿತವಾಗದು; ಆತನು ಧಾರ್ಮಿಕ ಜೀವನವನ್ನು ಬದುಕಲಾರನು" ಎಂಬುದು ಅವರ ಅಂಬೋಣ.

"ತ್ಯಾಗವಿಲ್ಲದೆ ಧಾರ್ಮಿಕ ಜೀವನವೇ ಇರಲಿಲ್ಲ; ಮುಂದೆಯೂ ಇರಲಾರದು, ಮನುಷ್ಯ ಇಂದ್ರಿಯಗಳ ಪ್ರವೃತ್ತಿಯಿಂದ ಸ್ವತಂತ್ರನಾಗಿ ಮನಸ್ಸಿನ ವಾಸನೆಗಳನ್ನು ಬುದ್ಧಿಯ ಅಧೀನಕ್ಕೆ ತಂದುಕೊಳ್ಳುವುದೇ ತ್ಯಾಗ. ನಾಲಿಗೆಯನ್ನು ತನ್ನ ವಶಪಡಿಸಿಕೊಳ್ಳುವುದೂ ಉಪವಾಸ ಮಾಡುವುದೂ ತ್ಯಾಗದ ಮೊದಲ ಮೆಟ್ಟಲು ಎಂದು ಎಲ್ಲ ಧರ್ಮಗಳೂ ಸಾರಿವೆ. ಉಪವಾಸವೇ ತ್ಯಾಗಪೂರ್ಣ ಜೀವನದ ಆದ್ಯ ನಿಯಮ." ಎಂದವರು ತಿಳಿದಿದ್ದರು.

ಟಾಲ್‌ಸ್ಟಾಯ್‌ಯವರು ಅಹಿಂಸೆಯ ಪಕ್ಷಪಾತಿಗಳು. ಸೇನೆಯನ್ನು ಕೂಡಿಸುವುದು ಕೊಲೆಗೆ ತಯಾರಿ ನಡೆಸಿದಂತೆ. ಹಿಂಸೆ ಮತ್ತು ಕೊಲೆಗಳಿಂದ ಶಾಂತಿ ಮತ್ತು ಸುಖಗಳೆಂದಿಗೂ ಲಭಿಸಲಾರವು. ರಕ್ತ ಸಿಂಚಿತ ಮಾರ್ಗವನ್ನು ರಕ್ತ ಹರಿಸಿ ಶುದ್ಧಗೊಳಿಸಬಹುದೆ? ಎಂದು ಕೇಳುತ್ತಾರೆ ಅವರು.

ಒಂದೇ ಮಾತಿನಲ್ಲಿ ಹೇಳುವುದಾದರೆ ಮಹಾತ್ಮಾ ಟಾಲ್ ಸ್ಟಾಯ್ ಮನೋವ್ಯಾಖ್ಯಾನಗಳಿಂದ ಮಾನವ ಹಿತ ಚಿಂತಕರು. ಅವರ ಹೃದಯಕ್ಕೆ ಅತಿನಿಕಟ ಹೋದವರು.

ಮಹಾತ್ಮಾ ಗಾಂಧೀ ಮತ್ತು ಮಹಾತ್ಮಾ ಟಾಲ್‌ಸ್ಟಾಯ್ ಯವರ ಅಭಿಪ್ರಾಯಗಳಲ್ಲಿ ಅದೆಷ್ಟು ಹೊಂದಾಣಿಕೆಯಿದೆ!

GOLCHHA-LODHA WEDDING

The marriage of Ch. Kamal Kumar Son of Shri B. J. Golchha Jain, Proprietor—Golchha Advertising Agency, Sadar Bazzar, Nagpur with Ku. Shanta daughter of Seth Pannalal Lodha was solemnised at a colourful ceremony on July 6 at Yeotmal. Elite of the Town were present on the occasion. Telegrams and messages congratulating the newly wed couple were received amongst others from President of India, Central Cabinet Ministers, Governors, Chief Ministers, and other State Ministers. Mr Golchha threw a Tea Party on July 8 at Jain Bhawan, Nagpur to celebrate the occasion. Prominent citizens of the City attended the reception.

ನಮ್ಮ-ನಮ್ಮವರು

(೧ನೇ ಪುಟದಿಂದ)

ಹಳ ನಿರೀಕ್ಷಿಸುತ್ತಿದೆ. ಪ್ರಧಾನಿ ನೆಹರೂರವರಿಂದ ರೂಪಿಸಲ್ಪಟ್ಟ ವಿದೇಶ ನೀತಿ ಹಾಗೂ ಧೋರಣೆಗಳನ್ನು ಮುಂದುವರಿಸಿಕೊಂಡು ಬರುವುದರಲ್ಲಿ ಹಾಗೂ ನಮ್ಮ ವಿದೇಶ ನೀತಿಯನ್ನು ಯಶಸ್ವಿಯನ್ನಾಗಿಸುವುದರಲ್ಲಿ ಶ್ರೀ। ಸ್ವರಣ ಸಿಂಗರು ಕೃತಕೃತ್ಯರಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸುವುದು ಸಮಯೋಚಿತವಾಗಿದೆ.

ಎಂ. ಮಧ್ವರಾಜ

ತಮ್ಮ ವಿದೇಶ ಪ್ರವಾಸದಿಂದ ಕಳೆದ ತಾ. ೧೭ರಂದು ಶ್ರೀ ಎಂ. ಮಧ್ವರಾಜರು ಮರಳಿ ಬಂದರು. ಮತ್ಸ್ಯ ವ್ಯವಸಾಯದ ಕುರಿತು ವಿಶೇಷ ಅಧ್ಯಯನಕ್ಕೆ ಹಾಗೂ ಅದರಲ್ಲಿಯ ಆಧುನಿಕ ವಿಧಾನಗಳ ಪರಿಶೀಲನೆಗಾಗಿ ಜಪಾನ್ ಮೊದಲಾದ ದೇಶ ಸಂಚರಿಸಿದ ಮಧ್ವರಾಜರು, ಆ ದೇಶಗಳಿಂದ ನಾವು ಕಲಿಯ ಬೇಕಾದುದು ಬಹಳವಿದೆ ಎಂದರು. ಅಲ್ಲಿಯ ಜನರು ರಾಜಕೀಯ ವಿಚಾರದಲ್ಲಿ ನಿರ್ಲಿಪ್ತರು. ಅವರು ನಮ್ಮ ಜನರಂತೆ, ರಾಜಕೀಯ ವಿಚಾರಗಳ ಕುರಿತು ಚಿಂತಿಸುವುದೂ ಇಲ್ಲ. ಉದ್ಯಮ ಶೀಲತೆಯೇ ಅವರ ಹಿರಿಯ ಗುಣ. ಅನಾವಶ್ಯಕವಾದ ಪ್ರಯೋಜನಕ್ಕೆ ಬಾರದ ವಿಚಾರಗಳ ಕಡೆಗೆ ಅವರು ಗಮನವೀಯುವುದೂ ಇಲ್ಲ ಎಂದು ಅವರು ತನ್ನ ವಿದೇಶ ಸಂಚಾರದ ಅನುಭವವನ್ನು ಹೇಳಿದರು.

ಶ್ರೀ ಮಧ್ವರಾಜರು ಈ ಹಿಂದೆಯೂ ಒಮ್ಮೆ ವಿದೇಶ ಸಂಚಾರ ಮಾಡಿದ್ದಾರೆ. ಅವರ ಈ ಸಂಚಾರದ ಅನುಭವವನ್ನು ಎಲ್ಲರೂ ಪಡೆಯುವಂತಾಗಬೇಕು. ನಮ್ಮ ರಾಜ್ಯದ ಮತ್ಸ್ಯ ವ್ಯವಸಾಯ ಇಲಾಖೆಯು ಅವರ ಪ್ರವಾಸದ ಅನುಭವದ ವರದಿಯನ್ನು ಪಡೆದು ತನ್ನ ಕಾರ್ಯ ವಿಧಾನದಲ್ಲಿ ಸೂಕ್ತ ಬದಲಾವಣೆ ಮಾಡುವುದು ಉಚಿತ, ಶಾಸನ ಸಭಾ ಸದಸ್ಯರಾಗಿರುವ ಶ್ರೀ। ಮಧ್ವರಾಜರ ಅನುಭವವನ್ನು ಪಡೆಯುವಲ್ಲಿ ನಮ್ಮ ರಾಜ್ಯ ಸರಕಾರ ಹಿಂದಾಗಬಾರದು. ಅವರ ಪ್ರವಾಸದ ಅನುಭವವನ್ನು ತಿಳಿದು, ನಮ್ಮ ಮೀನುಗಾರಿಕೆಯಲ್ಲಿ ಆಧುನಿಕತೆಯನ್ನು ಅಳವಡಿಸುವಲ್ಲಿ ನಮ್ಮ ಮತ್ಸ್ಯ ವ್ಯವಸಾಯ ಇಲಾಖೆ ಕಾರ್ಯಪ್ರವೃತ್ತವಾಗಬೇಕು. ಮಂತ್ರಿಗಳು ವಿದೇಶ ಸಂಚಾರ ಮಾಡಿಬಂದ ನಂತರವೇ ವಿನೂತನ ಕ್ರಮಗಳನ್ನು ಅನುಷ್ಠಾನಕ್ಕೆ ತರುವ ಪದ್ಧತಿಯನ್ನು ಬಿಡಬೇಕು.

ಶ್ರೀ। ಮಧ್ವರಾಜರ ವಿದೇಶ ಸಂಚಾರದ ಅನುಭವದಿಂದ ನಮ್ಮ ಮತ್ಸ್ಯೋದ್ಯಮ ಅಭಿವೃದ್ಧಿ ಹೊಂದಲಿ ಎಂದು ಹಾರೈಸುತ್ತೇವೆ.

Edited, Printed & Published by K, U, Shetty. at the Navayuga Press, Udipi, S. India

VOL. 43 No. 48 ಸಂಪುಟ ೪೩ ಸಂಚಿಕೆ ೪೮

NAVAYUGA—Nationalist Weekly ‡‡ ಉಡುಪಿ 30-7-1964 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ



ಶ್ರೀ ಗುಲ್ಜಾರಿಲಾಲ್ ನಂದಾ

ದೇಶದಲ್ಲಿ ವ್ಯಾಪಿಸಿರುವ ಭ್ರಷ್ಟಾಚಾರವನ್ನು ಸಮೂಲಾಗ್ರವಾಗಿ ಉಚ್ಚಾಟನೆ ಮಾಡುವ ಧೀರ ಪ್ರತಿಜ್ಞೆ ಕೈಗೊಂಡ ಗೃಹ ಮಂತ್ರಿ ಶ್ರೀ ನಂದಾರವರು ಸಫಲ ಕಾರ್ಯ ಯೋಜಕರು ಹಾಗೂ ಸಾಧಕರು. ತಾನು ಕೈಗೊಂಡ ಕಾರ್ಯದಲ್ಲಿ ಸರ್ವರ ಸಹಕಾರ ಲಭಿಸಿದಲ್ಲಿ ಆರೇ ತಿಂಗಳುಗಳಲ್ಲಿ ದೇಶದಲ್ಲಿಯ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬಹುದೆಂಬ ಭರವಸೆಯನ್ನು ಅವರು ತಾಳಿದ್ದಾರೆ. ನಂದಾರವರು ದೇಶಕ್ಕೆ ವ್ಯಾಧಿ ಎನಿಸಿರುವ ಈ ಕಳಂಕದ ಕುರಿತು ಅತಿ ಕ್ರೂರವಾದ ದೃಷ್ಟಿ ತಾಳಿದ್ದಾರೆ. ದೇಶದ ಆಡಳಿತವನ್ನು ಪರಿಶುದ್ಧಗೊಳಿಸುವಲ್ಲಿ ಅವರು ಈಗ ಅನೇಕ ಹೆಜ್ಜೆಗಳನ್ನು ಕೈಗೊಂಡಿದ್ದಾರೆ.

ನಂದಾರವರು ಮುಂದುವರಿದಂತೆ, ಭ್ರಷ್ಟಾಚಾರದ ಕುರಿತು ದೇಶದ ಇತರ ನಾಯಕರೂ ಈಗ ಮಾತಾಡತೊಡಗಿದ್ದಾರೆ. ಪ್ರಾಂತ್ಯಗಳ ಆಡಳಿತದಲ್ಲಿ, ಮಂತ್ರಿಗಳಲ್ಲಿ, ಇರುವ ಭ್ರಷ್ಟಾಚಾರದ ಕುರಿತು ಕೂಡಾ ಈಗೀಗ ಹಲವಾರು ಮಾತುಗಳು ಕೇಳಿ ಬರುತ್ತಿವೆ. ಪಂಜಾಬದ ಮುಖ್ಯಮಂತ್ರಿ ಕೈರಾನರು ದಾಸ್ ಆಯೋಗದ ವರದಿಯ ಪ್ರಹಾರಕ್ಕೆ ಬಲಿಯಾದಾಗ ನಂದಾರವರು ದೃಢ ಧೋರಣೆಯನ್ನು ತಾಳಿತಮ್ಮ ಸಚ್ಚಾರಿತ್ರ್ಯವನ್ನು ಪ್ರದರ್ಶಿಸಿದರು. ದಾಸ್ ಆಯೋಗದ ವರದಿಯನ್ನು ಪ್ರಸಿದ್ಧಿಸುವುದಕ್ಕೆ ಅವರು ಹಿಂದಾಗಲಿಲ್ಲ. ಸಾರ್ವಜನಿಕರ ದೂರುಗಳನ್ನು ಕೇಳಿಕೊಂಡು ಆ ಕುರಿತು ವಿಚಾರಣೆ ನಡೆಸುವುದಕ್ಕೆ ಅವರು ಸಂಯುಕ್ತ ಸದಾಚಾರ ಸಮಿತಿಯೊಂದನ್ನು ನೇಮಿಸಿದರು. ಈ ಸಮಿತಿಯು ಕೇವಲ ಒಂದು ತಿಂಗಳ ಅವಧಿಯಲ್ಲಿ ಇನ್ನೂರಕ್ಕೂ ಮಿಕ್ಕಿ ದೂರುಗಳನ್ನು ದಾಖಲು ಮಾಡಿಕೊಂಡಿದೆಯೆಂದರೆ, ದೇಶದಲ್ಲಿ ವ್ಯಾಪಿಸಿರುವ ಭ್ರಷ್ಟಾಚಾರದ ಪ್ರಮಾಣದ ಮನವರಿಕೆಯಾಗದಿರದು. ನ್ಯಾಯ ತಜ್ಞರನ್ನೊಳಗೊಂಡ ಈ ಸಮಿತಿ, ಈ ದೂರುಗಳ ಕುರಿತು ಸೂಕ್ಷ್ಮ ಪರಿಶೀಲನೆ ನಡೆಸುವುದೆಂದು ಹೇಳಲಾಗಿದೆ. ಶ್ರೀ ನಂದಾರವರು, ಈ ಸದಾಚಾರ ಸಮಿತಿಯ ಮೂಲಕ, ಭ್ರಷ್ಟಾಚಾರವನ್ನುಚ್ಚಾಟನೆ ಮಾಡುವಲ್ಲಿ ಸಮರ್ಥರಾದರೆ ಅದಕ್ಕಿಂತ ಸಂತೋಷದ ಸಂಗತಿ ಬೇರೆ ಇಲ್ಲ.

ಶ್ರೀಯುತ ನಂದಾರ ಮೇಲೆ ಇದೀಗ ಹೊಸತೊಂದು ಜವಾಬ್ದಾರಿ ಬಿದ್ದಿದೆ. ಭಾರತ ಹಾಗೂ ಪಾಕಿಸ್ಥಾನಗಳ ಗೃಹಸಚಿವರುಗಳ ಸಭೆಯು ಆಗಸ್ಟ ತಿಂಗಳ ಮೂರನೇ ವಾರದಲ್ಲಿ ಜರಗ ಬಹುದೆಂಬ ನಿರೀಕ್ಷೆ ಇದೆ. ಈ ಸಭೆಯು ಭಾರತ ಪಾಕಿಸ್ತಾನಗಳ ನಡುವೆ ಬಗೆಹರಿಯದೆ ಉಳಿದಿರುವ ಹಲವಾರು ಸಮಸ್ಯೆಗಳ ಕುರಿತು ಚರ್ಚಿಸಲಿದೆ. ಭಾರತ ಪಾಕ್ ಸಂಬಂಧ ಇಂದು ಹದಗೆಟ್ಟಿದೆ. ಪಾಕಿಸ್ಥಾನದೊಡನೆ ಸೌಹಾರ್ದದಿಂದ ಇರಬೇಕೆಂದು ಭಾರತ ಬಯಸಿದರೂ ಕೂಡಾ ಪಾಕಿಸ್ಥಾನದ ಹಟಮಾರಿತನದಿಂದ ಅದು ಅಸಾಧ್ಯವಾಗಿದೆ. ಈ ಹಿಂದೆ ಜರಗಿದ ಭಾರತ ಪಾಕ್ ಗೃಹ ಮಂತ್ರಿಗಳ ಸಭೆಯಾಗಲೀ, ಕಾಶ್ಮೀರ ಕುರಿತಾದ ಮಾತುಕತೆಯಾಗಲೀ ಫಲಕಾರಿಯಾಗದಿರುವುದಕ್ಕೆ ಪಾಕಿಸ್ತಾನದ ಆಗ್ರಹವೇ ಕಾರಣ. ಈಗ ಪುನಃ ಗೃಹ ಮಂತ್ರಿಗಳ ಸಭೆ ಸೇರಬೇಕೆಂಬ ನಿರ್ಣಯವಾಗಿದೆ. ಶ್ರೀ ನಂದಾರವರು ಈ ಹಿಂದೆಯೂ ಇಂತಹ ಸಭೆಯಲ್ಲಿ ಭಾಗ ವಹಿಸಿ, ಭಾರತದ ನಿಲುವನ್ನು ಸಮರ್ಥ ರೀತಿಯಲ್ಲಿ ವ್ಯಕ್ತಪಡಿಸುತ್ತಾರೆ. ಅವರು ಈ ಬಾರಿಯ ಸಭೆಯಲ್ಲೂ ಯೋಗ್ಯತೆಗನುಗುಣವಾಗಿ ಉತ್ತಮ ಪಾತ್ರ ನಿರ್ವಹಿಸುವರೆಂಬ ಭರವಸೆಯನ್ನು ಎಲ್ಲರೂ ತಾಳಿದ್ದಾರೆ.

ಶ್ರೀ ನಿಜಲಿಂಗಪ್ಪ

ಮೈಸೂರು ರಾಜ್ಯದ ಖಾದಿ ಮಂಡಳದ ವ್ಯವಹಾರದ ಬಗೆಗೆ ರಾಜ್ಯದಲ್ಲೆಲ್ಲಾ ತುಂಬ ಕೋಲಾಹಲವೆದ್ದಿದೆ. ಖಾದಿ ಬೋರ್ಡಿನಲ್ಲಿ ಭ್ರಷ್ಟಾಚಾರ ತಲೆ ಹಾಕಿದೆ ಎಂಬ ಕೂಗು ಹಲವು ಕಾಲದಿಂದ ಇತ್ತು. ಲೆಕ್ಕ ಪತ್ರಗಳ ಪರಿಶೀಲನೆ ನಡೆಯದೆ, ಲಕ್ಷಾಂತರ ರೂಪಾಯಿಗಳು ದುರುಪಯೋಗಗೊಳಿಸಲ್ಪಟ್ಟಿವೆ ಎಂದು ಆಪಾದನೆ ಹೊರಿಸಲಾಗಿತ್ತು. ಆದರೆ ರಾಜ್ಯ ಸರಕಾರ ಮಾತ್ರ ಈ ಕುರಿತು ಮೌನ ತಾಳಿತ್ತು. ಇದೀಗ ಮುಖ್ಯಮಂತ್ರಿ ನಿಜಲಿಂಗಪ್ಪನವರು ಖಾದಿ ಬೋರ್ಡಿನ ಲೆಕ್ಕ ಆಡಿಟ್ ಮಾಡಿಸಿ ಅಕ್ರಮಗಳಿಗೆ ಹೊಣೆಯಾದವರನ್ನು ಎಂಥ ಸ್ಥಾನದಲ್ಲಿದ್ದರೂ ಜೇಲಿಗೆ ಕಳುಸುವುದಾಗಿ ವಿಧಾನ ಸಭೆಯಲ್ಲಿ ಭರವಸೆ ನೀಡಿದರು. ಇದು ನಿಜಲಿಂಗಪ್ಪನವರು ಕೈಗೊಂಡ ದಿಟ್ಟತನದ ಹೆಜ್ಜೆ ಹಾಗೂ ಭ್ರಷ್ಟಾಚಾರ ನಿವಾರಣೆಯಲ್ಲಿ ಇದು ಪ್ರಥಮ ಹೆಜ್ಜೆಯೂ ಹೌದು.

ಆದರೆ ಇದೀಗ ನಿಜಲಿಂಗಪ್ಪನವರನ್ನೊಳಗೊಂಡು, ಮೈಸೂರು ಮಂತ್ರಿ ಮಂಡಲದ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಕಾಂಗ್ರೆಸ್ ಪಕ್ಷದ ಹತ್ತು ಮಂದಿ ಶಾಸಕರು ರಾಷ್ಟ್ರಾಧ್ಯಕ್ಷರನ್ನು ಹಾಗೂ ಗೃಹ ಮಂತ್ರಿಗಳನ್ನು ಕೇಳಿಕೊಂಡಿದ್ದಾರೆ. ಈ ಶಾಸಕರು ಮೈಸೂರು ಮಂತ್ರಿಮಂಡಲದ ಮೇಲೆ ಇಪ್ಪತ್ತು ರಾಜ್ಯಕ್ಕಾ ವಿ ಕ್ತಿ ಆರೋಪಗಳನ್ನು ಹೊರಿಸಿ ಹಲವಾರು ಪ್ರಸಂಗಗಳಲ್ಲಿ ಮಂತ್ರಿಗಳು ತಮ್ಮ ಸ್ವಂತ ಸ್ವಜನ ಸಾಧನೆಗಾಗಿ ಅಕ್ರಮವಾಗಿ ವರ್ತಿಸಿದ್ದಾರೆಂದು ಹೇಳಿದ್ದಾರೆ. ಶರಾವತಿ ಪ್ರಕರಣ, ಹಾರಂಗಿ ಯೋಜನೆ ಹಾಗೂ ಇನ್ನಿತರ ಪ್ರಕರಣಗಳಲ್ಲಿ ಕಾಯ್ದೆಗೆ ವ್ಯತಿರಿಕ್ತವಾಗಿ ವರ್ತಿಸಿ, ಕೆಲವ ಜನರ ಹಿತಾಸಕ್ತಿಗಾಗಿ ಸಾರ್ವಜನಿಕ ಹಿತವನ್ನು ಬಲಿಕೊಡಲಾಗಿದೆಯೆಂದು ಆರೋಪಿಸಲಾಗಿದೆ. ತಮ್ಮ ಸಂಬಂಧಿಕರು ಹಾಗೂ ಮಿತ್ರರಿಗೆ ಅನುಕೂಲ ಕಲ್ಪಿಸಿಕೊಡಲೆಂದು ಅಧಿಕಾರದ ದುರುಪಯೋಗ ನಡೆದಿದೆಯೆಂದೂ, ಕಂಟ್ರಾಕ್ಟುಗಳನ್ನು ಅವರಿಗೆ ಕೊಡಲಾಗಿದೆಯೆಂದೂ, ನಿಯಮಬಾಹಿರವಾಗಿ ಹಲವು ಸಂದರ್ಭಗಳಲ್ಲಿ ವರ್ತಿಸಲಾಗಿದೆಯೆಂದೂ ಹೇಳಲಾಗಿದೆ. ಹಲವಾರು ಘಟನೆಗಳಲ್ಲಿ ಮಂತ್ರಿಗಳ ವರ್ತನೆ ಸಂಶಯಾಸ್ಪದವಾಗಿದೆಯೆಂಬ ಅಭಿಪ್ರಾಯವನ್ನು ಈ ಶಾಸಕರು ವ್ಯಕ್ತಪಡಿಸಿದ್ದಾರೆ. ಈ ಕುರಿತಾದ ನ್ಯಾಯಾಂಗ ವಿಚಾರಣೆ ನಡೆಸಿ ಭ್ರಷ್ಟಾಚಾರ ನಿರ್ಮೂಲನ ಮಾಡಬೇಕೆಂದು ಅವರು ಕೇಳಿಕೊಂಡಿರುತ್ತಾರೆ.

ನಿಜಲಿಂಗಪ್ಪನವರು ಈಗ ಅಗ್ನಿ ಪರೀಕ್ಷೆಗೆ ಒಳಗಾಗಿದ್ದಾರೆ. ಪಂಜಾಬಿನ ಚರಿತ್ರೆ ಮೈಸೂರಲ್ಲಿ ಪುನರಾವೃತ್ತಿಯಾಗುವುದೇ ಎಂಬ ಸಂಶಯವನ್ನೂ ಹಲವರು ವ್ಯಕ್ತಪಡಿಸುತ್ತಿದ್ದಾರೆ. ಹೊರಿಸಲಾದ ಆಪಾದನೆಗಳಲ್ಲಿ ಮುಖ್ಯ ಮಂತ್ರಿಗಳ ಹಿತಾಸಕ್ತಿಯ ಕುರಿತಾದ ಆರೋಪಗಳೂ ಇವೆ. ಶರಾವತಿ ಯೋಜನೆಯ ಕುರಿತು ನ್ಯಾಯಾಂಗ ವಿಚಾರಣೆ ನಡೆದರೆ, ಆಗ ನಿಜಲಿಂಗಪ್ಪನವರ ಶ್ವೇತ ಪತ್ರದಲ್ಲಿನ ತಥ್ಯ ಎಷ್ಟೆಂದು ಅರಿವಾಗುವುದು. ಈ ಕುರಿತು, ಎಲ್ಲಾ ಕಡೆಗಳಿಂದಲೂ ಒತ್ತಾಯ ಹೇರಲಾಗುತ್ತಿದೆ. ನ್ಯಾಯಾಂಗ ವಿಚಾರಣೆ ನಡೆಯದಿದ್ದಲ್ಲಿ ಈ ಪ್ರಕರಣವನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಲಾಗುವುದು ಎಂದು ವಿರೋಧಿ ಪಕ್ಷದ ಪ್ರಭಾವೀ ಸದಸ್ಯ ಶ್ರೀ ಹುಂಡಿ ವಿಷ್ಣು ಕಾಮತರು ಇತ್ತೀಚೆಗೆ ಬೆಂಗಳೂರಿನಲ್ಲಿ ಹೇಳಿದರು. ಶ್ರೀ ನಿಜಲಿಂಗಪ್ಪನವರ ಸಚ್ಚಾರಿತ್ರ್ಯದ ಕುರಿತು ಸಾರ್ವಜನಿಕರು ಸಂಶಯ ತಾಳುವ ಪ್ರಸಂಗ ಇದೆಲ್ಲವುಗಳಿಂದ ಒದಗಿದೆ. ಜರಗಲಿರುವ ಅಗ್ನಿ ಪರೀಕ್ಷೆಯಲ್ಲಿ ಅವರು ಗೆದ್ದು ಬಂದರೆಂದರೆ ಆಗ ಅವರು ಕುಲುಮೆಯಲ್ಲಿ ಬೆಂದು ಬಂದ ಅಪ್ಪಟ, ನಿಜ ಚಿನ್ನವಾಗುತ್ತಾರೆ. ದೆಹಲಿಗೆ ತೆರಳಿದ ಶಾಸಕರಿಗೆ ದೆಹಲಿಯಲ್ಲಿ ಸಿಗುವ ಪ್ರತಿಕ್ರಿಯೆಯನ್ನು ಎಲ್ಲರೂ ಕಾದುನೋಡುತ್ತಿದ್ದಾರೆ.



ಶ್ರೀ ಬಿ ಎಲ್. ಎನ್. ರೈ

ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಮುಖ್ಯವಾಗಿ ಉಡುಪಿಯ ನಾಗರಿಕರು, ನಗು ಮುಖದ ಶ್ರೀ ಬಿ ಎಲ್. ಎನ್ ರೈ

(೧೩ನೇ ಪುಟ ನೋಡಿ)

ನಾರಿನ ಕಥೆ

ಕಾಳೀಗುಡಿಯ ಸುರಂಗ

ಬರೆದವರು: ಶ್ರೀ ಸಿರಿ ಪತಿ,

"ವೀಣಾ."

"ಪ್ರಭು."

"ಇಂದೇಕೊ ನೀನು ದಿನದಂತಿಲ್ಲ! ನಿನ್ನಲ್ಲೇನೋ ವ್ಯಾಕುಲವಡಗಿದಂತಿದೆ."

"ಅದನ್ನು ನೀವೂ ಅರಿತಿರುವಿರಿ. ನಾನೊಬ್ಬ ರಾಜಕುಮಾರಿಯಾಗಿದ್ದೇ ನನಗೆ ಬೇಡವಾಗಿದೆ."

"ಅಂದರೆ?....ನಿನ್ನ ಮಾತಿನ ಅರ್ಥವಾಗಲಿಲ್ಲ! ಎಂಥ ಸಂದರ್ಭದಲ್ಲಿಯೂ ನಾನು ನಿನ್ನನ್ನು ಬಿಡಲಾರೆ ವೀಣಾ. ವಿಶ್ವಾಸವಿಡು. ಈ ಬಗ್ಗೆ ಎಂಥ ಬಲಿದಾನಕ್ಕಾದರೂ ನಾನು ಸಿದ್ಧ..."

"ನಾನು ಯೋಚಿಸಿದ್ದೂ ಅದನ್ನೇ ಪ್ರಭು ನೀವು ನನ್ನ ಪಾಲಿನ ದೇವರು. ನಾನೊಬ್ಬ ಯಃಕಶ್ಚಿತ ಹೆಣ್ಣಾಗಿದ್ದರೆ ಇಂದೇ ನಿಮ್ಮೊಟ್ಟಿಗೆ ನಿಮ್ಮ ರಾಜ್ಯಕ್ಕೆ ಬರುತ್ತಿದ್ದೆ. ಆದರೆ ರಾಜಕುಮಾರಿಯಾಗಿ ಜನಿಸಿದ್ದೇ ನನ್ನ ದುರದೃಷ್ಟ."

"ಯಾಕೆ ವಸಂತ ರಾಜರಿಗೆ ನೀನೊಬ್ಬಳೇ ಮಗಳಲ್ಲವೇ! ನಿನ್ನ ಇಚ್ಛೆಯ ವ್ಯಕ್ತಿಯನ್ನು ಲಗ್ನವಾಗಲು ಅವರು ಅಡ್ಡ ಬರುವರೇ? ಒಂದುವೇಳೆ ಅಡ್ಡ ಬಂದರೆ ನಮ್ಮ ಬಾಹುಬಲ ಸಾಮರ್ಥ್ಯವನ್ನವರು ಕಂಡು ಬೇಯ ಬೇಕಾದೀತಲ್ಲದೆ ಇದನ್ನೊಪ್ಪ ಬೇಕಾದೀತು."

"ನಮ್ಮಿಬ್ಬರ ಬಾಂಧವ್ಯದ ಹೇತುವಿನಿಂದಾಗಿ ಸಾವಿರಾರು ಜನಹಾನಿ ರಕ್ತಪಾತಗಳಾಗಬೇಕೆ? ದೇಶದಲ್ಲೆಲ್ಲ ಕ್ಷೋಭೆಯೇಳಬೇಕೆ? ಪ್ರಭು, ಹಾಗೆ ಮಾತ್ರ ಆಗದಿರಲಿ!"

"ವೀಣಾ, ಹಾಗಾದರೆ ನೀನು ನಿನ್ನ ತಂದೆಯವರನ್ನು ನೇರವಾಗಿ ಕೇಳಬಾರದೇಕೆ?"

"ಇಲ್ಲ ಪ್ರಭು, ಅವರು ಸರ್ವಥಾ ಒಪ್ಪುವಂತಿಲ್ಲ. ನನಗೇಕೊ ಭಯವೆನಿಸುತ್ತಿದೆ. ನಾನಿಂದು ಎಲ್ಲರ ಕಣ್ಣು ತಪ್ಪಿಸಿ ಇಲ್ಲಿಗೆ ಬರಲು ಸಕಲ ಪ್ರಯತ್ನ ಪಡಬೇಕಾಯಿತು. ಯಾರಾದರೂ ನನ್ನನ್ನು ಹಿಂಬಾಲಿಸದಿದ್ದರೆ ನನ್ನ ಪುಣ್ಯ!"

"ಯಾಕೆ ವೀಣಾ, ನನ್ನ ಸಾಮರ್ಥ್ಯದ ಬಗ್ಗೆ ನಿನಗೆ ಸಂಶಯವೇ? ಅಂಗ, ವಂಗ ಮತ್ತು ಕಳಿಂಗ ದೇಶವೆಲ್ಲ ನನ್ನ ಸಾಮರ್ಥ್ಯವನ್ನು ತಿಳಿದಿದೆ ಆದರೆ ನಾನೂ ರಕ್ತಪಾತವಾಗಬಾರದೆಂದೇ ಯೋಚಿಸುತ್ತಿದ್ದೇನೆ."

"ಹಾಗಾದರೆ, ಏನನ್ನು ಯೋಚಿಸುವಿರಿ ಪ್ರಭು? 'ಹಾವು ಸಾಯಬಾರದು ಕೋಲು ಮುರಿಯ ಬಾರದು' ಎಂಬಂತೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಡೆಯಲು ಸಾಧ್ಯವೇ?"

"ಸಾಧ್ಯವಿದೆ ವೀಣಾ. ಆದರೆ ನೀನು ಮನಸ್ಸು ಮಾಡಬೇಕು."

"ಏನು ಮಾಡಲಿ ಪ್ರಭೂ. ದಾಸಿಯಾದ ನನಗೆ ಅಪ್ಪಣೆ ಕೊಡಿಸಿರಿ."

"ನೀನೀಗಲೇ ನನ್ನ ಜೊತೆಗೆ ಕಾಂಭೋಜಕ್ಕೆ ಬರಬೇಕು. ಕಾಗದವೊಂದರಲ್ಲಿ ತಾನಾಗಿಯೇ ಕಾಂಭೋಜ ರಾಜನಲ್ಲಿ ಅನುರಕ್ತಳಾಗಿ ಹೊರಡಿರುವೆನೆಂದೂ ಪೂರ್ವ ಕಾಲದಿಂದ ರಾಜ್ಯ ದಾರ್ಢ್ಯತೆಯ ಹವ್ಯಾಸದ ಸಂಬಂಧ ಪರಸ್ಪರ ವೈಮನಸಿದ್ದ ಕಾರಣದಿಂದಲೂ ಈ ಬಗ್ಗೆ ನಿಮ್ಮಿಂದ (ವಸಂತ ರಾಜ) ಅನುಮತಿ ದೊರೆಯದೆಂಬುದನ್ನರಿತವಳಾದ್ದರಿಂದಲೂ ಈ ಪ್ರಕಾರ ಮಾಡಬೇಕಾಯಿತೆಂಬುದನ್ನು ಈ ಬಗ್ಗೆ ಕ್ಷಮೆ ನೀಡಲೆಂಬುದನ್ನೂ ಬರೆದು ಕಳಿಸುವದು"

"ಸ್ವಾಮಿ, ನನ್ನ ಈ ಕಾರ್ಯದಿಂದೇನಾದರೂ ಪ್ರಕೋಪವಾಗಲಿಕ್ಕಿಲ್ಲವಷ್ಟೆ?"

"ಸಂದರ್ಭ ಬಂದಲ್ಲಿ ಹತ್ಯಾಕಾಂಡ ಇದ್ದೇ ಇದೆ. ನಾವಾಗಿ ಯುದ್ಧ ಮಾಡುವಂತಿಲ್ಲ! ವೀಣಾ ನಡೆ-ಏಳು ಕುದುರೆಯು ಕಾದು ನಿಂತಿದೆ! ಇನ್ನಾರಾದರೂ ನೋಡಿಯಾರು!"

ಪ್ರೇಮಿಗಳಿಬ್ಬರೂ ಕುದುರೆಯನ್ನೇರಿ ಇನ್ನೇನು ಹೊರಟರು—ಎನ್ನುವಷ್ಟರಲ್ಲಿ ನಾಲ್ಕು ಜನ ಸಶಸ್ತ್ರ ಸೈನಿಕರು ಅವರನ್ನಡ್ಡಗಟ್ಟಿದರು. ಮನದಲ್ಲೇನೋ ರಕ್ತಪಾತವಾಗಬಾರದು ಎಂದಿತ್ತು, ಆದರೆ ನಾಂದಿಗೆ ಪ್ರಾರಂಭವಾಯಿತು. ಕತ್ತಿ ವರಸೆಯಲ್ಲಿ ಪ್ರಖ್ಯಾತನಾದ ಪ್ರಸೇನನು ಕ್ಷಣಮಾತ್ರದಲ್ಲಿ ನಾಲ್ವರನ್ನೂ ಕೆಳಗುರುಳಿಸಿ. ತನ್ನ ಪ್ರೇಮಿಕೆಯೊಡನೆ ನಾಗಾಲೋಟದಿಂದ ದೂರ ಸಾಗಿದ! ಅನತಿ ದೂರದಲ್ಲಿ ಅವರಿಬ್ಬರೂ ಒಬ್ಬ ಸೈನಿಕನನ್ನು ಇಳಿದರು. ರಾಜಕುಮಾರಿಯ ಪರಿಚಯವನ್ನು ಅರಿತ ಅವನು ಅವಳಿಂಗಿತವನ್ನೂ ಕಾಗದವನ್ನೂ ರಾಜ ವಸಂತನಿಗೆ ತಲ್ಪಿಸುವ ಹೊಣೆ ಹೊತ್ತನು. ರಾತ್ರಿಯ ಮೂರನೆ ಜಾವದಲ್ಲಿ ತಿರುಗಿ ಅಶ್ವವನ್ನೇರಿ ಇಬ್ಬರೂ ಬೆಳಗಾಗುವದರೊಳಗೆ ಕಾಂಭೋಜವನ್ನು ತಲ್ಪಿದರು.

ಮಗಳ ಕಾಗದವು ಕೈಗೆ ದೊರಕುತ್ತಲೇ ವಸಂತರಾಜ ಕಿಡಿಕಿಡಿಯಾದ. ತನ್ನ ಮಗಳು ದೇಶ ದ್ರೋಹಿ—ಪಿತೃ ದ್ರೋಹಿಯಾಗುವಳೆಂದವನು ಕನಸಿನಲ್ಲಿಯೂ ಎಣಿಸಿರಲಿಲ್ಲ!!—ಅವಳಿಗೆ ಸ್ವೇಚ್ಛಾವರ್ತಿಯಾಗಿ ಊರಲ್ಲಿ ತಿರುಗಾಡಲು ಅವಕಾಶವಿತ್ತುದಕ್ಕಾಗಿ ತನ್ನನ್ನೇ ತಾನು ಶಪಿಸಿಕೊಂಡ!!—ಒಂದೆಡೆಯಲ್ಲಿ ಮಗಳನ್ನು ಕಳಕೊಂಡುದಲ್ಲದೆ ತನ್ನ ಪ್ರಜೆಗಳಿಗೆ ಮೋರೆತೋರಿಸದಷ್ಟು ಬಲವಾದ ಅವಮಾನವೆನಿಸಿತವನಿಗೆ.— ಯಾವರೀತಿಯಿಂದಾದರೂ ಸೇಡು ತೀರಿಸಿಕೊಳ್ಳತಕ್ಕದ್ದೆಣಿಸಿದ.

ಕಳಿಂಗ ರಾಜ್ಯ ಹಾಗೂ ಕಾಂಭೋಜ ರಾಜ್ಯ ಎರಡರಲ್ಲಿಯೂ ಪೂರ್ವಕಾಲದಿಂದಲೂ ವೈಷಮ್ಯವಿತ್ತು! ಒತ್ತೊತ್ತಿನ ರಾಜ್ಯವನ್ನು ಆಕ್ರಮಿಸಿ ಆಧ್ಯತೆಯನ್ನು ಬೇಡಿಕೊಳ್ಳುವ ಹವ್ಯಾಸವೊಂದೇ ಅಲ್ಲದೆ ಕಳಿಂಗ ರಾಜನಾದ ವಸಂತಕೇತು ಮೊದಲಿನಿಂದಲೂ ಕಾಂಭೋಜ ರಾಜನ ಮೇಲೆ ವಿಷಕಾರುತ್ತಲಿದ್ದ. ಕಾಂಭೋಜದ ರಾಜ ಹೃದ್ವಿಕಾರದಿಂದ ಮಡಿದ ನಂತರ ಅವನ ಮಗ ಪ್ರಸೇನನೇ ರಾಜ್ಯಭಾರ ನಡೆಸುತ್ತಿದ್ದ. ರಾಜ್ಯದಾದ್ಯಂತ ಅವನ ಪ್ರಖ್ಯಾತಿ ಹರಡಿತ್ತು!

ಎರಡೂ ರಾಜ್ಯಗಳ ಗಡಿ ಪ್ರದೇಶದಲ್ಲಿ ಕಳಿಂಗರಾಜ ಕುಮಾರಿ ವೀಣಾದೇವಿ ಹಾಗೂ ಕಾಂಭೋಜ ರಾಜಕುಮಾರ ಪ್ರಸೇನರು ಅದೆಷ್ಟೋ ದಿನ ಗುಪ್ತವಾಗಿ ಬೆಟ್ಟಿಯಾಗುತ್ತಲಿದ್ದು—ಗಾಂಧರ್ವರೀತ್ಯಾ ಅವರು ವಿವಾಹವಾದಂತಿದ್ದರು. ವಿಷಯವನ್ನರಿತ ದಿನವೇ ಕಳಿಂಗರಾಜ ತನ್ನ ಮಗಳಿಗೆ ಹೊರಗೆ ಹೋಗ ಕೂಡದೆಂದು ಕಟ್ಟಾಜ್ಞೆಯಿತ್ತನಲ್ಲದೆ ಭದ್ರ ಕಾವಲನ್ನಿಟ್ಟಿದ್ದ. ಆದರೆ ಪ್ರೇಮದ ಕರೆಯು ಛದ್ಮವೇಷದಲ್ಲಿ ಎಂದಿನಂತೆ ಅಂದೂ ಗಡಿಯ ತನಕ ತಂದು ಪ್ರಸೇನನೊಡನೆ ಗಡಿಪಾರು ಮಾಡಿಸಿತ್ತು! ಅವಳಿಗಿನ್ನು—ಕಳಿಂಗ ರಾಜ್ಯದ ಋಣ ತೀರಿದಂತೆ ಎನಿಸಿತು.

ಕಾಂಭೋಜ ರಾಜ್ಯದಲ್ಲಿ ಸಂತಸದ ಸಡಗರ ಆವರಿಸಿತು. ವಿಧಿರೀತ್ಯಾ—ರಾಜಕುಮಾರಿಯನ್ನು ಲಗ್ನಮಾಡಿಕೊಂಡ—ಪ್ರಸೇನನಿಗೆ ಕೆಲವು ವಿರೋಧಿಗಳು ಹುಟ್ಟಿಕೊಂಡರು. ಕದ್ದುತಂದ ರಾಜಕುಮಾರಿಯನ್ನು ಲಗ್ನವಾಗುವ ಪೂರ್ವ—ಆ ರಾಜಮನೆತನದ ಪಂಯನ್ನೊಪ್ಪಿಸಬೇಕಾಗಿತ್ತೆಂದು ಅವರವಾದ. ಅಥವಾ ಯುದ್ಧಮಾಡಿ ಅವರನ್ನೊಪ್ಪಿಸಬೇಕಾಗಿತ್ತೆಂದು ಅವರ ಎರಡನೇ ವಾದ. ಆದರೆ ತಮ್ಮ ರಾಜ್ಯಕ್ಕೆ ಮಹಾರಾಣಿಯಾಗಿ ಬಂದ ರಾಜಕುಮಾರಿಯ ಸೌಜನ್ಯ ಪ್ರತಿಭೆಯಿಂದ ಮಂತ್ರಿವರ್ಯರೇ—ಮೊದಲಾಗಿ ಹಲವರು ಒಪ್ಪಿಗೆಯನ್ನಿತ್ತು ಕಾರ್ಯವು ನೆರವೇರಿತು.

ಕಳಿಂಗ ರಾಜನು ಸೇಡು ತೀರಿಸಿಕೊಳ್ಳುವ ಬಗ್ಗೆ ಆಲೋಚಿಸಿದ. ಖಾಡಾಖಾಡಿ ಯುದ್ಧ ಮಾಡಿ ಕಾಂಭೋಜ ರಾಜನನ್ನು ಸೋಲಿಸುವದು ಸುಲಭವಿರಲಿಲ್ಲ. ಅಲ್ಲದೆ ಕಾಂಭೋಜದಲ್ಲಿದ್ದ ಕಾಲಾಂಶ ಸೈನಿಕರೂ ಕಳಿಂಗದಲ್ಲಿರಲಿಲ್ಲ!!—ಅಂತೆಯೇ ವಂಗ ದೇಶದ ವಿಕರ್ಣ ರಾಜನ ಸಹಾಯದಿಂದ ಕಾಂಭೋಜನ ಮೇಲೆ ಹಲ್ಲೆ ನಡೆಯಿಸಲು ಅವನು ಹವಣಿಸಿದ!—ಆ ಪೂರ್ವದಲ್ಲಿಯೇ ಮಗಳನ್ನು ಏನಕೇನ ಉಪಾಯದಿಂದ ಕಾಂಭೋಜದಿಂದ ಗುಪ್ತವಾಗಿ ಅಪಹರಿಸುವದೆಂದವನು ಯೋಚಿಸಿದ. ಅವನ ಯೋಚನೆ ಯಶಸ್ವಿಯಾಗಲು ವಿಳಂಬವಾಗಲಿಲ್ಲ.

ಅಂದು ಸಾಯಂಕಾಲ ತನ್ನ ಸಖಿಯರನ್ನೊಡಗೂಡಿಕೊಂಡು ರಾಣಿ ವೀಣಾದೇವಿ ಕಾಳಿಕಾ ಗುಡಿಗೆ ಪೂಜೆಯನ್ನೀಯಲು ಹೋಗಿದ್ದಳು. ಕಾಳಿಕಾ ಗುಡಿ—ಪಟ್ಟಣದ ಹೊರವಲಯದಲ್ಲಿತ್ತು!!—ದಾಸಿಯರೊಡನೆ ಒಳಗೆ ಹೋದ ವೀಣಾದೇವಿ ಎಷ್ಟು ಹೊತ್ತಾದರೂ ಬಾರದಿದ್ದನ್ನು ನೋಡಿ ಹೊರಗಿದ್ದ ಕಾವಲುಗಾರ ಸೈನಿಕರು ಗಾಬರಿಯಾದರು. ಒಳಹೊಕ್ಕು ನೋಡಿದರೆ ಕಲ್ಲಿನ ಪ್ರತಿಮೆ ದೇವಿಯ ಹೊರತು ಪೂಜಾರಿಗಳಾಗಲೀ-ದಾಸಿಯರಾಗಲಿ-ವೀಣಾ ದೇವಿಯಾಗಲೀ ಇರಲಿಲ್ಲ! ಕೂಡಲೇ ಊರೆಲ್ಲ—ಸುದ್ದಿಯಾಯಿತಲ್ಲದೆ ಇಡೀ ದೇವಾಲಯದ ಸುತ್ತೆಲ್ಲ ಸೈನಿಕರು ರಾಣಿಯವರಿಗಾಗಿ ಹುಡುಕಾಡಿದರು, ರಾಜಾ ಪ್ರಸೇನನು ಇದನ್ನು ತಿಳಿದು ಗುಡಿಗೆ ಬಂದ! ಗುಡಿಯ ಗರ್ಭಕೋಣೆಯಲ್ಲಿ ಪೂರ್ವ ಭಾಗದಲ್ಲಿ ಒಂದು ಬಾಗಿಲು ಇದ್ದುದನ್ನೂ ಅಲ್ಲಿಂದ ಒಳಗೊಂದು ಸುರಂಗವಿರುವುದನ್ನೂ ಕಂಡು ಆಶ್ಚರ್ಯಗೊಂಡವನೇ ಕೆಲವು ವೀರ ಯೋಧರನ್ನೂ ಸೇನಾಪತಿಯನ್ನೂ ಕೂಡಿಕೊಂಡು ರಾತ್ರಿಯೇ ಅದರ ಶೋಧನೆಗೆ ಹೊರಟ! ಸುರಂಗ ದ್ವಾರವು ಹಳೆಯದಾಗಿರದೆ ಹೊಸತಾಗಿ ಕಳೆದೆರಡು ತಿಂಗಳಲ್ಲಿ ತಯಾರಿಸಿದಂತಿತ್ತು!

(೧೧ನೇ ಪುಟ ನೋಡಿರಿ)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ (ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಕಾಮನ್‌ವೆಲ್ತ್ ಸಮ್ಮೇಳನದ ಫಲಶ್ರುತಿ

ಟಿ. ಟಿ. ಕೆ. ಮೇಲೆ ವ್ಯರ್ಥ ಟೀಕಾಸ್ತ್ರ

ಈ ತಿಂಗಳ ಮಧ್ಯಾವಧಿಯಲ್ಲಿ ಸೇರಿದ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವನ್ನು ಭಾರತೀಯ ದೃಷ್ಟಿಯಿಂದ ನೋಡುವಾಗ, ಭಾರತೀಯ ಪ್ರಭಾವದಿಂದದ್ದು ಇತಿಹಾಸದಲ್ಲಿ ಮೊದಲ ಬಾರಿಗೆ ದೂರವಾಗಿದೆಯೆಂಬುದು ಸಾಮಾನ್ಯ ಅಭಿಪ್ರಾಯ. ಈ ಅಭಿಮತವು ಹೊರಡುವುದಕ್ಕಿರುವ ಏಕಮೇವ ಕಾರಣವೆಂದರೆ, ಸಮ್ಮೇಳನಾಂತ್ಯದಲ್ಲಿ ಹೊರಟ ಪ್ರಕಟಣೆಯಲ್ಲಿ ಭಾರತ ಪಾಕಿಸ್ತಾನಗಳ ಸಂಬಂಧದಲ್ಲಿ ಸೇರಿದ ಒಂದೇ ಒಂದು ವಾಕ್ಯ. ಇರುವುದೊಂದು ವಾಕ್ಯವಾದರೂ ಭಾರತದಲ್ಲಿ ಅದು ವಿಪರೀತ ಪರಿಣಾಮವನ್ನೂ, ವಿರೋಧಾಭಿಪ್ರಾಯವನ್ನೂ ಹುಟ್ಟಿಸಿರುವುದು ಮಾತ್ರವಲ್ಲ, ಇದರ ವಿರುದ್ಧ ಒಂದು ಬಗೆಯ ಆಂದೋಲನವೇ ನಡೆಯುತ್ತಿರುವಂತೆ ಭಾಸವಾಗುತ್ತಿದೆ. ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತವು ಸರಿಯಾಗಿ ಪ್ರತಿನಿಧಿಸಲ್ಪಡಲಿಲ್ಲ, ಭಾರತದ ನೀತಿಯು ಸುಸ್ಪಷ್ಟವಾಗಿ ವಿವರಿಸಲ್ಪಟ್ಟಿಲ್ಲವೆಂದು ಮುಂತಾಗಿ ಭಾರತದ ಅಧಪತನವಾಯಿತೆಂಬಂತೆ ಕೆಲವು ಮುಖಂಡರೂ ಆಡತೊಡಗಿದ್ದಾರೆ.

ಪಾಕಿಸ್ತಾನವು ಹಿಂದಿನಿಂದಲೂ ಕಾಶ್ಮೀರದ ವಿಚಾರವನ್ನು ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಎತ್ತುವ ಪ್ರಯತ್ನವನ್ನು ಮಾಡಿದೆ; ಆದರೆ, ಇದಕ್ಕೆ ಇಂತಹ ಸಮ್ಮೇಳನವು ವೇದಿಕೆಯಾಗಲಾರದೆಂಬ ಉತ್ತರ ತಮಗೆ ದೊರಕಿರುವುದನ್ನು ಅಧ್ಯಕ್ಷ ಅಯ್ಯೂಬಖಾನರೇ ತಿಳಿಸಿದ್ದಾರೆ. ಹಾಗಿರುವಾಗ, ಕಾಶ್ಮೀರದ ಸಮಸ್ಯೆಯನ್ನು ಚರ್ಚಿಸುವ ಅವಕಾಶವಂತೂ ಅಲ್ಲಿ ಇರಲೇ ಇಲ್ಲ ಎಂದು ಯಾರಾದರೂ ಹೇಳಬಹುದು. ಹಿಂದೆ ದಿವಂಗತ ಪ್ರಧಾನಿ ನೆಹರುರವರು ಇಂತಹ ವಿಚಾರವನ್ನೆತ್ತಲು ಪ್ರಬಲ ವಿರೋಧ ವ್ಯಕ್ತಪಡಿಸಿದ್ದರಿಂದ ಅಂತಹ ಸಂದರ್ಭ ಸಿಗಲಿಲ್ಲ; ಇಂದು ಅವರ ಅನುಪಸ್ಥಿತಿಯ ದುರ್ಲಾಭಗಳಿಸಿ ಪಾಕಿಸ್ತಾನವು ತನ್ನ ಬೇಳೆ ಬೇಯಿಸುವಲ್ಲಿ ಯಶಸ್ಸು ಪಡೆಯಿತು ಎಂದು ಕೆಲವರ ಅಂಬೋಣ. ನೆಹರುರವರಂತೆ ಸಮ್ಮೇಳನದಲ್ಲಿ ಭಾಗವಹಿಸಲು ಅವರೊಬ್ಬರೇ ಸಮರ್ಥರಲ್ಲವೆ ಮತ್ಯಾರೂ ಅಲ್ಲ; ನೆಹರುರವರೊಬ್ಬ ಮಹಾನ್ ಪ್ರಭಾವಶಾಲೀ ವ್ಯಕ್ತಿ, ಅವರ ಸ್ಥಾನವನ್ನು ಪೂರ್ತಿ ಮಾಡುವ ಇನ್ನೊಬ್ಬ ಇಲ್ಲವೆಂಬುದು ಯಥಾರ್ಥ. ಅವರಂತಹ ವ್ಯಕ್ತಿ ದಶಕ—ಶತಕಗಳಲ್ಲೊಬ್ಬನೂ ಉದಿಸಲಾರನೆಂಬುದು ನಿಜ.

ನೆಹರುರವರಿಲ್ಲದ್ದರಿಂದ, ಲಾಲಬಹದೂರ ಶಾಸ್ತ್ರಿಗಳ ಅಸ್ವಸ್ಥದಿಂದ ಟಿ. ಟಿ. ಕೆ. ಯವರೂ ಇಂದಿರಾ ಗಾಂಧಿಯವರು ಭಾರತೀಯ ನಿಯೋಗದ ಸದಸ್ಯರಾಗಿ ಸಮ್ಮೇಳನದಲ್ಲಿ ಭಾಗವಹಿಸಿದರು. ಗಾಂಧಿಯವರು ನಿಯೋಗದ ಒಬ್ಬಾಕೆ ಸದಸ್ಯೆ ಮಾತ್ರವಾದುದರಿಂದ ಟಿ. ಟಿ. ಕೆ. ಯವರೇ ಹೆಚ್ಚಾಗಿ ಸಮ್ಮೇಳನದಲ್ಲಿ ಭಾರತದ ಯಶ—ಅಪಯಶಗಳಿಗೆ ಹೊಣೆಯಾಗಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದುದರಿಂದಲೇ ಅವರ ಮೇಲೆಯೇ ಟೀಕಾಕಾರರು ಅಸ್ತ್ರ ಬಿಡತೊಡಗಿದ್ದಾರೆ. ಆದರೆ, ನಾವಿಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಸಮ್ಮೇಳನಾಂತ್ಯದ ಪ್ರಕಟಣೆಯಲ್ಲಿ ಭಾರತ-ಪಾಕಿಸ್ತಾನಗಳ ಸಂಬಂಧದಲ್ಲಿ ಉಲ್ಲೇಖಿತವಾದ ಅಂಶ ಭಾರತದ ನೀತಿ, ಧೋರಣೆ, ಗೌರವ ಪ್ರತಿಷ್ಠೆಗಳಿಗೆ ಹಾನಿ ತರುವಂತಹುದಿದೆಯೆ? ಎಂದು.

ಪ್ರಕಟಣೆ ಈ ವಿಷಯದಲ್ಲಿ ಹೇಳಿದ್ದು ಇಷ್ಟು. "ಭಾರತದ ಪ್ರಧಾನಿ ಮತ್ತು ಪಾಕಿಸ್ತಾನದ ಅಧ್ಯಕ್ಷರು ಇತ್ತೀಚೆಗೆ ವ್ಯಕ್ತಪಡಿಸಿದ ಹೇಳಿಕೆಗಳು ಕಾಮನ್‌ವೆಲ್ತ್ ಪ್ರಧಾನಿಗಳಿಗೆ ಸಂತೋಷವನ್ನುಂಟು ಮಾಡಿವೆ. ಉಭಯ ದೇಶಗಳ ನಡುವಣ ಪ್ರಶ್ನೆಗಳು ಸೌಹಾರ್ದಯುತವಾಗಿಯೇ ಪರಿಹಾರಗೊಳ್ಳುವುದೆಂದವರು ಹಾರೈಸುತ್ತಾರೆ."

ಈ ಹೇಳಿಕೆಯೇ ಸೂಚಿಸುವಂತೆ ಉಭಯ ವರಿಷ್ಠರು ಬಹಿರಂಗವಾಗಿ ನೀಡಿದ ಹೇಳಿಕೆಗಳನ್ನೇ ಹೊಂದಿಕೊಂಡಿದೆ ಈ ಅಂಶ ಹೊರತು ಮತ್ತೇನೂ ಇಲ್ಲ. ಎರಡು ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಶ್ನೆಗಳನ್ನು ವಿವೇಚಿಸುವುದು ಮತ್ತು ಆದೇಶ ನೀಡುವುದು ಇಲ್ಲಿನ ವಿಷಯವಲ್ಲ. ಟಿ. ಟಿ. ಕೆ. ಯವರು ಈ ಅಂಶದ ಬಗ್ಗೆ ವಿರೋಧಿಸಿದರೂ ಹೆಚ್ಚಿನ ಸದಸ್ಯರು ಇದನ್ನು ಬಯಸಿದ್ದರಿಂದ ಅದು ಉಳಿದುಕೊಂಡಿತು. ದಿವಂಗತ ನೆಹರು ಇರುತಿದ್ದರೆ, ಈ ಪ್ರಸ್ತಾವವನ್ನೆತ್ತುವುದಕ್ಕೇನೇ ಉಳಿದವರು ಅಂಜುತ್ತಿದ್ದರೋ ಏನೋ! ಒಬ್ಬನ ವ್ಯಕ್ತಿತ್ವದಂತೆ ಇನ್ನೊಬ್ಬನದಿರುವುದು ಎಂದಿಗೂ ಸಾಧ್ಯವಿಲ್ಲ.

ಕಾಶ್ಮೀರದ ವಿಷಯವು ಅಧಿಕೃತವಾಗಿ ಸಮ್ಮೇಳನದ ಮುಂದೆ ಬಂದೂ ಇಲ್ಲ; ಬರುವುದು ಸಾಧ್ಯವೂ ಇಲ್ಲ. ಹಾಗೆಯೇ ಉಭಯ ರಾಷ್ಟ್ರಗಳ ನಡುವಣ ಸಮಸ್ಯೆಗಳೂ ಸಮ್ಮೇಳನದಲ್ಲಿ ಬಹಿರಂಗವಾಗಿ ಎತ್ತಲ್ಪಡಲಿಲ್ಲ. ಔಪಚಾರಿಕವಾಗಿ, ಸಮ್ಮೇಳನದ ಹೊರಗಡೆ ನಡೆದ ಈ ಪ್ರಸಂಗವನ್ನು ವಿರೋಧಿಸುವುದಾಗಲೀ ಆ ಮಾತು ಎತ್ತಬಾರದೆಂದು ಹೇಳುವುದಾಗಲೀ ಸಾಧ್ಯವಿದೆಯೆ? ಹರಿಯುವ ನೀರಿಗೆ ದೊಣ್ಣೆನಾಯಕನ ಅಪ್ಪಣೆ ಬೇಕೆ? ಪ್ರಕಟಣೆಯಲ್ಲಿ ಈ ವಿಷಯ ಪ್ರಸ್ತಾಪವೇ ಇರದಿದ್ದರೆ ಚೆನ್ನಾಗಿತ್ತು. ಹಾಗಾಗಲಿಲ್ಲ. ಕೆಲವೊಂದು ಪಾಶ್ಚಾತ್ಯರು ತಂತಮ್ಮ ಹಿತಾಸಕ್ತಿಗಾಗಿ ಇಂತಹ ಹುಳುಕನ್ನು ಮುಂದೆ ಮಾಡುತಿದ್ದಾರೆ. ಅಂತಹರ ಪ್ರಭಾವದಿಂದಾಗಿಯೇ ಈ ಅಂಶ ಅಲ್ಲಿ ಉಳಿದುಕೊಂಡಿತೆನ್ನಬೇಕು. ಆದರೆ, ಅದರಲ್ಲಿ ಅಲ್ಲವಾದುದೇನೂ ಇಲ್ಲವೆಂಬುದನ್ನು ನಾವು ಮರೆಯಬಾರದು. ಪಾಕ್ ಅಧ್ಯಕ್ಷ—ಭಾರತೀಯ ಪ್ರಧಾನಿಗಳ ನಡುವೆ ಪತ್ರ ವ್ಯವಹಾರ ನಡೆದದ್ದು ನಿಜ; ಇಬ್ಬರೂ ಮಾತುಕತೆಯ ಮೂಲಕ ಪ್ರಶ್ನೆಗಳನ್ನು ಪರಿಹರಿಸುವುದರಲ್ಲಿ ಉತ್ಸುಕತೆ ತೋರಿಸಿರುವುದೂ ಸತ್ಯ. ಹಾಗಿರುವಾಗ, ಇದನ್ನೇ ಸ್ವಾಗತಿಸಿ ಶುಭ ಬಯಸಿದರೆ ತಪ್ಪು ಎಂದು ಪಟ್ಟು ಹಿಡಿಯುವುದು ತರವಲ್ಲ. ಇದರಿಂದ ಯಾರ ಕೈ ಮೇಲಾದುದೂ ಇಲ್ಲ; ಯಾರದೂ ಕೆಳಗಾದುದೂ ಇಲ್ಲ. ಸತ್ಯ ಹೇಳುವುದಾದರೆ, ಈ ಸಮ್ಮೇಳನದ ಪ್ರಕಟಣೆಗೂ ಸದ್ಯ ರಾಷ್ಟ್ರದ ನೀತಿಗೂ ಪೂರ್ವಾಪರ ಸಂಬಂಧವೇ ಇರುವುದಿಲ್ಲ!

ಪೂರ್ವ ಪರಂಪರೆಯನ್ನು ಮೀರಿ ಈ ಬಾರಿ ಮಾತ್ರ ಇಂತಹ ಅಂಶ ಸಮ್ಮೇಳನದ ಪ್ರಕಟಣೆಯಲ್ಲಿ ಉಳಿಯಿತು ಎಂಬುದು ಮಾತ್ರ ಹೊಸ ಸಂಗತಿ. ಪರಂಪರೆಯನ್ನು ವುದು ನಾವು ಮಾಡಿಕೊಂಡ ಹಾಗೆ. ಅದೇನೂ ಶಾಶ್ವತವಾಗಿ ಉಳಿಯುವುದಿಲ್ಲ. ಹಾಗಾಗಿ ಇಂತಹ ಕ್ಷುಲ್ಲಕ ವಿಚಾರಗಳಿಗಾಗಿ ದೇಶದಲ್ಲಿ ಗೊಂದಲವನ್ನುಂಟು ಮಾಡುವುದು ಸರಿಯಲ್ಲ.

ಚೀನೀಯ ಆಕ್ರಮಣದ ಬಗ್ಗೆ ಅಯ್ಯೂಬಖಾನರ ಹೇಳಿಕೆಗಳು ಮಾತ್ರ ಭಾರತವು ತಳೆದ ನಿಲುವಿಗೆ ತುಸು ವ್ಯತಿರಿಕ್ತವಾದಂತಿವೆ ಅದು ಆಕ್ರಮಣ ಶೀಲವಲ್ಲವೆಂಬರ್ಥದಲ್ಲಿ ಅವರು ಮಾತಾಡಿದ್ದಾರೆ. ಆಗ್ನೇಯ ಏಶ್ಯಾದ ಮೇಲೆ ಕಮ್ಯುನಿಸ್ಟ ಆಕ್ರಮಣದ ಭೀತಿ ಮಾತ್ರ ಸಮ್ಮೇಳನದಲ್ಲಿ ಪ್ರಸ್ತಾಪಿಸಲ್ಪಟ್ಟಿತು. ಚೀನೀಯ ಆಕ್ರಮಣದ ಪ್ರಸ್ತಾಪ ಮಾಡಲು ಭಾರತೀಯ ನಿಯೋಗವೇಕೆ ಹಿಂಜರಿಯಬೇಕು ಎಂದು ಪ್ರಶ್ನಿಸುವವರೂ ಇದ್ದಾರೆ. ಅಪ್ರತ್ಯಕ್ಷವಾಗಿ ಇದೂ ಮುಂದೆ ಬಂದಿದೆ. ಪ್ರತ್ಯೇಕವಾಗಿ ಭಾರತದ ಮೇಲೆ ಅದು ಮಾಡಿದ ಆಕ್ರಮಣವನ್ನು ಪ್ರಸ್ತಾಪಿಸಲಿಲ್ಲ. ಪ್ರಾಯಃ ಅದಕ್ಕೆ ಅವಕಾಶ ದೊರೆಯಲಿಲ್ಲವೆಂದು ನಾವು ತಿಳಿಯಬಹುದು. ಸದಸ್ಯ ರಾಷ್ಟ್ರಗಳಲ್ಲಿಯೇ ಚೀನೀಯ ಆಕ್ರಮಣದ ಬಗ್ಗೆ ಭಿನ್ನಾಭಿಪ್ರಾಯವಿರುವುದನ್ನು ನಾವು ಗಮನಿಸಬೇಕು.

ಟಿ ಟಿ ಕೆ. ಯವರು ಇದೀಗ ಮೊದಲ ಬಾರಿ ಶಾಸ್ತ್ರಿಯವರು ಕಟ್ಟಿಕೊಟ್ಟ ಬುತ್ತಿಯನ್ನು ಹಿಡಿದುಕೊಂಡು ಸಮ್ಮೇಳನದಲ್ಲಿ ಭಾಗವಹಿಸಿದರು. ನೆಹರು ತನ್ನ ವ್ಯಕ್ತಿತ್ವ ಪ್ರಭಾವದಿಂದ ಸಮ್ಮೇಳನ ತುಂಬ ಹರಡುತಿದ್ದರೆ, ಟಿ ಟಿ ಕೆ. ಯವರು ಹಾಗೇನೂ ಮಾಡಲಿಲ್ಲ; ಮಾಡುವುದು ಅವರಿಗೆ ಸಾಧ್ಯವೂ ಇಲ್ಲ. ಆದರೆ ತನ್ನ ದೇಶದ ನೀತಿಯನ್ನವರು ಸ್ಪಷ್ಟಪಡಿಸುವಲ್ಲಿ ಹಿಂಜರಿಯಲಿಲ್ಲ. ಆದರೂ ಅದರ ಕಡೆಗೆ ಉಳಿದವರು ಹೆಚ್ಚಿನ ಗಮನ ಕೊಡಲಿಲ್ಲವೆಂದರೆ ಯಾರಾದರೂ ಏನು ಮಾಡಬೇಕು? ಒಂದು ಸಮ್ಮೇಳನದಲ್ಲಿ ಭಾಗವಹಿಸಿದ ಮೇಲೆ ಕೊಡುಕೊಳ್ಳುವ ನೀತಿಯನ್ನನುಸರಿಸಲೇ ಬೇಕಾಗುತ್ತದೆ. ಸಮ್ಮೇಳನಾಂತ್ಯದ ಹೇಳಿಕೆಗಳು ಪುರಸ್ಕಾರಾರ್ಹವಲ್ಲವಾದರೂ ಅತ್ಯಂತ ಆಕ್ಷೇಪಾರ್ಹವಲ್ಲ. ಅದು ಬರದೇ ಉಳಿದಿದ್ದರೆ ಉಚಿತವಿತ್ತು; ಬಂದುದರಿಂದ ಯಾರ ಗೌರವಕ್ಕೂ ಕುಂದುಂಟಾಗದು. ಆದುದರಿಂದ ಆ ಪ್ರಶ್ನೆಯನ್ನು ಅಲ್ಲಿಯೇ ಬಿಟ್ಟು, ನಮ್ಮ ಒಳಿತನ್ನು ಸಾಧಿಸುವಲ್ಲಿ ನಮ್ಮ ಶಕ್ತಿಯನ್ನು ವ್ಯಯಿಸುವುದು ಅಪೇಕ್ಷಣೀಯ.

ನಿಮಗೆ ನಾನು ನೆರವಾಗಲೇ?

ಸಿಂಡಿಕೇಟ್ ಬ್ಯಾಂಕಿನ ಸಿಬ್ಬಂದಿಯವರು ನಿಮ್ಮಿಂದ ಇದನ್ನೇ ತಿಳಿಯಲು ಆತುರಪಡುತ್ತಾರೆ. ನೀವು ಒಂದು ಚೆಕ್ಕನ್ನು ಕ್ಯಾಶ್ ಮಾಡಿಸುತ್ತಿರುವಾಗಾಗಲೀ, ಠೇವಣಿಯಿಡುತ್ತಿರುವಾಗಾಗಲೀ....................ಅಥವಾ ಬರೇ ಸಲಹೆಗಳನ್ನು ಕೇಳುವಾಗಾಗಲೀ ನೀವು ಕೋರುವ ಯಾವುದೇ ಸಹಾಯ ಸಲ್ಲಿಸಲು ಅವರಿಗೆ ಸಂತೋಷವೆನಿಸುತ್ತದೆ.

ಸಿಂಡಿಕೇಟ್ ಸಿಬ್ಬಂದಿಯವರು ನಯ-ವಿನಯದವರಾಗಿರುತ್ತಾರೆ. ನೀವು ಸಂಧಿಸಿದಾಗಲೆಲ್ಲಾ ಸೌಜನ್ಯ ಮತ್ತು ಸೇವೆಯನ್ನೊದಗಿಸುವಂತೆ ಅವರು ತರಬೇತುಗೊಂಡಿದ್ದಾರೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮಣಿಪಾಲ.

....ಜಗದ್ವ್ಯಾಪೀ ಬ್ಯಾಂಕಿಂಗಿಗಾಗಿ.

ಶಾಖೆಗಳು:	ಚಲಾವಣಾ ನಿಧಿ
192	57 ಕೋಟಿ ರೂ.ಗಳಿಗೂ ಮಿಕ್ಕಿದೆ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦.

ಒಂದು ವಿವೇಚನೆ

ಯುವ ಜನಾಂಗದಲ್ಲಿ ಕರ್ತವ್ಯ ಪ್ರಜ್ಞೆ

ದೇಶದ ಭವಿಷ್ಯವು ನಾಳಿನ ಜನಾಂಗವಾದ ಇಂದಿನ ಯುವಕ ಪೀಳಿಗೆಯ ಮೇಲೆ ಹೊಂದಿಕೊಂಡಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇಂದಿನ ನಮ್ಮ ಯುವ ಜನಾಂಗ ದೇಶದ ಭವಿಷ್ಯ ರೂಪಿಸುವಲ್ಲಿ ಮಹತ್ತರವಾದ ಪಾತ್ರ ವಹಿಸಬೇಕು ಎಂದು ದೇಶದ ಹಿತಚಿಂತನೆಯಲ್ಲಿ ಆಸಕ್ತರಾದವರು ಹೇಳುತ್ತಿದ್ದಾರೆ. ಯುವ ಜನಾಂಗದಲ್ಲಿ ಕರ್ತವ್ಯದ ಕುರಿತಾದ ಪ್ರಜ್ಞೆ ಮೂಡಬೇಕಾದುದು ದೇಶದ ಇಂದಿನ ಪರಿಸ್ಥಿತಿಯಲ್ಲಿ ಆವಶ್ಯವೆನಿಸಿದೆ. ಆದರೆ ಇಂದಿನ ಯುವಕರಲ್ಲಿ ಹೆಚ್ಚಿನವರಿಗೆ ತಮ್ಮ ಕರ್ತವ್ಯದ ಕುರಿತಾದ ಪ್ರಜ್ಞೆ ಇದೆಯೇ? ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಶ್ರದ್ಧೆಯಿಂದ ದುಡಿಯುತ್ತಿದ್ದಾರೆಯೇ? ತಮ್ಮ ಹೊಣೆ ಹಾಗೂ ಜವಾಬ್ದಾರಿಗಳನ್ನು ಅರಿತುಕೊಂಡು ಅವರು ವರ್ತಿಸುತ್ತಿದ್ದಾರೆಯೇ? ಎಂಬುದನ್ನು ಪರಿಶೀಲಿಸಿದರೆ ಉತ್ತರ ತುಂಬಾ ನಿರಾಶಾದಾಯಕವಾಗಿದೆ.

ನಾವಿಂದು ನಾಗರಿಕತೆಯ ಯುಗದಲ್ಲಿದ್ದೇವೆ. ನಮ್ಮ ಪೂರ್ವಜರಿಗಿಂತ ನಾನೆಷ್ಟೋ ಪ್ರಗತಿ ಸಾಧಿಸಿದ್ದೇವೆ. ಇಂದು ಪೂರ್ವ ಕಾಲದ ಸಂಪ್ರದಾಯಗಳಿಗೆ ಸ್ಥಾನವಿಲ್ಲ. ಅವುಗಳಲ್ಲಿ ಹೆಚ್ಚಿನವು ಮೂಢ ನಂಬಿಕೆಗಳಿಂದ ಪ್ರೇರಿತವಾದುವು ಎಂಬ ಮತನ್ನು ಮುಂದುವರಿಸಿಕೊಂಡ ಒಂದು ವರ್ಗ ಆಡುತ್ತಿದೆ ಹಿರಿಯರ ವರ್ತನೆ, ಅವರ ಸಲಹೆ ಸೂಚನೆ, ಅವರ ನಡವಳಿಕೆ ಹಾಗೂ ವಿಚಾರಗಳ ಕುರಿತು ಇಂದಿನ ಯುವಕ ಜನಾಂಗಕ್ಕೆ ತಾತ್ಸಾರ ಭಾವನೆ ಮೂಡಿದೆ, ತಮ್ಮ ವಿಚಾರಗಳು ಆಧುನಿಕತೆಯಿಂದ ಪ್ರೇರಿತವಾದುವು, ಹಿರಿಯರ ಸಲಹೆ ಸೂಚನೆಗಳು ಇಂದಿನ ಯುಗಕ್ಕೆ ಹೇಳಿಸಿಕೊಳ್ಳುವಂಥವುಗಳಲ್ಲ ಎಂಬ ಅಭಿಪ್ರಾಯ ನಮ್ಮ ಯುವ ಜನಾಂಗ ತಾಳಿದೆ. ಇದರಲ್ಲಿ ಕೆಲವಂಶ ಸತ್ಯವಾಗಿರಬಹುದಾದರೂ, ಇದನ್ನ ಪೂರ್ಣವಾಗಿ ಸ್ವೀಕರಿಸಲು ಬರುವುದಿಲ್ಲ. ನಮ್ಮ ಪರಂಪರೆ, ನಮ್ಮ ಸಂಸ್ಕೃತಿ, ನಮ್ಮ ನಡವಳಿಕೆ, ಆಚಾರ ವಿಚಾರಗಳು ಸುಸಂಸ್ಕೃತವೆನ್ನಿಸಿಕೊಂಡವುಗಳು. ಪೇಂಟ, ಕೋಟು ಹಾಕಿಯೋ ನೈಲಾನ್ ಸೀರೆ ಉಟ್ಟೋ, ಎರಡು ಜಡೆ ಕಟ್ಟಿಯೋ ತಿರುಗಿದೊಡನೆ ಹಿಂದಿನವರ ವೇಷಭೂಷಣಗಳ ಕುರಿತು ನಿಂದಿಸುವ ಅಧಿಕಾರ ಬರುವುದಿಲ್ಲ. ಹಿರಿಯರ ಮಾತಿನಲ್ಲಿ ಅನುಭವದ ಪಾಕ ತುಂಬಿದೆ. ಅವರ ವಿಚಾರ ಧಾರೆಯಲ್ಲಿ ಸ್ವಾನುಭವವು ಮಹತ್ತರ ಪಾತ್ರ ವಹಿಸುತ್ತಿದೆ ಎಂಬುದನ್ನು ನಮ್ಮ ಯುವಕರು ತಿಳಿಯಬೇಕು. ಕಾಲೇಜು ಹತ್ತಿದೊಡನೆ, ಅಥವಾ ಆಫೀಸೊಂದರಲ್ಲಿ ನೌಕರಿ ದೊರೆತ ಕೂಡಲೇ ಹಿರಿಯರನ್ನು ನಿಂದಿಸಲು, ಅವರ ಕುರಿತು ಅಲ್ಲಸಲ್ಲದ ಟೀಕೆ ಮಾಡಲು ಲೈಸನ್ಸ್ ದೊರೆತಂತಾಗಲಿಲ್ಲ. ಇದು ನಾಗರಿಕತೆಯ ಲಕ್ಷಣವೂ ಅಲ್ಲ. ವಿವೇಕದಿಂದ ಪೂರ್ವಿಕರ ಹಾಗೂ ಹಿರಿಯರ ವಿಚಾರ ಹಾಗೂ ವರ್ತನೆಗಳನ್ನು ಪರಿಶೀಲಿಸಿದರೆ, ಅದರಲ್ಲಿ ಮಹತ್ತರವಾದ ಸತ್ಯ ಹುದುಗಿದೆ ಎಂದು ಮನವರಿಗೆ ಆಗದಿರದು.

ನಮ್ಮ ಯುವ ಜನಾಂಗವಿಂದು ಜವಾಬ್ದಾರಿ ಅರಿತು ಕಾರ್ಯವೆಸಗುತ್ತಿದೆಯೆ? ನಿರ್ವಹಿಸಲು ಕೊಟ್ಟ ಕಾರ್ಯವನ್ನಾದರೂ ಅವರು ಸುಸೂತ್ರವಾಗಿ ಮಾಡುತ್ತಿರುವರೆ? ಎಂದರೆ ಉತ್ತರ ಇಲ್ಲ ಎಂಬುದೇ ಆಗಿದೆ. ಬೆರಳೆಣಿಕೆಯಷ್ಟು ಮಂದಿಯನ್ನು ಬಿಟ್ಟರೆ ಉಳಿದವರೆಲ್ಲರೂ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಒಂದಾಗಿದ್ದಾರೆ. ಕಾರಣ ಅವರಿಗೆ ತಮ್ಮ ಕರ್ತವ್ಯದಲ್ಲಿ ಆಸೆ ಇಲ್ಲ. ಅಥವಾ ವಹಿಸಿಕೊಟ್ಟ ಕೆಲಸವು ತಮ್ಮ ಯೋಗ್ಯತೆಗೆ ಕಡಿಮೆ ಎಂಬ ಭಾವವೂ ಕಾರಣ ಇರಬಹುದು. ತಾವು ಕಲಿತ ವಿದ್ಯೆಗೆ ಈ ಕೆಲಸ ಎಷ್ಟರದು ಎಂಬ ತಾತ್ಸಾರ ಭಾವವೂ ಇರಬಹುದು. ಇಲ್ಲವೇ ಯುವಕರ ಈಗಿನ ಘೋಷಣೆ ಯಾಗಿರುವ ಡೋಂಟ್ ಕೇರ್ ಪಾಲಿಸಿಯೂ (Don't care policy) ಹೇತುವಾಗಿರಬಹುದು. ತಾನು ಮಾಡಿದುದವನ್ನು ಇನ್ನೊಬ್ಬ ತಿದ್ದಲಿದ್ದಾನೆ ಎಂಬ ಧೈರ್ಯವೂ ಕಾರಣವಾಗಿರಬಹುದು. ನೌಕರಿ ಮಾಡುತ್ತಿರುವ ಇಂದಿನ ಬಹ್ವಂಶ ಯುವ ಜನಾಂಗ ಈ ವನೆ ತಾಳಿದೆ. ಈ ಯುವ ಜನಾಂಗದಲ್ಲಿ ಬಹಳವಾದ ಅತೃಪ್ತಿ, ಕರ್ತವ್ಯದ ಕುರಿತು ನಿರ್ಲಕ್ಷ್ಯ, ತಮ್ಮ ಉದ್ಯೋಗದ ಕುರಿತು ತಾತ್ಸರ ಭಾವನೆ, ಎಲ್ಲ ಮಾಡಿದೆ. ಇದಕ್ಕ ಕಾರಣ ಅವರಲ್ಲಿ ಕರ್ತವ್ಯದ ಕುರಿತಾದ ಪ್ರಜ್ಞೆ ಕಡಿಮೆಯಾಗಿರುವುದು.

ಇದರ ಪರಿಣಾಮವೆಂದರೆ ಆಡಳಿತದಲ್ಲಿ ಯುವಕರಿಗೆ ಮಹತ್ವದ ಪಾತ್ರ ಕೊಡಲು ಹೆಚ್ಚಿನ ಜವಾಬ್ದಾರಿ ಕೊಡಲು, ಉಚ್ಚಸ್ಥಾನದಲ್ಲಿರುವವರು ಹಿಂದು ಮುಂದು ನೋಡುವುದೇ ಆಗಿದೆ. ಬರೀ ಹುಡುಗಾಟಿಕೆಯ ಮನೋವೃತ್ತಿ ಇಂದಿನ ಯುವಜನಾಂಗದಲ್ಲಿ ಬೇರೂರಿದೆ, ಅವರು ತಮ್ಮ ವೇಷಭೂಷಣ ಹಾಗೂ ಫ್ಯಾಶನ್ನುಗಳ ಕಡೆಗೆ ಈಯುವಷ್ಟು ಗಮನ ಹಾಗೂ ಲಕ್ಷ್ಯವನ್ನು ತಮ್ಮ ಕರ್ತವ್ಯದ ಕಡೆಗೆ ಈಯುತ್ತಿಲ್ಲ ಎಂಬ ದೂರು ಎಲ್ಲೆಲ್ಲೂ ಕೇಳಿಬರುತ್ತಿದೆ. ಇದರಿಂದ ಆಡಳಿತ ಯಂತ್ರ ಸ್ವಲ್ಪ ಮಟ್ಟಿಗೆ ಕೆಟ್ಟು ಹೋಗಿದೆ. ಕೆಲವರಿಂದ ಕೆಲಸ ಮಾಡಿಸುವುದೂ ಮೇಲಾಧಿಕಾರಿಗಳಿಗೆ ಕಷ್ಟಕರವೆನಿಸುತ್ತಿದೆ. ಸದಾ ಕಾಲವೂ ಅವರ ಮೇಲೆ ದೃಷ್ಟಿಯಿಟ್ಟು ಹೆಜ್ಜೆ ಹೆಜ್ಜೆಗೆ ಅವರ ಕಾರ್ಯದಲ್ಲಿ ಪರಿಶೀಲನೆ ನಡೆಸ ಬೇಕಾಗುತ್ತದೆ. ಇವೆಲ್ಲವುಗಳ ಅಂತಿಮ ಫಲವೆಂದರೆ ಆಡಳಿತದಲ್ಲಿ ಬಿಗುತನವಿಲ್ಲದಿರುವುದು ಹಾಗೂ ಅತಿರೇಕವ ದನ್ಯೂನತೆಗಳು.

ಯುವ ಜನಾಂಗದ ಪ್ರತಿಭೆ ಹಾಗೂ ಅಭಿರುಚಿಗೆ ಸರಿಯಾದ ಅವಕಾಶ ಸಿಗದಿರುವುದು ಅವರ ಕರ್ತವ್ಯ ಪ್ರಜ್ಞೆ ಲೋಪವಾಗುವುದಕ್ಕೆ ಕಾರಣವೆಂದು ಹಲವರ ಅಭಿಮತ. ಇದು ಒಪ್ಪತಕ್ಕ ವಿಚಾರವೇ. ನಮ್ಮ ಯುವ ಜನಾಂಗವು ಇಂದು ಉದ್ಯೋಗ ಹಾಗೂ ನೌಕರಿಗಾಗಿ ಅಲೆದಾಡಬೇಕಾದ ಪ್ರಸಂಗ ಬಂದೊದಗಿದೆ. ತಮ್ಮ ಅಭಿರುಚಿ, ಪ್ರತಿಭೆ, ಹಾಗೂ ಯೋಗ್ಯತೆಗೆ ತಕ್ಕವಾದ ನೌಕರಿಯನ್ನು ಕಾಯುತ್ತ ಕುಳಿತಿರುವದು ಅವರಿಗೆ ಸಾಧ್ಯವೂ ಇಲ್ಲ. ಕಾದು ಕುಳಿತರೂ ಅಂತಹ ನೌಕರಿ ಸಿಗುವದೆಂಬ ಭರವಸೆಯೂ ಇಲ್ಲ ಹೀಗಾಗಿ ಅವರು ಸಿಕ್ಕಿದ ನೌಕರಿಗೆ ಸೇರುತ್ತಾರೆ. ಇಷ್ಟವಿಲ್ಲದಿದ್ದರೂ ಅವರು ಸಂಬಳದ ಸಲುವಾಗಿ ಕೆಲಸ ಮಾಡುತ್ತಾರೆ. ವಿಜ್ಞಾನದಲ್ಲಿ ಪದವೀಧರರಾದವರು ಕಾರಕೂನರ ವೃತ್ತಿಗೆ ಸೇರುತ್ತಾರೆ ಸಾಹಿತ್ಯಾಭ್ಯಾಸ ಮಾಡಿದವನು ವ್ಯಾಪಾರೀ ಸಂಸ್ಥೆಯೊಂದರಲ್ಲಿ ಲೆಕ್ಕ ಬರೆಯಬೇಕಾದ ಸಂದರ್ಭವೊದಗುತ್ತದೆ. ಈ ರೀತಿ ಅವರು ಕಲಿತ ವಿದ್ಯೆಗೂ, ಅವರ ನೌಕರಿಗೂ ಯಾವ ಸಂಬಂಧವೂ ಇಲ್ಲದೆ ಸ್ವಾಭಾವಿಕವಾಗಿಯೇ ಅವರಿಗೆ ತಮ್ಮ ಕೆಲಸದ ಕುರಿತು ತಾತ್ಸಾರ ಮೂಡುತ್ತದೆ. ಈ ಕೆಲಸ ಮಾಡಲು ತಾನು ಇಷ್ಟು ಕಲಿಯಬೇಕಾದ ಅವಶ್ಯಕತೆಯೇ ಇರಲಿಲ್ಲ ಎಂದು ಅವರು ಭಾವಿಸುತ್ತಾರೆ. ಯಾವಾಗಲೂ ಅವರ ಮನಸ್ಸು ಬೇರೆ ನೌಕರಿ ಹುಡುಕುವುದರಲ್ಲೇ, ಇಲ್ಲವೇ ತಮ್ಮ ಅತೃಪ್ತಿಯನ್ನು ತೋರಗೊಡುವುದರಲ್ಲೇ ಕೆಲಸ ಮಾಡುತ್ತಿರುತ್ತದೆ. ತಾವು ಮಾಡಬೇಕಾದ ಕೆಲಸದ ಕಾರ್ಯಗಳ ಕುರಿತು ಅವರಿಗೆ ಆಸಕ್ತಿಯೇ ಇರುವುದಿಲ್ಲ. ಸಂಬಳಕ್ಕಷ್ಟೇ ಕೆಲಸ ಎಂಬ ಭಾವನೆಯನ್ನು ಅವರು ತಾಳುತ್ತಾರೆ, ತಮ್ಮ ನೌಕರಿಯ ಕುರಿತು ಅವರಿಗೆ ಹೆಮ್ಮೆಯೂ ಇಲ್ಲ. "ಏನೂ ಇಲ್ಲದುದಕ್ಕೆ ಇದನ್ನು ಹಿಡಿದು ಕೊಂಡಿದ್ದೇನೆ", "ಬೇರೆ ಸಿಗಲಿಲ್ಲ. ಇದಾದರೆ ಇದು ಸೇರಿಕೊಂಡೆ. ದಿನ ದೂಡುವುದು" ಎಂದು ಹಲವರು ತಮ್ಮ ವೃತ್ತಿಯ ಕುರಿತು ಆಡುವುದನ್ನು ನಾವು ಕೇಳುತ್ತಿದ್ದೇವೆ. ಇಂಥವರಿಂದ ನಾವು ಎಂತಹ ಕರ್ತವ್ಯ ದಕ್ಷತೆಯನ್ನು ನಿರೀಕ್ಷಿಸಬಹುದು? ಅವರಲ್ಲಿ ಕರ್ತವ್ಯ ಪ್ರಜ್ಞೆ ಮೂಡಲುಸಾಧ್ಯವೇ?

ವಿಷಯಗಳನ್ನು ಬಹಳ ಹಗುರವಾಗಿ ತೆಗೆದುಕೊಳ್ಳುವುದು ಯುವ ಜನಾಂಗದಲ್ಲಿ ಕರ್ತವ್ಯವು ಪ್ರಜ್ಞೆ ಮೂಡದಿರುವುದಕ್ಕೆ ಒಂದು ಕಾರಣ. ವಿಷಯದ ಮಹತ್ವವನ್ನು ತಿಳಿಯದೆ ಏನುಮಾಡಿದರೂ ನಡೆಯುತ್ತದೆ ಎಂಬ ಭಾವನೆಯನ್ನು ಹಲವರು ತಾಳಿರುತ್ತಾರೆ ಆರಾಮವಾಗಿ, ತಲೆ ಬಿಸಿ ಇಲ್ಲದೆ ಸುಖಕರವಾಗಿ ಇರಬೇಕೆಂಬ ಮನೋವೃತ್ತಿಯ ಮುಂದಿ ಈ ವರ್ಗಕ್ಕೆ ಸೇರುತ್ತಾರೆ. ಸ್ವಪ್ರತಿಷ್ಠೆ ಸ್ವಾಭಿಮಾನ ಅತಿರೇಕವಾಗಿರುವ ಇನ್ನೊಂದು ವರ್ಗದವರೂ ಇದ್ದಾರೆ. ಅವರಿಗೆ ಕರ್ತವ್ಯ ನಿರ್ವಹಣೆಗಿಂತ ನಮ್ಮ ಪ್ರತಿಷ್ಠೆ ಹಾಗೂ ಅಭಿಮಾನಗಳೇ ಮುಖ್ಯ. ತಾವು ಆಳಿಸಿಕೊಳ್ಳುವವರಲ್ಲ, ಆಳತಕ್ಕವರು ಎಂಬ ಭಾವ ಅವರಲ್ಲಿ ಮನೆಮಾಡಿದೆ. ತಮ್ಮ

ನವಯುಗ ಸ್ವಾತಂತ್ರ್ಯ ವಿಶೇಷಾಂಕ ಅಗಸ್ಟ್ 15

ಕರ್ನಾಟಕದಲ್ಲಿ ಬಹುಕಾಲದಿಂದಲೂ ಅತ್ಯಂತ ಜನಪ್ರಿಯವಾದ 'ನವಯುಗ' ವಾರಪತ್ರಿಕೆಯ ಸ್ವಾತಂತ್ರ್ಯ ವಿಶೇಷಾಂಕವು ಪ್ರಕಟಗೊಳ್ಳುವ ದಿನ (ಆಗಸ್ಟ್ 15, 1964) ಸಮೀಪಿಸುತ್ತಿದೆಯಷ್ಟೆ, ಭಾರತಕ್ಕೆ ಸ್ವಾತಂತ್ರ್ಯವು ದೊರೆತ ಸವಿನೆನಪಿಗಾಗಿ ಈ ಸಲದ 17ನೆಯ ವರ್ಧಂತಿಯ ಶುಭದಿನದಲ್ಲಿ ನಮ್ಮ ವಿಶೇಷಾಂಕವು ವಿಶಿಷ್ಟವಾದ ರೀತಿಯಲ್ಲಿ ಪ್ರಕಟವಾಗಲಿದೆ. ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ಪತ್ರಿಕೋದ್ಯಮಿಗಳೂ ಬರೆದ ವಿವಿಧ ಲೇಖನಗಳೂ, ಪ್ರಹಸನಗಳೂ ಅಲ್ಲದೆ ನಮ್ಮ ನಾಡಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಜೀವನವನ್ನು ಕುರಿತ ವಿದ್ವತ್ಪೂರ್ಣ ನಿಬಂಧಗಳೂ ಚಿತ್ರಮಯವಾಗಿ ಕರ್ನಾಟಕದ 19 ಜಿಲ್ಲೆಗಳಲ್ಲಿ ವ್ಯಾಪಿಸಿರುವ 'ನವಯುಗ'ದ ಓದುಗರ ಕೈಸೇರುವುವು.

ಅಗಸ್ಟ್ 15—ಒಂದು ಮಂಗಲಕರವಾದ ದಿನ.

ಅಗಸ್ಟ್ 15—ನವಯುಗದ ಸ್ವಾತಂತ್ರ ವಿಶೇಷಾಂಕವು ಪ್ರಚುರವಾಗುವ ಸುದಿನ.

ಅಗಸ್ಟ್ 15— ನಿಮ್ಮ ಸರಕು ಮತ್ತು ಸೇವೆಯ ಸಂದೇಶವನ್ನು ನವಯುಗ ವಿಶೇಷಾಂಕದ ಮೂಲಕ ನಾಡಿನ ಮೂಲೆಮೂಲೆಗೂ ಜಾಹೀರಗೊಳಿಸಬೇಕಾದ ಶುಭದಿನ.

ನಿಮ್ಮ ವ್ಯಾಪಾರವು ಜನಜನಿತವಾಗಲು, ಮತ್ತು ನಿಮ್ಮ ಸರಕುಗಳು ಜನಪ್ರಿಯವೆನಿಸಲು 'ನವಯುಗ'ದ ಸ್ವಾತಂತ್ರ್ಯ ವಿಶೇಷಾಂಕವು ಒಂದು ಅಮೂಲ್ಯ ಸಾಧನ.

ಜಾಹೀರಾತಿನ ದರಗಳಿಗೆ ವಿಚಾರಿಸಿರಿ ಅಗಸ್ಟ್ 5ರ ಒಳಗೆ ನಿಮ್ಮ ಜಾಹೀರಾತನ್ನು ನಮಗೆ ಕಳಿಸಿ ಕೊಡಿ.

ಮೆನೇಜರ್, ನವಯುಗ, ಉಡುಪಿ.



ಯೋಗ್ಯತೆ ಹಾಗೂ ಪ್ರತಿಭೆಗಳ ಮುಂದೆ ಉಳಿದವರೆಲ್ಲರದೂ ಶೂನ್ಯ ಎಂಬ ಹೆಮ್ಮೆಯ ಭಾವ ಅವರಲ್ಲಿ ಬೇರೂರಿದೆ. ತಮ್ಮನ್ನು ಬಹಳವಾಗಿ ತಿಳಿದುಕೊಳ್ಳುವುದು ಅವರ ಹುಟ್ಟುಗುಣವಾಗಿರುತ್ತದೆ. ಈ ಧುರಭಿಮಾನ ಅವರನ್ನು ಕರ್ತವ್ಯವಿಮುಖರನ್ನಾಗಿ ಮಾಡಿ ಅವರ ಭವಿಷ್ಯವನ್ನು ಹಾಳುಮಾಡುತ್ತದೆ. ಕರ್ತವ್ಯ ಪ್ರಜ್ಞೆ ಮೂಡಲು ಅದು ಅವಕಾಶವನ್ನೇ ಕೊಡುವುದಿಲ್ಲ.

ಯುವ ಜನಾಂಗದಲ್ಲಿ ಕರ್ತವ್ಯ ಪ್ರಜ್ಞೆ ಲೋಪವಾಗಿರುವುದಕ್ಕೆ ಕೆಲ ಮಟ್ಟಿಗೆ ಹಿರಿಯರೂ, ಉನ್ನತ ಸ್ಥಾನದಲ್ಲಿರುವವರೂ, ಆಡಳಿತದಾರರೂ, ನಾಯಕರೆನಿಸಿಕೊಂಡವರೂ ಕಾರಣರಾಗಿದ್ದಾರೆ. ಯುವ ಜನಾಂಗದ ವರ್ತನೆಯ ಕುರಿತು ಅತಿರೇಖವಾದ ಟೀಕೆ ಟಿಪ್ಪಣಿಗಳನ್ನು ಮಾಡುವುದು ಇಂದಿನ ಪ್ಯಾಶನ್ನಾಗಿದೆ ಜವಾಬ್ದಾರಿಯನ್ನು ಯುವಕರಿಗೆ ಬಿಟ್ಟು ಕೊಡಲು ಜವಾಬ್ದಾರಿ ಸ್ಥಾನದಲ್ಲಿರುವವರು ಸಿದ್ಧರಿಲ್ಲ ಇಂದಿನ ವಿದ್ಯಾಮಟ್ಟ ಕೆಳಗಿಳಿದಿದೆ. ಪದವೀಧರರಿಗೆ ಒಂದು ವಾಕ್ಯ ಇಂಗ್ಲಿಷ್ ಸರಿಯಾಗಿ ಬರೆಯಲೂ ಬರುವುದಿಲ್ಲ, ಯುವ ಜನಾಂಗ ಬರೀ ಸಿರುಪಯೋಗಿ, ಎಂದು ವ್ಯಾಖ್ಯಾನ ಮಾಡಿ ನಿಂದಿಸುವ ಹಿರಿಯರ ಸಂಖ್ಯೆ ಹೆಚ್ಚಾಗಿದೆ ಪರಿಣಾಮವಾಗಿ ಯುವಕರು, ಈ ವರ್ಗದ ಮೇಲೆ ಅಸೂಯೆ ಪಡುವ, ಹಟಮಾರಿತನ ಪ್ರವೃತ್ತಿ ಬೆಳೆಸಿಕೊಳ್ಳುವ ಅವಕಾಶ ಒದಗುತ್ತದೆ. ಯುವ ಜನಾಂಗಕ್ಕೆ ಇಂದು ಉಪದೇಶವನ್ನು ಕೊಡುವವರು ಧಾರಾಳವಾಗಿದ್ದಾರೆ. ಹೊರತು ಅವರ ಕಷ್ಟಗಳೇನೆಂಬುದನ್ನು ತಿಳಿದು ಸಮಸ್ಯೆಯ ಪರಿಹಾರಕ್ಕೆ ಚಿಂತಿಸುವವರು ಬಹಳ ಕಡಿಮೆ. ಅವರ ಪ್ರತಿಭೆ ಹಾಗೂ ಕಾರ್ಯಪಟುತ್ವವನ್ನು ಗುರುತಿಸಿ ಅವರಿಗೆ ಅವಕಾಶ ಕಲ್ಪಿಸಿ ಕೊಡುವವರೇ ಇಲ್ಲವಾಗಿದೆ. ಪರಿಣಾಮವಾಗಿ ಸೂಕ್ತ ಮಾರ್ಗದರ್ಶನ ಹಾಗು ಪ್ರೋತ್ಸಾಹ ಇಲ್ಲದೆ ಯುವ ಜನಾಂಗ ಇಂದು ದಾರಿ ತಪ್ಪುತ್ತಿದೆ ಅವರಲ್ಲಿ ಕರ್ತವ್ಯ ಪ್ರಜ್ಞೆ ಮಾಯವಾಗುತ್ತಿದೆ. ಈ ಸಂದರ್ಭ ಹಿಡಿದು ನಂತರ ಇದೇ ನಾಯಕರು, ಹಿರಿಯರು ಪುನಃ ಯುವಕರನ್ನು ಗಾಳಿಗೆ ಹಿಡಿಯುತ್ತಾರೆ.

ನಮ್ಮ ಯುವ ಜನಾಂಗದಲ್ಲಿ ಕರ್ತವ್ಯ ಪ್ರಜ್ಞೆ ಮೂಡಿಸುವಲ್ಲಿ ಹಿರಿಯರು, ನಾಯಕರು ಮುಂದಾಗಬೇಕು. ಯುವ ಜನಾಂಗದವರೂ ಈ ಕುರಿತು ತೀವ್ರವಾಗಿ ಯೋಚಿಸಿ, ತಮ್ಮ ಲೋಪದೋಷಗಳನ್ನು ತಿದ್ದಿಕೊಳ್ಳಬೇಕು. ಕರ್ತವ್ಯ ಪ್ರಜ್ಞೆ ಇಲ್ಲದ ಜನಾಂಗ, ಅಭಿವೃದ್ಧಿ ಹೊಂದುವುದು ಅಸಾಧ್ಯ. ಈ ಕರ್ತವ್ಯ ಪ್ರಜ್ಞೆ ಆದಿಯಿಂದಲೆ ಮೂಡುವಂತೆ ಮಾಡುವಲ್ಲಿ ನಮ್ಮ ಶಿಕ್ಷಣದ ಪಾತ್ರ ಹಿರಿದು. ಈ ಕುರಿತು ಎಲ್ಲರೂ ಚಿಂತಿಸಿ, ದೇಶದ ಭದ್ರತೆಗೆ ಬುನಾದಿ ಹಾಕಬೇಕಾದ ಕಾಲ ಈಗ ಬಂದಿದೆ.

58

ವರ್ಷಗಳ

—ಅಪ್ರತಿಮ ಪ್ರಗತಿ

ನಿಮ್ಮ ಪ್ರೋತ್ಸಾಹಕ್ಕೆ ಧನ್ಯವಾದಗಳು. ಜುಲಾಯಿ ೧೯೦೬ ರಂದು
ಸ್ಥಾಪಿತವಾದ ಕೆನರಾ ಬ್ಯಾಂಕು ಇಂದು ಭಾರತದ ಬ್ಯಾಂಕಿಂಗ್ ಉದ್ದಿಮೆಯಲ್ಲಿ
ಹೆಮ್ಮೆಯ ಸ್ಥಾನವನ್ನು ಸಂಪಾದಿಸಿದೆ.
ನಿಮ್ಮ ಸ್ಫೂರ್ತಿದಾಯಕ ನಂಬಿಕೆಯು ಕೆನರಾ ಬ್ಯಾಂಕಿಗೆ
ಜನರನ್ನು ಮತ್ತು ದೇಶವನ್ನು ಊರ್ಜಿತಗೊಳಿಸಲು ಸೇವೆಯ
ಹೊಸ ಕ್ಷಿತಿಜಗಳನ್ನು ಮುಟ್ಟಲು ಹುರಿದುಂಬಿಸುತ್ತಿದೆ
ಕೆನರಾ ಬ್ಯಾಂಕು, ತನ್ನ ಗ್ರಾಹಕರು ಮತ್ತು ಅವರ ಅವಶ್ಯಕತೆಗಳು
ಸಮಾಜ ಮತ್ತು ಅವರ ಉದ್ದಿಮೆಗಳು, ದೇಶ ಮತ್ತು ಅವರ ಆರ್ಥಿಕ
ವ್ಯವಸ್ಥೆಯೊಂದಿಗೆ ಒಂದೇ ಗತಿಯೊಂದಿಗೆ ಮುಂದೆ ಸಾಗಿದೆ.
ತರುಣ ಮತ್ತು ಉತ್ಸಾಹಿ ಕೆನರಾ ಬ್ಯಾಂಕು
ಮುಂದೆಯೂ ಈಗಿನಕ್ಕಿಂತ
ಹೆಚ್ಚಿನ ಸೇವೆಯನ್ನು ಒದಗಿಸುವ
ಅವಕಾಶಕ್ಕೆ ಅಣಿಯಾಗಿದೆ.

ಬ್ಯಾಂಕ್ ಅಷ್ಟೇ ಅಲ್ಲ
ವಿಶೇಷ ವೈಶಿಷ್ಟ್ಯತೆಯ
ಬ್ಯಾಂಕಿನ
ಸಂಸ್ಥೆಯೂ ಅಹುದು



ಬ್ಯಾಂಕಿನ ಆಡಳಿತ ಕಚೇರಿಯ ಕಟ್ಟಡ.

ಜಗತ್ತಿನಾದ್ಯಂತ
ಪ್ರತಿನಿಧಿಗಳು

ಭಾರತದಲ್ಲಿ ೨೪೫ಕ್ಕಿಂತಲೂ
ಹೆಚ್ಚು ಶಾಖೆಗಳು

ಕೆನರಾ ಬ್ಯಾಂಕ್ ಲಿ.

ರಿಜಿಸ್ಟರ್ಡ್ ಆಫೀಸು: ಮಂಗಳೂರು.

ಆಡಳಿತ ಕಚೇರಿ, ಬೆಂಗಳೂರು.

ನವಯುಗ

ವರುಷ	ಉಡುಪಿ	ವಾರ
೪೩	೩೦-೭-೧೯೬೪	೪೮

ಕೇರಳದಲ್ಲಿ ಚುನಾವಣೆ

೧೯೬೦ರ ಮಾರ್ಚ ೧೨ರಂದು ಅಧಿಕಾರಕ್ಕೆ ಬಂದಿರುವ ಕೇರಳ ವಿಧಾನ ಸಭೆಯ ಅಧಿಕಾರಾವಧಿಯು ಮುಂದಿನ ವರ್ಷದ ಮಾರ್ಚ ೧೨ರಂದು ಕೊನೆಗೊಳ್ಳುವುದು. ಅದುದರಿಂದ ಈ ವೇಳೆಯೊಳಗೆ ಹೊಸತಾಗಿ ಚುನಾವಣೆಗಳನ್ನು ನಡೆಸುವುದು, ಅಥವಾ ವಿಧಾನ ಸಭೆಯ ಅಧಿಕಾರಾವಧಿಯನ್ನು ವಿಸ್ತರಿಸುವುದು ಅಗತ್ಯವಾಗಿತ್ತು. ಅಲ್ಲಿನ ಲೋಕ ಸಭಾ ಸ್ಥಾನಗಳಿಗೆ ಭಾರತದ ಉಳಿದ ರಾಜ್ಯಗಳಲ್ಲಿಯಂತೆಯೇ ೧೯೬೭ರಲ್ಲಿ ಚುನಾವಣೆ ನಡೆಯಲಿರುವುದರಿಂದ ಆ ವರೆಗೆ ಪ್ರಚಲಿತ ವಿಧಾನ ಸಭೆಯನ್ನೇ ಉಳಿಯಗೊಡಬೇಕೆಂಬುದನ್ನು ಸಮರ್ಥಿಸುವ ಒಂದು ಗುಂಪೂ ಇತ್ತು. ಆದರೆ, ಕೇಂದ್ರ ಸರಕಾರವು ಇದನ್ನು ಒಪ್ಪದೆ ಉಚಿತ ಸಮಯದಲ್ಲಿಯೇ ಚುನಾವಣೆಗಳನ್ನು ನಡೆಸಲು ನಿರ್ಧರಿಸಿರುವುದು ಕಾಂಗ್ರೆಸಿಗೊಂದು ಗೌರವವನ್ನು ತಂದು ಕೊಟ್ಟಿದೆಯೆಂದರೆ ಅತಿಶಯೋಕ್ತಿಯಲ್ಲ. ಇದನ್ನು ಬಲವಾಗಿ ಸಮರ್ಥಿಸಿದ ಪ್ರಧಾನಮಂತ್ರಿ ಲಾಲಬಹದೂರ ಶಾಸ್ತ್ರಿಯವರು ನಿಜಕ್ಕೂ ಅಭಿನಂದನಾರ್ಹರು.

ಕೇರಳದಲ್ಲಿ ೧೯೬೦ರಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತವನ್ನು ಪಡೆದಿದ್ದರೂ ಚುನಾವಣಾ ಒಡಂಬಡಿಕೆಯಂತೆ ಸಂಯುಕ್ತ ಮಂತ್ರಿ ಮಂಡಳದ ರಚನೆಯಾದದ್ದನ್ನೂ ಕೆಲವೊಂದು ನೀತಿಯ ಮೇಲೆ ಮುಖ್ಯ ಮಂತ್ರಿ ಪಟ್ಟಂಥಾನು ಪಿಳ್ಳೆ ಮತ್ತು ಆರ್. ಶಂಕರರಲ್ಲಿ ಮತ ಭೇದವಾದುದನ್ನೂ ಅಂದು ಗೃಹ ಮಂತ್ರಿಯಾಗಿದ್ದ ಶಾಸ್ತ್ರಿಯವರೇ ಪಿಳ್ಳೆಯವರನ್ನು ರಾಜ್ಯಪಾಲರಾಗಿ ನೇಮಿಸಲು ಪ್ರೇರಕರಾದುದನ್ನೂ ಆರ್. ಶಂಕರರು ಅನಂತರ ಸ್ಥಾಪಿಸಿದ ಶುದ್ಧ ಕಾಂಗ್ರೆಸ್ ಸರಕಾರವಾದರೂ ಹಲವಾರು ಆಂತರಿಕ ಸಮಸ್ಯೆಗಳಿಂದ ಕುಂಟುತ್ತ ಇಂದಿನವರೆಗೂ ನಡೆದು ಬರುತ್ತಿರುವುದನ್ನೂ ಇಲ್ಲಿ ಸ್ಮರಿಸಬೇಕು. ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಅಂಟಿಕೊಳ್ಳಲು ಇಚ್ಛಿಸುವುದಿಲ್ಲ; ಅಧಿಕಾರವಧಿ ಮುಗಿದಕೂಡಲೇ ಯಾರನ್ನು ಬೇಕಾದರೂ ಅವಕ್ಕೆ ಏರಿಸಲು ಮತದಾರರು ಸ್ವತಂತ್ರರಿದ್ದಾರೆಂಬುದನ್ನು ಆದಿಂದು ಮನ್ನಿಸಿದಂತಾಗಿದೆ. ಒಂದು ವೇಳೆ ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಬಹುಮತವನ್ನು ಪಡೆಯದೆ ಹೋದರೂ, ಚುನಾವಣೆಯನ್ನು ಮುಂದುವರಿಸುವದರಿಂದ ಉಂಟಾಗಬಹುದಾದ ಪ್ರತಿಕೂಲವಾತಾವರಣ ಮಾತ್ರ ಖಂಡಿತಕ್ಕೂ ತಲೆದೋರಲಾರದು. ವಿರೋಧಿ ಪಕ್ಷಗಳ ಮುಖ್ಯವಾಗಿ ಕಮ್ಯುನಿಸ್ಟರ ಟೀಕಾಸ್ತ್ರಗಳನ್ನದು ಸಹಿಸಿಕೊಳ್ಳಬೇಕಾಗಿಲ್ಲ. ಈ ದೃಷ್ಟಿಯಿಂದ ಸದ್ಯದ ನಿರ್ಣಯ ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನು ಗರಿಯೇರಿಸಿದಂತಾಗಿದೆ.

ಸಾಮಾನ್ಯವಾಗಿ ಇನ್ನಾರು ತಿಂಗಳುಗಳಲ್ಲಿ ಕೇರಳದ ವಿಧಾನ ಸಭೆಗೆ ಚುನಾವಣೆಗಳು ನಡೆಯುವುವು. ಹಿಂದಿನಂತೆಯೇ ಈ ಬಾರಿಯೂ ಪ್ರತಿ ರಂಗದಲ್ಲೂ ತುರಿಸಿನ ಸ್ಪರ್ಧೆ ನಡೆಯಬಹುದು. ಕಾಂಗ್ರೆಸ್ಸು, ಸಂಯುಕ್ತ ಸಮಾಜವಾದಿ ಮೊದಲಾದ ಒಂದೆರಡು ಪಕ್ಷಗಳೊಡನೆ ಚುನಾವಣಾ ಮೈತ್ರಿಯನ್ನು ಏರ್ಪಡಿಸಿಕೊಳ್ಳಲೂ ಬಹುದು; ಸ್ವತಂತ್ರವಾಗಿಯೇ ರಂಗಕ್ಕಿಳಿಯಲೂ ಬಹುದು. ಆರು ತಿಂಗಳುಗಳ ಕಾಲ ಕಾಂಗ್ರೆಸ್ಸಿಗೆ ಚುನಾವಣಾ ತಯಾರಿ ನಡೆಸಲು ಕಡಿಮೆಯಾಯಿತೆನ್ನುವವರೂ ಇರಬಹುದು. ಹಾಗೆಯೇ ಕಮ್ಯುನಿಸ್ಟ ಪಕ್ಷವೂ ವಿವಿಧ ವಿರೋಧಿ ಪಕ್ಷಗಳನ್ನು ಕೂಡಿಸಿ, ತಮ್ಮ ಸಾಮಾನ್ಯ ಶತ್ರುವನ್ನು ಎದುರಿಸಲು ತಯಾರಾಗಬಹುದು. ರಾಜಕೀಯದಲ್ಲಿ ಇದು ಹೀಗೆಯೇ ಆಗುತ್ತದೆಯೆಂದು ಹೇಳುವಂತಿಲ್ಲ. ಆದರೂ ಕೇರಳದ ಮುಖ್ಯ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ ಪಕ್ಷಗಳು ತಂತಮ್ಮ ಅಗ್ನಿ ಪರೀಕ್ಷೆಗೆ ತಕ್ಕ ಸಿದ್ಧತೆಯನ್ನು ಈಗಿಂದೀಗಲೇ ಮಾಡತೊಡಗುವುದು ಸಹಜ. ಎಂದಿನಂತೆಯೇ ಈ ಬಾರಿಯ ಚುನಾವಣೆಗಳೂ ಸರ್ವ ಪ್ರಕಾರೇಣ ಕಾವೇರಿದ ವಾತಾವರಣದಲ್ಲಿಯೇ ನಡೆಯುವುದೂ ಸಂಭವನೀಯ.

ಚೀನೀಯ ಆಕ್ರಮಣಕ್ಕೆ ದೇಶ ಸಿಕ್ಕಿ ಬಿದ್ದನಂತರ ಕಮ್ಯೂನಿಸ್ಟ ಪಕ್ಷದ ಬಗ್ಗೆ ಒಂದು ತರದ ಜಿಗುಪ್ಸೆ ಹುಟ್ಟಿರುವುದನ್ನು ನಾವು ಅಲ್ಲಗಳೆಯುವಂತಿಲ್ಲ. ಮಾತ್ರವಲ್ಲ, ಆ ಪಕ್ಷದಲ್ಲಿಯೇ ಎಡ ಬಲಗಳು ಹುಟ್ಟಿಕೊಂಡು ಪರಸ್ಪರ ಭಿನ್ನಾಭಿಪ್ರಾಯಗಳಿಂದ ಮುಖ ತಿರುಗಿಸುತ್ತಿರುವುದನ್ನೂ ನಾವು ಮರೆಯುವಂತಿಲ್ಲ ಡಾಂಗೆ ಮತ್ತು ಗೋಪಾಲನ್ನರ ಗುಂಪುಗಳಲ್ಲಿ ರಷ್ಯ ಮತ್ತು ಚೀನಾಗಳ ನಡುವಿರುವಂತೆಯೇ ತೀವ್ರ ತರದ ಭಿನ್ನಾಭಿಪ್ರಾಯಗಳಿರುವುದರಿಂದ ಇವು ಒಂದಾಗುವ ಸಂಭವವಿಲ್ಲವೆಂದು ಕೇರಳದ ಮಾಜಿ ಮುಖ್ಯ ಮಂತ್ರಿ ನಂಬೂದ್ರಿಪಾದರೇ ಹೇಳಿದ್ದಾರೆ. ಆದರೂ ಅವರು ಕೇರಳದ ಚುನಾವಣೆಗಳಲ್ಲಿ ಎಡ-ಬಲ ಗುಂಪುಗಳು ಒಂದಾಗಿ ಕಾಂಗ್ರೆಸಿಗೆ ವಿರುದ್ಧ ಹೋರಾಡಬೇಕೆಂದು ಕೇಳಿಕೊಂಡಿದ್ದಾರೆ; ಮಾತ್ರವಲ್ಲ ತಮ್ಮ ಪಕ್ಷವೇ ಬಹುಮತ ಗಳಿಸುವುದೆಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ. ಚೀನೀಯರ ಚೇಲರಂತಿರುವ ಈ ನಂಬೂದರಿ-ಗೋಪಾಲನ್ನರ ಗುಂಪಿಗೆ ರಾಷ್ಟ್ರೀಯ ವಾದಿಗಳಾದ ಡಾಂಗೆಯವರು ಚುನಾವಣೆಯ ನೆಪದಲ್ಲಿ ನೆರವು ನೀಡುವರೇ ಎಂಬ ದಿನ್ನೂ ತಿಳಿಯಬೇಕಷ್ಟೆ. ಇದು ತಿಳಿದಾಗಲೇ ಈ ಕೆಂಪು ಪಕ್ಷದ ದೇಶಪ್ರೇಮದ ಆಳದ ಪರಿಚಯವಾಗುವುದು. ಕೇರಳದ ಜನತೆ ರಾಜಕೀಯದ ಸುಖದುಃಖಗಳನ್ನು ಬೇಕೆಂಬಷ್ಟು ಅನುಭವಿಸಿದೆ. ಆದುದರಿಂದ ದೇಶ ದ್ರೋಹಿಗಳಿಗೆ ಅಧಿಕಾರವೇರುವ ಅವಕಾಶವನ್ನದು ಎಂದೂ ಕೊಡಲಾರದು; ಕೊಡಬಾರದು.

ಶುಲ್ಕ ಹೆಚ್ಚಳ

ಕಳೆದ ವರ್ಷ ಮೈಸೂರು ವಿಶ್ವವಿದ್ಯಾಲಯದ ಕಾಲೇಜುಗಳ ವಿದ್ಯಾರ್ಥಿಗಳು ಶುಲ್ಕ ಹೆಚ್ಚಳದ ವಿರುದ್ಧ ಸಂಪು ಹೂಡಿ ಯಶಸ್ವಿಯಾಗಿದ್ದಾರೆ. ಈ ವರ್ಷ ಕರ್ನಾಟಕ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ತಲೆಯೆತ್ತಿದ್ದಾರೆ. ಈ ಸಲದ ಪ್ರಕರಣಕ್ಕೆ ಕಾಲೇಜು ಫೀಯಲ್ಲಿ ಎರಡು ವಿಶ್ವವಿದ್ಯಾಲಯಗಳ ದರದಲ್ಲಿ ಏಕರೂಪತೆ ಅನಗತ್ಯವೆಂಬ ಮುದಲಿಯಾರ ಸಮಿತಿ ಸೂಚಿಸಿದ ಅಭಿಪ್ರಾಯವೇ ಕಾರಣವೆನ್ನಬಹುದು. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳೂ ಏಕರೂಪದ ಫೀ ನಿರ್ಧರಿಸಬೇಕೆಂಬ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳು ಕರೆಯಿತ್ತುದು ನ್ಯಾಯೋಚಿತವೆನ್ನಬಹುದು. ಖಾಸಗಿ ಕಾಲೇಜುಗಳೂ ಹೆಚ್ಚು ಶುಲ್ಕ ವಸೂಲು ಮಾಡಬಾರದೆಂಬ ವಿದ್ಯಾರ್ಥಿಗಳ ಬೇಡಿಕೆಯು ಒಂದು ದೃಷ್ಟಿಯಿಂದ ನ್ಯಾಯವೆನಿಸುತ್ತದೆ. ಆದರೆ, ಅವುಗಳು ಹೊರಬೇಕಾದ ವೆಚ್ಚ ಮತ್ತು ಪಡೆಯುವ ಸಹಾಯಧನಗಳ ಮಧ್ಯೆ ಬಹಳಷ್ಟಿರುವ ಅಂತರವನ್ನು ಹೇಗೆ ತುಂಬಿಕೊಳ್ಳಬೇಕು? ಸರಕಾರವುನೀಡುವ ಸಹಾಯಧನದಲ್ಲಿ ಈ ಕೊರತೆ ಯನ್ನು ತುಂಬಿ ಕೊಡುವುದು ಬಹುಮಟ್ಟಿಗೆ ಸಾಧ್ಯವಿಲ್ಲವೆಂಬುದನ್ನು ಮರೆಯಬಾರದು.

ಶಿಕ್ಷಣವು ತುಟ್ಟಿಯದಾಗಬಾರದೆಂಬುದನ್ನು ನಾವು ಒಪ್ಪುತ್ತೇವೆ. ಆದರೆ, ಅದರ ಜತೆಗೆ ಶಿಕ್ಷಣ ಸಂಸ್ಥೆಗಳ ಕೊರತೆಯಿಂದ ಕೂಡಿರಬಾರದೆಂಬುದನ್ನೂ ಸೂಚಿಸ ಬಯಸುತ್ತೇವೆ. ಏಕೆಂದರೆ, ಇದರ ದುಷ್ಟ ಪ್ರಭಾವ ಶಿಕ್ಷಣದ ಮೇಲೆಯೇ ಬೀಳುವುದು. ವ್ಯಕ್ತಿಯ ಆದಾಯವು ಹೆಚ್ಚಾಗುತ್ತಿರುವಾಗ, ಆತನ ಎಲ್ಲ ವಿಭಾಗದ ವೆಚ್ಚವೂ ಏರುತ್ತಿರುವಾಗ, ಶಿಕ್ಷಣ ಶುಲ್ಕವು ಮಾತ್ರ ಕಡಿಮೆಯಾಗಬೇಕಾದರೆ, ಅದು ಹೇಗೆ ಸಾಧ್ಯವೆಂಬುದನ್ನು ಪರ್ಯಾಲೋಚಿಸಬೇಕು. ಸರಕಾರವಾದರೂ ಹಣವನ್ನು ಎಲ್ಲಿಂದ ತರಬೇಕು? ತೆರುವ ಪ್ರತಿ ಬಾಬಿಗೂ ವಿರೋಧ ವ್ಯಕ್ತಪಡಿಸುವ ಇಂದಿನ ದಿನಗಳಲ್ಲಿ ಆಡಳಿತೆ ನಡೆಸುವುದು ಹೇಗೆ? — ಈ ವಿಚಾರವನ್ನು ಆಳವಾಗಿ ಯೋಚಿಸಿ ನ್ಯಾಯಪಕ್ಷ ಹಿಡಿಯುವುದು ಅಗತ್ಯವೆನಿಸುತ್ತದೆ.

ಅಲ್ಲಲ್ಲಿಯ ಸುದ್ದಿ ಸಾರ

ಇಂಜಿನಿಯರಿಂಗ್ ಕಾಲೇಜಿಗೆ ನಿಯೋಗ— ಬೇರೆ ರಂಗಗಳಲ್ಲಿ ಯೋಜಿತ ಗುರಿಯನ್ನು ಸಾಧಿಸುವುದಕ್ಕಾಗಿಲ್ಲವಾದರೂ ಇಂಜಿನಿಯರಿಂಗ್ ವಿದ್ಯಾಭ್ಯಾಸದ ಯೋಜನೆ ಗುರಿ ಮೀರಿದೆ ಎಂದು ಮದ್ರಾಸಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಡೈರೆಕ್ಟರ್ ಡಾ| ಬಿ. ಸೇನ್ ಗುಪ್ತಾ ತಾ. 20 7-64ರಂದು ಮಣಿಪಾಲದಲ್ಲಿ ನುಡಿದರು. ವಿಜ್ಞಾನ ಮತ್ತು ಇಂಜಿನಿಯರಿಂಗಿಗೆ ಪರಸ್ಪರ ಸಂಬಂಧವಿದೆಯಾದರೂ ಅದನ್ನು ಒಟ್ಟಿಗೆ ಅಭ್ಯಸಿಸಲಾಗುತ್ತಿಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಇದಕ್ಕೆ ಮುನ್ನ ಶ್ರೀ ಗುಪ್ತಾ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ನಿಯೋಗದ ಇತರ ಇಬ್ಬರು ಸದಸ್ಯರುಗಳಾದ ಮದ್ರಾಸಿನಲ್ಲಿ ತಾಂತ್ರಿಕ ವಿಭಾಗದ ಉಪ ವಿದ್ಯಾ ಸಲಹೆಗಾರ ಶ್ರೀ ವಿ. ಆರ್. ರೆಡ್ಡಿ ಮತ್ತು ದಕ್ಷಿಣದಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ವಿದ್ಯಾಧಿಕಾರಿ ಡಾ|| ಶಂಕರ ನಾರಾಯಣರವರೊಂದಿಗೆ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿಗೆ ಭೇಟಿಯಿತ್ತರು. ಈ ನಿಯೋಗವು ಇಂಜಿನಿಯರಿಂಗ್ ಸಂಸ್ಥೆಗಳ ತುಲನಾತ್ಮಕ ಅಧ್ಯಯನ ನಡೆಸಿ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಲಿದೆ ಎಂದು ಅವರು ಹೊರಗೆಡಹಿದರು.

ಕಾಲೇಜಿನ ಧರ್ಮದರ್ಶಿಗಳಲ್ಲೊಬ್ಬರಾದ ಶ್ರೀ ರಮೇಶ ಪೈಯವರು ಮಾತನಾಡಿ ಇದನ್ನು ಶ್ರೇಷ್ಠ ಸಂಸ್ಥೆಗಳ ಪೈಕಿ ಒಂದನ್ನಾಗಿ ಮಾಡುವುದಕ್ಕೆ ಸಕಲ ಸಹಾಯ ಮತ್ತು ಸಲಹೆಗಳನ್ನು ಕೊಡಬೇಕೆಂದು ಕೇಳಿಕೊಂಡರು. ಪ್ರಿನ್ಸಿಪಾಲ್ ಶ್ರೀ ಪಿ. ವೆಂಕಟರಮಣ ಭಟ್ ರವರು ನಿಯೋಗದ ಸದಸ್ಯರನ್ನು ಸ್ವಾಗತಿಸಿದರು.

ವಕೀಲಿ ವೃತ್ತಿ ಧರ್ಮ—ವಕೀಲನ ಯಶಸ್ಸಿಗೆ ನಿರಂತರವಾದ ಅಧ್ಯಯನ, ನಮ್ರತೆ, ಸ್ವಾತಂತ್ರ್ಯ, ಪ್ರಾಮಾಣಿಕತೆ ಮುಂತಾದ ಏಳು ಅಂಶಗಳು ಬಹಳ ಮುಖ್ಯವಾಗಿವೆ ಎಂದು ಉಡುಪಿಯ ಪ್ರಸಿದ್ಧ ವಕೀಲರಾದ ಶ್ರೀ ಜೆ ಸಿ. ರೇಗೋ ಅವರು ವಕೀಲಿ ವೃತ್ತಿ ಧರ್ಮ ಕುರಿತು ಉಡುಪಿ ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ ತಾ. 21-7-64 ರಂದು ಮಣಿಪಾಲದಲ್ಲಿ ಮಾತನಾಡುತ್ತಾ ಹಲವಾರು ಉದಾಹರಣೆಗಳೊಂದಿಗೆ ಈ ವೃತ್ತಿಯ ಮಹತ್ವವನ್ನು ವಿವರಿಸಿದರು.

ರೋಟೇರಿಯನ್ನರಾದ ಉಡುಪಿಯ ಸಬ್ ಜಡ್ಜ್ ಶ್ರೀ ಜಿ. ಆರ್. ದೇಸಾಯಿಯವರು ಅನಂತರ ಮಾತನಾಡಿ ವಕೀಲ ಮತ್ತು ನ್ಯಾಯಾಧೀಶರಿಬ್ಬರೂ ಮುಖ್ಯರಾದವರೆಂದರು. ನ್ಯಾಯಾಧೀಶರು ನಿಷ್ಪಕ್ಷಪಾತರಾಗಿರಬೇಕೆಂದರು. ಆರಂಭದಲ್ಲಿ ವೃತ್ತಿ ಸೇವಾ ಸಮಿಯ ಅಧ್ಯಕ್ಷ ಶ್ರೀ ಎ. ಜೆ. ಆಲ್ಸೆಯವರು ಮಾತನಾಡಿ ವಿವಿಧ ವೃತ್ತಿಗಳ ಧರ್ಮದ ಬಗ್ಗೆ ಈ ವಿಚಾರ ಗೋಷ್ಠಿ ಮಾಲೆಯನ್ನು ಕಳೆದ ವರ್ಷ ಹಮ್ಮಿಕೊಂಡಿದೆ ಎಂದರು. ಈಗ ಕಾಯ್ದೆಗಳು ಬಹಳ ಜಟಿಲವಾಗಿರುವುದರಿಂದ ವಕೀಲರು ಬಹಳ ಮುಖ್ಯ ಪಾತ್ರ ವಹಿಸಬೇಕಾಗಿದೆ ಎಂದು ಕ್ಲಬ್ಬಿನ ಅಧ್ಯಕ್ಷ ಡಾ|| ಎ. ಕೃಷ್ಣರಾವ್ ನುಡಿದರು. ಶ್ರೀ ಎಂ ಡಿ. ಕಾಮತ್ ರವರು ವಂದನಾರ್ಪಣೆ ಮಾಡುತ್ತಾ ಯುವಕ ವಕೀಲರು ವೃತ್ತಿಧರ್ಮದ ಏಳು ಅಂಶಗಳನ್ನು ಅನುಸರಿಸುವುದು ಅತ್ಯಗತ್ಯವಾಗಿದೆ ಎಂದರು.

ಹಿರಿಯ ಕಲಾವಿದ ಶ್ರೀ ಮಂಜುನಾಥಯ್ಯನವರ ನಿಧನ—ಉಡುಪಿಯ ಹಿರಿಯ ಸಂಗೀತ ವಿದ್ವಾಂಸರೂ, ಪ್ರಸಿದ್ಧ ಫಿಡ್ಲ ವಾದಕರೂ ಆದ ಶ್ರೀ ಕೆ. ಮಂಜುನಾಥಯ್ಯನವರು ಇದೇ ಜುಲೈ ತಾ. 23ರಂದು ತಮ್ಮ 77ರ ವಯಸ್ಸಿನಲ್ಲಿ ನಿಧನರಾದರು. ಶ್ರೀಯುತರು ಕಳೆದ ನಾಲ್ಕೈದು ತಿಂಗಳುಗಳಿಂದ ಅಸ್ವಸ್ಥರಾಗಿದ್ದು, ತಜ್ಞ ವೈದ್ಯರಿಂದ ಚಿಕಿತ್ಸೆಗೊಳಗಾಗಿದ್ದರೂ, ತುಂಬಿದ ವಯಸ್ಸಿನ ದೆಸೆಯಿಂದ ಅನಾರೋಗ್ಯ ಕ್ರಮಶಃ ಹೆಚ್ಚುತ್ತಾ ಬಂದಿತ್ತು.

ತಮ್ಮ ತಾರುಣ್ಯದಲ್ಲೇ ಕಲಾಭಿಮಾನದಿಂದ ಮೈಸೂರಿಗೆ ತೆರಳಿ ದಿವಂಗತ ಶ್ರೀ ಬಿಡಾರಂ ಕೃಷ್ಣಪ್ಪನವರಲ್ಲಿ ಸಂಗೀತ ಶಿಕ್ಷಣ ಪಡೆದ ಶ್ರೀ ಮಂಜುನಾಥಯ್ಯನವರು ಕಳೆದ

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆಯ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚು ಇಲ್ಲದೆ ಪಾವತಿ ಮಾಡ ಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು ವಿ.ಪ್ಪಿ ಮಾಡಿದರೆ 70 ನಯಾಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ.

—ಮೆನೇಜರ್.

ನಾಲ್ಕು ವರ್ಷಗಳಿಗಿಂತಲೂ ಮಿಗಿಲಾಗಿ ಉಡುಪಿಯಲ್ಲಿ ನೆಲೆನಿಂತು ಕಲಾ ಜಿಜ್ಞಾಸುಗಳಿಗೆ ಸಂಗೀತದಲ್ಲಿ ವಿದ್ಯೆಯನ್ನು ನೀಡಿ ಅವರನ್ನು ಯೋಗ್ಯ ರೀತಿಯಲ್ಲಿ ತರಬೇತಿಗೊಳಿಸಿದ್ದರು. ಜಿಲ್ಲೆಯ ಹಾಗೂ ಹೊರ ಭಾಗಗಳಲ್ಲಿ ಅನೇಕ ಕಡೆಗಳಲ್ಲಿ ಕಚೇರಿಗಳನ್ನು ನೀಡಿ ಜನರ ಪ್ರಶಂಸೆಯನ್ನು ಶ್ರೀ ಮಂಜುನಾಥಯ್ಯನವರು ಪಡೆದಿದ್ದರು. ತಮ್ಮ ಅಪಾರ ವಿದ್ವತ್ತಿನ ಜತೆಗೆ ಸರಳ ಜೀವನ ನಡೆಸಿದ ಈ ಹಿರಿಯ ಕಲಾವಿದರು ಉಡುಪಿಯ ಜನರ ಆದರಾಭಿಮಾನಕ್ಕೆ ಪಾತ್ರರಾಗಿದ್ದರು.

ಕಲಾಕ್ಷೇತ್ರದಲ್ಲಿ ಶ್ರೀ ಮಂಜುನಾಥಯ್ಯನವರು ಮಾಡಿದ ಸೇವೆಯನ್ನು ಗುರುತಿಸಿ, ಅವರನ್ನು ಸಾರ್ವಜನಿಕ ನೆಲೆಯಲ್ಲಿ ಗೌರವಿಸುವ ಸಮಾರಂಭವೊಂದನ್ನು ಕಳೆದ ವರ್ಷದ ಆಗಸ್ಟ್‌ನಲ್ಲಿ, ಅವರ ಎಪ್ಪತ್ತಾರನೆಯ ಜನ್ಮದಿನದಂದು ಉಡುಪಿಯ ಸಂಗೀತ ಸಭಾದವರು ವೈಶಿಷ್ಟ್ಯಪೂರ್ಣವಾಗಿ ಜರಗಿಸಿದ್ದರು. ಕಲಾಭಿಮಾನಿಗಳ ಮತ್ತು ಅವರ ಹಿತೈಷಿಗಳ ನೆರವಿನಿಂದ ನಿಧಿಯೊಂದನ್ನು ಸಂಗ್ರಹಿಸಿ ಆ ಸಮಾರಂಭದಲ್ಲಿ ಅವರಿಗೆ ನೀಡಲಾಗಿತ್ತು.

ಶ್ರೀ ದೇವದಾಸ ಜೋಶಿಯವರ ವಾಯೊಲಿನ್ ಕಚೇರಿ ಉಡುಪಿಯ ಸಂಗೀತ ಸಭಾದ ಆಶ್ರಯದಲ್ಲಿ ಇದೇ ತಾ 26ರಂದು ರಾತ್ರಿ ಸ್ಥಳೀಯ ಪರದೇಶ(?) ಕಲಾಮಂದಿರದಲ್ಲಿ, ಮುಂಬಯಿಯಲ್ಲಿ ವಾಸವಾಗಿರುವ ಜಿಲ್ಲೆಯ ತರುಣ ಕಲಾವಿದ ಶ್ರೀ ಪುತ್ತೂರು ದೇವದಾಸ ಜೋಶಿಯವರ ವಾಯೊಲಿನ್ ವಾದನ ಕಚೇರಿಯು ಜರಗಿತು.

ಆರಂಭದಲ್ಲಿ ಸಂಗೀತ ಸಭಾದ ಅಧ್ಯಕ್ಷ ಶ್ರೀ ಕೆ. ಕೆ ಪೈಯವರು, ಉಡುಪಿಯ ಸಂಗೀತ ವಿದ್ವಾಂಸರಾದ ಶ್ರೀ ಕೆ ಮಂಜುನಾಥಯ್ಯನವರು ನಿಧನರಾದ ವಿಷಯವನ್ನು ತಿಳಿಸುತ್ತಾ, ಶ್ರೀ ಮಂಜುನಾಥಯ್ಯನವರು ಕಲಾಕ್ಷೇತ್ರದಲ್ಲಿ ಮಾಡಿದ ಸತ್ವಪೂರ್ಣ ಸೇವೆಯನ್ನು ಸ್ಮರಿಸಿ, ಸಂಗೀತ ಸಭಾದ ಪರವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ನೀಡಿದರು.

ಅನಂತರ ಅಂದಿನ ಕಾರ್ಯಕ್ರಮದ ಕಲಾವಿದರಾದ ಶ್ರೀ ಪಿ. ದೇವದಾಸ ಜೋಶಿಯವರನ್ನೂ ತಬಲಾ ಸಂಗಡಿಗರಾದ ಮಂಗಳೂರಿನ ಶ್ರೀ ಓಂಕಾರನಾಥ ಗುಲ್ವಾಡಿಯವರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು.

ಕೊನೆಯಲ್ಲಿ ಸಂಗೀತ ಸಭಾದ ಜತೆ ಕಾರ್ಯದರ್ಶಿ ಶ್ರೀ ಟಿ ಪಿ ಆಚಾರ್ಯರು ಆಭಾರ ಸೂಚಿಸಿದರು.

ಶ್ರೀ ಜೋಶಿಯವರಿಗೆ ತಬಲಾ ಸಂಗಡಿಗರಾಗಿ ಶ್ರೀ ಓಂಕಾರನಾಥ ಗುಲ್ವಾಡಿಯವರೂ, ತಂಬೂರಾ ಸಾಥಿಗಳಾಗಿ ಮಂಗಳೂರಿನ ಶ್ರೀ ದಯಾನಂದ ಪೈಯವರೂ, ಶ್ರೀ ಜಿ ಮಾಧವ ಭಟ್ಟರು ಹಾಗೂ ದ್ವಾರಕಾನಾಥಾಚಾರ್ಯರು ಸಹಕರಿಸಿದ್ದರು.

ಪುತ್ತೂರು ಮುಂ. ಕೋರ್ಟಿನಲ್ಲಿ

R I. A 463/64 O S 231/63

K. ನಾರಾಯಣ ನಾಯ್ಕ . ಅರ್ಜಿದಾರ,

ಮತ್ತು

K. ಸಂಜೀವ ನಾಯ್ಕ ಕೂಡಾ .

ಎದ್ರಿರು

2, 3ನೇ ಎದ್ರಿರ ಮ್ಯೂನರರ ಗಾರ್ಡಿಯನನಾಗಿ ಸಹಾ 1ನೇ ಎದ್ರಿ K. ಸಂಜೀವ ನಾಯ್ಕ K. ಕೃಷ್ಣಯ್ಯನವರ ಮಗ ಪುತ್ತೂರು ತಾಲ್ಲೂಕು ಸುಳ್ಯ ಕಸಬಾ ಗ್ರಾಮದ ಕಂದಡ್ಕ ಎಂಬಲ್ಲಿ Post ಸುಳ್ಯ (ದ ಕ)

ಫೈನಲ್ ಡಿಕ್ರಿ ಬಗ್ಗೆ ಅರ್ಜಿದಾರನು ಮಾಡಿದ ಮೇಲಿನ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ 10-8-64ಕ್ಕೆ ಇಟ್ಟಿರುತ್ತದೆ ಆ ದಿವಸ ನೀವು ಖುದ್ದು ಯಾ ವಕೀಲರ ಮುಖಾಂತ್ರ ಉಪಸ್ಥಿತರಿರತಕ್ಕದ್ದು ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದೆಂತ ಈ ಮೂಲಕ ತಿಳಿಸಲಾಗಿಯದೆ

(By order of the court)

N S Bhat,

Advocate for Petitioner

ಪುತ್ತೂರು 23—7—1964

ಶ್ರೀ ವ್ಯಾಸರಾಯ ಆಚಾರ್ಯರ ನಿಧನ— ಮಂಗಳೂರಿನ ಹಿರಿಯ ವಕೀಲರೂ ಜಿಲ್ಲೆಯ ಆರ್ಥಿಕ ಪ್ರಗತಿಗಾಗಿ ಪ್ರಸಿದ್ಧರಾಗಿ ದುಡಿದವರೂ ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಶ್ರದ್ಧಾಪೂರ್ವಕ ಸೇವೆ ಸಲ್ಲಿಸಿದವರೂ ಕರ್ನಾಟಕ ಬ್ಯಾಂಕಿನ ಮಾಜಿ ಅಧ್ಯಕ್ಷರೂ ಆದ ಶ್ರೀ ಬಿ ಆರ್. ವ್ಯಾಸರಾಯ ಆಚಾರ್ಯರು ತಾ 21-7-64 ರಂದು ಮಂಗಳೂರಿನ ಕದ್ರಿಯ ಸ್ವಗೃಹದಲ್ಲಿ ನಿಧನ ಹೊಂದಿದರು. ಈ ವಾರ್ತೆ ತಿಳಿದೊಡನೆ ಕರ್ನಾಟಕ ಬ್ಯಾಂಕಿನ ಆಡಳಿತ ಕಚೇರಿಯ ಅಧಿಕಾರಿಗಳ ಮತ್ತು ನೌಕರರ ಸಭೆ ಸೇರಿ ದುಃಖ ಸೂಚಕ ನಿರ್ಣಯ ಮಾಡಿದರು. ಶೋಕ ಪ್ರದರ್ಶನಾರ್ಥವಾಗಿ ಅಂದು ಆಡಳಿತ ಕಚೇರಿಯು ಮುಚ್ಚಲ್ಪಟ್ಟಿತು.

ದುಃಖ ಸೂಚಕ ಸಭೆ— ವಿಜಯಾ ಬ್ಯಾಂಕಿನ ಮಾಜಿ ಕಾರ್ಯದರ್ಶಿ ಶ್ರೀ ಬಜ್ಜಲು ಮಹಾಬಲ ಶೆಟ್ಟಿ ತಾ 15 ರಂದು ದಿವಂಗತರಾದ ಪ್ರಯುಕ್ತ ತಾ 27 ರಂದು ವಿಜಯಾ ಬ್ಯಾಂಕಿನ ಸ್ಥಳೀಯ ಡೈರೆಕ್ಟರರು ಲೆಕ್ಕ ಪರಿಶೋಧಕರು ಹಾಗೂ ಸಿಬ್ಬಂದಿಯವರು ಲೈಟ್ ಹೌಸ್ ಹಿಲ್ಲಿನ ಪ್ರಧಾನ ಕಚೇರಿಯಲ್ಲಿ ಡೈರೆಕ್ಟರರು ಶ್ರೀ ಕೆ. ಸುಂದರರಾಮ ಶೆಟ್ಟಿ ಅಧ್ಯಕ್ಷತೆಯಲ್ಲಿ ದುಃಖ ಸೂಚಕ ಸಭೆ ಜರಗಿಸಿದರು. ಈ ಸಭೆಯಲ್ಲಿ 20 ವರ್ಷಗಳಿಗೂ ಹೆಚ್ಚಾಗಿ ಬ್ಯಾಂಕಿನ ಕಾರ್ಯದರ್ಶಿಯಾಗಿ ಅದರ ಉನ್ನತಿಗಾಗಿ ಗಣನೀಯ ಸೇವೆ ಸಲ್ಲಿಸಿದ ದಿವಂಗತ ಶೆಟ್ಟರ ಗುಣಗಾನ ಮಾಡಲಾಯಿತಲ್ಲದೆ ನಿಧನದ ಬಗ್ಗೆ ದುಃಖಸೂಚಕ ನಿರ್ಣಯ ಕೈಗೊಳ್ಳಲಾಯಿತು. ಸೆಕ್ರೆಟರಿ ಶ್ರೀ ಸಿ. ಜಯರಾಮ ಶೆಟ್ಟಿ ತನಗೂ ದಿವಂಗತ ಶೆಟ್ಟಿಗೂ ಇದ್ದ ಒಡನಾಟಗಳನ್ನು ಪ್ರಸ್ತಾಪಿಸಿ ಮಾತನಾಡಿದರು.

ಯಕ್ಷಗಾನ ಕೂಟ— ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ 'ಭಕ್ತ ಸುಧನ್ವ' ಎಂಬ ಕಥಾ ಭಾಗದ ಯಕ್ಷಗಾನ ತಾಳ ಮದ್ದಳೆಯು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರವರ ಅಧ್ಯಕ್ಷತೆಯಲ್ಲಿ ತಾ 25ರಂದು ಜರಗಿತು ಈ ಕಾರ್ಯಕ್ರಮದಲ್ಲಿ ಶ್ರೀ ಗಳಾದ ಕೀ ವೆ ಕೇಶವ, ರಾಮಯ ಗೌಡ, ವೇಷಧಾರಿ ಗುಡ್ಡಪ್ಪ ಗೌಡ, ಪರಮೇಶ್ವರ ಭಟ್, ಲಕ್ಷ್ಮಣ ಗೌಡ, ಮುನಿಯೂರು ನಾರಾಯಣ ರೈ, ತಿಮ್ಮಪ್ಪ ಗೌಡ ಮುಂತಾದವರು ಭಾಗವಹಿಸಿದ್ದರು

ಆರಂಭದಲ್ಲಿ ವ್ಯವಸ್ಥಾಪಕ ಶ್ರೀ ಎಂ ಎಸ್ ರೈಗಳು ಸ್ವಾಗತ ಬಯಸಿದ್ದು ಕೊನೆಯಲ್ಲಿ ಶ್ರೀ ಬಿ ವಿನೋದರವರು ವಂದನಾರ್ಪಣೆಗೈದರು.

ಭೂ ಸ್ವಾಧೀನತೆ ಸೂಚನೆಗೆ ಪ್ರತಿಭಟನೆ— ಇದೇ ತಾ 26ರಂದು ವಕೀಲ ಶ್ರೀ ಬಿ ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಪಣಂಬೂರು ಶಾಲಾ ಕಟ್ಟೆ ಮೈದಾನದಲ್ಲಿ ಜರಗಿದ ಸಭೆಯಲ್ಲಿ ಇನ್ನೂ ನಿಚ್ಚಳವಾಗಿ ತಿಳಿಯದ ಯಾವುದೋ ಕಾರಣಕ್ಕಾಗಿ ಮಂಗಳೂರು ಸರ್ವೆಯುತ. ಬಂದರ ನಿರ್ಮಾಣದ ಬಳಿಯಿಂದ ಇನ್ನೂ 1,500 ಎಕ್ರೆಗಳಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಸರಕಾರದ ಸೂಚನೆಯನ್ನು ಆ ಪ್ರಾಂತ್ಯದವರಾದ ಪಣಂಬೂರ್ ಬೈಕಂಪಾಡಿ ಮತ್ತು ತಣ್ಣೀರು ಬಾವಿಗಳ ನಿವಾಸಿಗಳು ಮುಂದೆ ನಿವಾಸಿಗಳು ತೀವ್ರವಾಗಿ ಪ್ರತಿಭಟಿಸಿದರು. ಸಭಿಕರ ಪರವಾಗಿ ಶ್ರೀಗಳಾದ ಬಿ ಮೋಹನದಾಸ್, ಕೆ ಆರ್ ಆಚಾರ್, ಎಸ್ ಎನ್ ಹೊಳ್ಳ, ಎಂ. ಸದಾನಂದ ಪೈ, ಕೆ. ಎಸ್ ಎನ್ ಅಡಿಗ, ಎಸ್ ನರಸಪ್ಪಯ್ಯ, ಎಚ್. ಕೆ. ತಿಂಗಳಾಯ ಮತ್ತು ಸಿ. ಶ್ರೀನಿವಾಸರಾಯರು ಮಾತಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸರಕಾರವು ಇದನ್ನು ಸಂಪಡಿಸಬೇಕು, ಇದನ್ನು ನಿರ್ಬಂಧಿಸಲು ಜನರು ಹಿತಸಾಧನೆಗಳು ಬೇಕೆಂದು ತಿಳಿಸಿದರು ಆರಂಭದಲ್ಲಿ ಪಣಂಬೂರು, ಬೈಕಂಪಾಡಿ ಗ್ರಾಮ ರಕ್ಷಣಾ ಸಮಿತಿಯ ಕಾರ್ಯದರ್ಶಿ ಕೆ. ಚಂದ್ರಶೇಖರ ಶೆಟ್ಟಿ ಮತ್ತು ಸ್ಥಳೀಯ ಎಸ್ಟೇಟ್ ಶ್ರೀ ಬಿ ಎಸ್. ಪಾತಾಳರು ಸ್ವಾಗತಿಸಿದರು ಅಂತ್ಯದಲ್ಲಿ ಶ್ರೀ ಎ ಎಂ ಪರ್ಮೇಶರು ವಂದನಾರ್ಪಣೆಗೈದರು

ಜಗತ್ಪರ್ಯಟನ

ನಾಲ್ಕನೇ ಯೋಜನೆಯಲ್ಲಿ ರಸ್ತೆ ನಿರ್ಮಾಣ

ನೇಶನಲ್ ಹೈವೇಗಳನ್ನೂ, ಅಂತರ ರಾಜ್ಯ ಸಂಸ್ಥೆಗಳನ್ನೂ ಸ್ಟೇಟ್ ಹೈವೇಗಳನ್ನೂ ಒಳಗೊಂಡಿರುವಂತಹ ರಾಷ್ಟ್ರೀಯ ರಸ್ತೆ ಯೋಜನೆಯೊಂದನ್ನು ಯೋಜನಾ ಆಯೋಗದ ಸಾರಿಗೆ ವಿಭಾಗವು ಶಿಫಾರಸು ಮಾಡಿದೆ ಎಂದು ತಿಳಿದು ಬಂದಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ರಸ್ತೆಗಳಿಗಾಗಿ ೧೧೫೦ ಕೋಟಿ ರೂಪಾಯಿಗಳ ನಿಧಿಯನ್ನು ಯೋಜನಾ ಆಯೋಗದ ಕಾರ್ಯ ಮಂಡಲಿಯು ಶಿಫಾರಸು ಮಾಡಿದೆ ಎಂದು ವರದಿಯಾಗಿದೆ.

ಕೈರೋ ಸಮ್ಮೇಳನದ ಕರೆ

ಕೈರೋದಲ್ಲಿ ಕಳೆದ ವಾರ ಮುಕ್ತಾಯಗೊಂಡ ಆಫ್ರಿಕನ್ ಪರಿಷತ್ತು ಪರಿಷತ್ತು ದಕ್ಷಿಣ ಆಫ್ರಿಕ ಹಾಗೂ ಪೋರ್ತುಗಾಲಗಳನ್ನು ಪೂರ್ತಿಯಾಗಿ ಬಹಿಷ್ಕರಿಸಬೇಕೆಂದು ಕರೆ ಇತ್ತಿದೆ. ದಕ್ಷಿಣ ಆಫ್ರಿಕೆಯಿಂದ ಬರುವ ಹಾಗೂ ಹೋಗುವ ಹಡಗುಗಳು ಮತ್ತು ವಿಮಾನಗಳ ಪ್ರಯಾಣಿಕರನ್ನು ಅವರು ಸದಸ್ಯ ರಾಷ್ಟ್ರಗಳ ಮೂಲಕವಾಗಿ ಹಾಯ್ದು ಹೋಗುವಾಗ ಬಹಿಷ್ಕರಿಸಬೇಕೆಂದೂ, ಎಣ್ಣೆ ಉತ್ಪಾದಿಸುವ ರಾಷ್ಟ್ರಗಳು ದ. ಆಫ್ರಿಕೆಗೆ ಎಣ್ಣೆ ಹಾಗೂ ಜಜ್ಜನ ಪೂರೈಕೆಯ ಪದಾರ್ಥಗಳ ಪೂರೈಕೆಯನ್ನು ಕೂಡಲೇ ತಡೆಯಬೇಕೆಂದೂ ಕೇಳಿಕೊಂಡಿದೆ.

ಪಾಕಿಸ್ತಾನದಲ್ಲಿ ಚುನಾವಣೆ

ಪಾಕಿಸ್ತಾನದಲ್ಲಿ ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಅಯೂಬ್ ಖಾನರಿಗೆದುರಾಗಿ "ಜತೆ ಅಭ್ಯರ್ಥಿ" ಯೋರ್ವರನ್ನು ನಿಲ್ಲಿಸಲು ವಿರೋಧ ಪಕ್ಷಗಳ ಸಭೆಯಲ್ಲಿ ನಿರ್ಣಯಿಸಲಾಯಿತೆಂದು ತಿಳಿದು ಬಂದಿದೆ. ಈಗ ಅಳ್ವಿಕೆಯಲ್ಲಿರುವ ಗಂಪನ್ನು ನೀಮಿಸಲು ವಿರೋಧ ಪಕ್ಷೀಯರ ಜತೆ ಚುನಾವಣಾ ಕಾರ್ಯಕ್ರಮಗಳನ್ನು ನಿರೂಪಿಸಿರುವರು ಕೌನ್ಸಿಲ್ ಆಫ್ ಮುಸ್ಲಿಂ ಲೀಗ್, ನೇಶನಲ್ ಅವಾಮಿ ಪಾರ್ಟಿ, ಅವಾಮಿ ಲೀಗ್, ನಿಜಾಮ್-ಇ-ಇಸ್ಲಾಮಿ ಮತ್ತು ಸಂಯುಕ್ತ ವಿರೋಧ ಪಕ್ಷಗಳ ನಾಯಕರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು ಅಧ್ಯಕ್ಷ ಅಯೂಬ ಖಾನರು ಈ ಬಾರಿಯ ಚುನಾವಣೆಯಲ್ಲಿ ಪ್ರಬಲ ವಿರೋಧವನ್ನು ಎದುರಿಸಬೇಕಾಗಬಹುದೆಂದು ರಾಜಕೀಯ ನಿರೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ

ಚೇತನಾ ಹೈಸ್ಕೂಲಿನ ದಶವಾರ್ಷಿಕೋತ್ಸವ ಇದೇ ತಾ. 26 ರಂದು ಹಂಪನಕಟ್ಟೆ ಚೇತನಾ ಹೈಸ್ಕೂಲಿನ ವರ್ಧಂತಿ ಸಮಾರಂಭದಲ್ಲಿ ಹತ್ತನೇ ತರಗತಿಯನ್ನು ಉದ್ಘಾಟಿಸುತ್ತಾ ಉಡುಪಿ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ಬರೇ ಭೌತಿಕ ವಿದ್ಯೆ ಅಪೂರ್ಣವೆನಿಸುವುದೆಂದರು ಆಡಳಿತ ಸಮಿತಿಯ ಅಧ್ಯಕ್ಷ ಬಿ. ಜಗಜ್ಜೀವನದಾಸ ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿದರು ಮುಖ್ಯೋಪಾಧ್ಯಾಯ ಶ್ರೀ ಎ ಎಸ್ ಹೆಬ್ಬಾರರು ಶುಭಕೋರಿಕೆಯ ಸಂದೇಶಗಳನ್ನೋದಿದರು ಉಪಾಧ್ಯಕ್ಷ ಶ್ರೀ ಎ ಜೆ ಅಲ್ಸೆಯವರು ಸ್ವಾಗತಭಾಷಣ ಮಾಡಿದರು.

ಇದೇ ಸಂದರ್ಭದಲ್ಲಿ ಶಾಲೆಯ ಸಾಹಿತ್ಯ ಸಮಾಜದ ಉದ್ಘಾಟನೆಯನ್ನು ಶ್ರೀ ಬನ್ನಂಜೆ ರಾಮಾಚಾರ್ಯರು ನೆರವೇರಿಸಿದರು ಕನ್ನಡ ಪಂಡಿತ ಶ್ರೀ ಕೆ. ಎಸ್. ಮುಕ್ಕಿತ್ತಾಯರು ಧನ್ಯವಾದ ಸಮರ್ಪಿಸಿದರು

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

REP No, 67/63 in O S 10/1956

ಪಿ. ಸರ್ವೋತ್ತಮ ಪ್ರಭು— ಅರ್ಜಿದಾರ

ಮತ್ತು

ಕೃಷ್ಣನಾಯಕ್ ಸಹಾ— ಎದ್ರಿರು.

ಇವರೊಳಗೆ

2 ನೇ ಎದ್ರಿ— ಸುಬ್ಬಣ್ಣ ನಾಯಕ್— ಟಿ ಶ್ರೀನಿವಾಸ ನಾಯಕರ ಮಗ 6ನೇ ಎದ್ರಿ— ಪದ್ಮಾವತಿ ಯಾನೆ ಅರುಂಧತಿಬಾಯಿ— ಟಿ ಶ್ರೀನಿವಾಸ ನಾಯಕರ ವಿಧವೆ, ಕಾರ್ಕಳ ಕಸ್ಬಾ ಕಾರ್ಕಳ ತಾಲೂಕಿನಲ್ಲಿರುವವರು ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, —

ಅರ್ಜಿದಾರನು ದಾಖಲು ಮಾಡಿದ ಸೇಲ್ಕಂಡ ಅಮಲ್ ಜ್ಯಾರಿಯನ್ನು ಲೋಕಲ್ ಇನ್ಸ್ಪೆಕ್ಟರ್‌ರ ಶರ್ತಗಳನ್ನು ನಿರ್ಣಯಿಸುವರೇ ಇದೇ ಬರುವ ಆಗೋಸ್ಟ್ ತಿಂಗಳ 5 ನೇ ತಾರೀಕಿಗೆ ಇಟ್ಟಿರುತ್ತದೆ ಆ ಕುರಿತು ಆಕ್ಷೇಪವಿದ್ದರೆ ಸದ್ರಿ ಮೊಕದ್ದಮೆಯ ತಾರೀಕಿನ ದಿವಸ 11 ಗಂಟೆಗೆ ಈ ಕೋರ್ಟಿನ ವಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

(By order of Court)

P Ranganath Shenoy

Advocote for Petitioner

Udipi S K. Dated _0 7 64

ದ ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘ ಮಂಗಳೂರು.

ಮೈಸೂರು ಸರಕಾರದ ಹೊಸ ಕಂದಾಯ ಯೋಜನೆ ವಿಷಯ ಆಲೋಚಿಸುವರೇ ಸಂಘದ ನೈಮಿತ್ತಿಕ ಮಹಾಸಭೆಯನ್ನು ತಾರೀಕು 9—8-1964ನೇ ಆದಿತ್ಯವಾರ ಬೆಳಿಗ್ಗೆ 11 ಘಂಟೆಗೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿಸಬೇಕಾಗಿ ಕಾರ್ಯನಿರ್ವಾಹಕ ಕಮಿಟಿಯು ನಿಶ್ಚಯಿಸಿಯದೆ, ಸಂಘದ ಎಲ್ಲಾ ತರಗತಿ ಮೆಂಬರರು ಸಭೆಗೆ ಹಾಜರಾಗಬೇಕಾಗಿ ವಿನಂತಿ,

ಕೆ. ಸುಂದರರಾಮ ಶೆಟ್ಟಿ,

ಸಂಘದ ಕಾರ್ಯದರ್ಶಿ

ಪುತ್ತೂರು ಮುಂ ಕೋರ್ಟ

O. S 151/64

R I A, 325/64, 326/64, 327/64.

ಮುತ್ತಪ್ಪ ಪೂಜಾರಿ ಕೂಡಾ .. ...

ಅರ್ಜಿದಾರ್ರು

ಮತ್ತು

ಅಗ್ಗು ಹೆಂಗ್ಸು ಕೂಡಾ ....ಎದ್ರಿರು.

3ನೇ ಎದ್ರಿ ಸೀತ ಯಾನೆ ಕೊರಗ ಪೂಜಾರಿ, ಅಗ್ಗು ಹೆಂಗಸಿನ ಮಗ ಪುತ್ತೂರು ತಾಲೂಕು ಕಳಂಜ ಗ್ರಾಮ ಸಪ್ಪೆ ಎಂಬಲ್ಲಿ.

Post ಕಳಂಜ (ದ ಕ)

ಇವರಿಗೆ

ಅರ್ಜಿದಾರರು ದಾಖಲು ಮಾಡಿದ ಫೈನಲ್ ಡಿಕ್ರಿ, ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 7—8—1964ಕ್ಕೆ ಇಟ್ಟಿರುತ್ತದೆ ಆ ದಿವಸ ನೀವು ಖುದ್ದು ಯಾ ವಕೀಲರ ಮುಖಾಂತ್ರ ಉಪಸ್ಥಿತರಿರತಕ್ಕದ್ದು ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದೆಂತ ಈ ಮೂಲಕ ತಿಳಿಸಲಾಗಿಯದೆ

(By order of the court)

A P Gowrishankar

Advocate for Petitioners

ಪುತ್ತೂರು, 14—7—64.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ಕವಲು ದಾರಿ—ಕೆಂಪು ದೀಪ

ಭಾಷಣದ ಬುರುಡೆಯಿಂದ!

- ಸುದಾಸ

ನಮ್ಮ ದೇಶದಲ್ಲಿ ಅನ್ನದ ಕೂಗು ಎದ್ದಿದೆ ಇದಕ್ಕಾಗಿ ಪರಿಹಾರದ ದಾರಿಯನ್ನೂ ಕಂಡು ಹಿಡಿಯುವ ಪ್ರಯತ್ನವೂ ನಡೆದಿದೆ.

ದೇಶದ ಮಧ್ಯಮ ವರ್ಗ ಪಡುತ್ತಿರುವ ನರಕ ಯಾತನೆಯ ಬಗ್ಗೆ, ನಮ್ಮ ನಾಯಕ ಮಣಿಗಳೆಲ್ಲ ಸಹಾನುಭೂತಿಯನ್ನೂ ಸೂಚಿಸುತ್ತಿದ್ದಾರೆ. ತಾತ್ಕಾಲಿಕ ಪರಿಹಾರೋಪಾಯವನ್ನು ಮಾಡಲಾಗುವದೆಂಬ ಭರವಸೆಯನ್ನೂ ಅವರಿಗೆ ಕೊಡಲಾಗಿದೆ.

ಮಧ್ಯಮ ವರ್ಗ ಬಳಲುತ್ತಿದೆ ಮೂರನೆಯ ವರ್ಗ ನರಳುತ್ತಿದೆ ಉಚ್ಚ ವರ್ಗ?

ಈಗ ಪ್ರಥಮ ವರ್ಗಕ್ಕೂ ಕಷ್ಟ ಕಾಲ ಬಂದಿದೆ ಯಾರಲ್ಲಿ ವಿಶ್ವಾಸವಿರಬೇಕೆನ್ನುವದೇ ತಿಳಿಯದ ಪೇಚಾಟಕ್ಕೆ ಪ್ರಥಮ ವರ್ಗದ ಹಲವು ಮಂದಿ ಸಿಕ್ಕಿ ಬಿದ್ದಿದ್ದಾರೆ ಆದರೆ ಅದೆಲ್ಲಾ ತಾತ್ಕಾಲಿಕ, ಅವರ ಕೈಯಲ್ಲಿರುವ ಮಹಾಸ್ತ್ರದ ಪ್ರಯೋಗದಿಂದ ಧೈರ್ಯವಾಗಿ ಉಳಿದುಕೊಳ್ಳಬಹುದೆಂಬ ಭರವಸೆ ಅವರಿಗೆಲ್ಲ ಇನ್ನೂ ಇದೆ.

ನರಳುತ್ತ ಬಂದುದೂ ಮುಂದಕ್ಕೆ ನರಳಬೇಕಾದುದೂ ಮಧ್ಯಮ ವರ್ಗ ಮತ್ತು ಮೂರನೆಯ ವರ್ಗವೇ

ಕಳೆದ ಹದಿನಾರು ವರ್ಷಗಳಿಂದ ಈ ನರಳಾಟ ಸಾಗಿ ಬಂದಿದೆ ಈ ನರಳಾಟದ ನಾಟಕದ ಪರಿಸಮಾಪ್ತಿಗಾಗಿ ಪ್ರಯತ್ನ ನಡೆಯುತ್ತಿದೆ ನಿಜ ಇದಕ್ಕಾಗಿ ಸತ್ಯಾಗ್ರಹಗಳೂ ನಡೆಯುತ್ತಿವೆ, ಉದ್ಬುದ್ಧ ಭಾಷಣಗಳಿಂದ ನಮ್ಮ ಭಾಷಣ ಪ್ರಿಯರು ದಾರಿದ್ರ್ಯ ದೇವಿಗೆ ಮಂಗಳಾರತಿ ಎತ್ತಿ ಹೂಮಾಲೆ ಹಾಕುವ ಪ್ರಯತ್ನ ನಡೆಸುವದೆಂಬುದೂ ನಿಜ.

ಅವರ ಭಾಷಣ ಕೇಳಿಯೇ ನಮ್ಮ ಹೊಟ್ಟೆ ತುಂಬುವಂತಿದ್ದರೆ, ಭಾರತವು ನಿಜಕ್ಕೂ ಸ್ವರ್ಗವಾಗುತ್ತಲಿತ್ತು. ಈ ಭಾಷಣ ಪ್ರಿಯರ ಪುಣ್ಯ ಪ್ರಭಾವದಿಂದ ನಾವೆಲ್ಲ ಮೃತ್ಯುಪಂಜರದಿಂದ ಬಿಡುಗಡೆಯನ್ನೂ ಹೊಂದಿ ಅಮರರಾಗಿ ಬಿಡುತ್ತಿದ್ದೆವು

ಹಾಗಾಗಿಲ್ಲ ನಮ್ಮ ಭಾಷಣ ಪ್ರಿಯರ ಭಾಷಣದಿಂದ ನಮ್ಮ ಹೊಟ್ಟೆ ತುಂಬಿಲ್ಲ. ಅಷ್ಟು ಮಾತ್ರವೇ ಅಲ್ಲದೆ ಅವರ ಸಾದಾತನವನ್ನು ಕಂಡು ಎಲ್ಲಕ್ಕಿಂತ ಚೆನ್ನಾಗಿರುವ ವೃತ್ತಿಯೆಂದರೆ, ಪುಢಾರಿಯಾಗಿಯೋ ಮರಿ ಪುಢಾರಿಯಾಗಿಯೋ ಭಾಷಣ ಬಿಗಿಯುತ್ತಿರುವದು ಎಂಬ ಭಾವನೆಯು ಕೆಲವರಲ್ಲಿ ಬೇರೂರಿ ಬಿಟ್ಟಿದೆ.

ಈ ಭಾಷಣ ಮಾಲೆಯಿಂದ ತಾಯಿ ಭಾರತಿ ಸಂತುಷ್ಟಳಾದರೆ, ಅದು ನಮ್ಮ ಪುಣ್ಯವೆಂದೇ ಅನ್ನಬೇಕಾಗುತ್ತದೆ

ನಮಗೆ ಅನ್ನ ಬೇಕಾಗಿದೆ; ನೀರು ಬೇಕಾಗಿದೆ ಭಾಷಣವಲ್ಲ.

ಸಂಬಂಧಪಟ್ಟ ಅಧಿಕಾರಿಗಳು ಆಹಾರ ವಸ್ತುಗಳ ಬೆಲೆ ಏರಿಕೆಯತ್ತ ಗಮನ ಕೊಡುವಂತಿಲ್ಲವಾದರೆ ಆ ಕಾರ್ಯವನ್ನು ನಾವೇ ಮಾಡಬೇಕಾಗುತ್ತದೆ

ಬೆಳಗಾಂವಿಯಲ್ಲಿ ಒಂದು ಘಟನೆ ನಡೆದಿದೆ. ಇದು ಆಗಬಾರದಾಗಿತ್ತು. ಆದರೆ ಆಗ ಮಂತೆ ಜನರನ್ನು ಉದ್ರೇಕಿಸಲಾಗಿದೆ

ಬೆಲೆ ಏರಿಕೆಯನ್ನು ತಡೆಗಟ್ಟಲು ಏಕೆ ಸಾಧ್ಯವಾಗಿಲ್ಲ ಎಂಬ ಪ್ರಶ್ನೆಗೆ ಸಮರ್ಥ ಉತ್ತರವನ್ನು ಕೊಡಲು ಯಾರಿಗೂ ಬಾಯಿ ಇಲ್ಲದಂತಾಗಿದೆ

ಜನರು ತಾಳ್ಮೆ ವಹಿಸಬೇಕು ಎಲ್ಲಿಯ ವರೆಗೆ ಎನ್ನುವದೂ ಅನಿಶ್ಚಿತ?

ಬೆಳಗಾಂವಿನ ಜನರು, ವ್ಯಾಪಾರಿಗಳಿಗೆ ಮಿತ ಬೆಲೆಗೆ ಆಹಾರ ವಸ್ತುಗಳನ್ನು ಮಾರಬೇಕೆಂದು ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ಇದರತ್ತ ಗಮನಕೊಡದಿದ್ದರೆ, ವ್ಯಾಪಾರಿಗಳಲ್ಲಿ ಕೆಲವರು ಈ ಜಗತ್ತಿನ ವ್ಯವಹಾರದಿಂದ ದೂರ ಹೋಗಬೇಕಾಗುತ್ತದೆ ಎಂದೂ, ಇದಕ್ಕಾಗಿ ನಾಲ್ಕು ದಿನದ ಸಮಯವನ್ನೂ ಕೊಡಲಾಗಿದೆ

ಹೆಸರಿಲ್ಲದ ಕೆಲವು ಪತ್ರಗಳು ಎಂತಹ ಪರಿಣಾಮವನ್ನೇ ಉಂಟುಮಾಡಿರಲಿ, ಅಲ್ಲಿನ ಕೆಲ ವ್ಯಾಪಾರಿಗಳು ಕಡಿಮೆ ಬೆಲೆಗೆ ಆಹಾರವನ್ನೂ ಕೊಡುತ್ತೇವೆಂದು ತಿಳಿಸಿದ್ದಾರೆ ಅಂತೆಯೇ ಅಲ್ಲಿ ಕಲವೆಡೆಗಳಲ್ಲಿ ಅಕ್ಕಿ ಜೋಳ ಅಗ್ಗ ಬೆಲೆಗೆ ಸಿಗುವಂತಾಗಿದೆ

ಜನರು ಉದ್ರಿಕ್ತರಾಗ ಬಾರದು ನಿಜ ಆದರೆ ಹಸಿವು ಏನನ್ನು ಮಾಡಿಸುತ್ತದೆ ಎಂಬತ್ತ ಎಲ್ಲರ ಲಕ್ಷ್ಯ ಹರಿಯಬೇಕಾಗಿದ್ದು, ಜನರು ಕಾಳ ಬೇಡದಂತ ವ್ಯವಸ್ಥೆ ಮಾಡುವ ಅಗತ್ಯವೂ ಇದೆ.

ಜನರ ಹಸಿವು ಎಂದರೆ ವ್ಯಾಪಾರಿಗಳು ಹಣ ಎಂದು ಹಣಕ್ಕಾಗಿ ಬಾಯ್ಬಿಡುವದನ್ನು ಕಡಿಮೆ ಮಾಡಬೇಕು

ಮಿತ ಬೆಲೆಗೆ ಆಹಾರ ವಸ್ತುಗಳನ್ನು ಮಾರುವ ಪಾಠವನ್ನು ವ್ಯಾಪಾರಿಗಳು ಕಲಿತು ಕೊಳ್ಳಲಿ.

ಇದು ಇಂದಿನ ಭಾರತ- ಇಲ್ಲಿ ಹಸಿವು ಇದೆ. ಈ ಹಸಿವು ಇನ್ನೊಬ್ಬರ ಕೊಲೆಯನ್ನು ಮಾಡಲೂ ಸಿದ್ಧವಾಗುತ್ತದೆ, ಇಲ್ಲವೆ ತಾನು ಸಾಯುತ್ತದೆ!

In tho Court of the Civil Judge of Udipi, South Kanara

O S. No 172/1951 of Sub court, Mangalore

R E P No 8 of 1964.

Amrithavathi and others — Petitioners

and

Rathi Devi and others — Respondents

To Respondents

17) Nabhiraja Padivala,

18) Dharmaraja Padivala,

sons of Saraswathi, 17th respondent resides in Ragimasalvada, Harpanahalli Taluk, Bellary District, and 23rd respondent resides at Messrs Vittal & Sons, 78 Kamathipura, 7th Lane, Bombay 8

Please take notice that the petitioners have made application to this Court for execution of decree in O S No 172/1951 of Sub-Court Mangalore and the same is posted to 19—8—1964 to show cause why execution should not be granted.

K Varadaraya Pai,

Advocate for petitioners·

Udipi, Dated 27—7—1964

ಜನತಾ ಉವಾಚ

"ಫಾರ್ಮಸಿಸ್ಟ್"ಗಳ ಸಂಬಳ ಮಟ್ಟ ಏರಬೇಕು

ರೋಗಿಯನ್ನು ಪರೀಕ್ಷಿಸಿ ಡಾಕ್ಟರರು ಒಂದು ಮದ್ದಿನ ಚೀಟಿಕೊಡುತ್ತಾರೆ. ಆ ಚೀಟಿಯ ಬ್ರಹ್ಮಲಿಪಿಯನ್ನು ಓದಿ, ಅರ್ಥಮಾಡಿಕೊಂಡು ಔಷಧಿಗಳನ್ನು ಸರಿ ಪ್ರಮಾಣದಲ್ಲಿ ಸೇರಿಸಿ ಪಥ್ಯಗಳನ್ನು ಸೂಚಿಸುವ ವರೆಗಿನ ಪ್ರಾಮುಖ್ಯವಾದ ಕೆಲಸಗಳನ್ನು ಮಾಡುವ ಕಂಪೌಂಡರುಗಳ ಸಂಬಳ ಮಟ್ಟವು ತೀರ ಕೆಳಗಿದೆ ಅವರು ಪಡುತ್ತಿರುವ ಬವಣೆ ಎಲೆಯ ಮರೆಯ ಕಾಯಿಯಂತೆ ಜನತೆಗೆ ತಿಳಿಯದೆ, ಶಾಸಕರ ಕೃಪೆಗೆ ಬೀಳದೆ, ಅವರ ಸ್ಥಿತಿಯು ಶೋಚನೀಯವಾಗಿದೆ "ಕಂಪೌಂಡರ" ಎಂಬ ಹೆಸರಿನಿಂದ ಮದ್ರಾಸು ಸರಕಾರದಲ್ಲಿ ಕರೆಯಲ್ಪಡುತಿದ್ದ ಹೆಸರು ಬದಲಾವಣೆಗೊಂಡ-ಮಹಾ ಮೈಸೂರಿನಲ್ಲಿ "ಫಾರ್ಮಸಿಸ್ಟ್" ಎಂಬ ಹೆಸರಿನಿಂದ ಕರೆಯಲ್ಪಡುವುದು ಬಿಟ್ಟಲ್ಲಿ— ಮೈಸೂರಿಗೆ ಬಂದು ಬೇರೇನು ಹೆಚ್ಚಿನ ಸವಲತ್ತು ಅವರಿಗೆ ಸಿಕ್ಕಲಿಲ್ಲ

ಅವರ ದಕ್ಷತೆ, ಚಾತುರ್ಯ, ಶೀಘ್ರತೆ, ಚುರುಕುತನಕ್ಕೆ ಎಳ್ಳಷ್ಟು ಬೆಲೆ ಕೊಡದೆ-ಸರಕಾರ ಕಡಿಮೆ ಸಂಬಳದ ಅವರ ಮೇಲೆ ಹೆಚ್ಚಚ್ಚಿನ ಹೊರೆಗಳನ್ನು ಹೊರಿಸುತ್ತಾ ಬರುವುದು ದುರ್ದೈವವಾಗಿರ ಫಾರ್ಮಸಿಸ್ಟನಾಗ ಬೇಕಾದರೆ ಕನಿಷ್ಟ S.S L C ಪಾಸಾಗಿ ಒಂದು ವರ್ಷದ ಯೋಗ್ಯ ತರಬೇತಿ ಪಡೆದು ಡಿಪ್ಲೊಮ ಪಡೆದಿರ ಬೇಕು ಆತನ ಈ ಯೋಗ್ಯತೆಗೆ ಸಿಕ್ಕುವ ಸಂಬಳದ ಸ್ಕೇಲು 80 3-110 4—120—5—140 ಆದರೆ ಕ್ಲಾರ್ಕ ಆದವನು (ಅದು ಟ್ರೈನಿಂಗೂ ಇಲ್ಲದ) 80—3—110—4—120-5-150 ಇಷ್ಟಲ್ಲದೆ ಆತನಿಗೆ ಭಡ್ತಿ ಕೂಡಾ ಕೊಡಲಾಗುತ್ತದೆ ಬಡಪಾಯಿ ಫಾರ್ಮಸಿಸ್ಟ್ ಆದೇಸ್ಕೇಲಿನಲ್ಲಿ ಇರಬೇಕಾದ್ದು ಮಾತ್ರವಲ್ಲ, ಆತನಿಗೆ ತನ್ನ ಉದ್ಯೋಗದಲ್ಲಿ ಭಡ್ತಿ ಕೂಡಾ ಇಲ್ಲ.

ಕೇಂದ್ರ ಸರಕಾರವು ಇವರ ದುರಂತ ಕತೆಯನ್ನು ಮನನ ಮಾಡಿಕೊಂಡು ಅವರ ಹುದ್ದೆಯನ್ನು ಸುಧಾರಿಸಿ 130-240 ರ ಮಟ್ಟದ ಸ್ಕೇಲಿನಲ್ಲಿ ಸಂಬಳ ಕೊಡುತ್ತಿರುವುದು ಸಂತೋಷಕರ ಆದರೆ ನಮ್ಮ ಪ್ರಾಂತ್ಯ ಸರಕಾರ ಫಾರ್ಮಸಿಸ್ಟ್‌ಗಳ ವೇತನವನ್ನು ಇನ್ನೂ ಸುಧಾರಿಸಲಿಲ್ಲ ಒಂದೇ ನಮೂನೆಯ ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ಒಂದೇ ದೇಶದೊಳಗೆ ಈ ರೀತಿಯ ತಾರತಮ್ಯ ಸಹ್ಯವಲ್ಲ. ಆರೋಗ್ಯ ಮಂತ್ರಿ ಶ್ರೀ ನಾಗಪ್ಪ ಆಳ್ವರು ಈ ಕಡೆ ಗಮನ ಕೊಡುವುದು ಅಗತ್ಯ ಇದೆ.

ಉಡುಪಿ—ಶಿರ್ವಾಡಿ ವಿಲಿಯಂ ಪಿಂಟೊ

ಹಾಹಾಕಾರಕ್ಕೆ ಆಸ್ಪದಬೇಡ

ಕೇಂದ್ರ ಆಹಾರ ಸಚಿವ ಶ್ರೀ ಸುಬ್ರಹ್ಮಣ್ಯಂರವರು ಈ ಖಾತೆ ವಹಿಸಿದಂದಿನಿಂದ ಒಂದು ಚುರುಕತನ ತೋರಿದೆ. ದಿನ ಬೆಳಗಾದೊಡನೆಯೇ ಸಿಗುವ ಪತ್ರಿಕೆಗಳಲ್ಲಿ ಡಿಲ್ಲಿ, ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಬೆಂಗಳೂರು, ಎಂದು ಮುಂತಾದ ಊರುಗಳಲ್ಲಿ ಅವರ ಸಿಂಹಗರ್ಜನೆ ಆಹಾರ ಧಾನ್ಯ ವ್ಯಾಪಾರಿಗಳಿಗೆ ಉಪದೇಶ, ಎಚ್ಚರಿಕೆ ನೊಡಬಾಮವುಗಳೇ ಕಾಣಸಿಗುತ್ತದೆಯಲ್ಲದೆ ಆಹಾರ ಧಾನ್ಯಗಳ ಬೆಲೆಯಲ್ಲಿ ಗಣನೀಯವಾದ ಇಳುವರಿಯೂ ದುರಿಲ್ಲ ಚೀಲದ ಮೇಲೆ ಐವತ್ತು ಪೈಸೆಯೋ ರೂಪಾಯಿಯೋ ಇಳಿತವಾದರೆ, ಅದರಿಂದ ಜನಸಾಮಾನ್ಯರಿಗೆ ಲಾಭವಿಲ್ಲ. ಆದುದರಿಂದ ಶ್ರೀ ಸುಬ್ರಹ್ಮಣ್ಯಂರವರು ಬೆಲೆಯಿಳಿಸುವ ಬಗ್ಗೆ ಕಾರ್ಯಕ್ರಮ ವಹಿಸ ಬೇಕು. ಇಂದು ನೌಕರರ ಬೇಡಿಕೆ ಅಧಿಕ ವೇತನ ಕೊಡಿ ಎಂದಲ್ಲ; ಜೀವನದ ಅವಶ್ಯಕ ಪದಾರ್ಥಗಳ ಬೆಲೆಗಳನ್ನು ಇಳಿಸಬೇಕು ಎಂಬುದು ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ದಿಸೆಯಲ್ಲಿ ಇನ್ನೂ ವಿಳಂಬ ಮಾಡಿದರೆ, ಆಹಾರ ಪರಿಸ್ಥಿತಿಯು ಕಂಗೆಡುವುದು ಮಾತ್ರವಲ್ಲ, ಅಸಂತುಷ್ಟ ಪ್ರಜೆಗಳ ಹಾಹಾಕಾರವೆಲ್ಲೆಲ್ಲಿಯೂ ಏಳವುದು ಖಚಿತ

ಕೆಮ್ಮಣ್ಣು— ಸದಾನಂದ ನಾಯಕ್.

o o o

ಸುದ್ದಿ ಬೆಂಗಳೂರಿನಿಂದ ಬಂದಿದೆ ನವ್ಯ ಮೈಸೂರಿನ (ಹಳೆ ಮೈಸೂರು ಕೂಡಾ ಸೇರಿರುವ ಮಾದರಿ ಮೈಸೂರಿನ) ರಾಜಧಾನಿ ಬೆಂಗಳೂರಿನಲ್ಲಿ ಭ್ರಷ್ಟಾಚಾರ ನಡೆದಿದೆ, ಎಂದು ಸುದ್ದಿ ತಿಳಿಸುತ್ತದೆ.

ಮುಖ್ಯಮಂತ್ರಿಗಳೂ, ಮಾಜೀ ಮುಖ್ಯಮಂತ್ರಿಗಳೂ (ತಾತ್ಕಾಲಿಕ) ಇತರ ಕೆಲ ಮಂತ್ರಿಗಳೂ ಕೂಡಿ ಭ್ರಷ್ಟಾಚಾರ ಮಾಡಿದ್ದಾರಂತೆ!

ಅದಕ್ಕೆ ದೂರು ಕೇಂದ್ರ ಸರಕಾರದತ್ತ ಹಾರಿದೆ ವಿಚಾರಣೆ ನಡೆಯುತ್ತದೆ, ಇಲ್ಲ, ಅದು ಯಾಕಾಗುವದಿಲ್ಲ?

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

360 ಪುಟಗಳಿಗೂ ಮಿಕ್ಕಿದ

ಪಾಕೇಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಒಂದು ಪ್ರತಿ ಬೇಕಾದವರು ಅಂಚೆ ವೆಚ್ಚ 50ನ. ಪೈಸೆ ಸೇರಿಸಿ ಬೇಕಾದ ಪುಸ್ತಕದ ಬೆಲೆಯನ್ನು ಮನಿಯಾರ್ಡರ ಮಾಡುವುದು. ಹೆಚ್ಚು ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ ಕ.

ಶುದ್ಧ ಹರಟೆ

ನೀವೂ ಸಾಹಿತಿಯಾಗುತ್ತೀರಾ?

ಬರೆದವರು
ಶ್ರೀ ಶಂಸ ಐತಾಳ, ಹಾರ್ಯಾಡಿ.

ಸಾಹಿತಿ, ಪತ್ರಿಕೋದ್ಯೋಗಿ, ಪ್ರೇಮಿ, ನಿರುದ್ಯೋಗಿ ಇವರೆಲ್ಲ ಒಂದೇ ವರ್ಗಕ್ಕೆ ಸೇರಿದವರು. ಇವರೆಲ್ಲರನ್ನೂ ಇಪ್ಪರೊಳಗೆ ಹುಚ್ಚಾಸ್ಪತ್ರೆಯಲ್ಲಿ ಕೂಡಿಸುತ್ತಿದ್ದರು- ಸ್ಥಳವೊಂದು ಇದ್ದಿದ್ದರೆ! ಆ ಮಾತು ಬೇರೆ. ಪ್ರೇಮಿಗೆ ತಾನು ಪ್ರೇಮಿಸಿದ ತರುಣಿ ಯಾ ತರುಣನೊಂದಿಗೆ ಲಗ್ನವಾದಾಗ, ನಿರುದ್ಯೋಗಿಗೆ ಉದ್ಯೋಗ ದೊರೆತಾಗ ಹುಚ್ಚು ಮಾಯವಾಗುವಂತೆಯೇ, ಈ ಸಾಹಿತಿ ಎನ್ನೋ ಪ್ರಾಣಿಗೆ ತಾನು ಬರೆದ ಒಂದು ಗ್ರಂಥ ಪ್ರಕಟವಾಗಿ, ರಾಜ್ಯದ ಪ್ರತಿಯೊಂದು ಪುಸ್ತಕದಂಗಡಿಗಳಲ್ಲೂ ಮಾರಾಟವಾಗದೆ ರಾಶಿಗಟ್ಟಲೆ ಇಡಲ್ಪಟ್ಟಾಗ ಸಂತಸವಾಗುತ್ತದೆ, ಆದರೆ ಬರೆಯಬೇಕು ಬರೆದು ಕನ್ನಡಮ್ಮನ ಚರಣ ಕಮಲಗಳಲ್ಲಿ ಬಿಸಾಡಬೇಕು ಆ ಧೂಳಿಯಿಂದ ತನ್ನ ಉದ್ದೇಶ ಸಾರ್ಥಕವಾಗಬೇಕು ಎಂಬ ಕೆಲವು ಮೇಲ್ತರಗತಿಯ ಹುಚ್ಚುಗಳು ಅವನಿಗಂಟಿಕೊಂಡು ಆತ ಮಸಿಯನ್ನೂ ಮತ್ತೂ ಬಿಳಿ ಹಾಳೆಗಳನ್ನು ಹಾಳು ಮಾಡುವ ಉದ್ಯಮದಲ್ಲಿ ತನ್ನ ಸಮಯವನ್ನು ವ್ಯಯಗೊಳಿಸಲಾರಂಭಿಸುತ್ತಾನೆ

ಸಾಹಿತಿಯಾಗುವವನಿಗೆ ಏನೆಲ್ಲ ಅರ್ಹತೆ ಇರಬೇಕು? ಮುಖ್ಯವಾಗಿ ಸಾಹಿತಿಯಾಗ ಬಯಸುವವನು ವಾರಗಟ್ಟಲೆ ಆಹಾರವಿಲ್ಲದೆ, ಬರೇ ನೀರು ಸಿಗರೇಟುಗಳಿಂದ, ಜೀವ ಹಿಡಿದು ಕೊಂಡಿರಲು ಅಭ್ಯಾಸ ಮಾಡಿರಲೇ ಬೇಕು, ಅಂದರೆ ಆತನಿಗೆ ನಿರಶನವ್ರತ ಸಾಧಿಸಿರಲೇ ಬೇಕು. ಮತ್ತು ಆತ ಗೀಚಿದ ಕಚಡಾ ಬರಹವನ್ನು ಪ್ರಕಟಿಸುವ 'ಎದೆಗಾರಿಕೆ'ಯುಳ್ಳ ಸಾಹಸೀ ಪತ್ರಿಕೋದ್ಯಮಿಯಿರಬೇಕು ಇಷ್ಟೇ ಸಾಹಿತಿಯಾಗಲು ಮೂಲ ಇನ್ನೆಲ್ಲ ತನ್ನಂತೆಯೇ ಒಂದು ಸಾರಿ ತನ್ನ ಲೇಖ ಪ್ರಕಟವಾದುದು ತಿಳಿದುಬರುತ್ತಲೇ ಆತ ನವ್ಯ ಬರಹಗಾರನಾಗುತ್ತಾನೆ (ಅಲ್ಲ, ಆದೆನೆಂದು ತಿಳಿದುಕೊಳ್ಳುತ್ತಾನೆ) ಹಾಗೂ ಬಿಳಿ ಹಾಳೆಗಳನ್ನು ಕರಿದುಮಾಡಲಾರಂಭಿಸುತ್ತಾನೆ ರೀಮುಗಟ್ಟಲೆ ಹಾಳೆಗಳು ಖರೀದಾಗುತ್ತವೆ. ಅವನು ಬರೆದ ಲೇಖನಗಳಲ್ಲಿ ಕೆಲವು ಪ್ರಕಟವಾಗುತ್ತವೆ. ಆಗದಿದ್ದರೂ ಕೂಡ ಬರೆದಾತನೇ ತನ್ನದೇ ಪ್ರಕಾಶದಲ್ಲಿ ತನ್ನಾಕೆಯ ಕಿವಿಯೋಲೆಯನ್ನು ಮಾರಿ ಬಂದ ಹಣದಿಂದಲಾದರೂ—ಪುಸ್ತಕ ಅಚ್ಚು ಹಾಕಿಸಿ, ತನ್ನನ್ನು ತಾನೇ (ಪಾಪ; ಮತ್ಯಾರು ತಾನೇ ಇದ್ದಾರು?) ನವನವೀನ ಶೈಲಿಯ ಉಜ್ವಲ ಭವಿಷ್ಯವುಳ್ಳ ಅಮೋಘ ಸಾಹಿತಿ ಎಂದು ಹೊಗಳಿಕೊಳ್ಳುತ್ತಾನೆ. ಆತನ ತಲೆಯಲ್ಲಿ ತಾನೇ ನವಯುಗದ ಕಾಳಿದಾಸನೆಂಬ ಹುಳ ಹೊಕ್ಕು ಅವನು 'ತನ್ನದೇ ಆದ' ವಿಚಿತ್ರ ರೀತಿಯಲ್ಲಿ ವರ್ತಿಸತೊಡಗಿ ಸಮಾಜದಲ್ಲೊಂದು ತಲೆ ಹರಟೆಯಾಗಿ ಮಾರ್ಪಡುತ್ತಾನೆ. ಅಂದಿನಿಂದ ಅವನ ಪತ್ನಿಗೆ ಫಜೀತಿ ಆರಂಭವಾಗುತ್ತದೆ. ಅವನು ತಾನು ಬರೆದ ಲೇಖಗಳನ್ನು ಮಡದಿಯೆದುರು ಓದಲಾರಂಭಿಸಿದಂತೂ ಮತ್ತೆ ಕೇಳಬೇಕಿಲ್ಲ. ಹೆಂಡತಿಗೆ ಅಲ್ಲಿಂದ ಓಡಿ ಹೋಗುವಂತೆಯೂ ಇಲ್ಲ. ಕೇಳುತ್ತ ನಿಂತರೆ ಆಸಕ್ತಿ ಎಲ್ಲಿಂದ? ಓಡಿಹೋದರೆ 'ನನ್ನ ಕವನ ನಿನಗೂ ತಿರಸ್ಕೃತವಾಯ್ತೇ?' ಎನ್ನುವ ಸಿಡಿನುಡಿ. ಒಟ್ಟಾರೆ ಸಾಹಿತಿಯ ಕೈ ಹಿಡಿದವಳು ಕಿವುಡಿಯಾಗ ಮೂಕಿಯಾಗಿರಲೇ ಬೇಕು. ಕಿವುಡಿಯಲ್ಲದಾಕ ಸಾಹಿತಿಯನ್ನು ಮದುವೆಯಾದರೆ "ಫಡ್‌ಚಾ"

'ಏನೂ ಅನುಭವವಿಲ್ಲದ ವಿದ್ಯಾರಹಿತ ವ್ಯಕ್ತಿ ಅದೆಂತು ಸಾಹಿತಿಯಾಗುತ್ತಾನೆ?' ಎಂದು ಸೋಜಿಗದಿಂದ ಪ್ರಶ್ನಿಸುವಿರಾ? ಸ್ವಲ್ಪ ಕೇಳಿ ಸಾಹಿತಿಯಾಗುವುದತಿ ಸುಲಭ ಕಣಾ! ಸಾಹಿತಿಯಾಗುವವನಿಗೆ ಪ್ರಕಟವಾದ, ಆಗದೆ ಕಸದ ಬುಟ್ಟಿ ಸೇರಿದ ಎಲ್ಲ ಕಥೆ, ಕವಿತೆ, ಲೇಖ ಪ್ರಬಂಧ, ನಾಟಕ, ಹರಟೆಗಳನ್ನೂ ಓದುವ ಅಭ್ಯಾಸವಿರಲೇ ಬೇಕು. ಹಾಗೂ ಅವುಗಳನ್ನು ಸಂಪೂರ್ಣ ಓದುವ ತಾಳ್ಮೆಯೊಂದಿಗೆ ಅವನ್ನು ನೆನಪಿನಲ್ಲಿಟ್ಟುಕೊಳ್ಳುವ ಜ್ಞಾಪಕ ಶಕ್ತಿಯೂ ಅತ್ಯವಶ್ಯ. ಹೀಗಿದ್ದರೆ ಆತ ಏಕ್‌ಧಮ್ ಸಾಹಿತಿಯಾಗಲು ಸಾಧ್ಯವಿದೆ.

"ಕೃತಿಚೌರ್ಯ ಮಾಡದವ ಸಾಹಿತಿಯಲ್ಲ ಎಂಬುದು ಈ ಕಾಲದ ಒಂದು ಹೊಸ ಸುಭಾಷಿತ, ಅಲ್ಲದೆ ಮತ್ತೆ ಸಾಹಿತಿಯಾಗಲು ಸಾಧ್ಯವೂ ಇಲ್ಲ ಈಗೀಗ ಲೇಖಕರೆನಿಸಿ ಕೊಂಡವರು (ಎಲ್ಲರೂ ಅಲ್ಲ—ಕೆಲವು ಪುಡಿ ಸಾಹಿತಿಗಳು ಮಾತ್ರ!) ಮಾಡುವುದಾದರೂ ಏನು! ಆ ಕಾದಂಬರಿಯ ನಾಯಕನು ಈ ಕಾದಂಬರಿಯ ನಾಯಕಿಯನ್ನು ಅಕಸ್ಮಾತ್ ಸಂಧಿಸಿ ಒಮ್ಮೆಲೇ ಅವರೀರ್ವರ ಹೃದಂಗಳದಲ್ಲೂ ಪ್ರೀತಿ ಉಕ್ಕಿ ಹರಿಯುವಂತೆ ಮಾಡುವುದು, ಕೊನೆಗೆ ಕಾದಂಬರಿ ಸುಖಾಂತವಾಗಬೇಕಿದ್ದಲ್ಲಿ ಮತ್ತೊಂದು ಕಾದಂಬರಿಯ ಪುರೋಹಿತನಿಂದ ಅವರೀರ್ವರ ಲಗ್ನ ಕುದುರಿಸುವುದು ಅಥವಾ ಅವರೇ ರಿಜಿಸ್ಟರ್ ಯಾ ಬರ್‌ಫ್ರೋಸ್ಟಿನಲ್ಲಿ ವಿವಾಹವಾಗುವಂತೆ ಮಾಡುವುದು. ಕಾದಂಬರಿ ದುಃಖಾಂತವಾಗಬೇಕೇ?—ಸರಿ! ಅದೂ ಸುಲಭ. ಮಗುದೊಂದು ಕಾದಂಬರಿಯ ಖಳನಾಯಕನಿಂದ ಅವರ ಮದುವೆ ಮುರಿಸಿ, ನಾಕೆ ನಾಯಿಕೆ ನಾಯಕರಿಬ್ಬರಿಗೂ ಗುಂಡಿಯನ್ನೂ ತೋರಿಸಿ ಕಾದಂಬರಿಯನ್ನು ಇತಿಶ್ರೀಗೊಳಿಸುವುದು. ಇಷ್ಟಾದ ಮೇಲೆ ಅರೆನಗ್ನನಾರಿಯ ಮುಖಚಿತ್ರದೊಂದಿಗೆ ಅಚ್ಚು ಹಾಕಿಸಿ ಬಿಟ್ಟರೆ ಮತ್ತೆ ಕೇಳಲೇಬೇಡಿ. ಕಾದಂಬರಿಯ ಎಲ್ಲ ಪ್ರತಿಗಳೂ ಬಿಸಿ ಬಿಸಿ ದೋಸೆಗಳಂತೆ ಖರೀದಿಯಾಗಿ ತಿಂಗಳೊಳಗೆಯೇ ಕಾದಂಬರಿ ಪುನರ್ಮುದ್ರಣಕ್ಕೆ ಸಿದ್ಧವಾಗಿಬಿಡುತ್ತದೆ.

ಇಲ್ಲೊಂದು ಮಾತು. ಸಾಹಿತಿಗೆ ಕದ್ದ ಕೃತಿಯನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯ ಅತ್ಯವಶ್ಯ ಅಂದರೆ ಕಾದಂಬರಿಯನ್ನು ನಾಟಕವನ್ನಾಗಿಯೂ, ನಾಟಕವನ್ನು ಕಥಾಸಂಕಲನವನ್ನಾಗಿಯೂ, ಕಥಾಸಂಕಲನವನ್ನು ಕವಿತಾಸಂಗ್ರಹವನ್ನಾಗಿಯೂ, ಕವಿತಾಸಂಗ್ರಹವನ್ನು ಕಾವ್ಯಖಂಡವನ್ನಾಗಿಯೂ, ಖಂಡಕಾವ್ಯವನ್ನು ನಗೆ (ಗೇಡು) ಬರಹವನ್ನಾಗಿಯೂ, ನಗೆ ಬರಹವನ್ನು ಇದ್ದಕ್ಕಿದ್ದಂತೆ ಪ್ರಬಂಧ ಸಂಗ್ರಹವನ್ನಾಗಿಯೂ, ಆ ಪ್ರಬಂಧಗಳನ್ನೆಲ್ಲ ಸೇರಿಸಿ ಅತ್ಯದ್ಭುತ ರೋಮಾಂಚಕಾರಿ ಪತ್ತೇದಾರಿಯನ್ನಾಗಿಯೂ ಪರಿವರ್ತಿಸುವ ಚಾಕಚಕ್ಯತೆ ಅವನಿಗಿರಲೇ ಬೇಕು. ಅದಲ್ಲದೆ ಯಾವುದಾದರೂ ಗ್ರಂಥದ ನೂರಾಂಪ್ರತಿ, ನಕಲು ತೆಗೆದನೋ, ಆತ ಖಂಡಿತ ಸಿಕ್ಕಿಬೀಳುತ್ತಾನೆ.

ಮತ್ತೊಂದು ಸ್ವಾರಸ್ಯ ಒಂದು ಬಾರಿ ಆತನ ಲೇಖನ ಜನಪ್ರಿಯತೆ ಪಡೆದರಾಯ್ತು. ಮತ್ತೆ ಆತ ಏನೇ ಬರೆಯಲಿ; ಅದನ್ನು ಜನತೆ ಓದಿಯೇ ಓದುತ್ತದೆ

ಸಾಹಿತಿಯು ತಲೆಬಾಚಿಕೊಳ್ಳಬಾರದು, ಆತ ಸದಾ ಧೂಳಿನಿಂದಾವೃತವಾದ ಮಾಸಿದ ಕೊಳಕು ಬಟ್ಟೆಯನ್ನೇ ಧರಿಸಬೇಕು. ಆತನಿಗೆ ಧೂಮ್ರಪಾನದ ಸಭ್ಯಾಚಾರ ಇರಲೇಬೇಕು. ಇಲ್ಲವಾದರೆ ಸ್ಫೂರ್ತಿ ತಾನೇ ಎತ್ತಣಿಂದ ಆಗಮಿಸಿತು? ಸಾಹಿತಿಯ ಮುಂದಿನ ಹೆಜ್ಜೆ ಪತ್ರಿಕೆ ಹೊರಡಿಸುವುದು. ಸುಲಭವಾದ ಕೆಲಸವದು. ವಾರಭವಿಷ್ಯ, ಚಿತ್ರ ಸಮಾಚಾರವನ್ನಿಷ್ಟು ಪತ್ರಿಕೆಯಲ್ಲಿ ತುಂಬಿಸಿ ಉಳಿದ ಪುಟಗಳನ್ನು ವ್ಯಾಪಾರೀಸಂಘ ಸಂಸ್ಥೆಗಳಿಗೆ ಯೋಗ್ಯದರಕ್ಕೆ ಮಾರಿದರಾಯ್ತು. ಇಪ್ಪತ್ತು ಪುಟದ ಪತ್ರಿಕೆಯಲ್ಲಿ ಕನಿಷ್ಠಾಂಶವೆಂದರೆ ಹದಿನಾರು ಪುಟಗಳಷ್ಟಾದರೂ ಜಾಹೀರಾತುಗಳಿರಲೇ ಬೇಕು ಪತ್ರಿಕೋದ್ಯೋಗಿಯಾದ ಮೇಲೆ ಸಾಹಿತಿಗೆ ಮತ್ತೆ ಚಿಂತೆಯಿಲ್ಲ. ಆತನನ್ನೂ ಜನತೆ ಮನುಷ್ಯನೆಂದೊಪ್ಪಿಕೊಳ್ಳುತ್ತದೆ.

ಕೊನೆಯದಾಗಿ ಒಂದು ಮಾತು. ಸಾಹಿತಿ ಮತ್ತು ಪ್ರತಿಕೋದ್ಯೋಗಿ ಇವರುಗಳಿಗೆ ಸಾವೂ ಒಂದೇ, ಬದುಕೂ ಒಂದೇ!

ಬೆಳ್ತಂಗಡಿ ಡಿ. ಮು ಕೋರ್ಟಿನಲ್ಲಿ
S. C. No. 83/64.

1. ಸುರದೇವಿ }
2. ಚಂದನ ದೇವಿ } ......ವಾದಿರು

Vs.

ಸಹಾಬ್ ಸಾಹೇಬ್ ......ಪ್ರತಿವಾದಿ.

ಪ್ರತಿವಾದಿ ಸಹಾಬ್ ಸಾಹೇಬ್, ಮಹಮದ್ ಸಾಹೇಬರ ಮಗ, ಪಡಂಗಡಿ ಗ್ರಾಮದಲ್ಲಿರುವವ.

ಪ್ರತಿವಾದಿಯಿಂದ ಬರಬೇಕಾದ ಬಾಲಗೇಣಿ ಬಾಕಿ ರೂ. 324-45 ನ ವೈಸಕ್ಕೆ ವಾದಿರು ಮಾಡಿದ ದಾವೆಯಲ್ಲಿ ಕೈಪೇತು ನೋಟೀಸು ವ್ಯಾದೆ ತಾ. 14-8 1964ಕ್ಕೆ ಇಟ್ಟಿರುತ್ತದೆ. ಪ್ರತಿವಾದಿಯು ತನ್ನ ಆಕ್ಷೇಪಗಳೇನಾದರೂ ಹೇಳುವುದಿದ್ದರೆ ಆ ದಿನ ಈ ಕೋರ್ಟು ಮುಂದೆ 11 ಘಂಟೆಗೆ ಹಾಜರಾಗಿ ಬರೆಹ ಮೂಲಕ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಅತನನ್ನು ಶಿವಾಯಿ ಎಂತ ಮಾಡಿ ಸಾಬೀತಿನ ತಕ್ಕಯಿಂದ ದಾವೆಯನ್ನು ತೀರ್ಮಾನಿಸಲಾಗುವುದು ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯಿದೆ.

Veerasimha
(Advocate for Plaintiff)
ಬೆಳ್ತಂಗಡಿ, ತಾ. 31-7-64.

ಅಮೃತ ಬಿಂದು

ಸಮೂಹದ ಐಕ್ಯ ಜೀವನವು ನಾವು ಹೇಗೆ ಬದುಕಬೇಕೆಂಬುದನ್ನು ಕಲಿಸಿದರೆ, ಏಕಾಂತತೆಯು ನಾವು ಹೇಗೆ ಸಾಯಬೇಕೆಂಬುದನ್ನು ಕಲಿಸುತ್ತದೆ.

೦೦ ೦೦ ೦೦

ಸಂಭಾಷಣೆಯಿಂದ ಜ್ಞಾನ ವಿಕಾಸವಾಗಬಹುದು; ಆದರೆ ಮೌನವು ಜ್ಞಾನಿಗಳ ತರಬೇತು ಶಾಲೆಯಾಗಿದೆ

೦೦ ೦೦ ೦೦

ಸದಾ ನಗು, ಸಂತೋಷಗಳು ನಮ್ಮನ್ನು ಯಾವ ಉಗ್ರ ತಪಸ್ಸು, ಯಾ ಪ್ರಾರ್ಥನೆಗಳಿಗಿಂತಾ ಬೇಗ ದೇವರ ಹತ್ತಿರ ಕೊಂಡೊಯ್ಯುವವು.

೦೦ ೦೦ ೦೦

ಪಾಪ ಕೃತ್ಯಗಳು ನೀರಿನ ತೆರೆಗಳಂತೆ ನೀರಿಗೆ ಒಂದು ಕಲ್ಲೆಸೆದಾಗ ಅದರಲ್ಲಿ ಹುಟ್ಟಿದ ಒಂದು ತೆರೆ ಹತ್ತಾಗಿ ಇಡೀ ಕೆರೆಯನ್ನು ಆವರಿಸುವಂತೆ ಪಾಪ ಕೃತ್ಯಗಳೂ ಕೂಡ.

೦ ೦ ೦

ತೋಟದಲ್ಲಿ ಕಾಡು ಗಿಡ ಬೆಳೆಯಬಾರದೆಂದಾದರೆ ಒಳ್ಳೆ ಗಿಡ ನೆಡಬೇಕು. ಅದರಂತೆ ಮನಸ್ಸಿನಲ್ಲಿ ಕೆಟ್ಟದು ಮನೆ ಮಾಡದಿರಬೇಕಾದರೆ ಸದ್ಭಾವನೆಗಳ ಕೃಷಿ ಬೇಕು.

೦ ೦ ೦

ಜಗತ್ತಿನ ಜನಜೀವನದಲ್ಲಿಯ ಪಾಪ ಕೃತ್ಯಗಳೆಲ್ಲ ಅಸತ್ಯದಿಂದ ಹುಟ್ಟಿಕೊಂಡವು. ಅವುಗಳ ನಿರ್ಮೂಲನವಾಗಬೇಕಾದರೆ ಸತ್ಯದ ಬೆಳಕು ಚೆಲ್ಲುವದೇ ದಾರಿ.

೦ ೦ ೦

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

READ & ADVERTISE IN NAVAYUGA WEEKLY.

ಭಾರತೀಯ ಸಾಹಿತ್ಯದಲ್ಲಿ

ದೇವತಾತ್ಮಾ ನಗಾಧಿರಾಜ

ಲೇಖಕರು: ಶ್ರೀ ಸಿದ್ದವನಹಳ್ಳಿ ಕೃಷ್ಣ ಶರ್ಮ

ನಮ್ಮ ಹಿರಿಯರಿಗೆ ಹಿಮಾಚಲ ಒಂದು ಪವಿತ್ರ ಸ್ಥಾನ. ಒಂದು ಅಲ್ಲ, ಹಲವು ಪವಿತ್ರ ಸ್ಥಾನಗಳ ನೆಲೆ. ಅವರಿಗೆ ಹಿಮಾಲಯ ವೇದಭೂಮಿ. ಪರಶಿವನ ಕೈಲಾಸ ಅಲ್ಲಿ ಪರಮಪಾವನೆ ಗಂಗೆಯ ಅವತರಣ ಅಲ್ಲಿ. ನಮ್ಮ ಋಷಿಮುನಿಗಳ ತಪೋಭೂಮಿ ಅದು. ಹಿಮಾಲಯ ದರ್ಶನ ಪ್ರತಿಯೊಬ್ಬ ಭಾರತೀಯನ ಆಸೆ ಆಗಿತ್ತು.

ಹಿಮಾಲಯ ಬರೀ ಬೆಟ್ಟ ಅಲ್ಲ ನಮಗೆ ಅದೂ ಒಂದು ವ್ಯಕ್ತಿ, ವಿಭೂತಿ, ಹಿಮವಂತ ನಗಾಧಿರಾಜ ಹಿಮವಂತ. ಅವನ ಮಗಳು ಹೈಮವತಿ ನಮ್ಮ ದೇವತೆ. ಪಾರ್ವತಿ ಅವನ ಮಗಳು. ಗಂಗೆ ಅವನ ಮಗಳು.

ಹೀಗೆ ಹಿಮಾಲಯವನ್ನು ವಿಭೂತಿಯಾಗಿ ದೇವತೆಯಾಗಿ ಪೂಜಿಸಿದವರು ನಮ್ಮವರು. ಆ ಪೂಜೆಯಿಂದ ಒಂದು ಸಂಸ್ಕೃತಿಯನ್ನು ಪಡೆದರು. ಒಂದು ಜೀವನ ದರ್ಶನ ಪಡೆದರು "ಯೋ ವೈ ಭೂಮಾ ತದ್ ಅಮೃತಂ ನಾಲ್ಪೇ ಸುಖಮಸ್ತಿ" ಎಂದೂ ನಮ್ಮ ಆದರ್ಶ ಬುದ್ಧಿಯನ್ನು ಬೆಳೆಯಿತು ಹಿಮಾಲಯ.

ಆಧುನಿಕರಲ್ಲಿ ಹಿಮಾಲಯದ ಬಗ್ಗೆಯೇ ಅಲ್ಲ, ಯಾವುದರ ಬಗ್ಗೆಯೂ ದೇವತಾ ಭಾವ ಕಡಿಮೆ. ನಮ್ಮ ಕಣ್ಣಿಗೆ ದಿವ್ಯ ದೃಷ್ಟಿಯಿಲ್ಲ, ಭವ್ಯ ದೃಷ್ಟಿಯೂ ಇಲ್ಲ. ನಮಗೆ ವಿಭೂತಿ ದರ್ಶನ ಆಗುವುದಿಲ್ಲ.

ಹಿಮಾಲಯ ನಮಗೆ ಈಗ "ದೇವತಾತ್ಮ" ಅಲ್ಲ. ನಮ್ಮ ಕವಿಯೊಬ್ಬರು ರಾಷ್ಟ್ರಗೀತೆ ಎಂಬುದು ಒಂದನ್ನು ಹಾಡಿದರು. ನಮ್ಮ ರಾಷ್ಟ್ರದ ವರ್ಣನೆ ಹಿಮಾಲಯದ ಪ್ರಸ್ತಾಪ ಇಲ್ಲದೆ ಮುಗಿಯುವುದಿಲ್ಲವಲ್ಲ. ಆದರಲ್ಲಿ ಹಿಮಾಲಯ 'ಪರ್ಬತ್ ವಹಾ ಸಬ್ ಸೆ ಉಂಚಾ"—"ವಹಾ ಸಂತರೀ ಹಮಾರಾ"—"ವಹ ಪಾಸ್ ಬಾನ್ ಹಮಾರ್" ಇಷ್ಟೇ ನಮ್ಮ ದೃಷ್ಟಿ ಹಿಮಾಲಯ ನಮ್ಮ ಕಾವಲುಗಾರ. ನಮ್ಮ ಅಭೇದ್ಯ ಕೋಟೆ. ಇದರಲ್ಲಿ ತಪ್ಪಿಲ್ಲ. ಋಷಿಗಳಿಲ್ಲ, ದೇವತೆಗಳಿಲ್ಲ. ಇದರ "ಗೋದೀಮೆ ಖೇಲ್ತೆ ಹೈ ಹಜಾರೋ ನದಿಯಾಂ" ಇಷ್ಟು.

ನಮಗೆ ಗೊತ್ತಿರುವುದು ಹಿಮಾಲಯದ ಕಲ್ಲು ಮಣ್ಣು ಮಂಜು. ಜಗತ್ತಿನ ಪರ್ವತಗಳಲ್ಲಿ ಎಲ್ಲ ಹಿಮಾಲಯವೇ ಚಿನ್ನ ಮೊನ್ನೆಯ ಮಗು. ಎಂಟು ಹತ್ತು ಲಕ್ಷ ವಯಸ್ಸು ಆಗಿರಬಹುದು. ಉಳಿದವು ಎಲ್ಲವೂ ಇದಕ್ಕಿಂತ ಹಳೆಯವು. ಮುದಿ. ನಿಜವಾಗಿ ಹಿಮಾಲಯ ಒಂದು ಪರ್ವತ ಅಲ್ಲ. ಬಹಳ ದೊಡ್ಡ ಪರ್ವತಮಾಲೆ ಹಿಮ ತುಂಬಿದ ಪರ್ವತಗಳ ತಾರು ಮನೆ. ಹಿಮ ಪರ್ವತಗಳ ಆಲಯ.

ಭಾರತ ದೇಶ ಎಷ್ಟು ಅಗಲ ಇದೆಯೋ, ಉತ್ತರದಲ್ಲಿ ಅಷ್ಟು ಉದ್ದ ಇದೆ ಹಿಮಾಲಯ. ಸುಮಾರು ಎರಡು ಸಾವಿರ ಮೈಲಿ. ಅಗಲ—ಸುಮಾರು ಎರಡು ನೂರು ಮೈಲಿ. ಇಡೀ ಹಿಮಾಲಯ ಶ್ರೇಣಿ ಒಂದು ಚಂದ್ರ ರೇಖೆಯ ಹಾಗೆ ಇದೆ. ಹಿಮಾಲಯದ ಇತ್ತ ಕಡೆ ಶಿವಾಲಿಕ ಪರ್ವತ. ಅತ್ತ ಕಡೆ ಮಾಂಧಾತ

ಹಿಮಾಲಯದ ಉತ್ತರದಲ್ಲಿ ಈಗ ಟಿಬೆಟ್ ಎಂದು ಕರೆಯುವ ಪ್ರದೇಶವು ಹಿಂದೆ ತ್ರಿವಿಷ್ಟಪ ಎಂದು ಹೆಸರುಗೊಂಡಿತ್ತು. ಇದು ಅಪಭ್ರಂಶ ಆಗಿ ಟಿಬೆಟ್ ಆಗಿದೆ. ಈ ತ್ರಿವಿಷ್ಟಪಕ್ಕೆ ರಾಜ ಕುಬೇರ. ನಮಗೆ ಈಗ ತ್ರಿವಿಷ್ಟಪದ ಸಂಬಂಧ ಇಲ್ಲ.

ರವೀಂದ್ರನಾಥರ ಒಂದೆರಡು ಹಾಡನ್ನು ಬಿಟ್ಟರೆ, ಇಕ್ಬಾಲ್ ಕವಿಯ ಒಂದೆರಡು ಹಾಡನ್ನು ಬಿಟ್ಟರೆ, ಹಿಮಾಲಯವನ್ನು ನಮ್ಮ ಕವಿಗಳು ನೆನೆದುದೇ ಅಪರೂಪ. ಮೊದಲಿಗಿಂತ ಈಗ ಹೆಚ್ಚು ಸೌಕರ್ಯವಿದೆ ಪ್ರಯಾಣಕ್ಕೆ. ಹಿಂದಿನ ಕಾಲಕ್ಕಿಂತ ಹೆಚ್ಚು ಜನ ಕಾಶ್ಮೀರ ಯಾತ್ರೆ ಮಾಡಿ ಹಿಮಾಲಯದ ಅಂಚನ್ನು ನೋಡಿ ಬಂದಿದ್ದಾರೆ. ಈಗಲೂ ಎಷ್ಟೋ ಜನ ಬದರೀಯಾತ್ರೆ ಮಾಡುತ್ತಾರೆ. ಗಡುಸಾದವರು ಇನ್ನೂ ಮುಂದಕ್ಕೆ ಹೋಗಿ ಬರುತ್ತಾರೆ.

ಆದರೆ ಈ ಪ್ರವಾಸಿಗಳು ನಿಜವಾಗಿ ಯಾತ್ರಿಕರಲ್ಲ ಅವರಿಗೆ ಹಿಮಾಲಯದಿಂದ ಯಾವ ಸಂದೇಶವೂ ಸಿಗುವುದಿಲ್ಲ. ಹಿಮಾಲಯವನ್ನು ನೋಡುತ್ತೇವೆ. ಅದರ ದರ್ಶನ ಆಗುವುದಿಲ್ಲ. ಅದರ ರಮಣೀಯತೆ ನಮಗೆ ಕಾಣಬರುತ್ತವೆ. ಅದರ ಉನ್ನತ ಶಿಖರಗಳನ್ನು ಕಂಡು ಮುಗ್ಧರಾಗುತ್ತೇವೆ. ಆದರ ಅಂತರಂಗ ನಮಗೆ ತಿಳಿಯುವುದಿಲ್ಲ.

ಹೀಗೆ ನಮ್ಮ ಕಾರ್ಯ ನಮ್ಮ ಭಾವುಕತೆ, ನಮ್ಮ ಧರ್ಮ ಹಿಮಾಲಯದ ವಿಭೂತಿಯನ್ನು ಗುರುತಿಸಲಾರದೆ ಹೋದ ಮೇಲೆ ಹಿಮಾಲಯ ನಮಗೆ ಬರೀ ಗಡಿ ಪ್ರದೇಶ ಆಯಿತು. ಚೀನಕ್ಕೂ ನಮಗೂ ಯುದ್ಧಭೂಮಿ ಆಯಿತು. ಅಸಂಖ್ಯ ಋಷಿಮುನಿಗಳ ಆಶ್ರಮಗಳು ಇದ್ದ ಕಡೆಯಲ್ಲಿ ಸೇನಾ ಶಿಬಿರಗಳು ಆಗಿವೆ. ಯಜ್ಞವಾಟಿಕೆಗಳ ಹೋಮಧೂಮದ ಬದಲು ಮದ್ದುಗುಂಡಿನ ಹೊಗೆ ಕಾಣುತ್ತದೆ.

ಆದ್ದರಿಂದಲೇ ಆಧುನಿಕ ಸಾಹಿತ್ಯದಲ್ಲಿ ಹಿಮಾಲಯದ ಪ್ರಸಕ್ತಿ ಕಡಿಮೆ, ಕನ್ನಡದಲ್ಲಿ ಹಿಮಾಲಯ ಪ್ರವಾಸ ಮಾಡಿ ಬಂದರು. ಕೆಲವರು ತಮ್ಮ ಪ್ರವಾಸದ ವರ್ಣನೆ ಬರೆದಿದ್ದಾರೆ. ಭಾರತ ಸಂಚಾರಿ ಗೋಸಾವಿ ಅವರದು ಒಂದು ಪುಸ್ತಕ ಇದೆ. ಮಹಾದೇವಿ ತಾಯಿ ಹಿಂದಿಯಲ್ಲಿ ಬರೆದ 'ದೇವತಾತ್ಮ' ಎಂಬ ಪುಸ್ತಕ ಒಂದು ಇದೆ. ದಿವಂಗತ ದಾತಾರ ಬಳವಂತರಾಯರು ಬರೆದದ್ದು ಇಂಗ್ಲಿಷ್ ಪುಸ್ತಕ ಒಂದು ಇದೆ. ಉತ್ತರ ಯಾತ್ರೆ ಮಾಡಿದವರು ಕೆಲವರು ಪತ್ರಿಕೆಗಳಲ್ಲಿ ಲೇಖನ ಬರೆದಿದ್ದಾರೆ. ಇಂಗ್ಲೀಷಿನಲ್ಲಿ ಕೆಲವಾರು ಪುಸ್ತಕ ಇವೆ.

ದಕ್ಷಿಣ ಭಾಷೆಗಳಲ್ಲಿ ಹಿಮಾಲಯ ಸಾಹಿತ್ಯ ಕಡಿಮೆ ಎನ್ನಬೇಕು. ಹಿಮಾಲಯದ ಹತ್ತಿರ ಇರುವ ಜನರ ಭಾಷೆಗಳಲ್ಲಿ ಹಿಮಾಲಯದ ಪ್ರಭಾವ ಅವರ ಸಾಹಿತ್ಯದಲ್ಲಿ ಕಾಣುತ್ತಿರಬೇಕು. ಬಂಗಾಳಿ ಭಾಷೆಯಲ್ಲಿ ಹಿಮಾಲಯದ ಬಗ್ಗೆ ಸಾಕಷ್ಟು ಪ್ರಸ್ತಾಪ ಬರುತ್ತದೆಯಂತೆ. ಹಿಂದೀ ಭಾಷೆಯಲ್ಲೂ ಅಲ್ಪಸ್ವಲ್ಪ ಇದೆ. ಎಲ್ಲ ಭಾಷೆಗಳೂ ನನಗೆ ಗೊತ್ತಿಲ್ಲವಲ್ಲ! ಗೊತ್ತಿದ್ದ ಭಾಷೆಗಳಲ್ಲಿ ಅಷ್ಟಾಗಿ ಹಿಮಾಲಯದ ಸಂದೇಶ ಕಂಡುಬಂದಿಲ್ಲ.

ಈಗ ಯುದ್ಧದ ನಿಮಿತ್ತ ಹಿಮಾಲಯದ ಪರಿಚಯ ನಮಗೆ ಆಗುತ್ತಿದೆ. ಪುರಾತನ ಭೂಭಾಗ ಆದ ಏಷ್ಯಾ—ಯೂರೋಪ್ ಖಂಡಗಳಿಗೆ ಹಿಮಾಲಯವೇ ಮಧ್ಯಬಿಂದು ಎಂದು ಈಗ ನಮಗೆ ತಿಳಿಯುತ್ತಿದೆ.

ಇದಕ್ಕೆ ಮೊದಲು ಎವರೆಸ್ಟ್ ಶಿಖರವನ್ನು ಹತ್ತಲು ಸಾಹಸ ಮಾಡಿದ ಪರ್ವತಾರೋಹಿಗಳ ಮೂಲಕ— ತೇನ್ ಸಿಂಗ್ ಮೊದಲಾದವರ ಮೂಲಕ—ಹಿಮಾಲಯದ ಒಂದು ಶಿಖರದ ಹೆಸರು ನಮಗೆ ಚೆನ್ನಾಗಿ ಪರಿಚಯ ಆಯಿತು. ವೀರ ಎಂದೆವು ಸಿಂಗನನ್ನು.

ಎವರೆಸ್ಟ್ ಪರ್ವತಾರೋಹಿಗಳ ಗುರುಹು. ಆದರೆ ಹಿಮಾಲಯದ ಅನೇಕ ಸ್ಥಾನ ನಮ್ಮ ಸಂಸ್ಕೃತಿಯ ಕುರುಹು. ನಮ್ಮ ತಕ್ಷಶಿಲೆಯ ವಿದ್ಯಾಪೀಠ ಅಲ್ಲಿತ್ತು. ಸಿಕಂದರನಂಥ ಜಗದ್ವಿಜಯಿ ಎದುರಿಗೆ ಬಂದಾಗ ನಿರ್ಲಕ್ಷ್ಯದಿಂದ ಕಂಡ ದಂಡಿಸ್ವಾಮಿಯಂಥ ಕುಲಪತಿಗಳು ಅಲ್ಲಿದ್ದರು. ನಮ್ಮ ಪರ್ವತಗ್ರಾಮಗಳು ಅನೇಕ ಅಲ್ಲಿ ತೇಜೋವಂತ ಆಗಿ ಮೆರೆದವು. ಹಿಮಾಲಯವನ್ನು ಹೀಗೆ ನಾವು ಸಾಂಸ್ಕೃತಿಕ— ಅಧ್ಯಾತ್ಮಿಕ ಆಶ್ರಯ ಆಗಿ ಮಾಡಿಕೊಂಡಿದ್ದಷ್ಟು ದಿನ ನಮಗೆ ಯಾವ ಶತ್ರು ಭಯವೂ ಇರಲಿಲ್ಲ.

ಇಷ್ಟುದಿನ ಹಿಮಾಲಯ ನಮ್ಮನ್ನು ಕಾಪಾಡಿತ್ತು. ಲೋಕದ ದುರ್ಭರ ಸಂಘರ್ಷಣಗಳಿಂದ ನಮ್ಮನ್ನು ದೂರ ಇಟ್ಟು ಏಕಾಂತದಲ್ಲಿ ಸಂಸ್ಕೃತಿಯನ್ನು ಬೆಳೆಸಿಕೊಳ್ಳಲು ಅವಕಾಶ ಕೊಟ್ಟಿತ್ತು. ಹಿಮಾಲಯದ ಅನಂತ ಭವ್ಯತೆಯಿಂದ ಪ್ರೇರಣೆ ಪಡೆದು ಅಮರ ಆತ್ಮದ ಅವ್ಯಕ್ತ ದರ್ಶನ ಮಾಡಿಕೊಂಡಿದ್ದೆವು ನಾವು. ಆಗ ಅದು ದೇವತಾತ್ಮ ಆಗಿತ್ತು. ನಮ್ಮನ್ನು ಕಾಪಾಡಿತು.

ಈಗ ಹಿಮಾಲಯ ನಮ್ಮ ಹುಡುಗಿಯರು ಕೂಡಾ ಹತ್ತುವ ಪರ್ವತ ಶಿಖರಗಳ ಒಂದು ಪರ್ವತ ಪ್ರದೇಶ. ಈಗ ನಾವು ಅದನ್ನು ಕಾಪಾಡಬೇಕಾಗಿದೆ. ನಮ್ಮ ಸಿಪಾಯಿಗಳು ಈಗ ಅಲ್ಲಿ ಕಳವೂರಿದ್ದಾರೆ. ಇದು ತತ್ಕಾಲದ ಕಾರ್ಯಕ್ರಮ.

ಆದರೆ ಚಿರಕಾಲದ ಕಾರ್ಯಕ್ರಮ ಒಂದು ರೂಪಿತ ಆಗಬೇಕು. ಹೊಸಕಾಲದ ಆಶ್ರಮಗಳು ಅಲ್ಲಿ ನೆಲೆಗೊಳ್ಳಬೇಕು. ಹೊಸ ಬಗೆಯ ತಪಸ್ಸು ಅಲ್ಲಿ ನಡೆಯಬೇಕು. ಆ ದೃಷ್ಟಿಯಿಂದಲೇ ವಿನೋಬಾ ಗಡಿಪ್ರಾಂತ ಆದ ಅಸ್ಸಾಂನಲ್ಲಿ ಎರಡು ವರ್ಷ ಯಾತ್ರೆ ಮಾಡಿದರು. ಅದೇ ಉದ್ದೇಶದಿಂದಲೇ ಉತ್ತರ ಲಖೀಮಪುರದ ಹತ್ತಿರ ಲೀಲಾಬಾಡೀ ವಿಮಾನಾಶ್ರಯದ ಪಕ್ಕದಲ್ಲಿ ಮೈತ್ರೀ ಆಶ್ರಮವನ್ನು ಸ್ಥಾಪಿಸಿದರು. ರಾಷ್ಟ್ರದ ಗಡಿ ಪ್ರದೇಶದಲ್ಲಿ ಇರುವ ಇದು ಒಂದು ಗುಡ್‌ವಿಲ್ ಮಿಷನ್.

ಹಿಮಾಲಯದ ಪರಿಚಯ, ಕಾರ್ಯದ ದ್ವಾರ ಮಾತ್ರ ಅಲ್ಲದೆ, ಪ್ರತ್ಯಕ್ಷ ದರ್ಶನದ ಮೂಲಕ ನಮ್ಮ ಜನರಲ್ಲಿ ಬಹುಭಾಗಕ್ಕೆ ಆಗಬೇಕು ನಮ್ಮ ಜನಸಂಖ್ಯೆ ಹೆಚ್ಚಿ, ವಿಜ್ಞಾನ ಹೆಚ್ಚಿ, ಭಾರತ ಖಂಡದ ವೈಶಾಲ್ಯದ ಅರಿವು ನಮಗೆ ಆಗುತ್ತಿಲ್ಲ. ಹಿಮಾಲಯವನ್ನಾದರೂ ನೋಡಿ, ಆ ಹಿಮಧವಳ ಶಿಖರಾವಳಿಯನ್ನು ನೋಡಿ, ಆ ವೈಶಾಲ್ಯ, ಆ ಉತ್ತುಂಗತೆ, ಆ ಅನಂತತೆಯ ವೈಭವಗಳನ್ನು ನೋಡಿ ನಮಗೆ ಭೂಮಾದ ಕಲ್ಪನೆ ಮೊಳೆದೀತು.

ಹಿಮಾಲಯದ ಕರೆ ಮತ್ತೆ ನಮ್ಮ ಕವಿಗಳಿಗೆ ಆಚಾರ್ಯರಿಗೆ ನಮ್ಮ ಬುದ್ಧಿ ಜೀವಿಗಳಿಗೆ ಕೇಳಿಸಿರಬೇಕು. ನಮ್ಮ ವಿಚಾರವಂತರು, ತತ್ವನಿಷ್ಠರು, ಅಲ್ಲಿ ನಮ್ಮ ಸಿದ್ಧಾಂತ ವಿಜಯಧ್ವಜವನ್ನು ಹಾರಿಸಬೇಕು.

ರಾಷ್ಟ್ರಗಳ ಗಡಿಮೇರೆಗಳನ್ನು ಅಳಿಸಿ ವಿಶ್ವಮಾನವತೆ, ಜಗದ ರಾಷ್ಟ್ರಗಳನ್ನು ಸ್ಥಾಪಿಸುವ ಸಿದ್ಧಾಂತವನ್ನು ಹರಡಬೇಕಾದ ಹಿಮಾಲಯದ ಸಂದೇಶವನ್ನು ಮತ್ತೆ ಜಗತ್ತಿಗೆ ಸಾರಬೇಕು; ನಮ್ಮ ವಿಚಾರವಂತರು. ಆಗಲೇ ಹಿಮಾಲಯ ನಮಗೆ ದೇವತಾತ್ಮ, ಅಲ್ಲಿಯವರೆಗೆ ಅಭೇದ್ಯವಲ್ಲದ 'ಸಂತರಿ ಹಮಾರಾ'.



ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇದಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಕಾಳೀಗುಡಿಯ ಸುರಂಗ

(೨ನೇ ಪುಟದಿಂದ)

ಸುರಂಗ ದ್ವಾರದಲ್ಲಿ ಸಾಗುತ್ತ ಹೊರಟ ಪ್ರಸೇನನೂ ಇನ್ನಿತರರೂ ಯಾವ ಸುಳಿವೂ ಕಾಣಲಾರದೆ— ಸುರಂಗದ ಇನ್ನೊಂದು ದ್ವಾರಕ್ಕೆ ತಲ್ಪಿದರು. ಅಲ್ಲಿಯೊಬ್ಬ ಮುದಿ ವ್ಯಕ್ತಿಯು ಹೊರತು ಬೇರಾರೂ ಕಾಣಿಸಲಿಲ್ಲ! ಅವನನ್ನು ವಿಚಾರಿಸಲು ತಾನು ಬೇರಾರನ್ನೂ ಕಾಣಲಿಲ್ಲವೆಂದ! ಇಷ್ಟರಲ್ಲಿ ಬೆಳಗಾಗುವ ಚಿಹ್ನೆ ತೋರಿತು. ಅವರು ಸುರಂಗದಲ್ಲಿ ಇಡೀ ರಾತ್ರಿ ತಿರುಗಿದ್ದು-ತಾವು ತಮ್ಮ ರಾಜ್ಯದಿಂದ ಹೊರಗೆ ಬಂದಿರುವೆವೆಂಬುದೂ, ವಂಗದೇಶವು ಸಮೀಪಿಸಿತೆಂಬುದೂ ಅವರಿಗೆ ತಿಳಿಯಿತು. ಈ ಕಾರ್ಯದಲ್ಲಿ ವಂಗದೇಶದ ರಾಜನ ಕೈವಾಡವಿದೆಯೆಂಬುದನ್ನರಿಯಲು ಅವರಿಗೆ ತಡವಾಗಲಿಲ್ಲ! ಆ ಮುದಿ ವ್ಯಕ್ತಿಯನ್ನು ಬಂಧಿಸಿಕೊಂಡು ಅವರು ತಿರುಗಿ ಅದೇ ಸುರಂಗದಲ್ಲಿ ತಿರುಗಿ ಒಳಗೆ ಹೋಗಿ, ತಮ್ಮ ನಗರಕ್ಕೆ ತಿರುಗಿದರು! ಪ್ರಸೇನ ಹಾಗೂ ಅವನ ಮಂತ್ರಿ ಮಾತ್ರ ಛದ್ಮವೇಶದಲ್ಲಿ ವಂಗ ದೇಶದಲ್ಲಿ ವಿಷಯವರಿಯುವದೆಂದು ಯೋಚಿಸಿದರು.

ಇತ್ತ ವಂಗದೇಶದಲ್ಲಿ ಕಳಿಂಗ ವಸಂತರಾಜ ಹಾಗೂ ವಿಕರ್ಣ ರಾಜರೂ ಸೇರಿ ಮಂತ್ರಾಲೋಚನೆ ನಡೆಸಿದ್ದರು! ವಿಕರ್ಣರಾಜ ನುಡಿಯುತ್ತಿದ್ದ "ನಿಮಗೆ ನಾವು ಸಹಾಯ ಮಾಡಿದಲ್ಲಿ ನಮಗೇನು ಪ್ರತಿಫಲವನ್ನೀಯುವಿರಿ?"

ವಸಂತರಾಜ ಉತ್ತರಿಸುತ್ತಿದ್ದ—"ಗೆದ್ದ ರಾಜ್ಯವನ್ನು ಸಮನಾಗಿ ಹಂಚಿಕೊಳ್ಳುವದು"

ಮದಿರೆಯ ಸೇವೆ ನಡೆಯುತ್ತಿತ್ತು. ಇಬ್ಬರೂ ಗಹಗಹಿಸಿ ನಗುತ್ತ ಕಾಂಭೋಜ ರಾಜ್ಯ ತಮ್ಮದಾಯಿತೆಂದೇ ಎಣಿಸುತ್ತಿದ್ದರು! ಇದನ್ನು ಮರೆಯಲ್ಲಿ ನಿಂತು ಕೇಳುತ್ತಲಿದ್ದ ವ್ಯಕ್ತಿಗಳಿಬ್ಬರೂ ಹಲ್ಲು ಕಡಿದರು. ಈ ಸ್ಥಳಕ್ಕೆ ಸಮಯೋಚಿತವಾಗಿ ಬಂದು ಸೇರಿದ್ದಕ್ಕೆ ಅವಶ್ಯ ಮಾಹಿತಿ ದೊರೆತಂತಾಯಿತೆಂದು ಅವರು ಹಿಗ್ಗಿದರು. ಅವರಿಗೀಗ ರಾಜ್ಯ ರಕ್ಷಣೆ ಹಾಗೂ ಮಹಾರಾಣಿಯ ಶೋಧ ಎರಡು ಕೆಲಸಗಳು ಪ್ರಮುಖವಾಗಿದ್ದುದರಿಂದ ಕೂಡಲೇ ಹಿಂತಿರುಗಿ ನಗರಕ್ಕೆ ಬರುವದೆಂದು ಯೋಚಿಸಿದರು.

ದೇಶ ರಕ್ಷಣೆಗೆ ಅವರಂಜುವಂತಿಲ್ಲ. ತಮ್ಮ ರಾಜ್ಯದ ಜನತೆ ಹಾಗೂ ಸೈನ್ಯ ಸ್ವರಕ್ಷಣೆಯನ್ನು ಯಾವ ವೇಳೆಯಲ್ಲಿಯೇ ಮಾಡಲು ಸಮರ್ಥವೆಂದವರರಿತಿದ್ದರು. ಮುಖ್ಯವಾಗಿ ಪ್ರಸೇನ ರಾಜ ವೀಣಾದೇವಿಗಾಗಿ ಹಂಬಲಿಸಿದ ಅವಳನ್ನು ಮೊದಲು ವೈರಿಗಳಿಂದ ಬಿಡಿಸಿ ತರುವದೆಂದು ಯೋಚಿಸಿದ. ಅವರಿಗೆ ಆ ಸುರಂಗ ದ್ವಾರದಲ್ಲೇನೊ ಮಹತ್ವವಿದೆ. ಅಲ್ಲಿ ತಿರುಗೊಮ್ಮೆ ಶೋಧಿಸಬೇಕೆಂದು ಯೋಚನೆ ಬಂದಿತು. ಇಬ್ಬರೂ ಅಲ್ಲಿಗೆ ತೆರಳಿದರು.

ಇತ್ತ ಗಡ್ಡದ ವೇಷದಾರಿ ಮುದುಕನನ್ನು ಸೆರೆ ಹಿಡಿದು ಕೊಂಡೊಯ್ದು ಪ್ರಸೇನನ ಸಿಪಾಯಿಗಳು ಅದೇ ಸುರಂಗದಿಂದ ರಾಜ್ಯಕ್ಕೆ ಹಿಂತಿರುಗಿ ಹೋಗಲು ಹವಣಿಸಿದರು. ಮಧ್ಯ ಸುರಂಗವನ್ನು ಸಮೀಪಿಸುತ್ತಲೆ ಪಕ್ಕದಲ್ಲಿ "ಧಡಲ್" ಎಂಬ ಸಪ್ಪಳವಾಯಿತು! ಅತ್ತಿತ್ತ ನೋಡುವಷ್ಟರಲ್ಲಿ ಒಂದು ತರದ ನಿಶಬ್ದವಾಯುವು ಸುತ್ತೆಲ್ಲಾ ಪರಡಿತು! ಕೈಸೆರೆಯಾಗಿದ್ದ ಮುದಿವ್ಯಕ್ತಿ ಮಾಯವಾಗಿದ್ದನಲ್ಲದೆ ಕೆಲನಿಮಿಷ ಸಿಪಾಯಿಗಳಿಗೆ ಹಾದಿಯೇ ತೋರಲಿಲ್ಲ!

ನೋಡುನೋಡುತ್ತಿದಂತೆ ಮುಂದಿನ ದ್ವಾರವು ಬಂದಾಯಿತು! 'ಕಿರ್‍ರ್‍ರ್' ಎಂಬ ಸಪ್ಪಳದೊಂದಿಗೆ ಬಲ ಪಾರ್ಶ್ವದಲ್ಲಿ ಇನ್ನೊಂದು ದ್ವಾರವುಂಟಾಯಿತು. ಅಲ್ಲಿಂದ ಮುಂದುವರಿದಾಗ ಸೈನಿಕರೆಲ್ಲ ಒಂದು ಕೋಣೆಯಲ್ಲಿ ಕೈದಾದರು! ಅಲ್ಲಿಂದ ಹೊರ ಬರುವ ಯೋಚನೆಯನ್ನು ಮಾಡಲಾರದೆ ಅವರೆಲ್ಲ ಚಡಪಡಿಸಿದರು. ಯಾಕೆಂದರೆ ಅವರ ಹಿಂದೆಯೇ ಬಾಗಿಲು ಬಂದಾಯಿತು! ಅನ್ನ ಗತ ಪ್ರಾಣರಾಗಿ ಅವರು ಚಿಂತಿಸತೊಡಗಿದರು. ದಿನವೆರಡರಲ್ಲಿ ಅವರು ಅನ್ನ ನೀರಿಲ್ಲದೆ ಪ್ರಾಣಬಿಡಬೇಕು.

ಮರುದಿನ ಹಗಲು ಹೊತ್ತು ನಾಲ್ಕು ಹೊತ್ತು ಮೂರೇರಿದೆ. ಅದೇ ಸುರಂಗವನ್ನು ಗರ್ವಾಗಿ ಇಬ್ಬರು ವ್ಯಕ್ತಿಗಳು ಛದ್ಮವೇಶಿಗಳಾಗಿ ಒಳಹೊಕ್ಕರು. ಒಬ್ಬ ಹಳ್ಳಿಯ ತರುಣ ಇನ್ನೊಬ್ಬ ವೃದ್ಧ ವ್ಯಾಪಾರಸ್ಥನಂತೆ ತೋರುತ್ತಿದ್ದ! ಅವರೂ ಮಧ್ಯ ಸುರಂಗಕ್ಕೆ ಬರುವಷ್ಟರಲ್ಲಿ ಸಿಪಾಯಿಗಳಿಗಾದಂತೆಯೇ ಮುಂದಿನ ದ್ವಾರ ಬಂದಾಯಿತು ಇದನ್ನು ಮೊದಲೇ ಊಹಿಸಿದ್ದ ಮುಂದಿನ ವ್ಯಾಪಾರಸ್ಥ ಕೂಡಲೇ ತರುಣ ಹಳ್ಳಿಗನ ಕೈಹಿಡಿದೆಳೆದು ಹಿಂದೆ ಸರಿದ! ಅವರು ಹಿಂದೆ ಸರಿಯುವಷ್ಟರಲ್ಲಿ ಯಾರೋ ಅವರನ್ನು ಮುಂದೆ ನೂಕಲು ಹವಣಿಸಿದಂತಾಯಿತು. ಕೂಡಲೇ ಇಬ್ಬರೂ ಆ ವ್ಯಕ್ತಿಯನ್ನು ಮುಗಿಸಿ ಆವನನ್ನು ಹಿಡಿದೆಳೆದುಕೊಂಡು ಮುಂದಕ್ಕೆ ಹೋದರು. ಈಗ ವಿಷವಾಯುವಿದ್ದಿಲ್ಲ!-ಆದರೆ ಮುಂದಕ್ಕೆ ದಾರಿಯಿದ್ದಿಲ್ಲ-ಅತ್ತಿತ್ತ ನೋಡಿ- ಅಂದಾಜಿನಿಂದ ಅದೇನೋ ಕೈಗೆಸಿಕ್ಕಿದ ವಸ್ತುವನ್ನು ಬಲವಾಗಿ ಅದುಮಿದೊಡನೆ- ಕಿರ್‍ರ್. ಎಂಬ ಶಬ್ದ-ದೊಂದಿಗೆ ಬಲಪಾರ್ಶ್ವದ ಬಾಗಿಲು ತೆರೆಯಿತು. - ಮುಂದೆಹೋಗಿ ನೋಡಲು ಬೆಳಕುಕಾಣಿಸಿತ !- ನೋಡುತ್ತಿದ್ದಂತೆ-ಅವರು ಹಿಡಿದು ಎಳೆಯುತ್ತಿದ್ದ ವ್ಯಕ್ತಿ—ಕೈಕೊಸರಿಕೊಂಡಿದ್ದು ಇಬ್ಬರನ್ನೂ ಬಲವಾಗಿ ಮುಂದೆ ನೂಕಿತು ಇಬ್ಬರೂ ಮುಂದಿರುವ ಕೋಣೆಯಲ್ಲಿ ತತ್ತರಿಸಿ ಬಿದ್ದು ಹಿಂತಿರುಗುವಷ್ಟರಲ್ಲಿ ಆ ವ್ಯಕ್ತಿ ಮಾಯವಾಗಿತ್ತಲ್ಲದೆ—ಹಿಂದಿನ ದ್ವಾರವು "ಧಡಲ್" ಎಂಬ ಶಬ್ದದಿಂದ ಮುಚ್ಚಿಕೊಂಡಿತು. ಅವರಿಬ್ಬರೂ ಅಲ್ಲಿ ಏಳುವಷ್ಟರಲ್ಲಿ ಹತ್ತು ಜನ ಸಶಸ್ತ್ರ ಸೈನಿಕರು ಅವರ ಮೇಲೆ ಬಿದ್ದರು. ಅವರೆಲ್ಲರೂ ಕಳಿಂಗ ದೇಶದ ಸೈನಿಕರೆಂದು ಅವರ ಪೋಷಾಕುಗಳಿಂದ ತಿಳಿಯುತ್ತಿತ್ತು! ಯುದ್ಧ ನಿಪುಣರಾದ ಅವರು ಈ ವೇಷದಾರಿಗಳನ್ನು ಹಿಡಿಯಲು ಬಂದಾಗ....ಅದೆ ಈದೆಯ ಲ್ಲೆಲ್ಲಾದರೂ ಜನರು ಬರಲು ಯಾ ದಾರಿಗಳು ದಾರಿಯಿದೆಯೇ ಎಂದು ತಿಳಿಯೆಂದು ವೃದ್ಧ ವೇಷಧಾರಿಯು ತರುಣ ವ್ಯಕ್ತಿಯೊಡನೆ — ಹೇಳಿ ಸಂಜ್ಞೆಮಾಡಿ ತಾನು ಆ ಜನರೊಡನೆ ಯುದ್ಧಕ್ಕಣಿಯಾದ!—ನೋಡು ನೋಡುವಂತೆ-ಅವರಲ್ಲಿ ಹಲವರು ಕೆಳಗುರುಳಿದರು. ದೂರದಲ್ಲಿ ಒಬ್ಬ ಸೈನಿಕ ಮಾತ್ರ ಇದನ್ನೆಲ್ಲ ನೋಡುತ್ತಲಿದ್ದನೇ ಹೊರತು ಯುದ್ಧಗೈಯಲು ಮುಂಬರಲಿಲ್ಲ!-ಯುದ್ಧರಂಗದಲ್ಲಿ ಇದ್ದಕ್ಕಿದ್ದಂತೆ ಅದೊಂದು ಸಪ್ಪಳವಾಯಿತು. ದಕ್ಷಿಣ ಭಾಗದಲ್ಲಿ ಕಲ್ಲೊಂದು ಉರುಳಿತು. ಅಲ್ಲಿಂದ ಬಂದ ವ್ಯಕ್ತಿ ಕೂಡಲೇ ಖಡ್ಗ ಹಿರಿದು ನಿಂತ! ಅವನು ವೃದ್ಧ ವ್ಯಾಪಾರಿಯನ್ನು ನೋಡಿ ಮೂದಲಿಸಿ ಪ್ರಸೇನ, ನಿನ್ನ ಪ್ರೇಮದಾಟವು ಮುಗಿಯಿತೆಂದು ತಿಳಿ – ಈ ವೇಷ ಭೂಷಣಗಳಿಂದ ನಮ್ಮನ್ನು ಮಂಕು ಮಾಡಲಾರೆ' 'ಎಂದವನೇ ಖಡ್ಗವನ್ನು ಹಿರಿದ!— ಅದೇ ದಾರಿಯಲ್ಲಿ ಆ ಸೈನಿಕ ನಿಂತು ಇವರಿಬ್ಬರ ಯುದ್ಧವನ್ನು ಕುತೂಹಲದಿಂದ ನೋಡಿದ! ಪ್ರಸೇನನೀಗ ತನ್ನ ಹೊರ ವೇಷವನ್ನು ಕಳಚಿಯೇ ಯುದ್ಧ ಮಾಡತೊಡಗಿದ. ಕತ್ತಿಗೆ ಕತ್ತಿ ಬಾಕಿಗೆ ಬಾಕಿನಿಂದ ಯುದ್ಧ ನಡೆಯಿತು! ನಿಮಿಷಾರ್ಧದಲ್ಲಿ ಆಕ್ರಮಣಕಾರಿಯನ್ನು ಖಡ್ಗ ರಹಿತನನ್ನಾಗಿ ಮಾಡಿದ ಪ್ರಸೇನನ—"ಮರುಳು ಭಿಕಾರಿ, ನಿನಗೆ ಯುದ್ಧ ಮಾಡುವ ಹುಚ್ಚೆ? ರಕ್ತಪಾತವಾಗಬಾರದೆಂದು ನಾನು ನಿನಗೆ ಅಂಗದೇಶದ ಅನುಭೋಗವನ್ನಿತ್ತಿದ್ದುದಕ್ಕೆ ನನ್ನ ವಿರುದ್ಧ ನಿಂತೆಯಾ. ಇಗೋ ಕತ್ತಿ ಯುದ್ಧ ಮಾಡು" ಎಂದು ಅಲ್ಲಿಯೇ ಬಿದ್ದ ಸಿಪಾಯಿಯೊಬ್ಬನ ಕತ್ತಿಯನ್ನು ಅವನಿಗಿತ್ತು — ಯುದ್ಧವನ್ನು ಮುಂದುವರಿಸಿದ! ಕ್ಷಣಾರ್ಧದಲ್ಲಿ ಬಸವಳಿದ ಆ ಅಂಗದೇಶದ ರಾಜ ಪ್ರಸೇನನ ಕತ್ತಿಗೆ ತುತ್ತಾದ! ಆ ಪೂರ್ವವೇ ಅಡಗಿದ್ದ ಮೂಲೆಯಲ್ಲಿ ನಿಂತ ಸೈನಿಕ—ಆದರೆ ಅದನ್ನೇ ನೋಡುತ್ತ ನಿಂತ ತರುಣ ಹಳ್ಳಿಗ ವೇಷಧಾರಿ ಅವನನ್ನು ಹಿಂಬಾಲಿಸದೆ ಬಿಡಲಿಲ್ಲ!

ಆ ಸೈನಿಕ ಪಕ್ಕದ ಇನ್ನೊಂದು ಸುರಂಗದಿಂದ ಕ್ಷಿಪ್ರವಾಗಿ ಹೊರಟ!—ಸದ್ದಿಲ್ಲದೆ ತರುಣ ಹಳ್ಳಿಗನೂ ಹೊಂಟ. ಆವನು ಮುನ್ನುಗ್ಗುವ ಪೂರ್ವ ಪ್ರಸೇನನೂ ಸಹ ಅವರನ್ನು ಹಿಂಬಾಲಿಸಿದ. ಮಧ್ಯದಲ್ಲಿ ಬಂದು ಮೋರೆಯನ್ನು ತಿರುವಿದೊಡನೆ ಮುಂದಿನ ಬಾಗಿಲು ತೆರೆಯಿತು. ಅಲ್ಲಿ ನೋಡುವುದೇನು:— ದೊಡ್ಡದೊಂದು ಗವಿ!—ಮಧ್ಯದಲ್ಲಿ ಮದ್ಯವನ್ನು ಸೇವಿಸಿ ಮತ್ತರಾಗಿ ಕುಳಿತ ಕಳಿಂಗ ದೇಶದ ರಾಜ ಹಾಗೂ ವಂಗದೇಶದ ರಾಜ!!-ಅಲ್ಲದೆ ಹತ್ತು ಜನ ಸಶಸ್ತ್ರ ಸೈನಿಕರು!!

ಪ್ರಸೇನನೂ ತರುಣ ವೇಷಧಾರಿಯಾದ ಅವನ ಸೇನಾಪತಿಯೂ ಅಲ್ಲಿಯೇ ಒಂದು ಕಂಬದ ಬಳಿ ಅಡಗಿದ್ದರು! ಆ ವೃದ್ಧ ಸೈನಿಕನು ಮೊದಲು ಮುಂದಕ್ಕೆ ಹೋದವನೇ ಕಳಿಂಗ ದೇಶದ ವಸಂತ ರಾಜನಿಗೆ ನಮಸ್ಕರಿಸಿ "ಅಂಗ ದೇಶದ ರಾಜನು ಮೃತ ಹೊಂದಿದನಷ್ಟೆ ಅಲ್ಲದೆ ನಮ್ಮ ಸೈನಿಕರೆಲ್ಲ ಕೆಳಗುರುಳಿದರು"-ಎಂದ ಕೂಡಲೇ — ಕಳಿಂಗ ಹಾಗೂ ವಂಗ ರಾಜರಿಬ್ಬರೂ ಆಶ್ಚರ್ಯಪಟ್ಟರಲ್ಲದೆ—"ನಾವಿಬ್ಬರೂ ಈಗಲೇ ಹೋಗ ಬೇಕು. ಆವನು ವೇಷಧಾರಿ ಪ್ರಸೇನನೇ ಇರಬೇಕು–ಮದಾಂಧನಿಗೆ ಇಂದೇ ಶಾಸ್ತಿ ಮಾಡಬೇಕು"—ಎಂದು ನುಡಿಯುತ್ತಿರುವಷ್ಟರಲ್ಲಿಯೇ ಅದೆ 'ಧಡಲ್' ಎಂದು ಸಪ್ಪಳವಾಗಿ ಕಲ್ಲೊಂದು ಉರುಳಿತು! ಪ್ರಸೇನ ಹಾಗೂ ಅವನ ಸೇನಾಪತಿ ಇಬ್ಬರೂ ಹೊರಬಂದು—"ಇದೋ ಇಲ್ಲಿಯೇ ಇದ್ದೇನೆ...ನಿಮ್ಮ ಕೈ ಬಲವೋ ನಮ್ಮ ಕೈಯೋ ನೋಡೋಣ"—ಎನ್ನುತ್ತಲೆ ವೇಷ ಮರೆಸಿ ನಿಂತ ಕಾಳಿ ಗುಡಿಯ ಪೂಜಾರಿಯು ಅವನ ಕಣ್ಣಿಗೆ ಬಿದ್ದ— "ದುಷ್ಟ ಬ್ರಾಹ್ಮಣ!—'ನಿನ್ನ ಅಪವಿತ್ರ ಜೀವ ಇನ್ನಿರದಿರಲಿ' ಎಂದವನೇ ಬಾಕೊಂದನ್ನು ಅವನಿಗೆಸೆದ! ಬ್ರಾಹ್ಮಣ ಚೀರಿ ಕೆಳಗೆ ಬಿದ್ದವನೇ—"ಪ್ರಭು ನನ್ನನ್ನು ಕ್ಷಮಿಸಿರಿ. ರಾಣಿಯವರು ಎಲ್ಲಿಯೋ ಬಂಧಿಸಲ್ಪಟ್ಟಿದ್ದಾರೆ. ಅವರನ್ನುಳಿಸಿರಿ"—ಎನ್ನುತ್ತಾ ಪ್ರಾಣ ಬಿಟ್ಟ!—

ವಸಂತರಾಜ ಸೈನಿಕರಿಗೆ "ಅವರಿಬ್ಬರನ್ನೂ ಹಿಡಿಯಿರಿ" ಎನ್ನುತ್ತಲೂ ಪ್ರಸೇನನೂ ಅವನ ಸೇನಾಪತಿಯೂ ತಮ್ಮ ಖಡ್ಗವನ್ನು ಹಿರಿದು ಎದುರಾದರು. ಅತ್ತ ವಿಕರ್ಣ ರಾಜನೂ ವಸಂತ ರಾಜನೂ ತಮ್ಮ ಖಡ್ಗವನ್ನು ಹಿಡಿದು ಏರಿ ಬಂದರು — ಖಾಡಾ ಖಾಡಿ ಯುದ್ಧವಾಯಿತು. ನೋಡು ನೋಡುತ್ತಿದ್ದಂತೆ—ಐದು ಜನ ಯೋಧರು ಕೆಳಗುರುಳಿ ಪ್ರಾಣ ಬಿಟ್ಟರಲ್ಲದೆ ಸೇನಾಪತಿಯು ವಂಗ ದೇಶದ ರಾಜನ ಮೇಲೇರಿ ಹೋದ! ಕಳಿಂಗ ರಾಜನೂ ಪ್ರಸೇನನೂ ಯುದ್ಧ ಮಾಡುತ್ತಿದ್ದಾಗಲೇ— ಅತ್ತ ಕಡೆಯ ಇನ್ನೊಂದು ಬಾಗಿಲಿನತ್ತ ಸರಿದ ಆ ಮುದಿ ಸೈನಿಕ ಅದೇನೊ ಕಾಲಿನಲ್ಲಿಯೇ ತಿರುಗಿಸಿ — ಇನ್ನೊಂದು ದ್ವಾರ ಕಲ್ಪಿಸಿದ! ಇದನ್ನು ನೋಡುವದರಲ್ಲಿ ಮಗ್ನನಾದ ಪ್ರಸೇನನ ಬಲಗೈಗೆ ವಸಂತ ರಾಜನ ಕತ್ತಿ ತಗಲಿತು! ಅದನ್ನು ಲಕ್ಷಿಸದೆ ಆವನು ಆ ಕೋಣೆಯತ್ತ ಧಾವಿಸಿದ! ವಸಂತ ರಾಜನೂ ಆವನನ್ನು ಹಿಂಬಾಲಿಸಿ ಅತ್ತ ಹೊರಟ—ಪ್ರಸೇನನು ಅಲ್ಲಿ ನೋಡಿದುದೇನು! ಕಾರಾಗೃಹದಲ್ಲಿ ನಿಂತಿರುವ ಜೀವನ ಪ್ರೇಮಿಕೆ ವೀಣಾ! ವೀಣಾ ಎಂದವನೇ ಅಲ್ಲಿಗೆ ಹಾರಿದ! ಹಿಂದಿನಿಂದ ಹಾರಿ ಬಂದ ವಸಂತರಾಜ ಅವನ ಬೆನ್ನಲ್ಲಿ ಬಾಕನ್ನೊತ್ತಿದ! ಪ್ರೇಮಿಕೆಯ ಮುಂದೆಯೇ ಪ್ರಸೇನನು ಅವಳನ್ನು ನೋಡುತ್ತ—ಪ್ರಾಣ ಬಿಡುವಾಗ—"ವೀಣಾ—ಬಂದೆ—ವೀ....ಣಾ..." ಎನ್ನುತ್ತಲೇ ಅವನ ಪ್ರಾಣಪಕ್ಷಿ ಹಾರಿ ಹೋಯಿತು. ವೀಣಾ—ಕಿರ್‍ರನೆ ಕೂಗಿ ಕೆಳಗೆ ಬಿದ್ದಳು! ಈ ದೃಶ್ಯವನ್ನು ಕಂಡ ವೃದ್ಧ ಸೈನಿಕನೊಮ್ಮೆ ತತ್ತರಿಸಿದ! ಆದರೆ ಮಗಳ ಚೀತ್ಕಾರ ವಸಂತ ರಾಜನ ಕಲ್ಲು ಹೃದಯಕ್ಕೆ ಕೇಳಿಸಲಿಲ್ಲ! ಅವನು ಹಿಂತಿರುಗಿ ವಿಕರ್ಣ ರಾಜನೊಡನೆ ಸೇರಿ ಸೇನಾಪತಿಯೊಡನೆ ಹೋರಾಡತೊಡಗಿದ! ಸೇನಾಪತಿ ತನ್ನ ಶಕ್ತಿ ಮೀರಿ ಹೋರಾಡಿ ಅವರ ಬಂದಿಯಾದ!

ಇತ್ತ ಕಾಂಭೋಜವು ಅರಾಜಕವಾಗಿ ವಂಗ ದೇಶದ ವಿಕರ್ಣನ ದಬ್ಬಾಳಿಕೆಗೊಳಗಾಯಿತು. ವಿಕರ್ಣ ರಾಜನನ್ನು ಪ್ರಜೆಗಳು ದ್ವೇಷಿಸ ತೊಡಗಿದರು. ಊರೆಲ್ಲ ಕರಕಂದಾಯದಿಂದ ಸುಲಿಗೆ ಮಾಡಲ್ಪಟ್ಟಿತು— ಓ! ಹಾ! ಕಾರಣದಿಂದ ತಂದೆ

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

REGD. No. B. G. 176
LICENCE No. 31
Licensed to Post without Prepayment

ಊರೆಲ್ಲ ಕಳವು ಸುಲಿಗೆ—ರುದ್ರ ಭೂಮಿಯಾಯಿತು.

ಕಳಿಂಗ ದೇಶದ ರಾಜ ಸೇಡು ತೀರಿಸಿಕೊಂಡೆನೆಂದು ಸಂತೋಷದಿಂದ ತಿಂಗಳು ಕಾಲ ಕಳೆಯುವುದರಲ್ಲಿಯೇ ಒಂದು ದಿನ ಸಂತೋಷಾಹ್ವಾನವನ್ನಿತ್ತ ವಿಕರ್ಣ ರಾಜನು-ಭೋಜನದಲ್ಲಿ ವಿಷವನ್ನು ಬೆರಸಿ ವಸಂತರಾಜನ ಇಹಲೋಕ ಯಾತ್ರೆ ಮುಗಿಸಿದ! ಇಂತಾಗಿ ವಿಕರ್ಣ ರಾಜನಿಗೆ-ಅಂಗ ವಂಗ-ಕಳಿಂಗ ಕಾಭೋಜ ನಾಲ್ಕು ರಾಜ್ಯಗಳೂ ದೊರೆತವು!

ತನ್ಮಧ್ಯದಲ್ಲಿ ಕಾಳಿಕಾ ಗುಡಿಯ ಸುರಂಗದ ಗವಿಯಲ್ಲಿ ಕೈದಾಗಿಡಲ್ಪಟ್ಟ ವೀಣಾದೇವಿ - ಪ್ರಸೇನನ್ನು ಹಂಬಲಿಸಿ-ಅವನ ಮರಣಕ್ಕೆ ತಾನೇ ಕಾರಣಳಾದೆನೆಂದು ಕೊರಗಿದಳು. ತನ್ನ ತಂದೆಯ ಮರಣ ವಾರ್ತೆಯನ್ನು ತನಗೆ ಊಟ ತರುವ ದಾಸಿಯಿಂದ ಕೇಳಿ—ಅಂದವಳು ಊಟವನ್ನೂ ಮಾಡಲಿಲ್ಲ!. ಪ್ರಾಯಶಃ ಅವಳು ಇಷ್ಟರಲ್ಲಿ ಪ್ರಾಣ ಕಳಕೊಳ್ಳುತ್ತಿದ್ದಳೋ ಏನೋ! ಆದರೆ ಅವಳ ಶರೀರದಲ್ಲಿ ದುರ್ಭಾಗ್ಯದ ಪಿಂಡವೊಂದು ಬೆಳೆದಿತ್ತು!—ಪೂರ್ಣ ಗರ್ಭಿಣಿಯಾದ ಅವಳು ಇಂದೋ ನಾಳೆಯೋ ಎನ್ನುವ ರೀತಿಯಲ್ಲಿದ್ದಳು. ಇವನ್ನೆಲ್ಲವನ್ನೂ ನೋಡುತ್ತಲಿದ್ದ ಆ ವೃದ್ಧ ಸೈನಿಕ!—ಅವನೊಬ್ಬ ರಾಜಭಕ್ತ! ಕಳಿಂಗ ರಾಜನ ಮರಣದಿಂದ ವೀಣಾದೇವಿಗೆ ಶೋಕವಾದಂತೆ ಅವನಿಗೂ ದಿಗ್ಭ್ರಮೆಯಾಯಿತು! ವೀಣಾದೇವಿಯನ್ನು ಕಂಡು ಅವನು "ತಾಯೀ, ಎಲ್ಲ ಸರ್ವನಾಶವಾಯಿತು! ಕಳಿಂಗ ರಾಜರೂ ವಿಷಾನ್ನದಿಂದ ಕೊಲ್ಲಲ್ಪಟ್ಟರು"—ಎಂದು ಮರುಗಿದನಲ್ಲದೆ- ಮುಂದಂದು "ಮಹಾರಾಜರು ಪ್ರಸೇನನ ಮಹತ್ತಿಕೆಯನ್ನರಿಯದೆ— ಮೂರ್ಖರಂತಾದರು- ಅಲ್ಲದೆ ಆ ದುಷ್ಟ ವಿಕರ್ಣನ ಮೋಸಕ್ಕೆ ಬಲಿಹೋದರು"— ಎನ್ನುತ್ತಿರುವಾಗಲೇ ಆ ಕಡೆಯಿಂದ ವಿಕರ್ಣನು ಕಠಾರಿಯನ್ನು ಹಿಡಿದು—ಹಲ್ಲು ಕಡಿಯುತ್ತಾ—"ಮುದಿಗೂಬೆಯೇನೆಂದು ಬೊಗಳುತ್ತಿರುವೆ. ನಿನ್ನನ್ನೂ ಅವನೊಡನೆಯೇ ಕಳಿಸುವೆನಲ್ಲದೆ- ಪ್ರಸೇನನ ವಂಶವನ್ನೇ ನಾಶ ಮಾಡದ ವಿನಹ ನನಗಿಲ್ಲಿ ಶಾಂತಿ."ಎಂದು ಗುಡುಗುಡಿಸಿ ಮುಂದುವರಿದ!—ವೃದ್ಧ ಕಾವಲುಗಾರನೂ ಇದಕ್ಕೆ ಸಿದ್ಧನಾಗಿಯೇ ಇದ್ದ. ಅಲ್ಲದೆ-ಅವನೆಂದ "ನನ್ನೀ ಪ್ರಾಣವಿರುವ ತನಕ ವೀಣಾದೇವಿಯ ಕೂದಲನ್ನೂ ನೀನು ಮುಟ್ಟಲಾರೆಯೆನ್ನುತ್ತಾ—ಇಬ್ಬರೂ ಹೊಯ್ಲುಬಿದ್ದು ಕಾದಾಡಿದರು! ಇದನ್ನು ಕಂಡ ವೀಣಾದೇವಿ ಕಣ್ಕತ್ತಲೆ ಬಂದು ಅಲ್ಲಿಯೇ ಮೂರ್ಛೆಗೊಂಡಳು.

ವೃದ್ಧ ಸೈನಿಕನ ಯುದ್ಧ ಕೌಶಲ್ಯ ತಾನು ತಿಳಿದಷ್ಟು ಕಡಿಮೆಯಲ್ಲವೆಂದರಿತ ವಿಕರ್ಣನು ಹಿಂದೆ ಓಡಲು ಹವಣಿಸಿದ! ಇವನನ್ನು ಈಗ ಬಿಟ್ಟರೆ ಅನರ್ಥವಾದೀತೆಂದು ವೃದ್ಧ ಕಾವಲುಗಾರ ಅವನನ್ನು ಅಡ್ಡಕಟ್ಟಿ ತನ್ನ ಭದ್ರವಾದ ಮುಷ್ಟಿಯಿಂದ ತಿವಿದು ಅವನನ್ನು ಘಾಸಿಮಾಡಿದ! ಕೆರಳಿದ ವಿಕರ್ಣ ತಿರುಗಿ ಅವನನ್ನು ಮುದಲಿಸಿ—ಕತ್ತಿ ಬೀಸಿದ ಕತ್ತಿಯು ಸೈನಿಕನಿಗೆ ತಾಗುವ ಬದಲು ಅವನ ಕತ್ತಿಯೊಡನೆ ಸಿಕ್ಕಿ—ಇದೀಗ ಮುಕ್ತ ಹಸ್ತನಾದ ವಿಕರ್ಣ—ತನ್ನ ಚಾಕುವನ್ನು ಅವನೆಡೆಗೆ ಬೀಸಿದ. ಆದರದು ತನ್ನ ಕರ್ತವ್ಯ ಮೊದಲು ಹಿಂಜರಿದುದನ್ನು ಕಂಡು ಮೊದಲು ವೀಣಾದೇವಿಯನ್ನು ಮುಗಿಸುವುದೆಂದು ಅತ್ತ ಓಡಿದ— ಆದರೆ ಅಷ್ಟರಲ್ಲಿ ವೃದ್ಧ ಸೈನಿಕನ ಚಾಕುವು ಅವನ ಬೆನ್ನಿನಲ್ಲಿ ಹೊಕ್ಕು ಹೃದಯವನ್ನು ಹಿಂಡಿತ್ತು!—

ಈ ರುದ್ರ ಭೂಮಿಯಲ್ಲಿ ಇವರಿರುವಾಗ ಅತ್ತ— ವೀಣಾದೇವಿಯವರು— ಹೆರಿಗೆ ಬೇನೆಯಿಂದ ತಳಮಳಿಸಿದರು—ವೃದ್ಧ ಸೈನಿಕನುಳಿದನೆಂದವಳು ಕಷ್ಟದ ಸಂತಸ ಕಂಡಳು— ವೃದ್ಧ ಸೈನಿಕ ತಡಮಾಡದೆ—ಸುರಂಗದ ಇನ್ನೊಂದು ದಾರಿಯಿಂದ ಹೊರಟು ಕೆಲದಾಸಿಯರನ್ನೂ ವೈದ್ಯರನ್ನೂ ಕರೆತಂದ!—ವೀಣಾದೇವಿ ಗಂಡುಮಗುವನ್ನು ಹೆತ್ತಳು.... ಆದರೆ. . ಮಗು ಜನಿಸುವಾಗಲೇ ತಾಯನ್ನು ಕಳಕೊಂಡಿತು !—ವೃದ್ಧಸೈನಿಕನಿಗೆ- ಆ ರುದ್ರಭೂಮಿಯ ಎಲ್ಲ ಘಟನೆಗಳಿಗಿಂತಲೂ ಇದು ಇನ್ನೂ ದಾರುಣವಾಗಿ ಕಂಡಿತು!—ಅವನು ತನ್ನ ಆದ್ಯ-ಕರ್ತವ್ಯವೆಂದು ಆ ಮಗುವನ್ನು ಜಾಗರೂಕತೆಯಿಂದ ಎತ್ತಿಕೊಂಡು ಯಾರಿಗೂ ಅರಿಯದಂತೆ ಕಾಂಬೋಜ ದೇಶಕ್ಕೆ ಇನ್ನೊಂದು ದ್ವಾರದಿಂದ ಹೊರಟ!— ಅವನು ಹೋಗುವಾಗ ಇಡೀ ಸುರಂಗವನ್ನೇ— ಮದ್ದು ಹಾಕಿ-ಸುಟ್ಟು ತೆರಳಿದ!—ಇಂತಹ ರುದ್ರ ಕಾಳಗ- ಇನ್ನಲ್ಲಿ ಆಗದಿರಲೆಂಬುದೇ ಅವನ ಮನದಿಚ್ಛೆಯಾಗಿತ್ತು!

ಮುಂದಿನ ಒಂದು ವಾರದಲ್ಲೇ ಕಾಂಭೋಜ ಜನತೆ ರಾಜಕುಮಾರನನ್ನು ರಾಜನಾಗಿ ಅಂಗೀಕರಿಸಿ— ಮಂತ್ರಿಮಂಡಳಿ-ರಾಜ್ಯವನ್ನು ಅವನ ಹೆಸರಿನಲ್ಲಿ ನಡೆಯಿಸಿತು- ಅನಂತರ—ಕಳಿಂಗದ ಜನತೆಯನ್ನು ಹುರಿದುಂಬಿಸಿ— ಅದೇ ವೃದ್ಧ ಸೈನಿಕನು ರಾಜಕುಮಾರನ— ಹೆಸರಿನಲ್ಲಿ ರಾಜ್ಯದಾಡಳಿತ ನಡೆಸಲು ಜನತೆಯನ್ನು ಎಚ್ಚರಿಸಿದ!- ತೊಟ್ಟಿಲ ಮಗುವಿನ ಹೆಸರಿನಲ್ಲಿ ಕಳಿಂಗ ಕಾಂಬೋಜವೆರಡು ದೇಶಗಳೂ ಒಂದಾದುವು.

—— ——

ನಮ್ಮ-ನಮ್ಮವರು

(೧ನೇ ಪುಟದಿಂದ)

ಗಳನ್ನು ಮರೆಯಲು ಸಾಧ್ಯವೇ ಇಲ್ಲ. ಲೆಕ್ಚರರಾಗಿ, ನ್ಯಾಯಾಧೀಶರಾಗಿ, ಪ್ರಿನ್ಸಿಪಾಲರಾಗಿ ಜನಪ್ರಿಯರೆನಿಸಿದ ಶ್ರೀ ರೈಗಳದು ಬಹುಮುಖ ಪ್ರತಿಭೆ. ಅವರು ತಮ್ಮ ಜೀವನದ ವಿವಿಧ ಕಾರ್ಯರಂಗಗಳಲ್ಲಿ ದುಡಿದು, ಜನಪ್ರಿಯರೆನಿಸಿದ್ದರೆ, ಅದಕ್ಕೆ ಮುಖ್ಯ ಕಾರಣ ಅವರ ಸದಾ ಮಂದಹಾಸಸ್ಮಿತವಾದ ವದನ

ಶ್ರೀಯುತ ರೈಗಳು ಮೂಲತಃ ಮಂಗಳೂರವರು. ಇದೀಗ ಉಡುಪಿಗೆ ಸಮೀಪದ ಪೆರಂಪಳ್ಳಿಯಲ್ಲಿ ಹಳ್ಳಿಯ ಪ್ರಶಾಂತ ವಾತಾವರಣದಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿದಾರೆ.ಅವರು ಬಿ.ಎ.ಎಂ.ಎಲ್ ಪದವೀಧರರು. ಪದವೀಧರರಾದ ಮೊದಲ ದಿನಗಳಲ್ಲಿ ಮದ್ರಾಸಿನ ಲಾ ಕಾಲೇಜಿನಲ್ಲಿ ಲೆಕ್ಚರರಾಗಿ ದುಡಿದರು. ಇವರ ಪ್ರತಿಭೆಯನ್ನು ಗುರುತಿಸಿದ ಮದ್ರಾಸು ಸರಕಾರ ಅವರನ್ನು ಮುನ್ಸಿಫರನ್ನಾಗಿ ನೇಮಿಸಿತು. ನಂತರ ಅವರು ಭಡ್ತಿಯನ್ನು ಪಡೆಯುತ್ತಾ ಜಿಲ್ಲಾ ಜಡ್ಜರಾಗಿ ನಿವೃತ್ತಿ ಹೊಂದಿದರು ಅವರು ಜಡ್ಜರಾಗಿ ನಮ್ಮ ಜಿಲ್ಲೆ ಮಾತ್ರವಲ್ಲ ಆಗಿನ ಮದ್ರಾಸು ಸರಕಾರದ ಹಲವಾರು ಜಿಲ್ಲೆಗಳಲ್ಲಿ ದುಡಿದು, ಜನ ಪ್ರಿಯರೆನಿಸಿದರು.

ನಿವೃತ್ತರಾದ ಬಳಿಕ ಶ್ರೀ ರೈಗಳ ಪ್ರತಿಭೆಯ ಪ್ರಯೋಜನ ಪಡೆಯುವ ಭಾಗ್ಯ ಉಡುಪಿ ಲಾ ಕಾಲೇಜಿಗೆ ಅಲ್ಲಿನ ವಿದ್ಯಾರ್ಥಿಗಳಿಗೆ ಲಭಿಸಿತು. ಎಕಾಡೆಮಿಯಿಂದ ಉಡುಪಿಯಲ್ಲಿ ಸ್ಥಾಪಿತವಾದ ಲಾ ಕಾಲೇಜಿನ ಮೊದಲ ಪ್ರಿನ್ಸಿಪಾಲರಾಗಿ ಶ್ರೀ ರೈಗಳು ದುಡಿದರು. ಹೊಸತಾಗಿ ಸ್ಥಾಪಿತವಾದ ಈ ಕಾಲೇಜಿನ ಶಿಕ್ಷಣ ಮಟ್ಟ ಅತ್ಯುಚ್ಚ ಮಟ್ಟದ್ದಾಗುವುದಕ್ಕೆ, ಈ ಕಾಲೇಜಿನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ರೇಂಕ್ ಗಳಿಸುವುದಕ್ಕೆ ಶ್ರೀ ರೈಗಳ ಉಚ್ಚ ಮಟ್ಟದ ಮಾರ್ಗದರ್ಶನವೇ ಕಾರಣ. ಅವರು ಉಡುಪಿಯ ಲಾ ಕಾಲೇಜಿಗೊಂದು ಭದ್ರವಾದ ಬುನಾದಿ ಹಾಕಿಕೊಟ್ಟರು.

ಶ್ರೀ ರೈಗಳು ನ್ಯಾಯಶಾಸ್ತ್ರ ಪಾರಂಗತರು ಮಾತ್ರವಲ್ಲ ಇತರ ಹಲವಾರು ಹವ್ಯಾಸಗಳನ್ನಿಟ್ಟುಕೊಂಡಿದ್ದರು. ಮಣಿಪಾಲದಲ್ಲಿ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಸ್ಥಾಪನೆಯಾದಾಗ ಅದರ ಮೊದಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು ಶ್ರೀ ರೈಗಳು. ಅವರು ಸಾಹಿತ್ಯ ಮತ್ತು ಕಲೆಯ ಅಭಿಮಾನಿಗಳು. ಪುಸ್ತಕಗಳೆಂದರೆ ಅವರಿಗೆ ಅಚ್ಚುಮೆಚ್ಚು. ಅವರ ಪುಸ್ತಕ ಸಂಗ್ರಹವು ಒಂದು ದೊಡ್ಡ ಲೈಬ್ರೆರಿಯಷ್ಟಾಗಿತ್ತು. ಅವರು ತಾವು ಸಂಗ್ರಹಿಸಿದ ಉತ್ತಮ ಪುಸ್ತಕಗಳನ್ನೆಲ್ಲ ಎಕೆಡೆಮಿಗೆ ದಾನವಾಗಿತ್ತರು. ಅವರಿತ್ತ ಈ ದಾನವೆ, ಎಕೆಡೆಮಿಯು ಒಂದು ಲೈಬ್ರೆರಿಯನ್ನು ಆರಂಭಿಸುವಂತೆ ಪ್ರೇರಕವಾಯಿತು.

ಶ್ರೀಯುತರು ಈಗ ನಿವೃತ್ತರಾಗಿ ಹಳ್ಳಿಯ ವಾತಾವರಣದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ ಇವರ ಮಕ್ಕಳು ಕೂಡಾ ತಂದೆಯಂತೆ ಪ್ರತಿಭಾಶಾಲಿಗಳಾಗಿ ವಿವಿಧ ರಂಗಗಳಲ್ಲಿ ಉಚ್ಚ ಸ್ಥಾನಗಳಲ್ಲಿ ಕಾರ್ಯವೆಸಗುತ್ತಿದ್ದಾರೆ ನವಯುಗದ ಅಭಿಮಾನಿಗಳಾದ ಶ್ರೀ ರೈಗಳ ಸೇವೆಯನ್ನು ಜಿಲ್ಲೆಯ ಜನತೆ ಮರೆಯುವಂತಿಲ್ಲ.

ಕರಿಮೆಣಸು ಒಣಶುಂಠಿ

ಭಾರತದಲ್ಲಿ ಅಲ್ಪ ಸಂಖ್ಯಾಕರಿಗೆ ಸಮಾನ ಹಕ್ಕುಗಳಿವೆ; ಅವರೂ ಇತರ ಭಾರತೀಯ ನಾಗರೀಕರಂತೆ ಅವುಗಳನ್ನು ಭೋಗಿಸಿ ಸುಖವಾಗಿದ್ದಾರೆಂಬುದನ್ನು ಗೃಹ ಮಂತ್ರಿ ನಂದಾ ಅವರು ಪಾಕ್ ಗೃಹ ಮಂತ್ರಿಗಳಿಗೆ ಸ್ಪಷ್ಟಪಡಿಸಿದ್ದಾರೆ.

—ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕರೆಂಬವರೇ ಇರಬಾರದೆಂಬುದನ್ನು ಕಾರ್ಯರೂಪಕ್ಕೆ ತರುವರೆ ತಾನು ಪ್ರಯತ್ನಿಸುವುದಾಗಿಯೂ ಆಗ ಸಮಾನ ನಾಗರಿಕ ಹಕ್ಕುಗಳ ಪ್ರಶ್ನೆಯೇ ಏಳುವುದಿಲ್ಲವೆಂದೂ ಪಾಕ್ ಗೃಹಮಂತ್ರಿ ಪ್ರತ್ಯುತ್ತರ ನೀಡುವರೆಂಬುದು ಕುತುಕವಲ್ಲದೆ ಮತ್ತೇನು?

ೲ ೲ ೲ

ಬೊಂಬಾಯಿ ಕರ್ನಾಟಕದ ಪ್ರಾಥಮಿಕ ಶಾಲೆಗಳನ್ನು ಸರಕಾರವೇ ವಹಿಸಿಕೊಳ್ಳುವ ಬಗ್ಗೆ ಮೈಸೂರು ಸರಕಾರ ಆದೇಶ ಹೊರಡಿಸಿದೆ.

— ಮಂಗಳೂರು ಜಿಲ್ಲೆಯವರು ಮಲತಾಯಿ ಮಕ್ಕಳೆಂಬುದು ಮತ್ತೊಮ್ಮೆ ಸಿದ್ಧವಾಯಿತು.

ೲ ೲ ೲ

ನಿಜಲಿಂಗಪ್ಪನವರನ್ನು ಇಮ್ಮಡಿ ಪ್ರತಾಪಸಿಂಹಕೈರಾನರೆಂದು ಕರೆಯಲು ಸಹಾಯಕವಾದ ಇವರ ಮೇಲಿನ ಆರೋಪ ಪತ್ರವನ್ನು ಕೇಂದ್ರ ವರಿಷ್ಠರಿಗೆ ಒಪ್ಪಿಸಲಾಗಿದೆ.

—ಮಂತ್ರಿಗಳ ಮೇಲೆ ಹೊರಿಸುವ ಆರೋಪಗಳಲ್ಲಿ ನೂರಕ್ಕೆ ಎಂಬತ್ತು ಹುರುಳಿಲ್ಲದವು ಎಂಬ ಕಾಮರಾಜರ ಉದ್ಗಾರವೇ ಈಗ ಸಹಾಯಕ ವಾದೀತೆ?

ೲ ೲ ೲ

ಗೋವೆಯ ಸರಕಾರವು ವಿಶ್ವಾಸಮತವನ್ನು ವಿಧಾನ ಸಭೆಯಲ್ಲಿ ಪಡೆಯಿತು.

—ಹುಟ್ಟಿದ ಏಳು ತಿಂಗಳ ವರೆಗಾದರೂ ವಿಶ್ವಾಸವುಳಿಯಿತೆಂಬುದೇ ಸದ್ಯ ಸಂತೋಷ.

ೲ ೲ ೲ

ಆಹಾರ ಧಾನ್ಯಗಳ ಬೆಲೆಯೇರಿಕೆಯಿಂದ ಜನತೆಯ ಲಕ್ಷ್ಯವನ್ನು ಬೇರೆಡೆಗೆ ಹರಿಸಲು ಲಂಚಾವತಾರದತ್ತ ಸರಕಾರ ಬೆಟ್ಟು ಮಾಡುತ್ತಿದೆ ಎಂದರಂತೆ ಮಾಜಿ ಮುಖ್ಯ ಮಂತ್ರಿ ಬಿಜೂ ಪಟ್ನಾಯಕರು.

— ಈ ಹೇಳಿಕೆಯನ್ನು ಅವರೇ ಹಿಂದೆ ತೆಗೆದುಕೊಂಡುದರಿಂದ ಇದಕ್ಕೆ ಲಕ್ಷ್ಯ ಹರಿಸಬೇಕಾದ ಅಗತ್ಯವಿಲ್ಲ.

ೲ ೲ ೲ

ದಕ್ಷಿಣ ಆಫ್ರಿಕೆ ಮತ್ತು ಪೋರ್ತುಗಲ್‌ಗಳನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದು ಆಫ್ರಿಕೆಯ ವರಿಷ್ಠ ಸಮ್ಮೇಳನವು ಕರೆಯಿತ್ತಿತು.

—ದ. ಆಫ್ರಿಕ ಮತ್ತು ಪೋರ್ತುಗಲ್‌ಗಳ ಸ್ನೇಹಿತ ರಾಷ್ಟ್ರಗಳನ್ನೂ ಬಹಿಷ್ಕರಿಸುವ ನಿರ್ಧಾರವಾಗಿದ್ದರೆ........?

ೲ ೲ ೲ

ಮದ್ರಾಸು—ದಾರವಾಡಗಳಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮುಷ್ಕರವನ್ನು ಪ್ರಾರಂಭಿಸಿದರು.

—ವರ್ಷಾರಂಭವೇ ಹೀಗೆ ಪ್ರಾರಂಭವಾದುದು ವಿದ್ಯಾರ್ಥಿಗಳ ಶುಭ ಯೋಗವೆನ್ನಬಹುದೆ?

ೲ ೲ ೲ

Ldited, Printed & Publish d by K. H.Shetty, at the N vayuga Press, Udipi, S. India

VOL. 43 No 49 ಸಂಪುಟ ೪೩ ಸಂಚಿಕೆ ೪೯

NAVAYUGA—Nationalist Weekly ಉಡುಪಿ 6-8-1964 ಗುರುವಾರ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಡಾ| ರಾಧಾಕೃಷ್ಣನ್

ತನ್ನ ಆಧ್ಯಾತ್ಮಿಕ ಸಂದೇಶವನ್ನು ಜಗತ್ತಿನ ಮೂಲೆ ಮೂಲೆಗೂ ಪಸರಿಸುತ್ತ ಬಂದಿರುವ ಭಾರತದ ರಾಷ್ಟ್ರಾಧ್ಯಕ್ಷರಾಗಿ ಸರ್ವಪಳ್ಳಿ ರಾಧಾಕೃಷ್ಣನರು ಭಾರತದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ. ಆಧ್ಯಾತ್ಮ, ಶಿಕ್ಷಣ ಹಾಗೂ ಸಂಸ್ಕೃತಿಗಳ ಕುರಿತು ಅವರಷ್ಟು ಅಧಿಕಾರ ವಾಣಿಯಿಂದ ಮಾತನಾಡಬಲ್ಲವರು ಬಹಳ ಜನರಿಲ್ಲ. ತತ್ವಜ್ಞಾನ, ವೇದೋಪನಿಷತ್ತುಗಳ ಕುರಿತು ಅವರು ಆಳವಾದ ಅಭ್ಯಾಸ ನಡೆಸಿದ್ದಾರೆ ಶಿಕ್ಷಕರಾಗಿ ಶಿಕ್ಷಣದ ಕುರಿತು ಅಪಾರ ಅನುಭವ ಪಡೆದಿದ್ದಾರೆ. ಭಾರತವು ಸ್ವತಂತ್ರವಾದ ಮೇಲೆ ಭಾರತದ ರಾಯಭಾರಿಗಳಾಗಿ ಇವರು ಮೋಸ್ಕೊದಲ್ಲಿ ಪವಾಡವನ್ನೇ ನಡೆಸಿದರು ರಶ್ಯಾ ಹಾಗೂ ಭಾರತದ ಸಂಬಂಧ ಮಧುರವಾಗುವಲ್ಲಿ ಅವರು ಆಡಿದ ಪಾತ್ರ ಮಹತ್ವವಾದುದು. ಉಕ್ಕಿನ ಮನುಷ್ಯ ಸ್ಟಾಲಿನರನ್ನು ಭೆಟ್ಟಿ ಮಾಡುವ ಸಂದರ್ಭವೂ ಇವರಿಗೆ ಬಂದಿತ್ತು. ಭಾರತದ ಧ್ಯೇಯ ಧೋರಣೆಗಳನ್ನು ವಿದೇಶಗಳಲ್ಲಿ ತಿಳಿಯಪಡಿಸುವುದರಲ್ಲಿ, ಆಧ್ಯಾತ್ಮಿಕ ಸಂದೇಶವನ್ನು ಜಗತ್ತಿಗೆ ನೀಡುವಲ್ಲಿ ಅವರು ಅಪಾರ ಕಾರ್ಯ ಮಾಡಿರುವರು.

ಉಪರಾಷ್ಟ್ರಪತಿಯಾಗಿ ೧೯೬೨ರ ಚುನಾವಣೆಯ ಬಳಿಕ ಆಯ್ಕೆಗೊಂಡ ಸರ್ವಪಳ್ಳಿಯವರು ಸರ್ವರ ಆದರಕ್ಕೆ ಪಾತ್ರರಾದರು. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಅನಾರೋಗ್ಯದ ನಿಮಿತ್ತ ರಜೆಯ ಮೇಲೆ ಹೋದಾಗ ಇವರು ಅಧ್ಯಕ್ಷ ಸ್ಥಾನದ ಕರ್ತವ್ಯವನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಿದರು ಇವರ ಯೋಗ್ಯತೆಗೆ ಮಿರುಗನ್ನಿತ್ತಿತು. ಬಾಬೂ ರಾಜೇಂದ್ರರು ನಿಧನ ಹೊಂದಿದಾಗ ಉಪರಾಷ್ಟ್ರಪತಿ ರಾಧಾಕೃಷ್ಣನರೇ ಅವರ ಉತ್ತರಾಧಿಯಾಗಿ ಆಯ್ಕೆಗೊಂಡರು. ಇದು ಎಲ್ಲರೂ ನಿರೀಕ್ಷಿಸಿದ್ದ ಆಯ್ಕೆಯಾಗಿತ್ತು.

ರಾಧಾಕೃಷ್ಣನರು ಮಹಾಮೇಧಾವಿಗಳು ಕರ್ತವ್ಯಶೀಲರು. ಅವರ ಭಾಷಣಗಳನ್ನು ಕೇಳುವುದೆಂದರೆ ಅದೊಂದು ಅನುಭವದ ಪಾಕವನ್ನು ಮೆದ್ದಂತೆ. ಹಿತಮಿತವಾದ, ತೂಕಬದ್ಧವಾದ ಶಬ್ದಗಳ ಜಾಲದಿಂದ ಅವರು ಶ್ರಾವಕರಲ್ಲಿ ಅತಿ ಉತ್ತಮವಾದ ಪರಿಣಾಮವನ್ನುಂಟು ಮಾಡುತ್ತಾರೆ. ಅವರು ಯಾವ ವಿಷಯದ ಕುರಿತೇ ಮಾತಾಡಲಿ, ಜನರು ಅವರನ್ನು ಕಿವಿ ನಿಮಿರಿಸಿ ಕೇಳುತ್ತಾರೆ ಇತ್ತೀಚೆಗೆ ಅವರು ದಕ್ಷಿಣದ ಮದ್ರಾಸು ರಾಜ್ಯದತ್ತ ಪ್ರವಾಸ ಮಾಡಿದಾಗ, ದೇಶದಲ್ಲಿ ಉಲ್ಬಣಗೊಂಡಿರುವ ಆಹಾರ ಸಮಸ್ಯೆಯ ಕುರಿತು ಮಾತಾಡುತ್ತಾ ಆಹಾರ ಧಾನ್ಯಗಳನ್ನು ಬಚ್ಚಿಡುವುದು, ರಾಷ್ಟ್ರಕ್ಕೆ ದ್ರೋಹವೆಸಗುವ ಕಾರ್ಯ ಎಂದು ಖಂಡಾತುಂಡವಾಗಿ ಹೇಳಿದರು. ಆಡಳಿತದಲ್ಲಿ ಭ್ರಷ್ಟಾಚಾರವನ್ನು ಸಮೂಲಾಗ್ರವಾಗಿ ಉಚ್ಚಾಟನೆ ಮಾಡಿಯೇ ತೀರಬೇಕು ಎಂದೂ ಅವರು ಇನ್ನೊಂದು ಕಡೆ ಮಾತನಾಡುತ್ತಾ ಹೇಳಿದರು. ಆಡಳಿತ ವಿಷಯದಲ್ಲಿ ಅವರು ನಿಷ್ಣಾತರಿದ್ದಂತೆ, ವೈಜ್ಞಾನಿಕ, ಆಧ್ಯಾತ್ಮಿಕ ಹಾಗೂ ಇನ್ನಿತರ ರಂಗಗಳಲ್ಲಿಯೂ ನಿಷ್ಣಾತರೇ.

ಕಳೆದ ತಿಂಗಳ ೨೭ ರಂದು ನವದೆಹಲಿಯಲ್ಲಿ ಭಾರತದ ವಿಜ್ಞಾನದ ಕಾರ್ಯಶೀಲರ ಸಂಘವು ಏರ್ಪಡಿಸಿದ ವಿಚಾರ ಗೋಷ್ಠಿಯಲ್ಲಿ ಅವರು ಮಾತನಾಡುತ್ತಾ ಹೇಳಿದ ಮಾತುಗಳು ಮನನೀಯವಾಗಿವೆ. ವಿಜ್ಞಾನದ ತಿಳಿವಿನ ಸಂಗ್ರಹಕ್ಕಿಂತ ಅದರ ಉದ್ದೇಶ, ಗುಣಗಳನ್ನರಿತುಕೊಂಡು ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸುವುದು ಪ್ರಾಮುಖ್ಯವಾಗಿದೆ ಎಂದು ಅವರು ಹೇಳಿದರು. ನಮ್ಮ ಜನತೆಯ ಮನೋವೃತ್ತಿಯಲ್ಲಿ ಬದಲಾವಣೆ ಆಗಬೇಕಾದುದು ಅಗತ್ಯ. ವೈಜ್ಞಾನಿಕ ಮನೋವೃತ್ತಿ ಆಧುನಿಕ ಯುಗದಲ್ಲಿ ಅತಿ ಅಗತ್ಯವೆನಿಸಿದೆ ಈ ಮನೋವೃತ್ತಿ ಬೆಳೆಸುವುದರ ಅವಶ್ಯಕತೆಯನ್ನು ಸರ್ವಪಳ್ಳಿಯವರು ಒತ್ತಿ ಹೇಳಿರುವರು. ಭಾರತದ ಈ ಮಹಾ ಮನೀಷಿ ನೀಡಿದ ವಿಚಾರ ಧಾರೆಗೆ ಅನುಗುಣವಾಗಿ ಭಾರತದ ಜನತೆ ಮುಂದುವರಿದರೆ ಆಗ ಭಾರತ ಭವ್ಯ ಭಾರತವೆನಿಸುವುದರಲ್ಲಿ ಸಂದೇಹವಿಲ್ಲ



ಶ್ರೀ| ಎಸ್. ಆರ್ ಕಂಠಿ

ಮೈಸೂರು ಮಂತ್ರಿ ಮಂಡಲದಲ್ಲಿ ಶಿಕ್ಷಣ ಮಂತ್ರಿ ಶ್ರೀ| ಕಂಠಿಯವರಷ್ಟು ಟೀಕೆಗೆ ಒಳಗಾದವರು ಯಾರೂ ಇಲ್ಲ ಎಂದರೂ ಸಲ್ಲುವುದು. ಮೈಸೂರು ವಿಧಾನ ಸಭೆಯ ಅಧ್ಯಕ್ಷರಾಗಿ ಅವರು ಬಹು ಜನಪ್ರಿಯರೆನಿಸಿಕೊಂಡವರು. ೧೯೫೭ರಿಂದ ೧೯೬೨ ರವರೆಗೆ ಅವರು ಮೈಸೂರು ಶಾಸನ ಸಭೆಯ ಕಾರ್ಯಕಲಾಪಗಳನ್ನು ಎಲ್ಲರೂ ಮೆಚ್ಚುವರೀತಿಯಲ್ಲಿ ನಡೆಸಿಕೊಂಡು ಬಂದರು. ವಿದೇಶ ಪ್ರವಾಸವನ್ನು ಕೈಗೊಂಡು ವಿವಿಧ ದೇಶಗಳ ಶಾಸನ ಸಭೆಗಳ ಕುರಿತಾದ ಅಧ್ಯಯನ ಮಾಡುವ ಸುಯೋಗವೂ ಅವರಿಗೆ ಲಭಿಸಿತು.

ಆದರೆ ೧೯೬೨ ರ ಚುನಾವಣೆಯ ಬಳಿಕ ಕಂಠಿಯವರ ಗ್ರಹಗತಿ ತುಸು ಬದಲಾವಣೆಯಾದಂತೆ ಕಾಣುತ್ತದೆ ಕಾಂಗ್ರೆಸಿನ ಒಳ ಜಗಳಗಳ ದೆಸೆಯಿಂದ ಅವರು ಸ್ವಲ್ಪಕಾಲ ಮುಖ್ಯ ಮಂತ್ರಿಗಳೂ ಆದರು. ರಾಮನ ಪ್ರತಿನಿಧಿಯಾಗಿ ಭರತನಾಗಿ ತಾನು ಕಾರ್ಯ ನಿರ್ವಹಿಸುವೆನೆಂದು ಆ ಕಾಲ ಅವರು ಬಹಳ ಔದಾರ್ಯದಿಂದ ಹೇಳಿದರು. ಹಾಗೂ ಹೇಳಿದ ಮಾತನ್ನು ನಡೆಸಿಯೂ ನಡೆಸಿದರು. ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಶಿಕ್ಷಣ ಮಂತ್ರಿಗಳಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದ ಕಂಠಿಯವರು ಕೆಲವು ಸಮಸ್ಯೆಗಳನ್ನೆದುರಿಸಬೇಕಾಯಿತು. ಹಲವು ಆಡಳಿತದಲ್ಲಿ ಸೇರಿದ್ದ, ಏಕೀಕೃತಗೊಂಡ ಕನ್ನಡ ಪ್ರದೇಶಗಳ ವಿವಿಧ ರೀತಿಯ ಶಿಕ್ಷಣ ಪದ್ಧತಿಯಲ್ಲಿ ಏಕತೆಯನ್ನು ವಿಧಿಸುವುದು ಅವರ ಪಾಲಿಗೆ ದೊಡ್ಡ ಸಮಸ್ಯೆಯೇ ಆಗಿ ನಿಂತಿದೆ, ಕಳೆದ ವರ್ಷ ಶಾಲಾರಂಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕಕ್ಷೆಗೊಳಪಟ್ಟ ಕಾಲೇಜು ವಿದ್ಯಾರ್ಥಿಗಳು ಶಿಕ್ಷಣ ಶುಲ್ಕದ ಕುರಿತು ಮುಷ್ಕರ ನಡೆಸಿದಾಗ ಶ್ರೀ ಕಂಠಿಯವರು ನೀಲಕಂಠರಾಗಬೇಕಾಯಿತು ಅವರು ಟೀಕೆಗೆ ಒಳಗಾದಷ್ಟು ಇನ್ನಾರೂ ಆಗಲಿಲ್ಲ. ಅಂತೂ ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಶುಲ್ಕದ ಸಮಸ್ಯೆ ಮುದಲಿಯಾರ ಸಮಿತಿ ರಚನೆಯಿಂದ ಒಮ್ಮೆಗೆ ಸ್ಥಗಿತವಾಯಿತು

ಇದೀಗ ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಗೊಳಪಟ್ಟ ಕಾಲೇಜು ವಿದ್ಯಾರ್ಥಿಗಳು ಶಿಕ್ಷಣ ಶುಲ್ಕದಲ್ಲಿ ಏಕರೂಪತೆಯಿರಬೇಕೆಂಬುದಕ್ಕಾಗಿ ಮುಷ್ಕರ ನಡೆಸಿದ್ದಾರೆ ವಿದ್ಯಾರ್ಥಿಗಳ ಕೇಳಿಕೆಗೆ ಸಾರ್ವಜನಿಕರ ಬೆಂಬಲವೂ ಇದ್ದಂತೆ ತೋರುತ್ತದೆ ಶ್ರೀ ಕಂಠಿಯವರು ಇತ್ತೀಚೆಗೆ ಧಾರವಾಡವನ್ನು ಸಂದರ್ಶಿಸಿದಾಗ ವಿದ್ಯಾರ್ಥಿ ಪ್ರತಿನಿಧಿಗಳನ್ನು ಭೇಟಿಯೂ ಆಗಿದ್ದಾರೆ, ಆದರೆ ಇನ್ನೂ ಯಾವ ಖಚಿತ ನಿರ್ಧಾರವೂ ಆಗದೆ ಮುಷ್ಕರ ಮುಂದುವರಿಯುತ್ತಿದೆ. ಶ್ರೀ ಕಂಠಿಯವರು ಈ ಸಮಸ್ಯೆಯನ್ನು ಹೇಗೆ ಪರಿಹರಿಸುವರೆಂದು ಎಲ್ಲರೂ ಕಾದು ನೋಡುತ್ತಿದ್ದಾರೆ

ಕಂಠಿಯವರು ಬಿಚ್ಚುಮಾತಿನವರು. ಅವರ ಬಿಚ್ಚು ಮಾತುಗಳೇ ಅವರನ್ನು ಹಲವು ಬಾರಿ ಅಪ್ರಿಯರನ್ನಾಗಿ ಮಾಡಿವೆ. ಇತ್ತೀಚೆಗೆ ಧಾರವಾಡದಲ್ಲಿ ಮಾತನಾಡುತ್ತಾ "ಮುಂಬಯಿ ಕರ್ನಾಟಕಕ್ಕೆ ಶಿಕ್ಷಣದಲ್ಲಿ ಪ್ರಾಶಸ್ತ್ಯ ದೊರಕಿಸಲು ನಾನು ಖಂಡಿತವಾಗಿ ಶ್ರಮಿಸುತ್ತೇನೆ 'ಕಂಠಿಯವರು ಸತ್ತು ಹೋಗಲಿ' ಎಂದು ಹಲವರು ಹೇಳಿದರು. ಆದರೆ ನಾನು ಮಾತ್ರಾ ನನ್ನ ನಿರ್ಧಾರದಿಂದ ಕದಲುವಂತಿಲ್ಲ" ಎಂದು ಹೇಳಿದರು. ಸಮಗ್ರ ರಾಜ್ಯದ ಶಿಕ್ಷಣದ ಹೊಣೆ ಹೊತ್ತ ಒಬ್ಬ ಮಂತ್ರಿಯು, ಜವಾಬ್ದಾರಿ ಸ್ಥಾನದಲ್ಲಿರುವ ವ್ಯಕ್ತಿಯು ಈ ರೀತಿ ಇನ್ನೂ 'ಮುಂಬಯಿ ಕರ್ನಾಟಕ' ಎಂದು ಪ್ರಾದೇಶಿಕ ವ್ಯಾಮೋಹಕ್ಕೆ ಒಳಗಾಗುವುದು ಸರಿಯೇ? ಬಹಿರಂಗವಾಗಿ ಇಂತಹ ಹೇಳಿಕೆ ನೀಡುವುದು ಸಮಂಜಸವೇ? ಎಂದು ಎಲ್ಲರೂ ಪ್ರಶ್ನಿಸುತ್ತಿದ್ದಾರೆ ಈ ಪ್ರಶ್ನೆಗೆ ಕಂಠಿಯವರೇ ಸರಿಯಾದ ಉತ್ತರ ಹೇಳಲು ಸಮರ್ಥರು.

ಶ್ರೀ ಟಿ. ರಮೇಶ ಪೈ

ತೋನ್ಸೆಯ ಪೈ ಬಂಧುಗಳು ಎಲ್ಲಿ ಹೋದರೂ ಸುದ್ದಿಯ ವ್ಯಕ್ತಿಗಳಾಗಿರು

(೧೨ನೇ ಪುಟ ನೋಡಿರಿ)

ವಾರದ ಕಥೆ

ಬರೀ ಹುಡುಗಾಟಿಕೆ

ಬರೆದವರು: ಶ್ರೀ ಕಾ. ಸೋ. ಮುತ್ತಪ್ಪ

ಕುಸುಮ ತನ್ನ ಪತಿಯಿಂದ ಬಂದ ಪತ್ರವನ್ನು ಪುನಃ ಓದಿದಳು. ಆದರೂ ಅವಳಿಗೆ ತೃಪ್ತಿಯಾಗಲಿಲ್ಲ. ಸಂಜೆ ಐದು ವರೆ ಗಂಟೆ ಎಷ್ಟು ಬೇಗ ಬರುವದೋ ತನ್ನ ಪತಿಯನ್ನು ಎಷ್ಟು ಬೇಗ ಕಾಣುವೆನೋ ಎಂದು ಅವಳ ಮನ ತವಕಿಸುತ್ತಿತ್ತು.

ರಾಜಗೋಪಾಲನನ್ನು ಮದುವೆಯಾಗಿ, ಅವನು ತನ್ನನ್ನು ಬಿಟ್ಟು ಬೊಂಬಾಯಿಗೆ ತೆರಳಿದಾಗ ಹೇಳಿದ ಸವಿಮಾತುಗಳನ್ನು ನೆನೆಸಿಕೊಂಡಳು. ‘ಈಗ ಇರುವ ಕೆಲಸ ಬಿಡಲು ಸಾಧ್ಯವಿಲ್ಲ ಕುಸುಮ. ಅಲ್ಲಿ ಮನೆ ಒದಗುವುದು ತುಂಬಾ ತಾಪತ್ರಯ. ಆದರೂ ಸಾಧ್ಯವಿದ್ದಷ್ಟು ಪ್ರಯತ್ನಪಟ್ಟು ಮನೆಮಾಡಿ ನಿನ್ನನ್ನು ಕರೆಸಿಕೊಳ್ಳುತ್ತೇನೆ’ ಎಂದಿದ್ದನವನು. ‘ಆಗಲಿ ದೊರೆ. ಆದಷ್ಟು ಬೇಗನೆ ನನ್ನನ್ನು ಕರೆಸಿಕೊಳ್ಳಿ. ನೀವಿಲ್ಲದೆ ನಾನೊಬ್ಬಳೇಯಿರಲಾರೆ" ಅಂದಿದ್ದಳು. ‘ಛೀ ಹುಚ್ಚಿಯಂತೆ ಮಾತನಾಡಬೇಡ. ನಾನೂ ನಿನ್ನನ್ನು ಬಿಟ್ಟು ಬಾಳಲಾರೆ. ಚೆನ್ನಾಗಿರು. ನಾನು ನಿನ್ನನ್ನು ಬೇಗನೇ ಬಂದು ಕರೆದುಕೊಂಡು ಹೋಗುತ್ತೇನೆ’ ಎಂದು ಅಭಯವನ್ನಿತ್ತಿದ್ದ ರಾಜಗೋಪಾಲ.

‘ಅಷ್ಟೇ ನನಗೆ ಬೇಕಾದುದು ಸ್ವಾಮಿ’

"ಕುಸುಮ. ನೀನು ಆಗಾಗ ಕಾಗದ ಹಾಕುತ್ತಿರು."

"ಆಗಲಿ. ನೀವೂ ಬರೆಯುತ್ತಿರಿ. ಆರೋಗ್ಯದ ಕಡೆ ಲಕ್ಷ್ಯವಿಟ್ಟುಕೊಳ್ಳಿ" ‘ಮಹಾರಾಣಿಯವರ ಅಪ್ಪಣೆ ಮೀರುವುದುಂಟೆ" ಎಂದು ಹೇಳಿ ನಗುತ್ತಾ ಹೋದವರಿಗೆ ಒಂದು ವರ್ಷದ ನಂತರ ‘ಇವತ್ತು ಬರುತ್ತೇನೆ ಸ್ಟೇಷನ್‌ನಲ್ಲಿ ಕಾದಿರು’ ಎಂದು ಬರೆಯಲು ಮನಸ್ಸು ಬಂತೇ ಎಂದುಕೊಂಡಳು.

"ಅಮ್ಮಾ ಟೆಲಿಗ್ರಾಂ" ಎಂದು, ಜವಾನ ಕೂಗಿದಾಗ ಕುಸುಮ ಹೋಗಿ ಸಹಿ ಹಾಕಿ ಅದನ್ನು ತೆಗೆದುಕೊಂಡು ನಡುಗುವ ಕೈಗಳಿಂದ ಒಡೆದಳು. ಅವಳ ಎದೆ ಜೋರಾಗಿ ಬಡಿದುಕೊಳ್ಳುತ್ತಿತ್ತು. "ರಾಜಗೋಪಾಲ್ ಕಾರ್ ಅಪಘಾತಕ್ಕೀಡಾದರು" ಎಂದು ಓದುತ್ತಿದ್ದಂತೆ ಕೆಳಕ್ಕುರುಳಿದಳು.

ಅಲ್ಲಿಯೇ ಸ್ಮೃತಿ ತಪ್ಪಿತು. ಸ್ವಲ್ಪ ಸಮಯದ ನಂತರ ಎಚ್ಚರವಾಯಿತು. ಬಿಕ್ಕಿ ಬಿಕ್ಕಿ ಅತ್ತಳು. ಆಗ ಮನೆಯಲ್ಲಿ ಯಾರೂ ಇರಲಿಲ್ಲ. ಅವಳ ಮಾವ ರಾಮರಾಯರು ಪೇಟೆ ಕಡೆ ಹೋಗಿದ್ದರು. ಅತ್ತೆ ಸಮಾಜದ ಸಭೆಗೆ ಬೆಳಗ್ಗೆ ಹೋದವರು ಬಂದಿರಲಿಲ್ಲ.

‘ನೀವಿಲ್ಲದೆ ನಾನೊಬ್ಬಳೇಯಿರಲಾರೆ’ ಎಂಬ ಅವಳದೇ ಧ್ವನಿ ಪ್ರತಿಧ್ವನಿಸಿದಂತಾಯಿತು. ಅದರ ಜೊತೆಯಲ್ಲೇ ‘ನಾನು ನಿನ್ನನ್ನು ಬಿಟ್ಟು ಬಾಳಲಾರೆ’ ಎಂಬ ರಾಜಗೋಪಾಲನ ಮಾತು ಕಿವಿಯಲ್ಲಿ ಪ್ರತಿಧ್ವನಿಸಿದಂತಾಯಿತು ಕುಸುಮಳಿಗೆ. ಇವತ್ತು ಬರುತ್ತಾರೆಂದು ರೈಲ್ವೆ ಸ್ಟೇಷನ್‌ಗೆ ಹೋಗಬೇಕೆಂದು ಆತುರಳಾಗಿದ್ದರೆ ಈ ಅಶುಭ ವಾರ್ತೆ ಬರಬೇಕೇ ಎಂದು ದುರ್ಗಾ ದೇವಿಗೆ ಮೊರೆಯಿಟ್ಟಳು ಮನಸಾರೆ ಪುನಃ ಜೋರಾಗಿ ಅತ್ತಳು. ಮನದ ದುಗುಡ ಕೊಂಚ ಕಡಿಮೆಯಾಯಿತು.

"ನಾನು ಈಗ ಅತ್ತರೆ ಅವರಿಗೆ ಸ್ವರ್ಗ ಸಿಗಲಾರದು" ಎಂದು ಕಣ್ಣೀರನ್ನು ಒರೆಸಿ ಉಕ್ಕಿ ಬರುವ ದುಃಖವನ್ನು ಬಲವಂತದಿಂದ ಹತ್ತಿಕ್ಕಿದಳು.

ಎದ್ದು ಹೋಗಿ ತನ್ನ ಪತಿಯ ಭಾವಚಿತ್ರಕ್ಕೆ ಕುಂಕುಮ ಹಚ್ಚಿದಳು. ರಾಜಗೋಪಾಲ್ ಉಪಯೋಗಿಸುತ್ತಿದ್ದ ವಸ್ತುಗಳಿಗೆಲ್ಲ ಮನಸಾರೆ ನಮಿಸಿದಳು. ಮೆಲ್ಲನೆ ಎದ್ದು ಹೊರಗೆ ನಡೆದಳು.

ದುಃಖದ ಆವೇಗದಿಂದ ಎದೆ ಜೋರಾಗಿ ಹೊಡೆದುಕೊಳ್ಳುತ್ತಿದ್ದರೂ ಯಾವುದರ ಪರಿವೇ ಇಲ್ಲದವಳಂತೆ ಬಿರಬಿರನೆ ಹೆಜ್ಜೆಯಿಟ್ಟಳು.

ತಾವಿಬ್ಬರೂ ವಾಯು ವಿಹಾರಕ್ಕೆ ಹೋಗಿದ್ದಾಗ ಕುಳಿತಿದ್ದ ಸ್ಥಳ ಕಾಣಿಸಿತು. ಅಲ್ಲಿಗೆ ಮನದಲ್ಲೆ ನಮಿಸಿದಳು. ಮುಂದೆ ಕಾಣಿಸಿತು ವಿಶಾಲವಾದ ಪಾಪನಾಶಿನಿ ದಕ್ಷಿಣ ಗಂಗೆಯಾದ ಕಾವೇರಿ ನದಿ. ಬೆಳದಿಂಗಳ ವಿಹಾರಕ್ಕಾಗಿ ರಾಜಗೋಪಾಲನೊಡನೆ ಅಲ್ಲಿಗೆ ಬಂದ ದೃಶ್ಯ ನೆನಸಿಕೊಂಡಳು.

ಬೆಳದಿಂಗಳಂತೆ ಶುಭ್ರ ಹೃದಯದ ದಂಪತಿಗಳಿಬ್ಬರು ಅಂದು ನುಡಿದಿದ್ದರು ‘ಎಂದೂ ತಾವಿಬ್ಬರೂ ಒಬ್ಬರಿಲ್ಲದೊಬ್ಬರು ಜೀವಿಸೆವು’ ಎಂದು. ಅವರು ರಾಜಹಂಸದಂತೆ ಜೀವಮಾನವಿಡೀ ವಿಹರಿಸಲು ತೀರ್ಮಾನಿಸಿದ್ದರು. ಅವರು ಕಟ್ಟಿದ್ದ ಗಾಳಿಗೋಪುರವೆಲ್ಲ ಪುಡಿ ಪುಡಿಯಾಗಿತ್ತು. ಇಂದು ತನ್ನ ಪತಿಯ ಸಾನಿಧ್ಯ ಸೇರಲು ಹೊರಟಿದ್ದಳು ಕುಸುಮ.

ದೂರದಲ್ಲಿ ಅಸ್ಪಷ್ಟವಾಗಿ ಕಾಣುವ ಮನೆಯ ಕಡೆ ನೋಡಿ ಮನದಲ್ಲೆ ಅತ್ತೆ ಮಾವರಿಗೆ ನಮಿಸಿ ದಯಾಮಯನಾದ ಪರಮಾತ್ಮನನ್ನು ಧ್ಯಾನಿಸಿದಳು ಸೀರೆಯ ಸೆರಗನ್ನು ಹರಿದು ಕಣ್ಣಿಗೆ ಕಟ್ಟಿದಳು. "ಪಾವನ ಗಂಗೆ, ಕಾವೇರಿ ತಾಯೇ ನಿನ್ನೊಳಗೆ ಅಡಗಿರುವ ಅನಂತ ಜೀವರಾಶಿಗಳೊಡನೆ ನನ್ನನ್ನು ಸೇರಿಸಿಕೊಂಡು ಪತಿ ಸಾನಿಧ್ಯ ಸೇರಲು ದಾರಿ ತೋರು" ಎಂದು ಪ್ರಾರ್ಥಿಸಿಕೊಂಡು ಹಾರಿದಳು....

"ಅಯ್ಯೋ" ಎಂದು ಕುಸುಮ ಜೋರಾಗಿ ಚೀರಿದಳು. ಆಗ ತಾನೆ ಮಹಿಳಾ ಸಮಾಜದ ಸಭೆ ಮುಗಿಸಿ ಬಂದ ಸಾವಿತ್ರಮ್ಮ "ಏನೇ ಕುಸುಮ ಹಾಗೆ ಚೀರಿಕೊಂಡೆ?"

"ಇಲ್ಲ ಅತ್ತೆ, ಏನೋ ಯೋಚಿಸುತ್ತಿದ್ದೆ ಹಾಗೆ ಜೊಂಪು ಹಿಡಿದಂತಾಯಿತು" ಎಂದು ಆರಾಮ ಖುರ್ಚಿಯಿಂದ ಎದ್ದಳು.

"ಹಗಲು ಕನಸು ಕಂಡಿಯೇನೆ? ಸರಿಯಾಯ್ತು ಬಿಡು. ಇವತ್ತು ರೈಲ್ವೆ ಸ್ಟೇಷನಿಗೆ ಹೋಗೋದಿಲ್ಲವೇ. ಆಗಲೇ ನಾಲ್ಕು ಗಂಟೆಯಾಯಿತು ಬೇಗ ಬಟ್ಟೆ ಬದಲಾಯಿಸಿಕೊಂಡು ಬಾ"

"ಆಗಲಿ ಅತ್ತೆ ಈಗಲೇ ಬಂದ್ಬಿಟ್ಟೆ" ಎಂದು ಒಳಗೆ ಓಡಿದಳು.

ಸಾವಿತ್ರಮ್ಮ ಕುಸುಮ ಇಬ್ಬರು ರೈಲ್ವೆ ಸ್ಟೇಷನ್‌ಗೆ ಮುಟ್ಟಿದಾಗ ಐದೂಕಾಲು ಗಂಟೆಯಾಗಿತ್ತು. ಅವರು ಕುತೂಹಲದಿಂದ ಯಾವಾಗ ‘ಬೋಂಬೆ ಎಕ್ಸ್‌ಪ್ರೆಸ್’ ಬರುತ್ತದೋ ಎಂದು ಕಾದರು.

ಗಂಟೆ ಐದೂವರೆಯಾಯಿತು. ಗಾಡಿ ಬರಲೇ ಇಲ್ಲ. ಕುಸುಮಳ ತಲೆಯಲ್ಲಿ ಒಂದೊಂದಾಗಿ ಆಲೋಚನೆಗಳು ಸುಳಿಯತೊಡಗಿದುವು. ‘ತಾನು ಆಗ ಕನಸು ಕಂಡೆನೇ? ಇಲ್ಲ ಅದು ನೆನಸೆ’ ಎಂದು ಯೋಚಿಸಿದಳು. ಇಲ್ಲ ಅದು ಕನಸೇ ಖಂಡಿತ... ಮತ್ತೆ ಯಾಕೆ ರೈಲು ತಡವಾಯಿತು... ಮನದ ಉದ್ವೇಗ ಬಹಳವಾಯಿತು ಇನ್ನು ಸ್ವಲ್ಪ ಹೊತ್ತು ಕಾದರೂ ಪ್ರಯೋಜನವಾಗಲಿಲ್ಲ. ದುಗುಡ ಬೇಸರ ಹೆಚ್ಚಾಯಿತು. ನಿಮಿಷಗಳು ಯುಗಗಳಾಗ ತೊಡಗಿದವು. ಆಪತ್ಕಾಲದೊಳು ಪರಮಾತ್ಮನ ನೆನೆ ಕಂಡ್ಯ ಮನವೇ ಎಂಬ ದಾಸರ ವಚನದಂತೆ ದುರ್ಗಾ ದೇವಿಯನ್ನು ಅನನ್ಯ ಭಕ್ತಿಯಿಂದ ಮನದಲ್ಲೇ ನೆನೆದಳು.

"ಮನೆಗೆ ಹೋಗುವಾ ಕುಸುಮ. ಅವನು ಬಂದರೆ ಬರಲಿ" ಎಂದು ಹೇಳಿದ ಸಾವಿತ್ರಮ್ಮನ ಮಾತೂ ಅವಳಿಗೆ ಕೇಳಿಸಲಿಲ್ಲ.

ಇದ್ದಕ್ಕಿದ್ದಂತೆಯೆ ಭೀಕರ ವಾರ್ತೆಯೊಂದು ಬಂದಿತು, ಬೋಂಬೇ ಎಕ್ಸ್‌ಪ್ರೆಸ್ ಟ್ರೇನ್ ದಾರಿಯಲ್ಲಿ ಅಪಘಾತಕ್ಕೀಡಾಯಿತೆಂದು. ಇದನ್ನು ಕೇಳಿದ ಇಬ್ಬರಿಗೂ ಜೀವವೇ ಇಲ್ಲ. ಸ್ವಲ್ಪ ಸಾವರಿಸಿಕೊಂಡರು. ಏನುಮಾಡಬೇಕೆಂದು ತೋರಲಿಲ್ಲ "ದೇವೀ ದುರ್ಗಾ ಪರಮೇಶ್ವರೀ, ನನಗೆ ಮಾಂಗಲ್ಯ ಪ್ರಧಾನ ಮಾಡು ತಾಯೇ" ಎಂದು ಅಂಗಲಾಚಿ ಬೇಡಿಕೊಂಡಳು. "ಸುಮ್ಮನಿರು. ಅವನಿಗೆ ಏನೂ ಆಗಿರಲಿಕ್ಕಿಲ್ಲ. ದೇವರಿದ್ದಾರೆ ಇಲ್ಲಿ ಯೋಚಿಸಿ ಫಲವಿಲ್ಲ. ಎಕ್ಸಿಡೆಂಟ್ ನಡೆದಲ್ಲಿಗೆ ಹೋಗೋಣ ನಡಿ" ಎಂದರು ಸಾವಿತ್ರಮ್ಮ

"ಹೇಗತ್ತೆ ಹೋಗೋದು"

"ಟ್ಯಾಕ್ಸಿ ಮಾಡಿಕೊಂಡು ಮನೆಗೆ ಹೋಗಿ ಹಣ ತೆಗೆದುಕೊಂಡು ಹೋಗೋಣ. ಬರುವಾಗ ಅದನ್ನೂ ತರಲೂ ಮರೆತೆ" ಎಂದು ಬೇಗನೇ ಟ್ಯಾಕ್ಸಿ ಸ್ಟೇಂಡಿಗೆ ಹೋಗಿ ಟ್ಯಾಕ್ಸಿ ಮಾಡಿಕೊಂಡು ಮನೆಗೆ ಬಂದರು.

ಮನೆಯಲ್ಲಿ ರಾಮರಾಯರು "ಕುಸುಮಾ ಎಲ್ಲಿಗಮ್ಮಾ ಹೋಗಿದ್ದಿ? ನಿನಗೊಂದು ಟೆಲಿಗ್ರಾಂ ಬಂದಿದೆ" ಎಂದು ಹೇಳಿ ಒಂದು ಕವರ್ ತೆಗೆದು ಕೊಟ್ಟರು.

"ಎಲ್ಲಿಂದ? ಏನಂತ..ತಂತಿ ಬಂದಿದೆ?" ಎಂದು ಇಬ್ಬರೂ ಕೇಳಿದರು

"ಓದಿ ನೋಡು ತಿಳಿಯುತ್ತೆ" ಎಂದರು ರಾಯರು.

ಗಡಗಡನೆ ನಡುಗುವ ಕೈಗಳಿಂದ ಬೇಗ ಬೇಗನೆ ಬಿಡಿಸಿ ಓದಿದಳು ಅದರಲ್ಲಿ "ಏಪ್ರಿಲ್ ಫೂಲ್ ಡಾರ್ಲಿಂಗ್" ಎಂದು ಬರೆದಿತ್ತು.

"ಅಬ್ಬ ದೇವರೇ, ಬರೀ ಹುಡುಗಾಟಿಕೆ ಇವರಿಗೆ. ಈಗ ಜೀವ ಬಂತು" ಎಂಬ ಉದ್ಗಾರದೊಡನೆ ಸೋಫದ ಮೇಲೆ ಬಿದ್ದಳು ಕುಸುಮ.



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ (ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ ‘ನವಯುಗ’ದ ಖಾತೆಗೆ ಜಮೆ ಮಾಡುವ ಅವಕಾಶವಿರುವುದು.

ಚೀನೀಯರಿಗೆ ಮೊದಲ ಪಾಠ

ನುಸುಳಿದೊಡನೆಯೇ ಶರಾಪಹಾರ

ಬರೆದವರು: ಶ್ರೀ ಶಿವಶಂಕರ.

ಹಿಂದಿನ ಲೇಖನದಲ್ಲಿ (೧೬-೭-೬೪ರ ಸಂಚಿಕೆಯಲ್ಲಿ ಪ್ರಕಟವಾದುದು) ಮಹಮ್ಮದೀಯ ಮತಾನುಯಾಯಿ ಚೆಂಗ್-ಹೋ ಅಥವಾ ಯುಂಗ್-ಲೋನನ್ನು ಪಟ್ಟದಲ್ಲಿ ಕುಳ್ಳಿರಿಸಿ ಪ್ರಪಂಚ ಪ್ರದಕ್ಷಿಣೆಯ ಕನಸು ಕಾಣುತ್ತಿದ್ದನೆಂಬುದನ್ನು ವಿವರಿಸಲಾಗಿತ್ತು. ಚೆಂಗ್-ಹೋನ ಇಚ್ಛೆಯಂತೆ ಪ್ರಥಮ ತಂಡ ಕ್ರಿ.ಶ ೧೪೦೫ರಲ್ಲಿ ಹೊರಟಿತು. ಇದೊಂದು ಚಿಕ್ಕ ಮಿತ್ರಕೂಟವಾಗಿರಲಿಲ್ಲ. ಅಂದು ಅರುವತ್ತಮೂರು ಹಡಗುಗಳು ಚೈನಾದಿಂದ ಹೊರಟವು. ಹಡಗಿನಲ್ಲಿ ಕುಳಿತುಕೊಂಡು ಚೆಂಗ್-ಹೋ ಚೆನ್ನಾಗಿ ಕನಸು ಕಾಣುತ್ತಿದ್ದನು. ಆದರೆ ಅವರ ಹಡಗುಗಳು ಪಾಲೆಂಬಾಗಿಗೆ ಬಂದಾಗ ವಿಚಿತ್ರ ಘಟನೆ ನಡೆಯಿತು. ಹಿಂದೆಯೇ ತಿಳಿಸಿರುವಂತೆ ಹಡಗುಗಳಲ್ಲಿ ಹೊರಟವರು ಯಾತ್ರಿಕರು ಅಥವಾ ಸಾಧು ಸಮಾಜದವರಿರಲಿಲ್ಲ. ಅದರಲ್ಲಿ ಹಡಗುಗಳ್ಳರೂ ಇದ್ದರು. ಅವರಿಗೆ ಚೆನ್ ಟ್ಸೋ—ಈ ಮುಖಂಡನಾಗಿದ್ದನು. ಅವನನ್ನೂ ಸಾಧಾರಣ ೫,೦೦೦ ಚೈನೀಯರನ್ನೂ ಪಾಲೆಂಬಾಗಿನಲ್ಲಿ ಬಂಧಿಸಲಾಯಿತು. ಆದರ್ಕಾಗಿ ಚೈನಿ ಸಾಮ್ರಾಟ ತುಟಿಪಿಟಿಕ್ಕನ್ನಲಿಲ್ಲ. ಚೆನ್-ಟ್ಸೋ—ಈಯ ಬಂಧನದ ಸುದ್ದಿಯನ್ನು ಕೇಳಿದವರೆಲ್ಲಾ ಎಣ್ಣೆ ಸ್ನಾನಮಾಡಿ, ಹಾಲು ಕುಡಿದಿರಬಹುದು. ಅಂದರೆ ಜನರಿಗೆ ಅವನೆಂದರೆ ಬಹಳ ಭೀತಿ ಇತ್ತು. ಸ್ವತಃ ಚೈನಾದಲ್ಲೇ ಅವನನ್ನು ಕಂಡರೆ ಭಯಪಡುತ್ತಿದ್ದರು. ಅಲ್ಲದೆ ಅವನ ಹೆಸರು ಸಾಗರದಾಚೆಯೂ ಸಾಗಿತ್ತು. ಆದುದರಿಂದಲೇ ಪಾಲೆಂಬಾಗಿಗೆ ಹಡಗುಗಳು ಬಂದಾಗ ಅವನನ್ನು ಬಂಧಿಸಿದರು. ಅವನ ಹಿಂಬಾಲಕರನ್ನು ಅಲ್ಲಿ ಕೊಲೆ ಮಾಡಲಾಯಿತು.

ಈ ರೀತಿ ಆರಂಭದಲ್ಲೇ ಮಂಗಳಾರತಿಯಾದುದರಿಂದ ಮುಂದಿನ ಸ್ಥಳಗಳಲ್ಲಿ ಅವರಿಗೆ ಅಂತಹ ಸ್ವಾಗತವೇನೂ ದೊರಕಲಿಲ್ಲ. ಆ ತಂಡ ಶ್ರೀಲಂಕೆಗೂ ಬಂದಿತ್ತು. ಅಲಗಕ್ಕೊನಾರಾದಲ್ಲಿ ಅವರ ಪಟ್ಟವಾತು ಶೋಚನೀಯವಾಗಿತ್ತು. ಪಾಲೆಂಬಾಗಿನ ಸುದ್ದಿ ಸಿಲೋನಿಗೂ ತಲುಪಿತ್ತು. ತಿಳಿಗೆ ಆಳಿದು ಬಂದ ಚೈನೀಯರು ಹೋದಲ್ಲೇ ತಡ, ಅಲ್ಲಿಯವರು ಭಯ ಭೀತರಾದರು. ಅತಿಥಿಗಳಿಗೆ ಅಪಮಾನ ಮಾಡಕೂಡದು ಸರಿ, ಆದರೆ ದೆವ್ವಗಳೇ ಅತಿಥಿಗಳಾಗಿ ಬಂದಾಗ ಏನು ಮಾಡುವುದು? ಕಾಸಿದ ಕಬ್ಬಿಣದಿಂದ ಆತಿಥ್ಯವನ್ನೀಯಲೇ ಬೇಕಲ್ಲವೇ? ಅಂತೆಯೇ ಚೆಂಗ್-ಹೋನ ಗುಂಪಿಗೂ ಆತಿಥ್ಯ ದೊರೆಯಿತು. ತಾನೊಂದು ಬಗೆದರೆ ದೆವ್ವ ಇನ್ನೊಂದು ಬಗೆಯಿತು. ಚಿತ್ರ-ವಿಚಿತ್ರ ಕಲ್ಪನೆಯ ಕಟ್ಟಡಗಳನ್ನು ಕಾಣುತ್ತಿದ್ದವನಿಗೆ ಮೊದಲ ಕಟ್ಟಡ ಕುಸಿದು ಬಿದ್ದಾಗ ಹೇಗಾದೀತು? ಚೆಂಗ್-ಹೋನ ಸ್ಥಿತಿ ಹಾಗಾಯಿತು. ಆ ಘಟನೆಯಿಂದ ಅವನಿಗೆ ಅಪಮಾನವಾಯಿತು. ಅದಕ್ಕೆ ಕಾರಣ ಯಾರು? ಹಗೆಯನ್ನು ತೀರಿಸಿಕೊಳ್ಳಲು, ಹೊಟ್ಟೆಯ ಉರಿಯನ್ನ ತಣಿಸಿಕೊಳ್ಳಲು ಆತನು ಯೋಚಿಸಿದನು.

ಅವನು ಪಾಲೆಂಬಾಗಿನಿಂದ ಚೆನ್-ಟ್ಸೋ-ಈಯನ್ನು ಕರೆಸಿಕೊಂಡನು. ಚೈನಾ ಸಾಮ್ರಾಟರು ಕೇಳುವಾಗ ಕೊಡದಿರಲಾಗುತ್ತದೆಯೇ? ಚೈನಾ ನ್ಯಾಯಕ್ಕೆ ಬೆಲೆ ಕೊಡುತ್ತದೆಯೇ? ಅದನ್ನು ನೋಡಬೇಕಾಗಿತ್ತು. ನ್ಯಾಯವೋ—ಅನ್ಯಾಯವೋ ಚೆಂಗ್-ಹೋಗಂತೂ ತನ್ನ ಅಪಮಾನಕ್ಕೆ ಕಾರಣವಾಗಿದ್ದವನ ರಕ್ತದಿಂದ ಉರಿಯನ್ನು ತಣಿಸಿಕೊಳ್ಳಬೇಕಾಗಿತ್ತು. ಅವನು ಚೆನ್ ಟ್ಸೋ-ಈಯ ಶಿರಚ್ಛೇದನ ಮಾಡಿಸಿದನು.

ಇಂದು ಕಾಲ ಬದಲಾಗಿರುತ್ತದೆ. ಚೈನಾದಲ್ಲಿ ಅಂದು ಎದುರಾಳಿಯ ಶಿರಚ್ಛೇದನ ಮಾತ್ರ ನಡೆದಿದ್ದಲ್ಲಿ ಇಂದು ಸ್ಥಿತಿ ಭೀಕರತೆಗೆ ಹೋಗಿದೆ. ಎದುರಾಳಿಯ ಒಳ್ಳೆಯವನಿರಲಿ, ಕೆಟ್ಟವನಿರಲಿ. ಅವನ ಮುಖ್ಯ ಅವನು ಕಮ್ಯೂನಿಸಮ್‌ಗೆ ವಿರೋಧಿಯಾಗಿದ್ದಲ್ಲಿ ತೀರಿತು ಅವನ ಕಥೆ. ಅವನ ಶಿರಚ್ಛೇದನ ನಡೆಯದಿದ್ದರೂ ಬಳ್ಳಿಗೆ ಇತಿಶ್ರೀ ಬರುವುದರಲ್ಲಿ ಸಂದೇಹವಿಲ್ಲ.

ಇನ್ನೊಂದೆಡೆ, ಕಮ್ಯೂನಿಸಮಿನ ಹಬ್ಬುವಿಕೆಗಾಗಿ ಸಾಹಸ ನಡೆಸುವ ಕಡಲುಗಳ್ಳರಿಗೆ ಇಂದು ಅಲ್ಲಿ ಪ್ರೋತ್ಸಾಹ ಸಿಗುತ್ತದೆ. ಆ ಧೈರ್ಯದಿಂದಲೇ, ನೆಲದಲ್ಲೂ ಭಾರತದ ಗಡಿಯತ್ತ ಯಂತ್ರಸವನ ಕಮ್ಯೂನಿಸ್ಟ್ ಚೀನೀಯರ ಸೈನ್ಯ ಮುಂದಕ್ಕೆ ಬಂದದ್ದು.

ಅವರಲ್ಲಿದ್ದ ಹಳೆಯ ಚಟ ಇನ್ನೂ ಹೋಗಿಲ್ಲ. ಇಂದು ಕಮ್ಯೂನಿಸ್ಟರು ಅದರ ಪೂರ್ಣ ಲಾಭ ಪಡೆಯುತ್ತಿದ್ದಾರೆ. ಚೈನೀಯರ ಚತುರತೆಯನ್ನು ಅವರು ಸುತ್ತಿಗೆ-ಕುಡುಗೋಲು ನೃತ್ಯಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅವರವರ ಹಡಗು ಪಡೆ ಇಂದು ಪುನಃ ಸಿಲೋನಿಗೆ ಬರಲು ಪ್ರಯತ್ನಿಸುತ್ತಿದೆ. ಅದರಲ್ಲಿ ಅವ್ರು ಯಶ ಸಿಗಲಿಕ್ಕಿಲ್ಲ.

ಮಳೆಯ ಹನಿಗಾಗಿ 'ಚ' ಬಾಯಿ ತೆರೆದು ಕಾದುಕೊಂಡಿದ್ದ ಪಕ್ಷಿಯ ಬಾಯಿಗೆ ಉರಿಯುತ್ತಿರುವ ಕೆಂಡ ಬಿದ್ದರೆ ಏನಾದೀತು? ಚೆಂಗ್-ಹೋನ ಪರಿಸ್ಥಿತಿ ಹಾಗಾಯಿತು. ಅವನ ಪ್ರಥಮ ಪ್ರಯಾಣ ಮುಕ್ತಾಯಕ್ಕೆ ಎರಡು ವರ್ಷಗಳಾಗಿದ್ದುವು. ತನ್ನ ಅಪಮಾನಕ್ಕೆ ಕಾರಣನಾದವನನ್ನು ಕೆಡವಿದವನ ಶಿರವನ್ನೇ ಆತನು ಬೀಳಿಸಿದನು. ಆದರೆ ಸರ್ಪ ತಪ್ಪಿಸಿಕೊಳ್ಳದೇ ಸುಮ್ಮನಿರಾದೀತೇ? ಹಾಗೆ ಸುಮ್ಮಗೆ ಬಿದ್ದುಕೊಳ್ಳುವುದಾದಲ್ಲಿ ಅದಕ್ಕೆ ಹೆಡೆ ಇದ್ದೇನು ಪ್ರಯೋಜನ? ಅದನ್ನು ಕಾಣಿಸಲೆಂದಲ್ಲವೇ ಅದು ಆಗಾಗ ಹೆಡೆ ಬಿಚ್ಚುತ್ತಿ ಬುಸುಗುಟ್ಟುವುದು? ಆರೆಯು ಅವನ್ನೆಯೂ ಅಷ್ಟೆ. ಮತ್ತೆ ಮತ್ತೆ ಅದು ತಲೆ ಎತ್ತುತ್ತದೆ. ಪ್ರಥಮ ಆಘಾತದಿಂದ ಅವನು ಮೂರ್ಛಿತನಾಗಲಿಲ್ಲ. ಕೆಲ ತಿಂಗಳುಗಳಲ್ಲೇ ಆ ಆಘಾತದಿಂದ ಸಂಭಾಳಿಸಿಕೊಂಡನು. ಆದರೆ ಭಯ ಮಾತ್ರ ಅವನ ಹೃದಯದಲ್ಲೇ ಸ್ಥಾನ ಪಡೆದಿತ್ತು. ಸಮುದ್ರದತ್ತ ಕಂಡಾಗಲೆಲ್ಲಾ ಅವನಿಗೆ ಹೆದರಿಕೆಯಾಗುತ್ತಿತ್ತು. ಆದರೆ ಸಿಲೋನು ಅವನ ಹೃದಯವನ್ನು ಸೂರೆ ಮಾಡಿತ್ತು. ಅಲ್ಲಿಗೆ ಹೋಗಲೇ ಬೇಕು. ಭಯ ಹಿಂದಿಸಿಂದ ಎಳೆಯುತ್ತಿತ್ತು.

ಹಾಗೆಯೇ ಬಿಟ್ಟು ಬಿಡುವುದೇನು? ಚೆಂಗ್—ಹೋ ಅದಕ್ಕೆ ಸಿದ್ಧನಾಗಿರಲಿಲ್ಲ. ಅದಕ್ಕಾಗಿ ಇನ್ನೊಂದು ಹಂಚಿಕೆಯನ್ನು ಹೂಡಿದನು. ಕಂಡವರ ಮಕ್ಕಳನ್ನು ಬಾವಿಯಲ್ಲಿ ಹಾಕಿ ಆಳ ನೋಡುವ ಅಭ್ಯಾಸ ಕೆಲವರಿಗಿದೆಯಂತೆ. ಆದು ಚೆಂಗ್—ಹೋನಿಂದಲೇ ಬಂದಿರಬಹುದು. ಆದರೆ ಅವನು ಕಂಡವರ ಮಕ್ಕಳನ್ನು ಬಾವಿಯಲ್ಲಿ ಹಾಕಲಿಲ್ಲ. ಬಾವಿ! ಅದು ಬಹಳ ಚಿಕ್ಕದಲ್ಲವೇ? ಅಗರಿಂದ ಅವನಿಗೆ ಪ್ರಯೋಜನವಾದರೂ ಏನು? ಅವನಿಗೆ ಬೇಕಾದದ್ದು ವಿಶಾಲ ಸಾಗರದಾಚೆ ಸಂಚಾರ ಮಾಡುವವರು.

ಅದದ್ದಾಗಲೆಂದು ಅವನು ಮನಸ್ಸಗಟ್ಟಿಮಾಡಿಕೊಂಡನು. ಆಳೆಯ ಹಡೆಯನ್ನು ಒಕ್ಕಿಟ್ಟುಕೊಂಡನು. ಸಾಗರದಾಚೆ ಸಾಗಲು ಇನ್ನೊಂದು ತಂಡವನ್ನು ತಯಾರು ಮಾಡಿದನು. ಕೆಲವೇ ತಿಂಗಳುಗಳಲ್ಲಿ ಅದು ಚೈನಾದಿಂದ ಹೊರಟಿತು. ಅದು ಕ್ರಿ. ಶ. ೧೪೦೮ರ ಆರಂಭದಲ್ಲಿ. ಸ್ವತಃ ಚೆಂಗ್—ಹೋನೇ ಸಿದ್ಧತೆಯತ್ತ ಗಮನ ಕೊಟ್ಟಿದ್ದನು.

ಅದೇ ಅಕಾರಕ್ಕೇರಲು ಹೇಳುತ್ತದೆಯಾದರೂ ಮಾನವ ಮರುಳಾಗಬೇಕಲ್ಲ! ಆಶೆ ಅವನನ್ನು ಸಾಗರದಾಚೆ ಸಿಂಹಳಕ್ಕೆ ಹೋಗಲು ಪ್ರೇರೇಪಿಸುತ್ತಿತ್ತು. ಹಿಂದಿನ ಭಯದಿಂದಾಗಿ ಆತನು ಪ್ರಯೋಗ ನಡೆಸಿದನು. ಸ್ವತಃ ತಾನೇ ಸಿದ್ಧತೆಯತ್ತ ಗಮನ ಕೊಟ್ಟರೂ ಅವನು ಮಾತ್ರ ಅವರೊಂದಿಗೆ ಸೇರಿಕೊಳ್ಳಲಿಲ್ಲ. ಸರಿ ಅವರು ಹೋಗಿ ಬರಲಿ, ಆಗ ಪರಿಸ್ಥಿತಿ ಹೇಗಿದೆಂಬುದರ ಅರಿವಾಗುತ್ತದೆ. ಒಡನೆ ತಾನು ಹೋದರೆ ಸರಿ, ಪರಿಸ್ಥಿತಿ ಒಗ್ಗುವಂತಿದ್ದಲ್ಲಿ.

ಪ್ರಯೋಗಕ್ಕಾಗಿಯೇ ಆ ತಂಡವನ್ನು ಕಳುಹಿಸಿದ್ದೆಂದು. ಆಗಲೇ ತಿಳಿಸಿರುವಂತೆ, 'ಅತಿಥಿದೇವೋ ಭವ' ಎನ್ನುವ ರಾಷ್ಟ್ರಗಳತ್ತವೇ ಆ ತಂಡವನ್ನು ಕಳುಹಿಸಲಾಗಿತ್ತು. ಹಿಂದೆ ಎಲ್ಲಿ ಪೆಟ್ಟು ಸಿಕ್ಕಿತ್ತೋ ಅಲ್ಲಿಗೆ ಹೋಗಲು ಅವರಿಗೆ ಸೂಚನೆ ಕೊಟ್ಟಿರಲಿಲ್ಲ, ಬದಲು ಹೋಗಕೂಡದೆಂದು ಆಜ್ಞೆ ಕೊಡಲಾಗಿತ್ತು. ಆದುದರಿಂದ ಆ ತಂಡವು ಜಾವಾ ಸಯಾಂ ಮತ್ತು ಭಾರತಗಳಿಗೆ ಬಂದು ಹಿಂತಿರುಗಿತ. ಭಾರತದಲ್ಲಿ ಅವರು ಕೊಚ್ಚಿ ಕಲ್ಲಿಕೋಟೆ ಅಲ್ಲದೆ ಇನ್ನಿತರ ಕೆಲ ಬಂದರುಗಳಲ್ಲಿ ಹಡಗುಗಳನ್ನು ನಿಲ್ಲಿಸಿ, ಹಿಂದಿನ ತಂಡದವರು ನಡೆಸಿದ್ದ ಕಳ್ಳತನ—ಕೊಲೆ ದರೋಡೆಗಳ ಪ್ರತಿಫಲವಾಗಿ ಇನ್ನೇನಾದರೂ ದೊರಕಬಹುದೇ ಎಂದು ಭಯದಿಂದಲೇ ಕಾಲಿಟ್ಟಿದ್ದರು. ಎಂತಹ ಕೊಲೆಗಡುಕನನ್ನೂ ಕ್ಷಮಿಸಿ ಬಿಡುವ ಮನೋಭಾವನೆಯುಳ್ಳ ಭಾರತೀಯರು, ಆದಲ್ಲೂ ಅತಿಥಿಗಳಂತೆ ಬಂದಿರುವವರಿಗೆ ಅಪಮಾನ ಮಾಡಿಯಾರೇ? ಅವರನ್ನು ಕರೆದು ಕುಳ್ಳಿರಿಸಿ ಸತ್ಕರಿಸಿ ಕಳುಹಿಸಲಾಯಿತು. ಆ ಹಾಲಿತ್ತಿದ್ದ ಕೈಗೆ ಇಂದು ಚೈನಾದಲ್ಲಿರುವ ಕಮ್ಯೂನಿಸ್ಟ ಕಣ್ಣಡಿ ಹಾವು ಕಚ್ಚುತ್ತಿರುತ್ತದೆ. ಅದಕ್ಕೇನು ಗೊತ್ತು, ಹಾಲಿತ್ತಿರುವ ಕೈಗೆ ಕಚ್ಚಬಾರದೆಂದು? ಅದಕ್ಕೆ ಗೊತ್ತಿರುವುದು ಒಂದೇ— ಕಚ್ಚುವದು ಬಾಯಿ

(೧೧ನೇ ಪುಟ ನೋಡಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ.

O S 139/62 REP 192/64

ಪಿ. ಸುರೋಚನ ರಾವ್—ಅರ್ಜಿದಾರಳು.

ಮತ್ತು

ಕೊಲ್ಲು ಶೆಟ್ಟಿ ಕೂಡಾ ಎದ್ರಿರು,

4ನೇ ಎದ್ರಿ ಚಂದಯ್ಯ ಶೆಟ್ಟಿ, ನಾಗಯ್ಯ ಶೆಟ್ರ ಅಳಿಯ ಚೇರ್ಕಾಡಿಗ್ರಾಮ, ಉಡುಪಿ ತಾಲೂಕು—ಇವರಿಗೆ.

ಉಡ್ಪಿ ಮುನ್ಸಿಫ್ ಕೋರ್ಟ O. S. 153/57 ನೇ ದಾವೆಯಲ್ಲಿ ಡಿಪೋಜಿಟು ಇರುವ ಎದ್ರಿಗ ಹಕ್ಕಿನ ಎಲ್ಲ ಜನ್ನು ಜಪ್ತಿಗೆ ಆಪ್ಪೆನ್ನಿಸಿ ಅರ್ಜಿದಾರಳ ಮಾಡಿದ ಮೇಲ್ಕಾಣಿಸಿದ ಅನುಸಾರ ಅರ್ಜಿಯು ತಾ. 29.8.64ಕ್ಕೆ ಹಗಲು 10 ಗಂಟೆಗೆ ತನ್ನಿಗೆ ಇಟ್ಟಿದೆ ಎಂದು ತಿಳಿಸಲಾಗಿದೆ.

ಪಿ. ರಾಮಚಂದ್ರ ರಾವ್.

B A B L.

ಎಡ್ವಕೇಟ್.

ಉಡುಪಿ, 30-7-64

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—1.

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

360 ಪುಟಗಳಿಗೂ ಮಿಕ್ಕಿದ

ಪಾಕೇಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಒಂದು ಪ್ರತಿ ಬೇಕಾದವರು ಅಂಚೆ ವೆಚ್ಚ 30ನ. ಪೈ. ಸೇರಿಸಿ ಬೇಕಾದ ಪುಸ್ತಕದ ಬೆಲೆಯನ್ನು ಮನಿಯಾರ್ಡರ್ ಮಾಡುವುದು. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ಗುಲಾಮರ ಗುಲಾಮ

ಸುಲ್ತಾನ್ ಬಾಲ್ಬನನ ಸ್ವದೇಶ ಪ್ರೇಮ

ಕ್ರಿ. ಶ. ಏಳನೆಯ ಶತಮಾನದ ಮಧ್ಯಾವಧಿಯಲ್ಲಿ (೬೩೬-೩೭)ಯೇ ಮುಹಮ್ಮದರು ಭಾರತದ ಮೇಲೆ ದಂಡೆತ್ತಿ ಬರುವ ಪ್ರಯತ್ನ ಮಾಡಿದ್ದರೂ ಅದು ಮುಹಮ್ಮದ ಬಿನ್ ಕಾಸೀಮನ ನಾಯಕತ್ವದಲ್ಲಿ ಕ್ರಿ ಶ. ೭೧೨ರಲ್ಲಿ ಮಾತ್ರ ಸಫಲವಾಯಿತು. ಆದರೆ ಅಂದಿನ ಆಕ್ರಮಣವು ಸಾಮ್ರಾಜ್ಯ ವಿಸ್ತರಣೆಗಾಗಿರದೆ ಕೇವಲ ಮತ ಪ್ರಚಾರಕ್ಕಾಗಿತ್ತು. ಮುಂದೆ ಕ್ರಿ. ಶ. ೧೦೦೦ದಿಂದ ೧೦೨೬ರ ವರೆಗಿನ ಕಾಲು ಶತಮಾನದಲ್ಲಿ ೧೭ ಬಾರಿಗೂ ಮಿಕ್ಕಿ ಭಾರತದ ದಂಡಯಾತ್ರೆಗೆ ಬಂದ ಘಜನಿಯ ಮಹಮೂದನು ಸಂಪತ್ತಿನ ಆಶೆಯನ್ನು ಮಾತ್ರ ಇಟ್ಟುಕೊಂಡುದರಿಂದ ಅವನ ಗುರಿಯು ಲೂಟಿಮಾಡಿ ಐಶ್ವರ್ಯವನ್ನು ಸೂರೆ ಮಾಡುವುದು ಮಾತ್ರ ಆಗಿತ್ತು. ಭಾರತದಲ್ಲಿ ಸಾಮ್ರಾಜ್ಯ ಕಟ್ಟುವ ಆಶೆಯಿಂದ ಮೊದಲು ಇಲ್ಲಿಗೆ ಧಾಳಿಮಾಡಿದ ಇಸ್ಲಾಮೀಯನು ಘೋರಿ ಮಹಮ್ಮದನು. ಅವನು ವಾಯವ್ಯ ಭಾರತವನ್ನು ಪಾದಾಕ್ರಾಂತ ಮಾಡಿ ತನ್ನ ಗುಲಾಮರಲ್ಲಿ ವಿಶ್ವಾಸ ಪಾತ್ರನಾದ ಕುತುಬುದ್ದೀನನನ್ನು ಇಲ್ಲಿ ವೈಸರಾಯಿಯಾಗಿ ನೇಮಿಸಿದನು. ಆದರೆ ಘೋರಿಯ ಮರಣಾನಂತರ (೧೨೦೬)ಈತನೇ ದೆಹಲಿಯ ಗದ್ದುಗೆಗೇರಿ ಸ್ವತಂತ್ರನಾದನು. ಗುಲಾಮ ವಂಶದ ಸಂಸ್ಥಾಪಕನಾದನು. ಮೊತ್ತಮೊದಲ ಭಾರತೀಯ ಇಸ್ಲಾಮೀ ಸುಲ್ತಾನನಾದನು. ಭಾರತವನ್ನೇ ಸ್ವದೇಶವೆಂದು ತಿಳಿದನು ಇವನ ನಂತರವೂ ಗುಲಾಮರಾಗಿದ್ದವರೂ ಗುಲಾಮರ ಗುಲಾಮರಾಗಿದ್ದವರೂ ಉತ್ತರಾಧಿಕಾರಿಗಳಾಗಿ ಬಂದು ಭಾರತದಲ್ಲಿ ೧೨೯೦ರ ತನಕ ಇಲ್ಲಿ ರಾಜ್ಯಭಾರವನ್ನು ಮಾಡಿದರು. ಈ ವಂಶದ ಅರಸರಲ್ಲೆಲ್ಲ ಅತಿ ಪ್ರಖ್ಯಾತನಾದವನು ಬಾಲ್ಬನ್.

ಮೂಲತಃ ಬಾಲ್ಬನನು ತುರ್ಕೀಯನು ಇವನ ತಂದೆ ೧೦,೦೦೦ ಕುಟುಂಬಗಳ ಖಾನನಾಗಿದ್ದನು. ಬಾಲ್ಬನನನ್ನು ಮೊಂಗೋಲರು ಸೆರೆಹಿಡಿದು ಬಗ್ದಾದದಲ್ಲಿ ಮಾರಿದರು. ಆತನ ಯಜಮಾನ ಬಾಲ್ಬನನನ್ನು ಡಿಲ್ಲಿಗೆ ಕರೆದೊಯ್ದಲ್ಲಿ ಗುಲಾಮರ ಅರಸ ಇಲ್ತುತಿಮಿಶನು [೧೨೧೧–೧೨೩೬) ಕೊಂಡುಕೊಂಡನು. ಅಂದಿನಿಂದ ರಾಜನ ಸೇವಕರಲ್ಲಿ ಬಾಲ್ಬನನೊಬ್ಬನಾದನು. ಇಲ್ತುತಿಮಿಶನ ಬಳಿಕ ಸುಲ್ತಾನ ರೆಜಿಯಾ (೧೨೩೬—೪೦) ಳ ಆಳಿಕೆಯಲ್ಲಿ ಬಾಲ್ಬನ್ ಪ್ರಧಾನ ಬೇಟೆಗಾರನೆನಿಸಿದನು ಮುಂದಿನ ಅರಸ ಬಹ್ರಾಮಶಹನು ಈತನ ಅಧಿಕಾರವನ್ನು ಬಲಪಡಿಸಿದನು. ನಾಸಿರುದ್ದೀನನ ಆಡಳಿತೆಯಲ್ಲಿ ಇವನು ಪ್ರಬಲ ಸೇನೆಯನ್ನು ಕಟ್ಟಿ ಮಂಗೋಲರು ಹಿಂದೆ ಸರಿಯುವಂತೆ ಮಾಡಿದನು. ಅರಸನು ರಾಜ್ಯದ ಸಕಲ ಕಾರ್ಯಭಾರಗಳನ್ನೂ ಬಾಲ್ಬನನಿಗೆ ಒಪ್ಪಿ ತಾನು ನಿಶ್ಚಿಂತನಾಗಿದ್ದನು. ಹಾಗಾಗಿ ಈತನೇ ಅಪ್ರತ್ಯಕ್ಷ ಪ್ರಭುವೆನಿಸಿದನು. ಆಡಳಿತೆಯಲ್ಲಿ ಸುಧಾರಣೆಗಳನ್ನು ಮಾಡಿ ಇವನು ಸುಲ್ತಾನನ ಅಧಿಕಾರವನ್ನು ಬಿಗಿಗೊಳಿಸಿದನು. ಇವನ ಅಭ್ಯುದಯವನ್ನು ತಾಳಲಾರದ ಕೆಲವರು ರಾಜನ ಕಿವಿಯೂದಿದರು. ಬಾಲ್ಬನನು ಕೆಲಕಾಲ ದೂರ ಸರಿದರೂ, ರಾಜ್ಯದ ಮೇಲೆ ಮೊಂಗೋಲರ ಧಾಳಿ ಮತ್ತು ದಂಗೆಗಳುಂಟಾಗಿ ಇವನನ್ನೇ ಮತ್ತೆ ರಾಜನು ಕರೆಯಲೇ ಬೇಕಾಯಿತು. ಆಗ ಮರಳಿ ಸೇವೆಗೆ ಸೇರಿದ ಇವನು ದಂಗೆಗಳನ್ನು ಅಡಗಿಸಿ, ಮೊಂಗೋಲರನ್ನು ತಡೆದು ನಿಲ್ಲಿಸಿದನು. ವೈಯುಕ್ತಿಕ ಸಾಮರ್ಥ್ಯ ಮತ್ತು ಅಸಾಧಾರಣ ಕರ್ತೃತ್ವ ಶಕ್ತಿಯಿಂದಾಗಿ ನಾಸೀರುದ್ದೀನನು ಮೃತ್ಯುವಶನಾದೊಡನೆಯೇ ೧೨೬೬ರಲ್ಲಿ ಗುಲಾಮರ ಗುಲಾಮನಾದ ಬಾಲ್ಬನ್ ದೆಹಲಿ ಸಿಂಹಾಸನಾಧೀಶ್ವರನಾದನು.

ರಾಜನ ಪ್ರತಿಷ್ಠೆಯನ್ನು ಪುನರ್ ಸ್ಥಾಪಿಸುವುದು, ಆಡಳಿತೆಯನ್ನು ಪುನರ್ಘಟಿಸುವುದು ಮತ್ತು ಮೊಂಗೋಲರನ್ನು ಪರಿಣಾಮಕಾರಿಯಾಗಿ ತಡೆದು ನಿಲ್ಲಿಸುವುದು ಇವನ ಮುಂದಿದ್ದ ಮುಖ್ಯ ಕಾರ್ಯಗಳು. ಮಾರ್ಗಗಳ್ಳರನ್ನು ನಾಮಾವಶೇಷ ಮಾಡಿದ ಬಾಲ್ಬನನು ವ್ಯಾಪಾರಕ್ಕೆ ನಿರಾತಂಕತೆಯನ್ನು ತಂದುಕೊಟ್ಟನು. ಅನ್ಯಾಯ ಮತ್ತು ಅತ್ಯಾಚಾರಿಗಳೆಲ್ಲರನ್ನೂ ಹಿಡಿದು ಕೊಂದು ಜನತೆಯಲ್ಲಿ ಸಾಮಾಜಿಕ ಭದ್ರತೆಯ ಭಾವನೆಯನ್ನುಂಟು ಮಾಡಿದನು; ತನ್ನ ಅಧಿಕಾರವನ್ನು ಪ್ರಶ್ನಿಸುವವರನ್ನೆಲ್ಲ ನಾಶ ಮಾಡಿದನು. ಹೀಗೆ ದಂಡನೆಗೆ ಗುರಿಯಾದವರಲ್ಲಿ ಅವನ ಚಿಕ್ಕಪ್ಪನ ಮಗನೂ ಇದ್ದನು.

ಬಂಗಾಳದ ಗವರ್ನರನೆಂದು ಬಾಲ್ಬನನು ನೇಮಿಸಿದ ಟಗ್ರಿಲ್ ಖಾನನು ೧೨೭೯ರಲ್ಲಿ ದಂಗೆಯೆದ್ದನು. ಈ ಸಮಯದಲ್ಲಿ ರಾಜನು ಮುದುಕನಾಗಿದ್ದುದರಿಂದ ಅಮೀರಖಾನನ ನೇತೃತ್ವದಲ್ಲಿ ಸೇನೆಯನ್ನು ಕಳಿಸಿದನು. ಆದರೆ, ಖಾನನು ಸೋತು ಮರಳಲು ರಾಜನು ನಿರ್ದಾಕ್ಷಿಣ್ಯನಾಗಿ ವರ್ತಿಸಿ ಅವನನ್ನು ಗಲ್ಲಿಗೇರಿಸಿದನು. ಎರಡನೆಯ ಬಾರಿ ಕಳಿಸಿದ ಸೇನೆಯೂ ಇಚ್ಛಿತ ಫಲಗಳಿಸದಿರಲು ತಾನೇ ಸೇನೆಯನ್ನೊಯ್ದು ದಂಗೆಯನ್ನಡಗಿಸಿದನು. ಜೀವದಾಸೆಯಿಂದೆ ಓಡುತ್ತಿದ್ದ ಟಗ್ರಿಲ್ ಖಾನನನ್ನು ಹಿಡಿದು ನಿಷ್ಕರುಣೆಯಿಂದ ಕೊಂದನು. ಆತನ ಸಂಬಂಧಿಕರೆಲ್ಲರನ್ನು ಎಲ್ಲೆಂದರಲ್ಲಿ ಸೆರೆಹಿಡಿದು ಅವರನ್ನು ಕಗ್ಗೊಲೆಮಾಡಿದನು. ತನ್ನ ಮಗ ಬುಗ್ರಾ ಖಾನನ್ನು ಬಂಗಾಳದ ರಾಜ್ಯಪಾಲನೆಂದು ನೇಮಿಸಿದನು.

ಬಾಲ್ಬನನು ಸ್ವಲ್ಪವಾದರೂ ಅಳುಕಿದ್ದಿದ್ದರೆ, ಅದು ಮಂಗೋಲರ ಬೃಹದಾಕ್ರಮಣಕ್ಕೆ. ಆದರೆ ಇವನ ಮಗ ಮಹಮ್ಮದನು ಮೊಂಗೋಲರನ್ನು ಹೊಡೆದೋಡಿಸಿದನು. ೧೨೮೫ರಲ್ಲಿ ಮೊಂಗಲರು ಪಂಜಾಬವನ್ನು ನುಗ್ಗಿದಾಗ, ರಾಜಕುಮಾರ ಮಹಮ್ಮದನು ಅವರನ್ನು ನದೆಬಡಿಯಲು ಹೋದನು. ಆದರೆ ನಡೆದ ಸಂಗ್ರಾಮದಲ್ಲವನು ಸತ್ತು ಹೋದನು. ಇದರಿಂದಾಗಿ ಅತೀವ ಆಘಾತಕ್ಕೊಳಗಾದ ಮುದುಕ ಬಾಲ್ಬನ್ ಮರು ವರ್ಷದಲ್ಲಿಯೇ ಸಾವನ್ನಪ್ಪಿದನು.

ಮಧ್ಯ ಕಾಲೀನ ಭಾರತೀಯ ಚರಿತ್ರೆಯಲ್ಲಿ ಬಾಲ್ಬನನ ಹೆಸರು ಚಿರಸ್ಮರಣೀಯವಾಗಿದೆ. ಒರ್ವ ಸಾಮಾನ್ಯ ಗುಲಾಮನಾಗಿದ್ದ ಆತನು ಡಿಲ್ಲಿ ಸಿಂಹಾಸನವನ್ನಡರಿದನು. ಅಂದಿನ ಬಿರುಗಾಳಿಯ ಕಾಲದಲ್ಲಿಯೂ ಹಾರಿ ಹೋಗದೆ ಕೆಚ್ಚೆದೆಯಿಂದ ಹೋರಾಡಿ, ತನ್ನ ರಾಜ್ಯದ ಮೇರೆ ಗಳನ್ನು ವಿಸ್ತರಿಸಿದನು. ಆದರೆ, ದಿಗ್ವಿಜಯದ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡಿದ್ದ ಅವನು ಮೊಂಗೋಲರ ಆಕ್ರಮಣದಿಂದಾಗಿ ಅತೃಪ್ತನಾಗಿಯೇ ಉಳಿಯಬೇಕಾಯಿತು. ಮಾಳವ ಮತ್ತು ಗುಜರಾಥಗಳನ್ನು ಮರಳಿ ಗೆಲ್ಲಬೇಕೆಂದು ಆತನ ರಾಜಕೀಯ ಸಲಹೆಗಾರರು ನುಡಿದಾಗ ಅವನು ನೀಡಿದ ಉತ್ತರ ಸ್ಮರಣೀಯವಾಗಿದೆ: "ಉತ್ತರದ ಗಡಿಯಲ್ಲಿ ಪದೇ ಪದೇ ಕರಿ ನೋಡದಂತೆ ಮುತ್ತುತ್ತಿರುವ ಮೊಂಗೋಲರನ್ನು ಮೊತ್ತ ಮೊದಲು ಧ್ವಂಸ ಮಾಡುವಲ್ಲಿ ನಮ್ಮ ಶಕ್ತಿಯನ್ನು ಕೇಂದ್ರೀಕರಿಸ ಬೇಕು" ಪರರಾಕ್ರಮಣಕ್ಕೆ ಅವಕಾಶ ನೀಡಬಾರದೆಂಬ ಬಾಲ್ಬನನ ರಾಜಕೀಯ ಪ್ರಜ್ಞೆ ಅತ್ಯುನ್ನತ ಮಟ್ಟದಲ್ಲಿಲ್ಲವೆ? ಇಡಿಯ ಉತ್ತರ ಭಾರತವನ್ನಾತನು ಭದ್ರಪಡಿಸಿದುದರಿಂದ ಮುಂದಿನ ಸುಲ್ತಾನರು ದಕ್ಷಿಣದತ್ತ ಕಣ್ಣುಹಾಯಿಸಬಹುದಾಯಿತು.

ಬಿಗುಹೀನ ಆಡಳಿತಾ ವಿಧಾನಕ್ಕೆ ಹೆಸರಾದ ಬಾಲ್ಬನನು ಕ್ರೂರಿಯೆಂಬ ಹೆಸರು ಪಡೆಯುವುದು ಸ್ವಾಭಾವಿಕ. ತನ್ನ ಶತ್ರುಗಳನ್ನು ಆತನು ಕಾಣುವ ಕಣ್ಣುಗಳೇ ರಾಕ್ಷಸೀಯ. ಇದನ್ನು ಸಂಪೂರ್ಣ ಸಮರ್ಥಿಸುವುದು ಸಾಧ್ಯವಿಲ್ಲವಾದರೂ ಅಂದಿನ ರಾಜಕೀಯ ಅಸ್ಥಿರತೆಯ ಕಾಲದಲ್ಲಿ ಇಂತಹ ಕಠೋರತೆಯು ಅಗತ್ಯವಾಗಿತ್ತು ಎಂಬುದು ನಿಸ್ಸಂದಿಗ್ಧ. ರಾಕ್ಷಸ ಸ್ವಭಾವದ ಚೆಂಗೀಜಖಾನನ ಉತ್ತರಾಧಿಕಾರಿಗಳ ದೊಡ್ಡ ಸೇನೆಯನ್ನಾತನು ಎದುರಿಸಿ ದೇಶದ ಗಡಿಯನ್ನು ರಕ್ಷಿಸಬೇಕಿತ್ತು. ಹಿಂದೂ ನಾಯಕರಲ್ಲಿ ಹೆರಡಿದ್ದ ಅಸಂತೋಷವನ್ನು ದೂರ ಮಾಡಬೇಕಿತ್ತು. ತುರ್ಕಿಯ ಗವರ್ನರ ಮತ್ತು ಭೂ ಮಾಲಕರ ದರ್ಪವನ್ನೂ ಇಳಿಸಬೇಕಿತ್ತು. ಇವೆಲ್ಲವನ್ನೂ ಏಕ ಕಾಲದಲ್ಲಿಯೇ ಮಾಡಬೇಕಾಗಿತ್ತು. ಹಾಗಾಗಿ ಕಠೋರತೆಯನ್ನು ಬಾಲ್ಬನನು ಅನುಸರಿಸುವುದು ಅನಿವಾರ್ಯವಾಗಿತ್ತು.

ಆಡಳಿತೆಯಲ್ಲಿ ನ್ಯಾಯ ದೊರಕಿಸುವುದರಲ್ಲಿ ಬಾಲ್ಬನನದು ಎತ್ತಿದ ಕೈ. ತನ್ನ ಮಿತ್ರರಿಗಾಗಲಿ ಬಂಧುಗಳಿಗಾಗಲೀ ಯಾವ ಉದಾರತೆಯನ್ನೂ ಇವನು ತೋರಿಸುತ್ತಿರಲಿಲ್ಲ. ಯಾರಿಗಾದರೂ ಯಾರಾದರೂ ಅನ್ಯಾಯವೆಸಗಿದರೆ, ಅನ್ಯಾಯಿಗಳಿಗೆ ತೀವ್ರ ದಂಡನೆ ಸಿಗುತಿತ್ತು ಮಾತ್ರವಲ್ಲ, ಅನ್ಯಾಯಕ್ಕೊಳಗಾದವನಿಗೆ ಪರಿಹಾರವೂ ದೊರೆಯುತಿತ್ತು.

ಬಾಲ್ಬನನ ನ್ಯಾಯಾಲಯವು ಅಭೂತವಾಗಿತ್ತು. ಯಾವ ಹಿಂದಿನ

(೯ನೇ ಪುಟ ನೋಡಿರಿ)

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ.ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಚಂದಾದಾರರಲ್ಲಿ ವಿನಂತಿ.

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆಯ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡ ಬಹುದು. ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ ಪ್ಪಿ ಮಾಡಿದರೆ 70 ನಯಾಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ.

ಜೀವನ್ಮೃತವಾದ

ಸಮರವಿರಾಮ ರೇಖೆ

ಕಾಶ್ಮೀರದಲ್ಲೊಂದು ಸಮರವಿರಾಮ ರೇಖೆಯಿದೆ. ಇದನ್ನು ದಾಟುವ ಅಧಿಕಾರ ಪಾಕಿಸ್ತಾನಕ್ಕೂ ಇಲ್ಲ; ಭಾರತಕ್ಕೂ ಇಲ್ಲ. ಇದುವರೆಗಿನ ಅಧಿಕೃತ ವರದಿಗಳ ಆಧಾರದಿಂದ ಹೇಳುವುದಾದರೆ, ಭಾರತೀಯರಾಗಲೀ ಭಾರತೀಯ ಗಡಿ ರಕ್ಷಕರಾಗಲೀ ಈ ರೇಖೆಯನ್ನು ದಾಟಿದ ನಿದರ್ಶನಗಳೇ ಇಲ್ಲ. ಆದರೆ, ಪಾಕಿಸ್ತಾನವು ಒಂದಲ್ಲ ನೂರುಬಾರಿ ಈ ಗಡಿಯನ್ನು ದಾಟಿ, ಭಾರತೀಯ ಪ್ರದೇಶಕ್ಕೆ ನುಗ್ಗಿ ಬಂದ ಉದಾಹರಣೆಗಳಿವೆ. ಈ ರೇಖೆಯ ಬಳಿ ಯಾವುದೇ ಮಿಲಿಟರಿ ಚಟುವಟಿಕೆಗಳು ಪ್ರತಿಬಂಧಿಸಲ್ಪಟ್ಟಿದ್ದರೂ ಪಾಕಿಸ್ತಾನದ ಸೀಮಾರಕ್ಷಕರು ಪದೇ ಪದೇ ಗುಂಡುಗಳನ್ನು ನಮ್ಮತ್ತ ಕಡೆ ತೂರಿದ್ದಾರೆ; ಚಿಕ್ಕ ಹಾಗೂ ಮಧ್ಯಮ ತರದ ಟ್ಯಾಂಕರುಗಳನ್ನು ಅವರು ಬಳಸಿಕೊಂಡಿದ್ದಾರೆ ಎಂದರೆ ಈ ಸಮರವಿರಾಮರೇಖೆಯು ಕೇವಲ ಭಾರತೀಯರಿಗೆ ಮಾತ್ರವಿರುವಂತಿದೆಯಲ್ಲದೆ ಪಾಕಿಸ್ತಾನವು ಇದನ್ನು ಸಮರವಿರಾಮ ರೇಖೆಯೆಂದು ತಿಳಿದದ್ದಿಲ್ಲ.

ಈ ಸಮರ ರೇಖೆಯು ತಾನೊಂದೇ ಇರುತಿದ್ದರೆ ಚಿಂತೆಯಿಲ್ಲ. ಆದರೆ, ಇದನ್ನು ಸಂರಕ್ಷಿಸುವ ಸಂಯುಕ್ತರಾಷ್ಟ್ರ ಸಂಘದ ಒಂದು ನಿರೀಕ್ಷಕರ ಮಂಡಳಿಯಿದೆ. ಉಭಯ ದೇಶಗಳು ರೇಖೆಯನ್ನು ಉಲ್ಲಂಘಿಸದಂತೆ ಮತ್ತು ಅದರ ಗುಂಟ ವಿದ್ರೋಹಕಾರಕ ಚಟುವಟಿಕೆಗಳನ್ನು ನಡೆಸದಂತೆ ನೋಡುವುದೇ ಅದರ ಕರ್ತವ್ಯ. ಆದರೆ ಈ ಮಂಡಳಿಯು ತನ್ನ ಕಾರ್ಯವನ್ನು ನಡೆಸುತ್ತಿರುವಂತೆಯೇ ಪಾಕಿಸ್ಥಾನದ ಉದ್ರೇಕಕಾರಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಅಂತಾರಾಷ್ಟ್ರೀಯ ಮಹತ್ವದ ಸಭೆ ಸಮ್ಮೇಳನಗಳು ಸೇರುತ್ತಿರುವಾಗ ಇಂತಹ ವಿದ್ರೋಹಕಾರಕ ಕೃತ್ಯಗಳು ಎಲ್ಲೆ ಮೀರುತ್ತ ಬರುತ್ತಿರುವುದು ಎಲ್ಲರೂ ತಿಳಿದಿರುವ ರಹಸ್ಯ. ಕಳೆದ ತಿಂಗಳಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಪರಿಷತ್ತು ಲಂಡನಿನಲ್ಲಿ ಸೇರುವುದಕ್ಕೆ ಮೊದಲು ಪ್ರಾರಂಭವಾದ ಈ ಸೀಮೋಲ್ಲಂಘನವು ಇದೀಗ ನವದೆಹಲಿಯಲ್ಲಿಯಲ್ಲಿ ಕೂಡಿದ ವಿಜ್ಞಾನಿಗಳ ಸಮ್ಮೇಳನದ ವರೆಗೂ ನಡೆಯುತ್ತ ಬಂದಿದೆ. ಇದೇನೂ ವಿಚಿತ್ರವೆನ್ನುವಂತಿಲ್ಲ. ಈ ಬಗೆಯ ಘಟನೆಗಳು ದಿನದಿನವೂ ಅಲ್ಲಿ ನಡೆಯುತ್ತಿವೆ. ಭಾರತಸರಕಾರವು ಸಂಯುಕ್ತ ರಾಷ್ಟ್ರಸಂಘ ನಿರೀಕ್ಷಕ ಮಂಡಳಿಗೆ ಪ್ರತಿಭಟನೆ ಸಲ್ಲಿಸುತ್ತಲೇ ಬಂದಿದೆ. ಇದೂ ದೈನಂದಿನ ಕಾರ್ಯಕ್ರಮಗಳಲ್ಲೊಂದೆಂಬಂತೆ ಪರಿಣಮಿಸಿದೆ.

ಇದಕ್ಕೆ ಇತ್ತೀಚೆಗಿನ ಒಂದು ವಿಚಾರವನ್ನು ಎತ್ತಿಕೊಳ್ಳಬಹುದು. ಈ ವರ್ಷದ ಜೂನ್ ತಿಂಗಳೊಂದರಲ್ಲೇ ಪಾಕ್ ಸೈನಿಕರು ಐದು ಬಾರಿ ಸಮರ ವಿರಾಮ ರೇಖೆಯನ್ನು ಉಲ್ಲಂಗಿಸಿದೆಯೆಂದು ನಿರೀಕ್ಷಕ ಮಂಡಳಿಯೇ ಒಪ್ಪಿಕೊಳ್ಳುತ್ತದೆ. ಜೂನ್ ೨೧, ೨೫, ೨೬, ೨೭ ಮತ್ತು ೩೦ರಂದು ಯುದ್ಧವಿರಾಮ ಒಪ್ಪಂದವನ್ನು ಪಾಕಿಸ್ತಾನವು ಉಲ್ಲಂಘಿಸಿದೆಯೆಂದು ಇದು ಸಾರಿದೆ. ಜುಲೈ ತಿಂಗಳ ವಿವರಗಳು ಇಷ್ಟರಲ್ಲಿಯೇ ದೊರೆಯಬಹುದು.

ನಿರೀಕ್ಷಕರ ಮಂಡಳಿಯು ಈ ಸಂಬಂಧದಲ್ಲಿ ಇನ್ನೊಂದು ಮಹತ್ವದ ವಿಚಾರವನ್ನು ಒಪ್ಪಿಕೊಂಡಿದೆ. ಪಾಕ್ ಸೈನಿಕರು ಈ ರೇಖೆಯ ಗುಂಟ ಯುದ್ಧ ಸನ್ನದ್ಧರಾಗುತ್ತಿರುವಂತೆ ಕಂಡು ಬರುತ್ತಿದೆಯೆಂದದು ಹೇಳಿದೆ. ಇದು ವಿವೇಚಿಸಬೇಕಾದ ವಿಚಾರವಿದೆ.

ಸಮರವಿರಾಮ ರೇಖೆಯನ್ನು ಪಾಕಿಸ್ತಾನವು ಮೀರಿ ಉದ್ರಿಕ್ತ ಪರಿಸ್ಥಿತಿಯನ್ನುಂಟು ಮಾಡಿದೆಯೆಂದು ಈ ನಿಯೋಗವು ಹೇಳುವುದು ಇದೇನೂ ಮೊದಲನೆಯ ಸಲವಲ್ಲ. ಅದು ಎಂದಿನಿಂದಲೂ ಇದನ್ನೇ ಪುನರುಚ್ಚರಿಸುತ್ತ ಬರುತ್ತಿದೆ. ಅಧಿಕೃತ ಸೀಮೋಲ್ಲಂಘನವೇ ಇಷ್ಟು ಭಾರಿ ನಡೆದಿರುವಾಗ ಅನಧಿಕೃತವಾಗಿ ಪಾಕ್ ಗಡಿ ಸಂರಕ್ಷಕರು ಏನೇನು ಮಾಡುತಿದ್ದಾರೆಂಬುದನ್ನು ಊಹಿಸಿಯೇ ತಿಳಿದುಕೊಳ್ಳಬೇಕು.

ಈ ರೀತಿಯ ಸೀಮೆ ದಾಟುವುದನ್ನು ತಡೆಗಟ್ಟುವುದು ಸಾಧ್ಯವಿಲ್ಲವೆ? ನಿಯೋಗದ ನಾಯಕರ ಅಭಿಪ್ರಾಯದಂತೆ ನಿರೀಕ್ಷಕರ ಮಂಡಳಿಯ ಸದಸ್ಯರ ಸಂಖ್ಯೆ ಕಡಿಮೆಯಾದುದರಿಂದ ಇದು ಸಾಧ್ಯವಾಗುತ್ತಿಲ್ಲ. ನೂರಾರು ಮೈಲು ಉದ್ದದ ಈ ರೇಖೆಯನ್ನು ನೋಡಿಕೊಳ್ಳುವುದಕ್ಕೆ ಬೆರಳೆಣಿಕೆಯ ನಿಯೋಗಿಗಳು ಸಾಕಾದಾರೆ? ಆದುದರಿಂದ ನಿಯೋಗಿಗಳ ಸಂಖ್ಯೆ ಹೆಚ್ಚಬೇಕೆಂದವರು ಕೆಲ ಸಮಯದ ಹಿಂದೆ ಕೇಳಿಕೊಂಡಿದ್ದಾರೆ; ಆದರೆ, ಅವರ ಬೇಡಿಕೆಯಿನ್ನೂ ಪೂರಯಿಸಲ್ಪಡಲಿಲ್ಲ. ಅದೇಕೆ ಎಂದು ಹೇಳುವಂತಿಲ್ಲ. ಆದುದರಿಂದ ನಿಯೋಗದವರನ್ನು ಈ ಬಗ್ಗೆ ದೂರುವುದು ಸಮಂಜಸವಲ್ಲ. ತನ್ನ ಅಸಮರ್ಥತೆಯನ್ನು ವ್ಯಕ್ತಪಡಿಸಿದವರಿಂದ ಎಂತಹುದನ್ನು ನಾವು ನಿರೀಕ್ಷಿಸಬಹುದು?

ಭಾರತದ ಬಗ್ಗೆ ಚಕಾರವೆತ್ತದ ನಿಯೋಗದವರು ಪಾಕಿಸ್ತಾನವನ್ನೇ ಬೊಟ್ಟು ಮಾಡಿ ಸತ್ಯದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ರೇಖೆಯ ಬಳಿಯ ಭಾರತೀಯ ಕಾಶ್ಮೀರಿಗಳ ವಿತ್ತ ಜೀವಿತಗಳಿಗೂ ಪಾಕಿಸ್ತಾನಿಗಳು ಗಂಡಾಂತರವನ್ನು ತಂದು ಹಾಕಿದ್ದಾರೆ. ಆದರೂ ಅಲ್ಲಿರುವ ಭಾರತೀಯರು ಬಂದ ಸಂಕಷ್ಟವನ್ನು ಕೆಚ್ಚೆದೆಯಿಂದ ಎದುರಿಸಿ ಧೈರ್ಯವಂತರಾಗಿ ಪಾಕಿಸ್ತಾನದ ಬೆದರಿಕೆ- ಉದ್ರೇಕಗಳಿಗೆ ಸೊಪ್ಪು ಹಾಕದೆ ಆದರ್ಶ ನಾಗರಿಕರಾಗಿಯೇ ಉಳಿದಿದ್ದಾರೆ. ಕಾಂಕ್ರೀಟಿನ ನೆಲದ ಮೇಲಾದರೂ ನಿರಂತರ ಮಳೆ ಸುರಿದರೆ, ಅದೂ ತೂತು ಬೀಳುವುದು ಸಹಜ. ತಾಳ್ಮೆಗೂ ಒಂದು ಮಿತಿಯಿದೆ. ಈ ಮಿತಿಯನ್ನೂ ಮೀರಿದರೆ ಆಗ ಪರಿಸ್ಥಿತಿಯನ್ನೆದುರಿಸುವುದು ದುಸ್ತರವಾದೀತು. ಆದುದರಿಂದ ಪ್ರಸಂಗ ಕೈಮೀರಿ ಹೋಗದಂತೆ ಎಚ್ಚರ ವಹಿಸುವುದು ಅಗತ್ಯ. ಚೆಲ್ಲಿದ ಮೇಲೆ ಕಣ್ಣೀರು ಮಿಡಿಯುವುದಕ್ಕಿಂತ ಚೆಲ್ಲಬಹುದೆಂಬ ಕಲ್ಪನೆ ಮೂಡಿದೊಡನೆಯೇ ಎಚ್ಚರಾಗುವುದು ಜಾಣತನ.

ಇನ್ನೂ ವಿಚಿತ್ರ ಸಂಗತಿಯೊಂದಿದೆ. ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತಿನ ಕೊನೆಯಲ್ಲಿ ಹೊರಟ ಹೇಳಿಕೆಯಲ್ಲಿ ಭಾರತ—ಪಾಕಿಸ್ತಾನಗಳ ಸಂಬಂಧದ ವಿಷಯ ಪ್ರಸ್ತಾಪಿತವಾದುದರಲ್ಲಿ ಅತ್ಯುಕ್ತಿ ಏನಿಲ್ಲ; ಅದರಲ್ಲಿ ಉಲ್ಲೇಖಗೊಂಡುದು ಪಾಸ್ತವಿಕಾಂಶ ಮಾತ್ರ. ಆದರೆ, ಇದುವರೆಗೆ ಇಲ್ಲದ ಸಂಪ್ರದಾಯವೊಂದನ್ನು ಈ ಬಾರಿಯೇಕೆ ಅನುಸರಿಸಲಾಯಿತು? ಭಾರತ-ಪಾಕ್ ವರಿಷ್ಠರು ಇತ್ತ ಹೊತ್ತ ಮೊದಲ ಹೇಳಿಕೆಯು ಇದಲ್ಲ. ಇದಕ್ಕೆ ಮೊದಲು ಹತ್ತಾರು ಸಲ ಸೌಹಾರ್ದಮಯ ವಾತಾವರಣದಲ್ಲಿಯೇ ಸಮಸ್ಯೆಗಳನ್ನು ಪರಿಹರಿಸುವ ಸದಿಚ್ಛೆಯು ಉಭಯ ರಾಷ್ಟ್ರನಾಯಕರ ಮುಖದಿಂದಲೇ ಹೊರಪಟ್ಟಿದೆ. ಪ್ರಧಾನಿ ನೆಹರುರವರೊಬ್ಬರಿಗೆ ಜೀವ ಉಳಿದವರು ಈ ವಿಚಾರದಲ್ಲಿ ತುಟಿ ಬಿಚ್ಚಲಿಲ್ಲವೆಂಬ ಮಾತು ಅತಿಶಯೋಕ್ತಿ. ಪ್ರಧಾನಿಗಳಿಗೆ ಬೇಕಾಗಿದ್ದರೆ, ಅವರು ನೆಹರೂರೊಬ್ಬರಿಗೆ ಅಂಜುತ್ತಿರಲಿಲ್ಲ. ಎಂದೂ ಇರದ ಆಸಕ್ತಿ ಇಂದವರಲ್ಲಿ ಮೂಡಿ ಬಂದಿದೆ. ಇದಕ್ಕೆ ನೆಹರೂ ನಿಧನವೊಂದು ಪೂರಕ ಸಾಧನವಾಗಿರಬಹುದಷ್ಟೆ.

ಇಲ್ಲಿ ಎತ್ತಿ ಕೇಳಬೇಕಾದುದೆಂದರೆ, ಪಾಕಿಸ್ತಾನವು ಅನ್ಯಾಯವನ್ನು ಮಾಡುತ್ತಿದೆಯೆಂದು ಸಂಯುಕ್ತ ರಾಷ್ಟ್ರ ಸಂಸ್ಥೆಯು ನೇಮಿಸಿದ ನಿರೀಕ್ಷಕ ಮಂಡಳಿಯೇ ಸಾರುತ್ತಿರುವಾಗ ಕೆಲವು ಪಾಶ್ಚಾತ್ಯ ದೇಶಗಳು ಪಾಕಿಸ್ತಾನದ ಬೆನ್ನು ಚಪ್ಪರಿಸುತ್ತಿರುವುದೇಕೆ? ಪ್ರತ್ಯಕ್ಷವಾಗಿ ಹಾಗೆ ಮಾಡುವ ನೈತಿಕ ಶಕ್ತಿಯಿಲ್ಲದೆ ಪರೋಕ್ಷವಾಗಿ ಇಂತಹ ಅನ್ಯಾಯಕ್ಕೆ ಮತ್ತಷ್ಟು ಪ್ರೋತ್ಸಾಹ, ಉತ್ತೇಜನ ನೀಡುವುದೇಕೆ? ಭಾರತದ ನೈತಿಕತೆಯ ಮುಂದೆ ತಲೆಯೆತ್ತುವುದಕ್ಕೂ ಹಿಂಜರಿಯುವ ಅವರು ಭಾರತದ ಯಾವ ಅಪರಾಧಕ್ಕೆ ಇಂತಹ ಶಿಕ್ಷೆಯನ್ನು ನೀಡುತ್ತಾರೆ? ಇವೆಲ್ಲವೂ ಯಕ್ಷ ಪ್ರಶ್ನೆಗಳೇ.

ಭಾರತದ ಮೇಲೆ ಕೆಂಪು ಚೀನಾವು ಆಕ್ರಮಣ ಮಾಡಿರುವುದನ್ನು, ಮುಂದೆಯೂ ಆಕ್ರಮಣದ ಭೀತಿ ಹೆಚ್ಚುತ್ತಿರುವುದನ್ನು ಸರಿಯಾಗಿ ತಿಳಿದುಕೊಂಡ ಈ ರಾಷ್ಟ್ರಗಳು ಪಾಕಿಸ್ತಾನದ ಅಸಮರ್ಪಕ ಧೋರಣೆಯನ್ನೇಕೆ ಅರ್ಥಮಾಡಿಕೊಳ್ಳುತ್ತಿಲ್ಲ? ನ್ಯಾಯಪಕ್ಷಪಾತಿಗಳೆಂದು ಕರೆದುಕೊಳ್ಳುವವರೂ ಅನ್ಯಾಯವನ್ನು ಅರಿತೂ ಅರಿತೂ ಏಕೆ ಪ್ರತಿಭಟಿಸುವುದಿಲ್ಲ? ಒಂದಲ್ಲ ಹಲವು ರೀತಿಗಳಿಂದ ಭಾರತದ ಮೇಲೆ ಅಪರೋಕ್ಷ ಒತ್ತಡ ಹೇರುವ ಈ ಪಾಶ್ಚಾತ್ಯ ರಾಷ್ಟ್ರಗಳು ಸಮರ ವಿರಾಮ ರೇಖೆಯ ಭದ್ರ ರಕ್ಷಣೆಗೆ ಅನುವು ಮಾಡಿ ಕೊಡುವುದು ಸಾಧ್ಯವೆ? ಇವು ಮನಸ್ಸು ಮಾಡದಿದ್ದರೆ ನಿರೀಕ್ಷಕ

(ಆನೇ ಪುಟ ನೋಡಿರಿ)

ಸೇವೆಗಳು

o ಇನ್ಶೂರನ್ಸ್ ಏಜನ್ಸಿ o
o ವಿದೇಶ ವಿನಿಮಯ o
o ಎಕ್ಸಿಕ್ಯೂಟರ್ ಮತ್ತು ಟ್ರಸ್ಟಿ ಸೇವೆ o
o ಉದ್ಯಮಗಳಿಗೆ ಮುಂಗಡ o
o ಆರ್ಥಿಕ ಜ್ಞಾನ ಮತ್ತು ಕ್ರೆಡಿಟ್ ತಿಳುವಳಿಕೆ o
o ವಿದೇಶ ವ್ಯಾಸಂಗಕ್ಕೆ o
o ವೃತ್ತಿ ಮತ್ತು ಸಣ್ಣ ವ್ಯಾಪಾರ ಆರಂಭಿಸಲು ಉದ್ಯೋಗಸ್ಥರಿಗೆ ಸಾಲ o
o ಭದ್ರತಾ ಕೋಶಗಳು o
o ವಿದ್ಯಾರ್ಥಿಗಳಿಗೂ ಧಾರ್ಮಿಕ ಸಂಸ್ಥೆಗಳಿಗೂ ವಿಶಿಷ್ಟ ಅನುಕೂಲತೆಗಳು o
o ಪ್ರಾತಿನಿಧ್ಯ ಮತ್ತು ಮಾರ್ಗದರ್ಶನ ಸೇವೆ o
o ಹೊಸ ಪಾಲು ಕೊಡಿಗೆಯ ಆಡಳಿತೆ o

ಇತರ ಎಲ್ಲಾ ಬ್ಯಾಂಕಿಂಗ್ ವ್ಯವಹಾರ
........ವಿಶ್ವಸನೀಯ ಬ್ಯಾಂಕಿಂಗಿಗಾಗಿ

ಯಾವ ಪರಿಮಾಣವು ಪರಿಪೂರ್ಣ ಪ್ರಮಾಣದ್ದಾಗಿದೆ?

ಒಂದು ಪರಿಪೂರ್ಣ ಪ್ರಮಾಣದ ಬ್ಯಾಂಕು ಎಂದೆನಿಸಿಕೊಳ್ಳಬೇಕಾದರೆ.... ಪ್ರತಿಯೊಂದು ಆರ್ಥಿಕ ಸೇವಾ ಸೌಲಭ್ಯಗಳನ್ನು ಅದು ವೈಯಕ್ತಿಕವಾಗಿರಲಿ, ವ್ಯಾವಹಾರಿಕದ್ದಾಗಲಿ, ನೀಡುವ ಸಾಮರ್ಥ್ಯ ಉಳ್ಳದ್ದಾಗಿರಬೇಕು ಬ್ಯಾಂಕು ಎಲ್ಲಾ ವಿಧದ ಖಾತೆಗಳನ್ನು ಅದು ದೊಡ್ಡದಿರಲಿ, ಸಣ್ಣದಿರಲಿ ಸ್ವಾಗತಿಸುವಂತಿರಬೇಕು ನಿಮಗೆ ಬ್ಯಾಂಕಿನ ಸೌಲಭ್ಯಗಳು ಆವಶ್ಯವೆನಿಸಿದಾಗಲೆಲ್ಲಾ ಅದು ಬದಲಾವಣೆಯದ್ದಾಗಿರಲಿ, ಬೆಳವಣಿಗೆಯದ್ದಾಗಿರಲಿ ಸೇವೆ ಸಲ್ಲಿಸಲು ಶಕ್ತವಾಗಿರಬೇಕು.

ಇಂತಹ ಒಂದು ಸಾಮರ್ಥ್ಯ ಶಕ್ತಿಯ ಬ್ಯಾಂಕನ್ನು ನೀವು ಅಪೇಕ್ಷಿಸುವಿರಾದರೆ 'ಸಿಂಡಿಕೇಟ್ ಬ್ಯಾಂಕ'ನ್ನು ಸಂದರ್ಶಿಸಿರಿ. ಅಲ್ಲಿ ನಮ್ಮ ಸೇವೆಯ ಅವಕಾಶವನ್ನು ಉಪಯೋಗಿಸಿಕೊಳ್ಳಿರಿ ನಮ್ಮ ಸಹಸ್ರಾರು ಗಿರಾಕಿಗಳು ಈಗಾಗಲೇ ಸಂತೋಷಿಸಿರುವ ನಮ್ಮ ಹಿರಿದಿನ ಅರ್ಹ ಗುಣಗಳನ್ನು ನೀವು ಕೂಡಾ ಮನವರಿಕೆ ಮಾಡಿಕೊಳ್ಳಬಲ್ಲಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ಮಣಿಪಾಲ
ರಿಜಿಸ್ಟರ್ಡ್ ಆಫೀಸು: ಮಣಿಪಾಲ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ನವಯುಗ

ವರುಷ	ಉಡುಪಿ	ವಾರ
೩೩	೬-೮-೧೯೬೪	೪೯

ಕರ್ನಾಟಕದ ಗಡಿತಂಟೆ

ಇದೇ ತಿಂಗಳ ೧೫ನೆಯ ದಿನ ಸಮಸ್ತ ಭಾರತೀಯರ ಪರ್ವದಿನ, ಈ ದಿನದೊಳಗೆ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವಣ ಗಡಿತಂಟೆಯನ್ನು ಪರಿಹರಿಸುವ ದಿಟ್ಟ ಪ್ರತಿಜ್ಞೆಯನ್ನು ಕೇಂದ್ರದ ಗೃಹಮಂತ್ರಿ ಗುಲ್ಜಾರೀಲಾಲ ನಂದಾ ತೊಟ್ಟು ಕೆಲಕಾಲವಾಯಿತು. ಅವಧಿಯು ಮುಗಿಯುತ್ತ ಬರುತ್ತಿರುವಾಗ ನಂದಾಜಿಯವರು ಈ ಸಂಬಂಧದಲ್ಲಿ ಹೆಚ್ಚಿನ ಮುತುವರ್ಜಿ ವಹಿಸತೊಡಗಿದ್ದಾರೆ. ಇದು ಸ್ವಾಗತಾರ್ಹ. ಇದೀಗ ಬೊಂಬಾಯಿಯಲ್ಲಿ ಮಹಾರಾಷ್ಟ್ರದ ರಾಜಕೀಯ ನಾಯಕರೊಡನೆ ಪರ್ಯಾಲೋಚನೆ ನಡೆಸಿ, ಬೆಂಗಳೂರಿಗೆ ಅವರು ಆಗಮಿಸಿದ್ದಾರೆ. ಇಷ್ಟರಲ್ಲೇ ತೊಡಗಿದ ಮಾತುಕತೆಗಳು ಒಂದು ಮುಕ್ತಾಯದ ಹಂತಕ್ಕೆ ಬರಬಹುದು. ಅದೇನಿದ್ದರೂ ಆಗೋಸ್ತ ೧೫ನೆಯ ತಾರೀಖಿನೊಳಗೆ ಈ ವಿವಾದ ಸಂಬಂಧದ ವರದಿಯನ್ನು ತಾನು ಪ್ರಧಾನ ಮಂತ್ರಿ ಲಾಲಬಹದೂರ ಶಾಸ್ತ್ರಿಯವರಿಗೆ ಅರ್ಪಿಸುವುದಾಗಿಯೂ ಒಂದು ವೇಳೆ ಇದು ಅಸಾಧ್ಯವಾದರೆ, ಕಾಂಗ್ರೆಸ್ ಅಧ್ಯಕ್ಷ ಕಾಮರಾಜರ ವಶಕ್ಕೆ ಈ ಪ್ರಶ್ನೆಯನ್ನು ಬಿಟ್ಟುಕೊಡುವುದಾಗಿಯೂ ಅವರು ಹೇಳಿದ್ದಾರೆ.

ಮಹಾರಾಷ್ಟ್ರ ಮತ್ತು ಕರ್ನಾಟಕಗಳ ಗಡಿಯ ವಿಚಾರ ಇದಕ್ಕೆ ಮೊದಲೂ ಕೆಲವು ಬಾರಿ ಮಂತ್ರಿ ಮಟ್ಟದ ಚರ್ಚೆಯಲ್ಲಿ ಬಂದಿತ್ತು. ಆದರೆ, ಮರಾಠಿಗಳು ಜಿಲ್ಲೆ-ತಾಲೂಕುಗಳ ಮಟ್ಟದಲ್ಲಿ ಹೊಂದಾಣಿಕೆ ನಡೆಯಬೇಕೆಂದು ವಾದಿಸಿದರೆ, ಕನ್ನಡಿಗರು ಗ್ರಾಮ ಮಟ್ಟವನ್ನು ಎತ್ತಿ ಹಿಡಿದರು. ಮಹಾರಾಷ್ಟ್ರವು ಅಚ್ಚಗನ್ನಡದ ಬೆಳಗಾವಿಯ ಮೇಲೆ ಕಣ್ಣಿರಿಸಿಕೊಂಡಿರುವುದರಿಂದ ಹೇಗಾದರೂ ಮಾಡಿ ಅದನ್ನು ಕರ್ನಾಟಕದಿಂದ ಕಬಳಿಸುವ ಇರಾದೆಯಿಂದಿದೆ. ಆದರೆ, ಅದರ ಈ ತಂತ್ರಕ್ಕೆ ಕನ್ನಡಿಗರು ಮರುಳಾಗಲಾರರು. ಇತ್ತೀಚಿನ ವರೆಗೂ ಅಲ್ಲಿ ನಡೆಯುತಿದ್ದ ಮರಾಠಿ ಪರ ಚಟುವಟಿಕೆಗಳು ಕೆಲವೇ ಪ್ರಭಾವಿಗಳ ಕಾರಣದಿಂದಾಗಿಯೇ ಹುಟ್ಟಿ ಅವರಲ್ಲಿಯೇ ಸತ್ತಿವೆ. ಧೃತಿವಂತರಾಗಿ ಕನ್ನಡಿಗರು ಕನ್ನಡದ ಮೇಲ್ಮೆಯನ್ನೂ ಕನ್ನಡದಲ್ಲಿಯೇ ಉಳಿಯುವ ಬಯಕೆಯನ್ನೂ ಬಯಸಿ, ಆ ಪುಂಡುಗಾರಿಕೆಯ ಸಮಯದಲ್ಲೂ ತಲೆಯೆತ್ತಿ ನಡೆದಿದ್ದಾರೆ; ಇಂದಿಗೂ ನಡೆಯುತಿದ್ದಾರೆ. ಇದೀಗ ನಂದಾರು ಬೊಂಬಾಯಿಯಲ್ಲಿ ಚರ್ಚೆ ನಡೆಸಿದಾಗ ಅಲ್ಲಿನ ನಾಯಕರು ತಮ್ಮ ಬೆಳಗಾವಿಯ ಮೇಲಿನ ಬೇಡಿಕೆಯನ್ನು ಬಲವಾಗಿ ಮುಂದಿಟ್ಟಿದ್ದಿರಬಹುದು. ಕಾಶ್ಮೀರದ ಪ್ರಶ್ನೆಯು ಹೇಗೆ ಭಾರತದ ಮಾನಾಪಮಾನದ ಪ್ರಶ್ನೆಯಾಗಿ ಉಳಿದಿದೆಯೋ ಹಾಗೆಯೇ ಬೆಳಗಾವಿಯು ಮಹಾರಾಷ್ಟ್ರದ ಮಾನಾಪಮಾನದ ಪ್ರಶ್ನೆ ಎಂದವರು ವಾದಿಸಿರ ಬಹುದು. ನಂದಾರವರೂ ಈ ಮಾತಿಗೆ ಮರುಳಾಗುವುದಕ್ಕಿಂತ ಹೆಚ್ಚಾಗಿ ಸಂರಕ್ಷಣಾ ಮಂತ್ರಿ ಚವನರ ವೈಯಕ್ತಿಕ ಪ್ರಭಾವಕ್ಕೆ ಬಲಿ ಬಿದ್ದಿರುವರೆಂದೂ ಹೇಳಲಾಗುತ್ತದೆ. ಆದರೆ, ಭ್ರಷ್ಟಾಚಾರ ನಿರ್ಮೂಲನೆಯ ಪಣ ತೊಟ್ಟ ನಂದಾಜಿ ಇಂತಹ ಹೇಯ ಕೃತ್ಯಕ್ಕೆ ಮನಗೊಡಲಾರರೆಂದು ನಾವು ಖಂಡಿತ ತಿಳಿಯಬಹುದು. ಮಹಾರಾಷ್ಟ್ರದ ವಾದದ ಸರಣಿಯನ್ನವರು ಮನಮುಟ್ಟಿ ತಿಳಿದುಕೊಂಡು ಬೆಂಗಳೂರಿಗೆ ಬಂದಿದ್ದಾರೆನ್ನಬೇಕು. ಇಲ್ಲಿ ಕನ್ನಡಿಗರಿಂದಲೂ ಅದೇ ಮಾದರಿಯ ವಾದವನ್ನವರು ಕೇಳಬೇಕಾಗಿ ಬಂದಿರಬೇಕು:- ಏಕೆಂದರೆ, ಗಡಿಯ ವಿಚಾರದಲ್ಲಿ ನಿಜಲಿಂಗಪ್ಪನವರ ಧೋರಣೆ ಅಚಲವಾಗಿಯೇ ಉಳಿದಿದೆ, ರಾಜ್ಯ ಪುನರ್ಘಟನೆಯ ನಂತರ ಇವರು ಮೊತ್ತಮೊದಲು ಮುಖ್ಯ ಮಂತ್ರಿಯಾಗಿದ್ದಾಗಲೇ ಈ ಬಗೆಯ ನೀತಿಯನ್ನು ರೂಪಿಸಿಕೊಂಡಿದ್ದರು. ಅವರ ಉತ್ತರಾಧಿಕಾರಿಯಾಗಿ ಬಂದ ಬಿ. ಡಿ. ಜತ್ತಿಯವರೂ ಈ ನೀತಿಯನ್ನೇ ಮುಂದುವರಿಸಿಕೊಂಡು ಬಂದರು. ಈಗ ಮರಳಿ ನಿಜಲಿಂಗಪ್ಪನವರೇ ಮುಖ್ಯ ಮಂತ್ರಿಯಾಗಿರುವುದರಿಂದ ಈ ನೀತಿ ಬದಲಾಗದೆಂದು ಖಂಡಿತ ಹೇಳಬಹುದು. ಹೀಗಾಗುವುದು ನ್ಯಾಯೋಚಿತವೆಂಬುದನ್ನು ಒಪ್ಪಬೇಕು. ಆದರೆ, ಇವ ಕೊಡ, ಅವ ಬಿಡ ಎಂಬಂತಾದರೆ, ಸಮಸ್ಯೆಯ ಪರಿಹಾರವೆಲ್ಲಿ? ನಂದಾರವರು ಎರಡೂ ರಾಜ್ಯಗಳ ಅಭಿಪ್ರಾಯವನ್ನು ಸರಿಯಾಗಿ ಅರಿತುಕೊಳ್ಳಬೇಕು; ಅವುಗಳನ್ನು ನ್ಯಾಯದ ಒರೆಗಲ್ಲಿಗೆ ತಿಕ್ಕಿ ನೋಡಬೇಕು; ಸೂಕ್ತ ನಿರ್ಧಾರಕ್ಕೆ ಬರಬೇಕು; ಇದನ್ನು ಉಭಯತರರೂ ಒಪ್ಪುವಂತೆ ಮಾಡಬೇಕು. ಹೀಗಾಗದೆ ಹೋದರೆ, ಸಮಸ್ಯೆ ಪರಿಹಾರವಾಗಲಾರದು. 'ಮಾತುಕತೆ' ಎಂದೊಡನೆ ಉಭಯ ಪಕ್ಷದವರೂ ಕುಸುವಾದರೂ ಬಗ್ಗಲೇ ಬೇಕಾಗುವುದು. ಇಲ್ಲಿ ಕೇವಲ 'ಪ್ರತಿಷ್ಠೆ'ಯನ್ನೇ ಎತ್ತಿ ಹಿಡಿದರೆ, ಅದು ಒಣ ಪ್ರತಿಷ್ಠೆಯಾಗಿ ಮಾತ್ರ ಉಳಿಯುವುದು.

ನಂದಾರವರು ಮಹಾರಾಷ್ಟ್ರ—ಕರ್ನಾಟಕದ ಗಡಿಯ ವಿಚಾರ ಮಾತ್ರ ಎತ್ತಲು ನಿರ್ಧರಿಸಿದ್ದಾರೆ. ಕರ್ನಾಟಕದ ಸೀಮಾ ವಿವಾದವು ಮಹಾರಾಷ್ಟ್ರದೊಡನೆ ಮಾತ್ರವಿರುವುದಲ್ಲ. ನೆರೆಯ ಕೇರಳ, ಮದ್ರಾಸ ಮತ್ತು ಆಂಧ್ರ ಪ್ರದೇಶಗಳೊಡನೆಯೂ ಇದೆ. ಆದರೆ, ಕಾಸರಗೋಡು, ತಾಳವಾಡಿ, ಮಡಕಶಿರ ಮೊದಲಾದುವುಗಳ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ನಂದಾಜಿ ಉದ್ದೇಶಿಸಿಲ್ಲ. ಇದಕ್ಕಾಗಿ ಅವರನ್ನು ಮಹಾರಾಷ್ಟ್ರದ ಪಕ್ಷಪಾತಿಗಳೆಂದು ತಿಳಿಯುವವರೂ ಇರಬಹುದು. ಹೀಗೆ ತಿಳಿಯುವುದು ಸರಿಯಲ್ಲ. ಒಂದೊಂದೇ ಪ್ರಶ್ನೆಯನ್ನೆತ್ತಿಕೊಂಡು ಅದನ್ನು ಬಿಡಿಸಿ ಮತ್ತೆ ಇನ್ನೊಂದಕ್ಕೆ ಕೈ ಹಾಕುವುದು ತಪ್ಪೆನ್ನುವಂತಿಲ್ಲ. ಆಗೋಸ್ತು ೧೫ರೊಳಗೆ ಮಹಾರಾಷ್ಟ್ರ—ಕರ್ನಾಟಕ ಗಡಿಯು ತಿಳಿಗೊಂಡರೆ, ನವಂಬರ ೧ರೊಳಗೆ ಕೇರಳ—ಕರ್ನಾಟಕ ಗಡಿಯಲ್ಲಿ ಹೊಂದಾಣಿಕೆಯಾದೀತು; ಮುಂದಿನ ಜನವರಿ ೨೬ರೊಳಗೆ ಮದ್ರಾಸ—ಕರ್ನಾಟಕವ ತ್ತು ಆಗೋಸ್ತು ೧೫ರೊಳಗೆ ಆಂಧ್ರ—ಕರ್ನಾಟಕ ಗಡಿಗಳ ವಿವಾದವು ಕೊನೆಗೊಂಡೀತು. ಆಗ ಗಡಿನಾಡಿನ ಕನ್ನಡಿಗರಿಗೆ ನ್ಯಾಯದಾನವಾದೀತು—ಎಂದು ಹಾರೈಸಿದರೆ ತಪ್ಪಲ್ಲ. ನಂದಾಜಿ ಈಗ ಎತ್ತಿಕೊಳ್ಳುವ ಮೊದಲ ಪ್ರಶ್ನೆಯೂ ಪ್ರಭಾವ ಪಕ್ಷಪಾತಗಳಿಗೆ ಎಡೆಗೊಡದೆ ನ್ಯಾಯ ಪಕ್ಷದ ತಳಹದಿಯಲ್ಲಿ ಇತ್ಯರ್ಥಗೊಂಡು, ಮುಂದಿನ ಪ್ರಶ್ನೆಗಳನ್ನೆತ್ತಿಕೊಳ್ಳಲು ಪ್ರೇರಕ ಶಕ್ತಿಯಾಗುವುದೆಂದು ನಂಬುತ್ತೇವೆ. ಹಾಗೆಯೇ ಆಗಲಿ.

ವಿಚಿತ್ರ ಯೋಚನೆ

ಸಂಯುಕ್ತ ಸಮಾಜವಾದಿ ಪಕ್ಷವು ತನ್ನ ನೀತಿಯೇನೆಂಬುದನ್ನು ಸರಿಯಾಗಿ ನಿರ್ಧರಿಸಿ ಕೊಳ್ಳಲು ಮೊತ್ತ ಮೊದಲಿಗೆ ಅಸಮರ್ಥವಾದುದು ಆ ಪಕ್ಷದ ಒಂದು ಹಿನ್ನಡೆಯನ್ನ ಬೇಕು. ಇದೀಗ ಅದರ ಅಧ್ಯಕ್ಷ ಎಸ್ ಎಂ. ಜೋಶಿಯವರು ಭಾರತದ ಎಲ್ಲ ವಿರೋಧೀ ಪಕ್ಷಗಳಿಗೊಂದು ಕರೆಯಿತ್ತು ಆಳುವ ಕಾಂಗ್ರೆಸ್ ಪಕ್ಷದ ಮುಂದೆ ತಮ್ಮ 'ಬೇಡಿಕೆಗಳ ಯಾದಿ'ಯನ್ನು ಮಂಡಿಸಬೇಕೆಂದೂ ಕಾಂಗ್ರೆಸ್ಸು ಆ ಬೇಡಿಕೆಗಳನ್ನು ಪೂರಯ್ಸದಿದ್ದರೆ ಭಾವಿ ಚುನಾವಣೆಯನ್ನು ವಿರೋಧೀ ಪಕ್ಷಗಳು ಬಹಿಷ್ಕರಿಸಬೇಕೆಂದೂ ತಿಳಿಸಿದ್ದಾರೆ. ಈ ಬೇಡಿಕೆಗಳ ಯಾದಿಯ ಸ್ವರೂಪವನ್ನು ನಾವು ವಿವೇಚಿಸುವುದಕ್ಕೆ ಮೊದಲು, ಈ ತತ್ತ್ವವನ್ನು ಒಪ್ಪಲು ಸಿದ್ಧವಿರುವ ಪಕ್ಷವಾದರೂ ಯಾವುದು? ಸ್ವಯಂ ಸಂಯುಕ್ತ ಸಮಾಜವಾದಿ ಪಕ್ಷವಾದರೂ ಚುನಾವಣೆಗಳನ್ನು ಬಹಿಷ್ಕರಿಸಲು ಸಿದ್ಧವಾದೀತೇ ಎಂದು ನಂಬುವಂತಿಲ್ಲ. ಬೇಡಿಕೆಗಳನ್ನು ಸರಕಾರದ ಮುಂದೆ ಈಗಲೂ ವಿರೋಧಿ ಪಕ್ಷಗಳು ಮುಂದಿಡುತ್ತಿವೆ. 'ಬೇಡುವ ಬಾಯಿ ಮುಂದು; ಕೊಡುವ ಕೈ ಹಿಂದು' ಎಂಬುದನ್ನು ನಾವು ಮರೆಯಬಾರದು. 'ಮಿಗೆ ಬೇಡುವವರ ಬಾಯಿ ಹರಿಯಲಾರದು.' ಹಾಗಿದ್ದರೂ ನ್ಯಾಯವಾದ ಬೇಡಿಕೆಗಳ ಬಗ್ಗೆ ಕಾಂಗ್ರೆಸ್ ಸರಕಾರ ವಿಚಾರ ಮಾಡಿ ಸೂಕ್ತಕ್ರಮ ಕೈಗೊಳ್ಳುವುದು ಹಿಂದೆಯೂ ನಡೆದಿದೆ; ಇಂದೂ ನಡೆಯುತ್ತಿದೆ; ಮುಂದೆಯೂ ನಡೆಯುವುದು ಹಾಗಿರುವಾಗ, ಜೋಶಿಯವರು ಮುಂದಿಟ್ಟ ಈ ಸೂಚನೆಯು ಪ್ರಜಾಪ್ರಭುತ್ವಕ್ಕೆ ಶೋಭನೀಯವಲ್ಲ. ಚುನಾವಣೆಯನ್ನು ಬಹಿಷ್ಕರಿಸುವುದರಿಂದ ವಿರೋಧೀ ಪಕ್ಷಗಳ ಬೇಡಿಕೆ ಪೂರೈಸಲ್ಪಡುವುದಿಲ್ಲ. ಆದುದರಿಂದ ಪ್ರಜಾಸತ್ತೆಯಲ್ಲಿ ಇಂತಹ ಯೋಚನೆ ಖಂಡಿತಕ್ಕೂ ಪುರಸ್ಕಾರಾರ್ಹವಲ್ಲ.

ಅಲ್ಲಲ್ಲಿಯ ಸುದ್ದಿಸಾರ

ವಿದ್ಯಾರ್ಥಿ ಸಂಘದ ಉದ್ಘಾಟನೆ- ಪೆರ್ಡೂರು ಹೈಸ್ಕೂಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆಯು ತಾ. ೩೧ರಂದು ಜೀವವಿಮಾ ಕಾರ್ಪೊರೇಶನಿನ ಕ್ಷೇತ್ರಾಧಿಕಾರಿ ಶ್ರೀ ಜಗನ್ನಾಥ ಹೆಗ್ಡೆಯವರಿಂದ ನಡೆಯಿತು ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸ್ವಾತಂತ್ರ್ಯದ ತಳಹದಿಯಲ್ಲಿ ರಚಿತವಾದ ವಿದ್ಯಾರ್ಥಿ ಸಂಘದ ಸದಸ್ಯರು ಇತರರ ಸ್ವಾತಂತ್ರ್ಯವನ್ನು ಮನ್ನಿಸಿ ಸಹೋದರತೆ ಮತ್ತು ಸಮಾನತೆಗಳ ತತ್ವಗಳನ್ನು ಪ್ರತಿ ಕ್ಷೇತ್ರದಲ್ಲಿಯೂ ಅನುಷ್ಠಾನಕ್ಕೆ ತರಬೇಕೆಂದರು. ಶಾಲೆಯು ೧೯೬೪ರ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದುದಕ್ಕೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಇದೇ ಪ್ರತಿಷ್ಠೆಯನ್ನು ಮುಂದೆಯೂ ಉಳಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಕೃತಿಶೀಲರಾಗಬೇಕೆಂದು ಕೇಳಿಕೊಂಡರು. ಸಮಾರಂಭದ ಅಧ್ಯಕ್ಷಸ್ಥಾನವನ್ನು ಸಿಂಡಿಕೇಟ್ ಬ್ಯಾಂಕಿನ ಸ್ಥಾನೀಯ ಮೆನೇಜರ್ ಶ್ರೀ ಅನಂದರಾಯ ಶೆಟ್ಟಿಯವರು ವಹಿಸಿದ್ದರು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷ ಕುಮಾರ ಬಿ. ಶಂಕರ ಹೆಗ್ಡೆಯವರು ಅತಿಥಿಗಳಿಗೆ ಹೂಮಾಲೆಗಳನ್ನರ್ಪಿಸಿದರು. ಮುಖ್ಯೋಪಾಧ್ಯಾಯ ಶ್ರೀ ಕೆ. ಗೋಪಾಲಕೃಷ್ಣ ಉಪಾಧ್ಯಾಯರು ಅತಿಥಿಗಳನ್ನು ಸ್ವಾಗತಿಸಿ, ಅವರ ಪರಿಚಯವನ್ನು ಮಾಡಿಕೊಟ್ಟರು. ಕಾರ್ಯದರ್ಶಿ ಕುಮಾರ ಕೆ ಹರ್ಷವರ್ಧನ ಸೂಡರು ಪ್ರಾರಂಭಿಕ ವರದಿಯನ್ನು ಓದಿದರು. ಕೊನೆಯಲ್ಲಿ ಉಪಕಾರ್ಯದರ್ಶಿ ಕುಮಾರ ಬಿ. ಗೋಪಾಲಕೃಷ್ಣ ಐತಾಳರು ವಂದನಾರ್ಪಣೆ ಮಾಡಿದರು.

96 ಹೊಸ ಸಾಲ ವಿದ್ಯಾ ವೇತನಗಳು:— ವಿದ್ಯಾರ್ಥಿ ಸಮಾಜದ ಸೇವಾದೃಷ್ಟಿಯಿಂದ ಪ್ರತಿ ವರ್ಷವೂ ಕೆನರಾ ಬ್ಯಾಂಕು ವಿಶೇಷ ಅರ್ಹತೆಯ ವಿದ್ಯಾರ್ಥಿಗಳಿಗೆ ಸಾಲ ರೂಪದ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದೆ. ಈ ವರ್ಷ 96 ವಿದ್ಯಾರ್ಥಿಗಳನ್ನು ಸಾಲ ವಿದ್ಯಾರ್ಥಿ ವೇತನಕೊಡಲು ಬ್ಯಾಂಕು ಆರಿಸಿದೆ. ಈ ವಿದ್ಯಾರ್ಥಿಗಳು ಭಾರತದ ವಿವಿಧ ಭಾಗದವರಿದ್ದು ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ತಾಂತ್ರಿಕ ವ್ಯಾಸಂಗಗಳನ್ನು ಭಾರತದ ಬೇರೆ ಬೇರೆ ಕಾಲೇಜುಗಳಲ್ಲಿ ಪಡೆಯುತ್ತಿದ್ದಾರೆ.

ಈ ವರೆಗೆ ಒಟ್ಟು 389 ವಿದ್ಯಾರ್ಥಿಗಳು ಈ ಸೌಲಭ್ಯ ಪಡೆದಿದ್ದಾರೆ ಮತ್ತು ಈ ತನಕ ಮಂಜೂರಾದ ಮೊತ್ತ ರೂ. 4, 12,000/- ಆಗಿದೆ.

ನಿರೀಕ್ಷಿಸಿರಿ!

ಬರುವ ವಾರ ತಾ. **13-8-64** ಕ್ಕೆ

'ನವಯುಗ'ದ

ಸ್ವಾತಂತ್ರ್ಯ ವಿಶೇಷಾಂಕ

ಎಂದಿನಂತೆ ವೈವಿಧ್ಯಪೂರ್ಣವಾಗಿ ಪ್ರಕಟವಾಗುವುದು.

ಪ್ರೊ! ಯು. ಎಲ್. ಆಚಾರ್ಯ, ಎಂ. ಎ., ಎಲ್. ಟಿ. ; ಶ್ರೀಗಳಾದ ಕೆ. ಎಸ್. ಭಟ್, ಶಿರಾಡಿಪಾಲ್; ಮಾದರಬೆಟ್ಟು ರಂಗ ರಾವ್ ಮದ್ರಾಸು; 'ಶಿವಶಂಕರ', ಮದ್ರಾಸು; ಯು. ನಾ. ಉಡುಪ, ವಿದ್ವಾನ್; ಪ್ರೊ| ಬಿ. ಎಚ್. ಶ್ರೀಧರ, ಎಂ. ಎ; ಕೆ. ಜಿ ಹೆಗ್ಡೆ, ಮುಂಬಯಿ; ರಾಧಾಕೃಷ್ಣ ರಾವ್, ಬಿ ಎ., ಬಿ. ಟಿ, ಕೃಷ್ಣಾನಂದ ಹೆಗ್ಡೆ, ಹೊಸ ದಿಲ್ಲಿ; ಅ. ಗಾ. ಕಿನ್ನಿಗೋಳಿ, ವಿದ್ವಾನ್; ತದ್ವಲಸೆ ವಿಷ್ಣೇಶ್ವರ ಶರ್ಮ; ಸಂಜೀವ ಲಕ್ಷ್ಮೇಶ್ವರ, ಬಿ. ಎ., ಮುಂಬೈ; ಡಾ। ಎಂ. ಗೋಪಾಲಕೃಷ್ಣ ರಾವ್, ಬೆಂಗಳೂರು ಮೊದಲಾದವರ ವಿಚಾರಪೂರ್ಣ ಲೇಖನ, ರೋಮಾಂಚನಕಾರಿ ಕಥೆ, ಸೊಗಸಾದ ಕವನಾದಿಗಳು ಈ ಸಂಚಿಕೆಯಲ್ಲಿ ಬರಲಿವೆ.

ನುಣುಪಾದ ಬಿಳಿ ಕಾಗದ! ತ್ರಿವರ್ಣ ಮುಖಪತ್ರ!

ನವಯುಗ ಆಕಾರದ 40 ಪುಟಗಳು! ಬೆಲೆ: 50 ಪೈಸೆ.

ಒಂದು ಪ್ರತಿ ಬೇಕಾದವರು 60 ಪೈಸೆಯನ್ನು ಸ್ಟಾಂಪು ಮೂಲಕ ಇಲ್ಲವೆ ಮನಿಯಾರ್ಡರು ಮೂಲಕ ಕಳಿಸಬೇಕು.

ಮೆನೇಜರ್, ನವಯುಗ, ಉಡುಪಿ.

ಹಿಂದೀ ಸೇವಾಸದನ; ಉಡುಪಿ— ಇದರ ಪ್ರಧಾನ ಶಿಕ್ಷಕರಾದ ಶ್ರೀ ಉ. ಲ. ಕ್ಷ್ಮೀನಾರಾಯಣ ಶೆಣೈಯವರು ಇದೀಗ, ಭಾರತ ಸರಕಾರದಿಂದ ರಾಷ್ಟ್ರೀಯ ಮಾನ್ಯತೆಯನ್ನು ಪಡೆದ, ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ಮದ್ರಾಸು—ಇದರ ಪ್ರಥಮ ಶ್ರೇಣಿಯ ಪ್ರಮಾಣಿತ ಪ್ರಚಾರಕರೆಂದು ಘೋಷಿಸಲ್ಪಟ್ಟು, ಸಭೆಯ ಮೂಲಕ ಜರಗಿಸಲ್ಪಡುವ ಯಾವತ್ತೂ ಪ್ರಾರಂಭಿಕ ಮತ್ತು ಉಚ್ಚ (ರಾಷ್ಟ್ರ ಭಾಷಾ ಪ್ರವೀಣ ತನಕ) ಪರೀಕ್ಷಾರ್ಥಿಗಳಿಗೆ ಹಿಂದೀ ಶಿಕ್ಷಣ ನೀಡಲು ಪ್ರಾಮಾಣಿಕ ಅರ್ಹತಾಪತ್ರವನ್ನು ಪಡೆದಿದ್ದಾರೆ.

ಶ್ರೀ ಕೃಷ್ಣ ಯಕ್ಷಗಾನ ಸಭಾ ಉಡುಪಿ— ತಾ. ೨೫ರಂದು ರಾತ್ರಿ ಶ್ರೀ ಕೃಷ್ಣ ಯಕ್ಷಗಾನ ಸಭೆಯ ಕಲಾವಿದರ ಕೂಡುವಿಕೆಯಲ್ಲಿ ಸುಭದ್ರಾ ಕಲ್ಯಾಣವೆಂಬ ತಾಳಮದ್ದಳೆಯು ಜರಗಿತು. ಶ್ರೀ ಶ್ರೀನಿವಾಸಾಚಾರ್ಯರ ನೇತೃತ್ವದಲ್ಲಿ ಜರಗಿದ ಈ ಯಕ್ಷಗಾನ ಕೂಟದ ಆರಂಭದಲ್ಲಿ ಉಡುಪಿಯ ಪ್ರಸಿದ್ಧ ಸಂಗೀತಗಾರರಾಗಿದ್ದ ಶ್ರೀ ಮಂಜುನಾಥಯ್ಯನವರ ನಿಧನದ ಬಗ್ಗೆ ಶ್ರದ್ಧಾಂಜಲಿಯನರ್ಪಿಸಿದ ಬಳಿಕ ಯಕ್ಷಗಾನ ಕೂಟವನ್ನು ಪ್ರಾರಂಭಿಸಲಾಯಿತು.

ಉಡುಪಿ ರೋಟರಿಕ್ಲಬ್: ಈ ಪ್ರಸಕ್ತ ರೋಟರಿ ವರ್ಷದಲ್ಲಿ ಉಡುಪಿಯಲ್ಲಿ ಛೇಂಬರ್ ಆಫ್ ಕಾಮರ್ಸ್ ಆರಂಭಗೊಳ್ಳಲಿದೆ ಎಂದು ಉಡುಪಿ ರೋಟರಿ ಕ್ಲಬ್ಬಿನ ವೃತ್ತಿ ಸೇವಾ ಸಮಿತಿಯ ಅಧ್ಯಕ್ಷ ಶ್ರೀ. ಎ. ಜೆ. ಅಲ್ಸೆ ತಾ. 28-7-64 ರಂದು ಕ್ಲಬ್ಬಿನ ಸಭೆಯಲ್ಲಿ ಪ್ರಕಟಪಡಿಸುತ್ತಾ ಮಣಿಪಾಲದಲ್ಲಿ ಸಹಕಾರಿ ಕೈಗಾರಿಕಾಕ್ಷೇತ್ರದ ಕಾರ್ಯ ಸದ್ಯದಲ್ಲೇ ಆರಂಭವಾಗಲಿದೆ ಎಂದೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿಧ ವೃತ್ತಿಗಳಲ್ಲಿ ತರಬೇತಿ ಹೊಂದುವುದಕ್ಕೆ ಇರುವ ಅವಕಾಶಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುವುದೆಂದೂ ಹೇಳಿದರು.

ಸಮಾಜ ಸೇವಾ ಸಮಿತಿಯ ಅಧ್ಯಕ್ಷ ಶ್ರೀ ಪಿ. ಆರ್. ಶೆಣೈಯವರು ನೂತನವಾಗಿ ಮಣಿಪಾಲದಲ್ಲಿ ಕ್ಯಾನ್ಸರ್ ಸಂಸ್ಥೆಯೊಂದನ್ನು ಆರಂಭಿಸುವ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದೆಂದರು. ತೊನ್ನು ರೋಗಿಗಳಿಗೆ ಚಿಕಿತ್ಸೆ ಏರ್ಪಡಿಸಲಾಗುವುದು. ಸಂಚಾರ ರಕ್ಷಣೆಯ ಕ್ರಮಗಳಲ್ಲಿ ಭಾಗವಹಿಸಲಾಗುವುದು. ಪ್ರೌಢ ಶಾಲೆಗಳಲ್ಲಿ ಇನ್ನು ಎರಡು ಇಂಟರಾಕ್ಟ ಕ್ಲಬ್ಬುಗಳನ್ನು ಆರಂಭಿಸಲಾಗುವುದು ಎಂದು ನುಡಿದರು.

ಬರುವ ಡಿಸೆಂಬರ್ ತಿಂಗಳಲ್ಲಿ ರೋಟರಿ ಜಿಲ್ಲಾ ಸಮ್ಮೇಳನ ಸೇರುವ ಮುನ್ನವೇ ನಿತೀಶ್ ಲಹರಿ ಮಕ್ಕಳ ಮ್ಯೂಜಿಯಮ್ಮನ್ನು ಆರಂಭಿಸಲಾಗುವುದೆಂದು ಅಂತರಾಷ್ಟ್ರೀಯ ಸೇವಾ ಸಮಿತಿಯ ಅಧ್ಯಕ್ಷ ಶ್ರೀ ಕೆ. ಎಸ್. ಹರಿದಾಸ್ ಭಟ್ ತಿಳಿಸಿದರು.

ಫೆಲೋಶಿಪ್ ಸಮಿತಿಯ ಅಧ್ಯಕ್ಷ ಶ್ರೀ ಪಿ. ವೆಂಕಟರಮಣ ಭಟ್‌ರವರು ತಪ್ಪದೆ ಕ್ಲಬ್ಬಿನ ಸಭೆಗಳಿಗೆ ಹಾಜರಾಗುವ ಸದಸ್ಯರ ಪತ್ನಿಯರಿಗೆ ಬಹುಮಾನಗಳನ್ನು ಕೊಡಲಾಗುವುದೆಂದರು.

ಆರಂಭದಲ್ಲಿ ಹಿಂದಿನ ಅಧ್ಯಕ್ಷ ಶ್ರೀ ಟಿ. ಆರ್. ಎ. ಪೈಯವರು, ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷ ನಿತೀಶ ಲಹರಿಯವರ ನಿಧನದ ಬಗ್ಗೆ ಮಂಡಿಸಿದ ಸಂತಾಪ ಸೂಚಕ ನಿರ್ಣಯವನ್ನು ಸಭೆಯು ಅಂಗೀಕರಿಸಿತು. ಉಪಾಧ್ಯಕ್ಷ ಶ್ರೀ ಕೆ. ಕೆ. ಪೈಯವರು ಈ ಜಿಲ್ಲೆಗೆ ... ಪೈಯವರು ರೂಪಿಸಿರುವ ಭಾರಿ ಯೋಜನೆಯನ್ನು ಕುರಿತು 'ದಿ ರೋಟೇರಿಯನ್' ಪತ್ರಿಕೆಯಲ್ಲಿ ಪ್ರಕಟವಾದ ಪ್ರಶಂಸಾತ್ಮಕವಾದ ಲೇಖನವನ್ನು ಓದಿ ಹೇಳಿದರು. ಶ್ರೀ ವಿ. ಚಂದ್ರಶೇಖರ್ ವಂದನಾರ್ಪಣೆ ಮಾಡಿದರು.

ವಿದಾಯ ಸಮಾರಂಭ — ಶ್ರೀ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಕಳೆದ ಮೂರು ವರ್ಷಗಳಿಂದ ಅರ್ಥಶಾಸ್ತ್ರದ ಅಧ್ಯಾಪಕರಾಗಿದ್ದ ಶ್ರೀ ಕೆ. ವಿ. ಸುಬ್ಬರಾವ್ ಅವರಿಗೆ ಕಾಲೇಜು ಬಿಡುವ ಸಂದರ್ಭದಲ್ಲಿ ಅವರ ವಿದ್ಯಾರ್ಥಿಗಳು ಕಾಲೇಜಿನ ಪ್ರಿನ್ಸಿಪಾಲ್ ವಿ. ಎಂ. ಇನಾಂದಾರರ ಅಧ್ಯಕ್ಷತೆಯಲ್ಲಿ ಹಾರ್ದಿಕವಾದ ವಿದಾಯವನ್ನಿತ್ತರು. ಶ್ರೀ ಬಿ. ನಾರಾಯಣ ಜೋಗಿತ್ತಾಯರು ಸ್ವಾಗತಿಸುತ್ತಾ, ಶ್ರೀ ಕೆ. ವಿ. ಸುಬ್ಬರಾಯರ ಗುಣಗಾನವನ್ನು ಮಾಡಿದರು. ವಿದ್ಯಾರ್ಥಿಗಳ ಕಡೆಯಿಂದ ಎಂ. ನಾರಾಯಣ ಭಟ್, ಸುರೇಶ ಕುಂದಾಪುರ್, ಅಪ್ಪು ಶೆಟ್ಟಿ, ಪೃಥ್ವೀನಾಥ ಹೆಗ್ಡೆ, ಸುಬ್ರಹ್ಮಣ್ಯ ಆಚಾರ್, ರಾಮಕೃಷ್ಣಯ್ಯನವರು ಮಾತನಾಡಿದರು. ಬಳಿಕ ವಿದ್ಯಾರ್ಥಿಗಳು ಶ್ರೀ ಸುಬ್ಬರಾಯರಿಗೆ ಉಡುಗೊರೆಯನ್ನಿತ್ತರು.

ಶ್ರೀ ಕೆ. ವಿ. ಸುಬ್ಬರಾಯರು ಕೃತಜ್ಞತೆಯನ್ನು ಅರ್ಪಿಸುತ್ತಾ, ವಿದ್ಯಾರ್ಥಿಗಳಿಗೆ ತಕ್ಕ ಹಿತ ವಚನವನ್ನಿತ್ತರು. ಪ್ರಿನ್ಸಿಪಾಲರು ತಮಗೆ ಕಲಿಸುವ ಗುರುಗಳನ್ನು ವಿದ್ಯಾರ್ಥಿಗಳು ಸನ್ಮಾನಿಸುವುದು ಉತ್ತಮವೆಂದರು. ಶ್ರೀ ಜಯರಾಮ ಹೊಳ್ಳರು ಧನ್ಯವಾದ ಸಮರ್ಪಣೆ ಮಾಡಿದರು.

ಜಿಲ್ಲೆಯ ಕೃಷಿ ಸಂಕಷ್ಟದ ಬಗ್ಗೆ ನಿವೇದನೆ— ಕುಂದಾಪುರ ಶಾಸನ ಸಭಾ ಸದಸ್ಯ ಶ್ರೀ ಎಸ್. ಎಸ್. ಕೊಳ್ಕೆಬೈಲ್‌ರವರು ಪತ್ರವೊಂದರ ಮೂಲಕ ರಾಜ್ಯದ ಮುಖ್ಯಮಂತ್ರಿಗಳನ್ನು, ಮಳೆಯ ಅಭಾವದಿಂದ ಬರಗಾಲದ ವಾತಾವರಣ ನಿರ್ಮಾಣವಾಗುವುದರ ಮೊದಲೇ ತಕ್ಕ ಮುಂಜಾಗ್ರತೆಗಳನ್ನು ಕೈಕೊಳ್ಳಬೇಕೆಂದು ವಿನಂತಿಸಿಕೊಂಡಿದ್ದಾರೆ. ಕುಂದಾಪುರ ಮತ್ತು ಉಡುಪಿ ತಾಲೂಕುಗಳಲ್ಲಿಂತೂ ಗದ್ದೆಗಳೆಲ್ಲಾ ಒಣಗಿ ಹೋಗಿ ಮಳೆ ಬಂದರೂ ಸಸಿಗಳ ಅಭಾವ ಉಂಟಾಗುವ ಸಂಭವವಿರುವ ಕಾರಣ, ಅವಶ್ಯಕತೆಗಳಿರುವೆಡೆಗಳಲ್ಲಿ ಬೀಜ ಹಂಚೋಣ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಅವರು ತಿಳಿಸಿದ್ದಾರೆ ಮುಂದುವರಿಸುತ್ತಾ ಅವರು ಕಂದಾಯ ವಸೂಲಿಯನ್ನು ತಾತ್ಕಾಲಿಕ ನಿಲ್ಲಿಸಲಾಗಿದೆ ಎಂದು ಮುಖ್ಯಮಂತ್ರಿಗಳು ಶಾಸನ ಸಭೆಯಲ್ಲಿ ಘೋಷಿಸಿದ ನಂತರವೂ ಕೆಲವೆಡೆಗಳಲ್ಲಿ ಕಂದಾಯ ವಸೂಲಿಯು ಮುಂದುವರಿಯುತ್ತಿದ್ದುದನ್ನು ತಡೆಗಟ್ಟಬೇಕೆಂದೂ ಹೇಳಿದ್ದಾರೆ.

ಚೇರ್ಕಾಡಿ- ಶಾರದಾ ಹೈಸ್ಕೂಲಿನ 'ನೂತನವಾದಿ ಸಂಘ'ವನ್ನು ಉದ್ದೇಶಿಸಿ 'ನ್ಯಾಯಾಂಗದ ಶ್ರೇಷ್ಠತೆ' ಎಂಬ ವಿಷಯದ ಮೇಲೆ ಉಡುಪಿಯ ವಕೀಲ ಶ್ರೀ ಶಿರ್ತಾಡಿ ಎಳಿಯಂಪಿಂಟೋರವರು ತಾ 30ರಂದು ಭಾಷಣವಿತ್ತರು. ಸಭೆಯ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಡಿ. ಮಾಧವರಾಯರು ವಹಿಸಿದ್ದರು. ಶಾಲಾ ಅಧ್ಯಾಪಕ ಶ್ರೀ ಸಿ. ಮಂಜಯ್ಯ ಶೆಟ್ಟಿಯವರು 'ನೂತನವಾದಿ ಸಂಘ'ದ ಅಗತ್ಯದ ಕುರಿತು ಸಭಿಕರಿಗೆ ತಿಳಿಸಿದರು. ಶ್ರೀ ಎಚ್. ಶ್ರೀಪಾಲ್ ಶೆಟ್ಟಿಯವರು ಸಭಿಕರಿಗೆ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರ ಭಾಷಣದ ತರುವಾಯ ಸಂಘದ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಅಡಿಗರವರು ಧನ್ಯವಾದ ಸಮರ್ಪಿಸಿದರು.

೬ ನೇ ತರಗತಿ ಪ್ರಾರಂಭೋತ್ಸವ:— ತಾ ೧ ರಂದು ಧರ್ಮಸ್ಥಳದ ಕನ್ನಾಡಿ ಬೋರ್ಡ್ ಶಾಲೆಯಲ್ಲಿ ಶ್ರೀ ಟಿ. ಎನ್. ಭಿಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಡಿ ರತ್ನವರ್ಮ ಹೆಗ್ಗಡೆಯವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಕೆ. ಸೂರ್ಯನಾರಾಯಣರಾಯರು ಸ್ವಾಗತಿಸಿದರು. ಸಭಿಕರಲ್ಲಿ ಪರೀಕ್ಷಾಧಿಕಾರಿ ಶ್ರೀ ಗಡಿಯಾರ್ ಮತ್ತು ಶ್ರೀ ರಾಮಣ್ಣ ಶೆಟ್ಟಿಯವರು ಮಾತನಾಡಿದರು. ಅಂತ್ಯದಲ್ಲಿ ಶ್ರೀ ಸೂರ್ಯನಾರಾಯಣ ರಾಯರು ಧನ್ಯವಾದ ಸಮರ್ಪಿಸಿದರು.

ಪಾಸ್ ಯೂನಿಯನ್ ಉದ್ಘಾಟನೆ— ತಾ. 2-8-64ರಂದು ಉಡುಪಿಯ ಪಾಸ್ ಟ್ಯುಟೋರಿಯಲ್ ಕಾಲೇಜ್ ಯೂನಿಯನಿನ ಉದ್ಘಾಟನೆಯನ್ನು ಮುನ್ಸಿಪಲ್ ಕೌನ್ಸಿಲರ್ ಶ್ರೀ ಸೀತಾರಾಮ ಕಾಮತರು ನೆರವೇರಿಸಿದರು. ಎಗ್ಸಿಕ್ಯೂಟಿವ್ ಆಫೀಸರ್ ಶ್ರೀ ಕೆ. ಕೊರಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮೆನೇಜರ್ ಡಾ| ಕೆ. ಕೆ ಕಲ್ಕೂರರು ಯೂನಿಯನ್ನಿನ ಉದ್ದೇಶಗಳನ್ನು ವಿವರಿಸಿದರು.

ಶ್ರೀ ಎಸ್. ಎಲ್. ಎನ್. ಭಟ್ಟರು ಪಾಸ್ ಕೋಲೇಜಿನಲ್ಲಿ ತಾನು ಕೇಳಿದಂತೆ ಮತ್ತು ನೋಡುವಂತೆ ಉತ್ತಮ ಶಿಕ್ಷಕರು ಬಹು ಜನರಿದ್ದು, ಉತ್ತಮ ಮಟ್ಟದ ಶಿಕ್ಷಣವನ್ನು ಶಾಲಾ ಪ್ರಾಯ ಮೀರಿದವರಿಗೂ ಉತ್ತಮ ರೀತಿಯಲ್ಲಿ ಕೊಡುತ್ತಿರುವುದರಿಂದ ಉಡುಪಿ ಜನತೆಯ ಒಂದು ಅಗತ್ಯತೆಯು ಕೂಡಿಬಂದ ಹಾಗಾಯಿತು ಎಂದರು. ಶ್ರೀ ಯು. ಶಿವರಾಯರು ಧನ್ಯವಾದಗಳನ್ನರ್ಪಿಸಿದರು, ನಂತರ ಲಘು ಉಪಾಹಾರದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಮಣಿಪಾಲ- ವಿದ್ಯಾರ್ಥಿಗಳ ಕ್ಷೇಮಕ್ಕಾಗಿ ರೂಪಿಸಲಾಗಿರುವ 'ಸ್ಥಳೀಯ ಪಾಲಕತ್ವ' ಎಂಬ ಉತ್ತಮ ವಿಧಾನದ ಉದ್ಘಾಟನೆಯನ್ನ ಡಾ| ಟಿ. ಎಂ. ಎ. ಪೈಯವರು ತಾ 3ರಂದು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನಲ್ಲಿ ನೆರವೇರಿಸಿದರು.

ಅಮೆರಿಕದ ಶಾಂತಿ ದಳಕ್ಕೆ ಸೇರಿದ ಇಬ್ಬರು ವಾದಿಯರು ಇಲ್ಲಿಗೆ ಆಗಮಿಸಿದ್ದಾರೆ, ಅವರು ಇಲ್ಲಿಯ ಕಸ್ತೂರಬಾ ಜನರಲ್ ಮತ್ತು ಮೆಟರ್ನಿಟಿ ಆಸ್ಪತ್ರೆಯ ದಾದಿಯರ ಶಾಲೆಯಲ್ಲಿ ಸೇವೆ ಸಲ್ಲಿಸಲಿದ್ದಾರೆ.

ಬಂಟ್ವಾಳ ತಾಲೂಕು ಅಭಿವೃದ್ಧಿ ಮಂಡಳಿಯ ಸಭೆಯು:— ಕಳೆದ ತಾ. 27 ರಂದು ಶ್ರೀ ಟಿ. ವೆಂಕಟೇಶ ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಚಾಲ್ತಿವರ್ಷದಲ್ಲಿ ಮಂಜೂರಾದ ಮತ್ತು ಅದ್ಯನಡ್ಕಗಳಲ್ಲಿರುವ ರೂರಲ್ ಡಿಸ್ಪೆನ್ಸರಿಗಳನ್ನು ಆರೋಗ್ಯಕೇಂದ್ರಗಳನ್ನಾಗಿ ಬದಲಾಯಿಸಲೂ ಪಾಣೆಮಂಗಳೂರು ಶಾರದಾ ಹೈಸ್ಕೂಲಿಗೆ ರೂ ಸಾವಿರ ಸಹಾಯಧನ ಕೊಡಲೂ ತಾಲೂಕಿನ ಇಪ್ಪತ್ತು ಶಾಲೆಗಳಿಗೆ ಮಧ್ಯಾಹ್ನದ ಉಪಾಹಾರದ ವ್ಯವಸ್ಥೆಗೆ ಸಹಾಯವಾಗಿ ಪಾತ್ರೆಗಳನ್ನು ಖರೀದಿಸಲು ರೂ 100 ರಂತೆ ಪ್ರತಿ ಶಾಲೆಗೆ ನೀಡಲು ನಿರ್ಧರಿಸಲಾಯಿತು.

ತಿದ್ದುಪಡಿ— ತಾ. 23-7-64ರ ಸಂಚಿಕೆಯಲ್ಲಿ ಪ್ರಕಟವಾದ ವಿಜಯ ಬ್ಯಾಂಕ್ ಲಿಮಿಟೆಡಿನ ಕುಂದಾಪುರ ಶಾಖೆಯ ಏಲಂ ನೋಟೀಸಿನಲ್ಲಿ ಏಲಂ ತಾ. 30-7-1964 ನೇ ಶನಿವಾರ ಎಂದು ವಾರ ತಪ್ಪಾಗಿ ಬಿದ್ದಿದೆ. ಅದು ಗುರುವಾರ ಎಂದಾಗಬೇಕು.

ಪಣಂಬೂರು ಬಂದರಕ್ಕೆ ಪುನಾ: ೧೫೦೦ ಎಕ್ರೆ ಭೂಮಿ!

ಪಣಂಬೂರಿನಲ್ಲಿ ಸರ್ವಋತು ಬಂದರದ ನಿರ್ಮಾಣಕ್ಕೆ ಈ ಮೊದಲು ಸರಕಾರವು ಸುಮಾರು ೧೬೦೦ ಎಕ್ರೆ ಭೂಮಿ ಬೇಕೆಂದು ನಿರ್ಣಯಿಸಿ ಈ ಭೂಮಿಯನ್ನು ವಶಪಡಿಸಿಕೊಂಡಿತು. ಇದರಿಂದ ಸಂಕಷ್ಟಗೊಳಗಾದರು ಇನ್ನೂ ಚೇತರಿಸಿಕೊಂಡಿಲ್ಲ. ಆದರೆ ಈಗಲೇ ಪುನಃ ೧೫೦೦ ಎಕ್ರೆಗಳಷ್ಟು ಭೂಮಿ ಬೇಕೆಂಬ ಕೇಳಿಕೆ ಬಂದಿದೆಯಂತೆ. ಬಂದರದ ಚೀಫ್ ಎಂಜಿನಿಯರು ಡೆಪ್ಯುಟಿ ಕಮಿಶನರಿಗೆ ಈ ಕುರಿತು ಪತ್ರ ಬರೆದು ಸಂಬಂಧಪಟ್ಟ ಎರಡು ಪಂಚಾಯತ್ ಅಧ್ಯಕ್ಷರು ಈ ಹೊಸ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ರಚನೆಗೆ ಅನುಮತಿ ಕೊಡಬಾರದೆಂದೂ ಈ ಕುರಿತು ಅವರಿಗೆ ಆದೇಶ ಕೊಡಬೇಕೆಂದೂ ಕೇಳಿಕೊಂಡಿರುವರಂತೆ. ಸರಕಾರ ಈ ಕುರಿತು ಶಾಸನಕ್ಕನುಗುಣವಾಗಿ ವರ್ತಿಸದೆ ಏಕಾಏಕಿಯಾಗಿ ಕಾರ್ಯಾಚರಣೆಗೆ ದುಮುಕಿದಂತಿದೆ. ಇನ್ನೂ ೧೫೦೦ ಎಕ್ರೆ ಭೂಮಿ ಬೇಕಾದರೆ ಪಣಂಬೂರು ಬಂದರವು ಮದ್ರಾಸು ಮುಂಬಯಿ, ಕಲ್ಕತ್ತೆಗಳಿಗೂ ಮಿಗಿಲಾದುದೆ? ಎಂದು ಎಲ್ಲರೂ ಪ್ರಶ್ನಿಸುತ್ತಿದ್ದಾರೆ. ಈ ಹೆಚ್ಚಿನ ಭೂಮಿಯಾವ ಉದ್ದೇಶಕ್ಕಾಗಿ ಬೇಕಾಗಿದೆ? ಬಂದರ ರಚನೆಗೆ ಇಷ್ಟು ಭೂಮಿ ಅವಶ್ಯಕವೆ? ಎಂಬುದರ ಕುರಿತು ಸಾರ್ವಜನಿಕರಿಗೆ ಸಂಶಯವುಂಟಾಗುವಂತಾಗಿದೆ. ಮುಖ್ಯವಾಗಿ, ಪಣಂಬೂರಿನ ನೆರೆಕರೆಯ ಗ್ರಾಮಗಳ ಜನತೆ ಇದರಿಂದ ತೀರಾ ಕಂಗಾಲಾಗಿದೆ. ಅಧಿಕ ಜನವಸತಿ ಇರುವ ಈ ಕರಾವಳಿಯ ಗ್ರಾಮಗಳ ಜನತೆಯನ್ನು ನಿರ್ಗತಿಕರನ್ನಾಗಿ ಮಾಡುವ ಈ ಯೋಜನೆಯ ಕೈ ಬಿಡುವು ಉಚಿತ. ಸರಕಾರಕ್ಕೆ ಹೆಚ್ಚಿನ ಭೂಮಿ ಬೇಕೆಂದೇ ಆದರೆ ಪಣಂಬೂರಿನ ನಾಲ್ಕು ಮೈಲು ಪೂರ್ವದಲ್ಲಿರುವ ಸರಕಾರಿ ಭೂಮಿಯನ್ನು ಉಪಯೋಗಿಸಿ ಕೊಳ್ಳಬಹುದಲ್ಲ. ಪಣಂಬೂರಿನ ನೆರೆಕರೆಯ ಗ್ರಾಮಗಳ ಸಾವಿರಾರು ಜನರಿಗೆ ಕಷ್ಟಕೊಟ್ಟು, ಅವರನ್ನು ನಿರ್ಗತಿಕರನ್ನಾಗಿ ಮಾಡುವ ಮೊದಲು ಸರಕಾರ ಈ ಕುರಿತು ಎರಡೆರಡು ಬಾರಿ ಯೋಚಿಸಬೇಕು. ಅಂತಹ ಅನಿವಾರ್ಯದ ಕಾರಣವಿದ್ದರೆ, ಅವುಗಳು ಯಾವುದೆಂಬುದನ್ನು ಸರಕಾರ ಸಾರ್ವಜನಿಕರ ಅವಗಾಹನೆಗೆ ತರುವುದು ಅಗತ್ಯ. ನಮ್ಮ ಜನತಾ ಪ್ರತಿನಿಧಿಗಳು ಈ ಕುರಿತು ಸರಕಾರದ ಗಮನ ಸೆಳೆಯಬೇಕು.

ವೈಮಾನಿಕ ದಳಕ್ಕೆ ಹೊಸ ಅಧಿಕಾರಿ

ಏರ್ ಮಾರ್ಶಲ್ ಎ. ಎಂ. ಇಂಜಿನಿಯರರು ವೈಮಾನಿಕ ದಳದ ಕೇಂದ್ರ ಕಚೇರಿಯಲ್ಲಿ ಕಳೆದ ತಾ ೩೧ರಂದು ಏರ್ ವೈಸ್ ಮಾರ್ಶಲ್ ಅರ್ಜನಸಿಂಗರಿಗೆ ಔಪಚಾರಿಕವಾಗಿ ಅಧಿಕಾರ ವಹಿಸಿಕೊಟ್ಟರು ಎ. ಎಂ. ಇಂಜಿನಿಯರರು ನಿವೃತ್ತಿ ಹೊಂದಿರುವುದರಿಂದ ಶ್ರೀ ಸಿಂಗರು ಅವರ ಸ್ಥಾನವನ್ನು ವಹಿಸುತ್ತಾರೆ.

NOTICE.

THE VIJAYA BANK LIMITED.

To Whomsoever It May Concern.

Whereas Shreemathi K. Rathi S. Shetty, D/o Late K. Anthaya Shetty has applied for the transmission of one Share numbered 1303 standing in the name of her Father Late K. Anthaya Shetty and 4 Shares numbered 12543 to 12546 standing in the name of her Mother Late P. Paddakke Heggadthy in the Books of the Bank, in terms of the final Decree passed by the Sub-Ordinate Judge, Udipi in O. S. No. 45/1961 and whereas Share Certificate No 1989 relating to the 4 Shares 12543 to 12546 referred above is stated to be lost, notice is hereby given that fresh Share Certificate will be issued in lieu of the original and the transmission of all the above five Shares to the name of the applicant will be registered in the Books of the Bank, if no objection is filed within 15 days from this date, with the Undersigned.

Head Office of the Bank,
Light House Hill Road,
MANGALORE—3.
Dated: 4—8—1964.

(Sd.) P. Jayarama Shetty,
SECRETARY,

ಭೂರಮೆಯ ಸಿರಿ

ಭವ್ಯ ನಾಡು - ಕೊಡಗು

ಲೇಖಕರು: ಶ್ರೀ ಕಾ. ಸೋ. ಮುತ್ತಪ್ಪ

"ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೊ" ಎಂದು ದಿ| ಕವಿಶಿಷ್ಯ ಪಂಜೆ ಮಂಗೇಶರಾಯರು ಮುಕ್ತಕಂಠದಿಂದ ಹಾಡಿ ಹೊಗಳಿದ ನಾಡು ಕೊಡಗು. ಇದರ ನೈಸರ್ಗಿಕ ಸೌಂದರ್ಯಕ್ಕೆ ಮನಸೋಲದವರಾರು?

ಎತ್ತೆತ್ತ ನೋಡಿದರೂ ಎತ್ತರವಾದ ಗಿರಿ ಶಿಖರಗಳಿಂದ, ದಟ್ಟವಾದ ಅರಣ್ಯಗಳಿಂದ ಕೂಡಿ ತನ್ನೊಳಗೆ ಹೆಬ್ಬಾವು, ಚಿರತೆ, ಕಾಡುಕೋಣ, ಹೆಬ್ಬುಲಿ ಮುಂತಾದ ಕ್ರೂರ ಜಂತುಗಳನ್ನು ಅಡಗಿಸಿಕೊಂಡಿದೆ, ಕೊಡಗು. ಸುಂದರ ಪಕ್ಷಿಗಳ ಇಂಚರ, ಜಿಂಕೆ, ಸಾರಂಗ, ಮೊಲವೇ ಮುಂತಾದ ಸಾಧು ಪ್ರಾಣಿಗಳ ಓಡಾಟ ಇಲ್ಲಿವೆ. ಇಲ್ಲಿಯ ವನಗಳು ಬೀಟೆ, ತೇಗ, ಮುಂತಾದ ಬೆಲೆ ಬಾಳುವ ಮರಗಳಿಂದಲೂ, ಅತ್ತರು ಮುಂತಾದ ಪರಿಮಳ ದ್ರವ್ಯಗಳಿಂದಲೂ, ವಿಧವಿಧ ಗಂಧ ಮಾಲಿಕೆಗಳಿಂದಲೂ ಮೆರೆಯುತ್ತಿವೆ.

ಸೊಂಪಿನ ಸಂಜೆಯ ಸಮಯದಲ್ಲಿ ಇಲ್ಲಿಯ ಎತ್ತರವಾದ ತಡಿಯಂಡ ಮೋಳ್ ಚಿತ್ರವನ್ನೋ ಬೇರೆ ಯಾವುದಾದರೂ ಶಿಖರವನ್ನೋ ಏರಿ ಸುತ್ತಲೂ ದೃಷ್ಟಿ ಹಸರಿಸಿದರೆ ಇಹಲೋಕದ ವ್ಯವಹಾರವನ್ನೇ ಮರೆತು ಪ್ರಕೃತಿ ಸೌಂದರ್ಯದೊಡನೆ ನಮ್ಮ ಮನ ಲೀನವಾಗುವುದರಲ್ಲಿ ಸಂಶಯವಿಲ್ಲ

ಎತ್ತ ನೋಡಿದರೂ ಹಚ್ಚ ಹಸುರಾದ ದಟ್ಟವಾದ ಕಾಡುಗಳು ಅಲ್ಲಲ್ಲಿ ವಿಶಾಲವಾಗಿ ತೋರುವ ಹುಲ್ಲು ಮೈದಾನಗಳೂ ಸಣ್ಣ ಹೊಳೆ ತೋಡುಗಳೂ ನೀಲಾಕಾಶದ ಸೊಬಗು. ಅಲ್ಪ ಸ್ವಲ್ಪ ಕಾಣುವ ತೆಂಗು ಕಂಗು ಬಾಳೆಯ ತೋಟಗಳು, ಅದರೊಡನೆ ದಟ್ಟವಾಗಿ ಶೋಭಿಸುವ ಕಾಫಿ ಕಿತ್ತಳೆ ತೋಟಗಳ ರಮ್ಯ ದೃಶ್ಯ ನಮ್ಮ ಕಣ್ಮನಗಳನ್ನು ಕಣಿಸುತ್ತಿವೆ. ಅಲ್ಲಲ್ಲಿ ಕಾಣುವ ಬೆಟ್ಟ ಗುಡ್ಡಗಳನ್ನು ಹಾವಿನಂತೆ ಬಳಸಿರುವ ರಸ್ತೆಗಳು ಪ್ರಕೃತಿ ಸೌಂದರ್ಯಕ್ಕೆ ನವೀನ ಕಳೆ ಕೊಟ್ಟಂತೆ ಕಾಣುತ್ತವೆ.

ದಕ್ಷಿಣ ಕಾಶ್ಮೀರವೆಂದು ಪ್ರಸಿದ್ಧವಾದ ಈ ಕೊಡಗನ್ನು ಇಬ್ಭಾಗ ಮಾಡಿದ ಪಾವನಾಶಿನಿ ದಕ್ಷಿಣ ಗಂಗೆಯಾದ ಕಾವೇರಿ ನದಿಯ ಕಲಕಲ ನಾದ ನಮಗೆ ಕರ್ಣಾನಂದವನ್ನುಂಟು ಮಾಡುವುದು. ಕಾವೇರಿ ಮಾತೆಯ ಹುಟ್ಟೂರು ಕೊಡಗಿನ ಭಾಗಮಂಡಲದ ಹತ್ತಿರವಿರುವ ತಲಕಾವೇರಿ ಅಥವಾ ಬ್ರಹ್ಮಗಿರಿ ಶಿರ. ಇಲ್ಲಿ ಸಂಕ್ರಮಣ ಸಮಯದ ಜಾತ್ರೆಯ ಸೊಬಗನ್ನು ವರ್ಣಿಸಲಸಾಧ್ಯ. ದಕ್ಷಿಣ ಕಾಶಿಯಲ್ಲಿ ಸ್ನಾನ ಮಾಡಲು ದೇಶದ ನಾನಾ ಕಡೆಗಳಿಂದ ತೀರ್ಥಯಾತ್ರಿಕರು ಬರುತ್ತಾರೆ.

ಕೊಡಗು ಪ್ರಕೃತಿ ಸೌಂದರ್ಯಕ್ಕೆ ಹೆಸರಾಂತುದಲ್ಲದೆ ಇದು ಫಲವತ್ತಾದ ನೆಲ್ಲವೆನ್ನಬಹುದು. ಇಲ್ಲಿ ಕಾಫಿ, ಕಿತ್ತಳೆ, ಕರಿ ಮೆಣಸು, ಯಾಲಕ್ಕಿ, ಚಾ, ರಬ್ಬರ್ ಮುಂತಾದ ಲಾಭದಾಯಕ ಬೆಳೆಗಳು ಬೆಳೆಯುತ್ತವೆ. ಸವಿಯಾದ ಕಿತ್ತಳೆಯ ರುಚಿ ಎಲ್ಲರೂ ಬಲ್ಲರು. ಮಾರ್ಚ್ ತಿಂಗಳ ಕಾಫಿ ಹೂವಿನ ಕಂಪು, ಬಿಳಿ ಮಲ್ಲಿಗೆ ರಾಶಿಯಂತೆ ಶೋಭಿಸುವ ಅದರ ಅಂದ ನೋಡಲು ಅಲ್ಲಿಗೆ ಹೋಗಬೇಕು.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತೆ ಕೊಡಗಿನವರ ಕೀರ್ತಿ ದಿಗಂತದುದ್ದಕ್ಕೂ ವ್ಯಾಪಿಸಿದೆ. ಅವರು ವೀರ ಪುತ್ರರು, ಕಡುಗಲಿಗಳು. ಬರಿಗೈಯಲ್ಲಿ ಕ್ರೂರ ಜಂತುಗಳನ್ನು ಕೊಂದ ಧೀರ ಕುಲದವರು. ಇಲ್ಲಿ ಒವ್ವನ ಒಗ್ಗಟ್ಟು ಎಲ್ಲೆಲ್ಲೂ ರಾರಾಜಿಸುತ್ತಿದೆ. ಗುರಿ ವಿದ್ಯೆಯಲ್ಲಿ ಪಳಗಿದ ಕೈ ಅವರದು. ಹೆಚ್ಚಿನ ಜನರು ವಿದ್ಯಾವಂತರು. ಅವರು ಎದುರು ತೊಡರುಗಳನ್ನು ಗಮನಿಸದೆ ಸತ್ಯದೆಡೆಗೆ ಸಾಗುವ ಕಡುಗಲಿಗಳು ಎಂಬುದನ್ನು ಪಂಜೆ ಮಂಗೇಶರಾಯರು "ಕವಣೆ ಬಿಲ್ಲಿಗೆ ಸೆಳೆದರೊ ಹೆಚ್ಚವನೊ, ಹುಲಿಯ ಮುದ್ದವರು" ಎಂದು ಮನಸಾರೆ ಹೊಗಳಿದ್ದರೆ, ಇದರ ದ್ಯೋತಕವೆಂಬಂತೆ ಕೊಡಗ ಕನ್ನಿಕೆ ತನ್ನಿಬ್ಬರು ಕುಲ ಪುತ್ರರನ್ನು ಭಾರತಾಂಬೆಗೆ ಸೈನ್ಯಾಧಿಪತಿಗಳಾಗಿ ನೀಡಿದ್ದಾಳೆ. ಇದೇ ರೀತಿ ಇನ್ನೂ ಅನೇಕಾನೇಕ ವೀರ ಶಿಶುಗಳು ಜಗದ ನಾನಾ ಕಾರ್ಯರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ, ಹಾಗೂ ಸಲ್ಲಿಸುತ್ತಾರೆ.

ವೀರತ್ವದ ಮುನ್ನಡೆಗೆ ತಕ್ಕಂತೆ ಅವರು ತಮ್ಮ ಹಳೇ ಪದ್ಧತಿಗಳನ್ನು ಇಂದೂ ನಡೆಸಿಕೊಂಡು ಬಂದಿದ್ದಾರೆ. ಇದನ್ನು ಅವರ ಮದುವೆ, ಸಾವು, ಹುಟ್ಟಿನ ಸಮಯದಲ್ಲಿ ನೋಡಬಹುದು. ವೀರ ಯೋಧನಂತೆ ತೋರುವ ಅವರ ಮದುವೆ ಉಡುಪು ನೋಡಲು ಚಂದ ಹಾಗೂ ಗಂಭೀರ. ಉದ್ದವಾದ ಕಪ್ಪು ಅಥವ ಬಿಳಿ ನಿಲುವಂಗಿ. ಸೊಂಟಕ್ಕೆ ಕೆಂಪು ಕಂಬಿಯ ದಟ್ಟಿಗೆ. ಸಿಕ್ಕಿಸಿರುವ ಬೆಳ್ಳಿ ಅಥವ ಚಿನ್ನದ ಕತ್ತಿ, ಅಚ್ಚುಗಟ್ಟಾಗಿ ತಲೆಗೆ ಕಟ್ಟಿದ ಕಂಬಿ ಅಂಚಿನ ರುಮಾಲುಗಳನ್ನು ನೋಡಿದರೆ ಸಾಕು ವೈರಿಯ ಎದೆ ಒಡೆಯ ಬೇಕು. ಅದೇ ಉಡುಪು ಧರಿಸಿದವರ ಸುಗ್ಗಿ ಕುಣಿತ ಅಖಿಲ ಭಾರತ ಪ್ರಸಿದ್ಧ ನೃತ್ಯಗಳಲ್ಲೊಂದೆನ್ನಬಹುದು.

ಸುಭಿಕ್ಷದಿಂದಿರುವ ನಾಡಿನಲ್ಲಿ ದೈವ ಭಕ್ತಿಗೆ ಕೊರತೆ ಇಲ್ಲ. ಇದಕ್ಕೆ ಪ್ರತಿರೂಪವಾಗಿ ಕೊಡಗಿನ ತಲಕಾವೇರಿ, ಇಗ್ಗುತ್ತಪ್ಪೇಶ್ವರ ಮುಂತಾದ ಹಲವಾರು ಸುಂದರ ಹಾಗೂ ಪ್ರಾಚೀನ ದೇವಾಲಯಗಳನ್ನೂ ಕಾಣಬಹುದು

ಶಿಲ್ಪಕಲೆಯ ನಿದರ್ಶನಗಳನ್ನೂ ಇಲ್ಲಿಯ ಮುಖ್ಯ ಪಟ್ಟಣವಾದ ಮಡಿಕೇರಿಯ ಕೋಟೆಯಲ್ಲಿ ಕರಿಕಲ್ಲಿನ ಜೋಡಿ ಆನೆ ಮತ್ತು ಅನೇ ಮತ್ತಿತರ ದೇವಾಲಯಗಳಲ್ಲಿರುವ ಕೆತ್ತನೆಗಳಿಂದ ಕಾಣಬಹುದು.

ಆದರೆ ಪ್ರಕೃತಿ ಸೌಂದರ್ಯಕ್ಕೆ ಪ್ರಸಿದ್ಧವಾದ ಈ ಕೊಡಗು ದಿನೇ ದಿನೇ ಕ್ಷಯಿಸುತ್ತ ಮಂಡನ ಮಾಡಿಸಿದ ವಿಧವೆಯೋಪಾದಿಯಲ್ಲಿ ತೋರುತ್ತಾ ಬರುತ್ತಿರುವುದು ತುಂಬಾ ಶೋಚನೀಯ.

ದಿವ್ಯ ಭವ್ಯನಾಡಾದ ಕೊಡಗಿನ ಕೀರ್ತಿ ಎಂದೆಂದಿಗೂ ಅಮರವಾಗಿ ಉಳಿಯಲಿ ಎಂದು ನಾವೆಲ್ಲರೂ ಹಾರೈಸುವ.

ಸಮರವಿರಾಮ ರೇಖೆ

(೫ನೇ ಪುಟದಿಂದ)

ರ ಸಂಖ್ಯೆ ಹೆಚ್ಚಾಗುವುದು ಸಾಧ್ಯವೆ?

ಕಾಶ್ಮೀರದಲ್ಲಿ ಸಮರವಿರಾಮ ರೇಖೆಯಿದೆ. ಅದು ಅಮರವಾಗಿಯೇ ಜೀವನ್ಮೃತವಾಗಿ ಉಳಿದರೇನೇ ತಮ್ಮ ಇಷ್ಟಾರ್ಥ ಸಾಧನೆ ಆಗುವುದೆಂದವು ತಿಳಿದಿರಬಹುದು. ಒಂದು ಕಡೆ ಆಕ್ರಮಗಳಿಗೆ ಪ್ರೋತ್ಸಾಹವಿತ್ತು ಇನ್ನೊಂದೆಡೆ ಶಾಂತಿಯ ಕರೆಯೀಯುವ ಪಾಕಿಸ್ತಾನದಂತೆಯೇ ಈ ಪಾಶ್ಚಾತ್ಯ ಕೂಟದ ನೀತಿಯೂ ನಡೆದಿದೆಯೆನ್ನಲೇ ಬೇಕಾಗುತ್ತದೆ. ಇದಕ್ಕಾಗಿ ಭಾರತವು ಕಾಶ್ಮೀರವನ್ನು ತನ್ನ ಇತರ ರಾಜ್ಯಗಳ ಮಟ್ಟಕ್ಕೆ ತಂದು ನಿಲ್ಲಿಸಿ ಮುಂದಿನ ಕ್ರಮಗಳನ್ನು ತೀವ್ರವಾಗಿ ಯೋಚಿಸುವುದು ಅತ್ಯವಶ್ಯವೆನಿಸುತ್ತದೆ. ಬಣ್ಣದ ನುಣ್ಣನೆಯ ಮಾತಿಗೆ ಬಲಿಬಿದ್ದು ಸಂಪೂರ್ಣ ಕೆಡಿಸಿಕೊಳ್ಳುವುದು ಸರ್ವನಾಶಕ್ಕೆ ನಾಂದಿಯಾದೀತು. ನೆಪ್ಪೆ ಸಿಂಗಾರವಾದಾಗ ಪಟ್ಟಣ ಸೂರೆಯಾಗದು ಳಿಯದು.

ವಜ್ರಗಳ ರಾಜ

ಡಾ|| ವಿಲಿಯಮ್‌ಸನ್

—ಶ್ರೀ ಬಸವರಾಜ ಕುಂಚೂರು

ಐದುವರೆ ಅಡಿ ಎತ್ತರದ ಮನುಷ್ಯನೊಬ್ಬ ತನ್ನ ಬುದ್ಧಿ ಶಕ್ತಿ ಕರ್ತೃತ್ವ ಶಕ್ತಿ ಬಹಳ ದಿನಗಳ ಹೋರಾಟದಿಂದ ಭೂ ವಿನ್ಯಾಸವನ್ನು ಬದಲು ಮಾಡಿಕೊಟ್ಟ, ಕಾಡಾಗಿದ್ದ ಪ್ರದೇಶವನ್ನು ಜಗತ್ತಿನ ಜನರೆಲ್ಲರ ಗಮನ ಸೆಳೆಯುವ ಪ್ರದೇಶವನ್ನಾಗಿ ಮಾಡಿದ ಎಂಬುದು ಅತ್ಯಂತ ಕುತೂಹಲಕಾರಿ ಮತ್ತು ಆಶ್ಚರ್ಯ ಸಂಗತಿ. ಅದೊಂದು ಡಾ|| ವಿಲಿಯಮ್‌ಸನ್‌ನ ಭೀಮ ಸಾಹಸದ ಕಥೆ.

ಐವತ್ತೊಂದು ವರುಷದ ಈ ಸಾಹಸಿಗ ಕೆನಡಾದ ಪ್ರಾಣಿಶಾಸ್ತ್ರಜ್ಞ. ೧೯೩೩ರಲ್ಲಿ ಡಾಕ್ಟರೇಟ್ ಪದವಿಯನ್ನು ಹೊಂದಿ ಅನಂತರ ಡಿ ಬೀರ್ಸ್ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದರು, ಇವರು. ಮುಂದೆ ಕೆಲವು ವರುಷಗಳು ಕಳೆದನಂತರ ಸ್ವತಂತ್ರವಾಗಿ ತಾವೇ ಕಂಪೆನಿಯೊಂದನ್ನು ಸ್ಥಾಪಿಸಿ ವಜ್ರಗಳ ಶೋಧನೆಗೆ ತೊಡಗಿದರು, ಅದಕ್ಕಾಗಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಇವರ ಶೋಧನೆಗಿಂತ ಮೊದಲು ಆ ಸ್ಥಳದ ಹೆಸರೇ ಜನರಿಗೆ ತಿಳಿದಿರಲಿಲ್ಲ, ಅಂಥ ಕಾಡು ಪ್ರದೇಶವದು. ರೋಗರುಜಿನಗಳ ತವರ್ಮನೆ, ಕಾಡು ಮೃಗಗಳ ಬೀಡು. ಯಾವುದನ್ನೂ ಲೆಕ್ಕಿಸದೆ ಇವರು ಧೈರ್ಯದಿಂದ ದಿಟ್ಟ ಹೆಜ್ಜೆ ಇಟ್ಟರು. ಅವರ ಶ್ರಮ ಮತ್ತು ಬುದ್ಧಿ ಶಕ್ತಿಗಳ ಫಲವಾಗಿ ಕೆಲವೇ ಕಾಲದ ನಂತರ ಯಶಸ್ಸು ಲಭಿಸಿತು. "ಪ್ರಯತ್ನವೇ ಪರಮೇಶ್ವರ" ಎನ್ನುವ ಮಾತು ಅವರ ಬಾಳಿನಲ್ಲಿ ಬಹು ಸತ್ಯವಾಯಿತು.

ಟಾಂಗನ್ಯೀಕಾದ ವಿಕ್ಟೋರಿಯಾ ಸರೋವರದ ಬಳಿಯಿರುವ ಸುಮಾರು ಐದು ಚದರಮೈಲುಗಳಷ್ಟು ಪ್ರದೇಶ ಇಂದು ಜಗತ್ತಿನ ವಜ್ರದ ದೊಡ್ಡ ಗಣಿಯಾಗಿದೆ. ಆ ಸ್ಥಳವಿಂದು ವಿಲಿಯಂಸನ್‌ರ ಮನೆಯಾಗಿದೆ ಎರಡುವರೆ ಸಾವಿರದಷ್ಟು ಜನ ಅವರ ಗಣಿಯಲ್ಲಿ ನಿತ್ಯ ಕೆಲಸ ಮಾಡುತ್ತಾರೆ. ಒಂದು ರೀತಿಯಲ್ಲಿ ದೈವವೂ ಇವರಿಗೆ ಅನುಕೂಲವಾಗಿದೆ. ಇವರ ಗಣಿಗಳು ವಿಶಿಷ್ಟ ತರದವುಗಳಾಗಿವೆ, ಹೆಚ್ಚು ಶ್ರಮ ಪಡದೆ, ಇಲ್ಲಿ ವಜ್ರದ ಹರಳುಗಳನ್ನು ಹೊರ ತೆಗೆಯ ಬಹುದಾಗಿದೆ, ಹೆಚ್ಚಿನ ಬೆಲೆ ಬಾಳುವ, ವಜ್ರಗಳು ಭೂಮಿಯ ಮೇಲ್ಭಾಗದಲ್ಲಿ ದೊರೆಯುತ್ತಿವೆ. ಸುಮಾರು ದಿನ ಒಂದಕ್ಕೆ ೩೫೦ ಕ್ಯಾರಟ್ ನಷ್ಟು ವಜ್ರಗಳನ್ನು ಹೊರತೆಗೆಯುತ್ತಾರೆ.

ವಿಲಿಯಂಸನ್ ಮನೆಯಲ್ಲಿ ಲಕ್ಷ್ಮಿ ತಾಂಡವಾಡುತ್ತಿದ್ದರೂ, ಅಷ್ಟೇ ಉದಾರಿಯು ಅವರೆಂಬುದು ಗಮನೀಯ ವಿಷಯ. ಎಲಿಜಬೆತ್ ರಾಣಿಯ ಮದುವೆಯ ಸಮಯದಲ್ಲಿ ೫೬ ಕ್ಯಾರಟ್‌ಳ್ಳ ಪಿಂಕವಜ್ರವೊಂದನ್ನು ಇವರು ಕೊಟ್ಟಿದ್ದಾರೆ ಲಂಡನ್ ಬ್ಯಾಂಕಿನಲ್ಲಿ ಸುಮಾರು ೧೪೫೭ ಕ್ಯಾರಟ್ ತೂಕದ ವಜ್ರವನ್ನಿಟ್ಟಿದ್ದಾರೆ.

ಪ್ರಪಂಚದ ಕೆಲವೇ ಶ್ರೀಮಂತರಲ್ಲಿ ಡಾ|| ವಿಲಿಯಂಸನ್‌ರು ಒಬ್ಬರು. ಆದರೆ, ಇನ್ನೂ ಬ್ರಹ್ಮಚಾರಿಯಾಗಿಯೇ ಉಳಿದಿದ್ದಾರೆ, ಈ ಲಕ್ಷ್ಮಿ ಪುತ್ರ.

(ಆಧಾರದಿಂದ)

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮ ಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ

ರೂ. ೩ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಉಳಿದವರಿಗೆ ಮಾದರಿ

ರಾಮಕಿಶನ್ನರ ಆಡಳಿತ ಪ್ರಜ್ಞೆ

ಪಂಜಾಬ ಸರಕಾರ—ಕಾಂಗ್ರೆಸ್ ಪಕ್ಷಗಳಲ್ಲಿ ತಾನೇ ತಾನಾಗಿ ವಿಶ್ವರೂಪವನ್ನು ತೋರಿಸಿದ್ದ ಪ್ರತಾಪಸಿಂಹ ಕೈರಾನರು ಈಗ ತಮ್ಮ ನಿಜವಾದ ಸ್ಥಾನವನ್ನು ಅರಿತುಕೊಳ್ಳುವಂತಾಗಿದೆ. ಇತ್ತೀಚೆಗೆ ಸೇರಿದ ಪ್ರಾದೇಶಿಕ ಕಾಂಗ್ರೆಸ್ ಸಭೆಯಲ್ಲಿ ತನ್ನ ಬೇಳೆಯು ಇನ್ನು ಮುಂದೆ ಏನೇನೂ ಬೇಯುವುದಿಲ್ಲವೆಂದವರು ಸರಿಯಾಗಿ ತಿಳಿದುಕೊಂಡಿದ್ದಾರೆ. ಪ್ರಜಾತಂತ್ರ ಪಕ್ಷದ ಸದಸ್ಯರು ಕಾಂಗ್ರೆಸ್ಸನ್ನು ಸೇರುವುದಕ್ಕೆ ಕೈರಾನರು ಪ್ರಬಲ ಪ್ರತಿಭಟನೆ ಸೂಚಿಸಿದವರು; ಆದರೆ ಪ್ರಾದೇಶಿಕ ಕಾಂಗ್ರೆಸ್ಸು ಈ ಪ್ರಶ್ನೆಯನ್ನು ಮುಖ್ಯಮಂತ್ರಿ ರಾಮಕಿಶನರಿಗೆ ಮತ್ತು ಕಾಂಗ್ರೆಸ್ ವರಿಷ್ಠರ ತೀರ್ಮಾನಕ್ಕೆ ಬಿಟ್ಟುಕೊಟ್ಟಿರುವುದನ್ನು ನಾವು ಈಗ ಉಲ್ಲೇಖಿಸಬಹುದು. ಕೈರಾನ ಗುಂಪಿನವರು ಹೀಗೆ ಕಾಂಗ್ರೆಸ್ ಸೇರುವವರು ವ್ಯಕ್ತವಾಗಿ ಕ್ಷಮಾಪಣೆ ಮಾಡಬೇಕೆಂದು ಆಗ್ರಹಪಡುತ್ತಿದ್ದರು.

ಪ್ರಾದೇಶಿಕ ಕಾಂಗ್ರೆಸಿನ ಅಧ್ಯಕ್ಷ ಭಗವತ್ ದಯಾಳ ಶರ್ಮರು ಹಿಂದಿನ ಸಭೆಯಲ್ಲಿ ಮಾತನಾಡುತ್ತ 'ದಾಸ ಕಮಿಶನ್ ಇರಲಿ, ಇಲ್ಲದಿರಲಿ, ಕೈರಾನರೇ ನಮ್ಮ ಏಕಮೇವ ನಾಯಕರಾಗಿರುವರೆಂದು ಉದ್ಘೋಷಿಸಿದ್ದರು. ಆದರೆ, ಇದೀಗ ಅವರು ತಮ್ಮ ಸ್ವರವನ್ನು ಸಂಪೂರ್ಣ ಬದಲಾಯಿಸಿದ್ದಾರೆ. ರಾಜ್ಯದ ಹೊಸ ಸರಕಾರಕ್ಕೆ ಬೆಂಗಾವಲಿನಂತಿರುವ ಕಾಂಗ್ರೆಸ್ ಕಾರ್ಯಕಾರಿಣಿಯನ್ನು ವಿಸರ್ಜಿಸಿ, ಅದರ ಪುನಾರಚನೆ ಮಾಡಲಾಗುವುದೆಂಬ ದಿಲ್ಲಿ ವರ್ತಮಾನವೇ ಶರ್ಮರ ನಿಲುವಿಗೆ ಪ್ರೇರಕ ಶಕ್ತಿಯಾಗಿದೆಯೆಂದು ಅನ್ನಬಹುದು. ಇತ್ತೀಚೆಗೆ ನವದೆಹಲಿಗೆ ಭೇಟಿಯಿತ್ತ ರಾಮಕಿಶನರೂ ಇದೇ ವಿಚಾರವಾಗಿ ಪ್ರಧಾನಿ ಶಾಸ್ತ್ರಿ ಮೊದಲಾದವರೊಡನೆ ಚರ್ಚಿಸಿದರೆಂಬುದೂ ಗೊತ್ತಾಗಿದೆ. ಹಾಗಾಗಿ ಅಧಿಕಾರದಲ್ಲಿ ಉಳಿಯ ಬಯಸುವ ಶರ್ಮರು ಮತ್ತೇನು ಮಾಡಬಹುದು?

ಮುಖ್ಯಮಂತ್ರಿ ರಾಮಕಿಶನರು ಪ್ರಜಾಪರಿಷತ್ತಿನಲ್ಲಿ ಅಲ್ಪಕಾಲ ಮಾತ್ರ ಉಳಿದಿರುವ ೧೮ ಮಂದಿ ಭಿನ್ನಾಭಿಪ್ರಾಯಿಗಳು ಕೈರಾನರ ವರ್ತನೆಯಿಂದ ಅತೃಪ್ತರಾಗಿಯೇ ಕಾಂಗ್ರೆಸ್ಸನ್ನು ಬಿಟ್ಟಿರುವರೆಂದೂ ಇದೀಗ ಕೈರಾನರು ದೂರ ಹೋದುದರಿಂದ ಮತ್ತೆ ಕಾಂಗ್ರೆಸ್ ಸೇರಲು ಉತ್ಸುಕರಾಗಿರುವರೆಂದೂ ಅರಿತಿದ್ದಾರೆ; ಮತ್ತದಕ್ಕೆ ತಮ್ಮ ಒಪ್ಪಿಗೆಯನ್ನೂ ನೀಡಿದ್ದಾರೆ. ಮುಖ್ಯಮಂತ್ರಿಯವರು ತಮ್ಮ ಸಂಪುಟವನ್ನು ವಿಸ್ತೃತಗೊಳಿಸುವುದಾದರೆ, ಇಬ್ಬರು ಈ ೧೮ ಜನರಲ್ಲಿಯೇ ಇದ್ದಾರೆ. ಇವರಲ್ಲಿ ಒಬ್ಬರು ವಿಧಾನಸಭೆಯ ಹಿಂದಿನ ಅಧ್ಯಕ್ಷರಾಗಿದ್ದವರು; ಮತ್ತೊಬ್ಬರು ಹಿಂದಿನ ಪೆಪ್ಸುವಿನ ಮುಖ್ಯಮಂತ್ರಿಗಳಾಗಿದ್ದು, ಮೊನ್ನಿನ ಸಾರ್ವತ್ರಿಕ ಚುನಾವಣೆಗಳಿಗೆ ಮೊದಲು ಕೈರಾನರ ಮಂತ್ರಿಮಂಡಲದಲ್ಲೇ ಇದ್ದವರು.

ರಾಜ್ಯದ ಪರಿವರ್ತಿತ ನಾಯಕತ್ವಕ್ಕೆ ಹೊಂದಿಕೊಂಡಿರುವಂತೆ ಎಲ್ಲ ವಿಧದಲ್ಲಿಯೂ ಪಕ್ಷವು ಪುನರ್ಘಟಿತವಾಗಬೇಕೆಂಬುದನ್ನು ರಾಮಕಿಶನ್ ಪ್ರಾದೇಶಿಕ ಕಾಂಗ್ರೆಸ್ ಸಭೆಯಲ್ಲಿ ಹೇಳಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಗೌರವ ಪ್ರತಿಷ್ಠೆಗಳನ್ನು ಉಳಿಸಿಕೊಳ್ಳಲು ದಾಸ ಕಮಿಶನ್ನಿನ ಹೇಳಿಕೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುವುದೆಂದವರು ಘೋಷಿಸಿದ್ದಾರೆ. ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಹೋರಾಡಲು ಸಹಾಯವಾಗುವಂತೆ ಕಾಂಗ್ರೆಸ್ಸಿನ ಆಡಳಿತೆ ಮತ್ತು ಪಕ್ಷಗಳಲ್ಲಿ ಸಮನ್ವಯವನ್ನು ಮಾಡಿಸಲು ಸಲಹೆ ಮಾಡುವ ಒಂದು ಸಮಿತಿಯನ್ನು ಬೇಗನೆ ನೇಮಿಸುವುದಾಗಿಯೂ ರಾಮಕಿಶನ್ ಅಂದಿದ್ದಾರೆ.

ಹಿಂದಿನ ಕರಿನೆರಳನ್ನು ತಿಳಿಗೊಳಿಸಿ ಹೊಸ ಚೇತನವನ್ನು ರಾಜ್ಯದಲ್ಲಿ ತರಲು ಹೊಸ ಸರಕಾರ ಪ್ರಯತ್ನಿಸುತ್ತಿದೆ. ದಾಸ ಕಮಿಶನ್ ವರದಿಯು ಎರಡು ಕೋಟಿ ಪಂಜಾಬಿಗಳ ಕಣ್ಣುಗಳನ್ನು ತೆರೆಯಿಸಿದೆ. ಕಮಿಶನ್ ವರದಿಯ ಉಲ್ಲೇಖಗಳ ಸತ್ಯತೆಯನ್ನು ಕಂಡುಹಿಡಿಯುವುದು [illegible] ಡಲ [illegible]ಥವಾಗಿ ನಂಬಿದೆ. ಆದುದರಿಂದಲೇ ಈ ವರದಿಗೆ ಬಂದಿದೆಯೆಂದು ಅಗ್ರ ಪ್ರಾಶಸ್ತ್ಯ. ಇದಕ್ಕಾಗಿಯೇ ಮುಖ್ಯಮಂತ್ರಿಯವರು ಕೇಂದ್ರ ಗೃಹ ಮಂತ್ರಿ ಗುಲ್ಜಾರೀಲಾಲ ನಂದಾರೊಡನೆ ಸಾಕಷ್ಟು ಪರ್ಯಾಲೋಚನೆ ನಡೆಸಿದ್ದಾರೆ. ಕೈರಾನರ ಘೋಷಣೆಯಲ್ಲಿ ಸೊಕ್ಕಿನಿಂದ ಹಿಟ್ಲರರನ್ನು ನೆಲಸಮ ಮಾಡುವ ಘೋಷಣೆಯನ್ನು ಪಂಜಾಬದ ಗೃಹಮಂತ್ರಿ ದರ್ಬಾರ ಸಿಂಗರು ಚಂಡಿಗರದಲ್ಲಿ ಮಾಡಿದ್ದಾರೆ. ಕಾಡಾಡಿಗಳ ಕಾನೂನು, ಸ್ಥಳೀಯ ಮಹಂತರ ಆಳಿಕೆ, ಕಳ್ಳಸೇಟಿಯವರ ಸಾಮರ್ಥ್ಯ ಹಾಗೂ ಮತ್ತಿತರ ಸಮಾಜ ಹಿತನಾಶಕ ಶಕ್ತಿಗಳನ್ನು ನಿರ್ಮೂಲ ಮಾಡಲು ಪೋಲೀಸರಿಗೆ ತಮ್ಮ ಕರ್ತವ್ಯವನ್ನು ನಿರಾತಂಕವಾಗಿ ಮಾಡಲು ತಕ್ಕ ಅವಕಾಶ ಮಾಡಿಕೊಡಲಾಗುವುದೆಂದವರು ನುಡಿದು, ಜನತೆಯಲ್ಲಿ ನ್ಯಾಯಾಡಳಿತೆಯ ಬಗ್ಗೆ ವಿಶ್ವಾಸ ಕುದುರಿಸುವುದಾಗಿ ಭರವಸೆ ನೀಡಿದ್ದಾರೆ.

ತಾನು ಅಧಿಕಾರ ಗದ್ದುಗೆಯೇರಿದ ಮೊದಲಲ್ಲೇ ರಾಮಕಿಶನರು ನ್ಯಾಯಾಂಗವನ್ನೂ ಕಾರ್ಯಾಂಗವನ್ನೂ ಪ್ರತ್ಯೇಕಿಸುವುದಾಗಿ ಅಂದಿದ್ದಾರೆ. ಇದಕ್ಕೆ ನಾಲ್ಕಾರು ತಿಂಗಳುಗಳು ತಗಲಬಹುದು. ಕೈರಾನರು ಇವುಗಳ ಪ್ರತ್ಯೇಕತೆಯನ್ನು ವಿರೋಧಿಸುತ್ತಿದ್ದರೆಂಬುದನ್ನು ಮರೆಯಬಾರದು. ಕಳೆದ ನವಂಬರದಲ್ಲಿ ಮತ್ತೆ ಕೈರಾನರು ಬಳಕೆಗೆ ತಂದ ಜಿಲ್ಲಾವಾರ ಮತ್ತು ಇನಾಮುದಾರ ಪದ್ಧತಿಯನ್ನು ರದ್ದುಗೊಳಿಸುವ ನಿರ್ಣಯ ರಾಮಕಿಶನ್ ಮಾಡಿದ್ದಾರೆ. ಆಡಳಿತ ಸಂಗತಿಗಳನ್ನು ಪರಿಶೀಲಿಸಲು ವಿಧಾನಸಭೆ— ಮಂಡಳಗಳ ಮುಂದೆ ಬರುವುದಕ್ಕೆ ಮೊದಲು ಅದನ್ನು ಸರಿ ನೋಡಲು ಒಂದು ಹೊಸ ಶಾಖೆಯನ್ನು ತೆರೆಯುವ ನಿರ್ಧಾರಕ್ಕವರು ಬಂದಿದ್ದಾರೆ. ವಿರೋಧೀ ಪಕ್ಷಗಳ ಸದಸ್ಯರಿಂದಲೂ ಕೂಡಿದ ಸಲಹಾ ಸಮಿತಿಯೊಂದನ್ನೂ ರಚಿಸುವುದು ರಾಮಕಿಶನರ ಅಪೇಕ್ಷೆಯಾಗಿದೆ.

ಹೀಗೆ ಪ್ರತಾಪ ಸಿಂಹರ ಆಡಳಿತೆಯಲ್ಲಿ ರೋಸಿಹೋದ ಜನತೆಯು ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಲು ಅಗತ್ಯವಿರುವ ಒಂದಲ್ಲ ಹಲವು ಕ್ರಮಗಳನ್ನು ರಾಮಕಿಶನ್ ಕೈಗೊಳ್ಳುತ್ತಿದ್ದಾರೆ. ಇದರಿಂದಾಗಿ ಇಂದು ಪಂಜಾಬದ ಈ ಹಳೆಯ ಸಿಂಹವನ್ನು ಕೇಳುವವರೇ ಇಲ್ಲವೆಂಬಂತಾಗಿದೆಯೆಂದರೆ ಅತಿಶಯೋಕ್ತಿಯಲ್ಲ.

ಪ್ರಜಾಪ್ರಭುತ್ವವೆಂದು ಹೇಳುವುದು ಇದನ್ನೇ ಅಲ್ಲವೆ? ಅಂದು ರಾಜನಾಗಿ ಮೆರೆದವರು ಇಂದು....?

ಸುಲ್ತಾನ್ ಬಾಲ್ಬನನ ಸ್ವದೇಶ ಪ್ರೇಮ

(೪ನೇ ಪುಟದಿಂದ)

ಭಾರತೀಯ ಮಹಾರಾಜನೂ ಇಂತಹವನ್ನು ರಚಿಸಿರಲಿಲ್ಲ. ಮೊಂಗಲರಿಂದ ಬದುಕುಳಿಯಲು ದೆಹಲಿಗೆ ಓಡಿಬಂದ ನಿರಾಶ್ರಿತ ರಾಜಕುಮಾರರು ಮತ್ತು ಕವಿಗಳು ಈತನ ಆಸ್ಥಾನದಲ್ಲಿರುತ್ತಿದ್ದರು. ಸುಪ್ರಸಿದ್ಧ ಕವಿ ಅಮೀರ್ ಖುಸ್ರೋ ಇವರಲ್ಲೊಬ್ಬನು. ಖಾಸಗಿ ಜೀವನದಲ್ಲಿ ಬಾಲ್ಬನ್ ಮೃದು ಸ್ವಭಾವಿ ಮತ್ತು ಅಲ್ಪಾಹಾರಿ. ಈತನ ಮರಣಕ್ಕೆ ವೃದ್ಧಾಪ್ಯ ಮಾತ್ರವಲ್ಲದೆ ಅವನ ಪ್ರೀತಿಯ ಮಗನು ಮೊಂಗಲರಿಂದ ಹತ್ತಾದುದೇ ಪ್ರಬಲ ಕಾರಣವಾಗಿತ್ತು.

ಬಾಲ್ಬನನು ಹಿಂದುಗಳನ್ನು ಕಠೋರವಾಗಿ ನೋಡಿಕೊಳ್ಳುತ್ತಿರಲಿಲ್ಲ ನಿಜ; ಆದರೆ, ಉದಾರ ನೀತಿಯನ್ನೂ ಅವನು ಅವಲಂಬಿಸಿರಲಿಲ್ಲ. ವಿಶ್ವಾಸಾರ್ಹವಾದ ಮತ್ತು ಜವಾಬ್ದಾರಿಯುತವಾದ ಯಾವ ಹುದ್ದೆಯನ್ನೂ ಅವನು ಹಿಂದುಗಳಿಗೆ ಕೊಡಲಿಲ್ಲ. ಹಾಗಿದ್ದರೂ ಆತನ ಆಡಳಿತೆಯು ಪ್ರಶಂಸನೀಯವಾಗಿದೆ.

ಆತ್ಮವಿಶ್ವಾಸ, ಕರ್ತೃತ್ವ ಶಕ್ತಿ, ದೇಶಪ್ರೇಮಪೂರ್ಣ ಧೈರ್ಯೋತ್ಸಾಹಗಳ ತ್ರಿವೇಣೀ ಸಂಗಮದಂತಿದ್ದ ಬಾಲ್ಬನ್ ಸುಮಾರು ಐವತ್ತು ವರ್ಷಗಳ ಕಾಲ ಗುಲಾಮ ವಂಶದ ವಿವಿಧ ಅರಸರ ಅಡಿಯಾಳಾಗಿ ಇಲ್ಲವೇ ಸ್ವತಂತ್ರನಾಗಿ ಭಾರತೀಯ ಚರಿತ್ರೆಯಲ್ಲೊಬ್ಬ ಧ್ರುವತಾರೆಯೆನಿಸಿದನು. ಪರರಾಕ್ರಮಣವನ್ನು ತಡೆಯುವುದರಲ್ಲಿಯೇ ಆತನ ಜೀವನದ ಬಹುಭಾಗ ಕಳೆದು ಹೋಯಿತು. ಆತನು ತೋರಿಸಿದ ತ್ರಿವೇಣಿಯಲ್ಲಿಯೇ ಇಂದೂ ಭಾರತೀಯರು ಸ್ನಾನ ಮಾಡಬೇಕಾದ ಅಗತ್ಯವಿದೆ. ಅಂದು ಚೆಂಗೀಜ್ ಖಾನ ಮತ್ತಾತನ ಉತ್ತರಾಧಿಕಾರಿಗಳ ಆಕ್ರಮಣ ಭೀತಿಯಿದ್ದರೆ ಇಂದು ಕೆಂಪು ಚೀನಾದ ಆಕ್ರಮಣ ಭಾರತದ ಮೇಲೆ ನಡೆದಿದೆ. ಆತನೆಂದಂತೆ ಪರಕೀಯರನ್ನೆದುರಿಸಲು ನಮ್ಮ ಶಕ್ತಿ ಸರ್ವಸ್ವವನ್ನಿಂದು ಕೇಂದ್ರೀಕರಿಸಬೇಕಾಗಿದೆ.'

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ವಿಠ್ಠಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಸಲಸಾದ ಸಾಮಾನ್ಯ ರೋಗಗಳ ಹುಟ್ಟು, ಬೆಳೆ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

'ನಚಿಕೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ನವಯುಗ ಪ್ರೆಸ್, ಉಡುಪಿ.

ನುಸುಳಿದೊಡನೆಯೇ ಶರಾಪ್ರಹಾರ

(೩ನೇ ಪುಟದಿಂದ)

ಬಲ ಮತ್ತು ಲೆನಿನನುಗಳಲ್ಲಿ ಮತ ಪ್ರಚಾರ ಮಾಡುವವರು ಭಾರತದಲ್ಲಿ ಪ್ರಚಾರ ಮಾಡಕೂಡದೆಂದು ಹೇಳಲಾಗುತ್ತಿದೆ. ಅದೆಷ್ಟು ಮಂದಿ ಕ್ರೈಸ್ತರೂ ಹಾಗೂ ಮಹಮ್ಮದೀಯರು ಅವರ ಪವಿತ್ರ—ಗ್ರಂಥಗಳ ಮಾತಿನಂತೆ ನಡೆದುಕೊಂಡಿದ್ದಾರೆನ್ನುವದನ್ನು ಇಂದಿನ ಶೋಚನೀಯ ಪರಿಸ್ಥಿತಿ ಸಾರುತ್ತಿದೆ. ಮಾರ್ಕ್ಸ್ ನು ಮಾತ್ರ ಭಾರತದಲ್ಲಿ ಪ್ರಚಾರ ಮಾಡಕೂಡದೆಂದು ಹೇಳಿಲ್ಲವೆಂದು ಕಾಣುತ್ತದೆ. ಅಲ್ಲದೆ ಲೆನಿನನು ಭಾರತ—ಚೀನಾಗಳ ಹಗಲುಗನಸನ್ನೇ ಕಾಣುತ್ತಿದ್ದನು. ತಮ್ಮ ಮತ ಗ್ರಂಥಗಳ ಮಾತನ್ನೇ ಮೀರಿ ಆ ಮತಾನುಯಾಯಿಗಳು ನಡೆದುಕೊಳ್ಳುತ್ತಿರುವಾಗ ಎಲ್ಲಾದಕ್ಕೂ ವಿರೋಧವಾಗಿರುವ ಕಮ್ಯೂನಿಸಂ ಸುಮ್ಮಗುಳಿದೀತೇ?

ಇನ್ನೊಂದು ಮುಖ್ಯವಾಗೂ ತಮಾಷೆಯ ವಿಷಯವೆಂದರೆ ಆ ಚೈನೀ—ತಂಡಕ್ಕೆ ಉತ್ತಮ ಸ್ವಾಗತ ಸಿಕ್ಕಿದ್ದು ಕೇರಳದಲ್ಲಿ. ಇದು ಅನಿಶ್ಚಿತ ಹಾಗೂ ಹೇಗೋ—ಹೇಗೋ ಆದ ಘಟನೆಯೇ ಇರಬಹುದು. ಇಂದು ಚೈನಿ ಕಮ್ಯೂನಿಷ್ಟರಿಗೆ ಭವ್ಯ ಸ್ವಾಗತವೀಯುವ ಪಾಪ ಕಾರ್ಯಕ್ಕೆ ಮುಂದಾದವರೂ ಕೇರಳದ ಕಮ್ಯೂನಿಷ್ಟರೇ ಇದ್ದಾರೆ.

ಈ ರೀತಿ ಉತ್ತಮ ಸ್ವಾಗತ ಸಿಕುತ್ತದೆಂಬ ಸಮಾಚಾರ-ಚೆಂಗ-ಯೋನಿಗೆ ಬರುತ್ತಾ ಇತ್ತು. ಇನ್ನು ಅವರಿಂದ ಸುಮ್ಮಗುಳಿಯಲಾಗಲಿಲ್ಲ. ಸಿಲೋನಿಗೆ ಹೋಗಬಾರದೆಂದು ಆ ತಂಡಕ್ಕೆ ಕಟ್ಟಪ್ಪಣೆ ಕೊಡಲಾಗಿತ್ತು. ಭಾರತ ಪ್ರವಾಸ ಮುಗಿದೊಡನೆ ಅವರನ್ನು ಹಿಂದಕ್ಕೆ ಕರೆಸಿಕೊಳ್ಳಲಾಯಿತು. ಕೇವಲ ಹತ್ತಿಪ್ಪತ್ತು ತಿಂಗಳಲ್ಲೇ ಈ ದ್ವಿತೀಯ ಪ್ರವಾಸ ಕೊನೆಗೊಂಡಿತು. ಹಿಂದಿನ ಕಹಿ ಅನುಭವ ಈ ತಂಡಕ್ಕಾಗಲಿಲ್ಲ. ಕಾರಣ ಇದರಲ್ಲಾರೂ ಕಡಲು ಕಳ್ಳರು ಇದ್ದಿರಲಿಲ್ಲ

ಇದರಿಂದಲಾದರೂ ಚೈನಿ ಕಮ್ಯೂನಿಷ್ಟರಿಗೆ ಬುದ್ಧಿ ಬರುತ್ತದೆಯೇ? ಕೆಟ್ಟಮೇಲೆ ತಾನೇ ಬುದ್ಧಿ ಬರುವುದು. ಇನ್ನೂ ಅವರು ಸೂರ್ಣ ಕೆಟ್ಟಿಲ್ಲ. ಪ್ರಥಮ ಪ್ರವಾಸದ ಪೆಟ್ಟಿನ ರುಚಿಯಿಂದ ದ್ವಿತೀಯ ಪ್ರವಾಸದ ಸಮಯ ಅವರು ಸರಿಯಾಗಿ ನಡೆದುಕೊಂಡರು.

ಇದರಿಂದ ಭಾರತೀಯರೂ ಬುದ್ಧಿ ಕಲಿತು ಕೊಳ್ಳಬೇಕಾಗಿತ್ತು. ಪ್ರಥಮ ಸಲವೇ ಚೈನಿ ಕಮ್ಯೂನಿಷ್ಟರಿಗೆ ಪ್ರಹಾರ ವೀಯುತ್ತಿದ್ದಲ್ಲಿ ಅವರು ಬಾಯಿಮುಚ್ಚಿಕೊಂಡು ಸುಮ್ಮಗಿರುತ್ತಿದ್ದರು, ರಷ್ಯಾಗಿ ನಡೆದು ಕೊಳ್ಳುತ್ತಿದ್ದರು. ಅದು ಅವರ ಕುಲಾಚಾರ. ನಾವು ಮಾಡಿದ್ದಾದರೂ ಏನು? ಇಂದಾದರೂ ಕೆಂಪು ಚೀನಾವನ್ನು ಎದುರಿಸಲು ನಾವು ಸಿದ್ಧರಾಗಿದ್ದೇವೆಯೇ? ಇದ್ದಾರಲ್ಲಾ, ನಮ್ಮ ಬಳಿಯೇ, ನಮ್ಮ ಕಾಲಡಿಯಲ್ಲೇ ಹೊಂಡತೋಡುವವರು. ಇಂದೂ ಅವರ ಮಾವನ ಚಿತ್ರವನ್ನಿಟ್ಟು ಕೊಂಡು ಪೂಜಿಸುವವರು! ಆಕ್ರಮಣವೇ ನಡೆದಿಲ್ಲವೆಂದು ಇಂದೂ ಹೇಳುವವರಿದ್ದಾರಲ್ಲಾ! ಅದೂ ಕರ್ನಾಟಕ ಗಂಡುಭೂಮಿಯ ಮೇಲೆ ನಿಂತುಕೊಂಡು!

ಚೈನಿ ಪ್ರವಾಸಿಕರ ಅನುಭವದಿಂದ ನಾವು ಬುದ್ಧಿ ಕಲಿತು ಕೊಂಡಲ್ಲಿ ಎರಡು ರಾಷ್ಟ್ರಗಳಿಗ ಹಿತವಾದೀತು.

ಐದೂವರೆ ಸಾವಿರ ವರ್ಷ ಹಳೆಯ

ಮಂಗಳಗಿರಿಯ ನರಸಿಂಹ

ವಿಜಯವಾಡದಿಂದ ಗುಂಟೂರಿಗೆ ಬರುವಾಗ ಎಂಟು ಮೈಲು ದೂರದಲ್ಲಿ ಮಂಗಳಗಿರಿಯಿದೆ. ಇದರಲ್ಲಿನ ೩೦೦ ಅಡಿ ಎತ್ತರದ ಗುಡ್ಡದಲ್ಲಿ ಒಂದು ನರಸಿಂಹ ದೇವಾಲಯವಿದೆ. ಈ ಗುಡ್ಡದ ಬುಡದಲ್ಲಿಯೂ ಇನ್ನೊಂದು ದೇವಾಲಯವಿದ್ದು ಇದೂ, ನರಸಿಂಹನ ದೇವಾಲಯಕ್ಕೆ ಸಂಬಂಧಿಸಿದುದಾಗಿದೆ.

ಮಂಗಳಗಿರಿಯ ನರಸಿಂಹನ ಉಲ್ಲೇಖವು ಬ್ರಹ್ಮ ವೈವರ್ತ ಪುರಾಣದಲ್ಲಿ ಕಂಡು ಬರುತ್ತದೆ. ಈ ದೇಗುಲವು ಸುಮಾರು ೫,೫೦೦ ವರ್ಷಗಳಿಗೆ ಮೊದಲು ಹಸ್ತಿನಾವತಿಯ ರಾಜ್ಯವಾಳಿದ ಪಾಂಡುಪುತ್ರ ಯುಧಿಷ್ಠಿರನಿಂದ ಕಟ್ಟಲ್ಪಟ್ಟದ್ದು ಎಂದೊಂದು ಕಥೆ ಹೇಳುತ್ತದೆ, ನಮ್ಮ ದೇಶದಲ್ಲಿ ಪಾಂಡವರಿಂದ ರಚಿತವಾದ ಹಲವಾರು ದೇವಾಲಯಗಳಿರುವ ಉಲ್ಲೇಖಗಳು ಎಲ್ಲೆಲ್ಲಿಯೂ ದೊರೆಯುತ್ತವೆ.

ಮಂಗಳಗಿರಿಯ ಬೆಟ್ಟವೊಂದು ಆನೆಯ ಆಕಾರದಲ್ಲಿದೆ. ಪ್ರತಿಯೊಂದಕ್ಕೂ ಆಧಾರವಿರುವ ನಮ್ಮ ಧರ್ಮಪ್ರಿಯ ನಾಡಿನಲ್ಲಿ ಇದಕ್ಕೂ ಒಂದು ದಂತ ಕಥೆಯಿದೆ. ರಾಜಕುಮಾರ ಬ್ರಸ್ವ ಶೃಂಗಿಯು ಇಲ್ಲಿ ತಪಸ್ಸು ಮಾಡಿ, ಆನೆಯಾಕಾರದ ಬೆಟ್ಟದ ರೂಪ ತಾಳಿದನೆಂದು ಇದು ಹೇಳುತ್ತದೆ. ನಾಮುಚಿಯೆನ್ನುವ ಭೂತವನ್ನು ಸಂಹರಿಸಿದ ಬಳಿಕ ನರಸಿಂಹನು ಇದೇ ಬೆಟ್ಟದಲ್ಲಿ ನೆಲೆಸಿಂತನೆಂದು ಹೇಳುತ್ತಾರೆ. ಅನಂತರ, ದೇವಾಸುರರು ಸಮುದ್ರ ಮಥನ ಮಾಡಿದಾಗ ಸಾಗರದಿಂದ ಹುಟ್ಟಿಬಂದ ಲಕ್ಷ್ಮಿಯನ್ನು ಪರಮಾತ್ಮನಿಗೆ ವಿವಾಹ ರೂಪದಲ್ಲಿ ಒಪ್ಪಿಸಲಾಯಿತಂತೆ. ಈ ದೇವರಿಗೆ ಕೃತಯುಗದಲ್ಲಿ ಜೇನನ್ನು, ದ್ವಾಪರ ಯುಗದಲ್ಲಿ ಹಾಲನ್ನು ಮತ್ತೀಗ ಕಲಿಯುಗದಲ್ಲಿ ಬೆಲ್ಲದ ನೀರು ಇಲ್ಲವೇ ಪಾನಕವನ್ನು ಸಮರ್ಪಣೆ ಮಾಡಲಾಗುತ್ತದೆ. ಆದುದರಿಂದ ಈ ನರಸಿಂಹನಿಗೆ "ಪಾನಕಲನರಸಿಂಹ" ಎಂಬ ಹೆಸರು ಪ್ರಸಿದ್ಧವಾಗಿದೆ.

ಪೌರಾಣಿಕ ಕಥೆಗಳಂತೆ ಈ ನರಸಿಂಹ ಮಂದಿರವು ಸುಮಾರು ೫,೫೦೦ ವರ್ಷಗಳ ಇತಿಹಾಸವನ್ನು ಪಡೆದಿದೆ; ಆದರೆ, ಐತಿಹಾಸಿಕ ದೃಷ್ಟಿಯಿಂದ ಪರಿಶೀಲನೆ ನಡೆಸಿದಾಗ, ಇದರ ರಚನೆ ಯಾವಾಗ ಆಯಿತೆಂದು ಸುಸ್ಪಷ್ಟವಾಗಿ ತಿಳಿಯುವುದಿಲ್ಲ. ಹಾಗಿದ್ದರೂ ಕ್ರಿ. ಶ ೧,೫೦೦ಕ್ಕೆ ಮೊದಲೇ ಈ ಪಾನಕಲ ನರಸಿಂಹನ ದೇಗುಲವು ನಿರ್ಮಿತವಾಗಿತ್ತು ಎಂಬುದಕ್ಕೆ ಆಧಾರಗಳು ದೊರೆಯುತ್ತವೆ. ಬೆಟ್ಟದ ಕೆತ್ತರದ 'ಲಾಟ್ಬಹದ್ದೂರ ದಾರಿಯಲ್ಲಿ ಒಂದು ಶಿಲಾಲೇಖವಿದೆ. ಇದರಲ್ಲಿ ೧೫೧೫ರಲ್ಲಿ ವಿಜಯನಗರದ ಮಹಾರಾಜನು ಅಮರಾವತಿಯ ಕೊಂಡತಿಡ್ಡಿಗಳನ್ನು ಗೆದ್ದ ವಿಚಾರವಿದೆ. ಗುಡ್ಡದ ಬುಡದಲ್ಲಿರುವ 'ಗರುಡಸ್ತಂಭ' ಮಂದಿರದಲ್ಲಿ ಇನ್ನೊಂದು ಶಿಲಾಲೇಖವಿದ್ದು ಇದು ೧೫೫೮ರಲ್ಲಿ ಸಿದ್ಧರಾಜು ಎಂಬ ಒರಿಸ್ಸಾದ ರಾಜನು ನರಸಿಂಹ ದೇವರಿಗೆ ಮಂಗಳಗಿರಿ ಮತ್ತು ಸುತ್ತಲಿನ ೨೮ ಗ್ರಾಮಗಳನ್ನೂ ೫೦೦೦ ಕ್ರೆ ಭೂಮಿಯನ್ನೂ ದಾನವಾಗಿತ್ತ ಸಂಗತಿಯನ್ನು ತಿಳಿಸುತ್ತದೆ.

ತಾಳಿಕೋಟೆಯ ಕದನಾಂತರ ವಿಜಯನಗರವು ಪತನವಾಯಿತು. ಆಗ, ಮಂಗಳಗಿರಿ ಮತ್ತದರ ಆಸುಪಾಸಿನ ಜನರು ಬಂದರ್ ಮುಂತಾದ ಊರುಗಳಿಗೆ ವಲಸೆ ಹೋದರು. ವಿಜಯನಗರದ ಉತ್ತರಾಧಿಕಾರಿಗಳಾಗಿ ಬಂದ ಮುಸ್ಲಿಂ ಆಡಳಿತಾಧಿಕಾರಿಗಳು ಈ ವಲಸೆ ಹೋದವರೊಡನೊಂದು ಒಡಂಬಡಿಕೆಯನ್ನು ಮಾಡಿಕೊಂಡರು. ಇದರನ್ವಯ ಅವರು ಮರಳಿ ಮಂಗಳಗಿರಿಯಲ್ಲಿ ನೆಲಸಲು ಆರಂಭಿಸಿದರು. ಈ ಒಪ್ಪಂದವು ಒಂದು ಶಿಲಾಸ್ತಂಭದಲ್ಲಿ ಉಲ್ಲಿಖಿತವಾಗಿದೆ. ಇದನ್ನು ೧೫೯೩ರಲ್ಲಿ ನಾಟಲಾಗಿತ್ತು. ಇಲ್ಲಿಯೇ ಒಂದು ಆಂಜನೇಯ ಗುಡಿಯೂ ಕಟ್ಟಲ್ಪಟ್ಟಿತು. ಇದು ಶಾಸನ ಸ್ತಂಭಾಂಜನೇಯ ದೇವಾಲಯ ಎಂಬ ಹೆಸರಿನಿಂದ ಲೋಕ ಪ್ರಸಿದ್ಧವಾಯಿತು.

ಮಂಗಳಗಿರಿಯ ಆಸುಪಾಸಿನಲ್ಲಿ ಡಚ್ಚರು, ಫ್ರೆಂಚರು ಮತ್ತು ಇಂಗ್ಲಿಷರು ವ್ಯಾಪಾರ ನಿರತರಾಗಿದ್ದರೆಂಬುದಕ್ಕೂ ಸಾಕಷ್ಟು ಪುರಾವೆಗಳು ಲಭಿಸುತ್ತವೆ. ಅಮರಾವತಿ ಮತ್ತು ಉಂಡವಲ್ಲಿ ಮೊದಲಾದೆಯ ಶಾಸನಗಳಲ್ಲಿಯೂ ಈ ದೇವಾಲಯದ ಉಲ್ಲೇಖವಿರುವುದನ್ನು ನಾವು ಕಾಣಬಹುದು. ಚೈತನ್ಯ ಮಹಾ ಪ್ರಭುಗಳೂ ಈ ನರಸಿಂಹನ ಮಂದಿರವನ್ನು ೧೫೧೨ರಲ್ಲಿ ಸಂದರ್ಶಿಸಿದ್ದರೆಂದೂ ತಿಳಿಯುತ್ತದೆ.

ಮಂಗಳಗಿರಿಯ ಮೇಲಿನ ಇಲ್ಲವೇ ಬುಡದ ದೇವಾಲಯವೇನೂ ಅತ್ಯಂತಾಕರ್ಷಕವೆನ್ನುವಂತಿಲ್ಲ. ಶಿಲ್ಪಕಲಾದೃಷ್ಟಿಯಿಂದಲೂ ಇದು ಮಹತ್ವದಲ್ಲ ಕೆಳ ದೇಗುಲದ ಮೂಡು ಬಾಗಿಲಲ್ಲಿ ೧೧ ಉಪ್ಪರಿಗೆಗಳಿರುವ ಗೋಪುರವೊಂದು ಇದೆ. ಇದನ್ನು ಸುಮಾರು ೧೮೨೦ರಲ್ಲಿ ಅಮರಾವತಿಯ ಜಮೀನುದಾರನೊಬ್ಬನು ಕಟ್ಟಿಸಿದನು.

ಕೆಳಗಿನ ದೇವಾಲಯದಲ್ಲಿ ನರಸಿಂಹನ ಮೂರ್ತಿಯೊಂದಲ್ಲದೆ ಸುಂದರವಾದ ಮಹಾಲಕ್ಷ್ಮಿಯ ವಿಗ್ರಹವೂ ಇರುವುದು. ತೆಲುಗು ಪಂಚಾಂಗದ ಕೊನೆಯ ತಿಂಗಳಲ್ಲಿ ಇಲ್ಲಿ ವರ್ಷಾವಧಿ ಉತ್ಸವವು ನೆರವೇರುವುದು ಈ ವೇಳೆ ಸುಮಾರು ೧೦,೦೦೦ ಜನರು ಇಲ್ಲಿ ಸೇರುತ್ತಾರೆ.

ದೇವಾಲಯವು ಸಾಮಾನ್ಯ ಸ್ವರೂಪದ್ದಾದರೂ ಇದರ ಇತಿಹಾಸ ಮತ್ತು ಪೌರಾಣಿಕತೆಯು ಬಹು ಪ್ರಾಚೀನ ಕಾಲಕ್ಕೆ ಇದನ್ನು ಒಯ್ಯುತ್ತದೆ. ಆದುದರಿಂದಲೇ ಪಾನಕಲ ನರಸಿಂಹ ಮಂದಿರ ನಾಮಾಂಕಿತವಾಗಿದೆ.

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೋ, ಉಡುಪಿ.



ಕವನ ಕಿಡಿಗಳು

ಆಸ್ಪತ್ರೆ:—

ನಮ್ಮೂರ ತಾಲೂಕು ಬೋರ್ಡಿನಾಸ್ಪತ್ರೆ।
ಕೇಳುವವರೇ ಇಲ್ಲ ರೋಗಿಗಳ ಸತ್ರೆ॥
ಎಲ್ಲ ರೋಗಕು ಅಲ್ಲಿ ಸಿಗುವುದೊಂದೇ ಜಾತಿ ಮಾತ್ರೆ।
ಕೊಡುವರೊಂದುದ್ದದ ಚೀಟಿ ಇನ್ನಾ ಅಲ್ಲಿ ನಿಂತ್ರೆ॥

ಸ್ಕೂಲು:—

ಊರೊಳಗೆ ಇರುವುದೊಂದೇ ಟೆಂಪರರಿ ಸ್ಕೂಲು।
ಹಾಕಿಲ್ಲ ಈವರ ಮಾಡಿಗೇ ಹುಲ್ಲು॥
ಹೇಳುವರು ಮಾಡುವೆವು ದೊಡ್ಡ ಹೈಸ್ಕೂಲು।
ಭಾಷಣದೊಳದು ಸತ್ಯ ಕಾರ್ಯದೊಳು ಸುಳ್ಳು॥

ದಾನ:—

ಕೇಳದಿರಿ ಊರೊಳಗೆ ಧರ್ಮಛತ್ರದ ದಾನ।
ಕೇಳದಿದ್ದರೆ ನಿಮಗಿಲ್ಲ ಕುಳಿತುಕೊಳ್ಳಲು ಸ್ಥಾನ॥
ಕೇಳಿದರೆ ಹೋಯಿತ್ತೈ ನಿಮ್ಮ ಮಾನ।
ಕೇಳದಯೆ ಕೊಡುವಷ್ಟು ಇಲ್ಲವೈ ಜ್ಞಾನ॥

ಪ್ರೊಹಿಬಿಷನ್ ಧಾಳಿ:—

ಊರೊಳಗೆ ಆಯಿತ್ತೈ ಪ್ರೊಹಿಬಿಷನ್ ಧಾಳಿ।
ಬಚ್ಚಿಟ್ಟ ಬಾಟ್ಲಿಗಳು ಆದುವೈ ಖಾಲಿ।
ಮುಗಿದು ಹೋಯಿತು ಎಲ್ಲ ಗೂಡಿನಾ ಕೋಳಿ।
ಆಯಿತೊಮ್ಮೆಗೆ ಎಲ್ಲರಿಗು ವೆರಿಜ್ಯೋಲಿ ಜ್ಯೋಲಿ॥

ಮಂತ್ರಿಗಳ ಮನೆ:—

ಮಂತ್ರಿಗಳ ಮನೆಯೆಲ್ಲ ಹೊಸತಾಜ ಮಹಲು।
ಗೋಡೆಗಳು ಕಂಬಗಳು ಅಮೃತ ಶಿಲೆ ಕಲ್ಲು॥
ಕೇಳುತಿರುವುದು ಅಲ್ಲಿ ರೇಡಿಯೋ ಸೊಲ್ಲು।
ಎಲ್ಲಿಂದ ಬಂತಿದು ಎಲ್ಲ ಮಾಮೂಲು॥

—ಶ್ರೀ ಪಿ. ರಾಮಕೃಷ್ಣ ಆಚಾರ್,
ಕುಂತೂರು.

In the Court of the Civil Judge of Udipi, S. Kanara.

S. C. S. No. 97 of 1964.

K. Purushothama Kamath ... Plaintiff.

against

K. Umavathi S. Shetty, wife of Seetharama Shetty, residing at Vakil Angara Shetty's Lane, Santhekatte, Udipi Town. ... ... Defendant.

To:

The defendant.

Please take notice that the above plaintiff has filed a suit against you for recovery of mulgeni rent claimed in the plaint and that it is posted to 26—8—1964 for notice to you. If you fail to appear before the said Court at 11 A. M. on the day mentioned above, the same will be decided in your absence.

K. Varadaraya Pai.
Advocate for plaintiff.

Udipi. Dated 29-7-1964.

ಶಿಕ್ಷಣ ಪುನಾರಚನೆಗೆ

ಸಲಹೆ ನೀಡುವ ಶಿಕ್ಷಣ ಆಯೋಗ

ಭಾರತೀಯ ಶಿಕ್ಷಣ ರಂಗದಲ್ಲಿ ಆಯೋಗಗಳನ್ನು ಪದೇ ಪದೇ ನೇಮಿಸುತ್ತಿಲ್ಲ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಕೇವಲ ಮೂರು ಆಯೋಗಗಳು ಮಾತ್ರ ನೇಮಕವಾಗಿದ್ದುವು. ಮತ್ತು ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ಇಲ್ಲಿಯವರೆಗೆ ಎರಡು ಆಯೋಗಗಳು ಮಾತ್ರ ನೇಮಕವಾಗಿವೆ. ೧೮೮೨ರಲ್ಲಿ ನೇಮಕವಾದ ಭಾರತೀಯ ಶಿಕ್ಷಣ ಆಯೋಗವೇ ಆಯೋಗಗಳಲ್ಲೆಲ್ಲಾ ಅತಿ ಪ್ರಾಚೀನವಾದುದಾಗಿದೆ. ಈ ಆಯೋಗವು ಮುಖ್ಯವಾಗಿ ಶಾಲಾ ಶಿಕ್ಷಣಕ್ಕೆ ಮಾತ್ರ ಸಂಬಂಧಪಟ್ಟಿತ್ತು. ಏಕೆಂದರೆ ವಿಶ್ವವಿದ್ಯಾನಿಲಯ ತಾಂತ್ರಿಕ ಹಾಗೂ ವೃತ್ತಿ ಪ್ರಧಾನ ಶಿಕ್ಷಣಗಳನ್ನು ಈ ಆಯೋಗದ ಪರ್ಯಾಲೋಚನೆಗೆ ಸೇರಿಸಲಿಲ್ಲ. ಅನಂತರ ೧೯೦೨ರಲ್ಲಿ ಭಾರತೀಯ ವಿಶ್ವವಿದ್ಯಾನಿಲಯ ಆಯೋಗವನ್ನು ರಚಿಸಲಾಯಿತು. ಇದು ಕೇವಲ ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಮಾತ್ರ ಸಂಬಂಧಪಟ್ಟಿತ್ತು. ಇದರ ಹಿಂದೆಯೇ ಕಲ್ಕತ್ತ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಆಯೋಗದ ನೇಮಕವಾಯಿತು. ಈ ಆಯೋಗ ಸಹ ಮುಖ್ಯವಾಗಿ ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಸಂಬಂಧಪಟ್ಟಿತ್ತಾದರೂ ಸೆಕೆಂಡರಿ ಶಿಕ್ಷಣದ ಕೆಲವು ವಿಷಯಗಳ ಬಗ್ಗೆ ಪರ್ಯಾಲೋಚನೆ ನಡೆಸಿತು.

ಸ್ವತಂತ್ರ ಭಾರತದಲ್ಲಿ ನೇಮಿತವಾದ ಮೊದಲನೆಯ ಆಯೋಗವೆಂದರೆ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ. ಇದನ್ನು ೧೯೪೮ರಲ್ಲಿ ರಚಿಸಲಾಯಿತು. ಅನಂತರ ೧೯೫೨ರಲ್ಲಿ ಸೆಕೆಂಡರಿ ಶಿಕ್ಷಣ ಆಯೋಗದ ರಚನೆಯಾಯಿತು. ಈ ಎರಡು ಆಯೋಗಗಳೂ ವಿಶ್ವವಿದ್ಯಾನಿಲಯ ಮತ್ತು ಸೆಕೆಂಡರಿ ಶಿಕ್ಷಣಗಳಿಗೆ ಮಾತ್ರ ಸಂಬಂಧಪಟ್ಟ ವಿಷಯಗಳ ಬಗ್ಗೆ ಪರ್ಯಾಲೋಚನೆ ನಡೆಸಿದವು.

ಆದ್ದರಿಂದ ಈ ಹಿಂದೆ ನೇಮಿತವಾದ ಯಾವುದೇ ಆಯೋಗವಾಗಲಿ ಶಿಕ್ಷಣ ಕ್ಷೇತ್ರದ ಎಲ್ಲಾ ರೂಪರೇಷೆಗಳನ್ನು ಕುರಿತು ವ್ಯಾಪಕವಾದ ಪರ್ಯಾಲೋಚನೆ ನಡೆಸಿಲ್ಲ. ಈಗ ತಾನೇ ಕೇಂದ್ರ ಸರಕಾರವು ನೇಮಿಸಿದ ಶಿಕ್ಷಣ ಆಯೋಗದ ಸ್ಥಾನಮಾನಗಳು ಅದ್ವಿತೀಯವಾಗಿವೆ. ಏಕೆಂದರೆ ಶಿಕ್ಷಣ ರಂಗದ ಎಲ್ಲಾ ಕೋನಗಳ ಪರಿಶೀಲನೆ ನಡೆಸುವ ಮೊದಲನೆಯ ಆಯೋಗ ಇದಾಗಿರುತ್ತದೆ.

ನೂತನ ಶಿಕ್ಷಣ ಆಯೋಗದ ಎರಡು ವಿಶೇಷಾಂಶಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ದೇಶವು ಯೋಜನಾ ಬದ್ಧವಾದ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವ ತಂತ್ರ ವಿಧಾನವನ್ನು ಅನುಸರಿಸಿದ ನಂತರ ಸ್ಥಾಪಿತವಾದ ಮೊದಲನೆಯ ಆಯೋಗವಿದು. ಆದ್ದರಿಂದ ಈ ಆಯೋಗವು ಮೊದಲನೆಯ ಮೂರು ಯೋಜನೆಗಳಲ್ಲಿ ಗಳಿಸಿದ ಅನುಭವಗಳನ್ನು ಅಂದಾಜು ಮಾಡಲು ಸಮರ್ಥವಾಗಿದೆ ಮತ್ತು ಮುಂದಿನ ಮೂರು ಯೋಜನೆಗಳ ಬಗ್ಗೆ ದೃಷ್ಟಿ ಹಾಯಿಸಬಹುದಾಗಿದೆ. ೧೯೪೮ರಲ್ಲಿ ರಚಿತವಾದ ವಿಶ್ವವಿದ್ಯಾನಿಲಯ ಆಯೋಗವಾಗಲಿ ೧೯೫೨ರಲ್ಲಿ ರಚಿತವಾದ ಸೆಕೆಂಡರಿ ಶಿಕ್ಷಣ ಆಯೋಗವಾಗಲಿ ಈ ಅವಕಾಶವನ್ನು ಪಡೆದಿರಲಿಲ್ಲ. ಎರಡನೆಯದಾಗಿ ಈ ಆಯೋಗವು ತಾನು ಮಾಡುವ ಶಿಫಾರಸುಗಳನ್ನು ಜಾರಿಗೆ ತಂದಲ್ಲಿ ತಗಲುವ ವೆಚ್ಚವನ್ನು ವಿವರವಾಗಿ ತಿಳಿಸುವುದು. ಈ ಮುಂಚೆ ರಚಿತವಾಗಿದ್ದ ಆಯೋಗಗಳಾವುವೂ ತಾವು ಸಲ್ಲಿಸಿದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ತಗಲುವ ವೆಚ್ಚವನ್ನು ಲೆಕ್ಕಾಚಾರ ಮಾಡಲಿಲ್ಲ.

ಇಲ್ಲಿಯವರೆಗೆ ನೇಮಕವಾಗಿರುವ ಆರು ಆಯೋಗಗಳಲ್ಲಿಯೂ ಭಾರತೀಯರು ಮತ್ತು ವಿದೇಶೀಯರು ಸದಸ್ಯರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಬ್ರಿಟಿಷರ ಕಾಲದಲ್ಲಿ ಈ ರೀತಿ ನಡೆದಿರುವುದು ಸ್ವಾಭಾವಿಕ. ಆದರೆ ಸ್ವಾತಂತ್ರ್ಯಾನಂತರವೂ ಈ ಪರಂಪರೆಯನ್ನೇ ಉಳಿಸಿಕೊಂಡು ಬರಲಾಗಿದೆ. ಏಕೆಂದರೆ ದೇಶೀಯ ಶಿಕ್ಷಣದ ಅಭಿವೃದ್ಧಿಯನ್ನು ಮುಂದುವರಿಸಿದ ದೇಶಗಳಲ್ಲಿನ ಅಭಿವೃದ್ಧಿಯೊಂದಿಗೆ ಮತ್ತು ಅಂತರಾಷ್ಟ್ರೀಯ ಮಟ್ಟದ ಅನುಭವಗಳೊಂದಿಗೆ ಸಂಬಂಧ ಕಲ್ಪಿಸುವುದು ಅಪೇಕ್ಷಣೀಯ. ೧೯೪೮ರಲ್ಲಿ ನೇಮಿತವಾದ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗದಲ್ಲಿ ಮೂವರು ವಿದೇಶೀಯರಿದ್ದರು. ಇವರಾರೆಂದರೆ: ಸರ್ ಜೇಂಸ್ ಎಫ್. ಡಫ್, ಡಾ| ಎ. ಇ. ಮೋರ್ಗನ್ ಮತ್ತು ಡಾ| ಜಾನ್ ಜೆ ಟಿಗಾರ್ಟ್. ಸೆಕೆಂಡರಿ ಶಿಕ್ಷಣ ಆಯೋಗದಲ್ಲಿ ಡಾ| ಕೆ. ಆರ್. ವಿಲಿಯಂಸ್ ಎಂಬ ವಿದೇಶೀಯರೊಬ್ಬರು ಮಾತ್ರ ಸದಸ್ಯರಾಗಿದ್ದರು. ನೂತನ ಶಿಕ್ಷಣ ಮಂಡಳಿಯಲ್ಲಿರುವ ವಿದೇಶೀಯರ ಸಂಖ್ಯೆ ಅತಿ ದೊಡ್ಡದಾಗಿರುತ್ತದೆ.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊಳಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ: ರೂ.ಎರಡೂವರೆ(ಟ.ಖ.ಪ್ರತ್ಯೇಕ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ
LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಚಿಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

REA 334/64 REP 158/61

ಕಿಲ್ಲೂರು ಲಕ್ಷ್ಮೀನಾರಾಯಣರಾವ್.... ಅರ್ಜಿದಾರ.

ಸಿದ್ದಪ್ಪಗೌಡ, ಕಾಂತಪ್ಪ ಗೌಡರ ಮಗ, ಬೆಳ್ತಂಗಡಿ ತಾಲ್ಲೂಕು ಪುಲವಂತಿಗೆ ಗ್ರಾಮ —ಎದ್ರಿ.

ಎದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ:—

ಮೇಲಿನ ಅಮಲ್ ಜ್ಯಾರಿಯಲ್ಲಿ ಅರ್ಜಿದಾರನ ಲೆಕ್ಕಕ್ಕೆ ಕೋರ್ಟು ಡಿಪೋಜಿಟಿನಲ್ಲಿರುವ ಹ್ಯವಜನ್ನು ತನಗೆ ಕೊಡಿಸಬೇಕಾಗಿ ಅಪೇಕ್ಷಿಸಿ ಮಾಡಿದ ಮೇಲ್ಕಂಡ ಅರ್ಜಿಯು ತಾ. 24-8-64ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಮ್ಮದೇನಾದರೂ ಆಕ್ಷೇಪಗಳಿದ್ರೆ ಸದ್ರಿ ದಿನ್ನ ಹಾಜರಾಗಿ ಉಪಪಡಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(Sd) C. S. Shatry.
Vakil for Petitioner.

ಪುತ್ತೂರು ತಾ. 29—7—64

READ & ADVERTISE IN

REGD. No. B. G. 176
LICENCE No. 31
Licensed to Post without Prepayment

ನಮ್ಮ-ನಮ್ಮವರು

(೧ನೇ ಪುಟದಿಂದ)

ತ್ತಾರೆ. ಇವರಲ್ಲಿ ಶ್ರೀ ರಮೇಶ ಪೈಗಳೂ ಒಬ್ಬರು. ಸದ್ದು ಗದ್ದಲವಿಲ್ಲದೆ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಪೈಗಳು ಸಾರ್ವಜನಿಕ ಸಂಸ್ಥೆಗಳಲ್ಲಿ ಹತ್ತು ಹಲವಾರು ಹೊಣೆ ಹೊತ್ತು ಸೇವೆ ಸಲ್ಲಿಸುತ್ತಿದ್ದಾರೆ. ಅವರು ಮಾತಿನಲ್ಲಿ ತುಸು ಹಿಂದೆಂದು ಹಲವರು ಭಾವಿಸುವುದಾದರೂ, ಕಾರ್ಯದಲ್ಲಿ ಬಹಳ ಮುಂದು. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಹುಮ್ಮಸ್ಸು ಅವರಿಗೆ ಹೆಚ್ಚಾಗಿರುವುದಿಲ್ಲ. ಆದರೆ ಅವರು ಸದಾ ಕಾರ್ಯನಿರತರು. ಸಫಲ ಯೋಜಕರು ಹಾಗೂ ಕಾರ್ಯಸಾಧಕರು.

ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕಾರ್ಪೊರೇಶನ್, ಮಹಾರಾಷ್ಟ್ರ ಎಪೆಕ್ಸ್ ಕಾರ್ಪೋರೇಶನ್, ಹಾಗೂ ಇನ್ನಿತರ ಹಲವಾರು ಸಂಸ್ಥೆಗಳಲ್ಲಿ ಶ್ರೀ ಪೈಗಳು ಉಚ್ಚ ಸ್ಥಾನದಲ್ಲಿದ್ದು ಆಡಳಿತ ನಿರ್ವಹಿಸುತ್ತಿದ್ದಾರೆ. ಶಿವಳ್ಳಿ ಪಂಚಾಯ್ತಿನ ಅಧ್ಯಕ್ಷರಾಗಿ ಅವರು ಸ್ಥಳೀಯ ಸಂಸ್ಥೆಗಳ ಅನುಭವವನ್ನು ಪಡೆದಿದ್ದಾರೆ. ಡಾ| ಪೈಗಳ ಎಕಾಡೆಮಿಯು ನಡೆಸುತ್ತಿರುವ ಹಲವಾರು ವಿದ್ಯಾ ಸಂಸ್ಥೆಗಳ ಆಡಳಿತದಲ್ಲೂ ಇವರು ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಕೈಗಾರಿಕೆ ಹಾಗೂ ಉದ್ದಿಮೆಯಲ್ಲಿ ಇವರಿಗೆ ಒಲವು ಬಹಳ.

ಹಿಂದೊಮ್ಮೆ ಜಪಾನಿಗೆ ತೆರಳಿ ಅಲ್ಲಿಯ ಪುಟ್ಟ ಕೈಗಾರಿಕೆಗಳ ಕುರಿತು ಅಧ್ಯಯನ ನಡೆಸಿದ ಶ್ರೀ ಪೈಗಳು ತಮ್ಮ ಅನುಭವವನ್ನು ಅನುಷ್ಠಾನಕ್ಕೆ ಹತ್ತು ಹಲವಾರು ವಿಧಗಳಲ್ಲಿ ತಂದರು. ಇತ್ತೀಚೆಗೆ ಅವರು ಡಾ| ಪೈಗಳ ಜತೆಗೂಡಿ ಅಮೇರಿಕ ಇತ್ಯಾದಿ ವಿದೇಶಗಳನ್ನು ಸುತ್ತಿ ಬಂದಿದ್ದಾರೆ. ಅವರ ವಿದೇಶ ಸಂಚಾರದ ಅನುಭವದ ಪ್ರಯೋಜನ ಉಡುಪಿಯ ಜನತೆಗೆ ಹಾಗೂ ಜಿಲ್ಲೆಗೆ ಲಭಿಸುವುದೆಂಬುದರಲ್ಲಿ ಸಂಶಯವಿಲ್ಲ.

ಯುವಕರಾದ ಶ್ರೀ ರಮೇಶ ಪೈಗಳಲ್ಲಿ ಅನುಭವವಿದೆ. ಅನುಭವವನ್ನು ಅನುಷ್ಠಾನಕ್ಕೆ ತರಲು ಬೇಕಾದ ಕಾರ್ಯ ಚತುರತೆ, ಸಾಮರ್ಥ್ಯ ಹಾಗೂ ಕೆಚ್ಚು ಅವರಲ್ಲಿದೆ. ಸಮುದ್ರ ದಾರಿದರೆಂದರೆ ಅವರು ಮುತ್ತು ಹೆಕ್ಕಿಯೇ ಮೇಲೆ ಬರುತ್ತಾರೆ. ಇಂತಹ ಕಾರ್ಯಶೀಲರ ಅಗತ್ಯ ಇಂದು ನಾಡಿಗೆ ಹೆಚ್ಚಾಗಿದೆ.

ನಗೆಗಡಲು

ಯಾರ ತಪ್ಪು?

ನಿಮ್ಮನ್ನು ಮದುವೆಯಾಗುವಾಗ ನನ್ನ ತಲೆಕೆಟ್ಟಿರಬೇಕು ಹೆಂಡತಿ ಗುಡುಗಿದಳು.

ಆಗ ನನಗೆ ಆ ವಿಷಯ ಗೊತ್ತಿರಲಿಲ್ಲ. ಈಗ ನನ್ನನ್ನು ದೂರ ಬೇಡ ಗಂಡ ಗುಡುಗಿದ

ಅವರು: ನಿಮ್ಮ ಮಗ ನನ್ನನ್ನು ಅನುಕರಣೆ ಮಾಡದಂತೆ ಎಚ್ಚರಿಕೆ ಕೊಡಿ!

ಇವರು: ಕೊಟ್ಟಿದ್ದೇನೆ ಸ್ವಾಮಿ, ಕೊಟ್ಟಿದ್ದೇನೆ! ಮೂರ್ಖರ ಅನುಕರಣೆ ಮಾಡಿದರೆ ಮೂಳೆ ಮುರಿಯುತ್ತೇನೆ ಎಂದು ಬೆದರಿಸಿದ್ದೇನೆ.

ಅಮಲ್ದಾರರು:— ಅಪ್ಪಣೆಯಿಲ್ಲದೇ ನೀವು ಗೈರು ಗೈರುಹಾಜರಾದ್ದಕ್ಕೆ ಕ್ಷಮಾರ್ಪಣೆ ಬರೆದುಕೊಡಿ.

ಗುಮಾಸ್ತ :— ಡ್ರಾಯರಿನಲ್ಲಿ Apology forms ಕಾಣೆಯಾಗಿವೆ ಸಾರ್

ಇರಲಿಕ್ಕಿಲ್ಲ!

ತಲೆಗೂದಲು ಬೆಳೆದಿದ್ದ ಆ ತರುಣ ಶೇವಿಂಗ್ ಸೆಲೂನ್ ಒಂದಕ್ಕೆ ಹೋಗಿ ಅವಿಯಿಂದ ಕುರ್ಚಿಯಲ್ಲಿ ಕುಳಿತು ಸುತ್ತು ಮುತ್ತು ನೋಡಿ ಕೇಳಿದ— "ಕಳೆದ ಸಲ ನಾನು ಕ್ರಾಪ್ ಕಟ್ ಮಾಡಿಸಿಕೊಂಡದ್ದು ಈ ಸೆಲೂನಿನಲ್ಲಿಯೇ ಅಲ್ಲವೇ?

ಸೆಲೂನಿನವನು— ಇರಲಿಕ್ಕಿಲ್ಲ ಸ್ವಾಮಿ, ನಾನು ಈ ಸೆಲೂನು ಪ್ರಾರಂಭಿಸಿ ಕೇವಲ ಎರಡು ವರ್ಷಗಳಾದುವಷ್ಟೆ.

ಅದಲು ಬದಲು

ಆತ:— ನೀನು "ಜನ ಪ್ರಯೋಜನ" ಎಂಬ ಪತ್ರಿಕೆ ನಡೆಸುತ್ತಿದ್ದೆ ಅಲ್ಲವೇ? ಅದೇಕೆ ಈಗ ನಿಲ್ಲಿಸಿಬಿಟ್ಟೆ?

ಈತ- ಅದರಿಂದೇನೂ ಪ್ರಯೋಜನವಾಗಲಿಲ್ಲ. ಅನೇಕ ಏಜಂಟರು ಪತ್ರಿಕೆ ಹಣ ತಿಂದು ಹಾಕಿಬಿಟ್ಟರು. ಪತ್ರಿಕೆ ನಿಲ್ಲಿಸ ಬೇಕಾಯಿತು.

ಆತ:- ಈಗೇನು ಮಾಡುತ್ತಿರುವೆ?

ಈತ:— ನಾಲ್ಕು ದಿನಪತ್ರಿಕೆ, ಆರು ವಾರಪತ್ರಿಕೆಗಳು, ಮೂರು ಮಾಸ ಪತ್ರಿಕೆಗಳ ಏಜಂಟನಾಗಿದ್ದೇನೆ.

ಸಂಗ್ರಹ: ಭಾಸ್ಕರ ಭಂಡಾರಿ,
ಮಂಜಿಬೈಲು.

० ० ०

ಕನ್ನಡಾ ಸ್ಪೀಚ್

ಲಂಡನ್‌ದಿಂದ P.Hd. ಪದವಿ ಪಡೆದು ಬಂದ ಮಹಾನುಭಾವರೊಬ್ಬರು— ಮಾತೃ ಭಾಷೆಯ ಪ್ರೇಮದಿಂದಾಗಿ ಅತ್ಯುತ್ಸಾಹವಾಗಿ ಕನ್ನಡದಲ್ಲಿಯೇ ಭಾಷಣ ಮಾಡುತ್ತ— ನಾನು ನನ್ನ ಕನ್ನಡಾ ಸ್ಪೀಚನಲ್ಲಿ ಒಂದು ಇಂಗ್ಲಿಷ್ ವರ್ಡನ್ನು ಸಹ ಯೂಸ್ ಮಾಡಿಲ್ಲ" ಎಂದು ಮಾತು ಮುಗಿಸಿದರು.

ಸಿರಿವಂತಿಕೆ!?

ಶಾಸ್ತ್ರಿಗಳು— ಭಟ್ರೆ, ರಾಮರಾಯರು ಏನು ಹೇಳಿದರು? ರಾಯರು ಏನೇ ಹೇಳಲಿ— ತುಳಸಾಬಾಯಿಯಂತೂ ಒಪ್ಪುತ್ತಾಳೆ....ಹುಡುಗ ಎರಡನೆ ಸಲ 'ಬಿ. ಎ.' ಮಾಡ್ತಾ ಇದ್ದಾನೆ. ಸುಂದರರಾಯರಿಗೆ ಒಬ್ಬನೆ ಮಗ— ಹತ್ತು ಎಕರೆ ಅಡಿಕೆ ತೋಟ ಉಂಟು— ವರುಷಕ್ಕೆ ಹತ್ತು ಸಾವಿರ 'ನಿವಾಳ' ಉಳಿಸುತ್ತಾರೆ"

ಭಟ್ರು— ವರದಕ್ಷಿಣೆ....

ಶಾಸ್ತ್ರಿಗಳು— ದಿಬ್ಬಣ ತರಲಿಕ್ಕಾದರೂ ಬೇಕಲ್ಲ ಐದುನೂರು ರೂಪಾಯಿ!!?

ಯಿಂದ/ ಗೆ

ಪುಟ್ಟು— ಎಷ್ಟು ಕೊಚ್ಚು ಕೊಳ್ಳುತ್ತಿದ್ದಿಯಲ್ಲಾ — ನಿನ್ನ ಆ ಲೇಖನ ಎಲ್ಲಿ ಹೋಯಿತು?

ಕಿಟ್ಟು— ನನ್ನ ಲೇಖನ 'ಕಸದ ಬುಟ್ಟಿಯಿಂದ' ಸಂಪಾದಕರ ಕೈ ತಪ್ಪಿನಿಂದ 'ಯಿಂದ'ದ ಬದಲು 'ಗೆ' ಆಯಿತು?!

ಪ್ರತಿಭೆ

ಆತ— ಸಾಹಿತ್ಯ ಸಾಗರದಲ್ಲಿ ಕನ್ನಡದ ಪ್ರತಿಭೆ ಎಂತಹದು? ಯಾವುದಕ್ಕೆ ಸಲ್ಲುತ್ತದೆ?

ಈತ— ಒಂದೇ ಮಾತಿನಲ್ಲಿ ಹೇಳುವುದಾದರೆ - ಅಶ್ಲೀಲಕ್ಕೆ ಚುಂಬಕ ಶಕ್ತಿಯನ್ನು ಕೊಟ್ಟು ಓದುಗರ ಮನಸ್ಸನ್ನು ಸೆಳೆದುಕೊಳ್ಳುವ 'ಸಾಹಿತಿ'ಗಳು— ಇನ್ನು ಮೊದಲನೆ ಸಾಲಿನಲ್ಲಿ 'ಪ್ರಕಾಶ'ಕರು- ಮತ್ತು (ಅಶ್ಲೀಲ ಸಾಹಿತ್ಯದ) ಓದುಗರು. ಮೊದಲನೆಯ ಸ್ಥಾನ—'ತ್ರಿವರ್ಣ, ರಕ್ಷಾ ಪತ್ರಿಕೆ'!?

ಫ್ರೆಂಡ್ ಶಿಪ್

(ಒಂದು ಕ್ಲಾಸು ಮುಂದೆ ಇದ್ದ ಶಾಮಲೆಗೆ—)

ಲೀಲಾ— "ಬರುವ ವರುಷ ನಾನು ನೀನು ಡೆಸ್ಕಮೇಟರಾಗುವಾ"!?

— ಪಿ. ಎನ್. ಹೆಗಡೆ—ಶಂಭು,
ಹೊಸಾಕುಳಿ.

ನೂತನ ವಧೂವರರು

ಶ್ರೀ ಬಿ. ವಿ. ಆಚಾರ್ಯ,
B.E (Hons) ಭಿಲಾಯ್
(ದಿ| ಯಾದವೇಂದ್ರ ಆಚಾರ್ಯರ ಪುತ್ರ)

ಕುಮಾರಿ ವಸಂತಿ
(ಶಾಸ್ತ್ರಿ ಮತ್ತು ಕಂಪೆನಿಯ ಶ್ರೀಮತಿ ಮತ್ತು ಶ್ರೀಯುತ ಕೆ. ವಿ. ಶಾಸ್ತ್ರಿಗಳ ಪುತ್ರಿ)

ಜನತಾ ಉವಾಚ

ಈ ಬಾರಿ ಜಂಬೂ ಸವಾರಿ ಯಾರಿಗೆ?

ಮೈಸೂರಿನಲ್ಲಿ ಮಹಾರಾಜರಿರುವಾಗ ಮಹಾರಾಜರ ಜಂಬೂ ಸವಾರಿ ನಡೆಯುತಿತ್ತು. ರಾಜ್ಯ ಪುನರ್ಘಟನೆಯ ನಂತರ ಈ ಮಹಾರಾಜರೇ ರಾಜ್ಯಪಾಲರಾಗಿ ದೊರೆತದ್ದರಿಂದ ಮುಂದೆಯೂ ಈ ರಾಜವೈಭವ ನಿರಾತಂಕವಾಗಿ ನಡೆಯಿತು. ಆಗ ಎದ್ದ ಭಿನ್ನಾಭಿಪ್ರಾಯಗಳಿಗೆ ಉತ್ತರವಾಗಿ ಮೈಸೂರಿನ ರಾಜ್ಯಪಾಲರೆಂದೇ ಅವರ ಜಂಬೂ ಸವಾರಿ ನಡೆಯುತ್ತದೆ ಎಂದು ಅನ್ನಲಾಯಿತು. ಇದೀಗ ಮಹಾರಾಜರು ಮೈಸೂರಿಗೆ ಮಾಜಿ ರಾಜ್ಯಪಾಲರಾಗಿ ಹೋಗಿದ್ದಾರೆ. ಹಾಗಾಗಿ ಈಗ ರಾಜ್ಯಪಾಲರಾಗಿರುವ ಶ್ರೀ ನಾಗೇಶರನ್ನೇ ಜಂಬೂ ಸವಾರಿ ಮಾಡುವಂತೆ ಕೇಳಿಕೊಳ್ಳಲಾಗುವುದೆ? ದಸರಾ ಪ್ರದರ್ಶನಾದಿಗಳಿಂದ ಸರಕಾರಕ್ಕೆ ಲಾಭ ಬರುವುದರಿಂದ ಮಾಜಿ ರಾಜ್ಯಪಾಲರನ್ನೇ ಕರೆಸಿ ಅವರಿಂದ ಜಂಬೂ ಸವಾರಿ ಮಾಡಿಸಿ ವ್ಯಾಪಾರವನ್ನು ಮಾತ್ರ ಸರಕಾರ ಮಾಡುವುದೆ? ಅಥವಾ ದಸರಾ—ಜಂಬೂ ಸವಾರಿಗಳು ಮೈಸೂರಿನ ಮಹಾರಾಜರ ಖಾಸಗಿ ವಿಷಯಗಳೆಂದು ಸರಕಾರ ಈ ಬಾರಿ ತೆಪ್ಪಗಿರುವುದೆ? ದಸರಾವು ಅತಿ ವೇಗವಾಗಿ ಓಡಿ ಬರುತ್ತಿರುವುದರಿಂದ ಈ ಬಗ್ಗೆ ನಾಗರಿಕರಲ್ಲಿ ಕುತೂಹಲವೇಳುವುದು ಸ್ವಾಭಾವಿಕ.

ಹಿರಿಯಡಕ, — ಜಗದೀಶರಾವ್.

ಏರಿದ ಭತ್ತೆ

ಮೈಸೂರ ಸರಕಾರವು ಈ ಆರ್ಥಿಕ ವರ್ಷದಲ್ಲಿ ತನ್ನ ನೌಕರರಿಗೆ ಕೊಡ ಮಾಡಿದ ತುಟ್ಟಿ ಭತ್ತೆಯ ಹೆಚ್ಚಳವನ್ನು ಸರಕಾರಿ ಸಹಾಯಧನ ಪಡೆಯುವ ಖಾಸಗಿ ಹಾಗೂ ಸ್ಥಳೀಯ ಸಂಸ್ಥೆಗಳ ಶಾಲೆಗಳ ಶಿಕ್ಷಕ-ನೌಕರರಿಗೂ ಅನ್ವಯಿಸುವುದಾಗಿ ಅಂದು ಅರ್ಥಮಂತ್ರಿ ಜತ್ತಿಯವರಂದಿದ್ದರು. ಸರಕಾರಿ ನೌಕರರು ಈ ಹೆಚ್ಚಳವನ್ನು ಈಗಾಗಲೇ ಪಡೆದಿದ್ದಾರೆ. ಆದರೆ, ಸರಿಯಾದ ಆಜ್ಞೆಯು ಬಾರದುಳಿದುದರಿಂದ ಉಳಿದವರಿಗದು ಇನ್ನೂ ಅಲಭ್ಯವಾಗಿದೆ. ಆದುದರಿಂದ ಆವಶ್ಯಕ ಸ್ಪಷ್ಟ ನಿರ್ದೇಶವನ್ನು ಸರಕಾರ ಈ ಸಂಬಂಧದಲ್ಲಿ ಶೀಘ್ರವಾಗಿ ನೀಡುವುದು ಅಗತ್ಯವಿದೆ.

ಉದಿಯಾವರ, —ನಾರಾಯಣ.

Edited, Printed & Published by K. H.Shetty. at the Navayuga Press, Udipi, S. India

ನವಯುಗ

NAVAYUGA INDEPENDENCE DAY SPECIAL 1964

50 ಪೈಸೆ

ಭಾರತ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಸ್ವತಂತ್ರ ಭಾರತದಲ್ಲಿ ತಯಾರಾಗುವ

ಖೀರಾ ಉಕ್ಕಿನ ಫರ್ನಿಚರುಗಳು



ಮೂರು ಸೈಜುಗಳಲ್ಲಿ ದೊರೆಯುವ
ಖೀರಾ ಉಕ್ಕಿನ ಕಪಾಟುಗಳು

ಕುರ್ಚಿಗಳು



ಮೇಜುಗಳು



ರೇಕ್‌ಗಳು





ಕಂಪೌಂಡು ಗೇಟು



ವಿಂಡೊಗ್ರಿಲ್

ಫೋನ್ ರೆಸ್ಟ್

ಮನೆ, ಆಫೀಸು, ಆಸ್ಪತ್ರೆಗಳಿಗೆಲ್ಲಾ ಬೇಕಾಗುವ ಯಾವತ್ತೂ ಖೀರಾ ಉಕ್ಕಿನ ಫರ್ನಿಚರುಗಳು, ಉಪಕರಣಗಳು ಚಿತ್ರದ ಸಾಹಿತ್ಯೋಪಕರಣಗಳು, ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ಉಕ್ಕಿನ ಕಿಟಿಕಿ ಬಾಗಿಲುಗಳು, ಮಕ್ಕಳಿಗಾಗಿ ನವೀನ 'ಬೇಬಿ ವಾಕರ್' ಇತ್ಯಾದಿಗಳಿಗೆ ವಿಚಾರಿಸಿರಿ ಯಾ ಹಂಪನಕಟ್ಟೆಯಲ್ಲಿರುವ ನಮ್ಮ ಶೋ ರೂಮನ್ನು ಸಂದರ್ಶಿಸಿರಿ!

ಶಾಸ್ತ್ರಿ & ಕೊ   Shastry & Co.

ಹಂಪನಕಟ್ಟೆ,
ಮಂಗಳೂರು.

HAMPANKATTA,
MANGALORE.

ಫೋನ್: 788

Telegram: "SHASTRYCO"

With Best Compliments From

MADHUSHREE INDUSTRIES

Manufacturers and Exporters of the finest quality of plastic packaging material, cane and all extruded articles and monofilaments.

Factories:

1. *Nalsaheb Chowk*
   Hansapuri
   Nagpur-2
   Phone: 5868
2. *No 103 Kakad Industrial Estate*
   Mahim
   Bombay-16

Administrative Office:
15, Narayan Dhabolkar Road,
Bombay—6
Phone 22036

ಹಾರ್ದಿಕ ಶುಭಾಶಯಗಳು

ಮಧುಶ್ರೀ ಇಂಡಸ್ಟ್ರೀಸ್

ಅತ್ಯುತ್ತಮ ತರದ ಪ್ಲಾಸ್ಟಿಕ್ ಹೊದಿಕೆ ಸಾಹಿತ್ಯ, ಬೆತ್ತ, ಮತ್ತಿತರ ಎಲ್ಲಾ ತರದ ಹೊರ ನೂಕುವ ಸಾಮಗ್ರಿಗಳು ಮತ್ತು ಒಂದೇ ಕೇಸರದ ದಂಡಗಳನ್ನು ತಯಾರಿಸುವವರು ಹಾಗೂ ರಫ್ತು ಮಾಡುವವರು.

ಫ್ಯಾಕ್ಟರಿಗಳು:

1. ನಾಲ್‌ಸಾಹೇಬ್ ಚೌಕ
   ಹನ್ಸಾಪುರಿ
   ನಾಗಪುರ-2.
   ಫೋನ್: 5868
2. ನಂ. 103 ಕಾಕಡ್ ಇಂಡಸ್ಟ್ರಿಯಲ್ ಎಸ್ಟೇಟ್
   ಮಾಹಿಮ್
   ಬೊಂಬ್ಯಾ-16.

ಆಡಳಿತ ಕಚೇರಿ:
15, ನಾರಾಯಣ ಧಾಬೋಳ್ಕರ್ ರೋಡ್,
ಬೊಂಬ್ಯಾ—6.
ಫೋನ್: 22036.

MANY VISIT

CHANDARANA BROTHERS

HAMPANKATTA, MANGALORE.

Phone: **460** Grams: **'TEXTILES'**

FOR

MORE THINGS

AND

BETTER LIVING

Why Not You Too!

THE LARGEST TEXTILE CUM DEPARTMENTAL STORES IN THE SOUTH

WITH

AIR-CONDITIONED

AND

CARE-FREE SHOPPING COMFORTS.

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು: **ಕೋಟ್ಟಕಲ್** ಫೋನ್ ನಂ **44** (ತಿರೂರು ಎಕ್ಸ್‌ಚೇಂಜ್)

ಶಾಖೆಗಳು:

1 ಕೋಯಿಕ್ಕೋಡ್ (ಫೋನ್ ನಂ 2155) ಕಲ್ಲಾಯಿ ರೋಡ್.
2 ತಿರೂರು (ಫೋನ್ ನಂ 31) ಸ್ಟೇಶನ್ ರೋಡ್
3. ಪಾಲ್ಘಾಟ್ (ಫೋನ್ ನಂ. 104) ವಡಕ್ಕಂತರ.
4. ಪಾಲ್ಘಾಟ್ ಸೇಲ್ಸ್ ಡಿಪೋ: ಜಿ. ಬಿ. ರೋಡ್
5. ಎರ್ನಾಕುಳಂ (ಫೋನ್ ನ. 3026) ಮಹಾತ್ಮಾ ಗಾಂಧೀ ರೋಡ್.
,, ವೈದ್ಯರ ನಿವಾಸ (ಫೋನ್. ನಂ. 674)
6. ತ್ರಿವೇಂದ್ರಮ್ (ಫೋನ್ ನಂ 3924) ಸ್ಟೇಚು ರೋಡ್.
7 ಈರೋಡು (ಫೋನ್ ನಂ. 172) 45, ಕಾವೇರಿ ರೋಡ್.
8 ಆಳ್ವಾಯಿ ಸೇಲ್ಸ್ ಡಿಪೊ ಬ್ಯಾಂಕ್ ರೋಡ್.

ಕೋಟ್ಟಕಲನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಖಾತ್ರಿಯಾದ ಸುಪ್ರಸಿದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲ್ಪಡುತ್ತವೆ.

ಎಲ್ಲಾ ಪತ್ರವ್ಯವಹಾರಗಳನ್ನು ಇಂಗ್ಲಿಷ್, ಮಲಯಾಳಂ ಅಥವಾ ತಮಿಳಿನಲ್ಲಿ ನಡೆಸಬೇಕು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ:

ಮ್ಯಾನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕಲ್.

ಬಾ ಪೂ ಜಿ—



ಪುಡಿ ಪುಡಿಯಾಗಿ ಧೂಳು ಧೂಳಾಗಿ ಬಿದ್ದಿದ್ದ ನಮ್ಮನ್ನು ಮಾನವರೆನಿಸು ವಂತೆ ಮಾಡಿ ನಿಲ್ಲಿಸಿದರು; ದಾಸ್ಯ ಬಂಧನದಿಂದ ಮುದುಡಿ ಬಿದ್ದ ಭಾರತ ವನ್ನು ಸ್ವತಂತ್ರಗೊಳಿಸಿದರು.

ಈ ಭವ್ಯ ಭಾರತದ ಸ್ವಾತಂತ್ರ್ಯವನ್ನು ಉಳಿಸೋಣ!
ಭದ್ರತೆಯನ್ನು ರಕ್ಷಿಸೋಣ! ಐಕ್ಯತೆಯನ್ನು ಕಾಪಾಡೋಣ!
ಸಂಪದಭಿವೃದ್ಧಿ ಸಾಧಿಸೋಣ!

ಸ್ವಾತಂತ್ರ್ಯೋತ್ಸವದ ಶುಭದಿನದಂದು
ಬಾಪೂಜಿಗೆ ನಮ್ಮ ಕೃತಜ್ಞತೆಯನ್ನರ್ಪಿಸೋಣ.

ಜಯಂತಿ ಟೈಲ್ ಫ್ಯಾಕ್ಟರಿ

ಕಲ್ಯಾಣಪುರ, ದ. ಕನ್ನಡ.

ಉತ್ತಮ ತರದ ಬೈಸನ್ ಬ್ರಾಂಡ್ ಹಂಚು ತಯಾರಕರು.

ಜಯಂತಿ ಟ್ರೇಡರ್ಸ್
ಪಾರ್ಟ್ನರ್ಸ್

Independence Day Greetings from

JAYANTHI TILE FACTORY

KALLIANPUR, S.K.

MANUFACTURERS OF

BISON BRAND MANGALORE TILES

JAYANTHI TRADERS

PARTNERS

ಸ್ವಾತಂತ್ರ್ಯವು ಚಿರಾಯುವಾಗಲಿ

REGD. TRADE MARK

REGD. TRADE MARK

ಸ್ವಾತಂತ್ರ್ಯ ದಿನ
ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಲು
ಅಧಿಕ ತ್ಯಾಗಕ್ಕಾಗಿ—
ಅತಿಕ್ರಮಣಕ್ಕಾಗಿ ಎಳಸುವ
ಶತ್ರುವನ್ನು ಹಿಮ್ಮೆಟ್ಟಿಸುವ
ಅಚಲ ನಿರ್ಧಾರಕ್ಕಾಗಿ
ಭಾರತದ ಶಾಂತಿ-ಅಹಿಂಸೆಗಳ
ಸಂದೇಶವನ್ನು ಸಾರ್ವತ್ರಿಕವಾಗಿ
ಪ್ರಚುರಿಸಲಿಕ್ಕಾಗಿ—
ಭಾರತೀಯರಾದ
ನಾವು ಒಂದೇ
ಬೃಹತ್ ಕುಟುಂಬವಾಗಿ ಮುನ್ನಡೆವೆವು.

ನಮ್ಮ ಪ್ರತಿಜ್ಞೆ
ಹೊಲಗಳಲ್ಲಿ ದುಡಿವ ಕೃಷಿಕ
ಕಾರ್ಖಾನೆಯಲ್ಲಿ ದುಡಿವ ಮಜೂರ
ಕಚೇರಿಯಲ್ಲಿ ದುಡಿವ ಕಾರಕೂನ
ಕಟ್ಟಡ ರಚಿಸುವ ಶಿಲ್ಪಿ
ಚಿತ್ರ ಬರೆವ ಕಲಾಕಾರ
ಕವನ ಕಟ್ಟುವ ಕವಿ
ರಂಗಭೂಮಿಯನ್ನು ಬೆಳಗಿಸುವ ನಟ
ಧರ್ಮ ಬೋಧೆಯೀವ ಆಚಾರ್ಯ
ಸಮಾಜ ತಿದ್ದುವ ಸುಧಾರಕ
ರಾಜಕೀಯಗಳಲ್ಲಿನ ರಾಜಕಾರಣಿ
ಪ್ರತಿಯೊಬ್ಬನೂ ತನ್ನ ಕಾರ್ಯದಲ್ಲಿ ದ್ವಿಗುಣಿತ
ಉತ್ಸಾಹ ತಾಳುವ ಪ್ರತಿಜ್ಞೆ ಮಾಡುವ
ಈ ದಿನದಂದು—

ಮುವತ್ತು ಮಾರ್ಕಿನ ಬೀಡಿಗಳು

—ನಾವು ಸ್ವಾತಂತ್ರ್ಯಕ್ಕಾಗಿ ತಮ್ಮನ್ನರ್ಪಿಸಿಕೊಂಡವರೆಲ್ಲರನ್ನೂ ಸ್ಮರಿಸಿ, ಸದಾ ನಮ್ಮ ಪಾಲಿನ ಸೇವೆಯನ್ನು ಸಲ್ಲಿಸುವೆವೆಂಬ ಆಶ್ವಾಸನೆಯೀಯುವೆವು. ಇಂದು ಮೂವತ್ತನಾಲ್ಕು ವರ್ಷಗಳನ್ನು ಕಳೆದು ಮೂವತ್ತಐದನೇ ವರ್ಷದಲ್ಲಿ ಪ್ರವೇಶಿಸುವ ನಾವು, ಭಾರತದ ರಾಜ್ಯಗಳಲ್ಲಿ—ದೂರ ದೂರದ ಕೇಂದ್ರಗಳಲ್ಲೂ—ಹರಡಿರುವ ಅಸಂಖ್ಯಾತ ಮಂದಿಯನ್ನು ಅಖಂಡ ಸ್ನೇಹ ಬಂಧನದಲ್ಲಿ ತಂದು, ನಮ್ಮ ಹೃದಯದಲ್ಲಿ ಚಿರಸ್ಥಾಯಿಯಾಗಿ ಮಾಡಿಕೊಂಡಿರುವೆವು.

"ಉತ್ತಮದಿಂದ ಉತ್ತಮತರ"ಕ್ಕೆ ಎಂಬುದೇ ನಮ್ಮ ಧ್ಯೇಯ.

ಭಾರತ ಬೀಡಿ ವರ್ಕ್ಸ್, (ರಿಜಿಸ್ಟರ್ಡ್) ಕಾರ್ಕಳ. (ದ.ಕ.)

ಫೋನ್:— ಕಾರ್ಕಳ: 30 & 37

ಮಂಗಳೂರು: Office: **391**
Res: **930**

ಟೆಲಿಗ್ರಾಮ್ಸ್ "DAMODAR"

ನವಯುಗ

ಸ್ಥಾಪಕರು:
ಡಾ। ಎ. ಬಿ. ಶೆಟ್ಟರು

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಸಂಚಾಲಕ-ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

Vol. 43 ಸಂಪುಟ ೪೩
No. 50 ಸಂಚಿಕೆ ೫೦

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ—೧೯೬೪

Independence Day Special-1964

ಸಂಪಾದಕೀಯ —

ಗೌರವಾರ್ಪಣೆ

ವಿದೇಶೀಯ ಆಳರಸರೊಡನೆ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ನಡೆದ ಹೋರಾಟದಲ್ಲಿ ಭಾರತೀಯರ ನಾಯಕತ್ವವನ್ನು ವಹಿಸಿದ, ಸ್ವಾತಂತ್ರ್ಯ ನಂತರ ಹದಿನೇಳು ವರ್ಷಗಳ ಸುದೀರ್ಘ ಕಾಲ ಸ್ವತಂತ್ರ ಭಾರತದ ರಾಜಕೀಯ ನಾಯಕತ್ವವನ್ನು ನಿರ್ವಹಿಸಿದ, ಭಾರತೀಯರ ಕಣ್ಮಣಿ, ಸೂತ್ರಧಾರನೆನಿಸಿದ ಪಂಡಿತ ಜವಾಹರಲಾಲರನ್ನು ಕಳೆದುಕೊಂಡು ನಾವಿಂದು ಮೊದಲಬಾರಿಗೆ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದೇವೆ. ಭಾರತೀಯರನ್ನು ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯ ಭದ್ರ ಬುನಾದಿಯ ಮೇಲೆ ನಿಲ್ಲಿಸುವ ಸತತ ಪ್ರಯತ್ನ ಮಾಡಿ ಅದರಲ್ಲಿ ಯಶಸ್ವಿತೆಯು ದೊರೆಯುವ ಸಂದರ್ಭ ಬಂದಾಗ ಅವರಿಗೆ ಈ ಸುದಿನದಲ್ಲಿ ಮೊತ್ತಮೊದಲಿಗೆ ನಿರಬಾಗುತ್ತದೆ. ನವ್ಯ ಆದ್ಯ ಕರ್ತವ್ಯ; ಲೋಕ ನಾಯಕ ಪಂಡಿತ ಜವಾಹರ, ಇದೋ ನಿನ್ನ ಪವಿತ್ರಾತ್ಮಕ್ಕೆ ನಮಸ್ರ ಪ್ರಣಾಮಗಳು!

ಜವಾಹರಲಾಲರು ಇನ್ನಿಲ್ಲವೆಂಬಾಗ ದೇಶದಲ್ಲಿ ಹೊಸ ನಾಯಕತ್ವದ ಪ್ರಶ್ನೆ ಮುಂದೆ ಬಂದಾಗ, ವಿದೇಶಗಳು ಈ ಸನ್ನಿವೇಶವನ್ನು ಕುತೂಹಲದಿಂದ ಕೊರಳುದ್ದಗೆಯ್ದು ನಿರೀಕ್ಷಿಸುತ್ತಿದ್ದಾಗ, ದೇಶದ ಭವ್ಯ ಭವಿತವ್ಯಕ್ಕೆ ನಾಂದಿಯೆಂಬಂತೆ ಅವಿರೋಧವಾಗಿ ಒಮ್ಮತದಿಂದ ಲಾಲಬಹದೂರ ಶಾಸ್ತ್ರಿಯವರನ್ನು ಭಾರತೀಯರು ಆರಿಸಿಕೊಂಡರು. ನಹರು ತಮ್ಮ ಮೃತ್ಯುಪತ್ರವನ್ನು ಹತ್ತು ವರ್ಷಗಳಿಗೆ ಮೊದಲೇ ಬರೆದಿದ್ದರೂ ತಮ್ಮ ಉತ್ತರಾಧಿಕಾರಿಯ ಬಗ್ಗೆ ಕೊನೆಯ ಗಳಿಗೆಯ ವರೆಗೂ ಉಸಿರದ ಪ್ರಜಾಸತ್ತೆಯ ಪಾಠವನ್ನು ಕಲಿಸಿಕೊಟ್ಟಾಗ, ಅದನ್ನು ಸಂಪೂರ್ಣವಾಗಿ ಅರಿತುಕೊಂಡ, ಪ್ರಜಾಪ್ರಭುತ್ವದಲ್ಲಿ ತನಗಿರುವ ಅಚಲ ವಿಶ್ವಾಸವನ್ನು ಜಗತ್ತಿನ ಮುಂದೆ ತೋರಿಸಿದ ಭಾರತೀಯ ಪ್ರಜಾಕೋಟಿಯನ್ನು, ಅದರ ಪ್ರತಿನಿಧಿಗಳನ್ನು ಮರೆಯುವುದು ಸಾಧ್ಯವೆ? ಧೃತಿಯುತ ಕೃತಿಶೀಲ ಜನತಂತ್ರನಿಷ್ಠ ಭಾರತೀಯ ಜನಕೋಟಿಯಲ್ಲಿ ಮನೆ ಮಾಡಿದ ಪ್ರಜಾಪ್ರಭುತ್ವ ತತ್ತ್ವಕ್ಕೆ ಇದೋ ಅನಂತ ವಂದನೆಗಳು!

ಗಂಡಾಂತರದ ವೇಳೆಯನ್ನು ನಿರ್ವಿಘ್ನವಾಗಿ ದಾಟಿ, ಮುಂದೆ ಬರಲಿರುವ ಆಕ್ರಮಣ—ಆಂದೋಲನಗಳನ್ನು ತಲೆಯೆತ್ತಿ ಎದುರಿಸಲು ಕಟಿಬದ್ಧವಾಗಿದೆ ಇಂದು ನಮ್ಮ ಸ್ವಾತಂತ್ರ್ಯ. ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ಶೂನ್ಯವೆಂದು ಅರ್ಥ ಶಾಸ್ತ್ರಜ್ಞರೆಲ್ಲರೂ ಒಕ್ಕೊರಲಿನಿಂದ ಸಾರಿದುದನ್ನು ಮನಗಂಡು, ಆದರ ಸಾಧನೆಯತ್ತ ಧಾವಿಸುತ್ತಿದೆ ನಮ್ಮ ಸ್ವತಂತ್ರ ಭಾರತ. ದೇಶದೊಳಗಿನ ಕುಶಕ್ತಿಗಳನ್ನು ಕರಗಿಸಿ ಹೊರಗಿನ ದುಷ್ಟ ಶಕ್ತಿಗಳನ್ನು ದಮನಿಸಿ ರಾಜಕೀಯ ಸ್ವಾತಂತ್ರ್ಯವನ್ನುಳಿಸಿಕೊಂಡು ಆರ್ಥಿಕ ಸ್ವಾತಂತ್ರ್ಯದ ಸಾಧನೆಯಲ್ಲಿ ನಿರತವಾದ ಭಾರತೀಯ ಸಮಾಜವಾದದ ಸಿದ್ಧಾಂತಕ್ಕೆ ಇದೋ ಹೃನ್ಮನ ಪೂರ್ವಕ ಸ್ವಾಗತ.

ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡುವ, ಆರ್ಥಿಕ ಸ್ವಾತಂತ್ರ್ಯಕ್ಕಾಗಿ ದುಡಿಯುವ, ಸಮಾನತೆ ಮತ್ತು ಸಹೋದರತೆಗಳ ಪುನಸ್ಸ್ಥಾಪನೆಗೆ ಹೆಣಗಾಡುವ ಭಾರತೀಯ ಜನಶಕ್ತಿಗೆ ಗೆಲುವಾಗಲಿ; ವಯಸ್ಸಿಗೆ ಬರುತ್ತಿರುವ ಭಾರತೀಯ ಸ್ವಾತಂತ್ರ್ಯ ತನ್ನ ಪ್ರೌಢತನಕ್ಕೆ ಹೊಂದಿಕೊಳ್ಳುವ ಸರ್ವತೋಮುಖ ಚಟುವಟಿಕೆಗಳನ್ನು ಉತ್ಸಾಹದಿಂದ ಕೈಗೊಳ್ಳಲಿ; ಸ್ವಾತಂತ್ರ್ಯದಿನ ಸಮಸ್ತ ಭಾರತೀಯರಿಗೆ ಅಭ್ಯುತ್ಥಾನ ಪಥಗಮನದ ಚರಮ ಸಂದೇಶವನ್ನು ಆಚಂದ್ರಾರ್ಕ ನೀಡುತ್ತಿರಲಿ.

ಭಾರತೀಯ ಸ್ವಾತಂತ್ರ್ಯ ಜ್ಯೋತಿ, ಇದೋ ನಿನಗೆ ತ್ರಿಕರಣಪೂರ್ವಕ ಶಿರಬಾಗಿ ಗೌರವಾರ್ಪಣೆ.

! ಜೈ ಹಿಂದ್ !

ವಂದನೆಗಳು

ಈ ಸ್ವಾತಂತ್ರ್ಯದಿನ ಸಂಚಿಕೆಯ ತಯಾರಿಯಲ್ಲಿ ನೆರವಾದ ಸಮಸ್ತ ಲೇಖಕ ಮತ್ತು ಜಾಹಿರಾತುದಾರರಿಗೆ ನಮ್ಮ ವಂದನೆಗಳು. ಸ್ಥಳಾಭಾವದಿಂದ ಪ್ರಕಟವಾಗದಿರುವ ಹಲವು ಲೇಖನಗಳ ಲೇಖಕ ಬಂಧುಗಳಿಂದ ಕ್ಷಮೆ ಬೇಡುವುದರೊಂದಿಗೆ ಅವರಿಗೂ ಪ್ರತ್ಯೇಕವಾದ ವಂದನೆಗಳು.

— ಸಂದೇಶಗಳು

ಶಿಕ್ಷಣ ಮಂತ್ರಿ ಶ್ರೀ ಎಸ್. ಆರ್. ಕಂಠಿ, ಬಿ. ಎ. ಎಲ್ ಎಲ್ ಬಿ ಅವರಿಂದ

ವಿಧಾನ ಸೌಧ,
ಬೆಂಗಳೂರು. 1 ತಾ 31-7-1964



ನವಯುಗದ ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆಯು ಆಗಸ್ಟ ೧೫, ೧೯೬೪ ರಂದು ಪ್ರಕಟವಾಗಲಿದೆಯೆಂದು ತಿಳಿದು ಆತ್ಯಾನಂದವಾಯಿತು. ಸ್ವತಂತ್ರ್ಯ ಭಾರತದ ಪುನರ್ ನಿರ್ಮಾಣ ವಿಷಯಗಳಿಗೆ ಸಂಬಂಧಪಟ್ಟ — ಉದ್ಬೋಧಕ ಲೇಖನಗಳನ್ನೊಳಗೊಂಡು ಈ ವಿಶೇಷ ಸಂಚಿಕೆ ಪ್ರಕಟವಾಗಲೆಂದು ಹಾರೈಸಿ ಅದಕ್ಕೆ ತುಂಬ ಯಶಸ್ಸನ್ನು ಕೋರುತ್ತೇನೆ.

ಶಿ ರಾ. ಕಂಠಿ
(ಎಸ್ ಆರ್ ಕಂಠಿ)

ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್ ನಿಜಲಿಂಗಪ್ಪ, ಅವರಿಂದ

ವಿಧಾನ ಸೌಧ
ಬೆಂಗಳೂರು, ತಾ. 31ನೇ ಜುಲೈ, 1964.



ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಗೆ ನವಯುಗದ ವಿಶೇಷಾಂಕವು 1964ನೇ ಆಗಸ್ಟ್ ತಿಂಗಳಲ್ಲಿ ಪ್ರಕಟವಾಗುವ ಸುದ್ದಿ ಕೇಳಿ ಸಂತೋಷವಾಗಿದೆ. ಈ ಪ್ರಕಟಣೆಗೆ ಅವರು ಯಶಸ್ಸನ್ನು ಕೋರುತ್ತಾರೆ.

(ಸಹಿ)
ಖಾಸಗೀ ಕಾರ್ಯದರ್ಶಿ.

ಆರೋಗ್ಯ ಸಚಿವ ಡಾ। ಕೆ. ನಾಗಪ್ಪ ಆಳ್ವ, ಎಂ. ಬಿ ಬಿ. ಎಸ್., ಅವರಿಂದ

ವಿಧಾನ ಸೌಧ,
ಬೆಂಗಳೂರು.1 ತಾ 31-7-1964.

ಸನ್ಮಿತ್ರರಾದ ಹೊನ್ನಯ್ಯ ಶೆಟ್ಟರೇ,

ಭಾರತ ಇತಿಹಾಸದಲ್ಲಿ ಆಗೋಸ್ತು ೧೫ ಚಿರಸ್ಮರಣೀಯವಾದ ದಿನ. ನೂರಾರು ವರುಷಗಳ ದಾಸ್ಯ ಶೃಂಖಲೆಯಿಂದ ವಿಮುಕ್ತವಾಗಿ ನವಭಾರತವು ಉದಯಿಸಿದ ಮಹಾದಿನ. "ನೆಹರು ಯುಗ"ದ ಮಹತ್ವಪೂರ್ಣ ಹಿನ್ನೆಲೆಯಲ್ಲಿ ಬೆಳೆದು ಬಂದು ನೂತನ ಅಧ್ಯಾಯವನ್ನು ಪ್ರಾರಂಭಿಸಿದ ಸ್ವತಂತ್ರ ಭಾರತವು ಅನೇಕ ಪ್ರಗತಿಪರ ಸಾಧನೆಗಳನ್ನು ಕಂಡು, ಜಗತ್ತಿನ ಸರ್ವೋತ್ಕೃಷ್ಟ ಶಕ್ತಿಯಾಗಿ ಪರಿಣಮಿಸಿದೆ. ಇದರ ನಿಜವಾದ ಅರಿವು ಜನತೆಯಲ್ಲಿ ಮೂಡಿ ಸುಖೀ ರಾಜ್ಯದ ಗುರಿಯನ್ನು ಮುಟ್ಟಬೇಕಾಗಿದೆ. ಈ ಬಗೆಗೆ "ನವಯುಗ" ವಾರ ಪತ್ರಿಕೆಯ ಸ್ವಾತಂತ್ರ್ಯದಿನ ವಿಶೇಷಾಂಕವು ಹೆಚ್ಚಿನ ಸಹಾಯಕವಾಗುವದೆಂದು ನೆನಸುತ್ತೇನೆ.

ಹಾರ್ದಿಕ ಶುಭಾಶಯಗಳಿಂದ —

ಇತೀ ನಿಮ್ಮ ವಿಶ್ವಾಸಿ,
ಕೆ. ನಾಗಪ್ಪ ಆಳ್ವ

ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗಾ, ಬಿ. ಎ. ಬಿ. ಎಲ್ ಅವರಿಂದ,

ಬೆಂಗಳೂರು.1 ತಾ. 9ನೇ ಆಗಸ್ಟ್ 1964

ನಮ್ಮ ಜನಪ್ರಿಯ ಮತ್ತು ಸುವ್ಯವಸ್ಥಿತ ಸಾಪ್ತಾಹಿಕವಾದ ನವಯುಗವು ಎಂದಿನಂತೆ ಸ್ವಾತಂತ್ರ್ಯೋತ್ಸವ ವಿಶೇಷಾಂಕವನ್ನು ಪ್ರಕಟಿಸುವುದನ್ನು ತಿಳಿದು ನನಗೆ ಆನಂದವೆನಿಸಿದೆ.

ನನ್ನ ಸ್ನೇಹಿತರಾಗಿದ್ದ ದಿವಂ| ಶ್ರೀ ಎ. ಬಿ. ಶೆಟ್ಟರಿಗೂ ಈ ಪತ್ರಿಕೆಗೂ ಇದ್ದ ಸುಸಂಬಂಧವನ್ನು ನಾನಿಲ್ಲಿ ಸ್ಮರಿಸುತ್ತೇನೆ. ಉನ್ನತವಾದ ಮಟ್ಟವನ್ನು ಕಾಯ್ದುಕೊಂಡು ಸಾರ್ವಜನಿಕ ಸೇವೆಯನ್ನು ಮಾಡುತ್ತ ಇರುವ 'ನವಯುಗ'ವು ತನ್ನ ಉನ್ನತ ಸಂಪ್ರದಾಯವನ್ನು ಎಂಥ ಕಠಿನ ಸಂದರ್ಭದಲ್ಲಿಯೂ ರಕ್ಷಿಸಿ ಬೆಳೆಸಿಕೊಂಡದ್ದು ವಿಶೇಷವೇ ಸರಿ. ಇಂಥ ಪತ್ರಿಕೆಯ ವಿಶೇಷಾಂಕಕ್ಕೆ ಸಂದೇಶವನ್ನು ಕಳಿಸುವುದು ಒಂದು ಸತ್ಪ್ರೇರಣೆ ಎಂದು ನಾನು ಭಾವಿಸಿದ್ದೇನೆ.

ಸ್ವಾತಂತ್ರ್ಯವನ್ನು ಕಳೆದು ಕೊಂಡು ತದನಂತರ ಅದನ್ನು ಪುನಃ ಪಡೆದುಕೊಂಡ ನಮಗೆ ಸ್ವಾತಂತ್ರ್ಯದ ಬೆಲೆಯೂ ಅರ್ಥವೂ ಚೆನ್ನಾಗಿ ಆಗಿದೆ. ಈ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ನಾವು ಈ ವರೆಗೆ ಸಾಧಿಸಿರುವ ವಿಷಯಗಳನ್ನು, ನಮ್ಮ ಮುಂದಿನ ದಾರಿಯಾವುದು ಎಂಬ ಕುರಿತು ನಾವು ವಿಮರ್ಶಿಸಬೇಕು. ನಾವು ಸಾಧಿಸಿರುವ ಪ್ರಗತಿಯ ಕುರಿತು ಹೇಗೂ ಸಾಮಾನ್ಯ ಮನುಷ್ಯನ ಆರ್ಥಿಕ ಶಕ್ತಿ ಸಾಕಷ್ಟು ಬೆಳೆಯದಿರುವ ಕುರಿತೂ ಒಂದು ಬಗೆಯ ಅಸಂತೃಪ್ತಿ ಮಾತ್ರವಲ್ಲದೆ ವಿಪುಲವಾದ ಟೀಕಾ ಟಿಪ್ಪಣಿಗಳೂ ದೇಶದಲ್ಲಿ ವ್ಯಾಪಿಸಿಕೊಂಡಿರುವುದು ಪ್ರಾಯಃ ಅನಿವಾರ್ಯವೇನೋ. ನಾವು ನಡೆಯುತ್ತಿರುವ ದಾರಿ ಸರಿಯಾದುದೆಂದೂ, ಸಾಧಿಸಿರುವ ಪ್ರಗತಿ ಸಾಕಷ್ಟಿರುವುದೆಂದೂ, ನನಗೆ ವೈಯುಕ್ತಿಕವಾಗಿ ತೋರುತ್ತಿದೆ. ಅಭಿವೃದ್ಧಿಯ ವೇಗ ಮಂದವಾಗಲು ನಮ್ಮ ಸುತ್ತಲ ಸನ್ನಿವೇಶವೂ ಬಹುಮಟ್ಟಿಗೆ ಕಾರಣವೆಂಬುದನ್ನು ನಾವು ಮರೆಯದಿರೋಣ. ಆದಾಗಲೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಿಂದೆ ನಮ್ಮ ಇತಿಹಾಸದಲ್ಲಿ ಏನೂ ದೊರೆಯದ ಉತ್ತೇಜನವು ಈಗ ದೊರಕುತ್ತಿದೆ. ಈ ಪವಿತ್ರದಿನದಲ್ಲಿ ದೇಶಸೇವೆಗೆ ಸರ್ವರೂ ಬದ್ಧಪ್ರಯತ್ನರಾಗೋಣ. ನಾಡಿನ ಪ್ರಗತಿಯ ಈ ಮಹಾ ಯಜ್ಞದಲ್ಲಿ ನವಯುಗದ ವಿಶೇಷಾಂಕವು ತನ್ನ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸುವುದೆಂಬ ಭರವಸೆ ನನಗಿದೆ.

ಬಿ. ವೈಕುಂಠ ಬಾಳಿಗ.

ಹಣಕಾಸಿನ ಸಚಿವ ಶ್ರೀ ಬಿ. ಡಿ. ಜತ್ತಿ ಅವರಿಂದ

ಬೆಂಗಳೂರು, 6.8.1964.



ಭಾರತದ ಹದಿನೇಳನೆಯ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ನವಯುಗ ಪತ್ರಿಕೆಯ ವಿಶೇಷ ಸಂಚಿಕೆಯು ಪ್ರಕಟವಾಗಲಿದೆಯೆಂದು ತಿಳಿದು ಬಹಳ ಸಂತೋಷವಾಯಿತು. ಸ್ವಾತಂತ್ರ್ಯದ ನಂತರ ಭಾರತ ದೇಶದ ಸರ್ವಾಂಗೀಣ ಪ್ರಗತಿಗಾಗಿ ಸರಕಾರವು ಕೈಕೊಂಡ ಕಾರ್ಯಕಲಾಪಗಳ ಬಗ್ಗೆ ತಿಳುವಳಿಕೆ ನೀಡುವಂಥ ಲೇಖನಗಳನ್ನು ಈ ಸಂಚಿಕೆಯು ಒಳಗೊಂಡು ಪ್ರಕಟವಾಗಲೆಂದು ಹಾರೈಸಿ ಅದಕ್ಕೆ ಸರ್ವ ಯಶಸ್ಸನ್ನು ಕೋರುತ್ತೇನೆ.

ಬಿ. ಡಿ. ಜತ್ತಿ

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲದ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರಿಂದ

ಮಣಿಪಾಲ,
ತಾ. 7-8-1964.

ಪ್ರಿಯ ಶ್ರೀ ಹೊನ್ನಯ್ಯ ಶೆಟ್ಟರಿಗೆ,

ನೀವು ನವಯುಗದ ಸ್ವಾತಂತ್ರ್ಯೋತ್ಸವ ವಿಶೇಷಾಂಕವನ್ನು ಪ್ರಕಟಿಸುವಿರೆಂದು ಕೇಳಿ ಸಂತೋಷವಾಯಿತು. ಒಂದು ಸಾಪ್ತಾಹಿಕದ ಮೂಲಕ ಸಮತೂಕದ ಅಭಿಪ್ರಾಯಗಳನ್ನು ಪ್ರಚುರಗೊಳಿಸಿ ಜನಮತವನ್ನು ತಿದ್ದುವ ಕಾರ್ಯದಲ್ಲಿ ನೀವು ನಮ್ಮ ಜಿಲ್ಲೆಯಲ್ಲೇ ಮೊದಲಿಗರ ಸಾಲಿಗೆ ಸೇರಿರುವಿರಿ. ೪೩ ವರ್ಷಗಳಿಂದ ನೀವು ಈ ಸಾಪ್ತಾಹಿಕದ ಸಂಪಾದಕತ್ವವನ್ನು ನಿರಂತರ ನಡೆಸಿರುವುದು ಉಲ್ಲೇಖನೀಯವಾಗಿದೆ. ಏಕೆಂದರೆ ಈ ದೀರ್ಘ ಅವಧಿಯಲ್ಲಿ ಅವಸರದಲ್ಲಿ ಹುಟ್ಟಿ ಬದುಕುವ ಸತ್ತ್ವವಿಲ್ಲದೆ ಅಷ್ಟೇ ಬೇಗನೆ ಮಾಯವಾದ ಪತ್ರಿಕೆಗಳೆಷ್ಟೋ ಇವೆ. ಒಂದು ಪತ್ರಿಕೆಯು ಮಾಡುವ ಸಾರ್ವಜನಿಕ ಸೇವೆ ಮತ್ತು ಅದಕ್ಕೆ ಪ್ರತಿಯಾಗಿ ದೊರೆಯುವ ಸಾರ್ವಜನಿಕ ಪುರಸ್ಕಾರದ ಮೇಲೆ ಪತ್ರಿಕೆಯ ಆಯುಷ್ಯ ಅವಲಂಬಿಸಿರುತ್ತದೆ. ನಿಮ್ಮ ಸೇವೆಯನ್ನು ಸಮಾಜವು ಒಪ್ಪಿಕೊಂಡಿರುವ ಬಗ್ಗೆ ನಿಮ್ಮ ಪತ್ರಿಕೆಯ ನಿಡುಬಾಳುವೆಯೊಂದು ಸಾಕ್ಷಿ. ಇಂಥ ಪತ್ರಿಕೆ ಇನ್ನಷ್ಟುಕಾಲ ಬಾಳಲಿ ಎಂದು ನಾನು ಹಾರೈಸುತ್ತೇನೆ.

ಡಾ. ಟಿ. ಎಂ. ಎ. ಪೈ.

ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ. ಟಿ. ಎ. ಪೈ. ಅವರಿಂದ

ಮಣಿಪಾಲ,
ತಾ. 8-8-1964

ಪ್ರಿಯರೆ,



ದಿನ ಕಳೆದಂತೆ ಸ್ವಾತಂತ್ರ್ಯಕ್ಕೆ ಅಪಾರ್ಥವನ್ನು ಕಲ್ಪಿಸಿ ಅದರ ವಿಕೃತಿಗಳ ಪ್ರದರ್ಶನವನ್ನು ನಡೆಸುತ್ತಿರುವ ನಮ್ಮ ಸಮಾಜ ಜೀವನದ ಇತಿಹಾಸದ ಈ ಸಂಧಿಕಾಲದಲ್ಲಿ ಸ್ವಾತಂತ್ರ್ಯದ ನಿಜವಾದ ಅರ್ಥವನ್ನು ಪ್ರತಿ ವರ್ಷವೂ ಸರ್ವತ್ರ ಪ್ರಚಾರ ಮಾಡಬೇಕೆಂಬ 'ನವಯುಗ' ಪತ್ರಿಕೆಯ ಪ್ರಯತ್ನಕ್ಕೆ ಯಶಸ್ಸನ್ನು ಕೋರುತ್ತೇನೆ

ಟಿ. ಎ. ಪೈ.

"VOLTAS" CRYSTAL AIR CONDITIONERS
"ALLWYN PRESTCOLD" REFRIGERATORS
"RACOLD" WATER HEATERS AND ELECTRICAL APPLIANCES
"SUNMICA" SHEETS FOR MODERN FURNITURE
Contact
GENERAL REFRIGERATION ENG. WORKS
WOODSIDE BLDG., K. S. RAO RD.,
MANGALORE-1. Phone: 1209.

ಪರಮಾಣು ಬಾಂಬು - ನೇಗಿಲು

ಶಿರೋನಾಮೆಯನ್ನೋದಿ ಹೆದರಬೇಡಿ; ನಿಜವಾಗಿಯೂ ಪರಮಾಣು ಬಾಂಬು ನೇಗಿಲಿನ ಕೆಲಸವನ್ನು ಯಶಸ್ವಿಯಾಗಿ ನಡೆಸುವುದೆಂದು ಕೆಲಿಫೋರ್ನಿಯಾದ ವಿಜ್ಞಾನಿಗಳ ತಂಡ ಪ್ರಯೋಗಗಳಿಂದ ಸಿದ್ಧಪಡಿಸಿದೆ. ಇದು ಸರ್ವಸಾಮಾನ್ಯವಾಗಿ ಪ್ರಚಾರಕ್ಕೆ ಬರುವ ದಿನ ಅತಿ ನಿಕಟದಲ್ಲಿದೆಯೆಂದು ಆ ವಿಜ್ಞಾನಿಗಳು ಭರವಸೆ ತಳೆದಿದ್ದಾರೆ.

ಬರೆದವರು

ಶ್ರೀ ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ., ಎಲ್. ಟಿ.

ಈ ಚಿಕ್ಕ ಲೇಖನಕ್ಕೆ ಇದೆಂಥ ಶಿರೋನಾಮೆ? ಎಂದು ನಿಮಗೆ ಅನಿಸುವುದು ಸಹಜವೇ. ಸುಮಾರು ೨ ದಶಕಗಳ ಹಿಂದೆ ಮೊತ್ತಮೊದಲು ನಿರ್ಮಿಸಲ್ಪಟ್ಟ ಪರಮಾಣು ಬಾಂಬು ತಾನು ಸ್ಫೋಟಗೊಂಡಸ್ಥಳದಲ್ಲೇ ಸಹಸ್ರಗಟ್ಟಳೆ ಜನರ ವಿನಾಶಕ್ಕೆ ಕಾರಣವಾಯಿತು. ಅಲ್ಲದೆ, ಇದು ಹಿಂದೆಂದೂ ಆಗದ ರೀತಿಯಲ್ಲಿ ಅಂತರಿಕ್ಷವನ್ನು ಕಲುಷಿತಗೊಳಿಸಿತು ಎಂಬುದನ್ನು ಅರಿತರೂ ಮುಂದೆ ಪರಮಾಣು ಬಾಂಬಿಗಿಂತಲೂ ಘೋರತರವಾದ ಜಲಜನಕ ಬಾಂಬು ರಚಿಸಲ್ಪಟ್ಟಿತು. ಹೀಗೆ ಪ್ರಬಲ ವಿನಾಶಕಾರಕಗಳಾದ ಅಸ್ತ್ರಗಳನ್ನು ತಯಾರಿಸಲೇ ಬಾರದು ಎಂದೂ, ತಯಾರಿಸಿದರೂ ಅವನ್ನು ಪ್ರಯೋಗಿಸಿದ್ದರೂ ಸ್ಫೋಟಗೊಳಿಸಲೇ ಬಾರದೆಂತಲೂ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಜನ ಕಾತರದಿಂದ ಪ್ರಾರ್ಥಿಸುತ್ತಲಿದ್ದಾರೆ. ಇಂಥ ಮಾರಕಾಸ್ತ್ರಗಳನ್ನು ನೇಗಿಲಿನೊಡನೆ ಹೋಲಿಸಬಲ್ಲವೇ ಎಂಬ ಶಂಕೆಯು ಯಾವನ ಮನಸ್ಸಿನಲ್ಲೂ ಸಹಜವಾಗಿ ಉದಿಸಬಹುದು.

ಸುಮಾರು ೧೯೫೭ನೆ ಇಸವಿಗೂ ಮುಂಚೆ ಅಮೇರಿಕದಲ್ಲಿನ ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಪರಮಾಣು ಶೋಧ ಕೇಂದ್ರದಲ್ಲಿ "ನೇಗಿಲ ಯೋಜನೆ" (Project Plowshare) ರೂಪಿತವಾಗಿದೆ. ಪರಮಾಣು ಬಾಂಬುಗಳನ್ನು ಕುರಿತ ಭಯ, ಜುಗುಪ್ಸೆಗಳೇ ಹಾಗೂ ಇಂಥ ಅಸ್ತ್ರಗಳ ತಯಾರಿಕೆಯಲ್ಲಿ ವಿವಿಧ ರಾಷ್ಟ್ರಗಳು ನಡೆಸುತ್ತಲಿರುವ ಪೈಪೋಟಿಯೇ ಇಂಥ ಸಾರ್ವತ್ರಿಕ ಭಯದ ಪ್ರಸ್ತಾಪಕ್ಕೆ ಕಾರಣವಾಗಿದ್ದರೆ, ಕೆಡುಕಿನಷ್ಟೇ ಒಳಿತನ್ನೂ ಇಂಥ ಪರಮಾಣು ಸ್ಫೋಟಕಗಳಿಂದ ಪಡೆಯಬಲ್ಲೆವು ಎಂಬ ಆಸೆಯಿಂದ ಈ ವಿಶ್ವವಿದ್ಯಾಲಯದ ಅಣು ವಿಜ್ಞಾನಿಗಳು ಈ ಯೋಜನೆಯನ್ನು ರೂಪಿಸಿಕೊಂಡರು ಎಂದು ಇಲ್ಲಿ ನೆನೆಸಿಕೊಳ್ಳಬೇಕು.

ಈ ಯೋಜನೆಯ ಮೊದಲನೆ ಪ್ರಯೋಗವಾದರೋ ತಾನು ಚಿಕ್ಕದೊಂದು ಪರಮಾಣುಸ್ಫೋಟದಿಂದಲೇ ಆರಂಭವಾಯಿತು. ಚಿಕ್ಕದೆಂದರೂ ಇದರ ಸ್ಫೋಟನ ಶಕ್ತಿಯು ೧೭೦೦ ಟನ್= ಮೂವತ್ತೆಂಟು ಲಕ್ಷ, ಎಂಟು ಸಾವಿರ ರಾತ್ಲ ಟಿ. ಎನ್. ಟಿ. (T.N.T) ಸ್ಫೋಟಕದ ಶಕ್ತಿಗೆ ಸಮವಿತ್ತಂತೆ. ನೆವಾಡ ಮರುಭೂಮಿಯಲ್ಲಿ ಶಿಲಾಮಯ ಭೂಭಾಗದಲ್ಲಿ ಸುಮಾರು ೨೦೦೦ ಅಡಿ ಉದ್ದದ ಕಂದಕವೊಂದನ್ನು ಅಗೆದು, ಕಂದಕದ ಒಳಗಡೆ ನೆಲದಿಂದ ೯೦೦ ಅಡಿ ದೂರದಷ್ಟು ಕೆಳಗೆ ಮತ್ತು ತುದಿಗಳಿಂದ ೮೦೦ ಅಡಿ ದೂರದಲ್ಲಿ ಪರಮಾಣು ಬಾಂಬನ್ನಿಟ್ಟು ಪಕ್ಕಡೆಗಳಲ್ಲಾ ಮರಳಿನ ಚೀಲಗಳನ್ನಿಟ್ಟು ಆ ಬಾಂಬನ್ನು ಸ್ಫೋಟಗೊಳಿಸಲಾಯಿತು. ಹಾನಿಯನ್ನು ತಡೆಗಟ್ಟಲು—ಕಮ್ಮಿ ಮಾಡಲು— ಅನುಕೂಲವಾಗುವಂತೆ ಕಂದಕವನ್ನು ಓರೆ ಕೋರೆಯಾಗಿಯೂ, ಸುರುಳಿಯಾಕಾರವಾಗಿಯೂ ಅಗೆದಿದ್ದರು. ಕಂದಕದ ಶಿಲಾಮಯ ಮೇಲ್ಭಾಗವು ಸುಮಾರು ಅರ್ಧ ಅಡಿಯಷ್ಟು ಎತ್ತರಕ್ಕೆ ನೆಗೆದು ಪುನಃ ಕೆಳಕ್ಕೆ ಬಿದ್ದಿತು ಎನ್ನುವುದರಿಂದಲೇ ಇದೆಂಥ ಅಪಾರ ಸ್ಫೋಟ ಎಂದು ನೀವು ಊಹಿಸಬಹುದು. ಇಷ್ಟೇ ಅಲ್ಲ, ಕಂದಕದ ಮಧ್ಯಭಾಗದಲ್ಲಿ ಸುಮಾರು ೧೦೦ ಅಡಿಗಳಿಗಿಂತಲೂ ಮಿಕ್ಕಷ್ಟು ಜಾಗದಲ್ಲಿ ಭೂಪೃಷ್ಠದ ಭಾಗವೆಲ್ಲವೂ ಕರಗಿ, ದ್ರವೀಕೃತವಾದದ್ದಲ್ಲದೆ ಮುಂದೆ, ಆ ಭಾಗವೆಲ್ಲವೂ ಆವಿಯಾಗಿ ಅಲ್ಲಿ ದೊಡ್ಡ ಗುಳ್ಳೆಯೊಂದು ರಚನೆಯಾಯಿತು. ಅಂತೂ, ಈ ಸ್ಫೋಟದ ಅನಾಹುತವು ಕೊನೆಗೊಳ್ಳುವಷ್ಟರಲ್ಲಿ ಸ್ಫೋಟಕವನ್ನಿಟ್ಟ ಭಾಗದ ಮೇಲೆ ಸುಮಾರು ೨ ಲಕ್ಷ ಟನ್ ಶಿಲೆಯು ಪುಡಿಯಾಗಿದ್ದರೆ, ಕಂದಕದ ಉದ್ದಕ್ಕೂ ೫ ಲಕ್ಷ ಟನ್ನಿಗೆ, ಮಿಕ್ಕಿದ ಶಿಲೆಯು ಶಿಥಿಲಗೊಂಡಿತ್ತು.

ಪರಮಾಣುಸ್ಫೋಟಜನ್ಯವಾದ ವಿಕಾರಕಾಂಶಗಳು ಬಂಡೆಗಳಲ್ಲೇ ಲೀನಗೊಂಡು ಮೇಲ್ಭಾಗವನ್ನೇನೂ ಸೇರದ ಕಾರಣ ಯಾವ ತರದ ಹಾನಿಯೂ ಈ ಸ್ಫೋಟದಿಂದ ಉಂಟಾಗಲಿಲ್ಲವೆಂಬುದು ಸ್ಪಷ್ಟವಾಯಿತು. ಅಲ್ಲದೆ, ಇದಿಷ್ಟರಿಂದಲೇ ಭೂಪೃಷ್ಠದ ಸ್ವರೂಪವನ್ನೇ ಬದಲಾಯಿಸಬಹುದು. ನೇಗಿಲು ಹೊಲಗಳಲ್ಲಿನ ಮೇಲ್ಭಾಗವನ್ನು ಮಗುಚಿ ಹಾಕುತ್ತ ಕೆಳಭಾಗದಲ್ಲಿನ ಪದರುಗಳನ್ನು ಮೇಲಕ್ಕೆ ತರುವಂತೆಯೇ ಭೂಪೃಷ್ಠದತ್ಯಂತ ಕಠಿಣ ಶಿಲಾಮಯ ಭೂಭಾಗಗಳನ್ನು ಅಗೆದು ಮಗುಚಿ ಹಾಕಬಹುದು ಎನ್ನುವುದನ್ನು ಮೊದಲ ಬಾರಿಗೆ ನೇಗಿಲಿನ ಪ್ರಯೋಗವು ತೋರಿಸಿತು.

ಇದಕ್ಕೆ ತಗಲುವ ವೆಚ್ಚವಾದರೂ ಎಷ್ಟು? ಪರಮಾಣು ಜಲಜನಕ ಬಾಂಬುಗಳಿಗೇ ೧ ಲಕ್ಷಗಟ್ಟಳೆ ಡಾಲರು ವೆಚ್ಚವಾದರೂ ಇತರ ಉಪಾಯಗಳಿಂದ ಇಂಥ ಕಂದಕಗಳನ್ನು ತೋಡಲು ಭೂಪೃಷ್ಠದಲ್ಲಿನ ಅತ್ಯಂತ ಶಿಲಾಮಯ ಹಾಳೆಗಳನ್ನು ಅಗೆದು ಮಗುಚಿ ಹಾಕಲು, ಆಗು

(೩೧ನೇ ಪುಟ ನೋಡಿರಿ)

A PINCH IN TIME SAVES NINE.

USE

MOST POPULAR

"SOVEREIGN"

MANGALORE SNUFF

AVAILABLE AT:-

B. SADASHIVA SHENOY

MERCHANT, TENKAPET,

UDIPI. (S. K.)

Greetings of the

INDEPENDENCE DAY

From:-

NAVA-JEEVAN TILE WORKS

PUTTUR, KALLIANPUR, S. K.

Prop

B. JAGAJJEEVANDAS SHETTY, *L M E*

•

MANUFACTURERS OF

MANGALORE TILES & RIDGES

Over half a century's experience pooled in the Tile Industry by the Proprietor.

Phone 190 UDIPI

ಸ್ವಾತಂತ್ರ್ಯಕ್ಕಾಗಿ ದುಡಿಯೋಣ!
ಸ್ವಾತಂತ್ರ್ಯದಿಂದ ಬದುಕೋಣ!

ಸರ್ವರಿಗೂ

ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು

ನವಜೀವನ ಟೈಲ್ ವರ್ಕ್ಸ್

ಪುತ್ತೂರು, ಕಲ್ಯಾಣಪುರ (ಉಡುಪಿ)

ದೀರ್ಘ ಕಾಲದ ಅನುಭವ!

ಉತ್ತಮ **ಮಂಗಳೂರು ಹಂಚು** ತಯಾರಿಕೆ,
ಶೀಘ್ರ ಪೂರೈಕೆ.

ಬಿ. ಜಗಜ್ಜೀವನದಾಸ ಶೆಟ್ಟಿ, *L M E*
ಮಾಲಕರು.

ಸ್ವಾತಂತ್ರ್ಯ ವೀರ ಶೇಖರ!

ಮೂಲ ಲೇಖಕರು
ಶ್ರೀ ಎನ್. ನಾರಾಯಣ್

'ಮೈಥಿಲೀ ದೇವಿಯ ಆಗಿನ ಪರಿಸ್ಥಿತಿಯೆಂದರೆ ಕಲ್ಲನ್ನೂ ಕರಗಿಸುವಂತಿತ್ತು. ಆಕೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು! ಈ ಸ್ಥಿತಿಯಲ್ಲಿ, ಮೃತ್ಯುಶಯ್ಯೆಯಲ್ಲಿ ಮಲಗಿದ್ದ ತನ್ನ ಪತಿಗೆ, ಶುಭ ವಾರ್ತೆಯೊಂದನ್ನು ಹೇಳಬೇಕಾಗಿತ್ತು! ಆದರೆ ಹೇಗೆ ಹೇಳಬೇಕೆಂಬುದೇ ಅವಳಿಗೆ ತೋಚದಾಯಿತು.'

ಅನುವಾದಕರು
ಶ್ರೀ ಕೆ. ಎಸ್. ಭಟ್, ಶಿರಾಡಿಪಾಲ್.

ಸನ್ ೧೯೫೬ನೇ ಇಸವಿ, ಜೂನ್ ತಿಂಗಳ ಒಂದೊಂದು ಶುಭದಿನ! ಆ ಚಿಕ್ಕ ಹಳ್ಳಿ ಚೊಕ್ಕವಾಗಿ ಅಲಂಕೃತವಾಗಿತ್ತು. ತೀಕ್ಷ್ಣವಾದ ಬಿಸಿಲ ತಾಪವನ್ನೂ ಲೆಕ್ಕಿಸದೆ, ಅಂದು ಅಲ್ಲಿ ಬಹುಮಂದಿ ಸೇರಿದ್ದರು. ಅತ್ತಿಂದಿತ್ತ ಓಡಾಡುತ್ತ ಕಾರ್ಯನಿರತರಾಗಿದ್ದ ನೂರಾರು ಮಂದಿ ಸ್ವಯಂಸೇವಕರು ಅತ್ಯಂತ ಆನಂದದೊಡನೆ, ಜನರನ್ನು ಸ್ವಾಗತಿಸುತ್ತಿದ್ದರು ಸ್ತ್ರೀಯರು, ಮಕ್ಕಳು ಮುದುಕರೂ ಅಂದು ಉತ್ಸಾಹದೊಡನೆ ಅಲ್ಲಿ ನೆರೆದಿದ್ದರು. ಅದು ಆ ಗ್ರಾಮಸ್ಥರ ಪಾಲಿಗೆ ಮಹತ್ವದ ದಿನವಾಗಿತ್ತು! ಅಷ್ಟು ಮಾತ್ರವಲ್ಲ-ಭಾರತದ ಸ್ವಾತಂತ್ರ್ಯೇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆದಿಡಬೇಕಾದ ದಿನ ಅದಾಗಿತ್ತು! ಭವ್ಯವಾದ ಸಭಾಂಗಣದಲ್ಲಿ ತ್ರಿವರ್ಣರಂಜಿತ ರಾಷ್ಟ್ರ ಧ್ವಜ ಎತ್ತರದಲ್ಲಿ ಹಾರುತ್ತಿತ್ತು.

ಈ ಗ್ರಾಮವು ಒಂದು ಚಿಕ್ಕ ಹಳ್ಳಿಯೂ ಗಿದ್ದರೂ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆ ಹಳ್ಳಿಯ ಜನರು ಜಾತಿ, ಮತ ಭೇದಗಳನ್ನು ಎಣಿಸದೆ ಐಕ್ಯರಾಗಿ ಹೋರಾಟ ನಡೆಸಿದ್ದರು. ದೇಶಕ್ಕೆ ಸ್ವಾತಂತ್ರ್ಯ ದೊರೆತು ಈ ಕಾಲಕ್ಕೆ ನವ ವರ್ಷಗಳುರುಳಿದ್ದರೂ, ಈ ಹಳ್ಳಿಯ ಜನರ ಸಂಘಟನೆ ಹಾಗೂ ಸಮಾಜ ಸೇವೆ, ಮಹತ್ವಪೂರ್ಣವಾಗಿದೆ. ಈ ಪರಿಯ ಸಂಘಟನೆ ಚಿರಸ್ಥಾಯಿಯಾಗಿ ಉಳಿಯುವುದೆಂದರೆ ಅದು ಸಹಜವಾಗಿ ಸಾಧ್ಯವಾಗಲಾರದು. ಈ ಗ್ರಾಮದಲ್ಲಿ ಇಂತಹ ಆದರ್ಶವನ್ನು ರೂಪಿಸಲು ಕಾರಣನಾದ, ಆ ಹಳ್ಳಿಯವನೇ ಆದ ಆದರ್ಶ ವೀರ ತರುಣನೊಬ್ಬನು, ಸ್ವಾತಂತ್ರ್ಯ ಪ್ರಾಪ್ತಿಗಾಗಿ ತನ್ನ ಜೀವನವನ್ನೇ ಅರ್ಪಿಸಿ ಕೊನೆಗೆ ದೇಶಕ್ಕಾಗಿಯೇ ಬಲಿದಾನಗೊಂಡಿರುವನು! ಈ ತರುಣ ವೀರನ ಆದರ್ಶ ಸಾಹಸಮಯ ಕಾರ್ಯಗಳ ಸಂಸ್ಮರಣೆ ಆ ಗ್ರಾಮವಾಸಿಗಳ ಮನದಲ್ಲಿ ಅಚ್ಚಳಿಯದೆ ಉಳಿದಿದೆ! ಈ ಆದರ್ಶ ತರುಣನೇ ಶೇಖರನಾಥ!

ಈ ಸ್ವಾತಂತ್ರ್ಯ ವೀರ ಶೇಖರನಾಥನ ಹೆಸರಿನಲ್ಲಿ ಒಂದು ವಿದ್ಯಾಮಂದಿರವನ್ನು ಸ್ಥಾಪಿಸಬೇಕೆಂದಿದ್ದ ಆ ಗ್ರಾಮಸ್ಥರ ಮಹತ್ವಾಕಾಂಕ್ಷೆ ಇದು ಈಡೇರಿತ್ತು! ಶೇಖರನಾಥನ ಸ್ಮಾರಕವಾಗಿ ಕಟ್ಟಿಸಿದ ಎರಡಂತಸ್ತಿನ ಭವ್ಯವಾದ ವಿದ್ಯಾಮಂದಿರ ಕೀರ್ತಿ ಪತಾಕೆಯಂತೆ ಶೋಭಿಸುತ್ತಿತ್ತು! ಜನರು ತಮ್ಮ ಪ್ರಯತ್ನದ ಫಲರೂಪವಾದ ಆ ಭವ್ಯವಾದ ಸೌಧವನ್ನು ಮನದಣಿಯೆ ನೋಡಿ ನೋಡಿ ಹರ್ಷಪುಳಕಿತರಾಗುತ್ತಿದ್ದರು.

ಅಂದು ಈ ವಿದ್ಯಾಮಂದಿರದ ಪ್ರಾರಂಭೋತ್ಸವವನ್ನು ಆ ಪ್ರಾಂತ್ಯದ ಮುಖ್ಯಮಂತ್ರಿಯವರು ನೆರವೇರಿಸುವವರಾಗಿದ್ದರು. ಮುಖ್ಯಮಂತ್ರಿಯವರ ಸ್ವಾಗತಕ್ಕೆ ಸಮಿತಿಯವರು ತೃಪ್ತಿಕರವಾದ ಏರ್ಪಾಡನ್ನು ಮಾಡಿದ್ದರು. ಮಧ್ಯಾಹ್ನ ಮೂರು ಗಂಟೆಗೆ ವಿದ್ಯಾ ಮಂದಿರದ ಪ್ರವೇಶೋತ್ಸವ ನೆರವೇರುವುದಾಗಿತ್ತು!

ಎರಡು ಗಂಟೆಯ ಹೊತ್ತಿಗೆ ಮುಖ್ಯಮಂತ್ರಿಗಳ ಆಗಮನ ವಾಯಿತು. ಜನರೆಲ್ಲರೂ ಜಯ ಜಯ! ಘೋಷದೊಡನೆ ಅವರನ್ನು ಸ್ವಾಗತಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರು ಸ್ವತಃ ಮೈಥಿಲೀ ದೇವಿಯವರ ಮನೆಗೆ ಹೋಗಿ ಅವರನ್ನು ಗೌರವ ಪೂರ್ವಕವಾಗಿ ಸಮಾರಂಭ ಸ್ಥಳಕ್ಕೆ ಕರೆದುಕೊಂಡು ಬಂದರು. ಯಾವ ಆದರ್ಶ ವೀರನ ಹೆಸರಿನಲ್ಲಿ ಆ ವಿದ್ಯಾಮಂದಿರದ ಪ್ರವೇಶೋತ್ಸವದ ಸಿದ್ಧತೆಯಾಗಿತ್ತೋ ಆ ವೀರ ತರುಣನ ಜೀವನ ಸಂಗಾತಿನಿಯಾದ ಮೈಥಿಲೀ ದೇವಿಯು ಸಭಾಂಗಣಕ್ಕೆ ಬರುವಾಗ ಜನರೆಲ್ಲರೂ, ಆಕೆಯನ್ನು ಶ್ರದ್ಧಾ ಭಕ್ತಿಗಳಿಂದ ಎದ್ದು ನಿಂತು ಗೌರವ ಪೂರ್ವಕವಾಗಿ ಸ್ವಾಗತಿಸಿದರು! ಮೈಥಿಲೀ ದೇವಿಯು ತನ್ನ ಏಕಮಾತ್ರ ಪುತ್ರನಾದ ಎಂಟುವರುಷದ ಬಾಲಕನೊಡನೆ ಸಮಾರಂಭಕ್ಕೆ ಬಂದಿದ್ದಳು.

ನಿಶ್ಚಿತವಾದ ವೇಳೆಯಲ್ಲಿ ವಿದ್ಯಾಮಂದಿರದ ಪ್ರವೇಶೋತ್ಸವ ನೆರವೇರಿತು. ಮುಖ್ಯಮಂತ್ರಿಯವರು, ಬಲಿದಾನಗೊಂಡ ವೀರಶೇಖರನ ಭಾವಚಿತ್ರವನ್ನು ಉದ್ಘಾಟಿಸುತ್ತಾ ಆತನ ಧೈರ್ಯ ಹಾಗೂ ದೇಶ ಪ್ರೇಮದ ಕುರಿತು ವಿವರಿಸುತ್ತ ಹೃದಯ ಸ್ಪರ್ಶಿಯಾದ ಭಾಷಣ ಮಾಡಿದರು. ಸಭಾಸದರು ಒಬ್ಬೊಬ್ಬರಾಗಿ ಎದ್ದುನಿಂತು ವೀರ ಶೇಖರನ ಜೀವನದ ಸಾಹಸಮಯವಾದ ಒಂದೊಂದೇ ಘಟನೆಯನ್ನು ವಿವರಿಸಿ ಹೇಳುತ್ತಿರಲು, ಶೇಖರನು ಎಂತಹ ಕಷ್ಟದಲ್ಲೂ, ಎದೆಗುಂದದೆ, ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ಸಾಹಸಕಾರ್ಯಗಳನ್ನು ಆಲಿಸುತ್ತಿದ್ದ ಜನರು, ಗದ್ಗದಿತರಾಗುತ್ತಿದ್ದರು! ವೀರ ನಾರಿ ಮೈಥಿಲೀದೇವಿಗೆ ಮಾತ್ರ ಇದಾವುದರ ಪರಿವೆಯೇ ಇರಲಿಲ್ಲ! ಆಕೆ, ತನ್ನ ಪತಿದೇವನ ಗತಕಾಲದ ಜೀವನೇತಿಹಾಸದ ಒಂದೊಂದೇ ಘಟನೆಯನ್ನು ಜ್ಞಾಪಿಸುತ್ತ ಭಾವಪರವಶಳಾಗಿದ್ದಳು. ಗತಕಾಲದ ಘಟನೆಗಳು ಚಲನ ಚಿತ್ರದಂತೆ ಆಕೆಯ ಮನಃಪಟಲದ ಮೇಲೆ ಮಾಡುತ್ತಿರಲು, ಅವಳಿಗರಿಯದಂತೆಯೇ ಆಕೆಯ ನಯನಗಳಿಂದ ಕಣ್ಣೀರು ಹರಿಯುತ್ತಿದ್ದಿತು!

o o o

ವ್ಯಾಪಾರಕ್ಕಾಗಿ ಭಾರತಕ್ಕೆಬಂದ ಪರಕೀಯರು ಇಲ್ಲಿಯೇಬಲವಾಗಿತಳವೂರಿಕ್ರಮೇಣ ಭಾರತೀಯರ ಮೇಲೆ ತಮ್ಮ ಪ್ರಭುತ್ವವನ್ನೇ ಸ್ಥಾಪಿಸಿದರು. ಎಷ್ಟೋ ವರ್ಷಗಳ ಬಳಿಕ ಭಾರತೀಯರಿಗೆ ತಮ್ಮ ಶೋಚನೀಯ ಸ್ಥಿತಿಯ ಅರಿವಾಗಿ ಅವರು ಹೋರಾಡ ತೊಡಗಿದರು. ಸಶಸ್ತ್ರ ಕ್ರಾಂತಿ ಆರಂಭವಾಯಿತು. ಆ ಬಳಿಕ ಸತ್ಯ-ಅಹಿಂಸೆಯ ಅಸ್ತ್ರಗಳಿಂದ ರಾಷ್ಟ್ರಪಿತ ಬಾಪೂಜಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡ ತೊಡಗಿದರು. ದೇಶದ ಎಷ್ಟೋ ಮಂದಿ ತರುಣರು ತಂತಮ್ಮ ವೃತ್ತಿಗೆ ತಿಲಾಂಜಲಿಯನ್ನಿತ್ತು ಬಾಪೂಜಿಯವರೊಡನೆ ಕೂಡಿಕೊಂಡರು. ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ತೊರೆದು ದೇಶಕ್ಕಾಗಿ ಸಂಘಟಿತರಾದರು. ಇಂತಹ ತರುಣರಲ್ಲಿ ಶೇಖರನೂ ಒಬ್ಬನಾಗಿದ್ದನು.

ಮಧ್ಯಮ ವರ್ಗಕ್ಕೆ ಸೇರಿದ್ದ ಶೇಖರನ ತಂದೆ ಒಂದು ಚಿಕ್ಕ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದರು. ಚಿಕ್ಕಂದಿನಲ್ಲಿಯೇ ಮಾತೃಪ್ರೇಮ ವಂಚಿತನಾದ ಶೇಖರನನ್ನು ಅವರು ಅತ್ಯಂತ ಪ್ರೀತಿಯಿಂದ ಸಾಕಿ ಸಲಹಿದ್ದರು. ಶೇಖರನು ಹೃಷ್ಟಪುಷ್ಟನೂ ಸಾಹಸಿಯೂ ಆಗಿದ್ದು ಚಿಕ್ಕಂದಿನಿಂದಲೇ ಚುರುಕು ಬುದ್ಧಿಯವನಾಗಿದ್ದನು. ಬಿ. ಎ. ವಿದ್ಯಾರ್ಥಿಯೂ ಗಿದ್ದ ಶೇಖರನು ಗಾಂಧೀಜಿಯವರ ಭಾಷಣ—ಲೇಖನಗಳಿಂದ ಪ್ರಭಾವಿತನಾಗಿ ಕೊನೆಗೊಂದು ದಿನ ಕಾಲೇಜನ್ನು ಬಿಟ್ಟುಬಿಟ್ಟನು. ಆ ಬಳಿಕ ಗಾಂಧೀಜಿಯವರ ಆದೇಶದಂತೆ, ಶೇಖರನು ತನ್ನ ಗ್ರಾಮದ ಜನರಿಗೆ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಬೋಧಿಸುತ್ತ ಜನಜಾಗೃತಿಯನ್ನುಂಟು ಮಾಡತೊಡಗಿದನು. ಶೇಖರನನ್ನು ಆತನ ಸ್ನೇಹಿತರು ತಡೆದರು. ಶೇಖರನ ತಂದೆಯು ಕೂಡಾ "ನಿನಗೀ ದುರ್ಗಮವಾದ ದಾರಿ ಬೇಡ ಮಗೂ!" ಎಂದು ಹಲವು ಪರಿಯಿಂದ ಬೋಧಿಸಿದ. ಆದರೆ ಎಲ್ಲವೂ ನಿಷ್ಫಲವಾಯಿತು ಶೇಖರನ ಕಾರ್ಯ ಕ್ಷೇತ್ರ ವಿಸ್ತಾರವಾಯಿತು.

ಈ ರೀತಿಯಿಂದ ಕೆಲವು ಕಾಲ ಕಳೆಯಲು ಶೇಖರನ ತಂದೆಯೂ ತೀರಿಕೊಂಡರು. ಈಗ ಶೇಖರನಿಗೆ ಹಿಂಬಲ್ಲ ಮುಂದಿಲ್ಲವೆಂಬಂತಾಗಿ ಆತನು ಪೂರ್ಣವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದನು. ಸ್ವಾತಂತ್ರ್ಯ ಪ್ರೇಮಿಗಳ ನೆರಳು ಕಂಡೊಡನೆಯೇ ಜಾಗೃತೆ ವಹಿಸುತ್ತಿದ್ದ ಪೋಲೀಸರ ದೃಷ್ಟಿ ಈಗ ಪೂರ್ಣವಾಗಿ ಶೇಖರನ ಮೇಲೆ ಬಿದ್ದಿತು.

ಒಂದು ದಿನ ತನ್ನ ಗ್ರಾಮಸ್ಥರನ್ನು ಕೂಡಿಸಿಕೊಂಡು ಶೇಖರನು, ಇಂಗ್ಲಿಷ್ ಸರಕಾರದ ವಿರುದ್ಧ ಏಸೆ ಮತ್ತು ಹೇಗೆ

ಅಧಿಕ ಭದ್ರತೆ ಮತ್ತು ಉತ್ತಮ ಬಡ್ಡಿಗೆ
ನಿಮ್ಮ ಉಳಿತಾಯವನ್ನು
ದಕ್ಷಿಣ ಕನ್ನಡ ಸೆಂಟ್ರಲ್
ಕೋ-ಒಪರೇಟಿವ್ ಬೇಂಕಿನಲ್ಲಿ
ಇಡಿರಿ.
ಹೆಡ್ ಆಫೀಸು:- ಕೊಡಿಯಾಲ್‌ಬೈಲ್, ಮಂಗಳೂರು.
ಶಾಖೆ:- ಪುತ್ತೂರು.
ಸರಕಾರದ ಪಾಲು ಭಂಡವಾಳವಿರುವ ಜಿಲ್ಲೆಯ ಕೇಂದ್ರ ಸಹಕಾರಿ ಸಂಸ್ಥೆ. ಮೂರು ವರ್ಷ ಮತ್ತು ಅದಕ್ಕೆ ಮಿಕ್ಕಿ ಸ್ವೀಕರಿಸುವ ಎಲ್ಲಾ ಠೇವಣಾತಿಗಳಿಗೆ ಸರಕಾರದ ಭದ್ರತೆ ಮತ್ತು ಉತ್ತಮ ಬಡ್ಡಿಯ ದರ.
ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರ
ಬೇಂಕಿನ ಕುಂದಾಪುರ ಶಾಖೆಯು
ಬೇಗನೆ ತೆರೆಯಲ್ಪಡುವುದು.
ಸ್ಥಾಪನೆ: 1914.

ವರ್ತಿಸಬೇಕೆಂಬುದನ್ನು ಬೋಧಿಸುತ್ತಿದ್ದನು. ನೂರಾರು ಮಂದಿ ಸೇರಿದ ಆ ಸಮೂಹದಲ್ಲಿ ಶೇಖರನ ವಾಗ್ವೈಖರಿ, ವಿಚಾರ ಪ್ರಣಾಲಿಗಳಿಗೆ ಜನರು ಮುಗ್ಧರಾಗಿದ್ದರು. ಅಷ್ಟರಲ್ಲೇ ಪೋಲೀಸರು ಬಂದು ಲಾಠೀ ಚಾರ್ಜು ಮಾಡತೊಡಗಿದರು. ಅದು ತನಕ ಪೋಲೀಸರನ್ನು ಕಾಣದ ಆ ಗ್ರಾಮಸ್ಥರು ಥರಥರನೆ ನಡುಗಿಹೋದರು. ಶೇಖರನನ್ನು ಪ್ರಥಮ ಬಾರಿಗೆ ದಸ್ತಗಿರಿ ಮಾಡಲಾಯಿತು. ಹಾಗೂ ಆತನಿಗೆ ಭಾಷಣ ಮಾಡಿದ ಅಪರಾಧಕ್ಕಾಗಿ ೧೫ ದಿನಗಳ ಶಿಕ್ಷೆ ವಿಧಿಸಲ್ಪಟ್ಟಿತು! ಅಂದು ಶೇಖರನು ಮೊದಲ ಬಾರಿಗೆ ಜೈಲಿಗೆ ಹೋಗಿದ್ದನು. ಆದರೆ ಆವನ ಉತ್ಸಾಹ ಅದರಿಂದ ದ್ವಿಗುಣಿತವಾಗಿತ್ತೇ ಹೊರತು ಕಡಿಮೆಯಾಗಿರಲಿಲ್ಲ!

ಜೈಲಿನಿಂದ ಬಿಡುಗಡೆ ಹೊಂದಿದ ಶೇಖರನು ಪ್ರತಿ ಗ್ರಾಮ ಗ್ರಾಮಗಳಿಗೆ ಹೋಗಿ ಇಂಗ್ಲೀಷ್ ಆಡಳಿತ ವಿರುದ್ಧ ಭಾಷಣಗಳನ್ನು ಮಾಡ ತೊಡಗಿದನು. ಶೇಖರನ ಪ್ರಯತ್ನದಿಂದ ಜನಜಾಗೃತಿಯುಂಟಾಯಿತು ಹೀಗೆ ಒಂದುದಿನ ಶೇಖರನ ಭಾಷಣ ನಡೆಯುತ್ತಿದ್ದ ವೇಳೆ ಅಲ್ಲಿ ನೆರೆದ ಸಾವಿರಾರು ಮಂದಿಯ ಮೇಲೆ ಅನಿರೀಕ್ಷಿತವಾಗಿ ಪೋಲೀಸರು ಲಾಠೀ ಚಾರ್ಜು ಮಾಡ ತೊಡಗಿದರು. ಆದರೆ ಈ ಸಲ ಜನತೆ ಜಗ್ಗಲಿಲ್ಲ! ಜನರು ಕೈಗೆ ಸಿಕ್ಕಿದ ವಸ್ತುಗಳಿಂದ ಪೋಲೀಸರನ್ನು ಹೊಡೆಯ ತೊಡಗಿದರು. ಕಲ್ಲುಗಳ ಸುರಿಮಳೆಯಾಗ ತೊಡಗಿತು. ಈ ವೇಳೆಯಲ್ಲಿ ಶೇಖರನು ಜನರಿಗೂ ಪೋಲೀಸರಿಗೂ ಮಧ್ಯೆ ನಿಂತು, ಉದ್ರೇಕಗೊಂಡ ಜನತೆಯನ್ನು ಶಾಂತಗೊಳಿಸುತ್ತಿರುವಾಗ ಎಲ್ಲಿಂದಲೋ ಒಂದು ಕಲ್ಲು ರಭಸದಿಂದ ಬಂದು ಶೇಖರನ ಎಡ ಕಣ್ಣಿಗೆ ತಗುಲಿತು! ಕಣ್ಣಿಗೆ ಬಲವಾದ ಪೆಟ್ಟಾದುದರಿಂದ— "ಹಾಯ್!" ಎನ್ನುತ್ತ ಶೇಖರನು ನೆಲಕ್ಕೊರಗಿದನು! ಇದನ್ನು ಕಂಡ ಜನರು ಓಡೋಡಿ ಬಂದು ಶೇಖರನನ್ನು ಎತ್ತಿದರು. ಬಳಿಕ ತಮ್ಮ ಈ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಡುತ್ತ ಶೇಖರನನ್ನು ಉಪಚರಿಸಿದರು. ಇಷ್ಟಾಗುವಾಗ ಅಲ್ಲಿಗೆ ಬಂದ ಪೋಲೀಸಿನವರೂ ಅಲ್ಲಿಂದ ಕಾಲ್ಕಿತ್ತರು. ಬಹುಶಃ ಶೇಖರನ ಒಂದು ಕಣ್ಣು ಹೋದುದೇ ಅವರಿಗೆ ಸ್ವಲ್ಪವಾದರೂ ತೃಪ್ತಿದಾಯಕ ವಿಚಾರವಾಗಿದ್ದಿತು!

ಆಸ್ಪತ್ರೆಗೆ ಸೇರಿಸಲ್ಪಟ್ಟ ಶೇಖರನು ಒಂದು ಕಣ್ಣನ್ನು ಕಳೆದುಕೊಂಡೇ ಹೊರಬಿದ್ದನು! ಶೇಖರನ ಒಂದು ಕಣ್ಣು ಹೋದುದನ್ನರಿತ ಜನರು— "ಅಯ್ಯೋ!" ಎಂದರು. ಎಲ್ಲರೂ ಶೇಖರನಿಗಾಗಿ ಮರುಗಿದರು! ಕೊನೆಗೆ ಶೇಖರನ ಆಪ್ತ ಮಿತ್ರನೊಬ್ಬನು– 'ಶೇಖರ್! ಇನ್ನು ಮುಂದಾದರೂ, ಸರಕಾರದ ವಿರುದ್ಧ ಸ್ವರವೆತ್ತಬೇಡ! ಯಾವ ಸರಕಾರ ಏನೇ ಮಾಡಲಿ? ನಮಗೇನು?' ಎಂದು ಹೇಳಿದನು. ಆದರೆ ಶೇಖರನು ತನ್ನ ಮಿತ್ರನಿಗೆ ಹೇಳಿದ ಮರು ನುಡಿಗಳಿಂದ ಆ ಮಿತ್ರನು ತನ್ನ ಹೇಳಿಕೆಯನ್ನು ಹಿಂತೆಗೆದುಕೊಂಡನು.

'ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವ ದಾರಿಯಲ್ಲಿ ದೇಶಕ್ಕಾಗಿ ನನ್ನ ಒಂದು ಕಣ್ಣು ಹೋದುದೇನು ಹೆಚ್ಚು? ಈಸಮನ್ನೀತ ಸಾಧನೆಯಲ್ಲಿ ನನ್ನ ಪ್ರಾಣವನ್ನು ನೀಡಲೂ ನಾನು ಸಿದ್ಧನಿದ್ದೇನೆ! ದೇಶವನ್ನು ಸ್ವತಂತ್ರಗೊಳಿಸುವ ಕಾರ್ಯವೆಂದರೆ ಅದು ಹೂವಿನ ಹಾಸಿಗೆಯಲ್ಲ! ಮಹತ್ಕಾರ್ಯ ಸಾಧನೆಯ ಪಥದಲ್ಲಿ ಇಳಿದವನು ಮುಳ್ಳಿನ ಹಾಸಿಗೆಯ ಮೇಲೂ ಒರಗಬೇಕಾಗುತ್ತದೆ!' ಎಂದು ಹೇಳುತ್ತಿದ್ದ ಶೇಖರನ ಮಾತಿಗೆ ಯಾರೂ ಕೂಡ ಮರುನುಡಿಯುವಂತಿರಲಿಲ್ಲ!

೦ ೦ ೦

ಶ್ರೀ ಗೋವಿಂದ ದಾಸರು ಮಹಾತ್ಮಾ ಗಾಂಧಿಯವರ ಅನನ್ಯ ಭಕ್ತರಲ್ಲೊಬ್ಬರು. ಅವರು ಸಂಪತ್ತಿನಿಂದ ಶ್ರೀಮಂತರಲ್ಲ, ಆದರೆ ಸುಗುಣಗಳಿಂದ ಶ್ರೀಮಂತರೆನಿಸಿದ್ದರು. ಈ ಮಹನೀಯರಿಗಿದ್ದ ವಿವಾಹ ವಯಸ್ಕಳಾದ ಏಕಮಾತ್ರ ಪುತ್ರಿಗೆ ಯೋಗ್ಯನಾದ ವರನನ್ನು ಆರಿಸುವ ಕಾರ್ಯದಲ್ಲಿ ಪ್ರಯತ್ನಿಸುತ್ತಿದ್ದ ಅವರು ಕೊನೆಗೂ ಯೋಗ್ಯನಾದ ತರುಣನನ್ನು ಆರಿಸುವಲ್ಲಿ ಸಫಲರಾಗಲಿಲ್ಲ. ಕಟ್ಟಕಡೆಗೆ ಅವರಿಗೆ ಧನಿಕನಾದ ವಿಧುರ ವರನೊಬ್ಬನು ಸಿಕ್ಕಿದನು. ಮೊದಲಿನ ಪತ್ನಿಯಲ್ಲಿ ಮಕ್ಕಳಿಲ್ಲದುದರಿಂದ ಆತನು ಎರಡನೆಯ ಮದುವೆಗೆ ಸಿದ್ಧನಾಗಿದ್ದನು. ಹಣದ ಅಡಚಣೆ ಹಾಗೂ ಪ್ರಾಯ ತುಂಬಿ ನಿಂತ ಮಗಳು ಈ ಮಧ್ಯದಲ್ಲಿ ಸಿಲುಕಿದ ಗೋವಿಂದ ದಾಸರು ಬೇರೆ ಉಪಾಯಗಾಣದೆ ಆ ವರನೊಡನೆ ಮದುವೆಯನ್ನು ನಿಶ್ಚೈಸಿದರು. ಹೊಸ ಅಳಿಯನ ಕೃಪಣತ್ವ ಸಂಕುಚಿತ ಮನೋಭಾವನೆ, ಮತ್ತು ನಿರ್ದಾಕ್ಷಿಣ್ಯ ಸ್ವಭಾವ ಇವೆಲ್ಲ ಮದುವೆಯ ದಿನವೇ ಗೋವಿಂದ ದಾಸರಿಗೆ ತಿಳುವಳಿಕೆಯಾಯಿತು. ಆದರೆ ಉಪಾಯವಿರಲಿಲ್ಲ. ಅಂತು ಮಗಳ ಮದುವೆಯೊಂದು ಆಯಿತು! ಎಂಬ ಸಂತೋಷದ ಎಡೆಯಲ್ಲೇ ಮದುವೆಯ ದಿನ ಸಂಜೆಯೇ ಆ ಅಳಿಯನು ಹಣದ ವಿಚಾರವಾಗಿ ವಿವಾದವೆತ್ತಿ ಕೊನೆಗೆ ಜಗಳವನ್ನೇ ಆರಂಭಿಸಿದನು. ಹದ್ದು ಮೀರಿ ಮಾತನಾಡಿದ ಆತನು ಕೋಪಗೊಂಡು, ವಿವಾಹಿತ ಪತ್ನಿಯನ್ನು ತಿರಸ್ಕರಿಸಿ ಆಗಲೇ ಹೊರಟು ಹೋಗಿಬಿಟ್ಟನು! ಎಂತಹ ಆಘಾತ! ಸುಕುಮಾರಿ ಮೈಥಿಲಿಯ ಆಸೆ ಆಕಾಂಕ್ಷೆಗಳೆಲ್ಲ ಮಣ್ಣುಗೂಡಿದುವು. ನವ ದಂಪತಿಗಳ ಆ ಮೊದಲ ರಾತ್ರಿಯನ್ನು ತರುಣಿ ಮೈಥಿಲಿಯು, ಮನದಲ್ಲೇ ಕೊರಗುತ್ತ ಕಳೆದಳು. ಗೋವಿಂದ ದಾಸರ ಚಿಂತೆಗೆ ತುದಿಮೊದಲಿರಲಿಲ್ಲ. ಬೆಳಗಾಯಿತು! ಮುಂದೇನು? ಎಂದು ದಾಸರು ಚಿಂತಿಸುತ್ತಿರುವಾಗಲೇ, ತಂದೆಯ ದುಃಖವನ್ನರಿತ ಮೈಥಿಲಿ, ಅಳುತ್ತಲೇ ತನ್ನನ್ನು ಪತಿಗೃಹಕ್ಕೆ ಕಳುಹಿಸಿ ಕೊಡಿ, ಎಂದಳು. ಅಷ್ಟರಲ್ಲೇ ಗಾಯದ ಮೇಲೆ ಬರೆ ಎಳೆದಂತೆ ಬಂದ ಭೀಕರ ವಾರ್ತೆಯಿಂದ ತರುಣಿ ಮೈಥಿಲಿ ಕುಸಿದು ಬಿದ್ದಳು! ಗೋವಿಂದ ದಾಸರಿಗೆ ದಿಕ್ಕೇ ತೋಚದಾಯಿತು. ಜಗಳವಾಡಿ ಹೊರಟು ಹೋಗಿದ್ದ ಮೈಥಿಲಿಯ ಪತಿ ಅಂದು ರಾತ್ರಿಯ ರೈಲು ಅಪಘಾತದಲ್ಲಿ ಮೃತನಾಗಿದ್ದನೆ! ಎಂಬ ವಾರ್ತೆ ಸಿಡಿಲಿನಂತೆ ಬಂದೆರಗಿತು!

ಮೈಥಿಲಿಯ ಜೀವನದ ಅರುಣೋದ

(೨೭ನೇ ಪುಟ ನೋಡಿರಿ)

R.O.I.

spectacle frames is the **fashion** of **the day**

R O I Spectacle frames are becoming more and more popular in several countries of the world where they are being exported in an increasing measure They are made to specifications of the buyer and are known for their strength, durebility and elegance

Royal Optical Industries

Naigaum Cross Road, Wadala, Bombay 31

Phone: 60175 Grams: CELLULOID

Branch Office:

79, Conning Street, 1st floor, Room No 71, CALCUTTA-1

Tel: No. 324244 Cable: "Sightaid"

ಆರ್. ಓ. ಐ.

ಕನ್ನಡಕದ ಫ್ರೇಮುಗಳು ಇಂದಿನ ಸೊಬಗಾಗಿದೆ

ಆರ್ ಓ. ಐ ಕನ್ನಡಕದ ಫ್ರೇಮುಗಳು ಜಗತ್ತಿನ ಅನೇಕ ಊರುಗಳಲ್ಲಿ ಹೆಚ್ಚು ಹೆಚ್ಚಾಗಿ ಜನಪ್ರಿಯವಾಗುತ್ತವೆ ಮತ್ತು ಅವು ಅಧಿಕ ಸಂಖ್ಯೆಯಲ್ಲಿ ರಫ್ತಾಗುತ್ತಿವೆ. ಅವು ಖರೀದಿಸುವವನ ಆಳತೆಗನುಸಾರವಾಗಿ ತಯಾರಿಸಲ್ಪಡುತ್ತವೆ ಮತ್ತು ಅವು ಬಲ, ಬಾಳಿಕೆ ಮತ್ತು ಸೌಂದರ್ಯಕ್ಕೆ ಹೆಸರುವಾಸಿಯಾಗಿವೆ.

ರೋಯಲ್ ಒಪ್ಟಿಕಲ್ ಇಂಡಸ್ಟ್ರೀಸ್

ನೈಗಾಂವ್ ಕ್ರಾಸ್ ರೋಡ್, ವಡಲಾ, ಬೊಂಬಾಯಿ 31

ಫೋನ್: 60175 ಗ್ರಾಂ: ಸೆಲ್ಲುಲ್ಯೊಡ್

ಬ್ರಾಂಚ್ ಆಫೀಸ್:

72, ಕ್ಯಾನಿಂಗ್ ಸ್ಟ್ರೀಟ್, 1ನೆ ಮಾಳಿಗೆ, ರೂ.ನಂ.71, ಕಲ್ಕತ್ತಾ–1.

ಟೆಲ್. ನಂ. 324244 ಕೇಬಲ್: "ಸೈಟೈಡ್"

ಮರೆಯಲಾಗದುದು

ಸ್ವರಾಜ್ಯವನ್ನು ಗಳಿಸಿಕೊಟ್ಟೊಡನೆಯೇ ರಾಷ್ಟ್ರಪಿತನನ್ನು, ಪ್ರಜಾಸತ್ತೆಗೆ ಭದ್ರ ಬುನಾದಿ ಹಾಕಿದೊಡನೆಯೇ ರಾಷ್ಟ್ರ ಶಿಲ್ಪಿಯನ್ನು ಕಾಲ ಕರೆದೊಯ್ದನು. ಗಾಂಧಿಗೆ ಗಾಂಧಿ, ನೆಹರೂಗೆ ನೆಹರೂ ಸಾಟಿಯಿಲ್ಲದ ಬೇರೆಯಿಲ್ಲ. ಗಾಂಧಿಯವರ ಮಾರ್ಗ, ನೆಹರೂರವರ ಆದರ್ಶ ತೆರೆದ ಪುಸ್ತಕದಂತೆ ನಮ್ಮ ಮುಂದಿದೆ; ನಾವಿಡುವ ಹೆಜ್ಜೆಹೆಜ್ಜೆಗೂ ಅದರತ್ತ ದೃಷ್ಟಿ ಹಾಯಿಸಿ ಮುಂದುವರಿಯುವುದು ನಮ್ಮ—ಭಾರತೀಯ ರಾಷ್ಟ್ರೀಯರ—ಪರಮ ಕರ್ತವ್ಯ.

ಬರೆದವರು
ಶ್ರೀ ಮೂಡಬೆಟ್ಟು ರಂಗರಾವ್.

ಲೇಖಕರು

ಅದೇನಾಶ್ಚರ್ಯವೋ ತಿಳಿಯದು. ಆಗಾಗ ಕಣ್ಣೀರು ತುಂಬುತ್ತೆ. ಮೂಗು ಸುರುಸುರು ಅನ್ನುತ್ತೆ. ಗಂಟಲು ಕಟ್ಟಿಕೊಂಡು ಮಾತನಾಡಲಾಗುವುದಿಲ್ಲ. ಏಕೆ ಹೀಗೆ?

ಪ್ರತಿ ದಿನಾ ಪತ್ರಿಕೆ ಬಿಡಿಸಿದಾಗ, ಓದುವಾಗ ಹೀಗಾಗುತ್ತದಲ್ಲ! ಇನ್ನೆಷ್ಟು ದಿನ ಹೀಗಾಗುತ್ತದೋ ತಿಳಿಯದು. ಮರೆಯುವುದು ಕಷ್ಟವೆಂದೇ ತೋರುತ್ತದೆ ಈ ದುಃಖವನ್ನು. ಇದೆಂತಹ ವಿಯೋಗ ದುಃಖ? ಇದೆಂತಹ ಮರಣ ಶೋಕ?

ನಮ್ಮ ಸ್ವಂತ ತಂದೆ ಸತ್ತ ದುಃಖವನ್ನು ಅನುಭವಿಸಿದವರಿದ್ದೇವೆ; ನಮ್ಮ ಆತ್ಮೀಯರ ನಿಯೋಗ ದುಃಖವನ್ನೂ ನಾವು ಬಲ್ಲೆವು. ಅದೆಲ್ಲಾ ಒಂದು ಅಳತೆಯ ದುಃಖ, ಸಹಜವಾದ ದುಃಖ; ಕಾಲದೇವನ ದಿವ್ಯೌಷಧಿಯಿಂದ ಮೆಲ್ಲನೆ ಮರೆಯಾಗಿ ಹೋಗುವಂತಹ ದುಃಖ. ಒಬ್ಬನು ಅಂತಹ ದುಃಖವನ್ನು ಅನುಭವಿಸುತ್ತಿದ್ದರೆ, ಇನ್ನೊಬ್ಬರಿಗೆ ಅದೊಂದು ವಿಶೇಷ ದುಃಖವೆನಿಸುವುದಿಲ್ಲ. ಆದರಲ್ಲಿಷ್ಟೇ ದಾರುಣತೆಯಡಗಿದ್ದರೂ ಅವರವರಿಗಷ್ಟೇ ಆ ದುಃಖದ ಬಾಧೆ. ಅಂತಹ ಬಾಧೆಯನ್ನು ಇತರರು ಅನುಭವಿಸುವಂತಿಲ್ಲ.

ಹಾಗಾದರೆ ಈ ದುಃಖದಲ್ಲಿ ಅದೇಕೆ ಇಷ್ಟೊಂದು ವಿಶೇಷತೆ?

ಹೌದು, ಜವಾಹರಲಾಲ ನೆಹರೂರ ಶೋಕವು ಹೀಗೇಕೆ ನಮ್ಮನ್ನು ಪೀಡಿಸುತ್ತಿದೆ? ದುಃಖದೊಂದಿಗೆ ಆಶ್ಚರ್ಯವೂ ಆಗುತ್ತಿದೆ.

ಅವರ ಸ್ವಂತ ಮಗಳು ಇಂದಿರಾ ಗಾಂಧಿ ಅನುಭವಿಸುತ್ತಿರುವಂತಹ ದುಃಖವನ್ನೇ ಭಾರತದ ಪ್ರತೀ ಪ್ರಜೆಯೂ ಅನುಭವಿಸುತ್ತಿದ್ದಾನೆಂದರೆ ಅತಿಶಯೋಕ್ತಿಯಲ್ಲವೆಂದೇ ಕಾಣುತ್ತಿದೆ.

○ ○ ○

ಇದೇ ಬಗೆಯ ದುಃಖವೇ ಮಹಾತ್ಮಾ ಗಾಂಧಿಯ ನಿಧನ ಕಾಲದಲ್ಲಿ ಜನತೆಯ ಅನುಭವಕ್ಕೆ ಬಂತು. ಅದು ಮರೆಯುವಂತಹುದಲ್ಲ. ಮತ್ತಿದೂ ಅಂತಹುದೇ ಆಯಿತು.

ಗಾಂಧಿಗೆ ಗಾಂಧಿಯೇ ಸಾಟಿ; ಅಂತಹನು ಮತ್ತೊಬ್ಬನಿಲ್ಲ. ನೆಹರೂಗೆ ನೆಹರೂವೇ ಸಾಟಿ; ಅಂತಹನು ಮತ್ತೊಬ್ಬನಿಲ್ಲ

ಗಾಂಧಿ ತನ್ನ ಅನಂತರ ಇಂತಹನೆಂದು ನೆಹರೂರನ್ನೆ ನಿರ್ದೇಶಿಸಿದರು. ಅವರು ಆದೇಶಿಸಿಕೊಟ್ಟ ಕಾರ್ಯಗಳನ್ನು ಮಾಡುತ್ತಾ ಬಂದ ನೆಹರು "ಕೆಲಸವೆಲ್ಲ ಮುಗಿಯಿತು" ಎಂದು ಹೇಳಿ ನಡೆದೇ ಬಿಟ್ಟರು.

ಇಲ್ಲ, ಅವರಾಗಿ ಹೋಗಲಿಲ್ಲ. ಕಾಲದೇವ ಹೊರಡಿಸಿಬಿಟ್ಟ. ಕಾಲ ಮೀರಿದ ಮೇಲೂ ಆಫೀಸಿನಲ್ಲಿ ಕುಳಿತು ಕೆಲಸ ಮಾಡುವವನನ್ನು ಬಾಗಿಲು ಹಾಕುವವನು ಹೊರಗೆ ಕಳಿಸುವ ಹಾಗೆ ಕಾಲದೇವನು ನಮ್ಮ ನೆಹರೂರನ್ನು ಹೊರಡಿಸಿಯೇ ಬಿಟ್ಟನು.

ನಮ್ಮ ನೆಹರೂ ವಿಶ್ರಾಂತಿ ಪಡೆಯಲಿಲ್ಲ. ನಮ್ಮ ಜವಾಹರಲಾಲಾ ಪದವೀ ವಿಮುಕ್ತರಾಗಿ ವಿಶ್ರಾಂತಿಯಿಂದ, ಉಳಿದ ಆಯುರ್ದಾಯವನ್ನು ನಮ್ಮೊಂದಿಗಿದ್ದು ಕಳೆಯಲಿಲ್ಲ. ನಮ್ಮ ಚಾಚಾ ನೆಹರೂ, ನಮ್ಮ ಮಾಮಾ ನೆಹರೂ ತನ್ನ ಮುದಿ ಹಾಸ್ಯ, ವಿನೋದಗಳನ್ನು ನಮಗೆ ತೋರಿಸಲೇ ಇಲ್ಲ. ಅವರನ್ನು ಅಂತಹ ವಿಶ್ರಾಂತಿಗೆ ಕಾಲದೇವನು ತನ್ನ ಸ್ವಂತ ನಾಡಿಗೇ ಕರೆದೊಯ್ದು ಬಿಟ್ಟ. ಆಕಸ್ಮಿಕವಾಗಿಯೇ ಕರೆದೊಯ್ದು ಬಿಟ್ಟ. ಸಾವಿರಾರು ತಲೆ ಕೂದಲುಗಳಲ್ಲಿ ಕೆಲವಾರು ಬಿದ್ದು ಹೋದರೆ ಏನೂ ಆಗುವುದಿಲ್ಲ. ಲಕ್ಷೋಪಲಕ್ಷ ನಕ್ಷತ್ರಗಳಲ್ಲಿ ಹತ್ತೆಂಟು ಉದುರಿ ಹೋದರೆ ಏನೂ ಗೊತ್ತಾಗುವುದಿಲ್ಲ, ಹಾಗೆಯೇ ಮಾನವ ಸಮುದಾಯದಲ್ಲಿ ಎಷ್ಟು ಮಂದಿ ಸಾಯುವುದಿಲ್ಲ? ನೆಹರೂ ಕೂಡ ಅಂತಹ ಒಬ್ಬ ಮಾನವ. ಗಾಂಧಿಯೂ ಹಾಗೆಯೇ.

ಆದರೆ ಅವರ ನಿಧನಗಳು, ನಿಧನಗಳ ಪರಿಣಾಮ ಏನೋ ಒಂದು ದೊಡ್ಡ ಶೂನ್ಯತೆಯನ್ನುಂಟು ಮಾಡಿದುವಲ್ಲ?

ಅವರಿಬ್ಬರೂ ಎರಡು ಕಣ್ಣುಗಳಂತಿದ್ದರು; ಕಿವಿಗಳಂತಿದ್ದರು; ಕೈಗಳಂತಿದ್ದರು; ಕಾಲುಗಳಂತಿದ್ದರು. ಗಾಂಧಿ ಹೋದ ಮೇಲೆ ಕಣ್ಣು ಕಿವಿ ಕೈಕಾಲುಗಳಲ್ಲಿ ಯಾವುದೋ ಒಂದೊಂದಾದರೂ ಇದ್ದಂತೆ ನೆಹರೂ ಬೆಳಗಿದರು. ಗಾಂಧಿ ಹೋದ ಶೋಕವನ್ನು ಮರೆಸಿಕೊಂಡೇ ಬಂದರು.

ಈಗ ಎರಡೂ ಹೋದಂತಾಯಿತು.

ಇನ್ನು ನಮಗಾರು ದಿಕ್ಕು?

ನಮಗೆ ನಾವೇ ದಿಕ್ಕು. "ಉದ್ಧರೇದಾತ್ಮನಾತ್ಮಾನಂ" ಎಂಬ ಗೀತಾ ವಾಕ್ಯದಂತೆ ನಮ್ಮನ್ನು ನಾವೇ ಉದ್ಧರಿಸಿಕೊಳ್ಳಬೇಕು.

○ ○ ○

ನೆಹರೂ ವ್ಯಕ್ತಿತ್ವವೆಂಬುದು ಹಿಮಾಲಯ ಶಿಖರದಂತಿತ್ತು. ಅದಕ್ಕೆ ಸಮಾನವಾದುದು ಇನ್ನಾವುದಿತ್ತು? ಅಂತೆಯೇ ಕೆಲವರ್ಷಗಳಿಂದಲೇ ಪ್ರಾರಂಭವಾಗಿತ್ತು "ನೆಹರೂ ಅನಂತರ ಯಾರು?" ಎಂಬ ಪ್ರಶ್ನೆ. ಅಂತಹರು ಯಾರೂ ಇಲ್ಲ; ಇದು ಸ್ವತಃ ನೆಹರೂಗೇ ಗೊತ್ತಿತ್ತು.

ಆದರೆ ಇದು ಪ್ರಜಾರಾಜ್ಯ ತಾನೆ? ಪ್ರಜಾರಾಜ್ಯದಲ್ಲೇಕೆ ಅಂತಹ ಪ್ರಶ್ನೆ?

ಸ್ವರಾಜ್ಯವನ್ನು ಸಂಪಾದಿಸಿ ಕೊಟ್ಟ ಮಹಾತ್ಮಾ ಗಾಂಧಿ ನೆಹರೂರನ್ನು ಕೊಟ್ಟು ಹೋದರು. ನೆಹರೂ ಕೂಡ ನಮಗೆ ತನ್ನ ಆದರ್ಶತೆಯನ್ನೆ ಕೊಟ್ಟು ಹೋಗಿದ್ದಾರೆ. ಸ್ವಾತಂತ್ರ್ಯ ಪ್ರಾಪ್ತಿಯಾಗಿ ಹದಿನೇಳು ವರ್ಷ ತನ್ನ ಮೇಲಾಳ್ತನದಲ್ಲಿ ಏನೇನು ಮಾಡಿದರೋ, ಹೇಗೆ ಹೇಗೆ ನಡೆಸಿಕೊಂಡು ಬಂದರೋ ಅವೆಲ್ಲಾ ಅವರ ಹಿಂದೆ ಇಷ್ಟೇ ಇರುತ್ತವೆ. ಅವುಗಳ ಒಳಿತು ಕೆಡುಕುಗಳನ್ನು ನೋಡಿಕೊಂಡು ಪ್ರಜೆಗಳೇ ತಕ್ಕ ನಾಯಕನನ್ನು ಆರಿಸಿಕೊಳ್ಳಬೇಕು. ಅದೇ ನ್ಯಾಯ. ಎಲ್ಲರೂ ನಿಜವಾದ ಪ್ರಜಾರಾಜ್ಯದಲ್ಲಿ ನಂಬುಗೆಯಿಡಬೇಕು, ಅಲ್ಲದೆ ತನ್ನ ಅನಂತರ "ಇವನು" ಎಂದು ತಾನೇ ಸ್ಪಷ್ಟವಾಗಿ ಹೇಳಿಬಿಟ್ಟರೆ ಅದು ರಾಜ ಪರಂಪರೆಯ, ವಾರೀಸುದಾರಿಕೆಯ ಮಾತಾದೀತಲ್ಲವೆ?

ಅಂತೆಯೇ ಪ್ರಜಾರಾಜ್ಯದಲ್ಲಿ ನಂಬಿಕೆಯುಳ್ಳ ನೆಹರೂ ಯಾರನ್ನೂ ನಿರ್ದೇಶಿಸಿಲ್ಲ; ತನ್ನ ಆದರ್ಶತೆಯನ್ನೇ ಪ್ರಜೆಗಳೆಲ್ಲರಲ್ಲಾ ಹಂಚಿಕೊಟ್ಟು ಹೋಗಿಬಿಟ್ಟಿದ್ದಾರೆ.

ತಿರುಗಿ ತಿರುಗಿ ಕೇಳಿದವರಿಗೆ "ಏಕೆ ನನ್ನ ವಿಷಯದಲ್ಲಿ ಅಪನಂಬಿಕೆ? ನಾನಿನ್ನು ಬಹುಕಾಲ ಜೀವಿಸಿರಬಲ್ಲೆ" ಎಂದುಬಿಟ್ಟರು.

ತನ್ನ ಆ ಬಗೆಯ ನಂಬುಗೆಗೆ ತಕ್ಕಂತೆಯೇ ತನ್ನ ಅನಾರೋಗ್ಯದ ವಿಷಯವನ್ನು ಕೂಡಾ ಅದಷ್ಟು ತೋರಿಸಿಕೊಳ್ಳದೆಯೇ ನಡೆದುಕೊಂಡು ಬಂದರು. ಭುವನೇಶ್ವರದ ಕಾಂಗ್ರೆಸ್ ಮಹಾ ಸಭೆಯಲ್ಲಿ ಪ್ರಾರಂಭವಾಗಿತ್ತು ಅವರ ಅನಾರೋಗ್ಯ. ಅಂದಿನಿಂದ ಅವರು ನಡೆದುಕೊಂಡು ಬಂದ ಬಗೆ ಹಾಗೆಯೇ ಕಾಣುವುದಿಲ್ಲವೆ? ಅಂದಿನಿಂದ ಅವರನ್ನು ಬಲವಂತವಾಗಿಯಾದರೂ ಪೂರ್ಣ ವಿಶ್ರಾಂತಿಗೆ ಒಳಪಡಿಸ ಬೇಕಾಗಿತ್ತೆಂದು ಅವರು ತೀರಿಹೋದ ಮೇಲೆ ನಮಗೆ ಕಾಣುತ್ತಿದೆ. ಇನ್ನು ಕಂಡು ಏನು ಪ್ರಯೋಜನ?

○ ○ ○

ತನ್ನ ಜೀವನದುದ್ದಕ್ಕೂ ವಿಶೇಷ ಕಾಯಿಲೆಗೇನೂ ಒಳಗಾಗದಿದ್ದ ನೆಹರೂ, ಸದಾ ಕಾರ್ಯಾಸಕ್ತರಾಗಿದ್ದ ಮಹಾ ಪ್ರಧಾನಿ, ಉತ್ಸಾಹದಿಂದ ಮಕ್ಕಳೊಂದಿಗೆ, ಸಾಕು ಪ್ರಾಣಿಗಳೊಂದಿಗೆ ಆಟವಾಡುತ್ತಿದ್ದ ಚಾಚಾ ಮಾಮಾ, ಎಪ್ಪತ್ತನಾಲ್ಕು ವಯಸ್ಸೆಂದು ಹೇಳಿದರಷ್ಟೇ ಆಶ್ಚರ್ಯವಾಗುವಂತಿರುವ ಯೌವನದ ಕಾಂತಿಯಿಂದ ಹೊಳೆಯುವ ಅರಳು ಮೊಗದ ನಮ್ಮ ಜವಾಹರಲಾಲ ನೆಹರೂ ರೋಗ ಪೀಡಿತರಾದುದೂ, ಸ್ಮೃತಿ ತಪ್ಪಿದುದೂ ಚಿರನಿದ್ರೆ ಮಾಡಿದುದೂ ಎಷ್ಟು ಬೇಗ! ಎಷ್ಟು ಬೇಗ!

ನಾವೆಲ್ಲಾ ಸಾಮಾನ್ಯ ಪ್ರಜೆಗಳು. ಎಲ್ಲರೂ ನೆಹರೂರನ್ನು ನೇರಾಗಿ ನೋಡಿದವರಲ್ಲ, ಮಾತಾಡಿದವರಲ್ಲ. ಸೂರ್ಯನು ಆಕಾಶದಲ್ಲಿದ್ದಾನೆ ಅವನ ಬೆಳಕು ಮನೆ ಮನೆಯೊಳಗೆಲ್ಲಾ ಹರಡಿದೆ. ಆ ಬೆಳಕಿನಲ್ಲಿ ನಮ್ಮ ಕೆಲಸ ನಾವು ಮಾಡಿಕೊಂಡಿರುತ್ತೇವೆ ಸೂರ್ಯನನ್ನು ನೇರಾಗಿ ನೋಡಿಯೇ ಅವನನ್ನೆಲ್ಲ ತಿಳಿದುಕೊಳ್ಳಬೇಕಾಗಿಲ್ಲವಷ್ಟೆ?

* *

ಈಗೇನು ಮಧ್ಯಾಹ್ನ ತಿರುಗಿದೆಯಷ್ಟೇ. ಹೊತ್ತು ಮುಳುಗಲು ಎಷ್ಟೋ ಹೊತ್ತಿದೆ. ಹೀಗೇ ನಾವೆಲ್ಲ ನಿಶ್ಚಿಂತರಾಗಿದ್ದಾಗ, ಆಕಾಶದ ಅಷ್ಟೆತ್ತರದಿಂದಲೇ ಸೂರ್ಯನು ಅಸ್ತಾದ್ರಿಯ ಮಡುವಿನೊಳಗೆ ಫಕ್ಕನೆ ಧುಮುಕಿದರೆ ಹೇಗಾದೀತು? ಸಂಜೆಯಾಗಲಿಲ್ಲ, ಸೂರ್ಯನ ವೃದ್ಧ ಕಿರಣಗಳು ಹರಡಿಲ್ಲ; ರಾತ್ರಿಗೆ ಬೇಕಾದ ದೀಪಜ್ಯೋತಿಗಳ ಏರ್ಪಾಡು ಮಾಡಿಕೊಳ್ಳಲಿಲ್ಲ, ಅಷ್ಟರಲ್ಲೇ ಸೂರ್ಯನು ಮುಳುಗಿ ಬಿಟ್ಟ. ನೆಹರೂ ಸೂರ್ಯನ ಅಸ್ತಮಾನವಾಗಿ ಹೋಯಿತು ಆಕಸ್ಮಾತ್ತಾಗಿ. ಈ ವರ್ಷದ ಸ್ವಾತಂತ್ರ್ಯೋತ್ಸವವು ದುಃಖಾಶ್ರುಗಳಿಂದ ನೆನೆದು ಹೋಗುವಂತಾಯಿತು.

ಇಂತಹ ಅದ್ಭುತಗತಿಗೆ ಕಾರಣ ಪುರುಷನಾರು? ಕಾಲದೇವನಲ್ಲದೆ ಮತ್ತಾರು? ಅಂತೆಯೇ ಅವನಿಗೆ ಪ್ರತ್ಯೇಕ ನಮಸ್ಕಾರವಿರಲಿ!

ಏಕೆಂದರೆ ಕಾಲದೇವನು ಎಲ್ಲಕ್ಕೂ ಮೀರಿದವನು, ದೊಡ್ಡವನು. ಒಂದು ನೋಡಿದರೆ ನೆಹರೂ ಹೆಚ್ಚು ನರಳಿ ನೊಂದುಕೊಳ್ಳದೆ ಬೇಗನೇ ತೀರಿಕೊಂಡುದು ಒಳ್ಳೆಯದೇ. ಆ ಕರ್ಮ ಪುರುಷ ಇನ್ನೂ ಬೇಗ ತೀರಿಕೊಳ್ಳಬೇಕಿತ್ತು, ಈಗಲ್ಲ—ನೂರು ವರ್ಷ ಬಾಳಿ ನಮ್ಮೊಂದಿಗಿದ್ದು, ಒಂದು ದಿನ ಏನೂ ನೋವನ್ನನುಭವಿಸದೆ, ಕಣ್ಣು ಮುಚ್ಚಿ ಕೊನೆಯುಸಿರನ್ನು ಬಿಡಬೇಕಿತ್ತು. ಇಷ್ಟು ಚುರುಕಾಗಿರುವ ವಯಸ್ಸಿನಲ್ಲಿ ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಏಕೆ ಅವರು ನೋವನ್ನು ಅನುಭವಿಸಬೇಕಿತ್ತು? ಆದರೆ ಕಾಲದೇವ ಕೊಂಚ ದಯಾಶಾಲಿಯೂ ಹೌದು. ನೋವು ಗೊತ್ತಾಗದಂತೆ ಬೇಗನೇ ಅವರ ಸ್ಮೃತಿತಪ್ಪಿಸಿ ಬಿಟ್ಟಿದ್ದಾನೆ. ಅದಕ್ಕಾಗಿಯೇ ಕಾಲದೇವನಿಗೆ ನಮಸ್ಕರಿಸಬೇಕು.

ನಿಜಕ್ಕೂ ಕಾಲದೇವನು ಕಠಿನಾತ್ಮನಲ್ಲ; ದಯಾಶಾಲಿ. ಮಹಾತ್ಮರನ್ನು, ಮಹಾಪುರುಷರನ್ನು ಹೆಚ್ಚು ನೋಯಿಸದೆಯೇ ಕೊಂಡೊಯ್ಯುತ್ತಾನೆ. ಮಹಾತ್ಮಾ ಗಾಂಧಿಯನ್ನು ಫಕ್ಕನೆ ನಿಂತಲ್ಲಿಂದಲೇ ಎಳೆದೊಯ್ಯಲಿಲ್ಲವೆ? ಅಂತೆಯೇ ಅವನಿಗೆ ನಮಸ್ಕಾರ.

○ ○ ○

ಪ್ರತಿಯೊಬ್ಬರೂ ಜವಾಹರಲಾಲರನ್ನು ಕಣ್ಣಾರೆ ಕಂಡವರಲ್ಲ; ಎಲ್ಲರಿಗೂ ಅವ

(ಎಂಟನೇ ಪುಟ ನೋಡಿರಿ)

ನಲವತ್ತೇಳರತ್ತ ಸಿಂಹಾವಲೋಕನ

೧೯೪೭ರಲ್ಲಿ ನಾವು ಸ್ವತಂತ್ರರಾದೆವು. ನೆಹರೂರವರ ನಾಯಕತ್ವ ನಮಗೆ ದೊರೆಯಿತು. ಈ ಹದಿನೇಳು ವರ್ಷಗಳಲ್ಲಿ ಭಾರತವು ಏನನ್ನು ಸಾಧಿಸಿದೆ? ಅಂದಿದ್ದಂತೆಯೇ ಭಾರತ ಉಳಿದಿಲ್ಲ, ನಿಜ. ಆದರೆ, ಅಂದಿನ ಕಂಬನಿಗಳು ಇಂದೂ ಉಳಿದಿವೆ. ನಿರಾಶ್ರಿತರ ಪ್ರವಾಹ, ಸ್ವಾತಂತ್ರ್ಯಕ್ಕೆ ಗಂಡಾಂತರ, ದೇಶ ವಿಭಜನೆಯ ಕೂಗು, ಭಾಷೆ-ಜಾತೀಯತೆಯ ಗೊಂದಲ, ರಾಷ್ಟ್ರೀಯ ಪ್ರವೃತ್ತಿ—ನೋವಲಾದವುಗಳ ಛಾಯೆಯನ್ನು ಮರೆತ ನೆಹರೂ ಕಂಡಿದ್ದರು. ನೆಹರೂರವರ ರಾಷ್ಟ್ರ ಚಿರಂಜೀವಿಯೆಂಬ ತತ್ವವನ್ನೊಪ್ಪಿದ ನಾವು ಅವರು ಕೊನೆಯ ಕಾಲದಲ್ಲಿ ಕಂಡ ಕಂಬನಿಗಳಿಗೆ ಸೂರ್ಯ ಪ್ರಕಾಶವನ್ನು ಚೆಲ್ಲುವ ದೃಢ ನಿರ್ಧಾರ ಮಾಡಬೇಕು; ಅದನ್ನು ಕೃತಕಾರ್ಯಗೊಳಿಸಬೇಕು.

ಬರೆಪವರು: ಶ್ರೀ ಶಿವಶಂಕರ.

ಪ್ರಜಾಪ್ರಭುತ್ವ ವಿಶೇಷಾಂಕಕ್ಕೆ ಕೆನ್ನೆಡಿಯವರ ಕೊಲೆಯಿಂದುಟಾಗಿದ್ದ ವ್ಯಥೆಯ ಕಣ್ಣೀರಿನಿಂದ ಲೇಖನ ಬರೆದು ಕಳುಹಿಸಿದಾಗ ಸ್ವಾತಂತ್ರ್ಯ ವಿಶೇಷಾಂಕಕ್ಕು ಅದೇ ರೀತಿ ದುಃಖದ ಕಣ್ಣೀರಿನಿಂದ ಲೇಖನ ಬರೆಯಬೇಕಾಗಬಹುದೆಂದು ಅಂದು ಭಾವಿಸಿರಲಿಲ್ಲ. ಆದರೆ ವಿಧಿಯ ಪ್ರಗತಿಯನ್ನು ಬಲ್ಲವರಾರು? ಆಸ್ಮಾನದ ಜ್ಯೋತಿ ಜವಾಹರಲಾಲ ನೆಹ್ರೂಜೀಯವರು ಸಾವಿಗೂ ಸವಾಲೆತ್ತಿದ್ದರು. ತನ್ನ ಸಾವಿನ ಕೇವಲ ಕೆಲವೇ ದಿನಗಳ ಹಿಂದೆ ಅವರು ಪತ್ರಿಕಾ ಪ್ರತಿನಿಧಿಗಳ ನಡುವೆ ಮಾತಾಡುತ್ತಿದ್ದಾಗ, ಕಾಶ್ಮೀರದ ಕುರಿತು ಮಾತಾಡುತ್ತ ತನ್ನ ಜೀವಮಾನವು ಅಷ್ಟು ಶೀಘ್ರ ಮುಗಿಯುವಂತಹದ್ದಲ್ಲವೆಂದು ಸ್ಪಷ್ಟ ಹೇಳಿದ್ದರು. ಯಮಲೋಕದಿಂದಲೂ ವಾದಿಗಾರರು ಅಂದು ಬಂದಿದ್ದರೋ ಏನೋ! ಬಂದಿದ್ದವರು ಹಾಗೆಯೇ ಯಮನಿಗೆ ಸುದ್ದಿಯನ್ನು ಮುಟ್ಟಿಸಿದರೋ. ಏನೋ! ತನಗೆ ಸವಾಲೀಯುವ ಹುಲು ಮಾನವನನ್ನು ಹದ್ದಿಗೆ ತರುವೆನೆಂದು ಯಮರಾಜ ತನ್ನ ಪಾಶವನ್ನು ಬೀಸಾಡಿದನೆಂದು ಕಾಣುತ್ತದೆ. ಜಗತ್ತಿಗೆಲ್ಲ ಜವಾಹರಲಾಲಜೀಯವರು ಬಿಟ್ಟೇ ಬಿಟ್ಟರು. ಯಮಲೋಕದ ವಿಷಯವಾದರೂ, ಇಷ್ಟು ಇಹಲೋಕದಲ್ಲೂ ಜವಾಹರಲಾಲರು ಆ ರೀತಿ ಎದೆ ತಟ್ಟಿ ಹೇಳಿದಾಗ ಕೆಲವರಿದೆಯಲ್ಲಿ ಚೇಳು ಕುಟುಕಿದಂತಾಗಿತ್ತು. ಅದಕ್ಕೆ ಕಾರಣ ಅವರಿಗೆ ಯಮರಾಜನೊಡನೆ ಸಂಪರ್ಕವಲ್ಲ, ಜವಾಹರಲಾಲಜೀಯವರ ರಾಜಕೀಯ ಮನೋನೆಲೆ. ಆಂಧ್ರದವರು ಪ್ರತ್ಯೇಕ ಪ್ರಾಂತ್ಯ ಕೇಳಿದಾಗ, ಭಾಷಾವಾರು ಪ್ರಾಂತ್ಯ ರಚನೆ ಸಾಧ್ಯವೇ ಇಲ್ಲವೆಂದಿದ್ದ ಜವಾಹರಲಾಲಜೀ ಕೊನೆಗೊಪ್ಪಿದರು. ಮಹಾರಾಷ್ಟ್ರ-ಗುಜರಾತ ವಿಂಗಡಿಸುವದಿಲ್ಲವೆಂದಿದ್ದ ನೆಹ್ರೂಜೀಯವರು ಅದನ್ನು ಬೇರ್ಪಡಿಸಿದರು. ಪ್ರತ್ಯೇಕ ನಾಗಾಲೇಂಡು ಸಿಗದೆಂದಿದ್ದ ಜವಾಹರಲಾಲಜೀ ಬಿಟ್ಟು ಕೊಟ್ಟರು. ಅಷ್ಟೇ ಏಕೆ? ಸ್ವಾತಂತ್ರ್ಯ ಪೂರ್ವದಲ್ಲಿ ರಾಜಾಜಿ ಮತ್ತು ಅವರ ಶಿಷ್ಯರು ದೇಶವಿಭಜನೆ ಆಗಲೇ ಬೇಕೆಂದು ಹಟಹಿಡಿದಿದ್ದಾಗ ದೇಶಭಕ್ತ ಜವಾಹರಲಾಲಜೀ ನುಡಿದದ್ದೇನು? ಆದರೆ ಮತ್ತೆ ನಡೆದದ್ದೇನು? ಆದರೆ, ಜವಾಹರಲಾಲ ನೆಹ್ರೂಜೀಯವರು ಅದೇನನ್ನಾದರೂ ಕಡ್ಡಿ ಮುರಿದಂತೆ ಹೇಳಿ ಬಿಟ್ಟರೆಂದರೆ ಫಲ ಅವರ ವಿರೋಧವೆಂಬ ಮಾತು ರಾಜಕಾರಣಿಗಳಿಗಂತೂ ಚೆನ್ನಾಗಿ ಗೊತ್ತಿತ್ತು. ಅಂತೆಯೇ ಅವರು ಎದೆತಟ್ಟಿಕೊಂಡಾಗ ದೇಶಪ್ರೇಮಿಗಳ ಎದೆ ಗುದ್ದಿದಂತಾದದ್ದು. ಜವಾಹರಲಾಲರ ಜಡ ಶರೀರ ಅಗ್ನಿ ನಾರಾಯಣನ ಪಾಲಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಪಂಡಿತ ಮದನ ಮೋಹನ ಮಾಲವೀಯರವರು ಎರಡು ಬಾರಿ ಪಂಡಿತ ಜವಾಹರಲಾಲ ನೆಹ್ರೂಜೀಯವರಿಗೆ ಮೌನ ಮುನಿಯುವರಿಂದ ಕಾಯ ಕಲ್ಪವನ್ನು ಕೊಡಿಸಿದ್ದರಂತೆ. ಸ್ವತಃ ತಾನೇ ಜವಾಹರಲಾಲರು ಕಾಯ ಕಲ್ಪವನ್ನು ಸೇವಿಸುತ್ತಿದ್ದರೇ, ಇಲ್ಲವೇ ಎನ್ನುವದನ್ನು ನೋಡಿಕೊಳ್ಳುತ್ತಿದ್ದರು. ಆದರೆ ಸ್ವಾತಂತ್ರ್ಯ ಪೂರ್ವಕಾಲ ಈಗ ಆಗಲ್ಲ. ಸ್ವಾತಂತ್ರ್ಯ ಸಿಕ್ಕಿದೆ. ಮಹಾತ್ಮಾ ಮದನ ಮೋಹನ ಮಾಲವೀಯಜೀಯವರು ಆಗೋಸ್ಟ ಹದಿನೈದನ್ನು ಕಾಣಲೂ ಇಲ್ಲ. ಜವಾಹರಲಾಲಜೀಯವರಿಗೆ ಕೆ. ಡಿ. ಮಾಲವೀಯ ಗೆಳೆಯರಾದರು. ಕೆ. ಡಿ. ಮಾಲವೀಯರು ಕೃಷ್ಣನ ಸನ್—ಪ್ರತಾಪ ಸಿಂಘ ಕೈರಾನ್—ಬಿಜು ಪಟ್ನಾಯಕ—ಟಾಕೋ—ಬುಲ್ಲಿಷ್ ಮತ್ತು ಕೂಟದ ಸಹಾಯದಿಂದ ನೆಹ್ರೂಜೀಯವರಿಗೆ ರಾಜಕೀಯ ಹಾಲಾಹಲವನ್ನೇ ಕೊಟ್ಟರು.

ಆದರೆ ವ್ಯತ್ಯಾಸವಿಷ್ಟೇ. ಸ್ವಾತಂತ್ರ್ಯ ಪೂರ್ವದಲ್ಲಿ ಜನತೆಯೆಲ್ಲಾ [ಹೆಚ್ಚಿನವರು] ಒಂದಾಗಿದ್ದರು. ಜವಾಹರಲಾಲಜೀಯವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಆಂಗ್ಲೇಯರನ್ನಟ್ಟಲು ಒಂದಾಗಿದ್ದರು. ಸ್ವಾತಂತ್ರ್ಯ ಸಿಕ್ಕಿದೊಡನೆ ಜವಾಹರಲಾಲಜೀಯವರೊಂದಿಗೆ ಅವರೇನೋ ಇದ್ದರು. ಆದರೆ 'ಜೈ' ಹಾಕುತ್ತ, ನೆಹ್ರೂಜೀಯವರ ಬೆನ್ನ ಹಿಂದುಗಡೆ ತಂಗಿಕೊಂಡು 'ಜೈ' ಹಾಕುತ್ತ ತಮ್ಮ ಬೇಳೆ ಬೇಯಿಸಿಕೊಳ್ಳಲು ಅವರು ಪ್ರಯತ್ನಿಸಲಾರಂಭಿಸಿದರು. ಅಂತಹ ಸನ್ನಿವೇಶದಲ್ಲಿ ನೆಹ್ರೂಜೀ ನಮ್ಮನ್ನು ಬಿಟ್ಟು ಅಗಲಿದರು. ನಮ್ಮನ್ನು ಬಿಟ್ಟು ಅವರು ಅಗಲಿದರೆನ್ನುವದಕ್ಕಿಂತಲೂ ರಾಜಕೀಯ ಹಾಲಾಹಲವನ್ನಿತ್ತ, ರಾಜಕೀಯ ಉದ್ಯಮಿಗಳು-ಅಧಿಕಾರ ಪ್ರಿಯರು- ಅವರನ್ನು ಕಾಲನ ಕಾಲಡಿಗೆ ತಳ್ಳಿಬಿಟ್ಟರೆನ್ನಬಹುದು. ಈಗ ಏನೆಂದರೂ ಜವಾಹರಲಾಲಜೀ ಇನ್ನು ಹಿಂತಿರುಗುವಂತಿಲ್ಲ.

ಆದರ ಮರ್ಮವನ್ನು ಜವಾಹರಲಾಲಜೀ ಅರಿತಿದ್ದರು. ಒಂದೊಂದು ದಿನ ತನಗೂ ಬಂದೇ ಬರುತ್ತದೆ. ಅನಂತರ ತಾನಿಲ್ಲ, ಗದ್ದುಗೆಯಿಲ್ಲ, ಜೈ ಹಾಕುವ ಜನತೆಯಿಲ್ಲ...... ಆದರೆ ಅವರತ್ತ ಅಷ್ಟು ಗಮನ ಕೊಟ್ಟರಲಿಲ್ಲ. ಬುದ್ಧ ಮಹಾತ್ಮನು ಹೇಳಿದಂತೆ ನೆಹರೂಜೀಯವರೂ ನಾಳೆಗೆ ಅಷ್ಟು ಮಹತ್ವ ಕೊಟ್ಟರಲಿಲ್ಲ. ಇಂದು ಮುಗಿದ ಮೇಲೆ ತಾನೇ ನಾಳೆ? ಅದರಿಂದಲೇ ಅವರು ಅಕ್ಕ—ಪುನರ್ಜನ್ಮಗಳಿಗೆ ಲಕ್ಷ್ಯವಿತ್ತಿರಲಿಲ್ಲ. ಆದರೆ ಸಾವಿಲ್ಲದ ಜೀವ ಚಿರಂಜೀವಿ ತಾನೆಂದೂ ನೆಹ್ರೂಜೀ ಎಂದೂ ನುಡಿದದ್ದಿಲ್ಲ. ಮಾನವ ಮುದಿಯೇ ತೀರುತ್ತಾನೆ. ಆದರೆ ರಾಷ್ಟ್ರ ಹಾಗಲ್ಲ. ಅದು ಚಿರಂಜೀವಿ. ಇವು ಜವಾಹರಲಾಲಜೀಯವರ ಮುತ್ತಿನಂತಹ ಮಾತುಗಳು. ರಾಷ್ಟ್ರ ಚಿರಂಜೀವಿ ಎಂದೊಡನೆ ಹಲವಾರ ಪ್ರಶ್ನೆಗಳೇಳುತ್ತವೆ.

ಯುಗ ನಿರ್ಮಾಪಕರಿಗೆ ತಟ್ಟನೆ ಕೋಪ ಬಂದೀತು. ಓ! ಮೃತ್ಯು ಲೋಕದ ಮಾನವನೇ, ನಿನಗೇನುಗೊತ್ತು ಅಮರತೆಯ ಕುರಿತು? ಆದರೂ ಆ ಒಂದು ಕೊನೆಯ ದಿನ ಬರುವ ವರೆಗೆ—ಜಲ ಪ್ರಳಯವೋ, ಭೂಕಂಪವೋ, ಮುಗಿಲ ಅಗ್ನಿ ಜ್ವಾಲೆಯೋ ಅಂದಿನ ವರೆಗೂ ರಾಷ್ಟ್ರ ಚಿರಂಜೀವಿ. ಅದರಲ್ಲಿ ಅದಿನಿತೂ ಸಂದೇಹಕ್ಕೆಡೆಯಿಲ್ಲ

ಇನ್ನೊಂದು ಪಂಗಡದವರು ಅದ್ವಿತೀಯ ದೇಶಪ್ರೇಮಿಗಳು. ಅವರು ಭಗವಂತನನ್ನಾದರೂ ನಂಬುತ್ತಾರೋ ಇಲ್ಲವೋ, ಭಾರತಮಾತೆಯನ್ನಂತೂ ನಂಬುತ್ತಾರೆ, ಪೂಜಿಸುತ್ತಾರೆ. ಅವರಲ್ಲಿ ನೆಹ್ರೂಜೀಯವರ 'ರಾಷ್ಟ್ರ ಚಿರಂಜೀವಿ' ಮಾತು ಕೇಳಿದೊಡನೆ ಕೋಪ-ತಾಪ-ದುಃಖ-ವ್ಯಥೆ...ಎಲ್ಲಾ ಒಂದೇ ಸಲ ಬುಗ್ಗೆಯಂತೆ ಚಿಮ್ಮಿ ಬಿಟ್ಟಿತು. ಮಾನ್ಯ ನೆಹರೂಜೀ ರಾಷ್ಟ್ರವೆಂದರೇನೆಂದು ಅವರು ತಾಳ್ಮೆಯಿಂದ ಕೇಳವಿರಲಿಕ್ಕಿಲ್ಲ. ಅದನ್ನು ವಿಭಜಿಸಲು ಸಾಧ್ಯವೆ? ಅದರ ಯಾವ ಪ್ರದೇಶವನ್ನಾದರೂ ಬೇರೊಬ್ಬರಿಗೆ ಕೊಡಲು ಸಾಧ್ಯವೇ? ಆಕ್ರಮಣವನ್ನು ಸಹಿಸಿಕೊಂಡಿರಲು ಸಾಧ್ಯವೇ? ಸ್ಪಷ್ಟವಾಗಿ ರಾಷ್ಟ್ರ ಚಿರಂಜೀವಿ ಎಂದಿದ್ದ ನೆಹ್ರೂಜೀ ಇದಕ್ಕೇನುತ್ತರ ಕೊಡುತ್ತಿದ್ದರೋ? ಇಂತಹ ದೇಶಭಕ್ತರನ್ನು ಅವರು ದಾರಿ ತಪ್ಪಿದ ಭಕ್ತರೆನ್ನುತ್ತಿದ್ದರು. ಅವರ ಭಾವನೆ ಅಥವಾ ಅಭಿಪ್ರಾಯಗಳಿಗೆ ಹುಚ್ಚುತನದ ತಲೆ ಹರಟೆ ಎನ್ನುತ್ತಿದ್ದರು. ಆಗ ಅವರಿಗೆ ಕೋಪ ಬಂದಿರಬಹುದು. ಕೋಪದ ಆವೇಶದಲ್ಲಿ ಅವರು ಆಡಿದರೂ ತಾಳ್ಮೆ-ಸಹನೆಯುಳ್ಳದ್ದಾಗ "ನಾನೇನು ಮಾಡುವುದು? ಜೀವನದಲ್ಲಿ ಹಟಮಾರಿತನದಿಂದ ಬದುಕಲು ಸಾಧ್ಯವೇನು? ಕೆಲವು ಸಲ ಬಿಟ್ಟುಕೊಟ್ಟು ಸಹಿಸಿಕೊಳ್ಳಲು ಬೇಕಾಗುತ್ತದೆ. ಒಂದೊಂದು ಸಲ ವಿಜಯ ವೈಜಂತಿಯನ್ನು ವೈಭವದಿಂದ ಮೆರೆಸಲೂ ಬೇಕು. ಅದುವೇ ಜೀವನ. ನಿಸರ್ಗವೇ ಕಲಿಸಿ ಕೊಡುತ್ತಿದೆ—ಏರು, ಇಳಿತವೆಂದು ......" ಎಂದು ಅಂದರೂ ಅಂದರು.

ಇಲ್ಲಿ ಇನ್ನೊಂದು ವಿಷಯವೂ ಇದೆ. ರಾಷ್ಟ್ರ ಚಿರಂಜೀವಿ ಎನ್ನುವಾಗ ದೇಶದ ದಶದಿಶೆಗಳ ವಿಷಯ ಮಾತ್ರ ಅದಿರುವದಿಲ್ಲ. ಗ್ರೀಸಿನ, ಪರ್ಷಿಯಾದ, ಚೈನಾದ ಅಫಘಾನ ಅಂತಹ ಇನ್ನಿತರ ಭೂಪ್ರದೇಶಗಳ ಕುರಿತು ನೋಡುವಾಗ ಆ ದಶದಿಶೆಗಳು ಅಂತೆಯೇ ಇರುವದನ್ನೂ ಕಾಣಬಹುದು. [ಆಕ್ರಮಣ ಗೈದು ಇತರ ಭೂಪ್ರದೇಶಗಳನ್ನು ಸೇರಿಸಿಕೊಂಡಿರಲೂ ಬಹುದು.] ಆದರೆ ಆ ಹಿಂದಿನ ರಾಷ್ಟ್ರ ಅಲ್ಲಿ ಇದೆ ಏನು? ಅಲ್ಲಿ ಹೊಸ ಜನತೆ ಇದೆ ಎಂದರೆ ತಪ್ಪೇನಿಲ್ಲ, ಭಾರತದಲ್ಲಿ ಮಾತ್ರ ಹಾಗಲ್ಲ. ಭಾರತೀಯತೆ ಬದುಕಿ ಉಳಿದಿದೆ. ಇಲ್ಲಿ ಆ ರಾಷ್ಟ್ರೀಯತೆ ಉಳಿದುಕೊಂಡಿದೆ. ಅದನ್ನು ಸ್ವಾಮಿ ವಿವೇಕಾನಂದರು ಪ್ರಪಂಚದ ರಾಷ್ಟ್ರಗಳ ಮುಂದೆ ಘೋಷಿಸಿದ್ದರು. ನೆಹರೂಜೀಯವರಾದರೋ ಅದೇ ಅರ್ಥದಲ್ಲಿ ಹೇಳಿರಬಹುದು—ರಾಷ್ಟ್ರ ಚಿರಂಜೀವಿ ಎಂದು.

ಸ್ವಾಮಿ ವಿವೇಕಾನಂದರವರು ಭಾರತದ ರಾಷ್ಟ್ರೀಯತೆಯನ್ನು ಜಗತ್ತಿನ ಜನರಿಗೆ ತಿಳಿಯಪಡಿಸಿದ್ದರೂ, ಜವಾಹರಲಾಲಜೀಯವರ ಬಾಲ್ಯಕಾಲ ಹಾಗೂ ವಿದ್ಯಾಕಾಲ ಮುಗಿದದ್ದು ಲಂಡನ್ನಿನಲ್ಲಿರುವದರಿಂದ, ಅವರ ರಾಷ್ಟ್ರೀಯ ಹೃದಯ ಇಂಗ್ಲೇಂಡಿನ ತಯಾರಿಕೆಯಾಗಿದ್ದುದರಿಂದ ಆ ರಾಷ್ಟ್ರೀಯತೆಯ ಸ್ಪಷ್ಟ ಪರಿಚಯ ಆಗುವ ವರೆಗೆ ಅವರೂ ಕೇವಲ ಕಲ್ಲು-ಮಣ್ಣಿನ ಭೌತಿಕ ಜಗತ್ತಿನಲ್ಲೇ ಇದ್ದರು. ಅವರ ಆಂಗ್ಲೇಯ ತೆರೆಯನ್ನು ಹರಿದೊಗೆದುದು ಕುಂಭ ಮೇಳ. ಆಗ ಅವರ ಅಂತಃರಾಳದಿಂದ ಹೊರಬಂದ ಮಾತುಗಳು ಮುತ್ತಿಗಿಂತಲೂ ಶ್ರೇಷ್ಠವಾಗಿವೆ. ಅವರೇ ಒಪ್ಪಿಕೊಂಡರು ಭಾರತದ ರಾಷ್ಟ್ರೀಯತೆ ಎಲ್ಲಿದೆಂಬುದನ್ನು. ಅವರಂಗ ಜೀವನ ಜೆಯಿಯಾದಿಂದಲೂ ಜಜ್ಜಿಬಿಡಲಾ

(೨೫ನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ರಾಮಾಶ್ವಮೇಧದಲ್ಲಿ ಸುಂದರ ವರ್ಣನೆಗಳು

ಈ ಶತಮಾನದ ಆರಂಭದೊಡನೆ ತನ್ನ ಕೊನೆಯುಸಿರೆಳೆದ ನಂದಳಿಕೆ ಲಕ್ಷ್ಮೀನಾರಣಪ್ಪ ಮುದ್ದಣ ಕಾವ್ಯನಾಮದಿಂದ ನುಂತಿಲ್ಲ ಹಿಂತಿಲ್ಲವೆನ್ನುವಂತೆ ಬರೆದ ಅದ್ವಿತೀಯ ಕಾವ್ಯ ರಾಮಾಶ್ವಮೇಧ. ಇದು ವರ್ಣನೆಗಳಿಗೆ ಆಗಾರವೂ ಆಗಿದೆ. ಇದರಲ್ಲಿಯ ಕೆಲವು ಸುಂದರ ವರ್ಣನೆಗಳನ್ನು ಎಲ್ಲರಿಗೂ ತಿಳಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

ಬರೆದವರು
ಶ್ರೀ ಯು. ನಾ. ಉಡುಪ, ವಿದ್ವಾನ್, ಕೋಟೇಶ್ವರ.

ವಸ್ತುಕ ಮತ್ತು ವರ್ಣಕವೆಂಬ ಕಾವ್ಯಭೇದವನ್ನು ಪ್ರಾಯಶಃ ಸಾಹಿತಿಗಳಾರೂ ಹೇಳದಿದ್ದರೂ, ವಸ್ತುಕವು ಕಥಾವಸ್ತು ಪ್ರಧಾನವಾದುದೆಂದೂ, ವರ್ಣಕವು ವರ್ಣನಾ ಪ್ರಧಾನವಾದ ಸಾಹಿತ್ಯವೆಂದೂ ಸಾಹಿತಿಗಳ ಸಾಮಾನ್ಯವಾದೊಂದು ಅಭಿಪ್ರಾಯವಿದೆ. ಇದನ್ನೇ ನಾಗವರ್ಮನು ತನ್ನ ಕಾವ್ಯಾವಲೋಕನವೆಂಬ ಲಕ್ಷಣ ಗ್ರಂಥದಲ್ಲಿ ಸೂಚಿಸಿದ್ದಾನೆ.

ಕಂ|| ನಗರಾರ್ಣವ ಸಂದಟವೀ
ನಗ ಚಂದ್ರಾರ್ಕೋದಯರ್ತು
ಸಲಿಲಕ್ರೀಡಾ ||
ದಿಗಳಾದಿಯೊಗೆ ಕರಸೋ
ಕ್ತಿಗಳಿಂ ವರ್ಣಿಸುಗೆ ವರ್ಣಕಂಗಳ
ನದರೊಳ್ ||

ವರ್ಣಕವೆಂದರೆ ನಗರ, ಸಮುದ್ರ ಮೊದಲಾದ ಸುಂದರ ವರ್ಣನೆಗಳುಳ್ಳ ಕಾವ್ಯ. ಇದು ಗದ್ಯ ಅಥವಾ ಪದ್ಯವೂ ಆಗಬಹುದು. ಷಡಕ್ಷರಿ ಮೊದಲಾದ ಕವಿಗಳು ವರ್ಣಕವೆಂದರೆ ಹಾಡು ಅಥವಾ ಷಟ್ಪದೀ ಕಾವ್ಯವೆಂಬರ್ಥದಲ್ಲಿ ಪ್ರಯೋಗಿಸಿದ್ದಾರೆ. ಆಗ ಸೊಬಗಿನ ಸೋನೆಯ ಹಾಡು ಎನ್ನುವ ಬದಲು ಸೊಬಗಿನ ಸೋನೆಯ ವರ್ಣಕ ಎಂಬ ಹೆಸರೂ ರೂಢಿಯಲ್ಲಿತ್ತು. ಆದರೆ ವಸ್ತುಕ ಮತ್ತು ವರ್ಣಕವೆಂಬುದು ಪ್ರತಿಯೊಂದು ಮಹಾ ಕಾವ್ಯದ ಎರಡು ಮುಖ್ಯಾಂಗಗಳೆಂದು ಭಾವಿಸುವುದೇ ಸಮಂಜಸವೆಂದು ತೋರುತ್ತದೆ. ವಸ್ತುಕವೆಂದರೆ ಕಾವ್ಯದ ಕಥಾವಸ್ತು—ಇದು ಕಾವ್ಯದ ಶರೀರ, ವರ್ಣಕವೆಂದರೆ ಕಾವ್ಯದಲ್ಲಿ ಬರುವ ವರ್ಣನೆ ಅಲಂಕಾರ ಮೊದಲಾದವುಗಳು—ಇವನ್ನು ಕಾವ್ಯದ ಆತ್ಮವೆನ್ನಬಹುದು. ಮಲ್ಲಿಕಾರ್ಜುನ, ಉದಯಾದಿತ್ಯರು ವರ್ಣಕ ವಿಭಾಗದಲ್ಲಿ ವರ್ಣನೆಗಳನ್ನು ಮಾತ್ರ ಪ್ರತ್ಯೇಕಿಸಿ, ಅವು ಹದಿನೆಂಟೆಂದು ಹೇಳಿರುವರು. ಹಿಂದೆ ಮಹಾ ಕಾವ್ಯಗಳಲ್ಲಿ ಈ ಹದಿನೆಂಟು ವರ್ಣನೆಗಳ ಸಮಾವೇಶವಾಗಬೇಕಿತ್ತು. ಈ ನಿರ್ಬಂಧಕ್ಕೆ ಸಿಕ್ಕಿಯೇ ಹರಿಹರ, ಷಡಕ್ಷರಾದಿ ಮಹಾ ಕವಿಗಳೂ ಅಪ್ರಯುಕ್ತವಾದ ಎಡೆಗಳಲ್ಲೂ ಈ ವರ್ಣನೆಗಳನ್ನು ತುಂಬಿದ್ದಾರೆ. ಕೆಲವರು ಈ ವರ್ಣನೆಗಳನ್ನು ಶ್ಲೇಷೆಯಿಂದ ಪೋಷಿಸಿ ವಾಚಕರಿಗೆ ತಲೆನೋವನ್ನುಂಟು ಮಾಡಿದ್ದಾರೆ. ಈ ಶೃಂಖಲೆಯಿಂದ ಬದ್ಧನಾದ ಲಕ್ಷ್ಮೀಶನು ಮಯೂರಧ್ವಜನ ಪಟ್ಟಣಕ್ಕೆ ಬಂದ ಶ್ರೀಕೃಷ್ಣಾರ್ಜುನರಿಗೆ ಸೂಳೆಗೇರಿಯ ಪರಿಚಯ ಮಾಡಿಸಬೇಕಾಯಿತು. ಗುರುಲಿಂಗ ವಿಭೇನ್ದ್ರಾವೀತ ರಾಗನಾದ ಶಿವನಿಗೆ ಭಿಕ್ಷಾಟನ ಕಾವ್ಯದಲ್ಲಿ ಶೃಂಗಾರ ರಸದ ರುಚಿ ಹತ್ತಿಸಿದ್ದಾನೆ. ಸಾರಾಂಶ–ಹಿಂದೆ ಸಾಹಿತಿಗಳು ಅಪ್ಪ ನೆಟ್ಟ ಆಲದ ಮರಕ್ಕೆ ನೇಣು ಬಿಗಿದು ಕೊಳ್ಳಲು ಬೇಸರಪಡುತ್ತಿರಲಿಲ್ಲ ಅದೊಂದು ಕಾಲ!

ಮುದ್ದಣ್ಣನು ರಾಮಾಶ್ವಮೇಧದಲ್ಲಿ ವರ್ಣನೆಗೆ ಪ್ರಾಮುಖ್ಯತೆಯನ್ನಿತ್ತಿದ್ದರೂ, ಅವುಗಳಲ್ಲಿ ಹೊಸತನವಿದೆ. ಆತನಿಗೆ ಈ ವಿಷಯದಲ್ಲಿ ಪ್ರಾಚೀನ ಕಾವ್ಯಗಳಿಗಿಂತಲೂ ಬಂಕಿಮ ಚಂದ್ರನ ಕಾದಂಬರಿಗಳ ಮಾರ್ಗವೇ ಹಿತವಾಗಿದೆ. ಅವನು ಕೇವಲ ಸಂಪ್ರದಾಯ ಶರಣನಲ್ಲ; ಕ್ರಾಂತಿಕವಿ. ಒಂದು ಸಾವಿರ ವರ್ಷಕ್ಕಿಂತಲೂ ಹೆಚ್ಚು ಕಾಲ ವಿದ್ವನ್ಮಾನ್ಯತೆಯನ್ನು ಗಳಿಸಿದ್ದ ಪದ್ಯ ಸಾಹಿತ್ಯವನ್ನು 'ಪದ್ಯಂ ವಧ್ಯಂ'ಎಂದು ಘೋಷಿಸಬೇಕಾದರೆ ಆತನ ಹೃದಯದಲ್ಲಿ ಧಾರ್ಷ್ಟ್ಯವಾದರೂ ಅದೆಷ್ಟಿದ್ದಿರಬೇಕು ? ಅವನು ಗದ್ಯ ಸಾಹಿತ್ಯಕ್ಕೆ ನೂತನ ಜೀವದಾನ ಮಾಡಿದ ಸಾಹಿತ್ಯ ಬ್ರಹ್ಮ! ಅವನ ವಿದ್ಯಾ ಗುರುಗಳಾದ ಕೈ|ವಾ| ಬವಲಾಡಿ ವೆಂಕಟರಮಣ ಹೆಬ್ಬಾರರು ಆತನ ಶ್ರೀ ರಾಮ ಪಟ್ಟಾಭಿಷೇಕಕ್ಕೆ ಯೋಗ್ಯತಾ ಪತ್ರವನ್ನೀಯದುದೂ ಆತನು ಗದ್ಯ ಸಾಹಿತ್ಯದ ಕಡೆಗೆ ತಿರುಗುವ ಒಂದು ಕಾರಣವಿರ ಬಹುದು. ಆ ವೇಳೆಗಾಗಲೇ ಬಿ. ವೆಂಕಟಾಚಾರ್ಯರ (ಮೂಲ ಕಾದಂಬರಿಕಾರರು ಬಂಕಿಮ ಚಂದ್ರರು) ಕಾದಂಬರಿಗಳು ಜನಮನವನ್ನು ಸೆಳೆಯತೊಡಗಿದ್ದುವು. ಮುದ್ದಣ್ಣನೂ ಅವುಗಳಲ್ಲಿ ಕೆಲವನ್ನು ಕೊಂಡು ಓದಿದ್ದನು. ಅವುಗಳಲ್ಲಿ ವಿಷವೃಕ್ಷವೆಂಬ ಸಾಮಾಜಿಕ ಕಾದಂಬರಿಯು ಆತನ ಮನಸ್ಸನ್ನು ಸೆರೆಹಿಡಿದಿರ ಬೇಕು. ಬಂಕಿಮನು ಸರ್ ವಾಲ್ಟರ್ ಸ್ಕಾಟನ [ಕ್ರಿ. ಶ. ೧೭೭೧-೧೮೩೨] ಸಂದರ್ಶನಾನುಯಾಯಿ ಆಗ ಬಂಕಿಮನ ಕಾದಂಬರಿಯು ಕನ್ನಡಿಗರಿಗೆ ಮಾತ್ರವಲ್ಲ; ಸಮಸ್ತ ಭಾರತೀಯರಿಗೂ ಆಕರ್ಷಕವಾಗಿದ್ದುವು. ವಿಷವೃಕ್ಷ ಕಾದಂಬರಿಯು ಆಗ ಎಷ್ಟು ಜನಪ್ರಿಯವಾಗಿತ್ತೆಂದರೆ ಕ್ರಿ. ಶ. ೧೮೭೩ರಿಂದ ೧೮೯೩ರವರೆಗೆ-ಬಂಕಿಮನ ಜೀವಿತಕಾಲದಲ್ಲೇ ಅದರ ಎಂಟು ಮುದ್ರಣಗಳು ಕೊನೆಗೊಂಡಿದ್ದವು! ಮುದ್ದಣನು ಬಂಕಿಮನ ಪ್ರತಿಭೆ ಮತ್ತು ಕಲ್ಪನೆಯ ವೈಖರಿಗೆ ಬೆರಗಾಗಿ ತಾನು ಬರೆಯುವ ಶ್ರೀ ರಾಮಾಶ್ವಮೇಧದಲ್ಲಿ ಆ ಕಾದಂಬರಿಯ ಮಾರ್ಗವನ್ನು ಅನುಸರಿಸಬೇಕೆಂದು ನಿರ್ಧರಿಸಿದನು. ವಿಷವೃಕ್ಷದ ಸೂರ್ಯಮುಖಿಯು ಕಮಲಮಣಿಗೆ ತನ್ನ ಪತಿಪ್ರಾಣತೆಯನ್ನು ತಿಳಿಸಿ ಬರೆದ ಪತ್ರದಲ್ಲಿದ್ದ ದುಃಖರಸವನ್ನು ಕವಿಯು ಮರೆಯಲಿಲ್ಲ. ಅಂತೆಯೇ ಅವನು ಶೋಕಸಾಹಿತ್ಯದ ಅಧಿದೇವಿಯಾದ ಸೀತಾಮಾತೆಯನ್ನು ರಾಮಾಶ್ವಮೇಧದಲ್ಲಿ ಚಿತ್ರಿಸಿದನು. ವಿಷವೃಕ್ಷದ ನಗೇಂದ್ರ (ನಾಗೇಂದ್ರ)ನೇ ಬಂಕಿಮನಾದರೆ, ಶ್ರೀರಾಮಾಶ್ವಮೇಧದ ಶ್ರೀರಾಮನೇ ಮುದ್ದಣ; ಆ ಕಾರ್ಯದ ಅಶ್ವಮೇಧವೇ ಮುದ್ದಣನು ಸಾಹಿತ್ಯ ಸಾಮ್ರಾಜ್ಯದಲ್ಲಿ ಪಡೆದ ಅಸಾಮಾನ್ಯ ಯಶಸ್ಸು! ಈ ಕಾವ್ಯದಲ್ಲಿ ಮುದ್ದಣನ ವರ್ಣನೆಗಳನ್ನು ಕಂಡರೆ ಅವನು ತನ್ನ ನಿಚ್ಚದ ಪೂಜೆಯ ಕಟ್ಟಿಚ್ಚಿನ ಪ್ರಾಣಲಿಂಗದೊಡನೆ ಗೆಡೆಪಕ್ಕಿಯಂತೆ ಬಹುಕಾಲವಿರಲಿಲ್ಲವೆಂದು ತೋರುತ್ತದೆ. ಸದಾಕಾಲ ಜೊತೆಯಲ್ಲಿರುವ ದಂಪತಿಗಳ ಬಾಯಿಂದ ಬರಲಾರದ ಪ್ರೇಮ ಸಂಬೋಧನೆಗಳನ್ನು ಈ ಕಾರ್ಯದಲ್ಲಿ ನಾವು ಕಾಣಬಲ್ಲೆವು. ಶ್ರೀ ರಾಮಚಂದ್ರನಂತೆ ಮುದ್ದಣನಿಗೂ ಆಗಾಗ ಪತ್ನೀವಿಯೋಗ ವ್ಯಥೆಯನ್ನನುಭವಿಸುವ ಯೋಗವನ್ನು ಆತನ ಹಣೆಯಲ್ಲಿ ವಿಧಿಯು ಬರೆದಿರಬೇಕು.

ಶ್ರೀರಾಮಾಶ್ವಮೇಧವು ಹೊಸಕಾದಂಬರಿಯ ಮಾರ್ಗದಲ್ಲಿ, ಬರೆದ ಹಳೆಯ ಪಣ್ಯಕಥೆ. 'ಉಳಿಮೊಡಂ ಅಳಿದೊಡಂ ಬಟ್ಟೆದೋರಿಪರಸಭರಿತ ಚರಿತಂ ಇದರಲ್ಲಿ ವಿಷವೃಕ್ಷದ ನಗೇಂದ್ರನು ಝುಮ್ ಝುಮ್ ಪುರದ ಕುಂದನಂದಿನಿಯ ಕುಟೀರವನ್ನು ಸೇರಿದ ದಿನ ಬಂದ ಮಳೆಯು ಮತ್ತು ಸನ್ನಿವೇಶವು ಕವಿಯ ಮನಸ್ಸನ್ನು ಕೆರಳಿಸಿದೆ ಅದೇ ವಿಷಯವೇ ರಾಮಾಶ್ವಮೇಧ ಕಾವ್ಯದ ನಾಂದಿಯಾಯಿತು.

'ಮಾರಗೇರಿಯೊಳೇರುಂಬೆ'ವನದ ನೀರೆಯರ ಮೇಲುಮರ ಸೆರಂಗನೋಸರಿಸಿ ಸೀರೆಸಿಲ್ತು ತೋರಮೊಲೆಗಳಂ ಸೇರ್ದು ಪಿಡಿದಾಂಕಿ ಪಾರುಬೋಜಂಗ (ಓಡುವ ವಿಟ) ನಂತೆ ವಿಾರಿ ನಿಟೋಟಂಗೊಂಡು ತೊಟ್ಟನೆ ಕಟ್ಟದಿರೊಳಟ್ಟಣಿಸಿ ಗಟ್ಟಿಮಗಳ್ಚುವ (ಗಂಧವನ್ನರೆಯುವ) ಗಟ್ಟಿವಳ್ತಿಯರ (ಗಂಧವರ) ಪಟ್ಟೆಡೆಯೊಳ್ ಕಟ್ಟುವಡೆದುಂ...... ಮುಂಕೆ ಸರಿದು ಮಾಲೆಗಾರ್ತಿಯರ ಮೇಲ್ಗೈಗಳೊಳ್ ಸಾಲ್ಗೊಂಡು ನೇಲವಾತಿದೊಡಂಬೆಯಂ ಕೂಗಿ, ಲತಾಂಗಮಂಕಾಗಿ, ಬೀಗಿ, ದಕ್ಷಿಣಾನಿಲನಂತಿರೆ ಪಕ್ಕಿವಾ ನಿಲಂ ಪೈದೋರಲೆಡಂ-ಮೊಲ್ಲೆ ಮುಗುಳ್ತುದು; ವನಮಲ್ಲಿಗೆ ಗಂಟೊಡೆದುದು; ನಾಗವಲ್ಲಿ ಬೆಳ್ಸುಳಿವಿಟ್ಟುದು; ಗರಿವೂ ಗರಿಗಟ್ಟಿದತ್ತೀ ...ಪೊಸ ಸುಸಿಲೋಳ್ ಸಾದೆಲ್ಲ ನಿಮಿರ್ನವರೇನೆ ಸಸಲೆ ಎಸೆದುದು'

ಈ ಮಳೆಗಾಲದಲ್ಲಿ ವಿಷವೃಕ್ಷದ ಮಳೆಗಾಲದ ಭೀಕರತೆ ಇಲ್ಲ. ಇಲ್ಲಿ ಪತ್ನಿ ಮಾನಿಲನು ವಿಟನಂತೆ ವರ್ತಿಸುತ್ತಾನೆ.

(ಎಳನೇ ಪುಟ ನೋಡಿರಿ)

Mangalore Roofs the World

For strength
and durability

USE ALWAYS

T. N. HEGDE
TILES

Contact

THE SATYANARAYANA
TILE WORKS LTD.

Manufacturers of: T. N. HEGDE TILES

KUDROLI, MANGALORE-3.

ಇತಿಹಾಸ ಪ್ರಜ್ಞೆ ಮತ್ತು ರಾಷ್ಟ್ರೀಯತೆ

ಬರೆದವರು:
ಶ್ರೀ ಬಿ. ಎಚ್. ಶ್ರೀಧರ, ಎಂ. ಎ.

ಪ್ರಜಾಪ್ರತಿನಿಧಿ ಪ್ರಭುತ್ವ ಭಾರತದಲ್ಲಿ ಒಂದಲ್ಲ ಹಲವು ಸಮಸ್ಯೆಗಳಿವೆ. ಇವೆಲ್ಲಕ್ಕೂ ಮುಖ್ಯ ಕಾರಣವೆಂದರೆ, ರಾಷ್ಟ್ರೀಯ ಮನೋಭಾವನೆಯ ಅಭಾವ. ರಾಷ್ಟ್ರೀಯತೆಯನ್ನು ನಾವು ಬೆಳಗಿಸಿಕೊಳ್ಳಬೇಕಾದರೆ, ರಾಷ್ಟ್ರೀಯ ದೃಷ್ಟಿಯಿಂದ ನಮ್ಮ ಬೃಹದ್ದೇಶದ ಇತಿಹಾಸವನ್ನು, ಅದರ ಘಟನೆಗಳನ್ನು ನಾವು ಅಭ್ಯಸಿಸಬೇಕಾಗಿದೆ. ಇತಿಹಾಸ ಪ್ರಜ್ಞೆಯಿಲ್ಲದ ಶಾಸಕರಿಂದ, ನೇತಾರರಿಂದ ರಾಷ್ಟ್ರೀಯತೆಯ ಬೀಜ ಬಿತ್ತುವುದು ಕಷ್ಟಸಾಧ್ಯ

ಭಾರತದಲ್ಲಿ ಏಕಾಧಿಪತ್ಯವನ್ನು (Unitary form of Government) ಸ್ಥಾಪಿಸಲಾಗದೆ ಸ್ವಾಯತ್ತ ಪ್ರಾಂತ ರಾಜ್ಯಗಳ ನಿರ್ಮಾಣವಾಗಿರುವುದು ಪ್ರಾಚೀನ ಭಾರತೀಯ "ಚಕ್ರಾಧಿಪತ್ಯ"ದ ಆಧುನಿಕ ರೂಪ. ಇಲ್ಲಿ ಸರಕಾರವು ಚಕ್ರಾಧಿಪತ್ಯದ ಕೇಂದ್ರ; ಪ್ರಾಂತ ರಾಜ್ಯಗಳು ಸಾಮಂತ ರಾಜ್ಯಗಳಿಗೆ ಸಮಾನ. ಆದರಿಂದಲೇ ಪ್ರಾಚೀನ ಹಾಗೂ ಮಧ್ಯಯುಗೀನ ಭಾರತದಷ್ಟೇ ಪ್ರಮಾಣದ ವೇಗದಿಂದ ಆಧುನಿಕ ಭಾರತ ತನ್ನ ಪ್ರಗತಿಯನ್ನು ಸಾಧಿಸಲು ಸಮರ್ಥವಾಗಿದೆ. ಅದಕ್ಕಿಂತ ಹೆಚ್ಚಿನ ವೇಗ ನಮಗೆ ಕೈಸೂರಿದ್ದಾಗಿವೆ. ಬಾಹ್ಯೋಪಸ್ಕರಗಳ ಒದಗಣೆ ಪ್ರಗತಿ ಮಾಪಕವಷ್ಟೆ

ವಿಜಯ ನಗರ ರಾಜ್ಯದ ಸರ್ವಧರ್ಮ ಸಮಾನತೆಯ ಮನೋಭಾವನೆಗೂ ನಮ್ಮ ಇಂದಿನ ಲೌಕಿಕ (Secular) ಧೋರಣೆಗೂ ಬಹಳ ವ್ಯತ್ಯಾಸವಿಲ್ಲ. ಈಗ ಇರುವ ಮತಧಾರ್ಮಿಕ ಸ್ವಾತಂತ್ರ್ಯಕ್ಕಿಂತ ಕಡಿಮೆ ಸ್ವಾತಂತ್ರ್ಯ ಆಗ ಇದ್ದಿಲ್ಲ. ನಾನಾ ಬಹು ಸಂಖ್ಯರ ಅಂದಿನ ಮತಧಾರ್ಮಿಕ ಅಭಿಪ್ರಾಯ—ಅಭಿನಿವೇಶಗಳಿಗೂ ಇಂದಿನವುಗಳಿಗೂ ಏನು ದೊಡ್ಡ ಅಂತರವುಂಟಾಗಿಲ್ಲ.

ಕಲೆ-ಶಾಸ್ತ್ರ ಮುಂತಾದ ವಿದ್ಯೆಗಳಿಗೆ ಹಿಂದೆ ರಾಜರು ಕೊಡುತ್ತಿದ್ದ ಪ್ರೋತ್ಸಾಹವನ್ನೇ ಅದಕ್ಕಿಂತ ಅಧಿಕವಾಗಿ ತೋರುವಂತೆ ನಮ್ಮ ಇಂದಿನ ಸರಕಾರಗಳು ಕೊಡುತ್ತಿವೆ. ನೀರಾವರಿ—ರಾಜ ಮಾರ್ಗಗಳ ರಚನೆಯಲ್ಲೂ ಹಳೆಯ ರಾಜರ ಪ್ರಭುತ್ವದ ಧೋರಣೆಗೂ ಇಂದಿನ ಪ್ರಜಾಪ್ರತಿನಿಧಿ ಪ್ರಭುತ್ವದ ಧೋರಣೆಗೂ ಎದ್ದು ಕಾಣುವ ವ್ಯತ್ಯಾಸವಿಲ್ಲ. ಮಧ್ಯಯುಗದ ಪಂಡಿತರ ಸಮಾಜೋಪಕಾರಿತ್ವವೂ ಹಾಗೇ ಇಂದಿನ ಸ್ಕಾಲರುಗಳ ಸಮಾಜೋಪಕಾರಿತ್ವಕ್ಕೆ ಹೆಚ್ಚು ಕಡಿಮೆ ಸರಿಸಮಾನವಾಗಿದೆ.

ಕಾಯಿದೆ ಮತ್ತು ಸುವ್ಯವಸ್ಥೆಗಳನ್ನು ಕಾಯ್ದುಕೊಂಡು ಹೋಗುವುದರಲ್ಲಿ ಬಹುಶಃ ಅಕ್ಬರ, ಕೃಷ್ಣದೇವರಾಯ ಮುಂತಾದ ಮಹಾನಾಯಕರ ಸರಕಾರಗಳು ನಮ್ಮ ಆಧುನಿಕ ಸ್ವತಂತ್ರ ಭಾರತದ ನಾಯಕರ ಸರಕಾರಗಳಿಗಿಂತ ಸ್ವಲ್ಪ ಹೆಚ್ಚು ಸಮರ್ಥವಾಗಿದ್ದವೆಂದೇ ಹೇಳಬಹುದು. ಶಿಲ್ಪದಲ್ಲೂ ಹಾಗೇ ಹಿಂದಿನ ಮಹಾರಾಜರು ನಮ್ಮ ಇಂದಿನ ಪ್ರಭುಗಳನ್ನು ಪ್ರಯೋಜನ ದೃಷ್ಟಿಯಿಂದಲೂ ಕಲಾದೃಷ್ಟಿಯಿಂದಲೂ (ಕಾಲಾನುಗುಣವಾಗಿ ವಿಮರ್ಶಿಸಿದರೆ) ಮೀರಿಸಿದ್ದರೆನ್ನಲೇಬೇಕು. ನೀರಾವರಿ ಕೆಲಸಗಳಲ್ಲೂ ಅಂಥದೇ ಆಧಿಕ್ಯವನ್ನು ಕಾಲಾನುಗುಣ ಮಟ್ಟದಿಂದ ಕಾಣಬಹುದಾಗಿದೆ.

ಪ್ರಾಚೀನ ಭಾರತಕ್ಕಿಂತಲೂ ಮಧ್ಯಯುಗೀನ ಭಾರತದಲ್ಲಿ ಅಂತಃಕಲಹಗಳ ಸಂಖ್ಯೆ ಇಂದಿನಂತೆಯೇ ಹೆಚ್ಚಾಗಿರುವುದನ್ನು ಗಮನಿಸಬಹುದು. ಜನರ ಜಾತೀಯತೆ ಅಷ್ಟೇ ಅಥವಾ ಸ್ವಲ್ಪ ಹೆಚ್ಚು ಪ್ರಭಾವಶಾಲಿಯಾಗಿದೆಯೆನ್ನಬಹುದು.

ಬ್ರಿಟಿಷರು ಭಾರತವನ್ನು ವಶಪಡಿಸಿಕೊಳ್ಳುವಾಗ ಇದ್ದ ಸಮಸ್ತ ದೌರ್ಬಲ್ಯಗಳೂ ಇಂದು ಒಂದಲ್ಲ ಒಂದು ಹೊಸ ರೂಪದಿಂದ ದೇಶದ ಒಂದಲ್ಲ ಒಂದು ಕಡೆ ತಲೆದೋರಿವೆಯೆಂಬುದು ಇತಿಹಾಸಕಾರನ ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿದರೆ ಕಾಣದಿರದು. ಜಾತಿ, ಪ್ರದೇಶ, ಮತ, ಉಪಪ್ರದೇಶ, ಬಂಧುತ್ವ ಮುಂತಾದ ಉಪಾಧಿಗಳಿಂದ ಪ್ರಜೆಗಳ ಮತ್ತು ಮಹಾಧಿಕಾರಿಗಳ ಮನಸ್ಸು ಮುಗ್ಧವಾಗಿ ಅವರ ರಾಷ್ಟ್ರೀಯತೆ ಬಹಳ ಸಲ ಕೇವಲ "ವಾಙ್ಮಯ"ವಾದುದು ನಿದರ್ಶನ

ಈ ಅಂಶವನ್ನು ಕಂಡ ಕೆಲವರು ಪದೇ ಪದೇ ಐಕ್ಯದ ಸಂದೇಶವನ್ನು ಸಾರುತ್ತ ಬಂದಿದ್ದಾರೆ. ಆದರೆ ಅಂಥ ಸಂದೇಶದಾತೃಗಳು ಐಕ್ಯವು ಕೇವಲ ನಾಲ್ಕು ಜನರ ಅವಿರತವಾದ ಇಚ್ಛಾಪರಿವರ್ತನದಿಂದಾಗ ತಕ್ಕದ್ದಲ್ಲ ಎಂಬುದನ್ನರಿತಿಲ್ಲ. ಸಾಮಾನ್ಯ ಮನುಷ್ಯರ ಜೀವನದ ಭೌತಿಕ, ಸಾಮಾಜಿಕ ಹಾಗೂ ಭಾವನಾತ್ಮಕ ಹಸಿವುಗಳನ್ನು ಪರಂಪರೆಯ ಹಿನ್ನೆಲೆಯಲ್ಲಿ ಅರಿತುಕೊಂಡು, ಅವುಗಳನ್ನು ನೀಗಿಸಲು ತಕ್ಕ ಶಾಸನಿಕ ಮತ್ತು ಪ್ರಶಾಸನಿಕ ಬದಲಾವಣೆಗಳನ್ನು ತಂದು, ಆ ಮೂಲಕ ರಾಷ್ಟ್ರೀಯ ಭ್ರಾತೃತ್ವ ಬೆಳೆಯುವಂತೆ ಮಾಡುವುದೊಂದೇ ಸ್ವಾಭಾವಿಕ ಮಾರ್ಗ ಎಂಬುದಕ್ಕೆ ಗಮನನೀಯದೆ ಹಲ ಕೆಲ ಪರಿವರ್ತನ ಪ್ರಕಾರಗಳನ್ನು ಮೇಲಿನಿಂದ ಹೇರುತ್ತ ಬಂದುದು ಉದ್ದೇಶ ಹಾನಿಗೆ ಕಾರಣವಾಗಿದೆ. ಪರಾಕ್ರಮಣ ಭಯವೊಂದೇ ಎಂದೂ ಐಕ್ಯಕ್ಕೆ ಸಮರ್ಥ ಪ್ರೇರಣೆಯನ್ನೊದಗಿಸಿ ಕೊಡಲಾರದು—ಎಂಬುದು ಭಾರತದ ಗಣ್ಯ ಐತಿಹಾಸಿಕ ಸತ್ಯ. ಆರ್ಥಿಕ ಹಾಗೂ ಸಾಂಸ್ಕೃತಿಕ ಮಟ್ಟಗಳ ವೈವಿಧ್ಯದಿಂದ ತುಂಬಿರುವ ಭಾರತದಲ್ಲಿ ಸುಧಾರಣೆಗಳನ್ನು ತರಲು ಯಾವುದಾದರೊಂದು ಪ್ರಬುದ್ಧ ವರ್ಗದ ಸಂಸ್ಕೃತಿಯ ಸಂಪ್ರದಾಯವನ್ನೋ ಅಥವಾ ಸರ್ವ ವರ್ಗಾತೀತವಾದ ಸಾಂಸ್ಕೃತಿಕ ಸಂಪ್ರದಾಯವನ್ನೋ ಆಸೇತು ಹಿಮಾಚಲವಾಗುವಂತೆ ಬಾರಿಗೆ ತರುವ ಕಠೋರ ಕ್ರಮ ಅತ್ಯಗತ್ಯ. ಇಂಥ ಯಾವ ಕ್ರಮವನ್ನೂ ಪರಿಗಣಿಸದ ಸುಧಾರಣಾ ಪ್ರಯತ್ನಗಳಿಂದ ಸರ್ವ ವರ್ಗಗಳೂ ಅಸಮಾಧಾನ ಹೊಂದುವಂತಾಗಿದೆ. ಈ ಸರ್ವಾಸಮಾಧಾನದ ನಿಷ್ಪಕ್ಷಪಾತತೆಯು ಕೇವಲ ಮಾಯೆ, ಆತ್ಮವಂಚನೆ, ಪರವಂಚನೆ ಎಂಬುದನ್ನು ನಾಗರಿಕತೆಯ ದ್ರಷ್ಟಾರರಿಗೆ ಹೊಸದಾಗಿ ಹೇಳಬೇಕಾಗಿಲ್ಲ.

ಒಂದು ದೇಶದ ನಾಗರಿಕತಾ ಪ್ರವಾಹದ ತರಂಗಗಳಷ್ಟನ್ನೇ ಗಣಿಸುವ ನೇತೃಗಳು ಕೊನೆಗೆ ಯದ್ ಭವಿಷ್ಯರಾಗಬೇಕಾಗುತ್ತದೆ. ಆಗಿನ ಐತಿಹಾಸಿಕ ನಡುತಿರುವುಗಳನ್ನು ತಂತ್ರೈಕ್ಯತ್ವದಿಂದ ಅವಲೋಕಿಸಿ, ತದನುಗುಣವಾಗಿ ಆ ಪ್ರವಾಹಕ್ಕೆ ಭವಿಷ್ಯತ್ ಪಾತ್ರವನ್ನು ನಿರ್ಮಿಸಿಕೊಟ್ಟು, ಆ ಮೂಲಕ ಅದು ಹರಿದು ಹೋಗುವಂತೆ ಮಾಡಲು ಸಾಮಾನ್ಯ ಧೀರೋದಾತ್ತ ದೃಷ್ಟಿ ಅಸಮರ್ಥವಾಗುತ್ತದೆ ಎಂಬುದನ್ನೀ ಯುಗ ಸ್ಪಷ್ಟಪಡಿಸಿದೆ. ಅವತಾರ ಪುರುಷರನ್ನು ಹಾಸ್ಯ ಮಾಡುವ ಆಧುನಿಕ ಆಭಾಸಿಕ ವಿಜ್ಞಾನಮತಿಗಳ ಅದೂರ ದೃಷ್ಟಿಗೆ ರಾಮತ್ವ—ಕೃಷ್ಣತ್ವಗಳಲ್ಲಡಗಿರುವ ಭಾರತೀಯ ನಾಯಕ ಧರ್ಮದ ಅರ್ಥ ಚೆನ್ನಾಗಿ ಆಗಿಲ್ಲ. ಈ ಅರ್ಥ ಹೊಳೆಯದಿರುವ ಯಾವ ವಿದ್ಯಾವಂತನಿಗೂ ಇತಿಹಾಸ ಪ್ರಜ್ಞೆಯಿದೆ ಎಂದು ಹೇಳುವುದು ದುಃಸಾಧ್ಯ. ಇತಿಹಾಸ ಪ್ರಜ್ಞೆಯುಳ್ಳ ಧೀರರ ನಾಯಕತ್ವವೊಂದೇ ಕಾಯಿದೆ, ಆಡಳಿತ, ನೀತಿ, ಶಿಕ್ಷಣಗಳ ಮೂಲಕ ಪ್ರಜಾಸ್ತೋಮದಲ್ಲಿ ಸಾಂಸ್ಕೃತಿಕ ಏಕರೂಪತೆಯನ್ನು ಬೆಳೆಯಿಸಲು ಸಮರ್ಥವಾಗುತ್ತದೆ. ಅಂಥ ವ್ಯಕ್ತಿತ್ವ ಗಾಂಧೀಯವರಿಗಿತ್ತು. ಅವರ ಬಳಿಕ ಬಂದವರಲ್ಲಿ ಸರ್ದಾರ್ ಪಟೇಲರು ಅಂಥ ಪ್ರಜ್ಞಾವಂತರಾಗಿದ್ದರೆನ್ನಬಹುದು ಮಿಕ್ಕವರು "ನಾಯಕ"ರಾಗಿರುವುದು ಕೇವಲ ಅಂಥ ಪ್ರಜೆಗಳ ಅಜ್ಞಾನದ ಫಲವಾಗಿ, .

ಅಕ್ಷರ ರೂಪದ ಮತ್ತು ಸುದ್ದಿಯ ರೂಪದ ಜ್ಞಾನಗಳ ಇಂದಿನ ಪ್ರಸಾರಾಧಿಕ್ಯವನ್ನು ಫಲಿತಾಂಶದ ದೃಷ್ಟಿಯಿಂದ ಪರಿಶೀಲಿಸಿದರೆ, ಅಷ್ಟು ಅಧಿಕ ಪ್ರಸಾರವಿಲ್ಲದಿದ್ದ ಮಧ್ಯ ಯುಗದ ಜನರಲ್ಲೂ ಸಾಮಾನ್ಯ ಜೀವನಕ್ಕೆ ಅಗತ್ಯವಾದ ಜ್ಞಾನದ ಮಟ್ಟವು ಅಂದು ಇಂದಿಗಿಂತ ಬಹಳ ಕಡಿಮೆಯದಾಗಿತ್ತೆನ್ನಲು ಸಾಧ್ಯವಿಲ್ಲ. ಅಂದಿನ ಮೂಢನಂಬಿಕೆಗಳು ಬೇರೆ, ಇಂದಿನವು ಬೇರೆ, ಆದರೆ ಅವುಗಳ ಸಂಖ್ಯಾಬಲದಲ್ಲಿ ಸಾಕಷ್ಟು ಸಮಾನತೆಯಿದೆ.

ಅಧಿಕಾರ ದಾಹದ ಮಧ್ಯಯುಗೀನ ಕಕ್ಷಿತ್ರಸ್ತ ತನ್ನ ಆಧುನಿಕ ರೂಪವನ್ನು ಕಂಡು ತಾನೇ ನಾಚಬಹುದು ಅಂದಿನ ಒಳಸಂಚುಗಳೂ ಇಂದಿನ ಒಳಸಂಚುಗಳನ್ನು ಕಂಡು ಹೆದರಬಹುದು. ಅಂದಿನ ಅಪಮೃತ್ಯುಯೋಗಗಳಾದರೂ ಇಂದಿನ ಅಪಮೃತ್ಯುಯೋಗಗಳನ್ನು ಸಂಗಟ್ಟುತ್ತಿವೆ ಆದರೆ ಅಂದಿನ ಜನಸಂಖ್ಯಾ ಪ್ರಮಾಣ ಮಾತ್ರ ಇಂದಿನದಕ್ಕಿಂತ ಬಹಳ ಕಡಿಮೆಯಾಗಿತ್ತು; ಬಂಗಾಲದ ಆಸ್ತಿಯಲ್ಲಾದರೋ ಇಂದಿಗಿಂತ ಎಷ್ಟೋ ಪಾಲು ಉನ್ನತ ಸ್ಥಾನದಲ್ಲಿತ್ತು ನಮ್ಮ ದೇಶ. ಆಹಾರ ಸ್ವಾವಲಂಬನದಲ್ಲೂ ಹಾಗೇ.

ಸ್ಥಳೀಯ ಸ್ವಾಭಿಮಾನದ ಸ್ವರೂಪ ಮತ್ತು ಮಟ್ಟಗಳಾದರೂ ಬಹಳ ವ್ಯತ್ಯಾಸ ಹೊಂದಿಲ್ಲ. ಮುಕ್ತಿ ಪ್ರಚಾರ ಮಾತ್ರ ಹಿಂದಿಗಿಂತ ಕಡಿಮೆಯಾಗಿದೆ. ಮತಾಂತರ ಹೊಂದುವುದರ ಹಾಗೆ ಸ್ವಲ್ಪ ಕಡಿಮೆಯಾಗಿದೆಯೆನ್ನಬಹುದು ಮಧ್ಯಪಾನ-ಮಾಂಸ ಭಕ್ಷಣಗಳಲ್ಲೂ ಪ್ರಮಾಣ ವ್ಯತ್ಯಾಸ ಅಲ್ಪ ಸ್ವಲ್ಪ. ಕುಟುಂಬ ಸ್ವಾರ್ಥದ ದೃಷ್ಟಿಯಲ್ಲಿ ಭೇದವುಂಟಾಗಿಲ್ಲ. ಜಾತಿಗಳನ್ನು ಸಮಾಜಗಳೆಂದು ಇಂದು ಕರೆಯುವುದರಿಂದ ಅವುಗಳ ಸಂಖ್ಯೆ ಕಡಿಮೆಯಾಗಿಲ್ಲ. ದೇವಾಲಯ-ಮಠಗಳನ್ನು ಕಟ್ಟಿಸುವ ಪ್ರವೃತ್ತಿಯೇನೋ ಕಡಿಮೆಯಾಗಿದೆ. ರಾಷ್ಟ್ರೀಯ ಸಮಾಜದ ದೃಷ್ಟಿ ಅಂದೂ ಇರಲಿಲ್ಲ; ಇಂದೂ ಕಾರ್ಯಕರವಾಗಿ ಇರುವಂತೆ ತೋರುವುದಿಲ್ಲ.

ಮುದ್ರಿತ ಲೇಖನಗಳ ಸಂಖ್ಯೆಯೇನೋ ನಡುಗಾಲಕ್ಕಿಂತ ಈಗ ಅತ್ಯಧಿಕವಾಗಿದೆ. ಆದರೆ ಅವುಗಳ ಸಾಫಲ್ಯ? ಸಫಲತೆಯ ಜರಡಿಯಲ್ಲಿ ಹಾಕಿ ಗಾಳಿಸಿದರೆ ಅಂದಿನ ಅಲ್ಪ ಸಂಖ್ಯಲಿಖಿತಗಳಿಗಿಂತ ಹೆಚ್ಚಿನ ಪರಿಣಾಮವನ್ನೇನೂ ಅವು ಜನಜೀವನದ ಮೇಲೆ ಮಾಡಿದಂತೆ ತೋರುವುದಿಲ್ಲ ಅಂದಿನ ಮತಾಚಾರ್ಯರ ಮತಾಧಿಕಾರವನ್ನಿಂದು ರಾಜಕೀಯ ಸ್ಪರ್ಧಾಳುಗಳಾದ ಮುಖಂಡರು ಕಸಿದುಕೊಂಡಂತಿದೆ. ಭಿಕ್ಷುಕರ ಸಂಖ್ಯೆಯು ಜನಸಂಖ್ಯಾನುಗುಣವಾಗಿ ಏರಿದೆ. ರೋಗಿಗಳ ಸಂಖ್ಯೆಯಾದರೂ ಹಾಗೇ ಚಾರಿತ್ರ್ಯ ಸಂಪನ್ನತೆಯ ಪ್ರಮಾಣ ಬಹುಶಃ ಅಂದೇ ಸ್ವಲ್ಪ ಹೆಚ್ಚಾಗಿತ್ತೋ ಏನೋ ಎನ್ನಿಸುತ್ತದೆ. ಪರೋಪದೇಶ ಪಾಂಡಿತ್ಯದಲ್ಲಿ ಇಂದು ಅದನ್ನು ಸ್ವಲ್ಪ ಮೀರಿಸಿದೆ. ಅಂದು ವೇದಾಂತವು ಹೇಗೋ ಇಂದು ವಿಜ್ಞಾನವೂ ಹಾಗೇ ನಮ್ಮಲ್ಲಿ ವಿದ್ವಜ್ಜನರ ಸುಖ ಸಂತಸ್ತ ವಿನೋದಕ್ಕೇ ಹೆಚ್ಚು ಮೀಸಲು. ಸಾಹಿತ್ಯವು ಆಗ ಹೇಗೋ ಈಗಲೂ ಹಾಗೆ ಯಾವ ಸಾಮಾಜಿಕ, ರಾಜಕೀಯ ಅಥವಾ ಆರ್ಥಿಕ ಕ್ರಾಂತಿಯನ್ನೂ ಎಬ್ಬಿಸಿಲ್ಲ; ಈಗ ಆಗಿರುವ ಚಿಲ್ಲರೆ ಬದಲಾವಣೆಗಳನ್ನು ಕ್ರಾಂತಿಕಾರಕವೆನ್ನಲು ಸಾಧ್ಯವಿಲ್ಲ. ಈ ೪೦ ಕೋಟಿಯ ವಿಶಾಲ ಗ್ರಾಮ ಭಾರತದಲ್ಲಿ

ಭಾರತದ ಇತಿಹಾಸದ ಈ ಎರಡು ಯುಗಗಳ ನಾಗರಿಕತೆಗಳನ್ನು ಹೋಲಿಸಿದರೆ ನಾಗರಿಕತಾ ಮೌಲ್ಯದ ಗುಣವು ರೂಪಾಂತರವನ್ನು ಕೆಲ ಮಟ್ಟಿಗೆ ಹೊಂದಿದೆಯಲ್ಲದೆ, ಪ್ರಮಾಣಾಂತರವನ್ನೂ ಅರ್ಥಾಂತರವನ್ನೂ ಹೊಂದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಸತ್ಯವನ್ನರಿಯದುದರಿಂದ ಅಂದಾದ ಐತಿಹಾಸಿಕ ತಪ್ಪುಗಳೇ ಇಂದೂ ಹಲವಾರು ಕ್ಷೇತ್ರಗಳಲ್ಲಿ ನಿವಾರ್ಯವಾಗಿದ್ದರೂ ಘಟಿಸುತ್ತವೆ. ಅಂದಿನ ಅನೇಕ ತಪ್ಪುಗಳು ಐತಿಹಾಸಿಕ ಅನಿವಾರ್ಯಗಳಾಗಿದ್ದವು; ಅಂದರೆ ಅರಿಯಲವಕಾಶ ಕಡಿಮೆಯಿದ್ದುದರಿಂದ ಘಟಿಸಿದಂಥವಾಗಿದ್ದವು ಇಂದು ಅಂದಿಗಿಂತ ಅರಿಯುವ ಸುಸಂಧಿ ಹೆಚ್ಚಾಗಿದ್ದರೂ ಅರಿಯಲೊಲ್ಲದ ದಾರ್ಢ್ಯದಿಂದ

(೩೩ನೇ ಪುಟ ನೋಡಿರಿ)

ಆದರ್ಶ ಮತ್ತು ಆಚರಣೆ

ಪ್ರತಿಯೊಬ್ಬರಿಗೂ ಆದರ್ಶವಿದ್ದೇ ಇದೆ; ಅದನ್ನು ಆಚರಣೆಯಲ್ಲಿ ತರುವವರು ಮಾತ್ರ ಅದೆಷ್ಟು ಮಂದಿ? ಆದರ್ಶ-ಆಚರಣೆಗಳ ನಡುವೆ ಸಂಬಂಧ ಬೆಳೆಸಲು ಪ್ರಯತ್ನಿಸಿದವರಲ್ಲಿ ಹೆಚ್ಚಿನವರು ಯಶಸ್ವಿಯಾಗಲಿಲ್ಲ, ಹಾಗೆಂದು ಅವುಗಳನ್ನು ದೂರವಿಡುವುದು ಮಾತ್ರ ವಿವೇಕವಲ್ಲ. ನಮ್ಮನ್ನು ನಾವು ಅಳೆದುಕೊಳ್ಳುವಾಗ ನಮ್ಮ ಆದರ್ಶ ಮತ್ತು ಆಚರಣೆಗಳನ್ನೂ ತೂಗಿ ನೋಡುವುದು ಅಗತ್ಯ.

ಬರೆದವರು
ಶ್ರೀ ಎ. ಎಸ್. ರಾಮಕೃಷ್ಣ

"ನಾವು ನಮ್ಮನ್ನು ನಮ್ಮ ಆದರ್ಶಗಳಿಂದಲೇ ಅಳೆದುಕೊಳ್ಳುತ್ತೇವೆ. ಆದರೆ ಇತರರನ್ನು ಅವರ ಕಾರ್ಯಾಚರಣೆಗಳನ್ನು ಕಂಡು ಅಳೆಯುತ್ತೇವೆ" ಎಂದು ಹೇಳಿದ ಮಹಾನುಭಾವ ಆದರ್ಶಕ್ಕೂ ಆಚರಣೆಗೂ ಲೋಕ ವ್ಯವಹಾರದಲ್ಲಿ ಬಹಳ ದೂರ ಎಂಬುದನ್ನು ಮನಗಂಡವನಿರಬೇಕು.

ವ್ಯಕ್ತಿಯು ಇಟ್ಟುಕೊಂಡಿರುವ ಆದರ್ಶಗಳಿಂದಲೇ ಜಗತ್ತು ಅವನನ್ನು ಅಳೆಯುವುದಾಗಿದ್ದ ಪಕ್ಷದಲ್ಲಿ ಜಗತ್ತಿನಲ್ಲಿ ಅನೇಕ ಮಂದಿ, ಸತ್ಪುರುಷರು, ಮಹಾಪುರುಷರು ಎನ್ನಿಸಿಕೊಳ್ಳುತ್ತಿದ್ದರು. ವ್ಯಕ್ತಿಯ ಒಳ್ಳೆಯ ಆದರ್ಶಗಳನ್ನೇ ನೆಚ್ಚಿ ಅವನನ್ನು ಲೋಕ ಅಷ್ಟೋ ಇಷ್ಟೋ ಶ್ಲಾಘಿಸುವುದಿಲ್ಲವೆಂದಲ್ಲ. ಆದರೆ ನಿಜವಾಗಿ ಅವನ ಬೆಲೆ ಕಟ್ಟುವುದು ಆತ ಏನು ಮಾಡಿದ್ದಾನೆ ಏನು ಮಾಡಿಲ್ಲವೆಂಬುದನ್ನು ನೋಡಿ.

ಆದರ್ಶಗಳಿಗಿಂತಲೂ ಮುಖ್ಯವಾಗಿ ಅವುಗಳ ಅನುಷ್ಠಾನದ ಅಂಶವನ್ನು ಅಳತೆಗೋಲಾಗಿ ಇಟ್ಟುಕೊಂಡಾಗ ನಮ್ಮಂತಹ ಸಾಮಾನ್ಯರ ವ್ಯಕ್ತಿತ್ವ ಅಷ್ಟೇನೂ ಸುಂದರವಾಗಿ, ಶುಭ್ರವಾಗಿ ಕಾಣಿಸುವುದಿಲ್ಲ. ಆದರ್ಶಗಳನ್ನು ಗಮನಕ್ಕೇ ತಂದುಕೊಳ್ಳದೆ ಕೇವಲ ಕಾರ್ಯಾಚರಣೆಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ವಿಮರ್ಶಿಸಿದರೆ ನಮ್ಮಲ್ಲನೇಕರ ವ್ಯಕ್ತಿತ್ವ ಬಹು ಕರಾಳವಾಗಿ ಕಾಣಿಸಲೂ ಬಹುದು.

ಆದ್ದರಿಂದಲೇ ಇರಬಹುದು, ನಮ್ಮನ್ನು ನಾವು ವಿಮರ್ಶಿಸಿಕೊಳ್ಳುವಾಗ ನಾವು ಏನೇನು ಮಾಡಬೇಕೆಂದಿದ್ದೇವೆ, ಹೇಗೆ ನಡೆಕೊಳ್ಳಬೇಕೆಂದಿದ್ದೇವೆ ಎಂಬುದನ್ನೇ ಲೆಕ್ಕ ಹಾಕಿ, ಪರವಾ ಇಲ್ಲ; ನಮ್ಮ ಧ್ಯೇಯಗಳೆಲ್ಲ ಒಳ್ಳೆಯವು ಅರ್ಥಾತ್ ನಾವೂ ಸತ್ಪುರುಷರೇ ಎಂದು ಭಾವಿಸುತ್ತೇವೆ. ಆದರೆ ಇತರರು ಅವರವರ ಕುರಿತು ಹಾಗೆಯೇ ಎಣಿಸಿದರೆ ನಮಗೆ ಸಮಾಧಾನವಿಲ್ಲ. ಧ್ಯೇಯ ಹಾಗಿರಬಹುದು ಹೀಗಿರಬಹುದು, ಆದರೆ ನೀವು ನಡೆಕೊಂಡು ಬಂದ ಬಗೆ ಹೇಗೆ ಎಂದು ಅವರ ಕಾರ್ಯಾಚರಣೆ ಪುಸ್ತಕವನ್ನು ಎತ್ತಿ ಹಿಡಿಯುತ್ತೇವೆ.

ನಮ್ಮ ವಿಷಯದಲ್ಲಿ ಆದರ್ಶಕ್ಕೂ ಆಚರಣೆಗೂ ವ್ಯತ್ಯಾಸವಿದ್ದಲ್ಲಿ ಅದು ಪರಿಸ್ಥಿತಿ ಹಾಗೆ ಒದಗಿತು ಹಾಗೆ ಮಾಡಬೇಕಾಯಿತು ಎಂದು ಹೇಳಿ ಬಿಡಬಲ್ಲೆವು. ಆದರೆ ಇತರರು ಹಾಗೆ ಮಾಡಿದಾಗ ನಮಗೆ ಸಹಿಸಲಾಗುವುದಿಲ್ಲ. ಯಾರು ಏನೇ ಹೇಳಲಿ, ಬೇಕೆಂದೇ ಕೆಟ್ಟ ಕೆಲಸ ನಾನು ಮಾಡುವುದಿಲ್ಲ ಎಂದು ದಿಟ್ಟತನದಿಂದ ನಮ್ಮನ್ನು ನಾವು ಕ್ಷಮಿಸಿಕೊಳ್ಳುವುದು ಸುಲಭ. ಆದರೆ ಇತರರ ಕುರಿತು ಆತ ಹೇಳಿಕೊಳ್ಳುವುದೇನು ಮಾಡುವುದೇನು ಎಂದು ಆಕ್ಷೇಪಿಸುವಾಗ, ಪರಿಸ್ಥಿತಿ ಹಾಗೆ ಬಂತು ಹಾಗೆ ಮಾಡಬೇಕಾಯಿತು ಎಂದರೆ ನಮಗೆ ಕ್ಷಮಿಸುವುದು ಕಷ್ಟವಾಗುತ್ತದೆ.

ವ್ಯಕ್ತಿಯ ವಿಷಯ ಹೀಗಾದರೆ ರಾಷ್ಟ್ರ ರಾಷ್ಟ್ರಗಳ ಸಮೂಹದ ಬೇರೆಯಲ್ಲ. ರಾಷ್ಟ್ರಗಳು ತಮ್ಮನ್ನು ತಮ್ಮ ಆದರ್ಶಗಳಿಂದಲೇ ಲೋಕ ಅಳೆಯಬೇಕು ಎಂದು ಅಪೇಕ್ಷೆ ಪಡುತ್ತವೆ. ಆದರೆ ಪರ ರಾಷ್ಟ್ರಗಳ ವಿಷಯದಲ್ಲಿ ಅವುಗಳ ನಡವಳಿಕೆಯೇ ಮುಖ್ಯ.

ಪಂಚಶೀಲ, ಸಹ ಅಸ್ತಿತ್ವ, ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯ, ಸಮಾಜವಾದ ಇವುಗಳಲ್ಲಿ ಯಾವುದು ಒಳ್ಳೆಯ ಧ್ಯೇಯವಲ್ಲ! ಪ್ರತಿಯೊಂದು ರಾಷ್ಟ್ರವೂ ಇಂಥ ಧ್ಯೇಯಗಳು ತನ್ನವು ಎಂದು ಹೇಳಿಕೊಳ್ಳುತ್ತಿರುತ್ತದೆ. ಆದರೆ ಆಚರಣೆಯದೇ ಸಂಕಟ. ರಾಷ್ಟ್ರಗಳ ಧ್ಯೇಯವೊಂದು ಆಚರಣೆಯೊಂದು ಆಗುವುದರಿಂದಲೇ ಪ್ರತ್ಯಕ್ಷ ಹಾಗೂ ಪ್ರಚ್ಛನ್ನ ಸಮರಗಳು ನಿರಂತರವಾಗಿ ನಡೆದಿರುತ್ತವೆ.

ಸಹ ಅಸ್ತಿತ್ವದ ಜಪ ಮಾಡುತ್ತಿರುವ ರಾಷ್ಟ್ರಗಳಿಗೆ ನೆರೆಯವರ ಒಳ ಕೀಟಲೆಗಳಲ್ಲಿ ಕೈಹಾಕುವ ಚಪಲ. ಪಂಚಶೀಲದ ಪಾರಾಯಣ ಮಾಡುವವರಿಗೆ ಪಕ್ಕದವರ ಬೇಲಿ ಮುರಿದು ದಕ್ಕಿಸುವನ್ನು ಕಬಳಿಸುವ ಚಪಲ. ವ್ಯಕ್ತಿ ಸ್ವಾತಂತ್ರ್ಯದ ಭಕ್ತರಿಗೆ ಆ ಸ್ವಾತಂತ್ರ್ಯ ಎಲ್ಲರಿಗೂ ಇರಬೇಕೆಂದೆನಿಸುವುದಿಲ್ಲ. ತಮ್ಮದು ಡಿಮಾಕ್ರಸಿ ಎಂದುಕೊಳ್ಳುವವರಿಗೆ ಜನರ ಬಾಯಿಗೆ ಬೀಗ ಹಾಕಿ ಕೈಗೆ ಸಂಕೋಲೆ ತೊಡಿಸಿ ಎಂಬ ರೀತಿಯಲ್ಲಿ ಆಳಬೇಕಾಗಿದೆ. ಆಗ ಡಿಮಾಕ್ರಸಿಗೆ ನಾನಾ ವಿಶೇಷಣಗಳನ್ನು ಹಚ್ಚಬೇಕಾದ್ದು ಅನಿವಾರ್ಯ.

ಆದರೆ ಅನುಷ್ಠಾನದ ವಿಷಯದಲ್ಲಿ ತಮ್ಮಲ್ಲಿರುವ ಲೋಪದೋಷಗಳನ್ನು ಇತರ ರಾಷ್ಟ್ರಗಳು ಎತ್ತಿ ಆಡಿದರೆ ಯಾವ ರಾಷ್ಟ್ರವೂ ಸಹಿಸುವುದಿಲ್ಲ. ಅವು ತಮ್ಮ ಸದುದ್ದೇಶಗಳನ್ನು ಕುರಿತು ಅಬ್ಬರಿಸುತ್ತಾ ಸತ್ಯ ಸಂಗತಿಯನ್ನು ಮರೆಮಾಚಲು ಯತ್ನಿಸುತ್ತವೆ. ಆದರೆ ಇತರ ರಾಷ್ಟ್ರಗಳು ತಮ್ಮ ಧ್ಯೇಯಗಳ ಕುರಿತು ಎಷ್ಟು ಕೊಚ್ಚಿಕೊಂಡರೂ ಅವುಗಳ ವ್ಯವಹಾರ ನೀತಿಯನ್ನು ಅನುಲಕ್ಷಿಸಿಯೇ ಅವುಗಳ ಬೆಲೆ ಕಟ್ಟುವ ಧೋರಣೆಯನ್ನು ಪ್ರತಿಯೊಂದು ರಾಷ್ಟ್ರವೂ ಇಟ್ಟುಕೊಂಡಿರುತ್ತದೆ.

With the Season's Greetings

To all our Patrons
& Well-wishers

From

K. VASUDEVA KINI

Proprietor

SHARADA INDUSTRIES

RICE, OIL, FLOUR & SAW MILLS

KATAPADI, S. KANARA.

Phone. 132.

ನಾವು ತಿಳಿದಂತೆ ನಮ್ಮ ರಾಷ್ಟ್ರ ಕೂಡ ಒಳ್ಳೆಯ ಆದರ್ಶಗಳನ್ನೆ ಇಟ್ಟುಕೊಂಡು ಮುನ್ನಡೆಯುತ್ತಿದೆ. ವ್ಯಕ್ತಿ ಸ್ವಾತಂತ್ರ್ಯ, ಸಮಾನಾವಕಾಶ, ಪ್ರಜಾಪ್ರಭುತ್ವ, ಕಲ್ಯಾಣ ರಾಷ್ಟ್ರ ಎಲ್ಲವೂ ಬಲು ಸೊಗಸು! ಪರರಾಷ್ಟ್ರಗಳ ವಿಷಯದಲ್ಲಿ ತಾಟಸ್ಥ್ಯನೀತಿ, ಸಹ ಅಸ್ತಿತ್ವ, ಪಂಚಶೀಲ ಬೇಕಿದ್ದಲ್ಲಿ ಅಂತಿಮ ಗುರಿ ರಾಷ್ಟ್ರೀಯತೆಯನ್ನು ಮೀರಿದ world government'! ಇವುಗಳೆಲ್ಲವುದರಲ್ಲಿ ನಮ್ಮಲ್ಲಿ ಹೆಚ್ಚಿನವರಿಗೆ ಪ್ರಾಮಾಣಿಕ ವಿಶ್ವಾಸ ಇದೆಯೆಂಬುದನ್ನು ಒಪ್ಪಿಕೊಳ್ಳೋಣ. ಆದರೆ ಆ ವಿಶ್ವಾಸವಿದೆಯೆಂದರೆ ಸಾಕೆ? ಆ ಆದರ್ಶಗಳಂತೆ ನಾವು ನಡೆಕೊಳ್ಳುತ್ತಿದ್ದೇವೆಯೇ ಎಂದು ವಿಮರ್ಶೆಗೆ ತೊಡಗುವವರು ಹಲವರು ಅಲ್ಲಿ ಇಲ್ಲಿ ನಾವು ಜಾರಿ ಬಿದ್ದು ನಮ್ಮ ಆದರ್ಶಗಳಿಂದ ದೂರಸರಿದುದನ್ನು ಬೆರಳು ಬೊಟ್ಟು ಮಾಡಿ ತೋರಿಸುತ್ತಾರೆ. ನಾವೇನೋ ಪರಿಸ್ಥಿತಿಯ ಒತ್ತಡ ಎನ್ನುತ್ತೇವೆ, ಆದರೆ ಅವರೊಪ್ಪುತ್ತಾರೆಯೆ? ಇತರರ ಮಾತು ಬಿಡಿ, ನಮ್ಮ ಆದರ್ಶಗಳು ನಮಗೇ ನಗೆಪಾಟಲಾಗಿದ್ದನ್ನು ಕಾಣಬಹುದು. ಮುಖ್ಯವಾಗಿ ಕಾನೂನುಗಳ ವಿಷಯದಲ್ಲಿ, ಮದ್ಯಪಾನ ನಿರೋಧ, ಲಂಚ ನಿರ್ಮೂಲನ, ಕಾಳ ಸಂತೆ ವ್ಯವಹಾರದ ಕೊನೆಗಾಣಿಸುವಿಕೆ ಇತ್ಯಾದಿ ವಿಷಯಗಳಲ್ಲಿ ನಮ್ಮನ್ನು ಕಂಡು ನಾವು ನಗಬೇಕು ಅಷ್ಟೆ. ಆದರೆ ನಮ್ಮ ಧ್ಯೇಯಗಳ ಕುರಿತು ಇತರರು ಟೀಕಿಸಿದರೆ ನಮಗೆ ಹಿಡಿಸುವುದಿಲ್ಲ, ಏಕೆಂದರೆ ನಮ್ಮ ಧ್ಯೇಯ ದೊಡ್ಡದು ಎಂಬ ಅಭಿಮಾನ ನಮಗೆ. ಆದ್ದರಿಂದಲೇ ನಮ್ಮಲ್ಲಿ ದೊಡ್ಡತನವಿದೆ ಎಂಬ ಭ್ರಮೆ ಬಂದು ಸೇರಿದೆ.

ಮೊನ್ನೆ ಮೇ ೨೭ರಂದು ಭಾರತ ತನ್ನ ಮಹಾ ನಾಯಕನನ್ನು ಕಳೆದುಕೊಂಡಿತು. ಆ ಅಗಲುವಿಕೆ ತೀರ ಅನಿರೀಕ್ಷಿತವಾದದ್ದೇನಲ್ಲ. ಆದರೆ ಅದು ಅಷ್ಟು ಶೀಘ್ರವಾಗಿ ಒದಗುತ್ತಿರಲಿಲ್ಲವೇನೋ. ಆದರ್ಶ ಅನುಷ್ಠಾನಗಳ ನಡುವಿನ ತಿಕ್ಕಾಟದಲ್ಲಿ ರಾಷ್ಟ್ರ ನೌಕೆಯ ಚುಕ್ಕಾಣಿಯನ್ನು ಹಿಡಿದ ಕೈಗೆ ನಡುಕವುಂಟಾಗಿರಬಹುದು. ಅದೇ ಮೃತ್ಯುವಿನ ಆಗಮನವನ್ನು ಅವಸರಗೊಳಿಸಿರಬಹುದು. ವಿದೇಶಾಂಗ ನೀತಿಯಲ್ಲಿಯೂ, ಒಳ ಆಡಳಿತದ ಹಾಗೂ ಸಮಾಜ ವ್ಯವಸ್ಥೆಯ ರೀತಿ ನೀತಿಗಳಲ್ಲಿಯೂ ದೊಡ್ಡ ಆದರ್ಶಗಳನ್ನು ಮುಂದಿಟ್ಟುಕೊಂಡು ಸಾಗುತ್ತಿದ್ದ ಆ ಧ್ಯೇಯವಾದಿಗೆ, ತನ್ನನ್ನು ತಾನು ಹೆಜ್ಜೆ ಹೆಜ್ಜೆಗೂ ವಿಮರ್ಶಿಸಿಕೊಳ್ಳುವ ಸಂದರ್ಭಗಳಿಗೆ ಮಾನಸಿಕ ಆಘಾತವುಂಟಾಗುವ ಪ್ರಸಂಗಗಳು ಹಲವಿದ್ದಿರಬಹುದು. ತನ್ನ ಧ್ಯೇಯಗಳಿಂದ ತೃಪ್ತಿಪಡುವ ಜನಸಮಾನದಲ್ಲಿ ಆ ಮಹಾ ಜೀವ, ಕಾರ್ಯದಲ್ಲಿಯೂ ಅದನ್ನು ತೋರಿಸಬೇಕೆಂಬ ನಿಷ್ಠೆಯಿದ್ದ ಚೈತನ್ಯವದು.

ಆದರೆ ಧ್ಯೇಯಗಳೆಲ್ಲ ಸಂಪೂರ್ಣವಾಗಿ ಕಾರ್ಯದಲ್ಲಿ ಪ್ರತಿಬಿಂಬಿತವಾಗಿರುವುದನ್ನು ಕಂಡ ಪುಣ್ಯ ಪುರುಷರು ಎಷ್ಟು ಮಂದಿಯೋ. ದೇಶಕ್ಕೆ ಸ್ವಾತಂತ್ರ್ಯ ದೊರಕಿದುದನ್ನು ಕಂಡು ಕೃತಾರ್ಥರಾದರೂ ಆ ಮಹಾತ್ಮ ಗಾಂಧಿಯವರು ಸತ್ಯ ಅಹಿಂಸೆಗಳು ಸರಳ ಜೀವನಗಳು ದೇಶದಲ್ಲಿ ನೆಲೆಗೊಳ್ಳುವ ಲಕ್ಷಣಗಳನ್ನು ಕೂಡ

(ಎರಡನೇ ಪುಟ ನೋಡಿರಿ)

ನಯಾ ಕಾಂಗ್ರೆಸ್

ಸ್ವಾತಂತ್ರ್ಯನಂತರ ದೇಶವನ್ನು ಆಳುತ್ತ ಬಂದ ಕಾಂಗ್ರೆಸ್ಸು ನವಯುಗಕ್ಕೊಪ್ಪುವ ಹೊಸ ಹೊಸ ನೀತಿಯನ್ನು ಅಳವಡಿಸಿಕೊಂಡು ಬಂದಿದೆ; ಆದರೆ, ಈ ಕ್ರಾಂತಿಕಾರಿ ನೀತಿಯನ್ನು ಒಪ್ಪದಿರುವವರು ಕಾಂಗ್ರೆಸಿನಲ್ಲೇ ಅಧಿಕ ಸಂಖ್ಯಾಕರಿದ್ದಾರೆ. ಆದುದರಿಂದ 'ನಯಾ ಕಾಂಗ್ರೆಸ್' ಅಂದರೆ, ಧ್ಯೇಯ ನಿಷ್ಠರಾದವರು ಮಾತ್ರ ಸದಸ್ಯರಾಗಿರುವ ಕಾಂಗ್ರೆಸ್ ಪಕ್ಷ—ಸ್ಥಾಪನೆಯಾಗಬೇಕೆನ್ನುತ್ತಾರೆ ಲೇಖಕರು. ಕಾಂಗ್ರೆಸಿನ ತತ್ವಗಳನ್ನೊಪ್ಪದವರು ಕಾಂಗ್ರೆಸಿನಿಂದ ಹೊರ ನಡೆಯಬೇಕು; ಕಾಂಗ್ರೆಸ್ ಶುದ್ಧೀಕರಣವಾಗಬೇಕು—ಎನ್ನುವ ವಾದಕ್ಕೆ ಇಂದು ಹೆಚ್ಚಿನ ಬೆಲೆ ಬಂದಿದೆ.

ಬರೆದವರು
ಶ್ರೀ ಕೆ. ಜಿ. ಹೆಗ್ಡೆ, ಬೊಂಬಾಯಿ.

"ಯಾವ ರಾಜ್ಯ ಬಂದರೇನು? ನನಗೆ ರಾಗಿ ಬೀಸುವುದು ತಪ್ಪೀತೇ?" ಎಂದು ದಿನವಿಡೀ ದಣಿದು, ದುಡಿದು, ಕಾಳುಕಡ್ಡಿಗಳ ಕೂಲಿಪಡೆದು, ಅರೆ ಹೊಟ್ಟೆ ಉಂಡು ಕಾಷ್ಠಿಕ ಜೀವನ ನಡೆಸುವ ಅಜ್ಜಮ್ಮ ನಿಡಿದಾದ, ನಿರಾಶಾಮಯ ಉದ್ಗಾರವನ್ನು ನೀಡಿದಳು ಎಂಬ ಒಂದು ಕತೆಯಿದೆ. ಆ ಬಡವಿ ಅಜ್ಜಮ್ಮನ ಕಾಲ ಕಳೆದು ಹೋಯಿತು.

ಪ್ರಜಾಪ್ರಭುತ್ವದಲ್ಲಿ 'ರಾಜ'ರನ್ನು ಉರುಳಿಸುವ, ನವರಾಜ್ಯವನ್ನು ಸಂಸ್ಥಾಪಿಸುವ ಸವಲತ್ತು ಮತ್ತು ಅಧಿಕಾರ ಎಲ್ಲಾ ಪ್ರಜೆಗಳಿಗೂ ಇದೆ. ಅರ್ಥಾತ್ ಅಜ್ಜಮ್ಮನಿಗೂ ಇದೆ. ಅಂದರೆ ಪ್ರಜಾಸತ್ತೆಯಲ್ಲಿ ಇಲ್ಲವೆ ಜನತಾ ರಾಜ್ಯ ರಚನಾ ಮತ್ತು ಪಾಲನ ಕಾರ್ಯಕ್ರಮಗಳಲ್ಲಿ ನಮಗೆ ಬೇಕಾದ ಯಾ ಒಪ್ಪಿನ ಸರಕಾರವನ್ನು ಕಟ್ಟುವ ಮತ್ತು ಕೆಡಹುವ ಸರ್ವಾಧಿಕಾರ ನಮ್ಮ ಕೈಯಲ್ಲಿದೆ. ಒಂದು ದೃಷ್ಟಿಯಿಂದ ಇದನ್ನು ಈ ನಿರಂಕುಶ ಅಧಿಕಾರವನ್ನು ಇಪ್ಪತ್ತನೆಯ ಶತಮಾನದ ಅದ್ಭುತವೆಂದು ಕರೆದರೂ ಸಲ್ಲುವುದೇ!

ಈ ಸದವಕಾಶವನ್ನು ಸಾರ್ವಜನಿಕರು ಜಾಗರೂಕತೆಯಿಂದ ಉಪಯೋಗಿಸಿದರೆ ಮಾತ್ರ "ಸರ್ವೇ ಜನಾಃ ಸುಖಿನೋಭವಂತು" ಎಂಬ ಆದೇಶದ ಬಹುಮುಖಿ ಕಲ್ಯಾಣ ರಾಜ್ಯವನ್ನು ಪಡೆಯಲು ಸಾಧ್ಯವಿದೆ. ಅಂದರೆ "ಜನರ ಯೋಗ್ಯತೆಗೆ ಅನುಗುಣವಾಗಿ ದೇಶದಲ್ಲಿ ರಾಜ್ಯ ನೆಲಸುತ್ತದೆ; ಸರಕಾರ ಸಿಗುತ್ತದೆ" ಎನ್ನುವ ಮಾತು ಸುಳ್ಳಲ್ಲ. ನಮ್ಮ ರಾಜ್ಯ ನಿರ್ಮಾಣ ಕಾರ್ಯದಲ್ಲಿ ನಾವು ನಿರ್ಲಕ್ಷ್ಯವನ್ನು ತೋರಿದಲ್ಲಿ ವಿಪತ್ತು ನಮಗೆ ಖಂಡಿತ. ಇಂತಹ ಸೌಲಭ್ಯ ನಮಗೆ ಸಿಕ್ಕಿ ಅನೇಕ ವರ್ಷಗಳು ಸಂದುಹೋದರೂ, ನಾವಿನ್ನೂ, ನವಯುಗದಲ್ಲಿ ಕಾಲಿರಿಸಿಲ್ಲವಲ್ಲಾ ಎಂದು ದುಃಖವಾಗುತ್ತದೆ.

ಹಾಗಾದರೆ ನಮ್ಮ ರಾಜ್ಯಾಡಳಿತದ ಕುಂದು ಕೊರತೆಗಳಾವುವು? ನಮ್ಮ ರಾಜಕೀಯ ಸೂತ್ರಗಳಲ್ಲಿ, ಪಂಗಡ-ಪಂಥ, ಸಂಘ ಸಂಸ್ಥೆಗಳಲ್ಲಿ ಎಂತಹ ಬದಲಾವಣೆಗಳಾಗಬೇಕು? ಸುಧಾರಣೆಯಾಗಬೇಕು? ಎಂದು ಯೋಚಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಯಾಕೆಂದರೆ ಇನ್ನು ಮುಂದೆ ನಮ್ಮ ಅಭ್ಯುದಯಕ್ಕೆ, ನಮ್ಮ ಭವಿಷ್ಯಕ್ಕೆ, ನಮ್ಮ ಸಂಸ್ಕಾರ ಸಂದೀಪನೆಗೆ ನಾವು ಬೇರಾರನ್ನೂ ದೂರಲು ಅವಕಾಶವಿಲ್ಲ. ನಮ್ಮನ್ನು ನಾವೇ ತಿದ್ದಿಕೊಂಡು, ಅನುಭವದ ನೆರಳಿನಲ್ಲಿ ಮೆಲ್ಲಮೆಲ್ಲನೆ ಹೆಜ್ಜೆಯಿಕ್ಕುತ್ತ ಸಾಗಿದರೆ ಮಾತ್ರ ನಮಗೆಲ್ಲರಿಗೆ ನೆಮ್ಮದಿ ಸಿಕ್ಕೀತು!

ಪ್ರಸ್ತುತ ನಮ್ಮ ಪ್ರಜಾಪ್ರಭುತ್ವದ ಸಂವಿಧಾನ, ರಾಜ್ಯಘಟನ ಸೂತ್ರಗಳನ್ನು ಅವಲೋಕಿಸೋಣ. ರಾಜಕೀಯ ಪಕ್ಷ ಪಂಗಡಗಳ ಅಥವಾ ಪಂಥಗಳ ಕಾರ್ಯಕ್ರಮಗಳನ್ನು ವಿವೇಚಿಸೋಣ.

ಪ್ರಜಾಪ್ರಭುತ್ವದ ತತ್ವ ತಳಹದಿಯಲ್ಲಿ ಸುಸೂತ್ರವಾಗಿ ರಾಜ್ಯಭಾರ ಅಥವಾ ಸರಕಾರದ ಕಾರ್ಯ ವ್ಯವಹಾರ ಸಾಂಗವಾಗಿ ನಡೆಯಬೇಕಾದರೆ ಪ್ರಜೆಗಳು ಸದಾಕಾಲ ಎಚ್ಚತ್ತಿರಬೇಕು. ಒಂದು ವೇಳೆ ಉದಾಸೀನತೆ ಅಥವಾ ಅಲಕ್ಷ್ಯದಿಂದ ಜನರು ಸಿದ್ದ ಹೊಡೆದರೂ, ಪ್ರಜೆಗಳಿಂದ ಚುನಾವಣೆಯಲ್ಲಿ ಆರಿಸಿ ಯಾ ಗೆದ್ದುಬಂದು ವಿಧಾನಸಭೆಗೋ ಲೋಕಸಭೆಗೋ ಹೋದ ಧುರೀಣರು ಎಚ್ಚರದಿಂದಿರಬೇಕು. ಈ ಜನತಾ ಹಿತಚಿಂತಕರು, ಸೇವಕರು ಐದು ವರ್ಷಗಳ ನಿರಂಕುಶ ಅಥವಾ ಸ್ವೇಚ್ಛಾ ಸದಸ್ಯ ಆಗದೆ ಇರಲು ಸಂವಿಧಾನದಲ್ಲಿ ಬದಲಾವಣೆಯಾಗಬೇಕು. ಚುನಾವಣೆಯಲ್ಲಿ ಆರಿಸಿಯೋ ಗೆದ್ದೋ ವಿಧಾನಸಭೆ ಯಾ ಲೋಕಸಭೆಯನ್ನು ಸೇರಿದ ಅನುಪಯೋಗಿ ಅಥವಾ ಕ್ರಿಯಾ ಹೀನ ಯಾ ಕರ್ತವ್ಯ ಶೂನ್ಯ ಸದಸ್ಯನನ್ನು ಹಿಂದಕ್ಕೆ ಕರೆಯುವ ಅಧಿಕಾರವನ್ನು ಸಂವಿಧಾನದಲ್ಲಿ ಮಾಡಿಡಬೇಕು. ಪ್ರಜಾ ಪ್ರತಿನಿಧಿಯನ್ನು ಆರಿಸುವ ಹಕ್ಕು ಪ್ರಜೆಗಳಿಗೆ ಹೇಗಿದೆಯೋ ಅದೇ ರೀತಿಯಲ್ಲಿ ಪ್ರಜಾ ಹಿತ ಸಾಧಕನಲ್ಲವೆಂದು ಕಂಡುಬಂದ ಪ್ರತಿನಿಧಿಯನ್ನು ಪದಚ್ಯುತನನ್ನಾಗಿ ಮಾಡುವ ಅಧಿಕಾರ ಪ್ರಜೆಗಳಿಗಿರಬೇಕು.

ಉದಾಹರಣೆಗಾಗಿ ದುಡ್ಡಿನಿಂದಲೋ, ದೌರ್ಜನ್ಯ ಬೆಂಬಲದಿಂದಲೋ ಕಾಯಿದೆಗಳನ್ನು ಉಲ್ಲಂಘಿಸಿ ಕಾಯಿದೆಯ ಕ್ಷೇಮಾರ್ಥ ತತ್ವಗಳನ್ನು ಉಲ್ಲಂಘಿಸಿ ರಾಜಕಾರಣಿಯಾದವರನ್ನು ಅಧಿಕಾರಚ್ಯುತರನ್ನಾಗಿ ಮಾಡಬಲ್ಲ ಸುಧಾರಣೆಗಳು ಕಾರ್ಯರೂಪಕ್ಕೆ ಬರಬೇಕು. ಉಪ್ಪಿನ ಕಲ್ಲಪ್ಪ ಮತ್ತು ಮೆಣಸಿನ ಕಾಳಪ್ಪರಂತಹರನ್ನು ನಾವು ಆರಿಸಿ ಕಳುಹಿಸಿದರೆ ಅವರಿಂದ ಪ್ರಜಾಹಿತ ಎಷ್ಟರ ಮಟ್ಟಿಗೆ ಸಾಧ್ಯವಾದೀತು? ನಮ್ಮ ಜೀವನದಲ್ಲಿ ಉಪ್ಪು ಮತ್ತು ಮೆಣಸಿಗೆ ಮಾತ್ರ ಪ್ರಾಧಾನ್ಯ ಸಿಕ್ಕೀತು!

ಪ್ರಜಾಪ್ರಭುತ್ವದಲ್ಲಿ ಪ್ರಜಾರಾಜ್ಯ ಸುಸೂತ್ರವಾಗಿ ಸಮಾಧಾನಕರವಾಗಿ ನಡೆಯಬೇಕಾದರೆ ನಮ್ಮಲ್ಲಿ ಈಗಿದ್ದ ರಾಜಕೀಯ ಪಂಗಡಗಳಲ್ಲಿ ಬದಲಾವಣೆಯಾಗಬೇಕು. ರಾಜಕೀಯ ಪಕ್ಷಗಳು ಕಡಿಮೆಯಾಗಬೇಕು. ಮತ್ತು ದೇಶ ಹಿತ ದೃಷ್ಟಿಯಿಂದ ಪ್ರಜೆಗಳು ಇದ್ದ ಹತ್ತಿಪ್ಪತ್ತು ಪಕ್ಷಗಳಲ್ಲಿ ಬರೀ ಎರಡನ್ನು ಆದರ್ಶವನ್ನಾಗಿ ಇಟ್ಟುಕೊಂಡು, ಅವುಗಳಲ್ಲಿ ಅಥವಾ ಈ ಎರಡರಲ್ಲಿ, ಉತ್ತಮವಾದುದೊಂದನ್ನು ಆರಿಸಿ ಅದನ್ನು ಪೋಷಿಸಬೇಕು. ಉಳಿದವುಗಳನ್ನು ಅಳಿಸುವ ಯತ್ನ ಪ್ರಯತ್ನಗಳನ್ನು ಮಾಡಬೇಕು. ಅಂದರೆ ಎಲ್ಲರನ್ನು ನಂಬಿ ಕೆಡುವ ಗಾದೆಯಂತೆ ನಮ್ಮ ಬಾಳು ಆಗ ಬಾರದು. ಆದುದರಿಂದ ನಾವು ಬರೀ ಎರಡು ಪಕ್ಷಗಳಿಗೆ ಸಹಾನುಭೂತಿಯನ್ನು ಪ್ರದರ್ಶಿಸಿ ಚುನಾವಣೆಯ ಸಮಯ ಬರೀ ಒಂದನ್ನು ಮಾತ್ರ ಅಧಿಕಾರಕ್ಕೆ ತರಿಸುವಂತಾಗಬೇಕು. ಆಗ ತಾನೆ ಪ್ರಜಾರಾಜ್ಯ ಪ್ರಬುದ್ಧ ರಾಜ್ಯವಾದೀತು. ಸರ್ವತಂತ್ರ ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ಯಶಸ್ಸು ಲಭಿಸೀತು.

ಸುಲಭದಲ್ಲೇ ತಿಳಿಯಪಡಿಸಬೇಕಾದರೆ, ಆಳುವ ಸರಕಾರ ಲಂಗು ಲಗಾಮಿಲ್ಲದ ಕುದುರೆಯ ಅವತಾರವನ್ನು ತಾಳಲು ಅವಕಾಶ ಕಲ್ಪಿಸಿಕೊಡಬಾರದು. ಅಂತಹ ಸಂದರ್ಭ ಬಂದಾಗ ವಿರೋಧ ಪಕ್ಷ ಸರಕಾರದ ಜವಾಬ್ದಾರಿಯನ್ನು ಶಿರಸಾ ವಹಿಸಲು ಸಿದ್ಧವಿರಬೇಕು. ವಿರುದ್ಧ ಪಕ್ಷದ ಸರಕಾರ ಅಧಿಕಾರದಲ್ಲಿ ಬರಬೇಕೆಂದಾದರೆ ಚುನಾವಣೆಯೇ ಆಗಬೇಕೆಂದಿಲ್ಲ. ಚುನಾಯಿತರಾದ ಸದಸ್ಯರಲ್ಲೇ ಎರಡು ಪಂಗಡಗಳಿರಬೇಕು, ಅಂದರೆ ಎಡ-ಬಲವೆಂದಲ್ಲ. ಇಂದಿನ ಸರಕಾರದ್ದೊಂದು ಪಕ್ಷ! ನಾಳಿನ ಸರಕಾರದ್ದು ಇನ್ನೊಂದು ಪಕ್ಷ! ಅರ್ಥಾತ್ ಆಳುವ ಸರಕಾರ ಪ್ರಜಾ ದೃಷ್ಟಿಯಿಂದ ಅಸಮರ್ಥವೆಂದಾದಲ್ಲಿ ಮರುಕ್ಷಣ ವಿರೋಧ ಪಕ್ಷ ಅಧಿಕಾರಕ್ಕೆ ಬರಲು ಅವಕಾಶ ಕೊಡಬೇಕು ವಿನಃ ಪಕ್ಷ ಪಂಗಡದ ಕಟ್ಟುಕಟ್ಟಲೆಗಳಿಗೆ ಗಂಟುಬಿದ್ದು ಸುಮ್ಮನಿರುವವರು ನಮಗೆ ಬೇಕಾಗಿಲ್ಲ.

ಜನತಾ ಸರಕಾರದ ಸಂವಿಧಾನಕ್ಕೆ ಅಥವಾ ರಾಜ್ಯಾಡಳಿತ ಪರಂಪರೆಯಲ್ಲಿ ಬ್ರಿಟನು ಹೆಸರುವಾಸಿಯಾದುದು. ಅಲ್ಲಿ ಮುಖ್ಯವಾಗಿ ಎರಡು ಪಕ್ಷಗಳಿವೆ. ಕನ್ಸರ್ವೇಟಿವ್ ಮತ್ತು ಲೇಬರ್. ಇದನ್ನು ಸನಾತನ ಸಂರಕ್ಷಿತ ಮತ್ತು ಕೂಲಿಗಾರ ಪಕ್ಷವೆಂದು ಕರೆಯಬಹುದು. ಅಲ್ಲಿಯ ಪಾರ್ಲಿಮೆಂಟಿನಲ್ಲಿ ಯಾವ ಕ್ಷಣ ಸರಕಾರ ಉರುಳೀತೆಂದು ಹೇಳುವುದು ಸುಲಭವಿಲ್ಲ. ಆಳುವ ಪಕ್ಷ ಸೋತರೆ ಕೂಡಲೇ ವಿರುದ್ಧ ಪಕ್ಷ ಸರಕಾರ ರಚನಾ ಜವಾಬ್ದಾರಿಯನ್ನು ವಹಿಸುವುದು.

ಇದೇ ಮಾದರಿಯಲ್ಲಿ, ಅಮೇರಿಕೆಯಲ್ಲಿ ರಿಪಬ್ಲಿಕನ್ ಮತ್ತು ಡೆಮೊಕ್ರೆಟಿಕ್ ಎಂಬ ಎರಡು ಪಕ್ಷಗಳಿವೆ. ಈ ಪ್ರಬಲ ಪಕ್ಷಗಳಲ್ಲದೆ ಇನ್ನಿತರ ಪಕ್ಷಗಳು ಅಲ್ಲಿ ಇವೆಯಾದರೂ ಅಲ್ಲಿನ ಜನತೆ ಈ ಎರಡು ಪಕ್ಷಗಳ ವಿನಃ

(೨೧ನೇ ಪುಟ ನೋಡಿರಿ)

To grow more food
Use
KIRLOSKAR
PUMPING SETS



ಅಧಿಕ ಆಹಾರ ಉತ್ಪಾದನೆಗಾಗಿ
ಕಿರ್ಲೋಸ್ಕರ
ಪಂಪಿಂಗ್ ಸೆಟ್‌ಗಳನ್ನು
ಉಪಯೋಗಿಸಿರಿ

Distributors:
KARKERA SONS & CO.
MAIDAN WEST ROAD,
MANGALORE-1.

ವಿತರಣೆಗಾರರು:
ಕರ್ಕೇರ ಸನ್ಸ್ & ಕೊ.
ಮೈದಾನ್ ವೆಸ್ಟ್ ರೋಡು,
ಮಂಗಳೂರು—1.

ಆಕಾಶವಾಣಿಯ ಕಾರ್ಯಕ್ರಮಗಳು

ಭಾರತೀಯ ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ಸುಧಾರಣೆಗಾಗಿ ಬೇಡಿಕೆಯ ಹಿನ್ನೆಲೆ ಹೊಸತಾಗಿ ಈ ಖಾತೆಯ ಮಂತ್ರಿಯಾದ ಶ್ರೀಮತಿ ಇಂದಿರಾ ಗಾಂಧಿಯವರ ಆಶ್ವಾಸನ ಇವುಗಳ ಮಧ್ಯೆ ಆಕಾಶವಾಣಿಯು ಈಗ ಸಂಯೋಜಿಸುತ್ತಿರುವ ವಿವಿಧ ಕಾರ್ಯಕ್ರಮಗಳ ವಿಡಂಬನೆಯೊಂದನ್ನು ಇಲ್ಲಿ ನೋಡಬಹುದು.

ಬರೆದವರು
ಶ್ರೀ ಕು. ಗೋ.

ಇದು ಆಕಾಶವಾಣಿ-ಬಕಾಸುರಪುರ.

೩೩.೩೩ ೧೯೭೦ನೇ ಮೀಟರುಗಳಲ್ಲಿ ಅಂದರೆ ಘಂಟೆಗೆ ೭೩ ಮೋಟಾರು ಸೈಕಲ್ಲುಗಳಲ್ಲಿ ನಮ್ಮ ನಾಲ್ಕನೆಯ ಪ್ರಸಾರವನ್ನು ಆರಂಭಿಸುತ್ತಿದ್ದೇವೆ.

ಈಗ ಶ್ರೀಮಾನ್ ಸೊಳ್ಳೆರಾಯರಿಂದ ಪಿಟೀಲು ವಾದನ......ಇದುವರೆಗೆ ಶ್ರೀಮಾನ್ ಸೊಳ್ಳೆರಾಯರಿಂದ ಪಿಟೀಲು ವಾದನವನ್ನು ಕೇಳಿದಿರಿ. ಇದು ಆಕಾಶವಾಣಿ. ಈಗ ವಾರ್ತೆಗಳು. ಓದುತ್ತಿರುವವರು ಶ್ರೀಮತಿ ಮೂಕಮ್ಮ.

ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿಯನ್ನು ಒಪ್ಪಿಸಲು ಕೇಂದ್ರ ಸರ್ಕಾರದವರು ಚನ್ನಪಟ್ಟಣದ ರೆಡ್ಡಿ ಕೇರಿಯ ನಾಲ್ವರು ಮುಖಂಡರನ್ನು ನೇಮಿಸಿದ್ದಾರೆ. ಅಂತರಾಷ್ಟ್ರೀಯ ನಾಯಕರುಗಳ ಉನ್ನತೋನ್ನತ ಮಟ್ಟದ ಸಭೆಯೊಂದು ಮುಂದಿನ ತಿಂಗಳು ಚಂದ್ರಮಂಡಲದಲ್ಲಿ ನಡೆಯಲಿದೆ. ಈ ಸಭೆಯಲ್ಲಿ ಭಾಗವಹಿಸಲು ರಷ್ಯಾ ಅಮೆರಿಕಾ ಪ್ರತಿನಿಧಿಗಳಲ್ಲದೆ ಕರ್ನಾಟಕದ ಕೆಲವು ಪೂಜೀ ನಾಯಕರುಗಳೂ ಹೋಗಲಿದ್ದಾರೆ. ಈ ಸಭೆ ಮುಗಿಯುವವರೆಗೂ ಹೊಸದಾಗಿ ಮದುವೆಯಾದ ವಧೂವರರು 'ಮಧು ಚಂದ್ರ'ಕ್ಕೆ ಚಂದ್ರಲೋಕಕ್ಕೆ ಹೋಗುವುದನ್ನು ನಿಶೇಧಿಸಲಾಗಿದೆ ಎಂದು ವರದಿಯಾಗಿದೆ.

ಹರಿಗೆ ಮಂತ್ರಿಗಳಾದ ಶ್ರೀ ಹಿರಿಯಣ್ಣನವರು ಮೊನ್ನೆ ಹಾಂಗಾಡಿಗೆ ಭೇಟಿಯಿತ್ತಾಗ ಅಲ್ಲಿಯ ಮಹಿಳಾ ನಿಯೋಗವೊಂದು ಮಾನ್ಯ ಮಂತ್ರಿವರ್ಯರನ್ನು ಭೇಟಿ ಮಾಡಿ ಹಾಂಗಾಡಿಯಲ್ಲಿ ಕೂಸುಗಳ ಹೆರಿಗೆಗಿಂತಲೂ ಸೊಳ್ಳೆಗಳ ಜನನ ಜಾಸ್ತಿ ಆಗುತ್ತಿರುವದರಿಂದ ಸೊಳ್ಳೆಗಳ ಜನನಕ್ಕೆ ಒಂದೆರಡು ಮೋರಿಗಳನ್ನು ತೋಡಿಸಬೇಕೆಂದೂ ಅವುಗಳ ಅಭಿವೃದ್ಧಿಗೆ ಯೋಜನೆಯೊಂದನ್ನು ಕೈಗೊಳ್ಳಬೇಕೆಂದೂ ಮನವಿ ಮಾಡಿಕೊಂಡರು. ಮಾನ್ಯ ಹೆರಿಗೆ ಮಂತ್ರಿಗಳು ಈ ವಿಚಾರವನ್ನು ತಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಿ ಸೂಕ್ತ ಏರ್ಪಾಡು ಮಾಡುವುದಾಗಿ ಭರವಸೆ ಇತ್ತರೆಂದು ವರದಿಯಾಗಿದೆ.

ಹುಣಸೂರಿನಲ್ಲಿ ಹುಚ್ಚಾಸ್ಪತ್ರೆಯೊಂದರ ಆರಂಭೋತ್ಸವವೊಂದನ್ನು ಮುನಿಸಿಪಲ್ ಅಧ್ಯಕ್ಷರು ಕಳೆದ ವಾರ ನೆರವೇರಿಸಿದರು. ಆ ಸಂದರ್ಭದಲ್ಲಿ ಅಧ್ಯಕ್ಷರು ಮಾತನಾಡುತ್ತಾ ಈಗಿನ ಕಾಲದಲ್ಲಿ ಹುಚ್ಚಾಸ್ಪತ್ರೆಗಳ ಆವಶ್ಯಕತೆ ತುಂಬಾ ಇದೆಯೆಂದೂ ಪ್ರತಿಯೊಂದು ಊರಲ್ಲೂ ಒಂದೊಂದು ಹುಚ್ಚಾಸ್ಪತ್ರೆಯನ್ನು ತೆರಯಲು ಸರ್ಕಾರದವರು ಆಲೋಚಿಸುತ್ತಿರುವುದಾಗಿಯೂ ತಿಳಿಸಿದರು. ಹುಚ್ಚಾಸ್ಪತ್ರೆಗೆ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರಲೆಂದು ಅವರು ಹಾರೈಸಿದರೆಂದು ವರದಿಯಾಗಿದೆ.

ಈ ಸಲದ ದಸರಾ ವಸ್ತುಪ್ರದರ್ಶನ ತುಂಬ ವೈವಿಧ್ಯಪೂರ್ಣವಾಗಿರುವುದಾಗಿ ತಿಳಿದು ಬಂದಿದೆ, ದಸರಕ್ಕೆ ಮೈಸೂರಿಗೆ ಬರುವ ದೇಶವಿದೇಶೀಯ ಜನಗಳಿಂದ ಎಲ್ಲ ವಿಧಗಳಿಂದಲೂ ಹಣ ವಸೂಲಿ ಮಾಡಲು ಮೈಸೂರಿನ ಪೌರರು ಸಿದ್ಧರಾಗಿದ್ದಾರೆಂಬುದಾಗಿ ನಂಬಲರ್ಹವಾದ ವಲಯಗಳಿಂದ ತಿಳಿದುಬಂದಿದೆ. ಕಲಾ ಪ್ರದರ್ಶನಕ್ಕೆ ಕಳೆದ ವರ್ಷಕ್ಕಿಂತಲೂ ಹೆಚ್ಚು ಸಂಖ್ಯೆಯ ಮತ್ತು ಕಳಪೆಯ ಚಿತ್ರಗಳು ಆರಿಸಲ್ಪಟ್ಟಿರುವುದು ಈ ವರ್ಷದ ಒಂದು ವಿಶೇಷತೆಯೆಂದು ತಿಳಿದುಬಂದಿದೆ, ಜಾನ್‌ಸನ್ ಕೃಶ್ಚೀವ್ ಮುಂತಾದವರು ಆಗಮಿಸುವ ನಿರೀಕ್ಷೆಯೂ ಇದೆಯೆಂದು ಹೇಳಲಾಗಿದೆ. ಅಲ್ಲದೆ ಇಂಗ್ಲಂಡಿನ ರಾಜಕೀಯದಲ್ಲಿ ಘೋಷಿಸಿಬ್ಬಿಸಿರುವ ಕ್ರಿಸ್ಟೀನ್ ಕೀಲರಳ ಅಂಗಪ್ರದರ್ಶನವನ್ನೂ ಇದೇ ಸಂದರ್ಭದಲ್ಲಿ ಏರ್ಪಡಿಸಲಾಗಿದೆ ಎಂದು ನಂಬಲರ್ಹವಾದ ವಲಯಗಳಿಂದ ತಿಳಿದು ಬಂದಿದೆ.

ಕಳೆದವಾರ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಅರಕಲಗೂಡಿನ ರೈತ ರೇವಣ್ಣನವರು ಪ್ರಥಮ ಬಹುಮಾನವನ್ನೂ, ಮಂಗಳೂರಿನ ಮಲ್ಲಿಗೆ ಮಾರುವವಳೊಬ್ಬಳು ದ್ವಿತೀಯ ಬಹುಮಾನವನ್ನೂ ಪಡೆದರೆಂದು ವರದಿಯಾಗಿದೆ. ಬಹುಮಾನ ವಿನಿಯೋಗ ಮಾಡುತ್ತಾ ಹೆಂಡದಂಗಡಿಯ ಮಾಲಿಕ ಮಾರಣ್ಣನವರು ಈಗಿನ ಕಾಲದಲ್ಲಿ ಜನರು ತಮ್ಮ ಸೌಂದರ್ಯಕ್ಕೆ ಹೆಚ್ಚಿನ ಗಮನ ಕೊಡಬೇಕೆಂದೂ, ಸೌಂದರ್ಯ ವರ್ಧಕ ವಸ್ತುಗಳನ್ನು ಹೆಚ್ಚಾಗಿ ಬಳಸುವುದಲ್ಲದೆ ಮಾದಕ ವಸ್ತುಗಳನ್ನೂ ಬಳಸಬೇಕೆಂದೂ ಆದರಿಂದ ದೇಹಕ್ಕೂ ದೇಶಕ್ಕೂ ಒಳ್ಳೆಯದೆಂದು ತಿಳಿಸಿದರೆಂದು ವರದಿಯಾಗಿದೆ.

ಸಾಹಿತ್ಯಾಭ್ಯಾಸಗಳ ಸಭೆಯ ವಾರ್ಷಿಕೋತ್ಸವವು ಕಳೆದವಾರ ಸೋಮನ ಹಳ್ಳಿಯಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರೊಬ್ಬರ ಅಧ್ಯಕ್ಷತೆಯಲ್ಲಿ ಜರುಗಿತು, ಪ್ರಸಿದ್ಧ ಸಂಗೀತಗಾರರಿಂದ ಭಾಷಣವಾಯಿತೆಂದೂ, ವಿವಿಧ ವಿನೋದ ಹಾವಳಿ ನಡೆಯಿತೆಂದೂ ವರದಿಯಾಗಿದೆ.

ರೇಣುಕಾ ಪುರದ ಮಹಿಳೆಯರೆಲ್ಲಾ ಮೊನ್ನೆ ಸಭೆ ಸೇರಿ ತಾವು ಇನ್ನು ಮುಂದೆ ತಮ್ಮ ಗಂಡಂದಿರೊಂದಿಗೆ ಇನ್ನೆಂದಿಗೂ ಜಗಳವಾಡಬಾರದೆಂಬ ನಿರ್ಣಯವನ್ನು ಮಾಡಿದ್ದಾರೆಂದು ತಿಳಿದು ಬಂದಿದೆ. ಆ ಸಭೆಯಲ್ಲಿ ಭಾಗವಹಿಸಿದ್ದ ಸೊಸೆಯರೆಲ್ಲಾ ಒಂದು ತಿದ್ದುಪಡಿಯನ್ನು ಸೂಚಿಸಿ 'ಅತ್ತೆಯರೂ ಪೊರಕೆ ಹಿಡಿದುಕೊಂಡು ಸೊಸೆಯರ ಮುಂದೆ ಬರಕೂಡದು' ಎಂಬ ನಿರ್ಣಯವನ್ನು ಮಾಡಿದರೆಂದು ವರದಿಯಾಗಿದೆ. ಈ ವಿಚಾರ ತಿಳಿದ ಗಂಡಂದಿರೆಲ್ಲಾ ಸಂತೋಷಗೊಂಡು ತಾವು ಇನ್ನು ಮುಂದೆ ಮೀಸೆಬಿಡಬೇಕೆಂದು ನಿಶ್ಚೈಸಿದ್ದಾರೆಂದು ನಂಬಲರ್ಹವಾದ ವಲಯಗಳಿಂದ ತಿಳಿದು ಬಂದಿದೆ.

ಕಲಕತ್ತಾ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳೆಲ್ಲಾ ತಾವು ಪರೀಕ್ಷೆಗಳಿಗೆ ಕುಳಿತು ಕೊಳ್ಳುವುದಿಲ್ಲವೆಂದು ಮುಷ್ಕರ ಹೂಡಿದ್ದಾರಂತೆ, ಇನ್ನು ಮುಂದೆ ಮಾರ್ಕೆಟಿನಲ್ಲಿ ಯಾವ ತರಹದ ನೋಟ್ಸ್ ಆಗಲೀ, ಗೈಡ್‌ಗಳಾಗಲೀ ಇರಕೂಡದೆಂದೂ, ಚಲನ ಚಿತ್ರಪ್ರದರ್ಶನವನ್ನು ನಿಲ್ಲಿಸಬೇಕೆಂದೂ, ಯಾವ ತರಹದ ಜಾಹೀರಾತುಗಳೂ ತಮ್ಮ ಕಣ್ಣಿಗೆ ಬೀಳಬಾರದೆಂದೂ, ಇಂಥ ಏರ್ಪಾಡನ್ನು ಸರ್ಕಾರ ಕೈಗೊಂಡರೆ ಮಾತ್ರ ತಾವು ಕೇವಲ ಟೆಕ್ಸ್ಟ್ ಬುಕ್‌ಗಳನ್ನೇ ಓದಿ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗುತ್ತೇವೆಂದು ಅವರು ತಿಳಿಸಿದರೆಂದು ವರದಿಯಾಗಿದೆ. ಇದರ ಬಗ್ಗೆ ಮೈಸೂರಿನ ವಿದ್ಯಾರ್ಥಿಗಳು ಮಾಡುತ್ತಿರುವ ಟೀಕೆಗಳಿಗೆ ಆಧಾರವಿಲ್ಲವೆಂದೂ ತಿಳಿದು ಬಂದಿದೆ.

ಕರ್ನಾಟಕ ರಾಜ್ಯೋದಯವಾದ ಮೇಲೆ ಪ್ರಥಮ ಬಾರಿಗೆ ದಕ್ಷಿಣದ ತುಳುವರು ಮತ್ತು ಕೊಂಕಣಿಗಳು ತಮಗೆ ಬೇರೆ ಪ್ರಾಂತ್ಯವನ್ನು ನಿರ್ಮಿಸಿಕೊಡಬೇಕೆಂಬೂ ಅದು ಸಾಧ್ಯವಾಗದಲ್ಲಿ ತುಳು ಮತ್ತು ಕೊಂಕಣಿ ಭಾಷೆಗಳನ್ನು ವಿಶ್ವವಿದ್ಯಾಲಯಗಳಲ್ಲಿ ಕಡ್ಡಾಯವಾಗಿ ಬೋಧಿಸಬೇಕೆಂದೂ ಹಠ ಹಿಡಿಯುತ್ತಿರುವುದಾಗಿ ವರದಿಯಾಗಿದೆ. ಈ ವಿಚಾರವನ್ನು ಪರಿಗಣಿಸಿ ಕೊರಗ ಪೂಜಾರಿ ಪರ. ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಅಲ್ಲಗಳೆದರೆಂದೂ, ದಕ್ಷಿಣದ ಜನರು ರಾಜಕೀಯಕ್ಕೆ ಪ್ರವೇಶಿಸದೆ ಸದಾ ದುಡಿಯುವುದರಲ್ಲಿ ಮತ್ತು ಕುಡಿಯುವುದರಲ್ಲಿ ಗಮನ ಕೊಡುವರೆಂದು ತಿಳಿಸಿದರೆಂದು ವರದಿಯಾಗಿದೆ.

(೨೦ನೇ ಪುಟ ನೋಡಿರಿ)

MODERN GARAGE
UDIPI
(Estd: 1950)
OFFERS
THE CAR OWNERS,
THE SERVICE OF A
WELL EQUIPPED
Service Station
Supervision By
TECHNICALLY QUALIFIED STAFF
Phone: 65.

INDIA'S MOST DURABLE & ECONOMICAL

DIESEL TRUCK & BUS CHASSIS....

TATA - MERCEDES - BENZ

DIESEL TRUCKS & BUS CHASSIS

Rs. 250

GETS YOU A NEW 1963

himalux

By a HIMALUX
the refrigerator—
you can afford

HIMALUX is the registered trade mark of Himalux Private Limited

Manufactured by
VINAR LTD
Calcutta-16

ON HIRE-PURCHASE

Himalux, the quality refrigerator, can be yours now for a down payment of only Rs. 250 (plus local taxes). Pay the balance in 12 monthly instalments of Rs. 87 - 50 nP. Lose no time—check with your nearest Himalux dealer today.

Telephone **362 & 186** Telegrams "**ARVIND**"

ARVIND MOTORS

BALMATTA ROAD : : MANGALORE-1.

ನೆಹರು ಅನಂತರ ಏನು?

ನೆಹರೂರ ಅನಂತರ ಯಾರು ಎಂಬ ಪ್ರಶ್ನೆ ಇಂದು ಉಳಿದಿಲ್ಲ. ನೆಹರು ಅನಂತರ ಏನು? ಎಂಬುದೀಗ ನಮ್ಮ ಮುಂದೆ ನಿಂತಿದೆ ಭೀಮಾಕಾರವಾಗಿ. ಪ್ರತಿ ನಾಗರಿಕನಿಗೆ ಸ್ವಾತಂತ್ರ್ಯ, ಸಮಾನತೆ, ಸಹೋದರತೆಯ ಅವಕಾಶವನ್ನು ಕಲ್ಪಿಸಿಕೊಡಲು ಎಲ್ಲರೂ ಸ್ವಯಂಸ್ಫೂರ್ತಿಯಿಂದ ಮುಂದೆ ಬರುವುದು, ನೆಹರೂ ಬಯಸಿದ ಸಮಾಜವಾದಿ ಸಮಾಜ ರಚನೆ ಮಾಡುವುದು ನಮ್ಮ ದಿವಂಗತ ಪ್ರಧಾನಿಯವರಿಗೊಂದೇ ಒಂದು ಚಿರಸ್ಮಾರಕ.

ಬರೆದವರು

ಶ್ರೀ ಸಂಜೀವ ಲಕ್ಷ್ಮೇಶ್ವರ, ಬಿ. ಎ; ಮುಂಬಯಿ.

ನಮ್ಮ ದೇಶದ ಕಣ್ಮಣಿ ಆದ ಪ್ರಧಾನ ಪಂಡಿತ ನೆಹರು ಅವರು ಜೀವದಿಂದ ಇರುವಾಗ ಇತ್ತೀಚಿನ ಕೆಲವರ್ಷಗಳಿಂದ ದೇಶ ವಿದೇಶಗಳ ಜನತೆಯ ಮುಂದೆ ಒಂದು ಪೆಡಂಭೂತವಾದ ಪ್ರಶ್ನೆ ಇದ್ದಿತು. ಅದೆಂದರೆ "ನೆಹರು ನಂತರ ಯಾರು?" ಆ ಪ್ರಶ್ನೆಗೆ ಸಮರ್ಪಕ ಉತ್ತರ ಕೊಡುವುದು ಯಾರಿಂದಲೂ ಸಾಧ್ಯವಾಗಿರಲಿಲ್ಲ ಎಂಬುದನ್ನು ಒಪ್ಪಲೇಬೇಕು. ಏಕೆಂದರೆ ಪಂ. ನೆಹರು ಅವರ ವ್ಯಕ್ತಿತ್ವವು ಇಡೀ ಜಗತ್ತಿನ ಜನಾಂಗದಲ್ಲಿಯೇ ಎದ್ದು ಕಾಣುತ್ತಿದ್ದಿತು, ಆದಕ್ಕಾಗಿಯೇ ಅವರಂಥ ಪ್ರಭಾವಶಾಲಿ ವ್ಯಕ್ತಿತ್ವವುಳ್ಳ ಭಾರತೀಯನು ಮುಂದೆ ದೊರೆಯಬಲ್ಲನೇ? ಎಂಬುದು ಎಲ್ಲರ ಶಂಕೆ ಆಗಿದ್ದಿತು. ಹೀಗೆ ಎನಿಸುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಪಂ. ನೆಹರು ಅವರನ್ನು ಮರೆಯುವದು ಯಾವುದೇ ಹಿಂದೀಯನಿಗೆ ಶಕ್ಯವಾಗಲಾರದು. ಅದಕ್ಕೆ ಕಾರಣವೆಂದರೆ ಅವರು ನಮ್ಮ ದೇಶವನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಿದರಲ್ಲದೇ, ಸ್ವಾತಂತ್ರ್ಯ ನಂತರ ೧೭ ವರ್ಷಕಾಲ ದೇಶದ ಆಡಳಿತ ಸೂತ್ರವನ್ನು ಕೈಯಲ್ಲಿ ತೆಗೆದುಕೊಂಡು ದೇಶದ ಸರ್ವತೋಮುಖ ಬೆಳವಣಿಗೆಗೆ ತಮ್ಮ ಶಕ್ತಿ ಮೀರಿ —ತಮ್ಮ ಆರೋಗ್ಯದ ಪರಿವೆಯಿಲ್ಲದೇ— ಪ್ರಯತ್ನಿಸಿದರಲ್ಲದೇ, ವಿಶ್ವದ ದೃಷ್ಟಿಯಲ್ಲಿ ಭಾರತಕ್ಕೊಂದು ಸ್ಥಾನವನ್ನು ಕಲ್ಪಿಸಿಕೊಟ್ಟರು. ಭಾರತದ ಬಗ್ಗೆ ಹಾಗೂ ಭಾರತೀಯರ ಬಗ್ಗೆ ಅವರಿಗಿದ್ದ ಕಳಕಳಿಯನ್ನು ಕೇವಲ ಅವರ ಮೇಲೆ ಹೇಳಿದ ಕಾರ್ಯಗಳಿಂದ ತಿಳಿಯುವೇ, ಅವರು ನಿಧನ ಹೊಂದುವ ೧೦ ವರುಷ ಮೊದಲು ಬರೆದು ಇಟ್ಟ ಮೃತ್ಯು ಪತ್ರದಲ್ಲಿ ವ್ಯಕ್ತಪಡಿಸಿದ ಇಚ್ಛೆಯಿಂದ ತಿಳಿದು ಬರುವದು. ಅದೆಂದರೆ ತಮ್ಮ ಮರಣದ ನಂತರ ತಮ್ಮ ಚಿತಾಭಸ್ಮವನ್ನು ವಿಮಾನ ಮೂಲಕ ನಮ್ಮ ದೇಶದ ಎಲ್ಲ ಭಾಗದಲ್ಲಿ ವಿಸರ್ಜಿಸಬೇಕು ಅಂದರೆ ತಮ್ಮ ದೇಹವು ಈ ಪುಣ್ಯಭೂಮಿ—ಭಾರತದ ಭೂಮಿಯಲ್ಲಿ ಲೀನವಾಗುವದು. ಎಂಥ ಉದಾತ್ತ ವಿಚಾರ! ಪಂಡಿತ ನೆಹರೂರ ಘನ ವ್ಯಕ್ತಿತ್ವಕ್ಕೆ, ವಿಚಾರ ಸರಣಿಗೆ ಯೋಗ್ಯವಾದ ವಿಚಾರವೇ ಸರಿ.

ಆದರೆ ಹೀಗೆ ದೇಹಸವೆಸಿ, ದೇಶಕಾರ್ಯದಲ್ಲಿ ತೊಡಗಿದಾಗಲೇ ನಿಧನ ಹೊಂದಿದ ಹಾಗೂ ಈ ಭೂಮಿಯಲ್ಲಿ ಲೀನವಾದ ನಮ್ಮ ಜನನಾಯಕನಿಗೆ ನಾವು ತಿರುಗಿ ಮಾಡಿದುದೇನು? ಯಾವುದೋ ಶಾಲೆ ಕಾಲೇಜಿಗೆ ಅಥವಾ ಯಾವುದೋ ಬೀದಿಗೆ ನೆಹರು ಅವರ ಹೆಸರಿಟ್ಟರೆ ಇಲ್ಲವೇ ಅವರ ಪುತ್ಥಳಿ ಮಾಡಿಸಿ ಪ್ರತಿ ಒಂದು ಊರಿನಲ್ಲಿ ನಿಲ್ಲಿಸಿದರೆ, ನಾವು ನಮ್ಮ ಕರ್ತವ್ಯ ಮಾಡಿದಂತಾಗುವದಿಲ್ಲ. ಹೀಗೆ ಮಾಡಲು ನೆಹರು ಅವರು ಯಾವದೋ ಮಾಮೂಲಿ ವ್ಯಕ್ತಿ ಅಲ್ಲ ಎಂಬುದನ್ನು ಲಕ್ಷ್ಯದಲ್ಲಿಡಬೇಕು.

ಹಾಗಾದರೆ ದಿವಂಗತ ನೆಹರು ಅವರು ನಮ್ಮ ದೇಶಕ್ಕೆ ಸಲ್ಲಿಸಿದ ಸೇವೆಗೆ ನಾವು ಮಾಡಬೇಕಾದುದೇನು? ಮೊದಲನೆಯದಾಗಿ ನಮ್ಮ ದೇಶಕ್ಕೆ ಅವರು ತಂದುಕೊಟ್ಟ ಸ್ವಾತಂತ್ರ್ಯವನ್ನು ಹಾಗೂ ವಿಶ್ವದ ದೃಷ್ಟಿಯಲ್ಲಿ ಕಲ್ಪಿಸಿಕೊಟ್ಟ ಸ್ಥಾನವನ್ನು ಕಾಪಾಡಿಕೊಳ್ಳಲು ಅವಶ್ಯವಾದ ದೇಶಭಕ್ತಿ, ಒಕ್ಕಟ್ಟು, ನಿಸ್ವಾರ್ಥ ಸೇವೆಗಳನ್ನು ಅವಗತ ಗೊಳಿಸಿಕೊಳ್ಳಬೇಕು. ಅದರಂತೆ ದಿವಂಗತ ನೆಹರು ಅವರ ಅಂತಿಮ ಗುರಿಯಾದ ಸಮಾಜವಾದೀ ಸಮಾಜ ರಚನೆಯನ್ನು ನನಸಾಗಿ ಮಾಡಲು ಹೆಣಗಬೇಕು.

ಈ ದೃಷ್ಟಿಯಿಂದ ದಿವಂಗತ ನೆಹರು ಅವರು ನಿಧನ ಹೊಂದಿದ ನಂತರದ ಈ ೩ ತಿಂಗಳಿನಲ್ಲಿ ನಮ್ಮ ದೇಶದಲ್ಲಿ ನಡೆದ ಘಟನೆಗಳನ್ನು ವಿಮರ್ಶೆ ಮಾಡಲಾಗಿ ನಮ್ಮ ಕೃತಿಗಳು ಎಷ್ಟು ಹೇಯವಾದುದು ಎಂಬುದು ತಿಳಿದು ಬರುವದು.

ಸಾಮಾನ್ಯ ನಾಗರಿಕನಿಗೆ ಜೀವಿಸಲು ಅಗತ್ಯವಾದ ಆಹಾರಬಟ್ಟೆಗಳು ಕೂಡ ಅವನ ಕೈಗೆ ಎಟುಕದ ವಸ್ತುಗಳಾಗಿವೆ. ಆಹಾರದ ಬಗ್ಗೆ ಆದ ಹಾಹಾಕಾರ, ದಿನದಿನಕ್ಕೆ ಏರುತ್ತಿರುವ ಬೆಲೆ, ವ್ಯಾಪಾರಸ್ಥರ ಲಾಭ ಬಡಕತನ, ರಾಜಕಾರಣಿಗಳ ಚತುರಂಗಬಾಟಗಳು ನಮ್ಮ ದೇಶದ ಆಂತರಿಕ ಪರಿಸ್ಥಿತಿಯನ್ನೂ ಹದಗೆಡಿಸಿವೆ ಎಂದು ಹೇಳಲೇಬೇಕು. ಹೊಟ್ಟೆಗಿಲ್ಲದ ಮನುಷ್ಯನು ಏನನ್ನೂ ಮಾಡಲು ಹೇಸಲಾರನು. ಒಮ್ಮೆ ಅರಾಜಕತೆ ಉಂಟಾದರೆ ದೇಶದಲ್ಲಿ ಅಶಾಂತತೆ ಹಾಗೂ ಆರ್ಥಿಕ ಮುಗ್ಗಟ್ಟುಗಳು ಆಗದೇ ಇರದು. ಈಗಾಗಲೇ ದೇಶದ ಅನೇಕ ಭಾಗಗಳಲ್ಲಿ ಆಹಾರದ ಹಾಹಾಕಾರವು ಅರಾಜಕತೆಯನ್ನು ತಂದೊಡ್ಡುವ ಲಕ್ಷಣಗಳನ್ನು ತೋರಿಸುತ್ತಿವೆ. ಆಹಾರದ ಪರಿಸ್ಥಿತಿಯನ್ನು ಸುಧಾರಿಸಿ ಏರಿಕೆಯ ಬೆಲೆಯನ್ನು ತಡೆಗಟ್ಟಿ ಜನಸಾಮಾನ್ಯರಿಗೆ ಜೀವಿಸಲು ಅನುಕೂಲ ಮಾಡಿಕೊಡದೇ ಇದ್ದಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುವದು. ಆದರೆ ನೆಹ

(೨೧ನೇ ಪುಟ ನೋಡಿರಿ)

WITH BEST COMPLIMENTS

FROM

THE BOMBAY BRUSH CO.

PVT. LTD.

Manufacturers of: **Tooth Brushes**
Hair Brushes
Shaving Brushes

on the auspicious occasion of

INDIA'S INDEPENDENCE ANNIVERSARY

493—F Arthur Road,
Ghaswala Estate,
Bombay—34.

Telephone : 73562
Telegram : SARIYASONS

ಭಾರತದ ಸ್ವಾತಂತ್ರ್ಯದ ಪುಣ್ಯ ದಿನದ

ಶುಭ ಸಂದರ್ಭದಲ್ಲಿ

ಹಾರ್ದಿಕ ಶುಭಾಶಯಗಳು.

ಅರ್ಪಿಸುವವರು:

ದಿ ಬೊಂಬೇ ಬ್ರಷ್ ಕೊ.

ಪ್ರೈ. ಲಿ.

ಟೂತ್ ಬ್ರಷ್
ಹೇರ್ ಬ್ರಷ್
ಶೇವಿಂಗ್ ಬ್ರಷ್— ಇವುಗಳನ್ನು ತಯಾರಿಸುವವರು.

493-ಎಫ್ ಅರ್ಥರ್ ರೋಡ್,
ಗಾಸ್‌ವಾಲಾ ಎಸ್ಟೇಟ್,
ಬೊಂಬ್ಯಾ 34.

ಟೆಲಿಫೋನ್: 73562
ಟೆಲಿಗ್ರಾಂ ಸಾರಿಯಾಸನ್ಸ್

Whenever You think of repairing

Your Auto

Make Your Choice
The Right One

HEGDE AUTO ENGINEERING WORKS

Shiribeedu, UDIPI, S. K.

Prop: K. J HEGDE

ಮೋಟಾರು ಕಾರು, ಸ್ಕೂಟರು, ಮೋಟಾರು ಸೈಕಲು, ಬಸ್ಸು, ಲೋರಿ ಇತ್ಯಾದಿ ವಾಹನಗಳನ್ನೆಲ್ಲಾ ಉತ್ತಮ ತಾಂತ್ರಿಕ ಜ್ಞಾನವುಳ್ಳ ತಜ್ಞರಿಂದ ಕ್ಲಪ್ತ ಕಾಲದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುವುದು.

ಹೆಗ್ಡೆ ಆಟೊ ಇಂಜಿನಿಯರಿಂಗ್ ವರ್ಕ್ಸ್

ಶಿರಿಬೀಡು, ಉಡುಪಿ, ದ. ಕ.

ಪ್ರೊ: ಕೆ. ಜೆ. ಹೆಗ್ಡೆ.

ಸ್ವಾತಂತ್ರ್ಯ ದಿನದ ಶುಭಾಶಯಗಳು!

ವಿಹಾರಕ್ಕಾಗಿ — ವ್ಯವಹಾರಕ್ಕಾಗಿ
ಉಡುಪಿಗೆ ಬಂದಾಗ
ಉಳಕೊಳ್ಳಲು
ಏರ್ ಕಂಡಿಶನ್ಡ್ ಕೋಣೆಗಳಿಂದ ಸುಸಜ್ಜಿತವಾದ
ಅತ್ಯಾಧುನಿಕ ಊಟ ಉಪಹಾರ
ಮತ್ತು ವಸತಿ ಗೃಹ

"ಕಲ್ಪನಾ"

ಉಪೇಂದ್ರ ಬಾಗ್
ಉಡುಪಿ.

ಫೋನ್: 140

ಶ್ರೀ ಎಸ್ ಎಸ್. ಕೊಳ್ಕೆಬೈಲ್, ಎಂ. ಎಲ್, ಎ. ಅವರ ಸಂದೇಶ—

ಪ್ರಿಯರೇ,

ನಮ್ಮ ಸ್ವಾತಂತ್ರ್ಯ ದಿನದಂದು ರಾಷ್ಟ್ರೀಯ ಪತ್ರಿಕೆ "ನವಯುಗ"ದ ವಿಶೇಷ ಸಂಚಿಕೆಯು ಪ್ರಕಟವಾಗುವುದು ಅತ್ಯುಚಿತ. ೪೩ ವರ್ಷಗಳಿಂದಲೂ ರಾಷ್ಟ್ರೀಯತೆಯ ಪಾಠವನ್ನು ಜನರಿಗೆ ಶ್ರುತ ಪಡಿಸುತ್ತ ಬಂದ ಭವ್ಯ ಪರಂಪರೆ 'ನವಯುಗ'ಕ್ಕಿದೆ.

"ನವಯುಗ"ಕ್ಕೆ ನನ್ನ ಶುಭಾಶಯಗಳನ್ನು ಕಳಿಸುವುದರೊಡನೆ ನೀವು ಕೈಕೊಂಡಿರುವ ಪುರಸ್ಕರಣದ ಕಾರ್ಯದಲ್ಲಿ ನನ್ನ ಸರ್ವ ವಿಧದ ಸಹಕಾರವನ್ನೂ ನೀಡುವೆನೆಂದು ಭರವಸೆ ನೀಡುತ್ತೇನೆ. ಸರ್ವರೂ ಸಹಕರಿಸಿ "ನವಯುಗ"ವು ಪರಿಷ್ಕೃತ ರೂಪದಲ್ಲಿ ಪ್ರಕಟಗೊಳ್ಳುವಂತೆ ನೋಡುವರೆಂದು ಆಶಿಸುತ್ತೇನೆ.

ಎಸ್. ಎಸ್. ಕೊಳ್ಕೆಬೈಲ್.

ಪ್ರಜ್ವಲಿಸು ಪ್ರಳಯಾಗ್ನಿ

ಪ್ರಜ್ವಲಿಸು, ಪ್ರಜ್ವಲಿಸು, ಪ್ರಜ್ವಲಿಸು ಪ್ರಳಯಾಗ್ನಿ!
ಬೆಂದೊಡಲ ಸ್ವಾಗತವು ನಿನಗಾಗಿ ಕಾದಿಹುದು! ||
ಈ ಜಗದ ಮೂಲದಲಿ ನೀನೊಮ್ಮೆ ಪ್ರಜ್ವಲಿಸಿ,
ಆದಿ ಮನುವನ್ನಳಿಸಿ ಸರ್ವ ಜೀವವನಳಿಸಿ,
ಶಾಂತನಾಗಿಹೆಯಂತೆ! ಆದೊಡೇನಿಂದಿನೀ
ಪ್ರಜ್ವಲನ ಬೇರೆಯಿರ ಬೇಕೆಂದು ಬಗೆದಿಹೆನು!
ನೋಡಲ್ಲಿ, ಈ ಜಗದ ದ್ವಂದ್ವ ಹೋರಾಟವನು!
ಸರ್ವ ಸುಖ ಭೋಗದಿಂ ಸುಖಿಸಲೊಂದೆಡೆ ಜನರು
"ಭವತಿ ಭಿಕ್ಷಾಂ ದೇಹಿ" ಎನ್ನುತಿಹರದೊ ಕೆಲರು!
ಕೈಯಿಲ್ಲ! ಕಾಲಿಲ್ಲ! ಕಣ್ಣು ಕಿವಿ ಮೂಗಿಲ್ಲ!
ಹೊಟ್ಟೆಗರೆ ಹಿಟ್ಟಿಲ್ಲ! ಒಟ್ಟಿಬರ ಮೊದಲಿಲ್ಲ!
ಕಂಡರೆನ್ನದೆ ನೊಂದು ಬೆದೆ ಬೆಂದು ಮರುಗುತಿದೆ
ಕೈಯೆತ್ತಿ ನೀಡು ನೀಡೆಂದೆನ್ನ ಕಾಡುತಿದೆ!
ನೀಡುವೆನು! ನೀಡುವೆನು! ಏನನೆಂಬುದೆ ಪ್ರಶ್ನೆ!
ನೀಡುವವ ಕಲು ಹೃದಯಿ! ತಣಿವುದೆಂತೀ ತೃಷ್ಣೆ!
ಉತ್ತರಿಸೆ ಪ್ರಜ್ವಲಿಸು! ಮುನ್ನಿನಂತಿದೊ ಸರ್ವ
ಜೀವಿಗಳ ಕೊಲಬೇಡ! ಕೊಂದರನ್ನೆಯ ಪರ್ವ!
ಕೊಲ್ಲು ನೀ ದೀನರನು; ದಲಿತರನು! ದುಃಖಿಗಳ
ಕಂಡವರ ಮರುಗುವರ! ನನ್ನ ತೆರನಿರುವವರ!
ಸುಖದ ಸುಷ್ಪ್ರೊತ್ತಿಗೆಯೊಳಗಿಹರ ನೀ ತರಿಯ ದಿರು!
ಸುಖಿಸಲವರಾದರೂ ತಡೆಯೇಕೆ? ಭಾರತದ
ಬಡತನವು ನೀಗಲೊಂದೇ ದಾರಿ ದಯೆದೋರಿ
ಪ್ರಜ್ವಲಿಸು! ಪ್ರಜ್ವಲಿಸು! ಸ್ವಾಗತವು! ಸ್ವಾಗತವು!

ಭಾಸ್ಕರ ಭಂಡಾರಿ, ಮುಜಿಬೈಲು.

— ಹೇರಾಸೆ —

ದೇವಕನ್ನಿಕೆಯ ಸಿರಿಮುಡಿಯನೇರುವ ಆಸೆ
ಎಳ್ಳನಿತುಯಿಲ್ಲವೆನಗೆ
ಪ್ರೇಮಿಕೆಯ ಪ್ರೇಮಮಾಲೆಯ ಸೇರಿ ನಗುವಾಶೆ
ಎಳ್ಳನಿತುಯಿಲ್ಲವೆನಗೆ
ರಾಜನಾಯಕರ ಮೃತದೇಹ ಚುಂಬಿಸುವಾಶೆ
ಎಳ್ಳನಿತುಯಿಲ್ಲವೆನಗೆ
ನಿನ್ನ ತಲೆಯಡರಿ ಜೃಂಭಿಸುವಂಥ ಹೇರಾಸೆ
ಎಳ್ಳನಿತುಯಿಲ್ಲವೆನಗೆ ||
ನನ್ನನೀಕುಯ್ದುಕೋ ವನಮಾಲಿ ಹೋಣೆಸೆಯು
ದೇಶರಕ್ಷಕ ವೀರರು
ಆವ ದಾರಿಯಲಿ ನಡೆದಪರೊ ಹಿಮಗಿರಿಯೆಡೆಗೆ
ಆ ದಾರಿ ವ್ರಜದ ದಾರಿ ||

— ಗೋರಾ.

Whenever You think of repairing

Your Auto

Make Your Choice

The Right One

HEGDE AUTO ENGINEERING WORKS

Shiribeedu, UDIPI, S. K.

Prop: K. J HEGDE

ಮೋಟಾರು ಕಾರು, ಸ್ಕೂಟರು, ಮೋಟಾರು ಸೈಕಲು, ಬಸ್ಸು, ಲೋರಿ ಇತ್ಯಾದಿ ವಾಹನಗಳನ್ನೆಲ್ಲಾ ಉತ್ತಮ ತಾಂತ್ರಿಕ ಜ್ಞಾನವುಳ್ಳ ತಜ್ಞರಿಂದ ಕ್ಲಪ್ತಕಾಲದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುವುದು.

ಹೆಗ್ಡೆ ಆಟೊ

ಇಂಜಿನಿಯರಿಂಗ್ ವರ್ಕ್ಸ್

ಶಿರಿಬೀಡು, ಉಡುಪಿ, ದ. ಕ.

ಪ್ರೊ: ಕೆ. ಜಿ. ಹೆಗ್ಡೆ.

ಸ್ವಾತಂತ್ರ್ಯ ದಿನದ ಶುಭಾಶಯಗಳು!

ವಿಹಾರಕ್ಕಾಗಿ — ವ್ಯವಹಾರಕ್ಕಾಗಿ

ಉಡುಪಿಗೆ ಬಂದಾಗ

ಉಳಕೊಳ್ಳಲು

ಏರ್ ಕಂಡಿಶನ್ಡ್ ಕೋಣೆಗಳಿಂದ ಸುಸಜ್ಜಿತವಾದ

ಅತ್ಯಾಧುನಿಕ ಊಟ ಉಪಹಾರ

ಮತ್ತು ವಸತಿ ಗೃಹ



"ಕಲ್ಪನಾ"

ಉಪೇಂದ್ರ ಬಾಗ್

ಉಡುಪಿ.

ಫೋನ್: 140

ಶ್ರೀ ಎಸ್.ಎಸ್. ಕೊಳ್ಕೆಬೈಲ್, ಎಂ. ಎಲ್, ಎ, ಅವರ ಸಂದೇಶ—

ಪ್ರಿಯರೇ,

ನಮ್ಮ ಸ್ವಾತಂತ್ರ್ಯ ದಿನದಂದು ರಾಷ್ಟ್ರೀಯ ಪತ್ರಿಕೆ "ನವಯುಗ"ದ ವಿಶೇಷ ಸಂಚಿಕೆಯು ಪ್ರಕಟವಾಗುವುದು ಅತ್ಯುಚಿತ. ೪೩ ವರ್ಷಗಳಿಂದಲೂ ರಾಷ್ಟ್ರೀಯತೆಯ ಪಾತವನ್ನು ಜನರಿಗೆ ಶ್ರುತ ಪಡಿಸುತ್ತ ಬಂದ ಭವ್ಯಪರಂಪರೆ 'ನವಯುಗ'ಕ್ಕಿದೆ.

"ನವಯುಗ"ಕ್ಕೆ ನನ್ನ ಶುಭಾಶಯಗಳನ್ನು ಕಳಿಸುವುದರೊಡನೆ ನೀವು ಕೈಕೊಂಡಿರುವ ಪರಿಷ್ಕರಣದ ಕಾರ್ಯದಲ್ಲಿ ನನ್ನ ಸರ್ವ ವಿಧದ ಸಹಕಾರವನ್ನೂ ನೀಡುವೆನೆಂದು ಭರವಸೆ ನೀಡುತ್ತೇನೆ. ಸರ್ವರೂ ಸಹಕರಿಸಿ "ನವಯುಗ"ವು ಪರಿಷ್ಕೃತ ರೂಪದಲ್ಲಿ ಪ್ರಕಟಗೊಳ್ಳುವಂತೆ ನೋಡುವರೆಂದು ಆಶಿಸುತ್ತೇನೆ.

ಎಸ್. ಎಸ್. ಕೊಳ್ಕೆಬೈಲ್.

ಪ್ರಜ್ವಲಿಸು ಪ್ರಳಯಾಗ್ನಿ

ಪ್ರಜ್ವಲಿಸು, ಪ್ರಜ್ವಲಿಸು, ಪ್ರಜ್ವಲಿಸು ಪ್ರಳಯಾಗ್ನಿ!
ಬೆಂದೊಡಲ ಸ್ವಾಗತವು ನಿನಗಾಗಿ ಕಾದಿಹುದು! ||
ಈ ಜಗದ ಮೂಲದಲಿ ನೀನೊಮ್ಮೆ ಪ್ರಜ್ವಲಿಸಿ,
ಆದಿ ಮನುವನ್ನುಳಿಸಿ ಸರ್ವ ಜೀವವನಳಿಸಿ,
ಶಾಂತನಾಗಿಹೆಯಂತೆ! ಅದೊಡೇನಿಂದಿನೀ
ಪ್ರಜ್ವಲನ ಬೇರೆಯಿರೆ ಬೇಕೆಂದು ಬಗೆದಿಹೆನು!
ನೋಡಲ್ಲಿ, ಈ ಜಗದ ದ್ವಂದ್ವ ಹೋರಾಟವನು!
ಸರ್ವ ಸುಖ ಭೋಗದಿಂ ಸುಖಿಸಲೊಂದೆಡೆ ಜನರು
"ಭವತಿ ಭಿಕ್ಷಾಂ ದೇಹಿ" ಎನ್ನುತಿಹರನ್ಯ ಕೆಲರು!
ಕೈಯಿಲ್ಲ! ಕಾಲಿಲ್ಲ! ಕಣ್ಣು ಕಿವಿ ಮೂಗಿಲ್ಲ!
ಹೊಟ್ಟೆಗರೆ ಹಿಟ್ಟಿಲ್ಲ! ಬಟ್ಟೆಬರೆ ಮೊದಲಿಲ್ಲ!
ಕಂಡರೆನ್ನದೆ ನೊಂದು ಬೆದೆ ಬೆಂದು ಮರುಗುತಿದೆ
ಕೈಯೆತ್ತಿ ನೀಡು ನೀಡೆಂದೆನ್ನ ಕಾಡುತಿದೆ!
ನೀಡುವೆನು! ನೀಡುವೆನು! ಏನನೆಂಬುದೆ ಪ್ರಶ್ನೆ!
ನೀಡುವವ ಕಲ್ಲು ಹೃದಯಿ! ತಣಿವುದೆಂತೀ ತೃಷ್ಣೆ!
ಉತ್ತರಿಸೆ ಪ್ರಜ್ವಲಿಸು! ಮುನ್ನಿನಂತಿದೊ ಸರ್ವ
ಜೀವಿಗಳ ಕೊಲಬೇಡ! ಕೊಂದರನ್ನೆಯ ಪರ್ವ!
ಕೊಲ್ಲು ನೀ ದೀನರನು; ದಲಿತರನು! ದುಃಖಿಗಳ
ಕಂಡವರ ಮರುಗುವರ! ನನ್ನ ತೆಂನಿರುವವರ!
ಸುಖದ ಸುಪ್ಪೊತ್ತಿಗೆಯೊಳಗಿಹರ ನೀ ತರಿಯದಿರು!
ಸುಖಿಸಲವರಾದರೂ ತಡೆಯೇಕೆ? ಭಾರತದ
ಬಡತನವು ನೀಗಲೊಂದೇ ದಾರಿ ದಯೆದೋರಿ
ಪ್ರಜ್ವಲಿಸು! ಪ್ರಜ್ವಲಿಸು! ಸ್ವಾಗತವು! ಸ್ವಾಗತವು!

ಭಾಸ್ಕರ ಭಂಡಾರಿ, ಮುಜಿಬೈಲು.

— ಹೇರಾಸೆ —

ದೇವಕನ್ನಿಕೆಯ ಸಿರಿಮುಡಿಯನೇರುವ ಆಸೆ
ಎಳ್ಳನಿತುಯಿಲ್ಲವೆನಗೆ
ಪ್ರೇಮಿಕೆಯ ಪ್ರೇಮಮಾಲೆಯು ಸೇರಿ ನಗುವಾಶೆ
ಎಳ್ಳನಿತುಯಿಲ್ಲವೆನಗೆ
ರಾಜನಾಯಕರ ಮೃತದೇಹ ಚುಂಬಿಸುವಾಶೆ
ಎಳ್ಳನಿತುಯಿಲ್ಲವೆನಗೆ
ನಿನ್ನ ತಲೆಯಡರಿ ಜೃಂಭಿಸುವಂಥ ಹೇರಾಸೆ
ಎಳ್ಳನಿತುಯಿಲ್ಲವೆನಗೆ ||
ನನ್ನನೀಶುಯ್ದುಕೋ ವನಮಾಲಿ ಮೋಹನೆಯು
ದೇಶರಕ್ಷಕ ವೀರರು
ಆವ ದಾರಿಯಲಿ ನಡೆದಪರೊ ಹಿಮಗಿರಿಯೆಡೆಗೆ
ಆ ದಾರಿ ಪ್ರಜದ ದಾರಿ ||

— ಗೋರಾ.

Message from Sri Ramakrishna Hegde,
Minister For Development, Panchayathi Raj
and Co-operation.

Bangalore,
August 6, 1964.

Dear Friend,

I am glad to know that you are bringing out a special issue of NAVAYUGA Kannada Weekly on the occasion of the INDEPENDENCE DAY. The role of the Press in democracy cannot be exaggerated They have a primary responsibilty to discharge in safeguarding the democratic principles by educating the public mind. I hope NAVAYUGA will keep the highest tradition of Journalism and will serve the people.

Yours sincerely
Ramakrishna Hegde

ಇದು ತಾ. 13 ಮತ್ತು 20ರ ಸಂಯುಕ್ತ ಸಂಚಿಕೆಯಾದುದರಿಂದ ಬರುವ ವಾರ (ತಾ 20-8-64) ಪ್ರತ್ಯೇಕ ಸಂಚಿಕೆ ಪ್ರಕಟವಾಗುವುದಿಲ್ಲ. ವಾಚಕರು ಗಮನಿಸಬೇಕಾಗಿ ವಿನಂತಿ. —ಸಂ. ನ

ಅತ್ತುತ್ತು ಜವಹರನ ಮರೆಯದಿರಿ!

ಇದ್ದ ಮಾನವನೊಬ್ಬ ಹೋದನಯ್ಯೋ–
ಬುದ್ಧಿ ಬಾರದ ರಾಷ್ಟ್ರ ನಮ್ಮದಯ್ಯೋ!
ಗಾಂಧಿಯೆದೆ ಗುಂಡಿನೇಟಿಗೆ ಒಡೆಯಿತು–
ಜವಹರನ ಜೀವಮಣಿ ಪುಡಿಯಾಯಿತು!
ಮಾನವತೆ ಮಸಕಾಗಿ ದಿಸೆತೋರದು,
ಹೀನಾಯ ಕೃತಿಯಿಂದ ಜಯಬಾರದು.
ಹಿರಿ ಕಿರಿಯರೆಲ್ಲರೊಂದಾಗಿರ್ಪ ಇಂದೆ.
ವಿಪುಲ ಭೂಮಿಯಲಿ ನಾವೆಲ್ಲರೊಂದೆ.
ಸಿರಿಭ್ರಮೆಯು ರಾಷ್ಟ್ರೈಕ್ಯ ಕೊಂದಿತೆಂಬ
ಕೂರಿಮಂದ ಜನತೆಯಿದು
ಸಲೆಸಾಯಿ ರೆಂಬೆ.
ಸಮಬಾಳು ಸರಿಕೂಳು ಇಮಜಗದ
ಬಯಕೆ ಮಹಾಕಾಂತಿಗಳ ಬಿಟ್ಟ
ನೆಹರು ಹೆಬ್ಬಯಕೆ·
ರಾಜ್ಯದಾಹದ ಮದದ ಆನೆಗಂಕುಶವೂ
ವ್ಯಕ್ಷ್ಯವಿಲ್ಲದ ಮಾರ್ಗ ನೆಹರು
ಪದ್ಧತಿಯು.
ಅತ್ತು ಗೋಳಿಟ್ಟು ಸ್ವಾರ್ಥದ ಹಾದಿ
ತುಳಿಯದಿರಿ!
ಉತ್ತುಂಗ ಜವಾಹರನ ಅಸ್ತಿತ್ವ
ಮರೆಯದಿರಿ!

ಡಾ|- ಎಂ ಎಸ್. ಹೆಗಡೆ,
ಬೈಲಹೊಂಗಲ

ಪುತ್ತೂರು ಮುನ್ಸಿಫ ಕೋರ್ಟಿನಲ್ಲಿ

S C 132/64

ಬಿ. ಸೈಯದ್ ಬ್ಯಾರಿ—ವಾದಿ.

ಪ್ಯೊದುಕುಞ್ಞಬ್ಯಾರಿ ಸಹಾ. ಪ್ರತಿವಾದಿರು

2 ನೇ ಪ್ರತಿವಾದಿ

ಮುಹಮ್ಮದ್ ಬ್ಯಾರಿ—ಉದ್ಯಾವರ ಪಳ್ಳಿ ಬ್ಯಾರಿ ಮಗ—ಕಾಸರಗೋಡು ತಾಲೂಕು ಉದ್ಯಾವರಗ್ರಾಮ.

ನಿಮಗೆ ಕೋರ್ಟು ಮೂಲಕ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ನೀವು ಕೂಡಾ ತಾ. 15.4.61 ರಲು ರೂ 325/-ಕ್ಕೆ ಅಬ್ದುಲ್ ಕಾದರ್ ಎಂಬವರಿಗೆ ಬರಕೊಟ್ಟ ನೋಟಿನ ಅಸಲು ಮ, ಬಡ್ಡಿಯ ವಸೂಲಿಹಕ್ಕಿನಪೂರಾ ಬಾಕಿಯನ್ನು ತಾ 9.9.63ರಲ್ಲಿ ಅಬ್ದುಲ್ ಕಾದರ್ ಬ್ಯಾರಿಯಿಂದ ವಾದಿಯು ಪಡೆದಿದ್ದರಿಂದ, ವಾದಿಹೂಡಿದ ಮೇಲಿನ ದಾವೆಯನ್ನು ತಾ. 17-8-64 ಕ್ಕೆ ನಿಮ್ಮ ನೋಟೀಸಿನ ಬಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಯರಿಸತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ತಿಳಿದಿರಲಿ.

Sd/- M·Sadashiva Rao
Vakil for Plff.

ಪುತ್ತೂರು ತಾ. 27.7.64

ಡಾ॥ ಗೋಪಾಲಕೃಷ್ಣರಾಯರ

ಹೊಸ ವಿಳಾಸ

ಡಾ॥ ಗೋಪಾಲಕೃಷ್ಣರಾವ್, L. A. M. S.
ತಾರಾನಾಥ ಆಯುರ್ವೇದ ಮಂದಿರ
೯೪, ಸರ್ವೆಯರ್ ಸ್ಟ್ರೀಟ್
ಬೆಂಗಳೂರು-೪

ಇನ್ನು ಯಾವಾಗಲೂ ಇದೇ ವಿಳಾಸದೊಡನೆಯೇ ವ್ಯವಹರಿಸಿರಿ.

= ದೀರ್ಘಾಯು =
ಕನ್ನಡ ಮಾಸಪತ್ರಿಕೆ

ಆರೋಗ್ಯ, ಸುಲಭ ಚಿಕಿತ್ಸೆ, ಆಯುರ್ವೇದ, ವೈದ್ಯ ವಿಜ್ಞಾನಗಳ ವಿಷಯಕ ಸರಳ ಶೈಲಿಯ ಬರಹಗಳಿಂದ ತುಂಬಿರುತ್ತದೆ.

ವಾರ್ಷಿಕ ಚಂದಾ— ೨ ರೂ

ವಿಳಾಸ:
ಪ್ರಿನ್ಸಿಪಾಲ್, ಬೆಂಗಳೂರು ಆಯುರ್ವೇದಿಕ್ ಕಾಲೇಜ್,
ಬೆಂಗಳೂರು-11.

Use Our

CHELSEA TONE

Vitalising Food Baverage

CHELSEA CHEMICALS
can always be depended upon for
their quality and constant Uniformity.

CHELSEA
CHEMICAL LABORATORIES
HADAPSAR INDUSRIAL ESTATE
POONA-1.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು ಉತ್ತಮ ಪ್ರತಿ:ರೂ ಎರಡೂವರೆ(ಟ ಖ ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ ಖ ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಿಗದ ಸ್ವಾತಂತ್ರ್ಯದ ಕನಸು

ಸ್ವಾತಂತ್ರ್ಯ ಸಿಕ್ಕ ಮೇಲೆ ನಾವು ಸ್ವರ್ಗಸೀಮೆ ತಲುಪುತ್ತೇವೆ ಎಂದು ಆಸಿದ್ದರು ಭಾರತೀಯರು. ಆದರೆ, ಕಳೆದ ಹದಿನೇಳು ವರ್ಷಗಳ ಕಟ್ಟನುಭವಗಳು ಈ ಆಶೆಯೆಲ್ಲ ಕನಸಿನ ಬತ್ತಕ್ಕೆ ಗೋಣಿ ಹಿಡಿದಂತಾಗಿವೆಯೆಂದು ಸಾರಿ ಹೇಳುತ್ತವೆ. ಆರ್ಥಿಕ ಸ್ವಾತಂತ್ರ್ಯವಿಲ್ಲದ ನಮ್ಮ ರಾಜಕೀಯ ಸ್ವಾತಂತ್ರ್ಯ ಬರೀ ಕನಸಿನ ಬತ್ತವಾಗಿದೆ. ಆಳುವವರು ಆಳಿಸಿಕೊಳ್ಳುವವರನ್ನು ಸುಖೀ ರಾಜ್ಯದತ್ತ ಕರೆದೊಯ್ಯುವ ಹಂಬಲದಲ್ಲಿ ಮುಂದುವರಿದರೂ ದುಃಖೀ ರಾಜ್ಯವೇ ಜನಸಾಮಾನ್ಯರ ಪಾಲಿಗೆ ದಕ್ಕಿದೆ. ಇಂತಹ ಪರಿಸ್ಥಿತಿಯಿಂದ ನಾವು ಬಿಡುಗಡೆ ಹೊಂದದೆ ನಮ್ಮ ಸ್ವಾತಂತ್ರ್ಯಕ್ಕೊಂದು ಅರ್ಥವಿದೆಯೆ?

ಲೇಖಕರು
ಡಾ। ಎಂ. ಗೋಪಾಲಕೃಷ್ಣರಾವ್.

ಪರಮಾತ್ಮನು ಮಾನವನಿಗೆ ಕೊಟ್ಟ ಅನೇಕ ವರಗಳಲ್ಲಿ 'ಕನಸು' ಕೂಡಾ ಒಂದು ಮಹತ್ವದ ವರವಾಗಿದೆ. ನಿರಾಶಾಮಯ ಮನೋಜೀವನದಲ್ಲಿ ಕನಸು ಒಂದು ಸಮಾಧಾನದ ಮಿಣುಕು ದೀಪವೆನಿಸುವುದು. ಭವಿಷ್ಯದ ಸಂದಿಗ್ಧ ಹೊಗೆಯಲ್ಲಿ ಕನಸು ಒಂದು ನಂಬಿಗೆಯ ಮೂರ್ತಿಯನ್ನು ಮೂಡಿಸುವುದು. ಮತ್ತೆ ಕನಸುಗಾರಿಕೆ ಬಡವರಿಗೂ ಉಂಟು; ಬಲ್ಲಿದರಿಗೂ ಉಂಟೆಂಬುದು ಸರ್ವೇಶ್ವರನ ಸಮತ್ವಭಾವದ ಗುರುತಾಗಿರಬಹುದು.

ಆದರೆ ಕನಸುಗಳೆಲ್ಲವೂ ನನಸಾಗುವುದಿಲ್ಲ. ಮತ್ತೆ ಒಮ್ಮೊಮ್ಮೆ ನನಸು ಕೂಡ ಕನಸಿಗಿಂತ ಹೆಚ್ಚು ಸಂದಿಗ್ಧವಾದಾಗ ನನಸಿಗಿಂತ ಕನಸೇ ಒಳಿತಾಗಿತ್ತು ಎಂದು ಕಸಿವಿಸಿ ಪಡುವಂತಾಗುವುದೂ ಉಂಟು. ಅಲ್ಲದೆ ಹಿಂದಿನ ಕನಸನ್ನೇ ಮೆಲುಕಾಡುತ್ತಿದ್ದರೂ 'ಅಯ್ಯೋ! ಇದೆಷ್ಟೆಂದರೂ ಕನಸೇ!' ಎಂಬ ಪ್ರಜ್ಞೆಯು ಕನಸಿನ ಕ್ಷಣಿಕ ಸುಖವನ್ನೂ ಕಸಿದುಕೊಳ್ಳುವುದು.

ಭಾರತವು ದಾಸ್ಯದಲ್ಲಿದ್ದಾಗ ಭಾರತೀಯರು ಅವಮಾನಗಳಿಂದ ನೂರು ಕಷ್ಟ ಸಾವಿರ ಸಂಕಷ್ಟಗಳಿಂದ ಬಳಲುತ್ತಿದ್ದರು. ದಾಸ್ಯದ ರಾತ್ರಿಯು ಅನಂತವೆನಿಸುತ್ತಿತ್ತಾದರೂ ಆಶಾವಾದಿ ಹೃದಯಗಳು ಸ್ವಾತಂತ್ರ್ಯ ಸೂರ್ಯೋದಯದ ಕನಸು ಕಾಣುತ್ತಿದ್ದವು. ತಿಲಕ, ಅರವಿಂದ, ಗಾಂಧಿಗಳಂತಹ ರಾಷ್ಟ್ರ ಚಾರಣರು ಇನ್ನೂ ಮೂಡದಿರುವ ಸ್ವಾತಂತ್ರ್ಯ ಸೂರ್ಯನಿಗೆ ಉದಯರಾಗದ ಪೂಜೆ ಸಲ್ಲಿಸುತ್ತಿದ್ದರೆ ಜನತೆಯು ವೈಯ ಸ್ವಾತಂತ್ರ್ಯ ಕಂಡವರಂತೆಯೆ ಉಬ್ಬಿ ಉತ್ಸಾಹಿತರಾಗುತ್ತಿತ್ತು; ಪಾರತಂತ್ರ್ಯ ಭೀತಿ, ಬವಣೆಗಳನ್ನು ತಾತ್ಕಾಲಿಕವಾಗಿ ಮರೆತು ಸ್ವಾತಂತ್ರ್ಯದ ಕನಸು ಕಾಣುವುದರಲ್ಲಿಯೇ ಸಮಾಧಾನ ಪಡುತ್ತಿತ್ತು. ರಾಷ್ಟ್ರ ಭಕ್ತರ ತಪಸ್ಸು ಫಲಿಸುವುದು; ರಾಷ್ಟ್ರ ಮಾತೆಯ ಹರಕೆ ಹಣ್ಣಾಗುವುದು; ಎಂದು ನಂಬಿ ಭಾರತೀಯರು ವರ್ತಮಾನದಲ್ಲಿಯೆ ಭವಿಷ್ಯತ್ ಸ್ವಾತಂತ್ರ್ಯ ಜೀವನವನ್ನು ಕನವರಿಸುತ್ತಿದ್ದರು.

ಅಂತೂ ಒಮ್ಮೆ ಸ್ವಾತಂತ್ರ್ಯ ಬಂತು! ಅದರ ಸಾಕ್ಷಾತ್ಕಾರಕ್ಕಾಗಿ ಎಷ್ಟು ಜೀವಗಳ ಬಲಿದಾನವಾಯಿತೋ! ಎಷ್ಟು ಗಂಡ ಹೆಂಡಿರು, ತಾಯಿ ಮಕ್ಕಳು, ಸೋದರ ಸೋದರಿಯರು ವಿರಹ, ವಿಯೋಗ, ವಿಪತ್ತುಗಳನ್ನನುಭವಿಸಿದರೋ! ಭವಿಷ್ಯತ್ ಸ್ವಾತಂತ್ರ್ಯ ಸ್ವಪ್ನೋನ್ಮಾದದಲ್ಲಿ ಅದೆಲ್ಲವೂ ಸಾರ್ಥಕವೆನಿಸುತ್ತಿತ್ತು. ಕೊನೆಗೆ ಭಾರತವು ಅಡಿಯಾಳ್ತನದ ಶಲೆಬಾರದಿಂದ ಬಿಡುಗಡೆಯಾಯಿತು! ಆ ತ್ಯಾಗ, ಬಲಿದಾನಗಳೆಲ್ಲ ಸಾರ್ಥಕವೆನಿಸಿದವು. ಆಗಿ ಹೋದ ನಾವು ಸಂಕಟಗಳನ್ನು ಮರೆತೆವು; ಆಗಲಿರುವ ಸುಖ, ಸಂತೃಪ್ತಿಗಳಿಗಾಗಿ ಬಾಯ್ದೆರೆದು ಕೂತೆವು.

ಆದರೆ ತೆರೆದ ಬಾಯಿ ಮುಚ್ಚಿತೇ? ಕನಸು ಕಂಡ ಸುಖ ಸಂತೃಪ್ತಿಗಳು ಕೈಗೂಡಿದವೇ? ಭಾರತ ಭೂಮಿ ದಾಸ್ಯದ ಬೇಡಿಗಳಿಂದ ಬಿಡುಗಡೆಯಾಗಿ ಹದಿನೇಳು ವರುಷಗಳು ಉರುಳಿ ಕಾಲನ ಬಸಿರಲ್ಲಿ ಅದೃಶ್ಯವಾದವು, ಎಂದಿನಂತೆ ಇಂದೂ ಆಗಸ್ಟ್ ಹದಿನೈದನೆಯ ದಿನ ಬೆಳಗಾಗಿದೆ! ಬೆಳಗಾಗಿದೆಯಂತೆ; ಬೆಳಕಿಲ್ಲವಲ್ಲಾ, ಎಂದು ಕೇಳುವಂತಾಗಿದೆ. ಸಿಗದ ಸ್ವಾತಂತ್ರ್ಯದ ಕನಸು, ಕಲ್ಪನಾ-ಸುಖ ಸಂತೃಪ್ತಿಗಳನ್ನು ಕೊಡುತ್ತಿತ್ತು; ಸಿಕ್ಕ ಸ್ವಾತಂತ್ರ್ಯದ ನನಸು, "ಸುಖವೆಲ್ಲಿ? ತೃಪ್ತಿಯೆಲ್ಲಿ? ಮನೆಯೆಲ್ಲಿ? ಅನ್ನವೆಲ್ಲಿ? ಬಟ್ಟೆಯೆಲ್ಲಿ?" ಎಂಬ ಜಲ್ಪನಾ ಜಂಜಾಲವನ್ನು ಹರಡಿದೆ.

ಆಳುವವರು ಆಳ್ವಿಕೆಯ ಗುರಿಯೇನೆಂಬುದನ್ನರಿತಿರುವರೇ? ಧಾರಣೆಗಳು ಮುಗಿಲು ಮುಟ್ಟುತ್ತಿರಲು ಜೀವನದ ಮಟ್ಟವೇರಿದೆನ್ನುತ್ತಾರೆ! ಸಕ್ಕರೆ, ಕಾಳು ಕಡಿ, ಬಟ್ಟೆಗಳು ಅದೃಶ್ಯವಾಗಿ ಶೂನ್ಯವಾದ ಪೇಟೆಗಳಲ್ಲಿ ಸುಗ್ಗಿಯು ಮೂಡಿ ಬಂದಿದೆಯೆಂದು ಬಡಬಡಿಸುತ್ತಾರೆ! ಪೌರುಷಶಾಲಿಗಳು ಸಾಹಸದಿಂದ ಸಂಪತ್ತನ್ನು ಬೆಳೆಸುವವೆಂದರೆ ಅವರ ಮೊಗಕ್ಕೆ ಚಿತ್ರ ವಿಚಿತ್ರ ತೆರಿಗೆಗಳ ಅಶ್ರು—ಗ್ಯಾಸನ್ನು ಎಸೆಯಲಾಗುತ್ತಿದೆ. ಮನೆಗಳಿಲ್ಲದೆ ಬಳಲುವ ಪ್ರಜೆಗಳಿಗೆ ಅನುಕೂಲವೊದಗಿಸಲೆಂದು ಹುಟ್ಟಿದ 'ರೆಂಟ್ ಕಂಟ್ರೋಲ್' ಶಾಸನವು ಲಂಚದ ಬುನಾದಿಯ ಮೇಲೆ ಅರಮನೆ ಕಟ್ಟಿಕೊಳ್ಳಬಲ್ಲ ಸರಕಾರಿ ನೌಕರರಿಗೇ ಮನೆಯೊದಗಿಸುವ ವರವಾಗಿದೆ. ಸ್ವಾವಲಂಬನದಿಂದ ಸೆಣಸುತ್ತ ಮನೆಮಕ್ಕಳನ್ನು ಸಾಕುತ್ತಾ ತೇಕುವ ದುಡಿಮೆಗಾರರಿಗೆ ಮನೆಗಳಿಲ್ಲ; ಶಾಲೆಯ ಶುಲ್ಕ ಸೌಲಭ್ಯವಿಲ್ಲ ಉಚಿತ ಚಿಕಿತ್ಸಾ ಸೌಕರ್ಯವಿಲ್ಲ; ಆದರೆ ಅವರ ತೆರಿಗೆಯಿಂದಲೆ ಸಂಬಳಪಡೆಯುವ ಸರಕಾರಿ ನೌಕರರಿಗೇ ಸಕಲ ಸೌಲಭ್ಯಗಳ ಶಾಸನಗಳಾಗುತ್ತಿವೆ. ಒಂದು

(೩೦ನೇ ಪುಟ ನೋಡಿರಿ)

The best Plastic Bangles are *produced by*

ನಮ್ಮಲ್ಲಿ ಅತ್ಯುತ್ತಮ ಪ್ಲ್ಯಾಸ್ಟಿಕ್ ಬಳೆಗಳು ತಯಾರಿಸಲ್ಪಡುತ್ತವೆ.

SARVODAY BANGLES WORKS

ಸರ್ವೋದಯ ಬ್ಯಾಂಗಲ್ಸ್ ವರ್ಕ್ಸ್

FACTORY:
Near Shantharam Lake
Daftary Road
Bombay-64

OFFICE:
Laxmishwar
Subhas Lane
Malad East
Bombay-64

ಫ್ಯಾಕ್ಟರಿ:
ಶಾಂತಾರಾಮ ಲೇಕಿನ ಸಮೀಪ
ಡಫ್ತರಿ ರೋಡ್,
ಬೊಂಬ್ಯಾ-64

ಆಫೀಸು:
ಲಕ್ಷ್ಮೀಶ್ವರ್
ಸುಭಾಸ್ ಲೇನ್
ಮಲಾಡ್ ಈಸ್ಟ್,
ಬೊಂಬ್ಯಾ-64

TELEPHONE : 84433
TELEGRAM : SARVODAY

ಟೆಲಿಫೋನ್: 84433
ಟೆಲಿಗ್ರಾಂ: ಸರ್ವೋದಯ.

Our exports cover all continents.

ಅಖಿಲ ಭೂಖಂಡಕ್ಕೆಲ್ಲಾ ಕಳಿಸಲ್ಪಡುತ್ತವೆ.

CONNECTING CURRENTS THROUGH CONTINENTS

Nurmud

ELECTRICAL ACCESSORIES

ARE

EXTENSIVELY USED

ALL OVER THE WORLD

CONTACT US AT

ANY OF OUR BRANCHES

IN

INDIA

SHREE NURSINGSAHAY MUDUNGOPAL ELECTRIC CO. PVT. LTD.

CALCUTTA	BOMBAY	MADRAS	DELHI	KANPUR	NAGPUR	MEERUT
55 Ezra St.	47-45 Lohar Ch.	108 Mint St.	Chandni Chowk.	Gaya Prasad St.	Gandhi Baug.	Begum Bridge
Tel. No. 343073	Tel. No. 22036-37	Tel. No. 31784	Tel. No. 25703	Tel No. 4495	Tel. No. 3091	Khunhi Pul.

ಆಕಾಶವಾಣಿಯ ಕಾರ್ಯಕ್ರಮಗಳು

(೧೯ನೇ ಪುಟದಿಂದ)

ಇದು ಎಷ್ಟರ ಮಟ್ಟಿಗೆ ನಿಜವೆಂಬುದು ತಿಳಿದುಬಂದಿಲ್ಲ.

ಉತ್ತರದ ಕೆಲವು V I. P ಗಳಿಗೆ ನೆಗಡಿಯಾಗಲು ಕೇರಳದ ಎಳನೀರೇ ಕಾರಣವಾಗಿದೆಯೆಂದು ಭಾವಿಸಲಾಗಿದೆ. ಆದಕ್ಕಾಗಿ, ಅವರಿಗೆ ಬೆಂಗಳೂರಿನ ಬ್ರ್ಯಾಂಡಿಯನ್ನು ರವಾನಿಸಲಾಗಿದೆಯೆಂದೂ ಅವರು ಈಗ ನೆಗಡಿಯಿಂದ ಗುಣಮುಖರಾಗುತ್ತಿದ್ದಾರೆಂದು [illegible] ರೇಡಿಯೋ ಸಮಾಚಾರವಾಗಿದೆ.

ಬೆಂಗಳೂರಿನ ಟೆಲಿಫೋನ ಎಕ್ಸ್‌ಚೇಂಜಿನಲ್ಲಿದ್ದ ಗೋವಿಂದರಾವ್‌ರವರನ್ನು ನಿವೃತ್ತಿಗೆ ಪರ್ಯಾಯಿಸಿದ ಬಗ್ಗೆ ಅವರ ಗೌರವಾರ್ಥವಾಗಿ ಅವರ ಸ್ನೇಹಿತರು ಬೀಳ್ಕೊಡುಗೆ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಭವ್ಯ ನಗರವನ್ನು ಬಿಟ್ಟು ತೆರಳಲು ತಮಗೆ ಮನಸ್ಸೇ ಬರುತ್ತಿಲ್ಲವೆಂದೂ, ಬೆಂಗಳೂರಿನ ಸಿನಿಮಾ ಥಿಯೇಟರ್‌ಗಳಲ್ಲಿ ಬಸ್‌ಸ್ಟ್ಯಾಂಡ್‌ಗಳಲ್ಲಿ ಕ್ಯೂ ನಿಲ್ಲುವ ಅವಕಾಶ ತಪ್ಪುತ್ತಿರುವುದಕ್ಕಾಗಿ ತಮಗೆ ದುಃಖವಾಗುತ್ತಿದೆಯೆಂದೂ ಅವರು ತಿಳಿಸಿದರು. ಈ ಸಂದರ್ಭದಲ್ಲಿ ಹತ್ತಾರು [illegible] ಭಾಷಣ ಬಿಗಿದರೆಂದು ತಿಳಿದು ಬಂದಿದೆ.

ಪ್ರಿಟೋರಿಯಾದ ಪ್ರೈಂ ಮಿನಿಸ್ಟರ್ ಬಂದಾಗ ಪಾಕಿಸ್ತಾನದ ಪ್ರಜೆಗಳು ಅವರಿಗೆ ಅಭೂತಪೂರ್ವ ಸ್ವಾಗತವನ್ನು ನೀಡಿದರು. ಅವರನ್ನು ಮೂರು ಜೊತೆ ಕೋಣಗಳನ್ನು ಕಟ್ಟಿದ ಅಲಂಕೃತ ಗಾಡಿಯಲ್ಲಿ ಮೂರು ಮೈಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತೆಂದೂ ಕನ್ನಡದಲ್ಲಿ [illegible] ಸ್ವಾಗತ ಕೋರಲಾಯಿತೆಂದೂ ವರದಿಯಾಗಿದೆ. [illegible] ಅರ್ಪಿಸುತ್ತಾ ಅವರು ತಾವು ಪಾಕಿಸ್ತಾನದ ಜನತೆಗೆ ಕೃತಜ್ಞರಾಗಿರುವುದಾಗಿಯೂ ತಮಗೆ ದೊರೆತ ರಾಗಿರೊಟ್ಟಿ, ಬೇಳೆ, ಗಂಜಿ ಇತ್ಯಾದಿ ಪೌಷ್ಟಿಕ ಆಹಾರಗಳಿಂದ ಸಂತೋಷವಾಯಿತೆಂದೂ ತಿಳಿಸಿದರು. ಅವರು ಪಾಕಿಸ್ತಾನದ [illegible] ಪ್ರಿಟೋರಿಯಾಕ್ಕೆ [illegible] ನಿಸಿದರೆಂದು ವರದಿಯಾಗಿದೆ.

ಈ ವಾರ್ತೆಗಳನ್ನು [illegible] ಯಿಂದ ಕೇಳುತ್ತಿದ್ದೀರಿ

ಮೊನ್ನೆ ನಡೆದ ಚೆಸ್ಸ್‌ಕೋಲು ಪಂದ್ಯದಲ್ಲಿ ಮೈಸೂರಿನ ಕುಂಬಾರಗೇರಿಯವರು ಚನ್ನಪಟ್ಟಣದ ಒಡ್ಡರಕೇರಿಯವರನ್ನು 3—4 ಗೋಲುಗಳಿಂದ ಸೋಲಿಸಿ ಸಾವಿರದ ಒಂಬೈನೂರರ ರಿಕಾರ್ಡನ್ನು ಮುರಿದರೆಂದು ವರದಿಯಾಗಿದೆ. ಗೆದ್ದವರಿಗೆ ಬಹುಮಾನ ವಿನಿಯೋಗ ಮಾಡಿ—

ಮಂತ್ರಿ ಮಹಾಶಯರನವರು ಚೆನ್ನಿಕೋಲು ಪಂದ್ಯವು ನಮ್ಮ ದೇಶದಲ್ಲಿ ಇನ್ನು ಮುಂದುವರಿಯಬೇಕೆಂದೂ ಅದಕ್ಕಾಗಿ ಸರ್ಕಾರದವರು ಯೋಚಿಸುತ್ತಿದ್ದಾರೆಂಬುದಾಗಿಯೂ ತಿಳಿಸಿದರು. ಅಲ್ಲದೆ ಗೋಲಿಯಾಟ, ಪಗಡೆಯಾಟ, ಇಸ್ಪೀಟಾಟ, ಕೋಳಿ ಅಂಕ ಇತ್ಯಾದಿಗಳಲ್ಲಿ ಆಗಾಗ್ಗೆ ಸ್ಪರ್ಧೆಗಳನ್ನು ಏರ್ಪಡಿಸಬೇಕೆಂದು ಪೌರರನ್ನು ಕೇಳಿಕೊಂಡರು … …ನಿನ್ನೆ ನಡೆದ ಅಂತರ್‌ವೆಂಕಟಪ್ಪ ದೊಣ್ಣೆವರಸೆ ಪಂದ್ಯದಲ್ಲಿ ಯುಕುಕಂಥಿಯ ಜನರು ಕೆಂಭೂತದ ಜನರನ್ನು ಮೂರು-ಒಂದು ಪಾಯಿಂಟುಗಳಿಂದ ಸೋಲಿಸಿದರು. ಈ ಪಂದ್ಯದಲ್ಲಿ ಕೆಲವರ ತೊಡೆಗಳೂ, ಕೆಲವರ ತಲೆಗಳೂ ಎಗರಿ ಹೋಗಿವೆಯೆಂದು ವರದಿಯಾಗಿದೆ. ಪಂದ್ಯದಲ್ಲಿ ಗೆದ್ದ ಯುಕುಕಂಥಿಯವರಿಗೆ ಮೂರು ಗಾಡಿ ಬಂಟು ಮಣ್ಣನ್ನು ಬಹುಮಾನವಾಗಿ ಕೊಡಲಾಯಿತು.

ಇನ್ನು ಹವಾಮಾನ,

ಹವಾಮಾನ ವರದಿ ರೀತ್ಯಾ ನಿನ್ನೆ ಅರಬ್ಬೀ ಸಮುದ್ರದ ಬಳಿ ಕೊಂಚ ಮಳೆಯಾಗಿದೆ. ಕೊಡಗಿನಲ್ಲಿ ಸುಂಟರ ಗಾಳಿ ಬೀಸಿ ಮಳೆ ಬರಲಿಲ್ಲವೆಂದೂ ಆದರೂ ಕೆಲವರಿಗೆ ಶೀತ ಗಾಳಿಯ ದೆಸೆಯಿಂದ ನೆಗಡಿ ಶುರುವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ನೂಗ್ಗಾಟ ಜಾಸ್ತಿಯಾಗಿದೆಯೆಂದೂ ತಿಳಿದು ಬಂದಿದೆ. ಕೆಲವು ಕಡೆ ನೆಟ ವಿಪರೀತವಿದ್ದು ಹೋಟೆಲುಗಳಲ್ಲಿ ಕಾಫಿ ಖರ್ಚಾಗದೆ ಕೇವಲ ಶರಬತ್ತು, ಮಜ್ಜಿಗೆಗಳು ವಿಕ್ರಯವಾದುವೆಂದು ತಿಳಿದು ಬಂದಿದೆ, ನಾಳೆ ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಗುಡುಗು ಮಿಂಚುಗಳಿಂದ ಕೂಡಿದ ಮಳೆಯಾಗಲಿದೆ. ಹಿಮಾಲಯದಲ್ಲಿ ನೆಟ ಸ್ವಲ್ಪ ಜಾಸ್ತಿಯಾಗಬಹುದೆಂದು ಊಹಿಸಲಾಗಿದೆ, ಈ ವಾರ್ತೆಗಳನ್ನು ಆಕಾಶವಾಣಿಯಿಂದ ನೀವು ಕೇಳುತ್ತಿದ್ದಿರಿ ಇಲ್ಲಿಗೆ ಕನ್ನಡ ವಾರ್ತಾ ಪ್ರಸಾರ ಮುಕ್ತಾಯವಾಯಿತು.

ಇದು ಆಕಾಶವಾಣಿ. ಈಗ ಪಕ್ಷಿನೋಟ

ನಾಳೆ ರಾತ್ರಿ ಹನ್ನೆರಡು ಘಂಟೆಗೆ ಶ್ರೀಮಾನ್ ತಂಬೂರಯ್ಯರ ಹಾಡುಗಾರಿಕೆ. ಶ್ರೀಮಾನ್ ನಾಗಪ್ಪ ಯರ ಪಿಟೀಲು, ದಾಸೇಲು ಮೂರ್ತಿಯವರ ಹಾರ್ಮೋನಿಯಂ, ಮತ್ತು ಶ್ರೀಮಾನ್ [illegible] ರ ತಬಲದೊಂದಿಗೆ... ನಾಳಿದ್ದು ಬೆಳಿಗ್ಗೆ ಐದು ಘಂಟೆಗೆ ಶ್ರೀಮತಿ ತ್ರಿಲೋಕ ಸುಂದರಮ್ಮಣ್ಣಿ ಯವರಿಂದ ಕಬ್ಬಿನ ಭೈರವಿ ಮತ್ತು ನೂಜಾಲ ಕಾಂಭೋಧಿ ರಾಗಗಳಲ್ಲಿ 'ದೇವಿಯರ ನಾಮ' ಅದೇ ದಿನ ಮಧ್ಯಾಹ್ನ ಹನ್ನೆರಡು ಘಂಟೆಗೆ ಸಾಹಿತಿ 'ಸುಯ್ಯು'ರವರಿಂದ ಭಾರತದಲ್ಲಿ ಮರಣಗಳು ಎಂಬ ವಿಚಾರವಾಗಿ ಉಪನ್ಯಾಸ ಮುವತ್ತೊಂದನೇ ತಾರೀಖು ಮೂರು ಘಂಟೆಗೆ ಪ್ರೈಮರಿ ಸ್ಕೂಲ್ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ. ಅದೇ ದಿನ ರಾತ್ರಿ ಒಂಭತ್ತು ಘಂಟೆಗೆ ಮಹಿಳೆಯರಿಗಾಗಿ ಕಾರ್ಯಕ್ರಮ. ಅದರ ಒಂದು ಭಾಗವನ್ನು ಇಲ್ಲಿ ಕೇಳಿ. ……"ನಮಸ್ಕಾರ ಸೀತಮ್ಮನವರೇ"…."ಹೋ ನಮಸ್ಕಾರ ಉಷ್ಣಮ್ಮನವರೇ." "ಇಂದಿನ ಕಾರ್ಯಕ್ರಮದಲ್ಲಿ ಅಡಿಗೆ ಮಾಡುವ ವಿಧಾನ ಹೇಳಿಕೊಡುತ್ತೇನೆ. ಇವತ್ತು ಬದನೆಕಾಯಿಯ ಸಾಂಬಾರ ಹೇಗೆ ಮಾಡುವುದು ಎಂಬುದರ ವಿಚಾರ ಹೇಳುತ್ತೇನೆ. ನಿಮಗೆ ಗೊತ್ತೇನು ಬದನೆ ಕಾಯಿಯ ಸಾಂಬಾರ್ ಮಾಡುವ ವಿಧಾನ?"

"ಇಲ್ಲವಲ್ಲಾ ಸೀತಮ್ಮನವರೇ"

"ಹಾಗಾದರೆ ಕೇಳಿ, ಹೇಳ್ತೇನೆ, ಹತ್ತು ಪೈಸೆಗೆ ಹನ್ನೆರಡರ ಬದನೇ ಕಾಯನ್ನು ತಂದು ತೊಟ್ಟು ತೆಗೆಯದೆ, ತೊಳೆಯದೇ ದಪ್ಪವಾಗಿ ಹೆಚ್ಚಬೇಕು ನಂತರ ಬಾಣಲೆಯಲ್ಲಿ ಹಾಕಿ ಒಲೆ ಮೇಲಿಟ್ಟು ನೀರು ಹಾಕಿ ಕದಡಬೇಕು ಒಂದು ಪಾವು ಉಪ್ಪು ಹಾಕಿ ರುಚಿಗೆ ಸ್ವಲ್ಪ ಒಗ್ಗರಣೆ, ಬೆಲ್ಲ ಹಾಕಬೇಕು ಅದು ಚೆನ್ನಾಗಿ ಕುದಿದಮೇಲೆ ಕೆಳಗಿಳಿಸಿ ಸ್ವಲ್ಪ ದ್ರಾಕ್ಷಿ ಗೋಡಂಬಿ, ಹಿಂಗು ಹಾಕಿ ಒಂದು ಚಮಚ ಎಣ್ಣೆ ಮತ್ತು ಒಂದು ಕೊಬ್ಬರಿ ಹಾಕಿ ನಂತರ ಬಡಿಸಬೇಕು, ಎಷ್ಟು ರುಚಿಯಾಗಿರುತ್ತೇಂತೀರಾ'….

ಇಲ್ಲಿಗೆ ಪಕ್ಷಿನೋಟ ಕಾರ್ಯಕ್ರಮ ಮುಕ್ತಾಯವಾಯಿತು ಆಲಿಂಡಿಯಾ ರೇಡಿಯೋ ಬಿತ್ತರಿಸುತ್ತಿದೆ. ಇಲ್ಲಿಗೆ ನಮ್ಮ ನಾಲ್ಕನೆಯ ಪ್ರಸಾರ ಮುಕ್ತಾಯವಾಯಿತು. ನಾಳೆ ಬೆಳಗ್ಗೆ ನಾಲ್ಕು ಘಂಟೆಗೆ ನಮ್ಮ ಮೊದಲನೆಯ ಪ್ರಸಾರ ಪ್ರಾರಂಭವಾಗುತ್ತದೆ.

ಜೈ ಮುಂದ್

ಕಪ್ಪು ಹುಡುಗಿ

ಕಪ್ಪು ಹುಡುಗಿಯ ಕೇಶರಾಶಿ ಬೆಳು
ಪೇರುತಿದೆ
ಕರಗಿನೀರಾಗುತಿದೆ ಕಣ್ಣ ಹೊಳಪು|
ಪುಷ್ಪಮಾಲೆಯು ತೊಡಿಸಬಂದ
ಕಾದಲನಿಲ್ಲ
ಮೃತ್ಯುಮಾಲಿಕೆ ಹಿಡಿದು ನಿಂತ ಮುಪ್ಪು|
— ೧ —
ಮುಡಿಯಿಂದ ಕೆಳಗಿಳಿದ ಅವಳ
ತಲೆಕೂದಲು
ಅಣಕಿಸಿದೆ "ನೀನು ನನಗಿಂತ ಕಪ್ಪು"
ಬತಸುವರ; ಬರುತಿಹವು ವರುಷಗಳು
ಎಚ್ಚರಿಸಿ
"ನೀ ವಿಧಾತನು ಗೈದ ದೊಡ್ಡ ತಪ್ಪು"
— ೨ —
ಓರಗೆಯ ಗೆಳತಿಯರು ಕೇಳುವರು
ಇವಳನ್ನು
"ಎಂದವ್ವ ಮದುವೆಯಾಗುವುದು
ನೀನು?"
ಲಜ್ಜೆಯಿಂದೆಂಬಂತೆ ನೆಲವನ್ನೋಡು
ವಳವಳು
"ನೆಲತಾಯೆ ನುಂಗಬಾರದೆ
ನನ್ನನ್ನು?"
— ೩ —
ಹೊಸಲನ್ನು ದಾಟಲಾರದೆ ಅಲ್ಲೆ
ನಿಂತಿಹಳು
ಆ ಶಿಲಬಾಲಿಕೆಯು ತಂಗಿಯಂತೆ!
ಕಣ್ಣೋದಿಗಂತದಲಿ ಮನಕನಸಿನೂರಿನಲಿ
ಮೋಕ್ಷವನು ಕಾಯುವಾ ಆತ್ಮದಂತೆ!
— ೪ —
ಕೆಲವೊಮ್ಮೆ ಕಾಲ್ಬೆರಳು ನೆಲದಲ್ಲಿ
ನಲಿನಲಿದು
ಪ್ರೇಮಪತ್ರವನೊಂದ
ಒರೆವುದುಂಟು!
ಅವಳ ಕಣ್ಣೀರಲ್ಲಿ ಒಲವಿನೋಲೆಯು
ತೇಲಿ
ಕಂಡಿರದ ನಲ್ಲನಿಗೆ ತಲಪಲುಂಟು!
— ೫ —
ವಿಧಿಯ ಕೈ ಬೆರಳುಗಳು ಮನವಾರೆ
ಆಡುತಿವೆ
ಇವಳ ಬಾಳಿನ ರುದ್ರವೀಣೆಯಲ್ಲಿ
ಹೊರಹೊಮ್ಮುತಿದೆ ಮೂಕಶೋಕಗೀತ
ವನೊಂದು
ಕಣ್ಣೀರ ಧಾರೆಗಳ ತಂತಿಗಳಲಿ
— ೬ —
ಆರದಾ ಕಣ್ಣೀರ ಊಟೆಯಾಗಿರಲೆಂದೆ
ನಿನಗೆರಡು ಕಣ್ಣುಗಳ ಕೊಟ್ಟಾತನು;
ನಿನ್ನ ಕಣ್ಣೀರ ಕಣ್ಣಾರೆ ಕಾಣುತ ನಗಲು
ನಮಗೆ ಕಣ್ಣುಗಳನ್ನು ಕೊಟ್ಟನೇನು?
— ೭ —

— ರಾಧಾಕೃಷ್ಣ ರಾವ್, ಯಂ,
ಬಿ ಎ ; ಬಿ ಟಿ.

ಎಲ್ಲಾ ತರದ ಕೈ ಮಗ್ಗದ ಸೀರೆಗಳಿಗೆ
ಮತ್ತು ಬಟ್ಟೆಗಳಿಗೆ

ಪೂರ್ಣಿಮಾ ಸ್ಟೋರ್ಸ್

— ಕೈಮಗ್ಗದ ಬಟ್ಟೆ ರಖಂ ಮತ್ತು ಚಿಲ್ಲರೆ ಮಾರಾಟ ಮಳಿಗೆ —

ಫೊಸ್ಟ್ಯುಂರ್ ಕಟ್ಟಡ, ಮಂಗಳೂರು–1.

1962ನೇ ಮತ್ತು 1963ನೇ ಮೈಸೂರು ದಸರಾ ವಸ್ತು ಪ್ರದರ್ಶನಗಳಲ್ಲಿ
"ಬಂಗಾರದ ಪದಕ" ಪಡೆದ ನಮ್ಮ ಸೀರೆಗಳನ್ನು
ಒಮ್ಮೆ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.



'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ನಯಾ ಕಾಂಗ್ರೆಸ್

(೧೩ನೇ ಪುಟದಿಂದ)

ಮೂರನೆಯದೇ ಒಂದು ಪಕ್ಷ ಅಧಿಕಾರದಲ್ಲಿ ಬರಲು ಬಿಡುವುದಿಲ್ಲ! ರಷ್ಯಾವೇ ಮೊದಲಾಗಿ ಇನ್ನಿತರ ಕೆಂಪುರಾಷ್ಟ್ರಗಳಲ್ಲಿ ಈ ಪರಂಪರೆ ಇಲ್ಲವಾದರೂ ಇನ್ನಿತರ ಎಲ್ಲಾ ದೇಶಗಳಲ್ಲಿ ಆಳುವ ಪಕ್ಷ ಮತ್ತು ವಿರುದ್ಧ ಪಕ್ಷಗಳಲ್ಲಿ ಸದಾ ಘರ್ಷಣೆ ನಡೆಯುತ್ತಲೇ ಇರುತ್ತದೆ. ಜಾಗ್ರತಾವಸ್ಥೆಯಿಂದ ಸರಕಾರ ನಡೆಯುತ್ತದೆ.

ಅದೀಗ ನಮ್ಮ ಭಾರತದಲ್ಲಿ ನೂರಾರು ಪಕ್ಷಗಳು ಇಲ್ಲವಾದರೂ ಇದ್ದ ಪ್ರಮುಖ ಹತ್ತಾರು ಪಕ್ಷಗಳು ನಿಜಕ್ಕೂ ಸುಗಮ ಸರಕಾರದ ದೃಷ್ಟಿಯಿಂದ ಹಿತಕರವಾದವುಗಳಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಎಲ್ಲಾ ಪಕ್ಷಗಳ ಕೂಗು ಒಂದೇ. ತತ್ವ ಒಂದೇ. ಸಮಾಜ ಕಲ್ಯಾಣ ದೇಶದ ಅಭ್ಯುದಯ. ಕಾಂಗ್ರೆಸ್ಸಿನಿಂದ ಹಿಡಿದು ಕಮ್ಯೂನಿಸ್ಟರು ಹಾಡುವ ಮಂತ್ರ ಒಂದೇ. ಸೋಷಿಯಲಿಸ್ಟರಿಂದ ಹಿಡಿದು ಪ್ರಜಾ ಸೋಷಿಯಲಿಸ್ಟರು ಬಾರಿಸುವ ತಮಟೆಯೊಂದೇ. ಅಂದ ಮೇಲೆ ನಮಗೆ ಇಷ್ಟೆಲ್ಲ ವಿರುದ್ಧ ಅಥವಾ ವಿವಿಧ ಪಕ್ಷಗಳು ಏಕೆ? ಎಲ್ಲರ ವಾಗ್ದಾನ ಮತ್ತು ಆಶ್ವಾಸನ ಹೆಚ್ಚುಕಡಿಮೆ ಒಂದೇ. ಅನ್ನ ವಿಲ್ಲದವರಿಗೆ ಅನ್ನ, ಕೆಲಸವಿಲ್ಲದವರಿಗೆ ಕೆಲಸ ಭೂಮಿಯಿಲ್ಲದವರಿಗೆ ಭೂಮಿ, ಮೋಟಾರು ಇಲ್ಲದವರಿಗೆ ಮೋಟಾರು—ಇತ್ಯಾದಿ. ಇವೊಂದರಲ್ಲೂ ನಂಬಿಕೆಯಿಲ್ಲದ ಅಜ್ಞಮ್ಮನ ಮಾತು ಇದುವರೆಗೆ ಬಹುಮುಖ ಸತ್ಯವಾಗಿ ಉಳಿದಿದೆ.

ಸ್ವಾತಂತ್ರ್ಯ ಸಿಕ್ಕಂದಿನಿಂದ ಅಥವಾ ಗಳಿಸಿದಂದಿನಿಂದ ಭಾರತ ದೇಶದ ರಾಜ್ಯಾಡಳಿತವನ್ನು ನೋಡಿಕೊಂಡು ಬಂದವರು ಕಾಂಗ್ರೆಸ್ಸಿಗರು ಅಥವಾ ಕಾಂಗ್ರೆಸ್ಸು. ಹಾಗಾದರೆ ದೇಶದಾದ್ಯಂತ ಇಂದು ಕಾಂಗ್ರೆಸ್ಸಿಗೆ ಏಕೆ ವಿರೋಧ ಪ್ರಕಟವಾಗುತ್ತಿದೆ? ಅಪಪ್ರಚಾರ ನಡೆಯುತ್ತಿದೆ? ಕಾಂಗ್ರೆಸ್ಸಿನಲ್ಲಿದ್ದ ಜನರ ನಂಬುಗೆ ಮತ್ತು ಆತ್ಮ ವಿಶ್ವಾಸಗಳು ಏಕೆ ಕುಸಿದು ಬೀಳುತ್ತವೆ? ಸುಲಭದಲ್ಲೇ ವಿವೇಚಿಸುವುದಾದರೆ ಇಂದು ಹಳ್ಳಿಯಿಂದ ಡಿಲ್ಲಿಯವರೆಗೆ ಕಾಂಗ್ರೆಸ್ಸು ಎಂಬ ಸಂಸ್ಥೆ ಕಾಂಗ್ರೆಸ್ ತರದಿಂದ ತುಂಬಿ ಹೋಗಿದೆ. ಕಾಂಗ್ರೆಸ್ಸಿನ ನೀತಿ, ಧ್ಯೇಯ ಮತ್ತು ಆದರ್ಶಗಳಿಗಾಗಿ ತನುಮನ ಧನ ಅಂದರೆ ಜೀವನವನ್ನೇ ಮುಡಿಪು ಕೊಟ್ಟ ಕಾಂಗ್ರೆಸ್ಸಿಗರು ಇಂದು ಕಾಂಗ್ರೆಸ್ಸಿನಲ್ಲಿಲ್ಲ. ಬದಲು ಸ್ವರಾಜ್ಯದ ದುರುಪಯೋಗ ಅಥವಾ ಸ್ವಲಾಭವನ್ನು ಪಡೆಯಲು ಹವಣಿಸಿದ ನವೀನ ಕಾಂಗ್ರೆಸ್ಸಿಗರಿಂದ ತುಂಬಿದೆ.

ಇಂಗ್ಲಿಷ್ ಭಾಷೆಯಲ್ಲಿ ಬರೆಯುವುದಾದರೆ—Congress has become an institution of castes, conflicts and contradiction

ಉದಾಹರಣೆಗಾಗಿ ಕಾಂಗ್ರೆಸ್ಸು-ಕಳ್ಳು ಕುಡಿಯುವವರ ಸಂಘ ಮತ್ತು ಕುಡಿಯದವರ ಸಂಘದ ಸದಸ್ಯರಿಂದ ತುಂಬಿದೆ. ಸಮಾಜವಾದಿಗಳಿಂದ—ಅಸಮಾಜವಾದಿಗಳಿಂದ— ಭೂ ಸುಧಾರಣೆಯಾಗಬೇಕೆನ್ನುವವರಿಂದ—ಬೇಡ ಆಗ ಕೂಡದು ಎನ್ನುವವರಿಂದ—ರಾಷ್ಟ್ರೀಕರಣವಾಗ ಬೇಕು—ಆಗಬಾರದು ಎನ್ನುವವರಿಂದ—ಗೋ ಸಂವರ್ಧಕರಿಂದ—ಗೋ ಭಕ್ಷಕರಿಂದ—ಜಾತೀಯತೆ ಇರಬಾರದೆನ್ನುವವರಿಂದ-ಜಾತೀಯ ಪೆಡಂಭೂತಗಳಿಂದ.—ಇಂಗ್ಲಿಷ್ ಬೇಕೆನ್ನುವವರಿಂದ-ಹಿಂದೀ ಬೇಡವೆನ್ನುವವರಿಂದ ತುಂಬಿ ಹೋಗಿದೆ. ಕಾಂಗ್ರೆಸ್ಸು ಹಳೆಯದಾಗಿದೆ. ಕೆಲುಬಕೊಡಗಿದೆ!

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಕಾಂಗ್ರೆಸನ್ನು ಎಷ್ಟೊಂದು ಭದ್ರವಾಗಿ ಬೆಳೆಸಿ ಕಟ್ಟಿದರೋ ಆ ಭವ್ಯ ಆದರ್ಶ ಮಂದಿರವನ್ನು ಇಂದು ಕಾಂಗ್ರೆಸಿಗರೇ ಕೆಡಹುತ್ತಲಿದ್ದಾರೆ. ಇಂಗ್ಲೆಂಡಿನಲ್ಲಿ ಅಸಹನೀಯ ಚಳಿಯಿದ್ದರೂ, ಪಂಚಮ ಜಾರ್ಜ ಚಕ್ರವರ್ತಿಗಳನ್ನು ಕಾಣಲು ತೆರಳಿದ ಗಾಂಧೀಜಿ ಒಂದು ತುಂಡು ಪಂಚೆ ಮತ್ತು ಅಂಗವಸ್ತ್ರಗಳಿಂದಲೇ ಮೈ ಕೈ ಬತ್ತಲೆಯನ್ನು ಮರೆಸಿದರು. ದರಿದ್ರ ಭಾರತದ ಪ್ರತಿನಿಧಿಯಾಗಿ ಜನಜಂಗುಳಿಯ ದಾರುಣ ಕಷ್ಟಗಳನ್ನು ಇಂಗ್ಲೆಂಡಿನ ಪ್ರಜೆಗಳಿಗೆ ತಿಳಿಸುವುದು ಅವರ ಉದ್ದಿಶ್ಯವೊಂದಾಗಿತ್ತು! ಅದೇ ರೀತಿಯಲ್ಲಿ ಮರಣ ಪರ್ಯಂತ ಅವರು ಬಟ್ಟೆ ಬರೆಗಳ ಡಂಭಾಚಾರಕ್ಕೆ ಇಳಿಯಲೇ ಇಲ್ಲ. ಮೂರನೆಯ ವರ್ಗದಲ್ಲೇ ರೈಲು ಪಯಣ ಮಾಡಿದರು. ಹರಿಜನ ಕೇರಿಯಲ್ಲಿ ನಿವಾಸ ನಿಂತರು!

ಆದರೆ ಇಂದು ಕಾಂಗ್ರೆಸ್ಸಿಗರ ನಡೆ, ನುಡಿ, ಆಚಾರ ವಿಚಾರಗಳನ್ನು ಕೂಲಂಕುಷವಾಗಿ ನಿರೀಕ್ಷಿಸಿದಲ್ಲಿ ಇವರು ಕಾಂಗ್ರೆಸ್ಸಿಗರೋ ಕೊಳ್ಳೆಕಾರರೋ ಎಂಬಷ್ಟು ಸಂಶಯ ಎಲ್ಲರಿಗೂ ಬರುತ್ತದೆ. ಆಂಗ್ಲ ಸಾಹೇಬರ ಜೀವನವನ್ನು ನಾವು ಕಟುವಾಗಿ ಟೀಕಿಸುತ್ತಿದ್ದೆವು. ಡೌಲು ದೌಲತ್ತುಗಳನ್ನು ಹೀಯಾಳಿಸುತ್ತಿದ್ದೆವು. ಆದರೆ ಇಂದು ಅದಕ್ಕೂ ನೂರು ಪಟ್ಟು ಮೀರಿ ಕಾಂಗ್ರೆಸ್ಸಿಗರ ಕಾರುಭಾರು ನಡೆಯುತ್ತಿದೆ.

ಹಿಂದೆ ಜೈಲುವಾಸವನ್ನು ಅನುಭವಿಸಿದ ದೇಶಭಕ್ತ ಜನರು ಕಾಂಗ್ರೆಸ್ಸಿನಲ್ಲಿ ತುಂಬಿದ್ದರೆ ಇಂದು, ಮುಂದೆ ಜೈಲುವಾಸ ಅನುಭವಿಸಲಿರುವ ದೇಶದ್ರೋಹಿಗಳಿಂದ ಕಾಂಗ್ರೆಸ್ಸು ತುಂಬಿವೆಯೆಂದು ಭಾಸವಾಗುತ್ತಿದೆ.

ಇಷ್ಟೊಂದು ಘನವಾದ ದೇಶ ಸಂಸ್ಥೆ ಎಂತಹ ವಿಕಟ ಪರಿಸ್ಥಿತಿಯಲ್ಲಿ ಸಿಕ್ಕಿ ಬಿದ್ದಿದೆ? ಎಂತಹ ವಿಪರ್ಯಾಸ ಘಟ್ಟವನ್ನು ಸೇರಿದೆ! ನಾನಾ ಬಗೆಯ ತಿಕ್ಕಾಟ, ಕಚ್ಚಾಟಗಳಿಂದಾಗಿ ಕಾಂಗ್ರೆಸ್ಸು ಕಲುಷಿತವಾಗಿದೆ. ತನ್ನ ಪಾವಿತ್ರ್ಯವನ್ನು ಕಳೆದುಕೊಂಡಿದೆ.

ಈ (ಹೋಸು) ಕಲುಷು ಮೇಲೋಗರದಿಂದ ಭಾರತಕ್ಕೆ ಮುಕ್ತಿಯಿಲ್ಲವೇ? ಈ ಕೊಬ್ಬಿದ ಹೆಬ್ಬಾವನ್ನು ಪಳಗಿಸಲು ಸಾಧ್ಯವಿಲ್ಲವೇ? "ಕಾಂಗ್ರೆಸ್ಸಿಗೆ ಜಯವಾಗಲಿ" ಎಂದು ಒಕ್ಕೊರಲಿನಿಂದ ಕೂಗಿದ ಪ್ರಜಾಕೋಟಿಯ ಕನಸು ನನಸಾಗದೆ? ಕಾಂಗ್ರೆಸ್ಸಿಗೆ ಪುನರ್ಜನ್ಮವಿಲ್ಲವೇ? ವಿಚಾರವಂತರೆಲ್ಲ ಇದನ್ನು ಪರಿಶೀಲಿಸಬೇಕು. ರಾಜಾಜಿ ಗೋಪಾಲನ್ನರೊಳಗೂಡಿ ಎಲ್ಲರೂ ಕಾಂಗ್ರೆಸ್ಸನ್ನು ಉರುಳಿಸಲು ಯತ್ನಿಸುವಾಗ ಇನ್ನು ಮುಂದೆ ಕಾಂಗ್ರೆಸ್ಸಿನ ಅವಸ್ಥೆ ಏನಾದೀತು? ಈ ವಿರಾಟ ಪಕ್ಷದ ಭವಿಷ್ಯ ಭದ್ರವಾಗಿದೆಯೆ? ಇವಕ್ಕೆಲ್ಲ ಉತ್ತರ ಒಂದೇ.

ನಯಾ ಕಾಂಗ್ರೆಸ್ಸು ಜನಿಸಬೇಕು.

ನವೀನವಾಗಿ "ಕಾಂಗ್ರೆಸ್" ಆದವರನ್ನೆಲ್ಲ ಹಳೆಯ ಕಾಂಗ್ರೆಸ್ಸಿನಿಂದ ಹೊರತೆಗೆಯುವುದೆಂದರೆ ಜೇಲಿಯೋ ಜೊಲವೊಂದ ಗಾದೆಯಂತಾದೀತು. "Democratic Socialism is our goal" ಅಂದರೆ ಪ್ರಜಾಸತ್ತಾತ್ಮಕ ಸಮಾಜವಾದ ನಮ್ಮ ಗುರಿಯೆಂದು ಕಾಂಗ್ರೆಸ್ಸು ಖಂಡತುಂಡವಾಗಿ ಸಾರಿದರೂ, ಇದರ ವಿರುದ್ಧ ಒಳಸಂಚು ನಡೆಸುವವರೇ ಇಂದು ಕಾಂಗ್ರೆಸ್ಸಿನಲ್ಲಿ ತುಂಬಿದ್ದಾರೆ, ಆದುದರಿಂದ "ಒಳ ಹೊಕ್ಕ"ವರನ್ನೆಲ್ಲ ಅಲ್ಲೇ ಇರಗೊಡುವುದು ದೇಶದ ಹಿತದೃಷ್ಟಿಯಿಂದ ಸಾಧುವಾಗಿದೆ.

ಕಾಂಗ್ರೆಸ್ಸಿನ ನವೀನ ಧ್ಯೇಯ, ತತ್ವ, ಆದರ್ಶ ಮತ್ತು ವಿಚಾರ ಪರಂಪರೆಯನ್ನು, ಸುಧಾರಣೆಯನ್ನು ನಂಬುವ ಜನರನ್ನು ಮಾತ್ರ ನಯಾ ಕಾಂಗ್ರೆಸ್ಸಿನಲ್ಲಿ ಇರಬಿಡಬೇಕು ಯಾ ಸೇರಿಸಿಕೊಳ್ಳಬೇಕು.

ಮುಂದೆ ನಯಾ ಕಾಂಗ್ರೆಸ್ಸಿಗೂ, "ಜುನಾ" (ಹಳೆಯ) ಕಾಂಗ್ರೆಸ್ಸಿಗೂ ರಾಜ್ಯಾಡಳಿತದ ಅವಕಾಶ ಸಿಗುವಂತಾಗಬೇಕು. ಅರ್ಥಾತ್ ಜನರಿಗೆ "ಹಳೆಯ" ಕಾಂಗ್ರೆಸ್ಸೇ ಉತ್ತಮವೆಂದಾದಲ್ಲಿ ಅವರು ಆಳಲಿ; ಸರಕಾರ ನಡೆಸಲಿ. ಪ್ರಜೆಗಳಿಗೆ ನಯಾ ಕಾಂಗ್ರೆಸ್ಸು ಬೇಕು ಎಂದಾದಲ್ಲಿ ನಯಾ ಕಾಂಗ್ರೆಸ್ ಆಳುವಂತಾಗಲಿ; ಸರಕಾರ ನಡೆಸಲಿ. ವಿನಾ ಇನ್ನಿತರ ವಿಭಿನ್ನ ಯಾ ವಿವಿಧ ಪಕ್ಷ ಪಂಗಡಗಳಿಗೆ ನಾವು ನೆರವನ್ನು ನೀಡುವುದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಸಮಂಜಸವಲ್ಲ; ದೇಶಕ್ಕೆ ಹಿತಕರವಲ್ಲ.

ಅಂದ ಮೇಲೆ ಈ ವಿಚಾರ ವಿನಿಮಯವನ್ನು ಎಲ್ಲ ಸಹೃದಯಿಗಳೂ ಮಾಡಬೇಕು. ಕಾಂಗ್ರೆಸ್ಸಿಗರೂ ಮಾಡಬೇಕು. ಕಾಂಗ್ರೆಸ್ಸೇತರರೂ ಮಾಡಬೇಕು. ನೂರಾರು ಕೆಲಸಗಳಿದ್ದರೂ ನವ ನವೀನ ವಿಚಾರ ಸಂಕೀರಣಗಳಿಗೆ ಸ್ವಾಗತ ನೀಡುವ ನವ್ಯೊಲವಿನ ವರಿಷ್ಠ ನಾಯಕರು ಇದನ್ನು ಅಗತ್ಯ ಪರಿಶೀಲಿಸ ಬೇಕು. ಇದನ್ನು ಅಗತ್ಯ ಪರಿಶೀಲಿಸಬೇಕು. ಹಂಬನಾದ ನನಗೇ ನವಯುಗಕ್ಕೆ ಒಂದೇ ದಾರಿ; ಕಲ್ಲು ಮುಳ್ಳಿನ ದಾರಿ, ಆತ್ಮೀಯರೆನಿಸಿಕೊಂಡವರನ್ನೂ ಅಲ್ಲಗಳೆಯುವ ಕಠಿನ ದಾರಿ ನವೀನ ಕಾಂಗ್ರೆಸ್ಸಿನ ರಚನೆ; ಸ್ಥಾಪನೆ ಇದುವೆ ನಯಾ ಕಾಂಗ್ರೆಸ್.

WITH THE BEST COMPLIMENTS OF THE SEASON—

From

JYOTHI TALKIES

MANGALORE.

Coming:

Andavan Kattalai
(Tamil)

Nava Jeevana
(Kannada)

PLEASE PATRONIZE OUR ADVERTISERS

ತೀನ್ ಮೂರ್ತಿಯಿಂದ ಶಾಂತಿವನಕ್ಕೆ

ತೀನ್ ಮೂರ್ತಿಯ ಜ್ಯೋತಿಯೀಗ ಆರಿ ಹೋಗಿದೆ; ಅದು ಶಾಂತಿವನದ ನೆಲದಲ್ಲಿ ಗಾಳಿಯಲ್ಲಿ ಲೀನವಾಗಿದೆ. ಇದುವರೆಗೆ ತೀನ್ ಮೂರ್ತಿ ಜನತೆಯ ಆಕರ್ಷಕ ಭವನವಾಗಿದ್ದಂತೆ, ಕೆಲವೇ ವರ್ಷಗಳಲ್ಲಿ ಶಾಂತಿವನವು ಮನಸೆಳೆಯುವ ಸ್ಥಳವಾಗುವುದು. ಇಂದು ಈ ಸ್ಥಳದಲ್ಲಿರುವ ಏಕಾಂತತೆ ಆಗ ದೂರವಾಗುವುದು.

ಬರೆದವರು
ಶ್ರೀ ಕೃಷ್ಣಾನಂದ ಹೆಗ್ಡೆ, ಹೊಸದಿಲ್ಲಿ.

ಆರುಮೈಲು ದೂರದ ಹಾದಿ. ಈ ಹಾದಿಯಲ್ಲಿ ಸ್ವಲ್ಪ ದಿನ ಹಿಂದೆ ಹೋದ ವ್ಯಕ್ತಿಯೊಬ್ಬ ಹಿಂದೆ ಬಂದಿಲ್ಲ. ಎಂದಿಗೂ ಹಿಂದೆ ಬಾರದ ವೀಥಿಯಲ್ಲಿ ಆತ ಹೊರಟು ಹೋದ. ನಾಲ್ಕು ದಿನಗಳ ನಂತರ ಮರಳಿ ಬಂದುದೆಂದರೆ ಆತನ ಬೂದಿ ಮಾತ್ರ.

ಆತ ಹೋದಾಗ ಬಾನು ಕಣ್ಣೀರಿಟ್ಟಿತು. ಭೂಮಿ ನಡುಗಿತು. ಇದು ಉತ್ಪ್ರೇಕ್ಷೆಯಲ್ಲ. ಎಂದಿಗೂ ಬಾರದಿದ್ದ ಮಳೆ ಅಂದು ಸುರಿಯಿತು. ಬಹಳ ದಿನಗಳ ಬಳಿಕ ಭೂಮಿ ನಡುಗಿತು.

ಆತನ ಶವ ಹಾದು ಹೋದಾಗ ಜನಕೋಟಿ ಗೋಳಿಟ್ಟಿತು "ಜವಾಹರಲಾಲ್ ಜಿಂದಾಬಾದ್!" ಎಂಥ ವಿಪರ್ಯಾಸ! ಬದುಕಿದ್ದಾಗಲೂ ಅದೇ, ಸತ್ತ ಮೇಲೂ ಅದೇ ಕೂಗು!

"ಕೆಲವರಿಗೆ ಅಣ್ಣನನ್ನು ಕಳೆದು ಕೊಂಡಂತೆ. ಕೆಲವರಿಗೆ ತಂದೆಯನ್ನು ಕಳೆದು ಕೊಂಡಂತೆ. ಮತ್ತು ಎಲ್ಲರಿಗೂ ತಮ್ಮ ಪ್ರೀತಿ ಪಾತ್ರನೊಬ್ಬನನ್ನು ಕಳೆದ ಕೊಂಡಂತೆ' ಅನಿಸಿತು

○ ○ ○

ತೀನ್ ಮೂರ್ತಿಯಲ್ಲಿರುವ ಆತನ ಮನೆಯ ಎದುರು ಈಗಲೂ ಜನ ಸುತ್ತಾಡುತ್ತಾರೆ ಎತ್ತರವಾಗಿರುವ ಕಬ್ಬಿಣದ ಗೇಟುಗಳಾಚೆ ಕತ್ತೆತ್ತಿ ನೋಡುತ್ತಾರೆ. ಯಾರಿಗಾಗಿ ತಾವು ಇಣುಕುತ್ತಿದ್ದೇವೋ ಆ ವ್ಯಕ್ತಿ ಈಗ ಆ ಮನೆಯಲ್ಲಿ ಇಲ್ಲ ಎಂದು ಆ ಜನಕ್ಕೆ ಗೊತ್ತು. ಆತನನ್ನು ಇನ್ನೆಂದಿಗೂ ತಾವು ಕಾಣಲಾರೆವೆಂದೂ ಅವರು ಬಲ್ಲರು ಆದರೂ, ಆತ ಇದ್ದಾನೆ ಎನ್ನುವ ಭ್ರಮೆ. ಆತ ಸತ್ತಿರುವುದು ಸುಳ್ಳು ಎನ್ನುವ ಭ್ರಮೆ. ಆತ ಸತ್ತಿದ್ದಾನೆ ಎಂದು ತಾವು ತಿಳಿದಿರುವುದಕ್ಕೆ ಅದನ್ನು ಸುಳ್ಳೆಂದು ಸಿದ್ಧ ಪಡಿಸಲು ಆತ ಬಂದೇ ಬರುತ್ತಾನೆ ಎನ್ನುವ ಭ್ರಮೆ. ತಾವು ಹಾಗೆ ತಿಳಿದಿರುವುದಕ್ಕೆ ತಮ್ಮನ್ನು ಗದರಲು ಬರುತ್ತಾನೆ ಎನ್ನುವ ಭ್ರಮೆ..... ...

ತೀನ್‌ಮೂರ್ತಿಯ ಜ್ಯೋತಿ ಆರಿ ಹೋಗಿದೆ. ಇಲ್ಲಿನ ಜನರ ಮುಖದಲ್ಲಿ ಮಾತ್ರವಲ್ಲ, ಮನೆಯ ಎದುರು ನಿಂತಿರುವ ಮೂರು ಕಾವಲುಗಾರರ ಪ್ರತಿಮೆಗಳಲ್ಲೂ ಹಿಂದಿನ ಕಳೆ ಮಾಯವಾಗಿದೆ.

ಮುಂಜಾನೆ ಒಂಬತ್ತು ಗಂಟೆಯ ಹೊತ್ತಿಗೆ ಈ ಮನೆಯ ಮಂದಿಯೆಲ್ಲ ಮಾಳಿಗೆ ಮೆಟ್ಟಲುಗಳತ್ತ ನೋಡುತ್ತಾರೆ. ಅಭ್ಯಾಸದ ಬಲ ಟಪ್ ಟಪ್ ಟಪ್ ಮೆಟ್ಟಲಿಳಿದು ಬರುವ ಶಬ್ದ. ಈಗಲೂ ಕೇಳುತ್ತಿದೆಯೆ? ಇಲ್ಲವೆ? ನಿಜವಾಗಿಯೂ?

ಬದುಕಿರುವಾಗ ಅದು ಆತ ಆಫೀಸಿಗೆ ಹೊರಡುವ ವೇಳೆ.

○ ○ ○

ಈ ಮನೆಯ ಮಾಳಿಗೆಯಲ್ಲಿ ಒಂದು ಕೋಣೆ. ಅಲ್ಲೊಂದು ಮಂಚ. ಪಕ್ಕದಲ್ಲೊಂದು ಜ್ಯೋತಿ. ಸುತ್ತಲೂ ಮೌನ. ಮೌನ. ಮೌನ.

ಇಲ್ಲಿ ಭಾರತದ ಜ್ಯೋತಿ ಆರಿತು.

ಅದರ ಪಕ್ಕದಲ್ಲೇ ಇನ್ನೊಂದು ಕೋಣೆ. ಸುತ್ತ ನಾಲ್ಕಾರು ಶೆಲ್ಫುಗಳಲ್ಲಿ ತುಂಬ ಪುಸ್ತಕಗಳು.

ಇಲ್ಲಿ ಆರು ಗಂಟೆಗಳ ಕಾಲ ಆತನ ಪಾರ್ಥಿವ ಶರೀರವನ್ನು ಇಡಲಾಗಿತ್ತು.

ಮನೆಯ ಕೆಳ ಭಾಗದಲ್ಲಿ, ಮೊಗಸಾಲೆ. ಇಲ್ಲಿ ಆತನ ದೇಹವನ್ನು ಸಾರ್ವಜನಿಕರ ದರ್ಶನಕ್ಕೆಂದು ಹನ್ನೆರಡು ಗಂಟೆಗಳ ಕಾಲ ಇಡಲಾಗಿತ್ತು.

ಇನ್ನು ಐವತ್ತು ನೂರು ವರ್ಷಗಳಲ್ಲಿ ಈ ಮನೆ ನಾಶವಾಗಬಹುದು. ಇದೇ ಜಾಗದಲ್ಲಿ ಭವ್ಯವಾದ ಮಂದಿರವೊಂದು ತಲೆಯೆತ್ತ ಬಹುದು.

ಇಲ್ಲಿಗೆ ಬರುವ ತಲತಲಾಂತರಗಳ ಜನರ ಮನಸ್ಸಿನಲ್ಲಿಯೂ ಇದೊಂದು ಮಾತು ಪ್ರತಿಧ್ವನಿಸ ಬಹುದು.

"ಇಲ್ಲೊಬ್ಬ ಅಸಾಧಾರಣ ವ್ಯಕ್ತಿ ತನ್ನ ಜೀವಮಾನದ ಹದಿನಾರು ವರ್ಷ ಕಾಲ ವಾಸಿಸುತ್ತಿದ್ದ. ಅವನ ಕಾಲದ ಜನ ಆತನನ್ನು ಅತಿಯಾಗಿ ಪ್ರೀತಿಸಿದರು. ಇಂತಹ ವ್ಯಕ್ತಿಗೆ ಸರಿ ಸಮಾನರಾದವರು ಈ ತನಕ ಹುಟ್ಟಲಿಲ್ಲ."

ನೆಹರೂ ತಾನೇ ಒಂದು ಬಾರಿ ಹೇಳಿರಲಿಲ್ಲವೆ?

"ಯಾರಾದರೂ ತಿಳಿಯುವಂತಿದ್ದರೆ ನಮ್ಮ ಜನ ಏನು ಯೋಚಿಸುತ್ತಾರೆ, ಏನು ಭಾವಿಸುತ್ತಾರೆ ಎನ್ನುವುದು ನನಗೆ ಚೆನ್ನಾಗಿ ಗೊತ್ತಿರಬೇಕು. ಏಕೆಂದರೆ ಇಷ್ಟೊಂದು ವರ್ಷಗಳ ಕಾಲವೂ ನಾನು ಜನತೆಯ ಅಪಾರ ಪ್ರೀತಿ ಬಂಧನದಲ್ಲಿದ್ದೇನೆ."

ತೀನ್ ಮೂರ್ತಿಯಲ್ಲಿರುವ ಈ ಮನೆ ಇನ್ನು ಸ್ವಲ್ಪ ಸಮಯದಲ್ಲಿಯೇ ನೆಹರೂ ಸ್ಮಾರಕ ಮಂದಿರವಾಗಿ ಮಾರ್ಪಡುತ್ತದೆ.

○ ○ ○

ತೀನ್ ಮೂರ್ತಿಯಿಂದ ಶಾಂತಿ ವನಕ್ಕೆ.

ಜನ ಈ ತನಕ ತುಳಿಯದ ವಿಸ್ತಾರ ಬಯಲು ರಾಜಘಾಟಿನ ಉತ್ತರಕ್ಕೆ [ಮುನ್ನೂರು ಗಜವಲ್ಲ, ಸುಮಾರು ಮುಕ್ಕಾಲು ಮೈಲುದೂರ.] ಅಲ್ಲೊಂದು ಕೆಂಪು ಇಟ್ಟಿಗೆಗಳಿಂದ ಕಟ್ಟಿದ ವೇದಿಕೆಯಿದೆ. ಹೂಗಳಿಂದ ಮುಚ್ಚಲ್ಪಟ್ಟಿದೆ. ನೋಡಲು ಬರುವ ಸಾಲು ಗಟ್ಟಲೆ ಜನ ಈ ವೇದಿಕೆಯ ಮೆಟ್ಟಲಲ್ಲಿ ತಾವು ತಂದ ಹೂ ಚೆಲ್ಲಿ ಕೈ ಮುಗಿಯುತ್ತಾರೆ.

ತೀನ್ ಮೂರ್ತಿಯಿಂದ ಬಂದ ವ್ಯಕ್ತಿ ಇಲ್ಲಿ ಮಣ್ಣಿನಲ್ಲಿ, ಗಾಳಿಯಲ್ಲಿ ಲೀನವಾಗಿ ಹೋದ.

ಇಲ್ಲೀಗ ಗಿಡ ಮರಗಳು ಕಾಣೆ. ಆದರೆ ಕೆಲವೇ ವರ್ಷಗಳಲ್ಲಿ ಇದೊಂದು ಪ್ರಶಾಂತ ವನವಾಗಿ ಮಾರ್ಪಡುತ್ತದೆ. ಇಲ್ಲಿ ಸಹಸ್ರ ಚೆಂಗುಲಾಬಿಗಳು ದಿನವೂ ಅರಳುತ್ತವೆ. ಕಾಡುಮರಗಳ ಎಡೆಯಲ್ಲಿ ಜಿಂಕೆಗಳು ಓಡಾಡುತ್ತವೆ.

ಆಗ ಇಲ್ಲಿಗೆ ಬಂದ ಜನ ಎತ್ತರವಾದ ಹಸುರು ಹುಲ್ಲಿನ ದಿನ್ನೆಯೊಂದರತ್ತ ಬೊಟ್ಟು ಮಾಡಿ ಹೇಳುತ್ತಾರೆ:

"ಇಲ್ಲಿ ಭಾರತದ ಕಣ್ಮಣಿಯ ಪಾರ್ಥಿವ ದೇಹ ಅಗ್ನಿಗಾಹುತಿಯಾಯಿತು. ಆ ಹೊತ್ತಿಗೆ ಯಾವ ಕಾಲದಲ್ಲಿಯೂ ಕಾಣದಿರುವಷ್ಟು ಜನಸ್ತೋಮ ಇಲ್ಲಿ ನೆರೆದಿತ್ತು. ಭಾರತದ ಚರಿತ್ರೆಯಲ್ಲಿ ಒಂದು ಮಹತ್ವ ಪೂರ್ಣವಾದ ಅಧ್ಯಾಯ ಮುಕ್ತಾಯವಾಯಿತು."

ಹೌದು ತೀನ್‌ಮೂರ್ತಿಯಿಂದ ಶಾಂತಿ ವನಕ್ಕೆ ಆ ವ್ಯಕ್ತಿ ಹೊರಟು ಹೋದಂದಿನಿಂದ ಭಾರತದ ಚರಿತ್ರೆಯಲ್ಲಿ ಇನ್ನೊಂದು ಅಧ್ಯಾಯ ಆರಂಭವಾಯಿತು.

ಆದರ್ಶ ಮತ್ತು ಆಚರಣೆ

(೧೧ನೇ ಪುಟದಿಂದ)

ಕಾಣಲಿಲ್ಲ. ಜವಹರಲಾಲರು ಭಾರತದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಮಸ್ತರಿಗೂ ಸುಖ ದೊರೆಯಬೇಕೆಂಬ ಧ್ಯೇಯವನ್ನಿಟ್ಟುಕೊಂಡು ದುಡಿದರು. ಆದರೆ ಅವರ ಉದ್ದೇಶ ಸಫಲವಾಯಿತೆಂಬ ಸಮಾಧಾನ—ಪೂರ್ತಿ ಸಮಾಧಾನ ಅವರಿಗೆ ಬಂದಿರಲಾರದು. ಆದರೆ ಧ್ಯೇಯಕ್ಕೂ ಅನುಷ್ಠಾನಕ್ಕೂ ಬಹಳ ಅಂತರವಿರುವ ಈ ಜಗತ್ತಿನಲ್ಲಿ, ಆ ಅಂತರ ಕೂಡದು ಎಂಬ ಸಂಪೂರ್ಣ ಪ್ರಜ್ಞೆಯಿಂದ ತನ್ನಿಂದಾದಷ್ಟು ಮಟ್ಟಿಗೆ ಧ್ಯೇಯಕ್ಕೆ ಸಮನಾಗಿ ಬಾಳಲು ಯತ್ನಿಸಿದ ಅವರು, ಹಾಗೂ ಅವರಂಥ ಮಹಾನುಭಾವರ ನೆನಪು ನಮಗೊಂದು ದೊಡ್ಡ ಬೆಳಕು. ಆ ಬೆಳಕಿನಲ್ಲಿ ನಮ್ಮ ಧ್ಯೇಯಗಳಿಗೂ ನಡುವಳಿಕೆಗೂ ನಡುವಿರುವ ಅಂತರವನ್ನು ಕಡಿಮೆ ಮಾಡಿಕೊಳ್ಳಲು ನಾವು ಪ್ರಯತ್ನಿಸಬೇಕು. ನಮ್ಮನ್ನು ನಾವು ಅಳೆದುಕೊಳ್ಳುವಾಗ ನಮ್ಮ ಧ್ಯೇಯಗಳು ಮಾತ್ರವಲ್ಲ, ನಮ್ಮ ಅನುಷ್ಠಾನವೂ ಅಳತೆಗೋಲಾಗಬೇಕು.

ಮಕ್ಕಳ ಮಮತೆಯ
"ಬಿಕ್ಕೊ"ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು— ರುಚಿಕರ ಸೇವನೆಗೆ ಪ್ರಸಿದ್ಧಿ ಪಟ್ಟಿವೆ.

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ

ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,
ಕಾಪು, ದ. ಕ.

ಇತಿಹಾಸ ಪ್ರಜ್ಞೆ ಮತ್ತು ರಾಷ್ಟ್ರೀಯತೆ

(೧೦ನೇ ಪುಟದಿಂದ)

"History repeats itself" ಇತಿಹಾಸವು ಪುನರಾವರ್ತಿಸುತ್ತದೆ' ಎಂಬ ಗಾದೆ ಅನುಭವಕ್ಕೆ ಬರುವಂತಾಗಿದೆ. ಅಂದರೆ ಅಂದಿನ ಆಚಾತುರ್ಯಗಳಿಗೆ ಕ್ಷಮ್ಯತೆ ಇಂದಿನವುಗಳಿಗಿರುವುದಕ್ಕಿಂತ ಹೆಚ್ಚು ಪ್ರಮಾಣದಲ್ಲದೆ ಎನ್ನಬೇಕಾಗಿದೆ.

ಪೃಥ್ವೀರಾಜನು ಮಹಮ್ಮದ್ ಘೋರಿಗೆ ಬಲಿಯಾದ ಹಾಗೆ, ರಾಣಾ ಪ್ರತಾಪ ನಿಷ್ಫಲ ಪ್ರತಿಜ್ಞನಾದ ಹಾಗೆ, ಮಲ್ಲಿಕಾಫರನಿಗೆ ದಂಡಯಾತ್ರೆ ಮಾಡಿಕೊಂಡು ಹೋಗಗೊಟ್ಟ ಹಾಗೆ, ಪೇಶ್ವೆಗಳು ಅಂದಾದುಂದಿ ಕಾರಭಾರಕ್ಕಿಳಿದ ಹಾಗೆ, ತಾಳಿಕೋಟೆಯಲ್ಲಿ ಮತಾಂಧತೆ ರಾಜದ್ರೋಹಕ್ಕೆಡೆಗೊಟ್ಟ ಹಾಗೆ, ೬೦೦ ಸಂಸ್ಥಾನಿಕರು ವಿದೇಶೀಯ ದಾಸ್ಯವನ್ನು ಹೆಚ್ಚು ಕಡಿಮೆ ಸಂತೋಷದಿಂದ ಸ್ವೀಕರಿಸಿ ಬದುಕಿ ಉಳಿದ ಹಾಗೆ ಇನ್ನೂ ಏನೇನೋ ರಾಷ್ಟ್ರೀಯ ಅಪಘಾತಗಳು ಸಂಭವಿಸಿದ ಹಾಗೆ ಇಂದೂ ನಮ್ಮ ರಾಜಕೀಯ ಆರ್ಥಿಕ ಮತ್ತು ಮತಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುತ್ತಿರುವುದನ್ನು ಕಾಣದವರೂ ಧೃತರಾಷ್ಟ್ರರು, ಕಂಡವರೂ ಧೃತರಾಷ್ಟ್ರರು! ಕಾಣದವರಿಗೆ ಅಂತರ್ದೃಷ್ಟಿಯಿಲ್ಲ; ಕಂಡವರಿಗೆ ಅಸಮರ್ಪಕವಾದುದನ್ನು ಸರಿಪಡಿಸುವ ಧೈರ್ಯ-ನಿರ್ಧಾರ ಬುದ್ಧಿಗಳಿಲ್ಲ!

ಮೇಲಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಮಧ್ಯಯುಗದ ನಾಗರಿಕತೆಯ ಅವನಾಶಕ್ಕೆ ವಿದೇಶೀಯ ಸಾಮ್ರಾಜ್ಯ ಸ್ಥಾಪನೆಗೆ ಅವಕಾಶ ಕೊಟ್ಟದ್ದು ಕಾರಣವಾದರೆ, ಇಂದಿನ ನಾಗರೀಕತೆಯ ಅವಸಾನಕ್ಕೆ ಅರ್ಥದಾಸ್ಯ ಮತ್ತು ರಾಜತಾಂತ್ರಿಕ ನಟನಾಚಾತುರ್ಯದ ಆಧಿಕ್ಯ ಕಾರಣಗಳಾಗುವ ಭಯವುಂಟಾಗುತ್ತದೆ. ಅಜೀರ್ಣವಾಗುವಷ್ಟು ಆಶಾವಾದವನ್ನು ಬೋಧಿಸುವುದು ಧೃತಿಗೆಡಿಸುವಷ್ಟು ನಿರಾಶಾವಾದವನ್ನು ಬೋಧಿಸಿದಷ್ಟೇ ರಾಷ್ಟ್ರಹಾನಿಕರ. ಧೃತಿಗೆಡುವ ಪರಿಸ್ಥಿತಿಯನ್ನು ಬರಮಾಡಿಕೊಳ್ಳದಿರುವಂತೆ ಯೋಜನಾಬದ್ಧ ದೃಷ್ಟಿಯುಳ್ಳ ಪ್ರಾಮಾಣಿಕ ಇತಿಹಾಸಕಾರರು ನಮ್ಮಲ್ಲೀಗ ಸಾಕಷ್ಟು ಎಚ್ಚರಿಕೆಯನ್ನು ಕೊಡುತ್ತಿಲ್ಲ. ಅತಿ ನಿಂದೆಯನ್ನು ಬಹಿಷ್ಕರಿಸುವ ಉಗ್ರಾವೇಶ ಸಂಪನ್ನರು ಅತಿ ಸ್ತುತಿಗಿಳಿದಿರುವುದೇ ಇಂದಾಗುತ್ತಿರುವ ಪ್ರಮಾದ. ಅತಿ ನಿಂದೆ ಅತಿ ಸ್ತುತಿಗಳನ್ನು ಕೂಡಿಸಿದರೆ ಜನರಲ್ಲಿ ಸಮತ್ವಬುದ್ಧಿ ಉಳಿಯುತ್ತದೆ ಎಂಬುದು ಓತಪ್ರೋತ ಕಟಿಪ್ರಮಾಣ ನ್ಯಾಯ ಹಿಡಿದು ಹೊಳೆ ದಾಟಿ ಹೋಗಿ ಮುಳುಗಿ ಸತ್ತ ಪಂಡಿತನ ನಂಬಿಗೆಗೆ ಸರಿಸಮವಾದುದು. ಸತ್ಯಕ್ಕೆ ಇರುವ ಸಾಮರ್ಥ್ಯದಿಂದಲೇ ಅತಿ ರಂಜಿತ ವಾಕ್ಯಗಳನ್ನು ಖಂಡಿಸಬೇಕಲ್ಲದೆ ಅವುಗಳ ವಿರುದ್ಧವಾದ ಅಷ್ಟೇ ಅತಿರಂಜಿತ ಪ್ರತಿವಾಕ್ಯಗಳಿಂದಲ್ಲ. ಸತ್ಯವನ್ನು ಮರೆಮಾಚುವ ಅಥವಾ ತಿರಸ್ಕರಿಸುವ ಪ್ರತಿಯೊಂದು ರಾಜಕೀಯ ಪಕ್ಷವೂ ಅರಾಷ್ಟ್ರೀಯ. ಅದಕ್ಕೂ ವಿದೇಶೀಯರೊಡನೆ ಒಳಸಂಚು ಮಾಡುವ ಪಕ್ಷಕ್ಕೂ ಬಹಳ ವ್ಯತ್ಯಾಸವಿಲ್ಲ. ಕೇವಲ ಪಕ್ಷ ಪ್ರತಿಷ್ಠೆಗಾಗಿ ಪರ ಪಕ್ಷಗಳ ಸದಾಸದಭಿಪ್ರಾಯಗಳೆಲ್ಲವನ್ನೂ ತಿರಸ್ಕರಿಸುವುದು ಆರೋಗ್ಯಸಂಪನ್ನ ಪ್ರಜಾಪ್ರಭುತ್ವದ ರಾಷ್ಟ್ರೀಯ ಲಕ್ಷಣವಲ್ಲ. ಅನಾರೋಗ್ಯ ಸಂಪನ್ನ ಪ್ರಜಾಸತ್ತೆಯು ಸ್ವಾಧಿಕಾರಪ್ರಮತ್ತ ರಾಜಪ್ರಭುತ್ವಕ್ಕಿಂತ ಹೆಚ್ಚು ಸತ್ಪರಿಣಾಮಕರವಲ್ಲ. ಯಾವುದಾದರೂ ಒಂದು ವ್ಯವಹಾರವನ್ನು ಪ್ರಜಾಸತ್ತಾತ್ಮಕವೆಂದು ಕರೆದ ಕೂಡಲೇ ಅದು ಶುದ್ಧ ಬುದ್ಧ ಸಚ್ಚಿದಾನಂದ ಸ್ವರೂಪವಾಗುವುದಿಲ್ಲ. ಪ್ರತಿಯೊಂದು ಹೊಸ ಧೋರಣೆಗೂ ಹೊಸ ಕ್ರಮಕ್ಕೂ ಅದರ ಪೂರ್ವ ಪರಿಸ್ಥಿತಿಯ ಆಮೂಲಾಗ್ರ ಜ್ಞಾನ ಅಗತ್ಯ. ಅದರ ಪೂರ್ವಾವಸ್ಥೆಯ ವಿಸ್ಮೃತಿ ಅಥವಾ ತಿರಸ್ಕಾರ ಇಂದು ನಮಗಾಗುತ್ತಿರುವ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಆಡಳಿತಾತ್ಮಕ ತೊಂದರೆಗಳಿಗೆ ಕಾರಣ. ಒಬ್ಬ ಮನುಷ್ಯನ ಜೀವನೇತಿಹಾಸದಲ್ಲಿ ಅವನ ಪೂರ್ವಾವಸ್ಥೆಗಳ ಅವಲೋಕನ ಉತ್ತರಾವಸ್ಥೆಗಳ ಯೋಜನೆಗೆ ಹೇಗೆ ಅಗತ್ಯವೋ ಹಾಗೇ ಒಂದು ದೇಶದ ಜನರ ಪೂರ್ವಾವಸ್ಥೆಯಲ್ಲಿದ್ದ ಮನೋಧರ್ಮದ ಅರಿವು ಅವರ ಉತ್ತರಾವಸ್ಥೆಯನ್ನು ಯಶಸ್ವಿಯಾಗಿ ರೂಪಿಸಲು ಅತ್ಯಗತ್ಯ. ಇಲ್ಲವಾದರೆ ಪೂರ್ವಾವಸ್ಥೆ – ಉತ್ತರಾವಸ್ಥೆಗಳಲ್ಲಿ ರೂಪಾಂತರವಾದರೂ ಅರ್ಥಾಂತರವುಂಟಾಗದು. ಮನಃಶಾಸ್ತ್ರದ ಆಧಾರವಿಲ್ಲದ ತರ್ಕಶಾಸ್ತ್ರ ಎಂಥ ಸಫಲ ತತ್ವಜ್ಞಾನವನ್ನು ದೊರಕಿಸಿ ಕೊಟ್ಟೀತು? ಕಾಲ್ಪನಿಕ ತತ್ವಜ್ಞಾನವನ್ನು; ವಾಸ್ತವಿಕವಾದುದನ್ನಲ್ಲ. ಅಂಥ ಕಾಲ್ಪನಿಕ ತತ್ವಜ್ಞಾನಗಳಿಗೆ ನಮ್ಮ ರಾಜಕೀಯ "ಇಜಮ್ಮು"ಗಳಲ್ಲಿ ಹಲವಾರು ನಿದರ್ಶನಗಳಾಗಿವೆ. ವಾಸ್ತವಿಕವನ್ನು ಕಾಲ್ಪನಿಕವೆಂದು ಬಾಯಿ ಹಾರಿಸುವ ಪ್ರವೃತ್ತಿಯಿಂದಲೇ ಗಾಂಧಿವಾದವನ್ನು ಮನಃಪೂರ್ವಕವಾಗಿ ಯಾರೂ ಆಚರಣೆಗೆ ತರಲು ಉತ್ಸಾಹವಂತರಾಗಲಿಲ್ಲ. ಮದ್ರಾಸಿನ ಭೂಸುಧಾರಣಾ ಕಾಯದೆಯನ್ನು ಇತ್ತೀಚೆಗೆ ಸುಪ್ರೀಂ ಕೋರ್ಟು ಅಸಂವಿಧಾನಿಕವೆಂದು ತಳ್ಳಿಹಾಕಿದ್ದು ಮತ್ತು ಆ ಕಾಯದೆಯನ್ನು ಎತ್ತಿ ಹಿಡಿಯಲು ಸಂವಿಧಾನವನ್ನು ಬದಲು ಮಾಡಿದ್ದು ವಾಸ್ತವಿಕತೆಯನ್ನು ಮರೆತುದಕ್ಕೆ ಕೊಟ್ಟ ಒಂದು ಎಚ್ಚರಿಕೆ. ಕಾಶ್ಮೀರ ಪ್ರಶ್ನೆಯಲ್ಲಿ ಇತ್ತೀಚೆಗೆ ಪಾಶ್ಚಾತ್ಯ ಮಿತ್ರರು ಪಾಕಿಸ್ತಾನ ಪರವಾದದ್ದೂ ಅಂಥ ಮತ್ತೊಂದು ಎಚ್ಚರಿಕೆ ನಮ್ಮ ದೇಶಕ್ಕೆ. ಸ್ವದೇಶದ ಲಂಚ-ಲಾಭಬಡುಕರಿಗೂ ವಿದೇಶದ ಪ್ರಭಾವ ದಾಹವುಳ್ಳ ಮುತ್ಸದ್ದಿಗಳಿಗೂ ಭೇದವಿದೆಯೇ? ಆದುದರಿಂದ ಇಂದು ಇತಿಹಾಸ ತಜ್ಞರು ಮುಂದೆ ಬಂದು ನಮ್ಮ ನಾಗರಿಕತೆಯ ವಿವಿಧ ಯುಗಗಳ ತುಲನಾತ್ಮಕ ವಿಮರ್ಶೆಯ ಮೂಲಕ ಜನತೆಯ ಹಾಗೂ ಜನನಾಯಕರ ಕಣ್ತೆರೆಯಿಸಬೇಕು. ಇತಿಹಾಸ ಪ್ರಜ್ಞೆಯಿಲ್ಲದ ಜನತೆಗೆ ರಾಷ್ಟ್ರೀಯತೆ ಅರ್ಥವಾದೀತೆ? ಇಂದು ರಾಷ್ಟ್ರೀಯತೆಯ ದೃಷ್ಟಿಯಿಂದ ಇತಿಹಾಸದ ಘಟನೆಗಳನ್ನು ತೂಗಿ ನೋಡಲು ಬಾರದ ಇತಿಹಾಸ ತಜ್ಞತೆಗೇನಾದರೂ ಅರ್ಥವಿದೆಯೇ? ಇಲ್ಲಿ ಕೊಟ್ಟ ತುಲನೆ ಅತ್ಯಂತ ಸ್ಥೂಲವಾದುದು.

In the tradition of the famous "CANARA" Springs now another excellent product:

'CANARA' BRAKE DRUMS

for all popular vehicles:

They are made from quality material, modern machines and with rigid quality control under watchful eyes of a modern laboratory. These drums matching the best of the International makes are made to suit Indian Road Conditions incorporating experience gained by lengthy practical road tests.

THE CANARA WORKSHOPS LIMITED

MANGALORE-3.

ರಾಮಾಶ್ವಮೇಧದಲ್ಲಿ ಸುಂದರ ವರ್ಣನೆ

([illegible])

ಅಂದು ಪಟ್ಟಿನ ಸೇರಿಸಿಯು ... ರಾವಳಿಯಲ್ಲಿ ವ್ಯಾಖ್ಯಾನಿಸಿದ ... ದ ಆಸಾಮಾನ್ಯತನವನ್ನು ... ಕುಂಟಿತನವು ಸೂಚಿಸುತ್ತಿವೆ.

ಶ್ರೀ ರಾಮನು ಅಶ್ವಮೇಧಕ್ಕೆ ತೊಡಗಿದಾಗ ಒಂದು ವಸಂತ ಋತು ಬಂತು. 'ಮನೋಹರನೆನಿಪ ವಸಂತಂ ಸೀಳ್ದು ಕಳಕಂಠದ ಕಂಠನಾಳಕ್ಕೆ ... ವಂ ಕಳೆದು ಕಲ್ಪನಾ ... ಯುಂ, ಅರಸೇರಿಲಿಪ ... ಸಿಕಿಸು ತರಗಿಳಿಯ ನಾಲಗೆಯ ತೆಳ್ಪನಾಗಿಸಿ ತೊದಲ್ನುಡಿಯಂ ಕಿರ್ದಿಯುಂ, ಪುಷ್ಪಘೋಳಿಯು ತಿಪ್ಪಂಬಳೆದ ... ಯ ಸುರಯಿಯು ಪೊಸ ಒಂದನೊಡನೆ ... ತ್ತೇ ... ಸಂ ... ಸೊಡವಿದ ತಿರೋಭ್ರ ... ಯುಂ ಬಸಂಗಂಬ ಜನನೆ ... ಲೇಡಂ. ದಕ್ಷಿಣಾನಿಲಂ ಮಂದಂ ದಂ ವಹಿಸುತ್ತಿರ್ಕೆ ... ಗಳ್ ಸನೆ ಕೊನೆ ಮುಗುಳ್ ... ಮುಗುಳ್ ... ನೊಗಮಿಸೆಯುಂ ... ಗದೆ ... ಪ್ರಕಾಶದಿಂದ ... ದ ... ಯ ... [illegible]

ಇಲ್ಲಿ ವಸಂತನು ... [illegible] ... ಸಿ ... ಗಳಿಗೆ ... ಆಗ [illegible]

[illegible] ವರ್ಣನೆ, ... ವರ್ಣನೆ, ಸುಬಾಹು ಯುದ್ಧದ ವರ್ಣನೆ, ಋತಂಭರ ರಾಜನ ದೇಶದ ವರ್ಣನೆ, ಚಕ್ರಾಂಕಪುರದ ದಮನದ ಬೇಟೆಯ ವರ್ಣನೆ, ಶುಕ್ರಾಂಗದನ ವನ ವಿಹಾರದ ವರ್ಣನೆ ಮೊದಲಾದ ವರ್ಣನೆಗಳೆಲ್ಲ ರಾಮಾಶ್ವಮೇಧ ಕಾವ್ಯಕ್ಕೆ ಹೊಸ ಶೋಭೆಯನ್ನು ತಂದಿವೆ.

ಮುದ್ದಣನ ವರ್ಣನೆಗಳೆಲ್ಲಾ ವಾಚ್ಯಗಳಾಗಿರದೆ ವ್ಯಂಗ್ಯಗಳಾಗಿರುವುದೂ ಉಂಟು. ಮಳೆಗಾಲದ ವರ್ಣನೆಯು ಬರೇ ವರ್ಣನೆ ಮಾತ್ರವಲ್ಲ, ಇದು ನಾಟಕದೊಳಗಿನ ನಾಂದಿಯ ಕೆಲಸ ಮಾಡಿದೆಯೆಂದು ದಿವಂ. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಕನ್ನೋಂದು ... ದಲ್ಲಿ ತೋರಿಸಿದ್ದಾರೆ. ಇಲ್ಲಿ ಕಾಲ ... ಶ್ರೀರಾಮ ... ಕಾಲ ... ಅಶ್ವಮೇಧವಾಗ. ... ಛತ್ರ ... ದಿ ... ದೇ ಆಗಸದ ... ದೇ ಸೀತಾ ಪರಿತ್ಯಾಗ. ಇದನ್ನೇ ... ಪ್ರಜೆಗಳು 'ಕಾಲಂ ಕಪ್ಪು, ಕಷ್ಟಂ ಎಂದ ... ನ್ನು ವಿಜಾತಿ ... ಗಿದನವಿಲೇ ಆಗಸ. ಮಳೆಗಾಲದ ಮುಗಿಲು ವಟ್ಟಕೋಗಿಲೆಯೋ ಲಕ್ಷ್ಮಣ ಹೀಗೆ ಮಳೆಗಾಲದ ವರ್ಣನೆಯನ್ನು ಮಾಡಿಯಿದವರು ರಾಮಾಶ್ವಮೇಧದ ಕಥೆಗೇ ಗಂಟಿಕ್ಕಿದ್ದಾರೆ.

... ಇನ್ಸ್ಪೆಕ್ಟರು ವಿದ್ವಾಂಸರು ಜಯ ಕರ್ನಾಟಕದಲ್ಲಿ ರಾಮಾಶ್ವಮೇಧದ ಕಥಾಮುಖದ ಮೊದಲಿನ ಪ್ರಕರಣವನ್ನು ಗಹನವಾದ ವೇದಾಂತದ ಪರವಾಗಿ ಅರ್ಥ ಮಾಡಿದ್ದಾರೆ! ಸಾರಾಂಶ—ಶ್ರೀರಾಮನೂ ಪೂರ್ಣನೇ ದೇವನಾಗಲಿ, ಇದರ ವರ್ಣನಾ ಭಾಗಗಳಾಗಲೀ ಬಂಕಿಮರ ... ಯಂತೆ ಓದಿದರೂ ಸಾರಿ ಓದಿ ಮುಗಿಸುವ ವಿಷಯಗಳಲ್ಲ. ಆ ವರ್ಣನೆಗಳಲ್ಲಿ ಜನಮನೋರಂಜನೆಯೊಡನೆ ಪಾಂಡಿತ್ಯದ ರಸಗಟ್ಟಿಗಳೂ ಇವೆ.

ಸೀತಾ ಪರಿತ್ಯಾಗದ ನಿರ್ಧಾರದ ರಾತ್ರಿ ಕಳೆಯಿತು: ಸೂರ್ಯೋದಯವಾಯಿತು. ಈ ವರ್ಣನೆಯೊಂದರಲ್ಲೇ ಕವಿ ಸ್ವರ್ಗ ಸೌಂದರ್ಯವನ್ನು ಸೂರೆಗೊಂಡಿದ್ದಾನೆ. ಈ ವರ್ಣನೆಯೊಂದೇ ಮುದ್ದಣನ ಹೆಸರನ್ನು ಚಿರಂಜೀವಿಯನ್ನಾಗಿ ಮಾಡಲು ಸಾಕು.

'ಆ ವೇಳೆಯೊಳ್ ರಾಮರಾಜ್ಯದೊಳಿಂತನು ಚಿತವಾಗಿ ಅರಂಗೆಟ್ಟುದೆಂದೇ ಬೆದರಿ ತಾರೆಗಳ್ ದೆಸೆಗೆಟ್ಟುವು, ಚಂದ್ರಮಂ ಕಳೆಗೆಟ್ಟಂ, ಜಂಪತಿವಕ್ಕಿ ಕಂಗೆಟ್ಟುವು; ಕೋವಳೆ ಬಣ್ಣಂಗೆಟ್ಟಳ್; ಕಮಲಿನಿ ಬಾಯ್ಬಿಟ್ಟಳ್; ತುಂಬಿ ನೊರೆಯಿಟ್ಟುದು ಇಂತಿದೇನನ್ನೆಯದ ಗಲಬೆ; ಇದರಡಿಯನರಿವೆಂ ಎಂದು ಮೆಯ್ವೇರದಿಕ್ಕಡೆ ಪಸೆಯಿಂ ಕುಳಿಗಾಳಿ ಸುಳಿಯಲೊಡಂ ಗೂಡುಹಕ್ಕಿಗಳ್ ಗಜಬಜಿಸೆ, ಶಾನೋಭಾಸ್ಕರಂ ಬೇಗನುದಯಿಸಿ ಮೂಡುವೆಟ್ಟನ ಕೋಡುಗಲ್ಲನೇರಿ ನಿಟ್ಟಿಸುತಿರ್ದಂ'

ಕವಿಯು, ಶ್ರೀ ರಾಮನು ನಿರಪರಾಧಿನಿಯಾದ ಸೀತೆಯನ್ನು ತ್ಯಜಿಸುವನೆಂದು ಪ್ರಕೃತಿಯುಲ್ಲಾದ ವಿಸ್ಮಿತಿಯನ್ನು ಸುಂದರವಾಗಿ ಹೇಳಿದ್ದಾನೆ. ಜಗದೊಳಿಂತ್ತು ಮರ ಹಾನಿಯನ್ನು ಕಂಡು ಸೈರಿಸುವರುಂಟೆ? ಇಲ್ಲಿ ಶ್ರೀರಾಮನು ರಾಜಾರಾಮನಾಗಿ ವರ್ತಿಸಿದ್ದಾನೆ!

ಸೀತಾಲಕ್ಷ್ಮಣರು ಗಂಗಾನದಿಯನ್ನು ದಾಟುವಾಗ ಮಧ್ಯಾಹ್ನವಾಗಿತ್ತು. ಆಗ ಜಿಂಕೆಗಳು ನೀರು ಕುಡಿಯುವ ಮತ್ತು ಮೆಲುಕಾಡುವ ದೃಶ್ಯವು ಸ್ವಭಾವೋಕ್ತಿಯಾಗಿದೆ. ಇಲ್ಲಿ ಸುಲಭವಾದ ಚೂರ್ಣವೆಂಬ ಗದ್ಯ ಶೈಲಿಯ ನಿದರ್ಶನವಿದೆ. ವಸಂತ ರಾಜನ ಆಧಿಪತ್ಯವನ್ನು ಚಿತ್ರಿಸಿದ ಕೈಯಿಂದಲೇ ಗ್ರೀಷ್ಮ ರಾಜನ ಒಡೆತನವನ್ನು ಕವಿ ಚಿತ್ರಿಸಿದ್ದಾನೆ. ಬೇಸಿಗೆಯ ಉಷ್ಣದಿಂದ ಪಕ್ಷಿಗಳ ಕಲಕಂಠದಲ್ಲಿ ನೇಣು ಪೇಜಾರು. ತುಂಬಿಗಳಿಗೆ ಪರಾಗವನ್ನು ಡುಬಾಯೂರಿಕೆಯಾಗಿ 'ಕನ್ನೆ ವೆಣ್ಗಳ ಕೈಗೊಡನ ತುಳುಕುಂ ಬನಿಯಂ ಕುಡಿಯಲಾಡಿಸಿದುವು; ಬಟ್ಟೆಗರರವಟ್ಟಿಗೆಯ ಬಾಲೆಯರ ನಯನಾತಿಥಿಗಳಾದರ್. ಪೆರ್ದೊರೆಕಾಲ್ವೊಡೆಯಂ ಕಿರುದೊರೆ ಪುಳಿಲ್ವೊರೆಯುವಾಯ್ತು. ಕಾಕಮರಂ ಪೋತಬಳ್ಳಿ ಸುರ್ಕಿ ಸುಳಿವ[illegible]ದುದು. ಕಲ್ ಸುಣ್ಣ ಬೇವಾಯ್ತು, ಸೆಕೆಯನ್ನು ಸಹಿಸಲಾರದೆ 'ಕಾಂತಾಜನಂ ಪಟ್ಟುಡೆಯಂ ಪುಟಗಪ್ಪುರಬೆರೆದ ಸಿರಿಕಂಡದಪ್ಪಿಂ ಮುತ್ತಿನೊತ್ತೆ ಸರದ ತೊಡವಿನುಳ್ಳಲರ್ದ ಬೈಗು ಮಲ್ಲಿಗೆಯ ಚೊಲ್ಲೆಯದ ತುರುಬಿಂ ಕಣ್ಗೆಡ್ಡ ಮಾದುದು'

ವಿದ್ಯುನ್ಮಾಲಿ ಯೆಂಬ ರಕ್ಕಸನನ್ನು ಕೊಂದಮೇಲೆ ಶ್ರೀ ರಾಮನ ಯಜ್ಞಯಾಶ್ವವು ಮುಂದೆ ಹೋಗುವಾಗ ಚಳಿಗಾಲ ಬಂತು. ಈ ವರ್ಣನೆಯೊಂದರಲ್ಲೇ ಕವಿಯ ಪದ ಶಕ್ತಿಯ ಪರಿಚಯವಾಗುತ್ತದೆ.

'ಗೊಜ್ಜಿಗೆಗಳ ಜವ್ವನಂ, ಮಲ್ಲಿಗೆಗೆ ಮೊಳೆಜವ್ವನಂ, ಸುರಯಿಗೆ ನೆರೆಜವ್ವನಂ, ಪಡ್ಡಳಿಗೆ ತುಂಬುಜವ್ವನಂ ಕೋವಳಿಗೆ ಮಿಂಟು ಜವ್ವನಂ, ತಾವರೆಗ್ ಏಳುಂಜವ್ವನ ಮೊದವಿತ್ತು. ಮತ್ತಂ ಗೋಣಿಗೆ ಪಣ್ಣಂ, ಮಾಮರಕ್ಕೆ ಪೂವಂ, ಬಕ್ಕೆವಲಸಿಂಗೆಕ ಳಿಕೆಯುಂ, ತೆಂಗು ಕೌಂಗುಗಳ್ಗೆ ನಿಡುಗೊನೆಯುಂ ಪತ್ತಿಸಿ ತೆತ್ತಿಸಿ ಬೀಸುವ ಪೆಲಗಾಳಿ ಕಳಿತು ಚಳಿತು, ಬೆಂಗುಡುವಿನೇಗಂ ಸುಗಿತಳ್ವಿಯುದ್ದ ಪಳಂಚಲೆದುದು......ಪೇಣಿಂ ಬಂದುಬಂದಿಗೊಂಡ ಕಡುಚಳಿ ನಾಡಿಗರಂ ಪಿಡಿದುಂ ಜಡಿದು ಮುಳುಕಿಸಿಯುಂ ನಡುಗಿಸಿಯುಂ ತಲೆನಾಗಿಸಿಯುಂ ಗುರ್ದಿಯುಂ ತಿರ್ದಿಯುಂ, ಕೆಡೆಪವುದುಂ, ಸೂಗಿದು ಸುರುಂಟೆ ಮುರುಂಟೆ ಮುರವಟ್ಟು ಮೂಗುಪಟ್ಟು ಮೆಯ್ಗಿಟ್ಟ ಸಕಳಿದರೆಲ್ಲರ್ ಪೊಸವರೆಯದ ಜವ್ವನಿಗರ್ ತಂತಮ್ಮ ಕಾದಲೆಯರ ತೋಳ ತಳ್ಕೆಯೊಳಿಸೆದರ್; ಮುದುಸರಂದು ಸುಡುಗಿರ್ಚಿನ ಮರೆಯಿಂ ನಾರ್ದುಗುರುಗುಮ್ಮ ನಿರ್ದರಿರುಳುಂ ಪಗಲುಂ'.

ಇಲ್ಲಿ ಚಳಿಯು ಜಗತ್ತನ್ನು ಕಣ್ಣು ಮಾಡಿದ ವಿಧಾನ, ತರುಣರ ಮತ್ತು ಮುದುಕರ ಆಶ್ರಯ ಸ್ಥಾನ ಚೆನ್ನಾಗಿದೆ.

ಪ್ರಾಚೀನ ಸಾಹಿತ್ಯದ ವರ್ಣನೆಗಳ ಮಾದರಿಯೇ ಬೇರೆ.

'ಸೂರ್ಯನ ಸಂಗದಿಂದ ಬಿಚ್ಚಿದ ಗಗನ ಲಕ್ಷ್ಮಿಯ ಕೇಶಪಾಶವೋ, ಕಮಲ ಕುಮುದಗಳಲ್ಲಿ ಸ್ಥಳವಿಲ್ಲದೆ ಜಗತ್ತನ್ನು ಮುತ್ತಿರುವ ಭೃಂಗ ಸಂಗವೋ—ಎಂಬಂತೆ ಜಾರಸ್ತ್ರೀಯರಿಗೆ ಮನೋದೇವತೆಯಾದ ಕತ್ತಲೆಯು ಎತ್ತೆತ್ತಲೂ ಮುತ್ತಿತು.'

'ಕಪ್ಪಿಲ್ಲದ ಕಾಡಿಗೆಯಂತೆ, ಮನ್ಮಥನ ಯಶದಂತೆ, ರಾತ್ರಿಯ (ವತ್ಸರಾಜ ಕಥೆ) ತಂಪು ಬಿಸಿಲಂತ ಹೊಸ ಬೆಳ್ದಿಂಗಳು ಶೋಭಿಸಿತು' (ಮಲ್ಲಿನಾಥ ಪುರಾಣ).

ಪ್ರಾಚೀನ ಕವಿಗಳಿಗೆ ವರ್ಣನೆಯಲ್ಲೂ ಉತ್ಪ್ರೇಕ್ಷೆ, ಉಪಮೆ, ಶ್ಲೇಷೆಗಳ ಸಹಾಯಬೇಕು; ಅತಿಶಯೋಕ್ತಿ ಅರ್ಥಾಂತರನ್ಯಾಸಗಳು ಅವರ ವಿನ್ಯಾಸದ ಗೆಳೆಯರು.

ಮನೋರಮೆಯು ಮೊದಲೇ ಮುದ್ದಣನೊಡನೆ 'ಸೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಬಾರದೆಂ'ದು ಪ್ರಾರ್ಥಿಸಿದ್ದಳು. ಆಕೆಗೆ ತಿರುಳ್ಗನ್ನಡದ ಜಿಳ್ಳಿಡಿಯಲ್ಲಿ ಪುರುಳು ಮಾತ್ರ ಬೇಕಾಗಿತ್ತು. ಮುದ್ದಣನು 'ಕನ್ನಡವು ಕತ್ತುರಿ' ಎಂಬುದನ್ನು ಮರೆಯದೆ 'ಕರ್ಮಣಿ ಸರದಲ್ಲಿ ಜೆಂಬವಳವನ್ನು ಕೋದಂತೆ' ಶ್ರೀರಾಮನ ಪಾವನ ಕಥೆಯ ನಡುನಡುವೆ ಸರಸ ವರ್ಣನೆಗಳನ್ನು ಸೇರಿಸಿ ಮನೋಹರವಾಗಿ ಕಥೆ ಹೇಳಿದುದು ಕನ್ನಡಿಗರ ಭಾಗ್ಯವಲ್ಲವೆ? ಮುದ್ದಣನ ಯಶಸ್ಸಿನ ಒಂದು ಪಾಲು ಬಂಕಿಮನಿಗೂ ಸಲ್ಲಲಾರದೆ?

ದಿ ಕೆನರಾ ನರ್ಸರಿ ರಿಸರ್ಚ್ ಗಾರ್ಡನ್ಸ್

ಪೋಸ್ಟ್: ಉಳಿಯಾರಗೋಳಿ, ಕಾಪು, ದ. ಕ.

ಸ್ಥಾಪನೆ: 1914

48 ವರ್ಷಗಳ ಅನುಭವದಿಂದ ಸಿದ್ಧಪಡಿಸಿದ ವಿವಿಧ ಮಾವು, ಚಿಕ್ಕು, ಪೇರಳೆ, ಅಂಜೂರ, ಪನ್ನೇರಳೆ, ಜಂಬುನೇರಳೆ, ಸೀತಾಫಲ, ಮಾದಾಳೆ, ಸಕ್ಕರೆಕಂಚು, ಕಿತ್ತಳೆ, ಪಪ್ಪಾಯಿ, ಬೀಪುಹಲಸು ತೆಂಗು, ಒಡಂಬ, ಕಾಫಿ, ಅನಾನಸು, ಬಾಳೆ ಕಸಿಗಿಡಗಳೂ ಅಲ್ಲದೆ 26 ಜಾತಿ ಕಸಿಗುಲಾಬಿ ಗಿಡಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿವೆ.

ದಕ್ಷಿಣ ಕನ್ನಡದಲ್ಲೇ ಪ್ರಸಿದ್ಧವಾದ ನಮ್ಮ ಗಿಡಗಳನ್ನು ಭಾರತದಾದ್ಯಂತ ಉಪಯೋಗಿಸಲಾಗುತ್ತದೆ. ಅಲ್ಲದೆ ಸರಕಾರಿ ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನೂ ತುಂಬಾ ಪದಕಗಳನ್ನೂ ಪಡೆದಿವೆ.

ನಮ್ಮ ಕೆನರಾ ನರ್ಸರಿ ಗಿಡಗಳೆಂದು ಹೇಳಿ ಮೋಸ ಮಾಡುವವರಿರುವುದರಿಂದ ಖಾತ್ರಿಯಾಗಿ ನಮ್ಮಿಂದಲೇ ಪಡೆಕೊಳ್ಳಿರಿ.

ಒಮ್ಮೆ ಸಂದರ್ಶಿಸಿ ತೃಪ್ತಿ ಪಡೆಯಿರಿ.

READ & ADVERTISE IN NAVAYUGA WEEKLY

೧೯೪೭ರತ್ತ ಸಿಂಹಾವಲೋಕನ

(೮ನೇ ಪುಟದಿಂದ)

ಗದಂತಹ ಭಾರತದ ರಾಷ್ಟ್ರೀಯತೆಯು ಅನುಭವ ಅವರಿಗಂದಾಯಿತು. ಸೋಮನಾಥ ದೇವಾಲಯದಂತೆ ಇದೆ ರಾಷ್ಟ್ರವೆನ್ನುವದು ಅವರ ಅಚಲ ನಂಬಿಕೆ. ಆ ದೃಷ್ಟಿಯಲ್ಲಿ ರಾಷ್ಟ್ರ ಚಿರಂಜೀವಿಯೇ ಸರಿ. ಪಂಜಾಬ, ಬಂಗಾಳ, ಸಿಂಧ ಕಾಶ್ಮೀರ.... ಅಲ್ಲಿ ಇಲ್ಲಿ ಒಂದಷ್ಟು ಬಿಟ್ಟುಕೊಟ್ಟರೂ ರಾಷ್ಟ್ರದ ಕೇಂದ್ರ ಅಥವಾ ರಾಷ್ಟ್ರೀಯತೆ ಚಿರಂಜೀವಿ ಇರುವದರಿಂದ ನಾಳೆ ಅವು ಸಮ್ಮೋಟನೆ ಬಂದು ಸೇರಬಹುದು. ನೆಹರೂಜೀ ಎಂದೂ ನಿರಾಶಾವಾದಿಯಾಗಿರಲಿಲ್ಲ. ಆದುದರಿಂದಲೇ ಆಶಾವಾದಿ ನೆಹ್ರೂಜೀ ರಾಷ್ಟ್ರ ಚಿರಂಜೀವಿ ಎಂದಿದ್ದರು. ಆದರೆ ಅದಕ್ಕಾಗಿ ರಕ್ತ ನದಿ ಹರಿಸಲು ಶಾಂತಿಪ್ರಿಯ ನೆಹರೂಜೀ ಸಿದ್ಧರಿರಲಿಲ್ಲ.

ಭೌಗೋಲಿಕ ವಿಜ್ಞಾನಿಗಳಗೂ ಮೇಲಿನ ವಿವರಣೆ ಅನ್ವಯಿಸುತ್ತದೆ. ಅವರು ಕೂಡಾ ರಾಷ್ಟ್ರ ಚಿರಂಜೀವಿ ಎಂದೊಡನೆ ಕಿಸಿ ನಗೆಯಾಡುವವರೇ ಇದ್ದಾರೆ. ಈಗ ಹಿಂದೂ ಮಹಾಸಾಗರ ಇರುವಲ್ಲಿ ಬಹಳ ಆಳದವರೆಗೆ ಹೋಗಿ ಅಗೆದು ನೋಡಿದಲ್ಲಿ ಆ ಸ್ಥಳ ಹಿಂದೆ ಊರಾಗಿತ್ತೆಂದು ಸಂಶೋಧಕರು ಹೇಳುತ್ತಾರೆ. ಅಂದರೆ ಈಗಿರುವ ಭೂ ಪ್ರದೇಶ ನಾಳೆ ಜಲಮಯವಾಗಿ ಬಿಡ ಬಹುದು ಇನ್ನೊಂದೆಡೆ ಜಲ ಹೋಗಿ ನೆಲ ಬರಬಹುದು. ಹಾಗಿರುವಾಗ ರಾಷ್ಟ್ರ ಚಿರಂಜೀವಿ ಹೇಗೆಂದು ಅವರು ಕೇಳಬಹುದು. ಜಲಮಯವಾಗುವದಲ್ಲಿ ಸಾಧ್ಯವಾದರೂ ಅಖಂಡ ಭಾರತ ಎಂದಿಗೂ ಜಲ ಸಮಾಧಿಯಾಗಲಾರದು. ಆಗ ಉಳಿದ ಪ್ರದೇಶದಲ್ಲಿ ರಾಷ್ಟ್ರೀಯತೆ ಇದ್ದೇ ಇರುತ್ತದೆ. ಅದು ಹೊಸ ಸ್ಥಳಕ್ಕೂ ಪ್ರವಹಿಸುತ್ತದೆ.

ಹೀಗೆ ರಾಷ್ಟ್ರವನ್ನು ನೆಹರೂಜಿಯುವರು ಕೇವಲ ಕಲ್ಲು, ಮುಳ್ಳೆಂಬ ದೃಷ್ಟಿಯಿಂದ ಕಾಣದೆ ಚೈತನ್ಯದ ಬುಗ್ಗೆಯೆಂಬ ದೃಷ್ಟಿಯಿಂದ ಕಂಡಿದ್ದರು. ಆದುದರಿಂದಲೇ ಅವರು ನೆಲಕ್ಕೆ ಅಷ್ಟು ಗಮನ ಕೊಡದೆ ನಿವಾಸಿಗಳತ್ತ ಲಕ್ಷ್ಯಕೊಡುತ್ತಿದ್ದರು. ಹಾಗಿದ್ದರೂ ದೇಶ ವಿಭಜನೆ ಆದಾಗ ಅವರೂ ತಲ್ಲಣಿಸಿ ಹೋಗಿದ್ದರು. ಬೇರು ಬಾರಿ ಅಪವಾದವಾಗಿ ಬರಹುದು.

ಕಳೆದ ಹದಿನೇಳು ವರ್ಷಗಳಲ್ಲಿ ನೆಹರೂಜೀಯವರ ಚಿರಂಜೀವಿ ರಾಷ್ಟ್ರ ಅದೆಷ್ಟು ಪ್ರಗತಿ ಹೊಂದಿದೆ? ಶೇಖ್ ಅಬ್ದುಲ್ಲಾ ಅಥವಾ ರಾಮ ಮನೋಹರ ಲೋಹಿಯಾ ಹೇಳುವಂತೆ ಭಾರತ ಇನ್ನೂ ೧೯೪೭ರಲ್ಲಿ ಇದ್ದಂತೆ ಇರುವದಿಲ್ಲವೆಂಬುದು ಸಾಮಾನ್ಯ ಮಾನವನಿಗೂ ಗೊತ್ತು. ಚಕ್ರವರ್ತಿ ರಾಜಗೋಪಾಲಾಚಾರಿ ಹೇಳುವಂತೆ ನೆಹರೂಜಿ ಮಾಡಿದ್ದೆಲ್ಲಾ ಹಾಳು ಎನ್ನುವದೂ ಸತ್ಯಕ್ಕೆ ಬಹುದೂರ ಮಾತು ಇದೆ.

ಆದರೆ ನೆಹರೂಜೀಯುವರು ಇಹಲೋಕ ತ್ಯಜಿಸುವಾಗ ೧೯೪೭ರ ಛಾಯೆಯನ್ನು ಕಂಡಿದ್ದರು. ಅಂದು ಸ್ವಾತಂತ್ರ್ಯದ ಹೆಸರಿನಲ್ಲಿ ದೇಶವಿಭಜನೆ ನಡೆದು ನಮ್ಮ ಸ್ವದೇಶಬಾಂಧವರು ತಮ್ಮದೇ ಆಗಿದ್ದ ಪೂರ್ವ ಭೂಪ್ರದೇಶದಿಂದ ಹೊರತಳ್ಳಲ್ಪಟ್ಟಿದ್ದರು. ಅವರ ಪ್ರವಾಹವನ್ನು ಕಾಲುವೆಗಳ ಮೂಲಕ ಕಳುಹಿಸಲು ಅಂದು ಕಷ್ಟವಾಗಿತ್ತು. ಪುನಃ ಅದೇ ಪರಿಸ್ಥಿತಿಯನ್ನು ಪಂಡಿತ್‌ಜೀಯವರು ಕಂಡಿದ್ದರು. ಪಾಕಿಸ್ತಾನಿಗಳ ಪೈಶಾಚಿಕ ಕೃತ್ಯದಿಂದಾಗಿ ಅಳಿದುಳಿದಿದ್ದ ಭಾರತೀಯರು ಆ ನೆಲವನ್ನು ಬಿಟ್ಟು ಇತ್ತ ಬರಬೇಕಾಯಿತು. ಅಷ್ಟು ಮಾತ್ರವಲ್ಲ ಅನ್ಯದೇಶಗಳಲ್ಲಿ ಆದೆಂದೋ ಹೋಗಿ ನೆಲೆಸಿದ್ದ ಭಾರತೀಯರೂ ಆ ದೇಶಗಳನ್ನು ಬಿಟ್ಟು, ಭಾರತಕ್ಕೆ ಬರಬೇಕಾಗಿರುತ್ತದೆ. ಆದರೆ ಅದು ಹಿಬ್ರೂಗಳು ಇಸ್ರೇಲಿಗೆ ಹೋದಂತೆ ಅಲ್ಲ. ಅದುವೇ ಮುಖ್ಯ ವಿಷಯ. ಹೀಗೆ ೧೯೪೭ರಲ್ಲೂ ಪಾಕಿಸ್ತಾನ ಪೀಡೆ ಕೊಡುತ್ತಿತ್ತು, ಇನ್ನೂ ಇಷ್ಟೆ. ಅವರೊಂದಿಗೆ ಇಂದು ಚೈನಾವೂ ಸೇರಿಕೊಂಡಿರುತ್ತದೆ. ಅವರನ್ನು ಕೈಕೊಟ್ಟು ಆಮಂತ್ರಿಸಲು ಇಲ್ಲಿಯ ಕಮ್ಯೂನಿಸ್ಟರು ಸಿದ್ಧತೆ ನಡೆಸುತ್ತಿದ್ದಾರೆ. ಹಿಂದೆ ಕಲ್ಕತ್ತದಲ್ಲಿ ಒಮ್ಮೆಲೆ ಕತ್ತಲೆಯನ್ನುಂಟು ಮಾಡಲಾರದೆ ಚೀನಾದಿಂದ ಛೀಮಾರಿ ಹಾಕಿಸಿಕೊಂಡಿರುವ ಕಮ್ಯೂನಿಸ್ಟರು ಇಂದು ದೇಶದಾದ್ಯಂತ ಗಲಭೆ ಎಬ್ಬಿಸಲು ನೋಡುತ್ತಿದ್ದಾರೆ. ಇಂದು ಹಳ್ಳಿಗಳನ್ನು ಅವರು ಸುಡುತ್ತಿದ್ದಾರೆ. ನಾಳೆ ದಿಲ್ಲಿಯನ್ನು ಹೀಗೆಯೇ ಬಿಟ್ಟಲ್ಲಿ ಭಸ್ಮ ಮಾಡುವದರಲ್ಲೂ ಸಂದೇಹವಿಲ್ಲ. ಅದರ ನಾಂದಿ ಆದಾಗಲೇ ಆಗಿರುತ್ತದೆ. ಇಲ್ಲಿನ ಪಾಕಿಸ್ತಾನದ ಪಂಚಮ ಸ್ತಂಭೀಯರು ಅವರಿಗೆ ಪಕ್ಕ ಬಲವಾಗಿದ್ದಾರೆ. ಈ ಹಿಂದೆ ಅವರು ನೆಹರೂಜೀಯವರ ಹೆಸರು ಕೇಳಿ ಆತತಾಯಿ ಕುಕೃತ್ಯಗಳನ್ನು ನಡೆಸುತ್ತಿದ್ದಲ್ಲಿ ಇಂದು ನೆಹರೂಜೀಯವರ ಭಾವಚಿತ್ರಕ್ಕೆ ಅಪಮಾನ ಮಾಡಲೂ ಅವರು ಹೇಸುವದಿಲ್ಲ. ಬೆಂಗಳೂರಿನ ಪಕ್ಕದ ರಾಮನಗರದಲ್ಲಿ ಅವರು ತಮ್ಮ ಆಟವನ್ನು ಆಡಿತೋರಿಸಿದ್ದಾರೆ.

ಭಾಷಾವಾರು ಭೂತವೂ ಇಂದು ಸುಮ್ಮಗಿರುವದಿಲ್ಲ. ಹೊಸ ಹೊಸ ಹೆಸರಿನ ರಾಜ್ಯಗಳಿಗಾಗಿ ರಾದ್ಧಾಂತ ನಡೆಯುತ್ತಿದೆ.

ಜಾತೀಯಜಾಡ್ಯವೂ ಗುಣವಾಗಿರುವುದಿಲ್ಲ. ನೆಹರೂಜೀ ಅಲಂಕರಿಸಿದ್ದ ಆಸನವನ್ನು ಪಡೆಯಲು ಹಂದ್ಯಾಟ ನಡೆದಾಗ, ನೆಹರೂಜೀಯವರೊಂದಿಗೆನೇ ಇದ್ದವರೂ ಕೂಡಾ ಜಾತೀಯಜಾಡ್ಯದಿಂದ ರಾಷ್ಟ್ರೀಯ ವೈದ್ಯರಿಗೆ ಬಹಳ ಉಪದ್ರ ಕೊಟ್ಟಿದ್ದಾರೆ.

ದೇಶದೊಳಗಿರುವ ಮೊಸಳೆ—ಬೆಗ್ಗಣಗಳಿಗೂ ಇಂದು ಸ್ವಾತಂತ್ರ್ಯ ಸಿಕ್ಕಿರುತ್ತದೆ. ಪ್ರತಾಪಸಿಂಘ ಕೈರಾನ ತಾನೇ ಕಲಿಯುಗದ ರಾವಣನಂತೆ ಮೆರೆದರು. ಬಿಜೂ ಪಾಟ್ನಾಯಕ ತಾನೇ ಭಸ್ಮಾಸುರನಂತಿದ್ದರು. ಕೇರಳದಲ್ಲಿ ಚಾಕೋ ಈ ಚಾಕುವನ್ನು ಮುಟ್ಟುವಧೈರ್ಯ ಆದ್ಯಾರಿಗಿದೆ ನೋಡೋಣವೆಂದು ರಸ್ತೆಯಲ್ಲೇ ಪ್ರದರ್ಶನ ನಡೆಸುತ್ತಿದ್ದರು. ತಾವು ದೇಶಭಕ್ತರೆಂಬಂತೆ ಈ ದೇಶದ್ರೋಹಿ ಮೊಸಳೆಗಳು ಕಣ್ಣೀರು ಸುರಿಸುತ್ತಿವೆ.

ಈ ದೃಷ್ಟಿಯಲ್ಲಿ ನಾವು ೧೯೪೭ರಲ್ಲಿ ಇದ್ದಂತೆಯೇ ಇದ್ದೇವೆ ಎಂದರೆ ಆಶ್ಚರ್ಯವೇನೂ ಇರುವದಿಲ್ಲ. ರಾಷ್ಟ್ರದ ಒಂದು ಅಂಗವಾಗಿರುವ ಔದ್ಯೋಗಿಕ ರಂಗದಲ್ಲಿ ಅಥವಾ ಕೈಗಾರಿಗಾ ರಂಗದಲ್ಲಿ ನಾವೊಂದಿನಿತು ಮುಂದರಿದಿರಬಹುದು. ಹಾಗೆಯೇ ಇತರ ಭೌತಿಕ ವಿಷಯದಲ್ಲಿ ಮುಂದರಿದಿರುವೆವೆಂಬುದರಲ್ಲಿ ಸಂಶಯವೇನೂ ಇರುವದಿಲ್ಲ. ಈ ವಿಷಯಗಳಲ್ಲಿ ಮಾತ್ರ ನಾವು ಮುಂದರಿದರೆ ಸಾಕೇನು? ಕುರಿಮರಿಯನ್ನು ಮುದ್ದಾಗಿ ಸಾಕಿ ಬಿಟ್ಟು ತೋಳನಿಗೆ ಕೊಟ್ಟಂತೆ ಆದೀತು ನಮ್ಮ ಪರಿಸ್ಥಿತಿ. ಕೈಗಾರಿಗೆ ಕೃಷಿ ಇತ್ಯಾದಿ ರಂಗಗಳಲ್ಲಿ ಭಾರತವನ್ನು ಚೆನ್ನಾಗಿ ಬೆಳಸಿಟ್ಟು ಭಾರತೀಯರ ಹೃದಯವನ್ನು ಶೂನ್ಯಗೊಳಿಸಿಟ್ಟರೆ ಏನು ಫಲ? ಆ ಹೃದಯ ಗುಡಿ ಮೂರ್ತಿ ಇಲ್ಲದ ಮಂದಿರವಾಗಬಾರದು. ಅಲ್ಲಿ ರಾಷ್ಟ್ರೀಯತೆಯ ಜ್ಯೋತಿರ್ಲಿಂಗದ ಪ್ರತಿಷ್ಠಾಪನೆಯಾಗಬೇಕು. ೧೯೪೭ರತ್ತ ಸಿಂಹಾವಲೋಕನ ಗೈದಾಗ ಈ ಸತ್ಯ ಸಂಗತಿ ನಮಗೆ ಸ್ಪಷ್ಟವಾಗುತ್ತದೆ ನಾವಾದರೋ ಸಿಂಹಾವಲೋಕನ ಮಾಡದೆ ಉಷ್ಟ್ರ ಪಕ್ಷಿಯು ಹೊಯಿಗೆಯಲ್ಲಿ ಮುಖವಡಗಿಸಿಕೊಳ್ಳುವಂತೆ ಸಮಾಜವಾದವೆಂಬ ಮರಳಿನಲ್ಲಿ ಮುಖವಡಗಿಸಿಕೊಳ್ಳುತ್ತಿದ್ದೇವೆ. ಆದರೆ ಈ ನಾಟಕ ಅದೆಷ್ಟು ದಿನ ನಡೆದೀತು? ಜನತೆಗೊಂದು ದಿನ ಗೊತ್ತಾಗಿಯೇ ಹೋಗುತ್ತದೆ. ಬಯಲಾಟದ ಭಗವಂತನ್ಯಾರು ನೈಜ ನಾರಾಯಣ, ಮೆಚ್ಚಿನ ಮಾಧವನ್ಯಾರೆಂಬುದು. ಆಗ ಆದ್ಯಾರೂ ಸಮಾಜವಾದದ ಮರಳು ಭೂಮಿಯಲ್ಲಿ ನೀರು ಹುಡುಕುವ ಗೋಜಿಗೆ ಹೋಗಲಾರರು. ಭಾರತೀಯ ಚಿರಂಜೀವಿ ರಾಷ್ಟ್ರೀಯತೆಯೆದುರು ಮಿಕ್ಕೆಲ್ಲವೂ ಮಿಥ್ಯವೇ ಸರಿ.

ಆದುದರಿಂದಲೇ ಸಮಾಜವಾದ ಗಂಡಾಂತರದಲ್ಲಿದೆ ಎನ್ನದೆ ಸ್ವಾತಂತ್ರ್ಯ ಗಂಡಾಂತರದಲ್ಲಿದೆಂದೂ, ಅದರ ರಕ್ಷಣೆಗಾಗಿ ತನು-ಮನ-ಧನ ಸರ್ವಸ್ವವನ್ನೂ ಅರ್ಪಿಸಲು ಸಿದ್ಧರಾಗ ಬೇಕೆಂದು ಜವಾಹರಲಾಲಜೀಯವರು ಹೇಳುತ್ತಿದ್ದರು. ಮಾನವ ಅಮರನಲ್ಲವೆಂಬುದನ್ನು ತೋರಿಸಲಿಕ್ಕಾಗಿಯೋ ಎಂಬಂತೆ ಜವಾಹರಲಾಲ ನೆಹರೂಜೀಯವರು ನಮ್ಮನ್ನು ಬಿಟ್ಟು ಅಗಲಿರುವರು. ಆದರೊಂದಿಗೇನೇ ರಾಷ್ಟ್ರ ಚಿರಂಜೀವಿ ಎಂಬುದನ್ನು ಅವರು ತಿಳಿಸಿ ಹೋಗಿರುವರು. ಅಂದು ಅವರಿತ್ತಿದ್ದ ಕರೆ ಇಂದೂ ನಮ್ಮ ಮುಂದೆ ಇದೆ. ಸ್ವಾತಂತ್ರ್ಯವನ್ನು ರಕ್ಷಿಸಲು ಕಟಿಬದ್ಧರಾಗುವದು ರಾಷ್ಟ್ರೀಯರ ಕರ್ತವ್ಯ ಇದೆ. ಉಳಿದವರು ಜವಾಹರಲಾಲಜೀಯವರಿದ್ದಾಗ ಜೈ ಹಾಕುತ್ತ ತಮ್ಮ ಬೇಳೆ ಬೇಯಿಸಿಕೊಂಡಿದ್ದು ಅವರ ಮರಣಾನಂತರ ಅವರ ಭಾವಚಿತ್ರಕ್ಕೆ, ಅಸ್ತಿಗೆ ಅಪಮಾನ ಮಾಡುವಂತಹ ಹೀನ ಕೃತ್ಯಗಳಿಗೆ ಇಳಿದು ಅವರಲ್ಲೇ ಸಮಯ ಕಳೆಯುವರು. ಅಂದು ಜವಾಹರಲಾಲಜೀಯವರು ಯಾವ ದಾರಿಯಲ್ಲಾದರೂ ದೇಶವನ್ನೊಯ್ಯುತಿದ್ದರು. ಇಂದು ಅವರಿಲ್ಲ. ದೇಶ ದ್ರೋಹಿಗಳ ವಿಷಯದಲ್ಲಿ ಎಚ್ಚರಿಕೆಯಿಂದಿದ್ದು ಸ್ವಾತಂತ್ರ್ಯ ರಕ್ಷಣೆಗಾಗಿ ಇಂದೆಲ್ಲಾ ರಾಷ್ಟ್ರೀಯರು ಮುಂದಾಗಬೇಕಾಗಿರುತ್ತದೆ. ೧೯೪೭ರತ್ತ ಸಿಂಹಾವಲೋಕನ ಗೈದಾಗ ಈ ವಿಷಯ ಸ್ಪಷ್ಟವಾಗುತ್ತದೆ.

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮ ಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ
ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ
ಬೆಲೆ: ರೂ. 1=75; ಬಿಳಿ ಕಾಗದ
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು
ವ್ಯಾಪಾರಿಗಳಿಗೆ ಧಾರಾಳ ಕಮಿಷನ್
ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಮರೆಯಲಾಗದುದು

(೭ನೇ ಪುಟದಿಂದ)

ರೇನೂ ಬಂಧುವಲ್ಲ ಬಳಗವಲ್ಲ; ಕೃತಜ್ಞರಾಗಿರುವಂತೆ ಬಹುಮಾನವೇನೂ ಅವರು ಕೊಟ್ಟಿಲ್ಲ. ವೈಯಕ್ತಿಕವಾಗಿ ಎಲ್ಲರಿಗೂ ಅವರೇನೂ ಆಗಬೇಡ.

ಏನೋ ಭಾರತ ದೇಶದ ಪ್ರಧಾನಿ ಎಂಬುದಷ್ಟು ಗೊತ್ತು. ಬಹುಸಂಖ್ಯೆ ನೋಡಿ ಹೊತ್ತವರಿಂಬುವೂ ನಿಜ. ಅಂತೆಯೇ ಅವರನ್ನು ಬಯ್ಯುವವರೂ ಬಹಳ ಮಂದಿ ಇದ್ದರು. ಅವರು ಮಾಡಿದುದನ್ನು ತಪ್ಪೆಂದು ಹೇಳುವವರಿದ್ದರು. ನಾನು ಕೂಡಾ ಎಷ್ಟೋ ಸಲ ನೆಹರೂರನ್ನು ಬೈದುಕೊಂಡದ್ದುಂಟು. ನೆಹರೂ ಸರಕಾರವನ್ನು ಹಳಿದುಕೊಂಡದ್ದುಂಟು. ನನ್ನಂತಹ ಸರ್ವಸಾಮಾನ್ಯರ ಹೊಗಳಿಕೆ ತೆಗಳಿಕೆಗಳಿಗೊಂದು ಮಹತ್ವವಿಲ್ಲದಿದ್ದರೂ, ಅಷ್ಟೆಲ್ಲ ಸ್ವಾತಂತ್ರ್ಯ ನಮಗಿತ್ತು—ಇದೆ.

ಮುಂಗೋಪಿಗಳಾದ ನೆಹರೂ ತೋರಿಕೆಗೆ ಕಠಿಣರಂತೆಯೇ ಕಾಣುತ್ತಾರೆ. ಮತ್ತೆ ಕಾರ್ಯದಲ್ಲಿ ಮಾತ್ರ ಅತ್ಯಂತ ಸುಹೃದಯಿಗಳೆಂದೂ ದಯಾಪೂರ್ಣ ಹೃದಯಿಗಳೆಂದೂ ಎಷ್ಟೋ ನಿದರ್ಶನಗಳು ಸಾರುತ್ತವೆ. ಅಂತಹ ಹೊಣೆಗಾರ ವ್ಯಕ್ತಿಯ ಆ ಬಗೆಯ ಸ್ವಭಾವವೇ ನಮಗೆಲ್ಲ ಟೀಕಿಸುವ ಧೈರ್ಯವನ್ನು ಕೊಟ್ಟಿತು. ಅನೇಕರು ಅವರನ್ನು ತಪ್ಪಿಸ್ಟಬಂದಂತೆ ಟೀಕಿಸಿದ್ದಾರೆ. ವಿಮರ್ಶಿಸಿದ್ದಾರೆ. ಹೀಗೆ ನೋಡಿದರೆ ನೆಹರೂ ನಮ್ಮೆಲ್ಲರಂತೆಯೇ ಒಬ್ಬ ಸಾಮಾನ್ಯ ವ್ಯಕ್ತಿ. ಮಾನವನೊಳಗೊಬ್ಬ ಮಾನವ, ಅಂತಹ ಒಬ್ಬರು ತೀರಿಹೋದಾಗ, ನಮ್ಮ ಮನೆಯೊಳಗೇ ನಮ್ಮ ಕುಟುಂಬದ ಪ್ರೀತಿಯ ಒಬ್ಬರು ಸತ್ತು ಹೋದರೆ ಆಗುವ ವಾರ್ತೆ ಸಮನಾಯಿತಲ್ಲ? ಅದೇಕೆ?

ಅದು ವಿಶ್ವ ಕುಟುಂಬಿಯಾದವರಿಂದಲೇ!

ಪ್ರತಿ ಕುಟುಂಬಕ್ಕೂ ಅವರು ಆತ್ಮೀಯರಾದರು. ಅದಕ್ಕೆ ನೆಹರೂರನ್ನು ಬಯ್ದಿರಬಹುದು, ವಿಮರ್ಶಿಸಿರಬಹುದು. ನಮ್ಮ ತಂದೆಯೋ ಅಣ್ಣನೋ ಮಾಡುವ ಅನೇಕ ಕಾರ್ಯಗಳು ನಮಗೆ ಹಿಡಿಸದೆ ನಾವು ಬೈದೇವು; ಜಗಳ ಮಾಡಿಯೇವು. ಆದರೆ ನಮಗೆಲ್ಲ ಒಂದು ವಿಷಯ ಹೃದಯದಲ್ಲಿ ಹತ್ತೊತ್ತಿಕೊಂಡಿತ್ತು: ಭಾರತದ ಪ್ರಜೆಗಳಾದ ನಮ್ಮೆಲ್ಲರ ಸಂರಕ್ಷಕ ನೆಹರೂ ಎಂದು. ಅವರನ್ನು ಟೀಕಿಸುವ, ಬಯ್ಯುವ ಕಕ್ಷಿ ಪಕ್ಷಿಗಳಿಗಾದರೂ ನೆಹರೂ ತಮ್ಮ ಮುಖಂಡನಾಗಲಾರನೆ? ತಮ್ಮ ಕಕ್ಷಿಗೆ ಸೇರಲಾರನೆ? ಎಂಬ ಅವ್ಯಕ್ತವಾದ ಬಯಕೆ ಇದ್ದೇ ಇದ್ದೀತು. ಅಂತೆಯೇ ಎಲ್ಲಾ ಪಕ್ಷದವರೂ ಅವರ ವಿಯೋಗದಿಂದ ಮರುಗುತ್ತಿದ್ದಾರೆ.

ಹೀಗೆ ವೈಷಮ್ಯಗಳಿಗೆಲ್ಲ ಈಡಾಗಿಯೂ ಪ್ರಜೆಗಳ ಆತ್ಮಮಿತ್ರನಾಗಿರುವುದಲ್ಲವೇ ನಿಜವಾದ ದೇಶ ಮುಖಂಡತೆಯ ಕುರುಹು? ಅಂತೆಯೇ ಸಾಮಾನ್ಯನೂ ಅವರ ವಿಯೋಗದಿಂದ ಅಳುತ್ತಾನೆ ಇಡಿಯ ಪ್ರಪಂಚವೇ ದುಃಖಿಸಿತು.

೦ ೦ ೦

ರಾಮಕೃಷ್ಣ ಪರಮಹಂಸರಿಗೆ ಪಟ್ಟಶಿಷ್ಯನಾಗಿ ವಿವೇಕಾನಂದ ದೊರೆತ ಹಾಗೆ, ಮಹಾತ್ಮಾಗಾಂಧಿಗೆ ಪಟ್ಟಶಿಷ್ಯನಾಗಿ ನೆಹರೂ ದೊರೆತರು.

ಹಾಗೆ ನೋಡಿದರೆ ಗಾಂಧಿಯ ಗುಣಗಳಿಗೂ ಅಭ್ಯಾಸಗಳಿಗೂ, ನೆಹರೂಜೀಯ ಗುಣ ಅಭ್ಯಾಸಗಳಿಗೂ ಎಷ್ಟೋ ಭೇದವಿದೆ.

ಮಹಾರಾಜನ ಹಾಗೆ ಹುಟ್ಟಿ ಬೆಳೆದವರು ನೆಹರೂ.

ಬಡಭಾರತದ ಕುರುಹಾಗಿದ್ದರು ಗಾಂಧೀ. ರಾಜಕೀಯವನ್ನು ರಾಮ ಭಕ್ತಿಯಲ್ಲಿ ಅಭಿಷೇಕಿಸಿ ಬೆಳಗಿಸಿಕೊಂಡವರು ಗಾಂಧೀ ಅಂತಹ ಭಕ್ತಿಗೆ ದೂರವಾಗಿದ್ದವರು ನೆಹರೂ.

ಆದರೆ ಭಕ್ತಿಯಿಲ್ಲದ ಮಾತ್ರಕ್ಕೆ ಭಕ್ತಿಯ ತತ್ವವಿಲ್ಲವೆಂದು ತಿಳಿದವರಲ್ಲ ನೆಹರೂ. ಪ್ರೇಮ ಸೇವೆಯೆಂಬ ಸೂತ್ರವು ಇಬ್ಬರಿಗೂ ಒಂದೇ-ಆದೇ ಅವರವರೊಳಗೆ ಪ್ರೀತಿಯ ಬಂಧನವಾಯಿತು. ಅದರ ವಿವರಣೆಯನ್ನು ಲೋಕವೇ ಬಲ್ಲದು.

ಗಾಂಧಿ ಅಹಿಂಸಾ ತತ್ವದಿಂದ ಸ್ವರಾಜ್ಯ ಸಂಪಾದಿಸಿ ಕೊಟ್ಟರಾದರೆ, ಆ ಸ್ವರಾಜ್ಯವನ್ನು ಕಾಪಾಡುವಂತಹ ಪ್ರತಿಭಾ ಸಂಪನ್ನ ವ್ಯಕ್ತಿ ನೆಹರೂಜೀ ಎಂಬುದನ್ನು ಮಹಾತ್ಮರು ತಿಳಿದಿದ್ದರು. ಅಂತೆಯೇ ಭಕ್ತಿಯಿಂದ ಮುದುಡಿಕೊಂಡಿದ್ದರೆ ಮುಂದುವರಿಯುತ್ತಿರುವ ಇತರ ರಾಜ್ಯಗಳ ಸರಿ ಸಮಾನತೆಯೊಂದಿಗೆ ಭಾರತವನ್ನು ತರಲು ಸಾಧ್ಯವಿಲ್ಲವೆಂತಲೇ ಕಾಲಕ್ಕೆ ತಕ್ಕ ಬದಲಾವಣೆಯ ಅಗತ್ಯವನ್ನು ಅರಿತವರಾದ ನೆಹರೂ, ಮೂಢನಂಬಿಕೆಗಳಿಗೆ ದೂರರಾಗಿದ್ದು ಭಾರತವನ್ನು ಮುಂದಕ್ಕೆ ತಂದರು.

ಗಾಂಧಿಯವರದು ಅಹಿಂಸಾ ತತ್ವವಾದರೆ ಅದರ ಮೇಲೆ ನೆಹರೂಜಿಯ "ಪಂಚಶೀಲ" ವೆಂಬ "ನೆಹರೂ ತತ್ವ" ಪ್ರಸಿದ್ಧವಾಯಿತು. ಈ ತತ್ವಾನುಸಾರವಾಗಿ ಎದ್ದು ಕಾಣಿಸಿದ ಮಧ್ಯ ಮಾರ್ಗವೊಂದರಲ್ಲಿ, ಪರಸ್ಪರ ಶತ್ರುಗಳಾದ ಸಾಮ್ರಾಜ್ಯವಾದಿಗಳು ಕೂಡಾ ಭಾರತಕ್ಕೆ ಮಿತ್ರರಾದರು. ಪಂಚಶೀಲವನ್ನು ಮೀರಿದ ಶತ್ರುವೊಬ್ಬ "ಕಿಂಕರ್ತವ್ಯತಾ ಮೂಢ"ನಂತಾದನು. ಹೀಗೆಯೇ ಯುದ್ಧವಿಲ್ಲದ ವಿಶ್ವವನ್ನು ತಯಾರಿಸುವ ಸಾಮರ್ಥ್ಯ ನೆಹರೂಜಿಗಿತ್ತು. ಅಂತಹ ವಿಶ್ವವನ್ನು ಕಾಣಬೇಕೆಂಬ ಆತುರ ಅವರಿಗಿತ್ತು:

ಎಲ್ಲಕ್ಕೂ ಮಿಗಿಲಾಗಿ ಭಾರತ ಭೂಮಿಯ ಮೇಲೆ ಅವರಿಗಿರುವ ಪ್ರೇಮವನ್ನು ನೋಡಿದರೆ, ನೆನೆದರೆ ಮೈನವಿರೇಳುತ್ತದೆ. ತಾನು ಪರದೇಶದಲ್ಲಿ ಸತ್ತರೂ, ತನ್ನ ಚಿತಾಭಸ್ಮವನ್ನು ಅಲ್ಲಿಂದ ತಂದು ಭಾರತ ದೇಶದ ಹೊಲಗಳಲ್ಲಿ ಚೆಲ್ಲಬೇಕೆಂದು ಅವರು ಬರೆದಿರುವ ತನ್ನ ಮೃತ್ಯುಪತ್ರವನ್ನೊಮ್ಮೆ ಯೋಚಿಸಿರಿ! ತಾನು ಮತ್ತೆ ಮತ್ತೆ ಈ ಭಾರತ ಭೂಮಿಯಲ್ಲೇ ಜನ್ಮತಾಳಬೇಕೆಂದೂ, ಪ್ರಜಾಸೇವೆ ಮಾಡಬೇಕೆಂದೂ, ಇಲ್ಲಿಯ ಪ್ರಕೃತಿ ಸೌಂದರ್ಯವನ್ನು ನೋಡಬೇಕೆಂದೂ ಅವರಿಗಿರುವ ಉತ್ಕಟೇಚ್ಛೆಯು ದ್ಯೋತಕವಲ್ಲವೇ ಅದು?

ಭಾರತ ಮಾತೆಯ ಸುಪುತ್ರನೆಂದರೆ ಅವನೇ, ಅವನೇ.

ಅವನು ಪಾಶ್ಚಾತ್ಯ ರೀತಿಯಲ್ಲೇ, ಪಾಶ್ಚಾತ್ಯ ದೇಶದಲ್ಲೇ ವಿದ್ಯೆ ಕಲಿತರೇನಾಯಿತು? ಭಾರತದ ಪರಿಶುದ್ಧ ರಕ್ತದ ಪ್ರಭಾವ ಅಳಿಯಲಿಲ್ಲ: ಜಾಗೃತವಾಗಿತ್ತು. ಅದು ಅವರು ಬರೆದ ಉಯಿಲಿನಲ್ಲಿ ಅಂತರ್ಮುಖಿಯಾಗಿ ಹೇಗೆ ನಿಂತಿದೆ!

೦ ೦ ೦

ಎಷ್ಟೊಂದು ಉನ್ನತೇಚ್ಛೆ, ಉತ್ಕಟೇಚ್ಛೆಗಳಿದ್ದರೂ ಕಾಲನು ಹಾಕಿಟ್ಟ ಗೆರೆಯ ಅವಧಿಯೊಂದು ಇದ್ದೇ ಇದೆಯಷ್ಟೆ? ಕಾಣದ ಗೆರೆ? ನೆಹರೂ ಹೋದರು ಆ ಗೆರೆ ಕಾಣಿಸಿತು.

ನೆಹರೂಜಿಯ ಮಾರ್ಗ, ಸಾಧನೆ, ಆದರ್ಶಗಳು ಹುಸಿ ಹೋಗಲಿಲ್ಲ. ಅವರು ಬಿಟ್ಟು ಹೋದ ಯೋಗ್ಯತೆಯೆಂಬ ಅವರ ಗುಣಗಳು ಚೇತನಾಪೂರ್ಣವಾಗಿವೆ. ಅಂತೆಯೇ ಸುಮುಖರೀತಿಯಲ್ಲಿ ಅವರ ನಾಯಕಪೀಠವು ಅಲಂಕೃತವಾಯಿತು. ಪ್ರಜಾರಾಜ್ಯವು ಸಾಗುತ್ತಿದೆ.

ನೆಹರೂಜಿಯ ಆದರ್ಶವು ತೆರೆದ ಪುಸ್ತಕದಂತೆ ನಮ್ಮ ಮುಂದಿದೆ. ಅವರ ಆದರ್ಶವನ್ನು ಮುಂದಿಟ್ಟುಕೊಂಡು, ಅವರ ಉದ್ದೇಶವನ್ನು ಸಿದ್ಧಿಗೆ ಮುಟ್ಟಿಸುವ ಕಾರ್ಯವನ್ನು, "ನೆಹರೂ ಪರಂಪರೆ"ಯವರು ಮಾಡಬೇಕು. ಹಾಗಾಗಲೆಂದೇ ಹಾರೈಸೋಣ.

ಜಾಣನಾಗು ತಮ್ಮನೆ!

— ಅ. ಗೌ. ಕಿನ್ನಿಗೋಳಿ.

ನಿನ್ನ ಹಣೆಯ ಹಾಳು ಬರೆಹ ಉಜ್ಜಿ ಹೊಸತು ಬರೆವರೆಂದು
ಗುದ್ದಲಿಯನು ಹಿಡಿದು ಬರುವ ಸಿದ್ಧರನ್ನು ಕಂಡುಕೊ!
ಹಣೆಯೊಡ್ಡುತ ನಿಂದುಕೊ.
ಕಾಮಧೇನುವನೆಳೆದು ತಂದು ನಿನ್ನ ಹಟ್ಟಿಯಲ್ಲಿ ಕಟ್ಟಿ
ಹಾಲು ಕರೆದು ಕೊಡುವರೆಂಬ ಮಾತ ನೀನು ನಂಬಿಕೊ!
ನಿನ್ನ ಬತ್ತಿದೆದೆಯ ಮಡಕೆ ಮೊಸರು ಕುಡಿಕೆ—ಎಂದುಕೊ.
ಕಡೆದ ಬೆಣ್ಣೆ ತಾವೆ ತಿಂದು, ಕೂರ್ಮೆಯಿಂದ ಕೈಯ ನಿನ್ನ
ಮೂತಿಗೊರಸಲೆಂದು ಬರೆ—
ಎಲವೊ ದಡ್ಡ ಮೂರ್ಖನಂತೆ ತಿರುಹಬೇಡ ಮೋರೆ!
ನಿನ್ನ ಪ್ರಾಪ್ತಿಗಷ್ಟೆ ಮೀರೆ—
ಎಂದುಕೊಳ್ಳು; ಬಯಸಬೇಡ ಬಾರೀ ದುಬಾರಿ! ||೧||

ನಿನ್ನ ಮನೆಯ ಚಿನ್ನಚಾರು ಚೂರುಗಳನು ಒಟ್ಟುಗೂಡಿ
ಸ್ವರ್ಣವೃಷ್ಟಿಗರೆವ ವ್ಯೋಮ ಕಾಣಲೆಂದು ಬದುಕಿಕೊ.
ನಿನ್ನ ತೋಟದೆಳನೀರಿಗೆ ಕಲ್ಪವೃಕ್ಷ ಫಲದ ಸಾರ
ತನ್ನ ತಾನೆ ಕೂಡಿಕೊಳುವ ತನಕವಾದರು ಬಾಳಿಕೊ.
ಆಸೆಯಿಂದ ತಾಳಿಕೋ
ಸುಖೀ—ಎಂದು ಹೇಳಿಕೊ!
"ಬೇಕು—ಅನ್ನ ಬಟ್ಟೆ ವಸತಿ ಬೆಳಕು ವಿದ್ಯೆ ಉದ್ಯೋಗ"
ಎಂದು ಕೂಗಿ ಕಮ್ಯುನಿಸ್ಟನಾಗಬೇಡ ತಮ್ಮನೆ!
ಹಣೆಯ ಬರೆಹ ತಿದ್ದ ಬಂದ ಸಿದ್ಧನೇನು ಗುಮ್ಮನೆ?
ಹೆದರಬೇಡ ಸುಮ್ಮನೆ. ||೨||

ಪುಣ್ಯದಾಯಿ—ಉಪವಾಸವು ನಮ್ಮದಾದ ಶ್ರೇಷ್ಠ ಕಲೆ,
ಉಣ್ಣಲಾರದಷ್ಟು ಏರೆ ಕೈಗೆಟಕದ ಬೆಲೆಗಳೇ!
ಕಣ್ಣೆ ಕಾಣದಂತೆ ಕವಿಯೆ ಧಾರಣೆಗಳ ಕತ್ತಲೆ,
ಮುಂದೆ ನಿನಗೆ ಬಟ್ಟೆ ಬೇಡ ಇರಬಹುದೈ ಬತ್ತಲೆ!
ನಿನ್ನ ಮಗಳ ಮದುವೆಗಾಗಿ ಸಿಗದೆ ಹೋಯ್ತು ಸಕ್ಕರೆ?
ಆದರೇನು ನಿನಗಿಲ್ಲವೆ ಅಳಿಯನ ಮೇಲಕ್ಕರೆ?
ಮದ್ದಿಲ್ಲವು ಮಧುಮೇಹಕೆ! ಜಾಣನಾಗು ತಮ್ಮನೆ,
ದೂರಬೇಡ ಸುಮ್ಮನೆ. ||೩||

ಪಿಂಪ್ರಿಯಲ್ಲಿ ಪೆನ್ಸಿಲೀನು, ಸಿಂಧ್ರಿಯಲ್ಲಿ ಗೊಬ್ಬರ,
ಬಿಲಾಯಿ ಉಕ್ಕು, ಪಠಾಣತಿಗೆ ಅಣೆಕಟ್ಟನಟ್ಟರ,
ಬೆಂಗಳೂರ ರಾಜ ಭವನ, ಪಂಜಾಬಿನ ಕೈರಣ,
ಭಕ್ರಾ ನಂಗಾಲವೆಲ್ಲ ನಿನಗೆ ಸಿದ್ಧಿ ನಾಳಿನ!
ವರ್ತಮಾನವನ್ನು ಮರೆ; ಬರುವ ಕಾಲಕೇನು ಕೊರೆ?
ನಿನ್ನ ಕಿರಿಯ ಮಗನ ಮಗನ ಮೊಮ್ಮಗನಿಗೆ ಎಲ್ಲವು
ನಿರಾಯಾಸ ಜೀವನಕ್ಕೆ ಕೂಡಿ ಒದಗಬಲ್ಲವು!
ಅಮೆರಿಕದ ಹಾಲು ಕುಡಿದು ತಣ್ಣಗಿರೋ ತಮ್ಮನೆ,
ಸೊರಗಬೇಡ ಸುಮ್ಮನೆ. ||೪||

ಮಾರೀಚನ ರಾಮಧ್ಯಾನದಿಂದ ಶೂರ್ಪನಖಿಯ ಮೂಗು
ಚಿಗುರಲುಬಹುದು!
ಶಕುನಿಯ ಔದಾರ್ಯದಿಂದ ದುಶ್ಶಾಸನ ವಸ್ತ್ರದಾನ
ಗೈಯಲುಬಹುದು!
ಬಕಾಸುರನ ಅಗ್ನಿಮಾಂದ್ಯದಿಂದ ಅನ್ನ ಮಿಗಲುಬಹುದು!
ಇಂದ್ರಾರಿಯ ಮಾರಣಕ್ಕೆ ಕಾಳಸಂತೆ ಬಲಿಯಾದರೆ,
ಭೂದಾನದ ಯಜ್ಞ ರಕ್ಷೆ ತಾಟಕಿಗೇ ಸೇರದೆ?
ಈ ವಿಶ್ವಾಮಿತ್ರ ಸೃಷ್ಟಿ ಕಲ್ಪನೆಗೂ ಬಾರದೇ
ಹೋದರೇನು? ನಿನ್ನ ಋಷಿಗೋತ್ರವನ್ನೆ ನೆನೆದುಕೊ—
ಭೋಗವಲ್ಲ ಬಾಳಗುರಿ; ತ್ಯಾಗಿ ನೀನು ತಮ್ಮನೆ,
ಮರುಗಬೇಡ ಸುಮ್ಮನೆ. ||೫||

ಸ್ವಾತಂತ್ರ್ಯ ವೀರ ಶೇಖರ!

(೬ನೇ ಪುಟದಿಂದ)

ದಯದಲ್ಲೇ ರಾಗಜ್ವಾಲೆ ಹಬ್ಬಿತು. ಆಕೆಯ ಮನದ ಆಳಲನ್ನು ಶಬ್ದಗಳಿಂದ ಹೇಳಲಳವಲ್ಲ. ಆಕೆಯ ಸುಖ ಸೌಭಾಗ್ಯದ ವೇಳೆ ವಿಧಿಯ ಕ್ರೂರವಾದ ತಾಂಡವ ನೃತ್ಯ ನಡೆಯಿತು! ಮೈಥಿಲಿಯ ಹಣೆ ಬರಿದಾಯಿತು!

ಬಾಲ ವಿಧವೆ ಮೈಥಿಲಿಯು ಕಷ್ಟದುಃಖಗಳಿಂದ ನೊಂದು ಬೆಂದು ಕಣ್ಣೀರಿಳಿಸುತ್ತ ತಂದೆಯ ಮನೆಯಲ್ಲೇ ಎರಡು ವರ್ಷಗಳ ಕಾಲ ಕಳೆದಳು.

ಮುಂದೇನು ಮಾಡುವುದೆಂದು ಆಲೋಚಿಸುತ್ತಿದ್ದ ದಾಸರು ಸುಧಾರಿತ ಮನೋಭಾವದ ಶೇಖರನೊಡನೆ ಈ ಪ್ರಸ್ತಾಪವೆತ್ತಿದ್ದರು. ಬಾಲ ವಿಧವಾ ವಿವಾಹಕ್ಕೆ ವಿಶೇಷ ಮಹತ್ವ ಕೊಡುತ್ತಿದ್ದ ಶೇಖರನು ಮೈಥಿಲಿಯನ್ನು ವಿವಾಹವಾಗಲೊಪ್ಪಿದನು. ಆದರೆ ಮೈಥಿಲಿಯ ವಿಚಾರವೇನೆಂದು ಸ್ವತಃ ತಾನೇ ಅರಿತುಕೊಳ್ಳಬೇಕೆಂದು ಹೇಳಿದನು. ಮತ್ತೊಂದು ದಿನ ಶೇಖರನು ದಾಸರ ಮನೆಗೆ ಒಂದಾಗ ವಧೂವರರ ಭೇಟಿಯಾಗಿ ಅವರೊಳಗೆ ವಿಚಾರ ವಿನಿಮಯವಾಗಿ ಮದುವೆಯು ಒಪ್ಪಂದವಾಯಿತು. ಶೇಖರನು ಕೇಳಿದನು —"ಒಂದು ಕಣ್ಣಿನ ದೇಶಸೇವಕನಾದ ನನ್ನನ್ನು ವರಿಸಿ ನೀವು ಯಾವ ಸುಖವನ್ನೂ ಪಡೆಯಲಾರಿರಿ!" ಅದಕ್ಕೆ ಮೈಥಿಲಿಯು —"ನಾನು ಈಗ ಎರಡು ಕಣ್ಣುಗಳುಳ್ಳವಳಾಗಿಯೂ ಪೂರ್ಣ ಕುರುಡಿಯಾಗಿದ್ದೇನೆ. ಇನ್ನು ನನಗೆ ಪ್ರಕಾಶ ಲಭಿಸುವುದಿದ್ದರೆ, ಅದು ತಮ್ಮ ಮೂಲಕವೇ ಆಗಿದೆ! ದೇಶ ಸೇವಾಕಾರ್ಯದಲ್ಲಿ ಎಷ್ಟೇ ಕಷ್ಟ ಬಂದರೂ ಸಹಿಸುತ್ತ ನಿಮ್ಮೊಡನೆ ದೇಶಕ್ಕಾಗಿ ಪ್ರಾಣ ಕೊಡಲೂ ನಾನು ಸಿದ್ಧಳಿದ್ದೇನೆ!" ಎಂದು ಹೇಳಿದಾಗ ಶೇಖರನು ಮೈಥಿಲಿಯ ಮಾತಿನಿಂದ ಆನಂದಭರಿತನಾದನು. ಶೇಖರ-ಮೈಥಿಲಿಯರು ದಂಪತಿಗಳಾದರು. ಸುಂದರಿಯಾದ ಮೈಥಿಲಿಯನ್ನು ಪಡೆದ ತನ್ನ ಭಾಗ್ಯಕ್ಕಾಗಿ ಶೇಖರನು ಹರ್ಷಪುಳಕಿತನಾದನು.

ಅಂದು ಆ ರಾತ್ರಿ ಆ ನವ ದಂಪತಿಗಳ ಜೀವನದ ಮೊದಲ ರಾತ್ರಿಯಾಗಿತ್ತು. ಮೈಥಿಲೀ ದೇವಿಯು ಪತಿದೇವನ ಸ್ಮರಣೆಯಲ್ಲಿ—ಅಂದಿನ ಸುಖ ಸ್ವಪ್ನಗಳ ಕಲ್ಪನೆಯಲ್ಲಿ ತಲ್ಲೀನಳಾಗಿ ಕುಳಿತಿದ್ದಳು. ಎರಡು ವರ್ಷಗಳ ಹಿಂದಿನ ತನ್ನ ಮದುವೆಯ ನೆನಪು ಮೈಥಿಲಿಗೆ ಮರುಕಳಿಸಿತ್ತು. ಶೇಖರನೂ ತನ್ನ ಪ್ರಿಯ ಪತ್ನಿಯನ್ನು ಕಾಣಲು ಶಯ್ಯಾಗಾರ ಪ್ರವೇಶ ಮಾಡಿದನು. ತರುಣ ದಂಪತಿಗಳು ಸರಸ ಸಲ್ಲಾಪ ಮಗ್ನರಾಗಿರುವಾಗಲೇ ಹಠಾತ್ತನೆ ಬಾಗಿಲು ತಟ್ಟಿದ ಶಬ್ದ ಜೋರಾಗಿ ಕೇಳಿಸಿತು! ಶೇಖರನ ಮನಸ್ಸು ತಳಮಳಿಸಿತು. ಮೈಥಿಲಿಯು ಬೆರಗುಗಣ್ಣುಗಳಿಂದ ಬಾಗಿಲ ಕಡೆ ನೋಡ ತೊಡಗಿದಳು. ನೋಡುವುದೇನು? ಶೇಖರನನ್ನು ಆತನು ಕೆಲವು ದಿನಗಳ ಮುನ್ನ ಮಾಡಿದ ಭಾಷಣಕ್ಕಾಗಿ ದಸ್ತಗಿರಿ ಮಾಡಲು ಈರ್ವರು ಪೋಲೀಸಿನವರು ಆ ಭಾಷಣ ಪ್ರಕಟವಾದ ಪತ್ರಿಕೆಯೊಡನೆ ಅಲ್ಲಿ ಹಾಜರಾಗಿದ್ದರು! ಮತ್ತಲ್ಲಿ ವಿವೇಚನೆಯುಂಟೇ? ಪೋಲೀಸಿನವರು ಶೇಖರನನ್ನು ಹಿಡಿದು ಕರೆದುಕೊಂಡೇ ಹೋದರು! ಪಾಪ! ಮೈಥಿಲಿ, ಅತ್ತಳು! ಗೋಳಾಡಿದಳು! ಆದರೇನು ಫಲ? ಕಟುಕನು ಕುರಿಯ ಕಣ್ಣೀರನ್ನು ನೋಡುವನೇ?

ಮೈಥಿಲಿಯ ಕೋಮಲ ಹೃದಯವೀಗ, ಇಷ್ಟರವರೆಗಿನ ಆಕೆಯ ಅನುಭವಗಳಿಂದ ಕಲ್ಲಾಯಿತು! ಶೇಖರನಿಗೆ ಆರು ತಿಂಗಳ ಕಾಲ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು! ಶೇಖರನ ಹೃದಯ ವೇದನೆಯನ್ನು—ವಿವರಿಸಲು ಶಬ್ದಗಳಿಂದ ಸಾಧ್ಯವಿಲ್ಲ! ನವ ವಿವಾಹಿತ ಪತ್ನಿಯೊಡನೆ ಕಳೆಯಬೇಕಾಗಿದ್ದ ಮೊದಲ ರಾತ್ರಿ, ಜೈಲಿನಲ್ಲಿ ಕಳೆಯುವಂತಾಯಿತು! ಆರು ತಿಂಗಳ ಕಾಲದ ಅದೆಷ್ಟೋ ಕಾಳ ರಾತ್ರಿಗಳು ಹೀಗೆಯೇ ಕಳೆದುವು! ಮೈಥಿಲಿಯು ತನ್ನ ಪತಿಯ ಬಿಡುಗಡೆಯ ದಿವಸವನ್ನೇ ನಿರೀಕ್ಷಿಸುತ್ತ ಕಣ್ಣೀರು ಸುರಿಸುತ್ತಿರಲು ಇತ್ತ ಶೇಖರನು ಹೃದಯ ವಿದ್ರಾವಕವಾದ ಸ್ಥಿತಿಯಲ್ಲಿ ದಿನಗಳನ್ನು ಲೆಕ್ಕ ಹಾಕುತ್ತ ಕಾಲಕಳೆಯುತ್ತಿರಲು, ಆರು ತಿಂಗಳ ಬಳಿಕ ಶೇಖರನ ಬಿಡುಗಡೆಯಾಯಿತು!

० ० ०

ಜೈಲಿನಿಂದ ಬಿಡುಗಡೆ ಹೊಂದಿದ ಶೇಖರನು ಮೈಥಿಲಿಯನ್ನು ಕಾಣಲು ಬಿರುಗಾಳಿಯಂತೆ ಮನೆಗೋಡಿದನು, ಈಗ ಅಲ್ಲಿಯ ಪರಿಸ್ಥಿತಿಯನ್ನು ಕಂಡ ಆ ಸಾಹಸಿಯ ಹೃದಯವು ಕೂಡಾ ತಣ್ಣಗಾಯಿತು! ಮೈಥಿಲಿಯ ತಂದೆ ಗೋವಿಂದ ದಾಸರು ಈ ಅವಧಿಯಲ್ಲೆ ತೀರಿಕೊಂಡಿದ್ದರು, ತರುಣಿ ಮೈಥಿಲಿಯು ಮನೆಯಲ್ಲಿ ಒಬ್ಬಂಟಿಗಳಾಗಿಯೇ ಇದ್ದಳು! ಶೇಖರನನ್ನು ಕಂಡ ಕೂಡಲೇ ಮೈಥಿಲಿಯು ಆತನ ಎದೆಯ ಮೇಲೆ ತನ್ನ ಮುಖವನ್ನಿಟ್ಟು ಬಿಕ್ಕಿ ಬಿಕ್ಕಿ ಅಳತೊಡಗಿದಳು! ಶೇಖರನಿಗೂ ಕಣ್ಣೀರು ಉಕ್ಕಿಬಂದಿತು! ಎಷ್ಟು ಹೊತ್ತಾದರೂ ಮೈಥಿಲಿಯ ಅಳು ನಿಲ್ಲಲೇ ಇಲ್ಲ! ದುಃಖಿಗಳಿಗೆ ಕಣ್ಣೀರಿಗಿಂತ ಮಿಗಿಲಾದ ಪರಿಹಾರವೇನಿದೆ? ಕೊನೆಗೆ ಹೇಗೂ ಒಬ್ಬರಿಗೊಬ್ಬರು ಸಮಾಧಾನ ಗೊಂಡು, ನಿಟ್ಟುಸಿರು ಬಿಟ್ಟರು. ಆ ದೇದಿನ ಸಂಜೆ, ಈ ನವದಂಪತಿಗಳೀರ್ವರೂ ಜೊತೆಯಾಗಿ ತಿರುಗಾಡಿ ಕೊಂಡು ಬರೋಣವೆಂದು ಪೇಟೆಗೆ ಹೊರಟರು. ಪೇಟೆಯಿಂದ ಬೇಕಾದ ಕೆಲವು ವಸ್ತುಗಳನ್ನು ತೆಗೆದುಕೊಂಡು ಅವರು ವಾಪಾಸು ಮರಳುವಾಗ ಮತ್ತೊಂದು ದುರ್ಘಟನೆ ನಡೆಯಿತು!

ಮೈಥಿಲಿ ಶೇಖರರಿಗೆ, ಪೋಲೀಸ್ ಇನ್ಸ್‌ಪೆಕ್ಟರರು ಎದುರಾದರು ಶೇಖರನೊಡನಿದ್ದ ಮೈಥಿಲಿ ಯಾರೆಂದು ಅವರಿಗೆ ಗೊತ್ತಿರಲಿಲ್ಲ. 'ಅರೆ! ಶೇಖರನೊಡನೆ ಈ ಸುಂದರಿ ಯಾರು?' ಎಂದು ಆಲೋಚಿಸಿದ ಅವರು ಮೈಥಿಲಿಯನ್ನು ದುರುಗುಟ್ಟಿ ನೋಡುತ್ತ ಶೇಖರನೊಡನೆ— 'ಏನ್ ಸಾರ್! ನಿಮ್ಮ ಜೊತೆ ಈ ಸುಂದರಿ! ಯಾರ್ರೀ ಇವಳು?' ಎಂದು ಕೇಳಿದರು. ಶೇಖರನು ಅವರ ವರ್ತನೆಯನ್ನು ಸಹಿಸದಾದನು. 'ಅವಳ ವಿಷಯದಲ್ಲಿ ನಿಮಗೇನೂ ಆಗತ್ಯವಿಲ್ಲ!' 'ಅರೆ! ಯಾರು ಈಕೆ? ಅಪೂರ್ವ ಸುಂದರಿ! ಈ ತರುಣಿಯನ್ನು ಎಲ್ಲಿಂದಲಾದರೂ ಹಾರಿಸಿ ತಂದಿದ್ದೀಯೊ? ಹೇಗೆ?' ಎಂದರು. 'ಏಯ್! ನಾಲಿಗೆ ಬಿಗಿ ಹಿಡಿದು ಮಾತಾಡು! ಎಚ್ಚರಿಕೆ!' ಎಂದನು, ಶೇಖರ. ಹೀಗೆ ಮಾತಿಗೆ ಮಾತು ಬೆಳೆದಾಗ ಶೇಖರನು, ತಡೆಯಲಾರದೆ, ಇನ್ಸ್‌ಪೆಕ್ಟರರ ಕಪಾಳಕ್ಕೆ ಒಂದೇಟು ಬಿಗಿದೇ ಬಿಟ್ಟನು! ಅಧಿಕಾರಿ! ಅದರಲ್ಲೂ ಬ್ರಿಟಿಷ್ ಆಡಳಿತದ ಪೋಲೀಸ್ ಅಧಿಕಾರಿ! ಶೇಖರನನ್ನು ಸುಮ್ಮನೆ ಬಿಟ್ಟಾನೇ? ಆದರೆ ಇನ್ಸ್‌ಪೆಕ್ಟರರು ಮೈಥಿಲಿಯ ರೂಪ–ಲಾವಣ್ಯಗಳನ್ನು ನೋಡಿ ಮುಗ್ಧರಾಗಿದ್ದುದರಿಂದ, ಆಗ ಸುಮ್ಮನೆ ಹೊರಟು ಹೋದರು. ಶೇಖರನ ಪೆಟ್ಟಿನ ಉರಿ! ಅಪಮಾನದ ಬರೆ! ಇವೆರಡನ್ನೂ ಅಂದು ರಾತ್ರಿ ಸುಂದರಿಯಾದ ಮೈಥಿಲಿಯೊಡನೆ ಕೂಡಿ ತಣಿಸಿಕೊಂಡು ಆನಂದಿಸುವುದರೊಂದಿಗೇ ತೀರಿಸುವೆನೆಂದು ಬಗೆದ ಇನ್ಸ್‌ಪೆಕ್ಟರರು ಠಾಣೆಗೆ ತಲುಪಿದ ಮೇಲೆ, ಇಬ್ಬರು ಪೋಲೀಸಿನವರ ಕಿವಿಯಲ್ಲಿ ಏನೋ ಹೇಳಿ ಆಜ್ಞೆ ಮಾಡಿದರು

ಅದೇ ದಿನ ರಾತ್ರೆ ಎಂಟು ಗಂಟೆಯ ವೇಳೆಯಲ್ಲಿ ಇನ್ಸ್‌ಪೆಕ್ಟರರ ಆಜ್ಞೆಯನ್ನು ಹೊತ್ತ ಈರ್ವರು ಸಿಪಾಯಿಗಳು ಶೇಖರನ ಮನೆಯತ್ತ ಹೊರಟರು. ಇತ್ತ ಬಹುಕಾಲದ ಬಳಿಕ ಜೊತೆಯಾದ ಮೈಥಿಲೀ ಶೇಖರರು ಊಟದ ಕೋಣೆಯಲ್ಲಿ ಅದೇ ವೇಳೆಯಲ್ಲಿ ಕುಳಿತಿದ್ದರು. ಆ ರಾತ್ರೆ ಮೊದಲ ರಾತ್ರಿಯನ್ನಾಗಿ ಆನಂದದಿಂದ ಕಳೆಯಬಹುದೆಂದು ಬಗೆದಿದ್ದ ಮೈಥಿಲಿ ಶೇಖರರು ಸಡಗರ ಸಂಭ್ರಮಗಳಿಂದ ಪುಳಕಿತರಾಗಿರುತ್ತಿರುವ ಆ ರಸ ನಿಮಿಷಗಳ ವೇಳೆಯಲ್ಲಿ ಯಾರೋ ಅನಿರೀಕ್ಷಿತವಾಗಿ ಬಾಗಿಲು ತಟ್ಟಿದ ಶಬ್ದ ಕೇಳಿಸಿತು! ಹಿಂದಿನ ಘಟನೆಯನ್ನು ನೆನೆದ ಮೈಥಿಲಿ ನಡುಗಿ ಹೋದಳು! ಜೋರಾಗಿ ಬಾಗಿಲು ತಟ್ಟುತ್ತಿರುವುದನ್ನು ತಿಳಿದ ಶೇಖರನು ಧಡಾರ್ರನೆ ಬಾಗಿಲನ್ನು ತೆರೆದಾಗ ಈರ್ವರು ಸಿಪಾಯಿಗಳು ಎದುರಿಗಿದ್ದಾರೆ! ಶೇಖರನನ್ನು ಕಂಡೊಡನೆಯೇ " ಇನ್ಸ್‌ಪೆಕ್ಟರರನ್ನು ಹೊಡೆದುದಕ್ಕಾಗಿ ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆ!" ಎಂದು ಅಬ್ಬರಿಸುತ್ತಾ, ಆ ಸಿಪಾಯಿಗಳು ಕಣ್ಣು ಮುಚ್ಚಿ ತೆರೆಯುವಷ್ಟರಲ್ಲೇ ಶೇಖರನಿಗೆ ಕೈ ಕೋಳ ತೊಡಿಸಲು ಮುಂದಾದರು. ಶೇಖರನು ತುಟಿ ತೆರೆಯಲಿಲ್ಲ! ಮೈಥಿಲಿಯು ಜೀವನ್ಮೃತಳಾದವಳಂತಾದಳು! ಆವರೆಬಡನೆಯೇ ಹೇ ತರಿಸಿಕೊಂಡ ಆಕೆ ಈ ದಿನ ಏನೋ ನಡೆಯಲಿಕ್ಕಿದೆಯೆಂದು ಬಗೆದು ಕರೋರಳಾದಳು! ಅಂದು ಸಂಜೆಯ ಘಟನೆಯನ್ನು ನೆನೆದ ಶೇಖರನೂ ನಡುಗಿದನು! ಆದರೆ ಉಪಾಯವೇನು? ಸಿಪಾಯಿಗಳು ಶೇಖರನನ್ನು ಅತ್ತಿತ್ತ ನೋಡಲೂ ಬಿಡದೆ ಎಳೆದು ಕೊಂಡೇ ಹೋದರು! ಧೀರೆ ಮೈಥಿಲಿ ಇನ್ನೇನನ್ನೂ ನೋಡುತ್ತ ಕಲ್ಲಿನ ಕಂಬದಂತೆ ನಿಂತಳು! ಈ ಸಲ ಆಕೆಯ ಕಣ್ಣೀರು ಇಂಗಿಯೇ ಹೋಗಿತ್ತು! ಆದರೆ ಸ್ವಲ್ಪ ಹೊತ್ತು ಕಳೆದ ಬಳಿಕ ಆವೇಶ ಚ್ಚಿಕೊಂಡ ಮೈಥಿಲಿ ಏನನ್ನು, ಹೊತ್ತು ಒಕ್ಕಿಯೂ ಅದರಿಂದ ಆಗಿಗೆ ತೃಪ್ತಿ

ಮಂಗಳೂರು ನಗರದ ಅತ್ಯಂತ ಕೇಂದ್ರ ಸ್ಥಳದಲ್ಲಿ
ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೋಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ

● ನೀವು ಅಪೇಕ್ಷಿಸುತ್ತಿರುವ ಯಾವತ್ತೂ ಮಿಲ್ ವಸ್ತ್ರಗಳ ಮೇಲೆ ಮಿಲ್ ಛಾಪಿತ ದರಗಳಿರುವುದನ್ನು ನೀವು ಕಾಣುವಿರಿ

●● ಹತ್ತಿಯ ಹಾಗೂ ಸಿಲ್ಕಿನ ಸೀರೆಗಳು— ಎಲ್ಲವೂ ವಿವಿಧ ನಮೂದರಿಗಳಲ್ಲಿ ಮತ್ತು ಮನೋಹರ ಬಣ್ಣಗಳಲ್ಲಿ— ನಿಶ್ಚಿತ ಬೆಲೆಯಲ್ಲಿ ಸಿಗುವುವು.

●●● ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆನಿಸಿದ— ಬನಾರಸ್— ಕಾಶ್ಮೀರ್, ಬೆಂಗಳೂರು, ಬಂಗಾಳ, ಧರ್ಮಾವರಂ, ಕಾಂಜೀವರಂ ರೇಶ್ಮೆ ಸೀರೆಗಳು— ಮತ್ತು

ಕೊಯಮುತ್ತೂರು, ಮದುರಾ ಸೇಲಂ, ಮುಂಬಾಯಿ, ಬೆಳಗಾಂ ಮತ್ತು
ಉತ್ತರ ಪ್ರದೇಶದ ಹತ್ತಿ ನೂಲಿನ ಸೀರೆಗಳು ಸರ್ವೋತ್ಕೃಷ್ಟವಾಗಿವೆ.
ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್ ಸಿಲ್ಕ್, ನೈಲಾನ್
ಇತ್ಯಾದಿ ಬಟ್ಟೆ ಬರಗಳು ಸದಾ ದೊರೆಯುತ್ತವೆ.

ಇಂದೇ ಸಂದರ್ಶಿಸಿರಿ

SAREE EMPORIUM
Opp: Catholic Club, Hampankatta, Mangalore.

ಯಾಗಲಿಲ್ಲ! ಈಗ ಯಾರಾದರೂ ಬಂದು ಬಾಗಿಲು ತಟ್ಟುತ್ತಾರೆ! ಮುಂದೇನಾಗಾ ವಿಪತ್ತು ಕಾದಿದೆ! ಎಂಬ ವೈಧಿಲಿಯ ನಿರೀಕ್ಷೆ ತಪ್ಪಾಗಲಿಲ್ಲ.

ಸ್ವಲ್ಪ ಹೊತ್ತು ಕಳೆಯಿತು. ಪುನಃ ಬಾಗಿಲು ತಟ್ಟಿದ ಶಬ್ದ! ಧಡಾರನೆ ಬಾಗಿಲು ತೆರೆದಾಗ ವೈಧಿಲಿಗೆದುರಾಗಿ ಪೋಲೀಸ್ ಇನ್ಸ್‌ಪೆಕ್ಟರರು ಪಿಸ್ತೂಲನ್ನು ಮುಂದುಮಾಡಿ ನಿಂತಿದ್ದರು! ವೈಧಿಲಿಯು ಅವರನ್ನೊಮ್ಮೆ ತೀಕ್ಷ್ಣವಾಗಿ ನೋಡಿದಳು! ಅಷ್ಟರಲ್ಲಿ ಅವರು ತಟಕ್ಕನೆ ಒಳಗೆ ಬಂದು ಬಾಗಿಲು ಮುಚ್ಚಿಬಿಟ್ಟರು! ಒಡನೆಯೇ ವೈಧಿಲಿಯು—"ಹೋ! ನೀವಾ? ...ಬನ್ನಿ....ಬನ್ನಿ..! ಬಾಗಿಲು ಮುಚ್ಚಿದಿರಾ?" ಎಂದಳು. ಇನ್ಸ್‌ಪೆಕ್ಟರರಿಗೆ ಆಶ್ಚರ್ಯವಾಗಿ ಅವರು ಪ್ರಶ್ನಿಸಿದರು — "ಏನು ನೀನು ನನ್ನ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದೆಯಾ?" "ಅಲ್ಲದೇ ಮತ್ತೇನು? ಬಹಳ ಹೊತ್ತಿನಿಂದ ನಿಮ್ಮ ದಾರಿ ಕಾಯುತ್ತಿದ್ದೇನಲ್ಲ"

ಈಗ ಇನ್ಸ್‌ಪೆಕ್ಟರರಿಗೆ ಆನಂದದ ಸ್ವರ್ಗಕ್ಕೆ ಇನ್ನು ಮೂರು ಗೇಣು ಇದ್ದ! ಎಂಬಂತಾಯಿತು. ಅವರು ವೈಧಿಲಿಯ ಮಾತನ್ನು ನಿಜವೆಂದೇ ನಂಬಿದರು! ಈಗ ಅವರು ಅವರ ಕೈಯಲ್ಲಿದ್ದ ತುಂಬಿದ ಪಿಸ್ತೂಲನ್ನು ಸೊಂಟಕ್ಕೆ ಸಿಕ್ಕಿಸಿದರು! ವೈಧಿಲಿಯು ಪ್ರಯೋಗದ ನಗೆಯೊಡನೆ ಮುನ್ನಡೆದಳು. ಅವರು ಅವಳ ಹಿಂದೆ ನಡೆದರು. ಒಂದು ಕೋಣೆಯಲ್ಲಿ ಇನ್ಸ್‌ಪೆಕ್ಟರರನ್ನು ಕೂರಿಸಿದ ವೈಧಿಲಿಯು "ಇದೋ ಬಂದೆ" ಎನ್ನುತ್ತ ಒಳಗೆ ಹೋದಳು.

ಈಗ ಇನ್ಸ್‌ಪೆಕ್ಟರರಿಗೆ ವೈಧಿಲಿಯ ಮೇಲೆ ಯಾವ ಸಂಶಯವೂ ಉಳಿಯಲಿಲ್ಲ! "ಕೈ ತೊಳೆದು ಮೈ ಮುಟ್ಟಬೇಕೆಂಬಂತಿದ್ದ ಆದರ್ಶ ಸುಂದರಿ ತನಗೆ ಇಷ್ಟು ಸುಲಭವಾಗಿ ಸಿಕ್ಕಿದಳಲ್ಲ!" ಎಂದು ಹಿಗ್ಗಿದ ಅವರಿಗೆ ಆನಂದದೊಡನೆ ಕಾಮೋದ್ರೇಕವೂ ಆಯಿತು!

ಒಳಗೆ ಹೋದ ವೈಧಿಲಿಯು ಮುಗುಳು ನಗುತ್ತ ಹೊರಗೆ ಬಂದು ಅವರ ಪಕ್ಕದಲ್ಲಿಯೇ ಕುಳಿತಳು. ಮತ್ತೆ ಕೇಳಿದಳು—"ನೀವು ಇಂದು ನನ್ನ ಗತಿಯನ್ನ ಲಾ ಕಿಸ್ಸಿನಲ್ಲಿ ಹಾಕಿಸಿದಿರಿ! ಅಲ್ಲವೇ?"

"ಸುಂದರೀ.. ಈ ಸಂತೋಷದ ವೇಳೆ ಆ ಪತಿಯ ಮಾತೇಕೆ?"

"ಹಾಗಾದರೆ ಈ ಸಂತೋಷದ ವೇಳೆಯಲ್ಲಿ ನಿಮ್ಮ ಸೊಂಟದಲ್ಲಿ ಈ ಪಿಸ್ತೂಲು ಏಕಿರಬೇಕು!" ಎಂದು ಹೇಳಿ ನಗು ನಗುತ್ತ ವೈಧಿಲಿಯು ತಾನೇ ಕೈ ಹಾಕಿ ಪಿಸ್ತೂಲನ್ನು ತೆಗೆದು—"ಇದನ್ನು ಅಡಗಿಟ್ಟು ಬರುತ್ತೇನೆ!" ಎಂದು ಹೇಳಿ ಸ್ವಲ್ಪ ದೂರ ಸರಿದಳು! ಕಾಮಾಂಧರಾದ ಇನ್ಸ್‌ಪೆಕ್ಟರರು ಕೋಮಲೆಯ ಸ್ಪರ್ಶಮಾತ್ರದಿಂದಲೇ—ಪೂರ್ಣ ಅಂಧರಾಗಿ ಕಿಸುಗಣ್ಣಿನ ನೋಡುತ್ತಲಿದ್ದರು.

ಪಿಸ್ತೂಲು ಕೈಗೆ ಬಂದೊಡನೆಯೇ ವೈಧಿಲಿಯ ನಾರೀ ಶಕ್ತಿ ಜಾಗ್ರತವಾಯಿತು! ಆಕೆ ಸ್ವಲ್ಪದೂರ ಹೋಗಿ ಪಿಸ್ತೂಲನ್ನು ಸರಿಯಾಗಿ ನೋಡಿಕೊಂಡು, ಬಿಡುಗಟ್ಟ—ಸೆರಗನ್ನು ಸೊಂಟಕ್ಕೆ ಬಿಗಿದು ಮಹಾಕಾಳಿಯಂತಾದಳು. ಇನ್ಸ್‌ಪೆಕ್ಟರರು ಕಾಮಾನಂದದ ಕಲ್ಪನೆಯಲ್ಲಿ ಜಿಷ್ಣುಸರೂಪ್ಯರಾಗಿ ತನ್ನನ್ನು ತಾನೇ ಮರೆತಿದ್ದರು.

ಇನ್ಸ್‌ಪೆಕ್ಟರರ ಎದುರಿಗೆ ಬಂದ ವೈಧಿಲಿಯು, ಮುನ್ಸೂಚನೆ ಎಂಬಂತೆ ಒಂದು ಗಾಜಿನಗ್ಲಾಸನ್ನು ತೆಗೆದು ಇನ್ಸ್‌ಪೆಕ್ಟರರ ತಲೆಗೆ ಹೊಡೆದಳು! ಗ್ಲಾಸು ತಗಲಿ, ಅವರ ತಲೆಗೆ ಗಾಯವಾಗಿ ರಕ್ತ ಸುರಿಯತೊಡಗಿದಾಗ ಅವರಿಗೆ ಎಚ್ಚರವಾಯಿತು! ಅವರು ಎದ್ದು ತಟ್ಟನೆ ಮುಂದೆ ಬಂದಾಗ—ಮಹಾಕಾಳಿಯ ರೂಪ ತಾಳಿದ ವೈಧಿಲಿಯು ಪಿಸ್ತೂಲನ್ನು ಅವರೆದೆಗೆ ಸರಿಯಾಗಿ ಆನಿಸಿ ಹಿಡಿದು—"ಹೆಜ್ಜೆ ಮುಂದಿಟ್ಟೆಯಾದರೆ ಜಾಗ್ರತೆ! ಪಾಪಿ! ನನ್ನ ಪತಿಯನ್ನು ಹಿಡಿದು ನನ್ನ ಮಾನಭಂಗ ಮಾಡಲು ಬಂದೆಯಾ! ಸರಕೀಯರ ಅನ್ನದ ಸೊಕ್ಕು ತೋರಿಸುವೆಯಾ!" ಎನ್ನುತ್ತ ಪಿಸ್ತೂಲಿನ ಗುಂಡಿಯನ್ನೊತ್ತಿಯೇ ಬಿಟ್ಟಳು!—ಗುಂಡು ತಗಲಿದ ಇನ್ಸ್‌ಪೆಕ್ಟರನು ದೊಪ್ಪನೆ ಬಿದ್ದು ರಕ್ತದಲ್ಲಿ "ಹಾಯ್ ಹಾಯ್!" ಎನ್ನುತ್ತ ಸ್ವಲ್ಪ ಹೊತ್ತು ಒದ್ದಾಡಿದನು! ಅಷ್ಟೆ! ಒಡನೆಯೇ ಆತನ ಉಸಿರು ನಿಂತಿತು! ಕಾಮದಾಟದ ಕಲ್ಪನೆ ಪೂರ್ಣ ನಾಶವಾಯಿತು!

೦೦ ೦೦ ೦೦

ಇತ್ತ ಶೇಖರನು ಬಂದೀಖಾನೆಯಲ್ಲಿ ಇಡೀ ರಾತ್ರಿ ಚಡಪಡಿಸುತ್ತಿದ್ದನು! ಮನೆಯಲ್ಲಿ ಇಂದು ಏನಾದರೊಂದು ನಡೆದಿದೆ! ಎಂದು ಯೋಚಿಸುತ್ತ ಇಡೀ ರಾತ್ರೆ ಆತ ಕಣ್ಣು ಮುಚ್ಚಲಿಲ್ಲ. ಬೆಳಗಾಗುತ್ತಲೇ ಶೇಖರನನ್ನು ಪೊಲೀಸರು ಬಿಟ್ಟುಬಿಟ್ಟರು! ಸ್ಟೇಷನ್ನಿನಿಂದ ಮನೆಗೆ ತಲಪುವ ಮೊದಲೇ ರಾತ್ರೆಯ ಘಟನೆ ಶೇಖರನಿಗೆ ಯಾರೋ ಹೇಳಿದರು. ಈಗ ತಾನೆ ವೈಧಿಲಿಯನ್ನು ಜೈಲಿಗೆ ಎಳೆದುಕೊಂಡು ಹೋದರೆಂದೂ ಶೇಖರನಿಗೆ ಯಾರೋ ಹೇಳಿದರು! ಇದನ್ನು ಕೇಳಿದ ಕೂಡಲೇ ಶೇಖರನು ಠಾಣೆಯತ್ತ ಓಡಿದನು ಆದರೆ, ವೈಧಿಲಿಯನ್ನು ನೋಡುವ ಮಾತನಾಡಿಸುವ ಅನುಮತಿ ಕೂಡಾ ಆತನಿಗೆ ದೊರೆಯಲಿಲ್ಲ! ಈಗ ಆತನಿಗೆ ಎಲ್ಲವೂ ಈ ಜಗತ್ತೆಲ್ಲವೂ ಶೂನ್ಯವಾಗಿ ತೋರಿತು! ಆತ ಜೀವನ್ಮೃತನಾದನು. ಕೆಲವು ಕಾಲ ಕಳೆದಾಗ, ಇನ್ಸ್‌ಪೆಕ್ಟರರನ್ನು ಕೊಲೆ ಮಾಡಿದುದಕ್ಕಾಗಿ ವೈಧಿಲಿಗೆ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟುದನ್ನು ತಿಳಿದ ಶೇಖರನು ಕಣ್ಣೀರು ಸುರಿಸಿದನು! ಸ್ಮಶಾನದಂತಾಗಿದ್ದ ಆ ಮನೆಯನ್ನು ಬಿಟ್ಟು ಶೇಖರನು ಹೊರಬಿದ್ದನು! "ಇಂಗ್ಲೀಷರ ಆಳ್ವಿಕೆಯನ್ನು ಕೊನೆಗಾಣಿಸಿದ ಹೊರತು ಭಾರತದ ಏಳಿಗೆಯಾಗದು!' ಎಂಬ ಉದ್ಗಾರ ಶೇಖರನ ಹೃದಯದಿಂದ ಹೊರಟಿತು!

ಆಗ ಉಪ್ಪಿನ ಸತ್ಯಾಗ್ರಹದ ಚಳವಳ ದೇಶಾದ್ಯಂತವಾಗಿ ಪಸರಿಸಿತ್ತು. ಶೇಖರನು ಕೂಡಾ ತನ್ನ ಗ್ರಾಮಸ್ಥರನ್ನು ಕೂಡಿಸಿ ಉಪ್ಪಿನ ಕರಭಾರದ ವಿರುದ್ಧ ಸತ್ಯಾಗ್ರಹದಲ್ಲಿ ಪ್ರಮುಖ ಭಾಗವಹಿಸಿದನು ಶೇಖರನ ಗ್ರಾಮದಲ್ಲಿಯೂ ಪೋಲೀಸರ ಲಾಠೀಪ್ರಹಾರವಾಯಿತು! ಮುಖಂಡನಾದ ಶೇಖರನನ್ನು ಹಿಡಿದು ಪೋಲೀಸ್ ಲಾರಿಯಲ್ಲಿ ಹಾಕಿದ ಪೋಲೀಸರು ಅವನನ್ನು ಬೂಟ್ಸು ಹಾಕಿದ ಕಾಲಿನಿಂದ ತುಳಿದರು! ಕಪಾಳಕ್ಕೆ ಹೊಡೆದರು. ಇಷ್ಟಾದರೂ ಶೇಖರನ ಸರಕಾರದ ವಿರುದ್ಧವಾದ ಸ್ವರ ಕುಗ್ಗಲಿಲ್ಲ. ಆತನ ಅನುಯಾಯಿಗಳೂ ಜಗ್ಗಲಿಲ್ಲ! ಎಷ್ಟು ಹೊಡೆದರೂ, ಕಲ್ಲು ಕಂಬದಂತೆ ಶೇಖರನು ಅದನ್ನು ಸಹಿಸಿಕೊಂಡನು.

ಹೀಗೆ ಕೈದಿಯಾದ ಶೇಖರನು ಸನ್ ೧೯೩೩ರಲ್ಲಿ ಜೈಲಿನಿಂದ ಬಿಡುಗಡೆ ಹೊಂದಿದನು, ಶೇಖರನು ನೋಡುವಾಗ ಕ್ಷೀಣನಾಗಿದ್ದರೂ ಆತನ ಮನಸ್ಸು ವಜ್ರದಂತೆ ಕಠೋರವಾಗಿತ್ತು. ಬಿಡುಗಡೆ ಹೊಂದಿದ ಮೇಲೂ ಆತನು, ಸ್ವಾತಂತ್ರ್ಯ ಚಳವಳವನ್ನು ಬಿಡಲಿಲ್ಲ. ಮತ್ತೂ ಹೆಚ್ಚಿನ ಸಂಘಟನೆಯಲ್ಲಿ ತೊಡಗಿದನು.

ಈ ಕಾಲದಲ್ಲಿ ಮತ್ತೊಂದು ದುರ್ಘಟನೆ ನಡೆಯಿತು! ಆ ದಿನಗಳಲ್ಲಿ ಶ್ರೀಮಂತನೋರ್ವನ ಕೊಲೆಯಾಗಿದ್ದು ಕೊಲೆಗಡುಕನ ಪತ್ತೆಯಾಗಿರಲಿಲ್ಲ. ಶೇಖರನನ್ನು ಜೈಲಿನಿಂದ ಹೊರಗೆ ಉಳಿಯಗೊಡುವುದು ಹೇಗೂ ಕ್ಷೇಮಕರವಲ್ಲವೆಂದು ಬಗೆದ ಪೋಲೀಸ್ ಅಧಿಕಾರಿಗಳು ಈ ಕೊಲೆಯ ಆರೋಪವನ್ನು ನಿರಪರಾಧಿ ಶೇಖರನ ಮೇಲೆ ಹೊರಿಸಿ ಬಿಟ್ಟರು! ಈ ಸಂಬಂಧವಾಗಿ ಶೇಖರನಿಗೆ ಹನ್ನೆರಡು ವರ್ಷ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು! ಇಂತು, ವೈಧಿಲೀ ಶೇಖರರು, ಬೇರೆ ಬೇರೆಯಾಗಿ ಕಾರಾಗೃಹವಾಸವನ್ನು ಅನುಭವಿಸುವಂತಾಯಿತು!

ಹನ್ನೆರಡು ವರುಷಗಳು ಕಳೆದುವು. ಶೇಖರನ ಬಿಡುಗಡೆಯಾಯಿತು! ಹೀಗೆ ಬಿಡುಗಡೆಯಾದ ಶೇಖರನು ಸನ್ ೧೯೪೬ರಲ್ಲಿ ಗಾಂಧೀಜಿಯವರು ಮದ್ರಾಸಿಗೆ ಬಂದಿದ್ದಾಗ ಅವರ ದರ್ಶನವನ್ನು ಮಾಡಲೋಸುಗ ತನ್ನ ಓರ್ವ ಆತ್ಮಸ್ನೇಹಿತನೊಡನೆ ಮದ್ರಾಸಿಗೆ ಹೊರಟನು. ದುರ್ದೈವೀ ಶೇಖರನಿಗೆ ಎಲ್ಲಿಗೆ ಹೋದರೂ ವಿಪತ್ತು ಕಾದಿರುತ್ತಿತ್ತು. ಮದ್ರಾಸಿನಲ್ಲಿ ಮತ್ತೊಂದು ದುರ್ಘಟನೆ ಸಂಭವಿಸಿತು. ರೈಲ್ವೇ ಸ್ಟೇಷನ್ನಿನಲ್ಲಿ ಪೋಲೀಸಿನವರು ಶೇಖರನು ಮುಂದೆ ಹೋಗದಂತೆ ಅವನನ್ನು ತಡೆದು ತಪಾಸಣೆ ಮಾಡತೊಡಗಿದರು! ಪೋಲೀಸರ ಹಲವು ವಿಧವಾದ ದುರ್ವರ್ತನೆಯಿಂದ ಶೇಖರನಿಗೆ ಅಸಮಾಧಾನವಾಯಿತು! ಮಾತಿಗೆ ಮಾತು ಬೆಳೆದು ಘರ್ಷಣೆಗೂ ಆರಂಭವಾಯಿತು! ಈ ಘರ್ಷಣೆಯ ಕೋಪದ ಭರದಲ್ಲಿ ಶೇಖರನೊಡನಿದ್ದ ಶೇಖರನ ಮಿತ್ರನು ಓರ್ವ ಪೋಲೀಸಿನವನ

Phone. 131. Tel. GOLDKING

ಸಂದರ್ಶಿಸಿರಿ:—



ತಾಜಾ ಬ್ಲೂ ಜಾಗರ್ ವಜ್ರಗಳಿಗೂ ಮತ್ತು ಅತ್ಯಾಧುನಿಕ ಫೇಶನಿನ ಚಿನ್ನಾಭರಣಗಳಿಗೂ, ಬೆಳ್ಳಿಯ ಉಡುಗೊರೆ ವಸ್ತುಗಳಿಗೂ ಪ್ರಖ್ಯಾತಿಯಾದ

ಎಸ್. ಎಲ್. ಶೇಟ್
ಡಾಯಮಂಡ್ ಹೌಸ್

ಮನೆಯ ನಿತ್ಯೋಪಯೋಗದ ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಫೇನ್ಸಿ ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್
ಸ್ಟೀಲ್ ಸೆಂಟರ್

ಮತ್ತು ಎಲ್ಲಾ ತರಡ ಫೊಟೋಗ್ರಾಫಿಕ್ ವಸ್ತುಗಳಿಗೆ

ಐಡಿಯಲ್
ಫೊಟೋ ಹೌಸ್

ಆಗ್ಫಾ ಕೋಡಕ್ ಮತ್ತು ಇಲ್‌ಫೋರ್ಡ್ ಇವುಗಳ ಡೀಲರ್ಸ್.
ಕಾರ್ನಾಡ್ ಸದಾಶಿವರಾವ್ ರೋಡ್,
ಹಂಪನಕಟ್ಟಾ, ಮಂಗಳೂರು–1

Prop: S L. SHET.

ಸನ್ಯಾಸಿಯವರು ಕೈಕಂಡ ಪ್ರಯೋಗ

ಬಾಲವಿಷ್ಣು ತೈಲ

ಈ ತೈಲವು ಬಾಲಗ್ರಹ ಮತ್ತು ಶೂಲಗ್ರಹ ರೋಗದ ಬೇರನ್ನೇ ಕಿತ್ತು
ಮಕ್ಕಳ ಚಿಹ್ನೆಯನ್ನು ಸಂಪೂರ್ಣ ಗುಣಪಡಿಸಿ
ಶರೀರವನ್ನು ಒಳ್ಳೇ ಪುಷ್ಟೀಕರಿಸುತ್ತದೆ.
ಮಕ್ಕಳ ಚಿಹ್ನೆಗೆ ದಿವ್ಯ ಔಷಧಿ. ಪ್ರಾಯಸ್ಥರಿಗೂ ಆಗುತ್ತದೆ.

(*Best Remedy for Hysteria Reckets & Convalsions*)

ಕುಡ್ತೆಗರ ರೂ. 2-87 ಬಾಟ್ಲಿ ಪ್ಯಾಕಿಂಗ್ ರೂ. 3-19.
(ವಿ. ಪಿ ಖರ್ಚು ಪ್ರತ್ಯೇಕ—ಲಗ್ಗೇಜು ಖರ್ಚ ಬೇರೆ.)

ತಯಾರಕರು: ಎ. ಸುಬ್ಬಯ್ಯ ಪಕ್ಕಳ, ಮುಗೇರು—
ಬಾಲವಿಷ್ಣು ತೈಲ ಔಷಧಾಲಯ,
ಪೋಸ್ಟು ಪುತ್ತೂರು, ದ. ಕ.
ದರ್ಬೆ ಹೈಸ್ಕೂಲು ಬಳಿ, ಬೀರ್‌ಮಲಾ ರೋಡು ಹೌಸ್,
ಪುತ್ತೂರು ಕಸಬಾ, ಪುತ್ತೂರು ತಾಲೂಕು.

ನ್ನು ಬಲವಾಗಿ ಹೊಡೆದನು! ದುರದೃಷ್ಟವಶಾತ್ ಪೋಲೀಸಿನವನು ಅಲ್ಲಿಯೇ ಪ್ರಾಣಬಿಟ್ಟನು! ಗಾಂಧೀಜಿಯವರ ದರ್ಶನಕ್ಕಾಗಿ ಬಂದ ಗಾಂಧೀ ಭಕ್ತನಾದ ಶೇಖರನು ಈ ಘಟನೆಯಿಂದ ಹತಾಶನಾದನು! ಶೇಖರನೂ ಆತನ ಮಿತ್ರನೂ ಬಂಧಿಸಲ್ಪಟ್ಟರು! ಮುಂದೆ ಶೇಖರನ ಮಿತ್ರನು ಶೇಖರನು ಅಪರಾಧಿಯಲ್ಲ! ಈ ಕೊಲೆಯನ್ನು ನಾನೇ ಮಾಡಿದವನು! ಆತನನ್ನು ಬಿಟ್ಟುಬಿಡಿ"! ಎಂದು ಎಷ್ಟು ಹೇಳಿದರೂ, ಶತಪ್ರಯತ್ನ ಮಾಡಿದರೂ ಶೇಖರನ ಬಿಡುಗಡೆಯಾಗಲಿಲ್ಲ!

ಆ ಬಳಿಕ ಸನ್ ೧೯೪೭ ನೇ ಆಗೋಸ್ತು ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು! ಈ ಶುಭ ಸಂದರ್ಭದಲ್ಲಿ ಜೈಲಿನಲ್ಲಿದ್ದ ಎಲ್ಲಾ ಕೈದಿಗಳನ್ನೂ ಸ್ವಾತಂತ್ರ್ಯ ಲಭಿಸಿದ ಸಂತೋಷಾರ್ಥವಾಗಿ ಬಿಡುಗಡೆ ಮಾಡಲಾಯಿತು! ಈ ಶುಭಮುಹೂರ್ತದಲ್ಲಿ ಮೈಥಿಲೀ ಶೇಖರರು ಬಿಡುಗಡೆ ಹೊಂದಿದರು

೦೦ ೦೦ ೧೦

ಎಷ್ಟೋ ವರ್ಷಗಳ ಹಿಂದೆ ಒಂದು ದಿನ ನವದಂಪತಿಗಳಾಗಿದ್ದ ಮೈಥಿಲೀ-ಶೇಖರರಿಗೆ ಭಾರತಕ್ಕೆ ಸ್ವಾತಂತ್ರ್ಯ ದೊರೆತ ಈ ಶುಭದಿನವೇ ಜೀವನದ ಸುಪ್ರಭಾತದ ಸುದಿನವಾಗಿ ಪರಿಣಮಿಸಿತು! ಮದುವೆಯಾಗಿ ಸುಮಾರು ಹದಿನಾರು ವರ್ಷಗಳ ಬಳಿಕ ಅಂದು ಆತ್ಯಾಗಿ ದಂಪತಿಗಳು ತಮ್ಮ "ಮೊದಲ ರಾತ್ರಿ"ಯನ್ನು ಆತ್ಯಾನಂದದಿಂದ ಕಳೆದರು!

ಬೆಳಗಾಯಿತು! ಪ್ರಭಾಕರನು ಜಗತ್ತಿನ ಮೂಲೆ ಮೂಲೆಗಳಿಗೂ ನವಕಾಂತಿಯನ್ನು ಪಸರಿಸಿದನು. ಮೈಥಿಲೀಶೇಖರರು ಅರುಣೋದಯದಲ್ಲೇ ಹಾಸಿಗೆ ಬಿಟ್ಟಿದ್ದರು. ಶೇಖರನು ಆನಂದದಿಂದಿದ್ದನು. ಮೈಥಿಲಿಯೂ ಕೂಡಾ ಅಂದು ಪ್ರಫುಲ್ಲವದನೆಯಾಗಿದ್ದಳು! ಹೊತ್ತು ಮೂರುದ್ದ ಮೇಲೇರುವಾಗ ಬೀದಿಯಲ್ಲೇನೋ ಗಲಾಟೆಯಾಗುತ್ತಿದ್ದುದನ್ನು ಕಂಡು ಶೇಖರನು ಮೇಲೆದ್ದನು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮರುದಿನವೇ, ಒಂದು ಸಣ್ಣದಾದ ವಿವಾದ ಪ್ರಾರಂಭವಾದುದು ಕೋಮುವಾರು ಜಗಳ— ಹೊಡೆದಾಟಕ್ಕೂ ಪ್ರಾರಂಭವಾಯಿತು! ಇದನ್ನು ಕಂಡ ಶೇಖರನಿಂದ ತಡೆಯಲಾಗಲಿಲ್ಲ! ಆತನು ಗಲಾಟೆಯಾಗುತ್ತಿದ್ದ ಸ್ಥಳಕ್ಕೆ ಧಾವಿಸಿ ಜನರನ್ನು "ಶಾಂತರಾಗಿ! ಶಾಂತರಾಗಿ!" ಎಂದು ಬೊಬ್ಬಿಡುತ್ತ ಆ ಹೊಡೆದಾಟದ ಮಧ್ಯದಲ್ಲಿ ಹೋಗಿ ನಿಂತನು! ದುರ್ದೈವೀ ಶೇಖರನಿಗೆ ಬಲವಾದ ಪೆಟ್ಟೊಂದು ಬಿದ್ದು—ಆತ ಚೀರಾಡುತ್ತ ನೆಲಕ್ಕೊರಗಿದಾಗ, ಜನರಿಗೆ ಆ ಪರಿಸ್ಥಿತಿಯ ಅರಿವಾಯಿತು. ಶೇಖರನಿಗೆ ಆದ ಗಾಯವನ್ನು ನೋಡಿದ ಹಿಂದೂ ಮುಸ್ಲಿಂ ಬಾಂಧವರು ಕಣ್ಣೀರ್ಗರೆದರು! ಆದರೆ ಕಾರ್ಯ ಮಿಂಚಿಹೋಗಿತ್ತು! ಶೇಖರನು ನೋವನ್ನು ತಡೆಯಲಾರನಾಗಿದ್ದರೂ ತೊದಲುತ್ತಲೇ ಹೇಳಿದನು—'ಬಂಧುಗಳೇ? ನೀವು ನಿಮ್ಮ ನಿಮ್ಮೊಳಗೆ ಹೊಡೆದಾಡುವುದಕ್ಕಾಗಿಯೇ, ಇಂಗ್ಲೀಷರನ್ನು ಹೊಡೆದಾಡಿಸಿದಿರಾ? ಇದಕ್ಕಾಗಿಯೇ ಭಾರತ ಸ್ವತಂತ್ರವಾಗಲೆಂದು ನೀವು ಒಗ್ಗಟ್ಟಿನಿಂದ ಹೋರಾಡಿದಿರಾ? ಈ ಪವಿತ್ರ ರಕ್ತದ ಹೊಳೆ ಹರಿಯಿಸಲಿಕ್ಕಾಗಿಯೇ ನೀವುಗಳು ಸ್ವಾತಂತ್ರ್ಯವನ್ನು ಗಳಿಸಿರುವಿರೆಂದಾದರೆ ಈ ಸ್ವಾತಂತ್ರ್ಯವು ಲಜ್ಜಾಸ್ಪದವಾದೀತು!' ಶೇಖರನ ಈ ವಾಕ್ಯಗಳನ್ನು ಕೇಳಿದ ಎರಡೂ ಪಂಗಡದವರು ಕಣ್ಣೀರು ಸುರಿಸುತ್ತ—"ಮುಂದೆ ಹೀಗಾಗಲಾರದು" ಎಂದು ಹೇಳಿ ಶೇಖರನಲ್ಲಿ ಕ್ಷಮೆ ಕೇಳಿದರು. ಆ ಬಳಿಕ ಶೇಖರನನ್ನು ಆಸ್ಪತ್ರೆಗೆ ಸೇರಿಸಲಾಯಿತು!

ಆಸ್ಪತ್ರೆಯಲ್ಲಿ ಮೂರು ತಿಂಗಳ ಕಾಲ ಚಿಕಿತ್ಸೆ ಹೊಂದಿದರೂ ಶೇಖರನು ಗುಣಹೊಂದುವುದು ಅಸಾಧ್ಯವೆಂದು ತೋರುತ್ತಿತ್ತು! ದಿನ ದಿನಕ್ಕೆಂಬಂತೆ ಶೇಖರನ ಆರೋಗ್ಯ ಕೆಡುತ್ತ ಬಂದು ಮತ್ತೊಂದು ದಿನ ಆತನ ಪರಿಸ್ಥಿತಿ ಶೋಚನೀಯವಾಯಿತು! ಮೂರು ತಿಂಗಳನಿಂದಲೂ ತನ್ನ ಪತಿದೇವನನ್ನು ಉಪಚರಿಸುತ್ತಿದ್ದ ಮೈಥಿಲಿಯು, ಪತಿಯ ಪಕ್ಕದಲ್ಲೇ ಕುಳಿತು ಕೊಂಡಿದ್ದಳು! ಬಿಕ್ಕಿ ಬಿಕ್ಕಿ ಅಳುತ್ತಿದ್ದ ಆಕೆಯ ಆ ಕರುಣಾಜನಕವಾದ ಪರಿಸ್ಥಿತಿಯೆಂದರೆ ಕಲ್ಲನ್ನಾದರೂ ಕರಗಿಸುವಂತಿತ್ತು. ಆದರೆ.........ಆದರೆ...ಏನು ಮಾಡಬಲ್ಲಳು? ಆವಳಿಗೆ ತನ್ನ ಪರಿಸ್ಥಿತಿಯನ್ನು ಪತಿದೇವನೊಡನೆ ಹೇಗೆ ಹೇಳುವುದೆಂದೇ ತಿಳಿಯದಾಯಿತು! ಆ ದುಃಖದ ವೇಳೆಯಲ್ಲೂ ಕೂಡ ಆಕೆ ನಾಚಿಕೆಯಿಂದ ಆ ವಿಚಾರವನ್ನು ಹೇಳಲಾರದಾಗಿದ್ದಳು! ಆದರೆ ಮೃತ್ಯುಶಯ್ಯೆಯಲ್ಲಿ ಮಲಗಿದ್ದ ತನ್ನ ಪತಿಗೆ ಒಂದು ಶುಭ ವರ್ತಮಾನವನ್ನು ಹೇಳಲೇ ಬೇಕೆಂದು ಬಗೆದ ಆಕೆ, ಶೇಖರನ ವಕ್ಷಸ್ಥಳದಲ್ಲಿ ತನ್ನ ಮುಖವನ್ನಿಟ್ಟು ಕಣ್ಣೀರು ಸುರಿಸುತ್ತ—"ನಾನು...ನಾನು....ನನಗೆ....ಈಗ ಮೂರು ತಿಂಗಳು! ನಿಮಗೆ ಪುತ್ರನಾಗುತ್ತಾನೆ!" ಎಂದು ಹೇಳಿ, ಅಳುತ್ತಲೇ ಆಕೆ ಮುಗುಳುನಕ್ಕಳು!

ಮೃತ್ಯು ಮುಖದಲ್ಲಿದ್ದ ಶೇಖರನ ಆನಂದಕ್ಕೆ ಮೇರೆಯಿಲ್ಲದಾಯಿತು! ಆದರೆ ಶಾರೀರಿಕ ವೇದನೆಯಿಂದ ಆ ಆನಂದ ನಶಿಸಿ ಹೋಯಿತು. ಆದರೂ ಆತನು ತನ್ನ ಪ್ರಿಯತಮೆ ಮೈಥಿಲಿಯನ್ನು ಅಪ್ಪಿ ಹಿಡಿದು ಕೊನೆಯ ಬಾರಿ ಚುಂಬಿಸಿ ಹೇಳಿದನು— "ಮೈಥಿಲೀ...ಮೈಥಿಲೀ....ನಾನು ನಿನ್ನ ಕೈ ಹಿಡಿದೆ! ಆದರೆ...ನಿನಗೆ ಜೀವನದಲ್ಲಿ ಸ್ವಲ್ಪವೂ ಸುಖ ಕೊಡಲಿಲ್ಲ! ನನ್ನ ದೇಶದ ಕಾರ್ಯವೇ ನನಗೆ ಮಹತ್ವವಾಯಿತು! ಕೊನೆಗೆ...ಕೊನೆಗೆ...ನನ್ನ ಮೃತ್ಯುವಿನ ವೇಳೆ, ಒಂದೇ ಬಾರಿ ನಾವು ಒಂದು ಗೂಡಿದೆವು! ಇದೋ! ಪ್ರಿಯೆ! ನೆನಪಿರಲಿ! ಮಗು ಗಂಡಾದರೆ ಶಿವಾಜಿಯಂತೆ! ವೀರ...ಧೀರನನ್ನಾಗಿ ಮಾಡು! ಒಂದು ವೇಳೆ ಹೆಣ್ಣಾದರೆ ವೀರ ಝಾನ್ಸೀ ಲಕ್ಷ್ಮಿಯಂತೆ ಧೀರೆಯಾಗಲಿ! ನನ್ನ ಮಗು ವೀರತ್ವದ ಉಪಾಸಕನಾಗಲಿ! ನನ್ನ ಸಂತಾನವನ್ನು ವೀರ.....ವೀರ........" ಎನ್ನುತ್ತಿರುವಾಗಲೇ ಶೇಖರನ ಪ್ರಾಣಪಕ್ಷಿ ಹಾರಿಹೋಗಿತು! ಸ್ವಾತಂತ್ರ್ಯದ ಜ್ಯೋತಿಯೊಂದು ನಂದಿ ಹೋಯಿತು!

೦೦ ೦೦ ೦೦

ದೇಶಕ್ಕಾಗಿಯೇ ಕೊನೆಯತನಕ ದುಡಿದು ಬಲಿದಾನಗೊಂಡ ತನ್ನ ಪತಿ ಶೇಖರನ ಸ್ಮರಣೆಯೊಂದೇ ಮೈಥಿಲಿಯ ಪಾಲಿಗೆ ಸಂತೋಷದಾಯಕವಾಗಿತ್ತು. ಆ ಪವಿತ್ರ ಸ್ಮರಣೆಯೇ ಆವಳಿಗೆ ಎಂತಹ ಕಷ್ಟ— ದುಃಖಗಳಲ್ಲಿಯೂ, ಜೀವನದ ಸಂಗಾತಿಯಾಗಿತ್ತು!

ವಿದ್ಯಾಮಂದಿರದ ಉದ್ಘಾಟನೆಗೆ ತನ್ನ ಬಾಲಕನೊಡನೆ ಬಂದು ಕುಳಿತಿದ್ದ-ಮೈಥಿಲಿಯ ಮನಃಪಟಲದ ಮೇಲೆ ಈ ಎಲ್ಲ ಘಟನೆಗಳೂ ಮೂಡಿ ಮಾಯವಾಗುತ್ತಿರಲು ಆಕೆಯ ನಯನಗಳಿಂದ ಅಶ್ರುಪ್ರವಾಹವು ಧಾರಾಕಾರವಾಗಿ ಸುರಿಯುತ್ತಿತ್ತು! ಆಕೆಯ ಸೆರಗೆಲ್ಲವೂ ಒದ್ದೆಯಾಗಿತ್ತು. ಹೀಗೆ ಕಣ್ಣೀರು ಸುರಿಸುತ್ತ ಏಕಧ್ಯಾನದಿಂದ ಕುಳಿತಿದ್ದ ಮೈಥಿಲಿಯನ್ನು ನೋಡುತ್ತಿದ್ದ ಸಭಾಸದರಿಗೂ ದುಃಖದಿಂದ ಗಂಟಲು ಬಿಗಿದಂತಾಯಿತು! ದುಃಖ ಉಕ್ಕಿಬಂದಂತಾಯಿತು.

ಸಾಂತ್ವನೆಯ ನಾಲ್ಕು ಮಾತುಗಳನ್ನು ಹೇಳಲೆಂದು ಮೈಥಿಲೀ ದೇವಿಯ ಕಡೆ ತಿರುಗಿ ನೋಡಿದ ಮುಖ್ಯಮಂತ್ರಿಗಳೂ ಸಹ ಮೈಥಿಲಿಯನ್ನು ನೋಡಿ ಭಾವಪರವಶರಾದರು! ಮಂತ್ರಿಗಳು ಅತ್ಯಂತ ವಿನಯದೊಡನೆ-'ಮೈಥಿಲೀ ದೇವಿಯರು ದಯವಿಟ್ಟು ಒಂದೆರಡು ಮಾತುಗಳನ್ನಾದರೂ ಹೇಳಬೇಕು!' ಎಂಬುದಾಗಿ ಕೇಳಿಕೊಂಡರು.

ಕಣ್ಣುಗಳನ್ನು ಒರಸಿಕೊಂಡ ವೀರನಾರಿ ಮೈಥಿಲೀ ದೇವಿಯು ಸಭೆಯ ಮುಂದೆ ಎದ್ದು ನಿಂತಾಗ ಸಭೆಯಲ್ಲಿ ಗಂಭೀರ ಮೌನ ವಾತಾವರಣವುಂಟಾಯಿತು. ಎದ್ದುನಿಂತ ಮೈಥಿಲಿಯು ತುಟಿಗಳನ್ನಲುಗಿಸಿದಳು! ಆದರೆ ಆವಳ ಮುಖದಿಂದ ಮಾತೇ ಹೊರಡದಾಯಿತು! ಕೊನೆಗೆ ಆಕೆ, ಉಕ್ಕಿ ಬರುತ್ತಿದ್ದ ಕಂಬನಿಯನ್ನು ತಡೆದು ಹೇಗೋ ನಾಲ್ಕು ಮಾತುಗಳನ್ನು ಹೇಳಿದಳು—

"ನನ್ನ ಪತಿದೇವನೊಡನೆ, ಅವರ ಸಂಗಾತಿನಿಯಾಗಿ ಕಾಲ ಕಳೆಯುವ ಭಾಗ್ಯ ನನಗೆ ಅತಿ ಅಲ್ಪಕಾಲ ಮಾತ್ರ ಲಭಿಸಿತ್ತು! ಆದರೆ ನಾನು ಅವರ ಧರ್ಮ ಪತ್ನಿಯಾಗಿದ್ದೇನೆ! ಸೇವಕಿಯಾಗಿದ್ದೇನೆ! ಅವರ ಹೆಸರಿನಲ್ಲಿ ಪ್ರಾರಂಭಿಸಲ್ಪಟ್ಟ ಈ ವಿದ್ಯಾ ಮಂದಿರದ ಮೂಲಕ ಎಷ್ಟು ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿದ್ಯಾದಾನ ಪಡೆಯುವರೋ ಅವರೆಲ್ಲರನ್ನೂ ಧೀರ--ವೀರರನ್ನಾಗಿ ದೇಶ ಪ್ರೇಮಿಗಳನ್ನಾಗಿ ಮಾರ್ಪಡಿಸುವ ಮಹಾ ಕಾರ್ಯ ಇಲ್ಲಿಯ ಅಧ್ಯಾಪಕ ವರ್ಗಕ್ಕೆ ಸೇರಿದೆ! ಇಲ್ಲಿ ವಿದ್ಯಾದಾನ ಪಡೆಯುವ ವಿದ್ಯಾರ್ಥಿಗಳು ವೀರರ ಗುಣಗಾನ ಮಾತ್ರ ಮಾಡುವವರಾಗಿ ಉಳಿಯದೆ ಸ್ವತಃ ಧೀರರೂ ವೀರರೂ ಆಗಿ ಬೆಳಗಲಿ! ಭಾವೀಜನಾಂಗವಾದ ಈ ಮಕ್ಕಳು ಭವ್ಯ ಭಾರತದ ದೇಶಭಕ್ತ ವೀರನಾಗರಿಕರಾಗಲಿ! ಎಂದು ನಾನು ಆಶಿಸುತ್ತೇನೆ! ವೀರತ್ವವೇ ಮಾನವನ ಉಚ್ಚ ಲಕ್ಷಣ! ವೀರತ್ವವೇ ಆಭೂಷಣ! ವೀರತ್ವಕ್ಕೆ ಜಯವಾಗಲಿ! ವೀರತಾಕೀ ಜೈ! ಜೈ ಹಿಂದ್!" ಮೈಥಿಲಿಯ ಮುಖದಿಂದ ಹೊರಟ ಈ ಜಯಘೋಷ ಸಹಸ್ರಾರು ಕಂಠಗಳಿಂದ ಪ್ರತಿಧ್ವನಿಸಿ ನಾಲ್ಕೂ ಕಡೆಗಳಿಂದ ಮಾರ್ದನಿಗೊಟ್ಟಿತು!

('ದಕ್ಷಿಣ ಭಾರತ'ದಿಂದ)

ಕೊರ್ಪೊರೇಶನ್ ಬೇಂಕ್

'ಕ್ಯುಮುಲೇಟಿವ್ ಡಿಪೊಸಿಟ್' ಯೋಜನೆಯಿಂದ ನಿಮಗಾಗುವ ಪ್ರಯೋಜನಗಳಾವುವು?

- ನಿಮ್ಮ ಹಣಕ್ಕೆ ಸುರಕ್ಷಿತತೆ ಮತ್ತು ಭದ್ರತೆಗಳನ್ನು ಯಥೇಷ್ಟವಾಗಿ ನೀವು ಪಡೆಯಬಹುದು.
- ನೀವು ಬಯಸುವ ಒಡವೆ-ವಸ್ತುಗಳನ್ನೆಲ್ಲಾ, ಒಂದರ ಬಳಿಕ ಇನ್ನೊಂದರಂತೆ ಸುಲಭದಲ್ಲಿ ನೀವು ಕೈಗೂಡಿಸಿಕೊಳ್ಳಬಹುದು.
- ಮುಂದೆ ಬರಬಹುದಾದ ಹಣದ ಅಡಚಣೆಗಳಿಗಾಗಿ ಇಂದಿನಿಂದಲೇ ನೀವು ಹಣ ಕೂಡಿಸಿಡುತ್ತಾ ಬರಬಹುದು.
- ತಿಂಗಳ ಕಂತನ್ನು ಪ್ಯಾಡೆಗೆ ಕಟ್ಟದ ತಪ್ಪಿಗಾಗಿ ಅನಾವಶ್ಯಕ ದಂಡ ತೆರುವ ಭೀತಿಯಿಂದ ಕಡ್ಡಾಯವಾಗಿ ಪ್ರತಿ ತಿಂಗಳೂ ನೀವು ಹಣ ಕೂಡಿಸಿಡುತ್ತ ಬರಬಹುದು.
- ಸಾಲಿಯಾನ್ ಶೇಕಡಾ 5 ರಂತೆ ನೀವು ಬಡ್ಡಿ ಸಂಪಾದಿಸಬಹುದು.

ಎಲ್ಲಾ ವಿಧದಲ್ಲೂ ಅನುಕೂಲವಿರುವ ಒಂದು ಸಿ. ಡಿ. ಎಕೌಂಟನ್ನು ನಿಮಗೆ ಸಮೀಪವಿರುವ ಕೊರ್ಪೊರೇಶನ್ ಬೇಂಕ್ ಶಾಖೆಯಲ್ಲಿ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿ.,

(Estd: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು: ಮಂಗಳೂರು

ಇಂದಿನ ಕಾನೂನು ಪ್ರಪಂಚದಲ್ಲಿ ಅಸತ್ಯವು ಅನಿವಾರ್ಯವೇ?

ದಿನ ಬೆಳಗಾದೊಡನೆಯೇ ಕಾನೂನುಗಳ ಸೃಷ್ಟಿಯಾಗುತ್ತಿರುತ್ತದೆ. ಆದರೆ, ಬದುಕುವುದನ್ನು ಬಯಸುವ ಮನುಷ್ಯ ಕಾನೂನಿನ ಜಾಲದಿಂದ ಬದುಕುಳಿಯಬೇಕಾದರೆ ಅಸತ್ಯದ ಮಾರ್ಗವನ್ನವಲಂಬಿಸಲೇ ಬೇಕಾಗುತ್ತದೆ ಅವ್ಯವಸ್ಥಿತ ಕಾನೂನು ಪ್ರಪಂಚದಲ್ಲಿ ರಾಮರಾಜ್ಯನಾಗಬೇಕೆಂದು ಬಯಸಿದರೆ ಅದು ಆಗಬಲ್ಲುದೆ?

ಬರೆದವರು

ಶ್ರೀ ತದ್ದಲಸೆ ವಿಶ್ವೇಶ್ವರ ಶರ್ಮ, ಶಿರಸಿ.

ಶಾಸ್ತ್ರಗಳ ಆದೇಶವಾಗಲೀ ಕಾನೂನುಗಳ ಉದ್ದೇಶವಾಗಲೀ ಸತ್ಯ ಜೀವನದ ರಕ್ಷಣೆ, ವಿಕಾಸ, ವಿಸ್ತಾರಕ್ಕಾಗಿಯೇ ಇವೆ ಯೆಂಬುದನ್ನು ನಾವು ಧಾರಾಳವಾಗಿ ತಿಳಿಯಲಡ್ಡಿ ಇಲ್ಲ ಯಾಕೆಂದರೆ ಪ್ರಪಂಚದ ಅಸಂಖ್ಯ ಜನಾಂಗದ ಭಿನ್ನ ಭಿನ್ನ ಆಶೆ ಆಕಾಂಕ್ಷೆ, ಅಭಿರುಚಿಗಳ ಸಾಧನೆಯಲ್ಲಿ ಘರ್ಷಣೆಯಾಗಲೀ ಪರಸ್ಪರ ವೈಮನಸ್ಯ, ತೊಂದರೆ ತೊಡಕುಗಳಾಗಲೀ ಹುಟ್ಟಬಾರದೆಂಬುದೇ ಇವುಗಳ ತಾತ್ವಿಕ ತಳಹದಿಯಾಗಿದೆ. ಜನತೆಯ ಮೇಲೆ, ಇವು ಪ್ರಭುತ್ವಗಳಿಸುವದಕ್ಕಾಗಿ ಒಂದು ಧಾರ್ಮಿಕ ಮುಖವಾಡವೂ, ಇನ್ನೊಂದಕ್ಕೆ ರಾಜನೀಯ ಮುದ್ರೆಯೂ ಹಾಕಲ್ಪಟ್ಟಿವೆ. ರಕ್ಷೆ, ಶಿಕ್ಷೆಗಳ ಶಕ್ತಿಯನ್ನು ಇವಕ್ಕೆ ಕೊಡಲಾಗಿದೆ

ಹೀಗಿರುವಾಗ ಇವುಗಳ ನಿರ್ದೇಶನವು, ಸುಲಭವಾಗಿ, ಸ್ಪಷ್ಟವಾಗಿ ಜನಸಾಮಾನ್ಯರಿಗೆಲ್ಲಾ ತಿಳಿಯುವಂತೆ ಇರಬೇಕೆಂಬುದನ್ನು ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವಾಗಿದೆ. ಒಮ್ಮೆ ಅವು ಹಾಗಿಲ್ಲದಿದ್ದರೆ ಜನಕ್ಕೆ ಸರಿಯಾದ ಕಲ್ಪನೆಯಾಗಲೀ ಮಾರ್ಗದರ್ಶನವಾಗಲೀ ಇವುಗಳಿಂದ ದೊರೆಯದಿದ್ದರೆ ಮೂಲ ಉದ್ದೇಶಕ್ಕೇ ವಿರುದ್ಧವಾದ ಪ್ರಸಂಗಗಳು ಸಂಭವಿಸುವುದುಂಟು. ಆಗ ಸತ್ಯದ ದಾರಿಯು ಒದಗಿ ತಪ್ಪದ [illegible] ಕುಳಿಯಲ್ಪಡುತ್ತದೆ. ಅನಿವಾರ್ಯವಾಗಿ [illegible] ಹೋಗುತ್ತದೆ. ಹಾಗಾಗಿ ಶಾಸ್ತ್ರ ಮತ್ತು ಕಾನೂನುಗಳ [illegible] ಸಿದ್ಧಾಂತಗಳು ಸ್ಪಷ್ಟವಾಗಿರಬೇಕಾಗಿದೆ

[illegible] ವಿಚಾರದ [illegible] ಶಾಸ್ತ್ರ [illegible] ಇವುಗಳ [illegible] ಜೀವನದೊಂದಿಗೆ [illegible] ಆದರೆ ಕಾನೂನುಗಳು ಹಾಗಲ್ಲ ದಿನವೂ ಅವು ಹುಟ್ಟಿಕೊಳ್ಳುತ್ತಲೇ ಇವೆ ಇಂದು ಮಾಡಿದ ಕಾನೂನಿನ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ನಾಳೆ ಮತ್ತೊಂದು ಕಾನೂನು ಸಿದ್ಧವಾಗುತ್ತಲೂ ಇದೆ ಹಾಗಾಗಿ ಈ ಕಾನೂನುಗಳು ನಮ್ಮ ಜೀವನದ ಸತ್ಯದ ಅನುಷ್ಠಾನಕ್ಕೆ ಎಷ್ಟರಮಟ್ಟಿಗೆ ಚಾಲನೆಯನ್ನು ಒದಗಿಸಿದೆ ಎಂಬುದನ್ನೂ ಸೂಕ್ಷ್ಮವಾಗಿ ನೋಡಬೇಕಾಗಿದೆ-

"ಬೇಲಿಯೇ ಎದ್ದು ಹೊಲ ತಿಂದರೆ, ಅದಕ್ಕೆ ಪರಿಹಾರವೇನು? ಶಿಕ್ಷೆಯೇನು? ಎನ್ನುವ ಜಟಿಲ ಸಮಸ್ಯೆಯಂತೆ ಇಂದು ಕೆಲವು ಕಾನೂನುಗಳಿಂದಲೂ ಉಂಟಾದ ಪ್ರಮಾದ ಅಪಚಾರಗಳ ಬಗ್ಗೆ ಅಂಥದೇ ಪರಿಸ್ಥಿತಿ ಉಪಸ್ಥಿತವಾಗಿದೆಯೆಂದು ಕಂಡುಬರುತ್ತದೆ. ಸತ್ಯವನ್ನು ಕಾಯುವುದಕ್ಕಾಗಿಯೇ ಇದ್ದ ಈ ಕಾಯಿದೆಗಳೇ ಅಸತ್ಯಕ್ಕೆ ಆಹ್ವಾನ ಕೊಡುತ್ತಿವೆಯೆಂಬುದು ಗಮನಾರ್ಹ ವಿಷಯವಾಗಿದೆ

ವ್ಯವಹಾರಕ್ಕೆ ಸಂಬಂಧಿಸಿದ ಒಂದು ವಿಷಯದ ನಿರ್ಣಯಕ್ಕಾಗಿ ನ್ಯಾಯಾಲಯಕ್ಕೆ ಹೋಗುವ ಪ್ರಸಂಗದಲ್ಲಿ ಕಾನೂನಿನ ಅಭಿಪ್ರಾಯ ಪಡೆಯಬೇಕು. ಆಗ ಈ ಕಾನೂನಿಗೆ ಇರುವ ಹಲವಾರು ಮುಖಗಳ ಪಂಚಯವಾಗುತ್ತದೆ- ನಿರ್ಣಯವೂ ಹಲವು ಬಗೆಯಾಗಿಯೇ ಇರುತ್ತವೆ ಇದಕ್ಕೆ ಸಂಬಂಧಿಸಿದ ಎರಡೂ ವ್ಯಕ್ತಿಗಳಿಗೂ ಲಾಭದ ಆಶೆಯೂ ಉಂಟಾಗುತ್ತದೆ. ಯಾಕೆಂದರೆ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಬೇರೆ ಬೇರೆ ರೀತಿಯ ನಿರ್ಣಯಗಳು ಆಗುವುದುಂಟು. ಆದ್ದರಿಂದ ಕಾನೂನಿನ ಲಾಭಕ್ಕಾಗಿ ಭಿನ್ನ ಭಿನ್ನ ಸಾಧನೆಗಳು, ಪ್ರಯತ್ನಗಳು ನಡೆಯುವುದು ಸ್ವಾಭಾವಿಕವೇ, ಆದರೆ ಈ ಪ್ರಯತ್ನಗಳಲ್ಲಿ ಸತ್ಯಕ್ಕಿರುವ ಸ್ಥಾನವೆಷ್ಟು? ಎಂಬುದು ಗಮನಾರ್ಹ ವಿಷಯ- ಇಲ್ಲಿ ವ್ಯಕ್ತಿಯ ಶಕ್ತಿ- ಅವ್ಯಕ್ತವಾಗಿರುವ ಕಾಯಿದೆಯ ಪ್ರಯೋಜನ ಪಡೆಯುವುದಕ್ಕಾಗಿ ಉಪಯೋಗವಾಗುತ್ತದೆಯೇ ಹೊರತು ವಾಸ್ತವತೆಯ ಮೇಲೆ ಸಾಗುವುದಿಲ್ಲ ಸತ್ಯವು ಏನೇ ಇದ್ದರೂ ಕಾಯಿದೆಯ ಲಾಭ ಹೇಗೆ ದೊರೆಯುತ್ತದೆಂದೂ ಅದನ್ನು ದೊರಕಿಸುವುದಕ್ಕೆ ಹೇಗೆ ಪ್ರಯತ್ನಿಸಬೇಕೆಂಬುದೇ ಇಲ್ಲಿ ಮುಖ್ಯ ವಿಷಯವಾಗಿ ಬಿಡುತ್ತದೆ. ಕೆಲವೊಂದು ಸಾರಿ ಸತ್ಯದ ಸ್ಥಾನ ಗೌಣವಾಗುವುದೂ ಅಪರೂಪವೇನಲ್ಲ. ಸುಳ್ಳುಗಾರನಾದರೂ ಕಾಯಿದೆಯಿಂದ ಸತ್ಯವಂತನಾಗಿ, ಅಪರಾಧಿಯಾದರೂ ಕಾಯಿದೆಯಿಂದ ನಿರಪರಾಧಿಯಾಗುವುದೂ ಇದೆ.

ಇತ್ತೀಚೆ ಹುಟ್ಟಿಬಂದ ಕೆಲವು ಕಾಯಿದೆಗಳ ಬಗ್ಗೆಯಂತೂ ಸುಳ್ಳು ಹೇಳುವುದು ಅನಿವಾರ್ಯವೆನ್ನಿಸಿಬಿಟ್ಟಿದೆ. ಯಾಕೆಂದರೆ ಜೀವನದಲ್ಲಿ "ಬದುಕುವ" ಪ್ರಶ್ನೆ ದೊಡ್ಡದು. ನಮ್ಮ ಶಾಸ್ತ್ರಗಳೂ ಸಹಾ "ಜೀವನ್ ಭದ್ರಾಣಿ ಪಶ್ಯತಿ" ಎಂದು ಹೇಳುತ್ತವೆ. ಹಾಗಾಗಿ ಬದುಕನ್ನು ಸಮೃದ್ಧಗೊಳಿಸುವುದೇ ನಮ್ಮ ಆಶೆಯಾಗಿರುತ್ತದೆ ಅದಕ್ಕೆ ಪೋಷಕವಾದ ಹೇಳಿಕೆಯನ್ನೀಯುವುದಾಗಲೀ, ಅದನ್ನು ಪಡೆಯುವುದಾಗಲೀ, ಸತ್ಯಕ್ಕೆ ಅಪಚಾರವೆಂದು ನಮಗನ್ನಿಸುವುದಿಲ್ಲ. ಎಷ್ಟೋ ಸಾರಿ ನಮಗೆ ತಿಳಿಯದೆಯೋ ಸುಳ್ಳು ಹೇಳುವುದೂ ಇದೆ.

ಕೆಲವು ಕಾನೂನುಗಳು ಕೆಲವೊಂದು ವಿಶಿಷ್ಟ ವರ್ಗಕ್ಕೆ ಸೌಲಭ್ಯ ದೊರಕಿಸಲು ಅವಕಾಶ ಕೊಡುವಂಥವುಗಳಿವೆ. ಅವನ್ನು ಪಡೆಯಲು ಆ ವರ್ಗದವರು ಅರ್ಜಿ ಸಲ್ಲಿಸಬೇಕಾಗುತ್ತದೆ. ಅನಂತರ ಅವುಗಳ ವಿಚಾರ ನಡೆಯುವದು. ಆಗ ಕೆಲವು ಮಾಹಿತಿ ಅಲ್ಲಿರುವ ನಮೂನೆಗಳಿಗೆ ಉತ್ತರಿಸಬೇಕು ಅಂದಲ್ಲಿ ನಾವು ಕೊಟ್ಟಿರುವ ಉತ್ತರ, ಮಾಹಿತಿಗಳಿಂದಲೇ ಕಾನೂನಿನ ಸೌಲಭ್ಯ ಕೊಡುವ ವಿಚಾರ ಆಳತೆ ಮಾಡುತ್ತಾರೆ. ಈ ಅಳತೆಯಲ್ಲಿ ನಾವು ಸಿಕ್ಕಿದರೆ ಸವಲತ್ತು ದೊರೆಯುತ್ತದೆ. ಇಲ್ಲದಿದ್ದರೆ ಇಲ್ಲ. ಅಂಥಾಗ ಪರೀಕ್ಷಾ ಪತ್ರಿಕೆಯ ನಮೂನೆಗಳಿಗೆ ಉತ್ತರ ಸಲ್ಲಿಸುವಾಗಲೇ ನಮ್ಮ ದೃಷ್ಟಿ ಸತ್ಯ, ವಾಸ್ತವ, ಪ್ರಪಂಚ ಬಿಟ್ಟು ಆ ಪರೀಕ್ಷೆಯಲ್ಲಿ ಯಶಸ್ಸು ಗಳಿಸುವುದನ್ನೇ ಲಕ್ಷಿಸುವುದು ಸ್ವಾಭಾವಿಕವಾಗಿ ಬಿಡುತ್ತದೆ ಆಗ ಸತ್ಯವು ಅಸತ್ಯವಾಗುವುದಕ್ಕೆ ಕಾಯಿದೆಯ ಅಪಕ್ವ, ಅಸ್ಪಷ್ಟ, ಅದೂರದರ್ಶಿತ್ವವೇ ಕಾರಣವಲ್ಲದೆ ಬೇರಾವುದೂ ಆಗಲಾರದು.

ಇನ್ನು ಕೆಲವು - ವ್ಯವಸಾಯ, ವ್ಯವಹಾರ, ವಾಣಿಜ್ಯಗಳಿಗೆ ವಿಧಿಸಿದ ಕರಗಳ ಕಾಯಿದೆಗಳಿವೆ. ಇವುಗಳಿಗೆ ಬಿಡಗಿನ ಎಷ್ಟು ಮುಖಗಳಿವೆಯೋ ತಿಳಿಯುವದಿಲ್ಲ. ರೈತನಿಗೆ ಕಾಣಿಸುವ ಮುಖವೊಂದಾದರೆ ಅಧಿಕಾರಿಗೆ ಕಾಣಿಸುವ ಮುಖ ಮತ್ತೊಂದು. ಹಾಗಾಗಿ ಮುಖಕ್ಕೆ ಸರಿಯಾಗಿ ಮಾತಾಡುವುದೂ, ಮನ್ನಣೆ ನೀಡುವುದೂ ಕಲಿತ ವಿನಹ "ಬದುಕು" ಸಾಧ್ಯವಿಲ್ಲವೆಂದಾಗುತ್ತದೆ, ಈ ರೀತಿ ಬದುಕಿನ ಹಿನ್ನೆಲೆಯಲ್ಲಿ ಹುದುಗಿರುವ ಜನತೆಯ ಹಠಗೆಟ್ಟ ಪ್ರವೃತ್ತಿಗೆ ಪ್ರೇರಕವಾದುದು ಈ ಕಾಯಿದೆಗಳೇ ಎಂದು ಹೇಳದೇ ಗತ್ಯಂತರವಿಲ್ಲ-

ಆಹಾರ ವಸ್ತು, ನಿತ್ಯೋಪಯೋಗಿ ವಸ್ತು ಪಡೆಯುವಾಗಲೂ ಸುಳ್ಳು ಹೇಳದೇ ಬೇರೆ ವಿಧಿಯೇ ಇಲ್ಲ ಎನ್ನುವ ಪ್ರಸಂಗವೂ ಬರುತ್ತದೆ. ಸುಳ್ಳು ಹೇಳದೇ ಇದ್ದರೆ ನಮಗೆ ಸಾಲುವಷ್ಟು ಆಹಾರ ದೊರೆಯುತ್ತಿಲ್ಲವೆಂದಾಗ ಬದುಕಬೇಕು ಎನ್ನುವವನಿಗೆ ಸುಳ್ಳು ಹೇಳಲೇಬೇಕು ಎನ್ನುವುದೇ ಅಲ್ಲಿ ನ್ಯಾಯವಾಗುತ್ತದೆ.

ಇಂಥ ಬಗೆಯ ಹಲವಾರು ಕಾನೂನುಗಳು ನಮ್ಮ ಸತ್ಯ ಜೀವನದ ಮೇಲೆ ನಿತ್ಯವೂ ಧಾಳಿ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಕಾಯಿದೆಯ ಸವಲತ್ತಿಗಾಗಿ ಮುಸಲತ್ತಿನ ಕಸರತ್ತೇ ನಡೆಯಬೇಕಾಗುತ್ತದೆ ಇಲ್ಲದಿದ್ದರೆ ಅವು ದೊರೆಯುವುದಿಲ್ಲ. ಹೀಗಾಗಿ ಬದುಕಿನ ಸುತ್ತಲೂ ಕಾನೂನು ಇದೆ. ಕಾನೂನಿನ ಸುತ್ತಲೂ ಸುಳ್ಳು ಇದೆ- ಎನ್ನುವ ಅಭಿಪ್ರಾಯಕ್ಕೆ ಜನತೆ ಮುಟ್ಟಿದರೆ ಅದರಲ್ಲಿ ತಪ್ಪೇನಿದೆ? ಅವ್ಯವಸ್ಥಿತ ಕಾನೂನು ಪ್ರಪಂಚದಲ್ಲಿ ರಾಮರಾಜ್ಯವಾಗಬೇಕೆಂದು ಬಯಸಿದರೆ ಅದು ಆಗಬಲ್ಲದೇ?

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ.

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ರೇಡಿಯೋ, ಟ್ರಾನ್ಸಿಸ್ಟರ್, ವೈರ್ ಸೆಟ್, ಟೇಪ್ ರೆಕಾರ್ಡು ಉಡುಗೊರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ತೆಂಕಪೇಟೆ, ಉಡುಪಿ, ದ. ಕ.

ಫೋನ್ 66

ಪ್ರೊ:- ಯು. ರಾಘವೇಂದ್ರ ಕೃಷ್ಣ ಭಟ್, ಉಡುಪಿ.

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ:- ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ, ಫೋನ್ 66 ಉಡುಪಿ. ದ. ಕ.

ಗ್ರಾಹಕರ ತೃಪ್ತಿಯೇ ನಮ್ಮ ಆದ್ಯ ಸಂತೋಷ.

ಪರಮಾಣು ಬಾಂಬು— ನೇಗಿಲು

(೪ನೇ ಪುಟದಿಂದ)

ವ ವೆಚ್ಚದೊಡನೆ ತುಲನೆ ಮಾಡಿದರೆ, ಪರಮಾಣು ಸ್ಫೋಟಕಗಳ ಪ್ರಯೋಗದ ವೆಚ್ಚವು ಕೇವಲ ೧/೧೦೦೦ರಷ್ಟು ಆದೀತು.

ಹೀಗೆಯೇ ಅವಶ್ಯವಿದ್ದಲ್ಲಿ ಜಲಮಾರ್ಗಗಳನ್ನೂ ಕಾಲುವೆಗಳನ್ನೂ ಅಗೆಯುವುದು ಸಾಧ್ಯವಾಗಲಾರದೆ? ರೇವುಗಳು ಆಳವಾಗದೆ ಇದ್ದಲ್ಲೆಲ್ಲಾ ಸಮುದ್ರ ತಳವನ್ನು ಕುಗ್ಗಿಸಿ ಆಳವನ್ನು ಹೆಚ್ಚಿಸಲಾರೆವೆ? ಇವೆಲ್ಲವೂ ಸಾಧ್ಯ. ಆದರೆ, ಈ ಬಗ್ಗೆ ನಡೆಸಲಿರುವ ಪ್ರಯೋಗಗಳು ಇನ್ನೂ ಪ್ರಾರಂಭಾವಸ್ಥೆಯಲ್ಲಿವೆ. ಇವುಗಳಲ್ಲಿ ತಕ್ಕ ತಾಂತ್ರಿಕ ಸುಧಾರಣೆಗಳನ್ನು ಯೋಜಿಸಿಕೊಂಡರೆ, ಭೂಪೃಷ್ಠದ ಎಲ್ಲ ಭಾಗವೂ ಹಸನು ಭೂಮಿಯಾಗುವುದರಲ್ಲಿ ಸಂದೇಹವಿಲ್ಲ. ಹೀಗೆ ಪರಮಾಣು ಸ್ಫೋಟಕಗಳು ನೂತನ ಕ್ರಮದ 'ಹಲಾಯುಧ'ಗಳಾಗಿ ಮುಂದೆ ಪರಿಣಮಿಸಿದರೆ ಆಶ್ಚರ್ಯವೇನೂ ಇಲ್ಲ. ಇಂಥ ಕಾರ್ಯಕ್ರಮಗಳಲ್ಲಿ ಪ್ರಯೋಗಾರ್ಥವಾಗಿ ನಡೆಸಲ್ಪಡುವ ಪರಮಾಣು ಸ್ಫೋಟಗಳು ಅತ್ಯವಶ್ಯವೇ ಆಗಿವೆ ಅಲ್ಲದೆ; ಭೂಪೃಷ್ಠದ ಕೆಳಗಡೆ-ಮೈಲುಗಟ್ಟಳೆ ದೂರದಲ್ಲಿ ಇರಬಹುದಾದ ಧಾತುಗಳ, ಘನ, ದ್ರವರೂಪದ ವಿವಿಧ ಇಂಧನಗಳ ಆವಿಷ್ಕಾರ, ಉದ್ಧಾರಗಳ ವಿಚಾರದಲ್ಲೇ ಇಂಥ ಪ್ರಯೋಗಗಳು ತಕ್ಕಷ್ಟು ನೆರವನ್ನೀಯಬಲ್ಲವು ಎಂದು ತೀರ್ಮಾನಿಸಿ ಕೆಲಿಫೋರ್ನಿಯದ ಅಣುವಿಜ್ಞಾನಿಗಳ ತಂಡ ಪರಮಾಣುವಿಕ ನೇಗಿಲಿನ ಯೋಜನೆಯನ್ನು ಕೈಗೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲ.

ನೆಹರು ಅನಂತರ ಏನು?

(೧೫ನೇ ಪುಟದಿಂದ)

ರು ಅವರು ನಿಧನ ಹೊಂದಿ ಎರಡೇ ತಿಂಗಳಿನಲ್ಲಿ ಈ ಪರಿಸ್ಥಿತಿ ಉಂಟಾದುದು ಶೋಚನೀಯವೇ ಸರಿ.

ಇದಕ್ಕೆ ವ್ಯತಿರಿಕ್ತವಾದ ಕೆಲಘಟನೆಗಳೂ ಜರಗಿವೆ. ಕೆಲವೆಡೆ ಅನೇಕ ವ್ಯಾಪಾರಸ್ಥರು ಬಡವರಿಗೆ ವಶ್ಯವಾದ ಧಾನ್ಯಗಳನ್ನು ಯಾವದೇ ಲಾಭವಿಲ್ಲದೆ ಮಾರುವದಾಗಿ ಸ್ವಯಂಸ್ಫೂರ್ತಿಯಿಂದ ಸಾರಿದ್ದಾರೆ ಎಂಬುದು ನಿಜವಾಗಿಯೂ ಅಭಿನಂದನದ ವಿಷಯವೇ ಸರಿ. ಇಂದು ಬೇಕಾದುದು ಇಂಥ ಸ್ವಯಂ ಸ್ಫೂರ್ತಿಯ ಸ್ವಾರ್ಥ ತ್ಯಾಗ.

ಸ್ವಾರ್ಥ ತ್ಯಾಗ ಬೇಕಾದುದು ಕೇವಲ ವ್ಯಾಪಾರಸ್ಥರಿಂದಲ್ಲದೇ ಜನಸಾಮಾನ್ಯರಿಂದ ಮೊದಲ್ಗೊಂಡು ಹಿರಿಯ ಅಧಿಕಾರಿ, ರಾಜಕಾರಣಿಯವರೆಗೆ ಪ್ರತಿಯೊಬ್ಬನಿಂದಲೂ ಬೇಕಾಗಿದೆ. ಆದುದರಿಂದ ನಾವು ಇನ್ನು ಮೇಲೆ ವಿಚಾರ ಮಾಡತಕ್ಕದ್ದು, ನೆಹರು ಅವರ ನಂತರ ನಾವು ಮಾಡಬೇಕಾದದ್ದು ಏನು? ಎಂದು. ಸ್ವಾತಂತ್ರ್ಯೋತ್ಸವದ ಶುಭ ಪ್ರಸಂಗದಂದು ನಾವೆಲ್ಲರೂ ಆ ದಿಶೆಯಲ್ಲಿ ವಿಚಾರ ಮಾಡಿ ಪ್ರಯತ್ನಿಸುವದಾಗಿ ಪ್ರತಿಜ್ಞೆ ಮಾಡೋಣವೇ? ಇದಕ್ಕಿಂತ ಬೇರೆ ಯಾವ ಕೃತಿಯೂ ನೆಹರು ಅವರ ಆತ್ಮಕ್ಕೆ ಸಮಾಧಾನ ಕೊಡಲಾರದು.

ಸಿಗದ ಸ್ವಾತಂತ್ರ್ಯದ ಕನಸು

(೧೫ನೇ ಪುಟದಿಂದ)

ವೇಳೆ ಜನಸಾಮಾನ್ಯರ ಸೌಲಭ್ಯಕ್ಕಾಗಿ ಒಂದೆರಡು ಶಾಸನಗಳಾದರೂ ಅದರ ಪ್ರಯೋಜನವು ಹಿಂದುಳಿದವರು— ಮುಂದುವರಿದವರು, ಆ ಜಾತಿ—ಈ ಜಾತಿಗಳೆಂಬ ಕರ್ಕಶ ಕಲಹದಲ್ಲಿಯೇ ಕಮರಿ ಹೋಗುತ್ತಿದೆ. ಯಾವ ಬಸ್ಸಿನಲ್ಲಿಯೂ ಸೀಟಿಲ್ಲ! ಆದರೂ ಸರಕಾರೀ ಸಾರಿಗೆ ಖಾತೆಗೆ ಲಕ್ಷಾವಧಿ ನಷ್ಟವಂತೆ! ಪ್ರತಿವರ್ಷವೂ ನೂರಾರು ಹೊಸ ಬಸ್ಸುಗಳನ್ನು ಕೊಂಡರೂ ಅವು ದಟ್ಟಡವಿಯಲ್ಲಿ ಕೆಟ್ಟು ಧರಣೀ ಸತ್ಯಾಗ್ರಹ ಹೂಡುವುದು ಹೆಚ್ಚಾಗುತ್ತಲೇ ನಡೆದಿದೆ.

ಎಲ್ಲಿದೆ ಸ್ವಾತಂತ್ರ್ಯ? ಆಳುವವರು ಆಳ್ವಿಕೆಯ ಆಳವನ್ನರಿತಿರುವರೇ? ಆಳಲ್ಪಡುವವರ ಅಳುವನ್ನರಿತಿರುವರೇ? ಈ ೧೫ ನೇ ಆಗಸ್ಟು ಸಿಕ್ಕ ಸ್ವಾತಂತ್ರ್ಯದ ಸಂತಸವನ್ನು ತೋರದೆ, ಸಿಗದ ಸ್ವಾತಂತ್ರ್ಯದ ಕನಸನ್ನೇ ಕನವರಿಸುವಂತಾಗಿಗಿದೆಯಲ್ಲವೇ!

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction, Madras.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 110/64.

ತೇಜಪ್ಪ ಸೆಟ್ಟಿ .. ವಾದಿ

ಮತ್ತು

ಕುರಡ ಜಾಂದ(ಪೌತ್ರಿ) ಕೂಡಾ— ಪ್ರತಿವಾದಿರು.

ಇವರೊಳಗೆ

೩ನೇ ಪ್ರತಿವಾದಿ—ಕಾರ್ಕಳ ತಾಲೂಕು ಚಾರಗ್ರಾಮದ ವಳಬೈಲು ಎಂಬಲ್ಲಿರುವ ಕಾಳಮ್ಮ ಸೆಡ್ತಿ ಮಗಳು ಕೃಷ್ಣಮ ಸೆಟ್ಟಿ ಎಂಬಳಿಗೆ ಈ ಮೂಲಕ ತಿಳಿಸುವದೇನೆಂದ್ರೆ:

ವಾದಿಯು ಗೇಣಿಬಾಕಿ ವಸೂಲು ಕೇಳಿ ಮಾಡಿದ ಮೇಲಿನ ದಾವೆಯು ತಾ. 17-8-64 ಕ್ಕೆ ಇಟ್ಟಿರುವುದರಿಂದ ಆ ದಿವಸ ನೀವು ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿ ಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು, ತಿಳಿದಿರಲಿ.

(By ordre of the Court.)

D N· Krishnamoorthy Rao.
Advocate for Plaintiff.

Udipi, 6-8-64.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

O. S. 442/63

ಮ್ಯಾಲ್ತಿ ಕೂಡಾ— ವಾದಿರು.

ಕರಿಯಮಡಿವಾಳ ಕೂಡಾ— ಪ್ರತಿವಾದಿರು.

1 ನೇ ಪ್ರತಿವಾದಿ:— ಕರಿಯ ಮಡಿವಾಳ ಮ್ಮಾಲ ಮಡಿವಾಳನ ಅಳಿಯ— ವೀರಕಂಭ ಗ್ರಾಮದ ಮಡಿವಾಳ ಸಾಲು

ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ನಿಮ್ಮಿಂದ ಮತ್ತು 2ನೇ ಪ್ರತಿವಾದಿಯಿಂದ ಕೂಡಾ ವಾದಿರು ಗೇಣಿ ಬಾಕಿಗೆ ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯು ತಾ 26-8-64 ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಬಿಟ್ಟು ಯುಕ್ತ ಕಂಡಂತೆ ತೀರ್ಮಾನಿಸಲಾದೀತು

Sd/- M·Sadashiva Rao
Vakil for Plff.

ಪುತ್ತೂರು ತಾ. 8-8-64.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು.

ಸುಮಾರು ಐವತ್ತು ವರ್ಷಗಳಿಂದ ಜನತಾ ಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕ ವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್ - ಪೌಡರ್

ಅನುಭವ ಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್ ಆಯಿಲ್,

ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹ

ಪ್ರತಿನಿತ್ಯ ಅತ್ಯುತ್ತಮ ರೀತಿಯಲ್ಲಿ ತಯಾರಾಗುತ್ತಲಿವೆ.

ಶಾಖೆಗಳು: ಮೈಸೂರು, ಬೆಂಗಳೂರು ಮತ್ತು ಮಂಗಳೂರು. ಡಿಪೋ: ಟಿ. ನರಸೀಪುರ.

ಸೋಲ್ ಏಜಂಟರು:—(ಕರ್ನಾಟಕದಾಚೆಗೆ) ದಿ ಯುನೈಟೆಡ್ ಕನ್ಸರ್ನ್ಸ್, 54, ಬಂದರುಬೀದಿ, ಮದ್ರಾಸ್.

ESTD. 1925 PHONE: 160.



ಸ್ವಾತಂತ್ರ್ಯ ಘಂಟಾರವಂ ಮೊಳಗಬೇಕು

ಭಾರತಾಂಬೆಯ ಬಂಧ ಮುಕ್ತಿಗೆಂದೆನಿತು ಜನ
ತಮ್ಮ ತನುಮನ ಧನವ ಮುಡಿಪುಗೊಟ್ಟಿಲ್ಲ?
ಪರದಾಸ್ಯ ಪರಿಹರಿಸೆ ಪರಕೀಯರೆದುರ್ ನಿಂತು
ಲಾಠಿ ಗುಂಡುಗಳೇಟಿಗೆದೆಯನೊಡ್ಡಿಲ್ಲ? ॥ ೧ ॥

ನಮ್ಮ ಹಿರಿಯರು ಗೆಯ್ದ ಸ್ವಾತಂತ್ರ್ಯ ಸಂಗ್ರಾಮ
ಫಲವಾಗಿ ಭಾರತಕೆ ಬಂತು ಸ್ವಾತಂತ್ರ್ಯಂ
ಎನಿತೊ ಕಾಲದ ತಪವು ಫಲಿಸಿದಂತಾಯ್ತು ಜನ
ಕೋಟಿ ಸ್ವಾಗತಿಸಿತ್ತು ಸ್ವಾತಂತ್ರ್ಯದಿನವಂ. ॥ ೨ ॥

ಸಪ್ತದಶವರ್ಷ ಸಂದತ್ತು ಭಾರತಕೆ ಸ್ವಾ-
ತಂತ್ರ್ಯ ಸಮನಿಸಿ ನಾವವೇನ್ ಗೆಯ್ದೆವು?
ಪಂಚವಾರ್ಷಿಕ ಯೋಜನೆಗಳ ಗಾಲಿಯ ತೊಡಿಸಿ
ಭಾರತವರೂಥವನ್ನೆಳೆದೊಯ್ದೆವು. ॥ ೩ ॥

ಸ್ವಾತಂತ್ರ್ಯದುತ್ಸವದ ಪುರಾರುತಿಯ ಭಾಷಣದ
ಮಾಲೆಯಿಂ ಸಿಂಗರಿಸಿ ತೇರೊಳಿರಿಸುತಲಿ
ಜಯಘೋಷ ಮಾಡಿದೆವು ದನಿಗೆ ದನಿಗೂಡಿದೆವು
ಬೇರೇನು ಗೆಯ್ದಿಲ್ಲ ಬೆವರ ಸುರಿಸುತಲಿ. ॥ ೪ ॥

ಏರಿಸುತ ಶೋಕಚಕ್ರಾಂಕಿತ ಧ್ವಜವ ಜನ
ಕೋಟಿ ಕೂಡುತ ವಂದಿಸುತ್ತಲತಿ ಹರ್ಷ
ಹೊಂದಿ 'ವಂದೇ ಮಾತರಂ' ಹಾಡಿ ಮಾಡಿದೆವು
ಸ್ವಾತಂತ್ರ್ಯದುತ್ಸವವ ವರ್ಷ ವರ್ಷ. ॥ ೫ ॥

ಜಾತ್ರೆಯಲಿ ಜನಜಾಲ ನೆರೆವಂತೆ ಸ್ವಾತಂತ್ರ್ಯ
ದಿನಮಾತ್ರ ಕೂಡಿದೆವು ನಾವೆಲ್ಲರೊಂದು
ಭಾರತಾಂಬೆಯು ನಮ್ಮ ನೆತ್ತತಾಯೆಂಬ ನುಡಿ
ಅಂದಂದಿಗೇ ಮರೆತು ಹೋಯ್ತಿಲ್ಲವಿಂದು. ॥ ೬ ॥

ಸೇತುವೆಗಳನು ರಚಿಸಿ ಜೋಡಿಸಿದೆವಿದ್ದವ
ಮನುಜರೆದೆಯೆದೆಯ ನಾವ್ ಜತೆಗೂಡಿಸಿಲ್ಲ
ನದಿ ನದಗಳಿಂಗಣೆ ಕಟ್ಟೆ ಕಟ್ಟಿದೆವಲ್ತೆ
ದೇಶಭಕ್ತಿಯ ಬೆಳೆಯನಿನ್ನು ಬೆಳೆಸಿಲ್ಲ. ॥ ೭ ॥

ಎಲ್ಲರಿಂ ನೊಡಲಾಗಿ ಮನವೊಂದು ಗೂಡಿಸಲು
ಸೌಹಾರ್ದ ಸೇತುವಂ ತಾರಚಿಸಬೇಕು
ಸ್ವಾತಂತ್ರ್ಯವೆನೆ ಸ್ವೈರವೃತ್ತಿಯಲ್ತೊಳ್ಳಿಕನು
ಸಾಧಿಪವರಾರೆಮದು ಬೆಳೆಯಬೇಕು. ॥ ೮ ॥

ಸೇವಾ ಮನೋಭಾವದಿಂದ ದುಡಿತದ ಪೂಜೆ
ಮನೆ ಮನೆಯೊಳನುದಿನಂ ನಡೆಯಬೇಕು.
ಭಾವೈಕ್ಯ ಮಂತ್ರದಿಂ ಭಾರತದ ಗುಡಿಯೊಳಗೆ
ಸ್ವಾತಂತ್ರ್ಯ ಘಂಟಾರವಂ ಮೊಳಗಬೇಕು! ॥ ೯ ॥

—ಎಸ್. ತಿರುಮಲೇಶ್ವರ ಭಟ್ಟ, ವಿದ್ಯಾಲಂಕಾರ, ಮಂಗಳೂರು.

ಸ್ವಾತಂತ್ರ್ಯ ದಿನದ ಶುಭಾಶಯಗಳು!

ರೋಯಲ್ ಮಹಾಲ್

ಉಡುಪಿ

ಪ್ರವಾಸಿಗರ ಪ್ರಥಮ ಶ್ರೇಣಿಯ

ಭೋಜನ ಮತ್ತು ವಸತಿ ಗೃಹ

ಸೌಜನ್ಯಕ್ಕೆ-ರುಚಿ-ಶುಚಿಗಳಿಗೆ ಹೆಸರಾದುದು.

ಕೆ. ವೆಂಕಟ್ರಮಣ ಭಟ್,
ಮ್ಹಾಲಕರು.

ROYAL MAHAL
Up-to-date Boarding & Lodging
UDIPI, S. K.

THE MALAYALA MAUNHREEKA VAIDYASALA
MAIN ROAD, QUILON (KERALA)

ಮಲೆಯಾಳ ಮಾನ್ರಿಕ ವೈದಶಾಲೆ,
ಮೆಯಿನ್ ರೋಡ್, ಕೊಯ್‌ಲೋನ್ S. I.

1. **ಆನಂದ ಕುಸುಮಾಕರ ಲೇಹ್ಯ** ರಸ ರಕ್ತಾದಿ ಸರ್ವಧಾತುವನ್ನು ಪುಷ್ಟಿ ಮಾಡಿ ಜೀವ ಸೌಭಾಗ್ಯಕ್ಕೆ ಬೇಕಾದ ಶುಕ್ಲವನ್ನು ಶುದ್ಧಿ ಮಾಡಿ ಪುರುಷತ್ವವನ್ನು ತಂದು ಜೀವಿತ ಸುಖ ಅನುಭವಿಸಲಿಕ್ಕೆ ಒದಗುವ ದಿವ್ಯ ಕಲ್ಪ. ೨೦ ತೊಲೆ ಡಬ್ಬ 1ಕ್ಕೆ ರೂ. 3-50.
2. **ಖಾಸಶ್ವಾಸ ಸಂಹಾರಿ.** ಎದೆಯಲ್ಲಿ ಕಫ ಕಟ್ಟಿ ಭಮ್ಮಿಷ್ಟ ಶ್ವಾಸ ಬಿಡುವರೇ ಬಹಳ ಕಷ್ಟ ಬಿಡುವ ರೋಗಿಗಳಿಗೆ ಇಂದ್ರಜಾಲದ ಹಾಗೆ ಬೇಗನೆ ಗುಣಪಡಿಸುವ ಸಿದ್ಧ ಕಲ್ಪಾಮೃತ ನಮ್ಮ ಖಾಸಶ್ವಾಸ ಸಂಹಾರಿ. ಅನುಭವಸ್ಥರ ಅನೇಕ ಸಾಕ್ಷಿ ಪತ್ರ ಸಿಕ್ಕಿರುತ್ತದೆ ಡಬ್ಬಿ 1ಕ್ಕೆ ರೂ. 3-50.
3. **ಮೋಹಾಂತ ಮೊಸಗು.** ದುಷ್ಟ ಸಂಸರ್ಗದಿಂದ ಉಂಟಾಗುವ ಮೇಹದ ಡಿಪ್ಪು, ಮೂತ್ರದಲ್ಲಿ ಬಿಳುಪು, ಗುಹ್ಯವೂ ಮುಂತಾದ ರೋಗಗಳಿಗೆ ಬೇಗನೆ ಫಲ ಕೊಡುವ ಔಷಧ ಡಬ್ಬಿ 1ಕ್ಕೆ ರೂ. 5-00.
4. ವಾತಗಜಕೇಸರಿ. ವಾತದಲ್ಲಿ ೮೦ ವಿಧದ ವಿಕಾರ ಹೇಳಿರುತ್ತದೆ. ಈಗ ಎಂಬತ್ತು ವಿಧದ ವಿಕಾರಗಳಿಗೂ ನಮ್ಮ ವಾತಗಜಕೇಸರಿ ಸೇವಿಸಿದಲ್ಲಿ ಶೀಘ್ರದಲ್ಲಿ ಗುಣ ಕಂಡುಬರುತ್ತದೆ. ಕುಪ್ಪಿ 1ಕ್ಕೆ ರೂ. 3-50.
5. **ಮೋಹಿನಿ ಕುಂದಳತೈಲ.** ವಿಶ್ವೋತ್ತರವಾದ ಪರಿಮಳ, ತಲೆಗೆ ತಂಪು, ಕೂದಲು ಉದುರುವುದನ್ನು ನಿಲ್ಲಿಸಿ ಕಪ್ಪು ಬಣ್ಣದಲ್ಲಿ ಬರುವುದು. ಕಜ್ಜಿ ಚಾರಣ ಮುಂತಾದ ತಲೆಯಲ್ಲಿ ಉಂಟಾಗುವ ರೋಗಗಳನ್ನು ಗುಣ ಮಾಡುವುದು. ಬೆಲೆ ಕುಪ್ಪಿ 1ಕ್ಕೆ ರೂ 1-75.

N. B ರೋಗ ವಿವರವು ಬರೆದು ಕಳುಹಿಸಿದಲ್ಲಿ ಔಷಧಿಯನ್ನು ನಿಶ್ಚಯ ಮಾಡಿ ವಿವರಕ್ಕೆ ಬರೆಯುತ್ತೇವೆ

Manager.

ಸ್ವಾತಂತ್ರ್ಯ ದಿನದ ಶುಭಾಶಯಗಳು

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಷೆಡ್ಯೂಲ್ಡ್ ಬ್ಯಾಂಕ್)

ನಮ್ಮ 3 ವರ್ಷ ಮಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ;

ಬಡ್ಡಿ ಶೇಕಡ 5ರಂತೆ;

ರೂ. **87-00, 3** ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. **100-00** ಒದಗಿಸುವುದು.

ಕರೆ, ಚಿಕ್ಕ ಮಾಯಿದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು:

ಬಡ್ಡಿ ಶೇಕಡ 5½ ವರೆಗೆ

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಬಡ್ಡಿ ಶೇಕಡ 3 ರಂತೆ.

ರೂ. **1.50** ಕೋಟಿಗೂ ಮಿಕ್ಕಿದ ಠೇವಣಾತಿಗಳು.

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

THE PANGAL NAYAK BANK LTD.

ESTD: 1920

Regd. Office: UDIPI, (S. Kanara)

ಭವ್ಯ ಭಾರತದ 18ನೇ ಸ್ವಾತಂತ್ರ್ಯ ದಿನವು
ಮನೆಮನೆಗಳಲ್ಲೂ, ಜನತಾಹೃದಯಗಳಲ್ಲೂ
ಸದಾ ಸ್ಫೂರ್ತಿಯನ್ನು ತರಲಿ . . . . .

ಮಂಗಳೂರು

ಪಿ. ವಿ. ಎಸ್. ಬೀಡಿಗಳು . . .

58 ವರ್ಷಗಳಿಂದಲೂ ನಮ್ಮ ಜನತೆಗೆ ಸುಖ-ಸಂತೋಷವನ್ನು
ಬಯಸುತ್ತಿರುವ ನಾಡಿನ ಒಂದೇ ಒಂದು ಸಂಸ್ಥೆ

P. V. S. BEEDIES PRIVATE LTD.

Registered Office: KODIYALBAIL

POST BOX NO. 707 - - - MANGALORE-3.

TELEGRAPH
PUTHUBIDIS

TELEPHONE
83, 83 A
RES: 593, 593A

ಕರ್ಣಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಹಣಗಳ ಮೇಲೆ

6.1%

ಬಡ್ಡಿಯನ್ನು ಗಳಿಸಲು

ಕರ್ಣಾಟಕ ಬ್ಯಾಂಕಿನ

ಕ್ಯಾಶ್ ಸರ್ಟಿಫಿಕೇಟುಗಳನ್ನು

ಪಡೆಯಿರಿ

USE ALWAYS

SPB

Quality Papers

Manufactured by

M/s Seshasayee Paper & Boards Ltd.,

PALLIPALAYAM. (Salem Dt.)

Distributors for Mysore State:

SRINIVAS BROTHERS

CAR STREET MANGALORE-1

Phone: 449 Grams: "ACTIVE"

Always Drink

PURE

FRESH

FLAVOURY

WATERFALLS

BROOKLANDS

GLENDALE

Teas

FAVOURITE OF ALL

POPULAR EVERYWHERE

Book your requirements through:

PUNJA & CO.,

MULKI.

PHONE:
OFF: 26
RES: 36

KOTHARI & SONS, MADRAS.

"ಸ್ವಾತಂತ್ರ್ಯ ದಿನ"ದ ಸಲುವಾಗಿ

ನಮ್ಮ ಎಲ್ಲ ಗ್ರಾಹಕರಿಗೂ ಶುಭಾಶಯಗಳು!

ನಮ್ಮ ಶಾಖೆಗಳು:-

ಮೈಸೂರು ರಾಜ್ಯದಲ್ಲಿ— ಬೆಂಗಳೂರು — ಮಲ್ಲೇಶ್ವರಂ, ಕೆ. ಜಿ. ರೋಡ್ ಮತು ಅಲ್ಸೂರು. ಮಂಗಳೂರು-3, ಮಂಗಳೂರು-ಸಿಟಿ, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಭಟ್ಕಳ, ಕಾರ್ಕಳ, ಪುತ್ತೂರು, ಮಡಿಕೇರಿ, ಗೋಣಿಕೊಪ್ಪಲ, ಮೂಡಿಗೆರೆ, ಚಾಮರಾಜನಗರ, ಮೈಸೂರು ಸಿಟಿ, ಸಂಜನಗೂಡು, ಕೃಷ್ಣರಾಜಪೇಟೆ, ಕೊಳ್ಳೆಗಾಲ್, ಕೋಲಾರ, ದೊಡ್ಡಬಳ್ಳಾಪುರ ಮತ್ತು ಧಾರವಾಡ.

ಮಹಾರಾಷ್ಟ್ರ -- ಪಾರ್ಸೀ ಬಜಾರ್ ಸ್ಟ್ರೀಟ್, ಮುಂಬಯಿ—1.

ಕೇರಳ -- ಕಾಸರಗೋಡು ಮತ್ತು ಕಾಂಞಂಗಾಡು.

ಸದ್ಯದಲ್ಲಿಯೇ ಮೈಸೂರು ರಾಜ್ಯದ ಹುಬ್ಬಳ್ಳಿ, ಗದಗ, ನೆಲಮಂಗಲ, ಮದ್ದೂರು, ಮಾಗಡಿ ಮತ್ತು ಮಳವಳ್ಳಿಯಲ್ಲಿ ಕೂಡಾ ನಮ್ಮ ಶಾಖೆಗಳು ತೆರೆಯಲ್ಪಡುವುವು ಎಂದು ತಿಳಿಸಲು ಸಂತೋಷಪಡುತ್ತೇವೆ.

ಡೈರೆಕ್ಟರರ ಮಂಡಳಿ:-

1. ಶ್ರೀ ಯಮ್. ಸುಂದರ್‌ರಾಮ ಶೆಟ್ಟಿ, ಬೆಂಗಳೂರು-1. (ಚೆಯರ್‌ಮೇನ್)
2. " ಬಿ. ಮಂಜಯ್ಯ ಹೆಗ್ಡೆ, ಮಂಗಳೂರು.
3. " ಕೆ. ಸುಂದರ್ ರಾಮ ಶೆಟ್ಟಿ, ಮಂಗಳೂರು
4. " ಬಿ. ರಾಜೀವ ಶೆಟ್ಟಿ, ಮಂಗಳೂರು.
5. " ಕೆ. ಯಲ್. ಭಂಡಾರಿ, ಮೈಸೂರು.
6. " ಕೆ. ಪಿ. ಭವಾನಿ ಶಂಕರ ಶೆಟ್ಟಿ, ಮಂಗಳೂರು.
7. ಶ್ರೀ ಡಿ. ರತ್ನವರ್ಮ ಹೆಗ್ಗಡೆ, ಧರ್ಮಸ್ಥಳ,
8. " ಡಾ ಕೆ ವಿಟ್ಟಲ್ ಶೆಟ್ಟಿ, ಕಾಪು.
9. " ಡಾ. ಕೆ. ಬಾಲಪ್ಪ ಶೆಟ್ಟಿ, ಮಂಗಳೂರು.
10. " ಬಿ ಟಿ ರವೀಂದ್ರನಾಥ ಪೂಂಜ, ಬೆಂಗಳೂರು.
11. " ಬಿ ಜಿ ವೀರಣ್ಣ, ಬೆಂಗಳೂರು
12. " ಕೆ ಪಿ ಪುಟ್ಟಯ್ಯ, ದೊಡ್ಡಬಳ್ಳಾಪುರ.

ಆಡಿಟರ್:—
ಶ್ರೀ ಪಿ ಯಂ ಹೆಗ್ಡೆ, ಮಂಗಳೂರು

ಸೆಕ್ರಿಟರಿ:—
ಶ್ರೀ ಪಿ. ಜಯರಾಮ ಶೆಟ್ಟಿ.

ಡಿಪ್ಯುಟಿ ಸೆಕ್ರಿಟರಿ –
ಶ್ರೀ ಯನ್. ವಿಟ್ಟಲ್ ಶೆಟ್ಟಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಅಫೀಸ್:- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಸ್ಥಾಪನೆ - 1931
ಫೋನ್ ನಂಬ್ರ:- 240
ಮಂಗಳೂರು - 3

NAVAYUGA
13 & 20th Aug. 1964

Regd. No. B. G. 176
LICENCE NO. 31
Licensed to Post without Prepayment

ಒಂದೊಂದು ದಿನವೂ....
ಒಂದೊಂದು ರೂಪಾಯಿ
...ಬ್ಯಾಂಕಿನಲ್ಲಿ!

ನೀವು ವ್ಯಾಪಾರಿಗಳೋ, ದೈನಿಕ ಆದಾಯವನ್ನು ತರುವ ಇನ್ಯಾವುದೇ ಉದ್ಯಮಿಗಳೋ ಆಗಿದ್ದರೆ ಈ ಮಾತು ನಿಮಗೊಂದು ಆರ್ಥಿಕಸೂತ್ರವಾಗಿ ಪರಿಣಮಿಸಬಲ್ಲುದು.

ವರ್ಷದಲ್ಲಿ ಪ್ರತಿದಿನವೂ ಒಂದು ರೂಪಾಯಿಯನ್ನು ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಠೇವಣಿ ಖಾತೆಯ ಮೂಲಕ ಉಳಿಸಿರಿ. ನಿಮ್ಮ ಠೇವಣಿ ಪಕ್ವವಾದಾಗ, ಏಳು ವರ್ಷಗಳ ಅನಂತರ, ನೀವು ಮರಳಿ ಪಡೆಯುವ ಮೊತ್ತ ರೂ. 2,800/-. ಕೆಲವು ದಿನಗಳಲ್ಲಿ ಉಳಿಸುವುದು ಅಸಾಧ್ಯವಾದರೂ ಪ್ರಮಾದವೇನೂ ಇಲ್ಲ. ಬ್ಯಾಂಕಿನಲ್ಲಿ ನಿಮ್ಮ ಹಣ ಬಡ್ಡಿಯೊಡನೆ ದಿನದಿನವೂ ಬೆಳೆಯುತ್ತಲೇ ಇರುತ್ತದೆ.

ಎಲ್ಲಕ್ಕಿಂತಲು ಮಿಗಿಲಾಗಿ ಹಣವನ್ನು ತೆರಲು ನೀವು ಬ್ಯಾಂಕಿನ ತನಕ
ಹೋಗಬೇಕಿಲ್ಲ—ನಮ್ಮ ಮಂದಿಯೆ
ನಿಮ್ಮ ಮನೆಬಾಗಿಲಿಗೆ ಬಂದು ಮೊತ್ತವನ್ನು ಸಂಗ್ರಹಿಸುತ್ತಾರೆ.

ನಿಮ್ಮ ಉಳಿತಾಯಕ್ಕಾಗಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ದೈನಿಕ ಪಿಗ್ಮಿ ಉಳಿತಾಯ ಯೋಜನೆ ನಮ್ಮ ಆವಿಷ್ಕಾರ

ರಿಜಿಸ್ಟರ್ಡ್ ಆಫೀಸು ಮಣಿಪಾಲ, ಮೈಸೂರು ರಾಜ್ಯ

Edited, Printed & Published by K. H. Shetty
at the Navayuga Press, Udipi, S India.

ನವಯುಗ

VOL. 43 No. 51 ಸಂಪುಟ ೪೩ ಸಂಚಿಕೆ ೫೧

NAVAYUGA—Nationalist Weekly ಉಡುಪಿ 27-8-1964 ಗುರುವಾರ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ನಮ್ಮ - ನಮ್ಮವರು

ಶ್ರೀ ಸಿ. ಸುಬ್ರಹ್ಮಣ್ಯಂ

ದೇಶದ ಎಲ್ಲೆಡೆಯಲ್ಲೂ ಇಂದು ಅನ್ನಕ್ಕಾಗಿ ಎದ್ದಿರುವಷ್ಟು ಕೂಗು ಇತ್ತೀಚೆಗಿನ ವರ್ಷಗಳಲ್ಲಿ ಎದ್ದಿರಲಿಲ್ಲ. ದೇಶದ ಆಹಾರ ಪರಿಸ್ಥಿತಿಯು ತೀರಾ ಕೆಟ್ಟುಹೋಗಿದೆ ಎಂಬುದಕ್ಕೆ ಈ ವರೆಗೆ ಸರಕಾರದ ಹತೋಟಿಗೆ ಈ ಸಮಸ್ಯೆ ಸಿಲುಕದಿರುವುದೇ ಸಾಕ್ಷಿ. ಸರಕಾರವೇನೋ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು, ಆಹಾರ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟಲು ಹಲವಾರು ಉಪಾಯಗಳನ್ನು ಕೈಕೊಂಡಿತು. ರಾಷ್ಟ್ರೀಯ ರಕ್ಷಣಾ ಕಾಯ್ದೆಯನ್ನು ಉಪಯೋಗಿಸುವುದಕ್ಕೂ ಸರಕಾರ ಹಿಂಜರಿಯಲಿಲ್ಲ. ಆದರೆ ಇವೆಲ್ಲವುಗಳೂ ಉತ್ತಮ ಫಲವನ್ನು ಕೊಟ್ಟಂತೆ ಕಾಣುವುದಿಲ್ಲ. ಕನಿಷ್ಠತೆಯ ಬೆಲೆಯನ್ನು ನಿರ್ಧರಿಸಿದ ಸರಕಾರ ಆ ಬೆಲೆಯಲ್ಲಿ ಆಹಾರಧಾನ್ಯಗಳ ಸರಬರಾಜನ್ನು ಮಾಡಲು ಸಮರ್ಥವಾಗಲಿಲ್ಲ. ವ್ಯಾಪಾರಿಗಳು ಈ ಕಾನೂನಿನ ದುರ್ಲಾಭ ಪಡೆದುಕೊಂಡ ಉದಾಹರಣೆಗಳೂ ಬೇಕಷ್ಟಿವೆ. ಪೇಟೆಯಲ್ಲಿ ಆಹಾರ ವಸ್ತುಗಳು ಮಂಗಮಾಯವಾದ ಘಟನೆಗಳೂ ಅನೇಕ ಇವೆ. ಮುಂದಿನ ಕೊಯ್ಲಿನ ವರೆಗೆ ಪರಿಸ್ಥಿತಿ ಯಾವ ಮಟ್ಟವನ್ನು ಮುಟ್ಟುವುದೆಂಬುದು ಊಹಿಸುವುದೂ ಕಷ್ಟ.

ಸುಬ್ರಹ್ಮಣ್ಯಂ ಈ ಸಂದರ್ಭ ದಾಸ್ತಾನು ಇಲ್ಲದ ಉಗ್ರಾಣದ ಯಜಮಾನನಂತಾಗಿದ್ದಾರೆ. ಆಹಾರ ಪರಿಸ್ಥಿತಿಯು ತೀರಾ ವಿಕೋಪಕ್ಕೆ ಮುಟ್ಟಿದ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ಆಹಾರ ಮಂತ್ರಿ ಖಾತೆ ಅವರ ಕೊರಳಿಗೆ ಬಿತ್ತು. ಅವರು ಅದನ್ನು ಸ್ವ ಸಂತೋಷದಲ್ಲೇ ವಹಿಸಿಕೊಂಡರು. ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಡಲು ಅವರು ದೇಶವಿಡೀ ಗಾಳಿಯಂತೆ ಸುತ್ತಿದರು. ಆಹಾರ ಮಂತ್ರಿಗಳೊಡನೆ ಚರ್ಚಿಸಿದರು. ವ್ಯಾಪಾರಿಗಳೊಡನೆ ಸಮಾಲೋಚನೆ ನಡೆಸಿದರು. ಜನತೆಗೆ ಅಭಯ ಹಸ್ತವನ್ನು ನೀಡಿದರು. ಪರಿಸ್ಥಿತಿಯನ್ನು ಸುಧಾರಿಸುವುದರತ್ತ ಅವರು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು, ಮಾಡುತ್ತಾ ಇದ್ದಾರೆ. ಆದರೆ, ಸುಬ್ರಹ್ಮಣ್ಯಂರ ಕೈಗೆ ಆಹಾರ ಖಾತೆ ಇರುವುದರ ಮೊದಲಿನ ಅಜಾಗರೂಕತೆಯ ಫಲವನ್ನು ಅವರು ಈಗ ಅನುಭವಿಸಬೇಕಾಗಿದೆ. ಕೇವಲ ಉತ್ಪಾದನೆಯಲ್ಲಿ ಐದು ಸೇಕಡಾ ಇಳಿಮುಖವಾದರೆ ಪರಿಸ್ಥಿತಿ ಈ ರೀತಿ ಒದಗಿರುವುದು ಸಾಧ್ಯವೇ ಇಲ್ಲ. ಹಾಗಿದ್ದರೆ ಇದಕ್ಕೆ ಕಾರಣ ಬೇರೆಯೇ ಎಂಬುದು ನಿಶ್ಚಿತ.

ಸುಬ್ರಹ್ಮಣ್ಯಂರು ಜಾರಿಬಿದ್ದು ಸಾವರಿಸಿಕೊಳ್ಳುವ ಮತ್ತು ನಿರಂತರ ಎಚ್ಚರದಿಂದ ವರ್ತಿಸುವ ಮಾರ್ಗ ಅನುಸರಿಸುತ್ತಿರುವರೇನೊ ಅನಿಸುತ್ತದೆ. ಈ ಬಾರಿ ಅವರು ಎದುರಿಸಿದ ಕಠಿಣ ಪರಿಸ್ಥಿತಿ ವಿಷಮ ಸಂದರ್ಭಗಳಿಂದ ಅವರು ಮಹತ್ತರವಾದ ಪಾಠಗಳನ್ನು ಕಲಿತಿದ್ದಾರೆ. ಈ ಅನುಭವ ಮುಂದಿನ ಬಾರಿ ಅವರು ಆಹಾರ ಧೋರಣೆಯನ್ನು ನಿರೂಪಿಸುವುದರಲ್ಲಿ ಖಂಡಿತಕ್ಕೂ ಸಹಕಾರಿಯಾದೀತು. ಸುಬ್ರಹ್ಮಣ್ಯಂ ಸುಸೂತ್ರವಾಗಿ ಆಹಾರ ಸಮಸ್ಯೆ ನೀಗಿಸುವರೆಂಬ ಆಶಯವನ್ನು ಎಲ್ಲರೂ ವ್ಯಕ್ತಪಡಿಸುತ್ತಿದ್ದಾರೆ. ಫಲಿತಾಂಶವನ್ನು ಕಾದುನೋಡಬೇಕಷ್ಟೆ.



ಶ್ರೀ ಶ್ರೀನಿವಾಸ ಮಲ್ಯ

ಶ್ರೀನಿವಾಸ ಮಲ್ಯರು ಸದ್ದಿಲ್ಲದೆ ದುಡಿಯುವ ವ್ಯಕ್ತಿ. ಅವರ ಆಳವನ್ನು ಕಂಡವರಿಲ್ಲ ಅನ್ನುತ್ತಾರೆ. ಅವರು ಪ್ರಚಾರವನ್ನು ಬಯಸುವವರೂ ಅಲ್ಲ, ಪ್ರಚಾರಕ್ಕೆ ಒಳಗಾಗುವವರೂ ಅಲ್ಲ. ಕಾರ್ಯಸಾಧನೆಯಾಗುವ ಮೊದಲೇ, ತಾನು ಹಾಗೆ ಮಾಡಿವೆ, ಹೀಗೆ ಹೇಳಿದೆ ಎಂದು ಡಂಗುರ ಸಾರುವವರೂ ಅಲ್ಲ. ಅವರು ಹಿಡಿದ ಕಾರ್ಯವನ್ನು ಪಟ್ಟು ಹಿಡಿದು ಪೂರೈಸುತ್ತಾರೆ. ಆದಾದ ನಂತರವೂ ಆ ಕುರಿತು ಪ್ರಚಾರ ನಡೆಸುವುದಿಲ್ಲ. ಹಾಗಾಗಿ ಅವರು ಸುದ್ದಿಯ ಸೃಷ್ಟಿಕರ್ತರಾಗುವುದಿಲ್ಲ.

ಆದರೆ, ಅವರ ಕರ್ತವ್ಯನಿಷ್ಠೆ ಹಾಗೂ ಸಾಧನೆಗಳ ಕುರಿತು ನಮ್ಮ ಜಿಲ್ಲೆಯ ಜನತೆಗೆ ಹೆಚ್ಚು ತಿಳಿಸಿ ಹೇಳಬೇಕಾದುದೇನೂ ಇಲ್ಲ. ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಅವರು ಕಾಂಗ್ರೆಸ್ ಸಂಘಟನೆಯಲ್ಲಿ ಜಿಲ್ಲೆಯಲ್ಲಿ ಮಾಡಿದ ಕಾರ್ಯದ ಕುರಿತು ಎಲ್ಲರಿಗೂ ತಿಳಿದಿದೆ. ಅವರು ಮಂಗಳೂರಿನಿಂದ ಡಿಲ್ಲಿಯ ವರೆಗೆ ಪ್ರಭಾವಿ ವ್ಯಕ್ತಿಗಳಾದರು. ಅಖಿಲ ಭಾರತ ಕಾಂಗ್ರೆಸಿನ ಕಾರ್ಯದರ್ಶಿಗಳಾಗಿ ಅವರು ಬಹಳ ಮೆಚ್ಚುವ ಕಾರ್ಯ ಮಾಡಿದ್ದಾರೆ. ಅವರ ಕಾರ್ಯ ಚತುರತೆಗೆ ಸಾಟಿ ಇಲ್ಲ. ಅವರು ಆಡಿದ ಮಾತಿಗೆ ಇದಿರಿಲ್ಲ. ಇದಕ್ಕಾಗಿಯೇ ಅವರು ಬಹಳ ಕಡಿಮೆ ಮಾತಾಡುತ್ತಾರೆ. ಅವರು ಪಾರ್ಲಿಮೆಂಟಿನಲ್ಲಿ ಗೊಂದಲ ಮಾಡುವ ಸದಸ್ಯರೂ ಅಲ್ಲ,

ಮಲ್ಯರು ಜಿಲ್ಲೆಯ ನಾರಿಗೆಯ ಅಭಿವೃದ್ಧಿಗೆ ದುಡಿದ ರೀತಿ ಎಲ್ಲರಿಗೂ ತಿಳಿದಿದೆ. ರಾಷ್ಟ್ರೀಯ ಹೆದ್ದಾರಿ ಯೋಜನೆಯನ್ವಯ ನಮ್ಮ ಜಿಲ್ಲೆಯ ಕರಾವಳಿಯ ಎಲ್ಲ ಹೊಳೆಗಳಿಗೂ ಸೇತುವೆಯಾಗಿ ಇಂದು ನೇರ ಸಂಪರ್ಕ ಏರ್ಪಟ್ಟಿದೆ. ಸುರತ್ಕಲಿನಲ್ಲಿ ಅವರ ಹೆಸರಿನ ನಗರವೇ ರಚನೆಗೊಂಡು ವಿದ್ಯಾಕ್ಷೇತ್ರವಾಗಿ ಬೆಳೆಯುತ್ತಿದೆ. ಮಂಗಳೂರು ಸರ್ವಋತು ಬಂದರದ ಕುರಿತು ಅವರು ಮೊದಲಿಂದಲೂ ಒತ್ತಾಯ ತಂದವರು. ಹಾಸನ ಮಂಗಳೂರು ರೈಲು ಮಾರ್ಗದ ಆವಶ್ಯಕತೆಯನ್ನು ಎತ್ತಿಹಿಡಿದವರಲ್ಲಿ ಅವರೂ ಒಬ್ಬರು.

ಜಿಲ್ಲೆಯ ಉತ್ತರ ಭಾಗದಿಂದ ಲೋಕಸಭೆಗೆ ಆರಿಸಿ ಹೋದ ಮಲ್ಯರು ತನ್ನ ಮತದಾರ ಕ್ಷೇತ್ರದ ಜನತೆಯನ್ನು ಆ ಪ್ರದೇಶದ ಆವಶ್ಯಕತೆಗಳನ್ನು ಕಡೆಗಣಿಸಿದ್ದರೆಂಬ ಕೂಗು ಕೂಡಾ ಇದೆ. ಹಾಗಿದ್ದರೆ ಅವರು ಸತತವಾಗಿ ಮೂರು ಚುನಾವಣೆಗಳಲ್ಲಿ ಅದೇ ಮತದಾರ ಕ್ಷೇತ್ರದಿಂದ ಆರಿಸಿಹೋಗುತ್ತಿದ್ದರೆ? ಇತ್ತೀಚೆಗೆ ಅವರು ಕೇಂದ್ರ ರೈಲ್ವೆ ಮಂತ್ರಿ ಶ್ರೀ|| ರಾಮ ಸುಭಾಗ ಸಿಂಘರನ್ನು ಹಾಸನ ಮಂಗಳೂರು ರೈಲು ಮಾರ್ಗದ ಶೀಘ್ರ ಕಾರ್ಯಾರಂಭದ ಕುರಿತು ಒತ್ತಾಯಿಸಿದರೆಂದು ಸುದ್ದಿ. ಮಂಗಳೂರು ಬಂದರದ ಯೋಜನೆಯನ್ನು ಕೈಬಿಡುವ ಯೋಚನೆ ಬರಲೇ ಕೂಡದೆಂದೂ ಅವರು ಕೇಂದ್ರ ಸರಕಾರವನ್ನು ಒತ್ತಾಯಿಸಿದರಂತೆ, ಮಲ್ಯರ ಪ್ರಭಾವದಿಂದ ಜಿಲ್ಲೆಯ ಜನತೆ ಇನ್ನೂ ಹೆಚ್ಚು ನಿರೀಕ್ಷಿಸುತ್ತಿದೆ.

ಶ್ರೀ ಡಯಾನ್ ಫೆರ್ನಾಂಡಿಸ್

ಯೋಗ್ಯತೆ ಹಾಗೂ ಪ್ರತಿಭೆ ಇದ್ದವರು ಎಲ್ಲಿಯೇ ಹೋದರೂ ಸುದ್ದಿಯನ್ನೇ ಉಂಟುಮಾಡುತ್ತಾರೆ. ಅವರ ಪ್ರತಿಭೆಯ ಪ್ರಯೋಜನವನ್ನು ಪಡೆದುಕೊಳ್ಳಲು ಎಲ್ಲರೂ ಮುಂದೆ ಬರುತ್ತಾರೆ. ಅಂತಹ ಪ್ರತಿಭಾವಂತ ಯುವಕರ ಸಾಲಿನಲ್ಲಿ ಸೇರಿದವರು ಶ್ರೀ ಡಯೊನ್ ಫೆರ್ನಾಂಡಿಸ್, ಉಡುಪಿಯ ಜನತೆಯ ಮನೆ ಮಾತಾಗಿರುವ ಶ್ರೀ ರಾಕೀ ಫೆರ್ನಾಂಡಿಸ್ ದಂಪತಿಗಳ ಸುಪುತ್ರರಾದ ಡಯೊನರು ಮಂಗಳೂರು, ಮುಂಬಯಿಗಳಲ್ಲಿ ವಿದ್ಯಾಭ್ಯಾಸ ನಡೆಸಿ ಬೊಂಬಾಯಿಯನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡವರು. ಬಹುಮುಖಿ ಪ್ರತಿಭಾಶಾಲಿ ಫೆರ್ನಾಂಡಿಸರು ಮುಂಬಯಿಯ 'ಪ್ಲೇಸ್ಟಿಕ್ಸ್ ಎಂಡ್ ಲಿನೋಲಿಯಮ್ಸ್ ಎಕ್ಸ್‌ಪೋರ್ಟ್ ಪ್ರಮೋಶನ್ ಕೌನ್ಸಿಲ್' ಇದರ ಡಿಪ್ಯುಟಿ ಸೆಕ್ರಿಟರಿ ಹುದ್ದೆಯಲ್ಲಿದ್ದಾರೆ.

ವಿದೇಶಗಳಲ್ಲಿ ಪ್ಲಾಸ್ಟಿಕ್ ಉದ್ದಿಮೆಯ ಕುರಿತಾದ ಪ್ರಚಾರ ಹಾಗೂ ತಿಳುವಳಿಕೆಯ ಬಗ್ಗೆ, ಹಾಗೂ ವಿದೇಶಗಳಲ್ಲಿ ಭಾರತದ ಸರಕುಗಳಿಗೆ ಮಾರುಕಟ್ಟೆ ಕಲ್ಪಿಸುವ ಬಗ್ಗೆ ಶ್ರೀ ಫೆರ್ನಾಂಡಿಸರು ಹಿಂ

(೧೦ನೇ ಪುಟನೋಡಿರಿ)

ವಾರದ ಕಥೆ:

ದುಃಖದಾಚೆ

ಬರೆದವರು: ಸುದಾಸ.

'ಲಕ್ಷ್ಮಣರಾವ್, ನಿಮ್ಮ ಬಳಿ ಸ್ವಲ್ಪ ಮಾತಾಡುವುದಿದೆ, ಸ್ವಲ್ಪ ಇತ್ತ ಬರುತ್ತೀರಾ?'

ಯಾವುದೋ ಲೆಕ್ಕ ಪರಿಶೀಲನೆಯಲ್ಲಿದ್ದ ಲಕ್ಷ್ಮಣರಾಯರು ರಾಜನಾರಾಯಣರ ಕಡೆಗೊಮ್ಮೆ ನೋಡಿ 'ಒಂದು ನಿಮಿಷ; ಈ ಲೆಕ್ಕ ಮುಗಿಸಿ ಬಿಡುತ್ತೇನೆ.' ಎಂದು ಹೇಳಿ ಮತ್ತೆ ಕೆಲಸದಲ್ಲಿ ತಲ್ಲೀನರಾದರು.

ಒಂದು ನಿಮಿಷವೆಂದ ಅವರು ಕೆಲಸ ಮುಗಿಸಿ ಬರಲು, ಆ ಬಳಿಕ ಹತ್ತು ನಿಮಿಷ ಬೇಕಾಯಿತು.

"ಏನು ವಿಶೇಷ?" ರಾಯರ ಪ್ರಶ್ನೆ.

"ನಡೆಯಿರಿ ಕಾಫಿ ಕುಡಿದು ಬರೋಣ, ಅಲ್ಲೇ ಮಾತಾಡಬಹುದು.'

ಇಬ್ಬರೂ ಕ್ಯಾಂಟೀನಿನತ್ತ ಹೊರಟರು. ದಾರಿಯಲ್ಲಿ ಒಂದು ಬದಿಗೆ ಕರೆದು ರಾಜನಾರಾಯಣ ಮಾತಿಗಾರಂಭಿಸಿದ.

"ನಿಮಗೆ ತೊಂದರೆ ಕೊಡಬೇಕಾಗಿದೆ, ಲಕ್ಷ್ಮಣರಾವ್"

"ವಿಷಯವೇನು ಹೇಳಿ; ಬಹಳ ಚಿಂತೆಯಲ್ಲಿದ್ದ ಹಾಗಿದೆ.."

"ತಾಪತ್ರಯಕ್ಕೆ ಸಿಕ್ಕಿಬಿದ್ದಿದ್ದೇನೆ' ನೀವಷ್ಟೇ ಇದರಿಂದ ನನ್ನ ರಕ್ಷಣೆ ಮಾಡಬಲ್ಲಿರಿ."

"ಹಣದವಿಷಯದಲ್ಲಿ ನನ್ನ ಪರಿಸ್ಥಿತಿ ನಿಮಗೆ ಗೊತ್ತೇ ಇದೆಯಲ್ಲಾ? ನನ್ನಿಂದ ಏನಾದರೂ ಆಗುವಂತಿದ್ದರೆ ಹೇಳಿ."

"ಇವತ್ತು ಮೂರು ಗಂಟೆಯ ಒಳಗೆ ಬ್ಯಾಂಕಿಗೆ ಸಾವಿರ ರೂಪಾಯಿ ತುಂಬಿಸಬೇಕು. ಬಹಳ ಪ್ರಯತ್ನ ಮಾಡಿ ನೋಡಿದೆ. ಎಲ್ಲೂ ಆಗಲಿಲ್ಲ. ಹಣ ತುಂಬಿಸದಿದ್ದರೆ ಅಡವಿಟ್ಟ ಬಂಗಾರ ಉಳಿಯುವುದಿಲ್ಲ."

'ಬಹಳ ಬೇಸರದ ಸಂಗತಿ ರಾಜ ನಾರಾಯಣ್. ಆದರೆ ಸಾವಿರ ರೂಪಾಯಿಯ ಮಾತು. ನಾನಾದರೂ ಏನು ಮಾಡಲು ಸಾಧ್ಯವಿದೆ?"

'ಇದು ನಿಮ್ಮಿಂದ ಮಾತ್ರ ಸಾಧ್ಯ....'

'ನೀವು ತಮಾಷೆಮಾಡುತ್ತಿಲ್ಲವಲ್ಲ? ಈ ತಿಂಗಳು ಮಗನ ಪರೀಕ್ಷೆಯ ಫೀಸು ಇನ್ನೂ ಕಟ್ಟಿಲ್ಲ. ನನ್ನ ವಿಷಯ ತಿಳಿದೂ ನೀವು ಕೇಳುತ್ತಿದ್ದೀರಿ. ಅದರಲ್ಲೂ ಸಾವಿರ ರೂಪಾಯಿ; ಇಪ್ಪತ್ತುವರ್ಷ ಸರ್ವೀಸು ಮಾಡಿದ್ದೇನೆ, ಇನ್ನೂ ಸಾವಿರ ರೂಪಾಯಿ ಉಳಿಸಲಾಗಲಿಲ್ಲ.'

'ನಿಮ್ಮ ಬಳಿಯಿದೆಯೆಂದು ಹೇಳಿಲ್ಲ.... ಇವತ್ತು ಬ್ಯಾಂಕಿನಿಂದ ಬಂಗಾರ ಬಿಡಿಸಿದರೆ, ನಾಳೆ ಮತ್ತೆ ಎಲ್ಲಾದರೂ ಅಡವಿರಿಸಬಹುದು. ಮತ್ತೆ ಕೆಲವು ಸಮಯದವರೆಗೆ ತೊಂದರೆಯಿಲ್ಲ. ಇವತ್ತು ಬಿಡಿಸದಿದ್ದರೆ ಬೇರೆ ಉಪಾಯವಿಲ್ಲ....ಕೊನೆಯ ದಿನ...

"ಅದುಸರಿ. ನಾನು ಏನು ಮಾಡುವಂತಿದೆ, ನೀವೇ ಹೇಳಿ?"

"ಹೇಗಾದರೂ ಮಾಡಿ ನನ್ನನ್ನು ಉಳಿಸಿ ಲಕ್ಷ್ಮಣರಾವ್. ಕ್ಯಾಷಿನಿಂದ ತೆಗೆದು ಕೊಡಿ. ನಾಳೆ ಹಿಂದಿರುಗಿಸುತ್ತೇನೆ."

ಲಕ್ಷ್ಮಣರಾಯರ ಮೈ ನವಿರೆದ್ದಿತು.

"ಅದು ಹೇಗಾಗುತ್ತದೆ ರಾಜನಾರಾಯಣ್ ಸಾಧ್ಯವೇ ಇಲ್ಲದ ಮಾತು. ಯಾರಿಗಾದರೂ ತಿಳಿದರೆ ನನ್ನ ನೌಕರಿ ಹೋಗುತ್ತದೆ."

"ಪ್ಲೀಸ್ ಲಕ್ಷ್ಮಣರಾವ್. ನನಗಾಗಿ ಈ ಉಪಕಾರ ಮಾಡಿ."

"ಕ್ಷಮಿಸಿ. ನನ್ನ ಸ್ವಂತದ ಉಪಯೋಗಕ್ಕಾಗಿಯೂ ಕ್ಯಾಷಿನಿಂದ ಒಂದು ಕಾಸು ತೆಗೆದವನಲ್ಲ."

"ಅದು ನನಗೂ ತಿಳಿದಿದೆ. ಆದರೆ ಈ ದಿನ ನೀವಲ್ಲದೆ ಬೇರೆ ಯಾರೂ ನನ್ನನ್ನು ಉಳಿಸುವಂತಿಲ್ಲ. ಒಂದ ದಿನದ ಮಟ್ಟಿಗೆ ನೀವೇನಾದರೂ ಮಾಡಲೇಬೇಕು."

ಹೇಳುತ್ತ ರಾಜನಾರಾಯಣನ ಕಂಠ ಭಾರವಾಯಿತು. ಕಣ್ಣಲ್ಲಿ ನೀರೂರಿತು. ಅತ್ತಿತ್ತ ನೋಡಿ ಅದನ್ನು ಒರಸಿಕೊಂಡ.

ಲಕ್ಷ್ಮಣರಾಯರು ಸ್ವಲ್ಪ ಹೊತ್ತು ಏನೂ ಆಡಲಿಲ್ಲ. ರಾಜನಾರಾಯಣನ ಪರಿಸ್ಥಿತಿಯನ್ನು ಕಂಡು ಅವರಿಗೆ ಮರುಕವುಂಟಾಗಿತ್ತು. ಇದು ಜವಾಬ್ದಾರಿಯ ಪ್ರಶ್ನೆ. ಒಂದು ವೇಳೆ ರಾಜನಾರಾಯಣ ಹಿಂದಿರುಗಿಸದಿದ್ದರೆ? ಆದರೂ ಅವರು ಒಂದು ದಿನದ ಮಟ್ಟಿಗೆ ಹೇಗಾದರೂ ನಡೆಯುತ್ತದೆ. ಕ್ಯಾಷ್ ಚೆಕ್ ಮಾಡುವದು ವಾರಾಂತ್ಯದಲ್ಲಿ; ಅದಕ್ಕಿನ್ನೂ ನಾಲ್ಕು ದಿನವಿದೆ; ಅಷ್ಟರಲ್ಲಿ ರಾಜನಾರಾಯಣ ಹಿಂದಿರುಗಿಸದಿರಲಾರ....

"ಕ್ಯಾಷಿನಿಂದ ಕೊಡುತ್ತೇನೆ. ಆದರೆ ನಾಳೆ ತಪ್ಪಿಸಬೇಡಿ. ಹೆಚ್ಚು ಕಡಿಮೆಯಾದರೆ ನಾನು ಉಳಿಯುವದಿಲ್ಲ.

ರಾಜನಾರಾಯಣ ಮರುದಿನ ಮೂರು ಗಂಟೆಯ ಒಳಗೆ ಹಿಂದಿರುಗಿಸುವದಾಗಿ ಭರವಸೆ ಇತ್ತ.

o o o

ಯಾರಿಗಾದರೂ ತಿಳಿದರೆ ಆಪತ್ತು ಎಂದು ಲಕ್ಷ್ಮಣರಾವ್, ಒಂದು ಲಕೋಟೆಯಲ್ಲಿ ಸಾವಿರ ರೂಪಾಯಿಗಳನ್ನಿರಿಸಿ ರಾಜನಾರಾಯಣನಕೈಯಲ್ಲಿರಿಸಿದ್ದರು. ಆ ಸಂದರ್ಭದಲ್ಲಿ ಅನೇಕ ಸಲ "ಇದು ಸರಿಯಲ್ಲ" ಎಂಬ ವಿಚಾರ ಅವರ ಮನಸ್ಸಿನಲ್ಲಿ ಸುಳಿದುಹೋಗಿತ್ತು. ಹಣವೆಣಿಸುವಾಗ ಅದೆಷ್ಟೋ ಬಾರಿ ಕೈ ನಡುಗಿತ್ತು.

ಹಣ ರಾಜನಾರಾಯಣನ ಕೈಸೇರಿತು; ಹಾಗೆ ಲಕ್ಷ್ಮಣರಾಯರು ಕ್ಯಾಷಿನಿಂದ ತೆಗೆದುಕೊಟ್ಟ ಹಣ ತಿರುಗಿ ಬರಲಿಲ್ಲ.

o o o

ಅದೇ ವಾರದ ಶುಕ್ರವಾರ. ರಾತ್ರಿ ಹತ್ತು ಗಂಟೆ ಕಳೆದಿತ್ತು. ಬಾಲ್ಕನಿಯಲ್ಲಿ ಸುಲೋಚನೆ ಗಂಡನಿಗಾಗಿ ಕಾದು ನಿಂತಿದ್ದಳು. ಶೈಲಜೆ ಮತ್ತು ಪಾಂಡುರಂಗ ಮಲಗಿ ಗಂಟೆ ಒಂದು ಕಳೆದಿದೆ. ಗಂಡ ಇನ್ನೂ ಮನೆಗೆ ಬಂದಿಲ್ಲ.

ಕಳೆದೆರಡು ದಿನಗಳಿಂದ ಗಂಡನನ್ನು ಯಾವುದೋ ಚಿಂತೆ ಕಾಡುತ್ತಿರುವದನ್ನು ಸೂಕ್ಷ್ಮವಾಗಿ ಆಕೆ ತಿಳಿದಿದ್ದಾಳೆ. ಇತ್ತೀಚೆಗೆ ತನ್ನನ್ನು ಕಾಡುತ್ತಿರುವ ಚಿಂತೆಯೇ ಗಂಡನನ್ನೂ ಕಾಡುತ್ತಿದೆಯೇನೋ ಎಂದು ಆಕೆ ಅಂದಾಜಿನ ಮೂಲಕ ತಿಳಿದುಕೊಂಡಿದ್ದಳು.

ಈ ಕುರಿತು ಗಟ್ಟಿಯಾಗಿ ಗಂಡನೊಡನೆ ಕೇಳಬೇಕೆಂದು ಎಷ್ಟೋ ದಿನಗಳಿಂದ ಆಕೆ ಆಲೋಚಿಸುತ್ತಿದ್ದಾಳೆ. ಕೇಳೋಣವೆಂದರೆ ಅದು ಅವಳಿಂದಾಗುವಂತಿಲ್ಲ. ಕೇಳಬೇಕೆಂದು ಬಾಯ್ದೆರೆದಾಗ, ತನ್ನ ಅಂದಾಜು ಸುಳ್ಳಾಗಿರಬಹುದೇನೋ ಎಂಬ ವಿಚಾರ ಮಾಡಿ ನಿಲ್ಲುತ್ತಿದೆ.

ಕಳೆದೆರಡುದಿನಗಳಿಂದ ಗಂಡನಮನಸ್ಸು ಸರಿಯಾಗಿಲ್ಲ. ತನ್ನನ್ನು ಕಾಡುತ್ತಿದ್ದ ಚಿಂತೆ ಈಗ ಗಂಡನನ್ನು ಕಾಡುತ್ತಿದೆ. ಇದಕ್ಕೆ ಇರುವ ಉಪಾಯವೆಂದರೆ, ಆದಷ್ಟು ಬೇಗ ಶೈಲಜೆಗೆ ಮದುವೆ ಮಾಡಿಬಿಡುವದು. ಅಂದರೆ ಮಾತ್ರ ನೆಮ್ಮದಿ ಸಿಗುತ್ತದೆ.

ತುಂಬು ಆರೋಗ್ಯದ ಜೀವವಲ್ಲ ಸುಲೋಚನೆ. ಈಗಂತೂ ಚಿಂತೆಯಿಂದಾಗಿ ಹೈರಾಣಾಗಿದ್ದಾಳೆ. ಮನೆಯ ಸ್ಥಿತಿಗತಿ ಚೆನ್ನಾಗಿಲ್ಲದಿದ್ದರೂ ಅದಕ್ಕಾಗಿ ಹಗಲಿರುಳು ಚಿಂತಿಸುವದು ಅವಳ ನಿತ್ಯ ವಿಧಿ ಎನ್ನಿಸಿದೆ.

ಲಕ್ಷ್ಮಣರಾವ್ ತರುವ ಇನ್ನೂರು ರೂಪಾಯಿ ಸಂಬಳದಲ್ಲಿ ನಾಲ್ಕನೆಯ ಒಂದು ಪಾಲು ಮನೆ ಬಾಡಿಗೆಗೆ ಹೋಗುತ್ತದೆ. ಮನೆಯ ಖರ್ಚು ಶೈಲಜಳ ಕಾಲೇಜು ಫೀಸು, ಪುಸ್ತಕ, ಬಟ್ಟೆ ಬರೆ, ಪಾಂಡುವಿನ ಫೀಸು ಪುಸ್ತಕ ಹೀಗೆ ಇವೆಲ್ಲವೂ ನೂರೈವತ್ತು ರೂಪಾಯಿಯಲ್ಲಿ ಆಗಬೇಕು.

ಶೈಲಜೆ ಈ ವರ್ಷ ಕಾಲೇಜು ಸೇರಿದ್ದಾಳೆ. ಪಾಂಡು ಎಸ್. ಎಸ್. ಸಿ ಗೆ ಕುಳಿತುಕೊಳ್ಳುವವನಿದ್ದಾನೆ. ಮುಂದಿನ ವರ್ಷ ಪಾಸಾದರೆ ಅವನೂ ಕಾಲೇಜು ಸೇರುವವನಿದ್ದಾನೆ.

ಸಂಬಳದ ಹೆಚ್ಚಿನ ಹಣ ಮಕ್ಕಳಿಬ್ಬರ ವಿದ್ಯೆ, ಮನೆಯ ಬಾಡಿಗೆಯಲ್ಲಿ ಕರಗಿಬಿಡುತ್ತದೆ.

ಶೈಲಜಳ ಮದುವೆ ಮಾಡಿ ಬಿಡುತ್ತಿದ್ದರೆ, ಹೆಚ್ಚಿನ ತಾಪತ್ರಯವೂ ಇಲ್ಲ; ಮನಸ್ಸಿಗೂ ನೆಮ್ಮದಿ ಸಿಗುತ್ತದೆ

ಆದರೆ ಸುಲೋಚನೆಯ ಮಾತನ್ನು ಕಿವಿಗೆ ಹಾಕಿಕೊಳ್ಳುವವರೇ ಇಲ್ಲ.

o o o

ಲಕ್ಷ್ಮಣರಾವ್ ಮನೆ ಸೇರುವಾಗ ಗಂಟೆ ಹನ್ನೊಂದೂಕಾಲಾಗಿತ್ತು. ಸುಲೋಚನೆ ಬಾಲ್ಕನಿಯಲ್ಲೇ ಅಷ್ಟು ಹೊತ್ತಿನ ವರೆಗೂ ನಿಂತಿದ್ದಳು.

ನಿಧಾನವಾಗಿ ಮೆಟ್ಟಲುಗಳನ್ನೇರಿ ಲಕ್ಷ್ಮಣರಾವ್ ರೂಮಿನತ್ತ ಬಂದರು. ಕತ್ತಲೆಯಲ್ಲಿ ನಿಂತಿದ್ದ ಸುಲೋಚನೆ ಅವರ ದೃಷ್ಟಿಗೆ ಬೀಳಲಿಲ್ಲ. ಆಕೆ 'ಈ ದಿನ ಇಷ್ಟು ಹೊತ್ತೇನು?" ಎಂದಾಗ ಅವರೊಮ್ಮೆ ಬೆಚ್ಚಿಬಿದ್ದರು. ಸುಲೋಚನೆ ಹಿಂಬದಿಯಲ್ಲಿರುವದನ್ನು ಕಂಡರು. ಏನೂ ಹೇಳಲಿಲ್ಲ.

ಬಾಗಿಲು ತಳ್ಳಿಕೊಂಡು ರೂಮಿನೊಳಗೆ ಹೋದ ಲಕ್ಷ್ಮಣರಾವ್ ಮೆಲ್ಲನೆ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ



ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ (ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಬೆಲೆಗಳನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುತ್ತದೆ.

ಕೃಷಿ ಸುಧಾರಣೆಗೆ

ನೇಗಿಲಯೋಗಿಯ ಗೋಳು ದೂರವಾಗಲಿ

ಬರೆದವರು: ಶ್ರೀ ಶಿರ್ವಾಡಿ ವಿಲಿಯಂ ಪಿಂಟೊ, ಎಡ್ವೊಕೇಟ್.

ದಿಲ್ಲಿಯ ಮುಖಂಡನ ಬಾಯಿಯಿಂದ ಹಿಡಿದು ಬೀದಿಯ ತುಂಡು ಮುಖಂಡನ ಬಾಯಿಯಲ್ಲಿ ಕೂಡಾ ಒಕ್ಕಲುತನದ ಸುಧಾರಣೆ ಆಗಬೇಕು. ಸುಧಾರಿತ ಕ್ರಮದಲ್ಲಿ ಕೃಷಿ ಮಾಡಬೇಕು, ಉತ್ತಮ ಬೀಜ ಗೊಬ್ಬರ ಹಾಕಬೇಕು, ಉಳಬೇಕು, ಬಿತ್ತಬೇಕು ಎಂಬ 'ಬೇಕು-ಬೇಕಿನ' ಪಲ್ಲವಿ ಹಾಡಲ್ಪಡುತ್ತದೆ. ಈ ಭಾಷಣಗಳ ಪರಿಣಾಮ ಮಾತ್ರ ಜನಗಳ ಮೇಲೆ ಬೋರ್ಗಲ್ಲ ಮೇಲೆ ನೀರು ಸುರಿದಂತಾಗಿದೆ. ಹೀಗಾಗಲು ಕಾರಣವೇನು? ವಿಚಾರಿಸಿ ನೋಡುವ. ಭಾಷಣ ಮಾಡುವ ಈ ಜನಕ್ಕೆ ಮತ್ತು ಒಕ್ಕಲುತನಕ್ಕೆ ಬಾದರಾಯನ ಸಂಬಂಧ. ಈ ಜಾತಿಗೆ ಸೇರಿದ ಜನ ಹೊಲದ ಮುಖ ನೋಡಿಲ್ಲ. ಬಡ ರೈತನ, ಅವನ ಆ ಚಿಕ್ಕ ಪುಟ್ಟ ಮಕ್ಕಳ ಆರ್ಥಿಕ ದುರವಸ್ಥೆಯನ್ನು ಕಂಡು ತಿಳಿದಿಲ್ಲ. ಹೊಲ ಹದವಾಗಬೇಕಾದರೂ ಆತನಿಂದಲೇ ಆಗಬೇಕು.

ಮದದಾನೆ ಮಾವುತನಿಂದ ಸುಧಾರಿಸುವಂತೆ, ಒಕ್ಕಲುತನದಲ್ಲಿ ಒಕ್ಕಲಿಗನದೇ ಪಾತ್ರ ಹಿರಿಯದು. ಆತನ ಸ್ಥಿತಿ ಸುಧಾರಣೆ ಹೊಂದದಿದ್ದಲ್ಲಿ, ಆತನನ್ನು ಸಾಲದ ಹೊಂಡದಿಂದ ಮೇಲಕ್ಕೆತ್ತದಿದ್ದಲ್ಲಿ ಭಾರತದ ಕೃಷಿ ಉತ್ಪನ್ನ ಖಂಡಿತಕ್ಕೂ ಹೆಚ್ಚದು. ಬದಲಾಗಿ ವರ್ಷಂಪ್ರತಿ ಆಹಾರಧಾನ್ಯಗಳನ್ನು ಪರದೇಶದಿಂದ ಆಮದು ಮಾಡಿಕೊಳ್ಳಬೇಕಾದೀತು. ಕೇವಲ ಭಾಷಣಗಳಿಂದ ಒಕ್ಕಲುತನದ ಅಭಿವೃದ್ಧಿಯಾಗುವುದಿಲ್ಲ ಎಂಬ ಸತ್ಯ ಸ್ವಾತಂತ್ರ್ಯ ನಂತರ ನಾವು ಕಂಡುಕೊಂಡಿದ್ದೇವೆ.

ಆ ಬಡ ರೈತನಿಗೆ ಇಂದು ಹೊಟ್ಟೆ ತುಂಬ ಉಣ್ಣಲು ಹಿಟ್ಟಿಲ್ಲ, ಪೌಷ್ಟಿಕ ಆಹಾರವಿಲ್ಲ. ಆ ಬಡಕಲು ಕೋಲು ಶರೀರ ಚಳಿ, ಮಳೆ, ಬಿಸಿಲು ಹೇಗೆ ತಡೆದೀತು? ಹಗಲಿರುಳು ಹೊಲಕ್ಕೆ ಆತ ಹೇಗೆ ಹೋದಾನು? ಈ ಬಾಡಿ ಬಣಗಿ ಸೊರಗಿ ಚಿಂತೆಯಿಂದ ಸುಕ್ಕು ಕಟ್ಟಿಹೋದ ನೇಗಿಲ ಯೋಗಿಯ ಕೈಯಲ್ಲಿ ಕೃಷಿ ಹೇಗೆ ಏಳಿಗೆಯಾದೀತು? ಭಾರತದ ರೈತನೆಂದರೆ ಆದಿಶೇಷನಂತೆ. ಆದಿಶೇಷ ಯಾವ ರೀತಿಯಲ್ಲಿ ಭೂಮಿಯ ಭಾರ ಹೊತ್ತು ಬಳಲಿ ಗಾಳಿ ಸೇವಿಸಿ ಬದುಕುತ್ತಾನೋ, ಹಾಗೇ ಈ ರೈತ ರಾತ್ರಿ ಹಗಲು ದುಡಿದು, ಸೊಪ್ಪು, ರಾಗಿ, ಗಂಜಿ ತಿಂದು ಬದುಕುತ್ತಾನೆ. ಸರ್ವಜ್ಞನೇ ಹೇಳುವಂತೆ 'ರೈತರು ದುಡಿಯುವುದು ಚೋಟುದ್ದ ಹೊಟ್ಟೆಗೆ ಮತ್ತು ಗೇಣುದ್ದ ಬಟ್ಟೆಗೆ' ಮದುಮಗನನ್ನು ಬಿಟ್ಟು ಮದುವೆಗೆ ಹೋದ ಹಾಗೆ ಒಕ್ಕಲಿಗನ ಸಂಕಷ್ಟಗಳನ್ನು ಪರಿಹಾರ ಮಾಡದೆ, ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಇರುವ ಭೂಮಿಯಲ್ಲಿ ಭದ್ರತೆ, ಕಡಿಮೆ ಗೇಣಿ, ಉತ್ತಮ ಪೌಷ್ಟಿಕ ಆಹಾರವನ್ನು ಒದಗಿಸಿ ನೇಗಿಲ ಯೋಗಿಯನ್ನು ನಿರ್ಮಾಣ ಮಾಡದೆ ಒಕ್ಕಲುತನದ ಸುಧಾರಣೆ ಹೇಗೆ ಆದೀತು?

ನೇಗಿಲ ಯೋಗಿಯನ್ನು ಆಧುನಿಕ ರೀತಿಯಲ್ಲಿ ತರಬೇತಿ ಮಾಡಿ ಶಿಸ್ತಿನಲ್ಲಿ ಆತ ಬೇಸಾಯ ಮಾಡುವಂತೆ ಕಲಿಸಿಕೊಡುವ ಶಾಲೆಗಳು ನಮ್ಮಲ್ಲಿಲ್ಲ. ಯಾವ ಕಾಲದಲ್ಲಿ ಯಾವ ಬೀಜ ಬಿತ್ತಬೇಕು, ಸುಧಾರಿತ ಕ್ರಮದಲ್ಲಿ ಕೃಷಿ ಎಲ್ಲ ಮಣ್ಣುಗಳಲ್ಲಿ ಸರಿಹೋಗುತ್ತದೆಯೋ? ಯಾವ ಗೊಬ್ಬರಗಳನ್ನು ಯಾವ ಕಾಲದಲ್ಲಿ ಹಾಕಬೇಕೆಂದು ಬೋಧಿಸುವ ಮತ್ತು 'ನೇಗಿಲಯೋಗಿ'ಯನ್ನು ರಾಷ್ಟ್ರ ಯೋಧನನ್ನಾಗಿ, ಯೋಗ್ಯ ನಾಯಕನನ್ನಾಗಿ ಬೆಳೆಸಿ ತರುವ ತರಬೇತಿ ಕೇಂದ್ರ ನಮ್ಮಲ್ಲಿರಬೇಕು. ಅಂತಹ ಶಾಲೆಗಳಿಗೆ ಸೇರಲು ಆಧುನಿಕ ಯುವಕರು ನಾಚಬಾರದು, ಬದಲಾಗಿ ಉತ್ಸಾಹದಿಂದ ಮುಂದೆ ಬರಬೇಕು. ಬಹಳ ಜನ ಬೇಸಾಯದ ಕೆಲಸಗಳನ್ನು ಮಾಡಲು ನಾಚುತ್ತಾರೆ. ಆದರೆ ಹೊಟ್ಟೆ ತುಂಬ ಊಟ ಮಾಡಲಿಕ್ಕೆ ನಾಚುವುದಿಲ್ಲ. 'ಕೈ ಕೆಸರಾಗದೆ ಬಾಯಿ ಮೊಸರಾಗದು' ಎಂಬ ನಾಣ್ಣುಡಿಯನ್ನು ಜ್ಞಾಪಕದಲ್ಲಿಟ್ಟು ಆ ಅನ್ನದ ಹಿಂದೆ ಎಷ್ಟೊಂದು ಪರಿಶ್ರಮ ಕಷ್ಟಗಳು ಅಡಗಿವೆ ಎಂಬುದಾಗಿ ಯೋಚಿಸಬೇಕು.

ಶಾಕಾಹಾರಿಯೇ ಆಗಲಿ, ಮಾಂಸಾಹಾರಿಯೇ ಆಗಲಿ ಕೃಷಿಯಿಂದ ಉತ್ಪಾದಿಸಲ್ಪಟ್ಟ ಧಾನ್ಯ ತರಕಾರಿಗಳಿಲ್ಲದೆ ಜೀವಿಸುವಂತಿಲ್ಲ, ಹಾಗಿರುವಾಗ್ಗೆ ಇದನ್ನು ಬೆಳೆಯಿಸುವವರ ಕಡೆಗೂ ಲಕ್ಷ್ಯ ಕೊಡಬೇಡವೇ? ಕೆಲವರ ತಲೆಯಲ್ಲಿರುವ 'ಹೊಲದಲ್ಲಿ ದುಡಿಯುವುದು ದೊಡ್ಡಸ್ತಿಕೆಯ ಲಕ್ಷಣವಲ್ಲ' ವೆಂಬ ಸುಳ್ಳು ಅಭಿಪ್ರಾಯ ಸತ್ತು ಶವವಾಗದೆ ಬೇಸಾಯ ಉತ್ಪನ್ನ ಖಂಡಿತಕ್ಕೂ ಹೆಚ್ಚದು.

ರೈತನ ಮಕ್ಕಳಿಗೆ ಹೊಲದ ಹತ್ತಿರವೇ ಓದು, ಬರಹ, ಗಣಿತ ಮುಂತಾದ ಬೌದ್ಧಿಕ ಶಿಕ್ಷಣ ಕೊಟ್ಟು—ಪ್ರಾಯ ಹೆಚ್ಚಿದಂತೆ ಹೊಲದ ಕೆಲಸಕ್ಕೆ ಹಚ್ಚಬೇಕು. ನವೀನ ರೀತಿಯಲ್ಲಿ ಕಾಯಿಪಲ್ಯ, ಹಣ್ಣುಹಂಪಲುಗಳನ್ನು ಬೆಳೆಸುವ ರೀತಿ ಹೇಳಿಕೊಟ್ಟು—ಬೆಳೆಯಿಸಿದ ಫಲಗಳನ್ನು ಅವರೂ ತಿನ್ನುವಂತೆ ಪ್ರೇರೇಪಿಸಬೇಕು. ಮನೆಯಲ್ಲಿ ದನ, ಎಮ್ಮೆ ಸಾಕಬೇಕು. ಈ ಜಾನುವಾರುಗಳಿಂದ ಹಾಲು ಸಿಗುತ್ತದೆ, ವ್ಯವಸಾಯಕ್ಕೆ ಬೇಕಾದ ಗೊಬ್ಬರ ಕೂಡಾ ಸಿಗುತ್ತದೆ. ಕಾಫಿ, ಚಾ, ಶರಾಬು, ಬೀಡಿ, ಸಿಗರೇಟಿನಂತಹ ದುಶ್ಚಟಗಳಿಗೆ ಒಕ್ಕಲು ಮಕ್ಕಳು ಬಲಿ ಬೀಳದಂತೆ ಸಮಾಜವೇ ಜಾಗ್ರತೆ ವಹಿಸಬೇಕು. ಏನಾದರೂ ಕಾರಣದಿಂದ ನಮ್ಮ ರೈತರು ಆರೋಗ್ಯ, ಸ್ಫೂರ್ತಿಯನ್ನು ಕಳಕೊಂಡರೆ–

(೧೦ನೇ ಪುಟ ನೋಡಿರಿ)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

O. S. 180/1964.

ಕೆ. ವಾಸುದೇವ ರಾವ್ — ವಾದಿ

ಇಸುಬು ಬ್ಯಾರಿ ಕೂಡಾ—ಪ್ರತಿವಾದಿರು.

1 ನೇ ಪ್ರತಿವಾದಿ ಇಸುಬು ಬ್ಯಾರಿ, ಸೋಕಂಗಡಿ ಹಂಮದೆ ಬ್ಯಾರಿಗಳ ಮಗ, ಬಂಟ್ವಾಳ ತಾಲ್ಲೂಕು ಬಂಟ್ವಾಳ ಕಸಬಾ ಗ್ರಾಮದ ಬಂಟ್ವಾಳ ಪೇಟೆಯಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ಮೊಡಂಕಾಪು ವೆಂಕಪ್ಪಯ್ಯ ಕಾರಂತರ ವಿಧವೆ ಗಂಗಮ್ಮನ ಕುಟುಂಬದಲ್ಲಿ ತಾ. 26-10-1947 ರಲ್ಲು ಆದ ವಿಭಾಗ ಪತ್ರ ಪ್ರಕಾರ ಸದ್ರಿ ಗಂಗಮ್ಮಗೆ ಬಹ ಜೀವನಾಂಶ ವಸೂಲು ಮಾಡುವ ಹಕ್ಕನ್ನು ಸದ್ರಿಯವಳು ವಾದಿಗೆ ತಾ. 16-6-1962 ರಲ್ಲಿ ವೀಲು ಮೂಲಕ ಹಕ್ಕು ಸ್ಥಾಪಿಸಿ ಮರಣಪಟ್ಟಿರುವುದ್ರಿಂದ ಜೀವನಾಂಶ ಬಾಕಿಗೆ ವಾದಿಯು ನಿಮ್ಮ ಮೇಲೆ ಕೂಡಾ ದಾಖಲೆ ಮಾಡಿದ ಮೇಲಿನ ದಾವೆಯು ತಾ. 31-8-1964 ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾದೆ ದಿವಸ ಪೂರ್ವಾಹ್ನ ಘಂಟೆ 11 ಕ್ಕೆ ನೀವು ಕೋರ್ಟು ಮುಂದೆ ಹಾಜ್ರಾಗಿ ಉದಹರಿಸಿ ಕೊಳ್ಳದಿದ್ರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

(ಕೋರ್ಟು ಹುಕುಂ ಪ್ರಕಾರ)

S. Soorappaya.
Vakil for Plaintiff.

ಮೊಕ್ಕಾಂ: ಪುತ್ತೂರು ತಾ. 5-8-64.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

O. S. No 190/1964.

C. ಪ್ಯಾಟ್-ರಿಸೀವರ್... ವಾದಿ.

ಮತ್ತು

ಕಿಂಞಣ್ಣರೈ, ಅಂಮು ರೈಗಳ ಅಳಿಯ. ಪುತ್ತೂರು ತಾಲ್ಲೂಕು ಪಡುವನ್ನೂರು ಗ್ರಾಮ— ಪ್ರತಿವಾದಿ.

ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದ್ರೆ:

ವಾದಿಯು ಗೇಣಿ ಬಾಕಿ ಬಗ್ಗೆ ನಿಮ್ಮ ಮೇಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 5-9-64 ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವಸ ಪುತ್ತೂರು ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ದ್ವಾರ ಹಾಜರಾಗಿ ಉದಹರಿಸಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(Sd) B. Ishwara Bhat.
Advocate for Plff.

ಪುತ್ತೂರು, ತಾ. 12-8-64



ಕಮ್ಯೂನಿಸ್ಟರ ಡಾಳದಾಟದಲ್ಲಿ

ಚೀನೀಯರಿಗೆ ಪೆಟ್ಟಿನ ರುಚಿ

ಬರೆದವರು: ಶಿವಶಂಕರ. ಮದ್ರಾಸು.

ಪ್ರಥಮ ಪರಿಣಾಮ ಸರ್ವೋಚ್ಚ ಪರಿಣಾಮವೆನ್ನುವದೊಂದು ಮಾತು. ಬಹುಶಃ ಚೈನಿಯರಿಗಾಗಿಯೇ ಆ ಮಾತಿಗೆ ರೂಪವನ್ನು ಕೊಟ್ಟಿರಬಹುದು. ಇಲ್ಲದಿದ್ದಲ್ಲಿ ಅಂದು ಪ್ರಪಂಚ ಪ್ರದಕ್ಷಿಣೆಯ ಹಗಲು ಕನಸು ಕಾಣುತ್ತಿದ್ದ ಚೆಂಗ್‌ಹೋ ಪ್ರಥಮ ಪ್ರಯಾಣದಲ್ಲೇ ಪ್ರಬಲ ಪ್ರಹಾರ ಪ್ರತ್ಯಸ್ತ್ರವಾದೊಡನೆ ಎದೆಯ ಮೇಲೆ ಕೈ ಇಟ್ಟುಕೊಂಡು ಕುಳಿತುಕೊಳ್ಳುತ್ತಿದ್ದನೇ? ಹಾಗೆಯೇ, ಇಂದು, ಆಕ್ರಮಣ ನಡೆಸಿದೊಡನೆಯೇ ಏಟು ಬಿದ್ದ ದಿನದಿಂದ ಕ್ರಮಶಃ ನಾನಾ ರೂಪಗಳಲ್ಲಿ ಚೈನಿ ಕಮ್ಯೂನಿಸ್ಟರು ಮುಂದಕ್ಕೆ ಬರುತ್ತಿದ್ದಾರೆ. ಹಾಗೆ ಚೆಂಗ್‌ಹೋನಿಗೆ ಭಯ ಗರ್ಭದಲ್ಲೇ ಆಶ್ರಯ ಪಡೆದು ಕೊಂಡಿದ್ದರೂ ಜಪದ ಮೇಲೆ ಪಡೆಯೊಡಿಸುತ್ತಿಲ್ಲ ಆಶೆ ಎಂಬುದು.

ಪ್ರಯೋಗಕ್ಕಾಗಿ ನಡೆಸಿದ ದ್ವಿತೀಯ ಪ್ರಯಾಣ ಫಲವಿತ್ತೊಡನೆ, ಮದುವೆಗಾಗಿ ದಗಲಿರುಳು ಪರಿಭಾವಿಸುತ್ತಿರುವವನನ್ನು ಹೆಣ್ಣೇ ಕರೆದು ಮದುವೆ ಮಾಡಿಕೋ ಎಂದರೆ ಹೇಗಾದೀತೋ, ಹಾಗೆಯೇ ಆಯಿತು ಚೆಂಗ್-ಹೋನ ಸ್ಥಿತಿ. ಪ್ರಪಂಚ ಪ್ರದಕ್ಷಿಣೆಗಾಗಿ ಪುನಃ ಹೊರಡುವನೆಂದು ಆತ ನಿಶ್ಚಯಿಸಿಕೊಂಡನು. ಅದಕ್ಕಾಗಿ ಸಕಲ ಸಿದ್ಧತೆಗಳೂ ನಡೆದುವು. ಪ್ರಯೋಗಕ್ಕಾಗಿ ಪ್ರಯಾಣ ನಡೆಸಿದ ದ್ವಿತೀಯ ತಂಡ ಹಿಂತಿರುಗುವ ವರೆಗೂ ಅಕ್ಷರಲು ಅವಸಿಂವಾಗಲಿಲ್ಲ. ದ್ವಿತೀಯ ತಂಡಕ್ಕೆ ಹಿಂತಿರುಗಲು ಆಜ್ಞೆ ಕಳುಹಿಸಿ, ಅಡಿಯು ಮುಂದಿಟ್ಟರು. ಇದು ತೃತೀಯ ಪ್ರಯಾಣ. ಈ ಸಲ ನಲ್ವತ್ತೆಂಟು ಹಡಗುಗಳು ಅಲ್ಲಿಂದ ಹೊರಟು. ಸಾಧಾರಣ ಒಂದು ತಿಂಗಳ ನಂತರ [ಈ ಪಡೆಯು ಪುಕಿನ್ ಪ್ರಾಂತ್ಯಕ್ಕೆ ಬಂದು ತಲಪಿತು. ಆದಾದ ಎರಡು ತಿಂಗಳ ನಂತರ ಅವರು ಟ್ಯಾಘಾಕ್ಕೆ ಬಂದು ಸೇರಿದರು. ಅದಕ್ಕನೇ ಒಂದು ವರ್ಷ ಸಮಯ ಬೇಕಾಯಿತು. ಅಲ್ಲಿಂದ ಅವರು ಕ್ರಮಶಃ ಚಂಪಾ, ಜಾವಾ ಮತ್ತು ಮಲಕ್ಕಗಳಿಗೆ ಭೇಟಿ ಕೊಟ್ಟರು. ಮಲಕ್ಕದ ರಾಜನು ಅವರಿಗೆ ಭಾರೀ ಸ್ವಾಗತವನ್ನು ಕೊಟ್ಟನು, ಅಲ್ಲದೆ ಅನೇಕ ಕಾಣಿಕೆಗಳನ್ನರ್ಪಿಸಿದನು. ಅದರ ಜ್ಞಾಪಕಾರ್ಥವಾಗಿ ಒಂದು ಶಿಲಾಫಲಕವನ್ನು ನಿಲ್ಲಿಸಲಾಯಿತು. ಅಲ್ಲಿಂದ ಪನಾಯಿಗೆ ಬಂದರು. ಚೆಂಗ್-ಹೋ ಪರಿತಪಿಸುತ್ತಿದ್ದ ಸಿಲೋನು ಈಗ ಹತ್ತಿರವಾಯಿತು. ಗೌರವದ ಮೆಟ್ಟಿಲುಗಳನ್ನೇರುತ್ತ ಚೆಂಗ್-ಹೋ ಚಂಗನೆ ಸಿಂಹಳಕ್ಕೆ ಹೋಗಲು ನಿಶ್ಚಯಿಸಿಕೊಂಡಿದ್ದನು. ಅವನ ಆಶೆ ಪೂರ್ತಿಯಾಗುವ ಸಮಯ ಸನ್ನಿಹಿತವಾಯಿತು ಬಹಳ ಜಾಗರೂಕತೆ ಹಾಗೂ ಗಂಭೀರತೆ ಆದರೆ ಸ್ನೇಹತ್ವದಿಂದ ವರ್ತಿಸಲು ಅವನು ಸಿದ್ಧತೆ ಮಾಡಿಕೊಂಡನು ಅಷ್ಟರಲ್ಲಿ ಹಡಗುಗಳು ಲಂಕೆಗೆ ಬಂದುವು. ಲಂಕೆಗೆ ಬಂದೊಡನೆ ಅವನ ಆನಂದಕ್ಕೆ ಅಂಕೆಯೇ ಇಲ್ಲವಾಯಿತು. ಲಂಕಾದ್ವೀಪದ ದಕ್ಷಿಣ ತುದಿಯಲ್ಲಿ ಮಹಾತ್ಮಾ ಬುದ್ಧನ ವಿಹಾರವಿದೆ. ಅಲ್ಲಿಗೂ ಅವನು ಹೋದನು. ಅವನು ಅಲ್ಲಿ ಪ್ರಾರ್ಥನೆ ಸಲ್ಲಿಸಿದನು. ಆದರಿಂದಲೂ ಅವನಿಗೆ ತೃಪ್ತಿಯಾಗಲಿಲ್ಲ. ವಿಹಾರಕ್ಕೆ ಕಾಣಿಕೆಗಳನ್ನರ್ಪಿಸಿದನು. ಪ್ರಯಾಣದ ಸಮಯ ಅವಘಡಗಳೇನೂ ನಡೆಯದೆ, ಸುಖವಾಗಿ ಬುದ್ಧದೇವನ ವಿಗ್ರಹವನ್ನು ಕಾಣುವಂತೆ ಬರಿಸಿಕೊಂಡ ಬುದ್ಧನನ್ನು ಹೊಗಳಿ ವಂದಿಸುತ್ತ ಒಂದು ಶಿಲಾಫಲಕವನ್ನು ನಿರ್ಮಿಸಿದನು. ಸರಿ, ಸಿಂಹಳದ ಸಿರಿತನವನ್ನು ಕಂಡಾಯಿತು. ಅಲ್ಲೇ ಕಾಲಕಳೆಯಲು ಸಾಧ್ಯವೇನು?

ಅಲ್ಲಿಂದ ಮುಂದರಿದು ಭಾರತದ ಇತರ ಬಂದರುಗಳಿಗೆ ಬಂದರು. ಮುಖ್ಯವಾಗಿ, ಅವರು ಕ್ವಿಲೋನು ಹಾಗೂ ಕಲ್ಲಿಕೋಟೆಗಳಿಗೆ ಬಂದಿದ್ದರು. ಈ ಎರಡು ಬಂದರುಗಳೂ ಕೇರಳ ಪ್ರದೇಶದಲ್ಲಿವೆ. ಹೀಗೆ ಚೈನೀಯರಿಗೂ ಕೇರಳದ ಭಾರತೀಯರಿಗೂ ಹಿಂದಿನಿಂದಲೂ ಅದೇನೋ ಸಂಪರ್ಕ ಬೆಳೆದುಕೊಂಡು ಬಂದಿದೆ. ಅದು ಇಂದು ನಿನ್ನೆಯದಲ್ಲ. ಅಂದಿನ ಕೇರಳದ ಭಾರತೀಯರು ಬಂದ ಅತಿಥಿಗಳಿಗೆ ಸತ್ಕಾರವಿತ್ತಿದ್ದಲ್ಲಿ, ಇಂದಿನ ಕಮ್ಯೂನಿಸ್ಟರು ಚೈನಾಕ್ಕೆ ಹೋಗಿ ಅವರನ್ನು ಕರೆದುಕೊಂಡು ಬರಲು ಸಿದ್ಧರಿದ್ದಾರೆ! ಅವರಿಗೆ ಚೈನಾದ ಮಾವೋನೇ ನಿಜವಾದ ಮಾನ. ಇಲ್ಲಿ ಇತ್ತೀಚೆಗಿನ ಒಂದು ಘಟನೆ ಜ್ಞಾಪಕಕ್ಕೆ ಬರುತ್ತದೆ.

ಕಳೆದ ವರ್ಷ ಕೇರಳದಲ್ಲಿ ಅಂತರ್ಜಾತೀಯ ವಿವಾಹ ಹಿಂದಿನ ವರ್ಷಗಳಿಗಿಂತ ಕಮ್ಮಿಯಾಗಿರುತ್ತದೆಂದು ಅಂಕೆ-ಸಂಖ್ಯೆ ಸೂಚಿಸಿರುತ್ತದೆ. ಅಂತರ್ಜಾತೀಯ ವಿವಾಹಗಳು ಹೆಚ್ಚಾಗಿ ಸ್ವಯಂವರ ಅಥವಾ ಪ್ರಣಯ ವಿವಾಹಗಳಿರುತ್ತವೆ. ಅದು ಅಲ್ಲಿ ಕಮ್ಮಿಯಾಗುತ್ತ ಬರುತ್ತಿದೆಯಂತೆ! ಕಮ್ಯೂನಿಸ್ಟ್ ಪಕ್ಷದ ಕಪಿಮುಷ್ಟಿಯಲ್ಲಿ ಅಲ್ಲಿನ ಲಗಾಮು ಇದ್ದಾಗ ಮಂತ್ರಿಗಳೇ ಮದುವೆ ಮಾಡಿಕೊಳ್ಳುತ್ತಿದ್ದುದನ್ನು ಕಂಡ ಸಾಮಾನ್ಯರು ತಾವೂ ಮುಂದೆ ಬರುತ್ತಿದ್ದರೆಂದು ಕಾಣುತ್ತದೆ ಈಗ ಹಾಗಲ್ಲ. ಕಾಲ ಬದಲಾಗಿರುತ್ತದೆ. ಅದಕ್ಕಿಂತಲೂ ತಮಾಷೆಯ ವಿಷಯ ಇನ್ನೊಂದಿದೆ.

ಹಿಂದಿನ ಒಂದು ಸಂಚಿಕೆಯಲ್ಲಿ 'ಕಮ್ಯೂನಿಸ್ಟ್ ಚೈನಾದಲ್ಲಿ ಕಲ್ಯಾಣ ಕಟ್ಟಳೆ' ಎಂಬ ಲೇಖನ ಪ್ರಕಟವಾಗಿತ್ತು. ಅದರಲ್ಲಿ ಪ್ರೇಮ ವಿವಾಹಗಳಿಗೆ ಅಲ್ಲಿ ಅದೆಷ್ಟು ಅಡೆ—ತಡೆ ಇದೆ ಎಂಬುದರ ಕುರಿತು ತಿಳಿಸಲಾಗಿರುತ್ತದೆ. ಪಕ್ಷದ ಸಮ್ಮತಿ ಇಲ್ಲದೆ ಗಂಡು—ಹೆಣ್ಣು ಒಂದಾಗುವದನ್ನು ಕಮ್ಯುನಿಸ್ಟರು ಸಹಿಸುವದಿಲ್ಲವೆಂಬುದನ್ನು ಅದರಲ್ಲಿ ಸೂಚಿಸಲಾಗಿತ್ತು. ಈಗ ಅಲ್ಲಿಂದ ಬಂದಿರುವವರ ಸ್ಪಷ್ಟವರದಿಯೊಂದು ಪ್ರಕಟವಾಗಿರುತ್ತದೆ. ಪ್ರೇಮ ವಿವಾಹಗೊಳಗಾದವರು ಕಷ್ಟ ಸಂಕೋಲೆಗಳನ್ನು ತೊಡಲು ಸಿದ್ಧರಾಗಿರಬೇಕು. ಪ್ರಣಯ ಪ್ರಹಸನದಲ್ಲಿ ತಲ್ಲೀನರಾಗುವ ತರುಣ ತರುಣಿಯರನ್ನು ಸಾರ್ವಜನಿಕರ ಮುಂದೆ ನಿಲ್ಲಿಸಿ ಎಚ್ಚರಿಕೆ ಕೊಡಲಾಗುತ್ತದೆ, ಪ್ರಣಯ ಪ್ರಹಸನದಲ್ಲಿ ಸಮಯ ಕಳೆಯುವ ಬದಲು ಸೊಳ್ಳೆ ಹೊಡೆಯುವ ಕೆಲಸ ಮಾಡಬೇಕೆಂಬ ಅವರಿಗೆ ಬುದ್ಧಿವಾದ ಹೇಳಲಾಗುತ್ತಿದೆ.

ಕಮ್ಯೂನಿಸ್ಟರೆಲ್ಲಾ ಒಂದೇ ರೀತಿಯ ಹೆಬ್ಬಾವುಗಳು ತಾನೇ! ಚೈನಾದಲ್ಲಿ ಆ ರೀತಿ ಹೇಳಿದ್ದೇತಡ ಇಲ್ಲಿಯ ಕಮ್ಯೂನಿಸ್ಟರೂ ಚಾಚು ತಪ್ಪದೆ, ಅದನ್ನು ಅನುಸರಿಸಿ ಬಿಟ್ಟರು. ಇದು ಇಂದು ನಿನ್ನೆಯ ಅಭ್ಯಾಸವಲ್ಲ. ಸಾಧಾರಣ, ಭಾರತಕ್ಕೆ ಸ್ವಾತಂತ್ರ್ಯ ಬಂದದಿಂನಿಂದ ಹಾಗೂ ಚೈನಾದಲ್ಲಿ ಕಮ್ಯೂನಿಸ್ಟರಾಡಳಿತ ಬೂಟುಗಾಲನ್ನೂರುತ್ತಿದಂದಿನಿಂದ ಈ ಚಟ ಜಾಸ್ತಿಯಾಗಿರುತ್ತದೆ. ಹೆಚ್ಚಿನ ವಿವರ ಬೇಕಾಗಿರುವವರು ಅಂದಿನಿಂದ ಭಾರತದಲ್ಲಿರುವ ಕಮ್ಯೂನಿಸ್ಟ್ ಪಕ್ಷ ಮುಂದಿಡುತ್ತಿರುವ ಘೋಷಣೆಯ ಪಟ್ಟಿ ಹಾಗೂ ಚೈನಾದ ಕಮ್ಯೂನಿಸ್ಟ ಪಕ್ಷ ಪ್ರಕಟಿಸುತ್ತಿರುವ ಘೋಷಣೆಯ ಪಟ್ಟಿಗಳನ್ನು ಕಣ್ಣಾರೆ ಕಾಣಬೇಕು. ಮಾತ್ರವಲ್ಲ ಪರಾಂಬರಿಸಿ ನೋಡಬೇಕು. ವಾಕ್ಯದಲ್ಲಿ ಚೈನಾದ ಕಮ್ಯೂನಿಸ್ಟ ಪಕ್ಷ ಇರುವೆಡೆಗಳಲ್ಲಿ ಇಂಡಿಯಾದ ಕಮ್ಯೂನಿಸ್ಟ ಪಕ್ಷ ಎಂದು ಬದಲಿಸಿದ ಭಾಷಾಂತರವೇ ಇಲ್ಲಿನ ಕಮ್ಯೂನಿಸ್ಟ ಪಕ್ಷಗಳ ಸಮ್ಮೇಳನ ಹೊರಗೆಡಹುತ್ತಿರುವ ಘೋಷಣೆಯ ಪಟ್ಟಿ. ಹಾಗಿರುವಾಗ ಈಗ ಮಾತ್ರ ದಿಢೀರನೆ ಅವರ ನಡುವೆ 'ಕಮ್ಯೂನಿಸ್ಟ ಕರಡಿ' 'ಕಮ್ಯೂನಿಸ್ಟ ಡ್ರೇಗನ್' ವ್ಯತ್ಯಾಸ ಬರಲು ಕಾರಣವೇನು? ಆ ವ್ಯತ್ಯಾಸದ ಕಾರಣ ಕೇರಳದ ಕಮ್ಯೂನಿಸ್ಟರಿಗೆ ಚೆನ್ನಾಗಿ ಗೊತ್ತು. ಇಲ್ಲದಿದ್ದಲ್ಲಿ ಇಷ್ಟೆಲ್ಲಾ ವ್ಯತ್ಯಾಸದ ಬೊಬ್ಬಾಟೆ ನಡೆಸುವವರು ಕೈದಿಗಳ ಬಿಡುಗಡೆಯ ಸಮಯ 'ವ್ಯತ್ಯಾಸ' ಮೂಲೆಗೊತ್ತಿ ಪ್ರಯತ್ನಿಸುತ್ತಾರೇನು? ಅದು ಮಾತ್ರವಲ್ಲ, ಮುಂಬರುವ ಕೇರಳದ ಚುನಾವಣೆಯಲ್ಲಿ ಇವರಿಬ್ಬರೂ ಒಂದಾಗಿ ಕಾಂಗ್ರೇಸನ್ನು ಎದುರಿಸುತ್ತಾರೆ. ಅದರೆ ಕಾಂಗ್ರೇಸ್ಸ್ ಜೋಡೆತ್ತಿಗೆ ಒಬ್ಬರು ಕುಡುಗೋಲು ತೋರಿಸಿ ಬೆದರಿಸುತ್ತಾರಾದಲ್ಲಿ, ಇನ್ನೊಬ್ಬರು ಸುತ್ತಿಗೆ ತೋರಿಸಿ ಹೆದರಿಸುತ್ತಾರೆ. ಅಲ್ಲಿನ ಜೋಡೆತ್ತುಗಳೋ ಒಂದು ಗದ್ದೆಗಿಳಿದರೋ ಇನ್ನೊಂದು ಗುಡ್ಡೆಗೆಳೆಯುತ್ತಿದೆ.

ವ್ಯತ್ಯಾಸ ನಾಟಕವನ್ನು ಅವರು ವಿಜಯವಾಡದಲ್ಲಿ ಆಡಿ ತೋರಿಸಿರುವರು. ಆದರಿಂದ ಕೆಲ ವಿಷಯಗಳು ಸ್ಪಷ್ಟವಾಗಿರುತ್ತವೆ. ಅದನ್ನೇ ಆಫ್ರಿಕಾದಿಂದ ಚೈನಾಕ್ಕೆ ಹೋಗಿದ್ದ ವಿದ್ಯಾರ್ಥಿಗಳು ಹೊ

(೯ನೇ ಪುಟ ನೋಡಿರಿ)

ದ. ಕ. ಜಿಲ್ಲಾ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ.

O. P. No 10/1964

1) B ಪದ್ಮರಾಜ ಜೈನ ಕೂಡಾ....

ಅರ್ಜಿದಾರರು.

ನೋಟೀಸು

ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ಅರ್ಜಿದಾರರು ಮೃತ ಪಟ್ಟ ಭೋಜರಾಜನ ಇನ್ಶೂರೆನ್ಸ್ ಪಾಲಿಸಿ ನಂಬ್ರ 12507892 ರಲ್ಲಿ ಬರತಕ್ಕ ಹ್ರವೇಜುಗಳನ್ನು 2 ನೇ ಅರ್ಜಿದಾರರ ಹೆಸರಲ್ಲಿ ಪಡೆವರೆ ವಾರೀಸು ಸರ್ಟಿಫಿಕೇಟಿಗೆ ಮೇಲ್ಕಂಡ ಕೋರ್ಟಿಗೆ ಅರ್ಜಿ ಮಾಡಿರುತ್ತಾರೆ. ಅ ಬಗ್ಗೆಯಾರದಾದರೂ ಆಕ್ಷೇಪ ಇದ್ದಲ್ಲಿ ತಾ 2-9-1964 ರಲ್ಲು ಗಂಟೆ 11 ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಣೆ ಕೊಡತಕ್ಕದ್ದು

By Order of the Court

B. K. Ratnakara Ballal.

B. A. LL. B.

Advocate for Petitioners.

Belthangady 14-8-1964

ಬೆಳ್ತಂಗಡಿ ಡಿ. ಮು ಕೋರ್ಟಿನಲ್ಲಿ

R. I. A. No. 142/1964

O. S. 194/1964.

ಸುಬ್ರಹ್ಮಣ್ಯ ಹೆಬ್ಬಾರ ಕೂಡಾ 16 ಜನ— ವಾದಿರು.

ಕಲ್ಲಡ್ಕ ಗೋವಿಂದ ಭಟ್ಟ— ಪ್ರತಿವಾದಿ.

ಕೋರ್ಟು ಹುಕುಂ ಪ್ರಕಾರ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಕಲ್ಮಂಜ ಗ್ರಾಮದ ಪರಾರಿ ಮತ್ತು ಆ ನಂಗಳ್ಕವಾಳ್ಯದ ಜನರು ವ ಸಾರ್ವಜನಿಕರು ಸಹಾ ಅನಾದಿಯಿಂದ ಮಾಮೂಲಾಗಿ ಉಪಯೋಗ್ಸಿಕೊಂಡಿರುವ ದಾರಿಯನ್ನು ಪ್ರತಿವಾದಿ ಪಕ್ಕದ ಕಲ್ಮಂಜ ಗ್ರಾಮದ ನಂ. 45/5ನೇ ಸ್ಥಳದಲ್ಲಿ ಹಾದುಹೋಗುವಲ್ಲಿ ಪ್ರತಿವಾದಿಯು ಸದ್ರಿ ಮಾಮೂಲು ದಾರಿಯ ಉಪಯೋಗಕ್ಕೆ ಯಾವ ವಿಧದಿಂದಲೂ ಅಡ್ಡಿ ಆತಂಕಗಳನ್ನು ಮಾಡಕೂಡದೆಂತ ಡಿಕ್ಲೇರೇಶನ್ ಮತ್ತು ಪರ್ಮನೆಂಟ್ ಇಂಜಂಕ್ಷನ್ ಕೇಳಿ ವಾದಿರು ತನ್ನ ಪರವಾಗಿಯೂ, ಸಾರ್ವಜನಿಕರ ಪರವಾಗಿಯೂ ಹೂಡಿರುವ ಮೇಲಿನ ದಾವೆಯು ತಾ. 31-8-64 ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಉಳ್ಳವರು ಸದ್ರಿ ವ್ಯಾದೆ ದಿನ ಕೋರ್ಟು ಮುಂದೆ ಹ್ಯಾಜರು ಮಾಡಿಕೊಳ್ಳತಕ್ಕದ್ದು, ಎಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿಯದೆ.

B K Suryanarayana Rao.

Advocate for Pltf

ಬೆಳ್ತಂಗಡಿ, ತಾ. 12-8-1964.

ಗುರುವಿನಂತೆ
ಮಿತ್ರನಂತೆ
ವೈದ್ಯನಂತೆ

3 ಪುಸ್ತಕಗಳು

ಸಿಗುವ ವಿಳಾಸ:
ನವಭಾರತ ಬುಕ್ ಡಿಪೊ,
ಪಾಲುಕೋಟಿ, ಉಡುಪಿ.

ಸುಲಭದಲ್ಲಿ
ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. ೨

ಸುಲಭದಲ್ಲಿ
ಪತ್ರಲೇಖನ
Letter Writing
Made Easy
ಬೆಲೆ: ರೂ. ೧-೨೫

ಮನೆಮದ್ದು
ನೂರಾರು ಕಾಹಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡುವ ವಿಧಾನ ವಿವರಿಸುವ ಗೃಹ
ವೈದ್ಯ: ಬೆಲೆ: ರೂ. ೨.

ಪ್ರವಾಸಾನುಭವ

ಭಾರತಕ್ಕೆ ಜಪಾನಿನ ಅಮರ ಪಾಠ

— ಶ್ರೀ ಟಿ. ಎ. ಪೈ.



ಬಡತನದ ನಿವಾರಣೆಗಾಗಿ ಬೇರೆ ಬೇರೆ ದೇಶದ ಜನರು ಒಂದು ಉದ್ದೇಶವನ್ನಿಟ್ಟುಕೊಂಡು ಕಾರ್ಯವೆಸಗುತ್ತಿರುವಾಗ, ನಾವು ಮಾತ್ರ ಹಲವು ಸಮಸ್ಯೆಗಳನ್ನೆತ್ತಿ ಕಾಲಹರಣ ಮಾಡುತ್ತೇವೆ. ನಾಡಿನ ಪ್ರಗತಿಪರ ಕಾರ್ಯಾಚರಣೆಗಿಂತಲೂ ಭಾಷಾ ಸಮಸ್ಯೆ, ಭ್ರಷ್ಟಾಚಾರ ನಿರ್ಮೂಲನ ಮೊದಲಾದುವುಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತೇವೆ. ಅನವಶ್ಯ ಅಥವಾ ಅಲ್ಪ ಪ್ರಾಮುಖ್ಯ ಪಡೆದ ವಿಷಯಗಳ ಬಗ್ಗೆ ಜಿಜ್ಞಾಸೆ ಬೆಳೆಯುವುದು ನಮ್ಮಲ್ಲಿ ತೀರಾ ಸಾಮಾನ್ಯ. ಆದರೆ, ಬಡತನದ ನಿರ್ಮಾಣಕ್ಕೆ ಜನರ ತಿಳುವಳಿಕೆ ಮತ್ತು ಆಚರಣೆಯೇ ಕಾರಣವೆಂಬುದನ್ನು ಮರೆಯುತ್ತೇವೆ.

ನಮ್ಮ ನಾಡಿನಲ್ಲಿ ಬುದ್ಧಿವಂತ ಜನರಿದ್ದಾರೆ, ವಿಪುಲ ನಿಸರ್ಗ ಸಂಪತ್ತಿದೆ ಇದನ್ನು ಸದುಪಯೋಗ ಮಾಡಿಕೊಳ್ಳುವ ಕಳಕಳಿಯು ಪ್ರತ್ಯಕ್ಷ ನಮ್ಮ ಜನರಲ್ಲಿ ಮೂಡಿ ಬರುವುದು ಅತ್ಯಗತ್ಯ. ಜಗತ್ತಿನ ಪುಟ್ಟ ದೇಶಗಳಲ್ಲಿ ಜಪಾನು ಒಂದು. ನಿರಂತರ ಭೂಕಂಪ, ಜ್ವಾಲಾಮುಖಿ ಮೊದಲಾದ ನಿತ್ಯಾಪತ್ತು ಜಪಾನೀಯರನ್ನು ಕಾಡುತ್ತಿದೆ, ಆದರೂ ಅವರು ತಮಗಿರುವ ಸ್ವಲ್ಪವೇ ಕೃಷಿ ಭೂಮಿಯಲ್ಲಿ ನಮಗಿಂತ ನಾಲ್ಕು ಪಾಲು ಹೆಚ್ಚು ಉತ್ಪಾದಿಸುತ್ತಾರೆ. ತರಕಾರಿ ಬೆಳೆಯುತ್ತಾರೆ. ಹಂದಿ-ಕೋಳಿ ಸಾಕಿ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಾರೆ ನಮ್ಮಲ್ಲಿ ಕಳೆದ ೧೭ ವರ್ಷಗಳಿಂದ ವ್ಯವಸಾಯ ಸಂಬಂಧವಾದ ಸತತ ಪ್ರಚಾರ ನಡೆದಿದ್ದರೂ ಅದು ಜನತೆಯಲ್ಲಿ ಸಾಕಷ್ಟು ಆಸಕ್ತಿಯನ್ನು ಹುಟ್ಟಿಸಿಲ್ಲವೆಂದು ಖಂಡಿತ ಹೇಳಬಹುದು.

ಜಪಾನೀಯರ ಕೈಗಾರಿಕಾ ಧರ್ಮವೂ ನಮಗಿಂತ ಭಿನ್ನವಾದುದು ಕಾರ್ಖಾನೆಯಲ್ಲಿ ದುಡಿಯುವಲ್ಲಿ ತಮ್ಮ ಜಾಣ್ಮೆಯನ್ನು ತೋರಿಸುವುದು ಮಾತ್ರವಲ್ಲದೆ ತಾವು ಕೆಲಸ ಮಾಡಲಿಕ್ಕೆ ಸಂಸ್ಥೆ ಬೆಳೆಯಬೇಕು, ಅಭಿವೃದ್ಧಿ ಹೊಂದಬೇಕು – ತಮ್ಮ ಮರಿ ಮಕ್ಕಳೂ ಇದೇ ಸಂಸ್ಥೆಯಲ್ಲಿ ಸೇವೆ ಸಲ್ಲಿಸುವಂತಾಗ ಬೇಕು ಎನ್ನುವ ಉತ್ಕಟೇಚ್ಛೆ ಅವರದು. ಅಲ್ಲಿ ಕಬ್ಬಿಣದ ಅದುರು ದೊರಕುವದಿಲ್ಲವಾದರೂ ಆಯಾತ ಮಾಡಿಕೊಂಡು ಉಕ್ಕಿನ ಕೈಗಾರಿಕೆಯನ್ನು ಬೆಳೆಸಿ ಇದರಲ್ಲಿ ಜಗತ್ತಿನಲ್ಲಿ ಮೂರನೆಯ ಸ್ಥಾನಗಳಿಸಿದೆ

ನಮ್ಮಲ್ಲಿ ಯಾವುದಕ್ಕೂ ಕೊರತೆಯಿಲ್ಲ ಪ್ರಕೃತಿ ಸಂಪತ್ತು ಹೇರಳವಿದೆ. ಬುದ್ಧಿವಂತ ಜನರೂ ಬೇಕಷ್ಟಿದ್ದಾರೆ. ಆದರೆ, ಶ್ರಮ ಪೂರ್ವಕ ಸದುಪಯೋಗ ಪಡಿಸಬೇಕೆನ್ನುವ ಆಸಕ್ತಿ ಮಾತ್ರವಿಲ್ಲ. ಮಾತಿನಲ್ಲಿ ಕಾಲಹರಣ ಮಾಡದೆ ಪ್ರಗತಿ ಸಾಧನೆಗೆ ಜನತೆಯನ್ನು ಮುಂದೆ ತರುವುದು ನಮ್ಮ ಆದ್ಯ ಕರ್ತವ್ಯವಾಗಿದೆ

ಜಪಾನಿನ ತಯಾರಿತ ವಸ್ತುಗಳು ಕಡಿಮೆ ಬೆಲೆಗೆ ದೊರೆಯುತ್ತವೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ದೊರೆತ ತರುವಾಯ ಉತ್ಪಾದಿತ ವಸ್ತುಗಳ ಬೆಲೆಯು ಏರುತ್ತ ಹೋಗುತ್ತಿದೆ ಅನ್ಯದೇಶಗಳಿಂದ ಆಯಾತವನ್ನು ತಡೆಯಲಾಗಿದೆ, ನಮ್ಮಲ್ಲಿ ತಯಾರಿಸುವ ವಸ್ತುಗಳು ಉತ್ತಮ ಗುಣವುಳ್ಳದ್ದಾಗಿರಬೇಕೆಂಬುದನ್ನೂ ನಾವು ಗಮನಿಸಬೇಕಾಗಿದೆ. ಜಪಾನಿನಲ್ಲಿ ಒಂದು ಕಾರು ೩, ೪ ಸಾವಿರ ರೂಪಾಯಿಗಳಿಗೆ ದೊರೆಯುವುದಾದರೆ, ನಮ್ಮಲ್ಲಿ ಅದಕ್ಕೆ ೧೭ ಸಾವಿರ ರೂಪಾಯಿ ಬೆಲೆ ವರ್ಷ ವರ್ಷಕ್ಕೆ ಇದರ ಬೆಲೆ ಹೆಚ್ಚುತ್ತಲೇ ಹೋಗುತ್ತದೆಯಲ್ಲದೆ ಕಡಿಮೆಯಾಗುವುದಿಲ್ಲ. ನಾವು ಉತ್ಪಾದಿಸುವ ಸಾಮಾನುಗಳನ್ನು ಗಿರಾಕಿಗಳ ಕ್ರಯಕ್ಕೆ ಒದಗಿಸದೆ ಹೋದರೆ ಏನೂ ಉಪಯೋಗವಿಲ್ಲ ಕಡಿಮೆ ಕ್ರಯಕ್ಕೆ ಹೆಚ್ಚಿನ ಸೌಲಭ್ಯ - ಗುಣಗಳನ್ನು ಗಿರಾಕಿಗಳಿಗೆ ಒದಗಿಸಿ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವ ಗುಣ ಜಪಾನೀಯರದ್ದು.

ಭಾರತದಲ್ಲಿ ಬೆಲೆಯೇರಿಕೆಯದೊಂದು ಪ್ರಶ್ನೆಯುಂಟಿದೆ. ಬೆಲೆಯ ಮಟ್ಟ ಒಂದೇ ರೀತಿ ನಿಲ್ಲಬೇಕಾದರೆ, ಉತ್ಪಾದನೆಯನ್ನು ಪ್ರೋತ್ಸಾಹಿಸಬೇಕು ಈ ಪ್ರೋತ್ಸಾಹ ಬಾಯಿಮಾತಿನಿಂದ ಬರುವುದಿಲ್ಲ. ಬೇಕಾದ ಸಕಲ ಆರ್ಥಿಕಾದಿ ಸಹಾಯವನ್ನು ಬೇಕಷ್ಟು ಪ್ರಮಾಣದಲ್ಲಿ ಕೊಡಬೇಕು. ಕೃಷಿಕನು ಬೆಳೆದ ಬೆಳೆಗೆ ಯೋಗ್ಯ ಪ್ರತಿಫಲವೂ ದೊರೆಯಬೇಕು. ಅಂತಹ ಸರಾಗವಾದ ಹಾಗೂ ನಿರ್ದಿಷ್ಟ ಪ್ರತಿಫಲದ ಭರವಸೆ ಭಾರತದ ರೈತನಿಗಿಲ್ಲದಿರುವುದೇ ನಮ್ಮ ಸಮಸ್ಯೆಗೆ ಕಾರಣ.

ಕೃಷಿರಂಗಕ್ಕೆಂದು ನಾವು ವ್ಯಯಿಸುತ್ತಿರುವ ಧನ ಜಪಾನಿನೊಂದಿಗೆ ನಾವು ಹೋಲಿಸುವುದಾದರೆ, ತೀರ ಅಲ್ಪ. ನಾವು ನಿರೀಕ್ಷಿಸಿರುವ ಉತ್ಪನ್ನಕ್ಕೆ ಸರಿಯಾಗಿ ವ್ಯಯಿಸುವುದಕ್ಕೂ ಸಿದ್ಧರಿದ್ದರೆ ಮಾತ್ರ ಉತ್ಪನ್ನ ಹೆಚ್ಚುವುದು. ಸಾಧ್ಯ. ಸಂಪ್ರದಾಯವಾದಿ ಕೃಷಿ ವಿಧಾನಗಳಿಗೆ ಆಧುನಿಕ ಸಂಶೋಧನೆಗಳ ನೆರವು ಸಿಕ್ಕದೇ ಹೋದರೆ ತೀವ್ರತಮ ಕೃಷಿ ವ್ಯವಸಾಯವು ಸಾಧ್ಯವಾಗಲು ಸಾಧ್ಯವಿಲ್ಲ. ಎಂದಿನವರೆಗೆ ಈ ಸಮಸ್ಯೆಗೆ ಪರಿಹಾರ ಹುಡುಕಲು ನೇರ ಮಾರ್ಗವನ್ನು ನಾವು ಅನುಸರಿಸುವುದಿಲ್ಲ ಅಂದಿನವರೆಗೆ ನಾವು ಕುರುಡರಂತೆಯೇ ವರ್ತಿಸಬೇಕಾದೀತು

ಜಪಾನಿನಲ್ಲಿ ನಗದಿ ಬೆಳೆಗೆ ಉತ್ತೇಜನವಿಲ್ಲ. ಅಕ್ಕಿ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ಕೃಷಿರಂಗದಲ್ಲಿ ವಿದ್ಯಾವಂತರೇ ಇದ್ದಾರೆ ಪ್ರತಿ ವಿಷಯದಲ್ಲಿಯೂ ಸಂಶೋಧನೆ ನಡೆಸಿ ಉತ್ಪತ್ತಿ ಹೆಚ್ಚಿಸುವುದನ್ನು ನೋಡುತ್ತಾರೆ. ಕ್ರಿಮಿ ಕೀಟಗಳು ಬಂದಾಗ ಮಾತ್ರ ಔಷಧವನ್ನು ಚಿಮುಕಿಸದೆ ಆಗಾಗ ಚಿಮುಕಿಸುತ್ತಾರೆ ಇದರಿಂದ ನೇಸರ್ಗಿಕ ರಷ್ಟು ಉತ್ಪತ್ತಿ ಹೆಚ್ಚುತ್ತದೆ ಜಪಾನಿನ ಗದ್ದೆಗಳೂ ಚಿಕ್ಕ ಪುಟ್ಟವುಗಳೇ ಒಂದು ಕುಟುಂಬದ ಸರಾಸರಿ ಹಿಡುವಳಿ ೨ ೩ ಎಕ್ರೆಗಳು ಮಾತ್ರ. ಆದರೆ, ರಾಷ್ಟ್ರಕ್ಕೆ ರಾಷ್ಟ್ರವೇ ಅಲ್ಲಿ ದುಡಿಯುತ್ತದೆ. ಗ್ರಾಮದ ಎಲ್ಲ ಕೃಷಿಕರೂ ಸೇರಿದ ಒಂದೊಂದು ಸಹಕಾರಿ ಸಂಘವಿದೆ. ಸಾಲ ಮೂಲಗಳನ್ನೊದಗಿಸಿ ಬೆಳೆಗೆ ನ್ಯಾಯ ಬೆಲೆಯನ್ನು ಒದಗಿಸಿ ನಿಂಗಾಟ ಖರ್ಚುತಗಲನಂತೆ ಮಧ್ಯವರ್ತಿಗಳ ಲಾಭಕ್ಕೆ ಎಡೆಗೊಡದೆ ಒಟ್ಟು ೧೧,೦೦೦ ಸೊಸೈಟಿಗಳ ಮೂಲಕ ಅಕ್ಕಿಯ ವಿತರಣೆಯಾಗುತ್ತಿದೆ ಉತ್ಪತ್ತಿಯಲ್ಲಿ ಖರ್ಚು ಕಡಿಮೆಯಾಗುವಂತೆ ಎಲ್ಲ ಪ್ರಯತ್ನಗಳನ್ನು ಅವರು ಮಾಡುತ್ತಾರೆ ಖರ್ಚುಕಡಿಮೆ ಮಾಡಲು ಉತ್ಪತ್ತಿಯನ್ನು ಹೆಚ್ಚಿಸುವುದೇ ನ್ಯಾಯವಾದ ಮಾರ್ಗವೆಂದವರು ತಿಳಿದಿದ್ದಾರೆ. ಸರಕಾರವೂ ನಿರ್ವಿಶೇಷ ವಿಧಿಸುವಾಗ ಅತಿ ಹೆಚ್ಚಿನ ಉತ್ಪತ್ತಿ ತರುವವರಿಗೆ ಅತಿ ಹೆಚ್ಚಿನ ವಿನಾಯತಿಯನ್ನು ನೀಡಿ ಉತ್ತೇಜಿಸುತ್ತಾರೆ. ನಮ್ಮ ದೇಶದಲ್ಲಿ ವಿದ್ಯಾವಂತರು ಕೃಷಿರಂಗಕ್ಕೆ ಇಳಿಯುವಾಗ ತೀರ್ವೆ ರಿಯಾಯತಿಯನ್ನು ಕೊಡಬಹುದು. ಸೆಕೆಂಡರಿ ಶಿಕ್ಷಣಾವಧಿಯಲ್ಲಿ ಕೃಷಿ ಕೈಗಾರಿಕೆಗಳ ವಶಿಕ್ಷಣ ತರಬೇತಿಯನ್ನು ಬಹುದು ಇದರಿಂದ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗುವುದಲ್ಲದೆ ಕೃಷಿಗೂ ಪ್ರಯೋಜನ ತುಂಬ.

ಕೈಗಾರಿಕೆಯನ್ನು ಬೆಳೆಸುವುದೇ ದೇಶದ ಸಮೃದ್ಧಿಗೆ ಕಾರಣವೆಂಬ ಭಾವನೆ ನಮ್ಮಲ್ಲಿದೆ ಆದರೆ, ಕೃಷಿಯೂ ಒಂದು ಕೈಗಾರಿಕೆಯೆಂಬುದನ್ನು ನಾವು ಮರೆಯುತ್ತೇವೆ ೧೯೫೯ರಲ್ಲಿ ಫೋರ್ಡ್ ಫೌಂಡೇಶನ್ನಿನವರು ಒಪ್ಪಿಸಿದ್ದ ವರದಿಯಲ್ಲಿ ೧೯೬೬ರ ಸುಮಾರು ೨೮ ಮಿಲಿಯ ಟನ್ ಆಹಾರದ ಕೊರತೆ ಬರಬಹುದೆಂದು ಸೂಚನೆ ನೀಡಿದ್ದರೂ ನಾವಿನ್ನೂ ನ ಪರಿಣಾಮ ಹೆಚ್ಚಿನ ಗಮನ ಹರಿಸಲಿಲ್ಲ

ಜಪಾನಿನಲ್ಲಿ ಆಹಾರದ ಕೊರತೆ ಸ್ವಲ್ಪವಿರಲಿಲ್ಲ. ಇಂದು ಆ ಕೊರತೆಯಿಲ್ಲ ಅಲ್ಲಿ ಪ್ರಾಕೃತಿಕ ಅವಾಂತರಗಳು ನಡೆಯುತ್ತಲೇ ಇವೆ ನೆರೆ, ಭೂಕಂಪ, ಜ್ವಾ

(ಅನೇ ಪುಟ ನೋಡಿರಿ)

ಇವುಗಳಲ್ಲಿ ಯಾವುದೊಂದು ಸೇವೆಯನ್ನು ನೀವು ಬಯಸಬಹುದು:

- ವಿದೇಶ ವಿನಿಮಯ.
- ಎಕ್ಸಿಕ್ಯೂಟರ್ ಮತ್ತು ಟ್ರಸ್ಟಿ.
- ಕೈಗಾರಿಕೆಗಳಿಗೆ ಆರ್ಥಿಕ ಸಹಕಾರ.
- ಆರ್ಥಿಕ ವಿಚಾರಗಳಲ್ಲಿ ಸಮಾಚಾರ, ಸಮೀಕ್ಷೆ.
- ವಿದೇಶ ವ್ಯಾಸಂಗಕ್ಕೆ ತೆರಳುವವರಿಗೆ ಮತ್ತು ಚಿಕ್ಕ ಪ್ರಮಾಣದಲ್ಲಿ ವ್ಯಾಪಾರ ಉದ್ಯೋಗಗಳನ್ನು ಪ್ರಾರಂಭಿಸುವ ಉದ್ದಿಮೆಗಳಿಗೆ ಸಾಲ.
- ಸೇಫ್ ಡಿಪಾಸಿಟ್ ಲಾಕರ್ಸ್.
- ವಿದ್ಯಾರ್ಥಿಗಳಿಗೂ ಧಾರ್ಮಿಕ ಸಂಸ್ಥೆಗಳಿಗೂ ವಿಶೇಷ ಸವಲತ್ತುಗಳು.
- ಉಸ್ತುವಾರಿ ಮತ್ತು ನಿರ್ವಹಣೆ.
- ಹೊಸ ಶೇರು ನೀಡಿಕೆಗಳಲ್ಲಿ ಮೇಲ್ತನಿಖೆ

ಅಲ್ಲದೆ ಇತರ ಎಲ್ಲಾ ತರದ ಬ್ಯಾಂಕು ವ್ಯವಹಾರಗಳಿಗೆ—

. . . . .ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ . .

ಯುಕ್ತವಾದ ಆಕಾರ ಯಾವುದು?

ವ್ಯಕ್ತಿ ವಿಷಯವೇ ಆಗಲಿ, ಅಥವಾ ಉದ್ಯಮಕ್ಕೆ ಸಂಬಂಧ ಪಟ್ಟದ್ದೇ ಆಗಲಿ, ಯಾವುದೇ ತರದ ಅವಶ್ಯಕತೆಗಳನ್ನು ಪೂರೈಸಲು ಸಿದ್ಧವಾಗಿರುವ ಬ್ಯಾಂಕು—ಸರಿಯಾದ ಪ್ರಮಾಣದ ಬ್ಯಾಂಕು ಯಾವುದೇ ತರದ ಖಾತೆಗಳನ್ನು—ಸಣ್ಣದಿರಲಿ, ದೊಡ್ಡದಿರಲಿ—ಅವು ಸ್ವಾಗತಿಸಲ್ಪಡಬೇಕು ನಿಮ್ಮ ಬ್ಯಾಂಕಿಂಗ್ ಆವಶ್ಯಕತೆಗಳು ಬದಲಾಗುವುದಾಗಲಿ, ಬೆಳೆಯುವುದಾಗಲಿ, ಅದನ್ನು ಪೂರೈಸಲು ಶಕ್ತವಾಗಿರಬೇಕು.

ಇಂಥ ಒಂದು ಬ್ಯಾಂಕನ್ನು ನೀವು ಬಯಸುವುದಾದರೆ ಸಿಂಡಿಕೇಟ್ ಬ್ಯಾಂಕಿಗೆ ಬನ್ನಿ— ನಮ್ಮ ಸೇವೆಯನ್ನು ಸ್ವೀಕರಿಸಿರಿ ಮೇಲೆ ವಿವರಿಸಲ್ಪಟ್ಟ ಎಲ್ಲಾ ವಿವರಗಳು ನಮಗೆ ಸರಿಯಾಗಿ ಹೊಂದಿಕೊಳ್ಳುತ್ತವೆ ಎಂಬುದು ನಿಮಗೆ ತಿಳಿಯುವುದು, ನಮ್ಮ ಸಾವಿರಾರು ಗಿರಾಕಿಗಳು ಇದನ್ನು ಕಂಡುಕೊಂಡಿದ್ದಾರೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು, ಮಣಿಪಾಲ

ಶಾಖೆಗಳು 192 ಚಲಾವಣಾ ಸಂಪತ್ತು ರೂ. 60 ಕೋಟಿಗೂ ಮಿಕ್ಕಿದೆ.

ನವಯುಗ

ವರುಷ	ಉಡುಪಿ	ವಾರ
೪೩	೨೭-೮-೧೯೬೪	೫೧

ಬೆಲೆಯೇರಿಕೆಗೆ ತಡೆ

ಭಾರತದಲ್ಲಿ ಶಾಸ್ತ್ರಿ ಸಂಪುಟವು ಅಧಿಕಾರ ಗ್ರಹಣ ಮಾಡಿದೊಡನೆಯೇ ಅದು ಎದುರಿಸಬೇಕಾಗಿ ಬಂದ ಸಮಸ್ಯೆಯೆಂದರೆ, ಆಹಾರ ವಸ್ತುಗಳ ಅಭಾವ ಮತ್ತು ಅವಶ್ಯಕ ಪದಾರ್ಥಗಳ ಬೆಲೆಯೇರಿಕೆ. ಪದಾರ್ಥಗಳ ಬೆಲೆಯೇರುವುದಕ್ಕೆ ಅತಿಪ್ರಸರಣ ಮಾತ್ರವಲ್ಲದೆ ಗಳಿಕೆ ಮತ್ತು ಬೇಡಿಕೆಗಳು ಸಮತೂಕದಲ್ಲಿಲ್ಲದಿರುವುದೂ ಮುಖ್ಯ ಕಾರಣ. ಆಹಾರ ಧಾನ್ಯಗಳ ಕೊರತೆಯು ಕಾಣಿಸುವ ಮುನ್ಸೂಚನೆಗಳು ೧೯೬೧ರಷ್ಟು ಹಿಂದೆಯೇ ದೊರಕಿದ್ದರೂ ನಾವತ್ತ ಕಡೆ ಹೆಚ್ಚಿನ ಗಮನ ಹರಿಸಲಿಲ್ಲ; ಅಥವಾ ಯೋಜನೆಯ ಫಲದ ಮೇಲೆ ಭರವಸೆಯಿಟ್ಟು ಸುಮ್ಮನಿದ್ದಿರಲೂ ಬಹುದು. ಯೋಜನೆಯ ಪರಿಣಾಮವಾಗಿ ಕೃಷ್ಯುತ್ಪನ್ನದಲ್ಲಿ ಅಲ್ಪಮಟ್ಟಿಗೆ ಹೆಚ್ಚಳವಾಗಿದ್ದರೂ ಜನಸಂಖ್ಯೆಯ ಹೆಚ್ಚಳದೊಡನೆ ಹೋಲಿಸಿದಾಗ ಇದು ತೀರ ಅಸಮಾಧಾನಕರವಿದೆ. ಆದುದರಿಂದಲೇ ಆಹಾರದ ಬಗ್ಗೆ ಎಲ್ಲೆಡೆಯೂ ಕೂಗು ಇಂದು ಕೇಳಿ ಬರತೊಡಗಿದೆ.

ಕೇಂದ್ರ ಆಹಾರ ಶಾಖಾ ಮಂತ್ರಿಗಳು ವಿವಿಧ ರಾಜ್ಯಗಳ ಮುಖ್ಯ ಮಂತ್ರಿ ಮೊದಲಾದವರೊಡನೆ ಪರಿಶೀಲನೆ ನಡೆಸಿದರು. ಪ್ರತಿ ರಾಜ್ಯದಲ್ಲಿಯೂ ಆಹಾರ ಧಾನ್ಯಗಳನ್ನು ಮಾರುವ ಬೆಲೆಯನ್ನು ನಿರ್ಧರಿಸಿ ಘೋಷಿಸಿದರು. ಆದರೆ, ಆ ಬೆಲೆಯಲ್ಲಿ ಮಾರುಕಟ್ಟೆಯಲ್ಲಿ ಧಾನ್ಯಗಳೇ ಇಲ್ಲವೆಂಬಂತಹ ಅಭಾವ ಪರಿಸ್ಥಿತಿಯಿಂದು ತಲೆದೋರಿದೆ. ಕೇಂದ್ರವು ತನ್ನಿಂದಾದಷ್ಟು ಧಾನ್ಯಗಳನ್ನು ರಾಜ್ಯಗಳಿಗೆ ಪೂರೈಕೆ ಮಾಡುತ್ತಿರುವುದಾದರೂ ಅಭಾವ ಪರಿಸ್ಥಿತಿಯು ಸುಧಾರಿಸುವ ಸಲ್ಲಕ್ಷಣಗಳಿಂದು ಗೋಚರವಾಗುತ್ತಿಲ್ಲ. 'ಸಂಗ್ರಹಕಾರ'ರು ತಮ್ಮ ಸಂಗ್ರಹವನ್ನು ಹೊರತೆಗೆಯಲು ಹಿಂಜರಿಯುತ್ತಾರೆ; ಸರಕಾರ ನಿರ್ದಿಷ್ಟ ಬೆಲೆಯಲ್ಲಿ ಮಾರುವುದರಿಂದ ನಷ್ಟವಾಗುತ್ತದೆ ಎನ್ನುತ್ತಾರೆ. ಇದರಿಂದಾಗಿ ಹುಟ್ಟಿಕೊಂಡಿರುವ ಅಭಾವವು ಕೇವಲ ಕೃತಕವೆನ್ನಲೇ ಬೇಕು. ಆಹಾರದಂತಹ ಮುಖ್ಯ ವಿಷಯಗಳಲ್ಲಿ ಸರಕಾರವು ಕೈಗೊಳ್ಳುವ ಕ್ರಮಗಳ ಕುರಿತು ಸಾಕಷ್ಟು ಪೂರ್ವಭಾವಿಯಾಗಿಯೇ ಸೂಚನೆಗಳು ನೀಡಲ್ಪಟ್ಟುದರಿಂದ ಸಂಗ್ರಹಕಾರರಿಗೆ ಅಸಂಗ್ರಹಿಗಳೆನ್ನಲು ಸಾಕಷ್ಟು ಅವಕಾಶವಿತ್ತು. ಅಲ್ಲದೆ, ಮಾರುಕಟ್ಟೆಗೆ ಸುರಿಯಲು ಸರಕಾರದೊಡನೆ ಬೇಕಷ್ಟು ಸಂಗ್ರಹವಿದ್ದರೆ, ಆ ವಿಷಯ ಬೇರೆಯಿತ್ತು. ಪಾಕಿಸ್ತಾನ, ಅಮೆರಿಕೆ, ಬರ್ಮಾ, ಆಸ್ಟ್ರೇಲಿಯಾ ಮೊದಲಾದ ದೇಶಗಳಿಂದ ಏಕಕ್ಷಣದಲ್ಲಿ ಧಾನ್ಯಗಳು ಬರುವುದು ಸಾಧ್ಯವಿಲ್ಲ. ಹಾಗಾಗಿ, ಜನರಿಗೆ ನಿರ್ದಿಷ್ಟ ಬೆಲೆಯಲ್ಲಿ ಅವು ದೊರಕುವುದೆಂತು? ಹೆಚ್ಚು ಬೆಲೆ ತೆತ್ತಾದರೂ ಕೊಳ್ಳೋಣವೆಂದರೆ, ಅದಕ್ಕೂ ಆತಂಕ ಬಂದಂತಾಗಿದೆ. ಒಬ್ಬೊಬ್ಬರ ಸಂಗ್ರಹವನ್ನು ಜಪ್ತು ಮಾಡಿದರೆಂಬ ವಾರ್ತೆಯಿಂದ ಸಾಹುಕಾರರು ಕಪ್ಪು ಮಾರುಕಟ್ಟೆ ಮಾಡುವುದೂ ಸಾಧ್ಯವಿಲ್ಲದಂತಾಗಿದೆ. ಹಾಗಾದರೆ, ಸರವೇರಿದಿಂದ ಆಹಾರ ಧಾನ್ಯ ಬರುವ ವರೆಗೆ ಜನಸಾಮಾನ್ಯರು ಉಪವಾಸ ಕೂತುಕೊಳ್ಳಬೇಕೆ? ಈ ದಿಸೆಯಲ್ಲಿ ಸರಕಾರದ ಹೆಜ್ಜೆ ಸರಿಯೆನ್ನುವುದು ಸಾಧ್ಯವಿಲ್ಲ. ಈಗಂತೂ ಹೆಜ್ಜೆಯಿಟ್ಟಾಯಿತು; ಅದನ್ನೇ ಮುಂದಿಟ್ಟು ಸಂಗ್ರಹಗಳನ್ನು ನಿರ್ದಾಕ್ಷಿಣ್ಯವಾಗಿ ಪೇಟೆಗೆಳೆಯುವ ಕ್ರಮವನ್ನು ಕಟ್ಟುನಿಟ್ಟಿನಿಂದ ಪಾಲಿಸಬೇಕು.

ಆಹಾರಾದಿ ವಸ್ತುಗಳ ಬೆಲೆಯೇರಿಕೆಯತ್ತ ಸರಕಾರದ ಗಮನ ಸೆಳೆಯಲು ಸಂಪೇ ಮೊದಲಾದ ಕ್ರಮಗಳನ್ನು ವಿರೋಧೀ ಪಕ್ಷದವರು ಸಂಘಟಿಸಿದ್ದಾರೆ. ಮಹಾರಾಷ್ಟ್ರವು ಅದರಲ್ಲೂ ದಾಖಲೆಯನ್ನು ಸ್ಥಾಪಿಸಿತು. 'ಭಾರತ ಬಂದ್' ದಿನವೂ ಸದ್ಯೋ ಭವಿಷ್ಯದಲ್ಲಿದೆಯೆಂದು ತಿಳಿಯುತ್ತದೆ. ಆದರೆ, ಇಂತಹ ಸಂಪಿನಿಂದ ಆಗುವುದಾದರೂ ಏನು? ಒಂದು ದಿನವಲ್ಲ ಒಂದು ವಾರ ಸಂಪು ನಡೆದರೂ ಸಂಪಿನ ಕಾರಣದಿಂದ ಬೆಲೆಯಿಳಿಯುವುದಿಲ್ಲ; ಬದಲಿಗೆ ಉತ್ಪಾದನೆಗೆ ಆತಂಕವಾಗಿ ಅಭಾವ ಮತ್ತೂ ಹೆಚ್ಚುವುದು. ಇನ್ನು ಸರಕಾರದ ಗಮನವೀಕಡೆಗೆ ಹರಿಸುವ ಉದ್ದೇಶವಾದರೆ ಅದು ಅವಶ್ಯಕ ಕ್ರಮ ಕೈಗೊಳ್ಳಲು ತಯಾರಿ ನಡೆಸುತ್ತಿರುವಾಗ, ಸೂಕ್ತ ಸಲಹೆ ಮತ್ತು ಕ್ರಮಗಳನ್ನು ಸರಕಾರದ ಮುಂದಿಟ್ಟು ಅವನ್ನು ಕಾರ್ಯಕೃತಗೊಳಿಸುವುದನ್ನು ಬಿಟ್ಟು ಸಂಪಿನಂತಹ ವಿನಾಶಕಾರಿ ಚಟುವಟಿಕೆಗಳಲ್ಲಿ ತಮ್ಮ ಬುದ್ಧಿ-ಶಕ್ತಿಗಳನ್ನು ವ್ಯಯಿಸುವುದು ದೇಶ ಹಿತದೃಷ್ಟಿಯಿಂದ ಹಿತವಲ್ಲ. ಪ್ರಧಾನಿ ಶಾಸ್ತ್ರಿಯವರು ವಿರೋಧೀ ಪಕ್ಷಗಳ ನಾಯಕರನ್ನು ಕರೆದು ಅವರೊಡನೆ ಅಭಾವ ನಿವಾರಣೆಯ ಬಗ್ಗೆ ಚರ್ಚಿಸಿದ್ದನ್ನೂ ಅವರ ಸಹಕಾರ ಯಾಚಿಸಿದ್ದನ್ನೂ ನಾವು ಮರೆತು ಬಿಡುವಂತಿಲ್ಲ. ಸರಕಾರವು ಮಾಡುವ ಕಾರ್ಯಗಳಿಗೆ ಸಮುಚಿತ ಸಹಕಾರವನ್ನು ನೀಡಿ, ಪರಿಸ್ಥಿತಿಯನ್ನು ತಿಳಿಗೊಳಿಸುವಲ್ಲಿ ತಮ್ಮ ನೆರವೀಯುವುದೂ, ಸರಕಾರವು ತಪ್ಪು ಮಾಡಿದ್ದಲ್ಲಿ ಅದು ನ್ಯಾಯ ವಿಧಾನಗಳಿಂದ ತಿದ್ದಿಕೊಳ್ಳುವಂತೆ ಮಾಡುವುದೂ ಪ್ರಜಾಪ್ರಭುತ್ವದಲ್ಲಿ ವಿರೋಧಿ ಪಕ್ಷಗಳ ಕರ್ತವ್ಯ. ಸಂಪು-ಸತ್ಯಾಗ್ರಹಾದಿಗಳಿಗೆ ಪ್ರಜಾಸತ್ತೆಯಲ್ಲಿ ಹೆಚ್ಚಿನ ಯಶಃ ಲಭಿಸಲಾರದು; ಆದರಿಂದ ವಾಂಛಿತ ಫಲ ಸಿದ್ಧಿಸಲಾರದು.

ನಮ್ಮ ಕುರಿತು

ಈ ಸಂಚಿಕೆಯೊಡನೆ “ನವಯುಗ”ದ ೪೩ನೆಯ ವರ್ಷವು ಮುಗಿಯುತ್ತದೆ. ಮುಂದಿನ ಸಂಚಿಕೆಯಿಂದ ೪೪ನೆಯ ವರ್ಷಾರಂಭ. "ನವಯುಗ"ವನ್ನು ಇನ್ನಷ್ಟು ಜನಪ್ರಿಯಗೊಳಿಸುವ ಇರಾದೆಯಿಂದ ಕೂಡಿದ ನಾವು ಅದರ 'ಪರಿಷ್ಕರಣ'ದ ಕುರಿತಾಗಿ ತುಂಬ ಯೋಚಿಸುತಿದ್ದೇವೆ. ಇಂದಿನ ಜನಮನವನ್ನು ಹೇಗೆ ಹೊಂದಿಸಿಕೊಳ್ಳಬಹುದೆಂಬುದನ್ನೂ ವಿವೇಚಿಸಿದ್ದೇವೆ. ಕಾಲಕಾಲಕ್ಕೆ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುತ್ತಲೂ ಬಂದಿದ್ದೇವೆ.

ಮುಂದಿನ ವರ್ಷದಿಂದ ಇನ್ನೂ ಹಲವಾರು ಮಾರ್ಪಾಟುಗಳನ್ನು ಮಾಡುವ ವಿಚಾರ ನಮ್ಮದು. ಇದನ್ನು ಸದ್ಯ ಕೇವಲ 'ಪ್ರಾಯೋಗಿಕ'ವಾಗಿ ಕೈಗೊಂಡು ಮುಂದೆ ನಿರ್ದಿಷ್ಟ ರೂಪ ಕೊಡುವವರಿದ್ದೇವೆ. ಹೊಸ ಯೋಜನೆಯಂತೆ ಹಲವಾರು ಸ್ಥಿರ ಶೀರ್ಷಿಕೆಗಳು ಹುಟ್ಟಿಕೊಳ್ಳುವುವು. ೧೬ ಪುಟಗಳಿಂದ ಕೂಡಿ ಮುಖಪೃಷ್ಠವನ್ನು ಹೊಂದಿರುವುದು. ಆದಷ್ಟು ಹೆಚ್ಚಿನ ವಿಚಾರಗಳನ್ನು ವಾಚಕರಿಗೆ ಒದಗಿಸುವ ಪ್ರಯತ್ನ ಮಾಡಲಾಗುವುದು. ಈ ಪ್ರಯತ್ನದಲ್ಲಿ ನಮ್ಮ ಲೇಖಕ ಬಂಧುಗಳು, ಜಾಹಿರಾತುದಾರರು, ಚಂದಾದಾರರು ಮತ್ತು ವಾಚಕಾಭಿಮಾನಿಗಳು ಇಂದಿಗಿಂತಲೂ ಅಧಿಕ ಪ್ರಮಾಣದಲ್ಲಿ ತಮ್ಮ ಸಹಕಾರ ನೀಡುವರೆಂದು ನಮ್ಮ ಹಾರೈಕೆ, ಇದುವರೆಗೆ ಇತ್ತ ನೆರವಿಗಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವುದರೊಡನೆ 'ನವಯುಗ'ದ ಶ್ರೇಯೋಕಾಂಕ್ಷಿಗಳಾದ ಅವರ ಬೆಂಬಲವನ್ನು ನಂಬಿಯೇ ಅಸಾಧ್ಯವಾದ ಹೊಸ ಉಪಕ್ರಮವನ್ನು ತೊಡಗುವ ಧೈರ್ಯ ಮಾಡಿದ್ದೇವೆಯೆಂದು ವಿನಯದಿಂದ ಸೂಚಿಸ ಬಯಸುತ್ತೇವೆ.

ಜಗತ್ಪರ್ಯಟನ

ರಾಷ್ಟ್ರಾಧ್ಯಕ್ಷರ ಸಂದೇಶ

ಆಧುನಿಕ ಭಾರತದ ಭವಿಷ್ಯವನ್ನು ರೂಪಿಸಲು ತನ್ನ ಜೀವನವನ್ನೇ ಮುಡಿಪಾಗಿಟ್ಟ ನಮ್ಮ ದಿವಂಗತ ಪ್ರಧಾನಿ ಜವಾಹರಲಾಲರ ಆದರ್ಶಗಳ ಪಾಲನೆ ಮತ್ತು ಧ್ಯೇಯಗಳ ಸಾಧನೆಗಾಗಿ ನಾವು ನಮ್ಮನ್ನೇ ಮೀಸಲಾಗಿಡಬೇಕೆಂದು ರಾಷ್ಟ್ರಪತಿ ಡಾ| ರಾಧಾಕೃಷ್ಣನರು ಸ್ವಾತಂತ್ರ್ಯ ದಿನದ ಸಂದೇಶವನ್ನು ದೇಶದ ಜನತೆಗೀಯುತ್ತಾ ಹೇಳಿರುವರು. ಸದ್ಯ ದೇಶವು ಎದುರಿಸುತ್ತಿರುವ ಕಠಿಣ ಪರಿಸ್ಥಿತಿಯನ್ನು ಐಕ್ಯದೊಂದಿಗೆ ನಾವು ಎದುರಿಸಬೇಕೆಂದೂ ಪರಿಸ್ಥಿತಿಯನ್ನೆದುರಿಸಲು ದೃಢತೆಯ ಕಾರ್ಯಾಚರಣೆ ಅಗತ್ಯ ಎಂದೂ ಅವರು ಹೇಳಿರುವರು.

ಗಡಿತಂಟೆಯ ಬಗ್ಗೆ ವರದಿ

ಮೈಸೂರು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಗೃಹಮಂತ್ರಿ ಶ್ರೀ ನಂದಾರವರು ತಮ್ಮ ವರದಿಯನ್ನು ಪ್ರಧಾನಿಗಳಿಗೆ ಕಳೆದ ತಾ ೧೪ರಂದು ಸಲ್ಲಿಸಿರುವರೆಂದು ತಿಳಿದು ಬರುತ್ತದೆ. ಉಭಯ ಪ್ರಾಂತ್ಯಗಳ ಮುಖ್ಯ ಮಂತ್ರಿಗಳೊಂದಿಗೆ ಜಂಟಿ ಸಮಾಲೋಚನೆ ನಡೆಸಿದ ಬಳಿಕವೇ ಈ ವರದಿ ಸಲ್ಲಿಸಲಾಗಿದೆ ತಿಳಿದು ಬಂದಿದೆ. ಮೈಸೂರು ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಬೆಳಗಾವಿ, ನಿಪ್ಪಾಣಿ, ಕಾರವಾರಗಳ ಕುರಿತು ದೃಢ ನಿಲುವು ತಳೆದಿರುವರೆಂದೂ ಉಳಿದ ಪ್ರದೇಶಗಳ ಬಗ್ಗೆ ಅಲ್ಪ ಸ್ವಲ್ಪ ಹೊಂದಾಣಿಕೆಗೆ ಅವರು ಒಪ್ಪಿಗೆ ನೀಡಿರುವರೆಂದೂ ವರದಿ. ಈ ವರದಿಗೆ ಪ್ರಧಾನಿಗಳ ಪ್ರತಿಕ್ರಿಯೆಯೇನೆಂಬುದನ್ನು ಕಾದು ನೋಡಬೇಕಷ್ಟೆ.

ವಿದ್ಯಾರ್ಥಿಗಳ ಸಂಪು

ಕರ್ನಾಟಕ ಯೂನಿವರ್ಸಿಟಿಯ ಕಕ್ಷೆಗೆ ಒಳಪಟ್ಟ ಕಾಲೇಜುಗಳ ವಿದ್ಯಾರ್ಥಿಗಳು ಒಂದು ತಿಂಗಳಿಗಿಂತಲೂ ಮೊದಲು ಆರಂಭಿಸಿರುವ ಸಂಪು ಇನ್ನೂ ಮುಂದುವರಿಯುತ್ತಿದೆ. ಉತ್ತರ ಕರ್ನಾಟಕದಿಂದ ಈ ಸಂಪಿನ ಗಾಳಿ ಬೆಂಗಳೂರಿಗೂ ಹಬ್ಬಿ, ಇದೀಗ ಇಡೀ ರಾಜ್ಯದಲ್ಲಿ ಪಸರಿಸುವುದರಲ್ಲಿದೆ. ವಿದ್ಯಾರ್ಥಿಗಳು, ಪಾಲಕರೂ, ಸಾರ್ವಜನಿಕರೂ ತಂಡ ತಂಡವಾಗಿ ಉಪವಾಸ ಮಾಡುತ್ತಿದ್ದಾರೆ. ಸರಕಾರದ ನಿಲುವು ತಾ. ೨೪ರೊಳಗೆ ತಿಳಿಯದಿದ್ದಲ್ಲಿ ಆಮರಣ ಉಪವಾಸ ಆರಂಭಿಸುವುದಾಗಿಯೂ ಕ್ರಿಯಾ ಸಮಿತಿಯು ಹೇಳಿದೆ. ಏಕರೂಪದ ಶುಲ್ಕದ ವಿಚಾರವು ಸರಕಾರಕ್ಕೆ ಸೇರಿದುದಲ್ಲ ಎಂದು ವಿದ್ಯಾಮಂತ್ರಿಗಳು ಹೇಳುತ್ತಿದ್ದಾರೆ. ಪರಿಸ್ಥಿತಿಯು ವಿಕೋಪಕ್ಕೆ ಹೋಗದೆ ಶಾಂತ ರೀತಿಯ ಚಳವಳ ಸಾಗುತ್ತಿದೆ ಎಂಬುದು ಸಮಾಧಾನಕರ ಸಂಗತಿ. ಇದರ ಅಂತಿಮ ಪರಿಣಾಮ ಏನೆಂಬ ಬಗ್ಗೆ ಎಲ್ಲೆಲ್ಲೂ ಕುತೂಹಲ ಹಬ್ಬಿದೆ. ತಾ. ೨೭ರ ಬಳಿಕ ಸರಕಾರೀ ಹೇಳಿಕೆ ಕೊಡಬಹುದಾಗಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಜಯಪ್ರಕಾಶರು ಪಾಕಿಸ್ತಾನಕ್ಕೆ

ಸರ್ವೋದಯ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಇದೇ ಸಪ್ಟಂಬರ ೨ಕ್ಕೆ ಪಾಕಿಸ್ತಾನ ಸರಕಾರದ ಆಮಂತ್ರಣದ ಮೇರೆಗೆ ಪಾಕಿಸ್ತಾನವನ್ನು ಸಂದರ್ಶಿಸಲಿರುವರೆಂದು ತಿಳಿದು ಬಂದಿದೆ. ಕಾಶ್ಮೀರದ ಸಮಸ್ಯೆಯನ್ನು ಇನ್ನೆರಡು ವರ್ಷಗಳವರೆಗಾದರೂ ಎತ್ತಬಾರದೆಂದು ಪಾಕ್ ಅಧ್ಯಕ್ಷ ಅಯೂಬಖಾನರ ಮನ ಒಲಿಸುವುದಾಗಿ ಅವರು ಹೇಳಿರುವರು. ಉಭಯ ದೇಶಗಳೂ ಪರಸ್ಪರ ತಿಳುವಳಿಕೆ ಹಾಗೂ ಸಹಕಾರಗಳನ್ನು ಬಳೆಸಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ ಎಂಬುದನ್ನು ಪಾಕಿಸ್ತಾನಿ ನಾಯಕರಿಗೆ ತಾವು ಬಿಂಬಿಸಲು ಯತ್ನಿಸುವುದಾಗಿಯೂ ಅವರು ಹೇಳಿದ್ದಾರೆ.

ನಾಗಾಲ್ಯಾಂಡಿನಲ್ಲಿ ಸಮರವಿರಾಮ

ನಾಗಾಲ್ಯಾಂಡಿನಾದ್ಯಂತ ಸಪ್ಟಂಬರ ದಿನಾಂಕ ೫ ಹಾಗೂ ೬ರ ಮಧ್ಯರಾತ್ರಿಯ ವೇಳೆ ಸಮರವಿರಾಮ ಹೂಡಬೇಕೆಂಬ ಭಾರತ ಸರಕಾರದ ಸೂಚನೆಯನ್ನು ನಾಗಾ ವಿದ್ರೋಹಿಗಳ ನಾಯಕರು ಅಂಗೀಕರಿಸಿದ್ದಾರೆ. ನಾಗಾಲ್ಯಾಂಡಿನಲ್ಲಿ ಶಾಂತಿ ಸ್ಥಾಪನೆ ಮಾಡುವ ಉದ್ದೇಶದ ಮಾತುಕತೆಗಳಿಗೆ ಇದು ನಾಂದಿಯಾಗಲಿದೆ. ಶಾಂತಿ ಮಾತುಕತೆಗಳು ಸಪ್ಟಂಬರದ ಮಧ್ಯಕಾಲದ ವೇಳೆ ಕೊಹಿಮಾದಲ್ಲಿ ಜರಗಬಹುದೆಂದು ಊಹಿಸಲಾಗಿದೆ.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ “ನವಯುಗ”ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆಯ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ “ನವಯುಗ”ದ ಖಾತೆಗೆ ಯಾವ ಖರ್ಚಿಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ ಪಿ ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ.

ಅಲ್ಲಲ್ಲಿಯ ಸುದ್ದಿ ಸಾರ

ಸ್ವಾತಂತ್ರ್ಯ ದಿನಾಚರಣೆ:— ಉಡುಪಿ ನಗರ ಸಭೆಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಉಡುಪಿ ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ, ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಾರಂಭದಲ್ಲಿ ನಗರ ಸಭಾಪತಿ ಶ್ರೀ ಪಿ. ರಂಗನಾಥಶೆಣೈಯವರು ಸ್ವಾಗತಿಸಿದ ಬಳಿಕ, ಪ್ರೊ|| ಎಸ್. ಕೆ. ಶ್ರೀಪತಿ ಆಚಾರ್ಯ ಹಾಗೂ ಶ್ರೀ ಎಂ. ರಾಜಗೋಪಾಲಾಚಾರಿಯವರು ಸ್ವಾತಂತ್ರ್ಯ ದಿನಾಚರಣೆಯ ಕುರಿತು ಮಾತನಾಡಿದರು. ವಿವಿಧ ಮನೋರಂಜನೆಗಳೊಂದಿಗೆ ಸಭಾಂತ್ಯವಾಯಿತು.

ಬೆಳಗ್ಗೆ ಧ್ವಜಾ ರೋಹಣ ಸಮಾರಂಭವು ಉಡುಪಿ ಗಾಂಧಿಮೈದಾನಿನಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಅರೂರು ಲಕ್ಷ್ಮೀ ನಾರಾಯಣ ರಾಯರು ಕೊಟ್ಟ ಸಿಹಿ ತಿಂಡಿಯನ್ನು ಶಾಲಾ ಮಕ್ಕಳಿಗೆ ಹಂಚಲಾಯಿತು.

ಕುಷ್ಟರೋಗ ಚಿಕಿತ್ಸಾ ಕೇಂದ್ರದ ಉದ್ಘಾಟನೆ — ಹಿಂದ್ ಕುಷ್ಟ ನಿವಾರಣ ಸಂಘದ ಉಡುಪಿ ಶಾಖೆಯವರು ಮಣಿಪಾಲ ಕಸ್ತೂರ್‌ಬಾ ಜನರಲ್ ಆಸ್ಪತ್ರೆಯಲ್ಲಿ ಆರಂಭಿಸಿರುವ ಕುಷ್ಟರೋಗ ಚಿಕಿತ್ಸಾ ಕೇಂದ್ರವನ್ನು ತಾ 19ರಂದು ದ. ಕ ಜಿಲ್ಲಾಧಿಕಾರಿ ಶ್ರೀ ಪಿ. ಎಂ. ಮುಜಾಹಿದ್ ಅವರು ಉದ್ಘಾಟಿಸುತ್ತ ಸಮಾಜದಲ್ಲಿ ದೂರ ಮಾಡಲಾಗಿರುವ ಅನೇಕರಿಗೆ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವುದಕ್ಕಿಂತ ಉಚ್ಚ ಸೇವೆ ಇನ್ನಾವುದೂ ಇಲ್ಲವೆಂದರು. ಉಪಾಧ್ಯಕ್ಷ ಡಾ|| ಕೆ. ಎಲ್. ಬಿಠಾಳ್ ಎಲ್ಲರನ್ನೂ ಸ್ವಾಗತಿಸಿದರು. ಆರ್ಥಿಕಾಭಿವೃದ್ಧಿ ಸಮಿತಿಯ ಶ್ರೀ ರಮೇಶ ಪೈ ಮಾತನಾಡಿ ಈ ಕೇಂದ್ರ ಗ್ರಾಮಾಂತರ ಪ್ರದೇಶದಲ್ಲಿರುವ ರೋಗಿಗಳಿಗೆ ಉಪಯುಕ್ತವಾಗುವುದೆಂದರು. ಈ ಜಿಲ್ಲೆಯಲ್ಲಿ ಇರಬಹುದಾದ ಸುಮಾರು ೧೦,೦೦೦ ಕುಷ್ಟರೋಗಿಗಳ ಪೈಕಿ ಬಹುಪಾಲು ಮಂದಿ ಹಳ್ಳಿಗಳಲ್ಲಿರುವುದರಿಂದ ಸಣ್ಣ ಊರುಗಳಲ್ಲಿ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಹಿಂದ್ ಕುಷ್ಟ ನಿವಾರಣಾ ಸಂಘದ ದಕ್ಷಿಣ ಕನ್ನಡ ಶಾಖೆಯ ಗೌರವ ಕಾರ್ಯದರ್ಶಿ ಡಾ|| ಎ. ಎಫ್. ಕೊಯಲ್ಹೋರವರು ಹೇಳಿದರು.

ಇಂತಹ ಕೇಂದ್ರಗಳು ರೋಗಿಗಳಿಗೆ ಆಶೋದಯವಾಗುವಂತೆ ಮಾಡುತ್ತವೆಂದೂ ಶ್ರೀ ಮುಜಾಹಿದ್ ನುಡಿದರು. ಇಂತಹ ಕೇಂದ್ರಗಳನ್ನು ಸಾಧ್ಯವಿರುವಷ್ಟು ಬೇಗನೆ ಆರಂಭಿಸುವುದಗತ್ಯವೆಂದರು ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಮಧ್ವರಾಜ್ ಎಂ.ಎಲ್.ಎ ರವರು ಈ ಕೇಂದ್ರವನ್ನು ಆರಂಭಿಸುವವರ ಉತ್ಸಾಹವನ್ನು ಪ್ರಶಂಸಿಸಿ ಈ ಕೇಂದ್ರ ಚೆನ್ನಾಗಿ ಬೆಳೆದು ರೋಗಿಗಳಿಗೆ ಸೇವೆ ಸಲ್ಲಿಸುವಂತಾಗಲೆಂದು ಹಾರೈಸಿದರು. ಗೌರವ ಕಾರ್ಯದರ್ಶಿ ಡಾ|| ಕೆ. ಮೋಹನ್‌ದಾಸ್ ಪೈ ವಂದನೆಗಳನ್ನು ಅರ್ಪಿಸಿದರು.

ಎಲ್. ಐ ಸಿ. ನೌಕರರಿಂದ ಮೌನ ಪ್ರದರ್ಶನ— ಉಡುಪಿ ಜೀವ ವಿಮಾ ಕಾರ್ಪೊರೇಶನು ತನ್ನ ಆಡಳಿತಾ ವಿಧಾನದಲ್ಲಿ ಮಾಡಬೇಕೆಂದಿರುವ ಬದಲಾವಣೆಗಳು ಹಾಗೂ ಈ ದಿಸೆಯಲ್ಲಿ ಕೈಕೊಂಡ ಏಳ ಮುಖವಾದ ಕಾರ್ಯಕ್ರಮಗಳ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಕಳೆದ ತಾ. ೧೭ರಂದು ಇಲ್ಲಿಯ ಡಿವಿಜನಲ್ ಹಾಗೂ ಬ್ರಾಂಚು ಆಫೀಸುಗಳಲ್ಲಿ ದುಡಿಯುತ್ತಿರುವ ನೂರಾರು ನೌಕರರು ಮೌನ ಪ್ರದರ್ಶನವನ್ನು ನಡೆಸಿದರು. ಡಿವಿಜನಲ್ ಆಫೀಸಿನ ಎದುರು ಸಂಜೆ ತಾಸು ೫-೩೦ಕ್ಕೆ ನೌಕರರು ನೆರೆದು: ‹‹ಹೊಸ ಆಡಳಿತಾ ಯೋಜನೆಯ ಕೈಬಿಡಿರಿ'', ನೌಕರರ ಸಂಘಗಳೊಡನೆ ಸಮಾಲೋಚನೆ ನಡೆಸಿರಿ''; ‹ಅಧಿಕಾರದ ಕೇಂದ್ರೀಕರಣ ಸಾಧುವಲ್ಲ"; "ನೌಕರರ ಹಿತವನ್ನು ಬಲಿಗೊಡಬೇಡಿರಿ" ಮತ್ತು ‹‹ಉಡುಪಿ ಡಿವಿಜನಲ್ ಆಫೀಸನ್ನು ಉಡುಪಿಯಲ್ಲೇ ಉಳಿಸಿರಿ" ಎಂಬಿತ್ಯಾದಿ ಘೋಷಣೆಗಳನ್ನೆಬ್ಬಿಸಿದರು

ಉಡುಪಿ ಬ್ರಾಂಚ್ ಆಫೀಸಿನ ಕ್ಷೇತ್ರಾಧಿಕಾರಿಗಳೂ ಈ ಮೌನಪ್ರದರ್ಶನದಲ್ಲಿ ಭಾಗವಹಿಸಿದ್ದು ತಮ್ಮ ಸಂಪೂರ್ಣ ಸಹಕಾರವನ್ನಿತ್ತರು. ಈ ದಿಸೆಯಲ್ಲಿ ಸಾರ್ವಜನಿಕರ ಗಮನ ಸೆಳೆಯಲು ಹಲವಾರು ಕಾರ್ಯಕ್ರಮಗಳು ಸದ್ಯವೇ ನಿರೂಪಿಸಲ್ಪಡಲಿವೆ ಎಂದು ಹೇಳಲಾಗಿದೆ.

ಯೂನಿಯನ್ ಉದ್ಘಾಟನೆ:— ಎಂ. ಜಿ. ಎಂ ಕಾಲೇಜಿನ ಪ್ರಸ್ತುತ ವರ್ಷದ ವಿದ್ಯಾರ್ಥಿ ಸಂಘವನ್ನು ಇದೇ ತಾ. 4ರಂದು ಕಾಲೇಜಿನ ಹೊಸ ಟ್ರಸ್ಟ್ ಮೆಂಬರರಾದ ಶ್ರೀ ಎಂ. ಮಧ್ವ ರಾಜ್, ಎಂ ಎಲ್ ಎ. ಅವರು ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಯೂನಿಯನ್ ಅಧ್ಯಕ್ಷ ಶ್ರೀ ಕೆ. ಪ್ರಭಾಕರ ಶೆಟ್ಟಿ ರು ಸ್ವಾಗತಿಸಿದ ತರುವಾಯ ಶ್ರೀ ಮಧ್ವರಾಜರು ಉದ್ಘಾಟನಾ ಭಾಷಣದಲ್ಲಿ ಭಾರತ ಪ್ರಜಾಪ್ರಭುತ್ವದ ದಾರಿಯಲ್ಲಿ ಮುನ್ನಡೆಯಬೇಕಾದ ಪ್ರಜೆಗಳಲ್ಲಿ ಯೋಗ್ಯರೂ, ಸಂಸ್ಕೃತರೂ, ನಿಸ್ಪೃಹರೂ ಆಗಿ ಶ್ರಮಪಟ್ಟು ದುಡಿಯಬೇಕಾದುದು ಅಗತ್ಯವೆಂದು ತಿಳಿಸಿದರು. ತಮ್ಮ ವಿದೇಶ ಸಂಚಾರಗಳಲ್ಲಿ ಅವರು ಕಂಡ ಮನನೀಯ ಅಂಶಗಳನ್ನು ವಿವರಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಮೋಹನ ರೈ ಇವರು ಧನ್ಯವಾದಗಳನ್ನರ್ಪಿಸಿದರು.

ಯೂನಿಯನ್ ಚುನಾವಣೆ— ಶ್ರೀ ಪೂರ್ಣಪ್ರಜ್ಞ ಕಾಲೇಜ್ ಯೂನಿಯನ್ ಚುನಾವಣೆಯು ತಾ. 3ರಂದು ಜರಗಿ ಶ್ರೀ ಕೆ. ಅಪ್ಪು ಶೆಟ್ಟಿ ರು ಜನರಲ್ ಸೆಕ್ರೆಟರಿಯವರಾಗಿ ಆಯ್ಕೆಗೊಂಡರು. ಶ್ರೀ ಯಂ ಸುಬ್ರಾಯ ಭಟ್ಟರು ಸಹಾಯಕ ಕಾರ್ಯದರ್ಶಿಗಳಾಗಿಯೂ, ಎನ್. ರಾಮಕೃಷ್ಣಯ್ಯನವರು ಲಲಿತಕಲಾ ಸಂಘದ ಕಾರ್ಯದರ್ಶಿಗಳಾಗಿಯೂ, ಎ ಎನ್. ರಮೇಶರು ಭಾಷಾ ಸಂಘದ ಕಾರ್ಯದರ್ಶಿಗಳಾಗಿಯೂ, ಎನ್. ವೆಂಕಟರಮಣ ಭಟ್ಟರು "ಸ್ಪೋರ್ಟ್ಸ್ ಮತ್ತು ಗೇಮ್ಸ್"ನ ಕಾರ್ಯದರ್ಶಿಗಳಾಗಿಯೂ ಮತ್ತು ಕುಮಾರಿ ಪರಮೇಶ್ವರನ್ ಲಕ್ಷ್ಮಿಯವರು ಮಹಿಳಾ ಪ್ರತಿನಿಧಿಯವರಾಗಿಯೂ ಆರಿಸಿ ಬಂದಿರುತ್ತಾರೆ.

ಯೂನಿಯನ್ ಚುನಾವಣೆ:— ಉಡುಪಿಯ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್, ಇದರ ಕಾಲೇಜು ಯೂನಿಯನ್ನಿನ ಚುನಾವಣೆಯು ಪ್ರಿನ್ಸಿಪಾಲ ಎಚ್. ವಿಜಯೇಂದ್ರ ಮೂರ್ತಿಯವರ ನೇತೃತ್ವದಲ್ಲಿ ಇತ್ತೀಚೆಗೆ ಜರಗಿ ಶ್ರೀ ಕೆ. ಸೀತಾರಾಮರಾಯರು ಅಧ್ಯಕ್ಷರಾಗಿ, ಶ್ರೀ [illegible] ಭಟ್ಟರು ಉಪಾಧ್ಯಕ್ಷರಾಗಿ, ಶ್ರೀ ಕೆ. ಎಸ್. ಕಾಳಪ್ಪ— ಇವರು ಕಾರ್ಯದರ್ಶಿಗಳಾಗಿ, ಶ್ರೀ ಕೆ ಎಸ್. ಬನ್ನಿಂತಾಯರು ಸಹ ಕಾರ್ಯದರ್ಶಿಗಳಾಗಿಯೂ, ಆರಿಸಿ ಬಂದರು.

ಸಾಮೂಹಿಕ ಅಭಿವೃದ್ಧಿ— ಪೆರ್ಡೂರಿನ ಶ್ರಮಿಕ ವರ್ಗದವರು ತಾ. ೨೦ರಂದು ಸಾಮೂಹಿಕ ಅಭಿವೃದ್ಧಿಯ ಅತ್ಯುತ್ತಮ ಪ್ರಯೋಗವನ್ನು ಆರಂಭಿಸಿದರು. ಸ್ಥಳೀಯ ಪ್ರೌಢ ಶಾಲಾ ಕಟ್ಟಡದ ಎದುರಿನ ಜಾಗು ಭೂಮಿಯನ್ನು ಸಮತಟ್ಟಾಗಿ ಮಾಡುವುದಕ್ಕಾಗಿ ಹಣದ ಕೊರತೆ ಇರುವುದನ್ನು ಗಮನಿಸಿ ಊರಿನ ಸುಮಾರು ೧೦೦ ಮಂದಿ ಸ್ವಪ್ರೇರಣೆಯಿಂದ ನೆಲವನ್ನು ಅಗೆಯುವುದಕ್ಕೆ ತೊಡಗಿದರು. ಇದರ ನಾಯಕತ್ವ ವಹಿಸಿದ್ದ, ಎಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯ ರಿಜಿಸ್ಟ್ರಾರ್ ಡಾ| ಟಿ. ಎಮ್. ಎ. ಪೈಯವರು "ಬಹಳ ಸಂತೋಷದಿಂದ" ಪ್ರಥಮವಾಗಿ ಗುದ್ದಲಿಯಿಂದ ನೆಲವನ್ನು ಅಗೆದರು. ಇದಕ್ಕಾಗಿ ಶ್ರೀ ಉಮಾನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ರೂಪಿಸಿದ ಸಮಿತಿಯು ಸ್ಥಳೀಯ ಜನರು ದೊಡ್ಡವರು, ಸಣ್ಣವರು ಎಂಬ ಭೇದಭಾವವಿಲ್ಲದೆ, ಮುಂದಾಗಿ ಸಹಾಯ ಹಾಗೂ ಸೇವೆ ಸಲ್ಲಿಸಬೇಕೆಂದು ಮನವಿಮಾಡಿ ಕೊಂಡಿತ್ತು. ಇದರಲ್ಲಿ ಭಾಗವಹಿಸುವವರೆಲ್ಲರಿಗೂ, ಉಚಿತವಾದ ಮಧ್ಯಾಹ್ನದ ಊಟವನ್ನು ಸಹ ವ್ಯವಸ್ಥೆ ಮಾಡಲಾಗಿದೆ. ಸತತವಾಗಿ ಹತ್ತು ದಿನ ನಡೆಯುವ ಈ ಶ್ರಮದಾನ ಕಾರ್ಯದಲ್ಲಿ ಸುಮಾರು ೧೫೦೦ ಮಂದಿ ಭಾಗವಹಿಸುವರೆಂದು ಅಂದಾಜು ಮಾಡಲಾಗಿದೆ. ಈ ಕೆಲಸಕ್ಕೆ ಒಟ್ಟು ಸುಮಾರು ೪೦೦೦ ರೂಪಾಯಿ ಖರ್ಚು ತಗಲುತ್ತಿತ್ತೆಂದು ಗೊತ್ತಾಗಿದೆ.

ರೋಟರಿ ಸಭೆ— ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ವಿ. ಎಂ. ಇನಾಮ್‌ದಾರ್‌ರವರು ತಾ. 18ರಂದು ಮಣಿಪಾಲದಲ್ಲಿ ಉಡುಪಿ ರೋಟರಿ ಕ್ಲಬ್ ಸಭೆಯಲ್ಲಿ ಭಾಷಣ ಮಾಡುತ್ತಾ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಶೇಕ್ಸ್‌ಪಿಯರ್‌ನ ಕೃತಿಗಳ ಅಧ್ಯಯನವನ್ನು ಕಡಿಮೆ ಮಾಡುತ್ತಿರುವುದು ಒಳ್ಳೆಯ ಕ್ರಮವಲ್ಲವೆಂದೂ ಆತನ ಕೃತಿಗಳಲ್ಲಿ ಅಪಾರ ಅನುಭವ, ಜಗತ್ತಿನ ಎಲ್ಲ ಜನರಿಗೂ ರುಚಿಸುವ ಶೈಲಿ, ಜೀವನ ತತ್ವಸಾರ, ಹಾಗೂ ಸ್ವಚ್ಛಂದ ಭಾಷಾ ಪ್ರಯೋಗ ತುಂಬಿಕೊಂಡಿವೆ ಎಂದೂ ಹೇಳಿದರು ಕ್ಲಬ್ಬಿನ ಅಧ್ಯಕ್ಷ ಡಾ| ಎ. ಕೃಷ್ಣರಾವ್‌ರವರು ಅಧ್ಯಕ್ಷತೆ ವಹಿಸಿದ್ದರು ರೋಟೇರಿಯನ್, ಕೆ ಎಸ್. ಹರಿದಾಸ ಭಟ್ಟರವರು, ಕನ್ನಡದಲ್ಲಿ ಹೆಸರಾಂತ ಕಾದಂಬರಿಕಾರರೂ ಆಗಿರುವ ಪ್ರೊ| ಇನಾಂದಾರ್‌ರವರ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಎನ್. ಎಸ್. ಪ್ರಭುರವರು ವಂದನೆಗಳನ್ನರ್ಪಿಸಿದರು

ಉದ್ಘಾಟನೆ — ತಾಲೂಕು ಡೆವಲಪ್‌ಮೆಂಟ್ ಬೋರ್ಡು ಆಸ್ಪತ್ರೆ, ಮುಲ್ಕಿ ಇದರ ಹೊಸ ಬ್ಲೋಕಿನ ಉದ್ಘಾಟನೆ ಮತ್ತು ತಜ್ಞ ವೈದ್ಯರಿಂದ ಆರೋಗ್ಯ ಪರಿಶೀಲನಾ ಯೋಜನೆಯ ಉದ್ಘಾಟನಾ ಸಮಾರಂಭವು ಜಿಲ್ಲಾ ವೈದ್ಯಾಧಿಕಾರಿಗಳಾದ ಡಾ| ಎಸ್. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ತಾ 17-8-64 ರಂದು ದಕ್ಷಿಣ ಕನ್ನಡ ಜಿಲ್ಲೆಯ ಡಿಪ್ಯುಟಿ ಕಮಿಶನರಾದ ಶ್ರೀ ಪಿ. ಯಂ. ಮುಜಾಹಿದ್‌ರವರಿಂದ ನೆರವೇರಿಸಲ್ಪಟ್ಟಿತು ಮಂಗಳೂರು ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಗಳವರು ಅತಿಥಿಗಳನ್ನು ಸ್ವಾಗತಿಸುತ್ತಾ 'ಹೊಸ ಕಟ್ಟಡಕ್ಕಾಗಿ ಸುಮಾರು ರೂ. 18,500 ವೆಚ್ಚವಾಗಿದೆ, ಆಸ್ಪತ್ರೆಯ ಅಭಿವೃದ್ಧಿಯ ವಿಚಾರದಲ್ಲಿ ಡೆವಲಪ್‌ಮೆಂಟ್ ಬೋರ್ಡು ವಿಶೇಷ ಆಸಕ್ತಿಯನ್ನು ವಹಿಸುತ್ತಾ ಇದೆ. ಬೇಕಾಗುವ ಸವಲತ್ತುಗಳನ್ನು ಒದಗಿಸಿಕೊಡಲು ಪ್ರಯತ್ನಿಸುತ್ತಾ ಇದೆ" ಎಂದರು. "ಮುಲ್ಕಿ ಆಸ್ಪತ್ರೆ ನಿರಾಶ್ರಿತ ಫಂಡ್ ಕಮಿಟಿ"ಯ ಕಾರ್ಯದರ್ಶಿ ಶ್ರೀ ಎಂ. ಆರ್. ಎಚ್. ಪೂಂಜರವರು ಫಂಡಿನ ವರದಿಯನ್ನು ಓದಿದರು. ಅದರಲ್ಲಿ ಆಸ್ಪತ್ರೆಯ ಕಟ್ಟಡಗಳು, ವಿದ್ಯುಚ್ಛಕ್ತಿ ವಿಸ್ತರಣೆ, ಉಪಕರಣಗಳು ಇತ್ಯಾದಿ ವಿಷಯಗಳಲ್ಲಿ ಊರಿನ ಜನರು ನೀಡಿದ ಸಹಕಾರದ ವಿವರಗಳನ್ನೂ ಹೇಳಲಾಗಿತ್ತು.

ಮಂಗಳೂರಿನ ತಜ್ಞವೈದ್ಯರಾದ ಡಾ| ಕೆ. ಪಿ. ಗಣೇಶನ್ ರವರು ಆರೋಗ್ಯ ಪರಿಶೀಲನದ ಯೋಜನೆಯ ಕುರಿತು ವಿವರಿಸುತ್ತಾ ವಾರದ ಪ್ರತಿ ಸೋಮವಾರ ನಾಲ್ಕು ಮಂದಿ ತಜ್ಞರು ಮುಲ್ಕಿ ಆಸ್ಪತ್ರೆಯಲ್ಲಿ ಮಧ್ಯಾಹ್ನ ಘಂಟೆ ೧೦ರಿಂದ ೧ರ ವರೆಗೆ ಇರುವ ಆ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಜ್ಞರ ಸಲಹೆಯನ್ನು ಪಡೆಯ. ಐಪುದು, ತಜ್ಞ ವೈದ್ಯರು ತಮ್ಮ ಕೆಲಸವನ್ನು ಮುಲ್ಕಿ ಆಸ್ಪತ್ರೆಯಲ್ಲಿಯ ಸಲಕರಣೆಗಳ ಮಿತಿಗೊಳಪಟ್ಟು ಮಾಡಬೇಕಾಗುತ್ತದೆ. ಆದರೂ ತಮ್ಮ ಕೈಲಾದ ಸಹಾಯವನ್ನು ತಜ್ಞರು ಮಾಡಲಿರುವರೆಂದರು

ಉದ್ಘಾಟನೆಯನ್ನು ಜಿಲ್ಲಾಧಿಕಾರಿಗಳು ನೆರವೇರಿಸುತ್ತಾ ಸಾಯುವ ಪರಿಸ್ಥಿತಿಯಲ್ಲಿರುವವರನ್ನು ವೈದ್ಯರು ಬದುಕುವಂತೆ ಮಾಡಲು ಪ್ರಯತ್ನಿಸುತ್ತಾರೆ ದ್ರವ್ಯ ಸಂಪಾದನೆಯೇ ವೈದ್ಯರ ಮುಖ್ಯ ಧ್ಯೇಯವಲ್ಲ. ಸಹಾಯ ಮಾಡುವುದೂ ಅವರ ಧೋರಣೆಯಾಗಿರಬೇಕು ಎಂದರು.

ಜಿಲ್ಲಾ ವೈದ್ಯಾಧಿಕಾರಿಗಳಾದ ಡಾ| ಎಸ್. ಶ್ರೀನಿವಾಸನ್ ರವರು ಅಧ್ಯಕ್ಷಸ್ಥಾನದಿಂದ "ಮುಲ್ಕಿಯ ಜನರು ಬಹಳ ಕಷ್ಟಪಡುವವರು. ಆಸ್ಪತ್ರೆ ನಿರಾಶ್ರಿತ ಫಂಡಿನ ಪರಿಶ್ರಮದಿಂದ ಅಭಿವೃದ್ಧಿ ಪಡೆಯುತ್ತಿದೆ. ತಾಲೂಕು ಡೆವಲಪ್ ಬೋರ್ಡಿನವರೂ ಈ ಯೋಜನೆಗೆ ಒಪ್ಪಿರುತ್ತಾರೆ" ಎಂದು ತುಂಬು ಹೃದಯದಿಂದ ಮಾತನಾಡಿದರು.

ಕೊನೆಗೆ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ| ಕೆ. ಬಾಬು ಶೆಟ್ಟಿರವರು ಧನ್ಯವಾದಗಳನ್ನು ಸಮರ್ಪಿಸಿದರು.

ಮಹಾಸಭೆ:— ತಾ. 9-8-64 ರಂದು ಮಂಗಳೂರಲ್ಲಿ ಬ್ರಾಹ್ಮಣ ಗರ್ಭ ಶಾಲೆಯಲ್ಲಿ ಅನ್ವಿತ್ ಸಂಗೀತ ಸಭೆಯ ಸದಸ್ಯರ ಸಭೆಯು ಶ್ರೀ ವೈ. ಉಮೇಶ ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಆರ್. ಕುದ್ವರು ಸ್ವಾಗತಿಸಿ ವರದಿಯನ್ನೋದಿದರು. ಅನ್ವಿತ ಸಂಗೀತ ಸಭಾದ ಅಭಿವೃದ್ಧಿಯ ಕುರಿತು ಕೆಲವರ ಭಾಷಣಗಳಾದ ಮೇಲೆ ದ್ವಿತೀಯ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸುವರೆ ಸಮಿತಿಯೊಂದನ್ನು ಆರಿಸಲಾಯಿತು. ಮಂಗಳೂರು ಸರಕಾರಿ ಆರ್ಟ್ಸ್ ಕಾಲೇಜಿನಲ್ಲಿ ತಾ. 25-10-64 ರಂದು ಆಚರಿಸಲಾಗುವ ವಾರ್ಷಿಕೋತ್ಸವದ ವೇಳೆ ಸಂಗೀತ ಸ್ಪರ್ಧೆ, ಸಂಗಿತ ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದೂ ನಿರ್ಧರಿಸಲಾಯಿತು.

ಶಿರ್ವ — ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಸ್ವಾತಂತ್ರ್ಯೋತ್ಸವವು ಬೆಳಗೆ ಉಡುಪಿ ತಾಲೂಕ್ ಬೋರ್ಡ್ ಉಪಾಧ್ಯಕ್ಷ ಡಾ| ಯು. ಕೆ. ಆಚಾರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ವೈದ್ಯಾಧಿಕಾರಿ ಡಾ| ಕೆ. ಆರ್. ವೆಂಕಟಕೃಷ್ಣನವರು ಸ್ವಾಗತಿಸಿ ಸ್ವಾತಂತ್ರ್ಯದ ಮಹತ್ವವನ್ನು ವಿವರಿಸಿದರು. ಶ್ರೀ ಕೆ. ಆರ್. ಹೆಗ್ಡೆಯವರು ಧನ್ಯವಾದ ಸಮರ್ಪಿಸಿದರು.

ಕಲಾಪ್ರದರ್ಶನ: — ಶಿರ್ವ ಹಿಂದೂ ಪ್ರೌಢಶಾಲೆಯ ಇಂದಿನ ಮತ್ತು ಹಳೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಕಲಾಕೃತಿಗಳ 'ಕಲಾಪ್ರದರ್ಶನ' ಉದ್ಘಾಟನಾ ಸಮಾರಂಭವು ತಾ. 15-8-64 ರಂದು ಡಾ| ಎಂ. ಬಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಸಿ. ಜಾಯರಿಯವರಿಂದ ನೆರವೇರಿಸಲ್ಪಟ್ಟಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಜಯರಾಮ ಶೆಟ್ಟರು ಅತಿಥಿಗಳಿಗೆ ಸ್ವಾಗತವನ್ನು ಬಯಸಿ, ಧನ್ಯವಾದವನ್ನು ಸಮರ್ಪಿಸಿದರು

ನಿಧನ — ರಾಕಿ ಪ್ಲಾಂಟರರಾಗಿದ್ದ ಕುತ್ಯಾರು ಗುತ್ತು ಕೆ. ಗಣಪಯ್ಯ ಶೆಟ್ಟರು ತಾ. 22-8 64ರಂದು ತಮ್ಮ 67ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹರಿಹರ— ಡಾ| ಬಿ. ವಿಜಯಕುಮಾರ್ ಅಧ್ಯಂತಾಯರ ವಿಜಯ ಕ್ಲಿನಿಕ್ ಔಷಧಾಲಯದ ಪ್ರಾರಂಭೋತ್ಸವವನ್ನು ತಾ. 26ರಂದು ದಾವಣಗೆರೆ ಜನರಲ್ ಆಸ್ಪತ್ರೆಯ ಆರ್. ಎಂ. ಒ. ರವರಾದ ಡಾ| ಜಿ. ಶೇಖರಪ್ಪನವರು ನೆರವೇರಿಸಿದರು.

ಸತ್ಕಾರ— ಉಡುಪಿ ಮೋಡರ್ನ್ ಗೇರೇಜಿನ ಮಾಲಕ ಶ್ರೀ ಎಂ. ಆರ್. ಕಾಮತರೂ ಸಿಬ್ಬಂದಿಯವರೂ ಇತ್ತೀಚೆಗೆ ಜಪಾನು ಪ್ರವಾಸವನ್ನು ಮುಗಿಸಿ ಬಂದ ಶ್ರೀ ಟಿ. ಎ. ಪೈಗಳಿಗೆ ತಾ. 8ರಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಶ್ರೀ ಕಾಮತರು ಸ್ವಾಗತಿಸಿದ ಬಳಿಕ ಶ್ರೀ ಪೈಗಳು ಜಪಾನು ಪ್ರವಾಸದ ಕುರಿತು ಮಾತಾಡುತ್ತಾ ಮಾಲಕ ಮಜೂರ ಸಂಬಂಧವು ಸೌಹಾರ್ದಯುತವಾಗಿದ್ದು ಕರ್ತವ್ಯದ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದರು

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 169/64.

ಕೂಸಮ್ಮ ಸೆಡ್ತಿ ಕೂಡಾ .... ವಾದಿರು

ಮತ್ತು

ಮುತ್ತಯ್ಯ ಸೆಟ್ಟಿ .... ಪ್ರತಿವಾದಿರು,

ಇವರೊಳಗೆ

ಪ್ರತಿವಾದಿ ಮುತ್ತಯ್ಯ ಸೆಟ್ಟಿ— ಕೊಡಪೂರು ಕಂಬಳಮನೆ ತಮ್ಮಯ್ಯ ಶೆಟ್ರ ಅಳಿಯ—ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದಲ್ಲಿರುವವ—ಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿರು ಕಳೆದ ಶೋಭಕೃತು ಸಂವತ್ಸರದ ಗೇಣಿ ಬಾಕಿ ಮತ್ತು ಸ್ವಾಧೀನತೆ ಬಗ್ಗೆ ಕೂಡಾ ನಿಮ್ಮ ಮೇಲೆ ನಡ್ಸಿದ ನೋಲ್ಕಂಡ ದಾವೆಯನ್ನು ತಾ 31-8-64ಕ್ಕೆ ನಿಮ್ಮ ಹಾಜರಾತಿಯ ಬಗ್ಗೆ ಇಟ್ಟಿರುತ್ತದೆ. ಆ ಬಗ್ಗೆ ನಿಮಗೆ ಏನಾದರೂ ಆಕ್ಷೇಪ ಇದ್ದಲ್ಲಿ ಮೇಲೆ ಕಾಣಿಸಿದ ತಾರೀಕಿನ ದಿವಸ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಿರತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಈ ದಾವೆಯು ತೀರ್ಮಾನಿಸಲ್ಪಡುವುದು.

(By order of the Court)

P. Ranganath Shenoy.

Advocate for Plaintiff

Udipi S. K. Dated 18-8-64.

ಸುಖ - ದುಃಖ

ಎಕ್ಸ್‌ಪ್ರೆಸ್ ಸರ್ವಿಸ್ ಬೇಕು

ಕುಂದಾಪುರದಿಂದ ಮಂಗಳೂರಿನ ತನಕ ಕರಾವಳಿ ರಸ್ತೆಯಲ್ಲಿ ಅಡ್ಡ ಬರುವ ಎಲ್ಲ ನದಿಗಳಿಗೂ ಆಧುನಿಕ ಸೇತುವೆಗಳು ರಚನೆಗೊಂಡಿದ್ದು ಇವುಗಳಲ್ಲಿ ವಾಹನಗಳು ನಿರಾತಂಕವಾಗಿ ಓಡಾಡತೊಡಗಿರುವುದು ಸಂತೋಷಕರ. ಆದರೆ, ಈ ಎರಡು ನಗರಗಳ ನಡುವಣ ಸುಮಾರು ಒಂದಷ್ಟು ಮೈಲುಗಳನ್ನು ದಾಟಬೇಕಾದರೆ, ಪ್ರವಾಸಿಯೊಬ್ಬನು ಐದಾರು ಗಂಟೆಗಳನ್ನು ಕಳೆಯಲೇ ಬೇಕಾಗುತ್ತದೆ. ಆದುದರಿಂದ ಮುಖ್ಯವಾಗಿ 'ಸೀದಾ' ಯಾತ್ರಿಕರ ಉಪಕಾರಕ್ಕಾಗಿ ಮಂಗಳೂರು (ಮೂಲ್ಕಿ-ಉಡುಪಿ-ಕೋಟ ಅಥವಾ ಬ್ರಹ್ಮಾವರಗಳಲ್ಲಿ ನಿಲ್ಲುವ) ಕುಂದಾಪುರ ಎಕ್ಸ್‌ಪ್ರೆಸ್ ಸರ್ವಿಸುಗಳನ್ನು ಪ್ರಾರಂಭಿಸುವ ಬಗ್ಗೆ ತೀವ್ರ ಗಮನ ಹರಿಯಬೇಕಾದುದು ಸೂಕ್ತವಲ್ಲವೆ?

ಕುಂದಾಪುರ. — ಪರಮೇಶ್ವರ.

ಹಸಿದ ಹೊಟ್ಟೆಗೆ...?

ಸರಕಾರವು ಅಕ್ಕಿಯ ಬೆಲೆ ಇಳಿಸಲು ಅದನ್ನು ನಿರ್ಧಾರ ಮಾಡಿದ್ದು ಸರಿ. ಆದರೆ, ಇದರಿಂದಾಗಿ ಸಾಮಾನ್ಯ ಜನರಿಗೆ ಸುಖ ಬರಲಿಲ್ಲ. ದಿನನಿತ್ಯ ಅಕ್ಕಿ ಕೊಂಡು ಬೇಯಿಸುವವರು ಅಂಗಡಿಗೆ ಹೋದರೆ ಅಕ್ಕಿ ಯಿಲ್ಲ ಎಂಬ ಮಾತನ್ನು ಕೇಳಬೇಕಾಗಿ ಬಂದಿದೆ. ಸರಕಾರ ಬೆಲೆ ಗೊತ್ತು ಮಾಡುವುದಕ್ಕೆ ಮೊದಲು ಇದ್ದ ಅಕ್ಕಿಯೆಲ್ಲಾ ರಾತ್ರಿ ಬೆಳಗಾಗುವುದರೊಳಗೆ ಎಲ್ಲಿ ಹಾರಿಹೋಯಿತು? ಬಡವರು ಉಪವಾಸ ಬಿದ್ದೇ ಸಾಯ ಬೇಕೆ? ವರ್ತಕರಿಗೆ ಮಾತ್ರ ಮತ್ತೊ ಅವಕಾಶಕೊಡುವುದರಲ್ಲಿ ಅರ್ಥವಿಲ್ಲ. ಬಚ್ಚಿಟ್ಟ ಆಹಾರವಸ್ತುಗಳನ್ನು ಮುಕ್ತ ಪೇಟೆಗೆ ತರಲು ಸರಕಾರ ಮುಕ್ತ ಮನಸ್ಸಿನಿಂದ ತುರ್ತು ಕ್ರಮ ಕೈಕೊಳ್ಳಬೇಕು. ಇಲ್ಲವಾದರೆ, ಹಸಿದ ಜನರೇ ಲೂಟಿಗಿಳಿಯಲಾರರೆಂಬ ಭರವಸೆಯೇನು?

ಕಿನ್ನಿಮೂಲ್ಕಿ. —ನರಹರಿ.

ನಮ್ಮ ಪಾಡು

ದಕ್ಷಿಣ ಕನ್ನಡದ ಜಾನಪದ ಕಲೆ ಯಕ್ಷಗಾನದ ಶ್ರೇಷ್ಠ ನಟ ಶ್ರೀ ಹಾರಾಡಿ ರಾಮರನ್ನು ಲಲಿತಕಲಾ ಅಕಾಡಮಿಯೂ ಗೌರವಿಸಿದುದು ನಮ್ಮ ಸೌಭಾಗ್ಯ. ಆದರೆ, ನಾವು ಈ ನಟರಿಗೆ ಏನು ಮಾಡಿದ್ದೇವೆ? ಮಂತ್ರಿ ಮಾಗಧರಿಗೆ ಹೂಮಾಲೆ ಹಾಕಲು ತಾನು ತಾನೆಂದು ಮುಂದೆ ಬರುವವರು ಇಂತಹ ಕಲಾವಿದರಿಗೂ ಹೂಮಾಲೆ ಹಾಕಲು ಇನ್ನಾದರೂ ಹಿಂಜರಿಯಬಾರದು. ತನ್ನ ಮರೆಯ ಕಂಪನರಿಯದದನ್ನೆ ಹೊರಗೆ ಹುಡುಕುವ ಮೃಗದ ಪಾಡು ನಮ್ಮದಾಗಿ ಮುಂದಾದರೂ ಉಳಿಯಬಾರದು.

ಕುಕ್ಕೆಕಟ್ಟೆ. — ಸದಾನಂದನಾಯಕ್.

ಇವರಿಗೂ ಪೆನ್ಶನ್ ಸಿಗಲಿ

1-4-36ರಿಂದ ನಿವೃತ್ತರಾದ ಎಲ್ಲಾ ಉಪಾಧ್ಯಾಯರಿಗೆ ಪೆನ್‌ಶನ್ ಕೊಡಲು ರಾಜ್ಯ ಸರಕಾರ ನಿರ್ಧರಿಸಿ, ಕೊಡುತ್ತಿದೆ. ಈ ದಿನಕ್ಕೆ ಮೊದಲು ನಿವೃತ್ತಿ ಹೊಂದಿದ ಕೆಲವು ಅಧ್ಯಾಪಕರಿಗೂ ಮದ್ರಾಸ್ ನಿಯಮದಂತೆ ಪೆನ್‌ಶನ್ ಸಿಗುತ್ತದೆ. ಆದರೂ ಈ ತಾರೀಕಿಗೆ ಮೊದಲು ನಿವೃತ್ತರಾದ ಹೈಸ್ಕೂಲ್ ಮುಖ್ಯೋಪಾಧ್ಯಾಯರಿಗೆ ಮತ್ತಿತರ ಪದವೀಧರ ಹಾಗೂ ಪಂಡಿತ ಅಧ್ಯಾಪಕರಿಗೆ ಇಂತಹ ಸೌಲಭ್ಯ ಸಿಗುತ್ತಿಲ್ಲ. ಹೀಗೆ ನಿವೃತ್ತರಾಗಿರುವವರ ಸಂಖ್ಯೆ ಇಂದು ಹೆಚ್ಚಿರಲಾರದು; ಮತ್ತು ಈಗಿರುವವರ ಸಂಖ್ಯೆಯೂ ವರ್ಷಂಪ್ರತಿ ಕಡಿಮೆಯಾಗುತ್ತ ಬರುತ್ತಿದೆ. ಇವರು ತಮ್ಮ ನಿವೃತ್ತಿಯ ಸಮಯ ಪಡೆಯುತ್ತಿದ್ದ ವೇತನವೂ ಕಡಿಮೆ. ಆದುದರಿಂದ ಇವರಿಗೆ ಕೊಡಬಹುದಾದ ಪೆನ್‌ಶನ್ ಕೂಡ ಕಡಿಮೆ. ಆದಕಾರಣ ಅಲ್ಪ ಸಂಖ್ಯಾಕರಾದ ಹಾಗೂ ಸಂಖ್ಯೆ ಕ್ಷೀಣಿಸುತ್ತ ಬರುವ ಇವರಿಗೂ ನಿವೃತ್ತಿ ವೇತನವನ್ನು ನಿವೃತ್ತಿ ದಿನದಿಂದಲ್ಲವಾದರೂ 1-4-63ರಿಂದಲಾದರೂ ಕೊಡುವ ವ್ಯವಸ್ಥೆ ಮಾಡಿದರೆ ಇವರಿಗೂ ತುಂಬ ನ್ಯಾಯ ಸಲ್ಲಿಸಿದಂತಾಗುವುದು. ಇದರಿಂದ ಸರಕಾರಕ್ಕೆ ಕೂಡ ಹೆಚ್ಚಿನ ಭಾರವಾಗದು. ಈ ಕುರಿತು ನಮ್ಮ ಶಾಸಕರೂ ರಾಜಕಾರಣಿಗಳೂ ಮಂತ್ರಿಗಳೂ ಸಹಾನುಭೂತಿಯಿಂದ ಪರ್ಯಾಲೋಚಿಸಿ ನ್ಯಾಯ ಸಲ್ಲಿಸುವುದು ಯೋಗ್ಯ.

—ಒಬ್ಬ ನಿವೃತ್ತ ಹೆಡ್ಮಾಸ್ಟರ್

ಭಾರತಕ್ಕೆ ಜಪಾನಿನ ಅಮರ ಪಾಠ

(೫ನೇ ಪುಟದಿಂದ

ಲಾವಾ ಮುಖಗಳ ಹಾವಳಿ ಆಗುತ್ತವೆ. ಅಲ್ಲಿನ ಭೂಮಿಯು ಸಾರರಹಿತವಾದುದು-ನಾಗ-ಭೂಮಿ ಮಿತವಾದುದು. ಆರು ತಿಂಗಳವಧಿಯ ಒಂದೇ ಬೆಳೆ ಅಲ್ಲಿ ಬೆಳೆಯಲು ಸಾಧ್ಯ. ಮುದುಕರೇ ಹೆಚ್ಚಾಗಿ ಅಲ್ಲಿ ಕೃಷಿ ರಂಗದಲ್ಲಿ ದುಡಿಯುತ್ತಾರೆ. ಯುವಕ ಯುವತಿಯವರು ಕೈಗಾರಿಕೆಗಳಲ್ಲೇ ಆಕರ್ಷಣೆ ಹೊಂದಿದ್ದಾರೆ.

ನಮ್ಮ ದೇಶದಲ್ಲಿ ಬೇಕಷ್ಟು ಭೂಮಿಯಿದೆ. ಪ್ರಾಕೃತಿಕ ಸಂಪತ್ತು ಬೇಕಷ್ಟಿದೆ. ಆದರೂ ಆಹಾರದ ಅಭಾವವನ್ನು ನೀಗಿಸಲಾರದಾಗಿದ್ದೇವೆ. ಇದಕ್ಕೆ ಕಾರಣವನ್ನು ನಾವು ಅರಿತುಕೊಳ್ಳಬೇಕಾಗಿದೆ.

ಜಪಾನಿನಲ್ಲಿ ಪ್ರವಾಸೋದ್ಯಮವು ಉನ್ನತ ಮಟ್ಟದಲ್ಲಿದೆ. ನಮ್ಮ ದೇಶದಲ್ಲಿಯೂ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಇವುಗಳಿಗೆ ವಿದೇಶೀ ಪ್ರವಾಸಿಗರನ್ನೂ ದೇಶೀಯರನ್ನೂ ಆಕರ್ಷಿಸಿ ಪ್ರವಾಸೋದ್ಯಮವನ್ನು ಬೆಳೆಸಿ ಅಧಿಕ ಗಳಿಸಲು ಸಾಧ್ಯವಿದೆ. ಹೆಚ್ಚು ಜನ ಬರುತ್ತಾರೆಂದು ಅವರಿಂದ ಹೆಚ್ಚು ಹಣ ಸುಲಿಯಬಾರದು. ಅವರಿಗೆ ಮಿತವೆಚ್ಚದಿಂದ ಉತ್ತಮ ಸೌಕರ್ಯ ಏರ್ಪಡಿಸುವುದು ಅತ್ಯಗತ್ಯ. ಹೀಗಾದಲ್ಲಿ ಪ್ರವಾಸೋದ್ಯಮವು ಅತ್ಯಂತ ಜನಪ್ರಿಯವಾಗುವುದರೊಡನೆ ಆರ್ಥಿಕ ಉತ್ಪನ್ನವೂ ಬೆಳೆಯುವುದು.

(ಇತ್ತೀಚೆಗೆ ಜಪಾನ ಸಂದರ್ಶನದಿಂದ ಮರಳಿ ಬಂದ ನಂತರ ಮಾಡಿದ ವಿವಿಧೆಡೆಯ ಭಾಷಣಗಳಿಂದ ಸಂಗ್ರಹಿತ)

— ಸ್ಮರಣೆ —

ಬಂಗಾರದ ಭಾರತದಿ
ಉದಯಿಸಿದ ಜ್ಯೋತಿ;
ಆರಿತದೋ! ಆರಿ ಹೋಯಿತದೋ!!
ಇನ್ನಿಲ್ಲ ಕಾಂತಿ! ॥ ೧ ॥
ಬುದ್ಧನೋ, ದೇವನೋ
ಅವತಾರವೆಂದು
ಹೇಳುವರು ಬಲ್ಲವರು
ನೆಹರುವನು ಇಂದು ॥ ೨ ॥
ಕ್ರಾಂತಿಯೋ, ಶಾಂತಿಯೋ
ಹೇಳಲಾರೆ ಮಹಾತ್ಮ
ಜಾತಿಯೋ ಭೇದವೋ
ತಿಳಿಯದದು ಆತ್ಮ ॥ ೩ ॥
ಪಂಚಶೀಲದ, ಭ್ರಾತೃಭಾವದ
ಪುಣ್ಯವಂತ ನೆಹರು
ಮಾತೃದೇಶದ, ವೀರರಕ್ತದ
ಶೂರ ಜವಹರ ನೆಹರು ॥ ೪ ॥
ಕಾಯ ಹೋಗಿದೆ, ಆತ್ಮ ಇಲ್ಲಿದೆ
ಮಾರ್ಗದರ್ಶನ ಜನತೆಗೆ
ಪುಣ್ಯಚಿತ್ತದ, ಶಾಂತಭಾವದ
ಸುಖದ ಸದನವು ಆಗದೆ? ॥ ೫ ॥
ದುಃಖ ಸಾಗರ, ಪ್ರೇಮದಾಗರ
ಅಶ್ರು ಕೋಡಿಯೆ ಹರಿಯಿತು
ಜೀವನಸ್ವರ, ಇಷ್ಟ ಈಶ್ವರ
ಸಾವಧಾನವ ತಂದಿತು ॥ ೬ ॥
ರಾಜಘಾಟನಲಿ ಜ್ಞಾನದೀಪದಲಿ
ನಿಂತಿಹುದು ಆ ಆತ್ಮ
ಮೌನಮನದಲಿ ಏಕ ನಿಷ್ಠೆಯಲಿ
ಮುಸುಕಿದನು ಮಹಾತ್ಮ ॥ ೭ ॥

— ಕುತ್ಯಾರುಗುತ್ತು ರವೀಂದ್ರ ಶೆಟ್ಟಿ.

ಉಡುಪಿ ಡಿ ಮು. ಕೋರ್ಟಿನಲ್ಲಿ

O. P. No. 32/1964-

ಪಾಂಗಾಳ ರಾಮಕೃಷ್ಣ ನಾಯಕ್— ಮಂಜುನಾಥ ನಾಯಕರ ಮಗ— ಉಡುಪಿ ಕಸಬಾ ಅಜ್ಜರಕಾಡು — ಅರ್ಜಿದಾರ

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಅರ್ಜಿದಾರನ ತಂದೆ—ತಾ. 2-6-64ರಲ್ಲಿ ಸ್ವರ್ಗಸ್ಥರಾದ — ಪಾಂಗಾಳ ಮಂಜುನಾಥ ನಾಯಕರಿಗೆ—ಅರ್ಜಿಯಲ್ಲಿ ವಿವರಿಸಿದ ಮೇರೆಗೆ ಕೇಳ್ಸುಗಳಿದ್ದು ಅವುಗಳನ್ನು ಸದ್ರಿ ಮಂಜುನಾಥ ನಾಯಕರು ತಾ. 19-9-63ರಲ್ಲಿ ರಿ. ಶಿಶಿ ಬರದಿಟ್ಟ ವೀಲು ಮೇರೆಗೆ ಟ್ರಾನ್ಸ್‌ಫರ ಮಾಡ್ಸಿಕೊಳ್ಳುವರೆ—ನಾನು ಹಕ್ಕುದಾರನಾಗಿರುತ್ತೇನೆಂತಲೂ ತನ್ನ ಹೆಸರಿಗೆ—ಸಕ್ಸೆಸನ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿ ತಾ. 17-9-64ಕ್ಕೆ ಇಡೋಣಾಗಿಯದೆ, ಆ ಕುರಿತು ಆಕ್ಷೇಪ ಹೇಳತಕ್ಕವರು ಇದ್ದರೆ ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದೆಂಬ ಸಂಗತಿ ಈ ಮೂಲಕ ಸಮಸ್ತ ಜನರಿಗೆ ತಿಳಿಸೋಣಾಗಿಯದೆ—

N. V. Kamath,
Advocate for Petitioner.

ಉಡುಪಿ, 2-8-64.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳುವಂತೆ ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ ಡಾ ಎ ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,

ವಾರ್ಷಿಕ ಚಂದಾ ರೂ. 10/- ನವಯುಗ, ಉಡುಪಿ.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನು ಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. No. 283/1957,
R. I. A. 1769/1958,
R. E. P. 408/1963.

ರಾಮಕೃಷ್ಣ ಉಪಾಧ್ಯ—ಅರ್ಜಿದಾರ.

ನರಸಿಂಹ ಅಡಿಗ ಕೂಡಾ— ಎದ್ರಿರು.

ಸದ್ರಿ ಅವರಲ್ಲಿ 1ರಿ ವ್ಯವಹರಿಸುವಲ್ಲಿ 2ನೇ ಎದ್ರಿ ಶಿವರಾಮ ಉಪಾಧ್ಯ, ಸುಬ್ರಾಯ ಉಪಾಧ್ಯರ ಮಗ, ಶಿವಮೊಗ್ಗಾ ಡಿಸ್ಟ್ರಿಕ್ಟ್, ಕಂಚಿಲ್ಲು ಕಸಬಾ ಇವನಿಗೆ.

ಅರ್ಜಿದಾರನು ನೀವು ಕೂಡಾ ಎದ್ರಿರ ಮೇಲೆ ಪಡೆದ ಸದ್ರಿ ಡಿಕ್ರಿಯ ಮೇಲೆ ಸದ್ರಿ ಸಿದ ಮೇಲ್ಕಂಡ ಅಮಲುಜಾರಿಯಲ್ಲಿ ನೀವು ಕೂಡಾ ಎದ್ರಿರ ಹಕ್ಕಿನ ಬಾಬ್ತು ಸ್ಥಿರ ಆಸ್ತಿಯನ್ನು ಏಲಂಮಿಗೆ ಅಪೇಕ್ಷಿಸಿ ಸದ್ರಿ ಏಲಂ ಇಸ್ತಿಹಾರಿನ ಶರ್ತಗಳ ನಿರ್ಣಯದ ಬಗ್ಗೆ ಅಕ್ಕರೆ ಸಾರಿ ತಾರೀಕು 3-9-1964ಕ್ಕೆ ಸದ್ರಿ ಕೋರ್ಟಿನಲ್ಲಿ ಇಟ್ಟದ್ದರಿಂದ ಈ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ದಿವಸ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗತಕ್ಕದ್ದು ಎಂತ ಈ ಮೂಲಕ ತಿಳಿಯಪಡಿಸಿದೆ.

By order of the Court

Y Tejappa Shetty, B.A.B.L.
Advocate for Petitioner.

Coondapur, 14-8-64.

ಭಾರತದರ್ಶನ

ಟ್ರಾಂಬೆಯ ಅಣುಶಕ್ತಿ ಕೇಂದ್ರ

ಭಾರತವು ಸ್ವಾತಂತ್ರ್ಯ ನಂತರ ಸಾಧಿಸಿದ ಪ್ರಗತಿಯನ್ನು ವಿದೇಶೀಯರೂ ಸ್ವದೇಶೀಯರೂ ಎದೆ ತುಂಬ ಮೆಚ್ಚುತ್ತಾರೆ. ಆದರೆ, ನಾವು ಗಳಿಸಿದ ಪ್ರಗತಿಯಿಂದ ನಮಗೇನೇ ತೃಪ್ತಿಯಿಲ್ಲ. ಇದಕ್ಕೆ ಒಂದಲ್ಲ ನೂರು ಕಾರಣಗಳಿವೆ. ಪಾರತಂತ್ರ್ಯದ ಅವಧಿಯಲ್ಲಿ ದೇಶೀಯ ಸಮೃದ್ಧಿಯ ಬಗೆಗೆ ಯಾವುದೇ ತರದ ಗಮನ ಹರಿಯದಿದ್ದುದು ಇವುಗಳಲ್ಲಿ ಅಗ್ರಗಣ್ಯವಾದುದು. ಭಾರತದಂತಹ ಸುವಿಶಾಲ ದೇಶದಲ್ಲಿ ಸಾಧಿಸಬೇಕಾದ ಪ್ರಗತಿ ಪ್ರಮಾಣವು ಅನಂತವಾಗಿರುವುದರಿಂದ ನಾವು ಕಳೆದ ಹದಿನೇಳು ವರ್ಷಗಳಲ್ಲಿ ಕೈಗೂಡಿಸಿಕೊಂಡಿರುವಂತಹದು ಏನೂ ಇಲ್ಲವೆಂಬಂತಾಗಿದೆ. ಹಾಗಿದ್ದರೂ ಪ್ರಪಂಚದ ಯಾವ ದೇಶವೂ ಇಷ್ಟೊಂದು ಅಲ್ಪ ಕಾಲಾವಧಿಯಲ್ಲಿ ಸಾಧಿಸದಿರುವಷ್ಟು ಸಮೃದ್ಧಿಯನ್ನು ನಾವುಎಲ್ಲ ರಂಗಗಳಲ್ಲಿ ಕಾಣುತಿದ್ದೇವೆಯೆಂಬುದರ ಬಗ್ಗೆ ಅಭಿಮಾನ ಪಡಬೇಕಾಗಿದೆ. ನಾವು ಈ ಮಹಾತ್ಸಾಧನೆಗಳಲ್ಲಿ ಕೆಲವನ್ನಾದರೂ ನೆನೆದು ಮುಂದಿನ ಸಾಧನೆಗಳ ಬಗ್ಗೆ ಚಿಂತಿಸುವುದು ಅಗತ್ಯ.

ಅಣುಶಕ್ತಿಯ ಬೆಲೆಯನ್ನಿಂದು ಅರಿಯದವರಿಲ್ಲ. ಮಾರಕ ಮತ್ತು ತಾರಕೋಪಾಯಗಳಿಗೆ ಅದನ್ನು ಬಳಸ ಬಹುದಾದರೂ ಭಾರತವು ಶಾಂತಿಯುತ ಉದ್ದೇಶಗಳಿಗಾಗಿ ಈ ಪವಾಡ ಶಕ್ತಿಯನ್ನು ಉಪಯೋಗಿಸುವ ಗುರಿಯಿಂದ ಮುನ್ನಡೆಯುತ್ತಿದೆ. ವಿದ್ಯುತ್ ಶಕ್ತಿಯೊಂದಿಗೆ ಕೃಷಿ, ವೈದ್ಯ, ಉದ್ಯಮ ಮೊದಲಾದುವುಗಳ ಪ್ರಗತಿ ಸಾಧನೆಗೆ ನೆರವಾಗುವ ರೇಡಿಯೋ ಐಸೊ ಟೋಪ್‌ಗಳನ್ನು ನಮ್ಮ ಅಣುಶಕ್ತಿಕೇಂದ್ರ ಉತ್ಪಾದಿಸುತ್ತಿದೆ.

ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರವೊಂದು ತನ್ನ ಸಹೋದರ ದೇಶದೊಡನೆ ಹೇಗೆ ಹೊಂದಿಕೊಂಡು ಅದರ ಪ್ರಗತಿಗೆ ನೆರವಾಗಬಹುದೆಂಬುದನ್ನು ಕೆನಡಾವು ತೋರಿಸಿ ಕೊಟ್ಟಿದೆ. ನಮ್ಮ ಭಾರತದಲ್ಲಿನ ಟ್ರಾಂಬೇಯ ಅಣುಶಕ್ತಿ ಕೇಂದ್ರವು ಈ ಸಹಾಯ ಹಸ್ತದ ಪ್ರತೀಕವಾಗಿದೆ. ಪಕ್ಕದಲ್ಲಿ ಕಾಣುವ ಮೊದಲ ಚಿತ್ರದಲ್ಲಿ ಈ ಅಣುಶಕ್ತಿ ಕೇಂದ್ರದ ಒಂದು ದೃಶ್ಯವನ್ನು ಹಿನ್ನೆಲೆಯೊಂದಿಗೆ ಕಾಣಬಹುದು, ಇದು ರೇಡಿಯೋ ಐಸೊ ಟೋಪ್‌ಗಳನ್ನು ಉತ್ಪಾದಿಸುವ ಬೃಹತ್ ಕೇಂದ್ರಗಳಲ್ಲಿ ಒಂದಾಗಿದೆ. ಈ ಕೇಂದ್ರದ ಕಾರ್ಯಾಂಗದ ನೌಕರರು ಅವಶ್ಯಕ ಪ್ರತಿಬಂಧಕ ತೊಡುಗೆಗಳೊಂದಿಗೆ ತಮ್ಮ ಕಾರ್ಯಾಸಕ್ತರಾಗಿರುವುದರ ಚಿತ್ರವು ಕೆಳಗಿರುವುದು.

ಭಾರತವೂ ಅಣುಶಕ್ತಿಯ ಉತ್ಪಾದನೆಯಲ್ಲಿ ಮುಂದುವರಿದ ರಾಷ್ಟ್ರಗಳ ಪಂಕ್ತಿಯಲ್ಲಿ ಸೇರುತ್ತಿರುವುದು ನಮಗೆ ಅಭಿಮಾನಾಸ್ಪದವಲ್ಲವೆ?



ಚೀನೀಯರಿಗೆ ಪೆಟ್ಟಿನ ರುಚಿ

(೫ನೇ ಪುಟದಿಂದ)

ರಗೆಟವಿರುವರು. ತರಬೇತಿಯ ಹೆಸರಿನಲ್ಲಿ ಚೈನಾವು ನಾನಾ ದೇಶಗಳಿಂದ ತರುಣರನ್ನು ತರಿಸಿಕೊಂಡಿತ್ತು. ಅವರಿಗೆ ಮೆದುಳು ತಿರುಗಿಸುವಿಕೆಯ ತರಬೇತಿ ಕೊಡಲಾಗುತ್ತಿದೆ. ಅದಕ್ಕಾಗಿ ಭಾರತದಿಂದಲೂ ಕಮ್ಯೂನಿಸ್ಟ್ ಪಕ್ಷವು ತರುಣರನ್ನು ಕಳುಹಿಸಿತ್ತು, ಆಫ್ರಿಕಾದ ವಿದ್ಯಾರ್ಥಿಗಳು ಅದೆಂತೋ ಆ ವ್ಯೂಹದಿಂದ ತಪ್ಪಿಸಿಕೊಂಡು ಬಂದಿರುವರು. ಬಂದವರು ಅಲ್ಲಿ ಅದ್ಯಾವ ರೀತಿಯ ವಿದ್ಯಾಭ್ಯಾಸ ಹೇಳಿಕೊಡಲಾಗುತ್ತಿದೆಯೆಂಬುದರ ಪರಿಚಯವನ್ನು ಪ್ರಪಂಚಕ್ಕೆ ಮಾಡಿಸಿಕೊಟ್ಟಿದ್ದಾರೆ. ಆದರೆ ಭಾರತದಿಂದ ಹೋದವರು ಅಂತಹವರಲ್ಲ. ಅವರು ಅಪ್ಪಟ ಕಮ್ಯೂನಿಸ್ಟರು–ಅಂದರೆ ಶುದ್ಧ ದೇಶದ್ರೋಹಿಗಳು. ಅವರು ಅಲ್ಲಿ ಗೊರಿಲ್ಲಾ ಪದ್ಧತಿಯ ರಣವಿದ್ಯೆ ಅಲ್ಲದೆ ದೇಶದೊಳಗೇನೇ ಗೊಂದಲವೆಬ್ಬಿಸುವ ಜಾದೂವನ್ನು ಕಲಿತುಕೊಂಡು ಬಂದಿದ್ದಾರೆ. ಅದರ ಪ್ರಯೋಜನವನ್ನು ಅವರು ವಿಜಯವಾಡದಲ್ಲಿ ಮಾಡಿರುವರು. ಅಂದರೆ ಎಲ್ಲಾ ಕಮ್ಯೂನಿಸ್ಟ್ ಪಕ್ಷಕ್ಕೆ ಬೆಂಬಲ ಇದೆಯೇ, ತಮ್ಮ ಗುಟ್ಟು ಬಹಿರಂಗವಾಗಲಿಕ್ಕಿಲ್ಲವೋ, ಅಲ್ಲಿ ಅವರು ಪ್ರಯೋಗ ನಡೆಸುತ್ತಿದ್ದಾರೆ. ಇದು ಒಂದು ವಿಧಾನ. ಇನ್ನೊಂದು ವಿಧಾನ ದೇಶದೊಳಗೇನೇ ಗೊಂದಲವೆಬ್ಬಿಸುವದು. ಒಂದು ಚಿಕ್ಕ ಕಾರಣ ಸಿಕ್ಕಿದರೂ ಸಾಕು; 'ಹೊಡಿ' 'ಬಡಿ' 'ನಾಶವಾಗು' ಆರ್ಭಟಕ್ಕೆ ಆರಂಭಿಸಿ ಬಿಡುತ್ತಾರೆ. ಗೃಹಮಂತ್ರಿ ನಂದಾರವರು ಈ ವಿಷಯ ಚೆನ್ನಾಗಿ ಎಚ್ಚರಿಕೆ ಕೊಡುತ್ತಿದ್ದಾರೆ. ಮಂಗಳೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಕಮ್ಯೂನಿಸ್ಟ ನಾಟಕ ಇದಕ್ಕೆ ಉತ್ತಮ ಉದಾಹರಣೆ ಆಹಾರ ಹಾಗೂ ಇತರ ಸಾಮಗ್ರಿಗಳ ಬೆಲೆ ಏರುತ್ತಿರುವದನ್ನು ತಡೆ ಹಿಡಿಯಲು ಎಲ್ಲ ಪಕ್ಷ ಸಂಗಡಗಳವರೂ ಕೇಳಿಕೊಳ್ಳುತ್ತಿದ್ದಾರೆ. ಉಪವಾಸ, ಮೆರವಣಿಗೆ ಮಾಡುತ್ತಿದ್ದಾರೆ. ಆ ರೀತಿ ಮಂಗಳೂರು ಜಿಲ್ಲೆಯಲ್ಲಿ ಭಾರತೀಯ ಜನಸಂಘದವರು ಬೇಡಿಕೆಗಳನ್ನು ಮುಂದಿಟ್ಟಾಗ ಜಿಲ್ಲಾಧಿಕಾರಿಯವರು ನ್ಯಾಯ ಬೆಲೆಯ ಅಂಗಡಿಗಳನ್ನು ಅಧಿಕಗೊಳಿಸುವನಾಗಿ ಆಶ್ವಾಸನೆ ಇತ್ತಿದ್ದರು. ಅದೆಲ್ಲಾ ಮುಗಿದ ಮೇಲೆ ಕಮ್ಯೂನಿಸ್ಟರು ಗಲಾಟೆ ಆರಂಭಿಸಿಬಿಟ್ಟಿದ್ದಾರೆ. ಸರಕಾರಿ ನೌಕರರನ್ನು ಕಚೇರಿಗಳ ಒಳಗೆ ಹೋಗಲು ಬಿಡದೆ ತಡೆಯುತ್ತಿದ್ದಾರೆ. ಇದರ ಅರ್ಥವೇನು, ? ಕಾರಣವಿರಲಿ ಇಲ್ಲದಿರಲಿ ಒಟ್ಟಾರೆ ಗಲಾಟೆಯಾಗಬೇಕು. ನಗರ ರಕ್ಷಕರು ಲಾಟಿ ತಿರುಗಿಸಬೇಕು, ಜನರು ಪೆಟ್ಟು ತಿನ್ನಬೇಕು, ರಕ್ತ ಹರಿಯಬೇಕು, ಕಮ್ಯೂನಿಸ್ಟ್ ಪುಢಾರಿಗಳು ಭೂಗತರಾಗಿ ಇದ್ದುಕೊಂಡು ಹೇಳಿಕೆಗಳನ್ನು ಕೊಡುತ್ತಿರಬೇಕು, ರೊಚ್ಚಿಗೆದ್ದ ಜನತೆ ಕಲ್ಲು ಹೊಡೆಯಬೇಕು. ಆಗ ಅಲ್ಲಲ್ಲಿ ಮನೆ ಕಛೇರಿಗಳಿಗೆ ಬೆಂಕಿ ಕೊಡಬೇಕು. ದೊಂಬಿ ಕೊಳ್ಳೆ ಸುಲಿಗೆ ನಡೆಯಬೇಕು. ಸರಕಾರ ಅತ್ತ ತಿರುಗುವಾಗ ಹಿಂದಿನಿಂದ ಡ್ರೇಗನ್ ನಾಲಗೆ ಚಾಚಿಕೊಂಡು ಮುಂದೆ ಬರಬೇಕು!

ದಿ. ವಿಜಯಾ ಬೇಂಕ್, ಲಿಮಿಟೆಡ್, ಕಾರ್ಕಳ.

ರಿಜಿಸ್ಟರ್ಡ್ ಆಫೀಸು:
ವಿಜಯಾ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡು, ಮಂಗಳೂರು,

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ವ್ಯಕ್ತಿಯವರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಆಧಾರದ ಮೇಲೆ ಪಡೆದ ಸಾಲವನ್ನು ನ್ಯಾಯಕ್ಕೆ ಸರಿಯಾಗಿ ಮರುಪಾವತಿ ಮಾಡದೇ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ — ವ — ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ಬರುವ ತಾರೀಕು 7—9—1964ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದ್ದಲ್ಲಿ, ಸದ್ರಿಯವರು ಅಡವಿಟ್ಟ ನಗಗಳನ್ನು ತಾರೀಕು 7—9—1964 ನೇ ಸೋಮವಾರ ಅಪರಾಹ್ನ ಗಂಟೆಗೆ ಕಾರ್ಕಳ ಬೇಂಕಿನ ಆವಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ಈ ಬೇಂಕಿನ ಮುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು . ವ . ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಿ.

ಸಾಲದ ಖಾತೆ ನಂಬರು	ಸಾಲಗಾರರ ಹೆಸರು ಮತ್ತು ವಿಳಾಸ	ಮೊಬಲಗು ರೂ ಪೈಸೆ
516/61	ಶ್ರೀ ವೃಷಭಯ್ಯ ಇಂದ್ರ, ನಾಭಿರಾಜ ಇಂದ್ರರ ಮಗ, ಕೆರೆ ಬಸ್ತಿ, ಅನೆಕೆರೆ, ಕಾರ್ಕಳ.	57=54
651/61	ಶ್ರೀ ವೈ. ಮುದ್ದಣ್ಣ ಸೆಟ್ಟಿ, ಚಂದಯ್ಯ ಸೆಟ್ರ ಅಳಿಯ, ಪೆರಿಂಜೆ ಮನೆ, ಎರ್ಲಪಾಡಿ, ಪೋಸ್ಟು ಎರ್ಲಪಾಡಿ.	104=60
755/61	ಶ್ರೀ ವೃಷಭಯ್ಯ ಇಂದ್ರ, ನಾಭಿರಾಜ ಇಂದ್ರರ ಮಗ, ಕೆರೆ ಬಸ್ತಿ, ಅನೆಕೆರೆ, ಕಾರ್ಕಳ.	73=10
1161/61	ಶ್ರೀ ಚಂದ್ರರಾಜ ಸೆಟ್ಟಿ, ಚಿನ್ನಪ್ಪ ಕದಂಬರ ಮಗ, ಹೊಸ ಮನೆ, ನಲ್ಲೂರು ಗ್ರಾಮ, ಪೋಸ್ಟು ನೆಲ್ಲಿಕಾರು.	113=82
1217/61	ಶ್ರೀ ಕೆ. ಮಂಜಪ್ಪ ಅದ್ಯಂತಾಯ, ಸೀತಮ್ಮ ಅದ್ಯಂತಾಯರ ಮಗ, ಪೆರ್ಲಗುತ್ತು, ಕಾಂತಾವರ.	539=62
1236/61	ಶ್ರೀ ದೇಜು ಸೆಟ್ಟಿ, ದೂಮಣ್ಣ ಸೆಟ್ರ ಮಗ, ಆಯರೆ ಗುತ್ತು, ಬಾರ್ಕಳ, ಮುಂಡ್ಲಿ ಗ್ರಾಮ, ಪೋಸ್ಟು ಹೆಮ್ರ್ಗಂಡೆ.	46=54
1370/61	ಶ್ರೀ ಮಹಾಬಲ ಅಂಚನ್, ಕೊರಗಪ್ಪನವರ ಮಗ, ಸಂಚಿ ಕಟ್ಟೆ, ಕುಕ್ಕುಂದೂರು.	72=80
1394/61	ಶ್ರೀ ಕೆ. ಮಂಜಪ್ಪ ಅದ್ಯಂತಾಯ, ಸೀತಮ್ಮ ಅದ್ಯಂತಾಯರ ಮಗ, ಪೆರ್ಲಗುತ್ತು, ಕಾಂತಾವರ	336=03
1410/61	ಶ್ರೀ ಶಾಂತಿರಾಜ ಭಂಡಾರಿ, ಧರ್ಮರಾಜ ಭಂಡಾರಿಯವರ ಅಳಿಯ, ಕರಿಯಾಲು ಮನೆ, ನಲ್ಲೂರು ಗ್ರಾಮ, ಬಜಗೋಳಿ ಪೋಸ್ಟು.	123=12
136/62	ಶ್ರೀ ರಹಮತುಲ್ಲಾ, ಬಾಬು ಸಾಹೇಬರ ಮಗ, ಹುಲ್ಕೇರಿ, ಕಾರ್ಕಳ.	84=40
204/62	ಶ್ರೀ ಎಸ್. ರಾಮ ಸೆಟ್ಟಿ, ಅಂತಯ್ಯ ಸೆಟ್ರ ಅಳಿಯ, ಟೀಚರ್, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ, ಸಾಣೂರು.	317=12
240/62	ಶ್ರೀ ಎಸ್. ರಾಮ ಸೆಟ್ಟಿ, ಅಂತಯ್ಯ ಸೆಟ್ರ ಅಳಿಯ, ಟೀಚರ್, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ, ಸಾಣೂರು.	330=79
475/62	ಶ್ರೀ ಸಂಜೀವ ಹೆಗ್ಡೆ, ಮುತ್ತಯ್ಯ ಹೆಗ್ಡೆರ ಮಗ, ಮೂಡಿ ಗುತ್ತು ಕುಂಟಾಡಿ ಗ್ರಾಮ, ಪೋಸ್ಟು ಕುಂಟಾಡಿ	382=19
541/62	ಶ್ರೀ ಕೆ ಅಣ್ಣು, ಅದಪ್ಪನವರ ಮಗ, ಕಾಶಿ ಪಟ್ಣ, ಬಸಂಜೆ ಮನೆ, ಪೋಸ್ಟು ಕಾಶಿ ಪಟ್ಣ.	35=45
544/62	ಶ್ರೀ ಭೋಜರಾಜ ಗುಡ್ಡ ಸೆಟ್ಟಿ, ಗುಡ್ಡ ಸೆಟ್ರ ಮಗ, ಬಲಿಪ ಗುತ್ತು, ನಕರೆ.	192=09
546/62	ಶ್ರೀ ಕೆ. ಮಂಜಪ್ಪ ಅದ್ಯಂತಾಯ, ಸೀತಮ್ಮ ಅದ್ಯಂತಾಯರ ಮಗ, ಪೆರ್ಲ ಗುತ್ತು, ಕಾಂತಾವರ.	159=10
561/62	ಶ್ರೀ ಕೆ. ರಾಮ ಹೆಗ್ಡೆ, ಹೂವಯ್ಯ ಹೆಗ್ಡೆರ ಮಗ, ಕೊಲಿ ಸಪ್ಲಾಯರ್, ಕೊಂಚಲು ಮನೆ, ಕುಂಟಾಡಿ.	570=91
569/62	ಶ್ರೀ ಕೆ. ರಾಮ ಹೆಗ್ಡೆ, ಹೂವಯ್ಯ ಹೆಗ್ಡೆರ ಮಗ, ಕೊಲಿ ಸಪ್ಲಾಯರ್, ಕೊಂಚಲು ಮನೆ, ಕುಂಟಾಡಿ.	504=35
690/62	ಶ್ರೀ ಕೊರಗು ಪೂಜಾರಿ, ಹೂವು ಹೆಂಗಸಿನ ಮಗ, ವೈಲಾಜೆ ಮನೆ, ಅತ್ತೂರು, ನಿಟ್ಟೆ ಗ್ರಾಮ, ಪೋಸ್ಟು ನಿಟ್ಟೆ.	190=37
845/62	ಶ್ರೀ ಅಣ್ಣು ಪಡಿವಾಳ, ಕಾಂತು ಅಧಿಕಾರಿಗಳ ಮಗ, ಓನಬಾಡಿ ಮನೆ, ಬೋಳ್ಕಟ್ಟೆ, ಮಿಯ್ಯಾರು.	187=40
918/62	ಶ್ರೀಮತಿ ಜಲಜ ಶೆಡ್ತಿ, ಚಿಕ್ಕ ಶೆಡ್ತಿಯವರ ಮಗಳು, ಪೊಡುಂಬ ಮನೆ, ಕುಕ್ಕುಂದೂರು	354=69
952/62	ಶ್ರೀ ಜಯರಾಮ ಭಟ್ಟ, ಪಾಂಡುರಂಗ ಭಟ್ರ ಮಗ, ಪುರೋಹಿತ, ಮರ್ಣೆ ಗ್ರಾಮ, ಅಜೆಕಾರು.	60=18

ಸ್ಥಳ:- ಕಾರ್ಕಳ
ತಾರೀಕು, 14.8.1964

ಯಂ. ಯಂ. ಭಂಡಾರಿ,
ಏಜಂಟ್.

ನೇಗಿಲಯೋಗಿಯ ಗೋಳು ದೂರವಾಗಲಿ

(೪ನೇ ಪುಟದಿಂದ)

ನಮ್ಮ ಕೃಷಿಯೇ ನಾಶ ಹೊಂದೀತು ಸೇ. ೭೦ರಷ್ಟು ಕೃಷಿಯೇ ಪ್ರಧಾನವಾಗಿರುವ ಭಾರತದ ಅಧಃಪತನವಾದೀತು. ಮುಂಜಾನೆ ಸಂಜೆ ಪ್ರಾರ್ಥನೆ ಮಾಡುವಂತೆ ನೋಡಿಕೊಳ್ಳಬೇಕು. ದೇವರ ದಯೆ ಧಾರಾಳವಿಲ್ಲದಿದ್ದರೆ ಮನುಷ್ಯ ಪ್ರಯತ್ನ ಎಷ್ಟಿದ್ದರೂ ಪ್ರಯೋಜನವಿಲ್ಲ. ದೇವರು ಮುನಿದರೆ ಕೃಷಿ ನಾಶವಾದೀತು. ಅತಿವೃಷ್ಟಿ ಬಂದೀತು—ಮಳೆ ಇಲ್ಲದೆ ಪೈರೇ ನಾಶವಾದೀತು. ರೈತರು ತಮ್ಮ ಬಿಡು ಸಮಯದಲ್ಲಿ ಜೂಜು, ಜುಗಾರಿ, ಕೋಳಿ ಅಂಕ ಜಗಳಗಳಲ್ಲಿ ತಲ್ಲೀನರಾಗದಂತೆ ಉಪವೃತ್ತಿಗಳನ್ನು ಕಲಿಸಿಕೊಟ್ಟು—ವಿಶಾಲವಾದ ಮೈದಾನಿನಲ್ಲಿ ಕಾಲ್ಚೆಂಡಿನಂತಹ ಆಟಗಳನ್ನಾಡುವ ವ್ಯವಸ್ಥೆಯೂ ಆಗಬೇಕು.

'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು'. ಕೃಷಿ ಹೇಡಿಯ ಉದ್ಯೋಗವಲ್ಲ—ಅದು ಅನುಭವ ಜನ್ಯ ಉದ್ಯೋಗ, ಓದಿದರೆ ಬರುವುದಿಲ್ಲ; ಸ್ವತಃ ಗೈದರೆ ಬರುತ್ತದೆ. ಪರದೇಶದ ಜನ ಪರಿಶ್ರಮಪಟ್ಟು ತಮ್ಮ ಆಹಾರ ಧಾನ್ಯವನ್ನು ಪೂರೈಸಿಕೊಂಡು ಹೆಚ್ಚಿನ ಧಾನ್ಯ ಹೊರ ಕಳಿಸುತ್ತಾರೆ. ನಾವು ಮಾತ್ರ ಬೀದಿಯ ಬಿಕಾರಿಗಳಂತೆ ಕೈಯೊಡ್ಡಿ ಧಾನ್ಯ ತರ ಬೇಕಾಗಿದೆ. ಇದು ನಮಗೆ ಭೂಷಣವೇ?

ಭೂ ಸುಧಾರಣೆಯ, ಬಗೆಗೆ ದೇಶದಲ್ಲಿ ಏಕಪ್ರಕಾರವಾದ ಘೋರಣೆ ಇನ್ನೂ ಸಿದ್ಧವಾಗಿಲ್ಲ. ಅನೇಕ ರಾಜ್ಯ ಸರಕಾರಗಳಿಗೆ 'ಭೂ ಮಸೂದೆ'ಯು ಬೇಡ; ರೈತ ಹಿತವೂ ಬೇಡವಾಗಿದೆ. ಅಸ್ಥಿರ ಹಾಗೂ ಅನಿಶ್ಚಿತ ಭೂ ಸುಧಾರಣೆಯ ಕಾನೂನಿನ ಪರಿಣಾಮದಿಂದ ಭೂ ಮಾಲಿಕರು ಹಾಗೂ ಒಕ್ಕಲುಗಳಲ್ಲಿ ವೈಮನಸ್ಸು,ವ್ಯಾಜ್ಯಗಳು ಉಂಟಾಗಿ ಗ್ರಾಮ ಜೀವನದ ಸುಖ, ಶಾಂತಿ ಕದಡಿದೆ. ಯಾವ ಕಾಲದಲ್ಲೇ ಆಗಲಿ—ಕೆಲಸ ಮಾಡುವ ರೈತನಿಗೆ ಭೂಮಿ ತನ್ನದೆನಿಸದೆ ಅವನು ತನ್ನ ಮನಸ್ಸು ಹಾಗೂ ಶ್ರಮವನ್ನು ಅದರಲ್ಲಿ ತೊಡಗಿಸಲಾರನು. ಭೂ ಸುಧಾರಣೆ ಮಾಡುವ ಮನಸ್ಸು ನಮಗಿದ್ದರೆ ಅನುಮಾನ, ಅರ್ಧ ಮನಸ್ಸು ಸಂದೇಹಗಳು ನಮ್ಮನ್ನು ಹಾದಿಗೆಡಿಸಬಾರದು. ಬೇಸಾಯದ ಉತ್ಪತ್ತಿ ಹೆಚ್ಚಬೇಕಾದರೆ ಭೂ ಸುಧಾರಣೆಯ ಕಾನೂನು ಕಠಿಣ ಹೆಚ್ಚಾಗಿ ಪ್ರತಿಯೊಂದು ರಾಜ್ಯದಲ್ಲಿಯೂ ಜ್ಯಾರಿಯಲ್ಲಿ ಬರಬೇಕು.

ಅನೇಕ ಯೋಜನೆಗಳಾಗಿವೆ ಆದರೂ ರೈತನ ಸ್ಥಿತಿಯಲ್ಲಿ ಆಗಬೇಕಾದಷ್ಟು ಬದಲಾವಣೆಗಳು ಆಗಲಿಲ್ಲ. ಮೇಲೆ ವಿವರಿಸಿದ ಕ್ರಾಂತಿಕಾರಕ ಬದಲಾವಣೆಗಳು ನಡೆದಲ್ಲಿ ಮಾತ್ರ ನಮ್ಮ ದೇಶದ ಮೂಲ ಭೂತ ಉದ್ದಿಮೆ ಒಕ್ಕಲುತನದ ಉತ್ಪಾದನೆ ಹೆಚ್ಚೀತು. ಇಲ್ಲದಿದ್ದಲ್ಲಿ ಮುಂದೆ ಬರುವ ನಿರ್ಣಯಾತ್ಮಕ ವರ್ಷಗಳಲ್ಲಿ ಪರಿಸ್ಥಿತಿ ಹೇಗೆ ನಿಂತೀತು ಎಂದು ಹೇಳಲು ಬರುವಂತಿಲ್ಲ. ಬುದ್ಧಿವಂತ ಜನತೆ ಕಾಲ ಮಿಂಚಿ ಹೋಗುವ ಮೊದಲೇ ಎಚ್ಚರಾಗಬೇಕು. ಸರಕಾರ ಸರಿ ದಾರಿ ಹಿಡಿಯುವಂತೆ ಪ್ರಯತ್ನಿಸಿ ಸಾಧಿಸಬೇಕು.

(ಸ್ವಾತಂತ್ರ್ಯದಿನ ಸಂಚಿಕೆಗೆ ಬಂದುದು)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R E P 489/63

ವೈ. ಈಶ್ವರ ಕಡಂಬಳಿತ್ತಾಯ ....
ಅರ್ಜಿದಾರ.

1 ಉಂಮಕ್ಕೆ ಹೆಂಗಸು, ಚೋಯಿಮಣಿಯಾಣಿ ಹೆಂಡ್ತಿ.
2 ನಾರಾಯಣ ಮಣಿಯಾಣಿ, ಉಂಮಕ್ಕೆ ಹೆಂಗ್ಸಿನ ಮಗ,
ಇಬ್ಬರೂ ಪೆರುವಾಯಿ ಗ್ರಾಮದ ತಚ್ಚಮೆಯಲ್ಲಿ } ಎದ್ರಿರು.

ಎದ್ರಿರೀಗೆ ಈ ಮೂಲಕ ತಿಳಿಸುವುದೇನೆಂದರೆ—

ಅರ್ಜಿದಾರನು ದಾಖಲ್ಲು ಮಾಡಿದ ಮೇಲ್ಕಂಡ ಅಮ್ಲಜ್ಯಾರಿಯಲ್ಲಿ ನಿಂಮ ಬಾಬ್ತು ಪೆರುವಾಯಿ ಗ್ರಾಮದ ಸ್ಥಿರಾಸ್ತಿಗಳಲ್ಲಿ ನಿಮಗಿರತಕ್ಕ ಹಕ್ಕು ಸಂಬಂಧಗಳನ್ನು ಜಪ್ತು ಪಡಿಸಿರುವುದರಿಂದ ಸದ್ರಿ ಜಪ್ತಿ ಕುರಿತು ನಿಮ್ಮ ಆಕ್ಷೇಪಣೆಗಳಿದ್ರೆ ತಾ. 2—9—64ರ ಒಳಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

(Sd) B Ishwara Bhat
Advocate for Petitioner
ಪುತ್ತೂರು, ತಾ 13.8—64.

ದ. ಕ. ಜಿಲ್ಲಾ ಬೆಳ್ತಂಗಡಿ ಡಿ. ಮು. ಕೋರ್ಟಿನಲ್ಲಿ.

O. P. 9/64

ಮಿರಾಬ್ಯಾಯೊನೆ ಶಾಂತಾ ಬ್ಯಾ ಕೂಡಾ...
ಅರ್ಜಿದಾರರು.

ನೋಟೀಸು.

ಎಲ್ಲಾ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಿನ 1 ನೇ ಅರ್ಜಿದಾರಳ ಗಂಡ ಮೃತ ನಾಗೇಶ ಶೆಣೈಯವರಿಗೆ ಜೀವವಿಮಾ ಪಾಲಿಸಿ ನಂಬ್ರ 78178674 ಮತ್ತು 179264 ರ ಬಾಬ್ತು ಬರತಕ್ಕ ಹಣಗಳ ಕುರಿತು ಸದ್ರಿ ಮೃತ ನಾಗೇಶ ಶೆಣೈ ವಾರೀಸುದಾರರಾದ ಅರ್ಜಿದಾರರ ಹೆಸರಿನಲ್ಲಿ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯನ್ನು ತಾ 2.9.64 ನೋಟೀಸು ಬಗ್ಗೆ ಇಟ್ಟಿರುತ್ತದೆ. ಆಕ್ಷೇಪ ಉಳ್ಳವರು ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸಿ ಕೊಳ್ಳತಕ್ಕದ್ದು.

By order of the Court
(Sd) K. Veerasimha.
M. A. LL. B.
Advocate for Petitioners.
Belthangady, 12-8-64

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.
ಜಗತ್ಪ್ರಸಿದ್ಧವಾದ ಜೈ ಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ದುಃಖದಾಚೆ

(೬ನೇ ಪುಟದಿಂದ)

ಕುರ್ಚಿಯತ್ತ ನಡೆದು ಕತ್ತಲೆಯಲ್ಲೇ ಕುರ್ಚಿಯನ್ನು ಹುಡುಕಾಡಿ ಕುಳಿತರು. ಅವರ ಹಿಂದೆಯೇ ಬಂದ ಸುಲೋಚನೆ ಸ್ವಿಚ್ ಹಾಕಿದಳು. ದೀಪದ ಬೆಳಕಿನಲ್ಲಿ ಗಂಡನನ್ನು ನೋಡಿದಳು ಮುಖ ಕಪ್ಪು ಕಪ್ಪಾಗಿತ್ತು. ತೀರಾ ಬಳಲಿಕೆ ಅಲ್ಲಿ ಮೂಡಿತ್ತು.

ಆಕೆ ಹೆಚ್ಚು ವಿಚಾರಿಸುವ ಗೊಡವೆಗೆ ಹೋಗದೆ ಒಳನಡೆದಳು.

ಲಕ್ಷ್ಮಣರಾಯರು ಆಲೋಚನೆಯಲ್ಲಿ ಮುಳುಗಿದ್ದರು. ಎಷ್ಟು ಪ್ರಯತ್ನಿಸಿದರೂ ಉಪಾಯದ ದಾರಿ ಕಾಣುತ್ತಿಲ್ಲ. ನಾಳೆ ಶನಿವಾರ; ಸಂಜೆ ಐದು ಗಂಟೆಯ ಒಳಗೆ ಅವರು ಸಾವಿರ ರೂಪಾಯಿ ಕ್ಯಾಷಿನಲ್ಲಿರಿಸಬೇಕು ಐದುಗಂಟೆಗೆ ಕ್ಯಾಷ್ ಪೆಟ್ಟಿಗೆ ಸೆಕ್ರೆಟರಿಯ ಬಳಿಗೆ ಹೋಗುತ್ತದೆ. ಅವರು ಲೆಕ್ಕನೋಡುತ್ತಾರೆ. ಹಣ ಕಡಿಮೆ ಇರುತ್ತದೆ. ವಿಚಾರಣೆ ಯಾಗುತ್ತದೆ ...

ಬಳಿಕ ಏನಾಗುವುದೊ? ಜೈಲಿಗೆ ಹೋಗ ಬೇಕಾದೀತು. ಹಣ ಕದ್ದ ಆರೋಪ... ಸಂಬಂಧಿಕರು, ನೆರೆಕರೆಯವರು, ಸಹೋದ್ಯೋಗಿಗಳು ನಗುತ್ತಾರೆ.... ಕ್ಯಾಷಿಯರ್ ರೂಪಾಯಿಕದ್ದ ಸುದ್ದಿ ಪತ್ರಿಕೆಗಳಲ್ಲಿ ಬರುತ್ತದೆ

ಆ ಬಳಿಕ....?

ವಿಚಾರಣೆ...ಕೋರ್ಟು....ಜೈಲು... ಜೈಲಿಗೆ ಹೋದ ಬಳಿಕ ಮನೆಯನ್ನು ಯಾರು ನೋಡಿಕೊಳ್ಳುತ್ತಾರೆ? ಶೈಲಜಳ ಶಿಕ್ಷಣ....ಪಾಂಡುವಿನ ಶಿಕ್ಷಣ...ಮನೆಯ ವ್ಯವಸ್ಥೆ....?

"ದೇವರೇ ನನ್ನನ್ನು ಯಾವ ಅವಸ್ಥೆಯಲ್ಲಿ ಕೆಡವಿದೆಯಪ್ಪ"

In the Court of the Munsif of Coondapoor.

S. C. No. 316/1964.

Between:

Bangle Shivarama Sheregara ... Plaintiff.

and

Hablidai Duggappa Sheregara son of Annappa Sheregara — of Paduvari village, Coondapoor Taluk— now at Soraba Taluk— Post: Anavati ... Defendant.

To

The defendant:

Please take notice that the above suit filed against you by the plaintiff for recovering the amounts due to him under the suit promissory note executed by you and your brother Thimmappa Sheregara for Rs: 364-00 on 4—12—58 — stands posted to 31—8—1964 at 11 A. M. before the above said court. You are hereby given notice that if you fail to appear before the said court at 11 A. M: on 31—8—64 either in person or through a duly instructed pleader you will be declared Ex Parte and further orders will be passed in your absence.

(By order)

Sd/. K. Ramappayya,

B. A., B. L.,

Advocate for plaintiff.

Coondapoor, 11-8-1964.

ಸುಲೋಚನೆ ಊಟದ ತಯಾರಿ ನಡೆಸಿ, ಗಂಡನನ್ನು ಕರೆಯಲು ಬಂದಳು. ಅಳುತ್ತ ಕುಳಿತಿರುವ ಗಂಡನನ್ನು ನೋಡಿದ ಆಕೆಗೆ ಒಮ್ಮೆಂದೊಮ್ಮೆ ಯಾವದೋ ಪ್ರಬಲ ಆಘಾತಕ್ಕೆ ಸಿಕ್ಕಂತಾಯಿತು. ಕಣ್ಣುಗಳು ಕ್ಷಣದಲ್ಲಿ ನೀರೂರಿ ನಿಂತವು. ಅದನ್ನು ಒರಸಿಕೊಂಡು,

'ಯಾಕೆ ಅಳುತ್ತೀರಿ? ಬರುವದನ್ನು ಅನುಭವಿಸಲೇ ಬೇಕಲ್ಲ? ಕಾಲೇಜಿಗೆ ಸೇರಿಸುವಾಗಲೇ ಹೇಳಿದೆ. ಬೇಡಾಂತ ಹೇಳಿದರೂ ಕೇಳಲಿಲ್ಲ." ಎಂದಳು.

ಲಕ್ಷ್ಮಣರಾಯರು ಏನೂ ಹೇಳಲಿಲ್ಲ.

"ಬನ್ನಿ, ಮೊದಲು ಊಟಮಾಡಿ. ಸದ್ಯ ಯೋಚಿಸುವಂತಹದೇನೂ ಇಲ್ಲ. ಆದಷ್ಟು ಬೇಗ ಗಂಡು ನೋಡಿ ಮದುವೆ ಮಾಡಿದರೆ ಸಾಕು."

ಸುಲೋಚನೆಯ ಮಾತು ಕೇಳಿ ಆ ಸನ್ನಿವೇಶದಲ್ಲೂ ಲಕ್ಷ್ಮಣರಾಯರಿಂದ ನಗದಿರಲು ಆಗಲಿಲ್ಲ.

"ಯಾಕೆ ನಗುತ್ತೀರಿ? ನಾನು ಇದ್ದ ವಿಷಯ ಹೇಳಿದೆ."

"ಇರುವ ವಿಷಯ ನಿನಗೆ ತಿಳಿಯದು ಸುಲೋಚನಾ. ನಾಳಿನ ದಿನ ಈ ಕೈಗೆ ಬೇಡಿ ಬೀಳುತ್ತದೆ."

ಭಾರವಾದ ಕಂಠದಿಂದ ಹೊರ ಬಿದ್ದ ಗಂಡನ ಮಾತನ್ನು ಕೇಳಿ ಸುಲೋಚನೆ ದಂಗಾದಳು.

'ಏನಂದಿರಿ? ಕೈಗೆ ಬೇಡಿ ಬೀಳುತ್ತದೆ? ನಾವು ಯಾರ ಮಾನ ತೆಗೆದಿದ್ದೇವೆಂದು ಕೈಗೆ ಬೇಡಿ ತೊಡಿಸುತ್ತಾರೆ? ನಮ್ಮ ಮಾನದ ಪ್ರಶ್ನೆಯೇ ನಮ್ಮ ಜೀವ ತಿನ್ನುತ್ತಿದೆ ..."

ವಿಷಯ ತಿಳಿಸಲು ಲಕ್ಷ್ಮಣರಾವ್ ಬಹಳ ಪ್ರಯತ್ನಿಸಿದರು. ಹೇಳಲಾಗಲಿಲ್ಲ. ಊಟಕ್ಕೆ ಹೊರಟರು. ಬಟ್ಟಲ ಮುಂದೆ ಕುಳಿತರು. ಕಣ್ಣಲ್ಲಿ ನೀರು ತುಂಬಿ ಬಂತು.

'ಉಣ್ಣುವಾಗಲೂ ಕಣ್ಣೀರೇಕೆ ತೆಗೆಯುತ್ತೀರಿ? ಬಂದುದನ್ನು ಅನುಭವಿಸೋಣವಂತೆ....ಇವತ್ತು ಏನಾಯಿತು? ತಡವಾಗಿ ಬಂದಿದ್ದೀರಾ. ಒಂದೂ ಆಡುವದಿಲ್ಲ"

"ಹೇಳುವಂಥದ್ದೇನಿದೆ? ನಾಳೆ...ನಾಳೆ ಯಂತೂ ನನ್ನ ಮರ್ಯಾದೆ ಹೋಗುತ್ತದೆ."

ಅವರು ಬಿಕ್ಕಿ ಬಿಕ್ಕಿ ಅಳ ತೊಡಗಿದರು. ಅದನ್ನು ಕಂಡ ಸುಲೋಚನೆ ಅನ್ನದ ಪಾತ್ರೆಯನ್ನು ಕೆಳಗಿರಿಸಿ ಅವರ ಸಮೀಪ ಬಂದಳು.

"ಅಳಬೇಡೀಂದ್ರೆ.....ಏನು ಬಂದರೂ ಬರಲಿ. ಅವಳ ಪ್ರಾರಬ್ಧ ಕರ್ಮಕ್ಕೆ ನಾವೇನು ಮಾಡೋಣ? ಒಂದು ಗಂಡು ನೋಡಿ ತಾಳಿ ಕಟ್ಟಿಸಿದರೆ ಮತ್ತೆ ಪಡೆದು ಬಂದಂತಾಗುತ್ತದೆ".

ಕಣ್ಣೀರು ಸುಲೋಚನೆಯ ಗುಳಿ ಬಿದ್ದ ಕೆನ್ನೆಯಲ್ಲಿ ಇಳಿದು ಹರಿಯಿತು.

"ನಾಳೆ ನಾನು ಸಾವಿರ ರೂಪಾಯಿ ತುಂಬಿಸಬೇಕಾಗಿದೆ ಸುಲೋಚನಾ...."

'ನೀವು ಇದೇನನ್ನುತ್ತೀರಿ?"

'ಒಬ್ಬನಿಗೆ ಮೊನ್ನೆ ಕ್ಯಾಷಿನಿಂದ ಸಾವಿರ ರೂಪಾಯಿ ಕೊಟ್ಟಿದ್ದೆ. ಅವನ ಮರ್ಯಾದೆ ಉಳಿಸಲು ಹೋಗಿ ನಾನು ಮರ್ಯಾದೆ ಕಳಕೊಳ್ಳಬೇಕಾಗಿದೆ."

"ನೀವು ಇದೇನು ಹೇಳುತ್ತೀರಿ? ನನಗೊಂದೂ ಅರ್ಥವಾಗುವದಿಲ್ಲ.'

"ನಿಜವಾಗಿ ಸುಲೋಚನೆ. ಎಲ್ಲಿಂದ ತರಲಿ ಸಾವಿರ ರೂಪಾಯಿ ಹೇಳು ಯಾರು ಕೊಡುತ್ತಾರೆ ಸಾವಿರ ರೂಪಾಯಿ? ಜೈಲೇ ಗತಿ...ಜೈಲಿಗೇ ಹೋಗಬೇಕು...'

ಸುಲೋಚನೆ ಹೇಳಬೇಕಾಗಿದ್ದ ಮಾತು ಹಾಗೆಯೇ ಉಳಿಯಿತು. ಅವಳು ಈಗ ಕೇಳುವದು ಬಹಳಷ್ಟಿದೆಯೇ ವಿನಃ ಹೇಳುವಂತಹದು ಏನೂ ಉಳಿದಿಲ್ಲ.

० ० ०

ಕಳೆದ ನಾಲ್ಕು ದಿನಗಳಿಂದ ಆಫೀಸಿಗೆ ಬಂದಿರದ ರಾಜನಾರಾಯಣ ಈ ದಿನ ಬಂದಿದ್ದ. ಬಂದಿದ್ದರೂ ಲಕ್ಷ್ಮಣರಾಯರಿಗೆ ಮುಖ ತೋರಿಸದೆ ತಪ್ಪಿಸಿಕೊಳ್ಳುತ್ತಿದ್ದ. ಆ ಧೈರ್ಯ ಅವನಲ್ಲಿರಲಿಲ್ಲ.

ಸಂಜೆಯಾಗುತ್ತದೆ. ಗಡಿಯಾರದ ಮುಳ್ಳು ಐದು ಗಂಟೆಯಾಗಿರುವುದನ್ನು ಸೂಚಿಸುತ್ತದೆ.

ಸಿಪಾಯಿ ಬಂದು ಕ್ಯಾಷಿನ ಪೆಟ್ಟಿಗೆ ಒಯ್ಯುತ್ತಾನೆ. ಲಕ್ಷ್ಮಣರಾವ್ ಮುಖ ಒರಸಿಕೊಳ್ಳುತ್ತಾರೆ.

ಕ್ಯಾಷಿಯರ್ ಲಕ್ಷ್ಮಣರಾಯರನ್ನು ಸೆಕ್ರೆಟರಿ ಸಾಹೇಬರು ಕರೆಯುತ್ತಾರೆ ಎಂದು ಸಿಪಾಯಿ ಬಂದು ತಿಳಿಸುತ್ತಾನೆ.

ಅವರು ಎದ್ದು ನಿಲ್ಲುತ್ತಾರೆ. ಕಾಲುಗಳಲ್ಲಿ ಶಕ್ತಿ ಉಳಿದಿಲ್ಲ. ನಡುಕವುಂಟಾಗುತ್ತದೆ. ಮತ್ತೆ ಮುಖ ಒರಸಿಕೊಳ್ಳುತ್ತಾರೆ. ಕೋಣೆಯತ್ತ ಸಾಗುತ್ತಾರೆ.

"ಸಾವಿರ ರೂಪಾಯಿ ಕಡಿಮೆ ಇದೆ."

"ಸಾವಿರ ರೂಪಾಯಿ....?"

"ಹೂಂ. ಲೆಕ್ಕ ನೋಡಿ.'

ಲಕ್ಷ್ಮಣರಾವ್ ಲೆಕ್ಕ ಪರಿಶೀಲನೆ ಮಾಡುತ್ತಾರೆ. ಅದು ಅನಗತ್ಯವೆಂದು ಅವರಿಗೂ ತಿಳಿದಿದೆ ನಡುಗುವ ಕೈಗಳಿಂದ ಪುಟ ತಿರುಗಿಸಿ, ತಿರುಗಿಸಿ ನೋಡುತ್ತಾರೆ.

'ಹೌದು....ಸಾವಿರ ರೂಪಾಯಿ ಕಡಿಮೆ ಇದೆ. ಅದನ್ನು...ಅದನ್ನು....ಕ್ಷಮಿಸಬೇಕು ಸರ್.'

'ಏನು ಕ್ಷಮಿಸಬೇಕು. ಹಣ ಏನಾಗಿದೆ?"

'ರಾಜನಾರಾಯಣರಿಗೆ ಮೊನ್ನೆ ಕೊಟ್ಟಿದ್ದೆ ಸರ್...ಒಂದು ದಿವಸಕ್ಕಾಗಿ....ಅವರು ಹಿಂದಿರುಗಿಸಿಲ್ಲ..."

"ಏನು? ಪರ್ಮಿಶನ್ ಇಲ್ಲದೆ ಸಾವಿರ ರೂಪಾಯಿ ಕ್ಯಾಷಿನಿಂದ ಕೊಟ್ಟಿದ್ದೀರಿ?'

'ಕ್ಷಮಿಸಿ ಸರ್....ದಯವಿಟ್ಟು ಕ್ಷಮಿಸಿ...'

ಕಾರ್ಯದರ್ಶಿ ಕರೆಗಂಟೆ ಒತ್ತಿದರು. ಸಿಪಾಯಿ ಬಂದ.

'ರಾಜನಾರಾಯಣನನ್ನು ಕರೆ.'

ಸ್ವಲ್ಪ ಹೊತ್ತಿನಲ್ಲಿ ರಾಜನಾರಾಯಣ ಬಂದ. 'ಕರೆದಿರ ಸರ್" ಎಂದು ಕೇಳಿದ.

"ಯಾರ ಅಪ್ಪಣೆಯಿಂದ ನೀವು ಸಾವಿರ ರೂಪಾಯಿ ತೆಗೆದುಕೊಂಡಿದ್ದೀರಿ?"

'ಏನಂದಿರಿ ಸರ್? ಸಾವಿರ ರೂಪಾಯಿ...'

'ರಾಜನಾರಾಯಣ್, ನೀವು ಮೊನ್ನೆ ನನ್ನಿಂದ ತೆಗೆದುಕೊಂಡಿಲ್ಲ?'

'ಏನು; ನಾನು ತೆಗೆದುಕೊಂಡಿದ್ದೇನೆಯೆ?"

'ನೀವು...ನೀವು ತೆಗೆದುಕೊಂಡಿಲ್ಲವೆ ರಾ

In the Court of the Munsif of Coondapoor.

R. E- P. No. 295/64 in S. C. No. 465/60.

Between:

M. Chandrashekara Maiya ... Petitioner

and

Ganesha Shanbhaga, son of Ananthayya Shanbhaga— Manoor Village, Udipi Taluk ... ... Respt.

To

The Respondent:

Please take notice that the above execution petition filed by the petitioner against you in respect of the decree obtained by him against you in S. C. 465/60 stands posted to 29—8—1964 at 11 A. M. before the above said court. You are hereby given notice that if you fail to appear before the said court at 11 A. M. on 29—8—64 either in person or through a duly appointed pleader you will be declared Ex Parte and further Orders will be passed in your absence.

(By Order).

Sd/. K. Ramappayya,

B. A., B. L.,

Advocate for petitioner.

Coondapoor, 11-8-1964.



REGD. No. B. G. 176
LICENCE No. 31
Licensed to Post without Prepayment

ಜನಾರಾಯಣ್?" ಲಕ್ಷ್ಮಣರಾಯರಿಗೆ ಭೂಮಿ ಕುಸಿಯುತ್ತಿದೆ ಎಂಬಂತೆ ಅನಿಸಿತು. ಎಂತಹ ಸುಳ್ಳನ್ನು ರಾಜನಾರಾಯಣ ಹೇಳುತ್ತಿದ್ದಾನೆ!

ರಾಜನಾರಾಯಣನಿಗೆ ಅವರತ್ತ ನೋಡಲು ಧೈರ್ಯವಿಲ್ಲ—

"ಏನಿದು ಸರ್, ನನಗೊಂದು ಅರ್ಥವಾಗುವದಿಲ್ಲ ...'

'ಮೊನ್ನೆ ಸಾವಿರ ರೂಪಾಯಿ ತೆಗೆದು ಕೊಂಡಿದ್ದಿರೆಂದು ಅವರು ಹೇಳುತ್ತಾರೆ. ನೀವು ತೆಗೆದು ಕೊಂಡಿಲ್ಲ? ಇವೆಲ್ಲಾ ಏನು ನಡೆದಿದೆ?"

'ನನಗೊಂದೂ ಗೊತ್ತಿಲ್ಲ ಸರ್, ನನಗೂ ತಮಗೂ ಗೆಳೆತನವಿದೆ. ಅದನ್ನು ಈ ರೀತಿ ಉಪಯೋಗಿಸುತ್ತಾರೆಂದು ನಾನು ತಿಳಿದಿರಲಿಲ್ಲ... ?'

° ° °

ರಾತ್ರಿ ಲಕ್ಷ್ಮಣರಾಯರು ಮನೆಗೆ ಬರಲಿಲ್ಲ. ಮನೆಗೆ ಸುದ್ದಿ ಮುಟ್ಟಿಸಲಾಗಿತ್ತು. ಲಕ್ಷ್ಮಣರಾಯರನ್ನು ಅರೆಸ್ಟ್ ಮಾಡಲಾಗಿದೆ.

ಸುಲೋಚನೆ, ಪಾಂಡು, ಶೈಲಜೆ, ರಾತ್ರಿಯೇ ಲಾಕಪ್ಪಿಗೆ ಹೋಗಿ ನೋಡಿದರು, ಮಾತಿಲ್ಲದೆ ಕಣ್ಣೀರಿಟ್ಟರು.

ಲಕ್ಷ್ಮಣರಾಯರು ಅವರ ಅಳುವಿನೊಡನೆ ಸೇರಿಕೊಳ್ಳಲಿಲ್ಲ. ಒಂದು ಮಾತನ್ನೂ ಆಡಲಿಲ್ಲ. ಮೂಕರಂತೆ ಕುಳಿತಿದ್ದರು. ತಗ್ಗಿಸಿದ ತಲೆಯನ್ನು ಮೇಲೆತ್ತಲಿಲ್ಲ.

° ° °

ಆರು ತಿಂಗಳ ಶಿಕ್ಷೆ, ಲಕ್ಷ್ಮಣರಾಯರ ಉತ್ತಮ ಗುಣ ನಡತೆಯ ಕಾರಣ, ನಾಲ್ಕು ತಿಂಗಳಲ್ಲಿ ಮುಗಿಯುತ್ತದೆ. ಒಂದು ಮುಂಜಾನೆ, ಅವರು ಜೈಲಿನಿಂದ ಹೊರ ಬರುತ್ತಾರೆ.

ಈಗ ಅವರು ಮನೆಗೆ ಹೋಗುವಂತಿಲ್ಲ. ಮನೆಯಲ್ಲಿ ಅವರನ್ನು ಸ್ವಾಗತಿಸುವವರು ಯಾರೂ ಇಲ್ಲ. ಕಳೆದ ನಾಲ್ಕು ತಿಂಗಳಲ್ಲಿ ಏನೆಲ್ಲ ನಡೆದಿದೆಯೋ, ಅದನ್ನೆಲ್ಲ ಹೇಳಲು ಬೇಸರವಾಗುತ್ತದೆ; ಹೇಳಲು ಸಾಧ್ಯವಾಗುತ್ತಿಲ್ಲ.

ಶೈಲಜೆ ನೆರೆಮನೆಯ ಶಂಕರನ ಕೈ ಹಿಡಿದಿದ್ದಾಳೆ. ಇದಾಗಿ ಎರಡು ತಿಂಗಳಾಗಿವೆ. ಅವರು ಅಹ್ಮದಾಬಾದಿನತ್ತ ಪ್ರಯಾಣ ಬೆಳೆಸಿದ್ದಾರೆ.

ಶೈಲಜೆ ಶಂಕರನನ್ನು ಪ್ರೀತಿಸುತ್ತಿದ್ದಳು. ಅವರಿಬ್ಬರೂ ವಿವಾಹವಾಗಲು ನಿಶ್ಚಯಿಸಿಯೂ ಇದ್ದರು. ನಡುವೆ ನಡೆಸಿದ ಘಟನೆಗಳು ಅವರಿಗೆ ಅಡ್ಡಿಯಾಗಿ ಬಂದುವು. ಸುಲೋಚನೆಯೇನೋ ಹಗಲಿರುಳು ಜಾಗ್ರತೆ ವಹಿಸಿದ್ದಳು. ಆದರೆ ಅದು ವ್ಯರ್ಥವಾಯಿತು. ಶೈಲಜೆಯ ಸುದ್ದಿ ನೆರೆಕರೆಯವರಿಗೆ ಒಂದು ಉತ್ತಮ ಆಹಾರವೆನಿಸಿತು. 'ತಂದೆ ಕನ್ನ ಹಾಕುವವನಾದರೆ, ಮಗಳ ಗುಣ ಹೇಗಿದ್ದೀತು?' ಎಂದೂ ಆಡಿಕೊಳ್ಳುವವರು ಆಡಿಕೊಂಡರು;

ಆ ರಾತ್ರಿಯೇ ಸುಲೋಚನೆ ಆತ್ಮಹತ್ಯೆ ಮಾಡಿಕೊಂಡಳು. ಸುದ್ದಿ ಜೈಲಿಗೆ ಮುಟ್ಟಿತು. ಲಕ್ಷ್ಮಣರಾವ್ ಬಂದರು. ಅಂತಿಮಕ್ರಿಯೆ ಮುಗಿಸಿ ಮತ್ತೆ ಜೈಲು ಸೇರಿ ಕೊಂಡರು.

ಪಾಂಡು ಒಬ್ಬನಿದ್ದ; ಅವನೂ ಶೂನ್ಯ ವಾತಾವರಣದ ಮನೆಯಲ್ಲಿರಲು ಇಚ್ಛಿಸದೆ ತಾನು ಎಲ್ಲಾದರೂ ಹೋಗುವದಾಗಿ ತಂದೆಗೆ ಪತ್ರ ಬರೆದಿದ್ದ. ಅವನು ಎಲ್ಲಿರುವನೋ ತಿಳಿಯದು.

° ° °

ಕತ್ತಲಾಗುವ ವರೆಗೆ ವಿಕ್ಟೋರಿಯಾ ಗಾರ್ಡನ್ನಿನಲ್ಲಿ ಕಳೆದ ಲಕ್ಷ್ಮಣರಾವ್, ಅಪೇರಾ ಹೌಸಿನ ಬಳಿಯಿರುವ ತಮ್ಮ ಮನೆಯತ್ತ ಬರುತ್ತಾರೆ.

ಬೆಳಗ್ಗೆಯಿಂದ ಅವರು ಏನೂ ತೆಗೆದು ಕೊಂಡಿಲ್ಲ. ತಿನ್ನಲು ಅವರಿಗೆ ಇಚ್ಛೆಯೂ ಇಲ್ಲ; ತೆಗೆದುಕೊಳ್ಳಲು ಹಣವೂ ಇಲ್ಲ.

ಅವರು ಮನೆಯ ಸಮೀಪ| ಬರುತ್ತಾರೆ. ಮೂರನೆಯ ಮಾಳಿಗೆಯಲ್ಲಿದ್ದ ತಮ್ಮ ಕೋಣೆಯತ್ತ ದೃಷ್ಟಿ ಹೊರಳಿಸುತ್ತಾರೆ. ಎಲ್ಲಾ ನೆನಪು ಒಮ್ಮೆ ಮರುಕಳಿಸುತ್ತದೆ.

ಶೈಲಜೆ ಶಂಕರನ ಜೊತೆ ಓಡಿಹೋದ ದೃಶ್ಯ—ಸುಲೋಚನೆ ಮೂರನೆಯ ಮಾಳಿಗೆಯಿಂದ ಹಾರುವಾಗಿನ ದೃಶ್ಯ—ಪಾಂಡುರಂಗ ಮನೆಯಲ್ಲಿ ಕಳೆದಿರಬಹುದಾದ ಕೆಲದಿನಗಳ ಅಸಹ್ಯ ಸ್ಥಿತಿಯ ಅನುಭವ—ಎಲ್ಲವನ್ನೂ ಅವರು ಕಲ್ಪಿಸಿಕೊಳ್ಳುತ್ತಾರೆ.

ದೃಶ್ಯಗಳು ಕಣ್ಣೆದುರು ನಿಲ್ಲುತ್ತವೆ. ಹೃದಯದಲ್ಲಿದ್ದ ನೋವು, ಕಣ್ಣೀರಿನ ರೂಪ ತಾಳುತ್ತದೆ. 'ಎಲ್ಲರೂ ಹೊರಟು ಹೋದರು— ಎಲ್ಲರೂ ಹೊರಟು ಹೋದರು. ನಾನೊಬ್ಬ ಮಾತ್ರ ಉಳಿದೆ' ಎಂದು ಹೇಳುತ್ತಾ ನಿಟ್ಟುಸಿರು ಬಿಡುತ್ತಾರೆ.

ಅಲ್ಲಿಂದ ಅವರು ಹೊರಡುತಾರೆ. ಅಲ್ಲಿ ಕ್ಷಣ ಹೊತ್ತೂ ನಿಲ್ಲಲು ಅವರಿಂದಾಗುವದಿಲ್ಲ.

ಅವರು ಹೊರಟು ಹೋಗುತ್ತಾರೆ. ಆ ಬಳಿಕ ಅವರನ್ನು ಬಹುಶಃ ಕಂಡವರೊಬ್ಬರೂ ಇಲ್ಲ ಆ ರಾತ್ರಿ ಅವರ ಅಂತಿಮ ರಾತ್ರಿಯಾಗಿದ್ದಿರಬಹುದೋ ಏನೋ!

° ° °

ಈಗ ರಾಜನಾರಾಯಣನ ಕುರಿತು ಅಗತ್ಯವಾಗಿ ಹೇಳಬೇಕಾದ ವಿಷಯವಿದೆ. ಅದನ್ನು ನಾನೀಗ ಹೇಳಲೇ ಬೇಕಾಗಿದೆ.

ಅವನು ಲಕ್ಷ್ಮಣರಾಯರಿಂದ ಪಡೆದ ರೂಪಾಯಿ ಜೇಬುಗಳ್ಳರ ಪಾಲಾಯಿತು. ಅವನಿಂದ ಬಂಗಾರ ಬಿಡಿಸುವದಾಗಲಿಲ್ಲ.

ಹಣಹೋಯಿತು. ಬಂಗಾರವೂ ಬಳಿಕ ಏಲಂ ಆಯಿತು. ಇದರಿಂದಾಗಿ ಲಕ್ಷ್ಮಣರಾಯರ ಸರ್ವನಾಶವಾಯಿತು.

ಇದನ್ನು ರಾಜನಾರಾಯಣ ಬಯಸಿರಲಿಲ್ಲ. ಏನಿದ್ದರೂ ಈಗ ರಾಜನಾರಾಯಣನ ಸ್ಥಿತಿಯೂ ಚೆನ್ನಾಗಿಲ್ಲ. ಅವನ ನಾಕರಿ ಹೋಗಿದೆ. ಅವನಿಗೆ ಹುಚ್ಚು ಎಂದು ಹೇಳುತ್ತಾರೆ.

ಮನೆಯ ಸ್ಥಿತಿ ಹೇಳಿಕೊಳ್ಳುವಂತಿಲ್ಲ. ಎಳೆಯ ಮೂರು ಮಕ್ಕಳ ಜೊತೆಗೆ ರಾಜನಾರಾಯಣನೂ ಒಂದು ಮಗು ಎಂಬಂತೆ ಈಗ ಅವನ ರಕ್ಷಣೆಯನ್ನು ಸಾವಿತ್ರಿ ಮಾಡಬೇಕಾಗಿದೆ.

ಅವಳ ನೆರವಿಗೆ ಆಕೆಯ ಅಣ್ಣತಮ್ಮಂದಿರು ಬರುತ್ತಾರೆ. ಅವರಿಗೆ ರಾಜನಾರಾಯಣನನ್ನು ನೋಡಿ ಕೊಳ್ಳುವದೇ ಒಂದು ಕೆಲಸವಾಗಿದೆ.

ಅವನು ಕೆಲವೊಮ್ಮೆ ಅವರ ಕಣ್ಣು ತಪ್ಪಿಸಿ ಬೀದಿಗಿಳಿಯುತ್ತಾನೆ. ನಾನು ಸಾವಿರ ರೂಪಾಯಿ ತೆಗೆದು ಕೊಂಡಿದ್ದೇನೆ; ಏನು ಮಾಡುತ್ತೀರಿ ಎಂದು ಬೊಬ್ಬಿಡುತ್ತಾನೆ; ನಗುತ್ತಾನೆ. ನನ್ನಿಂದಾಗಿ ಲಕ್ಷ್ಮಣರಾವ್ ಮುಳುಗಿ ಹೋದರು, ಎಂದು ಅಳುತ್ತಾನೆ. ಶ್ರೀಮಂತರ ಶ್ರೀಮಂತಿಕೆಯನ್ನು ನಿಮಿಷದಲ್ಲಿ ನಾಶ ಮಾಡುತ್ತೇನೆ ಎಂದು ಅಬ್ಬರಿಸುತ್ತಾನೆ. ಅಟಂ ಬಾಂಬ್ ಹಾಕಿ ಬಿಡಿ ಎಂದು ಕೂಗುತ್ತಾನೆ.

ಅರ್ಥವುಳ್ಳ, ಅರ್ಥವಿರದ ಮಾತುಗಳನ್ನು ಅವನು ಆಡುವ. ಅವನಿಗೆ ಹುಚ್ಚು ಎಂದು ಹೇಳುತ್ತಾರೆ. ಅವನ ಪರಿಚಯವುಳ್ಳವರು ಅವನು ಮಾಡಿದ್ದನ್ನು ಅನುಭವಿಸುತ್ತಿದ್ದಾನೆ ಎಂದು ಹೇಳುತ್ತಾರೆ.

ಅವನು ಆಡುವ ಮಾತನ್ನು ಕೇಳಿಸಿಕೊಳ್ಳುವ ಜನರು ನಕ್ಕು ಬಿಡುತ್ತಾರೆ. ಸಾವಿತ್ರಿ ಕೇಳಿಸಿಕೊಂಡಾಗ ಕಣ್ಣೀರಿಡುತ್ತಾಳೆ.

(ಸ್ವಾತಂತ್ರ್ಯದಿನ ಸಂಚಿಕೆಗೆ ಬಂದುದು)

ನಮ್ಮ-ನಮ್ಮವರು

(೧ನೇ ಪುಟದಿಂದ)

ದೆ ಮೂರು ಬಾರಿ ಸಂಸ್ಥೆಯ ಪತಿಯಿಂದ ಇತಿಯೋಪಿಯಾ, ಲಂಡನ್, ರೋಂ, ಪ್ಯಾರಿಸ್, ಲಿಬಿಯಾ, ಮೊಂಬಾಸಾ, ನೈರೋಬಿ ಮೊದಲಾದ ಆಫ್ರಿಕಾ, ಯುರೋಪ್ ದೇಶಗಳನ್ನು ಸುತ್ತಿ ಬಂದಿದ್ದಾರೆ. ತನ್ನ ಪ್ರಯಾಣದ ಹಾಗೂ ಅಧ್ಯಯನದ ಅನುಭವಗಳನ್ನು ಇವರು ಗ್ರಂಥಗಳನ್ನು ಬರೆದು ಕೂಡಾ ಪ್ರಕಟಿಸಿದರು.

ಫೆರ್ನಾಂಡಿಸರು ಪತ್ರಿಕೋದ್ಯಮದಲ್ಲೂ ದುಡಿದವರು. ಇಂಗ್ಲಿಷ್ ಪತ್ರಿಕೆಗಳಾದ 'ಇಂಡಿಯನ್ ನ್ಯೂಸ್' 'ಫ್ರೋರಂ'ಗಳ ಸಂಪಾದಕೀಯ ವಿಭಾಗದಲ್ಲಿ ಅವರು ದುಡಿದಿರುತ್ತಾರೆ. ಮುಂಬಯಿಯ ಜವಾಹರಲಾಲ್ ಫ್ರೀ ಸ್ಟೇಟ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ದುಡಿದು ಸೇವೆ ಸಲ್ಲಿಸಿದ್ದಾರೆ. ಅವರು ಚೀನಿಸಂತೆ ಯಾವಾಗಲೂ ಬಿಡುವಿಲ್ಲದೆ ದುಡಿಯುವ ಪ್ರವೃತ್ತಿಯವರಾಗಿದ್ದಾರೆ. ಕಾರ್ಯತತ್ಪರತೆಯಲ್ಲಿ ಅವರು ನಿಷ್ಣಾತರಾದುದರಿಂದಲೇ, ಅವರನ್ನು ಈಗ ಪುನಃ ವಿದೇಶಕ್ಕೆ ಕಳುಹಿಸುವ ನಿರ್ಧಾರವನ್ನು ಅವರ ಸಂಸ್ಥೆ ಕೈಕೊಂಡಿದೆ.

ಈ ತಿಂಗಳ ೨೮ಕ್ಕೆ ಶ್ರೀಯುತರು ಸಿಲೋನ್, ಪೋಲೇಂಡ್, ಜೆಕೊಸ್ಲೊವಾಕಿಯಾ ದೇಶಗಳನ್ನು ಸುಮಾರು ಒಂದೂವರೆ ತಿಂಗಳ ಕಾಲ ಸಂದರ್ಶಿಸಲು ತೆರಳಲಿದ್ದಾರೆ. ಅವರು ಈ ಹಿಂದೆ ವಿದೇಶಸಂಚಾರದಿಂದ ಗಳಿಸಿದ ಅನುಭವದ ಪ್ರಯೋಜನ ದೇಶಕ್ಕೆ ದೊರೆತಿದೆ. ಈ ಬಾರಿಯ ವಿದೇಶ ಯಾತ್ರೆ ಸಫಲವಾಗಲಿ, ಶ್ರೀ|| ಫೆರ್ನಾಂಡೀಸರಿಂದ-ನಮ್ಮ ಜಿಲ್ಲೆ ಇನ್ನೂ ಹೆಚ್ಚಿನ ಪ್ರಸಿದ್ಧಿಗೆ ಬರಲಿಎಂದು ಹಾರೈಸುತ್ತೇವೆ. ನವಯುಗದ ಅಭಿಮಾನಿಗಳಾದ ಶ್ರೀಯುತರಿಗೆ ನವಯುಗವು ಶುಭಕಾಮನೆಗಳನ್ನು ಈ ಸಂದರ್ಭ ಬಯಸುತ್ತದೆ.

In the Court of the Principal Munsif of Udipi.

O. S. No. 268 of 1964.

M. Chandrasekhara Shetty ... Plaintiff.

against

Thereja Pinto Bai and others ... Defendants.

To:

3rd defendant Marcel Lewis and 5th defendant Gregory Lewis, sons of Jacob Lewis, residing at Bhadragiri of Baikadi Village of Udipi Taluk.

Please take notice that the above plaintiff filed a suit against you and others for recovery of mulgeni rent claimed in the plaint and that is posted to 18—9—1964 for notice to both of you. If you fail to appear before the said Court at 11 A. M. on the day mentioned above, the same will be decided in your absence.

K. Varadaraya Pai,
Advocate for plaintiff.

Udipi, Dated 21-8-1964.

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನವ ಯುಗ

1)	3- 9- 1964	16
2)	10- 9- 1964	16
3)	17- 9- 1964	16
4)	24- 9- 1964	16
5)	1- 10- 1964	16
6)	8- 10- 1964	16
7)	15- 10- 1964	16
8)	22- 10- 1964	12
9)	29- 10- 1964	36
10)	5- 11- 1964	16
11)	12- 11- 1964	16
12)	19- 11- 1964	16
13)	26- 11- 1964	16
14)	3- 12- 1964	16
15)	10- 12- 1964	16
16)	17- 12- 1964	16
17)	24- 12- 1964	16
18)	31- 12- 1964	16
19)	7- 1- 1965	16
20)	14- 1- 1965	16
		336

21)	21-1-1965	12
22)	28 1-1965.	52
23)	4-2-1965.	16
24)	11-2-1965	16
25)	18-2-1965	16
26)	25-2-1965	16
27)	4-3-1965	16
28)	11-3-1965	16
29)	18-3-1965	16
30)	25-3-1965	16
31)	1-4-1965	16
32)	8-4-1965	16
33)	15-4-1965	16
34)	22-4-1965	16
35)	25-4-1965	16
36)	6-5-1965	16
37)	13-5-1965	16
38)	20-5-1965	16
39)	27-5-1965	16
40)	3-6-1965	16
		348

41)	10-6-1965	16	
42)	17-6-1965	16	
43)	24-6-1965	16	
44)	1-7-1965	16	
45)	8-7-1965	16	
46)	15-7-1965	16	
47)	22-7-1965	16	
48)	29-7-1965	16	
49)	5-8-1965	16	
50)	12-8-1965	44	Independence Issue
51)	19-8-1965	12	
52)	26-8-1965	16	
		216	

1) 336
2) 348
3) 216

900

ನವಯುಗ

ಸೆಪ್ಟೆಂಬರ, ೪, ೬೮

ಸಂಪುಟ ೮೮

ಸಂಚಿಕೆ ೧

Navayuga *nationalist kannada weekly*

೧೦ ಪೈಸೆ

ಯೂರೋಪಿನ ಜನಜೀವನ

ವಿವಿಧ ದೇಶಗಳ ವಿವಿಧ ರುಚಿಗಳು

ಪತ್ರಿಕೆಗಳ ಓದು, ಪ್ರವಾಸ, ಭವಿಷ್ಯಕ್ಕಾಗಿ ಈಗಿಂದೀಗಲೇ ಸಂಚಯ ಮೊದಲಾದ ಮುಖ್ಯ ವಿಷಯಗಳಲ್ಲಿ ಇಡಿಯ ಯುರೋಪಿನಲ್ಲಿ ಜರ್ಮನ್ನರು ಅಗ್ರಗಾಮಿಗಳು. ವಿಲಾಸಮಯ ಜೀವನ ನಡೆಸುವಲ್ಲಿ ಫ್ರೆಂಚರು ಮೊದಲಿಗರು, ಅವರನ್ನು ಇಟಾಲಿಯನ್ನರು ಅನುಸರಿಸುತ್ತಾರೆ.

ಯುರೋಪ್ ಅನೇಕ ಚಿಕ್ಕ ಪುಟ್ಟ ದೇಶಗಳ ಒಕ್ಕೂಟ. ಆದರೆ, ಈ ಭೂಖಂಡದ ಎಲ್ಲ ಭಾಗಗಳ ಪ್ರಜಾ ಜನರೂ ಏಕರೀತಿಯಲ್ಲಿ ವ್ಯವಹರಿಸುತ್ತಾರೆಯೇ ಎಂದು ಹೆಚ್ಚಿನವರಿಗೆ ತಿಳಿದಿಲ್ಲ. ಇದನ್ನು ತಿಳಿದುಕೊಳ್ಳಲು ಯುರೋಪದಲ್ಲೇ ಕುತೂಹಲ ಕೆರಳಿರುವಾಗ, ಪ್ರಪಂಚದ ಇತರ ದೇಶಗಳಲ್ಲಿ ಆಸಕ್ತಿ ಮೂಡುವುದು ಅಸ್ವಾಭಾವಿಕವಾಗದು. ಪಶ್ಚಿಮ ಜರ್ಮನಿಯ ಸಂಸ್ಥೆಯೊಂದು ಈ ಸಂಬಂಧದ ಅಧ್ಯಯನ ಕಾರ್ಯವನ್ನು ಕೈಗೊಂಡು ಕೆಲವೊಂದು ಸ್ವಾರಸ್ಯಮಯ ಅಂಕಿ ಅಂಶಗಳನ್ನು ಪ್ರಕಟಪಡಿಸಿದೆ.

ಯುರೋಪ ಖಂಡದಲ್ಲಿ ಫ್ರೆಂಚರಷ್ಟು ಸುಂದರರು ಮತ್ತಾರೂ ಇಲ್ಲ. ಸಮಾಜದಲ್ಲಿ ಬೆರೆಯಲು ಅವರಷ್ಟು ಆತುರಪಡುವವರು ಬೇರೊಂದು ದೇಶದವರಿಲ್ಲ. ಫ್ರೆಂಚ ಜನರು ತಮ್ಮಲ್ಲಿ ತಿಂಗಳಿಗೊಮ್ಮೆಯಾದರೂ ಔತಣ ಕೂಟಗಳನ್ನೇರ್ಪಡಿಸಿ, ಅದಕ್ಕೆ ಇಷ್ಟಮಿತ್ರರನ್ನು ಆಹ್ವಾನಿಸುತ್ತಾರೆ. ಅವರ ಕೂಟದಲ್ಲಿ ನಲಿದಾಡಿ ತಮ್ಮನ್ನೇ ತಾವು ಮರೆಯುತ್ತಾರೆ. ಸಮಾಜದೊಡನೆ ಬೆರೆಯುವ ಅವಕಾಶವನ್ನು ಕಲ್ಪಿಸುವುದಷ್ಟೇ ಇಂತಹ ಕೂಟಗಳ ಉದ್ದೇಶ.

ಜರ್ಮನ್ನರು ಈ ವಿಷಯದಲ್ಲಿ ಸ್ವಲ್ಪ ಹಿಂದೆಯೇ. ಆದರೂ ಕೇವಲ ಇಟಾಲಿಯನ್ ಅಥವಾ ಬೆಲ್ಜಿಯಂ ಪ್ರಜೆಯಂತೆ ತಾನುಂಟೋ ಮೂರು ಲೋಕವುಂಟೋ ಎಂಬಂತೆ ಕದ್ದು ಬಿಡುವುದಿಲ್ಲ.

ವೃತ್ತ ಪತ್ರಿಕೆಗಳನ್ನು ಓದುವುದರಲ್ಲಿ ಜರ್ಮನ್ನರೇ ಅಗ್ರಗಣ್ಯ ಸ್ಥಾನ ಗಳಿಸುತ್ತಾರೆ. ನೂರಕ್ಕೆ ೩೩ ಜರ್ಮನ್ನರು, ೩೨ ಬ್ರಿಟಿಷರು, ೨೪ ಫ್ರೆಂಚರು ಮತ್ತು ೧೭ ಇಟಾಲಿಯನ್ನರು ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ಇಟ್ಟುಕೊಂಡಿದ್ದಾರೆ.

ಗ್ರೇಟ್‌ಬ್ರಿಟನ್ ಅತ್ಯಧಿಕ ಸಂಖ್ಯೆಯ ಟೆಲಿವಿಜನ್‌ಗಳನ್ನು ಹೊಂದಿದೆ. ಜರ್ಮನಿ ಮತ್ತು ನೆದರ್‌ಲ್ಯಾಂಡ್ಸ್‌ಗಳ ಪ್ರಜೆಗಳು ಶಾದೇ ಸಂಗೀತ ಗೋಷ್ಠಿಗಳನ್ನು ನಡೆಸುವುದರಲ್ಲಿ ಸುಖವನ್ನು ಕಾಣುತ್ತಾರೆ. ಚಲಚ್ಚಿತ್ರಗಳನ್ನು ನೋಡುವುದರಲ್ಲಿ ಫ್ರೆಂಚರಿಗಿರುವಷ್ಟು ಮೋಹ ಮತ್ತಾರಿಗೂ ಇಲ್ಲ. ಇಟಾಲಿಯನ್ನರು ಇದರಲ್ಲಿ ಎರಡನೆಯ ಸ್ಥಾನ ಪಡೆಯುತ್ತಾರೆ. ತಮ್ಮ ಮನೆಗಳ ಕಿಟಕಿಗಳೆಡೆ ಕುಳಿತು ತಲೆ ಹೊರಗೆ ಹಾಕಿ ಮಾರ್ಗಗಳಲ್ಲೇನು ನಡೆಯುತ್ತದೆಂದು ನೋಡುವುದರಲ್ಲಿ ಜರ್ಮನ್ನರಿಗೆ ಅಭಿರುಚಿ. ನೆರೆಹೊರೆಯವರ ವಿಷಯಗಳಲ್ಲಿ ಆಸಕ್ತಿ ತೋರುವ ಜರ್ಮನ್ನರೂ ಕೆಲವರಿದ್ದಾರೆ. ಇಟಾಲಿಯನ್ನರೂ ಫ್ರೆಂಚರೂ ಈ ವಿಷಯದಲ್ಲಿ ಹೆಚ್ಚು ಹಿಂದುಳಿದಿಲ್ಲ. ಆದರೆ ಇಂಗ್ಲಿಷರು ಮಾತ್ರ ಇಂತಹ ಚಟಕ್ಕೆ ಹೊರತಾದವರು. ಪಕ್ಕದ ಮನೆಯ ಕೋಡಿನಲ್ಲಿ ಸಿಕ್ಕಿಕೊಳ್ಳಲು ಅವರೆಂದೂ ಬಯಸುವುದೇ ಇಲ್ಲ.

ಪುಸ್ತಕಗಳ ಓದುವುದರಲ್ಲಿ ಇಂಗ್ಲಿಷರು ಮೊದಲ ಸ್ಥಾನವನ್ನು ಪಡೆಯುತ್ತಾರೆ. ವಾಯು ವಿಹಾರ ಮತ್ತು ದೂರ ಪ್ರವಾಸಗಳನ್ನು ಕೈಗೊಳ್ಳುವುದರಲ್ಲಿ ಜರ್ಮನ್ನರು ಮೊದಲಿಗರು. ಆದರೆ, ಕ್ರೀಡೆಗಳ ವಿಷಯದಲ್ಲಿ ಈ ಎಲ್ಲ ದೇಶಗಳೂ ಹಿಂದೆ ಬಿದ್ದಿವೆ. ಪಂದ್ಯಾಟಗಳನ್ನು ವೀಕ್ಷಿಸಲು ಅಸಂಖ್ಯ ಪ್ರೇಕ್ಷಕರು ಬಂದರೂ ಆಟಗಾರರ ಸಂಖ್ಯೆ ಮಾತ್ರ ಇಲ್ಲಿ ವಿರಳ.

ನೂರಕ್ಕೆ ೫೫ ರಷ್ಟು ಜರ್ಮನ್ ಸಂಸಾರಗಳು ಪ್ರತಿತಿಂಗಳೂ ತಮ್ಮ ಹಣವನ್ನು ಸೇವಿಂಗ್ಸ್ ಬ್ಯಾಂಕಿಗೆ ಹಾಕುವ ಪದ್ಧತಿಯನ್ನಿಟ್ಟುಕೊಂಡಿವೆ. ಇಂಗ್ಲಿಷನಿಗೆ ಭವಿಷ್ಯದ ಚಿಂತೆಯಿದೆಯಾದರೂ ಅವನು ಹಾಗೆ ಮಾಡುವುದಿಲ್ಲ, ಬದಲಿಗೆ ಷೇರುಗಳನ್ನೂ ಬಾಂಡುಗಳನ್ನೂ ಆತ ಕೊಂಡುಕೊಳ್ಳುತ್ತಾನೆ. ಜೀವ ವಿಮೆಯಿಳಿಸಲು ಮೊತ್ತಮೊದಲು ಮುಂದೆ ಬರುವವನು ಇಂಗ್ಲಿಷನ. ತಮ್ಮ ಭವಿಷ್ಯದ ಬಗ್ಗೆ ಎಳ್ಳಷ್ಟೂ ಯೋಜನೆ ಮಾಡದವರೆಂದರೆ, ಫ್ರೆಂಚರು ಮತ್ತು ಇಟಾಲಿಯನರ.

ಹೀಗೆ ಯುರೋಪಿನ ಹತ್ತಾರು ದೇಶಗಳ ಪ್ರಜೆಗಳ ಮೆಚ್ಚು-ರುಚಿ ಬೇರೆ ಬೇರೆ ಆದರೂ ಅವರೆಲ್ಲರನ್ನೂ ಏಕಸೂತ್ರದಲ್ಲಿ ಬಂಧಿಸುವ ಯಶ್ಶಿಣಿಯೊಂದಿದೆ. ಅದೇ ಮಾನವೀಯತೆ.

ಅಪ್ಪಟ ಹರಟೆ

ಗಂಭೀರ ಪರಿಸ್ಥಿತಿ ವಿಮೋಚನೆ

ಐವತ್ತು ವಯಸ್ಸಿನ ಮನೆಯಾಕೆ ಮುಟ್ಟಾಗುವಳೆಂದು ಡಾಕ್ಟರರು ತಮ್ಮ ಔಷಧಿಯ ಮೇಲಿನ ಭರವಸೆಯಿಂದ ಆಶ್ವಾಸನ ನೀಡಿದ್ದರೂ ರಾಯರು ಅದನ್ನು ಮೆಚ್ಚುಗೆಮನಕ್ಕೆ ತಂದುಕೊಳ್ಳಲಿಲ್ಲ. ಇದು ಹಿಂದೆ ಅನೇಕ ತಜ್ಞರೂ ಇದೇ ಬಗೆಯ ವಿಶ್ವಾಸ ವ್ಯಕ್ತಪಡಿಸಿದ್ದರೂ ಅದು ವಿಶ್ವಾಸದಿಂದಲೇ ಪರ್ಯವಸಾನಗೊಂಡುದೇ ಇದಕ್ಕೆ ಮೂಲ ಕಾರಣ. ರಾಯರ ೫೦ ವರ್ಷದ ತಾಯಿ ಡಾಕ್ಟರರ ಶೋಧಿಸಿಂದ ಮರಳಿ ಬಂದ ರಾಯರಿಗೆ ಯಜಮಾನಿ ಮುಟ್ಟಾಗಲಿರುವಳೆಂದು ಖಡಾಖಂಡಿತವಾಗಿ ಸಾರಿದ್ದರೂ ರಾಯರ ದೃಷ್ಟಿ 'ಪರಿಸ್ಥಿತಿ'ಯನ್ನು ಹತೋಟಿಯಲ್ಲಿಡುವತ್ತ ಹರಿಯಲಿಲ್ಲ. "ಏನೋ ಹೇಳಿದ್ದಾರೆ, ಬಹುಮಟ್ಟಿಗೆ ಅದು ಸಂಭವಿಸಲಾರದು. ಒಂದು ವೇಳೆ ಸಂಭವಿಸಿಯೇ ತೀರಿದರೆ, ಪರಿಸ್ಥಿತಿಯನ್ನೆದುರಿಸಲು ಸಿದ್ಧರಾಗಿಯೇ ಇದ್ದೇವೆ' ಎಂದು ಡಣಾಡಂಗುರ ಸಾರಿದರು ರಾಯರು. ಅವರ ಊಹನ ತಪ್ಪುಗಲಲ್ಲ. ಡಾಕ್ಟರರು ನುಡಿದವಧಿಯವರೆಗೆ ಗಂಭೀರ ಪರಿಸ್ಥಿತಿ ತಲೆದೋರಲೇ ಇಲ್ಲ. ರಾಯರು ಗದ್ದವನ್ನೆ ಮೋಗ ಮಾಡಿದರು.

○ ○ ○

ಮೂರನೆಯದಿನ ರಾಯರು ಸೂರ್ಯನೊಡನೆ ಎದ್ದವರೇ ನೋಡುತ್ತಾರೆ ಮನೆಯಾಕೆ ದೂರದಲ್ಲಿ ಜೋಲು ಮೋರೆ ಹಾಕಿ ಕುಳಿತಿದ್ದಾಳೆ! ಮುದಿ ತಾಯಿ "ನಾನು ಮೊದಲೇ ಹೇಳಿದ್ದ, ಅವನು ಮಾತ್ರ ಕೇಳಲಿಲ್ಲ ಏನು ಮಾಡುವುದೀಗ' ಎಂದು ಮಗನಿಗೆ ಸಹಸ್ರನಾಮ ಕೇಳಿಸುತಿದ್ದಾರೆ. ಒಂದು ಕ್ಷಣ ರಾಯರು ಅಪ್ರತಿಭರಾದರು. ಮರುಕ್ಷಣವೇ 'ಪರಿಸ್ಥಿತಿಯನ್ನೆದುರಿಸಲು ಕಟಿಬದ್ಧರಾಗಿದ್ದೇವೆ, ಏನೂ ಬರಲಿ ಎದೆಗೆಡಬೇಡಿರಿ ಎಲ್ಲವೂ ಮೂರು ದಿನಗಳಲ್ಲಿ ಸರಿ ಹೋಗುವುದು. ಆದುವರೆಗ 'ಸಂಯಮದಿಂದ ವರ್ತಿಸಿರಿ' ಎಂಬ ಆ ಮಂತ್ರಿ ಘೋಷಣೆ ಅವರ ಬಾಯಿಂದ ಹೊರಟಿತು. ಹೆಚ್ಚು ಮಾರ್ಕೆಟ್ ಲಚ್ಚುವನ್ನು ದೂರದ ಸಂಬಂಧಿಕಂ ಮನೆಗ ಅಟ್ಟಿದರು. ಎರಡು ದಿನದ ನಂತರ ಜನ ಬರುವದೆಂಬ ಆಶ್ವಾಸನದೊಂದಿಗೆ ಆತ ಮುಂಚೆ ಬಂದನು ಸಂಜೆ.

○ ○ ○

ರಾಯರು ತಮ್ಮ ತಾಯಿಗೆ ಪ್ರಾರ್ಥಿಸಿದರು. "ನಮಗಂತೂ ಏನಾದರೂ ತಿಂದೇವು, ಉಳಿದೇವು. ಮಕ್ಕಳ ಹೊಟ್ಟೆಯನ್ನು ತಣಿಸಲು ಕೂಡಿದಷ್ಟಾದರೂ ಎದ್ದು ಗಂಜಿಯನ್ನಾದರೂ ಬೇಯಿಸಮ್ಮಾ" ಮುದಿ ಗೂರಲಿನ ತಾಯಿ ಎದ್ದು ಗಂಜಿ ಬೇಯಿಸುವ ಸಾಹಸ ಮಾಡಿದರು. ಅಕ್ಕಿಯನ್ನು ತಾಡಿನಿಂದ ಬೇರ್ಪಡಿಸಲು ಕೈಯಲ್ಲಿ ತ್ರಾಣವಿಲ್ಲ, ಬೆಂಕಿ ಮೂದಲು ಉಸಿರೇ ಇಲ್ಲ. ಅಕ್ಕಚ್ಚು ಬಸಿಯಲು ಕಣ್ಣು ತೋರುವುದಿಲ್ಲ. ಅಂತೂ ಬತ್ತ—ಕಲ್ಲು ಹುಳ-ತೌಡು ಮಿಶ್ರಿತ ಅಗಳ ಮುದ್ದೆ ಬಟ್ಟಲಲ್ಲಿ ಇಳಿಯಿತು. ಅದನ್ನೇ ರಾಯರೂ ಉಳಿದವರೂ ಮೆದ್ದು ಸಂತೃಪ್ತರಾದರು. ದಿನಾಂತದಲ್ಲಿ ರಾಯರೊಂದು ಪ್ರಕಟಣೆ ಹೊರಡಿಸಿದರು "ಪರಿಸ್ಥಿತಿ ಗಂಭೀರವಾಗಿದೆ. ಹೀಗೆಯೇ ಮುಂದುವರಿದರೆ, ಡಾಕ್ಟರರ ಚೀಟು ತುಂಬುವುದು ನಿಂಡಿತ. ಹಾಗಾಗದಂತೆ ತೀವ್ರ ಎಚ್ಚರಿಕೆಯಿರಬೇಕು. ಮನೆಯವರೆಲ್ಲರೂ ಒಂದಾಗಿ ಒಂದುಗೂಡಿ ಅಂಬಲಿಯನ್ನಾದರೂ ನಿರ್ಮಲವಾಗಿ ಬೇಯಿಸಬೇಕು. ಆದರೂ ಧೃತಿಗೆಡುವ ಆವಶ್ಯಕತೆಯಿಲ್ಲ. ಎಲ್ಲವೂ ಸರಿಯಾಗುವುದು. ಇನ್ನು ಈ ಬಗೆಯ ಸಮಸ್ಯೆಗಳು ಮುಂದೆ ಬರದಂತೆ ತಡೆಯಲು ಅಲ್ಪಾವಧಿಯ ಮತ್ತು ದೀರ್ಘಾವಧಿಯ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತಿದೆ. ಅದು ಪೂರ್ಣಗೊಂಡ ಮೇಲೆ ಏನೂ ಗಾಬರಿಪಡಬೇಕಾದ ಆಗತ್ಯವಿಲ್ಲ."

○ ○ ○

ಎರಡನೆಯ ದಿನವೂ ಕಳೆಯಿತು. ಅಂದೂ ರಾಯರೊಂದು ಹೇಳಿಕೆಯಿತ್ತರು: 'ಗಂಡಾಂತರ ವೇಗವಾಗಿ ಸಮೀಪಿಸುತ್ತ ಬರುತ್ತಿದೆ. ಪೂರ್ಣವಾಗಿ ಇಲ್ಲವಾದರೂ ಬಹಳಂ

(ಹದಿನೈದನೇ ಪುಟ ನೋಡಿರಿ)

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿ ಕಳಿಸುವವರಿಗೆ

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಚಂದಾದಾರರಿಗೆ

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:
ರಾಧಾ-ಕೃಷ್ಣರು

ನವಯುಗ

ಸಂಪುಟ ೪೪	ಉಡುಪಿ ೩—೯—೧೯೬೪	ಸಂಚಿಕೆ ೧

ವಚನ ಸುಧೆ

ಉತ್ತಿಷ್ಠತ | ಜಾಗ್ರತ |
ಪ್ರಾಪ್ಯ ವರಾನ್ನಿಬೋಧತ ||
(ಕಠೋಪನಿಷತ್, ೩-೧೪)

O ಎದ್ದೇಳು, ಎಚ್ಚರಾಗು ಮತ್ತು ಶ್ರೇಷ್ಠರನ್ನು ಸೇರಿ ಜ್ಞಾನ ಪ್ರಾಪ್ತಿ ಮಾಡು.

OO ಆಲಸ್ಯವನ್ನು ದೂರ ಮಾಡು; ನಿನ್ನ ಒಳಿತು ಕೆಡುಕುಗಳನ್ನು ವಿವೇಚಿಸು, ಸಜ್ಜನರ ಸಹವಾಸ ಗಳಿಸಿ ಅವರಿಂದ ಜ್ಞಾನ ಪಡೆಯು; ಮಹಾ ಜ್ಞಾನಿಯಾಗು.

ತುಟಿ ಮೀರಿದ ಮಾತು ಏಕೆ?

ಎ ಐ ಸಿ ಸಿ ಯ ಪ್ರಸಕ್ತ ಅಧಿವೇಶನವು ನವದೆಹಲಿಯಲ್ಲಿ ನಡೆದಾಗ ಕಾಮರಾಜ ಯೋಜನೆಯನ್ನು ಬಿಟ್ಟುಕೊಡುವ ಕುರಿತಾದ ಅನಧಿಕೃತ ಗೊತ್ತುವಳಿಯ ಮೇಲೆ ಬಿರುಸಿನ ಚರ್ಚೆ ನಡೆಯಿತು. ಈ ಯೋಜನೆಯು ತನಗೊಲ್ಲದವರನ್ನು ಅಧಿಕಾರದಿಂದ ದೂರವಿಟ್ಟು ತನ್ನ ಸ್ಥಾನಮಾನಗಳನ್ನು ಭದ್ರಗೊಳಿಸಲು ದಿವಂಗತ ಪ್ರಧಾನಿ ನೆಹರುರವರು ಕೈಗೊಂಡ ಒಂದು ತಂತ್ರವೆಂದು ಅದರ ಪುರಸ್ಕರ್ತರು ಹೇಳಿದರು. ಇದು ನಿಜಕ್ಕೂ ವಿಷಾದಪ್ರದ ಸಂಗತಿಯೇ ಸರಿ. ನೆಹರುರವರಂತಹ ಮಹಾನಾಯಕರು ಇಂತಹ ಹೀನಕೃತ್ಯಕ್ಕೆ ಇಳಿದರೆಂದು ಊಹಿಸುವುದೂ ಮಹಾಪಾಪ. ಕಾಂಗ್ರೆಸ್ ಮತ್ತು ಸರಕಾರಗಳೆರಡರಲ್ಲೂ ಅವರು ತಮ್ಮ ಪ್ರಭಾವವನ್ನು ಬೀರುತಿದ್ದರು ನಿಜ; ಆದರೆ, ಜನತೆಯು ವಿಶ್ವಾಸವಿಡುವ ವರೆಗೆ ಮಾತ್ರ ತಾನು ಅಧಿಕಾರದಲ್ಲಿರುವೆನೆಂದು ಘೋಷಿಸಿದ ನೆಹರುರ ಪವಿತ್ರಾತ್ಮಕ್ಕೆ ಕಳಂಕ ಬಳಿಯುವ ಈ ತೆರದ ಹವ್ಯಾಸ ಯಾರಿಗೂ ಶೋಭನೀಯವಲ್ಲ; ಹಾಗಿರುವಾಗ ಕಾಂಗ್ರೆಸಿಗರೇ ಈ ರೀತಿ ಉದ್ಗಾರವೆತ್ತುವುದು ನಾಚಿಗೆಗೇಡು.

ಮದ್ರಾಸದ ಯಶಸ್ವಿ ಮುಖ್ಯ ಮಂತ್ರಿಗಳೆಂದು ಹೆಸರು ಪಡೆದ ಕಾಮರಾಜರು ಪಕ್ಷದ ಬಿಗಿತ, ಸಂಘಟನೆಯು ಶಿಥಿಲವಾಗುತ್ತಿರುವುದನ್ನು ಮನಗಂಡರು. ಹಿರಿಯ ಕಾಂಗ್ರೆಸಿಗರು ಇದೇ ವಿಚಾರವಾಗಿ ತಲೆಕೆಡಿಸಿ, ಪಕ್ಷದ ಹಿತಾಸಕ್ತಿ ಮತ್ತು ಬಿಗುಹನ್ನು ಉಳಿಸಲು ಯೋಚಿಸುತ್ತಿರುವಾಗ, 'ಅಧಿಕಾರ ತ್ಯಾಗ' ಮೂಲವಾದ ತನ್ನ ಯೋಜನೆಯನ್ನು ರೂಪಿಸಿ ಅದರ ಕುರಿತು ಚರ್ಚಿಸಿದರು. ಅಧಿಕಾರಕ್ಕಂಟಿ ಕುಳಿತಿರುವುದರಿಂದ ದೇಶಹಿತ ಸಾಧನೆಯಾಗಲಾರದೆಂದೂ ಪಕ್ಷದ ಹಿತ ಮತ್ತು ಸಂಘಟನೆಗಾಗಿ ಅಖಿಲ ಭಾರತ ಮಟ್ಟದ ಕೆಲ ನಾಯಕರಾದರೂ ಪೂರ್ಣಾವಧಿಯಾಗಿ ದುಡಿಯಬೇಕೆಂದೂ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮನವರಿಕೆ ಮಾಡಿಕೊಂಡಿತು. ಆದರೆ, ಯಾರನ್ನು ಬಿಡಬೇಕು ಎಂಬ ಪ್ರಶ್ನೆಯನ್ನು ನೆಹರುರವರಿಗೆ ಒತ್ತಾಯದಿಂದದು ಒಪ್ಪಿಸಿತು. ಅಸಹಾಯಕರಾದ ಅವರು ಹಾಗೆ ಮಾಡಲೇ ಬೇಕಾಗಿ ಬಂತು. ಹಾಗಿರುವಾಗ ಕೆಲವರನ್ನು ಹೊರಮಾಡಲು ನೆಹರು ಹೂಡಿದ ತಂತ್ರವಿದೆಂದು ಉಸುರುವುದು, ಯೋಚಿಸುವುದು ಶುದ್ಧ ಅನ್ಯಾಯ.

ಅಧಿಕಾರ ತ್ಯಾಗದ ಪ್ರಶ್ನೆಯನ್ನು ಕಾಮರಾಜರೇ ಮೊದಲು ಎತ್ತಲಿಲ್ಲ. ಸಂಜೀವ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾದಾಗಲೂ ಈ ಸಲಹೆ ಬಂದಿತ್ತು. ಸ್ವಯಂ ನೆಹರುರವರು ಕೂಡ ಕಾಂಗ್ರೆಸಿಗರನ್ನು ಕುರಿತು ಮಾತನಾಡುವಾಗ ಕುರ್ಚಿಗಂಟಿರದ ಪ್ರವೃತ್ತಿ ಬೆಳೆಯಬೇಕೆಂದೂ ಪಕ್ಷದ ಬಲಸಂವರ್ಧನೆಗಾಗಿ ದುಡಿಯಬೇಕೆಂದೂ ಎಂದಿನಿಂದಲೂ ಸಲಹೆ ನೀಡುತ್ತ ಬಂದಿದ್ದರು. ಹಾಗಿರುವಾಗ ಕಾಮರಾಜ ಯೋಜನೆಯು ಇವೆಲ್ಲವುಗಳ ಫಲವೆಂದರೆ ತಪ್ಪಲ್ಲ. ನೆಹರು ಕೂಡ ಒಂದಕ್ಕಿಂತ ಹೆಚ್ಚು ಬಾರಿ ಅಧಿಕಾರದಿಂದ ನಿವೃತ್ತರಾಗುವ ವಿಚಾರ ಮುಂದೆ ತಂದಿದ್ದರು. ಕಾಮರಾಜ ಯೋಜನೆಯು ಕಾರ್ಯರೂಪಕ್ಕೆ ಬರತೊಡಗಿ ಒಂಬತ್ತು ತಿಂಗಳ ಅವಧಿ ಮಾತ್ರ ಕಳೆಯಿತು. ಅಷ್ಟರಲ್ಲಿ ಒಮ್ಮೆ ಮಂತ್ರಿ ಮಂಡಲದಿಂದ ಹೊರ ಬಂದವರಲ್ಲಿ ಕೆಲವರು ಮತ್ತೆ ಅದರಲ್ಲಿ ಸೇರಿದರು. ಮೊತ್ತಮೊದಲು ಹೊರ ಬರುವ ಘೋಷಣೆ ಮಾಡಿದ ಲಾಲಬಹದೂರ ಶಾಸ್ತ್ರಿಯವರು ಎಲ್ಲರಿಗಿಂತ ಮೊದಲಿಗೇನೇ ಅದರಲ್ಲಿ ಸೇರಿದರು; ನೆಹರು ನಿಧನಾನಂತರ ಅವರ ಸ್ಥಾನವನ್ನೂ ಪಡೆದರು. ರಾಜಕಾರಣದ ಗಾಳಿಪಟ ಹಾರುತ್ತಲೇ ಇರುತ್ತದೆ. ಅದು ಹಾರಿದತ್ತ ನೂಲು ಬಿಡುವುದು ಅತಿ ಅಗತ್ಯವಿರುತ್ತದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಜಾರಿಬಿದ್ದಿರಬಹುದು; ಮುಂದೆಯೂ ಜಾರಿಬೀಳಬಹುದು; ಆದರೂ ಇದರ ಹಿಂದೆ ಅಡಗಿರುವ ಅಮರ ತತ್ವವನ್ನು ಮಾತ್ರ ನಾವು ಮರೆಯಬಾರದು. ಅಧಿಕಾರಕ್ಕಿಂತ ಪಕ್ಷ ಸಂಘಟನೆ ಹೆಚ್ಚಿನದೆಂಬುದನ್ನಿದು ಕಾಂಗ್ರೆಸಿಗರಿಗೆ ಕಲಿಸುವುದಿಲ್ಲವೆ? ಈ ಸಾರವನ್ನು ಅರ್ಥಮಾಡಿಕೊಳ್ಳದಿದ್ದರೆ, ತಪ್ಪು ಯಾರದು?

ಈ ಸಂದರ್ಭದಲ್ಲಿ ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರು ಹೇಳಿದ ಮಾತುಗಳನ್ನು ಅವಶ್ಯ ನೆನಪಿಟ್ಟುಕೊಳ್ಳಬೇಕು. ಇಂದು ಕಾಂಗ್ರೆಸ್ ರಾಜ್ಯಗಳಲ್ಲಿ, ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದೆ-ಆದುದರಿಂದ ಅದರಲ್ಲಿ ಸರಕಾರ — ಪಕ್ಷವೆಂಬೆರಡು ಕಾರ್ಯಾಂಗಗಳಿವೆ. ಪ್ರಜಾಪ್ರಭುತ್ವ ಭಾರತದಲ್ಲಿ ಕೊನೆಯವರೆಗೂ ಕಾಂಗ್ರೆಸ್ಸೇ ಅಧಿಕಾರ ಗದ್ದುಗೆಯಲ್ಲಿಳಿಯುವುದೆಂದು ಯಾರು ಹೇಳಬಲ್ಲರು? ಅದು ವಿರೋಧಿ ಪಕ್ಷವಾಗಬೇಕಾದ ಒಂದು ದಿನವೂ ಬರಬಹುದು—ಕೇರಳದಲ್ಲಿ ಒಮ್ಮೆ ಹೀಗಾಗಿದೆ; ಗೋವೆಯಲ್ಲಿ ಇಂದು ಕಾಂಗ್ರೆಸ್ಸು ಹಾಗೇನೇ ಇದೆ—ಆಗ, ಪಕ್ಷದ ಸಂಘಟನೆ ಅತಿ ಬಿಗಿಯಿರಬೇಕಾಗುತ್ತದೆ. ಹಾಗಾಗಿ ಕಾಂಗ್ರೆಸ್ಸಿನ ಭವ್ಯದ ಹಿತ ಸಾಧನೆಗಾಗಿಯಾದರೂ ಅಧಿಕಾರ ತ್ಯಾಗ ಮತ್ತು ಸೇವೆಯ ವಿಚಾರವನ್ನು ಮನವರಿಕೆ ಮಾಡಿಕೊಳ್ಳುತ್ತಲೇ ಇರಬೇಕಾಗುತ್ತದೆ. ಕಾಮರಾಜ ಸೂತ್ರ ಇದನ್ನೇ ಕಾಂಗ್ರೆಸಿಗೆ ಸೂಚಿಸಿದೆ. ಸದ್ಯ ಗೊತ್ತುವಳಿ ಹಿಂದೆ ತೆಗೆಯಲ್ಪಟ್ಟಿತು ನಿಜ; ಆದರೆ, ಮುಂದೆಂದೂ ಇಂತಹ ಅಸಂಬದ್ಧ ಗೊತ್ತುವಳಿಗಳನ್ನು ಮುಂದೆ ತಾರದೆ ನಮ್ಮ ದಾರಿಯನ್ನು ಪ್ರಶಸ್ತಗೊಳಿಸಬೇಕು.

ಹೊಸ ಪ್ರಯೋಗ

ಇದು ನಮ್ಮ ೪೪ನೆಯ ವರ್ಷದ ಮೊದಲ ಸಂಚಿಕೆ. ಕಳೆದವಾರ ನಾವು ಪ್ರಸ್ತಾಪಿಸಿರುವ ವಿಚಾರದತ್ತ ತುಸು ಈ ವಾರ ನಮ್ಮ ಕಾರ್ಯಸಾಗಿದೆ. ಇದೇನೂ ಪರಿಪೂರ್ಣವಲ್ಲ, ಕೇವಲ ಪ್ರಯೋಗಿಕವಾದುದು. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲು ಇನ್ನೂ ಕೆಲವು ವಾರಗಳ ಕಾಲಾವಕಾಶ ಬೇಕಾಗಬಹುದು.

ನವಯುಗಕ್ಕೆ ೪೩ ತುಂಬಿತು. ಕನ್ನಡದ ಪತ್ರಿಕಾ ಪ್ರಪಂಚದಲ್ಲಿ ಇದೊಂದು ಮಹಾಸಾಧನೆ. 'ನವಯುಗ'ವು ಪ್ರಮಾಣದಲ್ಲಿ ಗುಣದಲ್ಲಿ ದೊಡ್ಡದಾಗಿ ಅಚಲವಾಗಿ ನಿಲ್ಲಬೇಕೆಂಬುದು ನಮ್ಮ ಮನೀಷೆ. ಕನ್ನಡಿಗರು ಸಹಕರಿಸಿದರೆ ಇದೇನೂ ದೊಡ್ಡ ವಿಷಯವಲ್ಲ. ಈ ಮಧ್ಯಾವಧಿಯಲ್ಲಿ ಅನೇಕ ಪತ್ರಿಕೆಗಳು ಹುಟ್ಟಿಕೊಂಡುವು, ಕೆಲವು ಬೆಳೆದುವು; ಹಲವು ಅಳಿದುವು. ಆದರೂ 'ನವಯುಗ'ವು ನಿಮ್ಮೆಲ್ಲರ ಆದರಾಭಿಮಾನಗಳಿಂದ ಉಳಿದು ಬಂದಿದೆ. ಮುಂದೆಯೂ ಬರುತ್ತದೆ. ಇದಕ್ಕಾಗಿ ಅಭಿನಂದನೆಗಳು.

ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೆಗಳು ಘಟ್ಟಹತ್ತಿ ಹೋಗುವುದೇ ಅಪರೂಪ. ಹೋದರೂ ಇಲ್ಲಿನವರೇ ವಾಸಿಸಿರುವ ಊರುಗಳಿಗೆ ಮಾತ್ರ. ಹುಬ್ಬಳ್ಳಿ—ಬೆಂಗಳೂರುಗಳ ಪತ್ರಿಕೆಗಳಂತೆ ವಿಶಾಲವಾದ ಪ್ರಸಾರ ಕ್ಷೇತ್ರ ಇವಕ್ಕೆ ಇರುವುದಿಲ್ಲ. ಇಂದು ಕನ್ನಡ ರಾಜ್ಯ ಒಂದಾಗಿದೆ; ಮನವೊಂದಾಗುತ್ತಿದೆ. ಇದರಿಂದ ಇಂದಿನ ದುಸ್ಥಿತಿ ಬೇಗನೇ ನಿವಾರಣೆ ಹೊಂದುವುದೆಂದು ನಂಬುತ್ತೇವೆ.

ಇತ್ತೀಚೆಗಿನ ಕೆಲವು ತಿಂಗಳುಗಳಲ್ಲಿ ನಾವು 'ನವಯುಗ'ದ ಪರಿಷ್ಕರಣ ಮತ್ತು ಪ್ರಸಾರದ ಸಂಬಂಧ ಸಂಚಾರಕ್ಕೆ ತೆರಳಿದ್ದೆವು. ಈ ಸಮಯದಲ್ಲಿ ಅನೇಕರು ತಮ್ಮ ಅಮೂಲ್ಯವಾದ ಸಲಹೆ-ಸೂಚನೆಗಳನ್ನು ನೀಡಿದ್ದರು. ಅವೆಲ್ಲವನ್ನೂ ಕಾರ್ಯರೂಪಕ್ಕೆ ತರುತ್ತೇವೆ ಎಂದು ನಾವೆನ್ನಲಾರೆವು, ಆದರೆ ಈ ಸಂಬಂಧ ಪ್ರಯತ್ನ ಮಾಡುತ್ತೇವೆ ಎಂದು ಮಾತ್ರ ಹೇಳುತ್ತೇವೆ.

|| ಜೈ ಹಿಂದ್ ||

ಕಾಡಿಕೋಡಗ ಹಲ್ಲು ಕಿರಿಯಿತು

"ಗೋಕಿ" ಬರೆದುದು.

ನೇಸರು ಮೂಡಿ ಎರಡು ಮೂರು ಮೇಲೇರಿತ್ತು. ಆಗಲೇ ಕುಂಜಾರುಗಿರಿಯ ಮೇಲೆ ಕೆಳಗೆ ಸಾವಿರಾರು ಜನ ಸೇರಿತ್ತು. ಕೆಲವರು ಗಿರಿಶಿರದ ಕೋಲಾಹಲದಲ್ಲಿ ಎದೆತುಂಬಿ ಭಾಗವಹಿಸುತಿದ್ದರು; ಇನ್ನು ಕೆಲವರು ಗಿರಿಯೇರುವುದರಲ್ಲೇ ಆಲಿಕಿದುಕೊಂಡು ಹೇಗೆಹೇಗೋ ಮುಂದುವರಿಯುತ್ತಿದ್ದರು; ಹಲವರು ಗಿರಿಯ ಬುಡದಲ್ಲಿ ನಿಂತು ಆಯಾಸ ಪರಿಹರಿಸಿಕೊಂಡು ಏರೇರುವ ಪೂರ್ವಸಿದ್ಧತೆ ನಡೆಸುತ್ತಿದ್ದರು ಸುತ್ತಲಿನ ನಾಲ್ಕು ನಿಟ್ಟಿನ ದಾರಿ—ಕಿರು ದಾರಿಗಳಲ್ಲಿ ಜನರೇ ಜನರು. ವರ್ಷಂಪ್ರತಿ ಜಾತ್ರೆ ಜಂಗುವುದಾದರೂ ಹಳ್ಳಿಗರಿಗೆ ಆದರಲ್ಲೇ ಆಸಕ್ತಿ ಹೆಚ್ಚು. ಜಾತ್ರೆಯದಿನ ದೇವದರ್ಶನಮಾಡಿತೀರ್ಥಪ್ರಸಾದ ಸ್ವೀಕರಿಸಿದರೆ, ಸಾಕು. ತಮ್ಮ ಒಂದು ವರ್ಷದ ಜೀವನವೇ ಸಾರ್ಥಕವಾದಂತೆನಿಸುತ್ತಾರೆ ಜನರು. ಅವರವರ ನಂಬುಗೆ ಅವರವರಿಗೆ ದಾರಿದೀಪವಲ್ಲವೆ?

ಸಮುದ್ರ ತಲದಿಂದ ಸುಮಾರು ಐನೂರು—ಆರುನೂರು ಅಡಿ ಎತ್ತರದ ಗಿರಿಯದು ಆದರ ಮೇಲೊಂದು ದುರ್ಗಾಲಯ. ಆಲಯವೆಂದಾಕ್ಷಣ ವರ್ಷಕ್ಕೊಮ್ಮೆ ಜಾತ್ರೆ ನೆರೆಯುವುದು ಸಹಜ. ಗಿರಿಯ ಸುತ್ತಮುತ್ತ ಕಡಿದಾದ ಇಳಿ. ಒಂದೆಡೆ ಮಾತ್ರ ಹರಡಿದ ಬಂಡೆಗಲ್ಲಿನ ಹಾಸುತಳ ಮತ್ತು ತುದಿಗಳನ್ನು ಕೂಡಿಸುತ್ತದೆ. ಗಿರಿಯೇರಲಿರುವ ಸುಗಮ ದಾರಿಯೆಂದರೆ ಇದೇ ಆದರೆ, ನೇಸರು ಮೇಲೇರಿದನೆಂದರೆ, ಈ ಬಂಡೆ ದಾರಿಯಲ್ಲಿ ಪಾದವಿಡುವುದು ಸಾಧ್ಯವಿಲ್ಲ. ಎಂತಲೇ ಬಿಸಿಲೇರುವುದಕ್ಕೆ ಮೊದಲೇ ಸಾವಿರಾರು ಜನರು ಗುಂಪುಸೇರಿದರು. ಇನ್ನೂ ದೂರದೂರದ ಜನರು ಹೊತ್ತಾರೆಯೇ ಎದ್ದು ನಡುದಾರಿಯಲ್ಲಿ ಬರುತ್ತಲಿದ್ದರು.

ಸಮಯ ಕಳೆಯುತ್ತಲೇ ಬಂತು. ಎಳೆನೇಸರನ ಮೃದುಲ ಕಿರಣಗಳು ಕಳೆದು ಯುವ ಭಾಸ್ಕರನ ಬಿರುಸಿನ ಶರಗಳು ಉರಿಸ ತೊಡಗಿದುವು ಬಂಡೆಯಂತೆಯೇ ದಾರಿ ಹೋಕರ ತಲೆಯೂ ಬಿಸಿಯೇರತೊಡಗಿತು. ಹೊರಗಡೆ ಒಮ್ಮೊಮ್ಮೆ ಬೀಸುವ ಗಾಳಿಯು ಚಳಿಯ ನಡುಕವನ್ನು ಹುಟ್ಟಿಸುತಿತ್ತು ನಿಜ; ಆದರೆ, ವೈಶಾಖದ ಬೇಗೆಯನ್ನೂ ಮಾಘಿಯ ಉರಿ ಮೀರಿಸುವಂತಿತ್ತು.

ಮಾಘಮಾಸದ ಹುಣ್ಣಿಮೆಯಂದು ದೇವಿಗೆ ವರ್ಷಾವಧಿ ಜಾತ್ರೆ ನಡೆಯಬೇಕು. ಹಳ್ಳಿಗಳ ಅಸಂಖ್ಯಾತ ನಾಗರಿಕರಿಗೆ ಮನಸದಂದು ಮೋಜು ಮಾಡುವ ದಿನವೆಂದರೆ ಜಾತ್ರೆಯದು ಮಾತ್ರವಿದ್ದ ಕಾಲವೊಂದಿತ್ತು. ಉಳಿದ ಬಯಲಾಟ, ಕೋಳಿ ಅಂಕ, ಕಂಬಳ ಮೊದಲಾದುವು ಮನರಂಜನೆಯ ಸಾಧನಗಳಾದರೂ ಅವು ನಿಯತವಾಗಿ ನಡೆಯುವ ಪರಿಪಾಠ ಆಗಲೇ ನಿಂತು ಹೋಗಿತ್ತು "ಹೊಸತು ಬಂದಿಲ್ಲ; ಹಳತು ಸತ್ತಿದೆ" ಎನ್ನುವಂತಹ ಸಂಕ್ರಾಂತಿಯ ಕಾಲವದು. ಇನ್ನೂ ಕೆಲವು ಮಳೆಗಾಲ ದಾಟಿತೆಂದರೆ, ಆಗ ದೇವಾಲಯಗಳ ಉತ್ಸವಗಳೂ ನಿಂತು ಹೋಗಬಹುದೋ ಏನೋ! ಅದರ ಪೂರ್ವ ಸೂಚನೆಯೆಂದೇ ಅದರ ವೈಭವ ಮಹತ್ವ, ವೈಶಿಷ್ಟ್ಯಗಳು ದಿನ ದಿನ ಹ್ರಾಸಗೊಳ್ಳುತ್ತ ಬರತೊಡಗಿದಂತಿದೆ. ಸಂಕ್ರಾಂತಿಯ ಕಾಲದ ಘರ್ಷಣೆಗಳಿಗನುಗುಣವಾಗಿ ಜಾತ್ರೆಯ ಉಪಯುಕ್ತತೆ—ನಿರುಪಯುಕ್ತತೆಯ ಮೇಲೆ ವಾದ—ವಿವಾದಗಳು ಯುವಕರಲ್ಲಿ ನಡೆಯುತ್ತಿದ್ದುವು.

ಯುವಕರು ಮುಖ್ಯವಾಗಿ ಆಕ್ಷೇಪಿಸುವುದು ಜಾತ್ರೆಯ ದಿನಗಳ ಮತ್ತು ಅವುಗಳ ಕಾಲಾವಧಿಯನ್ನು. ರಾತ್ರೆಯಿಡಿ ನಿದ್ದೆ ಬಿಡಿಸಿ ಆರೋಗ್ಯ ಕೆಡಿಸುವುದು ಅನ್ಯಾಯ: ಅದಕ್ಕಾಗಿ ನಾಟಕ ಸಿನೆಮಾಗಳಂತೆ ಎರಡು ಮೂರು ತಾಸುಗಳಲ್ಲಿ ಎಲ್ಲಾ ಮುಗಿಯಬೇಕು. ವ್ಯರ್ಥವಾಗಿ ಸುಡುವ ಮದ್ದುಗುಂಡುಗಳು, ತಿಪ್ಪೆಗೆಸೆಯುವ ಆಹಾರಾದಿಗಳು, ವ್ಯರ್ಥ ಒಡೆಯುವ ತೆಂಗಿನ ಕಾಯಿಗಳು—ಎಲ್ಲವೂ ನಷ್ಟ, ಅನಾವ್ಯಯ. ಮಿತವ್ಯಯ, ಅಲ್ಪ ಉಳಿತಾಯಗಳ ಕಾಲವಿದು. ಹಾಗಿರುವಾಗ ಇಂಥದೆಲ್ಲಾ ಬೇಕೆ? ಎಂದು ಪ್ರಶ್ನಿಸುತ್ತಾರೆ ಅವರು. ಇಲ್ಲಿಯೇ ತೊಡಗಿದ ವಾದವಿವಾದ ಆಸ್ತಿಕ — ನಾಸ್ತಿಕರವರೆಗೂ ಮುಂದುವರಿಯುತ್ತದೆ. ಮುಂದೊಂದು ಕದನ ಬಾರುವವರೆಗೋ ಮತ್ತೊಂದೆಡೆ ಗುಲ್ಲು ಏಳುವವರೆಗೋ ಇದು ಮುಂದರಿಯುತ್ತಿರುತ್ತದೆ.

ಇಂತಹುದೇ ಒಂದು ವಾದ ಪ್ರಸಂಗ ಗಿರಿಯ ಬುಡದಲ್ಲಿ ನಡೆಯುತಿತ್ತು. ಒಬ್ಬ ನವಯುವಕ ತನ್ನ ನಡು ಹರೆಯದ ತಾಯಿಯೊಡನೆ ಚರ್ಚೆ ನಡೆಸುತ್ತಿದ್ದ: ವಿಚಾರವೇನೂ ದೊಡ್ಡದಲ್ಲ. ಯಾವ ದಾರಿಯಲ್ಲಿ ಗಿರಿಯೇರಬೇಕೆಂಬ ಪ್ರಶ್ನೆಯ ಉತ್ತರದ ಮೇಲೆ ತೀವ್ರ ಬಿಕ್ಕಟ್ಟು ಎದ್ದಿತ್ತು. ಸಂಪ್ರದಾಯಿ ತಾಯಿ ಬಂಡೆಯೇರಿಯೇ ನಡೆದರೆ ಪೂರ್ಣ ಪುಣ್ಯವೆಂದು ವಾದಿಸಿದರೆ, ಇದರಲ್ಲಿ ಪುಣ್ಯ-ಪಾಪವೆಲ್ಲಿಯದೆಂದು ಮಗನ ವಾದ. ಬಿಸಿಲು ಏರಿದುದರಿಂದ ಬಂಡೆಯಲ್ಲಿ ಕಾಲಿಡುವುದು ಸಾಧ್ಯವಿಲ್ಲ; ಚಪ್ಪಲಿ ಮೆಟ್ಟಿದರೆ ಜಾರಿಬಿಟ್ಟೇತು; ಆದುದರಿಂದ ಹಿಂದುಗಡೆ ಹೊಸತಾಗಿ ಕಡಿದಿರುವ ತಿರು-ಕುರು-ದಾರಿಯಲ್ಲೇ ನಡೆಯೋಣವೆಂದು ಈತನ ಸಲಹೆ. ತಾಯಿ ಪಾಪ, ನಿರಾಶಳಾಗಿರಬೇಕು. ಹೀಗೆ ದೇವಿ ದರ್ಶನ ಮಾಡುವುದರಿಂದ ಲಾಭವಾದರೂ ಏನು ಎಂದು ಆಕೆಯ ಮರುಸವಾಲು.

ಇವರಿಬ್ಬರ ವಾದ ವಿವಾದ ನಡೆಯುತ್ತಲೇ ಇತ್ತು. ಪಾಪ—ಪುಣ್ಯಗಳಿಂದ ದೂರವಾಗಿ ಹಿರಿ-ಕಿರಿಯರ, ವಿಧೇಯತೆ—ಅವಿಧೇಯತೆಗಳ ಮತ್ತೆ ವ್ಯಕ್ತಿ ಪ್ರತಿಷ್ಠೆಯ ಪ್ರಶ್ನೆಗಳೂ ಮುಂದೆ ಬಂದುವು. ಅವರು ಜಗಳಾಡುತ್ತಿರುವಂತೆಯೇ ಭಾಸವಾಗುತಿತ್ತು.

ಪೂರ್ವಾಹ್ನದ ಹತ್ತು ತಾಸಾಗಿರಬಹುದು. ನೇಸರ ಝಳವನ್ನು ಸಹಿಸಲಾಗುತ್ತಿರಲಿಲ್ಲ. ಮೈ ಬೆವರಿಡುತಿದ್ದಿತ್ತು. ಅಷ್ಟರಲ್ಲಿಯೇ ಒಬ್ಬಾಕೆ ಮುದುಕಿ ದಂಟೆಯೂರುತ್ತ ಕುಂಟುತ್ತ ಅಲ್ಲಿ ಬಂದು ಉಸ್ಸಪ್ಪ ಎಂದು ಕುಳಿತಳು. ಆಕೆ ಹಣ್ಣು ಹಣ್ಣು ಮುದುಕಿ; ಪ್ರಾಯ ಎಪ್ಪತ್ತನ್ನು ಮೀರಿರದಿದ್ದರೂ ಅಕಾಲವೃದ್ಧೆಯಾದಂತಿದ್ದಳು. ಹತ್ತು ಹೆಜ್ಜೆಯಿಡಲು ಮೂರು ಬಾರಿ ಕುಕ್ಕರಿಸುತಿದ್ದಳು. ಮಾನ ಮುಚ್ಚಲು ಸುತ್ತಿದ್ದಳಾಕೆ ಒಂದು ತುಂಡು ಬಟ್ಟೆ. ಅದೂ ಹಲವೆಡೆ ಹರಿದಿತ್ತು ಕೊಳಕು ಕೊಳಕಾಗಿತ್ತು. ಬೆನ್ನು ಬಗ್ಗಿತ್ತು. ತಲೆಯು ಮೊಣಗಂಟನ್ನು ಮುಟ್ಟುವಂತಿತ್ತು. ತಲೆಗೂದಲಿಂದ ತೊಡಗಿ ಕಾಲುಗುರುಗಳವರೆಗೂ ಬೆವರು ಜರಿಯುತಿತ್ತು. ಕಾಡುತಿದ್ದ ಬಾಯಾರಿಕೆಯನ್ನು ನೀಗಿಸಲಿಕ್ಕೋ ಅಥವಾ ಬೆವರನ್ನು ಒರಸುವುದಕ್ಕೋ ತನ್ನ ನಾಲಗೆಯಿಂದ ಕೈಸೆ ಬೆವರನ್ನು ನೆಕ್ಕುತಿದ್ದಳು. ಹಲ್ಲಿಲ್ಲದ ಬಾಯಿ ಆಕೆಯದು, ನರೆತ ಕೂದಲು ಆ ಕಪಾಲಕ್ಕೆ ಬೆಳ್ಳಿಯ ತಗಡು ಹೊದಿಸಿದಂತಿತ್ತು- ಸುಕ್ಕುಗಟ್ಟಿದ ಮೈ ಆನೆಯ ಚರ್ಮವನ್ನು ಹೋಲುತಿತ್ತು-ಆದರೆ, ಕರ್ಕಶತೆ ಮಾತ್ರವಿರಲಿಲ್ಲ ಈ ಮುದುಕಿಯು ಬರುತ್ತಲೇ ಎಲ್ಲರ ದೃಷ್ಟಿಯೂ ಆಕೆಯಲ್ಲಿ ಕೇಂದ್ರೀಕೃತವಾಯಿತು.

ಆಕೆಯ ಹೆಸರು ಕಾವು. ಯೌವನದ ಕಾಲದಲ್ಲಿ ಆಕೆಯೇ ದೇವರ ಹಳ್ಳಿಯನ್ನು ಕಾಯುತಿದ್ದಳು, ಕಾಪಾಡುತಿದ್ದಳು. ಊರಿನಲ್ಲಿ ಆಕೆಯಿದ್ದಾಳೆಯೆಂದರೆ, ಕಳ್ಳಕಾಕರ ಭಯವೇ ಇರಲಿಲ್ಲ. ಆಕೆಯ ಸಾಹಸದ ಕಥೆಗಳು ವಿಲಕ್ಷಣ ಮತ್ತು ರೋಮಾಂಚಕಾರಿ. ಒಮ್ಮೆ ಒಬ್ಬಾತ ತೆಂಗಿನ ತೋಟವನ್ನು ಹೊಕ್ಕನಂತೆ. ಕಾವಮ್ಮನಿಗೆ ಇದರ ಸುಳಿವು ಸಿಕ್ಕಿ ತನ್ನ ಗಂಡನನ್ನು ಎಬ್ಬಿಸಿ ಕಳ್ಳ ಏರಿದ್ದ ತಾಳೆಯ ಬುಡಕ್ಕೆ ಬಂದಳಂತೆ. "ನೆಟ್ಟಗೆ ಶರಣಾಗು; ಇಲ್ಲವಾದರೆ, ಮರವನ್ನೇ ಉರುಳಿಸುವೆವು" ಎಂದು ಅರ್ಭಟಿಸಿದಳಂತೆ. ಕಳ್ಳ ಒಪ್ಪದಿರಲು, ಮರಕ್ಕೇ ಕೊಡಲಿಯೇಟು ಬೀಳತೊಡಗಿತಂತೆ. ಇದರಿಂದ ಧೃತಿಗೆಟ್ಟ ಆ ಕಳ್ಳ ಮತ್ತೆ ಶರಣಾದನಂತೆ. ಕಾವಮ್ಮ ತಾನೇ ಆತನ ಬೆನ್ನಿಗೆ ನಾಲ್ಕು ಬಾರಿಸಿ ಮುಂದೆ ಇಂತಹ ಕೆಲಸ ಮಾಡಬೇಡವೆಂದು ಉಪದೇಶಿಸಿ ಬಿಟ್ಟುಬಿಟ್ಟಳಂತೆ.

ಈ ಕಳ್ಳ ಮತ್ತಾರೂ ಅಲ್ಲ, ಸೀನ. ಸೀನನೆಂದರೆ, ಗಂಡಾಳು, ಆತನದು ಗಂಡೆದೆ, ಗಂಡು ಮನಸ್ಸು ಆದುದರಿಂದಲೇ ತನ್ನ ಚೌರ್ಯ ವೃತ್ತಿಯಲ್ಲಿನ ಹೆಸರು ಪಡೆದವ. ಸೀನನ ಹೆಸರು ಕೇಳಿದೊಡನೆಯೇ ಎಲ್ಲರೂ ಗಡಗಡನೆ ನಡುಗುತಿದ್ದರು ಆತನನ್ನು ಇದಿರಿಸುವ ಧೈರ್ಯ ಯಾರಿಗೂ ಇಲ್ಲ. ಸುತ್ತುಮುತ್ತಲಿನ ಹಳ್ಳಿಗಳಿಗೆ ಆತನೇ ನಿಶಾಚರ.

ಕಾವಮ್ಮನಂತಹ ಒಬ್ಬ ಹೆಂಗಸಿನಿಂದ ತನಗಾದ ಅಪಮಾನವು ಸೀನನ ಹೃದಯದಲ್ಲಿ ಬೇಯುತಿತ್ತು. ಇದುವರೆಗೆ ಯಾರ ಕೈಗೂ ಸಿಕ್ಕದ ತಾನು ಆಕೆಯಿಂದ ಥಳಿಸಿಕೊಳ್ಳಬೇಕಾಗಿ ಬಂದುದಕ್ಕೆ ಆತ ಮರುಗಿದ. ಇದಕ್ಕೆ ತಕ್ಕ ಪ್ರತೀಕಾರ ಮಾಡದೆ ಹೋದರೆ, ತಾನಿದ್ದೂ ಏನು ಪ್ರಯೋಜನವೆಂದಿತು ಅವನ ಮನಸ್ಸು. ಒಳ್ಳೆಯ ಕೆಲಸಗಳು ನಡೆಯಲು ದೊಡ್ಡ ಕಾಲಾವಕಾಶಗಳು ಬೇಕಾಗುತ್ತವೆ; ಆದರೆ, ದುರಾಲೋಚನೆಗಳು ಶೀಘ್ರ ಫಲಕಾರಿಯಾಗುತ್ತವೆ. ಕಾವಮ್ಮನ ಗಂಡ ಒಂದು ದಿನ ಪೇಟೆಯಿಂದ ಸಾಮಾನು ತರಲು ಹೋದವ ಮನೆಗೆ ಬರಲಿಲ್ಲ; ವಾರವೊಂದು ಸಂದಬಳಿಕ, ನರಿ ನಾಯಿ ತಿಂದುಳಿದ ಆತನ ಮೃತಶರೀರ ಕಾವಮ್ಮನ ಅಂಗಳದಲ್ಲಿ ಬಿದ್ದಿತ್ತು. ಇದರ ಕಾರಣವನ್ನು ಕಾವಮ್ಮ ಊಹಿಸಿಯೇ ತಿಳಿದುಕೊಂಡಳು. ತಾನು ಸೀನನಿಗೆ ಬಾರಿಸಿದ್ದು ಅನ್ಯಾಯವೇ ಎಂದಾಕೆ ಪ್ರಶ್ನಿಸುತಿದ್ದಳು. ನನ್ನದು ನ್ಯಾಯ ಪಕ್ಷವೆಂದಾಕೆಗೆ ಖಚಿತಗೊಳ್ಳುತಿತ್ತು. ಮುಂದೆ ಬರಬಹುದಾದ ಕಷ್ಟ ಪರಂಪರೆಯನ್ನು ನೆನೆದು, ಸದ್ಯ ಬಂದ ಅಮಂಗಲವನ್ನು ಸಹಿಸಿಕೊಂಡಳು. ಇದಾದ ಎರಡು ವರ್ಷಗಳಲ್ಲಿಯೇ ಆಕೆಯ ಏಕಮಾತ್ರ ಪುತ್ರ

(ಹದಿಮೂರನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

ಝೋಜಿಲಾ ಮಾರ್ಗದ ಪುನಸ್ಥಾಪನೆ

ಲಡಾಕಿನ ಕಂದು ಬಣ್ಣದ ಕಡಿದಾದ ಬಂಡೆಗಳಿಂದ ಕೂಡಿದ ಪರ್ವತಗಳಲ್ಲಿ ಸಾಲಿನಲ್ಲಿ ಹೋಗುವ ಮಿಲಿಟರಿ ಮೋಟಾರ್ ವಾಹನಗಳ ಶಬ್ದ ಮತ್ತೊಮ್ಮೆ ಪ್ರತಿಧ್ವನಿಸತೊಡಗಿದೆ. ಶ್ರೀನಗರದಿಂದ ಲಡಾಕಿನ ಮುಂಚೂಣಿ ಠಾಣೆಗಳಲ್ಲಿರುವ ನಮ್ಮ ವೀರಾಗ್ರಣಿಗಳಿಗೆ ಅಗತ್ಯವಾದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ಆಹಾರ ಪದಾರ್ಥಗಳು ಮತ್ತಿತರ ಸಹಸ್ರಾರು ವಸ್ತುಗಳನ್ನು ಈ ವಾಹನಗಳು ಪುನಃ ಒಯ್ಯಲಾರಂಭಿಸಿವೆ.

ಚಳಿಗಾಲದಲ್ಲಿ ಮಂಜು ಬೀಳಲಾರಂಭಿಸಿದ ನಂತರ ಶ್ರೀನಗರ ಮತ್ತು ಲೇಹ್‌ಗಳ ನಡುವೆಯ ರಸ್ತೆ ಬಂದಾಗುತ್ತದೆ. ೧೨,೦೦೦ ಅಡಿಗಳ ಎತ್ತರದಲ್ಲಿರುವ ಝೋಜಿಲಾದಲ್ಲಂತೂ ಭಾರಿ ಪ್ರಮಾಣದಲ್ಲಿ ಮಂಜು ಬೀಳುತ್ತದೆ. ಈ ಕೇಂದ್ರಕ್ಕೆ ಹೋಗಬಲ್ಲ ಮಾರ್ಗಗಳೂ ಮಂಜಿನಲ್ಲಿ ಮುಚ್ಚಿಕೊಂಡು ಬಿಡುತ್ತವೆ. ಕೆಲವು ಕಡೆಗಳಲ್ಲಂತೂ ೫೦ ಅಡಿಗಳಷ್ಟು ಮಂಜು ಬೀಳುವುದೂ ಉಂಟು.

ವಸಂತ ಋತುವಿನ ಆಗಮನದೊಂದಿಗೆ ಮಂಜನ್ನು ಎತ್ತಿಹಾಕಿ ರಸ್ತೆಯನ್ನು ಸಂಚಾರ ಯೋಗ್ಯವನ್ನಾಗಿಸುವ ಕಾರ್ಯ ಪುನಃ ಆರಂಭವಾಗುತ್ತದೆ.

ಪ್ರವೀಣರಾದ ಸೇನಾಧಿಕಾರಿಗಳು ಸೈನಿಕರನ್ನೊಳಗೊಂಡ ಎರಡು ತಂಡಗಳು ಎರಡೂ ಪಾರ್ಶ್ವಗಳಿಂದ ಹಿಮಾಚ್ಛಾದಿತ ಝೋಜಿಲಾ ಮಾರ್ಗವನ್ನು ಸಂಚಾರ ಯೋಗ್ಯವನ್ನಾಗಿ ಮಾಡುವ ಕಾರ್ಯಕೈಗೊಳ್ಳುತ್ತವೆ. ಸೇನಾಧಿಕಾರಿಗಳ ತಂಡಗಳು ಶ್ರೀನಗರದ ಪಾರ್ಶ್ವದಲ್ಲಿ ಗುಂಡ್ ಎಂಬಲ್ಲಿಂದಲೂ ಲಡಾಕ್ ಪಾರ್ಶ್ವದಲ್ಲಿ ಮಾಟಾಯಿ ಎಂಬಲ್ಲಿಂದಲೂ ಈ ಕಾರ್ಯ ಕೈಗೊಳ್ಳುವರು.



ಹಿಮ ದೂರ ಮಾಡುವ ಅತ್ಯಾಧುನಿಕ ಯಂತ್ರ ಆ್ಯಂಗಲ್ ಡೋಜರ್.

ಈ ತಂಡಗಳು ಬಳಸುವ ಉಪಕರಣಗಳು ಅತ್ಯಾಧುನಿಕವಾದವು. ಇವುಗಳಲ್ಲಿ ಹಿಮವನ್ನು ಅಗೆದು ಎತ್ತಿಹಾಕಿ ರಸ್ತೆಯನ್ನು ಸಜ್ಜುಗೊಳಿಸುವ ಯಂತ್ರಗಳೂ ಸೇರಿವೆ. ಇವುಗಳಲ್ಲಿ ಕೆಲವು ಯಂತ್ರಗಳ ಹೆಸರುಗಳು ಈ ರೀತಿ ಇವೆ:— ಆ್ಯಂಗಲ್ ಡೋಜರ್‌ಗಳು, ಲೋಡರ್‌ಗಳು, ಪ್ಲೋಗಳು ಮತ್ತು ಕ್ಲೀನರ್‌ಗಳು. ಎಲ್ಲಾ ವಿಧವಾದ ಉಪಕರಣಗಳನ್ನೂ ಬಳಸಲಾಗುತ್ತಿದೆಯಾದರೂ ವೀರಾಗ್ರಣಿಗಳ ದೃಢ ಸಂಕಲ್ಪ ಮತ್ತು ಜಿಗಟು ಸ್ವಭಾವ ಅತ್ಯಂತ ಪರಿಣಾಮಕಾರಿಯಾದ ಉಪಕರಣವಾಗಿ ಪರಿಣಮಿಸಿದೆ.

ಮಳೆ ಬೀಳಲಿ ಅಥವಾ ಮಂಜು ಬೀಳಲಿ, ರಸ್ತೆಯನ್ನು ಸಂಚಾರಯೋಗ್ಯವನ್ನಾಗಿ ಮಾಡುವ ಕೆಲಸವಂತೂ ನಡೆದೇ ಇರುವುದು. ಆದರೆ ಇಲ್ಲಿ ಒಂದು ಅಪಾಯ ಸದಾ ಕಾದಿರುತ್ತದೆ. ಇದಕ್ಕಾಗಿ ಸರ್ವಕಾಲ ಎಚ್ಚರಿಕೆಯನ್ನಿಟ್ಟಿರುವುದು ಅಗತ್ಯವಾಗಿದೆ. ಹಿಮ ಪ್ರಪಾತವೇ ಈ ಅಪಾಯವಾಗಿದೆ. ಹಿಮಘನ ಪ್ರಪಾತ ರಸ್ತೆಯ ಮೇಲೆ ಆವರಿಸಿದಾಗ ಅನೇಕ ದಿನಗಳವರೆಗೆ ಮಾಡಿದ ಕೆಲಸವೆಲ್ಲವನ್ನೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಈ ಹಿಮ ಪ್ರಪಾತ ಸಂಭವ ಕಂಡ ಕೂಡಲೆ ಈ ಕೆಲಸಕ್ಕಾಗಿ ನೇಮಿತರಾದ ಸೈನಿಕರು ಸೀಟಿಗಳನ್ನು ಊದುವರು. ಕೂಡಲೆ ರಸ್ತೆ ಕೆಲಸದಲ್ಲಿ ತೊಡಗಿರುವ ಜನರು ಸುರಕ್ಷಿತ ಸ್ಥಳಗಳಿಗೆ ಧಾವಿಸುತ್ತಾರೆ. ಈ ವರ್ಷ ಮೂರು ಅತಿದೊಡ್ಡ ಹಿಮಘನ ಪ್ರಪಾತಗಳು ಬಂದು ಮತ್ತೆ ೨೦,೦೦೦ ಘನ ಅಡಿಗಳಷ್ಟು ಮಂಜನ್ನು ಎತ್ತಿಹಾಕುವ ಕೆಲಸ ನಮ್ಮ ಸೈನಿಕರ ಪಾಲಾಯಿತು.

ರಸ್ತೆಗಳ ಸಂಚಾರಯೋಗ್ಯ ಕಾರ್ಯವನ್ನು ನಿಧಾನಿಸುವಂತಿಲ್ಲ ಬಹು ಜಾಗ್ರತೆಯಾಗಿ ನಡೆಯಬೇಕಾಗುತ್ತದೆ. ಎರಡು ಪಾರ್ಶ್ವಗಳಿಂದಲೂ ರಸ್ತೆ ನಿರ್ಮಿಸಿಕೊಂಡು ಬರುವ ತಂಡಗಳು ಪರಸ್ಪರ ಸಂಧಿಸಿದಾಗ ಉಂಟಾಗುವ ಆನಂದ, ಉಲ್ಲಾಸಗಳು ಅವರ್ಣನೀಯ. ಅಂದು ಅವರೆಲ್ಲರೂ ಒಟ್ಟುಗೂಡಿ ಹಬ್ಬವನ್ನೇ ಆಚರಿಸುತ್ತಾರೆ. ಏಕೆಂದರೆ ಕೆಲಸ ಮುಗಿಯಿತೆಂದು ಈ ಆನಂದೋಲ್ಲಾಸಗಳಲ್ಲಿ; ಲಡಾಕಿಗೆ ಹೋಗುವ ಮುಖ್ಯ ಮಾರ್ಗ ಮತ್ತೊಮ್ಮೆ ಸಂಚಾರಯೋಗ್ಯವಾಗಿದೆ ಎಂದು ಮಾತ್ರ.



ಈ ವರ್ಷದ ವಸಂತ ಋತುವಿನಲ್ಲಿ ಹಿಮದಿಂದ ಬಿಡುಗಡೆ ಮಾಡಿದ ಶ್ರೀನಗರ–ಲೇಹ್ ಮಾರ್ಗದಲ್ಲಿ ಜೀಪೊಂದು ಸಾಗುತ್ತಿದೆ.

ಯೋಧರಿಗೆ ಕರೆ

— ೧ —

ಭವ್ಯ ಹಿಮಾಲಯಕೊದಗಿದೆ ಸಂಕಟ
ಚೀನೀ ರಕ್ಕಸನಿಂದದು ಪ್ರಕಟಿತ
ಬನ್ನಿರಿ ಯೋಧರೆ ಶೌರ್ಯದಿ ಕಾದಲು
ವೈರಿಯು ನೆತ್ತರಿನೋಕುಳಿಯಾಡಲು!

— ೨ —

ಋಷಿ ಮುನಿ ತಪದಿಂ ಪಾವನಗೊಂಡಿಹ
ಪಾರ್ವತಿ ಪರಮೇಶ್ವರ ನೆಲೆಗೊಂಡಿಹ
ಭಾರತ ರಕ್ಷಣೆ ಭದ್ರತೆಗೊಂಡಿಹ
ದಿವ್ಯ ಹಿಮಾಲಯಕೊದಗಿದೆ ಕಡು ಭಯ!

— ೩ —

ಹಸಿದಿಹ ಚೈನಾ ಸುರನೊಳಗಿರುವದು
ಬಕ ರಕ್ಕಸನವತಾರಕೆ ಹೋಲ್ವುದು,
ಬಕ ವೈರಿಯು ತೆರವ್ಯೂಹವ ರಚಿಪುದು
ರಣದಲಿ ಅವನಿಗೆ ಪಾಠವ ಕಲಿಪುದು!

— ೪ —

ರಾಮೇಶ್ವರದಿಂ ಹಿಮಗಿರಿ ವರೆಗಿನ
ಕಾಮರೂಪದಿಂ ದ್ವಾರಕೆ ವರೆಗಿನ
ಭಾರತ ಮಾತೆಯ ಯೋಧರೆ ಏಳಿರಿ
ಮಾತೆಯ ರಕ್ಷಣೆಗಾಣೆಯ ಮಾಡಿರಿ!

— ೫ —

ನಮ್ಮನು ಕೆಣಕಿದ ಚೈನಾಸುರನಿಗೆ
ಆತನೆಲವು ಹುಡಿಗೂಡಿಸುವರೆಗೆ
ಶಾಂತಿಯು ಪಡೆಯೆವು ಎಂಬುದು ಅಚಲ
ಕೊನೆಗೂ ನಮ್ಮಳೆಜಯ ನಿಲುವದು ಅಚಲ

— ೬ —

ಭಾಷೆಯ ವಾದ ಪ್ರಾಂತದ ವಾದ
ಜಾತಿಮತ ಧರ್ಮದ ವಾದ
ಹುರುಳಿಲ್ಲದ ವಾದಗಳೆಲ್ಲವ ಬದಿಗಿಟ್ಟು
ಭಾರತೀಯರೆಲ್ಲರಾಗಿರಿ ಒಕ್ಕಟ್ಟು!

— ೭ —

ಸತ್ಯದ ಪಥವೆಮ್ಮದು ಜಗದಲಿ
ಸತ್ಯವೆ ಜಯ ಪಡೆವುದು ಕೊನೆಯಲಿ
ಸತ್ಯದ ಕಾಯಲು ಇಳಿವೆವು ರಣದೊಳು
ಸತ್ಯ ರಕ್ಷಣೆಗೆ ಸಿದ್ಧರು ಸಾಯಲು!

— ದಿಗಂಬರ ಜೋಶಿ, ಬೆಳಗಾವಿ.

ಉಡುಪಿ ಬಸ್ನಂಚೆ:— ಸ್ವಾತಂತ್ರ್ಯ ದಿನೋತ್ಸವದಂದು ಸಟ್ಟಿ ಸರಕಾರಿ ಸೋಶಿಯಲ್ ವೆಲ್‌ಫೇರ್ ಶಾಲೆಯಲ್ಲಿ ದಿ| ಜವಾಹರಲಾಲರ ಭಾವಚಿತ್ರವನ್ನು ಶ್ರೀ ಎನ್. ಕೆ. ಸಾಲಿಯಾನರು ಅನಾವರಣ ಮಾಡಿದರು. ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯ್ತು.

ಅಭಿಪ್ರಾಯ

ಮನೆಯೇ ಮೊದಲ ಘಟಕವಾಗಬೇಕು

"ಅಲ್ಲಿ ಪುಳ್, ಪುಳ್, ಇಲ್ಲಿ ಪುಳ್, ಪುಳ್, ಕಲ್ಯಾಣ ತುಂಬಾ, ಪುಳ್, ಪ್ರುಳ್," ಎನ್ನುವ ಹಾಗೆ ಎಲ್ಲೆಲ್ಲೂ ಭ್ರಷ್ಟಾಚಾರ ನಿರ್ಮೂಲನದ ಸುದ್ದಿ ಹರಡಿದೆ. ಅದರ ಬಗ್ಗೆ ಹೇಳದ ಪತ್ರಿಕೆ ಇಲ್ಲ, ಬರೆಯದ ಲೇಖಕನಿಲ್ಲ, ಭಾಷಣ ಬಿಗಿಯದ ರಾಜಕಾರಣಿಯಿಲ್ಲ. ಮನೆ, ಮಠ, ಶಾಲೆ, ಕಾಲೇಜು, ಆಸ್ಪತ್ರೆ, ಆಫೀಸು, ಊರು, ಕೇರಿ, ಎಲ್ಲೆಲ್ಲೂ ಜೇಡನ ಬಲೆಯಂತೆ ಹಬ್ಬಿರುವ ಈ, ಅನಿಷ್ಟ ಜಾಡ್ಯಕ್ಕೆ ಔಷಧಿ ಇನ್ನೂ ಸಿಕ್ಕಿಲ್ಲ. ಕಳೆಯ ಬೇರಿನಂತೆ ಹಳಬಿಟ್ಟಿರುವ ಈ ರೋಗಕ್ಕೆ ಬರಿ ಮಾತು, ಉಪದೇಶ, ಕಾನೂನು ಏನೂ ಮಾಡಲಾರದು. ಆಮೂಲಾಗ್ರವಾಗಿ ಅದರ ಬುಡ ಕೀಳುವ ಪ್ರಯತ್ನ ಇಂದು ನಡೆಯಬೇಕು.

ಗೃಹಮಂತ್ರಿ ನಂದಾರವರು ಈ ಬಗ್ಗೆ ನ್ಯಾಯದ ಗಂಟೆಯನ್ನೇನೋ ಕಟ್ಟಿದ್ದಾರೆ. ದಿಟ್ಟ ಹೆಜ್ಜೆಯನ್ನು ಇಟ್ಟಿದ್ದಾರೆ. ಅಷ್ಟರಿಂದಲೇ, ಅದರ ನಿರ್ಮೂಲನ ಸಾಧ್ಯವಿಲ್ಲ. ಗಿಡವನ್ನು ಉರುಳಿಸಲು ಹೊರಟವನು, ರೆಂಬೆ, ಕೊಂಬೆಗಳನ್ನು ತುಂಡರಿಸುತ್ತ ಕೂಡ್ರಬಾರದು. ಬುಡಕ್ಕೆ ಕೊಡಲಿ ಹಾಕಿ ಬೇರು ಸಮೇತ ಕೀಳಬೇಕು. ಸರಕಾರಿ ನೌಕರಿ ವರ್ಗದಲ್ಲೂ ರಾಜಕಾರಣಿಗಳ ವರ್ಗದಲ್ಲೂ ಅದರ ಬುಡ ಕೀಳುವ ಪ್ರಯತ್ನ ನಡೆಸಿರುವದು, ನಿಜವಾಗಿಯೂ ನಂದಾರ ಯೋಗ್ಯತೆ ದಕ್ಷ ಆಡಳಿತೆಯ ಪ್ರತೀಕವಾಗಿದೆ. ಅದು ಅವರ ಪ್ರಶಂಸನಾ ಕಾರ್ಯವೇ ಸರಿ.

'ಭ್ರಷ್ಟಾಚಾರ' ಎನ್ನುವದು ಎಲ್ಲಾ ಕಾಲದಲ್ಲೂ ಇತ್ತೇ ಅಥವಾ, ಈಗ ಹೊಸದಾಗಿ ಹುಟ್ಟಿರುವ ಸಮಸ್ಯೆಯೇ ಎಂದು ಯೋಚಿಸಬೇಕಾಗಿದೆ. ಮಾನವ ಪ್ರಪಂಚಕ್ಕೆ ಬಂದಾಗಿನಿಂದ ಬಸವನ ಹಿಂದಿ ಬಾಲವೆಂಬಂತೆ ಅವನ ಹಿಂದೆಯೇ ಹುಟ್ಟಿಬಂದ ರೋಗವಿದು ಅಂದೂ, ಸಮಾಜಘಾತಕರು ದ್ರೋಹಿಗಳು ರಾಷ್ಟ್ರನಾಶಕರು ಇದ್ದರು, 'ಇಂದೂ, ಇದ್ದಾರೆ, ಆದರೆ, ವ್ಯತ್ಯಾಸ ಇಷ್ಟೇ ಅಂದು ಅವರ ಸಂಖ್ಯೆ ಕಡಮೆ ಪ್ರಮಾಣದಲ್ಲಿ ಇದ್ದಿರಬಹುದು ಇಂದು ಹೆಚ್ಚಿದೆ. ಆ ಹೆಚ್ಚುವಿಕೆಗೆ ಕಾರಣಗಳೂ ಇವೆ. ಮನುಷ್ಯ ಇಂದು ಸಮಯದ ಬೆನ್ನಷ್ಟ ಹತ್ತಿದ್ದಾನೆ, ವಿಜ್ಞಾನ ಮಾನವನನ್ನು ಒಂದು ಕಡೆ ಮೇಲೇರಿಸಿ ಕುಳ್ಳಿರಿಸಿದರೆ ಇನ್ನೊಂದು ರೀತಿಯಲ್ಲಿ ಅಷ್ಟೇ ತುಳಿದಿದೆ. ಇಂದಿನ ಜಗತ್ತು ಗದ್ದಲ, ಗಡಿಬಿಡಿ, ಧಗಾ, ವಂಚನೆ ಮೋಸ ಭ್ರಾಂತಿ, ಸಮಾಧಾನ ಸೌಹಾರ್ದ ಬುದ್ಧಿ ಮಾನವನ ಬಾಳಿನಿಂದ ದೂರವಾಗ ಹತ್ತಿವೆ. ಭೌತಿಕ ಪದಾರ್ಥಗಳನ್ನು ಕೊಡೆ ಮಾಡಿದ ವಿಜ್ಞಾನ ಆತ್ಮಾನಂದದ ಬುಗ್ಗೆಯನ್ನು ಬತ್ತಿಸಿಬಿಟ್ಟಿದೆ. ಮನುಷ್ಯ ಇಂದು ಕಣ್ಣಾ ಬಿಕ್ಕಿಯಾಗಿದ್ದಾನೆ. ಹೀಗಾಗಿ ಸಹಜವಾಗಿಯೆ, ಅಪ್ರಾಮಾಣಿಕತನ, ಕುಹಕ ಬುದ್ಧಿ ಮಾರ್ಕೆಟ್ ಬುದ್ಧಿ ಎಲ್ಲಾ ಸೇರಿ ಬಿಟ್ಟಿವೆ. ಆದು ಆಹಾರ ಮತ್ತು ಜನ ಸಂಖ್ಯೆಯ ಸಮಸ್ಯೆಗಳಿಂದ ತೊಳಲಾಡುತ್ತಿರುವ ನಮ್ಮ ದೇಶದಲ್ಲಂತೂ, ಭ್ರಷ್ಟಾಚಾರ ಬೃಹದಾಕಾರವಾಗಿ ಬೆಳೆದು ಬಿಟ್ಟಿದೆ.

ತಂದೆ, ಮಕ್ಕಳಲ್ಲಿ, ಗಂಡ ಹೆಂಡರಲ್ಲಿ ಒಡೆಯ ಸೇವಕರಲ್ಲಿ, ಪ್ರೀತಿ, ವಿಶ್ವಾಸ ಭಕ್ತಿ, ಭಯ ಉಳಿದೇ ಇಲ್ಲ. ಧರ್ಮದ ಹೆಸರಿನಲ್ಲೂ ಅನಾಚಾರ ನಡೆದಿದೆ. ರೈತ, ವ್ಯಾಪಾರಿಯನ್ನು ಮೋಸ ಮಾಡಲು ಸಮಯ ಕಾಯುತ್ತಾನೆ. ವ್ಯಾಪಾರಿ ರೈತನನ್ನು ಮೋಸ ಮಾಡಲು ಎದುರು ನೋಡುತ್ತಾನೆ. ಇಬ್ಬರೂ ಧರ್ಮದ ಹೆಸರಿನಲ್ಲಿ ವಂಚನೆ ಮಾಡುತ್ತಾರೆ.

ಮನೆಗೆದ್ದು ಮಾರುಗೆಡೆ ಎನ್ನುವ ಮಾತು ಬಹು ಅರ್ಥ ಪೂರ್ಣವಾದದ್ದು, ಇಂದು ಭ್ರಷ್ಟಾಚಾರದ ನಿರ್ಮೂಲನ ಮನೆಯಿಂದ ಪ್ರಾರಂಭಿಸಬೇಕಾಗಿದೆ. ಅದಕ್ಕೆ ಜನತೆ ಸುಶಿಕ್ಷಿತರಾಗ ಬೇಕಾಗಿದೆ. ಒಳ್ಳೆ ಸಂಸ್ಕೃತಿ ಬೆಳೆದು ಬರಬೇಕಾಗಿದೆ. ಆಳುವ ಸರ್ಕಾರ ಆಳಿಸಿಕೊಳ್ಳುವ ಜನತೆಯಲ್ಲಿ ಸೌಮ್ಯತೆ ಬೆಳೆದುಬರಬೇಕು. ಮನೆಯನ್ನು ಹೇಗೆ ನಮ್ಮದೆಂಬ ಅಭಿಮಾನದಿಂದ ಅದರ ಒಳಿತಿನ ಕಡೆಗೆ ಲಕ್ಷ್ಯ ಕೊಡುವೆವೋ ಹಾಗೆ ದೇಶವು ನಮ್ಮದು ಎಂಬ ಅಭಿಮಾನ ಮೂಡಿಬರಬೇಕು. ತಂದೆ ತಾಯಿಗಳಾದವರು ಮಕ್ಕಳು ಗುಣಾಢ್ಯರಾಗುವಂತೆ ನೋಡಿಕೊಳ್ಳಬೇಕು.

ಭ್ರಷ್ಟಾಚಾರ ನಿರ್ಮೂಲನಕ್ಕೆ ಅತ್ಯಮೂಲ್ಯ ಔಷಧಿ ನಾವು ಮಕ್ಕಳಿಗೆ ಕೊಡುವ ಶಿಕ್ಷಣ. ನಮ್ಮ ಶಿಕ್ಷಣ ಸಮಸ್ಯೆ ಬಗೆಹರಿಯುವದಿಲ್ಲವೋ ಅಂದಿನವರೆಗೆ ಭ್ರಷ್ಟಾಚಾರದ ಸಮಸ್ಯೆಯು ಎಂದಿನವರೆಗೆ ಬಗೆಹರಿಯಲಾರದು. ನಮ್ಮ ಶಾಲೆ, ಕಾಲೇಜು, ಸದಾಚಾರ ಕೇಂದ್ರಗಳಾಗಬೇಕು. "ನೆಲದ ಗುಣದಂತೆ ಬೆಳೆ" ನಮ್ಮ ಶಿಕ್ಷಣದಂತೆ ಮಕ್ಕಳು, ನಮ್ಮ ಮಕ್ಕಳಂತೆ ದೇಶ. ಮಗು ಬೆಳೆದು ಮಾನವನಾಗುವ ಕೇಂದ್ರಗಳಾದ ಶಾಲಾ ಕಾಲೇಜು ಸುವ್ಯವಸ್ಥಿತ ಹಾದಿಯಲ್ಲಿ ಇಲ್ಲದಿದ್ದರೆ ಗತಿ ಏನು?"ಶಾಲೆಯೇ ದೇವಾಲಯ ಮಕ್ಕಳೇ ದೇವರು" ಎಂಬುದನ್ನು ಉಪಾಧ್ಯಾಯ ಇಂದು ಬಣ್ಣನೆಗಾಗಿ ಉಪಯೋಗಿಸುತ್ತಿದ್ದಾನೆ. ಸುಳ್ಳು ಹೇಳಬಾರದು ಕಳವು ಮಾಡಬಾರದು ಮಾದಕ ಪದಾರ್ಥಗಳನ್ನು ಸೇವಿಸಬಾರದು ಎಂದು ಹೇಳಿ ಕೊಡುವ ಗುರುವೇ ಮಕ್ಕಳೆದುರಿಗೆ ಅವೆಲ್ಲವನ್ನೂ ಮಾಡುತ್ತಾನೆ. ಇನ್ನು ಮಕ್ಕಳ ಗುಣ ಶ್ರೀಮಂತಿಕೆ ಹೆಚ್ಚಬೇಕೆಂದರೆ ಹೇಗೆ ಸಾಧ್ಯ? "ವೈದ್ಯನೇ ರೋಗಿಯಾದರೆ" ಇನ್ನಾರು ಬರಬೇಕು? ಕೆಲವೊಂದು ಸಮಸ್ಯೆಗಳು ಹೇಳುವಷ್ಟು ಸುಲಭವಲ್ಲ ನಿಜ ಆದರೆ ತಪ್ಪುಕಡೆಗಳು ಎಲ್ಲೆ ಮೀರಿ ಹೋಗಿವೆ. ಹೀಗೆಯೇ ಮುಂದುವರಿದರೆ ದೇಶ ಗಂಡಾಂತರ ಪ್ರಸಂಗಗಳನ್ನು ಎದುರಿಸಬೇಕಾದೀತು.

ದರಿದ್ರ ರೋಗಿಯ ಸೇವೆಯೇ ನಮ್ಮ ಗುರಿ ಎಂದು ಹೇಳುವ ವೈದ್ಯ, ಯಾವನಾದರೊಬ್ಬ ಬಡರೋಗಿ ಸರ್ಕಾರಿ ಆಸ್ಪತ್ರೆಯಲ್ಲಿ ಹಾಸಿಗೆ ಪಡೆಯ ಬೇಕೆಂದರೆ ಹೇಳಿಕೆ, ಕೇಳಿಕೆ ಅವರ ಮಾಮೂಲು ಬೇಕು. ಟಿ. ಬಿ. ಆಸ್ಪತ್ರೆಗಳಂತೂ ಬಡರೋಗಿಗಳಿಗೆ ಮೀಸಲ ಆಲ್ಲೇ ಅಲ್ಲ. ಒಂದು ಸೀಟಿಗೆ ಐವತ್ತು ರೂಪಾಯಿ. ಇದು ನೋಡಲಿಕ್ಕೆ ಹಗುರವಾಗಿಯು ತಮಾಷೆಯಾಗಿಯು ಕಾಣಬಹುದು. ಅದನ್ನು ಅನುಭವಿಸುವವರಿಗೆ ಮಾತ್ರ ಗೊತ್ತು. ದೇಶದ ತುಂಬಾ ನಡೆಯುತ್ತಿರುವ ಭೀಕರ ಹಾವಳಿ ಇದು.

ಬರಿಯ ಕಾನೂನಿಂದ ಬಗೆಹರಿಯಲಾರದ ಪ್ರಶ್ನೆ ಇದು ವರದಕ್ಷಿಣೆಯ ಸಮಸ್ಯೆಯನ್ನ ಬಗೆಹರಿಸಲು ಕಾನೂನು ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆ ಎಂಬುದನ್ನ ನಿತ್ಯ ಕಾಣುತಿದ್ದೇವೆ. ಜನರೇ ಜಾಗ್ರತರಾಗಬೇಕು ಪ್ರತಿಯೊಬ್ಬನು ತನ್ನ ಗುಣ ಶೀಲತೆಯನ್ನ ತಾನೇ ಅಳೆದುಕೊಂಡು ಸರಿಪಡಿಸಿ ಕೊಳ್ಳಬೇಕು.

ತನ್ನ ಮನೆ, ಸದಾಚಾರ ಕೇಂದ್ರವಾಗಲು ಪ್ರಯತ್ನಿಸಬೇಕು. "If I reform myself the world is rid of on e scoundrel" ಎನ್ನುವ ಆಂಗ್ಲ ಕವಿಯ ಮಾತು ಪ್ರತಿಯೊಬ್ಬನ ಬಾಳಿಗೆ ನಾಂದಿಯಾಗಬೇಕು.

—ಬಸವರಾಜ ಕುಂಚೂರು.

ನಗು ನೀನು ....

ಜಗವೆ ನಿನ್ನೊಡನೆ ನಗುತಲಿಹುದು

ಆಡಬಾರದ ಮಾತು

ಟ್ರಿನ್...ಟ್ರಿನ್...

(ರಿಸೀವರ ಎತ್ತಿಕೊಂಡು ಕ್ಲಾರ್ಕ್)

"ಹಲೋ...."

"ಹಲೋ...ಅಸಿಸ್ಟಂಟ ಕಮಿಶನರ್..."

"ಮೂರು ತಿಂಗಳಿನಿಂದ ಅವರು ಸರಿಯಾಗಿ ಆಫೀಸಿಗೆ ಬರುತ್ತಿಲ್ಲ. ಇದಕ್ಕೆ ಮದುವೆಯಾದುದೆ ಕಾರಣವಿರಬೇಕು...."

"ಶಟ್‌ಅಪ್ ನಾನೆ ಅಸಿಸ್ಟಂಟ ಕಮಿಶನರ್..."

o o o

ಕುಣಿಸಬೇಡಿ

ಲಲಿತಾ ಬಹು ಆತುರದಿಂದ ಪಾರ್ಸಲ್‌ನ್ನು ಒಡೆದಳು. ಉಡುಗೊರೆ ಸಾಮಾನಿನ ಸಂಗಡ ಒಂದು ಸಣ್ಣ ಕಾಗದದಲ್ಲಿ ಈ ರೀತಿ ಬರೆದಿತ್ತು.

"ಇನ್ನು ಮೇಲೆ ಮಾಧವರನ್ನು ಚನ್ನಾಗಿ ನೋಡಿಕೊಳ್ಳಿ ನಾನು ಅವರು ಒಂದೇ ಆಫೀಸಿನಲ್ಲಿ ಕೆಲಸಮಾಡುವವರು. ನಾನು ಎಷ್ಟೋ ಸಲ ನೋಡಿಯೂ ಇದ್ದೇನೆ— ಆದರೂ ನನ್ನ ಹತ್ತಿರ ಏನೂ ಮರೆಮಾಚುತ್ತಿರಲಿಲ್ಲ ಅನ್ನಿ. ನಿಮ್ಮಿಂದ ಕಾಗದ ಬರಲು ಒಂದು ದಿನ ತಡವಾದರೆ...ಪಾಪ ಆ ಯಾಕೆ ಕಾಗದ ಬರೆದಿಲ್ಲ ಎಂದು ಏನೆಲ್ಲ ಚಟಪಟ್ಟಿ ಮಾಡುತ್ತಿದ್ದರು, ಇನ್ನು ಮೇಲೆ ಆ ರೀತಿ ಕುಣಿಸಬೇಡಿ."

o o o

ನನಗೆ ದೊರೆಯಬೇಕಾದರೆ?

ಹೆಂಡತಿ - ನಿಮಗೇನ್ ಹುಚ್ಚೇ? ಪ್ರತಿ ತಿಂಗಳೂ 'ವಿಮೆ' ಅಂತ ಎಷ್ಟು ಹಣ ಹಾಳು ಮಾಡ್ತೀರಿ?

ಗಂಡ— ನಾನು ಸತ್ತ ನಂತರ ನಿನ್ನ ಮಕ್ಕಳಿಗೆ ಹತ್ತು ಸಾವಿರ ದೊರೆಯುತ್ತೆ!

ಹೆಂಡತಿ — ವಿಮೆಯ ಹಣ ನನಗೆ ದೊರೆಯಬೇಕಾದರೆ?....!?

o o o

ಹೆಸರೇನು?

ಹೆಂಡತಿ— (ಗಂಡನನ್ನು ಕರೆದು) ಏನಂತ ಹೆಸರಿಡುವಾ? ಈ ನಾಯಿಮರಿದು ಎಷ್ಟು ಒಳ್ಳೆಗುಣ?!

ಗಂಡ— ಸಾಮಾನ್ಯವಾಗಿ ಈ ನಾಯಿಮರಿಯಾದರೂ ನಿನ್ನ ಗುಣಕ್ಕೇನು ಹೆಚ್ಚಿಲ್ಲ. ಆದರೂ....ಶಾಮಲಾ ಅಂತಲೆ ಕರೆಯುವಾ.

—ಪಿ. ಎನ್. ಹೆಗಡೆ—ಶಂಬು,
ಹೊಸಾಕುಳಿ.

o o o

ಮೂರ್ಖನಾರು ?

ಪ್ರಸಿದ್ಧ ಕವಿ ಗಯಟೆ ಒಂದು ದಿನ ವಿಹಾರಾರ್ಥವಾಗಿ ಉದ್ಯಾನವನದಲ್ಲಿ ಸಾಗುತ್ತಿದ್ದನು. ಆ ದಾರಿ ಬಹಳ ಅಗಲಕಿರಿದಾದುದರಿಂದ ಒಬ್ಬರೇ ಸಾಗಬಹುದಾಗಿತ್ತು. ಅಷ್ಟರಲ್ಲಿ ಗಯಟೆಯ ಗ್ರಂಥವೊಂದನ್ನು ಕಟುವಾಗಿ ಟೀಕಿಸಿದ್ದ ವಿಮರ್ಶಕನೊಬ್ಬನು ಎದುರಾದನು. ಆತನು ಗರ್ವದಿಂದ "ನಾನು ಮೂರ್ಖರಿಗೆ ದಾರಿ ಬಿಟ್ಟುಕೊಡುವವನಲ್ಲ" ಎಂದನು. "ಅದಕ್ಕೇನು? ನಾನೇ ಅಂಥವರಿಗೆ ದಾರಿ ಬಿಡುತ್ತೇನಲ್ಲ" ಎಂದು ನಸ ನಗುತ್ತಾ ಗಯಟೆ ಒಂದು ಬದಿಗೆ ಸರಿದನು.

ಗುಣವಾಚಕ

ಅಧ್ಯಾಪಕ: ರೋಮ್ ಎಂಬ ಶಬ್ದದ ಗುಣವಾಚಕವೇನಪ್ಪಾ?

ವಿದ್ಯಾರ್ಥಿ: ರೋಮಾಂಟಿಕ್ ಎಂದು ಸಾರ್.

ಭೇಟಿಯಿಲ್ಲ

ಜವಾನ: ಸ್ವಾಮಿ ಡಾಕ್ಟರರು ಬಂದಿದ್ದಾರೆ.

ಅಧಿಕಾರಿ: ಈಗ ಜ್ವರದಲ್ಲಿ ಮಲಗಿದ್ದೇನೆ. ಅವರಿಗೆ ಈಗ ಭೇಟಿಕೊಡಲು ಸಾಧ್ಯವಿಲ್ಲ ಎಂದು ಹೇಳು.

ನೆನಪು

ಕ್ಷೌರಿಕ: ನಾನು ಈ ಮೊದಲೊಂದು ಬಾರಿ ತಮಗೆ ಕ್ಷೌರ ಮಾಡಿದ ನೆನಪಿದೆ.

ಗಿರಾಕಿ: ಇಲ್ಲ, ಈ ಗಾಯ ಚಿಕ್ಕಂದಿನಲ್ಲಿಯೇ ಆದದ್ದು.

— ಎಂ. ಭಾಸ್ಕರ ಭಂಡಾರಿ,
ಮಜಿಬೈಲು.

'NAVAYUGA' Weekly is in tho list of periodicals and Newspapers approved for uso in Secondary Schools as per proceedings Roc. No. 466 N/50 dated 2-12-1950 of the Director of Public Instruction, Madras.

ಕವಲು ದಾರಿ—ಕೆಂಪು ದೀಪ

ಆ ಮಾತು—ನಡುವೆ—ಈ ಮಾತು

ನಲ್ವತ್ತಮೂರು ತುಂಬಿ ನಲ್ವತ್ತನಾಲ್ಕಕ್ಕೆ ನವಯುಗ ಕಾಲಿರಿಸಿದೆ.

ವ್ಯಕ್ತಿಗೆ, ತಾನು ನಡೆದು ಬಂದ ದಾರಿಯತ್ತ ತಿರುಗಿ ನೋಡಬೇಕೆನ್ನುವ ಬಯಕೆ ಇರುತ್ತದೆ; ಇದು ಸಹಜ. ತಾನು ಸಾಗಿಬಂದ ದಾರಿಯಲ್ಲಿ ಉಂಡು ಅನುಭವಿಸಿದ ಕಷ್ಟಸುಖಗಳನ್ನು ಕಾಣಬಲ್ಲ ವ್ಯಕ್ತಿ ಮುಂದಿನ ದಾರಿಯನ್ನು—ಅದರ ಜೊತೆಯಲ್ಲಿ ಗುರಿಯನ್ನು, ಗುರುತಿಸಿಕೊಳ್ಳಬಲ್ಲ.

ನವಯುಗ, ತನ್ನ ನಲ್ವತ್ತಮೂರು ವರ್ಷಗಳ ಅನುಭವದಿಂದ ತನ್ನ ಉತ್ಸಾಹವನ್ನು ನೂರುಪಟ್ಟು ಹೆಚ್ಚಿಸಿಕೊಂಡಿದೆ; ಉತ್ಸಾಹದ ಕೈಚಾಚಿದೆ; ಅದನ್ನು ನೀವು ಗುರುತಿಸಿಕೊಳ್ಳುತ್ತೀರಿ.

ಹೋರಾಟಕ್ಕೆ ಇಳಿಯುವದು ಸಾಹಸದ ಕೆಲಸ, ಪತ್ರಿಕೋದ್ಯಮದ ಹೋರಾಟವೇ? ಇದನ್ನು ನಮ್ಮ ಶತ್ರುವೂ ಅನುಭವಿಸಬಾರದು, ಎಂದು ಪತ್ರಿಕೋದ್ಯಮಕ್ಕಿಳಿದವರು ಬಯಸುತ್ತಾರೆ!

ನವಯುಗ ಈ ದಿಶೆಯಲ್ಲಿ, ತನ್ನ ಸ್ಥಾನದಲ್ಲಿ, ಸ್ಥಿರತೆಯ ಅರಿವು ಮಾಡಿಕೊಟ್ಟಿದೆ; ಜನರಿಗೆ ಯೋಗ್ಯವಿಚಾರವನ್ನು ಕಾಲಕ್ಕೆ ತಕ್ಕಂತೆ ನೀಡುತ್ತ ಬಂದಿದ.

ಈ ಕುರಿತು ನವಯುಗ ಹೆಮ್ಮೆ ಪಡುತ್ತಿದೆ. ನಲ್ವತ್ತಮೂರರಿಂದ ನಲ್ವತ್ತನಾಲ್ಕಕ್ಕೆ ಕಾಲಿರಿಸುತ್ತ, ಹಿಂದಿನದೆಲ್ಲ ನೆನಪುಗಳನ್ನು ನೆನೆಯುತ್ತ ಅದು ಮುಂದೆ ಹೆಜ್ಜೆ ಇರಿಸಿದೆ.

ಈ ಶುಭ ಸಂದರ್ಭದಲ್ಲಿ, ಹೊಸ ವಿಚಾರಗಳ ಸಮ್ಮೇಲನವನ್ನು ನೀವು ಕಾಣುತ್ತೀರಿ ಅಲ್ಲ?

o o o

ಈಗ ನನ್ನ-ನಿಮ್ಮ ಕುರಿತು ಆಡಬೇಕಾದುದು ಬಹಳಷ್ಟಿವೆ.

ನಿಮ್ಮ ಊರಲ್ಲಿ ಬೆಳೆಗೆ ಸಾಲುವಷ್ಟು ಮಳೆ ಬಂದಿರಬಹುದಲ್ಲ? ಏನು; ಮಳೆಯೇ ಇಲ್ಲವೆಂದಿರಾ? ಮಳೆ ಹೆಚ್ಚು ಸುರಿದು ಬೆಳೆಯೆಲ್ಲ ಕೊಳೆಯುತ್ತಿದೆ ಎಂದಿರಾ?

ಮುಂದಿನ ವರ್ಷಕ್ಕೇನು ಗತಿ ಎಂಬ ಉದ್ಗಾರವೇ? ಈಗಲೇ ಉಪವಾಸ ನರಳುತ್ತಿದ್ದೇವೆ,ಇನ್ನೊಂದು ವರ್ಷವನ್ನು ಕಾಣುವ ಯೋಗ ನಮಗೆಲ್ಲಿದೆ ಎನ್ನುವ ನಿರಾಶೆ ನಿಮ್ಮದು?

ಹಾಗೆಲ್ಲ ನಿರಾಶರ ಗಬಾರದು ನಿರಾಶೆಯಲ್ಲೂ ನಿರಾಶೆಯನ್ನು ಹುಡುಕುತ್ತ ಮುಂದುವರಿಯುವವರು ನಾವು. ಇಂದಿನ ದಿನ ಸುದಿನ....ಎನ್ನುವ ಛಲವಿನಮ್ಮದು. ಬರುವದೆಲ್ಲ ಬರಲಿ, ನಿನ್ನದಯೆ ಒಂದಿರಲಿ, ಎಂಬುದು ನಮ್ಮ ನಿತ್ಯ ಜಪ (ಯಾರ ದಯೆ ಎಂದು ಮಾತ್ರ ಪ್ರಶ್ನಿಸಬೇಡಿ.)

ಪತ್ರಿಕೆಯಲ್ಲಿ ಒಂದು ಸುದ್ದಿ ಇದೆ:

ಕೊಳ್ಳೆಗಾಲದಲ್ಲಿ ಹರಿಜನ ಬಾಲಕಿಯೊಬ್ಬಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು ಎಂದುತಿಳಿದು ಬಂದಿದೆ.

ಕಾರಣ ಜೀವನದಲ್ಲಿ ಜಿಗುಪ್ಸೆ ಎಂದೂ ತಿಳಿಯಲಾಗಿದೆ.

ಇನ್ನೊಂದು ಪತ್ರಿಕೆಯಲ್ಲಿ ಮಧುರೆಯಲ್ಲಿ ಹೆಣ್ಣುಮಗಳೊಬ್ಬಳು ಸಾವಿಗೆ ಬಲಿಯಾದ ಸುದ್ದಿ ಇದೆ. ಆಕೆ ವೃತ್ತಿಯಲ್ಲಿ ಏನಾಗಿದ್ದಳು ಎಂಬುದು ತಿಳಿಯದು ಜಾತಿಯಲ್ಲಿ ಸೂಳೆಎಂಬುದು ವರದಿಯಾದ ಸುದ್ದಿ.

ಆಕೆಯ ವಯಸ್ಸು ಹದಿನಾರು ವರ್ಷ ಸಾಯುವ ಹಿಂದಿನ ದಿನ ಒಂದು ಮಗುವಿಗೆ ಜನ್ಮವಿತ್ತಿದ್ದಳು. ಗಂಡು ಮಗು. ಅದೂ ಬದುಕಿ ಉಳಿಯಲಿಲ್ಲ. ಆಕೆಯೂ ಬದುಕಿ ಉಳಿಯಲಿಲ್ಲ,

ಇಬ್ಬರೂ ಕೊಲೆ ಮಾಡಲ್ಪಟ್ಟರು. ಕಾರಣ, ಅಸ್ಪಷ್ಟ. ಈ ವಿಷಯದಲ್ಲಿ ಐವರು ಪೋಲೀಸರ ಕೈಗೆ ಸಿಕ್ಕಿದ್ದಾರೆ. ಅವರಲ್ಲಿ ಹೆಣ್ಣು ಮಗಳೊಬ್ಬಳೂ ಇದ್ದಾಳೆ.

ಮಧುರೆ ಮತ್ತು ಕೊಳ್ಳೆಗಾಲದ ಈ ಎರಡು ಘಟನೆಗಳು ನಮ್ಮಲ್ಲಿನ ಹಸಿವು ಎಷ್ಟು ಘೋರವಾಗಿದೆ ಎಂಬುದಕ್ಕೆ ಉತ್ತಮ ಉದಾಹರಣೆ. ಈ ಎರಡೂ ಘಟನೆಗಳು, ನಮ್ಮ ಬಡತನವನ್ನು ಸೂಚಿಸುತ್ತವೆ. ಅದಕ್ಕೂ ಹೆಚ್ಚಾಗಿ ನಮ್ಮ ಸಮಾಜದ ಬಡತನವನ್ನು ಸೂಚಿಸುತ್ತಿವೆ?

ಹಸಿವು ನಮ್ಮ ಬಲಿಬೇಡುತ್ತಿರುವಂತೆಯೇ, ಸಮಾಜವೂ ನಮ್ಮ ಬಲಿ ಬೇಡುತ್ತಿದೆಯೇ?

ನಮ್ಮದು ಪ್ರಜಾಪ್ರಭುತ್ವ ಸರಕಾರ. ಒಂದೂವರೆ ದಶಕಕ್ಕೂ ಮಿಾರಿ, ನಾವು ಅನುಭವಿಸಿರುವದನ್ನು ನೋಡಿದರೆ, ಈ ಮಾತನ್ನು ಒಪ್ಪಿಕೊಳ್ಳದೆ ವಿಧಿಯಿಲ್ಲ.

ಪ್ರಜೆಗಳೂ ಇದ್ದಾರೆ; ಪ್ರಭುತ್ವವೂ ಇದೆ; ಅಂತೆಯೇ ನಮ್ಮದು ಪ್ರಜಾಪ್ರಭುತ್ವ ಎನ್ನುತ್ತೀರಾ?

ನಿಮ್ಮ ಮಾತು ಅನುಭವದಿಂದ ಕೂಡಿರುವ ಸತ್ಯ; ನಿಜ. ಆದರೆ ಅದನ್ನು ನಿರಾಶೆಯಿಂದ ಆಡಿಕೊಳ್ಳುವಲ್ಲಿ ಮಾತ್ರ, ನೀವು ಎಡವಿ ಬೀಳಬಾರದು.

ಯಾವ ರಾಜ ಬಂದರೂ ರಾಗಿ ಬೀಸುವದೇನೂ ತಪ್ಪುವದಿಲ್ಲ, ಎಂಬ ಉದ್ಗಾರ ಇನ್ನು ಬೇಡ. ನಾವೀಗ ಹೊಸ ರಾಜ್ಯವನ್ನು ಕಟ್ಟಬೇಕಾಗಿದೆ, ಸಮಾನ ಸುಖ, ಸಮಾನ ನೀತಿಯ ಒಂದು ವರ್ತುಲವನ್ನು ರಚಿಸಿ, ನಾವೆಲ್ಲರೂ ಒಂದುಗೂಡದಿದ್ದರೆ, ನಾವು ಹೆಚ್ಚುಕಾಲ ಉಳಿಯುವದಿಲ್ಲ ನಮ್ಮ ಸುಖವನ್ನು ಕಸಿದುಕೊಳ್ಳುವವರಿಲ್ಲ, ನಮ್ಮ ದುಃಖವನ್ನೂ ಕಸಿದುಕೊಳ್ಳಬೇಕು.

ಅದಕ್ಕಾಗಿ ನಾವೀಗ ಹೋರಾಡೋಣ. ನಮ್ಮವರ ಸುಖಕ್ಕಾಗಿ ಶ್ರಮಿಸೋಣ. ನಿರಾಶೆಯನ್ನು ದೂರಕ್ಕೆಸೆಯೋಣ. ಇದು ನಮ್ಮ ಬಳಿಗೆಂದೂ ಸುಳಿಯದಿರಲಿ. ನೀವೀಗ ಸಿದ್ಧರಾಗುತ್ತೀರಲ್ಲ? ನಮ್ಮೆಲ್ಲರ ಸುಖಕ್ಕಾಗಿ ಶ್ರಮಿಸುತ್ತೇವೆ, ಎಂದು ಪ್ರತಿಜ್ಞೆ ತೊಡುತ್ತೀರಲ್ಲ? ನಮ್ಮ ಸುಖವನ್ನು ಕಸಿದುಕೊಳ್ಳುವವರನ್ನು ಬಡಿದೋಡಿಸುತ್ತೇವೆ ಎಂಬ ಪೌರುಷ ನಿಮ್ಮಲ್ಲಿದೆ. ಅದೆಂದೂ ಪೊಳ್ಳಾಗದಿರಲಿ; ಪೋಲಾಗದಿರಲಿ.

— ಸುದಾಸ.

ಶಿಕ್ಷಣ ಜಾಗೃತಿ

ಇವರು ಸಮಾಜಕಂಟಕರಲ್ಲ

ಅಂಗವಿಕಲರಿಗೆ ಶಿಕ್ಷಣ ನೀಡುವ ಪ್ರಶ್ನೆಯು ಎಲ್ಲ ದೇಶಗಳ ಮುಂದೂ ಇದೆ. ಅಮೇರಿಕೆಯು ಈ ದಿಶೆಯಲ್ಲಿ ಹಿಂದಿನಿಂದಲೂ ಮುಂದಿದೆ. ದಿನದಿಂದ ದಿನಕ್ಕೆ ಅದು ಮುಂದುವರಿಯುತ್ತಲೇ ಇದೆ. ಹೈದರಾಬಾದಿನಲ್ಲಿ ಎರಡು ವರ್ಷಗಳಿಗೆ ಮೊದಲು ಸ್ಥಾಪಿತವಾದ ವಯಸ್ಕ ಕಿವುಡರ ತರಬೇತಿ ಕೇಂದ್ರದ ಡೈರೆಕ್ಟರ್ ಶ್ರೀ ಜಾನ್ ಕಿಟ್ಟಪ್ಪ ಅವರು ಇತ್ತೀಚೆಗೆ ಅಮೇರಿಕೆಯ ಕಿವುಡರ ಮತ್ತು ಮೂಕರ ಶಾಲೆಗಳನ್ನು ಪರಿಶೀಲಿಸಿ ಮರಳಿ ಬಂದಿದ್ದಾರೆ. ಹೈದರಾಬಾದಲ್ಲಿರುವ ಈ ತರಬೇತಿ ಕೇಂದ್ರವು ಈ ಮಾದರಿಯ ಕೇಂದ್ರಗಳಲ್ಲಿ ಇಡಿಯ ಭಾರತದಲ್ಲೇ ಮೊದಲನೆಯದಾಗಿದೆ.

ಅಂಗವಿಕಲರ ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತ ಕ್ರಾಂತಿ ಮಾಗಿದೆಯೆನ್ನುತ್ತಾರೆ, ಭಾರತದ ಈ ಡೈರೆಕ್ಟರ್. ಅಂಗವಿಕಲರಿಗೆ ಇಂದು ಸಹಾನುಭೂತಿ ಮತ್ತು ವಿಶ್ರಾಂತಿಧಾಮಗಳು ಬೇಕಾಗಿಲ್ಲ; ಅವರಿಗೆ ಬೇಕಾಗಿರುವುದು ಅವಕಾಶ ಮತ್ತು ತರಬೇತಿಯೆಂಬುದನ್ನು ಅಮೇರಿಕೆಯ ಸರಕಾರ ಮತ್ತು ಜನತೆ ಮನವರಿಕೆ ಮಾಡಿಕೊಂಡಿದ್ದಾರೆ. ಇದರಿಂದಾಗಿ ಅಲ್ಲಿನ ಅಂಗವಿಕಲರು ಪರಿಪೂರ್ಣವೂ ಸುಖಮಯವೂ ಆದ ಜೀವನವನ್ನು ಬದುಕುವುದು ಸಾಧ್ಯವಾಗಿದೆ.

ಅಮೇರಿಕೆಯ ಫೆಡರಲ್ ಸರಕಾರವು ತನ್ನ ವೃತ್ತಿ—ಪುನರ್ನಿವೇಶನ ಕಛೇರಿಯ ಮೂಲಕ ಅಂಗವಿಕಲರ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಧನವನ್ನು ಒದಗಿಸುತ್ತದೆ. ಇದು ವರೆಗೆ ೧೫ ಲಕ್ಷ ಜನರನ್ನು ಪ್ರಯೋಜನಕರ ವೃತ್ತಿಗಳಿಗೆ ಹೊಂದಿಸಲಾಗಿದೆ ಇವರೆಲ್ಲರೂ ಉತ್ತಮ ಜೀವನ ಬದುಕುವುದು ಸಾಧ್ಯವಾಗಿದೆ.

ಅಮೇರಿಕದ ಅಧ್ಯಕ್ಷರು ೧೯೪೭ ರಲ್ಲಿ ಅಂಗವಿಕಲರ ಉದ್ಯೋಗ ಸಮಿತಿಯೊಂದನ್ನು ಸ್ಥಾಪಿಸಿದರು. ಇದರಲ್ಲಿ ೪೦೦ ಸದಸ್ಯರಿದ್ದಾರೆ. ಈ ಸಮಿತಿಯು ಅಂಗವಿಕಲ ವ್ಯಕ್ತಿಗಳಿಗೆ ಯೋಗ್ಯ ಉದ್ಯೋಗಗಳನ್ನು ದೊರಕಿಸಲು ಫೆಡರಲ್, ರಾಜ್ಯ ಮತ್ತು ಸ್ಥಾನೀಯ ಅಧಿಕಾರಿಗಳೊಡನೆ ಮತ್ತು ಸಂಘಟಿತ ಕಾರ್ಮಿಕ ವರ್ಗಗಳೊಡನೆ ನಿಕಟ ಸಂಪರ್ಕವಿಟ್ಟು ಕೊಂಡು ಸಹಕರಿಸಿ ಕಾರ್ಯ ನಿರ್ವಹಿಸುವದು.

ಅಮೇರಿಕೆಯಲ್ಲಿ ಕಿವುಡರ ಶಿಕ್ಷಣವು ಪ್ರಪಂಚದ ಹೆಚ್ಚಿನ ದೇಶಗಳಲ್ಲಿರುವದಕ್ಕಿಂತ ಬಹಳಷ್ಟು ಮುಂದುವರಿದಿದೆ ಒಂದು ಕಾಲದಲ್ಲಿ ಸಮಾಜಕ್ಕೆ ಮುಳ್ಳೆನಿಸಿದ್ದ ಅಂಗವಿಕಲರನ್ನು ಪ್ರಯೋಜನಕರರಾಗಬಲ್ಲ ನಾಗರಿಕರನ್ನಾಗಿ ತರಬೇತಿಸಿ ಮಾ

(ಆದಿನೈದನೇ ಪುಟ ನೋಡಿರಿ)

ಠೇವಣಿದಾರರಿಗೆ

ಸ್ಥಿರ ಠೇವಣಾತಿಗಳ ಮೇಲೆ
ಬಡ್ಡಿಯ ದರಗಳು

4% ರಿಂದ 6⅛%

ಇದೇ ತಾರೀಕು 17ನೇ ಆಗೋಸ್ತ್ 1964ರಿಂದ ನಿಮ್ಮ ಸ್ಥಿರ ಠೇವಣಾತಿಗಳ ಮೇಲೆ ಸಾಲಿಯಾನ್ ಸೇಕಡಾ 6⅛ ತನಕ ಬಡ್ಡಿ ಕೊಡಲಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಅರ್ಧ ವರ್ಷಕ್ಕೊಮ್ಮೆ ಬಡ್ಡಿಯ ಪಾವತಿ

1ರಿಂದ 7 ವರುಷಗಳ ಅವಧಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಚೇರಿ - - - - ಮಣಿಪಾಲ

ಶಾಖೆಗಳು: ೧೯೬

ಚಲಾವಣಾ ನಿಧಿ: ರೂ. 60 ಕೋಟಿಗೂ ಮಿಕ್ಕಿದೆ.

......ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರ.

ನಮ್ಮ ಹಬ್ಬ ಹರಿದಿನಗಳು

ವೈಭವೋಪೇತ

ಶ್ರಾವಣ ಬಹುಳ ಅಷ್ಟಮಿಯು ಲೋಕ ರಕ್ಷಕ ಶ್ರೀ ವಿಷ್ಣುವು ಎಂಟನೆಯ ಅವತಾರವೆತ್ತಿದ ಸುದಿನ. ಶ್ರೀ ಕೃಷ್ಣನೆಂಬ ಹೆಸರಿನಿಂದ ಆತನ ಈ ಅವತಾರವು ನಮ್ಮ ಕಾಲಕ್ಕೆ ಅತಿ ಸಮೀಪವಿರುವುದು! ಲೋಕಧರ್ಮದ ಮೂಲ ಗ್ರಂಥವಾಗಬಲ್ಲ ಶ್ರೀ ಮದ್ಭಗವದ್ಗೀತೆಯನ್ನಾತ ತನ್ನ ಶಿಷ್ಯೋತ್ತಮ ಅರ್ಜುನನಿಗೆ ಉಪದೇಶಿಸಿದ್ದುದರಿಂದ ಶ್ರೀ ಕೃಷ್ಣನಿಂದು ಲೋಕ ಪೂಜ್ಯನಾಗಿದ್ದಾನೆ; ಜನ ವಂದ್ಯನೆನಿಸಿದ್ದಾನೆ.

ಸಾಧುಸಜ್ಜನರ ಉದ್ಧಾರ ಮತ್ತು ದುಷ್ಟ ದುರ್ಜನರ ದಮನಕ್ಕಾಗಿ ದೇವಕಿಯ ಅಷ್ಟಮಗರ್ಭದಲ್ಲಿ ಭಗವಂತನು ಜನಿಸಿದನು; ಹುಟ್ಟಿದೊಡನೆಯೇ ಯಶೋದೆಯೆಂಬ ಸಾಮಾನ್ಯ ಗೋಪಿಯೊಬ್ಬಳ ಮನೆಯಲ್ಲೇ ಬೆಳೆದು ಬಂದನು. ಬಾಲಲೀಲೆಗಳಿಂದ ಎಲ್ಲರ ಹೃನ್ಮನಗಳನ್ನು ಆಕರ್ಷಿಸಿದ ಮುದ್ದು ಕೃಷ್ಣ ಪೂತನಾದಿ ದುರ್ಜನ ಧ್ವಂಸವನ್ನು ಹಾಲು ಹಸುಳೆಯಾಗಿರುವಾಗಲೇ ತೊಡಗಿ ಕೋಟಿ ದಾನವರನ್ನು ತರಿದನು. ಕೌರವ—ಪಾಂಡವರ ದಾಯಾದ ಹೋರಾಟದಲ್ಲಿ ಧರ್ಮಪಂಥೀಯ ಪಾಂಡವರ ಸರ್ವಸ್ವವಾಗಿ ಧರ್ಮ ಸಂರಕ್ಷಣೆಗೈದನು. ಆದುದರಿಂದಲೇ ಕೃಷ್ಣ ಭಾರತೀಯರಿಗೆ ಅಚ್ಚುಮೆಚ್ಚಿನ ದೇವರ ಅವತಾರ; ಹಲವರಿಗೆ ಆತನೇ ಆದಿ ದೈವ. ಇದರಿಂದಲೇ ಇಡಿಯ ಭಾರತದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಮನೆ ಮನೆಯಲ್ಲಾದಿನ ಹೊಸ ಚೇತನ ಮೂಡುತ್ತದೆ.

ಶ್ರೀಕೃಷ್ಣಜನ್ಮಾಷ್ಟಮಿಯು ಶ್ರೀಕೃಷ್ಣನ ಉಡುಪಿಗೊಂದು ದೊಡ್ಡ ಹಬ್ಬ. ಆ ದಿನ ಕೃಷ್ಣ ಮಠದಲ್ಲಿ ರಾತ್ರಿ ಭಗವಂತನಿಗೆ ಅರ್ಘ್ಯ ಬಿಡುವ ಕಾರ್ಯಕ್ರಮ ಸಡಗರದಿಂದ ನೆರವೇರುವುದು. ಈ ಶ್ರದ್ಧಾಪೂರ್ವಕ ಕರ್ಮದಲ್ಲಿ ಭಾಗವಹಿಸಲು ಊರಿನವರು ಮಾತ್ರವಲ್ಲ ಪರವೂರ ಕೃಷ್ಣ ಭಕ್ತರೂ ಸಾವಿರ ಸಂಖ್ಯೆಯಲ್ಲಿ ಬರುತ್ತಾರೆ. ಮನೆಮನೆಗಳಲ್ಲೂ ಹಗಲು ಉಪವಾಸವ್ರತ, ರಾತ್ರೆ ದೇವಾರಾಧನಾನಂತರವೇ ಪಾರಣೆ. ಕಡುಬು, ಲಡ್ಡು, ಉಂಡೆ, ಚಕ್ಕುಲಿ ಮೊದಲಾದ ಹಲವು ತರದ ತಿಂಡಿ ತಿನಸುಗಳು ಮುದ್ದು ಬಾಲಕೃಷ್ಣನಿಗೆ ಅತಿ ಪ್ರಿಯ. ಎಂತಲೇ ಎಲ್ಲರೂ ಇದನ್ನು ಆತನಿಗೆ ಸಮರ್ಪಿಸಿ, ತಮ್ಮ ಪಾರಣೆಯನ್ನು ಮಾಡುತ್ತಾರೆ.



ನೂಕು ನುಗ್ಗಲಿನ ನಡುವೆಯೂ ಬಿರುದು ಬಾವಲಿ ಮೊದಲಾದುವುಗಳೊಡನೆ ಶ್ರೀಕೃಷ್ಣ ತನ್ನ ಭಕ್ತರಿಗೆ ದರ್ಶನ ನೀಡಿ ಲೀಲೋತ್ಸವವನ್ನು ಕಣ್ಣಾರೆ ಕಾಣಲು ಹೊರಟಿದ್ದಾನೆ.

ಮರುದಿನವೇ ಶ್ರೀಕೃಷ್ಣನ ಲೀಲೋತ್ಸವ, ಆತನ ಲೀಲೆಗಳೇನು ಸಾಮಾನ್ಯವೆ? ಬೇರೆ ಬೇರೆ ತರದ ವೇಷಗಳನ್ನು ತೊಟ್ಟು ಆತ ತನ್ನ ಬಾಲಲೀಲೆಗಳಿಂದ ಅಂದಿನ ಜನರನ್ನು ಮೆಚ್ಚಿಸಿ ಉಡುಗೊರೆ ಪಡೆಯುತ್ತಿದ್ದನು. ಹಾಗೆಯೇ ಇಂದು ಹಲವರು ಬಗೆ ಬಗೆಯ ವೇಷ ಧರಿಸಿ, ನಲಿದು, ಕುಣಿದು ಹಾಡಿ, ಬೇಡಿ ಹಣ ಪಡೆಯುತ್ತಾರೆ. ಇಂತಹ ವೇಷಧಾರಿಗಳ ಗದ್ದಲ ಅಷ್ಟಮಿಯ ದಿನವೇ ಪ್ರಾರಂಭವಾಗುತ್ತದೆ. ಇದಕ್ಕೆ ಬೇಕಾದ ಪೂರ್ವ ಸಿದ್ಧತೆಗಳು ಒಂದೆರಡು ವಾರಗಳಿಗೆ ಮೊದಲೇ ತೊಡಗುತ್ತವೆ. ಅಂದು ಎಲ್ಲರೂ ಹಸನ್ಮುಖರು. ಉಡುಪಿಯ ಎಲ್ಲ ಓಣಿ, ಕೇರಿಗಳಲ್ಲಿ ವೇಷಗಳ ಅಬ್ಬರವೇ ಅಬ್ಬರ. ಬೇಂಡು ವಾದ್ಯಾದಿಗಳ ಕೂಗೇ ಕೂಗು!

ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಅಂದು ವಿಶೇಷ ಉತ್ಸವ. ಸೂರ್ಯೋದಯದ ಹೊತ್ತಿಗೇನೇ ಮಹಾ ಸಂತರ್ಪಣೆಯು ಮುಗಿದು ಬಿಡುತ್ತದೆ. ಅನಂತರ ಉತ್ಸವದ ತಯಾರಿ. ವೇಷಧಾರಿಗಳು ಮನೆ ಮನೆಗಳನ್ನು, ಅಂಗಡಿ-ಅಂಗಡಿಗಳನ್ನು ಸುತ್ತುತ್ತಿ ಮಠದ ಆವಾರಕ್ಕೆ ಬರುತ್ತಾರೆ. ಒಂದೆಡೆ ಹುಲಿಗಳ ಗರ್ಜನೆಯಾದರೆ, ಇನ್ನೊಂಡೆಡೆ ರಂಗ-ರಂಗಿಯರ ಕುಣಿತ! ಮತ್ತೊಂದೆಡೆ ಬೆಸ್ತರ ಮೀನು ಬೇಟೆಯಾದರೆ ಬೇರೊಂದೆಡೆ ಗೋಪಿಕಾ ವಸ್ತ್ರಾಪಹರಣ! ಮಗದೊಂದೆಡೆ ರಾಧಾಕೃಷ್ಣರು ನರ್ತನದಲ್ಲಿ ತಲ್ಲೀನರಾಗಿದ್ದರೆ, ಉಳಿದೊಂದೆಡೆ ಯಶೋದೆಯು ಮುದ್ದು ಮಗುವಿಗೆ ಮೊಲೆಯೂಡಿಸುತ್ತಾಳೆ! ಕಲಾತ್ಮಕವಾದ ವೇಷ ತೊಟ್ಟು ಕಲಾವಿದರು ಒಂದಲ್ಲ ನೂರು ಬಗೆಯ ವೇಷ ಧರಿಸಿ ಅಣುರೇಣು ತೃಣ ಕಾಷ್ಠಗಳೆಲ್ಲವೂ ಶ್ರೀಕೃಷ್ಣಮಯವೆಂಬಂತೆ ನಡೆಯುತ್ತಾರೆ. ಹುಲ್ಲು ಹಲ್ಲು ಕಿರಿಯುವ ಹನುಮಂತ, ನಾರಾಯಣ ಭಜನೆ ಮಾಡುವ ನಾರದ, ಹಾಲು ಮಾರುವವನು, ಮಡಿವಳ, ಕೆಲಸಿಗ, ಉಪ್ಪಾರ, ಕಮ್ಮಾರ, ಬಡಿಗ ಎಲ್ಲರೂ ಅಂದು ನೋಡ ಸಿಗುತ್ತಾರೆ. ಮೈತುಂಬ ಕರಿ ಬಳಿದು ನೆರೆದವರ ಬಟ್ಟೆಬರೆಗಳಿಗೂ ಕರಿಯೆರಚುವ ಕರಿ ವೇಷವಂತೂ ಎಳೆಯ—ಹಿರಿಯರಿಗೆ ಅಗ್ಗದ ವೇಷ! ಮುದ್ದು ಕೃಷ್ಣನೂ ಕರಿಯನಾದುದರಿಂದಲೋ ಏನೋ ಇಂತಹರ ಸಂಖ್ಯೆ ಅಪಾರ, ಅನಂತ!

ತೇರುಬೀದಿಯ ಸುತ್ತಲೂ ಅಲ್ಲಲ್ಲಿ ಮಂಟಪಗಳನ್ನು ಕಟ್ಟಿರುತ್ತಾರೆ. ಅವುಗಳಲ್ಲಿ ತಿಂಡಿತಿನಸು, ಪಾನೀಯಗಳಿಂದ ತುಂಬಿದ ಭಾಂಡಗಳನ್ನು ತೂಗ ಹಾಕುತ್ತಾರೆ. ನಿಶ್ಚಿತ ಹೊತ್ತಿನಲ್ಲಿ ಬಿರುದು, ಬಾವಲಿ, ಬೇಂಡು-ವಾಲಗ, ಗರ್ನಾಲ—ಬೆಡಿಗಳೊಂದಿಗೆ ಉತ್ಸವವು ಪ್ರಾರಂಭವಾಗುವುದು. ವೇಷಧಾರಿಗಳೆಲ್ಲರೂ ತಂತಮ್ಮ ಜತೆಯವರೊಂದಿಗೆ ಕುಣಿಯುತ್ತ ತಮ್ಮ ಕಲಾಕೌಶಲವನ್ನು ಪ್ರದರ್ಶಿಸುತ್ತಾ ಮುಂದುವರಿಯುತ್ತಾರೆ. ಅವರ ಹಿಂದೆ ಗೋಪ ವೇಷದವರು ಮೈಗೆ ಕರಿ ಬಳಿದು, ಸೊಂಟಕ್ಕೆ ಒಲಿಬಿಗಿದು, ತಲೆಗೆ ಬೈಹುಲ್ಲ ಹಗ್ಗವನ್ನು ಸುತ್ತಿ ಕೈಯಲ್ಲಿ ದೊಣ್ಣೆ ಹಿಡಿದು ಆಡುತ್ತ ಬರುತ್ತಾರೆ. ಅವರನ್ನು ಹಿಂಬಾಲಿಸಿ, ಶ್ರೀಕೃಷ್ಣ ತನ್ನವರನ್ನು ವಿಚಾರಿಸಿಕೊಳ್ಳಲು ಹೊರಬರುತ್ತಾನೆ. ಸುತ್ತುಮುತ್ತು ಕಿಕ್ಕಿರಿದ ಜನಸ್ತೋಮದಿಂದ ತೇರು ಬೀದಿಯಲ್ಲಿ ಸಾಸಿವೆ ಬಿದ್ದರೂ ನೂಕು ನುಗ್ಗಲಿಗೆ ಸಿಕ್ಕು ಪುಡಿಗುಟ್ಟೀತೇ ಹೊರತು ನೆಲಕುರುಳಲಾರದು. ಹೀಗೆ ವೈಭವೋಪೇತವಾಗಿ ಹೊರಟ ಮೆರವಣಿಗೆಯು ಕಟ್ಟಿದ ಮಂಟಪಗಳಿಗೆ ತುಸು ದೂರ ನಿಲ್ಲುತ್ತ ಹೋಗುವುದು. ಈಗ ಗೋಪರು ಶ್ರೀ ಕೃಷ್ಣನ ಬಾಲಲೀಲೆಯನ್ನು ಅನುಕರಿಸುವಂತೆ ಮಂಟಪದಲ್ಲಿ ತೂಗು ಹಾಕಿದ ಮಡಿಕೆಗಳನ್ನು ತಮ್ಮ ಕೋಲಿನಿಂದ ಕುಟ್ಟಿ ಕುಟ್ಟಿ ಪುಡಿ ಮಾಡುವರು. ಅದರೊಳಗಿನ ತಿಂಡಿ ತೀರ್ಥ ಕೆಳಕ್ಕೆ (ಮೈ ಮೇಲೆ) ಚೆಲ್ಲಿ ಹೋಗುವುದು. ಇದೂ ಒಂದು ಮೋಜು. ಹೀಗೆ ತೇರು ಬೀದಿಯ ಒಂದು ಸುತ್ತು ಮೆರವಣಿಗೆ ಬರುವುದಕ್ಕೆ ಒಂದು ತಾಸೂ

ಶೃಂಗರಿಸಿದ ಮಂಟಪದಲ್ಲಿ ಗೋಪ ವೇಷಧಾರಿಗಳು ಕುಟ್ಟಿ ಮಡಿಕೆಯೊಡೆಯುತ್ತಿದ್ದಾರೆ.

ಶ್ರೀಕೃಷ್ಣ ಲೀಲೋತ್ಸವ

ಮರಗಾಲು ಕಟ್ಟಿದ ಹುಲಿವೇಷಧಾರಿ ಎಲ್ಲರಿಗೂ ಮುಂದೆ ಕುಣಿಯುತ್ತಾ ಬರುತ್ತಿದ್ದಾನೆ.

ನಾಗೇ ಕೆಲವೊಮ್ಮೆ ಜಾರಿ ಎಡವಿ ಬೀಳುತ್ತಿರುವಾಗ, ಈ ಮರಗಾಲಿನವನನ್ನು ದೇವರೇ ಕಾಪಾಡ ಬೇಕೆಂಬ ಉದ್ಗಾರ ಹೊರಟರೂ ಆಶ್ಚರ್ಯವಿಲ್ಲ ದೈವಲೀಲೆ ವಿಚಿತ್ರ. ಕೆಲವೊಮ್ಮೆ ಹದ್ದು ತಪ್ಪಿ ಆತ ಕೆಡೆದುರುಳಿ ಬೀಳುವುದೂ ಇದೆ ಆದರೆ, ಇಂತಹದು ಘಟನೆಗಳು ಸ ವಿರಳವೇ ದೂ ಇಲ್ಲ

ಇದೇ ಹೆದರಿಕೆಯು ಅಡಿಕೆಮರವೇರುವುದರಲ್ಲೂ ಇದೆ ಸಿಪ್ಪೆ ಸುಲಿದು ಎಣ್ಣೆ ಸವರಿದ ಬುಡ ಗಟ್ಟಿಯಿಂದ ಈ ಮರ ಮುಂದು ಪ್ರಾಣಗಳೆದು ಕೊಂಡವರೂ ಒಬ್ಬಿಬ್ಬರಿದ್ದಾರೆ ಆದೇನೇ ಇರೂ ಇರಬಹುದು. ಆದೇನೇ ಇರಲಿ, ನಮ್ಮ ಹಿರಿಯರು ಪ್ರಾರಂಭಿಸಿದ ಈ ಉತ್ಸವ ಕೇವಲ ಶವೂಪಗಲ್ಲವಾದರೂ ಇಂದು ತನ್ನ ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತ ಇದೆ. ಹಣ ಗಳಿಸುವುದೇ ತಮ್ಮ ವೇಷಗಳ ಉದ್ದೇಶವೆಂದು ತಿಳಿದ 'ಕಲಾವಿದ'ರೂ ಹಲವಾರು ಇಂತಹ ದುಸ್ಥಿತಿ ಸೀಗಿ ನೈಜ ಕಲಾ ಪ್ರದರ್ಶನ ಮತ್ತು ಪ್ರೋತ್ಸಾಹದ ವಿಧಾನವೆಂದು ಈ ಉತ್ಸವ ಆಚರಿಸಲ್ಪಡುವಂಥಾಗ ಬೇಕು. ಹಾಗಾದರೇನೇ ಇದರ ಭೂಷಣ ಉಳಿಯುತ್ತದೆ

ಈ ಶ್ರೀ ಕೃಷ್ಣ ಲೀಲೋತ್ಸವವನ್ನು



ಅಡಿಕೆ ಮರವೇರುವ ಚತುರ ಗೋಪ ಯಶ ಪಡೆಯುವಂತಿದ್ದಾನೆ.

ಸಾಗುವುದಿಲ್ಲ, ಮರದ ಪಡುಗಡೆಯಲ್ಲಿ ಒಂದು ಅಡಿಕೆ ಮರವನ್ನು ನಾಟಿ ಅದರ ತುದಿಯಲ್ಲಿ ಹಣದ ಗಂಟನ್ನಿಡುವರು ಉತ್ಸವದ ಕೊನೆಯ ಹಂತದಲ್ಲಿ ಯಾರು ಈ ಮರವೇರಿ ಅದನ್ನು ತೆಗೆಯುತ್ತಾನೋ ಅವನಿಗದು ಸೇರುವುದು. ಹೀಗೆ ಗದ್ದಲದಿಂದ ನಡೆಯುವ ಸಂಭ್ರಮದ ಲೀಲೋತ್ಸವವು ಮುಗಿಯುವುದು

ಹುಡುಗರು ವಿನೋದಕ್ಕೆಂದು ಬಿಡುವ ಪೇಟ್ಲಿಯ ಹಂಕಾರವು ಕದನಗಳೊಡನೆ ಸ್ಪರ್ಧೆಗೆ ನಿಲ್ಲುವಂತಿರುವುದು. ಅವುಗಳಿಂದ ಹೊರ ಚಿಕ್ಕದ ಕಾಯಿಯು ಆದೆಷ್ಟೋ ಮಂದಿಗೆ ನೋವುಂಟು ಮಾಡುವುದೂ ಇದೆ.

ವೇಷಗಳು ಕುಣಿಯುತ್ತಿರುವುದನ್ನು ನೋಡಿ ಆನಂದಿಸಲು ಜನರ ನೂಕು ನುಗ್ಗಲು ವಿಪರೀತವಾಗಿರುವುದು. ಎಲ್ಲೆಲ್ಲಿಂದಲೋ ಹೇರಾಸೆಯಿಂದ ಬಂದ ಭಕ್ತರು ನಿರಾಶರಾಗಿ ಮರಳಿ ಹೋದುದೂ ಉಂಟು. ಇದಕ್ಕೆಂದು ಈಗ ರಥಬೀದಿಯಲ್ಲೇ ಒಂದು ಅಟ್ಟಳಿಗೆ ಕಟ್ಟುತ್ತಾರೆ, ಎಲ್ಲ ವೇಷಗಳೂ ಈ ಎತ್ತರದ ಅಟ್ಟಳಿಗೆಯೇರಿ ಅಲ್ಲಿ ತಮ್ಮ ಕಲಾಚಾತುರ್ಯವನ್ನು ತೋರಿಸಿ ಕೆಳಗಿಳಿಯುವುದು ರೂಢಿಯಾಗುತ್ತ ಬಂದಿದೆ ಇದರಿಂದ, ಅದನದ ರಂಗದ ರಂಗಿನ ಎಲ್ಲ ವೇಷಗಳನ್ನೂ ವೀಕ್ಷಿಸುವ ಸದವಕಾಶವು ಜನತೆಗೆ ದೊರೆಯುವಂತಾಗುತ್ತದೆ.

'ಮರಗಾಲು' ಹುಲಿವೇಷ ಎನ್ನುವುದೊಂದು ವಿಶೇಷ. ಕಾಲುಗಳಿಗೆ ಉದ್ದನೆಯ ಮರದ ತುಂಡನ್ನು ಕಟ್ಟಿಕೊಂಡು ಎಲ್ಲರಿಗೂ ಎದುರಿನಲ್ಲಿ ಮೆರವಣಿಗೆಯ ಮಾರ್ಗದರ್ಶಕನಂತೆ ನಲಿದಾಡಿ ಒರುವವನನ್ನು ಕಂಡ ಹೊಸಬರೆಲ್ಲರೂ ಮೂಗಿಗೆ ಬೆರಳೇರಿಸಿಯೇ ತೀರಬೇಕು ಎರಡು ಕಾಲಿದ್ದರೂ ಈ ಬಗೆಯ ದುರಂತಗಳು ಅತ್ಯಪರೂಪ. ನೂರಾರು ವರ್ಷಗಳಿಂದ ನಡೆದು ಬರುತ್ತಿರುವ ಈ ಲೀಲೋತ್ಸವದ ಇತಿಹಾಸದಲ್ಲಿ ಬೆರಳೆಣಿಕೆಯಷ್ಟೂ ಇಲ್ಲ ವೆನ್ನಬಹುದು ಇದನ್ನೇ ಭಗವಂತನ ಲೀಲೆಯೆನ್ನಬಹುದು

ಮೂರು ಹುಲಿಗಳು ತಲೆಯೆತ್ತಿ ಕುಣಿಯಲು ಸಿದ್ಧವಾಗುತ್ತಿವೆ.

ಇಂದಿಗೂ ಶ್ರೀ ಕೃಷ್ಣ ಲೀಲೋತ್ಸವ ನಡೆಯುತ್ತ ಬರುತ್ತಿದೆ ಕಲಾವಿದರಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಇದು ಮಠದ ಕಡೆಯಿಂದ ನಡೆದು ಕೊಂಡು ಬರುತ್ತಿದೆಯೆನ್ನಬಹುದು ಮಳೆಯ ದಿನಗಳು ಕಳೆದು ಜಡತೆಯಲ್ಲಿ ಚೇತನವನ್ನು ತುಂಬುವ ನೈಸರ್ಗಿಕ ವಿಧಾನವಿದಿರಲೂ ಬಹುದು. ನಾಟಕ—ಸಿನೆಮಾಗಳಿನ್ನೂ ಜನ ಸಾಮಾನ್ಯರ ಕೈಗಳಿಗೆ ನಿಲುಕದ ಸಮಯದಲ್ಲಿ ಅವರ ಮನರಂಜನೆಯ ಕಾರ್ಯಕ್ರಮವಿದಿದ್ದರೂ ಇರಬಹುದು ಧೋ ಎಂದು ಸುರಿಯುವ ಮಳೆಯಲ್ಲಿ ಮನೆಯೊಳಗೆ ಕುಳಿತು ಆಲಸರಾದ ರೈತರನ್ನು ವ್ಯಾಪಾರಿಗಳನ್ನು ಆಕರ್ಷಿಸಿ, ತಂತಮ್ಮ ಕರ್ತವ್ಯಗಳತ್ತ ದೃಷ್ಟಿ ಹರಿಸುವಂತೆ ಪ್ರೇರೇಪಿಸುವ ಕಾಂತಾ ಸಮ್ಮಿತ ಮಾರ್ಗವಿದಿದ್ದ ವಿಟ್ಲಪಿಂಡಿ, ಮೊಸರು ಕುಡಿಕೆ ಹಬ್ಬ ಎಂಬ ಹೆಸರಿನಿಂದಲೂ ಕರೆಯುವುದುಂಟು. ಇವು ಇದರ ಅನ್ವರ್ಥ ನಾಮಗಳೂ ಹೌದು.

ಶ್ರೀಕೃಷ್ಣನ ಭಕ್ತರೆಲ್ಲರೂ ತಮ್ಮ ಜೀವಮಾನದಲ್ಲಿ ಒಂದಾವರ್ತಿಯಾದರೂ ಈ ಲೀಲೋತ್ಸವವನ್ನು ನೋಡಬೇಕ, ಈ ಬಾರಿಯಂತೂ ತಪ್ಪಿತ, ಮುಂದಿನ ಶ್ರಾವಣ ಬಹುಳ ಅಷ್ಟಮಿಯ ದಿನವನ್ನಾದರೂ ನೆನಪಿಟ್ಟುಕೊಂಡು ತಪ್ಪದೆ ಬನ್ನಿ, ಹರ್ಷ್ಯವನ್ನೂ ಬಿಡಬಹುದು. ಉತ್ಸವವನ್ನೂ ನೋಡಬಹುದು. ಮತ್ತೆ ಬಾರದುಳಿಯಬೇಡಿ. ನಮಸ್ಕಾರ.

ಇನ್ನೂ ನೀವು "ಗೀತೆಯ ಕೈಗನ್ನಡಿ" ಎಂಬ ಶ್ರೀ ಮದ್ಭಗವದ್ಗೀತೆಯ ಸಮೂಲ ಭಾಷಾಂತರವನ್ನು ಕೊಂಡಿಲ್ಲವಾದರೆ ಉಡುಪಿಗೆ ಬಂದಾಗ ನವಯುಗ ಪ್ರೆಸ್ಸಿನಿಂದ ಕೊಂಡುಕೊಳ್ಳಿರಿ.

ಅಚ್ಲಾಡಿ — ಅಚ್ಲಾಡಿ ಮೂಡುಕೆರೆ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಎ. ಮಹಾಬಲ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ. ದಾಮೋದರ್ ಇವರು ಧ್ವಜಾರೋಹಣ ಮಾಡಿದರು. ಶ್ರೀ ಕೆ. ನಾರಾಯಣ ಶೆಟ್ಟರು ಭಾಷಣಗೈದ ಬಳಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಭೋಜ ಶೆಟ್ಟರು ಧನ್ಯವಾದವಿತ್ತರು. ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ಸುರತ್ಕಲ್: — ಮುಕ್ಕ ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲಾ ಮತ್ತು ಅಗ್ಗಿದಕಳಿ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಧ್ವಜಾರೋಹಣ ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳೊಂದಿಗೆ ಸ್ವಾತಂತ್ರ್ಯ ದಿನಾಚರಣೆಯು ಜರಗಿತು.

ದಿ. ವಿಜಯಾ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು—

ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು,—3

ಶಾಖೆ:--- ಕಾಸರಗೋಡು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ-ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ತಾರೀಕು 26—9—64ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 26—9—64 ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವರಾಂಡದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು-ವ-ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ, ತಿಳಿದಿರಲಿ.

ಸಾಲದ ನಂಬ್ರ		ಸಾಲಗಾರನ ಹೆಸರು ಮತ್ತು ವಿಳಾಸ.	ಮೊಬಲಗು ರೂ. ನ ಪೈ
1	1097/61	ಕೆ. ನಿತ್ಯಾನಂದ ಭಂಡಾರಿ, ಕೆ. ಟಿ ಭಂಡಾರಿಯವರ ಮಗ, ಕಿದೂರು ಗ್ರಾಮ ಪೋಸ್ಟ್: ಕಿದೂರು	47=05
2	1396/61	ಕೊಗ್ಗು, ಮಾಯಿಲರ ಮಗ, ಚಮನಾಡು ಗ್ರಾಮ, ಪೆರವನಡಕ, ಪೋಸ್ಟ್: ಪೆರವನಡಕ.	15=64
3	1608/61	ಕೆ. ಮಹಾಬಲ ನ್ಯಾಕ, ಶಂಕರ ಬಂಟರ ಮಗ. ಆದೂರು IIನೇ ಗ್ರಾಮ, ಪಾಂಡಿ ಮನೆ, ಪೋಸ್ಟ್: ಆದೂರು.	101=32
4.	110/62	ಪಿ. ಕುಂಞಂಬು ನಾಯರ್, ಕೆ ರಾಮನ್ ನಾಯರ್‌ರವರ ಮಗ ವ್ಯಾಪಾರಿ, ಮಾರ್ಕೇಟು ರಸ್ತೆ, ಪೋಸ್ಟ್: ಕಾಸರಗೋಡು	162=51
5	116/62	ಎಂ. ಅಬ್ದುಲ್ಲ, ಕುಂಞ ಅಹಮ್ಮದ್‌ರವರ ಮಗ ಮೊಗ್ರಾಲ್ ಪುತ್ತೂರು, ಕೈತೂರ್ ಪೋಸ್ಟ್: ಮೊಗ್ರಾಲ್ ಪುತ್ತೂರು	255=02
6	118/62	ಎಂ. ಅಬ್ದುಲ್ಲ, ಕುಂಞ ಅಹಮ್ಮದ್‌ರವರ ಮಗ. ಮೊಗ್ರಾಲ್ ಪುತ್ತೂರು, ಕೈತೂರ್, ಪೋಸ್ಟ್: ಮೊಗ್ರಾಲ್ ಪುತ್ತೂರು.	92=68
7	330/62	ಸಿ ಎ. ಅಬ್ದುಲ್ ರಹಿಮಾನ್, ಅಬ್ಬಾಸರ ಮಗ, ರೈಲ್ವೆ ಸ್ಟೇಶನಿನ ಎದುರುಗಡೆ ಪೋಸ್ಟ್: ಕಾಸರಗೋಡು.	976=38
8	390/62	ಸಿ. ಎ. ಅಬ್ದುಲ್ ರಹಿಮಾನ್, ಅಬ್ಬಾಸರ ಮಗ, ರೈಲ್ವೆ ಸ್ಟೇಶನಿನ ಎದುರುಗಡೆ ಪೋಸ್ಟ್ ಕಾಸರಗೋಡು.	782=96
9	509/62	ಅಬ್ದುಲ್ ರಹಿಮಾನ್, ಮಮ್ಮುಂಞಯವರ ಮಗ ಪಳ್ಳಿ ಪೋಸ್ಟ್: ಕಾಸರಗೋಡು.	67=86
10	560/62	ಎಸ್. ಎ. ಅಬ್ದುಲ್ ರಹಿಮಾನ್, ಅಬ್ದುಲ್ ಖಾದರ್‌ರವರ ಮಗ, ನಾಯಿಮಾರ್ಮೂಲೆ. ಪೋಸ್ಟ್: ಮುಟ್ಟತ್ತೋಡಿ	61=39
11	636/62	ಕೆ. ಅಚ್ಯುತ, ಬೀರನ್‌ರವರ ಮಗ. ಟಿ ಬಿ ಕ್ರಾಸ್ ರೋಡಿನ ಸಮೀಪ. ಪೋಸ್ಟ್: ಕಾಸರಗೋಡು.	99=10
12	719/62	ಬಿ. ಪರಮೇಶ್ವರ, ಭದ್ರಯ್ಯನವರ ಮಗ, ಕೋಟೆಕಲ್ ಕಲ್ನಾಡು ಗ್ರಾಮ. ಪೋಸ್ಟ್: ಕಲ್ನಾಡು.	810=63
13	789/62	ಎ. ಎಸ್. ಅಹಮ್ಮದ್ ಮಂಮುಂಞ ಹಾಜಿಯವರ ಮಗ. ತಳಂಗರೆ. ಪೋಸ್ಟ್: ಕಾಸರಗೋಡು	444=28
14	840/62	ಕೆ. ಕುಂಞಮ್ಮ ನಾರಾಯಣನವರ ಮಗಳು. ಕರಂದಕ್ಕಾಡು. ಪೋಸ್ಟ್: ಕಾಸರಗೋಡು.	73=90
15	847/62	ಎ. ಅಂದುಂಞ. ಪಕೀರರನ ಮಗ. ‘ಚಂದ್ರಿಕಾ’ ಕಲ್ನಾಡ್ ವಿಲೇಜ್. ಪೋಸ್ಟ್: ಚಂದ್ರಗಿರಿ.	67=88
16	958/62	ಎಚ್. ರಾಮಯ್ಯ ಭಟ್ಟ, ಎಚ್. ಕೃಷ್ಣ ಭಟ್ಟರ ಮಗ ಕುಂಟಾರು, ಆದೂರು ಗ್ರಾಮ, ಪೋಸ್ಟ್ ಆದೂರು.	130=53
17	983/62	ಕೆ. ಕೆ. ಅಬೂಬೇಕರ್, ಅಬ್ದುಲ್ಲರ ಮಗ, ಕೂಡ್ಲು ಗ್ರಾಮ, ಕಾವುಗೋಳಿ, ಪೋಸ್ಟ್ ಕೂಡ್ಲು.	82=12
18	1180/62	ಎನ್. ಕುಂಞಂಬು ನಂಬಿಯಾರ್, ಕೋಡೋತ್ ಕುಮಾರನ್ ನಾಯರ್‌ರವರ ಮಗ, ಮೂನಾಮೂಲೆ, ಪೋಸ್ಟ್: ಪೆರವನಡಕ.	371=92
19	1191/62	ಅಬ್ದುಲ್ಲ, ಮೊಹಮ್ಮದ್‌ರವರ ಮಗ, ಪಳ್ಳಿಕೆರೆ ಗ್ರಾಮ, ಪೋಸ್ಟ್ ಪಳ್ಳಿಕೆರೆ.	83=96
20	1232/62	ಕೆ. ಮಹಮ್ಮದ್, ಅಬ್ದುಲ್ ರಹಿಮಾನ್‌ರವರ ಮಗ, ಮೋಟರ್ ಸರ್ವೆಂಟ್, ಕಾಸರಗೋಡು.	1715=92
21	1239/62	ಎಂ. ಅಬ್ದುಲ್ಲ, ಕುಂಞ ಅಮದರವರ ಮಗ, ಮೊಗ್ರಾಲ್ ಪುತ್ತೂರು, “ಚೈತ್ತೂರು”, ಪೋಸ್ಟ್ ಮೊಗ್ರಾಲ್ ಪುತ್ತೂರು	120=59
22	1353/62	ಕುಂಞರಾಮನ್, ಕುಂಞಕಣ್ಣನವರ ಮಗ, ಜಾಲಸೂರು ರಸ್ತೆ, ಪೋಸ್ಟ್ ಕಾಸರಗೋಡು.	83=47
23	1392/62	ಕೆ. ಕೃಷ್ಣ ಮಣಿಯಾಣಿ, ಕುಂಞಕಣ್ಣನವರ ಮಗ, ಸಿಣ್ಣಕೂಡ್ಲು, ಪೋಸ್ಟ್ ಕೂಡ್ಲು	45=96
24	1471/62	ಖಾದರ್ ಹಾಜಿ, ಚೆರಿಯ ಮಹಮ್ಮದ್ ಹಾಜಿಯವರ ಮಗ, ಮೇಲಪರಂಬು, ಒರವಂಗರೆ, ಪೋಸ್ಟ್: ಕಲ್ನಾಡು.	130=80
25	1472/62	ಖಾದರ್ ಹಾಜಿ, ಚೆರಿಯ ಮಹಮ್ಮದ್ ಹಾಜಿಯವರ ಮಗ, ಮೇಲಪರಂಬು, ಒರವಂಗರೆ, ಪೋಸ್ಟ್ ಕಲ್ನಾಡು.	123=67
26	1496/62	ಸಿ ಎಲ್. ಮಹಮ್ಮದ್, ನ್ಯೂದಿನ ಕುಂಞಯವರ ಮಗ, ಲಾಸಿಯರ್ ಮನೆ, ಪೋಸ್ಟ್. ಚಮನಾಡ್	76=13
27	1532/62	ಬಿ ಮಹಮ್ಮದ್, ಬಿ ಎಸ್. ಅಬ್ದುಲ್ ಖಾದರ್‌ರವರ ಮಗ, ಬಿ. ಎಂ, ಬೀಡಿ ವರ್ಕ್ಸ್ ಚಮನಾಡು, ಪೋಸ್ಟ್ ಚಮನಾಡ್.	76=62
28	1539/62	ಕೆ. ಕೃಷ್ಣ, ರಾಮನ್‌ನವರ ಮಗ, ನೆಲ್ಲಿಕುಂಜೆ, ಪೋಸ್ಟ್ ಕಾಸರಗೋಡು.	99=59
29	1583/62	ಪಿ. ಎ. ಮಹಮ್ಮದ್ ಮುಸಲಿಯಾರ್, ಅಬ್ದುಲ್ ಅಜೀಜ್ ಮುಸಲಿಯಾರ್‌ರವರ ಮಗ, ಪಳ್ಳಿಕಾಲ್, ತಳಂಗರೆ, ಪೋಸ್ಟ್ ಕಾಸರಗೋಡು.	98=46
30	1623/62	ಎಸ್. ಹಸನ್ ಬ್ಯಾರಿ, ಕಂಟ್ರಾಕ್ಟರ್, ಚಂಗಳ ಗ್ರಾಮ, ಪೋಸ್ಟ್ ಚೆರ್ಕಳ.	364=89
31	1917/62	ಪಿ. ಎ ಮೊಹಮ್ಮದ್, ಅಬ್ದುಲ್ ರಹಿಮಾನ್‌ರವರ ಮಗ, ಟೊಪ್ಪಿ ವ್ಯಾಪಾರಿ, ತಳಂಗರೆ, ಪೋಸ್ಟ್ ಕಾಸರಗೋಡು.	33=37

ಬ್ಯಾಂಕಿನ ಆಫೀಸು:
ಕಾಸರಗೋಡು,
ತಾ. 27-8-1964.

For The Vijaya Bank Ltd.
K KOCHANNA RAI,
Agent, Kasaragod.

ವಿದ್ಯಾವರ್ಧಕ ಸಂಘ (ರಿ.), ಶಿರ್ವ. ದ. ಕ.

ಮಹಾಸಭೆಯ ನೋಟೀಸು.

ಮೇಲಿನ ಸಂಘದ ಮಹಾಸಭೆಯು ತಾ. 12—9—1964ನೇ ಶನಿವಾರ ಪೂರ್ವಾಹ್ನ ಘಂಟೆ 11-00ಕ್ಕೆ ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ “ನಿತ್ಯಾನಂದ ಸದನ”ದಲ್ಲಿ

ಶ್ರೀ ಎಸ್. ಎಸ್. ಕೊಳ್ಕೆಬೈಲ್, B. Sc., LL B., M L. A.
ಕುಂದಾಪುರ

ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸದಸ್ಯರು ಹಾಜರಿರಬೇಕಾಗಿ ವಿನಂತಿ.

ಸಭೆಯಲ್ಲಿ ಬರತಕ್ಕ ವಿಷಯಗಳು:.

1. ಲೆಕ್ಕಪತ್ರಗಳ ಪರಿಶೀಲನೆ.
2. ಹೊಸ ಕಾರ್ಯಕಾರಿ ಮಂಡಳಿಯ ಆಯ್ಕೆ.
3. ಇತರ ವಿಷಯಗಳು.

ಶಿರ್ವ, ದ. ಕ.
17—8—1964.

ಕೆ. ವಾಸುದೇವ ಶೆಟ್ಟಿ,
ಕಾರ್ಯದರ್ಶಿ

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್.66 ಉಡುಪಿ.

ವಸತಿ ಸಮಸ್ಯೆಗೆ ಪರಿಹಾರ

ಕೊಳಕು ಪ್ರದೇಶಗಳ ನಿರ್ಮೂಲನ

ಕೈಗಾರಿಕೆ ಮತ್ತು ವ್ಯಾಪಾರದ ಬೆಳವಣಿಗೆ ಪರಿಣಾಮವಾಗಿಯೂ ಉದ್ಯೋಗಾನ್ವೇಷಣೆ ಕಾರಣದಿಂದಾಗಿ ಹಳ್ಳಿಗಳಿಂದ ಪಟ್ಟಣಗಳಿಗೆ ಜನ ಬಂದು ನೆಲಸುತ್ತಿರುವ ಕಾರಣದಿಂದಾಗಿಯೂ ಕಳೆದ ಐವತ್ತು ವರ್ಷಗಳಲ್ಲಿ ಪಟ್ಟಣಗಳ ಜನಸಂಖ್ಯೆ ವಿಪರೀತವಾಗಿ ಹೆಚ್ಚಿದೆ. ಮುಂಬಯಿ, ಕಲ್ಕತ್ತ, ಮದರಾಸ್ ಮತ್ತು ದಿಹಲಿಗಳಂತಹ ಪಟ್ಟಣಗಳಲ್ಲಿ ಜನರ ವಾಸಕ್ಕೆ ಸ್ಥಳವಿಲ್ಲದಂತಾಗಿ ಅಲ್ಲಲ್ಲಿ ಕೊಳಕು ಪ್ರದೇಶಗಳು ಹೊಸದಾಗಿ ಹುಟ್ಟಿಕೊಳ್ಳುತ್ತಿವೆ.

ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯಂತಹ ತುಂಬಾ ಆವಶ್ಯಕ ಸೌಲಭ್ಯಗಳೂ ಇಲ್ಲದ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ.

ನಗರ ಪ್ರದೇಶಗಳಲ್ಲಿ ಕೊಳಕು ಪ್ರದೇಶಗಳನ್ನು ತೊಡೆದುಹಾಕಬೇಕಾದ ತೀವ್ರ ಅಗತ್ಯವನ್ನು ಮನಗಂಡು ಸರ್ಕಾರ ಈ ಸಂಬಂಧವಾಗಿ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಆರಂಭಿಸಿದೆ

ಕೊಳಕು ಪ್ರದೇಶಗಳಿಗೆ ಸಂಬಂಧಪಟ್ಟ ಮೂರು ಮುಖ್ಯ ತೊಡಕುಗಳಿವೆ. ಮೊದಲನೆಯದಾಗಿ ಈ ಪ್ರದೇಶಗಳನ್ನು ಶುಚಿಗೊಳಿಸಿ ಜನರು ಇಲ್ಲಿ ವಾಸ ಮಾಡಲು ಯೋಗ್ಯವಾದಂತಹ ಒಂದು ಪರಿಸ್ಥಿತಿಯನ್ನು ನಿರ್ಮಿಸಬೇಕಾಗಿದೆ. ನೀರು ಸರಬರಾಜು ಮಾಡುವುದು, ಚರಂಡಿ ವ್ಯವಸ್ಥೆ ಏರ್ಪಡಿಸುವುದು, ಬೀದಿಯ ದೀಪಗಳನ್ನು ಒದಗಿಸುವುದು, ರಸ್ತೆಗಳನ್ನು ಒಪ್ಪಮಾಡುವುದು ಮತ್ತು ಸ್ನಾನ ಗೃಹಗಳನ್ನು ಒದಗಿಸುವುದು ಇವೇ ಮೊದಲಾದವುಗಳನ್ನು ಕೈಗೊಂಡರೆ ಮಾತ್ರ ಈ ಪ್ರದೇಶಗಳು ಜನ ವಾಸಮಾಡಲು ಯೋಗ್ಯವಾಗುವುವು. ಹೀಗೆ ಈ ಪ್ರದೇಶಗಳ ಜೀವನ ಸ್ಥಿತಿಗತಿಗಳನ್ನು ಸುಧಾರಿಸುವುದು ಸಾಧ್ಯವೇ ಇಲ್ಲವೆಂದಾಗ ಅಂತಹ ಪ್ರದೇಶದ ಮನೆಗಳನ್ನೆಲ್ಲಾ ಸಂಪೂರ್ಣವಾಗಿ ಒಡೆದುಹಾಕಿ ಒಂದು ಪುನರ್ವ್ಯವಸ್ಥೆಯ ಕಾರ್ಯಕ್ರಮದ ಮೂಲಕ ಹೊಸದಾಗಿ ಮನೆಗಳನ್ನು ಕಟ್ಟಿಸುವುದು ಆವಶ್ಯಕವಾಗುತ್ತದೆ.

ಕೊಳಕು ಪ್ರದೇಶಗಳಿಂದ ಅಲ್ಲಿ ವಾಸವಿರುವ ಜನರನ್ನು ಹೊರಹಾಕಲು ಯೋಚಿಸಿದಾಗ ಅವರಿಗೆ ಬೇರೆ ಕಡೆ ವಸತಿ ಸೌಕರ್ಯವನ್ನು ಒದಗಿಸಬೇಕಾಗುತ್ತದೆ. ಕೊಳಕು ಪ್ರದೇಶಗಳಿರುವ ಸ್ಥಳಗಳು ಸಾಮಾನ್ಯವಾಗಿ ಖಾಸಗಿ ಮಾಲೀಕತ್ವಕ್ಕೆ ಒಳಪಟ್ಟಿರುತ್ತವೆ. ಇಂತಹ ಪ್ರದೇಶಗಳಲ್ಲಿ ವಾಸವಿರುವ ಬಾಡಿಗೆದಾರರನ್ನು ಬಿಡಿಸಿ ಅವರಿಂದ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಸಾಧ್ಯವಾದರೆ ಅಂತಹ ಪ್ರದೇಶಗಳ ಮಾಲಿಕರಿಗೂ ಅವರ ನಿವೇಶನಕ್ಕೆ ಒಳ್ಳೆಯ ಬೆಲೆ ಬರುತ್ತದೆ. ಈ ಕಾರಣದಿಂದಲೇ ಅವರನ್ನು ಬಿಡಿಸುವುದಕ್ಕೆ ಮಾಲಿಕ ಪ್ರಯತ್ನಿಸುತ್ತಿರುತ್ತಾನೆ. ಇದು ಎರಡನೆಯ ತೊಡಕು.

ಮೂರನೆಯದಾಗಿ ಕೊಳಕು ಪ್ರದೇಶಗಳಿಂದ ಹೊರ ಹಾಕಲ್ಪಡುವ ಜನರಿಗೆ ನ್ಯಾಯವಾದ ಒಂದು ಬಾಡಿಗೆ ಪಡೆಯುವ ವ್ಯವಸ್ಥೆಯಲ್ಲಿ ಸುಧಾರಿತ ಅಥವಾ ಪುನರ್ನಿರ್ಮಿಸಿದ ಕಟ್ಟಡಗಳಲ್ಲಿ ವಾಸ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ.

ಕೊಳಕು ಪ್ರದೇಶಗಳ ಸುಧಾರಣೆ ಹಾಗೂ ನಿರ್ಮೂಲನ ಕಾರ್ಯಕ್ಕೆಂದೇ ಪ್ರತ್ಯೇಕ ಒಂದು ಶಾಸನವನ್ನು ಪಾರ್ಲಿಮೆಂಟ್ ೧೯೫೬ರಲ್ಲಿ ಅಂಗೀಕರಿಸಿ, ಈ ಶಾಸನ ಕೇಂದ್ರಾಡಳಿತಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಜಾರಿಗೆ ಬಂತು. ಕೊಳಕು ಪ್ರದೇಶಗಳನ್ನು ಸುಧಾರಿಸಲು ಹಾಗೂ ಅಗತ್ಯ ಕಂಡುಬಂದ ಪ್ರದೇಶಗಳಲ್ಲಿ ಸಂಪೂರ್ಣವಾಗಿ ನಿರ್ಮೂಲನಗೊಳಿಸಲು ಈ ಶಾಸನ ಅವಕಾಶ ಮಾಡಿಕೊಟ್ಟಿತಲ್ಲದೆ ತಮ್ಮ ನೆಲಕ್ಕೆ ಹೆಚ್ಚು ಬೆಲೆ ಬರುತ್ತದೆ ಎಂಬ ಕಾರಣದಿಂದ ಅಂತಹ ಪ್ರದೇಶಗಳ ನಿವಾಸಿಗಳನ್ನು ಹೊರ ಹಾಕಲು ಮಾಲೀಕರು ಪ್ರಯತ್ನಿಸಿದಾಗ ಆ ಜನರಿಗೆ ರಕ್ಷಣೆ ಕೊಡಲು ಮತ್ತು ಕೊಳಕು ಪ್ರದೇಶಗಳನ್ನು ಕಡಿಮೆ ದರದಲ್ಲಿ ಅಕ್ವೈರ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಕೊಟ್ಟಿತು.

ಈ ಶಾಸನದ ಪ್ರಕಾರ ಕೊಳಕು ಪ್ರದೇಶಗಳನ್ನು ಸ್ವಚ್ಛಗೊಳಿಸಿ ಜನವಾಸ ಮಾಡಲು ಯೋಗ್ಯ ಪ್ರದೇಶಗಳನ್ನಾಗಿ ಮಾಡುವ ಹೊಣೆ ಆ ಪ್ರದೇಶದ ಮಾಲಿಕರಿಗೇ ಸೇರಿದ್ದಾಗುತ್ತದೆ ಆತ ಈ ಹೊಣೆಯನ್ನು ಹನ್ನೆರಡು ತಿಂಗಳ ಒಳಗಾಗಿ ನಿರ್ವಹಿಸದೇ ಹೋದರೆ ಅಂತಹ ಪ್ರದೇಶವನ್ನು ಅಕ್ವೈರ್ ಮಾಡಿಕೊಂಡು ಅದನ್ನು ವಾಸಮಾಡಲು ಯೋಗ್ಯ ಪ್ರದೇಶವನ್ನಾಗಿ ಮಾಡುವ ಅಧಿಕಾರ ಸರ್ಕಾರಕ್ಕೆ ಅಥವಾ ಆದರ ಪರವಾಗಿ ಕೆಲಸ ಮಾಡುವ ಸರ್ಕಾರಿ ಶಾಖೆಗೆ ಬರುತ್ತದೆ

ಆದರೆ ಈ ಶಾಸನವನ್ನು ಜಾರಿ ಮಾಡುವಾಗ ಕೆಲವು ಅಡಚಣೆಗಳು ಅನುಭವಕ್ಕೆ ಬಂದ ಕಾರಣದಿಂದಾಗಿ ತಿದ್ದುಪಡಿ ಮಸೂದೆಯೊಂದನ್ನು ಇದೀಗ ಪಾರ್ಲಿಮೆಂಟಿನ ಮುಂದೆ ತರಲಾಗಿದೆ.

ಈ ಮಸೂದೆಯ ಸಂಬಂಧವಾದ ಕೆಲವು ಮುಖ್ಯಾಂಶಗಳು ಈ ರೀತಿ ಇವೆ:

ಸರ್ಕಾರ ಕೊಳಕು ಪ್ರದೇಶದ ಸುಧಾರಣೆ ಕಾರ್ಯವನ್ನು ಮೊದಲಿಂದ ತಾನೇ ವಹಿಸಿಕೊಳ್ಳಬಹುದು ಅಥವಾ ಮಾಲಿಕರು ಅದಕ್ಕೆ ಒಪ್ಪಿ ಅದನ್ನು ಅವರು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಕಂಡು ಬಂದಾಗ ಕೂಡ ಸರ್ಕಾರ ಈ ಒಗ್ಗೆ ತಾನೇ ಮುಂದಾಗ ಬಹುದು.

ಕೊಳಕು ಪ್ರದೇಶಗಳಲ್ಲಿ ವಾಸವಿದ್ದ ಜನರು ಆ ಪ್ರದೇಶವನ್ನು ಸುಧಾರಿಸಿ ವಾಸ ಮಾಡಲು ಯೋಗ್ಯ ಪ್ರದೇಶವನ್ನಾಗಿ ಮಾಡಿದ ನಂತರ ಮತ್ತೆ ಅಲ್ಲಿಗೆ ಬಂದು ನೆಲಸಲು ಅಪೇಕ್ಷಿಸಿದಲ್ಲಿ ಅದಕ್ಕೆ ಅವಕಾಶ ಕಲ್ಪಿಸಿಕೊಡಲು ಸಾಧ್ಯವಾಗುತ್ತದೆ.

ಕೊಳಕು ಪ್ರದೇಶಗಳ ನಿವಾಸಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಮತ್ತು ಅವರು ಕೋರ್ಟು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಸರ್ಕಾರ ಒಂದು ವಿಧಿಯನ್ನು ಈ ಮಸೂದೆಯಲ್ಲಿ ಸೇರಿಸಿದೆ. ಇದರ ಪ್ರಕಾರ ಪೂರ್ವ ಅನುಮತಿ ಇಲ್ಲದೆ ಆ ಪ್ರದೇಶದ ಮಾಲಿಕರು ಬಾಡಿಗೆದಾರರ ವಿರುದ್ಧ ಯಾವುದೇ ನ್ಯಾಯಸ್ಥಾನದಲ್ಲಿ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ.

ಸರ್ಕಾರ ಅಥವಾ ಅದರಿಂದ ಅಧಿಕಾರ ಪಡೆದ ನಗರ ಸಭೆ ಕೈಗೊಂಡಿರುವ ಯಾವುದೇ ಕ್ರಮವನ್ನು ತಡೆಗಟ್ಟಲು ನ್ಯಾಯಾಲಯದಲ್ಲಿ ಆಕ್ಷೇಪಣೆಯನ್ನು ಸ್ವೀಕರಿಸಲಾಗುವುದಿಲ್ಲ

ಈ ಮಸೂದೆಯನ್ನು ಲೋಕ ಸಭೆ ಈಗಾಗಲೇ ಅಂಗೀಕರಿಸಿದ್ದು ರಾಜ್ಯ ಸಭೆಯು ತನ್ನ ಮುಂದಿನ ಅಧಿವೇಶನದಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಿದೆ.

ಮೂಲ ಮಸೂದೆಯನ್ನು ಪಾರ್ಲಿಮೆಂಟ್ ಅಂಗೀಕರಿಸಿದಾಗ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಈ ವಿಷಯವಾಗಿ ಬರೆದು ಇದೇ ರೀತಿಯ ಶಾಸನಗಳನ್ನು ರಾಜ್ಯಗಳ ಶಾಸನ ಸಭೆಗಳಲ್ಲಿಯೂ ಅಂಗೀಕರಿಸುವಂತೆ ಸೂಚಿಸಿತು. ಆಂಧ್ರ ಪ್ರದೇಶ, ಅಸ್ಸಾಂ, ಕೇರಳ, ಮಧ್ಯ ಪ್ರದೇಶ, ಮದರಾಸ್, ಮೈಸೂರು, ಪಂಜಾಬ್, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಈ ೮ ರಾಜ್ಯಗಳು ಈಗಾಗಲೇ ಕೇಂದ್ರ ಸರ್ಕಾರದ ಶಾಸನದ ಮಾದರಿಯ ಶಾಸನಗಳನ್ನು ಅಂಗೀಕರಿಸಿವೆ.

೧೯೫೬ರ ಮೇ ತಿಂಗಳಲ್ಲಿ ಕೇಂದ್ರ ಸರ್ಕಾರವು ಕೊಳಕು ಪ್ರದೇಶಗಳ ನಿರ್ಮೂಲನಾ ಕಾರ್ಯಕ್ರಮವೊಂದನ್ನು ಜಾರಿಗೆ ತಂದು ಕೊಳಕು ಪ್ರದೇಶದ ನಿವಾಸಿಗಳಿಗೆಂದು ಕಟ್ಟುವ ಮನೆಗಳ ವೆಚ್ಚದಲ್ಲಿ ಶೇ. ೭೫ರಷ್ಟು ಭಾಗವನ್ನು ವಹಿಸಿಕೊಳ್ಳಲು ಸಿದ್ಧವಾಯಿತು. ಇದರಲ್ಲಿ ಶೇ. ೫೦ರಷ್ಟನ್ನು ಸಾಲವಾಗಿಯೂ ಶೇ. ೨೫ರಷ್ಟನ್ನು ಗ್ರಾಂಟಿನ ರೂಪದಲ್ಲೂ ಕೊಡಬೇಕೆಂದು ಇತ್ಯರ್ಥವಾಯಿತು. ಆದರೆ ಮುಂದೆ ಸಾಲ ಮತ್ತು ಸಹಾಯ ಧನ ಇವುಗಳ ಪ್ರಮಾಣವನ್ನು ಸಮಾನವಾಗಿ ನಿರ್ಧರಿಸಲಾಯಿತು. ಝೋಪಡಿಪಟ್ಟಿಗಳಿಗೆ ಮನೆಗಳನ್ನು ಒದಗಿಸುವುದಾದರೆ ಸಹಾಯ ಧನದ ಪ್ರಮಾಣವನ್ನು ಶೇ. ೫೦ಕ್ಕೆ ಹೆಚ್ಚಿಸಲೂ ನಿರ್ಧರಿಸಲಾಯಿತು. ಇನ್ನುಳಿದ ಶೇ. ೨೫ರಷ್ಟು ಭಾಗವನ್ನು ಸಹಾಯಧನದ ರೂಪದಲ್ಲಿ ರಾಜ್ಯ ಸರ್ಕಾರ ಅಥವಾ ಅದರಿಂದ ಅಧಿಕಾರ ಪಡೆದ ಸ್ಥಳೀಯ ಸಂಸ್ಥೆ ಒದಗಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಕೊಳಕು ಪ್ರದೇಶದ ನಿವಾಸಿಗಳ ಶಕ್ತ್ಯಾನುಗುಣವಾಗಿ ಮನೆಗಳ ಬಾಡಿಗೆ ದರವನ್ನು ಕಡಿಮೆ ಮಾಡುವುದೇ ಇದರ ಉದ್ದೇಶವಾಗಿದೆ.

ಸಾರ್ವಜನಿಕ ಸ್ವತ್ತಾಗಿರುವ ಪ್ರದೇಶಗಳಲ್ಲಿರುವ ಅಥವಾ ಖಾಸಗಿ ಭೂಮಿಯಲ್ಲಿರುವ ಕೊಳಕು ಪ್ರದೇಶಗಳ ಸುಧಾರಣೆಗೂ ಹಣಕಾಸು ಸಹಾಯವನ್ನು ಇದೇ ಒಂದು ಆಧಾರದ ಮೇಲೆ ಕೊಡುವ ಅವಕಾಶವನ್ನೂ ಈ ಕಾರ್ಯ ಯೋಜನೆ ಒದಗಿಸುತ್ತದೆ.

ಆದರೆ ಈ ಕಾರ್ಯಯೋಜನೆ ಎಷ್ಟು ಪ್ರಗತಿ ಸಾಧಿಸಬೇಕಾಗಿತ್ತೋ ಅಷ್ಟು ಸಾಧಿಸಿಲ್ಲ. ೧೯೬೪ರ ಮಾರ್ಚ್ ಕೊನೆಯ ಹೊತ್ತಿಗೆ ಒಟ್ಟು ೮೮೦೦೦ ಮನೆಗಳನ್ನು ಸುಮಾರು ೨೮ ಕೋಟಿ ರೂಗಳ ವೆಚ್ಚದಲ್ಲಿ ಕಟ್ಟಿಸಲು ಮಂಜೂರಾತಿ ನೀಡಲಾಗಿತ್ತು. ಈ ಪೈಕಿ ೪೩,೦೦೦ ಮನೆಗಳು ಮಾತ್ರ ಸಿದ್ಧವಾಗಿದ್ದು ಇವುಗಳಿಗೆ ಸುಮಾರು ೨೨ ಕೋಟಿ ರೂಗಳ ವೆಚ್ಚವಾಗಿದೆ.

ಈ ಕಾರ್ಯಯೋಜನೆ ಇಷ್ಟು ನಿಧಾನವಾಗಿ ಪ್ರಗತಿ ಸಾಧಿಸುತ್ತಿರುವುದಕ್ಕೆ ಕೆಲವು ಮುಖ್ಯ ಕಾರಣಗಳು ಈ ರೀತಿ ಇವೆ:

ಕೊಳಕು ಪ್ರದೇಶದ ನಿವಾಸಿಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಬೇಕಾದ ನಿವೇಶನವನ್ನು ಅಕ್ವೈರ್ ಮಾಡಿಕೊಳ್ಳಲು ಮತ್ತು ಕೊಳಕು ಪ್ರದೇಶಗಳನ್ನು ತೆಗೆದುಹಾಕಲು ಕೆಲವು ತೊಂದರೆಗಳಿವೆ;

ಕೊಳಕು ಪ್ರದೇಶಗಳ ನಿವಾಸಿಗಳು ತಾವು ವಾಸವಾಗಿರುವ ಪ್ರದೇಶದಿಂದ ಬೇರೆ ಕಡೆಗೆ ಹೋಗಲು ನಿರಾಕರಿಸುತ್ತಾರೆ; ಮತ್ತು

ಈ ಕಾರ್ಯಕ್ರಮವನ್ನು ಕಾರ್ಯಗತ ಮಾಡಲವ ಹೊಣೆ ಹೊತ್ತಿರುವ ಸ್ಥಳೀಯ ಸಂಸ್ಥೆಗಳು ಸಾಕಷ್ಟು ಆಸಕ್ತಿ ವಹಿಸುತ್ತಿಲ್ಲ.

ಮುಖ್ಯವಾಗಿ ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಸ್ಥಳೀಯ ಸಂಸ್ಥೆಗಳು ವಿಶೇಷ ರೀತಿಯ ಆಸಕ್ತಿಯನ್ನು ವಹಿಸಿ ಕೆಲಸ ಮಾಡಬೇಕು. ಶೇ. ೭೫ರಷ್ಟು ವೆಚ್ಚದ ಹೊಣೆಯನ್ನು ಸರ್ಕಾರವೇ ವಹಿಸಿಕೊಳ್ಳುತ್ತಿದೆ ಎಂದಮೇಲೆ ನಾವು ಹೆಚ್ಚಿನ ಆಸಕ್ತಿ ವಹಿಸಬೇಕು ಎಂಬ ಪ್ರಜ್ಞೆ ಅವುಗಳಿಗಿರಬೇಕು.

ಕಾರ್ಪೊರೇಶನ್‌ಗಳು ಮತ್ತು ಪೌರಸಭೆಗಳು ಈ ಕಾರ್ಯಕ್ರಮಕ್ಕೆ ಪ್ರತ್ಯೇಕವಾಗಿ ಗಮನ ಕೊಡಲು ಒಂದು ಬೇರೆ ಇಲಾಖೆಯನ್ನು ಸ್ಥಾಪಿಸಿಕೊಳ್ಳಬೇಕು ಎಂಬುದಾಗಿ ಕೇಂದ್ರ ಕಾಮಗಾರಿ ಮತ್ತು ವಸತಿ ಮಂತ್ರಿ ಶಾಖೆಯು ಸೂಚಿಸಿದೆ. ಕಾರ್ಪೊರೇಶನ್‌ಗಳು ಮತ್ತು ಪೌರಸಭೆಗಳು ತಮ್ಮ ತಮ್ಮ ಪ್ರದೇಶಗಳಲ್ಲಿನ ಕೊಳಕು ಪ್ರದೇಶಗಳ ವ್ಯಾಪಕವಾದ ಸರ್ವೆ ನಡೆಸಿ ಇಡೀ ಸಮಸ್ಯೆಯ ಒಂದು ಸಮಗ್ರ ಚಿತ್ರವನ್ನು ಗಮನದಲ್ಲಿಟ್ಟು ಕೊಂಡು ಕೊಳಕು ಪ್ರದೇಶಗಳ ಸುಧಾರಣೆ ಹಾಗೂ ನಿರ್ಮೂಲನೆ ಸಂಬಂಧವಾದ ಕಾರ್ಯಕ್ರಮವನ್ನು ಹಾಕಿಕೊಂಡು ೧೫ ವರ್ಷಗಳ ಒಳಗಾಗಿ ಅದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ಇಳಿಸಲು ಗಮನಕೊಡಬೇಕು. ಈ ಕಾ ಕಾರ್ಯಕ್ರಮ ಒಂದೊಂದು ಘಟ್ಟದ ಯೋಜನೆಯ ರೂಪದಲ್ಲಿ ಕ್ರಮವಾಗಿ ಯಶಸ್ವಿಯಾಗಬೇಕು.

— —

ಚೀನೀಯ ಆಕ್ರಮಣದ ಹಿನ್ನೆಲೆ

ಹಗೆಯ ಹಾವು ಹೆಡೆ ಎತ್ತಿದಾಗ

ಬರೆದವರು: ಶ್ರೀ ಶಿವಶಂಕರ.

ಹಾವು ದೀರ್ಘಕಾಲ ಹಗೆ ಇಟ್ಟುಕೊಳ್ಳುತ್ತದಂತೆ. ಹಗೆ ತೀರಿಸಿಕೊಳ್ಳದೆ ಅದು ಬಿಡುವದಿಲ್ಲವೆಂದು ಹೇಳುವದುಂಟು. ಹಾವುಗಳಾದರೋ ಹಗೆಯ ತೀರಿಸಿಕೊಳ್ಳಲು ಹಲವಾರು ವೇಷಗಳಲ್ಲಿ ಬರಲಿಕ್ಕಿಲ್ಲ. ನಗು ನಗುತ್ತ, ಕುಣಿ ಕುಣಿಯುತ್ತ ಬಂದು ತಟ್ಟನೆ ಹಗೆ ತೀರಿಸಿಕೊಳ್ಳುವದುಂಟೇನು? ನಂಬಿಸಿ ಮೋಸ ಮಾಡುವದುಂಟೇನು? ಹಾವುಗಳನ್ನೇ ತಿನ್ನುವ ಚೈನೀಯರು ಹೇಗಿರಬಹುದು? ನಿಜ, ಅವರೂ ಹಗೆ ತೀರಿಸಿಕೊಳ್ಳದೆ ಬಿಡಲಿಕ್ಕಿಲ್ಲ.

ಅಂತೆಯೇ ಪ್ರಪಂಚ ಪ್ರದಕ್ಷಿಣೆಯ ಕನಸು ಕಾಣುತ್ತ ಹೊರಟಿದ್ದ ಚೆಂಗ್-ಹೋನಿಗೆ ಪ್ರಥಮ ಬಾರಿಗೇನೇ ಸಿಂಹಳದಲ್ಲಿ ಬಹಳ ಅಪಮಾನವಾಗಿದ್ದುದರಿಂದ ಅದರ ಹಗೆ ತೀರಿಸಿಕೊಳ್ಳಲು ಅವನು ಪ್ರಯತ್ನಿಸಿದನು. ದ್ವಿತೀಯ ಬಾರಿಗೆ ಅಲ್ಲಿಗೆ ಬಂದಾಗ ಅವನು ನಗು ನಗುತ್ತ ಬಂದಿದ್ದ. ಕಾಣಿಕೆಗಳನ್ನರ್ಪಿಸಿದ್ದ. ವಿಹಾರಗಳಿಗೆ ಹೋಗಿದ್ದ. ಇವೆಲ್ಲವನ್ನೂ ಕಳೆದ ವಾರ ಕಂಡಿರುವೆವು. ಭಾರತದ ಇತರ ಮುಖ್ಯ ಬಂದರುಗಳಿಗೂ ಚೆಂಗ್-ಹೋನ ಪಡೆ ಬಂದಿತ್ತು.

ಅಲ್ಲಿಂದ ಅವರು ಹಿಂತಿರುಗಿದರು. ಹಿಂತಿರುಗುವಾಗ ಪುನಃ ಅವರು ಲಂಕೆಗೆ ಹೋದರು. ನಂಬಿ ಮೋಸ ಹೋಗುವದು ಭಾರತೀಯರ ಅಭ್ಯಾಸ. ವೈರಿಯೊಡನೆ ಹೋರಾಡುವಾಗಲೂ ನಿಶ್ಶಸ್ತ್ರಧಾರಿಯೊಡನೆ ಅವರು ಹೋರಾಡುವದೆಂದಿಲ್ಲ. ಅವನಿಗೂ ಆಯುಧಕೊಟ್ಟು ಹೋರಾಡುತಾರೆ. ಲಂಕೆಯಲ್ಲಿರುವವರಾದರೂ ಯಾರು? ಇಂದು ಅವರು ನಮಗಿಂತ ಪ್ರತ್ಯೇಕವೆಂದು ಹೇಳಿ ಕೊಂಡರೂ ನಮ್ಮವರೇ ಇದ್ದಾರೆ. ಹಾಗಿರುವದರಿಂದ ಆ ಅಭ್ಯಾಸ ಅವರಲ್ಲಿರುವದರಲ್ಲೂ ಆಶ್ಚರ್ಯವಿಲ್ಲ.

ಚೆಂಗ್-ಹೋನ ಪಡೆ ಕಡಲುಗಳ್ಳರಾಗಿ ಬಂದಾಗ, ಸಿಂಹಳದ ರಾಜ ಅವರನ್ನು ಶಿಕ್ಷಿಸಿದ. ಸಜ್ಜನರಂತೆ ಬಂದಾಗ ಸತ್ಕರಿಸಿದ. ಚೈನೀಯರಿಗೇನು ಗೊತ್ತು ಅವುಗಳ ವ್ಯತ್ಯಾಸಕ್ಕೆ ಅದರಲ್ಲೂ ಹಗೆತನದ ಹೊಗೆಯಾಡುತ್ತಿರುವಾಗ? ನಮ್ಮ ಕಣ್ಣೆದುರಿನಲ್ಲೇ ನಾವು ಕಂಡದ್ದಾದರೂ ಏನು? ಚೈನಿ ಕಮ್ಯೂನಿಸ್ಟರಿಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಳ ತೆಗೆಸಿಕೊಡಲು ಜಗದ್ವಿಖ್ಯಾತ ಜವಾಹರಲಾಲಜೀ ಪ್ರಯತ್ನಿಸಿದರು. ಅವರ ಹುಟ್ಟುದಿನದಂದು ಭಾರತೀಯ ಸೈನಿಕರ ಶವಗಳನ್ನು ಚೈನಿ ಕಮ್ಯೂನಿಸ್ಟರು ಕೊಟ್ಟರು. ನಮ್ಮ ದೇಶದ ಭೂಭಾಗವನ್ನೇ ಆಕ್ರಮಿಸಿಕೊಂಡು ಬಿಟ್ಟರು. ಆದರೂ ಆ ಕರುಣಾಮಯಿ ನೆಹರೂಜೀ ಆಕ್ರಮಣ ನಡೆದಿಲ್ಲವೆಂದು ಪರದೆ ಎಳೆದು ಒಳಗಿಂದೊಳಗೇನೇ ಚೈನಿ ಕಮ್ಯೂನಿಸ್ಟರಿಗೆ ಬುದ್ಧಿ ಹೇಳಲು ಪ್ರಯತ್ನಿಸಿದರು. ಚೈನಿ ಕಮ್ಯೂನಿಸ್ಟರು ಅದನ್ನು ತಪ್ಪಾಗಿ ತಿಳಿದುಕೊಂಡರು. ತಾವು ಆಕ್ರಮಣ ನಡೆಸಿಯೇ ಇಲ್ಲವೆಂದು ಅವರೂ ಹೇಳಲಾರಂಭಿಸಿದರು. ಇಲ್ಲಿರುವ ಅವರ ಚೇಲಾಗಳು ಅದಕ್ಕೆ ತಕ್ಕಂತೆ ತಾಳ ಹಾಕಲಾರಂಭಿಸಿದರು. ಜನತೆ ನಿಜ ನಂಬಿತು. ಆದರೂ ಕೆಲವರಿದ್ದಾರಲ್ಲಾ—ಹುಲ್ಲಾಗಿ ಅಥವಾ ಹುಳುವಾಗಿ ಹುಟ್ಟುವವರಿದ್ದರೂ ಕೂಡಾ ಭಾರತದಲ್ಲೇ ಆಗಲೆಂದು ಭಾರತ ಮಾತೆಯನ್ನು ಸದಾ ನಮಸ್ಕರಿಸುವ ಅಪ್ರತಿಮ ದೇಶಭಕ್ತರು! ಅವರ ಒತ್ತಾಯದಿಂದ ನಿಜ ಸಂಗತಿ ಹೊರಗೆ ಬಂತು. ಅವರ ಮೇಲೆ ಹಗೆ ತೀರಿಸಿಕೊಳ್ಳಲು ಚೈನಿ ಕಮ್ಯೂನಿಸ್ಟರು ಇಲ್ಲಿಯ ಕಮ್ಯೂನಿಸ್ಟರನ್ನು ಛೂಬಿಟ್ಟರು..........ಇದು ನಮ್ಮ ಕಣ್ಮುಂದೆಯೇ ನಡೆದಿರುವ ಸತ್ಯ ಸಂಗತಿ. ಆ ಮೇಲೆ ಡೋಲ್-ಮಾಳ ಕಥೆಯನ್ನೂ ಕೇಳಿರುವೆವು. ಆಕೆಯೂ ನಗುನಗುತ್ತ, ಕುಣಿ ಕುಣಿಯುತ್ತ ಬಂದಳು......

ಹಾಗೆ, ಸಿಂಹಳದ ರಾಜನ ಬಳಿ ನಮ್ರತೆಯಿಂದ ಹಾಗೂ ನಂಬಿಗಸ್ಥನಂತೆ ವರ್ತಿಸಿದ್ದ ಚೆಂಗ್-ಹೋ ಹಿಂತಿರುಗಿ ಬಂದಾಗ ಮೋಸದಿಂದ ಅಲ್ಲಿಯ ರಾಜನನ್ನು ಸೆರೆಹಿಡಿದನು. ಅಲ್ಲಿಂದ ಅವರು ನೇರ ಚೈನಾಕ್ಕೆ ಹಿಂತಿರುಗಿದರು. ಇಂತಹ ಚೈನೀಯರನ್ನು ನಂಬುವದಾದರೂ ಹೇಗೆ? ಕೊಲಂಬೋ ಸಲಹೆಗಳನ್ನು ಕಮ್ಯೂನಿಸ್ಟರು ಮಾನ್ಯ ಮಾಡಿರುವದಿಲ್ಲ. ಸಿಂಹಳದ ಸಿರಿತನವನ್ನು ಕಂಡು ಹೋದ ಚೌ ಎನ್-ಲೈ ಇನ್ನೊಮ್ಮೆ ಬಂದು ಮೋಸದಿಂದ ಅಲ್ಲಿನ ಪ್ರಧಾನಿಯನ್ನು ಅಪಹರಿಸಿ ಕೊಂಡೊಯ್ಯಲಿಕ್ಕಿಲ್ಲವೆನ್ನುವುದಾದರೂ ಹೇಗೆ? ಪಂಚೆನ್ ಲಾಮಾರಿಗೆ ಮಾಡಿದ್ದಾದರೂ ಏನು? ಅದೇ ಜಾದೂ ವಿದ್ಯೆಯನ್ನು ಸಿರಮಾವೋ ಭಂಡಾರನಾಯಿಕೆಯವರತ್ತವೂ ಪ್ರಯೋಗಿಸಲಿಕ್ಕಿಲ್ಲವೆನ್ನಲು ಸಾಧ್ಯವೇನು?

ಸದಾ ಸಮುದ್ರ ಯಾನವನ್ನೇ ಇಚ್ಛಿಸುತ್ತಿದ್ದ ಚೆಂಗ್-ಹೋನಿಗೆ ಆ ಮೇಲೆ ಸುಮ್ಮಗೆ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ. ಅದರಲ್ಲೂ ಒಂದು ದೇಶದ ರಾಜನನ್ನು ಅಪಹರಿಸಿಕೊಂಡು ಬಂದ ಮೇಲೆ, ಆ ದೇಶದ ಪರಿಸ್ಥಿತಿ ಹೇಗಿದೆಯೆಂಬುದನ್ನು ತಿಳಿದುಕೊಳ್ಳದೆ ಇರಲು ಅವನಿಂದಾಗಲಿಲ್ಲ. ಅದೂ ತನ್ನ ಕಣ್ಣಾರೆಯೇ ಕಾಣಬೇಕು. ಇಷ್ಟೆಲ್ಲಾ ಆಗುವಾಗ್ಗೆ ಸಾಧಾರಣ ಒಂದೂವರೆ ವರ್ಷ ಕಳೆದು ಹೋಯಿತು.

ಕ್ರಿ. ಶ. ೧೪೧೪ರ ಜನವರಿಯಲ್ಲಿ ನಾಲ್ಕನೆಯ ಭಾರಿ ಸಮುದ್ರ ಯಾನಕ್ಕೆ ಪಡೆ ಹೊರಟಿತು. ಪುನಃ ಅವರು ಅದೇ ದೇಶಗಳತ್ತ ಹೋದರು. ಅವರು ಕ್ರಮಶಃ ಚಂಪಾ, ಕೆಲೆಂತನ್, ಪಹಾಂಗ್, ಜಾವಾ, ಪೆಲೆಂಬಾಂಗ್, ಮಾಲಕ್ಕಾ, ಅರು, ಪಾಸ್ಮ್ಯಾ, ಅಚಿನ್, ಸಿಲೋನ್, ಕಯೊಲ್, ಮಾಲ್ಡೀವ್, ಕೊಚ್ಚಿ ಮತ್ತು ಕಲ್ಲಿಕೋಟೆಗಳಿಗೆ ಬಂದಿದ್ದರು. ಈ ಸಲ ಅಲ್ಲಿಂದಲೇ ಹಿಂತಿರುಗುವ ಬದಲು ಅವರು ಪ್ರಯಾಣವನ್ನು ಮುಂದರಿಸಿದರು. ಅವರು ಪರ್ಶಿಯನ್‌ಕೊಲ್ಲಿಯಲ್ಲಿರುವ ಓರಮುಜುಗೆ ಹೋಗಿ ಹಿಂತಿರುಗಿದರು. ಇದಕ್ಕಿಂತ ಮುಂಚೆ ಅವರು ಭಾರತದಿಂದಾಚೆ ಹೋಗಿದ್ದರೋ, ಇಲ್ಲವೋ ಹೇಳುವದು ಕಷ್ಟ. ಅದಕ್ಕೇನೂ ಆಧಾರಗಳಿಲ್ಲ. ಈ ಪ್ರಯಾಣದ ಕುರಿತು ಬರೆದಿಡಲಾಗಿರುತ್ತದೆ.

ಈ ಸಲವೂ ಸುಮ್ಮಗೆ ಹಿಂತಿರುಗಲು ಅವನಿಗೆ ಮನಸ್ಸಾಗಲಿಲ್ಲ. ಅವನು ಪಾಸ್ಮ್ಯಾಯಲ್ಲಿ ಪಡೆಬಿಟ್ಟನು. ಅಲ್ಲಿ ಸಿಕಂದರ್ ಎಂಬವನು ರಾಜನಾಗಿದ್ದ. ಝೂಯಿನ್—ಉಲ್—ಅಬಿದಿನ್ ಎಂಬವನನ್ನು ಪಟ್ಟದಿಂದ ತಳ್ಳಿ ತಾನು ಮೇಲೇರಿದ್ದ. ಚೈನಿ ಚಕ್ರವರ್ತಿಯ ಆಜ್ಞೆಯ ಮೇರೆಗೆ ಹಾಗೂ ಕೆಳಗೆ ಬಿದ್ದಿದ್ದ ರಾಜನ ಬೇಡಿಕೆಯ ಮೇರೆಗೆ ಎಂಬ ಶಬ್ದಗಳನ್ನುಪಯೋಗಿಸಿಕೊಂಡು ಅವನು ಸಿಕಂದರನ್ನು ಸೆರೆ ಹಿಡಿದು ಚೈನಾಕ್ಕೆ ಕೊಂಡೊಯ್ದನು. ಅವನನ್ನು ಇಟ್ಟುಕೊಂಡರೆ ಆಪತ್ತೆಂದು ಒಡನೆಯೇ ಕೊಲೆ ಮಾಡಲಾಯಿತು. ಈ ಸಲದ ಪ್ರಯಾಣಕ್ಕೆ ಸುಮಾರು ಒಂದೂಮುಕ್ಕಾಲು ವರ್ಷಕಾಲ ಆಗಿತ್ತು.

ಒಂದು ವರ್ಷಕಾಲ ಚೈನಾದಲ್ಲಿದ್ದು ಪುನಃ ಪ್ರಯಾಣಕ್ಕೆ ಚೆಂಗ್ ಹೋ ಸಿದ್ಧತೆ ನಡೆಸಿಕೊಂಡನು. ಇನ್ನು ಮುಂದಕ್ಕೆ ಹೋಗಬೇಕೆಂಬುದೇ ಅವನ ಅಭಿಲಾಷೆಯಾಗಿತ್ತು. ಅದಕ್ಕಾಗಿ ಈ ಸಲ ಭಾರೀ ಸಿದ್ಧತೆಗಳಾದುವು. ೧೪೧೭ರ ದಶಂಬರದಲ್ಲಿ ಅವರು ಪ್ರಯಾಣಕ್ಕೆ ಮುಂದಾದರು. ಈ ಸಲವೂ ಕ್ರಮಶಃ ಚಂಪಾ, ಪಹಾಂಗ್, ಮಲಕ್ಕಾ, ಪಾಸ್ಮ್ಯಾ, ಅಚಿನ್, ಸಿಲೋನ್, ಮಾಲ್ಡಿವ್, ಕೊಚ್ಚಿ, ಕಲ್ಲಿಕೋಟೆ ಮತ್ತು ಶಾ-ಲಿ-ವಾನ್-ನಿಗೆ (ಬಹುಶಃ ಚಾಲಿಯಂ) ಹೋಗಿ ಅಲ್ಲಿಂದ ಓರಮುಜುಗೆ ಪ್ರಯಾಣ ಬೆಳೆಸಿದ್ದರು. ಈ ಸಲ ಅಲ್ಲಿಂದ ಹಿಂತಿರುಗದೆ ಇನ್ನೂ ಮುಂದಕ್ಕೆ ಏಡನಿಗೆ ಹೋದರು. ಅಲ್ಲಿಯ ಪ್ರಾಣಿಗಳನ್ನು ಕಂಡು ಅವರಿಗೆ ಅತ್ಯಾಶ್ಚರ್ಯವಾಯಿತು. ಅವರು ಒಂದು ಜಿರಾಫೆಯನ್ನು [ಟ್ಸಿ-ಲಾ-ಫಾ] ಪಡೆದುಕೊಂಡರು. ಅದನ್ನು ಬಹಳ ಜಾಗ್ರತೆಯಿಂದ ತಮ್ಮೊಂದಿಗೇನೇ ಕರೆದುಕೊಂಡು ಹೋದರು. ಅಷ್ಟೇ ಅಲ್ಲದೆ ಅವರು ಪ್ರಪ್ರಥಮ ಬಾರಿ ಆಫ್ರಿಕಾದ ಪೂರ್ವ ತೀರವನ್ನು ತಲುಪಿದರು.

ಈ ಸಲವೂ ಹಿಂದಕ್ಕೆ ಬರುವಾಗ ಅವರು ಬರಿಗೈಯಲ್ಲಿ ಬರಲಿಲ್ಲ. ಮಾನವರು ಸಿಗದಿದ್ದರೇನು? ಪ್ರಾಣಿಗಳಿಲ್ಲವೇ? ಒಬ್ಬೊಬ್ಬರಿಗೆ ಒಂದೊಂದು ವಿಷಯಗಳ ಮೇಲೆ ಆಸಕ್ತಿ ಅಧಿಕವಾಗಿರುತ್ತದೆ. ಅವರು ಹಿಂತಿರುಗುವಾಗ ತಮ್ಮದೇಶದಲ್ಲಿಲ್ಲದ ಅನೇಕ ಪ್ರಾಣಿಗಳನ್ನು ಹಿಡಿದುಕೊಂಡು ಬಂದರು. ಜಿಬ್ರಾ, ಒರಿಕ್ಸ್, ಒಂಟೆ ಮತ್ತು ಉಷ್ಟ್ರಪಕ್ಷಿಗಳಂತಹ ಸಾಧು ಪ್ರಾಣಿಗಳನ್ನು ಮಾತ್ರ ಅವರು ತೆಗೆದುಕೊಂಡು ಬಂದದ್ದಲ್ಲ. ವನ ರಾಜನೆನಿಸಿಕೊಂಡಿರುವ ಸಿಂಹಗಳನ್ನೂ, ಚಿರತೆಗಳಂತಹ ಕ್ರೂರ ಪ್ರಾಣಿಗಳನ್ನೂ ಹಿಡಿದುಕೊಂಡು ಬಂದರು. ಕ್ರೂರತೆಯ ಭಯ ಇರುವದಾದರೂ ಯಾರಿಗೆ? ಕ್ರೂರತೆಯ ಪರಮ ಪದವಿಯನ್ನೇರಿರುವ ಚೆಂಗೀಜ ಖಾನ್ ಸಂತತಿಯವರಿಗೆ ಭಯವೆಂದರೇನು?

ಅದೇ ಸೊಕ್ಕು ಚೈನಿ ಕಮ್ಯೂನಿಸ್ಟರಿಗಿರಬಹುದು. ಅಂತೆಯೇ ಅವರು ಅಗಮ್ಯ ಕಾಡು ಪ್ರದೇಶಗಳ ಮೂಲಕ ಭಾರತದ ಮೇಲೆ ಆಕ್ರಮಣ ನಡೆಸಿರುವರು. ಮಂಗನಿಗೆ ಕಳ್ಳು ಕುಡಿಸಿ ದೀವಟಿಗೆ ಕೈಯಲ್ಲಿ ಕೊಟ್ಟರೆ ಏನಾದೀತು? ಚೈನೀಯರ ಪಾಡು ಹಾಗೆಯೇ ಆಯಿತು. ಮೊದಲೇ ಕ್ರೂರರು. ಅದರಲ್ಲೂ ಕಮ್ಯೂನಿಸ್ಟರು ಕ್ರೂರರಿಗಿಂತಲೂ ಕ್ರೂರರು. ಅಲ್ಲಿಗೆ ಸರಿಯಾಗಿ ಹೋಯಿತು. ಆದರೆ ಪಾಪ! ಅವರಿಗೇನು ಗೊತ್ತು ಭಾರತದ ಮಹಾತ್ಮ್ಯೆ. ಕ್ರೂರ ಪ್ರಾಣಿಗಳನ್ನು ತಪೋವನದಲ್ಲಿ ಸಾಧು ಪ್ರಾಣಿಗಳಂತೆಯೇ ಋಷಿ ಕನ್ಯೆಯರು ಸಾಕುತ್ತಿದ್ದರು. ಅದನ್ನು ನೋಡಲಿಕ್ಕಾಗಿಯೇ ತಪೋಭೂಮಿಯ ಮೇಲೆ ಅವರು ಆಕ್ರಮಣ ನಡೆಸಿರುವರೇನು? ಅದೇ ಭೂಮಿಯ ಮೇಲೆ ಬಾಲಕನು ಶಾರ್ದೂಲಗಳ ಬಾಯಬಿಡಿಸಿ ಹಲ್ಲೆಣಿಸಿದ್ದಾನೆ. ಸ್ತ್ರೀಗೂ ಸಿಂಹವೇ ಆಸನ, ವಾಹನ. ಆಕೆ, ಸಿಂಹ ವಾಹಿನಿ ಪರಾ ಶಕ್ತಿ. ಅಯ್ಯಪ್ಪನಿಗೆ ಹುಲಿಯೇ ವಾಹನ. ಚೈನಿ ಕಮ್ಯೂನಿಸ್ಟರು ಅದನ್ನು ಅರಿತು ಕೊಳ್ಳಬೇಕಾಗಿತ್ತು. ಅದೆಲ್ಲವನ್ನೂ ಅರಿತುಕೊಳ್ಳದೆ, ಆಕ್ರಮಣಕ್ಕೆ ಮುಂದಾಗಿದ್ದಾರೆ. ಅದರ ಫಲವನ್ನು ಅವರು ಅನುಭವಿಸಿಯೇ ತೀರುತ್ತಾರೆ. ಅಪಮಾನವನ್ನು ಧೀರ ಭಾರತೀಯರು ಬಹಳ ದಿನ ಸಹಿಸಿಕೊಳ್ಳಲಿಕ್ಕಿಲ್ಲ. ರಾಷ್ಟ್ರೀಯ ಶಕ್ತಿ ಒಂದಾಗಿ ಹೂಂಗುಟ್ಟೀತು. ಆಗ ಚೈನಿ ಕಮ್ಯೂನಿಸ್ಟರು ಚದರಿ ಕಾಡು ಪಾಲಾಗುವುದರಲ್ಲಿ ಸಂದೇಹವಿಲ್ಲ.

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಕಾಡಕೋಡಗ ಹಲ್ಲು ಕಿರಿಯಿತು

(ನಾಲ್ಕನೇ ಪುಟದಿಂದ)

ನೂ ಕೊಲೆಯಾದ. ಇದು ನಡೆದದ್ದು ಹೀಗೆ. ಎಂದಿನಂತೆ ಮಾಘಿಯ ಜಾತ್ರೆಗೆ ಶಾವಮ್ಮ ಮಗನೊಂದಿಗೆ ಬಂದಿದ್ದಳು. ರಾತ್ರೆಯ ಹೊತ್ತು, ತಿಂಗಳ-ಬೆಳಕಿನಲ್ಲಿ ಗಿರಿಯಿಳಿದು ಬರುತ್ತಿರುವಾಗಲೇ ಆತ ಮುಗ್ಗರಿಸಿ ಬಿದ್ದುಬಿಟ್ಟ. ಮರುಕ್ಷಣವೇ ಅದೇ ಪಕ್ಕದಲ್ಲಿ ಓಡೋಡುತ್ತ ಸೀನ ಸರಿದು ಹೋದ. ಇದು ಸೀನನದೇ ಕುಕೃತ್ಯವೆಂದು ತಿಳಿಯಿತು ನಿಜ; ಆದರೇನು, ಅಷ್ಟರಲ್ಲಿಯೇ ಮಗನ ತಲೆಯೊಡೆದು ರಾಮರಕ್ತವಾಗಿ ಆತನ ಪ್ರಾಣಪಕ್ಷಿ ಹಾರಿಹೋಗಿತ್ತು!

ಶಾವಮ್ಮ ಅಕ್ಷಣ ಅಪ್ರತಿಭಳಾದಳು. ಅದೇ ಅಲ್ಲಿ ಕಣ್ಣು ಮುಚ್ಚಿ, ಭಕ್ತಿಭರಿತಳಾಗಿ ಕೈ ಮುಗಿದು ದೇವಿಯನ್ನು ಪ್ರಾರ್ಥಿಸಿದಳು. "ಅಮ್ಮಾ, ನಾನು ನಿರಪರಾಧಿ, ನನ್ನನ್ನು ಅನಾಥಳನ್ನಾಗಿ ಮಾಡಿದ ಆ ಸೀನನನ್ನು ನನ್ನ ಕಣ್ಣ ಮುಂದೆಯೇ ಕೊಲ್ಲು" ದೇವಿ ಈ ಪ್ರಾರ್ಥನೆಯನ್ನು ಕೇಳಿದ್ದಳೋ ಇಲ್ಲವೋ, ಶಾವಮ್ಮನಂತೂ ತನ್ನ ಬೇಡಿಕೆಯನ್ನು ಆಕೆ ಖಂಡಿತಕ್ಕೂ ಪೂರೈಸುವಳೆಂದು ನಂಬಿದ್ದಳು. ಹೀಗೆಯೇ ವರ್ಷಗಳ ಮೇಲೆ ವರ್ಷಗಳುರುಳಿದ್ದುವು. ಏಳಲು—ನಡೆಯಲು—ಕೂರಲು—ಮಲಗಲು ಬಲವಿಲ್ಲದ ಶಾವಮ್ಮ ಅಂದಿನಿಂದ ಇಂದಿನವರೆಗೂ ಪ್ರತಿ ಮಾಘೆಯ ಜಾತ್ರೆಗೆ ಗಿರಿಯನ್ನು ಏರುತ್ತ ಬಂದಿದ್ದಾಳೆ; ತಾಯಿಯನ್ನು ಪ್ರಾರ್ಥಿಸುತ್ತ ಬಂದಿದ್ದಾಳೆ. ಆದರೆ ಜಗದಂಬೆಯಿನ್ನೂ ಆಕೆಯ ಮೇಲೆ ಪ್ರಸನ್ನಳಾಗಿರಲಿಲ್ಲ.

ಅತ್ತ ಸೀನನ ಕೀಟಲೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇತ್ತು. ಆತನ ಕಳ್ಳತನ ನಿರಂತರವಾಗಿ ಸಾಗುತ್ತಲೇ ಇತ್ತು. ಆದರೆ ಆತನನ್ನು ಹಿಡಿಯುವ ಸಾಹಸವು ಯಾರಲ್ಲಿಯೂ ಇರಲಿಲ್ಲ. ಯಾವುದೋ ಒಂದು ಕೊಲೆಯ ಆರೋಪದ ಮೇಲೆ ಪೋಲೀಸರಿಗೂ ಅವನು ಬೇಕಾಗಿದ್ದ; ಆತನ ಶೋಧನೆಯಲ್ಲಿ ಅವರೂ ಅಸಫಲರಾಗಿದ್ದರು. ಅವನನ್ನು ಹುಡುಕಿ ಕೊಡುವವರಿಗೆ ಸರಕಾರವು ಬಹುಮಾನವನ್ನೂ ಘೋಷಿಸಿತ್ತು. ಅದನ್ನು ಪಡೆಯುವ ಭಾಗ್ಯ ಮಾತ್ರ ಯಾರಿಗೂ ಬಂದಿರಲಿಲ್ಲ. ಸೀನನ ಶೋಧನೆಯಾಗದಿದ್ದರೂ ಆತನ ಶೋಷಣೆ ಮಾತ್ರ ನಿಂತಿರಲಿಲ್ಲ. ಎಂದು ನುಗ್ಗುತ್ತಾನೆ, ಹೇಗೆ ಕದಿಯುತ್ತಾನೆ ಮತ್ತು ಯಾವರೀತಿ ತಪ್ಪಿಸಿಕೊಳ್ಳುತ್ತಾನೆ ಎಂಬುದು ಯಾರ ಕಲ್ಪನೆಗೂ ನಿಲುಕುತ್ತಿರಲಿಲ್ಲ. ಎಂತಲೆ ಜನರಲ್ಲೊಂದು ಕಥೆಯೂ ಹರಡಿತ್ತು. ಸೀನನು ದೇವಿಯನ್ನು ಪ್ರತ್ಯಕ್ಷೀಕರಿಸಿ ಆಕೆಯಿಂದ ವರ ಪಡೆದಿದ್ದಾನೆ; ಪ್ರತಿ ಮಾಘೆಯ ಜಾತ್ರೆಯಂದು ಆತ ಗಿರಿಗೆ ಬರುತ್ತಾನೆ. ದೇವಿಯನ್ನು ಆರಾಧಿಸುತ್ತಾನೆ; ಆದರೆ, ಆತನ ಆಗಮನ-ನಿರ್ಗಮನದ ವಿಚಾರ ಯಾರೊಬ್ಬರಿಗೂ ತಿಳಿಯುವುದಿಲ್ಲ.

ಇನ್ನೂ ಹಲವು ವರ್ಷಗಳ ಕಳೆಯಿತು. ಶಾವಮ್ಮ ತೀರ 'ವೃದ್ಧೆ' ಮಾಘಿಯ ಮರಳಿಜಾತ್ರೆ ಬಂದಿದೆ. ಆಕೆ ಗಿರಿಯ ಕಡೆಗೆಹೇಗೆ ಹೇಗೋಮಾಡಿ ಬಂದಿದ್ದಾಳೆ; ಆಕೆಯ ಮನೆಯಿಂದ ಗಿರಿಯ ಬುಡಕ್ಕೆ ನಾಲ್ಕು ಮೈಲುದೂರ, ಈ ದೂರವನ್ನು ಕ್ರಮಿಸಲು ನಾಲ್ಕುದಿನ ಬೇಕಾಗಿರಬಹುದು ಆಕೆಗೆ, ಆದರೂ ದೇವಿಯ ದರ್ಶನಕ್ಕೆ ಕಾತೊರೆದು ಕುಳಿತಿದ್ದಾಳೆ; ಅಸಹಾಯಕಳಂತಿತ್ತು ಆ ನಿಸ್ತೇಜ ಬೆವರೂರುವ ಮುಖ. ಆಕೆಯನ್ನು ನೋಡುವುದನ್ನೇ ಒಂದು ವಿನೋದದ ವಿಷಯವೆಂದು ಭ್ರಮಿಸಿದ ಜನರು ನೋಡುತ್ತಲೇ ಉಳಿದರು, ಬಹುಹೊತ್ತು.

ಮೇಲೆ ಗಿರಿಯತ್ತಣಿಂದ ಒಬ್ಬಾತ ದಾಂಡಿಗ ಆ ನೆರವಿಯನ್ನು ಕಂಡು ಅಲ್ಲೇ ನಿಂತ. ಸಮಾಚಾರವನ್ನು ಅರಿಯುವ ಕುತೂಹಲದಿಂದ ಸುತ್ತಮುತ್ತ ನೋಡತೊಡಗಿದ. ನೆರವಿಯ ಜನ ಆಡುತಿದ್ದ ಮಾತು ಒಂದೊಂದಾಗಿ ಆತನ ಕಿವಿಗೆ ಬೀಳ ತೊಡಗಿತು:

"ಯಾಕಜ್ಜಿ, ನಿನಗೆ ಬೆಟ್ಟ ಏರುವ ಆಸೆ?"

"ಅದ್ಯಾಕೆ ಹಾಗೆ ಹೇಳುತ್ತಿ ಮಗು, ಈ ಊರಿಗೆ ಬಂದಂದ್ನಿಂದ ಬರ್ತಾ ಇದ್ದೇನೆ. ಇನ್ನೇನು ಇಂದೋ ನಾಳೆಯೋ, ಅರೋದಿನ ದೇವರ ದರ್ಶನಮಾಡಿ ಬರೋಣಾಂತ ..."

"ಅದೆಲ್ಲಾ ಸರಿ ಅಜ್ಜಿ, ಆದ್ರೆ, ನೀನೀಗ ಮೇಲೇರುವುದಾದರೂ ಹೇಗೆ?"

"ಸರಿಯಾದ ದಾರಿಯಲ್ಲೇ ನಡೆಯೋಕಾಗದವಳು ಗುಡ್ಡ ಹೇಗೆ ಏರ್ತಿಯ?"

"ಏಳಲು ಕೂಡುವುದಿಲ್ಲ, ಕೂರಲು ಮನಸ್ಸಿಲ್ಲ."

"ಕಾಲಿಲ್ಲದವನಿಗೆ ಕುಣಿದಾಡೊ ಚಿಂತೆ!"

"ಅಜ್ಜಿಗೇ ಮನೆ ಲೇಸು......"

"ಏನೋ ಮಗೂ, ಆ ದೇವಿ ನನ್ನ ಇಲ್ಲಿ ತನಕ ಬರಮಾಡಿಕೊಂಡಿದ್ದಾಳೆ; ಇನ್ನೇನು ತುಸು ದೂರ. ರಾತ್ರೆಯಾಗೋದ್ರೊಳಗೆ ಹೇಗಾದರೂ ಮೇಲೆ ಏರ್ಸಿಯಾಳು"—ಮುದುಕಿಯ ಆತ್ಮವಿಶ್ವಾಸ ನುಡಿಸಿತು.

ಅಷ್ಟರಲ್ಲಿ ಆ ದಾಂಡಿಗ ವ್ಯಕ್ತಿ ಮುಂದೆ ಬಂದ.

"ಅಜ್ಜಿ, ಮೇಲೆ ಹೋಗಲೇ ಬೇಕೆ?'

"ಮತ್ಯಾಕೆ ಮಗ ಇಲ್ಲಿ ತನಕ ಬಂದದ್ದು?"—ಆಕೆಯ ಮಾತಿನಲ್ಲಿ ವ್ಯಂಗ್ಯವಿದ್ದರೂ ಇಂಟಹುದು.

ಆತ ಹೇಳಿದ: "ಅಜ್ಜಿ, ನಿನಗೆ ಕೂತು ಕೊಳ್ಳೋಕೆ" ಆಗೋದಿಲ್ಲ. ಅದ್ರ ಮೇಲೆ ಉರಿ ಬಿಸಿಲು. ಬೇಕಾದ್ರೆ ನಾನು ನಿನ್ನ ಹೊತ್ತುಕೊಂಡು ದೇವಿದರ್ಶನ ಮಾಡ್ಸಿ ಮರಳಿಸುತ್ತೇನೆ."

ಮುದುಕಿಯ ತಗ್ಗಿದ್ದ ದೃಷ್ಟಿ ಒಮ್ಮೆ ಮೇಲೇರಿತು. ನಾಲಿಗೆ ಪ್ರಶ್ನಿಸಿತು: "ಯಾರಪ್ಪಾ ನೀನು? ನಿನ್ನದಾರೀಲಿ ಯಾಕಪ್ಪ ನನ್ನನ್ನ ಎಳೆದುಕೊಂಡು ಹಾಕಿಕೊಳ್ತಿ?"

"ಯಾಕ್ಕೇನಂತೆ ಅಜ್ಜಿ, ನೀನು ಅಪೇಕ್ಷೆಪಟ್ಟರೆ, ನಿನ್ನ ಸೇವೆ ಮಾಡುವುದಕ್ಕೆ ಸಿದ್ಧ...."

ಶಾವಮ್ಮನಿಗೆ ಅದೇನು ಕಂಡಿತೋ! "ಹ್ಞಂ ಆಯಿತಪ್ಪಾ, ಮುದುಕಿಯ ಉಸಿರು ಹಾರಲು ಗಳಿಗೆ ಬಂದಿತೂಂತ ತೋರುತ್ತದೆ. ಅದಕ್ಕೇ ಬೇಗ ದರ್ಶನ ಮಾಡಿ ಹೋಗಲೀಂತ ದೇವಿಯೇ ನಿನ್ನನ್ನ ಕಳಿಸಿದ್ದಾಳೋ ಏನೋ..."

"ಹಾಗೆಲ್ಲಾ ಅಭದ್ರ ಆಡಬಾರದಜ್ಜಿ...." ಎಂದ ಆತ ಮುದುಕಿಯ ಮೈಯನ್ನು ತನ್ನ ಶಾಲಿನಿಂದ ಒರೆಸಿ, ಆಕೆಯನ್ನೆತ್ತಿ ತನ್ನ ಹೆಗಲ ಮೇಲಿಟ್ಟುಕೊಂಡು ಮೇಲೇರಿದ ಪಡಬಡನೆ.

ದುರ್ಗಾಲಯದ ನೂಕುನುಗ್ಗಲ ನಡುವೆ ಜಾಗ ಮಾಡಿಕೊಂಡು ಹೋದ ಆತ ದೇವಿಯ ಮೂರ್ತಿಯ ಮುಂದೆ ಮುದುಕಿಯನ್ನು ಕೂರಿಸಿದ. ಶಾವಮ್ಮ ಎರಡೂ ಕೈಮುಗಿದು, ಅಡ್ಡಬಿದ್ದು ಮರುಗಿದಳು: "ತಾಯಿ ಜಗದಂಬಾ, ನನ್ನ ಕೊನೆಗಳಿಗೆ ಬಂದಂತೆ ತೋರುತ್ತಿದೆ. ಆದರೂ ನನ್ನ ಬಯಕೆಯನ್ನು ನೀನಿನ್ನೂ ಪೂರೈಸಲಿಲ್ಲ. ನಾನು ಮಾಡಿದ್ದು ಅನ್ಯಾಯವಾದರೆ, ನನ್ನನ್ನೇ ತಿನ್ನು. ನ್ಯಾಯವಾದರೆ, ನನ್ನಿಚ್ಚೆಯನ್ನು ಕರುಣಿಸು."

ತೀರ್ಥ ಪ್ರಸಾದ ಕೊಂಡ ಬಳಿಕ ಆಕೆಯನ್ನೇ ನೋಡುತ್ತಿದ್ದ ಆತನೆಂದ: "ಅಜ್ಜೀ ಮುಗಿಯಿತೆ ನಿನ್ನ ಯಾತ್ರೆ? ಅಥವಾ..."

"ಇಲ್ಲ ಮಗು ದೇವಿಯ ಸೇವೆ ಮುಗಿಯಿತು. ಇನ್ನೇನು. ಮೆಲ್ಲಮೆಲ್ಲನೆ ಇಳಿಯುವುದು .."

"ನೀನೆಲ್ಲಿ ಇಳಿಯುವುದಜ್ಜಿ? ನಿನ್ನನ್ನು ನಾನೇ ಹೊತ್ತು ಇಳಿಸುತ್ತೇನೆ...."

ಶಾವಮ್ಮ ಮರು ಮಾತಾಡಲಿಲ್ಲ. ಆತ ನಾಕೆಯನ್ನೆತ್ತಿ ಗಿರಿಯಿಳಿಯ ತೊಡಗಿದ. ಆದರೆ, ಏರುವಾಗಲಿದ್ದ ಹುಮ್ಮಸ್ಸು ಇಳಿಯುವಾಗಾತನಲ್ಲಿರಲಿಲ್ಲ. ಅವನ ಎದೆ ಭಾರವಾಗಿತ್ತು. ತಲೆ ತಿರುಗುವಂತಿತ್ತು. ಆದರೂ ಆತ ವೇದನೆಯೆಲ್ಲವನ್ನೂ ನುಂಗಿ ಇಳಿಯ ತೊಡಗಿದ, ಶಾವಮ್ಮನಿಗೂ ಏನೋ ಸಂಕಟವಾದಂತಾಯಿತು. ಆದರೆ, ಅದೇನೆಂಬುದನ್ನಾಕೆ ಅರಿಯದಂತಾಗಿದ್ದಳು

ಇಬ್ಬರೂ ಗಿರಿಯ ಬುಡಕ್ಕೆ ಬಂದರು. ಆತನಾಕೆಯನ್ನು ಇಳಿಸಿ ಉಸ್ಸೆಂದು ನಿಟ್ಟುಸಿರುಬಿಟ್ಟ. "ಮಗೂ, ಭಾರಿ ಸೋತು ಹೋದೆಯಲ್ಲಾ? ದೇವಿಯು ನಿನಗೆ ಒಳ್ಳೆಯದನ್ನು ಮಾಡಲಪ್ಪ' ಎಂದು ತೃಪ್ತಿಯನ್ನು ತಂದುಕೊಂಡ ಆಕೆ ಆಶೀರ್ವದಿಸಿದಳು.

ಆಗ ಆತ ತಡೆತಡೆದು ಹೇಳಿದ: "ಅಜ್ಜಿ, ಒಂದು ಪ್ರಶ್ನೆ ಕೇಳುತ್ತೇನೆ. ಬೇಸರ ಮಾಡಬಾರದು........"

"ಅದೇನು ಮಗು? ಕೇಳು, ನೀನು ಮಾಡಿದ ಉಪಕಾರಕ್ಕೆ...."

"ಉಪಕಾರವೇನು ಬಂತಜ್ಜಿ....ಅದಲ್ಲ, ನೀನು ದೇವಿಯ ಮುಂದೆ ಬಹಳ ಹೊತ್ತು ಬೇಡಿಕೊಂಡೆ ನೋಡು. ನಿನ್ನ ಇಷ್ಟಾರ್ಥವನ್ನು ದೇವಿಯಿನ್ನೂ ಪೂರೈಸಲಿಲ್ಲ ಎಂದೆಯಲ್ಲ? ಅದೆಂತಹ ಇಷ್ಟಾರ್ಥವಜ್ಜಿ?"

ಶಾವಮ್ಮ ಒಮ್ಮೆ ಆತನನ್ನೇ ದುರುಗುಟ್ಟಿ ನೋಡಿದಳು. ನೋಡು ನೋಡುತಿದಂತೆಯೇ ಆ ಕೃಶ ಶರೀರಿಯ ಕಣ್ಣುಗಳು ಮೇಲೇರಿದುವು. ಆಕೆ ರೋಮಾಂಚಿತಳಾದಳು

"ಸೀನ.........ಸೀನ....... ಯಾರು ನೀನು?...."

ಹಿಂದು ಮುಂದರಿಯದ ಆತನೆಂದ "ಏನಜ್ಜಿ ಇದು? ನಾನು ಯಾರಾದರೇನಂತೆ? ನನ್ನ ಪ್ರಶ್ನೆಗೆ ಉತ್ತರ ಕೊಡಲು ಮನಸ್ಸಿಲ್ಲವಾದರೆ ಸುಮ್ಮನಿರು. ನಾನು ಹೋಗುತ್ತೇನೆ" ಎಂದ ಆತ ಆ ಮುದುಕಿಯನ್ನೇ ನೋಡುತ್ತ ಮೆಲ್ಲ ಮೆಲ್ಲನೆ ಏಳತೊಡಗಿದ

'ಸೀನಾ....' ಎಂಬಧ್ವನಿ ಆತನನ್ನು ಕುಕ್ಕರಿಸಿತು. ಆತನಿನ್ನೊಮ್ಮೆ ಆಕೆಯನ್ನೇ ನೆಟ್ಟದಿಟ್ಟಿಯಿಂದ ನೋಡಿ...." ಅಮ್ಮಾ ...ಶಾವಮ್ಮಾ..." ಎಂದ ಗದ್ಗದ ಕಂಠದಿಂದ. ಕಣ್ಣುಗಳು ಕೋಡಿ ಹರಿಸತೊಡಗಿದುವು. ಸೀನ ಆಕೆಯ ಪಾದಗಳನ್ನೇ ಬಿಗಿದಪ್ಪಿ "ಅಮ್ಮಾ...ಅಮ್ಮಾ....ನಾನು... ನಾನು....ಪಾಪಿ ನಿನಗೆ ಅನ್ಯಾಯವೆಸಗಿದವನು...."ಎಂದು ಅಳ ತೊಡಗಿದ,

"ಮಗೂ, ಏಳಪ್ಪಾ ಏಳು....ಎಲ್ಲ ದೇವಿಯ ಇಚ್ಛೆ. ಇಲ್ಲವಾದರೆ,. ಇಲ್ಲವಾದರೆ.......ನೀನು ...ನೀನು ... ನನ್ನನ್ನು..." ಮುಂದಾಕೆಯಿಂದ ಮಾತಾಡಲಾಗಲಿಲ್ಲ.

ಸೀನ-ಶಾವಮ್ಮ ಅದೆಷ್ಟು ಹೊತ್ತು ಹಾಗೇ ಅಳುತ್ತಿದ್ದರೋ ಏನೋ...ಗಿರಿಯ ಮೇಲೆ ಮಂಗಳ ವಾದ್ಯಗಳು ಕೇಳಿಬರತೊಡಗಿದುವು, ಅವುಗಳಿಂದ ಉತ್ತೇಜಿತನಾದ ಸೀನನೆಂದ: "ಅಮ್ಮಾ, ನನ್ನ ಅಪರಾಧವನ್ನು ಮನ್ನಿಸು. ಸರಿ ದಾರಿಯನ್ನ ನನಗೆ ತೋರಿಸು. ನಿನ್ನ ಮಗನೆಂದೇ ನನ್ನನ್ನು ಭಾವಿಸು...."

ಶಾವಮ್ಮನ ಬಾಯಿಂದ ಆಕೆಗರಿವಿಲ್ಲದಂತೆಯೇ ಮಾತು ಹೊರ ಬಿತ್ತು: "ದೇವಿ ಜಗದಂಬಾ, ತಪ್ಪನ್ನ ಅರಿತುಕೊಂಡಿದ್ದಾನೆ. ಇವನನ್ನು ಮನ್ನಿಸು. ಉಳಿಸು, ಬೆಳೆಸು."

ಶಾವಮ್ಮ ಸೀನರ ನಡುವೆ ಕಾಡಕೋಡಗವೊಂದು ಬಂದು ಹಲ್ಲು ಕಿರಿದು ಮುಂದೆ ಸಾಗಿತು. ಪ್ರಚಂಡ ಕಿರಣ ಮೇಲೊಂದು ತೆಳ್ಳಗಿನ ನೋಟ ಕವಿಯಿತು-ನೋಡದೆರೆಯುಡೆ ಆ ಸರ್ವಶಕ್ತಿ ದೇವ ಪ್ರಸನ್ನಮುಖನಾದಂತೆ ಭಾಸವಾಯಿತು. ದೂರದ ಮಾಮರದ ಮಂಜರಿ ಮೆಲುತಿದ್ದ ಕೋಗಿಲೆ ಪಂಚಮದಲ್ಲಿ ಹಾಡತೊಡಗಿತು. ಗಿರಿಯ ಮೇಲ್ಗಡೆ ಜೋಡು ಕದಸಿಗಳು ಹಿಡಿದು ಮಂಗಳವನ್ನು ಹಾಡಿದುವು.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.



ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ ಸ.

ಹುಟ್ಟೂರಿನ ಮೋಹ:

ಲೇಖಕರು: ಶ್ರೀ ಎ. ಎಸ್ ರಾಮಕೃಷ್ಣ.

ಪ್ರಕಾಶಕರು: ಕಾವ್ಯಾಲಯ, ಮೈಸೂರು.

ಪುಟಗಳು: ೧೧೦.

ಬೆಲೆ: ಸಾದಾಪ್ರತಿ ರೂ ೨-೦೦.

ಕ್ಯಾಲಿಕೋಪ್ರತಿ ರೂ. ೩-೫೦.

'ಕೊರವಂಜಿ'ಯ ಗರಡಿಯಲ್ಲಿ ಸಾಮು ಹೊಡೆಯುತ್ತಿರುವ ಎ. ಎಸ್ ರಾಮಕೃಷ್ಣರು ತಮ್ಮ ಪ್ರಬಂಧಗಳ ಮೂಲಕ ಈಗಾಗಲೇ ಪರಿಚಿತರಾಗಿದ್ದಾರೆ. ಪ್ರಬಂಧಗಳಲ್ಲಿ ಶೈಲಿ ಇರಬೇಕು, ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ; ಮರ್ಯಾದೆಯನ್ನು ಮೀರದ ಹಾಸ್ಯ-ಕೃತಕವಲ್ಲದ ಚಮತ್ಕಾರ ಸಹಾನುಭೂತಿ, ಸರಸತೆ, ಸಜ್ಜನಿಕೆ,ಆಕರ್ಷಕದೃಷ್ಟಿ, ಆಳವಾದ ಜ್ಞಾನ ಜತೆಗೆ ಲೇಖಕನ ಸ್ವಂತ ವ್ಯಕ್ತಿತ್ವ ಎದ್ದು ಕಾಣಬೇಕು. ರಾಮಕೃಷ್ಣರ ೨೧ ಪ್ರಬಂಧಗಳ ಈ ಸಂಗ್ರಹದಲ್ಲಿ ನಾವು ಇವೆಲ್ಲ ಗುಣಗಳನ್ನೂ ಕಾಣಬಹುದು.

ಹುಟ್ಟೂರಿನ ಮೋಹ, ದೇವರು ಬರುತ್ತಾರೆ, ಇನ್‌ಲ್ಯಾಂಡ್ ಲೆಟರ್, ಮಂದನೊಡನೆ ಒಂದು ರಾತ್ರಿ, ಗೋಮಟೇಶ್ವರನ ಸನ್ನಿಧಿಯಲ್ಲಿ — ಮೊದಲಾದುವು ಸಂಗ್ರಹದ ಉತ್ತಮ ನಿಬಂಧಗಳು. ವಾಚಕನಿಗೂ ಲೇಖಕನಿಗೂ ಬೆಳೆಯಬೇಕಾದ ಆತ್ಮೀಯತೆ ಇಲ್ಲಿ ಎದ್ದು ತೋರುತ್ತದೆ. ನಿಬಂಧವು ಭಾವಗೀತದಂತೆ ವೈಯಕ್ತಿಕ ಸ್ವಚ್ಛಂದ ಲಹರಿಯ ಪ್ರತೀಕವಾಗುವುದು. ಸಂಗ್ರಹದ ಎಲ್ಲ ನಿಬಂಧಗಳಲ್ಲಿಯೂ ಭಾವಲಹರಿಗಳು ವಿಚಾರಲಹರಿಗಳು ಹೃದಯದ ಬುಗ್ಗೆಯಿಂದ ಚಿಮ್ಮಿ ವಿಕಾರ ವಿಲಾಸವಾಗಿ ಹೊರ ಹೊಮ್ಮುವುವು.

ಎಲ್ಲ ಭಾಷೆಗಳಲ್ಲೂ ಉತ್ತಮ ಪ್ರಬಂಧಗಳ ಅಭಾವವಿದ್ದರೆ, ನಮ್ಮಲ್ಲಿ ಪ್ರಬಂಧ ಸಾಹಿತ್ಯದ ಅಭಾವವೇ ಕಾಡುತ್ತಿದೆ. ಕುವೆಂಪು, ಎ. ಎನ್. ಮೂರ್ತಿರಾವ್, ಮೊದಲಾದ ಕೆಲವರು ಪ್ರಬಂಧದಲ್ಲಿ ಕೃಷಿ ಮಾಡಿದ್ದಾರಾದರೂ ಅವರದು ಬಹುಮುಖ ಸಾಹಿತ್ಯ ಸೃಷ್ಟಿ. ರಾ. ಕು. ರವರಂತೆಯೇ ಎ. ಎಸ್ ರಾಮಕೃಷ್ಣರೂ ಪ್ರಬಂಧಸಾಹಿತ್ಯದಲ್ಲಿಯೇ ಕೈಯಾಡುತ್ತಿರುವರು ಶ್ರೀಯುತರ ಈ ಪ್ರಬಂಧ ಸಂಕಲನ ಕನ್ನಡಕ್ಕೆ ಉತ್ತಮವಾಗಿಯೇ ಇದೆ; ಅವರಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸಬಹುದು. ಇವರ ದಾರಿಯನ್ನು ನವ ಲೇಖಕರು ತುಳಿಯುವ ಪ್ರಯತ್ನ ಮಾಡಬೇಕು; ಪ್ರಬಂಧ ಸಾಹಿತ್ಯವನ್ನು ಬೆಳೆಸಬೇಕು. — ಗೋವಿಂ.

ಸಿಹಿ-ದಹಿ

ಸಂಪಿಗೆ ಕೊನೆಯಿಲ್ಲವೆ?

ಕಳೆದ ವರ್ಷ ಹಳೆಯ ಮೈಸೂರಿನ ಕಾಲೇಜು ವಿದ್ಯಾರ್ಥಿಗಳು ಸಂಪು ಹೂಡಿ ಯಶಸ್ವಿಯಾದರು ಸರಕಾರ ಅವರ ಕೇಳಿಕೆಯನ್ನು ಮನ್ನಿಸಿ ಶುಲ್ಕವನ್ನು ಇಳಿಸಿತು ಈ ವರ್ಷ ಉತ್ತರ ಕರ್ನಾಟಕದ ಕಾಲೇಜುಗಳ ವಿದ್ಯಾರ್ಥಿಗಳು ಸಂಪು ಹೂಡಿದರು. ಕೊನೆಯ ಗಳಿಗೆಯಲ್ಲಿ ಹಿಂತೆಗೆ ಮನಮಾಡಿದರು. ಅವರೂ ಯಶಸ್ವಿಯಾಗುವ ಲಕ್ಷಣಗಳೇ ಹೆಚ್ಚು. ಒಟ್ಟಿನಲ್ಲಿ ಒಂದು ಮಾತು ಸತ್ಯ ಮೇಲೆ ಹೇಳಿದ ಎರಡೂ ಸಂಪುಗಳಲ್ಲಿ ವಿದ್ಯಾರ್ಥಿಗಳಿಗಿಂತಲೂ ನಾಗರಿಕರ ಪಾತ್ರವೇ ಹೆಚ್ಚಿನದು. ರಾಜಕಾರಣದ ಗತ್ತುಗಾರಿಕೆಯೂ ಇವುಗಳ ಹಿಂದೆ ಇದೆ ವಿದ್ಯಾರ್ಥಿಗಳಿಗೆ ನ್ಯಾಯದಾನವಾಗ ಬೇಕಾದದು ಅಗತ್ಯ. ಆದರೆ, ಒಂದು ವಿಷಯವನ್ನು ನಾವು ಮರೆಯಬಾರದು. ಶುಲ್ಕವನ್ನು ಇಳಿಸಬಹುದು; ನಿಶ್ಶುಲ್ಕವಾಗಿಯೂ ಕಾಲೇಜ ವಿದ್ಯಾಭ್ಯಾಸವನ್ನು ಕೊಡಬಹುದು. ಆಗ ಪ್ರತಿ ಕಾಲೇಜಿಗೂ ಬರಗುವ ಕೊರತೆಯನ್ನು ಸರಕಾರವೂ ತುಂಬಿಸಿ ಕೊಡಬೇಕಾಗುವುದು. ಸರಕಾರವು ಹಣವನ್ನೆಲ್ಲಿಂದ ತರಬೇಕು? ಕರಗಳನ್ನು ಹೆಚ್ಚಿಸದೆ ಹೆಚ್ಚಿನ ಹಣ ದೊರೆಯುವುದಿಲ್ಲ, ಹಾಗೆಂದು ಕರ ಏರಿಸಿದರೆ, ಅದಕ್ಕೆ ಮತ್ತೊಂದು ಸಂಪು ತಯಾರಾಗಿಯೇ ಇರುವುದು ಹಾಗಿರುವಾಗ ಇಂತಹ ಗಂಡಾಂತರಗಳು- ಸಂಪಿನಂತಹ ಉಗ್ರ ವಿಧಾನಗಳು- ಮುಂದಕ್ಕಾದರೂ ತಲೆದೋರದಂತೆ ತೀಕ್ಷ್ಣಮತಿಗಳ ಸರಕಾರಕ್ಕೆ ಸಲಹೆ ಮಾಡಬೇಕು, ಸರಕಾರವು ಅಂತಹ ಸಲಹೆಯನ್ನು ಪರಿಶೀಲಿಸಬೇಕು, ಸಾಧ್ಯವಿರುವವನ್ನು ಕೃತಿಗಿಳಿಸಬೇಕು.

—ಸದಾಶಿವ ಭಟ್ಟ.

ಸ್ವಾತಂತ್ರ್ಯ ದಿನಾಚರಣೆ

ಶಿರ್ವ, ಆ.೧೫ ಸ್ಥಳೀಯ ರಿಕ್ರಿಯೇಶನ್ ಕ್ಲಬ್ಬಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಡಾ. ವೈ. ಆರ್. ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಸುಭಾಸ್‌ಚಂದ್ರ ಬೋಸರ ಭಾವಚಿತ್ರವನ್ನು ಅನಾವರಣ ಮಾಡಿದರು, ಶ್ರೀಗಳಾದ ಎಲ್. ಮೆಂಡೋನ್ಸರೂ ಬಿ ಜಯರಾಮ ಶೆಟ್ರೂ, ದಿನಾಚರಣೆಯ ಮಹತ್ವದ ಕುರಿತೂ, ಸುಭಾಸ್‌ಚಂದ್ರ ಬೋಸರು ಭಾರತಕ್ಕೆ ಸಲ್ಲಿಸಿದ ಸೇವೆಯ ಕುರಿತೂ ಭಾಷಣಗೈದರು. ಅಧ್ಯಕ್ಷರ ಭಾಷಣಾನಂತರ ಕಾರ್ಯದರ್ಶಿ ಎಸ್. ಎಸ್. ಎಲ್ಲಪ್ಪ ಶೆಟ್ರು ಧನ್ಯವಾದಗಳನ್ನಿತ್ತರು.

ಎಲ್ಲೆಲ್ಲಿ ಏನೇನು?

ಯೂನಿಯನ್ ಉದ್ಘಾಟನೆ.

ಉಡುಪಿ, ಆಗಸ್ಟ 26. ಶ್ರೀ ಪೂರ್ಣಪ್ರಜ್ಞ ಕಾಲೇಜು ಯೂನಿಯನಿನ ಉದ್ಘಾಟನೆಯು ಸ್ಯೆಂಟ್ ಎಲೋಶಿಯಸ್ ಕಾಲೇಜಿನ ಪ್ರಿನ್ಸಿಪಲ್ ರೆ ಫಾ ಎ ಪಿ. ಮಿನೆಜಸ್‌ರವರಿಂದ ಪ್ರಿನ್ಸಿಪಾಲ್ ಎ. ಎಮ್. ಉಡುಪರವರ ಅಧ್ಯಕ್ಷತೆಯಲ್ಲಿ ನೆರವೇರಿತು.ಮುಖ್ಯ ಅತಿಥಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಕಾಲೇಜ್ ಯೂನಿಯನ್‌ಗಳ ಉದ್ದೇಶ ಮತ್ತು ಚಟುವಟಿಕೆಗಳನ್ನು ವಿವರಿಸುತ್ತಾ ಇಂತಹ ಕಾಲೇಜ್ ಯೂನಿಯನ್‌ಗಳು ಕಾರ್ಯಾನೆಯ ಕಾರ್ಮಿಕ ರ ಟ್ರೇಡ್ ಯೂನಿಯನ್‌ಗಳಾಗಿ ಮಾರ್ಪಡದೆ, ಅವು ವಿದ್ಯಾಸಂಸ್ಥೆಯಲ್ಲಿ ತಮ್ಮ ಪಾತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ನುಡಿದರು ಅಧ್ಯಕ್ಷರ ಭಾಷಣದ ಬಳಿಕ ಯೂನಿಯನಿನ ಜನರಲ್ ಸೆಕ್ರೆಟರಿ ಶ್ರೀ ಕೆ. ಅಪ್ಪು ಶೆಟ್ಟಿಯವರು ಧನ್ಯವಾದ ಅರ್ಪಿಸಿದರು.

ಮುಂಬೈಯ ಬಂಟರ ಯಾನೆ, ನಾಡವರ ಸಂಘದ ಸ್ಕಾಲರ್ ಶಿಪ್

ಉಚ್ಚ ಶಿಕ್ಷಣಕ್ಕಾಗಿ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗಾಗಿ, ಮುಂಬೈಯ ಬಂಟರ ಯಾನೇ ನಾಡವರ ಸಂಘವು 'ಸ್ಕಾಲರ್ ಶಿಪ್'ನ್ನು ಕೊಡುವುದಾಗಿ ಸಾರಿದೆ. ಅಪೇಕ್ಷಿತ ಅಭ್ಯರ್ಥಿಗಳು ದಿ. 10-9-64ರ ಮುಂಚಿತವಾಗಿ ಗೌ. ಕಾರ್ಯದರ್ಶಿ, ಬಂಟರ ಯಾನೇ ನಾಡವರ ಸಂಘ, 4/34, ನವಯುಗ ನಿವಾಸ, ಮಿನರ್ವಾ ಟಾಕೀಸಿನ ಎದುರು, ಲೆಮಿಂಗ್ಟನ್ ರೋಡ್, ಮುಂಬೈ ಅವರಿಗೆ ತಮ್ಮ ಅರ್ಜಿಯನ್ನು ಕಳುಹಿಸಿಕೊಡಬೇಕಾಗಿ ಸಂಘದ ಅಧಿಕಾರಿಗಳು ವಿನಂತಿಸುತ್ತಾರೆ

'ಶ್ರೀ ರಾಮಾ ಕ್ಲಿನಿಕ್' ಉದ್ಘಾಟನೆ

ಭದ್ರಾವತಿ, ಆ ೨೦. ಡಾ| ಯು. ಕರುಣಾಕರ ಡಿ. ಎಸ್. ಎ.ಸಿ. (ಮೈಸೂರು) ಇವರ "ಶ್ರೀ ರಾಮಾ ಕ್ಲಿನಿಕ್" ಚಿಕಿತ್ಸಾಲಯವು ಈ ದಿನ ಭದ್ರಾವತಿ ಜನ್ನಾಪುರದಲ್ಲಿ ಶ್ರೀ ಎಸ್. ಸೀತಾರಾಮ ಶೆಟ್ಟಿ, ಬಿ. ಎ. ಬಿ ಎಲ್; ವೆಲ್‌ಫೇರ್ ಆಫೀಸರ್ ಇವರಿಂದ ಉದ್ಘಾಟಿಸಲ್ಪಟ್ಟಿತು.

ಜೀವವಿಮಾ ಏಜಂಟರ ಸಭೆ

ಉಡುಪಿ ಶಾಖೆಗೆ ಸಂಬಂಧಿಸಿದ ಜೀವ ವಿಮಾ ಏಜಂಟರ ಸಭೆಯು ಅದೇ ತಾ 6ನೇ ಬೆಳಿಗ್ಗೆ 10 ಘಂಟೆಗೆ ಉಡುಪಿ ಡಿವಿಜನಲ್ ಆಫೀಸಿನಲ್ಲಿ ಸಂಘದ ಸಂಘಟನೆಗಾಗಿ ನೆರವೇರಲಿರುವುದೆಂದೂ ಎಲ್ಲ ಏಜಂಟರೂ ಬರಬೇಕೆಂದೂ ಮುಂಬಯಿಯಲ್ಲಿ ಜರಗುವ ಅಖಿಲ ಭಾರತ ವಿಮಾ ಏಜಂಟರ ಅಧಿವೇಶನಕ್ಕೆ ಕಳುಹಿಸುವ ಹೆಚ್ಚಿನ ಸವಲತ್ತುಗಳ ಕುರಿತು ಚರ್ಚಿಸಲಾಗುವುದೆಂದೂ ಏಜಂಟ್ ಶ್ರೀ ಟಿ. ಸಂಜೀವ ಪೈಗಳು ತಿಳಿಸುತ್ತಾರೆ.

"ಕನ್ನಡ ಕೇಸರಿ"ಯ ಉದ್ಘಾಟನೆ

ಕುಂದಾಪುರ ಆ. ೨೨ — ಸ್ಥಳೀಯ ಹೈಸ್ಕೂಲಿನ ಕಲಾಮಂದಿರದಲ್ಲಿ ಶ್ರೀ ಜೀರಂಟೆ ಶ್ರೀಧರರಾವ್ ಹೆಗ್ಡೆಯವರ ಸಂಪಾದಕತ್ವದಲ್ಲಿ ನೂತನವಾಗಿ ಹೊರಟ ಕನ್ನಡ ಕೇಸರಿ ಎಂಬ ಹೊಸ ಪತ್ರಿಕೆಯ ಉದ್ಘಾಟನೆಯನ್ನು

ನರಸಣ್ಣನ ಸರಸ



ಧಾರವಾಡದಲ್ಲಿ ಗಲಾಟೆ ಸುರುವಾದಂದಿನಿಂದ ಕಾಲೇಜಿಗೆ ಚಕ್ಕರ್ ಕೊಟ್ಟೆ. ನಿನ್ನ ಸಹಾನುಭೂತಿ ಸಿದ್ಧಿಸಿತಲ್ಲಾ ...ಇನ್ನಾದರೂ ಕೀಟಲೆ ಕೊಡದೆ ಕಾಲೇಜಿಗೆ ಹೋಗಿ ತುಸ ಆರಾಮವಿದ್ದು ಬಿಡು.

ಶ್ರೀ ಕಂಪ್ಲಾರ ಕಿಟ್ಟಣ್ಣ ರೈಯವರು ಎಡಿಶನಲ್ ಡಿ ಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಶ್ರೀ ಕೆ. ವಿ. ಗೋವಿಂದರಾಜು ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ರೋಟರಿ ಸಮ್ಮೇಳನದ ಸಿದ್ಧತೆ

ಮಣಿಪಾಲ ಆ. ಆಗಸ್ಟ್ ೨೦ - ಬರುವ ಡಿಸೆಂಬರ್ ತಿಂಗಳಿನಲ್ಲಿ ಇಲ್ಲಿ ನಡೆಯಲಿರುವ ರೋಟರಿ ಜಿಲ್ಲಾ ಸಮ್ಮೇಳನದ ಅಧ್ಯಕ್ಷರಾಗಿ ಉಡುಪಿಯ ರೋಟರಿ ಕ್ಲಬ್ಬಿನ ಹಿಂದಿನ ಅಧ್ಯಕ್ಷ ಶ್ರೀ ರಮೇಶ ಪೈ ಆಯ್ಕೆಯಾಗಿದ್ದಾರೆ. ಶ್ರೀ ಎ. ಜಿ ಅಲ್ವೆ ಮತ್ತು ಶ್ರೀ ಎಸ್. ಎಸ್. ಪ್ರಭು ಕಾರ್ಯದರ್ಶಿಗಳಾಗಿಯೂ, ಡಾ ಕೆ. ಕೃಷ್ಣ ಸ್ವಾಮಿ ಕೋಶಾಧಿಕಾರಿಯಾಗಿಯೂ ಚುನಾಯಿತರಾಗಿದ್ದಾರೆ.

ಮೈಸೂರು ರಾಜ್ಯ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಕೆಲವು ಭಾಗಗಳು ಹಾಗೂ ಗೋವಾವನ್ನೊಳಗೊಂಡಿರುವ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ೨೧೭ನೇ ಜಿಲ್ಲೆಯಲ್ಲಿರುವ ೬೪ ರೋಟರಿ ಕ್ಲಬ್ಬುಗಳ ಸದಸ್ಯರು ಹಾಗೂ ಅವರ ಪತ್ನಿಯರು ಡಿಸೆಂಬರ್ ೨೬ ಮತ್ತು ೨೭ರಂದು ನಡೆಯುವ ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಪಾಂಗಾಳ ಕಳತ್ತೂರು:— ಜೂನಿಯರ್ ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಸುಂದರ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಶೇಷಪ್ಪನವರು ಸ್ವಾಗತಿಸಿದ ನಂತರ ಸಭಿಕರ ಭಾಷಣಗಳಾಗಿ ಸಿಹಿತಿಂಡಿ ಹಂಚಲಾಯಿತು. ಶ್ರೀ ಕೆ ಮಹಮ್ಮದರು ಧನ್ಯವಾದ ಸಮರ್ಪಿಸಿದರು.

ಉಡುಪಿ ಸಿವಿಲ್ ಜಡ್ಜರವರ ಕೋರ್ಟಿನಲ್ಲಿ

O. S. 2 of 1964

ಸಾದನ್ನು ಹೆಗ್ಗಡ್ತಿ ಕೂಡಾ ....ವಾದಿರು.

ಮತ್ತು

ಅಣ್ಣಪ್ಪ ಹೆಗ್ಡೆ ಕೂಡಾ....ಪ್ರತಿವಾದಿರು.

ಇವರೊಳಗೆ

1ನೇ ಪ್ರತಿವಾದಿ ಅಣ್ಣಪ್ಪ ಹೆಗ್ಡೆ — ನೇವನ್ನು ಹೆಗ್ಗಡ್ತಿ ಮಗ— ಕುಂದಾಪುರ ತಾಲೂಕು ತೆಗ್ಗರ್ಸೆ ಗ್ರಾಮದಲ್ಲಿರುವವ— ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ನೀವು ಪಕ್ಷಕಾರ ಪ್ರತಿವಾದಿರ ವವಾದಿರ ಕುಟುಂಬದ ಸ್ಥಿರಚರ ಸೊತ್ತುಗಳಲ್ಲಿ ಹಿಸೆ ಕೇಳಿ ವಾದಿರು ಮಾಡಿದ ಮೇಲ್ಕಂಡ ದಾವೆಯು ತಾ. 7-9-1964ಕ್ಕೆ ಇಟ್ಟಿರುತ್ತದೆ. ಉದಾಹರಿಸುವಂಥಾದ್ದಿದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ವಾಹೀರು ಮಾಡಿಕೊಳ್ಳಬಹುದು. ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ಮತ್ತು ಸದರಿ ದಾವಾ ಆಸ್ತಿಯ ಕುರಿತು ರಿಸೀವರ್ ನೇಮಿಸ್ಬೇಕು ಆಗಬೇಕೆಂತ ವಾದಿರ ಕಡೆಯಿಂದ ದಾಖಲಾದ R.I.A. 14/1964ನೇ ಅರ್ಜಿಯು ನಿಮ್ಮ ನೋಟೀಸಿನ ಬಗ್ಗೆ ಸದ್ರಿ ತಾರೀಕಿಗೇನೇ ಇಟ್ಟಿದೆಂಬ ಸಂಗ್ತಿ ಸಹಾ ಈ ಮೂಲಕ ತಿಳಿಯಪಡಿಸಿಯದೆ.

K. Balachandra Rao.
Advocate for Plaintiffs
Udipi. 1—9—1964.

ಟೆಂಡರ್ ನೋಟೀಸು

ನಂ. 9990ನೇ ತಲ್ಲೂರು ಸೇವಾ ಸಹಕಾರಿ ಸಂಘ ಮಿತ, ತಲ್ಲೂರು.
ಕುಂದಾಪುರ ತಾಲ್ಲೂಕು, ದ ಕ. ಜಿಲ್ಲೆ —

ಇದರಡಿಯಾಗಿ ಒಂದು ರೂರಲ್ ಗೋಡೌನ್ ಕಟ್ಟಿಸುವರೆ ಅರ್ಹ ಕಂಟ್ರಾಕ್ಟರರಿಂದ ತಾರೀಕು 15—9—1964ರ ಅಪರಾಹ್ನ ಗಂಟೆ 1—00ರ ವರೇಗೆ ಸಂಘದ ಆಫೀಸಿನಲ್ಲಿ ಟೆಂಡರುಗಳನ್ನು ಸ್ವೀಕರಿಸಲಾಗುವುದು. ಕಟ್ಟಡದ ಅಂದಾಜು ಮೌಲ್ಯ ರೂ. 13,200—00. (ರೂಪಾಯಿ. ಹದಿಮೂರು ಸಾವಿರದ ಎರಡುನೂರು.-) ಅರ್ನೆಸ್ಟ ಹಣ ಠೇವಣಾತಿ ರೂಪಾಯಿ 660—00, ಕೆಲಸದ ಅವಧಿ ತಾ. 31—1—1965. ಹೆಚ್ಚಿನ ವಿವರಗಳನ್ನು ಆಫೀಸಿನಿಂದ ಪಡೆಯಬಹುದು.

ಟೆಂಡರನ್ನು ಸ್ವೀಕರಿಸುವ, ತಿರಸ್ಕರಿಸುವ ಸಂಪೂರ್ಣ ಅಧಿಕಾರ ಸಂಘದ ಆಡಳಿತೆಯವರಿಗೆ ಇದೆ—

ಮೊಕ್ಕಾಂ ತಲ್ಲೂರು
ತಾ. 26—8—1964.

ನಾರಾಯಣ ಕಾಮತ್.
ಅಧ್ಯಕ್ಷ.
ತಲ್ಲೂರು ರಾಮಕೃಷ್ಣ ಪ್ರಭು
ಕಾರ್ಯದರ್ಶಿ.

ಇವರು ಸಮಾಜಕಂಟಕರಲ್ಲ

(ಹತ್ತನೇ ಪುಟದಿಂದ)

ದುವಲ್ಲಿ ಅಮೇರಿಕೆಯು ಎಲ್ಲರಿಗಿಂತಲೂ ಮುಂದಿದೆ. ವಾಷಿಂಗ್‌ಟನ್, ನ್ಯೂಯಾರ್ಕ್, ಲಾಸ್ ಎಂಜಲೀಸ್, ಸಾನ್ ಫ್ರಾನ್ಸಿಸ್ಕೊ ಮೊದಲ ದ ಹತ್ತಾರು ತರಬೇತಿ ಕೇಂದ್ರಗಳು ಇಲ್ಲಿವೆ. ಒಂದೊಂದು ಕೇಂದ್ರದಲ್ಲಿ ೩೦ರಿಂದ ೬೦೦ರ ವರೆಗೆ ವಿದ್ಯಾರ್ಥಿಗಳಿರುತ್ತಾರೆ. ಮಾನಸಿಕ ಮತ್ತು ದೈಹಿಕ ಹೀಗೆ ಎರಡು ಬಗೆಯಾಗಿಯೂ ಆರ್ತರಾದವರಿಗೆ ಸೂಕ್ತ ತರಬೇತಿಯಿಲ್ಲಿ ದೊರೆಯುತ್ತದೆ.

ಶಿಶುಗಳಿಂದ ತೊಡಗಿ ಹಿರಿಯರ ವರೆಗಣ ಅಂಗವಿಕಲರು ಈ ಕೇಂದ್ರಗಳಲ್ಲಿ ಸೇರಿಕೊಳ್ಳುತ್ತಾರೆ. ಸುಸಂಘಟಿತವಾದ ಕಾರ್ಯಕ್ರಮ ಮತ್ತು ಸುಸಜ್ಜಿತ ಶಿಕ್ಷಣ ಸಂಸ್ಥೆಗಳೇ ಈ ದಿಸೆಯಲ್ಲಿ ಸಾಧಿಸಿದ ಪ್ರಗತಿಗೆ ಮೂಲ ಕಾರಣ.

ಪ್ರಪಂಚದಲ್ಲಿ ಕಿವುಡರಿಗಾಗಿಯೇ ಇರುವ ಒಂದೇ ಒಂದು ಕಾಲೇಜು ವಾಶಿಂಗ್‌ಟನ್ನಿನ ಗಾಲಾಡೆಟ್ ಕಾಲೇಜು. ಇತ್ತೀಚೆಗೆ ಇದರ ಶತ ವಾರ್ಷಿಕೋತ್ಸವವು ಜರಗಿದಾಗ ಅಧ್ಯಕ್ಷ ಜಾನ್ಸನ್ನರು ವಿಶೇಷ ಫಲಕವೊಂದನ್ನಿತ್ತು ಕಾಲೇಜನ್ನು ಗೌರವಿಸಿದರು. ಇಲ್ಲಿ ಈಗ ಸುಮಾರು ೬೦೦ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ನಾಲ್ವರು ಭಾರತೀಯರಾಗಿದ್ದಾರೆ.

ಬರ್ಕ್ಲೀಯಲ್ಲಿರುವ ಕೆಲಿಫೋರ್ನಿಯಾ ಕಿವುಡರ ಶಾಲೆಯಲ್ಲಿ ಹುಡುಗಿಯರಿಗೆ ತರಬೇತಿ ನೀಡಲಾಗುತ್ತಿದೆ. ಈ ಹುಡುಗಿಯರಿಗೆ ಮನೆವಾರ್ತೆಯ ಮೂಲ ವಿಷಯಗಳನ್ನು ಕಲಿಸಲಾಗುತ್ತದೆ. ಅವರು ಮನೆಯ ಅಲಂಕಾರ, ಅಡುಗೆ, ಸಾಮಾನುಗಳ ಖರೀದಿ ಮತ್ತು ಮನೋರಂಜನೆಗಳನ್ನು ಅಭ್ಯಾಸ ಮಾಡುತ್ತಾರೆ. ಮುಂದಿನ ಜೀವನದಲ್ಲಿ ಈ ವಿಷಯಗಳು ಅವರಿಗೆ ಉಪಯೋಗಕ್ಕೆ ಬರುತ್ತವೆ. ಈ ಹುಡುಗಿಯರಿಗೆ ಇಂತಹ ಶಿಕ್ಷಣ ಅವಶ್ಯ. ಏಕೆಂದರೆ ಗೃಹಿಣಿಯರಾಗಿ, ಮಾತೆಯರಾಗಿ ಅವರಿಲ್ಲಿ ಬದುಕಿದರೂ ಅವರು ಆಯಾ ಸಮಾಜದ ಮತ್ತು ದೇಶದ ಅಂಗವಾಗುತ್ತಾರೆ.

ಲಾಸ್ ಎಂಜಲೀಸ್‌ನ ಜಾನ್ ಟ್ರೇಸೀ ಕ್ಲಿನಿಕ್ - ಡೈರೆಕ್ಟರ ಶ್ರೀಮತಿ ಟ್ರೇಸಿಯವರು ಹಲವಾರು ವರ್ಷದಿಂದ ಮಕ್ಕಳಿಗೆ ನೆರವು ನೀಡುತ್ತಾರೆ. ಇಲ್ಲಿರುವವರೂ ಹೊರಗಿನ ಕಿವುಡ ವಿದ್ಯಾರ್ಥಿಗಳು ತಮ್ಮ ತಾಯ್ತಂದೆಯವರೊಡನೆ ಸಂಬಂಧವಿರಿಸಿಕೊಳ್ಳುತ್ತಾರೆ. ಈ ಕ್ಲಿನಿಕ್‌ನವರು ತಾಯ್ತಂದೆಯರಿಗೆ ಶಿಕ್ಷಣಕೊಡಲು ಪತ್ರವ್ಯವಹಾರ ಮೂಲಕ ನಡೆಸುವ ಕೋರ್ಸೊಂದನ್ನು ತೆರೆದಿದ್ದಾರೆ. ಇಪ್ಪತ್ತು ವರ್ಷಗಳಿಗೆ ಮೊದಲು ಪ್ರಥಮ ಪಾಠ ನೀಡಿದ ಈ ವಿದ್ಯಾಲಯದ ಕಾರ್ಯವ್ಯಾಪ್ತಿ ಬಹಳಷ್ಟು ವಿಸ್ತಾರಗೊಂಡಿದೆ. ಇಂದು ಜಗತ್ತಿನ ೮೧ ದೇಶಗಳ ೧೭ ಸಾವಿರ ಕುಟುಂಬಗಳಿಗೆ ಪತ್ರ ಮುಖೇನ ಶಿಕ್ಷಣನೀಡುವಲ್ಲಿ ಯಶಸ್ವಿಯಾಗಿದೆ.

ಸಾಮಾನ್ಯವಾಗಿ ಎಲ್ಲ ಶಾಲೆಗಳಲ್ಲಿಯೂ ಅಂಗವಿಕಲರಿಗೆ ವೃತ್ತಿಪರ ತರಬೇತಿ ನೀಡಲಾಗುತ್ತಿದೆ. ಮರದ ಸಾಮಾನುಗಳ ತಯಾರಿಕೆ, ಬಟ್ಟೆಗಳಿಂದ ಅಲಂಕಾರ ಮಾಡುವುದು, ಆಫ್ ಸೆಟ್ ಮುದ್ರಣ, ಉದ್ಯಾನ ವ್ಯವಸ್ಥಾಪನೆ, ಆಟೋಮೊಬೈಲ್‌ಗಳ ಆರೈಕೆ ಮೊದಲಾದ ವೃತ್ತಿಗಳಲ್ಲಿ ಸೂಕ್ತ ತರಬೇತಿಯು ಅಲ್ಲಿ ನೀಡಲಾಗುತ್ತದೆ. ಅಂಗವಿಕಲರೂ ಜೀವನದಲ್ಲಿ ಸರಿಯಾದ ಉದ್ಯೋಗ ಮತ್ತು ಸ್ಥಾನಗಳನ್ನು ಪಡೆಯುವಂತೆ ಯತ್ನಿಸುವುದು ಪ್ರಜಾಸತ್ತೆಯ ಮತ್ತು ಪ್ರಜಾಜನರ ಮುಖ್ಯ ಕರ್ತವ್ಯ.

ಭಾರತದಲ್ಲಿರುವ ಕಿವುಡರ ತರಬೇತಿ ಕೇಂದ್ರವನ್ನು ಎರಡು ವರ್ಷಗಳಿಗೆ ಮೊದಲು ಕೇಂದ್ರ ಶಿಕ್ಷಣ ಸಚಿವಾಲಯವು ತೆರೆಯಿತು. ಇಲ್ಲಿ ಇಂಜಿನಿಯರಿಂಗ್ ಮತ್ತಿತರ ಕಸಬು ಕಾರ್ಯಗಳಲ್ಲಿ ವೃತ್ತಿಪರ ತರಬೇತಿ ನೀಡಲಾಗುತ್ತಿದೆ. ಅಮೇರಿಕನ್ ಮಾದರಿಯನ್ನನುಸರಿಸಿ, ಇಲ್ಲಿಯೂ ಮರಗೆಲಸ, ಗ್ಯಾಸ್ ವೆಲ್ಡಿಂಗ್, ಹೊಲಿಗೆ, ಆಫ್‌ಸೆಟ್ ಮುದ್ರಣ ಮತ್ತಿತರ ವೃತ್ತಿಗಳಲ್ಲಿ ತರಬೇತಿ ನೀಡಲು ಸೂಕ್ತಸಿದ್ಧತೆಗಳೂ ನಡೆಯುತ್ತಿವೆ.

ಉಡುಪಿ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 172/1964

ಕೆ. ಗಿರಿಯಣ್ಣ ಶೆಟ್ಟಿ ...... ವಾದಿ

ಮತ್ತು

1 ಮುದ್ದು ಶೆಟ್ಟಿ-ನರ್ಸಿ ಶೆಡ್ತಿ ಮಗ ....
4 ಪುಷ್ಪ ಶೆಡ್ತಿ — ಗಿರಿಜ ಶೆಡ್ತಿ ಮಗಳು....
ಉದ್ದಿ ಸಾಲ್ಯ ಕೊರಂಗ್ರ ಪಾಡಿ ಗ್ರಾಮದ ಕೆಮ್ಮಾರು — } ಪ್ರತಿವಾದಿಗಳು

ಸದ್ರಿ 1 ಮತ್ತು 4ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ —

ತಾರೀಕು 26-5-1916ನೇ ರಿಜಿಸ್ಟ್ರಿ ಆಗಿರುವ ಪಟ್ಟಮುಂಟು ಸಾಧನ ಪ್ರಕಾರವೂ ತಾ. 12-12-1932ನೇ ಟ್ರಾನ್ಸಫರ ಪ್ರಕಾರವೂ ರಾಮಯ್ಯ ಶೆಟ್ಟಿಗೆ ಬಂದ ಜೀವನಾಂಶದ ಕೊಡುವಿಕೆ ಹಕ್ಕನ್ನು ಕೋರ್ಟಿನ ಯಾಲಂನಲ್ಲಿ ಪಡೆದ ವಾದಿಗೆ ಕಳೆದ ಶುಭಕೃತು ಮತ್ತು ಶೋಭಕೃತು ಸಂ|ರದ ಬಾಬ್ತು ಬರ ಜೀವನಾಂಶ ಕೊಡುವಿಕೆಯನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 7-9-1961ಕ್ಕೆ ಮುಟ್ಟರಿಸಿದ್ದರಿಂದ ಅದು ಹಿಡಿಸುವಂತಾದಿದ್ದರೆ ಅ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಾತಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Balachandra Rao
Advocate for Plaintiff
Udipi. Dated 18-8-1964.

ಹೊಸ ಬಸ್ ದಾರಿ ಉದ್ಘಾಟನೆ

ದಿನಾಂಕ 21ರಂದು ಕೊರಂಗ್ರಪಾಡಿಯಲ್ಲಿ ಪಂಚಾಯತ್ ಅಧ್ಯಕ್ಷ ಬಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. ಬೋ. ಸದಸ್ಯ ಶ್ರೀ ಬಿ. ಕಾಳಪ್ಪ ಶೆಟ್ಟರಿಂದ, ಉಡುಪಿಯಿಂದ ಉದ್ಯಾವರ ಚರ್ಚಿನ ಮೂಲಕ ಬೈಲೂರಿಗಾಗಿ ಕೊರಂಗ್ರಪಾಡಿಗೂ ಅಲ್ಲಿಂದ ಅಲೆವೂರಿಗಾಗಿ ಪೆರಂಪಳ್ಳಿಯ ಮೂಲಕ ಮಣಿಪಾಲಕ್ಕೆ ಹೋಗುವ ಉಡುಪಿ, ಶ್ರೀ ಮಂಜುನಾಥ ಬಸ್ ಸರ್ವಿಸಿನ ಹೊಸ ಮಾರ್ಗದ ಉದ್ಘಾಟನಾ ಸಮಾರಂಭವು ನೆರವೇರಿಸಲ್ಪಟ್ಟಿತು. ಶ್ರೀ ಎಚ್. ವಿಠಲ ಶೆಟ್ಟರು ಸಭಿಕರ ಪರವಾಗಿ ಮಾತನಾಡಿದರು. ಶ್ರೀ ಮಂಜುನಾಥ ಮೋಟಾರ್ ಸಂಸ್ಥೆಯ ಮೆನೇಜರ್ ಶ್ರೀ ಕೆ. ನಾರಾಯಣ ಶೆಟ್ಟರು ಈ ಮಾರ್ಗದ ಉಪಯುಕ್ತತೆಯನ್ನು ವಿವರಿಸಿದರು. ಶ್ರೀ ಕೆಮ್ಮಾರು ಪದ್ಮ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಗಂಭೀರ ಪರಿಸ್ಥಿತಿ ವಿಮೋಚನೆ

(ಎರಡನೇ ಪುಟದಿಂದ)

ರ ಈಗ ಒಗೆಹರಿದಿದೆ. ಉಳಿದ ಅಲ್ಪಾವಧಿಯಲ್ಲಿ ಕಾಳ್ಗಿಚ್ಚು ಹಿಡಿದರೆ ಮುಂದಿನ ಸೂರ್ಯೋದಯದೊಡನೆ ಎಲ್ಲವೂ ಕರಿಕೊಂಡಾವುದು ಖಂಡಿತ. ಭೀಕರ ಪರಿಸ್ಥಿತಿಯಲ್ಲಿ ಲಭ್ಯವಿದ್ದ ಎಲ್ಲ ಕಾರ್ಯಕ್ರಮಗಳನ್ನೂ ಸಂಯೋಜಿಸಿ ಅದನ್ನೆದುರಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಹೊಟ್ಟೆಗೆ ಉತ್ತಮ ಆಹಾರ ಪೂರೈಕೆಯಾಗುವಲ್ಲಿ ವಿಳಂಬವಾಗುತ್ತಿದ್ದರೂ ಯಾರೂ ಉಪವಾಸ ಬಿದ್ದಿಲ್ಲ. ಈ ಸಂದರ್ಭದಲ್ಲಿ ಮನೆಯವರು ತೋರಿಸಿದ ಸಹಕಾರ ಮತ್ತು ಸಂಯಮಗಳಿಗೆ ಋಣಿಯಾಗಿದ್ದೇನೆ."

o o o

ಮಾರನೆಯ ದಿನದ ಹೇಳಿಕೆ ಹೀಗಿತ್ತು: "ನಾವು ನಿರೀಕ್ಷಿಸಿದ ಸಹಾಯ ದೊರೆಯದೆ ಹೋದರೂ ಗಂಡಾಂತರದ ಕೊನೆಯ ಹಂತದಲ್ಲಿದ್ದೇವೆ. ಯಾರೊಬ್ಬರೂ ಗಾಬರಿ ಪಡಬೇಕಾಗಿಲ್ಲ. ರಾತ್ರಿ ಕಳೆಯುತ್ತಲೇ ಹಗಲಾಗುವುದು. ಆಗ ಎಲ್ಲವೂ ಸರಿಹೊಂದುವುದು. ಅದುವರೆಗೆ ಕೀಟಲೆ ಮಾಡದೆ ಇದ ವರೆಗೆ ಸಹಿಸಿಕೊಂಡಿದ್ದಂತೆಯೇ ತೀರ ತಾಳ್ಮೆಯಿಂದಿರಿ. ಎಳ್ಳಷ್ಟಾದರೂ ತಾಳ್ಮೆಗೆಟ್ಟರೆ ಅದರಿಂದ ಅನಾಹುತವಾದೀತು...."

o o o

"ಇಂದು ಮುದಿನ ನಮ್ಮ ಸಮಸ್ಯೆಗಳೆಲ್ಲ ಬಂದಂತೆಯೇ ಹಿಂದೆ ಸರಿದಿವೆ. ಇನ್ನು ಹಲವು ದಿನಗಳ ವರೆಗೆ ಇಂತಹ ಅಭಾವ ಸ್ಥಿತಿ ಸಂಭವಿಸುವುದಿಲ್ಲ. ಬಂದು ವೇಳೆ ಒದಗಿ ಬಂದರೂ ಈಗ-ದೀಗಲೇ ಉಚಿತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನನ್ನೊಡನೆ ಪರಿಸ್ಥಿತಿಯನ್ನೆದುರಿಸಲು ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು!" —ರಾಯರ ನಾಲ್ಕನೆಯ ದಿನದ ಅಭಿನಂದನಾ ಹೇಳಿಕೆಯಿದು.

o o o

ರಾಯರ ಮಿತ್ರರೊಬ್ಬರು ಕೇಳಿದರು: "ಏನು ರಾಯರೇ, ನೀವೇನು ಪ್ರಯುಕ್ತ ಮಾಡಿದಿರಿ?"

ರಾಯರು ಸಮಾಧಾನದಿಂದಲೇ ಉತ್ತರಿಸಿದರು "ನನ್ನ ಸೈನ್ಯ ಬಗೆ ಕೈಕಾಲು ಒಡೆಯುತ್ತ ದೀರ್ಘವಾದ ಹೇಳಿಕೆಗಳನ್ನು ನೀಡುತ್ತ ಬಂದೆ. ಇದರಿಂದಲೇ ಸಮಸ್ಯೆ ಪರಿಹಾರವಾಯ್ತು ನೋಡಿ."

ರಾಯರ ಮಾತಿನಲ್ಲಿ ಗೆಲುವಿನ ನಗುವಿತ್ತು.

o o o

ಕೇಂದ್ರ ಆಹಾರಮಂತ್ರಿ ಸುಬ್ರಹ್ಮಣ್ಯಂರವರ ಮನಸ್ಸಿನಲ್ಲಿ.....?

— ರಾಯರು.

ದಿ. ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ

ರಿಜಿಸ್ಟರ್ಡ್ ಆಫೀಸು—
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಸಾಲಗಾರರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ಕೈಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ-ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ತಾರೀಕು 12—9—64ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 12—9—64 ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಬೇಂಕಿನ ಆವರಣದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು ಯಾ ಬೇಂಕಿಗೆ ಯುಕ್ತ ಕಂಡ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗ ಬಹುದಾದ ಸಕಲ ಖರ್ಚು ವೆಚ್ಚವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಬ್ರಾ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ರೂ. ನ. ಪೈ.
479/61	ಕೆ ಮಹಾಬಲ ಶೆಟ್ಟಿ, ಬೊಗ್ಗ ಶೆಟ್ಟಿ ಮಗ ಉದ್ಯಾವರ ಗ್ರಾಮದ ಬಾಂಡೆ ಮನೆ ಪೋಸ್ಟ್ —ಉದ್ಯಾವರ.	65—15
181/62	ಎಮ್. ಮಹಾಬಲ ಹೆಗ್ಡೆ, ರುದ್ರಮ್ಮ ಹೆಗ್ಗಡ್ತಿಯ ಮಗ, ಪೋಸ್ಟು ಹಿರಿಯಡ್ಕ.	461—25
239/62	ಮೊಸೆ ಕೂರದರ, ಅಬ್ರಹಾಮ ಕೂರದರನ ಮಗ,-ಬೀಡಿನ ಗುಡ್ಡೆ, ಪೋಸ್ಟು ಉಪ್ಪಿ	218—90
534/62	ವಿಲಿಯಂ ಆಳ್ವ, ಜೊಸೆಫ್ ಆಳ್ವರ ಮಗ, ಮೂಡುಬೆಳ್ಳೆ ಕಾಟೈಲ್ ಮನೆ, ಪೋಸ್ಟು ಮೂಡುಬೆಳ್ಳೆ.	47—55

ಸ್ಥಳ: ಉಡುಪಿ
ತಾ. 21—8—64.

ಕೆ. ಶೀನಪ್ಪ ರೈ.
ಏಜಂಟ್.

NAVAYUGA 3-9-1964

Registered with the Registrar
of News Papers for India
under No. R. N. 3516/'57

REGD. No. B G. 176
LICENCE No. 31
Licensed to Post without Prepayment

ನಮ್ಮ-ನಮ್ಮವರು



ವೈ ಬಿ ಚವಾನ್

ಆಗ ಚಿಕ್ಕ ವಯಸ್ಸಿನಲ್ಲಿಯೇ ಅಖಿಲ ಭಾರತ ಪ್ರಸಿದ್ಧಿಗೆ ಬಂದ ಧುರೀಣರಲ್ಲಿ ಮಹಾರಾಷ್ಟ್ರದ ಯಶವಂತ ರಾವ್ ಚವಾನರೂ ಒಬ್ಬರು. ಬೃಹತ್ ಮುಂಬಯಿ ಪ್ರಾಂತ್ಯವು ಇಬ್ಭಾಗವಾಗಿ ಮಹಾರಾಷ್ಟ್ರ ಗುಜರಾಥಗಳ ನಿರ್ಮಾಣವಾದಾಗ, ಮಹಾರಾಷ್ಟ್ರದ ಮುಖ್ಯ ಮಂತ್ರಿಯಾಗಿ ಈ ಅಪರಿಚಿತ ವ್ಯಕ್ತಿ ಆಯ್ಕೆಗೊಂಡರು. ಆಗಲೇ ಭಾರತದ ಜನತೆ ಇವರ ಹೆಸರನ್ನು ಕೇಳುವಂತಾಯಿತು. ಸಮಸ್ಯಾತ್ಮಕ ರಾಜ್ಯವಾದ ಮಹಾರಾಷ್ಟ್ರದಲ್ಲಿ ಸುವ್ಯವಸ್ಥಿತ ಆಡಳಿತವನ್ನು ನಡೆಸಿ, ಪ್ರತ್ಯೇಕತೆಯ ಹಾದಿಯತ್ತ ಸಾಗುತ್ತಿದ್ದ ವಿದರ್ಭದ ಜನತೆಯನ್ನು ಹಿಡಿತದಲ್ಲಿಟ್ಟುಕೊಂಡು ಅವರು ದಕ್ಷ ಆಡಳಿತಗಾರರೆನಿಸಿದರು. ಒಬ್ಬ ಸಾಮಾನ್ಯ ಕಾಂಗ್ರೆಸ್ ಕೆಲಸಗಾರನಾಗಿ ಅವರು ಸ್ವಾತಂತ್ರ್ಯ ಸಮರದಲ್ಲಿ ದುಡಿದವರು. ಸಂಘಟನೆಯಲ್ಲಿ ಅವರದು ಎತ್ತಿದ ಕೈ. ಆರಂಭದಲ್ಲಿ ವಕೀಲ ವೃತ್ತಿಯನ್ನು ಕೈಗೊಂಡಿದ್ದ ಈ ವ್ಯಕ್ತಿ ಅಖಿಲ ಭಾರತದ ರಕ್ಷಣೆಯ ಹೊಣೆ ಹೊತ್ತ ಜವಾಬ್ದಾರಿ ಸ್ಥಾನಕ್ಕೇರುವರೆಂಬುದನ್ನು ಯಾರೂ ಊಹಿಸಿರಲಿಲ್ಲ.

ದೇಶದ ಉತ್ತರ ಗಡಿಯಲ್ಲಿ ಚೀನೀ ಆಕ್ರಮಣವಾದಾಗ, ದೇಶಕ್ಕೆ ದೇಶವೇ ಎದ್ದು ನಿಂತಿತು. ಭಾರತೀಯ ಯೋಧರು ಸಮರದಲ್ಲಿ ಅಮಿತ ಸಂಖ್ಯೆಯಲ್ಲಿ ಆಘಾತ ಹೊಂದುವುದಕ್ಕೆ ರಕ್ಷಣಾ ವ್ಯವಸ್ಥೆ ಸೂಕ್ತ ರೀತಿಯಲ್ಲಿ ರೂಪುಗೊಳ್ಳದಿರುವುದೇ ಕಾರಣವೆಂದು ಎಲ್ಲರೂ ಅಭಿಪ್ರಾಯಪಟ್ಟರು. ಅಂದಿನ ರಕ್ಷಣಾ ಮಂತ್ರಿ ಮೆನನ್ನರನ್ನು ಕಟುವಾಗಿ ಟೀಕಿಸಲಾಯಿತು. ಅವರ ರಾಜಿನಾಮೆಗೆ ಒತ್ತಾಯ ತರಲಾಯಿತು. ಜನಾಭಿಪ್ರಾಯಕ್ಕೆ ಬಗ್ಗಿ ಮೆನನ್ನರು ರಾಜಿನಾಮೆ ಇತ್ತಾಗ, ಅವರ ಸ್ಥಾನಕ್ಕೆ ಬರುವ ವ್ಯಕ್ತಿ ಯಾರೆಂಬ ಕುರಿತು ಎಲ್ಲರಲ್ಲೂ ಕುತೂಹಲವಿತ್ತು. ಪ್ರಧಾನಿ ನೆಹರೂರವರು ಒಮ್ಮೆಲೇ ಮಹಾರಾಷ್ಟ್ರದ ಮುಖ್ಯ ಮಂತ್ರಿಯಾಗಿದ್ದ ಚವಾನರನ್ನು ಆಸ್ಥಾನಕ್ಕೆ ಆರಿಸಿದಾಗಲೇ ಚವಾನರ ನಕ್ಷತ್ರ ತಿರುಗಿತು. ಅವರು ಅಖಿಲ ಭಾರತ ಪ್ರಸಿದ್ಧಿಯ ವ್ಯಕ್ತಿಗಳೆನಿಸಿದರು. ಅಂದಿನಿಂದ ಇಂದಿನವರೆಗೆ ಅವರು ದೇಶದ ರಕ್ಷಣಾ ಕಾರ್ಯಕ್ರಮಗಳ ಕುರಿತು ಜನಮೆಚ್ಚುವಂತಹ ಕಾರ್ಯಮಾಡಿದ್ದಾರೆ.

ಭಾರತದ ರಕ್ಷಣಾ ಸಾಮಗ್ರಿಗಳ ಅವಶ್ಯಕತೆಯನ್ನು ಪೂರೈಸುವುದರ ಬಗ್ಗೆ ಅವರು ವಿದೇಶಗಳಲ್ಲಿ ಸುತ್ತಿ ಮಾತುಕತೆಯಾಡಿದ್ದಾರೆ. ಮಿಗ್ ವಿಮಾನ ಕಾರ್ಖಾನೆಯ ಸ್ಥಾಪನೆಯ ಕುರಿತು ತೀವ್ರ ಕಾರ್ಯಾಚರಣೆ ಆರಂಭಿಸುವ ನಿರ್ಧಾರ ಅವರದು. ಕಳೆದ ತಾ. ೨೮ರಂದು ರಶ್ಯಕ್ಕೆ ತೆರಳಿದ ಚವಾನರು ತಮ್ಮ ಮಾತುಕತೆಯಲ್ಲಿ ಈ ಕಾರ್ಖಾನೆಗೇನೇ ಹೆಚ್ಚಿನ ಪ್ರಾಧಾನ್ಯತೆ ಇತ್ತಿರುವರು. ಸ್ವಾತಂತ್ರ್ಯ ಗಳಿಸುವುದಕ್ಕಾಗಿ ದುಡಿದ ಚವಾನರು ಅದನ್ನು ಉಳಿಸುವುದರಲ್ಲಿ ಅಗ್ರಗಣ್ಯ ಪಾತ್ರ ವಹಿಸುತ್ತಿದ್ದಾರೆ. ಅವರ ಮಾತುಕತೆಯಿಂದ ನಾವು ಹೆಚ್ಚಿನ ಪ್ರತಿಫಲ ನಿರೀಕ್ಷಿಸಬಹುದು.

ನಿಜಲಿಂಗಪ್ಪ

ಈಗ್ಗೆ ಕೆಲವು ದಿನಗಳ ಹಿಂದೆ ಉತ್ತರ ಕರ್ನಾಟಕದ ವಾತಾವರಣ ವಿದ್ಯಾರ್ಥಿಗಳ ಸಂಪಿನ ದೆಸೆಯಿಂದ ತೀರಾ ಕಲುಷಿತವಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಗೆ ಒಳಪಟ್ಟ ಖಾಸಗಿ ಕಾಲೇಜುಗಳ ವಿದ್ಯಾರ್ಥಿಗಳು ಫೀಯಲ್ಲಿ ಏಕರೂಪತೆ ಇರಬೇಕೆಂಬುದಕ್ಕಾಗಿ ಸಂಪನ್ನು ಹೂಡಿ ತಿಂಗಳು ಕೂಡಾ ಉರುಳಿತು. ಸರಕಾರ ಈ ದಿಸೆಯಲ್ಲಿ ತನ್ನ ಕರ್ತವ್ಯವೇನೂ ಇಲ್ಲ ಎಂದು ಕಣ್ಣು ಮುಚ್ಚಿ ಕುಳಿತಿತು. ಬರೇ ಪತ್ರಿಕಾ ಹೇಳಿಕೆಗಳಿಂದಲೇ ಸರಕಾರ ತಾನು ಈ ವಿಷಯದಲ್ಲಿ ಪ್ರವೇಶಿಸಲು ಸಾಧ್ಯವಿಲ್ಲ ಎಂದಿತು. ವಿದ್ಯಾರ್ಥಿಗಳ ಕೇಳಿಕೆಯನ್ನು ಕಡೆಗಣಿಸಲಾಯಿತು.

ಮುಂದುವರಿಯುತ್ತ ಬಂದ ಸಂಪಿನಲ್ಲಿ ರಾಜಕೀಯ ಪಕ್ಷಗಳೂ ಪಾಲಕರೂ ಸೇರಿಕೊಂಡರು. ದಿನದಿಂದ ದಿನಕ್ಕೆ ಸಂಪಿನ ಕಾವು ಏರಿತಲ್ಲದೆ ಸರಕಾರ ನಿರೀಕ್ಷಿಸಿದಂತೆ ತಗ್ಗಲಿಲ್ಲ. ವಿದ್ಯಾರ್ಥಿಗಳಿಗೆ ಮಂತ್ರಿಗಳು ಧಾರಾಳವಾಗಿ ಉಪದೇಶವಿತ್ತು, ವರ್ಗಕ್ಕೆ ತೆರಳಲು ಹೇಳಿದರು. ಫೀಯ ಪ್ರಶ್ನೆ ತಂದೆ ತಾಯಿಗಳಿಗೆ ಬಿಡಿರಿ- ನೀವು ಕಾಲೇಜಿಗೆ ತೆರಳಿ' ಎನ್ನುವ ಧಾಟಿಯಲ್ಲಿ ಮಾತಾಡಿದರು. ಈ ಉಪದೇಶವು ಯಾವ ಫಲವನ್ನೂ ಕೊಡಲಿಲ್ಲ. ಈ ಪರಿಸ್ಥಿತಿಯ ದುರುಪಯೋಗವನ್ನು ಹಲವರು ಮಾಡಿಕೊಂಡರು. ಹೈಸ್ಕೂಲು, ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳೂ ಈ ಸಂಪಿನಲ್ಲಿ ಭಾಗವಹಿಸುವವರೆಗೆ ಪರಿಸ್ಥಿತಿ ಹಾಳಾಯಿತು.

ಕಳೆದ ತಾ. ೨೫ರಿಂದ ಧಾರವಾಡ, ಬೆಳಗಾಂ, ಬಾಗಲಕೋಟೆ, ಕಾರವಾರ, ಜಮಖಂಡಿಗಳಲ್ಲಿ ನಡೆದ ಘಟನೆಗಳು ಸರಕಾರಕ್ಕಾಗಲೀ, ವಿದ್ಯಾರ್ಥಿಗಳಿಗಾಗಲೀ, ಪಾಲಕರಿಗಾಗಲೀ ಭೂಷಣಪ್ರಾಯವಾದವುಗಳಲ್ಲ. ಅಮಾನುಷ ಹಿಂಸಾಚಾರದತ್ತ ವಿದ್ಯಾರ್ಥಿಗಳು ಒಲಿದು, ಪರಿಸ್ಥಿತಿ ವಿಕೋಪಕ್ಕೆ ಮುಟ್ಟಿ, ಸಾರ್ವಜನಿಕ ಸೊತ್ತುಗಳ ನಾಶವಾಗಿರುವುದು ನಿಜಕ್ಕೂ ಖೇದಕರ ಸಂಗತಿ. ಆದರೆ ಈ ಘಟನೆ ಮಾತ್ರ ಸರಕಾರದ ಕಣ್ಣು ತೆರೆಯಿಸಿತೆಂದು ಹಲವರ ಅಭಿಪ್ರಾಯ.

ನಿಜಲಿಂಗಪ್ಪನವರು ಈ ಕುರಿತ ತೀರಾ ನಿಧಾನವಾಗಿ ನಿರ್ಣಯ ಕೈಕೊಂಡರು. ಶಿಕ್ಷಣ ಮಂತ್ರಿ ಕಂಠಿಯವರ ಕುರಿತು ಜನಾಭಿಪ್ರಾಯ ತೀರಾ ಪ್ರತಿಕೂಲವಿದೆ ಎಂಬುದನ್ನು ಅರಿತ ಅವರು ಇನ್ನೂ ಅವರ ಧೋರಣೆಯನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಮುಖ್ಯ ಮಂತ್ರಿಯ ಹೊಣೆ ಇತರ ಮಂತ್ರಿಗಳ ಕಾರ್ಯದಲ್ಲಿ ಸಮತೋಲವನ್ನು ಕಾಯ್ದುಕೊಂಡು ಬರುವುದೂ ಆಗಿದೆ. ಖಾಸಗಿ ಕಾಲೇಜುಗಳಿಗೆ ಸಹಾಯಧನ ಹೆಚ್ಚಿಸುವ ನಿರ್ಣಯಕ್ಕೆ ಬರಬೇಕಾದರೆ, ಧಾರವಾಡ, ಬೆಳಗಾಂವಿ, ಕಾರವಾರಗಳಲ್ಲಿ ನಡೆದಂತಹ ಘಟನೆಗಳು ಜರಗಬೇಕಾಯಿತು! ಈ ರೀತಿಯ ಘಟನೆಗಳು ಜರಗಿದರೇನೇ ಸರಕಾರ ಬಗ್ಗುತ್ತದೆ ಎಂಬ ಪಾಠವನ್ನು ಇತರರಿಗೆ ಈ ಘಟನೆ ಕಲಿಸಿ ಕೊಟ್ಟಂತಾಯಿತು. ನಾವು ಪರಿಹಾರ ಕಾರ್ಯವನ್ನೇನೋ ಕೈಕೊಳ್ಳುತ್ತೇವೆ. ಆದರೆ ಆ ಪರಿಹಾರಕಾರ್ಯ ಕಾರ್ಯರೂಪಕ್ಕೆ ಬರುವಾಗ, ಪರಿಹಾರ ನಿರೀಕ್ಷಿಸುವವರ ತಾಳ್ಮೆ ಮಾತ್ರ ತಪ್ಪಿ ಹೋಗಿರುತ್ತದೆ. ನಿಜಲಿಂಗಪ್ಪನವರು ಈ ದಿಸೆಯಲ್ಲಿ ತುಸು ಜಾಣತನ ತೋರಿದ್ದರೆ ಹೀಗಾಗುತ್ತಿರಲಿಲ್ಲ.



ವಾಸುದೇವ ಕಿಣಿ

ನಮ್ಮ ಜಿಲ್ಲೆಯ ಜನತೆಗೆ ಚಿರಪರಿಚಿತವಾದ ಊರುಗಳಲ್ಲಿ ಕಟಪಾಡಿ ಕೂಡಾ ಒಂದು. ತೀರಾ ಚಿಕ್ಕದಾದ ಈ ಊರು, ಯಾವಾಗಲೂ ಚಟುವಟಿಕೆಯಿಂದ ತುಂಬಿರುತ್ತದೆ. ಕಟಪಾಡಿ ಜಿಲ್ಲೆಯ ಹಲವಾರು ಧುರೀಣರಿಗೆ, ಉದ್ದಿಮೆದಾರರಿಗೆ ಜನ್ಮ ಪವಿತ್ರ ಊರು. ಇಲ್ಲಿಯ ಜನರಲ್ಲಿ ಸ್ವಾವಲಂಬಿಗಳಾಗಬೇಕೆಂಬ ಹೆಬ್ಬಯಕೆ ಇದೆ. ಅಂತೆಯೇ ಇಲ್ಲಿ ಒಂದಲ್ಲ ಒಂದು ಉತ್ತಮ ಕಾರ್ಯ ನಡೆಯುತ್ತಾ ಇರುತ್ತದೆ.

ಕಟಪಾಡಿಯನ್ನು ಒಂದು ಆಕರ್ಷಣೆಯ ಕೇಂದ್ರವನ್ನಾಗಿ ಮಾಡುವಲ್ಲಿ ದುಡಿಯುವ ಹಲವಾರು ವ್ಯಕ್ತಿಗಳಲ್ಲಿ ಇಲ್ಲಿಯ ವ್ಯಾಪಾರಿಗಳಾದ ಶ್ರೀ ಕುರುಕಾಲು ವಾಸುದೇವ ಕಿಣಿಯವರೂ ಒಬ್ಬರು. ಅವರು ಕಟಪಾಡಿಯಲ್ಲಿ "ಶಾರದಾ ಇಂಡಸ್ಟ್ರೀಸ್" ನ್ನು ಸ್ಥಾಪಿಸಿ ಇಲ್ಲಿ ಅಕ್ಕಿ ಮಿಲ್ಲು, ಮರ ಕೊಯ್ಯುವ ಕಾರ್ಖಾನೆ ಇತ್ಯಾದಿಗಳನ್ನು ನಡೆಸುತ್ತಿದ್ದಾರೆ. ಕಟಪಾಡಿಯಲ್ಲಿ ಕೈಕೊಳ್ಳಲ್ಪಟ್ಟ ಹಲವಾರು ಸಾರ್ವಜನಿಕ ಕಾರ್ಯಗಳಲ್ಲಿ ಇವರದು ಹಿರಿಯ ಪಾತ್ರ. ಹತ್ತು ಜನರಿಗೆ ಪ್ರಯೋಜನಕ್ಕೆ ಬರುವ ಸಾರ್ವಜನಿಕ ಕಾರ್ಯಗಳಿಗೆ ಸಹಾಯಕ್ಕೆ ಅವರು ಉದಾರ ದಾನವನ್ನಿತ್ತಿದ್ದಾರೆ. ಹಲವರು ಕಾರ್ಯಗಳಲ್ಲಿ ತಾವೇ ಸ್ವತಃ ಭಾಗವಹಿಸಿ ನೆರವಾಗಿದ್ದಾರೆ.

ಕಟಪಾಡಿಯ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಕಳೆದ ಮೇಯಲ್ಲಿ ಸಾರ್ವಜನಿಕರು ಒಂದು ನೂತನ ಬ್ರಹ್ಮರಥವನ್ನು ವಿಧ್ಯುಕ್ತವಾಗಿ ನಿರ್ಮಿಸಿ ಅರ್ಪಿಸಿದರು. ನೂತನ ಬ್ರಹ್ಮರಥ ನಿರ್ಮಾಣ ಸಮಿತಿಯು ನಿರ್ಮಾಣಗೊಂಡ, ಈ ಬೃಹತ್ಕಾರ್ಯದ ಸಾಧನೆಗಾಗಿ ದುಡಿಯಿತು. ಶ್ರೀ ಕಿಣಿಯವರು ಈ ಸಮಿತಿಯ ಸದಸ್ಯರಾಗಿ ದುಡಿದರು. ಇದೇ ಸಂದರ್ಭ ಪ್ರಕಟಗೊಂಡ 'ಸ್ಮಾರಕ ಸಂಚಿಕೆಯ ಸಮಿತಿ'ಯ ಅಧ್ಯಕ್ಷರಾಗಿ ಅವರು ಬಹಳ ಶ್ಲಾಘನೀಯವಾದ ಕಾರ್ಯ ಮಾಡಿದ್ದಾರೆ. ಶ್ರೀ ಕಿಣಿಯವರು ನಿಷ್ಠಾವಂತ ಕಾರ್ಯಕರ್ತರು, ಸಾಹಸಿಗರು. ಹಿಡಿದ ಪಟ್ಟು ಬಿಡದೆ ಕಾರ್ಯ ಸಾಧಿಸುವ ಪರಿಶ್ರಮಿಗಳು - ಇಂತಹ ಹಿರಿಯ ಗುಣಗಳಿದ್ದರೂ ಅವರು "ಮಾಡುವವನಾನಲ್ಲ ಎಲ್ಲವನ್ನೂ ಮಾಡಿಸುವವನು ಭಗವಂತನೆ ಎಲ್ಲವೂ ಆತನ ಸೇವೆಯೆ" ಎನ್ನುತ್ತಾರೆ.

ಸಮಾಜದ ಹಿತಚಿಂತನೆಗೆ ಇಂತಹ ನಿರಾಡಂಬರ ಪ್ರಿಯ ನಿಷ್ಠಾವಂತ ಕಾರ್ಯಕರ್ತರು ಹೆಚ್ಚಾಗಬೇಕು. ನಮ್ಮ ಹಳ್ಳಿಗಳ ನಾಯಕರು ಇವರಿಂದ ತುಸು ಪಾಠ ಕಲಿಯಬೇಕು.

ನವಯುಗ



ಸೆಪ್ಟಂಬರ, ೧೦, ೬೪

ಸಂಪುಟ ೪೪

ಸಂಚಿಕೆ ೨

Navayuga nationalist kannada weekly

೨೦ ಪೈ

ಕವಲು ದಾರಿ—ಕೆಂಪು ದೀಪ — ಸುದಾಸ.

ಪರಿವರ್ತನೆಯ ಇನ್ನೊಂದು ಹೆಸರು - ಆತ್ಮವಂಚನೆ

ಮಹಾತ್ಮಾ ಗಾಂಧಿಯವರು ಆಡಿದ ಒಂದು ಮಾತು:

—ನಾನು ಸಾಮಾನ್ಯ ರೈತನ ಮನೆಯಲ್ಲಿ ಜನ್ಮ ತಾಳಿ ಬರಲು ಇಚ್ಛಿಸುತ್ತೇನೆ.

ಭಾರತ ಭಾಗ್ಯವಿಧಾತನೆಂದು ಕರೆಯಿಸಿಕೊಂಡ ಅವರ ದೊಡ್ಡ ಮನಸ್ಸು ಈ ಮಾತನ್ನು ಮುಚ್ಚು ಮರೆಯಿಲ್ಲದೆ ಆಡಿದೆ.

ಇನ್ನೊಮ್ಮೆ ಕನ್ನಡ ನಾಡಿನಲ್ಲಿ ಜನ್ಮ ತಾಳಿ ಬೆಳಲು ಇಚ್ಛಿಸುತ್ತೇನೆ ಎಂದು ಹೇಳಬಲ್ಲವರು ಯಾರಿದ್ದಾರೆ? (ಮಾತಿನ ಉಪಚಾರದಿಂದಲೇ ಕನ್ನಡಮ್ಮನ ಸೇವೆ ಮಾಡುತ್ತಿರುವವರಿಗೆ ಈ ಮಾತು ಅನ್ವಯಿಸುವುದಿಲ್ಲ)

ಕಳೆದ ಕೆಲ ವರ್ಷಗಳಿಂದ ಕನ್ನಡನಾಡು ಪೂರ್ವ ಗ್ರಹ ಪೀಡಿತ ಶಾಪದಿಂದ ಬಿಡುಗಡೆಯಾಗುತ್ತಿದೆ, ಎಂದು ತಿಳಿದವರು ಹಲವು ಮಂದಿ. ಕನ್ನಡ ನಾಡಿನ ಭವಿಷ್ಯ ಹೀಗಾಗುತ್ತದೆಂಬ ರೂಪರೇಖೆ ಹಾಕಿ ಕುಳಿತವರಿಗೂ ಕಡಿಮೆಯಿಲ್ಲ.

ಅದು ಈಗ ಓಬೀರಾಯನ ಕಾಲದ ಮಾತು. ಆ ಮಾತು ಈಗ ನೆನಪಿಗೂ ಬರಲು ಯೋಗ್ಯವಲ್ಲ?

ಕಳೆದ ವರ್ಷದ ಈ ಮಾಸ, ಕನ್ನಡ ನಾಡಿಗೆ ಮಾಸಿಕ. ನಾಡಿನ ಹಿರಿಯ ವ್ಯಕ್ತಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರನ್ನು ನಾವು ಕಳೆದುಕೊಂಡುದು ಕಳೆದ ವರ್ಷದ ಈ ತಿಂಗಳಲ್ಲಿಯೇ. [ಆ ಸುದ್ದಿ ಈಗ ಹಳೆಯದಾಗಿದೆ; ನೆನಪಿಂದ ದೂರಾಗಿದೆ.]

ಈ ವರ್ಷದ ಆರು ತಿಂಗಳ ಹಿಂದೆ ಇನ್ನೊಂದು ಸುದ್ದಿಯನ್ನೂ ನಾವೆಲ್ಲ ಕೇಳಿದ್ದೇವೆ. ಕನ್ನಡ ಕುಲ ಪುರೋಹಿತರು ನಮ್ಮಿಂದ ದೂರ ಸರಿದರು ಎಂದು ವ್ಯಥೆ ಪಟ್ಟಿದ್ದೇವೆ. [ಈ ವಿಷಯ ಕೂಡಾ ಈಗ ಎಲ್ಲೋ ಮೂಲೆಪಾಲಾಗಿದೆ. ಹಳೆಯದಾಗಿದೆ. ಈಗ ಅದಕ್ಕೂ ನಮಗೂ ಸಂಬಂಧವಿಲ್ಲ]

ಕನ್ನಡ ನಾಡಿನ ಪೂರ್ವೇತಿಹಾಸ ಭವ್ಯ; ನಿಜ. ವಿದ್ಯಾರಣ್ಯ, ಹೊಯ್ಸಳ, ಹುಕ್ಕ ಬುಕ್ಕ, ಕೃಷ್ಣದೇವರಾಯ, ಮುದ್ದಣ್ಣ, ಕಿತ್ತೂರು ರಾಣಿ, ಮುಂತಾದವರು ಕನ್ನಡ ಕುಲದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಅದರ ಭವ್ಯತೆಯ ಮನವರಿಕೆ ಮಾಡಿರುತ್ತಾರೆ.

ಇವರಲ್ಲಿ ಶಿವಾಜಿ, ಮಹಾರಾಣಾ ಪ್ರತಾಪ, ಅಕ್ಬರ್ (ದಿ ಗ್ರೇಟ್) ರಾಮದಾಸ, ಕವಿ ಭಾರತಿ, ಲಕ್ಷ್ಮೀಬಾಯಿ ಮುಂತಾದವರ ಮುಂದೆ ಯಾವ ಗಿಡದ ತೊಪ್ಪಲು? [ಈ ಪಕ್ಷಿ ಭಾರತದಲ್ಲಿ ನಮ್ಮ ಕುಲೋದ್ಧಾರಕರಿಗೆ ಸಿಕ್ಕಿರುವ ಮನ್ನಣೆಯ ಕುರಿತು ಚಿಂತಿಸಿದಲ್ಲಿ ಪ್ರತಿಯೊಬ್ಬರನ್ನು ಕಾಡಬಹುದು. ಕಾಡುತ್ತಿಲ್ಲ?]

ಜನವರಿ ತಿಂಗಳಲ್ಲಿ ಪುರಂದರದಾಸರ ನಾಲ್ಕೂರನೆಯ ಜಯಂತಿಯನ್ನು ಸಂಭ್ರಮದಿಂದಲೇ ಆಚರಿಸಿದ್ದೇವೆ ಎಂಬ ಸ್ಪ್ರವೆ. ಬೇರೆ ನಮ್ಮಲ್ಲಿದೆ.

ಜನಜಾಗೃತಿಯ ಒಂದು ಕಾರ್ಯ, ಕೆಲವು ವರ್ಷಗಳ ಹಿಂದೆ ನಮ್ಮಲ್ಲೂ ನಡೆದಿತ್ತು. ಕನ್ನಡ ನಾಡು ಪಡೆದಿರುವ ಭವ್ಯ ಇತಿಹಾಸದ ಕಲ್ಪನೆ, ಭಾರತೀಯರಲ್ಲಾಗುವಂತೆ, ನಾಡಿನ ಯುವಕರು ಎಚ್ಚತ್ತು ಶ್ರಮಿಸಬೇಕೆಂದು, ನಮ್ಮ ಬರಹಗಾರರು ಪ್ರಯತ್ನಶೀಲರಾಗಿದ್ದರು.

ವಿ. ಜಿ. ಭಟ್ಟರ ಚುಟುಕ, ಗೋಪಾಲಕೃಷ್ಣ ಅಡಿಗ, ರಾಮಚಂದ್ರ ಶರ್ಮ, ಸುಬ್ಬಣ್ಣ ಎಕ್ಕುಂಡಿ ಇವರ ಕವನ, ನಿರಂಜನ, ಮೋಟ ರಾಜಪಾನಸೆ, ಕೋ. ಚೆನ್ನಬಸಪ್ಪ, ರಾಮಚಂದ್ರ ಉಚ್ಚಿಲ, ಇವರ ಬರಹಗಳು ಕೆಲವು ಯುವಕರನ್ನಾದರೂ ಎಚ್ಚರಗೊಳಿಸಿದ್ದುವು.

ಇವರ ಬರಹಗಳಲ್ಲಿ ಜನಸಾಮಾನ್ಯರ ಗೋಳಿನ ಕತೆಯಿತ್ತು; ವಿಲಾಸ ಜೀವನದ ಖಂಡನೆಯಿತ್ತು; ನಾಡಿನ ಯುವಕರಿಗೆ ಪಂಥಾಹ್ವಾನವಿತ್ತು.

ಆ ಬರಹಗಳಲ್ಲೆಲ್ಲಾ ನಾಡಿಗೆ ನಾಡೇ ಎಚ್ಚರಗೊಳ್ಳ ಬೇಕೆಂಬ ಹಂಬಲ ಎದ್ದುದು ಕಂಡು ಬಂದಿತ್ತು.

ಕಾಲ ಈಗ ಬದಲಾಗಿದೆ. ಇವರಲ್ಲಿ ಕೆಲವರು ಆಧ್ಯಾತ್ಮಿಕ ವಿಷಯಗಳನ್ನು ಚಿಂತಿಸುವವರಾಗಿದ್ದಾರೆ; ಕೆಲವರು ಯಾರಿಗೂ ಬೇಡವಾದ್ದು ನಮಗೇಕೆಂದು ಉದಾಸೀನರಾಗಿದ್ದಾರೆ; ಕೆಲವರಲ್ಲಿ ಉತ್ಸಾಹ—ಕೆಚ್ಚು ಇದ್ದರೂ ಜನಸಾಮಾನ್ಯರ ಕುರಿತು ಚಿಂತಿಸುವುದು ಮಾತ್ರ ಬೇಡವಾಗಿದೆ.

ನಿರಂಜನರು ಮತ್ತು ಅವರಿಂದ ಪ್ರಭಾವಿತರಾದ ಕೆಲವರು ಕೆಂಪು ಕನ್ನಡಕ ಹಾಕಿಕೊಂಡು ನೋಡಲು ಈಗ ಮನಸ್ಸು ಮಾಡುತ್ತಿಲ್ಲ? ಒಂದು ಕಾಲಕ್ಕೆ ಅನಿವಾರ್ಯವಾಗಿ ಕಂಡು ಬಂದಿದ್ದ ಈ ಕನ್ನಡಕ ಈಗ ಬೇಡವಾಗಿದೆ?

[ಪಾನಸೆ, ಗೌರೀಶ ಕಾಯ್ಕಿಣಿ, ದಿನಕರ ದೇಸಾಯಿಯವರು ಇನ್ನೂ ಜನರನ್ನು ಎಚ್ಚರ ಗೊಳಿಸುವ ಕಾರ್ಯರಂಗದಲ್ಲಿ ಉಳಿದುಕೊಂಡಿದ್ದಾರೆ. ಅವರೂ ಪರಿವರ್ತನೆಗೊಳ್ಳುವ ಕಾಲವೊಂದು ಬರಬಹುದೋ ಏನೋ?]

ಏನಿದ್ದರೂ ಹಿಂದೊಮ್ಮೆ ಕನ್ನಡಿಗರನ್ನು ಬಡಿದೆಬ್ಬಿಸಬೇಕು ಎಂದಾಗ, ಎ

(ಒಂಭತ್ತನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ಸಹಕಾರದಿಂದ ಕಾರ್ಯಸಾಧನೆ

'ಇದು ಏನೂಂದ್ರೆ ಬ್ಯಾಗಿನಲ್ಲಿ...?'

'ಯಾವುದೆ?'

'ಇದೇ ನೋಡಿ, ಕವರಿನಲ್ಲಿರೋ ಚಿತ್ರಪಟಗಳು..'

'ಅವೇನೆ?...ಮತ್ತೇನಂತೆ? ಚಿತ್ರಪಟಗಳೆಂದು ನೀನೇ ಅಂದೆಯಲ್ಲಾ?'

"ನಾಕು ಬಿಡೀಂದ್ರೆ...ಎಲ್ಲಿಯ ಚಿತ್ರಗಳವು? ನಿಮ್ಮೊಡನೆ ಯಾಕೆ ಬಂದುವು ಎಂತ...."

"ಸೇಲ್ಸ್ ಟ್ಯಾಕ್ಸ ಆಫೀಸರ್ರಿಗಿಂತ್ಲೂ ಘಾಟಿಯಾಗಿ ಬಿಟ್ಟಿಯಲ್ಲೇ ನೀನು?"

"....ಹೋಗೀಂದ್ರೆ ... ನಾನೇನಾದ್ರೂ ಕೇಳಿದ್ರೆ ನೀವು, ಯಾವಾಗ್ಲೂ ಹೀಗೇ...."

'ನಾನು ಯಾವಾಗ್ಲೂ ಹೀಗೇನ್ನ ಅಲ್ಲಾನೆನ್ನೋದಿಲ್ಲ. ನೀನು ಮಾತ್ರ ಹೀಗಿರೋದಿಲ್ಲಾಂತಲ್ಲ ನೀನನ್ನೋದು?'

"ನೋಡ್ಕೊಳ್ಳಿ ಹೇಗಿದ್ದೇನೆಂತ...."

"ಪಾಪ, ಏನು ಹೇಳೋದು? ನಿನ್ನ ರೂಪವನ್ನ? ಕುರುಳು ತುಂಬಿಸು ಬಂಬಲು, ತೊಡೆಗಳು ಹೊಂಬಾಳೆ, ಕಣ್ಗಳು ನೈದಿಲೆ, ಬೆರಳು ಹೂಗೋಲು, ಕೊರಳು ನುಣ್ಪಳವಟ್ಟ ಕಾ-ಗು....'

"ನಾಳು ಸಾಕು ಬಿಡೀಂದ್ರೆ....ಯಾರಾದರೂ ಕೇಳಿದ್ರೆ ಏನಂದಾರೂಂತಾದ್ರೂ ಯೋಚನೆಬೇಡ್ವೆ?'

'ಯಾರು ಏನು ಬೇಕಾದ್ರೂ ಅನ್ಲಿ. ನಾನನ್ನೋದು ನನ್ಗೇ—ನಿನ್ಗೆ. ಮೂರ್ಖಿಯವನ್ಗಲ್ಲ.'

'ನಿಮ್ದು ಇದ್ದದ್ದೇ ತಾನೆ? ಸದ್ಯ, ನಾನು ಕೇಳೋದಕ್ಕಾದ್ರೂ ಉತ್ರ ನೀಡಿ ..."

"ಏನಮ್ಮಾ ನೀನು ಕೇಳೋದು?'

"ಅದೇ ಈ ಚಿತ್ರಪಟಗಳು ನಿಮ್ಗೆ ಹೇಗೆ ಬಂದುವೂಂತ....'

"ಅದೇ, ಸ್ಟುಡಿಯೋದಿಂದ ತಂದಿರೋದು."

"ಇವು ಯಾರದ್ದೂಂತ?"

"ನೀನೇ ಹೇಳು ನೋಡೋಣ ..."

"... ಅಯ್ಯೋ... ನನ್ಗೆ ಗೊತ್ತೇ ಆಗೋದಿಲ್ಲ. .... ನೋಡಿ ಇವ್ರೇನು ಕಡೀತಿದ್ದಾರೆ?"

"ಕಡಿಯೋದೇನು? ಮರಾನ್ನ...."

"ಮರವಲ್ಲ... ಮಣ್ಣು... ಓ.. ಸರಿಯಾಯ್ತು. ಇದು ಪೆರ್ಡೂರಿನ ಹೈಸ್ಕೂಲಲ್ಲವೆ?"

"ಹಾಗೆಂದುಕೊಳ್ಳಬಹುದು ..'

'ಸರಿ... ಈಗ ಗೊತ್ತಾಯ್ತು ಬಿಡಿ. ಶಾಲೆ ಮುಂದಿದ್ದ ಗುಡ್ಡೆಯನ್ನ ನೆಲಸಮ ಮಾಡೋದ್ರಲ್ಲಿ ಇವ್ರು ತೊಡಗಿದ್ದಾರೇನ್ನಿ...ಅಬ್ಬಬ್ಬ.... ಎಷ್ಟೊಂದು ಜನವಪ್ಪಾ....ಇಲ್ಲಿದೆ ನೋಡೀಂದ್ರೆ.... ಇವನೊಬ್ಬ ಕಂಬಳಿ ಹೊದ್ದು ಮಣ್ಣು ಹೊರಿ ಚಂದ...."

"ಹ್ಞ....ಚೆನ್ನಾಗಿದೆಯಲ್ಲ....?"

'ಇಲ್ದೆ ಏನಂತೆ? ಅಲ್ಲ, ಇವೆಲ್ಲ ಅದ್ರದ್ದೇ ಪಟಗಳು ಅಲ್ವೆ?'

"ಹೌದಂ'

"ಇವರು ನೋಡಿ ಹೇಗೆ ಗುದ್ದಲಿ ಎತ್ತಿ ಹಾಕುತ್ತಾರೆ ಏನು ಉತ್ಸಾಹವಪ್ಪಾ?"

'ತಮ್ಮೂರ ಹೈಸ್ಕೂಲಿಗೆಂದು ದುಡೀತಾರೆ'

'ಏನಂತೆ ಅವ್ರಿಗೆ ಸಂಬ್ಳ....'

'ಸಂಬ್ಳಾನು ಇಲ್ಲ; ಗಿಂಬ್ಳಾನೂ ಇಲ್ಲ. ಎಲ್ಲ ಸ್ವಯಂಸ್ಫೂರ್ತಿಯಿಂದ ದುಡೀತಿದ್ರೆ ಈಗ ಮುಗಿದಿದೇನ್ನ'

"ಇಷ್ಟು ಬೇಗ? ನಿಮ್ಮ ಆ ಗುಡ್ಡೆ ಒಂದು ವರ್ಷ ಕಡಿದ್ರೂ ತಗ್ಗಾಗೋದಿಲ್ಲ..."

'ಪಾಪ ಆಗುಡ್ಡೆ ಅಳಿದವಳು...'

"ಏನಂತೀರಿ? ನಾನು ಬಂದದೆಲ್ಲಾ ಕಳ್ದ ವರ್ಷ...."

"....ಓ ..ಹೌದೂನ್ನ ಹಾಗಾದ್ರೆ ಕರಿಹೋಯ್ತು ..."

"ಏನು ಸರಿಹೋಯ್ತು?"

"ನಿನ್ನ ಲೆಕ್ಕವನ್ನ ತಪ್ಪನ್ನೋಕೆ ಸಾಧ್ಯವಿಲ್ಲಾನ್ನ."

'ಎಷ್ಟು ದಿನಾ ಎಷ್ಟು ಜನ ಬರ್ತಿದ್ರು?"

"ಹತ್ತು ದಿನಾ ದುಡಿದಿದ್ರು, ಜನ್ರ ಅಷ್ಟೇ ಇಷ್ಟೇಂತ ಲೆಕ್ಕವೇನಿಲ್ಲ. ಬಂದವ್ರು ಕೆಲ್ಸ ಮಾಡ್ತಿದ್ರು ಸಾಗಿತ್ತು ರಥ..."

'ಹಾಗೆಂದ್ರೆ? ಅದ್ಕೆಲ್ಲಾ ಒಂದು ಕ್ರಮವಿಲ್ವೆ?"

"ಆಯ್ತು ಬಿಡು. ನಿನ್ನ ಪ್ರಶ್ನೆಗಳಿಗೆ ಉತ್ರ ಹೇಳ್ತಾ ಇರೋದಕ್ಕಿಂತ ನಾನೇ ಹೇಳೋದು ವಾಸಿ,"

"ಹೇಳಿ ಬಿಡಿ ಹಾಗಾದ್ರೆ...."

"ನೋಡು, ಗ್ರಾಮದ ಬ್ಲೋಕ್‌ಗಳಲ್ಲಿ ಎರಡನ್ನೋ ಮೂರನ್ನೋ ಕೂಡ್ಸಿ ಒಂದೊಂದು ಗುಂಪು ಮಾಡಿದ್ರು. ಒಂದೊಂದು ಗುಂಪಿನವು ಎರಡೆರಡು ದಿನ ಕೆಲ್ಸ ಮಾಡಿದ್ರು. ಒಟ್ಟು ಹತ್ತು ದಿನ ಶ್ರಮದಾನ ನಡೀತು. ಮುಗೀತಲ್ಲಾ...."

'ಅಂದ್ರೆ, ಸಾಮಾನ್ಯ ಒಟ್ಟು ಎಷ್ಟು ಆಳಿನ ಕೆಲ್ಸ ನಡೀತು?"

"ಸುಮಾರು ಒಂದು ಸಾವಿರಕ್ಕೆ ಮಿಕ್ಕುತ್ತನ್ನ."

"ಇವರೆಲ್ಲಾ ಬಿಟ್ಟಿ ಕೆಲ್ಸ ಮಾಡಿದ್ರಲ್ಲಾ...."

"ಬಿಟ್ಟಿಯಲ್ಲ ಕಣೇ, ಶ್ರಮದಾನ ಮಾಡಿದ್ದು...."

"ಏನಂತೆ,ಎಲ್ಲಾ ಕೆಲ್ಸ ಮುಗಿಯಿತೆ?"

"ಅಯ್ಯೋ, ನೀನು ಅಗ್ಲೆ ಶಾನುಭೋ

(ಹದಿನೈದನೇ ಪುಟ ನೋಡಿರಿ)

ಇದೀಗ ಪ್ರಾರಂಭವಾಗಿದೆ

ನ್ಯೂ ಗ್ರೇಂಡ್ ಹೋಟೇಲ್

(ಆಸ್ಪತ್ರೆ ರಸ್ತೆ, ಉಡುಪಿ.)

ಇಪ್ಪತ್ತೈದು ವರ್ಷಗಳಿಂದ ಊಟ ಉಪಚಾರಗಳಲ್ಲಿ ಹೆಸರಾಂತ ಗ್ರೇಂಡ್ ಹೋಟೆಲ್ ಹೊಸ ಸಮರ್ಥ ಆಡಳಿತದಲ್ಲಿ ಆಧುನಿಕ ಸೌಕರ್ಯಗಳಿಂದ ಜೋಡಿಸಲ್ಪಟ್ಟು ನುರಿತ ಅಡುಗೆಯವರಿಂದ ತಯಾರಿಸಲ್ಪಟ್ಟ ರುಚಿಕರ ಸಸ್ಯಾಹಾರಿ ಮತ್ತು ಮಾಂಸಾಹಾರಿ ಭೋಜನ ಮತ್ತು ನವೀನ ಕೋಳಿ ರೊಟ್ಟಿ, ಬಿರಿಯಾನಿ, ರೋಸ್ಟ್ ಮುಂತಾದ ತಯಾರಿಕೆಗಳಿಂದ ವಿಸ್ತೃತ ಸೇವೆ ಸಲ್ಲಿಸಲು ಮಹಾಜನರ ಅಪೇಕ್ಷೆ ಮೇರೆಗೆ

ತಾ. 3ರಂದು ಶ್ರೀ ಕೆ. ಕೆ. ಪೈ (ಬಿ. ಕಾಂ.) ಡೆಪ್ಯುಟಿ ಜನರಲ್ ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್, ಇವರ ದಿವ್ಯಹಸ್ತದಿಂದ ಉದ್ಘಾಟಿಸಲ್ಪಟ್ಟಿದೆ.

ಒಮ್ಮೆ ಸಂದರ್ಶಿಸಿ ಪ್ರೋತ್ಸಾಹಿಸಲು ಮರೆಯದಿರಿ.

ಪಿ. ಎಸ್. ರೆಟ್ಟಿ. ಎಂ. ಬಿ. ಶೆಟ್ಟಿ.

ನವಯುಗ

ಸಂಪುಟ	ಉಡುಪಿ	ಸಂಚಿಕೆ
೪೪	೧೦—೯—೧೯೬೪	೨

Estd: 1921

NAVAYUGA

Leading Kannada Weekly

UDIPI, S Kanara

(Mysore State)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಹಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿ ಕಳಿಸುವವರಿಗೆ

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಚಂದಾದಾರರಿಗೆ

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ವಿಘ್ನಾಧಿಪತಿ ವಿನಾಯಕ

(ಕೃಪೆ: 'ಪ್ರಕಾಶಿನಿ')

ಆಹಾರ ಧಾನ್ಯಗಳ ಕಾರ್ಪೊರೇಶನ್

ಕೆಲವು ಸಮಯಕ್ಕೆ ಮೊದಲು ಕೇಂದ್ರ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಅವರು ದೇಶವನ್ನು ಕಾಡುತ್ತಿರುವ ಆಹಾರ ಧಾನ್ಯಗಳ ಸಮಸ್ಯೆಗಳನ್ನು ಪರಿಹರಿಸಲು ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳುವ ಆಶಯವನ್ನು ವ್ಯಕ್ತಪಡಿಸಿದ್ದರು. ಅದೇ ಸಮಯದಲ್ಲಿ ಆಹಾರ ಧಾನ್ಯಗಳನ್ನು ಅಧಿಕ ಬೆಳೆಸುವ ಯೋಜನೆ ಅಲ್ಲದೆ ಆಹಾರ ಧಾನ್ಯಗಳ ಕಾರ್ಪೊರೇಶನ್ ಒಂದನ್ನು ಸ್ಥಾಪಿಸುವ ವಿಚಾರವನ್ನು ಬಹಿರಂಗಪಡಿಸಿದ್ದರು ಇದರಂತೆ ಕೇಂದ್ರ ಸರಕಾರವು ಮುಂದಿನ ಜನವರಿ ೧ರಿಂದ ಈ ಕಾರ್ಪೊರೇಶನನ್ನು ರಚಿಸುವುದಾಗಿಯೂ ಕರ್ನಾಟಕದ ಸುಪ್ರಸಿದ್ಧ ಬ್ಯಾಂಕಾದ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ ಅವರು ಇದರ ಅಧ್ಯಕ್ಷರಾಗುವರೆಂದೂ ತಿಳಿದು ಬಂದಿದೆ.

ಶ್ರೀ ಪೈಯವರು ಅರ್ಥವ್ಯವಸ್ಥೆಯಲ್ಲಿ ಕೃಷಿರಂಗದಲ್ಲಿ ಪರಿಪೂರ್ಣ ಅನುಭವವುಳ್ಳವರು. ಇಂದು ಅವರಿಗೆ ಸೇವೆಸಲ್ಲಿಸಲು ವಿಶಾಲ ಕಾರ್ಯಕ್ಷೇತ್ರ ಲಭಿಸಿದೆ. ತಮ್ಮ ಬುದ್ಧಿವಂತಿಕೆ, ಕರ್ತವ್ಯ ಶೀಲತೆ, ಪರಿಶ್ರಮ ಪಟುತ್ವ ಮೊದಲಾದ ಉಚ್ಚಗುಣಗಳಿಂದ ಈಗ ಒದಗಿಬಂದಿರುವ ದೊಡ್ಡ ಹೊಣೆಗಾರಿಕೆಯನ್ನು ಶ್ರೀ ಪೈಯವರು ಯಶಸ್ವಿಯಾಗಿ ನಿರ್ವಹಿಸುವರೆಂದು ನಂಬಬಹುದು. ಆಹಾರ ಧಾನ್ಯಗಳ ವಿಷಯದಲ್ಲಿ ಭಾರತವು ಕೊರತೆಯ ದೇಶವಾಗಿಯೇ ಉಳಿದಿದೆ. ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಬಗ್ಗೆ ವಿಶೇಷ ಆಸಕ್ತಿಯನ್ನು ತೋರಿಸಲಾಗಿದ್ದರೂ ಸ್ವಾವಲಂಬನೆಯನ್ನು ಸಾಧಿಸುವುದು ಸಾಧ್ಯವಾಗಲಿಲ್ಲ. ತಾನು ಮಾಡುವ ಭೂಮಿಯ ಮೇಲೆ ರೈತನಿಗೆ ಅಧಿಕಾರ ಇನ್ನೂ ದೊರಕಿಲ್ಲ ಭೂಶಾಸನವು ಬೇರೆ ಬೇರೆ ರಾಜ್ಯಗಳ ವಿಧಾನ ಮಂಡಲಗಳಲ್ಲಿ ಚರ್ಚಿಸಲ್ಪಟ್ಟಿದ್ದರೂ ಅವು ಕಟ್ಟುನಿಟ್ಟಾಗಿ ಆಚರಣೆಗೆ ಬಂದಿರುವುದಿಲ್ಲ ಬಡ ರೈತನಿಗೆ ಆರ್ಥಿಕ ಸಹಾಯ ನೀಡುವ ಯೋಜನೆಗಳು ಕೆಲವೊಂದಿದ್ದರೂ ಅವು ಶ್ರೀಮಂತ ರೈತರಿಗೆ ಮಾತ್ರ ಸಿಗುವ ಪರಿಸ್ಥಿತಿ ಇದೆ. ಸುಧಾರಿತ ಬೀಜಗಳ ಉಪಯೋಗ, ರಾಸಾಯನಿಕ ಗೊಬ್ಬರಗಳ ಬಳಕೆ, ಆಧುನಿಕ ಕೃಷಿ ವಿಧಾನಗಳು ನಮ್ಮ ಸಾಮಾನ್ಯ ರೈತರಿಗೆ ಕನಸಿನ ಗಂಟಾಗಿಯೇ ಉಳಿದಿವೆ. ನೀರಾವರಿಯ ಸೌಕರ್ಯ ಕೂಡಾ ಸಾಕಷ್ಟು ಇಲ್ಲವೆ ಅವನು ನಷ್ಟಕ್ಕೆ ಗುರಿಯಾಗುವಂತಾಗಿದ್ದಾನೆ. ಇವಕ್ಕೂ ಮಿಗಿಲಾಗಿ ತಾನು ಬೆಳೆದ ಧಾನ್ಯಗಳಿಗೆ ಯೋಗ್ಯವಾದ ಬೆಲೆ ದೊರೆಯುವುದೆಂಬ ಭರವಸೆ ಕೂಡಾ ಅವನಿಗಿರುವುದಿಲ್ಲ. ಇಂತಹ ಪುಷ್ಟ ಪದ್ಧತಿಗಳನ್ನು ದೂರ ಮಾಡುವ ವರೆಗೆ ದೇಶದಲ್ಲಿ ಆಹಾರ ಸಮಸ್ಯೆಯು ದೂರವಾಗುವುದು ಸಾಧ್ಯವಿಲ್ಲ. ಇದಕ್ಕೆ ದೀರ್ಘಾವಧಿಯ ಮತ್ತು ಅಲ್ಪಾವಧಿಯ ಕ್ರಮವನ್ನು ಎಡೆಬಿಡದೆ ತೆಗೆದುಕೊಳ್ಳಬೇಕು. ಸದ್ಯ ಸ್ಥಾಪಿತವಾಗಲಿರುವ ಆಹಾರ ಧಾನ್ಯಗಳ ಕಾರ್ಪೊರೇಶನ್ ರೈತನು ಬೆಳೆದ ಉತ್ಪತ್ತಿಗೆ ಕನಿಷ್ಠ ಬೆಲೆಯನ್ನು ನಿರ್ಧರಿಸಿ ಅವನ್ನು ಪಡೆದುಕೊಂಡು ಸಹಕಾರಿ ಸಂಘಗಳ ಮೂಲಕ ವಿತರಣೆ ಮಾಡುವುದು. ಇದರಿಂದ ರೈತನು ತಾನು ಬೆಳೆದ ಆಹಾರ ಧಾನ್ಯಗಳನ್ನು ದೂರ ವರ್ತಕನಿಗೆ ಅಲ್ಲದೆ ಸಾಹುಕಾರರಿಗೆ ಸಿಕ್ಕ ಸಿಕ್ಕ ಬೆಲೆಗೆ ಮಾರಿ ಬಿಡುವ ಪ್ರಮೇಯ ತಪ್ಪುವುದು. ಇದೇ ರೀತಿಯಲ್ಲಿ ಅತನನ್ನು ಕಾಡುವ ಇನ್ನಿತರ ಸಮಸ್ಯೆಗಳನ್ನು ದೂರ ಮಾಡುವಲ್ಲಿ ಕೃಷಿ ಮಂತ್ರಿ ಶಾಖೆಯು ಮುಂದೆ ಬರಬೇಕು.

ಆಹಾರ ಧಾನ್ಯಗಳ ಕಾರ್ಪೊರೇಶನ್ ರಚನೆ ಹೊಂದುವುದರಿಂದ ದೇಶದಲ್ಲಿ ಆಹಾರ ಧಾನ್ಯಗಳ ಒಟ್ಟಿಗೆ ಇದ್ದ ವರ್ತಕರ ನಿರಂಕುಶ ಪ್ರಭುತ್ವವು ದೂರವಾಗುವುದು, ಅವರು ಇವುಗಳ ವಿತರಣೆಯಲ್ಲಿ ಕಾರ್ಪೊರೇಶನಿನೊಡನೆ ಸ್ಪರ್ಧೆಗೆ ನಿಲ್ಲಬೇಕಾಗುತ್ತದೆ. ಅಭಾವ ಸ್ಥಿತಿಯು ತಲೆದೋರಿದಾಗ ಲಾಭಬಡಕತನವನ್ನು ಪ್ರದರ್ಶಿಸುವ ವ್ಯಾಪಾರಿಗಳು ಇನ್ನು ಮುಂದೆ ಹೀಗೆ ಮಾಡಲಾಗುವುದಿಲ್ಲ. ವರ್ತಕರು ಮಾಡುವ ಕೆಲಸವನ್ನೇ ಕಾರ್ಪೊರೇಶನೂ ಮಾಡುತ್ತದೆ. ಆದರೆ ವರ್ತಕರ ವ್ಯವಹಾರದ ಮೇಲೆ ನಿಯಂತ್ರಣ ಹೇರುವುದು ಸರಕಾರಕ್ಕೆ ಕಷ್ಟಸಾಧ್ಯ. ಕಾರ್ಪೊರೇಶನಿನ ಮೂಲಕ ರೈತನಿಗೆ ನ್ಯಾಯವಾದ ಬೆಲೆಯು ಸಿಗುವಂತೆ ಆಹಾರ ಧಾನ್ಯಗಳನ್ನು ಖರೀದಿಸಿ ಅವುಗಳ ಬೆಲೆಯನ್ನು ಎಲ್ಲ ಕಾಲದಲ್ಲಿಯೂ ಹತೋಟಿಯಲ್ಲಿಡುವುದು ಸಾಧ್ಯವಾಗುತ್ತದೆ, ಈ ದೃಷ್ಟಿಯಿಂದ ಸರಕಾರವು ಈಗ ಇಟ್ಟಿರುವ ಈ ಹೆಜ್ಜೆಯು ಮಹತ್ವಪೂರ್ಣವಾದುದು ಮಾತ್ರವಲ್ಲ ಸ್ವಾಗತಾರ್ಹವೂ ಆಗಿದೆ.

ಕಾಂಗ್ರೆಸ್ಸಿನಲ್ಲಿ ಶಿಸ್ತು

ಇತ್ತೀಚೆಗಿನ ಕೆಲವು ಸಮಯದಿಂದ ಕಾಂಗ್ರೆಸ್ಸು ಪಕ್ಷದ ಸಂಘಟನೆಯು ಬಲವತ್ತರವಾಗಿ ನಡೆಯಬೇಕೆಂಬ ಮಾತು ಎಲ್ಲೆಲ್ಲೂ ಕೇಳಿ ಬರುತ್ತಿದೆ. ಕಾಂಗ್ರೆಸ್ಸಿಗರಲ್ಲಿ ನಿಷ್ಠೆಯು ಕಡಿಮೆಯಾಗುತ್ತಾ ಬರುತ್ತಿದೆ ಎಂಬುವಕ್ಕೆ ಬೇರೆ ಬೇರೆ ರಾಜ್ಯಗಳ ವಿದ್ಯಮಾನಗಳೇ ಸಾಕ್ಷಿ. ಉತ್ತರ ಪ್ರದೇಶ ಒರಿಸ್ಸಾ ಮತ್ತೀಗ ಕೇರಳ ಮೊದಲಾದ ಕೆಲವು ರಾಜ್ಯಗಳಲ್ಲಿ ಕಾಣಿಸಿಕೊಂಡ ಕಾಂಗ್ರೆಸ್ಸಿಗರ ಘರ್ಷಣೆ ಪಕ್ಷಕ್ಕೆ ಶೋಭೆಯನ್ನು ತರುವುದಿಲ್ಲ. ನಿಷ್ಠಾವಂತ ಕಾಂಗ್ರೆಸ್ಸಿಗರಂತೆ ವರ್ತಿಸುವುದನ್ನು ಬಿಟ್ಟು ಗುಂಪುಗಾರಿಕೆಯನ್ನು ಪ್ರೋತ್ಸಾಹಿಸಿ ವೈಮನಸ್ಯದ ಭಾವನೆಯನ್ನು ಬೆಳೆಸುವುದು ಕಾಂಗ್ರೆಸ್ಸಿನ ಹಿತದೃಷ್ಟಿಯಿಂದ ಎಂದಿಗೂ ಒಳ್ಳೆಯದಲ್ಲ ಕರ್ನಾಟಕದ ಹನುಮಂತಯ್ಯನವರು ಕಾಂಗ್ರೆಸ್ಸಿನೊಳಗಿನ ಗುಂಪುಗಾರಿಕೆಯು ಆಡಳಿತದ ಒಳಿತಿಗೆ ಕಾರಣವಾಗುವದೆಂದು ಅಂದಿದ್ದರೂ ಪಕ್ಷದ ಶಿಸ್ತು ನಿಯಮಗಳಿಗೆ ಇದು ಮಾರಕವಾಗಬಹುದೆಂದುಂಬುದನ್ನು ಮರೆಯಬಾರದು. ಕೇರಳದಲ್ಲಿ ಭಿನ್ನ ಮತೀಯ ಕಾಂಗ್ರೆಸಿಗರು ಸರಕಾರಕ್ಕೆ ಬೆಂಬಲ ನೀಡಲು ನಿರಾಕರಿಸಿದ್ದಾರೆ. ಮಾತ್ರವಲ್ಲ ವಿರೋಧಿ ಪಕ್ಷಗಳು ಮಂಡಿಸುವ ಅವಿಶ್ವಾಸ ಗೊತ್ತುವಳಿಯನ್ನು ಬೆಂಬಲಿಸುವಷ್ಟು ಮುಂದುವರಿದಿದ್ದಾರೆ ಇದೇ ರೀತಿಯ ಪ್ರಸಂಗ ಕರ್ನಾಟಕವೇ ಮೊದಲಾದ ತೀವ್ರ ಗುಂಪುಗಾರಿಕೆಯ ರಾಜ್ಯಗಳಲ್ಲಿ ಕಂಡು ಬರಬಹುದು.. ಪಕ್ಷದ ಧ್ಯೇಯ ಧೋರಣೆಗಳನ್ನು ರೂಪಿಸುವಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳು, ಚರ್ಚೆಗಳು ಕಂಡು ಬರುವುದು ಸಹಜ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಟ್ಟಿರುವ ಕಾಂಗ್ರೆಸ್ಸು ಪಕ್ಷದ ಬಹುಜನ ಸದಸ್ಯರ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದು ಆಗತ್ಯವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ, ಪಕ್ಷದ ಸಂಘಟನೆಯು ಶಿಥಿಲಗೊಳ್ಳುವುದು ಮಾತ್ರವಲ್ಲ, ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳ ಕೈ ಮೇಲಾಗುವುದು. ಇದನ್ನು ಕಾಂಗ್ರೆಸ್ಸು ಮರೆಯದೆ ಮುಂದುವರಿಯುವುದು ಅತ್ಯಗತ್ಯವಾಗಿದೆ

ವಚನ ಸುಧೆ

ಆತ್ಮನಾ ವಿಂದತೇ ವೀರ್ಯಂ|
ವಿದ್ಯಯಾ ವಿಂದತೇಽ ಮೃತಮ್॥
(ಕೇನೋಪನಿಷತ್ತು—೧೨)

೦ ಆತ್ಮಜ್ಞಾನದಿಂದ ಬಲವು ದೊರೆಯುತ್ತದೆ. ವಿದ್ಯೆಯಿಂದ ದೇವತ್ವವು ಲಭಿಸುತ್ತದೆ.

೦೦ ಆತ್ಮಜ್ಞಾನವನ್ನು ಸಂಪಾದಿಸುವುದರಿಂದ ಆತ್ಮವಿಶ್ವಾಸವು ಹೆಚ್ಚುತ್ತದೆ. ವಿದ್ಯೆಯನ್ನು ಅಭ್ಯಸಿಸುವುದರಿಂದ ಅಮರತ್ವವು ದೊರೆಯುತ್ತದೆ. ಆದುದರಿಂದ ವಿದ್ಯಾಧ್ಯಯನವನ್ನು ಅವಶ್ಯ ಮಾಡು.

ಕೃತಜ್ಞತೆಗಳು

ಸ್ವಯಂಸ್ಫೂರ್ತಿಯಿಂದ ನವಯುಗಕ್ಕೆ ಕೆಲವು ಚಂದಾದಾರರನ್ನು ಒದಗಿಸಿಕೊಟ್ಟ ಡಾ|| ಕೆ. ಆರ್. ಶೆಟ್ಟಿ, ಶಾರದಾ ಕ್ಲಿನಿಕ್, ಆಲ್ದೂರು, ಅವರಿಗೂ ಡಾ|| ಕೆ. ಬಾಬು ಶೆಟ್ಟಿ, ಮುಲ್ಕಿ ಅವರಿಗೂ ಈ ಮೂಲಕ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಸಂ. ನ.

ನರಸಣ್ಣನ ಸರಸ



ಮುಂದಿನ ವರ್ಷ ಆಹಾರ ಧಾನ್ಯಗಳ ಕಾರ್ಪೊರೇಶನ್ ಸ್ಥಾಪನೆಗೊಳ್ಳಲಿಕ್ಕಿದೆ. ಅದ್ದರಿಂದ ಮುಂದಿನ ಚೌತಿಗೆ ಬೇಕಷ್ಟು ಮೋದಕ ಗಡುಬು ಕೊಡುತ್ತೇನೆ ಅಂತ ಸಿದ್ಧಿ ವಿನಾಯಕನನ್ನು ಬೇಡಿಕೊಂಡು ಬಾ.

ಕಥಾಪ್ರಪಂಚ

ಇರುಳು ಕಳೆಯಿತು

ತಮಿಳು ಮೂಲ. ಸ್ವರ್ಗೀಯ ಶ್ರೀ ಕು. ಪ. ರಾಜಗೋಪಾಲನ್.

ಅನುವಾದಕ: ಹಾರ್ಯಾಡಿ ಮಹಾಬಲೇಶ್ವರ ಐತಾಳ.

ತಂತಿ ನೋಡಿದೊಡನೆಯೇ ನಾವೆಲ್ಲರೂ ಒಮ್ಮೆಗೇ ದಿಗಿಲಾದೆವು ಎನ್ನಿದರ ಅರ್ಥ ಎಂದು ತಿಳಿದುಕೊಳ್ಳುವುದೇ ಕಠಿಣವಾಯಿತು. "ಶಿವರಾಮ ಅಯ್ಯರ್ ಸೀರಿಯಸ್"—ಎಂಬ ಮೂರು ಶಬ್ದಗಳು ಮಾತ್ರ ತಂತಿಯಲ್ಲಿದ್ದಿದ್ದುವು ತಂತಿಯು ಮದ್ರಾಸಿನ ಜನರಲ್ ಆಸ್ಪತ್ರೆಯಿಂದ ಬಂದಿತ್ತು.

ನನ್ನ ತಂಗಿ ಎರಡು ತಿಂಗಳ ಹಿಂದೆ ಮದ್ರಾಸಿನಿಂದ ಬಂದಿದ್ದಳು. ಆ ಸಮಯದಲ್ಲಂತೂ ನಮ್ಮ ಭಾವನವರ ಕಾಯಿಲೆ ಸಂಪೂರ್ಣ ಗುಣವಾಗಿದ್ದಿತ್ತು! 'ಇನ್ನೇನೂ ಭಯಪಡಬೇಕಾಗಿಲ್ಲ'ವೆಂದೂ 'ಈಗ ಅವರಲ್ಲಿ ಕ್ಷಯ ರೋಗದ ಕುರುಹು ಕೂಡ ಇಲ್ಲ'ವೆಂದೂ ಪ್ರಸಿದ್ಧ ಡಾಕ್ಟರರು ಭರವಸೆಯಿತ್ತಿದ್ದರು.

ಕುಂಜಮ್ಮ ಅದೇನನ್ನೋ ಕಳೆದುಕೊಂಡವಳಂತೆ ಬೆಪ್ಪಳಾಗಿ ಮೂಲೆಹಿಡಿದು ಕುಳಿತು ಬಿಟ್ಟಿದ್ದಳು. ಆ ತಂತಿಯಿಂದಾಗಿ ಅವಳಿಗೆ ಸಿಡಿಲೆರಗಿದಂತಾಗಿದ್ದರೆ ಆಶ್ಚರ್ಯವೇನಿಲ್ಲ. ನಾವೆಲ್ಲರೂ ಅಲ್ಲಸಲ್ಲದ ವಿಚಾರಗಳಿಗೆ ಮಿದುಳಲ್ಲಿ ಎಡೆಕೊಟ್ಟು ಏನೇನನ್ನೋ ಶಂಕಿಸ ತೊಡಗಿದ್ದೆವು. ಒಮ್ಮೆ ನನಗನ್ನಿಸುತ್ತಿತ್ತು:—"ಛೇ! ಹೀಗಾಗಿರಲಾರದು! ಆದರೆ ಮರುಕ್ಷಣವೇ 'ಏಕಾಗಬಾರದು? ಬಹುಶಃ ಹೀಗೆಯೇ ಏನೋ ಆಗಿರಬೇಕು'—ಎಂದೂ ಅನ್ನಿಸುತ್ತಿತ್ತು. ಈ ರೀತಿ ಪರಸ್ಪರ ವಿರೋಧೀ ಭಾವನೆಗಳು ತರಂಗತರಂಗವಾಗಿ ಹೃದಯಾಂತರಾಳದಲ್ಲಿ ಉದ್ಭವಿಸಿ ನನ್ನನ್ನು ಧೃತಿಗೆಡಿಸಿದುವು. ತಂತಿಯ ಆಧಾರದಿಂದ ಇದೇ ವಿಚಾರವೇ ಬಲವತ್ತರವಾದಾಗ ನಾನು ಕಿಂಕರ್ತವ್ಯ ವಿಮೂಢನಾದೆ. ಹೃದಯದಲ್ಲಿ ಬೇರೂರಿದ ಈ ವಿಚಾರವನ್ನು ಕಿತ್ತೆಸೆಯಲು ಸಾಧ್ಯವಾಗಲಿಲ್ಲ.

ತಂತಿಯನ್ನು ಹಲವು ಬಾರಿ ಓದಿದೆ. ಅದರಲ್ಲಿ ಸಂಶಯಕ್ಕೆ ಎಡೆಯೇ ಇದ್ದಿಲ್ಲ. ಅದು ಮದ್ರಾಸಿನ ಜನರಲ್ ಆಸ್ಪತ್ರೆಯಿಂದಲೇ ಬಂದಿತ್ತು. ಸಂದೇಹವೇ ಇಲ್ಲ. ಕುಂಜಮ್ಮಳ ಹೆಸರಿಗೆ ಅದೇ ದಿನ ಬೆಳಿಗ್ಗೆ ಕಳಿಸಿದ್ದರು. ಇದರಲ್ಲಿ ತಪ್ಪೇನಿದೆ?

ಆದರೆ ಇಷ್ಟು ಬೇಗ ಭಾವನವರಿಗೆ ಅಪಾಯವೇನಾಗಿರಬಹುದು? ಮೂರು ದಿನಗಳ ಕೆಳಗೆ ಅವರಿಂದ ಕುಂಜಮ್ಮಳಿಗೆ ಒಂದು ಪತ್ರ ಬಂದಿತ್ತು. ಅದರಲ್ಲಿ 'ತನಗೆ ಅಸ್ವಾಸ್ಥ್ಯ'ವೆಂದೇನೂ ಅವರು ಪ್ರಸ್ತಾಪಿಸಿದ್ದಿರಲಿಲ್ಲ

ನಾನು ಅದೇದಿನ ತಂಗಿಯನ್ನು ಕರೆದುಕೊಂಡು ಸಂಜೆಯ ರೈಲಿನಲ್ಲಿ ಮದ್ರಾಸಿಗೆ ಹೊರಟೆ. ಶಂಭುಕೋಣದಿಂದ ಮೊತ್ತಮೊದಲು ಮದ್ರಾಸಿಗೆ ಹೊರಡುವ ರೈಲು ಅದಾಗಿತ್ತು.

ಮನೆಯಿಂದ ಹೊರಡುವುದಕ್ಕೆ ಮೊದಲು ಒಳ್ಳೆಯ ಮುಹೂರ್ತ ನೋಡಿಯೇ ಹೊರಟಿದ್ದೆವು. ನಮ್ಮ ಪುರೋಹಿತರಾದ ನೀಲಕಂಠ ಶಾಸ್ತ್ರಿಗಳು "ಏನೇನೂ ಗಾಬರಿಪಟ್ಟುಕೊಳ್ಳಬೇಡಿ. ಸ್ವಲ್ಪ ಗ್ರಹಬಾಧೆಯಿದೆ. ಯತ್ಕಿಂಚಿತ್ ಕಷ್ಟವಾದೀತು. ಅಷ್ಟೇ"—ಎಂದಿದ್ದರು. ನಮ್ಮ ತಾಯಿ ತನ್ನ ಇಷ್ಟ ದೇವತೆಯನ್ನು ಪ್ರಾರ್ಥಿಸಿದಳು. ಒತ್ತಾಯಮಾಡಿ ನಮಗೆ ಉಣಬಡಿಸಿದಳು. ದಾರಿಯಲ್ಲಿ ಉಪಯೋಗಕ್ಕಿರಲೆಂದು ಸ್ವಲ್ಪ ತಿಂಡಿಯನ್ನು ಕಟ್ಟಿಕೊಟ್ಟಳು.

ಕುಂಜು ಯಂತ್ರದಂತೆ ಎಲ್ಲರ ಆಜ್ಞೆಯನ್ನು ಪರಿಪಾಲಿಸಿದಳು. ಯಾರೋ ಅಂದರು—"ದೇವರಿಗೆ ನಮಸ್ಕಾರ ಮಾಡಮ್ಮ." ತತ್‌ಕ್ಷಣವೇ ಆಕೆ ದೇವರಿಗೆ ನಮಸ್ಕರಿಸಿದಳು. ಅವಳ ಮೂಕ ವೇದನೆಯನ್ನು ಕಂಡು ನನಗೂ ಅಳು ಬಂತು. ಅವಳು ಈ ರೀತಿ ನಿರುತ್ಸಾಹಿಯಾಗಿರುವುದನ್ನು ನಾನೆಂದೂ ಕಂಡಿರಲಿಲ್ಲ.

ಮುಹೂರ್ತ ಬಂದೊಡನೆಯೇ ನಾವು ಮನೆಯಿಂದ ಹೊರಟೆವು. ಆಗಷ್ಟೇ ಕಾವೇರಿ ನದಿಯಿಂದ ನೀರು ತರುತಿದ್ದ ಪಕ್ಕದ ಮನೆಯ ಮಂದಾಕಿನಿ ನಮಗೆದುರಾದಳು. ಶುಭಶಕುನ! "ನಿಮಗೇನೂ ಆಪತ್ತು ಬರಲಾರದು. ಸ್ವಪ್ನದಲ್ಲಿಯೂ ನಾನೆಂದೂ ಪರರ ಕೇಡುಕನ್ನು ಹಾರೈಸಿದವರಲ್ಲ. ದೇವರು ಒಳ್ಳೆಯದನ್ನೇ ಮಾಡುತ್ತಾನೆ ಧೈರ್ಯದಿಂದಿರಿ."—ಎಂದು ನಮ್ಮ ತಾಯಿ ನಮ್ಮಲ್ಲಿ ಧೈರ್ಯ ತುಂಬಿ "ಒಳ್ಳೆಯದಾಗಲಿ"—ಎಂದು ತುಂಬು ಮನಸ್ಸಿನಿಂದ ಆಶೀರ್ವಾದ ಮಾಡಿದಳು.

ರೈಲನ್ನೇರುವಾಗ ರಾತ್ರಿಯ ಎಂಟು ಗಂಟೆಯಾಗಿತ್ತು. ಅಶಾಂತಿಯಿಂದಲೇ ಇಡೀ ರಾತ್ರಿಯನ್ನು ಕಳೆಯಬೇಕಾಗಿತ್ತು. ನಿದ್ದೆ ಹೇಗೂ ಬರುವಂತಿದ್ದಿರಲಿಲ್ಲ. ಆದರೆ ನಾವೀಗ ಅಶಾಂತರಾಗಿ ಎಷ್ಟೇ ಒದ್ದಾಡಿದರೂ ಪ್ರಯೋಜನವಿಲ್ಲವಲ್ಲ!

ನಾವಿಬ್ಬರೂ ಕಿಟಕಿಯ ಸಮೀಪದಲ್ಲಿ ಎದುರು-ಬದುರಾಗಿ ಕುಳಿತಿದ್ದೆವು.

"ನಾನು ಇಲ್ಲಿಯೇ ಕುಳಿತುಕೊಳ್ಳುತ್ತೇನೆ. ಈ ಸೀಟನ್ನೇನೂ ನೀವು ರಿಜರ್ವ್ ಮಾಡಿಸಿಟ್ಟಿಲ್ಲ. ನಾನು ನಿಮ್ಮಂತೆಯೇ ಟಿಕೇಟು ತೆಗೆದುಕೊಂಡಿದ್ದೇನೆ. ನಾನು ಇಲ್ಲಿಯೇ ಕುಳಿತುಕೊಳ್ಳುತ್ತೇನೆ" ಒಬ್ಬ ನವಯುವಕ ನಿರ್ಧಾರದಿಂದ ನುಡಿದ. ಹೀಗೆಂದವನೇ ಆತ ತನ್ನ ಸೂಟ್‌ಕೇಸನ್ನು ಕಾಲ ಬಳಿಯಿಟ್ಟುಕೊಂಡು ಅಲ್ಲಿಯೇ ಕುಳಿತುಬಿಟ್ಟ. ಕೆಲವರು ಪರಸ್ಪರ ಮುಖ ನೋಡಿಕೊಂಡು ಮುಗುಳು ನಕ್ಕರು. ಇನ್ನು ಕೆಲವರು ಆ ಯುವಕನ ದಿಟ್ಟತನವನ್ನು ಕಂಡು ಆಶ್ಚರ್ಯದಿಂದ ಅವನನ್ನೇ ಎವೆಯಿಕ್ಕದೆ ನೋಡತೊಡಗಿದರು

ಪಾಶ್ಚಾತ್ಯ ವೇಷ ಭೂಷಣಗಳಲ್ಲಿ ಆ ಯುವಕ ಅತ್ಯಂತ ಸುಂದರನಾಗಿ ಕಾಣಿಸುತ್ತಿದ್ದ; ಹೃಷ್ಟಪುಷ್ಟನಾಗಿದ್ದ. ಆಕರ್ಷಕ ವ್ಯಕ್ತಿತ್ವ ಅವನದಾಗಿತ್ತು. ಅಲ್ಲದೆ ಸುಶಿಕ್ಷಿತನಂತೆಯೂ ಕಾಣಿಸುತಿದ್ದ.

ಪ್ಲಾಟ್‌ಫಾರ್ಮಿನ ಮೇಲೆ ಜನರು ಗುಂಪು ಸೇರಿದ್ದರು. ಸುತ್ತಲೂ ಗುಲ್ಲೋ ಗುಲ್ಲು! ಗಾಡಿಯಲ್ಲಿ ಎಳ್ಳು ಚೆಲ್ಲಲೂ ಸ್ಥಳವಿಲ್ಲದಂತೆ ಜನರು ನೆರೆಕೊಂಡಿದ್ದರು. ಆ ಯುವಕ ಕಿಟಕಿಯಿಂದಲೇ ಒಳಗೆ ತೂರಿಬಂದಿದ್ದ. ಬಂದವನೇ ಗದ್ದಲ ಮಾಡಿ, ಮಧ್ಯ ವಯಸ್ಕರೊಬ್ಬರ ಬಳಿಯಲ್ಲಿ ಜಾಗ ಮಾಡಿಕೊಂಡು ಕುಳಿತುಬಿಟ್ಟಿದ್ದ. ಅಲ್ಲಿ ಆ ಮಧ್ಯ ವಯಸ್ಕರು ತಮ್ಮ ಬೆಡ್ಡಿಂಗನ್ನು ಬಿಡಿಸಿಟ್ಟಿದ್ದರು.

"ನೀವು ತುಂಬ ವಿಚಿತ್ರ ಮನುಷ್ಯರು! ಸುಶಿಕ್ಷಿತರಂತೆ ಕಾಣಿಸುತ್ತಿದ್ದೀರಿ ಈ ರೀತಿ ಅಸಭ್ಯರಂತೆ ಯಾಕೆ ವರ್ತಿಸುತ್ತಿರುವಿರಿ?"—ಸಿಟ್ಟಿನಿಂದ ಆ ಮಧ್ಯ ವಯಸ್ಕರು ಪ್ರಶ್ನಿಸಿದರು.

"ಸುಶಿಕ್ಷಿತನಾದರೇನಾಯಿತು? ಖಾಲಿ ಜಾಗವಿದ್ದರೂ ಕುಳಿತುಕೊಳ್ಳದೆ ನಿಂತುಕೊಂಡೇ ಹೋಗಬೇಕೆಂದು ನಿಮ್ಮ ಅಭಿಪ್ರಾಯವೇ?"

ಅಲ್ಲಿ ಕುಳಿತಿರುವವರೆಲ್ಲರೂ ಗಹಗಹಿಸಿ ನಕ್ಕರು.

"ಹಾಗಲ್ಲ, ನೋಡಿ. ಮುಂದಿನ ಸ್ಟೇಶನ್ನಿನಲ್ಲಿ ನನ್ನವರು ಕೆಲವರು ರೈಲು ಹತ್ತುವವರಿದ್ದಾರೆ. ಅವರಿಗಾಗಿ ನಾನು ಈ ಜಾಗವನ್ನು ಕಾದಿರಿಸಿದ್ದೆ"—ತುಸು ಮೆತ್ತಗಾಗಿ ಅವರು ಸ್ಪಷ್ಟೀಕರಣ ನೀಡಿದರು.

"ಓಹ್ಹೋ! ಹಾಗೋ? ಅಂದರೆ ನೀವು ಈ ಜಾಗವನ್ನು ಗುತ್ತಿಗೆಗೆ ಪಡೆದುಕೊಂಡಿದ್ದೀರಿ ಎಂದಂತಾಯಿತು"

ಇವರಿಬ್ಬರ ವಾದ ವಿವಾದ ಗಾಡಿಯಲ್ಲಿದ್ದ ಹಲವರಿಗೆ ಒಳ್ಳೆಯ ಮನರಂಜನೆಯನ್ನೊದಗಿಸಿತು. ಕೆಲವರಂತೂ ತಲ್ಲೀನರಾಗಿ ಇವರ ಮಾತುಗಳನ್ನೇ ಆಲಿಸುತ್ತ ಕಿವಿಯರಳಿಸಿ ಕುಳಿತಿದ್ದರು.

ಕ್ಷಣ ಕ್ಷಣಕ್ಕೂ ಗದ್ದಲ ಜಾಸ್ತಿಯಾಗುತ್ತಿದ್ದಿತ್ತು. ಆದರೆ ಆ ಯುವಕ ಇದಾವುದನ್ನೂ ಗಮನಿಸಿದಂತಿರಲಿಲ್ಲ. ಆತ ಕುಳಿತುಕೊಳ್ಳಲು ಜಾಗ ಸಿಕ್ಕಿದ್ದಕ್ಕಾಗಿ ಅತ್ಯಂತ ಹರ್ಷಚಿತ್ತನಾಗಿದ್ದ. ಜೇಬಿನಿಂದ ಸಿಗರೇಟು ತೆಗೆದು, ಮತ್ತೊಂದು ಜೇಬಿನಿಂದ ಬೆಂಕಿಪೊಟ್ಟಣ ತೆಗೆದು, ಕಡ್ಡಿಗೀರಿ ಸಿಗರೇಟು ಸೇದತೊಡಗಿದ.

ಅಷ್ಟರಲ್ಲಿ ರೈಲು ಸೀಟಿಯೂದಿತು.

ಪ್ಲಾಟ್‌ಫಾರ್ಮಿನಲ್ಲಿ ತಮ್ಮ ಆತ್ಮೀಯರೊಡನೆ ಮಾತುಕತೆಯಾಡುತ್ತ ನಿಂತಿದ್ದವರೆಲ್ಲರೂ ಅವಸರದಿಂದ ರೈಲನ್ನು ಏರತೊಡಗಿದರು. ರೈಲಿನಲ್ಲಿ ಮತ್ತೊಮ್ಮೆ ನೂಕು ನುಗ್ಗಲಿಗೆ ಪ್ರಾರಂಭವಾಯಿತು. ಆದರೆ ನನ್ನ ತಂಗಿಗೆ ಇದಾವುದರತ್ತಲೂ ಲಕ್ಷ್ಯವೇ ಇದ್ದಿರಲಿಲ್ಲ. ಆಕೆ ಪ್ಲಾಟ್‌ಫಾರ್ಮಿನಲ್ಲಿ ನಿಂತಿದ್ದ ಸುಂದರ ತರುಣಿಯೊಬ್ಬಳನ್ನು ನೋಡುತ್ತ ಕುಳಿತಿದ್ದಳು.

ರೈಲು ಮತ್ತೊಮ್ಮೆ ಸೀಟಿಯೂದಿ ನಿಧಾನವಾಗಿ ಚಲಿಸತೊಡಗಿತು. ಮೆಲ್ಲ ಮೆಲ್ಲನೆ ಕೆಲವು ದೂರ ಕ್ರಮಿಸಿದ ಬಳಿಕ ಅದು ತನ್ನ ಮಾಮೂಲಿನ ವೇಗದಿಂದ ಓಡಲಾರಂಭಿಸಿತು. ಗಾಡಿಯೊಳಗೆ ಗಾಳಿಯ ಸಂಚಾರಕ್ಕೆ ಪ್ರಾರಂಭವಾಯಿತು.

ರೈಲು ಅತಿವೇಗದಿಂದ ಓಡತೊಡಗಿತು.

ಹಸುರು ತುಂಬಿದ ಗದ್ದೆಗಳು! ಫಲಭರಿತವಾದ ತೆಂಗಿನ ತೋಟಗಳು! ವಿಶಾಲವಾದ ಬಯಲು! ಎಲ್ಲವನ್ನೂ ಹಿಂದಕ್ಕೆ ಹಾಕುತ್ತ ಸಾಗುತ್ತಿತ್ತು ರೈಲು.

ರೈಲಿನಲ್ಲಿರುವವರೆಲ್ಲ ಪರಸ್ಪರ ಮಾತುಕತೆಗಳಲ್ಲಿ ಮಗ್ನರಾಗಿದ್ದರು. ಮೂಲೆಯಲ್ಲಿ ಕುಳಿತಿದ್ದ ನಾಲ್ಕಾರು ಮಂದಿ ಯುವಕರು ಸಿಗರೇಟು ಸೇದುತ್ತ 'ಹಾ ಹಾ ಹೀ ಹೀ'—ಎಂದು ದೊಡ್ಡ ಕೋಲಾಹಲವನ್ನೆಬ್ಬಿಸಿದ್ದರು. ಬಹುಶಃ ಕಾಲೇಜಿನ ವಿದ್ಯಾರ್ಥಿಗಳಿರಬೇಕು, ಒಬ್ಬನ ಕೈಯಲ್ಲಿ ಫಿಲ್ಮ್‌ಫೇರ್ ಇದ್ದಿತ್ತು. ಆತ ಆಗಾಗ ಅದನ್ನು ತೆರೆದು ಅಲ್ಲಿಷ್ಟು ಇಲ್ಲಿಷ್ಟು ಓದುತ್ತಿದ್ದ. ಸಿನೆಮಾ ಸಂಬಂಧಿಯಾದ ಯಾವುದೋ ಒಂದು ವಿಚಾರವಾಗಿಯೇ ಅವರಲ್ಲಿ ಚರ್ಚೆ ನಡೆದಿತ್ತು.

(ಹನ್ನೆರಡನೇ ಪುಟ ನೋಡಿರಿ)

6¾%

ಫಿಕ್ಸೆಡ್ ಡಿಪಾಜಿಟುಗಳ ಮೇಲೆ ತಾರೀಕು 1—9—64ರಿಂದ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು:—

	1ರಿಂದ 3 (ತಿಂಗಳು)	4ರಿಂದ 12 (ತಿಂಗಳು)	2 ವರ್ಷ	3 ವರ್ಷ	4 ವರ್ಷ	5 ವರ್ಷ	6 ವರ್ಷ	7—10 (ವರ್ಷ)
	% p.a.	% p.a.	% p.a.	% p.a.	% p.a.	% p.a.	% p.a.	% p.a.
ರೂ. 4999ರ ವರೆಗಿನ ಡಿಪಾಜಿಟುಗಳ ಮೇಲೆ:-	4¾	5	5¼	5½	5¾	6	6¼	6½
ರೂ. 5000 ಮತ್ತು ಮೇಲ್ಪಟ್ಟ ಡಿಪಾಜಿಟುಗಳ ಮೇಲೆ:-	5	5¼	5½	5¾	6	6	6½	6¾

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು: ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ)
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920

ಭಾರತ ದರ್ಶನ

ಲಡಾಖಿನ ವೀರ ಪ್ರಜೆಗಳು

ಉದ್ದನೆಯ ಉಣ್ಣೆ ಅಂಗಿ ಮತ್ತು ಬಟ್ಟೆ ತೊಟ್ಟ ಲಡಾಖಿ ಪ್ರಜೆಗಳು.

ಸಮುದ್ರ ಮಟ್ಟಕ್ಕಿಂತ ೯,೦೦೦ದಿಂದ ೧೨,೦೦೦ ಅಡಿ ಎತ್ತರದ ಭೂ ಪ್ರದೇಶದಲ್ಲಿರುವ ಲಡಾಖ್ ಇಂದು ದೇಶದ ಇತರ ರಾಜ್ಯಗಳಂತೆಯೇ ಸರ್ವತೋಮುಖ ಅಭಿವೃದ್ಧಿ ಹೊಂದುತ್ತಿದೆ. ಗೃಹ ಕೈಗಾರಿಕೆ, ಶಿಕ್ಷಣ, ಸಂಪರ್ಕ ಸಾಧನೆಗಳ ವಿಸ್ತರಣೆಯಿಂದ ಲಡಾಖ್ ಹೊಸರೂಪವನ್ನು ಪಡೆದಿದೆ.

ಶ್ರೀನಗರ ಮತ್ತು ಲೇಹ್ ನಡುವಣ ರಸ್ತೆಯ ನಿರ್ಮಾಣ ಮತ್ತು ವಿಮಾನ ಸಂಚಾರ ವ್ಯವಸ್ಥೆಯ ಉದ್ಘಾಟನೆಯು ಲಡಾಖ್ ಜನರಿಗೆ ಜೀವನದಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟಿವೆ. ಲಡಾಖಿನಲ್ಲಿ ಅಂಚೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಹೆಚ್ಚಿಸಲಾಗಿದೆ. ಲಡಾಖಿ ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ನೀಡಲಾಗುತ್ತಿದೆಯಲ್ಲದೆ ಸಾಧ್ಯವಿರುವ ಮಟ್ಟಿಗೂ ವಿದ್ಯಾಭ್ಯಾಸ ಸೌಲಭ್ಯಗಳನ್ನು ವಿಸ್ತರಿಸಲಾಗುತ್ತಿದೆ.

ಲಡಾಖ್ ಪ್ರದೇಶಗಳಲ್ಲಿನ ಬೇಸಾಯ ಮತ್ತು ಗೃಹಕೈಗಾರಿಕೆಗಳಿಗೆ ಸೌಲಭ್ಯವನ್ನೊದಗಿಸಲು ಸಹಕಾರಿ ಸಂಸ್ಥೆಗಳು ಕೆಲಸ ಕಾರ್ಯಗಳನ್ನಾರಂಭಿಸಿವೆ. ಪ್ರಾಣಿ ಸಂಪತ್ತಿನ ಸಂರಕ್ಷಣೆಯ ಸಲುವಾಗಿ ಪ್ರಾಣಿ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಾಗಿದೆ. ಸರಕು ಸಾಮಗ್ರಿಗಳ ಸಾಗಣೆಗಾಗಿ ಬಳಸುವ "ಯಾಕ್" ಜಾತಿಯ ಚಮರೀ ಮೃಗಗಳ ಸಂತಾನಾಭಿವೃದ್ಧಿಗಾಗಿ ಕೇಂದ್ರಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಲಡಾಖಿ ನಿವಾಸಿಗಳ ಆರೋಗ್ಯ ರಕ್ಷಣೆಯ ಮಹದುದ್ದೇಶದಿಂದ ವೈದ್ಯಕೀಯ ಸೇವಾ ಸೌಲಭ್ಯಗಳನ್ನು ವಿಸ್ತರಿಸಲಾಗುತ್ತದೆ. ಕಷ್ಟ ಸಹಿಷ್ಣುಗಳಾದ ಲಡಾಖಿ ಜನರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಒಲಗೊಳಿಸುವ ಸವಾಲನ್ನು ಧೈರ್ಯದಿಂದ ಎದುರಿಸುತ್ತಿದ್ದಾರೆ.

ಲಡಾಖಿ ಜನರು ಕಷ್ಟಸಹಿಷ್ಣುಗಳಾಗಿರುವಂತೆಯೇ ಯಾವಾಗಲೂ ಸಂತಸದಿಂದಿರುತ್ತಾರೆ ಅವರು ಪ್ರಾಮಾಣಿಕರು ಮತ್ತು ಸರಳ ಜೀವಿಗಳು ಇವರಲ್ಲಿ ಹೆಚ್ಚು ಮಂದಿ ಬೌದ್ಧಮತೀಯರು ಬೌದ್ಧ ಗುರುಗಳಾದ ಲಾಮ ಮತ್ತು ಚೋಮಾಗಳು ಎಲ್ಲೆಲ್ಲೂ ಕಾಣಬಹುದು. ಬೌದ್ಧ ಗುರುಗಳ ಹಲವಾರು ಮಠಗಳು ಲಡಾಖಿನಲ್ಲಿವೆ

ಲಡಾಖಿ ಜನರಲ್ಲಿ ಬಹು ಮಂದಿ ಬೇಸಾಯ ಮತ್ತು ಕುರಿ ಸಾಕಣೆಯನ್ನೇ ಅವಲಂಬಿಸಿದ್ದಾರೆ ಬಂಜರು ಭೂಪ್ರದೇಶಗಳಿಂದ ತುಂಬಿರುವ ಈ ನಾಡಿನಲ್ಲಿ ಜೀವನ ಕಡು ಕಷ್ಟ. ಇಲ್ಲಿನ ಭೂಮಿ ಸಾರರಹಿತವಾದದ್ದು. ಇಷ್ಟೆಲ್ಲ ಕೊರತೆಗಳಿದ್ದರೂ ಲಡಾಖಿ ಜನರ ನಿತ್ಯ ಜೀವನದಲ್ಲಿ ಸಂಗೀತ ನೃತ್ಯಗಳು ಅವಿಭಾಗ ಅಂಗವಾಗಿದೆ.

ಉದ್ದನೆಯ ಉಣ್ಣೆ ಅಂಗಿಗಳನ್ನು ಧರಿಸಿ ಸೊಂಟಕ್ಕೆ ಬಟ್ಟೆಯನ್ನು ಸುತ್ತುವುದು ಇಲ್ಲಿನ ಜನರ ಸಂಪ್ರದಾಯ ಕುರಿಯ ಚರ್ಮದ ಟೋಪಿಗಳನ್ನು ಇವರು ಧರಿಸುತ್ತಾರೆ ಇಲ್ಲಿನ ಮಹಿಳೆಯರ ಉಡುಗೆಗಳೂ ಅಷ್ಟೇ ವಿಶಿಷ್ಟರೀತಿಯದಾಗಿದೆ ಲಡಾಖಿ ಗಂಡಸರು ಮತ್ತು ಹೆಂಗಸರು ಸಾಮಾನ್ಯವಾಗಿ ಉದ್ದವಾದ 'ಬೂಟ್ಸ್'ಗಳನ್ನು ಧರಿಸಿರುತ್ತಾರೆ ಬಾರ್ಲಿಯಿಂದ ತಯಾರಿಸಲಾದ 'ಸಂಪಾ' ಅವರ ಮೆಚ್ಚಿನ ಆಹಾರ ಹಬ್ಬದ ದಿನಗಳು ಮತ್ತು ಸಂತೋಷಕೂಟಗಳಲ್ಲಿ ಅವರು ಮಾಂಸವನ್ನು ಬಳಸುತ್ತಾರೆ, ಬಾರ್ಲಿಯಿಂದ ತಯಾರಿಸಿದ 'ಚಾಂಗ್' ಅವರ ಮೆಚ್ಚುಗೆಯ ಪಾನೀಯ

ಚೀಣೀ ದಾಳಿ ಕ್ರಮಣವು ಲಡಾಖಿ ಜನರ ಶಾಂತ ಪ್ರಶಾಂತ ಜೀವನವನ್ನು ಘಾಸಿಗೊಳಿಸಿದೆ. ಕಷ್ಟ ಸಹಿಷ್ಣುಗಳೂ, ದೃಢಕಾಯರೂ ಆದ ಲಡಾಖಿ ಯುವಜನರು ರಾಷ್ಟ್ರದ ಉತ್ತರ ಗಡಿ ಪ್ರದೇಶಗಳ ರಕ್ಷಣೆಯ ಹೋರಾಟದಲ್ಲಿ ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ.

ಲಡಾಖಿನ ರಾಜಧಾನಿ ಲೇಹದ ಒಂದು ದೃಶ್ಯ

READ & ADVERTISE IN NAVAYUGA WEEKLY



ಸಮಸ್ಯೆಗೆ ಮೂಲ ಇಲ್ಲಿದೆ

ಕಾಶ್ಮೀರದಲ್ಲಿ ಔರಂಗಜೇಬನ ಅವತಾರ

ಬರೆದವರು: ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ-

ಶತಮಾನಗಳ ಹೋರಾಟ ಅಸಂಖ್ಯಾತ ಭಾರತೀಯರ ಬಲಿದಾನದ ಪರಿಣಾಮದಿಂದ ಹಿಂದೂಸ್ಥಾನವು ಸ್ವತಂತ್ರವಾಯಿತು; ಆದರೆ ಅದು ತನ್ನ ಪರಂಪರಾಗತವಾಗಿಟ್ಟುಕೊಂಡಿದ್ದ ರಾಷ್ಟ್ರೀಯ ಅಖಂಡತೆಯನ್ನು ಉಳಿಸಲಾರದೆ ಹೋಯಿತು; ದೇಶವು ಇಬ್ಭಾಗವಾಯಿತು. ಪಾಕಿಸ್ತಾನ ಅಸ್ತಿತ್ವಕ್ಕೆ ಬಂತು

ಪಾಕಿಸ್ತಾನದ ಅಸ್ತಿತ್ವದೊಂದಿಗೆ ಭಾರತವು ಸ್ವತಂತ್ರವಾದರೂ ಇಲ್ಲಿಯ ರಾಜಮಹಾರಾಜರು ತಮ್ಮ ಭವಿತವ್ಯ ತೀರ್ಮಾನ ಮಾಡಿಕೊಳ್ಳುವುದರಲ್ಲಿ ಸರ್ವ ಸ್ವತಂತ್ರತೆ ಪಡೆದರು. ಆದರೂ ಧೀಮಂತ ರಾಜನೈತಿಕ ಮಹಾ ಮುತ್ಸದ್ಧಿ ಸರ್ದಾರ್ ವಲ್ಲಭಭಾಯಿ ಪಟೇಲರ ವಜ್ರ ಮುಷ್ಟಿಯ ಬಲದಿಂದ ನೇರ ಶಕ್ತಿಯ ಪ್ರತಿಕ್ರಿಯೆಯಿಂದ ಎಲ್ಲಾ ಸಂಸ್ಥಾನಿಕರು ಭಾರತ ಒಕ್ಕೂಟದೊಂದಿಗೆ ಮಿಲನರಾದರು. ಕಾಶ್ಮೀರದ ಮಹಾರಾಜರು ಮಾತ್ರ ತನ್ನ ಸ್ಥಾನಮಾನ ದೊಡ್ಡದು; ತಾನು ಸ್ವತಂತ್ರ ಶಾಸನ ಮಾಡಲಿಕ್ಕೆ ಯೋಗ್ಯನಾಗಿದ್ದವನೆಂಬ ಅಹಂ ಮನೋಭಾವದಿಂದಿದ್ದರು. ಈ ತರದ ಭಾವನೆಯು ಅವರಿಗೆ ಮುಳ್ಳಿನ ಹಾಸಿಗೆಯಂತಾಗಿ ಪರಿಣಮಿಸಿತು.

ಕಾಶ್ಮೀರದ ಅಂದಿನ ಪ್ರಧಾನ ಮಂತ್ರಿ ಪಂಡಿತ ರಾಮಚಂದ್ರ ಕಾಕರು, ಕಾಶ್ಮೀರಕ್ಕೆ ದ್ರೋಹ ಬಗೆದು ಪಾಕಿಸ್ತಾನಕ್ಕೆ ಸಹಾಯಕರಾಗಿ ಶ್ರೀನಗರ, ಪಹಲ್ಗಾಂವ್, ಗುಲ್ಮರ್ಗ (ಸೇನಾದೃಷ್ಟಿಯಲ್ಲಿ ಆಯಕಟ್ಟಿನ ಸ್ಥಳ) ಮೊದಲಾದ ಪ್ರಾಮುಖ್ಯ ಪ್ರದೇಶಗಳಲ್ಲಿ ಪಾಕಿಸ್ತಾನ ತನ್ನ ಸೇನಾ ಶಿಬಿರ ಸ್ಥಾಪಿಸಿಕೊಳ್ಳಲಿಕ್ಕೆ ಅನುಕೂಲತೆ ಒದಗಿಸಿಕೊಟ್ಟರು. ಈ ರಹಸ್ಯವನ್ನು ಮತ್ತಷ್ಟು ಸ್ಪಷ್ಟೀಕರಿಸುತ್ತಾ ಮೆಹರ್‌ಚಂದ್ ಮಹಾಜನ್ (ರಾಮ ಚಂದ್ರ ಕಾಕರ ಬಂಧನವಾದೊಡನೆ ಪ್ರಧಾನ ಮಂತ್ರಿಯಾಗಿ ಬಂದವರು)ರವರು ಪಂಡಿತ್ ರಾಮಚಂದ್ರ ಕಾಕರು ಪ್ರಧಾನ ಮಂತ್ರಿತ್ವದಲ್ಲಿರುವಾಗ ಜಿನ್ನಾರವರ ಆಪ್ತ ಕಾರ್ಯದರ್ಶಿ ಮೂರು ತಿಂಗಳ ತನಕ ಕಾಶ್ಮೀರದಲ್ಲಿದ್ದರು; ಮತ್ತು ಸಮಗ್ರ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸುವ ಬಗ್ಗೆ ಮಹಾರಾಜರು ಅನಿವಾರ್ಯವಾಗಿ ಸಮ್ಮತಿಸುವಂತೆ ಕಾಶ್ಮೀರದಲ್ಲಿ ಉಗ್ರತರವಾದ ಜಾತೀಯ ದಂಗೆ, ಅತ್ಯಾಚಾರ, ಅಲ್ಲಲ್ಲಿ ವಿಧ್ವಂಸಕ ಕೃತ್ಯಗಳು ನಿರಂತರ ಆಗುತ್ತಿರುವಂತೆ ಮುಸಲ್ಮಾನರನ್ನು ಸಾಮೂಹಿಕವಾಗಿ ಉದ್ರೇಕಿಸುತ್ತಿದ್ದರು. ಎಂಬುದಾಗಿ ಬಹಿರಂಗಪಡಿಸಿದರು ಈ ಸಂದರ್ಭದಲ್ಲಿ ಮಹಮ್ಮದಾಲಿ ಜಿನ್ನಾ ಪಾಕಿಸ್ತಾನದ ಗವರ್ನರ್ ಜನರಲ್ ಹುದ್ದೆಗೆ ಏರಲಿಲ್ಲ. ಪಾಕಿಸ್ತಾನ ರೂಪುಗೊಳ್ಳುವುದಕ್ಕೆ ಮೊದಲೇ ಕಾಶ್ಮೀರದ ಮಹಾರಾಜರು ರಾಮಚಂದ್ರ ಕಾಕರನ್ನು ಅಧಿಕಾರದಿಂದ ತಳ್ಳಿ ಸೆರೆಯಲ್ಲಿರಿಸಿ ಮಧ್ಯಕಾಲೀನ ಆಡಳಿತ ವ್ಯವಸ್ಥೆಗಾಗಿ "ಮೇಜರ್ ಜನರಲ್ ಜನಕಸಿಂಹ"ರನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಿದರು.

ಸರದಾರ್ ಪಟೇಲರ ಆಶ್ವಾಸನೆ

1947 ಜೂನ್ ತಿಂಗಳಲ್ಲಿ ಲಾರ್ಡ್ ಮೌಂಟ್ ಬೇಟನ್ನರು ೪ ದಿನ ತನಕ ಕಾಶ್ಮೀರದಲ್ಲಿದ್ದು ಮಹಾರಾಜರೊಡನೆ ಮಾತುಕತೆ ನಡೆಸಿ "ಕಾಶ್ಮೀರವು ಯಾವ ವಿಧದಿಂದಲೂ ಸ್ವತಂತ್ರವಾಗಿರಲಿಕ್ಕೆ ಸಾಧ್ಯವಿಲ್ಲ; ಏಕೆಂದರೆ ಬ್ರಿಟಿಷ್ ಸರಕಾರ ಇದನ್ನು ಒಪ್ಪುವುದಿಲ್ಲ. ಆದುದರಿಂದ ಆಗೋಸ್ತು ತಾ. ೧೫ರೊಳಗೆ ತಾವು ಯಾರೊಂದಿಗೆ ಸೇರ್ಪಡೆಯಾಗುವುದಾದರೂ ನಮ್ಮ ಆಕ್ಷೇಪವಿಲ್ಲ ಪಾಕಿಸ್ತಾನದೊಂದಿಗೆ ಸೇರುವುದಾದರೂ ಭಾರತವು ಆಕ್ಷೇಪಿಸಲಾರದು ಈ ಕುರಿತು ಸರ್ದಾರ್ ಪಟೇಲರ ಪತಿಯಿಂದ ನಾನು ತಮಗೆ ಆಶ್ವಾಸನೆ ಕೊಡುತ್ತೇನೆ. ಆದರೆ ಯಾರ ಜೊತೆ ಸೇರುವುದಾದರೂ ಪ್ರಜೆಗಳ ಅಭಿಪ್ರಾಯ ತಿಳಿದು ಆಗೋಸ್ತು ೧೫ರೊಳಗೆ ತೀರ್ಮಾನ ಮಾಡಲೇ ಬೇಕು," ಎಂದು ಸಲಹೆ ಕೊಟ್ಟರು. ಆದರೆ ಮಹಾರಾಜರು ಯಾವ ನಿರ್ಣಯವನ್ನೂ ಕೈ ಕೊಳ್ಳಲಿಲ್ಲ. ಮೌಂಟ್ ಬೇಟನ್ನರು ಅಲ್ಲಿಂದ ಹೊರಡುವಾಗ ಮಹಾರಾಜರ ಅಭಿಪ್ರಾಯ ತಿಳಿಯಲಪೇಕ್ಷಿಸಿದರು. ಪರಂತು ರಾಜರು ಅನಾರೋಗ್ಯದ ನೆವ ಮಾಡಿ ಭೇಟಿಗೆ ಅವಕಾಶಕೊಡಲಿಲ್ಲ.

ಅತ್ತ ದಿಲ್ಲಿಯಲ್ಲಿ ಸಂಸ್ಥಾನ ಶಾಖೆಯನ್ನು ಸ್ಥಾಪಿಸಲಾಯಿತು. ಸರದಾರ ಪಟೇಲರು ಅದರ ಅಧ್ಯಕ್ಷರೂ ವಿ. ಪಿ. ಮೇನನರು ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದು ಸಂಸ್ಥಾನಾಧೀಶರನ್ನು ಭಾರತದೊಂದಿಗೆ ಸೇರ್ಪಡೆಮಾಡಿ ಕೊಳ್ಳುವ ವ್ಯವಹಾರದಲ್ಲಿ ಮಗ್ನರಾಗಿದ್ದರು. ಪ್ರಧಾನ ಮಂತ್ರಿ ಪಂಡಿತ ರಾಮ ಚಂದ್ರ ಕಾಕರೂ ತನಗೇನಾದರೂ ಅಧಿಕಾರದ ಬೀಳಿಕಾಳು ಸಿಗಬಹುದೋ ಎಂಬ ಅಭಿಲಾಷೆಯಿಂದ ದಿಲ್ಲಿಗೆ ಬಂದಿದ್ದರು. ವಿ. ಪಿ. ಮೇನನ್ ಮತ್ತು ಸರ್ದಾರಪಟೇಲರನ್ನು ಕಂಡು ಅವರು ಸಂಭಾಷಣೆಮಾಡಿದರು. ಮೇನನರಿಗೆ ಶ್ರೀ ಕಾಕರ ಅಂತರ್ಯ ತಿಳಿಯಿತು. ಕಾಕರೊಡನೆ ತಾನು ನಡಿಸಿದ ಮಾತುಕತೆಯ ವರದಿಯನ್ನು ಸರ್ದಾರರಿಗೆ ಒಪ್ಪಿಸುವಾಗ ಅದರಲ್ಲಿ "ನಾನು ಈ ವ್ಯಕ್ತಿಯನ್ನು ಸಂಪೂರ್ಣ ಅನುಭವ ಮಾಡಿಕೊಳ್ಳಲು ಇನ್ನೂ ಶಕ್ತನಾಗಲಿಲ್ಲ; ಇವರ ಚಲನವಲನದ ರಹಸ್ಯವೂ ನನಗೆ ಸರಿಯಾಗಿ ಗೊತ್ತಾಗುವುದಿಲ್ಲ. ಈ ಮಹಾನುಭಾವನನ್ನು ಮೌಂಟಬೆಟನ್ನರು ಜಿನ್ನಾರವರೊಂದಿಗೆ ಸೇರಿಸಿಬಿಟ್ಟಿದ್ದಾರೆ." ಎಂದು ವಿವರವಾಗಿ ಬರೆದಿರುತ್ತಾರೆ.

ವಿಪತ್ತು ಮತ್ತು ಅಚಾತುರ್ಯ

ನಿಜವಾಗಿಯೂ ಮಹಾರಾಜರನ್ನು ಭಯಂಕರವಾದ ವಿಪತ್ತು ಆವರಿಸಿಕೊಂಡಿತು. ಪ್ರಾರಂಭದಲ್ಲಿ ಅವರು ಇತರ ನರೇಶರಂತೆ ಭಾರತದೊಂದಿಗೆ ಮಿಲನವಾಗುತ್ತಿದ್ದರೆ ಗಿಲ್ಗಿತ್‌ನ ಜನರು, ಮುಸ್ಲಿಮ್ ಕಾನ್ಫರೆನ್ಸ್, ಮತ್ತು ಮೌಲಿಗಳು ತಲೆ ಎತ್ತುತ್ತಿದ್ದರು; ಪಾಕಿಸ್ಥಾನದೊಂದಿಗೆ ಸೇರುವುದರ ವಿರುದ್ಧವಾಗಿ ಲದ್ದಾಖ್, ಜಮ್ಮು ಮತ್ತು, ನೇಷನಲ್ ಕಾನ್ಫರೆನ್ಸ್‌ನವರು ಆಕ್ಷೇಪವೆತ್ತುತಿದ್ದರು. ಇಂತಹ ಉಭಯ ವಿಪತ್ಕಾರಕ ಸನ್ನಿವೇಶದಲ್ಲಿ ಸಹ ಮಹಾರಾಜರು ಎಲ್ಲಾ ಕ್ಷೇತ್ರಗಳ ಮತ್ತು ಪಕ್ಷ—ಪಂಗಡಗಳ ಪ್ರತಿನಿಧಿಗಳ ಒಂದು ಸಂಯುಕ್ತ ಪರಿಷತ್ತನ್ನು ಕರಗಿಸಿ ಈ ವಿಷಯದ ಗುಣದೋಷಗಳ ಕುರಿತು ಚೆನ್ನಾಗಿ ವಿಚಾರ ವಿನಿಮಯ ಮಾಡಿಕೊಳ್ಳುತಿದ್ದರೆ ಸರ್ವ ಸಮ್ಮತದಿಂದಲ್ಲವಾದರೂ ಬಹುಮತದ ಒಂದು ತೀರ್ಮಾನ ಕೈಕೊಳ್ಳ ಬಹುದಾಗಿತ್ತು.

ಆಗೋಸ್ತು ೧೫ ರಂದು ಭಾರತದೇಶ ಸ್ವತಂತ್ರವಾದ ಮರುಕ್ಷಣದಲ್ಲಿ ದೇಶದಲ್ಲೆಲ್ಲಾ ಸಾಂಪ್ರದಾಯಿಕ ದಾವಾನಲಭುಗಿಲೆದ್ದಿತು. ಭಾರತ ವಿಭಜನೆ ಮಹಾಭಯಂಕರವಾದ ಸಮಸ್ಯೆ ತಲೆದೋರಿತು. ಎಲ್ಲೆಲ್ಲಿಯೂ ಅಸಂಖ್ಯಾತ ಸ್ತ್ರೀ ಪುರುಷರ—ಹಸುಕೂಸುಗಳ ಹತ್ಯೆಗಳಾಗತೊಡಗಿತು. ಮಾನವಂತೆಯರು ಹಗಲು ಬಟ್ಟ ಬಯಲಲ್ಲಿ ಮಾನ ಹಾನಿಗೊಳಗಾಗಿ ಮುಸಲ್ಮಾನರಿಂದ ಅಪಹರಿಸಲ್ಪಡುತಿದ್ದರು. ಇಂತಹ ಉಲ್ಬಣಾವಸ್ಥೆಯಲ್ಲಿ ಭಾರತ ಸರಕಾರಕ್ಕೆ ಕಾಶ್ಮೀರ ಸಮಸ್ಯೆಯ ಕುರಿತು ಆಲೋಚಿಸಲು ಅವಕಾಶವಿರಲಿಲ್ಲ. ಸಂಧಿಗ್ಧವಾದ ಈ ವಾತಾವರಣವನ್ನು ಪಾಕಿಸ್ತಾನ ಉಪಯೋಗಿಸಿಕೊಂಡು ಕಾಶ್ಮೀರಕ್ಕೆ ಹೋಗುತಿದ್ದ ಆಹಾರ ಸಾಮಗ್ರಿಗಳನ್ನು ತಡೆಗಟ್ಟಿ ಅದನ್ನೂ ಒಂದು ಕಡೆಯಿಂದ ಉಪವಾಸ ಕೆಡವಿ ಮತ್ತೊಂದೆಡೆಯಿಂದ ಸೇನೆಯ ಮೂಲಕ ದಾಳಿಯನ್ನು ಕೈಕೊಂಡಿತ್ತು. ಪಾಕಿಸ್ತಾನದ ಪತಿಯಿಂದ ಗುಪ್ತಚಾರರು ಪ್ರಾರಂಭದಲ್ಲಿಯೇ ಕಾಶ್ಮೀರದಲ್ಲೆಲ್ಲಾ ಹರಡಿ ಅಲ್ಲಿ ಜಾತೀಯ ಕಲಹ, ಕೊಲೆ, ಸುಲಿಗೆ ಇನ್ನಿತರ ವಿಧ್ವಂಸಕ ಕಾರ್ಯಗಳಾಗುತ್ತಿರುವಂತೆ ಜನತೆಯನ್ನು ಎಡೆಬಿಡದೆ ಉತ್ತೇಜಿಸುತಿದ್ದರು.

ಆಕ್ಟೋಬರದಲ್ಲಿ 'ಶ್ರೀ ಮೆಹರ್‌ಚಂದ್ ಮಹಾಜನ' ಎಂಬವರು ಕಾಶ್ಮೀರದ ಪ್ರಧಾನಿಗಳಾದರು. ಅವರು "ಪಾಕಿಸ್ತಾನ ನಮ್ಮೊಡನೆ ಯಥಾಸ್ಥಿತಿಯನ್ನು ಸ್ಥಿರವಾಗಿ ಉಳಿಸಿಕೊಳ್ಳುವ ಕರಾರು ಮಾಡಿಕೊಂಡಿರುತ್ತದೆ; ಆದರೂ ಈಗ ಕಾಶ್ಮೀರದ ಮೇಲೆ ಆಕ್ರಮಣ ಮಾಡಿರುತ್ತದೆ ಮತ್ತು ಹೊರಗಿನಿಂದ ಆಹಾರ ಸಾಮಗ್ರಿಗಳು ಬಾರದಂತೆ ತಡೆಗಟ್ಟಿರುತ್ತದೆ, ಅದರ ಈ ವರ್ತನೆಯನ್ನು ತಾವು ತಡೆಗಟ್ಟಬೇಕು" ಎಂದು ಬ್ರಿಟಿಷ್ ಪ್ರಧಾನಿಗಳಿಗೆ ದೂರಿತ್ತರು. ಪರಂತು ಅವರು ಮೌನತಾಳಿದರು. ಆಗ ಮೆಹರ್‌ಚಂದರು ಪಾಕಿಸ್ತಾನ ಗವರ್ನರ್ ಜನರಲ್ ಜಿನ್ನಾರವರ ಸಮಕ್ಷಮ ತನ್ನ ವಿರೋಧವನ್ನು ವ್ಯಕ್ತಪಡಿಸಿ 'ಯಥಾಸ್ಥಿತಿ ಒಪ್ಪಂದವನ್ನು ಮುರಿದು ತಾವು ಈಗ ಕಾಶ್ಮೀರದ ಮೇಲೆ ಆರ್ಥಿಕ ದಿಗ್ಬಂಧನ ಹೇರಿದ್ದೀರಿ ಈಗ ಆಕ್ರಮಣವೂ ಆಗಿ ಹೋಗಿದೆ. ಜನಸಾಮಾನ್ಯರ ಜೀವನೋಪಯೋಗಿ ಸಾಮಗ್ರಿಗಳೂ ಕಾಶ್ಮೀರಕ್ಕೆ ಬಾರದಂತೆ ತಡೆ ಹಾಕಲಾಗಿದೆ' ಎಂದು ವಿವರಿಸಿದರು. ಜಿನ್ನಾರವರಿಗೆ ಈ ವಿರೋಧ ಪತ್ರವು ಸರಿದೋರಲಿಲ್ಲ. 'ಭಾರತದ ಪೂರ್ವ ಪಂಜಾಬಿನಲ್ಲಿ ಸಾಂಪ್ರದಾಯಿಕ ದಂಗೆಗಳಾಗುತ್ತಿವೆ; ಇದರಿಂದಾಗಿ ವಾಹನ ಸಂಚಾರದ ಅಸ್ತವ್ಯಸ್ತದ ದೆಸೆಯಿಂದ ಆಹಾರ ಸಾಮಗ್ರಿಗಳ ಸಾಗಾಟ ನಿಂತು ಹೋಗಲು ಕಾರಣವಾಯಿತು' ಎಂದು ತತ್ಕಾಲ ಉತ್ತರವಿತ್ತರು. ಆದರೆ ಈ ಉತ್ತರವು ಹಸಿ ಸುಳ್ಳಿನ ಮೂಟೆಯಾಗಿತ್ತೆಂಬುದು ಮುಂದಿನ ಘಟನೆಗಳಿಂದ ಸ್ಪಷ್ಟವಾಗುತ್ತದೆ.

ಜಿನ್ನಾರವರ ಉಪರೋಕ್ತ ಉತ್ತರವು ಕಾಶ್ಮೀರದ ಪ್ರಧಾನಿಗಳಿಗೆ ತಲ್ಪಿದ ನಾಲ್ಕನೆಯ ದಿನ ಕಾಶ್ಮೀರದ ಮೇಲೆ ಪಾಕಿಸ್ತಾನ ಸೇನೆಯು ವಿಶಾಲ ರೂಪದಲ್ಲಿ ಕ್ರಮಬದ್ಧವಾಗಿ ಆಕ್ರಮಣ ಮಾಡಿ ಯುದ್ಧವನ್ನು ಪ್ರಾರಂಭಿಸಿತು. ಮಹಾರಾಜರಿಂದ ಸಂದರ್ಶನದ ಆಮಂತ್ರಣ ಪಡಕೊಳ್ಳಲಿಕ್ಕೆ ಜಿನ್ನಾರವರು ತನ್ನ ಆಂಗ್ಲ ಸೇನಾಸಚಿವರೊಬ್ಬರನ್ನು ಕಾಶ್ಮೀರಕ್ಕೆ ಕಳುಹಿಸಿದರು. ಶ್ರೀನಗರದಲ್ಲಿ ಹಬ್ಬದೂಟ ಮಾಡಬೇಕೆಂಬುದೇ ಜಿನ್ನಾರವರ ಮಹತ್ವಾಕಾಂಕ್ಷೆ ಇತ್ತು. ಹಬ್ಬದ ಪ್ರಾರ್ಥನೆಗೆ ಸೇರುವ ವಿಶಾಲವಾದ ಮುಸ್ಲಿಮ್ ಜನಸಮೂಹವನ್ನು, ಕಾಶ್ಮೀರವು ಪಾಕಿಸ್ತಾನಕ್ಕೆ ಸೇರುವಂತೆ ಹುರಿದುಂಬಿಸಬಹುದೆಂದು ಅವರು ಹೊಂಚಿಕೆ ಹೂಡಿದ್ದರು. ಆದರೆ ತನ್ನ ಕುಹಕತನವು ವ್ಯರ್ಥವಾದುದನ್ನರಿತು 'ಅವರು ಶ್ರೀನಗರದ ಮೇಲೆ ನೇರವಾಗಿ ಸೇನಾಕ್ರಮಣ ಮಾಡಿ ಸೈನಿಕರನ್ನು ರಭಸದಿಂದ ಮುನ್ನುಗ್ಗಿಸಿ ಹಬ್ಬದೊಳಗಾಗಿ ಶ್ರೀನಗರವನ್ನು ಸ್ವಾಧೀನಪಡಿಸಿ ಈ ಮೂಲಕ ಅಲ್ಲಿ ಹ

(ಹನ್ನೊಂದನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ·

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಚೀನೀ ಆಕ್ರಮಣದ ಹಿನ್ನೆಲೆ

ಮಹತ್ವಾಕಾಂಕ್ಷಿಗಳಿಗೆ ಮಲಗಲೂ ಮನಬಾರದು!

ಶಿವಶಂಕರ ಬರೆದುದು.

ಕಳ್ಳರನ್ನೂ ಕುಂಟರನ್ನೂ ನಂಬಬಾರದಂತೆ. ಬಹುಶಃ ಚೀನೀಯರನ್ನು ಕಂಡ ಮೇಲೆಯೇ ಚಿಕ್ಕವ್ವ ಚಟ್ಟನೆ ಈ ರೀತಿ ಹೇಳಿರಬಹುದು. ಹಾಗಾಗದಲ್ಲವಾದಲ್ಲಿ ಪ್ರಪಂಚ ಪ್ರದಕ್ಷಿಣೆಗೆಂದು ಹೊರಟ ಚೆಂಗ್-ಹೋ ಲಂಕೆಯಲ್ಲಿ ತಾನು ಬುದ್ಧ ದೇವನ ಪರಮ ಭಕ್ತನಂತೆ ವರ್ತಿಸಿ, ಅಲ್ಲಿಯ ಅರಸನನ್ನು ಮೋಸದಿಂದ ಹಿಡಿದುಕೊಂಡು ಚೈನಾಕ್ಕೆ ಕರೆತರುತ್ತಿದ್ದನೇ? ಆ ರಾಜ ಕಳ್ಳನನ್ನು ನಂಬಿ ಮೋಸ ಹೋದ. ಅಂದು ಅವನು ಮೋಸ ಹೋಗಿದ್ದಲ್ಲಿ ಇಂದು ನಾವು ಮೋಸ ಹೋಗಿರುವೆವು. ಅದಲ್ಲದೆ ಈಗ ಕಳ್ಳನೂ ಕುಂಟನೂ ಸೇರಿದಂತಾಗಿದೆ, ಚೈನಾದ ಸ್ಥಿತಿ. ಚೈನೀಯರಂತೂ ಕಳ್ಳರೇ ಇದ್ದಾರೆ. ಕಮ್ಯೂನಿಸ್ಟ್ ಸಿದ್ಧಾಂತವೆಂದು ಕರೆಯುತ್ತಿರುವ ಬುರುಡೆ ಮತ್ತು ಕುಂಟು ಸಿದ್ಧಾಂತವೇ ಇದೆ ಅವೆರಡರ ಮಿಲನವಾಗಿದೆ ಇಂದು ಚೈನಾದಲ್ಲಿ. ಮುಂದೇನಾಗಬಹುದೆಂಬುದನ್ನು ಹೇಳಲು ಕಣಿ ಕೇಳುವ ಅವಶ್ಯಕತೆ ಇದೆಯೇ?

ಚರಿತ್ರೆಯಲ್ಲಿ ಆ ರೀತಿ ರಾಜನ ಆಸ್ಥಾನದಿಂದ ಅವನನ್ನು ಸೆರೆಹಿಡಿದು—ಕದ್ದೊಯ್ದಿರುವ ಉದಾಹರಣೆ ಇದೆಯೇನು? ರಾಮಾಯಣ, ಟ್ರೋಜನ್ ಗುದುರೆ ಅಂತಹ ಉದಾಹರಣೆಗಳಲ್ಲಿ, ಸಂಯುಕ್ತೆಯಂತಹ ಖಂಡಿತ ಅಲ್ಲವೇ ಅಲ್ಲ. ಇದುವೇ ಆ ಘಟನೆಯ ವೈಶಿಷ್ಟ್ಯ. ಬಹುಶಃ ಆ ಗುಣ ಅವರ ರಕ್ತದಲ್ಲಿ ಬೆರೆತು ಕೊಂಡಿದೆಯೋ ಏನೋ? ಇಲ್ಲದಿದ್ದಲ್ಲಿ ಭಾರತ ಭೂಪ್ರದೇಶದೊಳಗಿನಿಂದ ಭಾರತೀಯ ಸೈನಿಕರನ್ನು ಮೋಸದಿಂದ ಹಿಡಿದುಕೊಂಡು ಹೋಗಿ ದಿ| ಜವಾಹರಲಾಲರ ಹುಟ್ಟುದಿನದಂದು ಅವರ ಶವಗಳನ್ನು ಕಾಣಿಕೆಗಳನ್ನಾಗಿ ಕಳುಹಿಸಿ ಕೊಡುತ್ತಿದ್ದರೇನು?

ಚೈನಿ ಚರಿತ್ರೆಯಲ್ಲಿ ಇಂತಹ ಘಟನೆಗಳನ್ನು ಕಂಡ ಮೇಲೂ ನಾವು, ರಾತ್ರಿಯಲ್ಲಿ ಕಂಡಿದ್ದ ಬಾವಿಯಲ್ಲಿ ಹಗಲು ಹೊತ್ತಿನಲ್ಲೇ ಬೀಳುವಂತೆ, ಮೋಸ ಹೋಗುತ್ತಿದ್ದೇವೆ. ನಮ್ಮಲ್ಲಿರುವ ರಾಜಕಾರಣಿಗಳಲ್ಲಿ, ಅದಕ್ಕಿಂತಲೂ ರಾಜಕೀಯ ಉದ್ಯೋಗಸ್ಥರಲ್ಲಿ, ಆ ರೀತಿಯವರಿದ್ದಾರೆ. ದಿ| ನೆಹರೂಜೀ ಪ್ರಧಾನಿಯಾಗಿದ್ದಾಗ ಆಕ್ರಮಣವೇ ನಡೆದಿಲ್ಲವೆಂದು ನೈಜ ಸಂಗತಿಯನ್ನು ಮರೆ ಮಾಚಿದ್ದು, ಬಡಬೋರೆ ಗೌಡನಿಗೆ ತಿಳಿಸದೆನೇ ಇದ್ದರು. ಕೊನೆಯಲ್ಲಿ ಅವರು ಚೈನಿ ಕಮ್ಯೂನಿಸ್ಟರು ನಮಗೆ ಹಿಂದುಗಡೆ ಬೆನ್ನಿಗೆ ತಿವಿದರು, ತಾನು ಮೋಸ ಹೋದನೆಂದು ಚಿಕ್ಕ ಹುಡುಗನಂತೆ ಹೇಳಿದರು. ನಾವು ಮೋಸ ಹೋಗಿದ್ದೇವೆ ಇದರಲ್ಲಿ ಸಂದೇಹವಿಲ್ಲ. ಅಂಥ ವೇಳೆಯನ್ನೂ ಮೋಸ ಹೋಗಬೇಕೆನ್ನುವದರಲ್ಲಿ ಹುರುಳಿಲ್ಲ, ಅದು ಬುದ್ಧಿವಂತರಿಗೆ ತಕ್ಕುದಾಗುವದಲ್ಲ. ಆದರಲ್ಲದೆ ತಾನು ಅರಿತವನಂತೆ ಅಭಿನಯಿಸಿಕೊಂಡು ಹಿಂಬಾಲಕರನ್ನು ಮೋಸಗೊಳಿಸುವದು, ದ್ರೋಹಿಗಳ ಲಕ್ಷಣ. ಅದುವೇ ರಾಷ್ಟ್ರದ ವಿಷಯದಲ್ಲಿ ಹೇಳುವಾಗ ಅಂತಹವರನ್ನು ರಾಷ್ಟ್ರದ್ರೋಹಿಗಳು ಅಥವಾ ದೇಶ ದ್ರೋಹಿಗಳೆನ್ನದೆ ವಿಧಿಯಿಲ್ಲ. ಅವರ ಪ್ರಥಮ ಸಾಲಿನಲ್ಲಿ ಅಗ್ರೇಸರರಾಗಿ ನಿಂತಿರುವವರು ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಶ್ರೀ ಜಯಪ್ರಕಾಶನಾರಾಯಣ. ಇಂದು ಸಿ ರಾಜಗೋಪಾಲಾಚಾರಿಯವರು ಛಿ ರಾಜಗೋಪಾಲಾಚಾರಿಯಾಗಿದ್ದಾರೆ. (ತಮಿಳಿನಲ್ಲಿ 'ಸಿ'ಕ್ಕೆ 'ಛ'ವನ್ನೇ ಉಪಯೋಗಿಸುತ್ತಾರೆ.) ಇನ್ನೊಬ್ಬರು ಜಯ ಪರಾಗತ ನಾರಾಯಣರಾಗಿ ಬಿಟ್ಟಿದ್ದಾರೆ. ಮಹಾನ್ ದೇಶದ ವಿಭಜನೆಯ ಘೋರ ಪಾಪಕಾರ್ಯಕ್ಕೆ ಆಚಾರ್ಯರಾಗಿದ್ದ ರಾಜಗೋಪಾಲಾಚಾರಿಯವರಿಂದು ಪಾಕಿಸ್ತಾನಕ್ಕೆ ಕಾಶ್ಮೀರ ದಾನವನ್ನೀಯುವ ಕಾರ್ಯಕ್ಕೂ ಆಚಾರ್ಯರಾಗಲು ಎಡೆಬಿಡದೆ ಹವಣಿಸುತ್ತಿದ್ದಾರೆ. ಅವರೊಡನೆ ಪಂದ್ಯ ಹೂಡಲು ಜಯಪ್ರಕಾಶ ನಾರಾಯಣ ಜಮ್ಮನೆ ಮುಂದಕ್ಕೆ ಬಂದಿದ್ದಾರೆ. ಅವರು ಅಕ್ಷಯ ಚಿನ್ನೆಯನ್ನು ಚೈನಾಕ್ಕೆ ಗೇಣಿಗೆ ಕೊಡಲು ಬುದ್ಧಿ ಹೇಳುತ್ತಿದ್ದಾರೆ! ಅಕ್ಷಯ ಚಿನ್ಹೆ ಭಾರತಕ್ಕೆ ಸೇರಿದ್ದು. ಜಯಪ್ರಕಾಶ ನಾರಾಯಣರು ಒಂದು ರೀತಿಯ ಸಮಾಜವಾದಿ. ಆದರಲ್ಲದೆ ಈಗ ಉಳುವವನಿಗೆನೇ ಭೂಮಿ, ಒಕ್ಕಲೆಬ್ಬಿಸಬಾರದು ಮುಂತಾದ ವಾದ—ಕಾನೂನು ವಗೈರೆಗಳಿರುವಾಗ ಅಕ್ಷಯ ಚಿನ್ಹವನ್ನು ಚೈನಾಕ್ಕೆ ಕೊಟ್ಟರೆ ಹೇಗಾದೀತು? ಅದೂ ಚಾಲಗೇಣಿಗೋ — ಮೂಲಗೇಣಿಗೋ, ಚೈನಾ ಅದಕ್ಕೆ ಸಿದ್ಧವಿದೆಯೇ? ಇತ್ಯಾದಿ ಇನ್ನೂ ಜಯಪ್ರಕಾಶ ನಾರಾಯಣರಿಗೆ ನಿಶ್ಚಯವಾಗಿ ಗೊತ್ತಿಲ್ಲ. ಇದ್ದ ಭೂಮಿಯನ್ನು ಗೇಣಿಗೆ ಕೊಟ್ಟು ಬಿಟ್ಟು ನಾವು 'ಪ್ರಭು'ಗಳಾಗೋಣ. ಬಂದ ಗೇಣಿ—ಬಾಡಿಗೆಯಿಂದ ಜೀವನ ಸಾಗಿಸೋಣ. ಯಾಕೆ, ಈ ಕಷ್ಟ? ಬಹಳ ಚೆನ್ನಾಗಿದೆ—ಜಯಪ್ರಕಾಶನಾರಾಯಣರ ಉದ್ದಿಷ್ಟ ಆಲೋಚನೆ!

ಹಿಂದೆ ಒಬ್ಬರು ಪ್ರಧಾನಿಸ್ಥಾನದಲ್ಲಿದ್ದರು. ಅವರು ಆಕ್ರಮಣಕ್ಕೊಳಗಾಗಿರುವ ಪ್ರದೇಶಗಳು ಕಲ್ಲು ಮಣ್ಣಿನ ಪ್ರದೇಶಗಳೆಂದೂ, ಅಲ್ಲಿ ಹುಲ್ಲು ಬೆಳೆಯುವುದಿಲ್ಲವೆಂದು ಬಹಳ ತಾತ್ಸಾರದ ಮಾತುಗಳನ್ನಾಡಿದ್ದರು. ಅವರು ಹೋದರು. ಇದೀಗ ಅವರ ನಿಕಟ ವರ್ತಿ ಸ್ನೇಹಿತರು ಆ ಪ್ರಯೋಜನವಿಲ್ಲದ ಪ್ರದೇಶವನ್ನು ಗೇಣಿಗೆ ಕೊಟ್ಟು ಬಿಡೋಣ ಎನ್ನುತ್ತಿದ್ದಾರೆ! ಹುಲ್ಲುಇಲ್ಲದ ಗುಡ್ಡ ಅದ್ಯಾಕೆ ಚೈನೀಯರಿಗೆ ಬೇಕಾಗಿರುತ್ತದೆ? ಅದನ್ನವರು ಗೇಣಿಗೆ ಪಡೆದು ಕೊಂಡು ಮಾಡುವುದಾದರೂ ಏನನ್ನು? ನಮಗೆ ವಾತ್ಸಲ್ಯಮಯಿ ಮಾತ್ರ ಭೂಮಿಯ ಮೇಲಿರುವ ಭಕ್ತಿ, ಶ್ರದ್ಧೆ ಹಾಗೂ ಪ್ರೀತಿ ಎದೆಯಿಂಬುದಕ್ಕೆ ಅದು ಸ್ಪಷ್ಟ ನಿದರ್ಶನ. ಆ ಗಡಿ ಪ್ರದೇಶ ಹುಲ್ಲು ಮುಳ್ಳು ಇಲ್ಲದ ಬಂಜರು ಪ್ರದೇಶವಲ್ಲ—ನಮ್ಮ ಹೃದಯ ಬಂಜರು ಹೃದಯ, ಅಭಿಮಾನ ಶೂನ್ಯ ಹೃದಯವಿದೆ. ಆ ಭೂಪ್ರದೇಶವನ್ನು ನಾವು ಗೇಣಿಗೆ ಕೊಡುತ್ತಿರುವದಲ್ಲ—ನಮ್ಮ ಹೃದಯ ಹಾಗೂ ಮೆದುಳನ್ನು ಬಾಡಿಗೆಗೆ ಕೊಡುತ್ತಿದ್ದೇವೆ! ಇದು ಇಂದಿನ ನಮ್ಮ ದೀನ ದುರ್ದರ ದಿಶೆ ಇದೆ.

ಈ ರೀತಿನಾವು ನಮ್ಮ ತಾಯ್ನಾಡಿನ ಅಂಗಾಂಗಗಳನ್ನು ವಿಭಜನೆಗೊಳಿಸಿಕೊಂಡು, ಪರಕೀಯರ ತೃಪ್ತಿಗಾಗಿ ಕಡಿದು ಕೊಡುತ್ತಿದ್ದು ಹಾಗೂ ಉಳಿದುದನ್ನು ಗೇಣಿಗೆ ಕೊಡುತ್ತ ಕಲ್ಪನೆಯ ಕುದುರೆಯ ಮೇಲೆ ಬಹಳೆತ್ತರದಲ್ಲಿ ಹಾರುತ್ತ ಮತ್ತೆ ಕಲ್ಪನಾ ಸರ್ಪಶಯನವಾಗಿರುವಾಗ ಮಹತ್ವಾಕಾಂಕ್ಷಿಗಳಿಗೆ ಮಲಗಲೂ ಮನಸ್ಸು ಬರುವುದಿಲ್ಲ ಅವರೂ ದೂರದಿಂದವೇಶಕ್ಕೆ ಹಾರಾಡುತಿದ್ದಾರೆ--ಆದರೆ. ಕಲ್ಪನೆಯ ಕುದುರೆಯ ಮೇಲಲ್ಲ; ನೈಜ ವಿಮಾನದಲ್ಲಿ ಕುಳಿತು ಕೊಂಡು, ಅತಿ ವೇಗದಲ್ಲಿ ಧಾವಿಸುತ್ತಿದ್ದಾರೆ.

ಆ ಅಧ್ಯಾಯ ಚೈನೀಯರಿಗೇನೂ ಹೊಸತಲ್ಲ. ಅದು ಅವರ ರಕ್ತದಲ್ಲೇ ಬಂದಿರುತ್ತದೆ. ಇಲ್ಲದಿದ್ದಲ್ಲಿ ಪ್ರಪಂಚ ಪರ್ಯಟನೆಗೆಂದು ಹೊರಟು ಸಿಂಹಳದಿಂದ ಅಲ್ಲಿನ ರಾಜನನ್ನ ಸಹಾಯಕ ರಾಜನನ್ನು ಚೆಂಗ್-ಹೋ ಹಾಗೂ ಚಟ್ಟಿ ಹಿಡಿಯಲು ಬಂದಿದ್ದ ಚೈನಿ ಕಮ್ಯೂನಿಸ್ಟ್ ಸೈನಿಕರು ಭಾರತೀಯ ಸೈನಿಕರನ್ನು! ಬಂಧಿಸಿ ಕೊಂಡೊಯ್ಯಲು ಸಾಧ್ಯವೇನು? ಮಲ್ಲಿರುವ ಮಹಾ ಮಹಾ ಆಚಾರ್ಯ— ಪಂಡಿತರು ನಮ್ಮ ಸೈನಿಕರನ್ನು ಕೊಂದು ಹೋದರೇನಂತೆ, ನವಿರಾಲ್ಕು ಜನರನ್ನು ಕೊಂಡೊಯ್ದದ್ದರಲ್ಲಿ ಹದಿನಾಲ್ಕು ದೇಹ ಹಿಂದಕ್ಕೆ ಕೊಡಲಿಲ್ಲವೇನು? ಜೀವ—ಅಷ್ಟು ಅವೆಲ್ಲಾ ಏನು, ಮಹಾ, ಅವನ್ನು ಕಂಡವರ್ಯಾರು? ದೇಹಕ್ಕೆ ದೇಹ ಹಿಂದಕ್ಕೆ ಕೊಟ್ಟುಬಿಟ್ಟಿದ್ದಾರೆ. ಎಷ್ಟು ಶಾಂತಿ ಪ್ರಿಯರು. ಸ್ನೇಹಾಕಾಂಕ್ಷಿಗಳು, ದಾನ ಶೂರರು ಕಮ್ಯೂನಿಸ್ಟ್ ಚೈನೀಯರೆಂದು ಇಲ್ಲಿರುವ ಚೈನೀ ಅಳಿಯರು ಜಯಘೋಷಮಾಡುತ್ತಿದ್ದಾರೆ. ಜನತೆ ದಂಗಾಗುವಂತೆ! ಈ ಭೂಪರನ್ನು ನಂಬಿದರೆ ಪಾಪ! ಇದ್ದಾರಲ್ಲಾ ಅಮೃತ ಸಾಧಕರು ರಣವಾದರು ಕೃಷ್ಣ ಗೋಪಾಲ, ಶಂಕರಾ ಆಂದವಿಟ್ಟರಾಯಿತು. ಅಹಾ! ಎಂತಹಾ ಮೋಹನ ಕುಮಾರರು!

(ಪಕ್ಕದ ಪುಟ ನೋಡಿರಿ)

ಸ್ಥಿರ ಠೇವಣಾತಿಗಳ ಮೇಲೆ
ಬಡ್ಡಿಯ ದರಗಳು

4% ರಿಂದ 6⅛%

ಇದೇ ತಾರೀಕು 17ನೇ ಆಗೋಸ್ಟ್ 1964ರಿಂದ ನಿಮ್ಮ ಸ್ಥಿರ ಠೇವಣಾತಿಗಳ ಮೇಲೆ ಸಾಲಿಯಾನ್ ಸೇಕಡಾ 6⅛ ತನಕ ಬಡ್ಡಿ ಕೊಡಲಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ 'ಸಿಂಡಿಕೇಟ್ ಬ್ಯಾಂಕಿ'ನ ಶಾಖೆಯಲ್ಲಿ ವಿಚಾರಿಸಿರಿ.

ಅರ್ಧ ವರ್ಷಕ್ಕೊಮ್ಮೆ ಬಡ್ಡಿಯ ಪಾವತಿ

1ರಿಂದ 7 ವರುಷಗಳ ಅವಧಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಚೇರಿ - - - - ಮಣಿಪಾಲ

ಶಾಖೆಗಳು: 192

ಚಲಾವಣಾ ನಿಧಿ: ರೂ. 60 ಕೋಟಿಗೂ ಮಿಕ್ಕಿವೆ.

........ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರ.

ಭ್ರಷ್ಟಾಚಾರದ ಮೇಲೆ

ವಿಶ್ವಾಸಕ್ಕೆ ಮೂಲ

ಯಾವುದೇ ಒಂದು ವ್ಯಕ್ತಿ ಅಧಿಕಾರದಲ್ಲುಳಿಯಬಹುದು ಅಥವಾ ಅಧಿಕಾರತ್ಯಾಗಮಾಡಬಹುದು, ಅದು ಮಹತ್ವದ ವಿಷಯವಲ್ಲ. ಭ್ರಷ್ಟಾಚಾರ ನಿವಾರಣೆಗಾಗಿ ನಾನು ಕೈಗೊಂಡಿರುವ ಪ್ರತಿಜ್ಞೆಯು ನನ್ನದೇ ಆದ ಪಕ್ಷದ ಹಾಗೂ ಸಮಗ್ರ ಭಾರತೀಯರ ಪ್ರತಿಜ್ಞೆಯಾಗಿದೆ. ಪೂರೈಸಲೇಬೇಕಾದ ಕರ್ತವ್ಯವಾಗಿದೆ. ಪ್ರತಿಜ್ಞೆಯು ಒಂದು ವೇಳೆ ವಿಫಲವಾದರೆ ಜನರಿಗೆ ಜನರಲ್ಲಿ, ಆಡಳಿತ ವ್ಯವಸ್ಥೆಯಲ್ಲಿ, ಸರ್ಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ವಿಶ್ವಾಸವಿಲ್ಲದಂತಾಗುತ್ತದೆ. ಪರಿಣಾಮವಾಗಿ ಸಾಮಾಜಿಕ ನ್ಯಾಯ ವ್ಯವಸ್ಥೆಗೆ ಭಾರೀ ಪೆಟ್ಟು ತಗಲುತ್ತದೆ.

ನನ್ನ ಅನೇಕ ಹಿತೈಷಿಗಳು, ಮಿತ್ರರು ನನ್ನ ಅವಸರದ ವಿಧಾನವನ್ನು ಟೀಕಿಸಿದರು. ಈ ನಿರ್ಧಾರದಿಂದ ನನ್ನ ಖ್ಯಾತಿಗೆ, ರಾಜಕೀಯ ಜೀವನಕ್ಕೆ ಚ್ಯುತಿ ಬರುವುದೆಂದೂ ಭಯಗ್ರಸ್ತರಾದರು. ಭ್ರಷ್ಟಾಚಾರ ನಿರ್ಮೂಲನಗೊಳಿಸಲು ಕೈಗೊಳ್ಳುವ ಆಂದೋಲನ ತ್ವರಿತ ಪ್ರಗತಿ ಸಾಧಿಸುವುದು ಸಹಜ. ಸಾರ್ವಜನಿಕ ಜೀವನದ ವಿವಿಧ ರಂಗಗಳಲ್ಲಿ—ವಿವಿಧ ರಾಜಕೀಯ, ಆಡಳಿತಾತ್ಮಕ, ಸಾಮಾಜಿಕ, ನೈತಿಕ ಮಟ್ಟಗಳಲ್ಲಿ ಈ ಹೋರಾಟ ನಡೆಯಬೇಕಾಗಿದೆ. ಈ ದಿಶೆಯಲ್ಲಿ ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಭ್ರಷ್ಟಾಚಾರದ ವಿರುದ್ಧ ಆಂದೋಲನ ನಡೆಸುವ ಪ್ರವೃತ್ತಿ ಬೆಳೆದು ಬಲಗೊಳ್ಳ ತೊಡಗಿದೆ. ಆಶೆ—ಆಕಾಂಕ್ಷೆಗೆ ಭಾರೀ ಅಪೇಕ್ಷೆಗಳಿಗೆ ಎಡೆಕೊಟ್ಟಿದೆ. ಫಲಸ್ವರೂಪವಾಗಿ ಆಂದೋಳನದಲ್ಲಿ ಜನರು ದಿನದಿನಕ್ಕೆ ಹೆಚ್ಚು ಆಸಕ್ತಿ ತಳೆಯ ತೊಡಗಿದ್ದಾರೆ.

ಆಡಳಿತ ವ್ಯವಸ್ಥೆ

ಆಡಳಿತ ವ್ಯವಸ್ಥೆಯಲ್ಲಿ ಕಂಡು ಬರುವ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಲು ಅನೇಕ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಮೈಸೂರು ಹೈಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶರ ನೇತೃತ್ವದಲ್ಲಿ ಕೇಂದ್ರ ಜಾಗ್ರತ ಆಯೋಗವನ್ನು ರಚಿಸಲಾಗಿದೆ. ಈ ಹೊಸ ಸಂಸ್ಥೆಯು ಸರ್ಕಾರಿ ನೌಕರರ ವಿರುದ್ಧ ಬರುವ ಭ್ರಷ್ಟಾಚಾರದ ದೂರುಗಳನ್ನು ತ್ವರಿತವಾಗಿ ಪರಿಶೀಲಿಸುವುದು ಹಾಗೂ ಅಪರಾಧಿಗಳನ್ನು ನಿರ್ದಾಕ್ಷಿಣ್ಯವಾಗಿ ದಂಡಿಸುವುದು, ಬೆಳಕಿಗೆ ಬಂದ ಭ್ರಷ್ಟಾಚಾರದ ಪ್ರಸಂಗಗಳನ್ನು ಮುಚ್ಚಿಡಲು ನಡೆಯುವ ಪ್ರಯತ್ನಗಳನ್ನು ಜಾಗ್ರತ ಆಯೋಗವು ಬಲವಾಗಿ ಪ್ರತಿಬಂಧಿಸುವುದು.

ಸರ್ಕಾರವು ಜಾಗ್ರತ ಆಯೋಗದ ಶಿಫಾರಸುಗಳನ್ನು ಅಂಗೀಕರಿಸದಿದ್ದರೆ, ಆಯೋಗವು ಈ ಸಂಗತಿಯನ್ನು ತನ್ನ ವಾರ್ಷಿಕ ವರದಿಯಲ್ಲಿ ಪ್ರಕಟಿಸುವುದು. ಹೀಗೆ ಪ್ರಕಟವಾದ ಸಂಗತಿಯನ್ನು ಪಾರ್ಲಿಮೆಂಟ್ ಚರ್ಚಿಸಬಹುದಾಗಿದೆ.

ಆಡಳಿತ ಸುಧಾರಣೆ

ಮೊಕದ್ದಮೆಗಳ ತೀರ್ಮಾನದಲ್ಲಿ ಕಂಡು ಬರುವ ವಿಲಂಬ, ಆಡಳಿತ ವ್ಯವಸ್ಥೆಯಲ್ಲಿ ಕಂಡು ಬರುವ ಪಕ್ಷಪಾತ, ಅದಕ್ಷತೆ ಇವು ಭ್ರಷ್ಟಾಚಾರದ ಮೂಲ ಕಾರಣಗಳಾಗಿವೆ. ಆಡಳಿತ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಹೆಚ್ಚಿಸಿ ಸಮಗ್ರತೆಯನ್ನು ಬಲಗೊಳಿಸುವ ಕ್ರಮಗಳನ್ನು ಜಾರಿಯಲ್ಲಿ ತರಲು ಕೇಂದ್ರ ಸರ್ಕಾರದ ಗೃಹ ಮಂತ್ರಿ ಶಾಖೆಯು "ಆಡಳಿತ ಸುಧಾರಣಾ ವಿಭಾಗ"ವೆಂಬ ಪ್ರತ್ಯೇಕವಿಭಾಗವನ್ನು ರಚಿಸಿದೆ. ವಿವಿಧ ಮಂತ್ರಿ ಶಾಖೆಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಪೂರೈಕೆ, ತಾಂತ್ರಿಕ ಅಭಿವೃದ್ಧಿ, ಆಮದು—ರಫ್ತು ನಿಯಂತ್ರಣ, ಮತ್ತು ಕೇಂದ್ರ ಲೋಕೋಪಯೋಗಿ ಇಲಾಖೆಗಳ ಕಾರ್ಯವಿಧಾನವನ್ನು ಪರಿಶೀಲಿಸಲು ಅನೇಕ ತಂಡಗಳನ್ನು ನೇಮಿಸಲಾಗಿದೆ. ಈ ಕ್ಷೇತ್ರಗಳಲ್ಲಿ ಕಂಡು ಬರುವ ಭ್ರಷ್ಟಾಚಾರವನ್ನು ನಿರ್ನಾಮಗೊಳಿಸಿ ವಿಲಂಬ ಪ್ರವೃತ್ತಿಯನ್ನು ನಿವಾರಿಸಿ ಕಾರ್ಯದಲ್ಲಿ ದಕ್ಷತೆಯನ್ನು ಹೆಚ್ಚಿಸುವುದೇ ಈ ಪರಿಶೀಲನಾ ತಂಡಗಳ ಗುರಿ. ಆರ್ಥಿಕ ಅಭಿವೃದ್ಧಿಯ ಮತ್ತು ಸಾರ್ವಜನಿಕ ಸೌಕರ್ಯಗಳ ವೃಷ್ಟಿಯಿಂದ ಈಗ ಹೆಚ್ಚು ವೆಚ್ಚ ಮಾಡುತ್ತಿರುವ ಇಲಾಖೆಗಳನ್ನೇ ಪರಿಶೀಲನೆಗಾಗಿ ಆಯ್ದುಕೊಳ್ಳಲಾಗಿದೆ.

ಆಡಳಿತ ವ್ಯವಸ್ಥೆಯಲ್ಲಿ ಲಂಚ ನಿರ್ಮೂಲನ ಮಾಡಿ ಅದನ್ನು ಶುದ್ಧೀಕರಿಸಲು ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳನ್ನು ದಂಡಿಸಲು ಆಡಳಿತ ವ್ಯವಸ್ಥೆಗೆ ಅಗತ್ಯವಾದ ಅಧಿಕಾರಗಳನ್ನು ಕೊಡುವುದಕ್ಕಾಗಿ ನಡವಳಿಕೆಯ ನಿಯಮಗಳು ಮತ್ತು ಶಿಸ್ತು ಸಂಬಂಧವಾದ ನಿಯಮಗಳಿಗೆ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಭ್ರಷ್ಟಾಚಾರ ನಿರ್ಮೂಲನಾ ಕ್ರಮಗಳನ್ನು ಕಾರ್ಯಗತಗೊಳಿಸಲು [illegible] ನಲ್ ಪ್ರೊಸೀಜರ್ ಕೋಡ್, ಭ್ರಷ್ಟಾಚಾರ ಪ್ರತಿಬಂಧ ಕಾನೂನು, [illegible] ನೇ ಸಾಲಿನ ಆಮದು ರಫ್ತು (ಹತೋಟಿ) ಕಾನೂನು, ಅಗತ್ಯ ವಸ್ತುಗಳ ಕಾನೂನು, [illegible] ಧನಾದ ಕಾನೂನು, [illegible] ಕೇಂದ್ರ ಅಬಕಾರಿ ಸುಂಕ [illegible] ಬಂಧವಾದ ಕಾನೂನು ಹಾಗೂ [illegible] ಧಾನದ [illegible] ನಿಬಂಧನೆಗಳಿಗೆ ತಿದ್ದುಪಡಿ ಮಾಡಲೂ ಉದ್ದೇಶಿಸಲಾಗಿದೆ. ನಿಗದಿಯಂತೆ ಕಾಲದಲ್ಲಿ ಎಲ್ಲವೂ ಸರಾಗವಾಗಿ ಕಾರ್ಯಗತವಾದರೆ ಮುಂದಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ತಿದ್ದುಪಡಿಗೆ ಸಂಬಂಧವಾಗಿ ವಿಧೇಯಕಗಳನ್ನು ಮಂಡಿಸಲು ಸಾಧ್ಯವಾಗುವುದು.'

ಪ್ರಾಮಾಣಿಕರಾದ ಅಧಿಕಾರಿಗಳನ್ನೇ ಉನ್ನತ ಆಡಳಿತ ಹುದ್ದೆಗಳಿಗೆ ನೇಮಕಗೊಳ್ಳುವಂತೆ ಸರ್ಕಾರವು ವಿಶೇಷ ಗಮನ ನೀಡಬೇಕು. ಶುದ್ಧ ಚಾರಿತ್ರ್ಯವಿಲ್ಲದ ಅಧಿಕಾರಿಗಳು ಇಂತಹ ಹುದ್ದೆಗಳಲ್ಲಿ ಸೇವೆ ಸಲ್ಲಿಸುವುದಕ್ಕಾಗಲಿ ಅಥವಾ ಅವರ ಪುನರ್ನೇಮಕಕ್ಕಾಗಲಿ ಅವಕಾಶವಿರಬಾರದು. ವರಿಷ್ಠ ಅಧಿಕಾರಿಗಳು ತಮ್ಮ ಕೈಕೆಳಗಿನ ಅಧಿಕಾರಿಗಳ ಕಾರ್ಯ ಚಟುವಟಿಕೆಗಳು ಮತ್ತು ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ಕಾರ್ಯಚಟುವಟಿಕೆಗಳ ಮೇಲೆ ಕಣ್ಣಿಡುವಂತೆ ನಿರ್ದೇಶಿಸಬೇಕು.

ಸಘನ ಕ್ರಮ

ಭ್ರಷ್ಟಾಚಾರ ನಿರ್ಮೂಲನದ ಉದ್ದೇಶಕ್ಕಾಗಿ ಮೂರು ವಿಶಿಷ್ಟ ಕ್ಷೇತ್ರಗಳಲ್ಲಿ ಹೆಚ್ಚಿನ ಕ್ರಮ ಕೈಗೊಳ್ಳಲಾಗಿದೆ. ವಿಶೇಷ ಪೋಲೀಸ ಸಿಬ್ಬಂದಿಯವರು ತಮ್ಮ [illegible] ಲ್ಲಿ ಈ [illegible] ಗುರುತಿಸಿದ [illegible] ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ ಈಗ ಮೂರು ಮಂತ್ರಿ ಶಾಖೆಗಳನ್ನು ಆರಿಸಿಕೊಳ್ಳಲಾಗಿದೆ. ಕಾರ್ಯವಿಧಾನದ ಪರಿಶೀಲನೆಗಾಗಿ ನಾಲ್ಕು ಇಲಾಖೆಗಳನ್ನು ಆಯ್ದುಕೊಳ್ಳಲಾಗಿದೆ. ಸಂತಾನಂ ಸಮಿತಿಯು ಭ್ರಷ್ಟಾಚಾರದ ನಿರ್ಮೂಲನಕ್ಕಾಗಿ ಸೈಚಿತ ಕ್ರಮ ಕೈಗೊಳ್ಳಲು ಸೂಚಿಸಿರುವ ಇಲಾಖೆಗಳಲ್ಲಿ ಇವು ನಾಲ್ಕು ಇವೆ.

ವಾಸ್ತವಿಕ ಕಾರ್ಯಾಚರಣೆ ಅಂಗವಾಗಿ ಕೇಂದ್ರಾಡಳಿತ ಪ್ರದೇಶದಿಂದ ದೆಹಲಿಯನ್ನು ಆರಿಸಿಕೊಳ್ಳಲಾಗಿದೆ. ಈ ಉದ್ದೇಶದಿಂದ ದೆಹಲಿಯಲ್ಲಿ ಲಂಚನಿರ್ಮೂಲನಾ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸಲಾಗಿದೆ. ಭ್ರಷ್ಟಾಚಾರದ ದೂರುಗಳನ್ನು ಸ್ವೀಕರಿಸಲು ಜನರ ಕಷ್ಟಕಾರ್ಪಣ್ಯಗಳನ್ನು ಕುರಿತು ವಿಚಾರಿಸಲು ಹೊಸ ಏರ್ಪಾಡು ಮಾಡಲಾಗಿದೆ.

ನಮ್ಮ ಅಧಿಕಾರಿಗಳಿಗೆ ಈಗ ಅನೇಕ ವಿಧವಾದ ದೂರುಗಳು ಬರತೊಡಗಿವೆ. ಅವು ಸಾಮಾನ್ಯವಾಗಿ ವಿಳಂಬ, ಪಕ್ಷಪಾತ, ಅನ್ಯಾಯ ಮತ್ತಿನ್ನಿತರ ಭ್ರಷ್ಟಾಚಾರದ ಕೃತ್ಯಗಳಿಗೆ ಸಂಬಂಧಿಸಿವೆ. ತಮ್ಮ ದೂರುಗಳಿಗೆ ಸಾಕಷ್ಟು ಗಮನ



ಲಡಖಿನ ಕುರಿಗಾಹಿಯು ತನ್ನ ಕುರಿ ಮತ್ತು ಆಡುಗಳನ್ನು ಮೇಯಿಸುವುದರಲ್ಲಿಯೇ ತಲ್ಲೀನನಾಗಿದ್ದಾನೆ. **ಕರ್ತವ್ಯ** ತತ್ಪರತೆ ಆತನ ಹೆಚ್ಚುಗಾರಿಕೆ. (ಲಡಖದ ಸಚಿತ್ರಲೇಖನ ಪುಟ ಆರರಲ್ಲಿ ಓದಿರಿ)

ಕೃತಿ ಪರಿಚಯ



ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಪಾಂಚಜನ್ಯ: (ಕವನ ಸಂಕಲನ).

ರಚಯಿತರು: 'ಪದ್ಮೇಂದ್ರ'

ಪ್ರಕಾಶಕರು: 'ನಲಂದಾ', ಬುಲ್ ಟೆಂಪಲ್ ರೋಡ್, ಬಸವನ ಗುಡಿ, ಬೆಂಗಳೂರು-೪.

ಪುಟಗಳು: ೫೫ ಬೆಲೆ: ರೂ. ೧=೦೦.

೧೯೬೨ರ ಕೊನೆಯ ಭಾಗದಲ್ಲಿ ಮಾತೃ ಭೂಮಿಯ ಸಂರಕ್ಷಣೆಗಾಗಿ ಬಲಿದಾನವಿತ್ತ ಭಾರತೀಯ ಕಲಿಗಳಿಗೆ ಅರ್ಪಿತವಾದ ಈ ಕೃತಿ ಜನ್ಮ ಭೂಮಿಯು ಸ್ವರ್ಗಕ್ಕೂ ಮಿಗಿಲಾದುದೆಂಬುದನ್ನು ನಾಲ್ಕೆಸೆಗಳಲ್ಲಿಯೂ ಪ್ರತಿಧ್ವನಿಸುತ್ತದೆ. 'ಇಂದಿನ ನಿರಾಶಾಮಯ ವಾತಾವರಣವನ್ನು ಬದಲಿಸಿ ಭವ್ಯ—ಬಲಿಷ್ಠ, ಸಮೃದ್ಧ—ಸಂಪನ್ನ, ಸುಸಂಘಟಿತ ರಾಷ್ಟ್ರವನ್ನು ಕಟ್ಟಿ ಜಗತ್ತಿನಲ್ಲಿ ಗೌರವದಿಂದ ತಲೆಯೆತ್ತಿ ನಿಲ್ಲುವ ವರೆಗೂ ವಿರಮಿಸೆ'ನೆಂಬ ದೃಢ ಪ್ರತಿಜ್ಞೆ ಗೆಯ್ಯುವಂತೆ 'ಪಾಂಚಜನ್ಯ' ಮೊಳಗಿ ಕರೆ ಕೊಡುತ್ತಿದೆ.

'ಪಾಂಚಜನ್ಯ'ವು ಮೂರು ಬಗೆಯಾಗಿ ಮೊಳಗಿದೆ ಮೊದಲನೆಯದು ಸ್ವದೇಶ ರಕ್ಷಣೆಯ ಅವಶ್ಯಕತೆಯನ್ನು ನಾನಾ ವಿಧವಾಗಿ ಪ್ರತಿಬಿಂಬಿಸಿ ಓದುಗರಲ್ಲಿ ವೀರ್ಯವನ್ನು ತುಂಬಿದರೆ ಎರಡನೆಯದು ದೇಶದೊಳಗಿನ ಹಿತಶತ್ರುಗಳ ವಿರುದ್ಧ ಎಚ್ಚರಿಕೆ ನೀಡುತ್ತದೆ. (ಮೂರನೆಯದು ರಾಷ್ಟ್ರಕವಿ ಗೋವಿಂದ ಪೈ ಮತ್ತು ಭಾರತೀಯ ಸಾಮಾನ್ಯನ ಕಂಬನಿಯ ಬಾಳನ್ನು ಕುರಿತಾಗಿದೆ.)

ಸ್ವದೇಶ ಜನನಿ ಸ್ವರೂಪಗಳು. 'ಮುಕುಟವದು ಹಿಮಗಿರಿ ನೇಪಾನಿನ್ನ ಸೆರಗು' ಆಕೆಯ ಮುಂದೆ ಮಾಡಬೇಕಾದ ಪ್ರತಿಜ್ಞೆ 'ವಿರಮಿಸೆ ನಿನ್ನಂಗವಗೂಡಿಸಪ' ಬಂದಿರುವ ಜೀವನ್ಮರಣದ ಪರ್ವದಲ್ಲಿ ಸಂಸ್ಕೃತಿ ಸ್ವಧರ್ಮ ಉಳಿಸಲು ಪಣ ತೊಡಬೇಕು. (ಪುಟ ೧೩) ಭಾರತವೆಂದಿಗೂ ಕುಡುಗಾಡಾಗದೆಂದು ವಿಶ್ವಾಸ ಕವಿಗೆ. ಎಂತಲೇ ಅವರು ಸಾರುತ್ತಾರೆ: 'ಪರ್ವತವೇ ಸಿಡಿದರೂ ಬರಸಿಡಿಲು ಬಡಿದರೂ ಹೇಡಿತನ ಮೂಡದು ಎದೆಯೆಡೆಯೊಳ್. ಗಡಿಯಲಿ ಕಲಿ ಮಡಿದರೂ ಕೆಚ್ಚಿನ ಉಡಿ ನಾಡದು. ನಾಡಿದು ಆಗದು ಸುಡುಗಾಡೆಂದಿಗೂ.' (ಪುಟ ೧೭) ಕವಿ ಭಾರತದ ವಿಧ್ವಕ್ಕೆ 'ಅಂಜು ಕುಂದಿಯೆ' ಬಾ'

ಎಂದು ಆಹ್ವಾನ ನೀಡುತ್ತಾರೆ. (ಪು. ೨೧) ಭಾರತೀಯ ಯುವಕನನ್ನು ಅವರು ಎಚ್ಚರಿಸಿ ಅತನಲ್ಲಿ ವೀರ್ಯ ತುಂಬುತ್ತಾರೆ: 'ಕಡಿದೊಗೆ ಕಲಿಯುಗದ ನೊಗ, ಮೊಳಗುತಿದೆ......ಇತಿಹಾಸದ ಪಾಂಚಜನ್ಯ' (ಪು. ೨೬) 'ಕುಂಭಕರ್ಣನ ಒಡ್ಡು ಎದ್ದೇಳು ಬಾ' ಎಂದು ಕರೆಯುತ್ತಾರೆ. ಹೋರಾಟದ ಪರಿಣಾಮವನ್ನೂ ಕವಿ ಆತ್ಮ ವಿಶ್ವಾಸದಿಂದ ಘೋಷಿಸುತ್ತಾರೆ: 'ಧೂರ್ತ ಚೀನೀಯರ ಕಾಲ್ಕಿತ್ತು ಓಟ, ಜಗವು ಕಲಿಯಿತೊಂದು ಪಾಠ ಭಾರತದ ಮೇಲೊರಗುವುದಲ್ಲ ಆಟ' (ಪು. ೩೧) ಹೋರಾಡುವ ವೀರನ ಮನದಾಶಯ 'ನಮ್ಮ ನೆಲವನುಳಿಸಿ ನನ್ನ ಮನೆಗೆ ಮರಳಬೇಕು' ಎಂಬುದು. ಶತ್ರುವಿನ ಆಕ್ರಮಣದಿಂದ ಕ್ರುದ್ಧನಾದ ಕವಿಯ ಆಶಯವಿದು: 'ಭೈರವನಾಗುವೆನು ನಾನಿಂದು, ವೈರಿಗಳ ಪಡೆ ಬಡಿಯಲು ಹೈಮಾಚಲ ಶಿಖರದಲಿನಿಂದು ಕಾಲಭೈರವನಾಗುವೆನು (ಲೇಖನಿಯ ಬಿಸುಟು)" (ಪು. ೩೭).

'ನೂರುಬಾರಿ . ದೇಶವನು ಧಿಕ್ಕರಿಸಿ ಜ್ಞಾನ ವಿದ್ಯೆ ಬುದ್ಧಿ ದೇಹವನು ವಿಕ್ರಯಿಸಿ ಸ್ವಾರ್ಥಲೋಲುಪನಾಗಿ ವೈರಿಗಳನಾಶ್ರಯಿಸುವೆಯ?.....ನಿನ್ನದೆಂದೊಮ್ಮೆ ತಿಳಿಯೊ ಮನೆ. ಈ ಮರ, ಈ ಗುಡಿ, ತಾಯ್ನೆಲ ..." ಎಂದು ಪಂಚಮಸ್ತಂಭೀಯರನ್ನು ಪ್ರಾರ್ಥಿಸುತ್ತಾರೆ, ಕವಿಗಳು. (ಪು. ೪೩-೪೪). ದೇಶ ರಕ್ಷಣೆಗೆ ಬಂಗಾರ ನೀಡು ಎಂದು ಸೋದರನೊಬ್ಬ ಸೋದರಿಗೆ ಬರೆಯುತ್ತಾನೆ: 'ನಿನಗಾಗಿ ಭಗಿನಿ, ಹಿಮ ಚಳಿಯಲಿಂದು ಹೋರಾಡುತಿಹೆನು. ಬಂಗಾರ ಮಾರಿ ಚಳಿಯುಡುಪು ಹೊಲಿಯಲು ತಾ ಉಣ್ಣೆದಾರ' ಎಂದು ವಿನಂತಿಸುತ್ತಾನೆ (ಪು ೪೬). ಕೊನೆಗೆ ಕವಿ 'ಬಾಳಿದು ಸಮಿಧೆ ರಾಷ್ಟ್ರ ಯಜ್ಞಕೆ ಬಾಳಿನ ಆರತಿ ಭಾರತ ಮಾತೆಗೆ' ಎಂದು ಹಾಡಿ ನೈಜ ದೇಶಪ್ರೇಮಿಯ ಗುರಿಯನ್ನು ಸಾರುತ್ತಾರೆ.

ದೇಶ ಪ್ರೇಮದಿಂದ ತುಂಬಿ ತುಳುಕಾಡುವ ಇಲ್ಲಿನ ಕವನಗಳು ಸುಖಸ್ವಾರ್ಥಲೋಲುಪ ಭಾರತೀಯರಲ್ಲಿ ಶತ್ರುವಿನಾಕ್ರಮಣದ ಭೀಕರ ಪರಿಣಾಮವನ್ನು ಪ್ರತಿಬಿಂಬಿಸಿ ದೇಶಕ್ಕಾಗಿ ಸರ್ವಸಮರ್ಪಣಾ ಭಾವದಿಂದ ಹೋರಾಡುವ, ದುಡಿಯುವ ಸಸ್ಫೂರ್ತಿಯನ್ನು ತಂದೀಯಬಲ್ಲವು. ಸಾಹಿತ್ಯದ ದೃಷ್ಟಿಯಿಂದ ಇವು ಸಾಮಾನ್ಯ ಮಟ್ಟದವೆನ್ನಬಹುದಾದರೂ ಇಲ್ಲಿ ಓಘವಿದೆ, ಭಾವವಿದೆ; ಅರ್ಥವ್ಯಕ್ತಿಯಿದೆ; ವೀರರ ಸಬೋಧವಿದೆ ಪದ್ಮೇಂದ್ರ ಕಾವ್ಯನಾಮದಿಂದ ಶ್ರೀ ಪದ್ಮನಾಭ ಭಟ್ ಬ್ರಹ್ಮಾವರ್ಕರ್ ಅವರು ಇಂದಿನ ದಿನಗಳಿಗೆ ಅವಶ್ಯವಾದ ಕವನ ಪ್ರಕಾರಗಳನ್ನೇ ಹೆಣೆದಿದ್ದಾರೆ. ಕೆಲವೊಂದು ಇತರ ಕೃತಿಗಳಿಂದ ಪ್ರೇರಿತವಾಗಿವೆಯೆಂಬುದನ್ನವರೇ ಹೇಳಿದ್ದಾರೆ. ಒಟ್ಟಿನಲ್ಲಿ, ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ಕೃತಿಗಳು ಇಂದು ಹೆಚ್ಚಬೇಕು; ದೇಶ ರಕ್ಷಣೆಯ ಕಾರ್ಯದಲ್ಲಿ 'ನಾವೆಲ್ಲ ಸೈನಿಕರೆ ಇರಲಾವುದೆ ಉಡುಕು' ಎಂಬ ಭಾವನೆಯು ೪೫ಕೋಟಿ ಭಾರತೀಯರಲ್ಲಿ ಮೂಡಬೇಕು. 'ಪದ್ಮೇಂದ್ರ'ರ ಪರಿಶ್ರಮ ಈ ದಿನೆಯಲ್ಲಿ ಸಂಪೂರ್ಣ ಸಫಲ

ಮಹತ್ವಾಕಾಂಕ್ಷಿಗಳಿಗೆ ಮಲಗಲೂ ಮನಸಬಾರದು!

(ಏಳನೇ ಪುಟದಿಂದ)

ಅದರಿಂದಲೂ ಚೆಂಗ್-ಹೋನಿಗೆ ತೃಪ್ತಿಯಾಗಲಿಲ್ಲ. ತನ್ನ ತಂಡ ಐದು ಬಾರಿ ಪ್ರಯಾಣ ಮಾಡಿದ್ದರೂ ಅವನಿಗೆ ತೃಪ್ತಿಯಾಗಲಿಲ್ಲ. ಚೈನೀಯರು ಪೆಟ್ಟಿಗೆ-ಪ್ರಹಾರಕ್ಕೆ ಮಣಿದಂತೆ ಬೇರಾವುದಕ್ಕೂ— ಪ್ರತಿಭಟನೆ, ಶಾಂತಿಸಮಿತಿ ಇತ್ಯಾದಿಗಳಿಗೆ—ಬಗ್ಗುವದಿಲ್ಲವೆಂಬುದನ್ನು ಹಿಂದಿನ ಲೇಖನಗಳಲ್ಲಿ ಕಂಡಿರುವೆವು. ಹಿಂದಿನ ಲೇಖನ ಒಂದರಲ್ಲಿ ಪ್ರಥಮ ಪ್ರಹಾರದ ಭಯ ಅದೆಂತು ಚೆಂಗ್-ಹೋನನ್ನು ಚೆನ್ನಾಗಿ ಕಾಡುತ್ತಿತ್ತೆಂಬುದನ್ನು ವಿವರಿಸಲಾಗಿತ್ತು. ಅದೇ ರೀತಿ ಬೇರೆ ದೇಶಗಳಿಂದ ಅಲ್ಲಿಯ ರಾಜರನ್ನು ಕದ್ದೊಯ್ದು ತಂದ ಮೇಲೆ ಪ್ರಯಾಣ ನಡೆಸಲು ಅವನಿಗೆ ಭಯವಾಯಿತು. ಆದರೆ ಒಳಗೆ ಹುತ್ತ ಬೆಳೆಸಿಕೊಂಡು ಅಡಗಿಕೊಂಡಿದ್ದ ಕ್ರಿಮಿಗಳು ಅವನು ಸುಮ್ಮನಿರುವಂತೆ ಬಿಡಲಿಲ್ಲ. ಹಾಗಾಗಿ ಪುನಃ ಅಂದರೆ ಆರನೆಯ ಬಾರಿ ಪ್ರಯಾಣಕ್ಕೆ ಹೊರಡಲು ಇನ್ನೊಂದು . ತಂಡವನ್ನು ಸಿದ್ಧಗೊಳಿಸಿದನು ಆ ತಂಡದಲ್ಲಿ ತಾನಿದ್ದೇನೋ ಇಲ್ಲವೋ ಎಂಬುದನ್ನು ಆತನು ಇತರರಿಗೆ ತಿಳಿಸಲಿಲ್ಲ. ಪ್ರಯಾಣಾರಂಭದಲ್ಲಿರದಿದರೂ ಅನಂತರ ಬಂದು ಸೇರಿಕೊಳ್ಳಬಹುದೆಂದು ಕೆಲವರು ಊಹಿಸಿಕೊಂಡಿದ್ದರು. ಅಂತೂ ಆ ವಿಷಯವನ್ನು ಅವನು ರಹಸ್ಯವಾಗಿಟ್ಟಿದ್ದನು. ಅಲ್ಲದೆ ಪಸಾಯಿವರೆಗೆ ಆತನು ಆ ತಂಡದಲ್ಲಿದ್ದನು. ಈ ತಂಡ ಹೊರಟದ್ದು ೧೪೩೦ ಜನವರಿಯಲ್ಲಿ. ಪಸಾಯಿಯ ರಾಜನನ್ನು ಅಪಹರಿಸಿ ಕೊಂಡೊಯ್ದ ಪರಿಣಾಮವಾಗಿಯೋ ಏನೋ ಅವನು ಅಲ್ಲಿಂದ ಮುಂದಕ್ಕೆ ಹೋಗಲಿಲ್ಲ. ಬಹುಶಃ ಅಲ್ಲಿಂದ ಹಿಂದಕ್ಕೆ ಓಡಿಬಂದಿರಬಹುದು. ಈ ಪ್ರಯಾಣ ಆತನ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನು ಬೀರಿರುತ್ತದೆ.

ಈ ತಂಡವು ಲಂಕೆಗೂ ಹೋಗಿತ್ತಲ್ಲದೆ, ಕೊಚ್ಚಿ, ಕಲ್ಲಿಕೋಟೆಗಳಿಗೂ ಬಂದಿತ್ತು. ಅದು ಏಡನಿನವರೆಗೂ ಮುಂದಕ್ಕೆ ಹೋಗಿತ್ತು. ಇದರಿಂದ ಮಹತ್ವಾಕಾಂಕ್ಷಿಗಳಿಗೆ, ಮಲಗಲೂ ಮನಸ್ಸು ಬರುವದಿಲ್ಲವೆಂಬದು ಸ್ಪಷ್ಟವಾಗುತ್ತದೆ. ಅಂತೆಯೇ ಚೈನೀ ಕಮ್ಯೂನಿಸ್ಟರು ಇಂದು ಗಡಿ ಪ್ರದೇಶಗಳಲ್ಲಿ ಮುಂದಕ್ಕೆ ಬರುತ್ತಿದ್ದಾರೆ. ನಾವು ಹಗಲು ಕನಸು ಕಾಣುತ್ತಿದ್ದೇವೆಯೇ?

ವಾಗಿದೆ. ಕೃಷ್ಣನ ಪಾಂಚಜನ್ಯ ಅರ್ಜುನನನ್ನು ಕಲಿಯಾಗಿಸಿದಂತೆ ಈ 'ಪಾಂಚಜನ್ಯ' ಕನ್ನಡಿಗರ ಪಂಚಪ್ರಾಣವನ್ನು ಬಡಿದೆಬ್ಬಿಸ ಬೇಕು.

ನವೋದಯ. ಸುರತ್ಕಲ್‌ನ ವಿದ್ಯಾದಾಯಿನೀ ಹೈಸ್ಕೂಲಿನ ವಿದ್ಯಾರ್ಥಿಸಂಸ್ಥೆಯ ವಾರ್ಷಿಕ ಪತ್ರಿಕೆ ಇದು ವಿದ್ಯಾರ್ಥಿಗಳಿಂದಲೇ ಬರೆಯಲ್ಪಟ್ಟ ಸಾಹಿತ್ಯ ಕೃತಿಗಳು ಇಲ್ಲಿ ಕನ್ನಡ, ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಬೆಳಕು ಕಂಡಿವೆ. ಭಾವಿ ಸಾಹಿತಿಗಳಲ್ಲಿ ಹುದುಗಿರುವ ಸುಪ್ತ ಸಾಹಿತ್ಯಿಕ ಶಕ್ತಿಯನ್ನು ಕುದುರಿಸಲು ಮತ್ತು ಆ ದಾರಿಯಲ್ಲಿ ಅಧ್ಯಾಪಕರ ನೇತೃತ್ವದಲ್ಲಿ ಮುಂದುವರಿಯಲು ಇಂತಹ ಪ್ರಕಟಣೆ ಸಹಾಯವಾಗುತ್ತದೆ. ಹಿಂದಿನ ವರ್ಷಗಳಂತೆಯೇ ಈ ವರ್ಷದ ನವೋದಯವೂ ಉತ್ತಮ ಮಟ್ಟವನ್ನು ಉಳಿಸಿಕೊಂಡಿದೆ. ಶಾಲಾ ಚಟುವಟಿಕೆಗಳಿಗೆ ಮೆರುಗು ಕೊಡುತ್ತದೆ.

ಉಡುಪಿಯ ಆಯುರ್ವೇದ ಕಾಲೇಜಿನ ವಾರ್ಷಿಕ ಪತ್ರಿಕೆಯು ನಮ್ಮ ಕೈ ಸೇರಿದೆ (1963—64) ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಚಿಕಿತ್ಸಕರು ಬರೆದಿರುವ ಆಯುರ್ವೇದ ವಿಷಯಕ ಲೇಖನಗಳಿಂದ ಇದು ತುಂಬಿರುವುದು ಶ್ಲಾಘನೀಯ. ಸಾಹಿತ್ಯ ಕೃತಿಗಳ ಬದಲು ಆಯುರ್ವೇದ ಪದ್ಧತಿಯ ವಿವೇಚನೆಗೇ ಅಗ್ರಪ್ರಾಶಸ್ತ್ಯ ನೀಡುವ ಇಲ್ಲಿನ ಪರಂಪರೆ ಬೆಳೆದು ಬಂದು ಅದು ಉಳಿದವರಿಗೆ ಮಾರ್ಗದರ್ಶಕವೆನಿಸಲಿ, ಆಯುರ್ವೇದದ ಪ್ರಚಾರ ಮತ್ತು ಜ್ಞಾನಕ್ಕೂ ನೆರವಾಗಲಿ.

—ಗೋರಾ.

ನವಯುಗಕ್ಕೆ.
ಚಂದಾದಾರರಾಗಿ ಪ್ರೋತ್ಸಾಹಿಸಿರಿ.,
ವಾರ್ಷಿಕ ಚಂದಾ ರೂ. ೧೦

ಬಾಲಾಶ್ರಮದ ಹಾವಳಿಯ ಕತೆಯೇ?
ವೇಶ್ಯಾಪುತ್ರಿಯ ಮಾನಾಪಹಾರದ ಚಿತ್ರವೇ?
ಯಾವುದು?

ಸನ್ಯಾಸಿಯ ಸೋಗಿನಲ್ಲಿ!

ಸನ್ಯಾಸದ ಹೆಸರಿನಲ್ಲಿ ವಿನ್ಯಾಸವೇ?
ವೇಶ್ಯಾಪುತ್ರಿಯರಿಗೆ ನೀತಿಯ ಜೀವನ ನಡೆಸುವ ಹಕ್ಕಿಲ್ಲವೇ?
ಈ ಪ್ರಶ್ನೆಗಳಿಗೆ ತಕ್ಕ ಉತ್ತರ ಬೇಕೆಂದಿದ್ದರೆ
ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ
ಈ ವಿಷಾದಾಂತ ಕಾದಂಬರಿಯನ್ನೋದಿರಿ.
ಬೆಲೆ: 0-75 ಪೈಸೆ ಮಾತ್ರ. ಟ. ಖ. ಪ್ರತ್ಯೇಕ.
ಸಿಗುವ ಸ್ಥಳಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಕಾಶ್ಮೀರದಲ್ಲಿ ಔರಂಗಜೇಬನ ಅವತಾರ

(ಆರನೇ ಪುಟದಿಂದ)

ಟ್ಟದ ಊಟ ಮಾಡುವ ನಿರ್ಧಾರ ಮಾಡಿದ್ದರು." ಈ ಆಕ್ರಮಣದಲ್ಲಿ ಪಾಕಿಸ್ತಾನ ಮತ್ತು ಸೀಮಾ ಪ್ರಾಂತ್ಯದ ಬ್ರಿಟಿಷ್ ಗವರ್ನರರ ಸಹಕಾರವಿದೆ ಮತ್ತು ಮಾಜಿ ವೈಸರಾಯರ ರಾಜಕೀಯ ವಿಭಾಗದ ಒಬ್ಬ ಆಂಗ್ಲ ಅಧಿಕಾರಿ ಈ ಆಕ್ರಮಣದ ವ್ಯವಸ್ಥಿತ ಯೋಜನೆಯನ್ನು ಸಿದ್ಧಗೊಳಿಸಿದ್ದನು" ಎಂಬುದು ಮೆಹರ್ಚಂದ್ ಮಹಾಜನರಿಗೆ ಮತ್ತೆ ತಿಳಿದು ಬಂತು. ಕೂಡಲೇ ಮಹಾಜನ್ ಮಹಾರಾಜರೊಂದಿಗೆ ವಿಚಾರ ವಿನಿಮಯ ಮಾಡಿದರು. ಆದರೆ ಒಬ್ಬ ಪರಮ ಸ್ನೇಹಿತನು ಮಹಾರಾಜರಿಗೆ ಉದ್ದೇಶಪೂರ್ವಕವಾಗಿ (ಈತನು ಪಾಕಿಸ್ತಾನದ ಗುಪ್ತಚಾರಕನಾಗಿದ್ದನು) ತಪ್ಪು ಸಲಹೆ ಕೊಟ್ಟನು. ಇದರಿಂದಾಗಿ ಮಹಾರಾಜರು ಪಾಕಿಸ್ತಾನದ ಇಷ್ಟು ದೊಡ್ಡ ಆಕ್ರಮಣವನ್ನು ಸಾಮಾನ್ಯವಾದ ಒಂದು ಪುಂಡಾಟಿಕೆಯ ಗದರಿಸುವಿಕೆ ಎಂದು ಭಾವಿಸಿದರು; ಮಾತ್ರವಲ್ಲ ಈ ಆಕ್ರಮಣವನ್ನು ಪ್ರತಿಭಟಿಸಲು ಡೋಗ್ರಾ ಸೈನ್ಯಕ್ಕೆ ಸಾಕಷ್ಟು ಸಾಮರ್ಥ್ಯವಿದೆಯೆಂಬ ಕಲ್ಪನಾ ಸಾಮ್ರಾಜ್ಯದಲ್ಲಿ ಮುಳುಗಿದರು

ಸೇನಾಧಿಪತಿಯ ಕಪಟ ನಾಟಕ

ಆದರೆ ಪ್ರಧಾನ ಮಂತ್ರಿ ಮಹಾಜನ್‌ರ ಊಹನೆ ಸರಿಯಾಗಿತ್ತು. ಕಾಶ್ಮೀರದ ಬ್ರಿಟಿಷ್ ಸೇನಾಪತಿಯು ಕಾಶ್ಮೀರ ಕ್ಕಜಿಸುವ ಮೊದಲು ಅಲ್ಲಿಯ ಸೇಯನ್ನು ಅಸ್ತವ್ಯಸ್ತವಾಗಿ ವಿಭಾಗಿಸಿ ಪಾಕಿಸ್ತಾನದ ಆಕ್ರಮಣವನ್ನು ಪ್ರತಿಭಟಿಸಲು ಸಾಧ್ಯವಾಗದಂತೆ ಮೊದಲೇ ಕುಹಕೋಪಾಯ ಹೂಡಿದ್ದನು. ಸೇನಾಪತಿಯ ಕಪಟ ನಾಟಕ ಮಹಾರಾಜರಿಗೆ ಅರಿವಾಗಲಿಲ್ಲ. ಅವರಿಗೆ ಡೋಗ್ರಾ ಸೇನೆಯ ಮೇಲೆ ಪೂರ್ಣ ನಂಬಿಕೆ ಇತ್ತು. ಮುಸ್ಲಿಮ್ ಸೇನೆಯಲ್ಲಿ ವಿಶ್ವಾಸವಿರಲಿಲ್ಲ ಮುಜಫ್ಫರಾಬಾದ್ ಕಡೆಯಿಂದ ಆಕ್ರಮಣ ಪ್ರಾರಂಭವಾಗಿತ್ತು. ಆಗ "ಕರ್ನಲ್ ನಾರಾಯಣ ಸಿಂಹರ ನೇತೃತ್ವದಲ್ಲ ಕೇವಲ ಒಂದು ಸೈನ್ಯದಲ್ಲಿ ಶೇಕಡ ೪೦ ಮಂದಿ ಮುಸ್ಲಿಮರೇ ಇದ್ದರು. "ಈ ಮುಸ್ಲಿಮ್ ಸೈನಿಕರನ್ನು ಕೂಡಲೇ ನಿಶ್ಶಸ್ತ್ರಗೊಳಿಸಬೇಕೆಂದು" ಕರ್ನಲ್‌ಗೆ ಮಹಾರಾಜರು ಮೂರು ನಾಲ್ಕು ಸಲ ಆದೇಶವಿತ್ತರು. ಅವರು ಮಾತ್ರ ಧೃಪೆಯುಳ್ಳವರು. ಮಹಾರಾಜರಿಗೆ ಅವರಿತ್ತ ಉತ್ತರದಲ್ಲಿ "ಪ್ರಕೃತ ನನ್ನೊಂದಿಗಿರುವ ಮುಸ್ಲಿಮ್ ಸೈನಿಕರು ಈವರೆಗೂ ಬರ್ಮಾ ಗಡಿಯಲ್ಲಿ ಕಲಿತನದಿಂದ ಕಾದಿರುವ ವಿಶ್ವಾಸಪ್ರಿಯ ಸೈನಿಕರು; ಇವರ ಕುರಿತು ನಾವು ಈ ರೀತಿ ಸಂಶಯ ತಾಳುವುದು ಸರಿಯಲ್ಲ" ಎಂದು ತಿಳಿಸಿದರು.

ನಾರಾಯಣ ಸಿಂಹರ ಅಮಾನುಷ ಕೊಲೆ

ಪರಂತು ಅವರ ವಿಶ್ವಾಸವು ತಲೆಕೆಳಗಾಯಿತು. ಪಾಕಿಸ್ತಾನಿ ಸೈನಿಕರು ಆಕ್ರಮಣ ಮಾಡಿದ ಕೂಡಲೇ ಈ ಸ್ವಾಮಿನಿಷ್ಠ ಸೈನಿಕರು ತನ್ನ ಅಚ್ಚುಮೆಚ್ಚಿನ ಕರ್ನಲ್ ನಾರಾಯಣ ಸಿಂಹರನ್ನು ಚಿತ್ರವಧೆಮಾಡಿಕೊಂದು ಎಲ್ಲರೂ ಪಾಕ್ ಸೇನೆಯನ್ನು ಸೇರಿ ಶ್ರೀನಗರದ ಕಡೆಗೆ ಮುಂದೊತ್ತಿದರು. ಈ ಆಕ್ರಮಣದ ರಭಸವನ್ನು ಶಿಥಿಲಗೊಳಿಸಲಿಕ್ಕೆ ಮಹಾರಾಜರು "ಕಿಷನ್ ಗಂಜ" ಸೇತುವೆ ಮತ್ತು "ಕೊಹಾಲಾ" ಸೇತುವೆಯನ್ನು ಕೂಡಲೇ ಧ್ವಂಸ ಮಾಡಲು ಆಜ್ಞೆ ಇತ್ತರು. ಈ ಎರಡು ಬಲವಾದ ಸೇತುವೆಗಳನ್ನು ಒಡೆಯಲಿಕ್ಕೆ ಶಕ್ತಿಯುತವಾದ ಸಿಡಿಮದ್ದು ಅಲ್ಲಿರಲಿಲ್ಲ. ಇದನ್ನು ತರಲು ಚೀಫ್ ಇಂಜಿನಿಯರ್ ಒಬ್ಬರು ದಿಲ್ಲಿಗೆ ಧಾವಿಸಿದರು. ಅವರು ಹಿಂತಿರುಗುವುದರೊಳಗಾಗಿ ಆಕ್ರಮಣಕೋರರು ಸೇತುವೆಗಳನ್ನು ದಾಟಿಯೇ ಬಿಟ್ಟರು.

೧೯೪೭ರ ಅಕ್ಟೋಬರದಲ್ಲಿ ಪಾಕಿಸ್ತಾನವು ೨೦೦ ಮೈಲು ವಿಸ್ತಾರ ಕ್ಷೇತ್ರದಲ್ಲಿ ಆಕ್ರಮಣ ಕೈಕೊಂಡಿತು. ಹಿಂದೂ ಸ್ತ್ರೀಯರು ಅಪಹರಿಸಲ್ಪಟ್ಟರು. ಅಸಂಖ್ಯಾತ ಮನೆಗಳು ಭಸ್ಮವಾದವು. ಲಕ್ಷಾಂತರ ಗೋವುಗಳು, ಅಮೂಲ್ಯ ಸಂಪತ್ತುಗಳು ಪಾಕಿಸ್ತಾನಕ್ಕೆ ಸಾಗತೊಡಗಿದವು. ಈ ದುಷ್ಕೃತ್ಯದಲ್ಲಿ ಕಾಶ್ಮೀರದ ಕೆಲವು ಮುಸಲ್ಮಾನರು — ಜಹಗೀರದಾರರು ಮತ್ತು ಸರಕಾರಿ ಅಧಿಕಾರಿಗಳೂ ಮೊದಲೇ ಸೇರಿಕೊಂಡಿದ್ದರು

ಆಕ್ರಮಣನಡೆಸುವ ಮೊದಲು ಕಾಶ್ಮೀರ ಸರಕಾರದ ಆಡಳಿತ ಯಂತ್ರವನ್ನು ತನ್ನ ಗುಪ್ತ ಚರರ ಮೂಲಕ ಪಾಕಿಸ್ತಾನ ಮೊದಲೇ ಅವ್ಯವಸ್ಥಿತಗೊಳಿಸಿತ್ತು. ಮುಸ್ಲಿಮ್ ಅಧಿಕಾರಿಗಳೆಲ್ಲರೂ ರಹಸ್ಯವಾಗಿ ಪಾಕಿಸ್ತಾನಕ್ಕೆ ಅನುಕೂಲತೆಗಳನ್ನೊದಗಿಸುತ್ತಿದ್ದರು. ಹೆಚ್ಚಿನವರು ಕರ್ತವ್ಯಕ್ಕೆ ಒದಗುವುದನ್ನೇ ನಿಲ್ಲಿಸಿದರು. ಸಂಪರ್ಕದ ಎರಡು ವಿಭಾಗಗಳಲ್ಲೂ ಅತ್ಯಾಚಾರವು ಬಿರುಸಿನಿಂದ ಸಾಗುತ್ತಿತ್ತು. ಆದರೆ ಪ್ರತಿಕ್ರಿಯೆ ಜಮ್ಮು ಮತ್ತು ಕಾಶ್ಮೀರದ ಮೇಲೆಯೂ ಆಯಿತು. ಜಮ್ಮುನಗರ ಪಾಕಿಸ್ಥಾನದ ಗಡಿಗೆ ೩೦ ಮೈಲು ದೂರದಲ್ಲಿದೆ. ಆಗೋಸ್ತು ೧೫ ರ ನಂತರ ಪಾಕಿಸ್ಥಾನಿಗಳು ಗಡಿನಾಡಿನಲ್ಲಿ ಆಕ್ರಮಣ ಕೈಗೊಂಡರು. ಕಾಶ್ಮೀರದ ಆಂಗ್ಲ ಸೇನಾಧಿಪತಿ "ಮೇಜರ್ ಜನರಲ್ ಸ್ಕಾಟ್" ರಾಜೀನಾಮೆಯಿತ್ತು ಆ ಸ್ಥಾನಕ್ಕೆ ಬ್ರಿಗೇಡಿಯರ್ ರಾಜೇಂದ್ರ ಸಿಂಗ್ ಬಂದಿದ್ದರು. ಸೀಮಾ ಪ್ರಾಂತ್ಯದ ಹಿಂದೂಗಳ ಮತ್ತು ಸಿಖ್ಖರ ಮೇಲೆ ಮುಸ್ಲಿಮರೆಸಗಿದ ಪೈಶಾಚಿಕ ಅನಾಚಾರದ ಪ್ರತಿಧ್ವನಿ ಅಲ್ಲಿಗೆ ಬಹುದೂರ ವಿದ್ದ ಹಿಂದೂ ಬಹುಮತ ಪ್ರದೇಶದ ಮೇಲೆ ಭಯಂಕರವಾಗಿ ಹರಡಿಕೊಂಡಿತು. ಹಿಂದೂಗಳೂ ಸಿಖ್ಖರೂ ಒಂದಾಗಿ ಅಲ್ಲಿಯ ಮುಸ್ಲಿಮರ ಮೇಲೆ ಎರಗಿ ಬಿದ್ದರು. ಆ ಅಕ್ಟೋಬರ ೨೦ರಂದು ಮಹಾರಾಜರು ಮತ್ತು ಪ್ರಧಾನ ಮಂತ್ರಿ ಮೆಹರ್ಚಂದ್ ಮಹಾಜನರು ಜಮ್ಮುವಿನ ಸೀಮಾವರ್ತಿ ಪ್ರದೇಶಗಳ ಪರಿಸ್ಥಿತಿಯ ಪರಿಶೀಲನೆಗಾಗಿ ತೆರಳಿದರು. ಆದರೆ ಅಲ್ಲಿನ ವಾತಾವರಣ ಅತ್ಯಂತ ಗಂಭೀರ ಹಾಗೂ ಎಂತಹ ಕಂಟಕಮಯವಾಗಿತ್ತೆಂದರೆ ಎಲ್ಲೆಲ್ಲಿಯೂ ಪಾಕಿಸ್ತಾನದಿಂದ ಬಂದಿರುವ ಬೇಹುಗಾರರೇ ಕಂಡು ಬರುತಿದ್ದರು. ಸ್ವತಃ ಮಹಾರಾಜರಿಗೆ ತನ್ನ ಪ್ರಾಣ ಉಳಿಸಿಕೊಳ್ಳುವುದು ಅಸಂಭವವೆನಿಸತೊಡಗಿತು. ಇದರಿಂದಾಗಿ ಅವರು ಬಹಿರಂಗವಾಗಿ ಸಂಚರಿಸದೆ ರಹಸ್ಯವಾಗಿ ಸಂಚರಿಸಿದರು.

ದೇವರೇ ರಕ್ಷಿಸಿದನು

ಒಳ ಮಾರ್ಗಗಳಿಂದ ರಹಸ್ಯವಾಗಿ ಸಂಚರಿಸುತ್ತಾ ಇದ್ದುದರಿಂದ ಮಹಾರಾಜರು ತಾತ್ಕಾಲಿಕ ಗಂಡಾಂತರದಿಂದ ಪಾರಾದರು. ಆ ಸಮಯದಲ್ಲಿ ಪ್ರಧಾನ ಮಂತ್ರಿ ಮೆಹರ್ಚಂದರ ದೂರದರ್ಶಿತ್ವವು ಮಹಾರಾಜರನ್ನು ಬದುಕಿಸಿತು. ಪಾಕಿಸ್ತಾನ ಗಡಿಯಿಂದ ಎರಡೇ ಮೈಲು ದೂರವಿರುವ "ಬಿಂಬರ್" ಎಂಬ ಊರಿಗೆ ಅತಿ ಸಮೀಪ ಪಾಕಿಸ್ತಾನಿ "ಗುಜರಾತ" ಎಂಬ ಊರು ಇದೆ. ಮಹಾರಾಜರು ಮತ್ತು ಪ್ರಧಾನಮಂತ್ರಿಗಳು "ಬಿಂಬರ್"ಗೆ ಬರತ್ತಾರೆ ಮತ್ತು ಪ್ರಯಾಣಿಕರ ಬಂಗಲೆಯಲ್ಲಿ ಉಳಕೊಳ್ಳುತ್ತಾರೆಂಬುದು ಪಾಕಿಸ್ತಾನಿಗಳಿಗೆ ತಿಳಿದು ಒಬ್ಬ ಮಂತ್ರಿ ಗುಜರಾತಿಗೆ ಬಂದಿದ್ದರು. ಮಹಾರಾಜರು ಅಲ್ಲಿಗೆ ಬರುವ ದಿನವೇ ಅಲ್ಲಿ ಆಕ್ರಮಣವೆಸಗುವ ಬಗ್ಗೆ ಎಲ್ಲಾ ಸಿದ್ಧತೆ ಅತನು ಕೈಕೊಂಡಿದ್ದನು. ಪರಂತು ಮಹಾರಾಜರು ಅಲ್ಲಿಗೆ ತ್ವರಿತವಾಗಿ ಬಂದು ಅಲ್ಲಿಯ ಎಲ್ಲಾ ಪರಿಸ್ಥಿತಿಯನ್ನೂ ತಿಳಿದುಕೊಂಡು ಕೂಡಲೇ ಹೊರಟು ಹೋಗಿದ್ದರು. ಪಾಕಿಸ್ತಾನಿಗಳಿಗೆ ಇದು ತಿಳಿದಿರಲಿಲ್ಲ. ಮಹಾರಾಜರೂ, ಪ್ರಧಾನಮಂತ್ರಿಗಳೂ ಅಲ್ಲಿರುವರೆಂದೇ ಭಾವಿಸಿ ಆಕ್ರಮಣ ಮಾಡಿ ಪ್ರಯಾಣಿಕರ ಬಂಗಲೆಯನ್ನು ಸಿಡಿಮದ್ದಿನಿಂದ ಧ್ವಂಸಗೊಳಿಸಿದರು. ಮಹಾರಾಜರನ್ನೂ ಮೆಹರ್ಚಂದರನ್ನೂ ದೇವರೇ ರಕ್ಷಿಸಿದರು. ಪಾಕಿಸ್ತಾನಿ ದುಷ್ಟರ ಅತ್ಯಾಚಾರದಿಂದ ಉಂಟಾದ ಹಾನಿಯನ್ನೂ ಮಹಾರಾಜರು ತನ್ನ ಪ್ರಧಾನಮಂತ್ರಿ ಸಹಿತ ಎಲ್ಲಾ ಕಡೆ ಅತಿ ಎಚ್ಚರಿಕೆಯಿಂದ ಸಂಚರಿಸಿ ಪ್ರತ್ಯಕ್ಷ ಅನುಭವ ಮಾಡಿಕೊಂಡರು. ಸೈನ್ಯ ಮತ್ತು ಪೋಲೀಸರ ಮುಖಾಂತರ ಪಾಕಿಸ್ತಾನಿಗಳು ಕಾಶ್ಮೀರದ ಮುಸ್ಲಿಮರನ್ನು ತಮ್ಮೊಡನೆ ಒಲಿಸಿಕೊಂಡಿದ್ದರು. ಉಳಿದ ಕೆಲವೇ ಸೈನಿಕರಿಂದ ಶಾಸನ ವ್ಯವಸ್ಥೆ ಮತ್ತು ನಾಗರಿಕ ಶಾಂತಿ ಕಾಪಾಡಲು ಮಹಾರಾಜರು ಅಸಮರ್ಥರಾದರು. ಸಮಗ್ರ ಜಮ್ಮು ಪ್ರಾಂತ್ಯದಲ್ಲಿ ಅಗ್ನಿಕಾಂಡ ಧಗಧಗಿಸುತಿತ್ತು; ರಕ್ತದ ಕಾಲುವೆ ಹರಿಯುತಿತ್ತು. ಪಂಜಾಬಿನಲ್ಲಿ ಆದ ನರಸಂಹಾರದ ಪ್ರತಿಕ್ರಿಯೆ ಇಡೀ ಜಮ್ಮುವಿನಲ್ಲಿ ಹರಡಿಕೊಂಡಿತ್ತು. ಆ ಬಳಿಕವೇ ಅಸಹಾಯಕರಾದ ಮಹಾರಾಜರು ಭಾರತದ ಸಹಾಯ ಕೋರಿದರು.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44 ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡ ಬಹುದು, ಇಲ್ಲವೆ ಮನಿಯಾರ್ಡರ್ ಮಾಡಬಹುದು. ವಿ ಪಿ ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳುವಂತೆ ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಮೆನೇಜರ್,

ವಾರ್ಷಿಕ ಚಂದಾ ರೂ. 10/- ನವಯುಗ, ಉಡುಪಿ.

ಸದಾ ಸುಸ್ವಾಗತ

ಉಡುಪಿಯಲ್ಲಿ ಪ್ರಥಮ ಶ್ರೇಣಿಯ ಹಾಗೂ ಪ್ರಪ್ರಥಮ ವಸತಿ ಮತ್ತು ಭೋಜನ ಮಂದಿರ

ರೋಯಲ್ ಮಹಾಲ್

ತೃಪ್ತಿದಾಯಕ ಸಮಾನ ಸೇವೆಯ ಸರ್ವಾನುಕೂಲತೆಗಳಿಂದೊಡಗೂಡಿರುವ ಅತ್ಯಾಧುನಿಕ ಮಾದರಿಯ ಬೋರ್ಡಿಂಗ್ ಮತ್ತು ಲಾಜಿಂಗ್.

ವ್ಯವಸ್ಥಾಪಕ: ಕೆ. ವೆಂಕಟ್ರಮಣ ಭಟ್.

ಇರುಳು ಕಳೆಯಿತು

(ನಾಲ್ಕನೇ ಪುಟದಿಂದ)

ಮತ್ತೊಂದು ಕಡೆಯಲ್ಲಿ ವೃದ್ಧರೊಬ್ಬರು ಅಂದಿನ ಪತ್ರಿಕೆಯನ್ನೋದುತ್ತ ಕುಳಿತಿದ್ದರು.

ಕೊಳಕು ಬಟ್ಟೆಯನ್ನು ತೊಟ್ಟಿದ್ದ ಕೆಲವು ಗ್ರಾಮೀಣ ಜನರು ಗಣೇಶ ಬೀಡಿ ಸೇದುತ್ತ 'ಇನ್ನೂ ಮಳೆ ಬಂದಿಲ್ಲವಲ್ಲ'- ಎಂದು ಚಿಂತಿಸುತ್ತಿದ್ದರು.

ರೈಲಿನ ಗಮನ ಮಂದವಾಯಿತು. ಬಹುಶಃ ಯಾವುದೊ ಒಂದು ಸ್ಟೇಶನ್ ಸಮೀಪಿಸಿರಬೇಕು. ರೈಲು ಮೆಲ್ಲ ಮೆಲ್ಲನೆ 'ಚುಂ...ಚುಂ' ಎನ್ನುತ್ತ ಸಾಗಿ 'ಗಡರ್' ಎಂದು ಒಂದೇ ಸಲಕ್ಕೆ ನಿಂತುಬಿಟ್ಟಿತು.

ರೈಲು ನಿಲ್ಲುತ್ತಲೇ ಪುನಃ ಕೋಲಾಹಲಕ್ಕೆ ಪ್ರಾರಂಭವಾಯಿತು. ಒಬ್ಬರ ಮೇಲೊಬ್ಬರು ನುಗಿ ಬಿದ್ದರು. ಎಲ್ಲರೂ ಮೊತ್ತಮೊದಲು ಇಳಿಯ ಬಯಸುತಿದ್ದರು. ಏರುವವರೂ ಅಷ್ಟೆ; ಎಲ್ಲೆಂದರಲ್ಲಿ ತಮ್ಮ ಸಾಮಾನುಗಳನ್ನು ಎಸೆಯುತಿದ್ದರು. ಕೂಲಿಗಳಂತೂ ರೈಲಿನಲ್ಲಿ ಕುಳಿತಿದ್ದ ಪ್ರಯಾಣಿಕರ ತಲೆಯ ಮೇಲೆಯೇ ಸಾಮಾನುಗಳನ್ನು ಬಿಸಾಡುತ್ತಿದ್ದರು. ಗದ್ದಲವೋ ಗದ್ದಲ!

ಪುನಃ ರೈಲು ಹೊರಟಿತು.

ಸುಮ್ಮನೆ ಕುಳಿತಿರುವುದಕ್ಕಿಂತ ಏನಾದರೂ ಮಾತಾಡುತ್ತಿರುವುದು ಲೇಸೆಂದು ಬಗೆದು ನಾನೇ ತಂಗಿಯನ್ನು ಮಾತನಾಡಿಸಿದೆ—"ಕುಂಜೂ, ನೀನು ಮದ್ರಾಸಿನಿಂದ ಹೊರಡುವಾಗ ಭಾವನವರು ಆರೋಗ್ಯವಾಗಿಯೇ ಇದ್ದರಷ್ಟೇ?"

"ಹೌದು ಸಂಪೂರ್ಣ ಆರೋಗ್ಯದಿಂದಿದ್ದರು. ಹಾಗೇನಾದರೂ ಅವರು ಅಸ್ವಸ್ಥರಿದ್ದಿದ್ದರೆ ನಾನು ಖಂಡಿತ ಹೊರಡುತ್ತಿರಲಿಲ್ಲ" ಆಕೆಯ ದನಿ ಸಣ್ಣವಾಗಿತ್ತು.

"ಮೊನ್ನೆಯಷ್ಟೇ ಕಾಗದ ಬಂದಿತಲ್ಲ. 'ನಾನು ಕ್ಷೇಮ'ವೆಂದೇ ಬರೆದಿದ್ದರು. ಈ ಅಲ್ಪಾವಧಿಯಲ್ಲಿಯೇ ಅವರಿಗೆ ಮತ್ತೇನಾಯಿತೋ ಏನೋ...." ನಾನೆಂದೆ.

ಏನೇ ಆಗಿರಲಿ. ಕೆಲವು ತಾಸುಗಳ ಕಾಲ ಯಾವುದಾದರೊಂದು ವಿಷಯವಾಗಿ ಮಾತನಾಡುತ್ತ ಹೃದಯದ ಭಾರವನ್ನು ಕೊಂಚ ಕಡಿಮೆಮಾಡಿಕೊಳ್ಳಬೇಕೆಂದೇ ನಮ್ಮಿಬ್ಬರ ಉದ್ದೇಶವಾಗಿತ್ತು.

"ಹಬ್ಬವೆಂದು ನಾನು ಊರಿನಲ್ಲಿ ನಿಲ್ಲಬಾರದಾಗಿತ್ತು. ಬಂದ ಕೆಲವೇ ದಿನಗಳಲ್ಲಿ ಹಿಂದಿರುಗಿದ್ದರೆ ಒಳ್ಳೆಯದಿದ್ದಿತ್ತು. ನಾನು ಇಷ್ಟು ದಿನ ಅವರನ್ನು ಬಿಟ್ಟು ಉಳಿದದ್ದೇ ತಪ್ಪಾಯಿತು."

"ಕುಂಜೂ, ನೀನು ಹಬ್ಬಕ್ಕೆಂದು ಊರಲ್ಲಿಯೇ ನಿಂತುದರಿಂದ ಭಾವ ಸಿಟ್ಟಾಗಿ, ನಿನ್ನನ್ನು ಕೂಡಲೇ ಕರೆಸಿಕೊಳ್ಳಬೇಕೆಂದು ಹೇಗೇನಾದರೂ ಉಪಾಯ ಹೂಡಿರಬಹುದೇ? ಈ ಹಿಂದೆ ನಿನಗೆ ಅವರು ಬರೆದ ಪತ್ರದಲ್ಲಿ 'ಕೂಡಲೇ ಬಾ' ಎಂದು ಬರೆದಿದ್ದರಷ್ಟೇ? ಅದಕ್ಕೆ 'ಹಬ್ಬ ಮುಗಿಸಿ ಬರುತ್ತೇನೆ'—ಎಂದು ಉತ್ತರ ಬರೆದುದರಿಂದಾಗಿ ಬಹುಶಃ ಅವರು ತುಂಬ ಸಿಟ್ಟುಗೊಂಡಿರಬೇಕೆಂದು ನನಗನ್ನಿಸುತ್ತಿದೆ."

"ಆದರೆ ಈ ತಂತಿ ಆಸ್ಪತ್ರೆಯಿಂದ ಬಂದದ್ದಲ್ಲವೇ...."

"ಆಸ್ಪತ್ರೆಯ ಹೆಸರಿನಿಂದ ಭಾವನವರೇ ತಂತಿ ಕೊಟ್ಟಿರಬಾರದೇಕೆ?"

"ಹಾಗೆ ಮಾಡಲೂ ಸಾಧ್ಯವಿದೆಯೇ ಅಣ್ಣ"—ಕುಂಜು ಉತ್ಸುಕಳಾಗಿ ಪ್ರಶ್ನಿಸಿದಳು.

"ಏಕೆ ಸಾಧ್ಯವಿಲ್ಲ? ಪೋಸ್ಟಾಫೀಸಿನಲ್ಲಿ..."

"ಹೋ! ಹೀಗಿದ್ದಿರಲೂಬಹುದು. ಹಾಗಾದರೆ...."ಕುಂಜಮ್ಮಳ ಮುಖ ಪ್ರಸನ್ನತೆಯಿಂದ ಅರಳಿತು.

"ಬಹುಶಃ ಹೀಗೆಯೇ ಇದ್ದಿರಬಹುದು. ಇಲ್ಲವಾದರೆ ಇದ್ದಕ್ಕಿದ್ದಂತೆಯೇ ಅವರಿಗೆ ಮತ್ತೇನಾದರೂ ಆಗುವುದು ತೀರ ಅಸಂಭವವೇ ಸರಿ. ಮೂರು ದಿನಗಳ ಕೆಳಗಲ್ಲವೇ ಅವರಿಂದ ಪತ್ರ ಬಂದದ್ದು?"

"ಹೌದು. ಅದರಲ್ಲಂತೂ ತಮ್ಮ ಕಾಯಿಲೆಯ ಸಮಾಚಾರವನ್ನು ಅವರು ಬರೆದಿರಲಿಲ್ಲ."

"ನನಗೀಗ ಗೊತ್ತಾಯಿತು. ನೋಡಿದೊಡನೆಯೇ ನೀನು ಹೊರಟು ಬಿಡಬೇಕೆಂಬ ಉದ್ದೇಶದಿಂದಲೇ ಅವರು ಈ ರೀತಿ ತಂತಿ ಕೊಟ್ಟಿದ್ದಾರೆ ಮತ್ತೇನಲ್ಲ."

ಕ್ಷಣಕಾಲ ಮೌನ.

ಕುಂಜಮ್ಮ ಅದೇನನ್ನೋ ತನ್ನಲ್ಲಿಯೇ ಯೋಚಿಸ ತೊಡಗಿದಳು.

ಆ ಮೇಲೆ—

"ಅಣ್ಣ ಈ ರೀತಿ ಅವರು ತಂತಿ ಕೊಟ್ಟಾರೇ?"

ನಾನು ಏನೆಂದು ಉತ್ತರಿಸಲಿ? ಈ ರೀತಿ ಮಾಡಲಾರರು ಎಂದೆನ್ನಲೇ? ಅವಳಿಗೆ ಮತ್ತಷ್ಟು ವ್ಯಸನವಾಗುತ್ತದೆ.

ಅವ್ಯಕ್ತ ಭಯವೊಂದು ಕೀಟವಾಗಿ ಮಿದುಳನ್ನು ಕೊರೆಯುತ್ತಿತ್ತು. ನಾಳೆ ಬೆಳಗ್ಗೆ ಇನ್ನಾವ ಸಂಕಟವನ್ನು ಎದುರಿಸಬೇಕಾಗುವುದೋ ಎಂಬ ಆ ಶಂಕೆಯಿಂದಾಗಿ ಕಣ್ಣುಗಳೆದುರು ಅಂಧಕಾರ ಕವಿದಂತಾಗಿತ್ತು. ಅನಿರ್ಧಾರಿತ ಭವಿಷ್ಯವು ಪೆಡಂಭೂತವಾಗಿ-ಬೃಹದಾಕಾರ ತಾಳಿ-ಎದುರು ನಿಂತಿತ್ತು. ರೈಲು ಉನ್ಮತ್ತನಂತೆ ಲಡಕ್ ಖಡಕ್ ಎಂದು ಶಬ್ದ ಮಾಡುತ್ತ ಸಾಗುತ್ತಿತ್ತು. ನಾಳೆ ದೂರದ ಮದ್ರಾಸಿನಲ್ಲಾಗುವ ಅರುಣೋದಯವನ್ನು— ಸ್ವರ್ಣಿಮ ಪ್ರಭಾತವನ್ನು— ಸ್ವಾಗತಿಸಲೆಂಬಂತೆ ರೈಲು ತುಂಬಾ ವೇಗದಿಂದ ಚಲಿಸುತ್ತಿತ್ತು.

ಮದ್ರಾಸು ಸೇರುವಷ್ಟರೊಳಗೆ ನಮ್ಮ ಮಾನಸಿಕ ಅಶಾಂತಿ ದೂರವಾಗಲಾರದೇ? ಸುತ್ತಲೂ ಕವಿದ ಈ ಅಂಧಕಾರ ವಿಲುಪ್ತವಾಗದೇ? ಶಾಂತಿಯು ನಮ್ಮನ್ನು ಸ್ವಾಗತಿಸಲಾರದೇ? — ಹೀಗೆ ಕಂಗೆಟ್ಟ ನನ್ನ ಮನಸ್ಸು ತುದಿ ಬುಡವಿಲ್ಲದ, ಪರಸ್ಪರ ಸಂಬಂಧವಿಲ್ಲದ ಏನೇನೋ ವಿಚಾರಗಳಲ್ಲಿ ಸಿಲುಕಿ ಹೊರಳಾಡುತ್ತಿತ್ತು.

ಕುಂಜೂ ತನ್ನ ಕೈಚೀಲದಿಂದ, ಅಮ್ಮ ಕಟ್ಟಿಕೊಟ್ಟಿದ್ದ ತಿಂಡಿಯನ್ನು ಹೊರತೆಗೆದು ನನಗೂ ಕೊಟ್ಟು ತಾನೂ ತಿನ್ನತೊಡಗಿದಳು.

ನಮ್ಮ ಕುಟುಂಬದಲ್ಲಿ ಕುಂಜಮ್ಮ ಅತ್ಯಂತ ಸುಂದರಿಯೆಂದು ಹೆಸರುವಾಸಿಯಾಗಿದ್ದಳು. ಬಿಳಿ ಬಣ್ಣ, ಆಕರ್ಷಕ ಶರೀರ. ನಮ್ಮ ಬೀದಿಯಲ್ಲಿ ಅವಳಿಗೊಂದು ಗೌರವದ ಸ್ಥಾನವಿದ್ದಿತ್ತು. ಹೂಗಳೆಂದರೆ ಆಕೆಗೆ ತುಂಬಾ ಪ್ರೀತಿ. ಯಾರಾದರೂ ತಮಾಷೆಮಾಡುತ್ತಾರೇನೋ ಎಂಬ ಅಂಜಿಕೆಯೂ ಅವಳಿಗಿಲ್ಲ. ತಲೆಯಮೇಲೆ ಹೂಗಳ ಹೊರೆಯನ್ನೇ ಹೇರಿ ಕೊಳ್ಳುತ್ತಿದ್ದಳು. ಹೂವು ಮುಡಿದು ಕೊಂಡಾಗ ಅವಳಲ್ಲಿನ ಅವರ್ಣನೀಯವಾದ ಒಂದು ಅನುಪಮ ಶೋಭೆಯನ್ನು ಕಂಡರೆ ನನಗಂತೂ ತುಂಬಾ ಹರ್ಷವಾಗುತ್ತಿತ್ತು.

ಇಂದೂ ಅವಳು ತುಂಬಾ ಹೂಗಳನ್ನು ಮುಡಿದುಕೊಂಡಿದ್ದಳು.

ತಿಂಡಿ ತಿನ್ನುತ್ತ ಹೇಳಿದಳು—"ಅಣ್ಣ ನಿನ್ನ ಭಾವನ ಕೈ ಹಿಡಿದು ನಾನೇನು ಸುಖಪಡೆದಂತಾಯಿತು?"— ಅವಳ ಕಂಗಳು ಅಶ್ರು ಪೂರಿತವಾದವು. "ಹಠ ಮೊರಿತನ! ತಾನು ಹೇಳಿದ್ದೇ ಆಗಬೇಕು. ಯಾವಾಗಲೂ ಸಿಡುಗು. ನಾನಂತೂ ಮದುವೆಯಾದಂದಿನಿಂದಲೂ ಕಣ್ಣೀರು ಸುರಿಸದೆ ಇದ್ದ ದಿನವೇ ಇಲ್ಲವೆನ್ನಬಹುದು. ಜೀವನವಿಡೀ ಅಳುತ್ತಲೇ ಕಾಲಕಳೆಯುವುದು ನನ್ನ ಹಣೆ ಬರಹವಾಯಿತು...."

ಮುಂದೆ ಅವಳಿಗೆ ಮಾತನಾಡಲಾಗಲಿಲ್ಲ. ದುಃಖದಿಂದಾಗಿ ಆಕೆಯ ಕೊರಳು ಬಿಗಿದು ಬಂತು.

ಕ್ಷಣಕಾಲ ತಡೆದು ಮತ್ತೆ ನುಡಿದಳು.—

"ಹಿಂದಿನ ಸಲ ಅವರು ಕಾಯಿಲೆಬಿದ್ದಾಗ— ಏನಾದರಾಗಲಿ, ಇದೊಂದು ಸಲ ಇವರನ್ನು ಈ ರೋಗದಿಂದ ಪಾರು ಮಾಡು, ನನ್ನ ಮಾಂಗಲ್ಯ ಭಾಗ್ಯವನ್ನು ಉಳಿಸಿಕೊಡು,— ಎಂದು ದೇವರನ್ನು ಪ್ರಾರ್ಥಿಸಿದೆ. ಅದಕಿಂತ ಹೆಚ್ಚಿನ ಯಾವ ಸೌಭಾಗ್ಯವೂ ನನಗೆ ಬೇಡ. ಅವರೇ ನನ್ನ ಸರ್ವಸ್ವ'

ಮತ್ತೆ ನಾವಿಬ್ಬರೂ ತುಂಬ ಸಮಯದವರೆಗೆ ಮೌನಿಗಳಾಗಿ ಕುಳಿತಿದ್ದೆವು. ಆದರೆ ನಮ್ಮ ಮನಸ್ಸು ಮಾತ್ರ ಮೌನ ತಾಳಲಿಲ್ಲ. ಅಲ್ಲಿ ಭಯಂಕರ ಸಂಗ್ರಾಮ ನಡೆದಿತ್ತು.

ಅರ್ಧರಾತ್ರಿಯಾಯಿತು.

ಗಾಡಿಯಲ್ಲಿ ಕೆಲವರು ಮಲಗಿದ್ದರು. ಕೆಲವರು ಕುಳಿತಲ್ಲಿಯೇ ತೂಕಡಿಸುತ್ತಿದ್ದರು. ನಿದ್ದೆ ಬಾರದ ಮಿಕ್ಕುಳಿದವರು ಹರಟೆ ಹೊಡೆಯುವುದರಲ್ಲಿ ಮಗ್ನರಾಗಿದ್ದರು

ಚಿಕ್ಕ ಚಿಕ್ಕ ಸ್ಟೇಶನುಗಳಲ್ಲಿ

Announcement

HAPPY DEEPAVALI, the great Indian festival of lights, is fast approaching. Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds. It will contain rich food for thought and entertainment for the masses. Thousands of Kannada people read this issue with relish.

It would be a happy idea for you to use the Navayuga Deepavali Special, as a medium for advertising your goods; for, Navayuga is able to carry your message to every home.

Kindly send your advertisement before 20-10-64.

MECHANICAL DATA:

Paper Size ... 15" × 10" (37.5 Cm. × 25 Cm.)

Size of type page ... 13" × 8" (32.5 Cm. × 20 Cm.)

Date of publication: 29—10—1964.

For advt. rates please write to:

Tha Advt. Manager,
Navayuga, Udipi.

ರೈಲು ನಿಂತಾಗ ಇಳಿಯುವ ಹತ್ತುವ ಪ್ರಯಾಣಿಕರಿಂದಾಗಿ ಕೊಂಚ ಗದ್ದಲವಾಗುತ್ತಿತ್ತು. ಮಲಗಿದಲ್ಲಿಂದಲೇ ಕೆಲವರು —"ಇದು ಯಾವ ಸ್ಟೇಶನ್?" ಎಂದು ಪ್ರಶ್ನಿಸುತ್ತಿದ್ದರು ಮತ್ತಾರೋ ಉತ್ತರಿಸುತ್ತಿದ್ದರು ಪುನಃ ರೈಲು ಮೆಲ್ಲ ಮೆಲ್ಲನೆ ಚಲಿಸತೊಡಗುತ್ತಿತ್ತು.

ರಾತ್ರಿ ಒಂದು ಗಂಟೆಗೆ ಸರಿಯಾಗಿ ರೈಲು ವಿಷುಪುರ ಸ್ಟೇಶನ್ ತಲುಪಿತು. ಇಷ್ಟರ ವರೆಗೆ ರೈಲಿನಲ್ಲಿದ್ದ ನಿಶ್ಶಬ್ದತೆ ಈಗ ಸಂಪೂರ್ಣ ಮಾಯವಾಗಿ ಕೋಲಾಹಲಕ್ಕೆ ಪ್ರಾರಂಭವಾಯಿತು

ಅದೇ ಸ್ಟೇಶನ್ನಿನಲ್ಲಿಯೇ ಹಳ್ಳಿಗಾಡಿನ ಒಬ್ಬ ಯುವತಿ ನಮ್ಮ ಕಂಪಾರ್ಟ್‌ಮೆಂಟಿಗೆ ಪ್ರವೇಶಿಸಿ ನನ್ನ ತಂಗಿಯ ಪಕ್ಕದಲ್ಲಿ ಖಾಲಿಯಾಗಿದ್ದ ಸೀಟಿನಲ್ಲಿ ಕುಳಿತುಕೊಂಡಳು. ಅವಳ ಬಗಲಲ್ಲಿ ಚಿಕ್ಕ ಮಗುವೊಂದು ಇದ್ದಿತ್ತು. ಕೈಯಲ್ಲಿ ಹಾಲಿನ ಸೀಸೆ. ಕಣ್ಣು ಕೋರೈಸುವ ಕೃತಕ ರತ್ನಗಳ ಆ ಭೂಷಣಗಳ ಕಾಂತಿಯೊಡನೆ ಆ ಗ್ರಾಮ್ಯ ಯುವತಿಯ ಮೋರೆಗೆ ಒಂದು ಅಪೂರ್ವವಾದ ವಿಶೇಷ ಶೋಭೆ ಬಂದಿತ್ತು. ಆಂತರಿಕ ಆಹ್ಲಾದದಿಂದ ಪ್ರಫುಲ್ಲಿತಳಾದ ಆಕೆ ತಲ್ಲೀನತೆಯಿಂದ, ನಿಶ್ಚಿಂತೆಯಿಂದ ತನ್ನ ಮುದ್ದು ಮಗುವನ್ನು ಮುದ್ದಾಡುತ್ತ ಕುಳಿತಿದ್ದಳು.

ರೈಲು ಹೊರಟಿತು.

ಒಂದೆರಡು ಕ್ಷಣಗಳನಂತರ ಸ್ಮಿತವದನೆಯಾದ ಆ ಗ್ರಾಮ್ಯ ಯುವತಿ ನನ್ನ ತಂಗಿಯನ್ನು ಪ್ರಶ್ನಿಸಿದಳು—

"ಎಲ್ಲಿಗೆ ಹೋಗುತ್ತಿರುವಿರಿ ಅಮ್ಮಾ?"

"ಮದ್ರಾಸಿಗೆ"—ನನ್ನ ತಂಗಿ ಚುಟುಕಾಗಿ ಉತ್ತರಿಸಿದಳು.

"..... ಬೇಕು."

ಆ ಮೇಲೆ ಆಕೆ ಎಡೆಬಿಡದೆ ನನ್ನ ತಂಗಿಯೊಡನೆ ಮಾತನಾಡುತ್ತಲೇ ಇದ್ದಳು. ಆಕೆ ತನ್ನ ಕೈಚೀಲದಿಂದ ನಾಲ್ಕಾರು ಕೆಂಪ ಸಂಪಿಗೆಯ ಹೂವುಗಳನ್ನು ತೆಗೆದು ನನ್ನ ತಂಗಿಗೆ ಕೊಟ್ಟಳು. ನನ್ನ ತಂಗಿ ತತ್‌ಕ್ಷಣವೇ ಆ ಹೂವುಗಳನ್ನು ತನ್ನ ಮುಡಿಯಲ್ಲಿ ತುರುಕಿಸಿಕೊಂಡಳು. ಸಾಕ್ಷಾತ್ ಮಹಾಲಕ್ಷ್ಮಿಯೇ ಈ ಹಳ್ಳಿಯ ಹುಡುಗಿಯ ರೂಪದಲ್ಲಿ ತನಗೆ ಹೂವುಗಳ ಪ್ರಸಾದವನ್ನು ಅನುಗ್ರಹಿಸಿದಳೆಂದೇ ನನ್ನ ತಂಗಿಗೆ ಅನ್ನಿಸಿತ್ತು.

"ಚಿಂತಿಸಬೇಡಿರಿ ಅಮ್ಮಾ, ನಿಮಗೆ ಎಂದೆಂದಿಗೂ ಹೂವಿನ ಕೊರತೆಯಾಗಲಾರದು."

ಇಷ್ಟರವರೆಗೆ ಅನ್ಯಮನಸ್ಕಳಾಗಿ ಆ ಗ್ರಾಮ್ಯ ಯುವತಿಯ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದ ನನ್ನ ತಂಗಿ ಈಗ ತುಸು ಉತ್ಸಾಹದಿಂದ ತನ್ನ ಕತೆಯನ್ನು ಆಕೆಗೆ ವಿವರಿಸತೊಡಗಿದಳು... ...

"ಅಮ್ಮಾ, ಸಾಕ್ಷಾತ್ ಮಹಾಲಕ್ಷ್ಮಿಯಂತೆ ಇರುವಿರಿ. ತಮಗೆ ಏನೇನೂ ಕಷ್ಟ ಬರಲಾರದು. ಚಿಂತೆ ಮಾಡಬೇಡಿರಿ"

ನನ್ನ ತಂಗಿ ಆ ಹಳ್ಳಿಯವಳ ಮಾತನ್ನು ದೇವವಾಣಿಯೆಂದೇ ನಂಬಿದಳು, ಈ ಸಾಂತ್ವನೆಯಿಂದ ನನ್ನ ತಂಗಿ ತುಂಬ ಹರ್ಷಿತಳಾದಳೆಂದು ಬೇರೆ ಹೇಳಬೇಕಿಲ್ಲ.

ನನ್ನ ತಂಗಿ ಆ ಹಳ್ಳಿಯವಳೊಡನೆ ವಾರ್ತಾಲಾಪದಲ್ಲಿ ಮಗ್ನಳಾದಳು. ಮಾತುಕತೆಯ ಮಧ್ಯದಲ್ಲಿ ಆಗಾಗ ನಿಶ್ಚಿಂತೆಯಿಂದ ನಗುತ್ತಿದ್ದಳು. ಕ್ಷಣಕಾಲ ಅವಳು ಹೃದ್ಯದ ಪರಿಸ್ಥಿತಿಯನ್ನೇ ಮರೆತು ಬಿಟ್ಟಳು.

ರೈಲು ಚೆಂಗಲ್ಪೇಟೆ ಸ್ಟೇಶನ್ ತಲುಪಿತು.

ಎಲ್ಲರೂ ದಬಡಬನೆ ಎದ್ದು ಕುಳಿತರು. ಪೂರ್ವ ದಿಕ್ಕಿನಲ್ಲಿ ಆಗಲೇ ಅರುಣೋದಯವಾಗಿ ಬಿಟ್ಟಿತ್ತು. ಇನ್ನೇನು ಬೇಗಾ ದಂತೆಯೇ.

ಮತ್ತೊಮ್ಮೆ ಚಿಂತೆ ನಮ್ಮನ್ನು ಆವರಿಸಿತು. ಬೆಳಗಾಗುತ್ತಿದೆ! ಹಾಯ್ ದೇವರೇ! ಇನ್ನೇನನ್ನು ಎದುರಿಸಬೇಕೋ...

ನನ್ನ ತಂಗಿ ನಿಶ್ಚಲಳಾಗಿ ಕುಳಿತಿದ್ದಳು. ರಾತ್ರಿಯಿಡೀ ನಿದ್ದೆಗೆಟ್ಟ ಕುಡಿದ ಒರಲೋಣವೇ?"—ನಾನು ಕೇಳಿದೆ.

"ಊಹುಂ. ಮದ್ರಾಸಿಗೆ ಹೋದ ಮೇಲೆ..."

ಪಕ್ಕದಲ್ಲಿದ್ದ ಆ ಗ್ರಾಮ್ಯ ಯುವತಿ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದಳು. ರೈಲು ಮತ್ತೆ ಮುಂದುವರಿಯಿತು. ಅದೇನೋ ವೇಗವಾಗಿಯೇ ಸಾಗುತ್ತಿದ್ದರೂ ನನಗೇನೋ ಅದು ಬಹು ನಿಧಾನವಾಗಿ ಚಲಿಸುತ್ತಿರುವಂತೆ ಭಾಸವಾಗುತ್ತಿತ್ತು.

ರೈಲು ಎಗ್ಮೋರ್ ತಲುಪಿತು.

ಸ್ಟೇಶನ್ನಿನಲ್ಲಿ ಯಾರೂ ಇದ್ದಿರಲಿಲ್ಲ. ಅರ್ಥಾತ್ ನಮ್ಮ ಭಾವನವರ ಹೊರತಾಗಿ ಉಳಿದವರೆಲ್ಲರೂ ಇದ್ದಿದ್ದರು. ಅವರೇಕೆ ಸ್ಟೇಶನ್ನಿಗೆ ಬಂದಾರು ಎಂದು ನಾನೆಂದುಕೊಂಡೆ ಅವರನ್ನು ನಿರೀಕ್ಷಿಸಿದ್ದು ನಮ್ಮ ತಪ್ಪು!

ಮನೆ ತಲುಪಿದೆವು.

ಬಾಗಿಲಿಗೆ ಬೀಗ ಹಾಕಿ ಕೊಂಡಿತ್ತು.

ಜನರಲ್ ಆಸ್ಪತ್ರೆಗೆ ಹೋದೆವು. ಅರ್ಧ ಗಂಟೆಯ ವರೆಗೂ ಮುಂದೇನು ಮಾಡಬೇಕೆಂದೇ ನನಗೆ ತೋಚಲಿಲ್ಲ.

ಅಷ್ಟರಲ್ಲಿ ಯಾವನೋ ಒಬ್ಬ ನಾವು ಕುಳಿತಿದ್ದಲ್ಲಿಗೆ ಬಂದ.

"ನೀವು ಕುಂಭಕೋಣದಿಂದ ಬಂದಿರಾ?"—ಆತ ಪ್ರಶ್ನಿಸಿದ.

"ಹೌದು"—ನಾನೆಂದೆ.

"ರೋಗಿ ನಿನ್ನೆ ರಾತ್ರಿ ಸತ್ತರು."

"ಸ....ತ್ತ....ರೇ....? ಹೇಗೆ?........ ಯಾರು?....ಶಿವರಾಮಯ್ಯರ್?" ಮತ್ತೂ ನನಗೆ ಅನುಮಾನವೇ!

"ಹೌದು."

"ಬಹುಶಃ..."

"ಸ್ವಲ್ಪ ನಿಲ್ಲಿರಿ. ಶವವನ್ನು ತೆಗೆದುಕೊಂಡು ಹೋಗಬಹುದು."—ಸಂಕ್ಷೇಪವಾಗಿ ತಿಳಿಸಿ ಆತ ತನ್ನ ಕೆಲಸಕ್ಕಾಗಿ ಹೊರಟು ಹೋದ

ಸ್ವಲ್ಪ ಸಮಯದ ಬಳಿಕ ಹೆಣವನ್ನು ನಮಗೊಪ್ಪಿಸಿದರು.

ಈಗ—

ಹೆಣವನ್ನು ಕಣ್ಣಾರೆ ಕಂಡ ಬಳಿಕ ನಮ್ಮ ಸಂಶಯ ನಿವಾರಣೆಯಾಯಿತು. ಒಂದು ರೀತಿಯಲ್ಲಿ ಗಾಬರಿ ಮಾಯವಾ ಪತ್ನೀನ? ತಲು ಆರಂಭ ಗೋಳಾಟ!

ಆ ಮೇಲೆ....? ಆ ಮೇಲೇನು? ಇರುಳು ಕಳೆಯಿತು, ಬೆಳಗಾಯಿತು.

ಮೊಗವೀರ ವ್ಯವಸ್ಥಾಪಕ ಮಂಡಳಿ

ಮುಂಬೈ, ಆ. ೨೨, ೧೯೬೪— ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆಯು ಮಂಡಳಿಯ ಅಧ್ಯಕ್ಷ ಶ್ರೀ ನಾರಾಯಣ ಬಿ ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಕೆ. ಪುತ್ರನರು ಸ್ವಾಗತಿಸಿದರು. ಅಧ್ಯಕ್ಷರು ಮಂಡಳಿಯ 61ನೇ ವಾರ್ಷಿಕ ವರದಿಯನ್ನು 31-3-64ಕ್ಕೆ ಅಂತ್ಯವಾದ ಮಂಡಳಿಯ ಒಂದು ವರ್ಷದ ಆಯ-ವ್ಯಯ ಮತ್ತು ಆಸ್ತಿ ವ ಸೊತ್ತುಗಳ ಪಟ್ಟಿಯನ್ನೂ ಸಭೆಯು ಮಂಜೂರಾತಿಗಿಡುತ್ತಾ 61 ವರ್ಷಗಳಿಂದ ಮಂಡಳಿಯು ಸಾಧಿಸಿದ ಪ್ರಗತಿಯನ್ನೂ ಮಂಡಳಿಯ ಆಶ್ರಯದಲ್ಲಿ ನಡೆಯುತ್ತಿರುವ ವಸತಿ ನಿರ್ಮಾಣ ಮತ್ತು ಹಗಲು ಶಾಲೆಯ ಯೋಜನೆಗಳು ಸಫಲೀಕೃತವಾಗಲು ಸದಸ್ಯರು ಬೆಂಬಲವೀಯಬೇಕೆಂದೂ ಕೇಳಿಕೊಂಡರು.

ಮಂಡಳಿಯ ಉಪಾಧ್ಯಕ್ಷ ಶ್ರೀ ಯಸ್. ಸಿ. ಕಡುಬಿದ್ರೆಯವರು ಅಧ್ಯಕ್ಷರ ಸೂಚನೆಯನ್ನು ಪುಷ್ಟೀಕರಿಸಿ ಮಾತಾಡಿದ ಮೇಲೆ ವರದಿ ಮಂಜೂರಾಯಿತು. 1964-65 ಮತ್ತು 1965-66ನೇ ವರ್ಷಗಳಿಗೆ ನೇಮಿಸಲ್ಪಟ್ಟ ಕಾರ್ಯಸ್ಥರ ಮತ್ತು ವ್ಯವಸ್ಥಾಪಕ ಸಮಿತಿ ಸದಸ್ಯರ ಹೆಸರುಗಳನ್ನು ದೃಢೀಕರಿಸಲು ಅಧ್ಯಕ್ಷರಿಟ್ಟ ಠರಾವನ್ನು ಶ್ರೀ ಬಿ. ಎಸ್. ಸಾಲಿಯಾನರು ಅನುಮೋದಿಸಲು ಸರ್ವಾನುಮತದಿಂದ ಮಂಜೂರಾಯಿತು. ಲೆಕ್ಕ ಪರಿಶೋಧಕರಾಗಿ ಶ್ರೀ ಆರ್. ಕೆ. ಕಾರಂತರನ್ನು ಆರಿಸಲಾಯಿತು. ಮಂಡಳಿಯ ಪ್ರಗತಿಗಾಗಿ ಸಹಕರಿಸಿದ ಸಂಘ, ಸಂಸ್ಥೆ ಮತ್ತು ಮಹಾಜನರ ಉಪಕಾರ ಸ್ಮರಿಸಲಾಯಿತು.

ಶ್ರೀಗಳಾದ ಬಿ. ಎ. ಕರ್ಕೇರ, ಜಿ. ಸಿ. ಮತ್ತನ್, ಲಿಂಗಪ್ಪ ಯಸ್. ಕಾಂಚನ್, ಮತ್ತು ಭೋಜ ಎಂ. ಮೆಂಡನರು ಸಮಯೋಚಿತವಾಗಿ ಮಾತಾಡಿದ ನಂತರ ಜೊತೆ ಕಾರ್ಯದರ್ಶಿ ಶ್ರೀ ಬಿ. ಶಾಂತಾರಾಮರು ಧನ್ಯವಾದಗಳನ್ನಿತ್ತರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 220/64

ವೆಂಕಟ್ರಮಣಯ್ಯ—ವಾದಿ

ಮತ್ತು

ಸಯ್ಯದ್ ಅಬ್ದುಲ್ ರಹಿಮಾನ್ ಸಾಹೇಬರು ಕೂಡಾ—ಪ್ರತಿವಾದಿರು.

ಯವರೊಳಗೆ.

1ನೇ ಪ್ರತಿವಾದಿ ಸಯ್ಯದ್ ಅಬ್ದುಲ್ ರಹಿಮಾನ್ ಸಾಹೇಬ ಮೂಲೂರು ಸಯ್ಯದ್ ಆದಂ ಸಾಹೇಬರ ಮಗ, ಉಡುಪಿ ತಾಲೂಕು ಮೂಲೂರು ಗ್ರಾಮದಲ್ಲಿರುವವರು ಮತ್ತು 2ನೇ ಪ್ರತಿವಾದಿ ಕೆ. ಖಾದಿರ್ ಬ್ಯಾರಿ ಉಡುಪಿ ತಾಲ್ಲೂಕು ಕಾಪು ಕೊಪ್ಪಲಂಗಡಿಯಲ್ಲಿರುವವರು—ಎರಡು ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:

ಮೇಲ್ಕಂಡ ದಾವೆಯ ವಾದಿರು ತಾರೀಕು 30-4-20 ರ ಮೂಲಗೇಣಿ ಎಮ್ರನಾಮೆ ಪ್ರಕಾರ ನಿಮ್ಮಿಂದ ಬರಬೇಕಾದ ನಂದನ ಸಂವತ್ಸರದ ಲಾಗ್ಯಾತು ಶೋಭಕೃತು ಸಂವತ್ಸರದ ವರೇಗಿನ ಮೂಲಗೇಣಿ ಬಾಕಿ ವಗೈರೆ ಕೇಳಿ ನಿಂಮ್ಮ ಮೇಲೆ ಮಾಡಿರುವ ದಾವೆಯಲ್ಲಿ ನಿಮಗೆ ಸಬ್ ಸರ್ವಿಸು ಮೂಲಕ ಹ್ಲೆಂಟು ನೋಟೀಸು ಜಾರಿ ಆಗತಕ್ಕದ್ದೆಂತ R I A ನಂಬ್ರ 662/64 ರಲ್ಲಿ ತಾ.27-8-64 ರಲ್ಲಾದ ಹುಕ್ಕುಂ ಪ್ರಕಾರ ಈ ನೋಟೀಸು ಮಾಡಿಸಿದ್ದಾಗಿರುತ್ತದೆ. ದಾವಾ ನೋಟೀಸು ಬಗ್ಗೆ ತಾ. 29-9-64 ಕ್ಕೆ ಇಟ್ಟಿರುವದರಿಂದ ಆ ದಿವಸ ಬೆಳಿಗ್ಗೆ 11 ಗಂಟೆಗೆ ನೀವು ಕೋರ್ಟು ಮುಂದೆ ಹಾಜರಾಗಲು ತಪ್ಪಿದರೆ, ನಿಮ್ಮ ಮೇಲೆ ಎಕ್ಸ್‌ಪಾರ್ಟ ಡಿಕ್ರಿ ಆಗುವದು

(By order)

Narayana Rao, K.
Advocate for Plaintiff

ಉಡುಪಿ ತಾ 28-8-64

ಬೆಳ್ತಂಗಡಿ ಡಿ. ಮು. ಕೋರ್ಟಿನಲ್ಲಿ

O. S. 123/64:

ಶಂಕರ ಭಟ್ ... ವಾದಿ

ಕಮಲಾವತಿ ಕೂಡಾ .... ಪ್ರತಿವಾದಿರು

ಬೆಳ್ತಂಗಡಿ ತಾಲ್ಲೂಕು ಸವಣಾಲು ಎಂಬಲ್ಲಿರುವ, ನಾರಾಯಣ ಪೈಯವರ ವಿಧವೆ ಕಮಲಾವತಿಗೆ— ಒಂದನೇ ಪ್ರತಿವಾದಿ,

ಪ್ರತಿವಾದಿಗಳಿಂದ ಬರಾ ಬಾಲಗೇಣಿ ಬಾಕಿ ರೂ. 1,340-19 ಪೈಸೆಗೆ ವಾದಿಯು ಮಾಡಿದ ದಾವೆಯು ತೈಮೇತು ನೋಟೀಸಿಗಾಗಿ ಮುದ್ದತು ತಾ. 18—9—1964ಕ್ಕೆ ಇಟ್ಟಿದೆ ಒಂದನೇ ಪ್ರತಿವಾದಿಯು ತನ್ನ ಆಕ್ಷೇಪಗಳೇನಾದರೂ ಹೇಳುವುದಿದ್ದರೆ ಆ ದಿನ ಈ ಕೋರ್ಟು ಮುಂದೆ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳುವುದು ಇದಕ್ಕೆ ತಪ್ಪಿದ್ದಲ್ಲಿ ಆತಳನ್ನು ಶಿವಾಯಿ ಎಂತ ಮಾಡಿ ದಾವೆಯನ್ನು ಮುಂದಿನ ತನ್ನಿಮಿತ್ತ ತೀರ್ಮಾನಿಸಲಾಗುವುದು ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

K. Veerasimha, M A. LL. B.
Advocate, Belthangady.
Advocate for Plintiff
(ವಾದಿಕಡೆ ವಕೀಲರು.)

ಬೆಳ್ತಂಗಡಿ, ತಾ. 1-9-1964.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಅಲ್ಲಲ್ಲಿಯ ಸುದ್ದಿಸಾರ

ಮಹಾ ಸಭೆ

ಕೊರಂಗ್ರಪಾಡಿ ಸೇವಾ ಸಹಕಾರಿ ಸಂಘದ ಮಹಾ ಸಭೆಯು ತಾ. 23-6-1964ರಲ್ಲು ಶ್ರೀ ಕೆ. ದೇವಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. 1964—66ನೇ ವರ್ಷಕ್ಕೆ ಆಡಳಿತ ಮೆಂಬರಾಗಿ ಶ್ರೀಗಳಾದ ಕೆ. ದೇವಯ್ಯ ಹೆಗ್ಡೆ, ವಿನೆಸ್ಟನ್ ನಿಕೋಲಸ್ ಅಮ್ಮನ್ನ, ಡೇನಿಜ್ ಅಬ್ರಾಹಮ್ ಕರ್ಕಡ, ಕೆ. ಕೃಷ್ಣ ಶೆಟ್ಟಿ ಮತ್ತು ಕೆ. ತುಕ್ರ ಪೂಜಾರಿಯವರು ಅವಿರೋಧವಾಗಿ ಆರಿಸಲ್ಪಟ್ಟರು. ಅಸಿಸ್ಟಂಟ್ ರಿಜಿಸ್ಟ್ರಾರರವರು ಅಮೂಲ್ಯ ಸಲಹೆಯನ್ನಿತ್ತರು.

ಉಡುಪಿ ರೋಟರಿ ಕ್ಲಬ್

ಮಣಿಪಾಲ, ಸೆಪ್ಟಂಬರ್ ೨— ಉಡುಪಿ ರೋಟರಿ ಕ್ಲಬ್ ಏರ್ಪಡಿಸಿದ್ದ ಇಂಗ್ಲಿಷ್ ವಾರ್ಕ್ ಸ್ಪರ್ಧೆಯಲ್ಲಿ ವಿಜೇತರಾದ ಪ್ರೌಢರು ವಿದ್ಯಾರ್ಥಿಗಳಿಗೆ ನಿನ್ನೆ ಇಲ್ಲಿ ನಡೆದ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಅಧ್ಯಕ್ಷ ಡಾ| ಎ. ಕೃಷ್ಣರಾಜ್ ಬಹುಮಾನಗಳನ್ನು ವಿತರಿಸಿ ಮಾಡಿದರು. ಪ್ರಥಮ ಹಾಗೂ ಬಹುಮಾನಗಳನ್ನು ಗೆದ್ದ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಶ್ರೀ ಸತೀಶ್‌ಚಂದ್ರ ಗೋಯಲ್, ಮಹಾತ್ಮಾಗಾಂಧಿ ಕಾಲೇಜಿನ ಶ್ರೀ ಪ್ರಭಾಕರ ಹೆಗ್ಡೆ ಮತ್ತು ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಶ್ರೀ ಬಾಲ ಸುಂದರ್‌ರವರು "ನೆಹ್ರೂ ನಂತರದ ಭಾರತ" ಎಂಬ ವಿಷಯವನ್ನು ಕುರಿತು ಮಾತನಾಡಿದರು. ಕ್ಲಬ್ಬಿನ ಹಿಂದಿನ ಅಧ್ಯಕ್ಷ ಶ್ರೀ ರಮೇಶ ಪೈಯವರು ಇತ್ತೀಚಿಗೆ ಅವರು ಅಮೇರಿಕಾ ಮತ್ತು ಐರೋಪ್ಯಗಳಲ್ಲಿ ಪ್ರವಾಸ ಮಾಡಿದಾಗ ತೆಗೆದ ಚಿತ್ರಗಳನ್ನು ಪ್ರದರ್ಶಿಸಿದರು.

ಶ್ರೀರಾಮನಾಮ ಪ್ರಚಾರಿಣೀ ಮಂಡಳಿ

ಉಡುಪಿ, ಆ. ೨೯— ಇದರ ಸಂಕೀರ್ತನಾ ಸಮಾರೋಪವು ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ಜರಗಿತು. ಶ್ರೀ ಉ. ಲಕ್ಷ್ಮೀನಾರಾಯಣ ಶೆಣೈಯವರು ವರದಿ ವಾಚನವನ್ನೂ ಶ್ರೀ ವಿಠಲಾಚಾರ್ಯರು ಸಮಾರೋಪ ಭಾಷಣವನ್ನೂ ಮಾಡಿದರು.

"ಶ್ರೀ ಕೃಷ್ಣ ಜನ್ಮಾಷ್ಟಮಿ" ಚೇಲಂಬಾಡಿ ಬನಿಂ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ "ಶ್ರೀಕೃಷ್ಣ ವಿಜಯ" ಎಂಬ ಯಕ್ಷಗಾನ ಕೂಟವು ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ನಡೆಸಲ್ಪಟ್ಟಿತು. ಶ್ರೀಗಳಾದ ಶೀ. ವ. ಕೇಶವ, ರಾಮರಾಯ ಗಾಂಧ, ಕೆ. ಎ. ಭಂಡಾರಿ,ಪರಮೇಶ್ವರ ಭಟ್, ಅಪ್ಪು ಪಾಟಾಳಿ, ಬಾಬುರ್ರೈ, ತಿಮ್ಮಪ್ಪ ಗೌಡ, ಕುಂಞಣ್ಣ ರೈ, ಲಕ್ಷ್ಮಣ ಗೌಡ ಮೊದಲಾದವರು ಪಾಲುಗೊಂಡ ಈ ಕೂಟದ ಅಧ್ಯಕ್ಷತೆಯನ್ನು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ವಹಿಸಿದ್ದರು.

ಕನ್ನಡ ಪ್ರೇಮಿ ಮಂಡಳಿಯ ಉದ್ಘಾಟನೆ ಮುಲ್ಕಿ ವಿಜಯಾ ಕಾಲೇಜಿನ ಕನ್ನಡ ಪ್ರೇಮಿ ಮಂಡಳಿಯ ಉದ್ಘಾಟನಾ ಸಮಾರಂಭವು ತಾ. 30—8—64 ರಂದು ಶ್ರೀ ಯಶವಂತ ವಿ. ಚಿತ್ತಾಲರ ಮುಖ್ಯ ಅತಿಥ್ಯದಲ್ಲಿ ಜರಗಿತು. ಪ್ರಿನ್ಸಿಪಾಲ್ ಎಲ್. ಜಿ. ಮಡೇಕರರವರು ಅಂದಿನ ಅಧ್ಯಕ್ಷತೆ ವಹಿಸಿದ್ದರು.

ಅಧ್ಯಕ್ಷೆ ಪ್ರೊ| ಶ್ರೀಮತಿ ಇಂದು ಬಾಲಕಾಮತ್, ಇವರು ಅತಿಥಿಗಳನ್ನು ಸ್ವಾಗತಿಸಿದರು. ಉಪಾಧ್ಯಕ್ಷ ಶ್ರೀ ಶಂಕರ ಪಕ್ಕಳರು ಅತಿಥಿಯವರ ಪರಿಚಯ ಮಾಡಿಕೊಟ್ಟರು. ಪ್ರಧಾನ ಕಾರ್ಯದರ್ಶಿ ಎಂ. ಪಿ ಸಾಲಿಯಾನ್, ಇವರು ಮಂಡಳಿಯ ವರದಿಯನ್ನೊಪ್ಪಿಸಿದರು. ಶ್ರೀ ಯಶವಂತ ಚಿತ್ತಾಲರು "ಸಾಹಿತ್ಯದಲ್ಲಿ ಅನುಭವದ ಸ್ಥಾನ"ದ ಕುರಿತು ಮಾತನಾಡಿದರು. ಅಧ್ಯಕ್ಷರ ಭಾಷಣದ ತರುವಾಯ, ಜತೆ ಕಾರ್ಯದರ್ಶಿ ಶ್ರೀ ಡಿ. ಆರ್. ಶೆಟ್ಟಿ ಇವರು ವಂದನಾರ್ಪಣೆ ಸಮರ್ಪಿಸಿದರು.

ಲಲಿತಾ ಕ್ಲಿನಿಕ್ ಉದ್ಘಾಟನೆ: ಮೇಗನವಳ್ಳಿ—ತಾ. 1—9—1964 ರಂದು ಡಾ| ಯು. ಸದಾಶಿವ ಇವರ ಲಲಿತಾ ಕ್ಲಿನಿಕ್

ಸುಖ-ದುಃಖ

ಇದನ್ನು ಮರೆಯದಿರಲಿ

ನವದೆಹಲಿಯಲ್ಲಿ ಎ ಐ ಸಿ ಸಿ ಯ ಸಭೆಗೊಂದು ಸೇರಿತ್ತಷ್ಟೆ? ಅಲ್ಲಿ ಪ್ರಥಾನ ಮಂತ್ರಿ ಶಾಸ್ತ್ರಿಯವರು ಆಹಾರ ವಸ್ತುಗಳಲ್ಲದೆ ಬಟ್ಟೆ, ಕೆರೊಸಿನ್ ಎಣ್ಣೆ, ವನಸ್ಪತಿ ತೈಲ ಮೊದಲಾದ ಅವಶ್ಯಕ ವಸ್ತುಗಳ ಬೆಲೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವಲ್ಲಿ ತನ್ನ ಸರಕಾರದ ಆಸ್ಥೆಯನ್ನು ವ್ಯಕ್ತ ಪಡಿಸಿದುದು ಸ್ವಾಗತಾರ್ಹ. ಯಾವುದೇ ವಸ್ತು ವಿನ ಬೆಲೆ ನಿಯಂತ್ರಿಸುವಲ್ಲಿ ಅದರ ಉತ್ಪಾದಕನ ಹಿತಚಿಂತನೆಯನ್ನೂ ಮಾಡಬೇಕು; ಕೇವಲ ಗಿರಾಕಿಯ ಹಿತವನ್ನು ಮಾತ್ರ ಬಯಸಿದರೆ ಸಾಲದು. ಹುಟ್ಟೆಯ ಇಂದಿನ ದಿನಗಳಲ್ಲಿ ಉತ್ಪಾದನೆಯ ವೆಚ್ಚವೂ ಪರ್ವತದಷ್ಟು ಹೆಚ್ಚಿರುವುದನ್ನು ಮರೆಯಬಾರದು.

—ಸುಬ್ಬಣ್ಣ ಉಪಾಧ್ಯ.

ಎಂಬ ಚಿಕಿತ್ಸಾಲಯವು ಶ್ರೀ ಮುದ್ರಾಡಿ ಕೃಷ್ಣಯ ಶೆಟ್ರ ನೇತೃತ್ವದಲ್ಲಿ ಡಾ| ಎ ನಾಗರಾಜ್ ಇವರಿಂದ ಉದ್ಘಾಟಿಸಲ್ಪಟ್ಟಿತು.

ಆರೋಗ್ಯ ಕೇಂದ್ರದ ಉದ್ಘಾಟನೆ.

ಬ್ರಹ್ಮಾವರ— ಕಳೆದ ತಾ. 30 ರಂದು ಬೋರ್ಡ್ ಹೈ. ಎ ಶಾಲೆಯಲ್ಲಿ ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಆಶ್ರಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಜಿಲ್ಲಾಧಿಕಾರಿ ಶ್ರೀ ಸಿ. ಎಮ್. ಮುಜಾಹಿದ್ ಇವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಡಿ. ಸಾಮ್ರಾಜ್ಯ ಎಂ. ಎಲ್. ಎ. ಇವರು ಉದ್ಘಾಟಿಸಿದರು. ಶ್ರೀ ಆನಂದ ಕುಂದ ಹೆಗ್ಡೆಯವರಿಂದ ಸ್ವಾಗತ, ಶ್ರೀ ಗೋಕುಲದಾಸ್. ಪೈಯವರಿಂದ ವಂದಿಗಳಾದ ಮೇಲೆ ಶ್ರೀ ಬಿ. ಜಗಜ್ಜೀವನದಾಸ್ ಶೆಟ್ಟರು ಸಂದೇಶಗಳನ್ನೋದಿದರು. ಶ್ರೀ ಎಂ ಮಧ್ವರಾಜ್, ಎಂ. ಎಲ್. ಎ. ಅವರು ಮಹಾತ್ಮಾಗಾಂಧಿ, ಪಂ. ನೆಹರೂ ಮತ್ತು ಸ್ವಾಮಿ ವಿವೇಕಾನಂದರ ಭಾವ ಚಿತ್ರಗಳನ್ನು ಅನಾವರಣ ಮಾಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಶ್ರೀ ಎಚ್. ಎಸ್. ನಾಯಕರು ಮಾತನಾಡಿದ ನಂತರ ಅಧ್ಯಕ್ಷ ಭಾಷಣವಾಯಿತು.

ಸರಕಾರಕ್ಕೆ ಮುನ್ಸೂಚನೆ.

ಮಾಧ್ಯಮಿಕ ಶಿಕ್ಷಣಾಲಯಗಳಿಗೆ ಸೇ. ೮೦-೮೫ ರಷ್ಟು ನೀಡುವಾಗ ಶಾಲೆಗಳಿಗೆ ಕೊರತೆಯ ಸೇ. ೭೦ ರಷ್ಟು ಸಹಾಯಧನವನ್ನು ನೀಡಲು ಕರ್ನಾಟಕದ ಸರಕಾರ ನಿರ್ಧರಿಸಿದ್ದು ಶ್ಲಾಘನೀಯ. ಆದರೆ, ಸರಕಾರವು ಇಂತಹ ಉದಾರ ನೀತಿಯನ್ನು ಸ್ವೀಕರಿಸಬೇಕಾದರೆ, ವಿದ್ಯಾರ್ಥಿಗಳು ಸಂಪು, ಸತ್ಯಾಗ್ರಹ ಹೂಡಬೇಕಾಯಿತು. ಅನ್ನ ಸತ್ಯಾಗ್ರಹ ಹಾಗೂ ಓಡಾಟ್ಮಕ ಸಂಪಿನ ಮುಂದೆ ಸರಕಾರ ಬಗ್ಗಲೇ ಬೇಕಾಯಿತು. ಇನ್ನುಳಿದುದು ಪ್ರಾಥಮಿಕ ಶಾಲೆಗಳ ವಿಚಾರ ಮಾತ್ರ. ಹೇಳಿ ಕೇಳಿ ಪೈಯ ಕ್ರಿ ಕ ಆಡಳಿತೆಯಲ್ಲಿರುವ ನಮ್ಮ ಜಿಲ್ಲೆಯ ಪ್ರಾಥಮಿಕ ಶಾಲೆಗಳ ವ್ಯವಸ್ಥೆ ಕೆಲವು ವರ್ಷಗಳಿಂದ ತೀರ ಕೆಟ್ಟು ಹೋಗಿದೆ. ಅಲ್ಲಿ ದುಡಿಯುತ್ತಿರುವ ಅಧ್ಯಾಪಕರ ಗೋಳು ಅವರ್ಣನೀಯವಾಗಿದೆ ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ಸರಕಾರದ ಅರ್ಥಹೀನ ನೀತಿಯಿಂದ ಈಗಾಗಲೇ ಕಂಗಾಲಾದ ಈ ಶಿಕ್ಷಕರು, ಮೆನೇಜುಮೆಂಟುಗಳಿಗೆ ನೂರಕ್ಕೆ ನೂರರಷ್ಟು ಸಹಾಯ ಧನ ನೀಡುವಂತೆ ಮನವರಿಕೆ ಮಾಡಲು ಹುಟ್ಟಿ ವಿದ್ಯಾರ್ಥಿಗಳೊಡನೆ ಮುಷ್ಕರಕ್ಕೆ ಇಳಿಯಬಹುದು. ಅದುದರಿಂದ ಪ್ರಾಥಮಿಕ ಶಿಕ್ಷಣದ ಸೂರ್ಣ ಹೊರೆಯನ್ನು ಹೊರಲೇ ಬೇಕಾದ ಸರಕಾರ ಇಂತಹ ಅಪ್ರಿಯ ಪ್ರಸಂಗವನ್ನು ತಂದುಕೊಳ್ಳದೆ ಮೆನೇಜ್‌ಮೆಂಟ್‌ಗಳಿಗೆ ಉದಾರ ಧನ ಸಹಾಯ ನೀಡಿ ಪ್ರಾಥಮಿಕ ಶಿಕ್ಷಣವನ್ನು ಯಶಸ್ವಿಗೊಳಿಸಬೇಕು.

—ಓರ್ವ ಅಧ್ಯಾಪಕ.

ರಜತ ಪರದೆಯ ಮೇಲೆ

ಚಿನ್ನದ ಗೊಂಬೆ

ಕಲ್ಯಾಣ ಕುಮಾರ್, ಜಯ ಲಲಿತ, ಬಿ ಆರ್. ಪಂತುಲು, ಎಂ. ವಿ. ರಾಜಮ್ಮ, ಕೆ. ಎಸ್. ಅಶ್ವಥ್, ನರಸಿಂಹರಾಜು, ಬಾಲಕೃಷ್ಣ, ಸಂಧ್ಯಾ, ಕಲ್ಪನಾ ಮುಂತಾದವರು ಅಭಿನಯಿಸಿರುವ ಪದ್ಮಿನಿ ಪಿಕ್ಚರ್ಸ್ ಅವರ 'ಚಿನ್ನದ ಗೊಂಬೆ' ಪ್ರದರ್ಶನಕ್ಕೆ ಸಿದ್ಧವಾಗಿದೆ ಆದರೆ ಪ್ರದರ್ಶನದ ದಾರಿಯನ್ನು ಕಾಯುವ ಪ್ರಸಂಗ ಈ ಚಿತ್ರಕ್ಕೆ ಬಂದಿದೆ ಎಂದು ವರದಿಯಾಗಿದೆ. ಕಾರಣ ಇದು ತಮಿಳು ಚಿತ್ರ 'ಮುರುದನ್ ಮತ್ತು'ವಿನ ಕನ್ನಡಾವತರಣಿಕೆಯಾಗಿದ್ದು. ತಮಿಳು ಚಿತ್ರವು ಪ್ರದರ್ಶನಕ್ಕೆ ಬಂದ ಬಳಿಕವೇ ಇದನ್ನೂ ಪ್ರದರ್ಶಿಸಲಾಗುವುದು ಎನ್ನಲಾಗಿದೆ.

ಚಿರಿತ ಜೀವ

ಕರ್ನಾಟಕ ಫಿಲ್ಮ್ಸ್ ಅವರು ತಮ್ಮ ನೂತನ ಚಿತ್ರ 'ಚಿರಿತ ಜೀವ'ದ ತಯಾರಿಕೆಯತ್ತ ಆಸಕ್ತಿ ತಾಳಿದ್ದಾರೆ. ಇತ್ತೀಚಿಗೆ ಅದರ ಪ್ರಾರಂಭೋತ್ಸವವನ್ನು ನೆರವೇರಿಸಲಾಯಿತು.

'ನಾಂದಿ'!

ಭಾರತೀ ಚಿತ್ರದವರ 'ನಾಂದಿ' ಚಿತ್ರವು ಕನ್ನಡ ನಾಡಿಗೆ ಅವರು ಅರ್ಪಿಸುವ ಭವ್ಯ ಕಾಣಿಕೆಯಾಗಬಹುದಾಗಿದೆ. ಸತ್ಯಜಿತ್‌ರೇ ಅವರ ಚಿತ್ರಗಳ ಬಗ್ಗೆ ಅತ್ಯಂತ ಆಸಕ್ತಿಯುಳ್ಳ ಲಕ್ಷ್ಮೀನಾರಾಯಣ್ ಅವರು ಈ ಚಿತ್ರವನ್ನು ನಿರ್ದೇಶಿಸುವ ಕಾರಣ, ಚಿತ್ರವು ಕನ್ನಡ ಚಿತ್ರೋದ್ಯಮದ ಒಂದು ವೈಲುಗಲ್ಲು ಎಂದು ಕರೆಯಿಸಿಕೊಳ್ಳಬಹುದಾಗಿದೆ.

ಅಬ್ಬಾಸರು ಹೊಸ ಹಾದಿಯಲ್ಲಿ!

'ಶಹರ್ ಔರ್ ಸಪ್ನಾ'ದ ಯಶಸ್ಸು ಅಬ್ಬಾಸರು ಇನ್ನೊಂದು ಚಿತ್ರ ತಯಾರಿಸುವಂತೆ ಹುರಿದುಂಬಿಸಿದೆ. ಅಬ್ಬಾಸರು ಈಗ ಆ ಸಿದ್ಧತೆಯಲ್ಲಿದ್ದಾರೆ. ಸುರೇಖಾ ದಿಲೀಪ ರಾಜರು ಪ್ರಮುಖ ಭೂಮಿಕೆಯಲ್ಲಿರುವ ಚಿತ್ರದ ಹೆಸರನ್ನು "ಆಸಮಾನ್ ಮಹಲ್" ಎಂದಿರಿಸಲಾಗಿದೆ ಚಿತ್ರೀಕರಣ ಆರಂಭವಾಗಿದೆ. ಚಿತ್ರವನ್ನು ಕೆ. ಎ ಅಬ್ಬಾಸರೇ ದಿಗ್ದರ್ಶಿಸುತ್ತಾರೆ.

ಬಂಗಾಲೀ ಚಿತ್ರದಲ್ಲಿ— ?

ಪೃಥ್ವೀರಾಜ್ ಕಪೂರ್, ಅನಿಲ್ ಚಟರ್ಜಿ, ಗೀತಾಬಾಲಿಯವರು ಪ್ರಮುಖ ಭೂಮಿಕೆಯಲ್ಲಿರುವ ಬಂಗಾಲೀ ಚಿತ್ರವೊಂದನ್ನು ಕಲ್ಯಾಣೀ ಗುಪ್ತಾ ಅವರು ತೆರೆಗೆ ತರುವ ಯೋಜನೆಯಲ್ಲಿದ್ದಾರೆ ಹೇಮಂತ ಕುಮಾರರು ಈ ಚಿತ್ರದ ಸಂಗೀತ ನಿರ್ದೇಶಕರು. ಚಿತ್ರಕ್ಕೆ 'ಆನಾವಿಕಾ' ಎಂದು ಹೆಸರಿಸಲಾಗಿದೆ.

ಚಾ ಚಾ ನೆಹರೂ...!

ನೆಹರೂ ಜೀವನಕ್ಕೆ ಸಂಬಂಧಿಸಿದ ಕತೆಯಾಗಿರದಿದ್ದರೂ, ನೆಹರೂ ಹೆಸರನ್ನು ಹೇಳಿಕೊಂಡು ಚಿತ್ರ ಪ್ರಸಿದ್ಧಿಗಾಗಿ ಪ್ರಯತ್ನಿಸಲು ನಿರ್ಮಾಪಕ ಜೈಮೂರ್ತಿ ಡಿ. ವಾಸರು ನಿರ್ಧರಿಸಿರುವಂತಿದೆ. ಅಂತೆಯೇ ಅವರ ಮುಂದಿನ ಚಿತ್ರಕ್ಕೆ "ಚಾ ಚಾ ನೆಹರೂ ಜಿಂದಾಬಾದ್!" ಎಂದು ಹೆಸರಿಸಲಾಗಿದೆ. ಎಂ. ಎಲ್. ಆನಂದರು ಈ ಚಿತ್ರವನ್ನು ನಿರ್ದೇಶಿಸಲಿರುವರು. ತಾರಾಗಣದ ಆಯ್ಕೆ ಆಗಿರುವದಿಲ್ಲ.

ಪಳನಿ

ಶಿವಾಜಿ ಗಣೇಶನ್, ಎಂ. ಆರ್. ರಾಧಾ, ಟಿ. ಎಸ್. ಬಾಲಯ್ಯ, ದೇವಿಕಾ, ಎಸ್. ಎಸ್. ರಾಜೇಂದ್ರನ್, ಪುಷ್ಪಲತಾ, ನಾಗೇಶ್ ಲಕ್ಷ್ಮೀರಾಜ್ಯಂ ಮುಂತಾದ ಪ್ರಮುಖ ತಾರಾಗಣವುಳ್ಳ ಚಿತ್ರವನ್ನು ಭಾರತಮಾತಾ ಪಿಕ್ಚರ್ಸ್ ಅವರು ತಯಾರಿಸುತ್ತಿದ್ದಾರೆ. ಎ ಭೀಮಸಿಂಗ್ ಅವರ ನಿರ್ದೇಶನದಲ್ಲಿ ತಯಾರಿಸಲ್ಪಡುವ ಈ ಚಿತ್ರದ ಹೆಸರು ಪಳನಿ

೦ ೦ ೦

ಹಣ ಗಳಿಕೆಯ ದೃಷ್ಟಿಯಿಂದ ಕನ್ನಡ ಚಿತ್ರಗಳು ಅಯಶಸ್ವಿಯಾಗುತ್ತಲೇ ಇವೆ ಎಂಬ ಮಾತು, ಇವತ್ತು ನಿನ್ನೆಯದಲ್ಲ. ಅದು ಬಹಳಷ್ಟು ವರ್ಷಗಳ ಹಿಂದಿನಿಂದ

ಕೇಳಿಸುತ್ತ ಬಂದಿದೆ. ಇದಕ್ಕೆ ಕಾರಣ, ಮುಖ್ಯವಾಗಿ ಪ್ರೇಕ್ಷಕರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವದೆ ಆಗಿದೆ ಎಂದೂ ಹೇಳಲಾಗುತ್ತಿದೆ.

ಕೊಂಕಣಿ ಭಾಷೆಯಲ್ಲಿ ತಯಾರಿಸಲ್ಪಟ್ಟ ಪ್ರಥಮ ಚಿತ್ರ 'ಅಮ್ಚೆ ನಸೀಬ' ಅತ್ಯಂತ ಯಶಸ್ವಿಯಾಗಿದೆ. ಇದು ಭಾರತದಲ್ಲಿ ಮಾತ್ರವಲ್ಲ ವಿದೇಶದಲ್ಲೂ ಪ್ರದರ್ಶಿಸಲ್ಪಟ್ಟಿದೆ.

ಈಗ ಕೊಂಕಣಿ ಭಾಷೆಯಲ್ಲಿ ದ್ವಿತೀಯ ಚಿತ್ರವೊಂದು ತಯಾರಾಗುತ್ತಿದೆ. ಕೊಂಕಣೀ ಭಾಷೆಯಲ್ಲಿ ಚಿತ್ರ ತಯಾರಿಸಿದರೆ ಕೈ ಸುಟ್ಟು ಹೋಗುವದಿಲ್ಲ, ಎಂಬ ಭರವಸೆ, ಆರಂಭ ಕಾಲದಲ್ಲೇ ಉಂಟಾಗಿದೆ.

ನಮ್ಮಲ್ಲಿ ನೆಪವನ್ನು ಮುಂದಿರಿಸುವವರು ಹೆಚ್ಚಿದ್ದಾರೆಯೇ ವಿನಃ ಸರಿಯಾದ ಪರಿಹಾರವನ್ನು ಕಂಡು ಹಿಡಿದು, ಚಿತ್ರೋದ್ಯಮವನ್ನು ಯಶಸ್ವಿನತ್ತ ಕೊಂಡೊಯ್ಯುವವರ ಸಂಖ್ಯೆ ದಿನ ದಿನಕ್ಕೆ ಕಡಿಮೆಯಾಗುತ್ತಿದೆ.

ಪತಿಯೇ ದೈವ

ಕೆ. ಎಸ್. ಅಶ್ವಥ್. ಸುದರ್ಶನ, ನಾಗೇಂದ್ರರಾವ್, ಪಂಡರೀ ಬಾಯಿ, ಜಯಂತಿ, ಕಲ್ಪನಾ, ರಮಾದೇವಿ ಮುಂತಾದವರು ಅಭಿನಯಿಸುತ್ತಿರುವ ಆರ್ ಎಸ್. ಆರ್ ಪಿಕ್ಚರ್ಸ್ ಅವರ ಚಿತ್ರಕ್ಕೆ 'ಪತಿಯೇ ದೈವ' ಎಂದು ನಾಮಕರಣವಾಗಿದೆ ಈ ಚಿತ್ರವನ್ನು ನಾಗೇಂದ್ರ ರಾಯರೇ ನಿರ್ದೇಶಿಸುತ್ತಿದ್ದಾರೆ. ಸಂಗೀತದ ಹೊಣೆ ವಿಜಯ ಭಾಸ್ಕರ್ ಅವರದ್ದು.

ನಮ್ಮ-ನಮ್ಮವರು

ಡಾ|| ಸರ್ವಪಳ್ಳಿ ರಾಧಾಕೃಷ್ಣನ್

ಭಾರತದಲ್ಲಿ ಸರ್ವೋಚ್ಚ ಪದವನ್ನಲಂಕರಿಸಿರುವ ರಾಷ್ಟ್ರಪತಿ ರಾಧಾಕೃಷ್ಣನರು ತಮ್ಮ ೭೫ ವರ್ಷಗಳ ಸಾರ್ಥಕ ಜೀವನವನ್ನು ಮುಗಿಸಿ ಕಳೆದ ೫-೯ರಂದು ೭೬ನೇ ವರ್ಷದಲ್ಲಿ ಕಾಲಿರಿಸಿದ್ದಾರೆ. ರಾಧಾಕೃಷ್ಣನರು ರಾಜಕಾರಣಿಯಾಗಿ ಎಂದೂ ಪ್ರಸಿದ್ಧಿಗೆ ಬಂದವರಲ್ಲ. ಅವರ ಮಹಾದಾರ್ಶನಿಕರಾಗಿ, ತತ್ವಜ್ಞಾನಿಗಳಾಗಿ, ವಿದ್ವಾಂಸರಾಗಿ, ಎಲ್ಲದಕ್ಕಿಂತಲೂ ಮಿಗಿಲಾಗಿ ಆದರ್ಶ ಅಧ್ಯಾಪಕರಾಗಿ ಪ್ರಸಿದ್ಧಿಗೆ ಬಂದವರು. ಜಗತ್ತಿನ ಚರಿತ್ರೆಯಲ್ಲಿ ಮಹಾದಾರ್ಶನಿಕನೋರ್ವನು ಒಂದು ರಾಷ್ಟ್ರದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವುದು ಭಾರತದಲ್ಲೇ ಎಂದರೆ ತಪ್ಪಾಗಲಾರದು. ಭಾರತದ ಶಾಂತಿಯುತ ಸಹಬಾಳ್ವೆಯ ತತ್ವಧೋರಣೆಗಳಿಗನುಗುಣವಾಗಿ, ವಿವಿಧ ವಿಚಾರಧಾರೆಗಳ ಸಮತೂಕದ ಒಬ್ಬ ವ್ಯಕ್ತಿ ಅದರ ಉಚ್ಚಸ್ಥಾನವನ್ನಲಂಕರಿಸಿರುವುದು ರಾಷ್ಟ್ರಕ್ಕೇನೇ ಭೂಷಣ. ಇಂದು ಭಾರತದ ನಾಯಕರಲ್ಲಿ ರಾಧಾಕೃಷ್ಣನರು ಹಿರಿಯ ಹಾಗೂ ಗೌರವದ ಸ್ಥಾನವನ್ನು ಪಡೆದಿದ್ದಾರೆ

ಆದರ್ಶ ಶಿಕ್ಷಕರಾಗಿದ್ದ ಸರ್ವಪಳ್ಳಿಯವರ ಜನ್ಮದಿನವನ್ನು ರಾಷ್ಟ್ರದಾದ್ಯಂತ 'ಶಿಕ್ಷಕರ ದಿನ'ವಾಗಿ ಆಚರಿಸುತ್ತಾ ಬರುವ ಸಂಪ್ರದಾಯ ೧೯೬೨ರಿಂದ ಆರಂಭವಾಯಿತು. ಶಿಕ್ಷಕರ ಕಲ್ಯಾಣ, ಅವರ ಸಮಸ್ಯೆಗಳು, ಜನತೆಯ ಮನದಲ್ಲಿ ಅವರ ಬಗ್ಗೆ ಇರಬೇಕಾದ ಭಾವನೆ, ರಾಷ್ಟ್ರವನ್ನು ಪುನರ್ರಚಿಸುವುದರಲ್ಲಿ ಶಿಕ್ಷಕರ ಮಹತ್ವದ ಪಾತ್ರ ಇವೇ ಮೊದಲಾದವುಗಳ ಕುರಿತು ಸಾರ್ವಜನಿಕರ ಗಮನವನ್ನು ಸೆಳೆಯುವುದು ಈ ದಿನಾಚರಣೆಯ ಮಹತ್ತರವಾದ ಉದ್ದೇಶ. ಆದರೆ, ಈ ಉದ್ದೇಶ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದೇ ಪ್ರಶ್ನೆ. ಸಂತೋಷದ ಸಂಗತಿ ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಶಿಕ್ಷಕರ ಜೀವನ ಮಟ್ಟದಲ್ಲಿ ತುಂಬಾ ಸುಧಾರಣೆಯಾಗಿದೆ ಎಂದು ಹೇಳಬಹುದಾದರೂ, ದೇಶದ ಶಿಕ್ಷಕ ವರ್ಗ ತೃಪ್ತಿಗೊಂಡಿಲ್ಲ ಎಂಬುದು ಸತ್ಯ ಸಂಗತಿ. ಶಿಕ್ಷಕರ ಕುರಿತು ನಾವು ಉದ್ದುದ್ದ ಸಹಾನುಭೂತಿಪರ ಮಾತುಗಳನ್ನಾಡುವುದರಲ್ಲೇ ನಿರತರಾಗಿರುವೆವಲ್ಲದೆ, ಅವರ ಕೆಲವೇ, ಆದರೆ ಪ್ರಾಮುಖ್ಯವಾದ ಸಮಸ್ಯೆಗಳತ್ತ ತೀಕ್ಷ್ಣ ಗಮನ ಹರಿಸಿರುವುದಿಲ್ಲ. ಸರಕಾರ ಹಾಗೂ ಜನತೆ ಈ ವಿಚಾರವನ್ನು ತೀವ್ರ ಪರಿಶೀಲಿಸುವುದು ಆವಶ್ಯಕ.

ರಾಷ್ಟ್ರಾಧ್ಯಕ್ಷರ ಜನ್ಮದಿನದ ಸವಿನೆನಪು ನಮ್ಮ ಮನದಲ್ಲಿ ಅಚ್ಚಳಿಯದೆ ಉಳಿಯಬೇಕಾದರೆ, ಶಿಕ್ಷಕರ ಸ್ಥಿತಿಯ ಸುಧಾರಣೆ ಮೊದಲು ಆಗುವುದು ಅಗತ್ಯ. ಆದರ್ಶ ಮಹೋಪಾಧ್ಯಾಯರೆಂದು ನಾವು ಸರ್ವಪಳ್ಳಿಯವರನ್ನು ಗೌರವಿಸುವುದರ ಜತೆಗೆ, ಶಿಕ್ಷಕ ವರ್ಗದ ಹಿತಚಿಂತನೆಯತ್ತಲೂ ಗಮನ ಹರಿಸುವುದು ಅಗತ್ಯ. ಸರ್ವಪಳ್ಳಿಯವರ ನಾಯಕತ್ವ ಇಂದು ದೇಶಕ್ಕೆ ಹೆಚ್ಚು ಅಗತ್ಯವೆನಿಸಿದೆ. ಅವರು ನೂರ್ಕಾಲ ಬಾಳಿ, ದೇಶದ ಘನತೆ ಹೆಚ್ಚಿಸಲಿ ಎಂದು, ಈ ಸಂದರ್ಭ ಹಾರೈಸುವುದು ಎಲ್ಲರ ಕರ್ತವ್ಯ.

ಶ್ರೀ|| ಟಿ. ಅನಂತ ಪೈ

"ರತ್ನವು ಎಲ್ಲಿದ್ದರೂ ರತ್ನವೇ ಮುತ್ತು ಎಲ್ಲಿದ್ದರೂ ಅದು ಮುತ್ತೇ." ಅದರ ಶೋಭೆ ಎಲ್ಲರನ್ನೂ ತನ್ನೆಡೆಗೆ ಸೆಳೆಯುತ್ತದೆ. ಕುಂದಣ ಏರಿದಾಗ ಅದರ ಶೋಭೆಗೆ ಇನ್ನಷ್ಟು ಮೆರುಗು ಬರುವುದು ಸಹಜ. ಕನ್ನಡದ ರತ್ನವೊಂದು, ಈಗ ಕುಂದಣವೇರಿ, ಅಖಿಲ ಭಾರತದಲ್ಲಿ ತನ್ನ ಶೋಭೆಯನ್ನು ಪ್ರದರ್ಶಿಸುತ್ತಿದೆ. ಕನ್ನಡಿಗರ ಮನಮೋಹಕರಾಗಿರುವ ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ|| ಟಿ. ಅನಂತ ಪೈಯವರು, ಇದೀಗ ಆಹಾರ ಧಾನ್ಯಗಳ ಟ್ರೇಡಿಂಗ್ ಕಾರ್ಪೊರೇಶನಿನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ ಮುಂದಿನ ಜನವರಿ ೧ರಿಂದ ಕಾರ್ಯಾರಂಭ ಮಾಡಲಿರುವ ಕಾರ್ಪೊರೇಶನು ಭಾರತದಾದ್ಯಂತ ತನ್ನ ಚಟುವಟಿಕೆಗಳನ್ನು ವಿಸ್ತರಿಸಲಿದೆ. ಭಾರತದ ವ್ಯಾಪಾರ ರಂಗದಲ್ಲೇ ಮೊದಲ ಪ್ರಯೋಗವಾಗಿರುವ ಈ ಕಾರ್ಪೊರೇಶನು, ದೇಶದ ಆಹಾರ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಅತಿ ಬೇಕಾದ ಪಾತ್ರ ವಹಿಸಲಿದ್ದಿದೆ. ಖಾಸಗೀ ವ್ಯಾಪಾರರಂಗದೊಂದಿಗೆ ಅದು ಸ್ಪರ್ಧಿಸಬೇಕಾಗಿದೆ. ಸಾರ್ವಜನಿಕರಲ್ಲಿ ಈ ಸಂಸ್ಥೆಯ ಬಗೆಗೆ ಸೂಕ್ತ ಭಾವನೆ ಉಂಟುಮಾಡಿ, ಈ ಕಾರ್ಪೊರೇಶನು ಉತ್ತಮ ತರದಲ್ಲಿ ಕಾರ್ಯವೆಸಗಬೇಕಾಗಿದೆ

ಈ ಎಲ್ಲಾ ಜವಾಬ್ದಾರಿಗಳನ್ನು ಸುಲಭವಾಗಿ ನಿರ್ವಹಿಸಬಲ್ಲ ವ್ಯಕ್ತಿಗಳು ಶ್ರೀ|| ಪೈಗಳು. ಅವರ ಹೆಸರೇ ಹೇಳುವಂತೆ ಅವರ ಕಾರ್ಯಪಟುತ್ವ, ಉತ್ಸಾಹ, ಅನುಭವ ಅನಂತವಾದುದು. ಅವರು ಅರ್ಥಶಾಸ್ತ್ರಜ್ಞರು, ವಾಣಿಜ್ಯ ನಿಪುಣರು ಹಾಗೂ ಪ್ರಸಿದ್ಧ ಬ್ಯಾಂಕರರು. ಜನತೆಯೊಂದಿಗೆ ಅವರಿಟ್ಟುಕೊಂಡಿರುವಷ್ಟು ನಿಕಟ ಸಂಪರ್ಕವನ್ನು ಇನ್ಯಾರೂ ಇರಿಸಿಕೊಂಡಿರಲಿಕ್ಕಿಲ್ಲ. ಅವರ ನಾಯಕತ್ವದಲ್ಲಿ ಕಾರ್ಯಾರಂಭಿಸಲಿರುವ ಆಹಾರಧಾನ್ಯಗಳ ವ್ಯಾಪಾರ ಕಾರ್ಪೊರೇಶನ್, ತನ್ನ ಉದ್ದೇಶಗಳನ್ನು ಸಾಧಿಸುವುದೆಂಬುದಕ್ಕೆ ಅನುಮಾನವೇ ಬೇಡ. ಅಖಿಲ ಭಾರತ ಪ್ರಸಿದ್ಧಿಯತ್ತ ಸಾಗುತ್ತಿರುವ ಶ್ರೀ|| ಪೈಗಳನ್ನು ನಾವು ಈ ಸಂದರ್ಭ ಹೃತ್ಪೂರ್ವಕ ಅಭಿನಂದಿಸಿ ಅವರಿಗೆ ಯಶಸ್ಸನ್ನು ಕೋರುತ್ತೇವೆ.

ಸಹಕಾರದಿಂದ ಕಾರ್ಯ ಸಾಧನೆ

(ಎರಡನೇ ಪುಟದಿಂದ)

ಗಿಕೆ ಮಾಡಿದ್ದಿಯಲ್ಲಾ. ."

"ಮರುವಾಯ್ತು ನಿಮ್ಮದೊಂದು.... ಅಲ್ಲಾ ಕೆಲ್ಸ ಎಷ್ಟಾಯ್ತೂಂತಂದ್ರೆ...."

"ಅಂದದಲ್ಲ, ಒಂದು ಸಾವಿರ ಜನ್ರ ದ್ದಾಯ್ತೂಂತ"

"ಅದನ್ನಲ್ಲ ನಾನು ಕೇಳಿದ್ದು. ಸದ್ಯ ಬೇಕಾದಷ್ಟು ನೆಲ ಸಮತಟ್ಟಾಯಿತೇಂತ...."

"ಓ ಹಾಗೋ.... ಬೇಕಾದಷ್ಟಲ್ಲವಾದ್ರೂ ಅತ್ಯಗತ್ಯವಿರುವಷ್ಟು ಆಯ್ತೂಂತ ಹೇಳಬಹುದು. ಶಾಲೆಯ ಕಟ್ಟಡದ ಮುಂದೆ ನೋಡು, ಕಲ್ಲು ಕಟ್ಟಿ ಎತ್ತರ ಮಾಡಿದ್ದು ಇಲ್ಲಿಂದ ಕೆಳಗೆ ಕ್ರೀಡಾಂಗಣಕ್ಕೆ ಈಗ್ಲೇ ೧೦-೧೨ ಅಡಿ ಆಳ ಇದೆ. ಅದು ಇನ್ನೂ ತಗ್ಗಾಗುತ್ತದಂತೆ...."

"ಓ.... ಇದು ಭಾರಿ ಚಂದ ಆಗಿದೆ.... ಅಲ್ಲ ಇದಕ್ಕೆಲ್ಲಾ ಮೂಲಪುರುಷ ಯಾರೂಂತ ..."

"ಅಲ್ಲೇ ನೀನು ಆಸ್ಪತ್ರೆಯಲ್ಲಿ ಕಂಡಿಯಲ್ಲ, ಹುಡುಗಿಯನ್ನ .."

"ಅದೇ ಪೆರ್ಡೂರಿನ ಮಳೂಂತಂದೆ. .."

"ಹೌದು, ಅವಳ ತಂದೆ ಶಾಲಾ ಸಮಿತಿಯ ಅಧ್ಯಕ್ಷರು, ನಾರಾಯಣ ಹೆಗ್ಡೆಯವರು. ಹಾಗೆಯೇ ಶ್ರಮದಾನದ ಸಮಿತಿಯ ಅಧ್ಯಕ್ಷರು ಪೆರ್ಡೂರಿನ ಅಬ್ರಹಾಂ ಲಿಂಕನ್ ಉಮಾನಾಥ ಹೆಗ್ಡೆಯವರು. ಇನ್ನು ಶೇಷಗಿರಿ ವಾಮನ ಮಲ್ಯರು, ಮಂಜುನಾಥ ಮಲ್ಯರು, ಎಂ. ಆರ್. ಹೆಗ್ಡೆಯವರು__"

"ಮತ್ತೆ ದೇವಸ್ಥಾನದ ಶೆಟ್ಟಿಗಾರರು, ಅಡಿಗರು..."

"ಅವ್ರು ಇದ್ದೇ ಇದ್ದಾರಲ್ಲಾ.. ಪಂಚಾಯತ ಅಧ್ಯಕ್ಷ ಭುಜಂಗ ಹೆಗ್ಡೇರು ಮೊದಲಾದವ್ರು—ಎಲ್ರೂ ಒಟ್ಟು ಸೇರಿ ಪರಸ್ಪರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದರು; ಅದರಲ್ಲಿ ಯಶಸ್ವಿಯೂ ಆದರು."

'ನಾನು ಏನೇನೋ ಅಂತಿದ್ದೆ ಈಗ ನೋಡುವಾಗ, ತುಂಬ ಕೆಲಸವಾಗಿದೆಯಲ್ಲಾ. ಅಲ್ಲ... ನಾನು ಕಳೆದ ವರ್ಷ ಬಂದಾಗ ಕಟ್ಟಡವೂ ಪೂರ್ತಿ ಆಗಿಲ್ಲ ."

"ಹೌದು, ಈಗ ಬೇಕಾದಷ್ಟು ಆಗಿದೆ. ಆಗುತ್ತಲೂ ಇದೆ ಕ್ರೀಡಾಂಗಣದ ಕೊರತೆಯಿತ್ತು ಈಗ ಅದೂ ಸ್ವಲ್ಪ ಪೂರೈಸಿತು ಇನ್ನೇನು, ಒಂದು ವರ್ಷದೊಳಗೆ ಎಲ್ಲಾ ಮುಗಿಯುತ್ತೇನ್ನು...."

"ಅಲ್ಲ, ನನಗೊಮ್ಮೆ ನೋಡಬೇಕು ಅನ್ನಿಸುತ್ತದೆ ಅವ್ರು ಮಾಡಿದ ಕೆಲ್ಸವನ್ನ. ಚಿತ್ರದಲ್ಲಿ ನೋಡುವಾಗ್ಲೇ..."

'ದೂರದ ಬೆಟ್ಟ ನುಣ್ಣಗೆ....'

'ಛೆ ಛೆ...ಹಾಗೇನಾದ್ರೂ ಇದ್ದಿದ್ರೆ ಈ ಬಾಯಿಂದ ಇಷ್ಟೆಲ್ಲಾ ಹೊರಡ್ತಿರ್ಲಿಲ್ಲ..'

"ಸಾಕು ಬಿಡಿ. ಬಾಯಿಗನ್ನು ಏನಾದ್ರೂ ಬೇಡ ನೀನು ಬಾಯಿಬಿಟ್ರೆ ದೇವಿಯಾದ್ರೂ..."

'ಇಲ್ಲ ಇಲ್ಲ...ಹಾಗನ್ನಬೇಡಿ ಮತ್ತೆ... ನನ್ನ ಯಾವಾಗ ಕರ್ಕೊಂಡು ಹೋಗ್ತೀರೀಂತ..."

'ಯಾವಾಗ, ಇವತ್ತೇ ಬೇಕಾದ್ರೂ ....ಆದ್ರೆ....'

'ಆದ್ರೆ ಏನಂತೆ?'

'....ಏನೂ ಇಲ್ಲ ಬೇಕಾದ್ರೆ ಒಂದು ಏಕಾದಶಿ ದಿನ ಹೋಗೋಣ; ಇಲ್ಲಾ ಶನಿವಾರವಾದ್ರೂ ಸರಿಯೇ...."

'ಈಗಂತೂ ಆಗ್ಲಿಲ್ಲ ನೋಡಿ. ಬರೀ ನೋಡ್ಬೇಕೂಂತ ಬಂದ್ರೆ ಯಾರಾದ್ರೂ ಏನು ಹೇಳದರು?,

"ಹೇಳೋದೇನಂತೆ? ಅಷ್ಟು ಜನ ಮೈ ಮುರಿದುಕಾಸು ಲಾಭವಿಲ್ಲದೆ ದುಡಿದಿದ್ದಾರಂತೆ. ಅವರ ಪರಿಶ್ರಮದ ಫಲವನ್ನು ಕಣ್ಣಾರೆ ಕಂಡು ನಲ್ಮೆಯ ಮಾತನ್ನಾಡೋವಕ್ಕೂ ಯಾರ್ಯಾರಿಗೆ ಯಾಕೆ ಹೆದರ್ಬೇಕು?"

"ಹೆದರೋದೇನಿಲ್ಲ, ಆದ್ರೂ ನಾಚಿಗೆಯಾಗುತ್ತದೆ"

"ಅವೇನೂ ಹೊಸದಲ್ಲ ಬಿಡು. ನಾರಿಯರಿಗೆ ನಾಚಿಕೆಯೇ ಭೂಷಣ ..."

"ಸಾಕು ಸುಮ್ಮನಿರೀಂದ್ರೆ..."

"ನಾನು ಸುಮ್ಮನಿದ್ದಾಗ ಮಾತಿಗೆ ಎಳೆದ ಕೊಂಡವಳು ನೀನೇ ಅಲ್ವೆ?"

"ಯಾವಾಗ ನಾನು ಎಳೆದೆ?...."

"ಸಂಜುವನ್ನು ಯಾಕೆ ಮಾತು? ನಿನ್ನ ಆತುರ ತೃಪ್ತಿಯಾಯ್ತಲ್ಲ? ಇನ್ನು ನನ್ನ ದಾಹಾತುರಕ್ಕೆ ಒಂದ ಲೋಟಾ ಹಾಲನ್ನಾದ್ರೂ..."

"ತಂದೆ ..ತಂದೆ..."

"ತಂದೆಯಿಲ್ಲಲ್ಲ ಹೋಗಿದ್ದಾರೆ...."

'....ಇಗೊಳ್ಳಿ... ಹೊಟ್ಟೆತುಂಬ ಕುಡೀರಿ.."

"ಹೌದೇ ಇಂದಿನ ಹಾಲು ಭಾರಿ ರುಚಿ.."

"ರುಚಿ ಮಾತಾಡಿದ್ರೆ ಬಾಯಿ ಸದಾ ರುಚಿಯೇ ..."

"ನೋಡೋಣ ಹಾಗಾದ್ರೆ...."

"ಹ್ಞಾ..ಸ್ವಲ್ಪ ತಡೀರಿ...."

—ಗೋರಾ.

ಯಕ್ಷಗಾನ

ಉಡುಪಿ, 30_8 64ರಂದು ಸ್ಥಳೀಯ ಯಕ್ಷಗಾನ ಕಲಾಕ್ಷೇತ್ರದ ಸಹಕಾರದಿಂದ ಮತ್ತು ಇತರ ಕಲಾವಿದರ ಕೂಡುವಿಕೆಯಿಂದ ಜಂಗಮರ ಮಠದಲ್ಲಿ "ಶ್ರೀ ಕೃಷ್ಣಜನನ" ಎಂಬ ಯಕ್ಷಗಾನ ಕೂಟವನ್ನು ವಿಜೃಂಭಣೆಯಿಂದ ಜರಗಿಸಲಾಯಿತು. ಕಲಾಕಾರ್ಯದರ್ಶಿ ಶ್ರೀ ಅಣ್ಣಯ್ಯ ಪಾಲನ್‌ರು ಧನ್ಯವಾದವಿತ್ತರು

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿಚಿತ್ರವಾದರೂ ಸತ್ಯ

ಶ್ಲೋಕವೊಂದು ಶೋಕವನ್ನಡಗಿಸಿತು

ಪ್ರಾಚೀನ ಭಾರತದಲ್ಲಿ ಹಲವಾರು ವಿಶ್ವವಿದ್ಯಾಲಯಗಳು ತಲೆ ಎತ್ತಿ ದೇಶ—ವಿದೇಶಗಳ ಜ್ಞಾನಪಿಪಾಸುಗಳನ್ನು ಆಕರ್ಷಿಸುತ್ತಿದ್ದವು. ಗುರುಕುಲ ಮಾದರಿಯಲ್ಲಿ ನಡೆಯುತ್ತಿದ್ದುವು. ಗುರುಕುಲ ಮಾದರಿಯಲ್ಲಿ ನಡೆಯುತ್ತಿದ್ದ ಇವು ಉತ್ತಮೋತ್ತಮ ಪಂಡಿತರನ್ನೂ ವಿದ್ವಾಂಸರನ್ನೂ ತರಬೇತಿಗೊಳಿಸುತ್ತಿದ್ದವು. ಇದೇ ರೀತಿಯ ಗುರುಕುಲ ವಿಶ್ವ ವಿದ್ಯಾಲಯಗಳು ಇತ್ತೀಚೆಗಿನವರ್ಷಗಳಲ್ಲಿಯೂ ಭಾರತದಲ್ಲಿ ಅಲ್ಲಲ್ಲಿ ತಲೆಯೆತ್ತಿ ನಿಂತಿದ್ದುವು.

ಕೇರಳದ ಕರಾವಳಿಯಲ್ಲಿ ತ್ರಿಚೂರು ಜಿಲ್ಲೆಯಿದೆ. ಇದರ ಕರಾವಳಿ ಪ್ರದೇಶದಲ್ಲಿ ಕೊಡುಂಗಲ್ಲೂರು ಎಂಬುದೊಂದು ಒಂದು ಚಿಕ್ಕ ಪಟ್ಟಣ ಇದರ ಇಂದಿನ ಹೆಸರು ಕ್ರಾಂಗನೂರು. ಬ್ರಿಟಿಷರು ಪಶ್ಚಿಮ ಕರಾವಳಿಯ ಪ್ರಭುತ್ವವನ್ನು ಪಡೆಯುವುದಕ್ಕೆ ಮೊದಲು ಇಲ್ಲೊಂದು ರಾಜವಂಶವು ಆಳುತ್ತಿತ್ತು. ಮಲಯಾಳದ ಸುಪ್ರಸಿದ್ಧ ಕವಿ ವೇಮನಿಯೂ ಈ ರಾಜವಂಶಕ್ಕೆ ಸೇರಿದವನು. ಈತನ ಮಗನೇ ಕೇರಳ ವ್ಯಾಸನೆಂಬ ಹೆಸರು ಪಡೆದ ರಾಮವರ್ಮ ಅಥವಾ ಕುನ್ನಿ ಕುಟ್ಟನ್ ತಂಪುರನ್.

ಕೊಡುಂಗಲ್ಲೂರಿನ ರಾಜ ಮನೆತನವೇ ಒಂದು ವಿಶ್ವ ವಿದ್ಯಾಲಯ ಇದ್ದಂತೆ. "ವಿದ್ಯಾ ನಃ ಪರದೈವತಂ" ಎಂಬುದನ್ನು ಆರಿಸಿಕೊಂಡು ಅದರಂತೆ ನಡೆಯುತಿತ್ತು ಅದು. ರಾಜಭವನವೂ ವಿದ್ಯೆಯ ಆವಾಸಸ್ಥಾನವಾಗಿತ್ತು. ಆ ದಿನಗಳಲ್ಲಿಯೂ ಅದು ಉಚಿತ ಶಿಕ್ಷಣವನ್ನು ನೀಡುತಿತ್ತು. ಭಾರತೀಯ ಸಾಂಪ್ರದಾಯಿಕ ಪರಂಪರೆಯ ಎಲ್ಲ ವಿಭಾಗಗಳಲ್ಲೂ ಅಲ್ಲಿ ಶಿಕ್ಷಣ ದೊರೆಯುತ್ತಿತ್ತು. ಗುರುಕುಲ ಮಾದರಿಯ ಈ ಸಂಸ್ಕೃತ ವಿಶ್ವ ವಿದ್ಯಾಲಯದ ಹೆಸರು ಎಲ್ಲೆಲ್ಲಿಯೂ ಪ್ರಚುರವಾಗಿತ್ತು. ಸಮೀಪ—ದೂರದೂರುಗಳಿಂದ ಶಿಕ್ಷಣಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಿದ್ದರು. ಜ್ಞಾನೇಚ್ಛುಗಳಾಗಿ ಬಂದ ಅಗಣಿತ ವ್ಯಕ್ತಿಗಳು ಕೆಲವರ್ಷಗಳ ಅಧ್ಯಯನ ಮತ್ತು ಸಂಶೋಧನೆಗಳನಂತರ ಸಂತೃಪ್ತರಾಗಿ ವಿದ್ಯಾ ಪಾರಂಗತರಾಗಿ ಮರುಳುತ್ತಿದ್ದರು. ಕೊಡುಂಗಲ್ಲೂರಿನ ರಾಜಭವನದಲ್ಲಿ ತಾವು ವಿದ್ಯಾಭ್ಯಾಸ ಪಡೆದೆವೆಂದು ಹೇಳಲು ಅಂದಿನ ವಿದ್ಯಾರ್ಥಿಗಳು ಹೆಮ್ಮೆಪಡುತಿದ್ದರು.

ಗುರುಕುಲದ ಪ್ರಧಾನನಾಗಿ ಬಹುಕಾಲ ಸೇವೆ ಸಲ್ಲಿಸಿದ ವಿದ್ವಾನ್ ಏಳಯ ತಾಂಪುರನ್ ವಿದ್ಯಾಪೀಠದ ಮೊದಲಿನ ಹಾಗೂ ಅತಿ ಹೆಸರುವಾಸಿಯಾದ ವಿದ್ಯಾರ್ಥಿ. ಈತನು ಮಡಿದು ಇಂದಿಗೆ ಕೇವಲ ೧೧೩ ವರ್ಷಗಳ ಮಾತ್ರ ಕಳೆದಿವೆ. ಈತನು ಮಹಾ ವಿದ್ವಾಂಸನಾಗಿದ್ದನು. ಇವನಿಗೊಬ್ಬ ನಂಬೂದಿರಿ ಗೆಳೆಯನಿದ್ದನು. ಈ ಮಿತ್ರನು ಕಡು ಬಡವನು. ಆಗ ಈತನೊಂದು ಸರಳ ಶ್ಲೋಕವನ್ನು ರಚಿಸಿಕೊಟ್ಟು ಅದನ್ನು ತಿರುವಂಕೂರಿನ ಮಹಾರಾಜರ ಮುಂದೆ ಹಾಡುವಂತೆ ತಿಳಿಸಿದನು. ನಂಬೂದರಿಯು ಹಾಗೆಯೇ ಮಾಡಿದನು.

> ದರಿದ್ರಸ್ಯ ದಯಾಲುತ್ವಮ್
> ಕಿಂಬ್ರವೀಮಿ ಮಹೀಪತೇ
> ಆತ್ಮನಾಶಮ್—ಅನಾದೃತ್ಯ
> ಭವಂತಮ್ ಮಾಮ್
>
> ಅದರ್ಶಯನ್ ॥

[ಮಹಾರಾಜ, ಬಡತನದ ದಯಾಳುತನವನ್ನು ನಾನೆಂತು ವರ್ಣಿಸಲಿ? ತನ್ನ ಸರ್ವನಾಶವಾಗುವುದೆಂದು ತಿಳಿತಿಳಿದೂ ಅದು ನನ್ನನ್ನು ನಿನ್ನ ಮುಂದೆ ತಂದು ನಿಲ್ಲಿಸಿದೆ.]

ಈ ಶ್ಲೋಕವನ್ನು ಕೇಳಿದ ಮಹಾರಾಜನು ಅದರ ಸೌಂದರ್ಯದಿಂದ ಮರುಳಾದನು. ತನ್ನ ಕರಣಿಕರಿಗೆ ಆಜ್ಞಾಪಿಸಿ ಸುವರ್ಣ ತುಂಬಿದ ಚೀಲವೊಂದನ್ನು ತರಿಸಿ ಅದನ್ನು ನಂಬೂದರಿಗೆ ಉಡುಗೊರೆಯಾಗಿ ನೀಡಿದನು. ವಿದ್ವಾನ್ ಏಳಯ ತಾಂಪುರನ್ ಈ ಶ್ಲೋಕವನ್ನು ತನ್ನ ಗಮನಕ್ಕೆ ತಂದುದಕ್ಕಾಗಿ ತಾನು ನೀಡುವ ಅಲ್ಪ ಕಾಣಿಕೆಯಿದೆಂದು ಭಯ ಭಕ್ತಿಯನ್ನು ಪ್ರದರ್ಶಿಸಿದನು.

ಸಂಸ್ಕೃತ ಜ್ಞಾನದ ಸಂಚಾರಿ ವಿಶ್ವಕೋಶವಾಗಿದ್ದನು ಏಳಯ ತಾಂಪುರನ್. ಈತನೇ ಕೊಡುಂಗಲ್ಲೂರಿನ ಗುರುಕುಲವನ್ನು ಸ್ಥಾಪಿಸಿದನು. ಈತನಿಂದ ಶಿಕ್ಷಣ ಪಡೆದವರಲ್ಲಿ ಅನೇಕರು ವಿಖ್ಯಾತ ವಿದ್ವಾಂಸರೂ ಕವಿಗಳೂ ಆಗಿದ್ದಾರೆ. ಇವರಲ್ಲಿ ಪ್ರತಿಯೊಬ್ಬರೂ ಕಡಿಮೆ ಪಕ್ಷಕ್ಕೆ ಒಂದೊಂದು ವಿಭಾಗಲ್ಲಾದರೂ ಮಹಾ ಪಾರಂಗತರು; ಆ ವಿಷಯದಲ್ಲಿ ಪ್ರಾಮಾಣಿಕ ಪರಿಜ್ಞಾನ ಪಡೆದವರು. ಸಂಸ್ಕೃತ ವ್ಯಾಕರಣದಲ್ಲಿ ಪರಿಣತನಾದ ಕುನ್ಹು ರಾಮ ವರ್ಮನ್ ಥಾಂಪುರನ್, ತರ್ಕ ಶಾಸ್ತ್ರವಿದ ಕುನ್ಹನ್ ಥಾಂಪುರನ್ ಜ್ಯೋತಿಶ್ಶಾಸ್ತ್ರಜ್ಞ ವಾಲಿಯ ಕೋಚುನ್ನಿ, ವಿಖ್ಯಾತ ಸಂಗೀತಜ್ಞ ಚಕ್ರನ್, ಭೌತ ಶಾಸ್ತ್ರ ಪಂಡಿತನೂ ಕವಿ ಸಾರ್ವಭೌಮನೆಂಬ ಬಿರುದು ಪಡೆದವನೂ ಆದ ಚೆರಿಯ ಕೋಚುನ್ನಿ ತರ್ಕ ಶಾಸ್ತ್ರ ರತ್ನ ಮಹಾಮಹೋಪಾಧ್ಯಾಯ ಗೋದವರ್ಮ, ಕಥಕ್ಕಳಿಯ ಆಚಾರ್ಯ ಭಾಗವತರ್ ಮೊದಲಾದವರು ಏಳಯನ ಶಿಷ್ಯಕೋಟಿಯಲ್ಲಿ ಕೆಲವರು.

ರಾಮವರ್ಮ ಅಥವಾ ಕೇರಳದ ವ್ಯಾಸನೂ ಇವರಲ್ಲೊಬ್ಬ. ಇವನು ವ್ಯಾಸ ಋಷಿ ಕೃತ ಸಂಸ್ಕೃತದ ಭಾರತದ ಶ್ಲೋಕಗಳನ್ನು ಮಲೆಯಾಳಂ ಭಾಷೆಗೆ ಇದ್ದಕ್ಕಿದ್ದಂತೆ ಅನುವಾದ ಮಾಡಿದ್ದಾನೆ. ಅನುವಾದವಾದರೂ ಸ್ವತಂತ್ರ ಕಾವ್ಯದಂತೆಯೇ ಮನೋಹರವಾಗಿದೆ. ಈ ಕವಿಯ ಶತಮಾನೋತ್ಸವ ಇದೇ ತಾ. ೧೯ರಿಂದ ಒಂದು ವಾರದವರೆಗೆ ಕೇರಳ ತುಂಬ ನಡೆಯುವುದು.

ಕವಿತಾ ವಿತಾನ

ಆನಂದ

(ಭಾವಗೀತೆ)

(೧)

ಹೆಣ್ಣು ಮಗುವಿನ ಮಾತೆಯಾಗುವ
ಕೊರಗು ಬೇಗಿತು ತಾಯಿಗೆ
ಹೆತ್ತು ದೇವರ ಹರಕೆ ಹೊತ್ತಳು
ಮತ್ತೆ ದುಹಿತೆಯ ಹೆರುವಿಕೆ

(೨)

ಲಲಿತಗಾತ್ರೆಯು ವಿಮಲ ನೇತ್ರೆಯು
ತೆರೆಂದೆ ಹೆಣ್ಣಿನ ತುಟಿಯೊಳು
ಹುಟ್ಟಿತಾಗಲೆ ಹೆಣ್ಣು ಮಗುವದು
ತಂಗಿ ತಾಣದ ತುಂಬಲು

(೩)

ಮರುಳುಗಾಡಿನ ಮಧ್ಯದಲ್ಲಿಯೆ
ಕಿರಿಯ ತೊರೆಯದು ಹರಿವೊಲು
ನಮ್ಮ ಮನದಲಿ ನಮ್ಮ ಮನೆಯಲಿ
ತೂಗುತಿದ್ದಿತು ತೊಟ್ಟಿಲು

(೪)

ತುಟಿಯ ಮಧ್ಯದಿ ನಿನಗೆ ಮೂಸುವ
ಎಳೆಯ ನಗುವಿನ ಬಂಧವು
ಮುದ್ದು ಮಾಟದ ಮುಗ್ಧ ಬಾಲೆಗೆ
ಕರೆದ ಹೆಸರಾ 'ನಂದವು'

(೫)

ಆರು ವರ್ಷವು ತುಂಬಲಿಲ್ಲವು
ಆಕೆ ಗೋಪುರ ಕಳಚಿತು
ಬಾಳಬಳ್ಳಿಯೊಳಿದ್ದ ಮಿಡಿಯದು
ಕದ್ದು ಕಾಣದೆ ಹೋಯಿತು

(೬)

ಹಸಿದ ಪಥಿಕಗೆ ಹಣ್ಣನೀಯುತ
ಮರಳಿ ನಡೆವದು ನ್ಯಾಯವೆ?
ಒಡೆಯಲಾರದ ಒಗಟನೊರೆದಿಹ
ದೈವ ಲೀಲೆಗೆ ವೇಧ್ಯವೆ?

ಬಸವರಾಜ ಕುಂಚೂರು.

ಮಧುರಚೆನ್ನರ ಸ್ಮೃತಿ ದಿನಾಚರಣೆ

ಮುಂಬೈಯ ಕನ್ನಡ ಸಾಹಿತ್ಯ ಕೂಟದವರು ರೂಪಾರೇಲ್ ಕಾಲೇಜಿನ ಸಭಾಂಗಣದಲ್ಲಿ ಕನ್ನಡದ ಅನುಭಾವಿ ಕವಿ 'ಮಧುರಚೆನ್ನ'ರ ಸ್ಮೃತಿ ದಿನವನ್ನು ಆಚರಿಸಿದರು. ಸಾಹಿತ್ಯ ಕೂಟದ ಅಧ್ಯಕ್ಷ ಪ್ರೊ. ಸಿ. ಕೆ. ದೀಕ್ಷಿತರು ಪ್ರಾಸ್ತಾವಿಕ ಭಾಷಣಗೈದರು. ವರಕವಿ ದ. ರಾ. ಬೇಂದ್ರೆ ಅವರು ಮಧುರ ಚೆನ್ನರ ಕೃತಿ, ಅವರ ಬಗ್ಗೆ ಪ್ರಕಟವಾದ ಬರೆಹಗಳು ಮತ್ತು ನಾಸಿಕ್‌ದೇಸಾಯಿಯವರು ಬಿಡಿಸಿದ ಮಧುರ ಚೆನ್ನರ ತೈಲಚಿತ್ರಗಳನ್ನು ಅನಾವರಣಗೈದಬಳಿಕ ಅಧ್ಯಕ್ಷಪೀಠದಿಂದ ಮಾತಾಡುತ್ತಾ—ಯಾವುದು ಕರ್ನಾಟಕದಲ್ಲಿ ಆಗಬೇಕಿದ್ದು ಆಗುವದಿಲ್ಲವೋ ಅಂತಹ ಕಾರ್ಯಗಳು ಹೊರನಾಡಲ್ಲಿ ಅವರಲ್ಲೂ ಮುಂಬಯಿಯಲ್ಲಿ ಕನ್ನಡಿಗರು ಮಾಡುತ್ತಾರೆ ಎಂಬುವದಕ್ಕೆ ಇದೊಂದು ಪ್ರತ್ಯಕ್ಷ ಉದಾಹರಣೆ ಎಂದರು.

ಶ್ರೀ ನಾರಾಯಣ ಭಾನುಭಾಗರ ಕಾವ್ಯ ವಾಚನದ ಬಳಿಕ ಶ್ರೀ ಪಾಂಡುರಂಗ ಕುಲಕರ್ಣಿಯವರು ಮಧುರ ಚೆನ್ನರ ಜೀವನ ಅನುಭವ ಮತ್ತು ಕಾವ್ಯದ ಕುರಿತು ಭಾಷಣಗೈದರು. ಮುಖ್ಯ ಅತಿಥಿ ಶ್ರೀ ರಂ. ಶ್ರೀ ಮುಗಳಿಯವರು ಮುಂಬೈ ಸಾಹಿತ್ಯ ಕೂಟದ ಈ ಕಾರ್ಯಕ್ರಮವನ್ನು ಮನಸಾರೆ ಪ್ರಶಂಸಿಸಿದರು. ಮಧುರ ಚೆನ್ನರು ಪ್ರಚಂಡವಾದ ಪ್ರಾಮಾಣಿಕವಾದ ಅಧ್ಯಾತ್ಮಿಕ ಸಾಧಕನ ಮೂರ್ತಿ ಎಂದರು. ಆನಂತರ ತನ್ನ ವಿದೇಶ ಯಾತ್ರೆಗೆ ಶುಭ ಕೋರಿದ ಮುಂಬೈ ಕನ್ನಡಿಗರಿಗೆ ಕೃತಜ್ಞತೆಯನ್ನು ಸೂಚಿಸಿದರು. ಮಧುರ ಚೆನ್ನರ ಸ್ಮೃತಿ ಇಂದು ನಡೆಯಿತು ಅದರೆ ಮುಗಿಯಿತೆಂದು ಯಾರೂ ಭಾವಿಸಬಾರದು ಇದು ಆರಂಭವಾಯಿತೆಂದು ತಿಳಿಯಬೇಕು ಎಂದರು. ಕಾರ್ಯ ನಿರ್ವಾಹಕರು ಆಭಾರ ಮನ್ನಣೆ ಸಲ್ಲಿಸಿದರು.

ಗುರುವಿನಂತೆ
ಮಿತ್ರನಂತೆ
ವೈದ್ಯನಂತೆ
3
ಪುಸ್ತಕಗಳು
ಸಿಗುವ ವಿಳಾಸ:
ನವಭಾರತ ಬುಕ್ ಡಿಪೊ,
ಪಾಲುಕೋಟೆ, ಉಡುಪಿ.

ಸುಲಭದಲ್ಲಿ
ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. [illegible]

ಸುಲಭದಲ್ಲಿ
ಪತ್ರಲೇಖನ
Letter Writing
Made Easy
ಬೆಲೆ: ರೂ. ೧-೨೫

ಮನೆಮದ್ದು
ನೂರಾರು ಕಾಹಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡುವ ವಿಧಾನ ವಿವರಿಸುವ ಗೃಹ ವೈದ್ಯ: ಬೆಲೆ: ರೂ. ೨.

Edited, Printed & Published by K. H Shetty, at the Navayuga Press, Udipi, S. India

ನವಯುಗ

ಸೆಪ್ಟಂಬರ, ೧೭, ೬೪

ಸಂಪುಟ ೪೪

ಸಂಚಿಕೆ

Navayuga *nationalist kannada weekly*